1944

1944

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 7—1—1944 [ಸಂಚಿಕೆ 1]

ಇಂದಿನ ಕೇರಳ ನಾಳೆಯ ಬಂಗಾಳವಾಗುವುದೆ?

ವಿದ್ವೇಷ[illegible] ಹಿಂದೆ ಬಂಗಾಳ ಯಾವ [illegible] ಶೀಲತೆ [illegible] ಕೇರಳ ಇಂದು ಅದೇ [illegible] ಕುರಿತು ಗ[illegible] ಹಾಗಾಗಿ ಆರು ತಿಂಗಳ ನಂತರ ಅವರು [illegible]ಗಾಳವಾದೀತೆ? ಸರಕಾರ, ದೇಶ ತೋರಿಸಿದ [illegible]ಕ್ಷಗಳು, ಕೇರಳದ ಜನತೆ-ಇವ ವಿಧೇಯ [illegible] ಬಿಡುವರೆ? ದುಡ್ಡಿದ್ದವರ [illegible] ಭಾರತ [illegible] ಜಿಲ್ಲೆಗಳಿಂದ, ಚಿತ್ತೂ[illegible] ಸಂಸ್ಥಾನಗಳಿಂದ ಕೂಡಿದೇ ಪರ್ಯಂತ [illegible] ಮತ್ತು ತಿರುವಾಂಕೂರು) ಕಳೆದ ವರ್ಷವೇ ಕೇರಳ [illegible] ಸಂಸ್ಥಾನಗಳು ಆಹಾರದ ವಿಷಯ [illegible]ಯನ್ನು ಗಮನಕ್ಕೆ ತಂದುಕೊಂಡು, ಆಹಾರ [illegible] ಸಾಮಗ್ರಿಗಳನ್ನು ಸ್ವಾಧೀನಪಡಿಸಿ, [illegible] ಕಾರಕ್ಕಾಗಿ ಬೇಕಾದ ಯೋಜನೆಗಳ [illegible]ದವು; ರೇಶನಿಂಗ್ [illegible] ಕಲೆಕ್ಟರರು [illegible] ಮಾಡ [illegible] ಬೇಕಾದಷ್ಟು [illegible] ಬೇಕಾದಷ್ಟು [illegible]

[illegible]

[illegible] ಸ್ವಾಧೀನ [illegible] ಕಳ ಸಂತೆಗೆ [illegible] ಮಲಬಾರಿನ [illegible] ಹೆದರಿಸಿ ಕಲ[illegible] [illegible]ದ್ದನ್ನು.

ಸೈನಿಕ ಮುಖಂಡ[illegible] ಆಹಾರ ಸಮಿತಿಯನ್ನು ಹೆದರಿಸಿ ಕಲಸ[illegible] ಮಲಬಾರಿನಲ್ಲಿ ಆದ ಘಾತಕ ಮಾಡಿ, ಕ[illegible]ನ್ನು ತಡೆಯಲಾಗ ಸುತ್ತಾರೆ ಮಂ[illegible] [illegible]ರಾಗಲಿ, ಆಹಾರ ಮಂಟನ್ನೊಡನೆ, ಊರಲ್ಲಿ ಬೆಳೆದ ಅಕ್ಕಿಯ ಕ್ರಯ ಹೊರಗಿಂದ ತಂದ ಅಕ್ಕಿಯ ಕ್ರಯಕ್ಕೆ ಸರಿಯಾಗಿಡುವಂತೆ ಪ್ರಯತ್ನ ಮಾಡಲಿಲ್ಲ.

ಆ[illegible] ಸರಕಾರಗಳ ಹಾಗೂ ಬ್ರಿಟಿಷ್ ಕೇರಳ ಸರಕಾರದ ಈ ಕರ್ತವ್ಯ ಪರಾಙ್ಮುಖತೆಯುಂದಾಗಿ ಕೇರಳವು ಬಂಗಾಳದ ಪರಿಸ್ಥಿತಿಗೆ [illegible]ಂದು ಮುಟ್ಟಿದೆಯೆಂದು [illegible] ಎಂ. ಎಸ್. ನ[illegible] [illegible] ದ[illegible]ವರಿಸಿದ್ದಾರೆ.

[illegible]ನು ಕಲ್ಲಿಕೋ[illegible] [illegible] ಇತಿಹಾಸ [illegible] ದೇವಸ್ಥಾನವಾದ ಗುರುವಾಯೂರಿಂದ [illegible] ಬಂದು ಮಲೆಯಾಳ [illegible] ಸುದ್ದಿಯನ್ನೋದಿದೆ. 'ದೇ[illegible] ದ್ವಾರದಲ್ಲಿ, ಮರೆದಡಿಯಲ್ಲಿ [illegible] ಬಿದ್ದಿತ್ತು. ಆ ಹೆಣವನ್ನು ತೆಗೆದು ಹುಗಿದು ಹಾಕಲು ದೇವಸ್ಥಾನದ ಅಧಿಕಾರಿಗಳು ರೂ. [illegible]ನ್ನು ವೆಚ್ಚಮಾಡಿದರು. ಆ ಮನುಷ್ಯನ ಮರಣವು ಅನ್ನವಿಲ್ಲದ್ದರಿಂದೆಂದು [illegible]ದು ಬಂದಿದೆ. ಗುರುವಾಯೂರ ದೇವಸ್ಥಾನದಲ್ಲಿ ಈಗ [illegible] ಗಂಡಿ [illegible] [illegible]ಯ ಅನ್ನ [illegible] ಅನ್ನವನ್ನೂ ಅಲ್ಲಿನ [illegible]

ಕೇರಳದ ಕರುಣ ಕತೆಯನ್ನು ಕೇಳುತ್ತೀರಾ?

ಉಪವಾಸದ ನಿತ್ಯನೋವು!

ಬಡವರಿಗೆ ಕೊಡುತ್ತಿದ್ದರು. ಆದರೆ ಈಗ ತೆಳಿ ಬೇಡಲು ಬರುವ ನಿರ್ಗತಿಕ ಉಪವಾಸಿಗಳ ಸಂಖ್ಯೆ ಬೆಳೆದುದರಿಂದ, ದೇವಸ್ಥಾನದ ಅಧಿಕಾರಿಗಳು ತೆಳಿಯನ್ನೀಗ ಯಾರಿಗೂ ಕೊಡುವುದಿಲ್ಲ.

ಮಳೆಯಾಳೀ ಪತ್ರಿಕೆಗಳಿಗೆ ಇಂಥಾ ಉಪವಾಸದಿಂದಾದ ಮರಣದ ಸುದ್ದಿಗಳು ಆಗಾಗ ಬರುತ್ತವೆ. ಇದರಿಂದಾಗಿ ನಾನು ಆಗಾಗ ಯಾರನ್ನು ಕಂಡರೂ ಈ ಕುರಿತೇ ಮಾತುಕತೆ ಮಾಡತೊಡಗಿದೆ. ನಿಜವಾಗಿ ಇಂದು ಕೇರಳದಲ್ಲಿ ಬಂಗಾಳದ ಪರಿಸ್ಥಿತಿ ತೊಡಗಿರದಿದ್ದರೂ, ಬಡಜನರಲ್ಲಿ ಉಪವಾಸದಿಂದಾಗಿ ಮರಣ ಹೊಂದುವುದು ಪ್ರಾರಂಭವಾಗಿ ಬಿಟ್ಟಿದೆಯೆಂದು ನನಗೆ ತಿಳಿದಿದೆ. ಕುರುಂಬ್ರನಾಡ್ ತಾಲೂಕಿನ ಒಬ್ಬ ಬಂಧು, ಆ ತಾಲೂಕಿನಲ್ಲಿ ಉಪವಾಸದಿಂದ ೩೦ ಮಂದಿ ಸತ್ತ ವಿವರ ನನಗೆ ಹೇಳಿದ. ಎರ್ನಾಕುಲದ ಒಬ್ಬ ಗೆಳೆಯನು ಮಾರ್ಗದಲ್ಲಿ ಬಿದ್ದು ಸತ್ತ ಇಬ್ಬರು ಬೇಡುವವರ ಕರುಣಕತೆ ತಿಳಿಸಿದ. ಉಪವಾಸದಿಂದಾದ ಮರಣಗಳ ಸುದ್ದಿಯನ್ನು ಇನ್ನೂ ಕೆಲವರು ನನ್ನೊಡನೆ ತಿಳಿಸಿದ್ದಾರೆ.

ಭೂರಿ ಜನತೆ, ಭೂರಿಸಂಖ್ಯೆಯಲ್ಲಿ ಸಾಯುವುದು ಇನ್ನೂ ಪ್ರಾರಂಭವಾಗಿಲ್ಲ. ಆದರೆ ಅಲ್ಲಲ್ಲಿ ಉಂಟಾದ ಈ ಒಂದೊಂದು ಉಪವಾಸದ ಮರಣದ ಸುದ್ದಿಗಳು ಯಾರನ್ನಾದರೂ ಎದ್ದು ಕುಳಿತು ಆಲೋಚನ ಮಗ್ನನನ್ನಾಗಿ ಮಾಡಲು ಸಾಕಾಗಿದೆ. ಈಗಲೇ ಹೀಗಾದರೆ ಕಷ್ಟಕಾಲವಾದ ಮೇಯಿಂದ ಸಪ್ಟಂಬರ ವರೆಗಿನ ಅವಸ್ಥೆ ಹೇಗಾದೀತು? ಆಗ ಭೂರಿ ಜನತೆ ಭೂರಿ ಸಂಖ್ಯೆಯಲ್ಲಿ ಸಾಯುವುದು ಬರಲಿಕ್ಕಿಲ್ಲವೆಂದು ಹೇಗೆ ಹೇಳುವುದು?

ಉಪವಾಸದಿಂದಾದ ಈ ಮರಣಗಳ ಸಂಖ್ಯೆ ಕೇರಳದ ಸಂಕಷ್ಟದ ಒಂದು ಚಿತ್ರವನ್ನು ಮಾತ್ರ ಕೊಡುತ್ತದೆ. ಕಳೆದ ವರ್ಷ ಜುಲಾಯಿಯಿಂದ ಅಗಸ್ಟಿನ ವರೆಗೆ ಕೇರಳದ ೪೦,೦೦೦ ಜನರು ಕೊಲರಾದಿಂದ ಸತ್ತುಹೋದರು. ಇದರಲ್ಲಿ ೩೦,೦೦೦ ಸಂಖ್ಯೆಯೂ ಮಲಬಾರಿನದು! ಹೀಗಂದರೆ ಇಡೀ ಜನ ಸಂಖ್ಯೆಯಲ್ಲಿ [illegible]% ಜನತೆ ಸತ್ತು ಹೋದಂತಾಯಿತು.

'ಪಾಲ್ಘಾಟು ತಾಲೂಕಿನ ಒಂದು ಕುಟುಂಬ[illegible]ತ್ತು ಜನರೂ ಕೊಲರಾದಿಂದು ಮಡಿದು ಹೋದರು. ಸಣ್ಣ ಮಗುವೊಂದು ತೊಟ್ಟಿಲಲ್ಲಿ ಕಂಗಾಲಾಗಿ ಬಿದ್ದಿತ್ತು; ಆ ಮಗುವಿನ ಹಿರಿಯರೆಲ್ಲರೂ ಒಬ್ಬರ ಮೇಲೊಬ್ಬರು ಸಾಯುತ್ತಿದ್ದರು. ಆ ಕುಟುಂಬದಲ್ಲಿ ನಾಲ್ಕು ಜನರ ಸಾವು ಆದ ಮೇಲೆ ಯಾರೋ ಅವರ ಆಪ್ತರು ಬಂದು ಹೆಣ ಹೂಳಿದರು. ಸೈನ್ಯಕ್ಕೆ ಸೇರಿದ್ದ ಆ ಕುಟುಂಬದ ಯುವಕನೊಬ್ಬನು ಈ ಸುದ್ದಿ ಕೇಳಿ ಸ್ವಲ್ಪ ಹಣ ಕಳಿಸಿದ. ಆದರೆ, ಆ ಕುಟುಂಬದ ಯಾರಿಗೂ ಪ್ರಯೋಜನಕ್ಕೆ ಬೀಳದಂತೆ ಹಣ ಬಹಳ ತಡವಾಗಿ ಮುಟ್ಟಿತು!

ರೋಗದ ಸಂಕಟ ಸಾವು!

ಇದು ಒಂದು ಉದಾಹರಣೆ. ಒಬ್ಬ ಮಧ್ಯಮ ತರಗತಿಯ ಕೃಷಿಕ ಗೆಳೆಯನೊಬ್ಬನು ನನ್ನೊಡನೆ ಹೇಳಿದ, ಆ ಊರಿನ ಹರಿಜನರೆಲ್ಲರೂ ಕೊಲರಾದಿಂದ ಮಡಿದು ಈಗ ಬೇಸಾಯಕ್ಕೆ ಜನವೇ ಸಿಗುವುದಿಲ್ಲವೆಂದು. ಹಲವು ಕುಟುಂಬಗಳು ಈ ಗಂಡಾಂತರದಿಂದ ಪಾರಾಗಿವೆಯೆಂಬುದು ಖರೆ. ಆದರೆ ಎಷ್ಟೋ ಮಕ್ಕಳು ಮಾತ್ರ. ಇತ್ತೀಚೆಗೆ ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯವರು ಅಂಥಾ ಹಲವು ಅನಾಥರನ್ನು ಸಾಕುತ್ತಿದ್ದಾರೆ. ಕೊಚ್ಚಿನ್ ತಿರುವಾಂಕೂರು ಒಟ್ಟಿಗೆ ಕೇರಳದಲ್ಲಿಯೇ ಈ ಅನಾಥರ ಸಂಖ್ಯೆ ೫,೦೦೦ಕ್ಕೆ ಮೀರಿದೆ.

ಸುಮಾರು ಸಪ್ಟಂಬರಿಗೆ, ಹೊಸ ಬೆಳೆ ಬರುವ ಹೊತ್ತಿಗೆ ಕೊಲರಾ ಶಾಂತವಾಯಿತು. ಜನವು ಒಮ್ಮೆ ನಿಟ್ಟುಸಿರೆಳೆಯಿತು. ಆದರೆ ಆ ಪರಿಸ್ಥಿತಿ ಇನ್ನೊಮ್ಮೆ ಪುನರಾವರ್ತಿತವಾಗುವ ಚಿಹ್ನೆ ಈಗಲೂ ತೋರುತ್ತದೆ. ಕೆಲವು ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗಗಳು ತಲೆಯೆತ್ತಿವೆ. ಕಳೆದ ದಶಂಬರ ಜನವರಿಯಲ್ಲಿ ೧,೦೦೦ಕ್ಕಿಂತ ಮಿಕ್ಕಿ ಜನರು ಕೊಲರಾದಿಂದ ಮಡಿದಿದ್ದರು. ಆಹಾರ ಸಾಕಾಗದಿರುವುದರಿಂದಲೇ ಈ ರೋಗ ಹಬ್ಬಿತೆಂದು ವೈದ್ಯರೆಲ್ಲರೂ ಅಭಿಪ್ರಾಯ ಪಟ್ಟಿದ್ದಾರೆ. ಬರಗಾಲವು ಇನ್ನೂ ಇರುವಾಗ ಈ ವರ್ಷದ ಪರಿಸ್ಥಿತಿ ಹೇಗಾದೀತು?

ಬರಗಾಲವು ಜನರನ್ನು ಕೊಲ್ಲುವುದರಲ್ಲಿ, ರೋಗಗಳನ್ನು ಹರಡುವುದರಲ್ಲಿ ಮಾತ್ರ ನಿಲ್ಲುವುದಿಲ್ಲ. ಅದು ಮಾನವನ ಸಾಮಾಜಿಕ ಶಕ್ತಿಯನ್ನೂ ನಾಶಗೊಳಿಸುತ್ತದೆ. ಜನರ ಪ್ರಾಥಮಿಕ ಆವಶ್ಯಕತೆಗಳನ್ನು ಒದಗಿಸಿಕೊಳ್ಳಲು ಅವರು ಅಸಮರ್ಥರಾದಾಗ, ಪ್ರತಿಯೊಬ್ಬನೂ ತನ್ನ ಹೊಟ್ಟೆಗೆ ಮಾತ್ರ ನೋಡಿಕೊಳ್ಳುತ್ತಾನೆ. ಗೌರವ, ಆತ್ಮ ಮರ್ಯಾದೆ, ಸಹೋದರ ಭಾವ ಇವೆಲ್ಲಾ ಹಸಿವಿನ ಬೆಂಕಿಗೆ ಸುಟ್ಟುಹೋಗುತ್ತದೆ. ಬೇಡುವುದು, ಲಂಚ ಕೊಡುವುದು, ಸಾಲಮಾಡುವುದು, ಕದಿಯುವುದು, ಬದುಕಲಿಕ್ಕೆ ಏನೆಲ್ಲಾ ಮಾಡಬೇಕೋ ಅದನ್ನೆಲ್ಲಾ ಮನುಷ್ಯನು ಆಗ ಮಾಡಿಯೇ ಮಾಡುತ್ತಾನೆ. ಇದರಿಂದ ಮಿಲಿಯಾಂತರ ಮಂದಿ ಜನತೆ ಭಗ್ನ ಹೃದಯರಾಗುತ್ತಾರೆ.

ಕಳೆದ ಅಗಸ್ಟಿನಲ್ಲಿ ಅಲಪ್ಪೆಯಲ್ಲಿ ನನ್ನ ಗೆಳೆಯನೊಬ್ಬನೊಡನೆ ಉಳಕೊಂಡಿದ್ದೆ. ಬಳಸುತ್ತಿದ್ದ ಆತನ ಮುದಿ ತಾಯಿ ಹೇಳಿದರು. 'ನಾನು ಈ ಹಿತ್ತಿಲಲ್ಲಿ ಎಂಟು ಬಾಳೆ ಗಿಡ ನಟ್ಟೆ; ಅವನ್ನು ಬೆಳೆಸಲು ಎಂಟು ತಿಂಗಳ ಕಾಲ ದುಡಿದೆ; ಅವು ಚನ್ನಾಗಿ ಬೆಳೆದವು. ಆದರೆ ಒಂದು ದಿನ ಬೆಳಿಗ್ಗೆ ಅವುಗಳೆಲ್ಲವೂ ಕಳ್ಳುಹೋಗಿದ್ದವು.' ಇದೀ ತಿರುವಾಂಕೂರಿನಲ್ಲಿಯೇ ಈ ವಿಷಯ ಹೊಸತಲ್ಲವೆಂದು ಆಕೆಯು ಮಗ ನನಗೆ ವಿವರಿಸಿದ. ಮನೆಯಲ್ಲಿರುವ ಅಕ್ಕಿ ಭತ್ತ ಮಾತ್ರ

ಕಳವಾಗುವುದಿಲ್ಲ. ಬೆಳೆ, ತರಕಾರಿ, ಗೆಣಸು, ಮರಗೆಣಸುಗಳೂ ಕದ್ದು ಹೋಗುತ್ತವೆಂದು, ಯಾರಿದನ್ನು ಕದ್ದುಕೊಳ್ಳುವುದೆಂದು ಅವರಿಗೆ ಗೊತ್ತು, ಯಾಕೆ ಕದ್ದುಕೊಳ್ಳುತ್ತಾರೆಂದೂ ಗೊತ್ತು. ಅದನ್ನು ತಡೆಯುವುದು ಅವರಿಂದ ಸಾಧ್ಯವಾಗುವುದಿಲ್ಲ. ಊರಲ್ಲಿ ಬರಗಾಲ ಹಬ್ಬಿದಾಗ ಸಣ್ಣ ಪುಟ್ಟ ಕಳವು ಆರಂಭವಾಗಿ ದೊಡ್ಡ ದರೋಡೆಯೇ ನಡೆಯುತ್ತದೆ. ಮನೆಯಲ್ಲಿ ಅಕ್ಕಿ ಭತ್ತ ಇದ್ದವರಿಗಂತೂ ಜೀವದ ಹೆದರಿಕೆ. ಯಾರಿಗೆ ಅಧಿಕ ಆಹಾರ ಬೆಳಸಲು ಶಕ್ತಿಯಿದೆಯೋ ಅವರೂ ಆ ಕೆಲಸ ಮಾಡುವುದಿಲ್ಲ, ಏಕೆಂದರೆ ಹಾಗೆ ಮಾಡಿದರೆ ಕಳ್ಳರು ಮನೆಗೆ ಮುತ್ತಿಗೆ ಹಾಕುವ ಹೆದರಿಕೆ ಇದ್ದೇ ಇದೆ.

ಹಿಂದೆ ಯಾರು ಗೌರವಸ್ಥರಾಗಿದ್ದರೋ ಅವರೂ ಇಂದು ತಮ್ಮ ಮರ್ಯಾದೆ ಬಿಟ್ಟುಬಿಟ್ಟಿದ್ದಾರೆ. ಕೊಚ್ಚಿ ಮತ್ತು ತಿರುವಾಂಕೂರುಗಳ ಮಧ್ಯಮ ವರ್ಗದ ಜನರೂ ತಮ್ಮ ಹಿಂದಿನ ಆತ್ಮಗೌರವ ಇಟ್ಟುಕೊಂಡಿಲ್ಲ. ಆಫೀಸರರ ಕೈಕಾಲು ಹಿಡಿದು ತಮಗೆ ಸವಲತ್ತು ಸಿಗುವಂತೆ ಮಾಡಿಕೊಳ್ಳಲು ಯತ್ನಿಸುತ್ತಾರೆ. ಡಾಕ್ಟರರು ವಕೀಲರಂಥವರೂ ಕೆಲವು ಸೇರು ಅಕ್ಕಿಗಾಗಿ ಸ್ವಲ್ಪ ಸಕ್ಕರೆಗಾಗಿ ತಹಶಿಲ್ದಾರರ ಚಿಕ್ಕೆ ಬೇಡುವುದನ್ನು ನೋಡಬಹುದು. ಜಮೀನ್ದಾರರು ಮತ್ತು ವರ್ಗದಾರರು ತಮ್ಮ ಉತ್ಪತ್ತಿಯನ್ನು ಕಡಮೆ ತೋರಿಸಲು ಅಧಿಕಾರಿಗಳಲ್ಲಿ ಹೋಗುತ್ತಾರೆ.

ಬೇಡುವುದು ಮತ್ತು ವ್ಯಭಿಚಾರ ಹೆಚ್ಚಾಗುತ್ತಿದೆ. ತಿರುವಾಂಕೂರಿನ ಹಲವು ಸ್ಥಳಗಳಲ್ಲಿ ಮೂರು ವರ್ಷಗಳಿಗಿಂತ ಹೆಚ್ಚು ಮಂದಿ ಬೇಡುವವರನ್ನೀಗ ಕಾಣಬಹುದು. ಇದಕ್ಕಿಂತ ಹೆಚ್ಚಿಗೆ ಏನು ಆಗಬೇಕಾದದ್ದಿದೆ. ಈಗ ಅವರು ಹಿಂದಿನಂತೆ ಟೀಗಾಗಲಿ ಅನ್ನಕ್ಕಾಗಿ ಹಣ ಕೇಳುವುದಲ್ಲ, ಗೆಡ್ಡೆ ಗೆಣಸು ತಿನ್ನಲು!

ಕೊಚ್ಚಿನ್ ಮತ್ತು ಅಲಪ್ಪೆಯ ಬಂದು ಕಡವನ್ನು ಕೆಲವು 8, 10 ವರ್ಷದ ಹುಡುಗರು, ಒಂದು ಚಿಕ್ಕಾಸನ್ನು ನೀರಿಗೆ ಬಿಸುಡಲು ಬೇಡುತ್ತಾರೆ. ಏಕೆಂದರೆ 10, 15 ಫೀಟು ಆಳದ ನೀರಿನೊಳಗೆ ಮುಳುಗಿ ಆ ಚಿಕ್ಕಾಸು ತೆಗೆದುಕೊಂಡು ಅವರು ಪ್ರಯಾಣಿಕರಿಗೆ ತಮ್ಮ ಸಾಹಸ ತೋರಿಸಿ ಹಣ ಮಾಡಿಕೊಳ್ಳುವರು! ಅದರಿಂದ ಅವರು ಸ್ವಲ್ಪ ಮರಗೆಣಸು ಕೊಂಡು ತಿನ್ನುವರು. ಎರಡು ಮೂರು ತಿಂಗಳ ನಂತರ ಅದೇ ಹುಡುಗರು ಆ ಸ್ಥಳದಲ್ಲಿ ಉಳಿಯಬಹುದೆಂದು ನಾನು ನಂಬುವುದಿಲ್ಲ, ಕೇರಳವನ್ನು ಹಬ್ಬಿದ ಬರಗಾಲ, ರೋಗಗಳಿಗೆ ಆ ಸುಂದರ ಎಳೆ ಹಸುಳೆಗಳೂ ಬಂದು ಬಲಿಯಾಗುವವು!

ಇದಕ್ಕಿಂತ ಹುಸು ಮುಂದೆ ಕಲ್ಪನೆಯಲ್ಲಿ ಬಸ್ಸು ನಿಲ್ಲುವುದು. ಕೆಲವು ಹುಡುಗರೂ (ಹುಡುಗಿಯರೂ) ಹಾಡುತ್ತಿರುವರು. ಅನಾಥಾಲಯದಲ್ಲಿ ನೆಲಸಿರುವ ಬೇಡುವ ಹುಡುಗ ಹುಡುಗಿಯರವರು. ಪ್ರಯಾಣಿಕರಿಗೆ ಅವರ [illegible] ನನ್ನು ನೋಡಿ ಕರುಣೆ ಹುಟ್ಟುವುದು. [illegible]

(೨ನೇ ಪುಟಕ್ಕೆ ಮುಂದುವರಿದಿದೆ)

ಇದು ನನ್ನ ನಲ್ಮೆಯ ತಾಯ್ನಾಡು

ಜೆಕ್ಕ್ ಸ್ವಾತಂತ್ರ್ಯಪ್ರೇಮಿಯ ಲೇಖನ

"ದಬ್ಬಾಳಿಕೆಗೆದುರು ಕ್ರಾಂತಿ ಮಾಡುವೆವು"

ಜೆಕೊಸ್ಲವೇಕಿಯದ ಪ್ರಧಾನ ಮಂತ್ರಿ ಹಾಗೂ ವಿದೇಶಾಂಗ ಮಂತ್ರಿಯಾದ ಮಿ| ಜೋನ್ ಮಸರಿಕನು ೧೮೮೬ರಲ್ಲಿ ಜೆಕೊಸ್ಲವೇಕಿಯದ ಮೊದಲನೆಯ ಅಧ್ಯಕ್ಷ ಮಸರಿಕನ ಮಗನಾಗಿ ಹುಟ್ಟಿದನು. ತಂದೆಯಂತೆ ಮಗನೂ ದೇಶಸೇವೆಯ ನಿರತನಾಗಿ ದಿನದಿಂದ ದಿನಕ್ಕೆ ಉನ್ನತಾಧಿಕಾರಕ್ಕೇರುತ್ತಾ ಹೋದನು. ಮ್ಯೂನಿಕ್ ಆದೇಶವನ್ನು ವಿರೋಧಿಸಿ ತನ್ನ ಅಧಿಕಾರಕ್ಕೆಲ್ಲಾ ರಾಜಿನಾಮೆಕೊಟ್ಟು ಜೆಕೊಸ್ಲವೇಕಿಯದ ಸ್ವಾತಂತ್ರ್ಯ ಹೋರಾಟಕ್ಕಿಳಿದನು ಮಿ| ಜೋನ್ ಮಸರಿಕನು ಉತ್ತಮ ರಾಜಕಾರಣಿಯಾಗಿ, ಭಾಷಣ ಕರ್ತನಾಗಿ, ಲೇಖಕನಾಗಿ ಬ್ರಿಟಿಷ್ ಲೋಕಕ್ಕೆ ಪರಿಚಿತನಾಗಿದ್ದಾನೆ ಆ ದೇಶಪ್ರೇಮಿಯು ತನ್ನ ತಾಯ್ನಾಡು, ಜೆಕೊಸ್ಲವೇಕಿಯದ ಕುರಿತು ಈ ಲೇಖನವನ್ನು ಬರೆದಿರುವನು

"ನಾನು ನನ್ನ ಜನತೆಗೆ ಆಗಾಗ ತಾಯ್ನಾಡಿನ ಕುರಿತು ಹೇಳುತ್ತಿರುವೆನಾದರೂ, ಅವರ ಕುರಿತು ಕೆಲವು ವಾಕ್ಯಗಳನ್ನು ಬರೆಯಬೇಕೆಂದು ನನಗೆ ಹೇಳಲಾಗಿದೆ ಇದನ್ನಾದರೂ ನಾನು ಸಂತೋಷಪೂರ್ವಕಮಾಡುತ್ತೇನೆ, ಏಕೆಂದರೆ ನನ್ನ ತಾಯ್ನಾಡಿನ ಕುರಿತು ತಿಳಕೊಳ್ಳಲು ವಿದ್ವಾಂಸರಾಗಿ, ವಿಶೇಷಜ್ಞರಾಗಿ ತುಂಬಾ ಇದ್ದ ಬ್ರಿಟಿಷ್ ಜನತೆ ಮೆಚ್ಚತಕ್ಕದ್ದು ಬಹಳವಿದೆ

ದುರ್ದೈವದಿಂದ, ನನ್ನ ಮಾತೃಭೂಮಿಯು ಈ ಎರಡನೆಯ ಮಹಾ ಯುದ್ಧದಲ್ಲಿ ಬಹಳ ದುರಂತ ಭಾಗವಹಿಸಬೇಕಾಗಿ ಬಂದುದರಿಂದ, ಅದರ ರಾಜಕೀಯ ಮಹತ್ವವನ್ನು ಬ್ರಿಟಿಷ್ ಲೋಕ ಚೆನ್ನಾಗಿ ಬಲ್ಲುದು, ನಾವು ಆಗಲೇ ತಿಳಕೊಂಡಂತೆ, ಈಗ ಅದು ಜಗತ್ತಿಗೇ ತಿಳಿದಿದೆ, ಯಾವುದೆಂದರೆ, ಹಿಟ್ಲರನು ಸುಡೆಟನ್ ಜರ್ಮನರಿಗಿತ್ತಾ ಉಪಚಾರವು ಮುಂದೆ ಲೋಕ ಆಕ್ರಮಣಕ್ಕೆ ಆತನು ಮಾಡುವ ಪೂರ್ವಸಿದ್ಧತೆಯೆಂದು ಬೊಹೆಮಿಯದ ಅಧಿಪತಿ ಯಾರಾಗುತ್ತಾನೋ ಆತನೇ ಮುಂದೆ ಅಖಿಲ ಯೂರೋಪಿನ ಅಧಿಪತಿಯಾಗುವನೆಂದು ಬಿಸ್ಮಾರ್ಕ್ ಮೊದಲೇ ಹೇಳಿದ್ದ ನನ್ನ ತಾಯ್ನಾಡು, ರಶ್ಯಕ್ಕೆ ಹೋಗುವ ಅವರ ಹಾದಿಯ ಮಧ್ಯದಲ್ಲಿದ್ದುದರಿಂದ ಅದರ ಮೇಲೂ ಅಭಿಯೋಗ ನಡೆಯಿತು

ಕಳೆದ ಮಹಾ ಯುದ್ಧದ ನಂತರ, ಜೆಕೊಸ್ಲವೇಕಿಯವನ್ನು ಹಾಗೆಂದು ಕರೆದರೂ, ನಿಜವಾಗಿ ನೋಡಿದರೆ ಅದನ್ನು ಒಂದು ಹೊಸ ರಾಷ್ಟ್ರವೆಂದು ಕರೆಯುವುದು ತಪ್ಪು ಶತಮಾನಗಳ ಹಿಂದೆ, ಬೊಹೇಮಿಯದ ಪ್ರಾಚೀನ ರಾಜಧಾನಿಯೂ ಜೆಕೊಸ್ಲೋವೆಕಿಯಕ್ಕಿಂದು ಯಾವ ಗಡಿಯಿದೆಯೋ ಅದೇ ಗಡಿಯಲ್ಲಿತ್ತು ಮಗ್ಯಾರರು ಸೆಂಟ್ರಲ್ ಯೂರೋಪನ್ನು ಆಕ್ರಮಿಸಿದಾಗ, ಸ್ಲವೇಕಿಯ ಮತ್ತು ಮೊರೇವಿಯಾ ಪ್ರತ್ಯೇಕಗೊಳಿಸಲ್ಪಟ್ಟಿತು ಆದರೆ ಆ ಎರಡು ಜನಾಂಗಗಳ ಅನ್ಯೋನ್ಯತೆ ಉಳಿದಿತ್ತು ಆದ್ದರಿಂದ ಜೆಕೊಸ್ಲವೆಕಿಯವು ಒಂದು ಕೃತ್ರಿಮ ರಾಷ್ಟ್ರವಾಗಿರದೆ, ಸೌಹಾರ್ದದಿಂದ ಸೇರಿದ ಜನಾಂಗಗಳ ಕೂಟವಾಗಿದೆ. ನಿಜವಾಗಿ ನೋಡಿದರೆ ಜೆಕೊಸ್ಲವೇಕಿಯವು ಬೋಹೇಮಿಯದ ಪ್ರಾಚೀನ ರಾಜಧಾನಿ ಬ್ರಿಟನಿನೊಡನೆ ಇದಕ್ಕೆ ಅನೇಕ ಚಾರಿತ್ರಿಕ, ಕಲಾವಿಷಯಕ, ಧಾರ್ಮಿಕ ಸಂಬಂಧಗಳಿವೆ

ಬ್ರಿಟನಿನೊಡನೆ ಸೇರಿರಿ

'ಬ್ರಿಟನಿನೊಡನೆ ಸೇರಿರಿ' ಎಂಬುದು ಕ್ರಿಸ್ತ ಕಾಲಗದಲ್ಲಿ ಮಡಿದ್ದ, ನಿಮ್ಮ ರಾಜಕುಮಾರನ ಗೆಳೆಯ ಲಕ್ಸೆಂಬರ್ಗ್ ನ ಜೋನನ ಘೋಷಣೆಯಾಗಿತ್ತು ಆತನ ಮಗ ೪ನೇ ಚಾರ್ಲ್ಸ್ ಪ್ರೇಗ್ ನಗರವನ್ನು ನಿರ್ಮಿಸಿದನು ಅಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದನು, ಯೂರೋಪಿನ ಪ್ರಾಚೀನ ವಿಶ್ವವಿದ್ಯಾನಿಲಯಗಳಲ್ಲಿ ಅದೊಂದಾಗಿದೆ ಆತನ ಮಗಳು ಏನೆಯು ನಿಮ್ಮ ೨ನೇ ರಿಚಾರ್ಡನನ್ನು ಮದುವೆಯಾದಳು ಆ ಮೂಲಕ ಬ್ರಿಟನಿನ ರಾಣಿಯಾದಳು ನಿಮ್ಮ ದೊಡ್ಡ ಧಾರ್ಮಿಕ ಮುಖಂಡ ವಿಕ್ಲಿಫನನ್ನು ಪ್ರೋತ್ಸಾಹಿಸಿ, ಏನೆಯು ಆತನ ಧಾರ್ಮಿಕ ತತ್ವವನ್ನು ಬೊಹೇಮಿಯದಲ್ಲಿ ಪ್ರಚಾರಪಡಿಸಲು ಪ್ರೋತ್ಸಾಹಿಸಿದ್ದು, ಈ ಉಭಯ ರಾಷ್ಟ್ರಗಳ ಸಂಬಂಧವನ್ನು ಇನ್ನಷ್ಟು ಹೆಚ್ಚು ಮಾಡಿತು. ೧ನೇ ಜೇಮ್ಸ್‌ನ ಮಗಳು, ಆಂಗ್ಲ ರಾಜಕುಮಾರಿ ಎಲಿಜಬೆತಳು ಬೊಹೇಮಿಯದ ಅರಸನೊಡನೆ ... [illegible]

ಜೆಕೊಸ್ಲವೇಕಿಯಾ ಹೇಗಿದೆ? ಅದು ೫೫,೦೦೦ ಚದರ ಮೈಲು ವಿಸ್ತೀರ್ಣವುಳ್ಳದ್ದು. ಬ್ರಿಟನಿನ ಅರ್ಧದಷ್ಟಿದೆ. ಗಡಿನಾಡಿನ ಸುತ್ತ ಪರ್ವತಶ್ರೇಣಿ ಹಬ್ಬಿದೆ. ಇದು ಒಳ್ಳೆಯ ಆಕರ್ಷಕ ದೃಶ್ಯದಿಂದ ಕೂಡಿದೆ ಕಪ್ಪು ವಿಚಿತ್ರ ಅರಣ್ಯಗಳಿವೆ. ಪರ್ವತ ಶ್ರೇಣಿಗಳು, ಆಹ್ಲಾದಕರ ಹುಲ್ಲುಗಾವಲು, ಮನೋಹರ ಗ್ರಾಮಗಳು ಇದರಿಂದ ಜೆಕ್ಕರ ರಾಜಧಾನಿ ಪ್ರೇಗು ಯೂರೋಪಿನ ಸುಂದರ ರಾಜಧಾನಿಗಳಲ್ಲಿ ಒಂದಾಗಿದೆ. ನನ್ನ ತಾಯ್ನಾಡು, ನಿಮ್ಮದರ ಹಾಗೆ ಪ್ರಾಚೀನ ಅರ್ವಾಚೀನಗಳ ಸುಂದರ ಸಮ್ಮಿಶ್ರವಾಗಿದೆ.

ಭೂತ ಪ್ರೇತಗಳ ನಾಡು

ಇದು ಭೂತಪ್ರೇತಗಳ ನಾಡು, ಇಂಥಾ ಸಾವಿರಾರು ಕಟ್ಟು ಕತೆಗಳಿವೆ. ಏಳು ಪರ್ವತಗಳ ಕುರಿತು ಈ ಕತೆಗಳನ್ನು ಜನರು ಹೇಳುತ್ತಾರೆ ನೂರು ವರ್ಷಗಳ ಹಿಂದೆ ಕ್ರೋಕನ ಸುಂದರಿ ಕನ್ಯೆ ಲಿಬ್ಯೂಸೆಯು ಒಂದು ಕನಸಿನಲ್ಲಿ ಒಂದು ನಗರ ನಿರ್ಮಾಣ ಮಾಡುವ ಕನಸು ಕಾಣುತ್ತಾ ಆ ಜಾಗದಲ್ಲಿ ಕನಸಿನ ಸತ್ಯತೆ ತಿಳಿಯಲು ಒಂದು ಹೆಂಗುಸಿರುವುದಾಗಿಯೂ ಸ್ವಪ್ನ ಕಂಡಳು ಮರುದಿನ ಕನಸಿನಲ್ಲಿ ಕಂಡಂತೆ ಅಲ್ಲಿ ಒಂದು ಹೆಂಗುಸಿದ್ದಳು. ಆ ಕ್ಷಣವೇ ಮಹಾ ನಗರ ನಿರ್ಮಾಣಕ್ಕೆ ತಳಹದಿ ಕಲ್ಲು ಹಾಕಲ್ಪಟ್ಟಿತು ನೀವು ನಮ್ಮ ನಗರ ಸಭಾ ಭವನವನ್ನು ನೋಡಬಹುದು, ಅಲ್ಲಿನ ಮಹತ್ವದ ಗಡಿಯಾರು ಪ್ರೇಕ್ಷಣೀಯವಿದೆ ನೀವು ಸ್ವರ್ಣಮಯ ಬೀದಿ ನೋಡಿರಿ ಅಲ್ಲಿ ಹಿಂದಿನ ವೈಜ್ಞಾನಿಕರು ತತ್ವಜ್ಞಾನಿಯು ರತ್ನವನ್ನು ಕಂಡು ಹುಡುಕಲು ಸಾಹಸಪಟ್ಟರು. ಲೋಹವನ್ನು ಬಂಗಾರಮಾಡಲು ಪ್ರಯತ್ನಿಸಿದರು, ಮುದುಕನನ್ನು ಯುವಕನನ್ನಾಗಿ ಮಾಡಲು ಸಾಧಿಸಿದರು ಮೃತನನ್ನು ಅಮರನನ್ನಾಗಿ ಮಾಡುವ ಆಸೆಯಿಟ್ಟರು ಇರುವದು ಹಳೆಯ ಸ್ಮೃತಿಗಳಲ್ಲಿನ ಹೊಸ ಪ್ರಯಾಣಿಕರ ಕಾಲ್ನಡಿಗೆ ಸಿಕ್ಕಿದ ನಗರ ಆಧುನಿಕ ರೀತಿಯ ಕಟ್ಟಡಗಳಲ್ಲಿಂದು ತುಂಬಿವೆ ಕ್ರೆಡೋನಿನಲ್ಲಿ ಪ್ರಾತಃ ೩ ಗಂಟೆಗೆ ವಿಮಾನವೇರಿ ಕುಳಿತರೆ ನೀವು ಊಟದ ಹೊತ್ತಿಗೆ ಆ ನಗರವನ್ನು ಮುಟ್ಟುವಿರಿ

ರೈಲು ಪ್ರಯಾಣ, ಶುಭ್ರ ಗಾಳಿ ಇತ್ಯಾದಿ ಮುಖ್ಯ ನಗರವನ್ನು ಜತೆಗೂಡಿಸಿವೆ ಬಸ್ಸ್ ಪ್ರಯಾಣವು ನಿಮ್ಮನ್ನು ಹೊರಗಿನ ಹಳ್ಳಿಗೆ ಕರಕೊಂಡು ಹೋಗುವುದು ಎಷ್ಟು ಸುಂದರವಾಗಿವೆ ಈ ಹಳ್ಳಿಗಳು ಹೂ ಹಣ್ಣುಗಳಿಂದ ಕೂಡಿದ ಅಲ್ಲಿನ ಮನೋಹರ ಕುಟೀರಗಳ ಚೆಲುವೇನು? ಈ ಗುಡಿಸಲ ಒಳಗೆ ಇನ್ನೂ ಕನಸಿನ ಕತೆಗಳನ್ನು ಅಲ್ಲಿನ ಜನ ಕಾಣುತ್ತಾ ಇದ್ದಾರೆ ನನ್ನೀ ದೇಶವು ಬಹಳಷ್ಟಾಗಿ ಪ್ರಾಚೀನವಾಗಿಯೇ ಇದೆಯೆಂದು ನಾನು ನಿಮಗೆ ತಿಳಿಸುವುದಲ್ಲ ನಮ್ಮ ಮಹಾ ಕವಿಗಳಿಂದ ಎಂಟೋನ್ ಡ್ವೋರಕ್, ಸೆಮಟಾನಾ ಮೊದಲಾದವರಿಂದ ನಮ್ಮ ರಾಷ್ಟ್ರದ ಪ್ರಾಚೀನ ವೈಭವ ಹಾಡಲ್ಪಟ್ಟಿದೆ, ಹಾಗೆಯೇ ಭವಿಷತ್ತಿನ ಬಗ್ಗೂ ನಮಗೆ ತುಂಬಾ ಭರವಸೆ ಇದೆ.

ಮೊದಲನೆಯ ಮಹಾಯುದ್ಧದ ನಂತರ ದೇಶದ ಆಡಳಿತವನ್ನು ಮುನ್ನಡೆಸುವ ಹೊಣೆ ನನ್ನ ತಂದೆಯ ಪಾಲಿಗೆ ಬಿತ್ತು ಓರ್ವ ಬಡ ಹೆಂಗುಸಿನ ತೋಟದ ಬಟಾಟೆಗಳನ್ನು ಅಗೆದದ್ದಕ್ಕಾಗಿ ಆಕೆಯಿಂದ ಪ್ರತಿಫಲ ರೂಪದಲ್ಲಿ ಓದುಬರಹ ಕಲಿತ ಓರ್ವ ಕೋಚ್‌ಮೇನನ ಮಗ ನನ್ನ ತಂದೆ. ಆಸ್ಟ್ರಿಯನ್ ಸಾಮ್ರಾಜ್ಯ ಉರುಳಿ, ಬೊಹೇಮಿಯಾ, ಮೊರೇವಿಯಾ, ಸ್ಲೊವೇಕಿಯಾ ಮತ್ತು ರುತೇನಿಯಗಳು ಒಂದು ಪ್ರಜಾ ಪ್ರಭುತ್ವ ರಾಷ್ಟ್ರವಾಗಬೇಕೆಂದು ನನ್ನ ತಂದೆ ಕನಸು ಕಾಣುತ್ತಿದ್ದ. ೧೯೧೮ರಲ್ಲಿ ಆತನು ವಾಶಿಂಗ್ ಟನಿನಲ್ಲಿ ಸ್ವಾತಂತ್ರ್ಯ ಘೋಷಣೆ ಹೊರಡಿಸಿದ, ಮರಳಿ ತನ್ನ ರಾಷ್ಟ್ರಕ್ಕೆ ಬಂದಾಗ, ತನ್ನ ನಾಡಿನ ಜನತೆ ಆನಂದ ತುಂದಿಲ ... [illegible] ೧೯೩೭ರಲ್ಲಿ ಮರಣ ಹೊಂದುವ ಕಾಲದವರೆಗೆ ಆತನು ತನ್ನ ರಾಷ್ಟ್ರವು ಒಂದು ಪ್ರಮುಖ ಪ್ರಜಾ ಪ್ರಭುತ್ವ ರಾಷ್ಟ್ರವಾಗಬೇಕೆಂದು ಸಾಧಿಸಿದ ಆತನು ಆ ಕಾರ್ಯದಲ್ಲಿ ಜಯಶಾಲಿಯಾದನೆಂದು ಎಲ್ಲಾ ಚರಿತ್ರಕಾರರೂ ಮುಕ್ತಕಂಠ ಒಪ್ಪಿದ್ದಾರೆ ನಿಜವಾಗಿಯೂ ಇದೊಂದು ಮಹಾ ಸಾಧನೆ, ೧೯೧೮ರ ವರೆಗೆ ಸ್ಲೊವೇಕಿಯ ಮತ್ತು ರುತೇನಿಯದ ಅರ್ಧವಾಸಿ ಜನರು ನಿರಕ್ಷರರಾಗಿದ್ದರು ರುತೇನಿಯದಲ್ಲಿದ್ದ ೧೬ ಪ್ರಾಥಮಿಕ ಶಾಲೆಗಳು ಬೇಗನೇ ೧೬೩೮ರ ಸಂಖ್ಯೆಗೇರಿ ಅವರೊಡನೆ ೧೫೧ ಕಿಂಡರ್ ಗಾರ್ಟನ್ ಶಾಲೆಗಳೂ ೧೧೬ ಸೆಕೆಂಡರಿ ಶಾಲೆಗಳು ಆದವು ಒಂದು ಬ್ರೋನೋದಲ್ಲಿ ಇನ್ನೊಂದು ಬ್ರಟಿಸ್ಲವಾದಲ್ಲಿ ಹೀಗೆ ಇನ್ನೆರಡು ವಿಶ್ವವಿದ್ಯಾನಿಲಯಗಳೂ ಸ್ಥಾಪಿತವಾದವು

ಇದು ಅಭಿಮಾನ ವಿಷಯ

ಜೆಕೊಸ್ಲವೆಕಿಯದ ಉತ್ತಮ ಸ್ಥಿತಿಯನ್ನು ಉಳಿಸುವಲ್ಲಿ, ಹಳೆಯ ಸಂಸ್ಕೃತಿಯನ್ನು ಹೊಸ ಹಾದಿಗೆ ತರಲು ಬೇಕಾದ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಯಿತು ಹೊಸ ಕಾರ್ಖಾನೆ, ಹೊಸ ಆಸ್ಪತ್ರೆಗಳನ್ನು ಸ್ಥಾಪಿಸಿ, ಸಂಶೋಧನಾಲಯಗಳನ್ನು ನಿರ್ಮಿಸಿ, ವೈದ್ಯ ಮತ್ತು ಕೃಷಿಯನ್ನು ಬೆಳಸಲಾಯಿತು ನಮ್ಮ ಪ್ರಸಿದ್ಧ ಗ್ರಾಸು ಕಾರ್ಖಾನೆಯಲ್ಲಿ 15 0000 ಜನರು ಉದ್ಯೋಗದಲ್ಲಿದ್ದಾರೆ ಅವರು ಮಾಡಿದ ಸಾಮಾನು ಪ್ರತಿಯೊಂದು ಬ್ರಿಟಿಷರ ಮನೆಯಲ್ಲಿಯೂ ಕಾಣಬಹುದು ನಾವು ಮಾಡಿದ ಹಲವು ಸಾಧನೆಗಳ ಕುರಿತು ನಿಜವಾಗಿ ನಾವೇ ಅಭಿಮಾನ ಪಡತಕ್ಕದ್ದಿದೆ ಈ ಯುದ್ಧಾನಂತರ ನಮ್ಮ ರಾಷ್ಟ್ರದ ಪ್ರಗತಿ ಮತ್ತಷ್ಟು ಹೆಚ್ಚುವುದು

ಉದಾಹರಣೆ ನಮಗೆ ನಮ್ಮ "ಓವರಿಜ್" ಯೋಜನೆಯಿದೆ ಸಂಬಳಗಳನ್ನು ಕಾನೂನಿನಿಂದ ಹಿಡತಕ್ಕೆ ತರಲಾಗಿದೆ ಹಾಗಾಗಿ ಪ್ರತಿಯೊಬ್ಬ ಕೂಲಿಗಾರನೂ ಒಳ್ಳೆಯ ಜೀವನ ಮಾಡುವಷ್ಟು ಗಳಿಸುತ್ತಾನೆ ಸಂಬಳ ಸಹಿತ ರಜೆ ಒತ್ತಾಯದಿಂದ ಕೊಡಲಾಗ ತ್ತದೆ ಆಧುನಿಕ ಯುಗಕ್ಕನುಕೂಲವಾದ, ಆಘಾತ, ಅನಾರೋಗ್ಯ, ವ್ಯಾದಿ ಪ್ರಾಯಗಳಿಗೆ ಬೇಕಾಗಿ ಜೀವವಿಮೆಯೂ, ಅಸೌಖ್ಯವಾದಾಗ ಯೋಗ್ಯ ವೈದ್ಯಾಲಯಗಳೂ ಕೂಲಿಗಾರರಿಗೆ ಇವೆ ಉದ್ಯೋಗದ ನಂತರ ವಿರಾಮವೇತನ ಕೊಡಲಾಗುತ್ತದೆ 14,000,000 ಜನಸಂಖ್ಯೆಯಲ್ಲಿ 10,000,000 ಜನರ ಜೀವನವೂ ಯೋಗ್ಯ ಪೆನ್ಶನ್ ಜೀವವಿಮೆಗಳಿಂದ ಭದ್ರವಾಗಿದೆ ಸಾಮಾಜಿಕ ಉನ್ನತಿಯ ಮಂತ್ರಿಮಂಡಳವೂ ಅದ್ಭುತ ಕಾರ್ಯ ಮಾಡಿದೆ ನಮ್ಮ ಶಾಲೆಗಳಲ್ಲಿ ಹಾಲು ಹಂಚುವ ಕೆಲಸವಿದೆ ಮುನಿಕಿಗಿಂತ ಮೊದಲೇ ನಾವು ನಮ್ಮ ಶಾಲೆಗಳಲ್ಲಿ 1,309 ಹಾಲಿನ ಡಿಪೋ ತೆರೆದಿದ್ದೆವು ಇದೂ ಅಲ್ಲದೆ 360 ವೈದ್ಯಾಲಯಗಳು ತಾಯಿ ಮತ್ತು ಮಕ್ಕಳ ಸಲುವಾಗಿಯೇ ಇವೆ ಧರ್ಮಾರ್ಥ ವೈದ್ಯಾಲಯ, 51 ಮಕ್ಕಳ ರಜಾ ಕೇಂದ್ರಗಳು, 11 ಮಕ್ಕಳ ಉನ್ನತಿ ಕೇಂದ್ರಗಳು, 44 ಅನಾಥಾಲಯಗಳಿವೆ

ಗರ್ಭಿಣಿಯರಿಗೆ ಪೂರ್ಣ ಸಂಬಳ ತೆತ್ತು 6 ತಿಂಗಳ ರಜಾ ಕೊಡಲಾಗುವುದು ಹೆತ್ತ ಮೇಲೆ 6 ವಾರದ ರಜೆಯಿದೆ ಮತ್ತೆ 12 ವಾರಗಳ ವರೆಗೆ ಅನಾರೋಗ್ಯ ಜೀವವಿಮೆಯಿದೆ ಅವರ ಸಂಬಳದ ಅರ್ಧ ತೆರುವ ವಿಶೇಷ ರಿಯಾಯಿತಿಗಳಿವೆ ಇದಕ್ಕಿಂತ ಹೆಚ್ಚು ನಮ್ಮ ಸಾಮಾಜಿಕ ಕಾರ್ಯದ ಕುರಿತು ಇಲ್ಲಿ ವಿವರಿಸಲಾರೆ ಆದರೆ ಇಷ್ಟರಿಂದಲೇ ನನ್ನ ತಾಯ್ನಾಡಿನ ಉನ್ನತಿ ಏಳಿಗೆ ಕುರಿತು ನೀವು ಊಹಿಸಿಕೊಳ್ಳಬಹುದು.

ಗೃಹ ನಿರ್ಮಾಣ

ಗೃಹ ನಿರ್ಮಾಣದ ಕುರಿತೂ ಆಶ್ಚರ್ಯಜನಕ ಅಭಿವೃದ್ಧಿಯಾಗಿದೆ. ೧೯೧೯ರಿಂದ ೧೯೩೭ರ ಒಳಗೆ ಸರಕಾರ ಖರ್ಚಿನಿಂದಲೇ ೬,೯೦೧ ಕುಟುಂಬದ ಮನೆಗಳೂ ಕಟ್ಟಲ್ಪಟ್ಟವು ಬಾಡಿಗೆಗಳೂ ಶಾಸನ ಮೂಲಕ ನಿಶ್ಚಿತವಾಗಿ ಪ್ರಸಿದ್ಧ ಸೋಕೊಲ್ ಪಂಥದ ಸಂಸ್ಥೆ ಬೇರೆ ಬೇರೆ ಹಳ್ಳಿ ಪಟ್ಟಣಗಳಲ್ಲಿ ಶಾಖೆಗಳನ್ನು ತೆರೆದಿದೆ ಇದರಿಂದ ಪ್ರತಿಯೊಬ್ಬನ ದೇಹಾರೋಗ್ಯ ಹೆಚ್ಚಿದೆ, ಆನಂದ ಅಧಿಕವಾಗಿದೆ. ಸರಕಾರೀ ಖಾತೆಗಳಲ್ಲಿ ಹೆಂಗುಸರು ಗಂಡುಸರ ಸಮಾನಸ್ಕಂಧರಾಗಿ ಕೆಲಸಮಾಡುತ್ತಾರೆ

ಜರ್ಮನರು ನಮಿಷ್ಟವೆಲ್ಲಾ ಒಳ್ಳೆಯ ಕೆಲಸಗಳನ್ನೂ ಹಾಳುಗೆಡಿದ್ದಾರೆ ಒಂದು ದಿನ ನಾವು ಇದನ್ನು ನಮ್ಮ ಗೆಳೆಯರೊಡಗೂಡಿ ಸರಿಪಡಿಸಬೇಕಾಗಿರುವುದು ಸ್ವಾತಂತ್ರ್ಯ ಹೋರಾಟದಲ್ಲಿ ರಶ್ಯನ್ ವೀರರೊಡನೆ ಸೇರಿ ಹೋರಾಡುವ ಜೆಕ್ಕ್ ವೀರರ, ಜೆಕ್ಕ್ ಮಹಿಳೆಯರ ಕಾರ್ಯಕ್ಕಾಗಿ ನಾವು ಅಭಿಮಾನಿಗಳಿದ್ದೇವೆ ಜರ್ಮನರ ಆಕ್ರಮಣವನ್ನೆದುರಿಸಲು ನಮ್ಮ ವೀರರು ಮಾಡುವ ಬಲಿದಾನಕ್ಕೂ ನಾವು ಅಭಿಮಾನಿಗಳಿದ್ದೇವೆ

ಗುಪ್ತ ಕ್ರಾಂತಿ ಮಾಡುವುದು ಹೇಗೆಂದು ನಮಗೆ ಗೊತ್ತಿದೆ ಜರ್ಮನರೆಷ್ಟು ದಬ್ಬಾಳಿಕೆ ನಡೆಸಿದರೂ, ನಾವು ತಲೆಮರೆಸಿ, ಸಂಘಟಿ- ಹೋರಾಟ ಕೊಡಬಲೆವು ... ಬಿ ಬಿ ಸಿ.

ಜರ್ಮನರ ಅಧೀನದ ಯಾವುದೇ ... ಜೆಕ್ಕರು ಓದಬಾರದೆಂದು ಹೇಳಿ ... ಯಾವುದೇ ಟ್ರೈನು, ಬಸ್ ... ಯಾರೂ ಅಂಥಾ ಪತ್ರಿಕೆ ಓದುವುದಿಲ್ಲ ಸಮಯ ಅನುಕೂಲವಾ... ವೀರರೂ, ನಾರಿಯರೂ ಎದುರ... ರಾಗಿದ್ದಾರೆ ಜರ್ಮನರ ದಾಸ... ಅವರು ಕಿತ್ತೊಗೆಯುವರು ... ಭವ್ಯ ಇತಿಹಾಸವಿತ್ತು, ಅಂತೆಯೇ ಭವಿಷ್ಯತ್ತೂ ಇದೆ ಅದು ವಿಶ್ವದ ವೈಭವಗಳೆ ಶವರೂರಾದಂತೆ ವೀರ ಯೋಧರ ನೆಲೆವೀಡೂ ಇದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿಯೂ ಮುಂದಿತ್ತಿದೆ ನಮ್ಮ ಜನರು ಪ್ರಗತಿಶೀಲರು ಜರ್ಮನರ ಪಾದದಡಿಯಲ್ಲಿ ಬಾಳಿರುವುದಕ್ಕಿಂತ ಅಕ್ಕೆನು ನರಕಕ್ಕಾದರೂ ಹೋದಾನು

ಇದನ್ನೆಲ್ಲಾ ಒಂದು ದಿನ ನೀವು ನಿಮ್ಮ ಕಣ್ಣಾರೆ ಕಾಣಲಿರುವಿರಿ

ಇಂದಿನ ಕೇರಳ, ನಾಳೆಯ ಬಂಗಾಳವಾಗುವುದೆ?

(೧ನೇ ಪುಟದಿಂದ)

ಅವರ ಸಂಗೀತ ಕೇಳಿ ಆನಂದವಾಗುವುದು ಹಾಗಾಗಿ ಅವರಿಗೆ ಹಣ ಸಿಗುತ್ತದೆ ಅದರಿಂದ ಅವರಿಗೆ ಅನ... ನಾನು ಬಯಸುವುದಿಲ್ಲ ... ರೂ ಅನ್ನ ಸಿಗದಂಥಾ ... ಎಷ್ಟೋ ಮಂದಿ ಬೇಡು... ಗಿಯರು ಮುಂದೆ ವ್ಯಬಿಚಾರಕ್ಕೆ ಅಂಗಡಿಯ ಬಾಗಿಲಲ್ಲಿ ಮಲಕೊಳ್ಳುವ ನಿರ್ಗತಿಕರಾದ ಬೇಡುವ ಹೆಂಗುಸರು ವ್ಯಭಿಚಾರದಲ್ಲಿ ಬಿದ್ದಿರುವರೆಂದು ಖಂಡಿತವಾಗಿ ತಿಳಿಯಬಹುದು

ತಿರುವಾಂಕೂರಲ್ಲಿ ಹಲವು ಹಳ್ಳಿಗಳಿವೆ ರೇಶನಿಂಗ್‌ನಲ್ಲಿ ಒಬ್ಬನಿಗೆ ಸಿಗುವುದು ೨ ತೊಲೆ ಅಕ್ಕಿ ತಿಂಗಳಲ್ಲಿ ಒಂದು ಊಟಕ್ಕೂ ಸಾಲದು ತಿಂಗಳ ೨೮ ದಿನವೂ ಉಪವಾಸವಿರಬೇಕು. ಇದ್ದರಲ್ಲಿಯೂ ಅರ್ಧ ಅಕ್ಕಿ, ಉಳಿದದ್ದು ಬೇರೆ ಆಹಾರ ಸಾಮಗ್ರಿ, ತಿರುವಾಂಕೂರಿನ ಕೈಗಾರಿಕೆ ಕೇಂದ್ರಗಳ ಕೆಲಸಗಾರರ ದಿನದ ರೇಶನಿಂಗ್ ... ೭ ಔನ್ಸ್ ... ಒಬ್ಬನ ಆವಶ್ಯಕತೆಯ ... ಅಥವಾ ... ಆತನಿಗೆ ಸಿಗುತ್ತದೆ

ಮಧ್ಯಮ ವರ್ಗದ ಮೇಲಿನವರೂ ತಮ್ಮ ಹಿಂದಿನ ಆಡಂಬರ ಬಿಟ್ಟು ಬಿಟ್ಟಿದ್ದಾರೆ. ಇತರರು ಕೆಲವರು ಬದುಕಲು ಬೇಕಾದಷ್ಟು ಮಾತ್ರ ಊಟಮಾಡುತ್ತಾರೆ ಯಾರೂ ಶರೀರ ಬೆಳವಣಿಗೆಗೆ ಆವಶ್ಯವಿರುವಷ್ಟು ಉಣ್ಣುವುದಿಲ್ಲ. ಇದೀ ಕೇರಳವು ಇಂದು ಹೀಗಿದೆ, ಕೇರಳದ ಸಾವಿರಾರು ಮಂದಿ ಮರಣದ ಬಾಗಿಲು ಮುಟ್ಟಿದ್ದಾರೆ ಈ ಪರಿಸ್ಥಿತಿ ಮುಂದುವರಿದರೆ ಕೇರಳ ಬಂಗಾಳವಾಗದಿರುವುದೆ?

ಸಮರಭೂಮಿಯ ಸಂಚಾರ

ಕಳೆದ ಜೂನಿನಲ್ಲಿ ಜಪಾನಿನಲ್ಲಿ ನ್ಯಾಯಾಧಿಪತಿಯಾಗಿದ್ದ ಜೋಸೆಫ್ ಗ್ರೂ ಎಂಬವರು ಇಂದು ಭಾಷಣವನ್ನು ಕೆಂಟುಕಿ ವಿಶ್ವವಿದ್ಯಾನಿಲಯದಲ್ಲಿ ಕೊಟ್ಟರು ಅದರಲ್ಲಿ ಅವರು, ಇಂದಿನ ಜಪಾನ್ ಯುದ್ಧವನ್ನು ಯಾರು ಮುನ್ನಡೆಸುತ್ತಾರೋ, ಅವರಿಗೆ ಸಾಮಾನ್ಯ ಜನತೆಯ ಪ್ರೋತ್ಸಾಹವಿಲ್ಲದಿರುವುದರಿಂದ, ಮುಂದೆ, ಶಾಂತಿ ಸ್ಥಾಪನೆ ಮಾಡುವ ಕಾಲದಲ್ಲಿ, ಜನತೆಯ ಪ್ರೋತ್ಸಾಹವಿಲ್ಲದ ಈ ಯುದ್ಧ ನಿರ್ವಾಹಕರ ಯೋಜನೆ ನಿರ್ನಾಮವಾಗಲಿದೆ ಯೆಂದು ಅವರು ಸಾರಿದ್ದಾರೆ ಅವರ ಭಾಷಣದ ವಿವರವು ಇಂತಿರುವುದು

ಜಪಾನರಿಗೆ ಜಗಳಬೇಡ

ಇಂದಿನ ಜಪಾನ್ ಯುದ್ಧವನ್ನು ಜರಗಿಸಿದ ಸಾಮಾನ್ಯ ಜನತೆಗೆ ಈ ಯುದ್ಧದ ಕಾರಣ ಗೊತ್ತಿರಲಿಲ್ಲ ಪಾಶ್ಚಿಮಾತ್ಯ ಜನಾಂಗಗಳೊಡನೆ ಜಪಾನಿನ ಜನತೆಗೆ ಅಂಥಾ ದೀರ್ಘ ಕಾಲದ ವಿದ್ವೇಷವಾದರೂ ಏನೂ ಇಲ್ಲ ನನ್ನ ಜಪಾನಿನ ಅನೇಕ ಕಾಲದ ವಾಸದಿಂದ ನಾನು ತಿಳಕೊಂಡದ್ದೇನೆಂದರೆ, ಜಪಾನಿನ ಸಾಮಾನ್ಯ ಜನರಿಗೆ, ಯಾವುದೆ ಜಾತಿಪಂತ, ಪಂಥದವರಿರಲಿ ಅವರಿಗೆ ಅಮೆರಿಕದೊಡನೆ ಯಾವುದೇ ವಿದ್ವೇಷವಿಲ್ಲ, ಅವರಿಗೆ ನಮ್ಮ ಅನಾಕ್ರಮಣಶೀಲತೆ ಮಾನವೀಯ ದಯಾಬುದ್ಧಿಯ ಕುರಿತು ಗೌರವವಿದೆ ಎಷ್ಟೋ ಸಲ ನಮಗೆ ಅವರು ವಿಧೇಯತ್ವ, ಸ್ನೇಹ, ಔದಾರ್ಯ ತೋರಿಸಿದ್ದಾರೆ ಇಷ್ಟು ಮಾತ್ರವಲ್ಲದೆ ಅವರು ವಿಧೇಯ ಜನರು ಯಾವಾಗ ಅವರ ಸರಕಾರದುಷ್ಟರ ಕೈಯಲ್ಲಿದ್ದರೂ, ಕೊಲೆಪಾತಕಿಗಳ, ಹುಚ್ಚರ ಕೈಗೆ ಬಿತ್ತೋ ಆಗ ಅಲ್ಲಿನ ಜನತೆಯೂ ಅವರಿಗೆ ಪರಂಪರಾಪ್ರಾಪ್ತವಾದ ವಿಧೇಯತಾ ಬುದ್ಧಿಯಿಂದಲೇ ಬೆಂಬಲವಿತ್ತಿತು

ಇದೇ ಸಾಮಾನ್ಯ ಜನತೆಯಿಂದ ಯುದ್ಧದಲ್ಲಿ ಹೋರಾಡುತ್ತಿದೆ ಆದರೆ ಅವರಿಗೆ ಹೃತ್ಪೂರ್ವಕವಾದ ವಿದ್ವೇಷವು ಅವರು ಹೋರಾಡುವ ಯಾವ ರಾಷ್ಟ್ರದೊಡನೆಯೂ ಇಲ್ಲ ಚೀನದ ಜನತೆ ಯಾವ ಸ್ವಾತಂತ್ರ್ಯ ಪ್ರೇಮದಿಂದ, ಯಾವ ನಿರ್ಧಾರದಿಂದ ಯಾವ ಧೈರ್ಯದಿಂದ ಇಂದು ಹೋರಾಡುತ್ತದೋ ಅಂಥಾ ಎಂಥಾ ಪರಾಕ್ರಮಗಳು ಜಪಾನಿನ ಜನತೆಯ ಹೃದಯದಲ್ಲಿ ಹುಟ್ಟುವುದಿಲ್ಲ ಅವರಿಗೆ ಯಾವುದನ್ನು ಮಾಡಬೇಕೆಂದು ಆಜ್ಞೆಯಾಗಿದೆಯೋ ಅದನ್ನು ಹೆದರಿಕೆಯಿಂದಲೂ ಶಿಸ್ತಿನಿಂದಲೂ ಅವರು ಮಾಡುತ್ತಿದ್ದಾರೆ ಜಪಾನನ್ನು ಇಂದು ಈ ಅಗ್ನಿ ಪರೀಕ್ಷೆಗೆ ಗುರಿಮಾಡಿದ ಕೆಲವು ಕೊಲೆಪಾತಕಿಗಳಿಂದ ಈ ಸಾಮಾನ್ಯ ಜನತೆಯನ್ನೊಮ್ಮೆ ಬೇರೆ ಮಾಡಿ ಬಿಟ್ಟರೆ ನಾವು ಶಾಂತಿ ಸ್ಥಾಪಿಸಿ ಬಿಡಬಹುದು

ಹೆದರಿಸಿ ಕೆಲಸ

ಸೈನಿಕ ಮುಖಂಡರು ಜಪಾನಿನ ಜನತೆಯನ್ನು ಹೆದರಿಸಿ ಕೆಲಸ ಮಾಡುತ್ತಾರೆ ವಿಶ್ವಾಸಘಾತಕ ಮಾಡಿ, ಕೊಲೆಮಾಡಿ ಕಾರ್ಯ ಸಾಧಿಸುತ್ತಾರೆ ಮಂತ್ರಿಮಂಡಳದೊಡನಾಗಲಿ ಪಾರ್ಲಿಮೆಂಟಿನೊಡನಾಗಲಿ, ಜನತೆಯೊಡನಾಗಲಿ ಒಂದೇ ಒಂದು ಮಾತು ಕೇಳದೆ, ಮಂಚೂರಿಯಾ ಯುದ್ಧವನ್ನು ಒಂದೇ ದಿನ ಜಪಾನಿನ ಸೇನಾಪತಿಗಳು ಆರಂಭಿಸಿದರು ಒಮ್ಮೆ ಯುದ್ಧ ಆರಂಭವಾದದ್ದೇ ತಡ ಅಲ್ಲಿನ ಸೇನಾಪತಿಗಳು ಕೂಗತೊಡಗಿದರು 'ನನ್ನ ದೇಶ, ಒಪ್ಪು ಮಾಡಲಿ, ಒಪ್ಪು ಮಾಡಲಿ' ಎಂದು ಅಂಥಾ ಮಾತನ್ನು ಜಪಾನಿನ ಜನರಾಗಲಿ, ದೇಶದ ಯಾವುದೇ ಭಾಗದ ಜನರಾಗಲಿ ಒಮ್ಮೆಲೇ ತಿರಸ್ಕರಿಸಲಾಗುವುದಿಲ್ಲ ಜಪಾನಿನ ರಾಜ್ಯ ಘಟನೆಗೆ ಮಂಚೂರಿಯಾ ಯುದ್ಧವು ತೀರಾ ಶಾಸನವಿರೋಧವಾಗಿದೆ ಇಂದು ಜಪಾನಿನ ಜನತೆ ದಿನ ಹೋದಂತೆ ಅಂತರಾಷ್ಟ್ರೀಯ ಸಂಬಂಧವನ್ನು ತಿಳಕೊಳ್ಳುತ್ತಾ ಇದೆ ಸೇನಾಪತಿಗಳು ಕೆಲವರು ರಾಜಕೀಯ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟು ಕೊಂಡಿರುವುದನ್ನು, ಒಂದು ದಿನ ಅಲ್ಲಿನ ಜನರು ಶಾಂತ ವಿಚಾರ ಮಾಡಿ ಅವರ ಕೈಯಿಂದ ಅಧಿಕಾರ ಕಿತ್ತು ಕೊಳ್ಳಬಹುದು. ಜಪಾನಿನ ಸಾಮಾನ್ಯ ಜನತೆಗೆ ಈ ಜಗಳ ಬೇಡವಾಗಿದೆ.'

ರಶ್ಯ ಜೆಕೊಸ್ಲವೇಕಿಯಾ

ಜೆಕೊಸ್ಲವೇಕಿಯ ಮತ್ತು ರಶ್ಯಗಳೊಳಗೆ ಆದ ಒಪ್ಪಂದವು ಯೂರೋಪಿನ ಆ ಭಾಗದ ಹಲವು ಯುದ್ಧಾನಂತರ ಸಮಸ್ಯೆಗಳನ್ನು ಪರಿಹರಿಸದೆ ೧೯೪೨ರಲ್ಲು ರಶ್ಯ ಬ್ರಿಟನ್ನು ಗಳೊಳಗೆ ಆದ ಒಪ್ಪಂದದ ಹಲವು ಪ್ರಾಮುಖ್ಯ ವಿಚಾರಗಳನ್ನು ಈ ಒಪ್ಪಂದವು ಒಳಕೊಂಡಿದೆ. ಇಂದಿನ ಯುದ್ಧದಲ್ಲಿ ಸಮಾನ ಸ್ಕಂಧವಾಗಿ ಹೋರಾಡುವುದು ಮಾತ್ರವಲ್ಲದೆ, ಮುಂದಿನ ರಾಜಕೀಯ, ಆರ್ಥಿಕ ಶಾಂತಿ ವಿಷಯಕಗಳ ವ್ಯವಸ್ಥೆಯೂ ಇದರಲ್ಲಿ ಒಳಕೊಂಡಿದೆ ರಶ್ಯ ಜೆಕೊಸ್ಲವೇಕಿಯಾ ಒಪ್ಪಂದದಲ್ಲಿ ಪೋಲೆಂಡ್ ವಿಷಯ ವಿಶೇಷ ಗಮನಕೊಡಲಾಗಿದೆ ಪೋಲೆಂಡು ರಶ್ಯ ಮತ್ತು ಜರ್ಮನಿಗಳ ಮಧ್ಯದಲ್ಲಿ ಒಂದು ಪ್ರಾಮುಖ್ಯ ರಾಜ್ಯವಾಗಿದೆ ಈ ಒಪ್ಪಂದಕ್ಕೆ ಸಹಿ ಹಾಕಿದ್ದು ರಶ್ಯ ಮತ್ತು ಪೋಲೆಂಡ್ ಸಂಬಂಧದಲ್ಲಿ ಹೊಸ ಮೈತ್ರಿಯ ಅಧ್ಯಾಯವನ್ನು ತೆರೆಯುತ್ತದೆ ಮುಂದಿನ ಜಗತ್ತಿನಲ್ಲಿ, ಯುದ್ಧಾನಂತರದಲ್ಲಿ ಪೋಲೆಂಡು ರಶ್ಯದ ವಿರೋಧ ಚಟುವಟಿಕೆ ಮಾಡದಂತಾದರೂ ಇದರಿಂದ ಸಿದ್ಧಿಸಬಹುದು ಆದರೆ ಪೋಲೆಂಡಿನ ಹಿಂದಿನ ಹಲವು ಘಟನೆಗಳನ್ನು ವಿಚಾರಿಸಿದರೆ, ಪೋಲೆಂಡಿಗೆ ರಶ್ಯದೊಡನಾಗಲಿ, ಜರ್ಮನಿಯೊಡನಾಗಲಿ ಯಾವುದೇ ತರದ ಸಂಬಂಧವನ್ನಿಟ್ಟುಕೊಳ್ಳುವುದೂ ಉಚಿತವಾಗುವುದಿಲ್ಲವೆಂದು ವಿಶದವಾಗಿದೆ ಹಾಗಾಗಿ, ಇಂದಿನ ಒಪ್ಪಂದದಿಂದ ರಶ್ಯ ಪೋಲೆಂಡುಗಳ ಹಿಂದಿನ ಘರ್ಷಣೆಯಾಗಲಿ, ಮುಂದಿನ ಸಂದೇಹವಾಗಲಿ ಉಳಿಯದಂತೆ ಈ ಒಪ್ಪಂದ ಸೂತ್ರ ಬಿಗಿದಿರಬೇಕೆಂದು ಊಹಿಸಬೇಕಾಗುತ್ತದೆ ಗಡಿನಾಡಿನ ವಿಷಯದಲ್ಲಿ ವಿಶೇಷಜ್ಞರು ಯೋಗ್ಯ ನಿರ್ಣಯವಿತ್ತದ್ದಕ್ಕೆ ಉಭಯ ರಾಷ್ಟ್ರಗಳೂ ಸಮ್ಮತಿಸಬೇಕಾಗಿದೆ ರಶ್ಯ ಜೆಕೊಸ್ಲವೇಕಿಯ ಒಪ್ಪಂದವು ಹೀಗೆ ಈ ರಾಷ್ಟ್ರಗಳ ಮಧುರ ಸಂಬಂಧ ಬೆಳೆಸುವಂತಾಗುವುದೆಂದು ರಾಜಕಾರಣಿಗಳ ಊಹೆಯಾಗಿದೆ

ರಶ್ಯನರ ವಿಜಯ

೧೯೪೨-೪೩ರ ಹೇಮಂತ ಧಾಳಿಯ ನಂತರ ರಶ್ಯದ ರಕ್ತ ಸೇನೆಯು ೧೯೪೩ರ ವಸಂತ ಧಾಳಿಯಲ್ಲಿ ಮತ್ತು ಮುಂದುವರಿಯಿತು ಆ ಮೂಲಕ, ರಕ್ತ ಪಡೆಯು ನಾಜೀ ಸೈನ್ಯವನ್ನೆದುರಿಸಲು ಅಶಕ್ತವಾಗಿದೆಯೆಂಬ ಗೊಬೆಲ್ಸನ ಅಪಪ್ರಚಾರಕ್ಕೆ ಮಾರುತ್ತರ ಕೊಟ್ಟಿತು. ೧೯೪೩ರ ವಸಂತಧಾಳಿಯು ಯುದ್ಧದ ಗತಿಯನ್ನೇ ಬದಲಾಯಿಸಿತೆನ್ನಬಹುದು. ಈ ಯುದ್ಧದ ಪ್ರಭಾವವು ರಶ್ಯ–ಜರ್ಮನ್ ರಂಗಗಳನ್ನು ಮೀರಿ ಇಡೀ ಪ್ರಪಂಚವನ್ನೇ ಆಕ್ರಮಿಸಿತು. ಜರ್ಮನರಿಗೆ ಈ ಯುದ್ಧದಲ್ಲಿ ಉಂಟಾದ ಅಪಜಯವು ಎರಡು ಪ್ರಾಮುಖ್ಯ ವಿಷಯಗಳನ್ನು ನಿರ್ಧರಿಸಿತು, ಅವೆಂದರೆ ಸ್ಟಾಲಿನ್‌ಗ್ರಾಡ್ ಮತ್ತು ಕರ್ಸ್ಕ್ ಕಾಳಗ ಸ್ಟಾಲಿನ್‌ಗ್ರಾಡ್ ಕಾಳಗದ ನಂತರ ಜರ್ಮನರು ತಲೆಯೆತ್ತಲೇ ಇಲ್ಲ ಸ್ಟಾಲಿನ್‌ಗ್ರಾಡ್ ಕಾಳಗವು ಜರ್ಮನರ ಮೇಲೆ ಅಪಜಯದ ಮೂಟೆ ಹೊರಿಸಿತು, ಅಂತೆಯೇ ಕರ್ಸ್ಕ್ ಕಾಳಗವೂ ಜರ್ಮನರನ್ನು ಸೋಲಿನಲ್ಲಿ ಸಿಲುಕಿಸಿತು ಇವೆರಡು ರಣರಂಗಗಳೂ ರಶ್ಯಕ್ಕೆ ದೊರಕಿದ ಮಹಾ ವಿಜಯಗಳೆನ್ನಬೇಕು

೧೯೪೩ರಲ್ಲಿ ರಕ್ತ ದಳದ ಪ್ರಾಮುಖ್ಯ ಕಾರ್ಯವೆಂದರೆ ಸ್ಮೊಲೆನ್ಸ್ಕದಲ್ಲಿಂದ ನಾಜೀ ಸಾಮ್ರಾಜ್ಯವನ್ನು ಹಿಂದೋಡಿಸುವುದು ಮತ್ತು ಕುಬಾನಿನಿಂದ ಹೊರಹಾಕುವುದೂ ಆಗಿದೆ ಈ ಮಹತ್ವದ ಯೋಜನೆಯು ಪೂರ್ಣ ಸಿದ್ಧಿಸಿದೆ ಇದರಿಂದ ರಶ್ಯನ್ ಸೇನೆ ಎಷ್ಟು ಬಲವಂತಾಗಿದೆಯೆಂಬುದು ಸಮರ್ಥಿತವಾಗಿದೆ ೧೯೪೩ರಲ್ಲಿ ರಶ್ಯನರು ತಮ್ಮ ವಸಂತ ಧಾಳಿ ಆರಂಭಿಸಿದಾಗ, ಕರ್ಸ್ಕನಲ್ಲಿರುವ ರಶ್ಯನರನ್ನು ಮುತ್ತಿ ನಾಶಗೊಳಿಸುವ ಹಂಚಿಕೆಯನ್ನು ಜರ್ಮನರು ಮಾಡಿದರು ಹಾಗೆ ಮಾಡಿ ಇಕ್ಕುಳದಲ್ಲಿ ರಶ್ಯನರು ಕೆಡವಿದಂತೆ ಮಾಡಿ ಅವರನ್ನು ಸೋಲಿಸಿಬಿಡಬೇಕೆಂದು ಅವರ ಸಾಧನೆಯಾಗಿತ್ತು, ಜರ್ಮನರ ಹಂಚಿಕೆಯು ಆದಿಯಿಂದ ಅಂತ್ಯದವರೆಗೂ ಕೇವಲ ಒಂದು ಜುಗಾರಿಯ ಆಟದಂತೆ ನಿರರ್ಥಕವಾಗಿಯೆ ಪರಿಣಮಿಸಿತು, ನಿಜವಾಗಿಯೂ ಅದರಿಂದ ಅವರಿಗೆ ಅಪಮಾನಕಾರಕ ಅಪಜಯವೇ ಒದಗಿತು

ಸೈನ್ಯ ಸಾಮಗ್ರಿ ನಷ್ಟ

ಈ ಯುದ್ಧದಲ್ಲಿ ಜರ್ಮನರ ವಶ ಇದ್ದಷ್ಟು ಸೈನ್ಯ ಸಾಧನ ಸಂಪತ್ತು ಹಿಂದೆಂದೂ ಸಂಗ್ರಹವಿರಲಿಲ್ಲ. ಬಹಳ ಸೈನಿಕರನ್ನು, ಮದ್ದುಗುಂಡುಗಳನ್ನು, ಫಿರಂಗಿ ಟೇಂಕುಗಳನ್ನು ಇದರಲ್ಲಿ ಜರ್ಮನರು ಕಳಕೊಂಡರು ಹಾಗೆ ಅಮಿತ ಶಕ್ತಿ ಪರಾಕ್ರಮಗಳನ್ನು ವ್ಯಯಮಾಡಿ ಜರ್ಮನರು ಅಪಜಯವನ್ನು ಹೊತ್ತುಕೊಂಡರು ಹೀಗೆ ಕೇವಲ ನಾಲ್ಕು ತಿಂಗಳ ಕಾಲದ ವಸಂತ ಧಾಳಿಯಲ್ಲಿ ರಶ್ಯ ಸೇನೆಯು ೩೫೦,೦೦೦ ಚದುರ ಕಿಲ್ಲೋಮಿಟರ್ ಸ್ಥಳವನ್ನು ಪುನಃ ಜರ್ಮನರ ಕೈಯಿಂದ ಸ್ವಾಧೀನಪಡಿಸಿಕೊಂಡಿತು ಇದರಲ್ಲಿ ಒಟ್ಟಿನಿಂದ ರಶ್ಯನರು ಜರ್ಮನರ ೧೪೪ ಜರ್ಮನ್ ಡಿವಿಜನ್ನುಗಳನ್ನು ಅದರೊಡನೆ ೨೪ ಟೇಂಕ್ ಮತ್ತು ಮೋಟರ್ ಡಿವಿಜನುಗಳನ್ನು ನಾಶಪಡಿಸಿದರು. ಇದರ ಪರಿಣಾಮವಾಗಿ ರಶ್ಯನ್ ಸೇನೆ, ಡೊನ್ ಬಸ್, ಖಾರ್ಕೊವ್, ನೀಪ್ರೋಪೆಟ್ರೋವಸ್ಕ, ಮತ್ತು ಯುಕ್ರೈನಿನ ಹಲವು ಪ್ರಾಮುಖ್ಯ ಔದ್ಯೋಗಿಕ ಕೇಂದ್ರಗಳನ್ನು ಹಾಗೂ ಸೋವಿಯಟ್ ಯೂನಿಯನಿನ ಪ್ರಧಾನ ಆರ್ಥಿಕ ಸ್ಥಳಗಳನ್ನೂ ಸಂಪಾದಿಸಿದೆ, ಇದರಿಂದ ರಶ್ಯದ ಹೋರಾಟ ಶಕ್ತಿಯೂ ಅಭಿವೃದ್ಧಿ ಹೊಂದಿದೆ ಉತ್ತರ ಡೊನೆಜಿನಿಂದ ನೀಪರ್ ವರೆಗಿನ ಕೃಷಿಕ್ಷೇತ್ರವು ಇಡೀ ರಶ್ಯದ ಉತ್ತಮ ಕಣಜವಾಗಿದೆ ಇದನ್ನೂ ನಾಜಿಗಳು ಕಳಕೊಂಡವರಾಗಿ ಈಗ ಶಕ್ತಿ ಕುಂದಿದವರಾಗಿದ್ದಾರೆ ಸೋವಿಯಟ್ ಯೂನಿಯನಿನ ಮಧ್ಯ ಭಾಗ ಮತ್ತು ದಕ್ಷಿಣಗಳನ್ನು ಜೋಡಿಸಿ ಸೇರಿಸುವ ಹಲವು ರೈಲ್ವೇ ಹಾದಿಗಳೂ ಇಲ್ಲವಾಗಿವೆ ಇದರಿಂದ ಯುದ್ಧ ಶಕ್ತಿ ಜರ್ಮನರಿಗೆ ಬಹಳ ಕಡಿಮೆಯಾಯಿತು ಹೀಗೆ ಸೈನ್ಯ, ಸಂಚಾರ ಮಾರ್ಗ ಮೊದಲಾದ ಹಲವು ಸೌಕರ್ಯಗಳನ್ನೆಲ್ಲಾ ಕಳಕೊಂಡವರಾಗಿ ಜರ್ಮನರು ನಿಜವಾಗಿಯೂ ಇಂದು ನಿರ್ಬಲರಾಗಿರುವರು

ಜರ್ಮನಿಯು ಒಮ್ಮೆಯೇ ಪೇಲ್ಲಿದ್ದುದರಿಂದ ಒಮ್ಮೆ ರಶ್ಯವನ್ನು ಕಳವಳಗೊಳಿಸಿತೆಂಬುದು ನಿಜ, ಆದರೆ ಯುದ್ಧವನ್ನು ಶಾಸ್ತ್ರೀಯ ವೈಜ್ಞಾನಿಕ ರೀತಿಯಲ್ಲಿ ನಡೆಸಿದ ರಶ್ಯವು ಇಂದು ಒಮ್ಮೆಲೇ ಮೇಲ್ಬಿದ್ದ ಜರ್ಮನಿಯನ್ನು ಸೋಲಿಸಿ ಜಯಶಾಲಿಯಾಗುತ್ತಲಿದೆ ಇದು ರಶ್ಯವನ್ನು ಇನ್ನು ಮುಂದೆ ಜಯದಿಂದ ವಿಜಯಕ್ಕೆ ಖಂಡಿತವಾಗಿ ಮುನ್ನಡೆಸುವುದೆಂದು ನಂಬಲು ಪ್ರಬಲ ಆಧಾರವಾಗಿದೆ ಈಗಾಗಲೇ ಜರ್ಮನ್ ಸೇನೆಗೆ ಬೇಕಾದಷ್ಟು ಅಪಜಯವೊದಗಿರುವುದು ಇನ್ನು ಮುಂದೆ ರಶ್ಯದ ನೆಲದಿಂದ ಹಾಗೂ ಯೂರೋಪಿನಿಂದಲೇ ಫೇಸಿಸ್ಟ ದಳವನ್ನು ಕಾಲ್ಕೀಳುವಂತೆ ಮಾಡುವುದು ಸುಲಭದ ಕೆಲಸ ಮಿತ್ರ ಪಕ್ಷಗಳಿಗಿಂದು ವಿಜಯವೊದಗುತ್ತಾ ಬರುತ್ತದೆ ಅವರ ಹೋರಾಟ ಶಕ್ತಿ ಬಲವಾಗಿದೆ ಯೂರೋಪಿನಲ್ಲಿ ದ್ವಿತೀಯ ರಂಗವು ನಿರ್ಮಾಣವಾಗಿ ಬಿಟ್ಟರೆ ಮತ್ತೆ ಮಿತ್ರರ ಗೆಲವು ಕೇಳುವುದೇ ಬೇಡ ಇತ್ತೀಚೆಗೆ ಕೈರೋ ತೆಹರಾನ್‌ಗಳಲ್ಲಿ ಆದ ಮಾತುಕತೆ ಈ ವಿಜಯಕ್ಕೆ ಮತ್ತಷ್ಟು ಬಲವಿತ್ತಿದೆ ರಶ್ಯದ ಉತ್ಸಾಹ, ಜರ್ಮನಿಯ ಅವನತಿ ಇವುಗಳಿಂದ ಬೇಗನೆ ವಿಜಯ ಸಿದ್ಧವೆನ್ನಬೇಕು

ರಶ್ಯ–ಜಪಾನ್ ಘರ್ಷಣೆ?

ತೆಹರಾನ್ ಸಮ್ಮೇಳನದ ನಂತರ ರಶ್ಯದ ಪ್ರಾಧಾನ್ಯತೆ ಹೆಚ್ಚಾಗಿದೆ. ಸ್ಟಾಲಿನನಲ್ಲಿಗೆ ಸಾಮ್ರಾಜ್ಯ ಶಾಹಿಗಳು ಹೋಗಿ ಕೈ ಕುಲಕಿಸಿದ ಸುದ್ದಿಯನ್ನು ಹಿಂದೆ ನಾವು ಓದಿದ್ದೇವೆ. ಹೀಗೆ ಯೂರೋಪಿನ ಯುದ್ಧದಲ್ಲಿ ರಶ್ಯ ಮಹತ್ವದ ಸ್ಥಾನ ಪಡೆದಿದೆ ಇದರೊಡನೆ ಇತ್ತೀಚೆಗೆ ಬರುವ ಒಂದು ಸುದ್ದಿ ರಶ್ಯ ಜಪಾನ್ ಸಂಬಂಧದ ಕುರಿತು ಇದೆ ರಶ್ಯವನ್ನು 'ಪರ್ಲ್ ಹಾರ್ಬರ್' ಧಾಳಿಗೆ ಪೂರ್ಣ ಸಿದ್ಧವಾಗಿದೆಯೆಂದೂ ಅರ್ಥಾತ್ ಇನ್ನೊಂದು ತಿಂಗಳ ರಶ್ಯ ಜಪಾನ್ ಹೋರಾಟ ಆಗಲಿದೆಯೆಂದೂ ಕೇಳುತ್ತದೆ ೧೯೪೩ರಲ್ಲಿ ಜಪಾನರಿಗೆ ಈ ಭಯವೇನೋ ಚೆನ್ನಾಗಿತ್ತು ಯುದ್ಧರಂಗದಲ್ಲಿ ರಶ್ಯನರು ಪ್ರಬಲರಾಗಿ ಸೈನ್ಯ ಸಾಧನ ಇಟ್ಟುಕೊಂಡಿದ್ದಾರೆ. ಜರ್ಮನ್ ಸುದ್ದಿ ಖಾತೆಯೇ ಇದನ್ನೊಪ್ಪಿದೆ ರಶ್ಯ ಇಂದು ಜಪಾನಿನ ಮೇಲೆ ನಿಜವಾಗಿ ಆಕ್ರಮಣ ಮಾಡಲು ಬಲುಗೊಳಿಸಿದೆಯೆ?

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD. 1906.

CANARA BANK LTD.

ಸ್ವದೇಶಾಭಿಮಾನಿ

ತಾರೀಕು 31—12—1943

ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗ್ ಅಧಿವೇಶನ

ಹಿಂದೂ ದೇಶದಲ್ಲಿ ಕಳೆದ ವಾರ ಮಹತ್ವದ ಎರಡು ಅಧಿವೇಶನಗಳು ನಡೆದವು. ಒಂದು ಕರಾಚಿಯಲ್ಲಿ ಮುಸ್ಲಿಂ ಲೀಗಿನ ಅಧಿವೇಶನ ಮತ್ತೊಂದು ಅಮೃತಸರದಲ್ಲಿ ಹಿಂದೂ ಮಹಾಸಭೆಯ ಅಧಿವೇಶನ.

ಮುಸ್ಲಿಂ ಲೀಗಿನ ಅಧಿವೇಶನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತಾ ಮಿ ಜಿನ್ನಾರವರು ಬ್ರಿಟಿಷರು ಇಂದಲ್ಲ ಮುಂದಾದರೂ ಹಿಂದೂಸ್ಥಾನವನ್ನು ಬಿಟ್ಟು ಹೋಗಲೇ ಬೇಕಾಗುವುದೆಂದು ತಿಳಿಸಿದ್ದಾರೆ, ತಾವಾಗಿಯೇ ಹಿಂದೂಸ್ಥಾನದಿಂದ ತೊಲಗಿ ಹೋದರೆ ಬ್ರಿಟಿಷರ ಮೇಲೆ ಹಿಂದೂಸ್ಥಾನದ ಸ್ನೇಹವು ಉಳಿಯುವುದೆಂದು, ಹಿಂದೂದೇಶದ ಜನತೆಯ ಬಲಾತ್ಕಾರದಿಂದ ಅವರು ಹೋಗಬೇಕಾದ್ದಲ್ಲಿ ಬ್ರಿಟಿಷರು ಹಿಂದೂಸ್ಥಾನದ ಸ್ನೇಹವನ್ನು ಕಳೆದುಕೊಳ್ಳಬೇಕಾಗುವುದೆಂದೂ ಹೇಳಿ, ಹೋಗುವ ಮುನ್ನ ನಮಗೆ ಪಾಕಿಸ್ತಾನ ಕೊಟ್ಟು ಹೋಗಿ ಎಂದು ಬೇಡಿದ್ದಾರೆ. ಕಾಂಗ್ರೆಸ್ ಯಾ ಬೇರಾವ ಸಂಗಡದೊಡನೆಯೂ ನಾವು ಗೌರವಯುತವಾದ ಯಾವ ಒಪ್ಪಂದಕ್ಕೂ ಸಿದ್ಧರಿದ್ದೇವೆಂದು ತಿಳಿಸಿದ್ದಾರೆ. ಆದರೆ ಕಾಂಗ್ರೆಸು ಕೇಳುವುದು ಅಖಿಲಹಿಂದುಸ್ಥಾನ, ಲೀಗ್ ಬೇಕೆನ್ನುವುದು ಪಾಕಿಸ್ತಾನ ಹೀಗಿರುವಲ್ಲಿ ಗೌರವಯುಕ್ತವಾದ ಒಪ್ಪಂದಕ್ಕೆ ದಾರಿಯೆಲ್ಲಿರುವುದು? ಏನೆಂದರೂ ಜಿನ್ನಾ ಸಾಹೇಬರ ಗುರಿಯೂ ಪಾಕಿಸ್ಥಾನದಿಂದ ಸ್ವಲ್ಪವೂ ಹಿಂದೆ ಸರಿಯದೆ ಭಾರತದ ಸ್ವಾತಂತ್ರ್ಯ ಪಡೆಯುವ ದಿನವನ್ನು ಇನ್ನಷ್ಟು ಮುಂದೆ ಸರಿಸಿದ್ದಾರೆ

ಮತ್ತೊಂದು ಅಧಿವೇಶನವು ವೀರ ಸಾವರಕರರ ಅಸ್ವಸ್ಥತೆಯಿಂದ ಡಾ। ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಇವರು ಪಾಕಿಸ್ಥಾನವನ್ನು ಎದುರಿಸುತ್ತಾ ಅದು ಅಶಕ್ಯವಾದ ಮಾತೆಂದು ಹೇಳಿದರು. ತಮ್ಮ ಭಾಷಣವನ್ನು ಮುಂದುವರಿಸುತ್ತಾ ಹಿಂದೂಸ್ಥಾನದ ಸಮಸ್ಯೆಯು ಬಗೆಹರಿಯಬೇಕಾದರೆ ಜಾತಿ ವೈಷಮ್ಯಗಳು ತೊಲಗಬೇಕು. ಪಾಕಿಸ್ಥಾನದಿಂದ ಇಡೀ ಹಿಂದೂಸ್ಥಾನಕ್ಕೆ ದೊಡ್ಡ ಗಂಡಾಂತರವಿದೆ. ಆದ್ದರಿಂದ ಪಾಕಿಸ್ಥಾನದ ಆಧಾರದ ಮೇಲೆ ಮುಸ್ಲಿಂ ಲೀಗಿನೊಡನೆ ಎಂದಿಗೂ ಒಪ್ಪಂದವು ಅಸಾಧ್ಯವೆಂದಿದ್ದಾರೆ. ಕಳೆದ ಹಲವು ವರ್ಷಗಳಿಂದ ಕಾಂಗ್ರೆಸು ದೇಶಕ್ಕಾಗಿ ಸಲಿಸಿದ ಸೇವೆಯನ್ನು ಪ್ರಸಂಶಿಸಿ ಕಾಂಗ್ರೆಸನ್ನು ಬಿಟ್ಟು ಸಂಘಾನವು ಶಕ್ಯವಿಲ್ಲವೆಂದಿದ್ದಾರೆ. ಕಾಂಗ್ರೆಸಿನಂತೆಯೇ ಅಖಿಲ ಹಿಂದೂಸ್ಥಾನದ ಸ್ವಾತಂತ್ರವೇ ಹಿಂದೂ ಮಹಾಸಭೆಯ ಧ್ಯೇಯವೆಂದು ಹೇಳಿದ್ದಾರೆ. ಮೂರನೆಯ ವಕ್ತವ್ಯ ಹಿಂದೂಸ್ಥಾನದಿಂದ ತೊಲಗಿದಲ್ಲಿ ಜಾತಿಯತೆಯ ಐಕ್ಯತೆಯು ತಾನಾಗಿ ಉಂಟಾಗುವುದೆಂದು ಸಾರಿರುವರು.

ಕಟ್ಟಕಡೆಗೆ ಕರಾಚಿ ಮತ್ತು ಅಮೃತಸರದಲ್ಲಾದ ಅಧಿವೇಶನಗಳ ಮುಖ್ಯ ನಿರ್ಣಯಗಳೆಂದರೆ 'ಪಾಕಿಸ್ಥಾನ' ವಿನಹ ಯಾವ ಸಂಸ್ಥೆಗಳೊಡನೆಯೂ ಒಪ್ಪಂದವು ಸಾಧ್ಯವಿಲ್ಲವೆಂಬುದು ಮುಸ್ಲಿಂ ಲೀಗಿನ ನಿರ್ಣಯ 'ಪಾಕಿಸ್ಥಾನ' ವಿಷಯವಿದ್ದಲ್ಲಿ ಮುಸ್ಲಿಂ ಲೀಗಿನೊಡನೆ ಒಪ್ಪಂದವು ಅಶಕ್ಯವೆಂಬುದು ಹಿಂದೂ ಮಹಾಸಭೆ.

ಅ। ಕ। ಪತ್ರಿಕೋದ್ಯೋಗಿ ಸಮ್ಮೇಳನ

ಮಂಗಳೂರಿನಲ್ಲಿ ಸದ್ಯದಲ್ಲೇ ಜರಗಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಕುರಿತು ಹೊರಟ ಒನೇ ಮಾಹಿತಿ ಪತ್ರ ಹೀಗಿದೆ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಜರಗಿಸಲು ಆಗುತ್ತಿರುವ ಯತ್ನವನ್ನು ಸ್ವಾಗತಿಸಿ, ಅದರ ಧ್ಯೇಯ–ಉದ್ದೇಶಗಳೊಡನೆಸಹಾನುಭೂತಿಯನ್ನು ವ್ಯಕ್ತಮಾಡುವ ಹಲಭಾರು ಪತ್ರಗಳು, ನಾಡಿನ ಹಲವೆಡೆಗಳಿಂದ ಸ್ವಾಗತ ಸಮಿತಿಯ ಕಾರ್ಯಾಲಯಕ್ಕೆ ಬರುತ್ತಲಿವೆ. ಹಲವು ಕನ್ನಡ ವೃತ್ತ ಪತ್ರಿಕೆಗಳ ಸಂಪಾದಕರೂ ಇತರ ಪತ್ರಿಕೋದ್ಯೋಗಿಗಳೂ ಪರಿಷತ್ತನ್ನು ಯಶಸ್ವಿಗೊಳಿಸಲು ತಮ್ಮ ಬೆಂಬಲವನ್ನೂ ಸಹಕಾರವನ್ನೂ ನೀಡಿರುವರು ಪ್ರತಿನಿಧಿಗಳಿಗಾಗಿ ಸಿದ್ಧವಾಗುತ್ತಿರುವ ಕಾರ್ಯಕ್ರಮವನ್ನು ಎಲ್ಲರೂ ಮೆಚ್ಚಿದ್ದಾರೆ.

ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಶ್ರೀ ಶಿ ರಾ. ಕುಳಕುಂದರ್ರು ಉತ್ತರ ಕರ್ನಾಟಕ ಧಾರವಾಡ ಮತ್ತು ಶಿವಮೊಗ್ಗಾ ಜಿಲ್ಲೆಗಳಲ್ಲಿ ತಮ್ಮ ಪ್ರವಾಸವನ್ನು ಮುಗಿಸಿ ಇದೀಗ ಮಂಗಳೂರಿಗೆ ಹಿಂದಿರುಗಿರುವರು ಕುಮಟಾ, ಶಿರ್ಶಿ, ಹುಬ್ಬಳ್ಳಿ, ಧಾರವಾಡ ಮತ್ತು ಶಿವಮೊಗ್ಗಾಗಳಲ್ಲಿ ಅವರು ಇಳಿದು, ಪತ್ರಿಕೋದ್ಯೋಗಿಗಳನ್ನು ಭೆಟ್ಟಿಯಾಗಿ, ವಿಚಾರ ವಿನಿಮಯ ಮಾಡಿದ್ದಾರೆ. ಕುಮಟಾ–ಶಿರ್ಶಿಯವರು ತಮ್ಮ ಪಕ್ಕದ ಜಿಲ್ಲೆಯು ಮಾಡುತ್ತಿರುವ ಯತ್ನವನ್ನು ಶ್ಲಾಘಿಸಿರುವರು ಹುಬ್ಬಳ್ಳಿ ಧಾರವಾಡಗಳಲ್ಲಿ ಹಲವು ಪತ್ರಿಕಾಕರ್ತರು, ಪತ್ರಿಕೋದ್ಯೋಗಿಗಳು ಮತ್ತು ಬರಹಗಾರರನ್ನು ಅವರು ಕಂಡು ಮಾತನಾಡಿದರು. ಆ ಮಹನೀಯರೆಲ್ಲ ಸಮ್ಮೇಳನವನ್ನು ಜರಗಿಸುವುದರ ಮತ್ತು ಸಂಘಟಿತ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘವನ್ನು ಸ್ಥಾಪಿಸುವುದರ ಕುರಿತು ಬಲು ಆಸಕ್ತಿಯನ್ನು ತೋರಿಸಿದರು. ಅಖಿಲ ಭಾರತ ವೃತ್ತಪತ್ರಿಕಾಕರ್ತರ ಸ್ಥಾಯಿ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ। ಮೋಹರೆ ಹಣಮಂತರಾಯರನ್ನು ನಮ್ಮ ಕಾರ್ಯದರ್ಶಿಯು ಭೇಟಿಯಾದಾಗ ಅವರು ಹಲವು ಉಪಯುಕ್ತ ಸೂಚನೆಗಳನ್ನು ಕೊಟ್ಟರು. ಶಿವಮೊಗ್ಗದಲ್ಲಿ ಬೆಳಗಾಂವಿ, ಬೆಂಗಳೂರು, ಬಳ್ಳಾರಿ, ಹೈದರಾಬಾದುಗಳ ಪತ್ರಿಕೋದ್ಯೋಗಿಗಳನ್ನು ಶಿವಮೊಗ್ಗಾ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿ ಮತ್ತು ಸದಸ್ಯರನ್ನೂ ನಮ್ಮ ಕಾರ್ಯದರ್ಶಿಯು ಭೇಟಿಯಾದರು. ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಜರಗುತ್ತಿದ್ದಾಗ ಅಲ್ಲಿ ನೆರೆದಿದ್ದವರೆಲ್ಲರಿಗೆ ಮಂಗಳೂರಿನ ಪತ್ರಿಕೋದ್ಯೋಗಿ ಪರಿಷತ್ತಿಗೆ ಬರಬೇಕೆಂದು ಸ್ವಾಗತ ಸಮಿತಿಯ ಪರವಾಗಿ ನಮ್ಮ ಕಾರ್ಯದರ್ಶಿಯು ಆಹ್ವಾನವಿತ್ತರು.

ಅ. ಭಾ. ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದಲ್ಲಿ ಭಾಗವಹಿಸುವುದಕ್ಕಾಗಿ ಸ್ವಾಗತಾಧ್ಯಕ್ಷರು ಸದ್ಯದಲ್ಲೇ ಮದ್ರಾಸಿಗೆ ತೆರಳಲಿರುವರು. ಮುಂದಿನ ಮಾಹಿತಿ ಪತ್ರವು ಈ ತಿಂಗಳ ತಾ. ೧೫ರಂದು ಪ್ರಕಟವಾಗುವುದು. ಅಧ್ಯಕ್ಷರ ಆಯ್ಕೆ ಮತ್ತು ಸಮ್ಮೇಳನದ ನಿಶ್ಚಿತ ದಿನಗಳ ಆ ಪತ್ರದಲ್ಲಿ ಪ್ರಕಟಿಸಲ್ಪಡುವುವು.

ಸ್ವದೇಶ ಸಮಾಚಾರ

ಕೇಸಿಯವರ ನೇಮಕಕ್ಕೆ ವಿರೋಧ

ಕೇಸಿಯವರನ್ನು ಬಂಗಾಲದ ಗವರ್ನರರನ್ನಾಗಿ ನಿಯಮಿಸಿದ್ದು ಭಾರತೀಯರ ಅವಮಾನವೇ ಸರಿ ಎಂದು ಕ್ರಾನಿಕಲ್ ಪತ್ರಿಕೆ ಅಭಿಪ್ರಾಯ ಪ್ರಕಟಿಸಿದೆ. ಸ್ಟಾರ್ ಒಫ್ ಇಂಡಿಯಾ ಪತ್ರಿಕೆಯು ಈ ನೇಮಕವು ಬಂಗಾಲಕ್ಕೆ ಒಪ್ಪಿಗೆಯಾಗದೆಂದು ತಿಳಿಸಿದೆ, ಸ್ಟೇಟ್ಸ್‌ಮನ್ ಪತ್ರಿಕೆಯು ಅವರಿಗೆ ಬಂಗಾಲದ ಸಂಬಂಧ ಏನೂ ಜ್ಞಾನವಿಲ್ಲದ್ದರಿಂದ ಆ ನೇಮಕವು ಆಯೋಗ್ಯವೆಂದು ಹೇಳಿದೆ, ಪಂಡಿತ ಹೃದಯನಾಥ ಕುಂಜ್ರುರವರು ಆಸ್ಟ್ರೇಲಿಯಾದವರು ಹಿಂದೀ ಜನರ ಮೇಲೆ ಆಳುವಂತೆ ಕುಳ್ಳಿರಿಸುವುದು ಹಿಂದೂಸ್ಥಾನದ ಅಪಮಾನವೆಂದು ಹೇಳಿದ್ದಾರೆ.

ಶ್ರೀಮತಿ ಪ್ರಭಾವತಿ ಭೋಸರ ನಿಧನ

ಸುಭಾಸ ಭೋಸರ ತಾಯಿಯವರಾದ ಶ್ರೀಮತಿ ಪ್ರಭಾವತಿ ಭೋಸರು ತಾ ೨೯ನೇ ದಿವಸ ಸ್ವರ್ಗಸ್ಥರಾದರು.

ಭೋಸರ ಭಾವಚಿತ್ರಗಳ ಜಪ್ತು

ಮಲಬಾರದ ಡಿ ಎಸ್. ಪಿ.ಯವರ ಆಜ್ಞೆಯ ಮೇರೆಗೆ ಪಾಲ್ಘಾಟ ಹಾಗು ಅಂಗಡಿಗಳಲ್ಲಿದ್ದ ಸುಭಾಸ ಭೋಸರ ಭಾವಚಿತ್ರಗಳನ್ನು ವಶಪಡಿಸಿರುವರೆಂದು ವಾರ್ತೆ

ಶ್ರೀಮತಿ ಕಸ್ತೂರಿ ಬಾ ಗಾಂಧಿಜಿಯವರ ಆರೋಗ್ಯ

ಗಾಂಧಿಜಿಯವರ ಧರ್ಮಪತ್ನಿ ಶ್ರೀಮತಿ ಕಸ್ತೂರಿ ಬಾಯಿಯವರ ಆರೋಗ್ಯದ ವಿಷಯ ಅವರ ಪುತ್ರ ಶ್ರೀ। ದೇವದಾಸ ಗಾಂಧಿಯವರು ಡರ್ಬಾನಿನಲ್ಲಿರುವ ತನ್ನ ಸಹೋದರನಿಗೆ ಕಳುಹಿಸಿದ ವಾರ್ತೆಯಲ್ಲಿ ತಾನು ತನ್ನ ತಂದೆ ಮತ್ತು ಮಾತೃಶ್ರೀಯನ್ನು ಸಂದರ್ಶಿಸಿರುವೆನೆಂದು ತಾಯಿಯ ಆರೋಗ್ಯವು ಈಗ ಅಷ್ಟೊಂದು ಚಿಂತಾಜನಕ ಸ್ಥಿತಿಯಲ್ಲಿರುವುದಿಲ್ಲವೆಂದು ತಂದೆಯವರು ಆರೋಗ್ಯದಲ್ಲಿರುವರೆಂದು ತಿಳಿಸಿದ್ದಾರೆ

ಹಸಿವಿನ ಭೂತಕ್ಕೆ ಬಲಿ

ಉತ್ತರ ಮಲಬಾರಿನ ಕಡಚೀರಾ ಗ್ರಾಮದಲ್ಲಿ ೪೦ ವರುಷದ ತಾಯಿಯೊಬ್ಬಳು ೨೦ ವರ್ಷ, ೬ ವರ್ಷದ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಮನೆಗೆ ಬೆಂಕಿ ಹಚ್ಚಿ ಕೊಂದು ಆ ಉರಿಯಲ್ಲೇ ತಾನೂ ಸತ್ತುಹೋದಳು ಇವರನ್ನು ಬದುಕಿಸಲು ಆಗಲಿಲ್ಲ, ಬಾಗಿಲು ಒಳಗಿನಿಂದ ಬಂಧಿತವಾಗಿತ್ತು ಬಾಗಿಲನ್ನು ಮುರಿದು ನುಗ್ಗಿದಾಗ ಹುಡುಗಿಯರಿಬ್ಬರೂ ಸತ್ತು ಹೋಗಿದ್ದರು. ತಾಯಿ ಮತ್ತು ೪ ವರ್ಷದ ಮತ್ತೊಬ್ಬ ಮಗಳು ಜೀವಂತವಾಗಿದ್ದರು ಹೊರಗೆ ತಂದ ಎರಡು ಘಂಟೆಯಲ್ಲಿ ತಾಯಿ ಸತ್ತಳು

ಕಾಂಗ್ರೆಸಿಗರೊಡನೆ ಶ್ರೀವಾಸ್ತವರವರ ಬಿನ್ನಹ!

ಶ್ರೀ। ಗೋಪಿನಾಥ ಶ್ರೀವಾಸ್ತವಾರವರು ಕಾಂಗ್ರೆಸಿಗರೊಡನೆ ಈ ಕೆಳಗಿನ ವಿನಂತಿ ಮಾಡಿರುವರು—"ನಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕು ಎಂದು ಕಾಂಗ್ರೆಸು ಸಾರಿದ ದಿನ–ಜನವರಿ ೨೬ ಬೇಗನೆ ಬರಲಿದೆ. ಕಾಂಗ್ರೆಸಿನ ಈ ಘೋಷಣೆಯನ್ನೇ ಇಂದು ದೇಶದ ಹಲವು ಪಕ್ಷಗಳು ತಮ್ಮದಾಗಿ ಮಾಡಿಕೊಂಡಿವೆ. ಇಂದು ನಮಗೆ ಗುರಿಯಿಲ್ಲದ ಘೋಷಣೆಗಳು ಬೇಡ. ಬದಲು ನಮ್ಮ ಉದ್ದೇಶ ಸಾಧಿಸುವ ಸಾಧನೆ ಬೇಕು. ಪ್ರತಿಯೊಬ್ಬರು ಸ್ವಾತಂತ್ರ್ಯಬೇಕೆಂದು ಹೇಳುವಾಗ ನಮ್ಮ ಪವಿತ್ರ ಉದ್ದೇಶವನ್ನು ಅಂತರಿಕ ಕಲಹದ ಹುಳವು ಕೊರೆಯುತ್ತಿದೆ. ಇಂದು ಕಾಂಗ್ರೆಸು ತನ್ನ ಧುರೀಣರು ಸೆರೆಯ ಮರೆಯಲ್ಲಿದ್ದರೂ ಐಕ್ಯತೆಯು ನಾಶವಾಗದಂತೆ ಸಾಧಿಸಬೇಕು.

ಅಸಹಾಯರೆಂದು ಭಾವಿಸದಿರಿ!

ಇಂದು ಸೆರೆಮನೆಯ ಹೊರಗಿರುವ ಕಾಂಗ್ರೆಸಿಗರೊಡನೆ ನಾನು ವಿನಂತಿಸುತ್ತಿದ್ದೇನೆ ಇಂದು ನಾವೆಲ್ಲರೂ ಅಸಹಾಯರು ಎಂಬ ಭಾವನೆ ನಮ್ಮಲ್ಲಿರಬಾರದು ಇಂದು ದೇಶದ ಜನರು ಒಂದು ತುತ್ತು ಅನ್ನ, ಒಂದು ತುಂಡು ವಸ್ತ್ರಕ್ಕಾಗಿ ನರಳುತ್ತಿರುವಾಗ ಅವರಿಗೆ ಸಹಾಯ ಒದಗಿಸಿ ಕೊಡುತ್ತಿರುವುದು ನಮ್ಮ ಮೊದಲ ಕರ್ತವ್ಯವಾಗಬೇಕು. ಈ ಸಲದ ಸ್ವಾತಂತ್ರ್ಯ ದಿನಾಚರಣೆಯು ನಮ್ಮ ಮುನ್ನಡೆಯನ್ನು ನೋಡಲಿ ಆ ಮುನ್ನಡೆಯು ಅಂತ್ಯವೆಲ್ಲಿ? ಸಂಪೂರ್ಣ ಸ್ವಾತಂತ್ರ್ಯದ ತಳದಲ್ಲಿ" ಶ್ರೀವಾಸ್ತವರವರ ಮಾತಿದು!

ಡಿಟೆನ್ಯೂಗಳ ಬಿಡುಗಡೆ

ತಂಜಾವೂರು ಜೈಲಿನಲ್ಲಿದ್ದ ೪೬ ಸ್ಥಾನಬದ್ಧರನ್ನು ಮದ್ರಾಸ್ ಸರಕಾರವು ಬಿಡುಗಡೆಮಾಡಿದೆ ಪಂಜಾಬ್ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಸರದಾರ್ ಗೋಪಾಲ ಸಿಂಗ್ ಕೌಮಿಯವರನ್ನು ಅವರ ಪತ್ನಿಯ ಅಸ್ವಸ್ಥತೆಯ ಕಾರಣ ೧೦ ದಿನಗಳ ಪೆರೋಲಿನ ಮೇಲೆ ಬಿಡುಗಡೆ ಮಾಡಲು ಪಂಜಾಬ್ ಸರಕಾರ ಆಜ್ಞೆ ಮಾಡಿದೆ.

ಡಾಕ್ಕಾದಲ್ಲಿ ದರೋಡೆ!

ಇಲ್ಲಿಯ ಜಗನ್ನಾಥ ಸೌಹಾ ಲೇನಿನಲ್ಲಿರುವ ವ್ಯಾಪಾರಿಯೊಬ್ಬನ ಮನೆಯಲ್ಲಿ ೮ ಮಂದಿ ಯುವಕರು ನುಗ್ಗಿ ಮನೆಯವರ ಪ್ರತಿಭಟನೆಯನ್ನು ಲೆಕ್ಕಿಸದೇ ಸುಮಾರು ೫೦೦ ರೂ. ಬೆಲೆಯ ಆಭರಣ ಮತ್ತು ೧೬೦೦ ರೂ ನಗದಿಯನ್ನು ದೋಚಿರುವರು ಈ ಸಂಬಂಧದಲ್ಲಿ ಕೆಲವರ ದಸ್ತಗಿರಿಯಾಗಿದೆ ಎಂದು ತಿಳಿದು ಬರುತ್ತದೆ.

ವಸ್ತ್ರದಂಗಡಿಗಳ ಮೇಲೆ ಪೋಲೀಸರ ಹಲ್ಲೆ

ಡಿಸೆಂಬರ್ ೩೧ರ ಒಳಗೆ ವಸ್ತ್ರ ವ್ಯಾಪಾರಿಗಳೆಲ್ಲರೂ ಮೊಹರು ಹೊಡೆಯದ ವಸ್ತ್ರಗಳನ್ನೆಲ್ಲಾ ಮಾರಬೇಕೆಂದು ಸರಕಾರದ ಆಜ್ಞೆಯಾಗಿತ್ತು ತಾ ೩೧ ಕಳೆಯಲು ಪೋಲೀಸರು ನಗರದ ವಸ್ತ್ರದಂಗಡಿಗಳ ಮೇಲೆ ಹಲ್ಲೆ ನಡೆಯಿಸಿ ಸುಮಾರು ೮೩,೦೦೦ ಗಜ ವಸ್ತ್ರವನ್ನು ವಶಪಡಿಸಿಕೊಂಡಿರುವರು, ಈ ವಸ್ತ್ರವು ಪುನಹ ಹಿಂತಿರುಗಿಸಲ್ಪಡಲಾರದು ಆದರೆ ೧೦ ಸಾವಿರ ಗಜಕ್ಕಿಂತ ಕಮ್ಮಿ ಸಂಗ್ರಹ ಇಟ್ಟವರಿಗೆ ಸ್ವಲ್ಪ ರಿಯಾಯಿತಿ ತೋರಿಸಲಾಗುವುದೆಂದು ಹೇಳಲಾಗಿದೆ

ಅಲ್ಪಸಂಖ್ಯಾಕರ ಹಕ್ಕನ್ನು ರಕ್ಷಿಸುವ ವರೆಗೆ

ಲೀಗ್ ಮಂತ್ರಿಮಂಡಲವಿರುವ ಪ್ರಾಂತ್ಯಗಳಲ್ಲಿ ಹಿಂದುಗಳ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ಸಮಿತಿ ರಚಿಸಬೇಕೆಂದು ಹಿಂದು ಮಹಾಸಭಾಅಧಿವೇಶನದಲ್ಲಿ ನಿರ್ಣಯವಾಗಿತ್ತು, ಇದರ ಕುರಿತು ಮಾತಾಡುತ್ತಾ ಗಡಿನಾಡಿನ ಹಿಂದು ಮಂತ್ರಿ ಸರದಾರ್ ಅಜೀತ್ ಸಿಂಗರು ಅನ್ನುತ್ತಿದ್ದಾರೆ. ಗಡಿನಾಡಿನ ಹಿಂದುಗಳ ಹಿತಕ್ಕೆ ಧಕ್ಕೆ ಬರದಿಲ್ಲವೆಂದು ಮಹಾಸಭೆಗೆ ತಿಳಿದದ್ದು ಸಂತೋಷ ೭ ತಿಂಗಳುಗಳಿಂದ ಈ ಮಂತ್ರಿಮಂಡಳದಲ್ಲಿದ್ದು ನನಗೆ ತೋರಿದುದೇನೆಂದರೆ ಇಂದಿನ ಮಂತ್ರಿಮಂಡಳವು ಹಿಂದು ಹಿತಗಳನ್ನು ರಕ್ಷಿಸುತ್ತದೆ, ನಾನು ಮಹಾಸಭೆಯವರಿಗೆ ಭರವಸೆ ಕೊಡುತ್ತೇನೆ. ಎಲ್ಲಿಯ ವರೆಗೆ ನನಗೆ ಹಿಂದು ಹಿತವನ್ನು ರಕ್ಷಿಸಲು ಸಾಧ್ಯವುಂಟೊ ಅಲ್ಲಿಯ ವರೆಗೆ ನಾನು ಮಂತ್ರಿಮಂಡಳದಲ್ಲಿ ಇರುತ್ತೇನೆ, ಅವರ ನಂತರ ಎಂದೂ ನಿಲ್ಲಲಾರೆನು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್

ನಿನ್ನೆ ಸಂಜೆ ನಮ್ಮ ಮುನಿಸಿಪಲ್ ಚೆಯರ್‌ಮ್ಯಾನರ ಅಧ್ಯಕ್ಷತೆಯಲ್ಲಿ ಜರುಗಿದ ಮುನಿಸಿಪಲ್ ಕೌನ್ಸಿಲಿನ ಮೀಟಿಂಗ್‌ನಲ್ಲಿ ಶ್ರೀ| ಐ. ಜೆ. ಫುರ್ಟಾಡೋ ಅವರು ಒಂದು ಠರಾವನ್ನು ತಂದಿದ್ದರು. ಅದರ ತಾತ್ಪರ್ಯವಿದು:—

'ಚಿಮಿಣಿ ಎಣ್ಣೆ, ಸಕ್ಕರೆ ಮತ್ತು ಕಟ್ಟಿಗೆ ಇವು ಸಕಾರಣವಾದ ಬೆಲೆಯಲ್ಲಿ ಜನರ ಅಗತ್ಯಕ್ಕೆ ತಕ್ಕಂತೆ ದೊರೆಯುವುದಿಲ್ಲ. ವ್ಯಾಪಾರಿಗಳ ಮೂಲಕವಾಗಿ ಚಿಮಿಣಿ ಎಣ್ಣೆ ಮತ್ತು ಸಕ್ಕರೆಯ ಮಾರಾಟ ನಡೆಯುತ್ತಿರುವ ಸದ್ಯದ ಸಂಪ್ರದಾಯದಿಂದ ಬ್ಲೇಕ್ ಮಾರ್ಕೆಟ್ ಯಾನೆ ಕಳ್ಳ ಸಂತೆಯ ವ್ಯಾಪಾರಕ್ಕೆ ಸಹಾಯವಾಗುತ್ತಿದೆ. ಆದುದರಿಂದ ಕಟ್ಟಿಗೆಯ ಬೆಲೆಯನ್ನು ಕಂಟ್ರೋಲ್ ಮಾಡುವುದಲ್ಲದೆ ಚಿಮಿಣಿ ಎಣ್ಣೆ ಸಕ್ಕರೆಗಳು, ಸಹಕಾರಿ ಸಂಘಗಳ ಮೂಲಕವಾಗಿ, ಗುರುತಿನ ಚೀಟುಗಳ ಸಂಪ್ರದಾಯದಂತೆ, ಮಾರಲ್ಪಡುವ ಹಾಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿಸಲು ಈ ಕೌನ್ಸಿಲು ನಿರ್ಧರಿಸುತ್ತದೆ.'

ಶ್ರೀ| ಎಚ್. ಭೀಮರಾಯರು ಈ ಠರಾವನ್ನು ಅನುಮೋದಿಸಿದರು. 'ಠರಾವನ್ನು ಸಮರ್ಥಿಸಿ ಶ್ರೀ| ಎಂ. ಮುಕುಂದ ನಾಯಕರು "ಗುರುತಿನ ಚೀಟಿನ ಸಂಪ್ರದಾಯದಂತೆ' ಎಂಬುದನ್ನೂ ಠರಾವಿಗೆ ಸೇರಿಸಬೇಕೆಂದರು. ಮಿ. ಸಿ. ಎಲ್. ಲೋಬೋ, ವೈಸ್ ಚೆಯರ್‌ಮ್ಯಾನ ಇವರೂ, ಶ್ರೀ ಬಿ. ಗಂಗಾಧರ ದಾಸ್ ಮೊದಲಾದವರೂ ಈ ಠರಾವಿಗೆ ಬೆಂಬಲಕೊಟ್ಟು ಮಾತಾಡಿದ ಮೇಲೆ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಕೆನರಾ ಹೈಸ್ಕೂಲಿನ ಉಪಶಾಖೆ

ಕೆನರಾ ಹೈಸ್ಕೂಲಿನ ಉಪಶಾಖೆಯೊಂದು ಮಣ್ಣಗುಡ್ಡೆಯಲ್ಲಿ ತೆರೆಯಲಿರುವುದು. ಈ ವಿಷಯದಲ್ಲಿ ಸರಕಾರೀ ಅನುಮತಿಯು ದೊರಕಿದೆಯೆಂದು ತಿಳಿಯುತ್ತೇವೆ. ಜೂನ್ ತಿಂಗಳಲ್ಲಿ ಈ ಶಾಲೆಯು ತೆರೆಯಲಿರುವುದು.

ವರ್ಗಾವರ್ಗಿ

ಶ್ರೀ. ಎಸ್. ಯು. ಪರಶುರಾಮ ನಾಯಕ್ ಬಿ. ಎ. ಬಿ. ಎಲ್.ರವರು ಮಂಗಳೂರು ಮುನಿಸಿಪಾಲಿಟಿಯ ಏರಿಯಾ ರೇಶನಿಂಗ್ ಆಫೀಸರರಾಗಿಯೂ, ಹಜೂರು ಹೆಡ್ ಎಕೌಂಟಾಂಟ್ ಶ್ರೀ. ಯು. ಅಪ್ಪಯ್ಯನವರು ಅಸಿಸ್ಟಾಂಟ್ ರೇಶನಿಂಗ್ ಆಫೀಸರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ. ಶ್ರೀ ಯು. ಅಪ್ಪಯ್ಯನವರ ಬದಲಿಗೆ ಮಂಗಳೂರು ತಾಲೂಕು ಆಕ್ಟಿಂಗ್ ಹೆಡ್ ಎಕೌಂಟಾಂಟ್ ಮಿ| ಜೆ. ಜೆ. ಡಿ'ಸೋಜರವರು ಹಜೂರು ಆಕ್ಟಿಂಗ್ ಹೆಡ್ ಎಕೌಂಟಾಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಹಜೂರು ರಿಕಾರ್ಡು ಕೀಪರ್ ಶ್ರೀ. ಎಮ್. ವಾಸುದೇವ ಪ್ರಭುರವರು ಮುನಿಸಿಪಾಲಿಟಿಯ ಅಸಿಸ್ಟಾಂಟ್ ರೇಶನಿಂಗ್ ಆಫೀಸರರಾಗಿಯೂ ಅವರ ಬದಲಿಗೆ ಡಿಟ್‌ಕನ್ಸಿಲಿಯೇಶನ್ ಬೋರ್ಡು ಕ್ಲಾರ್ಕ ಶ್ರೀ ಬಳ್ಳುಂಜೆ ವೆಂಕಟೇಶ ಶೆಣೈರವರು ಹಜೂರು ಆಫೀಸು ಆಕ್ಟಿಂಗ್ ರಿಕಾರ್ಡು ಕೀಪರರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸ್ ಹೆಡ್ ಕ್ಲಾರ್ಕ ಮಿ| ಟಿ. ಜೆ. ಬಂಗೇರ ಬಿ. ಎ. ರವರು ಕಾಸರಗೋಡು ಟೌನಿನ ಅಸಿಸ್ಟಾಂಟ್ ರೇಶನಿಂಗ್ ಆಫೀಸರರಾಗಿಯೂ ಅವರ ಬದಲಿಗೆ ಕಮ್ಮರ್ಶಿಯಲ್ ಟೇಕ್ಸ್ ಆಫೀಸಿನ ಹೆಡ್ ಕ್ಲಾರ್ಕ ಶ್ರೀ. ಪಿ. ಕೆ. ರಾಮರಾಯರು ಪುತ್ತೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಹಜೂರು ಆಫೀಸು ಕ್ಲಾರ್ಕ ಶ್ರೀ| ಪಿ. ಎನ್. ಮೆನೋನರವರು ಉಡುಪಿ ಮ್ಯುನಿಸಿಪಾಲಿಟಿಯ ಅಸಿಸ್ಟಾಂಟ್ ರೇಶನಿಂಗ್ ಆಫೀಸರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬಂಟ್ವಾಳ ಡಿಪ್ಯೂಟಿ ತಹಶಿಲ್ದಾರ್ ಮಿ. ಟಿ. ಟಿ. ವೇಲಿಯತ್ ಬಿ. ಎ.ರವರು ಒಂದು ತಿಂಗಳ ರಜೆ ಪಡೆದಿರುವುದರಿಂದ ಅವರ ಬದಲಿಗೆ ಕಾಸರಗೋಡು ಹೆಡ್ ಕ್ವಾರ್ಟರ್ಸ್ ಡಿಪ್ಯೂಟಿ ತಹಶಿಲ್ದಾರ್ ಶ್ರೀ| ಆರ್. ಎಸ್. ಸುಬ್ರಹ್ಮಣ್ಯಂ ಬಿ. ಎ. ರವರು ಬಂಟ್ವಾಳ ಆಕ್ಟಿಂಗ್ ಡಿಪ್ಯೂಟಿ ತಹಶಿಲ್ದಾರರಾಗಿಯೂ, ಡಿಸ್ಟ್ರಿಕ್ಟ್ ಲೇಬರ್ ಆಫೀಸ್ ಹೆಡ್ ಕ್ಲಾರ್ಕ ಮಿ. ಎ. ಮಸ್ಕರೇಂಞಸ್ ಬಿ. ಎ.ರವರು ಕಾಸರಗೋಡು ಹೆಡ್ ಕ್ವಾರ್ಟರ್ಸ್ ಆಕ್ಟಿಂಗ್ ಡಿಪ್ಯೂಟಿ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಈಗ ಮದ್ರಾಸ್ ಎ. ಆರ್. ಪಿ. ಸ್ಪೆಶ್ಯಲ್ ಆಫೀಸರರಾಗಿರುವ (ಈ ಮೊದಲು ಇಲ್ಲಿ ಎಕ್ಸೈಜ್ ಸರ್ಕಲ್ ಇನ್ಸ್‌ಪೆಕ್ಟರರಾಗಿದ್ದ) ರಾವ್ ಸಾಹೇಬ್ ಸಿ. ರಾಘವನ್ ಬಿ. ಎ.ರವರು ತಮಿಳುನಾಡು ಮತ್ತು ವೆಸ್ಟ್ ಕೋಸ್ಟ್ ಸರ್ಕಲಿನ ಕಮ್ಮರ್ಶಿಯಲ್ ಟೇಕ್ಸ್ ಡಿಪ್ಯೂಟಿ ಕಮಿಶನರರಾಗಿ ನೇಮಿಸಲ್ಪಟ್ಟಿದ್ದಾರೆ.

ಪುತ್ತೂರು ಸರಕಾರಿ ಆಸ್ಪತ್ರೆಯ ಸಿವಿಲ್ ಅಸಿಸ್ಟಾಂಟ್ ಸರ್ಜನ್ ಡಾಕ್ಟರ್ ಮುಂಡ್ಕೂರ್ ಸಂಜೀವರಾಯರಿಗೆ ತಲಚೇರಿಗೆ ವರ್ಗವಾಗಿರುವದರಿಂದ ಅವರ ಸ್ಥಾನಕ್ಕೆ ತಿರುಪತಿಯ ಸಿವಿಲ್ ಅಸಿಸ್ಟಾಂಟ್ ಸರ್ಜನ್ ಡಾಕ್ಟರ್ ಸಿ. ಎಸ್. ಕೃಷ್ಣ ಅಯ್ಯರ್ ಎಮ್. ಬಿ. ಬಿ. ಎಸ್. ಅವರು ಪುತ್ತೂರು ಸರಕಾರಿ ಆಸ್ಪತ್ರೆಯ ಸಿವಿಲ್ ಅಸಿಸ್ಟಾಂಟ್ ಸರ್ಜನರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ರಜತೋತ್ಸವ

ಸ್ಥಳೀಯ ಬಿಸೆಂಟ್ ನ್ಯಾಶನಲ್ ಗರ್ಲ್ಸ ಸ್ಕೂಲಿನ ರಜತ ಮಹೋತ್ಸವವು ಇದೇ ತಾ. ೧೪ನೇ ಶುಕ್ರವಾರ ಶ್ರೀ| ಸಿ. ರಾಜಗೋಪಾಲಾಚಾರ್ಯರ್ ಅವರ ಅಧ್ಯಕ್ಷತೆಯಲ್ಲಿ ಜರುಗುವುದು. ಈ ಸಂದರ್ಭದಲ್ಲಿ ಒಂದು ವಿದ್ಯಾಕಲಾಪ್ರದರ್ಶನವೂ ಇರುವುದು.

ಚೆಡ್ವಿಕ್ ಪೋಲೀಸ್ ಕ್ಲಬ್

ಈ ಕ್ಲಬ್ಬಿನ ಪ್ರಥಮ ವರ್ಷ ವರ್ಧಂತಿ ಕಳೆದ ತಾ. ೧ರಲ್ಲಿ ಕ್ಲಬ್ಬಿನ ವಠಾರದಲ್ಲಿ ಲಘು ಫಲಾಹಾರ, ಮೆಜಿಕ್—ಮೆಸ್ಮರಿಜಂ ಮೊದಲಾದುವುಗಳ ಸಹಿತ ಜರುಗಿತು. ಜಿಲ್ಲಾ ಪೊ| ಸುಪರಿಂಟೆಂಡೆಂಟರಾದ ಮಿ| ಚೆಡ್ವಿಕ್ ಅವರೂ, ನಮ್ಮ ಜಿಲ್ಲಾ ಕಲೆಕ್ಟರ್ ಮೊದಲಾದ ಇತರ ಅಧಿಕಾರಿ ವರ್ಗದವರೂ ಈ ಸಮಾರಂಭದಲ್ಲಿ ಭಾಗಿಗಳಾಗಿ ಸಂತೋಷಪಟ್ಟರು.

ಮಂಗಳೂರು ಸಹಕಾರಿ ಸ್ಟೋರ್ಸ್

ಈ ಸ್ಟೋರ್ಸಿನ ಡೈರೆಕ್ಟರರ ಸಭೆ ಈಚೆಗೆ ಅದರ ಅಧ್ಯಕ್ಷರಾದ ಶ್ರೀ| ಪಿ. ವ್ಯಾಸ್‌ರಾವ್ ಅವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಕಾರ್ಯದರ್ಶಿಯವರಾದ ಶ್ರೀ| ಎಸ್. ನರಸಪ್ಪಯ್ಯನವರು ಅಕ್ಕಿಯ ತೊಂದರೆಯ ನಿವಾರಣೆಗಾಗಿ ಕೈಕೊಂಡ ಕಾರ್ಯಕ್ರಮಗಳ ಕುರಿತು ವಿವರಿಸಿದರು. ಆ ಕ್ರಮಗಳನ್ನು ಡೈರೆಕ್ಟರ್ ಮಂಡಳವೂ ಮಂಜೂರು ಮಾಡಿತು. ಸದ್ಯ ಈ ನಗರದಲ್ಲಿ ಸುಮಾರು ೩೧ ಸಹಕಾರಿ ಡಿಪೋಗಳಿವೆ ಎಂದು ತಿಳಿದುಬಂದಿದೆ.

ನಿಧನ

ನಿಡ್ಲೆ ಗ್ರಾಮದ ಶ್ರೀಯುತ ಯುವ್. ಸುಬ್ರಾಯ ಹೆಬ್ಬಾರರು ಇದೇ ತಾ. ೨೭ಕ್ಕೆ ಅಡ್ಕೆ ತೋಟದಲ್ಲಿ ಅಡ್ಕೆ ಮರವು ತಲೆಗೆ ಬಿದ್ದು ಜಖಂ ಹೊಂದಿ ತನ್ನ ತರುಣ ವಯಸ್ಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಶ್ರೀಯುತರು ಕಳೆದ ರಿಸೆಟ್ಲ್‌ಮೆಂಟ್ ಕಾಲದಲ್ಲಿ ವರ್ಗದಾರರ ಸಂಘದ ಪರವಾಗಿಯೂ, ವೈಯುಕ್ತಿಕ ಶಾಸನ ಭಂಗ ಚಳವಳಿಯಲ್ಲಿಯೂ ಭಾಗವಹಿಸಿದವರಿದ್ದು ಧಾರ್ಮಿಕರೂ ಪರೋಪಕಾರಿಗಳೂ ಉದಾರಿಗಳೂ ಆಗಿದ್ದರು. ಮೃತರ ಆತ್ಮಕ್ಕೂ ಕುಟುಂಬಕ್ಕೂ ಭಗವಂತನು ಚಿರಶಾಂತಿಯನ್ನೀಯಲಿ.

ದ. ಕ. ಜಿಲ್ಲೆಯಲ್ಲಿ ಶ್ರೀ. ರಾಜಗೋಪಾಲಾಚಾರಿಯವರ ಕಾರ್ಯಕ್ರಮ

ಮದ್ರಾಸಿನಿಂದ ಹೊರಟ ಶ್ರೀ| ರಾಜಗೋಪಾಲಾಚಾರ್ಯರು ತಾ. ೧೩ರಂದು ಕಾಸರಗೋಡಿನಲ್ಲಿದ್ದು ಶೀತಂಗೋಳಿ—ಕುಂಬಳೆಗಳಿಗಾಗಿ ತಾ. ೧೪ರಂದು ಪೂರ್ವಾಹ್ನ ಮಂಗಳೂರು ಸೇರುವರು; ಆ ದಿನ ಸಂಜೆ ಬೆಸೆಂಟ್ ರಾಷ್ಟ್ರೀಯ ಹುಡುಗಿಯರ ಶಾಲೆಯ ಬೆಳ್ಳಿಯ ಹಬ್ಬದ ಅಧ್ಯಕ್ಷತೆ ವಹಿಸುವರು; ತಾ. ೧೫ರಂದು ಗವರ್ನಮೆಂಟ್ ಕಾಲೇಜಿನ ರಜತ ಮಹೋತ್ಸವದ ಅಧ್ಯಕ್ಷರಾಗುವರು; ತಾ. ೧೬ರಂದು ನೀಲೇಶ್ವರಕ್ಕೆ ತೆರಳಿ ಅಲ್ಲಿ ರಾಜಸ್ ಹೈಸ್ಕೂಲಿನ ರಜತೋತ್ಸವದ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿ, ತಾ. ೧೭ರಂದು ಮದ್ರಾಸಿಗೆ ಹಿಂತಿರುಗುವರು.

ಕಾಸರಗೋಡಿನಲ್ಲಿ

ತಾ. ೧೩ರಂದು ಸಂಜೆ ಕಾಸರಗೋಡು ರೈಲ್ವೆ ನಿಲ್ದಾಣದಲ್ಲಿ ರಾಜಾಜಿಯವರಿಗೆ ಸ್ವಾಗತವೀಯಲಾಗುವುದು. ಒಡನೆಯೇ ಅವರು ಶೀತಂಗೋಳಿಗೆ ಪ್ರಯಾಣ ಬೆಳೆಸುವರು. ಅಲ್ಲಿ ಹರಿಜನ ವಸತಿಯ ಶಂಕು ಸ್ಥಾಪನೆ, ಭಾಷಣ ಇತ್ಯಾದಿಗಳಾಗುವುವು. ಅನಂತರ ಮಾಯ್ಪಾಡಿ ಅರಮನೆಗೆ ಪ್ರಯಾಣ ಮತ್ತು ವಿಶ್ರಾಂತಿ. ಮರುದಿನ ಮುಂಜಾನೆ ಕುಂಬಳೆಗಾಗಿ ಮಂಗಳೂರಿಗೆ ಪ್ರಯಾಣ.

"ತಾ. ೧೩ನೆ ಗುರುವಾರ ಸಂಜೆ ೭—೩೦ಕ್ಕೆ ಮದ್ರಾಸ್ ಪ್ರಾಂತದ ಪ್ರಧಾನ ಮಂತ್ರಿಯಾಗಿದ್ದ ಶ್ರೀ. ಸಿ. ರಾಜಗೋಪಾಲಾಚಾರ್ಯರು ಕಾಸರಗೋಡು ತಾಲೂಕು ಎಡನಾಡು ಗ್ರಾಮದ ಶೀತಂಗೋಳಿಯಲ್ಲಿ ಸ್ಥಾಪಿತವಾಗಲಿರುವ ಹರಿಜನ ವಸತಿಯ ಶಂಕು ಸ್ಥಾಪನೆಯನ್ನು ಮಾಡಲಿರುವರು. ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ"—ಎಂದು ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷ ಶ್ರೀ. ಎ. ಬಿ. ಶೆಟ್ಟಿ, ಕಾಸರಗೋಡು ತಾಲೂಕು ಹರಿಜನ ಸೇವಾ ಸಂಘದ ಅಧ್ಯಕ್ಷ ಶ್ರೀ. ಎ. ಶ್ರೀನಿವಾಸ ಪೈ, ಉಪಾಧ್ಯಕ್ಷ ಶ್ರೀ| ಬಿ. ಎಸ್. ಕಕ್ಕಿಲ್ಲಾಯ, ಕಾರ್ಯದರ್ಶಿ ಶ್ರೀ| ಎಂ. ಕೆ. ಬಾಬು ಶೆಟ್ಟಿ ಇವರು ಒಂದು ಅರಿಕೆ ಹೊರಡಿಸಿರುವರು.

ಹೊಸ ವರ್ಷದೊಳಗೆ ಸಂಗ್ರಹವಾದ ಅಕ್ಕಿ!

ದಶಂಬರ ತಾ. ೩೧ರೊಳಗೆ ಇಡೀ ಜಿಲ್ಲೆಯಲ್ಲಿ ಸಂಗ್ರಹವಾದ ಅಕ್ಕಿ.

ಕುಂದಾಪುರ ತಾಲೂಕು ೩,೯೬೫ ಮುಡಿ ಅಕ್ಕಿ; ಉಡುಪಿ ೪,೦೭೬ ಮುಡಿ ಅಕ್ಕಿ; ಮಂಗಳೂರು ೮,೯೯೫ ಮುಡಿ ಅಕ್ಕಿ; ಮತ್ತು ೧೨೦ ಮುಡಿ ಭತ್ತ; ಕಾರ್ಕಳ ೧೦,೦೯೭ ಮುಡಿ ಅಕ್ಕಿ: ಪುತ್ತೂರು ೬,೩೪೧ ಮುಡಿ ಅಕ್ಕಿ ಮತ್ತು ೬೦೫೪ ಮುಡಿ ಭತ್ತ; ಕಾಸರಗೋಡು ೫೫೪ ಮುಡಿ ಭತ್ತ ಮಾತ್ರ, ಹೀಗೆ ಒಟ್ಟು ೩೭,೫೧೪ ಮುಡಿ ಅಕ್ಕಿ ಮತ್ತು ೬,೭೩೬ ಮುಡಿ ಭತ್ತ. ಭತ್ತವನ್ನು (ಮುಡಿ ಅಕ್ಕಿಗೆ ೬॥ ಕಳಸೆ ಭತ್ತದಂತೆ) ಅಕ್ಕಿಯಾಗಿ ಮಾರ್ಪಡಿಸಿದರೆ ಜಿಲ್ಲೆಯಲ್ಲಿ ದಶಂಬರ ಅಂತ್ಯದೊಳಗೆ ಸ್ವಾಧೀನಪಡಿಸಿಕೊಳ್ಳಲ್ಪಟ್ಟ ಒಟ್ಟು ಅಕ್ಕಿ ೪೦,೬೭೩ ಮುಡಿ. ಇಡೀ ಜಿಲ್ಲೆಯಲ್ಲಿ ಈ ವರ್ಷ ಸ್ವಾಧೀನವಾಗಬೇಕಾದ ಅಕ್ಕಿ ೫,೪೪,೫೦೦ ಮುಡಿ. ಅದರಲ್ಲಿ ೬೮,೭೫೦ ದಶಂಬರದೊಳಗೆ ಆಗಬೇಕಾಗಿತ್ತು.

ಒಟ್ಟು ೭೦ ಡಿಪೋಗಳು

ಕಾರ್ಕಳ ತಾಲೂಕಿನ ಕೆದಿಂಜೆ ಗ್ರಾಮದ ಮಂಜರಪಳಿಕೆಯಲ್ಲಿ ಸಹಕಾರಿ ಹೋಲ್‌ಸೇಲ್ ಸ್ಟೋರ್ಸಿನ ಆಶ್ರಯದಲ್ಲಿ ೭೦ನೆ ಡಿಪೋ ತೆರೆಯಲ್ಪಟ್ಟಿದೆ. ಕೆದಿಂಜೆ ಗ್ರಾಮದ ಪಟೇಲರೇ ಈ ಡಿಪೋದ ಏಜಂಟರಾಗಿರುವರು.

ದಕ್ಷಿಣ ಕನ್ನಡ ಗ್ರಾಮ ಕೈಗಾರಿಕೆ ಕೇಂದ್ರ ಮಂಗಳೂರು ಅಧಿಕೃತ (ಅ. ಭಾ. ಚ. ಸಂಘ) ಇದರಲ್ಲಿ ಕಳೆದ ಜುಲೈ ೧೯೪೩ರಿಂದ ದಶಂಬರ ೩೧ರ ವರೆಗೆ ೧೯೪೩ ಖಾದಿ ಉತ್ಪತ್ತಿ ಮತ್ತು ಕೈನೂಲು ಉತ್ಪತ್ತಿಯು ಈ ರೀತಿಯಾಗಿದೆಯೆಂದು ಸಮ್ಮಂಧಪಟ್ಟವರು ತಿಳಿಸುತ್ತಾರೆ.

ಕೂಲಿಗೆ ನೂಲುವವರ ನೂಲು ಬಟ್ಟೆ ೯೪೦೬ರ ಕ್ರಯ ೧೩೦೬—೧೪—೯, ನೂಲಿಗೆ ಬದಲಾಗಿ ಖಾದಿ ಕೊಟ್ಟದ್ದು ೩೩೧೨ರ ಕ್ರಯ ೪೬೦—೧೨—೩, ಜುಮ್ಲಾ ೧೭೬೩—೧೧—೦. ಖಾದಿ ಉತ್ಪತ್ತಿ ಗಜ ೧೩೪೦॥ರ ಕ್ರಯ ೧೫೪೩—೯—೬. ನೂಲುವವರಿಗೆ ಕೊಟ್ಟ ಕೂಲಿ ೭೫೫—೧೪—೩, ನೇಯ್ಗೆಯವರಿಗೆ ಕೂಲಿ ೪೧೨—೧೩—೩, ಮಡಿಯವರಿಗೆ ಕೂಲಿ ೪೧—೮—೩, ಜುಮ್ಲಾ ೧೨೧೦—೩—೯.

ಶೀತಂಗೋಳಿಯ ಹರಿಜನ ವಸತಿ

ಶೀತಂಗೋಳಿಯಲ್ಲಿ ಮಾನ್ಯ ಸರಕಾರದವರು ೩೧ ಎಕ್ರೆ ಚಿಲ್ಲರೆ ಸ್ಥಳವನ್ನು ಜಿಲ್ಲಾ ಸಂಘದ ಹೆಸರಲ್ಲಿ ಕೊಟ್ಟಿರುತ್ತಾರೆ. ಅಖಿಲ ಹಿಂದೂಸ್ಥಾನ ಹರಿಜನ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ| ಎ. ವಿ. ಥಕ್ಕರ್ ಇವರು ಈ ಸ್ಥಳವನ್ನು ಸಂದರ್ಶಿಸಿ ತುಂಬಾ ಸಂತೋಷಪಟ್ಟು ಯೋಗ್ಯ ಸಲಹೆಗಳನ್ನು ಕೊಟ್ಟಿರುತ್ತಾರೆ. ಅಲ್ಲಿ ಪ್ರಕೃತ ಪ್ರತಿಯೊಂದು ಮನೆಗೂ ರೂ. ೧೫೦ರ ೧೨ ಮನೆಗಳನ್ನು ಕಟ್ಟಿಸುವ ಹಾಗೂ ರೂ. ೧೫೦ ವೆಚ್ಚ ತಗಲಬಹುದಾದ ೨ ಬಾವಿಗಳನ್ನು ಸರಿಮಾಡುವ ಮತ್ತು ೧೪ ಎಕ್ರೆ ಸ್ಥಳದಲ್ಲಿ ಕೃಷಿಮಾಡುವ (ಅಂದಾಜು ವೆಚ್ಚ ರೂ. ೧೦೦೦) ಯೋಜನೆಯನ್ನು ಸಂಘವು ಕೈಕೊಂಡಿರುತ್ತದೆ. ಆ ವೈಕಿ ೬ ಜನ ಮಹನೀಯರು ೬ ಮನೆಗಳನ್ನೂ ಒಬ್ಬರು ಬಾವಿಯ ವೆಚ್ಚವನ್ನೂ ವಹಿಸಿಕೊಂಡಿರುತ್ತಾರೆ. ಇದೇ ರೀತಿಯ ಸಹಾಯವನ್ನು ಸಂಘವು ಮಹಾಜನರಿಂದ ಅಪೇಕ್ಷಿಸುತ್ತದೆ. ಸಹಾಯ ಧನಗಳನ್ನು ಕಳುಹಿಸುವವರು—ಅಧ್ಯಕ್ಷ, ಜಿಲ್ಲಾ ಹರಿಜನ ಸೇವಾ ಸಂಘ ಮಂಗಳೂರು ಅಥವಾ ಅಧ್ಯಕ್ಷ ತಾಲೂಕು ಹರಿಜನ ಸೇವಾ ಸಂಘ ಕಾಸರಗೋಡು ಎಂಬ ವಿಳಾಸಗಳಲ್ಲಿ ಯಾವುದಾದರೂ ಒಂದಕ್ಕೆ ಕಳುಹಿಸಬಹುದು ಎಂದು ಹರಿಜನ ಸೇವಕ ಸಂಘದ ಶ್ರೀ| ಎಸ್. ಎಸ್. ಕಿಲ್ಲೆ ಅವರು ಬರೆಯುತ್ತಾರೆ.

R

ಪ್ರಕಟಣೆ

ಮಂಗಳೂರು ನಗರ ನಿವಾಸಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ 1943 ನೇ ಇಸ್ವಿಯ ಮದ್ರಾಸ್ ರೇಶನಿಂಗ್ ಆರ್ಡರ್ ಪ್ರಕಾರ ಮಂಗಳೂರು ಟೌನ್ ಮತ್ತು ಸುತ್ತಲಿನ ಸರಹದ್ದಿನಲ್ಲಿ ಅಕ್ಕಿ ರೇಶನಿಂಗ್ ಯೋಜನೆಯನ್ನು ಜ್ಯಾರಿಗೆ ತರುವ ಸಮ್ಮಂಧ 1943ನೇ ಇಸ್ವಿಯ ಮದ್ರಾಸ್ ರೇಶನಿಂಗ್ (ಪ್ರಿಪರೇಟರಿ ಮೆಜರ್ಸ್) ಆರ್ಡರ್ ಪ್ರಕಾರ ಮಂಗಳೂರು ಮುನಿಸಿಪಾಲಿಟಿಯೊಳಗೆ ವಾಸಿಸುವ ಖಾಸಗಿ ಕುಟುಂಬಗಳ ಎಣಿಸುವಿಕೆಯು ಇದೇ ತಾರೀಕು 9-1-44ನೇ ಆದಿತ್ಯವಾರ ದಿವಸ ಮಂಗಳೂರು ಮುನಿಸಿಪಾಲಿಟಿಯ ಉದ್ಯೋಗಸ್ಥರ ಮೂಲಕ ಪ್ರಾರಂಭಿಸಲಾಗುವುದು. ಎಣಿಕೆಯ ಕೆಲಸವನ್ನು ಕ್ರಮ ಪ್ರಕಾರವಾಗಿ ತ್ವರ್ಯದಿಂದ ಮುಗಿಸುವುದರಲ್ಲಿ ಎಲ್ಲಾ ಪುರಜನರು ಎಣಿಕೆಗೆ ಬರುವ ಉದ್ಯೋಗಸ್ಥರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಈ ಸಂದರ್ಭದಲ್ಲಿ ಈ ಕೆಳಗೆ ಕೊಡಲ್ಪಡುವ ಸೂಚನೆಗಳನ್ನು ಜ್ಞಾಪಕದಲ್ಲಿಡಬೇಕಾಗಿ ವಿನಂತಿ.

೧. ರೇಶನಿಂಗ್ ಜ್ಯಾರಿಗೆ ತರುವ ಉದ್ದೇಶವು ಆಹಾರ ವ್ಯಯವನ್ನು ತಗ್ಗಿಸುವುದಲ್ಲ, ಆಹಾರವನ್ನು ಸಮತಾಭಾವದಿಂದ ಹಂಚುವುದಾಗಿರುತ್ತದೆ.

೨. ಕಳ್ಳಪಟಿಕೆ ವ್ಯಾಪಾರ (ಬ್ಲೇಕ್ ಮಾರ್ಕೆಟ್) ಮತ್ತು ಅಪರಿಮಿತ ಲಾಭ (profiteering) ಇವುಗಳು ರೇಶನಿಂದಾಗಿ ನಿರ್ಮೂಲವಾಗಿ ಜನರಿಗೆ ಪ್ರಯೋಜನವುಂಟಾಗುವುದು.

೩. ರೇಶನಿಂಗ್ ಯೋಜನೆಯು ಜಯವಾಗುವಂತೆ ಸರಕಾರದೊಡನೆ ಸಹಕರಿಸಿರಿ.

೪. ನಿಮ್ಮ ಕುಟುಂಬದಲ್ಲಿರುವ ಜನರ ಸಂಖ್ಯೆಯನ್ನು ತಪ್ಪಾಗಿ ಕೊಡಬೇಡಿರಿ.

೫. ಹೆಚ್ಚು ರೇಶನ್ ಯೂನಿಟ್‌ಗಳನ್ನು ಪಡಿಯುವ ಅಭಿಲಾಷೆಯಿಂದ ನಿಮ್ಮ ಕುಟುಂಬದ ಜನರ ಪ್ರಾಯವನ್ನು ತಪ್ಪಾಗಿ ಕೊಡಬೇಡಿರಿ.

೬. ನಿಮ್ಮ ಮನೆಯಲ್ಲಿ ವಾಸ್ತವ್ಯ ಮತ್ತು ಊಟಮಾಡದೆ ಇರುವ ಈ ನೌಕರರನ್ನು ಎಣಿಕೆಯಲ್ಲಿ ಸೇರಿಸಬೇಡಿರಿ.

೭. ಈ ಊರಿನಲ್ಲಿ ಇಲ್ಲದೆ ಇರುವ ನಿಮ್ಮ ಕುಟುಂಬಿಕರ ಹೆಸರುಗಳನ್ನು ಸೇರಿಸಬೇಡಿರಿ.

ಯಸ್. ಯು. ಪರಶುರಾಮ ನಾಯಕ್
ರೇಶನಿಂಗ್ ಆಫೀಸರ್, ಮಂಗಳೂರು

5—1—44.

ಶಿವಮೊಗ್ಗಾದಲ್ಲಾದ ಸಾಹಿತ್ಯ ಸಮ್ಮೇಳನ

ಪ್ರಗತಿಶೀಲ ಲೇಖಕರ ಸಭೆ!

ಯುವಕರ—ಮಹಿಳೆಯರ—ಸಂಘಗಳ ಸಮ್ಮೇಳನ

ಶ್ರೀಯು ಬೇಂದ್ರೆ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಸಮ್ಮೇಳನದ ಹಿಂದಿನ ದಿನ ಸಂಜೆ ಅಧ್ಯಕ್ಷರು ಶಿವಮೊಗ್ಗೆಗೆ ಬಂದು ತಲಪಿದರು. ಸಂಭ್ರಮದ ಸ್ವಾಗತವಿತ್ತು. ಕಾರಿನ ಮೇಲೆ ಮಯೂರಾಸನ (ಶಿವಮೊಗ್ಗಾ ಕರ್ನಾಟಕ ಸಂಘದ ಸುಕೇತ)ದಲ್ಲಿ ಅವರನ್ನು ಕುಳ್ಳಿರಿಸಿ, ಮೈಲುದ್ದದ ಮೆರವಣಿಗೆಯಾಯಿತು.

ಮೊದಲನೆಯ ದಿನ

ತಾ. ೨೧ರಂದು ಪೂರ್ವಾಹ್ನ ೯ ಘಂಟೆಗೆ ಅಧ್ಯಕ್ಷ ಶ್ರೀ। ಬೇಂದ್ರೆಯವರು ಸಮ್ಮೇಳನಕ್ಕೆ ಸಂಬಂಧಿಸಿ ಏರ್ಪಟ್ಟಿದ್ದ ಕಲಾವಸ್ತು ಪ್ರದರ್ಶನವನ್ನು ತೆರೆದರು. ಹನ್ನೊಂದು ಘಂಟೆಗೆ ಸಮ್ಮೇಲನದ ಬಹಿರಂಗ ಅಧಿವೇಶನವು ಆರಂಭವಾಯಿತು. ಸ್ವಾಗತ ಗೀತೆಯ ಬಳಿಕ ಸ್ವಾಗತಾಧ್ಯಕ್ಷ ಶ್ರೀ। ಹಸೂಡಿ ವೆಂಕಟ ಶಾಸ್ತ್ರಿ ಅವರು ಅಧ್ಯಕ್ಷರನ್ನೂ ಸಭಿಕರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ಸಮ್ಮೇಳನಕ್ಕೆ ಶುಭವನ್ನು ಕೋರಿ ಕೊಂಡು ಬಂದಿದ್ದ ಹಲವು ಸಂದೇಶಗಳನ್ನು ಸ್ವಾಗತ ಕಾರ್ಯದರ್ಶಿ ಶ್ರೀ। ಸಿ. ವಿ. ಕೃಷ್ಣಮೂರ್ತಿ ರಾಯರು ಓದಿದರು. ಬೇಂದ್ರೆಯವರ ಪರಿಚಯವನ್ನು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಶ್ರೀ। ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು ಮಾಡಿ ಕೊಡುತ್ತಾ, 'ನನ್ನ ಮತ್ತು ಬೇಂದ್ರೆಯವರೊಳಗಿನ ಸಂಬಂಧ ಅಣ್ಣ–ತಮ್ಮ ಸಂಬಂಧ' ಎಂದರು.

ಅಧ್ಯಕ್ಷರು ಅನಂತರ ವಿಚಾರಪೂರ್ಣವೂ ದೀರ್ಘವೂ ಆದ ತಮ್ಮ ಅಧ್ಯಕ್ಷ ಭಾಷಣವನ್ನಿತ್ತರು.

ಮಧ್ಯಾಹ್ನದ ಅನಂತರ ಮಹಿಳಾ ಸಮ್ಮೇಳನವು ಜರಗಿತು. ಬೆಂಗಳೂರಿನ ಶ್ರೀಮತಿ ತಿರುಮಲೆ ರಾಜಮ್ಮ ತಾತಾಚಾರ್ಯ ಶರ್ಮನ್ ಅವರು ಅಧ್ಯಕ್ಷತೆ ವಹಿಸಿದ್ದರು. ಗಮಕ ವಿದುಷಿ ಶ್ರೀಮತಿ ಲಲಿತಮ್ಮ ಅವರ ಭಾರತ ವಾಚನ, ಶ್ರೀಮತಿ ಶಾರದಮ್ಮನವರ ಸ್ವಾಗತ ಭಾಷಣ, 'ಮಹಿಳೆಯರು ಅಡುಗೆಮನೆಗಳನ್ನು ಬಿಟ್ಟು ತಲೆ ಹೊರ ಹಾಕಬೇಕೆಂ'ದು ಘೋಷಿಸಿ ಶ್ರೀಮತಿ ಆರ್. ಕಲ್ಯಾಣಮ್ಮ ಅವರ ಭಾಷಣ, ಹರಿಹರ ಮಹಾಕವಿಯ 'ಅಕ್ಕಮಹಾ ದೇವಿರಗಳೆ'ಯ ಕುರಿತು ಶ್ರೀಮತಿ ಸುಶಿಲಮ್ಮನವರ ಉಪನ್ಯಾಸ ಮೊದಲಾದ ಕಾರ್ಯಕ್ರಮಗಳು ನಡೆದುವು.

ಸಂಜೆ ಸ್ವಾಗತಾಧ್ಯಕ್ಷ ಶ್ರೀ। ಹಸೂಡಿ ವೆಂಕಟೇಶ ಶಾಸ್ತ್ರಿ ಅವರನ್ನು ಗೌರವಿಸುವುದಕ್ಕಾಗಿ ಸನ್ಮಾನ ಕೂಟವೇರ್ಪಟ್ಟಿತು. ಆರಂಭದಲ್ಲಿ ಶಿವಮೊಗ್ಗಾ ಕರ್ನಾಟಕ ಸಂಘದ ಸ್ವತಂತ್ರ ಕಟ್ಟಡಕ್ಕೆಂದು ರೂ. ೫,೦೦೦ ವಾಗ್ದಾನ ಮಾಡಿದ್ದ ಬಳಿಕ ರೂ. ೩೦,೦೦೦ ಕೊಟ್ಟ ಮಹನೀಯರಿವರು. ಅಧ್ಯಕ್ಷ ಬೇಂದ್ರೆಯವರು ಅವರ ತೈಲ ಚಿತ್ರದ ಅನಾವರಣವನ್ನು ಮಾಡಿದರು.

ರಾತ್ರಿ ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ಅವರ ಗಾಯನವಿತ್ತು.

ಎರಡನೆ ದಿನ

ತಾ. ೨೨ರಂದು ಪೂರ್ವಾಹ್ನ ಶ್ರೀ। ನೆಗಳೂರ ರಂಗನಾಥ ಅವರ ಅಧ್ಯಕ್ಷತೆಯಲ್ಲಿ ಯುವಕರ ಸಮ್ಮೇಳನವು ಜರಗಿತು. ಬೆಂಗಳೂರು, ಮಂಗಳೂರು, ಧಾರವಾಡ, ಕಾರವಾರ ಮತ್ತು ನಾಡಿನ ಇತರ ಭಾಗಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಕೆಲವರು ಸ್ವಂತ ಕೃತಿಗಳ ವಾಚನವನ್ನು ಮಾಡಿದರು; ಕೆಲವರು ಭಾಷಣಗಳನ್ನಿತ್ತರು. ತರುಣರು ಮುನ್ನಡಿಯಿಡಬೇಕೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉತ್ಸಾಹದ ಮತ್ತು ಪ್ರೋತ್ಸಾಹದ ಮಾತುಗಳನ್ನಾಡಿದರು.

ಮಧ್ಯಾಹ್ನದ ಅನಂತರ ಬಹಿರಂಗ ಅಧಿವೇಶನವು ಜರಗಿ, ಶ್ರೀಯುತರು ಬೆನಗಲ್ ರಾಮರಾವ್, ಎನ್. ಎಸ್. ಸುಬ್ಬರಾವ್, ಬೆಳ್ಳಾವೆ ವೆಂಕಟನಾರಾಯಣಪ್ಪ, ಟಿ. ವಾಸುದೇವಯ್ಯ, ಕೆ. ಶಂಕರನಾರಾಯಣ ರಾವ್, ವಿ. ಬಿ. ಜೋಶಿ, ಜಟಗೇರಿ ಭೀಮರಾವ್, ಗುಮಾಸ್ತೆ, ಪಂಡಿತ ತಾರಾನಾಥ, ಹಳ್ಳಿರಾವ್, ಗೋವಿಂದರಾವ್, ಶಾಸನ ದೇವಪ್ಪ ಮತ್ತು ಶ್ರೀಮತಿಯರು ಶೇಷಮ್ಮ, ಬೆಳಗಾವಿ ಶಾಮಲಾದೇವಿ ಇವರ ನಿಧನದಲ್ಲಿ ಸಂತಾಪವನ್ನು ಸೂಚಿಸುವ ನಿರ್ಣಯವು ಮಾನ್ಯವಾಯಿತು. ಮಹಾರಾಷ್ಟ್ರ ವಿಶ್ವ ವಿದ್ಯಾನಿಲಯದ ಸಮಿತಿಯ ವರದಿಯು ಕೆಲವು ಕನ್ನಡ ಸಂಸ್ಥಾನಗಳನ್ನು ಮಹಾರಾಷ್ಟ್ರದ್ದಾಗಿ ಪರಿಗಣಿಸಿದೆ ಹಾಗೆ ಮಾಡದಂತೆ ಅವರಿಗೆ ತಿಳುಹಬೇಕು, ಎಂಬ ನಿರ್ಣಯ; ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ನೇಮಿಸಲ್ಪಟ್ಟಿರುವ ಸಮಿತಿಗೆ ಬೆಂಬಲ ಕೊಡಬೇಕೆಂದು ಜನರಲ್ಲಿ ವಿನಂತಿ; ದೇಶ ಭಾಷೆಯಲ್ಲೇ ಶಿಕ್ಷಣ ದೊರೆಯುವಂತಾಗಬೇಕೆಂಬ ಅಭಿಪ್ರಾಯ; ಜನರಲ್ಲಿ ಬಲವಾದ ಅಕ್ಷರ ಪ್ರಚಾರವಾಗಬೇಕು—ಸಾಧ್ಯವಿರುವಲ್ಲೆಲ್ಲ ಜನರು ಕನ್ನಡವನ್ನೇ ಬಳಸಬೇಕು ಎಂಬ ನಿರ್ಣಯಗಳು; ಹೈದರಾಬಾದಿನ ಕೆಲವು ಕನ್ನಡ ಜಿಲ್ಲೆಗಳನ್ನು ಕರ್ನಾಟಕವಾಗಿಯೇ ಪರಿಗಣಿಸಬೇಕೆಂದು ನಿಜಾಂ ಸರಕಾರಕ್ಕೆ ವಿನಂತಿ; ಕಲ್ಬುರ್ಗಿಯನ್ನು ವರ್ಧಾ ಹಿಂದೀ ಪ್ರಚಾರ ಸಮಿತಿಯವರು ಮರಾಠವಾಗಿ ಪರಿಗಣಿಸಿದ್ದಾರೆ. ಅದನ್ನು ಕರ್ನಾಟಕವಾಗಿ ಮಾರ್ಪಡಿಸಬೇಕೆಂದು ಸೂಚನೆ—ಇವು ನಿರ್ಣಯಗಳು ಸ್ವೀಕರಿಸಲ್ಪಟ್ಟುವು.

ಬಹಿರಂಗ ಅಧಿವೇಶನದ ದ್ವಿತೀಯ ಭಾಗವಾಗಿ, ಮೈಸೂರು ವಿಶ್ವವಿದ್ಯಾನಿಲಯವನ್ನು ಬಿಟ್ಟು ಕರ್ನಾಟಕಕ್ಕೆ ಇನ್ನೂ ಒಂದು ವಿಶ್ವವಿದ್ಯಾನಿಲಯವಿರುವುದರ ಅವಶ್ಯಕತೆ ಮತ್ತು ಸಾಧ್ಯತೆಯ ಕುರಿತು ಉಪನ್ಯಾಸಗಳಾದುವು. ಮುಂಬಯಿ, ಮದ್ರಾಸು, ಕರ್ನಾಟಕ ಮತ್ತು ಕೊಡಗುಗಳಿಗೊಂದು ವಿಶ್ವವಿದ್ಯಾನಿಲಯವಾಗ ಬೇಕೆಂದು ಆಯಾ ಸರಕಾರಗಳು ಯತ್ನಿಸಬೇಕೆಂದು ಕೇಳಿಕೊಳ್ಳುವ ನಿರ್ಣಯವನ್ನು ಸಮ್ಮೇಳನವು ಸ್ವೀಕರಿಸಿತು.

ಆ ದಿನ ರಾತ್ರಿ ಆರು ನಾಟಕಗಳ ಸ್ಪರ್ಧೆ ನಡೆಯಿತು. ಒಟ್ಟು ಆರು ನಾಟಕಗಳಿದ್ದುವು. ಶ್ರೀ। ನಾ. ಕಸ್ತೂರಿಯವರ ಶಿವಮೊಗ್ಗಾ ಕುಟಿದವರಿಗೆ ಪ್ರಥಮ ಬಹುಮಾನವೂ ಬಿಜಾ…

[೭ನೇ ಪುಟಕ್ಕೆ ಮುಂದುವರಿದಿದೆ]

ಲಾಭ ಕೋರನೊಡನೆ ಹೋರಾಡಲು

ಉತ್ತಮ ಉಪಾಯ

ಮುಂಬರುವ ದಿನಗಳಿಗಾಗಿ ಕೂಡಿಡಿ. ಅನವಶ್ಯ ಪದಾರ್ಥಗಳನ್ನು ಯುದ್ಧಕಾಲದಲ್ಲಿ ಕೊಳ್ಳುವುದು ಮೂರ್ಖತನ; ಅದರಿಂದ ಲಾಭಕೋರನಿಗೆ ಲಾಭವಾಗುತ್ತದೆ, ಆದರೆ ಏರಿದ ಬೆಲೆಯಲ್ಲಿ ನೀವು ಕೊಂಡ ಪ್ರತಿಸಾರಿಯೂ ನೀವು ನಷ್ಟ ಮಾಡಿಕೊಳ್ಳುವಿರಿ. ಹಣವನ್ನು ಇಂದೇ ಕೂಡಿಡಿ! ಅತ್ಯಾವಶ್ಯಕವಾದುವುಗಳಿಗೆ ಮಾತ್ರ ವೆಚ್ಚಮಾಡಿ. ವಿಜಯವು ಸರಿಯಾದ ಬೆಲೆಯನ್ನು ತರುವವರೆಗೆ ಮೋಜಿನ ಸಾಮಾನುಗಳನ್ನು ಕೊಳ್ಳಬೇಡಿ.

ಸುರಕ್ಷಿತವಾಗಿ ಕೂಡಿಡಿ

ಎಚ್ಚರಿಕೆಯಿಂದಿರಿ! – ನೀವು ಕೂಡಿಡುವ ಹಣವನ್ನು ಇಟ್ಟುಕೊಳ್ಳುವ ಬಗ್ಗೆ. ಭಂಗಾರ ಬೆಳ್ಳಿ ಆಭರಣಗಳು, ಭೂಮಿ, ಕಟ್ಟಡಗಳು ಮತ್ತು ಸಾಮಾನುಗಳ ಮೇಲೆ ವಿನಿಯೋಗಿಸುವುದು ಬುದ್ಧಿವಂತಿಕೆಯಲ್ಲ, ಏಕೆಂದರೆ ಎಂದಾದರೂ ಒಂದುದಿನ ಈಗಿನ ಹೆಚ್ಚಿನ ಬೆಲೆಗಳು ಕುಸಿದು ಬೀಳುವುದು ನಿಜ, ಅದು ಹಠಾತ್ತಾಗಿ ಒದಗಿದರೂ ಒದಗಬಹುದು.

ದಿನವೂ ನಾಲ್ಕು ಆಣೆ ಕೂಡಿಡಿ!

ಲಾಭ ಕೋರರಿಗೆ ಕೊಡುವ ಬದಲಿಗೆ ನಿಮ್ಮ ರೂಪಾಯಿಗಳನ್ನು ಒಂದು ಹಣದ ಪೆಟ್ಟಿಗೆಯಲ್ಲಿ ಹಾಕಿಡಿ. ದಿನವೂ ನಾಲ್ಕು ಆಣೆ, ಸಾಧ್ಯವಾದರೆ ಹೆಚ್ಚಾಗಿ ಕೂಡಿಡುವುದೇ ನಿಮ್ಮ ಗುರಿಯಾಗಿರಲಿ. ಅನಂತರ ಕೂಡಿಟ್ಟ ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ ಈ ಕೆಳಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಮಾಡಿಸುತ್ತಾ ಬನ್ನಿ.

ಭದ್ರತೆಯ ಕುರಿತು ಆಲೋಚಿಸಿ

ನಿಮ್ಮ ಹಣವನ್ನು ಮೌಲ್ಯ ತಗ್ಗದ ಕಡೆ ಕೂಡಿಡಿ. ಸಹಕಾರ ಸಂಸ್ಥೆಯಲ್ಲಿ ವಿನಿಯೋಗಿಸಿ, ಇನ್ಷೂರೆನ್ಸು ಪಾಲಿಸೀಯನ್ನು ತೂಗೊಳ್ಳಿ, ಬ್ಯಾಂಕ್, ಅಥವಾ ಪೋಸ್ಟ ಆಫೀಸ್ ಸೇವಿಂಗ್ಸ ಬ್ಯಾಂಕ್‌ನಲ್ಲಿ ಹಣ ಕೂಡಿಡಿ. ಇವೆಲ್ಲವುಗಳಿಗೂ ಉತ್ತಮವಾದುದೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಡಿಫೆನ್ಸ್ ಸರ್ಟಿಫಿಕೇಟ್‌ಗಳಲ್ಲಿ ವಿನಿಯೋಗಿಸುವುದು.

ಮುಂಬರುವ ದಿನಗಳಿಗಾಗಿ

ಕೂಡಿಡಿ

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

FPI—191

ಶಿವಮೊಗ್ಗದಲ್ಲಾದ ಸಾಹಿತ್ಯ ಸಮ್ಮೇಳನ

[೩ನೇ ಪುಟದಿಂದ]

ರದ ಶ್ರೀ ರೋಹಿದೇಕರ್ ಮತ್ತು ಪಂಗಡಿಗ ರಿಗೆ ದ್ವಿತೀಯ ಬಹುಮಾನವೂ ದೊರೆತುವು.

ಮೂರನೆಯ ದಿನ

ಮಾ. ೩ರಂದು ಪೂರ್ವಾಹ್ನ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಲೇಖಕರ ಗೋಷ್ಠಿ ಜರಗಿತು. ಶ್ರೀಯುತರು ನಾ. ಕಸ್ತೂರಿ, ಶಾನುಭಾಗ, ನಾರಾಯಣ ಸಂಗಮ, ಗೋಕಾಕ ಮತ್ತು ಹಲವರು ತಮ್ಮ ಸ್ವಂತ ಕೃತಿಗಳ ವಾಚನವನ್ನು ಮಾಡಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳ ಸಾಹಿತ್ಯಿಕ ಚಟುವಟಿಕೆಯೇನು? ಮಿತ್ರಮಂಡಳಿ ಮತ್ತಿತರ ಸಂಸ್ಥೆಗಳು ಏನು ಮಾಡುತ್ತಿವೆ? ಸದ್ಯದಲ್ಲಿ ಮಂಗಳೂರಲ್ಲಿ ಜರಗಲಿರುವ ಸಮ್ಮೇಲನಗಳು ಯಾವುವು? ಎಂಬುದನ್ನು ವಿವರಿಸಿ ಶ್ರೀ ತಿ. ರಾ. ಕುಳುಕುಂದರು ಮಾತನಾಡಿದರು. ಶ್ರೀ. ಎಸ್. ವಿ. ಪರಮೇಶ್ವರ ಭಟ್ಟರ 'ರಾಗಿಣಿ'ಯಿಂದ ಸ್ವಲ್ಪ ಭಾಗವನ್ನು ಇವರ ಪತ್ನಿ ಶ್ರೀಮತಿ ರಾಜಮ್ಮನವರು ಹಾಡಿದರು. ಜನಜೀವನಕ್ಕೆ ಸಂಬಂಧಿಸಿದ ಸಾಹಿತ್ಯದ ಅವಶ್ಯಕತೆ ಮತ್ತು ನಾಡನ್ನು ಕಟ್ಟುವ ಅಗತ್ಯಗಳ ಕುರಿತು ಶ್ರೀ ಅ. ನ. ಕೃಷ್ಣರಾಯರೂ 'ಸಾಹಿತ್ಯ ಸೃಷ್ಟಿ'ಯ ಕುರಿತು ಹೈದರಬಾದಿನ ಶ್ರೀ ನರಸಿಂಗರಾಯರೂ ಭಾಷಣಗಳನ್ನಿತ್ತರು. ಶ್ರೀಯುತರು ನರೇಗಲ್ ಪ್ರಹ್ಲಾದರಾಯ, ರಂ. ಶ್ರೀ ಮುಗಳಿ ದತ್ತಾತ್ರೇಯ ಕುಲಕರ್ಣಿ—ಇವರು ತಮ್ಮ ಕವಿತೆಗಳನ್ನು ಹಾಡಿದರು.

ಆ ಮೇಲೆ ಆಶುಕವಿತಾ ಸ್ಪರ್ಧೆ ನಡೆಯಿತು. "ಅನ್ನದ ಕಷ್ಟ' ಎಂಬ ವಿಷಯದ ಮೇಲೆ ನಾಲ್ವತ್ತೊಂಬತ್ತರಷ್ಟು ಮಂದಿ ಅರ್ಧಘಂಟೆಯೊಳಗೆ ಕವಿತೆಗಳನ್ನು ಬರೆದುಕೊಟ್ಟರು. ಶ್ರೀಯುತರು ಗೋಪಾಲಕೃಷ್ಣ ಅಡಿಗ, ಭೂಪಾಳು ವಾಸುದೇವ ಮೂರ್ತಿ ಮತ್ತು ಬೇಂದ್ರೆ ರಾಮಚಂದ್ರ ಇವರಿಗೆ ಅನುಕ್ರಮವಾಗಿ ರೂ ೨೦; ೧೦; ಮತ್ತು ೫ ದೊರೆತುವು.

ನಾಡಿನ ವಿವಿಧ ಸಂಘಗಳ ಒಂದು ಸಮ್ಮೇಲನವು ಮಧ್ಯಾಹ್ನದ ಅನಂತರ ಜರಗಿತು. ಗಡಿನಾಡಿನ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು, ಮಹಿಳಾ ಕರ್ನಾಟಕ ಸಂಘಗಳು, ಸಾರ್ವಜನಿಕ ಸಂಘಗಳು—ಇವುಗಳೆಲ್ಲದರ ಸಮಸ್ಯೆ—ಸಂಕಷ್ಟಗಳ ಕುರಿತು ಸಂಘಗಳ ಪ್ರತಿನಿಧಿಗಳು ಮಾತನಾಡಿದರು.

ಆ ಬಳಿಕ ಮುಕ್ತಾಯ ಅಧಿವೇಶನವು ಜರಗಿತು. ಆಶುಕವಿತಾಸ್ಪರ್ಧೆ ಮತ್ತು ಆಶು ನಾಟಕ ಸ್ಪರ್ಧೆಗಳಲ್ಲಿ ಗೆದ್ದವರಿಗೂ ಕಲಾಪ್ರದರ್ಶನಕ್ಕೆ ಬಂದಿದ್ದ ಕೆಲವು ವಸ್ತುಗಳಿಗೂ ಅಧ್ಯಕ್ಷರು ಬಹುಮಾನಗಳನ್ನಿತ್ತರು. "ಪರಸ್ಪರ ಭೇಧವನ್ನು ನಾವೆಲ್ಲರೂ ಮರೆತು ನಮ್ಮ ಕನ್ನಡತನವನ್ನು ತೋರುತ್ತಿರುವ ಕಾಲವಿದು. ... ಈ ಪಕ್ವಾವದ ಪರಿಸ್ಥಿತಿಯ ಪೂರ್ಣ ಪ್ರಯೋಜನವನ್ನು ನಾವು ಮಾಡಿಕೊಳ್ಳಬೇಕು' ಎಂದು ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಹೇಳಿದರು. ಸ್ವಾಗತಾಧ್ಯಕ್ಷ ಶ್ರೀ ಹಸೂಡಿ ಶಾಸ್ತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ಆ ದಿನ ರಾತ್ರಿ ಕನ್ನಡ ನೃತ್ಯ ಕಲಾವಿದರಾದ ಶ್ರೀನಿವಾಸ ಕುಲಕರ್ಣಿ ಮತ್ತು ಪಂಗಡಿಗರ ನೃತ್ಯವಿತ್ತು.

(ಇಪ್ಪತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದಿನ ವರ್ಷ ತಮ್ಮ ಊರಲ್ಲಿ ಜರಗಿಸಬೇಕೆಂದು ಉತ್ತರ ಕರ್ನಾಟಕದ ರಬಕವಿಯವರು ಆಹ್ವಾನವಿತ್ತಿರುವರು. ಸಮ್ಮೇಳನವು ಅದಕ್ಕೆ ಒಪ್ಪಿರುವುದು.)

ಕನ್ನಡ ಪ್ರಗತಿಶೀಲ ಲೇಖಕರ ಸಭೆ

ಸಾಹಿತ್ಯ ಸಮ್ಮೇಳನದ ಮೂರನೆಯ ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯೊಂದು ಶಿವಮೊಗ್ಗ ಕರ್ನಾಟಕ ಸಂಘದ ಕಟ್ಟಡದಲ್ಲಿ ಜರಗಿತು. ನಾಡಿನ ವಿವಿಧ ಭಾಗಗಳಿಂದ ಒಟ್ಟು ನಲ್ವತ್ತೈದರಷ್ಟು ಪ್ರತಿನಿಧಿಗಳು ಬಂದಿದ್ದು ವಿಚಾರವಿನಿಮಯ ಮಾಡಿದರು.

ಮುಂಬಯಿಯಲ್ಲಿರುವ ಅಖಿಲ ಕರ್ನಾಟಕ ಪ್ರಗತಿಶೀಲ ಸಮಿತಿಯ ಕಾರ್ಯದರ್ಶಿ ಶ್ರೀ. ಕೃಷ್ಣ ಕುಮಾರ ಅವರು ಸಮಿತಿಯ ಕಾರ್ಯ ಪ್ರವೃತ್ತವಾಗುವಂತೆ ಮಾಡಲು ಏನೆಲ್ಲ ಆಗಬೇಕು! ನಾಡಿನ ವಿವಿಧ ಭಾಗಗಳಲ್ಲಿ [illegible] ರಚಿಸಿಕೊಂಡು ಎಲ್ಲವೂ ಜತೆಯಾಗಿ ಪ್ರವರ್ತಿಸುವಂತೆ ಮಾಡುವುದು ಹೇಗೆ ಎಂಬುದನ್ನು ವಿವರಿಸಿ ಮಾತನಾಡಿದರು. ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ ಬೆಂಗಳೂರು ಪ್ರಗತಿಶೀಲ ಲೇಖಕರ ಸಂಘದ ಚಟುವಟಿಕೆಗಳ ಕುರಿತು ಶ್ರೀ. ವೆಂಕಣ್ಣ ಅವರು ಮಾತನಾಡಿದರು. ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಮುಂದೆ ಮಂಗಳೂರಲ್ಲಿ ಜರಗಲಿರುವಾಗ ಪ್ರಗತಿಶೀಲ ಲೇಖಕರ ಸಮ್ಮೇಳನವನ್ನು ನಡೆಸಲು ಆದ ಯತ್ನ; ಫೆಬ್ರವರಿ ತಿಂಗಳು ಅಷ್ಟು ಅನುಕೂಲವಲ್ಲವಾದುದರಿಂದ ಸಮ್ಮೇಳನವನ್ನು ಮೇ ತಿಂಗಳಿಗೆ ಮುಂದುವರಿಸಬೇಕೆಂದು ಬಂದ ಸೂಚನೆ—ಮೊದಲಾದುವನ್ನು ವಿವರಿಸಿ ಶ್ರೀ. ತಿ. ರಾ. ಕುಳುಕುಂದರು ಮಾತನಾಡಿದರು.

ಪ್ರಗತಿಶೀಲ ಸಾಹಿತ್ಯಗಳ ಧೋರಣೆ ಏನಿರಬೇಕು? ಎಂಬುದರ ಕುರಿತು ಶ್ರೀಯುತರು ಅ. ನ. ಕೃಷ್ಣರಾಯ, ವಿ. ಕೃ. ಗೋಕಾಕ, "ಆನಂದ"—ಇವರು ಮಾತನಾಡಿ, ಚರ್ಚೆ ನಡೆಸಿದರು.

ಮುಂದಿನ ಮೇ ತಿಂಗಳಲ್ಲಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಸಮ್ಮೇಲನವನ್ನು ತಮ್ಮ ಊರಲ್ಲಿ ಜರಗಿಸಬೇಕೆಂದು ಚಿತ್ರದುರ್ಗದ ಶ್ರೀ। ಬಿ. ಕೆ. ರಾಮಚಂದ್ರ ರಾಯರು ಕೇಳಿದರು. ಸಭೆಯು ಆ ಆಹ್ವಾನವನ್ನು ಸ್ವೀಕರಿಸಿತು. ಪತ್ರಿಕೋದ್ಯೋಗಿ ಸಮ್ಮೆಲನದ ಜತೆಯಲ್ಲಿ ಒಂದು ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯನ್ನೂ ಜರಗಿಸಬೇಕೆಂಬ ಮಂಗಳೂರಿನ ಆಹ್ವಾನವೂ ಸ್ವೀಕರಿಸಲ್ಪಟ್ಟಿತು.

ಅನಂತರ, ಶ್ರೀ। ವೆಂಕಣ್ಣ ಅವರು ಬರೆದ ಮತ್ತು ಬೆಂಗಳೂರು ಪ್ರಗತಿಶೀಲ ಲೇಖಕರ ಸಂಘದವರು ಪ್ರಸಿದ್ಧಪಡಿಸಿದ "ಭಾರತದ ಶಕ್ತಿ" ಎಂಬ ಗೀತಾ ನಾಟಕದ ಉದ್ಘಾಟನೆಯನ್ನು ಶ್ರೀ। ಗೋಕಾಕರು ಮಾಡಿದರು. "ಯಥಾರ್ಥವಾಗಿ ಸಾಹಿತ್ಯವನ್ನು ಸೃಷ್ಟಿಸುವಾಗ ಅದು ಕಲಾ ಪೂರ್ಣವಾಗಿಯೂ ಇರುವಂತೆ ನಾವು ಮಾಡಬೇಕು. ಈ ಪುಸ್ತಕವು ಕಲಾ ದೃಷ್ಟಿಯಿಂದಲೂ ಸುಂದರವಿದೆ. ಇದರಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವಿದೆ. ಇಂತಹ ಹಲವು ಭಾಷಣದಲ್ಲಿ ಅವರು ಹೇಳಿದರು.

ನಾಡಿನ ವಿವಿಧ ಭಾಗಗಳ ಬರೆಹಗಾರರು ಮುಂಬಾಯಿಯ ಸಮಿತಿಯೊಡನೆ ಸಮೀಪ ಬಾಂಧವ್ಯವನ್ನು ಬೆಳೆಸಬೇಕೆಂದು ಶ್ರೀ। ಕೃಷ್ಣಕುಮಾರರು ಕೇಳಿಕೊಂಡ ಮೇಲೆ ಸಭಾಂತ್ಯವಾಯಿತು.



ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು

ಜಾಂಬಕನ್ನು ಪ್ರತಿ ರಾತ್ರೆ ಮಲಗೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಗೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೇ ಚರ್ಮಕ್ಕೆ ಹೀರಲ್ಪಟ್ಟು, ನಿಮ್ಮ ಶರೀರದ ಕಾವಿನಿಂದ ಹಾರಿಹೋಗುವುದು. ಹಾಗೆ ಅವು ಶ್ವಾಸಕೋಶದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಪ್ಲುಯೆಂಜಾ ಕ್ರಿಮಿಗಳನ್ನು ನಾಶಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

NOTICE

The Bombay Life Assurance Company, Ltd.

Notice having been given of the loss of Policy No: 2702 on the life of late Mr. Kanemar Venkappaya a duplicate policy will be issued and the claim will be paid unless objection is lodged with us within one month from this date.

Bombay, 4-1-1944. } Jyotendra L. Mehta, *Managing Director.*

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೩೫.	ರಾತ್ರಿ ೭-೪೦.
ಪಟ್ಟೆಲ್ ಕನ್ನಾನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಗ್ಗೆ ೯-೩೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

ಶಿವಮೊಗ್ಗಾದಲ್ಲಾದ ಸಾಹಿತ್ಯ ಸಮ್ಮೇಳನ

ಪ್ರಗತಿಶೀಲ ಲೇಖಕರ ಸಭೆ!

ಯುವಕರ—ಮಹಿಳೆಯರ—ಸಂಘಗಳ ಸಮ್ಮೇಳನ

ಸಮ್ಮೇಳನದ ಮುನ್ನಾ ದಿನ

ಡಿಸೆಂಬರ ತಾ. ೨೯, ೩೦ ಮತ್ತು ೩೧ ನೆಯ ದಿನಗಳಲ್ಲಿ ಶಿವಮೊಗ್ಗಾದಲ್ಲಿ ಶ್ರೀ। ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಸಮ್ಮೇಳನದ ಹಿಂದಿನ ದಿನ ಸಂಜೆ ಅಧ್ಯಕ್ಷರಿಗೆ ... ಸಂಭ್ರಮದ ಸ್ವಾಗತವಿತ್ತು. ಕಾರಿನ ಮೇಲೆ ಮಯೂರಾಸನ (ಶಿವಮೊಗ್ಗಾ ಕರ್ನಾಟಕ ಸಂಘದ ಸಂಕೇತ)ದಲ್ಲಿ ಅವರನ್ನು ಕುಳ್ಳಿರಿಸಿ, ವೈಭವದ ಮೆರವಣಿಗೆಯಾಯಿತು.

ಮೊದಲನೆಯ ದಿನ

ತಾ. ೨೯ರಂದು ಪೂರ್ವಾಹ್ನ ೯ ಘಂಟೆಗೆ ಅಧ್ಯಕ್ಷ ಶ್ರೀ। ಬೇಂದ್ರೆಯವರು ಸಮ್ಮೇಳನಕ್ಕೆ ಸಂಬಂಧಿಸಿ ಏರ್ಪಟ್ಟಿದ್ದ ಕಲಾವಸ್ತು ಪ್ರದರ್ಶನವನ್ನು ತೆರೆದರು. ಹನ್ನೊಂದು ಘಂಟೆಗೆ ಸಮ್ಮೇಲನದ ಬಹಿರಂಗ ಅಧಿವೇಶನವು ಆರಂಭವಾಯಿತು. ಸ್ವಾಗತ ಗೀತೆಯ ಬಳಿಕ ಸ್ವಾಗತಾಧ್ಯಕ್ಷ ಶ್ರೀ। ಹಸೂಡಿ ವೆಂಕಟ ಶಾಸ್ತ್ರಿ ಅವರು ಅಧ್ಯಕ್ಷರನ್ನೂ ಸಭಿಕರನ್ನೂ ಸ್ವಾಗತಿಸಿ ಭಾಷಣ ಮಾಡಿದರು. ಸಮ್ಮೇಳನಕ್ಕೆ ಶುಭವನ್ನು ಕೋರಿಕೊಂಡು ಬಂದಿದ್ದ ಹಲವು ಸಂದೇಶಗಳನ್ನು ಸ್ವಾಗತ ಕಾರ್ಯದರ್ಶಿ ಶ್ರೀ। ಸಿ. ವಿ. ಕೃಷ್ಣಮೂರ್ತಿ ರಾಯರು ಓದಿದರು. ಬೇಂದ್ರೆಯವರ ಪರಿಚಯವನ್ನು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಶ್ರೀ। ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರು ಮಾಡಿ ಕೊಡುತ್ತಾ, ನನ್ನ ಮತ್ತು ಬೇಂದ್ರೆಯವರೊಳಗಿನ ಸಂಬಂಧ ಅಣ್ಣ-ತಮ್ಮ ಸಂಬಂಧ' ಎಂದರು.

ಅಧ್ಯಕ್ಷರು ಅನಂತರ ವಿಚಾರಪೂರ್ಣವೂ ದೀರ್ಘವೂ ಆದ ತಮ್ಮ ಅಧ್ಯಕ್ಷ ಭಾಷಣವನ್ನಿತ್ತರು.

ಮಧ್ಯಾಹ್ನದ ಅನಂತರ ಮಹಿಳಾ ಸಮ್ಮೇಳನವು ಜರಗಿತು. ಬೆಂಗಳೂರಿನ ಶ್ರೀಮತಿ ತಿರುಮಲೆ ರಾಜಮ್ಮ ತಾತಾಚಾರ್ಯ ಶರ್ಮನ್ ಅವರು ಅಧ್ಯಕ್ಷತೆ ವಹಿಸಿದ್ದರು. ಗಮಕ ವಿದುಷಿ ಶ್ರೀಮತಿ ಲಲಿತಮ್ಮ ಅವರ ಭಾರತ ವಾಚನ, ಶ್ರೀಮತಿ ಶಾರದಮ್ಮನವರ ಸ್ವಾಗತ ಭಾಷಣ, 'ಮಹಿಳೆಯರು ಅಡುಗೆಮನೆಗಳನ್ನು ಬಿಟ್ಟು ತಲೆ ಹೊರ ಹಾಕಬೇಕೆಂ'ದು ಘೋಷಿಸಿ ಶ್ರೀಮತಿ ಆರ್. ಕಲ್ಯಾಣಮ್ಮ ಅವರ ಭಾಷಣ, ಹರಿಹರ ಮಹಾಕವಿಯ 'ಅಕ್ಕಮಹಾ ದೇವಿರಗಳೆ'ಯ ಕುರಿತು ಶ್ರೀಮತಿ ಸುಶಿಲಮ್ಮನವರ ಉಪನ್ಯಾಸ ಮೊದಲಾದ ಕಾರ್ಯಕ್ರಮಗಳು ನಡೆದುವು.

ಸಂಜೆ ಸ್ವಾಗತಾಧ್ಯಕ್ಷ ಶ್ರೀ। ಹಸೂಡಿ ವೆಂಕಟೇಶ ಶಾಸ್ತ್ರಿ ಅವರನ್ನು ಗೌರವಿಸುವುದಕ್ಕಾಗಿ ಸನ್ಮಾನ ಕೂಟವೇರ್ಪಟ್ಟಿತು. ಆರಂಭದಲ್ಲಿ ಶಿವಮೊಗ್ಗಾ ಕರ್ನಾಟಕ ಸಂಘದ ಸ್ವತಂತ್ರ ಕಟ್ಟಡಕ್ಕೆಂದು ರೂ. ೫,೦೦೦ ವಾಗ್ದಾನ ಮಾಡಿದ ಬಳಿಕ ರೂ. ೩೦,೦೦೦ ಕೊಟ್ಟ ಮಹನೀಯರಿವರು. ಅಧ್ಯಕ್ಷ ಬೇಂದ್ರೆಯವರು ಅವರ ತೈಲ ಚಿತ್ರದ ಅನಾವರಣವನ್ನು ಮಾಡಿದರು.

ರಾತ್ರಿ ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ಅವರ ಗಾಯನವಿತ್ತು.

ಎರಡನೆ ದಿನ

ತಾ. ೩೦ರಂದು ಪೂರ್ವಾಹ್ನ ಶ್ರೀ। ನೆಗಳೂರ ರಂಗನಾಥ ಅವರ ಅಧ್ಯಕ್ಷತೆಯಲ್ಲಿ ಯುವಕರ ಸಮ್ಮೇಳನವು ಜರಗಿತು. ಬೆಂಗಳೂರು, ಮಂಗಳೂರು, ಧಾರವಾಡ, ಕಾರವಾರ ಮತ್ತು ನಾಡಿನ ಇತರ ಭಾಗಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಕೆಲವರು ಸ್ವಂತ ಕೃತಿಗಳ ವಾಚನವನ್ನು ಮಾಡಿದರು; ಕೆಲವರು ಭಾಷಣಗಳನ್ನಿತ್ತರು. ತರುಣರು ಮುನ್ನಡಿಯಿಡಬೇಕೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉತ್ಸಾಹದ ಮತ್ತು ಪ್ರೋತ್ಸಾಹದ ಮಾತುಗಳನ್ನಾಡಿದರು.

ಮಧ್ಯಾಹ್ನದ ಅನಂತರ ಬಹಿರಂಗ ಅಧಿವೇಶನವು ಜರಗಿ, ಶ್ರೀಯುತರು ಬೆನಗಲ್ ರಾಮರಾವ್, ಎನ್. ಎಸ್. ಸುಬ್ಬರಾವ್, ಬೆಳ್ಳಾವೆ ವೆಂಕಟನಾರಾಯಣಪ್ಪ, ಚ. ವಾಸುದೇವಯ್ಯ, ಕೆ. ಶಂಕರನಾರಾಯಣ ರಾವ್, ವಿ. ಬಿ. ಜೋಶಿ, ಚುರಗೇರಿ ಭೀಮರಾವ್, ಗುಮಾಸ್ತೆ, ಪಂಡಿತ ತಾರಾನಾಥ, ಹಳ್ಳಿರಾವ್, ಗೋವಿಂದ ರಾವ್, ಶಾಪಸೆ ದೇವಪ್ಪ ಮತ್ತು ಶ್ರೀಮತಿಯರು ಕೇಶಮ್ಮ, ಬೆಳಗಾವಿ ಕಾಮಲಾದೇವಿ ಇವರ ನಿಧನದಲ್ಲಿ ಸಂತಾಪವನ್ನು ಸೂಚಿಸುವ ನಿರ್ಣಯವು ಮಾನ್ಯವಾಯಿತು. ಮಹಾರಾಷ್ಟ್ರ ವಿಶ್ವ ವಿದ್ಯಾನಿಲಯದ ಸಮಿತಿಯ ವರದಿಯು ಕೆಲವು ಕನ್ನಡ ಸಂಸ್ಥಾನಗಳನ್ನು ಮಹಾರಾಷ್ಟ್ರದ್ದಾಗಿ ಪರಿಗಣಿಸಿದೆ ಹಾಗೆ ಮಾಡದಂತೆ ಅವರಿಗೆ ತಿಳುಹಬೇಕು, ಎಂಬ ನಿರ್ಣಯ; ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ನೇಮಿಸಲ್ಪಟ್ಟಿರುವ ಸಮಿತಿಗೆ ಬೆಂಬಲ ಕೊಡಬೇಕೆಂದು ಜನರಲ್ಲಿ ವಿನಂತಿ; ದೇಶ ಭಾಷೆಯಲ್ಲೇ ಶಿಕ್ಷಣ ದೊರೆಯುವಂತಾಗಬೇಕೆಂಬ ಅಭಿಪ್ರಾಯ; ಜನರಲ್ಲಿ ಬಲವಾದ ಅಕ್ಷರ ಪ್ರಚಾರವಾಗಬೇಕು—ಸಾಧ್ಯವಿದುವಲ್ಲೆಲ್ಲ ಜನರು ಕನ್ನಡವನ್ನೇ ಬಳಸಬೇಕು ಎಂಬ ನಿರ್ಣಯಗಳು; ಹೈದರಾಬಾದಿನ ಕೆಲವು ಕನ್ನಡ ಜಿಲ್ಲೆಗಳನ್ನು ಕರ್ನಾಟಕವಾಗಿಯೇ ಪರಿಗಣಿಸಬೇಕೆಂದು ನಿಜಾಂ ಸರಕಾರಕ್ಕೆ ವಿನಂತಿ; ಕಲ್ಬುರ್ಗಿಯನ್ನು ವರ್ಧಾ ಹಿಂದೀ ಪ್ರಚಾರ ಸಮಿತಿಯವರು ಮರಾಠವಾಗಿ ಪರಿಗಣಿಸಿದ್ದಾರೆ. ಅದನ್ನು ಕರ್ನಾಟಕವಾಗಿ ಮಾರ್ಪಡಿಸಬೇಕೆಂದು ಸೂಚನೆ—ಇವು ನಿರ್ಣಯಗಳು ಸ್ವೀಕರಿಸಲ್ಪಟ್ಟುವು.

ಬಹಿರಂಗ ಅಧಿವೇಶನದ ದ್ವಿತೀಯ ಭಾಗವಾಗಿ, ಮೈಸೂರು ವಿಶ್ವವಿದ್ಯಾನಿಲಯವನ್ನು ಬಿಟ್ಟು ಕರ್ನಾಟಕಕ್ಕೆ ಇನ್ನೂ ಒಂದು ವಿಶ್ವವಿದ್ಯಾನಿಲಯವಿರುವುದರ ಅವಶ್ಯಕತೆ ಮತ್ತು ಸಾಧ್ಯತೆಯ ಕುರಿತು ಉಪನ್ಯಾಸಗಳಾದುವು. ಮುಂಬಯಿ, ಮದ್ರಾಸು, ಕರ್ನಾಟಕ ಮತ್ತು ಕೊಡಗುಗಳಿಗೊಂದು ವಿಶ್ವವಿದ್ಯಾನಿಲಯವಾಗುವಂತೆ ಆಯಾ ಸರಕಾರಗಳು ಯತ್ನಿಸಬೇಕೆಂದು ಕೇಳಿಕೊಳ್ಳುವ ನಿರ್ಣಯವನ್ನು ಸಮ್ಮೇಳನವು ಸ್ವೀಕರಿಸಿತು.

ಆ ದಿನ ರಾತ್ರಿ ಆಳು ನಾಟಕಗಳ ಸ್ಪರ್ಧೆ ನಡೆಯಿತು. ಒಟ್ಟು ಆರು ನಾಟಕಗಳಿದ್ದುವು. ಶ್ರೀ। ನಾ. ಕಸ್ತೂರಿಯವರ ಶಿವಮೊಗ್ಗಾ ಕೂಟದವರಿಗೆ ಪ್ರಥಮ ಬಹುಮಾನವೂ ಬಿಜಾಪು

[೭ನೇ ಪುಟಕ್ಕೆ ಮುಂದುವರಿದಿದೆ]

ಲಾಭ ಕೋರನೊಡನೆ ಹೋರಾಡಲು ಉತ್ತಮ ಉಪಾಯ

ಮುಂಬರುವ ದಿವಗಳಿಗಾಗಿ ಕೂಡಿಡಿ. ಅನವಶ್ಯ ಪದಾರ್ಥಗಳನ್ನು ಯುದ್ಧಕಾಲದಲ್ಲಿ ಕೊಳ್ಳುವುದು ಮೂರ್ಖತನ; ಅದರಿಂದ ಲಾಭಕೋರನಿಗೆ ಲಾಭನಾಗುತ್ತದೆ, ಆದರೆ ಏರಿದ ಬೆಲೆಯಲ್ಲಿ ನೀವು ಕೊಂಡ ಪ್ರತಿಸಾರಿಯೂ ನೀವು ನಷ್ಟ ಮಾಡಿಕೊಳ್ಳುವಿರಿ. ಹಣವನ್ನು ಇಂದೇ ಕೂಡಿಡಿ! ಅತ್ಯಾವಶ್ಯಕವಾದುವುಗಳಿಗೆ ಮಾತ್ರ ವೆಚ್ಚಮಾಡಿ. ವಿಜಯವು ಸರಿಯಾದ ಬೆಲೆಯನ್ನು ತರುವವರೆಗೆ ಮೋಜಿನ ಸಾಮಾನುಗಳನ್ನು ಕೊಳ್ಳಬೇಡಿ.

ಸುರಕ್ಷಿತವಾಗಿ ಕೂಡಿಡಿ

ಎಚ್ಚರಿಕೆಯಿಂದಿರಿ! - ನೀವು ಕೂಡಿಡುವ ಹಣವನ್ನು ಇಟ್ಟುಕೊಳ್ಳುವ ಬಗ್ಗೆ. ಭಂಗಾರ ಬೆಳ್ಳಿ ಆಭರಣಗಳು, ಭೂಮಿ, ಕಟ್ಟಡಗಳು ಮತ್ತು ಸಾಮಾನುಗಳ ಮೇಲೆ ವಿನಿಯೋಗಿಸುವುದು ಬುದ್ಧಿವಂತಿಕೆಯಲ್ಲ, ಏಕೆಂದರೆ ಎಂದಾದರೂ ಒಂದುದಿನ ಈಗಿನ ಹೆಚ್ಚಿನ ಬೆಲೆಗಳು ಕುಸಿದು ಬೀಳುವುದು ನಿಜ, ಅದು ಹಠಾತ್ತಾಗಿ ಒದಗಿದರೂ ಒದಗಬಹುದು.

ಭದ್ರತೆಯ ಕುರಿತು ಆಲೋಚಿಸಿ

ನಿಮ್ಮ ಹಣವನ್ನು ಸುಭದ್ರತೆಯ ಕಡೆ ಕೂಡಿಡಿ. ಸಹಕಾರ ಸಂಸ್ಥೆಯಲ್ಲಿ ವಿನಿಯೋಗಿಸಿ, ಇನ್ಶೂರೆನ್ಸ್ ಪಾಲಿಸಿಯನ್ನು ತೊಗೊಳ್ಳಿ, ಬ್ಯಾಂಕ್, ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಹಣ ಕೂಡಿಡಿ. ಇವೆಲ್ಲವುಗಳಿಗೂ ಉತ್ತಮವಾದುದೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಡಿಫೆನ್ಸ್ ಸರ್ಟಿಫಿಕೇಟ್‌ಗಳಲ್ಲಿ ವಿನಿಯೋಗಿಸುವುದು.

ದಿನವೂ ನಾಲ್ಕು ಆಣೆ ಕೂಡಿಡಿ!

ಲಾಭ ಕೋರರಿಗೆ ಕೊಡುವ ಬದಲಿಗೆ ನಿಮ್ಮ ರೂಪಾಯಿಗಳನ್ನು ಒಂದು ಹಣದ ಪೆಟ್ಟಿಗೆಯಲ್ಲಿ ಹಾಕಿಡಿ. ದಿನವೂ ನಾಲ್ಕು ಆಣೆ, ಸಾಧ್ಯವಾದರೆ ಹೆಚ್ಚಾಗಿ ಕೂಡಿಡುವುದೇ ನಿಮ್ಮ ಗುರಿಯಾಗಿರಲಿ. ಅನಂತರ ಕೂಡಿಟ್ಟ ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ ಈ ಕೆಳಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಮಾಡಿಸುತ್ತ ಬನ್ನಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

CPU-297 KN

ಶಿವಮೊಗ್ಗಾದಲ್ಲಾದ ಸಾಹಿತ್ಯ ಸಮ್ಮೇಳನ

[೬ನೇ ಪುಟದಿಂದ]

ರದ ಶ್ರೀ ರೋಹಿದೇಕರ್ ಮತ್ತು ಪಂಗಡಿಗರಿಗೆ ದ್ವಿತೀಯ ಬಹುಮಾನವೂ ದೊರೆತುವು.

ಮೂರನೆಯ ದಿನ

ತಾ. ೨೮ರಂದು ಪೂರ್ವಾಹ್ನ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಲೇಖಕರ ಗೋಷ್ಠಿ ಜರಗಿತು. ಶ್ರೀಯುತರು ಸಾ. ಕಸ್ತೂರಿ, ಶಾನುಭಾಗ, ನಾರಾಯಣ ಸಂಗಮ, ಗೋಕಾಕ ಮತ್ತು ಹಲವರು ತಮ್ಮ ಸ್ವಂತ ಕೃತಿಗಳ ವಾಚನವನ್ನು ಮಾಡಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳ ಸಾಹಿತ್ಯಿಕ ಚಟುವಟಿಕೆಯೇನು? ಮಿತ್ರಮಂಡಳಿ ಮತ್ತಿತರ ಸಂಸ್ಥೆಗಳು ಏನು ಮಾಡುತ್ತಿವೆ? ಸದ್ಯದಲ್ಲೆ ಮಂಗಳೂರಲ್ಲಿ ಜರಗಲಿರುವ ಸಮ್ಮೇಲನಗಳು ಯಾವುವು? ಎಂಬುದನ್ನು ವಿವರಿಸಿ ಶ್ರೀ ಶಿ. ರಾ. ಕುಳುಕುಂದರು ಮಾತನಾಡಿದರು. ಶ್ರೀ. ಎಸ್. ವಿ. ಪರಮೇಶ್ವರ ಭಟ್ಟರ 'ರಾಗಿಣಿ'ಯಿಂದ ಸ್ವಲ್ಪ ಭಾಗವನ್ನು ಇವರ ಪತ್ನಿ ಶ್ರೀಮತಿ ರಾಜಮ್ಮನವರು ಹಾಡಿದರು. ಜನಜೀವನಕ್ಕೆ ಸಂಬಂಧಿಸಿದ ಸಾಹಿತ್ಯದ ಅವಶ್ಯಕತೆ ಮತ್ತು ನಾಡನ್ನು ಕಟ್ಟುವ ಅಗತ್ಯಗಳ ಕುರಿತು ಶ್ರೀ ಅ. ನ. ಕೃಷ್ಣರಾಯರೂ 'ಸಾಹಿತ್ಯ ಸೃಷ್ಟಿ'ಯ ಕುರಿತು ಹೈದರಬಾದಿನ ಶ್ರೀ ನರಸಿಂಗರಾಯರೂ ಭಾಷಣಗಳನ್ನಿತ್ತರು. ಶ್ರೀಯುತರು ನರೇಗಲ್ ಪ್ರಹ್ಲಾದರಾಯ, ರಂ. ಶ್ರೀ ಮುಗಳಿ ದತ್ತಾತ್ರೇಯ ಕುಲಕರ್ಣಿ—ಇವರು ತಮ್ಮ ಕವಿತೆಗಳನ್ನು ಹಾಡಿದರು.

ಆ ಮೇಲೆ ಆಶುಕವಿತಾ ಸ್ಪರ್ಧೆ ನಡೆಯಿತು. 'ಅನ್ನದ ಕಷ್ಟ' ಎಂಬ ವಿಷಯದ ಮೇಲೆ ನಾಲ್ವತ್ತೊಂಬತ್ತರಷ್ಟು ಮಂದಿ ಅರ್ಧಘಂಟೆಯೊಳಗೆ ಕವಿತೆಗಳನ್ನು ಬರೆದುಕೊಟ್ಟರು. ಶ್ರೀಯುತರು ಗೋಪಾಲಕೃಷ್ಣ ಅಡಿಗ, ಭೂಪಾಳಂ ವಾಸುದೇವ ಮೂರ್ತಿ ಮತ್ತು ಬೇಂದ್ರೆ ರಾಮಚಂದ್ರ ಇವರಿಗೆ ಅನುಕ್ರಮವಾಗಿ ರೂ ೨೦; ೧೦; ಮತ್ತು ೫ ದೊರೆತುವು.

ನಾಡಿನ ವಿವಿಧ ಸಂಘಗಳ ಒಂದು ಸಮ್ಮೇಲನವು ಮಧ್ಯಾಹ್ನದ ಅನಂತರ ಜರಗಿತು. ಗಡಿನಾಡಿನ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು, ಮಹಿಳಾ ಕರ್ನಾಟಕ ಸಂಘಗಳು, ಸಾರ್ವಜನಿಕ ಸಂಘಗಳು—ಇವುಗಳೆಲ್ಲದರ ಸಮಸ್ಯೆ—ಸಂಕಷ್ಟಗಳ ಕುರಿತು ಸಂಘಗಳ ಪ್ರತಿನಿಧಿಗಳು ಮಾತನಾಡಿದರು.

ಆ ಬಳಿಕ ಮುಕ್ತಾಯ ಅಧಿವೇಶನವು ಜರಗಿತು. ಆಶುಕವಿತಾಸ್ಪರ್ಧೆ ಮತ್ತು ಆಶು ನಾಟಕ ಸ್ಪರ್ಧೆಗಳಲ್ಲಿ ಗೆದ್ದಿದ್ದವರಿಗೂ ಕಲಾಪ್ರದರ್ಶನಕ್ಕೆ ಬಂದಿದ್ದ ಕೆಲವು ವಸ್ತುಗಳಿಗೂ ಅಧ್ಯಕ್ಷರು ಬಹುಮಾನಗಳನ್ನಿತ್ತರು. 'ಪರಸ್ಪರ ಬೇಧವನ್ನು ನಾವೆಲ್ಲರೂ ಮರೆತು ಸಮ್ಮಿಲನವನ್ನು ಕೋರುತ್ತಿರುವ ಕಾಲವಿದು. ಈ ಪಕ್ವವಾದ ಪರಿಸ್ಥಿತಿಯ ಪೂರ್ಣ ಪ್ರಯೋಜನವನ್ನು ನಾವು ಮಾಡಿಕೊಳ್ಳಬೇಕು' ಎಂದು ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಹೇಳಿದರು. ಸ್ವಾಗತಾಧ್ಯಕ್ಷ ಶ್ರೀ ಹಸೂಡಿ ಶಾಸ್ತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ಆ ದಿನ ರಾತ್ರೆ ಕನ್ನಡ ನೃತ್ಯ ಕಲಾವಿದರಾದ ಶ್ರೀನಿವಾಸ ಕುಲಕರ್ಣಿ ಮತ್ತು ಪಂಗಡಿಗರ ನೃತ್ಯವಿತ್ತು.

(ಇಪ್ಪತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದಿನ ವರ್ಷ ತಮ್ಮ ಊರಲ್ಲಿ ಜರಗಿಸಬೇಕೆಂದು ಉತ್ತರ ಕರ್ನಾಟಕದ ರಬಕವಿಯವರು ಆಹ್ವಾನವಿತ್ತಿರುವರು. ಸಮ್ಮೇಳನವು ಅದಕ್ಕೆ ಒಪ್ಪಿರುವುದು.)

ಕನ್ನಡ ಪ್ರಗತಿಶೀಲ ಲೇಖಕರ ಸಭೆ

ಸಾಹಿತ್ಯ ಸಮ್ಮೇಳನದ ಮೂರನೆಯ ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯೊಂದು ಶಿವಮೊಗ್ಗ ಕರ್ನಾಟಕ ಸಂಘದ ಕಟ್ಟಡದಲ್ಲಿ ಜರಗಿತು. ನಾಡಿನ ವಿವಿಧ ಭಾಗಗಳಿಂದ ಒಟ್ಟು ನಲ್ವತ್ತೈದರಷ್ಟು ಪ್ರತಿನಿಧಿಗಳು ಬಂದಿದ್ದು, ವಿಚಾರವಿನಿಮಯ ಮಾಡಿದರು.

ಮುಂಬಯಿಯಲ್ಲಿರುವ ಅಖಿಲ ಕರ್ನಾಟಕ ಪ್ರಗತಿಶೀಲ ಸಮಿತಿಯ ಕಾರ್ಯದರ್ಶಿ ಶ್ರೀ. ಕೃಷ್ಣ ಕುಮಾರ ಅವರು ಸಮಿತಿಯ ಕಾರ್ಯ ಪ್ರವೃತ್ತವಾಗುವಂತೆ ಮಾಡಲು ಏನೆಲ್ಲ ಆಗಬೇಕು? ನಾಡಿನ ವಿವಿಧ ಭಾಗಗಳಲ್ಲಿ ಘಟಕಗಳನ್ನು ರಚಿಸಿಕೊಂಡು ಎಲ್ಲವೂ ಜತೆಯಾಗಿ ಪ್ರವರ್ತಿಸುವಂತೆ ಮಾಡುವುದು ಹೇಗೆ? ಎಂಬುದನ್ನು ವಿವರಿಸಿ ಮಾತನಾಡಿದರು. ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ ಬೆಂಗಳೂರು ಪ್ರಗತಿಶೀಲ ಲೇಖಕರ ಸಂಘದ ಚಟುವಟಿಕೆಗಳ ಕುರಿತು ಶ್ರೀ. ವೆಂಕಣ್ಣ ಅವರು ಮಾತನಾಡಿದರು. ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಮುಂದೆ ಮಂಗಳೂರಲ್ಲಿ ಜರಗಲಿರುವಾಗ ಪ್ರಗತಿಶೀಲ ಲೇಖಕರ ಸಮ್ಮೇಳನವನ್ನು ನಡೆಸಲು ಆದ ಯತ್ನ; ಫೆಬ್ರವರಿ ತಿಂಗಳು ಅಷ್ಟು ಅನುಕೂಲವಲ್ಲವಾದುದರಿಂದ ಸಮ್ಮೇಳನವನ್ನು ಮೇ ತಿಂಗಳಿಗೆ ಮುಂದುವರಿಸಬೇಕೆಂದು ಬಂದ ಸೂಚನೆ—ಮೊದಲಾದುವನ್ನು ವಿವರಿಸಿ ಶ್ರೀ. ಶಿ. ರಾ. ಕುಳುಕುಂದರು ಮಾತನಾಡಿದರು.

ಪ್ರಗತಿಶೀಲ ಸಾಹಿತ್ಯಗಳ ಧೋರಣೆ ಏನಿರಬೇಕು? ಎಂಬುದರ ಕುರಿತು ಶ್ರೀಯುತರು ಅ. ನ. ಕೃಷ್ಣರಾಯ, ವಿ. ಕೃ. ಗೋಕಾಕ, "ಆನಂದ"—ಇವರು ಮಾತನಾಡಿ, ಚರ್ಚೆ ನಡೆಸಿದರು.

ಬರುವ ಮೇ ತಿಂಗಳಲ್ಲಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಸಮ್ಮೇಲನವನ್ನು ತಮ್ಮ ಊರಲ್ಲಿ ಜರಗಿಸಬೇಕೆಂದು ಚಿತ್ರದುರ್ಗದ ಶ್ರೀ। ಬಿ. ಕೆ. ರಾಮಚಂದ್ರ ರಾಯರು ಕೇಳಿದರು. ಸಭೆಯು ಆ ಆಹ್ವಾನವನ್ನು ಸ್ವೀಕರಿಸಿತು. ಪತ್ರಿಕೋದ್ಯೋಗಿ ಸಮ್ಮೆಲನದ ಜತೆಯಲ್ಲಿ ಒಂದು ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯನ್ನೂ ಜರಗಿಸಬೇಕೆಂಬ ಮಂಗಳೂರಿನ ಆಹ್ವಾನವೂ ಸ್ವೀಕರಿಸಲ್ಪಟ್ಟಿತು.

ಅನಂತರ, ಶ್ರೀ। ವೆಂಕಣ್ಣ ಅವರು ಬರೆದ ಮತ್ತು ಬೆಂಗಳೂರು ಪ್ರಗತಿಶೀಲ ಲೇಖಕರ ಸಂಘದವರು ಪ್ರಸಿದ್ಧಪಡಿಸಿದ "ಭಾರತದ ಶಕ್ತಿ" ಎಂಬ ಗೀತಾ ನಾಟಕದ ಉದ್ಘಾಟನೆಯನ್ನು ಶ್ರೀ। ಗೋಕಾಕರು ಮಾಡಿದರು. "ಯಥಾರ್ಥವಾಗಿ ಸಾಹಿತ್ಯವನ್ನು ಸೃಷ್ಟಿಸುವಾಗ ಅದು ಕಲಾ ಪೂರ್ಣವಾಗಿಯೂ ಇರುವಂತೆ ನಾವು ಮಾಡಬೇಕು. ಈ ಪುಸ್ತಕವು ಕಲಾ ದೃಷ್ಟಿಯಿಂದಲೂ ಸುಂದರವಿದೆ. ಇದರಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವಿದೆ. ಇಂತಹ ಹಸಿವು ಭಾಷಣದಲ್ಲಿ ಅವರು ಹೇಳಿದರು.

ನಾಡಿನ ವಿವಿಧ ಭಾಗಗಳ ಬರೆಹಗಾರರು ಮುಂಬಾಯಿಯ ಸಮಿತಿಯೊಡನೆ ಸಮೀಪ ಬಾಂಧವ್ಯವನ್ನು ಬೆಳೆಸಬೇಕೆಂದು ಶ್ರೀ। ಕೃಷ್ಣ ಕುಮಾರರು ಕೇಳಿಕೊಂಡ ಮೇಲೆ ಸಭಾಂತ್ಯವಾಯಿತು.

215



ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು.

ಜಾಂಬಕನ್ನು ಪ್ರತಿ ರಾತ್ರೆ ಮಲಗೊಳ್ಳುವಾಗ ಹಚ್ಚಿರಿ.

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಗೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೇ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿಹೋಗುವುದು. ಹಾಗೆ ಅವು ಶ್ವಾಸಕೋಶದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧವಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

NOTICE

The Bombay Life Assurance Company, Ltd.

Notice having been given of the loss of Policy No: 2702 on the life of late Mr. Kanemar Venkappaya a duplicate policy will be issued and the claim will be paid unless objection is lodged with us within one month from this date.

Bombay, 4-1-1944. Jyotendra L. Mehta, *Managing Director.*

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗೂಡ್ಸ್ ಬಂಡಿ	ಬೆಳಗ್ಗೆ ೬-೨೫.	ರಾತ್ರಿ ೭-೩೦.
ಪಟೆಲ್ ಕನ್ನಾನ್ನೂರು ವರಿಯಂತ ಮಾತ್ರ	ಸಾಯಂ. ೫-೫೫	ಬೆಳಗ್ಗೆ ೯-೩೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

Regd. No. M 3460

ESTD. 1931

HEAD OFFICE Mangalore — BRANCHES Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June) (½% from July to Dec.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

TO GREET YOU

For the Past REMEMBRANCE

For the Present KIND THOUGHTS

For the Future GOOD WISHES

From

THE CANARA BANKING CORPORATION Ltd.

(Incorporated in British India with limited liability).

Estd:] Head office: UDIPI S. Kanara [1906.

HEARTY NEW YEAR GREETINGS

TO

All our Policy-holders, Agents, MedicalExaminers and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

Bhuvanendra Products Limited

Katapadi, S. Kanara.

Depot: Maharata Galli, Hubli.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಕೀರ್ತಿಶಾಲಿ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 14—1—1944 [ಸಂಚಿಕೆ 2]

ಬಂಗಾಳವನ್ನು ಆಸ್ಟ್ರೇಲಿಯನ್ ಆಳಬೇಕೆ?

ಅಮೆರಿ ಭಾರತದ ಪ್ರತಿನಿಧಿಯಾಗುವುದೆ?

'ಗವರ್ನರರು ವೈಸರಾಯರು ಈ ದೇಶಕ್ಕೆ ಬರುತ್ತಾರೆ, ಹೋಗುತ್ತಾರೆ. ಹಲವು ಸಲ ಅವರು ಯಾರೆಂಬುದು ನಮ್ಮ ಸ್ಮರಣೆಯಲ್ಲಿಯೇ ಇರುವುದಿಲ್ಲ. ಭಾರತದ ನಿಜವಾದ ರಾಜಕೀಯ ಇತಿಹಾಸದಲ್ಲಿ ಗವರ್ನರರು ಮತ್ತು ಗವರ್ನ ಮೆಂಟ್ ಭವನಗಳು ಅರಾಜಕತೆಯ ಸೂಚನೆಗಳು, ಬ್ರಿಟನಿಗೆ ಭಾರತ ಅಧೀನವಾಗಿದೆಯೆಂದು ತಿಳಿಸುವ ಶಬ್ದಗಳು. ಈ ಶಬ್ದಗಳನ್ನು ಆದಷ್ಟು ಬೇಗ ಹೊಡೆದುಹಾಕಿ ಬಿಡಬೇಕು. ಭಾರತ ಸ್ವತಂತ್ರವಾದಾಗ ಖಂಡಿತವಾಗಿ ಈ ಶಬ್ದಗಳು ಉಳಿಯಲಾರವು. ಆಗ ಬ್ರಿಟನು ಗೌರವಕರವಾದ ಬೇರೆ ಶಬ್ದಗಳನ್ನು ಸಾಲವಾಗಿ ಪಡಕೊಳ್ಳಬೇಕಾದೀತು. ಡಿವೆಲರಾ ಈ ಕೆಲಸದಲ್ಲಿ ಯಶಸ್ವಿಯಾಗಿದ್ದಾರೆ! ಬಂಗಾಳದ ಗವರ್ನರರಾಗಿ ಒಬ್ಬ ಆಸ್ಟ್ರೇಲಿಯನರನ್ನು ನೇಮಿಸಿದ್ದು ಚರ್ಚಿಲ್ ಅಮೆರಿ ಕಂಪನಿ ಮಾಡಿದ ಒಂದು ಅನ್ಯಾಯ. ಆಸ್ಟ್ರೇಲಿಯನ್ ಗವರ್ನರರು ನಮ್ಮ ದೇಶಕ್ಕೆ ಬರುವುದನ್ನು ನಾವು ತಿರಸ್ಕರಿಸುತ್ತೇವೆ' ಹೀಗೆಂದು ಬೊಂಬಯಿ ಘೋರಂ ಪತ್ರಿಕೆ ಬಂಗಾಳದ ಗವರ್ನರರಾಗಿ ಆಸ್ಟ್ರೇಲಿಯನ್‌ರಾದ ಕೇಸಿಯವರನ್ನು ನೇಮಿಸಿದ ಕುರಿತು ಬರೆದ ಲೇಖನ ಒಂದರಲ್ಲಿ ಉಲ್ಲೇಖಿಸಿದೆ. ಆ ಲೇಖನದ ಇನ್ನು ಕೆಲವು ಅಂಗಗಳು ಇಂತಿವೆ.

"ಆಸ್ಟ್ರೇಲಿಯನರಾದ ರಿಚರ್ಡ್ ಕೇಸಿಯವರನ್ನು ನೇಮಿಸಿದ್ದು ಭಾರತದ ರಾಷ್ಟ್ರೀಯತೆಗೆ ಹಾಗೂ ಗೌರವಕ್ಕೆ ಮನಃಪೂರ್ವಕ ಮಾಡಿದ ಒಂದು ಅನ್ಯಾಯ. ಭಾರತೀಯರು ಆಸ್ಟ್ರೇಲಿಯನನನ್ನಾಗಲಿ, ದಕ್ಷಿಣ ಆಫ್ರಿಕದವನನ್ನಾಗಲಿ ಇನ್ನಾವುದೇ ವಿದೇಶೀಯನನ್ನಾಗಲಿ ತಮ್ಮನ್ನಾಳಲು ಸ್ವಾಗತಿಸಲಾರರು. ಕೇಸಿಯವರಿಂದು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸಂಕಲೆಯನ್ನಿಲ್ಲಿ ಸಂಪೂರ್ಣಗೊಳಿಸುತ್ತಾರೆ . . . . . . ತುಂಬಾ ವೀರರಿಂದ, ಮಹಮ್ಮದ್ ಉಸ್ಮಾನ್, ಜೆ. ಪಿ. ಶ್ರೀ ವಾತ್ಸರಂಥಾ ಮಹನೀಯರಿಂದಲೂ ಕೂಡಿರುವೀ ನಾಡಿನಲ್ಲಿ ಗವರ್ನರರ ಗಾದಿಗೇರಲು ಯೋಗ್ಯತೆಯುಳ್ಳವನೊಬ್ಬ ಸಿಗಲಿಲ್ಲವಲ್ಲಾ! ಬ್ರಿಟಿಷ್ ಸಾಮ್ರಾಜ್ಯಶಾಹಿಗಳು, ಸದಾಕಾಲ ಅವರ ದಾಸಾನುದಾಸರಾಗಿರುವ ಕೆಲಸವನ್ನಾದರೂ ಭಾರತೀಯರನ್ನು ಈ ಗಾದಿಗೇರಿಸಲು ನಂಬಲಿಲ್ಲವಲ್ಲಾ! ಹಾಗೆ ನಂಬಿದ್ದರೆ, ಖಂಡಿತವಾಗಿಯೂ ಆ ಭಾರತೀಯರು ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ಪರವಾಗಿಯೇ ಭಾರತವನ್ನಾಳುತ್ತಿದ್ದರೂ ಈ ಕಾರ್ಯವನ್ನು ಮಾಡದೆ ಆಸ್ಟ್ರೇಲಿಯನರೊಬ್ಬರನ್ನು ಬಂಗಾಳದ ಗವರ್ನರರನ್ನಾಗಿ ನೇಮಿಸಲಾಯಿತಲ್ಲಾ!

"ಸರ್ ಗಿರಿಜಾ ಶಂಕರ್ ಬಜಪೆಯವರಿಗೆ ಒಂದು ಪ್ರಾಂತದ ಗವರ್ನರರಾಗುವ ಯೋಗ್ಯತೆಯಿತ್ತು. ಆದರೆ ಅವರನ್ನು ವಾಶಿಂಗ್‌ಟನಿಗೆ ಕಳುಹಿಸಲಾಯಿತು. ಬಹುಶಃ ದೊಲರುಗಳ ನಾಡು ಅವರಿಗೆ ಹೆಚ್ಚು ಆಕರ್ಷಕವೆಂದೋ ಏನೋ! ಆದರೆ ಇಂಡಿಯನ್ ಸಿವಿಲ್ ಸರ್ವಿಸಿನ ಸದಸ್ಯರೊಬ್ಬರಿಗೆ ಯೋಗ್ಯತೆ ಇದ್ದರೂ ಹೀಗೆ ಒಂದು ಕೆಲಸ ಕೊಡಲು ಹಿಂಜರಿದ ವಿಷಯ ನಾವು ನಿಜವಾಗಿ ಬೇಸರ ಪಡಬೇಕಾಗಿದೆ.

"ಒಮ್ಮೆ ಅಮೆರಿಯವರು ಹೇಳಿದ್ದರು, ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವುದಾದರೆ, ಇತರ ಡೊಮಿನಿಯನುಗಳ ಅಭಿಪ್ರಾಯ ಕೇಳಬೇಕೆಂದು. ಇದು ಒಬ್ಬ ಕಂಪನಿ ಡೈರೆಕ್ಟರನು, ಇತರ ಡೈರೆಕ್ಟರರಿಗೆ ಸಲ ಬೇಕಾದಂಶವನ್ನು ಬಾಕಿಡಲು ಮಾಡುವ ಕುತಂತ್ರದಂತೆ ಇದೆ. ಒಮ್ಮೆ ಕಾಂಗರುಗಳಿಂದ ಮಾತ್ರ ಕೂಡಿದ್ದ ಆಸ್ಟ್ರೇಲಿಯವು ಇಂದು ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಿಸಲು ಯೋಗ್ಯತೆಯುಳ್ಳದ್ದಾಗಿ ಪರಿಣಮಿಸಿದೆ. ಬಂಗಾಳ ಉಪವಾಸದಿಂದ ಸಾಯುತ್ತಿದ್ದರೂ 'ಆಸ್ಟ್ರೇಲಿಯಾ ಬಿಳಿ ಜನರಿಗೆ ಮಾತ್ರ' ಎಂದು ಆಸ್ಟ್ರೇಲಿಯನರ ಉದ್ಗಾರವಾಗಿದೆ. ಆದ್ದರಿಂದಲೇ ಇಂದಿನೀನೇಮಕವು ಹಿಂದಿನ ಅಪಮಾನದ ಕುರದ ಮೇಲೆ ಬೊಕ್ಕೆ ಹುಟ್ಟಿಸಿದಂತೆ ಆಗಿದೆ. ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ ನಾವು ಯುದ್ಧದಲ್ಲಿ ಸೇರಿದಲ್ಲವೆಂದು ಅಮೆರಿಕನರು ಹಲವು ಸಲ ಸಾರಿದರೂ ಸಾಮ್ರಾಜ್ಯ ಶಾಹಿಯ ದಿವಾಳಿಗೆ ಸಿದ್ಧರಿರದ ಒಬ್ಬ ಪ್ರಧಾನ ಮಂತ್ರಿಯಿರುವ ಸರಕಾರದಲ್ಲಿ ಯಾವುದೇ ಸಂಗತಿಯಾದರೂ ಸಂಭವವೇ ಆಗಿದೆ.

'ಚರ್ಚಿಲರು ಡಿಲ್ಲಿಗೆ ವೇವಲರನ್ನು ಕಳುಹಿಸುವುದಕ್ಕಿಂತ ಜನರಲ್ ಸ್ಮಟ್ಸರನ್ನು ಕಳುಹಿಸಬಹುದಾಗಿತ್ತು. ಲಂಡನಿನ ಆಡಳಿತ ಪ್ರಕಾರ ಅದು ಯೋಗ್ಯವೇ ಆಗುತಿತ್ತು. ಬಿಳಿ ಜನರು ಕರಿಜನರೊಡನೆ ಕುಳಿತುಕೊಳ್ಳುವುದು ಅಗೌರವವೆಂದು ಆಫ್ರಿಕದ ಮೇಯರ್ ಹೇಳಲಿಲ್ಲವೆ? ಆಸ್ಟ್ರೇಲಿಯದಲ್ಲಿ ಯಾವುದೇ ಒಂದು ಸ್ಥಾನ ಖಾಲಿ ಬಿದ್ದಿದ್ದರೆ ಚರ್ಚಿಲ್ ಕಂಪೆನಿಯು, ಭಾರತ ಸರಕಾರದ ಮಾಜಿ ರಾಯಭಾರಿ ಹಾಗೂ ಘನ ಸರಕಾರದ ಪ್ರಿವಿ ಕೌನ್ಸಿಲ್ ಪ್ರಿಯರಾದ ರೈ! ಆ! ಶಾಸ್ತ್ರಿಗಳನ್ನು ಆ ಸ್ಥಾನದಲ್ಲಿ ನೇಮಿಸುತಿತ್ತೆ? ಅದು ಖಂಡಿತವಾಗಿಯೂ ಅಸಾಧ್ಯವೇ ಆಗಿದೆ. ಮಾನ್ಯ ಗೃಹಸ್ಥನೂ ಯೋಗ್ಯ ರಾಜ ಕಾರಣಿಯೂ ಆಗಿದ್ದರೂ ರೈ! ಆ! ಶಾಸ್ತ್ರಿಗಳು ಆಸ್ಟ್ರೇಲಿಗೆ 'ಜನ'ವಾಗಿ ಪರಿಗಣಿಸಲ್ಪಡಲಾರರು! ಏಕೆಂದರೆ ಅವರ ಚರ್ಮ ಕರಿದು.

'ಬಂಗಾಳವಿಂದು ಭಗ್ನ ಹೃದಯವಿದೆ. ಜನರಿಗೆ ರಕ್ಷಣಾ ಶಕ್ತಿಯಿಲ್ಲ. ಇದನ್ನು ನಾವು ಒಪ್ಪಿಕೊಳ್ಳಲೇ ಬೇಕು. ಇದಕ್ಕಾಗಿ ನಮಗೆ ನಾಚಿಕೆಯಾಗುವುದಿಲ್ಲ. ಭಾರತವು ಹಿಂದೆ ಅನೇಕ ಸಲ ತನ್ನ ಶಕ್ತಿ ಸಾಮರ್ಥ್ಯ ಮೆರೆಸಿತ್ತೇನೋ ನಿಜ. ಕೊನೆಗೊಮ್ಮೆ ಸ್ವಾತಂತ್ರ್ಯವನ್ನು ತರುವ ಆ ಪರಾಕ್ರಮದ ಅಲೆಗಳು ಆಗಾಗ ಬರುವುದೂ ಸಹಜವಿದೆ. ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳವಿರುವಾಗ ಚೀಫ್ ಸೆಕ್ರೆಟರಿಯಾಗಿದ್ದ ಐ. ಸಿ. ಎಸ್. ಖಾತೆಯ ಓರ್ವ ಯೂರೋಪಿಯನ್ ಸದಸ್ಯರನ್ನು ಒರಿಸದ ಗವರ್ನರರನ್ನಾಗಿ ಮಾಡುವ ಆಲೋಚನೆ ಮಾಡಿ ಘಟನಾತ್ಮಕ ಬಿಕ್ಕಟ್ಟು ಉಂಟುಮಾಡಲು ಹೆದರಿಸಿದ್ದರು. ನೇಮಕ ಸಾರಲಾಗಿತ್ತು; ಸಾರಿ ಹಿಂದೆಗೆಯಲಾಗಿತ್ತು. ಏಕೆಂದರೆ, ಕಾಂಗ್ರೆಸು ಮಂತ್ರಿಗಳು ಯಾರಿಗೆ ಆಜ್ಞೆ ಕೊಡುತ್ತಿದ್ದಾರೋ ಆತನನ್ನೇ ತಮ್ಮ ಗವರ್ನರನನ್ನಾಗಿ ಮಾಡುವ ವಿಷಯ ಪ್ರಬಲ ವಿರೋಧ ತೋರಿಸಿದರು. ಭಾರತವು ಇಂದಾದರೂ ಬಲಯುತವಾಗಿದ್ದರೆ ಕೇಸಿಯಂಥಾ ವಿದೇಶೀಯರೊಬ್ಬರು ಭಾರತವನ್ನು ಆಳುವ ಅಗೌರವ ಕಾರ್ಯ ನಡೆಯುತ್ತಿರಲಿಲ್ಲ. ಬಂಗಾಳವಿಂದು ಭಗ್ನ ಹೃದಯವಾಗಿದೆ. ಅಲ್ಲಿನ ಹೆಂಗಳೆಯರು, ಮಕ್ಕಳು ಮರಿಗಳು ನರಳಿ ಸಾಯುತ್ತಿದ್ದಾರೆ. ಅದರ ಮೇಲೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳು ಮಾಡಿದೀ ಅಗೌರವವು ಅಸ್ಸಹನೀಯವಿದೆ. ಬಂಗಾಳವು ಬರುವ ಐವತ್ತು ವರ್ಷಕ್ಕೆ ತಲೆಯೆತ್ತದಂತೆ ಮಲಗಿದೆ. ಆದರೆ ಅದು ಬಳಿಕಾದರೂ ಒಮ್ಮೆ ಎಚ್ಚತ್ತರೆ ಮರಳಿ ಮಲಗಲಾರದು.'

'ಮುಖಂಡರ ಬಿಡುಗಡೆಗಾಗಿ ಹೋರಾಡಿರಿ'

ಸಂಪಾದಕ ಪರಿಷತ್ತಿನಲ್ಲಿ ಶಾಸ್ತ್ರಿಗಳ ಭಾಷಣ

ಗಾಂಧಿಜಿ ಶಾಂತಿಪರಿಷತ್ತಿನಲ್ಲಿ ಪ್ರತಿನಿಧಿ

ಮದರಾಸಿನಲ್ಲಿ ಸೇರಿದ ಅಖಿಲ ಭಾರತ ಸಂಪಾದಕ ಪರಿಷತ್ತಿನಲ್ಲಿ ಭಾಷಣ ಮಾಡುತ್ತಾ ಶ್ರೀನಿವಾಸ ಶಾಸ್ತ್ರಿಗಳು, ಗಾಂಧೀಜಿ ಹಾಗೂ ಇತರ ಕಾಂಗ್ರೆಸ್ ಮುಖಂಡರ ಬಿಡುಗಡೆಗಾಗಿ ಎಡೆಬಿಡದೆ ಹೋರಾಡುವುದು ಪತ್ರಿಕಾ ಸಂಪಾದಕರ ಪ್ರಥಮ ಕರ್ತವ್ಯವೆಂದು ಹೇಳಿ, ಪತ್ರಿಕೆಗಳ ಮಹತ್ವ, ಜನತೆಯ ಮೇಲೆ ಅವುಗಳಿಗಿರುವ ಪ್ರಭಾವ, ಇಂಥಾ ಕಾಲದಲ್ಲಿ ಪತ್ರಿಕೆಗಳಿಗೆ ಬೇಕಾದಷ್ಟು ಸ್ವಾತಂತ್ರ್ಯವಿಲ್ಲದಿದ್ದರೂ ಅವು ಹೇಗೆ ದೇಶದ ಕಲ್ಯಾಣವನ್ನು ಸಾಧಿಸಬಹುದು ಎಂಬ ವಿಚಾರ ಉದ್ಬೋಧಕ ಭಾಷಣವಿತ್ತರು.

ಶಾಸ್ತ್ರಿಗಳ ಭಾಷಣದ ಕೆಲವು ವಿವರಗಳು ಇಂತಿವೆ:

'ಭಾರತೀಯ ಪತ್ರಿಕೆಗಳು ಸ್ವಶಕ್ತಿಯನ್ನು ಅರಿತುಕೊಳ್ಳಬೇಕು. ಅವುಗಳ ಶಕ್ತಿ ಅಜೇಯವಿದೆ. ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳಿಗೆ ಮಹತ್ವಕೊಡಬಾರದು. ಇಂದಿನೀ ಬಿಕ್ಕಟ್ಟಿನ ನಿವಾರಣೆಗೆ ನೀವೆಲ್ಲರೂ ಪ್ರಯತ್ನಿಸಬೇಕು. ಇಂದಿನೀ ಬಿಕ್ಕಟ್ಟಿಗೆ ನಾವೇ ಜವಾಬ್ದಾರರೆಂದು ಬ್ರಿಟಿಷರು ಲೋಕದ ಮುಂದೆ ಸಾರಿದ್ದಾರೆ. ಯುದ್ಧವು ಮುಗಿದ ಕೂಡಲೇ ಶಾಂತಿ ಪರಿಷನಲ್ಲಿ ಸಾವಿರಾರು ಪ್ರಶ್ನೆಗಳು ಹುಟ್ಟುವವು. ಪೂರ್ವ ಪಶ್ಚಿಮ ಹಾಗೂ ವರ್ಣಭೇದಗಳ ಹಲವು ಸಮಸ್ಯೆಗಳನ್ನೆದಿರಿಸಬೇಕಾಗುವುದು. ಇಂದಿನೀ ಬಿಕ್ಕಟ್ಟು ಯುದ್ಧಾಂತ್ಯದ ವರೆಗೆ ಉಳಿದರೆ ಜಾಗತಿಕ ಸುಧಾರಣೆಯ ಕಾರ್ಯದಲ್ಲಿ ನಾವು ಭಾಗವಹಿಸದಂತಾಗುವುದು. ನಮ್ಮ ದೇಶದ ಈ ಹೀನಸ್ಥಿತಿಯನ್ನು ಸಹಿಸುವಿರಾ? ಜನಾಂಗದ ಹಕ್ಕು ಬಾಧ್ಯತೆಗಳ ರಕ್ಷಕರೂ ಬಲಿಷ್ಠರೂ ಆದ ನೀವು ಜಗತ್ತಿನ ನವನಿರ್ಮಾಣ ಸಮಯದಲ್ಲಿ ಭಾರತವನ್ನು ಮೂಲೆಗೆ ತಳ್ಳುವಿರಾ? ಈ ಪ್ರಶ್ನೆಯ ಕಡೆಗೆ ವಿಶೇಷ ಗಮನ ಕೊಡಿರೆಂದು ಪ್ರಾರ್ಥಿಸುತ್ತೇನೆ. ಬಿಕ್ಕಟ್ಟು ಬಿಡಿಸಲು ಸರಕಾರಕ್ಕೆ ಒತ್ತಾಯ ಮಾಡಿರಿ.

'ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡುವುದು ಅತ್ಯವಶ್ಯ. ಯಾರು ಸತ್ಯ, ಶಾಂತಿ, ಅಹಿಂಸೆ, ಸ್ನೇಹ ಸೌಹಾರ್ದಗಳಿಗಾಗಿ ತಮ್ಮ ಜೀವನವನ್ನೇ ಮೀಸಲಾಗಿರಿಸಿರುವರೋ ಆಗಾಖಾನ ಅರಮನೆಯಲ್ಲಿ ಕೊಳೆಯುತ್ತಿರುವ ಆ ಮನುಷ್ಯರೇ ಶಾಂತಿ ಸಂದೇಶ ಬೀರಲು ಅಶಕ್ತರಾದರೆ ಇನ್ನಾರು ಮಾಡಬೇಕು? ಇನ್ನಾರು ಹೇಳಿದರೆ ಜಗತ್ತು ನಂಬೀತು? ಜಗತ್ತಿನ ಇತರ ಮುಖಂಡರು ಕೂಡಿ ಶಾಂತಿವ್ಯವಸ್ಥೆ ಆಲೋಚಿಸುತ್ತಿರುವಾಗ ಅವರು ಸೆರೆಮನೆಯಲ್ಲಿ ಕೊಳೆಯುತ್ತಿರಬೇಕೆ? ಇದನ್ನು ನೀವು ಸಹಿಸುವಿರಾ? ಇದು ನಮ್ಮ ಗೌರವಕ್ಕೆ ಹೇಳಿದ್ದೆ? ಅಲ್ಲವೆಂದು ಒಂದು ಸಾವಿರ ಸಲ ಹೇಳುತ್ತೇನೆ. ಗಾಂಧಿ ಮತ್ತು ನೆಹರುಗಳ ದೃಷ್ಟಿಯಿಂದ ಅವರ ಬಿಡುಗಡೆಯಾಗಬೇಕೆಂದು ನಾನು ಹೇಳುವುದಲ್ಲ; ಜಗತ್ತಿನ ಹಿತದೃಷ್ಟಿಯಿಂದ ಹೇಳುತ್ತೇನೆ. ಜೀವನದ ಏರುತಗ್ಗುಗಳನ್ನು ಕಂಡು ದುಃಖ ಪಟ್ಟು ಯುದ್ಧದ ಮಹಾನರ್ಥಗಳನ್ನರಿತು ಯಾರ ಹೃದಯವು ಮಾನವೀ ಕಷ್ಟಗಳಿಗಾಗಿ ತಳಮಳಗೊಂಡಿರುವುದೋ, ಒಂದು ಜೀವಸತ್ತರೂ ಯಾರು ಸಹಾನುಭೂತಿ ತೋರಿಸುವರೋ ಅಂತಹ ಮಹಾತ್ಮರಿಗೆ ಶಾಂತಿ ಪರಿಷತ್ತಿನಲ್ಲಿ ಸ್ಥಾನವಿಲ್ಲ! ಈ ಗಹನ ಸಮಸ್ಯೆಯ ಮುಂದೆ ಇತರ ವಿಷಯಗಳು ಅಲ್ಪವಾಗಿವೆ.

'ಕಣ್ಣು ಬಿಟ್ಟು ನೋಡುತ್ತಿರಿ; ಸಕಾಲದಲ್ಲಿ ಗಾಂಧಿ ನೆಹರು ಹೊರ ಬರದಿದ್ದರೆ ಭಾರತದ ಪ್ರತಿನಿಧಿಯಾಗಿ ಅಮೆರಿ ಭಾಗವಹಿಸುತ್ತಾರೆ! ಅವರೊಂದಿಗೆ ಲೀಗ್, ಮಹಾ ಸಭೆ, ನರೇಂದ್ರರು, ಹರಿಜನರ ಪರವಾಗಿ ಅಂಬೇಡ್ಕರ್ ತೆರಳಬಹುದು. ಕಾಂಗ್ರೆಸಿಗೆ ಸ್ಥಾನ ಕೊಡಲಾರರು. ಭಾರತವನ್ನು ಈ ರೀತಿ ನಡೆಸುವುದೆ? ಅಮೆರಿ ಭಾರತದ ಪ್ರತಿನಿಧಿಯಾಗುವುದು ಭಾರತದ ಅಪಮಾನವೇ ಸರಿ. ಇದನ್ನು ನಾನು ನೋಡಬಯಸುವುದಿಲ್ಲ. ಅಂತಹ ಘಟನೆ ಆಗುವ ಮೊದಲು ಸಾಯಬಯಸುತ್ತೇನೆ. ಭಾರತದ ನಿಜವಾದ ಪ್ರತಿನಿಧಿಗಳನ್ನು ಬಿಡುಗಡೆ ಮಾಡಬೇಕೆಂದು ಆಗಾಗ ಅಧಿಕಾರವಾಣಿಯಿಂದ ಬರೆದು ಬಡಿದಾಡಿರಿ. ನಿಮಗೆ ಶಕ್ತಿಯಿದೆ. ಆದರಿಂದ ಹಾನಿಯಾಗದು.'

'ಹಸಿದವನಿಗೆ ಅನ್ನ ನೀಡು — ಬತ್ತಲೆಯವನಿಗೆ ಬಟ್ಟೆ ಕೊಡು'

ಗಾಂಧೀಜಿ ರಾಷ್ಟ್ರಕ್ಕೆ ಸಾರಿದ ಸಂದೇಶ.

ಆಹಾರ ಪರಿಸ್ಥಿತಿ ಕುರಿತು ಶ್ರೀ ಎ. ಬಿ. ಶೆಟ್ಟರ ಲೇಖನ.

"ಈ ಸಮಯದ ಕಾಲದಲ್ಲಿ ಗಮನಿಸಬೇಕಾದ ಅತ್ಯ ಗತ್ಯ ಕಾರ್ಯವೆಂದರೆ ಹಸಿದವನನ್ನು ಉಣ್ಣಿಸುವದು, ಬತ್ತಲೆಯವನನ್ನು ಉಡಿಸುವದು"— ಹೀಗೆಂದು ಗಾಂಧೀಜೀ ೧೯೪೨ನೇ ಜನವರಿಯ ೧೮, 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು. ಆಗಿನಿಂದ ಹಿಡಿದು ಇಂದಿನವರೆಗೆ ಯುದ್ಧಾಭಿವೃದ್ಧಿಯೊಂದಿಗೆ ಅನ್ನ ಅನ್ನ ವಸ್ತ್ರಗಳ ಅಭಾವವು ಹೆಚ್ಚುತ್ತಾ ನಡೆದಿದೆ. ಅವರೀಗ ಸೆರೆಮನೆಯಿಂದ ಹೊರಗಿರುತ್ತಿದ್ದರೆ, ಹಸಿದವನನ್ನು ಉಣ್ಣಿಸಲು ವಸ್ತ್ರ ವಿಹೀನನನ್ನು ಉಡಿಸಲು ಸಾಧ್ಯವಾದ ಕೆಲಸಗಳನ್ನು ಹೂಡುತ್ತಿದ್ದರು. ಇಂದಮೇಲೆ ಗಾಂಧೀಜೀಯ ಬೋಧನೆಯಂತೆ ತಮ್ಮ ಅವಶ್ಯಕತೆಗಳನ್ನು ತಗ್ಗಿಸಿ ಕೊಳ್ಳುವದು, ಆಹಾರದ ಅಪಾವ್ಯಯವನ್ನು ನಿಲ್ಲಿಸುವದು ಬಡವರೊಡನೆ ಸಹಾನುಭೂತಿಯುಳ್ಳವರೆಲ್ಲರ ಕರ್ತವ್ಯವಾಗಿಲ್ಲವೇ... ಲಾಭಾತುರವನ್ನು ಬದಿಗಿಟ್ಟು ಬಡವರ ಪರವಾಗಿ ಧಾನ್ಯದಾಸ್ತಾನುಗಾರರಾಗಿರೆಂದು ಸಾಹುಕಾರರಲ್ಲಿ ಗಾಂಧೀಜೀ ವಿನಂತಿ ಮಾಡಿಕೊಂಡಿದ್ದಾರೆ. ಧಾನ್ಯ ವ್ಯಾಪಾರಿಗಳನ್ನು ಸಂದರ್ಶಿಸಿ ಈ ಸಂದೇಶವನ್ನವರಿಗೆ ಮುಟ್ಟಿಸಬೇಕೆಂದು ಗಾಂಧಿಜಿ ಕಾಂಗ್ರೆಸಿಗರಿಗೆ ತನ್ನ ಜವಾಬ್ದಾರಿತ್ವವೊಪ್ಪಿಸಿದ್ದಾರೆ. ಅಂತೆಯೇ ಹಳ್ಳಿಗಳಿಗೀದು ಸಾಧ್ಯವಿದ್ದಲ್ಲೆಲ್ಲಾ ಅಧಿಕಾಹಾರ ಧಾನ್ಯಗಳ ಉತ್ಪತ್ತಿ ಮಾಡುವಂತೆ ರೈತರನ್ನು ಪ್ರೇರೇಪಿಸಬೇಕೆಂದೂ ಅವರ ಬೋಧನೆಯಿದೆ. ಆದ್ದರಿಂದ ಈ ದಿನ ನಮ್ಮನ್ನಿದಿರಿಸಿರುವ ಎಲ್ಲಾ ಸಮಸ್ಯೆಗಳ ಸಮಸ್ಯೆಯಾಗಿರುವ ಆಹಾರ ಸಮಸ್ಯೆಯ ತೀರ್ಮಾನ ಕಾರ್ಯದಲ್ಲಿ ಸಹಕರಿಸುವದು ನಮ್ಮೆಲ್ಲರ-ಉತ್ಪಾದಕರ, ಕೊಂಡುಕೊಳ್ಳುವವರ ಮತ್ತು ಮಧ್ಯಮ ವರ್ಗದವರ-ಕರ್ತವ್ಯವಲ್ಲವೇ?" ಹೀಗೆಂದು ಶ್ರೀ ಎ. ಬಿ. ಶೆಟ್ಟರು ನವಯುಗ ಪರ್ಯಾಯ ಸಂಚಿಕೆಯಲ್ಲಿ ಭಾರತದ ಆಹಾರ ಪರಿಸ್ಥಿತಿ ಕುರಿತು ಒಂದು ಲೇಖನ ಬರೆಯುತ್ತಾ ಉಲ್ಲೇಖಿಸಿದ್ದಾರೆ. ಆ ಲೇಖನದ ಬೇರೆ ಕೆಲವು ವಿವರಗಳು ಇಂತಿವೆ:

ಸಕಾಲದಲ್ಲಿ ಅರಿಯಲಿಲ್ಲ

ಹಿಂದುಸ್ಥಾನವನ್ನು ಭೀತಿದಾಯಿ ಪರಿಸ್ಥಿತಿ ಯಿದಿರಿಸಿದೆ. ದೇಶದ ಹಲವು ಭಾಗಗಳಲ್ಲಿ—ಮುಖ್ಯವಾಗಿ ಬಂಗಾಳದಲ್ಲಿ—ಸರ್ವತ್ರ ಹಬ್ಬಿರುವ ಬರಗಾಲ ದುಃಸ್ಥಿತಿಯು ಸಾವಿರಾರು ಹಸಿವು ಮರಣಗಳನ್ನು ನಿರ್ಮಿಸಿರುವುದು ಮಾತ್ರವಲ್ಲ, ಆರೋಗ್ಯಕ್ಕೂ ಧಕ್ಕೆಕೊಟ್ಟು, ಅಖಿಲ ರಾಷ್ಟ್ರದ ಭಾವೀ ಜನಾಂಗದ ಮೇಲೂ ಪರಿಣಾಮವನ್ನುಂಟುಮಾಡುವ ಭಯಬೀರುತ್ತಿದೆ. ಕಳೆದ ಯುದ್ಧದಲ್ಲಿ ಸಮುದ್ರ ದಿಗ್ಬಂಧನದ ಪರಿಣಾಮವಾಗಿ ಉಂಟಾಗಿದ್ದ ಭೀಕರ ಆಹಾರಾಭಾವದಿಂದ, ಯುರೋಪಿನ ರಾಷ್ಟ್ರಗಳೆಲ್ಲಾ ಪಾಠ ಕಲಿತು, ಈ ಬಾರಿ ಅಂತಹ ಗಂಡಾಂತರವುಂಟಾಗದಂತೆ ತಡೆಗಟ್ಟಲು ಸಕಾಲದಲ್ಲಿ ಕಾರ್ಯ ಕೈಕೊಂಡಿದ್ದವು. ದೃಷ್ಟಾಂತಕ್ಕಾಗಿ, ಈ ಯುದ್ಧಾರಂಭವಾಗುವ ಮೂರು ವರುಷಗಳ ಮೊದಲೇ ಇಂಗ್ಲಾಂಡು ತನ್ನಲ್ಲಿಗೆ ಆಹಾರ ಸರಬರಾಯಿ ಮಾಡಿಕೊಳ್ಳುವ ಯೋಜನೆ ಹಾಕಿದ್ದಿತು. ಆದರೆ ಹಿಂದುಸ್ಥಾನದ ಸರಕಾರವು ಯುದ್ಧ ಸ್ಥಿತಿಯಿಂದುದ್ಭವಿಸುವ ಆಹಾರ ದುಃಸ್ಥಿತಿಯ ಅಪಾಯವನ್ನು ಸಕಾಲದಲ್ಲಿ ಅರಿಯಲಾರದೆ ಹೋಯಿತು. ಹಿಂದುಸ್ಥಾನದಲ್ಲಿ ಬರಗಾಲದ ಅಪಾಯವಿಲ್ಲ, ಸರ್ವವೂ ಸರಿಯಾಗಿದೆ ಎಂದು ಭಾರತ ಕಾರ್ಯದರ್ಶಿ ಮಿ. ಅಮೆರಿ ಒಂದು ವರ್ಷಕ್ಕೆ ಮೊದಲು ಪಾರ್ಲಿಮೆಂಟಿನಲ್ಲಾಡಿದರು. ಬಂಗಾಳದಲ್ಲಿ ಆಹಾರಗಳ ಅಭಾವವುಂಟಾಗಿ ಕಠಿಣ ಪರಿಸ್ಥಿತಿ ತಲೆದೋರುತ್ತಿದಾಗಲೂ 'ಈ ತೊಂದರೆಗೆ, ಕಾಲಜನ್ಯ ಅವಘಡಗಳೂ (ಬಿರುಗಾಳಿ ಮತ್ತು ನೆರೆ) ಸಂಗ್ರಾಹಕರೂ ಕಾರಣ' ಎಂದು ಸರಕಾರವು ಹೇಳುತ್ತಾ ಬಂತು. ಕಳೆದ ವರ್ಷ ಇಡೀ ಬಂಗಾಳದಲ್ಲಿ ನಡೆಸಿದ ಮನೆಮನೆ ಜಡ್ತಿಯ ನಂತರ, ಕೊನೆಗೆ 'ನಿಜವಾಗಿಯೂ ಆಹಾರದ ಅಭಾವವಿದೆ' ಎಂಬುದನ್ನು ಸರಕಾರವೂ ಒಪ್ಪಿಕೊಳ್ಳಲೇಬೇಕಾಯಿತು.

ಆಹಾರದ ಅಭಾವ

'ಹಿಂದುಸ್ಥಾನದ ಆಹಾರ ಧಾನ್ಯೋತ್ಪತ್ತಿಯು ಆಹಾರ ವ್ಯಯದ ಸಂಪೂರ್ಣ ಇಲ್ಲವೇ ಸರಿಯಾದ ದಾಖಲೆಗಳು ತನ್ನಲ್ಲಿಲ್ಲವೆಂಬುದನ್ನು ಸರಕಾರವು ಒಪ್ಪುತ್ತದೆ. ಆಹಾರ ಸರಬರಾಯಿಯ ಮಟ್ಟಿಗೆ, ತನ್ನದೇ ತನಗೆ ಸಾಕಾಗುವ ದೇಶ ಹಿಂದುಸ್ಥಾನವಲ್ಲ. ಸಾಮಾನ್ಯ ಸ್ಥಿತಿಯ ವರುಷಗಳಲ್ಲಾದರೂ ಹಿಂದುಸ್ಥಾನದ ಮುಖ್ಯ ಆಹಾರ ಧಾನ್ಯಗಳ ಉತ್ಪತ್ತಿ ೫೦ ಮಿಲಿಯ ಟನ್ನುಗಳೆಂದೂ ಅದರ ಅರೆವಾಸಿಯಷ್ಟು ಅಕ್ಕಿಯೆಂದೂ ಹೇಳಲಾಗಿದೆ; ಅಕ್ಕಿಯ ಸಮೇತ ಆಹಾರ ಧಾನ್ಯೋತ್ಪತ್ತಿಯು ಕಳೆದ ೩೦ ವರುಷಗಳಲ್ಲಿ ಸರ್ವಸಾಮಾನ್ಯ ಏಕಪ್ರಕಾರವಾಗಿದೆ. ಅದೇ ಸಮಯದಲ್ಲಿ ಜನಸಂಖ್ಯೆ ಮಾತ್ರ ೧೯೨೧ರಲ್ಲಿ ೩೧೯ ಮಿಲಿಯವಿದ್ದುದು ೧೯೪೧ರಲ್ಲಿ ೩೮೮ ಮಿಲಿಯಕ್ಕೇರಿದೆ. ಹಿಂದುಸ್ಥಾನವು ಆಸ್ಟ್ರೇಲಿಯದಿಂದ ವರುಷಂಪ್ರತಿ ೧॥ ಮಿಲಿಯ ಟನ್ನುಗಳಷ್ಟು ಅಕ್ಕಿಯನ್ನೂ ಆಮದುಪಡಿಸಿಕೊಳ್ಳುತ್ತಿತ್ತು. ಸ್ವತಃ ನಮ್ಮ ಪ್ರಾಂತಕ್ಕೆ ವರುಷಂಪ್ರತಿ ೧೪೦ ಸಾವಿರ ಟನ್ ಅಕ್ಕಿಯು ಬರ್ಮದಿಂದಲೂ, ೫೦ ಸಾವಿರ ಟನ್ ಪುಡಿ ಯಕ್ಕಿಯು ಸಯಾಮಿನಿಂದಲೂ ಆಮದಾಗಿ, ಇಲ್ಲಿಯ ೫ ಮಿಲಿಯ ಟನ್ನಿನಷ್ಟು ಒಳ ಸರಬರಾಯಿ ಅಕ್ಕಿಗೆ ಕೂಡುತ್ತಿತ್ತು. ೧೯೪೩ರಲ್ಲಿ ಅಖಿಲಭಾರತದಲ್ಲಿ ಕಡಿಮೆಬಿದ್ದ ಅಕ್ಕಿ ಸುಮಾರು ೨ ಮಿಲಿಯ ಟನ್ ಎಂದು ಸರಕಾರದ ಅಂದಾಜು. ಆದರೆ ಅನಧಿಕಾರೀ ಅಂದಾಜಿನಂತೆ ಈ ಕಡಿಮೆ ಬೀಳುವ ಅಂಕೆ ಎಷ್ಟೋ ಪಾಲು ಅಧಿಕವಿದ್ದು, ಅದು ಸಾಮಾನ್ಯ ವರುಷಗಳಲ್ಲಾದರೂ ೧೦ರಿಂದ ೧೫ ಮಿಲಿಯ ಟನ್ನುಗಳಾಗಿವೆ. ಹಿಂದುಸ್ಥಾನದ ಜನಸಾಮಾನ್ಯರು ಸದಾಕಾಲ ಅರೆ ಹೊಟ್ಟೆಯಲ್ಲಿರುವವರೇ. ರಾಷ್ಟ್ರದ ಆಹಾರ ಕೊರತೆಗೆ ಸಾಮಾನ್ಯವಾಗಿ ಈ ಕೆಳಗಿನ ಕಾರಣಗಳನ್ನು ತೋರಿಸಲಾಗುತ್ತಿದೆ.

ಅಭಾವದ ಕಾರಣ

೧. ಯುದ್ಧ ಕಾರಣದಿಂದಾಗಿ ಹೊರದೇಶಗಳಿಂದ ಬರುತ್ತಿದ್ದ ಅಕ್ಕಿ ಮತ್ತು ಗೋದಿಯ ಆಮದು ನಿಂತು ಹೋದುದು.

೨. ಹಿಂದೀ ಸೇನೆಗೆ ಹೊಸತಾಗಿ 'ರಿಕ್ರೂಟ್' ಮಾಡಲ್ಪಟ್ಟ ೨ ಮಿಲಿಯ ಜನರಿಗೆ ಉತ್ತಮ ವರ್ಗದ ಆಹಾರ ಕೊಡಲ್ಪಡುತ್ತಿದ್ದು ಆ ಕಾರಣದಿಂದಾಗುತ್ತಿರುವ ಅಧಿಕಾಧಿಕ ಧಾನ್ಯ ವ್ಯಯ. ಪ್ರಕೃತ ಯುದ್ಧ ಕಾರ್ಯ ಹಾಗೂ ಯುದ್ಧ ಸರಬರಾಯಿ ವಿಭಾಗಗಳಲ್ಲಿ ಉದ್ಯೋಗ ಹೊಂದಿದ ಬಹು ಸಂಖ್ಯಾಕರು ಯುದ್ಧ ಪೂರ್ವಕ್ಕಿಂತ ಹೆಚ್ಚಿನ ಸಂಪಾದನೆ ಮಾಡುತ್ತಿದ್ದಾರೆ; ಸಂಪಾದನೆಯ ಹೆಚ್ಚಳವು ಹೆಚ್ಚು ಪರಿಮಾಣದ ಆಹಾರ ಸೇವನೆಯಲ್ಲಿ ಪ್ರತಿಫಲಿಸಿದೆ.

೩. ಹೆಚ್ಚುಹೆಚ್ಚಾಗಿ ಬರುತ್ತಿರುವ ವಿದೇಶೀ ಸೇನೆಗಳು, ವಿದೇಶೀ ಯುದ್ಧ ಕೈದಿಗಳು ಮತ್ತು ಬರ್ಮಾ ಮೊದಲಾದ ಕಡೆಗಳಿಂದ ಸ್ಥಳಾಂತರ ಹೊಂದಿದವರ, ಧಾನ್ಯವ್ಯಯೀ ಹೊಸ ವರ್ಗವೊಂದು ನಿರ್ಮಾಣಗೊಂಡುದು.

೪. ಈ ಮೊದಲು ಜೀವನಾವಶ್ಯಕತೆಗಾಗಿ ತಮ್ಮ ಉತ್ಪತ್ತಿಯ ಒಂದು ಭಾಗವನ್ನೇ ಮಾರಾಟಮಾಡುತ್ತಿದ್ದ ಮಿಲಿಯಾವಧಿ ಸಣ್ಣ ರೈತರು, ಈಗ ದವಸಧಾನ್ಯಗಳ ಬೆಲೆಯೇರಿದ ದೆಸೆಯಿಂದ ಬೆಚ್ಚಂತ ಕಡಿಮೆ ಧಾನ್ಯಮಾರಿಯೇ ತಮ್ಮ ಖರ್ಚುವೆಚ್ಚಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಹೀಗಾಗಿ ಮಾರ್ಕೆಟಿಗೆ ಬರುವ ರೈತನ ಅಕ್ಕಿ ಕಡಿಮೆಯಾದುದು.

೫. ಇನ್ನು ಮುಂದೆ ಆಹಾರಾಭಾವ್ಯಗಳ ಅಭಾವವುಂಟಾಗಬಹುದು, ಇಲ್ಲವೇ ಬೆಲೆಯೇರಬಹುದೆಂಬ ಭಯದಿಂದ, ಧಾನ್ಯೋತ್ಪಾದಕರೂ ಕೊಂಡುಕೊಳ್ಳುವವರೂ ಏಕಪ್ರಕಾರ ಅದಕ್ಕಿಂತ ಹೆಚ್ಚಿನ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಪ್ರಯತ್ನಿಸಿರುವದು.

೬. ಕಡಿಮೆ ಪರಿಮಾಣದಲ್ಲಿರುವ ಮಾರಾಟ ಸಾಧ್ಯವಾದ ಉಳಿತಾಯದ ಅಕ್ಕಿಯನ್ನು ಹಿಡಿಯಲು ಸಾಹುಕಾರರ ಸ್ಪರ್ಧೆ ನಡೆದಿರುವಾಗ, ತಮ್ಮ ದಾಸ್ತಾನನ್ನು ಉಳಿಸಿಕೊಳ್ಳಲು ದೊಡ್ಡ ವರ್ಗದಾರರ ಪ್ರಯತ್ನ ನಡೆದಿದೆ. ಹೀಗಾಗಿ ಏನೇನೋ ಊಹಾಪೋಹ, ಕಳ್ಳದಾಸ್ತಾನು, ಲಾಭಬಡಕತನಗಳ ತಾಂಡವ ನಡೆದಿರುವದು.

೭. ವಾಹನಾನುಕೂಲತೆಗಳನ್ನು ತಗ್ಗಿಸಿದುದರಿಂದಾಗಿ ಉಳಿತಾಯದ ಕ್ಷೇತ್ರಗಳಿಂದ ಕೊರತೆಬಿದ್ದ ವಲಯಗಳಿಗೆ ಧಾನ್ಯಗಳನ್ನೊಯ್ಯುವದರಲ್ಲಿ ಅಡಚಣೆಯುಂಟಾದುದು.

ಯುದ್ಧ ಜನ್ಯ ಪರಿಸ್ಥಿತಿಯಿಂದೆದ್ದ ಮೇಲಿನ ಕಾರಣಗಳಿಗೆ ಗಾಳಿ, ನೆರೆಗಳ ಅನಾಹುತಗಳೂ ಜತೆಗೂಡಿ, ಅಸಾಮಾನ್ಯ ದುರಂತ ನಿರ್ಮಾಣಕ್ಕೆ ನೆರವಾದುವು. ಇವುಗಳ ಅತ್ಯಂತ ನಿಕೃಷ್ಟಾನುಭವ ಸಂಪಾದಿಸಿದ ಪ್ರಾಂತ್ಯ ಬಂಗಾಳ. ತಿರುವಾಂಕೂರು ಮತ್ತು ಕೊಚ್ಚಿಯ ಆಹಾರಾಭಾವವೂ ಸಾಕಷ್ಟು ಕಠಿಣವಾದುದು. ಮದ್ರಾಸ್ ಪ್ರಾಂತ್ಯದ ಕೆಲವು ಭಾಗಗಳಲ್ಲಿಯೂ ಬೊಂಬಾಯಿ ಮತ್ತು ಇತರ ಕಡೆಗಳಲ್ಲಿಯೂ ಆಹಾರಾಭಾವವುಂಟಾಗಿದೆ.

ಆಹಾರದ ಆಡಳಿತೆ

"ದೇಶದ ಆಹಾರ ವಿಷಮಸ್ಥಿತಿಯು ಒತ್ತಡದಿಂದಾಗಿ, ಸರಕಾರವು ೧೯೪೨ನೇ ದಶಂಬರದಲ್ಲಿ ಆಹಾರ ಖಾತೆಯೊಂದನ್ನು ಪ್ರತ್ಯೇಕವಾಗಿ ನಿರ್ಮಿಸಿ ವೈಸರಾಯೀ ಎಗ್ಸಿಕ್ಯುಟಿವ್ ಸದಸ್ಯರಲ್ಲೊಬ್ಬರನ್ನು ಆಹಾರ ಮೆಂಬರರನ್ನಾಗಿ ನೇಮಿಸಬೇಕಾಯಿತು. ಪ್ರತಿಯೊಂದು ಪ್ರಾಂತ್ಯದ ಆಹಾರದ ಆಡಳಿತೆಯೂ ಸಲಹೆಗಾರರಲ್ಲೊಬ್ಬರ ಅಥವಾ ಮಂತ್ರಿಗಳಲ್ಲೊಬ್ಬನ ಕೈಯಲ್ಲಿದೆ. ಮದ್ರಾಸಿನಲ್ಲಿ ನಮಗೊಂದು ಪ್ರಾಂತಿಕ ಆಹಾರ ಸಮಿತಿಯಿದೆಯಲ್ಲದೆ, ಪ್ರತಿಯೊಂದು ಜಿಲ್ಲೆಗೂ ಅನಧಿಕಾರೀ ಸಲಹೆಗಾರ ಮಂಡಲಿ ಈಗ ಒಂದೊಂದು ಆಹಾರ ಸಮಿತಿಯಂತಿದೆ. ಅಖಿಲ ಭಾರತ ಆಹಾರ ಸಮ್ಮೇಲನಗಳು ಹಲವು ಬಾರಿ ನೆರೆದುವಲ್ಲದೆ, ಕೇಂದ್ರ ಎಸೆಂಬ್ಲಿ ಮತ್ತು ಕೌನ್ಸಿಲ್ ಓಫ್ ಸ್ಟೇಟ್‌ಗಳಲ್ಲಿ ಮೂರು ಬಾರಿ ಆಹಾರ ಸಮಸ್ಯೆಯು ಚರ್ಚಿಸಲ್ಪಟ್ಟಿತು. ನೂತನವಾಗಿ ಎದ್ದ ಆಹಾರ ಪರಿಸ್ಥಿತಿಯ ಕೂಲಂಕುಷ ವಿಚಾರಣೆ ನಡಿಸಲು ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟಿದ್ದ ಗ್ರೆಗೊರಿ ಸಮಿತಿಯ ಶಿಫಾರಸುಗಳು ಇತ್ತೀಚೆಗೆ ದೊರೆತಿವೆ. ಆಹಾರ ನಿಯಂತ್ರಣದ ಮಟ್ಟಿಗೆ ಸರಕಾರವು ಇತ್ತೀಚೆಗೆ ವಹಿಸಿದ ಧೋರಣೆ ಮತ್ತು ಯೋಜನೆಗಳಿಗೆ ಆ ಶಿಫಾರಸುಗಳೇ ಆಸ್ತಿವಾರ.

ಶಮನಾರ್ಥ ಹಂಚಿಕೆಗಳು

೧. ಆಹಾರ ಪ್ರಶ್ನೆಯ ಮಟ್ಟಿಗೆ ಹಿಂದುಸ್ಥಾನದ ವಿವಿಧ ಪ್ರಾಂತ್ಯಗಳೊಳಗೆ ಸಂಬಂಧ ನಿರ್ಮಾಣವಾಗಿದೆ. ಪಂಜಾಬು, ಸಿಂಧ, ಸಂಯುಕ್ತ ಪ್ರಾಂತ್ಯಗಳಂತಹ ಅಧಿಕೋತ್ಪತ್ತಿಯುಳ್ಳ ಪ್ರಾಂತಗಳು, ತಾವು ಮಿಗಿಸಲು ಸಾಧ್ಯವಿದ್ದುದನ್ನೆಲ್ಲಾ, ಬಂಗಾಲ ಅಸ್ಸಾಮು, ಬೊಂಬಾಯಿ, ಮದ್ರಾಸ್, ಒರಿಸ್ಸಾ ಮೊದಲಾದ ಕಡಿಮೆ ಉತ್ಪತ್ತಿಯ ಪ್ರಾಂತ್ಯಗಳಿಗೆ ಕೊಡಬೇಕಾಗಿದೆ. ಹಾಗೆಯೇ ಪ್ರತಿಯೊಂದು ಪ್ರಾಂತ್ಯ ಮತ್ತು ಪ್ರತಿಯೊಂದು ಜಿಲ್ಲೆಯೊಳಗೂ ಉಳಿತಾಯದ ಕ್ಷೇತ್ರಗಳಿಂದ ಕೊರತೆಯಿರುವ ಕಡೆಗಳಿಗೆ ಆಹಾರ ಧಾನ್ಯಗಳು ಸಾಗಲಿವೆ. ರಿಕ್ವಿಸಿಶನ್ ಮೂಲಕವೂ ಕೊಂಡುಕೊಳ್ಳುವ ಮೂಲಕವೂ ಮಾರಾಟ ಸಾಧ್ಯ ಉಳಿತಾಯಗಳನ್ನೆಲ್ಲಾ ಸಂಗ್ರಹಿಸಿ, ಕಡಿಮೆ ಬಿದ್ದ ಬೇರೆಬೇರೆ ಕಡೆಗಳಿಗೆ ಸರ್ವಸಮಾನವಾಗಿ ಹಂಚಿ ಹಾಕುವ ವ್ಯವಸ್ಥೆ ಕೈಕೊಳ್ಳಲಾಗಿದೆ.

೨. ಹೊರವಲಯಗಳಿಗೆ ಭಾರತದಿಂದ ರಫ್ತಾಗುತ್ತಿದ್ದ ಧಾನ್ಯಗಳನ್ನು ಪ್ರಥಮತಃ ನಿರ್ಬಂಧಿಸಲಾಗಿತ್ತಲ್ಲದೆ, ಈಗ ಅದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಸರಕಾರವು ತನ್ನನ್ನು ತಡೆಗಟ್ಟುವದರೊಂದಿಗೆ, ಪ್ರಥಮ ವರುಷದಲ್ಲಿ 1½ ಮಿಲಿಯ ಟನ್ನು ಮತ್ತು ಯುದ್ಧಾಂತ್ಯದವರೆಗೆ ವರುಷಂಪ್ರತಿ ಒಂದೊಂದು ಮಿಲಿಯ ಟನ್ನು ಧಾನ್ಯಗಳನ್ನು ಹೊರಗಿನಿಂದ ದೇಶಕ್ಕಾಮದು ಪಡಿಸಿಕೊಳ್ಳಬೇಕೆಂದು ಗ್ರೆಗೊರಿ ಸಮಿತಿಯು ಸೂಚಿಸಿದೆ. ಈ ಪರಿಮಾಣವಾದರೂ ನಮ್ಮ ಅವಶ್ಯಕತೆಗೆ ಸಾಕಷ್ಟು ಎನ್ನಿಸುವಂತಿಲ್ಲ. ಹೊರದೇಶಗಳಿಂದಾಗಲಿದ್ದ ಗೋದಿಯ ಆಮದಿಗೆ ಹಡಗ ಅನಾನುಕೂಲತೆಯಿಂದ ತಡೆಯಾಗಿದೆ ಎಂದು ಸರಕಾರದ ಅಂಬೋಣ. ಸಾಕಷ್ಟು ಪರಿಮಾಣದಲ್ಲಿ ಆಮದು ಆದಾಗಲೇ ಸದ್ಯಸ್ಥಿತಿಯು ಸುಗಮಗೊಳ್ಳಲಿದೆ.

೩. 'ಅಧಿಕಾಹಾರ ಬೆಳೆಸಿರಿ' ಚಳವಳಿವು ಅಕ್ಕೀ ವ್ಯವಸಾಯೀ ಕ್ಷೇತ್ರಗಳಲ್ಲಿ ಸುಮಾರು ೪ ಮಿಲಿಯ ಎಕ್ರೆಗಳಷ್ಟನ್ನು ಹೆಚ್ಚಿಸಿದೆ ಎಂದು ತಿಳಿದುಬರುತ್ತದೆ. ಆದರೆ ಈ ವಿಭಾಗದಲ್ಲಿ ಇನ್ನಷ್ಟು ಕಾರ್ಯವಾಗಲಿಕ್ಕಿದೆ. ಕಷ್ಟನಿವಾರಣೆಯ ಒಂದು ಹಾದಿಯೆಂದರೆ ಜನತೆಯ ಅಭ್ಯಾಸಬದ್ಧವಾದ ಒಂದು ಆಹಾರ ಧಾನ್ಯದ ಬದಲಿಗೆ ಮತ್ತೊಂದನ್ನು ಅಧಿಕ ಪರಿಮಾಣದಲ್ಲಿ ಸೇರಿಸುವದು. (ಮಲಬಾರು ಮತ್ತು ದಕ್ಷಿಣ ಕನ್ನಡಗಳ ಎಷ್ಟೋ ಬಡವರು ಅಕ್ಕಿಯ ಬದಲಿಗೆ ಕಣಗಲೆ ಹಿಟ್ಟು (Tapioca) ಮತ್ತು ಗೆಣಸನ್ನು ಉಪಯೋಗಿಸುತ್ತಿದ್ದಾರೆ.

೪. ವಿವರಣೆ ಮತ್ತು ಧಾರಣೆಯ ನಿಯಂತ್ರಣಕ್ಕೂ ಕಳ್ಳ ದಾಸ್ತಾನನ್ನು ತಡೆಯುವದಕ್ಕೂ 'ರೇಶನಿಂಗ್' ಅತಿ ಮುಖ್ಯ ಸಾಧನವೆಂಬುದು ಸಿದ್ಧವಾಗಿದೆ. ಬೊಂಬಾಯಿ, ಮದ್ರಾಸ್, ಬೆಂಗಳೂರುಗಳಂತಹ ಕೆಲವು ಸ್ಥಳಗಳು ಇಷ್ಟರಲ್ಲೇ ಈ ಹಂಚಿಕೆಯನ್ನಂಗೀಕರಿಸಿಕೊಂಡಿವೆ. ಸದ್ಯದಲ್ಲೇ ಎಲ್ಲಾ ದೊಡ್ಡ ನಗರ ಮತ್ತು ಪಟ್ಟಣಗಳಲ್ಲೂ ರೇಶನಿಂಗ್ ಜ್ಯಾರಿಗೆ ಬರಲಿದೆಯಲ್ಲದೆ, ಮೇಲೆ ಪಟ್ಟಣದಂತಹ ಇತರ ವಲಯಗಳಿಗೂ ಹಬ್ಬಲಿದೆ. ೧೦ ಸಾವಿರ ಮತ್ತು ಅಧಿಕ ಜನಸಂಖ್ಯೆಯುಳ್ಳ ಪಟ್ಟಣಗಳು ನಮ್ಮ ದೇಶದಲ್ಲಿ ೪೯೦.

೫. ಎಲ್ಲಾ ಮುಖ್ಯ ಆಹಾರ ಧಾನ್ಯಗಳಿಗೂ ಧಾರಣೆ ನಿಯಂತ್ರಣ ಹಾಕಬೇಕು ಮತ್ತು ಅಂತಹ ನಿಯಂತ್ರಣವು ಬೇಸಾಯೇತರ ಉತ್ಪತ್ತಿಗೆಗೂ ಮುಖ್ಯವಾಗಿ ಬೇಸಾಯಗಾರನಿಗೆ ಅವಶ್ಯವಿರುವ ಸಾಮಗ್ರಿಗಳಿಗೆ—ಲಗಾವಾಗಬೇಕು ಎಂಬ ಶಿಫಾರಸನ್ನು ಸರಕಾರವು ಅಂಗೀಕರಿಸಿದೆ. ಪ್ರಾಂತ್ಯಗಳು ತಮ್ಮ ಪ್ರಥಮ ಹೆಜ್ಜೆಯಾಗಿ ಅಂತಹ ನಿಯಂತ್ರಣವನ್ನು ಜ್ಯಾರಿ ಮಾಡಲಾರಂಭಿಸಿವೆ. ಧಾರಣೆಗಳನ್ನು ಅತಿ ಶೀಘ್ರವಾಗಿ ಏರಿಸುವ, ಕಳ್ಳದಾಸ್ತಾನು ಮತ್ತು ಕಳ್ಳ ವ್ಯಾಪಾರಗಳನ್ನು ಕಠಿಣ ಶಿಕ್ಷೆ ವಿಧಿಸುವ ಮೂಲಕ ತಡೆಗಟ್ಟಬೇಕು. ಯುದ್ಧ ಸಾಲಗಳಿಗೆ ಅಥವಾ ಯುದ್ಧ ನಿಧಿಗಳಿಗೆ ಸಹಾಯಮಾಡಿದ ಹಂಗಿನಿಂದಾಗಿ ಪಾಪಿಗೊಳಗಾಗುವದನ್ನು, ಇಲ್ಲವೆ ಶಿಕ್ಷೆಗೆ ಗುರಿಯಾಗುವದನ್ನು ಅಪರಾಧಿಗಳು ತಪ್ಪಿಸಿಕೊಳ್ಳುವಂತಾಗಬಾರದು. ಆಹಾರ, ವಸ್ತ್ರ ಮತ್ತು ಅವಶ್ಯಕ ಸಾಮಗ್ರಿಗಳ, ಸದ್ಯದ ಅತಿ ಹೆಚ್ಚಿನ ಧಾರಣೆಗಳಿಗೆ ಮುಖ್ಯ ಕಾರಣ ಗಳಲ್ಲೊಂದೆಂದರೆ ಕರೆನ್ಸಿ ನೋಟುಗಳ ಹೆಚ್ಚಳ. ಅತಿ ಪ್ರಸರಣವು ತಡೆಗಟ್ಟಲ್ಪಡದೆ ಧಾರಣೆ ನಿಯಂತ್ರಣವಸಾಧ್ಯ.

ಹಳ್ಳಿಗರ ಅವಶ್ಯಕತೆ

"ಪಟ್ಟಣಗಳ ಧನಿಕ—ದರಿದ್ರರೊಳಗೆ ಆಹಾರ ಧಾನ್ಯಗಳ ಸರಿಸಮಾನವಾದ ಹಂಚೋಣವು ರೇಶನಿಂಗ್ ಮೂಲಕ ಸುಗಮವಾಗಲಿದೆ. ಪೇಟೆ ವಲಯಗಳ ಪೂರೈಕೆಯು ಈ ರೀತಿ ಸಾಗುವಾಗ ಹಳ್ಳಿಗರ ಅವಶ್ಯಕತೆಯನ್ನು ಕಡೆಗಣಿಸಬಾರದು. ಕಡಿಮೆಯೆಂದರೆ ಒಬ್ಬ ಪ್ರಾಯಸ್ಥನಿಗೆ ದಿನಕ್ಕೊಂದು ತೊಲೆ ಧಾನ್ಯ ಬೇಕೆಂದು, ನಿರ್ಧರಿಸಲಾಗಿದೆ. ಈ ಉದ್ದೇಶ ಸಾಧನೆಗೆ ಸಾಕಾಗುವಷ್ಟು ಸರಬರಾಯಿಯಿಲ್ಲದೆ ಹೋದರೆ, ಪಟ್ಟಣಿಗ ಅಥವಾ ಹಳ್ಳಿಗನೆಂಬ ಭೇದವಿಲ್ಲದೆ, ಪ್ರತಿಯೊಬ್ಬನಿಗೂ ಕಡಿಮೆಯಂತ ಧಾನ್ಯವನ್ನೇ ಕೊಡುವ ಮೂಲಕ ಸರ್ವರೂ ಸಮಾನವಾಗಿ ಅನುಭವಿಸುವಂತಾಗಬೇಕು. ಧನಿಕರಾದರೋ, ಇತರ ಆಹಾರಗಳನ್ನು ಹೆಚ್ಚಾಗಿ ಸೇವಿಸುವ ಮೂಲಕ ತಮ್ಮ ಅಕ್ಕಿ ಅಥವಾ ಗೋದಿಯ ಕೊರತೆ ನಿವಾರಿಸಿಕೊಳ್ಳಬಲ್ಲರು; ಆದ್ದರಿಂದ ವಿಶೇಷ ಲಕ್ಷ್ಯ ಕೊಡಬೇಕಾದುದು ಬಡವರ ಕಡೆಗೇನೇ."

ಸಮರಭೂಮಿಯ ಸಂಚಾರ

೧೯೪೪ ವಿಜಯದ ವರ್ಷವಾಗುವುದೆ?

ಆಂಗ್ಲ-ಅಮೆರಿಕಗಳ ಶಕ್ತಿ ಹೆಚ್ಚಿದರೆ?

ಕೌಂಟ್ ಸಿಯಾನೋ ಕೊಲೆ!

ಮುಸಲಿನಿಯ ಅಳಿಯನಾದ ಕೌಂಟ್ ಸಿಯಾನೋ ಗುಂಡು ಬಿದ್ದು ಕೊಲೆ ಮಾಡಲ್ಪಟ್ಟನೆಂದು ಜರ್ಮನ್ ಸುದ್ದಿ ಸಂಸ್ಥೆಗೆ ವೆರೋನಾದಿಂದ ತಿಳಿದು ಬಂದಿದೆ. ವೆರೋನಾದಿಂದ ಪಾರಾಗಿ ಹೋಗುವಾಗ ಇಟಲಿಯನ್ ಗಡಿ ರಕ್ಷಕರು ಕೊಲೆಗೈದರೆಂದು ಗಜೆಟ್ ಡಿಲಾ ಸೇನದ ಚಾಸಿಯೋ ಸುದ್ದಿಗಾರನು ತಿಳಿಸುತ್ತಾನೆ. ಇವರ ಜತೆಯಲ್ಲಿ ಮಾರ್ಶಲ್ ಡಿಬೋನೋ, ಮ್ಯಾರಿನೇಲಿ, ಪರೇಶಿ ಮತ್ತು ಗೋಟಾರ್ಡಿ ಇವರೂ ಕೊಲೆ ಮಾಡಲ್ಪಟ್ಟಿರುವರೆಂದು ವರದಿಯಿದೆ.

೧೯೩೯ರ ಪೋಲಿಶ್ ಗಡಿಯಿಂದ ರಷ್ಯನ್ ಸೇನೆಗಳು ೩೫ ಮೈಲು ಒಳನಾಡಿನಲ್ಲಿರುವ ಸಾರ್ನಿ ವರೆಗೆ ಬಂದು ಮುಟ್ಟಿವೆ. ದಕ್ಷಿಣ ಯುಕ್ರೇನಿನಲ್ಲಿ ನುಗ್ಗುತ್ತಿರುವ ರಷ್ಯನ್ ಸೈನಿಕರು ಒಡೆಸ್ಸಾ ಪೋಲೆಂಡ್ ರೈಲ್ವೆ ಸಮೀಪಿಸುತ್ತಿರುವರು. ಜರ್ಮನರ ಪ್ರತಿಭಟನೆ ಉಗ್ರವಾಗಿದೆ ರಷ್ಯ ಪೋಲೆಂಡ್ ಗಡಿನಾಡಿನ ಸಮಸ್ಯೆ ಈಗ ಉಂಟಾಗಿದೆ ೧೯೩೯ರ ಗಡಿಯೇ ಕೊನೆಯದೆಂದು ರಷ್ಯದ ಅಭಿಪ್ರಾಯವಲ್ಲವಾಗಿ, ಬದಲಾವಣೆ ಮಾಡಬೇಕೆಂದೂ, ಯಾವ ಜಿಲ್ಲೆಯಲ್ಲಿ ಪೋಲೆಂಡಿನ ಜನರು ಬಹುಸಂಖ್ಯಾಕರಿರುವರೋ ಅವರನ್ನು ಪೋಲೆಂಡಿಗೆ ಬಿಟ್ಟುಕೊಡಬಹುದೆಂದೂ, ಈ ರೀತಿ ಮಾಡಿದರೆ ೧೯೧೯ರಲ್ಲಿ ಮಿತ್ರರು ನಿರ್ಧರಿಸಿದಂತೆ ಕರ್ಜನ್ ಲೈನ್ ರಷ್ಯನ್ ಪೋಲೆಂಡ್ ಗಡಿಯಾಗುವುದೆಂದೂ ಹೇಳಲಾಗುತ್ತದೆ ಈ ಗಡಿ ನಿರ್ಣಯದಂತೆ ಪೋಲೆಂಡ್ ಯುಕ್ರೇನ್ ಭಾಗವು ರಷ್ಯಕ್ಕೆ ಸೇರಬೇಕಾಗಿದೆ

ವಿಜಯದ ವರ್ಷ?

೧೯೪೩ನೆಯ ವರ್ಷ ದಾಟಿತು ೧೯೪೪ನೆಯ ವರ್ಷದ ನವೋದಯವಾಯಿತು ಕಳೆದ ವರ್ಷದ ಸಂಕಷ್ಟ ದಾಟಿ ನಿಂತ ನಾವು ಈ ವರ್ಷದಲ್ಲಿ ಸಂಕಷ್ಟವನ್ನೋ ಸೌಭಾಗ್ಯವನ್ನೋ ಏನನ್ನು ಪಡೆಯಲಿದ್ದೇವೆ ಎಂಬುದೇ ಸದ್ಯ ಎಲ್ಲರ ತಲೆ ಸುತ್ತು ತಿರುಗುತ್ತಿರುವ ವಿಚಾರವಾಗಿದೆ

ದ್ವಿತೀಯರಂಗದ ಸೇನಾಪತಿ ಇಸೆನ್ ಹಾವೆರರು ೧೯೪೪ನೆಯ ವರ್ಷ ವಿಜಯದ ವರ್ಷವೆಂದು ನಮಗೆ ಎದೆತಟ್ಟಿ ತಿಳಿಸಿದ್ದಾರೆ ಪ್ರೆಸಿಡೆಂಟ್ ರೂಸ್‌ವೆಲ್ಟರೂ ಅದೇ ಧೈರ್ಯ ಸಾರಿರುವರು. ಹೊಸ ವರ್ಷದ ಹಾಡಿನ ಪಲ್ಲವಿಯೇ 'ವಿಜಯ'ವಾಗಿದೆ

ಆದರೆ ನಮ್ಮ ನೆನಪು ಕಹಿಯಿರುವುದು ಕಳೆದ ವರ್ಷ ೧೯೪೩ನೇ ವರ್ಷ ಪ್ರಾರಂಭವಾಗುವಾಗಲೂ ಇದೇ ತರದ ಆಸೆ ಭರವಸೆಗಳನ್ನು ನಮಗೆ ಕೊಡಲಾಗಿತ್ತು. ೧೯೪೩ರಲ್ಲಿ ನಮಗೆ ವಿಜಯದ ಆಸೆ ಕಡಿಮೆ ಇದ್ದು ಈಗ ಅದು ಇನ್ನಷ್ಟು ಬಲಗೊಂಡಿದ್ದರೂ ಇರಬಹುದು ಆದರೆ ೧೯೪೩ರ ಸಂಕಟವನ್ನು ನೋಡಿದರೆ ೧೯೪೪ರಲ್ಲಾದರೂ ಅದು ಹೇಗೆ ಕಡಿಮೆಯಾಗುತ್ತದೋ ಎಂದು ವಿಚಾರಿಸಿದರೆ ನಮಗೇನೇನೂ ಅರ್ಥವಾಗುವುದಿಲ್ಲ.

ಆಫ್ರಿಕದಲ್ಲಿ ಜರ್ಮನರು ಸೋಲಿನ್ನು ಕಂಡರು, ಇಟಲಿ ಆಕ್ರಮಿಸಲ್ಪಟ್ಟಿತು ಸಿಸಿಲಿ ಆಕ್ರಮಣವಾಯಿತು. ಮುಸಲಿನಿ ಪರಾಜಿತನಾದನು. ಮಿತ್ರರು ಕಳೆದ ವರ್ಷ ಒಂದರ ಮೇಲೊಂದು ವಿಜಯವನ್ನೇ ಪಡೆದರು. ಹೀಗಾದರೂ ಮಿತ್ರರು ಫೇಸಿಸಮ್ಮಿನ ಬೇರು ಕೀಳಲು ಯಾವುದೇ ತರದಿಂದಲೂ ಶಕ್ತರಾಗಿಲ್ಲ. ೧೯೪೦ರಲ್ಲಿ ಫ್ರಾನ್ಸು ಶರಣಾದಂತೆ ೧೯೪೩ರ ಇಟಲಿ ಶರಣಾಯಿತೆಂದು ಇಷ್ಟು ಮಾತ್ರ ನಾವು ತಿಳಿಕೊಳ್ಳಬಹುದಾಗಿದೆ. ಇಷ್ಟರಿಂದಲೇ ಯಾರು ಗೆದ್ದರು, ಯಾರು ಸೋತರು ಎಂದು ನಿರ್ಧರಿಸ ಬರುವುದಿಲ್ಲ.

ರಶ್ಯನರ ಸಾಹಸ

ರಶ್ಯನ್ ರಕ್ತಸೇನೆ ಸಾಹಸದಿಂದ ಹೋರಾಡಿ ಜರ್ಮನರನ್ನು ವೋಲ್ಗಾದಿಂದ ನೀಪರ್ ಕಡೆ ಹಿಂದಟ್ಟುತ್ತಿದೆ. ಒಂದು ವರ್ಷ ಹಿಂದೆ ಸ್ಟಾಲಿನ್‌ಗ್ರಾಡ್ ಯಾವ ಪರಿಸ್ಥಿತಿಯಲ್ಲಿ ಸಿಕ್ಕಿತ್ತೋ ಕಿಟೆಬ್‌ಸ್ಕ ಇಂದು ಅದೇ ಸಂದರ್ಭವನ್ನೆದುರಿಸಿದೆ. ಸ್ಟಾಲಿನ್‌ಗ್ರಾಡ್ ಹಿಟ್ಲರನ ಮಹದಾಶೆಗೆ ಸಮಾಧಿ ಸ್ಥಳವಾದಂತೆ ಇದೂ ಆಗಬಹುದೇನೋ! ಕಳೆದ ಒಂದು ವರ್ಷದಲ್ಲಿ ರಶ್ಯ ಏಕಾಂಗಿಯಾಗಿ ಹೋರಾಡಿ ಈ ಯುದ್ಧದ ಇತಿಹಾಸದಲ್ಲಿಯೇ ಮಹಾಸಾಹಸ ಮಾಡಿದೆ.

ರಶ್ಯನರಿಗಾದರೂ 1943ರಲ್ಲಿ ವಿಜಯದಾಶೆಯಿತ್ತು ಅದೂ 1944ಕ್ಕೆ ಮುಂದುವರಿದಿದೆ. ಹಾಗಾಗಿ ಯಾರೂ ಈ ವರ್ಷವೇ ಗೆದ್ದು ಬಿಡುತ್ತೇವೆಂದು ಖಂಡಿತಮಾಡುವುದು ತಪ್ಪು, ಏಕೆಂದರೆ ಕೊನೆಗೆ ಆ ವಿಜಯ ದೊರಕದಿದ್ದರೆ ನಿರಾಶೆಯುಂಟಾಗಬಹುದು 1943ರಲ್ಲಿ ರಶ್ಯದ ವೀರರು ಸ್ಟಾಲಿನ್ ಮೊದಲ್ಗೊಂಡು ಸಕಲರೂ ದ್ವಿತೀಯ ರಂಗ ತೆರೆಯಲು ಮಾಡಿದ ವಿನಂತಿ ಒಂದು ರೀತಿಯಿಂದ ಅವರ ಧೈರ್ಯವನ್ನೂ ಇನ್ನೊಂದು ರೀತಿಯಿಂದ ಹೆದರಿಕೆಯನ್ನೂ ಸೂಚಿಸಬಹುದು ಯುರೋಪಿನಲ್ಲಿ ದ್ವಿತೀಯ ರಂಗ ತೆರೆಯಲು ಬ್ರಿಟನು ಅಮೆರಿಕ ಯಶಸ್ವಿಯಾಗದಿದ್ದರೆ 1944ರಲ್ಲಾದರೂ ವಿಜಯದ ಭರವಸೆ ಹೇಗೆ?

ಕಳೆದ ವರ್ಷದ ಕೊನೆಯ ವಾರದ ಒಂದು ಘಟನೆಯನ್ನುಳಿದರೆ ೧೯೪೩ನೆಯ ವರ್ಷವೂ ದುಃಖ ಸಂಕಟ ನಿರಾಶೆಗಳ ವರ್ಷವೇ ಆಗಿತ್ತು ಆ ಕೊನೆಯ ಘಟನೆಯೆಂದರೆ ಕೈರೋ ತೆಹರಾನ್‌ಗಳಲ್ಲಿ ಮುಖಂಡ ಚತುಷ್ಟಯವು ಸ್ಟಾಲಿನ್, ಚರ್ಚಿಲ್, ರೂಸ್‌ವೆಲ್ಟ್, ಚಿಯಾಂಗರು ಸೇರಿದ್ದು ಈ ನಾಲ್ವರು ಪ್ರಪಂಚದ ಮುಕ್ಕಾಲು ಪಾಲು ಭೂಭಾಗದ ಪ್ರತಿನಿಧಿಗಳಾಗಿರುವರು ಇವರು ಒಂದೇ ಮೇಜಿನ ಸುತ್ತು ಕುಳಿತು ಜಗತ್ತಿನ ಶಾಂತಿ ವ್ಯವಸ್ಥೆಗಳ ವಿಚಾರವನ್ನು ಅನ್ಯೋನ್ಯತೆಯ ಬುದ್ಧಿಯಿಂದ ಮಾಡಿದರೆಂದರೆ ಅದಕ್ಕಿಂತ ದೊಡ್ಡ ಫಲ ಸಾಧನೆ ಬೇರೆ ಬೇಕಾಗಿಲ್ಲ ಹಾಗಾಗಿಯೇ ಒಂದು ಆಶೆಯೆಂದರೆ ಮುಂದಿನ ವರ್ಷವಾದರೂ ವಿಜಯದ ವರ್ಷ ಆಗಬಹುದೆಂದು. ಇದು ಕೇವಲ ಆಶೆ ಮಾತ್ರ ಇದರ ಸಾಧನ ಉಪಾಯಗಳು ಇನ್ನು ಕಾಣಬೇಕಷ್ಟೆ

ಕಾರ್ಯರಂಗಕ್ಕಿಳಿದರೆ?

'ಶಾರ್ನ್‌ಹಾರ್ಸ್ಟ್' ಹಡಗವನ್ನು ಮುಳುಗಿಸಿ ಮಿತ್ರರು 1944ರ ವಿಜಯಕ್ಕಿಂದು ತಳಹದಿ ಹಾಕಿದಂತಿದೆ ಇಸೆನ್‌ಹಾವರನ್ನು ದ್ವಿತೀಯ ರಂಗದ ಸೇನಾಪತಿಯಾಗಿ ನೇಮಿಸಿದ ಸುದ್ದಿಯೂ ಈಗ ಪ್ರಕಟವಾಗಿರುವುದು ಇದನ್ನು ನೋಡಿದರೆ ಮಿತ್ರರು ಇಂದಾದರೂ ಕಾರ್ಯರಂಗಕ್ಕೆ ಇಳಿದಂತೆ ತೋರುತ್ತದೆ ರಶ್ಯವೂ ಮಿತ್ರರ ಈ ಕಾರ್ಯಪ್ರವೃತ್ತಿಯನ್ನು ಮೆಚ್ಚಿದೆ ಕೊನೆಗಾದರೂ ಒಂದು ದಿನ ಮಿತ್ರರೀ ಮನಸ್ಸು ಮಾಡಿದರಲ್ಲಾ ಎಂದು! ರಶ್ಯನ್ ರಣದಳವು ಈಗಾಗಲೇ 400 ಮೈಲು ವಿಸ್ತೀರ್ಣದ ರಣಕ್ಷೇತ್ರದಲ್ಲಿ ತನ್ನ ಹೇಮಂತ ಧಾಳಿ ತೊಡಗಿದೆ ನೀಪರ್ ವಕ್ರದಲ್ಲಿರುವ ಜರ್ಮನರನ್ನು ಹೊಡೆದೋಡಿಸುವುದು ರಷ್ಯನರ ಇಂದಿನ ಮುಖ್ಯಸಾಧನೆಯಾಗಿದೆ. ಕಳೆದುಕೊಂಡ ಯುಕರಿನ್ ಭಾಗವನ್ನು ಪಡೆಯಲು ಜರ್ಮನರು ಮಾಡಿದ ಕಾದಾಟವಿಂದು ವಿಫಲವಾಗಿರುವುದು. ಹಿಟ್ಲರನ ನೀಪರ್ ಕಾಳಗವು ಪುನಃ ಸ್ಟಾಲಿನ್‌ಗ್ರಾಡ್ ಕಾಳಗದ ಆವೃತ್ತಿಯ ಪಾಠವನ್ನು ಆತನಿಗೆ ಕಲಿಸುತ್ತಿದೆ

ಈ ವರ್ಷದಾದಿಯ ಕೆಲವು ಕುರುಹುಗಳು ಮಿತ್ರರಿಗೆ ವಿಜಯದಾಶೆ ಹುಟ್ಟಿಸುವಂತಿದೆಯೆಂಬುದಕ್ಕೆ ನಿದರ್ಶನಗಳಿವೆ ಭೂಮಿಲ್ಲಿ ಜಲದಲ್ಲಿಯೂ, ಪೂರ್ವದಲ್ಲಿ ಪಶ್ಚಿಮದಲ್ಲಿಯೂ ಮಿತ್ರರು ಯಶಸ್ವಿಗಳಾಗಿರುವರು 'ಶಾರ್ನ್‌ಹೋರ್ಸ್ಟ್' ಸಮಾಧಿಯೂ, ಅದರೊಡನೆ ಮೂರು ವಿನಾಶಿಕೆಗಳ ಧ್ವಂಸವೂ ಇವೆಲ್ಲಾ ಜಯದ ಆಶೆ ಹುಟ್ಟಿಸಿವೆ ಮಿತ್ರರ ನೌಕಾಪಾತೆ ಹಿಂದೆಯೂ ಕೂಡಾ, 'ಗ್ರಾಫ್‌ಸ್ಟೀ' ಮತ್ತು 'ಬಿಸ್ಮಾರ್ಕ್' ಸಮಾಧಿಯಂಥಾ ಕೆಲವು ವಿಜಯಗಳನ್ನು ಪಡೆದಿತ್ತು ಆದರೆ ಈ ಜಮೆಯನ್ನೂ ಖರ್ಚಿನ ಭಾಗವನ್ನೂ ನೋಡಿದರೆ ಜಮೆಗಿಂತ ಖರ್ಚು ಬಹಳವಾದದ್ದು ಕಂಡುಬರುತ್ತದೆ 'ಪ್ರಿನ್ಸ್ ಒಫ್ ವೇಲ್ಸ್' 'ರಿಪಲ್ಸ್'ಗಳಂಥಾ ಹಲವು ನಷ್ಟಗಳು ಮಿತ್ರರಿಗುಂಟಾದದ್ದು ಎಂದೂ ಮರೆಯತಕ್ಕದ್ದಲ್ಲ.

ಆಂಗ್ಲ-ಅಮೆರಿಕ ಶಕ್ತಿ

ಇಂದಿನೀ ಯುದ್ಧದಲ್ಲಿ ಹಿಟ್ಲರನ ನೌಕಾಬಲ ಅಷ್ಟೊಂದು ಪ್ರಶಂಸಾರ್ಹ ಕಾರ್ಯಮಾಡಿದ್ದಿಲ್ಲ ಹಿಟ್ಲರನು ನೌಕಾಬಲವನ್ನು ಹಾಗೆ ಬೆಳೆಸಲಿಲ್ಲವೆಂದರೂ ಎನಬಹುದು ಹಿಂದಕ್ಕೆ ಕೈಸರನು ಬ್ರಿಟಿಷ್ ನೌಕಾಪಾತೆಗೆ ಎದುರೊಡ್ಡಿ ಹೋರಾಡುವ ಪಂಥವನ್ನು ಒಪ್ಪಿಕೊಂಡಂತೆ ಈ ಸಲ ಹಿಟ್ಲರ್ ಆಹ್ವಾನಿಸಿದವನಲ್ಲ ಆದರೆ ಹಿಟ್ಲರನ ಒಂದೇ ಒಂದು ಸೂತ್ರವೆಂದರೆ ಸಣ್ಣ ಸಣ್ಣ ವಿನಾಶಿಕೆಗಳನ್ನು ಮಾಡಿ, ಶತ್ರುಹಡಗಗಳನ್ನು ಗುಟ್ಟಾಗಿ ಹಿಂಬದಿಯಿಂದಿರಿದು ಹಾಳು ಮಾಡುವುದು ಈ ಕಾರ್ಯದಲ್ಲಿ ಹಿಟ್ಲರನು ಮಾಡಿದಷ್ಟು ಪ್ರಯತ್ನ ಬೇರಾರೂ ಮಾಡಿಲ್ಲವೆಂದರೂ ಎನಬಹುದು

ಸಮುದ್ರ ಶಕ್ತಿಯ ವಿಚಾರವನ್ನು ಇಲ್ಲಿ ತುಸು ವಿವರಿಸುವುದು ಈಗ ಅವಶ್ಯವಿದೆ ಈ ಯುದ್ಧಾನಂತರ ಬ್ರಿಟನು ಅಮೆರಿಕಗಳೆರಡು ಮಾತ್ರ ತಮ್ಮ ನೌಕಾಶಕ್ತಿಯನ್ನುಳಿಸಿಕೊಳ್ಳಬಲ್ಲವು ಏಕೆಂದರೆ ಇಡೀ ಪ್ರಪಂಚದ ಉತ್ಪತ್ತಿಯಲ್ಲಿ ಶೇಕಡಾ 90ರಷ್ಟು ನೌಕಾಶಕ್ತಿ ನಿರ್ಮಾಣಸಾಮಗ್ರಿ ಹಾಗೂ ನೌಕಾಸಂಚಾರವಲಯ ಇವರ ಅಧೀನದಲ್ಲಿದೆ. ಜರ್ಮನಿಯ ನೌಕಾಬಲವು ಈಗಾಗಲೇ ಕೈಕಾಲು ಮುರಿದಂತಾಗಿದೆ ಇಂದಿನೀ ಪೆಟ್ಟು ತಿಂದು ಪುನಃ ಬಲಗೊಳ್ಳಲು ಇಟಲಿಯ ನೌಕಾಬಲಕ್ಕೆ ಇನ್ನು ಕೆಲವು ದಶಮಾನಗಳು ಬೇಕಾಗುವವು ಜಪಾನಿನ ಮಟ್ಟಿಗೆ ಹೇಳುವುದಾದರೆ ಈ ಯುದ್ಧ ಕೊನೆಗೊಳ್ಳುವಾಗ ಅವರ ನೌಕಾಶಕ್ತಿ ಅಡಗೀತು. ತಲೆಮಾರಿನ ತನಕ ಫ್ರಾನ್ಸು ಒಂದು ಪ್ರಪಂಚ ಶಕ್ತಿಯಾಗುವುದು ಸಾಧ್ಯವಿಲ್ಲ. ರಶ್ಯ ತನ್ನ ಗಡಿಯ ಒಳಗಲ್ಲದೆ ಹೊರಗೆ ನೌಕಾಶಕ್ತಿ ಬೆಳಸಿಕೊಳ್ಳಲಿಲ್ಲ.

'ಬ್ರಿಟನಿಯೂ ತೆರೆಗಳನ್ನಾಳುವಳು' ಎಂಬೀ ಮಾತು ಯುದ್ಧಾನಂತರ ಸ್ವಲ್ಪ ಮಟ್ಟಿಗೆ ಸತ್ಯವಾಗಲೇ ಬೇಕು. ಬ್ರಿಟನು ಹೀಗಾಗುವುದು ಅಮೆರಿಕದ ಸಹಾಯದಿಂದ ಹಾಗೂ ಆಶ್ರಯದಿಂದ ಎಂಬುದನ್ನಿಲ್ಲಿ ಮರೆಯಬಾರದು. ಅಮೆರಿಕವಿಂದು ಪಂಚಸಾಗರಗಳನ್ನು ಆಳಬಲ್ಲ ನೌಕಾಶಕ್ತಿ ನಿರ್ಮಿಸಿದೆ ಅದರ ಈ ನಿರ್ಮಾಣ, ಅದರ ಜನಶಕ್ತಿ, ಅದರ ಸಿದ್ಧತೆಗಳು ಪ್ರಪಂಚದ ಯಾವುದೇ ರಾಷ್ಟ್ರವನ್ನಾದರೂ ಬೆರಗುಗೊಳಿಸುವಂಥಾದ್ದಾಗಿದೆ ವಿಮಾನ ಶಕ್ತಿಯಲ್ಲಿಯೂ ಅಮೆರಿಕ ಅಂತೆಯೇ ಇದೆ. ಹಲವು ಹೊಸ ವಿಮಾನಗಳು, ಹೊಸ ಕೇಂದ್ರಗಳು ನಿರ್ಮಿತವಾಗಿವೆ, ಆಕ್ರಮಿತವಾಗಿವೆ, ಕಡಪತ್ತಿ ಕಾಯಿದೆಯಿಂದ ಪಡಕೊಳ್ಳಲಾಗಿವೆ ಹೀಗಾಗಿ ಯುದ್ಧಾನಂತರವೂ ಅಮೆರಿಕದ ಈ ಶಕ್ತಿ ಕುಂದದೆ ನಿಲ್ಲಲೇ ಬೇಕು

ಅಮೆರಿಕ ಹಾಗೂ ಬ್ರಿಟನು ಹೀಗೆ ಬಲಗೊಳ್ಳುತ್ತಿವೆ ಅಮೆರಿಕದ ನೌಕಾ ವಿಮಾನ ಶಕ್ತಿ ಇನ್ನೂ ಹೆಚ್ಚುತ್ತಿದೆ, ಇದರ ಪರಿಣಾಮವಾಗಿ ನಾಳೆ ಅಮೆರಿಕ ಬ್ರಿಟನಿನಿಂದ ಬಲವಾದ ಶಕ್ತಿಯಾಗಬಹುದು ಇದನ್ನು ಬ್ರಿಟನು ಎಂದಾದರೂ ಸಹಿಸೀತೆ? ಸಮುದ್ರ ಶಕ್ತಿಯಲ್ಲಿ ಬ್ರಿಟನು ಸದಾ ಮೇಲ್ಮೈಯಾಗಿರಬೇಕೆಂಬುದು ಅದರ ಮಹತ್ವಾಕಾಂಕ್ಷೆಯಾಗಿದೆ. ಈ ಮಹತ್ವಾಕಾಂಕ್ಷೆಗೆ ಅಮೆರಿಕ ಅಡ್ಡಬಂದರೆ ಮುಂದೆ ಆಂಗ್ಲ ಅಮೆರಿಕ ಸಂಬಂಧ ಚೆನ್ನಾಗಿ ಉಳಿಯುವುದೆ? ಇದೊಂದು ಪ್ರಶ್ನೆ ಈಗ ರಾಜಕಾರಣ ವಿಚಾರಿಗಳ ತಲೆತುರಿಸುತ್ತಿರುವುದು

ರಶ್ಯನ್ ಸೇನೆ ಪೋಲೆಂಡ್ ಗಡಿ ದಾಟಿದೆ!

ಈ ಸುದ್ದಿ ಕಳೆದ ಮೂರು ವರ್ಷಗಳಲ್ಲಿ ಇಂದು ಎರಡನೆಯ ಸಲ ನಾವು ಕೇಳುತ್ತೇವೆ. 1941ನೇ ಜೂನ್ 28ರಲ್ಲು ಜರ್ಮನ್ ಸೇನೆ ಪೋಲೆಂಡ್ ಗಡಿ ದಾಟಿತು ಅದರ ಆರು ವಾರಗಳ ಮೊದಲು ಜರ್ಮನ್ ಬಲವು ರಶ್ಯದ ಮೇಲೆ ಅತ್ಯಾಚಾರಕ್ಕೆ ತೊಡಗಿ ಆಕ್ರಮಣ ಗೈದಿತು 1939ರ ಸೆಪ್ಟಂಬರ ಮೊದಲ್ಗೊಂಡೇ ಪೋಲೆಂಡ್ ಗಡಿಗೆ ಪೆಟ್ಟುಬಿದ್ದಿತ್ತು ಒಮ್ಮೆಲೇ 200 ಡಿವಿಜನ್ ಬಲವನ್ನು ಮುಂದುವರಿಸಿಕೊಂಡು ಹಿಟ್ಲರನು ರಶ್ಯದ ಮೇಲೆ ಆಕ್ರಮಣ ಗೈದಾಗ ಜಗತ್ತೇ ಬೆರಗಾಗಿತ್ತು ರಶ್ಯವಾದರೂ ಪ್ರಥಮಾಘಾತದಲ್ಲಿ ಮುಗ್ಗುವರಿಸುವಂತಿತ್ತು 1940ರ ಫಿನ್ಲೆಂಡ್ ಕಾಳಗದಿಂದಲೂ ರಶ್ಯನ್ ಶಕ್ತಿಯ ವಿಷಯ ಜಗತ್ತೇ ತಪ್ಪು ಅಭಿಪ್ರಾಯ ಮಾಡಿಕೊಂಡಿತ್ತು ಹಿಟ್ಲರ್ ಸ್ವತಃ ಹತ್ತು ವಾರದಲ್ಲಿ ರಶ್ಯವನ್ನು ನುಂಗಿ ನೀರ್ಕುಡಿವೆನೆಂಬ ಶಪಥ ಹಾಕಿದ್ದನು ಲಂಡನಿನಲ್ಲಿ, ವಾಶಿಂಗ್‌ಟನಿನಲ್ಲಿ ರಶ್ಯದ ಸಾಮರ್ಥ್ಯದ ಕುರಿತು ಸಂದೇಹ ಸಾವಿರಗಳುಂಟಾಗಿದ್ದವು

ಫ್ರಾನ್ಸಿನ ಅಭೇಧ್ಯವೆನಿಸಿದ ಮೇಜಿನೋ ದುರ್ಗವನ್ನು ಜರ್ಮನರು ಮುರಿದರು ರಶ್ಯದ ಅಭೇಧ್ಯ ಸ್ಟಾಲಿನ್ ದುರ್ಗಕ್ಕೂ ಮುತ್ತಿಗೆ ಹಾಕಿದರು. ರಶ್ಯನರು ಮೊದಮೊದಲು ಬೇಕು ಬೇಕೆಂದೇ ಪೋಲೆಂಡ್ ಗಡಿಯಿಂದ ಸೈನ್ಯವನ್ನು ಹಿಂದೆಳೆದರೆಂದು ತೋರುತ್ತದೆ ಜರ್ಮನರೇನೋ ಗೆದ್ದೆವೆಂದು ಹಿಗ್ಗಿಕೊಂಡಂತೆ ತೋರುವುದು. ಜರ್ಮನರು ಸ್ಟಾಲಿನ್ ದುರ್ಗವನ್ನು ಮುರಿದು ಮೋಸ್ಕೋಗೆ ತೆರಳಿದೆವೆಂದು ಸಾರಿದರು. ಆದರೆ 1944 ಜನವರಿ 11ರ ಸುದ್ದಿ ಬೇರೆಯೇ ಆಗಿದೆ ಇಂದು ಜರ್ಮನರ ಸೇನೆ ಹಿಮ್ಮೆಟ್ಟುತ್ತಿದೆ ರಶ್ಯನರ ಪಿತೃಭೂಮಿಯ ಒಂದು ಗಡಿ ಇಂದು ಸ್ವತಂತ್ರವಾಗಿದೆ. ಇದರಿಂದ ಈಗಾಗಲೇ ಜರ್ಮನಿಯ ರಾಜಧಾನಿಗೆ ರಶ್ಯನರು ಮುಟ್ಟಿದರೆಂದು ಊಹಿಸುವುದು ಹುಚ್ಚುತನವಾದರೂ ರಶ್ಯನರು ವಿಜಯಗಳಾಗುತ್ತಿದ್ದಾರೆಂಬುದು ಖಂಡಿತವಿದೆ. ಜರ್ಮನರ ಅಂದಿನ ಜಯಕ್ಕಿಂತ ರಶ್ಯನರ ಇಂದಿನ ಜಯವು ಮಹತ್ವದ್ದಿದೆ; ಏಕೆಂದರೆ ರಶ್ಯನರಿಂದು ವಿಜಯಗಳಾದದ್ದು ಹೇಮಂತದಲ್ಲಿ; ಜರ್ಮನರಂದು ಗೆದ್ದದ್ದು ವಸಂತದಲ್ಲಿ.

ಚರ್ಮವ್ಯಾಧಿಗಳು ಮ್ಯಾಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು
(Cuticura Ointment)
ಚರ್ಮವ್ಯಾಧಿಗಳನ್ನು ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT

ಸ್ವದೇಶಾಭಿಮಾನಿ

ತಾರೀಖು 14—1—1944

'ಬಿಡುಗಡೆಗಾಗಿ ಹೋರಾಡಿರಿ'

ಈ ವಾರ ಮದ್ರಾಸಿನಲ್ಲಿ ಸೇರಿದ ಅಖಿಲ ಭಾರತ ಸಂಪಾದಕ ಸಮ್ಮೇಳನದ ಸದಸ್ಯರ ಮುಂದೆ ರೈ! ಬ! ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಒಂದು ವಿಚಾರಪೂರ್ಣ ಭಾಷಣವೀಯುತ್ತಾ, ಅಖಿಲ ಭಾರತದ ಸಂಪಾದಕರಿಂದು ಆದ್ಯಕರ್ತವ್ಯವಾಗಿ ಸಾಧಿಸಬೇಕಾದ ಕೆಲಸವೆಂದರೆ, ಗಾಂಧೀಜಿ ನೆಹರು ಮೊದಲಾದ ರಾಷ್ಟ್ರ ಮುಖಂಡರ ಬಿಡುಗಡೆಗಾಗಿ ಹೋರಾಡುವುದೆಂದು ಒತ್ತಿ ಹೇಳಿದರು. ಮುಖಂಡರನ್ನು ಬಿಡುಗಡೆ ಮಾಡದಿದ್ದರೆ ಬಿಕ್ಕಟ್ಟು ಬಗೆ ಹರಿಯದೆಂದೂ, ಶಾಂತಿ ಪರಿಷತ್ತಿನಲ್ಲಿ ಗಾಂಧೀಜಿಯಲ್ಲದೆ, ಬೇರಾವನೂ ಭಾರತವನ್ನು ಪ್ರತಿನಿಧೀಕರಿಸಲಾರನೆಂದೂ ಅವರು ಖಂಡಿತವಾಗಿ ನುಡಿದರು.

ಶ್ರೀ! ಶಾಸ್ತ್ರಿಗಳು ಪತ್ರಿಕಾ ಕರ್ತರ ಶಕ್ತಿಸಾಮರ್ಥ್ಯವೆಷ್ಟಿದೆಯೆಂದು ಸ್ಪಷ್ಟಪಡಿಸಿದರು. ಹಿಂದಿನ ಶಾಂತಿ ಪರಿಷತ್ತಿನ ಕಾಲದಲ್ಲಿ ಅವರು ಗೈದ ಸೇವೆಯನ್ನು ಕೊಂಡಾಡಿದರು. 'ಯುದ್ಧ ಮುಗಿದ ಕೂಡಲೇ ಶಾಂತಿ ಪರಿಷತ್ತು ಕೂಡುವುದು ನಿಶ್ಚಯ. ಶಾಂತಿ ಪರಿಷತ್ತಿನಲ್ಲಿ ಸಾವಿರಾರು ಪ್ರಶ್ನೆಗಳು ಹುಟ್ಟುವವು. ಹಲವು ಸಮಸ್ಯೆಗಳನ್ನು ನಿವಾರಿಸಬೇಕಾಗುವುದು. ನಮ್ಮ ಕಡೆಗೆ ಬ್ರಿಟಿಷ್ ಸರಕಾರವು ಗಮನ ಕೊಡುವುದೆ?' ಎಂದು ವಾದಿಸುತ್ತಾ ಶ್ರೀ! ಶಾಸ್ತ್ರಿಗಳು, ಭಾರತದ ಬಿಕ್ಕಟ್ಟು ಬಗೆಹರಿಯದೆ ಉಳಿದರೆ, ನವ ಜಗತ್ತಿನ ನಿರ್ಮಾಣದಲ್ಲಿ ಭಾರತದ ಸ್ಥಾನಮಾನವನ್ನು ಕಾಪಾಡಲು ಭಾರತೀಯ ಪ್ರಾತಿನಿಧ್ಯವಿರಲಾರದೆಂದು ಎಚ್ಚರಿಸಿ, ಆದ್ದರಿಂದ ಈಗಾಗಲೇ ಮುಖಂಡರ ಬಿಡುಗಡೆಗಾಗಿ ಹೋರಾಡಿರಿ ಎಂದು ಸಂಪಾದಕರನ್ನು ಅವರು ಹುರಿದುಂಬಿಸಿದರು.

'ಯಾರು ಸತ್ಯ, ಶಾಂತಿ, ಅಹಿಂಸೆ, ಸ್ನೇಹಗಳಿಗಾಗಿ ತನ್ನ ಜೀವನವನ್ನೇ ಮೀಸಲಾಗಿರುವರೋ, ಯಾರು ಆಗಾಖಾನ ಅರಮನೆಯಲ್ಲಿ ಕೊಳೆಯುತ್ತಿರುವರೋ ಅವರು ನಮಗೆ ಶಾಂತಿ ಸಂದೇಶ ಸಾರಲು ಶಕ್ತರು. ಅವರು ಆ ಸಂದೇಶ ಸಾರಿದರೆ ಜಗತ್ತೇ ನಂಬೀತು. ಜಗತ್ತಿನ ಇತರ ಮಹಾನುಭಾವರು ಶಾಂತಿಗಾಗಿ ಪ್ರಯತ್ನಿಸುವಾಗ ಅವರು ಸೆರೆಮನೆಯಲ್ಲಿ ಕೊಳೆಯುತ್ತಿರಬೇಕೆ? ಅಲ್ಲ, ಅಲ್ಲ ಎಂದು ಸಾವಿರ ಸಲ ಹೇಳುತ್ತೇನೆ' ಎಂದು ಶಾಸ್ತ್ರಿಗಳು ಸ್ಫೂರ್ತಿಯುತವಾಗಿ ವಾದಿಸಿ, ಗಾಂಧೀಜಿ, ನೆಹರುಗಳನ್ನು ಬಿಡುಗಡೆ ಮಾಡುವುದು, ಕೇವಲ ಅವರ ಮೇಲಿನ ಅಭಿಮಾನಕ್ಕೆ ಮಾತ್ರವಿರದೆ, ಜಗತ್ತಿನ ಹಿತದ ಸಲುವಾಗಿಯೆಂದು ತಿಳಿಸಿದರು.

'ನೆಹರೂ! ಯೋಗ್ಯ ಕಾಲದಲ್ಲಿ ಗಾಂಧಿ, ನೆಹರುಗಳ ಬಿಡುಗಡೆಯಾಗದಿದ್ದರೆ ಅವರ ಹೊರತಾದ ಪ್ರತಿನಿಧಿಯಾಗಿ ಶಾಂತಿ ಪರಿಷತ್ತಿನಲ್ಲಿ ಭಾಗವಹಿಸುವರು. ಇದು ಭಾರತಕ್ಕೆ ಅವಮಾನ. ಇದನ್ನು ನಾನು ನೋಡಲಾರೆ. ಇದನ್ನು ನೋಡುವುದಕ್ಕಿಂತ ನನಗೆ ಸಾವೇ ಮೇಲೆನ್ನುವೆನು. ಭಾರತದ ನಿಜವಾದ ಪ್ರತಿನಿಧಿಗಳಾಗಿರುವವರನ್ನು ಬಿಡುಗಡೆ ಮಾಡಬೇಕೆಂದು ನೀವು ಆಗಾಗ ಅವಿಶ್ರಾಂತರಾಗಿ ಬರೆದು ಹೋರಾಡಬೇಕು. ನಿಮಗೆ ಹಾಗೆ ಹೇಳುವ ಅಧಿಕಾರವಿದೆ; ಶಕ್ತಿಯಿದೆ' ಎಂದೂ ಶಾಸ್ತ್ರಿಗಳು ಎಚ್ಚರಿಸಿದರು.

'ಈ ಉಪಕಾರ ನಾನು ನಿಮ್ಮಿಂದ ಬೇಡುತ್ತೇನೆ. ಇದಕ್ಕಿಂತ ಮಹತ್ವವಾದ ಕಾರ್ಯ, ಮಹಾಯಜ್ಞ ಬೇರಿಲ್ಲ. ಸರಕಾರದ ಮುಂದೆ ನಿಮ್ಮ ಬೇಡಿಕೆ ಮಂಡಿಸಿರಿ. ನಿಮ್ಮೀ ಬೇಡಿಕೆ ಮಾನ್ಯವಾಗುವವರೆಗೂ ಮಂಡಿಸಿರಿ. ಇದಕ್ಕಾಗಿ ನಿರಂತರ ಹೋರಾಡಿರಿ. ಸರಕಾರಕ್ಕೆ ಅರ್ಧ ನಿಮಿಷ ವಿಶ್ರಾಂತಿ ಕೊಡಬೇಡಿ. ನಮ್ಮ ಮಹಾತ್ಮರನ್ನು ಅವರು ಬಿಡುಗಡೆ ಗೈಯಲಿ! ನಮ್ಮ ಪುಣ್ಯಪುರುಷರು ಶಾಂತಿಪರಿಷತ್ತಿನಲ್ಲಿ ಭಾಗವಹಿಸಿ, ಜಗತ್ತಿನ ಶಾಂತಿಗಾಗಿ ಸಲಹೆಗಳನ್ನು ಮುಂದಿಟ್ಟರೆ ಅದನ್ನು ತಿರಸ್ಕರಿಸುವ ಧೈರ್ಯ ಬ್ರಿಟನಿಗೆ ಇದ್ದೀತೆ? ಶಾಂತಿಪರಿಷತ್ತಿನಲ್ಲಿ ನಮ್ಮ ಮುಖಂಡರು ಭಾರತದ ಸ್ವಾತಂತ್ರ್ಯ ಸಂಪಾದಿಸಿ ನಮಗೆ ಕೊಡುವರು' ಹೀಗೆಂದು ಮಾನ್ಯ ಶಾಸ್ತ್ರಿಗಳು ಭಾಷಣವನ್ನು ಕೊನೆಗೊಳಿಸಿದರು.

ಶ್ರೀ! ಶಾಸ್ತ್ರಿಗಳ ಮಾತು ಹೃದಯ ಸ್ಪರ್ಶಿಯಾಗಿದ್ದು, ಬಹಳ ಉತ್ತೇಜಕವಿದೆ. ಬಹಳ ಕಾಲದಿಂದ ಅವರ ಹೃದಯನ್ನು ನೋಯಿಸುವ ಒಂದು ವಿಷಯವನ್ನವರು ಸಂಪಾದಕರ ಮುಂದೆ ಮಂಡಿಸಿದ್ದಾರೆ. ಸಂಪಾದಕರು ಈ ವೃದ್ಧ ಪಿತಾಮಹರ ಮಾತಿಗೆ ಸಲಬೇಕಾದ ಮನ್ನಣೆ ಕೊಡಲು ಮರೆಯಲಾರರೆಂದು ನಾವು ಭಾವಿಸುತ್ತೇವೆ.

ಕಮಲಾ ದೇವಿಯರ ಬಿಡುಗಡೆ

ವೆಲ್ಲೂರು ಸೆರೆಮನೆಯಲ್ಲಿ ಸ್ಥಾನಬದ್ಧತೆಯಲ್ಲಿದ್ದ ಶ್ರೀಮತಿ ಕಮಲಾ ದೇವಿ ಚಟ್ಟೋಪಾಧ್ಯಾಯರನ್ನು ಪ್ರಕೃತಿ ಅಸ್ವಸ್ಥದ ಮೂಲಕ ಬಿಡುಗಡೆ ಮಾಡಲು ಸರಕಾರ ಆಜ್ಞೆ ಹೊರಡಿಸಿದೆ.

ಭಾರತದಲ್ಲಿ ಬ್ರಿಟಿಷ್ ೧೪ನೇ ದಲ

ಬ್ರಿಟಿಷ್ ೧೪ನೇ ದಲವು ಅಸಾಮಿನಲ್ಲಿ ಜಪಾನರ ವಿರುದ್ಧ ಚಟುವಟಿಕೆ ನಡೆಸಿರುವುದೆಂದು ಈಗ ತಿಳಿದುಬಂದಿದೆ.

೧೪ ವಿದ್ಯಾರ್ಥಿನಿಯರ ಅನ್ನ ಸತ್ಯಾಗ್ರಹ

ಕಲ್ಕತ್ತದ ಕ್ಯಾಂಬೆಲ್ ಮೆಡಿಕಲ್ ಕಾಲೇಜಿನಲ್ಲಿನ ಮುಷ್ಕರದ ಸಂಬಂಧ, ೭ ವಿದ್ಯಾರ್ಥಿಗಳನ್ನು ಶಾಲೆಯಿಂದ ತಳ್ಳಿ ಹಾಕಿದ ನಿಷೇಧಾರ್ಥ ೧೪ ವಿದ್ಯಾರ್ಥಿನಿಯರು ಅನ್ನ ಸತ್ಯಾಗ್ರಹ ಹಿಡಿದಿರುವರು.

ರುಥರ್ ಫೋರ್ಡರಿಗೆ ರಜೆ

ಬಿಹಾರದ ಗವರ್ನರರೂ, ಸದ್ಯ ಬಂಗಾಳದ ತಾತ್ಕಾಲಿಕ ಗವರ್ನರರೂ ಆದ ಥೋಮಸ್ ರುಥರ್ ಫೋರ್ಡರಿಗೆ ಪ್ರಕೃತಿ ಅಸ್ವಸ್ಥತೆಯ ನಿಮಿತ್ತ ರಜೆ ದೊರಕಿದೆ.

ಸ್ವದೇಶ ಸಮಾಚಾರ

ಬೋಸರ ಮಾತೆ ಕಣ್ಮರೆಯಾದರು!

ಶ್ರೀಮತಿ ಪ್ರಭಾವತಿ ಬೋಸ್

೭೫ ವರ್ಷ ಪ್ರಾಯದ ಆ ಮುದುಕಿ ಇಬ್ಬರು ವೀರ ಪುತ್ರರನ್ನು ಪಡೆದಾ ವೀರ ಮಾತೆ ಶರತ್ ಚಂದ್ರ ಸುಭಾಸ ಚಂದ್ರ ಬೋಸರ ತಾಯಿ ಪ್ರಭಾವತಿ ಬೋಸರು ಕಳೆದವಾರ ಕಲ್ಕತ್ತದಲ್ಲಿ ದಿವಂಗತರಾದರು. ಕೊನೆಯುಸಿರು ಎಳೆವ ಕಾಲದಲ್ಲೂ ಅವರ ವೀರ ಪುತ್ರರಿಬ್ಬರನ್ನು ಶರತ್ ಚಂದ್ರ ಬೋಸರನ್ನು, ಸುಭಾಸಚಂದ್ರ ಬೋಸರನ್ನು ಅವರು ಕಣ್ಣಿನಿಂದೊಮ್ಮೆ ಕಂಡು ಕಣ್ಮುಚ್ಚುವುದಾಗಲಿಲ್ಲ. ಶರತ್ ಚಂದ್ರರು ಸಾಮ್ರಾಜ್ಯ ಶಾಹಿಗಳ ಸೆರೆಯೊಳಗೆಸೇರಿಸಲ್ಪಟ್ಟಿರುವರು. ಸುಭಾಸ ಬೋಸರು ಸಾಮ್ರಾಜ್ಯ ಶಾಹೀ ಬ್ರಿಟಿಷ್ ಆಡಳಿತದಿಂದ ಅಂತರ್ಧಾನರಾಗಿರುವರು!

ಆ ವೀರ ಮಾತೆಯು ತನ್ನ ಪ್ರೀತಿಯ ಪುತ್ರರಿಬ್ಬರನ್ನು ಕಾಣಲಾರದೆ ಅಸು ತೊರೆದರೆಂಬುದು ಅತ್ಯಂತ ವಿಷಾದಕರ. ಅವರು ತನ್ನ ವೀರ ಪುತ್ರ ಸುಭಾಸರ ಎರಡು ಅಂತರ್ಧಾನಗಳನ್ನು ಕಂಡಿದ್ದಾರೆ. ಒಂದು ಆತನು ಇನ್ನೂ ಎಳೆಯವನಾಗಿರುವಾಗ ಯಾವುದೋ ತಪಸ್ಸಾಧನೆಯ ಆಶೆಯಾಗಿ ನೇಪಾಲಿನ ಅರಣ್ಯದಲ್ಲಿ ಅಲೆದಾಡಿದ್ದು; ಪುನಃ ಮನೆಗೆ ಬಂದು ವಿದ್ಯಾಭ್ಯಾಸವನ್ನು ಆತನೇ ಮುಂದುವರಿಸುವವರೆಗೆ ಯಾರಿಗೂ ಆತನೆಲ್ಲಿ ಹೋದ್ದ, ಏನು ಮಾಡಿದ ಎಂಬುದು ಗೊತ್ತಿರಲಿಲ್ಲ. ತಿರುಗೊಮ್ಮೆ ಯುದ್ಧ ಪ್ರಾರಂಭವಾಗುವ ಸಮಯ ಆತ ದೇಶ ಬಿಟ್ಟು ಅಂತರ್ಧಾನವಾದ. ಮಾತೆ ಪುತ್ರನು ಒಂದು ದಿನ ಮರಳಿ ಬರುವನೆಂದೇ ಬಯಸಿ ಈ ಸಲವೂ ಕಾದು ಕೊಂಡಿರಬೇಕು! ಆದರೆ ಈ ಸಲ ಅವರ ಆಶೆ ನಿರಾಶೆಯಾಯಿತು. ತನ್ನ ಪ್ರೀತಿಯ ಮಗನನ್ನು, ದೇಶ ಭಕ್ತನೆನಿಸಿದ ವೀರ ಪುತ್ರನನ್ನು ಕಾಣದೆ ಅವರು ಕಣ್ಮುಚ್ಚಿದರು. ತನ್ನ ಸಂಸಾರ, ತನ್ನ ಮಕ್ಕಳು ಮರಿಗಳು ಎಂಥಾ ಹೋರಾಟಕ್ಕಿಳಿದು ಸಂಕಷ್ಟ ಸಾವಿರಗಳನ್ನೆದುರಿಸುತ್ತಿರಲು ಅದೆಲ್ಲವನ್ನೂ ಎದೆಗುಂದದೆ ಸಹಿಸಿದ ವೀರ ಜನನಿ ಇಂದು ಕಣ್ಮರೆಯಾಗಿದ್ದಾರೆ. ಇಡೀ ಬಂಗಾಳ ಮಾತ್ರ ಆಕೆಯ, ಆ ಪುಣ್ಯಾತ್ಮಳ ಮರಣಕ್ಕಾಗಿ ಕಂಬನಿ ಸುರಿಸುವುದಲ್ಲ, ಅಖಿಲ ಭಾರತವೇ, ಆ ವೀರ ಮಾತೆಗಾಗಿ ಇಂದು ಬಾಷ್ಪಾಂಜಲಿ ಅರ್ಪಿಸುತ್ತಿದೆ. ಆಕೆಯ ಆತ್ಮವು ಚಿರಶಾಂತಿಯನ್ನು ಹೊಂದಲಿ!

ಪುನಃ ಅಮೆರಿಗಾನ

ಲಂಡನಿನ ಯೋರ್ಕಿನಲ್ಲಿ ಭಾಷಣಮಾಡುತ್ತಾ ಅಮೆರಿಯವರು, ನಾವು ಹೆದರಿ, ಕ್ರಿಪ್ಸ್‌ರನ್ನು ಸಂಧಾನಕ್ಕೆ ಕಳುಹಿಸಿದ್ದಲ್ಲ, ಗಾಂಧಿ ಮತ್ತು ಕಾಂಗ್ರೆಸಿನವರು ಹಾಗೆ ಭಾವಿಸಿದವರು ಎಂದು ಹೇಳಿ, ಯುದ್ಧದಲ್ಲಿ ಭಾರತವು ಹೆಚ್ಚಿನ ಸಹಾಯ ಮಾಡಿದೆಯೆಂದೊಪ್ಪಿ, ಅದೆಲ್ಲಾ ಮನಃಪೂರ್ವಕ ಮಾಡಿರುವುದೆಂದೂ, ಜಪಾನಿ ಮರ್ದನ ಕಾರ್ಯದಲ್ಲಿ ಭಾರತೀಯರು ಹೆಚ್ಚಿನ ಸಹಾಯ ಮಾಡಬೇಕೆಂದೂ ತಿಳಿಸಿ, ಯುದ್ಧದಿಂದಾಗಿ ಭಾರತದ ಆರ್ಥಿಕಪರಿಸ್ಥಿತಿಗೆ ಭಾರ ಬಿತ್ತೆಂದೂ, ನೋಟುಗಳ ಅತಿಪ್ರಸರಣವಾಗದಂತೆ ಕೈಲಾದ ಪ್ರಯತ್ನ ಮಾಡಿರುವೆವೆಂದು ಹೇಳಿ, ಯುದ್ಧಾನಂತರ ಭಾರತವು ಕಾಮನ್ ವೆಲ್ತಿನಲ್ಲಿರುವುದೆಂದು ನಾವು ಹೇಳಿದರೂ ಅಲ್ಲಿನ ಜನತೆಯ ಭಿನ್ನಾಭಿಪ್ರಾಯವಿನ್ನೂ ತೊಲಗದಿರುವುದರಿಂದ ನಾವೇನು ಮಾಡಲೆಂದು ಉದ್ಗರಿಸಿ, ಮುಂದೆ ಭಾರತವು ಸ್ವತಂತ್ರವಾಗುವಂತೆ ಸಾಧಿಸುವೆವೆಂದು ಮಾತನಾಡಿದರು.

ಅ! ಭಾ. ಪತ್ರಿಕಾ ಸಂಪಾದಕರ ಪರಿಷತ್ತು

ಇದೇ ತಾ. ೧೧ರಂದು ಮದರಾಸಿನಲ್ಲಿ ಅಧ್ಯಕ್ಷ ಶ್ರೀ! ಎಸ್. ಎ. ಬ್ರೇಲ್ವಿಯವರ ಅಧ್ಯಕ್ಷತೆಯಿಂದ ಜರಗಿತು. ಶ್ರೀ! ನಟೇಶನರು ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಮಿತ್ರರಿಂದು ಪ್ರಜಾಪ್ರಭುತ್ವದ ಬೆಂಬಲಕ್ಕಿರುವ ಪತ್ರಿಕೆಗಳ ಮೇಲೆಯೇ ಗದೆಯೆತ್ತುತ್ತಿರುವರೆಂದೂ, [illegible] ಯತಕ್ಕೆ ಅಥವಾ ಪತ್ರಿಕೆಯವರಿಗೆ ಕಮಗಿಷ್ಟ ಯುದ್ಧದ ಬಗೆಗೆ ಬರೆಯಬಹುದೆಂದು ಹೇಳಿದರೆಂದೂ, ಭಾರತ ಸರಕಾರವು ಪತ್ರಿಕಾ ನಿರ್ಬಂಧ ಹೊರಿಸಿ ಅನ್ಯಾಯ ಮಾಡಿದ್ದೆಯೆಂದೂ ಅವರು ಹೇಳಿದರು.

ಹಿಂದಿನ ವರ್ಷದ ಅಧ್ಯಕ್ಷರಾದ ಶ್ರೀ! ಕೆ. ಶ್ರೀನಿವಾಸನರು ಶ್ರೀ! ಬ್ರೇಲ್ವಿಯವರನ್ನು ಕೊಂಡಾಡಿ, ಭಾರತದ ಪತ್ರಿಕೆಗಳ ಸೇವೆಯನ್ನು ಆನ್ ಗೋಕವರೂ, ಇಂದು ವೇವಲರೂ ಮನ್ನಿಸಿರುವರೆಂದರು. ಅನಂತರ ಬ್ರೇಲ್ವಿಯವರು ಭಾಷಣವಿತ್ತು, ಪತ್ರಿಕಾ ಸ್ವಾತಂತ್ರ್ಯದ ಮೇಲೆ ಗದೆಯೆತ್ತಿದ ಸರಕಾರದ ನೀತಿ ಖಂಡಿಸಿ, ಹಾರ್ನಿಮೆನ್, ದೇವದಾಸ ಗಾಂಧಿ, ಮಣಿಯರ ವಿಜಯವನ್ನು ಪ್ರಶಂಸಿಸಿ, ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆಯದೆ ಪತ್ರಿಕೆಗಳಿಗೆ ಸ್ವಾತಂತ್ರ್ಯವಿಲ್ಲವೆಂದೂ ಪತ್ರಿಕೋದ್ಯಮವು ಕೀಳ್ಮಟ್ಟಕ್ಕೆ ಇಳಿಯದಂತೆ ನೋಡಬೇಕಿದ್ದೂ ಸರಕಾರದ ನಿರಂಕುಶ ವೃತ್ತಿಯನ್ನೆದುರಿಸಬೇಕೆಂದೂ ಅವರು ಹೇಳಿದರು.

ಮಾಂಗಡಾ ನಗರ ಆಕ್ರಮಣ

ಮಾಂಗಡಾ ನಗರವನ್ನು ಆಕ್ರಮಿಸಲಾಯಿತೆಂದು ಭಾರತೀಯ ಸೇನಾ ನಿರೀಕ್ಷಕರ ಸುದ್ದಿಯಿಂದ ತಿಳಿದುಬರುತ್ತದೆ.

ಐ. ಸಿ. ಎಸ್.ರಿಗೆ ಶಿಕ್ಷೆ

ಕಳೆದ ಮೇ ೨೧ರಲ್ಲಿ ತನ್ನ ಸೇವಕಿಯಾದ ೧೪ ವರ್ಷದ ಯುವತಿ ಬಿಲಾಸಿಯಾ ಎಂಬವಳನ್ನು ಕೊಂದರೆಂದು ಸಂ! ಪ್ರಾಂತದ ಮಾಜಿ ಕಾರ್ಯದರ್ಶಿ ಬಿ. ಬಿ. ಸಿಂಗ ಐ. ಸಿ. ಎಸ್. ಇವರಿಗೆ ಲಕ್ನೋ ಡಿಸ್ಟ್ರಿಕ್ಟ್ ಮತ್ತು ಸೆಶನ್ ಜಡ್ಜರು ೬ ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವರು.

ಭಾರತದಲ್ಲಿ ಬ್ರಿಟಿಷ್ ೧೪ನೇ ದಲ

ಬ್ರಿಟಿಷ್ ೧೪ನೇ ದಲವು ಅಸಾಮಿನಲ್ಲಿ ಜಪಾನರ ವಿರುದ್ಧ ಚಟುವಟಿಕೆ ನಡೆಸಿರುವರೆಂದು ಈಗ ತಿಳಿದುಬಂದಿದೆ.

ಉಡುಪಿ

ಫಲಿಮಾರಿನ ಗ್ರಾಮಾಂತರದ ಆಸ್ಪತ್ರೆ

ಫಲಿಮಾರಿನಲ್ಲಿ ಈಚೆಗೆ ರೂರಲ್ ಡಿಸ್ಪೆನ್ಸರಿಯ ಹೊಸ ಕಟ್ಟಡದ ಆರಂಭೋತ್ಸವವು ಫಲಿಮಾರು ಶ್ರೀ! ಶ್ರೀಗಳವರ ಸಾನ್ನಿಧ್ಯದಲ್ಲಿ ಜಿಲ್ಲಾ ಮೆಡಿಕಲ್ ಆಫೀಸರರಾದ ಕೇಪ್ಟನ್ ಸಿ. ಕೃಷ್ಣ ಮೇನನ್‌ರ ಅಧ್ಯಕ್ಷತೆಯಲ್ಲಿ ಸಂಭ್ರಮಪೂರ್ವಕವಾಗಿ ನೆರವೇರಿತು.

ಒಂದು ಅಭಿಪ್ರಾಯ

ಶ್ರೀಮುಖ*

ಮದ್ರಾಸ್ ಕೋರ್ಪರೇಶನಿನ ಕೌನ್ಸಿಲರ್ ಡಾ! ಯು. ಕೃಷ್ಣರಾವ್ ಎಂ. ಬಿ. ಬಿ. ಎಸ್. ಇವರು, ಹೀಗೆ ಬರೆಯುತ್ತಾರೆ:

'...ಶ್ರೀಮುಖ'ವೆಂಬ ನಿಮ್ಮ ಪುಸ್ತಕದ ಪ್ರತಿ ಕಲಿಸಿತು. ಕವಿತಾಪ್ರಾಚುರ್ಯ, ಸ್ವದೇಶವಾತ್ಸಲ್ಯ, ಸ್ವಾಮಿಭಕ್ತಿ ಮುಂತಾದ ಗುಣಗಳನ್ನೊಳಗೊಂಡ ನಿಮ್ಮ ಪದ್ಯಗಳನ್ನೋದಿ ತುಂಬಾ ಆನಂದಪಟ್ಟೆನು. ಹೀಗೆಯೇ ಇನ್ನೂ ನೀವು ದೇಶಸೇವೆ ಭಾಷಾಸೇವೆಗಳನ್ನು ಮಾಡಲು ನಿಮಗೆ ಶ್ರೀ. ಪರಮಾತ್ಮನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಆತನನ್ನು ಬೇಡುವೆನು. ನಮ್ಮ ತುಳುನಾಡಿನವರಿಂದ ಮಾಡಲ್ಪಟ್ಟ ಈ ಕನ್ನಡ ಭಾಷಾಸೇವೆಯು, ಎಲ್ಲಾ ತುಳುವರಿಂದಲೂ, ಕನ್ನಡಿಗರಿಂದಲೂ ಆದರಿಸಲ್ಪಟ್ಟು ನಿಮಗೆ ಉತ್ತೇಜನವನ್ನು ಕೊಟ್ಟೀತಾಗಿ ನಂಬಿದ್ದೇನೆ. ಮುದ್ರಣಾಲಯದವರು ಮುದ್ದಾದ ಕವಿತೆಗೆ ತಕ್ಕಂತೆ ಮುದ್ದಾಗಿಯೇ ಛಾಪಿಸಿರುವರು. ಅದೂ ಸ್ತುತ್ಯವಾಗಿರುತ್ತದೆ...'

---

*'ಶ್ರೀಮುಖ' (ಕವನ ಸಂಗ್ರಹ) ಲೇಖಕರು: ಶ್ರೀ ಕಯ್ಯಾರ ಕಿಞ್ಞಣ್ಣರೈ. ಪ್ರಕಾಶಕರು: ಪ್ರೇಮಕೂಟ, ಬದಿಯಡ್ಕ, ಪೆರಡಾಲ, ದ. ಕ. ಬೆಲೆ ರೂಪಾಯಿ ಒಂದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರಕ್ಕೆ ರಾಜಾಜಿ ಬಂದಾಗ

ಈಗ ಮದ್ರಾಸಿನಲ್ಲಿರುವ ಡಾ। ಕೇಶವ ಪೈಯವರು ರಾಜಾಜಿಯ ಜತೆಯಲ್ಲೇ ಮಂಗಳೂರಿಗೆ ಬರುವರೆಂದು ಊಹಿಸಲಾಗಿದೆ. ಸಿ. ಆರ್. ಮಂಗಳೂರಿಗೆ ಬಂದ ಮೇಲೆ ಅವರ ಕಾರ್ಯಕ್ರಮಗಳೇನೆಂಬುದರ ವಿವರವನ್ನು ಡಾ। ಕೇಶವ ಪೈ ಅವರು ಮದ್ರಾಸಿನಿಂದ ಬರೆದು ಕಳುಹಿಸಿರುವರು. ಅದು ಹೀಗಿದೆ:—

ಜನವರಿ ತಾ। ೧೮ರ ಮುಂಜಾನೆ ೯-೩೦ಕ್ಕೆ ಕಾಸರಗೋಡಿನಿಂದ ಮಂಗಳೂರಿಗೆ ಬಂದು ತಲಪುವರು. ೧೧ ಘಂಟೆಗೆ ಬೆಸೆಂಟ್ ಹುಡುಗಿಯರ ಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಪ್ರದರ್ಶನ ಮತ್ತು ಬಾಲಿಕೆಯರಿಂದ ವ್ಯಾಯಾಮ ಪ್ರದರ್ಶನ. ಕೆಲ ವಿದ್ಯಾ ಸಂಸ್ಥೆಗಳ ಮಾನ ಪತ್ರ ಸಮರ್ಪಣೆ ಇದ್ದರೆ ಅದೂ ಆಗಲೇ ಆಗುವುದು. ೧೧ರಿಂದ ಅಪರಾಹ್ನ ೧ರ ತನಕ ಭಗಿನಿ ಸಮಾಜ ಮತ್ತು ಈಶ್ವರಾನಂದ ಮಹಿಳಾ ಸೇವಾಶ್ರಮಗಳ ಸಂದರ್ಶನೆ. ಸಂಜೆ ೪ ಘಂಟೆಗೆ ಡಿ. ಸಿ. ಯಂ. ಮತ್ತು ಹರಿಜನ ಸೇವಕ ಸಂಘಗಳ ಟೀ ಸತ್ಕಾರ; ೫ ಗಂಟೆಗೆ ಬೆಸೆಂಟ್ ಶಾಲೆಯಲ್ಲಿ ರಜತೋತ್ಸವ. ರಾತ್ರೆ ೮। ಘಂಟೆಗೆ ಸಾಧಕ ಆಶ್ರಮದಲ್ಲಿ ಪ್ರಾರ್ಥನೆ.

ತಾ। ೧೯ನೇ ಮುಂಜಾನೆ ೭ ಘಂಟೆಗೆ ಬಾಲಿಕಾಶ್ರಮದಲ್ಲಿ ಪ್ರಾರ್ಥನೆ. ೯ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಶ್ರೀಮತಿ (ಮಿಸೆಸ್) ವೆಂಕಟ್ರಮಣ ಪೈ ಕಟ್ಟಡವನ್ನು ತೆರೆಯೋಣ ಮತ್ತು ಶ್ರೀಮತಿಯ ಭಾವಚಿತ್ರದ ಅನಾವರಣ. ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡ್, ಭಗಿನಿ ಸಮಾಜ, ವಿವೇಕಾನಂದ ಸೊಸೈಟಿ, ಡಿ. ಸಿ. ಯಂ. ಹಿಂದೂ ಸೇವಾ ಸಂಘ ಮುಂತಾದವರಿಂದ ಮಾನಪತ್ರ ಸಮರ್ಪಣ. ೧೧ ಘಂಟೆಗೆ ಕಂಕನಾಡಿ ಬಾಲಿಕಾಶ್ರಮದ ಸಂದರ್ಶನ. ಸಂಜೆ ೫ ಘಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಸ್ಕೌಟ್ ರ್‍ಯಾಲಿ. ೭ ಘಂಟೆಗೆ ಗವರ್ನಮೆಂಟ್ ಕಾಲೇಜ್ ದಿನಾಚರಣೆ. ೮-೩೦ಕ್ಕೆ ಬೆಸೆಂಟ್ ಹುಡುಗಿಯರ ಶಾಲೆಯಲ್ಲಿ ಊಟ ಮತ್ತು ಶಿಬಿರಾಗ್ನಿ.

ತಾ। ೨೦ರಂದು ಮುಂಜಾನೆ ಅವರು ನೀಲೇಶ್ವರಕ್ಕೆ ಹೊರಡುವರು.

ಮಂಗಳೂರಲ್ಲಿ ರಾಜಾಜಿಯವರು ಡಾ। ಕೇಶವ ಪೈ ಅವರ ಜತೆಯಲ್ಲಿ ಇರುವರು.

ದ. ಕ. ಜಿಲ್ಲಾ ಹರಿಜನ ಸೇವಕ ಸಂಘ,

ಇದೇ ತಾ। ೧೩ನೇ ಗುರುವಾರ ಸಾಯಂ. ಗಂಟೆ ೭-೩೦ಕ್ಕೆ ಮದ್ರಾಸ್ ಪ್ರಾಂತ್ಯದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮಾನ್ ಸಿ. ರಾಜಗೋಪಾಲಾಚಾರ್ಯರು ಕಾಸರಗೋಡು ತಾಲೂಕು ಎಡನಾಡು ಗ್ರಾಮದ ಶೀತಂಗೋಳಿಯಲ್ಲಿ ಸ್ಥಾಪಿತವಾಗಲಿರುವ ಹರಿಜನರ ವಸತಿಯ ಶಿಲಾ ಸ್ಥಾಪನೆಯನ್ನು ಮಾಡಲಿರುವರು.

ವಿವರ:-ಶೀತಂಗೋಳಿಯಲ್ಲಿ ಮಾನ್ಯ ಸರಕಾರದವರು ೩೧ ಎಕ್ರೆ ಚಿಲ್ಲರೆ ಸ್ಥಳವನ್ನು ಜಿಲ್ಲಾ ಸಂಘದ ಹೆಸರಲ್ಲಿ ಕೊಟ್ಟಿರುತ್ತಾರೆ. ಅಖಿಲ ಹಿಂದೂಸ್ಥಾನದ ಹರಿಜನ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎ. ವಿ. ಥಕ್ಕರ್ ಇವರು ಸ್ಥಳವನ್ನು ಸಂದರ್ಶಿಸಿ ಸಂತೋಷಪಟ್ಟು ಯೋಗ್ಯ ಸಲಹೆಗಳನ್ನು ಕೊಟ್ಟಿರುತ್ತಾರೆ. ಅಲ್ಲಿ ಪ್ರಕೃತ ಪ್ರತಿಯೊಂದು ಮನೆಗೆ ರೂ. ೧೫೦.೮ ೧೨ ಮನೆಗಳನ್ನು ಕಟ್ಟಿಸುವ ಹಾಗೂ ರೂ. ೧೫೦ ವೆಚ್ಚ ತಗಲಬಹುದಾದ ೨ ಬಾವಿಗಳನ್ನು ಸರಿ ಮಾಡುವ ಮತ್ತು ೧೮ ಎಕ್ರೆ ಸ್ಥಳದಲ್ಲಿ ಕೃಷಿ ಮಾಡುವ (ಅಂದಾಜು ವೆಚ್ಚ ರೂ. ೧೧೫೦) ಯೋಜನೆಯನ್ನು ಸಂಘವು ಕೈಕೊಂಡಿರುತ್ತದೆ. ಆ ಪೈಕಿ ೬ ಜನ ಮಹನೀಯರು ೬ ಮನೆಗಳನ್ನೂ ಒಬ್ಬರು ಬಾವಿಯ ವೆಚ್ಚವನ್ನೂ ವಹಿಸಿಕೊಂಡಿರುತ್ತಾರೆ. ಇದೇ ರೀತಿಯ ಸಹಾಯವನ್ನು ಸಂಘವು ಮಹಾಜನರಿಂದ ಅಪೇಕ್ಷಿಸುತ್ತದೆ. ಸಹಾಯ ಧನಗಳನ್ನು ಕಳುಹಿಸುವವರು ಅಧ್ಯಕ್ಷ, ಜಿಲ್ಲಾ ಹರಿಜನ ಸೇವಾ ಸಂಘ, ಮಂಗಳೂರು ಅಥವಾ ಅಧ್ಯಕ್ಷ, ತಾಲೂಕು ಹರಿಜನ ಸೇವಾ ಸಂಘ, ಕಾಸರಗೋಡು ಎಂಬ ವಿಳಾಸಗಳಲ್ಲಿ ಯಾವುದಾದರೂ ಒಂದಕ್ಕೆ ಕಳುಹಿಸಬಹುದು.

ಎನ್. ಎಸ್. ಕಿಲ್ಲೆ,
ಹರಿಜನ ಸೇವಕ.

ನಿರ್ಬಂಧಕಾಜ್ಞೆ ಬೇಡ

"ದಾಸ್ತಾನು ಹೋರಿಗೆ, ಕಳ್ಳ ಸಂತೆಯವರಿಗೆ ವಿರೋಧವಾಗಿ ಜನರನ್ನು ಸಂಘಟಿಸಲು, ಕಾರ್ಖಾನೆ ಮಾಲಕರು ಹುಟ್ಟುವಳಿ ಕಡಿಮೆ ಮಾಡುವುದರಲ್ಲಿರುವುದರಿಂದ ಮಜೂರರು ಅದನ್ನು ವಿರೋಧಿಸಿ ಪ್ರಚಾರ ಮಾಡಲು, ಆಹಾರ ಪರಿಸ್ಥಿತಿ ಕೆಡದಂತೆ ನೋಡಲು ಸಭೆ ಜರಗಿಸುವುದು ಅವಶ್ಯವಿರುವುದರಿಂದ, ಉಡುಪಿ ಮಂಗಳೂರು ನಗರ ಸಹಿತ ಕಾಸರಗೋಡು ತಾಲೂಕಿನಲ್ಲೂ ಸಭೆ ಮೆರವಣಿಗೆಗಳ ಮೇಲಿರುವ ನಿರ್ಬಂಧಕಾಜ್ಞೆ ಹಿಂತೆಗೆಯಬೇಕು" ಎಂದು ಮಂಗಳೂರು ಕಮ್ಯುನಿಸ್ಟ್ ಪಕ್ಷದವರು ಜಿಲ್ಲಾ ಕಲೆಕ್ಟರರಲ್ಲಿ ವಿನಂತಿಸಿದ್ದಾರೆಂದು ತಿಳಿದಿದೆ.

ಶಿಕ್ಷೆ

ಮಣ್ಣಗುಡ್ಡೆಯಲ್ಲಿ ಸ್ವಲ್ಪ ಸಮಯದ ಹಿಂದೆ ದಶಾವತಾರ ಆಟ ನಡೆಯುತ್ತಿದ್ದಾಗ ಜುಗಾರಾಡಿದರೆಂಬ ಆಪಾದನೆಯ ಮೊಕದ್ದಮೆ ವಿಚಾರಣೆಯು ಬೆಂಚ್ ಕೋರ್ಟಿನಲ್ಲಿ ನಡೆದು ೧೮ ಮಂದಿಗೆ ತಲಾ ಒಂದರ ೫. ರೂಪಾಯಿ ಜುಲ್ಮಾನೆ ತಪ್ಪಿದರೆ ೪ ದಿನಗಳ ಕಠಿಣ ಸಜೆ ವಿಧಿಸಲಾಯಿತು.

ವರ್ಗ

ಮಂಗಳೂರು ಮುನಿಸಿಪಲ್ ಮೆನೆಜರರಾದ ಶ್ರೀ। ಹರಿಶ್ಚಂದ್ರ ರಾಯರು ತಲ್ಲಚೇರಿಯ ಹಂಗಾಮಿ ಮುನಿಸಿಪಲ್ ಕಮಿಶನರಾಗಿ ನೇಮಕ ಹೊಂದಿದ್ದಾರೆ.

ಮಂಜೇಶ್ವರ

ದ. ಕ. ಜಿಲ್ಲಾ ಗಾಣಿಗರ ಯಾನೆ ಸಫಲ್ಯರ ಸಮಾಜ ಸುಧಾರಕ ಸಂಘ

ಇದರ ಪಂಚಮ ವಾರ್ಷಿಕೋತ್ಸವವು ಕಳೆದ ತಾ. 1-1-1944ರಂದು ಶ್ರೀ. ಕೆ. ದೇಜಪ್ಪ ಶೆಟ್ಟಿ ಸಬ್ ರಿಜಿಸ್ಟ್ರಾರ್ ಮಂಜೇಶ್ವರ ಇವರ ಅಧ್ಯಕ್ಷತೆಯಲ್ಲಿ ಜರಗಿದಲ್ಲಿ ಅಧ್ಯಕ್ಷರು ಕಾಲೋಚಿತ ರೀತಿಯಲ್ಲಿ ಕೃಷಿ, ವಿದ್ಯೆ, ಸಹಕಾರ, ಸಂಘ ಶಕ್ತಿಯೇ ಮೊದಲಾದವುಗಳ ಕುರಿತು ಭಾಷಣವಿತ್ತ ಬಳಿಕ ಸಭಾಕಾರ್ಯಕ್ಕೆ ನೆರವಾದ ಮಹನೀಯರುಗಳ ಗುಣ ಕಥನದೊಂದಿಗೆ ಸಭೆಯು ವಿಸರ್ಜನೆಯಾಯಿತು.

ಬಂಟವಾಳ

ಸಭೆ—ಇಲ್ಲಿನ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಶ್ರೀ. ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಸೇರಿ, ಸದ್ಯದ ರಾಜಕೀಯ ಆಹಾರ ಪರಿಸ್ಥಿತಿ ವಿವರಿಸಲ್ಪಟ್ಟು, 'ಘಾಟಿ ಹೊಳ್ಳರನ್ನು ಬಿಡಬೇಕು, ಜಿಲ್ಲೆಯ ಕೆಲವೆಡೆಗಳಲ್ಲಿರುವ ನಿರ್ಬಂಧಾಜ್ಞೆ ಹಿಂತೆಗೆಯಬೇಕು' ಎಂಬ ನಿರ್ಣಯಗಳಾದುವು.

ಪ್ರಕಾಶಕೂಟದ ಕಾರ್ಯಕಾರೀ ಸಭೆ ತಾ. ೯ರಂದು ಡಾ. ಕೆ. ಗಿರಿಧರರಾಯರ ಅಧ್ಯಕ್ಷತೆಯಲ್ಲಿ ಜರಗಿ, 'ಸಂಘದ ವಾರ್ಷಿಕೋತ್ಸವವನ್ನು ತಾ. ೩೦ರಂದು ಜರಗಿಸಬೇಕೆಂದೂ ಆ ದಿನ ಕೂಟದ ಪ್ರಕಟಣೆಯಾದ 'ಮರಿಯ ಮುತ್ತುಗಳು' ಪುಸ್ತಕದ ಉದ್ಘಾಟನೆ ಮಾಡಬೇಕೆಂದೂ ನಿರ್ಣಯಗಳಾದುವು.

ಉಡುಪಿ

ರೇಶನಿಂಗ್ ವಿಚಾರ—ಉಡುಪಿ ಮುನ್ಸಿಪಾಲಿಟಿ ಅಸಿಸ್ಟಾಂಟ್ ರೇಶನಿಂಗ್ ಆಫೀಸರ್ ಶ್ರೀ. ಪಿ ಎನ್. ಮೆನೊನರು ತಾ. 7ರಂದು ಮುನ್ಸಿಪಲ್ ಆಫೀಸಿನಲ್ಲಿ ಮುನ್ಸಿಪಲ್ ಶಾಲಾ ಉಪಾಧ್ಯಾಯರ ಹಾಗೂ ಬಿಲ್ ಕಲೆಕ್ಟರರ ಸಭೆ ಕೂಡಿಸಿ ಪ್ರತಿಯೊಬ್ಬರು ರೇಶನಿಂಗ್ ಕಾಲದಲ್ಲಿ ಅನುಸರಿಸಬೇಕಾದ ನಿಯಮ ಮತ್ತು ಅವರು ಆಯಾಯ ವಾರ್ಡಿನಲ್ಲಿ ಹೋಗಿ ಮಾಡಬೇಕಾದ ಮಾಹಿತಿ ವಿವರಿಸಿದರು. ಈಗಾಗಲೇ ರೇಶನಿಂಗಿಗೆ ಬೇಕಾದ ಪ್ರಾರಂಭಿಕ ಕೆಲಸ ಸುರುವಾಗಿದೆ.

ಉಡುಪಿಯ ಶ್ರೀ ಪರ್ಯಾಯ ಮಹೋತ್ಸವ

ಇದೇ ಜನವರಿ ತಾ. ೧೮ರಲ್ಲಿ ಉಡುಪಿಯ ಶ್ರೀ ಪುತ್ತಿಗೆ ಮಠದ ಶ್ರೀ ಶ್ರೀಮತ್ಸುಧೀಂದ್ರ ತೀರ್ಥ ಶ್ರೀಪಾದಂಗಳವರು ತಮ್ಮ ಸಂಸ್ಥಾನ ಶಿಷ್ಯರಾದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀವಿದ್ಯಾವಲ್ಲಭ ಶ್ರೀಪಾದಂಗಳವರ ಸಹಿತರಾಗಿ ಶ್ರೀ ಕೃಷ್ಣ ಪರ್ಯಾಯ ಪೂಜಾಮಹೋತ್ಸವ ಸಮಾರಂಭವನ್ನು ವಹಿಸುವ. ಈ ಸಂಭ್ರಮ ಕಾರ್ಯವನ್ನು ಜರುಗಿಸುವವರಾಗಿದ್ದಾರೆ.

ಅಖಿಲ ಕರ್ನಾಟಕ ಶಿಕ್ಷಕರ ಸಮ್ಮೇಳನ ಉಡುಪಿ

ಈ ಸಮ್ಮೇಳನದ ಕಾರ್ಯಕ್ರಮಗಳು ಬರುವ ೧೫-೧೬-೧೭ನೇ ಶನಿ, ಆದಿತ್ಯ ಮತ್ತು ಸೋಮವಾರಗಳಲ್ಲಿ ಉಡುಪಿ ಬೋರ್ಡು ಹೈಸ್ಕೂಲಲ್ಲಿ ಉಡುಪಿ ಶಿಕ್ಷಕರ ಸಾಹಿತ್ಯ ಸಂಘದಾಶ್ರಯದಲ್ಲಿ ಜರಗುವುವು. ಸಮ್ಮೇಳನಾಧ್ಯಕ್ಷ ಶ್ರೀ. ಜಿ. ಉಮೇಶರಾವ್, ಧ್ವಜಾರೋಹಕ ಶ್ರೀ ಲಜಪತರಾವ್, ಉದ್ಘಾಟಕರು ಶ್ರೀ ಕೋಟ ಶಿವರಾಮ ಕಾರಂತರು, ಉಪನ್ಯಾಸಕರು ಶ್ರೀಗಳಾದ ಎಸ್. ಕೆ. ಕುಲಕರ್ಣಿ, ಕ. ರಾ. ಸುಬ್ಬರಾವ್, ಸ್ವಾಗತಾಧ್ಯಕ್ಷರು ಶ್ರೀ ಎ. ರಮೇಶ ರಾವ್, ನಗರ ಸ್ವಾಗತ ಸಮಿತಿಯ ಅಧ್ಯಕ್ಷರು ಶ್ರೀ ಡಾ. ಟಿ. ಮಾಧವ ಪೈಯವರು. ಈ ಮೂರು ದಿನಗಳಲ್ಲಿ ನಾಟಕ, ಸಂಗೀತ, ನೃತ್ಯಾದಿ ವಿವಿಧ ವಿನೋದಗಳೂ ಹಲವರ ಭಾಷಣಗಳೂ ಇವೆ.

ನೀಲೇಶ್ವರ ರಾಜರ ಹೈಸ್ಕೂಲಿನ ರಜತ ಮಹೋತ್ಸವ.

ಈ ಶಾಲೆಯ ರಜತ ಮಹೋತ್ಸವವು ಇದೇ ತಾ. ೧೭ರಿಂದ ೨೦ರ ವರೆಗೆ ಜರುಗುವುದು. ತಾ. ೧೭ರಲ್ಲಿ ತಳಿಲ್ ದೇವಸ್ಥಾನದಲ್ಲಿ ದೀಪೋತ್ಸವ; ತಾ. ೧೮ರಲ್ಲಿ ಹಳೇ ಮತ್ತು ಇಂದಿನ ವಿದ್ಯಾರ್ಥಿಗಳ, ಅತಿಥಿಗಳ ಸೋಶಿಯಲ್ ಗ್ಯಾದರಿಂಗ್; ತಾ. ೧೮ರಲ್ಲಿ ಫ್ಯಾನ್ಸಿ ಡ್ರೆಸ್ ಸ್ಪರ್ಧೆ; ಆಟಪಾಟ; ತಾ. ೧೯ರಲ್ಲಿ ಶ್ರೀ. ಎಂ. ಮಧುಸೂದನನ್ ತಂಗಳರವರ ಅಧ್ಯಕ್ಷತೆಯಲ್ಲಿ ಹಳೇ ವಿದ್ಯಾರ್ಥಿಗಳ ದಿನಾಚರಣೆ; ಅಂದು ಶಾಲಾ ಶ್ರೇಯಃ ಪ್ರಾರ್ಥನೆ, ಭಾಷಣ, ಸಂಗೀತ, ನಾಟಕ, ವ್ಯಾಯಾಮ ಪ್ರದರ್ಶನಾದಿಗಳಿಗೆ; ತಾ. ೨೦ರಲ್ಲಿ ಶ್ರೀ. ಸಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಜುಬಿಲಿ ಸ್ಮಾರಕೋತ್ಸವ; ಅಂದು ಶ್ರೀ. ವಿ. ಆರ್. ರಂಗನಾಥನ್, ಡಿವಿಜನಲ್ ಶಾಲಾ ಇನಸ್ಪೆಕ್ಟರ್, ಕೊಯಮುತ್ತೂರು ಅವರು ಜುಬಿಲಿ ಮೆಮೋರಿಯಲ್ ಹಾಲಿನ ಶಂಕುಸ್ಥಾಪನೆ ಮಾಡುವರು; ರಾವ್ ಸಾಹೇಬ್ ಎಂ. ಕೆ. ನಂಬಿಯಾರರಿಂದ ಸ್ಮಾರಕ ಭಾಷಣವಾಗುವುದಲ್ಲದೆ, ಇತರ ಮನೋಹರ ಕಾರ್ಯಕ್ರಮಗಳೂ ವಿನೋದಾವಳಿಗಳೂ ಇವೆ.

ಜಿಲ್ಲೆಯ ಆಹಾರ ವಿಚಾರ

ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿಮರ್ಶಿಸಲು ಮದ್ರಾಸ್ ಸರಕಾರದ ಎಡ್ವೈಸರ್ ಶ್ರೀ. ರಾಮಮೂರ್ತಿಯವರು ಮಂಗಳೂರಿಗೆ ಹಾಗೂ ಜಿಲ್ಲೆಯ ಇತರ ಕೆಲವು ಕಡೆಗಳಿಗೆ ಸಂದರ್ಶಿಸಿ ಹಿಂತೆರಳಿದ ಕೂಡಲೆ, ಬೆಜವಾಡದಿಂದ ೩೦,೦೦೦ ಗೋಣಿ ಅಕ್ಕಿ ಮಂಗಳೂರಿಗೆ ಬಂದಿತು; (ಒಂದು ಗೋಣಿ ಅಕ್ಕಿಯೆಂದರೆ ೫॥ ಕಳಸಿಗೆಯಾಗುತ್ತದೆ) ಸೆಂಟ್ರಲ್ ಹೋಲ್‌ಸೇಲ್ ಸ್ಟೋರಿನವರು ಈ ಅಕ್ಕಿಯನ್ನು ಸ್ವಾಧೀನ ಮಾಡಿಕೊಳ್ಳುವಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಅಕ್ಕಿಗೆ ಅತ್ಯಧಿಕ ಕ್ರಯ ನಿರ್ಣಯವಾಯಿತು. (ಈ ಅತ್ಯಧಿಕ ಕ್ರಯವು ಹಿಂದೆ ಪ್ರಕಟಿಸಲ್ಪಟ್ಟಿದೆ.) ಇದು ಸದ್ಯಕ್ಕೆ ಮಂಗಳೂರು ಮುನ್ಸಿಪಾಲಿಟಿಗೆ ಮಾತ್ರ ಅನ್ವಯಿಸುತ್ತದೆ. ಮುಂದಕ್ಕೆ ಇದನ್ನು ಇಡೀ ಜಿಲ್ಲೆಗೆ ಅನ್ವಯಿಸುವ ವಿಚಾರ ನಡೆದಿದೆ.

ಈ ಅತ್ಯಧಿಕ ಕ್ರಯ ನಿರ್ಣಯವಾದ ಒಂದೆರಡು ದಿವಸಗಳಲ್ಲಿ ಮಂಗಳೂರಲ್ಲಿ ವ್ಯಾಪಾರಿಗಳು ಅಕ್ಕಿ ಮಾರುವುದನ್ನು ನಿಲ್ಲಿಸಿದರು. 'ಇದ್ದ ಅಕ್ಕಿ ಮಾರಿಹೋಯಿತೆಂದೂ, ಮತ್ತೆ ಅಕ್ಕಿ ಬರುವುದಿಲ್ಲವೆಂದೂ' ಅವರ ಹೇಳಿಕೆಯಿತ್ತು. ಹೇಗೂ ಜನರು ಕಂಗಾಲಾಗುವಂತಾದರು. ಈ ಸಂದರ್ಭದಲ್ಲಿ, ಕಳೆದವರ್ಷ ಮಹಾಜನ ಆಹಾರ ಸಮಿತಿಯ ಕಾರ್ಯಕ್ರಮಕ್ಕೆಂದು ತೆಗೆದ ಮಾಹಿತಿ ಪತ್ರದಂತೆ ಮನೆಗಳಿಗೆ, ದಿನವೊಂದಕ್ಕೆ ಜನವೊಂದರ ೧।। ಪಾವಿನ ಲೆಕ್ಕ ಹಿಡಿದು ಅಕ್ಕಿ ಕೊಡುವರೆ ಕಾರ್ಡುಗಳನ್ನು ಕೊಡಲಾಯಿತು. ಈ ಕಾರ್ಡುಗಳ ಪ್ರಕಾರ ಅಕ್ಕಿ ಮಾರಾಟ ಮಾಡಲು ಮಂಗಳೂರು ಪೇಟೆಯಲ್ಲಿ ಈಗಾಗಲೇ ೪೫ ಡಿಪೋಗಳನ್ನು ತೆರೆಯಲಾಗಿದೆ. ಇವುಗಳಲ್ಲಿ ೨೯ ಡಿಪೋಗಳನ್ನು ಮಂಗಳೂರು ಸಹಕಾರೀ ಸ್ಟೋರಿನವರೂ, ಉಳಿದವುಗಳನ್ನು ಲೈಸೆನ್ಸ್ ಪಡೆದ ಅಲ್ಲಲ್ಲಿಯ ಚಿಲ್ಲರೆ ವ್ಯಾಪಾರವಿರುವ ಅಂಗಡಿಕಾರರೂ ನಡೆಸುತ್ತಾರೆ. ಈಗ ಹೆಚ್ಚಿನವರಿಗೆ ಕಾರ್ಡುಗಳು ಸಿಕ್ಕಿವೆ. ಗೋಣಿ ಅಕ್ಕಿಯಾಗಿ ಊಟಮಾಡಲು ಕಷ್ಟವಾದರೂ ಬದುಕಲು ಬರುವಂತಾಗಿದೆ.

ಮೇಲೆ ಹೇಳಿದ ಅಕ್ಕಿಮಾರಾಟ ಕ್ರಯ ನಿರ್ಣಯವಾದ ಕೂಡಲೇ ಅಕ್ಕಿಯ ಚಲನವಲನಗಳನ್ನು ಹತೋಟಿಯಲ್ಲಿಡಲು ಜಿಲ್ಲಾಧಿಕಾರಿಗಳು ಎರಡು ಆಜ್ಞೆ ಹೊರಡಿಸಿದರು. ಒಂದು ತಾಲೂಕಿಂದ ಇನ್ನೊಂದು ತಾಲೂಕಿಗೆ ಒಂದು ಸ್ಟೇಶನಿಂದ ಇನ್ನೊಂದು ಸ್ಟೇಶನಿಗೆ ಅಕ್ಕಿ ಭತ್ತ ಕೊಂಡೊಯ್ಯಬೇಕಾದರೆ ಪರ್ಮಿಟು ಬೇಕೆಂದೂ, ಇಲ್ಲದಿದ್ದರೆ ಅದು ನಿಷಿದ್ಧವಾಗುವುದೆಂದೂ ಆಜ್ಞೆ ತಿಳಿಸುತ್ತದೆ. ಆ ಮೇಲೆ ಮಂಗಳೂರು ಮುನ್ಸಿಪಾಲಿಟಿಯೊಳಗೆ ೧೦ ಮುಡಿ (ಕೈಲ್ಲೆ ಮುಡಿ ೧-೮೦ ರಾತ್ತ)ವ ಅದಕ್ಕೆ ಮಿಕ್ಕಿದ ಅಕ್ಕಿ ಭತ್ತ ಸ್ವಾಧೀನವಿರುವವರು ತಮ್ಮ ಹತ್ತಿರ ಎಷ್ಟು ದಾಸ್ತಾನಿದೆಯೆಂದು ತಾ. ೩೧-೧೨-೪೩ರ ಒಳಗೆ ತಿಳಿಸಬೇಕೆಂದೂ ಕಲೆಕ್ಟರರು ಆಜ್ಞೆಯಿತ್ತರು.

ಜಿಲ್ಲಾ ಕಲೆಕ್ಟರರು ಜಿಲ್ಲಾ ಆಹಾರ ಸಮಿತಿಯೊಂದನ್ನು ನೇಮಿಸಿ, ಆಹಾರ ವಿಷಯಕ ಸಮಸ್ಯೆಗಳಲ್ಲಿ ಈ ಸಮಿತಿಯ ಸಲಹೆಯನ್ನು ಕಲೆಕ್ಟರರು ಕೇಳುವ ಉದ್ದೇಶದಿಂದ ಕಳೆದ ತಾ. ೬ರಲ್ಲಿ ಇದರ ಸಭೆಯೊಂದು ಸೇರಿತು. ಆಹಾರ ಸಮಿತಿಯು ಈ ಸಭೆಯಲ್ಲಿ ರಿಕ್ವಿಸಿಶನ್ ಮಾಡುವ ಅಕ್ಕಿ ಪೇಟೆ ಸಾಲುಗಳಲ್ಲಿ ವಾಸಿಸುವ ಕೃಷಿಕರಲ್ಲದ ಜನರಿಗೆಂದು ವ್ಯಕ್ತಗೊಳಿಸಲ್ಪಟ್ಟು ಆ ಅಕ್ಕಿಯನ್ನು ಯಾವ ರೀತಿ ವಿನಿಯೋಗಿಸಬೇಕೆಂಬ ಯೋಜನೆಯು ಮಂಜೂರಾಯಿತು. ಈ ಯೋಜನೆಗೆ ಈಗ ರಿಕ್ವಿಸಿಶನ್ ಮಾಡಿದ ಅಕ್ಕಿ ಸಾಕಾಗುವುದಿಲ್ಲವೆಂಬುದರಿಂದ ೫ ಎಕ್ರೆ ವ ಹೆಚ್ಚಿನ ನಂಜ ಭೂಮಿ ಸಾಗುವಳಿ ಮಾಡುವವರಿಂದಲೂ ರಿಕ್ವಿಸಿಶನ್ ಮಾಡಬೇಕೆಂದಾಯಿತು. ಹೀಗೆ ರಿಕ್ವಿಸಿಶನ್ ಮಾಡುವಾಗ ರೈತರ ಆವಶ್ಯಕತೆ ಕಡೆಗೆ ವಿಶೇಷ ಗಮನ ಕೊಡಬೇಕೆಂದು ಸೂಚನೆಯಿದೆ.

ವರ್ಗದಾರ ಸಂಘದವರು ಡಿಸೆಂಬರ ೧೫ರೊಳಗೆ ೧೦ ಸಾವಿರ ಮುಡಿ ಅಕ್ಕಿ ಕೊಡುವೆವೆಂದು ಭರವಸೆ ಕೊಟ್ಟಿದ್ದರೂ ೧೨ ಸಾವಿರ ಮುಡಿ ಅಕ್ಕಿ ಸಂಗ್ರಹಿಸಿಕೊಟ್ಟರು. ಜನವರಿ ೧೦ರೊಳಗೆ ರಿಕ್ವಿಸಿಶನ್ ಮಾಡಿದ ಅಕ್ಕಿಯ ⅓ನೇ ಅಂಶ ಕೊಡಬೇಕೆಂದು ಈ ಮೊದಲೇ ವರ್ಗದಾರರಿಗೆ ತಿಳಿಸಿದಂತೆ ⅓ ಅಂಶ ತಾವಾಗಿ ಕೊಡದಿದ್ದಲ್ಲಿ ಅಕ್ಕಿಯನ್ನು ಕಾನೂನು ಪ್ರಕಾರ ಸ್ವಾಧೀನಪಡಿಸಿಕೊಳ್ಳಬೇಕೆಂದಾಯಿತು. ಏಕೆಂದರೆ ವ್ಯಾದೆ ಹಾಕಿದ ಅವಧಿಗೆ ಅಕ್ಕಿ ದೊರಕದಲ್ಲಿ ಅಕ್ಕಿ ಹಂಚಲು ತೊಂದರೆಯಾದೀತು.

ಈಗ ಮಾಡಿರಬಹುದಾದ ರಿಕ್ವಿಸಿಶನ್ ರೀತಿಯಲ್ಲಿ ಹೆಚ್ಚು ಕಡಿಮೆಯಿರಬಹುದು. ಅವುಗಳ ಕುರಿತು ಆಕ್ಷೇಪಣ ಅರ್ಜಿಗಳು ವಿಚಾರಿಸಲ್ಪಡುವವು. ಇಂಥ ಅರ್ಜಿಗಳನ್ನು ವಿಚಾರಿಸುವಾಗ ತಹಶಿಲ್ದಾರರು ಸ್ಥಳೀಕ ಮಹನೀಯರಲ್ಲಿ ಕೆಲವರಿಂದ ಕೂಡಿದ ಕಮಿಟಿಯೊಂದನ್ನು ನೇಮಿಸಿ ಅವರ ಸಲಹೆ ತೆಗೆದುಕೊಳ್ಳುವರು. ಸೆಂಟ್ರಲ್ ಸಹಕಾರೀ ಹೋಲ್‌ಸೇಲ್ ಸಂಘದವರು ಅಕ್ಕಿ ಪಡಕೊಳ್ಳುವ ಬಗ್ಗೆ ಆವಶ್ಯವುಳ್ಳ ಏರ್ಪಾಡುಗಳನ್ನು ಭರದಿಂದ ನಡೆಸುತ್ತಾರೆ. ಜಿಲ್ಲೆಯ ಬೇರೆ ಬೇರೆ ಕೇಂದ್ರಗಳಲ್ಲಿ ಈಗುಗಳೇ ೬೦ ಡಿಪೋ ತೆರೆದಿರುವರು.

ಉಡುಪಿ ಮುನ್ಸಿಪಾಲಿಟಿಯಲ್ಲಿಯೂ ರೇಶನಿಂಗ್ ಜಾರಿಗೆ ಬರಲಿದೆ. ಹೀಗೆ ಉಡುಪಿ, ಮಂಗಳೂರು, ಕಾಸರಗೋಡುಗಳಲ್ಲಿ ರೇಶನಿಂಗ್ ವ್ಯವಸ್ಥೆಯಾಗುವುದು. ಜಿಲ್ಲಾ ರೇಶನಿಂಗ್ ಆಫೀಸರರಾಗಿ ಶ್ರೀ. ಕಲ್ಯಾಣಪುರ ಕೃಷ್ಣಯ್ಯನವರ ನೇಮಕವಾಗಿದೆ.

ಇಡೀ ಜಿಲ್ಲೆಯಲ್ಲಿ ರಿಕ್ವಿಸಿಶನ್ ಮಾಡಿರುವ ಅಕ್ಕಿ ೫೩,೬೦೦೦ ಮುಡಿ. ಉಡುಪಿ, ಮಂಗಳೂರು, ಕಾಸರಗೋಡು ಈ ಮೂರು ಪಟ್ಟಣಗಳಲ್ಲದೆ ಇನ್ನೂ ೬೪ ಪೇಟೆ ಸಾಲುಗಳಲ್ಲಿ ಕೃಷಿಕರಲ್ಲದ ಜನರಿಗೆ ದಿನವೊಂದರ ೧।। ಪಾವು ಅಕ್ಕಿ ಹಂಚಬೇಕಾದರೆ ೬,೫೦,೦೦೦ ಮುಡಿ ಅಕ್ಕಿ ಬೇಕಾಗುವುದು, ಎಂದರೆ ಈಗ ರಿಕ್ವಿಸಿಶನ ಮಾಡಿರುವುದಕ್ಕಿಂತಲೂ ಹೆಚ್ಚು ಬೇಕು. ಇದಕ್ಕಾಗಿ ೫ ಎಕ್ರೆ ಅಥವಾ ಹೆಚ್ಚಿನ ನಂಜ ಸಾಗುವಳಿ ಮಾಡುವವರಿಂದಲೂ ರಿಕ್ವಿಸಿಶನ್ ಮಾಡುವ ಯೋಚನೆಯಾಗಿದೆ. ಹೀಗೆ ಮಾಡುವಾಗ ಗ್ರಾಮಗಳಲ್ಲಿ ಅಕ್ಕಿ ಕಡಿಮೆ ಬೀಳದಂತೆ ಬೇಕಾದ ಜಾಗ್ರತೆ ವಹಿಸಲೇಬೇಕಾಗುತ್ತದೆ.

ಸಿನಿಮಾ ಸುದ್ದಿ

ಶ್ಯಾಮ ಬೇಗಂ

ಹೈದರಾಬಾದಿಗೆ ಸೇರಿದ ಹೊಸ ನಟಿ ... ಇವಳ ನಿಜವಾದ ಹೆಸರು ಮಿಸ್ ... ಪ್ರಸಿದ್ಧ ... ಗುತ್ತಳ ಗಂಡನ ತಂಗಿಯಾಕೆ. ಇನ್ನೂ ಎಳೆ ಪ್ರಾಯದ ಹುಡುಗಿಯವಳು.

ಮೊಹ್ತಾಬ್ ಮೋತಿ

ಇವರು ಪೃಥ್ವೀವಲ್ಲಭ ತಯಾರಿಸಿದ ಬಳಿಕ 'ಸಿದ್ದಾಗಿ' ಚಿತ್ರ ತಯಾರಿಸುವರೆಂದು ಪಟ್ಟಿ ಸುದ್ದಿ ಹರಡಿತ್ತು. ಆದರೆ ಇನ್ನೂ ಅದರ ನಿರ್ಧಾರ ತೀರಿಲ್ಲ. 'ಶಹಾರನ್ ಸೌದಾಗರ್' ಚಿತ್ರವೀಗ ತಯಾರಿಕೆಯಲ್ಲಿದೆಯೆಂದು ತಿಳಿಯುತ್ತದೆ.

ನಾಸೀಮ್‌ಗೆ ಮದುವೆ

ಆಗಿದೆ. ತಾಜ್‌ಮಹಾಲ್ ಫಿಲ್ಮ್ ಕಂಪೆನಿಯ ಮಹಮ್ಮದ್ ಎಹಸಾನ್ ಆಕೆಯ ಗಂಡ. ಮದುವೆಯಾಗಿ ಎರಡು ವರ್ಷವಾಯಿತು. ಈಗಾಗಲೇ ಒಂದು ಹೆಣ್ಣು ಮಗು ಹುಟ್ಟಿರುವುದು.

ಕುಸುಮ್ ವಿವಾಹ

ಕುಸುಮ್ ದೇಶಪಾಂಡೆ, ಆಕೆಯ ಹೆಸರು ನೀವು ಕೇಳಿದ್ದೀರಿ. ನವಯುಗ ಕಂಪೆನಿಯಲ್ಲಿ ಹೆಚ್ಚಾಗಿ ಆಕೆ ಅಭಿನಯಿಸಿದ್ದಾಳೆ. ಸುಂದರ ಮುಖದ ಹುಡುಗಿ ಆಕೆ. ಪ್ರಭಾತ್ ಕಂಪೆನಿಯ 'ಹತ್ತುಗಂಟೆ' ಚಿತ್ರದಲ್ಲಿ ಅಭಿನಯಿಸಿದ ಸುಂದರ ಯುವಕ ವಸಂತ್ ಠಂಗಡಿಯೊಡನೆ ಅವಳ ಪ್ರಣಯ ವಿಚಾರವಿಂದು ಕೇಳಿಬರುತ್ತದೆ.

ಲೀಲಾ ಚಿಟ್ನಿಸ್ ಕತೆ

ಲೀಲಾ ಚಿಟ್ನಿಸ್ ಈಗಾಗಲೇ ಎರಡು ಗಂಡಂದಿರನ್ನು ಕಂಡಿದ್ದಾಳೆ. ಈಕೆಯು ಇತ್ತೀಚಿಯ ಗಂಡ ಗೌಲಾನಿ. ಲೀಲಾ ಗೌಲಾನಿಯನ್ನೂ ಬಿಟ್ಟು ಬೇರೆಯಾಗುವ ಸುದ್ದಿ ಕೇಳಿಬಂದಿದೆ. ವಿವಾಹ ವಿಚ್ಛೇದವಿನ್ನೂ ನಡೆದಿಲ್ಲವಾದರೂ ಅವರ ಪ್ರತ್ಯೇಕ ಜೀವನ ಪ್ರಾರಂಭವಾಗಿದೆಯೆಂದು ತಿಳಿದುಬರುತ್ತದೆ.

ಕಾಂಚನ್ ಮಾಲ್ ವಿವಾಹ

ಕಾಂಚನ್ ಮಾಲಾ ಎಂದ ಕೂಡಲೇ ದಕ್ಷಿಣ ಭಾರತದ ಪ್ರಸಿದ್ಧ ನಟಿಯೆಂದು ಭ್ರಮೆಗೊಳ್ಳಬೇಡಿ. ಈಕೆ ಬೊಂಬಯಿಯವಳು. ರಂಗಭೂಮಿಗೆ ಬಂದು ನಟಿಸಿದವಳಲ್ಲ. ಹಿಂದೆ ನಿಂತು ಹಾಡಿದಾಕೆ. ಸವಿಯಾದ ಕಂಠ ಇವಳದು. ಅನೇಕ ನಟಿಯರ ಕೊರಳಿಗೆ ಈಕೆ ಇಂಪು ಕೊಟ್ಟಿದ್ದಾಳೆ. ಆಚಾರ್ಯ ಆರ್ಟ್ ಪ್ರೊಡಕ್ಷನಿನ ಸಹ ನಿರ್ದೇಶಕ ಬಕುಲ್ ಬೇಡಿ ಅವಳನ್ನು ಮೊನ್ನೆ ತಾನೆ ಮದುವೆಯಾದ.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗೂಡ್ಸ್ ಬಂಡಿ	ಬೆಳಗ್ಗೆ ೬-೩೫.	ರಾತ್ರಿ ೭-೩೦.
ಪಟೆಲ್ ಕನ್ನಾನ್ನೂರು ಪರಿಯಂತ ಮಾತ್ರ.	ಸಾಯಂ. ೫-೫೫	ಬೆಳಗ್ಗೆ ೯-೩೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

ಎಲ್ಲವೂ ಬಹುಕಾಲ ತಾಳಿಕೆ ಬರುವಂತೆ ಮಾಡಿ ಮತ್ತು

ಮುಂಬರುವ ದಿನಗಳಿಗೋಸ್ಕರ

ಕೂಡಿಡಿ

ಯುದ್ಧಸಮಯದಲ್ಲಿ ಕೊಂಡ ಪದಾರ್ಥಗಳು ನಿಮ್ಮ ಹಣಕ್ಕೆ ಸರಿಯಾದ ಮೌಲ್ಯವನ್ನು ಕೊಡುವುದಿಲ್ಲ. ನಿಮ್ಮಲ್ಲಿರುವ ಬಟ್ಟೆ ಮತ್ತು ಪ್ರತಿಯೊಂದು ಪದಾರ್ಥವೂ ಬಹುಕಾಲ ತಾಳಿಕೆ ಬರುವಂತೆ ಮಾಡಿಕೊಳ್ಳಿ, ಏಕೆಂದರೆ ನೀವು ಇಂದು ಕೊಳ್ಳುವ ಪ್ರತಿಯೊಂದು ಹೊಸ ಪದಾರ್ಥದ ಬೆಲೆಯೂ ಅದರ ಯೋಗ್ಯತೆಗೆ ಮೀರಿ ಅಧಿಕವಾಗಿದೆ. ಮೋಜಿನ ತಂಟೆಗೇ ಹೋಗಬೇಡಿ. ಅತ್ಯಾವಶ್ಯಕವಾದುವುಗಳಿಗೆಮಾತ್ರವೇ ವೆಚ್ಚಮಾಡಿ, ಮತ್ತು ಮೊದಲಿನ ಧಾರಣೆಗಳು ಬರುವವರೆಗೂ ನೀವು ಕೂಡಿಡಬಹುದಾದ ಪ್ರತಿಯೊಂದು ಆಸೆಯನ್ನು ಶೇಖರಿಸಿ.

ಸುರಕ್ಷಿತವಾಗಿ ಕೂಡಿಡಿ

ನೀವು ಕೂಡಿಡುವ ಹಣದ ರಕ್ಷಣೆ ಬಗ್ಗೆ ಖಾತ್ರಿ ಮಾಡಿಕೊಳ್ಳಿ. ನಿಮ್ಮ ಹಣವನ್ನು, ಭಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಅಥವಾ ಸಾಮಾನುಗಳನ್ನಾಗಿ ಮಾರ್ಪಡಿಸಿದರೆ, ಮೊದಲಿನ ಧಾರಣೆಗಳು ಬಂದಾಗ ಶೇಖರಿಸಿದ ನಿಮ್ಮ ಹಣದ ವಿಷ್ಪೋ ಮೌಲ್ಯವು ಮಾಯವಾಗುತ್ತದೆ. ಬುದ್ಧಿವಂತರಾಗಿ ನಿಮ್ಮ ಹಣವನ್ನು ಸಹಕಾರಿ ಸಂಸ್ಥೆ, ಇನ್ಶೂರೆನ್ಸು, ಬ್ಯಾಂಕ್ ಅಥವಾ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ವಿನಿಯೋಗಿಸಿ.

ದಿನವೂ ನಾಲ್ಕು ಆಣೆ ಕೂಡಿಡಿ!

ನಿಮ್ಮ ಬಾಲ್ಯಾವಸ್ಥೆಯ ಹಣವ ಪೆಟ್ಟಿಗೆ ಅಭ್ಯಾಸವನ್ನು ಪುನಹ ಜಾರಿಗೆ ತನ್ನಿ! ದಿನವೂ ಅದರಲ್ಲಿ ನಾಲ್ಕು ಆಣೆ ಅಥವಾ ಸಾಧ್ಯವಾದರೆ ಹೆಚ್ಚು ಹಾಕುತ್ತಾ ಬನ್ನಿ. ಆಮೇಲೆ ಕೂಡಿದ ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ-ಈ ಕೆಳಗಣಂತ ವಿನಿಯೋಗಗಳಲ್ಲಿ ಕ್ರಮವಾಗಿ ಮಾರ್ಪಡಿಸುತ್ತಾ ಬನ್ನಿ.

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

CPU—298-KN.

1943-1944

Not because it is a time honoured custom but because we would feel ungrateful, if we did not express our appreciation to those whose loyalty, friendship and patronage make our success possible.

To our thousands of customer friends, the Directors and Staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desires.

ESTD. 1906.

CANARA BANK LTD.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಯಿ, ಕಲ್ಕತ್ತ.

ಮೌಲಾನಾ ಸಪ್ರು - ಪಂಡಿತ ಜಿನ್ನ!

ಒಮ್ಮೆ ಸರ್ ತೇಜ್ ಬಹದ್ದೂರ್ ಸಪ್ರುಗಳು ಮತ್ತು ಮಹಮ್ಮದಾಲಿ ಜಿನ್ನರು ಹೈದರಾಬಾದ್ ಕೋರ್ಟಿನಲ್ಲಿ ಕಕ್ಷಿ ಪ್ರತಿ ಕಕ್ಷಿ ಕಡೆಯ ವಕೀಲರಾಗಿ ವಾದಿಸಿದರು. ಸರ್ ಸಪ್ರುಗಳು ಉರ್ದು, ಪರ್ಶಿಯನ್, ಅರೇಬಿಕ್ ಭಾಷೆಗಳಲ್ಲಿ ನಿಷ್ಣಾತರೆಂದು ಜನಕ್ಕೆ ಗೊತ್ತಿದ್ದರೆ. ಆ ವ್ಯಾಜ್ಯದ ಮಧ್ಯದಲ್ಲಿ ಕುರಾನಿನ ವ್ಯಾಖ್ಯಾನವೊಂದನ್ನು ಮಾಡುವ ಸಂದರ್ಭ ಬಂಧಿತು. ತನ್ನ ವಾದವನ್ನು ಸಮರ್ಥಿಸುತ್ತಾ ಸಪ್ರುಗಳು ಕುರಾನಿನ ಪಂಕ್ತಿಯನ್ನು ಮೂಲ ಅರೇಬಿಕ್ ಭಾಷೆಯಿಂದಲೇ ಓದಿ ಅದನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿ ವಿವರಿಸಿದರು. ಆ ಮೇಲೆ ಜಿನ್ನರು ವಾದಿಸ ತೊಡಗಿದರು. ಅವರೂ ಆ ಕುರಾನಿನ ಪಂಕ್ತಿಯನ್ನು ಹೇಳಿ ಅದರ ವಿವರಣೆ ಮಾಡಬೇಕಾಗಿತ್ತು. ಅದು ಅವರಿಂದ ಆಗುವುದಿಲ್ಲವೆಂದು ತೋರಿತು. ಮೂಲ ಅರೇಬಿಕ್ ಪಂಕ್ತಿಯನ್ನು ಜಿನ್ನರಿಗೆ ಹೇಳಲು ತಿಳಿಯದೆ, ಕೇವಲ ಅದರ ಭಾಷಾಂತರವನ್ನು ಮಾತ್ರ ವಿವರಿಸಿ ಹೇಳಿದರು. ಈ ವ್ಯಾಜ್ಯದ ವಿವರವನ್ನು ಪ್ರಕಟಿಸುತ್ತಾ ಹೈದರಾಬಾದ್ ಪತ್ರಿಕೆಗಳು ಮರುದಿನ 'ಮೌಲಾನಾ ತೇಜ್ ಬಹದ್ದೂರ್ ಸಪ್ರು, ಪಂಡಿತ ಮಹಮ್ಮದಾಲಿ ಜಿನ್ನಾ' ಎಂಬ ತಲೆ ಕಟ್ಟಿನಿಂದ ಸುದ್ದಿ ಹೊರಡಿಸಿದವು! ಇಸ್ಲಾಮಿಗಾಗಿ, ಇಸ್ಲಾಮಿಗೆ ಪಾಕಿಸ್ತಾನಕ್ಕಾಗಿ ಹೋರಾಡುವೆನೆನ್ನುವ ಜಿನ್ನಾರಿಗೆ ಕುರಾನ್ ಹೇಳಲು ಬರುವುದಿಲ್ಲ!

ಜಿನ್ನಾರಿಗೆ ಇಂಥದೇ ಉಭಯ ಸಂಕಟ ಹಲವು ಸಲ ಒದಗಿದೆ. ಎರಡು ವರ್ಷಗಳ ಹಿಂದೆ ಜಿನ್ನರು ಸಿಂಧವನ್ನೊಮ್ಮೆ ಸಂದರ್ಶಿಸಿದ್ದರು. ಅಲ್ಲಿನ ಸಭೆಯೊಂದರಲ್ಲಿ ಭಾಷಣ ಮಾಡಿದರು ಆದರೆ ಮುಸ್ಲಿಂ ಪರವಾಗಿ ಮಾತನಾಡುವ ಅವರು ಮುಸ್ಲಿಂ ವೇಷಭೂಷಣವೊಂದನ್ನೂ ಧರಿಸಿಲ್ಲವಾಗಿ ಸಭಿಕರು ಆಕ್ಷೇಪವೆತ್ತಿದರು ಮುಸ್ಲಿಮರ ಪೈಜಾಮ್, ಗಡ್ಡ ಬೆಳೆಸುವುದು ಮೊದಲಾದದ್ದು ಯಾವುದೂ ಇಲ್ಲ. ಹೇಟ್ ಸೂಟ್ ಧರಿಸಿ ಯೂರೋಪಿಯನರಾಗಿ ಅವರು ಮುಸ್ಲಿಂ ಮುಖಂಡರಾಗಲಾರರೆಂದು ಸಭಿಕರಲ್ಲಿ ಹಲವರು ವಾದಿಸಿದರು ದಿನವೊಂದಕ್ಕೆ ಒಮ್ಮೆ ಮೂಲ ಅರೇಬಿಕ್ ಭಾಷೆಯಲ್ಲಿ ಕುರಾನ್ ಹೇಳುವುದು, ದಿನಕ್ಕೆ ಐದು ಸಲ 'ನಿಮಾಜ್' ಮಾಡುವುದು ಈ ಸಂಪ್ರದಾಯ ಯಾವುದೂ ಜಿನ್ನರಿಗಿಲ್ಲ

ಜಿನ್ನಾರದು ಇನ್ನೊಂದು ಸ್ವಾರಸ್ಯದ ಕತೆಯಿದೆ ಎರಡನೇ ಉರುಟು ಮೇಜಿನ ಪರಿಷತ್ತಿಗೆ ಮುಖಂಡರು ಹೊರಟಿದ್ದರು. ಕೈರೋ ನೋಡಬೇಕೆಂದು ಸಪ್ರು, ಜಿನ್ನ, ಶಫತ್ ಅಹಮ್ಮದ್ ಖಾನ್, ಮುಂಜೆ ಮೊದಲಾದವರು ಸುವೇಜಿನಲ್ಲಿಳಿದರು. ಒಂಟೆಯ ಮೇಲೇರಿ ಸವಾರಿ ಮಾಡಿದರು. ಅಲ್ಲಿನ ಆ ರಾಬ್ ಮುಖಂಡನು, ಸಪ್ರುಗಳನ್ನು ತಾವು ಮುಸಲ್ಮಾನರೇ ಎಂದು ಕೇಳಿದ, ಅವರು 'ಇನ್ಶಾ ಅಲ್ಲಾ' ಎಂದು ಹೇಳುತ್ತಾ ಅರೇಬಿಕ್ ಭಾಷೆಯಲ್ಲಿಯೇ ಮಾತನಾಡಿದರು. ಆ ಮೇಲೆ ಸಪ್ರುಗಳು ಜಿನ್ನಾ, ಶಫತ್ ಅಹಮ್ಮದರನ್ನು ಮುಸಲ್ಮಾನರೆಂದೂ, ಮುಂಜೆಯವರನ್ನು ಹಿಂದುವೆಂದೂ ಪರಿಚಯಮಾಡಿ ಕೊಟ್ಟರು. ಆದರೆ ಜಿನ್ನಾರಾಗಲಿ, ಶಫತರಾಗಲಿ ಅರೇಬಿಕ್‌ನಲ್ಲಿ ಮಾತನಾಡಲು ಅಸಮರ್ಥರಾಗಿ ಕಂಗಾಲಾದರು. ಅವರಿಬ್ಬರನ್ನು ಆ ಅರಾಬ್ ಮುಖಂಡನು ಒಂದು ತರದ ತಿರಸ್ಕಾರ ದೃಷ್ಟಿಯಿಂದ ನೋಡಿದನು. ಸಪ್ರುಗಳೊಬ್ಬರು ಮಾತ್ರ ಆ ಅರಾಬ್ ಮುಖಂಡನೊಡನೆ ಅರೇಬಿಕ್ ಭಾಷೆಯಲ್ಲಿ ಸಂಭಾಷಣೆ ನಡೆಸುತ್ತಾ ಇದ್ದರು, ಕೊನೆಗೆ ಆ ಮುಖಂಡನು ಸಪ್ರುಗಳನ್ನುದ್ದೇಶಿಸಿ, 'ತಾವು ಒಬ್ಬರು ಮಾತ್ರ ಈ ಪಂಗಡದಲ್ಲಿ ಒಬ್ಬ ಒಳ್ಳೆಯ ಮುಸಲ್ಮಾನರು' ಎಂದು ಹೇಳಿದನು. ಇಂದು ೩೪ ವರ್ಷ ಪ್ರಾಯ ಮೀರಿದೀ ಸಮಯದಲ್ಲಾದರೂ ಜಿನ್ನರಿಗೆ ಈತರದ ಅಪಮಾನದ ನೆನಪು ಆಗಲಾರದೆ? ಸುಳ್ಳು ಕಳಹದಿಯ ಮೇಲೆ ಜಿನ್ನಾರು ಮುಸ್ಲಿಮರಿಗಾಗಿ ಪಾಕಿಸ್ತಾನದ ಮಂಟಪ ಕಟ್ಟುತ್ತಿದ್ದಾರಲ್ಲವೆ?

ಎದೆಗೆ ನೋವನ್ನುಂಟುಮಾಡುವ ಬ್ರೊಂಕೈಟಿಸ್ ಗುಣಪಡಿಸಿರಿ.

ಬ್ರೊಂಕೈಟ್ಸ್ ನಿಮ್ಮ ಎದೆಯಲ್ಲಿ ನೋವನ್ನುಂಟುಮಾಡಿ ತೊಂದರೆ ಕೊಡುತ್ತದೆಯೆ? ನೀವು ಆಗಾಗ ಶ್ವಾಸಕ್ಕಾಗಿ ತೊಂದರೆ ಪಡುತ್ತೀರೆ? ನಿಮ್ಮ ತಲೆ ಸಿಡಿವ ಹಾಗೆ ಆಗಾಗ ಕಫ ಬರುತ್ತದೆಯೇ? ಹಾಗಾದರೆ ವಿಷಹಾರಿ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ ಬಾಯಿಗೆ ಹಾಕಿದ ಕೂಡಲೇ ಪೆಪ್ಸ್ ಕರಗಿ, ಔಷಧಿ ಸತ್ವವನ್ನು ಹೊರಗೆಡವಿ ಅದು ಶ್ವಾಸದೊಡನೆ ಸೇರಿ ಶ್ವಾಸಕೋಶಕ್ಕೆ ಮುಟ್ಟುತ್ತದೆ ಹೀಗೆ ಪೆಪ್ಸ್ ಎದೆನೋವು, ಕಫ, ತಲೆನೋವು ಮೊದಲಾದವುಗಳನ್ನು ಗುಣಪಡಿಸಿ ನಿಮ್ಮ ಶ್ವಾಸ ಸರಿಯಾಗಿರುವಂತೆ ಸಹಾಯಮಾಡುವುದು. ಪೆಪ್ಸ್ ಕಫವನ್ನು ಸರಿಗೊಳಿಸಿ ಶ್ವಾಸಕೋಶವನ್ನು ಬಲಗೊಳಿಸುವುದು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ.

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಹಿಂದೆ ಹಾಗೆ- ಮುಂದೇನು?

೧೯೪೩ — ೧೯೪೪

ಹೊಸವರ್ಷ ಬಂದಿತು, ಹಳೆವರ್ಷ ವಿಶ್ರಾಂತಿ ಹೊಂದಿತು.

೧೯೪೩ನೇ ಇಸವಿಯನ್ನು ನಾವಿಂದು ಬೀಳ್ಕೊಡುತ್ತೇವೆ ಏನೇನೂ ಬೇಸರವಿಲ್ಲದೆ ಬೀಳ್ಕೊಡುತ್ತೇವೆ

೧೯೪೩ನೇ ವರ್ಷ ಬಂಗಾಳ ಬಿಜಾಪುರಗಳ ಮಹಾ ಕ್ಷಾಮ ಡಾಮರವನ್ನು ತಂದ ವರ್ಷ; ಬ್ರಿಟಿಷರಿಂದಾಳಲ್ಪಡುವ ಭಾರತದ ಮಾರ್ಗ ಬೀದಿಗಳಲ್ಲಿ, ರಸ್ತೆ ರಸ್ತೆಗಳಲ್ಲಿ ಸಾವಿರಾರು ಜನ ಹೊಟ್ಟೆ ಬಟ್ಟೆಗಿಲ್ಲದೆ ನರಳಿ ಸತ್ತ ವರ್ಷ, ಮಿಲಿಯಾಂತರ ಮಂದಿ ಉಪವಾಸದಿಂದ ನರಳಿದ ವರ್ಷ. ಹೀಗಿದ್ದರೂ ಲಂಡನಿನಲ್ಲಿ ಕುಳಿತುಕೊಂಡು ಅಮೆರಿ ಸಾಹೇಬರು ಭಾರತೀಯರೆಲ್ಲಾ ಹೊಟ್ಟೆತುಂಬಾ ತಿನ್ನುತ್ತಾರೆಂದು ಅರಚಿದ ವರ್ಷ!

೧೯೪೩ ನಮ್ಮ ರಾಷ್ಟ್ರ ಮುಖಂಡರನ್ನು ಸೆರೆಮನೆಯಲ್ಲಿಯೇ ಸೇರಿಸಿಟ್ಟ ವರ್ಷ ಗಾಂಧಿಜಿ ೨೧ ದಿನಗಳ ಘೋರ ಉಪವಾಸಮಾಡಿ, ಜೀವನ ಮರಣಗಳ ಮಧ್ಯೆ ತೂಗಾಡುತ್ತಿದ್ದರೂ ಲಿನ್‌ಲಿತ್ ಗೋ ಹೃದಯವು ಕರಗದ ವರ್ಷ!

೧೯೪೩ನೇ ಇಸವಿಯಲ್ಲಿ ದಕ್ಷಿಣ ರಾಷ್ಟ್ರದ ಬಿಳಿಯರು ಅಲ್ಲಿನ ಭಾರತೀಯರ ಮೇಲೆ ಬಣ್ಣ ಭೇದದ ಮಸೂದೆ ಜಾರಿಮಾಡಿದ ವರ್ಷ!

೧೯೪೩ನೇ ವರ್ಷವನ್ನು ನಾವು ಏನೇನೂ ಬೇಸರವಿಲ್ಲದೆ ಇಂದು ಬೀಳ್ಕೊಡುವೆವು

ಆದರೆ ಮುಂದೇನು?

೧೯೪೪ರಲ್ಲಿ ನಮ್ಮ ಅವಸ್ಥೆಯೇನು?

೧೯೪೪ರ ವಿಜಯದ ವರ್ಷವೆಂದು ಈಗಾಗಲೇ ಸಾರಲ್ಪಟ್ಟಿದೆ

ಬಹುಶಃ ೧೯೪೪ ವಿಜಯದ ವರ್ಷವಾದರೂ ಆಗಬಹುದು ನಾಜೀ ಜರ್ಮನಿಯನ್ನು ಮಿತ್ರರು ಗೆದ್ದರೂ ಗೆಲ್ಲಬಹುದು

ಆದರೆ ಇದು ಸ್ವಾತಂತ್ರ್ಯದ ವಿಜಯ ವರ್ಷವಾದೀತೆ? ಸಾಮ್ರಾಜ್ಯ ಶಾಹಿಯನ್ನು ಪ್ರಜಾಪ್ರಭುತ್ವ ಗೆಲ್ಲುವ ವರ್ಷವಾದೀತೆ? ಬಿಳಿಕರಿ ಭೇದಭಾವನೆಯಿಲ್ಲದೆ ಬಣ್ಣ ಭೇದವಿಲ್ಲದೆ ಜಗತ್ತಿನ ಮಾನವ ಕೋಟಿ ಅನ್ಯೋನ್ಯ ಸ್ನೇಹ ಸಹಕಾರ ಗೈಯುವ ವರ್ಷವಾದೀತೆ? ಏಶ್ಯಾ ಯೂರೋಪಿಯನರು ಸಮಾನ ಮಾನವ ಬಾಂಧವರೆಂಬ ಭಾವನೆ ಬಂದೀತೆ?

೧೯೪೩ನೇ ವರ್ಷವು ಭಾರತಕ್ಕೆ ಕ್ರೋಧ, ದ್ವೇಷ ತಿರಸ್ಕಾರ, ಸಂಕಟ, ಉಪವಾಸ ಇವುಗಳ ವರ್ಷವಾಗಿತ್ತು ೧೯೪೪ನೇ ವರ್ಷದ ಗರ್ಭದಲ್ಲಿ ಭಾರತಕ್ಕೆ ಇನ್ನೇನಿದೆಯೊ? ಇದು ಸ್ವಾತಂತ್ರ್ಯದ ವರ್ಷವಾಗುವುದೆ? ಸಾಮ್ರಾಜ್ಯಶಾಹಿಯ ಬಾಧೆ ತಾಗದಿರುವ ವರ್ಷವಾದೀತೆ?

ಆಕಾಶದ ನಕ್ಷತ್ರಗಳು ಭೂಲೋಕವನ್ನು ಕಣ್ಣೆತ್ತಿ ನೋಡುತ್ತಿವೆ ಆದರೆ ಯಾವುದೇ ಭವಿಷ್ಯವನ್ನೂ ಅವು ತಿಳಿಸುವುದಿಲ್ಲವಲ್ಲಾ!

ಮಂಗಳೂರು ಕಲೆಕ್ಟರರ ಪ್ರಕಟಣೆ

೧೯೪೩ನೇ ಇಸ್ವಿ ಡಿಸಂಬರ ೧೫ನೇ ತಾರೀಕಿಗೆ ಮತ್ತು ಆ ನಂತರ ಯಾವನೊಬ್ಬನೂ ಅಕ್ಕಿಯ ಮತ್ತು ಗೋದಿಯ ತವುಡನ್ನು ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನೊಳಗಿನ ಯಾವ ಸ್ಥಳದಿಂದಲೂ ಹಿಂದುಸ್ಥಾನದಲ್ಲಿರುವ ಜಿಲ್ಲೆಯ ಹೊರಗಿನ ಯಾವ ಕಡೆಗೂ ಒಯ್ಯಕೂಡದು,

ಈ ಹುಕುಮನ್ನು ಉಲ್ಲಂಘಿಸುವ ಯಾವನೊಬ್ಬನೂ ಮೂರು ವರ್ಷಗಳಿಗೆ ಮೀರದ ಸಜೆಯೂ, ಜುಲುಮಾನೆ, ಯಾ, ಇವೆರಡೂ ವಿಧಿಸಿ ಶಿಕ್ಷಿಸಲ್ಪಡಲು ಗುರಿಯಾಗುತ್ತಾನೆ.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (½% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

TO GREET YOU

For the Past
REMEMBRANCE
For the Present
KIND THOUGHTS
For the Future
GOOD WISHES

From
THE CANARA BANKING CORPORATION Ltd.
(Incorporated in British India with limited liability).
Estd:] Head office: UDIPI S. Kanara [1906.

HEARTY NEW YEAR GREETINGS

TO

All our Policy-holders, Agents, MedicalExaminers and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

'Bhuvanendra Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ.
ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 21—1—1944 [ಸಂಚಿಕೆ 3]

ದಕ್ಷಿಣ ಕನ್ನಡದಲ್ಲಿ ರಾಜಗೋಪಾಲಾಚಾರ್ಯರು

ಹರಿಜನ ಕೊಲೊನಿ ಶಂಖುಸ್ಥಾಪನೆ-

ಹೈಸ್ಕೂಲುಗಳ ರಜತೋತ್ಸವ.

ಮಂಗಳೂರು ಕಾಲೇಜುಗಳಲ್ಲಿ ಭಾಷಣಗಳು.

ಮದ್ರಾಸ್ ಪ್ರಾಂತದ ಮಾಜಿ ಪ್ರಧಾನರಾದ ಶ್ರೀ। ಸಿ ರಾಜಗೋಪಾಲಾಚಾರ್ಯರು ತಾ ೧೩ರಂದು ಮೈಲ್ ಬಂಡಿಯಲ್ಲಿ ಬಂದು ಕಾಸರಗೋಡಿನಲ್ಲಿಳಿದರು; ಸ್ಟೇಶನಿನಲ್ಲಿ ಸ್ವಾಗತವಿತ್ತು

ಥಕ್ಕರ್ ಬಾಪಾ ಕೆಲಸ

ಅಲ್ಲಿಂದ ಎಡನಾಡು ಗ್ರಾಮದ ಶೀತಂಗೋಳಿಗೆ ಬಂದು ಅಲ್ಲಿ ಹರಿಜನ ಸೇವಕ ಸಂಘದವರು ಸ್ಥಾಪಿಸಲಿರುವ ಹರಿಜನ ಕೊಲನಿಯ ಶಂಖು ಸ್ಥಾಪನೆ ಮಾಡಿದರು ಅಂದಿನ ಸಭೆಗೆ ಶ್ರೀ। ಎ ಬಿ ಶೆಟ್ಟರು ಅಧ್ಯಕ್ಷರಾಗಿದ್ದರು ತಾಲೂಕು ಹ। ಸೇ। ಸಂಘದ ಉಪಾಧ್ಯಕ್ಷ ಶ್ರೀ। ಜಿ ಎಸ್ ಕಕ್ಕಿಲ್ಲಾಯರು ಸ್ವಾಗತ ಭಾಷಣ ಮಾಡಿದರು ರಾಜಾಜಿಯವರ ಭಾಷಣವನ್ನು ಜಿಲ್ಲಾ ಹರಿಜನ ಸೇವಕರಾದ ಶ್ರೀ ಎನ್. ಎಸ್ ಕಿಲ್ಲೆಯವರು ಭಾಷಾಂತರಿಸಿದರು ರಾಜಾಜಿಯವರು ಹರಿಜನರಿಗೂ, ಕೆಲಸಗಾರರಿಗೂ ಪ್ರೋತ್ಸಾಹಪರ ಸಲಹೆಯಿತ್ತರು ಅಖಿಲ ಭಾರತ ಹರಿಜನಸೇವಕ ಸಂಘದ ಶ್ರೀ ಥಕ್ಕರ್ ಬಾಪಾ ಹಾಗೂ ಮಂಗಳೂರಿನ ಡಾ। ಅಡಪ್ಪರೇ ಮೊದಲಾದವರಿಂದ ಸಂದೇಶಗಳು ಬಂದಿದ್ದವು ರಾಜಾಜಿಯವರು ಈ ಕಾಲೊನಿಗೆ ಥಕ್ಕರ್ ಬಾಪರ ಹೆಸರಿಡಬೇಕೆಂದು ಸೂಚಿಸಿದ್ದನ್ನು ಒಪ್ಪಿಕೊಳ್ಳಲಾಯಿತು ಡಾ। ಪಿ ಎನ್ ಭಟ್ಟರು ವಂದನಾರ್ಪಣೆ ಮಾಡಿದರು ಇತ್ತೀಗೆ ತಾಲೂಕಿನ ಬೇರೆ ಬೇರೆ ಕಡೆಗಳಿಂದ ಹರಿಜನರ ಮತ್ತು ಕೆಲಸಗಾರ ಜಾತಾಗಳು ಬಂದಿದ್ದವು ರಾತ್ರಿ ರಾಜಾಜಿಯವರು ಮಾಯಿಪ್ಪಾಡಿ ಅರಮನೆಗೆ ತೆರಳಿ ಅಲ್ಲಿ ವಿಶ್ರಾಂತಿ ತೆಗೆದುಕೊಂಡರು ಅಲ್ಲಿ ರಾತ್ರಿ ಹಲವು ಸಾರ್ವಜನಿಕ ಕೆಲಸಗಾರರಿಗೆ ವಿಶ್ರ ಭೋಜನದ ವ್ಯವಸ್ಥೆಯಿತ್ತು ಶ್ರೀ ಎನ್ ಎಸ್ ಕಿಲ್ಲೆಯವರ ಕಾಲಿಗೆ ಈ ದಿನ ರಾತ್ರಿ ಒಂದು ಹಾವು ಕಚ್ಚಿತೆಂದೂ, ಅ ಮೇಲೆ ಅದು ವಿಷರಹಿತ ಹಾವೆಂದು ತಿಳಿದುಬಂದಿರುವುದಾಗಿಯೂ ಸುದ್ದಿಯಿದೆ

ಬಿಸೆಂಟ್ ಬಾಲಿಕಾ ಶಾಲೆಯಲ್ಲಿ

ತಾ ೧೪ರಂದು ರಾಜಾಜಿಯವರು ಕುಂಬಳೆಯಲ್ಲಿ ರೈಲು ಹತ್ತಿ ಮಂಗಳೂರಿಗೆ ಬಂದರು ರೈಲ್ವೆ ಸ್ಟೇಶನಿನಲ್ಲಿ ಸ್ವಾಗತವಿತ್ತು, ೧೦—೩೦ ಗಂಟೆಗೆ ಬೆಸೆಂಟ್ ಹೈಸ್ಕೂಲಿನ ಕಲಾ ಪ್ರದರ್ಶನದ ಉದ್ಘಾಟನೆ ಮಾಡಿದರು ಕಲಾ ಪ್ರದರ್ಶನದಲ್ಲಿ ಅನೇಕ ಕೈಗಾರಿಕೆ, ಕಸೂತಿ, ಭೂಗೋಲ, ಇತಿಹಾಸ, ವೈಜ್ಞಾನಿಕ ವಿಷಯಗಳು ಇದ್ದವು ಹಲವು ಸಂಸ್ಥೆಯವರು ಕಲಾ ಪ್ರದರ್ಶನಕ್ಕೆ ಸಾಧನ ಸಾಮಗ್ರಿ ಕಳುಹಿಸಿದ್ದರು ಪ್ರಾರಂಭದಲ್ಲಿ ಬಾಲಿಕೆಯರಿಂದ ಪ್ರಾರ್ಥನೆ ಸ್ವಾಗತ ಗೀತೆಗಳಿದ್ದವು, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚಾಟರು ಸ್ವಾಗತ ಭಾಷಣ ಮಾಡಿದರು. ರಾಜಾಜಿಯವರು ತಮ್ಮ ಭಾಷಣದಲ್ಲಿ, ಲೋಕ ಸೇವೆಗೆ ಉಪಾಧ್ಯಾಯ ವೃತ್ತಿಯೇ ಮೇಲೆಂದೂ, ದಕ್ಷಿಣ ಕನ್ನಡವು ಶಿಕ್ಷಣದಲ್ಲಿ ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸದಲ್ಲಿ ಮುಂದುವರಿದಿದೆ ಯೆಂದು ಹೇಳಿದರು ವಿದ್ಯಾರ್ಥಿನಿಯರ ವ್ಯಾಯಾಮ ಪ್ರದರ್ಶನವಾಯಿತು

ಈ ಕಾರ್ಯಕ್ರಮದ ನಂತರ ರಾಜಾಜಿ ಭಗಿನೀ ಸಮಾಜ, ಈಶ್ವರಾನಂದ ಮಹಿಳಾ ಸೇವಾಶ್ರಮಗಳನ್ನು ಸಂದರ್ಶಿಸಿದರು ಸಂಜೆ ಡಿ ಸಿ ಎಂ ಮತ್ತು ಹರಿಜನ ಸೇವಕ ಸಂಘದವರು ಸತ್ಕಾರ ಕೂಟವನ್ನೇರ್ಪಡಿಸಿದರು

ಸಂಜೆ ಬೆಸೆಂಟ್ ಮಹಿಳಾ ಹೈಸ್ಕೂಲ್‌ನ ರಜತೋತ್ಸವವು ನೆರವೇರಿತು ರಾಜಾಜಿಯವರು ಅಧ್ಯಕ್ಷತೆ ವಹಿಸಿದ್ದರು ಬಾಲಿಕೆಯರಿಂದ ಪ್ರಾರ್ಥನೆ ಸ್ವಾಗತಗಳಾದ ಮೇಲೆ, ಶ್ರೀ ಏಕಾಂಬರರಾಯರು ದೇಶದ ನಾನಾ ಭಾಗಗಳಿಂದ, ಕಸಿನ್ಸ್ ದಂಪತಿಗಳು, ಡಾ। ಖಾರೆ, ಸರ್ ಸಿ ಪಿ, ಅರುಂಡೇಲ್ ದಂಪತಿಗಳು, ಸರ್ ಎಸ್ ರಾಧಾ ಕೃಷ್ಣನ್, ಪಂಡಿತ ಕುಂಜು, ಕಮಲಾ ದೇವಿ, ಡಾ। ಸುಬ್ಬರಾಯನ್ ಮೊದಲಾದವರಿಂದ ಬಂದ ಸಂದೇಶಗಳನ್ನೋದಿದರು ಶ್ರೀಮತಿ ಯು ಪಾರ್ವತಿ ಬಾಯಿಯವರು ಶಾಲಾ ಶ್ರೇಯಃ ಪ್ರಾರ್ಥನೆಯ ಭಾಷಣವಿತ್ತು ಶಾಲೆ ಪ್ರಾರಂಭವಾದ ಕಾಲದಿಂದ ಅದರ ಚಟುವಟಿಕೆಗಳನ್ನು ಪ್ರಶಂಸಿಸಿದರು ಶ್ರೀ। ಎ ಶ್ರೀನಿವಾಸ ಪೈಗಳು, ೧೯೧೮ರಿಂದ ಈ ಶಾಲೆ ಪ್ರಾರಂಭವಾದಂದಿನಿಂದ ಶಾಲೆಯೊಡನೆ ತನಗಿದ್ದ ಸಂಬಂಧ, ಶಾಲೆಯ ಪ್ರಗತಿ ವಿಚಾರ ಭಾಷಣವಿತ್ತರು ಶ್ರೀ। ಎಂ ಎಸ್ ಮಾಧವರಾಯರು ಶಾಲೆಯ ೨೫ ವರ್ಷಗಳ ಜೀವನದ ವರದಿಯೋದಿ ಶಾಲೆಗೆ ಧನ ಸಹಾಯ ಕೇಳಿದರು ಡಾ। ಕೇಶವ ಪೈಗಳು ಮಾತನಾಡಿ ಮಹಿಳೆಯರ ರಾಷ್ಟ್ರೀಯ ವಿದ್ಯಾವರ್ಧಕ ಸಮಿತಿಯವರು ಈಗ ಈ ಶಾಲೆ ನಡೆಸುತ್ತಿರುವ ವಿಚಾರವಾಗಿ, ಬಾಲಿಕೆಯರು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದಾಗಿ ಅವನತಿ ಹೊಂದಿದ ವಿಚಾರ ತಿಳಿಸಿ, ನಮ್ಮ ದೇಶದ ಬಾಲಿಕೆಯರಿಗೆ ನಮ್ಮ ದೇಶದ ಸಂಸ್ಕೃತಿಯನ್ನುಪದೇಶಿಸುವ ಶಿಕ್ಷಣ ಬೇಕೆಂದು ತಿಳಿಸಿದರು.

ರಾಜಾಜಿ ಭಾಷಣ

ಆ ಮೇಲೆ ರಾಜಾಜಿಯವರು ಮಾತನಾಡಿ ಶಾಲಾ ಶ್ರೇಯಃ ಪ್ರಾರ್ಥನೆಯ ಭಾಷಣಮಾಡಿದವರನ್ನು ಹೊಗಳಿ, ಈ ಶಾಲೆ ವಿಷಯ ಮಹಿಳೆಯರು ಮಾತ್ರವಲ್ಲ ತರುಣರೂ ಆಸಕ್ತಿಯಿಂದಿರಬೇಕೆಂದೂ, ಏಕೆಂದರೆ ಅವರಿಗೆ ಯೋಗ್ಯರಾದ ಹೆಂಡತಿಯರು ಇಲ್ಲಿ ಸಿಗುವರೆಂದೂ ಹೇಳಿ, ಈ ಶಾಲೆಯ ಉನ್ನತಿಗೆ ಅವರು ತಮ್ಮ ಹಣದಲ್ಲಿ ಒಂದು ಪಾಲು ಮೀಸಲಿರಿಸಬೇಕೆಂದೂ, ಬೇರೆ ಹಲವು ಕಡೆಗಳಿಗಿಂತ ಇಲ್ಲಿನ ಜನರ ಶಾಲೆಗಳ ಆಡಳಿತ ಚೆನ್ನಾಗಿದೆಯೆಂದೂ ಹೇಳಿ ವಿದ್ಯಾಸರಿಸ್ಥೆ ಸರಕಾರದ 'ರಿಕಗ್ನಿಶನ್' ಪಡೆವುದಕ್ಕಿಂತಲೂ ಜನತೆಯ 'ರಿಕಗ್ನಿಶನ್' ಪಡೆವುದೇ ಮೇಲೆಂದೂ ಸರಕಾರದಿಂದ 'ರಿಕಗ್ನಿಶನ್' ಪಡೆದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಲ್ಲಿ ಹಾಗೂ ಉಪಾಧ್ಯಾಯಿನಿಯರಲ್ಲಿ ಕ್ರಿಯಾ ಶಕ್ತಿ ಹಾಗೂ ಚಟುವಟಿಕೆ ಕುಂದುವುದೆಂದೂ ತಿಳಿಸಿ ನಮ್ಮ ದೇಶಕ್ಕೆ ರಾಷ್ಟ್ರೀಯ ಶಿಕ್ಷಣವು ಅಗತ್ಯವೆಂಬುದನ್ನು ವಿವರಿಸಿ, ಇಂದು ಮಹಿಳೆಯರ ಶಿಕ್ಷಣದ ರೀತಿ ಕೆಟ್ಟು ಹೋಗಿದೆಯೆಂಬುದನ್ನು ವಿಮರ್ಶಿಸುತ್ತಾ 'ಹಿಂದಿನ ಆ ಸೀತೆಯರು ಆ ಗಾರ್ಗಿಯರು ಈಗ ಎಲ್ಲಿ?' ಎಂದು ಪ್ರಶ್ನಿಸಿ, ಈ ಸಂಸ್ಥೆ ಕ್ರೈಸ್ತ ಕೊನ್ವೆಂಟ್‌ಗಳ ವಿರುದ್ಧ ಹಿಂದೂ ಧರ್ಮದ ಸಂಸ್ಥೆಯಾಗಿ ಸ್ಪರ್ಧೆ ಮಾಡುವ ಉದ್ದೇಶವಿಟ್ಟುಕೊಳ್ಳುವುದು ಸರಿಯಲ್ಲವೆಂದೂ, ಭಾರತದ ಯಾವುದೇ ಮತಧರ್ಮಾನುಯಾಯಿಗಳಿರಲಿ ಎಲ್ಲರ ಸಂಸ್ಕೃತಿಯೂ ಒಂದೇ ಇರುವುದೆಂದೂ ಸಂಸ್ಕೃತಿ ತಲೆಮಾರು ದಾಟಿದಂತೆ ಹಳೆಯದರೊಡನೆ ಹೊಸದು ಸೇರಿ ಹೋಗುವುದೆಂದೂ ವಿವರಿಸಿ, ಭಾರತದ ರಾಷ್ಟ್ರೀಯ ಸಂಸ್ಕೃತಿಯು ಅಖಂಡ ಅಭೇದ್ಯವಾದ ಏಕ ಸಂಸ್ಕೃತಿಯೆಂಬುದನ್ನು ತಿಳಿಸಿ ಹೇಳಿದರು

"ಮಹಿಳೆಯರ ಶಿಕ್ಷಣಕ್ಕೆ ನಾವು ಪ್ರೋತ್ಸಾಹ ಕೊಡದಿದ್ದರೆ ನಮಗೆ ಉನ್ನತಿಯಿಲ್ಲ ಸಂಸ್ಕೃತಿ ಮಹಿಳೆಯರ ಕೈಯ್ಯಲ್ಲಿದೆ ಮಹಿಳಾ ಶಿಕ್ಷಣವನ್ನು ನಾವ ಅಲ್ಲಗಳೆದರೆ ಸಂಸ್ಕೃತಿಯನ್ನು ಕಳೆಕೊಳ್ಳುವೆವು ಬಂಜರು ಬಿದ್ದ ಬಂಡೆಗಲ್ಲಿನಂತಿರುವ ನಮ್ಮ ಸಮಾಜದಲ್ಲಿ ಆ ಸಂಸ್ಕೃತಿಯನ್ನು ನೆಟ್ಟು ಬೆಳೆಸಿ ಹಸನಾಗಿ ಮಾಡಬೇಕು' ಎಂದು ರಾಜಾಜಿ ಹೇಳಿದರು ಕೊನೆಯಲ್ಲಿ ರಾಜಾಜಿಯವರು ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಿರಬೇಕಾದ ವಿಚಾರ ವಾದಿಸಿ ಇಂದಿನ ವಿಶ್ವವಿದ್ಯಾನಿಲಯ ಶಿಕ್ಷಣ ಪದ್ಧತಿ ಹೇಗೆ ಅಕ್ರಮವಾಗಿದೆಯೆಂದು ವಿವರಿಸಿ ವಿದ್ಯಾವತಿಯರಾದ ಮಹಿಳೆಯರೇ ಸೇರಿ ತಮಗೆ ಬೇಕಾದ ಶಿಕ್ಷಣ ಯಾವುದೆಂಬುದನ್ನು ನಿಶ್ಚಯಿಸಬೇಕೆಂದು ಉಪದೇಶಿಸಿದರು

ಶ್ರೀ ಎ ಬಿ ಶೆಟ್ಟರು ಕೃತಜ್ಞತೆ ಹೇಳಿದ ಬಳಿಕ ವಿವಿಧ ವಿನೋದಾವಳಿಗಳಿಂದ ರಜತ ಮಹೋತ್ಸವವು ಕೊನೆಗೊಂಡಿತು

ಸ್ಕೌಟ್ ರೇಲಿ

ರಾಜಾಜಿಯವರು ತಾ ೧೫ರಂದು ಬೆಳಗ್ಗೆ ಸಾಧಕಾಶ್ರಮದಲ್ಲಿ ಪ್ರಾರ್ಥನೆ ಮುಗಿಸಿ, ೯ ಗಂಟೆಗೆ ಕೆನರಾ ಹೈಸ್ಕೂಲಿಗೆ ಬಂದರು ವಿದ್ಯಾರ್ಥಿಗಳು ಅವರನ್ನು ಅಲ್ಲಿ ಸ್ವಾಗತಿಸಿದರು. ರಾಜಾಜಿಯವರು ಅಲ್ಲಿ ಪದ್ಮಾವತಿ ಅಮ್ಮ ಸ್ಮಾರಕ ಕಟ್ಟಡವನ್ನು ಉದ್ಘಾಟನೆ ಮಾಡಿ ಅವರ ಭಾವಚಿತ್ರದ ಅನಾವರಣವನ್ನೂ ಮಾಡಿದರು. ಆ ಮೇಲೆ ಹಿಂದೂ ಫೆಡರಲ್ ಸ್ಕೂಲ್ಸ್ ಬೋರ್ಡ್, ಭಗಿನೀ ಸಮಾಜ, ವಿವೇಕಾನಂದ ಸಂಘ, ಡಿ ಸಿ ಯಂ ಹಿಂದೂ ಸೇವಾ ಸಂಘ ಈಶ್ವರಾನಂದ ಮಹಿಳಾ ಸೇವಾಶ್ರಮ ಮೊದಲಾದವುಗಳ ಮಾನಪತ್ರ ಸ್ವೀಕರಿಸಿದರು ಮಾನಪತ್ರಗಳಿಗೆ ಉತ್ತರ ಕೊಡುತ್ತಾ, ಧಾರ್ಮಿಕ ಶಿಕ್ಷಣ ಶಾಲೆಯಲ್ಲಿ ಬೇಡ, ಮನೆಯಲ್ಲಾಗಲಿ ಎಂದರು ೧೧ ಗಂಟೆಗೆ ಕಂಕನಾಡಿಯ ಬಾಲಿಕಾಶ್ರಮವನ್ನು ಸಂದರ್ಶಿಸಿದರು ಸಂಜೆ ೫ ಗಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಸ್ಕೌಟ್ ರ್‍ಯಾಲಿ ನಡೆಯಿತು

'ಒಂದು ಗಂಟೆ ಕಾಲ ನೀವು ಹಕ್ಕಿಗಳಂತೆ ಹಾರಾಡಿದಿರಿ, ಕಪಿಗಳಂತೆ ಕುಣಿದಿರಿ, ನಿಮ್ಮ ಸಂತೋಷದಲ್ಲಿ ನಮ್ಮನ್ನೂ ತೇಲಿಸಿದಿರಿ ಏಕೆ ಹಾರಾಡಿದಿರಿ, ಏಕೆ ಕುಣಿದಿರಿ, ನಿಮಗೊಂದೂ ತಿಳಿಯದು ಇದು ಹೋರಾಟದ ಕಾಲ ಹೋರಾಡಲು ಯೋಧರಾಗಬೇಕು, ಯೋಧರನ್ನು ತರಬೇತಿ ಮಾಡುವ ವಿಧಾನವೇ ಹೀಗೆ ಇಂಥ ಶಿಕ್ಷಣದಿಂದ ನೀವು ಭಾರತದ ಯೋಧರಾಗಿರಿ' ಎಂದು ಹರಸುತ್ತಾ, 'ಹಿಂದ ಒಬ್ಬ ಸ್ಕೌಟ್ ಇದ್ದ ಆತನ ಹೆಸರು ಹನೂಮಾನ್ ಆತ ರಾಮನ ಬಂಟ ಆತನು ಮಂಗನಂತೆ ಕುಣಿದ, ಹಕ್ಕಿಯಂತೆ ಹಾರಾಡಿದ ಅಶೋಕವನದಲ್ಲಿ ಸೀತಾದೇವಿಯನ್ನು ಕಂಡು, ಮರಳಿ ಬಂದಾಗ ಕಿಷ್ಕಿಂಧದಲ್ಲಿ ದೊಡ್ಡ ರ್‍ಯಾಲಿ ನಡೆಯಿತು ಎಂದು ಹೇಳಿದರು ಕೊನೆಗೆ ನಮ್ಮ ದೇಶದಲ್ಲಿರುವ ಹಲವು ಸ್ಕೌಟ್ ಸಂಸ್ಥೆಗಳನ್ನು ಒಂದುಗೂಡಿಸುವ ಪ್ರಯತ್ನ ವಿಫಲವಾದ ವಿಚಾರ ವಿಷಾದಿಸಿ, ಅವುಗಳೆಲ್ಲ ಒಂದುಗೂಡಬೇಕಾದುದು ಅವಶ್ಯವೆನ್ನುತ್ತಾ ಈ ಏಕೀಕರಣಕ್ಕೆ ಹೆಚ್ಚಿನ ಪ್ರಯತ್ನ ಮಾಡುವುದು ಅಗತ್ಯವೆಂದರು

ಗವರ್ನಮೆಂಟ್ ಕಾಲೇಜ್‌ನಲ್ಲಿ

ಅದೇ ದಿನ ಸಂಜೆ ರಾಜಾಜಿಯವರ ಅಧ್ಯಕ್ಷತೆಯಲ್ಲಿ ಗವರ್ನಮೆಂಟ್ ಕಾಲೇಜ್ ದಿನಾಚರಣೆ ನಡೆಯಿತು ಪ್ರಾರ್ಥನೆಯ ಬಳಿಕ ಪ್ರಿನ್ಸಿಪಾಲ್ ಶ್ರೀ ಕೆ ಟಿ ವರ್ಗಿಸರು ರಾಜಾಜಿಗೆ ಪುಷ್ಪಹಾರ ಹಾಕಿ ಕಾಲೇಜ್ ವರದಿಯನ್ನೋದಿದರು ಕಲೆಕ್ಟರರ ಅಸಿಸ್ಟಾಂಟರಾದ ಶ್ರೀ ಜಿ ದತ್ತಾತ್ರೇಯರಾಯರು ಕಾಲೇಜಿನ ಶ್ರೇಯಃ ಪ್ರಾರ್ಥನೆ ಭಾಷಣವಿತ್ತರು ಇದಕ್ಕೆ ಉತ್ತರವನ್ನು ಕಾಲೇಜ್ ಯೂನಿಯನ್ ಅಧ್ಯಕ್ಷರಾದ ಕುಮಾರಿ ಎಸ್ ಶಾಂತಾದೇವಿಯರಿತ್ತರು. ಈ ಮಧ್ಯೆ ಅಧ್ಯಕ್ಷರು ಬಹುಮಾನ ಹಂಚಿದರು,

ರಾಜಾಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ವಿದ್ಯಾರ್ಥಿಗಳ ಉಲ್ಲಾಸಕ್ಕಾಗಿ ಸಂತೋಷ ಸೂಚಿಸಿ, ಪ್ರಿನ್ಸಿಪಾಲರು ಸಮರ್ಥರೆಂದು ಹೇಳುತ್ತಾ, ಪ್ರಿನ್ಸಿಪಾಲರನ್ನು ಒಳ್ಳೆಯ ಶಿಸ್ತು ಪಾಲನೆಯಿಂದ ಸುಖಿಗಳನ್ನಾಗಿ ಮಾಡಿರೆಂದು ಬೋಧಿಸಿ, ಆಧುನಿಕ ಕಾಲದ ಸ್ಫೂರ್ತಿಯ ಕುರಿತು ವಿವರಿಸುತ್ತಾ ಶ್ರೀ. ದತ್ತಾತ್ರೇಯರಾಯರ ಭಾಷಣ ಚೆನ್ನಾಗಿದ್ದರೂ ವಿದ್ಯಾರ್ಥಿಗಳಿಗೆ ತಾಳ್ಮೆ

(೭ನೇ ಪುಟ, ಮುಂದುವರಿದಿದೆ)

ಉಡುಪಿಯಲ್ಲಿ ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನ

ವಿಶಾಲ ವಿಶ್ವವೇ ನಮ್ಮ ಪಾಠಶಾಲೆ

'ದೇಶದ—ಲೋಕದ ಏಳಿಗೆಗಾಗಿ ದುಡಿವೆವು'

"ಎಲ್ಲರ ಕಿರಿಯಂತೆ ಮಕ್ಕಳಿಗೂ ಸ್ವಾತಂತ್ರ್ಯ ಬೇಕು' ಎಂಬುದು. ಹಿರಿಯರ ಬುದ್ಧಿವಾದ ಉಪದೇಶಗಳನ್ನು ಕೇಳಿ, ಅವರು ತೋರಿಸಿದ ಹಾದಿ ಹಿಡಿದು ಮುಂದುವರಿಯಲು ಸಿದ್ಧರಿದ್ದೇವೆ. ಆದರೆ ನಮಗೆ ದಾರಿ ತೋರುವವರು ಬೇಕು. ಮಕ್ಕಳ ಬುದ್ಧಿ ವಿಕಾಸಕ್ಕೆ ಅಸ್ಪದ ದೊರಕಬೇಕು. ಎಡೆ ಸಿಗಬೇಕು. ಇದಕ್ಕೆಲ್ಲ ಉತ್ತಮ ಶಿಕ್ಷಣ, ಮಕ್ಕಳ ಕೌಶಲ್ಯದ ವಿಕಾಸಕ್ಕಾಗಿ ಸೌಕರ್ಯ ಸೌಲಭ್ಯ ಅಗತ್ಯ. ಶಾಲಾ ಕೋಣೆಯ ಶಿಕ್ಷಣ ಹೋಗಿ ವಿಶಾಲ ವಿಶ್ವವೇ ಪಾಠಶಾಲೆಯಾಗಬೇಕು. ತತ್ವಜ್ಞಾನಿಗಳು ಮತ್ತು ಹಿರಿಯರು ಮಾತ್ರವಲ್ಲ, ಮಕ್ಕಳೂ ಇಂದು ಮುಂದಿನ ಆಗುಹೋಗುಗಳ ಕುರಿತು ಚಿಂತನೆ ಮಾಡಬೇಕು. ನಮ್ಮದಿದು, ನಾಡು ನಮ್ಮದು, ದೇಶ ನಮ್ಮದು, ಈ ವಿಶಾಲ ವಿಶ್ವ ನಮ್ಮದು, ನಮ್ಮ ಹಿರಿಯರ ಬಳಿಕ ಇಲ್ಲಿ ಜೀವನ ಮಾಡಬೇಕಾದವರು ನಾವು, ನಾವಲ್ಲದೆ ಇನ್ನಾರು ನಾಡನ್ನು ಕಟ್ಟಬೇಕಾದವರು? ನಮ್ಮ ಮೇಲಿನ ಹೊಣೆಯನ್ನು ಮರೆಯದಿರುವುದು ನಮ್ಮ ಆದ್ಯ ಕರ್ತವ್ಯ" —ಹೀಗೆಂದು ಉಡುಪಿಯಲ್ಲಿ ತಾ. ೧೫ರಂದು ಜರಗಿದ ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಅಧ್ಯಕ್ಷರಾದ ಮಂಗಳೂರಿನ ಕುಮಾರ ಜಿ. ಉಮೇಶರಾಯರು ಹೇಳಿದರು. ಅವರು ತಮ್ಮ ಭಾಷಣದಲ್ಲಿ ಮಕ್ಕಳ ಆಂದೋಲನದ ಆವಶ್ಯಕತೆ ಹೇಳಿ, ಕನ್ನಡನಾಡಿನಲ್ಲಿ ಮಕ್ಕಳ ಚಟುವಟಿಕೆಯನ್ನು ಆರಂಭಿಸಿದ ಶ್ರೀಯುತ ಕಾರಂತರು ಶ್ರೀಮತಿ ಕಲ್ಯಾಣಮ್ಮ ಮೊದಲಾದವರನ್ನು ಸ್ಮರಿಸಿ, ದೇಶ ವಿದೇಶಗಳಲ್ಲಿ ಮಕ್ಕಳ ಚಟುವಟಿಕೆ ಹೇಗಿದೆಯೆಂಬುದನ್ನು ತಿಳಿಸಿ, ಅಖಿಲ ಕರ್ನಾಟಕದ ಮಕ್ಕಳ ಸಂಘಟನೆಯಾಗಬೇಕೆಂದು ವಿವರಿಸಿದರು.

ಉಡುಪಿ ಬೋರ್ಡ್ ಹೈಸ್ಕೂಲ್ ಪಠಾರದಲ್ಲಿ ಹಾಕಿದ ಭವ್ಯವಾದ ಚಪ್ಪರದಲ್ಲಿ ಈ ಸಮ್ಮೇಳನವು ಸೇರಿತು. ದಕ್ಷಿಣ ಕನ್ನಡದ ಬೇರೆ ಬೇರೆ ತಾಲೂಕುಗಳಿಂದ ಮಾತ್ರವಲ್ಲದೆ, ಕೋಲಾರ, ಸಿದ್ಧಾಪುರ ಮೊದಲಾದ ಕಡೆಗಳಿಂದಲೂ ಕಿರಿಯರು ಪ್ರತಿನಿಧಿಗಳಾಗಿ ಬಂದಿದ್ದರು. ಅನೇಕ ಮಂದಿ ಹಿರಿಯರೂ ಕಿರಿಯರೂ ಪ್ರೇಕ್ಷಕರಾಗಿ ಸೇರಿದ್ದರು.

ತಾ. ೧೫ರಂದು ಪೂರ್ವಾಹ್ನ ೧೦ ಗಂಟೆಗೆ ಮಂಗಳೂರಿನ ಕುಮಾರ ಲಜಪತ ಕಿಣಿಯವರು ಕಿರಿಯರ ಬಾವುಟವನ್ನು ಏರಿಸಿದರು. "ನಮ್ಮ ಬಾವುಟವು ವಿಶಾಲ ವಿಶ್ವದ ಶಿಶು. ಲೋಕದ ಕಿರಿಯರ ಐಕ್ಯದ ಪ್ರತಿಬಿಂಬವಿದು, ಮತ–ಜಾತಿ–ವರ್ಣ ದ್ವೇಷಗಳಿಗಿಲ್ಲಿ ಆಸ್ಪದವಿಲ್ಲ. ಈ ಧ್ವಜದ ಘನತೆಯನ್ನು ನಾವು ಕಾಯ್ದುಕೊಳ್ಳಬೇಕು. ದೇಶದ–ಲೋಕದ ಏಳಿಗೆ ಸ್ವಾತಂತ್ರ್ಯಕ್ಕಾಗಿ ನಾವು ದುಡಿಯುವವರು' ಎಂದು ಅವರು ಧ್ವಜಾರೋಹಣ ಮಾಡುತ್ತಾ ಹೇಳಿದರು. ಅನಂತರ ಧ್ವಜ ವಂದನೆ ನಡೆಯಿತು.

ಧ್ವಜಾರೋಹಣದ ನಂತರ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ ಕಲಾ ಪ್ರದರ್ಶನದ ಅನಾವರಣವನ್ನು ಮೈಸೂರು ಮಕ್ಕಳ ಕೂಟದ ಕಾರ್ಯಕರ್ತರಲ್ಲೊಬ್ಬರಾದ ಶ್ರೀ। ಟಿ. ಎಂ. ಆರ್. ಸ್ವಾಮಿಯವರು ಮಾಡಿದರು. "ಮಕ್ಕಳ ಸ್ವತಂತ್ರವಿಚಾರದ ಕಲ್ಪನೆಯಿಂದ ಕಲೆ ಹುಟ್ಟಿ ಬರಬೇಕು. ಅದನ್ನೇ ಮಾಡು, ಇದನ್ನೇ ಮಾಡು ಎಂಬಾಜ್ಞೆ ಮಕ್ಕಳ ಮೇಲೆ ಹೊರಿಸುವುದು ಸರಿಯಲ್ಲ." ಎಂದು ಉದ್ಘಾಟನೆ ಮಾಡುತ್ತಾ ಶ್ರೀ। ಸ್ವಾಮಿಯವರು ನುಡಿದರು. ಅನಂತರ ಪಂದ್ಯಾಟಗಳು ಜರಗಿದವು.

ಸಮ್ಮೇಳನದ ಬಹಿರಂಗ ಅಧಿವೇಶನವು ಆ ದಿನ ಅಪರಾಹ್ನ ೩ ಗಂಟೆಗೆ ಪ್ರಾರಂಭವಾಯಿತು. ಶ್ರೀ ಶಿವರಾಮ ಕಾರಂತರು ಸಮ್ಮೇಳನದ ಉದ್ಘಾಟನೆ ಮಾಡಿದರು. "ಎಳೆಯರ ಜೀವನಕ್ಕೆ ಬೆಳಕು ಕೊಡುವಂಥಾ ಪ್ರಪಂಚ ನಮಗೆ ಬೇಕು; ಹಿರಿಯರಿಂದ ಆದರ್ಶ ದೊರಕಿತೆಂದು ಕಿರಿಯರು ಕಾದು ಕುಳಿತುಕೊಳ್ಳಬೇಕಾಗಿಲ್ಲ. ಬದಲಿಗೆ ತಪ್ಪು ಹಾದಿ ಸಿಗಬಹುದು. ಮಕ್ಕಳೇ; ಹಿರಿಯರ ಆಶ್ರಯ ನಿಮಗೆ ಬೇಕು; ಆದರೆ ಹಿರಿಯರ ಮಿದುಳು ನಿಮಗೆ ಬೇಡ. ಅವರ ಜಾಡ್ಯ ನಿಮಗೆ ಬರದಿರಲಿ" ಎಂದು ಶ್ರೀ ಕಾರಂತರು ತಮ್ಮ ಭಾಷಣದಲ್ಲಿ ಹೇಳಿದರು.

ಸಮ್ಮೇಳನದ ಉದ್ಘಾಟನೆಯಾಗಿ ಸ್ವಾಗತ ಗೀತೆ ಹಾಡಿದ ಮೇಲೆ ಸ್ವಾಗತ ಸಮಿತಿ ಸಹ ಕಾರ್ಯದರ್ಶಿ ಕುಮಾರ ಶ್ರೀನಿವಾಸಭಟ್ಟರು ಸಮ್ಮೇಳನದ ಅತಿಥಿ ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು. ಅನಂತರ ಸ್ವಾಗತಾಧ್ಯಕ್ಷ ಕುಮಾರ ಆರೂರು ರಮೇಶರಾಯರು ಬಂದ ಅತಿಥಿ ಪ್ರತಿನಿಧಿಗಳಿಗೆ ಸ್ವಾಗತ ಹೇಳಿ ಭಾಷಣವಿತ್ತರು. ಅವರು ತಮ್ಮ ಭಾಷಣದಲ್ಲಿ, ಕಿರಿಯರ ಸಮ್ಮೇಳನವನ್ನು ಜರಗಿಸಬೇಕೆಂದು ಉಡುಪಿಯ ಕಿರಿಯರು ಮಾಡಿದ ನಿರ್ಧಾರ, ಅದಕ್ಕೆ ಬಂದೊದಗಿದ ಎಡರು ತಡೆಗಳು, ಆದರೂ ಇಂದು ಪುಣ್ಯ ಕ್ಷೇತ್ರವಾದ ಉಡುಪಿಯಲ್ಲಿ ನಾಡಿನ ಕಿರಿಯರನ್ನು ಸೇರಿಸಿ ಸಮ್ಮೇಳನವನ್ನು ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು.

ಆ ಮೇಲೆ ಸ್ವಾಗತ ಸಮಿತಿ ಕಾರ್ಯದರ್ಶಿಗಳಲ್ಲೊಬ್ಬರಾದ ಕುಮಾರ ಉ. ವ್ಯಾಸರಾಯರು ಸಮ್ಮೇಳನಕ್ಕೆ ಶುಭವನ್ನು ಕೋರಿ ಬಂದ, ಹಲವು ತಂತಿ ಪತ್ರಗಳನ್ನು ಓದಿದರು. ಶ್ರೀಗಳಾದ ಮುಳಿಯ ತಿಮ್ಮಪ್ಪಯ್ಯ, ಡಿ. ವಿ. ಗುಂಡಪ್ಪ, ಡಿ ಮಂಜಯ ಹೆಗ್ಡೆ, ಎ. ಬಿ, ಶೆಟ್ಟಿ, ಮಾಳವಾಡ, ಸಿದ್ಧವ್ವನಹಳ್ಳಿ, ಅ. ನ. ಕೃಷ್ಣರಾಯ, ಶ್ರೀಮತಿ ಕಲ್ಯಾಣಮ್ಮ ಮೊದಲಾದವರು ಸಂದೇಶ ಕಳುಹಿಸಿದ್ದರು.

ಬಳಿಕ ಸಮ್ಮೇಳನವನ್ನು ಕರೆದಿದ್ದ ಹಿರಿಯರ ಪರವಾಗಿ ಡಾ। ಟಿ. ಮಾಧವ ಪೈಗಳು ನಾಲ್ಕು ಮಾತುಗಳನ್ನಾಡಿದರು. 'ಹಿರಿಯರು ಮಾಡುವುದೆಲ್ಲಾ ಕಿರಿಯರಿಗಾಗಿ. ಕಿರಿಯರೇ ಹಿರಿಯರಿಗೆ ಸಂಪತ್ತು. ಅವರಿಗೆ ಯಾರೂ ಅಡ್ಡಿ ಬರಬಾರದು. ಆದರೆ ಕಿರಿಯರು ಹಿರಿಯರು ಸಲಹೆ ಪಡೆದುಕೊಳ್ಳುವುದು ಒಳ್ಳೆಯದು' ಎಂದು ಅವರು ಹೇಳಿದರು.

ಆ ದಿನ ರಾತ್ರಿ ಉಡುಪಿಯ ಕಿರಿಯರು 'ನಾರದ ಗರ್ವಭಂಗ' ನಾಟಕವನ್ನೂ ಮತ್ತು ಬಾಲಿಕೆಯರು 'ಚಂದ್ರಹಾಸ' ನಾಟಕವನ್ನೂ ಆಡಿ ತೋರಿಸಿದರು.

ತಾ. ೧೬ರಂದು, ಪೂರ್ವಾಹ್ನ ಕಿರಿಯರಿಗಾಗಿ ಭಾಷಣ ಸ್ಪರ್ಧೆಗಳೇರ್ಪಟ್ಟವು. 'ಮುಂದಿನ ಜನಾಂಗ ಹೇಗಿರಬೇಕು' 'ಒಂದು ವಾರ ನಿಮಗೆ ರಾಜ್ಯಭಾರವಿತ್ತರೆ ನೀವೇನು ಮಾಡುವಿರಿ?' ಎಂಬೀ ವಿಷಯಗಳು ಕೊಡಲ್ಪಟ್ಟಿದ್ದವು. ಹಲವು ಮಂದಿ ಬಾಲಕ ಬಾಲಕಿಯರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಅನಂತರ ಉಡುಪಿಯ ಕಿರಿಯರೇ ಬರೆದು ಪ್ರಕಟಿಸಿದ 'ಮುಡಿಪು' ಎಂಬ ಕವನ ಸಂಗ್ರಹದ ಉದ್ಘಾಟನೆಯು ಶಿವಮೊಗ್ಗದ ಶ್ರೀ. ಭೂಪಾಲಂ ವಾಸುದೇವ ಮೂರ್ತಿಯವರಿಂದ ನೆರವೇರಿತು. 'ಕೆಲವು ಕಾಲದ ಹಿಂದೆ ಹಿರಿಯರೇ ಕವನ ಕಟ್ಟುತ್ತಿದ್ದರು; ಈಗ ಕಿರಿಯರೂ ಮುಂದೆ ಬಂದಿದ್ದಾರೆ. ಈಗ ಕವಿತೆ ಬರೆಯದ ಕಿರಿಯರೇ ಇಲ್ಲ' ಎಂದು ಅವರು ಆ ಪುಸ್ತಕವನ್ನು ಉದ್ಘಾಟನೆ ಮಾಡುತ್ತಾ ಹೇಳಿದರು. ಕವಿತೆಗಳನ್ನು ಬರೆದ ಕಿರಿಯರು ಕೆಲವರು ತಮ್ಮ ಕವಿತೆಗಳನ್ನು ಹಾಡಿ ತೋರಿಸಿದರು. ಆ ಪುಸ್ತಕದ ಪ್ರಕಾಶಕರಾದ ಕುಮಾರ ಶ್ರೀನಿವಾಸ ಭಟ್ಟರು ವಂದನಾರ್ಪಣೆ ಮಾಡಿದ ಬಳಿಕ ವೇಷಪಲ್ಲಟ ಸ್ಪರ್ಧೆ ನಡೆಯಿತು.

ಆ ದಿನ ಮಧ್ಯಾಹ್ನ ಮೇಲೆ ಶ್ರೀ. ಎನ್. ಕೆ. ಕುಲಕರ್ಣಿಯವರು 'ನಾಳೆಯ ಕನ್ನಡ–ಕರ್ನಾಟಕ' ಎಂಬ ವಿಷಯ ಭಾಷಣವಿತ್ತರು. ಅವರು ತಮ್ಮ ಭಾಷಣದಲ್ಲಿ ಕನ್ನಡ ನಾಡು, ಕನ್ನಡ ಭಾಷೆಗಳ ಪ್ರಾಚೀನ ವೈಭವವನ್ನು ವಿವರಿಸಿ, ಹಿಂದಿನ ಕನ್ನಡದ ಉಜ್ವಲ ಇತಿಹಾಸದಿಂದ ನಮಗಿಂದು ಹೊಸ ದೃಷ್ಟಿ ಬಂದಿದೆಯೆಂದು ತಿಳಿಸಿ, ಕನ್ನಡ ನಾಡಿನ ಸಾಹಿತ್ಯ ಕಲೆಗಳಲ್ಲಿರುವ ಲೋಪ ದೋಷಗಳನ್ನು ವಿವರಿಸಿ, ಕಿರಿಯರು ಕನ್ನಡ ನಾಡಿನ ಭವ್ಯ ಭವಿಷ್ಯತ್ತನ್ನು ನಿರ್ಮಿಸಬೇಕೆಂದು ಹೇಳಿದರು. ಬೆಂಗಳೂರಿನ ಶ್ರೀ. ಟಿ. ಆರ್. ಎಂ. ಸ್ವಾಮಿ ಮತ್ತು ಮಂಗಳೂರಿನ ಶ್ರೀ. ಜಿ. ಎಂ. ಇದಿನಬ್ಬ ಇವರು ಮಕ್ಕಳ ಪದ್ಯಗಳನ್ನು ಹಾಡಿದರು. ಸಂಗೀತ ಸ್ಪರ್ಧೆಯು ನಡೆಯಿತು.

ರಾತ್ರಿ ಬಾಲಕಿಯರ ನೃತ್ಯಗಳಿದ್ದವು. ನಾಟ್ಯಾಧ್ಯಾಪಕ ಶ್ರೀ. ಕೆ. ಎಲ್. ಭಟ್ಟರು ತಮ್ಮ ಶಿಷ್ಯೆಯರ ಪರಿಚಯ ಮಾಡಿಕೊಟ್ಟರು. ಕೋಲಾರದಿಂದ ಬಂದಿದ್ದ ಕುಮಾರರಾದ ನಾಗಾನಂದ ಮತ್ತು ನಾಗರಾಜರು 'ಸೊಹ್ರಾಬ್ ರುಸ್ತುಂ' ದೃಶ್ಯ ಅಭಿನಯಿಸಿದರು. ಬನ್ನಾಡಿಯ ಬಾಲಿಕೆಯರು 'ಸುಧನ್ವ ಕಾಳಗ'ವೆಂಬ ಯಕ್ಷಗಾನ ನಾಟಕವನ್ನಾಡಿದರು.

ಸಮ್ಮೇಳನದ ಕೊನೆಯ ದಿನ ತಾ. ೧೭ರಂದು ಪೂರ್ವಾಹ್ನ ೧೧ ಗಂಟೆಗೆ ಬೆಂಗಳೂರಿನ ಶ್ರೀ. ತ. ರಾ. ಸುಬ್ಬರಾಯರು 'ಮಕ್ಕಳೂ ಕಲಾಭಿರುಚಿಯೂ' ಎಂಬ ವಿಷಯ ವಿಚಾರ ಪ್ರಚೋದಕ ಭಾಷಣವಿತ್ತರು. ಸಮ್ಮೇಳನಾಧ್ಯಕ್ಷರು ಭಾಷಣಕರ್ತರ ಪರಿಚಯ ಮಾಡಿಕೊಟ್ಟರು.

"ಯಾರೂ ಕಲಿಸದೆ, ಯಾರಿಂದಲೂ ಕಲಿಯದೆ ಶಿಶು ಸೌಂದರ್ಯವನ್ನು ಉಪಾಸಿಸುತ್ತದೆ. ಹೂವನ್ನು ಕಂಡು ಹಿಗ್ಗುತ್ತಿದೆ. ಚಿಟ್ಟೆಯನ್ನು ಕಂಡು ಹಾರುತ್ತದೆ. ಕೆಂಡವನ್ನು ಹಿಡಿಯ ಹೋಗುತ್ತದೆ. ಹಾವನ್ನು ಮುಟ್ಟಹೋಗುತ್ತದೆ. ಆದರೆ ಬಳೆ ಬಳೆಯುತ್ತಾ ಶಿಶುವಿಗೆ ಹಿರಿಯರ ಸೋಂಕು ತಗಲಿ ನಮ್ಮಷ್ಟೇ ನಿರಸವಾಗುತ್ತದೆ. ಹೇಡಿಯಾಗುತ್ತದೆ. ಸೌಂದರ್ಯವನ್ನು ಕಂಡು ಅರಳುವ ಮನಸ್ಸು ಮುರುಟುತ್ತದೆ. ಮಗುವಿನ ಮನಸ್ಸು ಸ್ವಚ್ಛಂದವಾಗಿ ಹರಿಯಬಿಡದೆ ಹಿರಿಯರು ತಮ್ಮ ದಾಸ್ಯ ಬುದ್ಧಿಯನ್ನು ಮಗುವಿಗೂ ತಗಲಿಸಿ ಬಿಡುತ್ತೇವೆ" ಹೀಗೆಂದು ಶ್ರೀ. ತ. ರಾ. ಸುಬ್ಬರಾಯರು ಹೇಳಿದರು. ಅವರು ಮತ್ತೆ ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಹಿರಿಯರು ಮಗುವಿನ ಮೆದು ಮನಸ್ಸಿನಲ್ಲಿ ಕಲಾಭಿರುಚಿ, ರಸಿಕತೆ, ಶುಚಿ, ನಿರ್ಭಯ, ಸ್ವಾತಂತ್ರ್ಯ ಪ್ರೇಮಗಳನ್ನು ತುಂಬಿಸಬೇಕೆಂದೂ, ಮಕ್ಕಳಿಗಾಗಿ ಒಳ್ಳೆಯ ಸಾಹಿತ್ಯ, ನಾಟಕ, ಚಲಚ್ಚಿತ್ರಗಳು ನಿರ್ಮಾಣವಾಗಬೇಕೆಂದೂ, ಮನೆಯ ವಾತಾವರಣವು ನಿರ್ಮಲವಾಗಿದ್ದು ಮಗುವಿನ ಮನಸ್ಸು ಅರಳುವಂತಿರಬೇಕೆಂದೂ ಹೇಳಿ, ಮಕ್ಕಳಲ್ಲಿ ಎಲ್ಲಾ ವಿಧದಿಂದಲೂ ಕಲಾಭಿರುಚಿ ಹುಟ್ಟಿಸುವ ಪ್ರಯತ್ನ ನಮ್ಮ ನಾಡಿನಲ್ಲಿ ಆಗಲಿ ಎಂದು ತಿಳಿಸಿದರು.

ಬಳಿಕ ಹಿರಿಯರ ಭಾಷಣಗಳಾದುವು. ಶ್ರೀಗಳಾದ ಮಂಗಳೂರಿನ ಪಿ. ಕೆ. ನಾರಾಯಣ, ಕಯ್ಯಾರ ಕಿಞ್ಞಣ ರೈ, ತಿರುಮಲೇಶ್ವರ ಭಟ್, ಬಿ. ವಿ. ಕಕ್ಕಿಲ್ಲಾಯರೂ, ಕೋಲಾರದ ಶ್ರೀ। ವೆಂಕಟ ಕೃಷ್ಣಪ್ಪ ಇವರೂ ಉಡುಪಿಯ ಶ್ರೀ। ಕೆ. ವಿ. ಶೆಣೈ ಇತರರೂ ಸಮ್ಮೇಳನವನ್ನು ಜರಗಿಸಿ ಕಿರಿಯರಿಗೆ ಸಲಹೆ ಸೂಚನೆಗಳನ್ನಿತ್ತು ಅವರನ್ನು ಅಭಿನಂದಿಸಿದರು. ಶ್ರೀ। ಕೆ. ಎಲ್. ಭಟ್ಟರು ಭಾರತೀಯ ನೃತ್ಯದ ಕುರಿತು ಉಪನ್ಯಾಸವಿತ್ತರು.

ಈ ದಿನ ರಾತ್ರಿ ಸಿದ್ಧಾಪುರದ ಬಾಲಿಕೆಯರ ಒಂದು ನಾಟಕವೂ, ಉಡುಪಿ ಕಿರಿಯರ ನೃತ್ಯ ಪ್ರಹಸನಗಳೂ, ಮಂಗಳೂರು ಜನತಾ ರಂಗಭೂಮಿಯರ ನಾಟಕ, ವಾಚನ, ವಿನೋದಾವಳಿಗಳೂ ಇದ್ದುವು. ಸಮ್ಮೇಳನದ ಅಧ್ಯಕ್ಷರು ಬಹುಮಾನವಿತರಣೆ ಮಾಡಿದರು. ಕಾರ್ಯದರ್ಶಿ ಕುಮಾರ ಶ್ರೀನಿವಾಸ ಭಟ್ಟರು ಸಕಲರಿಗೂ ಕೃತಜ್ಞತೆಯನ್ನಿತ್ತರು.

[ಸಮ್ಮೇಳನ ನಿರ್ಣಯಗಳ ವಿವರವನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.]

Clergymen's Benefit Society, Mangalore.

(In Liquidation)

Notice is hereby given that a meeting of the creditors of the Society will be held on Wednesday 2-2-1944 at 4-30 p. m. at the office of the undersigned in Car Street Mangalore.

Mangalore, 17-1-1944.

M. Keshava Pai
Advocate
Liquidator.

ಬಾವು ಮತ್ತು ರಕ್ತ ವಿಷವೇರುವುದನ್ನು ತಡೆಯಿರಿ.

ಜಾಂಬಕ್ ಆದರ್ಶ ವಿಷಹಾರಿ ಔಷಧ

ಗಣ್ಯಮಾಡದ ಗಾಯವು, ವಿಷರೂಪಿಯಾಗಿ ನೋವು ಮತ್ತು ಸಂಕಷ್ಟಗಳನ್ನುಂಟು ಮಾಡುತ್ತದೆ. ಇದನ್ನು ಯಾವಾಗಲೂ ಗಾಯವಾದ ಕೂಡಲೇ ಜಾಂಬಕ್ ಲೇಪ ಸವರುವುದರಿಂದ ಪರಿಹರಿಸಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ಶುದ್ಧ ವನಸ್ಪತಿ ತೈಲವು ಚರ್ಮಕ್ಕೆ ಬೇಗನೇ ಅಂಟಿಕೊಂಡು ನೋವನ್ನು ಕಡಿಮೆಮಾಡಿ, ಬಾವನ್ನು ಇಳಿಸಿ, ಹೀಗೆ ಎಲ್ಲಾ ತರದ ಗಾಯ ವ್ರಣಗಳ ಕೊಳೆ ವಸ್ತುಗಳನ್ನು ಹೊರಹಾಕುತ್ತದೆ. ಜಾಂಬಕ್ ಕಲೆಯಿಲ್ಲದೆ ಗುಣಮಾಡುವುದು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಟ್ಟರು ಬ್ರಿಟಿಷ್ ಪ್ರಮುಖರು ಹಾಗೂ ಬ್ ಟ್ರಾಪರು ಗುಪ್ತ ಮಾತುಕತೆ ನಡೆಸಿರುವರೆಂದು ಕೈರೋದಿಂದ ಪ್ರವಾಡಾ ಪತ್ರಿಕೆಗೆ ಬಂದ ಒಂದು ಸುದ್ದಿಯಿಂದ ಮೊಸ್ಕೋದಲ್ಲಿ ವ ಮಿತ್ರ ವರ್ಗದವರಿಗೆ ಆಶ್ಚರ್ಯ ಸಂದೇಹಗಳುಂಟಾಗಿವೆಯೆಂದು ಮೊಸ್ಕೋದ ಸುದ್ದಿ ತಿಳಿಸುತ್ತದೆ. ರಶ್ಯನ್ ಪತ್ರಿಕೆಗಳನ್ನೋದುವವರು ಸಹ ಅದೇ ರೀತಿ ಆಶ್ಚರ್ಯಗೊಂಡಿರುವರಂತೆ. ಈ ಸುದ್ದಿ ವಿಚಾರದಲ್ಲಿ ಬ್ರಿಟಿಷ್ ಪತ್ರಿಕೋದ್ಯೋಗಿಗಳೊಡನೆ ಹಲವು ಸಲ ವಿಚಾರ ಮಾಡಲಾಯಿತಂತೆ. ಈ ಗಾಳಿ ಸುದ್ದಿ ಕುರಿತು ಮಿತ್ರ ವರ್ಗದ ರಾಜಕೀಯ ತಜ್ಞರೂ ಏನೂ ಹೇಳಲಾರದಾಗಿದ್ದಾರೆ. ಯುದ್ಧ ಕಾಲದಲ್ಲಿ ಈ ತರದ ಗಾಳಿ ಸುದ್ದಿಗಳು ಹರಡುವುದೇನೂ ಆಶ್ಚರ್ಯವಲ್ಲ. ಅಗತ್ಯವಿದ್ದವರು ತಮ್ಮ ಕೆಲಸ ಸಾಧಿಸಲಿಕ್ಕೆ ಹಾಗೂ ಮಿತ್ರ ಪಕ್ಷದಲ್ಲಿ ಒಡಕನ್ನುಂಟುಮಾಡಲಿಕ್ಕೆ ಹೀಗೆ ಸುದ್ದಿ ಹರಡಬಹುದಾಗಿದೆ. ಅಂತೂ ಕೈರೋ ಇಂಥಾ ಸುದ್ದಿಗಳಿಗೆ ಫಲವತ್ತಾದ ಪ್ರದೇಶ. ರಿಬ್ಬೆನ್ ಟ್ರಾಪರನ್ನು ಕಂಡ ಬ್ರಿಟಿಷ್ ಪ್ರಮುಖರು ಯಾರು, ಅವರ ಹೆಸರು ವಿವರಗಳೇನೆಂದು ತಿಳಿಯಲು ಮಾಡಿದ ಪ್ರಯತ್ನಗಳು ಇನ್ನೂ ಪ್ರಯೋಜನಕಾರಿಯಾಗಿಲ್ಲ. ಈ ಸುದ್ದಿ ಸುಳ್ಳೆಂದು ರಶ್ಯದಲ್ಲಿನ ಬ್ರಿಟಿಷ್ ರಾಯಭಾರಿ ಹೇಳಿಕೆಯಿತ್ತಿದ್ದಾನೆ.

ಯುಕ್ರೇನಿನಲ್ಲಿ ಜರ್ಮನರ ಪ್ರತಿ ಧಾಳಿಯು ಶಿಖರಕ್ಕೆ ಮುಟ್ಟಿರುವುದೆಂದು ರಾಯಿಟರ್ ವಿಶೇಷ ಸುದ್ದಿಗಾರನು ತಿಳಿಸುತ್ತಾನೆ. ಹಿಮಮಯ ರಣರಂಗದಲ್ಲಿ ಜೀವದ ಹಂಗದೊರೆದು ಬಿಳಿ ಸಮವಸ್ತ್ರಧಾರೀ ಸೈನಿಕರು ಹೋರಾಡುತ್ತಿರುವರು. ಇದೇ ರೀತಿ ಭೀಕರವಾಗಿ ಜರ್ಮನರು ಎಷ್ಟು ದಿವಸ ಹೋರಾಡುವರೆಂಬುದು ಪ್ರಶ್ನೆ. ಈ ಯುದ್ಧದ ಮೇಲೆ ವಾರ್ಸಾ-ಒಡೆಸ್ಸಾ ರೈಲ್ವೆಯ ಭವಿಷ್ಯ ಅವಲಂಬಿಸಿದೆ. ಚೆರ್ಕಾಸಿನ ಈಶಾನ್ಯ ಹಾಗೂ ಕಿರೋವಗ್ರಾಡಿನ ವಾಯುವ್ಯ ದಿಕ್ಕುಗಳಲ್ಲಿ ರಶ್ಯನರು ಧಾಳಿ ಮಾಡಿದರೆಂದು ಸೈನ್ಯ ಕಚೇರಿಯ ಪ್ರಕಟಣೆಯಿದೆ. ಇಟಲಿಯ ಪಶ್ಚಿಮ ಕರಾವಳಿಯಲ್ಲಿ ಜರ್ಮನರು ಕಟ್ಟಿರುವ ಗುಸ್ತವ್ ವ್ಯೂಹದ ಮೇಲೆ ಬ್ರಿಟಿಷ್ ಪಂಚಮ ದಳ ಪೆಟ್ಟು ಹಾಕುತ್ತಿದೆ. ಮಿಗ್ನಾನೋ ಈಗ ರಣರಂಗವಾಗಿರುವುದು. ಅಮೆರಿಕನ್ ಸೈನಿಕರು ಟ್ರೋಚಿಯೋದಿಂದ ನುಗ್ಗಿ ರಾಪಿಡೋ ನದಿಯ ಪೂರ್ವದಂಡೆ ಸೇರಿದ್ದಾರೆ. ನದಿಯ ಪಶ್ಚಿಮ ದಂಡೆಯಲ್ಲಿ ಜರ್ಮನರು ಕಟ್ಟಿದ ಅಭೇದ್ಯ ದುರ್ಗವಿದೆ. ದ್ವಿತೀಯ ರಂಗದ ಪ್ರಮುಖ ಸೇನಾಪತಿಗಳಾದ ಐಸೆನ್ ಹಾವರು ಪತ್ರಿಕೋದ್ಯಮಿಗಳಿಗೆ ಭೇಟಿಯಿತ್ತು ಮಿತ್ರರು ಅದರ ಸಿದ್ಧತೆ ಭರದಿಂದ ಮಾಡುತ್ತಿರುವುದಾಗಿ ಹೇಳಿದರು. ಬರ್ಮಾ ದಿಸ್ಸೆಯಲ್ಲಿ ಮಿತ್ರ ಸೈನ್ಯ ಮುಂದುವರಿಯುತ್ತಿದೆ. ಚರ್ಚಿಲರು ಬೇಗನೇ ಯುದ್ಧ ಪರಿಸ್ಥಿತಿ ವಿಚಾರ ಒಂದು ಹೇಳಿಕೆ ಕೊಡುವರೆಂದು ಪ್ರಕಟವಾಗಿದೆ.

ಸಮರಭೂಮಿಯ ಸಂಚಾರ

ಪೋಲೆಂಡು ರಶ್ಯಗಳ ಗಡಿನಾಡಿನ ಗಡಿಬಿಡಿ

— ಅಮೆರಿಕದ ಅಧ್ಯಕ್ಷರ ಹೊಸ ಯೋಜನೆ —

ಗಡಿಯಲ್ಲಿ ಗಡಿಬಿಡಿ

ಜರ್ಮನಿ ಹಿಂದೆ ಪೋಲೆಂಡನ್ನು ಆಕ್ರಮಿಸಿ, ಗಡಿದಾಟಿ ಹೋಗಿ ಈ ಮಹಾಯುದ್ಧದಂಥಾ ಗಡಿಬಿಡಿಯನ್ನು ತಂದಿತು. ಪೋಲೆಂಡಿನಲ್ಲೇ ದ್ವಿತೀಯ ಮಹಾಯುದ್ಧದ ರಣಭೇರಿ ಹೊಡೆಯಲಾಯಿತು! ಸದ್ಯಕ್ಕೆ ರಶ್ಯವೂ ಪೋಲೆಂಡ್ ಗಡಿದಾಟಿದೆ. ಲಂಡನಿನಲ್ಲಿರುವ ನ್ಯಾಯ ಸಮ್ಮತವೆನಿಸಿದ ಪೋಲೆಂಡ್ ಸರಕಾರವು ರಶ್ಯ ಈ ಗಡಿದಾಟಿದ ವಿಚಾರ ತನ್ನ ಪ್ರತಿಭಟನೆ ಸಾರಿದೆ. 'ನೀವು ನಮ್ಮನ್ನು ಉದ್ಧಾರಮಾಡಲು ಬರುತ್ತೀರೊ? ನಮ್ಮ ಮೇಲೆ ದಬ್ಬಾಳಿಕೆ ನಡೆಸಲು ಬರುತ್ತೀರೊ?" ಎಂದು ಪ್ರಶ್ನೆ ಹಾಕಿದೆ. ಪೋಲೆಂಡಿನ ಪರವಾಗಿ ಈ ಮಹಾಯುದ್ಧದಲ್ಲಿ ಸೇರಿದ ಬ್ರಿಟನು, ರಶ್ಯವಿಂದು ಗಡಿದಾಟಿ ಹೋದ ವಿಚಾರ ಸುಮ್ಮಗಿರುವುದೇ ನೋಡಬೇಕು. ಬ್ರಿಟನು ಅಮೆರಿಕೆಗಳ ಪತ್ರಿಕೆಗಳು ರಶ್ಯದ ಈ ಆಕ್ರಮಣ ನೀತಿಯನ್ನು ಖಂಡಿಸಿವೆ.

ಯುದ್ಧದ ಪ್ರಾರಂಭ ಕಾಲದಲ್ಲಿ ಜರ್ಮನಿಯೊಡನೆ ಸೇರಿ ರಶ್ಯವು ಪೋಲೆಂಡನ್ನು ಹಂಚಿಕೊಂಡಿತು. ಕಳೆದ ಯುದ್ಧಾಂತ್ಯದಲ್ಲಿ, ರಶ್ಯದಲ್ಲಿ ಅಂತಃಕಲಹವುಂಟಾಗಿ ತಳಮಳವಿದ್ದಾಗ ಪೋಲೆಂಡಿನ ಸೇನೆ ರಶ್ಯದ ಮೇಲೆ ಬಿದ್ದು ಬಿಳಿ ರಶ್ಯದ ವರೆಗೆ ಯುಕ್ರೇನಿನ ವರೆಗೂ ಆಕ್ರಮಣ ಮಾಡಿತು. ಮಿತ್ರ ರಾಷ್ಟ್ರಗಳು ಒಂದು ಕಟ್ಟು ಮಾಡಿ ಈಗಿನ ಲಿಥುವೇನಿಯ ಕೆಳಗಿನ ಸಾಲನ್ನು ಅನುಸರಿಸಿ ಗೊತ್ತು ಮಾಡಿದ್ದ ಪೋಲೆಂಡ್ ಗಡಿಯನ್ನು ಆಗ ಪೋಲೆಂಡ್ ಒಪ್ಪಲಿಲ್ಲ, ರಶ್ಯನರೂ ಒತ್ತಾಯ ಮಾಡಲಿಲ್ಲ. ಹೀಗೆ ಇಂದಿನ ಯುದ್ಧ ಪೂರ್ವದ ಪೋಲೆಂಡ್ ನಿರ್ಮಾಣವಾಯಿತು. ಇದು ಅನ್ಯಾಯವೆಂದು ರಶ್ಯ ಹೇಳುತ್ತಿದೆ. ಹಿಂದಕ್ಕೆ ವಿಧಿಸಲ್ಪಟ್ಟ ಗಡಿ (ಕರ್ಜನ್ ಗಡಿ) ಯೇ ನಿಜವಾದ ಗಡಿಯೆಂದು ರಶ್ಯ ವಾದಿಸುತ್ತದೆ. ಹೀಗಾಗಿ ರಶ್ಯ ಪೋಲೆಂಡ್‌ಗಳೊಳಗೆ ಗಡಿನಾಡಿನ ಕುರಿತು ಈ ಗಡಿಬಿಡಿ ಹುಟ್ಟಿರುವುದು.

ಪೋಲೆಂಡಿನ ದುರವಸ್ಥೆ

ಪೋಲೆಂಡು ಬಹುಕಾಲದಿಂದಲೂ ದುರವಸ್ಥೆಗೊಳಗಾದ ದೇಶ. ಬೆಲ್ಜಿಯಂ, ಹೊಲೆಂಡ್ ಅಥವಾ ಫ್ರಾನ್ಸಿನಂತೆ, ಇದಕ್ಕೂ ಸರಿಯಾದ ಗಡಿಯಿಲ್ಲ. ಅದರ ಮಾತೆಂಥರೆ ಪೂರ್ವ ಮತ್ತು ಪಶ್ಚಿಮ ಗಡಿಗಳೆದು; ನಿಜವಾಗಿ ವಿಚಾರಿಸಿದಲ್ಲಿ ಇವೆರಡೂ ಅದಕ್ಕಿಲ್ಲ. ಶತಮಾನಗಳಿಂದಲೂ ಪೋಲೆಂಡು, ರಶ್ಯ ಪ್ರಶ್ಯ ಮತ್ತು ಆಸ್ಟ್ರಿಯಗಳ ಕೊಳ್ಳೆಯಾಗಿದೆ. ೧೭೭೨ರಲ್ಲಿ ಜಾರಿನಾ ಕೆಥರಿನ್ ಮತ್ತು ಫೆಡ್ರಿಕ್ ದಿ ಗ್ರೇಟ್ ಇವರೊಳಗಾದ ಒಪ್ಪಂದದಂತೆ ಈ ಎರಡು ಆಕ್ರಮಣಗಾರರೊಳಗೆ ಅದು ಹಂಚಲ್ಪಟ್ಟಿತು. ಕೊನೆ ಕೊನೆಗೆ ಯೂರೋಪಿನ ಭೂಪಟದಿಂದಲೇ ಅದು ಅಂತರ್ಧಾನವಾಯಿತು. ಆ ಮೇಲೆ ೧೭೯೩ ಮತ್ತು ೧೭೯೫ರಲ್ಲಿ ಆಸ್ಟ್ರಿಯವೂ ಪೋಲೆಂಡನ್ನು ನುಂಗಲು ಪಾಲಿಗೆ ಸೇರಿಕೊಂಡಿತು. ಕೊನೆಗೆ ಕಳೆದ ಮಹಾಯುದ್ಧದ ಕೊನೆಗೆ, ೧೫೦ ವರ್ಷಗಳ ಗಡಿಬಿಡಿಯ ನಂತರ ಮಿತ್ರರು ಕರ್ಜನ್ ಗಡಿಯೊಂದನ್ನು ನಿರ್ಧರಿಸಿದರು. ಪೋಲರೇ ಕರ್ಜನ್ ಗಡಿಯನ್ನು ಒಪ್ಪಲಿಲ್ಲ. ಆ ಮೇಲೆ ರಶ್ಯದೊಡನೆ ಒಂದು ಕಾಳಗ ನಡೆದು ಅದರಲ್ಲಿ ರಶ್ಯನರು ಸೋತದ್ದರಿಂದ, ಪೋಲೆಂಡಿಗೆ ಕರ್ಜನ್ ಗಡಿಯಿಂದ ೧೦೦ ಮೈಲು ದೂರದಲ್ಲಿ ಗಡಿ ದೊರಕಿತು. ಪೋಲರು ತಮಗೆ ಈ ಗಡಿಯೇ ಬೇಕೆಂದೀಗ ಕೇಳುತ್ತಿದ್ದಾರೆ.

ಗತಿಸಿದ ಜನರಲ್ ಸಿಕೋರ್ಸ್ಕಿಯು, ಕಮ್ಯುನಿಸ್ಟ್ ವಿರೋಧಿಯಾದರೂ ದೂರದೃಷ್ಟಿಯ ರಾಜಕಾರಣಿಯಾದ್ದರಿಂದ, ಪೋಲೆಂಡಿನ ಭವಿಷ್ಯವು ರಶ್ಯವನ್ನು ಆಧರಿಸಿದೆಯೆಂದು ತಿಳಿದವನಾಗಿ, ಜರ್ಮನಿಯು ರಶ್ಯವನ್ನು ಆಕ್ರಮಿಸಿದ ಕೂಡಲೇ ರಶ್ಯದೊಡನೆ ಒಂದು ಒಪ್ಪಂದ ಮಾಡಿಕೊಂಡನು. ಈ ಒಪ್ಪಂದ ಪ್ರಕಾರ ೧೯೩೯ರಲ್ಲಿ ಪೋಲೆಂಡ್ ರಶ್ಯ ಜರ್ಮನಿಗಳೊಳಗೆ ವಿಭಾಗವಾದದ್ದು ಒಪ್ಪಿಕೊಳ್ಳಲಾಯಿತು. ಆದರೆ ಈ ಒಪ್ಪಂದವಾದರೂ ೧೯೩೯ರ ಮುಂಚಿನ ಗಡಿಯನ್ನು ಕೊಟ್ಟಿತೆ? ರಶ್ಯವು 'ಕೂಡದೆಂ'ದಿತು. ಪೋಲರು ಆಗಬಹುದೆಂದರು. ಇದರ ಮೇಲೆ ೧೯೪೩ರಲ್ಲಿ ೪,೩೦೦ ಪೋಲಿಷ್ ಸೈನಿಕರನ್ನು ಕಟ್ಯಾನ್ ಎಂಬಲ್ಲಿ ರಶ್ಯ ಸರಕಾರ ಕೊಂದಿತೆಂದು ಜನರಲ್ ಸಿಕೋರ್ಸ್ಕಿ ರಶ್ಯ ಸರಕಾರದ ಮೇಲೆ ಆಕ್ಷೇಪಕಾರಕ ಪತ್ರ ಬರೆದನು. ಇದು ನಾಜಿಗಳ ತಂತ್ರವೆಂದೂ, ಗೋಬೆಲ್ಸನ ಅಪಪ್ರಚಾರವೆಂದೂ ಆ ಮೇಲೆ ತಿಳಿಯಿತು. ಹೇಗಿದ್ದರೂ ಸಿಕೋರ್ಸ್ಕಿಯು ತನ್ನ ಮರಣಾವಧಿ ರಶ್ಯ ಪೋಲೆಂಡುಗಳೊಳಗೆ ಸ್ನೇಹವಿರುವಂತೆ ಪ್ರಯತ್ನಮಾಡಿದ್ದನು.

ತ್ರಿರಾಷ್ಟ್ರಗಳೊಳಗೆ ತಿಕ್ಕಾಟ

ಪೋಲಿಶ್ ಸರಕಾರಕ್ಕೆ ರಶ್ಯವು ಕೊಟ್ಟಿರುವ ಉತ್ತರವು ನಿಷಾದಕರವಿದೆಯೆಂದು ಪೋಲಿಶ್ ಜನರ ಅಭಿಪ್ರಾಯವೆಂದು ಲಂಡನಿನಿಂದೀಗ ಒಂದು ವಾರ್ತೆ ಬಂದಿದೆ. ಪೋಲಿಶ್ ಜನರು ಸ್ನೇಹ ಹಸ್ತನೀಡಿದಾಗ 'ರಶ್ಯನರು ಹೀಗೆ ಕಠೋರರಾದದ್ದು ವಿಷಮವಿದೆಯೆಂದೂ ಆ ಸುದ್ದಿ ಸಾರುತ್ತದೆ. ಹಾಗಾಗಿ ಇನ್ನು ಮುಂದೆ ಪರಿಸ್ಥಿತಿ ಯಾವ ರೂಪ ತಾಳುವುದೆಂದು ಹೇಳುವುದು ಕಷ್ಟವಿದೆಯಾಗಿ ರಾಯ್‌ಟರ್ ಸುದ್ದಿಗಾರನ ಹೇಳಿಕೆಯಿರುವುದು. ಪೋಲಿಶ್ ಸರಕಾರವು ಮುಂದಿನ ಹೆಜ್ಜೆಯಿಡುವ ಮೊದಲು ಬ್ರಿಟನು ಅಮೆರಿಕನ್ ಸರಕಾರಗಳೊಡನೆ ವಿಚಾರವಿನಿಮಯ ಮಾಡಬಹುದೆಂದು ಕೇಳಿಬರುತ್ತದೆ. ರಾಯ್‌ಟರ್ ವಿಶೇಷ ಸುದ್ದಿಗಾರನೂ ಇದೇ ಸೂಚನೆಯನ್ನು ಪೋಲಿಶ್ ಸರಕಾರಕ್ಕಿತ್ತಿರುವನು. ರಶ್ಯವು ಕೊಟ್ಟ ಉತ್ತರದಿಂದ ಮಿತ್ರ ಶಿಬಿರದಲ್ಲಿ ನಿರಾಶೆಯುಂಟಾಗಿದೆಯೆಂದೂ, ಕೇಳಿಬರುತ್ತದೆ. ಪರಸ್ಪರ ವಿಶ್ವಾಸವಿಲ್ಲದಿರುವುದೇ ಈ ಪರಿಸ್ಥಿತಿಗೆ ಕಾರಣವಾಗಿರುವುದೆಂಬುದು ಸ್ಪಷ್ಟವಿದೆ. ಪೋಲಿಶ್ ಸರಕಾರದ ಮೇಲೆ ವಿಶ್ವಾಸವಿಡಲು ಯಾವ ರೀತಿಯ ಭರವಸೆಬೇಕೆಂದು ಇದುವರೆಗೂ ರಶ್ಯನ್ ಸರಕಾರ ತಿಳಿಸಿಲ್ಲ. ಅದನ್ನು ತಿಳಿದಿದ್ದರೆ ದಾರಿ ಸುಗಮವಾಗುತಿತ್ತೇನೋ!

ರಶ್ಯನ್ ಸರಕಾರಕ್ಕೆ ಒಪ್ಪಿಗೆಯಿದ್ದರೆ ರಶ್ಯ ಪೋಲೆಂಡ್ ಗಡಿನಾಡಿನ ಸಮಸ್ಯೆ ಬಿಡಿಸುವರೆ ಉಭಯ ರಾಷ್ಟ್ರಗಳೊಡನೆ ವ್ಯವಹಾರ ಕೈಕೊಳ್ಳಲು ಅಮೆರಿಕ ಸಿದ್ಧವಾಗಿದೆಯೆಂದು ಕಾರ್ಡೆಲ್ ಹಲ್ಲರು ಹೇಳುತ್ತಾರೆ. ಇದನ್ನು ರಶ್ಯದ ಸರಕಾರಕ್ಕೆ ಈಗಾಗಲೇ ತಿಳಿಸಲಾಗಿದೆ. ಪೋಲೆಂಡ್ ಗಡಿನಾಡಿನ ವಿಚಾರ ರಶ್ಯವು ಕೊಟ್ಟ ಉತ್ತರಕ್ಕೆ ಬ್ರಿಟಿಷ್ ಪತ್ರಿಕೆಗಳೆಲ್ಲಾ ವಿಷಾದ ವ್ಯಕ್ತಮಾಡಿವೆ. ಕರ್ಜನ್ ಗಡಿಯ ತಳಹದಿಯ ಮೇಲೆ ಮಾತುಕತೆ ಪ್ರಾರಂಭಿಸಲು ರಶ್ಯ ನಿರಾಕರಿಸಿದ್ದು, ಹಾಗೂ ಈಗಿನ ಪೋಲಿಶ್ ಸರಕಾರದ ಮೇಲೆ ರಶ್ಯ ಮಾಡಿದ ಗಂಭೀರ ಆರೋಪ ಇವೆರಡು ರಶ್ಯನರಿತ್ತ ಉತ್ತರದಲ್ಲಿರುವ ಕಟು ವಿಚಾರಗಳು. ಹೀಗೆ ತಿಕ್ಕಾಟವುಂಟಾಗುವ ರೀತಿ ಬಹಿರಂಗ ಸ್ಪಷ್ಟಣೆ ಕೊಡುವುದಕ್ಕಿಂತ ಈ ಚರ್ಚಾಸ್ಪದ ಪ್ರಶ್ನೆಯನ್ನು ಸದ್ಯಕ್ಕೆ ಬಿಟ್ಟು ಬಿಡುವುದೇ ಯೋಗ್ಯವೆಂದು ಪತ್ರಿಕೆಗಳ ಅಭಿಪ್ರಾಯವೂ ಇದೆ. ಕರ್ಜನ್ ಗಡಿ ತಳಹದಿ ಮೇಲೆ ಮಾತುಕತೆ ಮುಂದುವರಿಸಲು ಪೋಲೆಂಡೂ ನಿರಾಕರಿಸಿದ್ದರೂ ಇನ್ನಿತರ ಮುಖ್ಯ ಪ್ರಶ್ನೆಗಳ ವಿಚಾರ ಅದು ನಿರಾಕರಿಸಿಲ್ಲ. ಸದ್ಯದ ಪೋಲಿಶ್ ಸರಕಾರದಲ್ಲಿ ಬದಲಾವಣೆಯಾಗಬೇಕೆಂದು ರಶ್ಯವು ಮಾಡಿದ ಸೂಚನೆಯನ್ನು ಬ್ರಿಟಿಷ್ ಪತ್ರಿಕೆಗಳು ವಿರೋಧಿಸುತ್ತವೆ. ಆಂಗ್ಲೋ ಅಮೆರಿಕನ್ ಸರಕಾರಗಳ ಸಲಹೆ ಪಡೆದು ರಶ್ಯ ಈ ಗಡಿನಾಡಿನ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕೆಂದು ಸಲಹೆ ಕೊಡಲಾಗಿದೆ. ಹೀಗಾಗಿ ಈಗ ರಶ್ಯನ್ ಸರಕಾರವೇ ಯೋಗ್ಯ ಕಾರಣ ಕೊಟ್ಟು ಮಿತ್ರರನ್ನು ಸಮಾಧಾನ ಪಡಿಸಬೇಕಾಗಿ ಬ್ರಿಟಿಷ್ ಪತ್ರಿಕೆಗಳು ಹೇಳುತ್ತಿವೆ.

ಯುದ್ಧಾನಂತರ ಇತ್ಯರ್ಥ

ಈ ಕುರಿತು ಈಗ ಪತ್ರಿಕೆಗಳಲ್ಲಿ ಗಡಿಬಿಡಿಯ ಸುದ್ದಿ ಬಹಳ ಬರುತ್ತಿದ್ದರೂ, ಮಿತ್ರವರ್ಗದವರೀಗ ರಶ್ಯದ ಬೆನ್ನು ಚಪ್ಪರಿಸುವದಲ್ಲದೆ ಪೋಲೆಂಡಿಗೆ ನೆರವಿಲ್ಲುವಂತೆ ಕಾಣುವುದಿಲ್ಲ. ಪರಿಸ್ಥಿತಿಯಾದರೂ ಹಾಗೆಯೇ ಇದೆ. ರಶ್ಯವನ್ನು ಸಮಾಧಾನಗೊಳಿಸದರೆ ಮಿತ್ರರಿಗಿಂದು ತೊಂದರೆಯುಂಟು. ಪೋಲೆಂಡ್ ಮಾತ್ರ ರಶ್ಯದ ಈ ನೀತಿ ತನಗೆ ತೀರಾ ಅನ್ಯಾಯವೆಂದು ಸಾಧಿಸುತ್ತಲಿವೆ. ಮಿತ್ರರೀಗ ಪೋಲೆಂಡನ್ನು ಸಮಾಧಾನ ಗೊಳಿಸಲು ಸಮರ್ಥರಾದರೆ ಮಹತ್ವದೊಂದು ಸಮಸ್ಯೆ ಪರಿಹಾರವಾದೀತು. ಇದಕ್ಕಿರುವ ಹಾದೀ ಒಂದು ಉಪಾಯವೆಂದರೆ, ನಿಜವಾದ ಗಡಿನಾಡಿನ ಇತ್ಯರ್ಥದ ವಿಚಾರವನ್ನೆಲ್ಲಾ ಯುದ್ಧಾನಂತರ ಮಾಡುವುದೆಂಬುದು. ಹೀಗೆ ಈಗ ಸಮಾಧಾನ ತರದು ಬಿಟ್ಟರೆ, ಯುದ್ಧಾನಂತರ ಮಾತ್ರ ಗಡಿನಾಡಿನ ಕುರಿತು ವಾದಿಸಿದರೆ ಸಾಕಾದೀತು. ಈಗ ಯಾರು ಮುಂದೆ ಬಂದರೂ ಯಾರು ಹಿಂದೆ ಬಿದ್ದರೂ ಅದರಿಂದ ಏನೂ ಪ್ರಯೋಜನವಿಲ್ಲವೆಂದಿಟ್ಟುಕೊಳ್ಳಬೇಕು.

ರಶ್ಯವು ಮೊದಲಿಂದಲೇ ಪೋಲೆಂಡು ಸ್ವತಂತ್ರವಾಗಬೇಕೆಂದು ಸಾರುತ್ತಲಿದೆ. ಆದರೆ ಇದು ಅರಿಟಿನಲ್ಲಿ ಇರುವೆಯನ್ನು ಹಾರಬಿಟ್ಟಂತೆ. 'ಈ ಸ್ವಾತಂತ್ರ್ಯವನ್ನು ಪೋಲೆಂಡು ಹೇಗೆ ಗಳಿಸಬಲ್ಲದು?' ಅದಕ್ಕೊಂದು ನೈಸರ್ಗಿಕ ಗಡಿಯಿಲ್ಲ. ಒಂದು ವಿಸ್ತೃತ ರಾಷ್ಟ್ರೀಯತೆಯೇ ಇಲ್ಲ. ನಿಜವಾಗಿ ನೋಡಿದರೆ ಅದೊಂದು ರಾಷ್ಟ್ರವೆನ್ನುವುದೇ ಸಾಧ್ಯವಿಲ್ಲ. ಮಾತ್ರವಲ್ಲದೆ ನಾಳೆಗೆ ರಶ್ಯ ವಿಜಯಿಯಾದರೆ ಪೂರ್ವ ಯೂರೋಪಿಗೆ ಅದೇ ಸರ್ವಾಧಿಕಾರಿಯಾಗುವುದು. ಹೀಗೆ ಪೋಲೆಂಡಿನ ಭವಿಷ್ಯವು ಸಂಪೂರ್ಣ ರಶ್ಯವನ್ನು ಆಧರಿಸಿರುವಾಗ, ಗಡಿವಿಚಾರವನ್ನು ಪೋಲೆಂಡು ಯುದ್ಧಾನಂತರ ಎತ್ತುವುದು ಅದರ ಹಿತಕ್ಕೆ ಒಳ್ಳೆಯದು.

ಅಮೆರಿಕದ ಅಧ್ಯಕ್ಷರು

ರೂಸ್‌ವೆಲ್ಟರು ಹೊಸತೊಂದು ಯೋಜನೆ ತಂದಿದ್ದಾರೆ. 'ಎಲ್ಲಾ ಶಕ್ತ ಜನರೂ, ಸಮವಯಸ್ಕರೂ ಸರಕಾರದ ಅಧೀನ, ಅವರ ಸೇವೆಯನ್ನು ಸರಕಾರ ಬೇಕಾದಾಗ ಕೇಳಬಹುದು. ಯಾವುದೇ ಕೆಲಸಕ್ಕಾದರೂ, ಕೂಡಲೇ ಅವರು ಬರಬೇಕು.' ಹೀಗೆ ಆ ಶಾಸನವಿದೆ. ಇದರಿಂದ ರೂಸ್‌ವೆಲ್ಟರು ಜನರನ್ನೆಲ್ಲಾ ಹತೋಟಿಗೆ ತರುವ ಪ್ರಯತ್ನ ಮಾಡಿದ್ದಾರೆ, ಮುಷ್ಕರಗಳು ತಲೆಯೆತ್ತದಂತೆ ಮಾಡಲೂ ಇದು ದಿವ್ಯೌಷಧವಾಗಿರುವುದು. 'ನಾವು ವಿಜಯ ದೊರೆಕಿತೆಂದು ಮತ್ತರಾಗಿರಕೂಡದು. ನಿಜವಾದ ಜಯ ಬಹಳ ದೂರವಿದೆ. ನಾವಿನ್ನೂ ಬಹಳ ದುಡಿಯಬೇಕು' ಎಂದು ಅವರು ಎಚ್ಚರಿಸಿದ್ದಾರೆ.

ರೂಸ್‌ವೆಲ್ಟರು ಜನತೆಗೆ ಹೀಗೆ ಹುರುಪುಗೊಡುವುದನ್ನು ನೋಡಿದರೆ, ಬೇಗನೇ ಬರಲಿರುವ ಅಧ್ಯಕ್ಷ ಚುನಾವಣೆಗೆ ಈ ಮೂಲಕ ಅವರು ಅಪ್ರತ್ಯಕ್ಷ ಜನರನ್ನು ಒಲಿಸುತ್ತಿರುವರೋ ಎಂದು ತಿಳಿಯಲೂ ಅವಕಾಶವಾಗಿದೆ. ಇದೇ ವರ್ಷ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಾಗಲಿದೆ. ಯುದ್ಧ ದೃಷ್ಟಿಯಿಂದಲೂ ಅಮೆರಿಕದ ದೃಷ್ಟಿಯಿಂದಲೂ ಇದು ಹೀಗೆ ಅತ್ಯಂತ ಮಹತ್ವದ ವರ್ಷ. ಕಳೆದ ಮಹಾ ಯುದ್ಧದ ಕಾಲದಲ್ಲೂ ಅಮೆರಿಕದ ಅಧ್ಯಕ್ಷ ವಿಲ್ಸನರು ಚುನಾವಣೆಯ ವಿಷಮಕ್ಕೆ ಸಿಕ್ಕಿಕೊಂಡರು. ವಿಲ್ಸನರು ಆಗ ಸ್ಥಾನಚ್ಯುತರಾಗಿ ಹೋದರು. ಇಂಥಾ ಚುನಾವಣೆಯ ಸನ್ನಿವೇಶ ಬಂದೊದಗಿದ್ದು ತೀರಾ ವಿಷಾದಕರವೆಂದು ಕ್ವಿಬೆಕ್ ಸಮ್ಮೇಳನದಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲರೇ ಉದ್ಗರಿಸಿದ್ದಾರೆ. ಪ್ರಪಂಚದಲ್ಲಿ ಇಂಥಾ ಕೋಲಾಹಲ ನಡೆಯುತ್ತಿರುವಾಗ, ರೂಸ್‌ವೆಲ್ಟರು ಅಧ್ಯಕ್ಷ ಸ್ಥಾನದಿಂದಿಳಿದು ಎಲ್ಲವನ್ನೂ ಅರ್ಧದಲ್ಲಿ ಬಿಟ್ಟು ಹೋಗಬೇಕಾಗುವುದೇ ನೋಡಬೇಕು.

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP

ಸ್ವದೇಶಾಭಿಮಾನಿ

ತಾರೀಕು 21—12—1943

ಕಿರಿಯರ ಸಮ್ಮೇಳನ

ಉಡುಪಿಯಲ್ಲಿ ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನ ಈ ವಾರ ಜರಗಿತು. ಜಿಲ್ಲೆಯ, ನಾಡಿನ ಮೂಲೆಮೂಲೆಗಳಿಂದ ಅನೇಕ ಮಂದಿ ಹಿರಿಯರೂ ಕಿರಿಯರೂ ಬಂದಿದ್ದರು. ಹಿರಿಯರೂ ಕಿರಿಯರೂ ಕೂಡಿ ವಿಚಾರವಿನಿಮಯ ಮಾಡಿದರು. ಹಿರಿಯರೊಡನೆ ಸಮಭುಜರಾಗಿ ಕಿರಿಯರು ಕೆಲಸ ಮಾಡಿದರು. ಹಿರಿಯರೊಡನೆ ಸಮಸ್ಪರ್ಧರಾಗಿ ಕಿರಿಯರೂ ಭಾಷಣ ಮಾಡಿದರು. ಕಿರಿಯರ ಉತ್ಸಾಹ ಹಿರಿಯರ ಪ್ರೋತ್ಸಾಹಗಳಿಂದ ಈ ಸಮ್ಮೇಳನವು ಅತ್ಯಂತ ಯಶಸ್ವಿಯಾಯಿತು.

ಕಿರಿಯರು ಉತ್ಸಾಹಿಗಳು. ಇಂದಿನ ಕ್ರಾಂತಿ ಜಗತ್ತು ಹಿರಿಯದಾದರೆ, ನಾಳೆಯ ಶಾಂತಿ ಜಗತ್ತು ಕಿರಿಯರದು. ಅಂಥಾ ಚೆಲುವಾದ ಜಗತ್ತನ್ನು ಕಟ್ಟಲು ಕಿರಿಯರು ಇಂದು ದುಡಿಯುತ್ತಾರೆ. ಇಡೀ ಪ್ರಪಂಚದ ಕಿರಿಯರೇ ಈ ಮಹಾ ಸಾಧನೆಗಾಗಿ ದುಡಿಯುತ್ತಿದ್ದಾರೆ. ಉಡುಪಿಯ ಕಿರಿಯರು, ಅಖಿಲ ಕರ್ನಾಟಕದ ಕಿರಿಯರು ಈ ಉದ್ದೇಶಕ್ಕಾಗಿ ತಮ್ಮ ಸಾಧ್ಯ ಸೇವೆ ಸಲ್ಲಿಸುತ್ತಾರೆ. ಕಿರಿಯರು ಉತ್ಸಾಹಿಗಳಿರುವುದರಿಂದ ನಾಳೆಯ ಶಾಂತಿ ಜಗತ್ತನ್ನು ಕಟ್ಟುವಲ್ಲಿ ಅವರು ಕೃತಾರ್ಥರಾದಾರೆಂದು ನಾವು ಭರವಸೆಗೊಂಡಿದ್ದೇವೆ.

ಶ್ರೀಗಳಾದ ಶಿವರಾಮ ಕಾರಂತ, ಎನ್. ಕೆ. ಕುಲಕರ್ಣಿ, ತ. ರಾ. ಸುಬ್ಬರಾವ್ ಈ ಮೂವರು ಮಹಾಶಯರು, ಮುಖ್ಯ ಭಾಷಣ ಕರ್ತರಾಗಿ ಮಂಗಳೂರು, ಧಾರವಾಡ, ಮೈಸೂರುಗಳಿಂದ ಬಂದು ಕಿರಿಯರನ್ನು ಪ್ರೋತ್ಸಾಹಿಸಿದರು. ಹರಸಿದರು, ಸಲಹೆ ಸೂಚನೆಗಳನ್ನಿತ್ತರು. ಈ ಮೂವರ ಮಾತುಗಳೂ ಅನುಭವಪೂರ್ಣವಿದ್ದು, ವಿಚಾರ ಪ್ರಚೋದಕವಿದ್ದು ನಮ್ಮ ನಾಡಿನ ಕಿರಿಯರಿಗೆ ನಿಜವಾದ ಮಾರ್ಗದರ್ಶಕವಿವೆ.

ಸಮ್ಮೇಳನಾಧ್ಯಕ್ಷ ಕುಮಾರ ಉಮೇಶರಾಯರು ಅಭ್ಯಾಸಪೂರ್ಣ ಭಾಷಣ ಮಾಡಿದರು. ಸಮ್ಮೇಳನದ ಕಾರ್ಯದರ್ಶಿಗಳು ಸ್ವಯಂಸೇವಕರು ಬಹಳ ಶ್ರಮವಹಿಸಿ ದುಡಿದು ಸಮ್ಮೇಳನ ಯಶಸ್ವಿಗೊಳಿಸಿದರು. ಉಡುಪಿಯ ಬಾಲಕ ಬಾಲಕಿಯರು ತಮ್ಮ ವಿವಿಧ ಕೈಗಾರಿಕೆ, ನೃತ್ಯ, ನಾಟಕ, ಸಂಗೀತ ಪ್ರಹಸನ ವಿನೋದಾವಳಿಗಳಿಂದ ಬಂದ ಅತಿಥಿಗಳನ್ನು ಪ್ರತಿನಿಧಿಗಳನ್ನು ಸಂತೋಷಗೊಳಿಸಿದರು. ಸಮ್ಮೇಳನದ ನಿರ್ಣಯಗಳೂ ಪ್ರಗತಿಪರ ವಿಚಾರವನ್ನೊಳಗೊಂಡಿದ್ದು ಅವು ಕಾರ್ಯರೂಪದಲ್ಲಿಳಿದರೆ ನಮ್ಮ ರಾಷ್ಟ್ರವನ್ನು ಶಕ್ತಿಶಾಲಿಯಾಗುವಂತೆ ಕಟ್ಟಲು ಉಪಯೋಗಿಯಾಗುವವು.

ಕಿರಿಯರ ಉತ್ಸಾಹ, ಚಟುವಟಿಕೆ, ನಿರ್ಣಯಗಳೆಲ್ಲಾ ಕೇವಲ ಸಮ್ಮೇಳನದಲ್ಲಿ ಮಾತ್ರ ಕೊನೆಗೊಳ್ಳದೆ ನಿರಂತರವಾಗಿ ನೆಲಸಿ, ಕನ್ನಡ ನಾಡನ್ನು ಚೆನ್ನದ ನಾಡಾಗಿ ಕಟ್ಟಲು ನೆರವಾಗಲಿ ಎಂದು ನಾವು ಹಾರೈಸುತ್ತೇವೆ.

ರಾಜಾಜಿ ಆಗಮನ

ಮದ್ರಾಸಿನ ಮಾಜಿ ಮಂತ್ರಿಗಳಾದ ರಾಜಗೋಪಾಲಾಚಾರ್ಯರು ಕಳೆದ ವಾರ ನಮ್ಮ ಜಿಲ್ಲೆಯನ್ನು ಹಲವು ಕಡೆಗಳಲ್ಲಿ ಸಂದರ್ಶಿಸಿ ಹಲವು ಭಾಷಣಗಳನ್ನಿತ್ತರು. ಈ ಸಲ ರಾಜಾಜಿಯವರು ಯಾವುದೇ ರಾಜಕೀಯ ಭಾಷಣ ಮಾಡದಿದ್ದು, ಕೇವಲ ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕಲಾಪಗಳಲ್ಲಿ ಮಾತ್ರ ಸಹಭಾಗಿಗಳಾದರೆಂಬುದು ಒಂದು ಗಮನೀಯ ವಿಚಾರವಾಗಿದೆ.

ರಾಜಾಜಿಯವರ ಈ ಸಲದ ಆಗಮನದಲ್ಲಿ ಶೀತಂಗೊಳ್ಳಿ ಹರಿಜನ ಕೊಲೊನಿ ಶಂಖು ಸ್ಥಾಪನೆ, ಬೆಸೆಂಟ್ ಹೈಸ್ಕೂಲ್ ಮತ್ತು ನಿಲೇಶ್ವರ ಹೈಸ್ಕೂಲುಗಳ ರಜತೋತ್ಸವ ಭಾಷಣ, ಮಂಗಳೂರು ಗವರ್ನಮೆಂಟ್ ಕಾಲೇಜ್ ವರ್ಧಂತಿ ಭಾಷಣ, ಸ್ಕೌಟ್ ರೇಲಿಯಲ್ಲಿ ಎಲಾಶಿಯಸ್ ಕಾಲೇಜಿನಲ್ಲಿ ಭಾಷಣಗಳು ಇವಿಷ್ಟು ಪ್ರಧಾನ ವಿಷಯಗಳಾಗಿವೆ.

ರಾಜಾಜಿಯವರು ಹರಿಜನ ಸೇವೆಯನ್ನು ಪ್ರಶಂಸಿಸಿ ಹರಸಿದರು. ಸ್ತ್ರೀ ವಿದ್ಯಾಭ್ಯಾಸ ಹೆಚ್ಚಬೇಕೆಂಬುದರೊಡನೆ ಅದು ರಾಷ್ಟ್ರೀಯ ಸಂಸ್ಕೃತಿಯಿಂದ ಕೂಡಿರಬೇಕೆಂದರು. ನೀಲೇಶ್ವರದಲ್ಲಿ ಕನ್ನಡ ಕೇರಳ ಮೈತ್ರಿ ಬೋಧಿಸಿದರು. ಕಾಲೇಜ್ ವಿದ್ಯಾರ್ಥಿಗಳಿಗೆ ಸ್ವತಂತ್ರ ವಿಚಾರ ಮಾಡಬೇಕೆಂದರು. ಎಲಾಶಿಯಸ್ ಕಾಲೇಜನ್ನು ಕೊಂಡಾಡಿದರು. ನಮ್ಮ ರಾಷ್ಟ್ರದಲ್ಲಿ ವಿವಿಧ ಮತ ಜಾತಿಗಳಿದ್ದರೂ ಸಂಸ್ಕೃತಿ ಒಂದೇ ಎಂದು ತಿಳಿಸಿದರು. ಸ್ಕೌಟುಗಳನ್ನು ಯೋಧರಾಗಬೇಕೆಂದು ಹರಸಿದರು. ಒಟ್ಟಿನಲ್ಲಿ ರಾಜಾಜಿ ಈ ಸಲ ಬಂದು ನಮ್ಮ ಜಿಲ್ಲೆಯ ಶೈಕ್ಷಣಿಕ ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ಒಂದು ಹೊಸ ಹುರುಪು ಹುಟ್ಟಿಸಿದರೆನಬಹುದು.

೧೪ ವರ್ಷದ ಬಳಿಕ ಬಿಡುಗಡೆ ಮತ್ತು ಬಂಧನ

ಡಾಕಾದ ಮೆಚುಬಜಾರ ಬಾಂಬ್ ಖಟ್ಲೆಯಲ್ಲಿ ೧೪ ವರ್ಷಗಳ ಶಿಕ್ಷೆಗೆ ಗುರಿಯಾದ ಶಚೀಂದ್ರ ಚಂದ್ರಕಾರ ಗುಪ್ತರನ್ನು ಡಾಕಾ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಿ, ಡಿ.ಐ. ಕಾನೂನಿನಂತೆ ಜೈಲಿನ ಬಾಗಿಲಲ್ಲಿ ಕೂಡಲೇ ಬಂಧಿಸಿರುವರು.

ರುಥರ್ ಫೋರ್ಡರಿಗೆ ರಜೆ

ಬಿಹಾರದ ಗವರ್ನರರೂ, ಸದ್ಯ ಬಂಗಾಳದ ತಾತ್ಕಾಲಿಕ ಗವರ್ನರರೂ ಆದ ಥೋಮಸ್ ರುಥರ್ ಫೋರ್ಡರಿಗೆ ಪ್ರಕೃತಿ ಅಸ್ವಸ್ಥತೆಯ ನಿಮಿತ್ತ ರಜೆ ದೊರಕಿದೆ.

ಅಮೆರಿಗೆ ತೊಂದರೆ

ಅಮೆರಿಯವರು ಯಾರ್ಕಿನಲ್ಲಿ ಭಾಷಣ ಮಾಡುತ್ತಿದ್ದಾಗ ಅನೇಕರು ಅವರಿಗೆ ಪ್ರಶ್ನೆಗಳ ಸುರಿಮಳೆ ಸುರಿಸಿದರು. ಬ್ರಿಟಿಷ್ ಕಮ್ಯುನಿಸ್ಟರೂ ಅವರಿಗೆ ಸಹಾಯವಿತ್ತರು. ಒಬ್ಬ ಪ್ರಶ್ನೆಕಾರನನ್ನು ಸಭೆಯಿಂದ ಹೊರಹಾಕಲಾಯಿತು.

ವಿದೇಶಗಳಿಂದ ಆಹಾರ ಬರಬೇಕು.

ಎಂಬುದಾಗಿ, ಆಹಾರ ಖಾತೆಯವರಿಗೆ ಸಲಹೆ ಕೊಡಲು ಕೇಂದ್ರ ಶಾಸನ ಮಂಡಳದಿಂದ ನಿಯಮಿಸಲ್ಪಟ್ಟ ಸ್ಥಾಯಿ ಸಮಿತಿ ಸೂಚಿಸಿದೆ.

ಸ್ವದೇಶ ಸಮಾಚಾರ

'ಅಮೆರಿಯವರನ್ನು ಹೊರತಳ್ಳಿ, ಭಾರತದ ದೇಶ ಪ್ರೇಮಿಗಳನ್ನು ಬಿಡುಗಡೆ ಮಾಡಿರಿ'

ಬ್ರಿಟಿಷ್ ವಿದ್ಯಾರ್ಥಿಗಳ ಹೇಳಿಕೆ

ಯುನಿವರ್ಸಿಟಿ ಲೇಬರ್ ಫೆಡರೇಶನ್ (ಬ್ರಿಟನಿನ ಸಂಯುಕ್ತ ಸೋಶಿಯಲಿಸ್ಟ್ ವಿದ್ಯಾರ್ಥಿಗಳ ಸಂಸ್ಥೆ) ಇದರ ಸಮ್ಮೇಳನದಲ್ಲಿ ಪ್ರತಿನಿಧಿಗಳು ಎಲ್ಲ ಕಡೆಗಳಿಂದಲೂ ಬಂದವರು, ಭಾರತದ ಕಡೆಗಿರುವ ಬ್ರಿಟಿಷ್ ಪ್ರತಿಗಾಮಿಗಳ ಧೋರಣೆಯನ್ನು ಖಂಡಿಸಿ, ಭಾರತದ ಭೀಕರ ಪರಿಸ್ಥಿತಿಯನ್ನು ಹೇಗಾದರೂ ಮಾಡಿ ಕೂಡಲೇ ಪರಿಹರಿಸಬೇಕೆಂದೂ, ಅಮೆರಿಯನ್ನು ಅಧಿಕಾರದಿಂದ ಹೊರತಳ್ಳಬೇಕೆಂದೂ, ಭಾರತದ ಮುಖಂಡರನ್ನು ಬಿಡುಗಡೆ ಮಾಡಬೇಕೆಂದೂ, ಭಾರತದ ಜನತೆ ಅವರಿಗೆ ಬೇಕಾದ ಸರಕಾರ ಸ್ಥಾಪಿಸುವ ಹಾಗೆ ಮಾಡಬೇಕೆಂದೂ ನಿರ್ಣಯವೊಂದು ಮಂಜೂರಾಗಿದೆ. ಕಾಂಗ್ರೆಸಿನ ಮಹತ್ವ, ಭಾರತದ ಸ್ವತಂತ್ರವಾಗುವ ಆವಶ್ಯಕತೆ, ಭಾರತದ ಭೀಕರ ಆಹಾರ ಪರಿಸ್ಥಿತಿ, ಮೊದಲಾದವು ಅಲ್ಲಿ ಚರ್ಚಿಸಲ್ಪಟ್ಟವು.

ಬ್ರಿಟಿಷ್ ಕೂಲಿಗಾರ ಚಳವಳದವರು ಜನವರಿ ೨೩ರಿಂದ ೩೦ರ ವರೆಗೆ 'ಭಾರತವಾರ'ವನ್ನು ಆಚರಿಸಲು ನಿರ್ಧರಿಸಿರುವರು. ಆ ಮಧ್ಯದಲ್ಲಿ ಲಂಡನಿನ ಪ್ರಸಿದ್ಧ ಥಿಯೇಟರೊಂದರಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಭೆ ಸೇರಿಸಲು ಇಂಡಿಯಾ ಲೀಗಿನವರು ನಿಶ್ಚಯಿಸಿದ್ದಾರೆ. ಇಂಡಿಯಾ ಲೀಗಿನವರು ಭಾರತದ ಬರಗಾಲ ದಿನಾಚರಣೆಯ ಸಭೆ ಕೂಡಿಸುತ್ತಿರುವರು.

ರೈತರಿಗಲ್ಲ — ಜಮೀನ್ದಾರರಿಗೆ!

ಆಹಾರ ಹೆಚ್ಚಿಸುವ ಸ್ಥಳ

ಸರಕಾರ 'ಆಹಾರ ಹೆಚ್ಚಿಸಿರಿ' ಎಂಬ ಪ್ರಚಾರ ಮಾಡುತ್ತಿದೆಯಷ್ಟೆ? ಈ ಬಗ್ಗೆ ಸ್ಥಳ ಸೌಕರ್ಯವನ್ನೂ ಕೊಡುತ್ತದೆ. ಆದರೆ ಗದ್ದೆಯಲ್ಲಿ ಕೃಷಿ ಮಾಡುವ ರೈತವರ್ಗಕ್ಕೆ ಈ ಸೌಕರ್ಯ ಕೊಡದೆ, ಗುಜರಾಥಿನ ಅಧಿಕಾರಿಗಳು ಅವರ ಬಾಲಬಡಿಯುವ ಜಮೀನ್ದಾರರಿಗೆ ಕೊಟ್ಟಿರುವ ಸುದ್ದಿ ಪತ್ರಿಕೆಗಳಲ್ಲೀಗ ಪ್ರಕಟವಾಗಿದೆ. ವೆಲ್ಸಾಡ್ ಎಂಬ ಹಳ್ಳಿಯ ೫೦೦ ಎಕ್ರೆ ಸ್ಥಳವು ಹೀಗೆ ಕೊಡಲ್ಪಟ್ಟಿತೆಂದು ತಿಳಿಯುತ್ತದೆ.

'ದಾಸ್ಯಕ್ಕಿಂತ ಅಂತಃಕಲಹ ಮೇಲು'

'ಬ್ರಿಟಿಷರ ಕೈಯಲ್ಲಿ ದಾಸರಾಗಿರುವುದಕ್ಕಿಂತ ಭಾರತವು ಸ್ವಾತಂತ್ರ್ಯ ಪಡೆದರೆ ಉಂಟಾಗುವ ಅಂತಃಕಲಹವಾದರೂ ಮೇಲು.' ಹೀಗೆಂದು ವಿಲ್ಸನ್ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ಶ್ರೀ ರಾಮಕೃಷ್ಣ ಮೋಡಕರು ಹೇಳಿದರು. ಅವರು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ವಿಳಂಬ ಮಾಡುವುದೇಕೆಂದೂ ಕೇಳಿದರು.

ಶ್ರೀ ಆರ್. ಎಸ್. ಪಂಡಿತರ ನಿಧನ

ಜವಾಹರಲಾಲರ ಸೋದರಿಯರಾದ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರ ಪತಿ ಶ್ರೀ ಆರ್. ಎಸ್. ಪಂಡಿತರು ತಾ. ೧೪ರಂದು ಲಕ್ನೋದಲ್ಲಿ ನಿಧನ ಹೊಂದಿದರು. ಇವರು ಸ್ವಲ್ಪ ರೋಗದಿಂದ ನರಳುತಿದ್ದು, ಕಳೆದ ೩ ತಿಂಗಳಿಂದ ಹಾಸಿಗೆ ಹಿಡಿದಿದ್ದರು. ಇವರು ಉಜ್ವಲ ರಾಷ್ಟ್ರಾಭಿಮಾನಿಗಳಿದ್ದು ಅಚಲ ಕಾಂಗ್ರೆಸ್ ಭಕ್ತರಿದ್ದ. ಇವರ ನಿಧನದಿಂದ ಇಡೀ ರಾಷ್ಟ್ರವೇ ಇಂದು ಅಪಾರ ದುಃಖಕ್ಕೀಡಾಗಿದೆ.

ಸುರೇಶ ವೈದ್ಯರ ಮೇಲೆ ದಾವೆ

ಚರಿತ್ರೆಯಲ್ಲೇ ಪ್ರಥಮವಿದು!

ಅಮೆರಿಕದ 'ಟೈಮ್ಸ್' ಮತ್ತು 'ಲೈಫ್' ಪತ್ರಿಕೆಯ ಲಂಡನ್ ಸಂಪಾದಕರಾದ ಸುರೇಶ ವೈದ್ಯರೆಂಬ ಭಾರತೀಯರು ಬ್ರಿಟಿಷ್ ಸೈನ್ಯಕ್ಕೆ ಸೇರಲು ನಿರಾಕರಿಸಿದ್ದಕ್ಕೆ ಅವರು ಪೋಲೀಸ್ ಕೋರ್ಟಿನ ಮುಂದೆ ಹಾಜರಾಗಬೇಕೆಂದು ಅವರ ಮೇಲೆ ಸಮನ್ಸ್ ಆಗಿದೆ. ಇವರು ಉಜ್ವಲ ರಾಷ್ಟ್ರಭಕ್ತರಿರುವರು. ಈ ತರದ ದಾವೆ ಇತಿಹಾಸದಲ್ಲೇ ಇದು ಮೊದಲನೆಯದು.

ಸಿಂಧ್ಯ ಇಂಜಿನಿಯರಿಂಗ್ ಯೂನಿಯನ್ ಸದಸ್ಯರು ತಳ್ಳಲ್ಪಟ್ಟರು!

ವಿಶಾಖಪಟ್ಟಣದ ಸಿಂಧ್ಯ ಕಂಪೆನಿಯ ಇಂಜಿನಿಯರಿಂಗ್ ಶಾಖೆಯ ೪೨ ಮಂದಿ ಸದಸ್ಯರು ಕೆಲಸದಿಂದ ತಳ್ಳಿ ಹಾಕಲ್ಪಟ್ಟರೆಂದೂ, ಅವರು ಒಂದು ಟ್ರೇಡ್ ಯೂನಿಯನ್ ಸ್ಥಾಪಿಸಲು ಪ್ರಯತ್ನಿಸುತ್ತಿದ್ದು ಮೆನೆಜ್‌ಮೆಂಟಿನವರಿಂದ ಸ್ಥಾಪಿಸಲ್ಪಡುವ ಒಂದು ಕಪಟ ಯೂನಿಯನಿಗೆ ಸಹಿ ಹಾಕಲು ಒಪ್ಪದಿರುವುದೇ ಅವರ ಕೆಲಸ ಹೋಗಲು ಕಾರಣವೆಂದೂ ಪೀಪಲ್ಸ್ ವಾರ್ ಪತ್ರಿಕೆ ವರದಿಯಿದೆ.

ತಾಯೆ! ಪಿತನು ಅಮರನು!

ವಿಜಯಲಕ್ಷ್ಮಿ ಪಂಡಿತರಿಗೆ ಕುಮಾರಿಯರ ತಂತಿ!

'ನಾವು ಧೈರ್ಯಗೆಡುವುದಿಲ್ಲ. ಅಮ್ಮಾ ನೀನೂ ಅದೇ ಧೈರ್ಯದಲ್ಲಿರು. ನಮ್ಮ ಪಿತನು ಅಮರನು. ಅವನ ಧ್ಯೇಯ ನಮ್ಮನ್ನು ತೊಲಗಿ ಎಂದೂ ಹೋಗದು. ನಿನಗೂ ರೀತಾಳಿಗೂ ನಮ್ಮ ಪ್ರೇಮಾಲಿಂಗನ' ಹೀಗೆಂದು ಪತಿಯ ಮರಣದಿಂದ ದುಃಖಿಸುವ ತಾಯಿಗೆ ಕುಮಾರಿ ಚಂದ್ರಲೇಖಾ ನಯನತಾರಾ ಇವರು ಅಮೆರಿಕದಿಂದ ತಂತಿ ಕಳುಹಿಸಿರುವರು. ದೇಶದ ಬೇರೆ ಬೇರೆ ಕಡೆಗಳಿಂದ ರಾಷ್ಟ್ರದ ಮುಖಂಡರಿಂದ ಶ್ರೀ ಆರ್. ಎಸ್. ಪಂಡಿತರ ನಿಧನದ ಬಗ್ಗೆ ಸಂತಾಪ ಸೂಚಕ ತಂತಿ ಬರುತ್ತಿದೆ.

ನಮ್ಮ ಜನರ ಶಕ್ತಿಯಲ್ಲಿ ನನಗೆ ವಿಶ್ವಾಸ ಕಡಿಮೆಯಾಗಿಲ್ಲ

ಕಮಲಾದೇವಿಯವರ ಹೇಳಿಕೆ

ಶ್ರೀಮತಿ ಕಮಲಾದೇವಿಯವರು ವೆಲ್ಲೂರು ಜೈಲಿನಿಂದ ಅನಾರೋಗ್ಯದ ನಿಮಿತ್ತ ಬಿಡುಗಡೆಗೊಂಡವರು ಒಂದು ಹೇಳಿಕೆ ಕೊಡುತ್ತಾ ಅದರಲ್ಲಿ ಸೆರೆಯಿಂದ ಹೊರಬಂದದ್ದು ನನಗೆ ಸಂತೋಷ ಕೊಡುವುದಾದರೂ, ನನ್ನ ಹೃದಯ ಸೆರೆಯ ಸಲಾಕೆಗಳ ಹಿಂದಿರುವವರ ಕಡೆಗೇ ಹರಿಯುತ್ತಿದೆ. ಸರಕಾರದ ಹೃದಯ ಪರಿವರ್ತನೆಗಾಗಿ ನಾನು ನಿರೀಕ್ಷಿಸುವುದಿಲ್ಲ; ಜನರ ಶಕ್ತಿಯಲ್ಲಿ ನನಗೆ ವಿಶ್ವಾಸವಿದೆ. ಸ್ವಾತಂತ್ರ್ಯ ಗಳಿಸುವ ಅವರ ಶಕ್ತಿಯನ್ನು ನಾನು ಹೇಗೆ ನಂಬದಿರಲಿ, ಎಂದು ತಿಳಿಸಿರುವರು.

1943-1944

Not because it is a time honoured custom but because we would feel ungrateful, if we did not express our appreciation to those whose loyalty, friendship and patronage make our success possible.

To our thousands of customer friends, the Directors and Staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desires.

ESTD. 1906.

CANARA BANK LTD.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಸಭೆಯು ಅದರ ಆಫೀಸಿನಲ್ಲಿ ತಾ. ೧೭ರಂದು ಸಂಜೆ ಜರಗಿತು ಹೊಸ ಕೌನ್ಸಿಲರ್ ಶ್ರೀ ವಿ ರಾಮರಾಯರು ರಾಜಭಕ್ತಿ ಪ್ರಮಾಣ ತೆಗೆದುಕೊಂಡರು ಬೊಕ್ಕಪಟ್ಣ ಬಜ್ಪೆಗಳಿಗೆ ಸದ್ಯ ಇಬ್ಬರು ಸಂಪೂರ್ಣ ಸಮಯದ ವೈದ್ಯ ಸನ್ನಿಡಲಾಗುವುದಿಲ್ಲವೆಂದೂ ಬೊಕ್ಕಪಟ್ಣದ ವೈದ್ಯರೇ ಬಜಯಿಯಲ್ಲಿಯೂ ಹಾಗೆ ಎರಡೂ ಕಡೆಗಳಲ್ಲಿ ವೈದ್ಯ ಕಾರ್ಯವನ್ನು ಮೂರು ತಿಂಗಳ ವರೆಗೆ ನಡೆಸಿ ನೋಡಬೇಕೆಂದೂ ತೀರ್ಮಾನ ವಾಯಿತು 'ವೆಲ್ಕಂ ಶೋ'ದ ಮಾಲಕರು ತಮ್ಮ ದೇಶಾದೆ (ಮಣ್ಣಗುಡ್ಡೆಯಲ್ಲಿ ಆರಂಭವಾಗಿದೆ) ೧೦ ಕುದುರೆ ಶಕ್ತಿ ಎಣ್ಣೆಯಂತ್ರಕ್ಕಾಗಿ ಅರ್ಜಿ ಮಾಡಿದ್ದು ವಕೀಲರ ಮುಖಾಂತರ ವಾದಿಸಿದರು ಹೆಲ್ತ್ ಆಫೀಸರು ಏಕೆ ತಾವು ಸಮ್ಮತಿಸಲಿಲ್ಲವೆಂಬುದನ್ನು ತಿಳಿಸಿದರು ಇತ್ಯರ್ಥಕ್ಕೆ ಬರುವ ಸೋಮವಾರ ಸಭೆ ಜರಗಬೇಕೆಂದಾಯಿತು

ಜಿಲ್ಲೆಯಲ್ಲಿ ರೇಶನಿಂಗ್

ತಾ ೧೮ರಿಂದ ದಕ್ಷಿಣ ಕನ್ನಡದಲ್ಲಿ ರೇಶನಿಂಗ್ ಮಾಡುವುದಾಗಿ ಪ್ರಸಿದ್ಧಿಸಲ್ಪಟ್ಟ ಸ್ಥಳಗಳಲ್ಲಿ ಸರಕಾರದವರು ರೇಶನಿಂಗ್ ಆರ್ಡರು ಜಾರಿ ಮಾಡಿರುವರು

ಜಿಲ್ಲಾ ಆಹಾರ ಸಮಿತಿ

ಶ್ರೀ ಎ ಬಿ ಶೆಟ್ಟರ ಪ್ರಶ್ನೆಗಳು

ಜಿಲ್ಲಾ ಆಹಾರ ಸಮಿತಿಯ ಸಭೆಯು ಇದೇ ತಾ ೨೪ರಂದು ಜರಗುವುದು ಈ ಸಭೆಯ ಮುಂದೆ ಈ ಕೆಳಗಿನ ಮಾಹಿತಿಯನ್ನು ತಿಳಿಸಬೇಕಾಗಿ ಶ್ರೀ ಎ ಬಿ ಶೆಟ್ಟರು ಕಲೆಕ್ಟರರಿಗೆ ಬರೆದಿದ್ದಾರೆ

೧ ಪ್ರತಿ ತಾಲೂಕಿನಲ್ಲ ಉತ್ಪತ್ತಿಯಾಗುವ ಮತ್ತು ಉಪಯೋಗಕ್ಕೆ ಬೇಕಾಗುವ ಅಕ್ಕಿಯೆಷ್ಟು? ೨ ಹೆಚ್ಚು ಬೆಳೆ ಬೆಳೆಸಲು ಮಾಡಿದ ಪ್ರಯತ್ನಗಳು ಯಾವುವು? ೩ ಈ ಜಿಲ್ಲೆಗಾಗಿ ಬರುವ ಚಿಮಿಣಿ ಎಣ್ಣೆ ಮತ್ತು ಸಕ್ಕರೆ ಎಷ್ಟು ಮತ್ತು ಆಯಾ ರೆವಿನ್ಯೂ ಡಿವಿಜನಿನಲ್ಲಿ ಇವನ್ನು ಹಂಚಲು ಯಾವ ಏರ್ಪಾಡ ಮಾಡಲಾಗಿದೆ ಇದರ ಪೈಕಿ ಎಷ್ಟು ಸಹಕಾರಿ ಸ್ಟೋರುಗಳ ಮೂಲಕ ಮಾರಾಟವಾಗುತ್ತದೆ ೪ ಕೃಷಿಯ ಉದ್ದೇಶದಿಂದ ಈ ಜಿಲ್ಲೆಗೆ ಕೊಟ್ಟ ಅಥವಾ ಕೊಡಬಹುದಾದ ಕಬ್ಬಿಣ ಮತ್ತು ಉಕ್ಕು ಎಷ್ಟು? ಇವುಗಳಿಂದ ಬೇಕಾದ ಉಪಕರಣಗಳನ್ನು ತಯಾರಿಸಲು ಯಾವ ಏರ್ಪಾಡು ಮಾಡಲಾಗಿದೆ ಕೃಷಿಕರಿಗೆ ಇವನ್ನು ಸ್ಟೋರುಗಳ ಮೂಲಕ ಒದಗಿಸಲಾಗುವದೆ? ೫ ಕಾಸರಗೋಡು ತಾಲೂಕಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯವುಳ್ಳ ಕಾರ್ಯಕ್ರಮವನ್ನು ನಿರ್ಧರಿಸತಕ್ಕದು ಪರ್ಮಿಟು ಮೂಲಕ ಕಾಸರಗೋಡು ತಾಲೂಕಿಗೆ ಕಳುಹಿಸಿದ ಅಕ್ಕಿ ಎಷ್ಟು ಮತ್ತು ಯಾವ ಯಾವ ಕ್ರಯಕ್ಕೆ ಕೊಂಡು ಕೊಂಡದ್ದು

ಜಾನುವಾರು ರೋಗ

ಪುನಃ ಇನ್ನೊಂದು ಪತ್ರದಲ್ಲಿ ಶ್ರೀ ಶೆಟ್ಟರು ಈ ಕೆಳಗಿನ ನಿರ್ಣಯವನ್ನು ಸಭೆಯ ಮುಂದಿಡುವುದಾಗಿ ಕಲೆಕ್ಟರರಿಗೆ ತಿಳಿಸಿದ್ದಾರೆ

"ಈ ಜಿಲ್ಲೆಯಲ್ಲಿ ಜಾನುವಾರು ರೋಗ ವಿಪರೀತ ಹಬ್ಬಿಕೊಂಡಿದ್ದು ಇದರ ಪರಿಣಾಮವಾಗಿ ಬಹಳ ಜಾನುವಾರು ಸಾಯುತ್ತಲಿರುವುದರಿಂದ ಕೃಷಿಗೂ ಹಾಲು ಸಿಕ್ಕುವುದಕ್ಕೂ ಬಹಳ ತೊಂದರೆಯಾಗುವ ಸಂಭವವಿರುವುದರಿಂದ ಈ ಜಾನುವಾರುಗಳಿಗೆ ದಾಕು ಹಾಕಿಸಲು ಬೇಕಾದ ಔಷಧಿಗಳನ್ನು ಕೂಡಲೇ ತರಿಸುವ ಏರ್ಪಾಡು ಮಾಡಬೇಕಾಗಿ ಸರಕಾರವನ್ನು ಈ ಸಭೆಯು ಒತ್ತಾಯಪಡಿಸುತ್ತದೆ. ಜಿಲ್ಲಾ ಕಲೆಕ್ಟರರು ಈ ನಿರ್ಣಯವನ್ನು ಕೂಡಲೇ ಮದ್ರಾಸು ಸರಕಾರಕ್ಕೆ ಕಳುಹಿಸತಕ್ಕದ್ದು.

ಜಾನುವಾರು ರೋಗದ ವಿಷಯದಲ್ಲಿ ಶ್ರೀ ಶೆಟ್ಟರು ಮದ್ರಾಸು ಗವರ್ನರರ ಎಡ್ವೈಸರರಾದ ಶ್ರೀ ಶಾನು ಮೂರ್ತಿಯವರಿಗೂ ಒಂದು ಪತ್ರ ಬರೆದಿರುವರು.

ಆಗಮನ

ಡಿಪ್ಯುಟಿ ಕಮಿಶನರ್ ಒಫ್ ಸಿವಿಲ್ ಸಪ್ಲೈಸ್ ಇವರು ತಾ. ೨೨ರಂದು ಮಂಗಳೂರಿಗೆ ಬಂದು ಮೂರು ದಿನ ಇಲ್ಲಿರುವರು

ನೇಮಕ

ಶ್ರೀ| ಟಿ ಜಿ ಬಂಗೇರರಿಗೆ IIIನೇ ತರಗತಿ ಮೆಜಿಸ್ಟ್ರೇರಿಯಲ್ ಅಧಿಕಾರವೂ, ಮಿಸ್ ಬೆರ್ನಡ್ಯಾನ್ ಅರಾಂಹಾ ಮತ್ತು ಶ್ರೀಮತಿ ಎಂ. ಗಿರಿಜಾ ಬ್ಯಾ ಇವರಿಗೆ ಹಂಗಾಮಿ ಲೇಡಿ ಅಸಿಸ್ಟೆಂಟ್ ಸರ್ಜನ್ ಕೆಲಸವೂ ದೊರಕಿದೆ ಶ್ರೀ| ಯು ಪಿ ನಾಯಕ್ ಇವರು ಫ್ಯಾಕ್ಟರಿಗಳ ಅಸಿ| ಇನ್ಸ್‌ಪೆಕ್ಟರರಾಗಿ ಆರಿಸಲ್ಪಟ್ಟು ಮದರಾಸಿಗೆ ತೆರಳಿರುವರು

ತ್ಯಾಗರಾಜ ಮಹೋತ್ಸವ

ಬೆಸೆಂಟ್ ಬಾಲಿಕಾ ಹೈಸ್ಕೂಲಲ್ಲಿ ಕಳೆದ ಆದಿತ್ಯವಾರ ಶ್ರೀ| ವಿ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಿಂದ ತ್ಯಾಗರಾಜರ ಕುರಿತು ಶ್ರೀಗಳಾದ ಎಸ್ ಮುಕುಂದರಾವ್, ಗೋಪಾಲಭಟ್ಟ ಇವರು ಮಾತನಾಡಿದರು ನಾನಾ ರೀತಿಯ ಸಂಗೀತ ಕಾರ್ಯಕ್ರಮಗಳಿದ್ದುವು

ವಿದ್ಯಾರ್ಥಿ ಸಮ್ಮೇಳನ

ಮಂಗಳೂರು ವಿದ್ಯಾರ್ಥಿ ಸಮ್ಮೇಳನವು ತಾ ೩೦ರಲ್ಲಿ ಡಾ| ಪಿ ಸುಬ್ಬರಾಯರ ಅಧ್ಯಕ್ಷತೆಯಿಂದ ಜರಗುವುದೆಂದೂ ಅದೇ ದಿವ ಶ್ರೀ| ರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯೂ ಜರಗುವುದೆಂದೂ ತಿಳಿದಿದೆ

ಅ ಕ ಪತ್ರಿಕೋದ್ಯೋಗಿ ಸಮ್ಮೇಳನ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಫೆಬ್ರವರಿ ತಾ ೧೯ ೨೦ರಂದು ಮಂಗಳೂರಲ್ಲಿ ಜರಗಲಿರುವುದೆಂದೂ 'ಸ್ವದೇಶಮಿತ್ರನ್' ಪತ್ರಿಕಾ ಸಂಪಾದಕ ಶ್ರೀ| ಸಿ ಆರ್ ಶ್ರೀನಿವಾಸರು ಅಧ್ಯಕ್ಷತೆ ವಹಿಸುವರೆಂದೂ, ಸಮ್ಮೇಳನಕ್ಕೆ ಬರಲಿರುವ ಪ್ರತಿನಿಧಿಗಳು ಬೇಗನೇ ಪ್ರತಿನಿಧಿ ಹಾಸಲು ಸಮೇತ ತಮ್ಮ ಹೆಸರು ವಿಳಾಸಗಳನ್ನು ತಿಳಿಸತಕ್ಕದೆಂದೂ ಸ್ವಾಗತ ಸಮಿತಿಯವರ ವಿನಂತಿಯಿದೆ

ಚಲಚ್ಚಿತ್ರ ವಿಮರ್ಶಕ ಕೂಟ

ಶ್ರೀ ತ ರಾ ಸುಬ್ಬರಾಯರ ಭಾಷಣ

ತಾ ೧೪ರಂದು ಸಂಜೆ ೬ ಗಂಟೆಗೆ ಜಿಲ್ಲಾ ಪತ್ರಿಕೋದ್ಯೋಗೀ ಸಂಘದ ಕಚೇರಿಯಲ್ಲಿ ಕೆನರಾ ಚಲಚ್ಚಿತ್ರ ಕೂಟದ ಸಭೆಯು ಶ್ರೀ ತ ರಾ ತಲ್ಲೇರಿಕರರ ಅಧ್ಯಕ್ಷತೆಯಲ್ಲಿ ಸೇರಿತು ಬೆಂಗಳೂರಿನ ಶ್ರೀ ತ ರಾ ಸುಬ್ಬರಾಯರು ಇಂದಿನ ಭಾರತೀಯ ಚಲಚ್ಚಿತ್ರಗಳ ಲೋಪದೋಷಗಳ, ಚಲಚ್ಚಿತ್ರ ವಿಮರ್ಶಕರ ಕರ್ತವ್ಯ ಎಂಬೀ ವಿಷಯ ಭಾಷಣವಿತ್ತರು ಶ್ರೀ| ಕಯ್ಯಾರ ಕಿಞ್ಞಣ್ಣ ರೈಗಳು ಭಾಷಣ ಕರ್ತರ ಪರಿಚಯವನ್ನು ಮಾಡಿ ಕೊಟ್ಟ ಬಳಿಕ, ಶ್ರೀ| ಸುಬ್ಬರಾಯರ ಮಾತನಾಡುತ್ತಾ, ಇಂದಿನ ಒಂದೆರಡು ಚಿತ್ರಗಳಲ್ಲದೆ ಭಾರತದಲ್ಲಿ ನಮ್ಮ ಜನತೆಯ ಜೀವನವನ್ನು ಚಿತ್ರಿಸುವ ಚಲಚ್ಚಿತ್ರಗಳು ಒಂದಿಲ್ಲವೆಂದೂ, ಕೇವಲ ಮನರಂಜನೆಯೆಂದು ಅದರಿಂದ ಏನೇನೂ ನಮ್ಮ ಜನತೆಗೂ ನಮಗೂ ಪ್ರಯೋಜನವಾಗದಿದ್ದರೆ ಅಂಥಾ ಚಿತ್ರಗಳನ್ನು ನಿರ್ಮಿಸಿ ಪ್ರಯೋಜನವಿಲ್ಲವೆಂದೂ ಹೇಳಿ, ಚಲಚ್ಚಿತ್ರ ವಿಮರ್ಶಕರು ಇಂದಿನ ಭಾರತೀಯ ಚಿತ್ರಗಳಲ್ಲಿರುವ ಈ ತರದ ಕುಂದು ಕೊರತೆಗಳನ್ನು ತೋರಿಸಿ, ನಮ್ಮ ನಾಡಿಗೂ, ನಮ್ಮ ಜನತೆಗೂ ಪ್ರಯೋಜನವಾಗತಕ್ಕ ಚಿತ್ರಗಳನ್ನು ನಿರ್ಮಿಸುವಂತೆ ಮಾಡುವ ಕೆಲಸ ಚಲಚ್ಚಿತ್ರ ವಿಮರ್ಶಕ ಕೂಟದವರ ಕರ್ತವ್ಯವೆಂದೂ ಹೇಳಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾಷಣಕರ್ತರ ವಿಚಾರಧಾರೆಯನ್ನು ಪ್ರಶಂಸಿಸುವುದರೊಡನೆ, ಹಣವಿದ್ದ ನಿರ್ಮಾಪಕರಿಗೆ ಇಂಥಾ ವಿಚಾರ ಬರುವುದಿಲ್ಲವೆಂದೂ, ಇಂಥಾ ವಿಚಾರವಿರುವವರು ಚಿತ್ರ ನಿರ್ಮಿಸಲು ಧನವಿಲ್ಲದೆ ಇರುವರೆಂದೂ ಹೇಳಿ ಈ ಸಮಸ್ಯೆ ಬೇಗನೇ ಪರಿಹಾರವಾಗಿ ನಮ್ಮ ನಾಡಿನ ಹಾಗೂ ನಮ್ಮ ಜನತೆಯ ನಿಜ ಜೀವನವನ್ನು ಚಿತ್ರಿಸುವ ಸಿನೆಮಾಗಳು ಬೇಗನೇ ಬರುವಂತಾಗಲಿ ಎಂದು ಹಾರೈಸಿದರು. ಕೂಟದ ಕಾರ್ಯದರ್ಶಿ ಶ್ರೀ ಎಂ ವೆಂಕಟೇಶ ಪ್ರಭುಗಳು ಕೃತಜ್ಞತೆ ಹೇಳಿದರು ಆ ಮೇಲೆ ಭಾಷಣ ಕರ್ತರಿಗೆ ಕೂಟದ ಸದಸ್ಯರನ್ನು ಪರಿಚಯಮಾಡಿ ಕೊಡಲಾಯಿತು

ಕಾಸರಗೋಡಿನಲ್ಲಿ ಅಕ್ಕಿಯ ಅಭಾವ

ಹೊರಗಿನಿಂದ ಅಕ್ಕಿ ಬರಲೇ ಬೇಕು.

ಕಾಸರಗೋಡು ತಾಲೂಕಿನ ಪೇಟೆ ಗ್ರಾಮಗಳಲ್ಲಿ ಮುಖ್ಯವಾಗಿ ಹೊಸದುರ್ಗ ಪ್ರದೇಶದಲ್ಲಿ ಅಕ್ಕಿಯಿಲ್ಲದೆ ಜನರು ಈಗಾಗಲೇ ಉಪವಾಸ ಬೀಳುತ್ತಿದ್ದಾರೆ ಪರಿಸ್ಥಿತಿ ಬಹಳ ಭೀಕರವಿದೆ. ಪುತ್ತೂರು ಮೊದಲಾದ ಕೆಲವು ಕಡೆಗಳಿಂದ ಹೆಚ್ಚಿನ ಕ್ರಯಕ್ಕೆ ಪಡೆದ ಅಕ್ಕಿ ಸ್ವಲ್ಪ ಮೆಟ್ಟಿಗೆ ವ್ಯಾಪಾರಸ್ಥರ ಮೂಲಕ ಇಲ್ಲಿ ವಿತರಣೆಯಾಗುತ್ತಿದೆ ಸೇರಿಗೆ ೭ ಆಣೆ (ಅದೂ ಸರಿಯಾಗಿ ಸಿಗುವುದಿಲ್ಲ) ಕ್ರಯವಿದೆ

ಕುಂದಾಪುರ ತಾಲೂಕಿನಿಂದ ಇಷ್ಟು ವರ್ಷದಂತೆ ಇಲ್ಲಿ ಅಕ್ಕಿ ಬಾರದಿರುವುದು ಪ್ರಾಯಶಃ ಇದರ ಒಂದು ಮುಖ್ಯ ಕಾರಣವಿರಬೇಕು ಕುಂದಾಪುರಕ್ಕೀಗ ಘಟ್ಟದ ಭತ್ತ ಸಿಗುವುದಿಲ್ಲ

ಈಗಿನ ಪರಿಸ್ಥಿತಿಯಲ್ಲಿ ಬೇರೆ ತಾಲೂಕುಗಳಿಂದ ಕಾಸರಗೋಡಿನ ಆವಶ್ಯಕತೆಯನ್ನು ಪೂರೈಸುವುದೂ ಸಾಧ್ಯವಿದ್ದಂತೆ ಕಾಣುವುದಿಲ್ಲ ಅಂದ ಮೇಲೆ ಜಿಲ್ಲೆಯ ಹೊರಗಿನಿಂದ ಅಲ್ಲಿ ಈಗ ಬೆಳೆ ಒಳ್ಳೆಯದಿರುವುದರಿಂದ ಕೂಡಲೇ ಸರಕಾರದವರು ಕಾಸರಗೋಡು ತಾಲೂಕಿನ ಮಟ್ಟಿಗೆ ಅಕ್ಕಿ ತರಿಸಿ ಒದಗಿಸುವುದು ಅತ್ಯವಶ್ಯ ಇಲ್ಲದಿದ್ದರೆ ಜನರು ಉಪವಾಸದಿಂದ ಸಾಯುವ ಪರಿಸ್ಥಿತಿ ಖಂಡಿತವಾಗಿ ಒದಗುವುದು

ಈಗಾಗಲೇ ಕಾಸರಗೋಡು ತಾಲೂಕಿನ ಜನರು ಸಿಕ್ಕಾಬಟ್ಟೆ ಆಹಾರ ತಿನ್ನಲು ಪ್ರಾರಂಭಿಸಿರುವುದರಿಂದ ಇದೇ ಪರಿಸ್ಥಿತಿ ಮುಂದುವರಿದರೆ ಸಾಂಕ್ರಾಮಿಕ ರೋಗಗಳ ಹಬ್ಬುವಿಕೆ ಪ್ರಾರಂಭವಾಗಬಹುದು

ಜಿಲ್ಲಾ ಕಲೆಕ್ಟರರು ಈ ಕರಿತು ಕಾಸರಗೋಡನ್ನು ಸಂದರ್ಶಿಸಿದವರು, ಅಲ್ಲಿನ ಆಹಾರ ಪರಿಸ್ಥಿತಿ ನೋಡಿ ಹೊಸದುರ್ಗಕ್ಕೂ ಕಾಸರಗೋಡಿಗೂ ಒಟ್ಟು ೧ ಸಾವಿರ ಗೋಣಿ ಬೇಜವಾಡ ಅಕ್ಕಿ ಮಂಗಳೂರಿಂದ ಕಳುಹಿಸುವ ಏರ್ಪಾಡು ಮಾಡಿರುವರಾಗಿ ತಿಳಿದು ಬರುತ್ತಿದೆ

ತಾಲೂಕು ಕಿಸಾನ ಸಮ್ಮೇಳನ

ಇದನ್ನು ಜರಗಿಸಲು ಜಿಲ್ಲಾ ಕಲೆಕ್ಟರರು ಅನುಮತಿ ಕೊಡದ ಕಾರಣ ನೆರೆನಾಡಾದ ಮಲಬಾರಿನ ಕರಿತಳಕರಿನಲ್ಲಿ ತಾ ೨೪ರಲ್ಲಿ ಜರಗಿಸಲು ಸಂಘದವರು ನಿರ್ಣಯಿಸಿರುವರೆಂದೂ ಶ್ರೀ ಕೆ ಎ ಕೇರಳೀಯನರು ಇದರ ಅಧ್ಯಕ್ಷತೆ ವಹಿಸುವರೆಂದೂ ತಿಳಿದುಬರುತ್ತದೆ

ಹೊಸದುರ್ಗ

ಆಹಾರ ಸಮಿತಿ

ಹೊಸದುರ್ಗ ಫಿರ್ಕಾ ಆಹಾರ ಸಮಿತಿಯೊಂದು ಶ್ರೀ ಎ ಸಿ ಕಣ್ಣನ್ ನಾಯರರು ಅಧ್ಯಕ್ಷರಾಗಿ, ಶ್ರೀ ಎನ್ ಸಿ ಕಣ್ಣನ್ ಮತ್ತು ಅಚ್ಯುತ ಶೆಣೈ ಇವರು ಕಾರ್ಯದರ್ಶಿಗಳಾಗಿ ಏರ್ಪಟ್ಟಿದೆ ಆಹಾರ ಸಮಿತಿಯವರು ತಹಶಿಲ್ದಾರರನ್ನು ಕಂಡು ಕೆಡುತ್ತಾ ಒರ ವ ಆಹಾರ ಪರಿಸ್ಥಿತಿ ವಿಚಾರ ಮಾತನಾಡಿದರೆಂದೂ ಅವರು ತಮ್ಮಿಂದಾಗುವ ಸಹಾಯದ ಭರವಸೆಯಿತ್ತಿರುವರೆಂದೂ ಕೇಳುತ್ತೇವೆ

ನೀಲೇಶ್ವರ

ಹಳೇ ವಿದ್ಯಾರ್ಥಿ ಸಭೆ

ಸ್ಥಳೀಯ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಭೆಯು ತಾ ೧೫ರಂದು ಸಂಜೆ ೫ ಗಂಟೆಗೆ ಶ್ರೀ| ಪುಟ್ಟನ್ನೂರು ಮಧುಸೂದನ ತಂಗಳ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯ ಬಳಿಕ ಅಧ್ಯಕ್ಷರ ಪ್ರಾರಂಭ ಭಾಷಣವಿತ್ತರು ಶ್ರೀ| ಕೆ ಗೋವಿಂದನ್ ನಂಬ್ಯಾರ್ ಶ್ರೀ| ಕೇಶವ ಭಟ್ ಇಂದು ತಮ್ಮ ಹಿಂದಿನ ಸ್ಮರಣೆಗಳನ್ನಿತ್ತರು ಮಲೆಯಾಳೀ ಸಾಹಿತ್ಯದ ಕುರಿತು ಶ್ರೀ| ಸ್ವಾಮಿ ಬಹ್ಮವ್ರತರ ಭಾಷಣದ ಬಳಿಕ ವಿವಿಧವಿನೋದಾವಳಿಗಳಿದ್ದುವು

ಬಿಡುಗಡೆ

ಶ್ರೀ ಕೆ ಈಶ್ವರ ಎಂ ಎಲ್ ಎ, ಶ್ರೀ ಕೆ ನಾರಾಯಣ ಶೆಣೈ ಮತ್ತು ಪ್ರಭಾಕರ ಶೇಟ್ ಇವರನ್ನು ಸ್ಥಾನಬದ್ಧರಾಗಿರುವವರನ್ನು ತಂಜಾವೂರು ಸ್ಪೆಶಲ್ ಜೈಲಿನಿಂದ ಅನಿರ್ಬಂಧ ಬಿಡುಗಡೆ ಮಾಡಲಾಗಿದೆ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ

ತಾರಾನಾಥರ ವಿಚಾರ

ಪಂಡಿತ ತಾರಾನಾಥರು ಸತ್ತು ಸ್ವರ್ಗಸೇರಿದರು. ಅವರಿಗೆ ಯಾರೂ ಕಣ್ಣೀರು ಸುರಿಸಿ, ಆತ್ಮಕ್ಕೆ ಶಾಂತಿ ಕೋರಬೇಕಾದ್ದಿಲ್ಲ ಆ ಆತ್ಮ ಅಂತಹದು ಅದಕ್ಕೆ ಖಂಡಿತ ಶಾಂತಿಯುಂಟಾಗಿದೆ

ಕನ್ನಡಕ್ಕೆ—ಕನ್ನಡ ಜನತೆಗೆ ಸೇವೆ ಸಲ್ಲಿಸಿದವರಲ್ಲಿ ತಾರಾನಾಥರೂ ಒಬ್ಬರು ಅವರ ಸೇವೆ ಇಂತಹುದೆಂದು, ಕೇವಲ ಒಂದೇ ಮಾರ್ಗ ಹಿಡಿದಿದ್ದೆಂದು ಹೇಳಲಾಗುವಂತಿಲ್ಲ ಅವರು ವೈದ್ಯರಾಗಿ, ಕವಿಗಳಾಗಿ, ಕತೆಗಾರರಾಗಿ, ಸಂಪಾದಕರಾಗಿ, ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ ಇಂದು ಪರಿಷತ್ತಿನಲ್ಲಿದ್ದುಕೊಂಡು ನಾವು ಕೆಲಸಮಾಡುತ್ತಿದ್ದೇವೆ' ಎಂದುಕೊಂಡಿರುವ ಎಷ್ಟೋ ಮಂದಿಗಿಂತ ಹೆಚ್ಚಾಗಿ ದುಡಿದಿದ್ದಾರೆ ಆದರೆ ಅವರು ಸತ್ತ ಮೇಲೆ ಕನ್ನಡ ನಾಡಿಗೆ ನಾಡೇ ಕಣ್ಣೀರಿಟ್ಟಾಗ, ಪರಿಷತ್ತಿನವರು ಕನ್ನಡದಲ್ಲಿ ಕತೆಯೊಂದನ್ನು ಬರೆದು ಕಣ್ಮರೆಯಾದವರಿಗೆಲ್ಲಾ ಸಭೆ ಸೇರಿಸಿ ಅವರ ಮನೆಯವರಿಗೆ ಸಹಾನುಭೂತಿ ತೋರಿಸುವ ಪರಿಷತ್‌ನವರು ತಾರಾನಾಥರಿಗಾಗಿ ಒಂದು ಸಭೆ ಕರೆಯುವಷ್ಟು—ಅವರಿಗಾಗಿ, ಸತ್ತು ಶಾಂತಿ ಪಡೆದ ಅವರ ಆತ್ಮಕ್ಕಾಗಿ ಬೇಡ—ಅವರನ್ನು ಕಳೆದುಕೊಂಡು ದುಃಖಿಸುತ್ತಿರುವ ಅವರ ಬಂಧುಬಳಗಕ್ಕೆ ಮಿತ್ರವರ್ಗಕ್ಕೆ ತಮ್ಮ ಸಹಾನುಭೂತಿ ತೋರಿಸಲಿಕ್ಕಾಗಿ ಒಂದು ಸಮಾನ ಸಭೆ ಕರೆಯುವಷ್ಟು ಸಮಾಧಾನ, ಪರಿಷತ್ತಿನವರಿಗಿಲ್ಲವಾದುದು ತುಂಬಾ ಶೋಚನೀಯ

ಮೊನ್ನೆ ನಡೆದ ಸಮ್ಮೇಳನದಲ್ಲಿ ಕಣ್ಮರೆಯಾದ ಕನ್ನಡಿಗರೆಲ್ಲರ ಹೆಸರನ್ನೋದಿ ಸಂತಾಪ ಸೂಚಿಸಿದಾಗ ಪಂಡಿತರ ಹೆಸರೊಂದನ್ನ ಸೇರಿಸಬಹುದಾಗಿತ್ತು ಆದರೆ ಇಲ್ಲ

ಇದಕ್ಕೆ ಒಂದು ಕಾರಣವು ನಮಗೆ ತಿಳಿದು ಬಂದಿದೆ ಪಂಡಿತರು ಪರಿಷತ್ತಿನ ಸದಸ್ಯರಾಗಿರಲಿಲ್ಲ ಆದ್ದರಿಂದ ಅವರ ಸಾವಿಗೆ ನಾವು ಕಣ್ಣೀರು ಸುರಿಸಬೇಕಾದದ್ದಿಲ್ಲ ಎಂಬುದು ಪರಿಷತ್ತಿನ ನಿರ್ಣಯ

ಈ ನಿರ್ಣಯಕ್ಕೆ ನಾವೇನು ಅರ್ಥ ಮಾಡೋಣ? ಪಂಡಿತರು ಪರಿಷತ್ತಿನ ಲೈಸೆನ್ಸ್ ಪಡೆದು ಕನ್ನಡ ಕಾರ್ಯ ಮಾಡಲಿಲ್ಲ ಅಂದ ಮೇಲೆ ಅವರು ಮಾಡಿದ ಸೇವೆಯೇತಾಗಿದೆ?

ಪರಿಷತ್ತಿನವರ ಅವರು ಕೇವಲ ಪರಿಷತ್ತಿನ ಸದಸ್ಯರಾಗಿರಲಿಲ್ಲವೆಂದು ಅವರು ಮಾಡಿದ ಕನ್ನಡ ಸೇವೆ ನಾಡಸೇವೆಯಲ್ಲವೆಂದು ಭಾವಿಸಿತೆ? ಹಾಗಿಲ್ಲವಾದರೆ ಪಂಡಿತರ ವೈಯಕ್ತಿಕ ಜೀವನಕ್ಕಾಗಿ ಬೇಡ ಅವರ ಕಾರ್ಯಕ್ಷೇತ್ರದ ಕಡೆ ಗಮನವಿಟ್ಟಾದರೂ ಅವರ ಸನ್ಮಾನ ಮಾಡಬೇಕಾಗಿದ್ದುದು ಪರಿಷತ್ತಿನ ಕರ್ತವ್ಯವಾಗಿತ್ತು

ಸಮ್ಮೇಳನಕ್ಕೆ ಬರದವರನ್ನು—ಅವರಿಗೆ ಸೇವಾಕಾಂಕ್ಷೆ ಕಾರ್ಯಾಸಕ್ತಿ ಇದೆಯೋ ಇಲ್ಲವೋ ಎಂದು ತಿಳಿಯುವುದಿರಲಿ ಕೇಳಿ ಸಹ ತಿಳಿಯದೆ ಕಾರ್ಯಕಾರಿ ಸಮಿತಿಗೆ ಚುನಾಯಿಸಿರುವ ಪರಿಷತ್‌ನವರು ಪಂಡಿತಜೀಯವರ ಮರಣಕ್ಕಾಗಿ ಎರಡು ನಿಮಿಷ ಮೌನವಾಚರಿಸುವುದು ತಪ್ಪೆಂದು ಪರಿಷತ್ ನೀತಿಗೆ ವಿರುದ್ಧವೆಂದು ತಿಳಿದಿದ್ದರೆ ಪರಿಷತ್ತಿನ ನೀತಿ, ರೀತಿ, ನಡವಳಿಕೆಗಳು ವಿಚಿತ್ರವೆನ್ನದೆ, ಪರಿಷತ್ತು ಇತರ ಸಭೆ—ಸಂಘಗಳಂತಲ್ಲವೆನ್ನದೆ ಯತ್ನವಿಲ್ಲ

(ದೇಶಬಂಧು)

ಜಾನುವಾರು ರೋಗ

ಜಾನುವಾರು ರೋಗವು ಈಗ ಕುಂದಾಪುರ ಕಾರ್ಕಳ, ಉಡುಪಿ, ಪುತ್ತೂರು, ಕಾಸರಗೋಡು ತಾಲೂಕುಗಳಲ್ಲಿ ಪ್ರಬಲವಾಗಿದೆ ರೋಗಗಳು ಬಾರದಂತೆ ಇನಾಕುಲೇಶನ್ ಮಾಡಲು ಸಾಕಷ್ಟು ಮದ್ದು ದೊರಕುವುದಿಲ್ಲವಾಗಿ ಸಂಬಂಧಪಟ್ಟವರು ಹೇಳುತ್ತಾರೆ ಹಟ್ಟಿ ಹಟ್ಟಿಗಳೇ ಖಾಲಿಯಾಗುತ್ತಿವೆ ಜಾನುವಾರುಗಳಿಗೆ ಕ್ರಯ ಹೆಚ್ಚಾಗಿದ್ದು, ಈಗ ಹೀಗೆ ಹಟ್ಟಿ ಹಟ್ಟಿಗಳು ಖಾಲಿಯಾದರೆ ಮುಂದಿನ ಕೃಷಿ ಬಹಳ ಕಷ್ಟವಾಗಿರುವುದು ಈ ಅನರ್ಥದ ವಿಚಾರ ಸಾರ್ವಜನಿಕರೂ ಅಧಿಕಾರಿಗಳೂ ಗಂಭೀರ ಗಮನ ಕೊಡಬೇಕು

ಒಂದು ಸಣ್ಣ ಕತೆ

ಸ್ವರ್ಗವೇ? ನರಕವೆ?

ಕತೆಗಾರರು: ಕೆ. ಎಸ್. ರೈ.

ಅವಳೊಬ್ಬ ವಿಧವೆ. ಅವಳ ಹೆಸರು ರಮೆಯೆಂದು. ಅವಳಿಗೆ ಹದಿನಾರು ವರ್ಷ ದಾಟಲಾರದು. ಪತಿಯನ್ನು ಕಳಕೊಂಡು ವರ್ಷವೊಂದೂ ಪೂರ್ತಿಯಾಗಿಲ್ಲ. ಅವಳು ಸುಶೀಲೆಯೂ ಸಚ್ಚರಿತೆಯೂ ಆಗಿದ್ದಳು. ಸೌಂದರ್ಯವೆಂದ ಚೆಲ್ಲುತ್ತಿತ್ತು.

ಅವಳ ರಕ್ಷಣೆಗೆ ತಂದೆಯೊಬ್ಬನಿದ್ದನು. ಅವರ ಮನೆಯಲ್ಲಿ ಮತ್ತಾರೂ ಇಲ್ಲ. ದಾರಿದ್ರ್ಯ ಮೂರ್ತಿಯ ಕಟಾಕ್ಷದಿಂದ ಅವರಿಗೆ ಬಡತನದಲ್ಲಿ ಕೊರತೆಯೇ ಇಲ್ಲ. ಸುಯೋಗದ ಮುಕ್ಕ ಅವನು ತೆರೆದರೆ, ಮರಳುವಾಗ ಗಂಟೆ ಎಂಟಾಗುತ್ತಿತ್ತು.

* * *

ಮುಸ್ಸಂಜೆಯ ಸಮಯ. ರಮಾಬಾಯಿಯ ಮನೆಯಲ್ಲಿ ಹಾಡುವ ಗೀತಲಹರಿಯು ವಾಯುವಿನಲ್ಲಿ ತೇಲಿ ಹೋಗುತಿತ್ತು. ರಮೇಶನು ಸಂಧ್ಯಾಕಾಲದ ವಾಯುಸೇವನೆಗೆ ಅತ್ತ ಕಡೆಗೆ ಬಂದಿದ್ದನು. ತಂದೆಯಿಂದ ನೂಕಲ್ಪಟ್ಟು ಸುರಾದೇವಿಯ ಬಂಧನಕ್ಕೆ ಸಿಲುಕಿದ ನವ ತರುಣನು ಅವನು.

ಸಂಗೀತಲಹರಿಗೆ ಅವನು ದಿಗ್ಭ್ರಾಂತನಾದ! ಕ್ಷಣಕಾಲ ಆಲಿಸಿದ. ಇನ್ನೂ ಕೇಳಬೇಕೆನಿಸಿತು. ಮನಸ್ಸು ಕಳವಳ ಹೊಂದಿತು. ಆ ಮನೆಯನ್ನು ಪ್ರವೇಶಿಸಿದ. ಹಾಡುವ ರಮಾಬಾಯಿಯು ಸ್ವರ್ಗೀಯ ಸೌಂದರ್ಯವು ಗೋಚರಿಸಿತು.

"ಸಂಗೀತ ಕಲಾದೇವಿಯೇ ಭೂಲೋಕಕ್ಕೆ ಬಂದಳೋ? ಎಂದು ಭಾವಿಸಿದ್ದೆ." ನಾಲ್ಕು ಕಣ್ಣುಗಳ ನೋಟವೂ ಒಟ್ಟುಗೂಡಿತು. ಎರಡೂ ವ್ಯಕ್ತಿಗಳ ಪ್ರೇಮಪ್ರವಾಹವು ಸಮ್ಮಿಳಿತಗೊಂಡಿತು.

"ತಾವಾರು?"

"ನಾನು ಇದೇ ಊರಿನ ಪ್ರಸಿದ್ಧ ವಕೀಲ ಮಹಾಶಯ ಸುಂದರರಾಯರ ಪುತ್ರ."

"ತಾವು ಬಂದಿರೇಕೆ."

"ನಾನೇ? ನಾನಾಗಿ ಬಂದುದಲ್ಲ. ನಿನ್ನ ಸಂಗೀತವೇ ನನ್ನನ್ನು ಕರೆತಂದಿತು. ಬಂದು ನೋಡುವಾಗ ಸೌಂದರ್ಯ ಮೂರ್ತಿಯಾದ ನಿನ್ನ ನೋಟವು ಕಣ್ಣಿಗೆ ಬಿತ್ತು. ನನ್ನ ಮನೋವಾಜಿಯ ಕಡಿವಾಣವು ತಪ್ಪಿತು."

ಮೌನ.

"ಅದೇಕೆ ಮೌನ ನನ್ನಲ್ಲಿ."

"ನೀವೊ, ಶ್ರೀಮಂತರು. ನಾನು ದರಿದ್ರಳು, ನನ್ನ ಮೇಲೆ ತಾವು ದಯೆದೋರುವುದು ನಿಜವೆ?"

"ನಿಜವಾಗಿಯೂ ಅದಕ್ಕೆ ಸಂದೇಹ ಬೇಡ."

"ತಾವು ವಿವಾಹಿತರೆ."

"ಅಲ್ಲ."

"ನನ್ನನ್ನೆ ವಿವಾಹವಾಗುವಿರೆ?"

"ನಿಜವಾಗಿಯೂ."

ಅಂದಿನಿಂದ ರಮೇಶನು ಪ್ರತಿದಿನವೂ ರಮೆಯ ಮನೆಗೆ ಬರುವನು. ಇಬ್ಬರೂ ಮಾತಾಡುವರು, ನಗುವರು, ನಲಿದಾಡುವರು, ಕಾಲಚಕ್ರವು ತಿರುಗಿತು. ವರುಷ ಒಂದು ಉರುಳಿತು.

* * *

ರಮೆ ಈಗ ಗರ್ಭಿಣಿ. ರಮೇಶನ ಪತ್ತೆಯೇ ಇಲ್ಲ. ಪ್ರತಿ ದಿನವೂ ರಮೆಯು ಕಣ್ಣೀರು ಸುರಿಸುವಳು. ರಮೇಶನನ್ನೇ ಹಂಬಲಿಸುವಳು. ಅವನಿಗಾಗಿ ದುಃಖಿಸುವಳು. ಮಾಡಿದ ಕರ್ಮಕ್ಕೆ ಪಶ್ಚಾತ್ತಾಪ ಪಡುವಳು. ಕ್ರಮೇಣ ಈ ವಿಷಯ ರಮೆಯ ಪಿತನಿಗೂ ತಿಳಿಯಿತು.

* * *

ಈಗ ರಮಾಬಾಯಿ ಪಿತನಿಂದ ನೂಕಲ್ಪಟ್ಟು ದಾರಿ, ದಾರಿಯಲ್ಲಿ, ಅಲೆಯುತ್ತಿದ್ದಾಳೆ. ಅವಳ ಅಂದಿನ ಸೌಂದರ್ಯವು ಇಂದೆಲ್ಲೋ ಅಡಗಿ ಹೋಗಿದೆ. ಅಂದಿನ ನಗುಮೊಗವು ಇಂದು ಕಾಂತಿಹೀನವಾಗಿದೆ. ಅವಳಿಂದು ಸಮಾಜಬಾಹಿರಳು, ಕಳಂಕಿತಳು, ಅವಳನ್ನೀಗ ಕಾಣುವವರಿಲ್ಲ. ರಮೇಶನು ಕಂಡರೂ ಕಾಣದಂತೆ ಮಾಡುವನು.

ಇಂದೀಗ ಅವಳಿಗೆ ಜಗತ್ತಿನಲ್ಲಿ ತಿರಸ್ಕಾರ. ಯಾವ ವಸ್ತುವನ್ನೂ ನಂಬಳು, ಅವಳೀಗ ತನ್ನ ಜೀವಮಾನದಲ್ಲಿ ಹೊಸತೊಂದು ಪ್ರಕರಣವನ್ನೂ ಅನುಭವಿಸುತ್ತಿದ್ದಾಳೆ. ಅವಳ ಮನಸ್ಸಿನಲ್ಲಿ ಚಂಚಲತೆಯು ಮೂಡಿದೆ. ಪ್ರಪಂಚವೇ ಅವಳಿಗೆ ಶೂನ್ಯವಾಗಿ ತೋರುತ್ತಿದೆ.

* * *

ಸಂಧ್ಯಾಕಾಲ, ರಮೆಯು ಕೆರೆಯೊಂದರ ಸೋಪಾನದಲ್ಲಿ ಕುಳಿತು ಆಲೋಚನೆಯಲ್ಲಿ ಮಗ್ನಳಾಗಿದ್ದಾಳೆ. ಎರಡು ವರ್ಷಗಳ ಹಿಂದೆ ಅವಳ ಪತಿಯೊಡನೆ ಆಡುತ್ತಿದ್ದ ನುಡಿ, ನಡೆಯುತ್ತಿದ್ದ ನಡೆಗಳು ಅವಳ ಮನೋಚಕ್ಷುವಿಗೆ ಒಂದೊಂದಾಗಿ ಚಲಚ್ಚಿತ್ರ ಪಟದಂತೆ ಗೋಚರಿಸಿದುವು. ಗಗನವನ್ನು ಕಂಡೊಮ್ಮೆ ನಿಟ್ಟುಸಿರಿಟ್ಟಳು. ಹಿಂದೆರಡು ಅಸ್ಥಿರ ತಾರೆಗಳು ಥಣುಕು ಮಿಣುಕಾಗಿ ಮಿನುಗುಗುತ್ತಿದ್ದುವು. ಅಷ್ಟರಲ್ಲಿ ಅವಳ ಮಸ್ಸಿನಲ್ಲಿ, ಅವಳ ಪತಿದೇವನು ಅವಳನ್ನು ಕರೆಯುವಂತೆ ಭಾಸವಾಯಿತು. ಅವಳ ಮನಸ್ಸಿನಲ್ಲಿ ಅವುದೋ ಒಂದು ವಿಚಿತ್ರ ಭಾವನೆಯುಂಟಾಯಿತು. ಅತ್ತಿತ್ತ ನೋಡದೆ ಕೆರೆಗೆ ಹಾರಿದಳು.

ಅವಳ ಪ್ರಾಣವಾಯು ಅಲ್ಲೇ ಮಂದ ಮಾರುತನಲ್ಲಿ ಲೀನವಾಯಿತು.

ಸತ್ತ ಆ ರಮೆಗೆ ಸ್ವರ್ಗವೇ ನರಕವೆ?

ಸಿನೆಮಾ ಸುದ್ದಿ

ಪ್ರತಿಮಾ ಪ್ರೊಡಕ್ಶನ್

ಪ್ರಸಿದ್ಧ ನಟಿ ಪ್ರತಿಮಾದಾಸ ಗುಪ್ತಳು ತನ್ನದೇ ಆದ ಹೊಸ ಚಲಚ್ಚಿತ್ರ ಸಂಸ್ಥೆಯೊಂದನ್ನು ನಿರ್ಮಿಸಿರುವಳು. ಇದರ ಪ್ರಥಮ ಚಿತ್ರದಲ್ಲಿ ಅವಳ ನಾದಿನಿಯಾದ ಬೇಗಂ ಪಾರಾಳು ಅಭಿನಯಿಸುವಳೆಂದು ತಿಳಿದಿದೆ.

ಲೀಲಾ ಚಿಟ್ನಿಸ್

ರೂಂಜೆ ಟಾಕೀಸಿನ ಮುಂದಿನ ಚಿತ್ರದಲ್ಲಿ ಲೀಲಾ ಚಿಟ್ನಿಸಳನ್ನು ಮುಖ್ಯಪಾತ್ರ ವಹಿಸಲು ಆರಿಸಲಾಗಿದೆಯೆಂದೂ, ಆ ಚಿತ್ರವನ್ನು ಸುಶೀಲ್ ಮಜುಂದಾರರು ನಿರ್ದೇಶಿಸುವರೆಂದೂ ತಿಳಿದು ಬಂದಿದೆ.

ನವಯುಗ ಚಿತ್ರಪಟ

ಇವರು 'ಗ್ರಮ ಅಥವಾ ಮರಣ' ಎಂಬ ಚಿತ್ರವನ್ನು ತಯಾರಿಸಿದ ಬಳಿಕ 'ತನ್ನಾ' ಎಂಬ ಚಿತ್ರ ತಯಾರಿಸುವರೆಂದೂ, ಇದರಲ್ಲಿ ಸ್ನೇಹಪ್ರಭೆ ಮುಖ್ಯಪಾತ್ರ ವಹಿಸುವಳೆಂದೂ ಸುದ್ದಿ.

ಯುದ್ಧಾನಂತರದ ನಿಮ್ಮ ಧ್ಯೇಯಗಳೇನು?

ಯುದ್ಧಾನಂತರ ಅಂಗಡಿಗಳಲ್ಲಿ ಸಾಮಾನುಗಳು ಭರ್ತಿಯಾಗಿ ತುಂಬಿರುತ್ತವೆ, ಮತ್ತು ಅವು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಯುದ್ಧಕಾಲದಲ್ಲಿ ದುಂದುವೆಚ್ಚ ಮಾಡಿದವರು ಪಶ್ಚಾತ್ತಾಪ ಪಡಬೇಕಾಗುವುದು: ಏಕೆಂದರೆ ಯುದ್ಧಸಮಯದ ಖರೀದಿಗಳು ದುರ್ವ್ಯಯವೇ ಸರಿ. ಯುದ್ಧಾನಂತರದ ನಿಮ್ಮ ಖಾಸಗೀ ಯೋಜನೆಗಳನ್ನು ಪೂರೈಸಲು ಈಗನಿಂದಲೇ ಕೂಡಿಡಲು ಆರಂಭಿಸಿ. ಅತ್ಯಾವಶ್ಯಕವಾದವುಗಳಿಗೆ ಹೊರತು ಉಳಿದ ಎಲ್ಲಾ ಖರ್ಚು ಬಾಬುಗಳನ್ನೂ ಕಡಿಮೆ ಮಾಡಿ. ಕಷ್ಟ ಧಾರಣೆಗಳು ಬರುವ ದಿನಕ್ಕಾಗಿ ಕೂಡಿಡಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ನಿಮ್ಮ ಹಣವನ್ನು ಲಾಭ ಕೋರರಿಗೆ ಕೊಡಬೇಡಿ. ಯುದ್ಧ ಮುಗಿಯುವವರೆಗೆ ನಿಮ್ಮ ಹಣವನ್ನು ಸುರಕ್ಷಿತವಾದ ಸಹಕಾರ ಸಂಸ್ಥೆ, ವಿಮೆ, ಬ್ಯಾಂಕ್ ಮತ್ತು ಪೋಸ್ಟಾಫೀಸ್‌ಗಳಲ್ಲಿ ಅಥವಾ ಇವೆಲ್ಲವುಗಳಿಗೂ ಉತ್ತಮವಾದ ಸರ್ಕಾರಿಸಾಲ ಮತ್ತು ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ವಿನಿಯೋಗಿಸಿ. ಬೆಳ್ಳಿ, ಬಂಗಾರ, ಆಭರಣಗಳು ಅಥವಾ, ಸಾಮಾನುಗಳಮೇಲೆ ಹಣ ಹಾಕಬೇಡಿ. ಏಕೆಂದರೆ ವಿಜಯ ಸೂಚನೆಗಳು ತೋರಿದಂತೆಲ್ಲ ಈಗಿನ ಧಾರಣೆಗಳು ಬಿದ್ದು ಹೋಗುತ್ತವೆ.



ರಾಷ್ಟ್ರೀಯ ಯುದ್ಧ ಮುಖಂಡರು ದೇಶೀಯರಿಗೆ ಮಾಡುವ ಮನವಿ

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಾಯಿ.

(೧ನೇ ಪುಟದಿಂದ ಮುಂದುವರಿದುದು)

ದಕ್ಷಿಣ ಕನ್ನಡದಲ್ಲಿ ಶ್ರೀ ರಾಜಗೋಪಾಲಾಚಾರ್ಯರು.

ಹರಿಜನ ಕಾಲೋನಿ ಶಂಕುಸ್ಥಾಪನೆ—ಹೈಸ್ಕೂಲುಗಳ ರಜತೋತ್ಸವ.

ಮಂಗಳೂರು ಕಾಲೇಜುಗಳಲ್ಲಿ ಭಾಷಣಗಳು.

ಲದಾಯಿತೆಂದು ಹಾಸ್ಯಪೂರ್ಣ ಮಾತುಗಳ ನ್ನಾಡಿದರು.

'ಸರಕಾರವೆಂದರೆ ಒಂದು ವ್ಯವಸ್ಥಿತ ಜೀವನ. ಅಧಿಕಾರಿಗಳನ್ನು ಕಂಡು ಹೆದರಬೇಕಾಗಿಲ್ಲ. ನೀವು ಅಧಿಕಾರಿಗಳೊಡನೆ ಬೆರೆತಿರುವ ಅಭ್ಯಾಸವಿಟ್ಟುಕೊಳ್ಳಬೇಕು. ನಿಮ್ಮ ಮನೆ ನಿರ್ಮಲವಾಗಿಟ್ಟರೆ ನೀವೇ ಹೆಲ್ತ್ ಆಫೀಸರ್ ನಿಮ್ಮ ಮಾರ್ಗ ಸರಿಯಾಗಿಟ್ಟರೆ ನೀವೇ ಪೋಲೀಸ್ ಅಧಿಕಾರಿ, ನಿಮ್ಮಲ್ಲಿ ಪ್ರತಿಯೊಬ್ಬರೂ ಅಧಿಕಾರಿಗಳ ಕೆಲಸ ಮಾಡಬಹುದು' ಎನ್ನುತ್ತಾ ರಾಜಾಜಿಯವರು ಬಹುಮಾನ ಪಡೆದವರನ್ನು ಅಭಿನಂದಿಸಿ, ಪುಸ್ತಕಗಳನ್ನೇ ಹೆಚ್ಚಾಗಿ ಉಪಯೋಗಿಸುವುದಕ್ಕಿಂತ ಬೆರಳನ್ನೂ ಚುರುಕಾಗಿ ಉಪಯೋಗಿಸಿರೆಂದೂ, ಬಹುಮಾನಕ್ಕಾಗಿ ಮಾತ್ರ ಕೆಲಸ ಮಾಡಬೇಡಿರೆಂದೂ, ಅತಿಯಾಗಿ ಓದಿ ನನ್ನಂತೆ ಕಣ್ಣು ಹಾಳುಮಾಡಿಕೊಳ್ಳಬೇಡಿರೆಂದೂ ಹೇಳಿದರು.

'ನೀವು ವಿಶೇಷ ಬ್ಳಳ್ಳೆಯ ಹುಡುಗರಾಗಬೇಡಿ; ಆದರೆ ಕೆಟ್ಟ ನಡತೆ ಕೆಟ್ಟದೆ. ನಿಮ್ಮಲ್ಲಿ ಧೈರ್ಯ ತುಂಬಿರಲಿ. ಒಳ್ಳೆಯ ನಡತೆ ಹೆತ್ತವರಿಂದುಂಟಾಗುತ್ತದೆ. ನಮ್ಮನ್ನು ನಾವೇ ತರಬೇತು ಮಾಡಬೇಕು. ವಿಜಯಕ್ಕಿಂತಲೂ ಅಪಜಯದಲ್ಲಿ ನಾವು ಕಲಿವುದು ಹೆಚ್ಚು. ಪ್ರತಿಯೊಬ್ಬ ಹುಡುಗನೂ ಹುಡುಗಿಯೂ ತೀವ್ರವಾಗಿ ಆಲೋಚಿಸಿ ತಿಳಿದುಕೊಂಡು, ಸರಿಯಾದ ನಿರ್ಣಯ ಮಾಡಲು ಶಕ್ತನಾಗುವುದೇ ವಿದ್ಯಾರ್ಜನೆಯ ಗುರಿ. ವಿದ್ಯಾರ್ಥಿಗಳು 'ಬರೀ ಉಪಾಧ್ಯಾಯರ ಮೇಲೂ ಪುಸ್ತಕದ ಮೇಲೂ ಆಧರಿಸಿದರೆ, ಸ್ವತಂತ್ರ ಆಲೋಚಿಸುವ ಅಭ್ಯಾಸ ಮಾಡಬೇಕು,' ಎಂದು ಹೇಳಿದರು. ಕೊನೆಗೆ ಮಂಗಳೂರು ಒಂದು ದೊಡ್ಡ ವಿದ್ಯಾ ಕೇಂದ್ರವೆಂದೂ, ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಮಂಗಳೂರು ಬೇರಾಗುವುದು ಬೇಡವೆಂದೂ, ನೀವು ಸಂಪಾದಿಸಿದ ವಿದ್ಯೆಯಿಂದ ಸಾರ್ವಜನಿಕರ ಸೇವೆ ಮಾಡಬೇಕೆಂದೂ ಹೇಳಿದರು.

ವಿವಿಧ ವಿನೋದಾವಳಿಗಳಿಂದ ಉತ್ಸವವು ಕೊನೆಗೊಂಡಿತು.

ಎಲೊಸಿಯಸ್ ಕಾಲೇಜಿನಲ್ಲಿ

ಶ್ರೀ. ರಾಜಗೋಪಾಲಾಚಾರ್ಯರು ತಾ. ೧೫ರಂದು ಸ್ಯೆಂಟ್ ಎಲೋಶಿಯಸ್ ಕಾಲೇಜನ್ನು ಸಂದರ್ಶಿಸಿದರು. ಕಾಲೇಜ್ ರೆಕ್ಟರ್ ಮತ್ತು ಪ್ರಿನ್ಸಿಪಾಲ್ ರೆ। ಪಾ। ಜೆ. ಎ. ಬಿ. ಕ್ಯೊಲೋ ಅವರು ಸ್ವಾಗತಿಸಿದ ಬಳಿಕ ಅವರು 'ಚೆಪಲ'ನ್ನು ಸಂದರ್ಶಿಸಿದರು. 'ಎಕಡಮಿ' ಹಾಲಿನಲ್ಲಿ ಕಾಲೇಜ್ ಯೂನಿಯನ್ ಸದಸ್ಯರನ್ನುದ್ದೇಶಿಸಿ ಭಾಷಣವಿತ್ತರು.

'ಕಾಲೇಜಿಗೆ ಸಂಬಂಧಿಸಿ ಚೆಪಲೊಂದಿದೆಯೆಂದು ನನಗಿದೇ ಮೊದಲಾಗಿ ತಿಳಿದುದು. ಈ ವಿಶಾಲ ಭವನ, ಅದರ ಗೋಡೆಯ ಚಿತ್ರಗಳು ಜಗತ್ತಿನ ಸಾಧನಗಳು. ದಕ್ಷಿಣಕನ್ನಡ ಈ ಕಲಾಸಂಪತ್ತಿಗಾಗಿ ಅಖಿಲ ವಿಶ್ವದಲ್ಲೇ ಹೆಮ್ಮೆಪಡಬೇಕು. ಈ ಚಿತ್ರ ಬಿಡಿಸಿದ ಇಟಲಿಯನರಿಗೆ ನಾವು ಕೃತಜ್ಞರು. ಕಾಲೇಜಿನ ವಾತಾವರಣವನ್ನು ನೋಡಿದರೆ ನಾವೊಂದು ವಿಶ್ವವಿದ್ಯಾನಿಲಯವನ್ನೇ ಸಂದರ್ಶಿಸಿದಂತಾಗುತ್ತದೆ.' ಎಂದು ಹೇಳುತ್ತಾ, ಕಾಲೇಜ್ ವಿದ್ಯಾರ್ಥಿಗಳ ಮುಂದೆ ಬಂದಿರುವ ರಾಜಕೀಯ ಪ್ರಶ್ನೆ ನಿಜವಾಗಿ ವಿಷಮವಿರುವುದರಿಂದ, ಈ ಕುರಿತು ಕಾಲೇಜ್ ಅಧಿಕಾರಿಗಳು ಉಗ್ರರಾಗಿರದೆ ಅವರಿಗೆ ಕೆಲವಟ್ಟಿನ ಸ್ವಾತಂತ್ರ್ಯ ಕೊಡಬೇಕೆಂದು ಹೇಳಿದರು. ಭಾರತದ ರಾಷ್ಟ್ರೀಯ ಸಂಸ್ಕೃತಿ ಒಂದೇ ಆಗಿದೆಯೆಂಬುದನ್ನೂ ತಿಳಿಸಿ ಹೇಳಿದರು. ಕಾಲೇಜ್ ಯೂನಿಯನ್ ಕಾರ್ಯದರ್ಶಿ ಶ್ರೀ. ಕೆ. ಜಯರಾಮ ಶೆಟ್ಟಿ ವಂದನಾರ್ಪಣೆ ಮಾಡಿದರು.

ನೀಲೇಶ್ವರ ಹೈಸ್ಕೂಲಲ್ಲಿ

ನೀಲೇಶ್ವರ ರಾಜಾಸ್ ಹೈಸ್ಕೂಲಿನ ರಜತೋತ್ಸವದಲ್ಲಿ ಅಧ್ಯಕ್ಷತೆ ವಹಿಸಲು ರಾಜಾಜಿಯವರು ತಾ. ೧೬ರಂದು ಬೆಳಗ್ಗಿನ ಮೈಲಿಗೆ ಮಂಗಳೂರಿಂದ ಬಂದರು. ಸ್ಟೇಶನಿನಲ್ಲಿ ಶಾಲಾ ಮುಖ್ಯೋಪಾಧ್ಯಾಯರೂ ಪುರ ಪ್ರಮುಖರೂ ಸ್ವಾಗತಿಸಿ ಆನೆಗಳು ಸಮೇತ ಮೆರವಣಿಗೆಯಿಂದ ಕೊಂಡೊಯ್ದರು. ಶಾಲೆಯ ರಜತ ಮಹೋತ್ಸವವು ಈ ದಿನ ಸಂಜೆ ೫॥ ಗಂಟೆಗೆ ಶಾಲಾ ವಠಾರದಲ್ಲಿ ನಿರ್ಮಿಸಿದ ಅಂದವಾದ ಚಪ್ಪರದಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ರಾಮಕೃಷ್ಣ ರಾಯರು ಸ್ವಾಗತ ಭಾಷಣ ಮಾಡಿ ಶಾಲೆಯ ೨೫ ವರ್ಷಗಳ ಪ್ರಗತಿಯ ಕುರಿತು ಸಂಕ್ಷಿಪ್ತ ವರದಿಯೋದಿದರು. ಶ್ರೀ. ಕೆ. ನಂಬಿಯಾರರು ಸ್ಮಾರಕ ಭಾಷಣವಿತ್ತರು. ಅನಂತರ ಬಹುಮಾನವಿತರಣೆ ನಡೆಯಿತು.

ರಾಜಾಜಿಯವರು ತಮ್ಮ ಭಾಷಣದಲ್ಲಿ ಶಾಲೆಯ ಪ್ರಗತಿಗೆ ಕಾರಣರಾದ ಮಹನೀಯರನ್ನು ಅಭಿನಂದಿಸಿ, ಶಾಲೆ ಕಾಲೇಜಾಗಲೆಂದು ಹರಸಿ, ನೀಲೇಶ್ವರವು ಕನ್ನಡ ಕೇರಳಗಳ ಗಡಿನಾಡಿನಲ್ಲಿದ್ದು ಈ ಉಭಯ ಪ್ರಾಂತ್ಯಗಳ ಸೌಹಾರ್ದ ಬೆಳೆಸಲು ಸಹಕಾರಿಯಾಗಿ ಇಲ್ಲಿ ಈ ಹೈಸ್ಕೂಲ್ ಶಾಶ್ವತವಾಗಿ ನೆಲೆಸಿದ್ದು ಠಾಗೂರರ ಶಾಂತಿ ನಿಕೇತನವು ವಿಶ್ವ ಮೈತ್ರಿಯನ್ನು ಬೆಳೆಸಿದಂತೆ ಈ ಹೈಸ್ಕೂಲು ಕನ್ನಡ ಕೇರಳ ಜನಾಂಗಗಳೊಳಗೆ ಮೈತ್ರಿ ಹರಡಲಿ ಎಂದು ಹರಸಿದರು. ಹಲವು ತರದ ಮನೋರಂಜಕ ನಾಟಕ ವಿನೋದಾವಳಿಗಳಾದ ಮೇಲೆ ಶ್ರೀ. ಕೆ. ಕೆ. ಎ ಅಡಿಯೋಡಿಯವರು ಕೃತಜ್ಞತೆ ಅರ್ಪಿಸಿದ ಬಳಿಕ ರಜತೋತ್ಸವ ಕೊನೆಗೊಂಡಿತು.

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ	ಬೆಳಿಗ್ಗೆ ೬–೨೫.	ರಾತ್ರಿ ೭–೩೦.
ಷಟಲ್ ಕಣ್ಣಾನ್ನೂರು ಪರಿಯಂತ ಮಾತ್ರ	ಸಾಯಂ. ೫–೫೫	ಬೆಳಿಗ್ಗೆ ೯–೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ ೭–೫.	ಸಾಯಂ. ೭.

TIMES HAVE CHANGED!

TIME-KEEPERS IN B.C.1400

and in 1944

ಬಿಜೊ ಮಿನಿಯೇಚರ್ "ಎ"
18ಕ್ಯಾ.ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ.330



ಬಿಜೊ ಮಿನಿಯೇಚರ್ "ಬಿ"
18ಕ್ಯಾ.ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ.310

ಬಿಜೊ ಮಿನಿಯೇಚರ್ "ಸಿ"
18ಕ್ಯಾ.ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ.375

ಕಾಲ ಬದಲಾವಣೆ

ಆಶ್ಚರ್ಯವೆಂದೇ ತೋರಿದರೂ ಈ ಭೋಗುಣಿ ೩ ಸಾವಿರ ವರ್ಷಗಳ ಹಿಂದೆ ಸಮಯ ಸೂಚಿಯಾಗಿ ಉಪಯೋಗದಲ್ಲಿತ್ತು. ಕ್ರಿಸ್ತ ಪೂರ್ವ ೧೪೦೦ರ ಈಜಿಪ್ಟಿನ ಜಲಯಂತ್ರದ ಗಡಿಯಾರಕ್ಕೂ ಈಗಿನ ಸಮಂಜಸ ಸುಂದರ ಸಮಯಸೂಚಿಗೂ ಬಹುದೂರ. ವಾಚುಗಳು ಎಷ್ಟು ಬಳಕೆಯವೆಂದರೆ ಅವುಗಳ ವೃದ್ಧಿಗಾಗಿರುವ ಶತಮಾನಗಳ ಚಾತುರ್ಯವನ್ನೂ ಮರೆಯುತ್ತೇವೆ. ಮತ್ತೆ ವಾಚು ಬಹು ಶಾಸ್ತ್ರೀಯ ಸಾಧನವಾಗಿರುವುದರಿಂದ ಒಳ್ಳೆ ನಂಬಿಕೆಯ ತಯಾರಿಕೆಯನ್ನು ಮಾತ್ರ ಆರಿಸಿ ವೆಸ್ಟ್ ಎಂಡ್‌ನ್ನು ಕೊಂಡರೆ ನಿಮಗೆ ಗುಣ.

ಅಕ್ರಮವಾದ ತಪ್ಪೋಣದರಿಂದ, ಜಾಹಿರಾತು ಮಾಡಿದ ಎಲ್ಲ ನಮೂನೆಗಳನ್ನೂ ಒದಗಿಸಲಾಗದಿದ್ದರೂ, ಸ್ಟಾಕಿನಲ್ಲಿರುವ ಮಟ್ಟಿಗೆ ಆರ್ಡರಿನ ಮೇರೆಗೆ ಒದಗಿಸುವ ಯತ್ನವಿದೆ.

ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co.
BOMBAY - CALCUTTA

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸ್ಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

The Bank of Mangalore Limited, Mangalore.
ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches

TO GREET YOU

For the Past
REMEMBRANCE
For the Present
KIND THOUGHTS
For the Future
GOOD WISHES
From
THE CANARA BANKING CORPORATION Ltd.
(Incorporated in British India with limited liability)
Estd:] Head office: UDIPI S. Kanara [1906.

HEARTY NEW YEAR GREETINGS

TO

All our Policy-holders, Agents, MedicalExaminers and Well-wishers

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

'Bhuvanendra' Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 28—1—1944 [ಸಂಚಿಕೆ 4]

೧೯೪೨ರಲ್ಲಾದ ಬಂಗಾಳದ ಜಲಪ್ರಳಯ.

ಡಾ| ಎನ್. ಎಸ್. ಹರ್ಡಿಕರರು ಕನ್ನಡ ನಾಡಿನ ವಾತ್ರವೇಕೆ ಅಖಿಲ ಭಾರತದ ಓರ್ವ ಉಜ್ವಲ ರಾಷ್ಟ್ರ ಪ್ರೇಮಿಗಳು, ಕಾಂಗ್ರೆಸ್ ಮುಖಂಡರು. ಕಳೆದ ಆಂದೋಲನ ಕಾಲದಲ್ಲಿ ಅವರನ್ನು ಸರಕಾರ ಹಿಡಿದು ಸ್ಥಾನಬದ್ಧತೆಯಲ್ಲಿಟ್ಟಿತು. ಸೆರೆಮನೆಯಲ್ಲಿರುವಾಗ, ಬಂಗಾಳದ ಹೃದಯದ್ರಾವಕ ಸುದ್ದಿ ಕೇಳಿ, ಬಂಗಾಳವನ್ನು ಸಂದರ್ಶಿಸಿ, ಸಾಧ್ಯವಾದ ಸೇವೆ ಸಲ್ಲಿಸಬೇಕೆಂದು ಅವರ ಹೃದಯ ಹಾತೊರೆಯುತಿತ್ತು; ಆದರೆ ಸೆರೆಮನೆಯೊಳಗಿರುವವರು ಏನು ಮಾಡಬಲ್ಲರು? ಮುಂದೆ ಕೆಲ ದಿನಗಳಲ್ಲಿಯೇ ಅನಿರೀಕ್ಷಿತವಾಗಿ ಅವರ ಬಿಡುಗಡೆಯಾದದ್ದೇ ತಡ, ಬಂಗಾಳಕ್ಕೆ ಅವರು ನಾಗಾಲೋಟದಿಂದ ಓಡಿದರು; 'ಸಂಯುಕ್ತ ಕರ್ನಾಟಕ'ದ ಸಂಪಾದಕರು ಅವರನ್ನು ತಮ್ಮ ಪ್ರತಿನಿಧಿಯಾಗಿ ಕಳುಹಿಸಿದರು. ಡಾ| ಹರ್ಡಿಕರ್ ತಾನು ನೋಡಿ ಬಂಗಾಳದ ಕುರಿತು ಹೃದಯದ್ರಾವಕ ಸುದ್ದಿ ಬರೆಯುತ್ತಿದ್ದಾರೆ. ಅವರು ತಮ್ಮ ಲೇಖನದ ಪ್ರಾರಂಭದಲ್ಲಿ, ಬಂಗಾಳವು ಬರಗಾಲ ಮಾರಿಗೆ ತುತ್ತಾಗುವ ಮುನ್ನ ೧೯೪೨ ಅಕ್ಟೋಬರ್ ೧೬ರಂದು ಉಂಟಾದ ಜಲಪ್ರಳಯದ ವಾರ್ತೆಯನ್ನು 'ಕರ್ಮವೀರ'ದಲ್ಲಿ ಹೀಗೆಂದು ವಿವರಿಸಿ ಬರೆದಿರುವರು.

೧೯೪೨ರ ಬಿರುಗಾಳಿ

"ಪ್ರಿಯ ಅಣ್ಣಾ, ಅದೆಂತಹ ಬಿರುಗಾಳಿ, ಅದು ಎಲ್ಲವನ್ನೂ ಬೇರು ಸಹಿತ ಕಿತ್ತು ಹಾಕುತ್ತಿದೆ. ಅದರ ನೆನಹು ಮೈಯನ್ನೆಲ್ಲಾ ನಡುಗಿಸುತ್ತಿದೆ, ಆಕಾಶಕ್ಕೆ ಅದು ತೂರುತ್ತಿರುವ ಧೂಳಿಯು ನಿಜವಾಗಿಯೂ ಬೀಕರವಿದೆ. ಅದನ್ನು ನೋಡಿ ನನ್ನ ಕಣ್ಣುಗಳು ಗಿಮಿ ಗಿಮಿ ತಿರುಗುತ್ತಿವೆ. ಮೈ ತಣ್ಣಗಾಗುತ್ತದೆ. ಅದನ್ನು ಕಂಡರೆ ನನಗಾಗುವುದಿಲ್ಲ. ಅಣ್ಣಾ, ನೀನು ಆ ಬಿರುಗಾಳಿಯನ್ನು ನಿಲ್ಲಿಸ ಬಲ್ಲೆಯಾ? ಇಲ್ಲದಿದ್ದರೆ ನಾವೆಲ್ಲರೂ ಇದರಲ್ಲಿ ಸಿಕ್ಕಿ ಚೂರು ಚೂರಾಗುತ್ತೇವೆ. ನಮ್ಮ ಜೀವನ ಸುಖವನ್ನೆಲ್ಲಾ ಮಣ್ಣು ಪಾಲು ಮಾಡುವುದು. ಆದ್ದರಿಂದ ಅಣ್ಣಾ, ಇದನ್ನು ದಯಮಾಡಿ ನಿಲ್ಲಿಸಲಾರೆಯಾ?"

"ನಾನೇನು ಮಾಡಲಿ ತಂಗಿ, ಇದು ನಿಸರ್ಗ ಕೋಪ. ಅದನ್ನು ತಡೆವುದು ಯಾರ ಕೈಯಲ್ಲಿಯೂ ಇಲ್ಲ. ನಾವು ಆ ದಯಾಘನನನ್ನು ಪ್ರಾರ್ಥಿಸಿ ನಮ್ಮ ಮೊರೆಯನ್ನು ಕೇಳುವಂತೆ ಬೇಡಿಕೊಳ್ಳುವೆವು ಮಾತ್ರ. ನಮ್ಮ ಕೈಯಲ್ಲಿರುವುದು ಇಷ್ಟೇ ಎಂದು ನಿನಗೆ ಗೊತ್ತಾಗುವುದಿಲ್ಲವೆ?"

ಬಂಗಾಲದ ಪರಿಸ್ಥಿತಿಯ ಕುರಿತು ನನ್ನೊಬ್ಬ ಬಂಗಾಳೀ ಮಿತ್ರರೊಡನೆ-ಅವರು ಈಗ ಬಂಗಾಲ ಸರಕಾರದ ಮಂತ್ರಿಗಳಿರುವರು—ಚರ್ಚಿಸುತ್ತಿದ್ದಾಗ ಮೇಲಿನ ಸಂಭಾಷಣೆಯನ್ನು ನನಗೆ ಹೇಳಿದರು. ... ೧೯೪೨ರ ಪೂಜಾ ಹಬ್ಬದಲ್ಲಿ ನನ್ನೊಡನೆ ಇರಲು ಬಂದ ನನ್ನ ತಂಗಿಯೊಬ್ಬಳೇ ಮೇಲಿನ ಉದ್ಗಾರವನ್ನು ತೆಗೆದುದಲ್ಲ; ಆ ಬಿರುಗಾಳಿ ಅನಿಷ್ಟ ಸೂಚಕವೆಂದು ಎಲರೂ ತಿಳಿದಿದ್ದರು.

ಡಾ| ಹರ್ಡೀಕರರು ಬರೆದ ಲೇಖನ
ಬಂಗಾಳ ಉಪವಾಸದ ಪೂರ್ವರಂಗ.

೧೯೪೨ರ ದಸರೆಯ ಹಬ್ಬದ ಮೊದಲು ಗಂಗಾಸಾಗರ (ಬಂಗಾಗಲ ಉಪಸಾಗರ)ದ ಕರಾವಳಿಯ ಜನರಲ್ಲಿ ಮೇಲಿನಂಥ ಮಾತುಗಳು ಆಗಲೇ ನಡೆಯುತ್ತಿತ್ತು. ಕೇಡುಗಾಲ ಕಾಯುತ್ತಿದೆಯೆಂದು ಎಲ್ಲರಿಗೂ ಆಗಲೇ ತಿಳಿದಿದ್ದರು.

ಬಿರುಗಾಳಿ ಮತ್ತು ನೆರೆಹಾವಳಿಯ ಗಂಡಾಂತರವಿದೆಯೆಂದು ವೇಧಶಾಲೆಯವರಿಗೆ ಗೊತ್ತಾಗಿತ್ತು. ಅವರು ಅದನ್ನು ಸರಕಾರೀ ಅಧಿಕಾರಿಗಳಿಗೆ ತಿಳಿಸಿದ್ದರು ಸಹ ಅದರಂತೆ ಅವರು ಸರಕಾರೀ ಆಸ್ತಿಗಳನ್ನು ಉಳಿಸಿಕೊಳ್ಳಲು ತಕ್ಕ ಉಪಾಯ ಕೈಕೊಂಡರು. ಆದರೆ ಅನಾಹುತಕ್ಕೊಳಗಾದ ಜಿಲ್ಲೆಗಳ ಸಾಮಾನ್ಯ ಜನತೆಯ ಗತಿ ಯೇನು? ಅವರನ್ನು ರಕ್ಷಿಸುವರಾರು? ಪಾಪ, ಅವರಿಗೆ ನಿಶ್ಚಿತ ಏನೂ ಗೊತ್ತಿದ್ದಿಲ್ಲ. ಸರಕಾರದವರೂ ಏನೂ ಹೇಳಲಿಲ್ಲ. ಅವರು ಪೂರ್ಣ ಕಗ್ಗತ್ತಲೆಯಲ್ಲಿದ್ದರು; ತತ್ಪರಿಣಾಮವಾಗಿ ದುಃಖವು ಅವರಿಗೆ ಕಟ್ಟಿಟ್ಟಂತಾಯಿತು. ಸಾವಿರಾರು ಜನರು ಇಹಯಾತ್ರೆ ಮುಗಿಸಿದರು. ಉಳಿದವರು ಅನನ್ಯ ಕಷ್ಟ ಅನುಭವಿಸಿದರು.

ಅಂದು ೧೯೪೨ ಅಕ್ಟೋಬರ್ ೧೬. . . ಒಮ್ಮಿಂದೊಮ್ಮೆಲೇ ಭಯಂಕರ ಬಿರುಗಾಳಿ ಬೀಸಿ ಸಮುದ್ರದ ನೀರು ಉಕ್ಕೇರಿ ಭೂಮಿಯ ಮೇಲೆ ನುಗ್ಗಿ ಬಂತು. ಮಿದಾನಾಪುರ ಮತ್ತು ೨೪ ಪರಗಣೆಗಳ ಜನರು ನೀರ ಮೇಲೆ ತೇಲ ಹತ್ತಿದರು. ಅವರ ಮನೆ ಮಾರುಗಳೆಲ್ಲಾ ನೀರ ಮೇಲೆ ಮುಳುಗಿದವು. ಹೊಲಗಳು ಸ್ವಚ್ಛ ತೊಳೆದುಕೊಂಡು ಹೋದವು. ಕುಡಿಯುವ ನೀರಿನ ಕೆರೆಗಳು ಮಾಯವಾದುವು. ಎಲ್ಲಿ ನೋಡಿದರಲ್ಲಿ ನೀರೇ ನೀರು ಜೀವ ಪ್ರಾಣಿಗಳು ನೀರ ಮೇಲೆ ತೇಲುತ್ತಿರುವುದಾಗಲಿ ಅಥವಾ ಉನ್ನತ ಕಟ್ಟಡ ಇಲ್ಲವೇ ಗಿಡಗಳ ಮೇಲಾಗಲಿ ಕಾಣಬರುತ್ತಿದ್ದವು. ಅಂಥವರನ್ನು ಅವರ ಜನ್ಮದಾತನಲ್ಲದೆ ಇನ್ನಾರು ರಕ್ಷಿಸಬೇಕು? ಅದೊಂದು ಪ್ರಳಯಕ್ಕಿಂತ ಹೆಚ್ಚಿನದಾಗದಿದ್ದರೆ ಅದಕ್ಕಿಂತ ಕಡಿಮೆಯೆನ್ನುವುದು ಸಾಧ್ಯವಿಲ್ಲ. ಪ್ರಜಾಕೋಟಿಗೆ ವರ್ಣನಾತೀತ ಆಪತ್ತು ಬಂದೊದಗಿತ್ತು. 'ಬಂಧು ಬಳಗದವರನ್ನು, ಹತ್ತಿರದವರನ್ನು, ಹೊಂದಿದವರನ್ನು ಕಿತ್ತುಕೊಂಡು ಹೋಗಿ ಅಸಂಖ್ಯಾತ ಜನರನ್ನು ವರ್ಣನಾತೀತ ದುಃಖಕ್ಕೀಡುಮಾಡಿದ ಈ ಪ್ರಳಯವು ಪರಮಾತ್ಮನ ಪ್ರಕೋಪವೇ' ಪ್ರಳಯದೊಳಗಿಂದ ಹಾಗೂ ಹೀಗೂ ಬದುಕಿ ಉಳಿದವರು ನನ್ನನ್ನು ಕೇಳಲಾಗಿ 'ಅದರ ಹೊರತು ಮತ್ತೇನಿದೆ?' 'ಮಾನವನ ಸುಖ ದುಃಖಗಳು ಆತನ ಪಾಪ ಪುಣ್ಯದ ಪ್ರತಿಫಲಗಳು. ನಾವು ಬಿತ್ತಿದ್ದನ್ನು ಬೆಳೆದುಕೊಳ್ಳುತ್ತೇವೆ. ಮಾನವ ಅಪಕೃತ್ಯವನ್ನು ಮಾಡಿದರೆ ಅವನಿಗೆ ದುಃಖ ಪ್ರಾಪ್ತವಾಗುವುದಿಲ್ಲವೆಂದು ಯಾರು ಹೇಳಬಲ್ಲರು? ಮಾನವನಂತೆ ಮಾನವನ ಜನ್ಮದಾತನೂ ಇದಕ್ಕೆ ಕೆಲವುಟ್ಟಿಗೆ ಹೊಣೆಗಾರನಾಗಿರಬಹುದು' ಎಂದು ನಾನು ಅವರನ್ನು ಸಮಾಧಾನ ಪಡಿಸಲು ಯತ್ನಿಸಿದೆನು. ಇದಕ್ಕೂ ಹೆಚ್ಚು ನನ್ನಿಂದ ಏನು ಸಾಧ್ಯವಿದೆ? ಯಾರ ಪ್ರಕೋಪವಾದರೂ ಸೈ; ಸಾವಿರಾರು ಜನರು ಆಹುತಿಯಾದರು. ಜನತೆಯ ಜೀವನಾಧಾರವಾಗಿದ್ದ ದನಕರುಗಳಿಗೂ ಅದೇ ಗತಿ ಬಂದೊದಗಿತು.

– ಡಾಕ್ಟರರ ಕರುಣಕತೆ –

"ಪ್ರಾರ್ಥಿಸುವ ಸರ್ವ ಜನರ ಕ್ಷೇಮ ಚಿಂತನೆಗಾಗಿ ಆ ದಯಾಮಯನನ್ನು ಬೇಡಿಕೊಳ್ಳಿರಿ" ಎಂದು ಆ ನೀಲವರ್ಣದ ನೀರಿನ ರಾಶಿ ಏರಿ ತಮ್ಮ ಮನೆಯ ಕಡೆಗೆ ನುಗ್ಗಿ ಬರುತ್ತಿರುವಾಗ ಓರ್ವ ಪತಿಯು ತನ್ನ ಪತ್ನಿಯನ್ನುದ್ದೇಶಿಸಿ ಆತುರದಿಂದ ಹೇಳಿದನು. ಅವನು ಆ ಮಾತುಗಳನ್ನು ಒಳನುಡಿಯುತ್ತಿರುವಾಗಲೇ ಪ್ರಳಯ ಜಲವು ಅವರ ಹೊಸ್ತಿಲಿಗೆ ಬಂದಿತು. ಮುಂದೆ ಕೆಲ ನಿಮಿಷಗಳಲ್ಲಿ, ಮಾನವನ ದೇಹಗಳು ನೀರ ಮೇಲೆ ತೇಲುತ್ತಿರುವುದು ಕಂಡುಬಂತು. ಗಂಗಾಸಾಗರದ ಕರಾವಳಿಯಲ್ಲಿದ್ದ ಓರ್ವ ಡಾಕ್ಟರರದು ಈ ಕತೆ. ಅವರ ಹಳ್ಳಿ ಸಮುದ್ರದಿಂದ ಎರಡೇ ಮೈಲು ದೂರವಿದ್ದಿತು. "ಪ್ರಾರ್ಥಿಸೆಂದು ಪತ್ನಿಯನ್ನು ಕೇಳಿದ್ದಕ್ಕೆ ಅವಳು ಮತ್ತು ನನ್ನ ಮಗು ಪಾರಾದರು. ನಮ್ಮ ಮನೆಯ ಕಲ್ಲಿನ ಗೋಡೆಗಳು ಅವರನ್ನು ಬದುಕಿಸಿದವು. ಇಲ್ಲದಿದ್ದರೆ ಅವರಿಬ್ಬರನ್ನೂ ನಾನು ಕಳೆಕೊಳ್ಳುತ್ತಿದ್ದೆನು. ನನ್ನ ಪತ್ನಿ ಮತ್ತು ಮಗುವಿಗೆ ಏನಾಯಿತೆಂದು ನೋಡುವುದಕ್ಕೆ ಸಹ ಸಮಯ ಇದ್ದಿಲ್ಲ. ನಮ್ಮ ಮನೆಯ ಕಂಪೌಂಡಿನಲ್ಲಿ ಮೊಣಕಾಲುದ್ದ ನೀರಿನಲ್ಲಿ ನಾನು ನಿಂತಿದ್ದೆ. ನಮ್ಮ ಮನೆಯ ಸಮೀಪದಲ್ಲಿಯೇ ತೇಲುತ್ತಿದ್ದ ಕೆಲವರನ್ನು ಬದುಕಿಸಕ್ಕೆ ನಾನು ಈಸುಬಿದ್ದು ಹೋಗಬೇಕಾಯಿತು. ಅತ್ಯಂತ ಪ್ರಯಾಸದಿಂದ ಸುಮಾರು ೧೫ ಜನ ಸ್ತ್ರೀಪುರುಷರು ಮತ್ತು ಮಕ್ಕಳನ್ನು ರಕ್ಷಿಸಿದೆನು. ಅದೊಂದು ಸಾಹಸದ ಕೆಲಸವಾಯಿತು. ಆದರೆ ಅವರ ಹೊಟ್ಟೆ ಬಟ್ಟೆಯ ಗತಿ ಏನು? ಆಗ ಆಕಾಶದ ಕಡೆಗೆ ಮುಖ ತಿರುವಿಕೊಂಡು, ಇದೇ ನಮ್ಮ ಮನೆಯಲ್ಲಿಯ ಇದೇ ಮಂಚದ ಮೇಲೆ ಕುಳಿತು ೨೪ ತಾಸುಗಳನ್ನು ಕಳೆದೆವು. ಅರ್ಧ ನಗ್ನಾವಸ್ಥೆ, ಮೈಯೆಲ್ಲ ಒದ್ದೆ; ಮೇಲೆ ಹಸಿವು! ಮುಂದೇನಾಗುವುದೆಂದು ಗೊತ್ತಿದ್ದಿಲ್ಲ. ಏನಾದರೂ ಪರಮಾತ್ಮನನ್ನು ಪ್ರಾರ್ಥಿಸುವುದನ್ನು ಬಿಡಲಿಲ್ಲ. ಕೊನೆಗೆ ಆತನಿಗೆ ನಮ್ಮ ಮೊರೆ ಕೇಳಿಸಿತೊ ಏನೊ? ಎನ್ನುವಂತೆ ನೀರು ಕ್ರಮಶಃ ಇಳಿಯ ಹತ್ತಿತು"

ಈ ಕತೆ ಹೇಳುತ್ತಿದ್ದಂತೆ ಡಾಕ್ಟರರ ಕಣ್ಣುಗಳಿಂದ ನೀರು ಧಾರೆಯಾಗಿ ಹರಿಯುತ್ತಿದ್ದಿತು. ಕಂಠವು ಬಿಗಿದು ಬಂದಿತ್ತು. ಅವರ ಕತೆ ಕೇಳಿ ನನ್ನ ಹೃದಯವೂ ಕರಗಿ ನೀರಾಯಿತು. ನಾನೂ ಆ ಗಂಡಾಂತರವನ್ನು ಅನುಭವಿಸುತ್ತಿದ್ದೇನೆಂಬ ಭಾವನೆಯುತ್ಪನ್ನವಾಯಿತು. ಅನಾಹುತಕ್ಕೀಡಾದ ಪ್ರದೇಶದಲ್ಲಿ ನಾನು ಸಂಚರಿಸಿದಲ್ಲೆಲ್ಲ ಇದೇ ತರದ ಕತೆಗಳನ್ನು ಕೇಳಿದೆನು. ಆದರೆ ೧೯೪೩ರಲ್ಲಿ ಜನತೆಗೆ ಬಂದೊದಗಿದ ಕಷ್ಟಕ್ಕೆ ಬಿರುಗಾಳಿ ಮತ್ತು ನೆರೆ ಹಾವಳಿಯ ಅನಾಹುತವಷ್ಟೇ ಕಾರಣವಲ್ಲ.

ಬಂಧನದಲ್ಲಿ ಜವಾಹರ್

ಬಂಧನದಲ್ಲಿರುವ ಜವಾಹರಲಾಲ ನೆಹರುಗಳಿಂದು ಏನೊ ಲೇಖನ ಕಾರ್ಯ ಮಾಡುತ್ತಿಲ್ಲ, ತುಂಬಾ ಪುಸ್ತಕ ಮಾತ್ರ ಓದುತ್ತಾರೆ, ನೆಹರು ಈಗ ಉರ್ದು ಭಾಷೆ ಕಲೆಯುತ್ತಿದ್ದಾರೆ ರಾಷ್ಟ್ರಪತಿ ಅಜಾದರೇ ಅವರಿಗೆ ಉರ್ದು ಅಧ್ಯಾಪಕರು. ನೆಹರು ಸ್ವಲ್ಪ ದುರ್ಬಲರಾಗಿರುವರು ಕೃಪಾಲನಿಯವರೊಡನೆ ನೆಹರು ಬೇಡ್‌ಮಿಂಟನ್ ಆಡುತ್ತಾರೆ! ಹಿಗೆಂದು ಹಿಂದುಸ್ತಾನ್ ಸ್ಟೆಂಡಾರ್ಡ್ ಪತ್ರಿಕೆಯ ಬಾತ್ಮಿದಾರನು ಬರೆಯುತ್ತಾನೆ.

ಥಾಕೂರ್‌ದಾಸ–ಟಾಟಾರವರ ಆರ್ಥಿಕಯೋಜನೆ

ಭಾರತದ ಆರ್ಥಿಕ ಅಭಿವೃದ್ಧಿಗಾಗಿ, ಸರ್ ಪುರುಷೋತ್ತಮ ದಾಸ್ ಥಾಕೂರ್ ದಾಸ್, ಜೆ. ಆರ್. ಡಿ. ಟಾಟಾ ಹಾಗೂ ಇನ್ನಿತರೆ ಉದ್ಯಮಶೀಲರು ೧೫ ವರ್ಷಗಳಲ್ಲಿ ಜಯಶೀಲವಾಗುವ ೧೦ ಸಾವಿರ ಕೋಟಿ ರೂಪಾಯಿಗಳ ಒಂದು ವಿಶಾಲ ಯೋಜನೆಯನು ತಯಾರಿಸಿದ್ದಾರೆ. ಈ ಯೋಜನೆಯಲ್ಲಿ ಕೆಲವು ಕುಂದು ಕೊರತೆಗಳಿದ್ದರೂ ಇದು ಸರಕಾರದ ಯೋಜನೆಗಿಂತ ಉತ್ತಮವಿದೆಯೆಂದು ಸರ್ ವಿಶ್ವೇಶ್ವರಯ್ಯನವರು ಇದನ್ನು ಹರಸಿರುವರು. ನೇಶನಲ್ ಪ್ಲೇನಿಂಗ್ ಕಮಿಟಿಯ ಕಾರ್ಯದರ್ಶಿ ಪ್ರೊ| ಕೆ. ಟಿ. ಶಹಾರವರು ಇದರಲ್ಲಿನ ಕೆಲವು ಕೊರತೆಗಳನ್ನು ತೋರಿಸಿದರೂ ಇದು ಸಾಮಾನ್ಯ ನೇಶನಲ್ ಪ್ಲೇನಿಂಗ್ ಕಮಿಟಿಯ ಅಭಿಪ್ರಾಯಗಳಿಗೆ ಸರಿಯಿದೆಯೆಂದು ಹೇಳಿರುವರು.

ಮಲಬಾರಿನಲ್ಲಿ ೪೦ ಸಾವಿರ ಜನರ ಮರಣ!

ಪಂಡಿತ ಹೃದಯನಾಥ ಕುಂಜ್ರುಗಳು ಒಂದು ಪ್ರಕಟಣೆ ಹೊರಡಿಸಿ, ಅದರಲ್ಲಿ, ಬರ್ಮಾ ಅಕ್ಕಿ ನಿಂತು ಹೋದದ್ದರಿಂದ ಬಹಳ ಅನರ್ಥವುಂಟಾಗಿದೆಯೆಂದು ವಿವರಿಸುತ್ತಾ, ಕೊಚ್ಚಿನ್ ತ್ರಿವಾಂಕೂರುಗಳಲ್ಲಿ ಬಹಳ ಸಂಕಷ್ಟವೊದಗಿರುವುದೆಂದೂ, ಕಳೆದ ವರ್ಷಾಂತ್ಯದಲ್ಲಿ ಕೊಲೆರಾದಿಂದ ೩೦ ಸಾವಿರದಿಂದ ೪೦ ಸಾವಿರ ಜನರ ವರೆಗೆ ಮಲಬಾರಿನಲ್ಲಿ ಮಡಿದರೆಂದೂ ಇದಕ್ಕೆ ಅಹಾರಾಭಾವನೇ ಕಾರಣವೆಂದೂ ಕೇಂದ್ರ ಸರಕಾರವು ಕೂಡಲೇ ಸಹಾಯ ನೀಡಬೇಕೆಂದೂ ಕೇಳಿಕೊಂಡಿರುವರು.

ಒಂದು ಸಣ್ಣ ಕತೆ

ಉಸಾಬರಿ

-೨-

ಲೇಖಕರು: ರತ್ನಾಕರ.

[illegible] ಹೊರಟಾಗ ಕೊಂಚ ಗೊಂದಲವೆದ್ದು ಅದಕ್ಕೆ ತ್ತರಿಯಾಗಿ ನನ್ನ ಹಿರಿಯ ಮಿತ್ರರು ನನ್ನ 'ಉಸಾಬರಿ'ಯನ್ನು ತೆಗೆದುಕೊಳ್ಳುತ್ತೇನೆಂದು ಬೆದರಿಕೆ ಹಾಕಿದರು. ನನ್ನ ಮಿತ್ರರೇನೋ ಸಾಮಾನ್ಯರಲ್ಲ. ಅವರ ಬೆದರಿಕೆಯು ಎಷ್ಟರವರೆಗೆ ಸಾಫಲ್ಯವಾದೀತೆಂದು ನನಗೇ ತಿಳಿಯದೆ—ಮೇಲಂತೂ ಚಳಿಗಾಲ—ಮೂಲೆಯಲ್ಲಿಯೇ ತಲೆಹಾಕಿ ಮುದುಡಿಕೊಂಡು ಹಿಮ ಕರಗಿಯಂತೆ ಅಜ್ಞಾತವಾಸಕ್ಕೆ ಹೊರಡುವ ಯೋಚನೆಯಿತ್ತು. ನಾನು ಮಾಡಿದ್ದೂ ತಪ್ಪೇ! 'ನಮ್ಮಿಬ್ಬರ (ನಾನು ಮತ್ತು ಅವಳು) 'ಉಸಾಬರಿ'ಯನ್ನು ಪ್ರಪಂಚವು ತೆಗೆದುಕೊಂಡಿತೇನು!' ಎಂಬ ಸಂದೇಹವನ್ನು ತೋರ್ಪಡಿಸಿದ್ದೆ. ತೆಗೆದುಕೊಳ್ಳದೆ ಬಿಟ್ಟೀತೇ? ಏನು, ಏನಾಗುವುದೋ ಎಂದು ಚಡಪಡಿಸುತ್ತ ತತ್ತರಿಸಿಕೊಂಡು ಕಡೆಗೆ ಎಲ್ಲಿಲ್ಲದ ಧೈರ್ಯ ತಾಳಿ ಆ ಮಿತ್ರರು ನನ್ನ 'ಉಸಾಬರಿ' ತೆಗೆದುಕೊಳ್ಳುವ ಮೊದಲೇ ನಾನು ಅದನ್ನು ತೆಗೆದುಕೊಂಡರಾಯಿತಲ್ಲ ಎಂದು ರಂಗಸ್ಥಳಕ್ಕೆ ಧುಮುಕಿದ್ದೇನೆ!

'ಅವಳ ಹೆಸರನ್ನು ನಾನು ಸಮಯಾಂತರದಲ್ಲಿ ಹೇಳುವೆನೆ'ಂದು ಹಿಂದೊಮ್ಮೆ ಹೇಳಿದ್ದೆ. ನಿಜಕ್ಕೂ ಅವಳಿಗಿನ್ನೂ ಹೆಸರಿಟ್ಟಿಲ್ಲ ನಾನು. ಇಟ್ಟ ಹೆಸರು ಎಲ್ಲಿಯಾದರು ಅಪ್ಪಿತಪ್ಪಿ ಅವಳ ತಲೆಗೆ ಅಡಿಸಿದರೆ ಬಂತು ಕೇಡು! 'ಕೆಣಕಿದ ಹೆಣ್ಣು ಕೆಂಡಕ್ಕಿಂತ ಕೇಡು' ಎಂದು ಕೈಲಾಸಂರವರು ಎಚ್ಚರವಿತ್ತಿದ್ದಾರೆ. ಕೇಡು ಮಾತ್ರವಲ್ಲ, ಅವಳೊಡನೆ ನನಗೂ ನಾಮಕರಣವಾದೀತೆಂಬ ಭಯ. 'ನಾಮಕರಣದ ದಿನ ಬಂದವರು ಕೂಸಿಗೆ ಮೂಗು ಅಗಲ, ಕಣ್ಣು ಸಣ್ಣ, ಹಣೆ ಚಿಕ್ಕದು, ಕೂದಲುದುರಿದೆ, ಬಾಯಿ ಸೊಟ್ಟು ಎಂದು ಹೇಳಿದರೂ-ಕೂಡ ಯಾರೂ ತಕ್ಷಣವೇ ಮಗುವನ್ನು ರಿಪೇರಿ ಮಾಡಲು ಹೋಗುವುದಿಲ್ಲ'ವೆಂದು ಕಸ್ತೂರಿಯವರು ಹೇಳಿದ್ದರೂ ಮಾಡದಿರಲಾರರೆಂದು ಭಾವಿಸುತ್ತೇನೆ! ಅವರು ಹಾಗೆ ಮಾಡಿದರೆ ಆಶ್ಚರ್ಯವೇನೂ ಇಲ್ಲ, ಕಾರಣ ಕೂಸನ್ನು ರಿಪೇರಿ ಮಾಡಬಾರದು-ಆದರೆ ನಾನು ಕೂಸೇ?

ಕಿರಿಯನಿದ್ದಾಗ ನನಗೆ ಪ್ರೇಮವೆಂದರೇನೆಂಬುದು ತಿಳಿದೇ ಇರಲಿಲ್ಲ ಆದರೆ ಕ್ರಮೇಣ ಬೆಳೆದು ಬರುತ್ತಿರುವಾಗ ಪ್ರೇಮವು ತಿಳಿಯದಿದ್ದರೂ ಅದರ ಸುಳಿವು ಹತ್ತುವುದಕ್ಕೆ ಆರಂಭವಾಯಿತು. ಅನುದಿನದ ಪಠ್ಯ ಪುಸ್ತಕಗಳಿಂದಲೇ ದೊರೆಯಿತು. ಮಾತ್ರವಲ್ಲ, ಸಹ ಶಿಕ್ಷಣದ ಪರಿಚಯು ಹತ್ತಿದೊಡನೆಯೇ ದರ್ಜೆಯ ವಯಸ್ಸಿನ ಹುಡುಗರಿಂದ ಬಂತು ಗಂಡು ಹೆಣ್ಣಿನ ಪ್ರೇಮ ಪತ್ರಗಳ ವಿಚಾರ ನನ್ನ ಕಣ್ಣೆದುರಿಗೇ ಸಹಪಾಠಿಗಳೂ ಪ್ರೇಮಿಗಳಾಗಿ ಸಂಸಾರ ಹೂಡಿದುದನ್ನು ಕಂಡಿದ್ದೇನೆ ಎಂಥೆಂಥ ಮಹನೀಯರೂ ಪ್ರೇಮದ ಮರೆಹೊಕ್ಕು ತಮ್ಮ ಜೀವನವನ್ನು ಅದರಲ್ಲಿ ಸವೆದ ಸಂಗತಿಯನ್ನೂ ತಿಳಿದಿದ್ದೇನೆ ಏಕೆ? ಪ್ರೇಮದ ಹೆಸರಲ್ಲಿ ಎರಡು ಗಂಡು ಹೆಣ್ಣುಗಳು ನನ್ನ ಸನಿಯದಲ್ಲೇ ಒಟ್ಟುಗೂಡಿದುದನ್ನು ನೋಡಿರುವಾಗ ನಾನೇಕೆ ಮಾತ್ರ ಇನ್ನೂ ಬೀಳಲಿಲ್ಲ? ಅಥವಾ ನನಗೆ ತಿಳಿಯದಂತೆಯೇ ಬೀಳುತ್ತಿರುವೆನೇ?

ಹೀಗೆಂದು ಯೋಚನೆಮಾಡುತ್ತ ಕುಳಿತಿದ್ದೆ. ವಿಚಾರಶೂನ್ಯವಾದ ಅಲೆಮರುಳನಂತೆಯೇ ಅತ್ತಿತ್ತ ಅಲೆದಾಡುತಿದ್ದೆ. ಅಷ್ಟರಲ್ಲಿ ಮನಸ್ಸಿನ ಪಟಲದಲ್ಲಿ ಒಂದು ಅಪೂರ್ವವಾದ ಚಿತ್ರವು ತೋರಿತು. ಮಹಾತ್ಮನೊಬ್ಬನು ಕದ ತಟ್ಟುವ ಚಿತ್ರ 'ಎಂದರೆ ದೇವರೇ ಸ್ವತಃ ಕದ ತಟ್ಟುವ ಚಿತ್ರ! ನನ್ನ ಕೆಳದಿಯೊಬ್ಬಳ ಆತಿಥ್ಯವನ್ನು ಸ್ವೀಕರಿಸುವ ಪ್ರಸಂಗ ಬಂದು ಅಲ್ಲಿ ಹೋದಾಗ ಮೊದಲು ಕಣ್ಣಿಗೆ ಬಿದ್ದುದು ಆ ಚಿತ್ರ. ಅದು ಎಷ್ಟು ಅರ್ಥಗರ್ಭಿತವಾಗಿತ್ತು! ನಡೆದುನಡೆದು ಬಳಲುತ್ತ ಆಯಾಸಗೊಂಡು ಬಂದಿರುವ ನನಗೆ ಆ ಚಿತ್ರವನ್ನು ನೋಡಿದೊಡನೆಯೇ ಚಿತ್ತಭ್ರಮೆಯುಂಟಾಗಿ ಮಂಕಾಯಿತು. ಬಾಯಾರಿಕೆಯೆಂದು ನೆಪ ಹೇಳಿ ಕೊಂಚ ತಣ್ಣೀರನ್ನು ಹೊಟ್ಟೆಗೆ ಸುರಿಸಿದ ನಂತರವೇ ಕಣ್ಣುಬಿಟ್ಟು ಸಾವಕಾಶವಾಗಿ ಆ ಚಿತ್ರವನ್ನು ಚೆನ್ನಾಗಿ ಪರಿಶೀಲಿಸಿದೆ. ಚಿತ್ರವನ್ನು ಕೂಡಲೇ ಎತ್ತಿಹಾಕಬೇಕೆಂದು ಯೋಚಿಸಿದರೂ ಕೈಸಾಗಲಿಲ್ಲ.

ಆ ಕೆಳದಿಯು ಸತ್ಕಾರವೇನೋ ಔತಣದೂಟದಂತೆಯೇ ಇತ್ತು. ಆದರೂ ಬಗ್ಗಿದವನಿಗೆ ಗುದ್ದೊಂದು ಹೆಚ್ಚು ಎಂಬಂತೆ ಮಿತ್ರರಿಬ್ಬರು ನನ್ನ ಅಕ್ಕಪಕ್ಕದಲ್ಲಿ ಕುಳಿತು ಹೆಚ್ಚಿನ ಸ್ಥಳವನ್ನು ಆಕ್ರಮಿಸಿಕೊಂಡುದ್ದರಿಂದ ನಡುವೆ ನಾನು ಸಾವರಿಸಿಕೊಂಡು ಔತಣದ ಸವಿಯನ್ನು ಮೆಲ್ಲುತಿದ್ದೆ. ಏಕೋ—ಚಿಕ್ಕಂದಿನಲ್ಲಿ ಸರ್ಕಸಿನಲ್ಲಿ ಹುಲಿ ಚಿರತೆಗಳನ್ನೂ ಆಡು ಕುದುರೆಗಳನ್ನೂ ಒಂದೇ ಬಟ್ಟಲಲ್ಲಿ ತಿನಿಸುತಿದ್ದುದನ್ನು ನೋಡಿದ ನೆನಪಾಯಿತು. ನನ್ನ ಮಿತ್ರರಲ್ಲಿ ಒಬ್ಬರಂತೂ ದೇಹದಲ್ಲಿ ನನಗಿಂತ ಮೂರು ಪಾಲು ಮಿಗಿಲು; ಮತ್ತೊಬ್ಬರು ನನಗೇನೂ ಕಡಿಮೆಯವರಲ್ಲ. ಇವರ ನಡುವೆ ಕುಳಿತು ಔತಣವೇ ಇರಲಿ, ಇಲ್ಲವೆ ಗಿವುತಣವೇ ಇರಲಿ-ಅದರ ಸವಿಯು ತಿಳಿಯಬೇಕಾದರೆ ಮಾರ್ಜಾಲ ಪರಂಪರೆಯವರಿಗೆ ಮಾತ್ರ ಸಾಧ್ಯ! ಮಾರ್ಜಾಲಕ್ಕಾದರೆ ಚಾಚೂ ಸೊಲ್ಲೆತ್ತದೆ ಕಣ್ಣುಮುಚ್ಚಿಕೊಂಡು ಎದುರಿಗಿದ್ದುದನ್ನು ಮುಂದಿನ ಯೋಚನೆಯಿಲ್ಲದೆ ತಿಂದು ಹಾಕುವ ಅಭ್ಯಾಸವಿರುತ್ತದೆ. ಆದರೆ ಡಾರ್ವಿನನು ನಾವೆಲ್ಲ ವಾನರ ಪರಂಪರೆಯೆಂದು ಸಿದ್ಧಗೊಳಿಸಿರುವಾಗ ಮಾರ್ಜಾಲ ಪರಂಪರೆಯಂತೆ ಕಣ್ಣುಮುಚ್ಚಿಕೊಂಡು ಮುಕ್ಕಲಿಕ್ಕೆ ಸಾಧ್ಯವಿದೆಯೇ? ಅಂತೂ ಅಲ್ಲಿ ಬಿಕ್ಕಟ್ಟಿನಲ್ಲಿ ತಿಂದು ತೇಗಬೇಕಾದರೆ ಸಾಕುಸಾಕಾಯಿತು. ಅದರಲ್ಲೂ ಆ ಚಿತ್ರವು ನನ್ನನ್ನು ಅಧೀರನನ್ನಾಗಿ ಮಾಡಿಬಿಟ್ಟಿತು

ಹೌದು, ದೇವರು ನಮಗೆ ಬೇಕಾದಾಗಲೆಲ್ಲ ನಮ್ಮ ಬಳಿಗೆ ಬರುತ್ತಾನೆ, ನಮಗೆ ತಿಳಿದೂ ತಿಳಿಯದೆಯೂ ಬಂದೇ ಬರುವನೆಂದು ಪೂಜ್ಯರೊಬ್ಬರು ಹೇಳಿದ್ದರು ಈ ಮಾತು ಎಷ್ಟರ ಮಟ್ಟಿಗೆ ಸತ್ಯವೆಂದು ಹೇಳಬರುವುದಿಲ್ಲ—ಅದರ ಅನುಭವವಿನ್ನೂ ನನಗೆ ಬಂದಿಲ್ಲ. ಆದರೂ ಈಚೆಗೆ ಕೆಲವು ಕಾಲದಿಂದ ನಾನು ಮೊದಲಿನ ಮುಸುಕನ್ನು ಹರಿದೊಗೆದು ಚೇತರಿಸಿಕೊಂಡು ಪುಳಕಿತವಾಗಿ ಹಾರಾಡುವ ಪತಂಗದ ಅನುಭವವನ್ನು ಪಡೆಯುತಿದ್ದೇನೆ. ಹೀಗೇಕೆ? ನನ್ನ ಹೃದಯವನ್ನು ಯಾರು ತಟ್ಟಿದರು? ದೇವರೇ? ಛೀ, ಇಂತಹ ಚಿಕ್ಕ ಚೊಕ್ಕ ವಿಚಾರಗಳಲ್ಲಿ ದೇವರು ಕೈಹಾಕಿದರೆ ದೊಡ್ಡ ವಿಚಾರಗಳಲ್ಲಿ ಕೈ ಹಾಕಲು ಉಳಿಯುವವರಾರು? ದೇವರು ನನ್ನ ಹೃದಯವನ್ನು ತಟ್ಟಿರಲಿಕ್ಕಿಲ್ಲ. ಈ ಮಾತನ್ನು ಕೇಳಿ ಕೆಲವರು ನನ್ನಲ್ಲಿ ಜಿಗುಪ್ಸೆಗೊಂಡಿರಬಹುದು ದೇವರಲ್ಲಿ ಭಯಭಕ್ತಿ ಶ್ರದ್ಧೆಗಳಿಲ್ಲವೆಂದು ಹೇಳುವುದಿಲ್ಲ ನಾನು. ದೇವರನ್ನು ದೇವರ ಸ್ಥಳದಲ್ಲಿಯೇ ಇಟ್ಟು ಅಲ್ಲಿಯೇ ಪೂಜಿಸಿದರೆ ದೇವರ ನಿಜವಾದ ಮಹಿಮೆಯು ತಿಳಿಯುತ್ತದೆ. ಚೂಡಾಮಣಿಯನ್ನು ಕಾಲಿನ ಮಣಿಯೊಡನೆ ಸಿಲುಕಿಸಬಾರದು, ಒಂದು ವೇಳೆ ಸಿಲುಕಿಸಿದರೆ ಕಾಲಿನ ಮಣಿಗೇನೂ ಗೌರವ ದೊರೆಯಲಾರದು, ಸಿಲುಕಿಸುವವನ ಗೌರವಕ್ಕೆ ಮಾತ್ರ ಕುಂದು. ಆಯಾಯ ವಸ್ತುಗಳ ನಿಜವಾದ ಮಹತ್ವವನ್ನು ತಿಳಿಯಬೇಕಾದರೆ ಅದಕ್ಕೆ ತಕ್ಕುದಾಗಿರುವ ಮನೋಭಾವವನ್ನು ಪಡೆಯಬೇಕು.

ಹಾಗಾದರೆ, ಕದ ತಟ್ಟಿದವರಾರಿರಬಹುದು? ಅವಳೇ? ಅವಳಲ್ಲದೆ ಮತ್ತಾರೂ ಅಲ್ಲ' ದಿನವೂ ಆವಳನ್ನು ನೋಡುವ ಅಭ್ಯಾಸವಾದುದರಿಂದ ಆವಳ ಚಿತ್ರವು ನನ್ನ ಮನಸ್ಸಿನಲ್ಲಿ ಅಂದವಾಗಿ ಬಿತ್ತುಹೋಗಿದೆ ನಮ್ಮ ಮೈತ್ರಿಯು ಮೊಳಕೆಯೊಡೆದು ಗಿಡವಾಗಿ ಬೆಳೆದು ಹೂ ಬಿಡಲಾರಂಭಿಸಿದೆ. "ಹೊಲದಲ್ಲಿ ಬೆಳೆಯುವ ಹೂವುಗಳನ್ನು ನೋಡಿ, ಅವು ನೂಲುವುದಿಲ್ಲ, ನೇಯುವುದಿಲ್ಲ, ಆದರೂ ಸಾಲಮನ್ ಚಕ್ರವರ್ತಿ ತನ್ನ ವೈಭವದ ಔನ್ನತ್ಯದಲ್ಲಿ ಸಹ ಅಷ್ಟು ಸುಂದರವಾದ ಉಡುಪನ್ನು ಧರಿಸಿರಲಿಲ್ಲ'ವೆಂದು ಎರಡು ಸಾವಿರ ವರ್ಷಗಳ ಕೆಳಗೆ ಕ್ರಿಸ್ತನು ಹೇಳಿದ್ದನು. ಹೊಲದಲ್ಲಿ ಯಾರ ಆರೈಕೆಯೂ ಇಲ್ಲದೆ ಕೇವಲ ತನ್ನಿಂದ ತಾನೇ ಬೆಳೆದ ಹೂಗಳು ರಾಜವೈಭವವನ್ನೂ ಮೀರಿಸಿದ್ದರೆ, ಜತನವಿಟ್ಟು ಆಕ್ಕರೆಯಿಂದ ಬೆಳೆಯಿಸಿದ ಆ ಪುಟ್ಟ ಹೂವಿನ ಸೊಬಗನ್ನು ವರ್ಣಿಸಲು ಶಕ್ಯವೇ? ಮೊಗ್ಗೆ ಬಿಟ್ಟಿದೆ—ಅದು ಅರಳಿದಾಗ ಎಲ್ಲಿಲ್ಲದ ಸುವಾಸನೆಯನ್ನು ಬೀರಿ ತನ್ನ ಇರವನ್ನು ತಿಳಿಯಪಡಿಸುತ್ತದೆ ಆಗ ಅದನ್ನು ಕೊಯ್ಯಲು ಬರುವವರೆಷ್ಟು ಮಂದಿ! . .

ಕಾರ್ಯ ನಿರತನಾಗಿದ್ದಾಗ ಒಂತು ನನಗೊಂದು 'ಫೋನ್ ಕಾಲ್', ನನಗಾಶ್ಚರ್ಯ! 'ಫೋನಿನ ಅನುಕೂಲತೆಯಿದ್ದ ಮಿತ್ರರು ನನಗಿರುವದು ಎಲ್ಲೋ ಅಲ್ಪಸ್ವಲ್ಪ!' ಯಾರೆಂದು ಕೂಡಲೇ ತಿಳಿಯಲಾರದೆ 'ಫೋನ'ನ್ನು ಎತ್ತಿ ನನ್ನ ಹೆಸರನ್ನು ತಿಳಿಸಿದಾಗ ಕೇಳಿಸಿತು—

'ನೀವೀಗಲೇ ಒರುವಿರೇ? ಅಗತ್ಯವಾಗಿ"

'ಕೆಲಸ ಬಿಟ್ಟು ಕೂಡಲೇ ಒರಲಾಗುವುದೇ? ಏಕೆಂದು ತಿಳಿಸಬಹುದೇ?

'ಬರುವುದಾದರೆ ಕೂಡಲೇ—ಇಲ್ಲವಾದರೆ ಬೇಡ'' ಎಂದು ಅವಳು ನುಡಿದು ಮುಗಿಸಿದಳು

'ಬರುವುದಾದರೆ ಕೂಡಲೇ'' ಏಕೆ? ಕೇಳಿದರೆ ತಿಳಿಸಲಾರಳು ಎಲ್ಲೋ ಓದಿದ್ದೆ ನಾನು—'When once a woman has got a man in hand, She has got him no longer in her heart' ಎಂದು ಇದಕ್ಕನುಸಾರವಾಗಿ ನಾನು ಈಗ ಹೋದರೆ, ಅದು ಪುರುಷಾರ್ಥವಲ್ಲವೆಂದಂದುಕೊಂಡು ಅವಳಲ್ಲಿ ಹೋಗಲೇ ಇಲ್ಲ ತಾಸೊಂದು ಕಳೆದ ನಂತರ ಅವಳು ಮತ್ತೊಮ್ಮೆ ಫೋನಿನಲ್ಲಿ 'ನೀವು ಈಗಲೇ ಬಾರದಿದ್ದರೆ ನಾನಾದರೂ ಅಲ್ಲಿಗೆ ಬರುತ್ತೇನೆ!' ಎಂದು ಹೇಳಿದಾಗ ಕೊಂಚ ತಳಮಳವಾಯಿತು ನಮ್ಮ ಆಫೀಸಿಗೆ ಅವಳು ಬರುವುದು ಅಷ್ಟು ಸಮಂಜಸವಲ್ಲವೆಂದು ತಿಳಿದು ಒಂದು ಸಣ್ಣ ನೆಪ ಹೇಳಿ ಆಫೀಸಿನಿಂದ ಹೊರಹೊರಟು ಅವಳನ್ನು ಕಂಡಾಗ ಸಾಂತಚಿತ್ತನಾದೆನು.

ಅವಳು—ಸೌಂದರ್ಯವತಿಯೇ! ಎಂತಹ ಚಿತ್ತವನ್ನೂ ಶಾಂತಗೊಳಿಸುವ ಸೌಂದರ್ಯ! ವಿಚಾರಿಸಿದಾಗ 'ವಿಶೇಷವೇನೂ ಇಲ್ಲ; ಈಗ ತಾನೇ ನಿಮ್ಮ ಮಿತ್ರರೊಬ್ಬರು ಇಲ್ಲಿ ಬಂದು [illegible] ನಮ್ಮಿಬ್ಬರ ವಿಷಯ ಮಾತಾಡಿ ತೆರಳಿದ್ದರು. ನಾನು ನಿಮ್ಮನ್ನು ಮದುವೆಯಾಗುವ ವಿಚಾರವನ್ನು ಬಿಟ್ಟರೆ ಒಳಿತೆಂದರು-ಬಿಡದಿದ್ದರೆ ಲೇಸಾಗಲಿಕ್ಕಿಲ್ಲವಂತೆ! ಇವರ ಬೆದರಿಕೆಗೆ ಯಾರು ಅಂಜುವವರು? . . . .'

ಅವಳ ಮಾತುಗಳನ್ನು ಕೇಳಿ ನನಗೆ ಹರುಷವಾಯಿತು. ಆವಳೀವರೆಗೂ ನನ್ನೊಡನೆ ನಲವಿನ ಸೊಲ್ಲೆತ್ತದಿದ್ದುದರಿಂದ ನನಗೂ ಕೊಂಚ ಸಂದೇಹವಿತ್ತು—ಅವಳು ನನ್ನನ್ನು ಪ್ರೀತಿಸುತ್ತಾಳೋ ಇಲ್ಲವೋ ಎಂದು ಮದುವೆಯ ವಿಚಾರದಲ್ಲೂ ಅವಳ ಸಮ್ಮತಿಯಿದೆಯೆಂದು ಯೋಚಿಸುವುದರೊಳಗೆ—

'ಏನು, ನೀವು ನನ್ನ ಸುದ್ದಿಯನ್ನೆಲ್ಲ ನಿಮ್ಮ ಸ್ನೇಹಿತರಿಗೆ ತಿಳಿಸಿ ಊರೆಲ್ಲ ಹಬ್ಬಿಸಿದೀರಾ? ಇರಲಿ—ಏನನ್ಯಾಯ! ನಿಮ್ಮನ್ನು ನಾನು ಪ್ರೀತಿಸುತ್ತೇನೆಂದು ತಿಳಿದಿರಾ? ನಗುತ್ತ ಕೊಂಚ ಸಲಿಗೆಯಿಂದ ಮೈತ್ರಿಯಿದ್ದರೆ ಅದನ್ನು ಪ್ರೇಮವೆಂದು ತಿಳಿಯುವ ಶಂಕರ ಭೋಳೇ ತನಕ್ಕೆ ಏನನ್ನಬೇಕು? ಇಲ್ಲ—ನಿಮ್ಮನ್ನು ನಾನೆಲ್ಲಾದರೂ ಮದುವೆಯಾಗುವುದುಂಟೇ'' ಎಂಬವಳ ಕೆಂಗಣ್ಣಿನ ಮಾತುಗಳನ್ನು ಕೇಳಿ ನಾನು ಝುರ್ಝುರಿತನಾದೆ ಗಾಳಿ ಗೋಪುರವನ್ನು ಕಟ್ಟಿ ಅದರ ಸೊಬಗನ್ನು ನೋಡುವುದರೊಳಗೆ ಅದು ಕುಸಿದು ಬಿದ್ದರೆ!—

ಹಿಂದೆ ಹೇನಿ ಎಂಬ ಪ್ರಸಿದ್ಧ ಜರ್ಮನ್ ಕವಿ ತರುಣನಾಗಿದ್ದಾಗ ಒಂದು ಸಭೆಯಲ್ಲಿ ವಿದ್ಯಾ ಪ್ರಶಸ್ತಿಯನ್ನು ಪಡೆಯುವುದಕ್ಕೆ ಹೋದವೇಳೆ ಎದುರಿಗಿದ್ದ ತರುಣಿಯೊಬ್ಬಳ ಚೆಲುವಿಗೆ ಮನಸೋತು ಮೂರ್ಛೆಗೊಂಡನಂತೆ ಆ ತರುಣಿಗಿಂತಲೂ ಆವಳು ಇಮ್ಮಡಿ ಸೌಂದರ್ಯವತಿ—ಆದರೂ ನಾನಿಷ್ಟರ ವರೆಗೆ ಮೂರ್ಛೆಗೊಂಡಿರಲಿಲ್ಲ! ದುರದೃಷ್ಟವಶಾತ್ ಅವಳ ಮಾತುಗಳನ್ನು ಕೇಳಿ ನನಗೆ ಕಣ್ಣುಕತ್ತಲೆ ಬಂದಂತಾಯಿತು! ಎದೆ ಮಾತ್ರ ಆಗಾಗ ಧಸಕ್ಕಾಗುತಿದ್ದರೂ ಎಂದೂ ಮೂರ್ಛೆಗೊಳ್ಳದ ನಾನು ಅಂದು ಮೂರ್ಛಿತನಾದೆನು!

ಎಚ್ಚರವಾಗಿ ನೋಡುವಾಗ ಅವಳು ನನ್ನ ಬಳಿಯಲ್ಲಿ ಕುಳಿತು ನನ್ನನ್ನೇ ತವಕಗೊಂಡು ನೋಡುತಿದ್ದಳು. ಕಂಬನಿದುಂಬಿದ ಕಣ್ಣುಗಳನ್ನು ನೋತಿ ಸಂತಾಪಗೊಂಡು ಎಳುವಾಗ—

'ದಯವಿಟ್ಟು ಏಳಬೇಡಿ—ತ್ರಾಸವಾಗಬಹುದು ನಾವಿಬ್ಬರೂ ನಮ್ಮ ನಮ್ಮ ಹೃದಯವನ್ನು ವಂಚಿಸುತ್ತ ಮರೆಮಾಚುತ್ತ ದಿನಗಳೆಯುತಿದ್ದೆವು. ಇಬ್ಬರೂ ಬಾಯಿ ಬಿಡುತ್ತಿರಲಿಲ್ಲ—ನಾನಾದರೂ ನಿಮ್ಮನ್ನು ಅಂದು ಸಾಲೆಯಲ್ಲಿ ನೋಡಿದ ದಿನವೇ ಪ್ರೀತಿಸಲಾರಂಭಿಸಿದೆನು—ನಿಮ್ಮ ಮನೋಭಿಪ್ರಾಯವು ಮಾತ್ರ ತಿಳಿದಿರಲಿಲ್ಲ—ನೀವಾಗಿ ತಿಳಿಸುವ ವಿಚಾರದಲ್ಲಿ ಇಲ್ಲವೆಂದು ಗೊತ್ತಾಗಿ ನಾನೊಂದು ಚಿಕ್ಕ ನಾಟಕವನ್ನು ರಚಿಸಬೇಕಾಯಿತು— . . . . . ಅಲ್ಲ ನೀವು ಮೂರ್ಛೆ ಹೋದುದೇ ನನಗಚ್ಚರಿ! ಬರೀ ನಾಲ್ಕು ಮಾತುಗಳಿಗೆ ನೀವು ಮೂರ್ಛೆಹೋದರೆ ಹೇಗೆ? ಇನ್ನು ನಾವು ಮುಂದಿಯನ್ನು ಎದುರಿಸುವ ಪ್ರಸಂಗ ಬಂದಾಗ . . . .'

'ಪ್ರೇಮವು ಒಂದು ಬೆಂಕಿಯಂತೆ—ಅದರ ಶಾಖವು ನಮ್ಮನ್ನು ಹುರಿದೆಬ್ಬಿಸಿ ಯಾವ ಎದುರಾಳಿಯನ್ನೂ ತಡೆಯುವಂತೆ ಮಾಡಬಹುದು; ಆದರೆ ಅದು ನಮ್ಮನ್ನು ಮಾತ್ರ ಸುಡಬಾರದು.. ...' ಎಂದು ಸಮಾಧಾನವಿತ್ತೆ.

ನೇಮಕ

ಸೇಲಂ ಗವರ್ನಮೆಂಟ್ ಸೆಕೆಂಡರಿ ಶಾಲೆ (ಹುಡುಗಿಯರ) ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಮ್. ಎಲ್. ಸ್ಟೋಲ್‌ರು ಮಂಗಳೂರು-ಗ್ಯ ಸೆಕೆಂಡರಿ ಟ್ರೈನಿಂಗ್ ಶಾಲೆ (ಹುಡುಗಿಯರ) ಸುಪರಿಂಟೆಂಡೆಂಟರಾಗಿ ನೇಮಕ ಹೊಂದಿದ್ದಾರೆ.

1943-1944

Not because it is a time honoured custom but because we would feel ungrateful, if we did not express our appreciation to those whose loyalty, friendship and patronage make our success possible.

To our thousands of customer friends, the Directors and Staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desires.

ESTD. 1906.

CANARA BANK LTD.

ರಶ್ಯನ್ ಸೈನಿಕರು ಕ್ರಿಮಿಯಾ ದ್ವೀಪಕಲ್ಪದ ಆಗ್ನೇಯದಲ್ಲಿ ಇಳಿದರು. ರಶ್ಯನರು ಇಳಿವ ನೊದಲು ಫಿರಂಗಿಗಳಿಂದ ಗುಂಡಿನ ಮಳೆಗರೆದ ರು. ಈಗ ಅಲ್ಲಿ ಉಗ್ರ ಕಾಳಗ ನಡೆಯುತ್ತಿದೆ. ಲೆನಿನ್‌ಗ್ರಾಡ್ ಭಾಗದಲ್ಲಿ ರಶ್ಯನ್ ಸೇನೆ ಟೋಸ್ನೋ ರೈಲ್ವೆ ಕೇಂದ್ರ ಸಮೀಪಿಸಿದೆ. ಈ ನಗರವೂ ಬೇಗನೇ ರಶ್ಯನರ ವಶವಾಗಬಹುದೆಂದು ರಶ್ಯನರ ಆಶೆಯಿರುವುದು. ಲೆನಿನ್‌ಗ್ರಾಡ್‌ಗೆ ಎರಡು ಮೈಲು ದೂರ ಕ್ರಾಸ್ನೋಯ್ ಗ್ರಾಡ್ ಸ್ಕಿ ನಗರದಲ್ಲಿ-ಶಿಬಿರ ಬಿಟ್ಟಿರುವ ಜರ್ಮನರ ನ್ನು ಹೊಡೆಪಟ್ಟಲು ರಶ್ಯನರು ಪ್ರಯತ್ನಿಸುತ್ತಿರುವರು. ಯುಕ್ರೇನಿನಲ್ಲಿಯೂ ಹೋರಾಟಕ್ಕೆ ಆರಂಭವಾಗಿರುವುದು. ಕಿರೋವ್‌ಗ್ರಾಡ್ ದೊಡ್ಡ ರಣರಂಗವಾಗಿರುವುದು.

ದಕ್ಷಿಣ ರೋಮಿನಲ್ಲಿ ಇಳಿದಿರುವ ಬ್ರಿಟಿಷ್ ಮತ್ತು ಅಮೆರಿಕನ್ ಸೈನಿಕರು ತಮ್ಮ ಠಾಣೆಯನ್ನು ವಿಸ್ತೃತಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮಿತ್ರ ಸೈನಿಕರು ಒಳನಾಡಿಗೆ ನುಗ್ಗಿದಂತೆ ರೋಮಿನಿಂದ ದಕ್ಷಿಣ ಇಟಲಿಗೆ ತೆರಳುವ ಜರ್ಮನ್ ವಾಹನ ಸೌಕರ್ಯಗಳಿಗೆ ಗಂಡಾಂತರವೊದಗುವುದೆಂದು ಊಹಿಸಲಾಗಿದೆ. ಐದನೇ ಸೇನೆ ಸ್ಥಾಪಿಸಿರುವ ಕರಾವಳಿ ಶಿಬಿರವನ್ನು ರಕ್ಷಿಸಲಾಗುತ್ತಿದೆ. ಇದನ್ನು ರಕ್ಷಿಸುವ ವಿಮಾನಗಳು ವೈರಿ ಶಿಬಿರಗಳ ಮೇಲೆ ಬಾಂಬೊಗೆದಿರುವವು. ಜರ್ಮನರು ಹಲವು ಬಾಂಬರ್ ಮತ್ತು ಘಾತಿಗಗಳನ್ನು ಕಳುಹಿಸಿರುವರು. ಇವು ಹೆಚ್ಚಾಗಿ ಮಿತ್ರ ಹಡಗಗಳ ಮೇಲೆ ಬಾಂಬೆಸೆಯಲು ಯತ್ನಿಸಿದವು. ರೋಮಿನ ದಕ್ಷಿಣದಲ್ಲಿ ಕರಾವಳಿ ಶಿಬಿರ ಸ್ಥಾಪಿಸಿರುವ ಮಿತ್ರ ಸೈನಿಕರು ಶತ್ರುಗಳು ಚೆಲ್ಲಿರುವ ಸುರಂಗಗಳನ್ನು ದಾಟಿ ಒಳನಾಡಿಗೆ ನುಗ್ಗಿರುವರೆಂದು ತಿಳಿದುಬಂದಿದೆ. ಐದನೇ ದಳವನ್ನು ಕೆಡವಿ ಹಾಕಲು ಜರ್ಮನರು ಪ್ರಬಲ ಹಂಚಿಕೆ ಮಾಡುತ್ತಿದ್ದಾರೆ. ಸೈನ್ಯ ಚಟುವಟಿಕೆಗಳು ಈ ಬಗ್ಗೆ ಬಹಳವಾಗಿ ನಡೆಯುತ್ತಿವೆ. ಗಾಂಗ್ಲಿಯಾನೋ ರಣರಂಗದಲ್ಲಿ ವಿಶೇಷ ಚಟುವಟಿಕೆಗಳೇನೂ ನಡೆದಿಲ್ಲ. ಇದರ ಕರಾವಳಿ ವ್ಯೂಹದಲ್ಲಿ ಜರ್ಮನರು ಒಂದು ಉಗ್ರ ಧಾಳಿಯಿಟ್ಟರು. ಮಧ್ಯ ಭಾಗದಲ್ಲಿರುವ ಫ್ರೆಂಚ್ ಸೈನಿಕರು ಜರ್ಮನರ ಪ್ರತಿಭಟನೆ ಕಡೆಯಲಾರದೆ ೧೦೦೦ ಅಡಿ ಹಿಂದೆ ಸರಿದರು. ರಾಪಿಡೋ ನದಿ ದಾಟಿದ ಅಮೆರಿಕನರಿಗೆ ಕಂದಕ ಅಗೆಯಲು ಸಮಯ ದೊರಕಲಿಲ್ಲ.

ಅಮೆರಿಕನ್ ನೌಕಾ ವಿಮಾನಗಳು ಪರಾಮುಶಿರೋ ದ್ವೀಪದ ಮೇಲೆ ಬಾಂಬೆಸೆದವೆಂದು ಸುದ್ದಿಯಿದೆ. ಈ ದ್ವೀಪವು ಟೋಕಿಯೋದಿಂದ ೧೮೦೦ ಮೈಲು ಉತ್ತರಕ್ಕಿದೆ. ಯುದ್ಧಾನಂತರದಲ್ಲಿ ದಕ್ಷಿಣ ಅಫ್ರಿಕ ದೇಶಗಳ ಆಡಳಿತೆಗಾಗಿ ಒಂದು ಮಿತ್ರಮಂಡಳ ವ್ಯವಸ್ಥೆಯನ್ನು ಮಾಡಬೇಕೆಂದು ಅಮೇರಿಕದಲ್ಲಿರುವ ನ್ಯೂಜಿಲಾಂಡ್‌ನ ರಾಯಭಾರಿ ವಾಲ್ಟರ್‌ನರರು ಹೇಳಿದರು. ಈ ದೇಶಗಳಿಗೆ ಕೊನೆಗೆ ಸ್ವರಾಜ್ಯ ಕೊಡಬೇಕೆಂಬ ಉದ್ದೇಶದಿಂದ ಜನರ ಸಹಕಾರ ಪಡೆಯಬೇಕೆಂದೂ ಅವರು ನುಡಿದರು. ಅರಕಾನ್ ವ್ಯೂಹದಲ್ಲಿ ಮಾಂಗಡಾ ಪ್ರದೇಶದಲ್ಲಿ ಸ್ವಲ್ಪ ಚಟುವಟಿಕೆಯಿತ್ತು. ಮಿತ್ರ ಸೇನೆಗಳು ಸಾಹಸ ತೋರಿಸಿ ಒಂದು ಸಣ್ಣ ಹಳ್ಳಿ ಆಕ್ರಮಿಸಿದವು. ಮಾಯೂ ಪ್ರದೇಶದ ಪೂರ್ವ ಭಾಗದಲ್ಲಿ ಅನೇಕ ಗುಡ್ಡಗಾಡು ಭಾಗಗಳನ್ನು ವಶಪಡಿಸಿಕೊಂಡು ಮಿತ್ರ ಸೇನೆಗಳು ತಮ್ಮ ಪರಿಸ್ಥಿತಿ ಸುಧಾರಿಸಿಕೊಂಡಿದೆ. ಒಟ್ಟು ಬೂಥಿಡಾಂಗ ಪ್ರದೇಶದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ೨॥ ಮೈಲು ದೂರ ಮಿತ್ರರ ಪರಿಸ್ಥಿತಿ ಸುಧಾರಿಸಿದೆ. ಚಿಂದವಿನ್ ತಪ್ಪಲಲ್ಲಿ ಚಟುವಟಿಕೆ ಸಾಗಿದ್ದು, ಮಿತ್ರ ಸೇನೆಗಳ ಪ್ರಗತಿಯಾಗಿರುವುದು. ಮಿನಿಯನದಲ್ಲಿ ಮಿತ್ರ ವಿಮಾನಗಳು ಬಾಂಬು ಧಾಳಿಯಿಟ್ಟುದಲ್ಲದೆ, ಮೇನಾಂಗ ಪ್ರದೇಶದ ಮೇಲೂ ಗುಂಡು ಸುರಿಸಿವೆ.

ಸಮರಭೂಮಿಯ ಸಂಚಾರ

ನೆಟ್ಯೂನೋದಲ್ಲಿಳಿದ ಬ್ರಿಟಿಷ್ ಮತ್ತು ಅಮೆರಿಕನ್ ಸೈನಿಕರು ಈಗ ರೋಮ್ ಪಟ್ಟಣದ ೨೦ ಮೈಲು ದೂರದಲ್ಲಿ ಠೇರೆ ಹೊಡೆದಿದ್ದಾರೆ. ವೆಲೆಟ್ರಿ ಎಂಬ ನಗರವೂ ಅವರ ವಶವಾಗಿದೆ. ಮಿತ್ರರ ಕರಾವಳಿ ಠಾಣ್ಯದ ಮೇಲೆ ಜರ್ಮನರು ಧಾಳಿಯಿಟ್ಟಿರುವರು. ಇಷ್ಟರ ವರೆಗೆ ಬ್ರಿಟಿಷ್ ಸೈನಿಕರು ಜರ್ಮನ್ ಸೈನಿಕರನ್ನು ಎದುರಿಸಿಲ್ಲ.

ಅರ್ಜೆಂಟಿಯಿನವು ಅಕ್ಷರಾಷ್ಟ್ರಗಳ ಸಂಬಂಧ ಕಡಿದುಕೊಂಡಿದೆಯೆಂದು ಅಧಿಕೃತವಾಗಿ ತಿಳಿದುಬಂದಿರುವುದು. ಪೋಲೆಂಡ್ ರಶ್ಯ ಜಗಳದಲ್ಲಿ ಅಮೆರಿಕವು ಮಧ್ಯಸ್ಥಿಕೆ ಮಾಡಲು ಮುಂದೆ ಬಂದುದನ್ನು ರಶ್ಯವು ನಿರಾಕರಿಸಿದೆಯಾಗಿ ಅಧಿಕೃತ ಪ್ರಕಟಿಸಲ್ಪಟ್ಟಿದೆ. ನ್ಯೂಗಿನಿಯಲ್ಲಿ ಆಸ್ಟ್ರೇಲಿಯನರು ಮುಂದೊತ್ತುತ್ತಿದ್ದಾರೆ. ಮಾರ್ಶಲ್ ದ್ವೀಪಗಳ ಮೇಲೆ ಅಮೆರಿಕನರು ಧಾಳಿಯಿಟ್ಟಿರುವರು.

ನಿಮ್ಮ ಕಂಠ ಮತ್ತು ಶ್ವಾಸ ಕೋಶಗಳನ್ನು ರಕ್ಷಿಸಿರಿ

ನೀವು ಕಫ, ಶೀತ, ಕಂಠನೋವು ಮತ್ತು ಶ್ವಾಸಕೋಶದ ದುರ್ಬಲತೆಗಳಿಂದ ನರಳುವಿರಾದರೆ, ವಿಷಹಾರೀ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಂಡು ತೀವ್ರ ಗುಣಹೊಂದಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತದೆ. ಅದು ನಿಮ್ಮ ಶ್ವಾಸದೊಡನೆ ಶ್ವಾಸಕೋಶಕ್ಕೆ ಸೇರಿ; ಅಲ್ಲಿನ ರೋಗಾಣುಗಳನ್ನು ನಾಶಮಾಡುವುದು. ಎದೆಯ ಅನೇಕ ತರದ ತೊಂದರೆಗಳನ್ನು ನಿವಾರಿಸುವುದು. ಪೆಪ್ಸ ಕೆರತವನ್ನು ಸರಿಗೊಳಿಸುವುದು. ನಿಮ್ಮ ಎದೆ ಮತ್ತು ಶ್ವಾಸಕೋಶಕ್ಕೆ ಒಳ್ಳೆಯ ರಕ್ಷಣೆಯನ್ನೀಯುವುದು.



ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಮಂಗಳೂರು ಜಿಲ್ಲಾ ಆಹಾರ ಸಮಿತಿ

ಕಳೆದ ಸೋಮವಾರ ಜಿಲ್ಲಾ ಆಹಾರ ಸಮಿತಿ ಸಭೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆ, ಕಲೆಕ್ಟರರ ಆಫೀಸಿನಲ್ಲಿ ಸೇರಿ, ಕಾಸರಗೋಡಿಗೆ ಕಡಿಮೆ ಬಿದ್ದಿರುವ ಅಕ್ಕಿಯನ್ನು ಹೊರ ಜಿಲ್ಲೆಯಿಂದ ತರಿಸಬೇಕೆಂದೂ, ಜಿಲ್ಲೆಯ ಹೊರಗಿ ೧೫ ಸಾವಿರ ಮುಡಿ ಬೆಳ್ತಿಗೆ ಅಕ್ಕಿ ಗೋಣಿ ತರಿಸಬೇಕೆಂದೂ, ತಿಂಗಳಿಗೆ ೧೫೦೦ ಗೋಣಿ ಸಕ್ಕರೆಯ ಸರಬರಾಯಿಯನ್ನು ತಿಂಗಳಿಗೆ ೩೫೦೦ ಗೋಣಿಗೆ ಹೆಚ್ಚಿಸಬೇಕೆಂದೂ, ಕಂಟ್ರೋಲ್ ದರದಲ್ಲಿ ಕೃಷಿಯ ಉಪಕರಣಗಳನ್ನು ತರಿಸಿ ಸ್ಟೋರುಗಳ ಮೂಲಕ ಮಾರಾಟ ಮಾಡಿಸಬೇಕೆಂದೂ, ದನಕರುಗಳ ರೋಗಕ್ಕೆ ಅಗತ್ಯವಿರುವ ಔಷಧಿಗಳನ್ನು ಕೂಡಲೇ ತರಿಸಬೇಕೆಂದೂ, ಜಿಲ್ಲೆಯ ಕೇಂದ್ರಗಳಲ್ಲಿ ಅಕ್ಕಿ ಶೇಖರವಾಗಿ ಹಂಚುವ ಏರ್ಪಾಡಾದ ಬಳಿಕ ಜಿಲ್ಲೆಯಲ್ಲೆಲ್ಲ ಅಕ್ಕಿಯ ಖಂಡಿತ ಕ್ರಯ ನಿರ್ಧಾರವಾಗಬೇಕೆಂದೂ ನಿರ್ಣಯಗಳಾಗಿವೆಯಾಗಿ ತಿಳಿಯುತ್ತದೆ.

ಅಕ್ಕಿ ಪರಿಸ್ಥಿತಿ ಕುರಿತು

ಸಿವಿಲ್ ಸಪ್ಲೈಸ್ ಶಾಖೆಯ ಡೆಪ್ಯುಟಿ ಕಮಿಶನರ್ ಶ್ರೀ ಕುಟ್ಟಿಲಿಂಗಂ ಪಿಳ್ಳೆಯವರು ಕಳೆದ ಶನಿವಾರ ಮಂಗಳೂರಿಗೆ ಬಂದಿದ್ದು ಅಕ್ಕಿ ಪರಿಸ್ಥಿತಿ ಕುರಿತು ಇಲ್ಲಿನ ಪ್ರಮುಖರೊಡನೆ ಚರ್ಚಿಸಿ ಹೊಸದುರ್ಗವನ್ನು ಸಂದರ್ಶಿಸಿ ಮಂಗಳೂರು ಆಹಾರ ಸಮಿತಿ ಸಭೆಗೂ ಹಾಜರಿದ್ದು ಮದ್ರಾಸಿಗೆ ಹಿಂತೆರಳಿದರು.

ಎಡ್ವೈಸರಲ್ಲಿ ವಿನಂತಿ

ಕೆಂಡುಪು, ಕಾವೂರು, ಪಚ್ಚನಾಡಿ, ಪದವು ಮತ್ತು ನೀರುಮಾರ್ಗಗಳ ಗ್ರಾಮಸ್ಥರ ಪ್ರಾತಿನಿಧ್ಯವುಳ್ಳ ಒಂದು ಶಿಷ್ಟ ಮಂಡಲವು ಕಳೆದ ಸೋಮವಾರ ಜಿಲ್ಲಾ ಕಲೆಕ್ಟರರನ್ನು ಕಾದು ನಿಂತು, ಅವರ ವಿನಂತಿ ಪತ್ರವನ್ನು ಗವರ್ನರರ ಎಡ್ವೈಸರರಿಗೆ ಕಳುಹಿಸುವಂತೆ ಬೇಡಿಕೊಂಡರು.

ಈ ವಿನಂತಿಯು ಭೂಮಿಕಾಣಿಗಳಿಲ್ಲದ ರಸ್ತೆ ಬಳಿಯಲ್ಲಿ ತರಕಾರಿ ವೀಳ್ಯದೆಲೆ ಮೊದಲಾದ ಚಿಲ್ಲರೆ ವ್ಯಾಪಾರ ಮಾಡುವವರ ಕಡೆಯದಾಗಿತ್ತು. ಮಂಗಳೂರು ಮುನ್ಸಿಪಾಲಿಟಿಯಲ್ಲಿ ಅಕ್ಕಿಗೆ ಖಂಡಿತ ಕ್ರಯ ನಿಶ್ಚಯವಾದ ಮೇಲೆ ತಮ್ಮಲ್ಲಿ ಅಕ್ಕಿಗೆ ಕ್ರಯ ಬಹಳ ಹೆಚ್ಚಾಗಿದ್ದು ತಮಗೆ ಕಡಿಮೆ ಕ್ರಯದಲ್ಲಿ ಅಕ್ಕಿ ದೊರಕಿಸಿ ಕೊಡಬೇಕೆಂದು ಅದರಲ್ಲಿ ಕೇಳಲಾಗಿದೆ.

ಜಿಲ್ಲಾ ಸೆಶ್ಯನ್ ಕೋರ್ಟಿನಲ್ಲಿ

ಕಳವು ಮಾಲು ತೆಗೆದುಕೊಂಡರೆಂದು ಮಂಗಳೂರಿನ ವ್ಯಾಪಾರಿ ಶ್ರೀ ಹನುಮಂತ ಪೈ ಎಂಬವರಿಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ರೂ ೨೦೦ ಜುಲ್ಮಾನೆಯು, ಕಳವು ಮಾಡಿದವರೆಂದು ಇಬ್ಬರಿಗೆ ತಲಾ ೩ ವರ್ಷ ಶಿಕ್ಷೆ ಅಸಿ. ಸೆಶ್ಯನ್ ಜಡ್ಜರು ವಿಧಿಸಿದ್ದು ಅದೀಗ ಅಪೀಲಿನಲ್ಲಿ ಜಿಲ್ಲಾ ಸೆ। ಜಡ್ಜ್ ಶ್ರೀ ಕೋಮನ್ ಇವರ ಮುಂದೆ ವಿಚಾರಣೆಯಾಗಿ ಸಜಾ ಅವಧಿಯನ್ನು ಕಡಿಮೆ ಮಾಡಿ ತೀರ್ಪು ಕೊಟ್ಟರು.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ

'ಸ್ವದೇಶ ಮಿತ್ರನ್' ಪತ್ರಿಕಾ ಸಂಪಾದಕರಾದ ಶ್ರೀ। ಸಿ. ಆರ್. ಶ್ರೀನಿವಾಸನರು ಮಂಗಳೂರಲ್ಲಿ ಜರಗಲಿರುವ ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡಿರುವರು.

ಸಮ್ಮೇಳನವು ೧೮ನೇ ಫೆಬ್ರವರಿ ೧೯ ಮತ್ತು ೨೦ರಂದು ಜರಗಲಿರುವುದು.

ಪ್ರತಿನಿಧಿಗಳು ತಮ್ಮ ಪ್ರತಿನಿಧಿ ಹಾಸ್ತಲು ಸಮೇತ ಕೂಡಲೆ ಸ್ವಾಗತ ಸಮಿತಿ ಕಾರ್ಯದರ್ಶಿಯವರಿಗೆ ತಮ್ಮ ಹೆಸರು ವಿಳಾಸ ತಿಳಿಸಬೇಕೆಂದು ವಿನಂತಿಯಿದೆ.

ವಿದ್ಯಾರ್ಥಿ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಐದನೆ ವಾರ್ಷಿಕ ಸಮ್ಮೇಳನವು ಜನವರಿ ತಾ. ೩೦ ಮತ್ತು ೩೧ರಲ್ಲಿ ಮೈಸೂರಿನ ಶ್ರೀಮತಿ ಕೇಸರಿ ಕೇಶವನ್, ಬಿ. ಎ. (ಲಂಡನ್)ರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜರಗುವುದು. ಶ್ರೀ। ಎ. ಬಿ. ಶೆಟ್ಟಿಯವರು ಸಮ್ಮೇಳನವನ್ನು ಉದ್ಘಾಟನೆ ಮಾಡಲು ಸಮ್ಮತಿಸಿರುವರು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Debts owing to Sundry Persons Suspense Accounts etc.	11,78,216- 6- 8	1. Investment on Govt. of India & Provincial Securities, 2. Deposits with banks, 3. Debentures & Shares, 4. Life Policies, & 5. Landed Properties	26,04,671- 6- 8
2. On other contracts (Deposits)	61,66,927- 6- 0	2. Bills of exchange, Hundies, Promisory Notes etc.	16,74,482-14- 8
3. On estimated liabilities—1. Reserve and other Funds, 2. Undisbursed profits, 3. unpaid dividends including revenue items etc.	4,59,692- 1- 4	3. Loans on Jewels & other valuable securities	23,72,302- 8- 7
4. Paid up Capital	12,95,970- 0- 0	4. Office premises, furniture etc.	93,251- 0- 0
5. Profits for the year ending 31-12-1943	1,08,522- 4- 0	5. Cash on hand & with bankers in curent accounts and short term deposits.	18,26,986- 3- 8
		6. Sundries including revenue items.	6,37,634- 0- 5
Total	92,09,328- 2- 0	Total	92,09,328- 2- 0

ಸ್ವದೇಶಾಭಿಮಾನಿ

ತಾರೀಕು 28—1—1944

ಎಷ್ಟೆಂಕಿ ಆಗುವದೆಂಬುದನ್ನು ಯಾರಾದರೂ ತಿಳಕೊಳ್ಳಬಹುದು. ಹೀಗೆ ಅಕ್ಕಿಯಿಲ್ಲದೆ, ಅನ್ನವಿಲ್ಲದೆ ಸಂಕಷ್ಟ ಪಡುತ್ತಿರುವ ಕಾಸರಗೋಡು ತಾಲೂಕಿನ ಜನರನ್ನು ಬದುಕಿಸುವುದು ಸರಕಾರದ, ಜಿಲ್ಲೆಯ ಅಧಿಕಾರಿಗಳ ಹಾಗೂ ಮುಖಂಡರ ಆದ್ಯ ಕರ್ತವ್ಯವಾಗಿದೆಯೆಂಬುದನ್ನು ನಾವು ಈಗ ಎಚ್ಚರಿಸದಿರಲಾರೆವು.

ಕಾಸರಗೋಡು ತಾಲೂಕಿನಲ್ಲಿ ಅಕ್ಕಿಯ ಅಭಾವ

ದಕ್ಷಿಣ ಕನ್ನಡ ಕೇರಳಗಳ ಗಡಿ ಭೂಮಿಯಾದ ಕಾಸರಗೋಡು ತಾಲೂಕಿನಲ್ಲಿ ಅಕ್ಕಿಯ ಅಭಾವದಿಂದ ಜನರು ಸಂಕಷ್ಟಗಳಿಗೆ ತುತ್ತಾಗಿರುವ ಸುದ್ದಿಗಳು ಎರಡು ವಾರಗಳಿಂದೀಚೆಗೆ ನಮಗೆ ತುಂಬಾ ಬರುತ್ತಿವೆ. ಕಾಸರಗೋಡು ಪೇಟೆ, ಹೊಸದುರ್ಗ, ನೀಲೇಶ್ವರ, ಪೆರಡಾಲ, ಬದಿಯಡ್ಕ, ಪೆರ್ಲ, ಮಂಜೇಶ್ವರ, ಮಂಗಲಪಾಡಿ ಮೊದಲಾದ ಕಾಸರಗೋಡು ತಾಲೂಕಿನ ಪ್ರತಿಯೊಂದು ಪೇಟೆ ಗ್ರಾಮಗಳ ಕೇಂದ್ರಸ್ಥಳಗಳಿಂದಲೂ ಬಹಳ ಕರುಣಾಜನಕ ವಾರ್ತೆಗಳನ್ನು ನಾವು ಕೇಳುತ್ತಿದ್ದೇವೆ. ಸಮೀಪದ ಕೇರಳದಲ್ಲಿ ಕಳೆದ ವರ್ಷವೇ ಉಪವಾಸ ರೋಗರುಜನೆಗಳ ತಾಂಡವವಾಗಿದ್ದು, ಅದೀಗ ನೆರೆನಾಡಾದ ಕಾಸರಗೋಡು ತಾಲೂಕಿಗೂ ಸಾಂಕ್ರಾಮಿಕವಾಗಿ ಬಂದಂತಿರುವುದರಿಂದ ಪರಿಸ್ಥಿತಿಯು ಕೂಡಲೇ ಪರಮಾವಧಿಗೇರುವುದು. ಶೋಚನೀಯ ... ಸಾಂಕ್ರಾಮಿಕವಾಗಿ ಬಂದಂತಿರುವುದರಿಂದ ಪರಿಸ್ಥಿತಿಯು ಕೂಡಲೇ ಪರಮಾಶೋಚನೀಯ

ಕಾಸರಗೋಡು ತಾಲೂಕಿನ ಕೆಲವು ಪೇಟೆ ಹಳ್ಳಿ ಕೇಂದ್ರಗಳಲ್ಲಿ ಅಕ್ಕಿ ಸೇರು ಒಂದಕ್ಕೆ ಹತ್ತು ಹನ್ನೊಂದಾಣೆ ಕ್ರಯವಾದ ವಿಷಯ ತಿಳಿದು ಬಂದಿರುವುದು. ನಿಜವಾಗಿಯೂ ಇದು ವಿಷಮ ಕಾಲ ಸನ್ನಿಹಿತವಾಗಿದೆಯೆಂಬುದನ್ನು ಸೂಚಿಸುತ್ತಿದೆ. ಅಕ್ಕಿಗೆ ಇಷ್ಟು ಕ್ರಯ ಏರುವುದೆಂದರೆ, ಅಕ್ಕಿ ಊರಲ್ಲಿ ಇಲ್ಲವೆಂದೇ ಅರ್ಥಮಾಡಿಕೊಳ್ಳಬೇಕು. ಕೆಲವು ಕಡೆಗಳಲ್ಲಿ ಜನರು ಉಣ್ಣಲು ಅಕ್ಕಿ ಸಿಗದೆ, ಹಸಿವಡಗಿಸಲು ಸಿಕ್ಕಾಬಟ್ಟೆ ತಿನ್ನತೊಡಗಿರುವರು. ಇದರಿಂದ ಕಾಲೆರಾದಂಥಾ ಸಾಂಕ್ರಾಮಿಕ ಮಾರಿ ರೋಗಗಳಿಗೆ ಒಳ್ಳೆಯ ಆಹ್ವಾನ

ಕಾಸರಗೋಡು ತಾಲೂಕು, ಅಲ್ಲಿಗೆ ಸಾಕಾಗದಷ್ಟು ಎಂದರೆ ಕಡಿಮೆ ಆಹಾರ ಬೆಳೆಸುವ ತಾಲೂಕು. ಪ್ರತಿ ವರ್ಷವೂ ಕುಂದಾಪುರದಿಂದ ಹಾಗೂ ಪುತ್ತೂರು ತಾಲೂಕಿಂದ ಅಕ್ಕಿ ಬಂದು ಈ ತಾಲೂಕಿನ ಜನರು ಬದುಕುತ್ತಿದ್ದರು. ಕುಂದಾಪುರಕ್ಕೆ ಗಟ್ಟದ ಅಕ್ಕಿ ಬರುವುದು ನಿಂತು ಅಲ್ಲಿ ಅಧಿಕ ಅಕ್ಕಿ ಇಲ್ಲದ್ದರಿಂದ ಕಾಸರಗೋಡಿಗೆ ಅಲ್ಲಿಂದ ಕಳುಹಿಸುವುದು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಪುತ್ತೂರು ತಾಲೂಕಿನಲ್ಲಿಯೂ ರಿಕ್ವಿಸಿಶನ್ ಆಗಿದ್ದು, ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಅಕ್ಕಿ ಭತ್ತ ಸಾಗಿಸಕೂಡದೆಂದಾಗಿರುವುದರಿಂದಲೂ ಕಾಸರಗೋಡು ತಾಲೂಕಿಗೆ ಅಲ್ಲಿಂದ ಅಕ್ಕಿ ಭತ್ತ ಬರುವಂತಿಲ್ಲ. ಕಾಸರಗೋಡು ತಾಲೂಕಿನ ಶ್ರೀಮಂತ ವರ್ಗದಾರರಿಗೆ ಸರಿಯಾಗಿ ಸಕಾಲದಲ್ಲಿ ರಿಕ್ವಿಸಿಶನ್ ನೋಟಿಸು ಜಾರಿಯಾಗಲಿಲ್ಲವೆಂದೂ ದೂರು ಇದೆ. ಈಗ ಅಲ್ಲಿ ಬದಿಯಡ್ಕ ಮೊದಲಾದ ಕೆಲವು ಕಡೆಗಳಲ್ಲಿ, ಪರಿಸ್ಥಿತಿ ವಿಷಮವಿರುವುದನ್ನು ಕಂಡು ಆ ಊರಿನಿಂದಲೇ ರಿಕ್ವಿಸಿಶನ್ ಮಾಡಿದ ಭತ್ತವನ್ನು ಹಂಚುವ ಏರ್ಪಾಡು ಮಾಡಿದ್ದಾರೆ. ಇದು ಒಂದೆರಡು ತಿಂಗಳಿಗೂ ಸಾಕಾಗದು. ಮುಂದೆ ಖಂಡಿತ ಉಪವಾಸ ಬೀಳಲೇ ಬೇಕಾಗುವುದು. ಆದ್ದರಿಂದ ಕಾಸರಗೋಡು ತಾಲೂಕಿಗೆ ಹೊರ ಜಿಲ್ಲೆಯಿಂದ ಕೂಡಲೇ ಅಕ್ಕಿ ತರಿಸುವ ಏರ್ಪಾಡು ಮಾಡುವುದು ಅವಶ್ಯ. ಪರಿಸ್ಥಿತಿ ಈಗಲೇ ವಿಷಮವಿರುವುದು. ಇನ್ನೂ ಇದು ಹದಗೆಟ್ಟು, ಹಿಡಿತಕ್ಕೆ ತರಲು ಸಾಧ್ಯವಿಲ್ಲದಷ್ಟು ಕೈಮೀರಿ ಹೋಗುವ ಮುನ್ನವೇ ಅಧಿಕಾರಿಗಳು ಎಚ್ಚತ್ತು ಯೋಗ್ಯ ಕಾರ್ಯ ಕೈಕೊಳ್ಳುವುದು ಅವಶ್ಯವಿರುತ್ತದೆ.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT.

Mangalore Stockists:—

M/S D. Narsimha Pai & Sons, Mangalore.

ಸ್ವದೇಶ ಸಮಾಚಾರ

ಒತ್ತಾಯದಿಂದ ಭಾರತೀಯರನ್ನು ಸೈನ್ಯಕ್ಕೆ ಸೇರಿಸಕೂಡದು

ಲಂಡನಿನಲ್ಲಿ ಗಡಿಬಿಡಿ

ಚರ್ಚಿಲರಿಗೆ ತಂತಿ

ಮೂರು [illegible] ಲಂಡನಿನಲ್ಲಿ ವಾಸಿಸಿದವರೆಲ್ಲರೂ ಸೈನ್ಯಕ್ಕೆ ಸೇರಬೇಕೆಂದು ಬ್ರಿಟಿಷ್ ಸರಕಾರ ಲಂಡನಿನಲ್ಲಿರುವ ಭಾರತೀಯರನ್ನು ಒತ್ತಾಯಪಡಿಸಿದ್ದಕ್ಕೆ, ಇತ್ತೀಚೆಗೆ ಅಮೇರಿಕದ 'ಲೈಫ್' ಮತ್ತು 'ಟೈಮ್ಸ್' ಪತ್ರಿಕೆಯ ಲಂಡನ್ ಸಂಪಾದಕರಾದ ಶ್ರೀ. ಸುರೇಶ ವೈದ್ಯರು ಆಕ್ಷೇಪಿಸಿದ್ದರಿಂದ ಅವರ ಬಂಧನವಾಗಿ ಅವರ ಮೇಲೆ ಹಾಕಿದ ಖಟ್ಲೆ ವಿಚಾರಣೆ ಈಗ ಮಿಲಿಟರಿ ಕೋರ್ಟಿನಲ್ಲಿ ನಡೆಯುತ್ತಿದೆ.

ಈ ಕುರಿತು ಲಂಡನಿನ ಭಾರತೀಯರಲ್ಲಿ ಗಡಿಬಿಡಿಯುಂಟಾಗಿ, ಬ್ರಿಟಿಷ್ ಸರಕಾರದ ಈ ಧೋರಣೆ ನಿಷೇಧಿಸಿ ತೀವ್ರ ಪ್ರಚಾರ ನಡೆಯುತ್ತಿದೆ. ಜೇಮ್ಸ್ ಮಾಕ್ಸ್‌ಟನರು ಸ್ವತಂತ್ರ ಕೂಲಿಗಾರ ಹಾಗೂ ಕಾಮನ್‌ವೆಲ್ತ್ ಪಕ್ಷಗಳ ಪ್ರಮುಖ ಪಾರ್ಲಿಮೆಂಟ್ ಸದಸ್ಯರನ್ನು ಕಂಡು ಮಾತನಾಡಲಿರುವರು. ಅವರು ಸ್ವರಾಜ್ಯಭವನದ ಶಿಷ್ಟಮಂಡಳವನ್ನು ಸ್ವೀಕರಿಸಿ ಬ್ರಿಟನಿನಲ್ಲಿರುವ ಭಾರತೀಯರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವ ವಿಚಾರ ಕೂಲಂಕಷ ವಿಚಾರ ವಿಮರ್ಶೆ ಮಾಡುವರು. ಭಾರತೀಯ ಸ್ವಾತಂತ್ರ್ಯ ಸಮಿತಿಯವರು ಈ ವಿಚಾರದಲ್ಲಿ ಪ್ರಮುಖರಿಂದ ಸಹಿ ಮಾಡಿಸಿ ಒಂದು ಬಹಿರಂಗ ಪತ್ರವನ್ನು ಚರ್ಚಿಲರಿಗೆ ಕಳುಹಿಸಿರುವರು.

ಭಾರತದಲ್ಲಿ ಸ್ತ್ರೀಯರನ್ನು ಕಲ್ಲಿದ್ದಲ ಗನಿಯೊಳಗೆ ದುಡಿಸುತ್ತಿರುವರೆಂಬ ಸುದ್ದಿ ಬ್ರಿಟನಿನಲ್ಲಿ ಕೇಳಿ ಅಲ್ಲಿನವರಿಗೆ ಬಹಳ ವಿಷಾದವಾಗಿದೆ. ನೊರೆನ್ಸನರು ಬೇಗನೇ ಈ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳುವವರಿದ್ದಾರೆ. ಇಂಗ್ಲೆಂಡಿನ ಮಹಿಳಾಸಭೆಗಳು ಈ ಕುರಿತು ಬ್ರಿಟಿಷ ಸರಕಾರದ ಧೋರಣ ಟೀಕಿಸಿದೆ.

ಬಂಗಾಳದ ೩೫ ಲಕ್ಷ ಜನರ ಬಲಿ!

ಉಪವಾಸದಿಂದ ೩೫ ಲಕ್ಷ ಮರಣ.

ಡಾ। ಮುಖರ್ಜಿಯರ ಹೇಳಿಕೆ

'ಬಂಗಾಲದಲ್ಲಿ ಸರ್ವ ಪಕ್ಷೀಯ ಮಂತ್ರಿಮಂಡಳವೊಂದನ್ನು ರಚಿಸುವುದು ಅವಶ್ಯ; ಇಲ್ಲವಾದರೆ ೧೯೪೩ರಲ್ಲು ಹಿಂದಿನ ವರ್ಷದ ಸ್ಥಿತಿ ಪುನರಾವೃತ್ತಿಯಾಗುವುದು ಖಂಡಿತ' ಹೀಗೆಂದು ಡಾ। ಶ್ಯಾಮಪ್ರಸಾದ ಮುಖರ್ಜಿಯವರು ಒಂದು ಹೇಳಿಕೆಯಿತ್ತು ತಿಳಿಸಿರುವರು. ಈ ಪ್ರಾಂತದಲ್ಲಿ ಒಟ್ಟು ೩೫ ಲಕ್ಷ ಜನರು ಉಪವಾಸದಿಂದ ಸತ್ತರೆಂದೂ ರೋಗರುಜೆಗಳಿಗೆ ೧೦ ಲಕ್ಷ ಬಲಿಯಾದರೆಂದೂ ಅವರು ಆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸ್ವಾತಂತ್ರ್ಯಕ್ಕಾಗಿ ಜೀವನ ಮುಡಿಪಾಗಿರಲಿ'

ವಿದ್ಯಾರ್ಥಿಗಳಿಗೆ ಸರೋಜಿನಿದೇವಿಯರ ಸಂದೇಶ

ಸ್ವಾತಂತ್ರ್ಯ ದಿನಾಚರಣೆಯ ಸಂಬಂಧ ಶ್ರೀಮತಿ ಸರೋಜಿನಿದೇವಿಯರು ವಿದ್ಯಾರ್ಥಿಗಳಿಗೆ ಒಂದು ಸಂದೇಶವೀಯುತ್ತಾ, ಭಾರತದ ಸ್ವಾತಂತ್ರ್ಯಕ್ಕಾಗಿ ಅವಿಶ್ರಾಂತ ಹೋರಾಡಲು ಇದೀ ರಾಷ್ಟ್ರವು ಇನ್ನೊಮ್ಮೆ ಸಿದ್ಧವಾಗಲಿದೆ; ಈ ಸುಮುಹೂರ್ತದಲ್ಲಿ ನಿಮಗೆ ನಾನು ಹೇಳುವುದೆಂದರೆ ನಿಮ್ಮ ಜೀವವು ಆ ಬಲಿದಾನಕ್ಕೆ ಮುಡಿಪಾಗಿರಲಿ' ಎಂದು ಅದರಲ್ಲಿ ಹೇಳಿರುವರು.

ಅವರು ತಮ್ಮ ಹೇಳಿಕೆಯಲ್ಲಿ ಮತ್ತೆ ಹೀಗೆಂದಿರುವರು.

'ಕಳೆದ ವರ್ಷಗಳಲ್ಲಿ ನಾವು ನಮ್ಮ ಮಾತು ಕೃತಿಗಳಲ್ಲಿ ಅಹಿಂಸೆ ರಾಷ್ಟ್ರ ಐಕ್ಯ ಮತ್ತು ನಿಸ್ವಾರ್ಥ ಸೇವೆ ಮಾಡಿರುವೆವೋ ಇಲ್ಲವೋ ಎಂಬ ಕುರಿತು ನಮ್ಮ ಆತ್ಮವನ್ನೇ ನಾವು ಶೋಧಿಸಬೇಕಾಗಿದೆ. ಭಾರತದ ಜನಸಂಖ್ಯೆ ಒಟ್ಟು ಮಾನವ ಜನಾಂಗದ ೧/೫ ಅಂಶವಿದೆ. ಅವರ ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞಾಬದ್ಧವಾಗಿರುವ ನಾವು ಆ ಮಹಾ ಕಾರ್ಯವನ್ನು ಸಾಧಿಸಲು ನಮ್ಮ ಜೀವಗಳನ್ನು ಮುಡಿಪಾಗಿಡಬೇಡವೆ?

'ನಮ್ಮ ನಡತೆ, ದೇಶಪ್ರೇಮ, ದೃಢ ನಿಶ್ಚಯ ಇವುಗಳೆನ್ನೆಲ್ಲಾ ಕೆಲವು ಸಂದರ್ಭಗಳಲ್ಲಿ ತೋರಿಸಿದರೆ ಮಾತ್ರ ಸಾಲದು; ನಾಡಿನ ಪ್ರಗತಿ, ಉದ್ಧಾರ, ವಿಮೋಚನೆಗಳಿಗಾಗಿ ನಾವು ನಿರಂತರ ನಿಷ್ಠೆಯಿಂದ ದುಡಿಯಬೇಕು. ನಿರಾಶರಾಗಬಾರದು; ಭಾರತದ ಭವಿಷ್ಯತ್ತು ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ಉಚಿತಸ್ಥಾನ ಪಡೆವ ಆದರ ಉಜ್ವಲ ಭವಿಷ್ಯದ ಬಗ್ಗೆ, ನಮ್ಮಲ್ಲಿ ವಿಶ್ವಾಸ ಶ್ರದ್ಧೆಯಿರಬೇಕು. ಅದೇ ನಮ್ಮ ದೇಶಪ್ರೇಮದ ಒರೆಗಲ್ಲು"

ಆಶ್ಫಾಫಿಲಾಲರ ಅನ್ನ ಸತ್ಯಾಗ್ರಹ

ಉಪಾಧ್ಯಾಯರಿಗೆ ಸೌಕರ್ಯ ಬೇಕು

ಲಖನೋದ, ಬಾರೇಕದ ಉಪಾಧ್ಯಾಯ ಸಂಘದ ಕಾರ್ಯದರ್ಶಿ ಶ್ರೀ ಅಶ್ಫಾಫಿಲಾಲರು ಉಪಾಧ್ಯಾಯರ ಸಂಬಳ ಹೆಚ್ಚಿಸಬೇಕು, ವರ್ಗ ಮಾಡುವಾಗ ಭತ್ತೆ ಕೊಡಬೇಕೆಂದು ಕೇಳಿಕೆ ಮುಂದಿಟ್ಟು ಒಂದು ತಿಂಗಳೊಳಗೆ ಉತ್ತರ ಸಿಗದಿದ್ದರೆ ಆಮರಣ ಅನ್ನ ಸತ್ಯಾಗ್ರಹಮಾಡುವುದಾಗಿ ತಿಳಿಸಿದಂತೆ ಅವರಿಗೆ ಉತ್ತರ ಬರದಿರುವುದರಿಂದ ಅವರೀಗ ಅನ್ನ ಸತ್ಯಾಗ್ರಹ ಕೈಕೊಂಡಿರುವರು.

ಫಿಶರರ ಪುಸ್ತಕದ ಬಗ್ಗೆ ಪರ್ಲ್ ಬಕ್ಕರ ವಿಮರ್ಶೆ

ಅಮೆರಿಕದ ಪ್ರಸಿದ್ಧ ಲೇಖಕರಾದ ಲುಯಿ ಫಿಶರರು ಸಾಮ್ರಾಜ್ಯ ಎಂಬ ಪುಸ್ತಕವನ್ನೀಗ ಬರೆದಿದ್ದು ಅದರಲ್ಲಿ ಭಾರತದ ಸ್ವಾತಂತ್ರ್ಯ ವಿಚಾರ ಬಲವಾಗಿ ಪ್ರತಿಪಾದಿಸಿರುವರು. ಈ ಪುಸ್ತಕಕ್ಕೆ ಪರ್ಲ್ ಬಕ್ಕರು ವಿಮರ್ಶೆ ಬರೆಯುತ್ತಾ, ಅಮೆರಿಕದ ಧುರೀಣರು ಇಲ್ಲಿನ ಸತ್ಯ ಸಂಗತಿಗಳನ್ನು ಅನುಲಕ್ಷಿಸಬೇಕೆಂದು ತಿಳಿಸಿದ್ದಾರೆ.

ಸರೋಜಿನಿದೇವಿಯರ ಮೇಲೆ ಪಂಜಾಬ್ ಸರಕಾರದ ನಿರ್ಬಂಧ

ಕಾಯಿಲೆಯಿಂದ ನರಳುತ್ತಿರುವ ತಮ್ಮ ತಂಗಿಯನ್ನು ನೋಡುವ ಬಗ್ಗೆ ಶ್ರೀಮತಿ ಸರೋಜಿನಿದೇವಿಯವರು ದಿಲ್ಲಿಯಿಂದ ಲಾಹೋರಿಗೆ ಬಂದಿದ್ದು, ಅವರು ರೈಲ್ವೆಯಿಂದ ಇಳಿವಷ್ಟರಲ್ಲಿ ಅವರ ಮೇಲೆ ಡಿ। ಕಾನೂನಿನನ್ವಯ ನೋಟೀಸು ಜಾರಿಮಾಡಿ, ಅದರಲ್ಲಿ ಬಹಿರಂಗ ಭಾಷಣ ಮಾಡಬಾರದೆಂದೂ ಮೆರವಣಿಗೆ ತೆಗೆಯಬಾರದೆಂದೂ, ಪತ್ರಿಕೆಗಳಲ್ಲಿ ಸಹ ಯಾವ ಹೇಳಿಕೆ ಕೊಡಬಾರದೆಂದೂ ನಿರ್ಬಂಧ ಹಾಕಲಾಗಿದೆ. ಅನಾರೋಗ್ಯದ ನಿಮಿತ್ತ ಡಾಕ್ಟರರ ಅಭಿಪ್ರಾಯದಂತೆ ತಾನು ಯಾವ ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸಬಾರದಾಗಿರುವುದರಿಂದ ನನ್ನ ಪಾಲಿಗೆ ಈ ನೋಟೀಸು ನಿರ್ಜೀವವಾಗಿದೆಯೆಂದು ಸರೋಜಿನಿ ದೇವಿಯವರು ಹೇಳಿದರು.

ಮುಂಬಯಿ, ಕರಾಚಿ, ಬೆಳಗಾವ್‌ಗಳಲ್ಲಿ ಬಂಧನ

ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಮುಂಬಯಿ ಕರಾಚಿ ಬೆಳಗಾವ್ ಮೊದಲಾದ ಕಡೆಗಳಲ್ಲಿ ಅನೇಕರ ಬಂಧನವಾಗಿದೆ.

ಮಂಗಳೂರಲ್ಲಿ ರೇಶನಿಂಗ್

ಅಕ್ಕಿ ಮತ್ತು ಚಿಮಿಣಿ ಎಣ್ಣೆ ರೇಶನಿಂಗ್‌ಗಾಗಿ ಮಂಗಳೂರಲ್ಲಿ ಜನಗಣನೆಯಾಗಿದ್ದು, ಬರುವ ಫೆಬ್ರವರಿ ಮೊದಲನೇ ವಾರದ ಸುಮಾರಿಗೆ ಇಲ್ಲಿ ರೇಶನಿಂಗ್ ಜಾರಿಯಾಗುವುದೆಂದು ತಿಳಿದು ಬರುತ್ತದೆ.

ಬಂಧನ—ಬಿಡುಗಡೆ

ತಾ ೨೬ರಲ್ಲು ಮಂಗಳೂರಲ್ಲಿ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಕರಪತ್ರಗಳನ್ನು ಹಂಚುತ್ತಿದ್ದ ರಾಮ, ದೂಮಪ್ಪ, ಕುಂಞಿರಾಮ, ಬಾಳ, ಹರ್ಷ ಬಂಗೇರ ಮೊದಲಾದ ೬ ಜನರನ್ನು ಪೋಲೀಸರು ಬಂಧಿಸಿ ಮರುದಿನ ಜಾಮೀನಿನಲ್ಲಿ ಬಿಡುಗಡೆ ಮಾಡಲಾಗಿದೆಯೆಂದು ತಿಳಿಯುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಸಭೆ, ಮೆರವಣಿಗೆಗಳಿಗೆ ಪುನಃ ನಿರ್ಬಂಧ!

"ಮಂಗಳೂರು, ಕಾಸರಗೋಡು ತಾಲೂಕು ಗಳಲ್ಲಿ ಮತ್ತು ಉಡುಪಿ ಮುನ್ಸಿಪಾಲಿಟಿಯಲ್ಲಿ ಧಾರ್ಮಿಕ ಸಾಮಾಜಿಕಗಳಲ್ಲದ ಸಭೆ ಮೆರವಣಿಗೆಗಳು ಜರಗುವುದನ್ನು ನಿಷೇಧಿಸಲಾಗಿದೆ, ಈ ಆಜ್ಞೆ ತಾ. ೨೫ರಿಂದ ೨ ತಿಂಗಳ ವರೆಗೆ ಜಾರಿಯಲ್ಲಿರುವುದು" ಎಂದು ಜಿಲ್ಲಾ ಕಲೆಕ್ಟರು ಆಜ್ಞೆ ಹೊರಡಿಸಿದ್ದಾರೆ.

ನಗರ ಸಭೆ

ಮಂಗಳೂರು ನಗರ ಸಭೆಯು ತಾ ೨೪ ರಂದು ಚೇಯರ್‌ಮೇನರ ಅಧ್ಯಕ್ಷತೆಯಲ್ಲಿ ಸೇರಿ, ಮುನ್ಸಿಪಲ್ ಶಾಲಾ ಉಪಾಧ್ಯಾಯರು ಹಿಂದುಸ್ಥಾನ್ ಸ್ಕೌಟ್ ಸಂಘವೊಂದಕ್ಕೆ ಮಾತ್ರ ಸೇರಬೇಕೆಂಬ ನಿರ್ಬಂಧ ರದ್ದುಮಾಡಿ, ಆ ಉಪಾಧ್ಯಾಯರು ಯಾವುದೇ ಸ್ಕೌಟ್ ಸಂಘಕ್ಕೂ ಸೇರಬಹುದೆಂದು ಕೇಳಿಕೊಂಡ ಜಿಲ್ಲಾ ಸ್ಕೌಟ್ ಕಮಿಶನರ ಪತ್ರದ ವಿಚಾರ ಜಿಲ್ಲಾ ವಿದ್ಯಾಧಿಕಾರಿಗಳನ್ನು ಕೇಳಿಕೊಳ್ಳಬೇಕೆಂದಾಯಿತು 'ವೆಲ್ಕಂ ಹೋ ದವರು ತಮ್ಮ ಪ್ರದರ್ಶನ ಸ್ಥಳದಲ್ಲಿ ೧೦ ಕುದುರೆ ಶಕ್ತಿ ಎಣ್ಣೆ ಯಂತ್ರವನ್ನಿಡಲು ಕೇಳಿಕೊಂಡು ಮಾಡಿದರ್ಜಿ ನಿರಾಕರಿಸಲ್ಪಟ್ಟಿತು

ಮುಷ್ಕರಗಾರರಿಗೆ ಶಿಕ್ಷೆ

ಕಳೆದ ಮೇ ತಿಂಗಳಲ್ಲಿ ಮಾರ್ನಮಿ ಕಟ್ಟೆಯ ರಂಗಿನ ಕಾರ್ಖಾನೆ ನೇಕಾರರು ಮುಷ್ಕರ ಹೂಡಿದಾಗ, ಮುಷ್ಕರಕ್ಕೆ ಸೇರದಿರುವವನೊಬ್ಬನನ್ನು ಹೊಡೆದರೆಂಬ ಕಾರಣ, ನೇಕಾರ ಸಂಘದ ಕಾರ್ಯಕಾರೀ ಸಮಿತಿಯ ಶೀಗಳಾದ ಮೈದಂಪ್ಪ ಅದ್ಯಂತಾಯ ರಾಮ ಬಲ್ಯಾಯ, ಕೋಟ್ಯಪ್ಪ, ಸಂಕಪ್ಪ ಮತ್ತು ಐತಪ್ಪ ಇವರಿಗೆ ತಲಾ ೬ ತಿಂಗಳ ಪ್ರಕಾರ ಐದು ಮಂದಿ ಮೇಲೆ ಖಟ್ಲೆಯಾಗಿ ಶಿಕ್ಷೆಯಾಗಿತ್ತು ಅವರು ಜಿಲ್ಲಾ ಕೋರ್ಟಿನಲ್ಲಿ ಮಾಡಿದ ಅಪೀಲೂ ರದ್ದಾಗಿ ಅವರಿಗೆ ಹಿಂದಿನ ಶಿಕ್ಷೆಯೇ ಖಾಯಂ ಆಗಿದೆ ಕೂಲಿಗಾರರ ಪರವಾಗಿ ಶ್ರೀ ರಂ ರಾ ತಲ್ಚೇರಿಕರರು ವ್ಯವಹರಣೆ ನಡೆಸಿದ್ದರು

ಪ್ರಕಾಶ ಕೂಟದ ವರ್ಧಂತಿ

ತಾ ೨೩ರಂದು ಸಂಜೆ ಪ್ರಕಾಶ ಕೂಟದ ವರ್ಧಂತ್ಯುತ್ಸವವು ಶಿವಮೊಗ್ಗದ ಶ್ರೀ। ವಸುದೇವ ಭೂಪಾಲಂ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಪೂರ್ವಾಹ್ನ ಭಾಷಣ ಸ್ಪರ್ಧೆಯಿತ್ತು ಸಂಜೆ ಸಭೆ, ಸೇರಿದಾಗ ಕೂಟದ ಉಪಾಧ್ಯಕ್ಷ ಶ್ರೀ। ಪಿ ಕೆ ನಾರಾಯಣರು ಸ್ವಾಗತ ಭಾಷಣವಿತ್ತರು ತರುಣರೂ ಸಾಹಿತ್ಯವೂ ಎಂಬ ವಿಷಯ ಶ್ರೀ। ಟಿ ಗೋಪಾಲಕೃಷ್ಣ ಭಟ್ಟರು ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ। ಎಸ್ ಜಿ ನಾಯಕರು ಸಂಘದ ವರದಿಯನ್ನೋದಿದರು ಅಧ್ಯಕ್ಷರು ಭಾಷಣ ಮಾಡುತ್ತಾ, ಸಾಹಿತ್ಯಕ್ಕೆ ಹೊಸ ದೃಷ್ಟಿ ಬೇಕು, ಸಾಹಿತ್ಯ ಜನಜೀವನಕ್ಕೆ ಸಂಬಂಧಿಸಿದ್ದಾಗಿರಬೇಕು, ಯುದ್ಧ ನಮ್ಮ ಸಾಹಿತ್ಯದ ಮೇಲೆ ಪ್ರಭಾವ ಬೀರಬೇಕು ಎಂದು ಮೊದಲಾಗಿ ತಿಳಿಸಿದರು ಅನಂತರ ನೃತ್ಯ, ನಾಟಕ, ವಾಚನ ಮೊದಲಾದ ವಿವಿಧ ವಿನೋದಾವಳಿದ್ದುವು

ಪ್ರೆಸ್ ಕೆಲಸಗಾರರ ಸಭೆ

ಇದರ ಕಾರ್ಯಕಾರೀ ಸಮಿತಿ ಸೇರಿ, ಮುಂದಿನ ತಿಂಗಳಲ್ಲಿ ಜರಗಲಿರುವ ಜಿಲ್ಲಾ ಮಜೂರು ಸಮ್ಮೇಳನದ ಸ್ವಾಗತ ಸಮಿತಿಗೆ ಇಬ್ಬರು ಪ್ರತಿನಿಧಿಗಳನ್ನೂ, ಫೆಬ್ರವರಿ ತಾ ೫ ಮತ್ತು ೬ ರಲ್ಲು ಕಣ್ಣಾನೂರಲ್ಲಿ ಜರಗಲಿರುವ ಅ ಕೇರಳ ಮಜೂರ ಸಮ್ಮೇಳನಕ್ಕೆ ಇಬ್ಬರು ಪ್ರತಿನಿಧಿಗಳನ್ನೂ ಆರಿಸಿದ್ದಲ್ಲದೆ, ಶಿಕ್ಷೆಗೆ ಗುರಿಯಾದ ನೇಕಾರ ಮಜೂರರ ಕುರಿತು ಅನುತಾಪ ಸೂಚಿಸುವ ನಿರ್ಣಯವೂ ಆಯಿತು

ವರ್ಧಂತ್ಯುತ್ಸವ

ಸೈಂಟ್ ಪೀಟರ್ಸ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ತಾ ೧೭, ೧೮, ಮತ್ತು ೧೯ರಲ್ಲು ಜರಗಿತು. ಇ ಬಿ. ಎಂ. ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ತಾ. ೩೧ರಲ್ಲು ಜರಗುವುದು.

ಹಳೆ ವಿದ್ಯಾರ್ಥಿ ಸಭೆ

ಮಂಗಳೂರು ಮಿಶ್ಯನ್ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ತಾ. ೨೫ರಂದು ಸಂಜೆ ಶ್ರೀ। ಎಸ್ ಏ ಫರ್ನಾಂಡೋರವರ ಅಧ್ಯಕ್ಷತೆಯಲ್ಲಿ ಸೇರಿ, ಸಂಘದ ವಾರ್ಷಿಕ ದಿನಾಚರಣೆ ಮಾರ್ಚ್ ತಾ ೫ರಂದು ಜರಗಿಸುವುದಾಗಿ ನಿರ್ಣಯವಾಯಿತು ತಾ ೪ರಂದು ಸಂಜೆ ಹಳೆ ವಿದ್ಯಾರ್ಥಿಗಳ ಪಂದ್ಯಾಟವಿದೆ.

ಪುರಂದರ ದಾಸರ ದಿನಾಚರಣೆ

ಬೆಸೆಂಟ್ ಬಾಲಿಕಾ ಶಾಲೆಯಲ್ಲಿ ತಾ ೨೫ ರಂದು ಸಂಜೆ ಪುರಂದರದಾಸರ ದಿನಾಚರಣೆಯು ಶ್ರೀ। ಎಚ್ ಶ್ರೀನಿವಾಸ ಉಡುಪರ ಅಧ್ಯಕ್ಷತೆಯಿಂದ ಜರಗಿತು ಶ್ರೀ। ಪಿ ಕೆ ನಾರಾಯಣರು ಪುರಂದರ ದಾಸರ ಜೀವನದ ವಿಷಯ ಮಾತನಾಡಿದರು ಬಾಲಿಕೆಯರು ದಾಸರ ಕೀರ್ತನೆಗಳನ್ನು ಹಾಡಿದರು ಕಾರ್ಯದರ್ಶಿ ಕುಮಾರಿ ಮೋಹಿನಿಯವರು ಧನ್ಯವಾದವಿತ್ತರು

ದೇವತಾ ಪ್ರಾರ್ಥನೆಯ ಬೇಡಿಕೆ

ಮಂಗಳೂರು ಧನ್ವಂತರಿ ವೈದ್ಯ ಶಾಲೆಯ ಶ್ರೀ। ಎಂ ಕೆ ವೈದ್ಯರ್ ಹೀಗೆ ಬರೆಯುತ್ತಾರೆ

ಬಂಧು ಭಗಿನಿಯರೇ, ನಾವು ಆಸ್ತಿಕರು ಆದರೇನು? ನಮ್ಮ ವರ್ತನೆಯು ನಾಸ್ತಿಕರಂತೆ! ಅದರಿಂದಾಗಿ ಇಂದೀಗ ನಮಗೆ ಗಂಡಾಂತರವು ಬಂದಿರುವುದು ಇನ್ನಾದರೂ ಕಣ್ಣು ತೆರೆಯೋಣ!

ಮೊತ್ತಮೊದಲು ನಾವು ದಿನಕ್ಕೆ ಎರಡು ಸಲವಾದರೂ ದೇವರನ್ನು ಭಕ್ತಿಯಿಂದ ಭಜಿಸಬೇಕು ಆಗ ನಮ್ಮ ಕಷ್ಟಗಳು, ಭಯಗಳು ತಾನಾಗಿಯೇ ದೂರವಾಗುವುವು

ಈಗ ಅದಕ್ಕೆ ಯೋಗ್ಯವಾದ ಸ್ತೋತ್ರವು ಬೇಕಾಗಿದೆ ದೈವ ಭಕ್ತಿಯನ್ನುಂಟುಮಾಡುವ, ಸದ್ವಿಚಾರಗಳನ್ನು ಒಳಗೊಂಡ ಒಂದು ಉತ್ತಮವಾದ ಸ್ತೋತ್ರವನ್ನು ನಾವು ಕೋರುತ್ತೇವೆ ಕವಿಗಳು ವಿದ್ವಾಂಸರು ಅದನ್ನು ದಯವಿಟ್ಟು ಇದೇ ಫೆಬ್ರವರಿ ಅಂತ್ಯದೊಳಗೆ ನಮ್ಮಲ್ಲಿ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

ಅವುಗಳಲ್ಲಿ ಉತ್ತಮವಾಗಿ ಆರಿಸಿಬಂದ ಸ್ತೋತ್ರಕ್ಕೆ ಯೋಗ್ಯವಾದ ಬಹುಮಾನವನ್ನು ಕೊಡಲು ನಿರ್ಧರಿಸುವೆವು ಹಾಗೂ ಅದನ್ನು ಅಖಿಲ ಕರ್ನಾಟಕದಲ್ಲಿ ಪ್ರಚಾರಪಡಿಸುವೆವು

೧ ಆ ಸ್ತೋತ್ರವು ಕನ್ನಡ ನುಡಿಯಲ್ಲಿರಬೇಕು

೨ ೧೫ ನಿಮಿಷಗಳಲ್ಲಿ ಹೇಳಿ ಮುಗಿಯುವಂತಿರಬೇಕು

೩ ಛಂದೋಮಯವಾಗಿ ಇರಬಹುದು, ಗದ್ಯಮಯವಾಗಿಯೂ ಇರಬಹುದು ಆದರೆ ಒಂದಾದರೂ ಛಂದಸ್ಸಿರಬೇಕು

೪ ಸರಳವಾಗಿ, ನಿರಳವಾಗಿ ಎಲ್ಲರಿಗೂ ಅರ್ಥವಾಗುವಂತಿರಬೇಕು

೫ ದೇವರ ಅಂಕಿತನಾಮ ನಿಲ್ಲದಿರಬೇಕು

೬ ಭಾವಗರ್ಭಿತವಾಗಿ ಭಕ್ತಿಭರಿತವಾಗಿ ಸದ್ವಿಚಾರ ಪೂರ್ಣವಾಗಿರಬೇಕು

ಉಡುಪಿ

ಪರ್ಯಾಯ

ತಾ ೧೮ರಂದು ಶ್ರೀ ಕೃಷ್ಣ ದೇವಸ್ಥಾನದ ವಸಂತ ಮಹಲಿನಲ್ಲಿ ಪುತ್ತಿಗೆ ಶ್ರೀ ಶ್ರೀ ಪಾದಂಗಳವರ ಪರ್ಯಾಯ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು. ಊರ ಪರವೂರ ಅನೇಕ ಮಂದಿ ನೆರವೇರಿದ್ದರು. ಸಂಗೀತ ಭಾಷಣಾದಿಗಳಿದ್ದುವು

ಅ. ಕ. ಕಿರಿಯರ ಸಮ್ಮೇಳನ

ಉಡುಪಿಯಲ್ಲಿ ಸೇರಿದ ಅ ಕ ಕಿರಿಯರ ಸಮ್ಮೇಳನದ ಕೊನೆಯ ದಿನ (ತಾ. ೧೭ರಂದು) ಬಹಿರಂಗ ಅಧಿವೇಶನದಲ್ಲಿ ಕೆಳಗಿನ ನಿರ್ಣಯಗಳಾದುವು.

ಹಿರಿಯರ ಸ್ವಾರ್ಥದ ಫಲವಾಗಿ ಉಂಟಾಗಿರುವ ಈ ಯುದ್ಧದಲ್ಲಿ ಸಂಕಷ್ಟಕ್ಕೊಳಗಾದ ಎಲ್ಲಾ ಕಿರಿಯರೊಡನೆ ಈ ಸಮ್ಮೇಳನ ಸಹಾನುಭೂತಿ ಸೂಚಿಸುತ್ತದೆ.

ಪ್ರತಿ ಹಳ್ಳಿ ಗ್ರಾಮಗಳಲ್ಲಿಯೂ, ಶಾಲೆ ಶಾಲೆಗಳಲ್ಲಿಯೂ ಮಕ್ಕಳ ಕೂಟಗಳ ಸ್ಥಾಪನೆಯಾಗಬೇಕೆಂದು ನಿರ್ಧರಿಸುತ್ತದೆ

ಮಕ್ಕಳಿಗಾಗಿ ಬೆಂಗಳೂರಿನ ಸರಸ್ವತಿ ಪತ್ರಿಕೆಯವರು 'ಮಕ್ಕಳ ಬಾವುಟ' ಎಂಬ ಸಂಚಿಕೆ ಹೊರಡಿಸುವುದಕ್ಕಾಗಿ ಅವರನ್ನು ಈ ಸಮ್ಮೇಳನ ಅಭಿವಂದಿಸುತ್ತದೆ. ದ ಕನ್ನಡದ ಮಕ್ಕಳ ಆಂದೋಲನಕ್ಕಾಗಿ ಒಂದು ಮಾಸಿಕ ಅಥವಾ ಯುದ್ಧಾಂತ್ಯದ ವರೆಗೆ ಒಂದು ತ್ರೈಮಾಸಿಕ ಹೊರಡಿಸಬೇಕಾಗಿ ಸಮ್ಮೇಳನ ಅಭಿಪ್ರಾಯಪಡುತ್ತದೆ

ಕನ್ನಡದ ಮಕ್ಕಳದೇ ಆದ ಒಂದು ಸ್ವಯಂ ಸೇವಕ ದಳವನ್ನು ಆಯಾಯ ಮಕ್ಕಳ ಕೂಟಗಳ ಆಶ್ರಯದಲ್ಲಿ ರಚಿಸಲು ಈ ಸಮ್ಮೇಳನ ನಿರ್ಧರಿಸುತ್ತದೆ

ಮಕ್ಕಳ ಕೂಟಗಳಿಗೆ ಸರಕಾರವೂ ಶಾಲಾಧಿಕಾರಿಗಳೂ ಸಮ್ಮತಿ ಕೊಡಬೇಕೆಂದೂ, ಹಿರಿಯರು ಸಹಕರಿಸಬೇಕೆಂದೂ, ಶಾಲೆಗಳಲ್ಲಿ ಕನ್ನಡ ಪಾಠಗಳು ಹೆಚ್ಚಾಗಬೇಕೆಂದೂ, ಬಡ ವಿದ್ಯಾರ್ಥಿಗಳಿಗೆ ಅನಾಥಾಲಯಗಳನ್ನು ಹಿರಿಯರು ಕಟ್ಟಿಸಬೇಕೆಂದೂ, ಮಕ್ಕಳ ಅಭಿಪ್ರಾಯ ಪಡೆದು ಪಠ್ಯ ಪುಸ್ತಕ ಮಂಜೂರು ಮಾಡಬೇಕೆಂದು ಮೊದಲಾಗಿ ನಿರ್ಣಯಗಳಾದುವು

ಮಕ್ಕಳ ಕೂಟದ ಮುಂದಿನ ಸಮ್ಮೇಳನವನ್ನು ಮಂಗಳೂರಲ್ಲಿ ಜರಗಿಸಲು ಆಹ್ವಾನ ಬಂದಿದೆ ಅದು ಸ್ವೀಕೃತವಾಯಿತು.

ರಾತ್ರಿ ವಿವಿಧ ವಿನೋದಾವಳಿಗಳಿದ್ದುವು. ಅಧ್ಯಕ್ಷ ಕುಮಾರ ಉಮೇಶರಾಯರು ತನ್ನ ಉಪಸಂಹಾರ ಭಾಷಣದಲ್ಲಿ, ಈ ಸಮ್ಮೇಳನ ಜರಗಿಸಿದ ಉಡುಪಿಯ ಕಿರಿಯರನ್ನು ಅಭಿನಂದಿಸಿದರು ಅನಂತರ ಮಂಗಳೂರು ಜನತಾ ರಂಗಭೂಮಿಯ ನಾಟಕ ವಿನೋದಾವಳಿಗಳಾದ ಮೇಲೆ ಕಾರ್ಯದರ್ಶಿ ಕುಮಾರ ವ್ಯಾಸರಾಯರು ಆಗ ಬಂದ ಸಂದೇಶಗಳನ್ನೋದಲು ಇನ್ನೊಬ್ಬ ಕಾರ್ಯದರ್ಶಿ ಕುಮಾರ ಶ್ರೀನಿವಾಸ ಭಟ್ಟರು ವಂದನಾರ್ಪಣೆ ಮಾಡಿದರು.

ಮಂಗಳೂರಲ್ಲಿ

ಶ್ರೀ। ಅ. ನ. ಕೃಷ್ಣರಾಯರು

ಕನ್ನಡ ಪ್ರಸಿದ್ಧ ಸಾಹಿತಿಗಳಾದ ಶ್ರೀ। ಅ ನ ಕೃಷ್ಣರಾಯರು ಮಂಗಳೂರಿಗೆ ಬಂದಿದ್ದು, ಅವರನ್ನು ಅವರ ಗೆಳೆಯರು ತಾ ೨೪ರಂದು ಸಂಜೆ ಜಿಲ್ಲಾ ಪತ್ರಿಕೋದ್ಯೋಗಿ ಸಂಘಕ್ಕೆ ಆಹ್ವಾನಿಸಿ ಸತ್ಕರಿಸಿದರು ಮಂಗಳೂರಿಗೆ ಬೇರೆ ಬೇರೆ ಸಂಸ್ಥೆಗಳ ಸಾಹಿತ್ಯ ಸಂಘಗಳ ಪ್ರತಿನಿಧಿಗಳು ಬಂದಿದ್ದರು ಶ್ರೀ। ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಿಂದ ಅಂದು ಸಭೆ ಜರಗಿತು

ಆ ಮೇಲೆ ಮಂಗಳೂರಿನ ಮಿತ್ರಮಂಡಳಿ, ಪತ್ರಿಕೋದ್ಯೋಗಿ ಸಂಘ, ಪ್ರಕಾಶ ಕೂಟ, ಜನತಾರಂಗ ಭೂಮಿ, ಚಲಚ್ಚಿತ್ರ ವಿಮರ್ಶಕ ಕೂಟ, ವಿದ್ಯಾರ್ಥಿ ಸಂಘ—ಮೊದಲಾದ ಸಂಸ್ಥೆಗಳ ಹಾಗೂ ಉಡುಪಿಯ ಕಿರಿಯರ ಚಟುವಟಿಕೆಯ ಪರಿಚಯ ಕಾರ್ಯಕಲಾಪಗಳ ವಿಷಯವನ್ನು ಅತಿಥಿಗಳಿಗೆ ಮಾಡಿಕೊಡಲಾಯಿತು

ಅನಂತರ ಶ್ರೀ। ಅ ನ ಕೃಷ್ಣರಾಯರು ಮಾತನಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತು ಪ್ರಗತಿಗಾಮಿಯಾಗಿ ಆಗಬೇಕು ತರುಣರು ಹೆಚ್ಚು ಸಂಖ್ಯೆಯಲ್ಲಿ ಸೇರಬೇಕು ಇದರೊಂದಿಗೆ ಪ್ರಗತಿಶೀಲ ಸಾಹಿತ್ಯದ ಆಂದೋಲನ ನಡೆಯಬೇಕು ಎಂದು ಮೊದಲಾಗಿ ವಿವರಿಸಿದರು ದಕ್ಷಿಣ ಕನ್ನಡ ಸಾಹಿತ್ಯ ಚಟುವಟಿಕೆಯನ್ನು ಪ್ರಶಂಸಿದರು ಅನಂತರ ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ। ಕಯ್ಯಾರ ಕಿಞ್ಞಣ್ಣ ರೈಗಳು ಧನ್ಯವಾದವಿತ್ತರು

ಮಂಗಳೂರು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಭೆಯವರು ತಾ. ೨೫ರಂದು ಪ್ರಾತಃಕಾಲ ಶ್ರೀ। ಅ. ನ. ಕೃಷ್ಣರಾಯರನ್ನು ಆಹ್ವಾನಿಸಿ ಸತ್ಕಾರ ಕೂಟವೊಂದ ನ್ನೇರ್ಪಡಿಸಿದ್ದರು. ಆಗ ಶ್ರೀ। ಎಂ. ವಾಸುದೇವರಾಯರ ಅಧ್ಯಕ್ಷತೆಯಿಂದ ಕೂಡಿದ ಸಭೆಯಲ್ಲಿ ಶ್ರೀ। ಅ. ನ. ಕೃಷ್ಣರಾಯರು ಪ್ರಸ್ತುತ ಪರಿಸ್ಥಿತಿ ಮತ್ತು ಸಾಹಿತ್ಯ ಎಂಬ ಕುರಿತು ವಿದ್ವತ್ಪೂರ್ಣ ಭಾಷಣವಿತ್ತರು. ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ವಿವರಿಸುತ್ತಾ, ಬಸವಣ್ಣ, ಸರ್ವಜ್ಞರೂ ಜನತಾ ಸಾಹಿತ್ಯವನ್ನು ನಿರ್ಮಿಸಿದರೆಂದೂ, ಮುಂದಿನ ಸಾಹಿತ್ಯ ಜನತಾ ಸಾಹಿತ್ಯವಾಗಿರಬೇಕೆಂದೂ ಹೇಳಿ, ಕನ್ನಡದಲ್ಲಿ ಬ್ರಾಹ್ಮಣರೇ ಬರೆಹಗಾರರಾಗಿದ್ದು, ಬ್ರಾಹ್ಮಣ ಜೀವನವೇ ಬರುತ್ತಿದೆಯೆಂಬ ದೂರು ಸರಿಯಾಗಿರುವುದಾಗಿಯೂ, ಕನ್ನಡ ಬರೆಹಗಾರರು ಬೇರೆ ಬೇರೆ ಜನರ ಜೀವನ ಚಿತ್ರವನ್ನು ಚಿತ್ರಿಸಿ ಸಾಹಿತ್ಯ ಸಂಪತ್ತು ಬೆಳೆಸಬೇಕೆಂದೂ ತಿಳಿಸಿದರು

ತಾ ೨೫ರಂದು ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಅಧ್ಯಾಪಕ ಸಂಘದ ಆಶ್ರಯದಲ್ಲಿ ಶ್ರೀ। ಅ ನ ಕೃಷ್ಣರಾಯರು ಕನ್ನಡ ಸಾಹಿತ್ಯದ ಕುರಿತು ಭಾಷಣವಿತ್ತರು. ಶ್ರೀ। ರೋಬರ್ಟರು ಅಧ್ಯಕ್ಷತೆ ವಹಿಸಿದ್ದರು ಶ್ರೀ। ಅ ನ ಕೃಷ್ಣರಾಯರು ಕನ್ನಡ ಸಾಹಿತ್ಯದ ವಿಹಂಗಮಾವಲೋಕನ ಮಾಡಿ, ಕನ್ನಡ ಸಾಹಿತ್ಯವು ಜೀವನ ಸಾಹಿತ್ಯವಾಗಿರಬೇಕೆಂದು ಹೇಳುತ್ತಾ, ಉಪಾಧ್ಯಾಯರು ಹಳ್ಳಿಯ ಜನಪದ ಸಾಹಿತ್ಯ, ಹಾಡ್ಡನಗಳನ್ನು ಸಂಗ್ರಹಿಸಬೇಕಾಗಿ ತಿಳಿಸಿದರು ಅನಂತರ ಕಾರ್ಯದರ್ಶಿ ಶ್ರೀ। ಸದಾಶಿವ ಶೆಟ್ಟರು ಕೃತಜ್ಞತೆ ಹೇಳಿದರು

ತಾ ೨೫ರಂದು ಸಂಜೆಗೆ ಸೈಂಟ್ ಎಲೋಶಿಯಸ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಅ ನ ಕೃಷ್ಣರಾಯರು 'ಹಾಸ್ಯದ ವಿಚಾರ' ರಸಭರಿತ ಭಾಷಣವಿತ್ತರು. ಶ್ರೀ। ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆ ವಹಿಸಿದ್ದರು ಶ್ರೀ। ಕೃಷ್ಣರಾಯರು ಆಂಗ್ಲ, ಸಂಸ್ಕೃತ ಕನ್ನಡ ಸಾಹಿತ್ಯಗಳಲ್ಲ ಹಾಸ್ಯವನ್ನು ಚಿತ್ರಿಸಿದ ಕವಿಗಳ ಕೃತಿಗಳ ನಿರೂಪಣೆ ಮಾಡಿ ಹಾಸ್ಯದಲ್ಲಿ ನಾಲ್ಕು ವಿಧವಿದೆಯೆಂದು ವಿವರಿಸಿ ಜೀವನದ ಸಂಕಷ್ಟ ಮರೆಯಲು ಹಾಸ್ಯವು ಇರಬೇಕೆಂದು ವಿವರಿಸಿದರು. ಕಾರ್ಯದರ್ಶಿ ಶ್ರೀ। ದಯಾನಂದ ನಾಯಕರು ವಂದನಾರ್ಪಣೆ ಮಾಡಿದರು.

ತಾ ೨೬ರ ಅಪರಾಹ್ನ ೩ ಗಂಟೆಗೆ ಗವರ್ನಮೆಂಟ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಶ್ರೀ ಅ ನ ಕೃಷ್ಣರಾಯರು ಕನ್ನಡದ ಕಾದಂಬರಿಗಳ ವಿಚಾರ ಮಾತನಾಡಿದರು ಶ್ರೀ। ನಂಜುಂಡ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಕಾದಂಬರಿಗಳ ಕುರಿತು ಮಾತನಾಡಿ, ಆಧುನಿಕ ಕಾದಂಬರಿಕಾರರು, ಕಾರಂತ, ಪುಟ್ಟಪ್ಪ ಮೊದಲಾದವರು ಹೇಗೆ ಜನಜೀವನವನ್ನು ಸುಂದರವಾಗಿ ಚಿತ್ರಿಸುತ್ತಾರೆಂದು ತಿಳಿಸಿ, ಮುಂದಿನ ಕಾದಂಬರಿಕಾರರು, ಶ್ರಮಜೀವನವನ್ನು, ರಾಷ್ಟ್ರೀಯ ಹೋರಾಟದ ಜೀವನವನ್ನೆಲ್ಲಾ ಚಿತ್ರಿಸಿ ಸಾಹಿತ್ಯವನ್ನು ವೀರ್ಯವತ್ತಾಗಿ ಮಾಡಬೇಕೆಂದರು ಸಂಘದ ಕಾರ್ಯದರ್ಶಿಗಳು ಧನ್ಯವಾದವಿತ್ತರು

ಇದೇ ಸಂಜೆ ೭ ಗಂಟೆಗೆ ಮಿತ್ರ ಮಂಡಳಿಯವರು ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ ಅ ನ ಕೃಷ್ಣರಾಯರಿಗೂ ಶ್ರೀ ವಸುದೇವ ಭೂಪಾಲನ್ ಇವರಿಗೂ ಸತ್ಕಾರಕೂಟವೇರ್ಪಡಿಸಿದರು ಮಿತ್ರ ಮಂಡಳಿಯ ಅಧ್ಯಕ್ಷ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಅವರ ಕನ್ನಡ ಸೇವೆಯನ್ನು ಹರಿಸಿ ಭಾಷಣವಿತ್ತರು ಶ್ರೀ ಭೂಪಾಲನ್ ಚಿಕ್ಕ ಭಾಷಣದಿಂದ ಕೃತಜ್ಞತೆ ಹೇಳಿದರು ಶ್ರೀ ಅ ನ ಕೃಷ್ಣರಾಯರು ಉತ್ತರವೀಯುತ್ತಾ, ಇಂದಿನ ಕನ್ನಡದ ಹಾದಿಯ ಕುರಿತು ಹೇಳಿ, ಕನ್ನಡಿಗರು ಕನ್ನಡ ನಾಡನ್ನು ಕಟ್ಟಬೇಕಾಗಿದೆ, ಅದರೊಂದಿಗೆ ಭಾರತ ರಾಷ್ಟ್ರವನ್ನೂ ನಿರ್ಮಿಸಬೇಕಾಗಿದೆಯೆಂದು ತಿಳಿಸಿ ನಮ್ಮಲ್ಲಿ ಅಂಥಾ ಸಾಹಿತ್ಯದ ನವನಿರ್ಮಾಣವಾಗಬೇಕೆಂದರು ಅತಿಥಿಗಳಿಗೆ ಶ್ರೀ ಜಿ ವಾಮನ ಭಟ್ಟರು ಮಿತ್ರ ಮಂಡಳಿ ಸದಸ್ಯರ ಪರಿಚಯ ಮಾಡಿಕೊಟ್ಟರು ಡಾ। ಎಸ್ ಪಿ ಭಟ್ಟರು ಧನ್ಯವಾದ ಹೇಳಿದರು.

"ಕನ್ನಡ ಚಿತ್ರಗಳ ವಿಷಯ ನಿರ್ದಯರಾಗಬೇಡಿ"

ಚಿತ್ರ ವಿಮರ್ಶಕರಿಗೆ ಶ್ರೀ. ಅ. ನ. ಕೃ. ರವರ ವಿನಂತಿ.

... ಚಲಚ್ಚಿತ್ರ ವಿಮರ್ಶಕ ಸಂಘದವರು ಶ್ರೀ ಅ. ನ. ಕೃಷ್ಣರಾಯರನ್ನು ಹಾಗೂ ಶ್ರೀ ವಸುದೇವ ಭೂಪಾಲಂ ಇವರನ್ನು ಆಹ್ವಾನಿಸಿ ... ಒಂದು ಸಭೆ ಏರ್ಪಡಿಸಿದರು. ಶ್ರೀ ವಸುದೇವ ಭೂಪಾಲಂರವರು ಚಲಚ್ಚಿತ್ರಗಳು ಇಂದು ನಮ್ಮ ಸಮಾಜದಲ್ಲಿ ಹೊಂದಿರುವ ಸ್ಥಾನ ಹಾಗೂ, ಕೆಟ್ಟ ಚಿತ್ರಗಳಿಂದ ಜನತೆಯಲ್ಲಿ ಉಂಟಾಗುವ ದುಷ್ಪರಿಣಾಮ ಹಾಗಾಗಿ ಉತ್ತಮ ಚಿತ್ರಗಳು, ನಿರ್ಮಾಣವಾಗಬೇಕೆಂಬ ವಿಚಾರವಾಗಿ ಮಾತ ನಾಡಿದರು.

ಆ ಮೇಲೆ ಅಂದಿನ ಸಭೆಗೆ ಅಧ್ಯಕ್ಷತೆ ವಹಿಸಿದ್ದ ಶ್ರೀ ಅ. ನ ಕೃಷ್ಣರಾಯರು ತಾವು ಭಾಷಣ ಕೊಡುವುದಿಲ್ಲವೆಂದೂ, ಚಿತ್ರ ವಿಮರ್ಶಕರು ಪ್ರಶ್ನೆ ಕೇಳಿದರೆ ಸಾಧ್ಯವಾದ ಮಟ್ಟಿಗೆ ತಾನು ಅದಕ್ಕೆ ಉತ್ತರ ಕೊಡುತ್ತೇನೆಂದೂ ಹೇಳಿದರು. ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ಹೀಗೆಂದು ಪ್ರಶ್ನೆ ಹಾಕಿದರು 'ಶ್ರೀ ಅ. ನ ಕೃಷ್ಣರಾಯರ ಕೈವಾಡವಿದೆಯೆಂದು ತಿಳಿದು ಬರುವ ಜೀವನ ನಾಟಕವು ಒಂದು ಕೀಳ್ತರಗತಿಯ ಚಿತ್ರವಾಗಲು ಕಾರಣವೇನು?' ಶ್ರೀ ಅ' ನ ಕೃ ರಾಯರು ಇದಕ್ಕೆ ಉತ್ತರ ಕೊಡುತ್ತಾ ಹೀಗೆಂದರು

"ಚಿತ್ರ ನಿರ್ಮಾಣದಲ್ಲಿ ಪ್ರಾಮುಖ್ಯನಾಗಿರುವವನು ನಿರ್ದೇಶಕ, ಜೀವನ ನಾಟಕವನ್ನು ನಿರ್ದೇಶಿಸಲು ಕನ್ನಡವರಿಯದ ಚತುರನೂ ಅಲ್ಲದ ಒಬ್ಬ ನಿರ್ದೇಶಕನನ್ನು ಕರೆತಂದುದು ಚಿತ್ರ ಕೆಡಲು ಒಂದು ಕಾರಣವಾಯಿತು ನಾನು ಬರೆದ ಕಥೆ ಚಿತ್ರ ನಿರ್ಮಾಣವಾಗುವಾಗ ನನ್ನದಲ್ಲವಾಯಿತು 'ಜೀವನ ನಾಟಕ'ದಲ್ಲಿ ಮುಖ್ಯ ಕಥಾನಾಯಕಿ ಪದ್ಮಾಳ ಪಾತ್ರವಹಿಸಿದ ಶಾಂತಾ ಹುಬ್ಲೀಕರ್ ನಿಜವಾಗಿಯೂ ಉತ್ಕೃಷ್ಟಕಲಾವಿದೆ, ಆಕೆಗಿಂತಲೂ ಪ್ರತಿನಾಯಕಿ ಪಾತ್ರ ವಹಿಸಿದ ಜಯಮ್ಮನಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ನಿರ್ಮಾಪಕರು ಬಯಸಿ ಅಭಿನಯವೆಂಬುದ, ಕಲಾವಿಚಾರ ಗೊತ್ತಿಲ್ಲದ, ನಾಟಕಾಭಿನಯ ಮಾತ್ರ ಕಲಿತ ಜಯಮ್ಮನನ್ನು ಹೆಚ್ಚಾಗಿ ಪ್ರೇಕ್ಷಕರ ಕಣ್ಣಮುಂದೆ ತಂದುದು ಚಿತ್ರ ಕೆಡಲು ಇನ್ನೊಂದು ಕಾರಣವಾಯಿತು. ನಮಗೆ ಯಾವುದು ಉತ್ತಮವೆಂದು ತೋರಿತ್ತೋ ಅದೆಲ್ಲವನ್ನೂ ಕತ್ತರಿಸಿ ನಿರ್ಮಾಪಕರ ಮನವೊಲಿಸಿದ ಸಂಪಾದಕರೂ ಚಿತ್ರ ಕೆಡಿಸಲು ಒಬ್ಬರು ಕಾರಣರಾದರು. ಹೀಗೆ ಇದರ ಅಂತರ್ಯವನ್ನೆಲ್ಲಾ ಹೇಳುತ್ತಾ ಹೋಗುವುದು ಸರಿಯಲ್ಲ. ನಿಜವಾಗಿ ನನ್ನ ಅಭಿಪ್ರಾಯವೆಂದರೆ, ಚಿತ್ರ ನಿರ್ಮಿಸಲು ದುಡ್ಡು ಹಾಕಿದವನು, ದುಡ್ಡು ಕೊಟ್ಟು ಸುಮ್ಮಗಿರಬೇಕಲ್ಲದೆ, ಚಿತ್ರ ತಯಾರಾಗುವಾಗ ತನಗೆ ಬೇಕಾದವರಿಗೆ ಪ್ರಾಧಾನ್ಯತೆ ಕೊಡಬೇಕೆಂದು ಆಗಾಗ ಮಧ್ಯದಲ್ಲಿ ಕೈ ಹಾಕಿದರೆ ಆ ಚಿತ್ರ ಜೀವನನಾಟಕದಂತೆ ಆಗದೆ ನಿರ್ವಾಹವಿಲ್ಲ"

ಕೊನೆಗೆ ಶ್ರೀ ಅ ನ. ಕೃಷ್ಣರಾಯರು ಚಲಚ್ಚಿತ್ರ ವಿಮರ್ಶಕರಲ್ಲಿ, ಕನ್ನಡ ಚಿತ್ರಗಳು ಒಳ್ಳೆಯದಾಗಿರದಿದ್ದರೂ ಅವುಗಳನ್ನು ನಿರ್ದಯ ಟೀಕಿಸಬೇಡಿರೆಂದೂ, ತಮಿಳು ತೆಲುಗು ಇನ್ನಾವುದೇ ಭಾಷೆಗಳಲ್ಲಾದರೂ ನೂರಾರು ಕೆಟ್ಟ ಚಿತ್ರಗಳ ಸೃಷ್ಟಿಯಾಗಿ ಒಂದು ಉತ್ತಮ ಚಿತ್ರ ತಯಾರಾಗುತ್ತಿದೆ ಎಂದೂ ಹಾಗಾಗಿ ಕನ್ನಡ ಚಿತ್ರ ನಿರ್ಮಾಣದ ಈ ಪ್ರಾರಂಭ ಕಾಲದಲ್ಲಿಯೇ ನಾವು ನಿರ್ದಯ ಟೀಕೆಗೆ ತೊಡಗಿ ಬಿಟ್ಟರೆ ನಮ್ಮ ನಾಡಿನ ಕೈಗಾರಿಕೆಯನ್ನೇ ಹಾಳುಮಾಡಿದಂತಾಗುವುದೆಂದೂ ವಿನಂತಿಸಿಕೊಂಡರು

ಚಲಚ್ಚಿತ್ರ ವಿಮರ್ಶಕ ಸಂಘದ ಕಾರ್ಯದರ್ಶಿ ಶ್ರೀ ಎಂ ವಿ ಪ್ರಭುಗಳು ಒಂದು ಪ್ರಶ್ನೆ ಹಾಕಿ, ತಮಿಳು ನಿರ್ಮಾಪಕರು ತಮಿಳು ನಟನಟಿಯರನ್ನು ಕೂಡಿಸಿ ಕನ್ನಡ ಚಿತ್ರವೆಂದು ನಿರ್ಮಿಸಿ ಮಾಡುವ ಅನ್ಯಾಯವನ್ನೂ ಕನ್ನಡ ಚಿತ್ರವೆಂಬ ಅಭಿಮಾನದಿಂದ ಸಹಿಸಬೇಕೆ?" ಎಂದು ಪ್ರಶ್ನಿಸಿದರು. ... ಶ್ರೀ ಅ. ನ. ಕೃಷ್ಣರಾಯರು ಉತ್ತರಿಸುತ್ತಾ, ... ಆ ಮೇಲೆ ಕಾರ್ಯದರ್ಶಿಗಳಿಂದ ವಂದನಾರ್ಪಣೆಯಾಯಿತು. ... ಕನ್ನಡ ಚಿತ್ರಗಳ ಪ್ರಾರಂಭ ಕಾಲವಾದ್ದರಿಂದ ಕೆಲಕಾಲ ಅದನ್ನು ನಾವು ಸಹಿಸಿಕೊಂಡರೆ ... ಕೆಂಬುದು ತನ್ನ ಅಭಿಪ್ರಾಯವೆಂದು ತಿಳಿಸಿದರು.

ಪ್ರಕಟಣೆ

ಪುತ್ತೂರು ತಾಲೂಕು ಕಣಿಯೂರು ಗ್ರಾಮದಲ್ಲಿರುವ ಕಣಿಯೂರು ಗುತ್ತು ಜೈನ ಕುಟುಂಬದ ಯಜಮಾನ ನ ಗದಿ ಹೊಂದಿದ ಹಿರೀ ಮೆಂಬರ ಆದಿರಾಜ ಪೆರ್ಗಡೆಯವರ ಅಳಿಯ ಪದ್ಮರಾಜ ಹೆಗ್ಗಡೆಯು ಈ ಮೂಲಕ ಸರ್ವರಿಗೆ ತಿಳಿಯಪಡಿಸುವುದೇನೆಂದರೆ –

ವಂದ್ರಿ ಮನಃಕ್ಲೇಶದಿಂದ ದುಷ್ಪ್ರಾಧನೆಗೆ ತೊಡಗಿ ಅಕ್ರಮದಿಂದ ವರ್ತಿಸಿ ನನ್ನ ಹಕ್ಕುಗಳಿಗೆ ಭಾಧಕಕರವಾಗಿ ಮಾಡಿಕೊಂಡ ವಳಸಂಚನೆ ಕರಾರು ರದ್ಯಾತಿ ವಗೈರೆ ನಿವೃತ್ತಿಗಳಿಗೆ ನಾನು ದಕ್ಷಿಣ ಕನ್ನಡಾ ಮಾನ್ಯ ಸಬ್‌ಜಡ್ಜರ ಕೋರ್ಟಿನಲ್ಲಿ ದಾವೆ ದಾಖ್ಲು ಮಾಡಿರುತ್ತೇನೆ ಅದನ್ನು ಅರಿತು ರಾ॥ ಅನಂತಯ್ಯ ಹೆಗ್ಗಡೆ ವಗೈರೆರ ಮತಲಬು ವ ವಳಸಂಚಿಗೆ ಸೇರಿ ರೂಪಿತಕ್ಕೆ ಮಾತ್ರ ಬನಾವಣಿ ರುಜುವಾತು ಮಾಡುವರೆ ಕುಟುಂಬದ ಕೆಲವು ಮೆಂಬರರು ತೊಡಗಿದ್ದಾರಾಗಿ ತಿಳಿಯುತ್ತದೆ ಅಲ್ಲದೆ ವಿನಿಯೋಗಗಳನ್ನು ಮಾಡಿಸಿದಾಗಿ ನಟಿಸುವರೇ ಒಂದು ಪ್ರಯತ್ನದಲ್ಲಿ ಇರುವಥಾಗಿ ವರ್ತಮಾನ ತಿಳಿಯುತ್ತದೆ ಗದಿಹೊಂದಿದ ನನಗೆ ಕೆಡಕು ವ ಅವಮರ್ಯಾದೆ ಮಾಡಬೇಕೆಂತ ವರ್ತಿಸುವದಾಗಿ ತಿಳಿಯುತ್ತೇನೆ ಇದು ನನ್ನ ಮೇಲಿಯೂ ನನ್ನ ಸಾಧನೆಗಳಿಗೆ ಬಾಧಿಸತಕ್ಕವುಗಳಲ್ಲ. ವ ಅಸಿಂಧು ಆಗತಕ್ಕವುಗಳಾಗಿರುತ್ತವೆ ಇಂತಹ ಅನ್ಯಾಯವಾದ ಕೆಲಸಕ್ಕೆ ಮಾನ್ಯ ಸದ್‌ಗೃಹಸ್ಥರು ಮದ್ದತು ಕೊಡಕೂಡದಾಗಿ ನನ್ನ ವಿನಂತಿಯಾಗಿರುತ್ತದೆ

ಕಣಿಯೂರು ಗ್ರಾಮ
ಕಣಿಯೂರು ಗುತ್ತು } ಪದ್ಮರಾಜ ಹೆಗ್ಡೆ
ತಾ. 22–1–44.

ನೋಟೀಸು

ಪುತ್ತೂರು ಡಿ॥ ಮು॥ ಕೋರ್ಟಿನಲ್ಲಿ

O S 8‑9/1943.

B G ತಿಮ್ಮಪ್ಪ ಕೈ ಕೂಡಾ— ವಾದಿರು

ತ್ಯಾಂಪು ಶೆಟ್ಟಿ ಕೂಡಾ 17 ಜನರು —

ಪ್ರತಿವಾದಿರು

ಪ್ರತಿವಾದಿರು

7 ಶೇಷಮ್ಮ–ಮ್ಮಾನರ ಗಾರ್ಡಿಯಾನ 4 ನೇ ಪ್ರತಿವಾದಿ ಸಂಕಪ್ಪ ಶೆಟ್ಟಿ–ಕುಂಞಕ್ಕೆ ಮಗ–ಕಾಸರಗೋಡು ತಾಲೂಕು ತಲೆಕಳ ಗ್ರಾಮದ ಮೈತಾಳ—

14 ಮೊಯಿದುಕುಂಞ ಬ್ಯಾರಿ – ಅಮದೆ ಬ್ಯಾರಿ ಮಗ – ಕಾಸರಗೋಡು ತಾಲೂಕು ಬಡಾಜೆ ಗ್ರಾಮದ ಪಲ್ಲಿಕಳ

17 ಚಿಕ್ಕು ಭಂಡಾರಿ–ಮುತ್ತು ಭಂಡಾರಿ ಮಗ ಬಾಯಾರು ಗ್ರಾಮದ ಪೆರುವಡಿ

ಪ್ರತಿವಾದಿರು

ವಾದಿರು ಪ್ರತಿವಾದಿರ ಮೇಲೆ ದಾವಾ ಅಡವಿನ ಅಸ್ಲು ವ ಬಡ್ಡಿಗೆ ಕೂಡಾ ರೂ 742–11–10ಕ್ಕೆ ದಾವಾ ಮಾಡಿ ಅದರ ನೋಟೀಸಿನ ವ್ಯಾದೆ ತಾ. 14–2–1944ಕ್ಕೆ ಇಟ್ಟಿರುತ್ತದೆ ಅದ್ದರಿಂದ ಆ ವ್ಯಾದೆಗೆ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ವ್ಯಾದೆಗೆ ಈ ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜ್ರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ಶಿವಾಯಿ ವಿಂತ ಮಾಡಿ ಈ ದಾವೆಯನ್ನು ಮುಂದಿನ ತನ್ನಿಯಿಂದ ತೀರ್ಮಾನಿಸಲಾಗುತ್ತದೆ ಎಂತ ಈ ಕೋರ್ಟಿನ ವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur } Sd/ B Ramachandra Rao,
ತಾ 21-1-'44 } M A B. L.
Pleader for plaintiff.

ನಿಮ್ಮ ಗಳಿಕೆಗಳನ್ನು ಕಾಪಾಡಿರಿ

ಅಮೂಲ್ಯ ಖನಿಜಗಳು, ಅಮೂಲ್ಯ ಹರಳು ಕಲ್ಲುಗಳು, ಭೂಮಿ, ಕಟ್ಟಡಗಳು ಅಥವಾ ತಯಾರಿಸಲ್ಪಟ್ಟ ಸಾಮಾನುಗಳಮೇಲೆ ಯುದ್ಧಕಾಲದಲ್ಲಿ ಕೂಡಿಟ್ಟ ಹಣವನ್ನು ವಿನಿಯೋಗಿಸಬೇಕೆಂಬುದು ಸ್ವಾಭಾವಿಕವಾದದ್ದು. ಆದರೆ ಇಂದು ಇದು ಬಹು ಅಪಾಯಕರವಾದ ದೀರ್ಘ ಅವಧಿಯ ಕೂಡಿಡುವ ವಿಧಾನವಾಗಿದೆ. ಭಂಗಾರ, ಬೆಳ್ಳಿ ಆಭರಣಗಳು, ಆಸ್ತಿ ಪಾಸ್ತಿ ಮತ್ತು ಸಾಮಾನುಗಳ ಬೆಲೆಯು ಇತರ ಧಾರಣೆಗಳ ಜೊತೆಗೆ ಮಿತಿಮೀರಿ ಏರಿವೆ; ಯುದ್ಧದಲ್ಲಿ ದೊರೆಯುತ್ತಿರುವ ವಿಜಯಗಳ ಫಲಿತವಾಗಿ ಈ ಬೆಲೆಗಳು ಒಂದು ದಿನ ಬಿದ್ದು ಹೋಗುತ್ತವೆ–ಹಠಾತ್ತಾಗಿ ಬೀಳಬಹುದು–ಮತ್ತು ನಿಮ್ಮ ಹಣದ ಹೆಚ್ಚಿನ ಭಾಗವು ಮಾಯವಾಗಬಹುದು. ನಿಮ್ಮ ವ್ಯವಹಾರ ಜ್ಞಾನವನ್ನು ... ಪ್ರ ಸದಿಪಾಟವಿಟ್ಟು ಕೂಡಿಟ್ಟ ಹಣವನ್ನು ಕಾಪಾಡಿಕೊಳ್ಳಿ.

ಮುಂಬರುವ ದಿನಗಳಿಗೋಸ್ಕರ ಸುರಕ್ಷಿತವಾಗಿ

ಕೂಡಿಡಿ

ಕೆಳಗೆ ಕಂಡವುಗಳಲ್ಲಿ ನಿಮ್ಮ ಕೂಡಿಟ್ಟ ಹಣವು ಸುರಕ್ಷಿತವಾಗಿರುತ್ತದೆ ಮತ್ತು ಶಾಶ್ವತಮೌಲ್ಯವುಳ್ಳದ್ದಾಗಿರುತ್ತದೆ

★ ಸಹಕಾರ ಸಂಸ್ಥೆ
★ ವಿಮೆ ಪಾಲಿಸಿ.
★ ಬ್ಯಾಂಕ್
★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಏಕಕ್ಕಿಂತಲೂ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟ್‌ಗಳು

ದಿನವೂ ನಾಲ್ಕು ಆಣೆ ಕೂಡಿಡಿ!

ನಿಮ್ಮ ಮನೆಯಲ್ಲಿ ... ದಿನವೂ ನಾಲ್ಕು ಆಣೆ ... ಹಣದ ಪೆಟ್ಟಿಗೆಯನ್ನು ... ಹಣವನ್ನು ಸುರಕ್ಷಿತವಾಗಿ ... ಕ್ರಮವಾಗಿ ...

ರಾಷ್ಟ್ರೀಯ ಯುದ್ಧಮುಖದವರು | ದೇಶೀಯರಿಗೆ ಮಾಡುವ ಮನವಿ

CPU—100, KN

ಸ್ವಾತಂತ್ರ್ಯದ ನಂದಾದೀಪ ಬೆಳಗಿಸಿರಿ'

ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸರೋಜಿನಿ ದೇವಿಯರ ಹೇಳಿಕೆ.

ಸ್ವಾತಂತ್ರ್ಯ ದಿನಾಚರಣೆಯು ಪ್ರತಿ ವರುಷ ನಡೆಯುವ ಒಂದು ಸಂಪ್ರದಾಯ ಕರ್ಮವಲ್ಲ ಅದೊಂದು ಪುಣ್ಯಕಾರ್ಯ. ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಗೆ ಎಂದಿಗಿಂತಲೂ ಹೆಚ್ಚಿನ ಮಹತ್ವವಿದ್ದೆ. ಜನರು ಬಹಳ ದುಃಖ ಸಂಕಷ್ಟಗಳಿಗೆ ಗುರಿಯಾಗಿದ್ದಾರೆ, ಹೀಗಿದ್ದರೂ ಅಧೀರರಾಗದೆ ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞೆ ಮಾಡುವುದು, ಮಹಾತ್ಮಾಜಿಯವರ ಅಹಿಂಸಾ ತತ್ವದ ಕುರಿತು ಅಚಲ ವಿಶ್ವಾಸ ಪ್ರದರ್ಶಿಸುವುದು ಮಹತ್ವವಾದುದು' ಹೀಗೆಂದು ಶ್ರೀಮತಿ ಸರೋಜಿನಿ ದೇವಿಯವರು ಒಂದು ಹೇಳಿಕೆ ಹೊರಡಿಸಿದ್ದಾರೆ

ಅವರು ತಮ್ಮ ಹೇಳಿಕೆಯಲ್ಲಿ ಮತ್ತೆ ಹೀಗಂದಿರುವರು

'ಈ ಪುಣ್ಯ ದಿನಾಚರಣೆ ಮಾಡುವ ಮುನ್ನ (ಸಾರ್ವಜನಿಕ ಸಭೆಗಳಲ್ಲಾಗಲಿ, ಮನೆಗಳಲ್ಲಾಗಲಿ, ಸೆರೆಮನೆಯಲ್ಲಾಗಲಿ) ನಮ್ಮ ನೈತಿಕ ಬಲ ಬೆಳೆಸೋಣ, ಹಾಗೆ ಮಾಡಿದರೆ ಪ್ರತಿಜ್ಞೆಯ ಮಹತ್ವವನ್ನರಿಯಲು ಸಾಧ್ಯವಾಗುವುದು ಆ ಭಾರ ಹೊರಲು ಧೈರ್ಯವೂ ಬರುವುದು

'ಕಾಂಗ್ರೆಸಿನ ನನ್ನ ಬಾಂಧವರಲ್ಲಿ ಒಂದು ವಿನಂತಿ ನಮ್ಮೊಬ್ಬ ಆತ್ಮೀಯ ಮಿತ್ರರು ಚಿರ ನಿದ್ರಾಲೀನರಾದರು ಇದು ಕೇವಲ ವೈಯುಕ್ತಿಕ ದುಃಖದ ವಿಷಯವಲ್ಲ ರಾಷ್ಟ್ರೀಯ ಸಂತಾಪದ ಘಟನೆಯಿದು ಆದರ ಪರಿಣಾಮವಾಗಿ ಅನಾರೋಗ್ಯದಿಂದ ಶಂಖ ಹುಳದಂತೆ ಮುದುಡಿಕೊಂಡು ನಾನು ಹೊರಗೆ ಎಡದಂತಾಗಿದೆ ದೇಶವಿಡೀ ಸಂಚರಿಸಿ ಪರಿಸ್ಥಿತಿ ಹೇಗಿದೆಯೆಂದು ತಿಳಿಯಲು ಸಾಧ್ಯವಿಲ್ಲವಾಗಿದೆ ಆದರೂ ಸಾಧ್ಯವಾದ ಮಟ್ಟಿಗೆ ಇಂದಿನ ಪರಿಸ್ಥಿತಿಯನ್ನು ಲಕ್ಷಿಸಿದ್ದೇನೆ

"ಕಾಂಗ್ರೆಸಿನ ನಿರ್ಣಯದ ಕುರಿತು ಭಿನ್ನಾಭಿಪ್ರಾಯವುಳ್ಳ ಅನೇಕರು ನಮ್ಮೊಡನಿದ್ದಾರೆ. ಉದ್ದೇಶವನ್ನು ಆಚಷ್ಟು ಬೇಗ ಸಾಧಿಸಬೇಕೆಂಬ ಆತುರದಿಂದ ಕಾಂಗ್ರೆಸಿನ ತತ್ವ ಧೋರಣೆಗಳಿಗೆ ವ್ಯತಿರಿಕ್ತ ಕಾರ್ಯಕ್ರಮವನ್ನು ಪ್ರತಿಪಾದಿಸುವವರೂ ಕೆಲವರಿರಬಹುದು ದೇಶದ ಹಿತದ ದೃಷ್ಟಿಯಿಂದ ಸಂಧಾನಮಾಡಿಕೊಳ್ಳುವುದು ಲೇಸೆನ್ನುವವರೂ ಕೆಲವರಿರುವರು ಅಂಥವರು ಕಾಂಗ್ರೆಸಿನಿಂದ ದೂರವಿದ್ದು ತಮಗೆ ಹಿತವೆನಿಸಿದ ಯೋಜನೆ ಕೈಕೊಳ್ಳುವುದೊಳಿತು

"ಆದರೆ ಕಾಂಗ್ರೆಸಿನ ತತ್ವವನ್ನೊಪ್ಪುವ ಜನರು ಅದರ ಆಜ್ಞೆ ಪಾಲಿಸದೆ ನಿರ್ವಾಹವಿಲ್ಲ ಅವರು ಕಾಂಗ್ರೆಸಿನ ಅಹಿಂಸೆ, ರಾಷ್ಟ್ರೀಯ ಐಕ್ಯ ಆಕ್ರಮಣಶೀಲ ದಬ್ಬಾಳಿಕೆ ಪ್ರತಿಭಟನೆ ಮೊದಲಾದ ಕಾಂಗ್ರೆಸ್ ತತ್ವಕ್ಕೆ ಅನುಕೂಲರಾಗಿರಲೇಬೇಕು ಕಾಂಗ್ರೆಸು ತಿಳಿದೇ ತ್ಯಜಿಸಿರುವ ಸ್ಥಾನಮಾನಗಳನ್ನು ಪುನಃ ಸ್ವೀಕರಿಸಲು ಯತ್ನಿಸಬಾರದು ಅಥವಾ ಈಗ ಸೆರೆಮನೆಯಲ್ಲಿರುವ ತಮ್ಮ ಮುಖಂಡರು ಕೈಕೊಂಡಿರುವ ಹಾಗೂ ಇಡೀ ಜನಾಂಗ ಒಕ್ಕೊರಲಿನಿಂದ ದೃಢಪಡಿಸಿದ ನಿರ್ಧಾರವನ್ನು ಮೂಲೆಗಿಡಲು ಸಾಧ್ಯವಿಲ್ಲ ಸಂಧಾನ ಇಲ್ಲವೇ ಅವಮಾನಕರ ಶರಣಾಗತಿಯು ನಮ್ಮ ಹಾದಿಯಲ್ಲ ಗೌರವ ಪೂರ್ಣ ಸಂಧಾನ ಅಥವಾ ತ್ಯಾಗ ಇವೆರಡರಲ್ಲೊಂದು ನಮ್ಮ ಮುಂದಿನ ಹಾದಿ ಆದ್ದರಿಂದ ಅಚಲ ಧೈರ್ಯದಿಂದಲೂ, ದೃಢ ನಿಶ್ಚಯದಿಂದಲೂ ನಮ್ಮ ಮುಂದಿನ ಮಹತ್ಕಾರ್ಯ ಸಾಧನೆಗೆ ನಾವು ಕಂಕಣಬದ್ಧರಾಗೋಣ ಅತಿ ಶೂರರೆಂದು ಇತಿಹಾಸದಲ್ಲಿ ಅಜರಾಮರ ಕೀರ್ತಿ ಗಳಿಸೋಣ'

ಬಂಗಾಲದಲ್ಲಿ ಪುನಃ ಬರಗಾಲ

ಈ ವರ್ಷ ಬಹಳ ಉತ್ತಮ ಬೆಳೆ ಬಂದಿದ್ದರೂ ಬಂಗಾಲ ಸರಕಾರದ ಅಚಾತುರ್ಯ, ಅಯೋಗ್ಯತೆ ಹಾಗೂ ಭಾರತ ಸರಕಾರದ ಔದಾಸೀನ್ಯ, ಅವಿಶ್ವಾಸಗಳಿಂದಾಗಿ ಕಳೆದ ವರ್ಷದ ದುಃಸ್ಥಿತಿಯೇ ಪುನಃ ಬಂಗಾಳದಲ್ಲಿ ಸಂಭವಿಸುವ ಕುರುಹುಗಳಿವೆಯೆಂದು ಹೊಸ ದಿಲ್ಲಿಯಿಂದ ಲಂಡನ್ ನ್ಯೂಸ್ ಕ್ರಾನಿಕಲ್‌ಗೆ ಸುದ್ದಿ ಹೋಗಿದೆ

ಸ್ವೀಕಾರ-ವಿಮರ್ಶೆ

ಪರ್ಯಾಯ ಸಂಚಿಕೆಗಳು

೧ ನವಯುಗ ವರ್ಷಂಪ್ರತಿಯಂತೆ ಉಡುಪಿ 'ನವಯುಗ ಪತ್ರಿಕೆಯ ಸಂಚಾಲಕರು ಈ ವರ್ಷವೂ ಪರ್ಯಾಯ ವಿಶೇಷ ಸಂಚಿಕೆಯನ್ನು ಪ್ರಕಟಿಸಿದ್ದಾರೆ ಜಯಕರ್ನಾಟಕ ಪತ್ರಿಕೆ ಆಕಾರದ ೧೩೨ ಪುಟಗಳ ಈ ವಿಶೇಷ ಸಂಚಿಕೆಯ ಬೆಲೆ ೮ ಆಣೆ ವಿವಿಧ ಚಿತ್ರಗಳಿಂದ ವಿಶೇಷ ಲೇಖನಗಳಿಂದ ಸಂಚಿಕೆ ವಾಚನೀಯ ವಿದೆ ಶ್ರೀಗಳಾದ ಕಾರಂತ, ಎನ್ ಕೆ ಕುಲಕರ್ಣಿ, ಎನ್. ಎಸ್ ಜೈನಿ, ಕೊರಡ್ಕಲ್, ಎ ಬಿ ಶೆಟ್ಟಿ ಡಾ ಗೋಪಾಲ ಕೃಷ್ಣರಾವ್, ಡಿ ಕೆ ಭಾರದ್ವಾಜ, ಜಾಗೀರ್ದಾರ್, ಕೆ ವಿ ಶೆಣೈ, ಬಿ ಪಿ ಬಾಳಿಗ, ಕುಳುಕುಂದ ಮೊದಲಾದವರ ಲೇಖಕರ ಹಾಗೂ ಶ್ರೀಮತಿ ಯರಾಧ ರಾಜವಾಡೆ, ಲೀಲಾಬಾಯಿ ಕಾಮತ್ ನಾಲತಿದೇವಿ, ಮೊದಲಾದ ಲೇಖಕಿಯರ, ಶ್ರೀಗಳಾದ ವೆಂಕಟರಾಜ, ದುರ್ಗಾದಾಸ, ಸುಬ್ರಾಯನ್, ಪುನಾಕ ಮೊದಲಾದ ಕವಿಗಳ ಕವಿತೆಗಳೂ ಇದ್ದು ಈ ಸಂಚಿಕೆ ಸಂಗ್ರಹನೀಯವೂ ವಾಚನೀಯವೂ ಇದೆ ಅಚ್ಚುಕಟ್ಟು ಆಕರ್ಷಣೀಯವಿರುವುದು.

೨ ಕರ್ಮವೀರ, ಹುಬ್ಬಳ್ಳಿಯ ಕರ್ಮವೀರ' ವಾರಪತ್ರಿಕೆಯವರೂ ಈ ವರ್ಷ ಉಡುಪಿ ಪರ್ಯಾಯ ಸಮಯದಲ್ಲಿ ಪರ್ಯಾಯ ವಿಶೇಷಸಂಚಿಕೆ ಹೊರಡಿಸಿದ್ದು ಅಭಿನಂದನೀಯ. ಶ್ರೀಗಳಾದ ಕೊರಡ್ಕಲ್, ರಾಮಕೃಷ್ಣಚಾರ್, ಪಂಚಮುಖಿ, ಜೋಶಿ, ನಾಯಕ್ ಸಂಜಯ ಮೊದಲಾದವರ ವಾಚನೀಯ ಲೇಖನಗಳಿವೆ ಕರ್ಮವೀರ' ವಾರಪತ್ರಿಕೆಯ ಆಕಾಲದ ೩೨ ಪುಟಗಳಿಂದ ಕೂಡಿದ್ದು ಉಡುಪಿ ವಿಚಾರ, ಕೃಷ್ಣ ಕನ್ನಡದ ವಿಚಾರ, ಪರ್ಯಾಯದ ಬಾರ ಇಷ್ಟೊಂದು ವಿಷಯ ಸಂಗ್ರಹಮಾಡಿ ವಿಶೇಷ ಸಂಚಿಕೆ ಹೊರಡಿಸಿದ ಹುಬ್ಬಳ್ಳಿ 'ಕರ್ಮವೀರ'— ಸಂಚಾಲಕರಿಗೆ ನಾವು ಕೃತಜ್ಞರು

TIMES HAVE CHANGED!

TIME-KEEPERS IN B.C.1400

and in 1944

ಬಿಜೊ ಮಿನಿಯೇಚರ್ "ಎ"
18ಕ್ಯಾ ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ 330



ಬಿಜೊ ಮಿನಿಯೇಚರ್ "ಬಿ"
18ಕ್ಯಾ ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ 310



ಬಿಜೊ ಮಿನಿಯೇಚರ್ "ಸಿ"
18ಕ್ಯಾ ಗಟ್ಟಿಚಿನ್ನದ್ದು ಭಾರದಮುಚ್ಚಳ ರೂ 3‾5

ಕಾಲ ಬದಲಾವಣೆ

ಆಶ್ಚರ್ಯವೆಂದೇ ತೋರಿದರೂ ಈ ಬೋಗುಣಿ ೩ ಸಾವಿರ ವರ್ಷಗಳ ಹಿಂದೆ ಸಮಯ ಸೂಚಿಯಾಗಿ ಉಪಯೋಗದಲ್ಲಿತ್ತು ಕ್ರಿಸ್ತಪೂರ್ವ ೧೪೦೦ರ ಈಜಿಪ್ಟಿನ ಜಲಯಂತ್ರದ ಗಡಿಯಾರಕ್ಕೂ ಈಗಿನ ಸಮಂಜಸ ಸುಂದರ ಸಮಯಸೂಚಿಗೂ ಬಹುದೂರ ವಾಚುಗಳು ಎಷ್ಟು ಬೆಳೆಯುವೆಂದರೆ ಅವುಗಳ ವೃದ್ಧಿಗಾಗಿರುವ ಶತಮಾನಗಳ ಚಾತುರ್ಯವನ್ನೂ ಮರೆಯುತ್ತೇವೆ ಮತ್ತೆ ವಾಚು ಬಹು ಶಾಸ್ತ್ರೀಯ ಸಾಧನವಾಗಿರುವುದರಿಂದ ಒಳ್ಳೆ ನಂಬಿಕೆಯ ತಯಾರಿಕೆಯನ್ನು ಮಾತ್ರ-ಆರಿಸಿ ವೆಸ್ಟ್ ಎಂಡ್‌ನ್ನು ಕೊಂಡರೆ ನಿಮಗೆ ಗುಣ

ಅಕ್ರಮವಾದ ತಲ್ಪೋಣದರಿಂದ್ರ ಜಾಹಿರಾತು ಮಾಡಿದ ಎಲ್ಲ ನಮೂನೆಗಳನ್ನೂ ಒದಗಿಸಲಾಗದಿದ್ದರೂ, ಸ್ಟಾಕಿನಲ್ಲಿರುವ ಮಟ್ಟಿಗೆ ಆರ್ಡರಿನ ಮೇರೆಗೆ ಒದಗಿಸುವ ಯತ್ನವಿದೆ

ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co.

BOMBAY - CALCUTTA

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಯಿ, ಕಲ್ಕತ್ತ.

HEARTY NEW YEAR GREETINGS

TO

All our Policy-holders, Agents, MedicalExaminers and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

Bhuvanendra Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 4—2—1944 [ಸಂಚಿಕೆ 5]

ದಕ್ಷಿಣ ಕನ್ನಡ ಜಿಲ್ಲೆಯ ಐದನೆಯ ವಿದ್ಯಾರ್ಥಿ ಸಮ್ಮೇಳನ

ಕಾಮ್ರೇಡ್ ಕೇಸರೀ ಕೇಶವನರ ಅಧ್ಯಕ್ಷತೆಯಲ್ಲಿ

ಶ್ರೀ. ಎ. ಬಿ. ಶೆಟ್ಟರ ಉದ್ಘಾಟನಾ ಭಾಷಣ.

"ವಿದ್ಯಾರ್ಥಿಗಳು ಇತರ ಚಟುವಟಿಕೆಗಳೊಡನೆ ದಿನ ದಿನದ ರಾಜಕೀಯವನ್ನೂ ಅಭ್ಯಸಿಸಬೇಕು. ನಮ್ಮ ರಾಷ್ಟ್ರದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದಷ್ಟು ಸ್ವಾತಂತ್ರ್ಯವಿಲ್ಲ. ಲಂಡನಿನಲ್ಲಿ ವಿದ್ಯಾರ್ಥಿಗಳು ಬಹಿರಂಗವಾಗಿಯೇ 'ಅರಸು ಮತ್ತು ರಾಷ್ಟ್ರಕ್ಕಾಗಿ ನಾನು ಕಾದಾಡಲಾರೆ' ಎಂಬಂತಹ ವಿಷಯವನ್ನೆತ್ತಿ ಚರ್ಚಿಸುತ್ತಾರೆ. ಜಗದ ಸ್ವಾತಂತ್ರ್ಯಕ್ಕಾಗಿ ಹೋರಾಟವೆಂಬುದು ಅವರ ಧ್ಯೇಯ. ಇಂತಹ ಸ್ವಾತಂತ್ರ್ಯ ನಮಗಿಲ್ಲ. ವಿದ್ಯಾರ್ಥಿಗಳು ಒಂದಾಗಬೇಕು. ಅಖಿಲ ಕರ್ನಾಟಕ ವಿದ್ಯಾರ್ಥಿ ಸಂಘವೊಂದನ್ನು ರಚಿಸಬೇಕು. ಆಗ ನಿಮ್ಮ ಉನ್ನತಿ; ದೇಶದ ಉನ್ನತಿ" ಹೀಗೆಂದು ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಭವನದಲ್ಲಿ ತಾ ೩೦ ರಂದು ಸೇರಿದ ದ. ಕ. ಜಿಲ್ಲಾ ಐದನೆಯ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮೈಸೂರಿನ ಕಮ್ಯುನಿಷ್ಟ ಪಕ್ಷದ ಕೆಲಸಗಾರ್ತಿಯರಾದ ಕಾಮ್ರೇಡ್ ಕೇಸರಿ ಕೇಶವನ್ ಬಿ. ಎ. (ಲಂಡನ್) ಇವರು ಹೇಳಿದರು.

ಶ್ರೀಮತಿಯವರು ತಮ್ಮ ದೀರ್ಘ ಭಾಷಣದಲ್ಲಿ, ವಿದ್ಯಾರ್ಥಿಗಳು ಅಂತರ್ ರಾಷ್ಟ್ರೀಯ ವಿಚಾರ ಭಾವನೆಯುಳ್ಳವರಾಗಬೇಕೆಂದು ಹೇಳುತ್ತಾ, ಲಂಡನಿನಲ್ಲಿ ತಾನಿದ್ದಾಗ ತಿಳಿದುಕೊಂಡಂತೆ ಅಲ್ಲಿನ ಸಾಮಾನ್ಯ ಜನರು ಭಾರತದ ಸ್ವಾತಂತ್ರ್ಯ ವಿರೋಧಿಗಳಲ್ಲವೆನ್ನುತ್ತಾ, ರಾಷ್ಟ್ರೀಯ ಐಕ್ಯದ ವಿಷಯ ತಿಳಿಸಿ, ಇಂದು ಪ್ರತಿಯೊಂದು ಕಾರ್ಯದಲ್ಲಿಯೂ ಸ್ತ್ರೀಯು ಪುರುಷನೊಡನೆ ಸಮ ಭುಜಳಾಗಿ ನಿಂತಿರುವಾಗ, ಮಂಗಳೂರಿನ ವಿದ್ಯಾರ್ಥಿನಿಯರು ಈ ಸಮ್ಮೇಳನದಲ್ಲಿ ಅಧಿಕ ಸಂಖ್ಯೆಯಿಂದ ಭಾಗ ವಹಿಸದಿರುವ ಕುರಿತು ವಿಷಾದಿಸಿ, ಅವರು ಮುಂದೆ ಬರಬೇಕೆಂದು ಹಾರೈಸುತ್ತಾ, ದೇಶದ ಆಹಾರ ಸಮಸ್ಯೆಯಲ್ಲಿ ಎಲ್ಲರೂ ಒಂದಾಗಿ ದುಡಿಯಬೇಕೆಂದೂ, ಫೇಸಿಸಮ್ಮನ್ನು ವಿರೋಧಿಸಬೇಕೆಂದೂ ವಿವರಿಸಿದರು.

ಈ ದಿನ ಮುಂಜಾನೆ ಕೆನರಾ ಹೈಸ್ಕೂಲ್ ಅಂಗಣದಲ್ಲಿ ವಿದ್ಯಾರ್ಥಿ ಧ್ವಜಾರೋಹಣವು ಕುಮಾರಿ ಶಾಂತಾ ಬಾಯಿಯವರಿಂದ ನೆರವೇರಿಸಲ್ಪಟ್ಟಿತು. ಮೈಸೂರಿನ ವಿದ್ಯಾರ್ಥಿ ಕಾಮ್ರೇಡ್ ಕೃಷ್ಣಮೂರ್ತಿಯವರು ಧ್ವಜದ ಪ್ರಾಧಾನ್ಯದ ಕುರಿತು ಮಾತನಾಡಿದರು. ಅನಂತರ ಪಂದ್ಯಾಟಗಳು ಜರಗಿದವು. ಮಧ್ಯಾಹ್ನ ಮೇಲೆ ಪ್ರಬಂಧ ಸ್ಪರ್ಧೆಯಿತ್ತು.

ಸಂಜೆಯ ಅಧಿವೇಶನ ಪ್ರಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಯೋಗೀಶ್ವರ ಹೊಳ್ಳರು, ಸ್ವಾಗತ ಭಾಷಣ ಮಾಡುತ್ತಾ, ಕೀ. ಶೇ. ಹಲ್ಸನಾಡು ಸೂರಪ್ಪಯ್ಯನವರು ಪ್ರಾರಂಭಿಸಿದ ವಿದ್ಯಾರ್ಥಿ ಸಂಘದ ಬೆಳವಣಿಗೆಯನ್ನು ವಿವರಿಸಿ, ಸಭೆ ಮೆರವಣಿಗೆ ನಿರ್ಬಂಧಗಳಿಂದ ವಿದ್ಯಾರ್ಥಿ ಸಂಘದ ಚಟುವಟಿಕೆಗಳ ಮೇಲೆ ಆಗಿರುವ ತೊಂದರೆಗಳನ್ನು ತಿಳಿಸಿ ಸ್ವಾತಂತ್ರ್ಯ ಶಾಂತಿ ಪ್ರಗತಿಗಳಿಗಾಗಿ ವಿದ್ಯಾರ್ಥಿಗಳು ಹೋರಾಡುವರೆಂದರು.

ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ವಾಮದೇವ ಪಾಯಾಕರು ವಾರ್ಷಿಕ ವರದಿಯನ್ನೋದಿದರು. ವಿದ್ಯಾರ್ಥಿ ಸಂಘದಲ್ಲಿ ಈ ವರ್ಷ ಉಂಟಾದ ಒಡಕನ್ನೆತ್ತಿ ಹೇಳಿ, ಅದರ ಐಕ್ಯಕ್ಕಾಗಿ ಶ್ರೀಗಳಾದ ಭಾಸ್ಕರ ರೈ ಮತ್ತು ಕೆ. ಕೆ. ರೈ ಇವರು ಮಾಡಿದ ಪ್ರಯತ್ನವನ್ನು ಅಭಿನಂದಿಸುತ್ತಾ, ತಾವು ಶರತವಿಲ್ಲದೆ ಐಕ್ಯವಾಗಲು ಒಪ್ಪಿದರೂ ಇನ್ನೊಂದು ವಿದ್ಯಾರ್ಥಿ ಸಂಘದವರು ಅನೇಕ ಶರತ ಹಾಕಿ ಐಕ್ಯ ಸಾಧಿಸದಂತೆ ಮಾಡಿದ ವಿಷಯಗಳು ಆ ವರದಿಯಲ್ಲಿದ್ದುವು.

ಆ ಮೇಲೆ ಶ್ರೀ! ಎ. ಬಿ. ಶೆಟ್ಟರು ಸಮ್ಮೇಳನದ ಉದ್ಘಾಟನಾ ಭಾಷಣವನ್ನಿತ್ತರು. ಬೇರೆ ಬೇರೆ ಜಾತಿಗಳಿಗಾಗಿ, ಶಾಲೆ, ವಿದ್ಯಾರ್ಥಿಭವನಗಳನ್ನೇರ್ಪಡಿಸುವುದರಿಂದ ರಾಷ್ಟ್ರೀಯ ಐಕ್ಯ ಹಾಳಾಗುತ್ತದೆನ್ನುತ್ತಾ, ವಿದ್ಯಾರ್ಥಿಗಳಲ್ಲಿ ಸಂಕುಚಿತ ರಾಷ್ಟ್ರಪ್ರೇಮವಿರಬಾರದೆಂದೂ, ನಾವು ಅಂತರ್ರಾಷ್ಟ್ರೀಯ ವಿಶಾಲ ದೃಷ್ಟಿಯಿಂದ ಯೋಚಿಸಬೇಕೆಂದೂ ಹೇಳಿ, ವಿದ್ಯಾರ್ಥಿಗಳು ಪ್ರಚಾರ ಒತ್ತಾಯಗಳಿಗೆ ಬಲಿಯಾಗದೆ ಸ್ವತಂತ್ರ ವಿಚಾರ ಶಕ್ತಿ ಬಲಗೊಳಿಸಬೇಕೆಂದು ವಿವರಿಸಿದರು.

ರಾತ್ರೆ ವಿವಿಧವಿನೋದಾವಳಿಗಳಿದ್ದುವು.

ಸಮ್ಮೇಳನದ ಎರಡನೇ ದಿನ ಪೂರ್ವಾಹ್ನ ಕಾಮ್ರೇಡ್ ಕೇಸರಿ ಕೇಶವನರ ಅಧ್ಯಕ್ಷತೆಯಲ್ಲಿ ಕೆಲ ಪ್ರತಿನಿಧಿಗಳ ಸಭೆ ಜರಗಿತು. ಬಹಿರಂಗ ಅಧಿವೇಶನದ ಮುಂದಿಡಬೇಕಾದ ನಿರ್ಣಯಗಳ ಕುರಿತು ಚರ್ಚೆಯಾಯಿತು. ಮಂಗಳೂರಿನ ಕಮ್ಯುನಿಸ್ಟ ಪಕ್ಷದವರು ಇಲ್ಲಿ ತಮ್ಮ ಪಕ್ಷದ ಧೋರಣೆಯ ಪರವಾಗಿರುವ ನಿರ್ಣಯಗಳನ್ನು ಮಂಜೂರು ಮಾಡಿಸುವರೆ ಬಹಳವಾಗಿ ಪ್ರಯತ್ನಮಾಡುತ್ತಿದ್ದರು. ಸರಿಯಾದ ಪ್ರತಿನಿಧಿಗಳು ಇಲ್ಲಿ ಹಾಜರಿರದಿರುವುದರಿಂದಲೂ ಅಧ್ಯಕ್ಷೆಯರೂ ಕಮ್ಯುನಿಸ್ಟ ಪಕ್ಷದವರೇ ಇದ್ದುದರಿಂದಲೂ ಅವರ ನಿರ್ಣಯಗಳೇ ಮಂಜೂರಾದವು. "ದೇಶದಲ್ಲಿರುವ ಕ್ಷಾಮನಿವಾರಣೆಗಾಗಿ ರಾಷ್ಟ್ರೀಯ ಮುಖಂಡರ ಬಿಡುಗಡೆಗಾಗಿ. ಸರಕಾರದೊಡನೆ ವಿನಂತಿಸಿಕೊಳ್ಳಬೇಕು." ಎಂಬೀ ನಿರ್ಣಯವು, ಕಮ್ಯುನಿಸ್ಟರು ಸಾರುತ್ತಿರುವ ಧೋರಣೆಗೆ ಸರಿಯಾಗಿದ್ದರೂ; ಕಮ್ಯುನಿಸ್ಟ ಪಕ್ಷದವರಲ್ಲದ ಪ್ರತಿನಿಧಿಗಳೊಬ್ಬರು ತಂದುದರಿಂದ ಅದನ್ನು ತರಕೂಡದೆಂದು ಅಧ್ಯಕ್ಷರು ತೆಗೆದು ಹಾಕಿದರು. ಅಂತೆಯೇ "ಮದ್ರಾಸು ಪ್ರಾಂತದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಸಂಘಗಳ ಮೇಲೆ ಸರಕಾರ್ ಹಾಕಿದ ನಿರ್ಬಂಧವನ್ನು ತೆಗೆದು ಹಾಕಲು ವಿನಂತಿಸಬೇಕೆನ್ನುವ, ಕಳೆದ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರೆಂದು ಕೆಲವಿದ್ಯಾರ್ಥಿಗಳನ್ನು ಶಾಲೆ ಕಾಲೇಜುಗಳಿಂದ ತೆಗೆದು ಹಾಕಿದ್ದು ಅವರನ್ನು ಪುನಃ ಸೇರಿಸಿಕೊಳ್ಳಬೇಕೆಂದು ವಿನಂತಿಸುವ" ಠರಾವುಗಳೆರಡನ್ನೂ (ಕಮ್ಯುನಿಸ್ಟ ಪಕ್ಷದವರಲ್ಲದ ವಿದ್ಯಾರ್ಥಿಗಳೊಬ್ಬರು ತಂದದ್ದು) ಅಧ್ಯಕ್ಷರು ಪ್ರತಿನಿಧಿಗಳ ಮತ ಕೇಳದೆಯೇ ಇದೆಲ್ಲಾ ರಾಜಕೀಯವಾಗುತ್ತದೆಂದು ತೆಗೆದು ಹಾಕಿದರು. ರಾಷ್ಟ್ರೀಯ ವಿದ್ಯಾರ್ಥಿ ಸಂಘದ ಮೇಲೆ ಸರಕಾರ ನಿರ್ಬಂಧ ಹಾಕಿದ್ದರ ಕುರಿತು ವಿರೋಧ, ಖಂಡನೆ, ಏನೂ ಮಾಡದೆ, ನಿರ್ಬಂಧ ಹಿಂತೆಗೆಯಬೇಕೆಂದು ಮಾತ್ರ ವಿನಂತಿಸಿಕೊಳ್ಳುವುದು, ಇದು ವಿದ್ಯಾರ್ಥಿಗಳ ಬೇಡಿಕೆಯೆಂದು ಹೇಳಿದರೂ ಅಧ್ಯಕ್ಷರು ಒಪ್ಪದೆ ಆ ನಿರ್ಣಯ ತರಲು ಬಿಡಲೊಲ್ಲೆನೆಂದು ಹೇಳಿದರು. ಹಾಗಾಗಿ ಫ್ಯಾಸಿಸ್ಟ ವಿರೋಧ ಹೋರಾಡುವವರನ್ನು ಅಭಿನಂದಿಸುವ; ಫ್ಯಾಸಿಸ್ಟ ಆಕ್ರಮಣ ವಿರೋಧಿಸಲು ದೇಶದಲ್ಲಿ ಐಕ್ಯವಿರಬೇಕೆನ್ನುವ, ಕಮ್ಯುನಿಸ್ಟರ ವಶವಿರುವ ಅ. ಭಾ. ವಿದ್ಯಾರ್ಥಿ ಫೆಡರೇಶನಿಗೆ ಸೌಹಾರ್ದ ಸಂದೇಶ ಕಳುಹಿಸಬೇಕೆನ್ನುವ ಬಂಗಾಳಕ್ಕೆ ಸಹಾಯ ಕೊಡಬೇಕೆನ್ನುವ, ರೇಶನಿಂಗ್ ಜಾರಿಮಾಡಬೇಕೆನ್ನುವ ಹೀಗೆ ಕಮ್ಯುನಿಸ್ಟ ಪಕ್ಷದ ಧೋರಣೆಗೆ ಸರಿಯಾಗಿರುವ ನಿರ್ಣಯಗಳು ಮಾತ್ರ ಹಾಗೂ ಶಾಲೆ ಕಾಲೇಜುಗಳ ಶಿಕ್ಷಣ ಮಾಧ್ಯಮವು ಸಂಪೂರ್ಣ ಕನ್ನಡ ಇಲ್ಲವೇ ಸಂಪೂರ್ಣ ಇಂಗ್ಲಿಷು ಆಗಬೇಕೆನ್ನುವ ನಿರ್ಣಯವೂ, ಮಂಜೂರಾಗಿ ಇವು ಮಾತ್ರ ಬಹಿರಂಗ ಅಧಿವೇಶನದಲ್ಲಿಡುವುದಾಗಿ ನಿರ್ಣಯವಾಯಿತು.

ಅನಂತರ ಆಂಗ್ಲ-ಕನ್ನಡ ಭಾಷಣ ಸ್ಪರ್ಧೆಗಳಾದುವು. ಹುಡುಗಿಯರಿಗಾಗಿ ಬಿಸೆಂಟ್ ಬಾಲಿಕಾ ಶಾಲೆಯಲ್ಲಿ ಸ್ಪರ್ಧೆಗಳಿದ್ದುವು.

ಸಂಜೆಗೆ ಬಹಿರಂಗ ಅಧಿವೇಶನವು ಕಾಮ್ರೇಡ್ ಕೇಸರಿ ಕೇಶವನರ ಅಧ್ಯಕ್ಷತೆಯಿಂದ ಜರಗಿತು. ಹಿತಚಿಂತಕರಾಗಿ ಮೈಸೂರಿನ ವಿದ್ಯಾರ್ಥಿ ಕಾಮ್ರೇಡ್ ಕೃಷ್ಣಮೂರ್ತಿಯರ ಭಾಷಣವಾದ ಬಳಿಕ ಮಂಗಳೂರಿನ ಹಿತಚಿಂತಕರಾಗಿ ಕಮ್ಯುನಿಸ್ಟ ಕೆಲಸಗಾರರಾದ ಕಾಮ್ರೇಡ್‌ಗಳು ಬಿ. ವಿ. ಕಕ್ಕಿಲ್ಲಾಯ ಮತ್ತು ಶಾಂತಾರಾಮ ಪೈಗಳು ಮಾತನಾಡಿದ ಮೇಲೆ ಶ್ರೀ ವಾಮನ ಶೇಟರು ಮಾತನಾಡಿದರು. ಬಳಿಕ ವಿದ್ಯಾರ್ಥಿಗಳ ಹಿತಚಿಂತಕೆಯರಾಗಿ ನೇಶನಲ್ ವಾರ್ ಫ್ರಂಟಿನ ಮಿಸ್ ರಾಧಾಬಾಯಿಯವರೂ ಭಾಷಣವಿತ್ತರು.

ಆ ಮೇಲೆ ಠರಾವುಗಳು ತರಲ್ಪಟ್ಟವು. ಶ್ರೀಗಳಾದ ಆರ್. ಎಸ್. ಪಂಡಿತ್, ಸತ್ಯಮೂರ್ತಿ ಬೇಗಂ ಆಜಾದ್, ಡಾ| ವಿಟ್ಠಲ ಶೆಟ್ಟಿ ಇವರ ನಿಧನದ ಬಗ್ಗೆ ಸಮ್ಮೇಳನ ಸಂತಾಪ ಸೂಚಿಸುವ ಠರಾವುಗಳಾದವು. ಮುಂದೆ ಮುಖ್ಯ ಠರಾವುಗಳನ್ನು ಒಂದೊಂದಾಗಿ ಓದಿ, ಬಹಿರಂಗ ಅಧಿವೇಶನದಲ್ಲಿ ಚರ್ಚಿಸಲಿಡದೆಯೇ ಇದೆಲ್ಲಾ ಸರ್ವಾನುಮತದಿಂದ ಮಂಜೂರಾಗಿದೆಯೆಂದು ಓದುತ್ತಿರುವಾಗ ಶ್ರೀ. ಎನ್. ಹೊಳ್ಳರು, ಎದ್ದು ನಿಂತು, 'ಪ್ರತಿನಿಧಿಗಳನ್ನು ಕೇಳದೆ ನಿರ್ಣಯ ಮಂಜೂರು ಮಾಡುವುದು ಸರಿಯೆ?' ಎಂದು ಅಧ್ಯಕ್ಷರೊಡನೆ ಪ್ರಶ್ನಿಸಿದರು. ಅಧ್ಯಕ್ಷರು 'ಪ್ರತಿನಿಧಿಗಳ ಮತ ತೆಗೆಯುವುದೇ ಕ್ರಮವಾಗಿದೆ. ಆದರೆ ಸಮ್ಮೇಳನದ ವ್ಯವಸ್ಥಾಪಕರು ಅಂತಾ ನಿರ್ಧಾರವು ಮಾಡದಿರುವುದರಿಂದ ಹೀಗೆ ಮಾಡಬೇಕಾಗಿದೆ' ಎಂದರು. 'ಹೀಗೆ ಸಮ್ಮೇಳನದ ಪ್ರಾಮುಖ್ಯ ವಿಷಯವಾದ ನಿರ್ಣಯಗಳ ಚರ್ಚೆಗೆ ಅವಕಾಶ ಕೊಡದಂತೆ ಮಾಡಿದ ಕಾರಣವೇನೆಂದು ವ್ಯವಸ್ಥಾಪಕರು ವಿವರಣೆ ಕೊಡುವರೆ?' ಎಂದು ಪುನಃ ಪ್ರಶ್ನಿಸಿದ್ದಕ್ಕೆ, ಅಧ್ಯಕ್ಷರು, 'ಇದು ನಿಜವಾಗಿಯೂ ಸಮ್ಮೇಳನ ಮಾಡಿದವರ ಒಂದು ದೊಡ್ಡ ಅಪರಾಧ. ಆದರೆ ಈಗ ಏನೂ ಮಾಡಲಾಗುವುದಿಲ್ಲ' ಎಂದರು. ನಿರ್ಣಯಗಳನ್ನು ಹೀಗೆ ಚರ್ಚೆಗಿಡದೆ ಒಬ್ಬರು ಓದಿ ಮಂಜೂರು ಮಾಡುತ್ತಿರುವೀ ಉಪಹಾಸವನ್ನು ನೋಡಿ ಪ್ರತಿನಿಧಿಗಳ ಸಭೆಯಲ್ಲಿ ಅಶಾಂತಿ, ಅತೃಪ್ತಿ, ಕೋಲಾಹಲಗಳುಂಟಾದವು. ಕಮ್ಯುನಿಸ್ಟ ಪಕ್ಷದವರು ಹೀಗೆ ಸಮ್ಮೇಳನದಲ್ಲಿ ಸರ್ವಾಧಿಕಾರ ನಡೆಸುತ್ತಿರುವುದನ್ನು ಕಂಡು, ಸಮ್ಮೇಳನ ಚಟುವಟಿಕೆಗಳಲ್ಲಿ ಇತರೇ ಪಕ್ಷದ ವಿದ್ಯಾರ್ಥಿಗಳು ಅಸಹಕಾರ ತೋರಿಸಿದರು.

ರಾಜಾಜಿ, ಫಳಿಮಾರು ಸ್ವಾಮಿ, ಕೇರಳ ಕಮ್ಯುನಿಸ್ಟ ಪಕ್ಷದ ಅ. ಭಾ. ವಿದ್ಯಾರ್ಥಿ ಸಂಘ ಇವರಿಂದ ಬಂದ ಸಂದೇಶಗಳು ಓದಲ್ಪಟ್ಟವು. ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಕಮ್ಯುನಿಸ್ಟ ಪಕ್ಷದ ಧೋರಣೆ ತಿಳಿಸುವಂಥಾ ಪುಸ್ತಕಗಳೇ ಹೆಚ್ಚಾಗಿ ಬಹುಮಾನವಾಗಿ ಹಂಚಲ್ಪಟ್ಟಿದ್ದುವು.

ಅನಂತರ ಅಧ್ಯಕ್ಷೆಯರಾದ ಕಾಮ್ರೇಡ್ ಕೇಸರಿ ಕೇಶವನ್ ಉಪಸಂಹಾರ ಭಾಷಣವೀಯುತ್ತಾ, ವಿದ್ಯಾರ್ಥಿಗಳನ್ನು ಸಂಘಟಿತರಾಗಬೇಕೆಂದು ಹುರಿದುಂಬಿಸುತ್ತಾ, ವಿದ್ಯಾರ್ಥಿನಿಯರು ಹೆಚ್ಚು ಸಂಖ್ಯೆಯಲ್ಲಿ ಸೇರಬೇಕೆಂದು ವಿನಂತಿಸಿ ಭಾಷಣ ಕೊನೆಗೊಳಿಸಿದರು.

ರಾತ್ರಿ ವಿವಿಧ ವಿನೋದಾವಳಿ ನಡೆದ ಬಳಿಕ ಶ್ರೀ ಯೋಗೀಶ್ವರ ಹೊಳ್ಳರು ಧನ್ಯವಾದಗಳನ್ನಿತ್ತರು.

ಕಸ್ತೂರ್‌ಬಾಗೆ ಪುನಃ ಹೃದಯ ವಿಕಾರ!

ಪುನದ ಸೆರೆಮನೆಯಿಂದ ಪುನಃ ಸುದ್ದಿ ಬಂದಿದೆ, ಕಸ್ತೂರ್‌ಬಾಗೆ ತಿರುಗಿ ಹೃದಯವಿಕಾರವಾಗಿದೆಯೆಂದು! ಗಾಂಧೀಜಿಗೆ ಇದರಷ್ಟು ಆತ್ಮೀಯವಾಗುವ ನೋವು ಬೇರಿದ್ದೀತೆ?

ಗಾಂಧೀಜಿ ಪ್ರಿಯ ಶಿಷ್ಯ ಮಹಾದೇವ ದೇಸಾಯಿ ಇದೇ ಸೆರೆಮನೆಯಲ್ಲಿ ಮೃತ್ಯುವಶರಾದರು! ಗಾಂಧೀಜಿ ಸಹಧರ್ಮಿಣಿಯಿಂದು ಹೃದಯವಿಕಾರದಿಂದ ನರಳುತ್ತಿದ್ದಾರೆ. ಆಚೆಗೆ ನಾಗಪುರ ಸೆರೆಮನೆಯಲ್ಲಿ ಕಿಶೋರಿಲಾಲರು ಕಾಯಿಲೆ ಬಿದ್ದಿದ್ದಾರೆ! ರಣಜಿತ್ ಪಂಡಿತರು, ಸತ್ಯಮೂರ್ತಿಯವರು, ಇನ್ನೆಷ್ಟೋ ಮಂದಿ ಅಜ್ಞಾತವೀರರು ಸೆರೆಮನೆ ಸೇರಿ ಮೃತ್ಯುಮುಖರಾದರು!

ಈ ನೋವು, ಈ ದುಃಖ, ಈ ಸಂತಾಪಗಳು ಗಾಂಧಿಜಿಯನ್ನು ಅನುದಿನವೂ ಕಂಗೆಡಿಸಬಹುದೆ?

ಕಾಗದವ್ವೋ? - ಕಜ್ಜಾಯವ್ವೋ?

ಬರೆದವರು: ಕೆ. ಕೆ. ಉತ್ತಪ್ಪ, ಕೊಡಗು.

"ವಾಲೀ, ಇಕೋ ಕಾಗೆ! ನಿನಗೂ ಒಂದು ಕಾಗದ ಇದೆ" ಎಂದು ಅವಳ ಚಿಕ್ಕಣ್ಣ ... ಓಡಿ ಬಂದಳು.

ವಾಲ್ಟಿದು ದಿನದಿಂದ ಯಾವಾಗಲೂ ಹೋಗಿ ಟೀಚರನ್ನು ಕಾಗದ ಕೇಳುವುದು ಕಂಡು. ಅವಳ ಸಂಗಡಿ 'ರುಕ್ಮ'ಳು, ನಿನ್ನೆ ತಾನೆ ಅವಳ ತಾಯಿ ಬರೆದ ಹಾಗೆ ಬರೆದು, ಅವಳನ್ನು ಮೋಸಪಡಿಸಿರುವಾಗ ಪಾಪ! ಅವಳಾದರೂ ಹೇಗೆ ನಂಬಿಯಾಳು? ಅದೇ ಪ್ರಕಾರ ಈ ಗೆಳತಿಯರ ಚೆಲ್ಲಾಟವೆಂದು ಹುಬ್ಬು ಗಂಟಿಕ್ಕಿ 'ಹೋಗೇ, ನಿನಗೆ ಕೆಲ್ಸ ಇಲ್ಲದಿದ್ದರೆ. ರುಕ್ಮುವಿನದು ನೀನೂ ಕಲಿತುಬಿಟ್ಟೆಯಾ" ಎಂದು ಮುಖ ತಿರುಗಿಸಿದಳು, 'ಅಲ್ಲ ಕಾಗೇ, ಇಲ್ಲಿ ನೋಡು, ಟೀಚರೂ ಓದಿ ನಗುತಿದ್ದರು.' ಎಂದು ಮುಖವನ್ನು ಮತ್ತಷ್ಟು ಉದ್ದ ಮಾಡಿ ಕಣ್ಣು ತಿರಳಿಸಿ ಕೈ ನೀಡಿದಳು. "ಸಾಕವ್ವಾ ನಿನ್ನ ಮಾಯೆ.' ಟೀಚರು ನಗಬೇಕಾದರೆ ನೀವೇ ಯಾರಾದರೂ ಬರೆದಿರಬೇಕು. ನನ್ಗೆಲ್ಲಾ ಕಲಿಸಬೇಡ," ಎಂದರು. "ಏನು ಗೊತ್ತು. ಅಮ್ಮನು ಎಲ್ಲಿಯಾದರೂ ಬರೆದಿದ್ದರೇ?" ಎಂದು ಯೋಚಿಸಿ, 'ಬೇಡಾ; ಬೇಕು' ಎನ್ನುವಂತೆ ಮೆಲ್ಲನೆ ಕೈ ನೀಡಿದಳು. "ಅಯ್ಯೋ ಮಂಕೇ; ಈಗಾ?" ಮತ್ತೂ ಕಾಗದ ತೆಕ್ಕೊಂಡು ಬಂದದಕ್ಕೆ ಮಧ್ಯಾಹ್ನ ಏನೋ?, ಗೊತ್ತಾಯಿತಲ್ಲ!', ಎಂದು ಕಿವಿಯ ಹತ್ತಿರ ಹೋಗಿ 'ನಿನ್ನದೊಂದು ಹಪ್ಪಳ ನನಗೆ;" ಎಂದು ಮೆಲ್ಲನೆ ಕೆನ್ನೆಗೆ ಚಿವುಟಿ ಓಡಿ ಹೋದಳು. ವಾಲಿಯು ತಲೆಯಲ್ಲಿ ಸಮ್ಮತಿಸುತ್ತಾ, ಕಾಗದವನ್ನು ನೋಡುತಿದ್ದಳು. ನೋಡುತಿದ್ದಂತೆಯೇ ಅರೆಬಿರಿದ ನಗೆಯ ಮೊಗ್ಗೆಯು ಒಂದೊಂದಾಗಿ ಅರಳ ತೊಡಗಿದವು.

ಪ್ರೀತಿಯ ತಂಗಿ 'ವಾಲಿ.'

ಅಮ್ಮನಲ್ಲಿ ರಜೆ ತೀರುವ ವರೆಗೆ ತಿಂದು ಸೊಕ್ಕಿದೆಲ್ಲಾ ಪರೀಕ್ಷೆಗೆ ಓದಿ ಓಡಿ ಹೋಯಿತು. ನಿನಗೆ ಸೊಕ್ಕಬೇಕಾಗಿದ್ದರೆ ಒಂದು ಉಪಾಯ ಹೇಳುವೆನು. ನಿಮ್ಮ ವಿದ್ಯಾರ್ಥಿನಿ ಭವನದಲ್ಲಿ ಯಾರು ಸೊಕ್ಕಿ ಹೆಚ್ಚು ದಪ್ಪ ಇದ್ದಾಳೋ ಅವಳು ಹೇಗೆ ಊಟ ಮಾಡುತ್ತಾಳೆಂದು ನೋಡಿಕೊ. ಅಂತೂ ಹಾಗೆಯೇ ಊಟ ಮಾಡು. ಅಂತೂ ಸಹ ಸೊಕ್ಕದಿದ್ದರೆ ಅವಳು ಕೂರುವ ಸ್ಥಳದಲ್ಲಿ ಕೂತು ಅವಳಿಗೆ ಇಕ್ಕಿದ ಅನ್ನವನ್ನು ಊಟ ಮಾಡಿಬಿಡು. ಅವಳ ಗಾಳಿ ಸಿಕ್ಕುವ ಹಾಗೆ ಅವಳೊಡನೆ ತಿರುಗು. ಇದು ಸುಳ್ಳಲ್ಲ. ನಿಮ್ಮ ಆರೋಗ್ಯದ ವಿಚಾರ ಪುಸ್ತಕದಲ್ಲಿ 'ಕಾಯಿಲೆ ಇರುವವರ ಸಂಗಡ ಇದ್ದರೆ, ಆ ಕಾಯಿಲೆ ನಮಗೂ ಅಂಟುವುದು; ಕಜ್ಜಿ ಇರುವವರ ಟವಲು ಉಪಯೋಗಿಸಿದರೆ ನಮಗೂ ಕಜ್ಜಿಯಾಗುವುದು;" ಎಂದು ಮೊದಲಾಗಿದೆ ಅಲ್ಲವೇನು? ಅದೇ ಪ್ರಕಾರ ದಪ್ಪ ಇರುವವರ ಒಡನೆ ಇದ್ದರೆ ದಪ್ಪ ಮಡಗುವರು. ದಪ್ಪ ಇರುವವರ ಅನ್ನ ಊಟಮಾಡಿದರೆ ದಪ್ಪ ಮಡಗಲೇಬೇಕು. ಇದು ಸುಳ್ಳೇನೂ ಅಲ್ಲ. ನಿನ್ನ ಟೀಚರನ್ನು ಬೇಕಾದರೆ ಕೇಳಿ ನೋಡು. ಅವಳು 'ಅಲ್ಲ' ಅಂದರೆ, ನೀನು ಕೇಳು "ಅದು ಹೇಗೆ ಮತ್ತೆ ಪೋಲಿ ಹುಡುಗಿಯರ ಒಟ್ಟಿಗೆ ಇದ್ದರೆ ಪೋಲಿಯಾಗುವುದು? ಕಜ್ಜಿ ಇರುವವರೊಡನೆ ಇದ್ದರೆ ನಮಗೆ ಕಜ್ಜಿಯಾಗುವುದು? ದಡ್ಡರೊಟ್ಟಿಗೆ ಇದ್ದರೆ ನಮಗೂ ದಡ್ಡತನ ಹತ್ತುವುದು? ಹುಷಾರಿದ್ದವರ ಒಡನೆ ಓದಿದರೆ ಹುಷಾರಾಗುವುದು?" ಎಂದು ಮೊದಲಾಗಿ ಗೊತ್ತಾಯಿತೇ? ಹುಂ! ಬಿಡಬೇಡ. ಉದಾಹರಣೆಗೆ ನೋಡು; ಆ ಸುಮ್ಮನೆ ತಿಂದು ಬಿದ್ದಿರುತಿದ್ದ ಡಿಕ್ಕಿ ನಾಯಿ; 'ಬೌ' 'ಬೌ' ಎಂದು ಇದ್ದ ಬದ್ದದಕ್ಕೆ ಕೂಗುತಿದ್ದ 'ರೋಸಿ' ನಾಯಿ ಬಂದ ಮೇಲೆ 'ಬೌ ಬೌ' ಎಂದು ಅದರೊಟ್ಟಿಗೆ ಹೇಳಲು ಕಲಿತದ್ದು.

ಹೆಚ್ಚಿನ ವಿಶೇಷ, ಅಂದರೆ ನಿನ್ನೆ ನನ್ನದೊಂದು ಸಾಬೂನನ್ನು ಒಂದು ಇಲಿಯು ಕಚ್ಚಿಕೊಂಡು ಹೋಗುತಿತ್ತು. ಅದನ್ನು ಕಂಡದೇ ಬಾಗಿಲು ಹಾಕಿ ಹೊರಗೆ ಹೋದೆ. ಆಗ ರಾತ್ರಿ ೧೦ ಗಂಟೆ. ಓದುತ್ತಾ ಇರುವ ಸಮಯ. ನನ್ನ ಅಕ್ಕ ಪಕ್ಕದ ರೂಮಿನವರನ್ನೆಲ್ಲಾ ಕರೆ ಬಿಡದು ಕರೆದೆ. 'ಹಿಟ್ಲರ್' ನನ್ನ ರೂಮಿನಲ್ಲಿದೆ. ಬೇಗ ಸ್ವಲ್ಪ ... ಬನ್ನಿ" ಎಂದು. [ಅಂದರೆ, ಆ ಇಲಿಗೆ 'ಹಿಟ್ಲರ್'ನೆಂದು ಹೆಸರು. ಜನವರಿ ೨ನೇ ತಾರೀಕಿನಲ್ಲಿ ನಾವೆಲ್ಲರೂ ಹಾಕಿದ್ದು. ಯಾಕೆ ಗೊತ್ತೋ? ಅದು ಬೇರೆ ಇಬ್ಬರ ಕೋಟಿಗೆ ಬಾಂಬು (ತೂತು ಮಾಡಿದೆ) ಹಾಕಿದೆ; ಮೂರು ಸಾಬೂನು ತಿಂದಿದೆ. ಒಬ್ಬನು ಮಲಗಿರುವಾಗ ಆತನ ಕೂದಲು ಕಡಿದಿದೆ; ಮತ್ತೊಬ್ಬನ ಮೇಲೆ ರಾತ್ರಿ ಮಲಗಿದಾಗ ಬಿದ್ದು, ಅವನನ್ನು ಹೆದರಿಸಿ ರೂಮಿಂದ ಓಡಿಸಿ, ಆ ರೂಮನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲು ಯತ್ನಿಸಿದೆ. ಅದಕ್ಕಾಗಿ,]

ಒಡನೆ 'ಹಿಟ್ಲರ್, ಹಿಟ್ಲರ್' ಎಂದು ಎಲ್ಲರೂ ಕೂಗುತ್ತಾ ಬಂದರು. ಎಲ್ಲರೂ ಸೇರಿ 'ಹಿಟ್ಲರ'ನನ್ನು ಹೊಡೆಯಲು ಓಡಿದೆವು. ಬಾಕಿ ಇರುವ ಆಚೆ ಬ್ಲಾಕಿನವರು, "ಎಂದಾ ಇದ್; ಒಂದಾ! ಎಂದಾ!" ಎಂದು ಬಂದರು. ಕೆಲವರು ದಂಡೆ ತೆಗೆದರು. ಕೆಲವರು ಶರ್ಟಿನ ಕೈ ತೆಕ್ಕಿ ನಿಂತರು. ಕೆಲವರು ತೊಡೆ ತಟ್ಟಿದರು. ನಾನು, 'ಏಳು ಕೂರು' ಮಾಡಿ ಮೈಯನ್ನು ಹತೋಟಿಗೆ ತಗೆದು 'ಹಿಟ್ಲರ'ನನ್ನು ಹೊಡೆಯಲು ಸಿದ್ಧನಾದೆ. ಹಾಗೂ ಹೀಗೂ ಮೆಲ್ಲಗೆ ಬಾಗಿಲು ತೆರೆಯಲಿಕ್ಕೆ ಹೇಳಿದರು. 'ನನಗೆ ಕೂಡದು,' ಎಂದೆ ನಾನು. ಎಲ್ಲರೂ 'ಕೂಡದು ಹಿಟ್ಲರ್ ತಿಂದಾನು,' ಎಂದರು. ಅಂತೂ 'ಗುಡಿದೇವರ'ನ್ನು ಯೋಚಿಸಿ ಬಾಗಿಲು ತೆರೆದೆ. ಹಿಟ್ಲರನನ್ನು ಹುಡುಕಿದೆವು. ಹಿಟ್ಲರನಿಲ್ಲ. ನನ್ನ ಹಿಂದೆ ಇದ್ದವ ನನಗೆ ಹೊಡೆದ. ಅಂದರೆ ಹಿಟ್ಲರನಿಲ್ಲದಕ್ಕೆ. ನಾನು ಓಡಿ ಬಂದು ನನ್ನ ಮುಂದೆ ಇದ್ದವನಿಗೆ ಹೊಡೆದೆ. ಅವನು ಅವನ ಮುಂಚಿನವನಿಗೆ, ಆತ ಇನ್ನೊಬ್ಬನಿಗೆ; ಹೀಗೆ ಗುದ್ದು ಮುಂದೆ ಹೋಯಿತು. ಕಡೇಯಲ್ಲಿದ್ದವನೂ ನೋಡದೆ ಮಾಡದೆ ಅವನ ಹಿಂದೆ ನಿಂತಿದ್ದ ಒಬ್ಬನಿಗೆ ಚೆನ್ನಾಗಿ ಕೊಟ್ಟ, ಅವನು 'ಗುಂಯಿರಾಮು," ಎಂದನಂತೆ. ನೋಡುವಾಗ ಅವನು ಹಾಸ್ಟೆಲಿನ 'ವಾರ್ಡನ್'. ನಮ್ಮ ಕೂಗು ಕೇಳಿ ಬಂದವನು. ಉಸಿರು ಬಿಡದೆ ಪೆಟ್ಟು ತಿಂದುಕೊಂಡು ಹೋದ. ಅಂದಿನಿಂದ ಅವನು 'ಎರಡನೆ ಹಿಟ್ಲರ್' ಪಾಪ! ಅವನ ಗ್ರಹಚಾರ. ಅವನಾದರೋ ಹೋಗಿ ಅವನ ಸಾಲವನ್ನು ಪೇಪರ್ ಓದುತಿದ್ದ ಅವನ ಹೆಂಡತಿಗೆ ಕೊಟ್ಟನಂತೆ. ಅವಳು ನಗುತ್ತಾ 'ಯಾಕೆ?' ಎಂದು ಕೇಳುವಾಗ ಆ ಹುಡುಗರ ಸಾಲ ನಾನು ನಿನಗೆ ತೀರಿಸಿದೆನೆಂದನಂತೆ. ಅವಳು ಹೋಗಿ ಅಡಿಗೆಯವಳು ಗಾಲು ಕೋಲೆಯುಲು ಸೀರು ಮಡಗಿದ್ದಳು. ಅವಳು ಹಾಲು ಕೀರಿಸಿದಳಂತೆ, ಅಡುಗೆಯವಳು ಮುಖಕ್ಕೆ ಮಸಿ, ಕೆಳಗೆ ಬಿದ್ದು, ಅದು ಅವಳ ಕಾಲ ತೀರಿಸಿತಂತೆ. ಅಂದರೆ ಆ ವಾರ್ಡನೂ ಅವನ ಹೆಂಡತಿಯೂ ಸಹ ತಮಾಷೆಯವರು. ನಮ್ಮ ಅಪ್ಪನ ಹಾಗೆ ಅಲ್ಲ. ನಮ್ಮ ಅಪ್ಪನಾಗಿದ್ದರೆ ಅಬ್ಬ! ಸರು ಹುಡುಗನಿಗೆ ಸ್ಕೂಲಲ್ಲಿ ಹೊಡೆದು. ಪುಕಾರ ಬಂತಲ್ಲಾ; ಹಾಗೆ. ಸಾಕು. ಇನ್ನು ಪಾಠ ಪುಸ್ತಕ ಓದುತ್ತೇನೆ.

ನಿನ್ನ ಅಣ್ಣ ಅಪ್ಪು.

ಓಲುತ್ತ ಪುನಃ ಪುನಃ ಓದಿದಳು. ಮತ್ತೂ ಮತ್ತೂ ನಕ್ಕಳು. ಆದರೆ ಒಡನೇ ಅವರ ವಿದ್ಯಾರ್ಥಿನಿ ಭವನದ ವಿಚಾರ ಹೊಳೆಯಿತು. "ಅದೆಷ್ಟು ಚೆನ್ನಾಗಿ ಮನೆಯಲ್ಲಿಗಿಂತ ಸಂತೋಷದಲ್ಲಿದ್ದಾರೆ ಅವರು. ನಮ್ಮ ವಾರ್ಡನ್‌ನ ಆ ಗುಡಾಣ ಹಲ್ಲದ ಗುಡುಗುಡಿ ಮಾತು ಕೇಳುವಾಗಲೇ ದಡಬಡಿಸುತ್ತದೆ—ಎದೆ, "ಎಂದು ಯೋಚಿಸಿದವಳೇ, ಗೆಳತಿ ರುಕ್ಮುವಿನ ಯೋಚನೆಯಾಗಿ, 'ರುಕ್ಕೂ; ಏ ರುಕ್ಕೂ" ಎಂದು ಕೂಗುತ್ತಾ ನೆಗೆದುಕೊಂಡು ಹೋದಳು.



ಕಾಲವು ಬದಲಾಗಿದೆ!

ಕ್ರಿ. ಶ. ಒಂದನೇ ಶತಮಾನದಲ್ಲಿ ಕಾಲನಿರ್ಣಯ

20ನೇ ಶತಮಾನ

ಪ್ರಾಚೀನ ರೋಮನ್ ಕಾಲದಲ್ಲಿ ಅದಕ್ಕೂ ಹಿಂದೆ ಮರಳು ಗ್ಲಾಸುಗಳು ಕಾಲನಿರ್ಣಯಕ್ಕಾಗಿ ಉಪಯೋಗಿಸಲ್ಪಡುತ್ತಿದ್ದವು. ನೀರಿನ ಗಡಿಯಾರಗಳಿಗಿಂತ ಅವು ಉತ್ತಮವಿದ್ದುವು. ಈ 20ನೇ ಶತಮಾನದಲ್ಲಿ ಬಾಳಿಕೆ ಮತ್ತು ಭದ್ರತೆಯುಳ್ಳ ವೈಜ್ಞಾನಿಕ ರೀತಿಯಲ್ಲಿ ತಯಾರಾದ ಕಾಲನಿರ್ಣಯ ಮಾಡುವ ಗಡಿಯಾರ ಅವಶ್ಯ. ಈ ಅವಶ್ಯ ಕತೆ ಹಲ ವಿಧದಲ್ಲಿ ತಯಾರಿಸಲ್ಪಡುವ ವೆಸ್ಟ್ ಎಂಡ್ ವಾಚ್ ಕೊಂಡರೆ ಪೂರೈಸುತ್ತದೆ. ಧನಾರ್ಥ ಕೆಟಲಾಗಿಗೆ ಬರೆಯಿರಿ.

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ — ಕಲ್ಕತ್ತ



ಬಿಜೊವ್ ಸೆವಿಥಿನ್ 11'' ಸ್ಯೆಜ್
ಪೇಟೆಂಟ್ ಎವರ್ ಬ್ರೈಟ್ ಸ್ಟೀಲ್—ರೂ. 150
18 ಕ್ಯಾರಟ್—ಸೋಲಿಡ್ ಗೋಲ್ಡ್—ರೂ. 365

ಬಿಜೊವ್ ಸಿಲೆಕ್ಟ್ ಪೇಟೆಂಟ್ ಎವರ್ ಬ್ರೈಟ್
ಸ್ಟಿ. ರೂ. 175. 18 ಕ್ಯಾ. ಸೋ. ಗೋ. ರೂ. 475.

ಸರಿಯಾಗಿ ಆಮದಾಗದಿದ್ದರೂ ನಮ್ಮಲ್ಲಿರುವ ಸ್ಟೋಕಿನಲ್ಲಿ ನಿಮ್ಮ ಆರ್ಡರಿಗೆ ಆದಷ್ಟು ವಿಶೇಷ ಗಮನವಿಡಲಾಗುವುದು.

WEST END WATCH Co.
Bombay - Calcutta

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,281- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಸಮರಭೂಮಿಯ ಸಂಚಾರ

ಹಿಟ್ಲರನು ತಾನು ಅಧಿಕಾರವೇರಿದ ಗಂಡನೇ ವಾರ್ಷಿಕೋತ್ಸವದ ಸಂದರ್ಭವಾಗಿ, ಕಳೆದ ತಾ. ೩೦ರಂದು ಬರ್ಲಿನನಲ್ಲಿ ಒಂದು ಭಾಷಣ ಮಾಡಿದನು 'ಯುದ್ಧದ ಫಲಿತಾಂಶ ಏನೇ ಆಗ ಲಿ; ನಾನದನ್ನು ಲೆಕ್ಕಿಸುವುದಿಲ್ಲ. ಇಂಗ್ಲೆಂಡು ಯುರೋಪಿನಲ್ಲಿ ತನ್ನ ಸ್ಥಾನ ಕಳಕೊಂಡಿದೆ. ಇಂದು ರಶ್ಯದಂಥಾ ಶಕ್ತಿಯನ್ನೆದುರಿಸಲು, ಯುರೋಪಿನಲ್ಲಿ ಜರ್ಮನಿಗಲ್ಲದೆ ಮಿಕ್ಕಾವ ರಿಗೂ ಸಾಧ್ಯವಿಲ್ಲ. ಇಂದಿನ ಹೋರಾಟದಲ್ಲಿ ಎರಡೇ ಮಾರ್ಗಗಳು, ಒಂದೋ ರಶ್ಯ ಸಾಯ ಬೇಕು; ಇಲ್ಲವೆ ಜರ್ಮನಿ ಆಳಬೇಕು!' ಹೀಗೆಂದು ಹಿಟ್ಲರನು ಗರ್ಜಿಸುತ್ತಾ, ಜರ್ಮನಿಯ ಪತನವಾದರೆ ಯುರೋಪಿನ ಸರ್ವನಾಶವಾ ಗುವುದೆಂದೂ, ರಶ್ಯವು ಗೆದ್ದರೆ ಅನಂತರ ಇಂಗ್ಲೆಂಡಿಗೆ ಅದರೊಡನೆ ಹೋರಾಡದೆ ನಿರ್ವಾಹ ವಿಲ್ಲವೆಂದೂ, ಅಮೆರಿಕಾ, ಇಂಗ್ಲೆಂಡುಗಳು ರಶ್ಯದ ಮೇಲೆ ಯುದ್ಧ ಸಾರಿದ್ದಾದರೆ ಆತ್ಮರಕ್ಷಣೆಯೇ ಕಷ್ಟವಾಗುತ್ತಿರುವಾಗ ಅವುಗಳಿಗೆ ಜಯ ದೊರೆಕುವುದು ಸಾಧ್ಯವಿಲ್ಲವೆಂದೂ ಹೇಳಿ 'ಜರ್ಮನರು ಕೊನೆಯ ಉಸಿರೆಳೆವ ವರೆಗೂ ಹೋರಾಡುವರು, ಯುರೋಪನ್ನುಳಿಸಲು ನಾವು ರಕ್ತದ ಪ್ರವಾಹ ಹರಿಸುತ್ತೇವೆ ಕಷ್ಟದ ಬಳಿಕವೇ ಸುಖ ದೊರೆಕುವುದು ಇಂದಿನ ಯುದ್ಧದಲ್ಲಿ ರಶ್ಯನರು ಪೈಶಾಚಿಕ ಕೃತ್ಯ ನಡೆಸಿದರೂ ವಿಜಯವು ಜರ್ಮನರಿಗಲ್ಲದೆ ಇತರರಿಗಿಲ್ಲ. ಇಂದಿನ ಯುದ್ಧಕ್ಕೆ ಯೆಹೂದ್ಯರೇ ಕಾರಣರೆಂದು ಯಾರೂ ಮರೆವಂತಿಲ್ಲ' ಎಂದನು

ರಶ್ಯನರು ರಭಸದಿಂದ ಧಾಳಿಯಿಡುತ್ತಿದ್ದಾರೆ ರಶ್ಯನರು ಪಶ್ಚಿಮಕ್ಕೆ ನುಗ್ಗುತ್ತಿದ್ದಂತೆ ಇಸ್ಟೋನಿಯನ್ ಗಡಿಯಲ್ಲಿರುವ ಕೊನೆಯ ನಗರವಾದ ಕಿಂಗಿಸೆಪ್ಪಕ್ಕೆ ಗಂಡಾಂತರದ ಭೀತಿ ಹೆಚ್ಚಾಗುತ್ತಿದೆ. ವೊಲೋಸ್ಟೊವೋ ಪ್ರದೇಶದಲ್ಲಿ ರಶ್ಯನರು ದೊಡ್ಡ ರೀತಿಯ ಧಾಳಿಯಿಟ್ಟು ಯಶಸ್ವಿಗಳಾಗುತ್ತಿರುವರು ಈ ಧಾಳಿಯಲ್ಲಿ ರಶ್ಯನರು ೬೦ ಜನನಿಬಿಡ ಪ್ರದೇಶಗಳನ್ನೂ, ಮೂರು ರೈಲ್ವೆ ಸ್ಟೇಶನುಗಳನ್ನೂ ವಶಪಡಿಸಿಕೊಂಡರೆಂದು ಹೇಳಲಾಗಿದೆ ಈಗ ಮತ್ತಷ್ಟು ಮುಂದೊತ್ತಿ ಕಿಂಗಿಸೆಪ್ಪ್ ನಗರದ ಹೊರ ವಲಯವನ್ನು ತಲುಪಿದ್ದಲ್ಲದೆ ಉಪನಗರದ ಭಾಗದಲ್ಲಿ ಶತ್ರುವನ್ನೆದುರಿಸಿರುವರು ಸ್ಟಲರಿಸ್ಕಿಯ ದಕ್ಷಿಣ ಮತ್ತು ನೈಋತ್ಯದಲ್ಲಿ ರಶ್ಯನ್ ಸೇನೆಗಳು ಮುಂದೊತ್ತಿ ಅನೇಕ ಜನನಿಬಿಡ ಸ್ಥಳಗಳನ್ನು ಆಕ್ರಮಿಸಿವೆ

ರೋಶ್ಯುಸ್ಟ್ರವೆಸ್ಕೋ ಮತ್ತು ಅಸ್ವಾವ್ ಭಾಗದಲ್ಲಿ ಸುತ್ತುಗಟ್ಟಲ್ಪಟ್ಟ ಶತ್ರುಸೇನೆಗಳು ನಾಶಗೊಳಿಸಲ್ಪಟ್ಟಿವೆಯೆಂದು ಹೇಳಲಾಗಿದೆ ಲ್ಯೂಗಾ ನದಿಯನ್ನೂ ದಾಡು ರಶ್ಯನ್ ಸೈನ್ಯ ಮುಂದೊತ್ತಿದೆ ಲಿಯೋಬಾನದ ದಕ್ಷಿಣ ಮತ್ತು ನೈಋತ್ಯದಲ್ಲಿ ರಶ್ಯನ್ ಸೇನೆ ತೀವ್ರ ಧಾಳಿಮಾಡಿದೆ. ಜರ್ಮನರ ಸೇನೆ ನಾರ್ವಾದ ಕಡೆ ಉತ್ತರ ವ್ಯೂಹದಲ್ಲಿ ಹಿನ್ನಡೆವ ಹಾಗೂ ರಶ್ಯನ್ ಸೈನಿಕರು ಅವರನ್ನು ಮುತ್ತಿ ಹಣ್ಣುಮಾಡುವ ಸುದ್ದಿ ಕೇಳಬರುತ್ತದೆ ಹೀಗೆ ರಶ್ಯನರು ರಭಸದ ಮುನ್ನಡೆಯಿಡುತ್ತಿರುವುದರಿಂದ ಜನರಲ್ ಕ್ಯೂಚಿಲರ ಸೈನ್ಯ ಚಲ್ಲಾಪಿಲ್ಲಿಯಾಗಿದೆಯೆಂದು ತಿಳಿದುಬಂದಿರುವುದು ಕರಾವಳಿ ಭಾಗದಿಂದ ಹಿಡಿದು, ಲೆನಿನ್‌ಗ್ರಾಡ್, ಕಿಂಗಿಸೆಪ್ಪ ಮತ್ತು ನಾರ್ವಾಗಾರ್ವೆಲ್ಲಾದ ವರೆಗೂ ಜರ್ಮನರ ಶಕ್ತಿ ಕ್ಷೀಣಿಸುತ್ತಿರುವ ಚಿಹ್ನೆಗಳು ಕಂಡುಬರುತ್ತದೆ ಆದರೆ ಬಿಲಾಯ ಸೆರ್ಕೋವದ ಆಗ್ನೇಯದಲ್ಲಿ ಹಾಗೂ ಚೆರ್ಕಾಸಿಯ ನೈಋತ್ಯದಲ್ಲಿ ಮತ್ತು ನಿಪ್ರೊ ಪೆಟ್ರೋವಸ್ಕದ ನೈಋತ್ಯದಲ್ಲಿ ಭೀಕರ ಸಂಗ್ರಾಮ ನಡೆಯುತ್ತಿರುವ ಸುದ್ದಿಯಿದೆ.

ಜರ್ಮನರು ಮೆಲ್ಲಮೆಲ್ಲನೆ ಇಟಲಿಯ ರಾಜಧಾನಿಯಾದ ರೋಮನ್ನು ಖಾಲಿ ಮಾಡುತ್ತಿರುವರೆಂದು ರೋಮ ನಗರದ ಇಟಲಿಯನ್ ನಿರಾಶ್ರಿತರು ಹೇಳುತ್ತಾರೆ ಎರಡು ದಿನಗಳ ಹಿಂದೆ ಕೆಸ್ಸಲರಿಂಗನು ಗುಸ್ತಾವ್ ವ್ಯೂಹವನ್ನು ಸಂದರ್ಶಿಸಿ ಹಿಟ್ಲರನ ಭಾಷಣವನ್ನು ಸೈನಿಕರಿಗೆ ತಿಳಿಸಿ ಸೈನಿಕರ ಕರ್ತವ್ಯದ ಕುರಿತು ಎಚ್ಚರಿಸಿರುವನೆಂದೂ, ಉತ್ತರ ಭಾಗದಲ್ಲಿ ರೋಮ್ ನಗರದ ದಕ್ಷಿಣದಲ್ಲಿ ಮಿತ್ರರ ಮುನ್ನಡೆಯನ್ನು ತಡೆವಷ್ಟು ಶಕ್ತಿ ಸಂಗ್ರಹವಾಗುವ ವರೆಗೆ ಗುಸ್ತಾವ್ ವ್ಯೂಹವನ್ನು ಕಾಯ್ದಿಟ್ಟುಕೊಳ್ಳಬೇಕೆಂದು ಕೆಸ್ಸೆಲರಿಂಗನು ಹಿಟ್ಲರನ ವಿನಂತಿಯನ್ನು ಹೇಳಿರುವನೆಂದೂ ತಿಳಿದುಬಂದಿದೆ. ಉತ್ತರ ಇಟಲಿಯಲ್ಲಿರುವ ಜರ್ಮನ್ ಹಾಗೂ ಅವರ ವಶವಿರುವ ವಿಮಾನ ಕ್ಷೇತ್ರಗಳ ಮೇಲೆ ಅಮೆರಿಕನರು ಬಾಂಬಿಟ್ಟಿರುವರು. ಈ ಹೋರಾಟದಲ್ಲಿ ಉಭಯಪಕ್ಷಗಳಿಗೂ ತುಂಬಾ ಹಾನಿಯುಂಟಾಗಿದೆ.

ಮೇಡ್ರಿಡಿನಲ್ಲಿ ಬ್ರಿಟಿಷ್ ರಾಯಭಾರಿಯಾದ ಸರ್ ಸಾಮುವೇಲ್ ಹೋರರು ಕಳೆದ ವಾರದ ಕೊನೆಯಲ್ಲಿ ಜನರಲ್ ಫ್ರೇಂಕೋವನ್ನು ಭೇಟಿಯಾದರೆಂದು ನಿಶ್ಚಿತವಾಗಿ ತಿಳಿದು ಬಂದಿದೆಯೆಂಬುದಾಗಿ ರ್‍ಯೂಟರ್ ಸುದ್ದಿಗಾರನು ಹೇಳುತ್ತಾನೆ. ಆಗ ಬ್ರಿಟನು ಮತ್ತು ಸ್ಪೈನಿನ ನಡುವೆ ಇರುವ ಮಹತ್ವದ ಪ್ರಶ್ನೆಗಳನ್ನು ಕುರಿತು ಚರ್ಚಿಸಲಾಗಿದೆಯೆಂದೂ ತಿಳಿಯುತ್ತದೆ. ಮುಖ್ಯವಾಗಿ ಸ್ಪೈನಿನ ಬ್ಲ್ಯೂ ಸೇನೆಯ ಚಟುವಟಿಕೆ, ಇಟಲಿಯ ಹಡಗಗಳನ್ನು ಸ್ವಾಧೀನ ಇಟ್ಟುಕೊಂಡದೇ ಹಾಗು ಟೇಂಜಿಯರ್ಸ್ ಮತ್ತು ಸ್ಪೈನಿಶ್ ಮೊರೊಕೋದಲ್ಲಿ ಜರ್ಮನ್ ಏಜೆಂಟರು ನಡೆಸುವ ಚಟುವಟಿಕೆ ಮುಂತಾದವುಗಳನ್ನು ಕುರಿತು ಮಾತುಕತೆ ನಡೆಯಿತೆಂದು ಹೇಳಲಾಗುತ್ತದೆ. ಈ ಭೇಟಿಯ ಪರಿಣಾಮವೇನೆಂದು ಇನ್ನೂ ತಿಳಿದು ಬಂದಿಲ್ಲ. ಸರ್ ಸಾಮುವೇಲ್ ಹೋರರು ಒಂದು ವಾರದ ಹಿಂದೆ ಮಾಡಿಕೊಂಡ ವಿನಂತಿಯಂತೆ ಈ ಭೇಟಿಯ ವ್ಯವಸ್ಥೆ ಮಾಡಲಾಗಿದೆಯೆಂದೂ ಗೊತ್ತಾಗಿದೆ

ಜನವರಿ ತಿಂಗಳಲ್ಲಿ ನಡೆದ. ಫೇಸಿಫಿಕ್ ಯುದ್ಧದಲ್ಲಿ ಜಪಾನರಿಗೆ ವಿಶೇಷ ಹಾನಿಯಾಗಿರುವುದಾಗಿ ವರದಿ ಬಂದಿದೆ ಈ ವರೆಗೆ ಜಪಾನರಿಗೆ ಇಷ್ಟು ವಿಮಾನ ಹಾನಿಯಾಗಲಿಲ್ಲವೆಂದು ಹೇಳಲಾಗಿದೆ ಒಟ್ಟು ೬೪೦ ವಿಮಾನಗಳು ನಾಶವಾಗಿವೆಯಂತೆ ಹೆಚ್ಚು ವಿಮಾನಗಳು ಮುಖ್ಯವಾಗಿ ರಬಾಲ ಧಾಳಿಯಲ್ಲಿಯೇ ನಾಶವಾಗಿವೆಯೆಂದೂ ತಿಳಿಯುತ್ತದೆ ರಬಾಲವನ್ನು ಉಳಿಸಬೇಕೆಂದು ಜಪಾನರು ಪ್ರತಿದಿನ ತಮ್ಮ ವಿಮಾನಗಳ ಉಪಯೋಗ ಮಾಡಿಕೊಂಡು ಸೋಲಮನಿನಿಂದ ಧಾಳಿಯಿಡುವ ಮಿತ್ರರನ್ನು ಎದುರಿಸಿದರು. ಅಮೆರಿಕದ ಜಲಾಂತರ್ಗಾಮಿಯೊಂದು ಜಪಾನರ ೫ ಹಡಗಗಳನ್ನು ಮುಳುಗಿಸಿದೆಯೆಂದು ಈಗ ಸುದ್ದಿಯೊಂದು ಬಂದಿರುವುದು.

ಫ್ರೆಂಚ್ ಮೊರೊಕ್ಕೋದಲ್ಲಿರುವ ಫುರಕೇತ ನಗರದಲ್ಲಿ ಫ್ರೆಂಚ್ ಮತ್ತು ಅರಬರೊಳಗೆ ಬಡಿದಾಟ ನಡೆಯಿತೆಂದೂ, ಹಲವು ದಿವಸಗಳಾದ ಮೇಲೆ ಈಗ ಪ್ರಕ್ಷೋಭೆಯಡಗಿದೆಯೆಂದೂ ಲಂಡನ್ ನ್ಯೂಸ್ ಕ್ರಾನಿಕಲಿನ ವಿಶೇಷ ಸುದ್ದಿಗಾರನು ತಿಳಿಸುತ್ತಾನೆ ಇತ್ತೀಚೆಗೆ ಫ್ರೆಂಚ್ ಮತ್ತು ಅರಬರೊಳಗೆ ಮನಸ್ತಾಪವುಂಟಾಯಿತು ೩೩ ವರ್ಷಗಳ ಹಿಂದೆ ಮಾಡಿಕೊಂಡಿದ್ದ ಒಪ್ಪಂದ ಕುರಿತು ಉಂಟಾದ ರಾಜಕೀಯ ಭಿನ್ನಾಭಿಪ್ರಾಯವೇ ಈ ಕ್ಷೋಭೆಯ ಕಾರಣವಾಗಿದೆ ಅರಬರಿಗೆ ಅಧಿಕ ಸಂಖ್ಯೆಯ ಮತದಾನ ಹಕ್ಕು ಕೊಡಲಾಗುವುದೆಂದು ಡಿಗಾಲೆಯವರು ಭರವಸೆ ಕೊಟ್ಟಿದ್ದರಂತೆ ಅದನ್ನು ಆಚರಣೆಯಲ್ಲಿ ತರಲಿಲ್ಲವೆಂದು ಅರಬರು ಹೇಳುತ್ತಾರೆ. ನಗರದ ಮದಿನಾ ಭಾಗದಲ್ಲಿ ಮೊದಲು ದಂಗೆಯೆದ್ದಿತು ಅನೇಕ ಅರಬರು ಮತ್ತೆ ಫ್ರೆಂಚರು ಪೆಟ್ಟುತಿಂದರು' ಹೀಗೆಂದು ಅದರಲ್ಲಿ ವರದಿಯಿದೆ

ಟರ್ಕಿಯಲ್ಲಿ ಪುನಃ ಈಗ ಭೂಕಂಪವುಂಟಾಗಿದೆ. ಇಡೀ ದೇಶವೇ ಕೆಲ ನಿಮಿಷಗಳ ವರೆಗೆ ಉಯ್ಯಾಲೆಯಂತೆ ತೂಗಿತು ೨೫ ಸಾವಿರ ಜನರಿರುವ ಗೆರೆದೆ ನಗರವು ಸಂಪೂರ್ಣ ನೆಲಸಮವಾಗಿದೆ.

ಇಸ್ಟೋನಿಯನ್ ಗಡಿಯಲ್ಲಿರುವ ಕೊನೆಯ ನಗರವಾದ ಕಿಂಗಿಸೆಪ್ಪವನ್ನು ರಶ್ಯನರು ವಶಮಾಡಿಕೊಂಡರೆಂದು ಈಗ ಸುದ್ದಿಬಂದಿದೆ. ನಾರ್ವಾಭಾಗದಲ್ಲಿ ಕಿಂಗಿಸೆಪ್ಪವು ಜರ್ಮನ್ ಪ್ರತಿಭಟನೆಯ ಪ್ರಮುಖ ಕೇಂದ್ರವಾಗಿದೆ ನೊವೊಗೊರೋಡದ ಪಶ್ಚಿಮದಲ್ಲಿ ರಶ್ಯನ್ ಸೇನೆಗಳು ಮುಂದೊತ್ತಿ ಗೊರೋಶಿನೋವ್ ಸಹಿತ ಹಲವು ಸ್ಥಳಗಳನ್ನು ಸ್ವಾಧೀನಮಾಡಿಕೊಂಡವೆಂದೂ ಈಗ ತಿಳಿದುಬರುತ್ತದೆ.

ಸ್ಪೈನ್ ಅಕ್ಷರಾಷ್ಟ್ರಗಳೊಡನೆ ತನ್ನ ಸಂಬಂಧ ಕಡಿದುಕೊಳ್ಳುವುದೆಂದು ದಕ್ಷಿಣ ಅಮೆರಿಕದ ರಾಜಕಾರಣಿಗಳಲ್ಲಿ ಊಹಾಪೋಹೆಯೆದ್ದಿದೆ. ಕ್ಯಾಸಿನೋ ನಗರದಲ್ಲಿ ಜರ್ಮನರು ಕಠಿಣ ಪರಿಸ್ಥಿತಿಯೆದುರಿಸುತ್ತಿರುವರೆಂದು ಹೇಳಲಾಗಿದೆ. ಐದನೇ ದಳಕ್ಕೆ ಸೇರಿದ ಅಮೆರಿಕನ್ ಮತ್ತು ಫ್ರೆಂಚ್ ಸೈನಿಕರು ದಕ್ಷಿಣ ಇಟಲಿಯಲ್ಲಿ ಜರ್ಮನರು ಕಟ್ಟಿರುವ ಗುಸ್ತವ್ ವ್ಯೂಹವನ್ನು ಕ್ಯಾಸಿನೋ ನಗರದ ಉತ್ತರದಲ್ಲಿ ಮುರಿದೆಸೆದಿರುವರೆಂದು ತಿಳಿದುಬಂದಿದೆ. ಆದರೆ ಇದರ ಒಳನಾಡಿನ 'ಹಿಟ್ಲರಕೋಟೆ' ಎಂಬ ಹೊಸ ವ್ಯೂಹವಿದೆಯೆಂದು ಸುದ್ದಿಯಿದೆ.

ಪೋಲೆಂಡ್ ರಶ್ಯ ಗಡಿ ವಿಷಯ ವಿವಾದವುಂಟಾಗಿ ಕೆಲಕಾಲವಾಯಿತಷ್ಟೆ? ಪೋಲೆಂಡು ಈ ಗಡಿ ನಿರ್ಣಯದ ಕುರಿತು ಅಮೆರಿಕ ಬ್ರಿಟನುಗಳು ಮಧ್ಯಸ್ಥಿಕೆ ವಹಿಸಬಹುದೆಂದು ಒಪ್ಪಿತು ಆದರೆ ರಶ್ಯ ಇದನ್ನು ನಿರಾಕರಿಸಿದೆ. ಕರ್ಜನ್ ಲೈನನ್ನು ಅದು ಒಪ್ಪಿಕೊಳ್ಳಲಿಲ್ಲವೆಂಬ ಕಾರಣದಿಂದ ಪೋಲೆಂಡಿನ ಎಲ್ಲಾ ಸೂಚನೆಗಳನ್ನು ರಶ್ಯವಿಂದು ನಿರಾಕರಿಸಿದೆ ಈಗಿನ ಪೋಲಿಶ್ ಸರಕಾರವು ರಶ್ಯದ ವಿರೋಧಿಯಿರುವುದರಿಂದ ಅದರಲ್ಲಿ ಬದಲಾವಣೆಯಾಗಬೇಕು, ಮತ್ತು ಮೊದಲಿನ ರಾಜಕೀಯ ಸಂಬಂಧವು ಪುನಃ ಸ್ಥಾಪನೆಯಾಗಬೇಕು, ಎಂದರೆ ಮಾತ್ರ ಸಂಧಾನವೆಂದು ರಶ್ಯ ಸರ್ವಾಧಿಕಾರೀ ರೀತಿಯಲ್ಲಿ ಮಾತನಾಡುತ್ತಿರುವುದು ಮಿತ್ರರಾದರೂ ರಶ್ಯದ ಈ ಧೋರಣೆಗೆ ಏನೂ ಹೇಳದಷ್ಟು ಅಸಮರ್ಥರಿರುವರು ಸ್ಟಾಲಿನರ ಈ ನೀತಿಯಿಂದ, ಭಾರತಕ್ಕೆ ಮಾತ್ರವಲ್ಲ, ಯುರೋಪಿನ ಚಿಕ್ಕ ರಾಷ್ಟ್ರಗಳ ಮಟ್ಟಿಗೂ ಅಟ್ಲಾಂಟಿಕ್ ಘೋಷಣೆ ಸಮಾಧಿ ಹೊಂದಿತು?

ಸೋವಿಯಟ್ ಯೂನಿಯನಿನ ರಿಪಬ್ಲಿಕ್ (ಸ್ವತಂತ್ರ) ಪ್ರಾಂತಗಳು ಪರದೇಶಗಳೊಡನೆ ಸ್ವತಂತ್ರವಾದ ರಾಜಕೀಯ ಸಂಬಂಧವನ್ನಿಟ್ಟುಕೊಳ್ಳಲು ಶಕ್ತರಾಗಬೇಕೆಂದು ಸೋವಿಯೆಟ್ ಮುಂದಾಳು ಎಂ ಮೊಲೊಟೋವರವರು ಸೋವಿಯೆಟ್ ಸರಕಾರದ ಮುಂದೆ ಒಂದು ಮಹತ್ವದ ನಿರ್ಣಯ ಮಂಡಿಸಿರುವರು. ಅಲ್ಲದೆ ಪ್ರತಿಯೊಂದು ಸೋವಿಯೆಟ್ ರಿಪಬ್ಲಿಕೂ ಸ್ವತಂತ್ರ ಸೈನ್ಯವನ್ನಿಟ್ಟುಕೊಳ್ಳುವುದು ಉಚಿತವೆಂದೂ ಸೂಚನೆ ಮಾಡಿರುವರು ಈಗ ಸೋವಿಯೆಟ್ ಕೌನ್ಸಿಲಿನ ಮುಂದೆ ಮಹತ್ವದೊಂದು ಪ್ರಶ್ನೆ ತಲೆದೋರಿದೆ, ಸೋವಿಯೆಟ್ ಪ್ರಜಾಪ್ರಭುತ್ವ ಸರಕಾರದ ಸಂರಕ್ಷಕ ಖಾತೆ ಹಾಗೂ ವಿದೇಶೀ ಖಾತೆಯನ್ನು ಅಖಿಲ ಸೋವಿಯೆಟ್ ಯೂನಿಯನಿನಿಂದ ಯೂನಿಯನ್ ರಿಪಬ್ಲಿಕನ್ ಪ್ರಜಾಪ್ರತಿನಿಧಿ ಮಂಡಳಿವಾಗಿ ಮಾರ್ಪಡಿಸಿ ಮಹತ್ವದ ಬದಲಾವಣೆ ಮಾಡುವಂಥಾ ಪ್ರಶ್ನೆಯುಂಟಾಗಿದೆಯೆಂದೂ ಅವರು ತಿಳಿಸಿದರು.

ಸೋವಿಯೆಟ್ ಯೂನಿಯನ್ ರಿಪಬ್ಲಿಕನ್ ರಾಷ್ಟ್ರಗಳು ಸ್ವತಂತ್ರ ಸೈನ್ಯವನ್ನಿಟ್ಟುಕೊಳ್ಳಬಹುದೆಂದೂ ಪರದೇಶಗಳೊಡನೆ ಸ್ವತಂತ್ರ ರಾಜಕೀಯ ಸಂಬಂಧವಿಟ್ಟುಕೊಳ್ಳಬಹುದೆಂದೂ ಮೊಲೊಟೋವರು ತಂದ ನಿರ್ಣಯಗಳೆರಡೂ ಸೋವಿಯೆಟ್ ಪಾರ್ಲಿಮೆಂಟಿನಲ್ಲಿ ಸರ್ವಾನುಮತದಿಂದ ಸ್ವೀಕೃತವಾಗಿವೆ

ಮಂಗಳೂರು

ನೇಮಕ

ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿನ ವ್ಯಾಪಾರದ ಜಗಳಗಳನ್ನು ತೀರ್ಮಾನಿಸಲು ಸಹಾಯಮಾಡುವ ಅಥವಾ ಮಧ್ಯಸ್ಥಿಕೆ ನಡೆಸುವ ಕಾರ್ಯಭಾಗದ ಕನ್ಸಿಲಿಯೇಶನ್ ಆಫೀಸರರಾಗಿ ಶ್ರೀ. ಪಿ ಎಸ್ ಮೋಸಸ್ ಅವರು ನೇಮಿಸಲ್ಪಟ್ಟಿದ್ದಾರೆ

ವರ್ಗ

ಉಡ್ಪಿ ತಹಶಿಲ್ದಾರರಾದ ಶ್ರೀ ಕೆ ಕೇಶವ ಕುದ್ರರು ಮಂಗಳೂರಿಗೆ ರಿಸೆಪ್ಶನ್ ತಹಶಿಲ್ದಾರರಾಗಿಯೂ ಇಲ್ಲಿನ ರಿಸೆಪ್ಶನ್ ತಹಶಿಲ್ದಾರ್ ಶ್ರೀ. ಜೋಶ್ವರು ಉಡುಪಿ ತಹಶಿಲ್ದಾರರಾಗಿಯೂ ನೇಮಿಸಲ್ಪಟ್ಟಿದ್ದಾರೆ

ಮದ್ಯದ ಅಂಗಡಿಗಳ ಹರಾಜು

ಈಚೆಗೆ ನಡೆದ ಈ ನಗರದ ಮದ್ಯದ ಅಂಗಡಿಗಳಲ್ಲಿ ಹಲವು ಕಳೆದ ವರ್ಷಕ್ಕಿಂತ ಬಹಳ ಹೆಚ್ಚಿನ ಮೊತ್ತಕ್ಕೆ ಹರಾಜಾಗಿವೆ ಕೆಲವು ಅಂಗಡಿಗಳು ಕಳೆದ ಸಲಕ್ಕಿಂತ ಸುಮಾರು ೪–೫ ಪಾಲಷ್ಟು ಹೆಚ್ಚಿಗೆ ಮೊತ್ತಕ್ಕೇ ವಹಿಸಿಕೊಳ್ಳಲಾಯಿತೆಂದೂ ಉದಾಹರಣೆಗಾಗಿ ಹಂಪನಕಟ್ಟೆಯ ಗಡಂಗು ಕಳೆದ ಸಲ ಸುಮಾರು ರೂ. ೧೩೦೦ಕ್ಕೆ ಏಲಂ ಆದದ್ದು ಈ ಸಲ ಸುಮಾರು ರೂ. ೫೫೦೦ಗಳಷ್ಟಕ್ಕೆ ಮಾರಾಟವಾಗಿದೆ ಎಂದೂ ಹೀಗಾದದ್ದು ಇದೊಂದೇ ಗಡಂಗ್ ಅಲ್ಲ—ಇನ್ನೂ ಹಲವು ಅಂಗಡಿಗಳಿವೆ ಎಂದೂ, ಇಷ್ಟು ವಿಪರೀತ ಮೊತ್ತಕ್ಕೆ ಏಲಂ ಆಗಲು ಕಾರಣ ತಿಳಿಯದೆಂದೂ ಹೇಳಲಾಗಿದೆ

ಸ್ವದೇಶಾಭಿಮಾನಿ

ಶುಕ್ರವಾರ 4-2-1944

ಹೊಸ ಆರ್ಥಿಕ ಯೋಜನೆ

ಭಾರತದ ಕೆಲವು ಮಂದಿ ಉದ್ಯೋಗಿಕ ಮುಖಂಡರಾದ ಆರ್ಥಿಕ ವಿಶಾರದರು ತಾತಾ ಮೊದಲಾದವರು ಭಾರತಕ್ಕೆ ಅನ್ವಯಿಸಿ ಹೊಸತೊಂದು ಆರ್ಥಿಕ ಯೋಜನೆ ತಯಾರಿಸಿದ್ದಾರೆ. ಹತ್ತು ಸಾವಿರ ಕೋಟಿ ರೂಪಾಯಿಗಳು ಈ ಯೋಜನೆಯ ವೆಚ್ಚಕ್ಕೆ ಬೇಕಾಗಿವೆ. ಹದಿನೈದು ವರ್ಷಗಳಲ್ಲಿ ಈ ಯೋಜನೆ ಸಂಪೂರ್ಣ ಮಾಡುವ ಹಂಚಿಕೆ ಹೂಡಲಾಗಿದೆ.

ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಯ ಉದ್ಯೋಗ ಮಾಡುವುದು, ನಿತ್ಯಜೀವನದ ಸಾಮಗ್ರಿಗಳನ್ನು ತಯಾರಿಸುವುದು, ಬೇಸಾಯವನ್ನು ಅಭಿವೃದ್ಧಿಗೈಯ್ಯುವುದು, ವಿದ್ಯಾ ಪ್ರಚಾರ ಮಾಡುವುದು, ಆರೋಗ್ಯಾಭಿವೃದ್ಧಿಯಾಗುವಂತೆ ಸಾಧಿಸುವುದು, ಸಂಚಾರಾನುಕೂಲತೆ, ಮಾರ್ಗ ಸೌಕರ್ಯಾದಿಗಳನ್ನು ಮಾಡುವುದು ಇವೇ ಮೊದಲಾದವು ಈ ಹೊಸ ಯೋಜನೆಯ ಮುಖ್ಯಾಂಗಗಳಾಗಿವೆ. ಒಟ್ಟಿನಲ್ಲಿ ಭಾರತದ ಜನತೆಯ ದೇಹ, ಬುದ್ಧಿಗಳ ಅಭಿವೃದ್ಧಿಯಾಗುವಂತೆ ಸಾಧಿಸುವುದೇ ಈ ಯೋಜನೆಯ ತತ್ವವಾಗಿರುವುದು.

ನೆಹರುಗಳ ಅಧ್ಯಕ್ಷತೆಯಿಂದ 'ನೇಶನಲ್ ಪ್ಲೇನಿಂಗ್ ಕಮಿಟಿ' ಎಂಬ ಒಂದು ಮಹಾ ಸಂಸ್ಥೆ ನಿರ್ಮಾಣವಾಗಿ ಕೆಲವು ಯೋಜನೆ ಸಿದ್ಧಪಡಿಸಿದೆ. ಅದಕ್ಕೊಂದು ರೂಪ ಕೊಡುವ ಮುನ್ನವೇ ರಾಷ್ಟ್ರ ಮುಖಂಡರು ಸೆರೆಮನೆ ಸೇರಿಸಲ್ಪಟ್ಟು ಅದರ ಕಾರ್ಯ ಮುಂದೊತ್ತದಂತೆ ಆಯಿತು. ಈ ಹೊಸ ಯೋಜನೆಯ ನಿರ್ಮಾಪಕರೂ ಈ ಯೋಜನೆ ಜಾರಿಗೆ ಬರಬೇಕಾದರೆ ರಾಷ್ಟ್ರೀಯ ಸರಕಾರವಿರಬೇಕೆಂದು ಸಾರಿದ್ದಾರೆ. 'ನೇಶನಲ್ ಪ್ಲೇನಿಂಗ್ ಕಮಿಟಿ'ಗೆ ಈಗ ಕೆಲಸಮಾಡಲು ಸಾಧ್ಯವಿಲ್ಲದಿದ್ದರೂ ಈ ಹೊಸ ಯೋಜನೆಗಾದರೆಗೆ ಸರಕಾರ ಬೆಂಬಲ ಕೊಡುವುದೇ ನೋಡಬೇಕು.

ಪೋಲೆಂಡ್—ರಶ್ಯ

ಆಂಗ್ಲ, ಅಮೇರಿಕನರ ಮಧ್ಯಸ್ಥಿಕೆಯನ್ನು ರಶ್ಯವು ನಿರಾಕರಿಸಿದ್ದು ಒಂದು ಗಂಭೀರ ವಿಚಾರವಾಗಿದೆ. ಅಂತರ್ರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ಥಿಕೆಯಿಂದ ಬಗೆಹರಿಸಬೇಕೆಂದು ಚತುರ್ರಾಷ್ಟ್ರಗಳು ಮಾಡಿಕೊಂಡ ಒಪ್ಪಂದದ ಸೂತ್ರವನ್ನೇ ಈ ಮೂಲಕ ರಶ್ಯ ನಿರಾಕರಿಸಿದೆ. ಇಗರಲ್ಲಿ ಕೇವಲ ಗಡಿನಾಡಿನ ಪ್ರಶ್ನೆಯೊಂದೇ ಅಡಕವಾಗಿಲ್ಲ. ಮಧ್ಯಸ್ಥಿಕೆ ನೀತಿಯನ್ನು ರಶ್ಯವು ಸ್ವೀಕರಿಸಲು ಸಿದ್ಧವಿದೆಯೋ ಇಲ್ಲವೋ ಎಂಬ ಪ್ರಶ್ನೆಯೇ ಮುಖ್ಯವಾಗಿದೆ! ಹೀಗೆಂದು ರಶ್ಯ-ಪೋಲೆಂಡ್ ವಿವಾದದ ವಿಷಯ, ಪೋಲೆಂಡು ಆಂಗ್ಲ-ಅಮೆರಿಕಗಳ ಮಧ್ಯಸ್ಥಿಕೆ ಒಪ್ಪಿದನ್ನು, ರಶ್ಯ ನಿರಾಕರಿಸಿದ ಕುರಿತು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಬರೆದಿದೆ.

ಪೋಲೆಂಡಿನಲ್ಲೇ ಈ ದ್ವಿತೀಯ ಮಹಾಯುದ್ಧದ ರಣಭೇರಿ ಹೊಡೆಯಲ್ಪಟ್ಟಿತು. ಪೋಲೆಂಡಿನ ಕುರಿತಾಗಿರುವ ಒಪ್ಪಂದ ನೀತಿಗನ್ವಯಿಸಿ ಬ್ರಿಟನು ಜರ್ಮನಿಯೊಡನೆ ಯುದ್ಧ ಸಾರಬೇಕಾಯಿತು. ರಶ್ಯವಿಂದು ಪೋಲೆಂಡನ್ನು ನುಂಗುವ ನೀತಿ ಅನುಸರಿಸುವುದು ಸರಿಯಲ್ಲ; ಅಥವಾ ರಶ್ಯವು ಆಂಗ್ಲ-ಅಮೆರಿಕ ಮಧ್ಯಸ್ಥಿಕೆ ನಿರಾಕರಣೆ ಮಾಡುವುದೂ ಸರಿಯಲ್ಲ. ಪೋಲೆಂಡಿನ ಕುರಿತು ಇಂದು ರಶ್ಯವು ತನ್ನ ಸರ್ವಾಧಿಕಾರೀ ನೀತಿಯನ್ನು ತೋರಿಸುವಂತೆ ಕಂಡುಬರುತ್ತದೆ. ಇದು ರಶ್ಯದ ಕೀರ್ತಿಗೆ ಭೂಷಣಕರವಾಗಿಲ್ಲ. ಅಟ್ಲಾಂಟಿಕ್ ಶಾಸನವು ಭಾರತಕ್ಕೆ ಮಾತ್ರವಲ್ಲ, ಯೂರೋಪಿನ ಅಸ್ವತಂತ್ರ ರಾಷ್ಟ್ರಗಳಿಗೂ ಅನ್ವಯಿಸುವುದಿಲ್ಲವೆಂದು ಈ ಮೂಲಕ ರಶ್ಯವು ಜಗತ್ತಿಗೆ ಸಾರುವಂತೆ ತೋರುತ್ತದೆ.

ಇಂದಿನೀ ಯುದ್ಧಕಾಲದಲ್ಲಿ ರಶ್ಯವೊಂದು ಪ್ರಬಲ ಶಕ್ತಿಯಾಗಿದೆ. ರಶ್ಯವನ್ನು ಮೀರಿ ನಿಲ್ಲಲು ಆಂಗ್ಲ ಅಮೆರಿಕನರೂ ಇಂದು ಅಸಮರ್ಥರಿರಬಹುದು. ಆದರೆ ಪೋಲೆಂಡು ಒಪ್ಪಿದರೂ ಆಂಗ್ಲ ಅಮೆರಿಕನರ ಮಧ್ಯಸ್ಥಿಕೆಗೆ ರಶ್ಯ ಒಪ್ಪದಿರುವುದು ಪ್ರತ್ಯಕ್ಷವಾಗಿ ಮಿತ್ರರಲ್ಲಿ ವಿಶ್ವಾಸವಿಲ್ಲವೆಂದು ಸಾರಿದ ಹಾಗಾಗಿದೆ. ಇದರ ಫಲಿತಾಂಶವನ್ನು ಮುಂದೆ ಗಮಿಸತಕ್ಕದಿದೆ.

ಸ್ವದೇಶ ಸಮಾಚಾರ

ಕಾಂಗ್ರೆಸು ಜಪಾನೀ ಪರವಲ್ಲ

ಡಾ. ಬಿ. ಕೆ. ಬಸು ಹೇಳಿಕೆ

'ಚೀನಕ್ಕೆ ವೈದ್ಯಕೀಯ ಮಂಡಳಿವನ್ನು ಕಾಂಗ್ರೆಸು ಕಳುಹಿಸಿದ್ದು ಫೇಸಿಸಂ ವಿರೋಧ ಜಪಾನ್ ವಿರೋಧ ಹೋರಾಡಲು. ಚೀನದ ಸ್ವಾತಂತ್ರ್ಯಕ್ಕಾಗಿ ಹೋರಾಡುವಾಗ ಅವರೊಡನೆ ನಾವು ಕಾಂಗ್ರೆಸ್ ಪ್ರತಿನಿಧಿಗಳಾಗಿ ಜಪಾನ್ ವಿರುದ್ಧ ಹೋರಾಡಿದೆವೆಂದು ಹೆಮ್ಮೆ ಪಡುತ್ತೇವೆ. ಹೀಗಿರುವಾಗ ಕಾಂಗ್ರೆಸನ್ನು ಜಪಾನ್ ಪರವೆಂದು ಹೇಳುವುದು ಶುದ್ಧ ತಪ್ಪು.' ಹೀಗೆಂದು ಚೀನಕ್ಕೆ ಕಾಂಗ್ರೆಸು ಕಳುಹಿಸಿದ ವೈದ್ಯಕೀಯ ಮಂಡಳಿದಲೊಬ್ಬರಾದ ಡಾ। ಬಿ. ಕೆ. ಬಸುಗಳು ಒಂದು ಪತ್ರಿಕಾ ಪ್ರಕಟಣೆಯಿತ್ತಿದ್ದಾರೆ.

ಚರ್ಚಿಲರು ಭಾರತಕ್ಕೆ ಧಾವಿಸಬೇಕು

ಮುಖಂಡರನ್ನು ಒಂದುಮಾಡಲು

ಲಂಡನಿನಲ್ಲಿ 'ಭಾರತವಾರ'ವೆಂಬ ಸ್ವಾತಂತ್ರ್ಯ ದಿನಾಚರಣೆಯ ಹಬ್ಬ ಇಂಡಿಯಾ ಲೀಗಿನ ಆಶ್ರಯದಲ್ಲಿ ನಡೆಯಿತು. ರಾಷ್ಟ್ರ ಮುಖಂಡರ ಬಿಡುಗಡೆ, ಭಾರತಕ್ಕೆ ಸ್ವಾತಂತ್ರ್ಯದಾನ ಮೊದಲಾದ ನಿರ್ಣಯಗಳು ಆ ಸಭೆಗಳಲ್ಲಿ ಮಂಜೂರಾದವು ರಶ್ಯ, ಅಮೆರಿಕ, ಚೀನ, ನೀಗ್ರೋ ಜನರೂ ಕೂಡಾ ಈ ಆಚರಣೆಯಲ್ಲಿ ಭಾಗವಹಿಸಿದ್ದರು. ಲಂಡನಿನ ಕೂಲಿಗಾರ ಪಕ್ಷದ ಮುಂದಾಳುಗಳೊಬ್ಬರು ಮಾತನಾಡುತ್ತಾ, ಭಾರತದ ಪರಿಸ್ಥಿತಿ ಸುಧಾರಿಸಲು, ಮುಖಂಡರನ್ನು ಒಟ್ಟುಗೂಡಿಸಲು ಕೂಡಲೇ ಚರ್ಚಿಲರು ಭಾರತಕ್ಕೆ ಧಾವಿಸಬೇಕೆಂದರು.

ಕರ್ನಾಟಕದಲ್ಲಿ ವೈಸರಾಯರ ಸಂಚಾರ

ವೈಸರಾಯ್ ವೇವಲರು ಕರ್ನಾಟಕ ಪ್ರಾಂತ ವಿಜಾಪುರ ಕ್ಷೇತ್ರದಲ್ಲಿ ಬೊಂಬಾಯಿ ಗವರ್ನರರೊಂದಿಗೆ ಸಂಚಾರ ಮಾಡಿದರು. ಬೆಳಗಾಂವಿಯನ್ನು ಅವರು ಸಂದರ್ಶಿಸಿದರು. ಬಿಜಾಪುರದಲ್ಲಿ ಕೆಲಕಾಲದಿಂದ ಮಳೆ ಬೀಳದೆ ಕ್ಷಾಮವುಂಟಾಗಿರುವುದು.

ಸರೋಜಿನಿ ದೇವಿಯರಿಗೆ ನಿರ್ಬಂಧ

ಸಾರ್ವಜನಿಕ ಭಾಷಣ, ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವುದು, ಪತ್ರಿಕೆಗಳಿಗೆ ಹೇಳಿಕೆ ಕೊಡುವುದು ಇದನ್ನು ಯಾವುದನ್ನೂ ಶ್ರೀಮತಿ ಸರೋಜಿನಿ ದೇವಿಯರು ಮಾಡಬಾರದಾಗಿ ಅವರಿಗೆ ನಿರ್ಬಂಧವಿದೆ. ಅವರ ಯಾವುದೇ ಭಾಷಣ, ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಬಾರದಾಗಿ ಪತ್ರಿಕೆಗಳಿಗೂ ಸರಕಾರದ ನಿರ್ಬಂಧವಿದೆ. ಇತ್ತೀಚೆಗೆ ಕಾಂಗ್ರೆಸಿನ ಮೇಲೆ ಜಪಾನೀ ಪರವೆಂದು ಮೊದಲಾಗಿದ್ದ ಅಲ್ಲಸಲ್ಲದ ಆರೋಪಗಳನ್ನು ಅಲ್ಲಗಳೆದು ಅವರೊಂದು ಹೇಳಿಕೆ ಇತ್ತಿದ್ದರು.

ಮಣಿಬೆನ್ ಮತ್ತು ಪ್ರೇಮಾಕಂಟಿಕ್

ಮಣಿಬೆನ್ ಪಟೇಲ್ ಮತ್ತು ಪ್ರೇಮಾ ಕಂಟಕರನ್ನು ಯಾವ ಶರತೂ ಇಲ್ಲದೆ ಬಿಡುಗಡೆಮಾಡಲಾಗಿದೆ.

ಗೋಪಿನಾಥ ಬಾರ್ಡೋಲಿ

ಅಸಾಮಿನ ಮಾಜಿ ಮಂತ್ರಿ ಗೋಪಿನಾಥ ಬಾರ್ಡೋಲಿಯರ ಬಿಡುಗಡೆ ಆಗಿದ್ದರೂ ಅವರು ಗೋಹತಿಯನ್ನು ಬಿಡಬಾರದೆಂದು ಅವರ ಮೇಲೆ ನಿರ್ಬಂಧ ಹಾಕಲಾಗಿದೆ.

ಪತ್ರಿಕೆಗಳಿಗೆ ಬಾಯಿ ಬೀಗ

ಹಿಂದುಸ್ಥಾನ್ ಟೈಮ್ಸ್ ಮತ್ತು ನೇಶನಲ್ ಕಾಲ್ ಪತ್ರಿಕೆಗಳು ಯಾವ ಲೇಖನಗಳನ್ನೂ ಸರಕಾರಕ್ಕೆ ತೋರಿಸದೇ ಪ್ರಕಟಿಸಬಾರದೆಂದು ಸರಕಾರದ ಆಜ್ಞೆಯಾಗಿದೆ.

ಅಮೆರಿಕದಲ್ಲಿ ಭಾರತೀಯರ ಕೈದು

ನ್ಯೂಯಾರ್ಕಿನಲ್ಲಿ ಭಾರತದ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ೯ ಮಂದಿ ಗಂಡಸರೂ ಹೆಂಗಸರೂ ಅಲ್ಲಿನ ಬ್ರಿಟಿಷ್ ರಾಯಭಾರ ಮನೆಯ ಮುಂದೆ ಪಿಕೆಟ್ ಮಾಡಲಿಕ್ಕಿದಾಗ ಅವರ ಕೈದಾಗಿದೆ.

ಜಯಪ್ರಕಾಶ ನಾರಾಯಣರ ವಿಚಾರಣೆಯೇ?

ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಮುಖಂಡರಾದ ಶ್ರೀ। ಜಯಪ್ರಕಾಶ ನಾರಾಯಣರನ್ನು ವಿಚಾರಣೆಗೆ ಗುರಿಪಡಿಸಲಾಗುವುದೆಂದು ತಿಳಿಯುತ್ತದೆ. ಸೆರೆಮನೆಯಲ್ಲಿ ಶ್ರೀ। ಜಯಪ್ರಕಾಶರನ್ನು ದಿಲ್ಲಿಯ ಕುಟೀರದಲ್ಲಿ ಇಡಲಾಗಿದೆಯೆಂಬ ಸುದ್ದಿಯ ಕುರಿತು ಕೇಂದ್ರ ಶಾಸನ ಸಭೆಯ ಅಧಿವೇಶನದಲ್ಲಿ ಸದಸ್ಯರು ಸರಕಾರದೊಡನೆ ಪ್ರಶ್ನಿಸಿದ್ದರು.

ಹರಿಜನ 'ಪಾಕಿಸ್ತಾನ'

ಶ್ರೀ। ಎನ್. ಶಿವರಾಜ ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಿಂದ ಅ. ಭಾ. ಹ. ಪರಿಷತ್ತು ಕಾನ್ಪುರದಲ್ಲಿ ಸೇರಿ, ಹರಿಜನರಿಗೆ ಪ್ರತ್ಯೇಕವಾದ ಸ್ಥಾನಮಾನ, ಗೌರವಗಳು ಕೊಡಬೇಕೆಂದೂ, ಅವರು ಒಂದು ಜಾತಿಯಿಂದ ಬೇರೆಯಾಗಿರುವ ಒಂದು ಸಂಘವೆಂದು ಮೊದಲಾಗಿ 'ಪಾಕಿಸ್ತಾನ' ರೀತಿಯ ಠರಾವುಗಳಾದುವು. ಇದರಲ್ಲಿ ಡಾ। ಅಂಬ್ಡೇಕರರು ಒಬ್ಬ ಮುಖಂಡರು.

ಒತ್ತಾಯದಿಂದ ಹಿಂದೀಯರನ್ನು ಸೈನ್ಯಕ್ಕೆ ಸೇರಿಸಕೂಡದು

ಲಂಡನಿನ ಸ್ವರಾಜ್ಯ ಭವನದಲ್ಲಿ, ಪಾರ್ಲಿಮೆಂಟ್ ಪ್ರತಿನಿಧಿಗಳಿಗೆ ಒಂದು ಮನವಿ ಮಂಡಿಸುತ್ತಾ ಬ್ರಿಟನಿನಲ್ಲಿರುವ ಹಿಂದೀಯರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವ ವಿಷಯ ಅದರಲ್ಲಿ ಪ್ರಸ್ತಾಪಿಸಿ ಭಾರತೀಯರು ಗುಲಾಮ ರಾಷ್ಟ್ರದವರೆಂದು ಈ ಆಜ್ಞೆ ಸೂಚಿಸುತ್ತೆಂದು ಅದರಲ್ಲಿ ತಿಳಿಸಲಾಗಿದೆ.

In The Court Of The Subordinate Judge Of South Kanara

R. E. P. No. 2/1943.

O. S. No. 43/1931.

Between:-

Sadiapu Krishna Bhatta- *Petitioner.*

AND

Rama Bhatta and others- *Respondents.*

To

The 12th respondent Krishna Bhatta, son of Norasimha Bhatta.

Please take notice that the above execution petition filed by the petitioner for the recovery of Rs. 3675-12-9 together with interest and costs of execution by sale of the properties charged in the preliminary decree will come on for hearing on 15-2-1944 at 11 A. M. for settling the terms of the sale proclamation as also R. E. A. No. 311/1943 for granting permission to petitioner to bid and set off at the time of the sale. You may appear either in person or by pleader on the said date failing which the matter will be decided in your absence.

Mangalore, 1-2-1944   R. A. Kamath, *Vakil for petitioner*

THE DIRECTORS OF

The Agricultural & Industrial Bank Limited

Head office: COONDAPUR

Beg to announce the opening of a branch of the bank at Mangalore at Nazerath Buildings Karnad Sadashiva Rao Road on the 8-2-44, where all kinds of Banking business will be transacted.

Public Patronage solicited

ಜಿಲ್ಲಾ ಸಮಾಚಾರಗಳು

ಮಂಗಳೂರು

ಅ. ಕ. ಪತ್ರಿಕೋದ್ಯೋಗಿ, ಸಮ್ಮೇಳನ, ಮಂಗಳೂರು

ಇದರ ಸ್ವಾಗತ ಸಮಿತಿ ಅಧ್ಯಕ್ಷರು [illegible]ಗೆ ಪ್ರಕಟಿಸುತ್ತಾರೆ:

ಪ್ರತಿನಿಧಿ ಹೊಸಲು

ಫೆಬ್ರವರಿ (೧೯೪೪) ತಾ. ೧೯ ಮತ್ತು ೨೦ ಈ ದಿನಗಳಲ್ಲಿ ಇಲ್ಲಿ, ಮದ್ರಾಸಿನ 'ಸ್ವದೇಶಮಿತ್ರನ್' ಪತ್ರಿಕೆಯ ಸಂಪಾದಕರಾದ ಶ್ರೀ. ಸಿ. ಆರ್. ಶ್ರೀನಿವಾಸನ್ ಅವರ ಅಧ್ಯಕ್ಷತೆಯಲ್ಲಿ, ಜರಗಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನಕ್ಕೆ ಬಂದು, ಸಮಾರಂಭಗಳಲ್ಲಿ ಭಾಗವಹಿಸುವ ಕರ್ನಾಟಕದ ವಿವಿಧ ಭಾಗಗಳ ಪ್ರತಿನಿಧಿಗಳು ಪ್ರತಿನಿಧಿಹಾಸಲು ಒಂದು ರೂಪಾಯಿಯನ್ನೂ ಅವರು ಅಧಿವೇಶನದ ಮುಂದಿಡಲು ಇಚ್ಛಿಸುವ ನಿರ್ಣಯಗಳಿದ್ದರೆ ಅವುಗಳನ್ನೂ ಫೆಬ್ರವರಿ ತಾ. ೧೫ರೊಳಗೆ ಸಮ್ಮೇಲನದ ಸ್ವಾಗತ ಸಮಿತಿಯವರಿಗೆ ಕಳುಹಿಸಿಕೊಡಬೇಕೆಂದು ವಿನಂತಿ. ಬರುವ ಪ್ರತಿನಿಧಿಗಳ ಊಟ-ವಸತಿಯ ಏರ್ಪಾಡನ್ನು ಸ್ವಾಗತ ಸಮಿತಿಯವರೇ ಮಾಡುವರು.

ವಿಚಾರ ವಿನಿಮಯ ಕೂಟ

ಸಮ್ಮೇಳನದ ಸಮಯದಲ್ಲೇ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಒಂದು ವಿಚಾರ ವಿನಿಮಯ ಕೂಟವನ್ನು (Symposium) ಜರಗಿಸಲು ನಿರ್ಧರಿಸಿದ್ದೇವೆ. 'ಕನ್ನಡ ಲಿಪಿ ಸಂಸ್ಕರಣ' ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯ ಹಾದಿಗಳನ್ನು ಹುಡುಕುವುದಕ್ಕಾಗಿ 'ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ'; ಮತ್ತು ಕನ್ನಡ ಪತ್ರಿಕೋದ್ಯಮದ ಸುವ್ಯವಸ್ಥಿತ ಬಾಳ್ವೆಗಾಗಿ "ಪತ್ರಿಕೋದ್ಯೋಗಿ-ಸಂಪಾದಕ-ಮುದ್ರಕ-ನಿರ್ವಾಪಕ-ಯಜಮಾನ ಇವರೊಳಗಿನ ಸೌಹಾರ್ದಿಕ ಸಂಬಂಧ" -ಈ ಮೂರು ವಿಷಯಗಳ ಮೇಲೆ ಕೆಲ ಬಲ್ಲಿದರ ನೇತೃತ್ವದಲ್ಲಿ ವಿಚಾರ ವಿನಿಮಯ ಮಾಡುವುದಕ್ಕೂ ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ತರ್ಕಿಸುವುದಕ್ಕೂ ಒಂದೊಂದು ಸಮನ್ವಯ ಕೂಟವನ್ನು ಏರ್ಪಡಿಸಲಾಗಿದೆ. ಈ ಕೂಟದಲ್ಲಿ ಭಾಗ ವಹಿಸಲಿಚ್ಛಿಸುವವರು ತಾವು ಸೂಚಿಸಬಹುದಾದ ವಿಷಯಗಳ ಸಂಕ್ಷಿಪ್ತ ವರದಿಯನ್ನು ನಾಲ್ಕೆಂಟು ದಿನ ಮುಂಚಿತವಾಗಿಯೇ ನಮಗೆ ತಿಳಿಸಿದರೆ ಚರ್ಚೆಯ ಕಾಲದಲ್ಲಿ ತಮಗೆ ಮಾತನಾಡುವ ಅವಕಾಶವನ್ನೊದಗಿಸಲು ಅನುಕೂಲವಾಗುವುದು. ಈ ವಿಚಾರ ಕೂಟದಲ್ಲಿ ರೂಪಿತವಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೆಲ ಗೊತ್ತುವಳಿಗಳಾಗಿ ಮುಂದಿಡಬೇಕೆಂಬುದೇ ನಮ್ಮ ಉದ್ದೇಶ.

ಪತ್ರಿಕಾ ಪ್ರದರ್ಶನ

ಸಮ್ಮೇಲನದ ಸಮಯದಲ್ಲಿ ಏರ್ಪಡಿಸಲಾಗುವ ಪತ್ರಿಕಾ ಪ್ರದರ್ಶನಕ್ಕೆ ಈಗಾಗಲೇ ಹಲವು ಪತ್ರಿಕೆಗಳು ಬಂದಿವೆ. ಉಳಿದಿರುವ ಎಲ್ಲಾ ರೀತಿಗಳ ಪತ್ರಿಕೆಯವರು ತಮ್ಮ ಅನುದಿನದ ಮತ್ತು ವಿಶೇಷ ಸಂಚಿಕೆಗಳನ್ನು, ಕರ್ನಾಟಕದ ಪುರಾತನ ಪತ್ರಿಕೆಗಳ ಮಾಹಿತಿ ಮುಂತಾದುವನ್ನೂ ಆದಷ್ಟು ಬೇಗನೆ ಒದಗಿಸಿಕೊಟ್ಟು ಪ್ರದರ್ಶನವನ್ನು ಯಶಸ್ವಿಗೊಳಿಸುವುದರಲ್ಲಿ ಸಹಕರಿಸಬೇಕೆಂದು ನಮ್ಮ ಕೋರಿಕೆ.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ

ಇದರ ೧೭ನೇ ವಾರ್ಷಿಕೋತ್ಸವವು ಶ್ರೀ। ಡಿ. ಮಂಜಯ್ಯ ಹೆಗ್ಡೆ, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಿಂದ ಜರಗಿತು. ಮಂಡಲದ ವಿದ್ಯಾರ್ಥಿಗಳಿಂದ ನಾನಾ ತರದ ವ್ಯಾಯಾಮ ಪ್ರದರ್ಶನಗಳಿದ್ದುವು. ವರದಿ ವಾಚನ 'ಮಹನೀಯರ ಭಾಷಣ, ಅಧ್ಯಕ್ಷ ಭಾಷಣಗಳಾಗಿ ವಂದನಾರ್ಪಣೆಯಿಂದ ಉತ್ಸವ ಕೊನೆಗೊಂಡಿತು. ಧ್ವಜವಂದನೆ, ಬಹುಮಾನ ವಿತರಣೆಗಳೂ ಇದ್ದುವು.

ವರ್ಧಂತಿಗಳು

ಮಂಗಳೂರು ಬಿ. ಇ. ಎಂ. ಸೆಕೆಂಡರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ಸಂಜೆ ಶ್ರೀ. ಕೆ. ಐ. ವರ್ಗಿಸರ ಅಧ್ಯಕ್ಷತೆಯಿಂದ ನೆರವೇರಿತು. ಸ್ವಾಗತಗೀತವಾದ ಮೇಲೆ ಶ್ರೀ ಶ್ರೀನಿವಾಸರಾಯರು ಶಾಲಾ ಸ್ವಸ್ತಿ ವಾಚನ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಎ. ಚರ್ಟ್ಟರ್ಡೋರವರು ಶಾಲಾ ವರದಿಯನ್ನೋದಿದ ಬಳಿಕ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿದರು. ಕೊನೆಗೆ ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದ ಮೇಲೆ ವಿವಿಧ ವಿನೋದಾವಳಿಗಳಿತ್ತು.

ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ವಾರ್ಷಿಕ ವರ್ಧಂತ್ಯುತ್ಸವವು ಫಾದರ್ ರೆಕ್ಟರ್ ಕ್ಯೊಲೋರವರ ಅಧ್ಯಕ್ಷತೆಯಿಂದ ಕಳೆದ ಶನಿವಾರ ಜರಗಿತು. ಎರಡು ವಿದ್ಯಾರ್ಥಿ ಭವನಗಳ ಕಡೆಯಿಂದ ಅನುಕ್ರಮವಾಗಿ ಶ್ರೀ ವಿಶ್ವನಾಥ ರೈ ಮತ್ತು ಕುಮಾರಿ ಮಾಲತಿ ಇವರು ವರದಿಗಳನ್ನೋದಿದರು. ಬಹುಮಾನ ವಿತರಣೆಯಾಗಿ ಶ್ರೀ. ಕೆ. ಸಿ. ನಾಯಕರು ಹಾಸ್ಟೆಲಿನ ಸ್ವಸ್ತಿ ವಾಚನ ಮಾಡಿದ ನಂತರ ಶ್ರೀ ಜಯರಾಮ ಶೆಟ್ಟರು ಅದಕ್ಕೆ ಉತ್ತರವಿತ್ತ ಬಳಿಕ ವಿವಿಧ ವಿನೋದಾವಳಿಗಳಿದ್ದುವು. ಕಾರ್ಯದರ್ಶಿಗಳು ಧನ್ಯವಾದಾರ್ಪಣೆ ಮಾಡಿದರು.

ರಜಕ ಕುಲೋದ್ಧಾರಕ ಸಂಘದ ವಾರ್ಷಿಕ ಮಹಾಸಭೆಯು ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. ೩೦ರಂದು ಜರಗಿತು. ಪ್ರಾರ್ಥನೆಯಾದ ಮೇಲೆ ಶ್ರೀ. ಕೆ. ವಾಮನರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ. ಯಂ. ಕೆ. ತ್ಯಾಂಪರು ಸಂದೇಶಗಳನ್ನೋದಿದ ನಂತರ, ಹಲವರು ಸಂಘದ ಏಳಿಗೆ ಹಾರೈಸಿ ಭಾಷಣವಿತ್ತರು. ಈ ಹಿಂದುಳಿದ ಜಾತಿಗೆ ವಿದ್ಯಾಭ್ಯಾಸದ ಸೌಕರ್ಯ ಕೊಡಬೇಕೆಂದೂ, ಜಿಲ್ಲಾ ಬೋರ್ಡು, ಮುನ್ಸಿಪಾಲಿಟಿ ಮತ್ತು ಸರಕಾರದ ಇತರ ಇಲಾಖೆಗಳಲ್ಲಿ ಈ ಜಾತಿಯವರಿಗೆ ಪ್ರಾತಿನಿಧ್ಯ ಸಿಗಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ಠರಾವುಗಳಾದುವು. ಅನಂತರ ಅಧ್ಯಕ್ಷರ ಭಾಷಣವಾಗಿ ಹೊಸ ವರ್ಷದ ಆಡಳಿತ ಕಮಿಟಿ ಚುನಾವಣೆಯಾಯಿತು.

ಸತ್ಕಾರಕೂಟ

ಚಲಚ್ಚಿತ್ರ ವಿಮರ್ಶಕ ಕೂಟ ಹಾಗೂ ಪ್ರಕಾಶಕಕೂಟಗಳ ಉತ್ಸಾಹೀ ಸದಸ್ಯರಾದ ಶ್ರೀ ಕೆ. ರಘು ಇವರನ್ನು ಬೀಳ್ಕೊಡುವ ಸಮಾರಂಭವೊಂದು ಅವರ ಕೆಲವು ಮಿತ್ರರಿಂದ ಪತ್ರಿಕೋದ್ಯೋಗಿ ಸಂಘದ ಕಚೇರಿಯಲ್ಲಿ ಶ್ರೀ ಪಿ. ಕೆ. ನಾರಾಯಣರ ಅಧ್ಯಕ್ಷತೆಯಿಂದ ನೆರವೇರಿತು.

ದ. ಕ. ಜಿಲ್ಲಾ ಮಜೂರರ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ಮಜೂರರ ಪರಿಷತ್ತು ಫೆಬ್ರವರಿ ೭ನೇ ಮತ್ತು ೮ನೇ ತಾರೀಕುಗಳಲ್ಲಿ ಮಂಗಳೂರಲ್ಲಿ ಜರಗುವುದು. ಅಖಿಲ ಭಾರತ ಮಜೂರ ಸಂಘದ ಅಧ್ಯಕ್ಷರಾದ ಕಾಮ್ರೆಡ್ ಎಸ್. ಎ. ಡಾಂಗೆ ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಲು ಒಪ್ಪಿರುವರು.

ನೇಮಕ

ಶ್ರೀ ಬಿ. ಆನಂದ ಬಾಳಿಗರು ನಿವೃತ್ತರಾದ ಮೇಲೆ ತಿನ್ನವೆಲ್ಲಿ ಖಜಾನೆ ಡಿಪ್ಯುಟಿ ಕಲೆಕ್ಟರರಾಗಿ ನೇಮಕ ಹೊಂದಿದ್ದಾರೆ.

ಮುದ್ದಣ ದಿನಾಚರಣೆ

ಇದು ಕಳೆದ ಶುಕ್ರವಾರ ಬಿಸೆಂಟ್ ಬಾಲಿಕಾ ಶಾಲೆಯಲ್ಲಿ ಜರಗಿತು. ಶ್ರೀ ಪಿ. ಕೆ. ನಾರಾಯಣರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮುಳಿಯ ತಿಮ್ಮಪ್ಪಯ್ಯರು ಭಾಷಣ ಮಾಡಿದರು. ಶ್ರೀ ಎಚ್. ಶ್ರೀನಿವಾಸ ಉಡುಪರು ರಾಮಪಟ್ಟಾಭಿಷೇಕದಿಂದ ಕೆಲ ಪದ್ಯ ಹಾಡಿದರು. ಕುಮಾರಿ ರಾಧಾ ಶೆಟ್ಟಿಯವರು ಕೃತಜ್ಞತೆಯಿತ್ತರು.

ಮಂಗಳೂರಲ್ಲಿ

ಕಾಮ್ರೆಡ್ ಕೇಸರಿ ಕೇಶವನ್

ಮಂಗಳೂರಿನ ವಿದ್ಯಾರ್ಥಿ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಲು ಬಂದ ಕಾಮ್ರೆಡ್ ಕೇಸರಿ ಕೇಶವನರನ್ನು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಸಂಘಕ್ಕೆ ಆಹ್ವಾನಿಸಿ ಅಲ್ಲಿನ ವಿದ್ಯಾರ್ಥಿಗಳು ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಕಾ। ಕೇಸರಿ ಕೇಶವನರು ಶ್ರೀ। ಕಾಶ್ಯಪ್ಪಯ್ಯ ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ವಿದ್ಯಾರ್ಥಿಗಳೂ ರಾಜಕೀಯವೂ ಎಂಬ ಕುರಿತು ಮಾತನಾಡಿದರು. ನೇಶನಲ್ ವಾರ್ ಫ್ರಂಟಿನ ಶ್ರೀಮತಿ ಪಾರ್ವತಿ ಬಾಯಿಯವರೂ ವಿದ್ಯಾರ್ಥಿಗಳಿಗೆ ಉಪದೇಶವಿತ್ತರು. ಆ ಮೇಲೆ ಅಧ್ಯಕ್ಷರು ಮಾತನಾಡಿ ಮಂಗಳೂರಿನಲ್ಲಿ ತಾನು ವಿದ್ಯಾರ್ಥಿಯಾಗಿರುವಾಗ ಇದ್ದ ಸಂಘಟನೆ ಕುರಿತು ತಿಳಿಸಿ. ಇಡೀ ಮಂಗಳೂರೇ ವಿದ್ಯಾರ್ಥಿಗಳ ಮುಂದೆ ನಡುಗತ್ತಿತ್ತೆಂದು ಹೇಳುತ್ತಾ, ಇಂದು ಅಪ್ರಾಗತಿಕ ಧೋರಣೆಯ ರಾಜಕೀಯ ಪಕ್ಷಗಳು ವಿದ್ಯಾರ್ಥಿ ಸಂಘದಲ್ಲಿ ಒಡಕು ಹುಟ್ಟಿಸಿವೆಯೆಂದು ತಿಳಿಸಿ ಈ ಸಲ ನಡೆದ ಸಮ್ಮೇಳನವು ಸರಿಯಾದ ಪ್ರಾತಿನಿಧಿಕವಲ್ಲವೆಂದು ಹೇಳಿ ಇನ್ನು ಮುಂದಾದರೂ ವಿದ್ಯಾರ್ಥಿಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕೆಂದು ಹೇಳಿದರು.

ಅನಂತರ ಸೈಂಟ್ ಎಲಾಶಿಯಸ್ ಕಾಲೇಜ್ ಹಾಸ್ಟೆಲಿನಲ್ಲಿ ಕಾಮ್ರೆಡ್ ಕೇಸರಿ ಕೇಶವನರು ವಿದ್ಯಾರ್ಥಿಗಳೂ ಧರ್ಮವೂ, ಎಂಬ ಕುರಿತು ಮಾತನಾಡಿ; ಧರ್ಮದ ನಿಜವಾದ ತತ್ವ ಪ್ರಚಾರವಾಗಬೇಕಾದರೆ ಕಮ್ಯುನಿಸಂ ಪ್ರಚಾರವಾಗದೆ ನಿರ್ವಾಹವಿಲ್ಲವೆಂದು ತಿಳಿಸಿದರು. ಶ್ರೀ. ಮಾದಪ್ಪರು ಅಧ್ಯಕ್ಷತೆ ವಹಿಸಿದ್ದರು.

ಸಂಜೆ ಮಂಗಳೂರು ಕಮ್ಯುನಿಸ್ಟ್ ಪಕ್ಷದ ಸಭೆಯಲ್ಲಿ ಪಕ್ಷದ ಸದಸ್ಯರು ಮತ್ತು ಇತರ ಹಿತಚಿಂತಕರು ಸೇರಿದ ಸಭೆಯಲ್ಲಿ ಮಾತನಾಡುತ್ತಾ, ವಿದ್ಯಾರ್ಥಿಗಳನ್ನು ಕಮ್ಯುನಿಸ್ಟ್ ಪಕ್ಷದ ವಿದ್ಯಾರ್ಥಿಗಳು ಸಂಘಟಿಸಬೇಕೆಂಬ ಕುರಿತು ಉಪದೇಶವಿತ್ತರು. ಆ ಮೇಲೆ ಪತ್ರಿಕೋದ್ಯೋಗಿ ಸಂಘದ ಕಚೇರಿಯಲ್ಲಿ ಮಂಗಳೂರು ಪೀಪಲ್ಸ್ ಥಿಯೇಟರಿನ ಆಶ್ರಯದಲ್ಲಿ ಶ್ರೀ। ರಂ. ರಾ. ತಳ್ಚೇರಿಕರರ ಅಧ್ಯಕ್ಷತೆಯಿಂದ, ಪೀಪಲ್ಸ್ ಥಿಯೇಟರ್ ಚಳವಳಿದ ಕುರಿತು ಮಾತನಾಡಿದರು. ಪ್ರಾರಂಭದಲ್ಲಿ ಶ್ರೀ। ಕುಳಕುಂದರು ಇಲ್ಲಿನ ಪೀಪಲ್ಸ್ ಥಿಯೇಟರ್ ಚಟುವಟಿಕೆ ಕುರಿತು ವಿವರಿಸಿದರು. ಶ್ರೀ। ತಳ್ಚೇರಿಕರರು ಮಾತನಾಡುತ್ತಾ, ಈಗಾಗಲೇ ಪೀಪಲ್ಸ್ ಥಿಯೇಟರ್ ಎಂದರೆ ಕಮ್ಯುನಿಸ್ಟ್ ಪಕ್ಷದ ಪ್ರಚಾರ ಶಾಖೆಯೆಂಬ ದೂರಿದೆಯೆಂದೂ, ನಮ್ಮ ರಾಷ್ಟ್ರಕ್ಕೆ ಶತಮಾನದಿಂದಲೂ ದಬ್ಬಾಳಿಯಿರುವಾಗ, ಅದನ್ನು ಮರೆತು ಚೀನಕ್ಕೆ ಜಪಾನ್ ದಬ್ಬಾಳಿಕೆ, ಫೇಸಿಸಂ ವಿರೋಧ ಪ್ರಚಾರ ಮಾತ್ರ ಮಾಡಿದರೆ ನಾವು, ಜನತೆ ಹಾಗೂ ರಾಷ್ಟ್ರ ಸೇವೆ ಮಾಡುವುದಕ್ಕಿಂತ ಯುದ್ಧ ಪ್ರಚಾರ ಮಾತ್ರ ಮಾಡಿದಂತಾಗುವುದೆಂದೂ ಹೇಳಿದರು. ಶ್ರೀ। ಕುಳಕುಂದರು ಧನ್ಯವಾದಗಳನ್ನಿತ್ತರು.

ಕಾ। ಕೇಸರೀ ಕೇಶವನರು ಬಿಸೆಂಟ್ ಬಾಲಿಕಾ ಶಾಲೆಯಲ್ಲಿ ಸ್ತ್ರೀಯರೂ ಅವರ ಹಕ್ಕುಗಳೂ ಎಂಬ ಕುರಿತು ಮಾತನಾಡಿದರು. ಮಹಿಳಾ ಸೇವಾಶ್ರಮದಲ್ಲಿಯೂ ಅವರ ಒಂದು ಭಾಷಣವಿತ್ತೆಂದು ತಿಳಿದಿದೆ. ತಾ. ೩ರಂದು ಬೆಳಿಗ್ಗೆ ಅವರು ಮೈಸೂರಿಗೆ ಹಿಂತೆರಳಿದರು.

ಉಡುಪಿ

ಶ್ರೀ. ಅ. ನ. ಕೃಷ್ಣರಾಯರು.

ಶ್ರೀ. ಅ. ನ. ಕೃಷ್ಣರಾಯರು ತಾ. ೨೩ರಂದು ಇಲ್ಲಿಗೆ ಬಂದು ತಾ. ೨೯ರಂದು ಇಲ್ಲಿಂದ ಶಿವಮೊಗ್ಗಕ್ಕೆ ತೆರಳಿದರು. ಉಡುಪಿಯಲ್ಲಿ ಕೆಲವು ಸಾಹಿತ್ಯಾಭಿಮಾನಿಗಳನ್ನು ಕಂಡು ಸಾಹಿತ್ಯ ಪರಿಷತ್ತಿಗೆ ಸದಸ್ಯರನ್ನಾಗಿಯೂ ಪೋಷಕರನ್ನಾಗಿಯೂ ಸೇರಿಸಿದರು.

ಶ್ರೀ. ಕೃಷ್ಣರಾಯರು ತಾ. ೨೮ರಂದು ಹೆಂಗುಸರ ಟ್ರೈನಿಂಗ್ ಶಾಲೆಯಲ್ಲಿ 'ಹೆಮ್ಮಕ್ಕಳೂ ಸಾಹಿತ್ಯವೂ' ಎಂಬ ವಿಷಯ ಭಾಷಣವಿತ್ತರು. ಶ್ರೀಮತಿ ಮನೋರಮಾ ಬಾಯಿಯವರು ಅಧ್ಯಕ್ಷರಾಗಿದ್ದರು.

ಇದೇ ದಿನ ಶ್ರೀ ಬೈಲೂರು ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ. ಕೃಷ್ಣರಾಯರು ಉಡುಪಿ ಕರ್ನಾಟಕ ಸಂಘದ ಉದ್ಘಾಟನೆ ನೆರವೇರಿಸಿದರು.

ಉಡುಪಿ ಮಕ್ಕಳ ಕೂಟದ ಸ್ಥಾಪನೆ ತಾ. ೨೮ರಂದು ಕುಮಾರ ವೆಂಕಣ್ಣ ಇವರಿಂದ ಜರಗಿತು. ಶ್ರೀ. ವಸುದೇವ ಭೂಪಾಲಂ ಅಧ್ಯಕ್ಷತೆ ವಹಿಸಿದ್ದರು. ಉಡುಪಿ ಕಿರಿಯರು ಶ್ರೀ. ಅ. ನ. ಕೃಷ್ಣರಾಯರಿಗೂ ಮತ್ತಿತರರಿಗೂ ಇದೇ ದಿನ ಸತ್ಕಾರಕೂಟವೇರ್ಪಡಿಸಿದ್ದರು.

ಕಾಸರಗೋಡು

ಉಪಾಧ್ಯಾಯರ ಸಭೆ

ತಾಲೂಕಿನ ಬೋರ್ಡು ಶಾಲಾ ಉಪಾಧ್ಯಾಯರ ಸಭೆಯೊಂದು ಕಾಸರಗೋಡಿನಲ್ಲಿ ಸೇರಿ ಶ್ರೀ ಪಿ. ಕೆ. ರಾಮರಾಯರು ಅಧ್ಯಕ್ಷರಾಗಿ ಶ್ರೀ ಕೆ. ಡಾಸಪ್ಪನವರು ಕಾರ್ಯದರ್ಶಿಯಾಗಿ ಶ್ರೀ ಎನ್. ಸಿ. ಕಣ್ಣನ್ ಕೋಶಾಧಿಕಾರಿಯಾಗಿ, ಜನಾಬ್ ಟಿ. ಮಮ್ಮುಕುಞ್ಞಿಯವರು ಲೆಕ್ಕ ಪರಿಶೋಧಕರಾಗಿ ಹಾಗೂ ೬ವರ ಉಪಾಧ್ಯಾಯನಿಯರು ಸಮೇತ ಆಡಳಿತ ಮಂಡಲಿ ಚುನಾಯಿತವಾಯಿತು. ಉಪಾಧ್ಯಾಯರ ಯೂನಿಯನ್‌ಗಳ ಸಂಯುಕ್ತ ಸಭೆ ಸೇರಿ, ಅಕ್ಕಿ ವಿಚಾರ ಕಲೆಕ್ಟರರಲ್ಲಿ ಶಿಷ್ಟಮಂಡಳ ಹೋಗಲು ಪ್ರತಿನಿಧಿಗಳನ್ನಾರಿಸಲಾಯಿತು.

ತಾಲೂಕು ಕಿಸಾನ್ ಸಮ್ಮೇಳನ

ಕಾಸರಗೋಡು ತಾಲೂಕು ಕಿಸಾನ್ ಸಂಘದ ಪ್ರಥಮ ಸಮ್ಮೇಳನವು ಕಳೆದ ತಾ ೨೩ರಂದು ಕರಿವೆಳ್ಳೂರಿನಲ್ಲಿ ಅ. ಭಾ. ಕಿಸಾನ್ ಕೌನ್ಸಿಲ್ ಸದಸ್ಯರಾದ ಕಾಮ್ರೆಡ್ ಕೆ. ಎ. ಕೇರಳೀಯನರ ಅಧ್ಯಕ್ಷತೆಯಿಂದ ನೆರವೇರಿತು. ಕೇರಳದ ಹರಿಜನ ಎಂ. ಎಲ್. ಎ. ಶ್ರೀ. ಇ. ಕಣ್ಣನ್ ಅವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಕೇರಳದ ಮಹಿಳಾ ಸಂಘದ ಕಾರ್ಯಕಾರೀ ಸಮಿತಿ ಸದಸ್ಯೆ ಯಶೋದಾ ಇವರು ಕೆಂಬಾವುಟ ಹಾರಿಸಿದರು. ಕಾಸರಗೋಡು ತಾಲೂಕಿನಲ್ಲಿ ಸಭೆ ಸೇರಲು ನಿರ್ಬಂಧವಿದ್ದು ಈ ಸಮ್ಮೇಳನವು ಮಲಬಾರಿನಲ್ಲಿ ಸೇರಬೇಕಾಗಿ ಬಂದ ವಿಷಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಷಾದ ಸೂಚಿಸಿದರು. ಕಿಸಾನ್ ಸಂಘಗಳನ್ನು ಬಲಪಡಿಸಬೇಕೆಂದು, ದ. ಕ. ಜಿಲ್ಲೆಯ ಪ್ರತಿಬಂಧಕಾಜ್ಞೆ ಹಿಂತೆಗೆಯಬೇಕೆಂಬು ರೇಶನಿಂಗ್ ಜಾರಿಯಾಗಬೇಕೆಂದು ಮೊದಲಾಗಿ ನಿರ್ಣಯಗಳಾದುವು.

ನೀಲೇಶ್ವರ

ಅಕ್ಕಿಯ ಪರಿಸ್ಥಿತಿ

ಇಲ್ಲಿನ ಅಕ್ಕಿಯ ಪರಿಸ್ಥಿತಿ ಕಠುತ್ತ ಇದೆ. ಸೇರಿಗೆ ಏಳಾಣೆ ಕ್ರಯಕ್ಕೆ ಮಾರಾಟವಾಗುತ್ತಿದ್ದು ಬಡವರು ಇಲ್ಲಿ ಕಷ್ಟಕ್ಕೊಳಗಾಗಿದ್ದಾರೆ.



ಕರ್ನಾಟಕದ ಪತ್ರಿಕೋದ್ಯೋಗಿಗಳಿಗೆ

ಶ್ರೀ ಶಿವರಾಮ ಕಾರಂತ ಕೆಲವು ಸೂಚನೆಗಳು

ಮಂಗಳೂರಲ್ಲಿ ಇದೇ ಫೆಬ್ರವರಿ ೧೯, ೨೦ ರಲ್ಲಿ ಜರಗುವ ಸಮ್ಮೇಳನದಲ್ಲಿ ಸೇರಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಅವಗಾಹನಾರ್ಥವಾಗಿ ಅವರಿಗೆ ಸಂಬಂಧ ಪಟ್ಟಿರುವ ವಿಷಯಗಳನ್ನು ತಿಳಿಸಿ ಶ್ರೀ ಶಿವರಾಮ ಕಾರಂತರು ಈ ಕೆಳಗಿನ ಸೂಚನೆಗಳನ್ನಿತ್ತಿದ್ದಾರೆ.

"ಪತ್ರಿಕೆಗಳ ಮುದ್ರಣಕ್ಕೆ ಲಿಪಿ ಅವಶ್ಯ. ಇಂದು ಕನ್ನಡ ಪತ್ರಿಕೆಗಳು ತೀವ್ರ ಪ್ರಚಾರವಾಗಲು ಅದರ ರಚನೆ ಇನ್ನಷ್ಟು ಸುಲಭವಾಗಲು ತುಂಬಾ ತೊಡಕುಗಳಿವೆ. ಕನ್ನಡ ಲಿಪಿ ಒಂದು ತೊಡಕಿನ ಸಮಸ್ಯೆ ಆಗಿದೆ. ಬೇಗ ಬರೆದುಕೊಳ್ಳಲು, ಶುದ್ಧವಾದ ಬರಹಗಳನ್ನು ತಯಾರಿಸಲು ಶೀಘ್ರ ಲಿಪಿಯ ಪ್ರಚಾರ ಹೆಚ್ಚಾಗಿ ಜತೆಗೆ ಕನ್ನಡ ಟೈಪ್‌ರೈಟರ್ ವ್ಯವಹಾರಕ್ಕೆ ಬರುವ ಮಾರ್ಗವನ್ನು ನಾವು ಹುಡುಕಬೇಕಾಗಿದೆ. ಇಂದು ದಿನ-ಪತ್ರಿಕೆ-ನಮ್ಮಲ್ಲಿ ಪ್ರಾರಂಭವಾಗಿವೆ. ಈಗಿನ ಅಕ್ಷರಗಳು ಅವುಗಳ ಜೋಡಣೆ ವೇಗಕ್ಕೆ ಸಹಾಯವಾಗಿಲ್ಲ. ಮೊನೋ ಟೈಪ್, ಲಿನೋ ಟೈಪ್ ಮೊದಲಾದ ಯಂತ್ರ ಸಲಕರಣೆಗಳು ನಮಗೆ ಕೈಗೂಡಬೇಕಾದರೆ ಕನ್ನಡ ಲಿಪಿ ಇನ್ನಷ್ಟು ಸುಧಾರಿಸಬೇಕಾಗಿದೆ. ಅಕ್ಷರಗಳಲ್ಲಿ ಒಂದು ರೀತಿಯ ಸಾಮ್ಯತೆ ಬೇಕು; ಅನವಶ್ಯಕವಾದ ಅಕ್ಷರಗಳನ್ನು ತೆಗೆದುಹಾಕಬೇಕು. ಧೀರ್ಘ ಮಹಾ ಪ್ರಾಣಗಳ ಕ್ರಮದಲ್ಲಿ ಒಂದೇ ಕ್ರಮಬೇಕು. ಈ ಬಗೆಯಿಂದ ಅಕ್ಷರಗಳ ಸಂಖ್ಯೆ ಕಡಿಮೆ ಮಾಡಿ ಮುದ್ರಣ ಸೌಕರ್ಯ ಹೆಚ್ಚಬೇಕು. ಈ ಕುರಿತು ವಿಚಾರ ಮಾಡಿದವರು, ಟೈಪೋಗ್ರಫಿಯ ಮಾಹಿತಿಯುಳ್ಳವರು ತಮ್ಮ ಅನುಭವ ಕಾರ್ಯ ರೂಪಕ್ಕೆ ಬರುವಂತೆ ಕೆಲಸ ಮಾಡಬೇಕು.

ನಮ್ಮ ಪತ್ರಿಕೆಗಳ ಬಾಹ್ಯಸೌಂದರ್ಯ ಚೆನ್ನಾಗುವಂತೆ ವ್ಯವಸ್ಥೆಪಡಿಸಬೇಕು. ಚಿತ್ರಗಳು ಹೆಚ್ಚಬೇಕು. ದಿನ ಪತ್ರಿಕೆಗಳಿಗೆ ರೋಟರಿ ಮೊದಲಾದ ಯಂತ್ರಗಳ ಸಹಾಯ ನಮಗೆ ಬೇಕು. ಪತ್ರಿಕೆಗಳ ಸಂಖ್ಯೆ ಹೆಚ್ಚಿ, ಆಕಾರ ಕುಗ್ಗಿ ವರ್ಚಸ್ಸು ಕಳಕೊಳ್ಳುವುದಕ್ಕಿಂತ ಸಾರ್ವಜನಿಕ ಜೀವನದಲ್ಲಿ ಪತ್ರಿಕೆಯೊಂದು ವರ್ಚಸ್ಸು ಎಂದು ಜನರಲ್ಲಿಯೂ ಸರಕಾರದಲ್ಲಿಯೂ ನಮ್ಮ ಪತ್ರಿಕೆಗಳು ಗೌರವ ಪಡೆಯ ಬೇಡವೆ?

ಕನ್ನಡ ವಾರ್ತೆಯ ಖಾತ್ರಿತನಕ್ಕೂ ವ್ಯವಸ್ಥೆಗೂ ಅನುಕೂಲವಾದ ವಾರ್ತಾ ಸಂಸ್ಥೆಯೊಂದರ ನಿರ್ಮಾಣವಾಗಬೇಕು. ಕರ್ನಾಟಕದ ಮಟ್ಟಿಗಾದರೂ ಮುಖ್ಯ ಎಲ್ಲಾ ಕೇಂದ್ರಗಳನ್ನೊಳಕೊಂಡ ತಂತೀಮೂಲಕ ಸುದ್ದಿ ದೊರಕಿಸಿ ಕೊಡುವ ನಂಬಿಗಸ್ಥ ಸಂಸ್ಥೆಯೊಂದು ಆಗಬೇಕು.

ಪತ್ರಿಕೋದ್ಯೋಗದ ಬೆಳವಣಿಗೆಯಾಗಲು ಪತ್ರಿಕೆಗಳ ವಿಷಯ ಸಂಗ್ರಹಕ್ಕೆ ಸಹಾಯವಾಗಬಲ್ಲ ವಿಶೇಷಜ್ಞರ (Specialists) ಸಹಾಯ ಬೇಕಾಗುತ್ತದೆ. ಒಬ್ಬನು ಎಲ್ಲಾ ವಿಷಯಗಳನ್ನು ಬರೆವುದು, ಎಲ್ಲರೂ ಎಲ್ಲದಕ್ಕೂ ಕೈಹಾಕುವುದು ಈ ಹಾದಿಗೆ ವಿರೋಧ. ಜನರಿಗೆ ರಂಜನೆಯಾಗುವ ರೀತಿ ಬರೆವುದು, ಉಪಯುಕ್ತ ರೀತಿಯಲ್ಲಿ ಅರಿಸುವುದು, ಅಧಿಕಾರಿಗಳ ಅವರ ಣದಲ್ಲಿ ತಕ್ಕ ಪ್ರಭಾವವಿರುವುದು—ಇವೆಲ್ಲಾ ವಾರ್ತೆ ವರದಿ ಮಾಡಿಕೊಳ್ಳುವವನಿಗಿರಬೇಕು. ನಮ್ಮಲ್ಲಿ ಪ್ರತಿಯೊಂದು ಪತ್ರಿಕೆಯೂ ಪ್ರತಿಯೊಂದು ವಿಷಯಕ್ಕೂ ಕೈಹಾಕುತ್ತದೆ. ಒಂದೊಂದು ವಿಷಯ ಅಥವಾ ಒಂದೊಂದು ವಿಷಯಗಳ ಗುಂಪನ್ನು ಅರಿಸುವ ಪತ್ರಿಕೆಗಳು ಬೇಕು. ಅವುಗಳಲ್ಲಿ ಅಧಿಕಾರ ವಾಣಿಯಿಂದ ಬರೆಯಬಲ್ಲ ತಜ್ಞರ ಬೆಂಬಲ ದೊರಕಿಸಿಕೊಳ್ಳಬೇಕು.

ಈಗ ಪತ್ರಿಕೋದ್ಯೋಗಿಯು ನಿತ್ಯ ಅವಸರದಲ್ಲಿ ಬಳಕೆಗೆ ತರಬೇಕಾದ ಅನೇಕ ಪಾರಿಭಾಷಿಕ ಶಬ್ದಗಳಿವೆ. ಇವುಗಳ ಬಗ್ಗೆ ಒಂದು ಶಬ್ದಕೋಶ ಮಾಡಬೇಕೆಂದು ಬಾಗಲಕೋಟೆಯ ಸಮ್ಮೇಳನದಲ್ಲೇ ನಿರ್ಣಯವಾಗಿತ್ತು. ಆದರೆ ಈ ಕೆಲಸ ನಿರ್ಣಯದೊಂದಿಗೆ ಮುಗಿಯಿತು. ಈ ಹೊತ್ತು ನಮಗೆ ಅರ್ಥಶಾಸ್ತ್ರ, ರಾಜಕೀಯ, ಯುದ್ಧ ವಿಜ್ಞಾನ ಇವೇ ಮೊದಲಾದ ಹಲವು ಬಗೆಯ ಶಬ್ದಗಳನ್ನು ಪತ್ರಿಕೆಗಳಲ್ಲಿ ಬಳಕೆಗೆ ತಾರದೆ ಗತ್ಯಂತರವಿಲ್ಲ. ಒಬ್ಬೊಬ್ಬರು ತಮ್ಮ ಇಚ್ಛೆಗೆ ಕಂಡ ಒಂದೊಂದು ಶಬ್ದವನ್ನುಪಯೋಗಿಸುವ ಬದಲು ಅಖಿಲ ಕರ್ನಾಟಕವೂ ಒಪ್ಪುವ ಶಬ್ದಕೋಶವನ್ನು ನಿರ್ಮಿಸಬೇಕಾಗಿದೆ.

ಪತ್ರಿಕಾ ವ್ಯವಸಾಯಿಗಳದೇ ಆದ ಒಂದು ಸಮಸ್ಯೆಯಿದೆ. ಈ ವ್ಯವಸಾಯಕ್ಕೆ ತಕ್ಕುದಾಗ ಕನಿಷ್ಠ ಯಾವ ಶಿಕ್ಷಣ ಬೇಕು, ಅದನ್ನು ಹೇಗೆ ದೊರಕಿಸಿಕೊಳ್ಳಬೇಕು ಎಂಬುದೊಂದು; ಪತ್ರಿಕೆಯ ಚಾಲಕರಿಗೂ ಸಂಪಾದಕರಿಕೂ ಇರಬೇಕಾದ ಗೌರವದ ಸಂಬಂಧವೊಂದು; ಯಾರೂ ಈಗಿನ ದಿನಗಳಲ್ಲಿ ಬಿಟ್ಟಿಯಾಗಿ ದುಡಿವುದಿಲ್ಲ. ಈ ಉದ್ಯೋಗ ಜೀವನಕ್ಕೂ ಒಂದು ದಾರಿಯಾಗಬೇಕು. ಬಂಡವಾಳಗಾರರ ಕೈಯಲ್ಲಿ ಕಾಫಿ ಹೋಟೆಲಿನ ದುಡಿತಕ್ಕೂ ಇದು ಕಡಿಮೆಯಲ್ಲವೆಂದು ತೋರಿಸಬೇಕು; ಇರದು ನಮ್ಮ ನಾಡಿನಲ್ಲಿ ಬರಹಗಾರರ ಪತ್ರಿಕೋದ್ಯೋಗಿಗಳ ಸ್ಥಿತಿ ಚೆನ್ನಾಗಿಲ್ಲವೆಂದೇ ಒಪ್ಪಿ ನಾವೀ ಪ್ರಶ್ನೆಯನ್ನು ಚರ್ಚಿಸಬೇಕು.

ಇಂದು ಮಕ್ಕಳ ಮನಸ್ಸನ್ನು ರಂಜಿಸ ತಕ್ಕುದಾಗಿ ಅವರಿಗೆ ಬೇಕಾಗುವ ಬಣ್ಣ ಬೆಡಗು ರಂಜನೆಗಳಿಂದ ಕೂಡಿದ ಪತ್ರಿಕೆಯುಂಟೆ? ಆಧುನಿಕ ಜ್ಞಾನ ಪ್ರಸಾರಕ್ಕೆ ನಮ್ಮ ಸಾಮಾನ್ಯ ಹಳ್ಳಿಗನು ದೊರಕಬೇಕೆಂದು ಬಯಸುವ ಪತ್ರಿಕೆಯುಂಟೆ? ಮನಶ್ಶಾಸ್ತ್ರದ ಪ್ರಗತಿಯನ್ನಾಗಲಿ, ಮಾನವ ಶಾಸ್ತ್ರದ ಪ್ರಗತಿಯನ್ನಾಗಲಿ ಜನರ ಮುಂದಿಡಬೇಡವೆ? ವಿವಿಧ ಕಲೆಗಳಿಗೆ ನವೀನ ದೃಷ್ಟಿಯನ್ನು ಕೊಡುವ ಪತ್ರಿಕೆಗಳು ನಮಗೆ ಬೇಡವೆ?

ಕನ್ನಡ ಪತ್ರಿಕೆಯ ಬಾಳು ಎಷ್ಟೇ ಬಡವಾಗಿದ್ದರೂ ಅದಕ್ಕಾಗಿ ದುಡಿದವರ ಸಂಖ್ಯೆ— ದುಡಿದ ಪತ್ರಿಕೆಗಳು ಬಹಳ ಇದ್ದುವು; ಇವೆ. ಇವುಗಳ ಕಥೆಯೆಲ್ಲ ಒಂದು ಶತಮಾನದ ಬದುಕು ಆದರೂ ವೃತ್ತಪತ್ರಿಕೆಗಳ ನೆನಪು ನಮಗೇನೇ ಅಳಿದು ಹೋಗಿದೆ. ಒಂದು ಇತಿಹಾಸದ ದೃಷ್ಟಿಯಿಂದಾದರೂ ಈ ವಿಷಯವಾದ ವಾರ್ತೆಯನ್ನು—ಅನುಭವನ್ನು ಕಲೆತು ಹಾಕಿ ಒಂದು ಪುಸ್ತಕ ಪ್ರಕಟಿಸಬೇಕು.

ಸಮ್ಮೇಳನ ಕಾಲದಲ್ಲಿ ಈ ವಿಷಯಗಳಲ್ಲಿ ಅನುಭವವುಳ್ಳವರನ್ನು ಮುಂದಿರಿಸಿಕೊಂಡು ವಿಚಾರಿಗಳೊಡನೆ ತರ್ಕಿಸಿ ಸ್ವಲ್ಪವಾದರೂ ಕೆಲಸಮಾಡಲಿಕ್ಕೆ—ತೊಡಗುವುದವಶ್ಯ. ಈ ಸೂಚನೆಗಳ ಕುರಿತಾಗಲಿ, ತಮಗೆ ತೋರುವ ಇತರ ಸೂಚನೆಗಳ ಕುರಿತಾಗಲಿ. ವಿವಿಧ ಪ್ರಾಂತದ ಪತ್ರಿಕೋದ್ಯೋಗಿಗಳು ತಮ್ಮ ಅಭಿಪ್ರಾಯವನ್ನು ಸೂಚಿಸಿದಲ್ಲಿ ಸಮ್ಮೇಳನ ಕಾಲದಲ್ಲಿ ಇದಕ್ಕೊಂದು ಮೂರ್ತ ಸ್ವರೂಪಕೊಡಲು ಬಂದೀತು."

ಸಿನೆಮಾ ಸುದ್ದಿ

ಬಂಗಾಳವೇಕೆ ಉಪವಾಸಬಿತ್ತು?

ಈ ಹೆಸರಿನ ಚಿತ್ರವೊಂದು ಕಲ್ಯಾಣ ಚಿತ್ರ ಲಿಮಿಟೆಡ್ ಇವರಿಂದ ರಚಿತವಾಗಿದ್ದು, ಇದನ್ನು ಇನ್‌ಫೋರ್ಮೇಶನ್ ಫಿಲ್ಮ್ ಓಫ್ ಇಂಡಿಯಾದವರು ಕೈವಶಪಡಿಸಿಕೊಂಡಿರುವರೆಂದು ತಿಳಿಯುತ್ತದೆ.

ಕನ್ನಡ ಸಿನೆಮಗಳು

'ವಾಣಿ' ಮತ್ತು 'ರಾಧಾರಮಣ' ಎಂಬೀ ಎರಡು ಕನ್ನಡ ಚಿತ್ರಗಳೀಗ ತಯಾರಾಗಿದ್ದು ಪ್ರದರ್ಶನಕ್ಕೆ ಸಿದ್ಧವಾಗಿವೆ. ಕಚ್ಚಾಫಿಲ್ಮ್ ಪಡೆಯಲು ಕೆಲವರು ಪ್ರಯತ್ನಿಸುತ್ತಿರುವುದರಿಂದ ಈ ವರ್ಷ ಇನ್ನು ಕೆಲವು ಕನ್ನಡ ಚಿತ್ರಗಳಾಗುವ ಸಂಭವ ತೋರುತ್ತದೆ.

ಪತ್ರಿಕಾ ಸಂಪಾದಕರ ಚಿತ್ರ

ಇತ್ತೀಚೆಗೆ ಮದ್ರಾಸಿನಲ್ಲಿ ಜರಗಿದ ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನದ ಚಿತ್ರವನ್ನು ಜೆಮಿನಿ ಸ್ಟುಡಿಯೋದವರು ಚಿತ್ರವಾಗಿ ತಯಾರಿಸುವರು. ಸಂಪಾದಕ ಸಮ್ಮೇಳನವು ಜೆಮಿನಿ ಸ್ಟುಡಿಯೋ ಸಂಪಾದಕ ಶ್ರೀ ವಾಸನರು ತಮಿಳಿನ ಪ್ರಸಿದ್ಧ ಪತ್ರಿಕೆ ಆನಂದ ವಿಕಟನ್' ಸಂಪಾದಕರು ಆಗಿರುವರು.

ವಿದ್ಯಾರ್ಥಿ ಸಮ್ಮೇಳನವೋ? ಕಮ್ಯುನಿಸ್ಟ ಸಮ್ಮೇಳನವೋ?

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿ ಸಮ್ಮೇಳನವು ಕಳೆದ ತಾ. ೩೦ ಮತ್ತು ೩೧ರಂದು ಮೈಸೂರಿನ ಕಮ್ಯುನಿಸ್ಟ ಪಕ್ಷದ ಪುಢಾರಿಯಾದ ಕಾಮ್ರೇಡ್ ಕೇಸರೀ ಕೇತನನವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾರ್ಥಿಗಳಲ್ಲಿ ಸಂಘಟನೆಯಾಗಬೇಕು; ವಿದ್ಯಾರ್ಥಿಗಳು ಬಲಗೊಳ್ಳಬೇಕು, ವಿದ್ಯಾರ್ಥಿನಿಯರೂ ಸಂಘಟಿತರಾಗಿ ಮುಂದೆ ಬರಬೇಕು, ದೇಶದ ಆಹಾರ ಸಂಕಷ್ಟ ಪರಿಹರಿಸಬೇಕು, ಫೇಸಿಸಮ್ಮನ್ನು ವಿರೋಧಿಸಬೇಕು, ಅಂತರ್ರಾಷ್ಟ್ರೀಯ ವಿಶಾಲಮತಿಗಳಾಗಬೇಕು—ಎಂಬಿತ್ಯಾದಿ ತತ್ವಗಳು ಈ ಸಮ್ಮೇಳನದ ವೇದಿಕೆಯಿಂದ ಭಾಷಣಗಳ ಮೂಲಕ, ನಿರ್ಣಯಗಳ ಮೂಲಕ ಸಾರಲ್ಪಟ್ಟವು. ಸಮ್ಮೇಳನವನ್ನು ಸೇರಿಸಿದವರ ಧ್ಯೇಯದಂತೆ ಸಮ್ಮೇಳನವು ಯಶಸ್ವಿಯಾಯಿತು.

ಮಂಗಳೂರಿನ ವಿದ್ಯಾರ್ಥಿಗಳಲ್ಲಿ ಐಕ್ಯವಿಲ್ಲವೆಂಬ ವಿಷಯವನ್ನು ಸಮ್ಮೇಳನ ಸಂಘಟಕರೂ ಅವರ ಹಿತಚಿಂತಕರಾಗಿ ಭಾಷಣವಿತ್ತ ಮಂಗಳೂರಿನ ಕಮುನಿಸ್ಟರೂ ನೇಶನಲ್ ವಾರ್ ಫ್ರಂಟಿನವರೂ ಒಪ್ಪಿಕೊಂಡಿದ್ದಾರೆ. [ಮಂಗಳೂರಿನ ವಿದ್ಯಾರ್ಥಿಗಳಿಗೆ ತಮ್ಮ ಹಿತಚಿಂತಕರಾಗಿ, ಕಮುನಿಸ್ಟರೂ, ನೇಶನಲ್ ವಾರ್‌ಫ್ರಂಟಿನವರೂ ಅಲ್ಲದೆ, ಪ್ರೊಫೆಸರರಾಗಲಿ, ಉಪಾಧ್ಯಾಯರಾಗಲಿ ಇನ್ನಾವದೇ ಸಾರ್ವಜನಿಕ ಮುಂದಾಳುಗಳಾಗಲಿ ದೊರಕದಿರುವುದು ವಿಷಾದಕರ] ವಿದ್ಯಾರ್ಥಿಗಳಲ್ಲಿ ಐಕ್ಯವಾಗಬೇಕೆಂದು ಅವರೆಲ್ಲರೂ ಸಾರಿದ್ದಾರೆ. ನಮ್ಮ ಜಿಲ್ಲೆಯ ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾಗಿದ್ದ ಕೀ. ಶೇ. ಹಲ್ಸನಾಡು ಸೂರಪ್ಪನವರಿಂದ ಸ್ಥಾಪಿತವಾದ ಮಂಗಳೂರಿನ ವಿದ್ಯಾರ್ಥಿ ಸಂಘವು ಒಂದು ಪ್ರಬಲ ಶಕ್ತಿಯಾಗಿ, ಅತ್ಯುತ್ತಮ ಸಂಘಟನೆಯಿಂದ ಹಲವಾರು ವರ್ಷಗಳ ವರೆಗೆ ನಡೆದುಬಂದಿದ್ದು, ಯಶಸ್ವೀ ಪ್ರಾತಿನಿಧಿಕ ಸಮ್ಮೇಳನಗಳನ್ನು—ದಕ್ಷಿಣ ಕನ್ನಡ ಮಲಬಾರುಗಳ ವಿದ್ಯಾರ್ಥಿಗಳನ್ನೂ ಕೂಡಾ ಕೂಡಿಸಿಕೊಂಡು ಸಮ್ಮೇಳನಗಳನ್ನು ಜರಗಿಸಿದ್ದು ಇಂದಿಗೂ ನಾವು ಹೆಮ್ಮೆ ಪಡತಕ್ಕಂಥಾ ವಿಷಯವಾಗಿದೆ. ಈಗ ಯಾವ ವಿದ್ಯಾರ್ಥಿಗಳ ಕಮುನಿಸ್ಟ ಹಿತಚಿಂತಕರು, ವಿದ್ಯಾರ್ಥಿಗಳ ಐಕ್ಯಕ್ಕಾಗಿ ಕೂಗುತ್ತಿದ್ದಾರೋ, ಅವರು ವಿದ್ಯಾರ್ಥಿ ಸಂಘವನ್ನು ಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳಲ್ಲಿ ಚೆನ್ನಾದ ಐಕ್ಯವಿತ್ತೆಂಬುದೂ ಸರ್ವ ವಿದಿತವಿದೆ ಮಾತ್ರವಲ್ಲದೆ ಕಮುನಿಸ್ಟರು, ಯೇನಕೇನ ಪ್ರಕಾರೇಣ ಆದರೂ ತಮ್ಮ ಧೋರಣೆ ಸಾಧಿಸಲು ವಿದ್ಯಾರ್ಥಿ ಸಂಘಗಳಲ್ಲಿ ತಂತ್ರ ನಡೆಸುತ್ತಿದ್ದಾರೆಂಬೀ ಆರೋಪದಿಂದಲೇ, ರಾಷ್ಟ್ರಿಸ್ಟರು ಬೇರಾಗಿ ಮಂಗಳೂರಲ್ಲಿ ಇನ್ನೊಂದು ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆಂಬುದೂ ಸ್ಪಷ್ಟವಿದೆ. ಈ ಸಲದ ಸಮ್ಮೇಳನದಲ್ಲಿಯೂ ಕೂಡಾ, ಮಂಗಳೂರಿನ ಕಮುನಿಸ್ಟರು, ಕಮುನಿಸ್ಟರೇ ಆದ ಅಧ್ಯಕ್ಷರ ಸಹಾಯದಿಂದ, ಇತರ ಪಕ್ಷದ ವಿದ್ಯಾರ್ಥಿಗಳ ಆಶೆ ಅಭಿಮತಗಳಿಗೆ ಏನೇನೂ ಅಸ್ಪದ ಕೊಡದೆ ಅವರು ತಂದ ನಿರ್ಣಯಗಳನ್ನು ತಿರುಚಿ ಬದಿಗೆ ತೆಗೆದುಹಾಕಿದ್ದು ಮಾತ್ರವಲ್ಲ ಬಹಿರಂಗ ಅಧಿವೇಶನದಲ್ಲಿ ಚರ್ಚೆಗೂ ಮತಗಣನೆಗೂ ಎಡೆಗೊಡದೆ ಅಕ್ರಮವಾಗಿಯಾದರೂ ತಮ್ಮ ತಂತ್ರವನ್ನೇ ನಡೆಸಿದ್ದು ನೋಡುವಾಗ, ವಿದ್ಯಾರ್ಥಿಗಳ ಹಿತಚಿಂತಕರಾಗಿ ಬಂದ, ಮಂಗಳೂರಿನ ಕಮುನಿಸ್ಟರು ಹಾಗೂ ಅಧ್ಯಕ್ಷರು ನಿಜವಾಗಿ ವಿದ್ಯಾರ್ಥಿಗಳಲ್ಲಿ ಐಕ್ಯವನ್ನುಂಟುಮಾಡುತ್ತಾರೋ, ಅನೈಕ್ಯವನ್ನುಂಟುಮಾಡುತ್ತಾರೋ ಎಂಬುದನ್ನು ಸುಲಭವಾಗಿ ಊಹಿಸಬಹುದು.

ಈ ವಿದ್ಯಾರ್ಥಿ ಸಮ್ಮೇಳನವನ್ನು ಸೇರಿಸಿ ತಮ್ಮ ಪಕ್ಷವನ್ನು ಬಲಪಡಿಸಲು, ಅಥವಾ ಬಲಪಡಿಸಿದೆವೆಂದು ಪ್ರಚಾರ ಮಾಡಲು ಪ್ರಯತ್ನಿಸುವ ಮಂಗಳೂರಿನ ಕಮ್ಯುನಿಸ್ಟ್ ಕಾಮ್ರೇಡರನ್ನು ನಿಜವಾಗಿ ಅಭಿನಂದಿಸಬೇಕಾಗಿದೆ. ಆದರೆ ಅವರು ಹೀಗೆ ಇತರ ಪಕ್ಷದವರಿಗೆ ಅಸ್ಪದ ಕೊಡದೆ ತಮ್ಮದೇ ತಂತ್ರ ನಡೆಸುತ್ತಿರುವುದರಿಂದ, ರಾಷ್ಟ್ರೀಯ ಮನೋಭಾವದ ವಿದ್ಯಾರ್ಥಿಗಳಿಗೆ ಸಂಘಟನೆಯಾಗಲು ಸರಕಾರವೂ ಅವರ ಮೇಲೆ ನಿರ್ಬಂಧ ಹಾಕಿರುವಾಗ ಮತ್ತು ರಾಷ್ಟ್ರೀಯ ಮುಖಂಡರು ಸೆರೆಮನೆ ಸೇರಿ ಕಾಂಗ್ರೆಸು ಸಂಸ್ಥೆ ನ್ಯಾಯಬಾಹಿರವೆನಿಸಿರುವಾಗ ಕಮುನಿಸ್ಟರೂ ಅವರ ಆಶೆ ಅಭಿಪ್ರಾಯಗಳಿಗೆ ಅಸ್ಪದ ಕೊಡದೆ ಇರುವುದರಿಂದ ವಿದ್ಯಾರ್ಥಿಗಳ ಐಕ್ಯ ಸಾಧಿಸಿದಂತಾಗುವುದಿಲ್ಲವೆಂಬುದನ್ನು ಇಲ್ಲಿ ಸ್ಪಷ್ಟ ತಿಳಿಸಬೇಕಾಗಿದೆ.

ಇಂದಿನ ವಿದ್ಯಾರ್ಥಿಗಳೇ ಮುಂದಿನ ರಾಷ್ಟ್ರ ನಿರ್ಮಾಪಕರು; ಅವರು ಸದಾ ಪ್ರಗತಿಗಾಮಿಗಳು; ಅವರಲ್ಲಿ ಉಜ್ವಲ ರಾಷ್ಟ್ರಾಭಿಮಾನವಿದೆ. ಇಂಥಾ ವಿದ್ಯಾರ್ಥಿಗಳು ಯಾವುದೇ ಪಕ್ಷದ ಕೈಗೊಂಬೆಗಳಾಗುವುದು ಅಥವಾ ತಾವು ಕೈಗೊಂಬೆಗಳಾಗಿ ಉಪಯೋಗಿಸಲ್ಪಡುವುದನ್ನು ಸಹಿಸುವುದೂ ನ್ಯಾಯವಲ್ಲ. ಇಂದಿನ ನಮ್ಮ ದುಷ್ಟದ ಪರಿಸ್ಥಿತಿಯಲ್ಲಂತೂ, ರಾಷ್ಟ್ರ ಮುಖಂಡರೂ, ರಾಷ್ಟ್ರೀಯ ಸಂಸ್ಥೆಯೂ ನಿರ್ಬಂಧಕ್ಕೊಳಗಾಗಿರುವಾಗ, ಅಪ್ರಾಗತಿಕರು, ಅರಾಷ್ಟ್ರೀಯ ಧೋರಣೆಯವರು ಮುಂಬಂದು ವಿದ್ಯಾರ್ಥಿ ಸಂಘಗಳಲ್ಲಿ ತಮ್ಮ ಸೂತ್ರಚಾಲನೆ ನಡೆಸುವುದು ಸ್ವಾಭಾವಿಕವಿದೆ. ಮಂಗಳೂರಿನ ಹಾಗೂ ಜಿಲ್ಲೆಯ ವಿದ್ಯಾರ್ಥಿಗಳು ಈ ಸಮ್ಮೇಳನದಿಂದ ತಮ್ಮ ಮುಂದಿನ ಧೋರಣೆಯ ಕುರಿತು ಒಳ್ಳೆಯ ಪಾಠವನ್ನು ಕಲಿತುಕೊಳ್ಳಬೇಕಾಗಿದೆ. ಮಂಗಳೂರ ವಿದ್ಯಾರ್ಥಿ ಸಂಘದಲ್ಲಿ ವಿದ್ಯಾರ್ಥಿ ಮುಂದಾಳುತನವಿಲ್ಲವೆಂದು ಸ್ಪಷ್ಟವಾಗಿದೆ. ಇನ್ನಾದರೂ ವಿದ್ಯಾರ್ಥಿಗಳು ಎಚ್ಚತ್ತು, ತಮ್ಮ ಸಂಘದಲ್ಲಿ ತಮ್ಮ ಹೆಸರಲ್ಲಿ ಅರಾಷ್ಟ್ರೀಯ ಧೋರಣೆಯನ್ನು ಸಾಧಿಸುತ್ತಿರುವ ಅಪ್ರಾಗತಿಕ ರಾಜಕೀಯ ಸಂತೃಸಾಧಕರನ್ನು ಹೊರ ಹಾಕಿ ತಮ್ಮದೇ ಮುಂದಾಳುತನ ಸ್ಥಾಪಿಸಿಕೊಳ್ಳಲಾರರೆ?

—ವಿದ್ಯಾರ್ಥಿ.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT.
Mangalore Stockists:— M/S D. Narsimha Pai & Sons, Mangalore
Universal Industries (India) Ltd.
Nable chambers, Fort Bombay.

ರಾಷ್ಟ್ರೀಯ ವಿದ್ಯಾರ್ಥಿಗಳ ಮೇಲೆ ಮದ್ರಾಸ್ ಸರಕಾರದ ನಿರ್ಬಂಧ

ಮದ್ರಾಸು ಪ್ರಾಂತದ ರಾಷ್ಟ್ರೀಯ ವಿದ್ಯಾರ್ಥಿ ಸಂಘಗಳ ಮೇಲೆ ಸರಕಾರವು ನಿರ್ಬಂಧ ಹಾಕ್ಕೆ ಮಾಡಿದೆ. ಈ ವಿದ್ಯಾರ್ಥಿ ಸಂಘಗಳಲ್ಲಿ ೪೦,೦೦೦ಕ್ಕೆ ಮಿಕ್ಕಿ ವಿದ್ಯಾರ್ಥಿಗಳಿದ್ದಾರೆ. ಇದೀ ವಿದ್ಯಾರ್ಥಿ [illegible] ಸರಕಾರವು ಮಾಡಿದ ಈ ನಿರ್ಬಂಧವನ್ನು ಹಿಂತೆಗೆಯಬೇಕೆಂದು ಕೇಳುತ್ತಿದೆ. ಈ ವಿದ್ಯಾರ್ಥಿ ಸಂಸ್ಥೆ ಯಾವುದೇ ಅನ್ಯಾಯ ಅಕ್ರಮ ಕಾರ್ಯ ಮಾಡುತ್ತದೆಂದು ಸರಕಾರ ರುಜುಪಡಿಸದ ವಿನ ಈ ಪ್ರತಿಬಂಧಕಾಜ್ಞೆ ನ್ಯಾಯಸಮ್ಮತವಾಗಲಾರದು.

ಕಳೆದ ಆಗಸ್ಟಿನಲ್ಲಿ ರಾಷ್ಟ್ರ ಮುಖಂಡರು ಸೆರೆಮನೆ ಸೇರಿದರು. ಎಷ್ಟೋ ಮಂದಿ ವಿದ್ಯಾರ್ಥಿಗಳೂ ಸೆರೆಮನೆ ಸೇರಿದರು. ಸರಕಾರ ವಿಚಾರಣೆಯಿಲ್ಲದೆ, ವಿಚಾರಣೆ ಮಾಡದೆ ರಾಷ್ಟ್ರದ ನಿಜವಾದ ಮುಂದಾಳುಗಳನ್ನು ಸೆರೆಮನೆಯಲ್ಲಿರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮುಂದಾಳುಗಳಿಲ್ಲದಾಯಿತು. ಈ ಮಧ್ಯೆ, ಕಮುನಿಸ್ಟರೇ ಮೊದಲಾದ ಅಪ್ರಾಗತಿಕ ಧೋರಣೆಯವರು ವಿದ್ಯಾರ್ಥಿ ಸಂಘಗಳನ್ನು ಆಕ್ರಮಿಸಿ ತಮ್ಮ ಕೈವಾಡ ನಡೆಸಿದರು. ವಿದ್ಯಾರ್ಥಿ ಸಂಘಗಳ ಹೆಸರಲ್ಲಿ ಯುದ್ಧ ಪ್ರಚಾರ ಕೈಕೊಂಡರು. ಇಂಥಾ ಸಂದರ್ಭದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಸಂಘ ಸ್ಥಾಪಿತವಾಗಿ, ರಾಷ್ಟ್ರೀಯ ಮನೋಭಾವದ ವಿದ್ಯಾರ್ಥಿಗಳನ್ನು ಸಂಘಟಿಸಿ, ಅಪ್ರಾಗತಿಕ ಧೋರಣೆಯವರನ್ನು ಕಮುನಿಸ್ಟರನ್ನೂ ವಿದ್ಯಾರ್ಥಿ ಸಂಘಗಳಿಂದ ಹೊರತಳ್ಳುತ್ತಾ ಒಂದು ನಿಜವಾದ ಸಂಘಟನೆ ಮಾಡಿತು. ಸರಕಾರವು ಇಂಥಾ ಸಂಸ್ಥೆಯನ್ನೀಗ ನಿರ್ಬಂಧಿಸಿದೆ. ಇದರಿಂದ ರಾಷ್ಟ್ರೀಯ ಮನೋಭಾವದ ವಿದ್ಯಾರ್ಥಿಗಳ ಚಟುವಟಿಕೆ ನಿರ್ಬಂಧಿಸಲಾಗಿದೆ ಅಪ್ರಾಗತಿಕ ಧೋರಣೆಯವರಿಗೆ ಸರಕಾರ ಅವಕಾಶಕೊಟ್ಟಿದೆ.

ಮುಂದಿನ ಕೇಂದ್ರ ಶಾಸನ ಸಭೆಯಲ್ಲಿ

ಹೊಸ ವರ್ಷದ ಬಿರುದುಗಳನ್ನು ಕೊಡುವ ಕ್ರಮವಿದೆಯಷ್ಟೆ?—ಸರ್ದಾರ್ ಮಂಗಲ ಸಿಂಗರು (ಕಾಂಗ್ರೆಸ್) ಮುಂದಿನ ಕೇಂದ್ರ ಎಸೆಂಬ್ಲಿಯಲ್ಲಿ ಮಂಡಿಸಲೆಂದು, ಭಾರತದ ರಾಷ್ಟ್ರೀಯರಿಗೆ ಯಾವುದೇ ತರದ ಬಿರುದನ್ನು ಸರಕಾರ ಕೊಡಬಾರದೆಂದೂ, ಕೇವಲ ಮಿಲಿಟರಿ ಕೆಲಸದವರಿಗೆ ಮಾತ್ರ ಇಂಥಾ ಬಹುಮಾನ ಕೊಡಬಹುದೆಂದು ಒಂದು ನಿರ್ಣಯ ತರುವುದಾಗಿ ತಿಳಿಸಿದ್ದಾರೆ.

ವಾರ್ ಕೆಬಿನೆಟಿಗೆ ಸರ್ ಫಿರೋಜ್ ಖಾನ್ ನೂನರ ನೇಮಕ, ಸರ್ ರೆಜಿನಾಲ್ಡ್ ಮೇಕ್ಸ್‌ವೆಲ್ಲರ ರಾಜೀನಾಮೆ ಇವುಗಳು ಬರುವ ಕೇಂದ್ರ ಶಾಸನ ಸಭಾಕಾರ್ಯದಲ್ಲಿ ಸಕಲರ ಕುತೂಹಲವನ್ನೆಳೆದಿದೆ. ಸರ್ ನೂನರು ಕೇವಲ ಎರಡೇ ತಿಂಗಳಲ್ಲಿ ಪುನಃ ಬರಲಿರುವುದರಿಂದ ಅವರ ಸ್ಥಳಕ್ಕೆ ಬೇರೆ ಜನರನ್ನು ನೇಮಿಸುವಂತೆ ಕಾಣುವುದಿಲ್ಲ, ಮೇಕ್ಸ್‌ವೆಲ್ಲರ ಬದಲಿಗೆ ರಾಮಸ್ವಾಮಿ ಮುದಲಿಯಾರರ ಹೆಸರು ಮುಂದೆ ಬಂದಿರುವುದು.

ಸತ್ಯಮೂರ್ತಿಯವರ ಸ್ಥಳಕ್ಕೆ ಚುನಾಯಿತರಾದ ಶ್ರೀ| ಗಡ್ಡೆ ರಂಗಯ್ಯನಾಯ್ಡು ಇವರು, ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕೆಂದು ಒಂದು ನಿರ್ಣಯ ಮುಂದೆ ತರಲಿರುವರು. ಜನತೆಯ ಕೇಳಿಕೆಯನ್ನು ಮನ್ನಿಸಿ ಸರಕಾರ ರಾಜಕೀಯ ಕೈದಿಗಳ ಬಿಡುಗಡೆ ಮಾಡುವಂತೆ ತೋರುವುದಿಲ್ಲ. ಸರಕಾರದ ಇಷ್ಟಪ್ರಕಾರ ಈಗಾಗಲೇ ಕೆಲವರ ಬಿಡುಗಡೆ ಮಾಡಲಾಗಿದೆ. ಹೇಗಿದ್ದರೂ ಸರಕಾರದ ಬಾಲ ಹಿಡಿವ ಸದಸ್ಯರು ತುಂಬಾ ಮಂದಿ ಇರುವಾಗ ನಾಯ್ಡುರವರ ನಿರ್ಣಯ ಮಂಜೂರಾಗುವುದು ಸುಲಭವಾಗಿ ತೋರುವುದಿಲ್ಲ.

ಕ್ರೈಕ್-ಕ್ರಿಪ್ಸರ್ 'ಕ್ವಿಟ್ ಇಂಡಿಯಾ' ವಿವಾದ

ಸರ್ ಹೆನ್ರಿಕ್ರೈಕ್ ಪಂಜಾಬ್ ಗವರ್ನರರಾಗಿದ್ದವರು; ಆ ಮೇಲೆ ವೈಸರಾಯರಿಗೆ ಎಕ್ಸಿಕ್ಯೂಟಿವ್ ಕೌನ್ಸಿಲರರಾಗಿ (ಸಂಸ್ಥಾನಗಳ ವಿಷಯ) ಇದ್ದರು. ಇತ್ತೀಚೆಗೆ ಅವರಿಗೂ ಕ್ರಿಪ್ಸರಿಗೂ ಒಂದು ವಿವಾದವುಂಟಾಗಿದೆ.

ಕ್ರಿಪ್ಸರು, ಆಶ್ರಿತ ರಾಜರನ್ನು ಕರೆದು, "ನಾವು ಭಾರತವನ್ನು ಬಿಟ್ಟು (ಕ್ವಿಟ್ ಇಂಡಿಯಾ) ಹೊರಟು ಹೋಗುತ್ತೇವೆ, ನಮ್ಮ ಹೊಣೆಗಾರಿಕೆಯನ್ನೆಲ್ಲಾ ಬಿಟ್ಟಿರುತ್ತೇವೆ; ಇನ್ನು ಮುಂದೆ ನೀವು ಕಾಂಗ್ರೆಸಿನೊಡನೆ ಗೃಹಸ್ಥರಂತೆ ನಡೆದುಕೊಳ್ಳಬೇಕು" ಎಂದು ಹೇಳಿದರೆಂದು ಸರ್ ಕ್ರೈಕ್ ಹೇಳುತ್ತಾರೆ.

ಇದಕ್ಕೆ ಕ್ರಿಪ್ಸರ ಉತ್ತರ ಹೀಗಿದೆ. "ನಾನು ಇಂಗ್ಲೆಂಡಿಗೆ ಮರಳಿದ ಕೂಡಲೇ ಮಾಡಿದ ಭಾಷಣದಲ್ಲಿ ಆಶ್ರಿತರಾಜರೊಡನೆ ಏನೇನು ಹೇಳಿದ್ದೇನೆಂದು ಪ್ರಕಟವಾಗಿದೆ. ಅದರಲ್ಲಿ 'ಕ್ವಿಟ್ ಇಂಡಿಯಾ' ಸಂಗತಿ ಹೇಳಿದ ವರದಿಯಲ್ಲ" ಎಂದು.

ಆದರೆ ಭಾರತದಲ್ಲಿರುವ ನಮಗೆ ಕ್ರಿಪ್ಸ್ ಸಂಧಾನವನ್ನು ಆದಿಯಿಂದ ಅಂತ್ಯದವರೆಗೆ ಅಭ್ಯಾಸಮಾಡಿದವರಿಗೆ ಕ್ರಿಪ್ಸರು ಮೊತ್ತಮೊದಲು ಈ ತರದ ಮಾತನ್ನಾಡಿದ್ದರಿಂದೂ, ಆ ಮೇಲೆ ಅವರಾಡಿದ ಮಾತು ವೈಸರಾಯರಿಂದ ಬ್ರಿಟಿಷ್ ಮಂತ್ರಿ ಮಂಡಳಕ್ಕೆ ವರದಿಯಾಗಿ, ಬಳಿಕ ಕ್ರಿಪ್ಸರು ತಾನು ಹೇಳಿದ ಮಾತನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತೆಂದೂ ವಿದಿತವಾಗಿರುವುದು. ಲುಯಿಫಿಶರ್ ಹೇಳಿದಂತೆ ಕ್ರಿಪ್ಸರನ್ನು "ಬೆನ್ನಿನಿಂದ ತಿವಿದರು" ಎಂಬುದು ಸ್ಪಷ್ಟವಿದೆ.

ಕಿಶೋರಿಲಾಲರಿಗೆ ಕಾಯಿಲೆ!

ನಾಗಪುರ ಸೆರೆಮನೆಯಿಂದ ಸುದ್ದಿ ಬಂದಿದೆ, 'ಕಿಶೋರಿಲಾಲರಿಗೆ ಕಾಯಿಲೆ!' ಎಂದು! ಇದ ನ್ನೋದಿ ಗಾಂಧೀಜಿ ಹೃದಯಕ್ಕೆ ಎಷ್ಟು ಬೇನೆಯಾಗುತ್ತದೋ ಏನೋ!

ಗಾಂಧೀಜಿಗೆ ಮಹಾದೇವದೇಸಾಯಿ ಬಲಗೈಯಾದರೆ, ಕಿಶೋರಿಲಾಲ ಮಶ್ರೂವಾಲರು ಎಡಗೈ. ದೇಸಾಯಿ ಗಾಂಧೀ ತತ್ವವನ್ನು ಜಗತ್ತಿಗೆ ಸಾರಿದರೆ ಅವನ್ನು ಕಾರ್ಯರೂಪಕ್ಕೆ ತಂದ ಕೀರ್ತಿ ಕಿಶೋರಿಲಾಲರದು. ಭಾರತಕ್ಕೆ ಗಾಂಧೀ ಸೇವಾಸಂಘ ಸಲ್ಲಿಸಿದ ಸೇವೆ ಅಪಾರವಾದುದು, ಗಾಂಧೀ ಸೇವಾ ಸಂಘದ ಸೂತ್ರಧಾರರು ಕಿಶೋರಿಲಾಲರು.

೧೯೪೨ರಲ್ಲಿ ಗಾಂಧೀಜಿ ಸಹಿತ ಕಾಂಗ್ರೆಸ್ ನಾಯಕರು ಸೆರೆಸೇರಿದ ಮೇಲೆ ಕಿಶೋರಿಲಾಲರು 'ಹರಿಜನ'ದ ಸಂಪಾದಕರಾದರು. ಇವರ ನಿರ್ಭಯ ನುಡಿ ಸರಕಾರಕ್ಕೆ ಸಹಿಸದಾಯಿತು. ಇವರನ್ನು ಸರಕಾರ ಸೆರೆ ಸೇರಿಸಿತು.

ಕಿಶೋರಿಲಾಲರು ಪ್ರಕೃತಿಯಲ್ಲಿಯೇ ದುರ್ಬಲರು, ಶ್ವಾಸಕೋಶದ ರೋಗಿಗಳು, ಮೊದಲ ಸಲದ ಸೆರೆಮನೆಯಲ್ಲಿಯೇ ಇವರ ಶರೀರ ಕರಗಿ ಹೋಗಿತ್ತು. ಹೀಗಿದ್ದವರನ್ನು ಪುನಃ ಸೆರೆಮನೆ ಸೇರಿಸಿದ್ದು ಸರಕಾರದ ತಪ್ಪು. ಇವರಿಗೂ ಈಗ ಕಾಯಿಲೆ ಹೆಚ್ಚಾಗಿದೆಯೆಂಬುದು ದಾರುಣ ವಾರ್ತೆ.

1943 - 1944

Not because it is a time honoured custom but because we would feel ungrateful, if we did not express our appreciation to those whose loyalty, friendship and patronage make our success possible.

To our thousands of customer friends, the Directors and Staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desires.

ESTD. 1906.

CANARA BANK LTD.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 5/1944,

ಅರ್ಜಿದಾರಳು-ಮಾನಿ ಕೃಷ್ಣಯ್ಯ, ಮಾನಿ ಲಕ್ಷ್ಮಿನಾರ್ಣಪ್ಪಯ್ಯನವರ ಮಗ, ಕುಂದಾಪುರ ತಾಲೂಕು ಹನ್ನಾರ ಮಾಗಣೆ ನಾಗೋಡಿ ಗ್ರಾಮದಲ್ಲಿರುವವ ರಹಿತ, Post Kollur.

ಎದ್ರಿರು—1. ದೇವಮ್ಮ, ಮಾನಿ ಗಣಪ್ಪಯ್ಯನ ವಿಧವೆ. 2. ಮೈನರ್ ರಾಮಚಂದ್ರ. 3. ಮೈನರ್ ಪರಮೇಶ್ವರ (ಸದರಿ ಗಣಪ್ಪಯ್ಯನ ಮಕ್ಕಳು. ಇವರ ಗಾರ್ಡಿಯಾನ ತಾಯಿ ಒಂದನೆ ಎದ್ರಿಳು ದೇವಮ್ಮ) ಕುಂದಾಪುರ ತಾಲೂಕ ನಾಗೋಡಿ ಗ್ರಾಮದಲ್ಲಿರುವವರು ರಹಿತ್ತರು. Post Kollur.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:-

ಅರ್ಜಿದಾರನ ತಮ್ಮನ 1ನೇ ಎದ್ರಿ ಗಂಡ ಮತ್ತು 2-3ನೇ ಎದ್ರಿರ ತಂದೆ ತಾರೀಕು 9-11-1943ರಲ್ಲು ಮೃತವಾದ ಮಾನಿ ಗಣಪ್ಪಯ್ಯನು ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಇದರಲ್ಲಿ ನಂಬ್ರ 407006ನೇಗೆ ರೂ. 1000-0-0ಕ್ಕೆ ಮಾಡಿದ ಲೈಫ್ ಇನ್ಸೂರ್ ಬಾಬ್ತು ಬರತಕ್ಕ ಸಾಲ ವಸೂಲಿ ಕುರಿತು ಅರ್ಜಿದಾರ ವ ಎದ್ರಿರ ಕುಟುಂಬದ ಅಡಳ್ತೆದಾರನಾದ ತನಗೆ ಸಕ್ಸೇಷನ್ ಸರ್ಟಿಫೀಕೇಟು ಕೊಡಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 17--2—1944ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಡೋಣಾಗಿರುತ್ತದೆ. ಆ ಕುರಿತು ಯಾರದ್ದಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡತಕ್ಕದ್ದು. ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿರುತ್ತದೆ.

ಮೊಕ್ಕಾಂ ಕುಂದಾಪುರ, ತಾ. 1-2-'44. } M. Mahabala Hebbara, Advocate for Petnr.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore — ***BRANCHES*** Moodabidri & Padubidri

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances

FixedDeposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

HEARTY NEW YEAR GREETINGS

TO

All our Policy-holders, Agents, Medical Examiners and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

'Bhuvanendra Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ ಬಾಲಾಮೃತವು ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 11—2—1944 [ಸಂಚಿಕೆ 6]

ಬ್ರಿಟನಿನ ಭಾರತೀಯರು ಬ್ರಿಟಿಷ್ ನಾಗರಿಕರೆ?

ಅವರಿಗೆ ಸೈನ್ಯಕ್ಕೆ ಸೇರಲು ನಿರ್ಬಂಧವೇಕೆ?

ಸರೋಜಿನಿಯವರ ಬಾಯಿಗೆ ಬೀಗಮುದ್ರೆಯೇಕೆ?

ಸರೋಜಿನಿಯವರ ಬಾಯಿಗೆ ಬೀಗ ಮುದ್ರೆಯೇಕೆ?

ಶಾಸನ ಸಭೆಯಲ್ಲಿ ಸರಕಾರದ ಮೇಲೆ ಟೀಕೆ

ಹೊಸದಿಲ್ಲಿಯಲ್ಲಿ ಕೇಂದ್ರ ಎಸೆಂಬ್ಲಿ ಅಧಿವೇಶನವು ತಾ ೭ರಂದು ಪ್ರಾರಂಭವಾಗಿದ್ದು, ಶ್ರೀಮತಿ ಸರೋಜಿನಿ ದೇವಿಯರ ಮೇಲೆ ಸರಕಾರವು ಮಾಡಿದ ನಿರ್ಬಂಧಕಾಜ್ಞೆಯ ಕುರಿತು ಶ್ರೀ ಎ ಸಿ. ದತ್ತರು ಮಂಡಿಸಿದ ನಿರ್ಣಯವು ದೀರ್ಘ ಚರ್ಚೆಯ ಬಳಿಕ ಬಿದ್ದುಹೋಯಿತು ಮೇಕ್ಸ್‌ವೆಲ್ಲರು ಉತ್ತರ ಕೊಡುತ್ತಾ, ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯ ಇತರ ಸದಸ್ಯರ ಮೇಲೂ ಹೀಗೆ ನಿರ್ಬಂಧವಿದೆ ಹಾಗಿರುವಾಗ ಇವರಿಗೆ ಸೌಕರ್ಯ ಹೇಗೆ ಕೊಡುವುದು' ಎಂದರು ಶ್ರೀ ದತ್ತರು ತನ್ನ ನಿರ್ಣಯವನ್ನು ಮಂಡಿಸಿ ಸರಕಾರದ ಧೋರಣವನ್ನು ಕಟುತರವಾಗಿ ಟೀಕಿಸಿದರು ತಮ್ಮ ಬೇಳೆ ಬೇಯಿಸಿಕೊಳ್ಳಲು ಸರಕಾರ ಹೀಗೆ ನಿರ್ಬಂಧ ಹಾಕುತ್ತಿದೆಯೆಂದೂ ನುಡಿದರು

ಶ್ರೀಗಳಾದ ಎನ್ ಎಂ ಜೋಶಿ, ಲಾಹರಿ ಚೌಧರಿ, ಜಿ ವಿ ದೇಶಮುಖ, ಸರ್ ಯಾಮಿನ್ ಖಾನ್, ಕೆ ಸಿ ನಿಯೋಗಿ ಇವರೆಲ್ಲರೂ ಮಾತನಾಡಿ ಸರಕಾರ ಧೋರಣವನ್ನು ಖಂಡಿಸಿದರು ಮುಸ್ಲಿಂ ಲೀಗಿನ ಪರವಾಗಿ ಮಾತನಾಡಿದ ಸರ್ ಯಾಮಿನ್ ಖಾನರೂ ತಮ್ಮ ಪಕ್ಷವು ಇಂಥಾ ಪ್ರತಿಗಾಮಿ ಆಜ್ಞೆಗೆ ಬೆಂಬಲ ಕೊಡುವುದಿಲ್ಲವೆಂದರು ಚೌಧರಿಯವರು ಮಾತನಾಡಿ, ಸರೋಜಿನಿಯವರಿಗೆ ಹೀಗೆ ನಿರ್ಬಂಧ ಹಾಕಿ ಸರಕಾರ ತಮ್ಮ ಗೌರವ ಕಳೆಕೊಂಡಿದೆಯೆಂದೂ, ಸರಕಾರ ಗಾಂಧಿಯವರ ಮೇಲೆ ಹೊರಿಸಿದ ಆರೋಪವನ್ನೆಲ್ಲಾ ಶ್ರೀಮತಿಯವರು ಅಲ್ಲಗಳೆದು ನಿಷ್ಪಕ್ಷಪಾತ ನ್ಯಾಯಮಂಡಳಿ ಏರ್ಪಡಿಸಬೇಕೆಂದು ಸರಕಾರಕ್ಕೆ ಅವರು ತಿಳಿಸಿದ್ದಾರೆಂದೂ, ಸರಕಾರವು ಮಾತ್ರ ಕೋರ್ಟಿಗೆ ಬರಲು ಹೆದರುತ್ತದೆಯೆಂದೂ ತಿಳಿಸಿದರು

ಶ್ರೀ. ದೇಶಮುಖರು ಮಾತನಾಡಿ, ಸರೋಜಿನಿಯವರ ಮೇಲೆ ಹಾಕಿದ ಆಜ್ಞೆಯನ್ನು ನೋಡಿದರೆ ಸರಕಾರ ಕಾಯಿದೆಯನ್ನು ಹೇಗೆ ದುರುಪಯೋಗ ಪಡಿಸುತ್ತದೆಯೆಂದು ಗೊತ್ತಾಗುವುದೆಂದೂ ಯಾವುದೇ ನಾಗರಿಕ ರಾಜ್ಯದಲ್ಲಿ ಇಂಥಾ ಆಜ್ಞೆ ಹೊರಡುವುದಿಲ್ಲವೆಂದೂ ಹೇಳಿ ಸರಕಾರವು ತನ್ನ ರಕ್ಷಣೆಗಾಗಿ ಹೀಗೆ ನಿರ್ಬಂಧ ಮಾಡುತ್ತದೆಂದೂ ನಿಜವಾಗಿ ನೋಡಿದರೆ ಶ್ರೀಮತಿಯವರ ಹೇಳಿಕೆಗೆ ಆಸ್ಪದವಿತ್ತು ಆ ಮೇಲೆ ಸರಕಾರ ಅದಕ್ಕೆ ಉತ್ತರ ಕೊಡಬೇಕಿತ್ತೆಂದೂ ತಿಳಿಸಿದರು ಶ್ರೀ. ನಿಯೋಗಿಯವರು ಮಾತನಾಡಿ ಸರಕಾರ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಮೀರಾಬೆನ್ನರ ಪತ್ರವನ್ನು ಬಚ್ಚಿಟ್ಟು ಕಾಂಗ್ರೆಸ್ ವಿರುದ್ಧ ಅಪಪ್ರಚಾರ ಮಾಡುತ್ತಿದೆಯೆಂದೂ ಗೃಹಮಂತ್ರಿಗಳು ಆ ಪತ್ರವನ್ನು ಪ್ರಕಟಿಸಬೇಕೆಂದೂ ನುಡಿದರು.

'ಅತ್ಯಾಚಾರಗಳಿಗೆ ಕಾಂಗ್ರೆಸು ಹೊಣೆ' ಎಂಬ ಮೇಕ್ಸ್‌ವೆಲ್ಲರ ಪುಸ್ತಕಕ್ಕೆ ಉತ್ತರವಾಗಿ ಸರೋಜಿನಿ ದೇವಿಯವರು ಕಳುಹಿಸಿದ ಪತ್ರದ ಸಂಗತಿಯನ್ನು ಸರಕಾರ ಪ್ರಕಟಿಸಲಿಲ್ಲವೇಕೆ? ಅಂತರಾಷ್ಟ್ರೀಯ ನಿಷ್ಪಕ್ಷಪಾತೀ ನ್ಯಾಯ ಮಂಡಳದೆದುರಿಗೆ ಕಾಂಗ್ರೆಸ್ ಮುಖಂಡರ ಮೇಲಿನ ಆರೋಪದ ವಿಚಾರಣೆ ನಡೆಸಬೇಕೆಂದು ಸರೋಜಿನಿಯವರು ಮಾಡಿದ ಸೂಚನೆ ಸರಕಾರ ಗಮನಿಸುವುದೊ?'' ಎಂಬೀ ಸಾರಾಂಶದ ಪ್ರಶ್ನೆಯನ್ನು ಅಸೆಂಬ್ಲಿಯಲ್ಲಿ ಶ್ರೀ . ರಾಮರತನ ಗುಪ್ತರು ತರುವರು ಬಂಗಾಳದ ಪರಿಸ್ಥಿತಿ ಬಗ್ಗೆ ತುಂಬಾ ಪ್ರಶ್ನೆಗಳು ಎಸೆಂಬ್ಲಿ ಮುಂದೆ ಬರುತ್ತಿವೆ

ಮೇಕ್ಸ್‌ವೆಲ್ ಅಪಾಯಕಾರೀ ಗ್ರಂಥಕರ್ತೃವೆ?

ಕಮಲಾ ದೇವಿಯರ ಜೈಲು ಅನುಭವ

ಜೈಲಿನಲ್ಲಿರುವ ರಾಷ್ಟ್ರ ಧುರೀಣರಿಗೆ ಕಳುಹಿಸಲು ಅಧಿಕಾರಿಗಳು ಒಪ್ಪದ್ದರಿಂದ ಇತ್ತೀಚೆಗೆ ಕೆಲವು ಪುಸ್ತಕಗಳು ಬಹಳ ಪ್ರಚಾರ ಪಡೆದಿವೆ ಆದರೆ ಸರಕಾರವೇ ತಮ್ಮ ಪ್ರಚಾರವಾಗಿ ಪ್ರಕಟ ಮಾಡಿದ ಪುಸ್ತಕಗಳನ್ನು, ತಮ್ಮ ಪ್ರಿಯ ಜೈಲುವಾಸಿಗಳಿಗೇ ಕೊಡದಿರುವರೆಂಬುದು ಒಂದು ಆಶ್ಚರ್ಯಕರವಾದ ವಿಷಯವಾಗಿದೆ ಅದು ಮಾತ್ರವಲ್ಲ ಜಾನ್‌ಸ್ಟೈನ್‌ಬೆಕರ ನಾಜೀ ವಿರೋಧ ಕತೆ 'ದಿ ಮೂನ್ ಈಸ್ ಡಾನ್' ಕಾದಂಬರಿಯೂ ಹೀಗೆ ತಿರಸ್ಕೃತವಾದುದರಲ್ಲಿ ಒಂದು'

ಇತ್ತೀಚೆಗೆ ಅನಾರೋಗ್ಯ ನಿಮಿತ್ತ ಬಿಡುಗಡೆ ಹೊಂದಿ ಬಂದ ಶ್ರೀಮತಿ ಕಮಲಾದೇವಿಯವರಿಗೆ ಓದಲು ಕೊಡದ ಪುಸ್ತಕಗಳಲ್ಲಿ ವಿಲಿಯಂ ಪ್ರೆಸ್‌ಕೊಟ್, ಸಿಡ್ನಿ ಮತ್ತು ಬ್ರೇಟ್ರಿಕ್ ವೆಬ್ ಇವರ ಪುಸ್ತಕಗಳೂ ಇವೆ ಇವುಗಳೆಲ್ಲದಕ್ಕಿಂತಲೂ ಆಶ್ಚರ್ಯವೆಂದರೆ ಮಾಕ್ಸ್‌ವೆಲ್ ಕೃತಿ, ಸರಕಾರದ ಪ್ರಕಟಣೆ 'ದುರಂತಕ್ಕೆ ಕಾಂಗ್ರೆಸ್ ಹೊಣೆ ಪುಸ್ತಕವನ್ನು ಅವರಿಗೆ ಓದಲು ಕೊಡಲಿಲ್ಲವೆಂಬುದು

ಜೈಲು ಜೀವನದ ಇನ್ನು ಕೆಲವು ವಿಚಿತ್ರ ಘಟನೆಗಳು ಶ್ರೀಮತಿಯವರು ಇತ್ತೀಚೆಗೆ ತಿಳಿಸಿದ್ದಾರೆ "ಪತ್ರಗಳನ್ನು ಸೆನ್ಸರ್ ಮಾಡುವುದು ಒಂದು ತಮಾಷೆಯ ಸಂಕಷ್ಟ. ನಮಗೆ ಸಾಮಾನ್ಯ ವಾಕ್ಯಗಳಲ್ಲಿಯೂ ಸೆನ್ಸರ್ ಅಧಿಕಾರಿಗಳು ಗಂಭೀರ ಅರ್ಥ ಕಾಣುತ್ತಾರೆ! ಒಂದು ಮಗು ಹುಟ್ಟಿದ್ದು, ನನ್ನ ತಾಯಿಗೆ ಕಣ್ಣು ನೋವು ಆದದ್ದು ಈ ತಂತಿ ಬಂದದ್ದನ್ನೂ ಏನೋ ಗುಪ್ತ ಸಂಕೇತವೆಂದು ಅವರು ಊಹಿಸಿದರು ನನ್ನ ಸೊಸೆಯಳೊಬ್ಬಳು ಮಾತಾಹಾರಿಯಲ್ಲಿ ಸೇರಿ ನರ್ತನ ಮಾಡುವ ವಿಷಯ ಆಕೆ ಬರೆದ ಅಸಂಬದ್ಧ ಮಾತುಗಳನ್ನೂ ಸೆನ್ಸರ್ ಕಪ್ಪು ಶಾಯಿ ತೊಡೆದುಹಾಕಿತ್ತು. ನಾನು ನನ್ನ ಬಂಧುಗಳಿಗೆ ಮಾತ್ರ ಪತ್ರಬರೆಯಬಹುದಿತ್ತು. ಆದರೆ ಶ್ರೀಮತಿ ಸರೋಜಿನಿ ನಾಯ್ಡುರವರಿಗೂ ನಾನು ಪತ್ರ ಬರೆಯಬಾರದೆಂದಾಯಿತು. ೧೨ ಸಾವಿರ ಮೈಲು ದೂರವಿರುವ ನನ್ನ ಮಗನ ಕುರಿತೂ ಸಂಶಯ ಹುಟ್ಟಿದರಲ್ಲಿ.

ಕಮಲಾದೇವಿಯರ ಆರೋಗ್ಯ ಬಹಳ ಕೆಟ್ಟು ಹೋಗಿತ್ತೆಂದೂ, ಅವರಿಗೆ ರಕ್ತದ ಒತ್ತಾಟದಿಂದ ಅನಾರೋಗ್ಯವಿದ್ದು, ಕೊನೆಗೆ ವಿಷಮವಾಗುತ್ತದೆಂದು ಡಾಕ್ಟರರೂ ಎಚ್ಚರಿಕೆ ಕೊಟ್ಟ ಮೇಲೆ ಬಿಡಲಾಗಿತ್ತೆಂದೂ ತಿಳಿದು ಬರುತ್ತದಾಗಿ 'ಬೊಂಬೆ ಕ್ರಾನಿಕಲ್' ವರದಿಯಿದೆ.

ಬ್ರಿಟನಿನ ಭಾರತೀಯರು ಬ್ರಿಟಿಷ್ ನಾಗರಿಕರೆ?

ಸೈನ್ಯಕ್ಕೆ ಸೇರಲು ಒತ್ತಾಯವೇಕೆ?

ಬ್ರಿಟನಿನಲ್ಲಿರುವ ಭಾರತೀಯರು ಸೈನ್ಯಕ್ಕೆ ಸೇರಬೇಕೆಂದು ಒತ್ತಾಯದ ಆಜ್ಞೆ ಹೊರಟಿದೆ ಈ ಆಜ್ಞೆಯನ್ನು ಪ್ರಥಮತಃ ಮುರಿದವರು ಶ್ರೀ ಸುರೇಶ ವೈದ್ಯರು ತಾವು ಆಯ್ಕೆಯಿಂದಾಗಲಿ, ಸ್ವಂತ ಒಪ್ಪಿಗೆಯಿಂದಾಗಲಿ ಬ್ರಿಟಿಷ್ ಪ್ರಜೆಯಲ್ಲವೆಂಬ ಕಾರಣದಿಂದ ಸೇನೆಗೆ ಸೇರಲಾರೆನೆಂದು ಆಜ್ಞೆಗೆ ವಿರೋಧ ಹೇಳಿದ್ದಾರೆ ತಮ್ಮ ಶಾಸನವನ್ನು ಮೀರಿದ ಅವಿಧೇಯತೆಗಾಗಿ ಬ್ರಿಟಿಷ್ ಸರಕಾರವಿಂದು ಆ ಭಾರತೀಯರನ್ನು 'ಕೋರ್ಟ್ ಮಾರ್ಶಲ್' ಮುಂದೆ ವಿಚಾರಣೆಗೆ ಗುರಿಮಾಡಿದ್ದೆ! ಬಹಳ/ಕಠಿಣ ವಿಚಾರಣೆ ನಡೆಯಲಿದೆ ಬ್ರಿಟನಿನಲ್ಲಿ ಭಾರತೀಯರನ್ನು ನೆಲಸಲು ಅವಕಾಶವಿತ್ತಿರುವ 'ನೇಶನಲ್ ಸರ್ವಿಸ್ ಕಾನೂನಿನ ಪ್ರಕಾರ ಅವರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಲು ಹಕ್ಕಿದೆಯೆಂದು ಆ ಕಾಯಿದೆ ಪ್ರಕಾರ ಸಾರಲಾಗಿದೆ

ಆದರೆ ಒಂದು ವಿಷಯವುಂಟು, ಈ ಕಾಯಿದೆ ಮಾಡುವಲ್ಲಿ ಭಾರತೀಯರಿಗೆ ಯಾವ ಅಧಿಕಾರವಿದೆ? ಅವರ ಅಭಿಪ್ರಾಯವನ್ನಾದರೂ ಕೇಳಿದೆಯೆ? ಎಂಬುದೊಂದು ಸಮಂಜಸವಾದ ಪ್ರಶ್ನೆ ಈ ಪ್ರಶ್ನೆ ಹಾಕಿದ್ದರಿಂದ ಪ್ರಯೋಜನವುಂಟೆಂದು ಹೇಳಬರುವುದಿಲ್ಲ ಏಕೆಂದರೆ ಭಾರತೀಯರ ಹೆಸರಲ್ಲಿ, ಅವರ ವೆಚ್ಚದಿಂದಲೇ ನಡೆಯುತ್ತಿರುವ ಇಲ್ಲಿನ ಯುದ್ಧದ ವಿಷಯ ಭಾರತದ ಸಮಸ್ತ ೪೦೦ ಮಿಲಿಯ ಜನರಿಗೆ ಯಾವ ಪಾಲೂ ಇಲ್ಲದಿದ್ದರೂ ಅವರ ಯಾವ ಒಪ್ಪಿಗೆಯನ್ನೂ ಕೇಳದಿದ್ದರೂ ಯುದ್ಧಕಾರ್ಯ ಭಾರತದಲ್ಲಿ ಭಾರತೀಯರ ಹೆಸರಲ್ಲಿ ನಡೆಯುತ್ತಲೇ ಇದೆ ಈ ಕುರಿತು ತಮ್ಮ ವಿರೋಧಾಭಿಪ್ರಾಯ ವ್ಯಕ್ತಪಡಿಸಿದವರನ್ನು 'ಮಹಾಪರಾಧಿ'ಗಳನ್ನಾಗಿ ಮಾಡಿ ಕಳೆದ ವರ್ಷದ ಆಗಸ್ಟಿನಿಂದ ನಿರಂತರ ಜೈಲಲ್ಲಿಯೇ ಬಂಧಿಸಿಡಲಾಗಿದೆ ಅವರ ಮೇಲೆ ಸಾಲದ್ದಕ್ಕೆ ಬೇಕಾದಷ್ಟು ಆರೋಪಗಳನ್ನೂ ಹಾಕಿ ಅವುಗಳಿಗೆ ಉತ್ತರ ಕೊಡಲೂ ಯಾವ ಆಸ್ಪದವು ಮಾಡಿಕೊಡಲಾಗಲಿಲ್ಲ ಮಾತ್ರವಲ್ಲ ಉತ್ತರವಿತ್ತ ಸರೋಜಿನಿ ದೇವಿಯರಂಥವರ ಬಾಯಿಗೆ ಬೀಗಮುದ್ರೆ ಹಾಕಿಬಿಡಲಾಗಿದೆ ಶ್ರೀ. ಸುರೇಶ ವೈದ್ಯರಾದರೂ ತಮ್ಮ 'ಅಪರಾಧ'ದ ಫಲವುಣ್ಣಲೇ ಬೇಕಾಗುತ್ತದೆ ಬ್ರಿಟಿಷ್ ಸರಕಾರದ ದಕ್ಷಯಲಿ!

ಪ್ರಜಾಪ್ರಭುತ್ವ ವಿರೋಧಿ, ಫೇಸಿಸಂ ಮಿತ್ರ, ಹಿಟ್ಲರ್ ಆರಾಧಕ ಒಸ್‌ವಾಲ್ಡ್ ಮೋಸ್ಲೆಯವರಿಗಾದರೂ ಬಿಡುಗಡೆ ದೊರಕಿದ ದೇಶದಲ್ಲಿ, ಪ್ರಜಾಪ್ರಭುತ್ವಪರ ಸುರೇಶ ವೈದ್ಯರದು ಇದು ಅಪರಾಧವೇ ಅಲ್ಲವೆ? ಒಸ್ವಾಲ್ಡ್ ಮೋಸ್ಲೆಯವರು ಅಪರಾಧಿಗಳಾದರೂ ಅಪರಾಧಿಗಳಲ್ಲ, ಕಾರಣ ಅವರು ಬಿಳಿಜನ, ಬ್ರಿಟಿಷರು, ಸುರೇಶ ವೈದ್ಯರು ಅಪರಾಧಿಗಳೇಕೆಂದರೆ ಅವರು ಕರಿಜನ, ಭಾರತೀಯರಲ್ಲವೆ?

ಸರೋಜಿನಿಯವರ ಪತ್ರ ಪ್ರಕಟಿಸುವುದಿಲ್ಲ

ಮ್ಯಾಕ್ಸ್‌ವೆಲ್ಲರ ಹೇಳಿಕೆ

ಕಾಂಗ್ರೆಸು ಹಿಂಸಾಚರಣೆಮಾಡಿಲ್ಲವೆಂದು ಸರೋಜಿನಿ ದೇವಿಯವರು ೧೯೪೩ ಫೆಬ್ರವರಿಯಲ್ಲಿ ಸರಕಾರಕ್ಕೆ ಬರೆದ ಪತ್ರವನ್ನು ಪ್ರಸಿದ್ಧವಿಲ್ಲವೇಕೆಂದು ಶ್ರೀ ರಾಮರತನ ಗುಪ್ತರು ಕೇಂದ್ರ ಶಾಸನ ಸಭೆಯಲ್ಲಿಕೇಳಿದ ಪ್ರಶ್ನೆಗೆ, ಸ್ಥಾನಬದ್ಧತೆಯಲ್ಲಿರುವವನ ಪತ್ರ ಪ್ರಕಟಿಸಬಾರದೆಂದು ಸರಕಾರದ ಧೋರಣೆಯಿರುವುದರಿಂದ ಪ್ರಕಟಿಸಲಿಲ್ಲವೆಂದು ಸರಕಾರದ ಉತ್ತರ ಬಂತು ಜಪಾನರು ಧಾಳಿಯಿಟ್ಟರೆ ಸರ್ವರೂ ಪ್ರತಿಭಟಿಸಬೇಕೆಂದು ಮಹಾತ್ಮರು ೧೯೪೨ ಮೇ ತಿಂಗಳಲ್ಲಿ ಶ್ರೀಮತಿ ಮೀರಾಬೆನ್ನರಿಗೆ ಪತ್ರ ಬರೆದದ್ದನ್ನು ಪ್ರಕಟಿಸುವರೋ ಎಂದು ಪ್ರಶ್ನೆ ಕೇಳಿದಕ್ಕೆ ಅದು ಖಾಸಗಿ ಇರುವುದರಿಂದ ಸರಕಾರ ಪ್ರಕಟಿಸುವುದಿಲ್ಲವೆಂದು ಉತ್ತರ ಬಂತು ಅಂತರಾಷ್ಟ್ರೀಯ ನಿಷ್ಪಕ್ಷಪಾತೀ ವಿಚಾರಣಾ ಮಂಡಲದೆದುರು ಕಾಂಗ್ರೆಸನ್ನು ವಿಚಾರಣೆಗೆ ಗುರಿಮಾಡಲಿ ಎಂದು ಸರೋಜಿನಿ ದೇವಿಯರು ಹೇಳಿದ ಆಹ್ವಾನವನ್ನು ಸರಕಾರ ಅಂಗೀಕರಿಸುವುದೇ ಎಂಬ ಕೇಳಿದ ಪ್ರಶ್ನೆಗೆ 'ಸರಕಾರದ ಅಭಿಪ್ರಾಯ ಈ ಕುರಿತು ಈಗ ಏನು ಹೇಳಲಾರೆನೆಂದು/ಉತ್ತರ ಬಂತು

'ಮಹಿಳೆಯರನ್ನು ಕಲ್ಲಿದ್ದಲು ಗಣಿಯಲ್ಲಿ ದುಡಿಸಬಾರದು'

ರೇಣುಕಾ ದೇವಿಯರ ಠರಾವು

ಝರಿಯಾ ಮತ್ತು ಅದರ ಸಮೀಪದಲ್ಲಿರುವ ಕಲ್ಲಿದ್ದಲು ಗಣಿಯಲ್ಲಿ ಮಹಿಳೆಯರನ್ನು ಸರಕಾರವು ಕಲ್ಲಿದ್ದಲು ಗಣಿಯ ಕೂಲಿ ಕೆಲಸದಲ್ಲಿ ನೇಮಿಸಿದ್ದನ್ನು ವಿರೋಧಿಸಿ ಶ್ರೀಮತಿ ರೇಣುಕಾ ದೇವಿಯವರು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ ನಿರ್ಣಯವು ಬಿದ್ದು ಹೋಯಿತು ಯೂರೋಪಿಯನ್ ಪಕ್ಷ ಸರಕಾರದ ಪರವಿತ್ತು ಮುಸ್ಲಿಂ ಲೀಗ್, ಸ್ವತಂತ್ರ ಪಕ್ಷ, ಕಾಂಗ್ರೆಸ್ ನೇಶನಲಿಸ್ಟ್ ಪಕ್ಷದವರು ನಿರ್ಣಯದ ಪರವಾಗಿದ್ದರು ಕಾಂಗ್ರೆಸ್ ಪಕ್ಷದವರು ಮೊದಲೇ ಸಭೆಯಿಂದ ಹೊರಬಂದಿದ್ದರು ನೆಲದಡಿಯ ಗಣಿಗಳಲ್ಲಿ ಮಹಿಳೆಯರನ್ನು ದುಡಿಸಬಾರದೆಂದು ಅಂತರಾಷ್ಟ್ರೀಯ ಕೂಲಿಗಾರ ಸಂಘದ ನಿಯಮವಿದೆಯೆಂದೂ, ಹಿಂದುಸ್ಥಾನ ಸರಕಾರವೂ ಆ ನಿಯಮಕ್ಕೆ ಸಹಿಹಾಕಿ ಈಗ ಇಂಥಾ ಅನ್ಯಾಯ ಮಾಡಬಾರದೆಂದೂ ಇಂಗ್ಲೆಂಡಿನ ಗಣಿಗಳಲ್ಲಿಯೂ ಈಗ ಮಹಿಳೆಯರು ದುಡಿವುದಿಲ್ಲವೆಂದೂ ಮೊದಲಾಗಿ

ಜಿಲ್ಲಾ ಕನ್ನಡ ಮಜೂರ ಸಮ್ಮೇಳನ

ಕಾಮ್ರೇಡ್ ಡಾಂಗೆಯವರ ಅಧ್ಯಕ್ಷತೆಯಲ್ಲಿ

ಕಾ। ಬಾಲಕೃಷ್ಣ ಮೆನನರಿಂದ ಉದ್ಘಾಟನೆ

ದಕ್ಷಿಣ ಕನ್ನಡ ಜಿಲ್ಲಾ ಮಜೂರ ಸಮ್ಮೇಳನವು ತಾ. ೬ರಂದು ಪ್ರಸಿದ್ಧ ಕಾರ್ಮಿಕ ಮುಖಂಡರಾದ ಕಾಮ್ರೇಡ್ ಎಸ್. ಎ. ಡಾಂಗೆಯವರ ಅಧ್ಯಕ್ಷತೆಯಿಂದ, ಮಂಗಳೂರು ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ಆವರಣದಲ್ಲಿ ಹಾಕಿದ ಚಪ್ಪರದಲ್ಲಿ ನೆರವೇರಿತು. ಮಂಗಳೂರಿನ ಅನೇಕ ಮಂದಿ ಬೀಡಿ, ನೇಯ್ಗೆ, ಪ್ರೆಸ್ ಕೆಲಸಗಾರರೇ ಮೊದಲಾದವರಲ್ಲದೆ ಬಂಟ್ವಾಳ, ಉಡುಪಿ, ಮೊದಲಾದ ಕಡೆಗಳಿಂದಲೂ ಹಲವು ಮಂದಿ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸಮ್ಮೇಳನ ಸ್ಥಳಕ್ಕೆ 'ಘಾಟೆ ನಗರ'ವೆಂತಲೂ, ಅದರ ದ್ವಾರಕ್ಕೆ 'ಜೋಶಿ ದ್ವಾರ'ವೆಂತಲೂ ಹೆಸರಿಡಲಾಗಿತ್ತು.

ಕಳೆದ ಒಂದು ವರ್ಷದಿಂದಲೂ ಜಿಲ್ಲೆಯಲ್ಲಿ ಹಾಗೂ ಮಂಗಳೂರಲ್ಲಿ ೧೪೪ನೇ ಸೆಕ್ಷನ್ ಜಾರಿಯಲ್ಲಿದ್ದರೂ ಕಾಮ್ರೇಡ್ ಡಾಂಗೆಯವರ ಅಧ್ಯಕ್ಷತೆಯಲ್ಲಿ ನೆರವೇರುವ ಈ ಸಮ್ಮೇಳನಕ್ಕೆ ಹಾಗೂ ಅವರ ಮೆರವಣಿಗೆಗೂ ಕೂಡಾ ಜಿಲ್ಲಾಧಿಕಾರಿಗಳು ಅಪ್ಪಣೆ ಕೊಟ್ಟಿದ್ದರಿಂದ ಈ ಸಮ್ಮೇಳನವು ಇನ್ನಷ್ಟು ಯಶಸ್ವಿಯಾಯಿತೆಂದು ಹೇಳಬಹುದು. ಕಣ್ಣನ್ನೂರಿನಲ್ಲಿ ಸೇರಿದ ಅ. ಕೇರಳ ಮಜೂರ ಸಮ್ಮೇಳನದಲ್ಲಿ ಭಾಗವಹಿಸಿ ಕಾ. ಡಾಂಗೆಯವರು ಬೆಳಗ್ಗಿನ ಬಂಡಿಯಲ್ಲಿ ಕಣ್ಣಾನೂರಿನಿಂದ ಮಂಗಳೂರು ಸ್ಟೇಶನಿನಲ್ಲಿ ಬಂದಿಳಿದರು. ಸ್ಟೇಶನಿನಲ್ಲಿಯೇ ಅವರನ್ನು ಮಜೂರರು ಜಯಘೋಷದಿಂದ ಸ್ವಾಗತಿಸಿದರು. ಅಲ್ಲಿಂದ ಮೆರವಣಿಗೆ ಸಮ್ಮೇಳನ ಸ್ಥಳಕ್ಕೆ ಸಾಗಿತು.

ರೈಲ್ವೆ ಸ್ಟೇಶನಿನಿಂದ ಮೆರವಣಿಗೆ 'ಘಾಟೆ ನಗರ'ವನ್ನು ಪ್ರವೇಶಿಸಿದ ಕೂಡಲೇ ಕಾಮ್ರೇಡ್ ಹರಿದಾಸಾಚಾರ್ಯರು ಪತಾಕೆ ಹಾರಿಸಿದರು. ಅವರು ತಮ್ಮ ಭಾಷಣದಲ್ಲಿ ಅದರ ಮಹತ್ವ ಸ್ಫೂರ್ತಿಗಳನ್ನು ವಿವರಿಸಿದರು. ಅನಂತರ ಸಮ್ಮೇಳನದ ಉದ್ಘಾಟನೆಯು ಕಾ। ಡಾಂಗೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾಮ್ರೇಡ್ ಕೃಷ್ಣಶೆಟ್ಟರು ಬಂದವರನ್ನು ಸ್ವಾಗತಿಸಿ ಮಾತನಾಡಿದರು. ಮದ್ರಾಸು ಪ್ರಾಂತಿಕ ಮಜೂರ ಸಂಘದ ಕಾರ್ಯದ ಕಾಮ್ರೇಡ್ ಬಾಲಕೃಷ್ಣ ಮೆನನರು ಸಮ್ಮೇಳನದ ಉದ್ಘಾಟನೆ ನೆರವೇರಿಸುತ್ತಾ, ದೇಶದ ಸಂಕಷ್ಟ, ಮಜೂರ ಸಂಘಟನೆ, ಅ. ಭಾ. ಮಜೂರ ಸಂಘವನ್ನು ಬಲಪಡಿಸುವ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿದರು.

ಆ ಮೇಲೆ ವಿದ್ಯಾರ್ಥಿ ಭವನದಲ್ಲಿ ಪ್ರತಿನಿಧಿಗಳ ಸಭೆ ಜರಗಿತು. ಬಹಿರಂಗ ಅಧಿವೇಶನದಲ್ಲಿ ಮಂಡಿಸಲಿರುವ ಠರಾವುಗಳು ನಿರ್ಣಯಿಸಲ್ಪಟ್ಟವು.

ಸಂಜೆ ೫ ಗಂಟೆಗೆ ವಿದ್ಯಾರ್ಥಿ ಭವನದಿಂದ ಕಾ। ಡಾಂಗೆಯವರ ಮೆರವಣಿಗೆ ಹೊರಟು, ಜಯಘೋಷದೊಡನೆ ನಗರದ ಪ್ರಮುಖ ಬೀದಿಗಳನ್ನು ಸಂಚರಿಸಿ, ಸಂಜೆಗೆ ಸಮ್ಮೇಳನ ಸ್ಥಳಕ್ಕೆ ತಲಪಿತು. ಈ ಮೆರವಣಿಗೆಯಲ್ಲಿ ಅನೇಕ ಮಂದಿ ಬೇರೆ ಬೇರೆ ಸಂಘಗಳ ಮಜೂರರು ಸೇರಿದ್ದು, ಮಜೂರರಲ್ಲಿ ವಿಶೇಷತರದ ಉತ್ಸಾಹ ತುಂಬಿ ತುಳುಕುತ್ತಿರುವುದು ವ್ಯಕ್ತವಾಗುತಿತ್ತು.

ಆ ಮೇಲೆ ಬಹಿರಂಗ ಅಧಿವೇಶನವು ಕಾ। ಡಾಂಗೆಯವರ ಅಧ್ಯಕ್ಷತೆಯಲ್ಲಿ ಸೇರಿತು. ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ಬಿ. ವಿ. ಕಕ್ಕಿಲ್ಲಾಯರು, ಈ ಸಮ್ಮೇಳನ ಸೇರಿಸಿದ ಉದ್ದೇಶ ತಿಳಿಸಿ ಇತ್ತೀಚೆಗೆ ಜಿಲ್ಲೆಯಲ್ಲಿ ಮಜೂರರು ಸಂಘಟಿತರಾಗಿರುವುದನ್ನು ಹೇಳಿ, ಇಷ್ಟಾದರೂ ಜಿಲ್ಲೆಯ ಎರಡು ಪ್ರಧಾನ ವರ್ಗಗಳಾದ ಹಂಚಿನ ಕೆಲಸಗಾರರು ಮತ್ತು ಮೋಟರ್ ಕೆಲಸಗಾರರು ಸಂಘಟಿತರಾಗದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿ, ಅಧ್ಯಕ್ಷರ ಪರಿಚಯ ತಿಳಿಸುತ್ತಾ, ಅವರು ಭಾರತದಲ್ಲಿ ಕಮ್ಯುನಿಸ್ಟ್ ತತ್ವವನ್ನು ಪ್ರಸಾರ ಮಾಡಿದ ಆದ್ಯರಲ್ಲೊಬ್ಬರೆಂದು ಅವರ ವಿವಿಧ ಚಟುವಟಿಕೆಗಳನ್ನು ಹೇಳಿ, ಸಕಲರಿಗೂ ಸ್ವಾಗತವಿತ್ತರು.

ಆ ಮೇಲೆ ಸಂದೇಶಗಳು ಓದಲ್ಪಟ್ಟವು. ಶ್ರೀಗಳಾದ ವಿ. ಬಿ. ಶೆಟ್ಟಿ, ಆರ್. ಆರ್. ಕುಂಜೂರು, ಕೇರಳ ಕಮ್ಯುನಿಸ್ಟ್ ಪಕ್ಷ ಇವರಿಂದ ಸಂದೇಶಗಳು ಬಂದಿದ್ದವು. ಶ್ರೀ। ಶೆಟ್ಟರು ತಮ್ಮ ಸಂದೇಶದಲ್ಲಿ, ಇಂದಿನ ಮಹಾ ಸಂಗ್ರಾಮದಲ್ಲಿ ರಷ್ಯವು ವಹಿಸಿರುವ ಪ್ರಧಾನ ಪಾತ್ರದಿಂದಾಗಿ ಮುಂದಿನ ಶಾಂತಿ ಪರಿಷತ್ತಿನಲ್ಲಿ ಅದಕ್ಕೆ ಸಹಜವಾಗಿ ಮಹತ್ವ ಬರುವುದೆಂದೂ, ಮುಂದೆ ಮಜೂರರಿಗೆ ಭವ್ಯ ಭವಿಷ್ಯತ್ತಿದೆಯೆಂದೂ ತಿಳಿಸಿದ್ದರು. ಕೇ. ಕ. ಪಕ್ಷದವರು, ದ. ಕ. ಜಿಲ್ಲೆಯಲ್ಲಿರುವ ೧೪೪ನೇ ಸೆಕ್ಷನು ಕೆಲಸಗಾರರ ಹಿತಕಾರ್ಯಕ್ಕೆ ಆತಂಕ ತರುವುದರಿಂದ ಅದನ್ನು ಪರಿಹರಿಸುವಂತೆ ಈ ಸಮ್ಮೇಳನದಲ್ಲಿ ಪ್ರಯತ್ನಿಸಬೇಕೆಂದು ಬರೆದಿದ್ದರು.

ಅನಂತರ ಕಾ। ಕಕ್ಕಿಲ್ಲಾಯರು ಮಜೂರ ಸಂಘಟನೆಯ ವರದಿಯನ್ನು ತಿಳಿಸಿದರು. ಆ ವರದಿಯಲ್ಲಿ ಇತ್ತೀಚೆಗೆ ಪಿ. ವಿ. ಎಸ್. ದಿ ಗ್ರೇಟ್ ದರ್ಬಾರ್ ಬೀಡಿಯವರು ಮಜೂರರಿಗೆ ಇದುವರೆಗೆ ಕೊಡುತ್ತಿದ್ದ ರೂ. ಎರಡರ ತುಟ್ಟಿಯನ್ನೂ ಈಗ ತೆಗೆದು ಹಾಕಿರುವ ವಿಚಾರ ವಿಷಾದ ವ್ಯಕ್ತಪಡಿಸಿದರು.

ಬಳಿಕ ಬಹಿರಂಗ ಅಧಿವೇಶನದಲ್ಲಿ ಮಂಜೂರು ಮಾಡುವ ಠರಾವುಗಳನ್ನು ಒಂದೊಂದಾಗಿ ಶ್ರೀ. ಬಿ. ವಿ. ಕಕ್ಕಿಲ್ಲಾಯರು ಓದಿ ಹೇಳಿದರು. ೧. ಸೋವಿಯಟ್ ರಕ್ತ ಸೇನೆಯ ಅಭಿನಂದನೆ ಮಾಡುವ, ೨. ಜಿಲ್ಲೆಯ ಆಹಾರ ನಿಯಂತ್ರಣ, ಮತ್ತು ಸಮಾನವಾಗಿ ಹಂಚಬೇಕೆನ್ನುವ ೩. ಎಲ್ಲಾ ಪಕ್ಷಗಳ ಸ್ವಯಂನಿರ್ಣಯಾಧಿಕಾರ ಒಪ್ಪಿ ರಾಷ್ಟ್ರೀಯ ಐಕ್ಯ ಸಾಧಿಸಬೇಕೆಂಬ, ೪. ಜಿಲ್ಲಾ ಮಜೂರ ಸಂಘಟನೆ ಮಾಡಬೇಕೆನ್ನುವ, ೫. ಜಿಲ್ಲೆಯ ಮಜೂರರಿಗೆ ರೂಪಾಯಿಗೆ ೧೪ ಅಣೆ ತುಟ್ಟಿ ಭತ್ತೆ ಸಿಗಬೇಕೆನ್ನುವ, ೬. ಪಿ. ವಿ. ಎಸ್. ಮತ್ತು ದರ್ಬಾರ್ ಬೀಡಿಯ ಮಾಲಕರು ರೂ. ೨ ತುಟ್ಟಿ ಭತ್ತೆ ತೆಗೆದು ಹಾಕಿದ್ದನ್ನು ಖಂಡಿಸುವ, ೭. ಜಿಲ್ಲಾ ನೇಕಾರರಿಗೆ ಈಗಿನ ತುಟ್ಟಿ ಭತ್ತೆ ಸಹಿತ ಸೇಕಡಾ ೨೫ರ ತುಟ್ಟಿ ಭತ್ತೆ ಸಿಗಬೇಕೆನ್ನುವ, ೮. ಪ್ರೆಸ್ ಕೆಲಸಗಾರರಿಗೆ, ವೃದ್ಧಾಪ್ಯದ ಬಗ್ಗೆ ಪ್ರೊವಿಡೆಂಟ್ ಫಂಡ್ ಏರ್ಪಾಡಾಗಬೇಕೆಂದೂ, ಶೇಕಡಾ ೧೦೦ರಷ್ಟು ತುಟ್ಟಿ ಭತ್ತೆ ಸಿಗಬೇಕೆಂದೂ, ಪ್ರತಿ ವರ್ಷ ಎರಡು ತಿಂಗಳ ಬೋನಸ್ ಕೊಡಬೇಕೆಂದೂ, ಮಾತ್ರವಲ್ಲದೆ ಇಂದಿನ ಸಂಬಳವನ್ನು ಶೇಕಡಾ ೧೫೦ರಷ್ಟು ಏರಿಸಬೇಕೆಂದೂ ಹೇಳುವ, ೯. ಜಿಲ್ಲಾ ಮಜೂರ ಯೂನಿಯನ್‌ಗಳು ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸಿಗೆ ಸೇರಬೇಕೆನ್ನುವ, ೧೦. ಬಂಗಾಳ ಕ್ಷಾಮದ ಪರಿಹಾರವಾಗಬೇಕೆನ್ನುವ—ಒಟ್ಟು ಹತ್ತು ನಿರ್ಣಯಗಳಿದ್ದುವು.

ಇಲ್ಲಿನ ಕೆಲವು ನಿರ್ಣಯಗಳ ಪರವಾಗಿ ಕೆಲ ಯೂನಿಯನ್ ಪ್ರತಿನಿಧಿಗಳಾದ ಕಾ। ಗಳು ಶ್ರೀನಿವಾಸ, ಸಿಂಪ್ಸನ್ ಸೋನ್ಸ್, ಲಿಂಗಪ್ಪ ಸುವರ್ಣ, ಎನ್. ಜಿ. ನಂಬೂದಿರಿ, ಅಮ್ಮು ಶೆಟ್ಟಿ ಇವರು ಮಾತನಾಡಿದರು. ಇವರು ಮತ್ತು ಕಾ।ಗಳಾದ ದುಗ್ಗಪ್ಪ ಮತ್ತು ರಾಘವನ್ ಇವರೂ ತಮ್ಮ ತಮ್ಮ ಯೂನಿಯನ್ ಪರವಾಗಿ ಅಧ್ಯಕ್ಷರಿಗೆ ಹೂವಮಾಲೆ ಹಾಕಿದರು. ಸಭಿಕರು ಈ ಸಮಯದಲ್ಲಿ ಜಯಘೋಷ ಮಾಡುತ್ತಿದ್ದರು.

ಅನಂತರ ಅಧ್ಯಕ್ಷ ಡಾಂಗೆಯವರು ಮಾತನಾಡಲು ಪ್ರಾರಂಭಿಸಿದರು. ಅವರು ತಮ್ಮ ಭಾಷಣದ ಪ್ರಾರಂಭದಲ್ಲಿ, ಕೆಲಸಮಯದಿಂದ ಜಿಲ್ಲೆಯಲ್ಲಿ ಇದ್ದ ನಿರ್ಬಂಧದ ಕುರಿತು ವಿಷಾದ ವ್ಯಕ್ತಪಡಿಸಿ ಈ ಸಮ್ಮೇಳನದಲ್ಲಿ ಪ್ರಸ್ತುತ ರಾಜಕೀಯದ ಕುರಿತು ಮಾತನಾಡಬಾರದೆಂದು ಅಧಿಕಾರಿಗಳು ನಿರ್ಬಂಧ ಹಾಕಿರುವುದರಿಂದ, ತಾನು ರಾಷ್ಟ್ರ ಮುಖಂಡರ ಬಿಡುಗಡೆಯಾಗಬೇಕೆಂದಾಗಲಿ, ರಾಷ್ಟ್ರೀಯ ಐಕ್ಯ ಆಗಬೇಕೆಂದಾಗಲಿ, ರಾಷ್ಟ್ರೀಯ ಸರಕಾರ ಸ್ಥಾಪಿತವಾಗಬೇಕೆಂದಾಗಲಿ ಈ ಸಮ್ಮೇಳನದಲ್ಲಿ ಹೇಳುವುದಿಲ್ಲವೆಂದು ತಿಳಿಸಿ, ಬಟ್ಟೆಯ ಕುರಿತು ಮಾತನಾಡುತ್ತಾ, ಬಟ್ಟೆಗೆ ಯಾಕೆ ಕ್ರಯ ಹೆಚ್ಚಾಯಿತು, ಹೇಗೆ ಅದು ದಾಸ್ತಾನುಗೊಳಿಸಲ್ಪಟ್ಟಿತು, ಕೊನೆಗೆ ಕಂಟ್ರೋಲ್ ಬರಲು ಕಾರಣವೇನು, ಮುಖ್ಯತಃ ದಾಸ್ತಾನುಗಾರರೂ, ಎರಡನೆಯದ್ದಾಗಿ ನೌಕರಶಾಹೀ ಸರಕಾರವೂ ಹೇಗೆ ತಮ್ಮ ದೇಶಶೋಷಣೆ ಮಾಡುತ್ತದೆಯೆಂದು ಮೊದಲಾಗಿ ಬಟ್ಟೆಯ ಕಥಾರೂಪದಲ್ಲಿ ಬಹಳ ಸ್ವಾರಸ್ಯವಾಗಿ ದೇಶದ ರಾಜಕೀಯ ವಿಚಾರ ವಿವರಿಸಿದರು.

ದಾಸ್ತಾನುಗಾರರು ತಾವು ಮಾಡುವುದು ತಪ್ಪೆಂದು ಅವರ ಹೃದಯಕ್ಕೆ ತಿಳಿವಂತೆ ನಾವು ಕೆಲಸ ಮಾಡಬೇಕಲ್ಲದೆ ದಂಗೆ ಗಲಾಟೆ ಮಾಡಕೂಡದೆಂದು ಹೇಳುತ್ತಾ, ಇಂದಿನ ಯುದ್ಧದಲ್ಲಿ ಫೇಸಿಸಮ್ಮನ್ನು ವಿರೋಧಿಸಬೇಕೆಂದು ಭಾರತದ ಎಲ್ಲಾ ಪಕ್ಷಗಳೂ ಏಕಮತ್ಯದಿಂದ ಒಪ್ಪುವವಾದರೂ, ಇದನ್ನು ಹೇಗೆ ಸಾಧಿಸಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವಿದೆಯೆಂದು ತಿಳಿಸಿ, ಈ ಯುದ್ಧ ನಮ್ಮದಲ್ಲವಾದರೂ, ನಮ್ಮೊಡನೆ ಯುದ್ಧ ಮಾಡುವಾಗ ಕೇಳದಿದ್ದರೂ, ನಾವು ಸುಮ್ಮಗಿರುವುದು ಸರಿಯಲ್ಲವೆಂದು ಹೇಳುತ್ತಾ ಇಂದು ನಮ್ಮ ಜನರ ಸೇವೆಮಾಡಬೇಕೆಂದೂ ಅನ್ನ ಕೊಟ್ಟು ಬಟ್ಟೆ ಕೊಟ್ಟು ಕ್ಷಾಮದಿಂದ ರಾಷ್ಟ್ರವನ್ನುಳಿಸಬೇಕೆಂದೂ, ಇದಕ್ಕಾಗಿ ರಾಷ್ಟ್ರ ಮುಖಂಡರ ಬಿಡುಗಡೆ, ರಾಷ್ಟ್ರೀಯ ಐಕ್ಯ, ರಾಷ್ಟ್ರೀಯ ಸರಕಾರ ಆಗಬೇಕೆಂದು, ನಾನು ಈ ಸಮ್ಮೇಳನದಲ್ಲಿ ಹೇಳಬಾರದಾದರೂ ಅದಾಗದೆ ನಿರ್ವಾಹವಿಲ್ಲವೆಂದೂ ಹೇಳಿ ಭಾಷಣ ಕೊನೆಕೊನೆಗಾಣಿಸಿದರು.

ರಾತ್ರಿ ವಿವಿಧ ವಿನೋದಾವಳಿಗಳಿದ್ದುವು. ಕಾ। ಕ್ವಿಲೂರ್ ಕರ್‌ರ ವಾಚನಾದಿಗಳು ಸಭಾರಂಜನವಾಗಿದ್ದುವು. ಅಧ್ಯಕ್ಷರ ಭಾಷಣವನ್ನು ಕಾಮ್ರೇಡ್ ಕುಳುಕುಂದರು ಭಾಷಾಂತರಿಸಿದರು.

ಮಜೂರ ಸಮ್ಮೇಳನದ ಎರಡನೆಯ ದಿನದ ಅಧಿವೇಶನವು ಅ. ಭಾ. ವಿದ್ಯಾರ್ಥಿ ಫೆಡರೇಶನಿನ ಕಾರ್ಯದರ್ಶಿ ಕಾಮ್ರೇಡ್ ಪ್ರಕಾಶ [illegible] ಅಧ್ಯಕ್ಷತೆಯಿಂದ ಮಂಗಳೂರು ಮೈದಾನಿನಲ್ಲಿ ತಾ. ೮ರಂದು ಸಂಜೆ ನೆರವೇರಿತು. ಕಾಮ್ರೇಡುಗಳಾದ ಹರಿದಾಸಾಚಾರ್ಯ, ಕಾಂತಾರಾಮ ಪೈ, ಬಿ. ವಿ. ಕಕ್ಕಿಲ್ಲಾಯ, ಕ್ವಿಲೂರ್ ಕರ್, ಮಾಧವ ನಾಯ್ನಾರ್, ಕೇಶವ ಕಾವಂತರೇ ಮೊದಲಾದವರು ಮಾತನಾಡಿದರು. ಕಾಮ್ರೇಡ್ ಕುಳುಕುಂದರು ಅಧ್ಯಕ್ಷರ ಭಾಷಣವನ್ನು ಭಾಷಾಂತರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬಂಗಾಳದ ಸಂಕಷ್ಟವನ್ನು ತಿಳಿಸಿ, ಫೇಸಿಸಂ ವಿರೋಧ ಹೋರಾಡಲು ಮಜೂರರು ಒಗ್ಗಟ್ಟಾಗಬೇಕೆಂದರು.

ಬಿಡುಗಡೆ

ಶ್ರೀ. ಕಾ. ಅ. ವೆಂಕಟರಾಮಯ್ಯ, ಬಿ. ಎ. ಸೆಕ್ರೆಟರಿ, ಅಖಿಲ ಭಾರತ ಚರಕಾ ಸಂಘ ಕರ್ನಾಟಕ ಶಾಖೆ, ಹುಬ್ಬಳ್ಳಿ ಇವರು ೮ ತಿಂಗಳ ಡಿಟೆನ್ಶನ್ ಅನುಭವಿಸಿ ಬೆಂಗಳೂರು ಸೆಂಟ್ರಲ್ ಸೆರೆಮನೆಯಿಂದ ಬಿಡುಗಡೆಯಾಗಿ ತಾ. ೩ರಂದು ಆಫೀಸು ಚಾರ್ಜು ವಹಿಸಿರುವರು.

ಸಮರಭೂಮಿಯ ಸಂಚಾರ

ನಿಕೋಪೋಲ್ ನಗರದ ಹೆಬ್ಬಾಗಿಲಲ್ಲಿ ರಶ್ಯನ್ ಸೈನಿಕರು ನಿಂತು ಹೋರಾಡುತ್ತಿದ್ದಾರೆ. ಇದು ಜರ್ಮನರಿಗೆ ಮ್ಯಾಂಗನೀಸ್ ಒದಗಿಸುವ ಕೇಂದ್ರ ಸ್ಥಳವಾದದ್ದರಿಂದ ರಶ್ಯನರಿದನ್ನು ವಶಪಡಿಸದಂತೆ ಜರ್ಮನರೂ ಹುರುಪಿನಿಂದ ಹೋರಾಡುತ್ತಿರುವರು. ಕ್ರಿವೊಯಿರಾಗ್ ಮತ್ತು ನಿಕೋಪೋಲ್‌ಗಳ ಮಧ್ಯವಿರುವ ಅಪೋಸ್ತಲೋವ್ ನಗರದ ದಕ್ಷಿಣದಲ್ಲಿ ಕೆಂಪು ಸೈನಿಕರು ನೀಪರ್ ನದಿಯ ಕಡೆಗೆ ಮುಂದೊತ್ತುತ್ತಿದ್ದಾರೆ. ಇನ್ನೂ ಆಚೆ ಉತ್ತರದಲ್ಲಿ ಲ್ಯಾಟಿವಿಯಾದ ಗಡಿಯಲ್ಲಿಯೂ ರಶ್ಯನ್ ದಳಗಳು ಯುದ್ಧ ಮಾಡುತ್ತಿವೆ. ಫಿನ್‌ಲೆಂಡ್‌ನ ರಾಜಧಾನಿಯಾದ ಹೆಲಸಿಂಕಿ ನಗರದ ಮೇಲೆ ರಶ್ಯನ್ ವೈಮಾನಿಕರ ಭಯಂಕರ ಧಾಳಿ ಮಾಡಿದ್ದರಿಂದ ಆ ನಗರ ಉರಿಯುತ್ತಿರುವುದಾಗಿ ತಿಳಿದಿದೆ. ಈ ಧಾಳಿಯಿಂದ ಹೆಲಸಿಂಕಿಯಲ್ಲಿ ಅಪಾರ ನಷ್ಟ ಸಂಭವಿಸಿರುವುದಾಗಿಯೂ ಹೇಳಲಾಗಿದೆ. ರಶ್ಯನ್ ರಣರಂಗದಲ್ಲಿ ರಶ್ಯನ್ ಸೇನೆ ಮನಸ್ಪ್ರಯಿಖನ ದುರ್ಗ ಧ್ವಂಸಮಾಡಿ ಅಪೊಸ್ಟೊಲೋವ್, ಸಾರ್ವ, ಮಾರ್ಗನೆಟ್ ಈ ಸ್ಥಳಗಳನ್ನು ಆಕ್ರಮಿಸಿಕೊಂಡಿವೆ. ಪೋಲೆಂಡಿನ ಒಳ ಪ್ರವೇಶಿಸುವ ರಶ್ಯನ್ ಸೇನಾಪತಿಯು ರೊವ್ನೊ, ಲಕ್ ಮೊದಲಾದವುಗಳನ್ನು ಆಕ್ರಮಿಸಿಕೊಂಡು ಮುನ್ನುಗ್ಗುತ್ತಿರುವನು.

—ಕುರಾಯಿಲ್ ದ್ವೀಪ ಸಮೂಹದಲ್ಲಿರುವ ಪರಾಮುಶಿರೋ ದುರ್ಗದ ಮೇಲೆ ಅಮೆರಿಕನ್ ಯುದ್ಧ ಹಡಗಗಳು ಗುಂಡಿನ ಮಳೆಗರೆದಿವೆ. ಜಪಾನಿನ ಸಮೀಪದ ಆಯಕಟ್ಟಿನ ಸ್ಥಳವಿದಾಗಿರುವುದರಿಂದ, ಅಮೆರಿಕನರ ಈ ಧಾಳಿಯನ್ನು ನೋಡಿ ಜಪಾನರು ತುಸುತ್ರಸ್ತರಾಗಿರುವರು. ಮಾರ್ಶಲ್ ಮತ್ತು ರಬಾಲ ದ್ವೀಪಗಳ ಮೂಲಕ ಜಪಾನಿಗೆ ಆಕ್ರಮಿಸಲು ಹೆಚ್ಚು ಸಮಯ ಹಿಡಿಯಬಹುದಾದ್ದರಿಂದ, ಕುರಾಯಿಲ್ ದ್ವೀಪಗಳು ಜಪಾನಿಗೆ ಬಹಳ ಹತ್ತಿರವಿರುವುದಾಗಿ ಈಗ ಅಮೆರಿಕನರು ಈ ಹಾದಿಯಲ್ಲಿ ಪ್ರಯತ್ನಿಸುತ್ತಿದ್ದಾರೆಂದು ಹೇಳಲಾಗಿದೆ. ಇತ್ತೀಚೆಗೆ ಅಮೆರಿಕನರು ಉತ್ತರ ಪೇಸಿಫಿಕ್ಕಿನಲ್ಲಿ ನೌಕಾ ಸಂಗ್ರಹ ಮಾಡುತ್ತಿರುವರು.

ಇಟಲಿ ವ್ಯೂಹದಲ್ಲಿ ಮಿತ್ರ ಠಾಣೆಗಳನ್ನು ಮುರಿಯಲು ಜರ್ಮನರು ಸಾಹಸ ಮಾಡುತ್ತಿದ್ದಾರೆ. ಅಂಝಿಯೋ ಠಾಣೆ ವ್ಯೂಹದಲ್ಲಿ ಮಿತ್ರ ದಂಡುಗಳು ಶತ್ರು ಪ್ರತಿದಾಳಿಯನ್ನು ಎದುರಿಸಿದವು. ಅಷ್ಟಮ ದಳದ ಸೈನಿಕರು ಮುನ್ನುಗ್ಗಿ ಪೆಟ್ಸ ಪೇರ್ಟೋಟಾ ಮತ್ತು ನಿರೋಡೋಮವೆಂಬ ಎರಡು ನಗರಗಳನ್ನು ಸ್ವಾಧೀನಮಾಡಿಕೊಂಡರು. ಹಿಟ್ಲರನ ಪಾಂಜರ್ ದಳವು ಇದೇ ವ್ಯೂಹದಲ್ಲಿ ಹೋರಾಡುತ್ತದೆ. ಕೇಸಿನೋದ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಅಮೆರಿಕನ್ ಸೇನೆಗೆ ವಿಶೇಷ ಲಾಭವಾಗಿದೆ. ಐದನೇ ದಲವಿರುವ ಕೇಸಿನೋ ನಗರದಲ್ಲಿ ಭೀಕರ ಹೋರಾಟ ನಡೆದಿರುವುದು.

ಮಾರ್ಶಲ್ ದ್ವೀಪ ಸಮೂಹದಲ್ಲಿ

ಅಮೆರಿಕನರು ಮಾರ್ಶಲ್ ದ್ವೀಪ ಸಮೂಹದಲ್ಲಿ ಇಳಿದುದು ಕಳೆದ ವಾರದ ಒಂದು ವಿಶೇಷ ವಾರ್ತೆಯಾಗಿದೆ. ಯುದ್ಧಕ್ಕಿಂತ ಮೊದಲೇ ಜಪಾನರ ಸ್ವಾಧೀನವಿದ್ದ ಪ್ರದೇಶದಲ್ಲಿ ಮಿತ್ರರು ಕಾಲಿರಿಸಿದ್ದು ಇದೇ ಮೊದಲನೆಯ ಸಲ. ಹಾಗಾಗಿ ಇದು ಮಿತ್ರರ ಹಾಗೂ ವಿಶೇಷತಃ ಅಮೆರಿಕನರ ಒಂದು ಪ್ರಚಂಡ ಸಾಹಸವೇ ಎನಬೇಕು. ಈಗ ಅವರು ಕ್ವಾಜಿಲಿನ್ ನಡುಗುಡ್ಡೆಯಲ್ಲಿ ಮತ್ತು ಇದಕ್ಕೆ ಸಂಬಂಧಿಸಿದ ರೊಯಿ ಎಂಬ ಭಾಗದಲ್ಲಿಳಿದಿರುವರು. ಅಲ್ಲಿ ಜೋರಿನ ಕಾದಾಟ ನಡೆಯುತ್ತಿದೆ. ಈ ನಡು ಗುಡ್ಡೆಗಳು ಜಪಾನರ ಹೊರವಲಯದ ರಕ್ಷಣಾ ಸ್ಥಳಗಳಾಗಿವೆ. ಹಾಗಾಗಿ ಯುದ್ಧಗತಿಯಲ್ಲಿದು ಬಹಳ ಪ್ರಾಮುಖ್ಯವಾಗಿದೆ. ಕೆರೋಲಿಯ ಎಂಬ ನಡುಗುಡ್ಡೆಯಲ್ಲಿರುವ ಟ್ರುಕ್ ಎಂಬ ಜಪಾನೀ ಭದ್ರಸ್ಥಾನವನ್ನು ವಶಪಡಿಸಿಕೊಳ್ಳಲೂ ಇದು ಅತ್ಯವಶ್ಯವಿದೆ. ಎರಡು ತಿಂಗಳ ಹಿಂದೆ ಗಿಲ್ಬರ್ಟ್ ನಡು ಗುಡ್ಡೆ ಆಕ್ರಮಿಸಿದಾಗಲೇ ಇದರ ಮೇಲೆ ಕಣ್ಣಿತ್ತು. ಆದರೆ ಇದು ಅಷ್ಟು ಸುಲಭವಾಗಿ ತೋರುವುದಿಲ್ಲ. ಕಳೆದ ಇಪ್ಪತ್ತಮೂರು ವರ್ಷಗಳಿಂದ ಜಪಾನರ ಸ್ವಾಧೀನದಲ್ಲಿದ್ದು ಇರುವುದರಿಂದ ಇಲ್ಲಿ ಅವರು ಪ್ರಬಲ ಸಂರಕ್ಷಣೆಯಿಟ್ಟಿರಲೇ ಬೇಕು. ಮಾರ್ಶಲ್ ದ್ವೀಪ ಸಮೂಹದಲ್ಲಿ ಇನ್ನಾದರೂ ಹೋರಾಟವಾಗಲಿದೆಯೆಂದು ತೋರುತ್ತದೆ. ಈಗ ಅಮೆರಿಕನರು ಇಳಿದ ಕ್ವಾಜಲಿನ್ ಇವುಗಳಲ್ಲಿ ದೊಡ್ಡದು. ಈ ದ್ವೀಪಕಲ್ಪ ಶಂಕಾಕೃತಿಯಲ್ಲಿದ್ದು ಸುತ್ತಲೂ ಜಲಪರಿವೃತವಾಗಿದೆ. ಇದರ ಮಧ್ಯದಲ್ಲಿರುವ ಸರೋವರವು ದೊಡ್ಡ ಹಡಗಗಳಿರೆ ನಿಂತುಕೊಳ್ಳಲು ಸಾಕಾಗುವಷ್ಟು ವಿಶಾಲವಿದೆ.

ಫ್ರೆಂಕೋ ಬೇರಾಗುವನೆ?

ಸ್ಪೈನಿನ ಸರ್ವಾಧಿಪತಿ ಫ್ರೇಂಕೋ ಹಿಟ್ಲರನಿಗೆ ಬೆಂಬಲ ನಿಂತು ಪ್ರತ್ಯಕ್ಷ ಸಹಾಯ ಮಾಡುತ್ತಾನೆಂದೂ, ಆತನ ಪಚ್ಚೆ ಪಡೆಯುವರು ಪೂರ್ವರಂಗದಲ್ಲಿ ಕಾದಾಡುತ್ತಿರುವರೆಂದೂ ರಶ್ಯನರು ಆರೋಪ ಹೊರಿಸುತ್ತಿದ್ದಂತೆ, ಫ್ರೇಂಕೋ ಅಕ್ಷ ರಾಷ್ಟ್ರಗಳ ಸಂಕಲೆಯಿಂದ ಹೊರ ಬರುವನೆಂಬೀ ಕಿರಿ ವದಂತಿ ಈಗ ಪ್ರಕಟವಾಗಿದೆ. ಇದೊಂದು ಅಚ್ಚರಿಯ ಸುದ್ದಿ. ಅಮೆರಿಕ ಎಣ್ಣೆಕೊಡುವುದನ್ನು ನಿಲ್ಲಿಸಿಬಿಟ್ಟುದೇ ಆತ ಹಿಟ್ಲರ್ ಪಕ್ಷ ಬಿಡಲು ಕಾರಣವೆಂದೂ ವರದಿಯಿದೆ. ಇಷ್ಟು ಸುಲಭದಲ್ಲಿ ಫ್ರೇಂಕೋ ಬಗ್ಗುವ ಮನುಷ್ಯನಾಗಿದ್ದಾನೆಂದು ಊಹಿಸುವುದು ಕಷ್ಟವೇ. ಸ್ಪೈನು ಸೆರೆಯಲ್ಲಿಟ್ಟ ಇಟಲಿಯನ್ ಹಡಗಗಳನ್ನು ಇನ್ನೂ ಬಿಟ್ಟು ಕೊಟ್ಟಿರುವುದಿಲ್ಲ. ಮಾತ್ರವಲ್ಲದೆ ಇನ್ನೂ ಫ್ರೇಂಕೋ ಜರ್ಮನಿಗೆ ಶಸ್ತ್ರಾಸ್ತ್ರವಿತ್ತು ನೆರವಾಗುತಿದ್ದಾನೆ. ಸಾಲದ್ದಕ್ಕೆ ಜರ್ಮನಿಯೊಡನೆ ಆರ್ಥಿಕ ಒಪ್ಪಂದವೂ ಆಗಿದೆ. ಸ್ಪೈನ್ ವಶವಿರುವ ಆಫ್ರಿಕದಲ್ಲಿ ಜರ್ಮನ್ ಬೇಹುಗಾರರು ಬಹಳ ಇದ್ದಾರೆ. ಒಟ್ಟಿನಿಂದ ಪ್ರತ್ಯಕ್ಷ ಸ್ಪೈನು ಯುದ್ಧ ಸಾರಿಲ್ಲವಾದರೂ ಜರ್ಮನಿಗೆ ಬೇಕಾದಷ್ಟು ನೆರವಾಗುತ್ತಿದೆ. ಎಣ್ಣೆ ಸರಬರಾಯಿ ನಿಲ್ಲಿಸಿದ ಮಾತ್ರಕ್ಕೆ ಆತ ಬಗ್ಗುತ್ತಾನೆಂದು ಭಾವಿಸುವುದು ಮೂರ್ಖತನವೇ ಸರಿ; ಬದಲು ಆತ ಉದ್ರೇಕಗೊಳ್ಳಲು ಇದರಿಂದ ಆಸ್ಪದವಿತ್ತಂತಾಗಬಹುದು. ಇದೊಂದು ಯುದ್ಧಕಾಲದ ವಾರ್ತಾ ಪ್ರಚಾರ ಕೌಶಲ್ಯವೆಂದೇ ತೋರುತ್ತದೆ. ತೆಹರಾನ್ ಪರಿಷತ್ತಿನ ಬಳಿಕ ಟರ್ಕಿಯನ್ನೂ ಮಿತ್ರರು ಇಂತಹ ತಮ್ಮ ಪಕ್ಷಕ್ಕೆ ಒಲಿಸುವ ಕಾರ್ಯ ಮಾಡುತ್ತಿದ್ದಾರೆ. ಇದೆಲ್ಲಾ ಎಷ್ಟರ ಮಟ್ಟಿಗೆ ಸಾರ್ಥಕವಾಗುವುದೋ ನೋಡಬೇಕು.

ರಶ್ಯದ ನವರಾಜ್ಯ ಘಟನೆ

ಸೋವಿಯಟ್ ಯೂನಿಯನಿನ ರಿಪಬ್ಲಿಕ್ (ಸ್ವತಂತ್ರ) ಪ್ರಾಂತಗಳು, ವಿದೇಶಗಳೊಂದಿಗೆ ಸ್ವತಂತ್ರ ರಾಜಕೀಯ ಸಂಬಂಧವನ್ನಿಟ್ಟುಕೊಳ್ಳಬಹುದೆಂದು ಸೋವಿಯೆಟ್ ಮುಖಂಡರಾದ ಮೊಲೊಟೋವರು ತಂದ ನಿರ್ಣಯವು ಸುಪ್ರೀಮ್ ಸೋವಿಯೆಟಿನಲ್ಲಿ ಒಪ್ಪಿಗೆ ಪಡೆದಿದೆ. ರಶ್ಯದ ರಾಜಕೀಯ ಇತಿಹಾಸದಲ್ಲಿ ಇದೊಂದು ಅತ್ಯಂತ ಪ್ರಾಧಾನ್ಯ ಸಂಗತಿಯಾಗಿರುವುದು. ಈ ರಿಪಬ್ಲಿಕ್‌ಗಳು ತಮ್ಮ ಸ್ವಂತ ವಿದೇಶಾಂಗ ಕಚೇರಿಯನ್ನಿಟ್ಟು, ರಾಯಭಾರಿಗಳನ್ನು ನೇಮಿಸುವುದು ಮಾತ್ರವಲ್ಲ ಸ್ವತಂತ್ರ ಸೈನ್ಯವನ್ನೂ ಇಟ್ಟುಕೊಳ್ಳಬಹುದಾಗಿ ಸೂಚಿತವಾಗಿರುವುದು. ಇದರಿಂದಾಗಿ ಮುಂದಿನ ಶಾಂತಿ ಪರಿಷತ್ತಿನಲ್ಲಿ ರಶ್ಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ದೊರಕಲು ಆಸ್ಪದವಾಗಿದೆಯೆಂದು ಈಗಾಗಲೇ ಅಮೆರಿಕ ಬ್ರಿಟನುಗಳಲ್ಲಿ ಟೀಕೆ ಎದ್ದಿದೆ. ಆದರೆ ಬೇರೆ ಬೇರೆ ವಸಾಹತುಗಳಿರುವ ಬ್ರಿಟನು ಅಮೆರಿಕಗಳಿಗೆ ಬೇರೆ ಬೇರೆ ಪ್ರಾತಿನಿಧ್ಯ ದೊರಕಬಹುದಾದರೆ ರಶ್ಯಕ್ಕೆ ಯಾಕೆ ದೊರಕಬಾರದು ಎಂಬುದೂ ವಿಚಾರಣೀಯವಿರುವುದು. ಹೇಗೂ ಇದರಿಂದ ಯೂರೋಪಿನ ರಾಜಕೀಯದಲ್ಲಿ ರಶ್ಯದ ವೈಶಾಲ್ಯ ಕಾರ್ಯ ಹೆಚ್ಚುವುದು. ಖಂಡಿತ ರಶ್ಯ ಜಾರನ ಆಳ್ವಿಕೆಯ ಬಗ್ಗೆ ಕ್ರಾಂತಿ ಮಾಡಿದ ತತ್ವವೆಂದರೆ ಪ್ರತಿಯೊಬ್ಬನಿಗೂ ಸ್ವತಂತ್ರ ನಿರ್ಧಾರ ಹಕ್ಕು ಬೇಕೆಂಬುದು; ಹಾಗಾಗಿ ಈಗ ಪ್ರತಿಯೊಂದು ರಿಪಬ್ಲಿಕಿಗೂ ಸ್ವತಂತ್ರ ಆಡಳಿತಾಧಿಕಾರವಿತ್ತದ್ದು ರಶ್ಯದ ಮೂಲ ತತ್ವಕ್ಕೆ ಅನುಗುಣವೇ ಆಗಿದೆಯೆನಬೇಕು.

ರೂಸ್‌ವೆಲ್ಟ್ ಹೇಳಿದರು

ಅಮೆರಿಕದ ಸೇನೆ ಭಾರತ ಮತ್ತು ಏಷ್ಯದಲ್ಲಿ ಬಹಳ ಇದೆ. ಇದರ ಉದ್ದೇಶವೇನು? ಎಂಬ ಬಗ್ಗೆ ಯಾರಾದರೂ ಸಂಶಯವೆತ್ತುವುದು ಸಹಜವಿದೆ. ಅದರ ಕುರಿತು ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿದ ತಮ್ಮ ಒಂದು ಹೇಳಿಕೆಯಲ್ಲಿ ಹೀಗೆ ವಿವರಿಸುತ್ತಾರೆ: 'ಭಾರತ ಹಾಗೂ ಏಶ್ಯದಲ್ಲಿ ನಮ್ಮ ಸೇನೆಯಿದೆ. ಇದರ ಉದ್ದೇಶದ ಬಗ್ಗೆ ಯಾರೂ ತಪ್ಪು ಭಾವನೆ ಮಾಡಿಕೊಳ್ಳಬಾರದು. ಜಪಾನನ್ನು ಸದೆಬಡೆಯುವುದೇ ನಮ್ಮ ಉದ್ದೇಶ. ಜಪಾನನ್ನು ಮರ್ದಿಸದೆ ನಿರ್ವಾಹವಿಲ್ಲ. ಸ್ವಾತಂತ್ರ್ಯವಿಲ್ಲದಿದ್ದರೆ ನಾವು ಹೋರಾಡುವ ಉದ್ದೇಶವಾದರೂ ಏನು?—ಮಾರ್ಶಲ್ ದ್ವೀಪದಲ್ಲಿ ನಮ್ಮ ಕಾರ್ಯಾಚರಣೆ ಸುಸೂತ್ರವಾಗಿ ಸಾಗುತ್ತಿದೆ. ಅಲ್ಲಿ ಜಪಾನರ ಪ್ರತಿಭಟನೆ ಉಗ್ರವಾಗಿದೆಯೆಂಬುದು ನಿಶ್ಚಯ. ಇರದಿನ ಅಶಾಂತಿಗೆ ಕಾರಣರಾದ ಜಪಾನರನ್ನು, ಸದೆಬಡೆಯುವುದು ಮಿತ್ರರ ಉದ್ದೇಶವಿದೆ. ನಮ್ಮ ಯುದ್ಧ ಕೈದಿಗಳಿಗೆ ಜಪಾನರು ಚಿತ್ರಹಿಂಸೆ ಕೊಡುತ್ತಿರುವರು. ಅವರ ಬಿಡುಗಡೆಗಾಗಿಯೂ ನಾವು ತ್ವರಿತದಿಂದ ಮುಂದುವರಿಯುತ್ತೇವೆ. ನಾವು ಬ್ರಿಟಿಷ್ ಡಚ್ಚರ ಸಹಾಯದಿಂದ, ಜಪಾನರನ್ನು ಮಲಯಾ, ಬರ್ಮ ಮತ್ತು ಜಪಾನದಿಂದ ಹೊಡೆದೋಡಿಸಲು ಪ್ರಯತ್ನಿಸುತ್ತಿದ್ದೇವೆ. ಇಂದಿನ ಯುದ್ಧದಲ್ಲಿ ಪರಸ್ಪರ ಸಹಕಾರದಿಂದ ವರ್ತಿಸುವುದೇ ನಮ್ಮ ಉದ್ದೇಶ. ನಮ್ಮ ಮುಂದಿನ ಸಮಸ್ಯೆ ಹೇಗೆ ಪರಿಹರಿಸಬಹುದೆಂದು ಕೇಳುತ್ತೀರಿ. ನಮ್ಮ ಭಾವನೆ ಒಂದೇಯಾದರೆ ಪರಿಹಾರಕ್ಕೆ ಏನು ಕಷ್ಟವಿದೆ. ಇಟಲಿಯನ್ ಅರಸರನ್ನು ಪದಚ್ಯುತರನ್ನಾಗಿ ಮಾಡುವುದು ನಮ್ಮ ಗುರಿಯಲ್ಲ. ಇಟಲಿಗೆ ಅರಸರ ಅಗತ್ಯವಿದ್ದರೆ ಅಲ್ಲಿನವರು ಹಾಗೆ ಮಾಡಬಹುದು. ಇಟಲಿಯ ಕುರಿತಾದ ಯಾವ ನಿರ್ಧಾರವನ್ನು ಇಟಲಿಯನರೇ ಕೈಕೊಳ್ಳಬೇಕು.'

ರೂಸ್‌ವೆಲ್ಟರೇನೋ ಇಂತು ಇಲ್ಲಿ ಸ್ಪಷ್ಟ ಹೇಳಿದ್ದಾರೆ. ಫೇಸಿಸ್ಟ್ ಆಕ್ರಮಣ ವಿರೋಧಕ್ಕಾಗಿ, ಹಾಗೂ ಸ್ವಾತಂತ್ರ್ಯದ ಸಲುವಾಗಿ ಭಾರತ ಹಾಗೂ ಏಶ್ಯದಲ್ಲಿ ತಾವು ಸೇನೆಯಿಟ್ಟಿರುವೆವೆಂದು ಅವರ ಹೇಳಿಕೆ. ಆದರೆ ಬಹುಕಾಲದಿಂದ ಸ್ವಾತಂತ್ರ್ಯವಿಲ್ಲದೆ, ಫೇಸಿಸ್ಟರ ಮರ್ದನ ರೀತಿಯ ಬ್ರಿಟಿಷ್ ಸಾಮ್ರಾಜ್ಯಶಾಹೀ ಮರ್ದನಕ್ಕೊಳಗಾದ ಭಾರತದ ಸ್ವಾತಂತ್ರ್ಯದ ಬಗ್ಗೆ ರೂಸ್‌ವೆಲ್ಟರು ಒಂದಿಷ್ಟು ಆಲೋಚಿಸುವುದಿಲ್ಲವೆಂದರೆ, ಏನೊಂದೂ ಪ್ರಯತ್ನ ಮಾಡುವುದಿಲ್ಲವಾದರೆ ಅವರು ಹೇಳಿದ ಈ ಮಹೋದ್ದೇಶಗಳ ಕುರಿತು ಯಾರಿಗೆ ತಾನೆ ವಿಶ್ವಾಸ ಹುಟ್ಟಬೇಕು?

ಕನ್ನಡಿಗರ ಕಣ್ಮಣಿ "ಮೈಸೂರು"

1943ರಲ್ಲಿ ನಮ್ಮ ಉದ್ಯಮವು 1942ನೇ ವರ್ಷದ ಉದ್ಯಮಕ್ಕಿಂತ ಎರಡಂಶದಷ್ಟು ಹೆಚ್ಚಿದೆ!

ಹೊಸ ಪ್ರೀಮಿಯಂ ಹುಟ್ಟುವಳಿಯು ಕಳೆದ ವರ್ಷದ ಹುಟ್ಟುವಳಿಗಿಂತ ದ್ವಿಗುಣಿತವಾಗಿದೆ!

ಮೈಸೂರು, ಮಂಡ್ಯ, ದಾವಣಗೆರೆ, ಉತ್ತರ ಕನ್ನಡ, ಹುಬ್ಬಳ್ಳಿ, ಕೊಲ್ಹಾಪುರ, ಶೋಲಾಪುರ, ಗುಲ್ಬರ್ಗಾ, ವೆಲ್ಲೂರು, ಕೊಯಮುತ್ತೂರು, ಮತ್ತು ವೀರರಾಜ ಪೇಟೆಗಳಲ್ಲಿ ಸಮರ್ಥವಾದ ಮತ್ತು ಸುವ್ಯವಸ್ಥಿತವಾದ ಆರ್ಗನೈಜೇಷನ್ ಮತ್ತು ಸಬ್ ಆಫೀಸುಗಳೂ ಸ್ಥಾಪಿತವಾಗಿವೆ.

ನಮ್ಮ ಸಂಸ್ಥೆಯು ಪ್ರಥಮ ಮೌಲ್ಯಮಾಪನದಲ್ಲಿಯೇ ಲಾಭಾಂಶವನ್ನು ಗಳಿಸಿದೆ!

(ಸಶಾಸ್ತ್ರೀಯವಾದ ಪ್ರಾವಿಡೆಂಟ್ ಉದ್ಯಮ ನಡೆಸಲು ಸಂಸ್ಥಾನದಲ್ಲಿ ಸ್ಥಾಪಿತವಾದ ಮೊಟ್ಟಮೊದಲನೆಯ 'ಮೈಸೂರು ಪ್ರಾವಿಡೆಂಟ್'ನ್ನು ಮರೆಯಲಾಗದು!)

ಕ್ಷೇತ್ರೋದ್ಯಮಿಗಳಿಗೆ ಅಪೂರ್ವಯೋಗ! ಸುಸಂಧಿ!

ಪ್ರತಿನಿಧಿಗಳಿಲ್ಲದಿರುವೆಡೆಗಳಲ್ಲಿ ಇನ್‌ಸ್ಪೆಕ್ಟರ್, ಆರ್ಗನೈಜರ್ ಮತ್ತು ಸ್ಪೆಷಲ್ ಏಜಂಟರಾಗ ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಜನರಲ್ ಮ್ಯಾನೇಜರ್,

ದಿ ಮೈಸೂರು ಇನ್‌ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಲಕ್ಷ್ಮೀ ಸ್ಥಾನಂ — ಲಾಲ್‌ಬಾಗ್ ಕೋಟೆರಸ್ತೆ — ಬೆಂಗಳೂರು ನಗರ

ಸ್ವದೇಶಾಭಿಮಾನಿ

ತಾರೀಖು 11—2—1944

ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನ

ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನವು ಇದೇ ತಿಂಗಳ ತಾ|| ೧೯ ಮತ್ತು ೨೦ರಂದು ಮದ್ರಾಸಿನ ಸ್ವದೇಶಮಿತ್ರನ್' ಪತ್ರಿಕಾ ಸಂಪಾದಕರಾದ ಅಖಿಲ ಭಾರತ ಖ್ಯಾತಿಯ ಪತ್ರಿಕೋದ್ಯೋಗಿ ಶ್ರೀ ಸಿ. ಆರ್. ಶ್ರೀನಿವಾಸನರ ಅಧ್ಯಕ್ಷತೆಯಿಂದ ನೆರವೇರಲಿದೆ. ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನಕ್ಕೆ ಕರ್ನಾಟಕ ಪತ್ರಿಕೋದ್ಯೋಗಿಗಳೇ ಯಾರಾದರೂ ಅಧ್ಯಕ್ಷರಾಗಬೇಕಾಗಿತ್ತೆಂಬುದು ಯೋಗ್ಯವಾದೊಂದು ಸೂಚನೆಯಾದರೂ, ಇದುವರೆಗೆ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಂಘವೊಂದು ಚನ್ನಾದ ನೆಲೆಯಲ್ಲಿ ಸಂಘಟನೆ ಹೊಂದದೆ ಇರುವುದರಿಂದ, ಯೋಗ್ಯ ಚುನಾವಣೆ ಮೂಲಕ ಕರ್ನಾಟಕದವರೇ ಆದ ಅಧ್ಯಕ್ಷರನ್ನು ಆರಿಸುವುದು ಸಾಧ್ಯವಾಗುವುದಿಲ್ಲನೆಂಬ ಕಾರಣದಿಂದಲೂ, ಮುಂದೆ ಈ ಸಮ್ಮೇಳನಾನಂತರವಾದರೂ ಅಖಿಲ ಕರ್ನಾಟಕ ಸಂಘವೊಂದರ ಸ್ಥಾಪನೆ ಸಂಘಟನೆಯಾಗಿ, ಮುಂದಿನ ನಮ್ಮ ಸಮ್ಮೇಳನಗಳಿಗೆ ಕರ್ನಾಕದವರೇ ಅಧ್ಯಕ್ಷರಾಗುವಂತೆ ಏರ್ಪಡಿಸ ಬಹುದೆಂತಲೂ, ಈ ಸಮ್ಮೇಳನವು ಒಂದು ರೀತಿಯಲ್ಲಿ ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳ ವಿಚಾರ ವಿನಿಮಯ ಕೂಟವಾಗಿ ಮುಂದಿನ ಹಾದಿಯನ್ನು ಸರಿಯಾಗಿ ನಿರ್ಧರಿಸುವಂತೆ ಮಾಡುವುದೆಂದೂ ನಾವು ಹಾರೈಸುತ್ತೇವೆ ಮಾತ್ರವಲ್ಲದೆ ಶ್ರೀ ಸಿ. ಆರ್. ಶ್ರೀನಿವಾಸನರು ದೇಶಭಾಷಾ ಪತ್ರಿಕಾ ಸಂಪಾದಕರಾಗಿ ಅಖಿಲ ಭಾರತ ಖ್ಯಾತಿಯವರಿರುವುದರಿಂದ ಕರ್ನಾಟಕದಲ್ಲಿ ದೇಶಭಾಷಾ ಪತ್ರಿಕೆಗಳೇ ಹೆಚ್ಚಿರುವ ಕಾರಣ ನಮ್ಮ ನಾಡಿನ ಪತ್ರಿಕೋದ್ಯೋಗಿಗಳಿಗೆ ಸರಿಯಾದ ಹಾದಿ ತೋರಿಸಲು ಅವರು ಸಹಾಯಕರಾಗುವರೆಂದೂ ನಾವು ನಂಬುತ್ತೇವೆ.

ಮಂಗಳೂರಲ್ಲಿ ಸೇರಲಿರುವ ಸಮ್ಮೇಳನದ ಮುಂದೆ ಹಲವಾರು ಪ್ರಮುಖ ವಿಚಾರಗಳು ಚರ್ಚೆಗೆ ಬರಲಿವೆ. ಈಗಾಗಲೇ ಕನ್ನಡ ನಾಡಿನ ಹಿರಿಯ ಸಾಹಿತಿ ಹಾಗೂ ಪತ್ರಿಕೋದ್ಯೋಗಿಗಳಾದ ಶ್ರೀ ಶಿವರಾಮ ಕಾರಂತರು ಕರ್ನಾಟಕ ಪತ್ರಿಕೋದ್ಯೋಗಿಗಳ ಮುಂದೆ ಕೆಲವು ಸೂಚನೆಗಳನ್ನು ಮಂಡಿಸಿದ್ದು, ಇಷ್ಟರಲ್ಲೇ ಆ ಸೂಚನೆಗಳು ಅಖಿಲ ಕರ್ನಾಟಕದ ದೃಷ್ಟಿಯನ್ನು ಸೆಳೆದಿವೆ. ಕನ್ನಡ ಲಿಪಿ ಸಂಸ್ಕರಣದ ವಿಚಾರ, ಕನ್ನಡ ಪತ್ರಿಕೋದ್ಯೋಗದ ಬೆಳವಣಿಗೆಯ ಹಾದಿ ಹುಡುಕುವಲ್ಲಿ ಪ್ರಾವೀಣ್ಯತೆ ಪಡೆವ ವಿಚಾರ, ಪತ್ರಿಕೋದ್ಯೋಗಿ, ಸಂಪಾದಕ, ಮುದ್ರಕ [illegible] ಸಂಬಂಧ ವಿಚಾರ, ಅವರು ಮತ್ತದ ಸೂಚನೆಗಳನ್ನು ಮಂಡಿಸಿದ್ದಾರೆ. ಈ ಸೂಚನೆಗಳನ್ನೆಲ್ಲಾ ಸರಿಯು, ಸಮ್ಮೇಳನ ಸ್ವಾಗತ ಸಮಿತಿಯವರು ಒಂದು ವಿಚಾರ ಸಮನ್ವಯ ಕೂಟವನ್ನು ಸಮ್ಮೇಳನದ ಮುಂದಿನ ದಿನ ಏರ್ಪಾಡು ಮಾಡಲು ನಿಶ್ಚಯಿಸಿದ್ದು ಪ್ರಶಂಸನೀಯವಿದೆ. ಏಕೆಂದರೆ ತಜ್ಞರ ಸಲಹೆ ಪಡೆದು ಆ ಕೂಟದಲ್ಲಿ ರೂಪುವೆತ್ತ ನಿರ್ಧಾರಗಳನ್ನು ಸಮ್ಮೇಳನದ ಮುಂದಿಟ್ಟು, ಮುಂದೆ ಯೋಗ್ಯ ಕಾರ್ಯಕ್ರಮ ಕೈಕೊಳ್ಳಲು ಇದರಿಂದ ಸಹಾಯವಾಗುವುದೆಂಬುದರಲ್ಲಿ ಸಂಶಯವಿಲ್ಲ.

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳು ಇತ್ತೀಚೆಗೆ ಸಂಘಟಿತರಾಗಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಪತ್ರಿಕೋದ್ಯೋಗಿ ಸಂಘವೊಂದು ಹುಬ್ಬಳ್ಳಿಯಲ್ಲಿ ಕೆಲವು ವರ್ಷಗಳ ಹಿಂದೆಯೇ ಸ್ಥಾಪಿತವಾಗಿದ್ದು ಮುಂದೆಯಾದರೂ ಅದು ಚನ್ನಾಗಿ ಕೆಲಸ ಮಾಡಿ ಬೊಂಬಯಿ ಕರ್ನಾಟಕದ ಪತ್ರಿಕೋದ್ಯೋಗಿಗಳನ್ನು ಸಂಘಟಿಸುವ ಕಾರ್ಯ ಕೈಕೊಳ್ಳಬೇಕಾಗಿದೆ. ಇದರೊಂದಿಗೆ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಂಘವೊಂದು ಕೇಂದ್ರ ಸಂಸ್ಥೆಯಾಗಿ ಸ್ಥಾಪಿತವಾಗಿ ಇಡೀ ಕರ್ನಾಟಕದ ಪತ್ರಿಕೋದ್ಯೋಗಿಗಳ ಪತ್ರಿಕೋದ್ಯೋಮದ ಉನ್ನತಿಗಾಗಿ ದುಡಿಯುವುದು ಅವಶ್ಯವಿರುವುದು.

ಕರ್ನಾಟಕದ ಜನರು, ದೌರ್ಭಾಗ್ಯದಿಂದ ರಾಜಕೀಯ ದೃಷ್ಟ್ಯಾ ಬ್ರಿಟಿಷ್ ಕರ್ನಾಟಕ, ಸಂಸ್ಥಾನ ಕರ್ನಾಟಕದವರೊಂದು ವಿಭಜಿಸಲ್ಪಟ್ಟಿದ್ದಾರೆ. ಬ್ರಿಟಿಷ್ ಕರ್ನಾಟಕದವರೂ ಮದ್ರಾಸು ಪ್ರಾಂತ ಬೊಂಬಯಿ ಪ್ರಾಂತಗಳಿಗೆ ಹರಿದು ಹಂಚಿ ಹೋಗಿದ್ದಾರೆ. ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಂಘವು ಈ ಕೃತ್ರಿಮ ರಾಜಕೀಯ ವಿಭಜನೆಯನ್ನು ಮೀರಿ ನಿಂತು, ಕನ್ನಡ ನಾಡಿನ ಎಲ್ಲಾ ಪತ್ರಿಕೋದ್ಯಮಿಗಳು ಒಗ್ಗಟ್ಟಾಗುವಂತೆ ಮುಂದಾಳುತನ ಕೊಡುವಂತಾಗಬೇಕೆಂದೂ, ಈ ಸಮ್ಮೇಳನಕ್ಕೆ ಎಲ್ಲ ಕಡೆಗಳಿಂದಲೂ ಪ್ರತಿನಿಧಿಗಳು ಬಹು ಸಂಖ್ಯೆಯಿಂದ ಬಂದು ಈ ಉದ್ದೇಶವನ್ನು ಸಾರ್ಥಕಗೊಳಿಸಲೆಂದೂ ನಾವೂ ಹಾರೈಸುತ್ತೇವೆ.

ಕರ್ನಾಟಕದ ಪತ್ರಿಕಾ ನಿರ್ಬಂಧ, ಪತ್ರಿಕಾ ಪ್ರಚಾರ, ಪತ್ರಿಕೋದ್ಯಮಿಗಳ ಜೀವನ, ಇವುಗಳಿಗೆ ಸಂಬಂಧಪಟ್ಟ ಹಲವಾರು ವಿಚಾರಗಳು ಈ ಸಮ್ಮೇಳನದಲ್ಲಿ ಚರ್ಚಿತವಾಗಿ ಕಾರ್ಯರೂಪಕ್ಕೆ ಬರಬೇಕು. ಕರ್ನಾಟಕಕ್ಕೊಂದು ಸ್ವತಂತ್ರ ಪ್ರಾಂತ್ಯ, ಸ್ವತಂತ್ರ ವಿಶ್ವ ವಿದ್ಯಾಲಯ ಇವೇ ಮೊದಲಾದ ವಿಚಾರಗಳನ್ನು ಕರ್ನಾಟಕದ ಪತ್ರಿಕೋದ್ಯಮಿಗಳು ವಿಚಾರಿಸುವುದು ಅವಶ್ಯವಿದೆ. ಅಂತೂ ಮಂಗಳೂರಿನ ಈ ಸಮ್ಮೇಳನವು ನಮ್ಮ ನಾಡಿನ ಪತ್ರಿಕೋದ್ಯಮಿಗಳಿಗೆ ಯೋಗ್ಯ ಮಾರ್ಗದರ್ಶಕವಾಗುವಂತೆ ಅಖಿಲ ಕರ್ನಾಟಕ ಪತ್ರಿಕೋದ್ಯಮಿಗಳು ನೆರವಾಗಬೇಕೆಂದು ನಮ್ಮದೂ ವಿನಂತಿಯಿದೆ.

ಸ್ವದೇಶ ಸಮಾಚಾರ

ಕಾಂಗ್ರೆಸಿನವರನ್ನು ಬಿಡಬೇಕೆಂದು ಕೇಳುವುದಿಲ್ಲ ಬ್ರಿಟಿಷರು ಹೊರಟು ಹೋಗಬೇಕಾಗಿದೆ

ಅಬ್ದುಲ್ ಖಯೂಮರ ಸ್ಪಷ್ಟೋಕ್ತಿ

ಸದ್ಯದ ಬಿಕ್ಕಟನ್ನು ಬಿಡಿಸಿ ಯುದ್ಧ ಪ್ರಯತ್ನ ಬಲಗೊಳಿಸುವ ದೃಷ್ಟಿಯಿಂದ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕೆಂದು ಶ್ರೀ. ಲಾಲ ಚಂದ ನವಲರಾಯರು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ ನಿರ್ಣಯವು ಮತಗಣನೆಗಿಡದೆ ನಿರಾಕರಿಸಲ್ಪಟ್ಟಿತು. ಶ್ರೀ. ಅಬ್ದುಲ್ ಖಯೂಮರು ಕಾಂಗ್ರೆಸ್ ಪಕ್ಷದ ಪರವಾಗಿ ಮಾತನಾಡಿ, ಕಾಂಗ್ರೆಸಿಗರನ್ನು ಬಿಡುಗಡೆ ಮಾಡಬೇಕೆಂದು ನಾವು ಯಾರನ್ನೂ ಬೇಡುವುದಿಲ್ಲ, ಬ್ರಿಟಿಷರು ಈ ದೇಶ ಬಿಟ್ಟು ಹೊರಹೋಗಬೇಕೆಂಬುದೇ ನಮ್ಮ ಅಭಿಪ್ರಾಯವಾಗಿದೆ ಎಂದರು. ಮುಂದುವರಿಸಿ ಅವರು ಮಾತನಾಡುತ್ತಾ, 'ನಾವು ಇಟ್ಟ ಹೆಜ್ಜೆ ಹಿಂದೆಗೆಯಲಾರೆವು. ಅಗಸ್ಟ ನಿರ್ಣಯ ಹಿಂತೆಗೆವುದು ಸಾಧ್ಯವೇ ಇಲ್ಲ. ಬ್ರಿಟಿಷ್ ಸರಕಾರವೇ ದಬ್ಬಾಳಿಕೆಯ ಧೋರಣವನ್ನು ಹಿಂದೆಗೆಯಬೇಕು. ಸರಕಾರ ಮನಸ್ಸಿಗೆ ಬಂದಷ್ಟು ದಿನ ನಮ್ಮನ್ನು ಸೆರೆಯಲ್ಲಿಡಲಿ, ನಾವು ಬಿಡುಗಡೆ ಮಾಡಬೇಕೆಂದು ಬೇಡಲಾರೆವು. ಸರಕಾರ ಕಾಂಗ್ರೆಸ್ಸಿನ ಮೇಲೆ ಆ ಮೂಲಕ ಇಡೀ ಭಾರತೀಯರ ಮೇಲೆ ಯುದ್ಧ ಹೂಡಿದೆ. ರಾಷ್ಟ್ರದ ಸ್ವಾತಂತ್ರ್ಯ ಸಂಪಾದಿಸುವುದೇ ನಮ್ಮ ಧ್ಯೇಯ; ಬ್ರಿಟಿಷರು ಈ ದೇಶ ಬಿಟ್ಟು ಹೊರಟು ಹೋಗಬೇಕು' ಎಂದರು.

ವಿಶಾಖ ಪಟ್ಟದ ಮೇಲೆ ಬಾಂಬು!

ಫೆಬ್ರವರಿ ತಾ ೬ರಂದು ಒಂದು ವಿಮಾನವು ಬಂದು ವಿಶಾಖಪಟ್ಟಣದ ಮೇಲೆ ಬಾಂಬ ಸುರಿಸಿತು. ಆದರೆ ವಿಶೇಷ ಹಾನಿಯೇನೂ ಆಗಲಿಲ್ಲವೆಂದು ಹೇಳಲಾಗಿದೆ.

ಹೆಂಗುಸರ ಜೈಲು

ಬೀಹಾರಿನಲ್ಲಿ ಇದೇ ಮೊದಲನೆಯ ಸಲವಾಗಿ ಹೆಂಗುಸರಿಗಾಗಿಯೇ ಒಂದು ಜೈಲು ತೆರೆಯಲಾಗಿದೆ. ಇದರಲ್ಲಿ ಅಧಿಕಾರಿಗಳೂ ಹೆಂಗುಸರೇ. ಹೆಂಗುಸರಾದ ಕೈದಿಗಳ ಜೀವನ ಉತ್ತಮ ಮಾಡಲು ಈ ಏರ್ಪಾಡು ಮಾಡಲಾಗಿದೆಯೆಂದು ತಿಳಿಯುತ್ತದೆ.

ಗೋಪಿನಾಥ ಬಾರ್ಡೋಲಿ

ಇವರನ್ನು ಅನಾರೋಗ್ಯದ ನಿಮಿತ್ತ ಬಿಡುಗಡೆಮಾಡಲಾಗಿದೆಯಷ್ಟೆ. ಅನಾರೋಗ್ಯ ಅತಿರೇಕವಾಗಿದ್ದು, ರಕ್ತದ ಒತ್ತಡ, ಕಣ್ಣಿನ ಬೇನೆ ಕೂಡಾ ಇರುವುದರಿಂದ ಅವರು ಕೂಡಲೇ ಕಲ್ಕತ್ತಕ್ಕೆ ತೆರಳಬೇಕಾಗಿ ಡಾಕ್ಟರರು ಅವರಿಗೆ ತಿಳಿಸಿದ್ದಾರೆ.

'ಹೆಂಗುಸರು ಗನಿಗಳಲ್ಲಿ ಕೆಲಸ ಮಾಡಬೇಕು'

ಡಾ॥ ಅಂಬ್ಡೇಕರ್ ಸಮರ್ಥನೆ

ಹೆಂಗುಸರು ಗನಿಗಳಲ್ಲಿ ಕೆಲಸ ಮಾಡುವುದು ಯಾವುದೇ ದೇಶದಲ್ಲಿಯೂ ಕೂಡಾ ಇಲ್ಲ. ಏಕೆಂದರೆ ಗಾಳಿ ಬೆಳಕಿಲ್ಲದ ಕತ್ತಲು ಕೋಣೆಯಲ್ಲಿ ಅಷ್ಟು ಪ್ರಯಾಸಕರವಾದ ಕೆಲಸ ಮಾಡಿದರೆ ಅವರ ಆರೋಗ್ಯ ಕೆಟ್ಟು ಹೋಗುತ್ತದೆಂಬುದು ಇದರ ಉದ್ದೇಶ. ಆದರೆ ಭಾರತದ ಕಲ್ಲಿದ್ದಲು ಗನಿಗಳಲ್ಲಿ ಹೆಂಗುಸರು ಕೆಲಸ ಮಾಡಬೇಕೆಂದೀಗ ಸರಕಾರ ವಿಧಿಸಿದೆ. ಡಾ॥ ಅಂಬ್ಡೇಕರ್ ಇದಕ್ಕೆ ಸಮರ್ಥನೆಯಿತ್ತಿದ್ದಾರೆ. ಅಂತರಾಷ್ಟ್ರೀಯ ಕೂಲಿಗಾರ ಸಂಘದ ನಿಯಮಕ್ಕೂ ಇದು ವಿರೋಧ. ಭಾರತದ ಬಡ ಕೂಲಿಗಾರನು ದಿನವಿಡೀ ದುಡಿದು ಬಂದರೂ, ಆತ ತನ್ನ ಹೆಂಡತಿ ಮಕ್ಕಳನ್ನು ಸಾಕಲಾರೆನೆಂದಾದರೆ ಅವರ ಜೀವನಕ್ಕಾಗಿ ಅವರನ್ನೂ ದುಡಿಸಬೇಕೆಂದಾದರೆ ಇದಕ್ಕಿಂತ ನಿಕೃಷ್ಟ ಬಾಳುವೆ ಯೇನಿದೆ? ಸರಕಾರದವರು ಇಂಥಾ ಕೆಲಸಕ್ಕೆ ಒಪ್ಪಿಗೆ ಕೊಡುವುದು ಅನ್ಯಾಯವಲ್ಲದೆ [illegible]

ಶ್ರೀಮತಿ ರೂಸ್‌ವೆಲ್ಟರು ಭಾರತಕ್ಕೆ ಬರುವರು

ಅಮೇರಿಕದ ಅಧ್ಯಕ್ಷರ ಪತ್ನಿ ಶ್ರೀಮತಿ ಫ್ರಾಂಕ್ಲಿನ್ ಡಿಲಾನೋ ರೂಸ್‌ವೆಲ್ಟರು ಭಾರತಕ್ಕೆ ಬರುವರೆಂಬ ಸುದ್ದಿ ಪತ್ರಿಕೆಗಳಲ್ಲಿ ಬಂದಿದೆ. ಶ್ರೀಮತಿ ರೂಸ್‌ವೆಲ್ಟರಿಗೆ ನಮ್ಮ ಸ್ವಾಗತವಿದೆ; ಭಾರತೀಯರ ಸ್ವಾಗತವಿದೆ.

ಸೆರೆಯಾದ ದೇಶನೇತಾರರನ್ನು, ಸೆರೆ ನೇತಾರರನ್ನು ಗಳ, ದುಃಖ ಜೀವಿಗಳಾದ ಆಕೆ ಭಾರತಕ್ಕೆ ಬರಬೇಕು. ಬಂದು ಇಲ್ಲಿನ ಪರಿಸ್ಥಿತಿ ನೋಡಬೇಕು. ಭಾರತೀಯರ ಸ್ವಾತಂತ್ರ್ಯ ಪ್ರೇಮ ತಿಳಿಯಬೇಕು. ಹೀಗಾಗಿ ಆಕೆ ಮರಳಿ ಅಮೆರಿಕಕ್ಕೆ ಹೋದರೆ ಅಧ್ಯಕ್ಷ ರೂಸ್‌ವೆಲ್ಟರನ್ನು ಒತ್ತಾಯಪಡಿಸಬಹುದಲ್ಲ!—ಇದು ನಮ್ಮ ಆಶೆ—ಭಾರತೀಯರ ಆಶೆ.

ಶ್ರೀಮತಿ ರೂಸ್‌ವೆಲ್ಟರು ಪ್ರವಾಸ ಪ್ರಿಯೆ; ಪತ್ರಿಕೆಗಳಿಗೆ ಲೇಖನ ಬರೆಯುತ್ತಾರೆ. ರೇಡಿಯೋದಲ್ಲಿ ಆಗಾಗ ಮಾತನಾಡುತ್ತಾರೆ. ಲೇಖನ, ಭಾಷಣ, ಪ್ರಚಾರಗಳ ಮೂಲಕ ಆಕೆ ಭಾರತದ ಸ್ವಾತಂತ್ರ್ಯಕ್ಕೆ ಸಹಾಯ ಮಾಡಲು ಅವಶ್ಯ ಬರಬೇಕು.

ಕಾಂಗ್ರೆಸ್ ಆಜ್ಞೆಯಂತೆ ಸೈನ್ಯಕ್ಕೆ ಸೇರದಿದ್ದವರಿಗೆ ಲಂಡನ್ ಭಾರತೀಯ ಕಾಂಗ್ರೆಸ್ ಬೆಂಬಲ

ಕಾಂಗ್ರೆಸಿನ ಆಜ್ಞೆಯಂತೆ, ಇಲ್ಲವೇ ಸ್ಪಷ್ಟವಾದ ರಾಜಕೀಯ ಕಾರಣದಿಂದಾಗಿ, ಬ್ರಿಟನಿನ ಸೈನ್ಯದಲ್ಲಿ ಸೇರಲು ಮೊದಲಿನಿಂದಲೂ ಒಪ್ಪದಿರುವ ಭಾರತೀಯರಿಗೆ ಈ ಸಮಿತಿಯವರು ತಮ್ಮ ಬೆಂಬಲವನ್ನು ಕೊಡುತ್ತಾರೆಂದೂ ಅವರು ತಮ್ಮ ಧೋರಣ ಸ್ಪಷ್ಟೀಕರಿಸಿ, ಕೊನೆತನಕ ಪರಿಣಾಮಗಳಿಗೆ ಹೆದರದೆ ತತ್ವ ಸಾಗಿಸಿಕೊಂಡು ಹೋಗಬೇಕೆಂದೂ ಲಂಡನಿನ ಭಾರತೀಯ ಕಾಂಗ್ರೆಸಿನವರು ಪ್ರಕಟಿಸಿದ್ದಾರೆ. ಆದರೆ ಯುದ್ಧ ಯತ್ನಕ್ಕೆ ಯಾವುದಾದರೊಂದು ಬಗೆಯಿಂದ ನೆರವಾದವರಿಗಾಗಲಿ ರಾಜಕೀಯ ಪ್ರಾಮಾಣಿಕ ಮತಭೇದದ ಹೊರತು ಉಳಿದ ಕಾರಣದಿಂದ ಸೈನ್ಯಕ್ಕೆ ಸೇರದವರಾಗಲಿ ಅಥವಾ ಶಾರೀರಿಕ ದೌರ್ಬಲ್ಯ ಮೂಲಕ ದೂರವುಳಿದವರಿಗಾಗಲಿ ಈ ಬೆಂಬಲವಿಲ್ಲವೆಂದೂ ತಿಳಿಸಲಾಗಿದೆ.

ಜಯಪ್ರಕಾಶರ ಬಂಧನ ವಿಚಾರ

ಶಾಸನಸಭೆಯಲ್ಲಿ ಪ್ರಶ್ನೆ

ಜಯ ಪ್ರಕಾಶ ನಾರಾಯಣರ ಕುರಿತು ಶ್ರೀ॥ ದೇಶಮುಖರು ಕೇಂದ್ರ ಶಾಸನ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರವೀಯುತ್ತಾ ಗ್ರಹ ಮಂತ್ರಿಗಳು ಅವರು ಪಂಜಾಬ್ ಸರಕಾರದ ಆಜ್ಞೆಯಂತೆ ೧೮೧೮ರ ಬಂಗಾಳ ರೆಗುಲೇಶನ್ IIIರ ಕಾನೂನಿನಂತೆ ಬಂಧಿತರಾಗಿರುವರೆಂದೂ, ಇಂಡಿಯಾ ಸರಕಾರದಿಂದ ಬಂಧಿತರಾಗಿಲ್ಲವೆಂದೂ ಹೇಳಿದರು. ಅವರನ್ನು I ಕ್ಲಾಸ್ ಕೈದಿಯಾಗಿ ನೋಡುತ್ತಿರುವುದಾಗಿಯೂ ತಿಳಿಸಿದರು. 'ಅವರನ್ನು ವಿಚಾರಣೆಗೆ ಗುರಿಪಡಿಸಲಾಗುವುದೇ' ಎಂದು ಕೇಳಿದ್ದಕ್ಕೆ ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲವೆಂದರು.

ಒರಿಸ್ಸದ ಮೇಲೆ ಜಪಾನ್ ವಿಮಾನ

ಫೆಬ್ರವರಿ ೬ರಂದು ಒಂದು ವೈರಿ ವಿಮಾನವು ಒರಿಸ್ಸದ ಕರಾವಳಿಯ ಸಮೀಪಿಸಿ ಕೆಲವು ಬಾಂಬುಗಳನ್ನು ಬಿಸಾಡಿತಾದರೂ ಏನೂ ನಷ್ಟ ಸಂಭವಿಸಲಿಲ್ಲವೆಂದು ತಿಳಿದು ಬರುತ್ತದೆ.

ಕಾಂಗ್ರೆಸಿನ ಮೇಲೆ ನಿಂದೆ ಖಂಡಿಸಲ್ಪಟ್ಟಿದೆ

ಅಮೇರಿಕದ ಪತ್ರಿಕೆಯಲ್ಲಿ

ವೀಲರನು ಬರೆದ 'ಇಂಡಿಯಾ ಎಗೈನ್‌ಸ್ಟ್ ಸ್ಟೋರ್ಮ್' ಎಂಬ ಪುಸ್ತಕವನ್ನು ವಿಮರ್ಶಿಸುತ್ತಾ 'ದಿ ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆಯು, ಆ ಪುಸ್ತಕ ಲೇಖಕನಿಗೆ ಕಾಂಗ್ರೆಸು, ಗಾಂಧಿ ಇವರ ಮೇಲಿರುವ ದ್ವೇಷವನ್ನು ಬಯಲಿಗೆಳೆದು, ಗಾಂಧಿಜೆಗೆ ನಿಜವಾಗಿ ಭಾರತದಲ್ಲಿರುವ ಪ್ರಭಾವದ ಕುರಿತು ಈ ಲೇಖಕರು ತಿಳಿಸಿಲ್ಲವೆಂದೂ, ಯಾವ ಸರಕಾರ ಜನತೆಯ ಒಪ್ಪಿಗೆ ಇಲ್ಲದೆ ಆಳುತ್ತದೋ ಅಂಥಾ ಇಂಡಿಯಾ ಸರಕಾರವೇ ಶಿಕ್ಷಾರ್ಹ [illegible] ನಿಂದನೀಯವೆಂದೂ

ಜಿಲ್ಲಾ ಸಮಾಚಾರಗಳು

ಮಂಗಳೂರು

ರೇಶನಿಂಗ್

ಮಂಗಳೂರಲ್ಲಿ ಅಕ್ಕಿ ರೇಶನಿಂಗ್ ಕಾರ್ಡು ಬರೆಯಲು ಪ್ರಾರಂಭವಾಗಿದೆ ಮುನ್ಸಿಪಲ್ ಉಪಾಧ್ಯಾಯರಿಂದ ಈ ಕೆಲಸ ಮಾಡಿಸಲ್ಪಡುತ್ತದೆ ಕೆಲವು ದಿನಗಳಲ್ಲಿಯೇ ಕೆಲಸ ಮುಗಿದು ರೇಶನಿಂಗ್ ಜಾರಿಗೆ ಬರಲಿರುವುದು.

ವರ್ಧಂತಿಗಳು

ಶಿವಾಜಿ ಫಿಸಿಕಲ್ ಕಲ್ಚರಲ್ ಇನ್ಸ್ಟಿಟ್ಯೂಟಿನ ವರ್ಧಂತ್ಯುತ್ಸವವು ಶ್ರೀ। ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಿಂದ ನೆರವೇರಿತು.

ಕಳೆದ ಆದಿತ್ಯವಾರ ಸಂಜೆ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದ ವಾರ್ಷಿಕ ವರ್ಧಂತಿಯು ಸಬ್ ಜಡ್ಜರಾದ ಶ್ರೀ। ಟಿ ಟಿ. ರಾಮಯ್ಯ ಪಂತುಲು ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ। ಕೆ. ಸದಾಶಿವ ಅಡಿಗ, ಎಡ್ವೊಕೇಟ್ ಇವರ ಭಾವಚಿತ್ರ ಅನಾವರಣೋತ್ಸವವು ಅಧ್ಯಕ್ಷರ ಹಸ್ತದಿಂದ ನೆರವೇರಿತು. ಶ್ರೀ। ಎಂ ವಾಸುದೇವರಾಯರು ಸ್ವಾಗತ ಭಾಷಣವಿತ್ತರು ಭವನದ ಶ್ರೇಯಃ ಪ್ರಾರ್ಥನೆಯನ್ನು ಶ್ರೀ। ಕೆ ರಾಮರಾಯರು ನೆರವೇರಿಸಿದರು ಶ್ರೀಗಳಾದ ಕೆ ನರಸಿಂಹ ಹೊಳ್ಳ ಮತ್ತು ಸುಬ್ರಾಯ ಭಟ್ಟರು ಆದಕ್ಕೆ ಉತ್ತರವಿತ್ತರು ವಿದ್ಯಾರ್ಥಿ ಸಭೆಯ ವರದಿಯನ್ನು ಶ್ರೀ। ಪಿ ಕೆ ಮಾಧವರಾಯರು ಓದಿದರು ಅನಂತರ ಬಹುಮಾನ ವಿತರಣ, ಅಧ್ಯಕ್ಷ ಭಾಷಣಗಳಾಗಿ ಶ್ರೀ। ಬಿ ವೆಂಕಟರಮಣರಾಯರು ಕೃತಜ್ಞತೆಯಿತ್ತರು ವಿವಿಧವಿನೋದಾವಳಿಗಳು ಇದ್ದವು

ಎಲಾಶಿಯಸ್ ಕಾಲೇಜ್ ಹಾಸ್ಟೆಲ್ ದಿನಾಚರಣೆಯು ಶ್ರೀ ಎಂ ಕೆ. ನಂಬಿಯಾರರ ಅಧ್ಯಕ್ಷತೆಯಿಂದ ಜರಗಿತು ಸ್ವಾಗತ ಭಾಷಣ ಧನ್ಯವಾದಾರ್ಪಣೆಯ ಬಳಿಕ ವಿವಿಧ ವಿನೋದಾವಳಿಗಳಿದ್ದುವು,

ಅಕ್ಕಿ ಪರ್ಮಿಟು

ಮಂಗಳೂರು ಪಟ್ಟಣವಾಸಿಗಳಿಗೆ ತಮ್ಮ ಮನೆ ಖರ್ಚಿಗೆ ಹಳ್ಳಿಗಳಿಂದ ಅಕ್ಕಿ ತರಿಸಿಕೊಳ್ಳಬೇಕೆಂದಿದ್ದರೆ ಅಂಥವರು ತಮ್ಮ ವಾರ್ಡು ನಂಬ್ರ, ಅರ್ಜಿದಾರನ ಹೆಸರು, ವಿಳಾಸ, ಮನೆಯಲ್ಲಿರುವ ಜನಸಂಖ್ಯೆ, ಅಕ್ಕಿ ತರಿಸುವ ವ್ಯಕ್ತಿ ಮತ್ತು ಗ್ರಾಮದ ಹೆಸರು, ತನ್ನ ಖಾಸಗಿ ಮತ್ತು ಕುಟುಂಬದ ಉಪಯೋಗಕ್ಕಾಗಿಯೇ ಅಕ್ಕಿ ಎಂಬ ಕುರಿತು ಹೇಳಿಕೆ ಮುಂತಾದುವನ್ನು ಕಾಣಿಸಿ ಶ್ರೀ। ನರಸಪ್ಪಯ್ಯ, ವಕೀಲ್ ಕದ್ರಿರೋಡ್, ಮಂಗಳೂರು ಇವರಿಗೆ ಅಥವಾ ಶ್ರೀ ಪಿ ಜೆ ಪ್ರಭು, ಲೈಟ್‌ಹೌಸ್ ಹಿಲ್, ಮಂಗಳೂರು ಇವರಿಗೆ ಪರ್ಮಿಟು ಕೊಡುವಂತೆ ಅರ್ಜಿ ಮಾಡಬಹುದು

ಜಿಲ್ಲಾ ಬೋರ್ಡು ಸಭೆ

ದ ಕ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ ೧೫ರಂದು ಪೂರ್ವಾಹ್ನ ೧೧ ಘಂಟೆಗೆ ಆದರ ಆಫೀಸಿನಲ್ಲಿ ಜರಗುವುದು ಈ ಸಭೆಯ ಮುಂದೆ ಡಿ. ಬೋ. ಮೆಂಬರ್ ಶ್ರೀ। ಬಿ ಕರಿಯಪ್ಪ ಭಂಡಾರಿಗಳು, ಮಿಡ್‌ವೈಫ್‌ಗಳ ಟ್ರಾನ್ಸ್‌ಫರ್ ವಿಷಯ, ನಿಶೇಷತಃ ಫರಂಗಿಪೇಟೆ ಮಿಡ್‌ವೈಫ್ ಟ್ರಾನ್ಸ್‌ಫರ್ ವಿಷಯ, ಹೆಲ್ತ್ ಇನ್ಸ್‌ಪೆಕ್ಟರ್ ಮೇಕ್ಸಿನೇಟರ್, ಚೈಲ್ಡ್ ವೆಲ್‌ಫೇರ್ ಸೆಂಟರ್ ಮಿಡ್‌ವೈಫ್, ಕ್ಲಾರ್ಕ್, ಏಟೆಂಡೆಂಟ ಮತ್ತು ಪ್ಯೂನುಗಳ ಮೇಲೆ ಚಾರ್ಜ್‌ಶೀಟ್, ಫೈನ್, ಡಿಸ್‌ಮಿಸ್ ಆದ ವಿಷಯ, ೧೯೩೩–೪೪ರಲ್ಲಿ ಲೈಸನ್ಸ್ ಇನ್ಸ್‌ಪೆಕ್ಟರ್ ಸ್ಥಾನ ಸೇಂಕ್ಷನ್ ಮಾಡಿದ ವಿಷಯ, ಕಲೆಕ್ಟರರು 'ಪೀರ್ಯೋಡಿಕಲ್' ಕಾನ್ಫರೆನ್ಸ್ ಮಾಡಿದ್ದ ವಿಷಯ, ಬೋರ್ಡಿನ ಆಡಳಿತದಲ್ಲಿರುವ ಸಂತೆ ಉತ್ಸವಗಳ ವಿಷಯ ಹೀಗೆ ಹೆಲ್ತ್ ಆಫೀಸರರಿಗೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳನ್ನು ಕೇಳಲಿರುವರು

ಡಿ ಬೋ. ಮೆಂಬರ್ ಶ್ರೀ। ಎಚ್. ಸರ್ವೋತ್ತಮ ಪೈಗಳಿಂದ, ಪ್ರೆಸಿಡೆಂಟರು ತನ್ನ ಸಂಬಂಧಿಕರಿಗೆ ಉದ್ಯೋಗ ಕೊಟ್ಟಿದ್ದಾರೋ ಎಂಬ ಕುರಿತು, ಪ್ರೆಸಿಡೆಂಟರು ಚುನಾವಣೆಗೆ ಸಂಬಂಧಿಸಿದ ಸಭೆಗೆ ಬರಲು ಮೆಂಬರರಿಗೆ ಧರ್ಮಾರ್ಥ ಬಸ್ ಪಾಸು ಕೊಡಲಾಗಿತ್ತೋ ಎಂಬ ಕುರಿತು, ಪ್ರೆಸಿಡೆಂಟರು ಧರ್ಮಾರ್ಥ ಬಸ್ ಪಾಸಿನಲ್ಲಿ ಬಂದು ಪ್ರಯಾಣ ಭತ್ತೆ ತೆಗೆದು ಕೊಳ್ಳುತ್ತಾರೋ ಎಂಬ ಕುರಿತು ಹೀಗೆ ಪ್ರೆಸಿಡೆಂಟರ ಗುಣನಡತೆಗಳ ಕುರಿತು ಕೆಲವು ಪ್ರಶ್ನೆಗಳೂ ಬರಲಿವೆ.

ಪೆರ್ಡಾಲ ಹಯ್ಯರ್ ಎಲಿಮೆಂಟ್ರಿ ಶಾಲೆಯನ್ನು ಹ್ಯಾಸ್ಕೂಲ್ ಮಾಡುವ ಕುರಿತು, ಡಿ. ಬೋ.ಗೆ ಅಸಾಧ್ಯವಾದರೆ ಊರವರು ಪ್ರಯತ್ನ ಮಾಡುವ ಬಗ್ಗೆ ಹಾಯ್ಯರ್ ಎಲಿಮೆಂಟ್ರಿ ಶಾಲೆಯ ಆಡಳಿತ ಊರವರಿಗೆ ಬಿಟ್ಟುಕೊಡುವ ವಿಚಾರವೂ ಈ ಸಭೆಯ ಮುಂದೆ ವಿಚಾರಕ್ಕಿಡಲಾಗುವುದು

ಮೋಡರ್ನ್ ಪೋನೋ ಟೈಪ್ ರೈಟಿಂಗ್ ಇನ್‌ಸ್ಟಿಟ್ಯೂಟ್

ಇದರ ವಾರ್ಷಿಕ ಕೂಟವು ತಾ ೬ರಂದು ಸಂಜೆ, ಶ್ರೀ। ಎನ್ ವಿ ಪೈ (ರಿಟಾಯರ್ಡ್ ಸಬ್ ಜಡ್ಜರು) ಇದರ ಅಧ್ಯಕ್ಷತೆಯಿಂದ ನೆರವೇರಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗಿನ ಸಮಯದಲ್ಲಿ, ಶಾರ್ಟ್‌ಹೇಂಡ್ ಟೈಪಿಂಗ್ ಬುಕ್ ಕೀಪಿಂಗ್ ಇದನ್ನು ಸರಿಯಾಗಿ ಕಲಿಯುವುದರ ಮಹತ್ವದ ಕುರಿತು ಮಾತನಾಡಿದರು. ಶ್ರೀಗಳಾದ ಯು ಗುರುರಾಜರಾವ್ ಮತ್ತು ಮಿಸ್ ತ್ರೇಸಾ ಪಿರೇರಾ ಮೊದಲಾದವರು ಮಾತನಾಡಿದರು ಶ್ರೀ। ಪಿ ಆರ್ ಪ್ರಭು ಇವರು (ಪ್ರಿನ್ಸಿಪಾಲ್) ದನ್ಯವಾದವಿತ್ತರು

ಜಿಲ್ಲಾ ಆಹಾರ ಸಮಿತಿ

ಜಿಲ್ಲಾ ಆಹಾರ ಸಮಿತಿಯ ಸಭೆಯೊಂದು, ಕಲೆಕ್ಟರರ ಕಚೇರಿಯಲ್ಲಿ ಜರಗಿ, ಅನ್ನ ಸಾಮಗ್ರಿಗಳನ್ನು ದೊರಕಿಸಿಕೊಳ್ಳಲೂ ಹಂಚಲೂ ಶ್ರೀ ಎಂ ಶಿವರಾಯರ ಸಮಿತಿ ತಯಾರಿಸಿದ ಯೋಜನೆಯನ್ನು ಸ್ವೀಕರಿಸಿತು ಗವರ್ನರರ ಎಡ್ವೈಸರರಾದ ಶ್ರೀ ರಾಮಮೂರ್ತಿಯವರಲ್ಲಿಗೆ, ಇಲ್ಲಿಂದ ಒಂದು ಶಿಷ್ಟ ಮಂಡಳಿ ಹೋಗಿ, ಇಲ್ಲಿನ ಆಹಾರ ಪರಿಸ್ಥಿತಿ ಕುರಿತು ನಿವೇದಿಸಿಕೊಳ್ಳುವುದಲ್ಲದೆ ಈ ಜಿಲ್ಲೆಗೆ ಸಾಕಾಗದೆ ಬರುವ ಕನಿಷ್ಟಪಕ್ಷ ೫ ಲಕ್ಷ ಮುಡಿಗಳಷ್ಟು ಅಕ್ಕಿಯನ್ನಾದರೂ ಹೊರ ಜಿಲ್ಲೆಯಿಂದ ತರಿಸುವಂತೆ ಅವರಲ್ಲಿ ವಿನಂತಿಸುವುದೆಂದೂ ನಿರ್ಣಯವಾಯಿತು ಮದ್ರಾಸಿನಲ್ಲಿ ಇದೇ ತಾ ೧೨ರಂದು ಈ ಶಿಷ್ಟ ಮಂಡಳಿಕ್ಕೆ ಭೇಟಿಕೊಡಲು ಅವಕಾಶ ಮಾಡಿಕೊಡಬೇಕೆಂದು ಶ್ರೀ। ರಾಮಮೂರ್ತಿಯವರಿಗೆ ತಂತಿ ಕೂಡಾ ಹೋಗಿದೆ ಶಿಷ್ಟ ಮಂಡಳದಲ್ಲಿ ಶ್ರೀಗಳಾದ ಎಂ ಶಿವರಾವ್, ಎ ಬಿ ಶೆಟ್ಟಿ ಮೊದಲಾದವರಿರುವರು,

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ

ಇದರ ಸ್ವಾಗತ ಸಮಿತಿಯ ಸಭೆಯೊಂದು ತಾ ೯ರಂದು ಸಂಜೆ ದ ಕ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಟ್ಟಡದಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ ವಿ ಎಸ್ ಕುಡ್ವರ ಅಧ್ಯಕ್ಷತೆಯಿಂದ ಸೇರಿ ಸಮ್ಮೇಳನವನ್ನು ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಭವನದಲ್ಲಿ ಜರಗಿಸುವುದಾಗಿಯೂ ಪ್ರತಿನಿಧಿಗಳಿಗೆ ಊಟವಸತಿ ಮೊದಲಾದವುಗಳ ಏರ್ಪಾಡಿನ ವಿಚಾರವೂ ಇತರ ಹಲವು ಪ್ರಾಮುಖ್ಯ ವಿಚಾರಗಳೂ ನಿರ್ಣಯಿಸಲ್ಪಟ್ಟಿವೆ. ಸಮ್ಮೇಳನದ ಕಾರ್ಯ ಕಲಾಪಗಳು ಭರದಿಂದ ಸಾಗುತ್ತಿವೆ. ಮೈಸೂರು ಬೆಂಗಳೂರು ಮೊದಲಾದ ಕನ್ನಡದ ಬೇರೆ ಬೇರೆ ಭಾಗಗಳಿಂದ ಪ್ರತಿನಿಧಿಗಳು ತಮ್ಮ ಪ್ರತಿನಿಧಿ ಹಾಸಲು ಕಳುಹಿಸಿ ಬರುವ ಸಿದ್ಧತೆ ಮಾಡುತ್ತಿರುವರಾಗಿಯೂ ತಿಳಿಯುತ್ತದೆ.

ದಿ. ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್,

ಇದರ ಶಾಖೆಯೊಂದು ಮಂಗಳೂರು ಕಾರ್ನಾಡ್ ಸದಾಶಿವರಾವ್ ರೋಡಿನಲ್ಲಿರುವ ನಜರೆತ್ ಬಿಲ್ಡಿಂಗಿನಲ್ಲಿ ತಾ ೯ರಂದು ಸಂಜೆ ಶ್ರೀ ಎ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಿಂದ ನೆರವೇರಿತು ಬೇಂಕಿನ ಅಧಿಕಾರಿಗಳಾದ ಶ್ರೀ ಕೆ ವಾಮನ ಶೆಣೈಯವರು ಈ ಬೇಂಕಿನ ಇತಿಹಾಸಾದಿಗಳನ್ನು ವಿವರಿಸಿ, ಈ ಉದ್ಘಾಟನೆಗೆ ಬಂದ ಸಂದೇಶಗಳನ್ನು ಓದಿದರು ಶ್ರೀಗಳಾದ ವೈಕುಂಠ ಬಾಳಿಗ, ರಾಘವೇಂದ್ರ ಪೈ, ಎಂ ಮಾಧವ ರಾವ್ ಮತ್ತು ಎಂ. ಅಣ್ಣಪ್ಪ ನ್ಯಾಕ್ ಇವರು ಶಾಖೆಯ ಏಳಿಗೆಯನ್ನು ಕೋರಿ ಭಾಷಣವಿತ್ತ ಬಳಿಕ ಅಧ್ಯಕ್ಷರ ಭಾಷಣವಾಗಿ ಉಪಹಾರ ಸತ್ಕಾರ ಧನ್ಯವಾದಾರ್ಪಣೆಗಳಿಂದ ಸಮಾರಂಭ ಕೊನೆಗೊಂಡಿತು

ಕಾ। ಡಾಂಗೆಯವರು

ಮಜೂರ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಬಂದಿದ್ದ ಕಾ। ಎಸ್ ಎ ಡಾಂಗೆಯವರು ತಾ ೮ರಂದು ಬೆಳಗ್ಗೆ ಮೈಲಿನಲ್ಲಿ ಹಿಂತಿರಳಿದರು ಮಂಗಳೂರಲ್ಲಿ ಅವರು ಬೇರೆ ಬೇರೆ ಕೂಲಿಗಾರ ಸಂಘಗಳ ಹಾಗೂ ಕಮ್ಯುನಿಸ್ಟ್ ಪಾರ್ಟಿ ಆಫೀಸಿನ ಸಂದರ್ಶನ ಮಾಡಿದರು.

ಅಪಘಾತ

ರಥಬೀದಿ ಸ್ಕೂಲ್ ಬುಕ್ ಕಂಪೆನಿಯ ಎದುರು ತಾ। ೧೨ರಂದು ಮಧ್ಯಾಹ್ನ ೪। ಗಂಟೆಗೆ ಒಂದು ಕುದುರೆ ಗಾಡಿ ಭರದಿಂದ ಓಡುತ್ತಿದ್ದಾಗ, ಓರ್ವ ಸುಮಾರು ೧೨ ವರ್ಷ ಪ್ರಾಯದ ಹುಡುಗನಿಗೆ ಪೆಟ್ಟು ತಾಗಿ, ತೀವ್ರ ಜಖಂ ಆಗಿ ಆತ ಕೂಡಲೇ ಮೂರ್ಛೆ ಹೋದುದದರಿಂದ, ಅವನನ್ನು ಆಸ್ಪತ್ರೆಗೆ ಕೊಂಡೊಯ್ದಿರುವರು

ಚಲಚ್ಚಿತ್ರ ವಿಮರ್ಶಕ ಕೂಟ

ಇದರ ಮಹಾ ಸಭೆಯು ಕಳೆದ ಆದಿತ್ಯವಾರ ನೆರವೇರಿತು ಕಳೆದ ಅರ್ಧ ವರ್ಷದ ವರದಿ ಮತ್ತು ಲೆಕ್ಕ ಪತ್ರಗಳನ್ನು ಕಾರ್ಯದರ್ಶಿ ಶ್ರೀ ವೆಂಕಟೇಶ ಪ್ರಭುಗಳು ಓದಿ ಮಂಜೂರು ಮಾಡಲಾಯಿತು ಹೊಸ ವರ್ಷದ ಕಾರ್ಯಕಾರಿ ಮಂಡಳಿಯ ಚುನಾವಣೆಯಾಗಿ, ಕೆಳಗಿನವರು ಆರಿಸಲ್ಪಟ್ಟರು ಶ್ರೀ ಜೆ. ಎನ್. ಶೆಣೈ (ಅಧ್ಯಕ್ಷರು) ಶ್ರೀ ರೊಡ್ರಿಗ್ಸ್ (ಉಪಾಧ್ಯಕ್ಷರು) ಶ್ರೀಗಳಾದ ಪಿ. ಎಚ್ ರಾವ್ ಮತ್ತು ಮುರಲೀಧರ್ (ಕಾರ್ಯದರ್ಶಿಗಳು) ಶ್ರೀ ತಿರುಮಲೇಶ್ವರ ಭಟ್ (ಖಜಾಂಚಿ) ಶ್ರೀಗಳಾದ ಇದಿನಬ್ಬ, ಕೆ. ಸದಾಶಿವ, ಪಿ. ಡೆಸ, ಮತ್ತು ಎಸ್. ಜಿ. ನಾಯಕ್ ಇವರು ಸದಸ್ಯರು.

ಹೊಸ ಕಾರ್ಯಕಾರೀ ಸಮಿತಿಯನ್ನು ಸ್ವಾಗತಿಸಿ ಹಿಂದಿನ ಕಾರ್ಯದರ್ಶಿ ಶ್ರೀ ಪ್ರಭುಗಳು ಮಾತನಾಡಿದ್ದಕ್ಕೆ ಹೊಸ ಕಾರ್ಯದರ್ಶಿಗಳಲ್ಲಿ ಶ್ರೀ ಪಿ. ಎಚ್. ರಾಯರು ಉತ್ತರವಿತ್ತರು ಕೃತಜ್ಞತೆ ಹೇಳಿದರು. ಫೆಬ್ರವರಿ ತಾ ೨೧ರಂದು ಈ ಕೂಟದ ಅರ್ಧ ವಾರ್ಷಿಕೋತ್ಸವ ಜರಗಿಸಲು ನಿಶ್ಚಯವಾಯಿತು

ವ್ಯಾಯಾಮ ವಿಹಾರ ಕೇಂದ್ರಗಳು

ಶಾಲೆಗೆ ಹೋಗದ ಯುವಕರ ಸಲುವಾಗಿ ಈ ಜಿಲ್ಲೆಯ ದ. ಕ. ಜಿಲ್ಲಾ ರೂರಲ್ ರಿಕ್ರಿಯೇಶನ್ ಆಫೀಸರ್ ಶ್ರೀ ಬಿ ಎಂ. ಬಾಳಿಗರು ವ್ಯಾಯಾಮ ಪ್ರದರ್ಶನಗಳನ್ನು ಏರ್ಪಡಿಸಿರುವುದಾಗಿ ತಿಳಿಸುತ್ತಾರೆ ಕಾರ್ಕಳ ಉಡುಪಿಯ ತಾಲೂಕುಗಳವರಿಗೆ ಆ ತಾಲೂಕು ಕೇಂದ್ರಗಳಲ್ಲಿ ಕ್ರಮಪ್ರಕಾರವಾಗಿ ಬರುವ ಫೆಬ್ರವರಿ ೨೬ ಮತ್ತು ಮಾರ್ಚಿ ೧೧ರಲ್ಲು ಏರ್ಪಡುವವು ಈ ವ್ಯಾಯಾಮ ಪ್ರದರ್ಶನ ಸ್ಪರ್ಧೆಯಲ್ಲಿ ಭಾಗವಹಿಸುವ ಉಮೇದ್ವಾರರು ಆಯಾಯ ತಾಲೂಕು ಕೇಂದ್ರಗಳ ಮೂಲಕ ೨೧–೨–೪೪ರ ಒಳಗೆ ಕಾರ್ಕಳದಕ್ಕೂ, ೪–೩–೪೪ರ ಒಳಗೆ ಉಡುಪಿಯದ್ದಕ್ಕೂ, ಕಳಿಸಬೇಕು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸಾಥೆಯವರು ಇದಕ್ಕೆ ಅಧ್ಯಕ್ಷರಾಗಿ ಇನಾಮು ಹಂಚುವರು

ಜಿಲ್ಲಾ ವ್ಯಾಯಾಮ ಸ್ಪರ್ಧೆಯು ಮಂಗಳೂರಲ್ಲಿ ೨೬–೩–೪೪ರಲ್ಲು ಜರಗುವುದು ಇದರಲ್ಲಿ ಎಲ್ಲಾ ಕೇಂದ್ರದವರು ಸಹಕರಿಸಬಹುದು ಯಾವುದೇ ಸ್ಪರ್ಧೆಗೂ ಪ್ರವೇಶಧನವಿಲ್ಲ ಜಿಲ್ಲಾ ಸ್ಪರ್ಧೆಗೆ ಉಮೇದ್ವಾರರಾಗುವವರು ೨೬–೩–೪೪ರ ಒಳಗೆ ತಿಳಿಸತಕ್ಕದ್ದು ಜಿಲ್ಲಾ ವ್ಯಾಯಾಮ ಸ್ಪರ್ಧೆಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಕರೆಮತುಲ್ಲರು ವಹಿಸಿ ಬಹುಮಾನ ಹಂಚುವರು ವಿವರಕ್ಕೆ ಆಯಾಯ ಕೇಂದ್ರಗಳಿಗೆ ಇಲ್ಲವೇ ಜಿಲ್ಲಾ ರಿಕ್ರಿಯೇಶನ್ ಆಫೀಸರರಿಗೆ ಬರೆದು ತಿಳಕೊಳ್ಳಬಹುದು

ಉಡುಪಿ

ಪರ್ಯಾಯ ಶ್ರೀಗಳವರಿಗೆ ಕಾಣಿಕೆ

ಮೈಸೂರು ಮಹಾರಾಜರು ಪರ್ಯಾಯ ಶ್ರೀ ಪುತ್ತಿಗೆ ಸ್ವಾಮಿಗಳವರಿಗೆ ಕುದುರೆಯೊಂದನ್ನು ಕಾಣಿಕೆಯಾಗಿ ಕಳುಹಿಸಿರುವರು

ಮುದ್ದಣ್ಣ ಜಯಂತಿ

ಇಲ್ಲಿ ಕಿರಿಟೂರ ಸಾಹಿತ್ಯ ಸಂಘದ ಆಶ್ರಯದಲ್ಲಿ ಮುದ್ದಣ ಜಯಂತಿಯು ಶ್ರೀ। ಎ ರಾಬೇಕಲ್ ಇವರ ಅಧ್ಯಕ್ಷತೆಯಿಂದ ನಡೆಯಿತು

ರೇಶನಿಂಗ್ ಕ್ರಮ

ತಾ ೬ರ ಮೇಲೆ ಉಡುಪಿ ಮುನ್ಸಿಪಾಲಟಿಯೊಳಗೆ ಗುರುತು ಚೀಟಿಯ ರೇಶನಿಂಗ್ ಕ್ರಮ ಸುರುವಾಗಿದೆ, ತಾತ್ಕಾಲಿಕವಾಗಿ ಅಗತ್ಯವಿರುವವರಿಗೆಲ್ಲಾ ಕಾರ್ಡು ಕೊಟ್ಟು ಸೇರಿಗೆ ೧–೪–೦ಯಂತೆ ಕೊಡಲು ೬ ಡಿಪ್ಪೋಗಳನ್ನು ತೆರೆಯಲಾಗಿದೆ

ಕುಂದಾಪುರ

ಅಕ್ಕಿ ಮುಡಿ ಜಪ್ತಿ

ಕಳೆದ ತಾ ೨ರಲ್ಲು ಕುಂದಾಪುರ ಡಿವಿಜನಲ್ ಸಬ್ ಕಲೆಕ್ಟರರು ಶ್ರೀ ಸಾಥೆಯವರು ಇತರ ಅಧಿಕಾರಿಗಳೊಂದಿಗೆ ಆಕಸ್ಮಾತ್ ಭೇಟಿಯಿತ್ತು ಸಾಧಾರಣ ೧೬೦೦೦ ಅಕ್ಕಿ ಮುಡಿಗಳನ್ನು ಜಪ್ತಿ ಮಾಡಿದ್ದು, ಸಂಜೆ ತಾಲೂಕು ಕಚೇರಿಯಲ್ಲಿ ಸೇರಿದ ಸಭೆಯಲ್ಲಿ, ರೇಶನಿಂಗ್ ಜಾರಿಗೆ ಬರುವ ತನಕ ಖಂಡಿತ ಕ್ರಯದಲ್ಲಿಯೇ ಅಕ್ಕಿ ಮಾರಾಟ ಮಾಡಲು ಸಾಹುಕಾರ ಬಂಧುಗಳ ಒಪ್ಪಿರುವರಾಗಿಯೂ ತಿಳಿಯುತ್ತದೆ

ಕಾರ್ಕಳ

ಕಾರ್ಕಳ ಕೇಂದ್ರ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ತಿಂಗಳ ಸಭೆ ಕಳೆದ ಶನಿವಾರ ಶ್ರೀ ಯು ಕೃಷ್ಣರಾಯರ ಅಧ್ಯಕ್ಷತೆಯಿಂದ ಜರಗಿ, ವಾಚನ, ಮಾದರಿ ಪಾಠಗಳಾದ ಮೇಲೆ ಅಧ್ಯಕ್ಷ ಭಾಷಣವಾಗಿ ಧನ್ಯವಾದಾರ್ಪಣೆಯಿಂದ ಸಭೆ ಕೊನೆಗೊಂಡಿತು.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತುಲ್ ಬಾರ್ ಸೋಪನ್ನೇ ಉಪಯೋಗಿಸಿರಿ

HERE'S AN ECONOMICAL BAR SOAP.. ಕಡಿಮೆ ಕ್ರಯದ ಉತ್ತಮ ಒಂದು ಬಾರ್ ಸೋಪ್ ಇಲ್ಲಿದೆ– ಬೇಗನೇ ನೊರೆ ಹೊರಡುವ ಬಾಳಿಕೆಯುದೂ ಆಗಿದೆ ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತದೆ,

PISTOL BRAND BAR SOAP

WANTED AGENTS IN S. KANARA DT.

Mangalore Stockists – M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಕಣ್ಮರೆಯಾದ ಆರ್. ಎಸ್. ಪಂಡಿತರು!

[ಜೀವನ ಮತ್ತು ಅಂತಿಮ ದರ್ಶನ]

[illegible] ಆರ್. ಎಸ್. ಪಂಡಿತರು ಜವಾಹರಲಾಲ ನೆಹರು ವಿಜಯ ಲಕ್ಷ್ಮಿ ಪಂಡಿತರ ಪತಿ. ಇವರಿಬ್ಬರು ಮಕ್ಕಳು ಕುಮಾರಿಯರಾದ ನಯನ ತಾರಾ ಮತ್ತು ಚಂದ್ರಲೇಖಾ ಈಗ ಅಮೇರಿಕದಲ್ಲಿದ್ದಾರೆ. ಶ್ರೀ. ಆರ್. ಎಸ್. ಪಂಡಿತರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ ಅನೇಕ ಸಲ ಸೆರೆಮನೆ ಸೇರಿದ್ದಾರೆ. ಅವರ ಪತ್ನಿ ವಿಜಯಲಕ್ಷ್ಮಿಯವರೂ ಹಾಗೆಯೇ. ಅವರ ಹಿರಿಯ ಮಗಳು ಚಂದ್ರಲೇಖಾ ಕೂಡಾ ಸೆರೆಮನೆ ಸವಿ ಅನುಭವಿಸಿದವರೇ.

ಸೆರೆಮನೆಯಿಂದು ನಮ್ಮ ರಾಷ್ಟ್ರ ವೀರರನ್ನು ಒಬ್ಬೊಬ್ಬರನ್ನೇ ಮೃತ್ಯು ಮುಖರನ್ನಾಗಿ ಮಾಡುತ್ತಿದೆ. ಹಿಂದೆ ಎಷ್ಟೋ ಮಂದಿ ಸೆರೆಮನೆ ಸೇರಿ ರಾಷ್ಟ್ರ ವೀರರು ಮಡಿದರು; ಮೊನ್ನೆ ಮೊನ್ನೆ ಮಹಾದೇವ ದೇಸಾಯಿ ಸತ್ಯಮೂರ್ತಿಗಳೂ ಮೃತರಾದರು. ಇನ್ನೆಷ್ಟೋ ಅಜ್ಞಾತ ವೀರರ ಹೆಸರು ಗೊತ್ತಿಲ್ಲ. ಈಗಲೂ ಕಿಶೋರಿಲಾಲ ಮಶ್ರೂವಾಲರು, ಕಸ್ತೂರಿ ಬಾಯಿಯವರು ಸೆರೆಮನೆಯಲ್ಲಿ ಮರಣಾ ಸನ್ನರಾಗಿರುವರೆಂಬ ಭಯಜನಕ ವಾರ್ತೆಯಿದೆ. ಆರ್. ಎಸ್. ಪಂಡಿತರೂ ಹೀಗೆ ದೇಶದ ಸ್ವಾತಂತ್ರ್ಯಕ್ಕಾಗಿ ಅಸುತೊರೆದ ವೀರರಲ್ಲಿ ಒಬ್ಬರು.

೧೯೪೨ ಅಗಸ್ಟ್ ಭಾರತದ ಇತಿಹಾಸದಲ್ಲಿ ರಕ್ತಾಕ್ಷರದಿಂದ ಬರೆಯಬೇಕಾದ ತಿಂಗಳು. ರಾಷ್ಟ್ರ ವೀರರು ಸೆರೆಮನೆ ಸೇರಿಸಲ್ಪಟ್ಟರು. ಆರ್. ಎಸ್. ಪಂಡಿತರೂ ಅವರ ಬಂಧು ಬಾಂಧವರೊಡನೆ, ದೇಶಬಾಂಧವರೊಡನೆ ಕತ್ತಲು ಕೋಣೆಗೆ ತಳ್ಳಲ್ಪಟ್ಟರು. ಈ ಸಲದ ಅಗ್ನೀ ಪರೀಕ್ಷೆಯಲ್ಲಿ ಅವರ ವೃದ್ಧ ದೇಹ ಬಾಡಿಹೋಯಿತು. ಸೆರೆಮನೆ ಸಂಕಷ್ಟದಿಂದ ಶರೀರ ಬಾಡಿತು. ಆ ಕಾರಣ, ಸರಕಾರ ಕೊನೆಗೊಂದು ದಿನ ಅವರ ಬಿಡುಗಡೆ ಮಾಡಿತು. ಕೆಲದಿನ ಲಕ್ನೋದಲ್ಲಿ, ಅಲ್ಮೋರಾದಲ್ಲಿ ಪಂಡಿತರು ವಿಶ್ರಾಂತಿ ಪಡೆದರು; ದೇಹ ಬಲಗೊಳ್ಳಲಿಲ್ಲ. ಆರ್. ಎಸ್. ಪಂಡಿತರು ಜನವರಿ ೧೪ರಂದು ತನ್ನ ಕೊನೆಯುಸಿರೆಳೆದರು; ಇವರ ನಿಧನದಿಂದ ನೆಹರು ಕುಟುಂಬಕ್ಕೆ ಮಾತ್ರವಲ್ಲ ಇಡೀ ದೇಶಕ್ಕೇ ಅಪಾರ ನಷ್ಟ!

ಆರ್. ಎಸ್. ಪಂಡಿತರು ಕಾಥಿಯಾವಾಡಿನಲ್ಲಿ ೧೯೧೦ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ೧೯೧೬ರಲ್ಲಿ ವಿಲಾಯತಿಗೆ ಹೋಗಿ ಕಲಿತು ಬೇರಿಸ್ಟರರಾದರು. ಕೆಲದಿನ ವಕೀಲ ವೃತ್ತಿ ನಡೆಸಿ ಜರ್ಮನಿಯಲ್ಲಿಯೂ ಕೆಲಕಾಲವಿದ್ದು ಭಾರತಕ್ಕೆ ಬಂದರು. ಆಗ ಯುದ್ಧದ ಸಮಯವಾದದ್ದರಿಂದ ಬಂದವರನ್ನೇ ಸರಕಾರ ಅವರನ್ನು ಬಂಧಿಸಿತು. ಯುದ್ಧ ಮುಗಿದ ಮೇಲೆ ಬಿಡುಗಡೆಯಾಯಿತು. ಮೇಲೆ ಕೆಲಕಾಲ ಕಲ್ಕತ್ತದಲ್ಲಿ ವಕೀಲ ವೃತ್ತಿ ನಡೆಸಿದರು. ೧೯೨೧ರಲ್ಲಿ ಗಾಂಧಿಜಿ ಸತ್ಯಾಗ್ರಹದ ಆಂದೋಲನ ಹೂಡಿದರು. ದೇಶಕ್ಕೆ ದೇಶವೇ ಗಾಂಧಿಜಿ ಕರೆಗೆ ಓ ಕೊಟ್ಟಿತು; ನೆಹರು ಕುಟುಂಬ ಈ ಆಂದೋಲನದಲ್ಲಿ ಅಗ್ರಗಾಮಿಯಾಯಿತು. ಆರ್. ಎಸ್. ಪಂಡಿತರೂ ಈ ಪ್ರವಾಹದಲ್ಲಿ ತೇಲಿ ಹೋದರೆಂದು ಬೇರೆ ಹೇಳಬೇಕೆ? ಈ ಆಂದೋಲನ ಕಾಲದಲ್ಲಿಯೇ ಆರ್. ಎಸ್. ಪಂಡಿತರಿಗೆ ಜವಾಹರಲಾಲರ ಪರಿಚಯವಾಗಿ, ಅದೇ ವರ್ಷ ವಿಜಯ ಲಕ್ಷ್ಮಿಯವರೊಡನೆ ವಿವಾಹವೂ ನೆರವೇರಿತು.

೧೯೩೦ರ ಸತ್ಯಾಗ್ರಹದಲ್ಲಿಯೂ ಆರ್. ಎಸ್. ಪಂಡಿತರು ಅಗ್ರಪಾತ್ರ ವಹಿಸಿದರು. ಸೆರೆಮನೆ ಸೇರಿದರು. ಅದೇ ವರ್ಷ ಪೇಶಾವರದಲ್ಲಿ ಸರಕಾರವು ಜನರನ್ನು ಗುಂಡು ಹಾರಿಸಿ ಕೊಂದಿತು. ಈ ದುರಂತ ಕೃತ್ಯದ ಕೂಲಂಕುಷ ಪರಿಶೀಲನೆಗಾಗಿ ಕಾಂಗ್ರೆಸ್ ಸಂಸ್ಥೆ ಶ್ರೀ ವಿ. ಜೆ. ಪಟೇಲರ ಅಧ್ಯಕ್ಷತೆಯಿಂದ ಒಂದು ಸಮಿತಿ ನೇಮಿಸಿತು. ಆರ್. ಎಸ್. ಪಂಡಿತರು ಇದರಲ್ಲಿ ಕಾರ್ಯದರ್ಶಿಗಳಾಗಿ ಕೆಲಸಮಾಡಿದರು. ಆ ಮೇಲೆ ಅವರು ದೇಶದ ಸ್ವಾತಂತ್ರ್ಯ ಸಾಧನೆಗಾಗಿಯೇ ಅಹರ್ನಿಶಿ ದುಡಿದರು.

ಆರ್. ಎಸ್. ಪಂಡಿತರಿಗೆ ಜರ್ಮನ್ ಭಾಷೆಯಲ್ಲಿ ಪಾಂಡಿತ್ಯವಿತ್ತು. ಸಂಸ್ಕೃತದಲ್ಲಿ ಒಳ್ಳೆಯ ವಿದ್ವಾಂಸರಿದ್ದರು. ಕಲ್ಹಣನ ರಾಜತರಂಗಿಣಿಯನ್ನು ಆಂಗ್ಲ ಭಾಷೆಗೆ ಪರಿವರ್ತಿಸಿದ್ದಾರೆ. ಅವರಿಂದ ದೇಶ ಬಹಳ ಹಾರೈಸಿತ್ತು. ಆದರೆ ಅಕಾಲ ಮೃತ್ಯು ಅವರನ್ನು ಐವತ್ತೊಂದನೇ ವಯಸ್ಸಿನಲ್ಲಿಯೇ ಸೆಳೆಕೊಂಡು ಹೋಯಿತು. ಅವರ ಕೀರ್ತಿ ಶಾಶ್ವತವಾಗಿದೆ. ಅವರು ನಾಡಿಗೆ ಸಲ್ಲಿಸಿದ ಸೇವೆ ಅಜರಾಮರವಾಗಿದೆ.

ಸಾಯುವ ಸಮಯದಲ್ಲಿ ಪುತ್ರಿಯರಿಬ್ಬರು ಕುಮಾರಿಯರಾದ ಚಂದ್ರಲೇಖಾ ಮತ್ತು ನಯನ ತಾರಾ ಅಮೇರಿಕದಲ್ಲಿದ್ದರು; ಶೋಕಾರ್ತರಾದ ತಮ್ಮ ಜನನಿಗೆ ಅವರು ಹೀಗೆ ಅಲ್ಲಿಂದ ತಿಳಿಸಿದ್ದಾರೆ 'ಅಮ್ಮಾ, ಅಳಬೇಡ ತಾಯೇ, ತಂದೆ ಅಮರರು' ನಿಜವಾಗಿಯೂ ಆರ್. ಎಸ್. ಪಂಡಿತರ ಹೆಸರು ಭಾರತದ ಇತಿಹಾಸದಲ್ಲಿ ಅಮರವಾಗಿ ಉಳಿವುದು.

ದಿವಂಗತ ಎಸ್. ಆರ್. ಪಂಡಿತರ ಅಂತ್ಯ ದರ್ಶನದ ಕುರಿತು ಶ್ರೀ ಪಿ. ಡಿ. ಟಂಡನರು 'ಹಿಂದುಸ್ತಾನ್ ಸ್ಟೇಂಡಾರ್ಡ್' ಪತ್ರಿಕೆಯಲ್ಲಿ ಆ ಹೃದಯ ದ್ರಾವಕ ಚಿತ್ರ ಚಿತ್ರಿಸಿದ್ದಾರೆ:

'ಜನವರಿ ೧೪, ಲಕ್ನೋದಿಂದ ಕಂಪನ ಸ್ವರವೊಂದು ಫೋನಿನಲ್ಲಿ ಹೇಳಿತು: 'ತಂದೆ ತೀರಿದರು ಅಯ್ಯೋ!' ಸ್ವರ ರೀತಾಳಿದ್ದು; ರಣಜಿತರ ವೀರ ಪುತ್ರಿ ಆಕೆ. ದುಃಖೋದ್ವೇಗದಿಂದ ಆಕೆಯ ಸ್ವರ ನಡುಗುತ್ತಿತ್ತು. ನಾನು ಧಾವಿಸಿದೆ, ಭಾರತದ ಸುಪುತ್ರನ ಅಂತ್ಯ ದರ್ಶನಕ್ಕಾಗಿ. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಪತಿಯ ಮೃತದೇಹದ ಬಳಿ ಕುಳಿತಿದ್ದರು. ಅಳುತ್ತಿದ್ದರು. ಅವರು ಶೋಕದ ಮೂರ್ತಿಯಂತಿದ್ದರು. ಅಳುವನ್ನು ತಡೆಯಲು ಅವರು ಯತ್ನಿಸುತ್ತಿದ್ದರಾದರೂ ಕಂಬನಿಯ ಕೋಡಿ ಹರಿಯುತಿತ್ತು.

'ನಾನು ಪಂಡಿತರ ಕಳೇಬರವನ್ನು ನೋಡಿದೆ. ಅವರು ಮೃತರಾಗಿಲ್ಲ. ಗಾಢ ನಿದ್ರೆಯಲ್ಲಿದ್ದಂತೆ ಕಂಡಿತು, ಆದರೆ ಇಂಥಾ ನಿದ್ರೆಯಿಂದ ಇದುವರೆಗೂ ಯಾರೂ ಎಚ್ಚತ್ತಿಲ್ಲ. ನಮ್ಮದಿದು ಭ್ರಾಮಕ ಜಗತ್ತು; ಇಲ್ಲಿ ಶಾಶ್ವತವಾದುದು ಯಾವುದೂ ಇಲ್ಲ; ಎಲ್ಲಾ ನಶ್ವರ. ಪಂಡಿತರು ತ್ರಿವರ್ಣ ರಾಷ್ಟ್ರಧ್ವಜದ ಗೌರವಕ್ಕಾಗಿ ಕಾದಾಡಿದರು; ಕಾದಾಡಿ ದೇಹವಿಟ್ಟರು. ಇಂದು ಆ ಧ್ವಜವೇ ಆಕುಲಗೊಂಡು ಅವರ ಶರೀರವನ್ನು ಮುದ್ದಿಸುತ್ತಿದೆ. ಜೀವನ ಮಾರ್ಗದಲ್ಲಿ ಅವರು ತಮ್ಮ ಮಾವ ಮೋತಿಲಾಲರ ಹಾದಿಯನ್ನೇ ಹಿಡಿದರು. ಮೋತಿಲಾಲರ ಶವವನ್ನೂ ಲಕ್ನೋದಿಂದ ಅಲ್ಲಾಬಾದಿಗೆ ತಂದಿದ್ದರು. ಇಂದು ಅದೇ ಹಾದಿಯಿಂದ ರಣಜಿತ್ ಪಂಡಿತರ ದೇಹವೂ ತೆರಳಾಯಿತು.

'ವಿಜಯ ಲಕ್ಷ್ಮಿ ಪತಿಯ ಶಿರವನ್ನು ತೊಡೆಯ ಮೇಲಿರಿಸಿದ್ದರು. ತಾ. ೧೩ರಂದು ಪಂಡಿತರು ಹಸನ್ಮುಖಿಗಳಿದ್ದರು. ಆದರೆ ಆರುವ ದೀಪದ ಜ್ಯೋತಿಯದೆಂದು ಯಾರೂ ಭಾವಿಸಿದ್ದರು? ಒಂದು ತಾಸಿನ ವರೆಗೆ ಅವರು ಹೃದಯ ವೇದನೆಯಿಂದ ನವೆದರು. ಒಮ್ಮೆಲೇ ಹೃದಯ ವೇದನೆ ನಿಂತಿತು. ಜೋರಾದ ಮಳೆ ಸುರಿದು ಆಕಾಶ ಶುಭ್ರವಾದಂತೆ ಅವರ ಮುಖದ ವಿಷಾದ ರೇಖೆ ಮಾಸಿತು, ಮಂದಸ್ಮಿತ ಮಿನುಗಿತು. ಆದರೆ ಆ ಮಂದಸ್ಮಿತವನ್ನು ಕಂಡು ಮುಗುಳ್ನಗುವವರಿಲ್ಲ. ಎಲ್ಲರೂ ಮರುಗುವವರೇ! ರಣಜಿತ್ ಪಂಡಿತರು ರಣರಂಗದಲ್ಲಿ ವೀರ ವಿಶ್ರಾಂತಿ ಪಡೆದರು!

'ದೇಶಕ್ಕಾಗಿ ಹೋರಾಡಿರಿ, ಎಂಬುದು ಅವರ ಸಂದೇಶ. ಅವರ ಮೃತ ದೇಹವೂ ಅದೇ ಸಂದೇಶ ಸಾರುವಂತೆ ಭಾಸವಾಗುತ್ತಿತ್ತು. ದೇಶಕ್ಕಾಗಿ ಸುಕಷ್ಟ ಸಾವಿರಗಳನ್ನನುಭವಿಸಿದ ನೆಹರು ಕುಟುಂಬದಂಥಾ ಕುಟುಂಬ ಭಾರತದಲ್ಲಿ ಬೇರೆ [illegible] ರಣಜಿತರ ಪ್ರೀತಿಯ ಭಾವ ಜವಾಹರರು ಇಂದು ಸೆರೆಮನೆಯೊಳಗಿದ್ದಾರೆ. ಈ ವಿಷಾದವಾರ್ತೆ ಕೇಳಿ ಅವರ ಹೃದಯಕ್ಕೆ ಎಂಥಾ ನೋವಾಗಿರಬೇಕು! ರಣಜಿತರ ಮುದ್ದು ಕುವರಿಯರು ನಯನ ತಾರಾ ಚಂದ್ರಲೇಖಾ ದೂರ ಅಮೆರಿಕದಲ್ಲಿ ಈ ವಾರ್ತೆ ಕೇಳಿ ಎಷ್ಟು ಮರುಗಬೇಕು; ೧೯೪೩ರಲ್ಲಿ ಸಕುಟುಂಬ ಅಮೆರಿಕಕ್ಕೆ ತೆರಳಿ ಮುದ್ದು ಕುವರಿಯನ್ನು ಕರೆತರುವೆನೆಂದು ರಣಜಿತ್ ಪಂಡಿತರು [illegible] ದ್ದರು! ಅದೆಲ್ಲಾ ಇಂದು ಬರಿದೋಬರಿದಾಯಿತು!!

'ಶವದ ಮೆರವಣಿಗೆ ಸಾಗುತ್ತಿತ್ತು 'ದೇಶಭಕ್ತನು ಅಮರನಾಗಲಿ' ಎಂದು ಜನರು ಘೋಷಿಸುತ್ತಿದ್ದರು. ಹೌದು, ನಿಜವಾಗಿ ಪಂಡಿತರ ಪಾರ್ಥಿವ ಶರೀರ ಮಡಿದರೂ, ಅವರು ಅಮರರಾಗಿದ್ದಾರೆ. ಅವರು ಈ ಲೋಕ ತೊರೆದರು; ಕಷ್ಟ, ನಿಷ್ಠುರಗಳ ಲೋಕ ಇದು; ಅಮರ ಲೋಕಕ್ಕೆ ತೆರಳಿದ್ದಾರೆ; ಅಲ್ಲಿ ಬಂಧನವಿಲ್ಲ; ಸಂಕಟವಿಲ್ಲ; ಪೂರ್ಣ ಸ್ವಾತಂತ್ರ್ಯ, ಸಂಪೂರ್ಣ ಸ್ವರಾಜ್ಯ ಅಲ್ಲಿ!

ಸಾಂಕ್ರಾಮಿಕ ಕಫರೋಗ ಬೇಗನೇ ಗುಣವಾಗುವುದು

ತೊಂದರೆ ಕೊಡುವ ಕಫಬಾಧೆಯು ನಿಮ್ಮ ಗಂಟಲಿಗೆ ತೊಂದರೆಯನ್ನುಂಟುಮಾಡಿ ನೋವುಗೊಳಿಸುವುದು. ಕಫವು ಮೃದುವಾದ ಶ್ವಾಸನಾಳಕ್ಕೆ ಅಪಾಯವನ್ನುಂಟುಮಾಡಿ ಮುಂದೆ ಅದರಿಂದ ಕೆಟ್ಟ ಪರಿಣಾಮವುಂಟಾಗಲೂ ಬಹುದು. ಆದ್ದರಿಂದ ವಿಷಹಾರೀ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ.

ಪೆಪ್ಸ್ ಬಾಯಲ್ಲಿ ಹಾಕಿದಕೂಡಲೇ ಕರಗಿ ಅತ್ಯುತ್ತಮ ಔಷಧಕಾರೀ ರಸವನ್ನು ಹೊರಡಿಸುತ್ತದೆ. ಅದು ನಿಮ್ಮ ಶ್ವಾಸದೊಡನೆ ಸೇರಿಕೊಂಡು ಶ್ವಾಸಕೋಶವನ್ನು ಬಲಪಡಿಸುವುದು. ಪೆಪ್ಸ್ ಹಾಗೆ ಸಾಂಕ್ರಾಮಿಕ ಕ್ರಿಮಿಗಳನ್ನು ಕೊಲ್ಲುವುದು ಗಂಟಲುನೋವನ್ನು, ಎದೆನೋವನ್ನು ಮತ್ತು ಯಾವುದೇ ತರದ ಕಫಶೀತಗಳನ್ನೂ ಅದು ಗುಣಪಡಿಸುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ.



PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಚಿಯಾಂಗರು ಮಗನಿಗಿತ್ತ ಮಾದರಿ ಶಿಕ್ಷಣ

ಮಕ್ಕಳು ಹೇಗೆ ಮುಂದೆ ಉತ್ತಮ ನಾಗರಿಕನಾಗಬೇಕೆಂಬ ಬಗ್ಗೆ ಬುದ್ಧಿವಂತರೆನಿಸಿದವರು ಅನೇಕ ಬುದ್ಧಿವಾದಗಳನ್ನು ಹೇಳುತ್ತಾರೆ. ಚೀಣದ ರಾಷ್ಟ್ರಪತಿ ಚಿಯಾಂಗ್ ಕೈಶೇಕರು ತಮ್ಮ ಮೊದಲನೆಯ ಮಗನಿಗೆ ಕೊಟ್ಟ ಶಿಕ್ಷಣ ಪದ್ಧತಿಯನ್ನು ಗಮನಿಸಿದರೆ ಒಂದು ಉತ್ತಮ ಸಾರ ಕಲಿಯಬಹುದು.

ಚಿಯಾಂಗ್ ಚಿಂಗ್‌ಕವೋ ಪೀಪಿಂಗಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಹಾಸ್ಟೆಲಿನ ತಿಂದಿ ಮುಷ್ಟೋ ಅಷ್ಟೆ ಸಕ್ಕಾಬಟ್ಟೆ ಹೊಟೆಲ್ ತಿಂದಿಯಿಲ್ಲ ತಂದೆ ಮಗನಿಗೆ ಕೊಡುತ್ತಿದ್ದ ಕಾಸೆ ಹಣ ಕೇವಲ ತಿಂಗಳ ಒಂದು ಕಾಲು ರೂಪಾಯಿ, ಇದನ್ನೂ ಹೆತ್ತು ಕಂತಿನಲ್ಲಿ ಕೊಡುವುದು 'ನನ್ನಿಂದ ಹಣ ಕೇಳಬೇಡ, ನೀನೇ ದೃಢಚಿತ್ತನಾಗು ನಿನ್ನ ಭವಿಷ್ಯವನ್ನು ಕಲ್ಪಿಸಿಕೋ' ಇದು ತಂದೆಯ ಉಪದೇಶ 'ಹಣದ ಬಲವಲ್ಲ, ಮನೋಬಲ ಬೇಕು' ಇದು ಚಿಯಾಂಗ್ ತತ್ವ.

'ದೊಡ್ಡ ನೌಕರನಾಗಬೇಕೆಂದು ಬಯಸದಿರು, ದೊಡ್ಡ ನೌಕರನಾದ ಮಾತ್ರದಿಂದ ನೀನು ದೇಶಸೇವೆ ಮಾಡಲಾರೆ' ಈ ಮಾತುಗಳನ್ನು ತಂದೆ ಆಗಾಗ ಮಗನಿಗೆ ಉಪದೇಶಿಸುತ್ತಿದ್ದ ತಂದೆ ಮಾತಿನಂತೆ ಮಗನೂ ಅನುಸರಿಸುತ್ತಿದ್ದ. 'ರಣರಂಗದ ಮುಂಸೇನೆಯಲ್ಲಿ ನಿಂತು ವೈರಿಯ ಗುಂಡಿಗೆ ಎದೆಗೊಡುವ ಸಿಪಾಯಿಯೂ, ರೈತನೂ ಎಲ್ಲರಿಗಿಂತಲೂ ಗೌರವಸ್ಥರು' ಇದು ಮಗನ ತತ್ವವೂ ಕೂಡ.

'ಹರಟೆ ಹೇಳುವುದರಿಂದ ಅಪಕೀರ್ತಿ ಬರುತ್ತದೆ, ಕೆಲಸಮಾಡು, ಜೀವನ ಹಾದಿ ಸಾಗಬೇಕಾದರೆ ಆತ್ಮ ಸಂಶೋಧನೆ ಬೇಕು' ಇದು ತಂದೆ ಮಗನಿಗೆ ತಿಳುಹುತ್ತಿದ್ದ ವೇದಾಂತ. ಮಗ ಚಿಯಾಂಗ್ ಮಲಗುವ ಮುನ್ನ ದಿನ ನಿತ್ಯ ಈ ಮೂರು ಪ್ರಶ್ನೆಗಳನ್ನು ತನ್ನಲ್ಲಿಯೇ ತಾನು ಕೇಳುತ್ತಿದ್ದ ೧ ನಾನು ನನ್ನ ಆತ್ಮಸಾಕ್ಷಿಗೆ ವಿರೋಧ ನಡೆದಿರುವೆನೆ? ೨ ನನ್ನ ಮಾತಾಪಿತೃಗಳಿಗೆ ಅಗೌರವಕರವಾಗಿ ವರ್ತಿಸಿರುವೆನೆ? ೩ ನನ್ನ ರಾಷ್ಟ್ರಹಿತಕ್ಕೆ ಆತಂಕ ತಂದಿರುವೆನೆ? ಈ ಮೂರು ಪ್ರಶ್ನೆಗಳಿಗೆ ಉತ್ತರ ಕೇಳಿಕೊಂಡು ಆತ ತನ್ನ ತಪ್ಪುಗಳನ್ನು ತಾನೇ ತಿದ್ದಿಕೊಳ್ಳುತ್ತಿದ್ದ.

ಯಾವುದೇ ಕೆಲಸ ಮಾಡಲಿ ಈ ಎರಡು ತತ್ವಗಳಿರಬೇಕೆಂದು ಪ್ರೆಸಿಡೆಂಟ್ ಚಿಯಾಂಗರ ಮತ ೧ ಮೊದಲು ಮಾಡಬೇಕಾದ ಕೆಲಸ ಯಾವುದು? ೨ ಕೈಕೊಂಡ ಕಾರ್ಯವನ್ನು ಮಧ್ಯೆ ಬಿಡಬಾರದು ಒಮ್ಮೆ ಮಗನ ಬರಹ ನೋಡಿ ತಂದೆಗೆ ಸಿಟ್ಟು ಬಂತು ಮಗ ಮೊದಲು ಚಂದವಾಗಿ ಬರೆಯುತ್ತಿದ ಎಚ್ಚರಿಕೆಯಿಂದ ಕೈಕೊಂಡ ಕೆಲಸ ಎಚ್ಚರಿಕೆಯಿಂದಲೇ ಕೊನೆಗೊಳಿಸಬೇಕೆಂದು ಚಿಯಾಂಗ್ ಹೇಳುತ್ತಾರೆ.

ತಮ್ಮ ಮಕ್ಕಳು ಯಾವ ವಾತಾವರಣದಲ್ಲಿ ಬೆಳೆಯುತ್ತವೆ ಎಂಬ ವಿಷಯ ಚಿಯಾಂಗ್ ಬಹಳ ಗಮನ ಕೊಡುತ್ತಾರೆ. ನವಚೀನ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಅರಿವಾಗಲು ತಂದೆ ಮಗನನ್ನು ಶಾಂಘೈಗೆ ಕಳುಹಿಸಿದರು ಅಲ್ಲಿನ ದುಂದುವೆಚ್ಚದ ಜೀವನ ನೋಡಿ ಪುನಃ ಅಲ್ಲಿಂದ ಪೀಪಿಂಗಿಗೆ ಹಿಂದೆ ಕರೆಸಿದರು.

ವಿಶ್ವಾಸ ಮನುಷ್ಯನಲ್ಲಿ ಮುಖ್ಯವಾಗಿ ಇರಬೇಕಾದ ಗುಣ ಜಂಬಬೇಡ, ಅನ್ಯಾನುಸರಣ ಬೇಡ, ಹಾಳುಹರಟೆ ಬೇಡ, ನಿನ್ನ ಸುತ್ತಲಿನ ವಾತಾವರಣವನ್ನು ಜಯಿಸು ಅದಕ್ಕೆ ಶರಣಾಗದಿರು, ಕೆಟ್ಟ ಚಾಳಿಗಳಿಗೆ ಬೀಳದಂತೆ ಧೀರನಾಗಿರು, ಇವೆಲ್ಲಾ ತಂದೆ ಮಗನಿಗಿತ್ತ ಉಪದೇಶಗಳು

ದೇಶಸೇವೆ ಮಾಡಬೇಕಾದರೆ ಮನುಷ್ಯನಲ್ಲಿ ಆತ್ಮತ್ಯಾಗ ಬುದ್ಧಿಯಿರಬೇಕೆಂದು ತಂದೆ ಮಗನ ತಲೆಯಲ್ಲಿ ಸದಾ ತುಂಬಿಸುತ್ತಿದ್ದರು ಹಿಂದೊಮ್ಮೆ ಚೀಣದ ಯುದ್ಧದಲ್ಲಿ ರಾಜನಾದ ತಂದೆ ಶತ್ರುಗಳ ಸೆರೆಸಿಕ್ಕಿದ, ಮಗನಿಗೆ ಶತ್ರುಗಳು ಹೇಳಿ ಕಳುಹಿಸದ ಮಾತಿದು. 'ನೀನು ಶರಣಾಗದಿದ್ದರೆ ತಂದೆಯನ್ನು ಗಲ್ಲಿಗೇರಿಸುತ್ತೇವೆ' ಮಗನು ಏನೆಂದು ಹೇಳಿದ ಗೊತ್ತೆ? 'ನೀವಾತನನ್ನು ಕೊಂದು ಅವನ ಮಾಂಸದಿಂದ ಸಾರುಮಾಡಿದರೆ ನನಗೂ ಒಂದು ಸೌಟು ಕಳುಹಿಸಿ'—ದೇಶದ ಸಲುವಾಗಿ ತಂದೆಯನ್ನೂ ಮಗ ಬಲಿದಾನ ಮಾಡಿದ. ಇದು ಚೀನದ ಇತಿಹಾಸ!

ಮಂಚೂ ಮನೆತನದ ಓರ್ವ ರಾಜರ್ಷಿ ಸೆಂಗ್‌ಕುವೊಫ್ಯಾನ್ ತನ್ನ ಮನೆಯವರಿಗೆ ಬರೆದ ಪತ್ರವಿಂದು ಪುಸ್ತಕ ರೂಪದಲ್ಲಿ ಅಚ್ಚಾಗಿದೆ. ಇದನ್ನು ಸದಾ ಓದಬೇಕೆಂದು ತಂದೆ ಚಿಯಾಂಗರು ಮಗನಿಗೆ ತಿಳಿಸುತ್ತಾರೆ. ಇಷ್ಟು ಜಾಗ್ರತೆಯಿಂದ ತಂದೆ ಮಗನನ್ನು ಬೆಳೆಸಿದರೆ ಮಗ ಮತ್ತೆ ಧೀರನಾಗದೆ, ಶೂರನಾಗದೆ ಇದ್ದಾನೆ?

ಜನವರಿ ತಿಂಗಳಲ್ಲಿ

೧ ಇಂಡಿಯನ್ ಪೆನಲ್ ಕೋಡ್ ೧೮೬೨ರಲ್ಲಿ ಬಂತು. ೨ ೧೯೧೪ರಲ್ಲಿ ಅನಿ ಬೆಸೆಂಟರ 'ಕೋಮನ್‌ವೆಲ್ತ್' ಪ್ರಕಟವಾಯಿತು ೩. ೧೭೮೧ರಲ್ಲಿ ವಿಲಿಯಂ ಪಿಟ್ ಪಾರ್ಲಿಮೆಂಟ್ ಪ್ರವೇಶಿಸಿದ್ದು ೪ ೧೯೩೧ರಲ್ಲಿ ಪ್ರಿನ್ಸೆಸ್ ರೋಯಲ್ ಸತ್ತದ್ದು ೫ ಕ್ರಿಸ್‌ಮಸ್‌ನ ನಂತರ ಎರಡನೇ ಆದಿತ್ಯವಾರ ೬ ೧೯೧೪ರಲ್ಲಿ ಸ್ಯುವೆಜ್ ಕೆನಲ್ ಮೊದಲು ಉಪಯೋಗಿಸಲ್ಪಟ್ಟದ್ದು ೭ ಡಾ। ಸರ್ ಯಂಗ್ ೧೮೪೭ರಲ್ಲಿ ಕ್ಲೋರೋಫಾರ್ಮ್ ಕಂಡುಹುಡುಕಿದ್ದು ೭ ೧೭೮೫ರಲ್ಲಿ ಇಂಗ್ಲಿಷ್ ಚಾನಲ್ ಮೊದಲು ದಾಟಿದ್ದು ೯ ೧೮೪೦ ಪೆನ್ನಿಪೋಸ್ಟ್ ಸ್ಥಾಪಿತವಾದದ್ದು ೧೦ ೧೯೨೦ರಲ್ಲಿ ಲೀಗ್ ಓಫ್ ನೇಶನ್ಸ್ ಸ್ಥಾಪಿತವಾದದ್ದು ೧೧ ಡಾ। ರೋಸ್ ೧೮೯೭ರಲ್ಲಿ ಮಲೇರಿಯಾ ಕ್ರಿಮಿಯ ಅಭ್ಯಾಸ ಮಾಡಿದ್ದು. ೧೨. ೧೬೬೨ರಲ್ಲಿ ಪ್ರಥಮ ಆಂಗ್ಲ ವಾರ ಪತ್ರಿಕೆ 'ವೀಕ್ಲಿ ನ್ಯೂಸ್' ಸುರುವಾದದ್ದು. ೧೩. ೧೯೧೩ರಲ್ಲಿ ಇಂಗ್ಲೆಂಡಿನಲ್ಲಿ 'ನೇಶನಲ್ ಇನ್ಸೂರೆನ್ಸ್' ಸ್ಥಾಪಿತವಾದದ್ದು ೧೪. ೧೮೬೫ರಲ್ಲಿ ಕಿಂಗ್ ಜಾರ್ಜ್ ಜನಿಸಿದ್ದು ೧೫. ೧೯೩೫ರಲ್ಲಿ ಸಾರ್ ಜರ್ಮನಿಗಾಗಿ ಮತವಿತ್ತದ್ದು ೧೬ ಜಸ್ಟಿಸ್ ಎಂ ಜಿ ರಾನಡೆ ೧೯೦೧ರಲ್ಲಿ ಸತ್ತದ್ದು ೧೭ ೧೮೬೩ರಲ್ಲಿ ಲೋಯ್ಡ್ ಜಾರ್ಜ್ ಜನಿಸಿದ್ದು ೧೮ ಜಸ್ಟಿನ್ ಎಂ ಜಿ ರಾನಡೆ ೧೮೪೨ರಲ್ಲಿ ಹುಟ್ಟಿದ್ದು ೧೯ ಎಪಿಫನಿ ನಂತರ ಎರಡನೇ ರವಿವಾರ ೨೦ ೧೯೩೬ರಲ್ಲಿ ೫ನೇ ಕಿಂಗ್ ಜಾರ್ಜ್ ಸತ್ತದ್ದು ೨೧ ೧೯೨೪ರಲ್ಲಿ ಲೆನಿನ್ ಸತ್ತದ್ದು ೨೨ ೧೯೨೪ರಲ್ಲಿ ಪ್ರಥಮ ಕೂಲಿಗಾರ ಸರಕಾರ ಇಂಗ್ಲೆಂಡಿನಲ್ಲಾದುದು ೨೩ ೧೯೦೧ರಲ್ಲಿ ರಾಣಿ ವಿಕ್ಟೋರಿಯಾ ಸತ್ತದ್ದು ೨೫ ಸೈಂಟ್ ಪೌಲ್ ದಿನದ ಕನ್ವರ್ಶನ್ ೨೬ ೧೮೧೫ರಲ್ಲಿ ಬ್ರಿಟಿಷ್ ಪೋಸ್ಟಿನವರಿಂದ ನಯರ್‌ಲೆಸ್ ಉಪಯೋಗಿಸಲ್ಪಟ್ಟದ್ದು ೨೭ ೧೮೫೯ರಲ್ಲಿ ಮಾಜಿ ಕೈಸರ್ ಜನನ. ೨೮ ೧೫೯೬ರಲ್ಲಿ ಸರ್ ಫ್ರೇನ್ಸಿಸ್ ಡೇಕ್ ಸತ್ತದ್ದು ೨೯ ೧೯೨೮ರಲ್ಲಿ ಅರ್ಲ್ ಹೈಗ್ ಸತ್ತದ್ದು ೩೦ ಪ್ರೆಸಿಡೆಂಟ್ ರೂಸ್‌ವೆಲ್ಟ್ ೧೮೮೨ರಲ್ಲಿ ಹುಟ್ಟಿದ್ದು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿವಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

CANARA BANK LIMITED.

ESTD 1906

General Manager **P S. Nayak,** B A., B L., F I I B.

LIABILITIES	Dec 31 1943 Rs	1942 Rs
Capital Subscribed	29,00,000	20,00,000
Capital Paid up	22,49,438	14,96,072
Reserves	8,54,188	4,50 000
Deposits	1,97,85,847	1,45,50,503
Due to Bankers	20,00,000	13,50,000
Branch adjustments	10,08,553	10,36,559
Bills for collection and Foreign Bills negotiated	26,27,394	16,81,196
Other Liabilities	15,766	16,968
Profit for the year	2,68,576	1,58,310
Total	2,88,09,762	2,07,84,608

ASSETS	Dec 31 1943 Rs	1942 Rs
Cash	73,51,060	43,63,353
Government Securities	90,47,683	63,16,651
Advances to Customers	93,99,429	75,52,902
Bills for collection and Foreign Bills negotiated	26,27,394	16 81,196
Landed Properties	70,736	2,14,256
Bank Premises and Furnitur & Fixtures	93,963	1,00,182
Other Assets	3,19,497	5,06,068
Total	2,88,09,762	2,07,84,608

The Bank of Mangalore Limited, Mangalore.
ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Dece.)
Savings bank Accounts 1½% p. a. on daily balances.
Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc. apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

HEARTY NEW YEAR GREETINGS

TO

All our Policy-holders, Agents, Medical Examiners and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

Bhuvanendra Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

[illegible] ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 18—2—1944 [ಸಂಚಿಕೆ 7]

ಸಾಮ್ರಾಜ್ಯ ವಾದವೋ. ಸ್ವಾತಂತ್ರ್ಯ ವಾದವೊ?

ಇವೆರಡರಲ್ಲಿ ಯಾವುದನ್ನು ಆರಿಸುತ್ತೀರಿ?

ಚರ್ಚಿಲ್ ಮತ್ತು ಭಾರತದ ಕುರಿತು—

"ಭಾರತದ ಸಮಸ್ಯೆ ಕೇವಲ ಭಾರತದ ಸಮಸ್ಯೆ ಮಾತ್ರವಲ್ಲ. ಅದು ನಾವು ಸಾರುತ್ತಲಿರುವ ಸ್ವಾತಂತ್ರ್ಯ ಸಮಸ್ಯೆಯಾಗಿದೆ" ಹೀಗೆಂದು ಪ್ರಸಿದ್ಧ ಚೀನೀ ಲೇಖಕರಾದಲಿನ್ ಯುತಾಂಗರು ತಮ್ಮೊಂದು ಲೇಖನದಲ್ಲಿ ಬರೆದಿರುವರು. ಲೇಖನದ ವಿವರವಿಂತಿದೆ.

"ನಾವು ಸಾಮ್ರಾಜ್ಯ ಹಾಗೂ ಸ್ವಾತಂತ್ರ್ಯದ ವಿಚಾರ ಮಾಡಲು ಎದೆಗಾರರಾಗಿಲ್ಲ; ಹಾಗಾಗಿಯೇ ಇರದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಭಾರತದ ದೇಶ ಪ್ರೇಮಿಗಳು ಸೆರೆಮನೆಗೆ ತಳ್ಳಲ್ಪಟ್ಟಿದ್ದಾರೆ.

"ಸ್ವಾತಂತ್ರ್ಯ! ಈ ಶಬ್ದದಲ್ಲಿ ಎಂಥಾ ಇಂದ್ರಜಾಲವಿದೆ. ಸ್ವಾತಂತ್ರ್ಯ ಮೊಳಗಲಿ! ಆದರೆ ಸ್ವಾತಂತ್ರ್ಯವನಿತೆ, ಸೀರೆಯನ್ನು ಬಿಚ್ಚಿ ಯುರೋಪಿಯನ್ ಗೌನ್ ಹಾಕಬೇಕೆ? ಅಲ್ಲಿ ಆಂಗ್ಲ ಸ್ವಾತಂತ್ರ್ಯ ಹಳ್ಳಿ ಕುಟೀರಗಳಲ್ಲಿ ನೆಲಸಿದೆ, ಇಲ್ಲಿ ಭಾರತ ಸ್ವಾತಂತ್ರ್ಯ ಆನೆಯ ಮೇಲೇರಿ ಕಾಡಿನಲ್ಲಿ ಅಲೆದಾಡುತ್ತಿದೆ. ಜನರ ಮನಸ್ಸು ಸಂಕೋಚವಾಧುದು; ಆದ್ದರಿಂದಲೇ, ನಿಜವಾಗಿ ಪ್ರತಿಯೊಬ್ಬ ಮಾನವನ ಹೃದಯಾಂತರಾಳದಲ್ಲಿ ಸ್ವಾತಂತ್ರ್ಯ ದೇವಿ ಮನೆಮಾಡಿರುವಳೆಂಬ ವಿಷಯ ಜನತೆ ಮರೆತೇ ಬಿಡುತ್ತದೆ.

ಯುದ್ಧ ಮೊದಲು ಗೆಲ್ಲಿರಿ

'ಆಂಗ್ಲೇಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೆ, ಭಾರತೀಯರು ಬ್ರಿಟಿಷರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೆ. ಭಾರತದಲ್ಲಿ ಯಾರೇ ಆದರೂ ನಾಲ್ಕು ಸ್ವಾತಂತ್ರ್ಯಗಳ ವಿಚಾರ ಚರ್ಚಿಸಕೂಡದು. ಅವುಗಳನ್ನು ಪಡೆಧಿರಲೂ ಕೂಡದು. ಇದು ತುಸು ವಿಪರೀತವಾದುದಲ್ಲವೆ? 'ಮೊದಲು ಯುದ್ಧ ಗೆಲ್ಲಿರಿ ಆ ಮೇಲೆ ನಿಮ್ಮ ಮೆದುಳು ಖರ್ಚುಮಾಡಿರಿ.' ಈ ತರ್ಕವನ್ನು ಆಂಗ್ಲ ಬುದ್ಧಿಮಾತ್ರ ಅರ್ಥಮಾಡಿ ಕೊಳ್ಳ ಬಲ್ಲುದು.

'ನಾನು ಇತ್ತೀಚೆಗೆ ನಿಷ್ಕಾರಣವಾಗಿ ನ್ಯೂಯಾರ್ಕಿನ ನನ್ನ ಗೆಳೆಯರ ಮಟ್ಟಿಗಾದರೂ 'ಆಂಗ್ಲ ದ್ವೇಷಿ'ಯೆಂಬ ಹೆಸರು ಪಡೆದಿದ್ದೇನೆ. ಏಕೆಂದರೆ ನಾನು ಭಾರತದ ಸ್ವಾತಂತ್ರ್ಯ ವಿಚಾರವೆತ್ತಿ ಮಾತನಾಡಿದೆ. ಭಾರತದ ವಿಚಾರ ಮಾತನಾಡಿದವನು ಆಂಗ್ಲ ದ್ವೇಷಿ ಏಕಾಗಬೇಕೋ ನನಗೆ ಅರ್ಥವಾಗುವುದಿಲ್ಲ. ಈ ಕುರಿತು ನನ್ನ ಗೆಳೆಯರಾದರೂ ನನಗೇನೂ ಹೇಳಲಾರದಾದರು. ನನ್ನ ಸ್ಥಾನ ಸ್ಪಷ್ಟವಿದೆ. ನಾನು ಆಂಗ್ಲ ದ್ವೇಷಿಯಲ್ಲ. ನಾನು ಮೂರ್ಖ ದ್ವೇಷಿ; ಮೂರ್ಖರು ಯಾವುದೇ ಜನಾಂಗಕ್ಕೆ ಸೇರಿರಲಿ, ನನ್ನ ದೇಶದವರೇ ಇರಲಿ.

ನಾನು ಶರಣೆನಲಾರೆ

'ಬ್ರಿಟಿಷ್ ಪ್ರಧಾನಿ ಚರ್ಚಿಲ್ ಮತ್ತು ಕೇಂಟರ್ಬರಿ ಆರ್ಚ್‌ಬಿಶೋಪ್ ಇಂಥಾ ಇಬ್ಬರು ಆಂಗ್ಲೇಯರೇ ಭಿನ್ನಮತದವರಾದಾಗ, ಅಮೆರಿಕದ ಸಂಪಾದಕರು ಇಬ್ಬರ ಮತವನ್ನೂ ಎತ್ತಿ ಹಿಡಿಯುತ್ತಾರೆ; ಅವರಿಗೆ ಜನರು ಯಾಕೆ ಹೋರಾಡುತ್ತಾರೆಂಬ ವಿಷಯವನ್ನೂ ತಿಳಿಸಿ ಹೇಳುತ್ತಾರೆ. ನಾನು, ಜನರು ಯಾಕಾಗಿ ಹೋರಾಡುತ್ತಾರೆಂಬ ವಿಷಯ ನನ್ನ ಗೆಳೆಯ ಗೆಳತಿಯರಿಗೆ, ನನ್ನ ತಾಯಿಗೆ, ದೇವರಿಗೂ ಕೂಡಾ ಸ್ಪಷ್ಟ ಪಡಿಸಲಾರೆ. ಸ್ಥಳೀಯ ರಾಜಕೀಯ ಭಿನ್ನಾಭಿಪ್ರಾಯದಲ್ಲಿ ನಾನು ಶರಣಾಗುವೆನು. ವಿದೇಶ ಜನಾಂಗ ಆಂತರಿಕ ಆರ್ಥಿಕ ವಿಷಯದಲ್ಲಿಯೂ ನಾನು ಶರಣೆನ್ನುವೆನು. ಯುದ್ಧ ಸಾಮುಗ್ರಿಯನ್ನು ಚೀನಕ್ಕೆ ಕಳುಹಿಸುವ ಮೊದಲು ಅಮೆರಿಕದಲ್ಲಿರುವ ಚೀನೀಯರಿಗೆ ಕಳುಹಿಸಬೇಕೆಂಬ ಕುರಿತಾದರೂ ನಾನು ಶರಣೆನ್ನುವೆನು. ಆದರೆ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ ನಾನು ಶರಣೆನ್ನಲಾರೆ, ಏಕೆಂದರೆ ಅದರಲ್ಲಿ ನನಗೆ ಅಚಲ ವಿಶ್ವಾಸವಿದೆ; ಅದರಿಂದಲೆ ನಾನು ಬದುಕಿದ್ದೇನೆ ಮಾತ್ರವಲ್ಲ ನಾವು ಸಾಮ್ರಾಜ್ಯ ಮತ್ತು ಸ್ವಾತಂತ್ರ್ಯ ಇವುಗಳಲ್ಲಿ ಒಂದರ ಪಕ್ಷ ಹಿಡಿಯದೆ ಗತ್ಯಂತರವಿಲ್ಲವೆಂದೂ ನಾನು ನಂಬಿದ್ದೇನೆ.

'ಭಾರತೀಯರು. ಕ್ರಿಪ್ಸ್ ಸಂಧಾನದ ಕುರಿತು, ಕ್ರಿಪ್ಸರು ಮಾತುಕತೆಯ ಮೊದಲಿಗೆ ರಾಷ್ಟ್ರೀಯ ಸರಕಾರದ ಭರವಸೆ ಕೊಟ್ಟರೆಂದು ಹೇಳುವಾಗ, ಕ್ರಿಪ್ಸರ ಅನುಯಾಯಿಗಳು, ಅವರು ಹಾಗೆ ಮಾಡಿಲ್ಲವೆಂದು ಹೇಳುತ್ತಾರೆ; ಇವರಿಗೆ ನಿಜವಾದ ಸಂಗತಿಯ ಜ್ಞಾನವೇನಾದರೂ ಇದೆಯೆಂಬ ಕುರಿತು ಹುಚ್ಚನಾದರೂ ಒಪ್ಪಲಾರ, ಕ್ರಿಪ್ಸ್ ಸಂಧಾನವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರನ್ನು ಈ ಸಂಧಾನಕ್ಕಾಗಿ ಕಳುಹಿಸಿದ ಜನರನ್ನು ಅರ್ಥ ಮಾಡಿಕೊಳ್ಳಬೇಕು. ಚರ್ಚಿಲರು ೧೯೪೦–೪೧ರಲ್ಲಿ ಮಾಡಿದ ಕೆಳಗಿನ ಹೇಳಿಕೆಗಳನ್ನು ಓದಿದವರು, ಯಾರಾದರೂ ಕ್ರಿಪ್ಸ್ ಸಂಧಾನ ಹೀಗೇಕಾಯಿತೆಂದು ಚನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಚರ್ಚಿಲ್ ಮತ್ತು ಕಿಪ್ಲಿಂಗ್

"೧೯೪೦ ಜನವರಿಯಲ್ಲಿ ಚರ್ಚಿಲರು ಹೇಳಿದರು: 'ಒಂದು ದಿನ ನಾವು ಈ ಗಾಂಧಿ ಮತ್ತು ಕಾಂಗ್ರೆಸನ್ನು ಪುಡಿಮಾಡಲೇ ಬೇಕು' ಎಂದು, ಇದೇ ಅಟ್ಲಾಂಟಿಕ್ ಶಾಸನ ಭಾರತಕ್ಕೆ ಅನ್ವಯಿಸುವ ಸೂತ್ರವಾಗಿದೆ. ಸೈಮನ್ ಕಮಿಶನಿನ ಸಮಯದಲ್ಲಿ ಮತ್ತು ನಂತರದಲ್ಲಿ ಗಾಂಧಿ ಮತ್ತು ಕಾಂಗ್ರೆಸಿನವರೊಡನೆ ಸರಕಾರ ಮಾತುಕತೆ ಬೆಳೆಸುವ ಕುರಿತೂ ಚರ್ಚಿಲರು ಪ್ರಬಲ ಆಕ್ಷೇಪವೆತ್ತಿದ್ದರು. ಸಂಧಾನ ಮಾತುಕತೆ ನಡೆಸುವುದು, ಬ್ರಿಟಿಷ್ ಗೌರವಕ್ಕೆ ಹಾನಿಯೆಂದು ೧೯೩೧ರಲ್ಲಿ ಚರ್ಚಿಲ್ ಹೇಳಿದರು: 'ನಾವು ಭಾರತದಲ್ಲಿ ವ್ಯಕ್ತಿಗಳಿಗೆ ಅತಿಶಯ ಪ್ರಾಧಾನ್ಯ ಕೊಡುತ್ತೇವೆ. ಇವರೊಡನೆ ನಾವು, ನಮ್ಮ ಗೌರವ ಕಳೆಕೊಳ್ಳದೆ ಸಂಧಾನ ಮಾಡಿಕೊಳ್ಳಲು ಸಾಧ್ಯವಿಲ್ಲ. ೧೯೩೧ನೇ ಫೆಬ್ರವರಿಯಲ್ಲಿ ಪುನಃ ಅವರೇ ಹೇಳಿದರು: "ನಮ್ಮ ಹೊಣೆಗಾರಿಕೆಯನ್ನು ಈ ಕೃತ್ರಿಮ ಮತ್ತು ಸಂಕುಚಿತವಾದ ಭಾರತದ ರಾಜನೀತಿಜ್ಞರ ಸಂಸ್ಥೆಗೆ ಬಿಟ್ಟುಕೊಡುವುದೆಂದರೆ ನಮ್ಮ ಶತಾಪರಾಧ. ಅದು ನಾಚಿಕೆಯ ಕೆಲಸ. ಅದು ಹೇಡಿತನದ ಕೆಲಸ. ಅದು ಅಗೌರವ ಕಾರ್ಯ; ಇದರಿಂದ ಬ್ರಿಟನಿಗೆ ನೈತಿಕ ಅವಮರ್ಯಾದೆ ಬಂದೀತು. ಆದರಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾನವ ಇತಿಹಾಸದಲ್ಲಿ ಒಂದು ಕಳಂಕ ಉಂಟಾದೀತು" ಎಂದು. ಇದೇ ಕಿಪ್ಲಿಂಗ್ ವಾದ ಸರಣಿಯೂ ಕೂಡಾ. ಕಿಪ್ಲಿಂಗ್ ಮತ್ತ ಚರ್ಚಿಲ್ ಬೋರ್ ಯುದ್ಧದಲ್ಲಿ ಪ್ರೆಸ್ ವರದಿಗಾರರಿದ್ದರು; ಅವರಿಬ್ಬರೂ 'ಕಡಿಮೆ ಉಣ್ಣುವ ಜನರ' ಕುರಿತು ಏಕಾಭಿಪ್ರಾಯದವರೇ ಆಗಿದ್ದಾರೆ.

"೧೮ನೇ ಶತಮಾನದಲ್ಲಿ ಅವರು 'ವೀರ'ರಾಗಬಹುದಿತ್ತು. ೧೭ ಮತ್ತು ೧೮ನೇ ಶತಮಾನಗಳಲ್ಲಿಯೂ ಅವರು 'ಯೋಗ್ಯ'ರಿರಬಹುದಿತ್ತು; ೧೯ನೇ ಶತಮಾನದಲ್ಲಿಯೂ ಅವರು ಮಹಾ ಪುರುಷರೆನಿಸಬಹುದಿತ್ತು. ಆದರೆ ಚರ್ಚಿಲರು ಈ ೨೦ನೇ ಶತಮಾನದಲ್ಲಿ ಕಿಪ್ಲಿಂಗ್ ಸರಣಿ ಹಿಡಿದು ಅರಾಜಕತೆ ಸಾರುತ್ತಿದ್ದಾರೆ. ಅವರು, ತತ್ವಪ್ರೇಮಿಯೋ ದೃಢ; ಅವರ ಭಾಷೆಯೂ ಸ್ಪಷ್ಟ, ಅವರ ಉದ್ದೇಶವೂ ನಿಶ್ಚಿತ. ಮೇಲಿನ ಮಾತುಗಳಲ್ಲಿ ಚರ್ಚಿಲರು ಕ್ರಿಪ್ಸ್ ಸಂಧಾನದ ವಿಚಾರ ಮಾತ್ರವಲ್ಲ, ಬ್ರಿಟಿಷರ ಭಾರತದ ಧೋರಣೆಯನ್ನೇ ವಿಶದೀಕರಿಸಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಸಂಯುಕ್ತ ಕೇಳಿಕೆ

"ಅಮೆರಿಕದಲ್ಲಿ ಎಷ್ಟು ಜಾತಿಗಳಿಲ್ಲ. ಪ್ರೊಟೆಸ್ಟಂಟರು, ಕೆಥೋಲಿಕರು, ಜ್ಯೂಗಳು ಬೇರೆ ಬೇರೆ ಬೀದಿಗಳಲ್ಲಿ ನೆಲಸಿದ್ದಾರೆ. ನ್ಯೂ ಡೀಲಿನವರು, ಡೆಮೊಕ್ರೆಟರು, ಕಮ್ಯುನಿಸ್ಟರು, ಸೋಶಿಯಲಿಸ್ಟರು ಎಷ್ಟೆಲ್ಲಾ ಪಂಗಡಗಳಿಲ್ಲ ಅಲ್ಲಿ. ಆದರೆ ಭಾರತದಲ್ಲಿ ಹಿಂದುಗಳು ಮುಸ್ಲಿಮರು ಒಂದೇ ಬೀದಿಯಲ್ಲಿ, ಒಂದೇ ಬಾವಿನೀರು ಕುಡಿಯುತ್ತಿದ್ದರೂ ಅದಕ್ಕೆ ಭೂತ ಕನ್ನಡಿ ಹಿಡಿವುದು ಯಾಕೆ? ಹಿಂದುಗಳಿರಲಿ ಮುಸ್ಲಿಮರಿರಲಿ, ಅವರೆಲ್ಲರೂ ಒಂದು ವಿಷಯದಲ್ಲಿ ಒಂದಾಗಿದ್ದಾರೆ; ಎಲ್ಲರಿಗೂ ಅವರ ಸ್ವಾತಂತ್ರ್ಯ ಬೇಕು; ಎಲ್ಲರೂ ಬ್ರಿಟಿಷರನ್ನು ದ್ವೇಷಿಸುತ್ತಾರೆ. ಹೀಗೆಯೇ ಯಾವುದೇ ದೇಶದಲ್ಲಾಗಲಿ, ಕೆಥಲಿಕರಿರಲಿ, ಪ್ರೊಟೆಸ್ಟಂಟರಿರಲಿ ಜ್ಯೂಗಳಿರಲಿ ಅವರ ದೇಶದ ಸ್ವಾತಂತ್ರ್ಯದ ವಿಷಯ ಎಲ್ಲರೂ ಏಕಾಭಿಪ್ರಾಯವುಳ್ಳವರೇ.

"ನಾನು ಭಾರತದ ಸ್ವಾತಂತ್ರ್ಯವನ್ನು ಇತರ ಯಾವುದೇ ಯುರೋಪಿನ ದಳಿತ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಸಮಾನವಾಗಿ ಭಾವಿಸುತ್ತೇನೆ. ರಶ್ಯ ಜರ್ಮನಿಗಳು ಗ್ರೀಸ್, ಪೋಲೆಂಡುಗಳ ಮೇಲೆ ಆಕ್ರಮಿಸಿದ್ದನ್ನು, ಭಾರತದ ಮೇಲೆ ಬ್ರಿಟಿಷರು ಆಕ್ರಮಿಸಿದ್ದನ್ನೂ ನಾನು ಒಂದೇ ವಿಧವಾಗಿ ವಿರೋಧಿಸುವೆನು.

'ಭಾರತದ ಜನರೊಡನೆ ಕೇಳದೆ ಹೇಳದೆ ಭಾರತದಲ್ಲಿ ಬ್ರಿಟಿಷರು ಯುದ್ಧ ಸಾರಿದ ಮೇಲೆ ಅಲ್ಲಿನ ಮುಖಂಡರನ್ನು ಬಂಧನದಲ್ಲಿಟ್ಟರು; ಆ ಮೇಲೆ ಭಾರತದ ಪರಿಸ್ಥಿತಿ ಸುಧಾರಿಸಲು ಬ್ರಿಟಿಷರು ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ಸ್ವಾತಂತ್ರ್ಯದ ಕಿರಿ ಕೂಗು, ಜಪಾನರ ಆಕ್ರಮಣದ ಕಲ್ಪಿತ ಭೀತಿ ಕ್ರಿಪ್ಸ್ ಸಂಧಾನದಲ್ಲಿ ಮಿಶ್ರವಾಗಿತ್ತು. ತಮ್ಮ ರಾಷ್ಟ್ರವನ್ನು ರಕ್ಷಿಸಬೇಕಾದರೆ ತಮಗೆ ನಿಜವಾದ ಅಧಿಕಾರ ಕೊಡಬೇಕೆಂದು ಭಾರತೀಯರು ಕೇಳಿದರು. ಬ್ರಿಟಿಷ್ ಸರಕಾರ ಅದನ್ನು ಅವರಿಗೆ ಕೊಡಲು ಇಷ್ಟಪಡಲಿಲ್ಲ. ಕಾಂಗ್ರೆಸು ಮತ್ತು ಭಾರತದ ಜನತೆ ಅತೃಪ್ತಿಪಟ್ಟಿತು. ಭಾರತದ ಶಾಂತತೆ ಭಂಗವಾಯಿತು. ಆಂಗ್ಲ ಆಡಳಿತಗಾರರು ಮತ್ತೂ ಮೌನವಾಗಿದ್ದಾರೆ. ಹೀಗೆ ಪ್ರತಿಯೊಂದು ಪ್ರಯತ್ನ ವಿಫಲವಾದಾಗ, ಶಾಸನ ಭಂಗ ಚಳವಳಿ ಮುಂದೆ ಮಾಡುವ ಸೂಚನೆಯನ್ನು ಗಾಂಧಿ ವೈಸರಾಯಿಗೆ ಕಳುಹಿಸಿದರು. ಇಂಗ್ಲಿಷರಿಗೆ ಈ ಸೂಚನೆ ಸಮುಂಚಿತವಾಗಿ ತಿಳಿಸುವ ಅವಶ್ಯಕತೆ ಇರಲಿಲ್ಲ. ಆದರೂ ಗಾಂಧಿಜಿ ಬೇಡಿದರು. ವೈಸರಾಯರು, ತಮ್ಮ ನಿಜಸ್ವರೂಪದಂತೆ ತಿರಸ್ಕರಿಸಿದರು. ಕಾಂಗ್ರೆಸು ಮುಖಂಡರನ್ನು ಸೆರೆಮನೆಗೆ ಸೇರಿಸಲಾಯಿತು. ಆಂಗ್ಲ ನ್ಯಾಯಾಧೀಶರೇ ಹೇಳಿದಂತೆ ಕೇವಲ 'ಆಕ್ರಮವಾಗಿ' ಅಶಕ್ತ ದಂಗೆಯನ್ನು ಅಡಗಿಸಲಾಯಿತು.'

ದೇಶ ಪ್ರೇಮ ಮಾತ್ರ ಸಾಲದು

ಆಂಗ್ಲೇಯರ ಧೋರಣೆಯ ವಿಚಾರ ಮಾಡುವಾಗ ನನಗೆ ತೋರುತ್ತದೇನೆಂದರೆ, ಮಿತ್ರರಲ್ಲಿ ಪ್ರಬಲ ಅಸ್ತ್ರಗಳಿರುವ ವರೆಗೆ ಆಶ್ರಿತ ಜನರು ಏನೇ ಹೇಳಲಿ, ಅವರು ತಮ್ಮಿಚ್ಛೆ ಸಾಧಿಸುವವರೇ. ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯ ನಡುವೆ, ಸ್ವಾತಂತ್ರ್ಯದ ಧ್ಯೇಯ ಸಾಧಿಸಲು ಬ್ರಿಟಿಷರೊಪ್ಪಲಾರರೆಂಬ ವಿಷಯವನ್ನು ಭಾರತದ ಪರಿಸ್ಥಿತಿ ಮನಗಾಣಿಸಿದೆ. ಕೈಯಲ್ಲಿ ಅಸ್ತ್ರವಿರುವ ವರೆಗೆ 'ಪರಿಸ್ಥಿತಿಯನ್ನು ಬ್ರಿಟಿಷರು ಹದ'ಕ್ಕೆ ತರಬಹುದು. ಯುದ್ಧಾನಂತರವೂ ಹೀಗೆಯೇ 'ಪರಿಸ್ಥಿತಿ ಹದ'ಕ್ಕೆ ತರಲಾಧೀತೆಂಥು ತೋರುತ್ತದೆ. ಇಂದಿನ ಯುದ್ಧದಲ್ಲಿ ಇರುವುದು ಒಂದು ವಿಷಯ—ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯ. ಇಬ್ಬರು ಲೋಕವೀರರು ವಿರೋಧ ಹಾದಿ ಹಿಡಿದಿದ್ದಾರೆ. ಚಿಯಾಂಗ್ ಕೈ ಶೇಕ ಮತ್ತು ಚರ್ಚಿಲರು. ಚಿಯಾಂಗರಿಗೆ "ದೇಶಾಭಿಮಾನ ಮಾತ್ರ ಸಾಲದು;" ಚರ್ಚಿಲರಿಗೆ ಸಾಕು; ಇವರಿಬ್ಬರಲ್ಲಿ ಯಾರು ಅಧಿಕರೋ ಅವರನ್ನು ಪ್ರತಿಯೊಬ್ಬ ವಿಚಾರವಂತನೂ ಆರಿಸಿಕೊಳ್ಳಬೇಕು. ಯುರೋಪಿನ ರಾಜಕೀಯ ಮತ್ತು ವಿಶ್ವದ ರಾಜಕೀಯ ಇವೆರಡು ಎಂದೂ ಸರಿ ಸಮಾನವಾಗಿಲ್ಲ."

The Bank of Mangalore Limited, Mangalore.
ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June) (½% from July to Dec.)
Savings bank Accounts 1½% p. a. on daily balances.
Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

1893 1943 GOLDEN JUBILEE

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಾಯಿ
ಕಲ್ಕತ್ತ.

HEARTY NEW YEAR GREETINGS

TO

All our Policy-holders, Agents, Medical Examiners and Well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

'Bhuvanendra Products Limited

Katapadi, S. Kanara.

Depot: *Maharata Galli, Hubli.*

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 18—2—1944 [ಸಂಚಿಕೆ 7]

ಸಾಮ್ರಾಜ್ಯ ವಾದವೋ ಸ್ವಾತಂತ್ರ್ಯ ವಾದವೋ?

ಇವೆರಡರಲ್ಲಿ ಯಾವುದನ್ನು ಆರಿಸುತ್ತೀರಿ?

ಚರ್ಚಿಲ್ ಮತ್ತು ಭಾರತದ ಕುರಿತು—

"ಭಾರತದ ಸಮಸ್ಯೆ ಕೇವಲ ಭಾರತದ ಸಮಸ್ಯೆ ಮಾತ್ರವಲ್ಲ. ಅದು ನಾವು ಸಾರುತ್ತಲಿರುವ ಸ್ವಾತಂತ್ರ್ಯ ಸಮಸ್ಯೆಯಾಗಿದೆ" ಹೀಗೆಂದು ಪ್ರಸಿದ್ಧ ಚೀನೀ ಲೇಖಕರಾದ ಲಿನ್ ಯುತಾಂಗರು ತಮ್ಮೊಂದು ಲೇಖನದಲ್ಲಿ ಬರೆದಿರುವರು. ಲೇಖನದ ವಿವರವಿಂತಿದೆ.

"ನಾವು ಸಾಮ್ರಾಜ್ಯ ಹಾಗೂ ಸ್ವಾತಂತ್ರ್ಯದ ಪ್ರಚಾರ ಮಾಡಲು ಎದೆಗಾರರಾಗಿಲ್ಲ; ಹಾಗಾಗಿಯೇ ಇಂದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಭಾರತದ ದೇಶ ಪ್ರೇಮಿಗಳು ಸೆರೆಮನೆಗೆ ತಳ್ಳಲ್ಪಟ್ಟಿದ್ದಾರೆ.

"ಸ್ವಾತಂತ್ರ್ಯ! ಈ ಶಬ್ದದಲ್ಲಿ ಎಂಥಾ ಇಂದ್ರಜಾಲವಿದೆ. ಸ್ವಾತಂತ್ರ್ಯ ಮೊಳಗಲಿ! ಆದರೆ ಸ್ವಾತಂತ್ರ್ಯವನಿತೆ, ಸೀರೆಯನ್ನು ಬಿಚ್ಚಿ ಯೂರೋಪಿಯನ್ ಗೌನ್ ಹಾಕಬೇಕೆ? ಅಲ್ಲಿ ಆಂಗ್ಲ ಸ್ವಾತಂತ್ರ್ಯ ಹಳ್ಳಿ ಕುಟೀರಗಳಲ್ಲಿ ನೆಲಸಿದೆ, ಇಲ್ಲಿ ಭಾರತ ಸ್ವಾತಂತ್ರ್ಯ ಆನೆಯ ಮೇಲೇ ಕಾಡಿನಲ್ಲಿ ಅಲೆದಾಡುತ್ತಿದೆ. ಜನರ ಮನಸ್ಸು ಸಂಕೋಚವಾದುದು; ಆದ್ದರಿಂದಲೇ, ನಿಜವಾಗಿ ಪ್ರತಿಯೊಬ್ಬ ಮಾನವನ ಹೃದಯಾಂತರಾಳದಲ್ಲಿ ಸ್ವಾತಂತ್ರ್ಯ ದೇವಿ ಮನೆಮಾಡಿರುವಳೆಂಬ ವಿಷಯ ಜನತೆ ಮರೆತೇ ಬಿಡುತ್ತದೆ.

ಯುದ್ಧ ಮೊದಲು ಗೆಲ್ಲಿರಿ

'ಆಂಗ್ಲೇಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೆ, ಭಾರತೀಯರು ಬ್ರಿಟಿಷರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೆ. ಭಾರತದಲ್ಲಿ ಯಾರೇ ಆದರೂ ನಾಲ್ಕು ಸ್ವಾತಂತ್ರ್ಯಗಳ ವಿಚಾರ ಚರ್ಚಿಸಕೂಡದು. ಅವುಗಳನ್ನು ಓದಿದರಲೂ ಕೂಡದು. ಇದು ತುಸು ವಿಪರೀತವಾದುದಲ್ಲವೆ? 'ಮೊದಲು ಯುದ್ಧ ಗೆಲ್ಲಿರಿ ಆ ಮೇಲೆ ನಿಮ್ಮ ಮೆದುಳು ಖರ್ಚುಮಾಡಿರಿ.' ಈ ತರ್ಕವನ್ನು ಆಂಗ್ಲ ಬುದ್ಧಿಮಾತ್ರ ಅರ್ಥಮಾಡಿ ಕೊಳ್ಳ ಬಲ್ಲದು.

'ನಾನು ಇತ್ತೀಚೆಗೆ ನಿಷ್ಕಾರಣವಾಗಿ ನ್ಯೂಯಾರ್ಕಿನ ನನ್ನ ಗೆಳತಿಯರ ಗುಂಪಿಗಾದರೂ ಆಂಗ್ಲ ದ್ವೇಷಿ'ಯೆಂಬ ಹೆಸರು ಪಡೆದಿದ್ದೇನೆ. ಏಕೆಂದರೆ ನಾನು ಭಾರತದ ಸ್ವಾತಂತ್ರ್ಯ ವಿಚಾರತ್ತ ಮಾತನಾಡಿದೆ. ಭಾರತದ ವಿಚಾರ ಮಾತನಾಡಿದವನು ಆಂಗ್ಲ ದ್ವೇಷಿ ಏಕಾಗಬೇಕೋ ನನಗೆ ಅರ್ಥವಾಗುವುದಿಲ್ಲ. ಈ ಕುರಿತು ನನ್ನ ಗೆಳತಿಯರಾದರೂ ನನಗೇನೂ ಹೇಳಲಾರರು. ನನ್ನ ಸ್ಥಾನ ಸ್ಪಷ್ಟವಿದೆ. ನಾನು ಆಂಗ್ಲ ದ್ವೇಷಿಯಲ್ಲ. ನಾನು ಮೂರ್ಖ ದ್ವೇಷಿ; ಮೂರ್ಖರು ಯಾವುದೇ ಜನಾಂಗಕ್ಕೆ ಸೇರಿರಲಿ, ಯಾವ ದೇಶದವರೇ ಇರಲಿ.

ನಾನು ಶರಣೆನಲಾರೆ

'ಬ್ರಿಟಿಷ್ ಪ್ರಧಾನಿ ಚರ್ಚಿಲ್ ಮತ್ತು ಕ್ಯಾಂಟರ್‌ಬರಿ ಆರ್ಚ್‌ಬಿಷಪ್ ಇಂಥಾ ಇಬ್ಬರು ಆಂಗ್ಲೇಯರೇ ಭಿನ್ನಮತದವರಾದಾಗ, ಅಮೆರಿಕದ ಸಂಪಾದಕರು ಇಬ್ಬರ ಮತ್ತವನ್ನೂ ಛಾಪಿಸುತ್ತಾರೆ; ಅವರಿಗೆ ಜನರು ಯಾಕೆ ಹೋರಾಡುತ್ತಾರೆಂಬ ವಿಷಯವನ್ನೂ ತಿಳಿಸಿ ಹೇಳುತ್ತಾರೆ. ನಾನು, ಜನರು ಯಾಕಾಗಿ ಹೋರಾಡುತ್ತಾರೆಂಬ ವಿಷಯ ನನ್ನ ಗೆಳೆಯ ಗೆಳತಿಯರಿಗೆ, ನನ್ನ ತಾಯಿಗೆ, ದೇವರಿಗೂ ಕೂಡಾ ಸ್ಪಷ್ಟ ಪಡಿಸಲಾರೆ. ಸ್ಥಳೀಯ ರಾಜಕೀಯ ಭಿನ್ನಾಭಿಪ್ರಾಯದಲ್ಲಿ ನಾನು ಶರಣಾಗುವೆನು. ವಿದೇಶ ಜನಾಂಗ ಅಂತರಿಕ ಆರ್ಥಿಕ ವಿಷಯದಲ್ಲಿಯೂ ನಾನು ಶರಣೆನ್ನುವೆನು. ಯುದ್ಧ ಸಾಮಗ್ರಿಯನ್ನು ಚೀನಕ್ಕೆ ಕಳುಹಿಸುವ ಮೊದಲು ಅಮೆರಿಕದಲ್ಲಿರುವ ಚೀನೀಯರಿಗೆ ಕಳುಹಿಸಬೇಕೆಂಬ ಕುರಿತಾದರೂ ನಾನು ಶರಣೆನ್ನುವೆನು. ಆದರೆ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ ನಾನು ಶರಣೆನ್ನಲಾರೆ, ಏಕೆಂದರೆ ಅದರಲ್ಲಿ ನನಗೆ ಅಚಲ ವಿಶ್ವಾಸವಿದೆ; ಆದರಿಂದಲೆ ನಾನು ಬದುಕಿದ್ದೇನೆ ಮಾತ್ರವಲ್ಲ ನಾವು ಸಾಮ್ರಾಜ್ಯ ಮತ್ತು ಸ್ವಾತಂತ್ರ್ಯ ಇವುಗಳಲ್ಲಿ ಒಂದರ ಪಕ್ಷ ಹಿಡಿಯದೆ ಗತ್ಯಂತರವಿಲ್ಲವೆಂದೂ ನಾನು ನಂಬಿದ್ದೇನೆ.

'ಭಾರತೀಯರು ಕ್ರಿಪ್ಸ್ ಸಂಧಾನದ ಕುರಿತು, ಕ್ರಿಪ್ಸರು ಮಾತುಕತೆಯ ಮೊದಲಿಗೆ ರಾಷ್ಟ್ರೀಯ ಸರಕಾರದ ಭರವಸೆ ಕೊಟ್ಟರೆಂದು ಹೇಳುವಾಗ, ಕ್ರಿಪ್ಸರ ಅನುಯಾಯಿಗಳು, ಅವರು ಹಾಗೆ ಮಾಡಿಲ್ಲವೆಂದು ಹೇಳುತ್ತಾರೆ; ಇವರಿಗೆ ನಿಜವಾದ ಸಂಗತಿಯ ಜ್ಞಾನವೇನಾದರೂ ಇದೆಯೆಂಬ ಕುರಿತು ಹುಚ್ಚನಾದರೂ ಒಪ್ಪಲಾರ, ಕ್ರಿಪ್ಸ್ ಸಂಧಾನವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವರನ್ನು ಈ ಸಂಧಾನಕ್ಕಾಗಿ ಕಳುಹಿಸಿದ ಜನರನ್ನು ಅರ್ಥ ಮಾಡಿಕೊಳ್ಳಬೇಕು. ಚರ್ಚಿಲರು ೧೯೩೦–೩೧ರಲ್ಲಿ ಮಾಡಿದ ಕೆಳಗಿನ ಹೇಳಿಕೆಗಳನ್ನು ಓದಿದವರು, ಯಾರಾದರೂ ಕ್ರಿಪ್ಸ್ ಸಂಧಾನ ಹೀಗೇಕಾಯಿತೆಂದು ಚನ್ನಾಗಿ ಅರ್ಥ ಮಾಡಿಕೊಳ್ಳಬಹುದು.

ಚರ್ಚಿಲ್ ಮತ್ತು ಕಿಪ್ಲಿಂಗ್

"೧೯೩೦ ಜನವರಿಯಲ್ಲಿ ಚರ್ಚಿಲರು ಹೇಳಿದರು: 'ಒಂದು ದಿನ ನಾವು ಈ ಗಾಂಧಿ ಮತ್ತು ಕಾಂಗ್ರೆಸನ್ನು ಪುಡಿಮಾಡಲೇ ಬೇಕು' ಎಂದು, ಇದೇ ಅಟ್ಲಾಂಟಿಕ್ ಶಾಸನ ಭಾರತಕ್ಕೆ ಅನ್ವಯಿಸುವ ಸೂತ್ರವಾಗಿದೆ. ಸೈಮನ್ ಕಮಿಶನಿನ ಸಮಯದಲ್ಲಿ ಮತ್ತು ನಂತರದಲ್ಲಿ ಗಾಂಧಿ ಮತ್ತು ಕಾಂಗ್ರೆಸಿನವರೊಡನೆ ಸರಕಾರ ಮಾತುಕತೆ ಬೆಳೆಸುವ ಕುರಿತೂ ಚರ್ಚಿಲರು ಪ್ರಬಲ ಆಕ್ಷೇಪವೆತ್ತಿದ್ದರು. ಸಂಧಾನ ಮಾತುಕತೆ ನಡೆಸುವುದು, ಬ್ರಿಟಿಷ್ ಗೌರವಕ್ಕೆ ಹಾನಿಯೆಂದು, ೧೯೩೧ರಲ್ಲಿ ಚರ್ಚಿಲ್ ಹೇಳಿದರು: 'ನಾವು ಭಾರತದಲ್ಲಿ ವ್ಯಕ್ತಿಗಳಿಗೆ ಅತಿಶಯ ಪ್ರಾಧಾನ್ಯ ಕೊಡುತ್ತೇವೆ. ಇವರೊಡನೆ ನಾವು ನಮ್ಮ ಗೌರವ ಕಳಕೊಳ್ಳದೆ ಸಂಧಾನ ಮಾಡಿಕೊಳ್ಳಲು ಸಾಧ್ಯವಿಲ್ಲ. ೧೯೩೧ನೇ ಫೆಬ್ರವರಿಯಲ್ಲಿ ಪುನಃ ಅವರೇ ಹೇಳಿದರು: "ನಮ್ಮ ಹೊಣೆಗಾರಿಕೆಯನ್ನು ಈ ಕೃತ್ರಿಮ ಮತ್ತು ಸಂಕುಚಿತವಾದ ಭಾರತದ ರಾಜನೀತಿಜ್ಞರ ಸಂಸ್ಥೆಗೆ ಬಿಟ್ಟುಕೊಡುವುದೆಂದರೆ ನಮ್ಮ ಶತಾಪರಾಧ. ಅದು ನಾಚಿಕೆಯ ಕೆಲಸ. ಅದು ಹೇಡಿತನದ ಕೆಲಸ. ಅದು ಅಗೌರವ ಕಾರ್ಯ; ಇದರಿಂದ ಬ್ರಿಟನಿಗೆ ನೈತಿಕ ಅವಮರ್ಯಾದೆ ಬಂದೀತು. ಅದರಿಂದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾನವ ಇತಿಹಾಸದಲ್ಲಿ ಒಂದು ಕಳಂಕ ಉಂಟಾದೀತು" ಎಂದು. ಇದೇ ಕಿಪ್ಲಿಂಗ್ ವಾದ ಸರಣಿಯೂ ಕೂಡಾ; ಕಿಪ್ಲಿಂಗ್ ಮತ್ತ ಚರ್ಚಿಲ್ ಬೋರ್ ಯುದ್ಧದಲ್ಲಿ ಪ್ರೆಸ್ ವರದಿಗಾರರಿದ್ದರು; ಅವರಿಬ್ಬರೂ 'ಕಡಿಮೆ ಉಣ್ಣುವ ಜನರ' ಕುರಿತು ಏಕಾಭಿಪ್ರಾಯದವರೇ ಆಗಿದ್ದಾರೆ.

"೧೬ನೇ ಶತಮಾನದಲ್ಲಿ ಅವರು 'ವೀರ'ರಾಗಬಹುದಿತ್ತು. ೧೭ ಮತ್ತು ೧೮ನೇ ಶತಮಾನಗಳಲ್ಲಿಯೂ ಅವರು 'ಯೋಗ್ಯ'ರಿರಬಹುದಿತ್ತು; ೧೯ನೇ ಶತಮಾನದಲ್ಲಿಯೂ ಅವರು ಮಹಾ ಪುರುಷರೆನಿಸಬಹುದಿತ್ತು. ಆದರೆ ಚರ್ಚಿಲರು ಈ ೨೦ನೇ ಶತಮಾನದಲ್ಲಿ ಕಿಪ್ಲಿಂಗ್ ಸರಣಿ ಹಿಡಿದು ಅರಾಜಕತೆ ಸಾರುತ್ತಿದ್ದಾರೆ. ಅವರು, ತತ್ವವೇನೋ ದೃಢ; ಅವರ ಭಾಷೆಯೂ ಸ್ಪಷ್ಟ, ಅವರ ಉದ್ದೇಶವೂ ನಿಶ್ಚಿತ. ಮೇಲಿನ ಮಾತುಗಳಲ್ಲಿ ಚರ್ಚಿಲರು ಕ್ರಿಪ್ಸ್ ಸಂಧಾನದ ವಿಚಾರ ಮಾತ್ರವಲ್ಲ, ಬ್ರಿಟಿಷರ ಭಾರತದ ಧೋರಣೆಯನ್ನೇ ವಿಶದೀಕರಿಸಿದ್ದಾರೆ.

ಸ್ವಾತಂತ್ರ್ಯಕ್ಕಾಗಿ ಸಂಯುಕ್ತ ಕೇಳಿಕೆ

"ಅಮೆರಿಕದಲ್ಲಿ ಎಷ್ಟು ಜಾತಿಗಳಿಲ್ಲ. ಪ್ರೊಟೆಸ್ಟೆಂಟರು, ಕೆಥೋಲಿಕರು, ಜ್ಯೂಗಳು ಬೇರೆ ಬೇರೆ ಬೀದಿಗಳಲ್ಲಿ ನೆಲಸಿದ್ದಾರೆ. ನ್ಯೂ ಡೀಲಿನವರು, ಡೆಮೊಕ್ರೆಟರು, ಕಮುನಿಸ್ಟರು, ಸೋಶಿಯಲಿಸ್ಟರು ಎಷ್ಟೆಲ್ಲಾ ಪಂಗಡಗಳಿಲ್ಲ ಅಲ್ಲಿ. ಆದರೆ ಭಾರತದಲ್ಲಿ ಹಿಂದುಗಳು ಮುಸ್ಲಿಮರು ಒಂದೇ ಬೀದಿಯಲ್ಲಿ, ಒಂದೇ ಬಾವಿನೀರು ಕುಡಿಯುತ್ತಿದ್ದರೂ ಅದಕ್ಕೆ ಭೂತ ಕನ್ನಡಿ ಹಿಡಿವುದು ಯಾಕೆ? ಹಿಂದುಗಳಿರಲಿ, ಮುಸ್ಲಿಮರಿರಲಿ, ಅವರೆಲ್ಲರೂ ಒಂದು ವಿಷಯದಲ್ಲಿ ಒಂದಾಗಿದ್ದಾರೆ; ಎಲ್ಲರಿಗೂ ಅವರ ಸ್ವಾತಂತ್ರ್ಯ ಬೇಕು; ಎಲ್ಲರೂ ಬ್ರಿಟಿಷರನ್ನು ದ್ವೇಷಿಸುತ್ತಾರೆ. ಹೀಗೆಯೇ ಯಾವುದೇ ದೇಶದಲ್ಲಾಗಲಿ, ಕೆಥಲಿಕರಿರಲಿ, ಪ್ರೊಟೆಸ್ಟೆಂಟರಿರಲಿ ಜ್ಯೂಗಳಿರಲಿ ಅವರ ದೇಶದ ಸ್ವಾತಂತ್ರ್ಯದ ವಿಷಯ ಎಲ್ಲರೂ ಏಕಾಭಿಪ್ರಾಯವುಳ್ಳವರೇ.

"ನಾನು ಭಾರತದ ಸ್ವಾತಂತ್ರ್ಯವನ್ನು ಇತರ ಯಾವುದೇ ಯುರೋಪಿನ ದಳಿತ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಸಮಾನವಾಗಿ ಭಾವಿಸುತ್ತೇನೆ. ರಶ್ಯ ಜರ್ಮನಿಗಳು ಗ್ರೀಸ್, ಪೋಲೆಂಡುಗಳ ಮೇಲೆ ಆಕ್ರಮಿಸಿದ್ದನ್ನು ಭಾರತದ ಮೇಲೆ ಬ್ರಿಟಿಷರು ಆಕ್ರಮಿಸಿದ್ದನ್ನೂ ನಾನು ಒಂದೇ ವಿಧವಾಗಿ ವಿರೋಧಿಸುವೆನು.

'ಭಾರತದ ಜನರೊಡನೆ ಕೇಳದೆ ಹೇಳದೆ ಭಾರತದಲ್ಲಿ ಬ್ರಿಟಿಷರು ಯುದ್ಧ ಸಾರಿದ ಮೇಲೆ ಅಲ್ಲಿನ ಮುಖಂಡರನ್ನು ಬಂಧನದಲ್ಲಿಟ್ಟರು; ಆ ಮೇಲೆ ಭಾರತದ ಪರಿಸ್ಥಿತಿ ಸುಧಾರಿಸಲು ಬ್ರಿಟಿಷರು ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ಸ್ವಾತಂತ್ರ್ಯದ ಕಿರಿ ಕೂಗು, ಜಪಾನರ ಆಕ್ರಮಣದ ಕಲ್ಪಿತ ಭೀತಿ ಕ್ರಿಪ್ಸ್ ಸಂಧಾನದಲ್ಲಿ ಮಿಶ್ರವಾಗಿತ್ತು. ತಮ್ಮ ರಾಷ್ಟ್ರವನ್ನು ರಕ್ಷಿಸಬೇಕಾದರೆ ತಮಗೆ ನಿಜವಾದ ಅಧಿಕಾರ ಕೊಡಬೇಕೆಂದು ಭಾರತೀಯರು ಕೇಳಿದರು. ಬ್ರಿಟಿಷ್ ಸರಕಾರ ಅದನ್ನು ಅವರಿಗೆ ಕೊಡಲು ಇಷ್ಟಪಡಲಿಲ್ಲ. 'ಕಾಂಗ್ರೆಸು ಮತ್ತು ಭಾರತದ ಜನತೆ ಅತೃಪ್ತಿಪಟ್ಟಿತು. ಭಾರತದ ಶಾಂತತೆ ಭಂಗವಾಯಿತು. ಆಂಗ್ಲ ಆಡಳಿತಗಾರರು ಮತ್ತೂ ಮೌನವಾಗಿದ್ದಾರೆ. ಹೀಗೆ ಪ್ರತಿಯೊಂದು ಪ್ರಯತ್ನ ವಿಫಲವಾದಾಗ, ಶಾಸನ ಭಂಗ ಚಳವಳ ಮುಂದೆ ಮಾಡುವ ಸೂಚನೆಯನ್ನು ಗಾಂಧಿ ವೈಸರಾಯಿಗೆ ಕಳುಹಿಸಿದರು. ಇಂಗ್ಲಿಷರಿಗೆ ಈ ಸೂಚನೆ ಮುಂಚಿತವಾಗಿ ತಿಳಿಸುವ ಅವಶ್ಯಕತೆ ಇರಲಿಲ್ಲ. ಆದರೂ ಗಾಂಧಿಜಿ ಬೇಡಿದರು. ವೈಸರಾಯರು, ತಮ್ಮ ನಿಜಸ್ವರೂಪದಂತೆ ತಿರಸ್ಕರಿಸಿದರು. ಕಾಂಗ್ರೆಸು ಮುಖಂಡರನ್ನು ಸೆರೆಮನೆಗೆ ಸೇರಿಸಲಾಯಿತು. ಆಂಗ್ಲ ನ್ಯಾಯಾಧೀಶರೇ ಹೇಳಿದಂತೆ ಕೇವಲ 'ಅಶ್ರೆಸು'ವಾಗಿ ಅಶಸ್ತ್ರ ದಂಗೆಯನ್ನು ಅಡಗಿಸಲಾಯಿತು.'

ದೇಶ ಪ್ರೇಮ ಮಾತ್ರ ಸಾಲದು

ಆಂಗ್ಲೇಯರ ಧೋರಣೆಯ ವಿಚಾರ ಮಾಡುವಾಗ ನನಗೆ ತೋರುತ್ತದೇನೆಂದರೆ, ಮಿತ್ರರಲ್ಲಿ ಪ್ರಬಲ ಅಸ್ತ್ರಗಳಿರುವ ವರೆಗೆ ಆಶ್ರಿತ ಜನರು ಏನೇ ಹೇಳಲಿ, ಅವರು ತಮ್ಮಿಚ್ಛೆ ಸಾಧಿಸುವವರೇ. ಸ್ವಾತಂತ್ರ ಮತ್ತು ಸಾಮ್ರಾಜ್ಯ ನಡುವೆ, ಸ್ವಾತಂತ್ರದ ಧ್ಯೇಯ ಸಾಧಿಸಲು ಬ್ರಿಟಿಷರೊಪ್ಪಲಾರರೆಂಬ ವಿಷಯವನ್ನು ಭಾರತದ ಪರಿಸ್ಥಿತಿ ಮನಗಾಣಿಸಿದೆ. ಕೈಯಲ್ಲಿ ಅಸ್ತ್ರವಿರುವ ವರೆಗೆ 'ಪರಿಸ್ಥಿತಿಯನ್ನು ಬ್ರಿಟಿಷರು ಹ'ದಕ್ಕೆ ತರಬಹುದು. ಯುದ್ಧಾನಂತರವೂ ಹೀಗೆಯೇ 'ಪರಿಸ್ಥಿತಿ ಹದ'ಕ್ಕೆ ತರಲಾದೀತೆಂದು ತೋರುತ್ತದೆ. ಇಂದಿನ ಯುದ್ಧದಲ್ಲಿ ಇರುವುದು ಒಂದು ವಿಷಯ-ಸ್ವಾತಂತ್ರ ಮತ್ತು ಸಾಮ್ರಾಜ್ಯ. ಇಬ್ಬರು ಲೋಕವೀರರು ವಿರೋಧ ಹಾದಿ ಹಿಡಿದಿದ್ದಾರೆ. ಚಿಯಾಂಗ್ ಕೈ ಶೇಕ ಮತ್ತು ಚರ್ಚಿಲರು. ಚಿಯಾಂಗರಿಗೆ "ದೇಶಾಭಿಮಾನ ಮಾತ್ರ ಸಾಲದು;" ಚರ್ಚಿಲರಿಗೆ ಸಾಕು; ಇವರಿಬ್ಬರಲ್ಲಿ ಯಾರು ಆದೀತೋ ಅವರನ್ನು ಪ್ರತಿಯೊಬ್ಬ ವಿಚಾರವಂತನೂ ಆರಿಸಿಕೊಳ್ಳಬೇಕು. ಯುರೋಪಿನ ರಾಜಕೀಯ ಮತ್ತು ಏಶ್ಯದ ರಾಜಕೀಯ ಇವೆರಡು ಎಂದೂ ಸರಿಸಮಾನವಾಗಿಲ್ಲ."

ಒಂದ ಸಣ್ಣ ಕಥೆ

★ ಓಪನಿಂಗ್ ನಂ. ೬ ★

ಬರೆದವರು: ಸಿಕಂದರ್, ಕಾವು.

[illegible] ಕುಳಿತೆ. 'ರಾಯರೇ; ಕಾಗದೊಂದು ಬಂದಿದೆ,' ಎನ್ನುತ್ತ ಅಂಚೆ ಇಲಾಖೆಯ ಲಕೋಟೆಯೊಂದನ್ನು ನನ್ನ ಕೈಗಿತ್ತು ಮುಗುಳ್ನಕ್ಕಳು. ಅದನ್ನು ಒಡೆದು ನೋಡಲು, ನಮ್ಮ ಮಾವಯ್ಯನವರ ಪತ್ರವಾಗಿತ್ತು. 'ಅದಾರ ಕಾಗದ' ಎಂದು ಲೀಲೆಯು ಆತುರದಿಂದ ಮನೆಯಿಂದ ಹೊರಬಂದು ನನ್ನ ಹಿಂಬದಿ ಕುರ್ಚಿಯನ್ನು ಹಿಡಿದು ಬಗ್ಗಿ ಇಣಿಕಿದಳು. ನಾನು ಬೇಕಂತಲೆ ಪತ್ರವನ್ನು ಓರೆಯಾಗಿ ಹಿಡಿದು 'ಪರರ ಪತ್ರವನ್ನು ಓದಬಾರದು ಲೀಲಾ,' ಎಂದು ನಕ್ಕೆನು.

'ಅದರಲ್ಲಿ ನಮ್ಮಪ್ಪಯ್ಯನೋರ ಹೆಸರುಂಟು, ರಾಮರಾಯರೆಂದು.'

'ಅದೇನು, ಆ ಹೆಸರಿನವರು ನಿನ್ನ ಅಪ್ಪ ಒಬ್ಬರೇ ಇರುವುದೇ ಊರಲ್ಲಿ?'

ನಾನು ಮಾತಾಡುತ್ತಿದ್ದಂತೆಯೇ ಅವಳು ಸರಕ್ಕನೆ ಕೈಯಲ್ಲಿದ್ದ ಕಾಗದವನ್ನು ಕಸಿದುಕೊಂಡು—'ನೋಡುವ ಹಾಗಾದರೆ, ಅನ್ಯರದ್ದಾದರೆ ನನಗೆ ಬೇಡ (ಓದಿ) ಯಾರಿಗೆ ಕಲಿಸುವುದು ಈ ಕಣ್ಣುಕಟ್ಟು ವಿದ್ಯೆ?'

ನಾನು ನಟನೆಯ ಸೋಲನ್ನೊಪ್ಪಿಕೊಳ್ಳುತ್ತ '—ಆಯ್ತು, ಹಾಗಾದರೆ ತಾವೇ ಓದಿ ತಿಳಿಸಿಬಿಡೋಣಾಗಲಿ ಪರ್ವಾಕು' ಎಂದೆ.

'ಹುಂ, ಏನು ತಮಾಷೆ. ತಾರೀಕೆಷ್ಟು ಈ ಹೊತ್ತು?'

'ಈ ದಿನ ೨೯ನೇ ತಾರೀಕು (ಕೆಲೆಂಡರು ನೋಡುತ್ತ) ಹೌದು ಅಷ್ಟೆ.'

'ಹಾಗಾದರೆ ನಾವು ಈ ದಿವಸ ಸಂಜೆ ೬ರ ಒಳಗೆ ಪುತ್ತೂರಿಗೆ ಹೋಗಿ ತಲಪಬೇಕಂತೆ. ನಾಳೆ ನಮ್ಮಣ್ಣನ ವಧು ನಿಶ್ಚಯಿಸಲು ಹೊರಡುವುದಂತೆ. ನೀವು ಅಗತ್ಯವಾಗಿ ಬರಲೇಬೇಕಂತೆ. ಸ್ವತಹ ಅಪ್ಪಯ್ಯನೋರೇ ಬರೆದಿದ್ದಾರೆ ಈ ಕಾಗದವನ್ನು.' ಎಂದು ನನ್ನ ಮುಖ ನೋಡಿದಳು.

'ಅದೆಲ್ಲ ಅಂತೆಗಳ ಕಂತೆಯಾಯ್ತು. ನಾಳೆ ಸೋಮವಾರ, ಹೇಗೆ ಹೋಗುವುದು ಪುತ್ತೂರಿಗೆ?'

'ಏನಾಯ್ತು ಅದರಲ್ಲಿ, ಒಂದು ದಿವಸದ ರಜೆ ಬರೆದುಕೊಂಡರೆ ಸರಿ, ನಾಳೆ ಸಾಯಂಕಾಲವೇ ಹಿಂತಿರುಗುವ'

'ಹೌದು, ಯೋಗ್ಯ ಮಂತ್ರಾಲೋಚನೆ. ಹಾಗಾದರೆ ನೀನು ಅಡುಗೆ ತಯಾರಿಸಿ ಮೋಹನ (ಮಗು) ನ್ನೊಡನೆ ಪುತ್ತೂರಿಗೆ ಹೊರಡಲು ಸಿದ್ಧತೆ ಮಾಡು. ನಾನು ಕ್ಷೌರಮಾಡಿಸಿಕೊಂಡು ಬರುತ್ತೇನೆ.' ಎನ್ನುತ್ತ ಎದ್ದೆ. ಲೀಲೆಯ ಮುಖವು ಪ್ರಫುಲ್ಲಿತವಾಯಿತು. ತಾಯ್ಮನೆಗೆ ತೆರಳಲು ತುದಿಗಾಲಲ್ಲಿ ನಿಂತಿದ್ದ ಅವಳಿಗೆ ಅಷ್ಟೇ ಬೇಕಾಗಿದ್ದಿತು 'ಬರುವಾಗ ಒಂದು ಡಬ್ಬಿ ಸ್ನೋ ತನ್ನಿ' ಎಂಬ ಶಬ್ದಗಳು ಮೆಟ್ಟಲನ್ನು ಇಳಿಯುವಾಗ ನನ್ನ ಕಿವಿಗೆ ಬಿದ್ದವು ನಾನು ಹಿಂತಿರುಗಿ ಕಿಸೆ (ಖಾಲಿ) ತಟ್ಟುತ್ತ 'ಚಿಲ್ಲರೆ ಇಲ್ಲ ಲೀಲಾ ನನ್ನಲ್ಲಿ' ಎಂದೆ.

'ನನ್ನ ಹತ್ತಿರ ಉಂಟು ಚಿಲ್ಲರೆ' ಎಂದು ಒಳಗಿಂದ ಎಂಟಾಣೆ ಪಾವಲಿಯೊಂದನ್ನು ತಂದು ಕೊಟ್ಟಳು।

* * *

'ದಿಲ್ ಖುಷ್ ಹೆಯರ್ ಕಟ್ಟಿಂಗ್ ಸೆಲೂನ್' ನಮ್ಮೂರಲ್ಲಿ ಹೆಸರಾದ ಕ್ಷೌರದ ಅಂಗಡಿ. ನನ್ನನ್ನು ಕಂಡ ಸೂರಪ್ಪನು (ಹೆಯರ್ ಕಟ್ಟರ್) —'ಬನ್ನಿ ರಮೇಶರಾಯರೇ, ಬಹಳ ಅಪರೂಪ. ಆಗೊಳ್ಳಿ ಅಲ್ಲಿ ಚೆಯರ್ ಸ್ವೀಕರಿಸಬೇಕು' ಎಂದು ಉಪಚರಿಸಿದ. ನನಗಿಂತ ಮುಂಚಿತವಾಗಿ ನನ್ನಂತೆಯೇ ಮೂವರ್ರು ಅಲ್ಲಿ ಬಂದು ಕೂತಿದ್ದರು. ಒಬ್ಬರ ಅಲಂಕಾರಕ್ಕೆ ಆರಂಭವಾಗಿತ್ತು. ಕ್ರಮಪ್ರಕಾರ ಈ ನಾಲ್ವರಿಗೆ ಕ್ಷೌರ ಮುಗಿಯುವಾಗ ಕಡಿಮೆ ಎಂದರೆ ಎರಡುಗಂಟೆ ಬೇಕು. ಗಡಿಯಾರದಲ್ಲಿ ಗಂಟೆ ಹತ್ತಾಗಿತ್ತು. ಇನ್ನು ಊಟ ಮುಗಿಸಿ ಬರಬಹುದಿತ್ತು. ಆದರೆ ಹಿಂತೆರಳಿದಲ್ಲಿ ನಮ್ಮ ಸ್ಪರ್ಧೆಯು ಹಚ್ಚೀಲಾಗಬಹುದು. ಹೇಗೂ ಆಗಲಿ ಹಿಂದಕ್ಕೆ ಹೋಗುವುದು ಸರಿಯಲ್ಲವೆಂದು ನಿರ್ಧರಿಸಿ ಅಲ್ಲೇ ಮೇಜಿನ ಮೇಲೆ ನನ್ನ ದೃಷ್ಟಿಗೆ ಬಿದ್ದ ಅಂದಿನ ದೈನಿಕವನ್ನು ಸಮಯ ನೂಕಲು ನೋಡುತ್ತ ಕುಳಿತೆ. ಅದನ್ನು ಮೂರು ಮೂರು ಬಾರಿ ತಿರುವಿ ಓದಿ ಮುಗಿಸುವಾಗ ಅವರೆಲ್ಲರ ಕ್ಷೌರವು ಸರಿಪ್ರಕಾರ ಮುಗಿಯಿತು. ಎಣಿಸಿದಂತೆ ಗಂಟೆ ಹನ್ನೆರಡೂ ಆಯಿತು. ಇನ್ನು ನನ್ನ ಸರ್ತಿ. ಕೂಡಲೇ ಪೇಪರನ್ನೆಸೆದು ಬಿಟ್ಟು ಒಂದೇ ಲಾಗಕ್ಕೆ ಸೂರಪ್ಪನ ಎದುರಿಗೆ ಹಾರಿ ಕುಳಿತು ನನ್ನ ಸೀಟನ್ನು ಭದ್ರಪಡಿಸಿಕೊಂಡೆ. ಅವನ ರಸವತ್ತಾದ ಗಂಭೀರ ಭಾಷಣಗಳೊಂದಿಗೆ ನನ್ನ ಕ್ರಾಪು ನಾಜೂಕಾಗಿ ಕತ್ತರಿಸಲ್ಪಟ್ಟು ಮುಗಿಯಿತು. ಇನ್ನು ಉಳಿದುದು ಗಡ್ಡಮಾತ್ರ ಅಷ್ಟರಲ್ಲಿ ಅವನು ಬಾಳನ್ನು ಕೆಳಗಿಟ್ಟು 'ಈಗ ಬಂದೆ ರಾಯರೇ, ಮೂರೇ ಮಿನಿಟಿನೊಳಗೆ.' ಎಂದವನೆ ಸೆಲೂನಿನಿಂದ ಕೆಳಗಿಳಿದ.

'ಏಯ್, ಎಲ್ಲಿಹೋಗುತ್ತ ಮಹರಾಯ, ನನ್ನ ಗಡ್ಡ ತೀರಿಸಿ ಹೋಗಬಾರದಿತ್ತೆ ನಿನಗೆ, ನನಗೆ ಊಟ ಸಹಾ ಆಗಲಿಲ್ಲ ಎಂದು ಗಟ್ಟಿಯಾಗಿ ಕೂಗಿದೆ.. ಅವನು 'ಬಂದೆ; ಈಗ ಬಂದೆ. . . .' ಎನ್ನುತ್ತಾ ಎದುರಿನ ಓಣಿಯಲ್ಲಿ ಹೋಗಿ ಬಲಕ್ಕೆ ತಿರುಗಿ ಮಾಯವಾಗಿ ಬಿಟ್ಟ.

* * *

ಒಟ್ಟಿಗೆ ಇಕ್ಕಟ್ಟಿನೊಳಗೆ ಸಿಕ್ಕಿಬಿದ್ದೆ ನಲ್ಲ ನಾನು! ಕ್ರಾಪ್ ಆಗಿದೆ; ಗಡ್ಡಮಾತ್ರ ಬಾಕಿ. ಛೆ! ಎಂತಹ ಅವಸ್ಥೆ ಇದು. ಇನ್ನು ಇದನ್ನಿಟ್ಟುಕೊಂಡು ಹೊರಡುವುದೆಲ್ಲಿಗೆ? ವಾಚು ನೋಡಿದೆ. ಮುಳ್ಳು ಒಂದರ ಮೇಲಿದ್ದು ನನ್ನನ್ನು ಅಣಕಿಸುವಂತೆ ಕಂಡಿತು: ಹೊಟ್ಟೆಯಲ್ಲಿ ಬೆಳಗ್ಗಿನ ಕಾಫಿ ಚರ್ಮುರಿಗಳು ಜುರುಗುಟ್ಟುತಿದ್ದುವು. 'ಆ ಪುಣ್ಯಾತ್ಮ ಹೋಗಿ ಮೂರು ಮಿನಿಟು ಕಳೆದು ಐದಾಯಿತು. ಇನ್ನೇನು ಗತಿ?' ಎಂದು ಬಕಧ್ಯಾನ ಪರನಾಗಿ ಕುಳಿತು ಬಿಟ್ಟೆ. ಅಲ್ಲಿ ಮನೆಯಲ್ಲಿ ಲೀಲೆಯು ಸುಸಜ್ಜಿತಳಾಗಿ ಪುತ್ತೂರಿಗೆ ಹೊರಡಲು ನನ್ನನ್ನೇ ನಿರೀಕ್ಷಿಸುತ್ತಿದ್ದರೆ; ಇಲ್ಲಿ ನಾನು ಸೂರಪ್ಪನ ಆಗಮನವನ್ನು ಇದಿರ್ನೋಡುತ್ತಿದ್ದೆನು. ಎದ್ದು ಹೋಗಿ ಬಿಡಲು ಉಪಾಯವಿಲ್ಲ, ಯಾರಾದರೂ ನನ್ನನ್ನು ಹಿಡಿದು ಹುಚ್ಚರಾಸ್ಪತ್ರೆಗೆ ರವಾನಿಸಿದರೆ, ಪ್ರಾರಬ್ಧ ಎಲ್ಲಿಯೂ ಬೆನ್ನು ಬಿಡುವುದಿಲ್ಲ ಎನ್ನುವುದು ಇದಕ್ಕೇನೆ. ಇಲ್ಲದಿದ್ದಲ್ಲಿ ಅವರೆಲ್ಲರಿಗೂ ಸ್ವಸ್ಥವಾಗಿ ಕ್ಷೌರಮಾಡಿದ ಸೂರಪ್ಪ ನನ್ನನ್ನು ನಡು ನೀರಲ್ಲಿ ಕೈ ಬಿಟ್ಟು ಹೋಗಬೇಕೇ? ಎಂದು ಯೋಚಿಸುತ್ತಾ ಇದ್ದೆ.

'ಢಣ ಢಣೆಂ'ದು ಎರಡರ ಗಂಟೆಯೂ ಬಾರಿಸಿತು. ಸೂರಪ್ಪ ಈಗ ಬಂದಾನು ಎಂದು ಕಾದು ಬೇಸತ್ತೆನು. ಕೋಪದಿಂದ ಪಿತ್ತವು ನೆತ್ತಿಗೇರಿತು. 'ಯಾವುದಕ್ಕೂ ಅವನು ನನ್ನ ಕಣ್ಣಿಗೆ ಮಾತ್ರ ಬೀಳಲಿ; ಆರು ಮಾಸಗಳ ಫಾಸಿಯಾದರೂ ಪರವಾಯಿಲ್ಲ ಅವನ ತಲೆ ಬುರುಡೆ ಜಪ್ಪಿ. . . . ಹೋ ಬಂತಯ್ಯ ಸೂರಪ್ಪನ ಸವಾರಿ?

* * *

ಯುದ್ಧವನ್ನು ಗೆದ್ದು ಬಂದ ವಿಜಯೀ ವೀರನ ಉತ್ಸಾಹದಿಂದ ಸೂರಪ್ಪ ಒಳ ಪ್ರವೇಶಿಸಿದ. ನಾನು ಮೇಲೇರುತ್ತಿದ್ದ ಕೋಪವನ್ನು ಒತ್ತಿ ನುಂಗಿಕೊಂಡೆ (ನುಂಗದೆ ನಿರ್ವಾಹವಿಲ್ಲ) 'ಎಲ್ಲಿ ಹೋಗಿದ್ದೆ ಸೂರಪ್ಪ?' ಎಂದೆ.

'ಒಂದು ವಸೂಲಿ ಇತ್ತು ನೋಡಿ, ನನ್ನಿಂದಾಗಿ ನಿಮಗೆ ಸ್ವಲ್ಪ ಲೇಟಾಯಿತಲ್ಲವೆ? ಕ್ಷಮಿಸಿ' ಎನ್ನುತ್ತ ಗಡ್ಡಕ್ಕೆ ಸಾಬೂನು ಹಚ್ಚಲು ತೊಡಗಿದ.

'ಎಂಥಾ ವಸೂಲಿಯೋ ಅದು ಸುಟ್ಟು ಹೋದದ್ದು; ಅಷ್ಟು ಅವಸರವೇ ನಿನಗೆ!'

"ನೋಡಿ ರಾಯರೇ ಆ ಶಿಂಗ್ಲೀಕ ಪ್ರಭುಗಳಿಂದ 'ಬಿಡ್ಡಿ'ನ ಬಾಬಿನಲ್ಲಿ ನನಗೆ ಸ್ವಲ್ಪ ಹಣ ಬರುವುದಿತ್ತು. ನಿನ್ನೆ ರಾತ್ರಿ ಅವರ ಹತ್ತಿರ ಚಿಲ್ಲರೆ ಇರಲಿಲ್ಲ—ವಂತೆ. ಈ ಹೊತ್ತು ಮಧ್ಯಾಹ್ನ ಸರೀ ಎರಡು ಗಂಟೆಗೆ ಬರಲಿಕ್ಕೆ ಹೇಳಿದ್ದರು. ಆದ್ದರಿಂದ ಸ್ವಲ್ಪ ಉಪದ್ರವಾಯಿತು." 'ಬಿಡ್' ಈ ಶಬ್ದವನ್ನು ಕೇಳುತ್ತಲೆ ನನ್ನ ಕಿವಿಗಳು ಥಕ್ಕನೆ ನೆಟ್ಟಗಾದುವು. "ಏನು ನಮ್ಮಲ್ಲಿಗೂ ಬಂದಿತೇ ಆ 'ಬಿಡ್'? ಯಾರು ತರಿಸಿದ್ದು ಅದನ್ನು ನಮ್ಮ ಊರಿಗೆ?' ಎಂದು ಕುತೂಹಲ ಆಶ್ಚರ್ಯಗಳಿಂದ ಕೇಳಿದೆ.

"ನೀವೆಲ್ಲಿರುವಿರಿ? ಐದಾರು ತಿಂಗಳಾಯಿತು ಅದು ಬಂದು ನಮ್ಮೂರಿಗೆ. ಅವರೇ ತರಿಸಿದ್ದು, ಸಿಂಗಲೀಕ ಪ್ರಭುಗಳು."

"ಹೌದೋ ಸೂರಪ್ಪ, ಅದು ಬೊಂಬಾಯಿಯಲ್ಲಿತ್ತು. ಗವರ್ನಮೆಂಟಿಗೆ ಇದು ತಿಳಿದಿಲ್ಲವೆ? ಇದೂ ಕೂಡ ಒಂದು ಬಗೆಯ ಜುಗಾರಿಯಂತೆ."

"ಹ್ಹ ಹ್ಹ? 'ಸರ್ವತ್ರ ಬಿಡ್ ಮಯಂ ಜಗತ್' ಆಗಿಬಿಟ್ಟಿದೆ ಅಂತೀನೆ! ನೀವು ಏನೆಂತ ತಿಳ್ಕೊಂಡಿದ್ದೀರಿ."

"ಅಹುದೇ, ಅಷ್ಟೂ ಪ್ರಚಾರವಾಗಿ ಬಿಟ್ಟಿದೆಯೋ ಇಲ್ಲಿ! ಆದರೆ, ನೀನೆಷ್ಟು ಕಟ್ಟಿದ್ದೆ ನಿನ್ನೆ?"

"ನಿನ್ನೆ ನಾನು ೬ಕ್ಕೆ ನಾಲ್ಕಾಣೆ ಕಟ್ಟಿದ್ದೆ. ಅದೇ ಬಂತು ಸುಮಾರು ಎರಡು ಮೂರು ದಿನಗಳ ಲಾಗಾಯಿತು ನಾನು ಕಟ್ಟಿದ ನಂಬರೇ ಬರುತ್ತದೆ. ಅದು ಕೂಡ ಒಂದು 'ಚಾನ್ಸು' ನೋಡಿ (ಕಿಸೆಯಿಂದ ಹಣವನ್ನು ತೆಗೆದು) ಇದು ನಿನ್ನೆ ಸಿಕ್ಕಿದ ೨॥ ರೂಪಾಯಿ. ಒಂದಕ್ಕೆ ೯ ಪಾಲು. ಇದೇ ಪ್ರಕಾರ ಎರಡು ಮೂರು ದಿನಗಳಿಂದ ಸಿಗುತ್ತಾ ಇದೆ. ಈ 'ಬಿಡ್' ಆಡಿ ಈ ಕಷ್ಟಕಾಲದಲ್ಲಿ ನಮ್ಮಂತಹ ಬಡವರು ಬದುಕಿಕೊಂಡರು ಎಂದೇ ಹೇಳಬೇಕು. ನಮ್ಮ ದೇಶಕ್ಕೆ ಇದೊಂದು ಭಾಗ್ಯ (?) ಸೂಚನೆ! ಅಲ್ಲವೆ ರಾಯರೇ?"

ನಾನು ನಿರುತ್ತರನಾಗಿ ಕೌತುಕದಿಂದ ಅವನ ಮುಖವನ್ನೇ ನೋಡುತಿದ್ದೆ. "ನೀವೇಕೆ ಒಂದು 'ಚಾನ್ಸು' ಪರೀಕ್ಷೆ ಮಾಡಿ ನೋಡಬಾರದು?" ಎಂದು ಮುಗುಳ್ನಗೆ ಬೀರಿದ ಸೂರಪ್ಪ. ನಾನು ನನ್ನ ಕಿಸೆಯೊಳಗಿದ್ದ ಪಾವಲಿಯನ್ನು ಹೊರತೆಗೆದು:

"ನೋಡು ಸೂರಪ್ಪ, ನನ್ನಲ್ಲಿ ಈ ಎಂಟಾಣೆ ಪಾವಲಿ ಒಂದೇ ಇರುವುದು. ಇದರಲ್ಲಿ ನಾಲ್ಕಾಣೆ ಕಟ್ಟುವ ಆಗದೇ" ಎಂದೆ.

"ಛೆ, ನಾಲ್ಕಾಣೆ ಏತಕ್ಕೆ? ಆ ಎಂಟಾಣೆಯನ್ನೇ ಕಟ್ಟುವ. ಒಂದೇ ಸಲಕ್ಕೆ ೪॥ ರೂ. ಸಿಗುತ್ತದೆ. ನೋಡಿ, ಇದೇ ಪ್ರಕಾರ ಆಡಿ ಎಷ್ಟು ಮಂದಿ ದೊಡ್ಡವರಾದರೆಂದು ಗೊತ್ತಿದೆಯೇ ನಿಮಗೆ? ಬಂಟ್ವಾಳದವರೊಬ್ಬರು ಒಂದು ದೊಡ್ಡ ಆಸ್ತಿಯನ್ನೇ ತೆಗೆದು ಕೊಂಡರು! ಕಾರ್ಕಳದಲ್ಲಿ ಗೆಣಸು ಮಾರುವ ಬಾಯಿಯೊಬ್ಬಳು ಮೂರೆಮ್ಮೆಗಳನ್ನು ಕಟ್ಟಿದಳಂತೆ! ಉಡುಪಿಯ ಒಬ್ಬ ಸಾಹುಕಾರರು ಭಾರೀ ಭಂಡಸಾಲೆಯನ್ನು ತೆರೆದರಂತೆ ಈ 'ಬಿಡ್ಡಿ'ನ ಹಣದಿಂದ! ನಾವೂ ಸಹ ಯಾತಕ್ಕೆ ಐಶ್ವರ್ಯವಂತರಾಗಬಾರದು?"

"ಹಾಗಾದರೆ ಈ ಪಾವಲಿಯನ್ನು ಯಾವ ನಂಬರಿಗೆ ಕಟ್ಟುವುದು?" ನಾನು ಮತ್ತು ಸೂರಪ್ಪ ಬಹು ಹೊತ್ತು ಯೋಚಿಸಿದೆವು. ನಾನು ಹೇಳಿದ ಅಂಕೆಯನ್ನು ಸೂರಪ್ಪ ಒಪ್ಪಲಿಲ್ಲ. ಅವನಿಗೆ ಹೊಳೆದ ಅಂಕೆ ನನಗೆ ಸರಿತೋರಲಿಲ್ಲ ಕೊನೆಗೆ ಅಲ್ಲೇ ಎದುರಿಗೆ ಎರಡು ಹೋತಗಳ ಗುದ್ದಾಟವು ಹಠಾತ್ತಾಗಿ ಸೂರಪ್ಪನ ದೃಷ್ಟಿಗೆ ಬಿತ್ತು. ಅವೆಷ್ಟು ಸಾರಿ ತಮ್ಮ ತಲೆಗಳನ್ನು ತಾಟಾಡಿಸಿಕೊಳ್ಳುವವೋ, ಅದನ್ನು ಎಣಿಸಿ, ಅದೇ ನಂಬರಿಗೆ ನನ್ನ ಪಾವಲಿಯನ್ನು ಕಟ್ಟುವುದೆಂದು ನಮ್ಮ ನಿರ್ಧಾರವಾಯಿತು. ಕ್ರಮವಾಗಿ ೯ ಬಾರಿ ಘರ್ಷಣೆ ನಡೆದು ಅದರಲ್ಲಿ ಒಂದು ಆಡು 'ಮೇಂ' ಎಂದು ಕೂಗಿ ತಪ್ಪಿಸಿಕೊಂಡು ಓಡಲು ಇನ್ನೊಂದು ಅದನ್ನು ಹಿಂಬಾಲಿಸಿತು. "ಹೋ, ಒಂಭತ್ತು ಖಂಡಿತ ಬರುತ್ತದೆ ಈ ಹೊತ್ತು!" ಎಂದು ಸೂರಪ್ಪ ಉದ್ಗಾರವೆತ್ತಿದ. ನಾವಿಬ್ಬರೂ ಪ್ರಭುಗಳ ಅಂಗಡಿಗೆ ಹೋಗಿ 'ಓಪನಿಂಗ್ ೯'ಕ್ಕೆ ನಮ್ಮ ರುಸುಂ ಕಟ್ಟಿದೆವು. ಅಂದು ಸೂರಪ್ಪನಿಗೆ ಒತ್ತಾಯದಿಂದ 'ಅಂಬಾಭವನ' ಕಾಫಿ ಹೊಟೆಲನ್ನು ಮೂರು ಬಾರಿ ಸಂದರ್ಶಿಸಿದ್ದೆವು ಎಂಬ ವಿಷಯವಂತೂ ಮರೆಯತಕ್ಕುದಲ್ಲ. ಪುನಃ ರಾತ್ರಿ ೧೦ಕ್ಕೆ ಅಂಬಾಭವನದ ಎದುರಲ್ಲಿ ನಾವು ಸಂಧಿಸುವುದೆಂದೂ ಗೊತ್ತಾಗಿ ಮನೆಗೆ ಹೊರಟೆ.

*

"ಹೊತ್ತು ಸಾಕಾಯ್ತೇ ರಾಯರೇ ನಿಮ್ಮ ಕ್ಷೌರಕ್ಕೆ? ಸೂರ್ಯ ಮುಣುಗಲಿಕ್ಕೆ ಇನ್ನೂ ಸ್ವಲ್ಪ ಸಮಯವಿದೆಯಲ್ಲ; ಇಷ್ಟು ಬೇಗನೆ ಬಂದು ಬಿಟ್ರೇ" ಲೀಲೆಯ ಸಂಜೆಯ ನುಡಿಗಳು. ನನ್ನ ವ್ಯೂಹ ವಿಚಾರ ಅವಳಿಗೇನು ಗೊತ್ತು? ಅವಳನ್ನು ನೋಡಿ ಗಂಭೀರವಾಗಿ ನಗುತ್ತ ಶರ್ಟ್ ತೆಗೆದಿಟ್ಟು ಜಗಲಿಯ ಚಿಟ್ಟೆಯಲ್ಲಿ ಕುಳಿತೆ. ನನ್ನನ್ನು ಹಿಂಬಾಲಿಸಿ ಬಂದ ಅವಳು "ಎಲ್ಲಿದೆ ಸ್ನೋ ಡಬ್ಬಿ? ಇತ್ತ ಕೊಡಿ," ಎಂದಳು. ಮುಖವೆಂಬುದು ಹಿಡಿ ಚಿತ್ರವಿಟ್ಟಲ್ಲಿ ಮುಡಿ ಅರಳೊಡೆವಂತಿತ್ತು.

"ನಿನಗೆ ನಾಳೆ ಸ್ನೋ ತರೋಣವಂತೆ ಲೀಲಾ, ಬಹಳ ಊಜುಸ್ನೋ. ಈ ಹೊತ್ತು ನಿನ್ನ ಪಾವಲಿ ನಾನು ಬಿಡ್ಡಿಗೆ ಕಟ್ಟಿ ಬಂದಿದ್ದೇನೆ" ಎಂದೆ ನಗುತ್ತ.

"ಹಾಳಾಯ್ತು ನಿಮ್ಮ 'ಬಿಡ್ ಗಿಡ್' ಎಲ್ಲಾ; ನನಗೆ ಸ್ನೋ ಈಗ್ಲೆ ಬೇಕು"

"ಇಲ್ಲಿ ಕೇಳು ನಿನ್ನ ಎಂಟಾಣೆಗೆ ಈ ರಾತ್ರಿ $4\frac{1}{2}$ ರೂಪಾಯಿ ಸಿಗುತ್ತದೆ, ಅದರಿಂದ ಸ್ನೋ ಪೌಡರು ಎಲ್ಲಾ ತರುವ ಆಗದೇ?"

"ರಾತ್ರಿ ನಾಲ್ಕೂವರೆ ರೂಪಾಯಿ ಸಿಕ್ಕಲು ಯಾರೊಟ್ಟಿಗೆ ಸೇರಿ ಎಲ್ಲಿ ಕನ್ನ ಹೊಡೆಯಬೇಕೆಂದಿರುವಿರಿ? ಮತ್ತೆ ಹೇಗಪ್ಪ ನಿಮಗೆ ಹಣ ಸಿಗುವುದು ರಾತ್ರಿ? ಸೀರೆಯ ಸೆರಗನ್ನು ಬಾಯಿಗೆ ಅಡ್ಡ ಹಿಡಿದು ನಕ್ಕಳು.

"ನಿನಗೇನು ಗೊತ್ತು ಆ ವಿಚಾರ? ರಾತ್ರಿಗೆ 'ಬಿಡ್ಡಿನ' ನಂಬರ್ ಬರುತ್ತದೆ. ಅದರಲ್ಲಿ ಸಿಗುವುದು ರೂಪಾಯಿ.

"ಅಯ್ಯೋ! ಸರ್ವನಾಶ, 'ಬಿಡ್' ಆಡುವಿರಾ ನೀವು? ನಾನೇನು ಮಾಡ್ಲಿ ಇನ್ನು?" ಲೀಲೆ ಗಾಬರಿಯಾದಳು.

"ಏನು ಏನು ಲೀಲಾ ಆಡಿದರೆ?" ಎಂದು ಕೇಳಿದೆ.

'ಇಲ್ಲ—ಖಂಡಿತವಾಗಿಯೂ ನೀವಾಡ್ಬಾರದು. ಅದನ್ನಾಡಿದವರಿಗೆ ಮನೆಮಾರಿಲ್ಲವಂತೆ! ಅವರ ಹೆಂಡ್ರು ಮಕ್ಕಳ ಕಿವಿ ಮೂಗಿನ ನಗನಟ್ಟು ಎಲ್ಲಾ ಆ 'ಬಿಡ್ಡಿ'ಗೆ ಆಹುತಿಯಾಗುವುದಂತೆ. ನೋಡಿ ಆ ನಾಗಮ್ಮನ ಅಳಿಯ ನಾರಾಯಣ 'ಬಿಡ್' ಆಡಲು ಹಣ ಸಿಕ್ಕದ್ದಕ್ಕೆ ಕಡೆಗೆ ಪೆಟ್ಟಿಗೆ ಮುರಿದು ಹಣ ಎಬ್ಬಿಸಿಕೊಂಡು ಪಲಾಯನ ಈಗವನ ಪತ್ತೆಯೇ ಇಲ್ಲವಂತೆ! ಬೇಡ ನಿಮಗೆ ಈ ಬುದ್ಧಿ, ನೀವಾಡಿದ್ರೆ ನನ್ನ ಕೊರಳಾಣೆಯಿದೆ. ಹ್ಞಾ? ಬೇಡಾ!'

'ಏ ಹುಚ್ಚೀ, ಇದನ್ನಾಡಿ ಎಷ್ಟು ಮಂದಿ ಬದುಕಿಕೊಂಡಿದ್ದಾರೆ ಗೊತ್ತೇ ಇಲ್ಲಿ? ನಿರುದ್ಯೋಗಿಗಳಿಗೆ ಇದು ಒಂದು ಧಂದೆಯೇ (ಕೆಲಸ) ಆಗಿ ಬಿಟ್ಟಿದೆಂತೆ. ಈಗ ಒಂದಲ್ಲ ಒಂದು ನಂಬರಿನಲ್ಲಿ ಸಿಕ್ಕಿಯೇ ಬಿಡುವುದಂತೆ. ನೋಡು ಆ ಸೂರಪ್ಪ. . . .' ಎಂದು ಮಧ್ಯಾಹ್ನ ನಡೆದ ಎಲ್ಲಾ ವಿಷಯವನ್ನು ವಿವರವಾಗಿ ತಿಳಿಸಿದೆ.

'ಅದೇನು ಹಾಗೆ ಒಂದಕ್ಕೆ ಎಂಭತ್ತು ಪಾಲು ಹಿಂದೆ ಕೊಡಲಿಕ್ಕೆ ಅವರಿಗೆ ಅಷ್ಟೂ ಹೆಚ್ಚಾಗಿದೆಯೋ ಹಣ?'

'ಛೆ, ಛೆ, ಈ ಜಾತಿಗೆ ಯಾರು ಮಂಡೆ ಹೊಡಕೊಳ್ಳಬೇಕು ಹೇಳಹೋಗಿ. ಇವರಿಗೆ ಹೆಚ್ಚು ವಿದ್ಯೆ ಕಲಿಸಬಾರದು; ಪುರುಷ ಸಮಾನ ಸ್ವಾತಂತ್ರ್ಯ ಕೊಡಬಾರದು' ಎನ್ನುವುದು ಇದಕ್ಕೇನೆ. ಒಂದು ವಿಷಯ ತಿಳಿಸಿದರೆ ಸೈ; ಶುರುವಾಯಿತು ವಕೀಲರ (Cross) ಅಡ್ಡ ಸವಾಲಿಗೆ. 'ಅದೇನು ಹಾಗೆ; ಇದೇನು ಹೀಗೆ ಎಂದು.'

'ಬೇಡ, ಬೇಡ ನೀವು ಹೇಳೋದು; ನನ್ಗೊತ್ತಿದೆ ಅದರ (ಬಿಡ್ಡಿನ) ಸುದ್ದಿ ಇಂಥಾದ್ದೇ ಅಂತ' ಎನ್ನುತ್ತ ಮೋರೆ ತಿರುಪಿಕೊಂಡು ಸಿಡುಕಿನಿಂದ ಎದ್ದು ಹೋಗಲುದ್ಯುಕ್ತಳಾದಳು.

"ಸ್ವಲ್ಪ ನಿಲ್ಲು ಮಹರಾಯಗಿತ್ತೀ" ಎಂದವಳ ಕೈ ಹಿಡಿದು ಜಗ್ಗಿ "ಏನು ನಿನ್ನ ಪಾವಲಿ ಹೋಯ್ತೆಂದು ಇಷ್ಟು ಸಿಟ್ಟೇ? ತಗೋ ಸಾಯಂಕಾಲಕ್ಕೆ ನಾಲ್ಕೂವರೆ ರೂಪಾಯಿ! ಅದರಲ್ಲೂ ನಮ್ಮ ಅದೃಷ್ಟಕ್ಕೆ 'ಡಬ್ಲಿಂಗ್' ಎದ್ದರೆ—ರೂಪಾಯಿ

(೬ನೇ ಪುಟಕ್ಕೆ ಮುಂದುವರಿದಿದೆ)

ಸಮರ ಭೂಮಿಯ ಸಂಚಾರ

"ಇಂದಿನ ಸಂಗ್ರಾಮದಲ್ಲಿ ಅಕ್ಷಪಕ್ಷವನ್ನು ಸೋಲಿಸಿ ತಮ್ಮ ಸಾಮ್ರಾಜ್ಯ ಸ್ಥಾಪನೆ ಮಾಡಬಹುದೆಂದು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಯೋಜನೆ ಕೈಕೊಂಡಿದ್ದಾರೆ. ಇದಕ್ಕಾಗಿ ಸಮಿತಿಗಳೂ ನೇಮಕವಾಗಿವೆ. ವಿವಿಧ ಸಾಮ್ರಾಜ್ಯ ಭಾಗಗಳ, ಸಾಮ್ರಾಜ್ಯಾಂತರ್ಗತ ಭಾರತದಂಥಾ ವಸಾಹತ್ತುಗಳ ಹಾಗೂ ಬ್ರಿಟನಿನ ಸಂಬಂಧದ ರೂಪರೇಷೆ ಈ ಸಮಿತಿ ಕೈಕೊಂಡಿದೆ." ಹೀಗೆಂದು ಪ್ರಖ್ಯಾತ ನೀಗ್ರೋ ಲೇಖಕ ಜಾರ್ಜ್ ... ಅವರು ಒಂದು ಲೇಖನದಲ್ಲಿ ಬರೆಯುತ್ತಾರೆ. ಅವರು ಮತ್ತೆ ಹೀಗೆಂದಿರುವರು:

"ಚರ್ಚಿಲ್ ಎದೆ ಬಿಚ್ಚಿದ್ದಾರೆ: ಬ್ರಿಟಿಷ್ ಸಾಮ್ರಾಜ್ಯದ ದಿವಾಳಿ ಮಾಡಲು ನಾನು ಪ್ರಧಾನ ಮಂತ್ರಿಯಾಗಲಾರೆನೆಂದು. ಹಿಂದಿನ ಮಂತ್ರಿಗಳಂತೆಯೇ ಅವರೂ ಕೂಡಾ. ಬಾಲ್ಡ್‌ವಿನರೂ ಹಿಂದೊಮ್ಮೆ ಹೇಳಿದ್ದರು: 'ಬ್ರಿಟಿಷ್ ಸಾಮ್ರಾಜ್ಯವು ಮಾನವ ಜನಾಂಗದುತ್ಕರ್ಷಕ್ಕಾಗಿ ದೇವದತ್ತವಾದ ಒಂದು ಸಾಧನ' ಎಂದು.

ಬ್ರಿಟನು ಅಮೇರಿಕ ಘರ್ಷಣೆ?

"ಸಾಮ್ರಾಜ್ಯವಿಲ್ಲದಿದ್ದರೆ, ಬ್ರಿಟನು ಕೇವಲ ೪೬ ಮಿಲಿಯ ಜನರಿಂದ ಕೂಡಿದ ಒಂದು ದ್ವೀಪವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಜಗತ್ತಿನಲ್ಲಿ ಇಂಗ್ಲೆಂಡಿಗೆ ಒಂದು ಪ್ರಾಧಾನ್ಯತೆ ಇರುವುದಾದರೆ ಅದು ಅದರ ಸಾಮ್ರಾಜ್ಯದಿಂದ; ಬ್ರಿಟಿಷ್ ಸಮ್ರಾಟ ಕಿರೀಟದಲ್ಲಿ ಶೋಭಿಸುವ ಉಜ್ವಲ ರತ್ನದಂತಿರುವ ಭಾರತದಿಂದ. ಆದ್ದರಿಂದ ಯುದ್ಧಾನಂತರ ಯಾವುದೇ ಸುಧಾರಣೆ ಆಗುವುದಿದ್ದರೂ ಕೂಡಾ, ಅದು ಯಾವುದೇ ಮಂತ್ರಿಮಂಡಳವಿರಲಿ, ತನ್ನ ಮಾರಾಟದ ಸಂತೆ ಹಾಗೂ ಜನಶಕ್ತಿಯ ಗಣಿಯಾಗಿರುವ ಸಾಮ್ರಾಜ್ಯಗಳನ್ನು ಬಿಡಲಾರದು. ಯುದ್ಧಾನಂತರ ಅಮೇರಿಕವೂ ಪ್ರಧಾನ ಸಾಮ್ರಾಜ್ಯವಾಗಿ ಬ್ರಿಟನಿಗೆ ಒಂದನೇ ಶತ್ರುವಾಗಿ ಪರಿಣಮಿಸಲಿರುವುದರಿಂದ ಇದು ಪ್ರಾಮುಖ್ಯ ವಿಚಾರವಿದೆ.

"ಯುದ್ಧಕ್ಕಿಂತ ಮೊದಲು ಬ್ರಿಟನಿಗೆ ವಿದೇಶ ವ್ಯಾಪಾರದಿಂದ ವರ್ಷಕ್ಕೆ ೭೦೦ ಮಿಲಿಯ ಪವನು ಕರ ಬರುತಿತ್ತು. ಇವು ವಿಶೇಷವಾಗಿ ಆಹಾರ ಸಾಮಗ್ರಿಗಳ ಕಚ್ಚಾಮಾಲು ರೂಪದಲ್ಲಿ ಬರುತಿತ್ತು. ಈಗ ಯುದ್ಧ ಕಾಲವಾಗಿ ಹಲವು ಉದ್ಯೋಗಗಳು ಕೈ ಬಿಟ್ಟಿತಾದರೂ ತನ್ನ ವಸಾಹತು ಸಾಮ್ರಾಜ್ಯವನ್ನು ಇನ್ನಷ್ಟು ಬಲಪಡಿಸಲು ಬ್ರಿಟನು ಪ್ರಯತ್ನಿಸದಿರಲಾರದು.

"ಯುದ್ಧದ ಕೊನೆ ಸಮೀಪಿಸಿದಂತೆ ಸಾಮ್ರಾಜ್ಯಲಾಲಸೆಯಿಂದ ಬ್ರಿಟನು ಅಮೇರಿಕಗಳೊಳಗೆ ಸ್ಪರ್ಧೆ ದಿನೇ ದಿನೇ ಹೆಚ್ಚುತ್ತಿದೆ. ಬ್ರಿಟನು ಅಮೇರಿಕಗಳ ಭಂಡವಾಳಗಾರರು ಈ ಬೊಬ್ಬೆ ಎಬ್ಬಿಸಿದ್ದಾರೆ. ಬ್ರಿಟನು ಅಮೇರಿಕಗಳ ನೀತಿಯಲ್ಲಿ ಪ್ರಾಮುಖ್ಯವಾದ ಭಿನ್ನಮತವಿರುವುದರಿಂದ ಈ ಉಭಯ ರಾಷ್ಟ್ರಗಳು ಯುದ್ಧಾನಂತರ ಸ್ನೇಹದಿಂದಿರುವುದು ಅಸಂಭವ, ಇದು ಅಮೇರಿಕದ ವಾಣಿಜ್ಯ ಸಂಘದ ಅಧ್ಯಕ್ಷ ಜಾನ್‌ಸನರ ಮಾತು. ವೆಂಡಲ್ ವಿಲ್ಕಿಯವರೂ ಕೂಡಾ ಈ ಸ್ಪರ್ಧೆಗೆ ನಿರಂತರ ಪ್ರೋತ್ಸಾಹ ಕೊಡುವವರೇ ಆಗಿದ್ದಾರೆ. ಲೋಕದ ಸಂತೆಯಲ್ಲಿ ಎಲ್ಲರ ಸಾಮಾನುಗಳೂ ತಡೆಯಿಲ್ಲದೆ ಬಂದು, ಯೋಗ್ಯವಿರುವುದಕ್ಕೆ ಹೆಚ್ಚಿನ ಪ್ರಚಾರ ಸಿಗಲಿ ಎಂಬುದು ಅವರ ಅಭಿಪ್ರಾಯ. ಆದರೆ ಬ್ರಿಟಿಷರು ಇದಕ್ಕೆ ಸಮ್ಮತಿಸುವುದಿಲ್ಲ. ವೆಂಡಲ್ ವಿಲ್ಕಿ 'ಒಂದು ವಿಶ್ವ ಜಗತ್ತು' ಎಂಬ ಪುಸ್ತಕದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ.

"ಇದರಿಂದಾಗಿ ಬ್ರಿಟಿಷರ ನೊಗದಿಂದ ಬೇರೆಯಾದ ರಾಷ್ಟ್ರಗಳು ಜಗತ್ತಿನ ಸಂತೆಯಲ್ಲಿ ಬದುಕಬೇಕಾದರೆ ತಮ್ಮ ಉದ್ಯಮ ಹೆಚ್ಚಿಸಲೇಬೇಕು ಹೀಗೆ ಮಾಡಬೇಕಾದರೆ ಅಮೇರಿಕದ ಸಹಾಯಬೇಕು. ಇಂದು ಅಮೇರಿಕಕ್ಕೆ ಆರ್ಥಿಕ ಹಾಗೂ ಔದ್ಯೋಗಿಕ ಶಕ್ತಿಯಿದೆ. ೧೯ನೇ ಶತಮಾನದಲ್ಲಿ ಬ್ರಿಟನು ಯಾವ ಸ್ಥಾನದಲ್ಲಿತ್ತೋ ಇಂದು ಅಮೇರಿಕಾ ಹಾಗೆ ಇದೆ.

ದಳಿತ ರಾಷ್ಟ್ರಗಳಿಗೆ ಗತಿಯಿಲ್ಲ

"ಹೀಗಿದ್ದರೂ ಬ್ರಿಟನು ಅಮೇರಿಕಗಳಲ್ಲಿ ಸೌಹಾರ್ದವಿಟ್ಟುಕೊಳ್ಳುವುದು ಸಾಧ್ಯವೆಂದು ಕೆಲವರ ಮತ. ಬ್ರಿಟನು ಅಮೇರಿಕಗಳು ಒಂದಾಗಿ ತಮ್ಮ ಸಾಮ್ರಾಜ್ಯಲಾಲಸೆ ತೀರಿಸಲು ಪತಿತ ರಾಷ್ಟ್ರಗಳ ಸುಲಿಗೆ ಮಾಡುವುದು ಸಾಧ್ಯವಿದೆ. ಈ ಅಭಿಪ್ರಾಯವನ್ನು ಆಫ್ರಿಕಾ ಮಂತ್ರಿ ಸ್ಮಟ್ಸರು ತಿಳಿಸಿದ್ದಾರೆ. ಹೀಗೆ ಆದರೂ, ಬ್ರಿಟನು ಮಾತ್ರ ಹಾಂಗ್‌ಕಾಂಗ್, ಭಾರತ, ಬರ್ಮಾಗಳು ತನ್ನ ಕೈಯಲ್ಲಿಯೇ ಇರಬೇಕೆಂದು ಹಠ ಸಾಧಿಸದಿರದು. ಮೇಲೆ ಹೇಳಿದ ರೀತಿಯಿಂದ ಒಂದು ಪಕ್ಷ ಬ್ರಿಟನು ಅಮೇರಿಕಗಳೊಳಗೆ ಘರ್ಷಣೆ ಹುಟ್ಟದಿರಲೂ ಬಹುದು. ಇಂದು ಲೋಕದ ಸಂತೆಯಲ್ಲಿ ಎಲ್ಲಾ ವಸ್ತುಗಳಿಗೂ ಪ್ರವೇಶ ಸಿಕ್ಕಿ ತಮ್ಮ ಉತ್ಕೃಷ್ಟತೆಯಿಂದ ಮಾರಾಟವಾಗಲಿ ಎಂದು ಅಮೇರಿಕವನ್ನೂ ಸಮಾಧಾನ ಪಡಿಸಬಹುದು. ಹೀಗಾದರೆ ಅಮೇರಿಕಕ್ಕೂ ಬ್ರಿಟಿಷರಿಗೂ ಲಾಭ ಬರುವುದು.

"ಆ ಮೇಲೆ ಅಲ್ಲಲ್ಲಿನ ರಾಷ್ಟ್ರದವರನ್ನು ಸಮಾಧಾನಗೊಳಿಸಲು ಅವರಿಗೆ ಕೆಲವು ಸುಧಾರಣೆ ಕೊಡಬಹುದು. ಶಾಸನಸಭೆಗಳಲ್ಲಿ ಒಂದೆರಡು ಜಾಗ ಹೆಚ್ಚಿಸಬಹುದು. ದಕ್ಷಿಣ ಆಫ್ರಿಕದವರಾದ ನಮಗೆ ಎಂದಿಗೂ ಪೂರ್ಣ ಅಧಿಕಾರ ಕೊಡಬಾರದು; ಅಲ್ಲಿ ಗವರ್ನರರು ಇದ್ದೇ ಇರುವರು. ವಿಶಾಲ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತಂದಿರುವುದಾಗಿ ತೋರಿಸಿದರೂ ಫಲಿತಾಂಶ ಉತ್ತಮವಾಗಲಾರದು. ಗವರ್ನರರ ನಿರ್ಧಾರವೇ ಕೊನೆಯದಾಗುವುದು. ಜನತೆಯ ಆಕಾಂಕ್ಷೆ ಮೂಲೆಗೆ ತಳ್ಳಲ್ಪಡುವುದು.

"ವಸಾಹತ್ತುಗಳ ವಿಚಾರದ ಪ್ರಚಾರಕರಾದ ಲಾರ್ಡ್ ಹೈಲೆಯವರು, ವಸಾಹತ್ತುಗಳ ವಿಚಾರ ಮಾತನಾಡುತ್ತಾ, ಇಂದು ಅಧೀನದಲ್ಲಿರುವವರ ಕುರಿತು ವಿಚಾರಿಸಲು ರೀಜನಲ್ ಕೌನ್ಸಿಲ್ ನೇಮಿಸಬೇಕು, ಈ ಕೌನ್ಸಿಲುಗಳ ಅಧೀನದಲ್ಲಿರುವ ಭಾಗಗಳ ಆರ್ಥಿಕ ವಿಚಾರ ಮಾಡಿ ಅವುಗಳ ಅಭಿವೃದ್ಧಿ ಕುರಿತು ಆಲೋಚಿಸಬೇಕು, ಎಂದಿದ್ದಾರೆ. ಆದರೆ ಈ ಸಮಿತಿಗಳನ್ನು ಯಾರು ನೇಮಿಸುವವರು? ಎಲ್ಲಾ ಬ್ರಿಟಿಷ್ ವ್ಯಾಪಾರ ಪ್ರಮುಖರು. ಈ ಸಮಿತಿಯ ಅಭಿಪ್ರಾಯವೇನೆಂದು ಈ ನೇಮಕದಿಂದಲೇ ಗೊತ್ತಾಗುವುದು. ವಸಾಹತ್ತುಗಳ ಜನರ ಶೋಷಣೆಯೇ ಆಗುವುದು.

"ಈ ಯೋಜನೆಗೆ ಹಣ ಸಹಾಯ ಮಾಡುವವರು ಅಮೇರಿಕನರು. ಬ್ರಿಟಿಷರಲ್ಲಿ ರಾಜಕೀಯ ಹಿಡಿತವುಳಿಯುವುದು. ಇದೇ ಬ್ರಿಟನ್ ಅಮೇರಿಕಗಳ ಯುದ್ಧಾನಂತರದ ಪುನರ್ಯೋಜನೆ. ಬ್ರಿಟಿಷ್ ಕೂಲಿಗಾರ ಪಕ್ಷ ಈ ಯೋಜನೆಗೆ ಬೆಂಬಲ ಕೊಡುತ್ತದೆ. ಬ್ರಿಟಿಷ್ ಕೂಲಿಗಾರ ಪಕ್ಷಕ್ಕೂ ಟೋರಿ ಪಕ್ಷಕ್ಕೂ ಬಾಯಲ್ಲಿ ಏನೇ ಹೇಳಿದರೂ ಕೆಲಸದಲ್ಲಿ ಯಾವ ಭೇದವೂ ಇಲ್ಲ."

ಇತರ ಸುದ್ದಿಗಳು

ಉತ್ತರ ಇಟಲಿಯ ಕರಾವಳಿ ಪ್ರದೇಶವನ್ನು ಖಾಲಿಮಾಡಲಾಗುತ್ತಿದೆಯೆಂದು ಜರ್ಮನ್ ಸುದ್ದಿ ಸಂಸ್ಥೆ ಸಾರಿದೆ. ಮಿತ್ರರು ಸೈನಿಕರನ್ನು ಇಳಿಸದಂತೆ ಈ ರೀತಿಯ ಮುಂಜಾಗ್ರತೆ ವಹಿಸಲಾಗುತ್ತಿದೆಯಂತೆ. ಪಶ್ಚಿಮ ಇಟಲಿಯ ಎರಡು ಆಯಕಟ್ಟಿನ ಸ್ಥಳಗಳಲ್ಲಿ ಹಾಗೂ ಆಡ್ರಿಯಾಟಿಕ್ ಕರಾವಳಿಯ ಒಂದು ಕಡೆ ಈ ಆಜ್ಞೆ ಜಾರಿಗೆ ತರಲಾಗಿದೆಯೆಂದೂ ಹೇಳಲಾಗಿದೆ.

ಪೀಪಸ್ ಸರೋವರದ ದಕ್ಷಿಣದಲ್ಲಿರುವ ಪಿಸ್ಕೋವ್ ನಗರವನ್ನು ಆಕ್ರಮಿಸಲು ರಶ್ಯನ್ ಸೇನೆ ಸಾಗಿ ಬರುತ್ತಿದೆ. ಪಿಸ್ಕೋವ್ ಲೆನಿನ್‌ಗ್ರಾಡ್ ವಿಯದ ಮತ್ತು ರಿಗಾ ಆಘಾತದ ಕೀಲಿಕೈ ಎಂದು ಹೆಸರಾಗಿದೆ. ಇದು ರಶ್ಯದ ನಿರ್ಣಾಯಕ ಯುದ್ಧಗಳಲ್ಲಿ ಒಂದಾಗಬಹುದೆಂದು ತಿಳಿಯುತ್ತದೆ. ಚೆಕೊಸ್ಲೊವಾಕಿಯ ಪಶ್ಚಿಮದಲ್ಲಿ ನೀಪರ್ ವಕ್ರದ ಸಮೀಪದಲ್ಲಿ ಸಿಕ್ಕಿಬಿದ್ದ ಶತ್ರು ಸೈನ್ಯಗಳ ಮೇಲೆ ರಶ್ಯನರ ಒತ್ತಡ ಹೆಚ್ಚಾಗಿ ಶತ್ರುಗಳ ಪರಿಸ್ಥಿತಿ ಚಿಂತಾಜನಕವಾಗುತ್ತಿದೆ. ಕಾನೆವ್ ಭಾಗದಲ್ಲಿ ರಶ್ಯನರು ಕರ್ಸನ್ ನಗರವನ್ನು ವಶ ಮಾಡಿಕೊಂಡು ವ್ಯೂಹವನ್ನು ಕಿರಿದು ಮಾಡಿದ್ದಾರೆ.

ಮಾರ್ಶಲ್ ದ್ವೀಪದ ಗುಂಪಿನಲ್ಲಿರುವ ರಾಯಿ ದ್ವೀಪದ ಮೇಲೆ ಜಪಾನೀ ವಿಮಾನಗಳು ಧಾಳಿಯಿಟ್ಟವು. ಇನ್ನೊಂದೆಡೆ ಮಾರ್ಶಲ್ ದ್ವೀಪ ಗುಂಪಿನಲ್ಲಿ ಅಮೇರಿಕನ್ ವಿಮಾನಗಳು ನೂರು ಸಲ ಧಾಳಿಯಿಟ್ಟು ಬಾಂಬೆಸೆದವು.

ಅಮೇರಿಕನ್ ಸೇನೆಗಳು ನ್ಯೂಗಿನಿ ಮತ್ತು ನ್ಯೂ ಬ್ರಿಟನಿನ ನಡುವೆ ಇರುವ ರೂಕ್ ದ್ವೀಪವನ್ನು ಆಕ್ರಮಿಸಿವೆ. ಈ ವರೆಗೆ ಶತ್ರು ಪ್ರತಿಭಟನೆ ಎಲ್ಲಿಯೂ ಕಂಡುಬರುವುದಿಲ್ಲ. ಅಮೇರಿಕನರು ಮುಂದೊತ್ತಿದಂತೆ ಜಪಾನರು ಹಿಂಜರಿಯುತ್ತಿದ್ದಾರೆ. ನ್ಯೂಗಿನಿಯ ಮೇಲೆ ಆಸ್ಟ್ರೇಲಿಯನ್ ವಿಮಾನಗಳು ಉಗ್ರ ಧಾಳಿಮಾಡಿವೆ.

ಮುಂಬರುವ ಅಮೇರಿಕದ ಅಧ್ಯಕ್ಷ ಪದವಿಗೆ ವೆಂಡಲ್ ವಿಲ್ಕಿ ರಿಪಬ್ಲಿಕನ್ ಪಕ್ಷದ ಉಮೇದ್ವಾರರಾಗಿ ನಿಲ್ಲುವರೆಂದು ಸುದ್ದಿಯಿದೆ.

ಕಾಲವು ಬದಲಾಗಿದೆ!

ಕ್ರಿ. ಶ. ಒಂದನೇ ಶತಮಾನದಲ್ಲಿ ಕಾಲನಿರ್ಣಯ



TIMES HAVE CHANGED

20ನೇ ಶತಮಾನ

ಪ್ರಾಚೀನ ರೋಮನ್ ಕಾಲದಲ್ಲಿ ...ದಕ್ಕೂ ಹಿಂದೆ ಮರಳು ಗ್ಲಾಸುಗಳು ...ಲನಿರ್ಣಯಕ್ಕಾಗಿ ಉಪಯೋಗಿಸಲ್ಪಡುತ್ತಿದ್ದವು. ನೀರಿನ ಗಡಿಯಾರಗಳಂತೆ ಅವು ಉತ್ತಮವಿದ್ದುವು. ಈ 20ನೇ ಶತಮಾನದಲ್ಲಿ ಬಾಳಿಕೆ ಮತ್ತು ಭದ್ರತೆಯುಳ್ಳ ವೈಜ್ಞಾನಿಕ ರೀತಿಯಲ್ಲಿ ...ಯಾರಾದ ಕಾಲನಿರ್ಣಯ ಮಾಡುವ ...ಡಿಯಾರ ಅವಶ್ಯ. ಈ ಅವಶ್ಯಕತೆ... ನಿಧದಲ್ಲಿ ತಯಾರಿಸಲ್ಪಡುವ ...ಸ್ಟ್ ಎಂಡ್ ವಾಚ್ ಕೊಂಡರೆ ...ರ್ಪೈಸುತ್ತದೆ. ಧರ್ಮಾರ್ಥ ಕೆಟಲಾಗ್‌ಗೆ ಬರೆಯಿರಿ.

...ಸ್ಟ್ ಎಂಡ್ ವಾಚ್ ಕಂಪೆನಿ ...ಬೊಂಬಾಯಿ — ಕಲ್ಕತ್ತ



ಬಿಜೊವ್ ಸೆಮಿಥಿನ್ 11'' ಸೈಜ್ ಪೇಟೆಂಟ್ ಎವರ್ ಬ್ರೈಟ್ ಸ್ಟೀಲ್—ರೂ. 150
18 ಕ್ಯಾರಟ್—ಸೋಲಿಡ್ ಗೋಲ್ಡ್—ರೂ. 365



ಬಿಜೊವ್ ಸಿಲೆಕ್ಟ್ ಪೇಟೆಂಟ್ ಎವರ್ ಬ್ರೈಟ್ ಸ್ಟಿ. ರೂ. 175. 18 ಕ್ಯಾ. ಸೋ. ಗೋ. ರೂ. 475.

ಸರಿಯಾಗಿ ಆಮದಾಗದಿದ್ದರೂ ನಮ್ಮಲ್ಲಿರುವ ಸ್ಟೋಕಿನಲ್ಲಿ ನಿಮ್ಮ ಆರ್ಡರಿಗೆ ಆದಷ್ಟು ವಿಶೇಷ ಗಮನವಿಡಲಾಗುವುದು.

WEST END WATCH Co.
Bombay - Calcutta

ಉಷ್ಣದ ತುರಿಕಜ್ಜಿಗಳಿಗೆ ಇದು ಅತ್ಯುತ್ತಮ ಔಷಧ

ಜಾಂಬಕಿನಿಂದ ನೋವು ತುರಿಸುವುದೂ ನಿಲ್ಲುವುದು

ತುರಿಕಜ್ಜಿ, ಹುಳಕಜ್ಜಿ ಮೊದಲಾದುವುಗಳಿಂದ ಎಷ್ಟು ಮಂದಿ ನರಳುತ್ತಿರುವರೆಂಬುದು ಆಶ್ಚರ್ಯಕರ. ಜಾಂಬಕ್ ಅಂತಹ ಉಷ್ಣಕಾಲದ ಕಜ್ಜಿಗಳಿಗೆಲ್ಲಾ ದಿವ್ಯೌಷಧ. ಉತ್ತಮ ವನೌಷಧಿ ಸತ್ವಗಳಿಂದ ಜಾಂಬಕ್ ಮಾಡಲ್ಪಟ್ಟಿದ್ದು, ಇದು ಚರ್ಮಕ್ಕೆ ತಾಗಿಸಿದ ಕೂಡಲೇ ಎಳಕೊಳ್ಳುವುದು. ಇದು ಆರೋಗ್ಯವನ್ನುಂಟುಮಾಡುತ್ತದೆ. ಸೂರ್ಯನಬಿಸಿಲಿನಿಂದ ಆರಿದ ಶರೀರದ ತೈಲವನ್ನು ಇದು ಒದಗಿಸುತ್ತದೆ.



ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಸ್ವದೇಶಾಭಿಮಾನಿ

ತಾರೀಕು 11—2—1944

ಪತ್ರಿಕಾ ನಿರ್ಬಂಧ

ಡಿಲ್ಲಿಯ ರಾಷ್ಟ್ರೀಯ ದಿನ ಪತ್ರಿಕೆಗಳಾದ 'ಹಿಂದುಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಈ ಎರಡು ಪತ್ರಿಕೆಗಳ ಮೇಲೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು ಹಾಗೂ ಮಹಾತ್ಮರು ೧೯೪೨ ಅಗಸ್ಟ್ ೮ರ ಮೇಲೆ ಮಾಡಿದ ಯಾವುದೇ ಹೇಳಿಕೆಯನ್ನಾದರೂ ಮೊದಲು ಅಧಿಕಾರಿಗಳಿಗೆ ಒಪ್ಪಿಸದೆ ಪ್ರಕಟಿಸಬಾರದೆಂದು ನಿರ್ಬಂಧಕಾಜ್ಞೆ ಮಾಡಲಾಗಿದೆ. ಇತ್ತೀಚೆಗೆ ಪತ್ರಿಕೆಗಳ ಮೇಲೆ ಒಂದರ ಮೇಲೊಂದು ನಿರ್ಬಂಧಗಳು ದಿನ ನಿತ್ಯವೆಂಬಂತೆ ಹೇರಲ್ಪಡುತ್ತಲೇ ಇವೆ; ಸದ್ಯ ನಮ್ಮ ದೇಶದ ಪ್ರಧಾನ ನಗರದಲ್ಲಿರುವ ಎರಡು ಪ್ರಧಾನ ಪತ್ರಿಕೆಗಳ ಮೇಲೆ ಈ ತರದ ನಿರ್ಬಂಧ ಹಾಕಲಾಗಿದೆ! ಇಡೀ ರಾಷ್ಟ್ರೀಯ ಭಾದತವಿಂದು 'ಇದು ಅಕ್ರಮ, ಅನ್ಯಾಯ' ಎಂದು ಏಕ ಕಂಠದಿಂದ ಸಾರುತ್ತದೆ.

ದೇವಿ ಸರೋಜಿನಿಯವರ ಸ್ಫೂರ್ತಿಯುಕ್ತವಾದ ಹೇಳಿಕೆಯನ್ನು ಮೇಲಿನ ಎರಡು ಪತ್ರಿಕೆಗಳು ಮಾತ್ರ ಪ್ರಕಟಿಸಿದುದಲ್ಲ; ಅಖಿಲ ಭಾರತದ ಸರ್ವ ಸಾಮಾನ್ಯ ಸಕಲ ಪತ್ರಿಕೆಗಳಲ್ಲಿಯೂ ಈ ಹೇಳಿಕೆ ಪ್ರಕಟವಾಗಿದೆ. 'ಹಿಂದುಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಈ ಎರಡು ಪತ್ರಿಕೆಗಳ ಮೇಲೆ, ಅದೂ ಕೂಡಾ ನಮ್ಮ ರಾಷ್ಟ್ರದ ಪ್ರಧಾನ ನಗರದಲ್ಲಿರುವ ಈ ಪ್ರಧಾನ ಪತ್ರಿಕೆಗಳ ಮೇಲೆ ಮಾತ್ರ ನಿರ್ಬಂಧ ಹಾಕಿದ್ದನ್ನು ಸಕಲರೂ ಖಂಡಿಸುತ್ತಾರೆ. 'ಹಿಂದುಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಈ ಎರಡು ಪ್ರಖ್ಯಾತ ಪತ್ರಿಕೆಗಳ ಸಂಪಾದಕರು ಹೊಣೆಗಾರಿಕೆ ಬಲ್ಲವರಲ್ಲವೆಂದು ಸಿದ್ಧಾಂತಿಸಿದ ಅಧಿಕಾರಿಗಳ ವಿಚಾರ ಕ್ರಮವನ್ನು ಅರ್ಥಮಾಡಿಕೊಳ್ಳುವುದೇ ಅಸಾಧ್ಯವಾಗಿದೆ. ಹಾಗಾಗಿಯೇ ಮೇಲಿನ ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧ ಕೇವಲ ಅಕ್ರಮವೂ ಅನ್ಯಾಯವೂ ಎಂದು ಎಲ್ಲರೂ ಹೇಳುತ್ತಿದ್ದಾರೆ.

ಅಖಿಲ ಭಾರತ ಸಂಪಾದಕ ಪರಿಷತ್ತು ಈ ತರದ ಅನ್ಯಾಯವನ್ನು ಕೂಡಲೇ ಖಂಡಿಸಬೇಕಾಗಿದೆ. ಮದ್ರಾಸಿನಲ್ಲಿ ಮೊನ್ನೆ ಮೊನ್ನೆ ಸಭೆ ಸೇರಿದಾಗ, ಮಹಾತ್ಮರ ಬಿಡುಗಡೆ ವಿಚಾರದಲ್ಲಿ ಯೂರೋಪಿಯನ್ ಸದಸ್ಯರು, ಅವರು ಕೇವಲ ಕೆಲವೇ ಮಂದಿಯಿದ್ದರೂ, ವಿರೋಧಿಸಿದರೆಂದು ಇಡೀ ರಾಷ್ಟ್ರದ ಬೇಡಿಕೆಯನ್ನು ಮುಂದಿಡಲು ಹಿಂಜರಿದ ಅ. ಭಾ. ಸಂ. ಪರಿಷತ್ತು ಈ ಕಾರ್ಯವನ್ನೂ ಈಗ ಮಾಡದಿದ್ದರೆ ಅದು ಇನ್ನೂ ನಿರ್ಜೀವವೆನಿಸುವುದು. 'ಹಿಂದುಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಪತ್ರಿಕೆಗಳ ಮೇಲೆ ಇಂದು ಹೊರಿಸಿದ ನಿರ್ಬಂಧವು ಅಪ್ರತ್ಯಕ್ಷವಾಗಿ ಇಡೀ ಭಾರತದ ಪತ್ರಿಕಾ ಪ್ರಪಂಚಕ್ಕೇ ಆದ ಅಗೌರವ ಹಾಗೂ ಅನ್ಯಾಯವೆಂದು ಎಲ್ಲರೂ ಏಕ ಕಂಠದಿಂದ ಖಂಡಿಸಲೇ ಬೇಕಾಗಿದೆ.

ಮಂಗಳೂರು

ಹಂಚು ಕೆಲಸಗಾರರ ಸಭೆ

ತಾ. ೧೪ ಮತ್ತು ೨೧ರಂದು ಹಂಚಿನ ಕಾರ್ಖಾನೆ ಕೆಲಸಗಾರರ ಸಭೆಯೊಂದು ಕಾಮನ್ ವೆಲ್ತ್ ಹಂಚು ಕಾರ್ಖಾನೆಗಳಲ್ಲಿ ಸೇರಿ, ಅವರ ಸಂಘ ಸ್ಥಾಪನೆಯಾಗಲಿದೆಯೆಂದು ತಿಳಿಯುತ್ತದೆ.

ಕಳೆದ ಮಂಗಳವಾರ ಕಾಮನ್ ವೆಲ್ತ್ ಹಂಚು ಕಾರ್ಖಾನೆಯ ಕೆಲಸಗಾರರು ಅಧಿಕ ಸಂಬಳಕ್ಕಾಗಿ ಮುಷ್ಕರ ಹಿಡಿದಿದ್ದು, ಮುಷ್ಕರಗಾರರ ಪರವಾಗಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಕಾರ್ಖಾನೆಯವರೊಡನೆ ಹೋಗಿ ಮಾತನಾಡಿದಾಗ, ಮಾಲಿಕರು ತಮ್ಮ ಮೇಲಧಿಕಾರಿಗಳೊಡನೆ ವಿಚಾರಿಸಿ ತಿಳಿಸುವುದಾಗಿ ಹೇಳಿದ್ದರಿಂದ ಮುಷ್ಕರ ಕೊನೆಗೊಂಡಿತು.

ಚಲಚ್ಚಿತ್ರ ವಿಮರ್ಶಕ ಸಂಘ

ಇದರ ಸಭೆ ತಾ ೧೩ರಂದು ಶ್ರೀ ಜಿ. ಎನ್. ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ಜರಗಿ, ನಿಬಂಧನೆಗಳಲ್ಲಿ ಕೆಲ ತಿದ್ದುಪಡಿಗಳು ಮಾಡಲ್ಪಟ್ಟವು ಕೂಟದ ಹಸ್ತಾಕ್ಷರೀ ಪತ್ರಿಕೆಗೆ ಶ್ರೀ ಅರಿಯ್ಯಪ್ಪ ಇವರು ಸಂಪಾದಕರಾಗಿ ಆರಿಸಲ್ಪಟ್ಟರು. ಕೂಟದ ಸಭೆಗಳು ಮುಂದೆ ತಿಂಗಳಿಗೆರಡು ಬಾರಿ ಜರಗುವವು. ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನವು ಜರಗುವ ಕಾಲಕ್ಕೆ ಚಲಚ್ಚಿತ್ರ ವಿಮರ್ಶಕರು ಪತ್ರಿಕೋದ್ಯೋಗಿಗಳನ್ನು ಕರೆದು ಸಭೆ ಸತ್ಕಾರ ಕೂಟವೇರ್ಪಡಿಸಬೇಕೆಂದು ಆಲೋಚಿಸಲಾಯಿತು.

ಗವರ್ನರರ ಆಗಮನ

ಮದ್ರಾಸ್ ಗವರ್ನರರು ಮಾರ್ಚಿಯಲ್ಲಿ ಮಂಗಳೂರನ್ನು ಸಂದರ್ಶಿಸುವ ಸಂಭವವಿದೆಯೆಂದು ತಿಳಿಯುತ್ತದೆ.

ಮಂಗಳೂರು

ದಿನಾಚರಣೆ

ರಿ. ಕಿ. ಎಂ.ನ ಸ್ಥಾಪಕರಾದ ಶ್ರೀ ಅಕ್ಷರಾನಂದ ಸ್ವಾಮಿಯವರ ದಿನಾಚರಣೆಯನ್ನು ಆ ಮಿಶನಿನವರು ಶ್ರೀ ಎ. ಶ್ರೀನಿವಾಸ ಪೈ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀಮತಿ ಎಂ. ಎಸ್. ರಮಾಬಾಯಿ ಮತ್ತು ಶ್ರೀ ಬಿ. ಅನಂತರಾವ್ ಮೊದಲಾದವರು ಸ್ವಾಮಿಯವರ ಕುರಿತು ಮಾತನಾಡಿದರು.

ಆರ್ಯಸಮಾಜ

ಕಳೆದ ಜನವರಿಯಲ್ಲಿ ಬೆಂಗಳೂರಿನ ಶ್ರೀ ಚಂದ್ರಶೇಖರ ಎಂಬವರ ವಿವಾಹವು, ಮೊದಲು ಕ್ರಿಸ್ತರಾಗಿದ್ದು ಈಗ ಶುದ್ಧಿಗೊಂಡ ಶ್ರೀಮತಿ ವಿಮಲಾಬಾಯಿಯವರೊಡನೆ ಜರಗಿತು. ವಧುವಿನ ಮೊದಲಿನ ಹೆಸರು ಮರಿಯಾಲ್ ಲೂಯಿಸ್.

ಇದೇ ಫೆಬ್ರವರಿ ೬ರಂದು ಪುತ್ತೂರಿನ ಚೆರ್ವಾಕ ಗ್ರಾಮದ ಐತಪ್ಪ ನಾಯಕರೆಂಬವರ ವಿವಾಹವು, ಶುದ್ಧಿ ಹೊಂದಿದ ಆರ್ಯೆಯಾದ ಶ್ರೀಮತಿ ಶಾರದಾ ದೇವಿಯವರೊಡನೆ ಜರಗಿತು. ಈಕೆಯೂ ಕ್ರೈಸ್ತರಾಗಿದ್ದು ಇವರ ಮೊದಲಿನ ಹೆಸರು ಶೀರಿದ ಬಾಯಿ. ಶುದ್ಧಿ ವಿವಾಹ ಸಂಸ್ಕಾರಾದಿಗಳು ಶ್ರೀಯುತರಾದ ಗೋಪಾಲ ನಾಯಕ್ ಮತ್ತು ಮೋನಪ್ಪ ತಿಂಗಳಾಯರಿಂದ ಜರಗಿದುವು.

ಉಡುಪಿ

ಅವಗಢ

ಕಟ್ಪಾಡಿ ಶ್ರೀ ಸುಬ್ರಾಯ ಚರ್ಡಪ್ಪ ಶ್ಯಾನುಭಾಗರ ಪುತ್ರ ಹಾಗೂ ಉಡ್ಪಿ ಬೋರ್ಡ್ ಹೈಸ್ಕೂಲಿನ VI ಫಾರ್ಮ್ ವಿದ್ಯಾರ್ಥಿ ಶ್ರೀ ಬಾಬುರಾಯ ಶೆಣೈ ಎಂಬವರು ತಾ ೮ರಲ್ಲು ಕಟ್ಪಾಡಿಯಿಂದ ಉಡುಪಿಗೆ ಸೈಕಲಲ್ಲಿ ಬರುತ್ತಿದ್ದಾಗ ಉದ್ಯಾವರ ಇಗರ್ಜಿ ಬಳಿ ಮೋಟರ್ ಅವಗಢಕ್ಕೆ ತುತ್ತಾಗಿ ಅಕಾಲ ಮರಣ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಶುದ್ಧಿ ಸಂಸ್ಕಾರ

ತಾ. ೬-೨-೪೪ರಂದು ಉಡುಪಿ ತೋನ್ಸೆ ಕೆಮ್ಮಣ್ಣು ಗ್ರಾಮದ ಸುಮಾರು ೩ ತಿಂಗಳ ಹಿಂದೆ ಕೆಥಲಿಕ್ ಕ್ರೈಸ್ತ ಜಾತಿಗೆ ಸೇರಿದ ಬಿಲ್ಲವರು ಶ್ರೀ ಅನಂತ ಪೂಜಾರಿ ಮತ್ತು ಅವನ ಅಳಿಯಂದಿರಾದ ಶ್ರೀಯುತರು ಶಿರ್ಯ, ಸೋಮ, ಅಂಗರ ಈ ನಾಲ್ಕು ಜನರು ದ. ಕ. ಜಿಲ್ಲಾ ಹಿಂದೂ ಮಹಾ ಸಭಾ ನೇತೃತ್ವದಲ್ಲಿ ಶುದ್ಧಿಗೊಂಡು ಪುನಃ ಅವರ ಜಾತಿಗೆ ಸೇರಿದರು ಈ ಸಮಾರಂಭವು ಶ್ರೀ ತೋನ್ಸೆ ವೆಂಕಪ್ಪ ಹೆಗ್ಡೆಯವರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ಮಂಜುನಾಥ ಶೆಣೈ ಮತ್ತು ಕೊಡವೂರು ಸುಬ್ಬಣ್ಣಯ್ಯ ಇವರಿಬ್ಬರು ಪೌರೋಹಿತ್ಯಾ ವಹಿಸಿದ್ದರು.

ಮುಲ್ಕಿ

ಮಂಗಳೂರು ತಾಲುಕು ಬೋರ್ಡ್ ಎಲಿಮೆಂಟ್ರಿ ಶಾಲಾ ಅಧ್ಯಾಪಕರ ಯೂನಿಯನಿನ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ. ೨೭-೨-೧೯೪೪ನೇ ರವಿವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಮಂಗಳೂರಿನ ಗಣಪತಿ ಹೈಸ್ಕೂಲಿನ ಸಭಾ ಮಂದಿರದಲ್ಲಿ ಶ್ರೀ ಯನ್. ರಾಮರಾವ್, ಎಡ್ವಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್‌ರವರು ಈ ಸಮ್ಮೇಳನವನ್ನು ಉದ್ಘಾಟನೆ ಮಾಡಲು ಒಪ್ಪಿರುತ್ತಾರೆ.

ಈ ತಾಲೂಕಿನ ಎಲ್ಲಾ ಬೋರ್ಡ್ ಎಲಿಮೆಂಟ್ರಿ ಶಾಲಾ ಅಧ್ಯಾಪಕ ಅಧ್ಯಾಪಕಿಯರು ಅಂದು ತಪ್ಪದೆ ಬಂದು ಈ ಸಭೆಯನ್ನು ಯಶಸ್ವಿಯಾಗಿ ಕೊನೆಗಾಣಿಸುವಂತೆ ಸಹಕರಿಸಬೇಕಾಗಿ ವಿನಂತಿ. ಅಲ್ಲದೆ ಸಭೆಯ ಮುಂದೆ ಮಂಡಿಸಲಿಕ್ಕೆ ಠರಾವುಗಳು ಏನಾದರೂ ಇದ್ದರೆ ಅಂಥವುಗಳನ್ನು ತಾ. ೨೫-೨-೪೪ರ ಒಳಗೆ ತಲಪುವಂತೆ ಕಾರ್ಯದರ್ಶಿಗಳ ವಿಳಾಸಕ್ಕೆ ಕಳುಹಿಸಿ ಕೊಡುವುದು.

ಧರ್ಮಸ್ಥಳದ ಶ್ರೀ ಹೆಗ್ಗಡೆಯವರು

ಧರ್ಮಸ್ಥಳದ ಶ್ರೀ ಹೆಗ್ಗಡೆಯವರು ೯-೨-೪೪ನೇಯ ದಿನ ಸಾಯಂಕಾಲ ಮದ್ರಾಸಿನಲ್ಲಿ ಕುಲಕರ್ಣಿ ಶ್ರೀನಿವಾಸರ ನೃತ್ಯ ಭಾರತಿ ಸಂಸ್ಥೆಯನ್ನು ಸಂದರ್ಶಿಸಿದರು. ಅವರು ಸಂಸ್ಥೆಯ ಬಾಲಕಬಾಲಿಕೆಯರ ಹಾಗೂ ಶ್ರೀನಿವಾಸರ ಕೆಲವು ನೃತ್ಯಗಳ ಪ್ರದರ್ಶನವನ್ನು ತಮ್ಮ ಅತ್ಯಂತ ಸಂತೋಷವನ್ನೂ ವ್ಯಕ್ತಮಾಡಿದರು ಕನ್ನಡಿಗರೊಬ್ಬರು ಮದ್ರಾಸಿಗೆ ಬಂದು ಈ ಬಗೆಯ ಸಂಸ್ಥೆಯನ್ನು ನಿರ್ಮಾಣ ಮಾಡಿ ಕೊಂಡು ಕಲಾಪ್ರಚಾರ ಮಾಡುತ್ತಿರುವದು ತುಂಬಾ ಅಭಿಮಾನಾಸ್ಪದವಾದುದೆಂದು ಹೇಳಿ ಕರ್ನಾಟಕದ ನೃತ್ಯ ವೈಶಿಷ್ಟ್ಯವಾದ ಯಕ್ಷಗಾನದ ನೃತ್ಯ ಪರಂಪರೆಗಳನ್ನು ಶ್ರೀನಿವಾಸರು ಪ್ರಚಾರಪಡಿಸುವಲ್ಲಿ ತಮ್ಮ ಅಗತ್ಯವಿರುವ ಸೌಕರ್ಯಗಳನ್ನು ತಾವು ಮಾಡಿ ಕೊಡಲು ಸಿದ್ಧವಿರುವೆವೆಂದು ತಮ್ಮ ಜಿಲ್ಲೆಗೆ; ತಮ್ಮ ಸ್ಥಳಕ್ಕೆ ತಮ್ಮ ನೃತ್ಯ ಮಂಡಲಿಯೊಂದಿಗೆ ಶೀಘ್ರದಲ್ಲಿಯೇ ಬರಬೇಕೆಂದೂ ಆಮಂತ್ರಣವನ್ನಿತ್ತರು.

ದ. ಕ. ಮಂಗಳೂರು ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

S. C. No. 98/1943

Between:-

ಟಿ. ಲಿಂಗಪ್ಪ ಭಂಡಾರಿ— ವಾದಿ

ಮತ್ತು

ಕಾಂತಪ್ಪ ಶೆಟ್ಟಿ— ಪ್ರತಿವಾದಿ

ಮಂಗಳೂರು ತಾಲೂಕು ಇರ ಗ್ರಾಮದಲ್ಲಿರುವ ದರ್ಬೆ ಕರಿಯಪ್ಪ ಭಂಡಾರಿಗಳ ಅಳಿಯ ಕಾಂತಪ್ಪ ಶೆಟ್ರಿಗೆ.

ನಿಮ್ಮ ಮೇಲೆ ಕೈಫೆತ್ತಿನಲ್ಲಿ ಕೇಳಿದ ನಿವೃತ್ತಿಗಳ ಬಗ್ಗೆ ಮೇಲ್ಕಂಡ ವಾದಿಯು ಈ ಕೋರ್ಟಿನಲ್ಲಿ S. C. ನಂಬ್ರ 98/1943ನ್ನು ದಾಖ್ಲು ಮಾಡಿರುತ್ತಾ ಅದನ್ನು ಇದೇ 1944ನೇ ಇಸವಿ ಫೆಬ್ರವರಿ ತಾರೀಕು 29ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆದುದರಿಂದ ಈ ಮೂಲಕ ನಿಮಗೆ ತಿಳಿಸುವುದೇನೆಂದರೆ ಸದ್ರಿ ವ್ಯಾಜ್ಯಕ್ಕೆ ನಿಮ್ಮದೇನಾದರೂ ಆಕ್ಷೇಪ ಇದ್ದರೆ ಅದನ್ನು ಈ ಕೋರ್ಟು ಮುಂದೆ ಸದ್ರಿ ತಾ. 29-2-44ರಲ್ಲು ನೀವು ಖುದ್ದು ಯಾ ವಕೀಲ್ ಮುಖಾಂತರ ಹಾಜರು ಮಾಡತಕ್ಕದ್ದು. ಇಲ್ಲದಿದ್ದಲ್ಲಿ ಅದು ನಿಮ್ಮ ಗೈರು ಹಾಜರಿನಲ್ಲಿಯೇ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

By Order

ಮಂಗಳೂರು 14-2-44 | B. Lakshmi Narayana Rai, Advocate for Plaintiff

ನಾಟ್ಯಾಚಾರ್ಯ

ಕುಲಕರ್ಣಿ ಶ್ರೀನಿವಾಸರು

೨೦ ಜನ ಸುಪ್ರಸಿದ್ಧ ನರ್ತಕ—ನರ್ತಕಿಯರ ಹಾಗೂ ಪ್ರಸಿದ್ಧ ವಾದ್ಯಗಾರರೊಂದಿಗೆ

ಉತ್ತರ ಕರ್ನಾಟಕ, ದಕ್ಷಿಣ ಕನ್ನಡ, ಮೈಸೂರು, ಕೊಡಗು ಪ್ರಾಂತದಲ್ಲಿ ಪ್ರವಾಸ ಕೈಕೊಂಡಿದ್ದಾರೆ

ಬರುವ ಸ್ಥಳ-ದಿನ ನಿರೀಕ್ಷಿಸಿರಿ

ನೃತ್ಯ ಭಾರತಿ, ೪೧, ರಾಯಪೇಟೆ ಹಾಯ್ ರೋಡ್ ಮದರಾಸು

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಜಿಲ್ಲಾ ಸಮಾಚಾರಗಳು

ಮಂಗಳೂರು

ಇಡೀ ಜಿಲ್ಲೆಯ ಅಕ್ಕಿ ಭತ್ತಗಳ ಕ್ರಯ ನಿರ್ಣಯ

ತಾ. ೧೪-೨-೧೯೪೪ರ ಮೇಲೆ ಈ ಕೆಳಗೆ ಕಾಣಿಸಿದ ಕ್ರಯಕ್ಕಿಂತ ಹೆಚ್ಚಿನ ಕ್ರಯಕ್ಕೆ ಯಾವ ವ್ಯಾಪಾರಿಯೂ ಕೂಡಾ ಅಕ್ಕಿ ಭತ್ತ ಮಾರಾಟ ಮಾಡಕೂಡದು. ಹಾಗೆ ಮಾಡಿದರೆ ಆತನ ಲೈಸನ್ಸು ರದ್ದಾಗುವುದಲ್ಲದೆ ಆತನ ಮೇಲೆ ದಾವೆ ಹೂಡಲಾಗುವುದೆಂದು ದ. ಕ. ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರು ಆಜ್ಞೆ ಹೊರಡಿಸಿದ್ದಾರೆ.

ಮಂಗಳೂರು ನಗರ (ಮುನ್ಸಿಪಲ್ ಭಾಗದಲ್ಲಿ) ಸುಗ್ಗಿ, ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೩, ಭತ್ತಕ್ಕೆ ೦-೧-೧೧, ಗುಡ್ಡ ಅಕ್ಕಿ ಸೇರಿಗೆ ೦-೪-೫, ಭತ್ತಕ್ಕೆ ೦-೨-೦; ಮಸ್ಕತಿ ಸೇರಿಗೆ ೦-೪-೮, ಭತ್ತಕ್ಕೆ ೦-೨-೧; ಬೆಳ್ತಿಗೆ ಅಕ್ಕಿ ಸೇರಿಗೆ ೦-೫-೦, ಭತ್ತಕ್ಕೆ ೦-೨-೩; ಗಂಧಸಾಲೆ, ಜೀರಾ, ಜಿ. ಬಿ, ಸಣ್ಣಕ್ಕಿ ಸೇರಿಗೆ ೦-೫-೫; ಭತ್ತಕ್ಕೆ ೦-೨-೫.

ಮುನ್ಸಿಪಲ್ ಭಾಗ ಬಿಟ್ಟು, ಮಂಗಳೂರು ತಾಲೂಕು ಸುಗ್ಗಿ. ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೨, ಭತ್ತಕ್ಕೆ ೦-೧-೧೧; ಗುಡ್ಡ ಅಕ್ಕಿ ಸೇರಿಗೆ ೦-೪-೪, ಭತ್ತಕ್ಕೆ ೦-೨-೦; ಮಸ್ಕತಿ ಅಕ್ಕಿ ಸೇರಿಗೆ ೦-೪-೬, ಭತ್ತಕ್ಕೆ ೦-೨-೧; ಬೆಳ್ತಿಗೆ ಅಕ್ಕಿ ಸೇರಿಗೆ ೦-೪-೧೦; ಭತ್ತಕ್ಕೆ ೦-೨-೩; ಗಂಧಸಾಲೆ, ಜೀರಾ, ಜಿ. ಬಿ. ಸಣ್ಣಕ್ಕಿ ಸೇರಿಗೆ ೦-೫-೨; ಭತ್ತಕ್ಕೆ ೦-೨-೫.

ಪುತ್ತೂರು ತಾಲೂಕು ಸುಗ್ಗಿ, ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೨, ಭತ್ತಕ್ಕೆ ೧-೧-೧೧; ಗುಡ್ಡ ಅಕ್ಕಿ ಸೇರಿಗೆ ೦-೪-೪, ಭತ್ತಕ್ಕೆ ೦-೨-೦; ಮಸ್ಕತಿ ಅಕ್ಕಿ ಸೇರಿಗೆ ೦-೪-೬, ಭತ್ತಕ್ಕೆ ೦-೨-೧; ಬೆಳ್ತಿಗೆ ಅಕ್ಕಿ ಸೇರಿಗೆ ೦-೪-೧೦, ಭತ್ತಕ್ಕೆ ೦-೨-೩; ಗಂಧಸಾಲೆ, ಜೀರಾ, ಜಿ. ಬಿ. ಸಣ್ಣಕ್ಕಿ ಸೇರಿಗೆ ೦-೫-೨, ಭತ್ತಕ್ಕೆ ೦-೨-೫.

ಕಾರ್ಕಳ ತಾಲೂಕು—ಸುಗ್ಗಿ, ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೨, ಭತ್ತಕ್ಕೆ ೦-೧-೧೧; ಗುಡ್ಡ ಅಕ್ಕಿ ಸೇರಿಗೆ ೦-೪-೪, ಭತ್ತಕ್ಕೆ ೦-೨-೦; ಮಸ್ಕತಿ ಅಕ್ಕಿ ಸೇರಿಗೆ ೦-೪-೬, ಭತ್ತಕ್ಕೆ ೦-೨-೧; ಬೆಳ್ತಿಗೆ ಅಕ್ಕಿ ಸೇರಿಗೆ ೦-೪-೧೦; ಭತ್ತಕ್ಕೆ ೦-೨-೩; ಗಂಧಸಾಲೆ, ಜೀರಾ, ಜಿ. ಬಿ. ಸಣ್ಣಕ್ಕಿ ಸೇರಿಗೆ ೦-೫-೨, ಭತ್ತಕ್ಕೆ ೦-೨-೫.

ಉಡುಪಿ ತಾಲೂಕು ಸುಗ್ಗಿ, ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೨, ಭತ್ತಕ್ಕೆ ೦-೧-೧೧; ಗುಡ್ಡ ಅಕ್ಕಿ ಸೇರಿಗೆ ೦-೪-೪, ಭತ್ತಕ್ಕೆ ೦-೨-೦; ಮಸ್ಕತಿ ೦-೪-೬, ಭತ್ತಕ್ಕೆ ೦-೨-೧; ಬೆಳ್ತಿಗೆ ಅಕ್ಕಿ ಸೇರಿಗೆ ೦-೪-೧೦, ಭತ್ತಕ್ಕೆ ೦-೨-೩; ಗಂಧಸಾಲೆ, ಜೀರಾ, ಜಿ. ಬಿ. ಸಣ್ಣಕ್ಕಿ ಸೇರಿಗೆ ೦-೫-೨, ಭತ್ತಕ್ಕೆ ೦-೨-೫.

ಕಾಸರಗೋಡು ತಾಲೂಕು, ಸುಗ್ಗಿ, ರಾಶಿ ಕಯಮೆ, ತೊಳಸಲು ಅಕ್ಕಿ ಸೇರಿಗೆ ೦.೪.೭ ಭತ್ತಕ್ಕೆ ೦-೨-೩; ಗುಡ್ಡ ಅಕ್ಕಿ ಸೇರಿಗೆ ೦-೪-೯, ಭತ್ತಕ್ಕೆ ೦-೨-೪; ಮಸ್ಕತಿ ಅಕ್ಕಿ ಸೇರಿಗೆ ೦-೪-೧೧ ಭತ್ತಕ್ಕೆ ೦-೨-೫; ಬೆಳ್ತಿಗೆ ಅಕ್ಕಿ ಸೇರಿಗೆ ೦-೫-೪, ಭತ್ತಕ್ಕೆ ೦-೨-೮; ಗಂಧಸಾಲೆ, ಜೀರಾ, ಜೀಬಿ, ಸಣ್ಣಕ್ಕಿ ಸೇರಿಗೆ ೦-೫-೮, ಭತ್ತಕ್ಕೆ ೦-೨-೧೧;

ಹೊಸದುರ್ಗ ಸಬ್ ತಾಲೂಕು-ಸುಗ್ಗಿ, ರಾಶಿ, ಕಯಮೆ, ತೊಳಸಲು ಅಕ್ಕಿ ಸೇರಿಗೆ ೦-೪-೮, ಭತ್ತಕ್ಕೆ ೦-೨-೪, ಗುಡ್ಡ ಅಕ್ಕಿ ಸೇರಿಗೆ ೦-೪-೧೦, ಭತ್ತಕ್ಕೆ ೦-೨-೫; ಬೆಳ್ತಿಗೆ ಅಕ್ಕಿ ಸೇರಿಗೆ ೦-೫-೫, ಭತ್ತಕ್ಕೆ ೦-೨-೯; ಗಂಧಸಾಲೆ, ಜೀರಾ, ಜಿ. ಬಿ, ಸಣ್ಣಕ್ಕಿ ಸೇರಿಗೆ ೦-೫-೯, ಭತ್ತಕ್ಕೆ ೦-೩-೦.

ಭೂಮಾಲಿಕರಲ್ಲಿ ವಿಜ್ಞಾಪನೆ.

ದ. ಕ. ಜಿಲ್ಲಾ ಭೂಮಾಲಿಕ ಸಂಘದ ಕಾರ್ಯದರ್ಶಿಗಳು ಈ ರೀತಿ ತಿಳಿಸುತ್ತಾರೆ:-

"ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ರೈತರಲ್ಲದವರಿಗೆ ಅಕ್ಕಿ ನಗ್ದಿ ಬೆಲೆಯಲ್ಲಿ ಮಾರಾಟ ಮಾಡುವ ಕಾರ್ಯವನ್ನು ಈಗ ಪ್ರಾರಂಭಿಸಿರುತ್ತದೆ. ಇನ್ನು ಅನೇಕ ಕಡೆಯಲ್ಲಿ ಅದೇ ರೀತಿ ಮಾರಾಟ ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದು ದ. ಕ. ಆಹಾರ ಕೌನ್ಸಿಲ್‌ನವರು ನಿಶ್ಚಯಿಸಿದ್ದಾರೆ. ಆದರೆ ಈಗ ಜಮೆ ಇರುವ ಅಕ್ಕಿಯು ಸಾಕಾಗಲಿಕ್ಕಿಲ್ಲ ಎಂಬ ಭಯದಿಂದ ಆ ಕಾರ್ಯವು ಬೇಗನೇ ಜಾರಿಗೆ ತರಲು ಅನಾನುಕೂಲವಾಗಿಯದೆ.

ಐದು ಎಕ್ರೆ ಮೇಲೆ ಜಮೀನು ಇರುವ ವರ್ಗದಾರರಿಂದ ಮತ್ತು ಸುಗ್ಗಿ ಬೆಳೆಯ ಉತ್ಪತ್ತಿಯಿಂದ ರಿಕ್ವಿಶಿಶನ್ ಆಗುವುದು. ಭೂಮಾಲಿಕರು ಗಾಬರಿಗೊಳ್ಳುವುದು ಅವಶ್ಯವಿಲ್ಲ. ಭೂಮಾಲಿಕರ ಸಾಗುವಳಿ ವ ಇತರ ಖರ್ಚಿಗೆ ಬೇಕಾಗುವಷ್ಟು ಅಕ್ಕಿಯನ್ನು ಅವರಲ್ಲಿಯೇ ಬಿಟ್ಟು ಮಾರಾಟ ಮಾಡುವ ಅಕ್ಕಿಯನ್ನು ಮಾತ್ರ ರಿಕ್ವಿಶಿಶನು ಮಾಡುವುದಲ್ಲದೆ ಇದರಿಂದ ಹಳ್ಳಿಯಲ್ಲಿ ಆಹಾರದ ಕೊರತೆಯು ಬಾರದಂತೆ ಜಾಗ್ರತೆ ತೆಗೆದುಕೊಳ್ಳುತ್ತದೆ. ಅಲ್ಲದೆ ಕೆಲವು ಹಳ್ಳಿಗಳಲ್ಲಿ ಕೂಡಾ ಆಹಾರದ ಕೊರತೆ ಇದ್ದರೆ ಅಂಥಾ ಹಳ್ಳಿಗಳಿಗೂ ಕೂಡಾ ಅಕ್ಕಿ ದೊರಕಿಸುವ ವಿಚಾರ ಕೂಡ ನಡೆಯುತ್ತದೆ. ಆ ಬಗ್ಗೆ ಈ ಜಿಲ್ಲೆಗೆ ಅಕ್ಕಿ ಹೊರಗಿನಿಂದ ಒದಗಿಸಿಕೊಡಬೇಕಾಗಿ ನಾವು ಮದ್ರಾಸು ಗವರ್ನಮೆಂಟಿಗೆ ಮನವಿ ಮಾಡಿಕೊಂಡಿರುತ್ತೇವೆ.

ಪುತ್ತೂರು ತಾಲೂಕಿನಲ್ಲಿ ಆಕ್ಷೇಪಣೆ ಅರ್ಜಿಗಳ ತನ್ಕಿ ಮುಗಿಯಿತು. ಮಂಗಳೂರು ತಾಲೂಕು ಆಕ್ಷೇಪಣೆ ಅರ್ಜಿಗಳು ತನ್ಕಿ ಆಗುತ್ತಲಿವೆ. ಅದೇ ರೀತಿ ಬಾಕಿ ತಾಲೂಕುಗಳಲ್ಲಿಯೂ ನಮ್ಮ ಸಂಘದ ಕಡೆಯಿಂದ ಪ್ರತಿನಿಧಿಗಳನ್ನು ಜತೆಗೆ ಸೇರಿಸಿಕೊಂಡು ಅವರ ಸಹಕಾರದ ಮೂಲಕವೇ ಆಕ್ಷೇಪಣೆ ಅರ್ಜಿಗಳು ತನ್ಕಿ ಆಗುವುವು. ಈ ವರೆಗೆ ನಡೆದ ತನ್ಕಿಯಲ್ಲಿ ಭೂಮಾಲಿಕರಿಗೆ ಯಾವ ತೊಂದರೆಯೂ ಬರಲಿಲ್ಲವೆಂಬುದಕ್ಕೆ ಒಂದೇ ದೃಷ್ಟಾಂತ ಕೊಡುವುದಾದರೆ, ಪುತ್ತೂರು ತಾಲೂಕಿನಲ್ಲಿ ಆಕ್ಷೇಪಣೆ ಅರ್ಜಿಗಳು ತನ್ಕಿಯಾದ ಕೂಡಲೇ ರಿಕ್ವಿಶಿಶನ್ ಆಗದೆ ಬಿಟ್ಟ ಸಾಧಾರಣ ೫,೦೦೦ ಮುಡಿ ಅಕ್ಕಿಯನ್ನು ವ್ಯಾಪಾರಸ್ಥರು ಹೆಚ್ಚಿನ ಬೆಲೆಗೆ ಪಡದು ಕಾಸರಗೋಡಿನಲ್ಲಿ ಬಹಳ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದಾರೆ; ಈಗಲೂ ಈ ಬ್ಲ್ಯಾಕು ಮಾರ್ಕೆಟು ನಡಿಯುತ್ತಾ ಇದೆ. ಕಾಸರಗೋಡಿಗೆ ಸಾಕಾಗುವಷ್ಟು ಅಕ್ಕಿಯು ಸ್ಟೋರ್ಸಿನಿಂದ ಕೊಡಲು ಅಸಾಧ್ಯವಾದ್ದರಿಂದ ಈ ಬ್ಲ್ಯಾಕುಮಾರ್ಕೆಟು ನಿಲ್ಲಿಸಲು ವಿಳಂಬವಾಗಿಯದೆ. ಹೊರಪ್ರದೇಶದಿಂದ ಅಕ್ಕಿ ಬಂದ ಕೂಡಲೇ ಅದನ್ನು ನಿಲ್ಲಿಸುವರು.

ಕಾಸರಗೋಡು ಬಿಟ್ಟು ಮಿಕ್ಕ ೫ ತಾಲೂಕಿನಲ್ಲಿ ಒದಗುವ ಅಕ್ಕಿಯು ಈ ಐದು ತಾಲೂಕುಗಳಿಗೆನೇ ಸಾಕಾಗುವುದಿಲ್ಲವೆಂತ ಕಾಣುತ್ತದೆ. ಆದ್ದರಿಂದ ಮಂಗ್ಳೂರು ಶಹರಿಗೆ ಮತ್ತು ಕಾಸರಗೋಡು ತಾಲೂಕಿಗೆ ಬೇಕಾಗುವ ಸಾಧಾರಣ ನಾಲ್ಕು ಲಕ್ಷ ಮುಡಿ ಅಕ್ಕಿಯು ನಮಗೆ ಒದಗಿಸಬೇಕಾಗಿ ಮದ್ರಾಸು ಗವರ್ನಮೆಂಟಿಗೆ ಮನವಿ ಮಾಡಿಕೊಂಡಿದ್ದೇವೆ. ಅದೂ ಕೂಡ ಸಾಕಾಗಲಿಕ್ಕಿಲ್ಲವೆಂಬ ಭಯವಿದೆ.

ಆದ್ದರಿಂದ ಭೂಮಾಲಿಕರು ತಮ್ಮ ಮಾರಾಟದ ಅಕ್ಕಿಯನ್ನು ಬೇಗನೇ ಸ್ಟೋರ್ಸ್‌ಗಳಿಗೆ ಕೊಡಬೇಕು. ವಿಳಂಬವಾದರೆ ಹೊರಗಿನ ಅಕ್ಕಿ ಬಂದು ಅಕ್ಕಿಯ ಬೆಲೆಯು ಇನ್ನೂ ಕಮ್ಮಿ ಆಗುವುದಲ್ಲದೆ ಬಾರದಿದ್ದರೆ ಆಹಾರದ ಕೊರತೆಯು ಜಾಸ್ತಿ ಆಗಿ ನೆಮ್ಮದಿಯು ಹಾಳಾಗುವ ಸಂಭವ ಒದಗೀತು. ಭೂಮಾಲಿಕರು ಈ ವಿಚಾರಗಳನ್ನೆಲ್ಲ ನೆನಪರಿಕೆ ಮಾಡಿ ನಮ್ಮ ಜಿಲ್ಲೆಯ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಸಹಾಯಕರಾಗಬೇಕಾಗಿ ಬೇಡಿಕೊಳ್ಳುತ್ತೇವೆ."

ಎಡ್ವೈಸರರಲ್ಲಿ ಶಿಷ್ಟಮಂಡಳ ಜಿಲ್ಲೆಯ ಆಹಾರದ ಕುರಿತು

ಶ್ರೀಗಳಾದ ಎ. ಬಿ. ಶೆಟ್ಟಿ, ಎಂ. ಶಿವರಾವ್ ಮತ್ತು ಶ್ರೀ ಎಂ. ರಾಘವೇಂದ್ರ ಪೈ ಈ ಮೂವರು, ದ. ಕ. ಜಿಲ್ಲಾ ಆಹಾರ ಸಮಿತಿ ಪರವಾಗಿ ಮದ್ರಾಸ್ ಗವರ್ನರರ ಎಡ್ವೈಸರ್ ಶ್ರೀ। ರಾಮಮೂರ್ತಿಯವರನ್ನು ತಾ. ೧೨ರಂದು ಭೇಟಿಯಾಗಿ ಜಿಲ್ಲೆಯ ಆಹಾರ ಪರಿಸ್ಥಿತಿ ವಿವರಿಸಿದರು. ರೆವೆನ್ಯೂ ಬೋರ್ಡಿನವರು ದ. ಕ. ಜಿಲ್ಲೆಯಲ್ಲಿ ೧೪,೦೦೦ ಟನ್ ಅಕ್ಕಿ ಹೆಚ್ಚಿಗಿದೆಯೆಂದು ಲೆಕ್ಕ ಹಾಕಿದ್ದು ಸರಿಯಲ್ಲವೆಂದೂ ಈ ವರ್ಷದ ಬೆಳೆ ಹಾಳಾದ್ದರಿಂದ, ಈ ಜಿಲ್ಲೆಗೆ ಕಡಿಮೆ ಪಕ್ಷ ೫ ಲಕ್ಷ ಮುಡಿ ಅಕ್ಕಿ ಬೇಕಾಗುವುದೆಂದೂ ಈ ಅಕ್ಕಿ ಹೆಚ್ಚಾಗಿ ಕಾಸರಗೋಡು ಮತ್ತು ಮಂಗಳೂರು ತಾಲೂಕಿಗೆ ಬೇಕಾಗುವುದೆಂದೂ, ಇದಾಗದೆ ರೇಶನಿಂಗ್ ಪ್ರಾರಂಭಿಸಿದರೆ ಒಳ್ಳೆಯದಾಗಲಾರದೆಂದೂ, ಈ ಜಿಲ್ಲೆಗೆ ಗೋದಿ, ಗೋದಿ ಸಾಮಾನು, ರಾಗಿ, ಮೊದಲಾದ ಧಾನ್ಯಗಳನ್ನು ಹೊರಗಿನಿಂದ ತರಿಸಬೇಕೆಂದೂ ಕೇಳಿಕೊಂಡರು.

ಎಡ್ವೈಸರರು, ರೆವೆನ್ಯೂ ಬೋರ್ಡಿನವರ ಲೆಕ್ಕ ತಪ್ಪಾಗಿರಬಹುದೆಂದು ಒಪ್ಪಿ, ದ. ಕ. ಜಿಲ್ಲೆಯ ಆಹಾರ ದುಸ್ಥಿತಿ ವಿಚಾರ ತಾನು ತಿಳಕೊಂಡಿರುವೆನಾಗಿಯೂ, ವಾಹನಾನುಕೂಲವಿಲ್ಲದಿದ್ದರೂ ಅಲ್ಲಿಗೆ ಆಹಾರ ಸಾಮಗ್ರಿ ಹೊರಗಿನಿಂದ ಕಳುಹಿಸುವ ಏರ್ಪಾಡು ಮಾಡುವುದಾಗಿಯೂ, ಆಹಾರೋಪಯೋಗಿ ಸಾಮಾನು ಕಳುಹಿಸುವ ಏರ್ಪಾಡನ್ನೂ ಸರಕಾರದವರೂ ಆಲೋಚಿಸುವುದಾಗಿಯೂ ತಿಳಿಸಿದರು.

ಪೆರ್ಡಾಲ್ ಹೈಸ್ಕೂಲ್ ಪ್ರಯತ್ನಕ್ಕೆ ಜಿಲ್ಲಾ ಬೋರ್ಡಿನ ಸಮ್ಮತಿ

ಪ್ರೆಸಿಡೆಂಟರೊಡನೆ ಪ್ರಶ್ನೋತ್ತರಗಳು

ದ. ಕ.-ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ. ೧೫ರಂದು ಪೂರ್ವಾಹ್ನ ೧೧ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಅಧ್ಯಕ್ಷ ಶ್ರೀ ಆರೂರು ಲಕ್ಷ್ಮಿನಾರಾಯಣ ರಾಯರ ಅಧ್ಯಕ್ಷತೆಯಿಂದ ಸೇರಿತು.

ಸಭೆ ಸೇರುವ ಮೊದಲು ವಿಶೇಷ ಸಭೆಯೊಂದು ಸೇರಿ ವಿದ್ಯಾ ಸಮಿತಿಗೆ ಶ್ರೀಮತಿ ಸುಶೀಲಾ ಚೌಟರನ್ನು ಓರ್ವ ಅನಧಿಕಾರೀ ಸದಸ್ಯೆಯರಾಗಿ ಆರಿಸಲಾಯಿತು.

ಶ್ರೀಗಳಾದ ಕರಿಯಪ್ಪ ಭಂಡಾರಿಗಳು ಮತ್ತು ಶ್ರೀ। ಎಚ್. ಸರ್ವೋತ್ತಮ ಪೈಗಳು ಕಳುಹಿಸಿದ್ದ ಪ್ರಶ್ನೆಗಳಿಗೆ ಅಧ್ಯಕ್ಷರ ಉತ್ತರ ತಯಾರಾಗಿ ಸದಸ್ಯರ ಕೈಗೆ ಕೊಡಲ್ಪಟ್ಟಿತು. ಖಾ. ಬ. ಶರ್ವ್ವಾಡರು ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿದ್ದಕ್ಕೆ ಅದು ಇದುವರೆಗೆ ಈ ಬೋರ್ಡಿನ ಸಂಪ್ರದಾಯವಲ್ಲವೆಂದು ಅಧ್ಯಕ್ಷರು ತಿಳಿಸಿದರು.

ಶ್ರೀ। ಕರಿಯಪ್ಪ ಭಂಡಾರಿಗಳ ಪ್ರಶ್ನೆಗಳಲ್ಲಿ ಕೇಳಿದ ಅಂಕೆ ಸಂಖ್ಯೆ ತಿಳಿಸಲಾಗಿತ್ತು. ಫರಂಗಿಪೇಟೆ ಮಿಡ್ ವೈಫಿನ ಟ್ರಾನ್ಸ್‌ಪರ್ ಆಡಳಿತ ಕ್ರಮಕ್ಕೆ ಅನುಗುಣವಾಗಿ ಮಾಡಲ್ಪಟ್ಟಿತೆಂದು ಹೇಳಲಾಯಿತು. ಹೆಲ್ತ್ ಆಫೀಸಿನ ಸಿಬಂಧಿಗೆ ಶಿಕ್ಷೆ, ದಂಡನೆ ಮೊದಲಾದದ್ದು ವಿಧಿಸಿದ್ದು ಅವರ ತಪ್ಪಿಗೆಂದೂ, ಸುಳ್ಯ ಮೆಡಿಕಲ್ ಆಫೀಸರರು ಕೊಲೆರಾ ಇನಾಕುಲೇಶನಿಗೆ ಫೀಸು ತೆಗೆದುಕೊಳ್ಳುತ್ತಿದ್ದ ವಿಷಯ ವರದಿ ಬಂದಿತ್ತೆಂದು ಮೊದಲಾಗಿ ಉತ್ತರದಲ್ಲಿತ್ತು.

ಶ್ರೀ। ಸರ್ವೋತ್ತಮ ಪೈಗಳ ಪ್ರಶ್ನೆಗಳಲ್ಲಿ ತನ್ನ ಸಂಬಂಧಿಕರಿಗೆ ಅಧ್ಯಕ್ಷರು ಉದ್ಯೋಗ, ಕೊಟ್ಟಿಲ್ಲವೆಂದೂ, ಸದಸ್ಯರು ಅಧ್ಯಕ್ಷ ಚುನಾವಣೆಗೆ ಧರ್ಮಾರ್ಥ ಬಸ್ ತಾನು ಉಪಯೋಗಿಸಿದ್ದು ನನಗೆ ಗೊತ್ತಿಲ್ಲವೆಂದೂ ಮೊದಲಾಗಿ ಉತ್ತರ ಕೊಡಲಾಗಿತ್ತು.

ಶ್ರೀ। ಸರ್ವೋತ್ತಮ ಪೈಗಳು ಈ ಸಂದರ್ಭದಲ್ಲಿ ತನ್ನ ಪ್ರಶ್ನೆಗಳನ್ನು ಹಿಂದೆಗೆದುಕೊಂಡಿರುವೆನಾಗಿ ಹೇಳಿದರೂ, ಅಧ್ಯಕ್ಷರು ಅವುಗಳಿಗೆಲ್ಲಾ ಉತ್ತರ ಕೊಟ್ಟಿರುವುದರಿಂದ ಇನ್ನು ಮುಂದೆ ಪ್ರಶ್ನೆ ಹಾಕಿದವರಿಗೆ ಅದನ್ನು ಹಿಂದೆಗೆದುಕೊಳ್ಳಲು ಅಧಿಕಾರವಿಲ್ಲವೆಂದು ಇತರ ಸದಸ್ಯರು ಹೇಳಿದ್ದರಿಂದ ಪ್ರಶ್ನೆಗಳು ಉತ್ತರಿಸಲ್ಪಟ್ಟವು.

ಈ ಚರ್ಚೆಗಳ ಮಧ್ಯದಲ್ಲಿ ಕೇಳಿದ ಉಪಪ್ರಶ್ನೆಗಳಿಗೆ ಅಧ್ಯಕ್ಷರು ಪ್ರತ್ಯೇಕ ನೋಟೀಸು ಕೊಡಬೇಕೆಂದು ಹೇಳಿದರು.

ಪೆರ್ಡಾಲ್ ಹ್ಯಾಯರ್ ಎಲಿಮೆಂಟರಿ ಶಾಲೆಯನ್ನು ಹ್ಯಾಸ್ಕೂಲಾಗಿ ಮಾರ್ಪಡಿಸಬೇಕೆಂದು ಊರಿನವರ ವಿನಂತಿಯಿದ್ದು, ಅದಕ್ಕೆ ಬೇಕಾದ ಸಹಾಯ ತಾವು ಮಾಡುವುದಾಗಿ ಅವರು ತಿಳಿಸಿದ್ದರೂ, ಅದು ಈಗಿನ ಜಿಲ್ಲಾ ಬೋರ್ಡಿನ ಆರ್ಥಿಕ ದುಸ್ಥಿತಿಯಿಂದಾಗಿ ಅಸಾಧ್ಯವಿರುವುದರಿಂದ, ಪ್ರಕೃತ ಊರವರೇ ಅಲ್ಲಿ ತಮ್ಮ ಸ್ವಂತ ಆಡಳಿತದಿಂದ ಹೈಸ್ಕೂಲ್ ಸ್ಥಾಪನೆಗೆ ಪ್ರಯತ್ನ ಮಾಡುವ ನಿರ್ಧಾರ ಮಾಡಿರುವುದರಿಂದ, ಅವರಿಗೆ ಅಲ್ಲಿ ಹ್ಯಾಸ್ಕೂಲ್ ಆಗುವ ಕೆಲಸದಲ್ಲಿ ಜಿಲ್ಲಾ ಬೋರ್ಡಿನವರು ನೆರವನ್ನು ಕೊಡಬೇಕೆಂದೂ, ಈಗಿರುವ ಹ್ಯಾಯರ್ ಎಲಿಮೆಂಟರಿ ಶಾಲೆಯ ಆಡಳಿತವನ್ನು ಊರವರಿಗೆ ಕೊಡಬೇಕೆಂದೂ ಕೇಳಿಕೊಂಡ ಊರವರ ವಿನಂತಿಯನ್ನು ಜಿಲ್ಲಾ ಬೋರ್ಡು ಸದಸ್ಯರು ಮಾನ್ಯಮಾಡಿದರು. ಊರವರ ಪರವಾಗಿ ಬದಿಯಡ್ಕ ಹ್ಯಾಸ್ಕೂಲ್ ಸಮಿತಿ ಕಾರ್ಯದರ್ಶಿ ಡಾ। ಪಿ. ಎಸ್. ಶಾಸ್ತ್ರಿಗಳೇ ಮೊದಲಾದವರು ಹಾಜರಾಗಿದ್ದು, ಡಾ। ಶಾಸ್ತ್ರಿಗಳು ಸದಸ್ಯರ ಕೆಲವು ಸಂದೇಹಗಳಿಗೆ ಉತ್ತರವಿತ್ತು ಸಮಾಧಾನಗೊಳಿಸಿದರು. ಪೆರ್ಡಾಲಿಗೊಂದು ಹೈಸ್ಕೂಲ್ ಅವಶ್ಯವಿದೆಯೆಂದು ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿದರು.

೧೯೪೪-೪೫ ಮೊದಲ್ಗೊಂಡು ಯುದ್ಧಾಂತ್ಯದ ವರೆಗೆ ಹಳ್ಳಿಯ ಆಯುರ್ವೇದಿಕ್ ಆಸ್ಪತ್ರೆಗಳಿಗೆ ರೂ. ೩೬೦ಕ್ಕಿಂತ ಹೆಚ್ಚು ಕೊಡುವುದು ಸಾಧ್ಯವಿಲ್ಲವೆಂದಾಯಿತು. ಮೂಲ್ಕಿ ಆಸ್ಪತ್ರೆಗೆ ಬಡವರ ನಿಧಿಯಿಂದ ಕೊಡಲ್ಪಟ್ಟರೂ. ೪೦೦ರಷ್ಟು ಔಷಧಿಯನ್ನು ಮೂಲ್ಕಿ ಆಸ್ಪತ್ರೆಗಾಗಿ ಸ್ವೀಕರಿಸಲಾಯಿತು.

ಇತರ ಕೆಲವು ವಿಷಯಗಳೂ ಚರ್ಚಿಸಲ್ಪಟ್ಟವು.

ಕಂಬನಿ

ದಕ್ಷಿಣ ಕನ್ನಡ ಜಿಲ್ಲಾ ರಿಕ್ರಿಯೇಶನ್ ಆಫೀಸರರಾದ ಶ್ರೀ ಬಿ. ಮುಕುಂದ ಬಾಳಿಗರು ತಾ ೧೫ರಂದು ಮಧ್ಯಾಹ್ನ ಉಡುಪಿಯಲ್ಲಿ ಅಕಸ್ಮಾತ್ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿಯಿರಲಿ.

ಶ್ರೀರಾಮಾಂಜನೇಯ ವ್ಯಾಯಾಮ ಶಾಲಾ

ಇದರ ೧೨ನೆಯ ವಾರ್ಷಿಕೋತ್ಸವವು ತಾ. ೧೩ನೇ ಸಂಜೆ ಜಿಲ್ಲಾ ಜಡ್ಜ್ ಶ್ರೀ। ಕೋಮನರ ಅಧ್ಯಕ್ಷತೆಯಿಂದ ಜರಗಿತು. ಕಾರ್ಯದರ್ಶಿ ವರದಿಯೋದಿದರು. ದಿವಂಗತ ಎಸ್. ಸಹಾ. ರಾಮರಾಯರ ಭಾವಚಿತ್ರ ಅನಾವರಣೋತ್ಸವ ಜರಗಿತು. ಸಂಸ್ಥೆಯ ಹಿತ ಕೋರಿ ಹಲವರು ಮಾತನಾಡಿದರು.

ಮುನ್ಸಿಪಲ್ ಸಭೆ

ಕಳೆದವಾರ ಸಂಜೆ ಚೇರ್‌ಮೇನರ ಅಧ್ಯಕ್ಷತೆಯಲ್ಲಿ ಜರಗಿದಾಗ, ಶ್ರೀ। ಶಂಕರಾಳ್ವರು, ನಗರದಲ್ಲಿ ಪ್ಲೇಗ್ ಇದೆಯೇ ಎಂದು ಪ್ರಶ್ನಿಸಿದ್ದಕ್ಕೆ, ಗೋಳಿಕಟ್ಟೆ ನವಾಯತ್ ವಾರ್ಡುಗಳಲ್ಲಿ ಪ್ಲೇಗಿನ ಸೋಂಕಿರಬಹುದೆಂಬ ಸಂದೇಹ ಬಂದಿದೆಯೆಂದೂ ಅದರ ನಿವಾರಣೆಗಾಗಿ ಇಲಿಗಳನ್ನು ನಾಶಮಾಡುವ ಹಾಗೂ ಇನಾಕುಲೇಶನ್ ಮಾಡುವ ಕಾರ್ಯಕ್ರಮ ಕೈಕೊಳ್ಳಲಾಗುತ್ತಿದೆಯೆಂದೂ ಹೆಲ್ತ್ ಆಫೀಸರರು ಹೇಳಿದರು.

ಮುನ್ಸಿಪಲ್ ಕೌನ್ಸಿಲಿನವರು ಮಾರ್ಚಿಯಲ್ಲಿ ಬರುವ ಗವರ್ನರರಿಗೆ ಮಾನಪತ್ರ ಕೊಡುವ ಹಾಗೂ ಅವರಿಂದ ಶಂಕು ಸ್ಥಾಪನೆಯೊಂದನ್ನು ಮಾಡಿಸುವ ವಿಚಾರ ಆಲೋಚಿಸುತ್ತಿದ್ದಾರೆ.

ಸೈಂಟ್ ಎಗ್ನೆಸ್ ಕಾಲೇಜ್

ಇದರ ಬಹುಮಾನ ವಿತರಣ ಉತ್ಸವವು ಜಿಲ್ಲಾ ಜಡ್ಜರಾದ ಶ್ರೀ ಕೋಮನರ ಅಧ್ಯಕ್ಷತೆಯಿಂದ ಜರಗಿತು. ಬೇಗಂ ಕರಮತುಲ್ಲರು ಬಹುಮಾನವಿತರಣ ಮಾಡಿದರು. ವಿವಿಧ ವಿನೋದಾವಳಿಗಳಿದ್ದವು.

ವಿವಾಹ

ಕಳೆದ ಆದಿತ್ಯವಾರ ಪೂರ್ವಾಹ್ನ ೧೦-೩೦ಕ್ಕೆ ಬೋಳೂರು ನೇಶನಲ್ ಟೈಲ್ ಫೇಕ್ಟರಿಯ ಮಾಲಕರಾದ ಶ್ರೀ ಬಿ. ತಿಮ್ಮಪ್ಪ ಶೆಟ್ರ ಪುತ್ರ ಶ್ರೀ ಶ್ಯಾಮಸುಂದರ ಶೆಟ್ರಿಗೆ ಶ್ರೀ ಪಟ್ಟ ಮೊಗರು ನಾರಾಯಣ ಶೆಟ್ರ ಪುತ್ರಿ ಶ್ರೀಮತಿ ಕಂಜಾಕ್ಷಿಯೊಡನೆ ವಿವಾಹ ಸಮಾರಂಭವು ಅವರ ಕಾರ್ಖಾನೆಯಲ್ಲಿ ಸಂಭ್ರಮದಿಂದ ನೆರವೇರಿತು. ಮದ್ರಾಸಿನಿಂದ ಬಂದಿದ್ದ ಶ್ರೀ ಕಾಳಿಂಗ ರಾವ್ ಮತ್ತು ಪಾರ್ಟಿಯವರ ಸಂಗೀತ ಕಾರ್ಯಕ್ರಮವು ಇತ್ತು.

ಶ್ರೀ। ಕೆ. ಆರ್. ಕಾರಂತರು

ಕಳೆದ ೧೧ ವರ್ಷದಿಂದ ಸ್ಥಾನಬದ್ಧರಾಗಿರುವ ಶ್ರೀ। ಕೆ. ಆರ್. ಕಾರಂತರು ಅನಾರೋಗ್ಯದಲ್ಲಿರುವ ತಮ್ಮ ತಾಯಿಯನ್ನು ನೋಡುವ ಸಲುವಾಗಿ ಕೆಲದಿನಗಳ ಮಟ್ಟಿಗೆ ಬಂದಿದ್ದು ಬರುವ ಮಾರ್ಚಿ ಮೊದಲ ವಾರದಲ್ಲೇ ಪುನಃ ಅವರು ಸೆರೆಮನೆಗೆ ಹೋಗಬೇಕಾಗಿರುವುದೆಂದೂ ತಿಳಿಯುತ್ತದೆ.

(೧ನೇ ಪುಟದಿಂದ)

ಓಪನಿಂಗ್ ನಂ. ೯!

ಒಂಭತ್ತು! ಹ್ಹ, ಹಾ. ಹಾ, ನೋಡು ಅದು ನಂಬರ್ ಬಂದಂತೆ; ಅವರಾಗ 'ಫುಕ್ಸಾಟೆ' ಕೊಡುವುದಿಲ್ಲ. 'ಲಕ್ಕೀ ಛಾನ್ಸು' ಹೊಡೆಯ ಬೇಕಾದರೆ ಒಂದೊಂದೇ ಸಂಖ್ಯೆಗೆ ತಪ್ಪಿಸಿ ಕಟ್ಟ ಬೇಕು ಹಣ! ಹತ್ತು ಕಲ್ಲು ಹೊಡೆಯುವಾಗ ಒಂದಕ್ಕಾದರೂ ಹಣ್ಣುರುಳದೆ ಇದ್ದೀತೇ? ಅದಕ್ಕೂ ಒಂದು ವಿದ್ಯೆಯುಂಟಂತೆ; ಆ ವಿದ್ಯೆ ಕಲಿಯಬೇಕು."

"ಇಷ್ಟೆಲ್ಲಾ ಉಪದೇಶವನ್ನು ಅದಾವ ಮಹಾತ್ಮರು ಕೊಟ್ಟಿರಬಹುದೋ?"

"ಅವನೇ; ಸೂರಪ್ಪ! ಮತ್ತಾರು? ಅವ ಕುಂಟಾ ಹಣ ಸಂಪಾದನೆ ಮಾಡಿದ ಇದರಿಂದ" ಎಂದು 'ಬಿಡ್' ಮಹಾತ್ಮ್ಯೆಯನ್ನು ಮತ್ತಷ್ಟು ವಿಸ್ತಾರವಾಗಿ ವರ್ಣಿಸಿ, ಬಂಟ್ವಾಳದ ಬದನೆ ಕ್ಯಾ, ಕಾರ್ಕಳದ ಕುಂಬಳ ಕ್ಯಾ, ಮತ್ತು ಉಡುಪಿಯ ಅಮಟೇ ಕ್ಯಾ ಇವನ್ನು ಚೆನ್ನಾಗಿ ಕೊಚ್ಚಿ, ಉಪ್ಪುಕಾರ ಚಚ್ಚಿ, ಬಲವಾದ ಒಂದು ಒಗ್ಗರಣೆ ಬಿಟ್ಟೆ. ಲೀಲೆಯ ಕೋಪವು ಶಮನ ವಾಗಿ ಬುಸುಗುಟ್ಟುತಿದ್ದ ಅವಳ ಮೋರೆಯಲ್ಲಿ ನಸುನಗೆಯು ತಲೆದೋರಿತು.

"ಹೌದ್ಹೌದು; ಇದೆಲ್ಲ ಪುತ್ತೂರಿಗೆ ಹೋಗು ವುದನ್ನು ತಪ್ಪಿಸ್ಲಿಕ್ಕೆ ಹೂಡಿದ ಉಪಾಯ" ಎಂದಳು ತಿರುಗಿ. ಛೆ, ನಿನಗೆ ಹೇಳಿದಷ್ಟು ಸತ್ಯ ಕಂಡು ಬರುವುದಿಲ್ಲ. ಅದಿರಲಿ ಮತ್ತೆ ರೂಪಾಯಿ ಕೈಗೆ ಬರುವಾಗ ತಿಳಿದೀತು; ಪ್ರತ್ಯಕ್ಷಕ್ಕೆ ಪ್ರಮಾಣಬೇಕೇ? ನಿಮ್ಮಣ್ಣನ ಹುಡುಗಿ ಆ ಮೋಲ್ಕಾಣೆ ವರದಶಾಯರ ಪುತ್ರಿ ಶಾರದೆಯಲ್ಲವೆ? ನೀನವಳನ್ನು ಅದೆಷ್ಟೋ ಸಲ ತಡವೆ ನೋಡಿರ ಬಹುದು; ಇನ್ನು ಅತ್ತಿಗೆಯಾಗಿ ಬಂದ ಬಳಿಕ ಚೆನ್ನಾಗಿ ನೋಡುವಿಯಂತೆ! ಅಷ್ಟೇನು ಅವಸರ? ದೂರದೇಶದವಳೇನೂ ಅಲ್ಲವಷ್ಟೆ? ಈಗ ಅಡುಗೆ ತಯಾರಾಗಲಿ; ನನಗೆ ಹತ್ತಕ್ಕೆ ಅಲ್ಲಿ ಹೋಗ ಬೇಕು."

ಕ್ಲಪ್ತ ಕಾಲಕ್ಕೆ ನನ್ನ 'ಬಿಡ್' ಧರ್ಮದೀಕ್ಷಾ ಗುರುವಾದ ಶ್ರೀಮಾನ್ ಸೂರಪ್ಪನವರನ್ನು ಮುಂದಿಟ್ಟು ಕೊಂಡು ಶಿಂಗಳೀಕ ಪ್ರಭುಗಳಲ್ಲಿ ಹಾಜರಾದದ್ದಾಯಿತು. ಅಂಗಡಿಯ ಮುಂದೆ ಒಂದು ಜಾತ್ರೆಯ ಜನ ಸ್ತೋಮವು ಆಗಲೇ ನೆರೆದಿತ್ತು. ಇವರೆಲ್ಲ ಬಿಡ್ ಆರಾಧಕರೇ, ಇವರೊಳಗೆ ದಿನದ ಇಪ್ಪತ್ತನಾಲ್ಕು ತಾಸೂ ಊಟ, ನಿದ್ದೆಗಳಿಲ್ಲದೆ 'ಬಿಡ್ ದೇವಿಯ ಭಜನೆ ಯಲ್ಲಿ ತಲ್ಲೀನರಾದ ಕೆಲವಂದಿ ಮಹಾಭಕ್ತರೂ ಇರುವರಂತೆ. ನಾವಿಬ್ಬರು ಒಂದು ಬದಿಗೆ ಹೋಗಿ ನಿಂತೆವು. ನನ್ನ ತಲೆಯಲ್ಲಿ ನಾನಾ ವಿಚಾರಗಳು ಸುಳಿದಾಡುತಿದ್ದುವು. ಈಗ ನನ್ನ ನಂಬರ್ ಬರುವುದೋ–ಇಲ್ಲವೋ ಎಂಬ ಶಂಕೆ ಒಂದು ಪಕ್ಷ ಅದು ಬಾರದೆ–ಬೇರೆ ನಂಬರ್ ಬಂದರೇ . . . ; ಛೆ; ಸೂರಪ್ಪನ ಶಕುನ ಸುಳ್ಳಾದೀತೇ? ಆ ಹೋತಗಳೇಕೆ ಅಲ್ಲಿ ಗುದ್ದಾಡಿ ಕೊಳ್ಳಬೇಕು? ಅವೆಲ್ಲವೂ ನಮಗೆ ಅನುಕೂಲ ಲಕ್ಷಣಗಳಲ್ಲವೇ?

ಬಹಳ ಹೊತ್ತು ಕಾದು ನಿಂತಿರಲು ಜನ ಸಂದಣಿಯ ಮಧ್ಯದಿಂದ "ಓಪನಿಂಗ್ ಸತ್ತಾ!" "ಓಪನಿಂಗ್ ಸತ್ತಾ!" ಎಂಬ ಕೂಗು ಕೇಳಿಸಿತು. ಉತ್ತರ ಕ್ಷಣಕ್ಕೆ ಜನರ ನೂಕು ನುಗ್ಗಲಿಗಾರಂಭ ವಾಯಿತು.

"ಹ್ಞ; ಸತ್ತನಂತೆ ಸತ್ತ! ಯಾರು ಸತ್ತನಪ್ಪಾ! ನಾನು ಕಬ್ಬಿಬ್ಬಾಗಿ ಬಳಿಯಲ್ಲಿದ್ದವನೊಡನೆ–ಸತ್ತುದಾರೆಂದು ಕೇಳಿದೆ. ಅವನು ನನ್ನನ್ನು ನೋಡಿ ನಗುತ್ತ–"ಯಾರೂ ಸತ್ತಿಲ್ಲ, ರಾಯರೇ 'ಓಪನಿಂಗ್ ಸತ್ತಾ' ಅಂದರೆ ಓಪನಿಂಗ್ ಏಳು; ಅದು ಬಿಡ್ ಭಾಷೆ! ಹ್ಹ ಹ! ತಮ್ಗೊತ್ತಿಲ್ವೇ" ಎಂದು.

"ಏನು? ಅದಕ್ಕೂ ಭಾಷೆಯೊಂದು ಬೇರೆ ಇದೆಯೋ"?

"ಮತ್ತೆ?? ಹ್ಹಹ್ಹ, ಹಾ!" ಆವನಿಗೆ ಭಾರೀ ನಗೆ! "ಅಬ್ಬ! ಈ ದಿವಸ 'ಸತ್ತ' ಬಂದು ಬಿಟ್ಟಿತು ನೋಡಿ; ನನ್ನ ನಂಬರ್ ಅದೇ! ಎಂದ ವನೇ ಗುಂಪಿನ ಮಧ್ಯಕ್ಕೆ ನುಗ್ಗಿ ಹೋದ.

"ಸತ್ತ' ಅಂದರೆ ಒಂಭತ್ತಲ್ಲವೆ, ಸೂರಪ್ಪ?" ಎಂದು ನಾನು ಬಲಕ್ಕೆ ತಿರುಗಿದೆ. ಸೂರಪ್ಪ ನಿಲ್ಲ! ಪುನಹ ಎಡಕ್ಕೆ ತಿರುಗಿ ಮತ್ತೊಮ್ಮೆ ಕೇಳಿದೆ. ಅಲ್ಲಿ ಇರಲಿಲ್ಲ! ಅವನಾಗಲೇ ಅಂತ ರ್ಧಾನ! ಸುತ್ತಲಿದ್ದವರು ನನ್ನ ಅವಸ್ಥೆ ನೋಡಿ 'ಗೊಳ್ಳೆಂದು ನಕ್ಕರು. ನನಗೆ ತುಂಬಾ ಬೇಸ ರವಾಯಿತೆಂದು ಬೇರೆ ಹೇಳುವ ಅಗತ್ಯವಿಲ್ಲ. ಇನ್ನು–ಲೀಲೆಗೆ ಹೇಗೆ ಮುಖ ತೋರಿಸಲಿ? ಅವಳ ಮುಂದೆ ಜಂಭ ಕೊಚ್ಚಿ ಬಂದಿದ್ದವನು ಈಗ ಕೈಲಾಗದವನಂತೆ ಹೋದರೆ ನನ್ನನ್ನು ಗೇಲಿ ಮಾಡದೆ ಸುಮ್ಮನಿರುವಳೇ? ಆ ಪುತ್ತೂರಿನ ಪಯಣ; 'ಸ್ನೋ ಪಬ್ಬಿ,' 'ಅವಳ ಪಾವಲಿ' ಇವೆಲ್ಲವೂ ನನ್ನ ದೃಷ್ಟಿಯ ಮುಂದಕ್ಕೆ ಕಟ್ಟಿದಂ ತಾಯಿತು. ನಿಶ್ಶಕ್ತನಾಗಿ ತಲೆ ತಿರುಗಿ ಅಲ್ಲೇ ಜಗ ಲಿಯ ಮೇಲೆ ಕುಸಿದು ಕುಳಿತು ಬಿಟ್ಟೆ.

* * *

ಹೀಗೆ ಎಷ್ಟು ಹೊತ್ತು ಕಳೆದೆನೆಂಬ ಅರಿವು ನನಗಾಗಲಿಲ್ಲ. ಸ್ಮೃತಿ ತಪ್ಪಿ ಕುಳಿತು ಬಿಟ್ಟೆನೋ, ಅಥವಾ ಕುಳಿತಲ್ಲೇ ತೂಕಡಿಸಿ ನಿದ್ದೆ ಹೋದೆನೋ ನೆನಪಿಲ್ಲ, ಎಚ್ಚರವಾದಾಗ ಚಂದ್ರೋದಯವಾಗಿ ಒಂದೆರಡು ಗಳಿಗೆಯಾಗಿರ ಬಹುದು. ರಸ್ತೆಯಲ್ಲಿ ಜನಸಂಚಾರವು ಕಡಿಮೆ ಯಾಗಿದ್ದಿತು. ಪುಣ್ಯಕ್ಕೆ ಕೊಡೆಯೊಂದು ನಮ್ಮ ಕೈಯಲ್ಲೇ ಇತ್ತು. "ನನಗೇತಕ್ಕೆ ಬೇಕಿತ್ತು ಈ 'ಒಣ ಉಸಾಬರಿ'? ಇನ್ನವಳ (ಲೀಲೆಯ) ಬಾಯಿಯಿಂದ ಹೇಗೆ ಪಾರಾಗಲಿ?" ಎಂಬ ಚಿಂತೆಯು ತಲೆದೋರಿತು. ನನ್ನ ಗುರುವಿನ ನೆನಪಾಗಲು ನಗುವೂ ಬಂದಿತು. ಆತನ ಪಲಾಯನದ ಪಾಂಡಿತ್ಯಕ್ಕೆ ತಲೆದೂಗಿದೆ. ಲೋಕದಲ್ಲಿ ಇಂಥಾ ಗುರುಗಳು ಅನೇಕ ಮಂದಿ ಇರಬಹುದು!

ಬಹಳವಾಗಿ ಯೋಚಿಸಿದ ಮೇಲೆ ದೀರ್ಘವಾಗಿ ಆಕಳಿಸಿ, "ಹ್ಞಾ, ಈ ದಿನ ಓಪನಿಂಗ್ ಸತ್ತ! ಸೂರಪ್ಪ ಓಟಕಿತ್ತ!! ನಾವು ಇನ್ನು ಎತ್ತ???"–ಹ್ಹುಂ, ಗಂಡುಸಾಗಿ ಹೆಂಡತಿಗೆ ಹೆದರುವುದೇ? ಏನಾದರೊಂದು ಮೋಡಿ ಹೂಡಲೇ . . . ." ಎಂದು ತುಸು ಧೈರ್ಯವನ್ನು ಬಾಡಿಗೆಗೆ ಪಡೆದುಕೊಂಡು ಸೀದಾ ಮನೆಯ ದಾರಿ ಹಿಡಿದೆ.

ಮನೆಯಲ್ಲಿ ದೀಪವು ಕಾಣಿಸಿತು. ಲೀಲೆ ನನ್ನ ಹಾದಿ ನೋಡುತ್ತ ಕುಳಿತಿದ್ದಳು. ನನ್ನನ್ನು ಕಾಣುತ್ತಲೇ ಎದ್ದು–"ಏನಾಯ್ತು?" ಎಂದಳು.

"ಆಗುವುದೇನು? ನಂಬರೇ ಬರಲಿಲ್ಲ ಲೀಲಾ."

"ಅದೇನಂತೆ?"

"ಅದೇನು ಮಣ್ಣು; ಒಂದೊಂದು ಬಾರಿ ಹಾಗಾಗುವುದು. ಸಾಯಂಕಾಲದ ನಂಬರ್ ಬೆಳಿಗ್ಗೆ; ಬೆಳಗಿನದ್ದು ಸಾಯಂಕಾಲಕ್ಕೆ ಬರುವುದು. 'ಬರಲಿಲ್ಲವೇ, ಇವತ್ತು 'ಏಳು'!" ಬಿರುಗಣ್ಣಿಂದ ನನ್ನನ್ನೇ ನೋಡುತಿದ್ದಳು ಲೀಲೆ!

"ಹ್ಞ . . . ." (ಓಪನಿಂಗ್ 'ಸತ್ತಾ'!) ನನ್ನೆದೆ ಧಸಕ್ಕೆಂದಿತು, ಮೈಯಲ್ಲಿ ಬೆವರೊಡೆಯಿತು. ನಿನಗಾರು ಹೇಳಿದರು ಲೀಲಾ"?

"ಯಾರು ಹೇಳ್ಬೇಕು? ನಿಮ್ಮಂತೆಯೆ ಒಬ್ಬ 'ಬಿಡ್ ಭಕ್ತ' ನೆರೆಮನೆಯ ರಂಗಪ್ಪ! ಅಬ್ಬಾ ನಿಮ್ಮ ಸುಳ್ಳೇ!" ಎಂದು ಮೂಗಿನ ಮೇಲೆ ಬೆರಳಿಟ್ಟಳು.

"ಇಂದಿಲ್ಲವಾದರೆ ನಾಳೆ ಸರಿ, ನೋಡುವ ಎಲ್ಲಿ ಹೋಗುತ್ತದೆ ಆ ಹಣ! ಹಟ . . . . "

"ಬೇಡ, ಅಗತ್ಯವಿಲ್ಲ; ನಾಳೆ ನೋಡುವಷ್ಟೆ! ನಾನಿಟ್ಟ ಆಣೆ ಮುರಿದು ಹಾರಿಕೊಂಡು ಹೋಗಿ–ಈಗ ನಾಳೆಯಂತೆ, ನಾಳೆ! ಇನ್ನು ಮುಂದಕ್ಕೆ ನೀವು ಬಿಡ್ಡಿನ ಸುದ್ದಿ ಎತ್ತಿದ್ದೇ ಆದರೆ ಜಾಗ್ರತೆ! ಮತ್ತೆ ನನ್ನನ್ನು ದೂರ್ಬೇಡೀ! ನಿಮ್ಮ 'ಬಿಡ್ ಹುಚ್ಚು' ಇಂದೇ ಆರಂಭವಾಗಿ ಇಲ್ಲಿಗೇ ಅಂತ್ಯವಾಗಬೇಕು! ತಿಳಿಯಿತೇ?"

"ನಿನ್ನ 'ಎಂಟಾಣೆ!' ಅದನ್ನು ಬಿಡುವೆಯೋ?

"ಹೋಗ್ಲಿ ಆ ಎಂಟಾಣೆ! ಹೋದರೆ ಅಷ್ಟೇ ಸರಿ. ಮೈಮುರಿದು, ಬೆವರಿಳಿಸಿ ಸಂಪಾದಿಸಿದ ಹಣವೇ ನಮಗೆ ಯಥೇಷ್ಟ ಸಾಕು! ಮಂದಿಯ ಹಣ ಸುಲಿದು ಸುರಿಗೊಳ್ಳುವ ಆ ಹಾಳು ಜಿಡ್ಡಿಂದ ಸಿಗುವ ಸಾಮ್ರಾಜ್ಯವಾದರೂ ಬೇಡ! ನೀವು ಮರೆತಾದರೂ ಅತ್ತ ದೃಷ್ಟಿ ಹೊರಳಿಸಬಾರದು! ಹ್ಞಾ!"

ಅಲ್ಲಿ ಹಾರಿದ್ದ ನನ್ನ ಜೀವವು ಈಗ ಬಂತು. ಕಟ್ಟಾಜ್ಞೆಯಿತ್ತು ನುಡಿಯುತಿದ್ದ ನನ್ನಾಕೆಯ ಮೊಗವನ್ನೆ ಎವೆಯಿಕ್ಕದೆ ನೋಡುತಿದ್ದೆ. ಗವಾಕ್ಷದಿಂದ ಹಾದು ಒಳಬಿದ್ದ ಶುಭ್ರಚಂದ್ರ ಪ್ರಕಾಶದಲ್ಲಿ ಆ ಮಂದಸ್ಮಿತ ವದನವು ಅತ್ಯಂತ ಮನೋಹರವಾಗಿತ್ತು. ತಲೆಗಡರಿದ್ದ 'ಬಿಡ್ ಹುಚ್ಚು' ತೀರಾ ಇಳಿದು ಹೋಗಲು ನನ್ನ ಅವಿವೇಕಕ್ಕೆ ಪಶ್ಚಾತ್ತಾಪಗೊಂಡೆ. ಅವಳಾಡಿದ ಪ್ರತಿಯೊಂದು ವಾಕ್ಯವು ಅಕ್ಷರಶಃ ನಿಜವೆಂದು ತೋರಿತು. "ಲೀಲಾ ಇದೊಂದು ಜನತೆಯ ಮಂಕು ಬುದ್ಧಿ. ನೀನಂದಂತೆ ಕಾಯ ಕಷ್ಟದಿಂದ ಗೇದು ಸಂಪಾದಿಸುವುದನ್ನು ಬಿಟ್ಟು ಆಕಾಶ ಕುಸುಮವನ್ನು ಕೀಳುವ ಹವ್ಯಾಸಕ್ಕೆ ತೊಡಗಿದ್ದಾರೆ." ಎಂದೆ.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಉತ್ತಮ ಬಾರ್ ಸೋಪ್ ಇಲ್ಲಿದೆ– ಉತ್ತಮ ಒಂದು ಬಾರ್ ಸೋಪ್ ಇಲ್ಲಿದೆ ಬೇಗನೇ ನೊರೆ ಹೊರಡುವ ಬಾಳಿಕೆಯದೂ ಆಗಿದೆ. ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ.

PISTOL BRAND BAR SOAP

WANTED AGENTS IN S. KANARA DT.
Mangalore Stockists:- M/S D. Narsimha Pai & Sons, Mangalore.
Universal Industries (India) Ltd.
Nable chambers, Fort Bombay.

ಕನ್ನಡಿಗರ ಕಣ್ಮಣಿ "ಮೈಸೂರು"

1943ರಲ್ಲಿ ನಮ್ಮ ಉದ್ಯಮವು 1942ನೇ ವರ್ಷದ ಉದ್ಯಮಕ್ಕಿಂತ ಸುಮಾರು ಎರಡಂಶದಷ್ಟು ಹೆಚ್ಚಿದೆ!

ಹೊಸ ಪ್ರೀಮಿಯಂ ಹುಟ್ಟುವಳಿಯು ಕಳೆದ ವರ್ಷದ ಹುಟ್ಟುವಳಿಗಿಂತ ದ್ವಿಗುಣಿತವಾಗಿದೆ!

ಮೈಸೂರು, ಮಂಡ್ಯ, ದಾವಣಗೆರೆ, ಉತ್ತರ ಕನ್ನಡ, ಹುಬ್ಬಳ್ಳಿ, ಕೊಲ್ಹಾಪುರ, ಶೋಲಾಪುರ, ಗುಲ್ಬರ್ಗಾ, ವೆಲ್ಲೂರು, ಕೊಯಮುತ್ತೂರು, ಮತ್ತು ವೀರರಾಜಪೇಟೆಗಳಲ್ಲಿ ಸಮರ್ಥವಾದ ಮತ್ತು ಸುವ್ಯವಸ್ಥಿತವಾದ ಆರ್ಗನೈಜೇಷನ್ ಮತ್ತು ಸಬ್ ಆಫೀಸುಗಳೂ ಸ್ಥಾಪಿತವಾಗಿವೆ.

ನಮ್ಮ ಸಂಸ್ಥೆಯು ಪ್ರಥಮ ಮೌಲ್ಯಮಾಪನದಲ್ಲಿಯೇ ಲಾಭಾಂಶವನ್ನು ಗಳಿಸಿದೆ!

(ಸಶಾಸ್ತ್ರೀಯವಾದ ಪ್ರಾವಿಡೆಂಟ್ ಉದ್ಯಮ ನಡೆಸಲು ಸಂಸ್ಥಾನದಲ್ಲಿ ಸ್ಥಾಪಿತವಾದ ಮೊಟ್ಟ ಮೊದಲನೆಯ 'ಮೈಸೂರು ಪ್ರಾವಿಡೆಂಟ'ನ್ನು ಮರೆಯಲಾಗದು!)

ಕ್ಷೇತ್ರೋದ್ಯಮಿಗಳಿಗೆ ಅಪೂರ್ವಯೋಗ! ಸುಸಂಧಿ!

ಪ್ರತಿನಿಧಿಗಳಿಲ್ಲದಿರುವೆಡೆಗಳಲ್ಲಿ ಇನ್‌ಸ್ಪೆಕ್ಟರ್, ಆರ್ಗನೈಜರ್ ಮತ್ತು ಸ್ಪೆಷಲ್ ಏಜಂಟರಾಗ ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:–

ಜನರಲ್ ಮ್ಯಾನೇಜರ್,

ದಿ ಮೈಸೂರು ಇನ್‌ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಲಕ್ಷ್ಮೀ ಸ್ಥಾನಂ — ಲಾಲ್‌ಬಾಗ್ ಕೋಟೆರಸ್ತೆ — ಬೆಂಗಳೂರು ನಗರ

ಪುಸ್ತಕಾವಲೋಕನ

ಕವನ ಸಂಗ್ರಹಗಳು

ರಾಗವಿಲಸನ (ಕವನ ಸಂಗ್ರಹ) ಕವಿ ಧನ್ವಂತ — ಶ್ರೀಮಾನ್ ದೇವುಡುರವರ ಮುನ್ನುಡಿಯೊಡನೆ. ಪ್ರಕಾಶಕರು ಎಚ್. ಎನ್ ರಾವ್ ಬ್ರದರ್ಸ್, ಚಿಕ್ಕಪೇಟೆ ಬೆಂಗಳೂರು, ನಗರ ಕ್ರೌನ್ ೧/೮ ಆಕಾರದ ೬೪ ಪುಟಗಳು. ಬೆಲೆ ಹನ್ನೆರಡಾಣೆ.

'ಧನ್ವಂತ' ಇವರು ಇತ್ತೀಚೆಗೆ ಅಲ್ಲಲ್ಲಿ ಪತ್ರಿಕೆಗಳಲ್ಲಿ ಕೆಲವು ಕವಿತೆಗಳನ್ನು ಬರೆದು ಸಾಹಿತ್ಯ ಲೋಕಕ್ಕೆ ಪರಿಚಿತರಾದ ಹೊಸ ಕವಿಗಳು. ಅಂತೆಯೇ ಇವರ ಪುಸ್ತಕಕ್ಕೆ ಶ್ರೀಮಾನ್ ದೇವುಡು ಇವರು ಮುನ್ನುಡಿ ಬರೆದು ಆಶೀರ್ವದಿಸಿದ್ದಾರೆ. ಶ್ರೀ ರಾಘವೇಂದ್ರರ ಹೊದಿಕೆ ಚಿತ್ರ ಚೆನ್ನಾಗಿದೆ.

ಈ ಕವನ ಸಂಗ್ರಹದಲ್ಲಿ ಒಟ್ಟು ೪೯ ಚಿಕ್ಕ ಪುಟ್ಟ ಕವನಗಳಿವೆ. ಭಾವಗೀತೆಗಳೇ ಹಲವು ಪ್ರೇಮ ಗೀತೆಗಳೂ ಕೆಲವಿವೆ; ಪ್ರಕೃತಿಗೀತಗಳು ಕಥಾ ಕವನಗಳೂ ಇಲ್ಲದಿಲ್ಲ. ಆಧುನಿಕ ಕವಿಗಳವರು, ಆಧುನಿಕ ಕಾಲದ ಕವಿಗಳಿಗೆ ಸಹಜವಾದ ವಸ್ತು—ತತ್ತ್ವ—ಭಾಗಗಳನ್ನು ಆರಿಸಿಕೊಂಡು ಕವಿತೆಗಳನ್ನು ಕಟ್ಟಿದ್ದಾರೆ, ಸಾಧ್ಯವಾದಷ್ಟು ಚನ್ನಾಗಿಯೇ ಈ ಕೆಲಸವನ್ನು ಅವರು ಮಾಡಿದ್ದಾರೆ.

ಹೊರ ಹೊದಿಕೆ ಸಚಿತ್ರವಿದ್ದು ಚೆನ್ನಾಗಿವೆ ಒಳಗಿನ ಕಾಗದ ಮಾತ್ರ ಕವನ ಸಂಗ್ರಹಕ್ಕೆ ಸಾಕಷ್ಟು ಚೆನ್ನಾಗಿಲ್ಲವೆನ ಬೇಕು, ಇದು ಪ್ರಕಾಶಕರು ಗಮನಿಸ ಬೇಕಾದ ವಿಷಯ

ಈ ಕವನ ಸಂಗ್ರಹದಲ್ಲಿ ಕಂಡು ಬರುವ 'ಧನ್ವಂತ'ರ ಪ್ರಯತ್ನ, ಉತ್ಸಾಹ ಆಶೆಗಳು ಅವರ ಮುಂದಿನ ಕೃತಿಗಳಲ್ಲಿ ಇನ್ನೆಷ್ಟು ಉಜ್ವಲವಾಗಿ ಬೆಳಗಲೆಂದು ಬಯಸಿ ಈ ಕವನ ಸಂಗ್ರಹವನ್ನು ಕನ್ನಡ ನಾಡಿನ ಜನರು ಅವಶ್ಯ ಪ್ರೋತ್ಸಾಹಿಸಬೇಕೆಂದು ನಾವು ಹಾರೈಸುವೆವು

ಮುಡಿಪು. (ಕವನ ಸಂಗ್ರಹ) ಮುಡಿಸಿದವರು (?) 'ಕಿರಿಯರು ಉಡುಪಿಯ ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನ ಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಪ್ರಕಾಶಕರು ಕಲಾಮೃತ ಪ್ರಕಟಣಾಲಯ, ಉಡುಪಿ ಕ್ರೌನ್ ೧/೮ ಆಕಾರದ ಪುಟಗಳು ೧೭, ಬೆಲೆ ನಾಲ್ಕಾಣೆ

ಮೊನ್ನೆ ತಾನೇ ಉಡುಪಿಯಲ್ಲಿ ಜರಗಿದ ಕಿರಿಯರ ಸಮ್ಮೇಳನ ಕಾಲದಲ್ಲಿ ಅಲ್ಲಿನ ಕಿರಿಯ ಕವಿಗಳು ಕೆಲವರು ತಮ್ಮ ಕವಿತಾಸಂಗ್ರಹವನ್ನು ಮುದ್ರಿಸಿ ಪ್ರಕಟಿಸಿದ್ದಾರೆ ಇದರಲ್ಲಿ ಒಟ್ಟು ೧೨ ಕಿರಿಯರ ಕವನಗಳಿವೆ

ಇದರಲ್ಲಿ ಭಾವ ಗೀತೆಗಳು, ನಾಡ ಗೀತೆಗಳು, ಬಾಲ ಗೀತೆಗಳು ಇನ್ನು ಶೃಂಗಾರ ಗೀತೆಗಳೂ ಇವೆ ಎಳೆ ಪ್ರಾಯದ ಹರೆಯುವೇರುವ ಕಿರಿಯರ ಮನದ ಆಸೆಗಳು ಇಲ್ಲಿ ಒಡಮೂಡಿದ್ದನ್ನು ನೋಡಬಹುದು

ಕಿರಿಯರೀ ಪ್ರಯತ್ನವು ಪ್ರಶಂಸನೀಯ ಜಾಹೀರಾತು ಹಾಕಿ ಪುಸ್ತಕದ ವೆಚ್ಚ ಸಂಪಾದಿಸಿದ ಅವರ ವ್ಯವಹಾರಿಕ ಬುದ್ಧಿಯೂ ಹೊಗಳತಕ್ಕದ್ದಿದೆ ಈ ಕಿರಿಯ ಕವಿಗಳು ಮುಂದೆ ಉತ್ತಮ ಕವಿಗಳಾಗಿ ನಮ್ಮ ನಾಡಿನ ಕೀರ್ತಿ ಕಮಲಗಳಾಗಿ ಅರಳಲಿ

ಭಾರತ ಶಕ್ತಿ (ಗೀತಾ ನಾಟಕ) ಬರೆದವರು ಕವಿ ವೆಂಕಣ್ಣ—ಬೆಂಗಳೂರಿನ ಪ್ರಗತಿಶೀಲ ಸಾಹಿತ್ಯ ಸಂಘದವರ ಪ್ರಕಟಣೆ ಬೆಲೆ ಮೂರಾಣೆ.

ಶ್ರೀ ವೆಂಕಣ್ಣನವರು ಕೆಲ ಕಾಲದಿಂದ ಕನ್ನಡ ಸಾಹಿತ್ಯ ಲೋಕದಲ್ಲಿ ಕತೆ, ಕವಿತೆ ಲೇಖನಗಳ ಮೂಲಕ ದುಡಿಯುತ್ತಿದ್ದಾರೆ. ಅವರ ಕಲಾಭಿಮಾನ, ಸಾಹಿತ್ಯಾಭಿರುಚಿ, ಸ್ವಾತಂತ್ರ್ಯ ಧ್ಯೇಯಗಳ ಪರಿಚಯವನ್ನು 'ಭಾರತ ಶಕ್ತಿ' ಯೆಂಬೀ ಗೀತಾ ನಾಟಕವು ಮಾಡಿಕೊಡುವುದು

ಈ ಗೀತಾ ನಾಟಕದಲ್ಲಿ ಇಂದಿನ ಅನ್ನದ ಸಮಸ್ಯೆ, ರೈತನ ವಿಚಾರ, ಭಂಡವಾಳಗಾರನ ವಿಚಾರ, ನೌಕರ ಶಾಹಿ ಪ್ರಭುತ್ವದ ವಿಚಾರ ಇವೆಲ್ಲಾ ವಿವೇಚಿಸಲಾಗಿದೆ. ಪರದೆಯ ಹಿಂದಿನಿಂದ ಇದನ್ನು ಹಾಡಿದಂತೆ ಮುಂದೆ ನಟನೆ ನಡೆಯಬೇಕು; ಆಗ ಇದರ ಸ್ವಾರಸ್ಯ ಹೆಚ್ಚಾಗುವುದು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಪ್ಲೇಗು ರೋಗದ ಸಂದೇಹ

ಮಂಗಳೂರು ಪಟ್ಟಣದ ೮ ಮತ್ತು ೯ನೇ ವಾರ್ಡುಗಳಲ್ಲಿ ಇಲಿಗಳು ಬೀಳುತ್ತವೆ. ಮನುಷ್ಯರಿಗೂ ಪ್ಲೇಗು ತಗಲಿರಬಹುದು ಎಂಬ ಸಂದೇಹವುಂಟಾದುದರಿಂದ, ಪ್ಲೇಗು ಹರಡದ ಹಾಗೆ ಪ್ರತಿಬಂಧಕ ಉಪಾಯಗಳನ್ನು ಈಗಲೇ ಮಾಡಿಕೊಂಡು ಮುಂಜಾಗ್ರತೆಯಿಂದ ಇರುವುದು ಲೇಸು. ಈ ಪರವಾಗಿ ಮುನಿಸಿಪಲ್ ಹೆಲ್ತ್ ಇಲಾಖೆಯು ಇಲಿಗಳನ್ನು ಗೂಡುಗಳಲ್ಲಿ ಹಿಡಿದು ಕೊಲ್ಲುವುದು, ಇಲಿಗಳ ಬಿಲಗಳಲ್ಲಿ ಸಯಾನೋ ಗ್ಯಾಸ್‌ನ್ನು ಹೊಡೆದು ಇಲಿಗಳನ್ನು ಕೊಲ್ಲುವುದು; ಇಲಿಗಳು ಬೀಳುತ್ತವೆ ಎಂಬ ಸಂದೇಹವಿರುವ ಸ್ಥಳಗಳನ್ನು ಶುಭ್ರಪಡಿಸುವುದು, ಮಾರ್ಗಗಳನ್ನು ಸಂದುಗಳನ್ನು ಅಲ್ಲದೆ ಖಾಸಗಿ ಸ್ಥಳಗಳನ್ನು ಕೂಡಾ ಗುಡಿಸಿ ಜಮೆಯಾದ ಕಸಕಡ್ಡಿಗಳನ್ನು ಎತ್ತಿ ಹಾಕಿ ಸ್ವಚ್ಛಪಡಿಸುವುದು; ಜನರಿಗೆ ಪ್ಲೇಗು ಪ್ರತಿಬಂಧಕ ವಿಷಯದಲ್ಲಿ ಅಗತ್ಯವಿದ್ದ ಉಪದೇಶ ಮಾಡುವುದು ವಗೈರೆ ನಿವಾರಣೋಪಾಯಗಳನ್ನು ಮಾಡುತ್ತಾ ಇದೆ. ಈ ಸಂದರ್ಭದಲ್ಲಿ ಸಾರ್ವಜನಿಕ ಸಹಾಯವೂ ಸಹಕಾರವೂ ಅತ್ಯಾವಶ್ಯವಿರುತ್ತದೆ. ಈ ಕೆಳಗಿನ ಸೂತ್ರಗಳನ್ನು ಎಲ್ಲರೂ ಅನುಸರಿಸುವುದು ಒಳ್ಳೆಯದು.

೧. ತಮ್ಮ ತಮ್ಮ ಮನೆಗಳಲ್ಲಿ ಸ್ವಂತ ಗೂಡುಗಳನ್ನಿಟ್ಟು ಆದಷ್ಟು ಇಲಿಗಳನ್ನು ಕೊಲ್ಲುವುದು.

೨ ಇಲಿಗಳ ಬಿಲಗಳು ಇದ್ದಲ್ಲಿ ಹೆಲ್ತ್ ಆಫೀಸರರಿಗೆ ಬರೆದು ಅವುಗಳಲ್ಲಿ ಗ್ಯಾಸು ಹೊಡಿಯುವ ಏರ್ಪಾಡು ಮಾಡುವುದು.

೩. ತಮ್ಮ ತಮ್ಮ ಮನೆಗಳನ್ನು ಶುಭ್ರಪಡಿಸುವುದು.

೪. ಮನೆ ಒಳಗಿನ ಸಾಮನುಗಳನ್ನು ತೆಗೆದು ಬಿಸಿಲಿಗೆ ಹಾಕಿ ಎರಡು ಮೂರು ದಿವಸ ಒಣಗಿಸುವುದು.

೫. ಮನೆಗಳ ಸುತ್ತು ಮುತ್ತು ಮತ್ತು ಚಿತ್ತಲನ್ನು ಶುಭ್ರಪಡಿಸುವುದು.

೬. ಪ್ಲೇಗಿನ ದಾಕು ಹಾಕಿಸಿಕೊಳ್ಳುವುದು.

೭. ಇಲಿಗಳು ಬಿದ್ದ ಯಾ ಬೀಳುತ್ತವೆ ಎಂಬ ಸಂಶಯವಿರುವ ಸ್ಥಳಗಳಿಗೆ ಹೋಗದಿರುವುದು, ವ ಅಂಥಾ ಸ್ಥಳದಿಂದ ಯಾವ ತರದ ಸಾಮಗ್ರಿಗಳನ್ನು ತಮ್ಮಲ್ಲಿಗೆ ತಾರದಿರುವುದು.

೮. ಇಲಿಗಳು ಬಿದ್ದ ಒಡನೆಯೇ ಹೆಲ್ತ್ ಇಲಾಖೆಯವರಿಗೆ ತಿಳಿಸುವುದು

೯. ಇಲಿ ಬಿದ್ದ ಸಮಾಚಾರವನ್ನು ಎಂದೆಂದಿಗೂ ಮುಚ್ಚಿಡದೆ ಇರುವುದು.

೧೦. ಮನೆಯಲ್ಲಿ ಯಾರಿಗಾದರೂ ವಿಶೇಷ ತರದ ಜ್ವರವು ಬಂದರೆ ಇದರೊಂದಿಗೆ ಗ್ರಂಥಿಗಳು ಬಾತಿದ್ದರೆ, ಕೂಡಲೇ ಹೆಲ್ತ್ ಇಲಾಖೆಯವರಿಗೆ ತಿಳಿಸುವುದು.

ಸರ್ವ ಜನರೂ ಮೇಲೆ ಹೇಳಿದಂತೆ ಜಾಗರೂಕತೆಯಿಂದ ನಡ ಕೊಂಡರೆ, ನಮ್ಮ ಪಟ್ಟಣಕ್ಕೆ ಬರಲಿಕ್ಕಿರುವ ದೊಡ್ಡ ಆಪತ್ತಿನಿಂದ ನಾವೆಲ್ಲರೂ ವಿಮುಕ್ತರಾಗಬಹುದು

ಬಿ ಸುಬ್ರಾಯ ಬಾಳಿಗ,
ಮುನಿಸಿಪಲ್ ಹೆಲ್ತ್ ಆಫೀಸರ್.

ಮುನಿಸಿಪಲ್ ಹೆಲ್ತ್ ಆಫೀಸು,
ಮಂಗಳೂರು ತಾ 11-2-'44

ಮೊನ್ನೆಯ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಕಾಲದಲ್ಲಿದು ಪ್ರಕಟವಾಯಿತು ಕನ್ನಡಿಗರೆಲ್ಲರೂ ಈ ಪ್ರಗತಿಶೀಲ ಸಾಹಿತ್ಯವನ್ನು ಅವಶ್ಯವಾಗಿ ಓದಬೇಕು, ಪ್ರೋತ್ಸಾಹಿಸಬೇಕು

'ಶ್ರೀ'

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs As Ps
1 Paid up Capital	12 95,970- 0- 0
2 Reserves	3 83 379- 1- 6
3 Deposits	61 66 927- 6- 0
4 Bills for collection	5 53 548- 6- 1
5 Sundries including revenue items	7 00 981- 0- 5
6 Profits for the year ending 31-12-1943	1 08 522- 4- 0
Total	92 09,328- 2- 0

ASSETS	Rs As Ps
1 Cash on hand & with bankers	18 26 986- 3- 8
2 Investments on (1) Govt Securities (2) Immovable properties etc	26 04 671- 6- 8
3 Loans on Jewels & other valuable securities	23 72 302- 8- 7
4 Loans on personal securities & Bills purchased	16 74 482 14- 8
5 Bills for collection as per contra	5 53 548 6- 1
6 Office premises furniture etc	93 251- 0- 0
7 Sundries including revenue items	84 085-10- 4
Total	92,09,328- 2- 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. ***BRANCHES*** Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDeposits 6 months 2½% p. a.
12 months 3% p. a.
24 months 3½% p. a.

The Bank al o accepts Season and short term deposits and many other ucrative schemes at most favourable rates of interest. Forl terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits" free of any cost.

Payment of double the insured amount in case of death by accident at a very small cost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ್ತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ
ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 25—2—1944 [ಸಂಚಿಕೆ 8]

ಸಮ್ಮೇಳನ ಸಂಚಿಕೆ

ಪತ್ರಿಕೋದ್ಯಮಕ್ಕೆ ಕಾಂಗ್ರೆಸು ಮಹತ್ ಶಕ್ತಿ ನೀಡಿದೆ

ಅ. ಕ. ಪತ್ರಿಕೋದ್ಯೋಗೀ ಸಮ್ಮೇಳನದಲ್ಲಿ

ಅಧ್ಯಕ್ಷ ಶ್ರೀ. ಸಿ. ಆರ್. ಶ್ರೀನಿವಾಸನರ ಭಾಷಣ

'ಭಾರತದಲ್ಲಿ ಆದಿಕಾಲದ ಪತ್ರಿಕೆಗಳ ಪ್ರಭಾವದ ಕುರಿತು ಯಾರಾದರೂ ಏನೂ ಪ್ರಾಧಾನ್ಯತೆ ಕೊಡದಿದ್ದರೂ, ಕಾಂಗ್ರೆಸು ಜನ್ಮವೆತ್ತಿದ ಬಳಿಕ ಪತ್ರಿಕೆಯು ಸಾರ್ವಜನಿಕ ಜೀವನದಲ್ಲಿ ಮಹತ್ವದ ಪ್ರಭಾವ ಬೀರುವಂತೆ ಮಾಡಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಕಾಂಗ್ರೆಸು ವಿರೋಧಾಭಿಪ್ರಾಯದ ಪತ್ರಿಕೆಗಳಾದರೂ ಅವುಗಳೂ ಕೂಡಾ ಶಕ್ತಿ ಸಾಮರ್ಥ್ಯವನ್ನು ಕಾಂಗ್ರೆಸಿನಿಂದಲೇ ಪಡೆದವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಭಾರತದ ರಾಜಕಾರಣಿಗಳ ಉದ್ದೇಶ ಮತ್ತು ಮಹತ್ವಾಕಾಂಕ್ಷೆಗಳಿಗೆ ಕಾಂಗ್ರೆಸು ಬೇಕಾದ ಪುಷ್ಟಿಯನ್ನು ಕೊಟ್ಟಿತು. ಇಂದೂ ಕೂಡಾ ಅದೊಂದು ಅತೃಪ್ತಿಯ ಸಂಸ್ಥೆ; ಇಂದಿನ ರಾಜ್ಯಭರಣದ ಉನ್ನತಿಯ ಬಗ್ಗೆ ಅದು ದಂಗೆ ಹೂಡುತ್ತದೆ: ಏಕೆಂದರೆ ರಾಜ್ಯಭರಣವನ್ನು ಉತ್ತಮಗೊಳಿಸಬೇಕೆಂದು ಅದರ ಆಶೆ. ಕಾಂಗ್ರೆಸಿನ ಈ ಅತೃಪ್ತಿ ಹೋರಾಟಗಳಿಂದಾಗಿಯೇ ಭಾರತದ ಪತ್ರಿಕೆಗಳೂ ಕೂಡಾ ಒಂದು ರೀತಿಯಲ್ಲಿ ಭಾರತದ ಜನಮನವನ್ನು ಬೆಳಗಿಸುತ್ತಾ ಬಂದವು. ಸುಧಾರಣೆಗಳಿಗಾಗಿ ಚಳವಳ ಹೂಡಿದವು. ಸ್ವಲ್ಪ ಸುಧಾರಣೆ ಕೊಟ್ಟದ್ದು ಹೆಚ್ಚಿನ ಆಶೆಯನ್ನುಂಟುಮಾಡಿತು. ತನ್ನ ಗುರಿಯನ್ನು ಸ್ಪಷ್ಟಪಡಿಸಲು ಕಾಂಗ್ರೆಸಿಗೆ ಇಪ್ಪತ್ತು ವರ್ಷ ಹಿಡಿಯಿತು. ಆ ಮೇಲೆ ಅದರ ಹೋರಾಟ ಪ್ರಬಲವಾಯಿತು. ಸುಧಾರಣೆ ಮತ್ತು ದಬ್ಬಾಳಿಕೆಗಳ ನಡುವೆ ಕಾಂಗ್ರೆಸು ಹೂಡಿದ ಹೋರಾಟ ಇಂದಿಗೂ ಮುಂದುವರಿಯುತ್ತಿದೆ. ನಾನು ಕಾಂಗ್ರೆಸಿನ ಕಾರ್ಯನೀತಿಯನ್ನು ಇಲ್ಲಿ ವಿವರಿಸುವುದು ಅವಶ್ಯವಿಲ್ಲದಿದ್ದರೂ, ಕಾಂಗ್ರೆಸಿನ ಪ್ರಭಾವದಿಂದಾಗಿ, ಭಾರತದ ಪತ್ರಿಕಾ ಲೋಕದಲ್ಲಿ ಎಂಥಾ ಶಕ್ತಿ ಹುಟ್ಟಿತೆಂಬುದನ್ನು ತಿಳಿಸಲು ಇಚ್ಛಿಸುತ್ತೇನೆ' ಹೀಗೆಂದು, ಮಂಗಳೂರಲ್ಲಿ ತಾ. ೧೯ರಲ್ಲು ಸೇರಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮದ್ರಾಸ್ 'ಸ್ವದೇಶ ಮಿತ್ರನ್' ಸಂಪಾದಕರಾದ ಶ್ರೀ. ಸಿ. ಆರ್. ಶ್ರೀನಿವಾಸನರು ಭಾಷಣಮಾಡುತ್ತಾ ಹೇಳಿದರು

ಶ್ರೀ ಸಿ. ಆರ್. ಶ್ರೀನಿವಾಸನರ ಅಧ್ಯಕ್ಷ ಭಾಷಣ ಇತರ ಕೆಲವು ವಿವರಗಳು ಇಂತಿವೆ:

'ಭಾರತದ ಪತ್ರಿಕೋದ್ಯಮದ ಇತಿಹಾಸವು ರಾಜ್ಯಘಟನೆಯ ಇತಿಹಾಸವನ್ನು ಅಭ್ಯಾಸ ಮಾಡುವವರಿಗೆ ಅತ್ಯಂತ ಮನೋಹರವಾದ ವಿಷಯಗಳನ್ನು ಒದಗಿಸುತ್ತದೆ. ಇತಿಹಾಸ ಸಂಶೋಧಕರಿಗೆ ಇದರಲ್ಲಿ ವಿಪುಲ ಸಾಧನಗಳಿರುತ್ತವೆ. ಈ ರಾಷ್ಟ್ರದಲ್ಲಿ ಪತ್ರಿಕೋದ್ಯಮ ಹೇಗೆ ಬೆಳೆಯಿತು ಎಂಬುದನ್ನು ನಾನಿಲ್ಲಿ ತುಸು ವಿಚಾರಿಸುತ್ತೇನೆ ಮಾತ್ರ. ಪ್ರಾರಂಭವಾಗಿ ಹೇಳುವುದಿದ್ದರೆ, ಭಾರತದ ಪತ್ರಿಕೋದ್ಯಮವು ಆಂಗ್ಲ ಪತ್ರಿಕೋದ್ಯಮದ ಮರಿಯಾಗಿ ಇಲ್ಲಿ ಬೆಳೆಯಿತು; ಇತರ ಬ್ರಿಟಿಷ್ ಸಂಸ್ಥೆಗಳೊಡನೆ, ಅದೂ ಕೂಡಾ ಜಾನ್ ಕಂಪೆನಿಯ ಕಾಲದ ಇತರ ಸಾಹಸಗಳಂತೆ ಯಾವುದೇ ಮುಂದಿನ ಧೋರಣವಿಲ್ಲದ್ದಾಗಿ ಆಗ ಸೃಷ್ಟಿಯಾಯಿತು. ಈ ಪ್ರಾರಂಭ ಕಾಲದಲ್ಲಿ ಈ ಪತ್ರಿಕೆಗಳು ರಾಷ್ಟ್ರೀಯ ಜನತೆಗೆ ಏನೂ ಪ್ರಯೋಜನ ಬೀರಲಿಲ್ಲ. ಜೇಮ್ಸ್ ಹಿಕ್ಕಿ ಮತ್ತು ಸಿಲ್ಕ್ ಬಕ್ಕಿಂಗಾಮ್ ಇವರಿಬ್ಬರು ಭಾರತದಲ್ಲಿ ಪತ್ರಿಕೋದ್ಯಮ ಪ್ರಾರಂಭಿಸಿದವರು. ಈ ಊರಿನ ಜನತೆಗೆ ಅದರಿಂದ ಏನಾದರೂ ಪ್ರಯೋಜನ ಮಾಡಬೇಕೆಂಬ ಹಂಚಿಕೆ ಇಟ್ಟುಕೊಂಡೇ ಇರಲಿಲ್ಲ. ಅವರಿಗೆ ತನಗೆ ದ್ರವ್ಯಪದವಿ ಸಿಗಬೇಕೆಂಬೀ ಸ್ವಾರ್ಥಮಾತ್ರವಿತ್ತಲ್ಲದೆ ದೇಶಕ್ಕೆ ಹಿತ ಮಾಡಬೇಕೆಂದೇನೂ ಇರಲಿಲ್ಲ.

'ಪ್ರಥಮತಃ ನಾಡಿನ ಜನತೆಯ ಅಭಿವೃದ್ಧಿಯ ಕೂಗು ಎಬ್ಬಿಸಿದವರು ಕ್ರಿಶ್ಚಿಯನ್ ಮಿಶನರಿಗಳು, ಆದರೆ ಅವರ ಕಾರ್ಯವೂ ಅಷ್ಟೊಂದು ಫಲಕಾರಿಯಾಗಿಲ್ಲ. ಜಾನ್ ಕಂಪನಿಯವರು ಆಗ ತಮ್ಮ ಸಾಮ್ರಾಜ್ಯ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದರು. ವ್ಯಾಪಾರವು ಆಗ ಪ್ರಾಮುಖ್ಯ ಸಾಧನವಾಗಿ ಆ ಮೂಲಕ ಸರಕಾರದ ಸೂತ್ರವೂ ತಮ್ಮ ಕೈಗೆ ಬರುವುದೆಂದು ತಿಳಿಯಲಾಗಿತ್ತು. ತಮ್ಮ ವ್ಯಾಪಾರ ಮತ್ತು ಸಾಮ್ರಾಜ್ಯ ಲಾಲಸೆಯಿಂದ ಅವರು ಮಾಡಿದ ಕಾರ್ಯ ಧೋರಣೆಗಳು ಕಾನೂನು ಮತ್ತು ನ್ಯಾಯ ಇವೆರಡಕ್ಕೂ ಬಾಹಿರವಾದುವೂ ಇದ್ದವು. ಹೇಗಾದರೂ ೧೯ನೇ ಶತಮಾನದಲ್ಲೂ ಅವರ ಮೇಲಿನ ಟೀಕೆಗಳು ಹತ್ತಿಕ್ಕಲ್ಪಟ್ಟು ಅವರ ಸಾಮ್ರಾಜ್ಯ ಕಟ್ಟುವ ಕೆಲಸವೇ ಮುಂದುವರಿಯಿತು; ಇಂದು ೨೦ನೇ ಶತಮಾನದಲ್ಲೂ ಪತ್ರಿಕೆಗಳ ಟೀಕೆ ಹತ್ತಿಕ್ಕಲ್ಪಟ್ಟು ಆ ಕೆಲಸ ಸಾಗುತ್ತಾ ಇರುವಂತೆಯೇ. ಹೀಗೆ ಭಾರತದ ರಾಜ್ಯಭರಣ ಬ್ರಿಟಿಷ್ ಚಕ್ರವರ್ತಿಗಳ ಕೈಗಳಿಗೆ ಹೋದಮೇಲೆ ಒಬ್ಬರೊಡನೆ ಕೂಗಬೇಕಾಗಿ ಬಂದುದರಿಂದ ಒಂದು ರೀತಿಯ ಗೊಂದಲಮಯ ವಾತಾವರಣವೇನೋ ತಪ್ಪಿದಂತಾಯಿತು.

'ವಿದೇಶೀ ಆಕ್ರಮಣದಲ್ಲಿ ಅದು ಬಹುಶಃ ಅನಿವಾರ್ಯವೇ. ಪ್ರಾರಂಭ ಕಾಲದಲ್ಲಿ ಆಂಗ್ಲ ಇಂಡಿಯನ್ ಪತ್ರಿಕೆಗಳು ಹೋರಾಟ ನಡೆಸಿದವು, ದೇಶೀಯ ಪತ್ರಿಕೆಗಳು ಆಗ ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಹುಟ್ಟಿದವು. ಭಾರತವು ಬ್ರಿಟಿಷ್ ಸಾರ್ವಭೌಮರ ಕೈಕೆಳಗೆ ಹೋದ ಮೇಲೆ ಆಂಗ್ಲ ಇಂಡಿಯನ್ ಪತ್ರಿಕೆಗಳು ತಮ್ಮ ಹೋರಾಟವನ್ನು ಕಡಿಮೆ ಮಾಡಿದವು ಆದರೊಂದಿಗೆ ಸರಕಾರವು ಮತ್ತು ಅಂಥಾ ಪತ್ರಿಕೆಗಳ ಹಿತಸಂಬಂಧವೇ ಬೆಳೆಯಿತು. ದೇಶೀಯ ಪತ್ರಿಕೆಗಳು ಪ್ರಬಲ ಹೊಂದಿದಂತೆ ಮೇಲಿನ ಆ ಸಂಬಂಧ ಮತ್ತಷ್ಟು ಬೆಳೆದು, ಹಿಂದೆ ಜನತೆಯ ಪತ್ರಿಕೆಗಳಾಗಿದ್ದ ಆಂಗ್ಲ ಇಂಡಿಯನ್ ಪತ್ರಿಕೆಗಳು ಸರಕಾರದ ಪತ್ರಿಕೆಗಳಾಗಿ ಮಾರ್ಪಟ್ಟವು. ಪ್ರಾರಂಭದಲ್ಲಿ ಆಂಗ್ಲ ಇಂಡಿಯನ್ ಪತ್ರಿಕೆಗಳಿಗೆ ಹೀಗೆ ಸರಕಾರದ ಬೆನ್ನು ತಟ್ಟುವುದು ಹಿತವಾಗಿತೋರಿದರೂ, ಜನತೆಯ ಬೆಂಬಲವನ್ನು ಅವು ದಿನದಿಂದ ದಿನಕ್ಕೆ ಕಳಕೊಳ್ಳಲೇಬೇಕಾಗಿ ಬಂದಿತು. ಭಾರತದ ಪತ್ರಿಕೋದ್ಯೋಗದ ಇತಿಹಾಸವು ಇದಕ್ಕೆ ಬೇಕಾದಷ್ಟು ಆಧಾರ ಕೊಡುತ್ತದೆ. 'ಪಯೊನೀಯರ್' ಪತ್ರಿಕೆ ಒಂದು ಕಾಲದಲ್ಲಿ ಆಂಗ್ಲ ಇಂಡಿಯನ್ ಆಗಿದ್ದದ್ದು ಭಾರತೀಯರ ಕೈಗೆ ಬಂತು; 'ಇಂಗ್ಲಿಷ್ ಮನ್' ಅಸ್ತಿತ್ವವನ್ನೇ ಕಳಕೊಂಡಿತು.

'ಭಾರತದ ಹೋರಾಟದ ಪ್ರಾರಂಭ ಕಾಲದಲ್ಲಿ ಕಾಂಗ್ರೆಸು, ಜನತೆಯ ಹೋರಾಟ ಮಾಡುವುದಕ್ಕಿಂತಲೂ ವರ್ಗ ಹೋರಾಟ ಮಾಡಿತೆನ್ನಬಹುದು. ವರ್ಗಗಳು ತಮ್ಮ ಕೆಲಸವನ್ನು ಚೆನ್ನಾಗಿ ಮಾಡಿ, ಜನತೆಯ ಪ್ರಾತಿನಿಧ್ಯ ವಹಿಸಿದವೇನೋ ನಿಜ. ಆದರೆ ವರ್ಗಗಳ ಹಿತ ಜನತೆಯ ಹಿತಕ್ಕಿಂತ ದೂರವಿರುವುದು ಸಹಜ. ಯಾವುದೇ ಭದ್ರ ಸರಕಾರದೆದುರು ಹೋರಾಟ ನಡಿಸಬೇಕಾದರೂ ಜನತೆಯ ಪೂರ್ಣ ಬೆಂಬಲ ಬೇಕು. ಹಾಗಾಗಿ ಕಾಂಗ್ರೆಸು ತನ್ನ ನ್ಯೂನತೆಯನ್ನು ಕಳಕೊಳ್ಳಲು, ಜನತಾ ಸಂಪರ್ಕಗಳಿಸಲು ಪ್ರಚಾರ ಕಾರ್ಯ ಕೈಕೊಂಡಿತು. ಆಗ ದೇಶ ಭಾಷಾ ಪತ್ರಿಕೆಗಳು ಬಲಶಾಲಿಗಳಾದವು. ಭಾರತದ ರಾಜಕೀಯ ಆಂದೋಲನದಲ್ಲಿ ದೇಶ ಭಾಷಾ ಪತ್ರಿಕೆಗಳು ಅಗ್ರಸ್ಥಾನವನ್ನು ಪಡೆದವು. ದೇಶಭಾಷಾ ಪತ್ರಿಕೆಗಳಿನ್ನೂ ಬಲಗೊಳ್ಳಬೇಕಾಗಿದೆ. ರಾಷ್ಟ್ರೀಯ ಹೋರಾಟದಲ್ಲಿ ಇನ್ನಷ್ಟು ಅವುಗಳ ಶಕ್ತಿ ಮೆರೆಯಬೇಕಾಗಿದೆ. ಇನ್ನಾದರೂ ಆಂಗ್ಲ ಭಾಷಾ ಪತ್ರಿಕೋದ್ಯಮದ ಬಗ್ಗೆ ಜನರಿಗೆ ಹೆಚ್ಚಿನ ಅಭಿಮಾನವಿದೆಯೆನ್ನೋ ನಿಜ, ಉತ್ತಮ ಬರೆಹಗಾರರು ಆ ಕಡೆ ಆಕರ್ಷಿತವಾಗುವುದೂ ನಿಜ. ದೇಶಭಾಷಾ ಪತ್ರಿಕೋದ್ಯಮದಲ್ಲಿ ಕೆಲಸಮಾಡುವವರು ಬೇಕಾದಷ್ಟು ಶಿಕ್ಷಣ ಹೊಂದಿದವರಾಗಿರುವುದಿಲ್ಲ. ಇದೊಂದು ಇಲ್ಲಿನ ನ್ಯೂನತೆಯಾಗಿದೆ. ರಾಜಕೀಯ ದೃಷ್ಟಿಯಿಂದ ಇದು ಸರಕಾರದ ಕೆಂಗಣ್ಣಿಗೆ ಗುರಿಯಾಗುತ್ತದೆ; ಏಕೆಂದರೆ ಸರಕಾರಕ್ಕೆ ಅರ್ಥವಾಗದ ಭಾಷೆಯಲ್ಲಿದು ಪ್ರಕಟವಾಗುವುದು. ಆರ್ಥಿಕ ದೃಷ್ಟಿಯಿಂದ ಇವುಗಳ ಸ್ಥಿತಿ ಚೆನ್ನಾಗಿರುವುದಿಲ್ಲ. ಜಾಹಿರಾತು ಉತ್ಪತ್ತಿ, ಇನ್ನೂ ದೇಶ

(೬ನೇ ಪುಟಕ್ಕೆ ಮುಂದುವರಿದಿದೆ)

ಕಸ್ತೂರ್ ಬಾ ಕಣ್ಮರೆಯಾದರು!

ಪಟ್ಟ ಶಿಷ್ಯನನ್ನೂ ಧರ್ಮಪತ್ನಿಯನ್ನೂ ಕಳಕೊಂಡು ಗಾಂಧೀಜಿ ಏಕಾಂಗಿಯಾಗಿದ್ದಾರೆ!

ಕಸ್ತೂರ್ ಬಾ ಕಣ್ಮರೆಯಾದರು! ೧೯೪೪ನೆಯ ಕ್ರಿಸ್ತಾಬ್ದ ಫೆಬ್ರವರಿ ೨೨ರಂದು ಅಪರಾಹ್ನ ೭॥ ಗಂಟೆಗೆ ಅದೇ ಆಗಾಖಾನ ಅರಮನೆಯಲ್ಲಿ! ತನ್ನ ಪಟ್ಟಶಿಷ್ಯ ಮಹಾದೇವ ಬಾಯಿಯನ್ನು ಕಳಕೊಂಡು ಗಾಂಧೀಜಿ ಎಂಥಾ ನೋವಿಗೆ ಬಲಿಯಾದರೆಂದುನಾವು ಕೇಳಿದ್ದೇವೆ. ಪುನಾದ ಆಗಾಖಾನ ಅರಮನೆ, ಆ ಸೆರೆಮನೆ ಗಾಂಧೀಜಿಯ ಎರಡು ಪ್ರಿಯ ಆತ್ಮಗಳನ್ನು ಬಲಿತೆಗೆದುಕೊಂಡಿತು! ಗಾಂಧೀಜಿಗೆ ಮಹಾದೇವರ ಮರಣ—ಈಗ ಪತ್ನಿ ಕಸ್ತೂರ್ ಬಾರ ನಿಧನ—ಇವೆರಡರಿಂದಾಗುವ ನೋವನ್ನು ಹೇಳಲು ಶಬ್ದಗಳಿಗೆ ಶಕ್ತಿ ಸಾಲದು! ಮಹಾತ್ಮರಾದವರೇ ಇಂಥಾ ನೋವನ್ನು ಸಹಿಸಬಲ್ಲರು!

"ಮಹಾದೇವದೇಸಾಯಿ ಮೃತರಾದ—ಆ ದಾರುಣ ವಾರ್ತೆ ಕೇಳಿ—ಗಾಂಧೀಜಿ ಒಮ್ಮೆಲೇ ಮಹಾದೇವ್—ಮಹಾದೇವ" ಎಂದು ಕರುಳು ಕಂಪಿಸುವ ದನಿಯಲ್ಲಿ ಕೂಗುತ್ತಾ ಬಂದರು "ಓ ಕೊಡು ಮಹಾದೇವ್, ನಿನ್ನನ್ನೇ ಬಾಪೂಜಿ ಕರೆಯುತ್ತಾರೆ; ಕೇಳದೇ ಮಹಾದೇವ್' ಎಂದು ಕಸ್ತೂರ್ ಬಾ ಅಳು ಅಳುತ್ತಾ ಚಿರನಿದ್ರೆಯಲ್ಲಿ ಮಲಗಿದ್ದ ಭಾಯಿಯನ್ನು ಕರೆದರು. ಆದರೆ ಆ ಪಟ್ಟ ಶಿಷ್ಯನ ಆತ್ಮ ಪರಮಾತ್ಮನಲ್ಲಿ ಲೀನವಾಗಿತ್ತು; ಯಾರು ಬೇಡವೆಂದರೂ ಕೇಳದೆ ಗಾಂಧೀಜಿ ತಾವೇ ಮಹದೇವರ ದೇಹಕ್ಕೆ ಸ್ನಾನ ಮಾಡಿಸಿದರು. ಒಂದು ಗಂಟೆಕಾಲ ಚಂದನ ಲೇಪಿಸಿದರು. ಲೇಪಿಸುವಾಗ ಅವರ ಕೈ ಕಂಪಿಸುತ್ತಿತ್ತು; ಕಣ್ಣು ಕೆರೆಯಾಗಿತ್ತು. ಪಟ್ಟ ಶಿಷ್ಯನ ದೇಹಕ್ಕೆ ಕೈಯಾರೆ ಕೊಳ್ಳಿ ಇಟ್ಟರು ಬಾಪೂಜಿ; ಎಲ್ಲಾ ಸಂಸ್ಕಾರವನ್ನು ತಾವೇ ಮಾಡಿದರು.' ಹೀಗೆಂದು ಆ ದಿನದ ದುರಂತ ಚಿತ್ರವನ್ನು ಸರೋಜಿನಿದೇವಿ ಕಾನಪುರದಲ್ಲಿ ಪತ್ರಿಕೋದ್ಯಮಿಗಳಿಗೆ ಮೊನ್ನೆ ಮೊನ್ನೆ ಹೇಳಿದ್ದರು.

ಪುನಃ ಗಾಂಧೀಜಿ ಹೃದಯಕ್ಕೆ ಅದಕ್ಕಿಂತಲೂ ದಾರುಣವೇದನೆಯನ್ನುಂಟುಮಾಡುವ ಸುದ್ದಿ ಬಂದಿದೆ; ಈ ಸಲ ಗಾಂಧೀಜಿ ಎಷ್ಟು ನೊಂದರೋ, ಎಷ್ಟು ಅತ್ತರೋ, ಎಂಥಾ ಕರುಣೆಯ ಕೂಗು ಅವರ ಹೃದಯದಲ್ಲಿ ಎದ್ದಿತೋ, ಅರುವತ್ತು ವರ್ಷಗಳೂ ತನ್ನ ಸುಖ ದುಃಖಗಳಲ್ಲಿ ಸಮಭಾಗಿನಿಯಾದ ಆ ಧೀರಪತ್ನಿಗಾಗಿ ಅವರು ಎಂಥಾ ಧಾರುಣ ವ್ಯಥೆಪಟ್ಟರೋ, ಎಂತು ಅಂತ್ಯ ಸಂಸ್ಕಾರ ತೀರಿಸಿದರೋ, 'ಈ ಕರುಳು ಕೊರೆವ ಕತೆಯನ್ನು ಜಗತ್ತಿಗೆ ಈಗ ಯಾರು ತಿಳಿಸಬೇಕು?

ಒಂದು ಸಣ್ಣ ಕಥೆ

ಪಶ್ಚಾತ್ತಾಪ

ಕತೆಗಾರ:—ಕೆ. ಎಸ್. ಶೈ, ವಿಟ್ಲ

ವಿಮಲನು ಸುಗುಣಿ, ಸುಂದರ ಯುವಕ; ನವತಾರುಣ್ಯದ ಸೋಪಾನದಲ್ಲಿ ಕಾಲಿಟ್ಟ ನವ ಸುಧಾರಕ ವ್ಯಕ್ತಿ. ಹೈಸ್ಕೂಲು ವ್ಯಾಸಂಗವು ಮುಗಿದಿದೆ. ಆದರೆ ಮಾತಾಪಿತೃ ವಿಹೀನನಾಗಿ ತನ್ನ ಚಿಕ್ಕಪ್ಪನ ಮನೆಯಲ್ಲಿ ಇರಬೇಕಾಗಿದೆ.

ವಿಶ್ವನಾಥನವರು ಮಂಗಳೂರಿನ ಪ್ರಸಿದ್ಧ ಹಂಚಿನ ವ್ಯವಸ್ಥಾಪಕರು. ವಿವಾಹಿತರಾದ ಕೆಲವೇ ಸಮಯದಲ್ಲಿ ಪತ್ನಿಯನ್ನು ಕಳಕೊಂಡಿದ್ದರು. ನಿರ್ಮಲಳು ಅವರ ಏಕಮಾತ್ರ ಪುತ್ರಿ. ಸುಂದರಿಯೂ ವಿದ್ಯಾವತಿಯೂ ಆಗಿದ್ದಳು. ವಿಮಲನೂ ನಿರ್ಮಲಳೂ ನೆರೆಕರೆಯವರು. ಬಾಲ್ಯದಿಂದಲೂ ಒಟ್ಟಿಗೆ ಆಟಪಾಟಗಳನ್ನು ಸಾಗಿಸುತ್ತ ಅಣ್ಣತಂಗಿಯರಂತೆ ನಡೆಯುತ್ತಿದ್ದರು.

ಇಂದೀಗ ಅವರು ಅಂದಿನ ಚಿಕ್ಕಮಕ್ಕಳಲ್ಲ. ಈರ್ವರಲ್ಲಿಯೂ ನವತಾರುಣ್ಯದ ಮೋಹಕೆಯು ತಲೆದೋರಿದೆ. ಭಾವೀ ಜೀವನದ ನೌಕೆಯನ್ನು ಒಟ್ಟಾಗಿ ನಡೆಸಬೇಕೆಂದು ವಿಮಲನ ಆಶಯು. ನಿರ್ಮಲೆಯೊಡನೆ ಒಂದು ದಿನ ವಿಮಲನು ಎತ್ತಿದ ವಿವಾಹ ಪ್ರಸ್ತಾಪಕ್ಕೆ ನಿರ್ಮಲೆಯೂ ತಾನು ಅವನಲ್ಲಿ ಅನುರಕ್ತಳಾಗಿರುವೆನೆಂದೂ ತನಗೆ ವಿವಾಹಕ್ಕೆ ಸಮ್ಮತಿಯಿದೆಯೆಂದೂ ಹೇಳಿದ್ದಳು.

ಗೋಪಾಲನು ಮಂಗಳೂರಿನ ಪ್ರಸಿದ್ಧ ಡಾಕ್ಟರ್ ಸಾಹೇಬರ ಪುತ್ರ. ಬಿ. ಎ. 'ಪಾಸಾ'ಗಿದ್ದನು. ಎಲ್. ಟಿ. ಕಲಿಯಬೇಕೆಂದವನ ಇಚ್ಛೆ. ಅಷ್ಟರಲ್ಲಿ ವಿವಾಹದ ಪ್ರಸ್ತಾಪ; ತಾಯಿಯ ಒತ್ತಾಯ. ಗೋಪಾಲನು ತಾಯಿಯ ಮಾತನ್ನು ಎಂದಿಗೂ ಅಲ್ಲಗಳೆಯಲಾರನು. ನಿರ್ಮಲಳು ವಿದ್ಯಾಭ್ಯಾಸ ಮಾಡುತ್ತಿರುವಾಗ ಅವಳನ್ನು ಎಷ್ಟೋ ಬಾರಿ ಕಂಡಿದ್ದನು. ಅದುದರಿಂದ ಅವನ ಮನಸ್ಸು ಅವಳಲ್ಲೆ ನೆಟ್ಟಿತ್ತು.

* * *

ಅದೊಂದು ಸುಂದರ ಸಂಧ್ಯಾಕಾಲ. ನಿರ್ಮಲೆಯು ಅಂದಿನ ಸಂಧ್ಯಾಕಾಲದ ಮಂದ ಮಾರುತನನ್ನು ಹೀರಲೆಂದು ಅಲ್ಲಿಗೈತಂದಿದ್ದಳು. ಪಶ್ಚಿಮ ದಿಗಂತದಲ್ಲಿ ಮರೆಯಾಗುತ್ತಿದ್ದ ಸೂರ್ಯನ ಮನೋಹರ ಕಿರಣಗಳನ್ನು ಕಣ್ಣಣಿಯೆ ನೋಡುತ್ತಿದ್ದಳು. ಅಷ್ಟರಲ್ಲಿ ಅವಳನ್ನು ಹಿಂದಿನಿಂದ ಯಾರೋ ಕರೆದಂತಾಯಿತು. ನಿರ್ಮಲ ಹಿಂದಿರುಗಿ ನೋಡಿದಳು. ನೋಡುವಾಗ ಗೋಪಾಲನ ಸುಂದರ ಮೂರ್ತಿಯು ಚಂದನದ ಗೊಂಬೆಯಂತೆ ನಿಂತಿದ್ದಿತು. ಅಪ್ರತಿಭಳಾದಳು ನಿರ್ಮಲೆ! ಅವನನ್ನು ಈ ಮೊದಲು ಎಷ್ಟೋ ಬಾರಿ ಕಂಡಿದ್ದಳವಳು!

"ತಾವೆಂದು ಇಲ್ಲಿಗೈತಂದಿರಿ"

"ಈಗಲೇ ಬಂದೆನು"

"ಮನೆ ಕಡೆಗೆ ತೆರಳದಿರಿ"

ಇಲ್ಲ; ನಿನ್ನಲ್ಲಿ ಮಾತಾಡುವ ಅಗತ್ಯ ಕೆಲಸವಿದ್ದುದರಿಂದ ಇಲ್ಲಿಗೇ ನೆಟ್ಟಗೆ ಬಂದೆನು.

"ಅದೇನು ಅಂತಹ ಅಗತ್ಯ ಕೆಲಸ"

"ನಾನು ನಿನ್ನನ್ನು ವಿವಾಹವಾಗಲು ಬಂದೆನು. ಅದಕ್ಕೆ ನಿನ್ನ ತಂದೆಯಲ್ಲಿ ಕೇಳುವ ಮೊದಲು ನಿನ್ನಲ್ಲಿ ಕೇಳುವುದು ಉಚಿತವೆನಿಸಿದುದರಿಂದ ನೆಟ್ಟಗೆ ಇಲ್ಲಿಗೇ ಬಂದೆನು."

ನಿರ್ಮಲೆಯು ಗೋಪಾಲನ ದಿವ್ಯ ರೂಪ ಸೌಂದರ್ಯಪಾನದಲ್ಲಿ ವಿಮಲನಿಗಿತ್ತ ಬಾಸೆಯನ್ನು ಮರೆತಳು.

"ತಂದೆಗೆ ಸಮ್ಮತವಾದರೆ ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ."

ಗೋಪಾಲನು ನಿರ್ಮಲೆಯನ್ನು ವಿವಾಹಿತನಾಗಿ ಅದೊಂದು ಸುಂದರವಾದ ಬಂಗಲೆಯಲ್ಲಿ ಇರಹತ್ತಿದನು. ಪಿತ್ರಾರ್ಜಿತವಾದ ಹೇರಳ ಐಶ್ವರ್ಯವಿದೆ. ಮುಂದಿನ ವ್ಯಾಸಂಗವನ್ನು ಬಿಡು ನಿರ್ಮಲೆಯೊಡನೆ ಸುಖಲೋಲುಪನಾಗಿ ಸಮಯ ಕಳೆಯುತ್ತಿದ್ದನು. ನಿರ್ಮಲೆಗೆ ಇಂದು ವಿಮಲನ ನೆನಪೇ ಇಲ್ಲ. ಅವಳ ಮನಸ್ಸು ಇಂದು ಸಂಪೂರ್ಣ ಸುಖಭೋಗಗಳಲ್ಲಿ ನೆಟ್ಟಿರುವುದು.

ವಿಮಲನು ಎಷ್ಟು ಸುಂದರನೋ ಅಷ್ಟೆ ಗುಣಯುತನೂ ಆಗಿದ್ದನು. ತನ್ನ ಭಾವೀ ಸಂಸಾರ ಸಾಗರವನ್ನು ದಾಟಲು ನಿರ್ಮಲೆಯೇ ಸಹಾಯಕಳೆಂದು ಬಗೆದಿದ್ದನು. ಆದರೆ ಅವನು ಭಾವಿಸಿದ ಭಾವನೆಯು ಭಂಗವಾಯಿತು. ಅದರಿಂದ ಅವನು ನಿರಾಶನಾಗಿ ತನ್ನ ಜೀವನವನ್ನು ಹೊಸದೊಂದು ವಿಧದಲ್ಲಿ ನಡೆಯಿಸಿದನು.

ಇಂದಿನ ವಿಮಲನು ನಿರ್ಮಲಳ ಪ್ರೇಮ ಪ್ರವಾಹದಲ್ಲಿ ಸಿಲುಕಿ ಮುಳುಗಾಡುವ ವಿಷಯು ಕೊಟ್ಟಾತ ವಿಮಲನಲ್ಲ. ಇಂದವನ ಮೊಗವು ಕಾಂತಿಯುತವಾಗಿದೆ. ಮಂಗಳೂರಿನಲ್ಲಿ ಪ್ರಸಿದ್ಧವಾದ "ಹರಿಜನಸೇವಕ ಸಂಘ"ದ ಸದಸ್ಯನಾಗಿ ಸೇರಿದನು. ದೇಶಸೇವೆಗೆ ಟೊಂಕಕಟ್ಟಿ ನಿಂತನು.

ವಿಮಲನಿಗೆ ನಿರ್ಮಲಳ ಸಹವಾಸದಲ್ಲಿ ದೊರೆತ 'ಹ್ಯಾಟು' 'ಬೂಟ್ಸ್' 'ನೆಕ್ ಟೈ' 'ಕಾಲರ್'ಗಳು ಮೂಲೆ ಪಾಲಾದುವು. ತನ್ನ ಸರ್ವಸ್ವವನ್ನೂ ತೊರೆದು ಮಾತೃಭೂಮಿಯ ಸೇವೆಗಾಗಿ ನಿಂತನು. ಇಂದು ಅವನು ತನ್ನ ಪರಹಿತ ಕಾರ್ಯದಿಂದಲೂ ದೇಶಸೇವೆಯಿಂದಲೂ ದೊಡ್ಡ ಮನುಷ್ಯನೆನಿಸಿದನು. ಎಲ್ಲಾ ಜನರಿಗೂ ಬೇಕಾದವನವನು. ಎಲ್ಲಿ ಕೇಳಿದರೂ ಕೀರ್ತಿಯವನು.

ಕೆಲ ಸಮಯ ಕ್ರಮಿಸಲು ಗೋಪಾಲನು ವಿಷಮ ಜ್ವರದ ಬಾಧೆಗೆ ಸಿಲುಕಿ ಮರಣ ಹೊಂದಿದನು. ಇನ್ನು ನಿರ್ಮಲೆಗೆ ರಕ್ಷಕರಿಲ್ಲ. ಪತಿಯಿಂದ ದೊರಕಿದ ಸಿರಿಯು ಹೇರಳವಾಗಿದ್ದರೂ ಅದನ್ನು ಅನುಭವಿಸಲು ಅವಳೊಬ್ಬಳೆ. ಆದರಿಂದಾಗಿ ಅವಳ ಜೀವನವು ನಿರಾಶಾಮಯವಾದ ಮರುಭೂಮಿಯಾಗಿದ್ದಿತು. ಪತನೆಡೆಗೆ ತೆರಳೋಣವೆಂದರೆ ಆತ ಸ್ವರ್ಗವನ್ನೇರಿ ವರ್ಷವರಡೂ ಕಳೆದು ಹೋಯಿತು. ಮಾತೆಯೆಂದೋ ತೆರಳಿರುವಳು. ಒಮ್ಮೊಮ್ಮೆ ಅವಳು ಏಕಾಂಗಿಯಾಗಿ ತನ್ನ ಬಾಲ್ಯದ ಆಟಪಾಟಗಳನ್ನೆ ಯೋಚಿಸುತ್ತ ಅದರಲ್ಲೆ ತಲ್ಲೀನಳಾಗುವಳು. ಆಗ ಅವಳು ಸಮಾಧಿಸ್ಥಳಾದವಳಂತೆ ತೋರುತ್ತಿದ್ದಳು. ಆದರಿಂದ ಅವಳು ವಿರಕ್ತೆ; ಅದರಿಂದ ಅವಳ ಜೀವನ ನಿಸ್ಸಾರ; ಆದರಿಂದ ಇಂದವಳ ದುಃಖಿತೆ.

ಒಂದು ದಿನ ವಿಮಲನು ಅದೇಕೋ ನಿರ್ಮಲೆಯ ಮನೆ ಬಾಗಿಲಿನಿಂದ ಹೋಗುತ್ತಿದ್ದನು. ಕೆದರಿದ ಕೇಶರಾಶಿಯಿಂದ ಕೂಡಿದವಳಾಗಿ ಏನನ್ನೋ ಏಕಾಂಗಿಯಾಗಿ ಯೋಚಿಸುತ್ತಿದ್ದಳು ನಿರ್ಮಲ! ಎಲ್ಲೋ ನೋಡುತ್ತ ಏನೋ ಚಿಂತಿಸುತ್ತಿದ್ದಳು! ವಿಮಲನೂ ಒಬ್ಬಂಟಿಗನಾಗಿ ಬರುತ್ತಿದ್ದನು. ದೂರದಲ್ಲಿ ಬರುತ್ತಿದ್ದವನು ಹತ್ತಿರ ಬಂದನು. ಇಬ್ಬರೂ ಒಮ್ಮೆ ಕಣ್ಣೆತ್ತಿ ನೋಡಿದರು. ಈರ್ವರಿಗೂ ಒಮ್ಮೆಲೆ ತಮ್ಮ ಬಾಲ್ಯದ ಶಾಲಾ ಜೀವನವು ಗೋಚರಿಸಿತು. ಇಬ್ಬರ ಕಂಗಳಲ್ಲಿಯೂ ಕಂಬನಿಗಳು ತುಂಬಿದುವು.

* * *

ಇಂದು ನಿರ್ಮಲ ವಿಮಲರ ಅದೃಷ್ಟಾಕಾಶದಲ್ಲಿ ಭಾಗ್ಯರವಿಯು ಉದಯವಾಗಿದೆ. ಈರ್ವರೂ ಸೋದರ ಸೋದರಿಯರಂತೆ ದೇಶ ಸೇವಾ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ನಿರ್ಮಲಳು ಮಾಡಿದ ಕರ್ಮವನ್ನು ಪಶ್ಚಾತ್ತಾಪದ ಕಣ್ಣೀರಿಂದ ತೊಳೆದು ಶುದ್ಧೀಕರಿಸಿದಳು. ವಿರಕ್ತೆಯಂತೆ ಜೀವಿಸತೊಡಗಿದಳು. ದೇಶ ಸೇವೆಯೇ ತನ್ನ ಜೀವಿತ ನಿಜಧ್ಯೇಯವೆಂದು ತಿಳಿದು ಕೆಲಸಮಾಡ ತೊಡಗಿದಳು. ಇಂದು ಅವಳ ಭಾಷಣವನ್ನು ಕೇಳಲು ಸಾವಿರಾರು ಮಂದಿ ಮಹಿಳೆಯರು ಸೇರುವರು. ಹಿಂದೂ ಸ್ತ್ರೀಯರ ಅಂಧ ಶ್ರದ್ಧೆಗಳನ್ನು ಹೋಗಲಾಡಿಸಿದಳು. ಅವಳು ಭಾಷಣಕ್ಕೆಂದು ಒಂದೆಡೆಯಿಂದ ಇನ್ನೊಂದೆಡೆಗೆ ತೆರಳುವಾಗ ಅವಳ ಭಾಷಣ ಕೇಳಲು ಹಾತೊರೆಯುವ ಜನರೆಷ್ಟು! ಸ್ವಾಗತಿಸುವ ಮಂದಿಯೆಷ್ಟು! ಆದರಿಸುವ ಮಹಿಳೆಯರೆಷ್ಟು!

ಪಶ್ಚಾತ್ತಾಪವೇ ಅವಳ ಜೀವನವನ್ನು ಬೆಳಗಿಸಿತು.



THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಭಿನ್ನ ಆಡಳಿತ ಭಿನ್ನ ಹಿತಗಳಿಂದ ಕನ್ನಡ ಪತ್ರಿಕೋದ್ಯಮದಲ್ಲಿ

::: ಸಂಘಟಿತ ಶಕ್ತಿ ರಚನೆಯಾಗಲಿಲ್ಲ :::

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ

— ಶ್ರೀ| ವಿ. ಎಸ್. ಕುಡ್ವರ ಸ್ವಾಗತ ಭಾಷಣ —

"ಕರ್ನಾಟಕದಲ್ಲಿ ಪತ್ರಿಕೋದ್ಯಮವು ಇನ್ನೂ ಎಷ್ಟು ರಚನೆಯಲ್ಲಿಯೇ ಇದೆ. ಕೆಲವು ದುಸ್ತರವಾದ ತೊಂದರೆಗಳು ಇಲ್ಲಿಯ ಪತ್ರಿಕೋದ್ಯಮದ ಅಭಿವೃದ್ಧಿಗೆ ಕಲ್ಲು ಹಾಕಿವೆ—ನಮ್ಮ ಪರಿಸ್ಥಿತಿಯ ವೈಶಿಷ್ಟ್ಯವಾದ ತೊಂದರೆಗಳವು. ನಮ್ಮಲ್ಲಿ ತೋರುವ ಒಂದು ದೊಡ್ಡ ಕುಂದು ಯಾವುದೆಂದರೆ, ಕನ್ನಡ ಭಾಷೆಯು ವ್ಯವಹಾರದಲ್ಲಿರುವ ಸಮಗ್ರಕ್ಷೇತ್ರವು ಸಾಂಸ್ಕೃತಿಕ ದೃಷ್ಟ್ಯಾ ಒಂದೇ ಆಗಿದ್ದಗೂ, ರಾಜಕೀಯ ಪ್ರಭೇದಗಳು ಅದನ್ನು ಒಂದು ಸಮಸ್ಯಾತ್ಮಕ ರೀತಿಯಲ್ಲಿ ವಿಚ್ಛಿನ್ನವಾಗಿರಿಸಿರುತ್ತವೆ ಕನ್ನಡ ಪ್ರಾಂತ್ಯವು ವಿಭಜಿಸಲ್ಪಟ್ಟಿದೆ—ಉತ್ತರ ಕನ್ನಡವು ಮುಂಬಾಯಿ ಆದಿಪತ್ಯದ ಒಂದು ಭಾಗವಾಗಿದ್ದು ಕೆಲವು ಮೇಲಣ ಘಟ್ಟ ಸೀಮೆಗಳನ್ನೂ ಒಳಗೊಂಡಿದೆಯಾದರೆ, ದಕ್ಷಿಣ ಕನ್ನಡವು ಮದ್ರಾಸು ಆದಿಪತ್ಯದಲ್ಲಿ ಪ್ರತ್ಯೇಕಿಸಲ್ಪಟ್ಟ ಸದಸ್ಯನಂತಿದ್ದು ಏಕಾಕಿಯಾಗಿದೆ! ಕೊಡಗು ಕಮಿಷನರರ ಪ್ರಾಂತ್ಯ! ಮೈಸೂರು ಹಿರಿಯ ಸಾಂಸ್ಥಾನಿಕ ರಾಜ್ಯ! ಕರ್ನಾಟಕದ ಕೆಲವು ಭಾಗಗಳು ಬೇರ್ಪಟ್ಟು ನಿಜಾಮ್ ರಾಜ್ಯಕ್ಕೆ ಸೇರಿಸಲ್ಪಟ್ಟಿವೆ ಕೊಳ್ಳೆಗಾಲವು ಮರಳು ಕಾಡಿನಲ್ಲಿ ಕಾಣಸಿಗುವ ಹಸುರು ಭೂಮಿಯಂತಿದೆ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಯ ಕೆಲವು ಭಾಗಗಳು ತೆಲುಗು ಪ್ರಾಂತ್ಯದ ಮಧ್ಯದಲ್ಲಿ ಸಿಲುಕಿಕೊಂಡಿವೆ ಉಳಿದ ಕೆಲವು ಕನ್ನಡ ಭಾಗಗಳು ಬೇರೆಬೇರೆಯಾಗಿ ಚೂರುಚೂರುಗಳಾಗಿ ಸಾಂಸ್ಥಾನಿಕ ರಾಜ್ಯಗಳಾಗಿ ಬಿಟ್ಟು, ಪರಿಸ್ಥಿತಿಯು ಮತ್ತೂ ನಿಕೃಷ್ಟವಾಗಿದೆ ಹೀಗೆ ಕರ್ನಾಟಕವು ಇಂದು ಒಂದು ಬರಿಯ ಧ್ಯೇಯ ಮತ್ತು ಕನಸು ಆಗಿ ನಿಂತಿದೆ ಈ ರೀತಿಯ ಭಿನ್ನರಾಜ್ಯಾಡಳಿತಗಳ ಭಿನ್ನ ಹಿತಗಳ ಕಾರಣದಿಂದ, ಯಾವುದೊಂದು ಪತ್ರಿಕೆಯೂ ಕರ್ನಾಟಕದ ಸಮಗ್ರ ಜನಸಮುದಾಯಕ್ಕೆ ವಾಚನೀಯವಾಗುವುದಿಲ್ಲ, ಕಾರಣ, ಯಾವ ಪತ್ರಿಕೆಯನ್ನೂ ಸಮಗ್ರ ಕರ್ನಾಟಕಕ್ಕೆ ವಾಚನೀಯವಾಗುವಷ್ಟು ವಿಶಾಲವಾಗಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಈ ದೊಡ್ಡ ಸಮಸ್ಯೆಯು ಎಲ್ಲಾ ಕಾರ್ಯಶಾಲಿ ಪತ್ರಿಕೋದ್ಯೋಗಿಗಳ ತಲೆ ಕೆಡಿಸಿತು ಆದರಿಂದಾಗಿ ಕರ್ನಾಟಕದಲ್ಲಿ ಕೇವಲ ವೈಯಕ್ತಿಕ ಪತ್ರಿಕೆಗಳು ಮಾತ್ರ ಉಳಿಯುವಂತಾಯ್ತು ಹೊರತು ಸಮಗ್ರ ಕರ್ನಾಟಕಕ್ಕೆ ಪತ್ರಿಕೋದ್ಯಮವನ್ನು ಪ್ರತಿಬಿಂಬಿಸುವ ಒಂದು ಸಂಘಟಿತ ಶಕ್ತಿ ರಚನೆಯಾಗಲಿಲ್ಲ ಮೈಸೂರು ಪತ್ರಿಕೆಯು ಮೈಸೂರು ರಾಜ್ಯದ ಸೇವೆ ಮಾಡಬಲ್ಲುದು ಧಾರವಾಡದ ಒಂದು ಪತ್ರಿಕೆಯು ಮುಂಬಾಯಿ ಕರ್ನಾಟಕದವರ ಅಭಿಪ್ರಾಯಗಳಿಗೆ ಸ್ವರ ಕೊಡಬಲ್ಲುದು, ಆದರೆ ದಕ್ಷಿಣ ಕನ್ನಡದ ಒಂದು ವೃತ್ತ ಪತ್ರಿಕೆಯು ಬಳ್ಳಾರಿ ನಾಗರಿಕರ ಜೀವನದ ಅಂಚನ್ನೂ ಮುಟ್ಟುವಂತಿಲ್ಲ—ದೌರ್ಭಾಗ್ಯವಶಾತ್ ರೀತಿನೀತಿಗಳಲ್ಲಿ ನಮಗೆ ತೀರಾ ಸಮೀಪದಲ್ಲಿರುವ ಉತ್ತರ ಕನ್ನಡದವರ ಕುರಿತು ಕೂಡಾ ಅದು ಹೇಳುವಂತಿಲ್ಲ ಇದೊಂದು ವಿಷಾದಾಂತ ನಾಟಕವೆನ್ನಬೇಕಾಗಿದೆ—ಕೇವಲ ವಿಷಾದವಲ್ಲ, ವಿಷಾದದ ಪರಮಾವಧಿ! ಸಮಗ್ರ ಕರ್ನಾಟಕವನ್ನು ಒಟ್ಟುಗೂಡಿಸುವ ಈ ಘನ ಸಮಸ್ಯೆಯನ್ನು ಒಂದಲ್ಲ ಒಂದು ದಿನ ನಾವು ಬಿಡಿಸಲೇಬೇಕು—ಎಷ್ಟು ಬೇಗನೆ ಅದನ್ನು ಬಿಡಿಸಲು ಯತ್ನಿಸುತ್ತೇವೊ ಅಷ್ಟು ಒಳ್ಳೆಯದು."

ಹೀಗೆಂದು ಮಂಗಳೂರಲ್ಲಿ ಇದೇ ತಾ ೧೯ರಂದು ಸೇರಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನದ ಸ್ವಾಗತಾಧ್ಯಕ್ಷಸ್ಥಾನದಿಂದ ಶ್ರೀ ವಿ. ಎಸ್. ಕುಡ್ವರು ಭಾಷಣ ಮಾಡುತ್ತಾ ಹೇಳಿದರು, ಅವರ ಭಾಷಣದ ಇತರ ಕೆಲ ವಿವರಗಳು ಇಂತಿವೆ

"ಕರ್ನಾಟಕದಲ್ಲಿ ಚೇತನಭರಿತವಾದ, ಜೀವಕಳೆ ತುಂಬಿ ತುಳುಕುತ್ತಿರುವ ಪತ್ರಿಕೋದ್ಯಮವು ಬೆಳೆಯದಿರಲು ವಿಘ್ನಕಾರಿಯಾದ ಮತ್ತೊಂದು ಎಡರು—ವ್ಯವಹಾರ ಸೌಕರ್ಯಗಳ ಅಭಾವ. ಈ ನಮ್ಮ ಪ್ರಾಮುಖ್ಯ ಶಹರಿಗೆ ಬರಲಿಕ್ಕೆ ಕಷ್ಟತೊಡಕುಗಳನ್ನು ಈಗಾಗಲೇ ಸ್ವತಹ ಅನುಭವಿಸಿಬಂದಿರುವ ನಿಮಗೆ, ಕರ್ನಾಟಕದ ಪತ್ರಿಕೆಗಳು ಓದುಗರನ್ನು ಶೀಘ್ರ ವೇಗದಿಂದ ಏಕೆ ಸೇರಲಾರವು ಎಂಬುದನ್ನು ನಾನು ಪ್ರತ್ಯೇಕ ವಿವರಿಸಬೇಕಾಗಿಲ್ಲ ಕರ್ನಾಟಕದಲ್ಲಿ ರೈಲುರಸ್ತೆಗಳ ವಿತರಣ ಹೇಗಾಗಿದೆ ಎಂಬುದರ ಕುರಿತು ಒಂದು ಮಾತು ಹೇಳುವುದಿದ್ದರೆ, ಈ ಕಡೆ ಇನ್ನು ಆಗಬೇಕಾದ ಯತ್ನ ಈ ವರೆಗೆ ಆದುದಕ್ಕಿಂತ ಅತ್ಯಧಿಕ ಬಾಕಿಯಿದೆ ಎನ್ನಬೇಕಾಗುವುದು ಆ ಯತ್ನವು ಪೂರ್ಣತೆ ಹೊಂದಿ, ನಮ್ಮೆಲ್ಲಾ ಪಟ್ಟಣಗಳಿಗೆ ರೈಲು ರಸ್ತೆಯ ಸೌಕರ್ಯ ಸೌಲಭ್ಯ ಒದಗಿ, ಕನ್ನಡ ಪತ್ರಿಕೆಗಳು ಶೀಘ್ರಗತಿಯಲ್ಲಿ ಸುದ್ದಿ ಮುಟ್ಟಿಸಲನುವಾಗುವ ಆ ಸುದಿನವು ಬೇಗನೆ ಉದಯಿಸಲೆಂದು ನಾವು ಇಚ್ಛಿಸುತ್ತೇವೆ ವ್ಯವಹಾರದ ವೇಗವು ಹೆಚ್ಚಾಗದೆ ಸುದ್ದಿಗಳು ಮತ್ತು ಅಭಿಪ್ರಾಯಗಳು ಜನರ ಮನಮುಟ್ಟುವಂತಿಲ್ಲ

"ಕರ್ನಾಟಕದಲ್ಲಿ ಪತ್ರಿಕೋದ್ಯಮವು ಇನ್ನೂ ಶೈಶವಾವಸ್ಥೆಯಲ್ಲಿದೆ ಈ ಮಹತ್ವದ ಹಾಗು ಗೌರವಪೂರ್ಣವಾದ ಉದ್ಯೋಗದ ಕಡೆ ವಿಚಕ್ಷಣಮತಿಗಳ ಇನ್ನೂ ಸೆಳೆಯಲ್ಪಟ್ಟಿದಿಲ್ಲ ಪತ್ರಿಕೋದ್ಯೋಗಿಗಳಿರದ ಪತ್ರಿಕೆಗಳು ಇವೆ ನಮ್ಮಲ್ಲಿ ಕೆಲವು ಬರೀ ಅಲ್ಪ ಜ್ಞಾನವಿರುವ, ಉದ್ಯಮಕ್ಕೆ ಸಾಕಷ್ಟು ಉಪಕರಣಗಳಿರದ ಕೆಲಸಗಾರರಿಂದ ನಡೆಯುತ್ತಿವೆ ಕೆಲವು ಪತ್ರಿಕೆಗಳು ಅನುಕೂಲವಾದ ಸಂದರ್ಭಗಳು ದೊರೆಯದೆ ತಮ್ಮ ಪ್ರತಿಭೆಯನ್ನು ತುಕ್ಕು ಹಿಡಿಯಲು ಬಿಟ್ಟು, ಇತರ ಉದ್ಯೋಗಗಳನ್ನು ಸೇರಿ, ಅಪರೂಪ ಸಮಯಗಳಲ್ಲಿ ಈ ಪವಿತ್ರ ಕ್ಷೇತ್ರದಲ್ಲಿ ತಮ್ಮ ದರ್ಶನವನ್ನೀಯುವ ಅವಿಕಸಿತ ಪತ್ರಿಕಾವ್ಯವಸಾಯಿಗಳೂ ಬಹುಮಂದಿ ಇದ್ದಾರೆ ಸಾರ್ವಜನಿಕರ ಪ್ರೋತ್ಸಾಹದ ಅಭಾವವೇ ಪ್ರಗತಿಯನ್ನು ಹಿಂದೂಡಲಿಕ್ಕೆ ಮತ್ತೊಂದು ಕಾರಣವೆನ್ನಬೇಕಾಗಿದೆ, ಹಲವು ವೃತ್ತಪತ್ರಿಕೆಗಳು ಮತ್ತು ಮಾಸಪತ್ರಿಕೆಗಳು ಪ್ರತಿವರ್ಷವೆಂಬಂತೆ ತಲೆ ಎತ್ತುತ್ತವೆ, ಆದರೆ ವಿಷಾದವೆಂಧರೆ ಅವುಗಳಲ್ಲಿ ಹಲವು ವರ್ಷಾಂತ್ಯದ ವರೆಗೂ ಬಾಳುವುದಿಲ್ಲ ಶಿಶು ಮರಣ ಸಂಖ್ಯೆಯು ಕರ್ನಾಟಕ ಪತ್ರಿಕಾಪ್ರಪಂಚದಲ್ಲಿ ಕಾಣುವಷ್ಟು ಲೋಕದ ಇನ್ನಾವ ಕಡೆಯಲ್ಲಿಯೂ ಕಾಣಲಾರೆವು!

"ಪತ್ರಿಕೋದ್ಯಮವು ಅದಕ್ಕೆ ತಕ್ಕುದಾದ ಸ್ಥಾನದಲ್ಲೇರುವಂತೆ ಮಾಡುವ ಕಾರ್ಯಭಾರವು ಪತ್ರಿಕೋದ್ಯೋಗಿಗಳದು. ಆ ಕಾರ್ಯಭಾರದಲ್ಲಿ ಪತ್ರಿಕೋದ್ಯೋಗಿಗಳು ಭಗಿರಥ ಯತ್ನಗಳನ್ನು ನಡೆಸಿಯೇ ತೀರಬೇಕು. ಆದರ ಸಾಧನೆಗಾಗಿ ಹಾದಿ ಹುಡುಕುವುದು, ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವುದು ಇಂದು ನಮ್ಮ ಕರ್ತವ್ಯವಾಗಿದೆ ಸಾರ್ವಜನಿಕರ ಬೆಂಬಲ ಮತ್ತು ಪ್ರೋತ್ಸಾಹವನ್ನು ನಾವು ಹೇಗೆ ಪಡೆಯಬಹುದು, ಪತ್ರಿಕೆಗಳು ಪ್ರಜೆಗಳ ಜವಾಬ್ದಾರಿಕೆಯನ್ನು ಅವರ ಅಭಿಪ್ರಾಯಗಳ ಸ್ವರವನ್ನು ಪ್ರತಿಬಿಂಬಿಸುವ ಸಾಧನಗಳನ್ನಾಗಿ ಮಾಡುವುದು ಹೇಗೆ, ಜನರು ಅವುಗಳನ್ನು ತಮ್ಮದೆಂದೇ ತಿಳಕೊಂಡು ಅವುಗಳ ಕಡೆಗೆ ಆಕರ್ಷಿತರಾಗುವಂತೆ ಮಾಡುವುದು ಹೇಗೆ ಈ ಎಲ್ಲಾ ಪ್ರಶ್ನೆಗಳಿಗೆ ಇಂದು ನಾವು ಉತ್ತರ ಕಂಡು ಹಿಡಿಯಬೇಕಾಗಿದೆ

"ಇಂದು ಜಗತ್ತಿನ ರಾಜಕೀಯ ಅಂಗರಚನೆಯಲ್ಲಿ ಪತ್ರಿಕೋದ್ಯಮಕ್ಕೆ ಒಂದು ಪ್ರಾಮುಖ್ಯ ಸ್ಥಾನವಿದೆ ಅದು ನಾಗರಿಕರ ಹಕ್ಕಿನವುಗಳೆಂದ ಚತುಸ್ವಾತಂತ್ರ್ಯಗಳಲ್ಲಿ ನಾಲ್ಕನೆಯದಾಗಿದೆ; ಸಾರ್ವಜನಿಕರ ಅಂತರಾಳದ ಕರೆಯದು, ಅದೊಂದು ಪ್ರತಿಬಿಂಬ, ಸಾರ್ವಜನಿಕ ಅಭಿಪ್ರಾಯದ ಕನ್ನಡಿ, ಎಣಿಸಲ್ಪಡತಕ್ಕ (ಎಣಿಕೆಗೆ ಅರ್ಹವಾದ) ಶಕ್ತಿ ಎಲ್ಲಾ ಪತ್ರಿಕೋದ್ಯೋಗಿಗಳು ಒಂದಾಗಿ, ಕರ್ನಾಟಕದಲ್ಲಿನ ಪತ್ರಿಕಾ ಶಕ್ತಿಯನ್ನು ಇನ್ನಷ್ಟು ಜನಮಾನ್ಯ, ಇನ್ನಷ್ಟು ಶಕ್ತಿಪೂರ್ಣ, ಇನ್ನಷ್ಟು ಉತ್ಕೃಷ್ಟದಾಯಕ ಹಾಗು ಗೌರವಪೂರ್ಣವನ್ನಾಗಿ ಮಾಡಲು ಪಂಕತೊಟ್ಟು, ಕಾರ್ಯರಂಗಕ್ಕಿಳಿದು ಕೃತಕೃತ್ಯರಾದರೆ ಅಂದಿನ ಶುಭದಿನವು ಎಷ್ಟೊಂದು ಮಹತ್ವಪೂರ್ಣವೆನಿಸೀತು!

"ಕರ್ನಾಟಕದ ಪತ್ರಿಕೋದ್ಯಮಿಗಳು ಬಿಡಿಸಲಿರುವ ಸಮಸ್ಯೆಗಳು ಸ್ಫೂರ್ತಿಯ ಒಗ್ಗೆಯಂತಿರುವವರನ್ನು ಕೂಡ ನಿರಾಶೆಗೊಳಿಸಬಹುದಾದಷ್ಟು ಕಠಿನವಾಗಿವೆ. ಇದನ್ನು ನಾವು ತಿಳಿದರೆ, ನಾವು ಆಗಾಗ ಸೇರಿ ಇವುಗಳನ್ನು ಚರ್ಚಿಸಿ ತೀರ್ಮಾನದ ಬಗ್ಗೆ ಪ್ರಯತ್ನಿಸುವ ಅವಶ್ಯಕತೆಯು ಸ್ವತಹ ವಿದಿತವಾಗುವುದು ಅವುಗಳಲ್ಲಿ ಕೆಲವನ್ನು ಮಾತ್ರ ಎತ್ತಿ ನಿಮ್ಮ ತೀರ್ಮಾನದ ಬಗ್ಗೆ ನಾನಿಲ್ಲಿ ಚರ್ಚಿಸುತ್ತೇನೆ

"ಇಂದು ಕರ್ನಾಟಕದಲ್ಲಿ ಪತ್ರಿಕೋದ್ಯಮವು ಲಾಭದಾಯಕ ಉದ್ಯೋಗವಾಗಿ ಕಂಡು ಬರುವುದಿಲ್ಲ ಪತ್ರಿಕೆಗಳಲ್ಲಿ ಹಲವು, ಅಸ್ಥಿರ ಜೀವನ ನಡಿಸಿಕೊಂಡಿವೆ ಎಂದರೆ ತಪ್ಪಾಗದು—ಅರೆಹೊಟ್ಟೆಯಷ್ಟೆ ಜೀವಧಾರಣೆ ಮಾಡಿಕೊಂಡಿರುವ ಪತ್ರಿಕೆಗಳೂ ನಮ್ಮಲ್ಲಿವೆ ಉದ್ಯೋಗಗಳಲ್ಲಿ ಸಾಹಸಮಯ ಉದ್ಯೋಗವೆನಿಸಿಕೊಂಡಿದರೂ ವ್ಯಾಪಾರ ದೃಷ್ಟಿಯಲ್ಲಿ ಒಹಳ ನಿರಾಶಾಜನಕ ವಹಿವಾಟು ಆಗಿ ಬಿಟ್ಟಿದೆ ಪತ್ರಿಕೋದ್ಯಮ. ತಲೆಯಲ್ಲಿಯೂ ಹಸಿವೆ ಹೊಟ್ಟೆಯಲ್ಲಿಯೂ ಹಸಿವೆಯಿರುವಾಗ ಆಲೋಚನಾಶಕ್ತಿ ಯಾರಿಗೂ ಬರಲಾರದು. ಪತ್ರಿಕಾ ಪ್ರತಿನಿಧಿಗೆ ತನ್ನ ಕಾರ್ಯವನ್ನು ವಿಚಕ್ಷಣತೆಯಲ್ಲಿ ನಡೆಸುವರೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನಗಳು ಸಿಗಬೇಕು ಪತ್ರಿಕೋದ್ಯಮವು ಲಾಭದಾಯಕ ಉದ್ಯೋಗವಾಗಲಾರದಾದರೆ ಯೋಗ್ಯತೆಯುಳ್ಳ ಮಂದಿ ಅದರ ಕಡೆಗೆ ಆಕರ್ಷಿತರಾಗಲಾರರು. ವಾಚಕರ ಮತ್ತು ಜಾಹೀರಾತುದಾರರ ಸಂಖ್ಯೆಯನ್ನು ವೃದ್ಧಿಗೊಳಿಸಿ ಪತ್ರಿಕೋದ್ಯೋಗದ ಆರ್ಥಿಕ ಸ್ಥಿತಿಯನ್ನು ಊರ್ಜಿತಗೊಳಿಸಲು ಇಂದು ನಾವೆಲ್ಲರೂ ಯತ್ನಿಸಬೇಕಾಗಿದೆ

"ಅಂತೆಯೇ ಪತ್ರಿಕೋದ್ಯೋಗಿಗಳಿಗೆ ಅಗತ್ಯವಿರುವ ಸಾಧನಗಳನ್ನು ಒದಗಿಸಿಕೊಡಲು ನಾವು ಮರೆಯಬಾರದು ಇಂದು ನಮ್ಮಲ್ಲಿಯ ಪತ್ರಿಕೋದ್ಯೋಗಿಗೆ ನಾವು ಒದಗಿಸಿಕೊಡುವ ಜ್ಞಾನವು ಕೇವಲ ಅನುಭವಸಿದ್ಧ ಪ್ರಕೃತಿಯದು ಅವರನ್ನು ತರಬೇತಿಗೊಳಿಸುವ ಯಾವ ರೀತಿಯ ವ್ಯವಸ್ಥೆಯೂ ನಮ್ಮ ವಿಶ್ವವಿದ್ಯಾಲಯಗಳಲ್ಲಿಲ್ಲ ನಮ್ಮಲ್ಲಿಯ ಪತ್ರಿಕೋದ್ಯೋಗಿಗೆ ತನ್ನ ಭಾಷಾಜ್ಞಾನ ವಿಕಾಸಗೊಳಿಸಲನುಗುಣವಾಗುವ ಯೋಗ್ಯ ಕನ್ನಡ ಪುಸ್ತಕಗಳ ಸಂಗ್ರಹ ಇಲ್ಲವೆ ಇತರ ಪರಿಪಾರ ಸಾಹಿತ್ಯ ಸಿಗುವುದಿಲ್ಲ. ಪತ್ರಿಕಾಕಾಯಿದೆಗಳಾವುವು, ಮಾನನಷ್ಟ ಕಾಯಿದೆಯನ್ವಯ ಬರುವ ವಿಷಯಗಳಾವುವು, ಕೊಪಿರೈಟ್ ಆಕ್ಟ ಅಂದರೇನು, ಪತ್ರಿಕೆಯ ಅಂಗರಚನೆ ಹೇಗಿರಬೇಕು—ಇತ್ಯಾದಿ ವಿಷಯಗಳನ್ನು ತಿಳಿಯಬೇಕಾದರೆ ಅವನು ಸ್ವಯಂಶಿಕ್ಷಣದ ಮೇಲೆ ಅವಲಂಬಿಸಿರಬೇಕಲ್ಲದೆ, ಅವನಿಗೆ ಬೇರೆ ತರಬೇತಿ ಇಲ್ಲ ಇದು ಖಂಡಿತವಾಗಿಯೂ ಪತ್ರಿಕೋದ್ಯೋಮದ ಭಾವೀ ಬೆಳವಣಿಗೆಗೆ ಅಷ್ಟೊಂದು ಚೆನ್ನಾಗಿ ಒಪ್ಪುವುದಿಲ್ಲ ಆದುದರಿಂದ ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಕಂಡು, ಪತ್ರಿಕೋದ್ಯೋಗದ ಕುರಿತು ಹೇಳಿಕೊಡುವ ಒಂದು ಪ್ರತ್ಯೇಕ ವಿಭಾಗವನ್ನು ಅವರ ಪಾಠಕ್ರಮದಲ್ಲಿ ಸೇರಿಸಿಕೊಳ್ಳಲು ಕೇಳಿಕೊಳ್ಳುವುದು ಅಗತ್ಯವಿದೆ. ಬ್ರಿಟಿಷ್ ಕರ್ನಾಟಕ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಬೇಕೆಂಬ ಚಳವಳಿಕ್ಕೆ ಬೆಂಬಲಕೊಡುವುದು ಅತ್ಯವಶ್ಯವಲ್ಲವೇ? ಈ ಪರಿಷತ್ತು ಪತ್ರಿಕಾ ವ್ಯವಸಾಯದಲ್ಲಿ ಒಂದು ವಿದ್ಯಾಂಗವನ್ನು ರಚಿಸಬೇಕು, ಆಗಾಗ್ಗೆ ಪರೀಕ್ಷೆಗಳನ್ನು ಏರ್ಪಡಿಸಿ ಉತ್ತೀರ್ಣರಾದವರಿಗೆ ಯೋಗ್ಯತಾ ಪತ್ರಗಳನ್ನು ಕೊಡಬೇಕು ಮತ್ತು ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಬೇಕು ಎಂಬಿತ್ಯಾದಿ ಯೋಗ್ಯ ಸಲಹೆಯೊಂದು ಈ ಪರಿಷತ್ತಿನ ಮುಂದೆ ಬಂದಿದೆ. ಆ ಸಲಹೆಯನ್ನು ನಾನು ಮನಸಾರೆ ಒಪ್ಪುತ್ತೇನೆ.

[೬ನೇ ಪುಟಕ್ಕೆ ಮುಂದುವರಿದಿದೆ]

ಪೆಪ್ಸಿನ ವಿಷಯ ಒಬ್ಬ ಪ್ರಖ್ಯಾತ ಡಾಕ್ಟರರ ಅಭಿಪ್ರಾಯ

ಡಾಕ್ಟರ್ ಗೋರ್ಡನ್ ಸ್ಟೇಬಲ್ಸ್

ಎಂ. ಡಿ ಸಿ ಡಿ. ಆರ್. ಎನ್ ಇವರು ಶ್ವಾಸಯೋಗ್ಯ ವಿಷಹಾರಿ ಪೆಪ್ಸನ್ನು ಸ್ವತಃ ಉಪಯೋಗಿಸಿ ಹೀಗೆ ಬರೆದಿರುತ್ತಾರೆ

"ಕಫವನ್ನು ನಿವಾರಿಸಲು, ಕಂಠವನ್ನು ಸರಿಗೊಳಿಸಲು, ಶ್ವಾಸಕೋಶದ ನೋವನ್ನು ಹೋಗಲಾಡಿಸಲು ಪೆಪ್ಸು ಅತ್ಯಂತ ಹಿತವಾದ ಔಷಧಿಯಾಗಿದೆ"

ಬಾಯಿಗೆ ಹಾಕಿದ ಕೂಡಲೆ ಪೆಪ್ಸು ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ, ಆ ಸತ್ವವು ಶ್ವಾಸದೊಡನೆ ಶ್ವಾಸಕೋಶಕ್ಕೆ ಹೋಗಿ ಅಲ್ಲಿರುವ ರೋಗಕಾರೀ ಅಣುಗಳನ್ನು ಕೊಂದು ಕಫ ಶೀತಾದಿ ಬಾಧೆಗಳನ್ನು ಗುಣಪಡಿಸುತ್ತದೆ

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು.

ಸ್ವದೇಶಾಭಿಮಾನಿ

ತಾರೀಖು 25—2—1944

ಪತ್ರಿಕೋದ್ಯೋಗಿ-ಸಮ್ಮೇಳನ

ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನವು ಮಂಗಳೂರಲ್ಲಿ ಇದೇ ಫೆಬ್ರವರಿ ೧೯ ಮತ್ತು ೨೦ರಂದು ಶ್ರೀ ಸಿ. ಆರ್. ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಅಭೂತಪೂರ್ವ ಯಶಸ್ಸಿನಿಂದ ಜರಗಿತು; ಅಖಿಲ ಕರ್ನಾಟಕ ಸಮ್ಮೇಳನವೆಂದು ಇದುವರೆಗೆ ಹೇಳಲ್ಪಟ್ಟ ಕೆಲ ಪತ್ರಿಕೋದ್ಯೋಗೀ ಸಮ್ಮೇಳನಗಳಂತಿರದೆ ಇದು ನಿಜವಾಗಿಯೂ ಹೆಚ್ಚು ಪ್ರಾತಿನಿಧಿಕವಾಗಿತ್ತೆಂಬುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳಿಂದಲ್ಲದೆ, ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಮೈಸೂರು, ಮದ್ರಾಸ್, ಬೊಂಬಾಯಿ ಮೊದಲಾದ ಬಿನ್ನಭಿನ್ನವಾದ ಕರ್ನಾಟಕದ ಎಂಟು ಮೂಲೆಗಳಿಂದಲೂ ನೂರಾರು ಮಂದಿ ಪ್ರತಿನಿಧಿಗಳು ಬಂದದ್ದು ಸಾಕಷ್ಟು ಸಾಕ್ಷಿಯಾಗಿದೆ. ಹೀಗೆ ಇಂದು ಪತ್ರಿಕೋದ್ಯಮಿ ಜೀವನವು ಅಗ್ನಿಪರೀಕ್ಷೆಗೊಳಗಾಗುತ್ತಿರುವೀಕಾಲದಲ್ಲಿ, ಸಂಘಟಿತರಾಗಿ ಕಾರ್ಯನಿರ್ವಹಿಸಬೇಕೆಂದು ಸಕಾಲದಲ್ಲಿ ಮನಗಂಡ, ಅಖಿಲ ಕರ್ನಾಟಕದ ಪತ್ರಿಕೋದ್ಯಮಿಗಳನ್ನು ಅಭಿನಂದಿಸುವುದರೊಡನೆ, ಇಂಥಾ ಮಹೋತ್ಸವವನ್ನು ನೆರವೇರಿಸಿ, ಎಂಟು ದಿಕ್ಕಿನಿಂದಲೂ ನೂರಾರು ಪ್ರತಿನಿಧಿಗಳನ್ನು, ಉದ್ದಾಮ ಪತ್ರಿಕೋದ್ಯಮಿಗಳನ್ನೆಲ್ಲಾ ಬರಮಾಡಿಕೊಂಡು, ವಿಚಾರವಿನಿಮಯ ಮಾಡಲು ಆಸ್ಪದವಿತ್ತು, ಅವರಿಗೆ ಬೇಕು ಬೇಕಾದ ಸಕಲ ಸೌಕರ್ಯಗಳನ್ನೂ ಒದಗಿಸಿಕೊಟ್ಟ ಸ್ವಾಗತ ಸಮಿತಿಯವರನ್ನೂ ನಾವು ಅಭಿನಂದಿಸದಿರಲಾರೆವು.

ಕರ್ನಾಟಕವು ಬ್ರಿಟಿಷ್ ಕರ್ನಾಟಕ ಮತ್ತು ಆಶ್ರಿತ ರಾಜರ ವಶವಿರುವ ಕರ್ನಾಟಕವೆಂಬುದಾಗಿ ರಾಜಕೀಯ ದೃಷ್ಟ್ಯಾ ವಿಭಜಿಸಲ್ಪಟ್ಟಿದ್ದರೂ ಪತ್ರಿಕೋದ್ಯಮಿಗಳು ತಮ್ಮೆದುರಿಗಿರುವ ಸಮಾನ ಸಮಸ್ಯೆಗಳನ್ನು ಬಗೆಹರಿಸಲು ಒಂದು ಕೇಂದ್ರ ಸಂಸ್ಥೆ ಸ್ಥಾಪಿಸಿ ಕೆಲಸಮಾಡಬೇಕಾಗಿದೆಯೆಂದು ನಾವು ಹಿಂದಿನ ಲೇಖನವೊಂದರಲ್ಲಿ ವಿನಂತಿಮಾಡಿದ್ದೆವು. ಆಶ್ರಿತ ಸಂಸ್ಥಾನಕ್ಕೆ ಸೇರಿದ ಕರ್ನಾಟಕದ ಪತ್ರಿಕೋದ್ಯಮಿಗಳು ಬೆಂಗಳೂರು, ಮೈಸೂರು ಕಡೆಗಳಿಂದ ಈ ಸಲದ ಸಮ್ಮೇಳನಕ್ಕೆ ಇತರ ಯಾವುದೇ ಭಾಗಗಳಿಗಿಂತಲೂ ಹೆಚ್ಚಾಗಿ ಬಂದು ಸಮ್ಮೇಳನದಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ ಈ ಸಮ್ಮೇಳನದಲ್ಲಿ ರೂಪಿತವಾದ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಂಘದಲ್ಲಿಯೂ ಕೂಡಿ ಕೆಲಸಮಾಡಲು ಮುಂದೆ ಬಂದದ್ದನ್ನು ನೋಡಿ ಕರ್ನಾಟಕದ ಪತ್ರಿಕೋದ್ಯಮಿಗಳು ತಮ್ಮ ಮಟ್ಟಿಗಾದರೂ ಈ ಕೃತ್ರಿಮ ವಿಭಜನೆಯನ್ನು ಕಿತ್ತು ಹಾಕಿ ಪ್ರಗತಿಯ ಹಾದಿಯಲ್ಲಿ ಒಂದು ಧೀರವಾದ ಹೆಜ್ಜೆಯನ್ನು ಮುಂದಿಟ್ಟಿರುವುದು ಧೈರ್ಯವಾಗಿ ಹೇಳಬಹುದು. ಈ ಬಗ್ಗೆ ನಾವು ಮೈಸೂರು—ಬೆಂಗಳೂರು ಭಾಗದಿಂದ ಬಂದ ಪತ್ರಿಕೋದ್ಯಮಿಗಳನ್ನು ಹಾರ್ದಿಕ ಅಭಿನಂದಿಸಬೇಕಾಗಿದೆ.

ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಂಘವೊಂದು ಈ ಸಮ್ಮೇಳನ ಕಾಲದಲ್ಲಿ ರೂಪಿತವಾಗಿದೆ. ಈ ಕೇಂದ್ರ ಸಂಸ್ಥೆ ಒಂದು ಪ್ರಬಲ ಶಕ್ತಿಯುತವಾದ ಸಂಸ್ಥೆಯಾಗಿದೆ ಎಂಬುದರಲ್ಲಿ ಏನೇನೂ ಸಂಶಯವಿಲ್ಲ. ಇಂದು ಈ ಸಂಘಕ್ಕೆ ಚುನಾಯಿತರಾದ ಸದಸ್ಯರೂ ಕರ್ನಾಟಕ ಪತ್ರಿಕೋದ್ಯಮದಲ್ಲಿ ನುರಿತವರೂ ಪ್ರಭಾವ ಶಾಲಿಗಳೂ ಇದ್ದಾರೆ. ಇದನು ಪ್ರಬಲ ಶಕ್ತಿಯಾಗಿ ಮುಂದುವರಿಸುತ್ತಾ ಹೋಗಿ ಜನತೆ ಮತ್ತು ಸರಕಾರದ ನಡುವೆ ಈ ಸಂಘವು ತನ್ನ ಉತ್ತಮ ಪ್ರಭಾವ ಬೀರುವಂತಾಗಲಿ ಎಂದು ನಾವು ಹಾರೈಸುವೆವು.

ಇಂದು ಸರ್ವ ಸಾಧಾರಣವಾಗಿ ಪತ್ರಿಕೆಗಳ ಮೇಲೆಲ್ಲಾ ಹಾಕಿರುವ ಕಠಿಣ ನಿರ್ಬಂಧ, ವಿಶೇಷತಃ 'ಹಿಂದುಸ್ಥಾನ್ ಟೈಮ್ಸ್' 'ನೇಶನಲ್ ಕಾಲ್' ಪತ್ರಿಕೆಗಳ ಮೇಲಿನ ನಿರ್ಬಂಧ, ಸರೋಜಿನಿ ದೇವಿಯರ ಬಾಯಿಗೆ ಹಾಕಿದ ಬೀಗಮುದ್ರೆ ಮೈಸೂರಿನ ಎರಡು ಪತ್ರಿಕೆಗಳಿಂದ ಜಾಮೀನು ಹಣ ತೆಗೆದುಕೊಂಡ ವಿಚಾರ ಇವುಗಳನ್ನು ಇಂಥಾ ಹಲವು ಪತ್ರಿಕೋದ್ಯೋಗೀ ಸಮಸ್ಯೆಗಳನ್ನು ಈ ಸಮ್ಮೇಳನದಲ್ಲಿ ಚರ್ಚಿಸಲಾಗಿದೆ. ಆಶ್ರಿತ ಸಂಸ್ಥಾನದ ಪತ್ರಿಕೋದ್ಯೋಗಿಗಳಿಗೂ ಅಖಿಲ ಭಾರತ ಪತ್ರಿಕೋದ್ಯೋಗೀ ಸಂಸ್ಥೆಯಲ್ಲಿ ಸ್ಥಾನ ಸಿಗಬೇಕೆಂದು ಕೇಳಿಕೊಳ್ಳಲಾಗಿದೆ. ಬ್ರಿಟಿಷ್ ಕರ್ನಾಟಕಕ್ಕೆ ಇಂದು ಪ್ರಾತಿನಿಧ್ಯ ಸಿಗುವುದಿದ್ದರೆ, ಕರ್ನಾಟಕದ ಆಶ್ರಿತ ಸಂಸ್ಥಾನದ ಪತ್ರಿಕೋದ್ಯಮಿಗಳೂ ಅಖಿಲ ಕರ್ನಾಟಕದ ಕೇಂದ್ರ ಸಂಸ್ಥೆಯಲ್ಲಿ ಒಂದುಗೂಡಿ ಕೆಲಸಮಾಡುವುದರಿಂದ, ಅಖಿಲ ಭಾರತ ಸಂಸ್ಥೆಯಲ್ಲಿ ನ್ಯಾಯವಾಗಿ ಅವರೂ ಪ್ರಾತಿನಿಧ್ಯ ಪಡೆಯಲು ಅರ್ಹರೇ ಆಗುತ್ತಾರೆ.

ಪತ್ರಿಕೋದ್ಯಮಿಗಳ ಜೀವನದ ವಿಚಾರಕ್ಕೆ ಸಂಬಂಧಿಸಿದ ನಿರ್ಣಯವೂ ಈ ಸಮ್ಮೇಳನದ ಮುಂದೆ ಬಂದಿರುವುದು. ಇಂದು ಕರ್ನಾಟಕದ ಪತ್ರಿಕೋದ್ಯಮವು ಪ್ರಭಾವಶಾಲಿಯಾಗಬೇಕಾದರೆ ಅದರಲ್ಲಿ ದುಡಿವ ಪತ್ರಿಕೋದ್ಯಮಿಗಳ ಪಾಡು ಉತ್ತಮ ಸ್ಥಿತಿಗೇರಬೇಕೆಂಬುದು ನಿರ್ವಿವಾದ. ಈ ವಿಚಾರದಲ್ಲಿ ಕೇಂದ್ರ ಸಂಸ್ಥೆಯು, ಆಯಾಯ ಪತ್ರಿಕಾ ಸಂಚಾಲಕರನ್ನು ಒತ್ತಾಯಿಸುವುದರೊಡನೆ ಆ ನಿರ್ಣಯವನ್ನು ಶೀಘ್ರ ಕಾರ್ಯರೂಪಕ್ಕೆ ತರುವಂತಾಗಬೇಕು.

ಒಟ್ಟಿನಿಂದ ಈ ಸಮ್ಮೇಳನದಲ್ಲಿ ಪತ್ರಿಕೋದ್ಯಮಿಗಳ ಹಲವು ಜೀವಂತ ಪ್ರಶ್ನೆಗಳು ಚರ್ಚಿತವಾಗಿ ನಿರ್ಣಯ ರೂಪಕ್ಕೆ ಬಂದಿವೆ. ಅವುಗಳು ಬೇಗನೇ ಕಾರ್ಯರೂಪಕ್ಕೆ ಬರಬೇಕು; ಬರುವಂತೆ ಪತ್ರಿಕೋದ್ಯಮಿಗಳು, ಪತ್ರಿಕಾ ಸಂಚಾಲಕರೂ, ಇವರೊಡನೆ ಜನತೆಯೂ, ಇದಕ್ಕೆಲ್ಲಾ ಸರಕಾರವೂ ಸಾಕಷ್ಟು ಬೆಂಬಲ ಕೊಡುವುದು ಅವಶ್ಯವಿದೆ.

ಅಧ್ಯಕ್ಷ ಶ್ರೀ ಸಿ. ಆರ್. ಶ್ರೀನಿವಾಸನರ ಭಾಷಣ

(೧ನೇ ಪುಟದಿಂದ)

ಭಾಷಾ ಪತ್ರಿಕೆಗಳಿಗೆ ಹೆಚ್ಚಬೇಕಾಗಿದೆ. ಲಕ್ಷಾಂತರ ಮಂದಿಯಾಂತರ ಪತ್ರಿಕೆಗಳಿದ್ದಾಗಲೇ ಭಾರತದ ಈ ಶಕ್ತಿ ಹೆಚ್ಚುವುದು. ಬಂಗಾಳದ 'ಆನಂದ ಬಜಾರ್ ಪತ್ರಿಕೆ'ಯಂಥಾ, ಭಾರತದ ಪತ್ರಿಕೆಗಳಲ್ಲಿ ಅತ್ಯಂತ ಪ್ರಭಾವವಿರುವ ಪತ್ರಿಕೆಗಳು ಇನ್ನೂ ಹೆಚ್ಚುವುದು ಅದೇನೂ ಅಸ್ವಾಭಾವಿಕವೆನಲಾಗುವುದಿಲ್ಲ.

'ಭಾರತದ ಪತ್ರಿಕೋದ್ಯಮವಿಂದು ಮೂರು ಭಾಗವಾಗಿ ವಿಂಗಡಿಸಲ್ಪಟ್ಟಿದೆ: ಆಂಗ್ಲೋ ಇಂಡಿಯನ್, ಇಂಡೋ ಇಂಗ್ಲಿಷ್ ಮತ್ತು ದೇಶಭಾಷಾ ಪತ್ರಿಕೆಗಳೆಂದು. ಸರಕಾರ ಮತ್ತು ವ್ಯವಹಾರಿಗಳಿಂದ ಬೆಂಬಲ ದೊರೆವ ಕಾರಣ ಮೊದಲಿನವುಗಳು ಆರ್ಥಿಕ ದೃಷ್ಟ್ಯಾ ಪ್ರಥಮ ತರಗತಿಯಲ್ಲಿವೆ. ರಾಜಕೀಯ ದೃಷ್ಟ್ಯಾ ಎರಡನೆಯವುಗಳು ಪ್ರಬಲವಿವೆ; ಏಕೆಂದರೆ ಯಾರ ಕೈಯ್ಯಲ್ಲಿ ಮುಂದಾಳುತನವಿದೆಯೋ ಆ ಜನರ ವಶವಿದೆ ಇದು. ನಿಜವಾದ ಶಕ್ತಿಯಲ್ಲಿ ಮೂರನೆಯವು ಪ್ರಬಲವಿವೆ; ಏಕೆಂದರೆ ಇವು ಜನತೆಯ ಸಂಪರ್ಕವನ್ನಿಟ್ಟು ಕೊಂಡಿವೆ. ಇತ್ತೀಚೆಗೆ ಮಾತ್ರ ಈ ಮೂರು ಪಂಗಡದವರೂ ಪತ್ರಿಕೋದ್ಯಮದ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವಲ್ಲಿ ಒಂದಾಗಿ ದುಡಿಯುತ್ತಿದ್ದಾರೆ. ಆದರೆ ಈ ಸಂಬಂಧವು ಕೆಲ ಸಂದರ್ಭದಲ್ಲಿ ರಾಜಕೀಯ ಬಿನ್ನಾಭಿಪ್ರಾಯದಲ್ಲಿ ದೂರವಾಗುತ್ತಿವೆ. ಆದರೆ ಇದುವರೆಗಿನ ಸಂಬಂಧದಿಂದ ಅನ್ಯೋನ್ಯ ಮೈತ್ರಿ ಸಹಕಾರ ಬೆಳೆದಿದೆ. ಹಾಗಾಗಿ ಮುಂದೆ ಭಾರತದ ಪತ್ರಿಕಾಲೋಕ ಬಲಶಾಲಿಯಾಗಿರುವ ಲಕ್ಷಣ ತೋರುತ್ತದೆ. ದೇಶದ ಬೇರೆ ಬೇರೆ ಕಡೆಗಳಲ್ಲಿರುವ ಪತ್ರಿಕೋದ್ಯೋಗಿ ಸಂಘಗಳ ವಿನಾ, ಎರಡು ಅಖಿಲ ಭಾರತ ಸಂಸ್ಥೆಗಳಿವೆ; ದಿ ಇಂಡಿಯನ್ ಎಂಡ್ ಈಸ್ಟರ್ನ್ ನ್ಯೂಸ್ ಪೇಪರ್ ಸೊಸೈಟಿ ಮತ್ತು ಆಲ್ ಇಂಡಿಯಾ ನ್ಯೂಸ್ ಪೇಪರ್ ಎಡಿಟರ್ಸ್ ಕೋನ್ಫರೆನ್ಸ್—ಎಂದು ಇವೆರಡು ಮೇಲಿನ ಮೂರು ಪಂಗಡಗಳಿಗೂ ಸಹಕಾರಿಯಾಗಿದ್ದು, ಇಡೀ ಭಾರತದ ಪತ್ರಿಕಾ ಲೋಕಕ್ಕೆ ನೆರವಾಗಿವೆ. ಮೊದಲಿನ ಸಂಸ್ಥೆ ಪತ್ರಿಕೆಗಳ ವ್ಯಾಪಾರ ದೃಷ್ಟಿಯಲ್ಲಿ, ಎರಡನೆಯದು ಸರಕಾರ ಮತ್ತು ಪತ್ರಿಕೆಗಳ ಸಂಬಂಧದಲ್ಲಿ ಕೆಲಸ ಮಾಡುವುದು. ಈ ಯುದ್ಧಕಾಲದಲ್ಲಿ ಇವೆರಡು ಸಂಸ್ಥೆಗಳಿಂದ ಆದ ಪ್ರಯೋಜನ ಪರೀಕ್ಷೆಯಿಂದ ಯುದ್ಧಾನಂತರವೂ ಅವು ಬಲಶಾಲಿಯಾಗಿ ದೇಶದ ಹಿತವನ್ನು ಇನ್ನೂ ಹೆಚ್ಚಾಗಿ ಮಾಡುವಂತೆ ಇರುವವೆಂದು ಹಾರೈಸಬಹುದು.'

ಕಸ್ತೂರ್ ಬಾರ ನಿಧನದ ಬಗ್ಗೆ

ಮಂಗಳೂರಲ್ಲಿ ಹರತಾಳ

ಮಹಾತ್ಮರ ಪತ್ನಿ ಕಸ್ತೂರ್ ಬಾ ಮರಣ ಹೊಂದಿದ ಸುದ್ದಿ ಕೇಳಿದೊಡನೆಯೇ ಮಂಗಳೂರು ನಾಗರಿಕರು ಸ್ವೇಚ್ಛೆಯಿಂದಲೇ ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರಾದರೂ ಬಹಳ ವಿಷಾದ ವ್ಯಕ್ತಪಡಿಸಿದರು. ಕೆಲವು ಕಾರ್ಖಾನೆಗಳು ಹೆಚ್ಚಾಗಿ ಶ್ರೀಯುರು ಕೆಲಸ ಮಾಡುವಂಥವು—ಗುಜರಾತಿ ಅಂಗಡಿಗಳು, ಬಂದರದಲ್ಲಿ ಕೆಲವು ಕೂಡಲೇ ಮುಚ್ಚಲ್ಪಟ್ಟಿತು. ಮರುದಿನವೂ ಇದೇ ರೀತಿ ನಡೆಯಿತು. ತಾ. ೨೪ರಂದು ಮಂಗಳೂರಲ್ಲಿ ಸಂಪೂರ್ಣವಾಗಿ ಯಶಸ್ವೀ ಹರತಾಳ ನಡೆಯಿತು.

[೭ನೇ ಪುಟದಿಂದ]

ಸತ್ಕಾರ ಕೂಟ

ಸಂಜೆ ಗ್ರೂಪ್ ಫೋಟೋ ತೆಗೆಯಲ್ಪಟ್ಟಿತು. ಕೆನರಾ ಬೇಂಕ್ ಮತ್ತು ಕೆನರಾ ಬೇಂಕಿಂಗ್ ಕಾರ್ಪೋರೇಶನಿನವರು ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಭುವನೇಂದ್ರ ಹಾಲಿನಲ್ಲಿ ಸತ್ಕಾರ ಕೂಟವನ್ನೇರ್ಪಡಿಸಿದರು. ಆ ಸಮಯದಲ್ಲಿ ಶ್ರೀಯುತರು ಅಮ್ಮೆಂಬಳ ಶ್ರೀನಿವಾಸ ಪೈ ಮತ್ತು ಶ್ರೀ ವೆಂಕಟ್ರಾಯ ಬಾಳಿಗ ಇವರು ಅತಿಥಿಗಳನ್ನು ಸ್ವಾಗತಿಸಿ ಸಂಸ್ಥೆಗಳ ಪರಿಚಯ ಮಾಡಿಕೊಟ್ಟರು. ಶ್ರೀ ಬಿ. ಎನ್. ಗುಪ್ತರು ಪ್ರತಿನಿಧಿಗಳ ಪರವಾಗಿ ಕೃತಜ್ಞತೆ ಸೂಚಿಸಿದರು. ಡಾ. ಸುಂದರರಾವ್ ಪೈ ಅವರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

"ಲಿಪಿ ಸಂಸ್ಕರಣ"

ಅನಂತರ "ಲಿಪಿ ಸಂಸ್ಕರಣ" ಎಂಬ ವಿಷಯದ ಕುರಿತು ಸಮನ್ವಯ ಕೂಟ ಜರಗಿತು. ಮೈಸೂರಿನ ಶ್ರೀ ಎಸ್. ವಿ. ಶ್ರೀನಿವಾಸರಾವ್ ಎಂ., ಎ. ಅವರು ಮಾತನಾಡಿದರು. ಶ್ರೀಯುತರು ಮೊಹರೆ, ಕನ್ನಡ ಟೈಪ್‌ರೈಟರ್ ನಿರ್ಮಾಪಕರಾದ ಎಸ್. ಸುಬ್ಬರಾವ್, ಅನಂತ ಸುಬ್ಬರಾವ್, ಅಮ್ಮೆಂಬಳ ಶಂಕರನಾರಾಯಣ, ಕೌಜಲಗಿ ಶೇಷಾಚಾರ್ಯ, ಶಿವರಾಮ ಕಾರಂತ ಮತ್ತು ನಂಜುಂಡಯ್ಯ ಇವರು ಭಾಗವಹಿಸಿದರು.

ಸಂಗೀತ ಕಚೇರಿ

ರಾತ್ರೆ ಪ್ರತಿನಿಧಿಗಳ ವಸತಿ ಗೃಹದಲ್ಲಿ ಮಂಗಳೂರಿನ ಶ್ರೀ ನಾರಾಯಣ ಶಾಸ್ತ್ರಿ ಅವರಿಂದ ಸಂಗೀತ ಕಚೇರಿ ನಡೆಯಿತು. ಶ್ರೀ ಮೋಹರೆಯವರು ಶಾಸ್ತ್ರಿಗಳ ಸಂಗೀತಗಳನ್ನು ಪ್ರಶಂಸಿಸಿದರು. ಕಚೇರಿಯ ಅಂತ್ಯದಲ್ಲಿ ಶ್ರೀ ಬಿ. ಎಂ. ಇದಿನಬ್ಬ ಅವರು ಒಂದೆರಡು ಲಾವಣಿಗಳನ್ನು ಹಾಡಿದರು. ಅಧ್ಯಕ್ಷರು ಹಲವು ಪ್ರತಿನಿಧಿಗಳು ಉಡುಪಿಯನ್ನು ಸಂದರ್ಶಿಸುವುದಕ್ಕಾಗಿ ತಾ. ೧೯ರಂದು ತೆರಳಿದರು.

ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಬಂದಿದ್ದ ಹಲವಾರು ಪ್ರತಿನಿಧಿಗಳೂ ತಾ. ೨೧ರಂದು ಪ್ರಾತಃ ಉಡುಪಿಗೆ ತೆರಳಿದರು. ಅವರನ್ನು ಅಲ್ಲಿ ಫಲಿಮಾರ ಸ್ವಾಮಿಗಳು ಮತ್ತು ಇತರ ಮಹನೀಯರು ಆದರೋಪಚಾರವಿತ್ತು ಸತ್ಕರಿಸಿದರು. ಅಧ್ಯಕ್ಷರಾದ ಶ್ರೀ ಸಿ. ಆರ್. ಶ್ರೀನಿವಾಸನರು ತಾ. ೨೦ರಂದು ಸಂಜೆಗೆ ಉಡುಪಿಗೆ ತೆರಳಿದ್ದು ತಾ. ೨೧ರಂದು ಮೈಲಿನಲ್ಲಿ ಮದ್ರಾಸಿಗೆ ತೆರಳಿದರು.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ—ಉತ್ತಮವೂ ಬಾಳಿಕೆಯದೂ ಆಗಿದೆ. ಬೇಗನೇ ನೊರೆ ಹೊರಡುತ್ತದೆ; ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ.



PISTOL BRAND BAR SOAP

WANTED AGENTS IN S. KANARA DT.

Mangalore Stockists:— M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಅಖಿಲ ಕರ್ಣಾಟಕಕ್ಕೆ ಒಂದು ಪತ್ರಿಕೋದ್ಯೋಗೀ ಸಂಘ

ಮಂಗಳೂರು ಸಮ್ಮೇಳನದಲ್ಲಿ ಸ್ಥಾಪಿತವಾಯಿತು.

ಪತ್ರಿಕಾ ನಿರ್ಬಂಧದ ಖಂಡನೆ!

ಪತ್ರಿಕೋದ್ಯೋಗಿಗಳಿಗೆ ತುಟ್ಟಿಭತ್ತೆ!

ಸಮ್ಮೇಳನದ ಎಲ್ಲಾ ವಿವರಗಳು.

ಮಂಗಳೂರಲ್ಲಿ ಕರ್ನಾಟಕ ಪತ್ರಿಕೋದ್ಯೋಗಿಗಳ ಬೃಹತ್ ಸಮ್ಮೇಳನವೊಂದು ಮದ್ರಾಸಿನ ಸ್ವದೇಶ ಮಿತ್ರನ್ ಸಂಪಾದಕರಾದ ಶ್ರೀ। ಸಿ. ಆರ್. ಶ್ರೀನಿವಾಸನರ ಅಧ್ಯಕ್ಷತೆಯಿಂದ ತಾ. ೧೯ ಮತ್ತು ೨೦ ರಂದು ಬಹಳ ಸಂಭ್ರಮದಿಂದ ಜರಗಿತು. ಮೈಸೂರು, ಬೆಂಗಳೂರು, ಧಾರವಾಡ, ಬೊಂಬಾಯಿ, ಮದರಾಸು, ಬೆಳಗಾವಿ, ಶಿವಮೊಗ್ಗ, ಹಾಸನ, ಮೊದಲಾದ ಕಡೆಗಳಿಂದ ಬಹಳ ಮಂದಿ ಪ್ರತಿನಿಧಿಗಳು ಬಂದಿದ್ದರು. ಮೈಸೂರು ಸಂಸ್ಥಾನದ ಬೇರೆ ಬೇರೆ ಭಾಗಗಳಿಂದ ಸುಮಾರು ೫೦ಕ್ಕೆ ಮಿಕ್ಕಿ ಪ್ರತಿನಿಧಿಗಳು ಹಾಜರಾಗಿದ್ದರು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ, ಪತ್ರಿಕೋದ್ಯಮಿಗಳು ಆಗಮಿಸಿದ್ದರು. ಶ್ರೀಗಳಾದ ಹ. ರಾ. ಮೋಹರಿ, ಬಿ. ಎನ್. ಗುಪ್ತ, ಪಿ. ಆರ್. ರಾಮಯ್ಯ, ವಿ. ಸೀತಾರಾಮಯ್ಯ, ಗಣೇಶರಾಮಯಾಜಿ ಮೊದಲಾದ ಕನ್ನಡದ ಪ್ರಮುಖ ಪತ್ರಿಕೋದ್ಯೋಗಿಗಳು ನೆರೆದಿದ್ದರು. ಒಟ್ಟು ನೂರಕ್ಕೆ ಮಿಕ್ಕಿ ಪ್ರತಿನಿಧಿಗಳು ಹಾಜರಿದ್ದರು. ಇದುವರೆಗೆ ಇಷ್ಟು ಮಂದಿ ಕನ್ನಡ ಪತ್ರಿಕೋದ್ಯೋಗೀ ಪ್ರತಿನಿಧಿಗಳು ಯಾವ ಕಡೆಯೂ ಒಟ್ಟು ಸೇರಿಲ್ಲವೆಂಬಷ್ಟು ಮಂಗಳೂರ ಸಮ್ಮೇಳನವು ಯಶಸ್ವಿಯಾಗಿತ್ತು.

ಅಧ್ಯಕ್ಷ ಪ್ರತಿನಿಧಿಗಳ ಆಗಮನ

ತಾ ೧೮ರಂದು ಸಂಜೆ ಅಧ್ಯಕ್ಷರಾದ ಶ್ರೀ। ಆರ್. ಶ್ರೀನಿವಾಸನರು ಮೈಲು ಬಂಡಿಯಲ್ಲಿ ಬಂದಿಳಿದಾಗ ಅವರಿಗೆ ಸ್ವಾಗತಾಧ್ಯಕ್ಷರಾದ ಶ್ರೀ। ವಿ. ಎಸ್. ಕುಡ್ವ, ಸ್ವಾಗತ ಉಪಾಧ್ಯಕ್ಷರಾದ ಶ್ರೀ। ಹುರುಳಿ ಭೀಮರಾವ್, ಕೆ. ಆರ್. ಆಚಾರ್, ರಾ. ಸಾ. ಎಸ್. ಎಲ್. ಪಿಂಟೋ ಸ್ವಾಗತ ಸಮಿತಿ ಸದಸ್ಯರಾದ ಶ್ರೀ। ಎ. ಬಿ. ಶೆಟ್ಟಿ, ಮಂಗಳೂರು ಜಾರಪ್ಪ, ಸ್ವಾಗತ ಕಾರ್ಯದರ್ಶಿ ಶ್ರೀ. ಕೆ. ಕೆ. ರೈ ಮೊದಲಾದವರೂ ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯ ಶ್ರೀ. ವೆಂಕಟ್ರಮನ್ ಮೊದಲಾದ ಹಲವು ಮಂದಿ ಪುರಪ್ರಮುಖರೂ ಹೂಮಾಲೆ ಹಾಕಿ ಸ್ವಾಗತವಿತ್ತರು.

ಇದೇ ದಿನ ಸಂಜೆಗೆ ಮೈಸೂರು, ಬೆಂಗಳೂರು, ಬೊಂಬಾಯಿ, ಮದ್ರಾಸು, ಶಿವಮೊಗ್ಗ, ಹಾಸನ, ಅರಕಲಗೂಡು, ಕಾನಕಾನಹಳ್ಳಿ, ಉಡುಪಿ, ನೀಲೇಶ್ವರ, ಕಾಸರಗೋಡು, ಪುತ್ತೂರು, ಕುಂಬಳೆ, ಉಡುಪಿ, ಈ ಎಲ್ಲಾ ಕಡೆಗಳಿಂದ ನೂರಾರು ಮಂದಿ ಪತ್ರಿಕೋದ್ಯೋಗಿ ಪ್ರತಿನಿಧಿಗಳು ಬಂದರು. ಬಂದ ಪ್ರತಿನಿಧಿಗಳನ್ನು ಸ್ವಾಗತ ಸಮಿತಿಯವರು ರೈಲ್ವೆ ನಿಲ್ದಾಣದಲ್ಲಿ, ಬಸ್ ಸ್ಟೇಶನ್‌ಗಳಲ್ಲಿ ಸ್ವಯಂಸೇವಕರು ಸಹಿತ ಸ್ವಾಗತಿಸಿ, ಪ್ರತಿನಿಧಿಗಳಿಗಾಗಿ ಏರ್ಪಡಿಸಿದ, ಸಿ. ಪಿ. ಸಿ. ಬಿಲ್ಡಿಂಗಿನ ವಸತಿ ಗೃಹಕ್ಕೆ ಕರಕೊಂಡು ಹೋಗಿ ಊಟ ಉಪಚಾರಾದಿಸತ್ಕಾರಗಳನ್ನು ಮಾಡಿದರು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಲನವು ತಾ. ೧೯ರಲ್ಲಿ ಮಂಗಳೂರಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಆರಂಭವಾಯಿತು.

ಪತ್ರಿಕಾ ಪ್ರದರ್ಶನ

ಪೂರ್ವಾಹ್ನ ೯॥ ಘಂಟೆಗೆ ಪತ್ರಿಕಾ ಪ್ರದರ್ಶನವನ್ನು ಶ್ರೀ। ಪಿ. ಆರ್. ರಾಮಯ್ಯ ಬೆಂಗಳೂರು ಅವರು ತೆರೆದರು. ಶ್ರೀ। ರಾಮಯ್ಯ ಅವರು ಭಾಷಣಮಾಡುತ್ತಾ, ಹೀಗೆಂದರು;

'ಮಂಗಳೂರು ಕರ್ಣಾಟಕದ ನಂದನ ವನವೆಂದು ಹಿಂದೆ ಯಾರೋ ಹೇಳಿದ್ದರು. ಇಂದಿಗೂ ಆ ಹೆಸರು ಇದೆ. ಕಲೆ—ಕೈಗಾರಿಕೆ—ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರ ವಹಿಸಿದೆ ಈ ಮಂಗಳೂರು. ಇಂತಹ ಸ್ಥಳದಲ್ಲಿ ಈ ಸಮ್ಮೇಳನ ಜರಗುತ್ತಿರುವುದು ಸಮಂಜಸವೇ ಸರಿ.

'ವೃತ್ತ ಪತ್ರಿಕೋದ್ಯಮದ ಕಡೆಗೆ ದೃಷ್ಟಿ ಹರಿಸಿದರೂ ಮಂಗಳೂರು ಪ್ರಾಧಾನ್ಯತೆ ಕಂಡು ಬರುತ್ತದೆ. ಇಲ್ಲಿನ ಮುದ್ರಣದ ಸ್ಫುಟತ್ವ ಮತ್ತು ಸೌಂದರ್ಯ ಹೆಸರುವಾಸಿಯಾದುದು. ಪತ್ರಿಕೆಗಳಲ್ಲೂ ತನ್ನದೇ ಆದ ಒಂದು ವೈಶಿಷ್ಟ್ಯವಿದೆ.

'ಆದರೂ ಸಮಗ್ರ ಕರ್ನಾಟಕದಲ್ಲಿ ಆಗಬೇಕಾದಷ್ಟು ಪ್ರಗತಿ ಆಗಲಿಲ್ಲ. ಸಂಸ್ಕೃತಿ ಮತ್ತು ಭಾವನಾ ದೃಷ್ಟಿಯಿಂದ ಕರ್ನಾಟಕ ಒಂದಾಗಿದೆ. ಆದರೆ ಆಡಳಿತ ದೃಷ್ಟಿಯಿಂದ ಇನ್ನೂ ಕರ್ನಾಟಕ ಸ್ವಂತ—ಸ್ವತಂತ್ರವಾಗಿಲ್ಲ. ಅಂತಹ ಏಕೀಕರಣವಿಲ್ಲದೆ ತಮಿಳು, ಆಂಧ್ರ, ಬಂಗಾಳಗಳ ಪತ್ರಿಕೆಗಳಂತೆ ನಾವು ಮುಂದುವರಿಯುವುದು ಸಾಧ್ಯವಿಲ್ಲ. ಗಾಂಧಿಯುಗ ಬಂದ ಮೇಲೆ ನಮ್ಮ ಪತ್ರಿಕೆಗಳ ಪ್ರಗತಿಗೆ ಆರಂಭವಾಯಿತು.

"ಅಮೇರಿಕದಲ್ಲಿ ಮೂರರಲ್ಲೊಬ್ಬರು ಪತ್ರಿಕೆ ಓದುತ್ತಾರೆ. ನಮ್ಮಲ್ಲಿ ನೂರರಲ್ಲಿ ಮೂರು ಮಂದಿ ಓದುತ್ತಾರೆ? ಆದರೂ ನಮ್ಮ ದೇಶದ ಅಕ್ಷರಸ್ಥರ ಸಂಖ್ಯೆ ತೆಗೆದರೆ ಹೆಚ್ಚಿನ ಆಶ್ಚರ್ಯ ತೋರುವುದಿಲ್ಲ. ಆದರೂ ಇದು ಸಾಲದು; ಅಕ್ಷರಜ್ಞರ ಸಂಖ್ಯೆ ಹೆಚ್ಚಾಗಬೇಕು. ಚಂದಾದಾರರ ಸಂಖ್ಯೆಯೂ ಏರಿ ಜಾಹೀರಾತುಗಳಿಂದ ಸಿಗುವ ಪ್ರತಿಫಲವೂ ಹೆಚ್ಚಾಗಬೇಕು. ಎಲ್ಲಾ ಸೌಕರ್ಯಗಳಿದ್ದ ಮೇಲೆ ಕನ್ನಡ ಪತ್ರಿಕೋದ್ಯಮ ಉಜ್ವಲವಾಗಿ ಬೆಳೆಯುವುದು."

ಪ್ರದರ್ಶನದಲ್ಲಿ ೫೦೦ರಷ್ಟು ಕನ್ನಡ ನಾಡಿನ ಪತ್ರಿಕೆಗಳಿದ್ದುವು. ಒಮ್ಮೆ ಹುಟ್ಟಿ ಅಳಿದು ಈಗ ಜೀವಂತವಿರುವ ಪತ್ರಿಕೆಗಳೂ ವಿಶೇಷ ಸಂಚಿಕೆಗಳೂ ಪ್ರದರ್ಶನಕ್ಕೆ ಇಡಲ್ಪಟ್ಟಿದ್ದುವು. ಬೆಂಗಳೂರಿನ ಎಸ್. ಸುಬ್ಬರಾವ್‌ರವರು ತಯಾರಿಸಿದ ಕನ್ನಡ ಟೈಪ್‌ರೈಟರ್ ಕಂಡು ಪ್ರತಿಯೊಬ್ಬರೂ ಸಂತೋಷ ವ್ಯಕ್ತಪಡಿಸಿದರು.

ಶ್ರೀ। ಬಿ. ವಿ. ಬಾಳಿಗರ ಪ್ರಾರ್ಥನೆಯೊಡನೆ ಸ್ವಾಗತ ಭಾಷಣ ಪ್ರಾರಂಭವಾಯಿತು, ಇದರ ಮೊದಲು ಶ್ರೀ। ಶಿವರಾಮ ಕಾರಂತರು ಶ್ರೀ। ಶ್ರೀನಿವಾಸನರನ್ನು ಅಧ್ಯಕ್ಷರಾಗಿ ಸೂಚಿಸಲು ಶ್ರೀಗಳಾದ ಬಿ. ಎನ್. ಗುಪ್ತ ಮತ್ತು ಹ. ರಾ. ಮೋಹರಿ ಇವರು ಆ ಸೂಚನೆ ಸಮರ್ಥಿಸಿದರು.

ಭಾಷಣಗಳು

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ। ವಿ. ಎಸ್. ಕುಡ್ವರು ಸ್ವಾಗತ ಭಾಷಣ ಓದಿದರು (ಅದರ ವಿವರ ಬೇರೆ ಕಡೆ ಕೊಡಲಾಗಿದೆ.) ಸ್ವಾಗತ ಭಾಷಣ ನಂತರ ಅಧ್ಯಕ್ಷ ಭಾಷಣವಾಯಿತು. (ಅದರ ವಿವರವೂ ಬೇರೆ ಕಡೆ ಕೊಟ್ಟಿದೆ.)

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಅಧಿವೇಶನವು ತಾ. ೨೦ರಂದು ಮಧ್ಯಾಹ್ನ ಮುಕ್ತಾಯವಾಯಿತು.

ಆರಂಭದ ದಿನ ಬೆಳಗ್ಗೆ ಗುರುನಾರಾಯಣ ಬೇಂಕಿನವರು ಅಧ್ಯಕ್ಷರಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು. ಅಲ್ಲಿ ಜರಗಿದ ಸಭೆಯಲ್ಲಿ ಬೇಂಕಿನ ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ ಮಂಗಳೂರು ಜಾರಪ್ಪ ಅವರು ಬಿಲ್ಲವ ಸಮಾಜದವರಿಗೆ ಮಾತ್ರವೆಂದು ಆರಂಭವಾದ ಬೇಂಕನ್ನು ಈಗ ಎಲ್ಲರ ಉಪಯೋಗಕ್ಕಾಗಿಯೂ ತೆರೆದಿಡಲಾಗಿದೆಯೆಂದರು. ಶ್ರೀ ಶ್ರೀನಿವಾಸರು ಬೇಂಕಿನ ಶುಭವನ್ನು ಕೋರಿದರು. ಶ್ರೀ ಕೆ. ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ವಿಷಯ ನಿರ್ಧಾರಕ ಸಮಿತಿಸಭೆ

ಆ ರಾತ್ರಿ ವಿಷಯ ನಿರ್ಧಾರಕ ಸಮಿತಿಯ ಸಭೆ ಶ್ರೀ ಪಿ. ಆರ್. ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಜರಗಿತು. ಸದಸ್ಯರ ಆಯ್ಕೆಯ ಬದಲು ಎಲ್ಲಾ ಪ್ರತಿನಿಧಿಗಳೂ ಸಭೆಯಲ್ಲಿ ಭಾಗವಹಿಸಿದರು. ಸ್ವಾಗತ ಸಮಿತಿಯ ಪರವಾಗಿ ಮುಂದಿಡಲ್ಪಟ್ಟಿದ್ದ ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಹೊಸ ಘಟನಾವಳಿಯ ಕುರಿತು ನಿರ್ಧಾರಕ್ಕೆ ಬರಲು ಆರು ಮಂದಿಯ ಒಂದು ಸಮಿತಿಯ ರಚನೆಯಾಯಿತು.

"ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ"

ಮರುದಿನ—ರವಿವಾರ—ಪ್ರಾತಃ ೯॥ಗೆ ಭುವನೇಂದ್ರ ಹಾಲ್‌ನಲ್ಲಿ "ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ" ಎಂಬ ವಿಷಯದ ಕುರಿತು ವಿಚಾರ ವಿನಿಮಯ—ಸಮನ್ವಯ ಕೂಟ ಜರಗಿತು. ಮೈಸೂರಿನ ಶ್ರೀ। ವಿ. ಸೀತಾರಾಮಯ್ಯ ಅವರು ಮೊದಲು ಮಾತನಾಡಿದರು. ಅನಂತರ ಶ್ರೀಯುತರು ಪಿ. ಆರ್. ರಾಮಯ್ಯ ಶಿವರಾಮ ಕಾರಂತ, ಕಡಂಗೋಡ್ಲು ಶಂಕರ ಭಟ್ ಮತ್ತು ನಂಜುಂಡರಾವ್ ಇವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪತ್ರಿಕೋದ್ಯಮದಲ್ಲಿ ಪ್ರಗತಿ ಹೇಗೆ ಸಾಧ್ಯ? ವಿವಿಧ ವಿಭಾಗಗಳಲ್ಲಿ ಅಭಿವೃದ್ಧಿ ಹೇಗೆ ಉಂಟಾದೀತು? ಎಂಬುದರ ಕುರಿತು ಚರ್ಚೆ ನಡೆಯಿತು.

ಈ ದಿನ ಅಪರಾಹ್ನ ಗಂಟೆ ೩॥ಗೆ ಪತ್ರಿಕೋದ್ಯೋಗೀ ಪ್ರತಿನಿಧಿಗಳನ್ನು ಬಸ್ಸಿನಲ್ಲಿ ಕುಳ್ಳಿರಿಸಿ ಮಂಗಳೂರಲ್ಲಿ ನೋಡಲಿಕ್ಕಿರುವ ವಿಶೇಷ ಸ್ಥಳಗಳನ್ನು ತೋರಿಸಲಾಯಿತು. ಸಾಯಂಕಾಲ ೬ ಗಂಟೆಗೆ ಅಧ್ಯಕ್ಷರಿಗೂ ಊರ ಪರವೂರ ಪತ್ರಿಕೋದ್ಯೋಗೀ ಪ್ರತಿನಿಧಿಗಳಿಗೂ ಶ್ರೀಮತಿ ಕಮಲಾ ದೇವಿ ಚಟ್ಟೋಪಾಧ್ಯಾಯರು ಸತ್ಕಾರ ಕೂಟವೇರ್ಪಡಿಸಿದರು.

ಮುಕ್ತಾಯ ಅಧಿವೇಶನ

ಅನಂತರ ಶ್ರೀ ಸಿ. ಆರ್. ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಮುಕ್ತಾಯ ಅಧಿವೇಶನವು ಆರಂಭವಾಯಿತು. ಹಿಂದಿನ ದಿನ ಪ್ರತಿನಿಧಿಗಳ ಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು ಶ್ರೀಯುತರು ಮಹದೇವ ದೇಸಾಯಿ, ರಮಾನಂದ ಛಟರ್ಜಿ, ಪಂಡಿತ ತಾರಾನಾಥ, ಎಂ. ಎನ್. ಕಾಮತ್, ಕೆ. ಭೀಮರಾವ್ ಮತ್ತು ವಿದ್ಯಾಭೂಷಣ ಸಂಜೀವರಾವ್ ಅವರ ನಿಧನದ ಕುರಿತು ಸಮ್ಮೇಳನವು ಸಂತಾಪ ಸೂಚಿಸಿತು. ಸಭಿಕರೆಲ್ಲ ಎದ್ದು ನಿಂತು ಆ ನಿರ್ಣಯವನ್ನು ಮಾನ್ಯಮಾಡಿದರು.

ಕರ್ಣಾಟಕ ಪತ್ರಿಕೋದ್ಯೋಗಿ ಸಂಘ

ಕರ್ಣಾಟಕ ಪತ್ರಿಕೋದ್ಯೋಗಿ ಸಂಘದ ೧೯೪೪—೪೫ನೇ ವರ್ಷದ ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆಯನ್ನು ಸಭೆಯು ಸ್ವೀಕರಿಸಿತು. ಶ್ರೀ। ಮೋಹರೆ ಹಣಮಂತರಾಯರು ಸಂಘದ ಅಧ್ಯಕ್ಷರು, ಶ್ರೀಯುತರು ಬಿ. ಎನ್. ಗುಪ್ತ (ಜನವಾಣಿ) ವಿ. ಎಸ್. ಕುಡ್ವ (ನವಭಾರತ) ಪಿ. ಬಿ. ಶ್ರೀನಿವಾಸನ್ (ತಾಯಿನಾಡು)—ಇವರು ಉಪಾಧ್ಯಕ್ಷರು. ಶ್ರೀ। ಕುಡ್ವರು ಕೋಶಾಧಿಕಾರಿಯಾಗಿಯೂ ಇರುವರು. ಶ್ರೀಯುತರು ಕುಳುಕುಂದ ಶಿವರಾಯ (ಮಂಗಳೂರು) ಕೆ. ನಂಜುಂಡರಾವ್ (ಬೆಂಗಳೂರು) ಮತ್ತು ಹ. ರಾ. ಪುರೋಹಿತ (ಹುಬ್ಬಳ್ಳಿ) ಇವರು ಕಾರ್ಯದರ್ಶಿಯರು. ಶ್ರೀಯುತರು ಹರ್ಡೀಕರ್ ಮಂಜಪ್ಪ, ಅನಂತರಾವ್ ಚಿಕ್ಕೋಡಿ, ಹಿ. ರಾ. ಮಲ್ಯ, ಹುರುಳಿ ಭೀಮರಾವ್, ಕಡಂಗೋಡ್ಲು ಶಂಕರ್ ಭಟ್, ಎ. ಎಸ್. ಕಾಮತ್, ಹಿರೇಮಠ, ಎನ್. ಎಸ್. ವೆಂಕೋಬರಾವ್, ತಿರುಮಲೆ ತಾತಾಚಾರ್ಯ ಶರ್ಮ, ಬೆಳಿಯಪ್ಪ, ಎಸ್. ಡಿ. ನಾಡಕರ್ಣಿ, ಹೊಳಿ ಬಸವ ಶಾಸ್ತ್ರಿಗಳು, ಜಿ. ಆರ್. ಜಾಗಿರ್‌ದಾರ್—ಇವರು ಸಮಿತಿಯ ಸದಸ್ಯರಾಗಿರುವರು.

ಪತ್ರಿಕೆಗಳ ಮೇಲಿನ ನಿರ್ಬಂಧ

ಪತ್ರಿಕೆಗಳ ವಾರ್ತೆಗಳು ಪ್ರಧಾನವಾಗಿ ಭಾರತೀಯ ಪತ್ರಿಕೆಗಳ ಅಭಿಪ್ರಾಯಗಳು ಮತ್ತು ಆಂತರಿಕ ಪರಿಸ್ಥಿತಿಯ ಕುರಿತು ಜವಾಬ್ದಾರಿ ಧುರೀಣರ ಪ್ರಸ್ತಾವನೆಗಳು ದೇಶದ ಹೊರ ಹೋಗುವುದನ್ನು ಮತ್ತು ವಾರ್ತೆಗಳು ದೇಶದ ಒಳಕ್ಕೆ ಬರುವುದನ್ನು ಹತೋಟಿಯಲ್ಲಿಟ್ಟು, ರಾಜಕೀಯ ಕಾರಣ ತೋರಿಸಿ ತಡೆಯೊಡ್ಡುತ್ತಿರುವ, ಸರಕಾರದ ಧೋರಣೆಯನ್ನು ಈ ಸಮ್ಮೇಳನವು ಖಂಡಿಸುತ್ತಿದೆ; ಮತ್ತು ವಾರ್ತೆಗಳ ಮೇಲಿನ ನಿರ್ಬಂಧವು ಮಿಲಿಟರಿ ರಕ್ಷಣೆಯನ್ನಲ್ಲದೆ ರಾಜಕೀಯ ಅಥವಾ ಬೇರಾವ ವಿಷಯವನ್ನೂ ಹೊಂದಿಕೊಂಡಿರಕೂಡದೆಂದು ಅಭಿಪ್ರಾಯಪಡುತ್ತಿದೆ; ಅಲ್ಲದೆ ವಾರ್ತೆಗಳ ಮೇಲೆ ಕತ್ತರಿ ಪ್ರಯೋಗಿಸಿದಾಗಲೆಲ್ಲ ಆ ವಿಷಯವನ್ನು ತನ್ನ ಕಾರ್ಯಕ್ಕೆ ಕಾರಣ ತೋರಿಸಿ, ಸರಕಾರವು ಕೇಂದ್ರ ಪತ್ರಿಕಾ ಬೋಧಕ ಸಮಿತಿಯ ಎದುರು ಇಡಬೇಕು ಎಂದು ಸ್ಪಷ್ಟಪಡಿಸುತ್ತದೆ.

ಹಿಂದೂಸ್ಥಾನ್ ಟೈಮ್ಸ್ ಮತ್ತು ನೇಶನಲ್ ಕಾಲ್ ನಿರ್ಬಂಧ

'ಹಿಂದೂಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಪತ್ರಿಕೆಗಳ ಮೇಲೆ, ೧೯೪೨ ಆಗಸ್ಟ್ ೮ರ ಅನಂತರ ಮಹಾತ್ಮಾ ಗಾಂಧಿಯವರು ಇಲ್ಲವೆ ಅಕ್ರಮ ಬದ್ಧವೆಂದು ಸಾರಲ್ಪಟ್ಟ ಕಾಂಗ್ರೆಸ್ ಸಮಿತಿಯ ಸದಸ್ಯರು ಮಾಡಿದರೆಂದು ಹೇಳಲಾದ ಪ್ರಸ್ತಾವನೆಗಳನ್ನೂ ಅವುಗಳ ಮೇಲಿನ ವ್ಯಾಖ್ಯೆಗಳನ್ನೂ ಪ್ರಕಟಿಸುವುದಕ್ಕೆ ಮುಂಚಿತವಾಗಿ ಢಿಲ್ಲಿಯ ವಿಶೇಷ ಪತ್ರಿಕಾಬೋಧಕರಿಗೆ ಪರೀಕ್ಷೆಗೆ ಒಪ್ಪಿಸಬೇಕು; ಮತ್ತು ಅವರ ಸಮ್ಮತಿ ಸಿಗದೆ ಹೋದಲ್ಲಿ ಪ್ರಕಟಿಸಬಾರದು' ಎಂದು ಢಿಲ್ಲಿಯ ಛೀಫ್ ಕಮಿಶನರರು ಇತ್ತೀಚೆಗೆ ಹೊರಡಿಸಿದ ಆಜ್ಞೆಯನ್ನು ಈ ಸಮ್ಮೇಳನವು ಖಂಡಿಸುತ್ತದೆ. ಮತ್ತು ಅದನ್ನು ಒಡನೆಯೇ ಹಿಂತೆಗೆಯಬೇಕೆಂದು ಹೇಳುತ್ತದೆ.

ನಾಯುಡು ಬಾಯಿಗೆ ಬೀಗಮುದ್ರೆ

"ಸಾರ್ವಜನಿಕ ಸಭೆ—ಮೆರವಣಿಗೆಗಳಲ್ಲಿ ಭಾಗವಹಿಸಬಾರದು ಮತ್ತು ಭಾರತದಲ್ಲಿರುವ ಯಾವುದೇ ಪತ್ರಿಕೆಗೂ ಪ್ರಕಟಣೆ ಕೊಡಕೂಡದು" ಎಂದು ಸರಕಾರವು ಶ್ರೀಮತಿ ಸರೋಜಿನಿ ನಾಯುಡು ಅವರ ಮೇಲೆ ಹೊರಿಸಿರುವ ನಿರ್ಬಂಧಾಜ್ಞೆಯನ್ನು ಈ ಸಮ್ಮೇಲನವು ವಿರೋಧಿಸುತ್ತದೆ, ಮತ್ತು ಇದು ನಾಗರಿಕ ಸ್ವಾತಂತ್ರ್ಯದ ಧ್ಯೇಯಗಳಿಗೆ ವಿರೋಧವಾಗಿರುವುದು ಮಾತ್ರವೇ ಅಲ್ಲ, ಭಾರತೀಯ ಪತ್ರಿಕೆಗಳಿಗೆ ಅವಮಾನಕರವೂ ಆಗಿರುವ ಈ ಬಾಯಿಗೆ ಬಟ್ಟೆ ತುರುಕುವ ಆಜ್ಞೆಯನ್ನು ಒಡನೆಯೇ ಹಿಂತೆಗೆಯಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯಪಡಿಸುತ್ತದೆ.

ಜಾಮೀನು ಹಣ ಹಿಂದೆ ಕೊಡಿರಿ!

೧೯೪೨ರ ಮೈಸೂರು ನ್ಯೂಸ್ ಪೇಪರ್ಸ್ ಆಕ್ಟಿನ ಮೇರೆಗೆ ಬೆಂಗಳೂರಿನ 'ವಿಶ್ವಕರ್ಣಾಟಕ' ಸಾಪ್ತಾಹಿಕ ಮತ್ತು 'ಮೈಸೂರು ಪತ್ರಿಕೆ' ಪತ್ರಿಕೆಗಳಿಂದ ಪಡೆದಿರುವ ಜಾಮೀನು ಹಣವನ್ನು ಮೈಸೂರು ಸರಕಾರವು ಒಡನೆಯೇ ಹಿಂದೆ ಕೊಡಬೇಕೆಂದು ಈ ಸಮ್ಮೇಳನವು ಒತ್ತಾಯ ಪೂರ್ವಕ ಕೇಳುತ್ತದೆ.

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನಲ್ಲಿ

ಆಶ್ರಿತ ಸಂಸ್ಥಾನಗಳಲ್ಲಿರುವ ಪತ್ರಿಕಾ ಸಂಪಾದಕರನ್ನು ತಮ್ಮ ಪರಿಷತ್ತಿನಲ್ಲಿ ಸೇರಿಸಿ ಅವರ ವಿಶೇಷ ಪ್ರಶ್ನೆಗಳನ್ನು ವಿಶೇಷ ಉಪಸಮಿತಿಗಳ ಮೂಲಕ ಬಗೆಹರಿಸಬೇಕು; ಮತ್ತು ತನ್ನ ಈಗಿನ ಘಟನೆಯಲ್ಲಿ ತಿದ್ದುಪಡಿಮಾಡುವುದರ ಮೂಲಕ ಕರ್ಣಾಟಕದ ಆಶ್ರಿತ ಸಂಸ್ಥಾನ ವಿಭಾಗಕ್ಕೂ 'ಬ್ರಿಟಿಷ್ ವಿಭಾಗಕ್ಕೂ ಒಂದೊಂದು ಸ್ಥಾನವನ್ನು ತಮ್ಮ ಸ್ಥಾಯಿ ಸಮಿತಿಯಲ್ಲಿ ಕೊಟ್ಟು ಕರ್ಣಾಟಕಕ್ಕೆ ತಕ್ಕ ಪ್ರಾತಿನಿಧ್ಯವನ್ನು ಕಲ್ಪಿಸಬೇಕೆಂದು ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತನ್ನು ಈ ಸಮ್ಮೇಲನವು ಕೇಳಿಕೊಳ್ಳುತ್ತದೆ.

ಪತ್ರಿಕೋದ್ಯಮದ ಮೇಲೆ ಪುಸ್ತಕ

ಈ ಕೆಳಗಿನ ವಿಷಯಗಳ ಮೇಲೆ ಬರೆಯಲ್ಪಡುವ ಅತ್ಯುತ್ತಮ ಪುಸ್ತಕಕ್ಕೆ ೧೦೦ರೂ.ಗಳ ಬಹುಮಾನಕೊಡಲಾಗುವುದೆಂದು ಪ್ರಸಿದ್ಧಿಸಲು ಈ ಸಮ್ಮೇಳನವು ಕರ್ಣಾಟಕ ಪತ್ರಿಕೋದ್ಯೋಗಿ ಸಂಘಕ್ಕೆ ತಿಳಿಸುತ್ತದೆ. ೧. ಕನ್ನಡ ಪತ್ರಿಕೋದ್ಯಮದ ಚರಿತ್ರೆ; ೨. ವಾರ್ತೆ ವರದಿ ಮಾಡುವ ಕಲೆ; ೩. ಭೇಟಿಯಾಗುವ ಕಲೆ; ಮತ್ತು ಪುಸ್ತಕವನ್ನು ಪರೀಕ್ಷಿಸಿ ಬಹುಮಾನವನ್ನು ಕೊಡಲು ಶ್ರೀಯುತರು ವಿ. ಎಸ್. ಕುಡ್ವ, ಹ. ರಾ. ಮೋಹರೆ, ಪಿ. ಆರ್. ರಾಮಯ್ಯ, ಕೋ. ಶಿ. ಕಾರಂತ—ಸಮ್ಮೇಲನವು ಇವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸುತ್ತದೆ.

[೭ನೇ ಪುಟಕ್ಕೆ ಮುಂದುವರಿದಿದೆ]

ಅಖಿಲ ಕರ್ನಾಟಕ ಪ. ಸಮ್ಮೇಳನದಲ್ಲಿ ಶ್ರೀ ವಿ. ಎಸ್.

::: ಕುಡ್ವರ ಸ್ವಾಗತ ಭಾಷಣ :::

[೩ನೇ ಪುಟದಿಂದ]

"ಪತ್ರಿಕೆಯನ್ನು ಆಕರ್ಷಕ ಮತ್ತು ಪತ್ರಿಕೆಯನ್ನಾಗಿ ಮಾಡುವುದು ಹೇಗೆ ಎಂಬ ವಿಷಯವನ್ನು ನಾವು ತೀವ್ರ ಆಲೋಚಿಸಬೇಕಾಗಿದೆ. ಕ್ಷೇತ್ರದಲ್ಲಿ ರಾಜಕೀಯವನ್ನು ಆಳುತ್ತಿರುವ ಶಾಸ್ತ್ರ ಪತ್ರಿಕೆಗಳು ಕೇವಲ ಕೆಲವೇ. ಆಕರ್ಷಕವಾದ ಹಾಸ್ಯರಸವನ್ನು ಹೇಗೆ ಒದಗಿಸಿಕೊಡಬೇಕು, ಹೃದಯದ ಉಲ್ಲಾಸದಿಂದ ಪ್ರೇರಿತವಾದ ನಗು ಹುಟ್ಟಿಸುವಂತೆ ಹೇಗೆ ಮಾಡಬಹುದು, ನಿಜವಾದ ಜ್ಞಾನವನ್ನು ಜನರಿಗೆ ಹೇಗೆ ತಿಳಿಸಬಹುದು, ಉಪಯುಕ್ತ ವಿಷಯಗಳನ್ನು ಕುತೂಹಲಜನಕವಾಗಿ ಹೇಗೆ ಒದಗಿಸಬಹುದು, ದ್ವೇಷರಹಿತವಾದ ಅಭಿಪ್ರಾಯಗಳಿಗೆ ಹೇಗೆ ರೂಪು ಕೊಡಬಹುದು ಎಂಬುದನ್ನು ಪತ್ರಿಕೆಗಳು ಚೆನ್ನಾಗಿ ಗಮನಿಸುವುದೊಳ್ಳಿತು. ಪತ್ರಿಕೆಗಳು ತಮಗೆ ಶಿಕ್ಷಣ ಕೊಡಬಲ್ಲವು, ತಮ್ಮ ಜ್ಞಾನವಿಕಾಸಕ್ಕೆ ಸಹಾಯವಾಗಬಲ್ಲವು ಮತ್ತು ತಮಗೆ ಮನರಂಜನೆಯನ್ನೂ ಒದಗಿಸಬಲ್ಲವು ಎಂಬುದು ಜನರಿಗೆ ಮನದಟ್ಟಾದರೆ ಮಾತ್ರ ಅವರಿಗೆ ಪತ್ರಿಕೆಗಳ ಪ್ರಯೋಜನವೇನೆಂಬುದು ತಿಳಿಯುವುದು—ಪತ್ರಿಕೆಗಳ ಕಡೆಗೆ ಅವರು ಆಕರ್ಷಿತರಾಗುವರು. ಈ ಎಲ್ಲಾ ವಿಷಯಗಳು ಸಾಧ್ಯವಾಗಬೇಕಾದರೆ ಯೋಗ್ಯ ವ್ಯವಸ್ಥೆ ಹಾಗು ವಿಚಾರಸರಣಿ ಅವಶ್ಯವಿದೆ. ಪ್ರತಿಯೊಂದು ವ್ಯವಹಾರದಲ್ಲೂ ವ್ಯವಸ್ಥೆ ಅತ್ಯವಶ್ಯ—ಅಂತೆಯೇ ಎಲ್ಲಾ ತರದ ಶಿಕ್ಷಣಗಳಿಗೆ ವಿಚಾರವು ಬೇಕು. ಪತ್ರಿಕೆಗಳ ಜೀವನ ಹಾಗು ಅಸ್ತಿತ್ವವು ಅಸ್ಥಿರವಾದ ಈ ಕಾಲಕ್ಕೆ ಒಂದೇ ಮಾದರಿಯ ಹಲವು ಪತ್ರಿಕೆಗಳನ್ನು ಹೊರಡಿಸಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು, ಸ್ಪರ್ಧೆಗೆ ತೊಡಗಿ ಒಂದು ಇನ್ನೊಂದರ ಮೂಗು ಕಡಿಯಲು ಯತ್ನಿಸುವುದು ಇದು ಕೇವಲ ಹುಚ್ಚುತನ ಎನ್ನಬೇಕಾಗುತ್ತದೆ. ಬದಲು ಪತ್ರಿಕೋದ್ಯೋಗಿಗಳು, ಇನ್ನೂ ಬೆಳಕು ಕಾಣದ ಇತರ ಹಲವು ಉಪಯುಕ್ತ ಕ್ಷೇತ್ರಗಳಲ್ಲಿ ತಮ್ಮ ಚಟುವಟಿಕೆಗಳನ್ನು ಪ್ರದರ್ಶಿಸಬಹುದಾಗಿದೆ ಉದಾಹರಣೆಗಾಗಿ ವ್ಯಂಗ್ಯಚಿತ್ರಗಳನ್ನು ಬರೆವುದು, ಸಾಹಸಕಾರ್ಯಗಳ ಕುರಿತು ಬರೆಯುವುದು, ಚಿತ್ರಗಳ ಕುರಿತಾದ ಜ್ಞಾನ ವೃದ್ಧಿಗೊಳಿಸುವುದು, ಪ್ರಯಾಣಗಳ ಕುರಿತಾದ ರಮ್ಯ ವಿಷಯಗಳನ್ನು ಬರೆವುದು, ಪ್ರಕೃತಿ ಜೀವನ ಚಿತ್ರಿಸುವುದು, ಸಂಶೋಧನೆ ಇತ್ಯಾದಿ ಹಲವಾರು ಕಾರ್ಯಕ್ಷೇತ್ರಗಳಲ್ಲಿ ಅವರು ತಮ್ಮ ಜಾಣ್ಮೆ ತೋರಿಸಬಹುದು. 'ನೇಶನಲ್ ಜಿಯೋಗ್ರಫಿಕಲ್ ಮೆಗಜಿನ್', 'ಲೈಫ್', 'ಕರೆಂಟ್ ಹಿಸ್ಟರಿ', 'ಟೈಮ್ಸ್', 'ದಿ ಲಿಟರರಿ ಡೈಜೆಸ್ಟ್', 'ಚಿಲ್ಡ್ರನ್ಸ್ ನ್ಯೂಸ್ ಪೇಪರ್' ಇತ್ಯಾದಿ ಪರರಾಷ್ಟ್ರಗಳ ಪತ್ರಿಕೆಗಳನ್ನು ಓದಿದರೆ ಈ ಎಲ್ಲಾ ವಿಷಯಗಳ ಕುರಿತು ವಿಪುಲ ಜ್ಞಾನವನ್ನು ನಾವು ಸಂಗ್ರಹಿಸಬಹುದಾಗಿದೆ. ಹೀಗೆ ಬೇರೆ ಬೇರೆ ವೈಶಿಷ್ಟ್ಯವಿರುವ ಬೇರೆ ಬೇರೆ ಪತ್ರಿಕೆಗಳನ್ನು ಪ್ರಚಲಿಸುವುದರ ಪ್ರಯೋಜನಗಳನ್ನು ನಾವು ಪರಿಶೀಲಿಸಿ ನೋಡಬಹುದೆಂದು ನನಗೆ ಅನ್ನಿಸುತ್ತಿದೆ.

"ಅಖಿಲ ಕರ್ನಾಟಕದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸುದ್ದಿ ಮುಟ್ಟಿಸಲು 'ವಾರ್ತಾವಾಹಕ ಸಂಸ್ಥೆ'ಯೊಂದು ಅಗತ್ಯ ಸ್ಥಾಪಿಸಲ್ಪಡಬೇಕು. ಈ ಪ್ರಶ್ನೆಯನ್ನು ಪತ್ರಿಕೋದ್ಯೋಗಿಗಳು ಮುಖ್ಯತಃ ಚರ್ಚಿಸಬೇಕಾಗಿದೆ. ಪತ್ರಿಕೆಗಳು ಈ ಕಡೆ ವೈಯಕ್ತಿಕ ಯತ್ನಗಳನ್ನು ನಡೆಸಿದರೆ ಸಾಲದು—ಅದಕ್ಕೂ ದಗಬಹುದಾದ ಖರ್ಚಿನ ಪರಿಮಾಣ ಅಮಿತವಿದೆ. ಆದರೆ ಕರ್ನಾಟಕದ ಎಲ್ಲಾ ಪತ್ರಿಕೆಗಳು ಒಂದಾಗಿ ಒಗ್ಗಟ್ಟಿನಿಂದ ಎಲ್ಲರಿಗೂ ಅನ್ವಯಿಸುವಂತೆ ಒಂದು ಸಾಮಾನ್ಯ ವಾರ್ತಾಕಚೇರಿ ವ್ಯವಸ್ಥೆಗೊಳಿಸುವುದಾದರೆ, ಆ ಯೋಜನೆಯು ಪತ್ರಿಕಾ ವ್ಯವಸಾಯದ ಬೆಳವಣಿಗೆಗೆ ಬಹು ಮಟ್ಟಿಗೆ ಸಹಾಯವಾದೀತೆಂದು ನಾನು ಧೈರ್ಯದಿಂದ ಹೇಳಬಲ್ಲೆ.

"ಲಿಪಿ ಸುಧಾರಣೆಯ ಪ್ರಶ್ನೆ, ಕನ್ನಡ ಟೈಪ್ ರೈಟರ್, ಲಿನೊಟೈಪ್, ಮೊನೊ-ಟೈಪ್ ಮತ್ತು ರೋಟರಿ ಇವುಗಳನ್ನು ಬೆಳಕಿಗೆ ತರುವ ಯೋಜನೆ, ಈ ಮಹತ್ವದ ವಿಷಯಗಳನ್ನೂ ನಾವು ಚರ್ಚೆಗೊಳಪಡಿಸದಿದ್ದರೆ ಇಂದಿನ ನಮ್ಮ ವಿಚಾರ ವಿನಿಮಯಗಳು ಪೂರ್ಣತೆ ಹೊಂದುವಂತಿಲ್ಲ. ಈಗಿನ ಕನ್ನಡ ಅಚ್ಚಿನ ಕಲೆ ಮುದ್ರಣದ ಮೊಳೆ ಜೋಡಣೆ ಮತ್ತು ಮುದ್ರಣಗಳಿಗೆ ಅಂಟಿಕೊಂಡರೆ ತಮ್ಮ ವ್ಯವಸಾಯವನ್ನು ಕಾರ್ಯಕ್ಷಮವಾಗಿ ನಡೆಸಲಾಗುವುದಿಲ್ಲ ಎಂಬ ಭಾವನೆ ಇಂದು ಹಲವು ಮಂದಿ ಪತ್ರಿಕೋದ್ಯೋಗಿಗಳಲ್ಲಿ ಮನೆಮಾಡಿಕೊಂಡಿದೆ. ಕನ್ನಡ ಲಿಪಿಯು ಬಹಳ ಕಷ್ಟಕಾರಕವಾಗಿದೆ. ವೇಗ ಮತ್ತು ಕಾರ್ಯಕ್ಷಮತೆಯನ್ನು ಅದು ಕಡೆಯುತ್ತದೆ. ಒಂದು ಫೌಂಟ್‌ದಲ್ಲಿ ೨೫೦ ಬೇರೆ ಬೇರೆ ಮೊಳೆಗಳು. ಬೇಕಾಗಿರುವ ಈ ಲಿಪಿಯಿಂದ ನಾವು ಎಷ್ಟು ವೇಗ ಸಾಧಿಸಬಹುದು? ಇದೇ ಲಿಪಿಯನ್ನು ನಾವು ಗಟ್ಟಿಮಾಡಿದರೆ ಕನ್ನಡ ಟೈಪ್‌ರೈಟರನ್ನು ತಯಾರಿಸುವ ಯೋಜನೆಯು ಕೇವಲ ಆಕಾಶ ಕುಸುಮವಾಗಿ ಉಳಿಯಬಹುದು. ಮೊನೋಟೈಪ್ ಮತ್ತು ಲೀನೊ ಟೈಪ್‌ಗಳನ್ನು ಈಗಿನ ಲಿಪಿಯ ಬಗ್ಗೆ ರಚಿಸುವುದು ಅಸಾಧ್ಯವಾದುದರಿಂದ ನಮ್ಮ ಲಿಪಿಯನ್ನು ಶಾಸ್ತ್ರೀಯ ರೀತಿಯಲ್ಲಿ ಶೋಧಿಸಿ ಕ್ರಮಪಡಿಸುವುದೇ ನಮಗೆ ಉಳಿದ ಮಾರ್ಗ. ಇಲ್ಲವೆ ನಾವು ನಮ್ಮ ಭಾಷೆಗೆ ರೋಮನ್ ಲಿಪಿಯನ್ನೇ ಗೊತ್ತುಹಚ್ಚಿ ಈ ಕ್ಷೇತ್ರದಲ್ಲಿ ಬರುವ ಎಲ್ಲಾ ಅಡಚಣೆಗಳನ್ನು ಗೆದ್ದವರಾಗಬಹುದೇ? ಎಲ್ಲಾ ಭಾಷೆಗಳು ರೋಮನ್ ಲಿಪಿಯನ್ನೇ ಪ್ರಯೋಗಕ್ಕೆ ತಂದು, ಈ ಭಾಗದ ಅನಾವಶ್ಯಕ ಶ್ರಮವನ್ನು ನಿವಾರಿಸಿದರೆ ತುಂಬಾ ಒಳಿತಲ್ಲವೆ? ಈ ವಿಷಯವನ್ನು ವ್ಯವಹಾರ ದೃಷ್ಟಿಯಿಂದ ಇಂದು ನಾವು ಚರ್ಚಿಸಬೇಕಾಗಿದೆ. ರೋಮನ್ ಲಿಪಿಯನ್ನು ವ್ಯವಹರಣೆಯಲ್ಲಿ ತರುವುದಿದ್ದರೆ ಹಲವು ಪ್ರಯೋಜನಗಳಿವೆ— ಆದುದರಿಂದ ರೋಮನ್ ಲಿಪಿಯನ್ನು ಪ್ರಯೋಗಕ್ಕೆ ತರುವ ಸಲಹೆಯನ್ನು ತಿರಸ್ಕರಿಸುವುದು ಸುಲಭವಿಲ್ಲ; ಇಲ್ಲವೆ ನಮ್ಮ ಲಿಪಿಯನ್ನೇ ರೋಮನ್ ಲಿಪಿಯ ಗುಣಗಳನ್ನೈದುವಂತೆ ಮಾರ್ಪಾಟುಗೊಳಿಸಲು ಸಾಧ್ಯವುಂಟೇ ಎಂಬುದನ್ನು ನಾವು ಯೋಚಿಸಬಹುದು.

"ಇಂದು ಜಗತ್ತು ಪ್ರಳಯಕಾರೀ ಯುದ್ಧದ ಬೇಗೆಯಿಂದ ಕರಗುತ್ತಿದೆ. ಯುದ್ಧದ ನಿಕೃಷ್ಟ ಕಾಲ, ಅತೀವ ವಿಷಮ ಕಾಲವು ಕಳೆಯಿತು—ಪ್ರಜಾಪ್ರಭುತ್ವದ ತತ್ವಗಳು ನಿರಂಕುಶವಾದದ ಧ್ಯೇಯಗಳನ್ನು ಜಯಿಸಿ ಉಗ್ರ ಶಿಖರವನ್ನೇರುವ ಕಾಲ ತೀರಾ ಸನಿಹದಲ್ಲಿದೆ ಎಂದು ನಾವು ಆಶಿಸಲೇ? ನಾಜೀ ಅಭಿಯೋಗವನ್ನು ಕಡೆದು ತಮ್ಮ ಮಾತೃದೇಶವನ್ನು ರಕ್ಷಿಸಿದ ಸೋವಿಯಟ್ ರಷ್ಯದ ಯಶಸ್ವೀ ಪ್ರತಿಭಟನೆಯು ಈ ಯುದ್ಧದ ಅತ್ಯಂತ ಉಲ್ಲೇಖನೀಯ ಘಟನೆಯಾಗಿ ಬಾಳುವುದರಲ್ಲಿ ಸಂದೇಹವಿಲ್ಲ. ಯುದ್ಧವು ಭಾರತದಲ್ಲಿರುವ ನಮಗೆ ಹೊಸ ಸಮಸ್ಯೆಗಳನ್ನು ತಂದೊಡ್ಡಿದೆ. ಪ್ರೆಸ್ ಕಾಯಿದೆಗಳು, ಪ್ರಿ-ಸೆನ್ಸರ್‌ಶಿಪ್ ಇವೇ ಮುಂತಾದ ಕಾನೂನುಗಳ ಶೃಂಖಲೆಯಿಂದ ಇಂದು ನಮ್ಮಲ್ಲಿಯ ಪತ್ರಿಕಾ ವ್ಯವಸಾಯವು ಬಿಗಿಯಲ್ಪಟ್ಟಿದೆ. ಈ ನಿರ್ಬಂಧಗಳು ಯುದ್ಧ ಯತ್ನಗಳ ಆವಶ್ಯಕತೆಯನ್ನು ಮೀರದಂತೆ ನೋಡಿಕೊಳ್ಳುವುದು ಪತ್ರಿಕೋದ್ಯೋಗಿಗಳಾದ ನಮ್ಮ ಕರ್ತವ್ಯವಾಗುತ್ತದೆ. ನಾವು ಯಾವಾಗಲೂ ಎಚ್ಚರದಿಂದಿದ್ದು, ಪತ್ರಿಕೆಗಳ ಹಕ್ಕನ್ನು ಕಾಪಾಡಲು ಭಗೀರಥ ಯತ್ನ ನಡೆಸುವ ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿಗೆ ಸಂಪೂರ್ಣ ಬೆಂಬಲವನ್ನು ನೀಡಬೇಕು.

"ಶಾಂತಿಯು ನಂತರ ಬರುವ ಜಗತ್ತಿನಲ್ಲಿ ಪತ್ರಿಕೆಗಳು ಪ್ರಾಮುಖ್ಯ ಪಾತ್ರ ವಹಿಸಲಿವೆ. ಯುದ್ಧಾನಂತರದ ವಿಶ್ವ ಪುನರ್ರಚನೆಯ ಯೋಜನೆಗೆ ಪತ್ರಿಕೆಗಳು ಉತ್ತಮ ಸಲಹೆಗಳನ್ನು ನೀಡಬಹುದು ಮತ್ತು ಭಾರತ ದೇಶದಲ್ಲಿ ಸ್ವಾತಂತ್ರ್ಯದ ಪ್ರವೇಶವಾಗುವಾಗ—ಆ ಶುಭದಿನ ಬಹಳ ದೂರವಿರದೆಂದು ನಾನು ಆಶಿಸುತ್ತೇನೆ—ಪ್ರಜೆಗಳಿಗೆ ಆ ಸ್ವಾತಂತ್ರ್ಯ ಸವಿಯನ್ನು ಉಣ್ಣಿಸುವ ಕಾರ್ಯಭಾರವನ್ನು ಪತ್ರಿಕೆಗಳು ಹೊತ್ತುಕೊಳ್ಳಬೇಕು. ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ಜಾತೀಯ ಪಕ್ಷಪಾತಕ್ಕೆಡೆಗೊಡದೆ, ಉತ್ತಮ ವಿಚಾರಗಳಿಗೆಲ್ಲಾ ಪತ್ರಿಕೆಗಳು ಬೆಂಬಲ ಕೊಡಬೇಕು.

"ಕನ್ನಡ ಪತ್ರಿಕೋದ್ಯಮಕ್ಕೆ ಮತ್ತು ಮುದ್ರಣ ಕೈಗಾರಿಕೆಗೆ ನಮ್ಮ ಜಿಲ್ಲೆಯು ಕೊಟ್ಟ ಪ್ರೋತ್ಸಾಹವು ಅಪಾರ ಎಂಬುದನ್ನು ಅಭಿಮಾನಪೂರ್ವಕವಾಗಿ ನಾವು ಹೇಳಬಲ್ಲೆವು. ಜಿಲ್ಲೆಯ ಮುದ್ರಣ ಇತಿಹಾಸದಲ್ಲಿ ಮೊಟ್ಟಮೊದಲಿನ ಹಾಗೂ ಅತ್ಯುತ್ಕೃಷ್ಟ ರೀತಿಯ ಮುದ್ರಣಕ್ಕೆ ಹೆಸರು ಹೊಂದಿದ ಬಾಸೆಲ್ ಮಿಶ್ಯನ್ ಮುದ್ರಣಾಲಯವು ಗಂಡಿಗಳಲ್ಲಿ ಇಲ್ಲಿ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಈ ತನಕ ಅಸಂಖ್ಯ ಮುದ್ರಣಾಲಯಗಳು ಇಲ್ಲಿ ತಲೆ ಎತ್ತಿ, ಪ್ರತಿಯೊಂದೂ ಉತ್ತಮ ಮುದ್ರಣ ಮತ್ತು ಅತ್ಯುತ್ಕೃಷ್ಟ ರಚನೆಗೆ ಹೆಸರು ಹೊಂದಿರುತ್ತದೆ.

"ಪತ್ರಿಕೋದ್ಯಮವೂ ಇಲ್ಲಿಯ ಜನರನ್ನು ಹಲಕಾಲದ ಹಿಂದೆಯೇ ತನ್ನ ಕಡೆಗೆ ಆಕರ್ಷಿಸಿತ್ತು. ಮೊದಲನೇ ಕನ್ನಡ ಪತ್ರಿಕೆಯು ಗಳಲ್ಲೊಂದಲ್ಲಿ ಇಲ್ಲಿ ಪ್ರಕಟವಾಯಿತು. ನಮ್ಮ ಜಿಲ್ಲೆಯಲ್ಲಿ ಶಕ್ತಿಯುತವಾದ ವೃತ್ತಪತ್ರಿಕೆಗಳ, ಮಾಸಪತ್ರಿಕೆಗಳ ಮತ್ತು ದೈನಿಕಗಳ ಪಟ್ಟಿಯೊಂದನ್ನು ತಯಾರಿಸಲು ಯತ್ನಿಸಿದರೆ ನಮ್ಮನ್ನೇ ನಾವು ಮರೆಯಬೇಕಾದೀತು. ಅಷ್ಟು ದೊಡ್ಡದಿದೆ ಆ ಸಂಖ್ಯೆ. ಹಲಕಾಲದ ತನಕ ಬೇರೆ ಯಾವ ಪ್ರಾಂತ್ಯಗಳೊಡನೆ ಯಾವ ಸಂಪರ್ಕವೂ ಇಲ್ಲದೆ ಸಂಪೂರ್ಣ ಪ್ರತ್ಯೇಕಿಸಲ್ಪಟ್ಟವರಂತಿದ್ದು ಇಲ್ಲಿಯ ಪತ್ರಿಕೋದ್ಯೋಗಿಗಳು ದುಡಿದರು. ಹೀಗಾಗಿ ಇಲ್ಲಿಯ ಪತ್ರಿಕೋದ್ಯಮಕ್ಕೆ ತನ್ನದೇ ಆದ ಒಂದು ಪ್ರತ್ಯೇಕ ರೂಪ ಬರುವಂತಾಯಿತು. ಈ ಸಂದರ್ಭದಲ್ಲಿ, ನಮ್ಮ ಜಿಲ್ಲೆಯ ಪತ್ರಿಕೋದ್ಯಮದ ಬೆಳವಣಿಗೆಗೆ ಅವಿರಾಮ ಶ್ರಮ ವಹಿಸಿ ದುಡಿದ ದಿವಂಗತ ಶ್ರೀ. ವಿ. ಎಸ್. ಕಾಮತ್, ಕರೋಡಿ ಸುಬ್ಬರಾವ್, ಪಂಜೆ ಮಂಗೇಶರಾವ್ ಮತ್ತು ಎಮ್. ಎನ್. ಕಾಮತ್ ಇವರ ಸ್ಮರಣೆಗೆ ಅಭಿನಂದನೆ ಸಲ್ಲಿಸದಿದ್ದರೆ ನಾನು ಕರ್ತವ್ಯ ವಿಮುಖನಾಗುವೆನು. ಇಂದು ಕೂಡಾ ತನಗೆ ಪ್ರತಿಸ್ಪರ್ಧಿ ಇಲ್ಲವೆನ್ನುವಂತೆ ವಿರಾಜಮಾನವಾಗಿ ಮೆರೆಯುವ ಕನ್ನಡ ಇಂಗ್ಲಿಷ್ ಅರ್ಥಕೋಶವನ್ನು ರೆವರೆಂಡ್ ಕಿಟ್ಟೆಲ್‌ರು ಸಂಪಾದಿಸಿದುದು, ಮುದ್ರಿಸಿದುದು ಮತ್ತು ಪ್ರಕಟಿಸಿದುದು ಮಂಗಳೂರಿನಲ್ಲಿಯೇ ಎಂಬುದನ್ನು ಮರೆಯಲಿಕ್ಕಾಗುತ್ತದೆಯೇ?"

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ	ಬೆಳಿಗ್ಗೆ ೬-೨೫	ರಾತ್ರಿ ೭-೩೦
ಪಟಲ್ ಕನ್ನಾನೂರು ಪರಿಯಂತ ಮಾತ್ರ		ಸಾಯಂ. ೫-೫೫ ಬೆಳಿಗ್ಗೆ ೯-೨೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ ೭-೫	ಸಾಯಂ. ೭

ಕನ್ನಡಿಗರ ಕಣ್ಮಣಿ "ಮೈಸೂರು"

1943ರಲ್ಲಿ ನಮ್ಮ ಉದ್ಯಮವು 1942ನೇ ವರ್ಷದ ಉದ್ಯಮಕ್ಕಿಂತ ಸುಮಾರು ಎರಡಂಶದಷ್ಟು ಹೆಚ್ಚಿದೆ!

ಹೊಸ ಪ್ರೀಮಿಯಂ ಹುಟ್ಟುವಳಿಯು ಕಳೆದ ವರ್ಷದ ಹುಟ್ಟುವಳಿಗಿಂತ ದ್ವಿಗುಣಿತವಾಗಿದೆ!

ಮೈಸೂರು, ಮಂಡ್ಯ, ದಾವಣಗೆರೆ, ಉತ್ತರ ಕನ್ನಡ, ಹುಬ್ಬಳ್ಳಿ, ಕೊಲ್ಹಾಪುರ, ಶೋಲಾಪುರ, ಗುಲ್ಬರ್ಗಾ, ವೆಲ್ಲೂರು, ಕೊಯಮುತ್ತೂರು, ಮತ್ತು ವೀರರಾಜಪೇಟೆಗಳಲ್ಲಿ ಸಮರ್ಥವಾದ ಮತ್ತು ಸುವ್ಯವಸ್ಥಿತವಾದ ಆರ್ಗನೈಜೇಷನ್ ಮತ್ತು ಸಬ್ ಆಫೀಸುಗಳೂ ಸ್ಥಾಪಿತವಾಗಿವೆ.

ನಮ್ಮ ಸಂಸ್ಥೆಯು ಪ್ರಥಮ ಮೌಲ್ಯಮಾಪನದಲ್ಲಿಯೇ ಲಾಭಾಂಶವನ್ನು ಗಳಿಸಿದೆ!

(ಸಶಾಸ್ತ್ರೀಯವಾದ ಪ್ರಾವಿಡೆಂಟ್ ಉದ್ಯಮ ನಡೆಸಲು ಸಂಸ್ಥಾನದಲ್ಲಿ ಸ್ಥಾಪಿತವಾದ ಮೊಟ್ಟ ಮೊದಲನೆಯ 'ಮೈಸೂರು ಪ್ರಾವಿಡೆಂಟ್'ನ್ನು ಮರೆಯಲಾಗದು!)

ಕ್ಷೇತ್ರೋದ್ಯಮಿಗಳಿಗೆ ಅಪೂರ್ವಯೋಗ! ಸುಸಂಧಿ!

ಪ್ರತಿನಿಧಿಗಳಿಲ್ಲದಿರುವೆಡೆಗಳಲ್ಲಿ ಇನ್‌ಸ್ಪೆಕ್ಟರ್, ಆರ್ಗನೈಜರ್ ಮತ್ತು ಸ್ಪೆಷಲ್ ಏಜಂಟರಾಗ ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಜನರಲ್ ಮ್ಯಾನೇಜರ್,

ದಿ ಮೈಸೂರು ಇನ್‌ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಲಕ್ಷ್ಮೀ ಸ್ಥಾನಂ — ಲಾಲ್‌ಬಾಗ್ ಕೋಟೆರಸ್ತೆ — ಬೆಂಗಳೂರು ನಗರ

ಸಮ್ಮೇಳನದ ಇತರ ವಿವರಗಳು

[ಹಿನೇ ಪುಟದಿಂದ]

ಮೇಲಿನ ೧೦೦೦ರೂ.ಗಳ ಬಹುಮಾನವನ್ನು ಕೊಡಲೊಪ್ಪಿರುವ ಶ್ರೀ 'ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಈ ಸಮ್ಮೇಳನವು ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ.

ಪತ್ರಿಕೋದ್ಯೋಗಿಗಳಿಗೆ 'ತುಟ್ಟಿ' ಭತ್ತೆ

ಆಹಾರ ಮತ್ತಿತರ ಸಾಧನಗಳ ಬೆಲೆ ಮಿತಿಮೀರಿ ಏರಿರುವ ಕಾರಣದಿಂದ ಕರ್ಣಾಟಕದಲ್ಲಿರುವ ಪತ್ರಿಕೆಗಳ ಮ್ಹಾಲಿಕರೆಲ್ಲ ಸಾಕಷ್ಟು ತುಟ್ಟಿ ಭತ್ತೆಯನ್ನು ತಮ್ಮ ಕೈಕೆಳಗೆ ಮಡಿಯುವ ಪತ್ರಿಕೋದ್ಯೋಗಿಗಳಿಗೆ ಕೊಡಬೇಕೆಂದು ಈ ಸಮ್ಮೇಳನವು ವಿನಂತಿಮಾಡುತ್ತದೆ.

ಕನ್ನಡ ಪ್ರಾಂತದ ವಾರ್ತೆಗಳು

ಕನ್ನಡ ಮಾತನಾಡುವ ಜನರಿಗೆ ಬೇಕಾಗುವ ವಾರ್ತೆಗಳನ್ನು ಸಂಗ್ರಹಿಸಿಕೊಡಲು ಭಾರತದಲ್ಲಿರುವ ವಾರ್ತಾ ಸಂಸ್ಥೆಗಳಿಗೆ ಈ ಸಮ್ಮೇಳನವು ಸೂಚನೆ ಕೊಡುತ್ತದೆ, ಮತ್ತು ವಾರ್ತಾ ವಿತರಣದಲ್ಲಿ ಈ ಯತ್ನಕ್ಕೆ ಅವಶ್ಯವಿರುವುದನ್ನು ಒಡನೆಯೇ ಮಾಡಬೇಕೆಂದು ಕರ್ಣಾಟಕದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳ ಸಂಪಾದಕರಿಗೆ ವಿನಂತಿ ಮಾಡುತ್ತದೆ

ಮುದ್ರಣ ಕಾಗದ

ಹೆಚ್ಚು ಮುದ್ರಣ ಕಾಗದವು ಈ ದೇಶಕ್ಕೆ ಬಂದು, ಪತ್ರಿಕೆಗಳಿಗೆ ದೊರಕುವ ಅಂಶವು ಹೆಚ್ಚಿ, ಪ್ರತಿ ಪತ್ರಿಕೆಗಳಿಗೆ ಪ್ರತಿ ಸಂಚಿಕೆಯಲ್ಲೂ ಹೆಚ್ಚು ಪುಟಗಳಾಗುವಂತೆ ನ್ಯೂಸ್ ಪ್ರಿಂಟು ನಿಯಂತ್ರಣಾಜ್ಞೆಯನ್ನು ಸಡಿಲುಪಡಿಸಬೇಕೆಂದು ಈ ಸಮ್ಮೇಲನವು ಭಾರತ ಸರಕಾರವನ್ನು ಕೇಳುತ್ತದೆ.

ಕನ್ನಡ ಶೀಘ್ರ ಲಿಪಿ

ಕನ್ನಡದಲ್ಲಿ ಈಗಾಗಲೇ ನಾಲ್ಕೈದು ಶೀಘ್ರ ಲಿಪಿಗಳಿವೆ ಇಂಗ್ಲಿಷ್ ಪತ್ರಿಕೋದ್ಯೋಗದಂತೆ ಕನ್ನಡ ಪತ್ರಿಕೋದ್ಯೋಗವನ್ನೂ ಅಭಿವೃದ್ಧಿಪಡಿಸುವ ಸಲುವಾಗಿ, ಎಲ್ಲಾ ಕನ್ನಡ ಪತ್ರಿಕೋದ್ಯೋಗಿಗಳೂ ಯಾವುದಾದರೊಂದು ಕನ್ನಡ ಶೀಘ್ರ ಲಿಪಿಯನ್ನು ಕಲಿಯಬೇಕೆಂದು ಈ ಸಮ್ಮೇಳನವು ಸೂಚಿಸುತ್ತದೆ.

ಕನ್ನಡ ವಿಶ್ವವಿದ್ಯಾಲಯದಲ್ಲಿ

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮವು ಎಂದು ಅಭ್ಯಾಸದ ವಿಷಯವಾಗಬೇಕೆಂದು ಈ ಸಮ್ಮೇಳನವು ಅಭಿಪ್ರಾಯ ಪಡುತ್ತದೆ ಮತ್ತು ಮೈಸೂರು, ಮದ್ರಾಸು, ಮುಂಬಯಿ ಮತ್ತು ಹೈದರಬಾದು (ದಕ್ಷಿಣ)ಗಳ ವಿಶ್ವವಿದ್ಯಾನಿಲಯಗಳು ಪತ್ರಿಕೋದ್ಯಮವನ್ನು ಪಾರವಾಗಿ ಇಡಬೇಕೆಂದು ಒತ್ತಾಯ ಪಡಿಸುತ್ತದೆ

ಕರ್ಣಾಟಕಕ್ಕೊಂದು ವಿಶ್ವವಿದ್ಯಾಲಯ

ಕರ್ಣಾಟಕದಲ್ಲಿ ಇನ್ನೊಂದು ವಿಶ್ವವಿದ್ಯಾನಿಲಯವಿರಬೇಕೆಂಬ ಚಳವಳಿಕ್ಕೆ ಈ ಸಮ್ಮೇಳನವು ಪೂರ್ಣ ಬೆಂಬಲ ಕೊಡುತ್ತದೆ. ಮತ್ತು ಜನಮತವನ್ನು ಆ ಕುರಿತು ಅಣಿಗೊಳಿಸಬೇಕೆಂದು ಎಲ್ಲಾ ಪತ್ರಿಕೆಗಳನ್ನು ಕೇಳುತ್ತದೆ.

ಪಾರಿಭಾಷಿಕ ಶಬ್ದಕೋಶ

ಪತ್ರಿಕೋದ್ಯೋಗಿಗಳ ಉಪಯೋಗಕ್ಕೆ ಬೀಳುವಂತಹ ಒಂದು ಪಾರಿಭಾಷಿಕ ಗ್ರಂಥವನ್ನು ನಿರ್ಮಿಸುವುದಕ್ಕಾಗಿ ಶ್ರಿಯುತರು ಶಿವರಾಮಕಾರಂತ, ವಿ ಬಿ. ನಾಯಕ್, ಸಿದ್ದವ್ವನಹಳ್ಳಿ ಕೃಷ್ಣ ಶರ್ಮ, ವಿ ಸೀತಾರಾಮಯ್ಯ ಇವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸುತ್ತದೆ ಮತ್ತು ಎಲ್ಲ ಕನ್ನಡ ಪತ್ರಿಕಾ ಕಾರ್ಯಾಲಯಗಳ ಸಹಕಾರ ಪಡೆದು ಆರಂಭದ ಕಾರ್ಯವನ್ನು ಪೂರೈಸಲು ಶ್ರೀ। ಕಾರಂತರಿಗೆ ಅಧಿಕಾರ ಕೊಡುತ್ತದೆ

ಕರ್ಣಾಟಕದ ಏಕೀಕರಣ

ಕರ್ಣಾಟಕದ ಏಕೀಕರಣಕ್ಕಾಗಿ ಇರುವ ಚಳವಳಿಕ್ಕೆ ಈ ಸಮ್ಮೇಳನವು ಬೆಂಬಲವನ್ನು ವ್ಯಕ್ತಪಡಿಸಿ, ಆ ಕುರಿತು ಜನರಲ್ಲಿ ಹೆಚ್ಚಿನ ಪ್ರಚಾರವಾಗಬೇಕೆಂದು ಪತ್ರಿಕೆಗಳನ್ನು ಕೇಳಿಕೊಳ್ಳುತ್ತದೆ.

ಸಂದೇಶಗಳು

ಶ್ರೀಯುತರು ಶ್ರೀನಿವಾಸನ್ (ಹಿಂದೂ) ತಿರುಮಲೆ ತಾತಾಚಾರ್ಯ ಶರ್ಮಾ, ಮಂಜೇಶ್ವರ ಗೋವಿಂದ ಪೈ ಬಿ. ಶಿವರಾವ್ (ಡಿಲ್ಲಿ) ಸಿದ್ದವ್ವನ ಹಳ್ಳಿ ಕೃಷ್ಣ ಶರ್ಮ, ಪುತ್ತಿಗೆ ಮತ್ತು ಫಲಿಮಾರು ಮಠದ ಸ್ವಾಮಿಗಳು, ಶ್ರೀಗಳಾದ ಆಲೂರು ವೆಂಕಟರಾವ್, ಜಾಗೀರ್ದಾರ್, ರಂ. ಶ್ರೀ, ಮುಗಳಿ, ಬೆಟಗೇರಿ ಕೃಷ್ಣ ಶರ್ಮ, ಕಡೆಕಾರು ರಾಜಗೋಪಾಲ ಕೃಷ್ಣರಾವ್ ಮೊದಲಾದವರಿಂದ ಬಂದಿದ್ದ ಸಂದೇಶಗಳನ್ನು ಶ್ರೀ ಕುಳಕುಂದ ಶಿವರಾಯರು ಓದಿದರು.

ಮುಕ್ತಾಯ ಭಾಷಣ

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣವನ್ನೀಯುತ್ತಾ, ಸಮ್ಮೇಳನವನ್ನು ಜರಗಿಸಿದವರನ್ನು ಅಭಿನಂದಿಸಿದರು ಅದರ ಅವಶ್ಯಕತೆಯನ್ನು ಒತ್ತಿ ಹೇಳಿ, "ದಕ್ಷರಾದ ನೀವೆಲ್ಲ ಇಲ್ಲಿ ಸೇರಿದ್ದೀರಿ. ನಿಮ್ಮ ನಾಡಿನ ಪತ್ರಿಕೋದ್ಯಮದ ಪ್ರಗತಿ ಸಾಧ್ಯವಾಗಲಿ" ಎಂದರು

ಬಂದಿದ್ದ ಪ್ರತಿನಿಧಿಗಳ ಪರವಾಗಿ ಶ್ರೀಯುತರು ಬಿ ಎನ್ ಗುಪ್ತ, ಪಿ ಆರ್ ರಾಮಯ್ಯ ಹಣಮಂತರಾವ್ ಮೋಹರೆ ಮತ್ತು ಅಗರಂ ರಂಗಯ್ಯ ಇವರು ಸ್ವಾಗತ ಸಮಿತಿಯವರಿಗೂ ಪ್ರತ್ಯೇಕವಾಗಿ ಶ್ರೀ ವಿ. ಎಸ್. ಕುಡ್ವರಿಗೂ ವಂದನೆಗಳನ್ನರ್ಪಿಸಿದರು. ಶ್ರೀ ಕಡೆಂಗೋಡ್ಲು ಶಂಕರಭಟ್ಟರು ಸ್ವಾಗತ ಸಮಿತಿಯ ಪರವಾಗಿ ಮರುವಂದನೆಗಳನ್ನರ್ಪಿಸಿದರು. ಸ್ವಾಗತ ಕಾರ್ಯದರ್ಶಿ ಶ್ರೀ ಕೆ. ಕೆ. ರೈಗಳು, ಅಧ್ಯಕ್ಷರು, ಪ್ರತಿನಿಧಿಗಳು, ಸ್ವಯಂಸೇವಕರು, ಸಹಾಯಕರು ಎಲ್ಲರ ಊಟದ ವ್ಯವಸ್ಥೆಯನ್ನು ಬಲು ದಕ್ಷತೆಯಿಂದ ನೆರವೇರಿಸಿದ ಶ್ರೀ ಹುರುಳಿ ಭೀಮರಾಯರು ಮೊದಲಾದವರಿಗೆ ಕೃತಜ್ಞತೆಗಳನ್ನರ್ಪಿಸಿದರು.

ಮಧ್ಯಾಹ್ನ ನಂತರ

ಹೊಸ ಕಾರ್ಯಕಾರಿ ಸಮಿತಿಯ ಸಭೆ ಜರಗಿತು ೧೯೪೪-೪೫ರಲ್ಲಿ ಸಂಘದ ಕಾರ್ಯಾಲಯವು ಮಂಗಳೂರಲ್ಲೇ ಇರುವುದು ಸಮ್ಮೇಳನಕ್ಕೆ ಬಂದಿದ್ದ ಹಲವಾರು ಪ್ರತಿನಿಧಿಗಳು ವಾರ್ಷಿಕ ವರ್ಗಣಿ ಮೂರು ರೂ ಗಳನ್ನು ಕೊಟ್ಟು ಸದಸ್ಯರಾಗಿರುವರು. ಹಲವರು ಸಂಘದ ನಿಧಿಗೆ ಸಂಭಾವನೆಗಳನ್ನು ಕೊಟ್ಟಿರುವರು

[೬ನೇ ಪುಟ ನೋಡಿ]

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಒಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE

The Joint Booking Office, KODIALBAIL

CANARA BANK LIMITED.

ESTD 1906

General Manager. **P S Nayak,** B. A, B. L, F I I B.

LIABILITIES	Dec 31 1943. Rs	1942 Rs
Capital Subscribed	29,00,000	20,00 000
Capital Paid up	22,49,438	14,96,072
Reserves	8,54,188	4,50 000
Deposits	1,97,85,847	1,45,50,503
Due to Bankers	20,00,000	13,50,000
Branch adjustments	10,08,553	10,36,559
Bills for collection and Foreign Bills negotiated	26,27,394	16,81,196
Other Liabilities	15,766	16,968
Profit for the year	2,68,576	1,53,310
Total	2,88,09,762	2,07,34,608

ASSETS	Dec 31 1943 Rs	1942 Rs
Cash	73,51,060	43,63,353
Government Securities	90,47,683	63,16,651
Advances to Customers	92,99,429	75,52,902
Bills for collection and Foreign Bills negotiated	26,27,394	16,81,196
Landed Properties	70,736	2,14,256
Bank Premises and Furniture & Fixtures	93,963	1,00,183
Other Assets	3,19,497	5,06,068
Total	2,88,09,762	2,07,34,608

The Bank of Mangalore Limited, Mangalore.
ESTD: 1931
HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.
Current Accounts (1% from Jan. to June) (½% from July to Decr.)
Savings bank Accounts 1½% p. a. on daily balances.
Fixed Deposits 6 months 2½% p. a.
12 months 3% p. a.
24 months 3½% p. a.
The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವದ ಸಂಚಿಕೆಗೆ
ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ
GOLDEN JUBILEE
ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.
2½% Rebate on annual premiums.
"Permanent Disability Benefits" freeof any cost
Payment of double the insured amount in case of death by accident at a very small cost of Rs. 1-8-0 per 1000.
Special rebates on large size policies.
A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ MaduraS ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**
Bhuvanendra Products Ltd.
Factory & Head Office
KATAPADI, S. Kanara.

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 3—3—1944 [ಸಂಚಿಕೆ 9]

ಕಸ್ತೂರ್‌ಬಾ ಗಾಂಧಿಯವರ ಕೊನೆಯ ದರ್ಶನ!

ಮಹಾತ್ಮಾ ಗಾಂಧಿಯವರ ಪತ್ನಿ—ಕಸ್ತೂರ್ ಬಾ, ಫೆಬ್ರವರಿ ೨೨ರಂದು ಅಪರಾಹ್ನ ೭ ೩೫ ಗಂಟೆಗೆ—ಮಹಾ ಶಿವರಾತ್ರಿಯ ಪುಣ್ಯದಿನದಂದು ಮಹಾತ್ಮರನ್ನು ಅವರ, ಪರಿವಾರ ಸಮೇತ ಬಂದಿಸಿಟ್ಟ ಸೆರೆಮನೆಯಾದ ಪುನದ ಆಗಾಖಾನ ಅರಮನೆಯಲ್ಲಿ ವಿಧಿವಶರಾದರು! ಭಾರತದ ಮಹಾ ಪುರುಷನ—ಲೋಕದ ಮಹಾ ವಿಭೂತಿ ಪುರುಷನ ಸಹಧರ್ಮಿಣಿ ಮಾತೆ ಕಸ್ತೂರ್ ಬಾ ಹೀಗೆ ಮಹಾಸತಿಗೆ ಯೋಗ್ಯವಾದ ಧೀರಮರಣ ಹೊಂದಿದರು!

ಇದೊಂದು ಸಂದೇಶ!

ಭಾರತದ ಬಿಡುಗಡೆಗಾಗಿ—ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ—ಸುಖಕ್ಕೆ ತಿಲಾಂಜಲಿಯಿತ್ತು—ಮಹಾತ್ಮರ ಅಹಿಂಸಾ ಸತ್ಯಾಗ್ರಹೀ ಸೇನೆ ಕಳೆದ ಇಪ್ಪತ್ತು ವರ್ಷಗಳಿಂದ ಸೆರೆಮನೆಯ ಸಂಕಷ್ಟ ಸಾವಿರಗಳನ್ನು ನಗುಮೊಗದಿಂದ ಅನುಭವಿಸುತ್ತಿದೆ. ಈ ಅಗ್ನಿ ಪರೀಕ್ಷೆಯಲ್ಲಿ, ಈ ಮಹಾ ಯಜ್ಞದಲ್ಲಿ ಆತ್ಮ ಬಲಿದಾನ ಮಾಡಿದ ಸ್ತ್ರೀ ಪುರುಷರು ಸಾವಿರಾರು ಮಂದಿ! ಲೋಕ ಹಿತಕ್ಕಾಗಿ ರಾಷ್ಟ್ರದ ಬಂಧವಿಮೋಚನೆಗಾಗಿ ಸೆರೆಮನೆ ಸೇರುವುದು, ಸಂಕಷ್ಟ ಸಾವಿರಗಳನ್ನನುಭವಿಸುವುದು—ಕೊನೆಗೆ ಅದೇ ಪವಿತ್ರ ಕಾರ್ಯದಲ್ಲಿ ಸಾವನ್ನಪ್ಪುವುದೂ ಅದು ಯಾವುದೇ ರಾಷ್ಟ್ರದ ಇತಿಹಾಸದಲ್ಲಿಯೂ ಹೊಸತಲ್ಲ —ಅದು ಇತರರಿಗೆ ಸಂಕಷ್ಟವಿತ್ತರೂ ಅಂಥಾ ಬಲಿದಾನವಿತ್ತವರಿಗೆ ಸಂತೋಷವೆ!

ಜಗದ ಪಾಪಿಗಳ ಸಲುವಾಗಿ ಮಹಾತ್ಮಾ ಏಸು ಸಿಲುಬೆಗೆ ಏರಿದನು ಮುಳ್ಳಿನಿಂದ ತಿವಿಯಲ್ಪಟ್ಟು ಮೃತನಾದನು! ಮಹಾತ್ಮರ ಸತ್ಯಾಗ್ರಹೀ ಸೇನೆ ಇಂದು ಅದೇ ಅಗ್ನಿಪರೀಕ್ಷೆಯನ್ನು ಅನುಭವಿಸುತ್ತಿದೆ! ಆ ಸೇನೆಯ ನಾಯಕಿ ಕಸ್ತೂರ್‌ಬಾ ಇಂದು ಅಂಥಾ ಭವ್ಯ ಮರಣ ಹೊಂದಿದರು ತನ್ನ ಜೀವಿತೋದ್ದೇಶ—ತನ್ನ ಹೃದಯ ಸಂದೇಶ ಈ ರೀತಿಯಿಂದ ಭಾರತದ ಪುತ್ರಪುತ್ರಿಯರಿಗೆ ಜಗದ ಜನತೆಗೆ ಸಾರಿದರು!

ಹಾ! ಎದೆನೋವು!

ಕಸ್ತೂರ್‌ಬಾಗೆ ಎದೆನೋವು!—ಈ ಸುದ್ದಿ ಕೆಲದಿನಗಳ ಹಿಂದೆ ಸೆರೆಮನೆಯಿಂದ ಹೊರಬಿತ್ತು. ಇಡೀ ದೇಶ ಆ ಸುದ್ದಿ ಕೇಳಿ ತಳಮಳಗೊಂಡಿತು ಗಾಂಧೀ ಪುತ್ರ ದೇವದಾಸರು ಪುನಕ್ಕೆ ಧಾವಿಸಿದರು ಡಾಕ್ಟರರು ಉಪಚಾರ ಮಾಡಿದರು ಆದರೆ ಮಗನ ಸೇವೆ ಡಾಕ್ಟರರ ಉಪಚಾರ ಯಾವುದೂ ಆ ಪುಣ್ಯಾತ್ಮಳ ಜೀವವುಳಿಸಲಿಲ್ಲ ಕೊನೆಯ ಶ್ವಾಸವೆಳೆವವರೆಗೂ—ಜಗದೇಕ ವಿಭೂತಿಪುರುಷನೆನಿಸಿದ ಪತಿಯ—ಮಹಾತ್ಮಾ ಗಾಂಧಿಯ ಸೇವೆಮಾಡುತ್ತಾ, ಸೆರೆಮನೆಯಲ್ಲಿಯೂ ಆತನ ಸುಖದುಃಖದಲ್ಲಿ ಸಹಭಾಗಿನಿಯಾಗಿರುತ್ತಾ, ಯಾವುದೇ ಹಿಂದೂ ಪತ್ನಿಯಾದರೂ ಹಾರೈಸುವಂಥಾ ಮರಣವನ್ನು, ಸೌಭಾಗ್ಯವತಿಯಾಗಿ ಸಾವನ್ನು ಹೊಂದಿದರು! ಅಖಿಲ ಭಾರತವೇ ಈ ಸುದ್ದಿ ಕೇಳಿ ಸಂತಾಪಗೊಂಡಿದೆ! ದೇಶ ಸರ್ವತ್ರ ದುಃಖ ವಿಷಾದವ್ಯಕ್ತವಾಗಿದೆ! ಎಲ್ಲೆಲ್ಲೂ ನಗರ ಗ್ರಾಮಗಳಲ್ಲೂ ಹರತಾಳವಾಚರಿಸಲ್ಪಟ್ಟಿದೆ.

ಮಹಾತ್ಮರು ಕಂಬನಿಯೊರಸಿದರು!

—ದೇಶವಿದೇಶಗಳಲ್ಲಿ ಸಂತಾಪ ಸೂಚನೆ—

ಅಂತ್ಯ ಪ್ರಶಾಂತ!

ಕಸ್ತೂರ್‌ಬಾ ಮೃತರಾಗುವ ಹೊತ್ತಿಗೆ ಅವರ ನಾಲ್ಕರು ಮಂದಿ ಗಂಡು ಮಕ್ಕಳೂ ಅವರ ಬಳಿಯಿದ್ದರು, ಪತಿ ಸದಾ ಜತೆಯಲ್ಲಿಯೇ ಇದ್ದರೆಂದು ಬೇರೆ ಹೇಳಬೇಕಾಗಿಲ್ಲ ಹೀರಾಲಾಲರ ಮಗಳು (ಸಣ್ಣದಿರುವಾಗಲೇ ಆಕೆಯ ತಾಯಿ ತೀರಿಹೋಗಿದ್ದು, ಆ ಹುಡುಗಿಯನ್ನು ಕಸ್ತೂರ್‌ಬಾರವರೇ ಪಾಲಿಸಿದ್ದರು) ಆಕೆ ಕೂಡಾ ಅವರ ಬಳಿಯಿದ್ದಳು ಗಾಂಧಿಜಿಯೊಮ್ಮಗೆ ಕಾನೂ ಗಾಂಧೀ ಹತ್ತಿರ ಇದ್ದ ಡಾ| ಗಿಲ್ಡರ್, ಸುಶೀಲಾ ನಾಯರ್, ಪ್ಯಾರೇಲಾಲ್, ಮೀರ್‌ಬೆನ್, ಮದುರಾದಾಸ ತ್ರಿಕಮ್‌ಜಿ ಇವರೂ ಅಲ್ಲಿದ್ದರು ಸೂರ್ಯನು ಅಸ್ತಂಗತನಾಗುತ್ತಿದ್ದಂತೆ ಕಸ್ತೂರ್‌ಬಾ ಕಣ್ಮುಚ್ಚಿದರು ಶಾಂತರಾಗಿ ಕಣ್ಮುಚ್ಚಿದರು ಅವರ ಅಂತ್ಯ ಪ್ರಶಾಂತವಾಗಿತ್ತು

ಮಹಾದೇವರ ಸಮಾಧಿ ಬಳಿ!

ಕಸ್ತೂರ್‌ಬಾರ ದೇಹಸಮಾಧಿ ಮರುದಿನ ಪೂರ್ವಾಹ್ನ ೧೧-೪೦ಕ್ಕೆ ನಡೆಯಿತು ಅವರ ಕಿರಿಯ ಮಗ ದೇವದಾಸ ಗಾಂಧೀ ಇವರು ಕೊನೆಯ ಕ್ರಿಯೆ ಪೂರೈಸಿದರು ಮಹಾತ್ಮಾ ಗಾಂಧೀ ಈ ಕಾರ್ಯಗಳೆಲ್ಲಾ ಆಗುವಾಗ ಕೊನೆವರೆಗೆ ಹಾಜರಿದ್ದರು ಅಂತ್ಯ ಕಾರ್ಯವಾಗುವಾಗ ಬಂಧುಗಳು, ಮಿತ್ರರೇ ಮೊದಲಾಗಿ ನೂರಕ್ಕಿಂತ ಮಿಕ್ಕಿ ಜನರು ಸೇರಿದ್ದರು ಮಹಾತ್ಮರ ಪಟ್ಟಶಿಷ್ಯ ಮಹಾದೇವ ದೇಸಾಯಿಯವರನ್ನು ಸಮಾಧಿಗೈದ ಸ್ಥಳದ ಬಳಿಯಲ್ಲಿಯೇ ಕಸ್ತೂರ್‌ಬಾರ ಸಮಾಧಿಯೂ ಆಯಿತು ಮಹಾದೇವ ದೇಸಾಯಿಯವರ ಅಂತ್ಯಕ್ರಿಯೆ ನೆರವೇರಿಸಲು ಬಂದ ಬ್ರಾಹ್ಮಣ ಪುರೋಹಿತರೇ ಈ ಸಂದರ್ಭದಲ್ಲೂ ಬಂದಿದ್ದರು ಮೃತದೇಹವನ್ನು ಹೂವಿನಿಂದ ಮುಚ್ಚಿ ಮಹಾತ್ಮರ ಮಕ್ಕಳು ಮತ್ತು ಬಂಧುಗಳು ಹೊತ್ತರು ಸಮಾಧಿ ಸ್ಥಳ ಅಲ್ಲಿಂದ ನೂರು ಗಜ ದೂರವಿತ್ತು ಅಂತ್ಯಕ್ರಿಯೆ ಸೂಕ್ಷ್ಮವಾಗಿ ಸರಳವಾಗಿತ್ತು ಸ್ವಾಮಿ ಆನಂದ, ಕಾನೂ ಗಾಂಧಿ ಶಾಂತಿಕುಮಾರ್, ಮೊರಾರ್ಜಿ, ಕಮಲನಯನ್ ಬಜಾಜ್; ಮತ್ತು ಇತರ ಬಂಧುಗಳು ಮತ್ತು ಮಿತ್ರರು ಚಿತೆಯನ್ನು ಸಿದ್ಧಗೊಳಿಸಿದರು

ಮಹಾತ್ಮರ ದುಃಖಾಶ್ರು

ಕಸ್ತೂರ್‌ಬಾರ ದೇಹವನ್ನು ಗಾಂಧೀಜಿಯೇ ತೊಳೆದರು ಶುದ್ಧ ಬಿಳಿ ಖಾದಿಯಿಂದ ಅವರ ದೇಹ ಮುಚ್ಚಲ್ಪಟ್ಟಿತ್ತು ಬಾರ ದೇಹವನ್ನು ಚಿತೆಯ ಮೇಲಿಡುತ್ತಿದ್ದಂತೆ ಗಾಂಧಿಜಿ ಮೆಲ್ಲನೆ ತನ್ನ ಹೊದಿಕೆಯ ಸೆರಗಿನಿಂದ ಕಂಬನಿ ಒರಸುವುದು ಕಂಡುಬಂತು. ಕಳೆದ ೬೨ ವರ್ಷಗಳಲ್ಲಿ ತನ್ನೆಲ್ಲಾ ಸುಖದುಃಖಗಳಲ್ಲಿ ಸಹಭಾಗಿನಿಯಾದ ನೆರಳಿನಂತೆ ತನ್ನನ್ನು ಎಲ್ಲೆಲ್ಲೂ ಅನುವರ್ತಿಸಿದ ಕೊನೆಕಾಲಕ್ಕೂ ತನ್ನನ್ನು ಹಿಂಬಾಲಿಸಿ ಸೆರೆಮನೆಯಲ್ಲಿಯೇ ಅಸುತೊರೆದ ಪುಣ್ಯ ಸಹಧರ್ಮಿಣಿಯ ಅಗಲುವಿಕೆಯಿಂದ ಗಾಂಧೀಜಿ ಎಷ್ಟು ನೊಂದರೊ! ಇತರ ಎಲ್ಲಾ ಸಮಯದಲ್ಲಿಯೂ ಗಾಂಧೀಜಿ ಶಾಂತ ಗಂಭೀರರಾಗಿಯೇ ಕಾಣುತ್ತಿದರು.

'ಗೋವಿಂದಾ—ಗೋವಿಂದಾ'

ಬಾರ ದೇಹವನ್ನು ಚಿತೆಯ ಮೇಲಿಟ್ಟ ಕೂಡಲೇ ಗಾಂಧೀಜಿ ಪುರೋಹಿತರೊಡನೆ ತನ್ನ ಕೊನೆಯದೊಂದು ಸೇವೆ ಸಲ್ಲಿಸಲು ಕೇಳಿಕೊಂಡರು ಕುರಾನ್, ಗೀತಾ, ಮತ್ತು ಬೈಬಲ್‌ಗಳಿಂದ ಕೆಲ ಪಂಕ್ತಿಗಳು ಓದಲ್ಪಟ್ಟವು ಆಶ್ರಮವಾಸಿಗಳು ಭಜನೆ ಮಾಡಿದರು ಜೊರೋಸ್ಟ್ರಿಯನ್ ವೇದದಿಂದ ಡಾ| ಗಿಲ್ಡರ್ ಕೆಲವು ಸಾಲು ಓದಿದರು ಮೀರಾಬೆನ್ ಕೆಲವು ಕ್ರಿಸ್ತವಾಣಿಯನ್ನು ಪಠಿಸಿದರು ಹೀಗೆ ಆ ಕ್ರಿಯೆ ಮುಗಿಯಿತು ಮುಂದೆ ಪುರೋಹಿತರಿಗೆ ಅವರ ಕೆಲಸ ಮಾಡಲು ಗಾಂಧೀಜಿ ತಿಳಿಸಿದರು. ಗಾಂಧೀಜಿ ಕೈಯ ಕೋಲಿಗೆ ಆತು ನಿಂತುಕೊಂಡೇ ನೋಡುತ್ತಿದ್ದರು ಕಸ್ತೂರ್‌ಬಾರ ಮೃತದೇಹದ ಮೇಲೆ ಗಂಧದ ಕಟ್ಟಿಗೆ ಇಟ್ಟು ತುಪ್ಪ ಎರೆಯಲಾಯಿತು. ದೇವದಾಸ ಗಾಂಧಿ ಚಿತೆಗೆ ತನ್ನ ಕೈಯಿಂದ ಬೆಂಕಿ ಕೊಡುತ್ತಾ 'ಗೋವಿಂದಾ, ಗೋವಿಂದಾ, ಗೋವಿಂದಾ ಎಂದು ಮೂರು ಬಾರಿ ಚಿತೆಗೆ ಸುತ್ತು ಬಂದರು ಆ ಪವಿತ್ರಾತ್ಮಳ ದೇಹವನ್ನು—ಪವಿತ್ರಾಗ್ನಿಯು—ಪವಿತ್ರಗೊಳಿಸಿತು

ಮಹೋಪವಾಸಾನಂತರ?

ಕಳೆದ ವರ್ಷ ಗಾಂಧೀಜಿ ಇದೇ ಸೆರೆಮನೆಯಲ್ಲಿ ಮಹೋಪವಾಸ ಕೈಕೊಂಡರು, ತನ್ನ ಮೇಲೆ, ಕಾಂಗ್ರೆಸಿನ ಮೇಲೆ ಸರಕಾರ ಹೊರಿಸಿದ ಆರೋಪಕ್ಕಾಗಿ ತಾನೇ ಅಗ್ನಿ ಪರೀಕ್ಷೆಗೆ ಬಲಿಯಾದರು, ಮುದಿ ಪ್ರಾಯದಲ್ಲಿ ನಿಶ್ಶಕ್ತ ಶರೀರಿ ೨೧ ದಿನಗಳ ಮಹೋಪವಾಸ ಮಾಡಿದಾಗ ದೇಶಕ್ಕೆ ದೇಶವೇ ಮರುಗಿತು, ಎಂಥಾ ಅಪಾಯ, ಇನ್ನೆಂಥಾ ಗಂಡಾಂತರ ಅವರಿಗೆ ಒದಗಬಹುದೋ ಎಂದು! ಆಗಿನ ಪ್ರತಿನಿಮಿಷವೂ ಬಹಳ ಉದ್ವೇಗಜನಕವಾಗಿತ್ತು, ಆ ಕಾಲದಲ್ಲಿ ಪತಿಯ ಸನ್ನಿಧಿಯಲ್ಲಿದ್ದ ಕಸ್ತೂರ್‌ಬಾನ ಜೀವ ಎಂತು ಕುದಿದಿರಲಿಕ್ಕಿಲ್ಲ! ಪತಿಗೆ ಎಲ್ಲಿ ಗಂಡಾಂತರ ಬರುವುದೋ ಎಂದು ಆಕೆ ಎಷ್ಟು ಕಳವಳ ಗೊಂಡಿರಲಿಕ್ಕಿಲ್ಲ? ಪತಿಗೆ ಒದಗಬಹುದಾದ ಗಂಡಾಂತರ ತನ್ನ ಮೇಲೆ ಬರಲಿ ಎಂದು ಆಕೆ ಎಷ್ಟು ವಿಧವಾಗಿ ದೇವರೊಡನೆ ಮೊರೆಯಿಟ್ಟಿರಲಿಕ್ಕಿಲ್ಲ! ಅದೇ ಗಾಂಧೀಜಿ, ದೇವರ ದಯೆಯಿಂದ, ಭಾರತದ ಭಾಗ್ಯದಿಂದ ಆ ಅಗ್ನಿಪರೀಕ್ಷೆಯಲ್ಲಿ ಶುದ್ಧರಾಗಿ ಮೇಲ್ಬಂದರು, ಆ ಮೇಲೆ ಕೆಲಕಾಲದಲ್ಲಿಯೇ ವಾರ್ತೆ ಬಂದಿತು—'ಕಸ್ತೂರ್ ಬಾಗೆ ಹೃದಯವೇದನೆ' ಎಂದು! ಗಾಂಧೀಜಿಯ ಮಹೋಪವಾಸ ಕಾಲದಲ್ಲಿ ಕಸ್ತೂರ್ ಬಾಗೆ ಉಂಟಾದ ಉದ್ವೇಗ ಅವರಿಗೆ ಆ ಹೃದಯವೇದನೆ ಹುಟ್ಟಿಸಿರಲೂ ಬಹುದು! ದೇವರು ಆಕೆಯ ಮೊರೆ ಕೇಳಿರಲೂಬಹುದು! ಕಸ್ತೂರ್ ಬಾ ಸುಮಂಗಲಿಯಾಗಿ—ಸೌಭಾಗ್ಯವತಿಯಾಗಿ ಪತಿಪಾದತಲದಲ್ಲಿಯೇ ಸರಕಾರದ ಸೆರೆಮನೆಯಲ್ಲಿಯೇ ಪ್ರಾಣಬಿಟ್ಟರು!

ಮರಣದ ಮೆರವಣಿಗೆ

ಗಾಂಧೀಜಿ ಕುಟುಂಬದಲ್ಲಿ, ಸತ್ಯಾಗ್ರಹೀ ಸೇನೆಯಲ್ಲಿ ಇಂದು ಮರಣದ ಮೆರವಣಿಗೆ ಹೊರಟಿದೆ ಜಮನಾಲಾಲ್ ಬಜಾಜ್ ತೀರಿಹೋದರು, ಅದು ಗಾಂಧೀಜಿಗೆ ಬಲವಂತವಾದ ಒಂದು ನೋವನ್ನು ತಂದಿತು, ದೇಶಕ್ಕೆ ಕಾಂಗ್ರೆಸಿಗೆ ದೊಡ್ಡ ನಷ್ಟವಾಯಿತು, ಮತ್ತೆ ಇದೇ ಸೆರೆಮನೆಯಲ್ಲಿ ಮಹಾತ್ಮರ ನೆರಳು, ಪಟ್ಟಶಿಷ್ಯ ಮಹಾದೇಸಾಯಿ ಅಕಾಲ ಮೃತ್ಯುವಿಗೆ ತುತ್ತಾದರು ಗಾಂಧೀಜಿ ಆಗ ಎಷ್ಟು ನೊಂದುಕೊಂಡರೆಂಬುದನ್ನು ಪತ್ರಿಕೆಗಳಲ್ಲಿ ಬಂದ ವರದಿಗಳೇ ವ್ಯಕ್ತ ಮಾಡಿವೆ ಸತ್ಯಮೂರ್ತಿಗಳು ಮಡಿದರು, ರಣಜಿತ್ ಪಂಡಿತರು ತೀರಿಹೋದರು, ಸೆರೆಮನೆ ಸೇರಿ, ರಾಷ್ಟ್ರ ನಾಯಕರು ಒಬ್ಬೊಬ್ಬರೇ ಬಲಿಯಾದರು. ಕೊನೆಗೀಗ ಕಸ್ತೂರ್ ಬಾ ತನ್ನ ಜೀವನ ಸಂಗಾತಿ ಈ ಮುಪ್ಪಿನ ಪ್ರಾಯದಲ್ಲಿ ಗಾಂಧೀಜಿ ಕೈ ಬಿಟ್ಟಿದ್ದಾರೆ ಕಿಶೋರ್‌ಲಾಲ ಮಶ್ರೂವಾಲಾ ಸೆರೆಮನೆಯಲ್ಲಿ ಸಂಕಟ ಪಡುತ್ತಿದ್ದಾರೆಂದು ವಾರ್ತೆ ಬಂದಿದೆ ವಜ್ರದೇಹಿ ಸರ್ದಾರ್ ಪಟೇಲ್ ಜವಾಹರಲಾಲ ನೆಹರುಗಳೂ ಡಾ| ಅಹಮ್ಮದರೂ ಸೆರೆಮನೆಯಲ್ಲಿ ಅಸೌಖ್ಯದಿಂದಿರುವರೆಂದು ಅಸೆಂಬ್ಲಿಯಲ್ಲಿ ಹೇಳಲಾಗಿದೆ ಹೆಸರು ಗೊತ್ತಿದ್ದವರು ಇಷ್ಟು ಮಂದಿಯೂ ಹೀಗಿದ್ದಾರೆ ಹೆಸರು ಗೊತ್ತಿಲ್ಲದ ಅಜ್ಞಾತ ವೀರರು ಎಷ್ಟು ಮಂದಿ ಆತ್ಮ ಯಜ್ಞ ಮಾಡಿದಾರೋ ಸೆರೆಮನೆಯಲ್ಲಿ ಯಾರು ಬಲ್ಲ? ಈ ಮರಣದ ಮೆರವಣಿಗೆ—ಈ ಸಾವಿನನೋವಿನ ದುಃಖ ಗಾಂಧೀಜಿ ಹೃದಯಕ್ಕೆ ಎಂಥಾ ವೇದನೆ ಹುಟ್ಟಿಸಲಿಕ್ಕಿಲ್ಲ!

ಇನ್ನೂ ಬಿಡುಗಡೆಯಿಲ್ಲ!

ಹಿಟ್ಲರ್ ಪಕ್ಷಪಾತಿ—ಒಸ್ವಾಲ್ಡ್ ಮೋಸ್ಲೆಯನ್ನು—ಅಸೌಖ್ಯದ ನಿಮಿತ್ತ ಬ್ರಿಟಿಷ್ ಸರಕಾರ ಬಿಟ್ಟಿದೆ ಆದರೆ ಹಿಟ್ಲರ್ ವಿರೋಧಕರು, ಫೇಸಿಸ್ಟ್ ದ್ವೇಷಿಗಳು ಆದ ಮಹಾತ್ಮರೇ ಮೊದಲಾದ ಕಾಂಗ್ರೆಸ್ ಮುಖಂಡರನ್ನು ಈ ಸಾವಿನ ಕಾಲದಲ್ಲಿಯೂ, ಸೆರೆಮನೆಯಲ್ಲಿ ಹೀಗೆ ಈ ಮರಣದ ಮೆರವಣಿಗೆಯಾಗುತ್ತಿರುವ ಕಾಲದಲ್ಲೂ ಬಿಡುಗಡೆ ಮಾಡುವ ಅಭಿಪ್ರಾಯ ಸರಕಾರಕ್ಕಿಲ್ಲ! ದಾಸ್ಯ ಭೂಮಿಯಲ್ಲಿ ಜನಿಸಿದ ರಾಷ್ಟ್ರ ಪುಂಗವರಿಗೆ ಇದು ಸರಿಯಾದ ಸತ್ಕಾರವೇನು? ದೇಶಕ್ಕೆ ದೇಶವೇ ರಾಷ್ಟ್ರ ಮುಖಂಡರನ್ನು ಬಿಡುಗಡೆ ಮಾಡಿರೆಂದು ಸಾರುತ್ತಿದೆ; ವಿದೇಶಗಳಿಂದಲೂ ಈ ಧ್ವನಿಗೆ ಶ್ರುತಿಕೂಡಿದೆ. ಮಹಾತ್ಮರು ಜಗದೇಕ ವಿಭೂತಿ ಪುರುಷರು ತನ್ನ ೭೫ರ ಮುಪ್ಪಿನಕಾಲದಲ್ಲಿ ತನ್ನ ಕುಟುಂಬವನ್ನು—ತನ್ನ ಪರಿವಾರವನ್ನು—ತನ್ನ ಆತ್ಮೀಯರನ್ನು ಒಬ್ಬೊಬ್ಬರನ್ನೇ ಕಳೆದುಕೊಂಡು ಇನ್ನೂ ಸೆರೆಮನೆಯಲ್ಲಿಯೇ ಇರಬೇಕೆ? ಮೊನ್ನೆ ತಾನೇ ವೈಸರಾಯ್ ವೇವಲ್ ಖಂಡಿತವಾಗಿ ಹೇಳಿದರು 'ಇನ್ನೂ ಬಿಡುಗಡೆಯಿಲ್ಲ!' ಎಂದು!

ಒಂದು ಸಣ್ಣ ಕಥೆ

ಕೆಲವು ದಿನಗಳಿಂದ . . .

ಕತೆಗಾರ:— ಶ್ರೀ. ತಿರುಮಲೇಶ್ವರ, ಅಲಂಗಾರ್

'ಬಂಗಾಲ ಅಂದರೆ ಜಗತ್ತು ಉಳಿಯದು' ಪತ್ರಿಕೆಯಲ್ಲಿ ಬಂದ ಈ ಬರಹವನ್ನು ಓದಿ ಗೋವಿಂದನ ಮನಸ್ಸು ಅಲ್ಲೋಲ ಕಲ್ಲೋಲ ವಾಗಿತ್ತು. 'ಮತ್ತೀಗ ಈ ಕಡೆ ಸಂಬಂಧ ಪಟ್ಟವರು ಮನಸ್ಸು ಕೊಡುತ್ತಿಲ್ಲ' ಎಂದು ಯೋಚಿಸುತ್ತಾ ಪತ್ರಿಕೆಯ ಪುಟವನ್ನು ತಿರುವಿಸಿ ಹಾಕುತ್ತಿದ್ದ. ಅಲ್ಲಲ್ಲಿ ಅನ್ನಕ್ಕಾಗಿ ಬಾಯಿ ಬಿಡುತ್ತಿರುವ, ಪ್ರಾಣ ಬಿಡುತ್ತಿರುವ, ಸಾವಿನ ದಾರಿ ಕಾಯುತ್ತಿರುವ, ಮುಂತಾದ ಚಿತ್ರಗಳು ಪತ್ರಿಕೆಯಲ್ಲಿ ತುಂಬಾ ಇತ್ತು. ಚಿತ್ರಗಳನ್ನು ನೋಡುತ್ತಾ ಗೋವಿಂದ ಕೊನೆಗೂ ನಮ್ಮ ದೇಶದ ಜನ, ವೀರ ಪುಂಗವರುದಿಸಿದ ನಾಡು, ವಿಶ್ವದೇಳಿಗೆಗಾಗಿ ಹೋರಾಡಿದವರುದಿಸಿದ ಬೀಡಿಗೇ ಗತಿ ಬಂತೆ? ಈಗ ಆ ಕವಿ ಪುಂಗವ, ವಿಶ್ವಕವಿ ಜೀವಿಸಿದ್ದರೆ, ಜಗದ್ವಿಖ್ಯಾತ ಬೋಸರು ಬಾಳಿದ್ದರೆ, ಎಂದು ಒಂದೊಂದೇ ವಿಚಾರ ಯೋಚಿಸುತ್ತಾ ಕೊನೆಗೆ ಒಂದು ನಿರ್ಧಾರಕ್ಕೆ ಬಂದವನಂತೆ 'ಇಲ್ಲ ಇನ್ನೂ ಸಮಯ ಬಂದಿಲ್ಲ ಸತ್ಯ ಪರೀಕ್ಷೆಯ ಕಾಲ ಮಾಗಿದಲ್ಲ! ಇಲ್ಲವಾದರೆ ಇಂಥಾ ಸಮಯದಲ್ಲಿ, ಅದರಲ್ಲಿಯೂ ಮೊದಲಿಗೆ ನಮ್ಮ ಸರಕಾರದ ಮಾನ್ಯರು ಕಾಲೂರಿದ ಜಾಗದಲ್ಲಿ ಇಂಥಾ ದುರ್ದೆಶೆ ಬರದಾಗ ದೇಶದ ಮುಂದಾಳುಗಳನ್ನು ಬಂಧಿಸಿಟ್ಟು ಕೊಂಡುದೇಕೆ? ಈಗಲಾದರೂ ಅವರನ್ನು ಬಿಟ್ಟಿದ್ದರೆ, ತಮ್ಮ ದೇಶದ ಜನರು ಅನ್ನವಿಲ್ಲದೆ ಮಡಿಯುತ್ತಿರುವುದನ್ನು ಕಾಣುತ್ತಾ ಸುಮ್ಮನಿರುತ್ತಿದ್ದರೊ? ಏನಾದರೊಂದು ನಿವಾರಣೋಪಾಯ ಮಾಡುತ್ತಿರಲಿಲ್ಲವೆ? ಹಿಂದೆ ಬಿಹಾರು ಭೂಕಂಪವಾದಾಗ ಅಜಾತಶತ್ರು ಬಾಬುರಾಜೇಂದ್ರ ಪ್ರಸಾದರು ತಾವು ಅಸ್ವಸ್ಥದಲ್ಲಿದ್ದರೂ ಹೊರಟು ಕಾರ್ಯರಂಗಕ್ಕಿಳಿದು ಕೆಲಸ ಮಾಡಿಲ್ಲವೆ? ಮೊದಲಿಗೆ ತಮ್ಮವರು ಸುಖವಾಗಿ ಎದ್ದು ಕುಳಿತಮೇಲಲ್ಲವೆ ಮತ್ತಿನ ಕಾರ್ಯ? ಆದರೆ ಕೇಳುವವರಾರು? ಜನತೆ ಇಂದು ಏನನ್ನು ಆಶಿಸುತ್ತಿದೆ, ಏನನ್ನು ಕೇಳುತ್ತಿದೆ' ಎಂದು ಲಕ್ಷಿಸಿ ಅವರ ಇಷ್ಟಸಿದ್ಧಿಗಾಗಿ ದುಡಿಯುವುದಾದರೂ ಯಾರು ಘನ ಸರಕಾರದ ಅಧಿಕಾರಿ ವರ್ಗವೇ? 'ಹೌದು, ದೇಶದ ನಾಡಿನ ಧುರೀಣರು ತುರಂಗದಲ್ಲಿ ಮರೆಯಾಗಿರುವಾಗ ಶಾಂತಿಯನ್ನು ಕಾಪಾಡಿಕೊಳ್ಳುವುದು ಜನತೆಯ ಬಿನ್ನಹಗಳನ್ನು ಕೇಳುವುದು ಅಧಿಕಾರಿಗಳ ಕರ್ತವ್ಯ, ಆದರೆ ಇಂದು ಹಾಗೆ ನಡೆಯುತ್ತಿರುವುದೆ? ಅದಕ್ಕೆ ಬದಲಾಗಿ ಕೇಳುವವರಾರು? . . . . .'

* * *

ಗೋವಿಂದ ಹುಟ್ಟು ಶ್ರೀಮಂತ. ಹಳ್ಳಿಯ ಶಾಂತ ಜೀವನದಲ್ಲಿ ಬೆಳೆದಾತ. ಪಟ್ಟಣದ ಕೆಲವೇ ವರುಷದ ಅನುಭವ ಅವನದು. ಆದರೆ ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳುವ ಶಕ್ತಿ ಅವನಿಗಿತ್ತು. ತನ್ನ ವಿದ್ಯಾಭ್ಯಾಸದ ಸಮಯ ವಿದ್ಯಾಮಂದಿರದ ಮೆಟ್ಟಿಲು ಹತ್ತಿಳಿದಿರುವ ಕಾರ್ಯದಲ್ಲಿ ಮಾತ್ರ ಆತ ತೃಪ್ತಿಗೊಂಡಿರಲಿಲ್ಲ. ಅಲ್ಲದೆ ಪಟ್ಟಣದ ಇತರ ಹವ್ಯಾಸಗಳಿಗೂ ಅವನ ಮನಸ್ಸು ಸೋತಿರಲಿಲ್ಲ. ದೇಶಕ್ಕಾಗಿ ದುಡಿಯುವವರ, ತಮ್ಮ ಜೀವನವನ್ನೇ ಅದಕ್ಕಾಗಿ ಮೀಸಲಾಗಿರಿಸಿದ್ದವರ ವಿಷಯ ತುಂಬಾ ಅಭಿಮಾನದಿಂದ, ನಲ್ಮೆಯಿಂದ ತಿಳಿದುಕೊಳ್ಳುತ್ತಿದ್ದ. ತಿಳಿದುಕೊಳ್ಳಲು ಯತ್ನಿಸುತ್ತಿದ್ದ. ಅಂತೂ ಅದರಲ್ಲಿ ತನ್ನಿಂದಾದಷ್ಟರ ಮಟ್ಟಿಗೆ ತಿಳಿದುಕೊಂಡು ಕಾರ್ಯರಂಗಕ್ಕಿಳಿದು ದುಡಿಯುವುದರಲ್ಲಿಯೂ ಹಿಂದೆ ನಿಂತವನಲ್ಲ. ತನ್ನಿಂದಾದ ಸೇವೆ ಸಲ್ಲಿಸಿದ್ದ. ಆದರೆ ಇಂದಿನ ಈ ಪರಿಸ್ಥಿತಿಯಲ್ಲಿ ಆತನೇನು ಮಾಡಬಲ್ಲ? ಹಿಂದೊಮ್ಮೆ ಗಾಂಧೀಜಿ ಹೇಳಿದ ಮಾತು ಅವನ ನೆನಪಿಗೆ ಬಂತು. 'ನನ್ನ ಒಡಲು ಸುಡುತ್ತಿದೆ' ಇರಬಹುದು. ಇಂದು ಬಂಗಾಲದಲ್ಲಿ ನಡೆಯುತ್ತಿರುವುದನ್ನು ಅವರು ಅಂದು ಹೇಳಿದ್ದಿರಬೇಕು. ಗೋವಿಂದನ ವಿಚಾರ ಲಹರಿಯಲ್ಲಿ ಅದೂ ಬಂದು ಹೋಯಿತು. ಆತ ತುಂಬಾ ವಿಚಾರ ಜೀವಿ; ಆಶಾವಾದಿ.

ಪತ್ರಿಕೆಯ ಪುಟ ತಿರುವಿಹಾಕುತ್ತಾ ಹೋದಂತೆ 'ನಾಳಿನ ಬಂಗಾಲ ನಮ್ಮ ಜಿಲ್ಲೆಯೇ?' ಎಂಬ ಲೇಖನವೊಂದು ಆತನ ಕಣ್ಣಿಗೆ ಬಿತ್ತು. ಮೊದಲಿಂದ ಕೊನೆಯ ತನಕ ಓದಿದ. ನಮ್ಮಲ್ಲಿಯ ಆಹಾರದ ಜಟಿಲ ಸಮಸ್ಯೆ ಅವನಿಗೆ ತಾನು ತಿಳಿದುದಕ್ಕಿಂತಲೂ ವಿಪರೀತವಾಗಿ ಕಂಡು ಬಂದಿತು. ಕಳೆದ ವರುಷ ಇದೇ ಸಮಯಕ್ಕೆ ಆಹಾರ ವಸ್ತುಗಳ ಬೆಲೆ ಎಷ್ಟಿತ್ತು? ಎಂದೊಂದು ಲೆಕ್ಕಹಾಕಿದ. ಇಂದು ನಡೆಯುತ್ತಿರುವ ಧಾರಣೆಯನ್ನು ಅದಕ್ಕೆ ಹೋಲಿಸಿದ. ಒಂದಕ್ಕೆ ಎರಡರಷ್ಟು; ಕೆಲವೊಂದು ಜೀವನಕ್ಕೆ ಅತ್ಯಗತ್ಯವಾದವುಗಳಿಗೆ ಮೂರರಷ್ಟು ನಾಲ್ಕರಷ್ಟು ಹೆಚ್ಚಿತು. ಏಕೆ? ನಮ್ಮಲ್ಲಿಲ್ಲದೆಯೇ! ವಿಚಾರಿಸಿದ ಹೌದು ಕೆಲವೊಂದು ನಮ್ಮಲ್ಲಿಲ್ಲ. ಆದರೆ ನಮ್ಮ ನೆರೆನಾಡಿನಲ್ಲಿಲ್ಲವೇ? ಹಿಂದಿನ ವರುಷ ಬಂದಷ್ಟು ಈ ವರುಷ ಬರುವುದಿಲ್ಲವೆ? ಈ ಪ್ರಶ್ನೆಗಳು ಅವನನ್ನು ಕಾಡತೊಡಗಿದವು. ಕೆಲವೊಂದು ಹೊರನಾಡಿನಿಂದ ಬರುವುದಾದರೆ ನಮ್ಮಲ್ಲಿದ್ದುದಕ್ಕೇಕೆ ಸಾಯಬೇಕು? ಯುದ್ಧದಿಂದಾಗಿ ಎಂದು ಗೋವಿಂದ ಕೇಳಿದ್ದ. ಆದರೆ ಹಿಂದಿನ ಯುದ್ಧದಲ್ಲಿ ಇಷ್ಟು ನಿಕೃಷ್ಟ ಸ್ಥಿತಿಗೆ ದೇಶ ಬಂದಿರಲಿಲ್ಲ. ಎಂದು ಆತ ಓದಿದ್ದ. ಅಕ್ಕಿಗೆ ಹದಿನೆಂಟು; ಇಪ್ಪತ್ತು ರೂಪಾಯಿಯಾದರೂ ಹೆಚ್ಚುದಿನ ನಡೆಯಲಿಲ್ಲ. ಈಗ ಅದೆಷ್ಟು ದಿನಗಳಿಂದ ಈ ಧಾರಣೆ ನಡೆಯುತ್ತಿಲ್ಲ!

ಸ್ವಲ್ಪ ಸ್ವಲ್ಪವೇ ಕ್ರಯವೇರುತ್ತಿರುವುದು ರೂಢಿ. ಅದೂ ಮಳೆಗಾಲದಲ್ಲಿ, ಇತರ ಕಡೆಗಳಿಂದ ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಕಷ್ಟವಾದಾಗ. ಆದರೆ ಹೊಲದಿಂದ ಧಾನ್ಯ ದವಸ ಬಂದು ಅದು ಬಜಾರಿಗೆ ಬಂದ ಮೇಲೆ ಹಿಂದಿಗಿಂತಲೂ ಹೆಚ್ಚುವುದೆಂದರೆ; ಇದಾವುದರ ಚಿಹ್ನೆ?

ದವಸಧಾನ್ಯ ಆಹಾರ ವಸ್ತುಗಳಿಗೆ ಕ್ರಯವೇರುತ್ತಾ ಹೋದಾಗ ಸರಕಾರವೊಮ್ಮೆ ಎಚ್ಚತ್ತು ಅದನ್ನೆಲ್ಲಾ ಹದಕ್ಕೆ ತರಲು ಕೆಲವು ನಿಬಂಧನೆಗಳನ್ನು ಹಾಕಿತು. ಮತ್ತು ತಾನೇ ಮುಂದರಿಯಿತು; ಹೆಚ್ಚಿನ ಆಹಾರ ಸಾಮಗ್ರಿಯನ್ನು ಸಂಗ್ರಹಿಸಲು. ಆದರೆ ಅದರ ಫಲ ಎಷ್ಟರ ಮಟ್ಟಿಗೆ ಪಡೆಯಿತೋ? ಕೆಲವರು ತಮ್ಮ ಹಸಿವೆಯನ್ನು ನೀಗಿಸಿಕೊಂಡಲ್ಲಿಗೆ ಅದರ ಹೆಚ್ಚಿನ ಆಡಂಬರ ನಿಂತಿತು. ಧನವಂತ ವರ್ಗದಾರರುಳಿದು ಬೆಳೆದರು. ಸಾಧಾ ವರ್ಗದಾರರಾದ ಮಧ್ಯ ತರಗತಿಯವರು ಈ ಅಧಿಕಾರಿಗಳ ಕೈಯಲ್ಲಿ ಸಿಕ್ಕಿ ಬೆಂದುಹೋದರು. ಅಂತೂ ಉಳಿದವರು ಬೆಳೆದರು, ಬಳಲಿದವರು, ಬೆಂದರು ಎಂದಾಯಿತು ಪರಿಸ್ಥಿತಿ, ಬೆಳೆಯೋನೋ ಎಂದಿನಂತೆ ಬೆಳೆದು ಬರಬೇಕಾದವರ ಕೈಗೆ ಬರುತ್ತಲೇ ಇತ್ತು. ಕ್ರಯವೇನೋ ಒಂದೇ ಸಮನೆ ಏರುತ್ತಲೇ ಇತು.

ಜನರು ಗಾಬರಿಗೊಂಡರು. ಈ ರೀತಿ ಕ್ರಯವೇರುತ್ತಾ ಹೋದರೆ ಮುಂದೆ? ಗೋವಿಂದ ಕೇಳಿದ ಸಂಬಂಧಪಟ್ಟವರ ಹತ್ತಿರ. ಇದೇ ರೀತಿ ಬೆಲೆ ಏರುತ್ತಾ ಹೋದರೆ ಇನ್ನಾರು ತಿಂಗಳಲ್ಲಿ ದವಸ ಧಾನ್ಯಗಳ ಧಾರಣೆ ಹೇಗಾಗಬಹುದೆಂದು.

'ಅಷ್ಟರ ತನಕ ಉಳಿಯಬೇಕಷ್ಟೇ? ಇಷ್ಟರಲ್ಲೇ ಖಾಲಿಯಾಗುತ್ತಿದೆ ಆಗ ಉಳಿದವರ ಪುಣ್ಯ. ಅಂತೂ ಇದೊಂದು ಸಂಧಿಕಾಲ' ಎಂದು ಅವರು ಉತ್ತರವಿತ್ತರು.

ಗೋವಿಂದನಿಗೆ ಯೋಚನೆ ಮೊದಲಾಯಿತು. 'ಆಹಾರ ವಸ್ತುಗಳು ಎಲ್ಲಿ ಹೋಗುತ್ತಿದೆ.? ಎಂದು ಆತ ಕೆಲವುದಿನಗಳ ಹಿಂದೆ ಪತ್ರಿಕೆಗಳಲ್ಲಿ ಓದಿದ್ದ ಸನಿಹದ ನಾಡಾದ ಮಲಬಾರದಲ್ಲಿ ಅನ್ನವಿಲ್ಲದೆ ಜನರು ಹುಲ್ಲು ತಿನ್ನುತ್ತಿದ್ದಾರೆ.? ಎಂದು ಮತ್ತೆ ಕೆಲವು ಸಮಯದಲ್ಲಿ ಕಾಲರಾ ಹಾವಳಿ ಹೆಚ್ಚಿದೆಯೆಂದು, ಕಾರಣ ಹೊಟ್ಟೆಗಿಲ್ಲದೆ ಸಿಕ್ಕಿದ್ದನ್ನು ತಿಂದು ಎಂದೂ ಜೊತೆಗೆ ಓದಿದ್ದ. ಅಲ್ಲಿಗೆ ಸಾಗುತ್ತಿತ್ತು, ಎಂದು ಕೆಲವರು ಹೇಳಿದ್ದನ್ನು ಕೇಳಿದ್ದ. ಪಾಪ! ಹೊಟ್ಟೆಗಿಲ್ಲದೆ ನರಳುವವರಿಗಾಗಿ ಸಾಗುವುದಾದರೆ. .! ಅದೇ ಕೆಲವು ಸಮಯದಲ್ಲಿ ಬಂಗಾಲದ ಬರಗಾಲ ದೇಶದ ನಾನಾ ಮೂಲೆಗಳಿಂದ ಸಹಾಯ ಸಹಕಾರ ನಿಧಿ ಹೋಗುತ್ತದೆಂದು ಪತ್ರಿಕೆಗಳಲ್ಲಿ ಬರುತ್ತಿತ್ತು. ಮುಂದೆ ಕೆಲವು ದಿನಗಳಲ್ಲಿ ಅಕ್ಷಿಯ ಮುಖಂಡರದೊಂದು ಹೇಳಿಕೆ ಹೊರಟಿತು, ದೇಶದ ನಾನಾ ದಿಕ್ಕುಗಳಿಂದ ನಮ್ಮ ನಾಡಿನ ದುರ್ಗತಿ ಕಂಡು ಸಹಾಯ ನೀಡುವವರನ್ನು ಕಂಡು ನಾವು ಹರುಷಿಸಬೇಕಾಗಿದೆ, ಆದರೆ ಅವರು ಕಳುಹಿಸಿದನ್ನು ನಾವು ಪತ್ರಿಕೆಗಳಲ್ಲೇ ಕಾಣುತ್ತೇವಲ್ಲದೆ ಹೆಚ್ಚಿನದು ನಮ್ಮ ಸೋದರರ ಬಾಳುಬೆಳಗಿಸಿಲ್ಲ!—ಎಂದಿತ್ಯಾದಿ' ಹಾಗಾದರೆ ಎಲ್ಲಿಗೆ ಹೋಗುತ್ತಿದೆ? ಅಲ್ಲಿ ಹಸಿದವರಿಗೂ ಇಲ್ಲ. ಇಲ್ಲಿ ಬೆಳಸಿದವರಿಗೂ ಇಲ್ಲ. ಮಧ್ಯ ಧನಿಕರ ಕೈಯಲ್ಲಿ—ವ್ಯಾಪಾರಿಗಳಲ್ಲಿ ನಲಿಯುತ್ತಿದೆ. ಮುಂದೆ ಅದು ಶ್ರೀಮಂತರ ರಾಜ್ಯದಲ್ಲೇ, ಸುತ್ತಿ 'ದೇಶರಕ್ಷಕರ' ಕೈ ಸೇರುತ್ತಿದೆ. ಎಂದಿತ್ಯಾದಿಯನ್ನು ಅದೇ ಹೇಳಿಕೆಯ ಕೊನೆಯಲ್ಲಿ ಗೋವಿಂದ ಓದಿದ.

* * *

ಧನಿಕರಿಗೆ ಹಸಿವು ಎಂದರೆ ತಿಳಿಯದು. ಇದು ಗೋವಿಂದನು ಸ್ವತಃ ತಿಳಿದ ವಿಷಯ. ಚಿಕ್ಕಂದಿನಲ್ಲಿ ಆತನ ಗೆಳೆಯನೊಬ್ಬನು 'ನಿನಗೆ ಹಸಿವೆ ಎಷ್ಟು ಹೊತ್ತಿಗಾಗುತ್ತದೆ?' ಎಂದು ಕೇಳಿದ್ದ. ಈಗ ಆ ಮಾತು ಆಗಾಗ ಆತನಿಗೆ ನೆನಪಿಗೆ ಬರುತ್ತಲೇ ಹಸಿವಿನ ತಾಪ ಧನಿಕರಿಗಿಲ್ಲ. ಹೊತ್ತಿಗಾಗುವ ಕಾರ್ಯ ನಡೆಯಬೇಕು, ಆದಕ್ಕಾಗಿ—ರುಚಿ ರುಚಿಯಾದ—ನಾಲಗೆ ಬೇಡಿದ್ದನ್ನು ತಿಂದುಕೊಂಡು ತಮ್ಮಷ್ಟಕ್ಕೇ ಇರುತ್ತಾರೆ, ಅದರ ಸಂಗ್ರಹಕ್ಕಾಗಿ ಬಡವರನ್ನು ದುಡಿಸುತ್ತಾರೆ, ತಮ್ಮ ಹಸಿವೆ ತಮಗೆ ತಿಳಿಯದ ಜನಕ್ಕೆ ಮತ್ತೊಬ್ಬರ ಹಸಿವೆ ಎಂತು ತಿಳಿಯಬೇಕು? ದುಡಿಯುವುದೊಂದೋ ಮಾನವ ಧರ್ಮ ಎಂಬಂತೆ ಅವರು ದುಡಿಯುತ್ತಾರೆ. ಕೊಟ್ಟಿದ್ದನ್ನುಂಡು ತೃಪ್ತಿಪಡುತ್ತಾರೆ. ಆದರೆ ಅದು ಸಿಗದಾದಾಗ— ಅದಕ್ಕಾಗಿ ಹೋರಾಡುತ್ತಾರೆ. ಆದರೆ ಆ ಹೋರಾಟದ ಅಂತ್ಯ—? ಗುರಿಮುಟ್ಟುವ ತನಕ. ಧನಿಕನ ಜೀವನದ ಗುರಿ ಧನಕೂಡಿ ಹಾಕುವುದಾದರೆ, ಬಡವನ ಜೀವನದ ಗುರಿ—ತನ್ನ ತುತ್ತು ತನ್ನ ಸ್ವಾತಂತ್ರ್ಯ ತನ್ನದಾಗುವ ತನಕ. ಅದಕ್ಕಾಗಿ ತನ್ನ ಜೀವ ನೀಡಲು ಆತ ಮುಂದಾದಾನು. ಧನಿಕನು ಧನ ಗುಡ್ಡೆ ಹಾಕುವಾಗ ತೊಂದರೆ ಬಂದರೆ ಸುಮ್ಮನಿದ್ದು ಸಮಯ ಸಾಧಿಸಿದಂತೆ, ಆತ ಸುಮ್ಮನಿದ್ದು ತನ್ನ ಕಾರ್ಯ ಸಾಧಿಸಲಾರ. ಆತನು ನಿತ್ಯನು. ಆತನಿಗೆ ಮರಣವಿಲ್ಲ, 'ಸಿರಿತನವು ಸ್ಥಿರವಲ್ಲ' ಎಂದ, ಹಾಡಿದವರು—ಕೆಮ್ಮಿ ಇಲ್ಲ. ಆದರೆ 'ಬಡತನವು ಸ್ಥಿರವಲ್ಲ' ಎಂದವರು ಇಲ್ಲವೆಂದೇ ಹೇಳಿದರೆ ಎಲ್ಲರೂ ಒಪ್ಪತಕ್ಕ ವಿಷಯವೆ?

* * *

ಗೋವಿಂದ ಸಂಜೆ ಮನೆಕಡೆ ಹೋಗುತ್ತಿದ್ದ. ದಾರಿಯಲ್ಲಿ ಮುಂದಿನಿಂದ ಜನರ ಗುಂಪೊಂದು ಹೋಗುತ್ತಿತ್ತು. ಎಲ್ಲರೂ ದಿನದ ದುಡಿತದಿಂದ ಬಳಲಿದ್ದರು. 'ಕೆಲವು ದಿನಗಳಿಂದ ಹಣ ಜಾಸ್ತಿ ಕೊಟ್ಟರಾದರೂ ಅಕ್ಕಿ ಸಿಗುತ್ತಿತ್ತು. ನಾಳೆಯಿಂದ ಅದೂ ಇಲ್ಲವಂತೆ' ಎಂದ ಒಬ್ಬಾತ.

'ಸಿಕ್ಕಿದ ಕೂಲಿ ಒಂದು ಸೇರು ಅಕ್ಕಿಗಾದರೆ ಮುಂದೆ ಹೇಗೆ ಜೀವನ.' ಅಂತೂ ಕಷ್ಟ. ಮುಂದೆ ಹೀಗಾದರೆ ಮಕ್ಕಳು ಮರಿಗಳು ಉಪವಾಸ.' 'ಏನು ಮಾಡುವುದು ಕೂಲಿ ಸಾಲದು; ಎಂದರೆ ಮುಂಚೆ ಇದ್ದುದಕ್ಕಿಂತ ಎರಡುಪಾಲು ಹೆಚ್ಚಿಸಲಿಲ್ಲವೆ? ಅನ್ನುತ್ತಾರೆ.'

'ಜೊತೆಗೆ ಅಕ್ಕಿಗೆ ನಾಲ್ಕುಪಾಲು ಹೆಚ್ಚಿದ್ದು ಅವರಿಗರಿಯದು. ಇವರ ಮನೆ ಹಾಳಾಗ. ಅಲ್ಲ; ಇಂದು ನಾನು ಒಂದುಸೇರು ಅಕ್ಕಿಕೊಡಿ ನನ್ನ ಇಡೀ ದಿನದ ಕೂಲಿ ಕಳೆಯಿರಿ ಎಂದೆ;' ಇಲ್ಲವೇ ಇಲ್ಲ ಎಂದು ರೂಪಾಯಿ ತೆಗೆದು ಹೊರಗೆಸೆದರು.' ಒಬ್ಬಾತ ತುಂಬಾ ರೇಗಿಕೊಂಡು ಹೇಳಿದ—ಮೊದಲಿನವನಿಗೆ.

'ನಾನು ಸುತ್ತಿ ಸುತ್ತಿ ಸಾಕಾಯಿತು. ಅಲ್ಲೊಂದೆಡೆ 'ನಾಲ್ಕುವರೆ ಆಣೆಗೆ ಅಕ್ಕಿಕೊಡುತ್ತಾರೆಂದು ಕೊಂಡು ಮುಂಜಾನೆಯಿಂದ ಕಾಯುತ್ತಿದ್ದೆ. ಕೊನೆಗೆ ಸಿಕ್ಕಿತು. ನಾಯಿ ಸಮೇತ ತಿನ್ನದು ಅದೂ ನಾಳೆಯಿಂದ ಇಲ್ಲವಂತೆ. . .'

'ನಿನಗೆ ಅಷ್ಟಾದರೂ ಸಿಕ್ಕಿತು. ಅಲ್ಲೊಂದೆಡೆ ಕೇಳಿದ್ದಕ್ಕೆ ಮುಡಿ ಮುಡಿ ಕೊಡುವುದೆನ್ನುತ್ತಾರೆ. ಯಾರು ಅವರಿಗೆ ಕ್ರಯ ಕೊಡುವುದು. ಮೊನ್ನೆ ಅಲ್ಲೊಂದೆಡೆ ರೈಲಿನಲ್ಲಿ ಚಿಮಿಣಿ ಎಣ್ಣೆ ತರುವಾಗ ಬೆಂಕಿಬಿದ್ದು ಸುಟ್ಟಂತೆ ಇವರಂಗಡಿಗೂ ಮಧ್ಯಾಹ್ನ ಬೆಂಕಿ ಬಿದ್ದರೆ! ಮನೆಯಲ್ಲಿ ಅಕ್ಕಿ ಇಲ್ಲದೆ ಮಕ್ಕಳು ಉಪವಾಸ.'

ತುಂಬಾ ದೂರ ಅವರನ್ನೇ ಅನುಸರಿಸಿದ ಗೋವಿಂದ. ಇದೇ ರೀತಿಯ ಮಾತುಗಳು ಕೇಳುತ್ತಿದ್ದವು. ಕೆಲವು ದಿನಗಳಿಂದ ಅಷ್ಟಾದರೂ ಸಿಕ್ಕುತ್ತಿತ್ತು ನಾಳೆಯಿಂದ ಅದೂ ಇಲ್ಲವಂತೆ ಏಕೆ? ಯೋಚನೆ ಮಾಡುತ್ತಾ ನಡೆಯುತ್ತಿದ್ದ. ಮನೆ ಬಂತು 'ರೂಮಿ'ಗೆ ಹೋಗಿ ದೀಪ ಹಚ್ಚಿದ. ಅಂದಿನ ದಿನ ಪತ್ರಿಕೆ ಆಗ ತಾನೇ ಬಂದು ಮೇಜನ್ನು ಅಲಂಕರಿಸಿತ್ತು. ತೆಗೆದು ನೋಡಿದ; ಮೇಲೆ ಎದುರಿಗೆ ಬರೆದಿತ್ತು. 'ಅಕ್ಕಿಯ ಖಂಡಿತ ಬೆಲೆ ನಿರ್ಧರಿಸಿದರು' ಎಂದು ಇದರ ಪ್ರಭಾವವೇ ಇದೇನು? ಗೋವಿಂದ ಯೋಚಿಸುತ್ತಾ ಮಲಗಿದ.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT.

Mangalore Stockists:-M/S D. Narsimha Pai & Sons, Mangalore.

Universal Industries (India) Ltd.

Noble chambers, Fort Bombay.

ಲಂಡನಿನ ಮೇಲೆ ಭಾರೀ ಪ್ರಮಾಣದಲ್ಲಿ ಬಾಂಬು ಧಾಳಿ ನಡೆಯುತ್ತಿರುವ ಭಯಂಕರವಾದ ಸುದ್ದಿ ಕೇಳಿ ಬರುತ್ತದೆ. ಜರ್ಮನಿ ಮೇಲೆ ಬ್ರಿಟಿಷರು ಬಾಂಬು ಹಾಕಿದ್ದಕ್ಕೆ ಪ್ರತೀಕಾರವೋ ಏನೋ! ರಷ್ಯದ ರಣರಂಗದಲ್ಲಿ ಜರ್ಮನರಿಗೆ ಸೋಲೇ ಸೋಲು; ರಷ್ಯನರು ತಮ್ಮ ಒಂದೊಂದೇ ಕಳಕೊಂಡ ನಗರ ಗ್ರಾಮಗಳನ್ನು ಪುನಃ ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ ಜಪಾನೀ ರಣರಂಗದಲ್ಲಿಯೂ ತುಸು ಮಂದಗತಿಯೇ ಇದೆ. ಶಾಂತಸಾಗರದಲ್ಲಿ ಮಾರ್ಶಲ್ ನಡುಗುಡ್ಡೆ ಆಕ್ರಮಿಸಿಕೊಂಡ ಮೇಲೆ ಅಮೇರಿಕನರು ಗಣನೀಯ ವಿಜಯ ಪಡೆದಿಲ್ಲ ಬರ್ಮದಲ್ಲಿಯೂ ಹಾಗೆ ತಾಟಸ್ಥ್ಯವೇ ಇದೆ

ಯುದ್ಧ ಬೇಗನೇ ಮುಗಿವುದಿಲ್ಲ

"ಯುರೋಪಿನ ಯುದ್ಧವು ಬೇಗನೇ ಮುಗಿವುದೆಂದಾಗಲಿ, ಹಿಟ್ಲರನ ಪತನ ಬೇಗನೇ ಸಂಭವಿಸುವುದೆಂದಾಗಲಿ ನಾನು ಎಂದೂ ತಿಳಕೊಂಡಿಲ್ಲ, ೧೯೪೪ರಲ್ಲಿ ಯುದ್ಧ ಕೊನೆಗಾಣುವುದೆಂಬ ಭರವಸೆಯನ್ನೂ ನಾನು ತೋರಿಸಿಲ್ಲ" ಹೀಗೆಂದು ಬ್ರಿಟನಿನ ಮಹಾ ಮಂತ್ರಿ ಚರ್ಚಿಲರೇ ಮೊನ್ನೆ ಪಾರ್ಲಿಮೆಂಟಿನಲ್ಲಿ, ಯುದ್ಧ ವಿಮರ್ಶೆಯ ಭಾಷಣ ಮಾಡುತ್ತಾ ಹೇಳಿದರು ಚರ್ಚಿಲರಂಥಾ ಏಕಪಕ್ಷದ ಮಹಾ ಮುಂದಾಳುಗಳೇ ಈ ಮಾತನ್ನು ಹೇಳಿದರೆಂದ ಮೇಲೆ ಯುದ್ಧ ಬೇಗನೇ ಮುಗಿವುದೆಂದು, ಅಥವಾ ಮುಗಿದರೆ ಆಗಬಹುದೆಂದು ಹಾರೈಸುವವರು ತಮ್ಮ ಆಶೆ ಬಿಟ್ಟುಬಿಡುವುದೇ ಒಳ್ಳೆಯದು, ಬದಲಾಗಿ ಇನ್ನು ಹಲವಾರು ವರ್ಷಗಳೂ ಇದೇ ರೀತಿ ಯುದ್ಧ ನಡೆದರೂ ಅದಕ್ಕೆ ಸಿದ್ಧರಾಗಿಯೇ ಇರುವುದೊಳ್ಳಿತು ಇಂದು ರಷ್ಯ ರಣರಂಗದಲ್ಲಿ, ಇಟಲಿಯಲ್ಲಿ, ಜಪಾನ್ ಯುದ್ಧ ಭೂಮಿಯಲ್ಲಿ ಎಲ್ಲೆಲ್ಲಿಯೂ ಸೈನ್ಯಗಳು ತಟಸ್ಥವಾಗಿ ನಿಂತಿರುವುದನ್ನು ನೋಡಿದರೆ ಈ ತಾಟಸ್ಥ್ಯಸಮನಾದ ಯುದ್ಧವೇ ಬಹಳ ಕಾಲ ಮುಂದುವರಿಯಲೂ ಸಾಕೆಂದು ತೋರುತ್ತದೆ ಏಕೆಂದರೆ ಯುದ್ಧವು ಭರದಿಂದ ಸಾಗುತ್ತಿದ್ದರೆ ಸೋಲುಗೆಲವು ಬೇಗನೇ ನಿಶ್ಚಯವಾಗಬಹುದು ಪ್ರಾರಂಭದಲ್ಲೇನೋ ಯುದ್ಧಗತಿ ಬಹಳ ತೀವ್ರವಾಗಿಯೇ ಸಾಗಿತೆನಬೇಕು, ಆದರೆ ಅದರಿಂದ ಜಯಾಪಜಯ ತಿಳಿಯಲಾಗಲಿಲ್ಲ, ಸದ್ಯ ಅಷ್ಟು ರಭಸ ಎಲ್ಲಿಯೂ ಇಲ್ಲ ತುಸು ತಾಟಸ್ಥ್ಯವೇ ಇದೆಯೆನಬೇಕು. ಹೀಗಾದರೆ ಯಾವಾಗ ಯುದ್ಧ ಮುಗಿವುದೆಂದು ಯಾರಿಗೂ ಹೇಳಬರುವುದಿಲ್ಲ ಶತ್ರು ಮಿತ್ರ ಪಕ್ಷಗಳೆರಡೂ ಸಮಬಲವಾಗಿ ಒಂದನ್ನೊಂದು ಎದುರಿಸಿ ಎಲ್ಲಾ ರಣರಂಗದಲ್ಲಿಯೂ ಭುಜ ಹೊಯ್ದು ಸದಾ ನಿಂತುಕೊಂಡೇ ಇವೆಯಾದರೂ ಯಾರ ಮೇಲೆ ಯಾರು ಬಿದ್ದರೂ, ಪೆಟ್ಟು ಹೊಡೆಯಲೂ ಪೆಟ್ಟು ತಿನ್ನಲೂ ಉಭಯ ಪಕ್ಷಗಳೂ ಸಿದ್ಧವಾಗಿವೆ ಇಂಥಾ ಪರಿಸ್ಥಿತಿಯಲ್ಲಿ ಯುದ್ಧ ಬೇಗನೇ ಮುಗಿವುದಿಲ್ಲವೆಂದು ಯಾರಾದರೂ ಸ್ಪಷ್ಟ ತಿಳಕೊಳ್ಳಬಹುದು, ಚರ್ಚಿಲರಂತೂ ಈ ಮಾತಿಗೀಗ ಪುಷ್ಟಿಯನ್ನಿತ್ತಿದ್ದಾರೆ

ಸಮರ ಭೂಮಿಯ ಸಂಚಾರ

ದ್ವಿತೀಯರಂಗವುಂಟೇನು?

ಚರ್ಚಿಲರು ಮೊನ್ನೆ ಮಾಡಿದ ಯುದ್ಧ ವಿಮರ್ಶೆಯಲ್ಲಿ ಮೇಲಿನಾ ವಿಷಯವೊಂದನ್ನು ಬಿಟ್ಟರೆ ತಿಳಿದುಕೊಳ್ಳತಕ್ಕಂಥಾ ಬೇರೆ ವಿಷಯವಿಲ್ಲ. ದ್ವಿತೀಯ ರಂಗವನ್ನು ಯಾವಾಗ ತೆರೆವರು ಎಂಬುದನ್ನು ಚರ್ಚಿಲರು ಈ ಸಲದ ಭಾಷಣದಲ್ಲಿಯೂ ಸ್ಪಷ್ಟವಾಗಿ ಹೇಳದೆ ಹಾರಿಸಿ ಮಾತನಾಡಿದರು ಚರ್ಚಿಲರು ಇದುವರೆಗಾದರೂ ಮಾಡಿದ್ದು ಹೀಗೆಯೇ! ದ್ವಿತೀಯ ರಂಗ ತೆರೆಯಬೇಕೆಂದು ಸ್ಟಾಲಿನರು, ಮಿತ್ರ ಪಕ್ಷದವರೆಲ್ಲರೂ ಬ್ರಿಟನಿಗೆ ಬೊಬ್ಬಿಟ್ಟರೂ ಚರ್ಚಿಲರು ಹಿಂದೆ ಹೇಳಿದ್ದು, ಇಂದು ಹೇಳುವುದು, ಮುಂದೆ ಹೇಳುವುದೂ ಸಹ ಹೀಗೆ ಅಸ್ಪಷ್ಟವಾದ ಉತ್ತರವೇ ಎಂದು ತೋರುತ್ತದೆ ನಿಶ್ಚಿತವಾಗಿ ದ್ವಿತೀಯ ರಂಗ ತೆರೆಯಬೇಕಾದರೆ ಅಂಥಾ ಸಿದ್ಧತೆ ಬೇಕು, ಅಷ್ಟು ಸಾಹಸ ಮಾಡಬೇಕು, ದ್ವಿತೀಯ ರಂಗ ತೆರೆಯಲೇ ಬೇಕೆಂಬ ವಿಷಯ ಅವರ ಒಡಲಲ್ಲಿ ದನಿ ಹುಟ್ಟಬೇಕು, ಸುಮ್ಮ ಸುಮ್ಮಗೆ ಬೇರೆಯವರು ಹೇಳುತ್ತಾರೆ, ಜಗತ್ತೇ ಬೊಬ್ಬಿಡುತ್ತದೆ ಎಂದರೆ, ಪಾಪ, ಚರ್ಚಿಲರು ಅದಕ್ಕೇನು ತಾನೇ ಮಾಡಬಲ್ಲರು? ಹಾಗೆಂದು ದ್ವಿತೀಯ ರಂಗ ತೆರೆಯುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ ಸ್ವಲ್ಪ ಸಮಾಧಾನ ಮಾಡಿಕೊಳ್ಳಬೇಕು, ಯಾವಾಗಲಾದರೂ ಒಂದು ದಿನ ದ್ವಿತೀಯ ರಂಗ ತೆರೆದಾರು, ರಷ್ಯದ ಭಾರ ಆಗ ಕಡಿಮೆಯಾದೀತು! ಜರ್ಮನಿಯನ್ನು ಸೋಲಿಸಬೇಕೆಂದು ಸ್ಟಾಲಿನರಂತೆ ಚರ್ಚಿಲರಿಗೂ ಇದೆಯಷ್ಟೆ ಸದ್ಯ ಸ್ಟಾಲಿನರು ಹಿಟ್ಲರನೆದುರು ನಿಂತು ಖಡಾಖಾಡಿ ಹೋರಾಡುತ್ತಾರೆ, ಹೋರಾಡಲಿ, ಮುಂದೆ ಚರ್ಚಿಲರಿದ್ದಾರಲ್ಲವೆ? ಅಂತೂ ಹಿಟ್ಲರನ ಪತನವಾಗದೆ ಚರ್ಚಿಲರು ಅಸ್ತ್ರ ಕೆಳಗಿಡುವುದಿಲ್ಲವೆಂದು ಅವರ ಖಂಡಿತ ಆಸೆಯಿರುವುದೆಂಬುದನ್ನು ನಾವು ಅವರ ಹಲವಾರು ಭಾಷಣಗಳಿಂದ ಅರ್ಥಮಾಡಿಕೊಂಡಿಲ್ಲವೆ?

ಇಟಲಿಯಲ್ಲಿ ತಾಟಸ್ಥ್ಯ

ಇಟಲಿ ಯುದ್ಧವೂ ಇಂದು ತಾಟಸ್ಥ್ಯಕ್ಕೆ ಬಂದಿದೆಯೆನಬೇಕು ಮುಸಲನಿ ಪತನವಾಗಿ, ಮಿತ್ರರು ಇಟಲಿಯಲ್ಲಿ ಇಳಿವ ಕಾಲಕ್ಕೆ, ಇನ್ನೇನು ಇಟಲಿ ಮಿತ್ರರ ಗಂಟಲೊಳಗೆ ಬಿತ್ತು ಎಂದೇ ಹೇಳಲಾಯಿತು ಆದರೆ ಇಟಲಿಯ ಗಂಟು ಮಿತ್ರರ ಗಂಟಲನ್ನು ಸುಡುತ್ತಾ ಸುಡುತ್ತಾ ತೌಸಾಗುತ್ತದೆಯೆಂದು ಆ ಮೇಲಿನ ಅನುಭವಗಳಿಂದ ತಿಳಿದು ಬಂತು, ಜರ್ಮನ್ ಸೈನ್ಯ ಅಲ್ಲಿ ಅಪಾರವಿದ್ದು ಮಿತ್ರರನ್ನು ಪ್ರಬಲವಾಗಿ ಪ್ರತಿಭಟಿಸಲಾಯಿತು ಮಿತ್ರರ ಸೆರೆಯೊಳಗೆ ಸಿಕ್ಕಿಬಿದ್ದ ಮುಸಲನಿಯನ್ನು ಏನು ಇಂದ್ರಜಾಲ ಮಾಡಿಯೋ ಜರ್ಮನ್ ಸಾಹಸಿಗಳು ಬಿಡಿಸಿಕೊಂಡೂ ಹೋಗಿ ಬಿಟ್ಟರು ಮುಂದೆ ಇಟಲಿಯಲ್ಲಿ ಜರ್ಮನರ ಕೈಯೇ ಮೇಲಾಗುತ್ತಾ ಬಂತು. ಆ ಮೇಲೆ ಜರ್ಮನರು ಮಿತ್ರರನ್ನು ಸಮುದ್ರಕ್ಕೆ ದೂಡಬೇಕೆಂದು ಬಹಳ ಹಾಗಿ ಪ್ರಯತ್ನಪಟ್ಟರು; ಆದರೆ ಅದು ಸಿದ್ಧಿಸಲಿಲ್ಲ. ಸದ್ಯ ಅಲ್ಲಿನ ಯುದ್ಧ ಬಹಳ ಮಂದಗತಿಯಲ್ಲಿದೆ ಕ್ಯಾಸಿನೋ ಮತ್ತು ಸಿಸ್ಟರ್ನಾ ಇವೆರಡು ನಗರಗಳಿನ್ನೂ ಜರ್ಮನರ ಕೈಯಲ್ಲಿದೆ, ಅಕ್ಟೋಬರಿನಲ್ಲಿ ನೇಪಲ್ಸನ್ನು ವಶಪಡಿಸಿಕೊಂಡ ಮೇಲೆ ಮಿತ್ರರು ಬಹಳ ಪ್ರಯಾಸದಿಂದ ಮೆಲ್ಲನೆ ಮುಂದುವರಿಯುತ್ತಿರುವರು. ಇದಕ್ಕೆ ಹವೆ ಅನುಕೂಲವಿಲ್ಲದಿರುವುದೂ, ಪರ್ವತ ಪ್ರದೇಶ ಎದುರಾದದ್ದೂ ಕಾರಣವೆಂದು ಚರ್ಚಿಲರು ಮೊನ್ನೆಯ ಪಾರ್ಲಿಮೆಂಟ್ ಭಾಷಣದಲ್ಲಿ ಹೇಳಿದರು ಇದನ್ನು ಚರ್ಚಿಲರು ಹೇಳಬೇಕಾ

ಪಿರಿಯಾಡಿಕಲ್ ಕಾನ್ಫರೆನ್ಸ್

ಇತ್ತೀಚೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿ. ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಕಾನ್ಫರೆನ್ಸಿನಲ್ಲಿ ಕುಮರಿ ಬೇಸಾಯದ ಕುರಿತು ಸರಕಾರ ತಿರುಗಿ ಆಲೋಚಿಸಬೇಕೆಂದು ಕೇಳಿಕೊಳ್ಳುವ, ರೈತರಿಗೆ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಗ್ರಾಂಟ್ ಮಂಜೂರು ಮಾಡುವ, ಪಂಚಾಯತ ಬೋರ್ಡು ಇತ್ಯಾದಿಗಳು ಬೀಜದ ಕೋಣಗಳಿಗಾಗಿ ಉಚಿತ ಗ್ರಾಂಟು ಕೊಡುವ ಸೂಚನೆಗಳು ವ್ಯರ್ಥವಾದುವು ಕುಂಬಳೆ ಹೊಳೆಯ ಭಾಗದ ೧೨೦ ಅಡಿ ನೆಲವನ್ನು ಉಪಯೋಗಿಸುವ ಯೋಜನೆಯ ವಿಚಾರದಲ್ಲಿ ಪಶ್ಚಿಮ ಕರಾವಳಿ ಭಾಗದ ಎಗ್ಜಿಕ್ಯೂಟಿವ್ ಇಂಜಿನಿಯರರ ವರದಿಯನ್ನು ನಿರೀಕ್ಷಿಸಲಾಗಿದೆ ಜಿಲ್ಲೆಯ ಪ್ರತಿಯೊಂದು ತಾಲೂಕು ಹೆಡ್ ಕ್ವಾರ್ಟರ್ಸಿನಲ್ಲಿಯೂ ಒಂದೊಂದು ವೆಟರ್ನರಿ ಆಸ್ಪತ್ರೆಯನ್ನು ಸ್ಥಾಪಿಸಿ ಹಾಗೆ ದನಕರುಗಳ ರೋಗವನ್ನು ನಿವಾರಿಸಬೇಕೆಂಬ ಸೂಚನೆಯನ್ನು ಈ ಕಾನ್ಫರೆನ್ಸಿನವರು ಪ್ರಬಲವಾಗಿ ಸಮರ್ಥಿಸಿರುತ್ತಾರೆ
ದ್ದೇನೂ ಇಲ್ಲ, ಎಲ್ಲರಿಗೂ ಗೊತ್ತಿರುವ ವಿಚಾ

ಮುಂಬಯಿ — ನಿಧನ

ಶ್ರೀ| ಸುಜೀರ್ ಗೋಪಾಲರಾವ್ ನಾಯಕರು ತಾ ೨೬–೨–೪೪ರಂದು ಬೊಂಬಾಯಿಯಲ್ಲಿ ತಮ್ಮ ೭೪ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಹೆಂಡತಿ ಮಕ್ಕಳ ಹಾಗೂ ಹಲವಾರು ಬಂಧುಮಿತ್ರರ ದುಃಖದಲ್ಲಿ ನಾವು ಸಹಸಂತಾಪ ಸೂಚಿಸುವೆವು ಮೃತರ ಆತ್ಮಕ್ಕೆ ಶಾಂತಿಯಿರಲಿ

ರವೇ. ನಿಪುಣ ಸೇನಾಪತಿಗಳಾದರೆ ಈ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಿ ಮುಂದುವರಿಯಬೇಕಾಗಿತ್ತು; ಅದರಲ್ಲಿ ನಿಜವಾದ ಯುದ್ಧ ಪರಾಕ್ರಮವಿದೆ ಅಂತೂ ಇಂದು ಇಟಲಿ ರಣರಂಗದಲ್ಲಿ ತಾಟಸ್ಥ್ಯವಿದ್ದು ಇಲ್ಲಿನ ಯುದ್ಧವೂ ಬೇಗನೇ ಒಂದು ನಿರ್ಣಯಕ್ಕೆ ಬರುವಂತೆ ಕಂಡುಬರುವುದಿಲ್ಲ.

ಯೂರೋಪಿಯನ ಯುದ್ಧ ಹೇಗೂ ಬೇಗನೇ ಕೊನೆಗಾಣುವ ಸೂಚನೆ ಕಂಡುಬರುವುದಿಲ್ಲ.

WANTED

Wanted a well experienced Accountant for an established firm in Mangalore The candidate must have at least S S L C. qualification Pay according to qualification

Apply X

C/o Swadeshabhimani

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P 709/1943
in O S 335/1937

ವಾದಿರು ಶ್ರೀನಿವಾಸ ಭಗತ್ ಕೂಡಾ
ಪ್ರತಿವಾದಿರು: ಕೃಷ್ಣ ಯ ನ್ಯಾಕ್ ಕೂಡಾ
3ನೇ ಪ್ರತಿವಾದಿ:– ಲಕ್ಷ್ಮಣ ನ್ಯಾಕ್–ಜನ್ನಾಲೆ ವಾಸುದೇವ ನ್ಯಾಕನ ಮಗ ತೀರ್ಥಹಳ್ಳಿ ಕ್ಸಬಾ–ಶಿವಮೊಗ್ಗ ಡಿಸ್ಟ್ರಿಕ್ಟ್–ಮೈಸೂರು ಪ್ರಾವಿನ್ಸ್

ಸದಿ ಡಿಕ್ರಿಯ ಮೇಲೆ ವಾದಿರು ಮೇಲ್ಕಂಡ ಅಮಲ್ಜಾರಿಯನ್ನು ಕೋರ್ಟಿಗೆ ದಾಖಲು ಮಾಡಿರುತ್ತಾರೆ ಆದುದರಿಂದ ಅಮಲ್ಜಾರಿಯನ್ನು ಯಾಕೆ ನಡಿಸಕೂಡದೆಂಬ ಸಬಬು ತೋರಿಸುವರೇ ತಾರೀಕು 13-3 1944ಕ್ಕೆ ಮೇಲೆ ನಮೂದಿಸಿದ ಕೋರ್ಟಿನಲ್ಲಿ ಇಟ್ಟದೆ ಆದುದರಿಂದ ಆ ದಿವಸ ಹಗಲು ಹನ್ನೊಂದು ಗಂಟೆಗೆ ಹಾಜರಾಗಿ ಆಕ್ಷೇಪ ವಗೈರೆಯನ್ನು ಜಾಹಿರು ಪಡಿಸಿಕೊಳ್ಳದಿದ್ದಲ್ಲಿ ಸದಿ ವಿಷಯದಲ್ಲಿ ಏಕಪಕ್ಷವಾಗಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಸದ್ರಿ ಮೂರನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ

(ಕೋರ್ಟು ಹುಕುಂ ಪ್ರಕಾರ)

ಕುಂದಾಪುರ } K Raghunath Shenai B. A
25 3 44 } Pleader for the petitioners

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ ಧನ ಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ ಮತ್ತೆ ನೆನಪಿರಲಿ—ಯಾವ ಚೆಕ್ ಆದರೂ ಕೆನರಾ ಬೇಂಕಿನಲ್ಲಿ ವಟಾಯಿಸಲ್ಪಡಲು ಐದು ನಿಮಿಷಗಳಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

FOR SALE

The undermentioned property belonging to Basel Mission is for sale Intending purchasers are hereby requested to send in their offers and inquiries to reach the undersigned before the 15th of March 1944.

Description of Property

Ajakar-Marne Village, Karkala Taluk

Survey number	Extent	Description
82-1 2,3 4,6,7,8,10,11	8 82 Acres	
82 9	0 45 ,,	
234 1 & 2	0 75 ,,	
239	1 35	Fields & Garden
235	1 31 ,,	
262	15 96 ,,	
422-1	0 40	

Puttur Casba Village-Puttur Taluk

Survey Number	Extent	Description
134-7	0 52 Acres	House & Compound

K. R. Karunakar,
Ag District Chairman,
Basel Mission,
BALMATTA MANGALORE.

ಸ್ವದೇಶಾಭಿಮಾನಿ

ತಾರೀಖು 8–3–1944

ಕಸ್ತೂರ್ ಬಾ

ಕಸ್ತೂರ್ ಬಾ ಕಣ್ಮರೆಯಾದರು; ಸೆರೆಮನೆಯಲ್ಲಿಯೇ ಸಾವಿಗೆ ಬಲಿಯಾದರು; ಈ ವೃದ್ಧಾಪ್ಯದಲ್ಲಿ ಗಾಂಧೀಜಿಯನ್ನು ಸೆರೆಮನೆಯಲ್ಲಿ ಹಾಗೂ ಜೀವನದಲ್ಲಿ ಏಕಾಂಗಿ ಮಾಡಿ ಅಗಲಿ ಹೋದರು.

ರಾಷ್ಟ್ರಮಾತೆ ಕಸ್ತೂರ್ ಬಾರ ಮರಣಕ್ಕಾಗಿ ರಾಷ್ಟ್ರವಿಡೀ ಇಂದು ಮರುಗುತ್ತಿದೆ; ಜಗದೇಕವಿಭೂತಿಪುರುಷನ ಮಹಾಸತಿಗೆ ಸೆರೆಮನೆಯಲ್ಲಿ ಈ ಸಾವು ಒದಗಿದಕ್ಕಾಗಿ ದೇಶವಿದೇಶಗಳ ಜನತೆ ಸಂತಾಪಗೊಂಡಿದೆ; ಗಾಂಧೀಜಿಗೊದಗಿದ ದುಃಖದಲ್ಲಿ ವಿಶಾಲ ವಿಶ್ವವೇ ಸಹಾನುಭೂತಿ ತೋರಿಸಿದೆ.

ಕಸ್ತೂರ್ ಬಾ ವೀರಮಹಿಳೆಯಾಗಿ ರಾಷ್ಟ್ರದ ಸ್ವಾತಂತ್ರ್ಯ ಸಮರಮಧ್ಯದಲ್ಲಿ ಪ್ರಾಣವನ್ನು ನೀಗಿದರು; ಕಸ್ತೂರ್ ಬಾ ಆದರ್ಶ ಸತಿಯಾಗಿ ಪತಿಯ ನೆರಳಾಗಿ ನಿಂತು ಸಂಕಷ್ಟ ಸಾವಿರಗಳನ್ನು ನಗು ಮೊಗದಿಂದ ಅನುಭವಿಸುತ್ತಾ ಸೆರೆಮನೆಯಲ್ಲಾದರೂ ಪತಿಯ ಪದತಲದಲ್ಲಿ ಅಸುತೊರೆದರು; ಕಸ್ತೂರ್ ಬಾ ಸೌಭಾಗ್ಯವತಿಯಾಗಿ ಸುಮಂಗಲಿಯಾಗಿಯೇ ಸಾವನ್ನು ಕಂಡರು. ಹೀಗೆ ಅವರು ಲೋಕಪೂಜ್ಯರ ಪತ್ನಿಗೆ ಸದೃಶವಾದ ಮರಣಹೊಂದಿ ಲೋಕ ವಂದ್ಯೆಯಾದರು.

ಮಹಾತ್ಮರ ಆತ್ಮೀಯರು ಒಬ್ಬೊಬ್ಬರೇ ಅವರನ್ನು ಅಗಲಿ ಓ ಕೊಡದ ಲೋಕಕ್ಕೆ ಹೋಗುತ್ತಿದ್ದಾರೆ. ಸೆರೆಮನೆಯಲ್ಲಿ ಭಾರತದ ಮುಖಂಡರು – ಮುಖಂಡೆಯರು ಒಬ್ಬೊಬ್ಬರೇ ಮರಣಕ್ಕೆ ಬಲಿಯಾಗುತ್ತಿದ್ದಾರೆ. ಒಸ್ವಾಲ್ಡ್ ಮೋಸ್ಲೆಯಂಥಾ ಹಿಟ್ಲರ್ ಪಕ್ಷಪಾತಿಯನ್ನು ಅನಾರೋಗ್ಯದ ನಿಮಿತ್ತ ಬ್ರಿಟಿಷ್ ಸರಕಾರ ಬಿಡುಗಡೆ ಮಾಡಿದರೂ, ಮಹಾದೇವದೇಸಾಯಿ, ಕಸ್ತೂರ್ ಬಾರವರು ಸೆರೆಮನೆಯಲ್ಲಿಯೇ ಸಾಯಬೇಕಾಯಿತು! ಇಂಥಾ ವಿಪರೀತವನ್ನು ಇನ್ನೆಷ್ಟು ಕಾಲ ಜನತೆ ಸಹಿಸಬೇಕಾಗಿದೆಯೊ?

ಕಸ್ತೂರ್ ಬಾರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ ನೀಡಲಿ!

ಅಂದಾಜು ಪತ್ರ

ಭಾರತ ಸರಕಾರದ ಹೊಸ ವರ್ಷದ, ೧೯೪೪–೪೫ರ ಅಂದಾಜು ಪತ್ರವನ್ನು ಅರ್ಥಸಚಿವ ಸರ್ ಜೆರಿಮಿ ರೈಸ್ಮನರು ಶಾಸನಸಭೆಯ ಮುಂದಿಟ್ಟು ಅದರ ಸ್ಪಷ್ಟೀಕರಣ ಭಾಷಣ ಮಾಡಿದರು. ಸರ್ ಜೆರಿಮೆನರ ಅಂದಾಜು ಪತ್ರವನ್ನು ನೋಡಿದರೆ ಸರಕಾರದ ಖರ್ಚು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುವುದು, ದಿನದಿಂದ ದಿನಕ್ಕೆ ಹೊಸ ತೆರಿಗೆಗಳು ಪ್ರಜೆಗಳ ಮೇಲೆ ಬೀಳುವುದು ಮಾತ್ರ ಕಂಡು ಬರುತ್ತದಲ್ಲದೆ, ಇನ್ನೇನೂ ತೋರುವುದಿಲ್ಲ.

ಹೊಸ ವರ್ಷದಲ್ಲಿ ೨೪೪–೬೭ ಕೋಟಿ ರೂ. ಆದಾಯವಾಗಿ ೩೬೩.೧೮ ಕೋಟಿ ರೂ. ವೆಚ್ಚವಾಗುವುದರಿಂದ ೭೬–೫೧ ಕೋಟಿ ರೂ. ಸಾಕಾಗದೆ ಬರುವುದೆಂದು ರೆಜಿಮೆನರು ಅಂದಾಜು ಪತ್ರದಲ್ಲಿ ತಿಳಿಸಿದ್ದಾರೆ. ರೆಜಿಮೆನರ ಅಂದಾಜಿಗೆ ಇತ್ತೀಚೆಗೆ ತುದಿ ಮೊದಲಿಲ್ಲವಾಗಿದೆ. ಯುದ್ಧ ಕಾಲವೆಂದು ಸಮಾಧಾನ ಪಟ್ಟರೂ ಇಂದಿನೀ ಅತ್ಯಂತ ಅಂತರವು ಯೋಗ್ಯವೆನಿಸಲಾರದು. ೧೯೪೩–೪೪ರಲ್ಲಿ ೩೫ ಕೋಟಿ ರೂ. ಕೊರತೆಯಾಗುವುದೆಂದು ಅಂದಾಜು ಮಾಡಿದ್ದು ೯೪ ಕೋಟಿಗೆ ಮುಟ್ಟಿತು. ೧೯೪೩–೪೪ರಲ್ಲಿ ಹೊಸ ಕರಗಳನ್ನು ಹೇರಿದಾಗ ೪೦ ಕೋಟಿ ರೂ. ಕೊರತೆ ಬೀಳುವ ಅಂದಾಜು ಮಾಡಿದರೂ ಈಗ ೯೩ ಕೋಟಿ ರೂ.ಗೆ ಏರಿದೆ. ಬರುವ ವರ್ಷದ ಅಂದಾಜು ಇನ್ನೆಷ್ಟು ಪ್ರಮಾಣ ಹೆಚ್ಚಾಗಲಿದೆಯೋ ನೋಡಬೇಕು.

ಮುಂದಿನ ವರ್ಷದ ಕೊರತೆಯನ್ನು ಕಡಿಮೆ ಮಾಡಲು ಸಂಪ್ರದಾಯದಂತೆ ಹೊಗೆಸೊಪ್ಪು ಹಾಗೂ ಉತ್ಪನ್ನ ಮತ್ತು ಆ ಸಂಬಂಧದ ತೆರಿಗೆ ಏರಿಸಲ್ಪಟ್ಟದ್ದಲ್ಲದೆ ಚಾಕಾಫಿ ಮತ್ತು ಅಡಿಕೆಗಳ ಮೇಲೆ ಒಂದು ಪೌಂಡಿಗೆ ಎರಡಾಣೆಯಂತೆ ತೆರಿಗೆ ಹೇರಿದ್ದಾರೆ. ಇವೆಲ್ಲವುಗಳಿಂದ ಕೇವಲ ೨೩॥ ಕೋಟಿ ರೂ. ದೊರಕುವುದಾಗಿದ್ದು ಮತ್ತೂ ೫೪–೭೧ ಕೋಟಿ ರೂ. ಸಾಲ ಪಡೆಯಬೇಕು. ಕಳೆದ ವರ್ಷ ವನಸ್ಪತಿ ತುಪ್ಪದ ಮೇಲೆ ತೆರಿಗೆ ಹಾಕಿ ಜನರು ಅತೃಪ್ತರಾದಂತೆ ಈ ವರ್ಷದ ಅಡಿಕೆಯಂಥಾ ಭಾರತೀಯರ ಆಹಾರ ಸಾಧನದಂಥಾ ಪದಾರ್ಥಗಳ ಮೇಲೆ ತೆರಿಗೆ ಹಾಕಿದ್ದರಿಂದಲೂ ಜನತೆ ಅತೃಪ್ತಿ ಪಡುವಂತೆ ಆಗಿದೆ.

ಭಾರತೀಯರ ಒಪ್ಪಿಗೆ ಬೆಂಬಲವಿಲ್ಲದೆ ಈ ಯುದ್ಧದ ವೆಚ್ಚಕ್ಕಾಗಿಯೇ ಹೆಚ್ಚಿಸಿದ ತೆರಿಗೆಯನ್ನು ಆಧರಿಸಿ. ರೆಜಿಮೆನರು ಯುದ್ಧಾನಂತರದ ವ್ಯವಸ್ಥೆಯ ಕುರಿತೂ ಕೆಲವು ಹಗಲು ಕನಸು ಕಟ್ಟಿದನ್ನು ನೋಡಿದರೆ ನಗ ಬೇಕೋ ಅಳ ಬೇಕೋ ತಿಳಿಯದಾಗಿದೆ.

ಮೃದುವಾದ ಚರ್ಮವನ್ನು ಬಹಳ
ಜಾಗ್ರತೆಯಿಂದ ಕಾಪಾಡಬೇಕು
ಕುಟಿಕೂರಾ ಸಾಬೂನು ಮಗುವಿನ
ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು
CUTICURA SOAP

ಕಸ್ತೂರ್ ಬಾರ ಅಂತ್ಯ ನಿಮಿಷಗಳು!

ದೇವದಾಸ ಗಾಂಧೀ ತಿಳಿಸುತ್ತಾರೆ

"ತಾಯಿಗೆ ೧೯೪೩ ಸೆಪ್ಟೆಂಬರದಿಂದಲೇ ಅನಾರೋಗ್ಯವುಂಟಾಯಿತು. ಆದರೆ ಆಗ ಹೃದಯ ವಿಕಾರ ಇದ್ದಿಲ್ಲ. ಈ ಸಲದ ಸೆರೆ ಮನೆ ಅವರ ತನುಮನಗಳನ್ನು ಒಣಗಿಸಿತು. ಹೆಸರಿಗೆ ಮಾತ್ರ ಇದು ಆಗಾಖಾನ ಅರಮನೆ; ಎಂಥಾ ವಿರೋಧಾಭಾಸ. ಸೇವಾ ಗ್ರಾಮದ ಗುಡಿಸಲಿಗೆ ಮರಳಿ ಹೋಗಬೇಕೆನಿಸುತ್ತದೆಂದು ತಾಯಿ ಕಳೆದ ವರ್ಷ ಇಚ್ಛೆ ಪ್ರದರ್ಶಿಸಿದ್ದರು. ಮನಃ ಶಾಂತಿ ಇದ್ದಿಲ್ಲ ಅವರಿಗೆ. ತಮ್ಮಂತೆ ಇನ್ನೂ ಸಾವಿರಾರು ಮಂದಿ ದುಃಖಕ್ಕೆ ತುತ್ತಾಗಿರುವರೆಂದು" ನೆನಪಾದ ಕೂಡಲೇ ಅವರ ಮನಸ್ಸಿಗೆ ಅತ್ಯಂತ ವೇದನೆಯಾಗುತಿತ್ತು. ಬೇರೆಯವರನ್ನೆಲ್ಲಾ ಬಿಡುವುದಾದರೆ ತಾನೂ ಬಾಪೂಜಿಯೂ ಎಷ್ಟು ಕಾಲಬೇಕಾದರೂ ಸೆರೆಮನೆಯಲ್ಲಿರಬಹುದೆಂದು ಕಳೆದ ಒಂದುವರೆ ವರ್ಷದಿಂದ ದೇವರೊಡನೆ ಅವರು ನಿರತ ಮೊರೆಯಿಡುತಿದ್ದರು. ಅವರನ್ನು ಸರಕಾರ ಬಿಡುಗಡೆಮಾಡಿದ್ದರೆ ಬೇಕಾದರೆ ಪುನಃ ಸ್ಥಾನಬದ್ಧತೆಗೆ ಬರುವ ಆಸ್ಪದ ಕೊಟ್ಟಿದ್ದರೆ ಒಳ್ಳೆದಾಗುತಿತ್ತು. ಆದರೆ ಕೊನೆಗೆ ಪರಮಾತ್ಮನಿಂದಲೇ ಬಿಡುಗಡೆ ಬಂದಿತು" ಹೀಗೆಂದು ಶ್ರೀ. ದೇವದಾಸ ಗಾಂಧಿಯವರು ತಾಯಿ ಕಸ್ತೂರ್ ಬಾ ಇವರ ಅಂತ್ಯ ದರ್ಶನದ ಕುರಿತು ಕೊಟ್ಟ ಒಂದು ಪ್ರಕಟಣೆಯಲ್ಲಿ ಹೇಳುತ್ತಾರೆ.

ಆ ಪ್ರಕಟಣೆಯ ಉಳಿದ ಕೆಲವು ವಿವರಗಳು ಇಂತಿವೆ.

ಗಾಂಧೀಜಿ ಉಪಚರಿಸಿದರು

"ಪ್ರಾಣ ಹೋಗುವ ವರೆಗೂ ತಾಯಿಗೆ ಸ್ಮೃತಿಯಿತ್ತು. ಹೃದಯ ಅಶಕ್ತವಾಗಿದ್ದುದರಿಂದ ಕೆಲದಿನಗಳ ಹಿಂದೆ ಮೂತ್ರಪಿಂಡ ರೋಗ ಸುರುವಾಗಿತ್ತು. ಹೃದಯ ಕೊಳದ ಬೇನೆಯಿಂದ ಅದು ಮತ್ತಷ್ಟು ಹೆಚ್ಚಾಯಿತು. ಡಾಕ್ಟರರು ಆಶೆ ಬಿಟ್ಟಿದರು. ನಾನು ಸೋಮವಾರ ಸಂಜೆ ಅಲ್ಲಿಗೆ ಹೋದಾಗ ಅವರಿಗೆ ವೇದನೆಯಾಗುತಿತ್ತು. ಡಾಕ್ಟರರ ನಿರೀಕ್ಷಣೆಯನ್ನು ಮೀರಿ ಅವರು ಆ ರಾತ್ರಿ ಕಳೆದರು. ಅದೇ ಅವರ ಇಹ ಜೀವನದ ಕೊನೆಯ ರಾತ್ರಿ. ಗಾಧೀಜಿ ಮತ್ತು ಇನ್ನಿತರರು ಕ್ಷಣ ಬಿಡದೆ ಬೆಳಗಾಗುವ ತನಕ ಉಪಚರಿಸಿದರು. ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಅರಿಸ್ಮೃತಿಯಿಂದ ಒಂದೊಂದು ಶಬ್ದ ಹೇಳುತ್ತಿದ್ದರು. ಒಮ್ಮೆ ಗಾಂಧೀಜಿ ಅವರ ಬಳಿ ಬಂದಾಗ ಕೈಯೆತ್ತಿ 'ಯಾರವರು' ಎಂದರು. ಗಾಂಧೀಜಿ ಅಲ್ಲಿಯೇ ಒಂದು ಗಂಟೆ ಕಾಲ ಉಪಚರಿಸುತ್ತಿರುವಾಗ ಅವರಿಗೆ ಬಹಳ ಆನಂದವಾಯಿತು. ಗಾಂಧೀಜಿ ಕೈಗಳು ನಡುಗುತ್ತಿದ್ದರೂ ತಾಯಿಯ ಮುಂದೆ ಅವರೆಷ್ಟೋ ಚಿಕ್ಕವರಂತೆ ಕಾಣುತಿದ್ದರು.

'ನಾನು ಹೋಗುತ್ತೇನೆ'

"ಮರುದಿನ ಮುಂಜಾನೆ ಪ್ರಕೃತಿ ಮತ್ತಷ್ಟು ಕೆಟ್ಟರೂ ಮುಖ ಪ್ರಶಾಂತವಾಗಿತು. ಬದುಕುವ ಆಶೆ ಮತ್ತೂ ಇತ್ತು. ಮಂಗಳವಾರ ಅದು ಹೋಯಿತು. ಮೂತ್ರದೋಷದಿಂದ ಸಂಕಟವಾಗುತ್ತಿದ್ದರೂ ಮನಸ್ಸುಪ್ರಸನ್ನವಿತ್ತು. ಸೋಮವಾರದಿಂದ ಮದ್ದು ನೀರು ಸಹ ಬಿಟ್ಟಿದ್ದರು. ಆದರೂ ಮಧ್ಯಾಹ್ನ ಸಮಯಕ್ಕೆ ಗಂಗೋದಕ ಎರೆಯುವುದಾಗಿ ಹೇಳಿದಾಗ ಆ ಎಂದು ಬಾಯ್ತೆರೆದರು. ಮಧ್ಯಾಹ್ನ ಮೂರು ಗಂಟೆ ಹೊತ್ತಿಗೆ ನನ್ನನ್ನು ಬರ ಹೇಳಿ "ಇನ್ನೂ ನಾನು ಹೋಗುತ್ತೇನೆ. ಯಾವಾಗಲಾದರೂ ಒಂದು ದಿನ ಹೋಗಲೇ ಬೇಕಾಗಿರುವಾಗ ಈ ದಿನವೇ ಯಾಕಾಗಬಾರದು" ಎಂದರು. ನಾನು ಅವರ ಕೊನೆಯ ಮಗನಾಗಿದ್ದು ನನ್ನ ಮೇಲೆ ವಾತ್ಸಲ್ಯ ಅವರಿಗೆ ಬಹಳ ಇತ್ತು. ಎಲ್ಲರ ಮುಂದೆ ಅದೇ ರೀತಿ ಹೇಳಿ ನನ್ನ ಸಂಬಂಧ ಕಡಿದು ಕೊಂಡರು. ಆಗ ಅವರು ಹೇಳಿದ ಮಾತುಗಳು ಬಹಳ ಸ್ಪಷ್ಟವಾಗಿದ್ದುವು.

ಕೊನೆಯ ಪ್ರಾರ್ಥನೆ

ಇದಾದ ಕೂಡಲೇ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ಯಾರ ಸಹಾಯವಿಲ್ಲದೆ ಎದ್ದು ಕುಳಿತು, ತಲೆ ತಾಗಿ ಹಲ ನಿಮಿಷಗಳ ತನಕ, ಸಾಧ್ಯವಾದಷ್ಟು ಉಚ್ಚ ಸ್ವರದಿಂದ ದೇವರನ್ನು ಪ್ರಾರ್ಥಿಸಿದರು. 'ಪರಮಾತ್ಮ ನೀನೇ ನನಗೆ ಆಶ್ರಯ; ನಿನ್ನ ದಯ ಬೇಡುತ್ತೇನೆ." ಇವು ಅವರ ತುಟಿಗಳಿಂದ ಹೊರಬಿದ್ದ ಶಬ್ದಗಳು. ನನಗೆ ದುಃಖ ತಡೆವುದಾಗಲಿಲ್ಲ ... ವಿಮಾನ ಮೂಲಕ ತರಿಸಿದ ಸಂಜೀವಿನಿ ಬಂದು ಮುಟ್ಟಿತು. ಅದನ್ನು ಪ್ರಯೋಗಿಸಲಂತೂ ಡಾಕ್ಟರರಿಗೆ ಮನಸ್ಸಿರಲಿಲ್ಲ: ಪೂರ್ಣ ನಿಂತುಹೋದ ಮೂತ್ರಪಿಂಡದ ಕ್ರಿಯೆ ಸರಿಗೊಳಿಸುವುದು ಸಂಜೀವಿನಿಗೂ ಸಾಧ್ಯವಿರಲಿಲ್ಲ, ಅಲ್ಲದೆ ಅದು ಬಹಳ ತಡವಾಗಿ ಬಂತು. ಆದರೂ ಕ್ಷಯರೋಗದ ಮೇಲೆ ಒಳ್ಳೆಯ ಔಷಧಿಯಾದ ಇದನ್ನು ತಯಾರು ಮಾಡಿದರು. ಸಂಜೆ ೫ ಗಂಟೆಗೆ ಪುನಃ ತಾಯನ್ನು ನೋಡಲು ಒಳ ಹೋದೆ. ಅವರು ಮುಗುಳು ನಗು ಚೆಲ್ಲಿದರು. ಈ ಅವರ ನಗು ನನ್ನನ್ನು ಕಳೆದ ೪೦ ವರ್ಷಗಳಿಂದಲೂ ಮಗುವನ್ನಾಗಿ ಮಾಡಿದ ಮಗನನ್ನು ಸಂತೈಸಲು ಮರಣೋನ್ಮುಖ ತಾಯಿಯ ಕೊನೆಯ ನಗು ಇದೆಂದರೂ ಎನಬಹುದು. ಅದರಲ್ಲಿ ಮಾನವೀಯತೆ ತುಂಬಾ ಇತ್ತು. ನನ್ನಂತೆ ಅನೇಕರು ಅವರ ಪ್ರೀತಿಗೆ ಪಾತ್ರರಾಗಿರುವರು. ಆದರೆ ಎಲ್ಲರಿಗಿಂತಲೂ ನನ್ನ ಮೇಲೆ ಅವರ ಪ್ರೇಮ ತುಸು ಹೆಚ್ಚಿನದು. ಅವರ ಮುಗುಳು ನಗು ನೋಡಿ ಸಂಜೀವಿನಿ ಪ್ರಯೋಗಿಸಲು ನನಗೆ ಆಸೆ ಹುಟ್ಟಿತು. ಡಾಕ್ಟರರು ಸಿದ್ಧರಿದರು. ಯಶಸ್ವಿಯಾಗುವ ಭರವಸೆ ಅವರಿಗಿರಲಿಲ್ಲ,

ಸಂಜೀವಿನಿ ತಡವಾಗಿ ಬಂತು

ತಾಯಿಯವರಿಗೆ ನೋವಾಗುವಂತೆ ಸಂಜೀವಿನಿ ಇಂಜೆಕ್ಷನ್ ಕೊಡಿಸಲು ನಾನು ಸಿದ್ಧನಿರುವೆನೆಂದು ಗಾಂಧೀಜಿಯವರಿಗೆ ತಿಳಿದ ಕೂಡಲೇ ಅವರು ಸಂಜೆಯ ತಮ್ಮ ಗಾಳಿ ಸವಾರಿ ಬಿಟ್ಟು ನನ್ನ ಮನ ತಿರುಗಿಸಲು ಬಂದರು. 'ಎಂಥಾ ಅದ್ಭುತ ಔಷಧಿ ಕೊಡಿಸಿದರೂ ನಿನ್ನ ತಾಯಿ ಮೇಲೆ ಬೀಳುವುದಿಲ್ಲ. ನೀನು ಹಟಹಿಡಿದರೆ ನಾನು ಬೇಡವೆನ್ನಲಾರೆ. ನೀನು ಮಾತ್ರ ತಪ್ಪು ಮಾಡುತ್ತಿ, ಕಳೆದ ಎರಡು ದಿನಗಳಿಂದ ನೀರು ಮದ್ದು ಸಹ ಅವಳು ಬಿಟ್ಟಿದ್ದಾಳೆ. ಅವಳೀಗ ಪರಮಾತ್ಮನ ಕೈಯಲ್ಲಿದ್ದಾಳೆ. ಅಲ್ಲಿಂದ ನಿನ್ನ ತಾಯಿನ್ನು ಸೆಳೆದು ತರಬೇಕೆಂದು ನಿನಗೆ ತೋರಿದರೆ ಪ್ರಯತ್ನ ಮಾಡು. ನಾನಂತು ಬೇಡವೆನ್ನುತ್ತೇನೆ. ಮರಣಾಸನ್ನಳಾದ ತಾಯಿಗೆ ಆಗಾಗ ಇಂಜೆಕ್ಷನ್ ಕೊಡಿಸಿದರೆ ಎಷ್ಟು ನೋವಾಗುವುದೆಂದು ನೆನಸಿಕೊ' ಎಂದು ವಾದಿಸಿದರು. ನನಗೆ ಉತ್ತರ ಕೊಡುವುದು ಸಾಧ್ಯವಾಗಲಿಲ್ಲ. ಡಾಕ್ಟರರೂ ಸುಮ್ಮನಿದರು.

ಗಾಂಧೀಜಿ ಕೈಯಲ್ಲಿ ಮರಣ

ಅಗಲೇ ಗಾಂಧೀಜಿಗೆ ತಾಯಿಯ ಕರೆ ಬಂತು. ಅವರು ಕೂಡಲೆ ಒಳ ಹೋಗಿ ಉಳಿದವರನ್ನು ಹಿಂದೆಸರಿಸಿ ತಾವು ಆಸರವಿತ್ತರು. ತಮ ಭುಜಕ್ಕೆ ತಾಗಿಸಿಕೊಂಡು ಸಾಧ್ಯವಾದಷ್ಟು ಸಮಾಧಾನಪಡಿಸುತ್ತಿದ್ದರು. ಮರಣ ಛಾಯೆ ಆಗ ತಾಯ ಮುಖದಲ್ಲಿ ಮೆಲ್ಲನೇ ಪಸರಿಸುವುದು ಕಂಡು ಬಂದಿತು. ಆಗಲೂ ಅವರು ಮಾತನಾಡುತ್ತಿದ್ದರು. ಆಸರಕ್ಕಾಗಿ ಕೈ ನೀಡುತ್ತಿದ್ದರು. ಮುಂದೆ ನಿಮಿಷದಲ್ಲಿ ಎಲ್ಲವೂ ನಿಶ್ಶಬ್ದವಾಯಿತು.

ಅಲ್ಲಿದ್ದವರ ಕಣ್ಣುಗಳಲ್ಲಿ ಕಂಬನಿಹರಿಯಿತು. ಗಾಂಧೀಜಿ ಮಾತ್ರ ಅದನ್ನು ಹೊರಗೆಡಹಲಿಲ್ಲ. ಅಲ್ಲಿದ್ದವರೆಲ್ಲಾ ಅರ್ಧ ಚಂದ್ರಾಕಾರವಾಗಿ ನಿಂತು ತಾಯಿಯು ಅವರೊಡನೆ ಅನೇಕ ವರ್ಷಗಳಿಂದ ಹಾಡಿದ ಕೆಲವು ಪ್ರಾರ್ಥನೆಗಳನ್ನು ಹೇಳಿದರು. ಮುಂದೆ ಒಂದೆರಡು ನಿಮಿಷಗಳಲ್ಲಿ ಅವರ ಪ್ರಾಣ ಪಕ್ಷಿ ಹಾರಿ ಹೋಯಿತು. 'ನಮ್ಮ ರಾತ್ರಿಯ ಊಟ ಆಗಬೇಕೆಂದು ತಡ ಮಾಡಿದರೆಂದು ತೋರುತ್ತದೆ.' ಎಂದು ಆಶ್ರಮ ವಾಸಿಗಳೊಬ್ಬರು ಕಂಬನಿ ಸುರಿಸುತ್ತಾ ಹೇಳಿದರು. ಆಗಾಖಾನ ಅರಮನೆಯಲ್ಲಿ ರಾತ್ರಿ ಊಟ ೭ ಗಂಟೆಗೆ; ತಾಯಿಯ ಪ್ರಾಣ ಹೋದದ್ದು ೭–೩೫ಕ್ಕೆ."

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಪತ್ರಿಕೋದ್ಯೋಗಿ ಸಂಘ

ಇದರ ವಾರ್ಷಿಕ ಸಭೆಯು ತಾರೀಕು ೧೯-೨-'೪೪ರಂದು ಇದರ ಕಚೇರಿಯಲ್ಲಿ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಿಂದ ಜರಗಿ, ಶ್ರೀ. ಕುಳುಕುಂದ ಶಿವರಾಯರಿಂದ ಕಳೆದ ವರ್ಷದ ವರದಿ ವಾಚನವಾಗಿ ಲೆಕ್ಕ ಪತ್ರಗಳ ಪರಿಶೀಲನೆಯಾಗಿ ಕಾರ್ಯಕಾರೀ ಮಂಡಳಿಕ್ಕೆ ಕೆಳಗಿನವರು ಚುನಾಯಿತರಾದರು ಶ್ರೀ ಹುರುಳಿ ಭೀಮರಾಯರು (ಅಧ್ಯಕ್ಷ) ಶ್ರೀ ಎಸ್. ಮುಕುಂದರಾಯರು (ಉಪಾಧ್ಯಕ್ಷ) ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ) ಶ್ರೀಗಳಾದ ಬಿ. ವಿ ಬಾಳಿಗರು, ಎಸ್ ಸುಬ್ಬರಾಯರು, ಹಿರಿಯಡ್ಕ ರಾಮರಾಯ ಮಲ್ಯರು ಮತ್ತು ಉಡುಪಿ ಗೋವಿಂದರಾಯರು (ಸದಸ್ಯರು)

ಕಳೆದ ವರ್ಷದಲ್ಲಿ ದ ಕ ಜಿಲ್ಲಾ ಪತ್ರಿಕೋದ್ಯೋಗೀ ಸಂಘವು ತನ್ನ ಇತಿಹಾಸದಲ್ಲೇ ಚಿರಸ್ಮರಣೀಯವಾದ ಚಟುವಟಿಕೆಗಳನ್ನು ಕೈಕೊಂಡಿದೆ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನವನ್ನು ಮಂಗಳೂರಲ್ಲಿ ಕರೆದು ಯಶಸ್ವಿಯಾಗಿ ಜರಗಿಸಿದೆ. ಸಂಘವು ತನ್ನದೇ ಆದ ಆಫೀಸೊಂದನ್ನು ನಡೆಸಿಕೊಂಡು ಬರುತ್ತದೆ ಪತ್ರಿಕೋದ್ಯೋಗಿಗಳಿಗೆ ಉಪಯುಕ್ತವಾಗುವ ಪುಸ್ತಕ ಭಂಡಾರವೊಂದನ್ನು ತೆರೆವ ಸಂಕಲ್ಪ ಮಾಡಿ ಈಗಾಗಲೇ ಕಾರ್ಯ ಕೈಕೊಂಡಿದೆ ಈ ಕಾರ್ಯದಲ್ಲಿಯೂ ಸಂಘದ ಇತರ ಹಲವು ಚಟುವಟಿಕೆಗಳಲ್ಲಿಯೂ ಪತ್ರಿಕೋದ್ಯಮಿಗಳು ಮತ್ತು ಮಹಾಜನರು ಎಂದಿನಂತೆ ನೆರವಾಗುವರಾಗಿ ಪ್ರಾರ್ಥನೆಯಿದೆ

ಹರತಾಳ—ಸಭೆಗಳು

ಕಸ್ತೂರ್ ಬಾರ ನಿಧನದ ಬಗ್ಗೆ ದುಃಖ ಸೂಚಕ ಸಭೆ—ಮೌನ ಪ್ರಾರ್ಥನೆ, ಹರತಾಳ ಆದ ಸುದ್ದಿಗಳು ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ, ಎಲ್ಲಾ ತಾಲೂಕು ಕೇಂದ್ರ, ಹಳ್ಳಿ ಪಟ್ಟಣಗಳಿಂದಲೂ ಬಂದಿದೆ

ಶ್ರೀ ಕೈದಲ್ ತಿಮ್ಮಪ್ಪ ಶೆಟ್ಟರು

ಒಂದು ತಿಂಗಳ ಪೆರೋಲ್‌ನ ಮೇಲೆ ತಂಜಾವೂರು ಸೆರೆಮನೆಯಲ್ಲಿ ಸ್ಥಾನಬದ್ಧರಾಗಿರುವ ಶ್ರೀ ಕೈದೇಲ್ ತಿಮ್ಮಪ್ಪ ಶೆಟ್ಟರು ಮಂಗಳೂರಿಗೆ ಬಂದಿರುವರು

ಅನಿರ್ಬಂಧ ಬಿಡುಗಡೆ

ತಂಜಾವೂರು ಸೆರೆಮನೆಯಲ್ಲಿ ಸ್ಥಾನಬದ್ಧರಾಗಿದ್ದ ಶ್ರೀ ಬಾಳಪ್ಪ ಇವರು ಅನಿರ್ಬಂಧ ಬಿಡುಗಡೆ ಹೊಂದಿ ಮಂಗಳೂರಿಗೆ ಬಂದಿರುವರು ಸ್ಥಾನಬದ್ಧತೆಯಲ್ಲಿದ್ದ ಶ್ರೀ ಲೋಕಯ್ಯ ಶೆಟ್ಟರೂ ಪೆರೋಲಿನಲ್ಲಿ ಬಂದಿರುವರು

ಕಯ್ಯೂರು ಕುಟುಂಬಗಳಿಗೆ ಬ್ರಿಟಿಷ್ ಮಜೂರರ ೬,೬೦೦ ದಾನ

ಪೋಲೀಸನೊಬ್ಬನು ಕೊಲ್ಲಲ್ಪಟ್ಟನೆಂಬ ಆರೋಪದಿಂದ ಕಳೆದ ವರುಷ ಮಾರ್ಚ್ ೨೯ರಂದು ಗಲ್ಲಿಗೇರಿಸಲ್ಪಟ್ಟ ಕಯ್ಯೂರು ಪ್ರಾಮದ ಶ್ರೀಗಳಾದ ಮಡತಿಲ್ ಅಪ್ಪು, ಚಿರುಕಂಡನ್, ಅಬೂಬಕರ್ ಮತ್ತು ಕುಂಜಂಬು ನಾಯರ್ ಇವರ ನಾಲ್ಕು ಕುಟುಂಬಗಳಿಗೆ ಸಹಾಯವಾಗಿ ಬ್ರಿಟಿಷ್ ಮಜೂರರು ೬೦೦೦ ರೂಗಳನ್ನು ಸಂಗ್ರಹಿಸಿ ಮುಂಬಾಯಿಯ ಶ್ರೀ ಎನ್ ಎಂ ಜೋಶಿ, ಎಂ. ಎಲ್. ಎ ಇವರಿಗೆ ಕಳುಹಿಸಿ ಕೊಟ್ಟಿದ್ದ ಹಣ, ಮಂಗಳೂರಿಗೆ ಬಂದಿದ್ದು ಆ ಹಣವನ್ನು ಕುಟುಂಬದವರು ಬಂದು ಬೇಂಕಿನಿಂದ ಪಡೆಯಂಡರು.

ಇನ್ನೂ ಸೆರೆಮನೆಯಲ್ಲಿರುವ ರಾಜಕೀಯ ಬಂದಿಗಳಿಗೆ ಸಹಾಯ ಕೊಡುವುದಕ್ಕಾಗಿ ಆ ನಾಲ್ಕು ಕುಟುಂಬದವರು ಒಟ್ಟು ೧,೬೦೦ ರೂಪಾಯಿಗಳ ಒಂದು ನಿಧಿ ಮಾಡಿ ಅ ಕಮ್ಯುನಿಸ್ಟ್ ಪಕ್ಷದ ವಶಕೊಟ್ಟಿರುವರು

ಪ್ಲೇಗು ರೋಗನಿವಾರಣೆಗೆ ಬಂದರ ಸಾಹುಕಾರರ ಸಭೆ

ಕಳೆದ ತಾ ೨೬ರಂದು ಬಂದರ ಸಾಹುಕಾರರ ಸಭೆಯೊಂದು ಕೆನರಾ ವಾಣಿಜ್ಯ ಸಂಘದ ಆಶ್ರಯದಲ್ಲಿ ಶ್ರೀ ನೇಮಿರಾಜ ಪಡಿವಾಳರ ಅಧ್ಯಕ್ಷತೆಯಲ್ಲಿ ಸೇರಿ, ಮಂಗಳೂರಲ್ಲಿ ಪ್ಲೇಗು ರೋಗದ ಸೂಚನೆಯಿರುವುದರಿಂದ, ಅದರ ನಿವಾರಣೆಗಾಗಿ ತಾ. ೨೮ರಿಂದ ಮಾರ್ಚಿ ೫ರ ವರೆಗೆ ಬಂದರದ ಎಲ್ಲಾ ಸಾಹುಕಾರರೂ ಸ್ವಚ್ಛಗೊಳಿಸುವ ವಾರ ಆಚರಿಸಬೇಕೆಂದೂ, ಕೊಡಗು ಸೋಮವಾರಪೇಟೆ ಪುತ್ತೂರಲ್ಲಿ ಪ್ಲೇಗು ಬೇನೆ ಹರಡಿರುವುದರಿಂದ ಅಲ್ಲಿಂದ ಸರಕನ್ನು ಆಮದುಗೊಳಿಸಬಾರದಾಗಿಯೂ ನಿರ್ಣಯವಾಗಿದೆ

ಮಂಗಳೂರಲ್ಲಿ ಪ್ಲೇಗಿನ ಸೂಚನೆ

ತಾ ೨೬-೨-೪೪ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ರೋಗವು ಯಾರಿಗೂ ತಗಲಲಿಲ್ಲ ಪ್ಲೇಗು ರೋಗದಿಂದ ಮರಣವು ಇರಲಿಲ್ಲ ಮದರಾಸಿಗೆ ಪರೀಕ್ಷೆಗೆ ಕಳುಹಿಸಿದ ಇಲಿಗಳಲ್ಲಿ ಇನ್ನೊಂದು ಇಲಿಯು ಪ್ಲೇಗಿನ ಇಲಿ ಎಂದು ತೀರ್ಮಾನಿಸಲ್ಪಟ್ಟಿದೆ ಮುನಿಸಿಪಲ್ ಆರೋಗ್ಯ ಇಲಾಖೆಯವರು ತಕ್ಕ ಏರ್ಪಾಡುಗಳೆಲ್ಲಾ ಮಾಡುತ್ತಾ ಇದ್ದಾರೆ ಪ್ಲೇಗು ಇಂಜೆಕ್ಷನ್ ಕೊಡುತ್ತಿದ್ದಾರೆ ಇಷ್ಟರ ತನಕ ೭೩೩ ಇಂಜೆಕ್ಷನ್ ಕೊಡಲಾಗಿದೆ. ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿ ಪ್ರತಿ ಆಫೀಸು ಇರುವ ದಿವಸ ಸಂಜೆಗೆ ಇಂಜೆಕ್ಷನ್ ಕೊಡುವ ಏರ್ಪಾಡು ಮಾಡಿರುತ್ತದೆ ಪ್ರತಿ ಒಬ್ಬರೂ ಬಂದು ಇಂಜೆಕ್ಷನ್ ತೆಗೆದುಕೊಳ್ಳುವುದು ಉತ್ತಮ ಎಂದು ಶ್ರೀ ಬಿ ಸುಬ್ರಾಯ ಬಾಳಿಗ, ಮುನಿಸಿಪಲ್ ಹೆಲ್ತ್ ಆಫೀಸರ್, ಇವರು ತಿಳಿಸಿದರು

ಹಜೂರಾಫೀಸು ಮುಚ್ಚಿದೆ

ಇಲಿ ಬಿದ್ದ ಸಂಬಂಧ ಮಂಗಳೂರು ಹಜೂರು ಆಫೀಸು ಒಂದು ವಾರದವರೆಗೆ, ಮಾರ್ಚಿ ೧ರವರೆಗೆ ಮುಚ್ಚಲಾಗಿದೆ ಮಂಗಳೂರಲ್ಲಿ ಪ್ಲೇಗು ಇನಾಕುಲೇಶನ್ ಕಾರ್ಯ ನಡೆಯುತ್ತಿದೆ

ಮಿಶನ್ ಹೈಸ್ಕೂಲಲ್ಲಿ ಇಲಿ ಬಿದ್ದಿದೆ

ಯಾಗಿ ಆ ಸಂಬಂಧ ಕೆಲ ದಿನಗಳವರೆಗೆ ಈ ಶಾಲೆಯನ್ನು ಮುಚ್ಚಲಾಗಿದೆ

ಹೀಗೆ ಮಂಗಳೂರಲ್ಲಿ ಬೇರೆ,ಬೇರೆ ಕಡೆ ಮನೆಗಳಲ್ಲಿ ಇಲಿ ಬೀಳುವ ಸುದ್ದಿ ಕೇಳುತ್ತಿದೆ

ಮಂಗಳೂರಲ್ಲಿ ಬೇಗನೇ ರೇಶನಿಂಗ್ ಇಲ್ಲ?

ಪ್ರಾಂತಿಕ ರೇಶನಿಂಗ್ ಆಫೀಸರರಾದ ಶ್ರೀ ಗ್ರಬ್ಬರು ಮಂಗಳೂರಿಗೆ ಬಂದಿದ್ದು, ಕಳೆದ ಆದಿತ್ಯವಾರ ಗವರ್ನಮೆಂಟ್ ಕಾಲೇಜಿನಲ್ಲಿ ಒಂದು ಸಭೆ ಸೇರಿ ಅವರು ರೇಶನಿಂಗ್ ವಿಚಾರ ಕೆಲವು ಮಾಹಿತಿಯಿತ್ತರು ಶ್ರೀಗಳಾದ ಎಂ ಆರ್ ತಲ್ಜೇರಿಕರ್ ಸಿ ಎಲ್ ಲೋಬೋ ಮೊದಲಾದವರು ಕೇಳಿದ ಪ್ರಶ್ನೆಗಳಿಗೆ ಗ್ರಬ್ಬರು ಉತ್ತರ ಕೊಡುತ್ತಾ ಸುಮಾರು ೧ ತಿಂಗಳ ಅಕ್ಕಿ ದಾಸ್ತಾನು ಆದ ಕೂಡಲೇ ಮಂಗಳೂರಲ್ಲಿ ಪೂರ್ಣ ರೇಶನಿಂಗ್ ಜಾರಿಗೆ ಬರುತ್ತದೆ ಈಗ ಅಷ್ಟು ತಯಾರಾಗಿಲ್ಲ ಎಂದರೆ ೬೦ ಸಾವಿರ ಮುಡಿ ಅಕ್ಕಿ ಬೇಕು, ಈಗ ೧೪ ಸಾವಿರ ಮುಡಿ ಅಕ್ಕಿ ಇದೆ ರೇಶನಿಂಗಿನ ಇತರ ಕೆಲಸಗಳೆಲ್ಲಾ ಸಿದ್ಧವಾಗಿದೆ ಎಂದರು ಚಿಮಿಣಿ ಎಣ್ಣೆಯ ಅಭಾವದ ಕುರಿತು ಪ್ರಶ್ನಿಸಲು ಈ ಕುರಿತು ನೀವು ನಿಮ್ಮ ಕಲೆಕ್ಟರರನ್ನು ಕೇಳಿ ಎಂದರು ಬರುವ ತಿಂಗಳ ಅಂತ್ಯದ ಸುಮಾರಿಗೆ ಪೂರ್ಣ ರೇಶನಿಂಗ್ ಆಗುವುದೆಂದು ಗ್ರಬ್ಬರು ಹೇಳಿದರು

ಕಲೆಕ್ಟರರ ಪ್ರಕಟಣೆ

"೧೯೪೩ನೇ ಇಸವಿ ದಶಂಬರ ೧೫ನೇ ತಾರೀಕಿಗೆ ಮತ್ತು ಅನಂತರ ಯಾವನೊಬ್ಬ ಹುಣಸೆಹುಳಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನೊಳಗಿನ ಯಾವ ಸ್ಥಳದಿಂದಲೂ ಮದ್ರಾಸು ಆಧಿಪತ್ಯದೊಳಗಿನ ಯಾವ ಕಡೆಗೂ ಜಿಲ್ಲಾ ಕಲೆಕ್ಟರವರಿಂದ ಯಾ ಈ ಬಗ್ಗೆ ನೇಮಕ ಪಟ್ಟ ಇತರ ಆಫೀಸರರಿಂದ ಕೊಡಲ್ಪಟ್ಟ ರಹದಾರಿ ವಿನಾ ಒಯ್ಯ ಕೂಡದು ಈ ಹುಕ್ಕುಮನ್ನು ಉಲ್ಲಂಘಿಸುವ ಯಾವನೊಬ್ಬನು ಮೂರು ವರ್ಷಗಳಿಗೆ ಮೀರದ ಸಜೆಯೂ ಜುಲುಮಾನೆಯಾ ಇವೆರಡು ವಿಧಿಸಿ ಶಿಕ್ಷಿಸಲ್ಪಡಲು ಗುರಿಯಾಗುತ್ತಾನೆ."

ನಗರ ಸಭೆ

ಇತ್ತೀಚೆಗೆ ಚೇರ್‌ಮೇನರ ಅಧ್ಯಕ್ಷತೆಯಲ್ಲಿ ಜರಗಿ, ಮಂಗಳೂರಿಗೆ ಬರುವ ಗವರ್ನರರಿಗೆ ಮಾನಪತ್ರ ತಯಾರಿಸುವ ವಿಷಯ ಒಂದು ಸಮಿತಿಯಾಗಿ, ಗವರ್ನರರಿಂದ ಯಾವುದೇ ಕಟ್ಟಡದ ಶಂಕುಸ್ಥಾಪನೆ ಮಾಡಿಸುವ ವಿಚಾರ ಆಲೋಚನೆ ಮುಂದುವರಿಸಲ್ಪಟ್ಟು, ಮುನ್ಸಿಪಲ್ ಶಾಲೆಗಳ ಸ್ಕೌಟುಗಳು ತಮಗೆ ಇಚ್ಛೆ ಬಂದ, ಯಾವುದೇ 'ರಿಕೊಗ್ನೈಸ್' ಆದ ಸ್ಕೌಟ್ ಸಂಘಕ್ಕೆ ಸೇರಬಹುದೆಂದೂ, ಹಾಗೆ ಒಂದು ಸಂಘಕ್ಕೆ ಸೇರುವವರು ಇದೇ ತಾ. ೧೦ರ ಒಳಗೆ ಮನವಿ ಕಳುಹಿಸಬೇಕೆಂದೂ, ಒಂದು ಶಾಲೆಯ ಒಂದು ತಂಡವು ಒಂದೇ ಸಂಘಕ್ಕೆ ಸೇರಬೇಕೆಂದೂ, ಮೂರು ವರ್ಷಗಳವರೆಗೆ ಬದಲಾಗಬಾರದೆಂದೂ ಮೊದಲಾಗಿ ನಿರ್ಧಾರವಾಯಿತು; ಸಂಭಾವನೆ ಕೊಟ್ಟಾದರೂ ಇಲಿಗಳನ್ನು ಕೊಲ್ಲಲೇಬೇಕೆಂಬ ಸೂಚನೆ ಮಂಜೂರಾಯಿತು

ಕೆಂಪು ಸೈನ್ಯ ದಿನಾಚರಣೆ

ಯು ಮಂಗಳೂರಲ್ಲಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಮೈದಾನಿನಲ್ಲಿ ಕಾಮ್ರೇಡ್ ಕೇರಳೀಯನರ ಅಧ್ಯಕ್ಷತೆಯಿಂದ ಜರಗಿತು ಕಸ್ತೂರ್ ಬಾರ ನಿಧನದ ಬಗ್ಗೆ ಸಂತಾಪ ಸೂಚಿಸುವ, ಕೆಂಪು ಸೈನ್ಯವನ್ನು ಅಭಿನಂದಿಸುವ ಠರಾವುಗಳಾದವು ಕಾಮ್ರೇಡುಗಳಾದ ಬಿ. ವಿ ಕಕ್ಕಿಲ್ಲಾಯ, ಶಾಂತಾರಾಮ ಪೈ ಮೊದಲಾದವರು ಮಾತನಾಡಿದರು

ತಾ। ಬೋ। ಎ। ಶಾ। ಉಪಾಧ್ಯಾಯರ ವಾರ್ಷಿಕ ಸಭೆ

ಮಂಗಳೂರು ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ವಾರ್ಷಿಕ ಸಭೆ ಕಳೆದ ಆದಿತ್ಯವಾರ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಎನ್ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು ಡಿ। ಬೋ ಅಧ್ಯಕ್ಷ ಶ್ರೀ। ಎ ಲಕ್ಷ್ಮೀನಾರಾಯಣರಾಯರು ಇದರ ಆರಂಭೋತ್ಸವ ನೆರವೇರಿಸಿದರು 'ಕಸ್ತೂರ್ ಬಾರ ನಿಧನದ ಕುರಿತು ಸಂತಾಪ ಸೂಚನೆ ಠರಾವಾದ ಮೇಲೆ ಕಾರ್ಯದರ್ಶಿ ಶ್ರೀ। ಭೋಜರಾಯರು ವರದಿಯೋದಿದರು ಡಾ। ಮಿರ್ಲ ಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚನೆ ಠರಾವಾಯಿತು ಸೀನಿಯರ್ ಡಿ ಇನ್ಸ್‌ಸ್ಪೆಕ್ಟರ್ ಶ್ರೀ ಸಂಜೀವ ರಾಯರು ಉಪಾಧ್ಯಾಯರು ಸಂಘಗಳನ್ನು ಬಲಗೊಳಿಸುವ ಅವಶ್ಯಕತೆ ಕುರಿತು ಮಾತನಾಡಿದರು ಉಪಾಧ್ಯಾಯರಿಗೆ ತುಟ್ಟಿ ಭತ್ತೆ ಹೆಚ್ಚಿಸುವ, ಪ್ರೊವಿಡೆಂಟ್ ಫಂಡ್ ಸಾಲವನ್ನು ಉಪಾಧ್ಯಾಯರು ಕೆಲ ತಿಂಗಳಲ್ಲಿ ಕಂತಿನಂತೆ ಮರುಪಾವತಿ ಮಾಡುವ ಕೆಲಸ ಮಾಡುವ ದಿನಗಳನ್ನು ವರ್ಷಕ್ಕೆ ೨೦೦ ಕ್ಕಿಳಿಸುವ, ಒಂದು ಕೇಂದ್ರ ಸಂಘ ಸ್ಥಾಪಿಸುವ, ಬೋ। ಎ। ಶಾ। ಉಪಾಧ್ಯಾಯರ ಮಕ್ಕಳಿಗೆ ಎಲ್ಲಾ ಬೋರ್ಡ್ ಹೈಸ್ಕೂಲುಗಳಲ್ಲಿ ಫೀಸು ಮಾಫಿಯಾಗಬೇಕೆನ್ನುವ ಠರಾವುಗಳಾದುವು ಮುಂದಿನ ಕಾರ್ಯಕಾರಿ ಮಂಡಳದ ಚುನಾವಣೆಯಾದ ಮೇಲೆ ಕಾರ್ಯದರ್ಶಿಗಳು ವರದಿ ವಾಪಸ್ ಮಾಡಿದರು

ಕೆನರಾ ಗರ್ಲ್ಸ್ ಸ್ಕೂಲ್

ಇದರ ಶಾಲಾ ದಿನಾಚರಣೆ ಆದಿತ್ಯವಾರ ಶ್ರೀಮತಿ ಹೇಮಲತಾ ಶೆಟ್ಟಿ ಇವರ ಅಧ್ಯಕ್ಷತೆಯಿಂದ ಜರಗಿತು ಶ್ರೀಮತಿ ಬಿ ಸುಷತಿ ಬಾಯಿಯವರು ಶಾಲಾ ಶ್ರೇಯಃಪ್ರಾರ್ಥನೆ ಮಾಡಿದರು ವರದಿಯನ್ನು ಶ್ರೀಮತಿ ಕೆ ರತ್ನಾಬಾಯಿಯವರು ಓದಿದರು ಬಹುಮಾನವಿತರಣೆಗಳಾದ ಮೇಲೆ ಶಾಲಾ ಮೆನೇಜರ್ ಶ್ರೀ ಕೆ ಸದಾಶಿವ ರಾಯರು ವಂದನಾರ್ಪಣೆ ಮಾಡಿದರು

ಹಳೆ ವಿದ್ಯಾರ್ಥಿನಿ ಸಂಘ

ಈ ಶಾಲೆಯ ಹಳೆ ವಿದ್ಯಾರ್ಥಿನಿ ಸಂಘದ ಸಭೆ ಶ್ರೀಮತಿ ಎಂ ರಮಾಬಾಯಿ ವೆಂಕಟೇಶ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿನಿ ಶ್ರೀಮತಿ ಲೀಲಾಬಾಯಿ ಬಾಳಿಗರು ವರದಿ ಓದಿದರು ಹೊಸವರ್ಷದ ಆಡಳಿತ ಮಂಡಳದ ಚುನಾವಣೆಯಾಯಿತು

ಜಿಲ್ಲಾ ಎತ್ಲೆಟಿಕ್ ಸಂಘ

ಇದರ ಆಶ್ರಯದಲ್ಲಿ ತಾ ೨೬ರಲ್ಲು ಜಿಲ್ಲಾ ಜಡ್ಜ ಶ್ರೀ ಕೋಮನರ ಅಧ್ಯಕ್ಷತೆಯಿಂದ ಮೈದಾನಿನಲ್ಲಿ ಹಲವು ಆಟಗಳ ಸ್ಪರ್ಧೆ ಜರಗಿ, ಶ್ರೀಮತಿ ಎ ಎಫ್ ಲಸ್ರಾದೋರವರಿಂದ ಬಹುಮಾನವಿತರಣೆ ನಡೆಯಿತು

ವಾರ್ಷಿಕೋತ್ಸವ

ಆರ್ಯಸಮಾಜದ ವಾರ್ಷಿಕೋತ್ಸವವು ಶ್ರೀ। ಜಿ ದತ್ತಾತ್ರೇಯರಾಯರ ಅಧ್ಯಕ್ಷತೆಯಿಂದ ಜರಗಿ, ಶ್ರೀ। ಯು ಗೋಪಾಲ ನಾಯ್ಕರು ಶ್ರದ್ಧಾನಂದ ಅನಾಥಾಶ್ರಮದ ವರದಿಯೋದಿದ ಮೇಲೆ ಶ್ರೀಮತಿ ಬಿ. ಸೀತಾ ದೇವಿ, ಶ್ರೀಗಳಾದ ದಾಸಪ್ಪ ಶೆಟ್ಟಿ ಮತ್ತು ಎಂ ತಿಂಗಳಾಯ ಇವರು ದಯಾನಂದರ ಕುರಿತು ಮಾತನಾಡಿದರು.

ತರುಣ ಚಿತ್ರಾಪುರ ಸಾರಸ್ವತ ಕೂಟ

ಮಂಗಳೂರಿನ ಈ ಕೂಟದ ವಾರ್ಷಿಕ ಸಭೆ ಕಳೆದ ಶನಿವಾರ ಜರಗಿ, ಪ್ರಾರ್ಥನೆಯ ಬಳಿಕ ವಾರ್ಷಿಕ ವರದಿ ಸ್ವೀಕೃತವಾದ ಮೇಲೆ ಹೊಸ ವರ್ಷದ ಕಾರ್ಯಕಾರೀ ಮಂಡಳಿ ರಚಿತವಾಯಿತು.

ವಿವಾಹ

'ನವಭಾರತ' ಮತ್ತು 'ಸಾರಸ್ವತ' ಪತ್ರಿಕೆಯ ಉಪಸಂಪಾದಕ ಶ್ರೀ.ಬಿ. ವಾಸುದೇವ ಬಾಳಿಗರ ವಿವಾಹವು ಶ್ರೀ। ಬೈಲೂರು ಪಾಡುರಂಗ ಶಿಣೆಯವರ ಪುತ್ರಿ ಶ್ರೀಮತಿ ಉಮಾ ಬಾಯಿಯವರೊಡನೆ ತಾ ೨೭ರಂದು ಮಣ್ಣಗುಡ್ಡೆಯ ವಧುವಿನ ಮನೆಯಲ್ಲಿ ಸಂಭ್ರಮದಿಂದ ಜರಗಿತು ವಧೂವರರಿಗೆ ಹಲವು ಶುಭಸಂದೇಶಗಳು ಉಡುಗೊರೆಗಳು ಬಂದಿದ್ದವು

ಗೋಖಲೆ ದಿನಾಚರಣೆ

ಡಿ ಸಿ ಮಿಶನಿನಲ್ಲಿ ಶ್ರೀಮತಿ ನಯಂಪಳ್ಳಿ ಲಲಿತಾ ಬಾಯಿಯವರ ಅಧ್ಯಕ್ಷತೆಯಿಂದ ಗೋಖಲೆ ದಿನಾಚರಣೆ ನಡೆಯಿತು ಶ್ರೀ ಸಿ ಆರ್ ಶ್ರೀನಿವಾಸನ್, ಶ್ರೀಮತಿ ಲಲಿತಾ ಶೆಟ್ಟಿ, ಎಚ್ ಆರ್ ಮೊಹರೆ ಮೊದಲಾದವರು ಗೋಖಲೆಯವರ ಜೀವನದ ಕುರಿತು ಮಾತನಾಡಿದರು ಶ್ರೀ ವೆಂಕಟ್ರಮಣನರು ಧನ್ಯವಾದವಿತ್ತರು

ಉಡುಪಿ

ಅ ಕ ಪತ್ರಿಕೋದ್ಯೋಗಿಗಳು

ಮಂಗಳೂರಲ್ಲಿ ಜರಗಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳಕ್ಕೆ ಬಂದಿದ್ದ ಪತ್ರಿನಿಧಿಗಳು ಅಧ್ಯಕ್ಷ ಶ್ರೀನಿವಾಸನರೂ ಉಡುಪಿಗೆ ಬಂದು ಶ್ರೀ ಕೃಷ್ಣ ಸಂದರ್ಶನ ಮಾಡಿದರು ಅಧ್ಯಕ್ಷ ಶ್ರೀ ಸಿ ಆರ್ ಶ್ರೀನಿವಾಸನರ ಮಣಿಪಾಲ ಸಂದರ್ಶಿಸಿದರು ಆ ಮೇಲೆ ಹಲವು ಸಂಘ ಸಂಸ್ಥೆಗಳ ಭೇಟಿ ಮಾಡಿ ಡಾ। ಮಾಧವ ಪೈಗಳ ಮುಕುಂದನಿವಾಸದಲ್ಲಿ ಜರಗಿದ ಸತ್ಕಾರ ಕೂಟದಲ್ಲಿ ಭಾಗವಹಿಸಿ ಕಾರ್ಕಳಕ್ಕೆ ತೆರಳಿದರು

ಬೆಂಗಳೂರಿನ ಶ್ರೀ ಪಿ ಆರ್ ರಾಮಯ್ಯರೇ ಮೊದಲಾದ ಇತರ ಪತ್ರಿಕೋದ್ಯೋಗಿಗಳು ಉಡುಪಿಗೆ ಒಂದು ಫಲಿಮಾರ ಮಠದಲ್ಲಿ ವಸತಿ ಊಟ ಮಾಡಿ ಶ್ರೀ ಕೃಷ್ಣ ಸಂದರ್ಶನ ತೀರಿಸಿ ಡಾ। ಮಾಧವ ಪೈಗಳ ಸತ್ಕಾರಕೂಟದಲ್ಲಿ ಭಾಗವಹಿಸಿದರು ಬೋರ್ಡ್ ಹೈಸ್ಕೂಲಲ್ಲಿ ಶ್ರೀ ಪಿ ಆರ್ ರಾಮಯ್ಯರು ಶ್ರೀ ನಂಜುಂಡರಾಯರು ಭಾಷಣವಿತ್ತರು ಇವರು ಕೊಚ್ಚಿಕಾರ್ ಒದರ್ಸ್ ಮುಂತಾದ ಸಂಸ್ಥೆಗಳಿಗೆ ಭೇಟಿಯಿತ್ತರು

ಪರ್ಯಾಯ ಮಠದಲ್ಲಿಯೂ ಪತ್ರಿಕೋದ್ಯೋಗಿಗಳಿಗೆ ಭೋಜನ ಸತ್ಕಾರಾದಿಗಳು ನಡೆದವು

ಸಂಯುಕ್ತ ಕರ್ನಾಟಕದ ಸಂಪಾದಕ ಶ್ರೀ ಎಚ್ ಆರ್ ಮೊಹರೆಯವರು ಉಡುಪಿಗೆ ಬಂದು ಶ್ರೀ ಕೃಷ್ಣ ಸಂದರ್ಶನೆ ಮಾಡಿ ಸಂಸ್ಕೃತ ಕಾಲೇಜ್ ಮೊದಲಾದ ಸಂಸ್ಥೆಗಳ ಭೇಟಿ ಮಾಡಿದರು

ಇವರನ್ನೂ ಫಲಿಮಾರು ಮತ್ತು ಪರ್ಯಾಯ ಸ್ವಾಮಿಗಳು ಸತ್ಕರಿಸಿದರು

'ಹ್ಯೂಮನ್ ಎಫೇರ್ಸ್' ಆಫೀಸಿನಲ್ಲಿಯೂ 'ನವಯುಗ' ಕಾರ್ಯಾಲಯದಲ್ಲಿಯೂ ಪತ್ರಿಕೋದ್ಯೋಗಿಗಳಿಗೆ ಸತ್ಕಾರಕೂಟಗಳಿತ್ತು

ಮಂಗಳೂರು ನೇಶನಲ್ ಒಡಿ ವರ್ಕ್ಸ್ ಉಡುಪಿ ಎಂಬ ಹೆಸರಿನಿಂದ ಉಡುಪಿಯಲ್ಲಿ ಒಂದು ಹೊಸ ಬೀಡಿಕೈಗಾರಿಕೆ ಪ್ರಾರಂಭವಾಗಿದೆ

ಶ್ರೀ ಪಾಂಗಾಳ ಮಂಜುನಾಥ ನಾಯ್ಕರು

ಇವರನ್ನು ಉಡುಪಿಯ ಅವರ ಮನೆಯಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಕಾನೂನು ಮೇರೆಗೆ ಬಂಧಿಸಲಾಗಿದೆ

ಸುರತ್‌ಕಲ್‌ನಲ್ಲಿ ಹೈಸ್ಕೂಲ್

ಸ್ಥಾಪಿಸಲು ಹಿಂದು ವಿದ್ಯಾದಾಯಿನಿ ಸಂಘದವರಿಗೆ ವಿದ್ಯಾಖಾತೆಯವರಿಂದ ಅನುಮತಿ ದೊರೆತಿದೆಯೆಂದು ತಿಳಿಯುತ್ತೇವೆ

ಮೂಡಬಿದ್ರಿ

ಸ್ಥಳೀಯ ದಿಗಂಬರ ಜೈನ ಹಾ ಎ ಶಾಲೆಯ ಮತ್ತು ಸಂಸ್ಕೃತ ಶಾಲೆಯ ವರ್ಧಂತ್ಯುತ್ಸವವು ಶ್ರೀ ಯು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ತಾ ೧೭ರಿಂದ ೧೯ರ ವರೆಗೆ ಜರಗಿಸಲ್ಪಟ್ಟಿತು ಮಕ್ಕಳಿಗೆ ಪಾರಿತೋಷಕಗಳು ಹಂಚಲ್ಪಟ್ಟಿತು. ಶ್ರೀ ಜಿ ಗೋಪಾಲ ಪೈಗಳು ಸ್ವಸ್ತಿವಾಚನವನ್ನು ಮಾಡಿದರು 'ವಿಧಿ ಸಂಕಲ್ಪ'ವೆಂಬ ನಾಟಕವನ್ನು ಅಭಿನಯಿಸಿದ ನಂತರ ಊರ ಜನರಿಂದ ಶಾಲಾ ವರ್ಧಂತ್ಯುತ್ಸವದ ಫಂಡಿಗಾಗಿ ೧೬೬ ರೂಪಾಯಿಗಳು ಶೇಖರಿಸಲ್ಪಟ್ಟಿತು "ವಂದೇ ಮಾತರಂ" ಹಾಡಿನಿಂದ ಸಭೆಯು ಮುಕ್ತಾಯವಾಯಿತು.

... ಸುದ್ದಿ

ಕನ್ನಡ ಚಿತ್ರಗಳ ಕಠಿಣ ಟೀಕೆ ಬೇಡ

ಶ್ರೀ ಮಾಧವರಾಯರ ವಿನಂತಿ

ಕನ್ನಡ ಚಲಚ್ಚಿತ್ರ ವಿಮರ್ಶಕ ಸಂಘದವರು ತಾ. ೨೨ರಂದು ... ಸುಬ್ರಾಯ ... ಸ್ಮಾರಕ ... ಮೈಸೂರು ಸಿನಿಮಾ ಪತ್ರಿಕೆಯ ಸಂಪಾದಕ ಶ್ರೀ. ಎಂ. ಎಸ್. ಮಾಧವರಾವ್ (...) ಇವರನ್ನು ಪತ್ರಿಕೋದ್ಯಮಿ ಸಮ್ಮೇಳನಕ್ಕೆ ಬಂದಿದ್ದ ಇತರ ಹಲವು ಪತ್ರಿಕೋದ್ಯಮಿಗಳನ್ನು ಆಮಂತ್ರಿಸಿ ಒಂದು ಸತ್ಕಾರ ಕೂಟವೇರ್ಪಡಿಸಿದರು. ಮನೋಹರ ಗ್ರಂಥ ಭಂಡಾರದ ಶ್ರೀ. ದತ್ತಾತ್ರೇಯ ಕುಲಕರ್ಣಿ ಮತ್ತು ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತಾಧ್ಯಕ್ಷ ಶ್ರೀ. ವಿ. ಎಸ್. ಕುಡ್ವರೇ ಮೊದಲಾದವರೂ ಆಮಂತ್ರಿತರಾಗಿದ್ದರು.

ಶ್ರೀ ತಿರುಮಲೇಶ್ವರ ಭಟ್ಟರು ಅತಿಥಿಗಳ ಪರಿಚಯ ಮಾಡಿಕೊಟ್ಟ ಮೇಲೆ, ಶ್ರೀ ಮಾಧವರಾಯರು ಮಾತನಾಡುತ್ತಾ, ತಮ್ಮ ಚಲಚ್ಚಿತ್ರ ನಟನಾ ಜೀವನದ ಅನುಭವದ ಮೇಲಿಂದ ಹಲವು ಉಪಯುಕ್ತ ವಿಷಯಗಳನ್ನು ಹೇಳಿ, ಇಂದು ಕನ್ನಡ ನಾಡಿನ ಹಣವಂತರು, ಉದ್ಯಮಿಗಳು, ವ್ಯವಹಾರ ನಿಪುಣರು, ಸಿನೆಮಾದಂಥಾ ಲಾಭದಾಯಕ ವೃತ್ತಿಯನ್ನು ಕಡೆಗಾಣುತ್ತಿರುವ ಬಗ್ಗೆ ವಿಷಾದ ವ್ಯಕ್ತಮಾಡಿ, ಕನ್ನಡ ಚಿತ್ರಗಳು ಈಗ ಸೃಷ್ಟಿಯಾಗುತ್ತಿರುವುದು ನಮ್ಮ ಆದರ್ಶಕ್ಕೆ ಅನುಗುಣವಿಲ್ಲದಿದ್ದರೂ, ಕನ್ನಡ ಚಿತ್ರಗಳು ಬೆಳೆಯಲಿ ಎಂಬ ಭಾವನೆಯಿಂದ ಅವುಗಳನ್ನು ಕಠಿಣವಾಗಿ ಟೀಕಿಸಬೇಡಿರೆಂದು ಹೇಳಿ, ಚಲಚ್ಚಿತ್ರ ವಿಮರ್ಶಕ ಕೂಟದವರ ಕಾರ್ಯವನ್ನು ಅಭಿನಂದಿಸಿ ಮಾತು ಕೊನೆಗೊಳಿಸಿದರು.

ಅನಂತರ ಶ್ರೀ ದತ್ತಾತ್ರೇಯ ಕುಲಕರ್ಣಿಯವರು ಮಾತನಾಡಿ, ಈ ವಿಮರ್ಶಕ ಸಂಘವು ಒಳ್ಳೆಯ ಹಾದಿ ಹಿಡಿದಿದೆಯೆಂದು ಹೇಳಿ, ಅಖಿಲ ಕರ್ನಾಟಕದಲ್ಲಿ ಇಂಥ ಹಲವು ಸಂಘಗಳಾಗಿ ನಾಡಿನ ಕಲೆಯನ್ನು ಉನ್ನತಿಗೆ ತರಲೆಂದು ಹಾರೈಸಿದರು.

ಅನಂತರ ಶ್ರೀ ವಿ. ಎಸ್. ಕುಡ್ವರು ಮಾತನಾಡುತ್ತಾ, ಕನ್ನಡವೆಂಬ ಅಭಿಮಾನದಿಂದ ಟೀಕೆಮಾಡುವುದನ್ನು ಕಡಿಮೆ ಮಾಡಬೇಕೆಂಬುದು ಸರಿಯಲ್ಲವೆಂದೂ ಒಳ್ಳೆಯದು ಯಾವುದೇ ಭಾಷೆಯಲ್ಲಿರಲಿ, ಕೆಟ್ಟದು ಯಾವುದೇ ಭಾಷೆಯಲ್ಲಿರಲಿ ಅದನ್ನು ಇದ್ದಕ್ಕಿದ್ದಂತೆ ಹೇಳಬೇಕೆಂದೂ ಹೇಳಿ, ಇಂದಿಗೆ ಸುಮಾರು ನಾಲ್ಕೈದು ವರ್ಷಗಳ ಹಿಂದೆ ಆದ ಚಿತ್ರಗಳಷ್ಟು ಉತ್ತಮ ಚಿತ್ರಗಳೀಗ ತಯಾರಾಗುತ್ತಿಲ್ಲವೆಂದು ತಿಳಿಸಿ, ಇಂದು ಪೌರಾಣಿಕ ಚಿತ್ರಗಳನ್ನು ತಯಾರಿಸುವ ಹುಚ್ಚು ನಿರ್ಮಾಪಕರಿಗೆ ಹಿಡಿದಿದೆಯೆಂದೂ, ಆದರೆ ಅಂಥಾ ಚಿತ್ರಗಳನ್ನು ತಯಾರಿಸುವಾಗ ತುಂಬಾ ಎಚ್ಚರದಿಂದಿರಬೇಕಲ್ಲದೆ ನಮ್ಮ ಪೌರಾಣಿಕ ವ್ಯಕ್ತಿ ಚಿತ್ರಗಳ ಅಭ್ಯಾಸ ಮಾಡಬಾರದೆಂದೂ ಮೊದಲಾಗಿ ಹೇಳಿದರು.

ಅನಂತರ ಅಧ್ಯಕ್ಷರಾದ ಶ್ರೀ ಜೆ. ಎನ್. ಶೆಣೈಯವರು ಮಾತನಾಡಿ, ಹಲವು ಪ್ರಾಮುಖ್ಯ ವಿಷಯಗಳ ಕುರಿತು ತನ್ನ ಅನುಭವ ತಿಳಿಸಿದ ಮೇಲೆ ಕಾರ್ಯದರ್ಶಿ ಪಿ. ಎಚ್. ರಾಯರು ಕೃತಜ್ಞತೆ ಹೇಳಿದರು.

ಪ್ರಾರಂಭದಲ್ಲಿ ಲಘೂಪಹಾರವೂ ಕೊನೆಯಲ್ಲಿ ಗ್ರೂಪ್ ಫೋಟೋವೂ ಇತ್ತು.

ಕಳೆದ ಆದಿತ್ಯವಾರ ಚಲಚ್ಚಿತ್ರ ವಿಮರ್ಶಕ ಕೂಟದ ಸಭೆ ಶ್ರೀ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಸೇರಿ ನಗರದಲ್ಲಿ ಪ್ರದರ್ಶಿತವಾದ ಆಗುತ್ತಿರುವ ಹಲವು ಚಿತ್ರಗಳ ಕುರಿತು ವಿಮರ್ಶೆ ಮಾಡಲಾಯಿತು. ಶ್ರೀಮತಿ ಕಸ್ತೂರ್ ಬಾ ಮತ್ತು ಚಲಚ್ಚಿತ್ರ ಪಿತಾಮಹ ಫಾಲ್ಕೆಯವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯಗಳಾದವು.

ವರ್ಕಿಂಗ್ ಕಮಿಟಿ ಸದಸ್ಯರು

ಸರ್ದಾರ್ ಮಂಗಲ ಸಿಂಗರು ಎಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಗೃಹ ಮಂತ್ರಿಗಳು ಹೀಗೆಂದರು.

"ವರ್ಕಿಂಗ್ ಕಮಿಟಿ ಸದಸ್ಯರನ್ನು ಅಹಮ್ಮದ್ ನಗರದಲ್ಲಿ ಇಡಲಾಗಿದೆ. ಅವರಿಗೆ ವಾರಕ್ಕೆರಡುಸಾರಿ ಪತ್ರ ಬರೆವ ಹಾಗೂ ನಾಲ್ಕು ಪತ್ರಸ್ವೀಕಾರ ಮಾಡುವ ಸೌಕರ್ಯವಿದೆ. ಮುಂಬೈ ಪ್ರಾಂತ್ಯದಲ್ಲಿ ಪ್ರಕಟವಾಗು ಪತ್ರಿಕೆಗಳಲ್ಲಿ ಅವರಿಗೆ ಮಂಜೂರು ಮಾಡಿದ ಪತ್ರಿಕೆಗಳಲ್ಲದೆ ಅವರಿಗೆ ಬೇಕಾದ್ದು, ಮುಂಬಯಿ ಪ್ರಾಂತ್ಯದಿಂದ ಹೊರಗಿನ ಪತ್ರಿಕೆಗಳ ಪೈಕಿ 'ಸ್ಟೇಟ್ಸ್‌ಮನ್' 'ಅಮೃತಬಜಾರ್' 'ಹಿಂದೂ' ಟ್ರಿಬ್ಯೂನ್, ಲೀಡರ್, ಮತ್ತು ಲಂಡನಿನ ಮ್ಯಾಂಚೆಸ್ಟರ್ ಗಾರ್ಡಿಯನ್ ವಾರ ಪತ್ರಿಕೆ ಮತ್ತು ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಗಳನ್ನು ಕೊಡಲಾಗುತ್ತದೆ

ನೆಹರು ತೂಕ ಕಡಿಮೆಯಾಗಿದೆ!

"ಪಂಡಿತ ಜವಾಹರಲಾಲ ನೆಹರುಗಳ ತೂಕ ಕಡಿಮೆಯಾಗಿದೆ, ಆದರೂ ಅವರ ಆರೋಗ್ಯ ಕೆಟ್ಟಿಲ್ಲ ಅವರನ್ನು ಪರೀಕ್ಷಿಸುವಾಡಿ ಶುಶ್ರೂಷೆ ಮಾಡುವ ಡಾಕ್ಟರರು ಹೇಳಿದ ಔಷಧಿಗಳನ್ನು ಕೊಡಲಾಗುತ್ತದೆ. ಜವಾಹರಲಾಲರು ಇದುವರೆಗೂ ತಮಗೆ ಇದೇ ರೀತಿಯ ಔಷಧಿ ಬೇಕೆಂದು ಕೇಳಿಲ್ಲ."

ಮಹಮ್ಮದರಿಗೆ ಶಸ್ತ್ರಕ್ರಿಯೆ

ಎಸೆಂಬ್ಲಿ ಅಧಿವೇಶನದಲ್ಲಿ ತಾ. ೩ರಂದು ಶ್ರೀ ಕೃಷ್ಣಮಾಚಾರಿಯವರು ಕೇಳಿದ ಪ್ರಶ್ನೆಗೆ ಗೃಹ ಮಂತ್ರಿಗಳು ಹೀಗೆಂದರು.

'೧೯೪೩ರ ದಶಂಬರ ಕೊನೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಲೊಬ್ಬರಾದ ಡಾ। ಸಯ್ಯದ್ ಮಹಮ್ಮದರಿಗೆ ಗಂಟಲು ನೋವಾಗಿತ್ತು. ಜನವರಿ ೬ರಂದು ಶಸ್ತ್ರಕ್ರಿಯೆ ಮಾಡಲಾಯಿತು ಅವರಿಗೆ ಗುಣವಾಗುತ್ತ ಬಂದಿದೆ. ಆ ಮೇಲೆ ಅವರಿಗೆ ಗಂಟಲು ನೋವಾದ ಅಥವಾ ರಕ್ತ ಸ್ರಾವವಾದ ಸುದ್ದಿಯಿಲ್ಲ.

ಸರ್ದಾರ್ ಪಟೇಲರಿಗೆ ಕರುಳುಬೇನೆ

"ವಲ್ಲಭ ಬಾಯಿ ಪಟೇಲರಿಗೆ ಬಹಳ ಸಮಯದಿಂದ ಕರುಳಿನ ಬೇನೆಯಿತ್ತು. ಅವರ ಆರೋಗ್ಯದ ಸಂಬಂಧವಾಗಿ ಬಂದ ವರದಿಯಲ್ಲಿ ಆರೋಗ್ಯ ತೃಪ್ತಿಕರವಾಗಿದೆಯೆಂದು ಬರೆಯು

ಸಾದರ-ಸ್ವೀಕಾರ.

ಪ್ರಕಾಶಿನಿ: (ಮಾಸ ಪತ್ರಿಕೆ) ಸಂಪುಟ ೩ ಸಂಚಿಕೆ ೧ ಮತ್ತು ೨ ಸಂಪಾದಕರು ಮತ್ತು ಪ್ರಕಾಶಕರು ಶ್ರೀ। ಕೆ. ಎಚ್. ಶೆಟ್ಟಿ, ನವಯುಗ ಪ್ರೆಸ್ ಉಡುಪಿ. ವಾರ್ಷಿಕ ಚಂದಾ ರೂ. ೨-೦-೦.

ಉಡುಪಿಯಲ್ಲಿ 'ಶ್ರೀ ಕೃಷ್ಣ ಪರ್ಯಾಯ ಪ್ರಕಾಶಿನಿ' ಹೆಸರಿನಿಂದ ಪ್ರಕಟವಾಗುತ್ತಿದ್ದ ಪತ್ರಿಕೆಯೀಗ 'ಪ್ರಕಾಶಿನಿ'ಯಾಗಿ ಹೊರ ಬಿದ್ದಿದೆ. ಉಡುಪಿಯ ಹಲವಾರು ಪತ್ರಿಕೆಗಳ ಪ್ರಕಾಶಕರೂ ಸಂಪಾದಕರೂ ಆ ಶ್ರೀಮಾನ್ ಹೊನ್ನಯ ಶೆಟ್ರೀ ಇದನ್ನೂ ಸಂಪಾದಿಸಿ ಪ್ರಕಟಿಸುತ್ತಿದ್ದಾರೆ. ಅಂದವಾದ ಬಹ್ಯಾಂಗ, ಒಳಗೂ ಚಿತ್ರಗಳು ಸಿನೆಮ ಚಿತ್ರಗಳೂ ಇವೆ. ಪ್ರಬಂಧ, ಹರಟೆ, ಕಥೆ, ರಾಜಕೀಯ ವಿಚಾರ, ಸಿನೆಮ ಸಂಗತಿ, ನಾಟಕಗಳಿಂದ ಸಂಚಿಕೆ ವಾಚನ ಮನೋಹರವಿದೆ. ಕನ್ನಡಿಗರು ಇದನ್ನು ಅವಶ್ಯ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ,

ಹಳ್ಳಿಯ ೧೦ ಸಮಸ್ತರು,

ಲೇಖಕರು ಮತ್ತು ಪ್ರಕಾಶಕರು: ಶ್ರೀ। ಕೋ. ಶಿ. ಕಾರಂತ, ಪುತ್ತೂರು ದ. ಕ. ಕ್ರೌನ್ ೧/೮ ಆಕಾರದ ಪುಟಗಳು ೧೧೩ ಬೆಲೆ ೧-೪-೦.

ಕಾಶೀನಾಥ ಮತ್ತು ವೃಂದಾವನ

ಮೂಲ ಲೇಖಕರು ಶರಚ್ಚಂದ್ರ ಚಟರ್ಜಿ, ಅನುವಾದಕರು ಶ್ರೀಮತಿ ಕುಪ್ಪಮ್ಮ ಮತ್ತು ಗುರುನಾಥ ಜೋಶಿ ಪ್ರಕಾಶಕರು ಸಾಹಿತ್ಯ ಭಂಡಾರ ಹುಬ್ಬಳ್ಳಿ ಕ್ರೌನ್ ೧/೮ ಆಕಾರ ೬೩+೧೩೨ ಪುಟಗಳು ಬೆಲೆ ರೂ. ೨-೮-೦.

... ವರ್ಕಿಂಗ್ ಕಮಿಟಿ ಸದಸ್ಯರ ಆರೋಗ್ಯದ ಕುರಿತು ಗೊತ್ತು ಕೊಡಲಾಗಿದೆ."

ಕಸ್ತೂರ್ ಬಾರ ನಿಧನದ ಕುರಿತು ಬ್ರಿಟಿಷ್ ಪತ್ರಿಕೆಗಳ ಉದಾಸೀನ.

ಬಿ. ಬಿ. ಸಿ. ಯಲ್ಲಿಯೂ ಸುದ್ದಿಯಿಲ್ಲ.

ಕಸ್ತೂರ್ ಬಾರ ನಿಧನದ ಕುರಿತು ಬ್ರಿಟಿಷ್ ಪತ್ರಿಕೆಗಳೇನೂ ಆ ಸುದ್ದಿಗೆ ಮಹತ್ವ ಕೊಟ್ಟಿಲ್ಲ. ಬಿ. ಬಿ. ಸಿ. ಆಕಾಶವಾಣಿಯಲ್ಲಿ ಆ ಕುರಿತು ಏನೇನೂ ಮಾತಿಲ್ಲ. ಅಮೇರಿಕದ ಪತ್ರಿಕೆಗಳು ಮಾತ್ರ ಸುದ್ದಿಗೆ ಬಹಳ ಮಹತ್ವವಿತ್ತಿವೆ. ಅಲ್ಲಿನ ರೇಡಿಯೋಗಳಲ್ಲಿಯೂ ಅವರ ಜೀವನ ಚರಿತ್ರೆ ವಿವರಿಸಲಾಗಿದೆ. ಇಡೀ ಲೋಕದ ಮಹಾ ಪುರುಷರಾದ ಮಹಾತ್ಮಾ ಗಾಂಧಿಯವರ ಪತ್ನಿ ಬ್ರಿಟಿಷರ ಸೆರೆಮನೆಯಲ್ಲಿ ಸತ್ತರೆಂದು ಬ್ರಿಟಿಷ್ ಪತ್ರಿಕೆಗಳು ಯಾವ ಮುಖದಿಂದ ಪ್ರಚಾರ ಪಡಿಸಬೇಕು?

ಸಂಧಾನ ಪುನಃ ಸಂಧಾನ!

ಪಂಡಿತ ಮದನಮೋಹನ ಮಾಲವೀಯರು ಸಕಲಪಕ್ಷ ಸಮ್ಮೇಳನವೊಂದನ್ನು ಕರೆದಿದ್ದಾರೆ. ಸಕಲ ಪಕ್ಷ ಸಮ್ಮೇಳನ ಸೇರಿ ಭಾರತದ ಬಿಕ್ಕಟ್ಟು ಬಗೆಹರಿಸುವ, ಸರಕಾರದೊಡನೆ ಸಂಧಾನ ಸೂಚನೆ ಮಾಡುವ ಆಲೋಚನೆ ಇದಾಗಿದೆ.

... ಮಂಡಳದ ಸರ್ ಜಗದೀಶ ಪ್ರಸಾದರೂ ... ಧಾನ ಪ್ರಯತ್ನ ಮಾಡುವ ಉಮೇದಿನಿಂದ ಶ್ರೀ ಎಂ. ಆರ್. ಜಯಕರರನ್ನು ಕಂಡು ಮಾತನಾಡಿದರೆಂದು ತಿಳಿದಿದೆ.

ಉಗ್ರ ಪಕ್ಷ ಧೋರಣವೆ?

ವೇವಲರ ಭಾಷಣದ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಅವಕಾಶ ಕೊಡಲಾಗುವುದೇ ಎಂಬ ಪ್ರಶ್ನೆಗೆ ಬಟ್ಲರರು ಸಮಾಧಾನಕರ ಉತ್ತರ ಕೊಡದಿರುವುದರಿಂದ "ಈ ವಿಷಯವನ್ನು ವಾ... ಅಮೆರಿಯವರ ಮುಂದೆ ತೆರದೆ ಬಿಡಲಾಗಿ" ಎಂದು ಸೋರೆನ್ಸನರು ಹೇಳಿದರು. ಪಾರ್ಲಿಮೆಂಟಿನಲ್ಲಿ ವೇವಲರ ಭಾಷಣ ಚರ್ಚೆಯಾದಾಗ ಮಾತ್ರ ಅದರ ಹುಳುಕು ಹೊರ ಬೀಳುವುದೆಂದು ಅವರ ಮತ. ಅಮೆರಿಯವರ ಉತ್ತರ ಅನಾನುಕೂಲವಿದ್ದರೆ ಹೊಯಿಗೆಯೊಳಗೆ ತಲೆ ಹಾಕಿ ಹೊರಗಿನ ಜಗತ್ತನ್ನು ಮರೆವ ಉಷ್ಟ್ರಪಕ್ಷಿ ಧೋರಣವನ್ನು ಸರಕಾರ ಹಿಡಿದಿದೆ, ಸರಕಾರ ಮಾತು ಒಂದು ಕೃತಿಯೊಂದು ಎಂಬುದನ್ನು ಮತ್ತೂ ಸ್ಪಷ್ಟಗೊಳಿಸಬಹುದು ಎಂದು ಸೋರೆನ್ಸನರು ಹೇಳಿದರು.

ಕಸ್ತೂರ್ ಬಾರ ಜೀವನ ಪರಿಚಯ

ಆದರ್ಶ ಸತೀಮಣಿಯಾಗಿ ಮಡಿದರು!

ಶ್ರೀಮತಿ ಕಸ್ತೂರ್ ಬಾರವರು, ಗಾಂಧೀಜಿ ಜನಿಸಿದ ಊರಾದ ಪೋರ್ ಬಂದರ್ ನಲ್ಲಿಯೇ ಹುಟ್ಟಿದರು. ಅವರು ಸರಿಯಾದ ಜನನ ತಾರೀಕು ತಿಳಿದಿಲ್ಲ. ಗಾಂಧೀಜಿ ತನ್ನ ಆತ್ಮ ಚರಿತ್ರೆಯಲ್ಲಿ ಕಸ್ತೂರ್ ಬಾಗೂ ತನಗೂ ಒಂದೇ ಪ್ರಾಯವೆಂದು ಬರೆದಿದ್ದಾರೆ

ಬಾಲ್ಯ ಮತ್ತು ವಿವಾಹ

ಕಸ್ತೂರ್ ಬಾ ಗೋಕುಲ್ ದಾಸ್ ಮಕಂಜಿಯರ ಪುತ್ರಿ. ಮಕಂಜಿ ಹತ್ತಿ, ಬಟ್ಟೆ, ಧಾನ್ಯ ವ್ಯಾಪಾರಿಗಳು. ಇಡೀ ಕುಟುಂಬದ ಪ್ರೀತಿಯ ಮಗಳು ಕಸ್ತೂರ್ ಬಾ. ಕಸ್ತೂರ್ ಬಾ ಶಾಲೆಗೆ ಹೋಗಿರಲೇ ಇಲ್ಲ. ಗುಜರಾಥಿಯನ್ನು ಆಕೆ ಕಷ್ಟದಿಂದ ಓದಬಲ್ಲವರಿದ್ದರು ಬಾಲ್ಯದಲ್ಲಿ ಆಕೆಯನ್ನು ವಿದ್ಯಾವತಿಯಾಗಿ ಮಾಡಬೇಕೆಂದು ಗಾಂಧೀಜಿ ಪಟ್ಟ ಶ್ರಮ ಹೆಚ್ಚು ಪ್ರಯೋಜನಕಾರಿಯಾಗಲಿಲ್ಲ ಆದರೆ ಚಿಕ್ಕಂದಿನಿಂದಲೇ ಅವರಿಗೆ ಪ್ರಾಪಂಚಿಕ ಜ್ಞಾನ ಬಹಳ ಇತ್ತು

ಪೋರ್ ಬಂದರ್ ನ ದಿವಾನರಾದ ಕರಮಚಂದ ಗಾಂಧಿ (ಮಹಾತ್ಮರ ತಂದೆ)ಯವರೂ ಗೋಕುಲ ದಾಸ್ ಮಕಂಜಿಯವರೂ ಅತ್ಯಂತ ಆಪ್ತ ಮಿತ್ರರು ಅವರ ಮೈತ್ರಿಯನ್ನು ನೆಂಟಸ್ತಿಕೆಯಿಂದ ದೃಢಗೊಳಿಸಲು ಅವರು ಬಯಸಿದರು ಕಸ್ತೂರ್ ಬಾಗೆ ಏಳು ವರ್ಷ ಪ್ರಾಯವಾದಾಗ ಕರಮಚಂದರ ಮಗ, ಮೋಹನದಾಸ್ ಗಾಂಧೀಗೆ ಆಕೆಯನ್ನು ಮದುವೆ ಮಾಡಿಕೊಡುವುದು ನಿಶ್ಚಯವಾಯಿತು ನಿಜವಾದ ವಿವಾಹ ಮುಂದೆ ೧೮೮೩ರಲ್ಲಿ ನಡೆಯಿತು

ಪತಿಯ ನೆರಳಂತೆ

ಮದುವೆಯಾದ ಮೇಲೆ ಹೆಚ್ಚಾಗಿ ಕಸ್ತೂರ್ ಬಾ ಗಂಡನ ಜತೆಯಲ್ಲೇ ರಾಜಕೋಟದಲ್ಲಿ ಇದ್ದರು ಪತಿ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ತೆರಳಿದಾಗ ಅವರು ತನ್ನ ಮಗುವಿನೊಂದಿಗೆ ಮಾವನ ಮನೆಯಲ್ಲಿಯೇ ರಾಜಕೋಟದಲ್ಲಿ ವಾಸವಾಗಿದ್ದರು ೧೮೯೬ನೇ ಇಸವಿ ದಶಂಬರ ೧ರಂದು ಅವರು ಮಹಾತ್ಮರೊಂದಿಗೆ ದಕ್ಷಿಣ ಆಫ್ರಿಕಕ್ಕೆ ತನ್ನಿಬ್ಬರು ಮಕ್ಕಳೊಡನೆ ತೆರಳಿದರು ಅಲ್ಲಿ ಫೋನಿಕ್ಸ್ ಆಶ್ರಮ ಸ್ಥಾಪಿಸುವಲ್ಲಿ ಆಕೆ ಪ್ರಮುಖ ಭಾಗವಹಿಸಿದರು

ಕಸ್ತೂರ್ ಬಾ ಸರಳ ಸ್ವಭಾವದ ಶಾಂತ ನಿರ್ಮಲ ಕುಲೀನ ಗೃಹಿಣಿ ತನ್ನ ಪತಿಯ ಸಂಕಷ್ಟಗಳಲ್ಲೆಲ್ಲಾ ಮೌನವಾಗಿ ಆಕೆಯೂ ಅನುವರ್ತಿಸಿದರು, ಅವರು ಸೆರೆ ಸೇರಿದಾಗ ತಾನೂ ಹಿಂಬಾಲಿಸಿದರು, ಪತಿಯು ಸೆರಗು ಹಿಡಿದು ಎಷ್ಟೋ ಸಲ ಲಾಠೀ ಪ್ರಹಾರಕ್ಕೆ ತಲೆಯೊಡ್ಡಿದರು ಪತಿಯು ಪಾಶ್ಚಾತ್ಯ ಲೋಕದಿಂದ ಮರಳಿ, ಪಾಶ್ಚಾತ್ಯ ವೇಷಭೂಷಣಗಳಿಗೆ ಮರುಳಾಗಿದ್ದಾಗಲೂ, ಸತ್ಯಾಗ್ರಹಿಯಾಗಿ ಸರಳಜೀವನಕ್ಕೆ ಸಿದ್ಧರಾಗಿದ್ದಾಗಲೂ, ಪತಿಯೇ ಪರದೈವವೆಂದು ನಂಬಿ ಆಕೆ ಅನುವರ್ತಿಸಿ ಆದರ್ಶ ಭಾರತೀಯ ಮಹಿಳೆಯರಂತೆ ಲೋಕವಿಖ್ಯಾತೆಯಾದರು ಸ್ವತಃ ಗಾಂಧೀಜಿಯೇ ತನ್ನ ಆತ್ಮ ಚರಿತ್ರೆಯಲ್ಲಿ ಕಸ್ತೂರ್ ಬಾರ ಸರಳ ಜೀವನ, ಕಷ್ಟ ಸಹಿಷ್ಣುತೆ, ಧೀರ ವೃತ್ತಿ, ಭಕ್ತಿ ಭಾವಗಳನ್ನು ಕೊಂಡಾಡಿದ್ದಾರೆ

ಸತ್ಯಾಗ್ರಹೀ ಸೇನೆಯಲ್ಲಿ

ಸಾರ್ವಜನಿಕ ಜೀವನದಲ್ಲಿಯೇ ಕಸ್ತೂರ್ ಬಾ ತನ್ನ ವಿದ್ಯಾಭ್ಯಾಸಗಳಿಸಿಕೊಂಡರು ಚಂಪಾರಣದ ಬಡಜನರ ಸಂಕಷ್ಟ ನಿವಾರಣೆಗಾಗಿ ಗಾಂಧೀಜಿ ಆಂದೋಲನ ಆರಂಭಿಸಿದಾಗ ಕಸ್ತೂರ್ ಬಾ ಅವರಿಗೆ ಬಲಗೈಯಾಗಿ ನಿಂತರು ಗಾಂಧೀಜಿ ಸ್ಥಾಪಿಸಿದ ಆರು ಹಳ್ಳಿ ಶಾಲೆಗಳಲ್ಲಿ ಒಂದರಲ್ಲಿ, ಅವರಿಗೇ ಗುಜರಾಥಿ ಬಹು ಪ್ರಯಾಸದಿಂದ ಓದಿ ಬರೆಯಲು ಮಾತ್ರ ಬರುತ್ತಿದ್ದರೂ, ಕಸ್ತೂರ್ ಬಾ ಉಪಾಧ್ಯಾಯಿನಿಯಾದರು. ಆಕೆ ಹಳ್ಳಿ ಸುತ್ತು ತಿರುಗಾಡಿ ಅಲ್ಲಿನ ಹೆಂಗುಸರಿಗೆ ನೈರ್ಮಲ್ಯ ವಿಚಾರ ಹೇಳುತ್ತಿದ್ದರು ಆ ವರದಿ ಗಾಂಧೀಜಿಗೆ ತಿಳಿಸುತ್ತಿದ್ದರು ಚಂಪಾರಣದ ಸಾರ್ವಜನಿಕ ಜೀವನದಿಂದ ಕಸ್ತೂರ್ ಬಾ ತನ್ನ ಜೀವಿತದ ಧ್ಯೇಯ ತಿಳಿದು ಕೊಂಡರು. ಪತಿಯೊಡನೆ ತನ್ನನ್ನೂ ಜನತಾ ಸೇವೆಗೆ ಅರ್ಪಿಸಿಬಿಟ್ಟರು.

ಮುಂದೆ ೧೯೩೨ರಲ್ಲಿ ಗಾಂಧಿಜಿ ಸೆರೆಮನೆ ಸೇರಿದಾಗ, ಕಸ್ತೂರ್ ಬಾ ಭಾರತದ ಜನತೆಗೆ ಸಾರಿದ ಸಂದೇಶ ಅವರ ಧೀರ ಹೃದಯವನ್ನು ತಿಳಿಸುತ್ತದೆ. ಆ ಸಂದೇಶದಲ್ಲಿ ಅವರು, ಜನತೆ ಶಾಂತತೆಯಿಂದ ಗಾಂಧೀಜಿ ಬಂಧನ, ಮುಂದಿನ ಸಂಕಷ್ಟಗಳನ್ನೆಲ್ಲಾ ಎದುರಿಸಿ, ಸ್ವಾತಂತ್ರ್ಯಕ್ಕಾಗಿ ಎಡೆಬಿಡದೆ ಹೋರಾಡಬೇಕೆಂದೂ, ರಚನಾತ್ಮಕ ಕಾರ್ಯ ಅದರಲ್ಲೂ ಖಾದಿ ವ್ರತದಿಂದಲೇ ನಿಜವಾದ ಸ್ವರಾಜ್ಯ ಪ್ರಾಪ್ತಿಯಿದೆಯೆಂದೂ ತಿಳಿಸಿ ಜನತೆಯನ್ನು ಒಮ್ಮೆ ನಿದ್ರೆಯಿಂದ ಎಚ್ಚರುವಂತೆ ಮಾಡಿದರು ಗಾಂಧೀಜಿ ಇಡೀ ಜನಾಂಗದ ವ್ಯಕ್ತಿಯಾದುದರಿಂದ, ಆತನ ಕೈ ಹಿಡಿದ ಕಸ್ತೂರ್ ಬಾ ತನ್ನ ಗೃಹಿಣೀ ಜೀವನದ ಎಷ್ಟೋ ಸುಖಗಳಿಗೆ ತಿಲಾಂಜಲಿಯಿತ್ತು ಪತಿಯನ್ನನುಸರಿಸಿ ರಾಷ್ಟ್ರ ಸೇವೆಮಾಡಬೇಕಾಯಿತು ಪತಿ ಸೆರೆಮನೆ ಸೇರಿದಾಗೆಲ್ಲಾ, ಆಕೆಯೂ ಬಂಧನಕ್ಕೊಳಗಾದರು, ಪತಿ ಅನೇಕ ಸಲ ಮಹೋಪವಾಸ ಕೈಕೊಂಡಾಗ ಅವರೂ ಕಠಿಣ ಜೀವನ ಮಾಡಿದರು ರಾಜಕೋಟ ಉಪವಾಸದ ಸಮಯ, ತಾನು ಸೆರೆಮನೆಯಲ್ಲಿರುವಾಗ, ಎಪ್ಪತ್ತು ವರ್ಷ ಪ್ರಾಯದಲ್ಲಿ ಗಾಂಧೀಜಿ ಉಪವಾಸ ಕೈಕೊಂಡರೆಂಬ ಸುದ್ದಿ ಕೇಳಿ ಆಕೆ ವಹಿಸಿದ ಧೀರತೆ ಆದರ್ಶಕರವಾಗಿತ್ತು.

ಸೆರೆಮನೆಯಲ್ಲಿ ಸಾವು

ಕಸ್ತೂರ್ ಬಾರ ಕೊನೆಯ ಬಂಧನ ೧೯೪೨ರ ಅಗಸ್ಟ್ ೯ರಂದು, ಗಾಂಧೀಜಿ ಜೊತೆಗಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಬಂಧನವಾದ ಸ್ವಲ್ಪ ಹೊತ್ತಿನಲ್ಲಿಯೆ ಗಾಂಧೀಜಿ ಭಾಷಣ ಮಾಡಬೇಕಾಗಿದ್ದ ಸಭೆಯಲ್ಲಿ ತಾನು ಭಾಷಣ ಕೊಡುವುದಾಗಿ ಅವರು ಪ್ರಕಟಿಸಿದರು ಅಷ್ಟರಲ್ಲಿ ಸರಕಾರ ಅವರನ್ನು ಪ್ಯಾರೇಲಾಲ್, ಸುಶೀಲಾ ನಾಯರ್ ಇವರೊಡನೆ ಬಂಧಿಸಿ ಆಗಾಖಾನ ಅರಮನೆಯ ಸೆರೆಮನೆಯಲ್ಲಿಟ್ಟಿತು

ಶ್ರೀಮತಿ ಗಾಂಧಿಯವರು ಅಸೌಖ್ಯದಲ್ಲಿದ್ದಾರೆಂದು ೧೯೪೩ನೇ ದಶಂಬರ ೪ರಂದು ಮೊದಲನೆಯದಾಗಿ ಸುದ್ದಿ ಹೊರಬಂತು. ಹೃದಯವೇದನೆ-ಕಸ್ತೂರ್ ಬಾ ಹೃದಯವೇದನೆಯಿಂದ ನರಳುತ್ತಿದ್ದಾರೆಂದು. ಅವರ ಮಕ್ಕಳು ಮೊಮ್ಮಕ್ಕಳು ನೋಡ ಹೋದರು. ದಿನ ಹೋದಂತೆ ಅವರ ಪರಿಸ್ಥಿತಿ ಕೆಟ್ಟಿತು. ಹೃದಯ ಬಡಿಯಿತು! ಗಾಂಧೀಜಿಯ ಪದತಳದಲ್ಲಿ, ಪತಿಯ ಪಾದಪದ್ಮದಲ್ಲಿ, ಸೆರೆಮನೆಯಾದರೂ ಸಹಿಸಿಕೊಂಡು ಆಕೆ ಕೊನೆಯುಸಿರೆಳೆದರು! ಜಗದ ಮಹಾವಿಭೂತಿ ಪುರುಷನ ಪತ್ನಿ ಹೀಗೆ ಬ್ರಿಟಿಷ್ ಸರಕಾರದ ಸೆರೆಮನೆಯಲ್ಲಿ ಅಸುತೊರೆದರು!

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ	ಬೆಳಗ್ಗೆ ೬-೨೫	ರಾತ್ರಿ ೭ ೪೦
ಪಟೆಲ್ ಕನ್ನನ್ನೂರು ಪರಿಯಂತ ಮಾತ್ರ	ಸಾಯಂ ೫ ೫೫	ಬೆಳಗ್ಗೆ ೯ ೨೫
ಮೈಲ್ ಎಕ್ಸ್ಪ್ರೆಸ್	ಬೆಳಗ್ಗೆ ೭ ೫	ಸಾಯಂ ೭

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs As Ps	ASSETS	Rs As Ps
1 Paid up Capital	12 95 970- 0 0	1 Cash on hand & with bankers	18 26 986 3 8
2 Reserves	3 83 379- 1- 6	2 Investments or (1)Govt Securities (2) Immovable properties etc	26 04 671- 6- 8
3 Deposits	61 66 927 6 0	3 Loans on Jewels & other valuable securities	23 72 302 8- 7
4 Bills for collection	5 53 548- 6- 1	4 Loans on personal securities & Bils purchased	16 74 482-14- 8
5 Sundries including revenue items	7 00 981- 0- 5	5 Bills for collection as per contra	5 53 548 6- 1
6 Profits for the year ending 31-12-1943	1 08 522 4 0	6 Office premises furniture etc	93 251 0- 6
		7 Sundries including revenue items	84 085-10- 4
Total	92 09,328 2- 0	Total	92,09,328 2- 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD: 1931

HEAD OFFICE Mangalore. ***BRANCHES*** Moodabidri & Padubidri.

ANNOUNCEMENT

Deposits accepted at the following rates from 1-1-1944
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances
FixedDeposits 6 months 2½% p. a.
12 months 3% p. a
24 months 3½% p. a
The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ.

1893 1943 GOLDEN JUBILEE

ಅಮೃತಾಂಜನ ಲಿಮಿಟೆಡ್.
ಮದ್ರಾಸ್, ಬೊಂಬಯಿ,
ಕಲ್ಕತ್ತ

THE BOMBAY LIFE ASSURANCE CO., LTD.

Our34 years' experience in Insurance Service enables us to recommerd to you this First Class Indian Life Office

Some Salient Features of The 'Bombay Life' Policies

Premiums are low
2½% Rebate on annual premiums.
"Permanent Disability Benefits free of any cost
Payment of double the insured amount in case of death by accident at a very smallcost of Rs 1-8-0 per 1000.
Special rebates on large size policies
A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S K.

BOMBAY ★ MADRAS ★ CALICUT ★ MANGALORE ★ BANGALORE ★ MaduraS ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the super vision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs

Depot **Maharata Galli Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 10—3—1944 [ಸಂಚಿಕೆ 10]

ನಾ ಕಂಡ ಕಸ್ತೂರ್‌ಬಾ

—ಜಿ. ಎಸ್. ಕಲ್ಯಾಣಪುರ

ಗುಜರಾಥಿನ ಕೈರಾ ಜಿಲ್ಲೆಯ ಬೊರ್ಸಾದಿನಿಂದ ಒಂದು ಜರೂರಿನ ತಂತಿ ಬಂತು, ನವಸಾರಿ ಬಳಿಯ ಮರೋಳಿ ಗ್ರಾಮದ ಒಂದು ಗುಡಿಸಲಲ್ಲಿದ್ದ ಕಸ್ತೂರ್‌ಬಾಗೆ ಈ ತಂತಿ ಒಂದು ಬೆಳಗಾಲದ ಪ್ರಾತಃಕಾಲ ಬಂದು ತಲುಪಿತು ಬೊರ್ಸಾದಿನ ಮಹಿಳೆಯರ ಕರೆ ಅದಾಗಿತ್ತು

ಭಾರತಕ್ಕೆ ಆ ದಿನಗಳು ಅಸಾಧಾರಣದವು ಮಹಾತ್ಮಾಗಾಂಧಿಯವರ ಮುಂದಾಳುತನದಲ್ಲಿ ಭಾರತದ ಧುರೀಣರು, ಯರವಾಡಾ ಇಲ್ಲವೇ ಇಂಥಾ ಭಾರತದ ರಾಜಕೀಯ ಇತಿಹಾಸದಲ್ಲಿ ಚಿರಸ್ಮರಣೀಯವಾದ ಸೆರೆಮನೆಗಳ ಕತ್ತಲು ಕೋಣೆ ಸೇರಿದ್ದರು ಸ್ವಾತಂತ್ರ್ಯ ಸಂಗ್ರಾಮದ ಎರಡನೆಯ ಅಲೆ ಮುಸಗಿತ್ತು ಬೊಂಬಾಯಿಯಲ್ಲಿ ಅಂತೆ ಭಾರತದ ಪ್ರಮುಖ ನಗರ ಗ್ರಾಮಗಳಲ್ಲಿ ಸ್ತ್ರೀಪುರುಷ ಬಾಲ ವೃದ್ಧರೆನ್ನದೆ ಸಾವಿರಾರು ಮಂದಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಸೆರೆಮನೆಗಳನ್ನು ಸೇರುತ್ತಿದ್ದರು, ಇಲ್ಲವೇ ಲಾಠಿ ಪೆಟ್ಟುಗಳಿಂದ ತಲೆ ಒಡೆಸಿಕೊಂಡು ಆಸ್ಪತ್ರೆಗಳಿಗೆ ಸಾಗಿಸಲ್ಪಡುತ್ತಿದ್ದರು ತ್ರಿವರ್ಣ ರಾಷ್ಟ್ರಧ್ವಜದ ಮಾನವುಳಿಸಲು ಬೊಂಬಾಯಿ ಅಜಾದ್ ಮೈದಾನಿನಲ್ಲಿ ಸಾವಿರಾರು ಮಂದಿ ಸ್ವಯಂಸೇವಕರು ಮುಂಎಂದು ಪೋಲೀಸರಿಂದ ಜರ್ಜರಿತರಾಗಿ ಮಾಡಲ್ಪಟ್ಟ ಸುದ್ದಿ ಪತ್ರಿಕೆಗಳ ಪುಟ ತುಂಬ ಪ್ರಕಟವಾಗಿತ್ತು ಇದರ ಜತೆಯಲ್ಲಿಯೇ ಇದಕ್ಕಿಂತಲೂ ಕರುಣಾಮಯ ರೋಮಾಂಚಕವಾದ ಇನ್ನೊಂದು ಸುದ್ದಿ ಬಂತು ಬೊರ್ಸಾದಿನಲ್ಲಿ ಮಹಿಳೆಯರ ಮೇಲೆ ಲಾಠಿ ಪೆಟ್ಟು ಬಿದ್ದದ್ದು ಬೊಂಬಾಯಿಯಲ್ಲಿ ಆದಂತೆ ಇಲ್ಲಿ ಪೋಲೀಸರ ಗುಂಡಿಗಾದರೂ ಎದೆ ಗೊಡುವೆವೆಂದು ನಿರ್ಧರಿಸಿದ ಜನರ ಗುಂಪು ಅದಾಗಿರಲಿಲ್ಲ ಹಾಗಾಗಿ ಬೊರ್ಸಾಡ್ ಘಟನೆ ಬಹಳ ಕ್ರೂರಭೀಕರವಾಗಿತ್ತು

"ನಮಗೆ ಕಸ್ತೂರ್‌ಬಾ ಬೇಕು"

"ಕಸ್ತೂರ್‌ಬಾ ನಮ್ಮ ಜತೆಯಲ್ಲಿರಬೇಕು ಇದು ಬೊರ್ಸಾದ್ ಆಸ್ಪತ್ರೆಗಳಲ್ಲಿ ಗಾಯಗೊಂಡು ಮಲಗಿದ ಮಹಿಳೆಯರ ಕೂಗು 'ನಗರದ ಜನತೆಯ ಹೃದಯದಲ್ಲಿ ಸ್ಫೂರ್ತಿ ಚಿಮ್ಮಿಸಲು ನಮ್ಮ ಜತೆಯಲ್ಲಿ ಬಾ ಬರಬೇಕು

ಈ ತಂತಿ ಓದುತ್ತಲೇ ಫಲಾಹಾರಕ್ಕೆ ಕುಳಿತಿದ್ದ ಬಾ ಅದನ್ನು ಅಲ್ಲಿಯೇ ಬಿಟ್ಟು ಹಾಗೆಯೇ ಎದ್ದರು, ತಮ್ಮ ಗುಡಿಸಲ ಕಡೆಗೆ ಒಮ್ಮೆಗೇ ಧಾವಿಸಿದರು, ಮುಂದಿನ ರೈಲು ಗಾಡಿಯಲ್ಲೇ ಬೊರ್ಸಾದಿಗೆ ಅವರು ಹೊರಡಲು ಎಲ್ಲಾ ಸಿದ್ಧತೆ ಮಾಡಿದರು ಕಸ್ತೂರ್‌ಬಾರ ಈ ಆತುರವನ್ನು ನೋಡಿ, ಅವರ ಆತಿಥ್ಯ ಮಾಡುತ್ತಿದ್ದ ಶ್ರೀಮತಿ ಮಿಥು ಬೆನ್ನರಿಗೆ ಗಾಬರಿಯಾಯಿತು

'ಬಾ ನಿಮಗೆ ಎನೆಮಿಯ (ರಕ್ತ ಕಡಿಮೆಯಾಗುವ ರೋಗ) ಇದೆ, ಡಾಕ್ಟರರು ನೀವು ವಿಶ್ರಾಂತಿ ತೆಗೆದುಕೊಳ್ಳಬೇಕೆಂದಿದ್ದಾರೆ, ಬೊರ್ಸಾದಿಗೆ ನಿಮ್ಮ ಪರವಾಗಿ ನಾನು ಹೋಗಿ ಬರುತ್ತೇನೆ' ಅವರು ಹೇಳಿದರು,

ಶಾಂತ ಮನಸ್ಸಿನ, ಮೃದು ಭಾಷಿಣಿ ಕಸ್ತೂರ್‌ಬಾ ಮಿಥುಬೆನ್ನರ ಮಾತಿಗೆ ಅಸಮ್ಮತಿ ತೋರಿಸಿ ಸತ್ಯಾಗ್ರಹದೀಕ್ಷೆ ತೊಟ್ಟು ಹೇಳಿದರು. "ಪೋಲೀಸರ ಮರ್ದನವನ್ನು ಅಷ್ಟು ಧೀರರಾಗಿ ಎದುರಿಸಿದ ನನ್ನ ಮಕ್ಕಳನ್ನು ನಾನು ನೋಡಲೇ ಬೇಕು, ನಾನವರೊಡನಿದ್ದು ಅವರಿಗೆ ಧೈರ್ಯಗೊಡಬೇಕು. ಬಾಪು ಇಂದು ಅವರೊಡನೆ ಇರುತಿದ್ದರು ಆದರೆ ಅವರು ಈಗ ಹೊರಗೆ ಇಲ್ಲ"

ಕಸ್ತೂರ್‌ಬಾ ತನ್ನ ಸಡಿಳ ಸ್ಪಷ್ಟ ಗುಜರಾಥಿಯಲ್ಲಿ ಬೊರ್ಸಾದಿಗೆ ಒಂದು ಸಂದೇಶ ಬರೆಸಿದರು ಅದರಲ್ಲಿ ಲಾಠಿ ಚಾರ್ಜನ್ನು ಅವರು ಕಠಿಣವೆಂದು ಹೇಳಿದ್ದರು ಕೂಡಲೇ ತಾನು ಬೊರ್ಸಾದಿಗೆ ಬರುವುದಾಗಿ ತಿಳಿಸಿ ಅಲ್ಲಿನ ಮಹಿಳೆಯರಿಗೆ ಆಸೆ ಭರವಸೆ ಹುಟ್ಟಿಸಿದರು

"ಇದರ ಭಾಷಾಂತರವನ್ನು ಪತ್ರಿಕೆಗಳಿಗೆ ಕೊಡು" ಅವರು ನನ್ನೊಡನೆ ಹೇಳಿದರು ಕೆಲವೇ ತಾಸುಗಳಲ್ಲಿ ನಾನೂ ಅವರೊಡನೆ ತಗಣೆ ಕಾಟದ ಮೂರನೆಯ ತರಗತಿ ರೈಲು ಬಂಡಿಯಲ್ಲಿ ಬರ್ಸೊರಾಕ್ಕೆ ಹೊರಟೆ

ಮಹಾತ್ಮರ ಪ್ರತಿನಿಧಿ

ಬೊರ್ಸಾದಿಗೆ ಹೋಗುವಾಗ ನಾನು ಹೊಸ ಕಸ್ತೂರ್‌ಬಾರ ವ್ಯಕ್ತಿತ್ವವನ್ನು ಕಂಡೆ ಮರೋಳಿ ಆಶ್ರಮದಲ್ಲಿ ಕುಳಿತು ಶಾಂತಳಾಗಿ ಚರಕಾ ತಿರುಗಿಸುತ್ತಿರುವಾಗ ಯಾವನಾದರೂ ಸ್ವಯಂಸೇವಕ ಪತ್ರಿಕೆಯ ಸುದ್ದಿ ಓದುವುದನ್ನು ಕೇಳುತಿದ್ದ ಬಾ ಅವರು ಆಗಿರಲಿಲ್ಲ ಆಗ, ಮರೋಳಿಯಲ್ಲಿ ಪ್ರತಿ ದಿನ ಸಂಜೆ ಹಳ್ಳಿಯಲ್ಲಿ ಸುತ್ತಾಡಿ ಹಳ್ಳಿ ಜನರಿಗೆ, ರಾಷ್ಟ್ರದ ಮುಂದಾಳು ಮಹಾತ್ಮರಂತೆ ಇರದೆ ತಾಯಿ ಮಕ್ಕಳಿಗೆ ಹೇಳುವಂತೆ ತನ್ನ ಪ್ರೀತಿಯ ಮತ್ತು ಅವರಿಗ ವಶ್ಯವಾದ ಖಾದಿಯ ಮಹತ್ವವನ್ನು ಹೇಳುವ ಬಾ ಕೂಡಾ ಆಗ ಅವರಾಗಿರಲಿಲ್ಲ ಈಗ ಆಕೆ ಭಾರತದ ಮಹಾ ಮುಂದಾಳುವಿನ ಪತ್ನಿಯಾಗಿದ್ದರ ರಾಷ್ಟ್ರದ ಮುಂದಾಳುಗಳು ಯಾರೂ ಇಲ್ಲದಾಗ ಆಕೆ ಮಹಾತ್ಮರ ಪ್ರತಿನಿಧಿಯಾಗಿ ರಂಗಕ್ಕಿಳಿದಿದ್ದರು ಆಕೆ ಅಲ್ಲಿಯೂ ಬೇಕು—ಇಲ್ಲಿಯೂ ಬೇಕು ಜನತೆಯ ಉದ್ವೇಗದಿಂದ ಎಲ್ಲೆಲ್ಲಿ ಅಸಾಧಾರಣ ಕಾರ್ಯನಡೆಯಿತೋ ಅಲ್ಲೆಲ್ಲಾ ಅವರು ಬೇಕು ದಳಪತಿಯನ್ನು ಸೆರೆ ಹಿಡಿದ ಕೂಡಲೇ ರಣರಂಗಕ್ಕಿಳಿದು ಮುಂದಾಳುತನ ಕೊಡುವ ಓರ್ವ ಅಜ್ಞಾತ ಯೋಧನಂತೆ ಆಗ ಅವರು ಆಗಿದ್ದರು,

ಬೊರ್ಸಾದಿನಲ್ಲಿ ಕಾರ್ಯರಂಗಕ್ಕಿಳಿದು ದುಡಿವ ಕಸ್ತೂರ್‌ಬಾರನ್ನು ನೋಡುವುದೇ ಒಂದು ದಿವ್ಯ ದರ್ಶನವಾಗಿತ್ತು, 'ಎನೀಮಿಯಾ'ವನ್ನು ಆಳಿಗೆದ್ದಂತೆ ಕಂಡು ಬಂತು ಮುಂಜಾನೆಯಿಂದ ಕತ್ತಲು ತನಕ ಅವರು ತನ್ನಡಿಗಳಿಗೆ ವಿಶ್ರಾಂತಿಕೊಡದೆ ಚಲಿಸುತ್ತಿದ್ದರು ಸ್ಥಳೀಯ ಮುಂದಾಳುಗಳನ್ನು ಕಾಣಬೇಕು, ನಗರದಲ್ಲಿ ಆದ ಘಟನೆಗಳ ವಿವರ ತಿಳಿಯಬೇಕು, ಆಸ್ಪತ್ರೆಯಲ್ಲಿ ಬಿದ್ದಿರುವ ಸತ್ಯಾಗ್ರಹಿಗಳನ್ನು ಕಂಡು ಅವರನ್ನು ಹುರುದುಂಬಿಸಬೇಕು ಮಹಾ ಸಂಸ್ಥೆಯಾದ ಕಾಂಗ್ರೆಸಿನ ಮಹಾ ಮುಂದಾಳುವಿನ ಪ್ರಾತಿನಿಧ್ಯ ವಹಿಸುವುದು ಸಾಮಾನ್ಯ ಕಾರ್ಯವಲ್ಲ ಕಸ್ತೂರ್‌ಬಾ ಪ್ರತಿಯೊಂದು ಕಾರ್ಯಕ್ರಮವನ್ನೂ ಮುಂದಾಳುವಿನಂತೆ ಜಾಗ್ರತೆ ವಹಿಸಿ ಪೂರೈಸುತಿದ್ದರು ಬೋರ್ಸಾದ್ ಪ್ರಾರಂಭದ ರಣರಂಗ ಮಾತ್ರ ಆಗಿತ್ತು

ನಾಡಿಯಾದಿನಲ್ಲಿ ಕೆಲವು ಡಾಕ್ಟರರು ಅವರನ್ನು ಪರೀಕ್ಷಿಸಿ ಎಚ್ಚರವಿತ್ತರು, ಅವರು ಕೂಡಲೇ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು "ನಾನು ಆರೋಗ್ಯದಿಂದಿರುವಂತೆ ನನಗೆ ತೋರುತ್ತದೆ ಬಾಪುವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಿಂಬಾಲಿಸುವುದು ಬಿಟ್ಟು, ಆಶ್ರಮನಿಯಮ ಪಾಲಿಸುವುದನ್ನುಳಿದು ವಿಶ್ರಾಂತಿ ಪಡೆಯುವುದುವಿನಾ ನಾನೇನು ಮಾಡುತ್ತಿದ್ದೆ ಈಗ ಬಾಪೂ ಹೊರಗಿಲ್ಲದಿರುವುದರಿಂದ ನಾನು ಅವರ ಹಾಗೆ ಕೆಲಸ ಮಾಡಲೇಬೇಕು ನಾನು ವಿಶ್ರಾಂತಿ ವಿಚಾರ ಆಲೋಚಿಸಲೇ ಕೂಡದು ಈಗ"

ರೈತರ ಬಂಧು

ಎಲ್ಲಿ ಹೋಗಲಿ ಪ್ರಯಾಣ ಮಾಡುತ್ತಿರಲಿ ಕಸ್ತೂರ್‌ಬಾ ಸಬರ್ಮತಿಯ ಮೊದಲನೆಯ ಆಶ್ರಮವಾಸಿನಿಯಾಗಿದ್ದುದರಿಂದ, ಆಶ್ರಮನಿಯಮ ಬಿಡದೆ ಪಾಲಿಸುತ್ತಿದ್ದರು ಪ್ರಾತಃ ೪ ಗಂಟೆಗೆ ಪ್ರಾರ್ಥನೆ ಮಾಡುವುದರೊಡನೆ ಅವರ ದಿವಸ ಪ್ರಾರಂಭವಾಗುತ್ತಿತ್ತು ಜನನಿಬಿಡ ರೈಲಿನಲ್ಲಿದ್ದರೂ ಅವರು ಆ ನಿಯಮ ತಪ್ಪುತ್ತಿರಲಿಲ್ಲ ಪ್ರತಿದಿನ ಪ್ರಾತಃಕಾಲ ಗೀತಾ ಪಠಣ ಮಾಡುವರು ವಿದ್ಯಾಭ್ಯಾಸವನ್ನು ಜೀವನದಲ್ಲಿ ಬಹಳ ತಡವಾಗಿ ಆಕೆ ತೊಡಗಿದರೂ ಗೀತಾ ಆದಿಯಿಂದ ಅಂತ್ಯದವರೆಗೆ ಅವರಿಗೆ ಬಾಯಿಪಾಠ ಬರುತಿತ್ತು

ಶಾಲೆಗೆ ಹೋಗದಕ್ಕಾಗಿ ನಾನೀಗ ಪಶ್ಚಾತ್ತಾಪ ಪಡುತ್ತೇನೆ" ಹೀಗೆಂದು ಒಮ್ಮೆ ನನ್ನೊಡನೆ ಒಂದು ಪತ್ರಿಕಾ ಪ್ರಕಟಣೆ ಬರೆಸುತ್ತಾ ಅವರು ಹೇಳಿದರು ಬಾಪುವಿನ ಜೀವನ ಸಂಗಾತಿನಿಯಾಗಿ ಸೇರಿದಾಗ, ನನಗೆ ವಿದ್ಯೆ ಕಲಿಸಬೇಕೆಂದು ಅವರಿಗೆ ಬಹಳ ಆತುರ ಇತ್ತು, ಆದರೆ ನನ್ನದು ಬಹಳ ಮಂದಗತಿ, ಲಿಪಿ ಕಲಿಯಲಿಕ್ಕೇ ಹಲವು ತಿಂಗಳು ಹಿಡಿದವು ಒಮ್ಮೊಮ್ಮೆ ನಾನು ಹೀಗೆ ಜಡಳಾಗಿರುವ ಬಗ್ಗೆ ಅವರಿಗೆ ಬಹಳ ಅಸಮಾಧಾನವುಂಟಾದರೂ, ಬಾಪು ನನ್ನ ಮೇಲೆ ಯಾವಾಗಲೂ ದಯೆ ಶಾಂತಿ ತೋರಿಸುತ್ತಿದ್ದರು ನಾನು ಶಾಲೆಗೆ ಹೋಗಬೇಕಿತ್ತೆಂದು ನನಗನಿಸುತ್ತದೆ ಈ ಪತ್ರಿಕೆಯವರು ನನ್ನನ್ನು ಪ್ರಕಟಣೆ ಕೊಡಿರೆಂದು ಆಗಾಗ ತೊಂದರೆ ಕೊಡುತ್ತಾರೆ ಆದರೆ ಪತ್ರಿಕೆಯವರನ್ನು ನಾನು ಮೆಚ್ಚುವುದಿಲ್ಲ ಕೆಲಸ ಮಾಡುವಾಗ ಅವರು ಅಷ್ಟು ಸಂಭಾವಿತರಾಗಿರುವುದಿಲ್ಲ"

ಬಾಪುವಿನ ಇಷ್ಟೆಲ್ಲಾ ಪರಿಶ್ರಮದ ಮೇಲೂ, ತನಗೆ ರಾಜಕೀಯ ಜ್ಞಾನ ಬಹಳ ಕಡಿಮೆಯಿದೆಯೆಂದು ಕಸ್ತೂರ್‌ಬಾ ಚೆನ್ನಾಗಿ ಅರಿತಿದ್ದರು ಪತ್ರಿಕೆಗಳನ್ನು ಓದುವಷ್ಟು ಅವರು ಗುಜರಾಥಿ ಕಲಿತರು ಆದರೆ ಇಂಗ್ಲಿಷು ಜ್ಞಾನ ಮುಂಗುಡುವರಿಯಲೇ ಇಲ್ಲ ಒಮ್ಮೊಮ್ಮೆ ರೈಲ್ವೆ ಸ್ಟೇಶನಿನಲ್ಲಿ ನಾನು ದಿನ ಪತ್ರಿಕೆ ತೆಗೆದುಕೊಂಡಾಗ ಅವರು ಕೂಡಲೇ ಅದನ್ನು ಸೆಳೆದುಕೊಂಡು, ತಲೆಬರೆಹದ ಒಂದೊಂದು ಅಕ್ಷರ ಕಷ್ಟದಿಂದ ಓದುವರು, ಆ ಮೇಲೆ ಪುಟ ತಿರುಗಿಸಿ, ತಾನು ಯಾವಾಗಲೂ ಕುತೂಹಲದಿಂದ ನೋಡುವ, ಗಾಂಧೀಜಿ ಚಿತ್ರ ಎಲ್ಲಿಯಾದರೂ ಇದೆಯೋ ಎಂದು ನೋಡಿ 'ಗಾಂಧೀಜಿ ಸುದ್ದಿ ಏನಾದರೂ ಇದೆಯೆ?' ಅವರು ಏನು ಹೇಳುತ್ತಾರೆ ಎಂದು ಪ್ರಶ್ನಿಸುವರು

ಪ್ರಯಾಣ ಮಾಡುತ್ತಿದ್ದಂತೆ ತನ್ನ ರಾಜಕೀಯ ಜ್ಞಾನ ಹೆಚ್ಚಿಸಲು ಆಕೆ ಪ್ರಯತ್ನಿಸುತ್ತಿದ್ದರು ಧುರೀಣತ್ವದ ಭಾರ ಅವರ ಹೆಗಲ ಮೇಲೆ ಬಿದ್ದಾಗ, ದಿನನಿತ್ಯದ ಘಟನೆ ಮತ್ತು ರಾಜಕೀಯ ಜ್ಞಾನ ತನಗೆ ಪೂರ್ಣ ಇರಬೇಕೆಂದು ಅವರು ತಿಳಿದಿದ್ದರು ಆದರೆ ಪ್ರಾರಂಭದಲ್ಲಿ ಓದು ಬರೆಹ ಕಲಿಯದಿದ್ದುದರಿಂದ ಅವರಿಗೆ ಎಲ್ಲಾ ತಿಳಕೊಳ್ಳುವುದು ಬಹಳ ಪ್ರಯಾಸ ಆಗುತಿತ್ತು ಪತ್ರಿಕೆಗಳ ವಿಷಯ ಅವರು ಹೆಚ್ಚು ದಯಾಭಾವ ಇರಿಸಿರಲಿಲ್ಲ ಪ್ರತಿದಿನ ಅವರು ಪತ್ರಿಕೆಯ ಸಾರಾಂಶವನ್ನು ಕೇಳವರ ಮಗುವಿನಂತೆ ಅದ್ದ ಸವಾಲು ಹಾಕುವರು ಆದರೆ ಕಸ್ತೂರ್‌ಬಾ ಗಾಂಧೀತತ್ವವನ್ನು ಚೆನ್ನಾಗಿ ಬಲ್ಲವರಿದ್ದರು ಪ್ರತಿದಿನ ಗುಜರಾಥಿನ ಹಳ್ಳಿ ಸಂಚರಿಸುವಾಗ ಅವರಿಗೆ ಆ ತತ್ವವನ್ನು ಸರಳ ಸ್ಪಷ್ಟ ಭಾಷೆಯಲ್ಲಿ ಬಾ ತಿಳಿಸಿ ಹೇಳುವರು ಪತ್ರಿಕೆಗಳಿಗೆ ಅವರು ಕೊಡುತಿದ್ದ ಹೇಳಿಕೆಗಳು ಕೂಡಾ ಅಷ್ಟೇ ಸರಳ ಮತ್ತು ಸ್ಪಷ್ಟ ಇದವ

* * *

ಗುಜರಾಥಿನ ಮತ್ತು ಇತರ ಕಡೆಯ ರೈತರ ಮಹಾ ಜನತೆಗೆ ಅವರು ಬಾ (ತಾಯಿ) ಆಗಿದ್ದರು ಬಾಡೋಲಿಯಲ್ಲಿ ಅವರೊಡನೆ ನಾನು ಪ್ರಯಾಣ ಮಾಡಿದಾಗ ಬಾ ಹೋಗದ ಒಂದೇ ಒಂದು ಹಳ್ಳಿಯೂ ಕೂಡಾ ಇಲ್ಲವೆಂದು ನಾ ತಿಳಿದೆ ರೈತರು ಎಷ್ಟೋ ಸಲ ಅವರಲ್ಲಿಗೆ ದೂರು ತರುತ್ತಿದ್ದರು ಗಾಂಧಿ–ಇರ್ವಿನ್ ಒಪ್ಪಂದವಾದ ಕೂಡಲೇ ಸರ್ಭೋನ್ ಗ್ರಾಮದಲ್ಲಿ ಓರ್ವ ಮುದಿ ರೈತ ಕಸ್ತೂರ್‌ಬಾರಲ್ಲಿ ಬಂದು, ಬಾಪು ತಮ್ಮನ್ನು ಸಂಪೂರ್ಣ ಮರೆತುಬಿಟ್ಟುದಾಗಿ ದೂರು ಹೇಳಿದ ಗೇಣಿ ಕರ 'ತೆರಿಗೆ ಕೊಡದಿರುವ ಆಂದೋಲನದಲ್ಲಿ ಭಾಗವಹಿಸಿದ ಗುಜರಾಥಿನ ರೈತರಿಗೆ ಆ ಒಪ್ಪಂದದಿಂದ ಏನೂ ಪ್ರಯೋಜನವಾಗಲಿಲ್ಲವೆಂದು ಅವನ ದೂರಾಗಿತ್ತು ಬಾಪು ಭಾರತದ ಜನತೆಗೆ ಒಳ್ಳೆಯದಾಗುವುದನ್ನೇ ಮಾಡುತ್ತಾರೆ ನಿಮಗೂ ಅವರು ಖಂಡಿತ ಒಳ್ಳೆಯದು ಮಾಡುತ್ತಾರೆ ಚಿಂತಿಸಬೇಡಿ, ನೀವು ಹೇಳಿದ್ದನ್ನು ನಾನು ಅವರಿಗೆ ತಿಳಿಸುತ್ತೇನೆ" ಬಾ ಹೇಳಿದರು

ಪತಿಯೆ ಪರಬ್ರಹ್ಮ

ಕಸ್ತೂರ್‌ಬಾ ಆದರ್ಶ ಹಿಂದೂ ಸತಿಯಾಗಿದ್ದರು ಗಾಂಧೀಜಿಯ ಮೇಲೆ ಬಹಳ ಗೌರವ ಅವರಿಗೆ ಗಾಂಧೀಜಿ ತನ್ನ ಆತ್ಮ ಚರಿತ್ರೆಯಲ್ಲಿ ಅವರ ಕುರಿತು ಬರೆದ ಕೆಲ ವಿಚಾರಗಳ ಕುರಿತು ತಾನು ಅವರೊಡನೆ ಕೆಲ ಸಮಯ ಪ್ರಶ್ನಿಸಿದ್ದೆ "ಬಾಪು ಮಹಾತ್ಮರು, ಅವರು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾರೆ ಆದರೆ ಅವರು ನನಗೆ ಒಮ್ಮೆಯೂ ಅನ್ಯಾಯ ಮಾಡಿಲ್ಲ, ನಾನೇ ಯಾವಾಗಲೂ ತಪ್ಪು ಮಾಡುತ್ತಿದ್ದೆ" ಆಕೆ ಹೇಳಿದರು ಒಮ್ಮೆ

[೭ನೇ ಪುಟಕ್ಕೆ ಮುಂದುವರಿದಿದೆ]

He who has passed through life without ever being in love, has had no spring time—no summer in his existence: his heart is as a flowering plant which hath never blown—never developed itself—never put froth its beauty and its perfume—never given or received pleasure.

—from HEADS AND TALES

ಒಂದು ಸಣ್ಣ ಕತೆ

ಹೂವಿನ ಮುಳ್ಳು

ಲೇಖಕ:—ರತ್ನಾಕರ

‘ಕಲ್ಲಿನ ಹೃದಯ!’

‘ಹೌದು, ಕುರುಡನಿಗೆ ಸರ್ವ ಪ್ರಪಂಚವೇ ಕತ್ತಲೆಯಲ್ಲಿ ಮುಸುಕಿದ್ದಂತೆ ತೋರುತ್ತದೆ, ಕಲ್ಲಿನ ಹೃದಯಕ್ಕೆ ಬೇರೆ ಹೃದಯಗಳೂ ಕಲ್ಲಿನವೇ ತೋರಿದರೆ ಸೋಜಿಗವೇನು!’

‘ಕೆಸರನ್ನು ಕೆಸರಿನಿಂದಲೇ ತೊಳೆಯಲು ಯತ್ನವೆ? ಹೃದಯವನ್ನು ಕಲ್ಲಾಗಿಸಿ ಈಗ ನನ್ನನ್ನು ಕಲ್ಲಿನ ಹೃದಯದವಳೆಂದು ಮೂದಲಿಸುವಿರಾ?’

‘ಎಲೇ ಹುಚ್ಚೀ, ಯಾರಾದರೂ ಕೆಸರನ್ನು ಕೆಸರಿನಿಂದ ತೊಳೆಯುದುಂಟೇ? ಅಂತೂ ನಿನ್ನನ್ನು ಮೂದಲಿಸುವೆನೇ? ನೀನು ರೇಗಿಕೊಂಡು ನನ್ನ ಮೇಲೆ ಮುನಿದರೆ—’

‘ಇಂದಿಗೆ ಸರಿಯಾಗಿ ಎರಡು ತಿಂಗಳುಗಳು ಕಳೆದುವು, ಹಿಂದೆ ದಿನವೂ ನನ್ನನ್ನು ನೋಡ ಬರುತ್ತಿದ್ದವರು ಈಗ ನಿಮ್ಮ ಪತ್ತೆಯೇ ಇಲ್ಲ, ನಿಮ್ಮ ಸುದ್ದಿಯೂ ನನ್ನ ಕಿವಿಗೆ ಬೀಳದ ಹಾಗೆ ಯತ್ನಗೊಂಡಿರುವಿರಿ—ಏಕೆ? ನಾನು ಸೇರುವುದಿಲ್ಲವೆಂದೇ? ಅಥವಾ ಬೇರೊಬ್ಬಳು ಗಂಟು ಬಿದ್ದಳೆಂದೇ?’

‘ನೋಡು—ನೀನೇ ಒಮ್ಮೆ ನುಡಿದಿದ್ದೆ—ಗಂಡಸರು ಪಾತರಗಿತ್ತಿಯ ಹಾಗೆ ಮತ್ತು ಹೆಂಗಸರು ಪತಂಗದ ತೆರನಂತೆಂದು—ಒಂದು ಹೂವಿನಿಂದ ಇನ್ನೊಂದು ಹೂವಿಗೆ ಪಾತರಗಿತ್ತಿಯು ಹಾರಿದರೆ ದೀಪಕ್ಕೆ ಮುಗಿಬಿದ್ದು ಸುಟ್ಟು ಹೋಗುವ ಪತಂಗಕ್ಕೆ ಏನು ಕೇಡಾಯಿತು?’

‘ನಾವು ಹುಟ್ಟಿದುದೇ—ಮುಗಿಬಿದ್ದು ಸಾಯಲಿಕ್ಕೆ ಅಲ್ಲವೇ? ನೀವು ಗಂಡಸರು ಹೂವಿನಿಂದ ಹೂವಿಗೆ ಸರಸವಾಗಿ ಹಾರಾಡಲಿಕ್ಕೆ ಹುಟ್ಟಿದುದು ತಾನೇ? ದೇವರು ಎಂತಹ ಪಕ್ಷಪಾತಿಯು! ನಾವು ಮುಗಿಬಿದ್ದು ಸುಟ್ಟು ಹೋಗುತ್ತಿರುವಾಗ ನಿಮಗೆಲ್ಲ ಹಾರಾಟಕ್ಕಾಗಿ ಹೂವಿನ ಓರಣವನ್ನೇ ಸೃಷ್ಟಿಸಿರುವನಲ್ಲ!’

ದೇವರು ಪಕ್ಷಪಾತಿಯೇ? ನನಗೇಕೋ ಈ ಮಾತಿನಿಂದ ಕಸಿವಿಸಿಯಾಯಿತು. ದೇವರ ಜ್ಞಾನವೇ ನನಗಿದೆಯೋ ಇಲ್ಲವೋ ಹೇಳುವುದು ಬಲು ಕಷ್ಟ. ಯಾವುದೋ ಒಂದು ಉದ್ದೇಶಕ್ಕನುಸಾರವಾಗಿ ನಾನೀ ಪ್ರಪಂಚದಲ್ಲಿ ಹುಟ್ಟಿ ಬಂದು ಯಾವುದೋ ಧ್ಯೇಯವನ್ನರಸುತ್ತಾ ಸುಳಿಯುತ್ತಿದ್ದೇನೆ—ನಿಜ, ಆ ಧ್ಯೇಯವು ಯಾವುದು ಇಲ್ಲವೆ ಎತ್ತ ಕಡೆ ಸುಳಿಯುತ್ತಿದ್ದೇನೆ ಎಂಬುದನ್ನು ನಾನು ತಿಳಿಯಲಾರೆ—ಅದೆಲ್ಲ ವಿಧಿಯ ಆಟ! ನನ್ನಂತೆಯೇ ಇತರರೂ ಇದೇ ಗತಿಯಲ್ಲಿ ಚಲಿಸುತ್ತಿರಬೇಕು ಎಂದು ಭಾವಿಸುತ್ತೇನೆ. ಎಲ್ಲವೂ ಪರಮಾತ್ಮನ ಉದ್ದೇಶವಾದುದರಿಂದ ಬೆಂಕಿಗೆ ಮುಗಿಬಿದ್ದು ಸುಟ್ಟು ಹೋಗುತ್ತಿರುವ ‘ನಮ್ಮಂತಹ’ ಹುಳುಗಳಿಗೆ ‘ಜ್ಯೋತಿ’ಯನ್ನು ಟೀಕಿಸುವದು ಸಲ್ಲದು. ಆದುದರಿಂದ ಉತ್ತರ ಕೊಡದೆ ಮೌನಿಯಾದೆ.

‘ಹೂವಿನಿಂದ ಹೂವಿಗೆ ಹಾರಾಟವಾಗಿವೆಯೆಂದಾಗ ನಿಮ್ಮ ಸ್ವೊಲ್ಲೀ ಇಲ್ಲ ತಿಳಿಯಿತು—ನಿಮ್ಮ ಗುಟ್ಟು ರಟ್ಟಾಯಿತು—ಹಾಯ್, ಇಲ್ಲ ನಾನು ಸುಟ್ಟು ಹೋಗುತ್ತಿದ್ದೇನೆ—ಅಲ್ಲ ನೀವು ಮಕರಂದವನ್ನು ಹೀರುತ್ತೀರಿ—ಏನು, ನನ್ನನ್ನು ನಡುನೀರಿನಲ್ಲಿ ಕೈ ಬಿಡಲಿಕ್ಕೆ ನಾನು ಮಾಡಿದುದಾರೇನು?’

‘ನೀನು ಏನನ್ನೂ ಮಾಡದೇ ಇದ್ದುದೇ ತಪ್ಪು. ನೀರಿಗಿಳಿಯುವಾಗಲೇ ಪರ್ಯಾಲೋಚಿಸಬೇಕು, ನೀರಿನ ಆಳವೆಷ್ಟಿದೆಯೆಂದು—ನಡುನೀರಿಗೆ ಬಂದು ಕಳಸಿಕ್ಕದಾಗ ಮತ್ತೆ ಕೈಕಾಲು ಬಡಬಾರದು!’

‘ನಿಮ್ಮ ಮಾತುಗಳೆಲ್ಲ ಒಗಟಿನ ಮಾತುಗಳೇ—ನಿಮ್ಮ ಕತೆಗಳಲ್ಲಿರುವ ಪಾತ್ರಗಳ ಮುಖದಿಂದ ಹೊರಡಿಸುವ ಮಾತುಗಳು—ಅವುಗಳನ್ನು ತಿಳಿಯುವುದೂ ಕಷ್ಟ—ತಿಳಿಯದಿರುವುದೂ ಕಷ್ಟ. ಟಾಲಸ್ಟಾಯಿಯವರು ತಮ್ಮ ‘ಎನ್ನಾ ಕೆರಿನಾ’ದಲ್ಲಿ ಗಂಡಸರಿಗೆ ಮತ್ತರವೇ ಮೋಹಿನಿಯಾನಿ ಬಂದರೂ ನೈಗೂಡಲು ನೆಲೆಗಾಗುತ್ತದೆಂದು” ಒಂದು ಪಾತ್ರದಿಂದ ನುಡಿಸಿದುದು ನಿಮಗೆ ನೆನಪಿಲ್ಲವೆ? ನೀವು ಎಚ್ಚರದಪ್ಪಿ ನಿಮ್ಮ ಕೈ ತಲೆಯ ಮೇಲಿಟ್ಟು ಕೊಂಡು ಸುಟ್ಟು ಹೋಗುವಿರಿ—ಜೋಕೆ!’

‘ಹುಟ್ಟುವುದು ಸಾಯುವುದಕ್ಕಾಗಿ ಎಂದ ಮೇಲೆ ಮೋಹಿನಿಯನ್ನು ಪಡೆದು ಸಾಯುವುದರಲ್ಲಿ ಆನಂದವಿಲ್ಲವೇ — ಅಲ್ಲ, ಏನೆಲ್ಲ ವಿಚಾರಗಳನ್ನು ನಿನ್ನ ಈ ಪುಟ್ಟ ತಲೆಯಲ್ಲಿ ತುಂಬಿಕೊಂಡು ಬಂದಿದ್ದೀಯೇ? ಇಷ್ಟು ಚಿಕ್ಕ ತಲೆಯೊಳಗೆ ದೊಡ್ಡ ದೊಡ್ಡ ವಿಚಾರಗಳನ್ನು ತುಂಬಬಾರದು ನೋಡು—ಹುಚ್ಚು ಹುಡುಗಿ!’ . .

ಸುಳಿಗ್ಗಾಳಿ ಬರುವುದೂ ಗೊತ್ತಾಗುವುದಿಲ್ಲ—ಹೋಗುವುದೂ ಗೊತ್ತಾವುದಿಲ್ಲ—ಹುಬ್ಬು ಗಂಟಿಕ್ಕಿ ನಡೆದೇ ಬಿಟ್ಟಳು! ಸಿಟ್ಟಿಗೆದ್ದಾಗ ಅವಳ ಮುಖವೆಷ್ಟೋ ಸುಂದರವಾಗಿ ತೋರುತ್ತೆಂದು ಹಿಂದೊಮ್ಮೆ ಅವಳಿಗೆ ಹೇಳಿದ್ದೆ. ಅಂದಿನಿಂದ ಸಿಟ್ಟಿದ್ದರೆ ಅವಳು ಮುಖವನ್ನು ನನಗೆ ತೋರಿಸುವುದೇ ಇಲ್ಲ—ಅಷ್ಟು ಕೋಪ!

ಹೂವಿನಿಂದ ಹೂವಿಗೆ ಹಾರಾಡುವ ಪಾತರಗಿತ್ತಿಯೆಂದು ನನ್ನನ್ನೇಕೆ ಹೇಳಿದಳು? ಹೂವಿನಿಂದ ಹೂವಿಗೆ ಹಾರಾಡಿದ್ದೇನೆಯೇ?

ಅವಳೂ ನನಗೂ ಸ್ನೇಹವಾದಂದಿನಿಂದ ನಾನವಳ ಶಾಲೆಗೆ ದಿನಕ್ಕೊಮ್ಮೆ ಬಿಡದೆ ಹೋಗುತಿದ್ದೆ—ಅವಳು ಒಬ್ಬ ಉಪಾಧ್ಯಾಯಿನಿಯೆಂದು ನಿಮಗೆ ತಿಳಿಸದೆ ಇರಲಾರೆ—ಮಧ್ಯಾಹ್ನ ಕೆಲಸದಿಂದ ಕೊಂಚ ಬಿಡುವಿತ್ತು. ಅವಳ ಪಾಠಾರಂಭವಾಗುವ ಸಮಯ ಒಂದು ಅರೆ ತಾಸು ಅವಳ ಪಾಠಾರಂಭವಾಗುವ ಸಮಯ ಒಂದು ಅರೆ ತಾಸು ಅವಳ ದರ್ಜೆಗೆ ಕಾಲಿಕ್ಕಿ ಬರುವುದು ನಿತ್ಯದ ಕಟ್ಟಳೆಯಾಗಿತ್ತು. ಈಚೆಗೆ ಕೆಲವು ದಿನಗಳಿಂದ ಹೋಗುತಿದ್ದಿಲ್ಲ—ಕಾರ್ಯಾಂತರದಿಂದ. ಆದರೂ ಅವಳು ನಂಬಬೇಕಲ್ಲ.

ಹಾದಿಯಲ್ಲಿ ನಾವಿಬ್ಬರು ಹೋಗುತಿದ್ದಾಗ ಪರಿಚಯದ ಸ್ನೇಹಿತರು—ಅದರಲ್ಲೂ ಹುಡುಗಿಯರು ದೊರೆತರೆ ಅವಳಿಗೆ ತುಂಬಾ ಅಸೂಯೆ. ಒಮ್ಮೊಮ್ಮೆ ಅವಳ ದೆಸೆಯಿಂದ ಊರಲ್ಲಿದ್ದ ಎಲ್ಲ ಹುಡುಗಿಯರೂ ನನ್ನನ್ನು ಪ್ರೇಮಿಸುತಿದ್ದಾರೋ ಎಂಬ ಸಂದೇಹ ನನಗೇ ಬರುತ್ತಿತ್ತು! ಒಂದು ನಗೆಗಾಗಿ, ಒಂದು ಔಪಚಾರಿಕ ನುಡಿಗಾಗಿ ತುಂಬಾ ಕಚ್ಚಾಟ. ಈ ಅಸೂಯೆಯನ್ನು ತೆಗೆದು ಹಾಕಬೇಕೆಂದು ನಾನೆಷ್ಟು ಪ್ರಯತ್ನಪಡುತಿದ್ದೆ! ಮಹಾಕವಿ ಶೇಕ್ಸಪಿಯರು ಒಮ್ಮೆ ಹಾಡಿದ್ದರು—

For when Love reigns, disturbing jealousy Doth call himself Affection's sentinel'

ಮಾತ್ರವಲ್ಲ, ಈಚೆಗೆ ಒಂದೆರಡು ವರ್ಷಗಳ ಹಿಂದೆ ಡಾ। ಜೋನ್ ರೋಕ್ವೆಲ್ಲರು—‘If some one takes your girl out and you don't feel the urge to punch him on the nose—well, you are not in love!’ ಎಂದು ಕೊಂಚ ಉಗ್ರವಾಗಿಯೇ ಟೀಕಿಸಿದ್ದರು.

ಇದರಿಂದ ನಮ್ಮೊಳಗೆಷ್ಟೊ ರಂಪಾಟವಾಗುತಿದ್ದರೂ ನನಗೆ ಮಾತ್ರ ಒಂದು ಬಗೆಯ ಹರುಷ. ಅವಳ ಅನುರಾಗ ನನ್ನಲ್ಲಿತ್ತೆಂದು. ಹೂವನ್ನು ಕೊಯ್ಯುವಾಗ ಒಮ್ಮೊಮ್ಮೆ ಅದರ ಮುಳ್ಳುಗಳು ಚುಚ್ಚುತ್ತವೆ, ಚುಚ್ಚುವಾಗ ಸ್ವಲ್ಪ ನೋವಾದರೂ ಆಗಬಹುದು. ಆದರೆ ಕೊಯ್ಯುವುದು ಹೂವನಲ್ಲವೇ? ಹೂವಿನ ಸೌಂದರ್ಯ ಸುವಾಸನೆಯು ಇದಿರಿಗೆ ನೋವಿನ ಗೊಡವೆಯೇ ಇರುವುದಿಲ್ಲವೆಂದು ನನಗೆ ಗೊತ್ತು. ಹೀಗಾಗಿ ಅವಳ ಕಚ್ಚಾಟವು ನನಗೊಂದು ನಿತ್ಯದ ಸರಳೆರಗಳೆಯಂತೆ.

ಆ ದಿನ ಬಿಡುವನ್ನು ದೊರಕಿಸಿ ಅವಳ ದರ್ಜೆಗೆ ಕಾಲಿಟ್ಟೆನು. ಹುಡುಗಿಯರ ವರ್ಗವೆಂದರೆ ಚೆಂದಾದ ಒಂದು ಹೂ ತೋಟ. ಹುಡುಗರ ವರ್ಗ ಅದೆಷ್ಟು ನೆಟ್ಟಗಿದ್ದರೂ ಹಣ್ಣಿನ ತೋಟವೆಂದು ಒಬ್ಬ ಉಪಾಧ್ಯಾಯರು ಒರೆದಿದ್ದರು. ಹೌದೆಂದು ತೋರಿತು. ನೆತ್ತಿಸುಡುವ ಬಿಸಿಲಿಗೆ ನಡೆದು ಬಂದು ಹುಡುಗಿಯರ ವರ್ಗವನ್ನು ಹೊಕ್ಕಾಗ ವರ್ಗ ತುಂಬ ಹೂವಿನ ಸೌರಭವೇ! ಇದನ್ನು ನೋಡಿ ಮನಸ್ಸಿಗೆ ಆನಂದವಾಯಿತು.

ಅವಳ ಲಕ್ಷ್ಯವನ್ನು ನನ್ನ ಕಡೆಗೆ ಸೆಳೆಯಬೇಕೆಂದು ನಾನು ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲ. ನನಗೆ ಸಂದೇಹ ಬಂತು. ಅವಳು ಬೇಕೆಂತಲೇ ಬೆಚ್ಚು ಮೋರೆ ಹಾಕಿದ್ದಾಳೋ ಎಂದು. ಪ್ರಯೋಜನವಿಲ್ಲ, ಹಿಂದೊಮ್ಮೆ ಹೆಸರಾಂತ ಕಾದಂಬರಿಕಾರರು ‘ಹೆಂಗಸರ ಬುದ್ಧಿ ಮೊಣಕಾಲ ಕೆಳಗೆಂದು’ ವಾದಿಸಿದ್ದರು. ನನಗೆ ಆ ಮಾತಿನಲ್ಲಿ ವಿಶ್ವಾಸವಿರದಿದ್ದರೂ ಸುಳ್ಳಾಗಲಾರದೆಂದು ತೋರಿತು. ಕ್ಷುಲ್ಲಕ ವಿಚಾರಗಳಿಗೆ ತಲೆ ಕೆದರಿ ಕೊಂಡು ಸುಮ್ಮನೆ ಸಿಡಿದು ಕೊಂಡಿದ್ದಾಳಲ್ಲ!

ಕನಿಕನಿಯಾಗಿ ಆಗ ನಮ್ಮ ಸಾಲೆಯ ಮುಖ್ಯೋಪಾಧ್ಯಾಯಿನಿ ಆ ದರ್ಜೆಗೆ ಕಾಲಿಟ್ಟಳು. ನಾನು ‘ನಮ್ಮ’ ಶಾಲೆಯ ಮುಖ್ಯೋಪಾಧ್ಯಾಯಿನಿಯೆಂದು ಹೇಳಿದೆನೇ? ನೋಡಿದಿರಾ, ನನಗೂ ಅವಳಿಗೂ ಗಂಟು ಬಿದ್ದದರಿಂದ ಅವಳ ವಿಚಾರಗಳನ್ನೆಲ್ಲ ಬಾಯಿ ತಪ್ಪಿಯೋ ಏನೋ ನಮ್ಮ ವಿಚಾರಗಳೆಂದೇ ಹೇಳುತ್ತೇನೆ. ಅವಳ ಸ್ನೇಹಿತರು ನನ್ನ ಸ್ನೇಹಿತರೇ, ಅವಳ ಮೆಚ್ಚಿನ ವಸ್ತುಗಳೂ ನನ್ನ ಮೆಚ್ಚಿನವೇ, ಅವಳಿಗೆ ಹಗೆಯಾದರೆ ನನಗೂ, ಅವಳಿಗೆ ಬೇಡದ ವಸ್ತುವಿನಲ್ಲಿ ನನಗೂ ಹಾಗೆ ಹಾಗೆಯೇ. ಎಂದರೆ ನಮ್ಮ ಹೂವಿನ ಬಳ್ಳಿಯು ಬೆಳೆಯಲಾರಂಭವಾದಂದಿನಿಂದ ನಮ್ಮಿಬ್ಬರ ಧ್ಯೇಯ ಬಾಳುಗಳೂ ಒಂದು, ಹೆಚ್ಚೇಕೆ? ನಮ್ಮಿಬ್ಬರ ಪ್ರಪಂಚವೂ ಒಂದೇಯಾಗಿದೆ. ಇಂತಹ ಸ್ಥಿತಿಯಿರುವಾಗ ನಾನು ಅವಳ ಶಾಲೆಯನ್ನು ನಮ್ಮ ಶಾಲೆಯೆಂದು ಕರೆದರೆ ಅದರಲ್ಲಿ ಸೋಜಿಗದ ವಿಷಯವೇನಿದೆ?

ಆ ಮುಖ್ಯೋಪಾಧ್ಯಾಯಿನಿಯು ತೀರ ನಿರ್ದುಷ್ಟವಾದ ವಾತಾವರಣದಲ್ಲಿಯೂ ಸಲ್ಲದ ಕಿರುಕುಳವನ್ನು ಹುಡುಕುವ ಆತುರದ ಮೂರ್ತಿಯೆಂದೊಮ್ಮೆ ಅವಳು (ನನ್ನಾಕೆ) ನನಗೆ ತಿಳಿಸಿದ್ದಳು. ಹೀಗಿರುತ್ತಾ ನಾನು ಅಲ್ಲೇಕೆ ಕಾಲಿಟ್ಟೆನೆಂದು ಅವಳು ಕೇಳಿದರೆ ಏನು ಉತ್ತರ ಕೊಡಬೇಕು? ಅವಳ (ನನ್ನಾಕೆಯ) ಪೀತಿಯನಲ್ಲ ನೊಡು ಹೇಳುವುದು ಸಾಧ್ಯವೇ? ಮತ್ತು ಸಮಂಜಸವೇ? ಆ ಮುಖ್ಯೋಪಾಧ್ಯಾಯಿನಿಯು ಹಿಂದೆಂದೂ ನನ್ನನು ನೋಡಿರಲಿಲ್ಲ. ನನ್ನನ್ನು ನೋಡಿದಕೂಡಲೇ ಸಂಶಯಿತಳಾಗಿ ಇವರ್ಯಾರು ನಿಮಗೆ ಗೊತ್ತೇ ಎಂದವಳನ್ನು ಹುಬ್ಬು ಗಂಟಿಕ್ಕಿ ಪ್ರಶ್ನಿಸಿದಳು. ಎಲ್ಲಾದರೂ ಇವಳು ನಮ್ಮಾಫೀಸಿಗೆ ಬರೆದು ಹಾಕಿದರೆ ನನ್ನ ಕತ್ತೆತ್ತಲಾಗದು ಹೋಗಲಿ, ಅವಳೂ (ನನ್ನಾಕೆಯೂ) ಪ್ರಪಂಚಕ್ಕೆ ಮುಖ ತೋರಿಸಲಾಗುವುದೇ?

ಮೇಲಾಗಿ ಈಚೆಗೆ ನನಗೂ ಅವಳಿಗೂ ಮನಸ್ತಾಪ ಬಿದ್ದಿದೆ, ಬೆಂಕಿ ತಾಗಿದ ಹಾಗೆ-ನಂದಿಸುವಳೇ, ಇಲ್ಲ ಉರಿಯಿಕ್ಕುವಳೇ ತಿಳಿಯದು. ಆದರೆ ಅವಳು ಮೋರೆ ತಿರುಗಿಸಿ ನನ್ನ ಕಡೆಗೆ ಎವೆಯಿಕ್ಕದೆ ನೋಡುತ್ತಾ ಸ್ವಲ್ಪ ಮುಗುಳ್ನಕ್ಕು ‘ಓಹೋ ಇವರು’ ತಾನೇ ಮೊಂಟಿಸ್ಸೂರಿ ಶಿಕ್ಷಣಕ್ರಮದ ಡಿಪ್ಲೋಮಾ ಪರೀಕ್ಷೆಗೆ ಕೂತುಕೊಳ್ಳುತ್ತಾರಂತೆ. ಈಚೆಗೆ ಕೆಲವು ದಿನಗಳಿಂದ ನಮ್ಮ ಶಾಲೆಗೆ ಬರುತ್ತಾ ಪಾಠ ಕ್ರಮಗಳನ್ನು ಅಧ್ಯಾಸಕ್ಕಾಗಿ ನೋಡುತ್ತಾರೆ’. . . ಎಂದು ಹೇಳಿದಾಗ ಬದುಕಿದಂತಾಯಿತೆಂದು ತಿಳಿದೆನು. ಅವಳ ಸಮಯೋಚಿತ ಬುದ್ಧಿ ಕೌಶಲಕ್ಕಾಗಿ ಬೆರಗು ಗೊಂಡೆನು. ಕೂಡಲೇ ಆ ಮುಖ್ಯೋಪಾಧ್ಯಾಯಿನಿಯನ್ನು ವಂದಿಸುತ್ತಾ, ಹೌದು ಹೌದು ಮೊಂಟಿಸ್ಸೂರಿ ಶಿಕ್ಷಣ ಕ್ರಮಕ್ಕೂ ನಿಮ್ಮ ಕ್ರಮಕ್ಕೂ ವಿಶೇಷ ಹೆಚ್ಚು ಕಡಿಮೆಯಿಲ್ಲ ಎಂದು ಮಾರ್ಮಿಕವಾಗಿ ಹೇಳಿ ಅವಳ ಶಾಲೆಯನ್ನು ಕೊಂಡಾಡಿ ಅಲ್ಲಿಂದ ಹೊರ ಬಂದೆನು. ಅವಳ ಶಾಲೆಯನ್ನು ಕೊಂಡಾಡುವ ರಭಸದಲ್ಲಿ ನಾನು ಕಳೆದ ವರ್ಷ ಶಾಂತಿನಿಕೇತನವನ್ನೂ ಟಾಗೋರರನ್ನೂ ಸಂದರ್ಶಿಸಿ ಬಂದಿದ್ದೇನೆಂದೂ ಅವಳು (ನನ್ನಾಕೆ) ಸುಳ್ಳಿಗೆ ಸುಳ್ಳನ್ನು ಸೇರಿಸಿದ್ದಳು. ಹಾಗೂ ಹೀಗೂ ಸಂಭಾಷಣೆ ಮುಗಿದು ಹೊರ ಬಂದಾಗ ನೆನಪಾಯಿತು. ಅಕ್ಷಮ್ಯವಾದ ಸುಳ್ಳನ್ನು ಹೇಳಿದೆನೆಂದು. ಟಾಗೋರರನ್ನು ಕಂಡಿದ್ದೆನೆಂದು ಹೇಳಿದ್ದನ್ನು ಒಪ್ಪಿದ್ದೆನು. ಕಳೆದ ವರ್ಷದಲ್ಲಿ ಅಸಾಧ್ಯವಾದ ಮಾತು; ಅವರು ಕೀರ್ತಿಶೇಷರಾಗಿ ಕೆಲವು ವರ್ಷಗಳು ಸಂದ ಬಳಿಕ ಕಳೆದ ವರ್ಷ ಅವರನ್ನು ನೋಡಿದ್ದ ಕತೆ ಸುಳ್ಳೇ ಅಲ್ಲವೇ? ನನ್ನಿಂದ ಬೇಕೆಂತಲೇ ಸುಳ್ಳು ಹೇಳಿಸಿದಳಲ್ಲಾ? ಆ ಹಿರಿಯಾಕೆಗೆ ತಿಳಿದರೆ ನಾವು ಹೇಳಿದುದೆಲ್ಲ ಸಟೆಯೆಂಬುದು ನಿಜವಾಗುವುದಲ್ಲ!

ಶಾಲೆಯಿಂದ ಹೊರ ಬರುತ್ತಿರುವಾಗ ಮೆಲ್ಲನೆ ಅವಳ ಬಳಿ ಸಾರಿ—‘ಲೇ ನಾನು ಟಾಗೋರರನ್ನು ಕಳೆದ ವರ್ಷ ಕಂಡಿದ್ದೆನೆಂದು ಸಟೆಯನ್ನಾಡಿದಿಯಾ? ಅವರು ಕೀರ್ತಿಶೇಷರಾಗಿ ಎಷ್ಟೋ ವರ್ಷಗಳಾದುವು ನಿನಗೆ ತಿಳಿಯದೆ?’’ ಎಂದು ಹೇಳಲು —

ಅವಳು ಗಾಬರಿಯಾದಳು. ‘ಬೇಗ ಹೇಳಿ ಇದರ ಪರಿಹಾರ, ಅವಳಿಗೆ ತಿಳಿದರೆ ಮತ್ತೇನು ಉಳಿಯಿತು?

ಹೌದು, ಒಮ್ಮೆಗೇ ಏನು ಹೇಳುವುದು ಎಂದು ನನಗೆ ತೋರಲಿಲ್ಲ. ದೈವಾನುಗ್ರಹದಿಂದ ಪಕ್ಕನೆ ಹೊಳೆಯಿತು, ಟಾಗೋರರ ಮಗನೂ ಟಾಗೋರ ತಾನೇ ಎಂದು.

ಮೇಲಿನ ಉಪಾಯವನ್ನು ಅವಳಿಗೆ ಸೂಚಿಸಿದಾಗ ನಗು ಬಂದು ಆನಂದಾಶ್ರುವನ್ನು ಸುರಿಸಿದಳು. ಅದನ್ನು ನೋಡಿ ನಾನು ‘ಏನೇ ಕಂಬನಿ ಸುರಿಸುತಿದ್ದಿಯೊ?’ ಎಂದು ಬೇಕಂತಲೇ ಕೇಳಿದೆನು.

ನೋಡಿದಿರಾ, ಈ ಕಂಬನಿ ಸಂತಸದಲ್ಲಿಯೂ ಬರುತ್ತಿದೆ ದುಃಖದಲ್ಲಿಯೂ ಪಲ್ಯಕ್ಕೆ ಉಪ್ಪಿದ್ದ ಹಾಗೆ, ಉಪ್ಪಿಲ್ಲದಿದ್ದರೆ ರುಚಿಯೇ ಇಲ್ಲ.

ಕಂಬನಿ ಒರೆಸಲಿಕ್ಕೆ ಯಾರಾದರೂ ಇದ್ದರೆ ಅಳುವುದರಲ್ಲಿ ಆನಂದವಿರುತ್ತದೆಂದು ಖಾಂಡೇಕರರು ಬರೆದುದು ನೆನಪಿಗೆ ಬಂತು. ‘ಕಂಬನಿ ಒರಸಲಿಕ್ಕೆ ನಾನಿರುವಾಗ ನಿನಗೇತರ ಯೋಚನೆ? ಹಾಯ್, ನನಗೂ ಒಮ್ಮೊಮ್ಮೆ ಕಂಬನಿ ಒರಸಲಿಕ್ಕೆ ಯಾರಾದರೂ ಇದ್ದರೆ ಆದೀತೆಂದು ತೋರುತ್ತದೆ’ ಎಂದು ನಗೆ ಮಾತನ್ನುಸುರಿದೆ.

“ನೀವು ಕಂಬನಿ ಮಿಡಿಯ ಎವುದನ್ನು ನಾನು ನೋಡಿಯೇ ಇಲ್ಲವಲ್ಲ ಇದಿದ್ದರೆ ನಾನು ನೋಡಿ ಒಂದಲ್ಲ ಒಂದು ದಿನ, ಅಲ್ಲ ನೀವು ಏಕೆ ನನ್ನನ್ನು ನೋಡುವುದನ್ನು ಕಡಿಮೆ ಮಾಡಿರುತ್ತೀರಿ?”

“ವರ್ಷಕ್ಕೊಮ್ಮೆ ಅರೆ ತಾಸು ಮಾತ್ರ ತಮ್ಮ ಪ್ರೇಯಸಿಯನ್ನು ನೋಡುವುದು ಲೇಸೆಂದು Balzac ಹೇಳಿದ್ದಾರಲ್ಲಾ?”

“ಆದರೆ Balzac ರೇ ಸ್ವತ ಅರೆ ತಾಸಿಗೆ ಹೆಚ್ಚೇ ಸಮಯ ತಮ್ಮ ನಲ್ಲೆಯೊಡನೆ ಕಳೆಯುತ್ತಿದ್ದುದನ್ನು ಒಪ್ಪಿಕೊಂಡಿದ್ದಾರಲ್ಲ?”

“ನಾನು Balzac ಅಲ್ಲ ತಾನೇ!”

“ಇಕ್ಕಿ ಸಿಕ್ಕಿ ಬೀಳುವ ಪ್ರಸಂಗ ಬಂದಾಗ ನುಸುಳಿಹೋಗುವುದರಲ್ಲಿ ಮಹಾ ಜಾಣರು ನೀವು!”

Secondhand Articles for Sale!

1 A Singer Sewing Machine.
2. A Type-writer.
3. A Gramaphone.
4 A Set of Band Instruments.
5. Ceiling Tiles.

All in excellent condition.

Enquire at X
C/o The Editor
SWADESHABHIMANI.

ಕೆಲಕಾಲ ತಟಸ್ಥವಿದ್ದ ರಶ್ಯನ್ ರಣರಂಗ ಒಮ್ಮೆಯೇ ಕೆರಳಿಬಿಟ್ಟಿದೆ; ಜರ್ಮನರೂ ರಶ್ಯನರೂ ಹಾದಾಹಾದಿ ಹೋರಾಡುತ್ತಿದ್ದಾರೆ. ಪುನಃ ಒಮ್ಮೆ ರಶ್ಯದಲ್ಲಿ ರಕ್ತದ ಕಾಲುವೆ ಹರಿಯತೊಡಗಿದೆ.

ಸಮರ ಭೂಮಿಯ ಸಂಚಾರ

ಪಶ್ಚಿಮ ಯುಕ್ರೈನಿನಲ್ಲಿ ಜಯ

ಪಶ್ಚಿಮ ಯುಕ್ರೈನಿನಲ್ಲಿ ರಶ್ಯನರು ವಿಜಯ ಪಡೆದಿರುವರು. ತಾ. ೭ರಂದು ಪೊಲೊಟಿಸ್ಕ ನಗರವನ್ನು ಆಕ್ರಮಿಸಿದರು; ಇದು ಪೋಲಿಶ್ ಗಡಿನಾಡಿನಲ್ಲಿದೆ. ಒಡೆಸ್ಸಾ—ವಾರ್ಸಾ ರೈಲ್ವೆ ರಸ್ತೆಯ ಕೆಲ ಭಾಗಗಳೂ ರಶ್ಯನರ ಸ್ವಾಧೀನ ಬಂದಿವೆ. ಈ ರಸ್ತೆಯಾಗ ಕತ್ತರಿಸಲ್ಪಟ್ಟುದರಿಂದ ನೀಪರ್ ವಕ್ರಕ್ಕೆ ಸಹಾಯ ಕಳುಹಿಸಲು ಜರ್ಮನಿಗೆ ಅನುಕೂಲವಾಗಿದೆ. ಈ ವಕ್ರದಲ್ಲಿರುವ ಜರ್ಮನ್ ಬಲ ಬೇಗನೇ ಹಿಂತಿರುಗದಿದ್ದರೆ ಮುತ್ತಲ್ಪಡುವ ಅಂಜಿಕೆಯಿರುವುದು. ಈಗ ರಶ್ಯನ್ ಸೇನೆ ಟರ್ನೊಪೋಲಕ್ಕೆ ಕೇವಲ ಹತ್ತು ಮೈಲು ದೂರದಲ್ಲಿದೆ. ಈ ಪಟ್ಟಣವೂ ರಶ್ಯನರ ವಶವಾದರೆ ಜರ್ಮನರ ಅವಸ್ಥೆ ನಿಕೃಷ್ಟವಾಗುವುದು.

ಉತ್ತರ ರಶ್ಯದಲ್ಲಿ ತಡೆ!

ಉತ್ತರ ರಶ್ಯದಲ್ಲಿ ಹವೆ ಅನಾನುಕೂಲವಿರುವುದರಿಂದ ಹಾಗೂ ಜರ್ಮನರು ಪ್ರಬಲವಾಗಿ ಪ್ರತಿಭಟಿಸುತ್ತಿವುದರಿಂದಲೂ ರಶ್ಯನ್ ಸೈನ್ಯದ ಮುನ್ನಡೆಗೆ ತೊಡಕುಂಟಾಗಿರುವುದೆಂದು ರಾಯಿಟರ್ ಸುದ್ದಿಗಾರನ ವರದಿ. ಸ್ಕೋವ್ ಯುದ್ಧವು ಮೊದಲಾಗಿ ಎಲ್ಲರ ಲಕ್ಷ್ಯ ಸೆಳೆದಿತ್ತು; ಬಾಲ್ಟಿಕ್ ರಾಷ್ಟ್ರಗಳ ಬೀಗದ ಕೈಯಂತಿರುವ ನಾರ್ವಾ ಯುದ್ಧವೂ ಈಗ ಮುಗಿಯುತ್ತಾ ಬಂದಿದೆ. ಇತರ ಎಲ್ಲಾ ರಣಕ್ಷೇತ್ರಗಳಿಗಿಂತಲೂ ರಶ್ಯನರು ಸದ್ಯ ಇಲ್ಲಿ ಪ್ರಬಲ ಪ್ರತಿಭಟನೆ ಕೊಡುತ್ತಿದ್ದಾರೆ. ರಶ್ಯ–ಜರ್ಮನ್ ಯುದ್ಧ ಪ್ರಾರಂಭವಾದ ಸಮಯದಲ್ಲಿ ಅನುಸರಿಸಿದ ತಂತ್ರವನ್ನೇ ಜರ್ಮನರು ಪುನಃ ಈಗ ಕೈಕೊಂಡಿರುವರು. ಸೇನೆಗಳ ಮೇಲೆ ಸೇನೆ ಕಳುಹಿಸುವುದನ್ನುಳಿದು ಸದ್ಯ ಒಂದೊಂದೇ ದೊಡ್ಡ ಸೇನೆ ಕಳುಹಿಸುತ್ತಿರುವರು. ರಶ್ಯನರ ಧೈರ್ಯ ಕುಗ್ಗಿಸಲು ಇದೊಂದು ಉಪಾಯ ಹೂಡಲಾಗಿದೆಯೆಂದು ತಿಳಿಯುತ್ತದೆ. ರಶ್ಯನರೂ, ಕಠೋರವಾಗಿ ಹೋರಾಡುತ್ತಾರೆ. ಮಾರ್ಚ ತಿಂಗಳು ಅಂತ್ಯವಾಗುವುದರೊಳಗೆ ರಶ್ಯನರಿಗೆ ಇಲ್ಲಿ ವಿಜಯದೊರೆತರೆ, ಅವರು ಲೇಸಗೆಯಲ್ಲಿ ಮತ್ತಷ್ಟು ಮುಂದೆ ನುಗ್ಗಬಹುದು.

ಇಟೆಲಿ ವ್ಯೂಹ ತಟಸ್ಥ

ಇಟಲಿ ರಂಗದಲ್ಲಿ ಈ ವಾರವೂ ಸ್ತಬ್ಧತೆಯೇ ಉಳಿದಿದೆ. ಹವಾಮಾನ ಕೆಟ್ಟದ್ದರಿಂದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಭೂ ಹಾಗೂ ವೈಮಾನಿಕ ಯುದ್ಧಗಳಿಗೆ ತೊಂದರೆಯಾಗಿದೆಯೆಂದು ತಿಳಿದುಬರುತ್ತದೆ. ಮಿತ್ರರ ಕರಾವಳಿ ಸೇನೆಗಳು ಶತ್ರುಗಳನ್ನು ತುಸು ಹಿಮ್ಮೆಟ್ಟಿಸಿವೆಯಾಗಿ ಹೇಳಲಾಗಿದೆ. ಅಂಜಿಯೋ ಮುತ್ತಿಗೆ ಸೇನೆ ವ್ಯೂಹದಲ್ಲಿಯೂ ಸ್ವಲ್ಪ ಚಟುವಟಿಕೆಯಿದೆ. ಎಡೆಬಿಡದೆ ಮಳೆ ಬರುತ್ತಿರುವದರಿಂದ ಹಾಗೂ ಆಕಾಶವು ಮೋಡನಿಬಿಡವಾಗಿರುವುದರಿಂದ ವಿಮಾನ ಯುದ್ಧ ಬಹಳ ಕಡಿಮೆಯಾಗಿ ಆಗುತ್ತಿದೆ. ಅಂತೂ ಒಟ್ಟಿನಿಂದ, ಇಟಲಿ ರಣರಂಗದಲ್ಲಿ ಏನೂ ಬಿಸಿಯಿಲ್ಲ. ಎರಡು ಪಕ್ಷದವರೂ ಸಾಕಾಗಿಯೋ, ಸಾಧ್ಯವಿಲ್ಲದೆಯೋ ಅಥವಾ ಸಿದ್ಧತೆಗಾಗಿಯೋ ಸದ್ಯ ತುಸು ವಿರಾಮ ಹೊಂದುತ್ತಿರುವರೆಂದರೆ ಹೆಚ್ಚಾಗದು.

ಅರಕಾನ್ ಗೆಲವು

ಇಂದಿನ ಯುದ್ಧ ದೃಷ್ಟಿಯಲ್ಲಿ ಬರ್ಮ ರಂಗದಷ್ಟು ಅರಕಾನ ರಂಗ ಪ್ರಧಾನವಲ್ಲ; ಆದರೆ ಸದ್ಯ ಅಲ್ಲಿ ಒಮ್ಮೆಯೇ ವಿಶೇಷ ಚಟುವಟಿಕೆ ನಡೆಯುತ್ತಿರುವುದು ಕೇಳಿಬರುತ್ತಿದೆ. ಹೇಗಾದರೂ ಇಲ್ಲಿ ಮಿತ್ರರು ಮುಂದುವರಿಯುತ್ತಿರುವರೆಂಬುದು ಒಂದು ಸಂತೋಷದ ಸುದ್ದಿ. ಫೆಬ್ರವರಿ ತಿಂಗಳಿಂದ ಈ ವ್ಯೂಹದಲ್ಲಿ ಚಟುವಟಿಕೆ ಮೊದಲಾಯಿತು. ಜಪಾನರು ಭಾರತೀಯ ಸಪ್ತಮ ದಳವನ್ನು ಮಾಯೂ ಪರ್ವತ ಶ್ರೇಣಿಯಲ್ಲಿ ನಾಶಮಾಡಿ ಭಾರತದತ್ತ ಮುಂದೊತ್ತಬೇಕೆಂದು ಹಂಚಿಕೆ ಹೂಡಿ, ಜಪಾನರು ಆ ಕೆಲಸದಲ್ಲಿ ಮುಂದುವರಿದು ಹೋರಾಡುತ್ತಿದ್ದರು. ಆದರೆ ಒಮ್ಮೆಗೇ ಸಪ್ತಮ ಸೇನೆಗೆ ವಿಜಯ ದೊರಕಿದ ವಾರ್ತೆ ಇಂದು ಕೇಳಿಬರುತ್ತದೆ. ನಗಾಕಿಡಾಕ್ ಕಣಿವೆಯ ಬಳಿಯಲ್ಲಿರುವ ಜಪಾನೀ ಸೈನಿಕರ ಮೇಲೆ ಮಿತ್ರ ಬಲಗಳು ಮುತ್ತಿಗೆ ಹಾಕಿವೆ. ಕಲಡಾನಾ ಕಣಿವೆಯಲ್ಲಿ ಜಪಾನರು ಮುಂದಕ್ಕೆ ನುಗ್ಗುತ್ತಿದ್ದರೂ ಪಶ್ಚಿಮಾಫ್ರಿಕ ಸೈನಿಕರು ಅವರನ್ನು ತಡೆಯುತ್ತಿದ್ದಾರೆ. ಇಲ್ಲಿ ಅಮೆರಿಕನ್ ಮತ್ತು ಚೀನೀ ಸೈನಿಕರೂ ಇದ್ದು ವಿಜಯಿಯಾಗಿ ಯುದ್ಧ ಸಾಗಿಸುತ್ತಿರುವರು.

ಫಿನ್‌ಲೆಂಡ್-ರಶ್ಯಾ ಸಂಧಾನವೆ?

'ಎರಡು ವಾರಗಳ ಹಿಂದೆ ಸ್ಟಾಕೋಂಗೆ ಫಿನ್‌ಲೆಂಡ್ ಸರಕಾರದ ಪ್ರತಿನಿಧಿ ಪಾಸ್ಸಿಕಿವಿಯರು ಬಂದು ಅಲ್ಲಿರುವ ರಶ್ಯಾ ರಾಯಭಾರಿಯನ್ನು ಕಂಡು ಫಿನ್‌ಲೆಂಡಿನ ವಿಚಾರದಲ್ಲಿ ರಶ್ಯದ ಅಭಿಪ್ರಾಯ ತಿಳಿಯಲು ಯತ್ನಿಸಿದರು ಮತ್ತು ಫಿನ್‌ಲೆಂಡಿನೊಡನೆ ಸಂಧಾನ ಮಾಡಲು ರಶ್ಯ ಒಪ್ಪುವುದೇ ಎಂದೂ ಅವರನ್ನು ಕೇಳಿದರು.

'ರಶ್ಯಾ ರಾಯಭಾರಿಯು ಇದಕ್ಕೆ ಉತ್ತರವಾಗಿ, ಫಿನ್‌ಲೆಂಡಿನ ಈಗಿನ ಸರಕಾರದಲ್ಲಿ ರಶ್ಯಕ್ಕೆ ಏನೂ ವಿಶ್ವಾಸವಿಲ್ಲ, ಆದರೂ ಫಿನ್‌ಲೆಂಡಿಗೆ ಬೇರೆ ದಾರಿಯಿಲ್ಲವಾದರೆ, ರಶ್ಯಾ–ಫಿನ್‌ಲೆಂಡ್ ಸರಕಾರದೊಡನೆ ಶಾಂತಿ ಪ್ರಯತ್ನ ಮಾಡುವುದು ಎಂದರು.

'ಆ ಮೇಲೆ ಅವರಿಬ್ಬರಿಗೂ ಅಧಿಕಾರಯುತವಾದ ಮಾತುಕತೆಗಳು ನಡೆದು, ರಶ್ಯವು ಫಿನ್‌ಲೆಂಡಿಗೆ ಕೆಳಗಿನ ಶರ್ತಗಳನ್ನು ಕೊಟ್ಟಿದೆ.

ಸಂಧಾನ ಶರ್ತಗಳು—

(೧) ಫಿನ್‌ಲೆಂಡು ಜರ್ಮನಿಯೊಡನೆ ರಾಜಕೀಯ ಸಂಬಂಧ ಬಿಡಬೇಕು ಮತ್ತು ಜರ್ಮನ್ ಸೇನೆಗಳನ್ನು ಫಿನ್‌ಲೆಂಡಿನಿಂದ ಓಡಿಸಬೇಕು. ಈ ಕಾರ್ಯದಲ್ಲಿ ಅವಶ್ಯವಿದ್ದರೆ ರಶ್ಯ ಫಿನ್‌ಲೆಂಡಿಗೆ ಸಹಾಯ ಮಾಡುವುದು. (೨) ಎಲ್ಲಾ ಫಿನ್‌ಲೆಂಡ್ ಸೈನ್ಯಗಳನ್ನು ೧೯೪೦ರಲ್ಲಿ ಏರ್ಪಟ್ಟಿದ್ದ ಗಡಿಗೆ ಸಾಗಿಸಬೇಕು. (೩) ಫಿನ್‌ಲೆಂಡಿನಲ್ಲಿರುವ ಎಲ್ಲಾ ರಶ್ಯ ಮತ್ತು ಮಿತ್ರ ಯುದ್ಧ ಕೈದಿಗಳನ್ನು ಕೂಡಲೇ ಬಿಡಬೇಕು. (೪) ಸೈನ್ಯ ವಿಸರ್ಜನೆ ಮತ್ತು ನಷ್ಟ ಪರಿಹಾರ ಕೊಡುವ ವಿಷಯ ಮುಂದೆ ಮಾತುಕತೆಯಲ್ಲಿ ಇತ್ಯರ್ಥಿಸಬಹುದು. (೫) ಫಿನ್‌ಲೆಂಡ್ ಸರಕಾರದ ಅಧಿಕಾರಿಗಳು ಮೊಸ್ಕೋಗೆ ಬರುವುದಾದರೆ ಅದಕ್ಕೆ ರಶ್ಯದ ಸರಕಾರ ಸಿದ್ಧವಿದೆ.

"ಫಿನ್‌ಲೆಂಡು ಯಾವ ಶರ್ತವೂ ಇಲ್ಲದೆ ಶರಣಾಗಬೇಕೆಂದು ರಶ್ಯ ಕೇಳಿಲ್ಲ ಮಾತ್ರವಲ್ಲದೆ ಹೆಲ್ಸಿಂಕಿ ಅಥವಾ ಫಿನ್‌ಲೆಂಡಿನ ಇನ್ನಾವುದೇ ಪಟ್ಟಣವನ್ನು ಹಿಡಿವುದೂ ರಶ್ಯದ ಉದ್ದೇಶವಲ್ಲ" ಹೀಗೆಂದು ಫೆಬ್ರವರಿ ೨೮ರ ಮೊಸ್ಕೋ ರೇಡಿಯೋದಲ್ಲಿ ಹೇಳಲಾಗಿದೆ.

ಜರ್ಮನಿ ನಕಾರ.

ಫಿನ್‌ಲೆಂಡ್ ಪಾರ್ಲಿಮೆಂಟ್ ಕೂಡಿ ತನ್ನ ಪೂರ್ಣ ಅಧಿವೇಶನ ನಡೆಸಿದೆ; ಅದರೊಡನೆ ಒಂದು ರಹಸ್ಯ ಸಭೆಯೂ ಅಲ್ಲಿ ಜರಗಿತು. ಫಿನ್‌ಲೆಂಡಿನಲ್ಲಿ ಜನರಲ್ ಡೀಟಿಲರ ನಾಯಕತ್ವದಲ್ಲಿರುವ ಜರ್ಮನ್ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಫಿನ್‌ಲೆಂಡ್ ಪ್ರತಿನಿಧಿಗಳು ಸೂಚಿಸಿದರೆಂದೂ ಇದಕ್ಕೆ ಜರ್ಮನಿ ಸಮ್ಮತಿಸಲಿಲ್ಲವೆಂದೂ ಹೇಳಲಾಗಿದೆ. ಅಂತೂ ಈ ಸಂಧಾನ ಮಾತುಕತೆಯ ಆಗುಹೋಗುಗಳು ನಿರೀಕ್ಷಣೀಯವಿವೆ.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೩೫.	ರಾತ್ರಿ ೭-೩೦.
ಪಟೆಲ್ ಕನ್ಯಾನ್ಯೂರು ಪರಿಯಂತ ಮಾತ್ರ	ಸಾಯಂ. ೫-೩೫	ಬೆಳಗ್ಗೆ ೯-೩೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೬

ಕಫ, ಎದೆಬೇನೆ ಮತ್ತು ಇಂಫ್ಲುಯೆಂಜಾ ಗುಣ ಪಡಿಸಿರಿ.

ನೀವು ಕಫ, ಶೀತ, ಎದೆನೋವೂ ಕಂಠನೋವು ಇವುಗಳಿಂದ ನರಳುತ್ತಿರುವರಾದರೆ ವಿಷಹಾರಿ ಶ್ವಾಸಯೋಗ್ಯ, ನಿಶ್ಚಿತ ಗುಣಕಾರಿ, ಪೆಪ್ಸ ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕಳಗಿ ಅತ್ಯುತ್ತಮ ಔಷಧಿ ಸತ್ವವನ್ನು ಹೊರಗೆಡುವುದರಿಂದ ಅದು ನೀವು ಶ್ವಾಸ ಎಳಕೊಳ್ಳುವಾಗ ಅದರೊಡನೆ ಸೇರಿಕೊಳ್ಳುವುದು. ಹೀಗಾಗಿ ಪೆಪ್ಸ ಹಾನಿಕಾರಕ ಕ್ರಿಮಿಗಳನ್ನು ಕಂಡು ಹುಡುಕಿ ನಾಶಮಾಡುತ್ತದೆ. ಪೆಪ್ಸ ನೋವನ್ನು ಕಡಿಮೆಮಾಡಿ ವಿಷಕ್ರಿಮಿಗಳನ್ನು ನಿರ್ಬಂಧಿಸುವುದು.

ಪೆಪ್ಸ ಬೇಗನೇ ಕಂಠವನ್ನು ಸರಿಗೊಳಿಸುತ್ತದೆ. ಹಾಗಾಗಿ ಪೆಪ್ಸ ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಯೋಗ್ಯ ರಕ್ಷಣೆಯನ್ನು ಕೊಡುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತಲ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ—ಉತ್ತಮ ವ್ರೂ ಬಾಳಿಕೆಯದೂ ಆಗಿದೆ. ಬೇಗನೇ ನೊರೆ ಹೊರಡುತ್ತದೆ; ಪಿಸ್ತೂಲ್ ಬ್ರೇಂಡ್ ಬಾರ್‌ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ.

PISTOL BRAND BAR SOAP

WANTED AGENTS IN S. KANARA DT.

Mangalore Stockists:—M/S D. Narsimha Pai & Sons, Mangalore.

Universal Industries (India) Ltd:
Nable chambers, Fort Bombay.

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನ ಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ತೇವಣೆಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿರಲಿ—ಯಾವ ಚೆಕ್ ಆದರೂ ಕೆನರಾ ಬೇಂಕಿನಲ್ಲಿ ವಟಾಯಿಸಲ್ಪಡಲು ಐದು ನಿಮಿಷಗಳಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸ್ವದೇಶಾಭಿಮಾನಿ

ತಾರೀಖು 10—8—1944

ಭಾರತದ ಆರ್ಥಿಕ ಮತ್ತು ರಾಜಕೀಯ ನೀತಿಗಳು.

ನ್ಯೂ ಡಿಲ್ಲಿಯಲ್ಲಿ ಮೊನ್ನೆ ತಾನೇ ಸೇರಿದ ಭಾರತೀಯ ವಣಿಕ್ ಸಂಪದ ವಾರ್ಷಿಕ ಅಧಿವೇಶನದಲ್ಲಿ ಮಂಜೂರಾದ ನಿರ್ಣಯಗಳನ್ನು ಗಮನಿಸಿದರೆ ಸರಕಾರ ಇದುವರೆಗೆ ಅನುಸರಿಸಿದ ಹಾಗೂ ಮುಂದೆ ಅನುಸರಿಸಲಿರುವ ಆರ್ಥಿಕ ಮತ್ತು ರಾಜಕೀಯ ನೀತಿಗಳಲ್ಲಿ ಭಾರತದ ಮುಖಂಡರು ತೀವ್ರ ಅತೃಪ್ತಿ ಪಟ್ಟಿರುವರೆಂಬುದು ವಿದಿತವಾಗುತ್ತದೆ. ಈ ಅಧಿವೇಶನದಲ್ಲಿ ರಾಷ್ಟ್ರ ಮುಖಂಡರ ಬಿಡುಗಡೆ ಮತ್ತು ರಾಷ್ಟ್ರೀಯ ಸರಕಾರ ಸ್ಥಾಪನೆಯ ನಿರ್ಣಯವು ಪ್ರಥಮವಾಗಿ ಮಂಡಿಸಲ್ಪಟ್ಟು ಸ್ವೀಕೃತವಾದದ್ದು ಇಂದಿನೀ ಕಾಲ ಧರ್ಮಕ್ಕೆ ಅನುಗುಣವಾಗಿಯೇ ಇದೆ ಮಿತ್ರ ರಾಷ್ಟ್ರಗಳು ನಾಣ್ಯ ಚಲಾವಣೆ, ವ್ಯಾಪಾರ, ನೌಕಾವಿಸ್ತಾರ ಮೊದಲಾದ ಹಲವು ಆರ್ಥಿಕ ಸಮಸ್ಯೆಗಳನ್ನು ಯುದ್ಧಾನಂತರದ ಹಲವು ಸಮಸ್ಯೆಗಳನ್ನೂ ಇಂದಿಗೇ ನಿರ್ಧರಿಸುತ್ತಿರುವೀ ಕಾಲದಲ್ಲಿ ಭಾರತದ ಭವಿಷ್ಯ ಯೋಜನೆಯ ಕುರಿತು, ಪ್ರಾತಿನಿಧಿಕ ಸರಕಾರವೊಂದು ನಮ್ಮ ಭವಿಷ್ಯದ ವಿಚಾರ ಮಾಡಲಿಕ್ಕೆ ಇಲ್ಲದಿರುವುದು ನಿಜವಾಗಿ ವಿಷಾದಕರವೇ ಆಗಿದೆ ಇಂದು ವೈಸರಾಯರ ಮಂತ್ರಿ ಮಂಡಳದಲ್ಲಿ ಭಾರತೀಯ ಸದಸ್ಯರು ಬಹು ಸಂಖ್ಯಾಕರಾಗಿರುವರೆಂದು ಎಷ್ಟು ಉದ್ಘೋಷಿಸಿದರೂ ಭಾರತ ಸರಕಾರದ ಕೀಲಿ ಕೈ ಶ್ವೇತಭವನದಲ್ಲಿದೆಯೆಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ ಹಾಗಾದ್ದರಿಂದಲೇ ಭಾರತದ ಆರ್ಥಿಕ ನೀತಿ ಇಂದಿನ ಮತ್ತು ಮುಂದಿನ—ಸರಿಗೊಳ್ಳಬೇಕಾದರೆ ರಾಷ್ಟ್ರ ಮುಖಂಡರ ಬಿಡುಗಡೆಯಾಗಿ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಲೇಬೇಕೆಂದು ಇಂದು ಸಕಲ ಜಾತಿಮತ ಧರ್ಮ ಪಕ್ಷಗಳವರ ಏಕಕಂಠದ ಕೇಳಿಕೆಯಿರುವುದು

ವಣಿಕ್ ಸಂಪದವರು ತಮ್ಮ ಹಲವಾರು ನಿರ್ಣಯಗಳಲ್ಲಿ, ಭಾರತವಿಂದು ಬ್ರಿಟನಿನ ಆಡಳಿತದಿಂದ ಹಲವು ಬಗೆಯ ಅನ್ಯಾಯಗಳಿಗೆ ಗುರಿಯಾಗಿದೆಯೆಂದು ಧೈರ್ಯಪೂರ್ವಕ ಹೇಳಿದ್ದಾರೆ 'ಜಸ್ಟಿಸ್' ಪಕ್ಷದ ಮುಖಂಡರೇ ಆದ ಸರ್ ಮುತ್ತಯ್ಯ ಚೆಟ್ಟಿಯಾರರೇ ಅಧ್ಯಕ್ಷರಾಗಿ ಈ ನಿರ್ಣಯಗಳು ಮಂಜೂರಾದದ್ದನ್ನು ನೋಡಿದರೆ ಇಂದು ಸರಕಾರದ ಆರ್ಥಿಕ ರಾಜಕೀಯ ಧೋರಣವನ್ನು ಬೆನ್ನು ತಟ್ಟುವವರು ಯಾರಾದರೂ ಭಾರತದಲ್ಲಿ ಇದ್ದಾರೆಯೇ ಎಂಬ ಪ್ರಶ್ನೆ ಸಹಜವಾಗಿ ಹುಟ್ಟದಿರದು. ಸರ್ ಮುತ್ತಯ್ಯ ಚೆಟ್ಟಿಯಾರರು ಈ ಅಧಿವೇಶನ ಸೇರುವ ಒಂದೆರಡು ದಿನಗಳ ಮುನ್ನ ಕೊಟ್ಟ ಒಂದು ಪ್ರಕಟಣೆಯಲ್ಲಿಯೂ ಕೂಡಾ ರಾಷ್ಟ್ರ ಮುಖಂಡರ ಬಿಡುಗಡೆ ಮಾಡಿ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಬೇಕೆಂದೂ ಭಾರತದ ವ್ಯಾಪಾರ ಉದ್ಯೋಗಗಳಿಗೆ ಇಂದಿನ ಆಡಳಿತದಿಂದ ಅನ್ಯಾಯವಾಗುತ್ತಿದೆಯೆಂದೂ ಸಾರಿ ಹೇಳಿದ್ದಾರೆ. ಭಾರತದ ಹಿತಕ್ಕೆ, ಆರ್ಥಿಕ ಹಾಗೂ ರಾಜಕೀಯ ಎರಡು ರೀತಿಯಲ್ಲಿಯೂ, ಉಂಟಾದ ಈ ಆಘಾತವನ್ನು ತಪ್ಪಿಸುವರೆ ಒಂದುಗೂಡಿ ಯತ್ನಿಸಬೇಕಾದುದು ಅವಶ್ಯವೆಂದು 'ಭಾರತೀಯ ವಣಿಕ್ ಸಂಪದವರು ಮನಗಂಡಿರುವರೆಂಬುದು' ಅವರ ನಿರ್ಣಯಗಳಿಂದ ಸ್ಪಷ್ಟವಾಗುವುದು

ವ್ಯವಹಾರಜ್ಞರಿಗೆ ಹೆಚ್ಚಿನ ಕಳವಳವನ್ನುಂಟುಮಾಡುವ ವಿಚಾರವೆಂದರೆ ಇಂದಿನ ಸ್ಥಿತಿಗಿಂತಲೂ ನಾಳೆಯ ಅವಸ್ಥೆಯೇನಾಗುತ್ತದೆಂಬುದು. ಸ್ಟರ್ಲಿಂಗ್ ಉಳಿತಾಯವನ್ನು ಸರಕಾರ ಹೇಗೆ ಸಲ್ಲಿಸುವುದು? ಯುದ್ಧ ಕಾಲದಲ್ಲಿ ಉಜ್ಜೀವಿತವಾದ ಕೈಗಾರಿಕೆಗಳನ್ನು ಯುದ್ಧಾನಂತರ ಸರಕಾರ ಉಳಿಸುವ ಭರವಸೆಯೇನು? ಉದ್ಯೋಗ ಮತ್ತು ಕೃಷಿ ಕಾರ್ಯಗಳಲ್ಲಿ ಸರಕಾರ ಯಾವ ಹಂಚಿಕೆ ಹೂಡಿದೆ? ಇಂಥಾ ಹಲವಾರು ವಿಚಾರಗಳ ಕುರಿತು ಈ ಅಧಿವೇಶನದಲ್ಲಿ ಮಾತನಾಡಿದವರು ಸಂದೇಹಗಳನ್ನೆತ್ತಿದರು ಶ್ರೀ। ಜಿ ಎಲ್ ಮೆಹತಾರವರು ಇದನ್ನು ಉದಾಹರಿಸಿ ಮಾತನಾಡುತ್ತಾ, ಭಾರತದ ಔದ್ಯೋಗಿ ಉನ್ನತಿಗೆ ಸಹಕಾರವಾಗುವ ಯಂತ್ರಗಳನ್ನು ತರಿಸಲು ಹಡಗಗಳಲ್ಲಿ ಸ್ಥಳವಿಲ್ಲವೆಂದು ನೆವನ ಹೇಳಿದ ಸರಕಾರವು ಬೈಸ್‌ಕಲ್, ವಸ್ತ್ರ ಹಾಗೂ ವಿಸ್ಕಿ ಮೊದಲಾದ ಸುಖೋಪಭೋಗ ವಸ್ತುಗಳನ್ನು ಆಮದು ಮಾಡಲು ಹಡಗಗಳಲ್ಲಿ ಸ್ಥಳ ಕೊಡುತ್ತಿರುವ ವಿಷಯವನ್ನು ಹೇಳಿ ಸರಕಾರವು ಭಾರತದ ಏಳಿಗೆಯನ್ನು ಮಾಡುವ ಹಂಚಿಕೆ ಹೂಡಿಲ್ಲವೆಂದು ತಿಳಿಸಿದರು ಮೊಂಬಾಯಿಯ ವ್ಯವಹಾರಜ್ಞರು ಸೂಚಿಸಿದ ೧೫ ವರ್ಷಗಳ ಯೋಜನೆಯೂ ಸರಕಾರದ ಮುಂದೆ ಕೇವಲ ಅರಣ್ಯ ರೋದನವಾಗುತ್ತಿದೆಯೆಂದು ವಿಷಾದ ವ್ಯಕ್ತ ಪಡಿಸಿದರು ಇದಕ್ಕಾಗಿ ರಾಷ್ಟ್ರೀಯ ಸರಕಾರ ಬೇಕಾಗಿದೆಯೆಂದರು ಹೀಗೆ ನ್ಯೂ ಡಿಲ್ಲಿಯಲ್ಲಿ ಸೇರಿದ ಭಾರತೀಯ ವಣಿಕ್ ಸಂಪದ ಈ ಸಲದ ಸಮ್ಮೇಳನವು ಭಾರತದ ಆರ್ಥಿಕ ರಾಜಕೀಯ ನೀತಿಗಳ ಕುರಿತು ಮಹತ್ವದ ನಿರ್ಣಯಗಳನ್ನು ಮಾಡಿದೆ

ಶ್ರೀ। ಕೆ ಆರ್ ಕಾರಂತರು

ಅಮರಾವತಿ ಸೆರೆಮನೆಯಿಂದ ತಮ್ಮ ಮಾತೃಶ್ರೀಯವರ ಅನಾರೋಗ್ಯದ ನಿಮಿತ್ತ ಪೆರೋಲಿನಲ್ಲಿ ಬಂದ ಶ್ರೀ। ಕೆ ಆರ್ ಕಾರಂತರಿಗೆ ಅವರ ಪೆರೋಲ್ ಅವಧಿ ಇನ್ನೊಂದು ತಿಂಗಳಿಗೆ ಮುಂದುವರಿಸಿದೆ ಎಂದು ತಿಳಿದು ಬರುತ್ತದೆ

ಶ್ರೀಮತಿ ಕಮಲಾದೇವಿಯವರು

ಅನಾರೋಗ್ಯದ ನಿಮಿತ್ತ ಬಿಡುಗಡೆ ಹೊಂದಿದ ಶ್ರೀಮತಿ ಕಮಲಾದೇವಿಯವರು ಕೆಲ ಸಮಯ ಮಂಗಳೂರಲ್ಲಿದ್ದು ಈಗ ಇಲ್ಲಿಂದ ಡಿಲ್ಲಿಗೆ ಹೋಗಿದ್ದು, ಅಲ್ಲಿಂದ ಮುಂಬಯಿಗೆ ತೆರಳಿ ಕೆಲ ಸಮಯ ಅಲ್ಲಿರುವರೆಂದು ತಿಳಿಯುತ್ತದೆ.

ಯುದ್ಧಾನಂತರ ನಮ್ಮ ಪಾಡೇನು?

ಭಾರತೀಯ ಔದ್ಯೋಗಿಕರ ಸಮಸ್ಯೆ

ಸರಕಾರದ ನೀತಿಯ ಖಂಡನೆ

ಹೊಸದಿಲ್ಲಿಯಲ್ಲಿ ಚೆಟ್ಟಿನಾಡಿನ ಸರ್ ಮುತ್ತಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಸೇರಿದ, ಭಾರತೀಯ ವಣಿಕ್ ಸಂಘದ ವಾರ್ಷಿಕ ಅಧಿವೇಶನದಲ್ಲಿ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿ, ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದು ದೇಶದ ಆಹಾರ ಪರಿಸ್ಥಿತಿ ವಿಷಮವಿದ್ದು, ಬರಗಾಲದ ಭೀತಿ ಇರುವಾಗ ಇಲ್ಲಿರುವ ಆಗ್ನೇಯ ಏಶ್ಯಾ ಕಮಾಂಡ್ ಸೈನ್ಯದ ಆಹಾರ ಸಾಮಗ್ರಿ ಹೊರದೇಶಗಳಿಂದ ತರಿಸಬೇಕೆಂದೂ ಭಾರತದಿಂದ ಹೊರದೇಶದ ವ್ಯಾಪಾರಕ್ಕೆ ಯು ಕೆ ಸಿ ಸಿಯಿಂದ ಧಕ್ಕೆ ಬರದಂತೆ ನೋಡಬೇಕೆಂದೂ ನಿರ್ಣಯಗಳಾದುವು

ಶ್ರೀ। ಥಾಕೂರ್‌ದಾಸ್ ಮೊದಲಾದವರ ೧೫ ವರ್ಷದ ಯೋಜನೆಯನ್ನು ಸ್ವಾಗತೀಕರಿಸಿ, ಸರಕಾರವು ಯುದ್ಧಾನಂತರದ ಪುನರ್ನಿರ್ಮಾಣದ ಯೋಜನೆ ಮಾಡುವಾಗ ೧೫ ವರ್ಷ ಯೋಜನೆಯಲ್ಲಿರುವ ತತ್ವವನ್ನು ಮರೆಯಬಾರದೆಂದು ಕೇಳಿಕೊಳ್ಳಲಾಯಿತು

ದೇಶದಲ್ಲಿ ಹೊಟ್ಟೆಗನ್ನವಿಲ್ಲದೆ ಲಕ್ಷಾಂತರ ಮಂದಿ ಸಾಯುತ್ತಿರುವ ಕುರಿತು ವಿಷಾದ ವ್ಯಕ್ತ ಮಾಡಿ ಆಹಾರಧಾನ್ಯ ಬೆಳೆಸಲು ಸಂಗ್ರಹಿಸಲು ಕೇಂದ್ರ ಸರಕಾರವು ಅಖಿಲ ಭಾರತಕ್ಕೆ ಒಂದೇ ಧೋರಣ ವಹಿಸಬೇಕೆಂದೂ, ಆಹಾರಧಾನ್ಯಗಳ ವ್ಯಾಪಾರವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದೂ, ಆಹಾರ ಧಾನ್ಯಗಳ ನಿರ್ಯಾತ ಮತ್ತು ಆಯಾತವನ್ನು ನಿಲ್ಲಿಸಿ ಮುಂದಿನ ಧಾನ್ಯ ಸಂಗ್ರಹಕ್ಕೆ ಅನುಕೂಲಮಾಡಬೇಕೆಂದೂ, ಹೆಚ್ಚಿಗೆ ಆಹಾರ ಧಾನ್ಯ ಬೆಳೆಸುವರೆ ಎಲ್ಲಾ ಸೌಕರ್ಯವನ್ನು ಸರಕಾರ ಕೊಡಬೇಕೆಂದೂ, ಕ್ಷಾಮಪೀಡಿತ ಪ್ರದೇಶಗಳ ಜನರಿಗೆ ಯೋಗ್ಯ ಪರಿಹಾರ ನೀಡಬೇಕೆಂದೂ ನಿರ್ಣಯ ಮಾಡಲಾಯಿತು

ಮಿತ್ರರಾಷ್ಟ್ರಗಳ ಯುದ್ಧ ಸಾಮಗ್ರಿ ಹಾಗೂ ನಾಗರಿಕ ಪೂರೈಕೆಗಾಗಿ ಯುದ್ಧ ಸಮಯದಲ್ಲಿ ಹೊಸದಾಗಿ ಸ್ಥಾಪಿತವಾದ ಕೈಗಾರಿಕೆಗಳ ಭವಿಷ್ಯದ ಬಗ್ಗೆ ಅವುಗಳಿಗೆ ಯುದ್ಧಾನಂತರವೂ ಅವಶ್ಯಕ ಸಂರಕ್ಷಣೆ ಕೊಡಲು ಯೋಗ್ಯ ಏರ್ಪಾಡು ಮಾಡಬೇಕೆನ್ನುತ್ತಾ, ಭಾರತದಲ್ಲಿ ಹೊಸದಾಗಿ ಹೊರಟ ಕಂಪೆನಿಗಳಲ್ಲಿ ಸಿದ್ಧವಾಗುತ್ತಿರುವಂತಹ ಸಾಮಾನುಗಳನ್ನೂ ಹೊರಗಿನಿಂದ ಹೆಚ್ಚಾಗಿ ತರಿಸುವ ಸರಕಾರದ ಧೋರಣವನ್ನು ಅವರು ಟೀಕಿಸಿ, ಯುದ್ಧಾನಂತರ ಬ್ರಿಟಿಷ್ ವ್ಯಾಪಾರಕ್ಕೆ ಉತ್ತೇಜನ ಕೊಡಲು ಸಂಗ್ರಹವಾಗುತ್ತಿರುವ ಸ್ಟರ್ಲಿಂಗ್‌ಗಳನ್ನು ಉಪಯೋಗಿಸಬಾರದೆಂದು ಭಾರತೀಯರು ಒತ್ತಾಯಪಡಿಸಬೇಕೆಂದೂ ನಿರ್ಧರಿಸಲಾಯಿತು

ಕೇಂದ್ರ ಕೈಗಾರಿಕೆ ಅಭಿವೃದ್ಧಿ ಮತ್ತು ಸುಂಕದ ಹೊರೆಯ ವಿಚಾರ ಒಂದು ನಿರ್ಣಯವಾಗಿ, ಸರಕಾರದವರು ತಮ್ಮ ಇಂದಿನ ತೆರಿಗೆ ಹೊರಿಸುವ ಧೋರಣವನ್ನು ಶಾಸ್ತ್ರೀಯವಾಗಿ ಮಾಡದಿದ್ದರೆ ಯುದ್ಧಾನಂತರ ಅದು ಭಾರತದ ವಿಘಾತುಕವಾಗುವುದೆಂದೂ ಇಂದಿನ ಆದಾಯ ತೆರಿಗೆ ಮತ್ತು ಅಧಿಕ ಲಾಭದ ತೆರಿಗೆಯಿಂದ ಎಲ್ಲಾ ಲಾಭಗಳೂ ಮಾಯವಾಗವದೆಂದೂ, ಇದರಿಂದ ಅನೇಕ ಕೈಗಾರಿಕೆಗಳು ನಡೆಯದಂತಾಗಿದೆಯೆಂದೂ ಸಮಾಲೋಚಿಸಲಾಯಿತು

ಯುದ್ಧ ಮುಗಿದ ಮೇಲೆ ಬರ್ಮ ದೇಶಕ್ಕೆ ಹೋಗುವ ಭಾರತೀಯರ ಮೇಲೆ ನಿರ್ಬಂಧವಿರಬಾರದು, ಭಾರತೀಯರಿಗೆ ಅಲ್ಲಿ ಪ್ರವೇಶ ಸ್ವಾತಂತ್ರ್ಯ ಹಾಗೂ ಸಮಾನತೆಯಿರಬೇಕು, ಎರಡೂ ದೇಶಗಳೊಳಗೆ ನಿಕಟ ಸಂಬಂಧ ಬೆಳೆಸಬೇಕು ಹಾಗೂ ಅದರ ಪುನರ್‍ರಚನೆ ಮತ್ತು ಪುನರ್ನಿಯೋಜನೆಯಲ್ಲಿ ಭಾರತೀಯರ ಸಂಪೂರ್ಣ ಸಹಕಾರ ಪಡೆಯಬೇಕೆಂಬ ನಿರ್ಣಯವಾಯಿತು

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಭಾರತೀಯರಿಗೆ ನಾಗರಿಕ ಹಕ್ಕು ದೊರಕಿಸಿ ಕೊಡಬೇಕು, ಅವರೊಡನೆ ವಾಣಿಜ್ಯ ಹಾಗೂ ಹಡಗ ಒಪ್ಪಂದ ಮಾಡಿಕೊಳ್ಳಬೇಕ ಎಂದು ಸರಕಾರವನ್ನು ಕೇಳಿಕೊಳ್ಳುವ, ದಕ್ಷಿಣ ಆಫ್ರಿಕದ ಇತ್ತೀಚೆಯ ಪಕ್ಷಪಾತದ ಕಾನೂನನ್ನು ನಿಷೇಧಿಸಿ ಆ ಬಗ್ಗೆ ಪ್ರತೀಕಾರ ಕೈಕೊಳ್ಳಬೇಕೆನ್ನುವ ಇವೇ ಮೊದಲಾದ ನಿರ್ಣಯಗಳಾದುವು

ಈ ಪ್ರಖ್ಯಾತ ಲೇಪವು ಕಲೆ ಉಳಿಯದರೀತೆ ಗುಣ ಪಡಿಸುತ್ತದೆ

ಈ ಜಾಂಬಕ್ ಪೆಟ್ಟಿಗೆ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದು.

ನೀವೆಷ್ಟೇ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲವು ಅಪಾಯಗಳು ಸಂಭವಿಸಿಯೇ ಬಿಡುತ್ತವೆ ಗಾಯ, ಮೊಣಕಾಲು ಬೇನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆ ಕೊಡುತ್ತವೆ ಅಂಥಾ ಗಾಯಗಳು ಒಳಗಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಅಪಾಯಕಾರಿಗಳಲ್ಲ ಅದಕ್ಕಾಗಿಯೂ ನೀವು ಆಗ ಜಾಂಬಕ ತಾಗಿಸಬೇಕು ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಬೇಗನೇ ಹೀರಿಕೊಂಡು, ನೋವನ್ನು ಗುಣಮಾಡಿ, ಬಾವನ್ನು ಕಡಿಮೆ ಮಾಡಿ ರಶಿ ಇತ್ಯಾದಿಗಳನ್ನು ಒಣಗಿಸುವುದು

ಯಾವಾಗಲೂ ಜಾಂಬಕನ್ನೇ ಹಚ್ಚಿರಿ

ZAM-BUK.

ಪ್ರಾಣಿ ಕೊಬ್ಬು ವಿರಹಿತವಾದುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲೆಕ್ಟರಂಗೆ ವರ್ಗ

ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ ಕರಮತುಲ್ಲ ಐ. ಸಿ. ಎಸ್. ಇವರಿಗೆ ಚಿತ್ತೂರಿಗೆ ಕಲೆಕ್ಟರಾಗಿ ವರ್ಗವಾಗಿ, ಶ್ರೀ ಕೆ. ಎಂ. ಉಣ್ಣಿಕೃಷ್ಣನ್, ಐ. ಸಿ. ಎಸ್. ಇವರು ನಮ್ಮ ಜಿಲ್ಲೆಯ ಕಲೆಕ್ಟರಾಗಿ ನೇಮಕವಾಗಿರುವರು.

ನಗರ ಸಭೆಯಲ್ಲಿ ಕಸ್ತೂರ್ ಬಾರ ಕುರಿತು ಸಂತಾಪ ಸೂಚನೆ

ತಾ ೬ರಂದು ಸಂಜೆ ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆ ಚೇರ್ ಮೇನ್ ಶ್ರೀ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ, ಕಸ್ತೂರ್ ಬಾರ ನಿಧನದ ಬಗ್ಗೆ ಅಧ್ಯಕ್ಷರು ಸಂತಾಪ ಸೂಚನೆ ಮಾಡಿ, ಸಭಾ ಕಾರ್ಯವನ್ನು ಹತ್ತು ನಿಮಿಷಗಳ ವರೆಗೆ ಮುಂದುವರಿಸಲ್ಪಟ್ಟಿತು.

ಅನಂತರ ನಡೆದ ಸಭೆಯಲ್ಲಿ ಶ್ರೀ ಸಿ. ಎಲ್. ಲೋಬೋ ಮತ್ತು ಶ್ರೀ ಸುವರ್ಣರು ಕಯಿಮಾನೆ ಸಂಗ್ರಹಿಸಿ ಸಾಗಿಸುವ ಕುರಿತು ಮಗೆ ಬರುತ್ತಿರುವ ದೂರುಗಳ ಕುರಿತು ಪ್ರಸ್ತಾಪಿಸಿ, ಅದಕ್ಕೆ ಕೂಡಲೇ ನಿವೃತ್ತಿ ಮಾಡಬೇಕೆಂದು ಒತ್ತಾಯಿಸಿದರು. ಅದಕ್ಕೆ ಮು। ಹೆಲ್ತ್ ಆಫೀಸರ್ ಡಾ। ಬಾಳಿಗರು ಲಾರಿಗಳ ತೊಂದರೆಯನ್ನು ತಿಳಿಸಿ ತಮ್ಮಿಂದಾಗುವುದನ್ನೆಲ್ಲ ಮಾಡುವುದಾಗಿ ಹೇಳಿದರು. ಕದ್ರಿ ವಿದ್ಯಾಬೋಧಿನಿ ಶಾಲೆಯ ಮಕ್ಕಳ ಆಟಕ್ಕೆಂದು ಮಂಜೂರು ಮಾಡಿದ್ದ ೪೦ ಸೆಂಟ್ಸ್ ಸ್ಥಳದ ಕುರಿತು ಸ್ಪಷ್ಟೀಕರಣ ಕೊಡಬೇಕೆಂದು ಕಲೆಕ್ಟರು ಬರೆದ ಪತ್ರ ಚರ್ಚೆಯಾಗಿ, ಶ್ರೀ ಸಿ. ಎಲ್. ಲೋಬರು ಆ ಸ್ಥಳವನ್ನು ಯಾವುದೇ ವ್ಯಕ್ತಿ ಸಂಸ್ಥೆಗಳಿಗೆ ಕೊಡದೆ ಸಾರ್ವಜನಿಕ ಉಪಯೋಗಕ್ಕಾಗಿ ಇರಿಸಬೇಕೆಂದು ವಾದಿಸಿದರು. ಕೌನ್ಸಿಲಿನ ಮೊದಲಿನ ನಿರ್ಣಯವನ್ನೇ ಮನ್ನಿಸಿ ಶಾಲೆಗೆ ಸ್ಥಳಕೊಡಬೇಕೆಂದು ಶ್ರೀಗಳಾದ ರಾಮಚಂದ್ರಶೆಣೈ, ಶಂಕರ ಆಳ್ವ, ಮುಕುಂದ ನ್ಯಾಕ್, ಸುವರ್ಣ, ಯು. ರಾಮರಾವ್, ರಾಮಪ್ಪ ಮೊದಲಾದವರು ವಾದಿಸಿದರು. ಶ್ರೀ ಶ್ರೀಕೃಷ್ಣ ರಾವ್ ಲೋಬೋರನ್ನು ಸಮರ್ಥಿಸಿದರು. ಉಭಯ ಪಕ್ಷರೂ ಒಂದು ಇತ್ಯರ್ಥಕ್ಕೆ ಬರಬೇಕೆಂದು ಚೇರ್ ಮೇನರು ಸಮಯ ಕೊಟ್ಟರೂ ಇತ್ಯರ್ಥಕ್ಕೆ ಬರದ ಕಾರಣ, ಶಾಲೆಗೆ ಸ್ಥಳ ಕೊಡಬೇಕೆಂದು ಶ್ರೀ ಶಂಕರಾಳ್ವರು ತಂದ ಸೂಚನೆ ಮತಗಣನೆಗೆ ಹಾಕಲಾಗಿ ೧೧ ಪರ ಮತ್ತು ೯ ವಿರುದ್ಧ ಮತಗಳಿಂದ ಶಾಲೆಗೆ ಸ್ಥಳಕೊಡಬೇಕೆಂದು ನಿರ್ಣಯವಾಯಿತು.

ಪ್ರಾಂತಿಕ ಸರಕಾರದಿಂದ ಬಂದಿದ್ದ ಆಜ್ಞೆಗಳನ್ನು ಓದುವಾಗ, ನವಂಬರ ತಿಂಗಳಲ್ಲಿ ಹೊರಟ ಆಜ್ಞೆಗಳನ್ನು ಇಷ್ಟು ತಡವಾಡಿ ಸಭೆಯ ಮುಂದಿಡುವುದೇಕೆಂದು ಶ್ರೀ ಲೋಬೋರವರು ಪ್ರಶ್ನಿಸಿದ್ದಕ್ಕೆ ಇನ್ನು ಮುಂದೆ ಹಾಗಾಗದಂತೆ ನೋಡುವುದಾಗಿ ಕಮಿಶನರು ಹೇಳಿದರು.

ಪ್ಲೇಗ್ ನಿರೋಧಕ ಪೋಸ್ಟರುಗಳ ವೆಚ್ಚಕ್ಕಾಗಿ ರೂ ೨೪ ಮಂಜೂರಾಯಿತು. ಮಂಗಳೂರಿನ ವಿದ್ಯುದ್ದೀಪಗಳ ಯಂತ್ರ ಪದ್ಧತಿಯಂತೆ ಸಮಯ ಸೂಚಿಸಲು ಬೆಳಕು ನಂದಿಸುವುದು ಅಸಾಧ್ಯವಿರುವುದರಿಂದ ಪುನಃ ಸೈರನುಗಳು ಕೂಗುವಂತೆ ಮಾಡಲು ನಗರ ಸಭೆ ಯತ್ನಿಸಬೇಕೆಂದಾಯಿತು. ೧೯೪೪–೪೫ನೇ ವರ್ಷದಲ್ಲಿ ನಗರದೊಳಗೆ ಮಾರ್ಕೆಟುಗಳ ಏಲಂ ಹರಾಟದ ಪಟ್ಟಿ ಓದಲ್ಪಟ್ಟಿತು, ಪ್ರಧಾನ ಮಾರ್ಕೇಟುಗಳಿಗೆಲ್ಲ ಈ ವರ್ಷ ಹಿಂದಿಗಿಂತ ಹೆಚ್ಚು ಹಣ ಬಂದಿತ್ತು.

ಸದಸ್ಯರು ಕೆಲವರು ಎದ್ದು ಹೋದುದರಿಂದ, ಕೆಲ ಪ್ರಧಾನ ವಿಷಯ ತೀರ್ಮಾನವಾದ ಮೇಲೆ ಸಭೆ ಮುಂದುವರಿಯಿತು.

ದಕ್ಷಿಣ ಕನ್ನಡದಲ್ಲಿ ಮೈಸೂರು ಮಹಾರಾಜರು

ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರವರು ಇದೇ ತಾ ೮ರಂದು ಆಗುಂಬೆ ಕಾರ್ಕಳ ಮಾರ್ಗವಾಗಿ ಕೋಲಿಗೆ ಬಂದು, ಅಲ್ಲಿಂದ ಧರ್ಮಸ್ಥಳಕ್ಕೆ ತೆರಳಿ ರಾತ್ರಿ ಅಲ್ಲಿದ್ದು ಮರುದಿನ ಕಟೀಲನ್ನು ಸಂದರ್ಶಿಸಿ ಧರ್ಮಸ್ಥಳಕ್ಕೆ ಹಿಂತಿರುಗಿ ಅಲ್ಲಿಂದ ಚಿಕ್ಕ ಮಂಗಳೂರು ಮಾರ್ಗವಾಗಿ ಮೈಸೂರಿಗೆ ತೆರಳಿದರೆಂದೂ ತಿಳಿದು ಬರುತ್ತದೆ.

ದಿ. ಬೇಂಕ್ ಓಫ್ ಮಂಗಳೂರು

ಇದರ ಬಂದರ ಶಾಖೆಯನ್ನು ತೆರೆವ ಸಮಾರಂಭವು ತಾ. ೨–೩–'೪೪ರಂದು ಸಂಜೆ ಡಾ। ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಬೇಂಕಿನ ಮೇನೆಂಜಿಂಗ್ ಡೈರೆಕ್ಟರ್ ಡಾ। ಉಪೇಂದ್ರ ಪೈಗಳು ಅಧ್ಯಕ್ಷರನ್ನು ಸೂಚಿಸಿದ ಮೇಲೆ ಸ್ವಾಗತ ಸ್ವೀಕಾರದ ನಂತರ ಉಪಹಾರವಾಗಿ, ಬೇಂಕಿನ ಅಧ್ಯಕ್ಷರಾದ ಡಾ। ಕೆ. ಆರ್. ಕಿಣಿಯವರು ಬೇಂಕಿನ ವಿಚಾರ ತಿಳಿಸಿದ ಬಳಿಕ ಶ್ರೀಗಳಾದ ಅಮ್ಮೆಂಬಳ ಶ್ರೀನಿವಾಸ ಪೈ, ಕೆ. ಕೇಶವ ಶೆಣೈ, ಪಾಂಡುರಂಗ ಕಾಮತ್ ಇವರು ಮಾತನಾಡಿದ ಬಳಿಕ ಅಧ್ಯಕ್ಷ ಭಾಷಣ ಧನ್ಯವಾದಾರ್ಪಣೆಯಿಂದ ಸಮಾರಂಭ ಕೊನೆಗೊಂಡಿತು.

ಕಂಠೀರವದ ಸಂಪಾದಕರು

ಕಳೆದ ಇಪ್ಪತ್ತೈದು ವರ್ಷಗಳಿಂದ 'ಕಂಠೀರವ'ದ ಸಂಪಾದಕರಾಗಿದ್ದು ದಕ್ಷಿಣ ಕನ್ನಡದ ಪತ್ರಿಕಾ ವ್ಯವಸಾಯದ ಅಗ್ರಗಣ್ಯರಲ್ಲೊಬ್ಬರೆನಿಸಿದ ಶ್ರೀ ಬೋಳಾರ ವಿಠಲರಾಯರು ಕಳೆದ ವಾರ ಅದರ ಸಂಪಾದಕತ್ವವನ್ನು ಬಿಟ್ಟುಕೊಟ್ಟು ಪತ್ರಿಕಾ ವ್ಯವಸಾಯದಿಂದ ನಿವೃತ್ತರಾಗಿರುವರೆಂದು ತಿಳಿದು ಬರುತ್ತದೆ. ಅದರ ಸಹ ಸಂಪಾದಕರಾಗಿದ್ದ ಶ್ರೀ. ಹುರುಳಿ ಭೀಮರಾಯರು ಈಗ ಕಂಠೀರವ'ದ ಸಂಪಾದಕರಾಗಿರುವರು. 'ಕಂಠೀರವ'ದ ಮೂಲಕ ಶ್ರೀ. ವಿಠಲರಾಯರು ಕನ್ನಡ ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಕೊಂಡಾಡುವುದರೊಡನೆ 'ಕಂಠೀರವ'ದ ಹೊಸ ಸಂಪಾದಕರಾದ ಶ್ರೀ ಹುರುಳಿ ಭೀಮರಾಯರಿಗೆ ಅಭಿವಂದನೆಯಿದೆ. ಮಂಗಳೂರು ಪ್ರೆಸ್ಸಿನ ಶ್ರೀ. ಬಾಬುರಾಯ ಪ್ರಭುಗಳು 'ಕಂಠೀರವ'ದ ಮುದ್ರಕ ಪ್ರಕಾಶಕರಾಗಿರುವರು.

ಟಪಾಲು ಬಟ್ವಾಡೆ

ಮಂಗಳೂರಲ್ಲಿ ಸಂಜೆಗೆ ಬರುವ ಟಪಾಲನ್ನು ಮರುದಿನ ಪೂರ್ವಾಹ್ನ ೧೧ ಗಂಟೆ ಹಾಗೂ ಕೆಲವು ಸಲ ಅದರ ಮೇಲೂ ಕೂಡಾ ಬಟ್ವಾಡೆ ಮಾಡುತ್ತಿರುವ ಈಗಿನ ಕ್ರಮದ ಕುರಿತು ದೂರು ಬಂದಿದೆ. ಸಂಬಂಧ ಪಟ್ಟ ಅಧಿಕಾರಿಗಳು ನಿಗಾ ಕೊಡುವರಾಗಿ ನಂಬಿಕೆ.

ಮಗ್ಗದ ಕೆಲಸದವರಿಗೆ

ಫೆಬ್ರವರಿ ೨೭ನೇ ಮತ್ತು ಮಾರ್ಚ ೫ನೇ ತಾರೀಕಿನಲ್ಲಿ ಪಟ್ಟಣದಲ್ಲಿದ್ದ ಮಗ್ಗದ ಕೆಲಸದವರಿಗೆ ಒಂದು ಪ್ರೊವಿಡೆಂಟ್ ಫಂಡು ಸ್ಥಾಪಿಸಬೇಕೆಂಬ ಇಚ್ಛೆಯಿಂದ ಕಥೋಲಿಕ್ ಕ್ಲಬ್ಬಿನಲ್ಲಿ ಎರಡು ಮಿಟಿಂಗುಗಳು ನಡೆದು ಈ ಫಂಡನ್ನು ನಡೆಯಿಸಲಿಕ್ಕೆ ಒಂದು ಬೋರ್ಡನ್ನು ವರ್ಷಂಪ್ರತಿ ಎಲ್ಲಾ ಮೆಂಬರರು ಚುನಾಯಿಸಬೇಕೆಂದೂ ನಿರ್ಣಯವಾಯಿತೆಂದೂ ಈ ಫಂಡನ್ನು ಬರುವ ಮೇ ೧ನೇ ತಾರೀಕಿನಿಂದ ನಡೆಯುವದಕ್ಕೆ ಆರಂಭಿಸುವರಾಗಿಯೂ ತಿಳಿದು ಬರುತ್ತದೆ.

ಪ್ರವಚನಗಳು

ಹಿಂದೂ ಫೆಡರಲ್ ಸ್ಕೂಲ್ಸ್ ಬೋರ್ಡ್ ಮತ್ತು ವಿವೇಕಾನಂದ ಸಭಾ ಇವೆರಡರ ಆಶ್ರಯದಲ್ಲಿ ಈ ಕೆಳಗೆ ಕಾಣಿಸಿದಂತೆ ಇದೇ ತಿಂಗಳ ೮ರಲ್ಲು ಕೆನರಾ ಹೈ ಸ್ಕೂಲಲ್ಲಿ ೧೦ರಲ್ಲು ಬೆಸಂಟ್ ಗರ್ಲ್ಸ್ ಸ್ಕೂಲಿನಲ್ಲಿ ೧೩ರಲ್ಲು ಕೆನರಾ ಹೈಸ್ಕೂಲಲ್ಲಿ ಮತ್ತು ಸಾಯಂಕಾಲ ೬ರಿಂದ ೭.೩೦ರ ವರೆಗೆ ಶ್ರೀ। ಶ್ರೀಧರ ಸ್ವಾಮಿಜಿ ಇವರ ಪ್ರವಚನಗಳು ಇವೆ. ಪ್ರತಿ ದಿನ ಕೀರ್ತನೆ ಕೂಡ ಇದೆ.

ಗವರ್ನಮೆಂಟ್ ಕೋಲೇಜಿನ

ಮೊಡೆಲ್ ಶಾಲಾಮಕ್ಕಳ ಹೆತ್ತವರ ಕೂಟ ಸಮಾರಂಭವು ತಾ. ೮ರಂದು ಸಂಜೆ ಶಾಲಾ ಪ್ರಾರ್ಥನಾ ಮಂದಿರದಲ್ಲಿ ಶ್ರೀಮತಿ ಪಾರ್ವತಿ ಬಾಯಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮಳೆ

ಕಳೆದ ಆದಿತ್ಯವಾರ ರಾತ್ರಿ ಮಂಗಳೂರಲ್ಲಿ ಚನ್ನಾಗಿ ಮಳೆ ಬಂದಿತ್ತು. ಮತ್ತು ಮಂಗಳವಾರ ಸಂಜೆಗೂ ತುಸು ಮಳೆ ಬಿದ್ದಿದೆ.

ವಾರ್ಷಿಕೋತ್ಸವ

ಕೆಥ್ಲಿಕ್ ಪ್ರೀ ಸರ್ವೀಸ್ ಎಸೋಸಿಯೇಶನ್‌ನ ೧೮ನೇ ವಾರ್ಷಿಕೋತ್ಸವವು ತಾ. ೫ರಲ್ಲು ಶ್ರೀ ಎನ್. ಎಸ್. ಸುವರ್ಣರ ಅಧ್ಯಕ್ಷತೆಯಿಂದ ಜರಗಿ, ಕಾರ್ಯದರ್ಶಿ ಶ್ರೀ. ಎಂ. ಎಸ್. ಶೆಣೈಯವರು ವರದಿಯೋದಿದ ಮೇಲೆ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣವಾಗಿ, ಅಧ್ಯಕ್ಷರ ಮತ್ತು ಹಿತೈಷಿಗಳ ಭಾಷಣಗಳಾದುವು. ಕೊನೆಗೆ ಸಂಗೀತವೂ ಇತ್ತು.

ಚಲಚಿತ್ರ ವಿಮರ್ಶಕ ಕೂಟ

ಇದರ ಸಭೆಯೊಂದು ಕಳೆದ ಆದಿತ್ಯವಾರ ಶ್ರೀ. ಕುಳುಕುಂದ ಶಿ. ರಾಯರ ಅಧ್ಯಕ್ಷತೆಯಲ್ಲಿ ಸೇರಿ, ನಗರದಲ್ಲಿ ಪ್ರದರ್ಶಿತವಾಗುವ ಚಿತ್ರಗಳ ವಿಮರ್ಶೆ ನಡೆಯಿತು. 'ನಯಿಕಹಾನಿ' ಸಾಮಾನ್ಯ ಚಿತ್ರವೆಂದು ಹಲವರ ಅಭಿಪ್ರಾಯ. ಕೆಲವರು ಉತ್ತಮ ಫಿದೆಯೆಂದರು. 'ಟೆರಿಎಂಡ್ ದಿ ಪೈರೆಟ್ಸ್' ಅತೀ ಸಾಮಾನ್ಯ ತರದ 'ಮಾರಾಮಾರಿ' ಚಿತ್ರವೆಂದು ಅಭಿಪ್ರಾಯವಾಯಿತು. 'ಸಂತ ಸಖೂ' ಚಿತ್ರವನ್ನು ಈ ಸಲವೂ ಕೂಟದ ಸದಸ್ಯರಾರೂ ನೋಡಿರಲಿಲ್ಲ.

ಈ ವರ್ಷಾಂತ್ಯದಲ್ಲಿ ಈ ಕೂಟದ ಮುದ್ರಿತ ವಾರ್ಷಿಕ ಸಂಚಿಕೆಯೊಂದನ್ನು ಪ್ರಕಟಿಸುವರೆ ಶ್ರೀಗಳಾದ ಕಯ್ಯಾರ ಕಿಞ್ಞಣ್ಣ ರೈ, ಜೆ. ಎನ್. ಶೆಣೈ, ಪಿ. ಎಚ್. ರಾವ್ ಮತ್ತು ಎಂ. ವಿ. ಪ್ರಭುಗಳಿಂದ ಕೂಡಿದ ಒಂದು ಸಮಿತಿ ನೇಮಕವಾಯಿತು.

ಮಿಶನ್ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘ.

ಇದರ ವಾರ್ಷಿಕೋತ್ಸವವು ತಾ. ೫ರಂದು ಶ್ರೀ. ದತ್ತಾತ್ರೇಯರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ವಿ. ಬಾಳಿಗರು ಸ್ವಾಗತಗೀತೆ ಹಾಡಿದರು. ಶ್ರೀ. ಎಂ. ಈಶ್ವರ ಶೆಟ್ಟರು ಸ್ವಸ್ತಿವಾಚನ ಭಾಷಣ ಮಾಡಿದ ನಂತರ ಕಾರ್ಯದರ್ಶಿಗಳು ಗತ ವರ್ಷದ ವರದಿ ಓದಿದರು. ಆ ಮೇಲೆ ವಿವಿಧ ಪಂದ್ಯಾಟಗಳಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಣೆಯಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಗೂ ಹಳೆ ವಿದ್ಯಾರ್ಥಿ ಸಂಘಕ್ಕೂ ಶ್ರೇಯಸ್ಸು ಹಾರೈಸಿ ಮಾತನಾಡಿದ ಮೇಲೆ ವಿವಿಧ ವಿನೋದಾವಳಿ ನಡೆಯಿತು. ಶ್ರೀ ಬಿ. ಅಪ್ಪಯ್ಯನವರು ಬರೆದ 'ಪ್ರತಿ ಫಲ' ನಾಟಕ ಅಭಿನಯಿಸಲ್ಪಟ್ಟಿತು. ಬಾಲಿಕೆಯರಿಂದ ನೃತ್ಯಗಳೂ ಇದ್ದವು.

ಬ್ಲೇಕ್ ಔಟ್ ಇಲ್ಲ

ಮಂಗಳೂರಲ್ಲಿ ಬ್ಲೇಕ್ ಔಟ್ ಪದ್ಧತಿಯೀಗ ರದ್ದಾಗಿದೆ.

ದೇವತಾ ಸ್ತೋತ್ರ

ಶ್ರೀ ಎಂ. ಕೆ. ವೈದ್ಯರ್, ಧನ್ವಂತರಿ ವೈದ್ಯಶಾಲಾ, ಮಂಗಳೂರು ಇವರು ಹೀಗೆ ತಿಳಿಸುತ್ತಾರೆ:—

ನಾವು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದುದರ ಫಲವಾಗಿ ಈಗಾಗಲೇ ಹೆತ್ತು ಹನ್ನೆರಡು ದೇವತಾ ಸ್ತೋತ್ರಗಳು ಬಂದಿರುವುವು. ಆದರೆ ಇನ್ನೂ ಹಲವು ಕವಿಗಳು ಕಳುಹಿಸಿ ಕೊಡಲಿಕ್ಕಿರುವರಾದುದರಿಂದ, ಇದನ್ನು ಸ್ವೀಕರಿಸುವ ಸಮಯವನ್ನು ಇನ್ನೊಂದು ತಿಂಗಳಿಗೆ ಮುಂದುವರಿಸಿರುವೆವು. ಗುಣಗ್ರಾಹಿಗಳು ದಯವಿಟ್ಟು ಸ್ತೋತ್ರವನ್ನು ರಚಿಸಿ ನಮಗೆ ಬೇಗನೆ ಕಳುಹಿಸಿ ಕೊಡಬೇಕಾಗಿ ಇನ್ನೊಮ್ಮೆ ಪ್ರಾರ್ಥಿಸುತ್ತೇವೆ.'

ಕನ್ನಡ ಕಲಾವಿದರು

ಮದ್ರಾಸ್ ಆಲ್ ಇಂಡಿಯಾ ರೇಡಿಯೋ ಗಾಯಕರೂ ಪ್ರಸಿದ್ಧ ಹಿಂದುಸ್ಥಾನೀ ಸಂಗೀತವಿದ್ವಾಂಸರಾದ ಶ್ರೀ ಕಾಳಿಂಗ ರಾವ್ ಮತ್ತು ಶ್ರೀದಾಸ್ ಇವರು (ಇವರಿಬ್ಬರೂ ದಕ್ಷಿಣ ಕನ್ನಡಿಗರು) ಈಗ ದಕ್ಷಿಣ ಕನ್ನಡಕ್ಕೆ ಬಂದಿದ್ದು ಇಲ್ಲಿ ಒಂದೆರಡುವಾರ ಇರುವರಾಗಿ ತಿಳಿಯುತ್ತದೆ. ಇವರಿಬ್ಬರು ಸಂಗೀತಕಾರರು ಮಾತ್ರವಲ್ಲದೆ ಸಿನೆಮಾ ನಟರೂ ಆಗಿರುವರು. ಕನ್ನಡ ವಸಂತ ಸೇನಾ, ಹರಿಶ್ಚಂದ್ರ, ರಾಧಾರಮಣ ಚಿತ್ರಗಳಲ್ಲಿ ಇವರ ಅಭಿನಯ ಸಂಗೀತಗಳಿವೆ.

ಇನ್ನಂಜೆ ಪ್ರವೇಶೋತ್ಸವ ಮತ್ತು ವರ್ಧಂತ್ಯುತ್ಸವ.

ತಾ. ೨೪–೨–'೪೪ರಂದು ಸಂಜೆ ಇಲ್ಲಿ ನೆರೆದ ಮಹಾಸಭೆಯಲ್ಲಿ ಶ್ರೀ ಫಲಿಮಾರು ಮಠದ ಶ್ರೀ ಶ್ರೀ ಪಾದಂಗಳವರನ್ನು ಶಾಲಾ ಮೆನೇಜರ್ ಶ್ರೀ ಶ್ರೀನಿವಾಸ ಮಿತ್ತಂತಾಯರು ವಾದಿರಾಜ ಗುರುಕುಲದ ಪ್ರವೇಶೋತ್ಸವವನ್ನು ನೆರವೇರಿಸಬೇಕೆಂದು ಕೇಳಿಕೊಂಡಾಗ ಶ್ರೀ ಶ್ರೀ ಪಾದಂಗಳವರು ವಾದ್ಯ ಮಂತ್ರ ಘೋಷಗಳೊಡನೆ ಉದ್ಘಾಟನೆಯನ್ನು ನೆರವೇರಿಸಿದರು.

ಶ್ರೀ ಕುರ್ಕಾಲು ಗಣಪಯ್ಯ ಸೆಟ್ರು ಈ ಶಾಲೆಯ ಚರಿತ್ರೆಯನ್ನು ವಿವರಿಸಿ ಭಾಷಣವಿತ್ತರು. ಬಳಿಕ ಶಾಲಾ ಕರೆಸ್ಪೊಂಡೆಂಟ್ ಶ್ರೀ ಸಾಬಾಜೆ ಶ್ರೀನಿವಾಸಾಚಾರ್ಯರು ಧನ್ಯವಾದಗಳನ್ನು ಅರ್ಪಿಸಿದರು. ಶಾಲಾ ವರ್ಧಂತ್ಯುತ್ಸವವು ಡಾ। ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ ಅಧ್ಯಕ್ಷರ ಆರಂಭ ಭಾಷಣವಾದ ಮೇಲೆ ಡಾ। ಮಿತ್ತಂತಾಯರು ಶಾಲಾಭ್ಯುದಯ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯರಾದ ಶ್ರೀ ಎ. ಶ್ಯಾಮರಾಯರು ಈಗ ಶಾಲೆಯಲ್ಲಿ ಹತ್ತು ಮಂದಿ ಅಧ್ಯಾಪಕರು ಮೂರು ಕ್ಲಾಸುಗಳಲ್ಲಿ ೨೦೧ ಬಾಲಕರೂ ಇರುವರೆಂಬು ಮುಂತಾದ ವರದಿಯನ್ನು ಪರೀಕ್ಷಕರ ಮತ್ತು ಸಂದರ್ಶಕರ ಅಭಿಪ್ರಾಯಗಳನ್ನೂ ಓದಿ ಮಹಾಜನರ ಸಹಾಯ ಸಹಕಾರಗಳನ್ನು ಕೇಳಿಕೊಂಡರು. ಬಹುಮಾನಗಳ ಹಂಚೋಣವಾದ ಮೇಲೆ ಶ್ರೀ ಫಲಿಮಾರು ಮಠದ ಶ್ರೀಗಳವರು ಈ ಶಾಲೆಯ ಅಭಿವೃದ್ಧಿ ಹಾರೈಸಿ ಭಾಷಣವಿತ್ತರು. ಮುಖ್ಯೋಪಾಧ್ಯಾಯರ ಧನ್ಯವಾದ ಸಮರ್ಪಣೆಯಾದ ಬಳಿಕ ತುಳು ಕನ್ನಡ ನಾಟಕ ಮುಂತಾದ ನಾನಾ ವಿಧ ವಿನೋದಗಳಿದ್ದವು.

ತಾ ೨೫ರಂದು ರೆ. ಫಾದರ್ ಜಿ. ಎಸ್. ಪೇರಿಸ್‌ರವರ ಅಧ್ಯಕ್ಷತೆಯಲ್ಲಿ ಬಾಲಕರ ನಾನಾ ವಿದ ಸ್ಪರ್ಧೆಗಳು ಜರಗಿ ಜಯಶೀಲರಾದವರಿಗೆ ಬಹುಮಾನಗಳು ಹಂಚಲ್ಪಟ್ಟಿದ್ದವು.

ತಾ ೨೬ರಂದು ಬಾಲಕರಿಗೂ ಊರ ಮಹನೀಯರಿಗೂ ಉಪಹಾರ ಕೂಟ ಏರ್ಪಡಿಸಲ್ಪಟ್ಟಿತು.

ತಾ ೨೯ನೇ ಮಂಗಳವಾರ ಡಿವಿಜನಲ್ ಇನ್ಸ್‌ಪೆಕ್ಟರವರು ಜಿಲ್ಲಾ ವಿಧ್ಯಾಧಿಕಾರಿಗಳೊಡನೆ ಈ ಶಾಲೆಯನ್ನು ಸಂದರ್ಶಿಸಿ ಇಲ್ಲಿಯ ಕಾರ್ಯಕಲಾಪಗಳನ್ನು ಕಂಡು ಸಂತೃಪ್ತರಾಗಿರುವರು.

ಕಾಸರಗೋಡು

ನಿಧನ

ಇಲ್ಲಿಯ ಪ್ರಮುಖ ವಕೀಲರಲ್ಲೊಬ್ಬರಾದ ಶ್ರೀ. ಚಂದಾವರ ರಾಮರಾಯರು ತನ್ನ ೬೨ನೇ ವಯಸ್ಸಿನಲ್ಲಿ ಕಳೆದ ತಾ. ೩ನೇ ಶುಕ್ರವಾರ ಬೆಳಗ್ಗೆ ೫½ ಘಂಟೆಗೆ ಕೈಲಾಸ ವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯೀಯಲಿ.

ವರ್ಗ

ಕೆಲವು ತಿಂಗಳುಗಳಿಂದ ಇಲ್ಲಿಯ ಪೋಲೀಸ್ ಸ್ಟೇಶನ್ ಹೌಸ್ ಆಫೀಸರರಾಗಿದ್ದ ಸಬ್ ಇನಸ್ಪೆಕ್ಟರ್ ಶ್ರೀ. ಫರ್ನಾಂಡೋರವರಿಗೆ ಕೊಯಮುತ್ತೂರಿಗೆ ವರ್ಗವಾಗಿದೆ.

ಪೆಡೂರ್ನರು

ತಾ. ೧೧–೩–೪೪ ಮೊದಲ್ಗೊಂಡು ತಾ. ೧೮–೩–೧೯೪೪ರ ವರೆಗೆ ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ಮಾಮೂಲ್ ಮೇರೆಗೆ ಶ್ರೀಮನ್ಮಹಾರಥೋತ್ಸವದ ಕಾರ್ಯಗಳು ಜರಗಲಿರುವುವು.

ಕಳ್ಳ ಸಾಧು

ಕದ್ರಿಯ ನೋಡು ಬೈಲಿಯ ಒಂದು ಮನೆಯವರು ಒಬ್ಬ 'ಸಾಧು'ವಿಗೆ ಆಶ್ರಯ ಕೊಟ್ಟಿದ್ದು ಆತನು ಕಳೆದ ತಾ. ೬–೨–'೪೪ರಂದು ಆ ಮನೆಯಿಂದ ಸುಮಾರು ಸಾವಿರ ರೂಪಾಯಿ ವರೆಗೆ ಕಳವು ಮಾಡಿ ಪರಾರಿಯಾಗಿರುವನೆಂದು ತಿಳಿದಿದೆ.

WANTED

Wanted a well experienced Accountant for an established firm in Mangalore. The candidate must have at least S. S. L. C. qualification. Pay according to qualification.

Apply X

C/o Swadeshabhimani

ಕೆಲವು ಹೊಸ ತೆರಿಗೆಗಳು

ಬಿಡುಗಡೆ ಮಾಡಲು ಲಂಚ ಕೇಳಿದರು

ಬಿಳಿ ಪತ್ರಿಕೆಗಳ ಸುಳ್ಳು ಪ್ರಚಾರ

ಇದಕ್ಕಾಗಿ ಕೆಲವು ಹೊಸ ತೆರಿಗೆಗಳು ಸೂಚಿಸಲಾಗಿದೆ.

ಟೀ, ಕಾಫಿ ಮತ್ತು ಅಡಿಕೆಗಳ ಮೇಲೆ ಪೌಂಡು ಒಂದಕ್ಕೆ ಎರಡಾಣೆಯಂತೆ ಹೊಸ ತೆರಿಗೆ ಹಾಕಲಾಗಿದೆ. ಇದರಿಂದ ೪ ಕೋಟಿ ರೂಪಾಯಿ ಉತ್ಪತ್ತಿ ಬರಬಹುದೆಂದು ಅಂದಾಜು ಮಾಡಲಾಗಿದೆ.

ಸುಂಕಗಳ ಮೇಲೆ ಶೇಕಡಾ ೨೦ರಂತೆ ವಿಧಿಸಿದ ಎಮರ್ಜೆನ್ಸಿ ಸರ್‌ಚಾರ್ಜು ಮುಂದಿನ ವರ್ಷವೂ ಇರುವುದು,—ಹೊಗೆಸೊಪ್ಪು, ಮಾದಕ ದ್ರವ್ಯಗಳ ಮೇಲೆ ಸರ್‌ಚಾರ್ಜು ೧/೫ರಿಂದ ಅರ್ಧಕ್ಕೆ ಹೆಚ್ಚಿಸಲಾಗುವುದು. ಹೊಗೆಸೊಪ್ಪಿನ ಸುಂಕದಿಂದ ೧೦ ಕೋಟಿ ರೂಪಾಯಿ ಆದಾಯ ಊಹಿಸಲಾಗಿದೆ.

ಆದಾಯ ತೆರಿಗೆ ವಿಧಿಸುವ ಅಲ್ಪಾವಧಿ ಪರಿಮಿತಿಯನ್ನು ೧೫೦೦ ರೂಪಾಯಿಗಳಿಂದ ೨೦೦೦ ರೂಪಾಯಿಗೆ ಏರಿಸಲಾಗಿದೆ. ೧೦ ರೂ. ಆದಾಯದವರಿಗೆ ತೆರಿಗೆ ಏರಿಸಿಲ್ಲ. ೧೦ ಸಾವಿರ ರೂಪಾಯಿಂದ ೧೫ ಸಾವಿರ ರೂಪಾಯಿವರೆಗೆ ಆದಾಯ ತೆರಿಗೆ ರೂಪಾಯಿಗೆ ಎರಡು ಕಾಸು ಹೆಚ್ಚಿಸಲಾಗಿದೆ. ಎಂದರೆ ರೂಪಾಯಿಗೆ ಒಂದಾಣೆ ನಾಲ್ಕು ಪೈ ಇದ್ದುದನ್ನು ಒಂದುವರೆ ಆಣೆಗೆ ಹೆಚ್ಚಿಸಲಾಗಿದೆ. ೧೫ ಸಾವಿರ ರೂಪಾಯಿಗಿಂತ ಹೆಚ್ಚಿನ ಆದಾಯಕ್ಕೆ ರೂಪಾಯಿಗೆ ನಾಲ್ಕು ಕಾಸು ಹೆಚ್ಚಿಸಲಾಗಿದೆ. ಎಂದರೆ ರೂಪಾಯಿಗೆ ಒಂದಾಣೆ ಎಂಟು ಪೈ ಇದ್ದುದನ್ನು ಎರಡಾಣೆ ಮಾಡಲಾಗಿದೆ.

ಆದಾಯ ತೆರಿಗೆಯ ಸುಪರ್‌ಟ್ಯಾಕ್ಸಿನ ಮೇಲೆ ೩೫ ಸಾವಿರದಿಂದ ಎರಡು ಲಕ್ಷ ರೂ.ಗಳ ಆದಾಯದ ವರೆಗೆ ಕೇಂದ್ರ ಸರ್‌ಚಾರ್ಜಿನಲ್ಲಿ ಅರ್ಧಾಣೆಯಷ್ಟು ಹೆಚ್ಚಿಸಲಾಗಿದೆ. ಅಧಿಕ ಲಾಭದ ತೆರಿಗೆಯಲ್ಲಿ ವ್ಯತ್ಯಾಸವಿಲ್ಲ.

ಈ ಎಲ್ಲಾ ತೆರಿಗೆಗಳಿಂದ ೨೫ ಕೋಟಿ ೫೦ ಲಕ್ಷ ರೂ. ಹೆಚ್ಚು ಆದಾಯ ಬರುವುದೆಂದು ಅಂದಾಜು ಮಾಡಲಾಗಿರುವುದು. ಇದರಿಂದಾಗಿ ಕಡಿಮೆ ಬೀಳುವುದು ೭೮ ಕೋಟಿ ೨೧ ಲಕ್ಷದಿಂದ ೫೪ ಕೋಟಿ ೭೧ ಲಕ್ಷಕ್ಕಿಳಿಯುತ್ತದೆ.

೧೯೪೩-೪೪ರ ಪುನರ್ರಚಿತ ಅಂದಾಜು ಮೇರೆಗೆ ಆದಾಯವು ೨೫೪ ಕೋಟಿ ೫೦ ಲಕ್ಷ ರೂಪಾಯಿ; ಎಂದರೆ ಮೊದಲಿನ ಅಂದಾಜಿಗಿಂತ ೩೫ ಕೋಟಿ ೫೦ ಲಕ್ಷ ರೂಪಾಯಿ ಹೆಚ್ಚಾಗಿದೆ. ಖರ್ಚಿನ ಬಾಬಿನಲ್ಲಿ ೮೭ ಕೋಟಿ ೩೪ ಲಕ್ಷ ರೂ. ಹೆಚ್ಚಿದೆ. ಈ ವರ್ಷದಲ್ಲಿ ೯೨ ಕೋಟಿ ೪೩ ಲಕ್ಷ ರೂ. ಕಡಿಮೆ ಬೀಳುತ್ತದೆ.

ಯುದ್ಧ ಖರ್ಚಿನ ಜಗ್ಗೆ ಹುಟ್ಟುವಳಿಯಿಂದ ೨೬೨ ಕೋಟಿ ೬೪ ಲಕ್ಷ ರೂಪಾಯಿಯೂ, ಭಂಡವಾಳದಿಂದ ೩೮ ಕೋಟಿ ೩೦ ಲಕ್ಷ ರೂಪಾಯಿಯೂ ಕೂಡಲಾಗಿದೆ. ಮುಂದಿನ ವರ್ಷ (೧೯೪೪-೪೫) ಒಟ್ಟು ಆದಾಯವು ೨೮೪ ಕೋಟಿ ೯೪ ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಯುದ್ಧದ ಖರ್ಚು ೨೭೬ ಕೋಟಿ ೬೧ ಲಕ್ಷ ರೂ. ಆಗುವುದು.

ಆದಾಯ ತೆರಿಗೆಯಿಂದ ಈ ವರ್ಷ ಪ್ರಾಂತಗಳಿಗೆ ೧೯ ಕೋಟಿ ೫೦ ಲಕ್ಷ ರೂ. ಕೊಡಲಾಗುವುದು. ಮುಂದಿನ ವರ್ಷ ೨೩ ಕೋಟಿ ೬೯ ಲಕ್ಷ ರೂ. ಕೊಡಲಾಗುವುದು.

ಸಿವಿಲ್ ಆಡಳಿತದ ಆದಾಯ ೧೯೪೩-೪೪ರಲ್ಲು ೭೬ ಕೋಟಿ ೬೮ ಲಕ್ಷ ರೂಪಾಯಿಂದ ೪೪ ಕೋಟಿ ೨೯ ಲಕ್ಷಕ್ಕೆ ಹೆಚ್ಚಿದೆ. ಮುಂದಿನ ವರ್ಷ ೮೬ ಕೋಟಿ ೫೭ ಲಕ್ಷ ರೂಪಾಯಿ ಅಂದಾಜು ಮಾಡಿದೆ. ಕಡಿಮೆ ಬೀಳುವುದು ೭೮ ಕೋಟಿ ೨೧ ಲಕ್ಷ ರೂ. ಆಗುತ್ತದೆ.

೧೯೪೩-೪೪ರಲ್ಲು ಆದಾಯದ ಬಾಬಿನಲ್ಲಿ ೯೨ ಕೋಟಿ ೪೩ ಲಕ್ಷ ರೂ. ಕಡಿಮೆ ಬಿದ್ದು, ಮುಂದಿನ ವರ್ಷ ೭೮ ಕೋಟಿ ೨೧ ಲಕ್ಷ ರೂ. ಕಡಿಮೆ ಬೀಳುವುದಾಗಿ ಸೂಚಿಸಲಾಗಿದೆ.

ಯುದ್ಧದ ಆರಂಭದಿಂದ ೪೪೭ ಕೋಟಿ ರೂ. ಸಾಲ ತೆಗೆಯಲಾಗಿದೆ. ರಕ್ಷಣಾ ಬಾಂಡಿಗೆ ೧೯೪೩ನೇ ಜನವರಿಯಿಂದ ೧೯೪೪ನೇ ಫೆಬ್ರವರಿ ವರೆಗೆ ೧೧೫ ಕೋಟಿ ರೂ. ದೊರೆ ಇದೆ. ಕಳೆದ ೧೨ ತಿಂಗಳಲ್ಲಿ ಒಟ್ಟು ೨೮೯ ಕೋಟಿ ರೂ. ಸಾಲಕ್ಕೆ ಹಣ ಬಂದಿದೆ.

ಯುದ್ಧಾನಂತರದ ಆವಶ್ಯಕತೆಗಾಗಿ ಡಾಲರ್ ನಿಧಿ ಏರ್ಪಡಿಸಲಾಗಿದೆ.

ಬಿಡುಗಡೆ ಮಾಡಲು ಲಂಚ ಕೇಳಿದರು!

ಸಿಂಧ ಎಸೆಂಬ್ಲಿ ಸದಸ್ಯ ಖುಹೋರವರು, ಬಿಡುಗಡೆಗಾಗಿ ಬರಕೊಟ್ಟ ಭರವಸೆಯನ್ನು ಹಿಂತೆಗೆದುಕೊಂಡಿರುವುದಾಗಿ ಗೃಹಮಂತ್ರಿ ಹೇಳಿದಾಗ, ಅದಕ್ಕೆ ಉತ್ತರ ಕೊಡುತ್ತಾ ಖುಹೋರವರು ಹೀಗಂದರು. 'ಯುದ್ಧ ವಿರೋಧ ಚಟುವಟಿಕೆಗಾಗಿ ನನ್ನ ಬಂಧನವಾಗಿರಲಿಲ್ಲ; ಅಲ್ಲಾಭಕ್ಷ ಪಕ್ಷದವನೆಂದು ಸೆರೆಹಿಡಿದರು. ಬಿಡುಗಡೆಯಾಗಬೇಕಾದರೆ ಸಂಬಂಧಪಟ್ಟವರಿಗೆ ಲಂಚಕೊಡಬೇಕೆಂದು ತಿಳಿಸಲಾಯಿತು. ಲಂಚ ಕೊಡುವುದಕ್ಕಿಂತ ಭರವಸೆ ಕೊಟ್ಟು ಹೊರ ಬರುವುದೇ ವಾಸಿಯೆಂದು ನಾನು ಹಾಗೆ ಮಾಡಿದೆ."

'ಬಾ'ರ ಕುರಿತು ಬಿಳಿ ಪತ್ರಿಕೆಗಳ ಸುಳ್ಳು ಪ್ರಚಾರ

ಸರ್ವ ಸಾಧಾರಣವಾಗಿ ಸುಳ್ಳು ಹೇಳುವುದೆಂದರೆ ಬ್ರಿಟಿಷ್ ಪತ್ರಿಕೆಗಳ ಒಂದು ಶೀಲ. ಅದರಲ್ಲಿಯೂ ಭಾರತೀಯ ಮುಖಂಡರ ವಿಷಯ ಬರೆಯುವಾಗಲಂತೂ ಅವುಗಳು ಪ್ರಾಮಾಣಿಕತನದ ಮೇರೆ ಮೀರುತ್ತವೆ. 'ಬಾ'ರ ವಿಷಯ ಬೊಂಬಾಯಿಯ 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆ ಕೊಟ್ಟ ಒಂದು ಸುದ್ದಿ ಇದು:—ಅಮೆರಿ ಸಾಹೇಬರು ಗಾಂಧೀಜಿಯ ವೆರು ಕಟ್ಟ ಮನುಷ್ಯರೆಂದು ಹೇಳಿದ್ದನ್ನು ಕೇಳಿ ಅವರು (ಬಾ) "ನಾವು ಕಟ್ಟವರಲ್ಲ ಈ ಕಿರೀಟ (ಕ್ರಿಪ್ಸ್) ಮತ್ತು ಮೇರಿ (ಅಮೇರಿ) ಇವರೇ ಕಟ್ಟವರು ಎಂದು ಹೇಳಿದರು."

ಬ್ರಿಟನ್ನಿನ ಪತ್ರಿಕೆ ಎನಿಸಿ, ತುಂಬಾ ಅನುಭವಸ್ಥಳಾದ 'ಬಾ' ಇಷ್ಟೊಂದು ಹಳ್ಳಿಗಳಂತೆ ವರ್ತಿಸಿದಳೆಂಬುದು ತೀರ ಹೇಯ ಕಲ್ಪನೆಯ ಪರಮಾವಧಿಯಲ್ಲದೆ ಅದರಲ್ಲಿ ಒಂದಿಷ್ಟು ನಿಜಾಂಶವಿಲ್ಲ.

'ಸಂಡೇ ಡಿಸ್‌ಪಚ್' ಎಂಬ ಬ್ರಿಟಿಷ್ ಪತ್ರಿಕೆಯ ಬೊಂಬಾಯಿ ವಾರ್ತಾದಾರನು ೧೯೩೨ರಲ್ಲಿ ಒಂದು ಸಲ ಕಳುಹಿಸಿದ ವರದಿ: "ರೈಲುನಿಂತ ಕೂಡಲೇ ಮಹಾತ್ಮ ಗಾಂಧೀಜಿಯವರು ತಮ್ಮ ಮಿತ್ರ ಪರಿವಾರದೊಂದಿಗೆ ತಮ್ಮ ಸುಖೋಪಭೋಗಮಯವಾದ ತಮ್ಮ ಬಿರ್ಲಾ ಭವನಕ್ಕೆ ತೆರಳಿದರು. ೧೫ ನಿಮಿಷಗಳ ನಂತರ ರೈಲಿನ ಯಾವುದೋ ಹಾದಿಯಿಂದ ಕೃಶಳಾಗಿ ಕುಳ್ಳಾಗಿರುವ ಒಬ್ಬ ಮುದುಕಿ-ಹೆಂಗಸು ತನ್ನ ಹಾಸಿಗೆ ಎತ್ತಿಕೊಂಡು ಮೂರು ಮೈಲು ದೂರದ ಬಿರ್ಲಾ ಭವನಕ್ಕೆ ಕಾಲು ನಡೆಯಿಂದಲೇ ಹೋದಳು. ಅವಳೇ ಕಸ್ತೂರ್‌ಬಾ-ಗಾಂಧಿ; ಮಹಾತ್ಮನ ಪತ್ನಿ, ಒಬ್ಬರೂ ಅವಳನ್ನು ಗಮನಿಸಲಿಲ್ಲ.!"

ಸಮ್ಮೇಳನ ಸಂಚಿಕೆಗಳು

ನವಭಾರತ (ಸಮ್ಮೇಳನಾಂಕ): ಮಂಗಳೂರಲ್ಲಿ ಜರಗಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಚಿಕೆಯಾಗಿ ಮಂಗಳೂರಿನ 'ನವಭಾರತ' ದಿನ ಪತ್ರಿಕೆಯವರು ತಮ್ಮದೀ ವಿಶೇಷಾಂಕ ಹೊರಡಿಸಿದ್ದಾರೆ. ಸಮ್ಮೇಳನದ ಭಾಷಣಗಳು, ನಿರ್ಣಯಗಳು, ಇತರ ಎಲ್ಲಾ ವಿವರಗಳು ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಘಟನಾವಳಿ, ಸಮ್ಮೇಳನ ಸಂದರ್ಭದಲ್ಲಿ ತೆಗೆದ ಛಾಯಚಿತ್ರಗಳು ಮತ್ತು ಕೆಲವು ವಿಶೇಷ ಲೇಖನ, ಕವಿತೆಗಳಿಂದ ಈ ಸಂಚಿಕೆ ಸುಂದರವೂ ವಾಚನೀಯವೂ ಇದೆ. ಕ್ರೌನ್ ಸೈಜಿನ .... ಪುಟಗಳು—ಬೆಲೆ ಎಂಟಾಣೆ.

The Freind of the Poor (ಬಡವರ ಬಂಧು) ಮಂಗಳೂರಿನ ಆಂಗ್ಲ ದಿನ ಪತ್ರಿಕೆ The Freind of the Poor 'ಇವರು ಮಂಗಳೂರಲ್ಲಿ ಜರಗಿದ ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನದ ಸಂದರ್ಭದಲ್ಲಿ ಇಂಗ್ಲಿಷಿನಲ್ಲಿ ಈ ವಿಶೇಷಾಂಕವೊಂದನ್ನು ಪ್ರಕಟಿಸಿರುವರು. ಸಮ್ಮೇಳನದ ಭಾಷಣ ಮತ್ತು ಇತರ ವಿವರಗಳಿಂದ ಪತ್ರಿಕೋದ್ಯೋಗಕ್ಕೆ ಸಂಬಂಧಿಸಿದ ತುಂಬಾ ವಿಶೇಷಲೇಖನಗಳಿಂದ ಕೂಡಿರುವ ಈ ಪತ್ರಿಕೆ ಸಂಗ್ರಾಹ್ಯವಿರುವುದು. ಕ್ರೌನ್ ೧/೮ ಆಕಾರದ ೬೦ ಪುಟಗಳಿಗೆ ಮೀರಿದ ಈ ಸಂಚಿಕೆಯ ಕ್ರಯ ಎರಡಾಣೆ.

'ದಕ್ಷಿಣ ಕನ್ನಡದ ಪತ್ರಿಕೆಗಳು'

ಲೇಖಕ: ಶ್ರೀ| ಜಿ. ಶಂಕರ ಭಟ್ಟ; ವಿದ್ವಾನ್ ಮಂಗಳೂರು.

ಮಂಗಳೂರಲ್ಲಿ ಜರಗಿದ ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ ಕಾಲದಲ್ಲಿ ದಕ್ಷಿಣ ಕನ್ನಡದಲ್ಲಿ ಹಿಂದೆ ಆಗಿ ಹೋದ ಈಗ ಪ್ರಚಲಿತವಾಗಿರುವ ಹಲವಾರು ಪತ್ರಿಕೆಗಳ ವಿವರ ಇತಿಹಾಸಗಳನ್ನು ಶ್ರೀ| ಭಟ್ಟರು ಈ ಪುಸ್ತಕದಲ್ಲಿ ಸಂಗ್ರಹಿಸಿ ಕೊಟ್ಟಿರುವರು: ಇದರ ಬೆಲೆ ಎರಡಾಣೆ; ಇದೇ ಪ್ರಕಾರ ಅಖಿಲ ಕರ್ನಾಟಕದ ಪತ್ರಿಕೋದ್ಯೋಗದ ಇತಿಹಾಸವನ್ನೂ ಶ್ರೀ| ಭಟ್ಟರು ಸಂಗ್ರಹಿಸಿ ಕೊಟ್ಟರೆ ಕನ್ನಡ ನಾಡಿಗೆ ಮಹೋಪಕಾರವಾಗುವುದು.

ಇದನ್ನು ಸುಳ್ಳು—ಹಸಿ ಸುಳ್ಳು—ಎಂದು ಕರೆಯಬೇಕೆ?

ಸರಕಾರಕ್ಕೆ ಸೋಲು

ಕೇಂದ್ರ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀ| ಪಿ. ದಾಸರು ರೈಲ್ವೆ ದರ ಹೆಚ್ಚಿಸಬಾರದೆಂದು ತಂದ ಉಪ ಸೂಚನೆಯು ಸ್ವೀಕೃತವಾಯಿತು. ಮುಸ್ಲಿಂಲೀಗ್‌ನವರು ರಾಷ್ಟ್ರೀಯ ಪಕ್ಷ, ಸ್ವತಂತ್ರ ಪಕ್ಷ ಮತ್ತು ಇತರ ಕೆಲವು ಸ್ವತಂತ್ರ ಸದಸ್ಯರೂ ಈ ಉಪಸೂಚನೆಗೆ ಬೆಂಬಲ ಕೊಟ್ಟಿದ್ದರು. ಸೂಚನೆ ಸ್ವೀಕೃತವಾದ ಕೂಡಲೇ ಪ್ರಚಂಡ ಘೋಷವಾಯಿತು.

ಅಲ್ಲಾ ಭಕ್ಷರ ಕೊಲೆ ತೀರ್ಪು

ಅಲ್ಲಾ ಭಕ್ಷರ ಕೊಲೆಯ ಖಟ್ಲೆ ತೀರ್ಮಾನವಾಗಿ ಕಾಸಿಮನೆಂಬವನಿಗೆ ಮರಣ ಶಿಕ್ಷೆ, ಉಳಿದ ನಾಲ್ವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ, ಕಳೆದ ಮೇ ೧೩ ತಾರೀಕಿನಂದು ಹಗಲು ಮಧ್ಯಾಹ್ನ ಪೋಲೀಸು ಸ್ಟೇಶನಿನೆದುರು ಸಿಂಧದ ಮುಖ್ಯ ಮಂತ್ರಿ, ಅಲ್ಲಾ ಭಕ್ಷರ ಕೊಲೆ ನಡೆದಿತ್ತು. ಅಲ್ಲಾ ಭಕ್ಷರ ಕೊಲೆಯ ವಿಚಾರದಲ್ಲಿ ಪೋಲೀಸರು ಅಜಾಗ್ರತೆ ವಹಿಸಿದ ವಿಷಯ ಸಿಂಧ ಅಸೆಂಬ್ಲಿಯಲ್ಲಿ ದೀರ್ಘ ಚರ್ಚೆ ನಡೆದಿದೆ.

Times have changed !

TIME-KEEPERS in Shakespeare's Day

ಕಾಲ ಬದಲಾಗಿದೆ!

ಶೇಕ್ಸ್‌ಪೀಯರನ ಕಾಲದಲ್ಲಿ ಸಮಯ ನೋಡುವುದು ಮತ್ತು ಇಂದು ಸಮಯ ನೋಡುವುದು.

& present day

ಎಕ್ಸ್‌ಟ್ರಾ "ಎಫ್"

18 ಕ್ಯಾ. ಸೋ. ಗೋಲ್ಡ್ ಗಟ್ಟಿ ಕೇಸು ರೂ. 280 ಕಿ. ಅರೆಬಿಕ್ ಅಥವಾ ನ್ಯೂಮ್ಸೈಲ್ ಡ. ಅದೇ ಕ್ರಯ.

ಎಕ್ಸ್‌ಟ್ರಾ 'ಎಚ್'

18 ಕ್ಯಾ. ಸೋ. ಗೋಲ್ಡ್, ಗಟ್ಟಿ ಕೇಸು ರೂ 345

ಶೇಕ್ಸ್‌ಪೀಯರನು ವಾಚ್ ಪ್ರಾರಂಭವನ್ನು ಕಂಡಿದ್ದನು. ಆದರೆ ಸ್ಕ್ರೂ ಇಗ್ಗೆ ವಾಚಿನ ಚಲನವಲನಗಳು ಪಿನ್‌ಗಳಿಂದ ಮತ್ತು ರೈವೆಟ್‌ಗಳಿಂದಾಗುತ್ತಿತ್ತು. ಗಿಯರ್ ಕಟ್ಟಿಂಗ್ ಕೈಯಿಂದ ನಾಜೂಕಿರದೆ ಮಾಡಲ್ಪಡುತ್ತಿತ್ತು, ಬೆಲೆನ್ಸ್ ಸ್ಪ್ರಿಂಗ್‌ಗೆ ಬ್ರಿಸ್ಲ್ ಉಪಯೋಗಿಸಲ್ಪಡುತ್ತಿತ್ತು. ಇಂದು ವಾಚುಗಳು 400 ವರ್ಷಗಳ ಅನುಭವದ ಫಲವಾಗಿ ಚಲೋದಾಗಿ, ಭದ್ರಬಾಳಿಕೆಯದಾಗಿ ತಯಾರಾಗುತ್ತವೆ. ಹಿಂದಿನ ಮತ್ತು ಇಂದಿನ ಕೌಶಲ್ಯಗಳೆಲ್ಲಾ ವೆಸ್ಟ್ ಎಂಡ್ ವಾಚುಗಳಲ್ಲಿವೆ: ಬೇಕಾದವರಿಗೆ ಕೆಟಲಾಗು ಧರ್ಮಾರ್ಥ.

ಸರಿಯಾಗಿ ಆಮದಾಗದಿರುವುದರಿಂದ ಜಾಹೀರು ಮಾಡಿದ ಎಲ್ಲಾ ನಮೂನೆಗಳನ್ನೂ ಒದಗಿಸುವುದು ಕಷ್ಟವಾದರೂ, ನಮ್ಮಲ್ಲಿ ಸ್ಟಾಕು ಇರುವ ಮಟ್ಟಿಗೆ ಆದಷ್ಟು ಸರಿಯಾಗಿ ಉತ್ತಮ ವಾಚುಗಳನ್ನು ಒದಗಿಸಿ ಕೊಡುವೆವು.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ ಮತ್ತು ಕಲ್ಕತ್ತ

West End Watch Co

Bombay — Calcutta

ನೇ ಪುಟದಿಂದ

ನಾ ಕಂಡ ಕಸ್ತೂರ್‌ಬಾ

"ಬಾಪುವಿನ ಆತ್ಮಚರಿತ್ರೆಯಲ್ಲಿ ನಿಮ್ಮ ಧೈರ್ಯದ ಕುರಿತೇ ಪ್ರತ್ಯೇಕ ಒಂದು ಅಧ್ಯಾಯ ಇದೆ" ನಾನೊಮ್ಮೆ ಹೇಳಿದೆ, ಕಸ್ತೂರ್‌ಬಾ ಹೇಳಿದರು; "ಅದು ನನ್ನ ಧೈರ್ಯ ಅಲ್ಲ;" ಅವರ ಮಾತನ್ನು ಸಮರ್ಥಿಸಲು ಆ ಘಟನೆ ವಿವರಿಸಿದರು. ದರ್ಬಾನಿನಲ್ಲಿ ಬಾ ವಿಷಮ ಸಂಕಟಕ್ಕೀಡಾಗಿದ್ದರು, ದನದ ಮಾಂಸದ ಕಷಾಯ ಕುಡಿಯಬೇಕೆಂದು ಅವರಿಗೆ ಚಿಕಿತ್ಸೆ ಮಾಡುತ್ತಿದ್ದ ಡಾಕ್ಟರು ಒತ್ತಾಯಿಸಿದರು ಸಸ್ಯಾಹಾರಿಯಾದ ಗಾಂಧೀಜಿ ಅದರ ಕುರಿತು ಆಕ್ಷೇಪಿಸಿದರು

"ನೀವು ನಿಮ್ಮ ಹೆಂಡತಿಗೆ ನಾನು ಚಿಕಿತ್ಸೆ ಮಾಡಬೇಕೆಂದು ಹೇಳುವುದಾದರೆ ನಾನು ಕೊಡುವುದನ್ನೆಲ್ಲಾ ಒಪ್ಪಬೇಕು ಇಲ್ಲವಾದರೆ ನನ್ನ ಮದ್ದು ಬಿಟ್ಟು ಬಿಡಬಹುದೆಂದು ನಾನು ವಿಷಾದಪೂರ್ವಕ ಹೇಳಬೇಕಾಗುತ್ತದೆ" ಡಾಕ್ಟರು ತಿಳಿಸಿದರು

ಕಸ್ತೂರ್‌ಬಾ ಒಪ್ಪುವುದಾದರೆ, ಆಕೆಯನ್ನು ಆ ಡಾಕ್ಟರರ ಚಿಕಿತ್ಸೆಯಿಂದ ಬಿಡಿಸಲು ಗಾಂಧೀಜಿ ಸಿದ್ಧರಿದ್ದರು ಅವರು ಪತಿಗೆ ತನ್ನ ಅಭಿಪ್ರಾಯ ತಿಳಿಸಿದರು ಆಕೆಯ ಉತ್ತರವೂ ನಿರ್ಧಾರದ್ದೇ ಇತ್ತು "ಅಂಥಾ ಪೇಸಿಕೆ ಕುಡಿದು (ದನದ ಮಾಂಸದ ಕಷಾಯ) ಬದುಕುವುದಕ್ಕಿಂತ ನಾನು ನಿಮ್ಮ ತೋಳಲ್ಲಿ ಸಾಯುವುದನ್ನೇ ಇಚ್ಛಿಸುತ್ತೇನೆ" ಈ ಮಾತುಗಳನ್ನು ನೆನವರಿಕೆಗೆ ತಂದಂತೆ, ಕಸ್ತೂರ್‌ಬಾ ನನಗೆ ಬಾಪುರವರ ಧೈರ್ಯ ಮತ್ತು ತತ್ವದ ಮೇಲಿರುವ ಅಚಲ ಭಕ್ತಿ ಇವುಗಳೇ ತನಗೆ ಮಾರ್ಗ ದರ್ಶಕವೆಂದು ಹೇಳಿದರು

ಬಾಡೋ‍ಲಿ ಮತ್ತು ಬೊಸಾ‍ದ್ ಘಟನೆಗಳ ಮೇಲೆ ನಾಲ್ಕು ವರ್ಷ ನಾನು ಕಸ್ತೂರ್‌ಬಾರನ್ನು ಕಾಣುವುದಾಗಲಿಲ್ಲ ಆ‍ಕ್ಷಿಗರಲ್ಲಿ ನಾನು ಪುನ ಸೇವಾ ಗ್ರಾಮದಲ್ಲೊಮ್ಮೆ ಅವರನ್ನು ಕಂಡೆ ತನ್ನ ಸ್ವಂತ ಅಡಿಗೆಗೆ ಕೆಲವು ಧಾನ್ಯಗಳನ್ನು ಸರಿ ಗೊಳಿಸುತ್ತಾ, ಮೂಗಿನ ಮೇಲೆ ಕನ್ನಡಕ ತೂಗಾಡುತಿದ್ದು ಆಕೆ ಗುಡಿಸಲಲ್ಲಿ ಕುಳಿತಿದ್ದರು ಗ್ರೆಕ್ಷಿಗರಲ್ಲಿ ನಾನು ಗುಜರಾಥಿನಲ್ಲಿ ಕಂಡದ್ದಕ್ಕಿಂತ ಇದು ಬೇರಾಗಿತ್ತು ಗಾಂಧೀಜಿಯೊಡನೆ ಹರಿಜನ ಪ್ರವಾಸ ಮುಗಿಸಿ ಅವರು ಶಾಂತ ಜೀವನ ಕೈಕೊಂಡಿದ್ದರು. ಅವರ ಬಲಗಡೆಯ ಆ ಜೋಪಿಯಲ್ಲಿ ಗಾಂಧೀಜಿ ಹರಿಜನಕ್ಕೆ ಲೇಖನ ಬರೆವ ಮತ್ತು ಧನುಷ್ ತಕ್ಲಿಯಲ್ಲಿ ನೂಲುತ್ತಿರುವ ಎರಡು ಜಗತ್ ಪ್ರಸಿದ್ಧ ಕೋಣೆಗಳಿದ್ದುವು ಮೀರಾಬೆನ್ ಸಹಾಯಿಡುತ್ತಿರಲು ಕಸ್ತೂರ್‌ಬಾ ಗಾಂಧೀಜಿಯನ್ನು ಬಹಳ ಚೆಲುವಾಗಿ ಆರೈಕೆ ಮಾಡುತ್ತಿದ್ದರು ಬಾಪುವಿಗೆ ಹಸುರು ತರಕಾರಿಯ ಸಲಾಡನ್ನು ಮೀರಾಬೆನ್ ತಯಾರಿಸುತ್ತಿದ್ದರೆ ಬಾ ಗೃಹ ಕೃತ್ಯ ನೋಡುತ್ತಿದ್ದರು.

ಗ್ರೆಕ್ಷಿಗರ ನಂತರ ಈ ತರದಲ್ಲಿರುವ ಕಸ್ತೂರ್‌ಬಾರನ್ನು ನಾನು ಆಗಾಗ ನೋಡುವ ಸಂದರ್ಭವೊದಗಿತು ತನ್ನ ಮುಂದಿನ ಜೀವನದ ಪತ್ರಿಯೊಂದು ನಿಮಿಷವನ್ನೂ ಗಾಂಧೀಜಿಯ ಶರೀರ ಪಾಲನೆಯಲ್ಲಿ ವಿನಿಯೋಗಿಸಬೇಕೆಂದು ಬಾ ನಿರ್ಧರಿಸಿದಂತೆ ತೋರುತಿತ್ತು, ಇಡೀ ತನ್ನ ಜೀವನದಲ್ಲೇ ಅವರು ಆ ಕೆಲಸ ಮಾಡುತ್ತಿದ್ದರೆಂಬುದೂ ಮರೆಯತಕ್ಕದಲ್ಲ ಗಾಂಧೀಜಿಯ ಶರೀರಾರೋಗ್ಯ ಉತ್ತಮ ಗೊಳ್ಳಲು ಕಾರಣವಾದ ಆಡಿನ ಹಾಲಿನ ಸೇವನೆಯನ್ನು ಅವರೇ ಗಾಂಧೀಜಿಗೆ ತಿಳಿಸಿದ್ದರು

ಇದರ ಕತೆಯನ್ನು ಶ್ರೀಮತಿ ಪೋಲಕ್ ಹೇಳಿದ್ದಾರೆ ಹಾಲು ಕುಡಿಯುವುದಿಲ್ಲವೆಂದು ಗಾಂಧೀಜಿ ಪ್ರತಿಜ್ಞೆ ಕೈಕೊಂಡ ಕೆಲ ವರ್ಷದ ಮೇಲೆ ಅವರ ಆರೋಗ್ಯ ಬಹಳ ಕೆಟ್ಟಿತು ಗಾಂಧೀಜಿ ವಿಷಮ ಕಾಹಿಲೆಗೆ ತುತ್ತಾದಾಗ, ಡಾಕ್ಟರರು ಹಾಲು ಕುಡಿಯಲೇ ಬೇಕೆಂದರು ತನ್ನ ಪ್ರತಿಜ್ಞೆಯ ಪ್ರಕಾರ ಗಾಂಧೀಜಿ ಡಾಕ್ಟರರ ಸೂಚನೆಗೆ ಕಿವಿ ಗೊಡಲೇ ಇಲ್ಲ ಈಗ ಕಸ್ತೂರ್‌ಬಾ ಒಂದು ಹಾದಿ ಹುಡುಕಿದರು "ಬಾಪು, ಹಾಲು ಕುಡಿಯಲಾರೆನೆಂದು ಪ್ರತಿಜ್ಞೆ ಮಾಡಿದ್ದರು, ಹಾಲು ಎಂದರೆ ಕೂಡಲೇ ಜನರು ದನ ಅಥವಾ ಎಮ್ಮೆಯ ಹಾಲೆಂದೇ ಅಭಿಪ್ರಾಯ ಪಡುವುದು. ಬಾಪು ಆಡಿನ ಹಾಲನ್ನು ಕುಡಿದರೆ ಪ್ರತಿಜ್ಞೆ ಭಂಗವಾಗುವುದಿಲ್ಲ" ಡಾಕ್ಟರಿಗೆ ಈ ಸೂಚನೆ ಸರಿಯೆಂದು ತೋರಿತು. ಗಾಂಧೀಜಿ ತನ್ನ ಆತ್ಮ ಚರಿತ್ರೆಯಲ್ಲಿ ಈ ವಿಷಮ ಘಟನೆ ಕುರಿತು ಬರೆದಿದ್ದಾರೆ, ಆದರೆ ಕಸ್ತೂರ್‌ಬಾರ ವಿಷಯ ಅಲ್ಲಿ ಹೇಳಿಲ್ಲ; ಶ್ರೀಮತಿ ಪೋಲಕ್ ಗಾಂಧೀಜಿಗೆ ಕಸ್ತೂರ್‌ಬಾ ಮಾಡಿದ್ದ ಮಹೋಪಕಾರವನ್ನು ಬರೆದಿರುವರು.

'ಮಾ' 'ಬಾ'ರನ್ನು ಕಂಡಾಗ—

ಕಸ್ತೂರ್‌ಬಾರ ಕುರಿತು ಬರೆವಾಗ ನನಗೆ, ನನ್ನ ವೈಯುಕ್ತಿಕ ಘಟನೆಯೊಂದನ್ನು ತಿಳಿಸದೆ ಇರಲಾಗುವುದಿಲ್ಲ. ಗ್ರೆಕ್ಷಿಗರಲ್ಲಿ ಕಸ್ತೂರ್‌ಬಾರೊಡನೆ ದೀರ್ಘ ಪ್ರವಾಸ ಮಾಡಿ ಮರೋಳಿ ಗ್ರಾಮಕ್ಕೆ ಬಂದಿದ್ದೆ ನಾನು ತಿರುಗಿ ಹಳ್ಳಿಗೆ ಹೊರಡಬೇಕಾಗಿತ್ತು ಆದರೆ ನನ್ನ ತಾಯಿ ನನ್ನನ್ನು ಮನೆಯಲ್ಲಿರಬೇಕೆಂದು ಒತ್ತಾಯ ಮಾಡಿದಾಗ ನನ್ನ ಕನಸು ಮುರಿದಂತಾಯಿತು ನನ್ನೀ ತಿರುಗಾಟದ ಜೀವನದಿಂದ ಆಕೆ ಬೇಸರಗೊಂಡಿದ್ದರು ಮನೆಯಲ್ಲೇ ನಾನು ಇರಬೇಕೆಂದು ಅವರ ಅಪೇಕ್ಷೆ ನಾನು ಬಿಕ್ಕಟ್ಟಿನಲ್ಲಿ ಬಿದ್ದೆ ಪತ್ರಿಕೆಯ ಸುದ್ದಿಗಾರನಾಗಿ ಅಲೆದಾಟ ನನಗೆ ಆನಂದವಾಗಿತ್ತು ಅದರಲ್ಲೂ ಕಸ್ತೂರ್‌ಬಾರ ಮಾತೃಸಮಾನ ಆರೈಕೆಯಲ್ಲಿರುವುದು ಇನ್ನಷ್ಟು ಆನಂದ ನನಗೆ. "ಪಾತ್ರ ಮರೋಳಿ ಬಿಡುವ ಮುನ್ನ ದಯಮಾಡಿ ಕಸ್ತೂರ್‌ಬಾಗೆ ತಿಳಿಸಿರಿ" ಎಂದು ನಾನು ತಾಯಿಯೊಡನೆ ಹೇಳಿದೆ ಆಕೆ ಒಪ್ಪಿದರು. ಅದೇ ನನ್ನ ಸಮಸ್ಯೆ ಪರಿಹರಿಸಿತು.

ನನ್ನ ತಾಯಿಯೊಡನೆ ಕಸ್ತೂರ್‌ಬಾ ಮಾಡಿದ ಆ ತುಸು ಹೊತ್ತಿನ ಸಂಭಾಷಣೆ ಕಾಲದಲ್ಲಿ ನಾನೂ ಅಲ್ಲಿ ಇದ್ದೆ, ಬಾ, ತನ್ನ ತಾಯ ಹೃದಯವನ್ನು ಸಂಪೂರ್ಣ ಬದಲಿಸಿ ಬಿಟ್ಟರು

"ಅವ ನಮ್ಮ ಒಬ್ಬನೇ ಮಗ, ಅವನು ಪುನಃ ನಮಗೆ ಬೇಕು; ಮಗ ದೂರ ಹೋದಾಗ ನಮಗೆ ತುಂಬಾ ಕಳವಳವಾಗುತ್ತದೆ" ನನ್ನ ತಾಯಿ ಹೇಳಿದರು

ಕಸ್ತೂರ್‌ಬಾ ಮುಗುಳ್ನಕ್ಕರು. 'ನೀವು ಅದೃಷ್ಟ ಶಾಲಿಗಳು, ನಿಮ್ಮ ಒಬ್ಬನೇ ಮಗನಿಗಾಗಿ ನೀವು ಕಳವಳಗೊಳ್ಳುತ್ತೀರಿ, ನನಗೆ ಮೂವರು ಮಂದಿ ಮಕ್ಕಳಿದ್ದಾರೆ, ಅವರು ಮೂವರೂ ನನ್ನಿಂದ ದೂರ ಇದ್ದಾರೆ, ಹಿಂದುಸ್ಥಾನದ ಸಲುವಾಗಿ ದುಡಿಯುತ್ತಿದ್ದಾರೆ. ನಿಮಗೆ ಹೆಣ್ಣು ಮಕ್ಕಳಿಲ್ಲವೇ?" ಕಸ್ತೂರ್‌ಬಾ ಕೇಳಿದರು

ತನಗೆ ಓರ್ವ ಹೆಣ್ಣು ಮಗಳಿರುವಳೆಂದೂ, ಆಕೆಗೆ ಮದುವೆಯಾಗಿ ದೂರ ಗಂಡನನೊಡನೆ ಇರುವಳೆಂದೂ ನನ್ನ ತಾಯಿ ನಿಟ್ಟುಸಿರು ಬಿಡುತ್ತಾ ಹೇಳಿದರು.

"ನೀವು ಭಾಗ್ಯವಂತರು!" ಪುನಃ ಕಸ್ತೂರ್‌ಬಾ ಅಂದರು "ನಿಜವಾಗಿ ಭಾಗ್ಯವಂತರು ನೀವು, ನಿಮಗೆ ನಿಮ್ಮದೇ ಆದ ಓರ್ವ ಮಗಳಿದ್ದಾಳೆ. ಮಗಳಿಂದ ಪ್ರೀತಿಸಲ್ಪಡುವುದು ನಿಜವಾಗಿ ಎಷ್ಟು ಭಾಗ್ಯ. ನನಗೆ ಸ್ವಂತ ಮಗಳೇ ಇಲ್ಲ. ನಾನು ಒಬ್ಬಳನ್ನು ದತ್ತಕ್ಕೆ ತೆಗೆದುಕೊಂಡೆ ಅವಳು ಲಕ್ಷ್ಮಿ, ಆಕೆಯನ್ನು ಒಂದು ಹರಿಜನ ಕುಟುಂಬದಿಂದ ನಾನು ಸ್ವೀಕರಿಸಿದೆ ಆದರೆ ಆಕೆಯೂ ನನಗಿಲ್ಲದಾದಳು ಬಾಪೂ ದೂರದಲ್ಲಿದ್ದಾರೆ, ನನ್ನ ಹುಡುಗರೂ ದೂರದಲ್ಲಿರುವರು ಲಕ್ಷ್ಮಿಯೂ ದೂರ ಇದ್ದಾಳೆ, ಎಲ್ಲರೂ ಹಿಂದುಸ್ಥಾನಕ್ಕಾಗಿ ದುಡಿಯುತ್ತಾರೆ ತಾಯ್ನಾಡಿನ ಸಲುವಾಗಿ ಅವರೆಲ್ಲಾ ದೂರದಲ್ಲಿದ್ದಾರೆಂದೇ ನಾನು ಆನಂದ ಪಡುತ್ತೇನೆ"

'ಬೊಂಬೆ ಕ್ರೋನಿಕಲ್'

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs As Ps	ASSETS	Rs As Ps
1 Paid up Capital	12 95 970- 0- 0	1 Cash on hand & with bankers	18 26 986- 3- 8
2 Reserves	3 83 379- 1 6	2 Investments on (1) Govt Securities (2) Immovable properties etc	26 04 671- 6- 8
3 Deposits	61 66 927 6 0	3 Loans on Jewels & other valuable securities	23 72 302- 8- 7
4 Bills for collection	5 53 548- 6- 1	4 Loans on personal securities & Bills purchased	16 74 482-14 -8
5 Sundries including revenue items	7 00 981- 0- 5	5 Bills for collection as per contra	5 53 548- 6- 1
6 Profits for the year ending 31-12-1943	1 08 522- 4- 0	6 Office premises furniture etc	93 251 0- 0
		7 Sundries including revenue items	84 085-10- 4
Total	92 09,328 2 0	Total	92,09,328 2 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD. 1931

HEAD OFFICE	*BRANCHES*
Mangalore.	Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (½% from Jan. to June)
(¼% from July to Decr)
Savings bank Accounts 1½% p. a. on daily balances.
Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office

Some Salient Features of The 'Bombay Life' Policies

Premiums are low
2½% Rebate on annual premiums.
"Permanent Disability Benefits free of any cost
Payment of double the insured amount in case of death by accident at a very smallcost of Rs 1-8-0 per 1000.
Special rebates on large size policies
A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ MaduraS ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

'Bhuvanendra'	'ಭುವನೇಂದ್ರ'
Dashamoolarishta	ದಶಮೂಲಾರಿಷ್ಟ
Prepared with selected ingredients under the super vision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs	ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು
Depot Maharata Galli, Hubli	ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ
Bhuvanendra Products Ltd.	ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
Factory & Head Office KATAPADI S. Kanara	ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 17—3—1944 [ಸಂಚಿಕೆ 11]

ವರ್ಕಿಂಗ್ ಕಮಿಟಿ ಮೆಂಬರರು ಅಹ್ಮದ್ ನಗರದಲ್ಲಿ!

ಟ್ರೈನು ಹೊರಟಿತು — ಎಲ್ಲಿಗೆಂದು ಗೊತ್ತಿಲ್ಲ!

—ಬಂಧನ ಕಾಲದ ಕೆಲವು ವಿವರಗಳು—

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರನ್ನು ಅಹಮ್ಮದ್ ನಗರದಲ್ಲಿಡಲಾಗಿದೆಯೆಂದು ಮೊನ್ನೆ ಎಸೆಂಬ್ಲಿಯಲ್ಲಿ ಗೃಹಮಂತ್ರಿ ತಿಳಿಸಿದ ವಿಷಯ, ಅವರನ್ನು ಬಂಧಿಸಿದ ಕಾಲದ ಕತೆ-ಇವುಗಳನ್ನು 'ಬೊಂಬೇ ಕ್ರಾನಿಕಲ್' ಪತ್ರಿಕೆಯಲ್ಲಿ 'ಕ್ರಾನಿಕ್‌ಲರ್' ಅತ್ಯಂತ ರಮ್ಯವಾಗಿ ಈ ರೀತಿ ಬರೆದಿದ್ದಾರೆ.

ಗಲ ತಿಂಗಳ ನಂತರ-ಅಧಿಕಾರೀ ಮಂಡಳದ 'ಗುಟ್ಟಿನ ಪೆಟ್ಟಿಗೆ'ಯೊಳಗಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರ ಗೊತ್ತು ಗುರಿ ಹೇಗೋ ಹೊರಬಿತ್ತು!

ಎಸೆಂಬ್ಲಿಯಲ್ಲಿ ಸರ್ದಾರ್ ಮಂಗಲಸಿಂಗರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ, ಗೃಹ ಮಂತ್ರಿ ಹೇಳಿದರು; 'ವರ್ಕಿಂಗ್ ಕಮಿಟಿ ಮೆಂಬರರು ಅಹಮ್ಮದ್ ನಗರದಲ್ಲಿ ಇದ್ದಾರೆ' ಎಂದು!

ರಾಷ್ಟ್ರದ ಮುಖಂಡರನ್ನು ಯಾವ ಸೆರೆಮನೆಯೊಳಗೆ ಸೇರಿಸಿದೆ, ಎಲ್ಲಿ ಕತ್ತಲು ಕೋಣೆಯಲ್ಲಿ ಅವರು ಕೊಳೆಯುತ್ತಿದ್ದಾರೆ ಎಂಬೀ ವಿಷಯವನ್ನು ಗುಟ್ಟಾಗಿಟ್ಟ ಸರಕಾರದ ರಹಸ್ಯವಿಂದು ಹೇಗೋ ಬಹಿರಂಗಗೊಳಿಸಲ್ಪಟ್ಟಿತು. ಎಲ್ಲಿಯಾದರೂ ಗೃಹಮಂತ್ರಿಗಳು ಈ ರಹಸ್ಯವನ್ನು ಅರೆ ನಿದ್ರೆಯಲ್ಲಿ ಹೇಳಿಬಿಟ್ಟರೋ ಎಂದು ಇನ್ನೂ ನನಗೆ ಸಂಶಯವಿದೆ.

ಹಾಗೆಂದರೆ, ಈ ವಿಷಯವು ಹಿಂದಿನಿಂದಲೇ ಅಷ್ಟೊಂದು ರಹಸ್ಯವಾಗಿತ್ತೆಂದಲ್ಲ. ನನಗೆ ಗೊತ್ತಿತ್ತು; ನಿಮಗೂ ಗೊತ್ತಿತ್ತು, ಪ್ರತಿಯೊಬ್ಬನಿಗೂ ಗೊತ್ತಿತ್ತು. ಆದರೆ ನನಗೂ ನಿಮಗೂ ಯಾರಿಗಾದರೂ ಈ ವಿಷಯ ಪ್ರಕಟಿಸಲು ಸ್ವಾತಂತ್ರ್ಯವಿರಲಿಲ್ಲ!

ವಿಚಿತ್ರವೆಂದರೆ ಈ ಸುದ್ದಿಯನ್ನು ಅಮೆರಿಕದ 'ಟೈಮ್' ಎಂಬ ವಾರ್ತಾ ಪತ್ರಿಕೆ ಪ್ರಕಟಿಸಿದ್ದಲ್ಲದೆ, ವರ್ಕಿಂಗ್ ಕಮಿಟಿ ಮೆಂಬರರನ್ನು ಯಾಕೆ ಅಹಮ್ಮದ್ ನಗರದಲ್ಲಿ ಇಟ್ಟಿದ್ದಾರೆ, ಸ್ಥಾನಬದ್ಧತೆಯಲ್ಲಿಟ್ಟ ಸೆರೆಮನೆಯ ವಿವರ ಹೇಗಿದೆ, ಎಂಬೀ ವಿಷಯವೆಲ್ಲವನ್ನೂ ವಿವರವಾಗಿ ತಿಳಿಸಿದ್ದು. ಈ ಸಂಬಂಧ ಒಂದು ದೊಡ್ಡ ಕತೆಯೇ ನಡೆದಿದೆ; ಗೃಹ ಮಂತ್ರಿ ಈಗ ಇಷ್ಟು ವಿಷಯ ತಿಳಿಸಿದ್ದರಿಂದ ನಾನು ಆ ವಿವರ ಹೇಳಬಹುದಾದ್ದಕ್ಕೆ, ಗೃಹ ಮಂತ್ರಿಗಳಿಗೆ ನನ್ನ ಕೃತಜ್ಞತೆ. ಈ ಕತೆಯಲ್ಲಿ ನನ್ನದೂ ತುಸು ಪ್ರವೇಶ ಇದೆ.

ರೈಲು ಹೊರಟಿತು-ಎಲ್ಲಿಗೆಂದು ಗೊತ್ತಿಲ್ಲ!

ನಾವೀಗ ೧೯೪೨ರ ಆಗಸ್ಟ್ ೮-೯ರ ಮಧ್ಯದ ರಾತ್ರಿ ಕಡೆ ಹೊರಳುವ:

ಆ ರಾತ್ರಿ ವಾರ್ತಾ ಪತ್ರಿಕೆಗಳ ಕಚೇರಿಯಲ್ಲಿ ಉಂಟಾದ ಉದ್ವೇಗ, ಜನರ ವಾತಾವರಣದಲ್ಲಿ ಉಂಟಾದ ನಾಟಕೀಯ ಘಟನೆಯೆಂದರೆ, ಇಡೀ ಬೊಂಬಯಿಯಲ್ಲಿ ಟೆಲಿಫೋನ್ ಹಾದಿಗಳೆಲ್ಲಾ "ನಿರ್ಜೀವ"ವಾಗಿವೆಯೆಂದು ತಿಳಿದದ್ದು.

ಬೇರೊಂದು ದೃಶ್ಯ-ಆದರೂ ಅಷ್ಟೇ ಉದ್ವೇಶಕರವಾದದ್ದು — ವಿಕ್ಟೋರಿಯಾ ಟರ್ಮಿನೆಸ್ ಸ್ಟೇಶನಿನಲ್ಲಿ ಜರಗಿತು. ಕೊನೆಯ ರೈಲುಬಂಡಿ ಹೋಗಿತ್ತು. ಪ್ಲೇಟು ಫೋರ್ಮಿನಲ್ಲಿ ಜನ ಖಾಲಿಯಾಗಿತ್ತು. ಕೆಲವು ಜನ ಸ್ಟೇಶನ್ ಆಫೀಸರರು ಅತಿ ನಿದ್ದೆಯ ಕಣ್ಣಿಂದ ದಿನದ ಲೆಕ್ಕಮಾಡುತ್ತಿದ್ದರು.

ಅಲ್ಲಿನ ಒಂದು ಪ್ಲೇಟ್ ಫೋರ್ಮಿನಲ್ಲಿ ಒಂದು ರೈಲುಬಂಡಿ ಸಿದ್ಧವಾಗಿ ನಿಂತಿತ್ತು; ಒಂದು ಸ್ಪೇಶಲ್ ಟ್ರೈನು! ಕೆಲವೇ ಗಾಡಿಗಳಿಂದ ಕೂಡಿದ ಒಂದು ಎಂಜಿನಿನುಳ್ಳ ಟ್ರೈನು! ಇನ್ನೊಂದು ಉಣ್ಣುವ ಕಾರು! ಆದರೆ ಯಾರಿಗೂ, ಡ್ರೈವರ್ ಹಾಗೂ ಗಾರ್ಡ್ನಿಗೂ ಕೂಡಾ ಟ್ರೈನುಎಲ್ಲಿಗೆ ಹೋಗಬೇಕಾಗಿದೆಯೆಂಬುವು ಗೊತ್ತಿರಲಿಲ್ಲ; ಯಾವಾಗ ಅದು ಹೊರಡುವುದು; ಯಾರು ಅದರಲ್ಲಿ ಪ್ರಯಾಣ ಮಾಡುವವರು, ಯಾವುದೂ ತಿಳಿದಿಲ್ಲ. ಉಣ್ಣುವ ಕಾರಿನ ಪರಿಚಾರಕರು ಅಚೀಚೆಗೆ ತಿರುಗಾಡುವ ರಭಸ ನೋಡಿದರೆ ಅವರು ರೈಲ್ವೆ ಅಧಿಕಾರಿಗಳಂತೆ ತೋರುತ್ತಿದ್ದರು.

'ಯಾರು ಈ ಸ್ಪೆಶಲ್ ಟ್ರೈನಿನಲ್ಲಿ ಪ್ರಯಾಣಮಾಡುವುದು? ಯಾವಾಗ ಇದನ್ನು ಬಿಡುವುದು?' ಹೀಗೆ ಓರ್ವ ರೈಲ್ವೆ ಅಧಿಕಾರಿ ಪ್ರಶ್ನಿಸಿದ.

'ನನಗೆ ಗೊತ್ತಿಲ್ಲ ಸರ್, ಆದರೆ ೨೦ ಜನರಿಗೆ ಊಟ ತಯಾರು ಮಾಡಿಡಲು ನಮಗೆ ತಿಳಿಸಿದ್ದಾರೆ' ಪರಿಚಾರಕ ಉತ್ತರವಿತ್ತ.

'ಯಾರೋ ಮಿಲಿಟರಿ ಅಧಿಕಾರಿಗಳಿರಬೇಕು' ಹೀಗೆ ಹೇಳುತ್ತಾ ಆಯಾಸದಿಂದ ನಿದ್ದೆ ತೂಗುತ್ತಿದ್ದ ಆ ರೈಲ್ವೆ ಅಧಿಕಾರಿ ಅಲ್ಲಿಂದ ಹೊರಟು ಹೋದ.

'ಇರಬಹುದು; ಆದರೆ ಮಿಲಿಟರಿ ಅಧಿಕಾರಿಗಳಾಗಿದ್ದರೆ ತರಕಾರೀ ಆಹಾರ ಯಾಕೆ ತಯಾರು ಮಾಡಲು ಹೇಳಿದ್ದಾರೆಂಬುದು ನನಗೆ ಸೋಜಿಗ!' ಪರಿಚಾರಕ ತಾತ್ವಿಕನಾಗಿ ಉತ್ತರವಿತ್ತ.

ಮರುದಿನ ಮುಂಜಾನೆ ಎದ್ದಾಗ, ಕಾಂಗ್ರೆಸ್ ಮುಂದಾಳುಗಳ ಬಂಧನದ ಸುದ್ದಿ ಕೇಳಿದ ರೈಲ್ವೆ ಅಧಿಕಾರಿ-ಹಾ-ತಾನು ಕಳೆದ ರಾತ್ರಿ ಎಂಥಾ ಒಂದು ಸಂದರ್ಭ ಕಳಕೊಂಡೆ ಎಂದು ಮರುಗಿದ!

ಆ ಟ್ರೈನು ಸರಿಯಾಗಿ ಹೊರಟ ಸಮಯ ಪ್ರಾತಃಕಾಲ ೭-೩೦; ಪ್ಲೇಟ್ ಫೋರ್ಮಿನೊಳಗೆ ಬಿಟ್ಟು, ಸ್ಟೇಶನ್ ಕಟ್ಟಡದೊಳಗೂ ಯಾರನ್ನೂ ಹೋಗಲು ಬಿಡಲಿಲ್ಲ. ಅಷ್ಟರಲ್ಲಿಯೇ ಇಡೀ ಜಗತ್ತಿಗೇ-ವರ್ಕಿಂಗ್ ಕಮಿಟಿ ಮೆಂಬರರು ಬಂಧಿಸಲ್ಪಟ್ಟಿದ್ದಾರೆಂಬ ಸುದ್ದಿ ಪ್ರಕಟವಾಗಿತ್ತು. ಬೋರಿಬಂದರ್ ಸ್ಟೇಶನಿನೆದುರು-ಅಂಥಾ ವಿಚಿತ್ರ ಸಮಯದಲ್ಲಿಯೂ ಕೂಡಾ-ಗುಂಪು ಕೂಡಿದ್ದ ಕೆಲ ಜನರು, ಪೋಲೀಸರಿಂದ ಸುತ್ತುಗಟ್ಟಲ್ಪಟ್ಟ ಕೆಲವು ಮೋಟರುಗಳು ಒಳಗೆ ಹೋಗುವುದನ್ನು ಕಂಡರು. 'ವಿಸ್ಸಲ್' ಕೇಳಿತು-ಶಬ್ದವಾಯಿತು; ಟ್ರೈನು ಸ್ಟೇಶನ್ ಬಿಟ್ಟು ಹೊರಟಿತು-ಯಾವುದೋ "ಗೊತ್ತುಗುರಿಯಿಲ್ಲದ ಸ್ಥಳಕ್ಕೆ" ಹೀಗೆಂದು ವಾರ್ತಾ ಪತ್ರಿಕೆಗಳವರು, ವಾರ್ತಾ ಪ್ರಚಾರಕರೂ ಪ್ರಕಟಿಸಿದರು ಎಂದರೆ ಹೀಗೆ ಅವರು ಪ್ರಕಟಿಸಬೇಕೆಂದು ನಿರ್ಬಂಧವಾಗಿತ್ತು! ಆದರೂ ಇಷ್ಟು ಗುಪ್ತ ಕಾರ್ಯಕಲಾಪಗಳ ನಡುವೆಯೂ ಕೆಲವು ಪತ್ರಿಕೋದ್ಯಮಿಗಳು, ತಮ್ಮ ಷಡಿಂದ್ರಿಯದ ಸಹಾಯ ಪಡೆದು ವರ್ಕಿಂಗ್ ಕಮಿಟಿ ಮೆಂಬರರನ್ನು ಅಹಮ್ಮದ್ ನಗರಕ್ಕೆ ಕೊಂಡೊಯ್ದಿರುವರೆಂದು ತಿಳಿದಿದ್ದರು; ಆದರೆ ಅವರು ಅದನ್ನು ಹೇಳಬಾರದಾಗಿತ್ತು.

ಬಿಲ್ ಫಿಶರ್ ಸುದ್ದಿ ಸಾರಿದ!

ಈ ಸಂದರ್ಭದಲ್ಲಿ, ಪೆದ್ದಾರ್ ರೋಡಿನ ಒಂದು ಮಾಳಿಗೆಯಲ್ಲಿ, 'ಟೈಮ್' 'ಲೈಫ್' ಪತ್ರಿಕೆಗಳ ಬಾತ್ಮೀದಾರ ಬಿಲ್ ಫಿಶರ್, ರಾತ್ರಿಯಿಡೀ ಎ. ಐ. ಸಿ. ಸಿ ಸಭೆಯ ದೀರ್ಘ ಕಥೆಯ ವರದಿಯನ್ನು ತನ್ನ ಲಂಡನ್ ಆಫೀಸ್ ಮೂಲಕ ನ್ಯೂಯಾರ್ಕಿಗೆ ತಂತಿ ಕೊಟ್ಟು ಗಟ್ಟಿ ನಿದ್ರೆಮಾಡುತ್ತಿದ್ದ. ಅವನ ಮಾಳಿಗೆಯಲ್ಲಿ ಟೆಲಿಫೋನ್ ಪುನಃ ಕೆಲಸಮಾಡಿದ್ದು ೧೧ ಗಂಟೆಗೆ. ಆತನೊಡನೆ ಆಗ ನಾನು ಮಾತನಾಡಿದೆ. ಅಯ್ಯೋ ಪಾಪ! ತಾನು ಮಲಗಿದ್ದ ಈ ಸಂದರ್ಭದಲ್ಲಿ ಭಾರತದ ಆಧುನಿಕ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಒಂದು ಘಟನೆ ನಡೆದು ಹೋಯಿತಲ್ಲಾ ಎಂದು ಆತ ಮರುಗಿಕೊಂಡ.

"ನೀನು ಒಳ್ಳೆಯ ಮಿತ್ರ; ಇದೆಲ್ಲಾ ಆಗುವಾಗ ನನ್ನನ್ನು ಮಲಗಬಿಟ್ಟೆಯಲ್ಲಾ; ಇದಕ್ಕಿಂತ ಮೊದಲೇ ನೀನು ನನ್ನನ್ನೇಕೆ ಎಚ್ಚರಿಸಲಿಲ್ಲ" ಆತ ಗುಡುಗಿದ.

ಟೆಲಿಫೋನು ಲೈನುಗಳು ತುಂಡುಮಾಡಲ್ಪಟ್ಟ ವಿಷಯವನ್ನು ನಾನು ಆತನಿಗೆ ತಿಳಿಸಿದೆ; ಆಗ ಆತ ಪರಿಸ್ಥಿತಿಯನ್ನು ತಿಳಿಕೊಂಡು ಸಮಾಧಾನ ಪಟ್ಟ.

ಒಂದೇ ತಾಸಿನಲ್ಲಿ ನಿಪುಣ ಸುದ್ದಿಗಾರನಂತೆ ಸುದ್ದಿವಾಸನೆ ಹಿಡಿಯುತ್ತಾ ಆತ ಹೊರಟ; ನಮ್ಮಾಫೀಸಿಗೆ ಬಂದು, ಮೊದಲಾಗಿ ಮುಖಂಡರ ಬಂಧನದ ಸುದ್ದಿ ಮಾತ್ರ ತಂತಿಮಾಡಿದ

"ಆದರೆ ಅವರನ್ನು ಎಲ್ಲಿಗೆ ತೆಕ್ಕೊಂಡು ಹೋಗಿದ್ದಾರೆ ನನಗೆ ಹೇಳು ನೋಡೋಣ" ನನ್ನೊಡನೆ ಆತ ಕೇಳಿದ.

ನಾನು ಹೇಳಿದೆ, ನನಗೆ ಸಿಕ್ಕಿದ ಸುದ್ದಿಯಂತೆ ಅವರನ್ನು ಅಹಮ್ಮದ್ ನಗರಕ್ಕೆ ಸಾಗಿಸಿದ್ದಾರೆಂದು ತಿಳಿದು ಬಂದಿದೆಯೆಂದು; ಆದರೆ ಎಲ್ಲಾ ಸುದ್ದಿಗಳೂ ಸೆನ್ಸರ್ ಆಗಬೇಕಾಗಿರುವುದರಿಂದ ನಾನೀ ಸುದ್ದಿ ಪ್ರಕಟಿಸಲಾಗುವುದಿಲ್ಲವೆಂದೂ ತಿಳಿಸಿದೆ. ಆತ ಹೇಳಿದ, ಕೇಬ್‌ಲ್ ಸೆನ್ಸರಿನಲ್ಲಿ ತಾನು ಒಂದು ಪ್ರಯತ್ನಮಾಡಿ ನೋಡುತ್ತೇನೆಂದು.

ಆದರೆ ಇದೆಲ್ಲಾ ಹೇಗಾಯಿತೆಂದು ನನಗೆ ಗೊತ್ತಿಲ್ಲ; ಬಿಲ್ ಫಿಶರ್ ಕಳಿಸಿದ ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ ವಿಷಯ, ಅವರನ್ನು ಅಹಮ್ಮದ್ ನಗರದಲ್ಲಿಟ್ಟಿರುವ ವಿವರ, ಅಹಮ್ಮದ್ ನಗರ ಕೋಟೆಯ ಇತಿಹಾಸ, ಇವೆಲ್ಲವೂ ಸೆನ್ಸರ್‌ನಲ್ಲಿ ಕತ್ತರಿಸಲ್ಪಡದೆ ಅಮೆರಿಕಕ್ಕೆ ಹೋಯಿತು. ಆ ಮೇಲೆ ಇತರ ವಿದೇಶೀ ಪತ್ರಿಕೆಗಳ ಬಾತ್ಮೀದಾರರೂ ಈ ಕುರಿತು ವಿವರವಾದ ಸುದ್ದಿ ಕಳುಹಿಸಬೇಕೆಂದು ಪ್ರಯತ್ನಿಸಿದರೂ, ಅವುಗಳಲ್ಲಿರುವ ಅಹಮ್ಮದ್ ನಗರ 'ಕಥೆಯ' ಭಾಗ ಕತ್ತರಿಸಲ್ಪಡುವ ಜಾಣತನವನ್ನು ಸೆನ್ಸರ್ ಮಾಡುವವರು ಗಳಿಸಿಕೊಂಡರು.

(೭ನೇ ಪುಟಕ್ಕೆ ಮುಂದುವರಿದಿದೆ)

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಾಯಿ,
ಕಲ್ಕತ್ತ.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ MaduraS ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 17—3—1944 [ಸಂಚಿಕೆ 11]

ವರ್ಕಿಂಗ್ ಕಮಿಟಿ ಮೆಂಬರರು ಅಹ್ಮದ್ ನಗರದಲ್ಲಿ!

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರನ್ನು ಅಹಮ್ಮದ್ ನಗರದಲ್ಲಿಡಲಾಗಿದೆಯೆಂದು ಮೊನ್ನೆ ಎಸೆಂಬ್ಲಿಯಲ್ಲಿ ಗೃಹಮಂತ್ರಿ ತಿಳಿಸಿದ ವಿಷಯ, ಅವರನ್ನು ಬಂಧಿಸಿದ ಕಾಲದ ಕತೆ—ಇವುಗಳನ್ನು 'ಬೊಂಬೇ ಕ್ರಾನಿಕಲ್' ಪತ್ರಿಕೆಯಲ್ಲಿ 'ಕ್ರಾನಿಕ್‌ಲರ್' ಅತ್ಯಂತ ರಮ್ಯವಾಗಿ ಈ ರೀತಿ ಬರೆದಿದ್ದಾರೆ.

೧೮ ತಿಂಗಳ ನಂತರ—ಅಧಿಕಾರೀ ಮಂಡಳದ 'ಗುಟ್ಟಿನ ಪೆಟ್ಟಿಗೆ'ಯೊಳಗಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರ ಗೊತ್ತು ಗುರಿ ಹೇಗೋ ಹೊರಬಿತ್ತು!

ಎಸೆಂಬ್ಲಿಯಲ್ಲಿ ಸರ್ದಾರ್ ಮಂಗಲಸಿಂಗರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ, ಗೃಹ ಮಂತ್ರಿ ಹೇಳಿದರು; 'ವರ್ಕಿಂಗ್ ಕಮಿಟಿ ಮೆಂಬರರು ಅಹಮ್ಮದ್ ನಗರದಲ್ಲಿ ಇದ್ದಾರೆ' ಎಂದು!

ರಾಷ್ಟ್ರದ ಮುಖಂಡರನ್ನು ಯಾವ ಸೆರೆಮನೆಯೊಳಗೆ ಸೇರಿಸಿದೆ, ಎಲ್ಲಿ ಕತ್ತಲು ಕೋಣೆಯಲ್ಲಿ ಅವರು ಕೊಳೆಯುತ್ತಿದ್ದಾರೆ ಎಂಬೀ ವಿಷಯವನ್ನು ಗುಟ್ಟಾಗಿಟ್ಟ ಸರಕಾರದ ರಹಸ್ಯವಿಂದು ಹೇಗೋ ಬಹಿರಂಗಗೊಳಿಸಲ್ಪಟ್ಟಿತು. ಎಲ್ಲಿಯಾದರೂ ಗೃಹಮಂತ್ರಿಗಳು ಈ ರಹಸ್ಯವನ್ನು ಅರೆ ನಿದ್ರೆಯಲ್ಲಿ ಹೇಳಿಬಿಟ್ಟರೋ ಎಂದು ಇನ್ನೂ ನನಗೆ ಸಂಶಯವಿದೆ.

ಹಾಗೆಂದರೆ, ಈ ವಿಷಯವು ಹಿಂದಿನಿಂದಲೇ ಅಷ್ಟೊಂದು ರಹಸ್ಯವಾಗಿತ್ತೆಂದಲ್ಲ. ನನಗೆ ಗೊತ್ತಿತ್ತು; ನಿಮಗೂ ಗೊತ್ತಿತ್ತು, ಪ್ರತಿಯೊಬ್ಬನಿಗೂ ಗೊತ್ತಿತ್ತು. ಆದರೆ ನನಗೂ ನಿಮಗೂ ಯಾರಿಗಾದರೂ ಈ ವಿಷಯವು ಪ್ರಕಟಿಸಲು ಸ್ವಾತಂತ್ರ್ಯವಿರಲಿಲ್ಲ!

ವಿಚಿತ್ರವೆಂದರೆ ಈ ಸುದ್ದಿಯನ್ನು ಅಮೇರಿಕದ 'ಟೈಮ್' ಎಂಬ ವಾರ್ತಾಪತ್ರಿಕೆ ಪ್ರಕಟಿಸಿದ್ದಲ್ಲದೆ, ವರ್ಕಿಂಗ್ ಕಮಿಟಿ ಮೆಂಬರರನ್ನು ಯಾಕೆ ಅಹಮ್ಮದ್ ನಗರದಲ್ಲಿ ಇಟ್ಟಿದ್ದಾರೆ, ಸ್ಥಾನಬದ್ಧತೆಯಲ್ಲಿಟ್ಟ ಸೆರೆಮನೆಯ ವಿವರ ಹೇಗಿದೆ, ಎಂಬೀ ವಿಷಯವೆಲ್ಲವನ್ನೂ ವಿವರವಾಗಿ ತಿಳಿಸಿದ್ದು. ಈ ಸಂಬಂಧ ಒಂದು ದೊಡ್ಡ ಕತೆಯೇ ನಡೆದಿದೆ; ಗೃಹ ಮಂತ್ರಿ ಈಗ ಇಷ್ಟು ವಿಷಯ ತಿಳಿಸಿದ್ದರಿಂದ ನಾನು ವಿವರ ಹೇಳಬಹುದಾದ್ದಕ್ಕೆ ಗೃಹ ಮಂತ್ರಿಗಳಿಗೆ ನನ್ನ ಕೃತಜ್ಞತೆ. ಈ ಕತೆಯಲ್ಲಿ ನನ್ನದೂ ತುಸು ಪ್ರವೇಶ ಇದೆ.

ರೈಲು ಹೊರಟಿತು—ಎಲ್ಲಿಗೆಂದು ಗೊತ್ತಿಲ್ಲ!

ನಾವೀಗ ೧೯೪೨ರ ಅಗಸ್ಟ್ ೮-೯ರ ದುರದೃಷ್ಟ ರಾತ್ರಿ ಕಡೆ ಹೊರಳುವ.

ಟ್ರೈನು ಹೊರಟಿತು — ಎಲ್ಲಿಗೆಂದು ಗೊತ್ತಿಲ್ಲ!

—ಬಂಧನ ಕಾಲದ ಕೆಲವು ವಿವರಗಳು—

ಆ ರಾತ್ರಿ ವಾರ್ತಾಪತ್ರಿಕೆಗಳ ಕಚೇರಿಯಲ್ಲಿ ಉಂಟಾದ ಉದ್ವೇಗ, ಜನರ ವಾತಾವರಣದಲ್ಲಿ ಉಂಟಾದ ನಾಟಕೀಯ ಘಟನೆಯೆಂದರೆ, ಇಡೀ ಬೊಂಬಯಿಯಲ್ಲಿ ಟೆಲಿಫೋನ್ ಹಾದಿಗಳೆಲ್ಲಾ 'ನಿರ್ಜೀವ'ವಾಗಿವೆಯೆಂದು ತಿಳಿದದ್ದು.

ಬೇರೊಂದು ದೃಶ್ಯ—ಆದರೂ ಅಷ್ಟೇ ಉದ್ವೇಶಕರವಾದದ್ದು — ವಿಕ್ಟೋರಿಯಾ ಟರ್ಮಿನಸ್ ಸ್ಟೇಶನಿನಲ್ಲಿ ಜರಗಿತು. ಕೊನೆಯ ರೈಲುಬಂಡಿ ಹೋಗಿತ್ತು. ಪ್ಲೇಟು ಫೋರ್ಮಿನಲ್ಲಿ ಜನ ಖಾಲಿಯಾಗಿತ್ತು. ಕೆಲವು ಜನ ಸ್ಟೇಶನ್ ಆಫೀಸರರು ಅತಿ ನಿದ್ರೆಯ ಕಣ್ಣಿಂದ ದಿನದ ಲೆಕ್ಕಮಾಡುತ್ತಿದ್ದರು.

ಅಲ್ಲಿನ ಒಂದು ಪ್ಲೇಟ್ ಫೋರ್ಮಿನಲ್ಲಿ ಒಂದು ರೈಲುಬಂಡಿ ಸಿದ್ಧವಾಗಿ ನಿಂತಿತ್ತು; ಒಂದು ಸ್ಪೇಶಲ್ ಟ್ರೈನು! ಕೆಲವೇ ಗಾಡಿಗಳಿಂದ ಕೂಡಿದ ಒಂದು ಎಂಜಿನುಳ್ಳ ಟ್ರೈನು! ಇನ್ನೊಂದು ಉಣ್ಣುವ ಕಾರು! ಆದರೆ ಯಾರಿಗೂ, ಡ್ರೈವರ್ ಹಾಗೂ ಗಾರ್ಡಿಗೂ ಕೂಡಾ ಟ್ರೈನುಎಲ್ಲಿಗೆ ಹೋಗಬೇಕಾಗಿದೆಯೆಂಬುದು ಗೊತ್ತಿರಲಿಲ್ಲ; ಯಾವಾಗ ಅದು ಹೊರಡುವುದು; ಯಾರು ಅದರಲ್ಲಿ ಪ್ರಯಾಣ ಮಾಡುವವರು, ಯಾವುದೂ ತಿಳಿದಿಲ್ಲ. ಉಣ್ಣುವ ಕಾರಿನ ಪರಿಚಾರಕರು ಆಚೀಚೆಗೆ ತಿರುಗಾಡುವ ರಭಸ ನೋಡಿದರೆ ಅವರು ರೈಲ್ವೆ ಅಧಿಕಾರಿಗಳಂತೆ ತೋರುತ್ತಿದ್ದರು.

'ಯಾರು ಈ ಸ್ಪೆಶಲ್ ಟ್ರೈನಿನಲ್ಲಿ ಪ್ರಯಾಣಮಾಡುವುದು? ಯಾವಾಗ ಇದನ್ನು ಬಿಡುವುದು?' ಹೀಗೆ ಓರ್ವ ರೈಲ್ವೆ ಅಧಿಕಾರಿ ಪ್ರಶ್ನಿಸಿದ.

'ನನಗೆ ಗೊತ್ತಿಲ್ಲ ಸರ್, ಆದರೆ ೨೦ ಜನರಿಗೆ ಊಟ ತಯಾರು ಮಾಡಿಡಲು ನಮಗೆ ತಿಳಿಸಿದ್ದಾರೆ' ಪರಿಚಾರಕ ಉತ್ತರವಿತ್ತ.

'ಯಾರೋ ಮಿಲಿಟರಿ ಅಧಿಕಾರಿಗಳಿರಬೇಕು' ಹೀಗೆ ಹೇಳುತ್ತಾ ಆಯಾಸದಿಂದ ನಿದ್ದೆ ತೂಗುತ್ತಿದ್ದ ಆ ರೈಲ್ವೆ ಅಧಿಕಾರಿ ಅಲ್ಲಿಂದ ಹೊರಟು ಹೋದ.

'ಇರಬಹುದು; ಆದರೆ ಮಿಲಿಟರಿ ಅಧಿಕಾರಿಗಳಾಗಿದ್ದರೆ ತರಕಾರೀ ಆಹಾರ ಯಾಕೆ ತಯಾರುಮಾಡಲು ಹೇಳಿದ್ದಾರೆಂಬುದು ನನಗೆ ಸೋಜಿಗ' ಪರಿಚಾರಕ ತಾತ್ವಿಕನಾಗಿ ಉತ್ತರವಿತ್ತ.

ಮರುದಿನ ಮುಂಜಾನೆ ಎದ್ದಾಗ, ಕಾಂಗ್ರೆಸ್ ಮುಂದಾಳುಗಳ ಬಂಧನದ ಸುದ್ದಿ ಕೇಳಿದ ರೈಲ್ವೆ ಅಧಿಕಾರಿ—ಹಾ—ತಾನು ಕಳೆದ ರಾತ್ರಿ ಎಂಥಾ ಒಂದು ಸಂದರ್ಭ ಕಳಕೊಂಡೆ ಎಂದು ಮರುಗಿದ!

ಆ ಟ್ರೈನು ಸರಿಯಾಗಿ ಹೊರಟ ಸಮಯ ಪ್ರಾತಃಕಾಲ ೭-೩೦; ಪ್ಲೇಟ್ ಫೋರ್ಮಿನೊಳಗೆ ಜಿಟ್ಟು, ಸ್ಟೇಶನ್ ಕಟ್ಟಡದೊಳಗೂ ಯಾರನ್ನೂ ಹೋಗಲು ಬಿಡಲಿಲ್ಲ. ಅಷ್ಟರಲ್ಲಿಯೇ ಇಡೀ ಜಗತ್ತಿಗೇ—ವರ್ಕಿಂಗ್ ಕಮಿಟಿ ಮೆಂಬರರು ಬಂಧಿಸಲ್ಪಟ್ಟಿದ್ದಾರೆಂಬ ಸುದ್ದಿ ಪ್ರಕಟವಾಗಿತ್ತು. ಬೋರಿಬಂದರ್ ಸ್ಟೇಶನಿನೆದುರು—ಅಂಥಾ ವಿಚಿತ್ರ ಸಮಯದಲ್ಲಿಯೂ ಕೂಡಾ—ಗುಂಪು ಕೂಡಿದ್ದ ಕೆಲ ಜನರು, ಪೋಲೀಸರಿಂದ ಸುತ್ತುಗಟ್ಟಲ್ಪಟ್ಟ ಕೆಲವು ಕಾರುಗಳು ಒಳಹೊಕ್ಕು ಹೋಗುವುದನ್ನು ಕಂಡರು. 'ವಿಸ್ಲ್' ಕೇಳಿತು—ಶಬ್ದವಾಯಿತು; ಟ್ರೈನು ಸ್ಟೇಶನ್ ಬಿಟ್ಟು ಹೊರಟಿತು—ಯಾವುದೋ "ಗೊತ್ತುಗುರಿಯಿಲ್ಲದ ಸ್ಥಳಕ್ಕೆ" ಹೀಗೆಂದು ವಾರ್ತಾ ಪತ್ರಿಕೆಗಳವರು, ವಾರ್ತಾ ಪ್ರಚಾರಕರೂ ಪ್ರಕಟಿಸಿದರು ಎಂದರೆ ಹೀಗೆ ಅವರು ಪ್ರಕಟಿಸಬೇಕೆಂದು ನಿರ್ಬಂಧವಾಗಿತ್ತು! ಆದರೂ ಇಷ್ಟು ಗುಪ್ತ ಕಾರ್ಯಕಲಾಪಗಳ ನಡುವೆಯೂ ಕೆಲವು ಪತ್ರಿಕೋದ್ಯಮಿಗಳು, ತಮ್ಮ ಷಡಿಂದ್ರಿಯದ ಸಹಾಯ ಪಡೆದು ವರ್ಕಿಂಗ್ ಕಮಿಟಿ ಮೆಂಬರರನ್ನು ಅಹಮ್ಮದ್ ನಗರಕ್ಕೆ ಕೊಂಡೊಯ್ದಿರುವರೆಂದು ತಿಳಿದಿದ್ದರು; ಆದರೆ ಅವರು ಅದನ್ನು ಹೇಳಬಾರದಾಗಿತ್ತು.

ಬಿಲ್ ಫಿಶರ್ ಸುದ್ದಿ ಸಾರಿದ!

ಈ ಸಂದರ್ಭದಲ್ಲಿ, ಪೆದ್ದಾರ್ ರೋಡಿನ ಒಂದು ಮಾಳಿಗೆಯಲ್ಲಿ, 'ಟೈಮ್' 'ಲೈಫ್' ಪತ್ರಿಕೆಗಳ ಬಾತ್ಮೀದಾರ ಬಿಲ್ ಫಿಶರ್ ರಾತ್ರಿಯಿಡೀ ಎ. ಐ. ಸಿ. ಸಿ. ಸಭೆಯ ದೀರ್ಘ ಕಥೆಯ ವರದಿಯನ್ನು ತನ್ನ ಲಂಡನ್ ಆಫೀಸ್ ಮೂಲಕ ನ್ಯೂಯಾರ್ಕಿಗೆ ತಂತಿ ಕೊಟ್ಟು ಗಟ್ಟಿ ನಿದ್ರೆಮಾಡುತ್ತಿದ್ದ. ಅವನ ಮಾಳಿಗೆಯಲ್ಲಿ ಟೆಲಿಫೋನ್ ಪುನಃ ಕೆಲಸಮಾಡಿದ್ದು ೧೨ ಗಂಟೆಗೆ; ಆತನೊಡನೆ ಆಗ ನಾನು ಮಾತನಾಡಿದೆ. ಅಯ್ಯೋ ಪಾಪ! ತಾನು ಮಲಗಿದ್ದ ಈ ಸಂದರ್ಭದಲ್ಲಿ ಭಾರತದ ಆಧುನಿಕ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಒಂದು ಘಟನೆ ನಡೆದು ಹೋಯಿತಲ್ಲಾ ಎಂದು ಆತ ಮರುಗಿಕೊಂಡ.

"ನೀನು ಒಳ್ಳೆಯ ಮಿತ್ರ; ಇದೆಲ್ಲಾ ಆಗುವಾಗ ನನ್ನನ್ನು ಮಲಗಬಿಟ್ಟೆಯಲ್ಲಾ; ಇದಕ್ಕಿಂತ ಮೊದಲೇ ನೀನು ನನ್ನನ್ನೇಕೆ ಎಚ್ಚರಿಸಲಿಲ್ಲ" ಆತ ಗುಡುಗಿದ.

ಟೆಲಿಫೋನು ಲೈನುಗಳು ತುಂಡುಮಾಡಲ್ಪಟ್ಟ ವಿಷಯವನ್ನು ನಾನು ಆತನಿಗೆ ತಿಳಿಸಿದೆ; ಆಗ ಆತ ಪರಿಸ್ಥಿತಿಯನ್ನು ತಿಳಕೊಂಡು ಸಮಾಧಾನ ಪಟ್ಟ.

ಒಂದೇ ತಾಸಿನಲ್ಲಿ ನಿಪುಣ ಸುದ್ದಿಗಾರನಂತೆ ಸುದ್ದಿವಾಸನೆ ಹಿಡಿಯುತ್ತಾ ಆತ ಹೊರಟ; ನಮ್ಮಾಫೀಸಿಗೆ ಬಂದು, ಮೊದಲಾಗಿ ಮುಖಂಡರ ಬಂಧನದ ಸುದ್ದಿ ಮಾತ್ರ ತಂತಿಮಾಡಿದ

"ಆದರೆ ಅವರನ್ನು ಎಲ್ಲಿಗೆ ತೆಕ್ಕೊಂಡು ಹೋಗಿದ್ದಾರೆ ನನಗೆ ಹೇಳು ನೋಡೋಣ" ನನ್ನೊಡನೆ ಆತ ಕೇಳಿದ.

ನಾನು ಹೇಳಿದೆ, ನನಗೆ ಸಿಕ್ಕಿದ ಸುದ್ದಿಯಂತೆ ಅವರನ್ನು ಅಹಮ್ಮದ್ ನಗರಕ್ಕೆ ಸಾಗಿಸಿದ್ದಾರೆಂದು ತಿಳಿದು ಬಂದಿದೆಯೆಂದು; ಆದರೆ ಎಲ್ಲಾ ಸುದ್ದಿಗಳೂ ಸೆನ್ಸರ್ ಆಗಬೇಕಾಗಿರುವುದರಿಂದ ನಾನೀ ಸುದ್ದಿ ಪ್ರಕಟಿಸಲಾಗುವುದಿಲ್ಲವೆಂದೂ ತಿಳಿಸಿದೆ. ಆತ ಹೇಳಿದ, ಕೇಬ್‌ಲ್ ಸೆನ್ಸರಿನಲ್ಲಿ ತಾನು ಒಂದು ಪ್ರಯತ್ನಮಾಡಿ ನೋಡುತ್ತೇನೆಂದು.

ಆದರೆ ಇದೆಲ್ಲಾ ಹೇಗಾಯಿತೆಂದು ನನಗೆ ಗೊತ್ತಿಲ್ಲ; ಬಿಲ್ ಫಿಶರ್ ಕಳಿಸಿದ ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ ವಿಷಯ, ಅವರನ್ನು ಅಹಮ್ಮದ್ ನಗರದಲ್ಲಿಟ್ಟಿರುವ ವಿವರ, ಅಹಮ್ಮದ್ ನಗರ ಕೋಟೆಯ ಇತಿಹಾಸ, ಇವೆಲ್ಲವೂ ಸೆನ್ಸರ್‌ನಲ್ಲಿ ಕತ್ತರಿಸಲ್ಪಡದೆ ಅಮೇರಿಕಕ್ಕೆ ಹೋಯಿತು. ಆ ಮೇಲೆ ಇತರ ವಿದೇಶೀ ಪತ್ರಿಕೆಗಳ ಬಾತ್ಮೀದಾರರೂ ಈ ಕುರಿತು ವಿವರವಾದ ಸುದ್ದಿ ಕಳುಹಿಸಬೇಕೆಂದು ಪ್ರಯತ್ನಿಸಿದರೂ, ಅವುಗಳಲ್ಲಿರುವ ಅಹಮ್ಮದ್ ನಗರ ಕಥೆಯ ಭಾಗ ಕತ್ತರಿಸಲ್ಪಡುವ ಜಾಣತನವನ್ನು ಸೆನ್ಸರ್ ಖಾತೆಯವರು ನೆಳಿಸಿಕೊಂಡರು.

(೨ನೇ ಪುಟಕ್ಕೆ ಮುಂದುವರಿದಿದೆ)

ಬಿಕ್ಕು ಜೀವಗಳು

ಬರೆದವರು: ಸಿಕಂದರ್, [illegible]

— ೧ —

“ಬಾಬೂಜೀ, ಹಸಿವಿನಿಂದ ಸಾಯುತ್ತಿದ್ದೇನೆ. ಹಿಡಿ ಅನ್ನ ಕೊಡಿ ಬಾಬೂಜೀ....” ಭಿಕ್ಷುಕಿಯೊಬ್ಬಳು ಕಲ್ಕತ್ತೆಯ ಮಹೇಶ ಬಾಬುಗಳ ಗೃಹದ್ವಾರದಲ್ಲಿ ಕೂಗಿದಳು. ಕೃಶವಾದ ಶರೀರ, ನಿಸ್ತೇಜಗೊಂಡ ಮುಖ, ಕೊಳಕಾದ ಹರಕು ಹರಿದ ಬಟ್ಟೆಗಳು. ಅವಳ ಹೆಗಲಲ್ಲಿ ಕೂಸೊಂದು ಬಳ್ಳಿಯಂತೆ ಬಿದ್ದು ನಿದ್ರಿಸಿತ್ತು. ಅಲ್ಲೇ ಕಟ್ಟಿದ್ದ ಬಾಬುಗಳ 'ಟೈಗರ್' ನಾಯಿ ಅವಳನ್ನು ಕಂಡು ಗುರ್ರೆಂದಿತು. ಪುನಃ ಅದೇ ಕೂಗು ಭಿಕ್ಷುಕಿಯ ಗಂಟಲಿಂದ.

ಬಾಬುಗಳು ಮನೆಯಲ್ಲಿದ್ದರು. ವಿದೇಶದಿಂದ ಆಗಮಿಸಿದ್ದ ಅವರ ಮಿತ್ರರೊಬ್ಬರಿಗೆ ಅವರಲ್ಲಿ ಸತ್ಕಾರವಿತ್ತು ಆ ದಿನ ಅವರೊಂದಿಗೆ. ವಿನೋದ ಗೋಷ್ಠಿಯಲ್ಲಿದ್ದ ಸಮಯಕ್ಕೆ ಈ ಕೂಗು ಅಸಹ್ಯವೆನಿಸಿತು. “ತೊಲಗಾಚೆ, ಹೆಣದತ್ತ, ದಿನ ದಿನವೂ ಇದೇ ರಗಳೆ” ಎಂದರು ಮಹೇಶ ಬಾಬುಗಳು ತಿರಸ್ಕಾರದಿಂದ ಮಿತ್ರರ ಕಡೆಗೆ ತಿರುಗಿ. “ಟೌನ್ ಇಡೀ ತುಂಬಿ ಹೋಗಿದೆ ಮಿಸ್ಟರ್, ಇವುಗಳ ಕಾಟ!” ಒಂದು ಮುಗುಳ್ನಗೆಯನ್ನು ತೇಲಿಸಿದರು ಅವರ 'ಮಿಸ್ಟರ್.'

“ಮೂರು ದಿನವಾಯ್ತು ಬಾಬೂಜೀ ಕೂಳು ಕಾಣದೆ! ಮಗುವನ್ನಾದರೂ.”

“ಹೋಗತ್ತ, ಮುಂದೆ ಹೋಗು, ಮುಂದೆ ಅಲ್ಲಿದೆ ಕೂಳು, ಇಲ್ಲಿ ತೊಂದರೆ ಕೊಡಬೇಡ.”

“ಬಾಬೂಜೀ. . . .” ಭಿಕ್ಷುಕಿಯ ದೀನವಾಣಿ. ಸಿಟ್ಟು ಬಂದಿತು ಬಾಬುವಿಗೆ, ಇಂದಿನ ವರೆಗೆ ಅವರ ಮುಂದೆ ಒಂದಕ್ಕಿಂತ ಹೆಚ್ಚು ಪ್ರಶ್ನೆಯೆತ್ತಿದ ತಿರುಪೆಯವರಿಲ್ಲ. ಇವಳಾದರೋ ಸ್ಥಿರವಾಗಿ ನಿಂತು ಸಂಸಾರಿ ವಾಗ್ವಾದಕ್ಕೆ ತೊಡಗಿದ್ದಾಳೆ. ಕೊಂಚವೂ ಹಿಂದಕ್ಕೆ ಸರಿಯುಲೊಲ್ಲಳು. ಅವರು ಆಸನದಿಂದೆದ್ದು ಬಂದು ಅವಳನ್ನೇ ಕೆಕ್ಕರಿಸಿ ನೋಡಲಾರಂಭಿಸಿದರು. ಆ ಕ್ರೋಧ ಪೂರ್ಣ ನೋಟದ ತೀಕ್ಷ್ಣತೆಯು ಆಕೆಯನ್ನು ಸಜೀವವಾಗಿ ಸುಟ್ಟು ಬಿಡುವಂತಿತ್ತು. ಮಿತ್ರನ ಮುಂದೆ ತನ್ನ ಘನತೆಗೆ ನೀರೆರಚಿ—ತಾನಾಡಿದ ದರ್ಪಯುಕ್ತ ನುಡಿಗಳಿಗೆ ಗೌರವಕೊಡದೆ ಇಷ್ಟೊಂದು ಧೈರ್ಯಗೊಂಡು ನಿಂತಿರುವ ಓರ್ವ ಯಕಃಶ್ಚಿತ ಭಿಕ್ಷುಕಿಯ ಮೇಲೆ ಅವರಂತಹರು ಸಿಟ್ಟಾಗುವುದು ಸ್ವಾಭಾವಿಕವೆ. ಆದರೆ—ಸಮಸ್ತ ಬಂಗಾಲವನ್ನು ನುಂಗಿ ನೀರ್ಕುಡಿಯಲು ಹವಣಿಸುತ್ತಿರುವ ಆ ಘೋರ ಹಸಿವಿನ ಉಗ್ರ ಶಕ್ತಿಯನ್ನು ಆ ಬಾಬುಗಳು ಹೇಗೆ ತಿಳಿಯಬೇಕು? “ಈಗ ನಿವಾರಿಸುವೆಯೋ ಇಲ್ಲಿಂದ; ಅಥವಾ ನಾಯಿ ಬಿಡಬೇಕೋ ನಿನ್ನ ಮೇಲೆ?” ಕೋಪವು ಪರಮಾವಧಿಯನ್ನು ಮುಟ್ಟುವಂತಿತ್ತು.

ತಿರುಪೆಯವಳು ರವಷ್ಟಾದರೂ ಕದಲುವ ಹಾಗೆ ಇನ್ನೂ ಕಾಣುವುದಿಲ್ಲ!

* * *

ಮಹೇಶ ಬಾಬುಗಳ ಮನೆಯಲ್ಲಿ ಭೋಜನ ಗೃಹದ ಕೊಠಡಿಯೊಂದರಲ್ಲಿ ಅವರ ಪುತ್ರ ರಮೇಶ ಬಾಬುವು ಊಟಕ್ಕೆ ಕುಳಿತಿದ್ದನು. ಸೇವಕನು ಪಕ್ವಾನ್ನದ ಒಂದೊಂದೇ ತಾಟನ್ನು ತಂದು ಟೇಬಲಿನ ಮೇಲಿರಿಸುತ್ತಿದ್ದನು. ಬಳಿಯಲ್ಲೇ ರಮೇಶನ ತಾಯಿಯೂ ಕುಳಿತು ಯಾವುದೋ ಒಂದು ವಿಷಯವೆತ್ತಿ ಮಗನೊಡನೆ ಸಂಭಾಷಿಸುತ್ತಿದ್ದರು. ಮಕ್ಕಳು ಉಣ್ಣುವಾಗ ಅವರೊಂದಿಗೆ ಸುಖಸಲ್ಲಾಪಗಳನ್ನಾಡುತ್ತಿರುವುದು ಕೆಲವು ತಾಯಂದಿರ ಮಮತೆಯ ವಾಡಿಕೆ. 'ಮಾಜೀ (ಅಮ್ಮಾ), ಇಂದೇನು ನಮ್ಮಲ್ಲಿಷ್ಟು ಗದ್ದಲ? ಹಬ್ಬವಿದೆಯೇ?” ಚಪಾತಿಯನ್ನು ಹರಿದು ಬಾಯೊಳಗಿಡುತ್ತ ಕೇಳಿದ ರಮೇಶ ಬಾಬು. “ಹಬ್ಬವಲ್ಲ ರಮೇಶ್, ಇಂದು ಮಧ್ಯಾಹ್ನ ನಮ್ಮಲ್ಲೊಂದು 'ಡಿನ್ನರ್ ಪಾರ್ಟಿ'ಯಿದೆ! ಅದೇ ಗೌಜಿ.” ಎಂದರು ಮಾತೆ.

“ಓಹೋ! ಸರಿಸರಿ ಪಿತನು 'ಲಂಡನ್ ಕೆಫೆ'ಯಿಂದ 'ಸ್ಪೆಶ್ಯಲ್ ಕುಕ್ಕ'ನ್ನು ಕರೆದಿರುವುದು ಅದಕ್ಕೆ ತಾನೇ? ಅದಾಂಗೆ ಮಾಜೀ, 'ಡಿನ್ನರ್ ಪಾರ್ಟಿ?'

“ಬಾಬುಗಳ ಆಪ್ತಮಿತ್ರ ಸುರೇಂದ್ರನಾಥ ಚೌಧುರಿಗಳಿಗೆ. ಅವರು ಅಮೇರಿಕಾದಲ್ಲಿ 'ಇಂಜಿನಿಯರಿಂಗ್' ಕಲಿತು ಕಳೆದ ವಾರ ಸ್ವದೇಶಕ್ಕೆ ಮರಳಿ ಬಂದಿರುವರು. ಈಗ ನಮ್ಮಲ್ಲಿಗೆ ಬಂದಿರುತ್ತಾರೆ. ಪೋರ್ಟಿಕೋವಿನಲ್ಲಿ ನಿನ್ನ ಹೆತ್ತವರೊಡನೆ 'ಕಾರ್ಡ್ಸ್ (ಇಸ್ಪೀಟು)'ಗಳನ್ನಾಡುತಿದ್ದಾರೆ. ಹೋಗಿ ನೋಡು.”

“ಅದೇನು ಮಾಜೀ, 'ಲಂಡನ್ ಕೆಫೆ'ಯ ಕುಕ್? ನಮ್ಮ ಕುಕ್ ತಯಾರಿಸಿದ ಅಡುಗೆ ಸೇರುವುದಿಲ್ಲವೇ ಅವರಿಗೆ?”

“ಅವರು ಪಾಶ್ಚಾತ್ಯ ವಿಧಾನದ ಊಟವನ್ನು ಉಂಡುವರು. ನಮ್ಮಲ್ಲಿಯ ಅಡುಗೆಯು ರುಚಿಸದೆಂದು ಅವನನ್ನು ಕರೆಸಲಾಯಿತು.”

“ಈ ದೇಶದ ಊಟವನ್ನು ಮೊದಲೆಂದೂ ಉಂಡಿಲ್ಲವೆ ಚೌಧುರಿಗಳು? ಈಗ ಏನಾಗುವುದಂತೆ?”

“ಅಪ್ಪಾ ಆ ಮಹನೀಯರು 'ವಿಲಾಯತಿ'ಗೆ ಹೋಗಿ 'ಸಾಹೇಬೀ' ಮರ್ಜಿಯನ್ನು ಕಲಿತಿದ್ದಾರೆ, ಮುಂದಕ್ಕೆ ನೀನೂ ಅವರಂತಾಗುವೆ.”

'ಅಹಹ! ವಿಲಾಯತಿ! 'ಸಾಹೇಬೀ ಮರ್ಜಿ!' ಎನ್ನುತ್ತ ತುತ್ತನ್ನು ಎತ್ತಿ ಹಿಡಿದವನೇ ಅರ್ಧದಲ್ಲಿ ತಡೆದು,—'ನೋಡು ಮಾಜೀ, ಅದೋ, ಕೂಗುತ್ತಿರುವರು ಹೊರಗೆ!' ಕೈಯಲ್ಲಿದ್ದ ಅನ್ನವನ್ನು ಬಟ್ಟಲಿಗೆ ಚೆಲ್ಲಿ ಕೊಟ್ಟು ಎದ್ದು ಹೊರಗೋಡಿದನು. 'ಮಾಜೀ, ನಮ್ಮ ಟೈಗರ್ ಒಬ್ಬ ಹೆಂಗಸನ್ನೋಡಿಸುತ್ತಿದೆ! ಅದೊ ಕಚ್ಚಿತು! ಕಚ್ಚಿತು! ಮೂರ್ಛೆ ಹೋದಳು! ಸ್ವಲ್ಪ ನೀರು ತಾ, ಬೇಗ ತಾ! ಟೈಗರ್, ಟೈಗರ್ ಠೆರೋ ಠೆರೋ (ನಿಲ್ಲು ನಿಲ್ಲು)” ಈ ಮಾತುಗಳು ತಾಯಿಗೆ ಕೇಳಿಸಿದುವು.

'ಬಾಬೂ ನೀವಾರು? ನನ್ನ ಮಗುವೆಲ್ಲಿ! ಅಯ್ಯೋ ನಾಯಿ, ನಾಯಿ! ನೀವಿಲ್ಲದಿದ್ದರೆ ನನ್ನನ್ನು ಕೊಂದೇ ಬಿಡುತ್ತಿತ್ತು!' ರಮೇಶನು ಮುಖಕ್ಕೆ ಸಿಂಪಡಿಸಿದ ನೀರಿನಿಂದ ಭಿಕ್ಷುಕಿಯು ಚೇತರಿಸಿದ್ದಳು.

'ಗಾಬರಿಗೊಳ್ಳದಿರು, ನಾಯನ್ನು ಅತ್ತ ಒಯ್ದರು, ಕಚ್ಚಿತೇ ನಿನಗೆ ಅದು?' ಕೇಳಿದ ರಮೇಶ ಬಾಬು.

'ಇಲ್ಲ ಬಟ್ಟೆಯಲ್ಲಿ ಹಿಡಿದಿತ್ತು. ನಾನು ಬೆದರಿ ಓಡುವಾಗ ಎಡವಿ ಬಿದ್ದೆ' ಎಂದು ಕೂಸನ್ನು ತಬ್ಬಿಕೊಂಡಳು ಅವಳಿಗೆ ಮಾತಾಡುವಷ್ಟು ಶಕ್ತಿಯಿರಲಿಲ್ಲ.

'ಮಗೂ ಅವಳು ತುಂಬಾ ಹಸಿದಂತಿದೆ. ಅದುವೆ ಮೂರ್ಛೆ ಬಂದಿತು' ಎಂದರು ರಮೇಶನ ಜನನಿ. ಕೂಡಲೇ ರಮೇಶ ಬಾಬುವು ಕೊಠಡಿಗೋಡಿದ; ಅಲ್ಲಿ ಇನ್ನೂ ಎರಡು ಹರಿವಾಣ ತುಂಬ ಅನ್ನ-ಚಪಾತಿಗಳು ಹಾಗೆಯೇ ಉಳಿದಿದೆ. ತಂದು ತಿರುಪೆಯವಳ ಮುಂದಿಟ್ಟ.

'ಆ ಬಟ್ಟಲುಗಳನ್ನೇ ತಂದಿಟ್ಟೆಯೋ ರಮೇಶ್? ಅವಳಾವ ಜಾತಿಯವಳೋ ಏನೋ' ಎಂದರು ತಾಯಿ.

“ಯಾವ ಜಾತಿಯವಳಾದರೇನು ಮಾಜೀ? ಬಹಳ ಹಸಿದಿದ್ದಾಳೆ ಈಕೆ.”

ಆ ಬಡವೆಯು ರಮೇಶನನ್ನು ಕೃತಜ್ಞತಾ ಭಾವದಿಂದ ನೋಡಿದಳು. ಮೊದಲು ತನ್ನ ಮಗುವಿಗೆ ಹೊಟ್ಟೆ ತುಂಬಾ ಉಣಿಸಿ, ಒಂದೆರಡು ತುತ್ತು-ತಾನೂ ನುಂಗಿ, ಹತ್ತಿರದಲ್ಲಿದ್ದ ನಲ್ಲಿಯ ನೀರನ್ನು ಯಥೇಷ್ಟವಾಗಿ ಕುಡಿದ. ಬಳಿಕ ಹರಿವಾಣಗಳಲ್ಲಿದ್ದ ಆಹಾರ ವಸ್ತುಗಳನ್ನು ಒಂದು ವಸ್ತ್ರಕ್ಕೆ ಸುರುವಿಸುತ್ತ ಕಟ್ಟಲಾರಂಭಿಸಿದಳು. ಅದನ್ನೆಲ್ಲಿಗೆ ಒಯ್ಯುವೆ? ನೀನೂ ಹೊಟ್ಟೆ ತುಂಬ ಉಂಡಿಲ್ಲ. ಮತ್ತಾರಿಗದು? ಎಂದು ಪ್ರಶ್ನಿಸಿದರು ರಮೇಶನ ಮಾಜಿ. 'ಇನ್ನೈವರ ಹೊಟ್ಟೆ ತಣಿಯಬೇಕು ಮಾಯೀ, ಇದರಿಂದ' ಎಂದಳು.

“ಯಾರವರು? ನಿನ್ನ ಮಕ್ಕಳೇ?”

“ಹೌದು ತಾಯೀ ನನ್ನ ಮಕ್ಕಳು, ಈ ಕೂಸು ಮತ್ತು ನಾನು ಕೂಡಿ ಏಳು ಮಂದಿ ಹೊರಟಿದ್ದೇವೆ.”

“ಎಲ್ಲಿಂದ? ನಿಮ್ಮ ಊರಾವುದು?”

“ನಮ್ಮೂರು ನವಕಾಲ ತಾಯಿ!”

“ನೀವು ಹೇಗೆ ಬಂದಿರಿ ಇಲ್ಲಿಗೆ? ನಿಮಗಲ್ಲಿ ಹೊಲ ಮನೆಗಳಿರಲಿಲ್ಲವೆ?”

“ಇದ್ದುವು, ಎಲ್ಲಾ ಇದ್ದುವು ತಾಯಿ! ಗೇಣಿಯ ಹೊಲಗದ್ದೆಗಳಿದ್ದುವು, ಸ್ವಂತದ ತೋಟ ಮನೆಯಿತ್ತು, ಆದರೆ”

“ಆದರೆ ಏನು?”

“ಎಲ್ಲವೂ ಕೈ ಬಿಟ್ಟು ಹೋದುವು”

“ಹೇಗೆ?”

“ಎರಡು ತಿಂಗಳ ಹಿಂದೆ ನಮ್ಮೂರಿಗೆ ಬಂದು ದೊಡ್ಡ ನೆರೆಯೂ ಬಿರುಗಾಳಿಯೂ ಬಂದುದನ್ನು ನೀವು ಕೇಳಿರಬಹುದು. ಆಗ ಪೈರು ಕಟಾವಿನ ಸಮಯ, ಬೆಳೆದ ದವಸ ಧಾನ್ಯಗಳ ಬಹು ಭಾಗವು ನೀರುಪಾಲಾಯಿತು. ಮಂಗೆಡ್ಡೆಗಳು ಹಣ್ಣು ಹಂಪಲು ಬಿರುಗಾಳಿಯಿಂದ ನಾಶವಾಯಿತು. ಉಳಿದುಳಿದ ದವಸಗಳನ್ನು ಧನಿಗಳು ಧಾನ್ಯ ರೂಪದಲ್ಲಿಯೇ ತಮ್ಮ ಗೇಣಿಗೆ ಅಳೆದು ಕೊಂಡರು. ಕೊನೆಗೆ ನಮ್ಮ ಪೋಷಣೆಗೆ ಆಹಾರವಿಲ್ಲ. ಹೊಟ್ಟೆ ಕೇಳದು, ಅದಕ್ಕಾಗಿ ಸ್ವಂತದ ತೋಟ ಮನೆಗಳನ್ನು ಮಾರಿದೆವು. ಬಂದ ಹಣದಿಂದ ಕೆಲವು ಕಾಲಕಳೆದೆವು. ಈಗ ಆ ಹಣ ಪೂರ್ಣವಾಗಿ ಊರು ಬಿಟ್ಟು ಅನಾಥರಂತೆ ದೇಶಾಂತರ ಅಲೆಯುತಿದ್ದೇವೆ' ಎಂದೆನುವಾಗ ಅವಳ ಕಣ್ಣುಗಳಿಂದ ಧಾರಾಕಾರವಾಗಿ ಕಂಬನಿಗಳುದುರಿದುವು.

ರಮೇಶನ ಮಾತೆಗೆ 'ಅಯ್ಯೋ ಕಷ್ಟವೇ ಎನಿಸಿತು. ಭಿಕ್ಷುಕಿಯು ಕುಳಿತಲ್ಲಿಂದ ಎದ್ದಳು, ತಾಯಿ, ನಿಮ್ಮ ಮಗಳು ಕಡು ದಯಾಳುವು. ಇಂತಹ ಪುತ್ರ ರತ್ನವನ್ನು ಪಡೆದ ನೀವು ಪರಮ ಸುಕೃತಶಾಲಿನಿ. ನಿಮ್ಮ ಹೊಟ್ಟೆಯು ಎಂದೆಂದಿಗೂ ತಣ್ಣಗಿರಲಿ! ಭಗವಾನನು ಚಿಕ್ಕ ಬಾಬುವಿಗೆ ದೀರ್ಘಾಯುಷ್ಯವನ್ನು ದಯಪಾಲಿಸಲಿ! ಹೋಗಿ ಬರುವೆನು.” ಎಂದು ಹೊರಟಳು.

ಆ ಮಾತಾಪುತ್ರರ ಕಡೆಗೆ ತಿರುತಿರುಗಿ ನೋಡುತ್ತಾ ತಿರುಪೆಯವಳು ಹೊರಟು ಹೋಗಿದ್ದಳು. ರಮೇಶನ ಜನನಿಯು ಒಂದು ದೀರ್ಘವಾದ ನಿಟ್ಟುಸಿರ್ಗರೆದರು. ಅದುವರೆಗೆ ಸಂಭ್ರಂದಂತೆ ನಿಂತು ಯೋಚನಾಪರನಾದ ರಮೇಶ ಬಾಬುವು ಎಚ್ಚತ್ತು ತಾಯಿಯೊಡನೆ—'ಮಾಜೀ, ಆಪ್ತೇಷ್ಟರನ್ನು ಆಮಂತ್ರಿಸಿ ಸಡಗರದಿಂದ ಸತ್ಕಾರವೀಯಲು 'ಲಂಡನ್ ಕೆಫೆ'ಯ ಅಡಿಗೆ ಭಟ್ಟನೇ ಆಗಬೇಕು ನಮ್ಮಪ್ಪನಿಗೆ, ಆದರೆ ಅನ್ನಾನ್ನವೆಂದು ಅಲೆದಾಡುವ ನಿರ್ಗತಿಕರ ಗೋಳನ್ನು ಕೇಳುವವರಿಲ್ಲ. ಆಹ! ಬಹುತೇಕ ಲೋಕಸ್ಥಿತಿಯೇ ಹೀಗಿರುವಾಗ ಅವರೊಬ್ಬರು ಇದರಿಂದ ಪ್ರತ್ಯೇಕವಾಗಿರಲು ಸಾಧ್ಯವಿಷೆಯೇ?' ಎಂದನು. ಮಾತೆಯು ಮೌನ.

ಸ್ವಾತಂತ್ರ್ಯ ಪ್ರತಿಜ್ಞೆ ರಾಜ ದ್ರೋಹ!

ಕಾಂಗ್ರೆಸ್ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸರಕಾರ ನಿರ್ಬಂಧಿಸಿದ್ದು ಏಕೆ ಎಂಬುದಾಗಿ ಅಖಿಲಚಂದ್ರರು ಅಸೆಂಬ್ಲಿಯಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಲು ಅದು ರಾಜ ದ್ರೋಹಾತ್ಮಕವಾದದ್ದರಿಂದ ಹಾಗೆ ಮಾಡಲಾಯಿತೆಂದು ಗೃಹ ಮಂತ್ರಿ ಹೇಳಿದರು. ಅದು ರಾಜ ದ್ರೋಹಾತ್ಮಕವಿರುವದೆಂದು ಸರಕಾರಕ್ಕೆ ಗಣ್ಯಳ ಮತ್ತು ಗಣ್ಯರಲ್ಲಿ ಸಲಹೆ ಕೊಡಲಾಯಿತಂತೆ!

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ [illegible]	ರಾತ್ರಿ [illegible]
ಘಟಿಲ್ ಕನ್ನಾನೂರು ವರಿಯಂತ ಮಾತ್ರ	ಸಾಯಂ. [illegible]	ಬೆಳಗ್ಗೆ [illegible]
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ [illegible]	ಸಾಯಂ. [illegible]

ಸಮರ ಭೂಮಿಯ ಸಂಚಾರ

ರಷ್ಯನ್ ಸೈನಿಕರು ಕೆರ್ಸನ್ ನಗರವನ್ನು ಆಕ್ರಮಿಸಿಕೊಂಡಿರುವರು. ನೀಪರ್ ನದಿ ಕಪ್ಪು ಸಮುದ್ರಕ್ಕೆ ಸಂಗಮವಾಗುವಲ್ಲಿ ಈ ಪಟ್ಟಣವಿದೆ. ೧೯೧೮ರಲ್ಲಿ ಜರ್ಮನರಿದನ್ನು ಸ್ವಾಧೀನ ಪಡಿಸಿಕೊಂಡಿದ್ದರು.

ಇದಲ್ಲದೆ ಬಾರಿಸ್ಲಾವಲ್, ಗಾಯವೊಲೊನ್, ಶಿವ್ ಚೆನ್ ಕೊವ್ ಮೊದಲಾದ ನಗರಗಳೂ ರಷ್ಯನರ ವಶವಾಗಿದೆ. ದಕ್ಷಿಣ ಯುಕ್ರೇನಿನಲ್ಲಿ ಮನಸ್ಟೀನನು ಕಟ್ಟಿರುವ ವ್ಯೂಹವು ಮುರಿದುಹೋಗಿದೆ. ಮಾರ್ಶಲ್ ಕೋನಿವ್‌ನ ಸೇನೆ ಬಗ್ ನದಿಯನ್ನು ದಾಟಲು ಮುನ್ನುಗ್ಗುತ್ತಿದೆ

ಫಿನ್‌ಲೆಂಡ್ ರಷ್ಯ

ಸಂಧಾನ ಮಾತುಕತೆಗಳು ಇನ್ನೂ ನಿರ್ಣಯಕ್ಕೆ ಬಂದಿಲ್ಲ. ರಷ್ಯದ ಶರತ್ತಗಳಿಗೆ ಫಿನ್‌ಲೇಂಡಿನ ಉತ್ತರ ಹೋಗಿದೆ ಈಗ ಮೋಸ್ಕೋದಿಂದ ಅದಕ್ಕೆ ಪ್ರತ್ಯುತ್ತರವೂ ಬರಿದಿರುವುದು. ಪ್ರತ್ಯುತ್ತರದ ವಿವರವೊಂದೂ ಪ್ರಕಟವಾಗಿಲ್ಲ. ಫಿನ್ನರ ಫಾರ್ಲಿಮೆಂಟಿನ ಗುಪ್ತ ಸಭೆಯೊಂದು ಸೇರಿದೆ. ರಷ್ಯದ ಉತ್ತರವನ್ನು ಪರಿಶೀಲಿಸುವುದೇ ಇದರ ಉದ್ದೇಶವೆಂದು ತಿಳಿದು ಬಂದಿದೆ.

ಇತ್ತೀಚಿಗೆ ರಷ್ಯವು ಮಾಡಿದ ಸೂಚನೆಯಂತೆ ಫಿನ್ಲೆಂಡು ಸಂಧಾನಕ್ಕೆ ಒಪ್ಪುವುದು ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. ಮಿತ್ರರಾಷ್ಟ್ರಗಳಲ್ಲಿ ಮಾತ್ರ ರಷ್ಯದ ಶರ್ತಗಳ ಬಗ್ಗೆ ಸಮಾಧಾನವಿರುವುದು ಜರ್ಮನಿ ಮೊನ್ನೆ ಮೊನ್ನೆ ರಷ್ಯದ ಶರತಗಳು ಬಂದಾಗಲೇ, ಫಿನ್ಲೆಂಡಿನಿಂದ ಜರ್ಮನ್ ಸೇನೆ ಹಿಂತೆಗೆಯಲು ಸಾಧ್ಯವಿಲ್ಲವೆಂದು ತಿಳಿಸಿಯೇಬಿಟ್ಟಿದೆ ಜರ್ಮನ್ ಸೇನೆ ಫಿನ್‌ಲೆಂಡಿನ ಹೊರಹೋಗುವುದು ರಷ್ಯದ ಮುಖ್ಯ ಶರ್ತಗಳಲ್ಲಿ ಒಂದು.

ಅಯರ್-ಅಮೆರಿಕ ತಿಕ್ಕಾಟ

ಅಯರ್‌ನಲ್ಲಿರುವ ಅಕ್ಷರಾಷ್ಟ್ರಗಳ ರಾಯಭಾರೀ ಕಚೇರಿಗಳನ್ನು ಮುಚ್ಚಬೇಕೆಂದು ಅಮೆರಿಕವು ಹೇಳಿದೆ, ಇದು ತಮ್ಮನ್ನು ಯುದ್ಧಕ್ಕೆ ಕರೆದಂತೆ ಎಂದು ತಿಳಿದು ಅಯರ್ ಸರಕಾರವು ಸೇನೆಯನ್ನು ಸಿದ್ಧಗೊಳಿಸುತ್ತದೆಂದು ಸುದ್ದಿ ಬಂದಿದೆ. ಡಿವೆಲರು ವಿರೋಧಿಪಕ್ಷಗಳ ಮುಖಂಡರನ್ನು ಕಂಡು ಮಾತನಾಡಿದರೆಂದೂ ತಿಳಿದು ಬರುತ್ತದೆ. ಅಯರಿನ ಮೇಲೆ ಆಕ್ರಮಣ ನಡೆಯಲಿದೆಯೆಂದೂ ದಟ್ಟಸುದ್ದಿ ಹಬ್ಬಿರುವುದು

ಅಯರ್ ತಟಸ್ಥ ದೇಶ, ಹಾಗಾಗಿ ಅದಕ್ಕೆ ಶತ್ರು ಮಿತ್ರರೆಂದು ಭೇದವಿಲ್ಲ, ಅದು ಯಾರಿಗೂ ಉಪಕಾರ ಮಾಡಕೂಡದು, ಯಾರಿಗೂ ಅಪಕಾರವೂ ಮಾಡಕೂಡದು, ಅಮೆರಿಕವಿಂದು ಅಕ್ಷರಾಷ್ಟ್ರಗಳ ರಾಯಭಾರಿ ಕಚೇರಿ ಮುಚ್ಚಬೇಕೆಂದು ಹೇಳಿದ್ದರಿಂದ ಅಯರ್ ಮಿತ್ರಪಕ್ಷಕ್ಕೆ ಸೇರಬೇಕೆಂದೂ, ಅಕ್ಷರಾಷ್ಟ್ರಗಳ ವೈರ ಕಟ್ಟಿಕೊಳ್ಳಬೇಕೆಂದೂ ಹೇಳಿದಂತಾಯಿತು ಇದಕ್ಕೆ ಡಿವೆಲರು ಒಪ್ಪುವುದಿಲ್ಲ ಹಾಗಾಗಿ ಇಂದಿನ ಪರ್ಷಣೆ ಒದಗಿದೆ ತಟಸ್ಥರಾಗಿರಲು ಅಯರಿಗೆ ಹಕ್ಕಿದೆಯೆಂದು ಲಂಡನ್ ಪತ್ರಿಕೆಗಳೇ ಸಮರ್ಥಿಸಿವೆ

ಇಂಗ್ಲೆಂಡೂ ಸೇರಿದೆ!

ಇಂಗ್ಲೆಂಡಿನಿಂದ ಅಯರಿಗೆ ಯಾರೂ ಹೋಗಕೂಡದೆಂದು ಬ್ರಿಟಿಷ್ ಸರಕಾರವೂ ಒಂದು ಆಜ್ಞೆ ಹೊರಡಿಸಿದೆ. ಅಯರಿನಿಂದ ಇಂಗ್ಲೆಂಡಿಗೆ ಪ್ರಯಾಣಮಾಡಲೂ ಸಾಧ್ಯವಿಲ್ಲ. ಅಮೆರಿಕದ ಸೂಚನೆ ಅಯರ್ ನಿರಾಕಾರಿಸಿದ್ದರಿಂದ ಈ ಪ್ರತೀಕಾರ ಕೈಕೊಳ್ಳಲಾಗಿದೆಯೆಂದು ನಂಬಲಾಗಿದೆ. ಡಿವೆಲರಾ ಅಮೆರಿಕದ ಸೂಚನೆಗೆ ಒಪ್ಪದಿದ್ದರೆ ಅಯರಿಗೆ ಸಹಾಯ ಸಾಮಗ್ರಿ ಕಳುಹಿಸಲು ಮಿತ್ರರು ಹಡಗದ ಒದಗಿಸುವುದು ಸಂದೇಹವಾಗಿದೆ. ಅಯರಿಗೆ ಎಣ್ಣೆ ಬ್ರಿಟಿಷ್ ಹಡಗಗಳ ಮೂಲಕವೇ ಬರಬೇಕು ದೇಶಕ್ಕೆ ಬೇಕಾದ ಗೋದಿಯಲ್ಲಿ ಸ್ವಲ್ಪಾಂಶ ಕೇನಡಾದಿಂದ ಒರುತಿತ್ತು. ಇದುವರೆಗೆ ಅಯರಿಗೆ ಅವಶ್ಯವಿದ್ದ ಯಂತ್ರವನ್ನು ಅಮೆರಿಕ ಕೊಡುತಿತ್ತು. ಈ ಪರ್ಷಣೆಯಿಂದ ತೊಂದರೆ ಉಂಟಾಗಬಹುದು

ಚರ್ಚಿಲರು ಸದ್ಯ ಅಮೆರಿಕದ ನೀತಿಗೆ ಬೆಂಬಲವಿತ್ತಿದ್ದಾರೆ ಕಾಮನ್ಸ್ ಸಭೆಯಲ್ಲಿ ಒಂದು ಹೇಳಿಕೆ ಕೊಡುತ್ತಾ ಡಬ್ಲಿನಿನಲ್ಲಿರುವ ಜಪಾನ್ ಮತ್ತು ಜರ್ಮನ್ ರಾಯಭಾರಿಗಳಿಂದಾಗಿ ಮಿತ್ರ ಸೇನೆಗಳಿಗೆ ಏನಾದರೂ ತೊಂದರೆಯುಂಟಾದರೆ ದಕ್ಷಿಣ ಅಯರ್ಲಂಡ ಮತ್ತು ಬ್ರಿಟನಿನ ಸಂಬಂಧ ಬಹಳ ದೂರವಾಗುವುದೆಂದೂ ಈ ವೈಷಮ್ಯ ತಲೆತಲಾಂತರಗಳವರೆಗೆ ಮರೆಯುತಕ್ಕುದಲ್ಲವೆಂದೂ ಚರ್ಚಿಲ್ಲರು ಹೇಳಿದರು ಅಮೆರಿಕವು ಅಯರಿಗೆ ಈ ಸೂಚನ ಕೊಡುವ ಮೊದಲು ಬ್ರಿಟಿಷ್ ಸರಕಾರದೊಡನೆ ವಿಚಾರವಿನಿಮಯ ಮಾಡಿಯೇ ಈ ಸೂಚನೆಯಿತ್ತಿರುವುದಾಗಿಯೂ ತಿಳಿಸಿದರು ಇದನ್ನೆಲ್ಲಾ ನೋಡಿದರೆ ಬ್ರಿಟನು ಅಮೇರಿಕಗಳಿಗೆ ಅಯರನ್ನು ಬೆದರಿಸಿ ಕಲಿಸುವ ಉದ್ದೇಶವಿರುವ ಅಪೇಕ್ಷೆಯಿರುವಂತೆ ಸ್ಪಷ್ಟವಾಗುತ್ತದೆ.

ಉಡುಪಿ

ನಗರ ಸಭೆ

ತಾ. ೭ರಲ್ಲು ಜರಗಿದ ಉಡುಪಿ ನಗರ ಸಭೆಯಲ್ಲಿ ೧೯೪೪-೪೫ರ ಅಂದಾಜು ಪತ್ರ ವಿಮರ್ಶಿಸಲಾಯಿತು. ಆಸ್ತಿ ಕರಗಿ ಹೆಚ್ಚಿಸಲು ಸಾಧ್ಯವಿಲ್ಲವೆಂದು ಕೌನ್ಸಿಲು ಅಭಿಪ್ರಾಯ ಮಾಡಿ ಇತರ ಲೈಸೆನ್ಸುಗಳ ಫೀಜನ್ನು ಏರಿಸಿ ಅಂದಾಜು ಪತ್ರ ಸರಿಗೊಳಿಸಲಾಯಿತು.

ಸಿಡುಬು

ಇಲ್ಲಿ ಸಿಡುಬು ಅಲ್ಲಲ್ಲಿ ತಲೆದೋರಿದೆಯೆಂದು ತಿಳಿಯುತ್ತದೆ.

ಕಲೆಕ್ಟರರ ಪ್ರಕಟಣೆ

ಉಡುಪಿ ಮುನಿಸಿಪಾಲಿಟಿ ಮತ್ತು ಅದರ ಆಸುಪಾಸಿನ ಗ್ರಾಮಗಳಲ್ಲಿ ಇದೇ ತಾ ೧೫ರ ಅನಂತರ ಲೈಸನ್ಸು ಪಡೆದ ವ್ಯಾಪಾರಿವಿನಾ ಇತರರು ೧೦ ಮಣಕ್ಕಿಂತ ಹೆಚ್ಚು ಅಕ್ಕಿ ಅಥವಾ ಭತ್ತವಿದ್ದಲ್ಲಿ ಅದನ್ನು ಅಧಿಕಾರಿಗಳ ಬರಹ ಮೂಲಕದ ಒಪ್ಪಿಗೆ ಪಡೆಯದೆ ಮಾರಾಟ ಮಾಡುವುದಾಗಲಿ, ಸ್ಥಳಾಂತರ ಮಾಡುವುದಾಗಲಿ ಕೂಡದು.

ಶ್ರೀ ಮಂಜುನಾಥ ನಾಯ್ಕರು

ಡಿಫೆನ್ಸ್ ಕಾನೂನಿನಂತೆ ಬಂಧಿಸಲ್ಪಟ್ಟವರು ಜಮಾನು ಮೇಲೆ ಬಿಡುಗಡೆ ಹೊಂದಿರುವರು. ತಾ ೨೦ರಲ್ಲಿ ಇವರ ವಿಚಾರಣ ಕುಂದಾಪುರ ಮೊಕ್ಕಾಮಿನಲ್ಲಿ ಜರಗಲಿರುವುದಾಗಿ ತಿಳಿದಿದೆ

ರೇಶನಿಂಗ್ ಜಾರಿ

ಉಡುಪಿಯಲ್ಲಿ ತಾ ೧೫ರ ಮೊದಲ್ಗೊಂಡು ರೇಶನಿಂಗ್ ಜಾರಿಯಾಗಿದೆ. ಅಕ್ಕಿಯ ಕಾರ್ಡುಗಳೆಲ್ಲಾ ಹಂಚಲ್ಪಟ್ಟಿದರ ರಾಶಿ ಸೇರು ೧ಕ್ಕೆ ೦-೪-೨, ಗುಡ್ಡು ಮಸ್ಕತಿ ಸೇ ೧ಕ್ಕೆ ೦-೪-೪ ಮತ್ತು ಬೆಳಿಗೆ ಸೇ ೧ಕ್ಕೆ ೦ ೪-೧೦ ಪ್ರಕಾರ ಅಕ್ಕಿ ಕೊಡಲ್ಪಡುತ್ತದೆ ನಾಗರಿಕರು ೧೦ ಮಣ ಅಕ್ಕಿಗಿಂತ ಹೆಚ್ಚು ತಮ್ಮಲ್ಲಿ ದಾಸ್ತಾನು ಇಟ್ಟು ಕೊಳ್ಳಬಾರದಾಗಿ ತಿಳಿದಿದೆ

ಇದು ಮಗುವಿನ ಚರ್ಮವನ್ನು
ತಂಪಾಗಿಯೂ, ಮೃದುವಾಗಿಯೂ,
ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ
ಉಪಯೋಗಿಸಿರಿ ಅಷ್ಟು ಸುಖಕರ- ಅಷ್ಟು
ಚರ್ಮ ಮೃದುಕರ-

ಕುಟಿಕೂರ ಟಾಲ್ಕಮ್ ಪೌಡರ್.
CUTICURA TALCUM POWDER

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ ಧನ ಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

“ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ” ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿರಲಿ—ಯಾವ ಚೆಕ್ ಆದರೂ ಕೆನರಾ ಬೇಂಕಿನಲ್ಲಿ ನಗದಾಯಿಸಲ್ಪಡಲು ಐದು ನಿಮಿಷಗಳಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.
Canara Bank Ltd.

ವಿಷಮಯ ಕಡಿತಗಳಿಗೆ
ಗಾಯಗಳಿಗೆ ತೀವ್ರ
ಗುಣಕಾರಿ.

ಝಾಂಬಕ್ ಜಗತ್ಪ್ರಸಿದ್ಧ
ವಿಷಹಾರೀ ಲೇಪ

ನಿಮಗೆ ಗಾಯವಾದರೆ, ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು ಆದರಿಂದ ಹಾಗಾಗದೆ ಅನರ್ಥವಾಗದಂತೆ ಕೂಡಲೇ ಝಾಂಬಕನ್ನು ಹಚ್ಚಿ ಸವರಿರಿ ಝಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಆದರಿಂದ ನೋವು ಕಡಿಮೆಯಾಗುತ್ತದೆ ರೀತಿಗೆ ಒಣಗುತ್ತದೆ ವಿಷಮಯ ಕ್ರಿಮಿಗಳು ಝಾಂಬಕಿನಿಂದ ಕೂಡಲೆ ನಾಶಹೊಂದುತ್ತವೆ

ಯಾವಾಗಲೂ ಝಾಂಬಕನ್ನು ಉಪಯೋಗಿಸಿರಿ

ZAM-BUK

ಸಪ್ಪೆಕೊಬ್ಬು ವಿರಹಿತವಾದುದು.

ಸ್ವದೇಶಾಭಿಮಾನಿ

ತಾರೀಖು 17—3—1944

ಕೇಂದ್ರ ಎಸೆಂಬ್ಲಿಯಲ್ಲಿ

ಮೊದಲನೆಯದಾಗಿ ಇವರು ಜನರ ಮೇಲೆ ಸುಂಕ ಹೇರಿದ್ದಾರೆ; ಎರಡನೆಯದಾಗಿ ಇವರ ಖರ್ಚು ಬಹಳ ಹೆಚ್ಚಿದ್ದು, ಅದರಲ್ಲಿ ಅಧಿಕಾಂಶ ಮತ ಸಮ್ಮತವಾಗಿಲ್ಲ; ಮೂರನೆಯದಾಗಿ ಇವರು ೧೭೭೦ ರಿಂದ ಈ ವರೆಗೆ ಆಗದ ಗಂಡಾಂತರವನ್ನು ಎಂದರೆ ಬಂಗಾಳದ ಬರಗಾಲವನ್ನು ನಿವಾರಿಸಲು ಅಸಮರ್ಥರಾದರು; ನಾಲ್ಕನೆಯದಾಗಿ ಇವರು ದೇಶದ ಆರ್ಥಿಕ ಹಿತವನ್ನು ಕಾಪಾಡಲು ಶಕ್ತರಾಗಿಲ್ಲ; ಐದನೆಯದಾಗಿ ಇವರು ವಿಚಾರಣೆ ಮಾಡದೆ ಅನೇಕರನ್ನು ಬಂಧನದಲ್ಲಿರಿಸಿದ್ದು ಅವರಲ್ಲಿ ಕೆಲವರು ಸೆರೆಮನೆಯಲ್ಲಿಯೇ ಸತ್ತು ಹೋಗಿರುವರು. ಆರನೆಯದಾಗಿ ಇವರು ಈ ಸಭೆಗೆ ಹಾಗೂ ಪ್ರಜೆಗಳಿಗೆ ಹೊಣೆಗಾರರಲ್ಲ; ಕೊನೆಗೆ ಏಳನೆಯದಾಗಿ ಇವರು ಈ ಸಭೆಯ ನಿರ್ಣಯದಂತೆ ನಡೆಯುವುದಿಲ್ಲ, ಸಭೆಯ ನಿರ್ಣಯಗಳನ್ನು ಮತ್ತು ಜನತಾ ಪ್ರತಿನಿಧಿಗಳ ಮಾತನ್ನು ತಿರಸ್ಕರಿಸಿ ನಡೆಯುತ್ತಿದ್ದಾರೆ ಹೀಗೆಂದು ಡಾ। ಪಿ. ಎನ್. ಬೆನರ್ಜಿಯವರು ಇದೇ ತಾ. ೧೩ರಂದು ಕೇಂದ್ರ ಶಾಸನ ಸಭೆಯಲ್ಲಿ ಪೂರೈಕೆಯ ತಿರಸ್ಕಾರ ಸೂಚಕವೆಂದು, ವೈಸರಾಯ್ ಕಾರ್ಯಕಾರೀ ಮಂಡಳದ ಗ್ರಾಂಟನ್ನು ಒಂದು ರೂಪಾಯಿಗೆ ಇಳಿಸಬೇಕೆಂದು ಕಾಂಗ್ರೆಸು ಪಕ್ಷದ ಅಬ್ದುಲ್ ಖಯೂಮರು ತಂದ ಉಪಸೂಚನೆಯನ್ನು ಸಮರ್ಥಿಸುತ್ತಾ ಹೇಳಿದರು.

ಮೇಲಿನ ಸೂಚನೆ, ಹಾಗೂ ಸರಕಾರದ ಬೇರೆ ಬೇರೆ ಖರ್ಚುಗಳ ಕುರಿತು ವಿಚಾರಿಸಿ ಅಗತ್ಯವುಳ್ಳ ಮಿತವ್ಯಯದ ಬಗ್ಗೆ ಸಲಹೆ ಕೊಡಲು ಪ್ರಜಾ ಪ್ರತಿನಿಧಿ ಸದಸ್ಯರ ಒಂದು ಸಮಿತಿ ನೇಮಿಸಬೇಕೆಂದು ಮುಸ್ಲಿಂಲೀಗಿನ ಸರ್ ಯೂಮಿನ್ ಖಾನರು ತಂದ ಸೂಚನೆ ಇವೆರಡೂ ಮಂಜೂರಾಗಿ ಪುನಃ ಎರಡು ಸಲ ಸರಕಾರಕ್ಕೆ ಶಾಸನ ಸಭೆಯಲ್ಲಿ ಸೋಲು ಒದಗಿತು! ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ಸದಸ್ಯರು ಈ ಸಂದರ್ಭದಲ್ಲಿ ಒಮ್ಮತ ಪಟ್ಟದ್ದು ಒಂದು ಗಣನೀಯ ವಿಚಾರವಾಗಿದೆ.

'ವೈಸರಾಯ್ ಕಾರ್ಯಕಾರೀ ಮಂಡಳದ ಸದಸ್ಯರು ಯಾರ ಪ್ರತಿನಿಧಿಗಳೂ ಅಲ್ಲ. ಒಂದು ಕಡೆಯಲ್ಲಿ ಭಾರತಕ್ಕೆ ಯುದ್ಧಾನಂತರ ಪೂರ್ಣ ಸ್ವಾತಂತ್ರ್ಯ ಕೊಡಲಾಗುವುದೆಂದು ಹೇಳುತ್ತಾ, ಇನ್ನೊಂದು ಕಡೆ ಮಂತ್ರಿಗಳ ಅಧಿಕಾರಾವಧಿ ೫ ವರ್ಷ ಬೆಳೆಸಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಭಾರತದ ಸ್ವಾರ್ಥ ಸಾಧಕರ ಅನೈತಿಕ ಪ್ರೇಮದ ಫಲವಾಗಿ ಹುಟ್ಟಿದ ವಿಕಾರವಾದ ರಾಕ್ಷಸೀ ಶಿಶು ಇಂದಿನ ಕಾರ್ಯಕಾರೀ ಮಂಡಳಿ' ಹೀಗೆಂದು ಅಬ್ದುಲ್ ಖಯೂಮರು ನುಡಿದರು.

"ಕೇಂದ್ರ ಭಾರತ ಸರಕಾರವು ಕೇಳಿ ಸಂ ಮತ್ತು ವಾಣಿಸಂಗಳ ಲಘು ಆಹಾರ ಇದು ಪ್ರಜಾ ಸತ್ತಾತ್ಮಕವಾಗಿದ್ದರೆ ಎಂದೋ ರಾಜೀನಾಮೆ ಕೊಡಬೇಕಾಗಿತ್ತು" ಎಂದು ಸರ್ ಯೂಮಿನ್ ಖಾನ್ ಹೇಳಿದರು. "ಒತ್ತಾಯ ಮತ್ತು ಲಂಚಕೋರತನವೇ ಸರಕಾರದಲ್ಲಿ ಸದ್ಯ ಹೆಚ್ಚಿದೆಯೆಂದು ಶ್ರೀ. ನಿಯೋಗಿ ತಿಳಿಸಿದರು.

ಈ ರೀತಿ ಜನತಾ ಪ್ರತಿನಿಧಿ ಸದಸ್ಯರು ಸರಕಾರೀ ಸದಸ್ಯರ, ಮಂತ್ರಿಗಳ ಮೇಲೆ ತೀವ್ರ ವಾಗ್ಬಾಣಗಳನ್ನೇ ಬಿಟ್ಟಿದ್ದಾರೆ. ವೈಸರಾಯ ಕಾರ್ಯಕಾರೀ ಮಂಡಳದಲ್ಲಿ ಅಧಿಕ ಸಂಖ್ಯೆಯಿಂದ ಭಾರತೀಯರೇ ಇದ್ದಾರೆ ಎಂದು ಸಾರಿ ಕಂಠ ಶೋಷಣೆ ಮಾಡುವ ಬ್ರಿಟಿಷ್ ಸರಕಾರವನ್ನು ಈ ಟೀಕೆಗಳು ಎಚ್ಚರಿಸಲಾರವೆ?

ಕಸ್ತೂರ್‌ಬಾ ಸ್ಮಾರಕ ನಿಧಿ

ರಾಷ್ಟ್ರ ಜನನಿ ಕಸ್ತೂರ್‌ಬಾ; ಜಗತ್ತಿನ ಓರ್ವ ವಿಭೂತಿ ಪುರುಷನೆನಿಸಿದ ಮಹಾತ್ಮಾ ಗಾಂಧಿಯವರ ಧರ್ಮಪತ್ನಿ ಅವರು; ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಸೆರೆಮನೆಯಲ್ಲಿಯೇ ಸಾವನ್ನಪ್ಪಿ ಅಮರರಾದವರು. ಭಾರತದ ಇತಿಹಾಸದಲ್ಲಿ ಮರೆಯಲಾಗದ ಮಹತ್ ಕೀರ್ತಿಗಳಿಸಿದ್ದಾರೆ ಕಸ್ತೂರ್‌ಬಾ.

ಕಸ್ತೂರ್‌ಬಾರ ಗೌರವಕ್ಕೆ, ಅವರ ಮೇಲೆ ಭಾರತೀಯರಿಗಿರುವ ಅಭಿಮಾನಕ್ಕೆ ಹಾಗೂ ಅವರ ಜೀವನೋದ್ದೇಶಕ್ಕೆ ತಕ್ಕಂತಹ ಒಂದು ಸ್ಮಾರಕ ನಿಧಿಯನ್ನು ಏರ್ಪಡಿಸುವುದು ಅವಶ್ಯವಿತ್ತು. ಈಗಾಗಲೇ ಪಂಡಿತ ಮದನಮೋಹನ ಮಾಲವೀಯರೇ ಮೊದಲಾದ ರಾಷ್ಟ್ರದ ಹಲವಾರು ಮುಂದಾಳುಗಳು "ಸಹಿಹಾಕಿ ಕಸ್ತೂರ್‌ಬಾರ, ರಾಷ್ಟ್ರೀಯ ಸ್ಮಾರಕ ನಿಧಿ'ಯೊಂದನ್ನು ಏರ್ಪಡಿಸಬೇಕೆಂದು ವಿನಂತಿಸಿದ್ದಾರೆ.

ಬರುವ ಅಕ್ಟೋಬರ ೨ರಂದು ಮಹಾತ್ಮಾ ಗಾಂಧಿಯವರ ೭೫ನೆಯ ಜನ್ಮದಿನೋತ್ಸವ. ಆದ್ದರಿಂದ ಈ ಸಂದರ್ಭದಲ್ಲಿ ೭೫ ಲಕ್ಷ ರೂಪಾಯಿಗಳನ್ನು 'ಕಸ್ತೂರ್‌ಬಾ ಸ್ಮಾರಕನಿಧಿ'ಗೆ ಸಂಗ್ರಹಿಸಿ ಮಹಾತ್ಮಾ ಗಾಂಧಿಯವರ ವಶಕೊಡಬೇಕೆಂದು ನಿರ್ಧಾರವಾಗಿರುವುದು. 'ಮಹಿಳಾ ಶಿಕ್ಷಣ ಮತ್ತು ಅವರ ಉನ್ನತಿ'ಯ ಬಗ್ಗೆ ಈ ನಿಧಿಯನ್ನು ಉಪಯೋಗಿಸುವಂತೆ ಕೇಳಿಕೊಳ್ಳಲಾಗುವುದು.

ಭಾರತೀಯರು, ಈ ಸಂದರ್ಭದಲ್ಲಿ ತಮ್ಮ ಕರ್ತವ್ಯಪಾಲನೆ ಮಾಡಲು ಹಿಂಜರಿಯಲಾರರೆಂದು ನಮಗೆ ಭರವಸೆಯಿದೆ. 'ಕಸ್ತೂರ್‌ಬಾ ರಾಷ್ಟ್ರೀಯ ಸ್ಮಾರಕ ನಿಧಿ'ಯು ೭೫ ಲಕ್ಷ ರೂಪಾಯಿಗೂ ಮೀರಿ ಸಂಗ್ರಹಿಸಲ್ಪಟ್ಟು ಮಹಾತ್ಮಾ ಗಾಂಧಿಯವರ ಕೈಗೆ ಅರ್ಪಿಸಲ್ಪಡಲಿ ಎಂದು ನಾವು ವಿನಂತಿಸುವೆವು.

ಸ್ವದೇಶ ಸಮಾಚಾರ

ಆಗಾಖಾನ ಸೆರೆಮನೆಯಲ್ಲಿ ರೂ. ೫೦೦ ವೆಚ್ಚ! ವರ್ಕಿಂಗ್ ಕಮಿಟಿ ಮೆಂಬರರಿಗೆ ರೂ. ೧೦೦!

ಪೂನ ಆಗಾಖಾನ ಸೆರೆಮನೆಯಲ್ಲಿಟ್ಟ ಮಹಾತ್ಮಾ ಗಾಂಧಿ ಮತ್ತು ಅವರ ಪರಿವಾರಕ್ಕೆ ತಿಂಗಳಿಗೆ ರೂ. ೫೦೦ ಮತ್ತು ಅಹಮ್ಮದ್‌ನಗರದಲ್ಲಿರುವ ವರ್ಕಿಂಗ್ ಕಮಿಟಿ ಮೆಂಬರರಿಗೆ ತಿಂಗಳೊಂದರ ಪ್ರತಿಯೊಬ್ಬರಿಗೆ ರೂ. ೧೦೦ ವೆಚ್ಚ ಮಾಡಲಾಗುವುದೆಂದು ಎಸೆಂಬ್ಲಿಯಲ್ಲಿ ಹೇಳಲಾಯಿತು.

ತಿಂಗಳೊಂದರ ರೂ. ೫೦೦ ವೆಚ್ಚ ಗಾಂಧಿಯವರಿಗೊಬ್ಬರಿಗೆ ಮಾತ್ರವಲ್ಲ; ಅವರೊಡನೆ ಇರುವವರಿಗೆಲ್ಲ; ಇತ್ತೀಚೆಗೆ ವರೆಗೆ ಅವರ ಜತೆ ಅವರ ಪತ್ನಿಯೂ ಇದ್ದರು; (ಅದಕ್ಕಿಂತ ತುಸು ಹಿಂದೆ ಮಹಾದೇವದೇಸಾಯಿಯೂ ಇದ್ದರು.) ಈಗಲಾದರೂ ಶ್ರೀ। ಪ್ಯಾರೇಲಾಲ್, ಡಾ। ಸುಶೀಲಾ ನಾಯರ್, ಡಾ। ಗಿಲ್ಡರ್, ಮೀರಾಬೆನ್, ಜಯಪ್ರಕಾಶರ ಪತ್ನಿ ಇವರಿಷ್ಟು ಮಂದಿಯಿದ್ದಾರೆ. ಎಂದರೆ ಪ್ರತಿಯೊಬ್ಬರಿಗೆ ತಿಂಗಳಿಗೆ ರೂ. ೭೦ ವೆಚ್ಚಮಾಡಿದಂತಾಗುವುದು. ತಿಂಗಳಿಗೆ ರೂ. ೭೦ ವೆಚ್ಚ ಮಾಡುವುವೆಂದರೆ ಸರಕಾರೀ ಉದ್ಯೋಗಸ್ತರಲ್ಲಿ ಕೆಳ ಗುಮಾಸ್ತನ ಸಂಬಳ; ಎರಡು ದಿನದ ಸಿಗರೇಟಿಗೆ ಒಂದು ದಿನದ ಊಟ ಮತ್ತು ಕುಡಿತಕ್ಕೆ ಬ್ರಿಟಿಷ್ ಸಿಪಾಯಿಗೆ ಸರಕಾರ ಮಾಡುವ ವೆಚ್ಚ. ಸಿಮ್ಲಾ ಮತ್ತು ಮಸ್ಸೂರಿಯಲ್ಲಿ ವಸಂತ ಕಾಲದಲ್ಲಿ ಯೂರೋಪಿಯನ್ ವಸತಿಗಳಲ್ಲಿ ದಿನವೊಂದರ ಬಾಡಿಗೆ ರೂ. ೭೫.

ಹಿಂದೆ ಮಹಾತ್ಮಾ ಗಾಂಧಿಯವರಿಗಿಂತ ಕೆಳತರಗತಿಯ ಮುಖಂಡರಿಗೂ ಹೆಚ್ಚು ವೆಚ್ಚಮಾಡುತಿತ್ತು ಈ ಸರಕಾರ. ಅಸಿಬೆಸೆಂಟರನ್ನು ಕೈದುಮಾಡಿದಾಗ ರೂ. ೧೦೦೦ ತಿಂಗಳೊಂದರ ವೆಚ್ಚಮಾಡುತಿತ್ತು. ಚಿಂದ್ವಾರದಲ್ಲಿ ಅಲಿ ಸಹೋದರರನ್ನು ಬಂಧಿಸಿದಾಗ ಅವರಿಗೆ ಪ್ರತಿಯೊಬ್ಬರಿಗೆ ತಿಂಗಳೊಂದರ ರೂ. ೫೦೦ ಖರ್ಚು ಮಾಡಿತ್ತು. ಸುಭಾಸಚಂದ್ರ ಬೋಸ್ ಮತ್ತು ಅವರ ಅಣ್ಣ ಶರತ್‌ಚಂದ್ರ ಬೋಸರನ್ನು ಹಿಂದಿನ ಕ್ರಾಂತಿಕಾರೀ ಚಳವಳದ ಕಾಲದಲ್ಲಿ ಬಂಧಿಸಿದಾಗ ಅವರಿಗೆ ರೂ. ೩೫೦೦ ತಿಂಗಳೊಂದರ ವೆಚ್ಚವಾಗುತ್ತು.

ಇದೂ ಈ ಕಾಲದಲ್ಲಿ; ಸಾಮಾನುಗಳಿಗೆ ಕ್ರಯ ಕಡಿಮೆ ಇರುವಾಗ. ಯುದ್ಧದ ದೆಸೆಯಿಂದ ಸಾಮಾನುಗಳಿಗೆ ನಾಲ್ಕೈದು ಪಾಲು, ಕೆಲವುಗಳಿಗೆ ಹತ್ತು ಪಾಲು ಕೂಡಾ ಬೆಲೆಯೇರಿರುವಾಗ ಗಾಂಧಿಯವರಿಗೆ ಕೇವಲ ತಿಂಗಳೊಂದರ ರೂ. ೭೦ ಹಾಗೂ ವರ್ಕಿಂಗ್ ಕಮಿಟಿ ಮೆಂಬರರಿಗೆ ಕೇವಲ ತಿಂಗಳೊಂದರ ರೂ. ೧೦೦ ಮಾತ್ರ ಸರಕಾರ ವೆಚ್ಚ ಮಾಡುತ್ತಿದೆ!

ಅರ್ಥಸಚಿವರಿಗೆ ಶ್ರೀ. ಜಿನರಾಜಾ ಹೆಗ್ಡೆಯವರ ಉತ್ತರ

'ನಿಮ್ಮ ಮೇಲೆ ಒಂದು ಪೈಯ ವಿಶ್ವಾಸವೂ ನಮಗಿಲ್ಲ'

ಕೇಂದ್ರ ಸರಕಾರದ ಅಂದಾಜು ಪತ್ರದ ಮೇಲೆ ಚರ್ಚೆಯಾದಾಗ ದ. ಕನ್ನಡ ಜಿಲ್ಲೆಯ ಎಂ. ಎಲ್. ಎ (ಕಾಂಗ್ರೆಸ್)ಗಳಾದ ಶ್ರೀ। ಜಿನರಾಜ ಹೆಗ್ಡೆಯವರು ಮಾತನಾಡುತ್ತಾ, 'ನಿಮ್ಮ ಅಂದಾಜು ಪತ್ರದ ಬಗ್ಗೆಯಾಗಲಿ, ನಿಮ್ಮ ಯುದ್ಧಾನಂತರದ ಪುನರ್ಘಟನೆ ಯೋಜನೆ ವಿಷಯವಾಗಿಯಾಗಲಿ ನಮಗೆ ನಿಮ್ಮಲ್ಲಿ ಒಂದು ಪೈಯ ವಿಶ್ವಾಸವೂ ಇಲ್ಲ' ಎಂದರು. ನಮ್ಮ ಕೃಷಿ ಮತ್ತು ಕೈಗಾರಿಕೆ ಬೆಳೆದು ಅದರಿಂದ ಅತಿಪ್ರಸರಣಕ್ಕೆ ತಡೆಯಾಗುವುದು ನಿಶ್ಚಯವೆಂದು ಮನಗಂಡರೆ ಆಗ ಮಾತ್ರ ನಾವು ನಿಮಗೆ ಸಹಾಯಮಾಡುವೆವೆಂದರು.

'ಹಿತವಾದ' ಆಫೀಸು ಜಪ್ತಿ

ನಾಗಪುರದ 'ಹಿತವಾದ' ದಿನಪತ್ರಿಕೆ ಆಫೀಸನ್ನು ಪೋಲೀಸರು ಜಪ್ತಿಮಾಡಿ. ಡೆಟಿನ್ಯುಗಳ ವಿಚಾರವಾಗಿ, ಜಬಲ್‌ಪುರದ ಆ ಪತ್ರಿಕೆಯ ಬಾತ್ಮೀದಾರನು ಕೊಟ್ಟ ವರದಿಯನ್ನು ಸೆಳಕೊಂಡು, ಆ ದಿನದ ಪತ್ರಿಕೆಯ ಎಲ್ಲಾ ಪ್ರತಿಗಳನ್ನು ಸ್ವಾಧೀನಮಾಡಿ ಆ ಪತ್ರಿಕೆಯ ತಾತ್ಕಾಲಿಕ ಸಂಪಾದಕರಾದ ಶ್ರೀ। ಎ. ಕೆ. ಘೋಷರನ್ನು ಸಂಪಾದಕ ಶ್ರೀಮಣಿಯರನೂ ಬಂಧಿಸಲಾಗಿದೆ.

'ನವಭಾರತ' ಮತ್ತು ನಾಗಪುರ ಟೈಮ್ಸ್ ಪತ್ರಿಕೆಗಳ ಆಫೀಸನ್ನೂ ಇದೇ ಕಾರಣಕ್ಕಾಗಿ ಪೋಲಿಸರು ಜಪ್ತಿಮಾಡಿದರು.

ಅಪೂರ್ವ ನಾಟ್ಯ ಪ್ರದರ್ಶನ

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು

ಮಲಬಾರಿನ ಆನಂದ ಶಿವರಾಮರೊಡನೆ

ಉಷಾರಾಣಿ, ಸೀತಾದೇವಿ, ಗಜಲಕ್ಷ್ಮಿ, ವನಜಾಕ್ಷಿ,

ಮೊದಲಾದ ಸುಂದರ ನರ್ತಕಿಯರೊಡನೆ

ನೃತ್ಯ ಭಾರತಿ ಆರ್ಕೆಸ್ಟ್ರಾ ಹಿಮ್ಮೇಳನದಲ್ಲಿ

ಭಾರತೀಯ ನೃತ್ಯಗಳನ್ನು ಪ್ರದರ್ಶಿಸುವರು

ಮಡಿಕೇರಿ ಸೆಂಟ್ರಲ್ ಹ್ಯಾಸ್ಕೂಲ್ ಹೋಲಿನಲ್ಲಿ ಮಾರ್ಚಿ ೨೪ ೨೫, ಶುಕ್ರವಾರ, ಶನಿವಾರ. ವೀರಾಜಪೇಟೆ-ಹ್ಯಾಸ್ಕೂಲ್ ಹೋಲಿನಲ್ಲಿ-ಮಾರ್ಚ್ ೨೬ ರವಿವಾರ. ಸೋಮವಾರಪೇಟೆ-ಮಿಡ್ಲ್‌ಸ್ಕೂಲ್ ಹೋಲಿನಲ್ಲಿ-ಮಾರ್ಚಿ ೨೭ ಸೋಮವಾರ. ಪುತ್ತೂರು-ಸ್ಕೂಲ್ ಹೋಲಿನಲ್ಲಿ ಎಪ್ರಿಲ್ ೨ ರವಿವಾರ. ಮಂಗಳೂರು-ಬಾಲಾಜಿ ಥಿಯೇಟರಿನಲ್ಲಿ-ಎಪ್ರಿಲ್ ೭ ಶುಕ್ರವಾರ. ಉಡುಪಿ-ರಾಮಕೃಷ್ಣ ಥಿಯೇಟರಿನಲ್ಲಿ-ಎಪ್ರಿಲ್ ೯ ರವಿವಾರ

ಪ್ರತಿದಿನ ಎರಡು ಆಟಗಳು ಸಾಯಂಕಾಲ ೭ ಮತ್ತು ೧೦ಕ್ಕೆ

ಜಿಲ್ಲಾ ಸಮಾಚಾರಗಳು

ಮಂಗಳೂರು

ಹೊಸ ಕಲೆಕ್ಟರರು

ಜಿಲ್ಲಾ ಕಲೆಕ್ಟರ್ ಶ್ರೀ. ಎಂ. ಕರಮತುಲ್ಲಾ ಇವರ ಸ್ಥಾನಕ್ಕೆ ನೇಮಕಹೊಂದಿದ್ದ ಶ್ರೀ. ಉಣ್ಣಿತನ್ ಇವರ ಬದಲು ರಾ। ಸಾ। ಪಿ. ರಾಮದಾಸ್ ಇವರು ಈಗ ನೇಮಕವಾಗಿರುವರು.

ಆಗಮನ

ಡೈರೆಕ್ಟರ್ ಓಫ್ ಸಿವಿಲ್ ಸಪ್ಲೈಸ್ ರಾದ ಜೆ. ಬಿ. ಬ್ರೌನ್ ಇವರು ಮಂಗಳೂರಿಗೆ ಬರಲಿರುವರು.

ಅಕ್ಕಿ ಸರಬರಾಯಿ

ಮಂಗಳೂರಿಗೆ ಬೇಗನೇ ಕೆಲವು ಸಾವಿರ ಮುಡಿ ಅಕ್ಕಿ ಬೇರೆ ಜಿಲ್ಲೆಗಳಿಂದ ಮದ್ರಾಸ್ ಸರಕಾರ ಕಳುಹಿಸಲಿದೆ ಯೆಂದು ತಿಳಿದು ಬರುತ್ತದೆ.

ಜಿಲ್ಲಾ ಆಹಾರ ಸಮಿತಿ

ಫೆಬ್ರವರಿ ತಾ. ೨೮ರಂದು ಸೇರಿದ ಜಿಲ್ಲಾ ಆಹಾರ ಸಮಿತಿಯ ಸಭೆಯಲ್ಲಿ ಈ ನಿರ್ಣಯಗಳನ್ನು ಮಾಡಲಾಗಿದೆ ಯೆಂದು ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

೧. ಗುರುತು ಚೀಟು ಮತ್ತು ರೇಶನಿಂಗ್ ಚೀಟು ಇರುವವರಿಗೆ ಅಕ್ಕಿ ಹಂಚುವುದಕ್ಕೆ ಅವಶ್ಯವಿರುವ ದಾಸ್ತಾನು ಹೆಚ್ಚಿಸುವುದಕ್ಕಾಗಿ ಸ್ವಾಧೀನ ಪಡಿಸಿಕೊಳ್ಳದಿರುವ ಅಕ್ಕಿಯನ್ನು ತರಬಲ್ಲ ವ್ಯಾಪಾರಿಗಳ ಸಹಾಯ ಪಡಕೊಳ್ಳಬೇಕು, ಆ ಅಕ್ಕಿಯನ್ನು ವ್ಯಾಪಾರಿಗಳು ಮಾರಲು ಸಾಧ್ಯವಾಗುವ ಮಾರಾಟದ ಬೆಲೆಯನ್ನು ಅಧಿಕಾರಿಗಳು ನಿಶ್ಚಯಿಸುವರು ಆ ಬೆಲೆಗೆ ವ್ಯಾಪಾರಿಗಳು ಅಕ್ಕಿ ಮಾರಬೇಕು.

೨. (ಎ) ಅಕ್ಕಿಯಾಗಿ ಮಾರ್ಪಡಿಸಲು ಭತ್ತ ಒದಗಿಸಿಕೊಡಬೇಕೆಂದು ಕೇಳಿಕೊಂಡ ಎಂ. ಎ. ಕೃಷ್ಣ ನಾಯಕ್ ಎಂಡ್ ಸನ್ಸ್ ಇವರು ಫೆ. ತಾ. ೫ರಂದು ಬರೆದ ಪತ್ರ ಓದಲ್ಪಟ್ಟು ಎಷ್ಟು ಭತ್ತಕ್ಕೆ ಸರಾಸರಿ ಎಷ್ಟು ಅಕ್ಕಿಯಾಗುತ್ತದೆಂದು ಪ್ರಯೋಗ ನೋಡಬೇಕೆಂದೂ, ಅನಂತರ ಮಿಲ್ಲಿನ ಹೆಚ್ಚಿನ ಮಾಹಿತಿ ತಿಳಕೊಳ್ಳಬೇಕೆಂತಲೂ ನಿರ್ಣಯವಾಯಿತು.

(ಬಿ) ಉತ್ತಮ ಬೆಳ್ತಿಗೆ ಅಕ್ಕಿಯ ಬೆಲೆ ಸಣ್ಣಕ್ಕಿ ಮತ್ತು ಜೀರಾ ಅಕ್ಕಿಯಷ್ಟೆ ಇರಬೇಕು.

(ಸಿ) ಸ್ವಾಧೀನಪಡಿಸಿ ಕೊಂಡಿರುವ ಅಕ್ಕಿಯ ಬದಲು ೧,೫೦೦ ಮುಡಿ ಗಂಧಸಾಲೆ ಅಕ್ಕಿ ಕೊಡುವೆವೆನ್ನುವ ಕಾರ್ಕಳ ವ್ಯಾಪಾರಿಗಳ ಸೂಚನೆ ಒಪ್ಪಲಾಯಿತು.

೩. ಜಿಲ್ಲೆಯಲ್ಲಿ ಹೆಚ್ಚು ಆಹಾರ ಬೆಳೆಸುವುದಕ್ಕಾಗಿ ಹೆಚ್ಚು ನೀರು ಸರಬರಾಯಿ ಮಾಡುವ ಬಗ್ಗೆ ಯೋಜನೆ ನಿರ್ಮಿಸಿ ಕಾರ್ಯರೂಪಕ್ಕೆ ತರಲು ಕೆಲವು ನೀರಾವರಿ ಅಧಿಕಾರಿಗಳನ್ನು ಬೇಗನೇ ನೇಮಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತದೆ.

ಪ್ಲೇಗು ರೋಗ ಹಬ್ಬುತ್ತಿದೆ

ಮಂಗಳೂರು ಬಂದರದಿಂದ ಮೂಡುದಿಕ್ಕಿಗೆ ಪ್ಲೇಗು ರೋಗ ಹರಡುತ್ತಿದ್ದಂತೆ ತೋರುತ್ತದೆ ಮುಖ್ಯಪ್ರಾಣ ದೇವಸ್ಥಾನದ ಕೇರಿಗಳಲ್ಲಿ (ಹಳೆ ಚಟ್ಟಿಗಲ್ಲಿ) ಪ್ಲೇಗು ಹರಡಿದೆ. ಇಲ್ಲಿ ಎರಡು ಮರಣಗಳಾಗಿವೆ. ದೇರೆಬೈಲಿನಲ್ಲಿ ಗೇರು ಬೀಜ ಕಾರ್ಖಾನೆ ಬಳಿ ಇಲಿ ಬೀಳುತ್ತಿವೆ. ಜೆಪ್ಪುವಿನಲ್ಲಿಯೂ ಇಲಿ ಬೀಳುವ ಸುದ್ದಿಯಿದೆ. ಇಂತಹ ಸ್ಥಳಗಳನ್ನು ಕ್ರಿಮಿನಾಶಕ ದ್ರವ್ಯಗಳಿಂದ ತೊಳೆವ ಮತ್ತು ದಾಖು ಹಾಕುವ ಕೆಲಸ ನಡೆಯುತ್ತಿದೆ. ಇಲಿಗಳು ಬಿದ್ದ ಸ್ಥಳಗಳನ್ನು ಕೂಡಲೇ ಮುನ್ಸಿಪಾಲಿಟಿಗೆ ತಿಳಿಸಿ ಆ ಸ್ಥಳಗಳನ್ನು ಸ್ವಚ್ಛಗೊಳಿಸಬೇಕಾಗಿ ವಿನಂತಿಯಿದೆ.

ಶ್ರೀ. ಕೃಷ್ಣ ಶೆಟ್ಟರ ಬಿಡುಗಡೆ

ಧಾರವಾಡ ಕರ್ನಾಟಕ ಹೈಸ್ಕೂಲ್ ಅಧ್ಯಾಪಕರಾಗಿದ್ದ ಮಂಗಳೂರಿನ ಶ್ರೀ. ಕೆ. ಕೃಷ್ಣ ಶೆಟ್ಟಿ ಬಿ. ಎ. ಇವರು ಡಿ. ಓ. ಇ. ಕಾನೂನಿನಂತೆ ಮಂಗಳೂರಲ್ಲಿ ಬಂಧಿಸಲ್ಪಟ್ಟವರು ತಮ್ಮ ಶಿಕ್ಷೆ ಅವಧಿ ತೀರಿಸಿ ಹಿಂಡಲಗಿ ಸೆರೆಮನೆಯಿಂದ ಬಿಡುಗಡೆಯಾಗಿ ಮಂಗಳೂರಿಗೆ ಬಂದಿದ್ದಾರೆ.

ಜಿಲ್ಲಾ ಪತ್ರಿಕೋದ್ಯೋಗಿ ಸಂಘ

ಇದರ ಕಾರ್ಯಕಾರೀ ಮಂಡಳಿಯ ಸಭೆ ಕಳೆದ ವಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಶ್ರೀ. ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಸೇರಿ ಮುಂದಿನ ವರ್ಷದ ಅಂದಾಜು ಪತ್ರ ಅಂಗೀಕೃತವಾಯಿತು. ಮುಂದಿನ ವರ್ಷದಲ್ಲಿ ಸಂಘದ ಪುಸ್ತಕ ಭಂಡಾರವನ್ನು ಬೆಳೆಸಬೇಕೆಂದೂ, ಅದಕ್ಕಾಗಿ ಸಂಘದಿಂದ ರೂ. ೧೨೦ ಖರ್ಚು ಮಾಡಬೇಕೆಂದೂ ನಿರ್ಣಯವಾಯಿತು.

ಜಾನುವಾರು ರೋಗ

ನಮ್ಮ ಜಿಲ್ಲೆಯಲ್ಲಿ ಜಾನುವಾರು ರೋಗ ಈ ವರ್ಷ ಪ್ರಬಲವಾಗಿ ಬಂದು ಎಷ್ಟೋ ಸಾವಿರ ಜಾನುವಾರುಗಳು ಸತ್ತಿವೆ ಕಾಸರಗೋಡು ತಾಲೂಕೊಂದರಲ್ಲಿಯೇ ಎಂಟು ಸಾವಿರಕ್ಕೆ ಮಿಕ್ಕಿ ಜಾನುವಾರುಗಳು ಈ ರೋಗದಿಂದ ಮೃತಪಟ್ಟಿರುವುದಾಗಿ ತಿಳಿದಿದೆ. ಹಳ್ಳಿಯ ಕೆಲವು ರೈತರ ಇಡೀ ಹಟ್ಟಿ ಹಟ್ಟಿಗಳೇ ಈ ರೋಗದಿಂದಾಗಿ ಖಾಲಿಯಾಗಿರುವವು. ಇದರಿಂದಾಗಿ ಮುಂದಿನ ಬೆಳೆ ಮಾಡಲು ರೈತರಿಗೆ ಬಹಳ ಕಷ್ಟವಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಸಂಬಂಧ ರೈತರಿಗೆ ಸರಕಾರದವರು ಏನಾದರೂ ಪರಿಹಾರ ಕೊಡುವುದು ಅವಶ್ಯವಿದೆ. ಸಾಲವನ್ನಾದರೂ ಕೊಟ್ಟು ಅವರ ಸಹಾಯಕ್ಕೆ ಸರಕಾರ ಬರಬೇಕು. ಬೇಗನೇ ಈ ಕುರಿತು ಸಂಬಂಧಪಟ್ಟವರು ಕಾರ್ಯಕ್ರಮ ಕೈಕೊಳ್ಳುವರೆಂದು ಹಾರೈಸುವೆವು.

ಹಂಚು ಕಾರ್ಖಾನೆ ಕೆಲಸಗಾರರು

ಹೆಚ್ಚು ತುಟ್ಟಿಭತ್ತೆ ಸಿಗಬೇಕೆಂದು ಬಾಸೆಲ್ ಮಿಶನ್ ಹಂಚು ಕಾರ್ಖಾನೆ ಕೆಲಸಗಾರರು ಇತ್ತೀಚೆಗೆ ಮುಷ್ಕರ ಹೂಡಿದ್ದರ ಫಲವಾಗಿ, ಈಗ ರೂಪಾಯಿಯಲ್ಲಿ ಎಂಟಾಣೆಯಿದ್ದ ತುಟ್ಟಿಭತ್ತೆಯನ್ನು ಹತ್ತಾಣೆಗೆ ಏರಿಸಲಾಗಿದೆಯೆಂದು ತಿಳಿಯುತ್ತೇವೆ.

ಸ್ಯೆಂಟ್ ಎಲಾಶಿಯಸ್ ಕಾಲೇಜ್

ಇಲ್ಲಿ ಬರುವ ಜೂನ್ ತಿಂಗಳಿಂದ ಕೆಮಿಸ್ಟ್ರಿ ಮತ್ತು ಫಿಸಿಕ್ಸ್ ವಿಭಾಗದ ಬಿ. ಎಸ್. ಸಿ ಕ್ಲಾಸುಗಳೂ, ಮತ್ತು ಬಿಕಾಮ್ ಕ್ಲಾಸುಗಳೂ ತೆರೆಯಲ್ಪಡುವವೆಂದು ತಿಳಿದುಬರುತ್ತದೆ.

ಅ. ಭಾ. ಕಿಸಾನ್ ಸಮ್ಮೇಳನ

ಬೆಜವಾಡದಲ್ಲಿ ಜರಗುವ ಅಖಿಲ ಭಾರತ ಕಿಸಾನ್ ಸಮ್ಮೇಲನಕ್ಕೆ ಮಂಗಳೂರಿಂದ ಶ್ರೀ। ಶಾಂತಾರಾಮ ಪೈಗಳು ಸೌಹಾರ್ದ ಪ್ರತಿನಿಧಿಯಾಗಿ ಹೋಗಿರುವರು. ಕಾಸರಗೋಡು ತಾಲೂಕು ಕಿಸಾನ್ ಸಂಘದ ಪರವಾಗಿ ಶ್ರೀಗಳಾದ ವಿ. ವಿ. ಕುಂಞಂಬು, ಕೆ. ಮಾಧವನ್, ಪಿ. ಕುಂಞಂಬು ನಾಯರ್ ಈ ಮೂವರು ಹೋಗಿರುವರು.

ಶ್ರೀ. ರಾಮಕೃಷ್ಣ ವಿದ್ಯಾರ್ಥಿನಿ ಭವನ, ಮಂಗಳೂರು

ಈ ಭವನದ ಬಗ್ಗೆ ಬೇಕಾದ ಸ್ಥಳ ಪಡಕೊಂಡು ಕಟ್ಟಡ ಕಟ್ಟಿಸಲಿಕ್ಕೆ ಧನಸಹಾಯ ಪಡೆಯಲು ಹೋದ ಕಮಿಟಿಯವರು ಪುನಾ ಬೊಂಬಾಯಿಗಳಲ್ಲಿ ಒಟ್ಟು ರೂ. ೧೨,೯೯೩ ವಾಗ್ದಾನ ಪಡೆದು, ರೂ. ೪,೫೩೯ ವಸೂಲು ಹೊಂದಿರುತ್ತಾರೆ. ವಿದ್ಯಾರ್ಥಿನಿ ಭವನದ ಸ್ಥಳ ಮತ್ತು ಕಟ್ಟಡದ ಬಗ್ಗೆ ಕನಿಷ್ಠ ರೂ. ೨೫,೦೦೦ ವಾದರೂ ಬೇಕಾದೀತೆಂದು ಅಂದಾಜು ಮಾಡಿದೆ. ಈ ಕೆಲಸ ಪುನಾ ಮುಂಬಾಯಿ ಮತ್ತು ನಮ್ಮ ಜಿಲ್ಲೆಯ ಹೊರಗಿನ ಮಹನೀಯರ ಸಹಾಯದಿಂದಲೇ ಆಗಬೇಕೆಂದು ಅಪೇಕ್ಷೆಯಿರುವುದು. ಈ ಬಗ್ಗೆ ಉದಾರ ಬುದ್ಧಿಯಿಂದ ಸಹಾಯ ಮಾಡುವರು ತಮ್ಮ ವಂತಿಗೆ ಮೊಬಲಗನ್ನು ಶ್ರೀ. ರಾಮಕೃಷ್ಣ ಪೂಂಜ, ಮುಲ್ಕಿ ಇವರಿಗೆ ಕಳುಹಿಸಿ ಕೊಡಬೇಕೆಂದು ಒಂದು ವಿನಂತಿ ಹೊರಡಿಸಿರುವರು.

ಮಿತ್ರಮಂಡಳಿ

ಇದರ ಆಶ್ರಯದಲ್ಲಿ ಬರುವ ಶನಿವಾರ ಸಂಜೆ ೬॥ ಗಂಟೆಗೆ ಥಿಯಾಸಫಿಕಲ್ ಲಾಜಿನಲ್ಲಿ ಲಿಪಿ ಸುಧಾರಣೆ - ವಿಚಾರ ಅಭ್ಯಾಸ ಗೋಷ್ಠಿ ಯಾಗಲಿದೆಯೆಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಪ್ರಕಾಶ ಕೂಟದ

ಆಶ್ರಯದಲ್ಲಿ ಕಳೆದ ಆದಿತ್ಯವಾರ ಶ್ರೀ ವೆಂಕಣ್ಣನವರಿಂದ ರಚಿತವಾದ 'ಭಾರತ ಶಕ್ತಿ'ಯ ಅಭ್ಯಾಸ ಗೋಷ್ಠಿಯು ಶ್ರೀ. ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ಎಂ. ವಿ. ಪ್ರಭು, ಎಸ್. ಜಿ. ನಾಯಕ್ ಮತ್ತು ಶ್ರೀ. ಕುಳುಕುಂದ ಇವರು ಮಾತನಾಡಿದರು. 'ಭಾರತ ಶಕ್ತಿ' ಸಾಹಿತ್ಯದಲ್ಲಿ ಹೊಸ ಹಾದಿ ಹಿಡಿದಿದೆಯೆಂದೂ ಪ್ರಗತಿ ಶೀಲ ವಿಚಾರವನ್ನೊಳಗೊಂಡಿದೆಯೆಂದು ಭಾಷಣ ಕರ್ತರು ಅಭಿಪ್ರಾಯಪಟ್ಟರು.

ದಕ್ಷಿಣ ಕನ್ನಡದಲ್ಲಿ ಶ್ರೀ ಶ್ರೀಧರ ಸ್ವಾಮಿಜಿ

ಇವರು ಅನಿರೀಕ್ಷಿತ ಪ್ರವಾಸ ಕೈಕೊಂಡರು. ಶ್ರೀ ವಿಠೋಬ ದೇವಸ್ಥಾನದಲ್ಲಿ ದಾಸನವಮಿ ಉತ್ಸವದಲ್ಲಿ ಭಾಗವಹಿಸಿ, ಶ್ರೀ ಕೃಷ್ಣ ಮಂದಿರ ವಿವೇಕಾನಂದ ಸಭೆಯಲ್ಲಿ ಗೀತೆಯ ಕುರಿತು ಮಾತನಾಡಿ, ಹಿಂದೂ ಫೆಡರಲ್ ಸ್ಕೂಲ್ಸ್ ಬೋರ್ಡುಗಳ ಆಶ್ರಯದಲ್ಲಿ ಸನಾತನ ಧರ್ಮ, ಭಕ್ತಿಯೋಗ ಮತ್ತು ಕರ್ಮಯೋಗ ಇವುಗಳ ಕುರಿತು ಭಾಷಣವಿತ್ತರು. ಇದೇ ತಾ. ೮, ೧೦ ಮತ್ತು ೧೩ರಲ್ಲು ಈ ಪ್ರವಚನಗಳು ನಡೆದವು. ಈ ಪ್ರವಚನದ ಕುರಿತು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಮಂಗಳೂರಲ್ಲಿ ಪ್ಲೇಗಿನ ವಿವರ

"ತಾ. ೧೧ಕ್ಕೆ ಅಂತ್ಯವಾಗುವ ವಾರದಲ್ಲಿ ೩ ಜನರಿಗೆ ಪ್ಲೇಗ್ ಜಾಡ್ಯ ತಗಲಿ, ಮೂವರೂ ಮರಣ ಹೊಂದಿದರು. ಪ್ಲೇಗ್ ರೋಗ ಕಂಡು ಬಂದಂದಿನಿಂದ ಇದುವರೆಗೆ ೭ ಮಂದಿಗೆ ಪ್ಲೇಗ್ ತಗಲಿ ಆ ಪೈಕಿ ೬ ಜನರು ಸತ್ತಿರುವರು. ಈ ವರೆಗೆ ೧,೯೮೮ ಜನರಿಗೆ ಪ್ಲೇಗು ಇಂಜೆಕ್ಷನ್ ಆಗಿದೆ. ಈ ವಾರ ೧೭ ಇಲಿ ಬಿದ್ದಿದೆ. ಅವುಗಳ ರಕ್ತವನ್ನು ಪರೀಕ್ಷೆಗೆ ಗಿಂಡಿಗೆ ಕಳುಹಿಸಲಾಗಿದೆ. ಒಟ್ಟು ೨. ಇಲಿಗಳು ಪ್ಲೇಗಿನವೆಂದು ತಿಳಿದು ಬಂದಿದೆ" ಹೀಗೆಂದು ಮಂಗಳೂರು ಹೆಲ್ತ್ ಆಫೀಸರರ ಪ್ರಕಟಣೆಯಿದೆ.

ಕರ್ನಾಟಕ ಪತ್ರಿಕೋದ್ಯೋಗಿಗಳಲ್ಲಿ ಪ್ರಾರ್ಥನೆ

ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಎಚ್. ಆರ್. ಮೋಹರೆಯವರು ತಮ್ಮೊಂದು ಪ್ರಾರ್ಥನೆಯಲ್ಲಿ ಮಂಗಳೂರಲ್ಲಿ ಜರಗಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಯಶಸ್ವಿತೆಯನ್ನು ಕೊಂಡಾಡಿ, ಈ ಬಗ್ಗೆ ದಕ್ಷಿಣ ಕನ್ನಡದ ಪತ್ರಿಕೋದ್ಯೋಗಿ ಸಂಘವು ಅಭಿನಂದನಾರ್ಹವೆಂದು ತಿಳಿಸುತ್ತಾ, ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘವೊಂದು ಈ ಸಮ್ಮೇಳನದ ಮೂಲಕ ಪುನರುತ್ಥಾನ ಗೊಂಡಿರುವ ವಿಷಯ ತಿಳಿಸಿ ಸಂಘದ ಮುಖ್ಯ ಕಾರ್ಯಾಲಯ ಮಂಗಳೂರಲ್ಲೇ ಇರುವುದು ಮತ್ತು ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ. ವಿ. ಎಸ್. ಕುಡ್ವರವರು ಕಾರ್ಯಾಲಯ ನಡೆಸಲು ಒಪ್ಪಿಕೊಂಡಿದ್ದಾರೆ. ಆದುದರಿಂದ ಎಲ್ಲಾ ಪತ್ರ ವ್ಯವಹಾರವನ್ನು ಈ ವರ್ಷದ ಮಟ್ಟಿಗೆ ಮಂಗಳೂರ ಕಾರ್ಯಾಲಯಕ್ಕೆ ಮಾಡಬೇಕು. ಎಲ್ಲಾ ಪತ್ರಿಕೋದ್ಯೋಗಿಗಳು ದಯವಿಟ್ಟು ಸಂಘವನ್ನು ಮುಂದೆ ಪ್ರೋತ್ಸಾಹಿಸಬೇಕೆಂದು ಬಿನ್ನವಿಸುತ್ತೇನೆ." ಎಂದು ಪ್ರಾರ್ಥಿಸುತ್ತಾರೆ.

ಬದಿಯಡ್ಕ

ಉದ್ಯೋಗನಿವೃತ್ತಿ

ಕಳೆದ ತಾ. ೨ರಂದು ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಊರ ಮಹಾ ಜನರ ಸಭೆಯೊಂದು ಸೇರಿ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾಗುವ ಶ್ರೀ. ಅನಂತ ಭಟ್ಟರನ್ನು ಸತ್ಕರಿಸುವ ಸಮಾರಂಭವು ಜರಗಿತು. ಶ್ರೀ ಈಳಂತೋಡಿ ಕೃಷ್ಣಭಟ್ಟ ಮೊದಲಾದವರು ಶ್ರೀ. ಅನಂತ ಭಟ್ಟರ ಗುಣಕಥನ ಮಾಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಶ್ರೀ. ಅನಂತ ಭಟ್ಟರು ಮಾಡಿದ ವಿದ್ಯಾ ಸೇವೆಯನ್ನು ಪ್ರಶಂಸಿಸಿ ಈ ಸ್ಥಳದಲ್ಲಿ ಹೈಸ್ಕೂಲ್ ಆಗಬೇಕೆಂದು ಊರವರು ಮಾಡುತ್ತಿರುವ ಕೆಲಸಕ್ಕೆ ತಾನು ತನ್ನಿಂದಾದ ಸಹಾಯ ನೀಡಲು ಸಿದ್ಧನಿರುವೆನಾಗಿ ತಿಳಿಸಿದರು.

ಕಳೆದ ಆದಿತ್ಯವಾರ ಈ ಕೇಂದ್ರದ ಉಪಾಧ್ಯಾಯರ ಸಭೆಯೊಂದು ಸೇರಿ ಶ್ರೀ. ಅನಂತ ಭಟ್ಟರನ್ನು ಸತ್ಕರಿಸುವ ಸಮಾರಂಭ ಡಾ। ಪಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೇಶವ ಭಟ್ಟ, ರಾಮಕೃಷ್ಣ ರಾವ ಮೊದಲಾದವರು ಶ್ರೀ. ಅನಂತ ಭಟ್ಟರ ಗುಣಕಥನ ಮಾಡಿದರು.

ಹಳೆ ವಿದ್ಯಾರ್ಥಿ ಸಂಘ

ಬದಿಯಡ್ಕ ಹಯ್ಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿ ಸಂಘವೊಂದು ಕಳೆದ ಆದಿತ್ಯವಾರ ಶ್ರೀ. ಈಳಂತೋಡಿ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ರಚಿತವಾಯಿತು. ಶ್ರೀ. ಕೆ. ... ರೈ, (ಅಧ್ಯಕ್ಷರು) ಶ್ರೀಗಳಾದ ಪಿ. ಕೃಷ್ಣ ಭಟ್ ಮತ್ತು ಬಿ. ರಾಘವೇಂದ್ರ ಶೆ... (ಕಾರ್ಯದರ್ಶಿಗಳು) ಮತ್ತು ಇತರ ನಾಲ್ಕು ಮಂದಿ ಸದಸ್ಯರುಳ್ಳ ಒಂದು ಕಾರ್ಯಕಾರೀ ಮಂಡಳಿ ರಚಿತವಾಗಿದೆ.

ಈ ಸಂಘದ ಮೂಲಕ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾಗುವ ಶ್ರೀ. ... ಅನಂತ ಭಟ್ಟರಿಗೆ ಒಂದು ಸತ್ಕಾರ ಕೂಟವೂ, ಅವರ ಭಾವ ಚಿತ್ರ ಅನಾವರಣೋತ್ಸವವೂ ಬೇಗನೇ ಮಾಡಬೇಕಾಗಿ ನಿರ್ಧಾರವಾಗಿದೆ.

WANTED

Respectable Agents o[n] profitable terms at importa[nt] centers of South Kana[ra] District for THE MYSOR[E] INSURANCE CO., LTD.

Apply by letter or in perso[n]

To

M. Ramachandra Pa[i]

Inspector of Agencies

Pentlandpeta, Mangalo[re]

ಸಿನೆಮಾ ಸುದ್ದಿ

ಜಯಮ್ಮನ "ಮಲ್ಲಮ್ಮ"

ಸುದ್ದಿ ವೀರಣ್ಣನವರು ... ಫಿಲ್ಮ್ ಕಂಪೆನಿ ತೆಗೆಸಿರುವಂದ ಬಂದು ಪಿಲ್ಮ್ ಕಂಪೆನಿ ಮಾಡಿದ್ದು, "ಚೆಂಚುಲಕ್ಷ್ಮಿ" ಚಿತ್ರ ತಯಾರಿಸಿದ ಸೌಂದರ್ ರಾಜನರ ಸಹಾಯದಿಂದ 'ಮಲ್ಲಮ್ಮ' ಎಂಬ ಚಿತ್ರ ತಯಾರಿಸುವದಾಗಿ ಸುದ್ದಿಯಿದೆ. ವೀರಣ್ಣನವರ ನಟಿ ಜಯಮ್ಮ ಇದರಲ್ಲಿ 'ಮಲ್ಲಮ್ಮ'ನಾಗಿ ಅಭಿನಯಿಸುವಳೆಂದೂ ತಿಳಿಸಲಾಗಿದೆ. ಜಯಮ್ಮನ 'ಮಲ್ಲಮ್ಮ'ವನ್ನೊಮ್ಮೆ ನೋಡಲಿಕ್ಕಿದೆ.

'ಕನ್ನಡ ಕನಕದಾಸ'

ರೇಣುಕಾ ಪಿಲ್ಮನವರು 'ಕನ್ನಡ ಕನಕದಾಸ' ಚಿತ್ರ ತೆಗೆಯುವರೆಂದು ಸುದ್ದಿ. 'ಕನ್ನಡ ಕನಕದಾಸ' ಎಂಬ ಮಾತಿಗೆ ವಿಶೇಷವಿದ್ದೇ ಇದೆ. ಏಕೆಂದರೆ ನಾವಿದುವರೆಗೆ ನೋಡಿದ ಚಿತ್ರಗಳೆಲ್ಲಾ ಕನ್ನಡ ಹರಿಶ್ಚಂದ್ರ, ಕನ್ನಡ ವಸಂತಸೇನಾ, ಕನ್ನಡ ಪ್ರಹ್ಲಾದ ಇತ್ಯಾದಿಗಳು. ಆ ಮೇಲೆ ತಮಿಳು, ತೆಲುಗು ಚಿತ್ರ ತೆಗೆಯುವ ಕಂಪಣಿಗಳು, 'ತಮಿಳು, ತೆಲುಗು ನಟರನ್ನು ಸೇರಿಸಿ ಈ ಚಿತ್ರಗಳನ್ನು ತೆಗೆಯುವುದರಿಂದ, 'ಕನ್ನಡ'ವೆಂಬ ವಿಶೇಷಣ ಸೇರಿಸದಿದ್ದರೆ ಪ್ರೇಕ್ಷಕರು ಆ ಚಿತ್ರಗಳು ಯಾವ ಭಾಷೆಯವೆಂದು ಗೊಂದಲಗೊಳ್ಳಬೇಕಾಗುತ್ತದೆ. ಹೇಗಿದ್ದರೂ ನಾವು 'ಕನ್ನಡ ಕನಕದಾಸ'ವನ್ನೂ ನೋಡಲೇ ಬೇಕಾಗಿದೆ.

ಸಿನೆಮದಲ್ಲಿ ಮಗನ ಮರಣವನ್ನು ಕಂಡಳು.

ನ್ಯೂಜೆರಿಸಿಯ ನೆವಾರ್ಕಿನ ಒಂದು ಸಿನೆಮಾ ಭವನದಲ್ಲಿ, ದೂರದೇಶದಲ್ಲಿ ಅಮೇರಿಕದ ಯುದ್ಧ ಹಡಗ 'ಸವನ್ನಾ' ಮೆಡಿಟರೇನಿಯನಿನಲ್ಲಿ ಶತ್ರು ಬಾಂಬು ಘಾತದಿಂದ ಮುಳುಗುವ ಸಮಯದಲ್ಲಿ ಅವರಲ್ಲಿ ತನ್ನ ಮಗನು ಇರುವುದನ್ನು ನೋಡಿ, ಪ್ರೇಕ್ಷಕರಲ್ಲಿ ಒಬ್ಬಳಾದ ಶ್ರೀಮತಿ ಅನ್ನಾನ್ಸುಬೇರ್ ಎಂಬಾಕೆ 'ಓ ಮಗನೇ' ಎಂದು ಕೂಗಿದಳು. ಕೂಡಲೇ ಸಿನೆಮಾ ಅಧಿಕಾರಿಯ ಬಳಿ ಹೋಗಿ ಆ ಚಿತ್ರವನ್ನು ತನಗಾಗಿ ಇನ್ನೊಮ್ಮೆ ಮಂದಗತಿಯಲ್ಲಿ ತೋರಿಸಬೇಕೆಂದು ಬೇಡಿಕೊಂಡಳು.

ಮೊದಲಿನ ಪಂಕ್ತಿಯಲ್ಲಿ ಕುಳಿತುಕೊಂಡು ಆ ಸಿನೆಮವನ್ನು ನೋಡುತ್ತಾ ಆಕೆ, ತನ್ನ ಮಗನು ಸಾಯುತ್ತಿರುವ ದೃಶ್ಯ ನೋಡಿ ಪ್ರಾರ್ಥನೆ ಮಾಡಿದಳು. ಅವಳಿಗೆ ತನ್ನ ಮಗ ಸತ್ತಿರುವ ಸುದ್ದಿ ನಾಲ್ಕು ದಿನ ಮೊದಲು ತಿಳಿದುಬಂದಿತ್ತಂತೆ. ಆಗ ಮಗ ಸಾಯುವ ಸಮಯ ಅವನ ಬಳಿಯಿರಬೇಕಿತ್ತೆಂದು ಅವಳಿಗನಿಸಿತ್ತು. ಸಿನೆಮಾದಲ್ಲಿ ಆತನ ಮರಣ ದೃಶ್ಯವನ್ನು ನೋಡಿ ತಾನಾತನ ಬಳಿ ಇರುವಂತೆ ಆಕೆ ಅನುಭವಿಸಿ ಎಷ್ಟೋ ಸಮಾಧಾನಗೊಂಡಳು. ಅದಾಗಿ ಪ್ರಾರ್ಥನೆ ನಡೆಸಿದಳು.

'ಅಪ್ಸಾಘುರ್' ಮೇಲೆ ನಿರ್ಬಂಧ

'ಅಪ್ಸಾಘುರ್' ಚಿತ್ರದ ಪ್ರಾರಂಭದಲ್ಲಿ ಗಾಂಧೀಜಿ, ರವೀಂದ್ರನಾಥ ಠಾಗೋರ್ ಮತ್ತು ಸ್ವಾಮಿ ವಿವೇಕಾನಂದ ಇವರನ್ನು ತೋರಿಸುವ ಹಾಗೂ ಕಥಾ, ನಾಯಿಕೆಯಿಂದ ಹಾಡಲ್ಪಟ್ಟ ಹಾಡು ಮತ್ತು ಅಂತ್ಯದ ಧ್ವಜವಂದನೆ ಇವಿಷ್ಟು ವಿಷಯಗಳನ್ನು ಪ್ರದರ್ಶಿಸಬಾರದಾಗಿ ಕೇಂದ್ರ ಪ್ರಾಂತ ಮತ್ತು ಬಿಹಾರ್ ಸರಕಾರಗಳು ನಿರ್ಬಂಧ ಹೊರಿಸಿವೆ.

ಅಂದಾಜು ಪತ್ರ ಭಾರತದ ಸುಂಗೆ

... ಅಂದಾಜು ಪತ್ರದ ಮೇಲೆ ... ಮಾಡಿದ್ದಾರೆ.

ಶ್ರೀ. ಅವಿನಾಶಲಿಂಗಂ ಚೆಟ್ಟಿಯಾರ್: (ಕಾಂಗ್ರೆಸ್) "ಸರಕಾರದ ಕ್ರಯ ನಿಯಂತ್ರಣದಿಂದ ನಿತ್ಯ ಜೀವನಕ್ಕೆ ಬೇಕಾದ ಸಾಮಾನುಗಳು ಕಳ್ಳ ಪೇಟೆಗೆ ಹೋದದ್ದಲ್ಲದೆ ಬಡವರಿಗೆ ಉಪಕಾರ ಮಾಡಿದಂತಾಗಲಿಲ್ಲ."

ಸರ್ ಯಾಮಿನ್ ಖಾನ್: (ಮುಸ್ಲಿಂ ಲೀಗ್) "ಹೆಚ್ಚು ಸಂಬಳ ಸಿಗುವ ಸರಕಾರೀ ನೌಕರರು ಸಂರಕ್ಷಕ ಯೋಜನೆ ಸ್ವೀಕರಿಸಿ ರಂತೆ ವಂತಿಗೆ ಕೊಡುವುದೊಳ್ಳೆಯದು."

ಶ್ರೀ. ಕೃಷ್ಣಮಾಚಾರಿ: "ಅರ್ಥ ಸಚಿವರು ಇನ್ನೆಷ್ಟು ಹಣ ಸಂರಕ್ಷಕ ವ್ಯವಸ್ಥೆಗೆ ಬೇಕೆಂದು ಗೊತ್ತಿಲ್ಲದೆ ಹಣ ಸಂಗ್ರಹಿಸುತ್ತಿದ್ದಾರೆ. ಈ ಸಂರಕ್ಷಕ ವೆಚ್ಚ ಅಧಿಕಾರಿಗಳ ಇಚ್ಛೆಯಂತೆ ಹೆಚ್ಚುಕಡಿಮೆಯಾಗುತ್ತದೆ. ಬ್ರಿಟನು ಅಮೇರಿಕದ ಕಡೆಯಿಂದ ರಿಸರ್ವ್ ಬೇಂಕಿನವರಿಗೆ ಬಂಗಾರ ವಿಕ್ರಯ ಮಾಡಕೊಟ್ಟದ್ದು ಸರಿಯಲ್ಲ. ಈ ದೇಶವನ್ನು ಸುಲಿಗೆ ಮಾಡಿ ಲಾಭಪಡೆಯಲು ಅನುಕೂಲ ಸರಕೀಯ ಸರಕಾರಗಳಿಗೆ ಎಡೆಗೊಟ್ಟ ಸರಕಾರ ನೀತಿ ನ್ಯಾಯವಲ್ಲ."

ಅಬ್ದುರ್ ರಶೀದ್ ಚೌಧರಿ: "ಭಾರತವು ಇನ್ನೆಷ್ಟು ಬಡ ರಾಷ್ಟ್ರವಾಗಬೇಕು, ಬಡತನದಿಂದ ಮತ್ತೆಷ್ಟು ನರಳಬೇಕು, ಬ್ರಿಟನು ಶ್ರೀಮಂತ ರಾಷ್ಟ್ರವಾಗಬೇಕು, ಭಾರತ ನರಳುತ್ತಿದ್ದಂತೆ ಬ್ರಿಟನು ಶ್ರೀಮಂತನಾಗಿಯೇ ಉಳಿಯಬೇಕು—ಎಂಬೀ ಉದ್ದೇಶದಿಂದ ಈ ಅಂದಾಜು ಪತ್ರ ಮಾಡಲಾಗಿದೆ. ಈ ಸುಂಕದಿಂದ ಬಡವರಮೇಲೆ ಪೆಟ್ಟು ಬಿದ್ದಿದೆ."

ಸರ್ದಾರ್ ಸಂತಸಿಂಗ್: "ಭಾರತದ ಸೈನ್ಯ ಪರದೇಶಕ್ಕೆ ಕಳುಹಿಸಿ ಇಲ್ಲಿಗೆ ವಿದೇಶೀ ಸೈನ್ಯ ತರಿಸಿದ್ದೇಕೆ? ಭಾರತ ಸೈನ್ಯ ಇಲ್ಲಿದ್ದರೆ ಖರ್ಚೂ ಕಡಿಮೆಯಾಗುತಿತ್ತು. ಈಗಿನ ಹೆಚ್ಚು ವೆಚ್ಚ ಯಾರು ಹೊರಬೇಕು?"

ಜೈಲಿನಲ್ಲಿ ಮುಖಂಡರಿಗೆ ಲಾಠೀ!

ಜನವರಿ ೨೭ರಂದು ಬರಹಾಂಪುರ್ ಜೈಲಿನಲ್ಲಿ ರಾಜಕೀಯ ಕೈದಿಗಳ ಮೇಲೆ ಅನಾವಶ್ಯಕವಾಗಿ ಲಾಠೀ ಪ್ರಯೋಗ ಮಾಡಿದ್ದನ್ನು ಒರಿಸಾ ಅಸೆಂಬ್ಲಿಯ ಶ್ರೀ. ಬಿ. ದಾಸರು ಖಂಡಿಸುತ್ತಾ, ಈ ಸಂದರ್ಭದಲ್ಲಿ ಒರಿಸಾದ ಹಿಂದಿನ ಮುಖ್ಯ ಮಂತ್ರಿ ವಿಶ್ವನಾಥ ದಾಸರಿಗೂ, ಮಂತ್ರಿಗಳಾದ ಶ್ರೀ. ನಿತ್ಯಾನಂದ ಕನೂಂಗೋ ಮತ್ತು ಶ್ರೀ. ಯು ಸಿ ಪಟ್ನಾಯಕ್ ಮೊದಲಾದ ಕಾಂಗ್ರೆಸಿನವರಿಗೂ ತೀವ್ರ ಗಾಯ ಸಂಭವಿಸಿತ್ತೆಂದು ಹೇಳಿದರು. ಈ ಸುದ್ದಿ ಪ್ರಕಟವಾಗದಂತೆ ಸರಕಾರ ನಿರ್ಬಂಧಿಸಿದ್ದನ್ನೂ ಶ್ರೀ. ದಾಸರು ಟೀಕಿಸಿದರು. ಸ್ಥಾನಬದ್ಧರ ಮನೆಯವರಿಗೂ ಈ ಸುದ್ದಿ ಮುಟ್ಟಿಸದ್ದು ಅನ್ಯಾಯವೆಂದರು.

ವೈಸರಾಯ್ ಮಂತ್ರಿಮಂಡಳ

ಅರ್ ಎಸ್. ಮೂಡಿ, ಇವರು ವೈಸರಾಯ್ ಮಂತ್ರಿಮಂಡಳದಲ್ಲಿ ಗೃಹ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು. ಈಗಿನ ಗೃಹಮಂತ್ರಿ ಮೇಕ್ಸ್‌ವೆಲ್ಲರು ಬರುವ ಎಪ್ರಿಲ್ ಅಕ್ಕೆ ನಿವೃತ್ತರಾಗುತ್ತಾರೆ. ಈಗ ಮೂಡಿಯವರು ಬಿಹಾರಿನ ಗವರ್ನರರಾಗಿದ್ದು, ಅನಂತರ ಅವರು ಎರಡು ತಿಂಗಳ ರಜೆ ಮೇಲೆ ಹೋಗುವುದರಿಂದ ಅವರು ಪುನಃ ಕೆಲಸಕ್ಕೆ ಸೇರುವವರೆಗೆ—ಎಂದರೆ ಬರುವ ಜುಲ್ಯಾವರೆಗೆ ಸರ್ ಜಾನ್ ಥರ್ನ್ ಇವರು ಹಂಗಾಮಿ ಗೃಹಮಂತ್ರಿಯಾಗಿರುವರು.

ಸರಬರಾಯಿ ಖಾತೆಯ ಮಂತ್ರಿ ರಾಮಸ್ವಾಮಿ ಮುದಲಿಯಾರರು ಮೇ ತಿಂಗಳಿಗೆ, ಈ ಉದ್ಯೋಗದಲ್ಲಿದ್ದು ೫ ವರ್ಷಗಳಾದರೂ ಅವರೇ ಇನ್ನು ಮುಂದೆಯೂ ಅದೇ ಸ್ಥಾನದಲ್ಲಿ ನೇಮಕ ಹೊಂದಿರುವರು. ಹಾಗೆಯೇ ಇದೇ ಎಪ್ರಿಲಿಗೆ ೫ ವರ್ಷ ತುಂಬುವ ಅರ್ಥಸಚಿವ ರೈಸ್‌ಮೆನರೂ ಅದೇ ಸ್ಥಾನದಲ್ಲಿ ಇನ್ನೊಂದು ವರ್ಷ ಇರುವರೆಂತೆ ನಿಯುಕ್ತರಾಗಿದ್ದಾರೆ.

ಸುರೀಶ ವೈದ್ಯರು

... ಕಾರ್ಯದಿಂದ ಸೈನ್ಯ ಸೇರಲು ... ಟಿನ ಬರಿ ಕೋರ್ಟ್‌ಮಾರ್ಶಲ್ ಮುಂದೆ ಪ್ರಾರಂಭವಾಗಿದ್ದು, ಅವರ ಪರವಾಗಿ ಒಪ್ಪದೆ ಅಮೇರಿಕದ ಟ್ರಿಬ್ಯೂನ್ ಪತ್ರಿಕೆಗಳ ಲಂಡನ್ ಸಂಪಾದಕ ಶ್ರೀ ... ಸ್ಟೇನ್ ಮರೆಯುವರು ವಕೀಲಿ ನಡೆಸುತ್ತಿರುವರು. ಸುರೀಶ ವೈದ್ಯರು ಈಗಾ ಸುರೀಶ ವೈದ್ಯರ ವಿಚಾರಣೆಯು ಕೆಲ ... ಗಲೇ ತಮ್ಮ ಹೇಳಿಕೆಯುತ್ತಿದ್ದಾರೆ.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ—ಉತ್ತಮವೂ ಬಾಳಿಕೆಯದೂ ಆಗಿದೆ. ಬೇಗನೇ ನೊರೆ ಹೊರಡುತ್ತದೆ; ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ.

PISTOL BRAND BAR SOAP

WANTED AGENTS IN S. KANARA DT.

Mangalore Stockists -M/S D. Narsimha Pai Mangalore.

Universal Industries (India) Ltd

Nable chambers, Fort Bombay.

Times have changed !

TIME-KEEPERS in Shakespeare's Day & present day



ಕಾಲ ಬದಲಾಗಿದೆ!

ಶೇಕ್ಸ್‌ಪೀಯರನ ಕಾಲದಲ್ಲಿ ಸಮಯ ನೋಡುವುದು ಮತ್ತು ಇಂದು ಸಮಯ ನೋಡುವುದು



ಎಕ್ಸ್‌ಟ್ರಾ "ಎಫ್"

18 ಕ್ಯಾ. ಸೋ. ಗೋಲ್ಡ್ ಗಟ್ಟಿ ಕೇಸು ರೂ 280 ರಿ ಅರಬಿಕ್ ಅಥವಾ ನ್ಯೂಸ್ಟೈಲ್ ೭ ಅದೇ ಕ್ರಯ.



ಎಕ್ಸ್‌ಟ್ರಾ 'ಎಚ್'

18 ಕ್ಯಾ. ಸೋ. ಗೋಲ್ಡ್, ಗಟ್ಟಿ ಕೇಸು ರೂ 345

ಶೇಕ್ಸ್‌ಪೀಯರನು ವಾಚ್ ಪ್ರಾರಂಭವನ್ನು ಕಂಡಿದ್ದನು ಆದರೆ ಸ್ಕ್ರೂ ಇಲ್ಲ ವಾಚಿನ ಚಲನವಲನಗಳು ಪಿನ್‌ಳಿಂ ಮತ್ತು ರೈವೆಟ್‌ಗಳಿಂದಾಗುತ್ತಿತ್ತು. ಗಿಯರ್ ಕಟ್ಟಿಂಗ್ ಕೈಯಿಂದ ನಾಜೂಕಿರದೆ ಮಾಡಲ್ಪಡುತ್ತಿತ್ತು. ಬೆಲೆನ್ಸ್ ಸ್ಪ್ರಿಂಗ್‌ಗೆ ಬ್ರಿಸಲ್ ಉಪಯೋಗಿಸಲ್ಪಡುತ್ತಿತ್ತು. ಇಂದಿನ ವಾಚುಗಳು 400 ವರ್ಷಗಳ ಅನುಭವದ ಫಲವಾಗಿ ಚಲೋದಾಗಿ, ಭದ್ರಬಾಳಿಕೆಯದಾಗಿ ತಯಾರಾಗುತ್ತವೆ. ಹಿಂದಿನ ಮತ್ತು ಇಂದಿನ ಕೌಶಲ್ಯಗಳೆಲ್ಲಾ ವೆಸ್ಟ್ ಎಂಡ್ ವಾಚುಗಳಲ್ಲಿವೆ ಬೇಕಾದವರಿಗೆ ಕೆಟ್ಲಾಗ್ ಧರ್ಮಾರ್ಥ.

ಸರಿಯಾಗಿ ಆಮದಾಗದಿರುವುದರಿಂದ ಜಾಹೀರು ಮಾಡಿದ ಎಲ್ಲಾ ಸಮಾನುಗಳನ್ನೂ ಒದಗಿಸುವುದು ಕಷ್ಟವಾದರೂ, ನಮ್ಮಲ್ಲಿ ಸ್ಟಾಕು ಇರುವ ಮಟ್ಟಿಗೆ ಆದಷ್ಟು ಸರಿಯಾಗಿ ಉತ್ತಮ ವಾಚುಗಳನ್ನು ಒದಗಿಸಿ ಕೊಡುವೆವು.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಯಿ ಮತ್ತು ಕಲ್ಕತ್ತ

West End Watch Co

Bombay — Calcutta

೧ನೇ ಪುಟದಿಂದ

ವರ್ಕಿಂಗ್ ಕಮಿಟಿ ಮೆಂಬರರು ಅಹಮ್ಮದ್ ನಗರದಲ್ಲಿ!

ಹೀಗಾಗಿ ತನ್ನ ಪ್ರತಿಸ್ಪರ್ಧಿಗಳನ್ನು ಬಿಲ್ಲಿಫಿಶರ್ ಜಯಿಸಿ, ಅಮೆರಿಕದಲ್ಲಿ 'ಟೈಮ್'ನ ಮಿಲಿಯಾಂತರ ಮಂದಿ ಓದುಗರಿಗೆ–ಯಾವ ಪತ್ರಿಕೆಯ ಹಿಂದಿನ ಸಂಚಿಕೆಯು ಆವರಣ ಪತ್ರದಲ್ಲಿ ಪಂಡಿತ ನೆಹರುಗಳ ಭಾವ ಚಿತ್ರ ಬಂದಿತ್ತೋ, ಅದೇ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಅಹಮ್ಮದ್ ನಗರ ಕೋಟೆಯ ವಿವರಗಳನ್ನು ಕೊಟ್ಟು ಕೀರ್ತಿಗಳಿಸಿದ. ಹೇಗಿದ್ದರೂ ಈ 'ಟೈಮ್' ಪತ್ರಿಕೆಯ ಭಾರತದ ಚಂದಾದಾರರಿಗೆ ಈ ಸಂಚಿಕೆ ಸಿಗಲು ಸರಕಾರ ಬಿಡಲಿಲ್ಲ!

ಇತಿಹಾಸವೇ ತುಂಬಿಸುವುದು

ಅಹಮ್ಮದ್ ನಗರ ಕೋಟೆಯ ಕುರಿತು ೧೯೩೬ರಲ್ಲಿ ಮುದ್ರಿತವಾದ 'ಬೊಂಬೇ ನಗರ ಮತ್ತು ಸಂಸ್ಥಾನದ ಟೈಮ್ಸ್ ಒಫ್ ಇಂಡಿಯಾ ಡೈರೆಕ್ಟರಿ'' ಪುಸ್ತಕದಲ್ಲಿ ಕೇವಲ ಐದು ಪಂಕ್ತಿಗಳು ಮಾತ್ರ ಬರೆಯಲ್ಪಟ್ಟಿದೆ

"ಅಹಮ್ಮದ್ ನಗರವು ಆ ಜಿಲ್ಲೆಯ ಕೇಂದ್ರ ನಗರ, ವೆಲ್ಲಿಂಗ್ಟನ್ ಡ್ಯೂಕ್‌ನ ಭಾರತ ಆಕ್ರಮಣದಲ್ಲಿದು ಮುಖ್ಯ ಪಾತ್ರವಹಿಸಿದೆ ಈ ನಗರ ಆಕರ್ಷಣೀಯವಲ್ಲ, ಆದರೆ ಇಲ್ಲಿ ಒಂದು ಒಳ್ಳೆಯ ಕೋಟೆಯಿದೆ, ಇದು ಈ ನಗರದಿಂದ ಅರ್ಧ ಮೈಲು ದೂರದಲ್ಲಿದೆ ಧೋಂಡ್ ಮನ್‌ಮಡ್ ಮಾರ್ಗದಲ್ಲಿ 'ಗ್ರೇಟ್ ಇಂಡಿಯನ್ ಪೆನಿನ್ಸುಲಾ ರೈಲ್ವೆ'ಯ ಒಂದು ಸ್ಟೇಶನ್ ಅಹಮ್ಮದ್ ನಗರ–ಅಲ್ಲಿ ಒಂದು ಒಳ್ಳೆಯ ಪ್ರಯಾಣದ ಬಂಗ್ಲೆಯೂ ಇದೆ

ಈ ಸೂಕ್ಷ್ಮ ವಿವರವು ಅಹಮ್ಮದ್ ನಗರದ ಹಾಗೂ ಅದರ ಕೋಟೆಯ ಕುರಿತು ಹಲವು ಇತಿಹಾಸ ವಿಷಯಗಳನ್ನು ತಿಳಿಸುತ್ತದೆ ಡೆಕ್ಕಾನ್ ರಾಜ್ಯ ಆಳಿದ ಭಾಮಿನಿ ವಂಶದ ಅರಸರ ಒಂದು ಪ್ರಸಿದ್ಧ ಸ್ಥಾನ ಇದು ಅಲ್ಲಿನ ಕೋಟೆ ಆ ಕಾಲದ ಗತವೈಭವ, ಇದನ್ನು ಆ ಮೇಲೆ ಬೋರ್ ಯುದ್ಧದ ಕೈದಿಗಳನ್ನು ಇಟ್ಟು ಸಂಕಷ್ಟಕೊಟ್ಟ ಸೆರೆಮನೆಯೆಂದೂ ಹೇಳಲಾಗಿದೆ ಕಳದ ಯುದ್ಧದಲ್ಲಿ ಜರ್ಮನ್ ಕೈದಿಗಳನ್ನು ಇಲ್ಲಿಟ್ಟಿದ್ದರು ಎರಿಟ್ರಿಯಾ ಮತ್ತು ಟ್ರಿಪೋಲಿ ಪತನಾನಂತರ ಕೈಸೆರೆ ಹಿಡಿದ ಇಟಲಿ ಕೈದಿಗಳನ್ನು (ಈ ಯುದ್ಧದ) ಇಲ್ಲಿಗೆ ತರಲಾಗಿದೆಯೆಂದು ತಿಳಿದಿದೆ.

ಅಹಮ್ಮದ್ ನಗರದ ಚರಿತ್ರೆಯನ್ನು ಬರೆಯುವ ಭವಿಷ್ಯತ್ ಕಾಲದ ಇತಿಹಾಸಕಾರನು ಐದು ಪಂಕ್ತಿಗಿಂತ ಹೆಚ್ಚು ವಿವರ ಬರೆದಾನು ೧೯೫೬ರಲ್ಲಿ ಮುದ್ರಿತವಾಗುವ 'ಬೊಂಬಯಿ ನಗರ ಮತ್ತು ಸಂಸ್ಥಾನದ ಇತಿಹಾಸ' ಪುಸ್ತಕದಲ್ಲಿ ಹೀಗೆ ಬರೆಯಲ್ಪಡುವುದೆಂದು ನಾವು ಊಹಿಸಬಹುದ :-

ಅಹಮ್ಮದ್ ನಗರ ಬೊಂಬಯಿ ಡೆಕ್ಕಾನಿನ ಈ ಹೆಸರಿನ ಜಿಲ್ಲೆಯ ಕೇಂದ್ರ ನಗರವಿದು ಭಾರತದ ಇತಿಹಾಸದಲ್ಲಿ ಪ್ರಾಮುಖ್ಯ ಸ್ಥಾನ ಪಡೆದಿದೆ ಇದು ಭಾಮಿನಿ ರಾಜವಂಶೀಯರ ಸ್ಥಾನವಾಗಿತ್ತು, ಭಾರತದ ಬ್ರಿಟಿಷ್ ಸಾಮ್ರಾಜ್ಯಶಾಹೀ ವಿಸ್ತರಣ ಕಾಲದಲ್ಲಿ ವೆಲ್ಲಿಂಗ್‌ಟನ್ ಡ್ಯೂಕನು ತನ್ನ ಆಕ್ರಮಣದಿಂದ ಗೆದ್ದುಕೊಂಡನು. ಈ ನಗರದಿಂದ ಅರ್ಧ ಮೈಲು ದೂರದಲ್ಲಿ ಒಂದು ಕೋಟೆಯಿದೆ, ಇದನ್ನು ಕಟ್ಟಿದಾಗ ಇದು ಪ್ರವೇಶಾತೀತವಾಗಿತ್ತೆಂದು ಹೇಳಲಾಗುತ್ತದೆ. ಬ್ರಿಟಿಷರು ಭಾರತವನ್ನಾಳುತ್ತಿದ್ದ ಕಾಲದಲ್ಲಿ ಇದನ್ನು ಬೇರೆ ಬೇರೆ ಯುದ್ಧ ಕೈದಿಗಳನ್ನು ಶಿಕ್ಷಿಸಲು ಇಡುವ ಸೆರೆಮನೆಯಾಗಿ ಉಪಯೋಗಿಸುತ್ತಿದ್ದರು. ಅವರಲ್ಲಿ ಪ್ರಸಿದ್ಧವೆಂದರೆ, ಭಾರತದ ರಾಷ್ಟ್ರೀಯ ಆಂದೋಲನದ ಮುಖಂಡರನ್ನು ಇಲ್ಲಿ ಬಂಧಿಸಿಟ್ಟಿದ್ದು, ಪಂಡಿತ ಜವಾಹರಲಾಲನೆಹರು, ಮೌಲಾನಾ ಅಬುಲ್ ಕಲಂ ಅಜಾದ್, ಹಾಗೂ ಸರ್ದಾರ್ ವಲ್ಲಭ ಬಾಯಿ ಪಟೇಲರಂಥ ಭಾರತದ ವೀರಾಗ್ರೇಸರರನ್ನು ೧೯೪೨ನೇ ಇಸವಿ ಅಗಸ್ಟ್ ೯ರಂದು ಇವರನ್ನೆಲ್ಲಾ ಬಂಧಿಸಿ ಅಹಮ್ಮದ್ ನಗರಕ್ಕೆ ತರಲಾಯಿತು ಅಹಮ್ಮದ್ ನಗರದಲ್ಲಿ ಅವರನ್ನಿಟ್ಟಿರುವ ವಿಷಯ ೧೮ ತಿಂಗಳ ವರೆಗೆ ರಹಸ್ಯವಾಗಿಡಲ್ಪಟ್ಟಿತು; ಆ ಮೇಲೆ ಒಂದು ದಿನ ಗೃಹಮಂತ್ರಿಯ ಮೂಲಕ ಬ್ರಿಟಿಷ್ ಸರಕಾರವು ಶಾಸನ ಸಭೆಯಲ್ಲಿ ಈ ವಿಷಯ ತಿಳಿಸಿತು. ಅವರು ಅಹಮ್ಮದ್ ನಗರದಲ್ಲಿ .. ವರ್ಷಗಳ ವರೆಗೆ ಸ್ಥಾನಭದ್ಧರಾಗಿಡಲ್ಪಟ್ಟರು; .ವರ್ಷದಲ್ಲಿ ಭಾರತ ಬ್ರಿಟಿಷ್ ಒಪ್ಪಂದವಾದ ಮೇಲೆ ಅವರು ಬಿಡುಗಡೆ ಹೊಂದಿದರು.

ಖಾಲಿಬಿಟ್ಟ ಸ್ಥಳಗಳನ್ನು ಇತಿಹಾಸವೇ ತುಂಬಿಸುವುದು!

ಸರಕಾರ ನಿರ್ದಯವಾಗಿದೆ

ಜಗನ್ನಾಥ ಮಿಶ್ರರ ಟೀಕೆ

ಒರಿಸಾ ಅಸೆಂಬ್ಲಿಯಲ್ಲಿ ಅಂದಾಜು ಪತ್ರದ ಮೇಲೆ ಚರ್ಚೆ ನಡೆದಾಗ, ಶ್ರೀ ಜಗನ್ನಾಥ ಮಿಶ್ರರು ಮಾತನಾಡುತ್ತಾ, ಸರಕಾರವು ೧೪–೧೫ ವರ್ಷದ ಹುಡುಗಿಯರನ್ನೂ ವಿಚಾರಣೆ ಮಾಡದೆ ಸ್ಥಾನಬದ್ಧತೆಯಲ್ಲಿಟ್ಟ ವಿಚಾರ, ಶ್ರೀ ಗೋಪಬಂಧು ಚೌಧರಿಯರ ೮೦ ವರ್ಷದ ತಾಯಿಯನ್ನುಳಿದು ಆ ಮನೆಯವರನ್ನೆಲ್ಲಾ ಸೆರೆಮನೆ ಸೇರಿಸಿ, ಆ ಮುದುಕಿಯ ಶುಶ್ರೂಷೆಗೆ ಯಾರೂ ಇಲ್ಲದೆ ಮಾಡಿ ಆ ಮುದುಕಿ ತನ್ನ ೧೪ ವರ್ಷದ ಮೊಮ್ಮಗಳನ್ನು ಬಿಡಬೇಕೆಂದು ಕೇಳಿದರೂ ಹಾಗೆ ಮಾಡದಿರುವ ವಿಚಾರ ಟೀಕಿಸಿ, ೧೪ ವರ್ಷದ ಹುಡುಗಿಯಿಂದಲೂ ಕ್ರಾಂತಿಯಾಗುತ್ತದೆಂದು ಸರಕಾರ ತಿಳಿದಿದೆಯೇ ಎಂದು ಪ್ರಶ್ನಿಸಿ, ರಾಜಕೀಯ ಕೈದಿಗಳ ಸಂಬಂಧಿಕರಿಗೆ ವೇದಿಗಳ ಸಂಬಳಕ್ಕಿಂತಲೂ ಕಡಮೆ ಭತ್ತೆ ಕೊಡುತ್ತಿರುವುದನ್ನು ಖಂಡಿಸಿ ಮಾತನಾಡಿದರು

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs As Ps	ASSETS	Rs As Ps
1 Paid up Capital	12 95 970- 0 0	1 Cash on hand & with bankers	18 26 986- 3- 8
2 Reserves	3 83 379- 1- 6	2 Investments on (1) Govt Securities (2) Immovable properties etc	26 04 671- 6- 8
3 Deposits	61 66 927- 6- 0	3 Loans on jewels & other valuable securities	23 72 302- 8- 7
4 Bills for collection	5 53 548- 6- 1	4 Loans on personal securities & Bills purchased	16 74 482-14- 8
5 Sundries including revenue items	7 00 981- 0- 5	5 Bills for collection as per contra	5 53 548- 6- 1
6 Profits for the year ending 31-12-1943	1 08 522- 4- 0	6. Office premises furniture etc	93 251- 0- 0
		7 Sundries including revenue items	84 085-10- 4
Total	92 09,328- 2 0	Total	92,09,328- 2- 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂಧರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June) (½% from July to Decr.)

Savings Bank Accounts 1½% p. a. on daily balances.

FixedDeposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

GOLDEN JUBILEE

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಯಿ,
ಕಲ್ಕತ್ತ.

THE BOMBAY LIFE ASSURANCE CO., LTD.

Our34 years" experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೊಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ್ರು ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 24—3—1944 [ಸಂಚಿಕೆ 12]

ಎಂದಿಗೆ ಆ ಅರುಣೋದಯ?

—ಕೃಷ್ಣಾ ಹಾತೀಸಿಂಗ್

ಮುಂದೇನು—ಎಂಬುದು ಇಂದು ಎಲ್ಲಾ ವಿಚಾರವಂತರ ವಿಚಾರಗಳನ್ನು ಕೆದಕಿರುವ ಪ್ರಶ್ನೆ. ನಮ್ಮ ಸುತ್ತಲಿನ ಇಂದಿನೀ ಸಂಕಷ್ಟ ಸಾವಿರಗಳನ್ನು ನೋಡಿದರೆ, ಜನಾಂಗ ಹಾಗೂ ವ್ಯಕ್ತಿಗಳ ಬಾಧೆ ತೊಂದರೆಗಳನ್ನು ನಿರೀಕ್ಷಿಸಿದರೆ, ಸಹಜವಾಗಿ ಯಾರಾದರೂ ಕುಗ್ಗಿ ನಿರಾಶರಾಗಲೇಬೇಕು. ಇಂದು ಆಸೆ ಭರವಸೆಗಳನ್ನು ಲವಲೇಶವಾದರೂ ಇಟ್ಟುಕೊಂಡಿರುವಂಥಾ ಜನರನ್ನು ನೋಡುವುದೇ ಅಪರೂಪ; ಜಗತ್ತು, ಜನತೆ ಹೀಗೇಕೆ ಇಂದು ಆಗಿದೆ?

ಅವರ ಕಾಲ ಮುಗಿಯುತ್ತಿದೆ

ಕೆಲವು ಮಂದಿ ಅನ್ಯಾಯಗಾರರ ಕುತಂತ್ರದಿಂದಾಗಿ ಇಡೀ ಜಗತ್ತೇ ಮಹಾ ಮಾರಣಯಜ್ಞಕ್ಕೆ ಬಲಿಯಾಗಿರುವುದನ್ನು ನೋಡಿದರೆ ಸಂಕಟವಾಗುತ್ತದೆ; ಉದ್ರೇಕವಾಗುತ್ತದೆ. ನಾಗರಿಕತೆಯೆಂದರೆ ಇಂದು ಒಂದು ಜನಾಂಗ ಇನ್ನೊಂದು ಜನಾಂಗವನ್ನು ನಿರ್ಮೂಲಗೊಳಿಸುವುದೆನಿಸಿದೆ. ಕೇವಲ ಪಶುಶಕ್ತಿಯಿಂದಲೇ ಇಡೀ ಜಗತ್ತನ್ನು ತಾವು ಆಳಿ ಬಿಟ್ಟೇವೆಂದು ಕೆಲ ಜನಾಂಗಗಳು ಇನ್ನೂ ಭಾವಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕೆಲಕಾಲದವರೆಗೆ ಇಂಥಾ ಅಕೃತ್ಯ ಆಗಹೋದರೂ ಆಗಬಹುದು; ಆದರೆ ಶಾಶ್ವತವಾಗಿ ಆಗಲು ಸಾಧ್ಯವೇ ಇಲ್ಲ. ಸಾಮ್ರಾಜ್ಯಗಳ ಮತ್ತು ಸರ್ವಾಧಿಕಾರಿಗಳ ಕಾಲವು ದಿನದಿಂದ ದಿನಕ್ಕೆ ಮಂದಗತಿಯಿಂದಾದರೂ ಖಂಡಿತವಾಗಿ ಮುಗಿಯುತ್ತಾ ಮುಗಿಯುತ್ತಾ ಬರುತ್ತಿದೆ.

ಏಶ್ಯಾದ ಜನರು ಎಚ್ಚತ್ತಿದ್ದಾರೆ

ಜಗತ್ತಿನ ಪ್ರಾಚೀನತಮ ನಾಗರಿಕತೆಯ ಜನಾಂಗವಾದ ನಾವು, ಲೋಕದ ಇಂದಿನ ಸಂದೇಹ ಸಂಕುಲಗಳಿಂದ ದಿಗ್ಭ್ರಾಂತಿಗೊಳ್ಳಬಾರದು. ಶತಮಾನಗಳ ದಾಸ್ಯ ಪೀಡೆಯಿಂದ ಬಳಲಿದ ಬಳಿಕ ಇಂದು ಏಶ್ಯಾದ ಜನರು ಎಚ್ಚತ್ತು ತಮ್ಮ ಮುಂದಿನ ಹಾದಿ ತಿಳಕೊಂಡಿದ್ದಾರೆ. ಅವರ ಹೃದಯದಲ್ಲಿ ಆಸೆ ಭರವಸೆ ತುಂಬಿದೆ, ಅವರ ಆ ಆಸೆಭರವಸೆಗಳನ್ನು ಯಾರೂ ಹಿಡಿದೊತ್ತಲಾರರು, ಯಾರೂ ಕಡೆಗಟ್ಟಲಾರರು.

ನಾವು ನಮ್ಮಾ ದೇಶದಲ್ಲಿ ಇತರ ಎಲ್ಲಾ ಕಡೆಯ ಜನರಿಗಿಂತಲೂ ಹೆಚ್ಚಿನ ಸಂಕಷ್ಟ ಹೋರಾಟಗಳಿಗೆ ಬಲಿಯಾಗಿದ್ದೇವೆ. ನಿಜವಾಗಿ ಹೇಳುತ್ತೇನೆ, ನಮ್ಮ ಸಂಕಷ್ಟಗೋಳಾಟಗಳು ಇತರರಿಗಿಂತ ಹೆಚ್ಚಿಗಿದೆ. ಏಕೆಂದರೆ, ಯುದ್ಧಾಸಕ್ತನಾದ ಇತರ ರಾಷ್ಟ್ರಗಳು ಸಂಕಷ್ಟಕ್ಕೊಳಪಡಲಿಲ್ಲವೆಂಬಲ್ಲ, ಆದರೆ ಅವುಗಳು ಯುದ್ಧಕ್ಕಿಳಿದುದರಿಂದ ಅದರ ಫಲವನ್ನು ಅವು ಉಣ್ಣಲೇಬೇಕಷ್ಟೆ? ಇಂದು ನಮ್ಮ ರಾಷ್ಟ್ರವನ್ನು ಕತ್ತಲು ಕವಿದಿದೆ; ಪ್ರಕತಕ ಇಲ್ಲ ಒಂದೇ ಒಂದು ಅಸ್ಪಷ್ಟ ಕಿರಣದ ಕಾಂತಿಯೂ ಕಾಣಬರುವುದಿಲ್ಲ. ಎಷ್ಟೋ ಮಂದಿ ನಮ್ಮ ಜನರು ಬೇರೆ ಬೇರೆ ಯುದ್ಧರಂಗಗಳಲ್ಲಿ ಕೊಲ್ಲಲ್ಪಟ್ಟಿದ್ದಾರೆ, ಸಾವಿರಾರು ಮಂದಿ ನಮ್ಮ ಬಂಧುಗಳು ಸೆರೆಮನೆಗಳ ಕತ್ತಲು ಕೋಣೆಗಳಲ್ಲಿ ಕೊಳೆಯುತ್ತಿದ್ದಾರೆ. ದೇಶ ಸಂಪತ್ ಸಾಮಗ್ರಿ ವಿಪುಲವಾಗಿದ್ದರೂ, ಎಷ್ಟೋ ಮಂದಿ ಉಪವಾಸದಿಂದ ನರಳಿ ಸಾಯುತ್ತಿದ್ದಾರೆ—ಏತಕ್ಕೆಂದರೆ—ಅವರಿಗೇ ಅದು ಗೊತ್ತು—ಕೆಲ ಮಂದಿ ಅವರನ್ನು ಈ ದುರವಸ್ಥೆಗೆ ನೂಕಿದ್ದಾರೆ! ತಮ್ಮ ಆತ್ಮೀಯರು ಎಲ್ಲಿದ್ದಾರೆ, ಅವರಿಗೆ ಏನಾಗಿದೆಯೆಂಬುದು ಗೊತ್ತಿಲ್ಲದೆ, ತಮ್ಮ ಮನೆ ಉರಿಯುತ್ತಿದ್ದರೂ, ಇನ್ನು ಕೆಲವರು ಸಾಮಾನ್ಯ ಜೀವನ ಮಾಡಿಕೊಂಡಿರಬೇಕೆಂದು ಬಯಸಿಕೊಂಡ್ದಾರೆ; ಪಾಪ ಅವರಿಗೆ ತಮ್ಮ ಆವರಣಕ್ಕಿಂತ ಹೊರಗೆ ಹೋಗಿ ಯಾವುದೊಂದು ಕೆಲಸ ಮಾಡಲೂ ಸ್ವಾಧ್ಯವಿಲ್ಲದಾಗಿದೆ; ಇವೆಲ್ಲದರ ಕುರಿತು ನಮ್ಮ ಹೃದಯಗಳು ದುಃಖಗೊಂಡಿದ್ದರೂ ನಾವೀ ಕುರಿತು ಏನೊಂದೂ ಮಾತನಾಡಕೂಡದು; ಇಂಥಾ ವಿಷಯಗಳನ್ನು ನಾವು ಆಲೋಚಿಸಲು ಕೂಡಾ ಕೂಡದೆಂದು ಒಂದು ದಿನ ನಮ್ಮ ಮೇಲೆ ಕರಾಳ ಶಾಸನವೊಂದು ಆದರೂ ಆಗಬಹುದು!

ಇಪ್ಪತ್ತು ವರ್ಷಗಳ ವಿಪತ್ತು!

ಇಪ್ಪತ್ತು ವರ್ಷಗಳಿಗೂ ಮೀರಿ ನಾವು ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅಹಿಂಸೆಯಿಂದ ಹೋರಾಡಿದ್ದೇವೆ. ನಮ್ಮ ಗುರಿಯನ್ನು ಮುಟ್ಟುವ ಹಾದಿ ಎಷ್ಟು ಸಂಕೋಚವಿದೆ, ಎಷ್ಟು ಸಂಕಷ್ಟದ್ದಿದೆ, ಎಷ್ಟು ಮುಳ್ಳುಗಳಿಂದ ಕೂಡಿದೆಯೆಂಬುದನ್ನು ನಾವು ಈ ಇಪ್ಪತ್ತು ವರ್ಷಗಳಲ್ಲಿ ಪಡೆದ ಸೋಲು ಗೆಲವುಗಳು ನಮಗೆ ತಿಳಿಸಿವೆ. ರಾಷ್ಟ್ರದ ಸ್ವಾತಂತ್ರ್ಯವನ್ನು ಎಂತಾದರೂ ಪಡೆಯಲೇಬೇಕೆಂದು ನಮಗೆ ಎಂಥಾ ಉತ್ಸಾಹ, ಎಂಥಾ ನಿರ್ಧಾರವಿರಲಿ, ಒಮ್ಮೊಮ್ಮೆ ನಮ್ಮ ಹೃದಯಗಳನ್ನು ದುಃಖ ಆವರಿಸದೆ ಇರುವುದಿಲ್ಲ; ನಮ್ಮ ಪರಿಸ್ಥಿತಿ ಮುಂದೇನು ಎಂಬ ವಿಷಾದ ತೋರದಿರುವುದಿಲ್ಲ. ಅಂಥಾ ದುಃಖ ವಿಷಾದ ನಮ್ಮ ಹೃದಯಗಳನ್ನು ಆಗಾಗ ಆವರಿಸುವುದೇಕೆಂದರೆ, ಎಷ್ಟೋ ಮಂದಿ ನಮ್ಮ ಆತ್ಮೀಯರು ಎಷ್ಟೇ ನಿರ್ಧಾರ ಆತ್ಮಶಕ್ತಿಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ, ಸೆರೆಮನೆ ಸೇರಿದರೂ, ಅವರು ದೇಹಶಕ್ತಿ ಕಳಕೊಂಡು ಸೆರೆಮನೆಯೊಳಗೇ ಅಂತ್ಯಗೊಂಡರು! ಇಪ್ಪತ್ತು ವರ್ಷಗಳಿಂದ ಮೇಲಟ್ಟು ಇಂಥಾ ಮರಣದ ವಿಜಯಯಾತ್ರೆ ನಡೆದೇ ಇದೆ. ಪ್ರತಿಯೊಂದು ಸ್ವಾತಂತ್ರ್ಯ ಸಂಗ್ರಾಮದ ಅಲೆಯ ಹೊಡೆತದಲ್ಲಿಯೂ ಎಷ್ಟೋ ಮಂದಿ ನಮ್ಮ ಬಂಧುಬಾಂಧವರು ಬಲಿಯಾಗಿದ್ದಾರೆ; ಸೆರೆಮನೆಯೊಳಗೆ ಸೇರಿ ಅವರ ಹೋರಾಟ ಅಲ್ಲಿಯೇ ಅಡಗಿಸಲ್ಪಟ್ಟಿದೆ. ಅಲ್ಲಿ ಆ ನಮ್ಮ ಬಂಧುಬಾಂಧವರನೇಕರು ಅಕಾಲ ಮರಣ ಹೊಂದಿದ್ದಾರೆ; ಅವರ ಜೀವ ರಕ್ಷಿಸಲು ನಾವು ಅಸಹಾಯರಾಗಿದ್ದೆವು. ಇಪ್ಪತ್ತು ವರ್ಷಗಳಿಂದಲೂ ಪರಿಸ್ಥಿತಿ ಇದೇ ಆಯಿತು, ಇನ್ನೂ ಸೆರೆಮನೆ ರಕ್ಕಸನು ತನ್ನ ನಿರ್ದಯ ಬಲಿಯನ್ನು ತೆಗೆದುಕೊಳ್ಳುತ್ತಲೇ ಇದ್ದಾನೆ, ನಮ್ಮ ನಡುವೆ ಈಗ ಕೆಲದಿನಗಳವರೆಗೆ ಇರುವ ನಮ್ಮ ಬಂಧುಗಳ ಬಗ್ಗೆಯೂ ನಾವು ಬಹಳ ಕಳವಳಗೊಂಡಿದ್ದೇವೆ; ಏಕೆಂದರೆ ಅವರ ಆರೋಗ್ಯ ಪೂರ್ಣ ಕೆಟ್ಟು ಹೋಗಿದ್ದರೂ ನಾಳೆ ಅವರು ಹೋಗಲೇ ಬೇಕಾಗಿದೆ. ಹೊಟ್ಟೆಗಿಲ್ಲದೆ ನರಳಿ ಸಾಯುವ, ರೋಗಗ್ರಸ್ತರಾಗಿ ಕಂಗೆಟ್ಟು ಮಡಿವ ನಮ್ಮ ದೇಶಬಾಂಧವರ ಸಹಾಯಕ್ಕೆ ಹೋಗಲು, ಅವರಿಗೆ ಏನಾದರೂ ಪರಿಹಾರ ಕಾರ್ಯ ಮಾಡಲೂ ನಾವು ಅಸಹಾಯರಾಗಿ ನಿಜವಾಗಿ ನಾವಿಂದು ಕಂಗಾಲಾಗಿದ್ದೇವೆ.

ಜಗತ್ತಿಗೇ ಹುಚ್ಚು ಹಿಡಿದಿದೆ

ಹಾಗಾಗಿ ಭವಿಷ್ಯ ಬಹಳ ಭೀಕರವೂ ಭೀಷಣವೂ ಆಗಿ ತೋರುತ್ತದೆ. ಭಾರತ ದೇಶವನ್ನು ಆವರಿಸಿದ ಇಂದಿನೀ ಸಂಕಷ್ಟಕ್ಕೆ ನಮಗೆ ಕೊನೆಯೇ ತೋರಲೊಲ್ಲದು. ನಿಸ್ಸಹಾಯಕ ಜೀವನದ ಮೇಲೆ ಇಂಥಾ ಪರಿಸ್ಥಿತಿ ಹೊರಿಸಲ್ಪಡದಿದ್ದರೆ ನಮಗೀ ಬವಣೆಗಳು ಬರುತ್ತಿರಲಿಲ್ಲ. ಹುಚ್ಚು ಹಿಡಿದಿರುವ ಜಗತ್ತಿನಲ್ಲಿ ನಾವಿಂದು ಜೀವಿಸುತ್ತಿದ್ದೇವೆ; ಈ ಜಗತ್ತಿಗೆ ಬುದ್ಧಿ ಸರಿಯಾಗುವ ಸೂಚನೆಗಳೇನೂ ಈಗ ಕಾಣಬರುವುದಿಲ್ಲ.

ಅಚಲ ವಿಶ್ವಾಸದಿಂದ, ಅನುಪಮ ಧೈರ್ಯದಿಂದ ಶಾಂತರಾಗಿ ನಾವೀ ವಿಪತ್ತುಗಳನ್ನೆಲ್ಲಾ ಸಹಿಸಿಕೊಂಡಿದ್ದೇವೆ. ಶಾಂತವಾಗಿ ಎಲ್ಲವನ್ನೂ ಸಹಿಸಿಕೊಳ್ಳಲು ನಮಗೆ ನಮ್ಮ ಶತಮಾನಗಳ ಸಂಸ್ಕೃತಿಯೇ ಕಲಿಸಿದೆ. ಆದರೆ ನಮಗೆ ನಮ್ಮ ಪಾಲು ದೊರೆವ ದಿನ ಬಹಳ ದೂರ ಇರಲಾರದು.

ಇಂದಿನೀ ಜಗತ್ತಿನಲ್ಲಿ ಯಾವುದೇ ಆದರ್ಶವನ್ನಾದರೂ ಇಟ್ಟುಕೊಂಡ, ಹಾಗೂ ಸಂಕಷ್ಟ ಸಾವಿರಗಳಿಂದ ಚಿತ್ರಭ್ರಮೆಗೊಳಗಾಗದ ಜನರು ಇರುವವರು ಕೆಲವೇ ಮಂದಿ [illegible] ಮಾಡುವುದಿದೆ; ಬುದ್ಧಿವಂತರಾದವರು ತಪ್ಪುಗಳಿಂದ ಪಾಠ ಕಲಿತುಕೊಳ್ಳುವರು; ಆದರೆ ಪ್ರಮತ್ತರಿಗೆ ಅದರಿಂದ ಯಾವುದೇ ಅರಿವೂ ಆಗಲೊಲ್ಲದು. ಜಗತ್ತಿನಲ್ಲಿಂದು ತಪ್ಪಿನ ಮೇಲೆ ತಪ್ಪು ಮಾಡುತ್ತಾ, ತಮ್ಮ ಯಾವುದೇ ತಪ್ಪಿನ ಅರಿವೂ ಆಗದ ಜನರಿಂದ ಇಂದು ಜಗತ್ತು ಆಳಲ್ಪಡುತ್ತಿದೆ. ಲಿನ್ ಯುತಾಂಗ್ ಹೇಳಿದ್ದಾರೆ: 'ತಪ್ಪುಗಳಿಂದ ಮಹಾಮನುಷ್ಯರು ತಿದ್ದಿಕೊಳ್ಳುತ್ತಾರೆ; ಅಲ್ಪ ಮನುಷ್ಯರು, ಅವರು ಸತ್ತ ಮೇಲೆ ಅವರ ತಪ್ಪು ಜನರಿಂದ ಹೇಳಲ್ಪಡುತ್ತದೆ.'

ಕತ್ತಲು ಭೇದಿಸಿ ಅರುಣೋದಯ

ಈ ಎಲ್ಲಾ ಹೋರಾಟ ಅವ್ಯವಸ್ಥೆಗಳು ಮುಗಿದು ಭವಿಷ್ಯವು ನಮಗೇನಾದರೂ ಒಳಿತನ್ನು ತಂದೀತೆ? ನಮ್ಮ ಜನರ, ನಮ್ಮ ವೃದ್ಧ ಮುಖಂಡರ, ನಮ್ಮ ರಾಷ್ಟ್ರದ ಯುವಕರ ಹಾಗೂ ನಮ್ಮ ನಾಡಿನ ಮಕ್ಕಳ ಈ ಬಲಿದಾನಕ್ಕೆ ಏನೂ ಫಲವಿಲ್ಲವೆ? ನಮ್ಮ ರಾಷ್ಟ್ರದ ಈ ಪುಷ್ಪಗಳು ಸೆರೆಮನೆಯಲ್ಲಿ ಕತ್ತಲು ಕೋಣೆಯಲ್ಲೇ ಚಿರಚಿರಂತನವಾಗಿ ಬಾಡಿ ಕೊಳೆತಿರಬೇಕೆ? ಪುನಃ ನಾವೊಮ್ಮೆ ಸಾದಾ ಜೀವನ ಹೇಗೆಂಬುದನ್ನು ನೋಡಲಾರೆವೆ? ನಮ್ಮ ಮಕ್ಕಳು ತಮ್ಮ ಹೆತ್ತವರನ್ನು ದೂರವಿರಿಸಿಕೊಂಡು, ಇಂಥಾ ಪರಿಸ್ಥಿತಿಯಲ್ಲಿ ಸಹಜವಾಗಿ ತಮ್ಮ ಹೃದಯಗಳಲ್ಲಿ ದ್ವೇಷ ಕ್ರೋಧ ತುಂಬಿಸಿಕೊಂಡೇ ಬೆಳೆಯಬೇಕೆ? ನಾನು ಚಕಿತಳಾಗಿದ್ದೇನೆ. ನಮ್ಮನ್ನು ಆವರಿಸಿಕೊಂಡಿರುವೀ ಕತ್ತಲೆಯನ್ನು, ನಮ್ಮನ್ನು ಮುತ್ತಿರುವೀ ವಿಪತ್ತುಗಳನ್ನು ಇವೆಲ್ಲವನ್ನೂ ಭೇದಿಸಿ ನಾವು ಒಂದು ಉತ್ತಮ ಸುಖಮಯ ಜಗತ್ತಿನಲ್ಲಿ ಬಾಳಲಿರುವೆವೆಂಬ ಆಶೆ ನನಗಿದೆ. ಬಿರುಗಾಳಿ ಬೀಸಿದ ಮೇಲೆ ಯಾವಾಗಲೂ ಮಂದಮಾರುತವೊಮ್ಮೆ ಬಂದೇ ಬರುತ್ತದೆ; ಕತ್ತಲು ಮುಸುಕಿದ ಮೇಲೊಮ್ಮೆ ಅರುಣೋದಯ ಆಗಿಯೇ ಆಗುತ್ತದೆ; ಶರೀರದಲ್ಲಿ ನಾವು ತಾಡಿತರಾಗಿ ಜರ್ಜರಿತರಾಗಿದ್ದರೂ ನಮ್ಮ ಆತ್ಮಶಕ್ತಿ ದೃಢವಿದೆ, ನಮ್ಮ ಹೃದಯ ಸಶಕ್ತವಿದೆ. ನಾವು ಅಸಹಾಯರಾಗಿ, ನಿರಾಶರಾಗಿ ಆಗಬಾರದು; ಆಗಕೂಡದು, ಇಂದಿನೀ ಕಗ್ಗತ್ತಲೆ ಭೀಕರವಿದ್ದರೂ, ನಮ್ಮನ್ನು ಮುನ್ನಡೆಸಲು ಒಂದೇ ಕಿರಣ ಬೆಳಕು ಇಂದಿಲ್ಲದಿದ್ದರೂ, ಆ ಅರುಣೋದಯ ಆಗಲೇಬೇಕು! ಆ ಅರುಣೋದಯವನ್ನು ನಾವು ಇನ್ನಷ್ಟು ಆಶಾವಾದಿಗಳಾಗಿ, ದೃಢಚಿತ್ತರಾಗಿ ಬಲಶಾಲಿಗಳಾಗಿ ಕಾಯುತ್ತಾ ಇರಬೇಕು—ಏಕೆಂದರೆ ಅನ್ಯಾಯವನ್ನು ನ್ಯಾಯವು ಗೆಲ್ಲುವುದು; ವಂಚನೆಯನ್ನು ಸತ್ಯವು ಖಂಡಿತವಾಗಿ ಸೋಲಿಸುವುದು.

—ಬೊಂಬೇ ಕ್ರಾನಿಕಲ್

ಏಳು ಜೀವಗಳು

ಬರೆದವರು:- ಸಿಕಂದರ್, ಕಾಪು.

— ೨ —

[illegible] ಬಾಬುವ ಅವನ ಮಾ[illegible] [illegible]ಗಾರರ ವಾತ್ರ ವನು ಸ್ವಾಭಾವ [illegible] ಹೊಂದಿದಾಗ [illegible] ಅವನೊಬ್ಬ ಕಾಲೇಜು ವಿ[illegible] ವಿಶ್ವವಿಖ್ಯಾತನಾದ ಅವಿದ್ಯಾರ್ಥಿ [illegible]ವನದ ಸವಿಯನ್ನಲ್ಲದೆ ಬಾಹ್ಯ ಜಗ[illegible] ಯಾವತ್ತೂ ಗೆಲಿಥೆ ಗೊಂದಲ[illegible] ವ್ಯವಹಾರ ಕೌಶಲ್ಯವನ್ನಾ[illegible] ಅರಿತವನಲ್ಲ. ದೀನದುಃಖಿಗಳನ್ನು [illegible]ದರಿಸುವುದೆಂದರೆ ಅವನಿಗೆ ತುಂಬಾ [illegible]ಷ್ಟ. ಸರ್ವಸಾಧಾರಣವಾಗಿ ಲೋಭಿ[illegible] ಹೊಟ್ಟೆಯಲ್ಲಿ ದಾನಿಗಳೂ, ಸಂತರ [illegible]ಸುದರದಲ್ಲಿ ತುಂಟರೂ, ಹೇಡಿಗಳ ಬಸಿ[illegible]ಲ್ಲಿ ಬಂಟರೂ ಹುಟ್ಟುವುದು. ಇದೀಗ [illegible]ಇಂದಿನ ಯುಗ ಮಹಿಮೆ.

ರಮೇಶ ಬಾಬುವು ಒಂದು ಸೈಕಲ [illegible]ತ್ತೇರಿ ಭಿಕ್ಷುಕಿಯು ಹೋದ ದಾರಿಯ[illegible]ನ್ನು ಹಿಡಿದು ಹೊರಟನು. ಇದ್ದ[illegible]ಕ್ಕಿದ್ದಂತೆ ಆತನ ವಿಚಾರಚಕ್ರವು ಸುತ್ತ[illegible]ಲಿನ ಪರಿಸ್ಥಿತಿಯ ಕಡೆಗೆ ಹೊರಳಿತು. ಆಹ! ತಾನು ಹುಟ್ಟಿ ಬೆಳೆದ ನಾಡು ಬಂಗಾಲ—ಭಾರತ ಮಾತೆಯ ಬಲಗೈಯಂತಿದ್ದಿತು ಬಂಗಾಲ! ಆ ಬಲಗೈಯ ವಜ್ರಮುಷ್ಟಿಯಾಗಿದ್ದಿತು ಕಲ್ಕತ್ತಾ ನಗರ. ಸಾಗರ, ಗಂಭೀರಿಯಾದ ಗಂಗಾನದಿಯು ಸಮುದ್ರ ಸಂಗಮವಾಗುವುದು ಇಲ್ಲಿಯೇ. ಶ್ರೀವಳ ಕೃಪೆಯಿಂದ ಪ್ರಕೃತಿಯು ಸದಾ ಸಸ್ಯಶ್ಯಾಮಲೆಯಾಗಿ ಕಂಗೊಳಿಸುವುದು. ಜಗತ್ತಿನ ಅತಿನಿಬಡಜನ ಸಂಖ್ಯೆಯ ನಗರಗಳಲ್ಲಿ ಕಲ್ಕತ್ತವು ಒಂದಾಗಿದೆ. ಇದರಂತೆ ಪಾಟ್ಣ, ಮುರ್ಷಿದಾಬಾದು, ಡಾಕ್ಕಾ ಮೊದಲಾದ ಸಂಪತ್ಸಮೃದ್ಧ ಸಣ್ಣ ದೊಡ್ಡ ನಗರಗಳು ಗಂಗೆಯ ದಡದಲ್ಲಿ ನಾಡಿನ ಉದ್ದಕ್ಕೂ ಇವೆ. ಬಂಗಾಲಿಗಳೆಂದರೆ ಭಾರತದ ಜನತೆಯಲ್ಲಿ ಲೋಕ ಪ್ರಸಿದ್ಧರು. ಇಲ್ಲಿ ಅವತರಿಸಿದ ಜೀವಜ್ಯೋತಿಗಳು ಹಿಂದುಸ್ಥಾನದ ಹೆಚ್ಚಿನ ಕೀರ್ತಿಗೆ ಕಾರಣರಾಗಿದ್ದರು; ಆ ದಕ್ಷಿಣೇಶ್ವರ ಕಾಳೀಗುಡಿಯ ಮರುಳುಪೂಜಾರಿಯೆಂದೆನಿಸಿಕೊಂಡ ಯತಿವರೇಣ್ಯ ರಾಮಕೃಷ್ಣ ಪರಮಹಂಸ, ಅವರ ನೆಚ್ಚಿನ ಶಿಷ್ಯ—ಪಶ್ಚಿಮ ದೇಶಗಳಲ್ಲಿ ಆರ್ಯ ಸಂಸ್ಕೃತಿಯ ವಿಜಯ ಕಹಳೆಯನ್ನೂದಿ, ಲೋಕಕ್ಕೆ ಸರ್ವಧರ್ಮಸಮನ್ವಯ ತತ್ವವನ್ನು ಸಾರಿದ ರಾಜಯೋಗಿ ಸ್ವಾಮಿ ವಿವೇಕಾನಂದಜಿ, ಭಾರತದಿಂದ ಹಿಡಿದು ಇಂಗ್ಲಾಂಡಿನ ವರೆಗೆ ಬಂಗಾಳಿಗಳ ಕೆಚ್ಚಿ'ನ ಬಗೆಯನ್ನು ಮೆಚ್ಚಿಸಿಕೊಂಡ ಧೀಮಂತ ರಾಜಾರಾಮ ಮೋಹನರಾಯ್, ಪ್ರಚಂಡ ಕಾದಂಬರೀಕಾರರಾದ ಬಂಕಿಮ ಚಂದ್ರಬಾಬು, ಶರಚ್ಚಂದ್ರ ಚಟ್ಟೋಪಾಧ್ಯಾಯ, ಸಸ್ಯಾದಿಗಳಲ್ಲಿರುವ ಜೀವ—ಚೈತನ್ಯಗಳನ್ನು ತನ್ನ ಅಸಮಾನ್ಯ ಸಂಶೋಧನೆಗಳಿಂದ ಕಂಡು ಹಿಡಿದ, ಪಾಶ್ಚಾತ್ಯ ಮಹಾವಿಜ್ಞಾನಿಗಳ ಸಮಗೈಯಾಗಿ ನಿಂತ ಸರ್ ಜಗದೀಶ ಚಂದ್ರವಸು, ವಿಶ್ವಕವಿ—ವಂಗಸಾಹಿತ್ಯ ಸಾಮ್ರಾಟ್ ಡಾ। ರವೀಂದ್ರನಾಥ ಟಾಗೂರ್, ಹಿಂದುಸ್ತಾನ 'ಸಂಪಾದಕ ಮಹರ್ಷಿ' ಎನಿಸಿಕೊಂಡು ಇತ್ತೀಚೆಗೆ ಕೀರ್ತಿಶೇಷರಾದ ರಮಾನಂದ ಚಟರ್ಜಿ, ವೀರಹೆಚ್ಚಿಯ ಚಿತ್ತರಂಜನದಾಸ್, ದೇಶಗೌರವ ಸುಭಾಷ್ ಚಂದ್ರಬೋಸ್—ಇಂತಹ ಘನ ವ್ಯಕ್ತಿಗಳ ತೊಟ್ಟಿಲಾದ ನಾಡಿನಲ್ಲಿ ಇಂದು ದುರ್ಭಿಕ್ಷ, ಬರಗಾಲ! ಇವರ ಪದಸ್ಪರ್ಶದಿಂದ ಗರ್ವಿತವಾದ ಕಲ್ಕತ್ತಾ ನಗರದ ಪ್ರಶಸ್ತ ಬೀದಿಗಳಲ್ಲಿ ಕರಾಳ ನೃತ್ಯವು—ಉಣ್ಣಲು ಆಹಾರ ಧಾನ್ಯಗಳಿಲ್ಲದೆ ಹಸಿವೆಯಿಂದ ತಳಮಳಿಸುತ್ತಿರುವ ಬಡಪಾಯಿಗಳ ಗೋಳಿಗೆ ತಾಳವಿಟ್ಟು ತಾಂಡವವಾಡುತ್ತಿದೆ. ಸೇತು—ಹಿಮಾಚಲ ಪರಿಯಂತವಾಗಿ ಒಕ್ಕೊರಲಿಂದ ಹಾಡಲ್ಪಡುವ 'ವಂದೇ ಮಾತರಂ' ಭಾರತ ರಾಷ್ಟ್ರಗೀತವು ಯಾವ ವಂಗಭೂಮಿಯ ಕವಿಕಂಠದಿಂದ ಹರಿಯಿತೋ, ಆ ನಿರ್ಭಾಗ್ಯ ನಾಡಿನ ರೈತರ ಗಂಟಲಿಂದ 'ಅನ್ನ ಅನ್ನ' ವೆಂಬ ಕೂಗು ಕೇಳಿಸುತ್ತಿದೆ! ಹಾಯ್ರಾ, ಇದಕ್ಕೆ ಕಾರಣವೇನು? ಬರಗಾಲ! ಇದು ಹೇಗೆ ಬಂದಿತು? ಈ ಭೂಭಾಗದಲ್ಲಿ ಮಳೆಬೆಳೆಗಳಾಗಿಲ್ಲವೆ? ಎಲ್ಲವೂ ಆಗಿವೆ. ಪ್ರಥ್ವಿಯಲ್ಲಾಗುವ ಅತ್ಯಂತ ಮಳೆಬೆಳೆಗಳ ಪ್ರದೇಶಗಳಲ್ಲೊಂದಿದು, ಬಂಗಾಲ. ಬಿರುಗಾಳಿಯಂತೆ, ಬಲು ನೆರೆಯಂತೆ? ಅದುವೆ ಬರಗಾಲ. ಬಂಗಾಲವಿದರಿಂದ ಕಂಗಾಲ. ವಿಚಾರಿಸಿ ನೋಡುವಲ್ಲಿ ಇದು ದೈವೀದತ್ತವಾದ ಬರಗಾಲವಲ್ಲ; ಕೇವಲ ಮಾನವ ನಿರ್ಮಿತ. ಗಾಳಿನೆರೆಗಳು ಬಂದಮಾತ್ರಕ್ಕೆ ಇಷ್ಟೊಂಭು ಭಯಂಕರ ಸ್ಥಿತಿಯು ಬಂಗಾಲಕ್ಕೆ ಕಾಲಿಡಲಿಕ್ಕಿಲ್ಲ. ಪ್ರಾಂತಾಡಳಿತದ ಅಧಿಕಾರಿಗಳು ತಮ್ಮ ಹೊಣೆಕಾರಿಕೆಯಲ್ಲಿ ಅಸಡ್ಡೆಯನ್ನು ತೋರಿಸಿದುದರ ದುಷ್ಪರಿಣಾಮವಿದು. ನಾಡನ್ನು ವಿಪತ್ತಿನಿಂದ ರಕ್ಷಿಸಬಲ್ಲ ಸ್ವಾತಂತ್ರ್ಯ ವೀರರು ಗೊತ್ತುಗುರಿಯಿಲ್ಲದೆ ಅಜ್ಞಾತವಾಸದಲ್ಲಿ. ಸೆರೆಮನೆಯ ಲೋಹ ಸರಳುಗಳ ಹಿಂದೆ ನಿಂತು ಶೂನ್ಯ ಹೃದಯಿಯಾಗಿ ನಿಟ್ಟುಸಿರ್ಗರೆವ ದೇಶಪ್ರೇಮಿಯೇ, ನಿನ್ನ ಮಿದುಳಲ್ಲಿ ಜನ್ಮಭೂಮಿಗೆ ಬಡಿದ ಪೈಶಾಚಿಕ ಪೀಡೆಯು ಕಲ್ಪನೆಯಾದರೂ ಮೂಡಲವಕಾಶವಿದೆಯೇ? ಇದರ ಮೇಲೆ ಬ್ರಿಟಿಷ್ ಮಂತ್ರಿಮಂಡಲದಲ್ಲಿ ಬರವೇರಿದ ಕುರಿತು ನಡೆಯುವ ಪ್ರಶ್ನೋತ್ತರಗಳ ಸಾರಸ್ಯವನ್ನು ಗ್ರಹಿಸುವಾಗಲಂತೂ ಕಣ್ಣಾಲಿಗಳೆಡೆಯಿಂದ ರಕ್ತಾಶ್ರುಗಳೇ ಉಕ್ಕಿ ಹರಿಯುತ್ತಿವೆ. ಬಂಗಾಲದ ಶಾರ್ದೂಲ! ಫಜ್ಲುಲ್ ಹಕ್, ಅಧಿಕಾರ ರಂಗದಿಂದ ಹಿಂದೋಡಿ ಕಣ್ಣು ಬಾಯ್ಬಿಡುವೆಯೇತಕ್ಕೆ? ಮನಗಾಣು, ಪಾರತಂತ್ರ್ಯದ ಪರಮಾವಧಿಯನ್ನು;—"ರಮೇಶ ಬಾಬುವಿನ ಅಂತರ್ಯದ ಉದ್ವೇಗವು ಸೈಕಲಿನ ಗತಿಯನ್ನು ಹಿಂದಿಕ್ಕಿತು.

'ತಾನು ಬಂದುದೆಲ್ಲಿಗೆ?' ಎಂದು ಯೋಚಿಸುತ್ತಿರುವಾಗಲೇ, 'ಅದೋ ನಮ್ಮ ಚಿಕ್ಕಬಾಬು!' ಎಂಬ ಧ್ವನಿಯು ರಮೇಶನಿಗೆ ಕೇಳಿಸಿತು. ಒಂದು ಮರದ ಕೆಳಗೆ ಆ ತಾಯಿ, ಮಕ್ಕಳು ನಿಂತಿದ್ದರು. ಅತ್ತ ಸೈಕಲು ತಿರುಗಿಸಿದ ಪೂರ್ವಪರಿಚಿತಳಾದ ಆ ಭಿಕ್ಷುಕಿಯು ತನ್ನ ಮಕ್ಕಳೊಡನೆ ಅವನೆದುರಿಗೆ ಓಡಿಬಂದಳು. ಅವರೆಲ್ಲರಿಗೂ ವರ್ಣಿಸಲಸಾಧ್ಯವಾದ ಆನಂದ. 'ಚಿಕ್ಕಬಾಬು ಚಿಕ್ಕಬಾಬು!' ಎನ್ನುತ್ತಾ ಅವನ ಸುತ್ತುವರಿದು ನಿಂತರು. ಸೊರಗಿ ಹೋದ ದೇಹಗಳು, ಹರಕು ಚಿಂದಿಗಳಲ್ಲಿವೆ. ಎಲುಬುಗಳಂದು! ಇದಿಯ ಒಂದು ಬಳಿಗವೇ ರಮೇಶನ ಮುಂದಿದೆ. ಇಂತಹ ಅದೆಷ್ಟೋ ಕುಟುಂಬಗಳು ಕಲ್ಕತ್ತೆಯ ಹೆದ್ದಾರಿಗಳಲ್ಲಿ! ಇವರೊಳಗೆ ಹಲವು ಸಾವಿನ ಗಂಟಲಲ್ಲಿ ಇಳಿದು ಹೋಗಿವೆ. ಕೆಲವು ಅದರ ದವಡೆಯಲ್ಲಿ ಉರುಳಾಡುತ್ತಿವೆ. ಇನ್ನು ಕೆಲವು ಕುಟುಕು ಜೀವದಿಂದಿವೆ. ಅಹ! ಇವರಾರು? ಭಾರತ ಜನನಿಯ ಜೀವನಾಡಿಗಳು! ದಿಕ್ಕಿಲ್ಲದ ರೈತರು!

ತನ್ನ ಕೋಟಿನ ಕಿಸೆಯಲ್ಲಿ ತುರುಕಿ ತಂದಿರುವ ಹಣ್ಣುಹಂಪಲುಗಳನ್ನು ಅವರಿಗೆ ಹಂಚಿಕೊಟ್ಟು:— 'ನಿಮಗೆ ರಕ್ಷಕರಾರೂ ಇಲ್ಲವೇ?' ಎಂದು ಕೇಳಿದ. 'ಇಲ್ಲ ಯಾರೂ ಇಲ್ಲ. ಅಪ್ಪ ತೀರಿಕೊಂಡು ಎರಡು ಕಾಲವಾಯ್ತು. ಅಜ್ಜ ಇದ್ದ; ನಮ್ಮೊಡನೆ ನಗರಕ್ಕೆ ಬರುವಾಗ ಹಾದಿಯಲ್ಲಿ ಇಹಲೀಲೆಯನ್ನು ಮುಗಿಸಿದ.' ಎಂದು ಉತ್ತರವಿತ್ತ ಅವರಲ್ಲಿ ಹಿರಿಯನೊಬ್ಬ.

ರಮೇಶಬಾಬುವಿಗೆ ಅಲ್ಲಿ ಹೆಚ್ಚುಹೊತ್ತು ನಿಲ್ಲಲಾಗಲಿಲ್ಲ. 'ವಿಶ್ವ ಪ್ರಯತ್ನದಿಂದ ಈ ಏಳು ಜೀವಿಗಳನ್ನು ರಕ್ಷಿಸುವ ಭಾರವು ತನ್ನಪಾಲಿಗೆ'ಂದು ನಿರ್ಧರಿಸಿ ಸೈಕಲ್ ಹತ್ತಿ ಹಿಂದಿರುಗಿದ. ಬರುವಾಗ ದಾರಿಯಲ್ಲಿ ಶಾಂತಿನಿಕೇತನದ ಮಹಾದ್ವಾರವು ಗೋಚರಿಸಿತು. ಒಳಗಿಂದ ವಿಶ್ವಭಾರತಿಯ ಭವ್ಯ ಕಟ್ಟಡವು ಕಂಗೊಳಿಸುತ್ತಿದೆ. ವಿಶ್ವಕವಿಯ ಅಗಾಧ ನೆನಹು! 'ಹೇ ಗುರುದೇವ, ರವೀಂದ್ರನಾಥ! ಜೀವಿತ ಕಾಲದಲ್ಲಿ—ಕವನಕಟ್ಟಿ, ಲೇಖನ ಬರೆದು, ಭಾಷಣವಿತ್ತು, ನಾಟಕವಾಡಿ ಮಾತೃಭೂಮಿಯ ಸೇವೆಗೈದಿರುವೆ. ವಂಗಮಾತೆಯ ಈಗಿನ ದುಸ್ಥಿತಿಯನ್ನು ಕಂಡು ನಿನ್ನಾತ್ಮವು ಶಾಂತಿಧಾಮದಲ್ಲಿ ನಿಶ್ಚಿಂತವಾಗಿರಲಾಪುದೇ?' ರಮೇಶನ ಕಣ್ಣುಗಳಲ್ಲಿ ಅಶ್ರುಬಿಂದುಗಳೊಸರಿದುವು.

* * *

'ಎಷ್ಟುದಿನವಾಯ್ತು ಮಹೇಶಬಾಬುಗಳೇ, ತಮ್ಮ ಮಗನಿಗೆ ಜ್ವರಹತ್ತಿ?'

(೭ನೇ ಪುಟಕ್ಕೆ ಮುಂದುವರಿದಿದೆ)

Times have changed !

TIME-KEEPERS

in Shakespeare's Day



ಕಾಲ ಬದಲಾಗಿದೆ!

ಶೇಕ್ಸ್‌ಪೀಯರನರ ಕಾಲದಲ್ಲಿ ಸಮಯ ನೋಡುವುದು ಮತ್ತು ಇಂದು ಸಮಯ ನೋಡುವುದು.

& present day



ಎಕ್ಸ್‌ಟ್ರಾ "ಎಫ್"

18 ಕ್ಯಾ. ಸೋ. ಗೋಲ್ಡ್ ಗಟ್ಟಿ ಕೇಸು ರೂ. 280

ರಿ. ಅರೆಬಿಕ್ ಅಥವಾ ನ್ಯೂಸ್ಟೈಲ್ ದ. ಅದೇ ಕ್ರಯ.

ಏಕ್ಸ್‌ಟ್ರಾ 'ಎಚ್'

18 ಕ್ಯಾ. ಸೋ. ಗೋಲ್ಡ್, ಗಟ್ಟಿ ಕೇಸು ರೂ 345

ಶೇಕ್ಸ್‌ಪೀಯರನು ವಾಚ್ ಪ್ರಾರಂಭವನ್ನು ಕಂಡಿದ್ದನು. ಆದರೆ ಸ್ಕ್ರೂ ಇ[illegible] ವಾಚಿನ ಚಲನವಲನಗಳು ಪಿನ್‌ಳ[illegible] ಮತ್ತು ರೈವೆಟ್‌ಗಳಿಂದಾಗುತ್ತಿತ್ತು. ಗಿಯರ್ ಕಟ್ಟಿಂಗ್ ಕೈಯಿಂದ ನಾಜೂಕಿರದೆ ಮ[illegible]ಡಲ್ಪಡುತ್ತಿತ್ತು. ಬೆಲೆನ್ಸ್ ಸ್ಪ್ರಿಂಗ್‌ಗೆ ಬ್ರಿ[illegible]ಲ್ ಉಪಯೋಗಿಸಲ್ಪಡುತ್ತಿತ್ತು. ಇಂ[illegible] ವಾಚುಗಳು 400 ವರ್ಷಗಳ ಅನುಭವ ಫಲವಾಗಿ ಚಲೋದಾಗಿ, ಭದ್ರಬಾಳಿಕೆ[illegible]ದಾಗಿ ತಯಾರಾಗುತ್ತವೆ. ಹಿಂದಿನ ಮತ್ತು ಇಂದಿನ ಕೌಶಲ್ಯಗಳೆಲ್ಲಾ ವೆಸ್ಟ್ ಎಂ[illegible] ವಾಚುಗಳಲ್ಲಿವೆ: ಬೇಕಾದವರಿಗೆ ಕೆಟಲಾ[illegible] ಧರ್ಮಾರ್ಥ.

, ಸರಿಯಾಗಿ ಆಮದಾಗದಿರುವುದರಿಂ[illegible] ಜಾಹೀರು ಮಾಡಿದ ಎಲ್ಲಾ ನಮೂನೆಗ[illegible]ನ್ನೂ ಒದಗಿಸುವುದು ಕಷ್ಟವಾದರೂ, ನಮ್ಮಲ್ಲಿ ಸ್ಟಾಕು ಇರುವ ಮಟ್ಟಿಗೆ ಅದಕ್ಕೆ ಸರಿಯಾಗಿ ಉತ್ತಮ ವಾಚುಗಳನ್ನು ಒ[illegible]ಗಿಸಿ ಕೊಡುವೆವು.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ ಮತ್ತು ಕಲ್ಕತ್ತ

West End Watch Co

Bombay — Calcutta

ಸಮರ ಭೂಮಿಯ ಸಂಚಾರ

ಮಿತ್ರರಿಗೆ ಇತ್ತೀಚೆಗೆ ಯೋಗ್ಯ ಉತ್ತರಗಳು ದೊರಕುತ್ತಿವೆ. ಟರ್ಕಿಯನ್ನು ತಮ್ಮ ಪಕ್ಷವಾಗಿ ಯುದ್ಧಕ್ಕೆಳೆಯಬೇಕೆಂದು ಮಿತ್ರರು ತುಂಬಾ ಪ್ರಯತ್ನ ಮಾಡಿದರು; ಇನೋನ್ಯು ಬಂಡರು-ಮಾತುಕತೆ ಮಾಡಿದರು. ಆದರೆ ಟರ್ಕರು ಇದುವರೆಗೆ ಮಿತ್ರಪಕ್ಷ ಸೇರಿಲ್ಲ; ತಾಟಸ್ಥ್ಯ ಮುರಿದಿಲ್ಲ. ಆಯರ್ಲೆಂಡಿನ ವಿಷಯದಲ್ಲಂತೂ ಅವರು ತಾಟಸ್ಥ್ಯ ಮುರಿವುದೂ, ಮಿತ್ರ ಪಕ್ಷಕ್ಕೆ ಬರುವುದಾದರೂ ಸಾಧ್ಯವಿಲ್ಲವೆಂದೂ ಅವರ ಉತ್ತರದಿಂದ ಸ್ಪಷ್ಟವಾಗಿದೆ

ಪ್ರೆಸಿಡೆಂಟ್ ಇನೂನ್ ಡಿವೆಲರೂ ಹಲ ಕಾಲದಿಂದ ಈ ತಾಟಸ್ಥ್ಯ ಇಟ್ಟುಕೊಂಡಿದ್ದಾರೆ. ಅಲ್‌ಸ್ಟರ್ ಪಾಕಿಸ್ಥಾನ ಮಾಡಿದ ಬಗ್ಗೆ ಡಿವೆಲರು ಮಾಡುವ ಸತ್ಯಾಗ್ರಹವೆನ್ನಬೇಕು, ಇಂದಿನ ಅಯರ್ಲೆಂಡ್ ತಾಟಸ್ಥ್ಯ. ಏಕೆಂದರೆ ಅಯರ್ಲೆಂಡಿನ ಜನರಷ್ಟು ಡಿವೆಲರರಷ್ಟು ಸ್ವಾತಂತ್ರ್ಯಪ್ರಿಯ ಜನರು ಬೇರಿಲ್ಲವೆಂದು ಹೇಳಿದರೂ ಸರಿಯೇ, ಅಂಥವರು ಈ ಯುದ್ಧದಿಂದ ಬೇರಾಗಿರುವುದರಲ್ಲಿ ತುಸು ಉದ್ದೇಶವಿದ್ದೇ ಇದೆ 'ಅಯರ್ಲೆಂಡ್? ಮೊದಲು ಸಂಯುಕ್ತ ರಾಷ್ಟ್ರ ಆ ಮೇಲೆ' ಇದು ಡಿವೇಲರರ ಘೋಷಣೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರಿಗೆ ದೊರಕಿದ ಜಯದಿಂದ ಅಯರ್ಲೇಂಡಿನ ಜನರು ಎಷ್ಟರಮಟ್ಟಿಗೆ ಈ ಘೋಷಣೆಗೆ ಒಪ್ಪುತ್ತಾರೆಂದೂ ವಿದಿತವಾಗುತ್ತದೆ

ಹಾಗಾಗಿ ಅಮೆರಿಕ ಸರಕಾರವು ಡಿವೆಲರ ವಿಷಯ ಮಾಡುತ್ತಿರುವ ಆರೋಪವನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ ಅದಕ್ಕೆ ಅಯರ್ಲೆಂಡು ಕೊಟ್ಟ ಉತ್ತರವೂ ಧೀರ ಗಂಭೀರವಿದೆ ಬ್ರಿಟನೂ ಅಮೆರಿಕದ ಬೆಂಬಲಸಿಂತ ಅಯರ್ಲೆಂಡನ್ನು ತಿವಿವಂತೆ ಚರ್ಚಿಲರ ಹೇಳಿಕೆಯಿಂದ ಸ್ಪಷ್ಟವಾಗುವುದು. ಅಯರ್ಲೆಂಡು ರಕ್ತದಲ್ಲಿ ಮಿಂದು ಸ್ವಾತಂತ್ರ್ಯ ಪಡೆದ ರಾಷ್ಟ್ರ; ಪುನಃ ಅದಕ್ಕೀಗ ಒಂದು ಸಂಧಿ ದೊರೆತಿದೆ ಭಾರತೀಯರು, ನಾವು, ಅಯರ್ಲೆಂಡು ಯಾಕೆ ತಾಟಸ್ಥ್ಯವಾಗಿದೆಯೆಂಬುದನ್ನು ಚೆನ್ನಾಗಿ ತಿಳಕೊಳ್ಳಬಲ್ಲೆವು.

ಅಮೆರಿಕ ಮುಂದೆ ಬರಬೇಕು

'ಅಮೆರಿಕವು ತನ್ನ ಶ್ರೇಷ್ಠ ಶಕ್ತಿಯನ್ನು ಒಂದು ಪ್ರಬಲ ಅಂತರಾಷ್ಟ್ರೀಯ ಶಕ್ತಿಯಾಗಿ ಮಾಡಿ, ಬೆಳಸುತ್ತಾ ತನ್ನ ಶಕ್ತಿಯ ಸದುಪಯೋಗ ಮಾಡಿಕೊಂಡರೆ ಇನ್ನು ಮುಂದಿನ ಜಗತ್ತಿನ ಮಹಾ ಯುದ್ಧವನ್ನು ಮಹಾ ಗಂಡಾಂತರವನ್ನು ತಪ್ಪಿಸಬಹುದು. ಈ ಶತಮಾನದ ಆದಿಯಿಂದಲೇ ಅಮೆರಿಕವು ತನ್ನ ಜನತೆಯನ್ನು ಮುನ್ನಡೆಸುವ ಶಕ್ತಿ ಕಳಕೊಂಡಿದೆ ಅಮೆರಿಕವು ತನ್ನ ಉತ್ತಮ ಶಕ್ತಿಯನ್ನುಪಯೋಗಿಸಿ, ಶಾಂತಿಯಿಂದಿರುವ ಇನ್ನಿತರ ರಾಷ್ಟ್ರಗಳೊಡನೆ ಸಹಕರಿಸಿ ಅಂತರಾಷ್ಟ್ರೀಯ ಸಂಘವೊಂದನ್ನು ನಿರ್ಮಿಸಿ, ಅವು ಚನ್ನಾಗಿ ಕಾರ್ಯ ಪ್ರವೃತ್ತವಾಗುವಂತ ಮತ್ತು ಇದುವರೆಗೆ ಇತಿಹಾಸದಲ್ಲಿಯೇ ಆಗದಿದಿರುವಂಥಾ ರೀತಿಯಲ್ಲಿ ಎಲ್ಲಾ ರಾಷ್ಟ್ರಗಳಿಗೂ ಆರ್ಥಿಕ ಹಾಗೂ ರಾಜಕೀಯ ಭದ್ರತೆಯನ್ನು ಒದಗಿಸಿಕೊಡುವುದು ಉಚಿತವಿದೆ ಇದಲ್ಲದೆ ವ್ಯವಸ್ಥೆಗೆ ನಾವು ಮುನ್ನಡೆದರೆ, ಕಳೆದ ಮಹಾಯುದ್ಧದ ನಂತರ ವಹಿಸಿದ ಧೋರಣೆ ವಹಿಸಿದರೆ ನಾವು ಮೂರನೆಯ ಮಹಾಯುದ್ಧವನ್ನು ಕಾಣಬೇಕಾಗುವುದು.' ಹೀಗೆಂದು ವೆಂಡಲ್ ವಿಲ್ಕಿಯವರು ಇತ್ತೀಚೆ ಅಮೆರಿಕದ 'ವಿದೇಶನೀತಿ' ಎಂಬ ಪತ್ರಿಕೆಗೆ ಲೇಖನ ಬರೆದಿರುವರು

ವಿಲ್ಕಿಯವರ ಮಾತು ಯೋಗ್ಯವಿದೆ ಅಮೆರಿಕ ಯುದ್ಧಕ್ಕೆ ಸೇರದೆ ಇದ್ದಿದ್ದರೆ ಇಂದಿನೀ ಮಹಾಯುದ್ಧವನ್ನು ರಾಜಿಯಿಂದ ತೀರಿಸಲು ಶಕ್ಯವಾಗಿದ್ದ ರಾಷ್ಟ್ರವದಾಗಿತ್ತು, ಹಾಗೆ ಮಾಡಬಹುದೆಂದು ಹಲಜನ ಹಾರೈಸಿಯೂ ಇದ್ದರು, ಆದರೆ ಆ ಹಾರೈಕೆ ಅಮೆರಿಕ ಯುದ್ಧಕ್ಕೆ ಸೇರಿದ ಕೂಡಲೇ ಹಾರಿಹೋಯಿತು. ಈಗಲಾದರೂ, ಜಗತ್ತಿನ ಹಿತದೃಷ್ಟಿಯಿಂದ ತನ್ನ ಸಾಮರ್ಥ್ಯಕ್ಕನ ಗುಣವಾಗಿ ಅಮೆರಿಕವು ವಿಲ್ಕಿಯವರ ಸೂಚನೆಯಂತ ನಡೆವುದ?

ಪುಸ್ತಕಾವಲೋಕನ

ಕಾಶೀನಾಥ ಮತ್ತು ವೃಂದಾವನ—ಶರಚ್ಚಂದ್ರ ಚಟ್ಟೋಪಾಧ್ಯಾಯರ ಎರಡು ಕಾದಂಬರಿಗಳ ಅನುವಾದ ಕನ್ನಡಿಸಿದವರು ಶ್ರೀಮತಿ ಎಂ ಎ ಕುಪ್ಪಮ್ಮ ಮತ್ತು ಶ್ರೀಮಾನ್ ಗುರುನಾಥ ಜೋಶಿ ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಎಂಟು-ಒಂಬತ್ತನೆಯ ಪ್ರಕಟನೆ ಕ್ರೌನ್ ಅಷ್ಟಪತ್ರಾಕಾರದ ೫೩+೧೩೨ ಪುಟಗಳು ಬೆಲೆ ರೂ ೨-೪-೦

ಶರಚ್ಚಂದ್ರರ ಕಾದಂಬರಿಗಳಲ್ಲಿ ಅನೇಕ ಈಗಾಗಲೆ ಕನ್ನಡಿಗರಿಗೆ ಮೆಚ್ಚುಗೆಯಾಗಿವೆ ಆದ್ದರಿಂದ ಈ ಪುಸ್ತಕದ ಬಗೆಗೆ ಹೆಚ್ಚೇನೂ ಹೇಳಬೇಕಾದುದಿಲ್ಲ.

ಬಡ ಹುಡುಗ ಕಾಶೀನಾಥನಿಗೆ ತಂದೆಯಂತೆ ಹೆಚ್ಚಿನ ವಿದ್ಯಾವ್ಯಾಮೋಹವಿದ್ದುದನ್ನು ಕಂಡು ಅನೇಕರು, ಅವನು ತಂದೆಯಂತೆ ಹುಚ್ಚನಾಗಬಹುದೆಂದು ಅನುಮಾನಪಡುತ್ತಾರೆ ಅಂಥವರಲ್ಲಿ ಅವನ ಸೋದರ ಮಾವ ಮಧುಸೂದನ ಪಂಡಿತನೂ ಒಬ್ಬ. ಹುಡುಗನ ತಂದೆ ತಾಯಿ ತೀರಿ ಹೋಗಿದ್ದುದರಿಂದ ಅವನು ಸೋದರ ಮಾವನ ಆಸರೆಯಲ್ಲಿದ್ದು ಸಮೀಪದ ಪಾಠಶಾಲೆಯಲ್ಲಿ ವ್ಯಾಕರಣ ತರ್ಕ ಮೊದಲಾದುವನ್ನು ಕಲಿಯುತ್ತಾನೆ.

ಆ ಊರ ಜಮೀನುದಾರ ಪ್ರಿಯನಾಥ ಬಾಬುವಿನ ಒಬ್ಬಳೇ ಮಗಳು ಕಮಲೆಗೆ ಮದುವೆಯ ವಯಸ್ಸಾಗಿರೆ ವರನನ್ನು ಹುಡುಕಿ ಸಾಕಾಗಿರುವುದರಿಂದ ಕಾಶೀನಾಥನನ್ನೇ ಮನೆಯ ಅಳಿಯನನ್ನಾಗಿ ಮಾಡಿಕೊಳ್ಳುವ ಏರ್ಪಾಡು ನಡೆಯುತ್ತದೆ ಸಿರಿವಂತರ ಮನೆಯ ಅಳಿಯನಾಗಿ ಕಾಶೀನಾಥನಿಗೆ ಸುಖ ದೊರೆಯಲಿಲ್ಲ ಹಿಂದಿನ ಸ್ವಾತಂತ್ರ್ಯ ಸ್ವಾಚ್ಛಂದ್ಯಕ್ಕೆ ಅತ್ತೆ ಮಾವ ಅಡ್ಡ ಬರುತ್ತಾರೆ ಮೊದಮೊದಲು ಕಮಲೆ ಸಾನುಭೂತಿ ತೋರಿದರೂ ಕ್ರಮೇಣ ಅವನ ಮನಸ್ಸಿಗೆ ಸಂಕಟವಾಗುವಂತೆ ನಡೆಯುವುದು ವಿಚಿತ್ರವೆನಿಸುತ್ತದೆ ಕಾಶೀನಾಥ ಪಾಡುಪಟ್ಟರೂ ಅಧೀರನಾಗುವುದಿಲ್ಲ ಕಾದಂಬರಿಗಳನ್ನು ಕನ್ನಡಿಸಿದವರ ಒಂದು ಮಾತನ್ನು ಇಲ್ಲಿ ಎತ್ತಿ ಬರೆಯಬಹುದು. "ಕಾಶೀನಾಥದಲ್ಲಿ ಗಂಡು-ಹೆಣ್ಣಿನ ಸೂಕ್ಷ್ಮ ಮನೋವೃತ್ತಿ, ಹೆಂಡತಿಗೆ ಗಂಡನು ಹೆಚ್ಚೋ ತವರು ಹೆಚ್ಚೋ ಅಳಿಯನಿಗೆ ಶ್ರೀಮಂತ ಮಾವನ ಮನೆಯ ವಾಸ ಕಾರಾಗೃಹ, ಮುಂತಾದ ಹಲವು ವಿಷಯಗಳು ಹೃದಯಂಗಮವಾಗಿ ಚಿತ್ರಿತವಾಗಿವೆ"

ಚಾಡಾಲ ಗ್ರಾಮದ ಜಮೀನುದಾರ ಗೌರದಾಸ ಅಧಿಕಾರಿಗಳ ಮಗ ವೃಂದಾವನನೇ ಎರಡನೆಯ ಕಾದಂಬರಿಯ ನಾಯಕ ಒಡವನಾದ ಕುಂಜ ವೈಷ್ಣವನ ತಂಗಿ ಕುಸುಮೆ ಐದು ವರ್ಷದ ಹುಡುಗಿಯಾಗಿರುವಾಗಲೇ ಒಲುಮೆಯಾಗಿರುವುದರಿಂದ ವೃಂದಾವನನಿಗೆ ಅವಳೊಡನೆ ಮದುವೆಯಾಗುತ್ತದೆ ಆದರೆ ಸಲ್ಪ ದಿನಗಳಲ್ಲಿಯೇ ಕುಸುಮೆಯ ತಾಯಿಯ ವಿಷಯದಲ್ಲಿ ಜನರ ಅಲ್ಲದ ಸಲ್ಲದ ಸೊಲ್ಲನ್ನು ಆಡತೊಡಗಿದರಿಂದ ಕುಸುಮೆಯನ್ನು ಬಿಟ್ಟು ವೃಂದಾವನನಿಗೆ ಬೇರೆ ಮದುವೆಯಾಗುವುದು

ವೃಂದಾವನನ ತಂದೆಯೂ ಹೆಂಡತಿಯೂ ಕೆಲ ವರುಷಗಳಲ್ಲಿ ತೀರಿ ಹೋಗುತ್ತಾರೆ ಈಗ ಕುಸುಮೆ ಯುವತಿ ರೂಪವತಿ, ಗುಣವತಿ, ವಿದ್ಯಾವತಿ ಆದುದರಿಂದ ಪುನಃ ಆಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆ ವೃಂದಾವನನಿಗೆ ಕುಂಜನಿಗೂ ಇದು ಇಷ್ಟ ಅಭಿಮಾನಿನಿಯಾದ ಕುಸುಮೆ ಇದಕ್ಕೆ ಒಪ್ಪುವುದಿಲ್ಲ ಆದರೆ ಕ್ರಮೇಣ ಅವಳ ಮನಸ್ಸು ವೃಂದಾವನನೆಡೆಗೆ ಒಲಿಯುತ್ತದೆ ಅದಕ್ಕೆ ಮೊದಲೇ ವೃಂದಾವನನ ಮಗ ಚರಣ ಅವಳ ಮುದ್ದುಮರಿಯಾಗುತ್ತಾನೆ

ವೃಂದಾವನ ಕುಸುಮೆಯರು ಒಂದುಗೂಡಬೇಕಾದರೆ ಅವರ ಅಭಿಮಾನ ಇನ್ನೂ ಅಡ್ಡ ಬರುತ್ತದೆ ಅವರಿಬ್ಬರ ಮನಸ್ಸಿನ ಹೊಯ್ದಾಟದ ಕತೆ ಬಲು ಸೊಗಸಾಗಿದೆ ಪುಸ್ತಕವನ್ನು ಓದುತ್ತಿರುವಾಗ ವಂಗದೇಶದ ಹಳ್ಳಿಯ ಸಮಾಜವನ್ನು ಪ್ರತ್ಯಕ್ಷ ನೋಡಿದಂತಾಗುವುದು

ಶ್ರೀಮತಿ ಕುಪ್ಪಮ್ಮನವರು ಮಾಡಿರುವ 'ಕಾಶೀನಾಥ'ದ ಅನುವಾದ ಬಹಳ ಚೆನ್ನಾಗಿದೆ ಶ್ರೀ ಗುರುನಾಥ ಜೋಶಿಯವರಂತು ಈಗಾಗಲೆ ಒಳ್ಳೆಯ ಕನ್ನಡ ಬರೆಹಗಾರರ ಪಟ್ಟಿಯಲ್ಲಿ ಸೇರಿ ಹೋಗಿದ್ದಾರೆ 'ವೃಂದಾವನ'ವನ್ನು ಅವರು ಅನುವಾದಿಸಿದಾರೆ ಇದರಲ್ಲಿ ಉತ್ತರ ಕರ್ನಾಟಕದ ಛಾಯೆ ಸ್ವಲ್ಪ-ಬಹಳ ಸ್ವಲ್ಪ-ಕಾಣುತ್ತದೆ ಒಟ್ಟಿನಲ್ಲಿ ಹೃದ್ಯವಾಗಿದೆ .

೪೫ನೆಯ ಪುಟದ ನಾಲ್ಕನೆಯ ಸಾಲಿನಲ್ಲಿ 'ಸಿರಸಾವಹಿಸಿ," ೧೧೬ನೆಯ ಪುಟದಲ್ಲಿ ಕೊನೆಯಿಂದ ನಾಲ್ಕನೆಯ ಸಾಲಿನಲ್ಲಿ "ಕಾತುರತೆಯಿಂದ"-ಈ ಅಸಾಧುರೂಪಗಳನ್ನು ಎರಡನೆಯ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದು.

— ವಾಸುದೇವ.



ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ

WANTED AGENTS IN S. KANARA DT.

Mangalore Stockists —M/S D Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಸ್ವದೇಶಾಭಿಮಾನಿ

ತಾರೀಖು 24—6—1944

ಇಂಡಿಯಾ ಕಂಪೆನಿಯಂತೆ ಕೆಲವರು ಹೇಳಿದ್ದರು. ಶ್ರೀ ಕೃಷ್ಣಮಾಚಾರ್ಯರು ಕೇಂದ್ರ ಎಸೆಂಬ್ಲಿ ಭಾಷಣದಲ್ಲಿ ಇದರಲ್ಲಿ ರಾಜಕೀಯ ಉದ್ದೇಶವೂ ಇದೆಯೆಂದು ಈಗಲೂ ಅದನ್ನೇ ಸಮರ್ಥಿಸಿದ್ದಾರೆ. ಒಟ್ಟಿನಿಂದ ಭಾರತದ ಹಿತಕ್ಕೆ ಭಾರತ ಆರ್ಥಿಕ ಹಿತಕ್ಕೆ ಭಾರತದ ರಾಜಕೀಯ ಹಿತಕ್ಕೆ ಯು. ಕೆ. ಸಿ. ಸಿ. ಉಪಟಳಕಾರಿಯೆಂಬುದು ಭಾರತದ ಮುಖಂಡರ ಅಭಿಪ್ರಾಯವಿದೆ.

ಯು. ಕೆ. ಸಿ. ಸಿ.

ವ್ಯಾಪಾರ ವಹಿವಾಟಿನಲ್ಲಿ ಯು. ಕೆ. ಸಿ. ಸಿ.ಗೆ ಸಂಪೂರ್ಣ ಹಕ್ಕು ಕೊಟ್ಟಿಲ್ಲವೆಂದು ಹೇಳಲಾಗಿದ್ದರೂ ಚಾ ಮತ್ತು ಚರ್ಮದ ನಿರ್ಯಾತದಲ್ಲಿ ಅದಕ್ಕೆ ಸಂಪೂರ್ಣ ಹಕ್ಕು ಕೊಡಲಾಗಿದೆ. ಟರ್ಕಿಯಲ್ಲಿ ಈ ಚರ್ಮವನ್ನು ಹಂಚುವ ವ್ಯವಸ್ಥೆಯನ್ನು ಇನ್ನು ಮುಂದೆ ಯು. ಕೆ. ಸಿ. ಸಿ. ಮಾಡುವುದೆಂದು ಇಸ್ತಾಂಬೂಲಿನಲ್ಲಿರುವ ಬ್ರಿಟಿಷ್ ರಾಯಭಾರಿ ಕಚೇರಿ ಮುಂದೆ ನೋಟೀಸು ಹಚ್ಚಲಾಗಿದೆಯೆಂದು ತಿಳಿದುಬಂದಿದೆ" ಹೀಗೆಂದು ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಆರ್ಥಿಕ ನಿರ್ಣಯದ ಬಗ್ಗೆ ಚರ್ಚೆ ನಡೆದಾಗ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿದರು.

ಶ್ರೀ. ಟಿ. ಟಿ. ಕೃಷ್ಣಮಾಚಾರಿಯವರು ಎರಡುವರೆ ಗಂಟೆವರೆಗೆ ದೀರ್ಘ ಭಾಷಣ ಮಾಡಿ ಹೊಸ ತೆರಿಗೆಗಳ ವಿಚಾರ ಖಂಡಿಸಿ, ದೇಶದಲ್ಲಿ ಹೊಸ ಹೊಸ ಕೈಗಾರಿಕೆ ಸ್ಥಾಪಿಸುವ ವಿಚಾರವಾಗಿ ಸರಕಾರ ವಹಿಸಿದ ಧೋರಣೆಯನ್ನು ಕಟುವಾಗಿ ಟೀಕಿಸಿದರು. ಈ ಸಂಬಂಧದಲ್ಲಿ ಯು. ಕೆ. ಸಿ. ಸಿ. ಚಟುವಟಿಕೆಗಳನ್ನೂ ಬಲವಾಗಿ ವಿಮರ್ಶಿಸಿದರು. ಯು. ಕೆ. ಸಿ. ಸಿ. ಒಂದು ವ್ಯಾಪಾರೀ ಸಂಸ್ಥೆಯೆಂದು ಹೇಳಲಾಗಿದ್ದರೂ ಇದರಲ್ಲಿ ರಾಜಕೀಯ ಉದ್ದೇಶವಿದೆಯೆಂದರು. ಸರಕಾರವು ಇನ್ನೂ ಇದರ ಧೋರಣವನ್ನು ಸ್ಪಷ್ಟಗೊಳಿಸಿಲ್ಲವೆಂದು ಸಾರಿದರು.

ಯು. ಕೆ. ಸಿ. ಸಿ ಎಂದರೇನೆಂಬುದು ಇಷ್ಟರಲ್ಲೇ ಭಾರತೀಯರಿಗೆ ಗೊತ್ತು. ಇದೊಂದು ವಿದೇಶೀ ವ್ಯಾಪಾರ ಸಂಸ್ಥೆಯೆಂದು ಹೇಳಲಾಗಿದೆ. ಇದರ ಸ್ಥಾಪನೆಯ ಸಮಯದಲ್ಲಿಯೇ ಭಾರತದ ಮುಖಂಡರು ಭಾರತದ ಅರ್ಥಿಕಜ್ಞರು ಭಾರತದ ರಾಜಕೀಯ ಪ್ರಮುಖರು ನಿಷೇಧ ಸೂಚಿಸಿದ್ದರು. ಇದು ಇನ್ನೊಂದು ಈಸ್ಟ್

ಯುದ್ಧ ಸುದ್ದಿಗಳು

ಜರ್ಮನ್ ಸೈನಿಕರು ಹಂಗೇರಿಯನ್ನು ಆಕ್ರಮಿಸಿದರು. ಬ್ರಿಟಿಷ್ ಪತ್ರಿಕೆಗಳಲ್ಲೂ ಇದಕ್ಕೆ ವಿಶೇಷ ಮಹತ್ವ ಕೊಡಲಾಗಿದೆ. ಹಂಗೇರಿಯನ್ನು ಆಕ್ರಮಿಸಿದ ಕೂಡಲೇ ಹಿಟ್ಲರ್ ಅಲ್ಲಿ ಫೇಸಿಸ್ಟ್ ರಾಜ್ಯ ಭಾರ ಸುರು ಮಾಡಿ ಬಿಟ್ಟಿದ್ದಾನೆ. ಜರ್ಮನರ ಆಕ್ರಮಣದಿಂದ ಹಂಗೇರಿಯಿಂದು ಸ್ವಾತಂತ್ರ್ಯ ಕಳಕೊಂಡಿತು.

ಫಿನ್‌ಲೆಂಡು ರಶ್ಯದ ಸಂಧಾನ ಶರ್ತಗಳನ್ನು ನಿರಾಕರಿಸಿದೆಯೆಂದು ಈಗ ಅಧಿಕೃತವಾಗಿ ಸಾರಲಾಗಿದೆ. ರಶ್ಯದ ಶರತಗಳು ಬಹಳ ಕಠಿಣವಿರುವವೆಂದು ಫಿನ್‌ಲೆಂಡ್ ಸರಕಾರದ ಅಭಿಪ್ರಾಯವಿದೆ. ಈ ವಿಚಾರವನ್ನು ಸೋವಿಯೆಟ್ ಯೂನಿಯನಿಗೂ ತಿಳಿಸಲಾಗಿದೆ. ಫಿನ್‌ಲೆಂಡಿನ ನಿರಾಕರಣೆಯಿಂದ ರಶ್ಯದ ಪೆಟ್ಟನ್ನು ತಿನ್ನಲು ಅದೀಗ ನಿಶ್ಚಯ ಮಾಡಿದೆಯೆಂದು ಸ್ಪಷ್ಟವಾಗಿದೆ.

ಜಪಾನೀ ಸೈನಿಕರು ಹಿಂದುಸ್ಥಾನ ಬರ್ಮಾ ಗಡಿ ಪ್ರದೇಶವನ್ನು ದಾಟಿ ಮಣಿಪುರ ಸಂಸ್ಥಾನಕ್ಕೆ ಕಾಲಿಟ್ಟಿರುವರು. ೧೫೦ ಮೈಲು ದೂರವಿರುವ ಮಣಿಪುರ ರಸ್ತೆಯನ್ನು ಹಿಡಿಯುವುದು ಅವರ ಉದ್ದೇಶವೆಂದು ಹೇಳಲಾಗಿದೆ. ಚಿಂಡ್ವಿನ್ ನದಿ ಹತ್ತಿರವಿರುವ ಜಪಾನೀ ಸೈನಿಕರು ಪಶ್ಚಿಮಕ್ಕೆ ತೆರಳಿ ಸೋಮ್ರ ಗುಡ್ಡಗಾಡು ಪ್ರದೇಶವನ್ನು ಹೊಕ್ಕು ಮಣಿಪುರಕ್ಕೆ ಕಾಲಿಟ್ಟಿರುವರೆಂದು ವಿವರ ಬಂದಿರುವುದು.

ಜಪಾನರನ್ನು ಅರಕಾನಿನಲ್ಲಿ ಗೆಲ್ಲುತ್ತಿದ್ದೇವೆಂದು ನಮಗೆ ಕಳೆದ ವಾರ ತಿಳಿಸಲಾಗಿದೆ. ಈಗ ಜಪಾನರು ಮಣಿಪುರದಲ್ಲಿ ಕಾಲಿಟ್ಟಿದ್ದಾರೆಂದು ಸುದ್ದಿ ಬಂದಿರುವುದು. ಹೇಗೂ ನಾವಿಂದು ನಮ್ಮ ದೇಶದ ಗಡಿಯಲ್ಲಿ ಭೀಕರ ಹೋರಾಟ ನಡೆಯುತ್ತಿದೆಯೆಂದು ಸ್ಪಷ್ಟವಾಗಿ ತಿಳಿಯಲೇಬೇಕು; ಒಮ್ಮೆ ಜಪಾನರು ಮುಂದಾದರೆ, ಒಮ್ಮೆ ಮಿತ್ರರು ಜಪಾನರನ್ನು ಹಿಂದಟ್ಟಿದರೆ ಇಷ್ಟರಿಂದ ಯುದ್ಧದ ನಿರ್ಣಯವಾಗದು.

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನ ಸಂಗ್ರಹ ಅಥವಾ ನಿಮ್ಮ ಠೇವಣಿಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿರಲಿ—ಯಾವ ಚೆಕ್ ಆದರೂ ಕೆನರಾ ಬೇಂಕಿನಲ್ಲಿ ವಟಾಯಿಸಲ್ಪಡಲು ಐದು ನಿಮಿಷಗಳಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮೈಸೂರು ಮಹಾರಾಜರು

ತಾ. ೧೮ರಂದು ಎರಡನೆಯ ಬಾರಿಯಾಗಿ ಪೊಳಲಿಯನ್ನು ಸಕುಟುಂಬರಾಗಿ ಸಂದರ್ಶಿಸಿ ಪೂಜಾದಿಗಳನ್ನು ನೆರವೇರಿಸಿ ಮರಳಿದರು.

ಮರಣ

ಬೆಳ್ಳಿಪ್ಪಾಡಿ ಮನೆತನದ ಶ್ರೀ ನಾರಾಯಣ ರೈ ಇವರು ತಾ. ೧೭ರಂದು ಗಾಯಗೊಂಡು ಮಂಗಳೂರು ವೆನ್‌ಲಾಕ್ ಆಸ್ಪತ್ರೆಗೆ ತರಲ್ಪಟ್ಟು ಮರು ದಿನ ಇಲ್ಲಿ ಮರಣ ಹೊಂದಿದರು. ಶ್ರೀಯುತರನ್ನು ಉಪ್ಪಿನಂಗಡಿ ಬಳಿಯಲ್ಲಿ ಕೆಲವರು ಹಿರಿದರೆಂದು ತಿಳಿದಿದೆ.

ಗೆಣಸು ಕಳುಹಿಸ ಕೂಡದು

ದ. ಕ. ಜಿಲ್ಲೆಯಿಂದ ಯಾವನೊಬ್ಬನು ಗೆಣಸನ್ನು ಮದ್ರಾಸು ಪ್ರಾಂತ್ಯದ ಪರಿಮಿತಿ ಬಿಟ್ಟು ಹೊರಗೆ ಇಂದಿಯದ ಯಾವುದೇ ಸ್ಥಳಕ್ಕಾದರೂ ಅನುಮತಿಯಿಲ್ಲದೆ ಕಳುಹಿಸ ಕೂಡದೆಂದು ಈ ಆಜ್ಞೆ ಮೀರಿದವರು ೩ ವರ್ಷಗಳ ಶಿಕ್ಷೆ ಅಥವಾ ಜುಲ್ಮಾನೆ ಇಲ್ಲವೇ ಇವೆರಡಕ್ಕೂ ಗುರಿಯಾಗುವರೆಂದು ಜಿಲ್ಲಾ ಕಲೆಕ್ಟರರ ಆಜ್ಞೆಯಾಗಿದೆ.

ಮಿತ್ರ ಮಂಡಳಿ

ಕಳೆದ ಶನಿವಾರ ಸಂಜೆ ಮಿತ್ರ ಮಂಡಳಿಯ ಸಭೆಯೊಂದು ಶ್ರೀ. ಅಣ್ಣಪ್ಪ ಇವರ ಅಧ್ಯಕ್ಷತೆಯಲ್ಲಿ ಥಿಯಾಸಫಿಕಲ್ ಲಾಜಿನಲ್ಲಿ ಜರಗಿ 'ಅಂದಿನ ಅವೂರು' ಭಾಷಣ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲಾಯಿತು.

ವ್ಯವಸಾಯಾಭಿವೃದ್ಧಿ ಸಹಕಾರೀ ಸಂಘ

ಮೇಲಿನ ಹೆಸರಿನ ಒಂದು ಸಂಘವು ಮಂಗಳೂರು ತಾಲೂಕಿನ ಕೆಲವು ಜಮೀನ್ದಾರರ ಸಭೆ ತಾ. ೧೯ರಂದು ಸೇರಿ ಸ್ಥಾಪಿತವಾಯಿತು.

ಕೃಷ್ಣಪ್ಪ ಸ್ಮಾರಕ ಟೂರ್ನಮೆಂಟ್

ಓರಿಯಂಟಲ್ ಬೆಡ್ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಕೃಷ್ಣಪ್ಪ ಸ್ಮಾರಕ ಬೆಡ್ಮಿಂಟನ್ ಟೂರ್ನಮೆಂಟು ಜರಗಿ ಅದರ ಬಹುಮಾನ ವಿತರಣೆ ಶ್ರೀ. ಎಂ. ಎ. ಕಾಮತರ ಅಧ್ಯಕ್ಷತೆಯಿಂದ ಇತ್ತೀಚೆಗೆ ಜರಗಿತು.

ಜಿಲ್ಲಾ ಹಿಂದುಸ್ಥಾನ್ ಸ್ಕೌಟ್ ಸಂಘ

ಇದರ ವಾರ್ಷಿಕ ಸಭೆಯು ಡಾ। ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ತಾ. ೧೮ರಂದು ಸೇರಿ ವಾರ್ಷಿಕ ವರದಿಯೊಪ್ಪಿಸಲ್ಪಟ್ಟ ಮೇಲೆ ದಿವಂಗತರಾದ ಕಸ್ತೂರ್ ಬಾ, ಬಿ. ಮುಕುಂದ ಬಾಳಿಗ, ಸೋದೆ ಮಠದ ಶ್ರೀ ಪಾದಂಗಳವರು, ಶ್ರೀ ರಾಮದಾಸ ಪಂತಲು ಮತ್ತಿತರ ನಿಧನ ಕುರಿತು ಸಂತಾಪ ಸೂಚಕ ನಿರ್ಣಯವಾಯಿತು. ಮುಕುಂದ ಬಾಳಿಗರ ಭಾವಚಿತ್ರವನ್ನು ಸಂಘದ ಕಾರ್ಯಾಲಯದಲ್ಲಿ ಅನಾವರಣ ಮಾಡಬೇಕೆಂದೂ ನಿರ್ಣಯವಾಗಿ ಹೊಸ ವರ್ಷದ ಕಾರ್ಯಕಾರೀ ಮಂಡಳಿ ಆರಿಸಲ್ಪಟ್ಟಿತು.

ಜಿಲ್ಲಾ ಗ್ರಾಮ ಕೈಗಾರಿಕೆ

ಗ್ರಾಮ ಕೈಗಾರಿಕೆಗಳಲ್ಲಿ ಆಸಕ್ತಿಯುಳ್ಳವರ ಸಭೆಯೊಂದು ತಾ. ೧೯ರಂದು ಕೋಓಪರೇಟಿವ್ ಸೊಸೈಟಿಗಳ ಡಿ. ರಿಜಿಸ್ಟ್ರಾರಾದ ಶ್ರೀ ಸರ್ವೋತ್ತಮ ರಾಯರ ಅಧ್ಯಕ್ಷತೆಯಲ್ಲಿ ಸೇರಿ ಕೆಲಸಮಯದಿಂದ ಕೆಲಸ ಮಾಡದಿರುವ ಗ್ರಾಮ ಕೈಗಾರಿಕೆಗಳ ಸಹಕಾರೀ ಸಂಘವನ್ನು ಪುನರುಜ್ಜೀವಿಸುವ ಕುರಿತು ಸೂಚನೆಯಾ

ಯುದ್ಧ ಪ್ರಯತ್ನದ ಕೈಗಾರಿಕೆಗಳ ಮತ್ತು ದೇಶದ [illegible] ಕೈಗಾರಿಕೆಗಳ ಮೂರು ಸಂಘ ಸ್ಥಾಪಿಸುವ ಕಾರ್ಯ ಕೈಕೊಳ್ಳುವ ಸಲುವಾಗಿ ಒಂದು ಸಮಿತಿ ಸ್ಥಾಪಿತವಾಯಿತು.

ದಕ್ಷಿಣ ಕನ್ನಡಕ್ಕೆ ೧೮ ಸಾವಿರ ಟನ್ ಅಕ್ಕಿ ಬೇಕು.

ಪಂಡಿತ ಕುಂಜ್ರುಗಳು ಕೌನ್ಸಿಲ್ ಓಫ್ ಸ್ಟೇಟನಲ್ಲಿ ಸರಕಾರದ ಅನ್ನ ಸಾಮಗ್ರಿ ಸರಬರಾಯಿ ವಿಚಾರವಾಗಿ ಪ್ರಸ್ತಾಪಿಸುತ್ತಾ, ದಕ್ಷಿಣ ಕನ್ನಡದ ವಿಚಾರ ಬಂದ ವಿಷಯವು ಹೇಳಲಿಲ್ಲವೆಂದೂ ದಕ್ಷಿಣ ಕನ್ನಡಕ್ಕೆ ಇನ್ನೂ ೧೮ ಸಾವಿರ ಟನ್ ಅಕ್ಕಿ ಬೇಕೆಂದೂ ಸರಕಾರವು ಇನ್ನೂ ಈ ಕಡೆ ಲಕ್ಷ್ಯ ಪೂರೈಸಿಲ್ಲ ಎಂದು ತಿಳಿಸಿದರು.

ಎಸೆಂಬ್ಲಿಯಲ್ಲಿ ಜಿನರಾಜ ಹೆಗ್ಡೆ

ಇವರು ಆಹಾರದ ಅಭಾವ ಹೆಚ್ಚಾಗಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಅಕ್ಕಿ ಸರಬರಾಯಿ ಮಾಡಬೇಕೆಂಬ ಕೇಳಿಕೆಯನ್ನು ಸರಬರಾಯಿ ಖಾತೆ ಕಮಿಶನರು ಧಿಕ್ಕರಿಸಿದ ಕುರಿತು ಚರ್ಚಿಸಲು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ. ಜಿನರಾಜ ಹೆಗ್ಡೆಯವರು ತಂದ ನಿರ್ಣಯವನ್ನು ಅಧ್ಯಕ್ಷರು ತರಲು ಒಪ್ಪಿಗೆ ಕೊಡಲಿಲ್ಲ.

ಶ್ರೀ। ಶ್ರೀಧರ ಸ್ವಾಮಿಜಿಯವರು

"ಈ ಸತ್ಪುರುಷರು ಸಮರ್ಥ ರಾಮದಾಸ ಪಂಥಕ್ಕೆ ಸೇರಿದವರೂ ಸ್ವಾಮಿಜಿಯವರಿಗೆ ವೇದ ಉಪನಿಷತ್ತು, ಗೀತಾ ಹಾಗೂ ಸಮರ್ಥ ವಾಙ್ಮಯ ಇತರ ಮರಾಠಿ ಪ್ರಾಸಾದಿಕ ವಾಙ್ಮಯಗಳ ಸಮಗ್ರ ಪರಿಚಯವಿದೆ. ಈ ಪರಿಚಯವು ಸ್ವಾನುಭೂತಿಯಲ್ಲಿ ಪರಿಪಕ್ವವಾದ್ದರಿಂದ ಸ್ವಾಮಿಜಿಯವರ ಆಗಮನವು ಅಪೂರ್ವ ಸಂಧಿಯೇ ಸರಿ

ಗಹನವಾದ ಅಗಾಧವಾದ ತತ್ವವನ್ನು ಸುಲಭವಾಗಿ ಸರಳವಾಗಿ ರಸಯುಕ್ತವಾಗಿ ಜನರಿಗೆ ತಿಳಿಯ ಹೇಳುವುದೊಂದು ಅಸಾಧಾರಣ ಶಕ್ತಿ ಇವರಲ್ಲಿದೆ ವಿಷಯಪರಿಜ್ಞಾನವೂ ಸರ್ವರೂ ಕೃತಾರ್ಥರಾಗಬೇಕೆಂಬ ಆಕಾಂಕ್ಷೆಯೂ ಇದಕ್ಕೆ ಕಾರಣವಿರಬೇಕು

ಸ್ವಾಮಿಜಿಯವರು ಪ್ರೌಢ ಮಾರ್ಗದಲ್ಲಿ ಅಗಾಧ ವಿಷಯವಾದ ಸ್ವಸ್ವರೂಪದ ಜಾಗೃತಿಯನ್ನು ಯುಕ್ತಿ ಪ್ರಮಾಣಗಳಿಂದ ಉಂಟು ಮಾಡಿದರು ಈ ಜ್ಞಾನವು ಸನಾತನ ಧರ್ಮದ ಹಾಗೂ ಭಕ್ತಿ ಕರ್ಮಯೋಗಗಳ ಲಕ್ಷ್ಯವೆಂದು ಬೋಧಿಸಿದರು. ಭಗವದ್ಗೀತ ನಿರೂಪಣ ಸಂದರ್ಭದಲ್ಲಿ ಭಗವತ್ಪ್ರಾಪ್ತಿಗೆ ಮುಮುಕ್ಷುವಿನ ಯೋಗ್ಯತಾನುಸಾರ ಸನ್ಯಾಸ ಹಾಗೂ ಕರ್ಮಯೋಗಗಳೂ ಏಕಪ್ರಕಾರ ಅನುಕೂಲವೆಂಬ ಯೆಂಶವನ್ನು ತಿಳಿಯ ಹೇಳಿದರು.

ಸುಶಿಕ್ಷಿತ ಅಶಿಕ್ಷಿತರೆಂಬ ಭೇದವಿಲ್ಲದೆ ಎಲ್ಲರನ್ನೂ ಏಕಪ್ರಕಾರ ಆಕರ್ಷಿಸಿದ್ದನ್ನು ಕಾಣುವಾಗ ಈ ಸಾಧುಗಳು ಅಸಾಧಾರಣ ವ್ಯಕ್ತಿಯೆಂದು ತೋರುವುದು. ಈ ಸತ್ಪುರುಷರಿಂದ ಪರಮಾತ್ಮನು ಇನ್ನು ಹೆಚ್ಚು ಹೆಚ್ಚು ಲೋಕೋಪಕಾರವನ್ನು ಮಾಡಲೆಂದು ಪ್ರಾರ್ಥಿಸುತ್ತೇವೆ."

ವಿವಾಹ

ಶ್ರೀ. ಅಲಂಗಾರು ಗೋವಿಂದ ಭಟ್ಟರ ಪುತ್ರ ಶ್ರೀ. ತಿರುಮಲೇಶ್ವರ ಭಟ್ಟರಿಗೆ ತಾ. ೭—೩—೪೪ರಂದು ಶ್ರೀ. ಕುಕ್ಕೆಮನೆ ಶಂಕರ ಭಟ್ಟರ ಪುತ್ರಿ ಶ್ರೀಮತಿ ಪರಮೇಶ್ವರಿ ಇವರೊಡನೆ ಕುಕ್ಕೆಮನೆಯಲ್ಲಿ ವಿವಾಹವಾಯಿತು. ವಧೂವರರಿಗೆ ಅನೇಕ ಸಂದೇಶ ಪಾರಿತೋಷಕಗಳು ದೊರೆತಿದ್ದವು.

ಅಂತರ್ಜಾತೀಯ ವಿವಾಹ

ಕಾರ್ಕಳದ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಅಧ್ಯಾಪಕಿಯರಾಗಿದ್ದ ಗೌಡಸಾರಸ್ವತ ಸಮಾಜದ ಶ್ರೀಮತಿ ಸುಲೋಚನಾಬಾಯಿಯವರು ಧಾರವಾಡದ ಶ್ರೀ. ಯಂ. ಸಿ. ಹಿರೇಮಠ ಇವರನ್ನು ಇತ್ತೀಚೆಗೆ ಧಾರವಾಡದಲ್ಲಿ ವಿವಾಹ ಮಾಡಿಕೊಂಡರೆಂದು ತಿಳಿಯುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಪತ್ರಿಕೋದ್ಯೋಗೀ ಸಂಘ

ವಿಶ್ವಕರ್ಣಾಟಕ ನಿರ್ಬಂಧನಿಷೇಧ

ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗೀ ಸಂಘದ ಕಾರ್ಯಕಾರೀ ಸಮಿತಿಯ ಸಭೆ ತಾ. ೧೯ರಂದು ಸೇರಿ ಈ ಕೆಳಗಿನ ನಿರ್ಣಯ ಮಾಡಿದೆ:

'ಬೆಂಗಳೂರಿನ ವಿಶ್ವಕರ್ಣಾಟಕ ದಿನಪತ್ರಿಕೆಯನ್ನು ಒಂದು ವರ್ಷದ ವರೆಗೆ ಪ್ರಕಟಿಸಬಾರದೆಂದು ಮೈಸೂರು ಸರಕಾರವು ಹೊರಡಿಸಿದ ಪ್ರತಿಬಂಧಕಾಜ್ಞೆಯನ್ನು ಈ ಸಂಘವು ತೀವ್ರವಾಗಿ ಪ್ರತಿಭಟಿಸುತ್ತದೆ ಮಾತ್ರವಲ್ಲದೆ ಸಂಬಂಧಪಟ್ಟ ಸರಕಾರವು ಪತ್ರಿಕಾ ಸ್ವಾತಂತ್ರ್ಯಕ್ಕೆ ದಕ್ಕೆ ತರುವಂತಹ ಇಂಥ ಕಠಿಣವಾದ ಆಜ್ಞೆಯನ್ನು ಹಿಂತೆಗೆಯ ಬೇಕಾಗಿಯೂ ಒತ್ತಾಯಪಡಿಸುತ್ತದೆ ಮತ್ತು ಕರ್ಣಾಟಕದ ಇತರ ಎಲ್ಲಾ ಪತ್ರಿಕೆಗಳು ಪತ್ರಿಕೋದ್ಯಮಿಗಳು ಪತ್ರಿಕೋದ್ಯೋಗಿ ಸಂಘಗಳು ಈ ನಿರ್ಬಂಧಕಾಜ್ಞೆಯನ್ನು ಪ್ರತಿಭಟಿಸಬೇಕಾಗಿ ಕೇಳಿ ಕೊಳ್ಳುತ್ತದೆ

ಪೂರೈಕೆ ಕಮಿಶನರಲ್ಲಿ ಶಿಷ್ಟ ಮಂಡಳ

ತಾ. ೧೭ರಂದು ಬೆಳಗ್ಗೆ ಶ್ರೀಗಳಾದ ಎ. ಬಿ. ಶೆಟ್ಟಿ, ಯಂ ಶಿವರಾವ್ ನರ್ಸಪ್ಪಯ್ಯ, ಸದಾನಂದ ಹೆಗ್ಡೆ ಮತ್ತು ಸಿ ಎಲ್. ಲೋಬೋ ಇವರ ಶಿಷ್ಟ ಮಂಡಳವೊಂದು ಇಲ್ಲಿಗೆ ಬಂದಿರುವ ಪ್ರಾಂತಿಕ ಆಹಾರ ಪೂರೈಕೆ ಕಮಿಶನರಾದ ಡಬ್ಲ್ಯು. ಸ್ಕಾಟ್ ಬ್ರೌನ್ ಇವರನ್ನು ಕಂಡು ಮಾತನಾಡಿತು

ಈ ಜಿಲ್ಲೆ ಕಡಿಮೆ ಉತ್ಪತ್ತಿ ಪ್ರದೇಶ, ಹೊರಗಿನಿಂದ ಇಲ್ಲಿಗೆ ಅಕ್ಕಿ ಬರಬೇಕೆಂದು ಶಿಷ್ಟ ಮಂಡಳದವರು ಪೂರೈಕೆ ಕಮಿಶನರಿಗೆ ತಿಳಿಸಿದರು ಸ್ವಂತದ ಅವಶ್ಯತೆಗೆ ಬೇಕಾಗುವುದಕ್ಕಿಂತ ಹೆಚ್ಚಿಗೆ ಇರುವ ಅಕ್ಕಿಯನ್ನೆಲ್ಲ ಜಮೀನ್ದಾರರು ಮತ್ತಿತರರಿಂದ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ತಮ್ಮ ಒಪ್ಪಿಗೆ ಸಹಕಾರವಿದೆಯೆಂದು ಶಿಷ್ಟ ಮಂಡಳದವರು ಹೇಳಿದರು

ಕಮಿಶನರು ಉಡುಪಿ ಕಾರ್ಕಳಗಳನ್ನೂ ಸಂದರ್ಶಿಸಿ ಜಿಲ್ಲೆಯ ಆಹಾರ ಪರಿಸ್ಥಿತಿ ಪರಾಮರ್ಶಿಸಿದರು ಬೇರೆ ಕಡೆಗಳನ್ನೂ ಸಂದರ್ಶಿಸಿರುವರು

ಕೆನರಾ ಚೇಂಬರ್ ಓಫ್ ಕಾಮರ್ಸಿನಲ್ಲಿ ಚೇಂಬರಿನ ಸದಸ್ಯರು ಕಮಿಶನರನ್ನು ಭೇಟಿಯಾಗಿ, ಜಿಲ್ಲೆಯ ಆಹಾರ ಸಂಕಷ್ಟ ನಿವಾರಣೆ ಮಾಡಲು ತಾವು ತಮ್ಮ ಸಹಾಯ ಕೊಡುವುದಾಗಿ ತಿಳಿಸಿದರು ಜಿಲ್ಲೆಯ ಹಲವೆಡೆಗಳಲ್ಲಿ ಸರಕಾರ ಸ್ವಾಧೀನ ಮಾಡಿರುವ ಅಕ್ಕಿಯನ್ನು ಬೇಕಾದರೆ ತಾವು ನಗರಕ್ಕೆ ತಂದು ಹಂಚುವ ಕೆಲಸ ಮಾಡುವೆವೆಂದು ಹೇಳಿದರು. ಇದರ ಕುರಿತು ಆಲೋಚಿಸುವುದಾಗಿ ಕಮಿಶನರು ತಿಳಿಸಿದರು ಹೆಚ್ಚಿನ ವಿಷಯ ಪರಿಶೀಲಿಸಲು ಆಹಾರ ಪೂರೈಕೆಯ ಕಮಿಶನರರನ್ನು ಪುನಃ ಮಂಗಳೂರಿಗೆ ತಾವು ಮಂಗಳೂರಿಗೆ ಕಳುಹಿಸುವುದಾಗಿಯೂ ಹೇಳಿದರು.

ಮುನ್ಸಿಪಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆ ತಾ. ೨೦ರಂದು ಚೇರ್ಮೆನ್ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿತು

ಮದ್ರಾಸಿನ ಸ್ಥಳೀಯ ಸಂಸ್ಥೆಗಳ ಇನ್ಸ್ಪೆಕ್ಟರರು 'ಆಂಧ್ರ ಸರ್ವಸ್ವಂ' ಎಂಬ ಪುಸ್ತಕವನ್ನು ತೆಕೊಳ್ಳಬೇಕೆಂದು ಬರೆದ ಸೂಚನೆ ರಿಕಾರ್ಡು ಮಾಡಲ್ಪಾಯಿತು. 'ಇದು ಆಂಧ್ರ ದೇಶವಲ್ಲ; ಲೈಬ್ರೆರಿಗಾಗಿ ಈ ಪುಸ್ತಕ ತೆಕೊಳ್ಳುವುದು ಬೇಡ' ಎಂದು ಹಲವು ಸದಸ್ಯರು ಹೇಳಿದರು.

ಸಮಯ ಸೂಚಿಸಲು ಸೈರನುಗಳನ್ನಿಡಬೇಕೆಂಬ ನಗರ ಸಭೆಯ ಸೂಚನೆಗೆ ಎ. ಆರ್. ಪಿ. ಸೈರನುಗಳೇ ಇನ್ನೂ ಇರಬೇಕೆಂದು ಸರಕಾರ ತಿಳಿಸಿದೆ

ನಗರದಲ್ಲಿ ಪ್ಲೇಗು ಹಬ್ಬುವುದರ ಕುರಿತು ದೀರ್ಘ ಚರ್ಚೆಯಾಯಿತು ಪ್ಲೇಗು ಹಬ್ಬುತ್ತಲೇ ಇದೆಯೆಂದು ಹೆಲ್ತ್ ಆಫೀಸರ್ ಡಾ। ಬಾಳಿಗರು ತಿಳಿಸಿದರು. ವೆಬ್ಸ್ಟರ್ ಮಾರ್ಕೆಟಿನಲ್ಲಿ ಇಲಿ ಬೀಳುತ್ತಿರುವುದರಿಂದ ಆ ಮಾರ್ಕೆಟನ್ನು ಸದ್ಯಕ್ಕೆ ಮುಚ್ಚಿ ಮೈದಾನಿಗೆ ಒಯ್ಯಬೇಕು ಎಂದು ಶ್ರೀ. ವ್ಯಾಸರು ಸೂಚಿಸಿದರು ಸಾಕಷ್ಟು ಹಣವಿಲ್ಲ, ಸಾಮಾಗ್ರಿ ದೊರಕುವುದಿಲ್ಲ ಎಂದು ಕಮಿಶನರೂ ಕೆಲ ಸದಸ್ಯರೂ ಆಕ್ಷೇಪಿಸಿದರು, ಗವರ್ನರರು ಬರುವಾಗ, ಚಪ್ಪರ ಹಾಕಲು ಹಣವಿದೆ, ಜನರ ಜೀವ ಬದುಕಿಸಲು ಹಣವಿಲ್ಲವೇ ಎಂದು ಶ್ರೀ ವ್ಯಾಸರು ಕೇಳಿದರು.

ಈ ಕುರಿತು ದೀರ್ಘ ಚರ್ಚೆಯಾಗಿ ವೆಬ್ಸ್ಟರ್ ಮಾರ್ಕೆಟನ್ನು ಹದಿನೈದು ದಿನಗಳ ತನಕ ಮುಚ್ಚಬೇಕೆಂದೂ ಒಡನೇ ದುರಸ್ತಿಗೊಳಿಸಿ ಶುಚಿ ಮಾಡಬೇಕೆಂದೂ, ಸದ್ಯಕ್ಕೆ ಮಾರ್ಕೆಟನ್ನು ಮೈದಾನಿಗೊಯ್ಯಲು ಕಲೆಕ್ಟರ ಸಮ್ಮತಿ ಪಡೆಯಬೇಕೆಂದೂ ನಿರ್ಣಯವಾಯಿತು. ಈ ಸೂಚನೆ ಮಂಜೂರು ಮಾಡಿದ್ದಕ್ಕೆ ಹೆಲ್ತ್ ಆಫೀಸರ್ ಡಾ। ಬಾಳಿಗರು ಎಲ್ಲರಿಗೂ ವಂದನೆ ಹೇಳಿದರು

ಸತ್ತ ಹಾಗೂ ಜೀವಂತ ಇಲಿಗಳನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಕೊಡಲು ರೂ ೧೦೦ ಮಂಜೂರಾಯಿತು

ತಮ್ಮ ಮನೆ ಎದುರು ಮುರಿದಡಬ್ಬಿ ಮತ್ತು ಕಸದ ರಾಶಿಗಳನ್ನು ಇಟ್ಟಿರುವುದಕ್ಕಾಗಿ ಕೋರ್ಟ್ವಾಷಿಷ್ಟ ಶ್ರೀಮತಿ ಲೋಲಾ ವ್ಯಾಸರು ಕೋರ್ಟಿನಲ್ಲಿ ಹೂಡಿದ ವ್ಯವಹರಣೆ ಚರ್ಚೆಗೆ ಬಂದಿತು ನಾನೇ ತಪ್ಪು ಮಾಡಿದ ಮೇಲೆ ಇದರ ಸಮರ್ಥನೆ ಹೇಗೆ? ಎಂದು ಕೆಲ ಸದಸ್ಯರು ಹೇಳಿದರು 'ಬೇಕಾದರೆ ನಾವು ಸ್ವಯಂ ಸೇವಕರಾಗುತ್ತೇವೆ, ನಗರ ಶುಚಿಯಾಗಿಡಬೇಕು' ಎನ್ನುತ್ತಾ, ಶ್ರೀ ಶ್ರೀಷ್ಟರು ಅಧಿಕಾರಿ ವರ್ಗವನ್ನು ಟೀಕಿಸಿದರು

ಈ ಸಂದರ್ಭದಲ್ಲಿ ಶ್ರೀಗಳಾದ ವ್ಯಾಸ್ ಮತ್ತು ಫಾದರ್ ಲೋಬೋ ಇವರಿಗೂ ಶ್ರೀಗಳಾದ ಸಿ ಎಲ್ ಲೋಬೋ ಮತ್ತು ಹಮ್ಮಬ್ಬ ಇವರಿಗೂ ವಾದವಿವಾದಗಳು ಜರಗಿದವು ಕಮಿಶನರು ಉತ್ತರ ಕೊಡುತ್ತಾ, ಹೊಸ ಲೋರಿಗಳು ಮಿಲಿಟರಿಗೆ ಹೋಗಿವೆ, ಹಳೆ ಲೋರಿ ಮುರಿದು ಬಿದ್ದಿದೆ ಎಂದರು ಕಡೆಗೆ ಇದನ್ನು ಪರಾಮರ್ಶಿಸಿ ಪರಿಸ್ಥಿತಿ ಸುಧಾರಿಸಲು ಒಂದು ಸಮಿತಿ ರಚಿಸಲ್ಪಟ್ಟಿತು

ನಗರದಲ್ಲಿ ಅಲ್ಲಲ್ಲಿ ನೀರಿನ ಚಪ್ಪರಗಳನ್ನೇರ್ಪಡಿಸುವ ಸರಕಾರದ ಸಲಹೆಯನ್ನು ಈ ಕಾಲದಲ್ಲಿ ಜರಗಿರುವುದು ಕಷ್ಟವೆಂದು ಅದನ್ನು ಹಾಗೆ ಬಿಟ್ಟು ಗ್ಯಾಂಗಿನ ಕೂಲಿಗಳಿಗೆ ವಾರಕ್ಕೊಂದು ದಿನ ಸಂಬಳ ಸಹಿತ ರಜೆ ಕೊಡಬೇಕೆಂದಾಯಿತು ಮುನ್ಸಿಪಲ್ ಆಸ್ಪತ್ರೆಗಳಿಗೆ ಒದಗಿಸುವ ಔಷಧಿಗಳ ಪರೀಕ್ಷೆ ಕುರಿತು ಕಳೆದ ವರ್ಷದ ಸಮಿತಿಯನ್ನೇ ಕೇಳಿಕೊಳ್ಳಬೇಕೆಂದಾಯಿತು. ಹೊಯ್ಗೆ ಬಜಾರಿನ ಮಾರ್ಕೆಟಿನ ಸ್ಥಳವನ್ನು ಅದರ ಮೊದಲಿನ ಮೂಲಿಕರಿಗೆ ಬಿಟ್ಟು ಕೊಡಬೇಕು, ಆ ಸ್ಥಳಕ್ಕೆ ಬರಲು ಅದೇ ಕರಾರದಲ್ಲಿ ಆ ಮೂಲಕರು ಮುನ್ಸಿಪಾಲಿಟಿಯವರಿಗೆ ಬೇರೆ ಸ್ಥಳ ಕೊಡಿಸಬೇಕೆಂದು ಹಿಂದಿನ ಕೌನ್ಸಿಲಿನ ವಿಧಾರದಂತೆ ಆ ಮೂಲಕರು ಬೆಲೆಗೆ ಪಡೆದು ಒಪ್ಪಿಸುವ ಸ್ಥಳವರಿಶೀಲನೆಗೆ ಒಂದು ಸಮಿತಿ ರಚಿತವಾಯಿತು.

ಗವರ್ನರರು ಬರುವುದಿಲ್ಲ

ಬರುವ ತಾ. ೨೪ಕ್ಕೆ ಮಂಗಳೂರಿಗೆ ಪತ್ನಿ ಸಮೇತರಾಗಿ ಬರಲಿರುವರೆಂದು ಹೇಳಲಾದ ಗವರ್ನರರು ತಮ್ಮ ಸಂಚಾರ ಕಾರ್ಯಕ್ರಮವನ್ನು ಸದ್ಯ ರದ್ದುಗೊಳಿಸಿರುವರೆಂದು ತಿಳಿದಿದೆ

ಜಿಲ್ಲಾ ಆಹಾರ ಸಮಿತಿ ಸಭೆ

ಪ್ರಕೃತ ಜಿಲ್ಲೆಯಲ್ಲಿ ಕಂಡುಬರುವ ಅಕ್ಕಿ ತುಟ್ಟಿಯ ದೃಷ್ಟ್ಯಾ ಆಹಾರ ಪರಿಸ್ಥಿತಿಯನ್ನು ಚರ್ಚಿಸುವರೆ ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯು ತಾ ೨೦ರಂದು ಬೆಳಿಗ್ಗೆ ೧೧ ಘಂಟೆಗೆ ಕಲೆಕ್ಟರರ ಆಫೀಸಿನಲ್ಲಿ ಸಭೆ ಸೇರಿತು ಹಲವು ಮಂದಿ ಭೂಮ್ಯಾಲಿಕರು ಹಾಗು ಒಕ್ಕಲುಗಳು ತಾವು ಈ ಮೊದಲು ವಾಗ್ದಾನ ಮಾಡಿದಷ್ಟು ಸಂಗ್ರಹವನ್ನು ಈ ತನಕವೂ ಕಳುಹಿಸಿದುದಿಲ್ಲ ಇದೇ ರೀತಿಯ ಪರಿಸ್ಥಿತಿ ಮುಂದುವರಿಯುವಂತಾದರೆ ಸದ್ಯದಲ್ಲೇ ಆಹಾರ ವಸ್ತುಗಳಿಗೆ ತುಟ್ಟಿ ಬರಬಹುದು. ಎಂಬ ವಿಷಯವು ಸಭೆಯಲ್ಲಿ ಸ್ಪಷ್ಟೀಕರಿಸಲ್ಪಟ್ಟಿತು.

ಶಹರದ ಹಾಗು ಹಳ್ಳಿಗಳ ಆವಶ್ಯಕತೆಯು ಸುಮಾರು ೯ ಲಕ್ಷ ಮುಡಿ ಅಕ್ಕಿ ಎಂದು ಅಂದಾಜು ಮಾಡಲಾಗಿದೆ ಈ ವರೆಗೆ ರಿಕ್ವಿಜಿಶನ್ ಮಾಡಿದ ಅಕ್ಕಿಯು ೨೦,೦೦೦ ಮುಡಿಗಳು ಮಾತ್ರ ಉಡುಪಿ, ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ರಿಕ್ವಿಜಿಶನ್ ಮಾಡಿದ ಅಕ್ಕಿಯು ಆ ತಾಲೂಕುಗಳ ಉತ್ಪತ್ತಿಗೆ ತಕ್ಕ ದಾಮಾಶಯದಲ್ಲಿಲ್ಲವೆಂಬುದನ್ನೂ ಸಮಿತಿಯ ಅವಗಾಹನೆಗೆ ತರಲಾಯಿತು, ಎಲ್ಲಾ ತಾಲೂಕುಗಳಲ್ಲಿರುವ ಭೂಮ್ಯಾಲಿಕರಿಂದ ಹೆಚ್ಚಿನ ಸಂಗ್ರಹವನ್ನು ಕೂಡಿದಷ್ಟು ಮಟ್ಟಿಗೆ ರಿಕ್ವಿಜಿಶನ್ ಮಾಡುವರೆ ಶೀಘ್ರ ಹಾಗು ಪರಿಣಾಮಕಾರಿಯಾಗಬಲ್ಲ ಯತ್ನಗಳನ್ನು ನಡೆಸಿಯೇ ತೀರಬೇಕು ಹಾಗು ಈ ವರೆಗೆ ತಾವು ವಾಗ್ದಾನ ಮಾಡಿದಷ್ಟು ಸಂಗ್ರಹ ಕಳಿಸಿಕೊಡದಿರುವ ಭೂಮ್ಯಾಲಿಕರಿಂದ ಮತ್ತೂ ಒಕ್ಕಲುಗಳಿಂದ ಬಾಕಿ ಇರುವ ಅಕ್ಕಿಯನ್ನು ಕೂಡಲೇ ಪಡೆಯತಕ್ಕದೆಂದೂ ಗೊತ್ತುವಳಿಗಳಾದುವು.

ಭೂಮ್ಯಾಲಿಕರ ಮತ್ತು ಒಕ್ಕಲುಗಳ ಅವಶ್ಯಕತೆಗಳಿಗೆ ಬೇಕಾಗುವಷ್ಟು ಅಕ್ಕಿಯನ್ನು ಅವರಿಗೆ ಬಿಟ್ಟುಕೊಟ್ಟು ಉಳಿದ ಎಲ್ಲಾ ಅಕ್ಕಿಯನ್ನು ಆದಷ್ಟು ಬೇಗನೆ ರಿಕ್ವಿಜಿಶನ್ ಮಾಡಲಾಗುವುದೆಂದು ಜಿಲ್ಲಾ ಕಲೆಕ್ಟರರು ಅಭಯವಿತ್ತರು ಅಕ್ಕಿಯ ಸಂಗ್ರಹವನ್ನು ಒಟ್ಟುಗೂಡಿಸಲು ತೀವ್ರ ಕಾರ್ಯಕ್ರಮವೊಂದು ಜಿಲ್ಲಾ ಕಲೆಕ್ಟರರಿಂದ ಸದ್ಯದಲ್ಲೇ ಕೈಕೊಳ್ಳಲಾಗುವುದೆಂದೂ ಸಾಧಲಾಯಿತು. ಇದರ ಕುರಿತು ತಹಶಿಲ್ದಾರರಿಗೆ ಮತ್ತು ಆಹಾರ ಸುಧಾರಣೆಯ ಬಗ್ಗೆ ನಿಯಮಿಸಲ್ಪಟ್ಟ ಸ್ಪೆಶಲ್ ಸಿಬ್ಬಂದಿಗೆ ಸೂಚನೆಗಳನ್ನು ಕಳಿಸಲಾಗಿದೆ. ರೆವೆನ್ಯೂ ಡಿವಿಜನಲ್ ಆಫೀಸರರು ರಿಕ್ವಿಜಿಶನ್ ಕಾರ್ಯಕ್ರಮವನ್ನು ಸುಪರ್ವೈಜ್ ಮಾಡಬೇಕು, ಆ ಬಗ್ಗೆ ಹತ್ತಿರದ ಸಂಬಂಧವಿಟ್ಟುಕೊಂಡು ಮುತುವರ್ಜಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಅವರನ್ನು ಕೇಳಿಕೊಳ್ಳಲಾಗಿದೆಯಾಗಿ ತಿಳಿಯುತ್ತೇವೆ.

ಇತ್ತೀಚೆಗೆ ಜಿಲ್ಲೆಗೆ ಸಂದರ್ಶನವಿತ್ತ ಆಹಾರ ಪೂರೈಕೆ ಕಮಿಶನರರು ಈ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿರುವರು ಮಾತ್ರವಲ್ಲ ಅಗತ್ಯವಿರುವ ಎಲ್ಲಾ ಸೂಚನೆಗಳನ್ನೂ ಕೊಟ್ಟಿರುವರು. "ಇತರ ತಾಲೂಕುಗಳು ಸ್ವಯಂಪೂರೈಸುವಂತಿದ್ದರೆ ಕಾಸರಗೋಡು ತಾಲೂಕಿಗೆ ಮಾತ್ರ ಅಕ್ಕಿ ಸರಬರಾಯಿಯನ್ನು ಕಳಿಸುವೆ" ಎಂದು ಕೂಡಾ ಪೂರೈಕೆ ಕಮಿಶನರರು ಹೇಳಿರುವರಂತೆ

ಶ್ರೀ. ಕಾಳಿಂಗ ರಾಯರ ಸಂಗೀತ

ಮದ್ರಾಸಿನಿಂದ ಬಂದಿದ್ದ ಪ್ರಸಿದ್ಧ ರೇಡಿಯೋಗಾಯಕರಾದ ಶ್ರೀ ಕಾಳಿಂಗ ರಾವ್ ಇವರ ಸಂಗೀತ ಕಚೇರಿಯೊಂದು 'ಮಂಗಳೂರು ಸಂಗೀತ ವೃತ್ತ'ದ ಆಶ್ರಯದಲ್ಲಿ ತಾ ೨೧ರಂದು ರಂಗ ಭವನದಲ್ಲಿ ಜರಗಿತು ಶ್ರೀ। ದಾಸಪ್ಪ ಇವರ ತಬ್ಲಾವಾದನವಿತ್ತು ಹಿಂದುಸ್ಥಾನೀ ಸಂಗೀತದಲ್ಲಿ ಶ್ರೀ. ಕಾಳಿಂಗ ರಾಯರು ಸಭಿಕರು ತಲೆ ದೂಗಿಸುವಂತೆ ಚಲೋದಾಗಿ ಹಾಡಿದರು. ಇವರ ಸಂಗೀತಕಚೇರಿ ನಗರದಲ್ಲಿ ಅಲ್ಲಲ್ಲಿ ಜರಗುತ್ತಿದೆ ಶ್ರೀಯುತರಿಬ್ಬರು ದಕ್ಷಿಣ ಕನ್ನಡದವರಾಗಿದ್ದು ಸಂಗೀತ ಕಲೆಯಲ್ಲಿ ಪ್ರಖ್ಯಾತಿ ಪಡೆದಿರುವುದು ನಾವು ಅಭಿಮಾನ ಪಡತಕ್ಕದ್ದಿದೆ.

ತಾ ೧೯ರಂದು ಶ್ರೀಗಳಾದ ಕಾಳಿಂಗ ರಾವ್ ಮತ್ತು ದಾಸಪ್ಪ ಇವರು ಚಲಚಿತ್ರ ವಿಮರ್ಶಕ ಕೂಟದಲ್ಲಿ ಭಾಷಣಗಳನ್ನಿತ್ತರು ತಾ ೨೨ರಂದು ಬೋಳಾರದ ಶ್ರೀ ವೆಂಕಪ್ಪಯ್ಯ ಇವರ ಮನೆಯಲ್ಲಿಯೂ, ತಾ ೨೩ರಂದು ಶ್ರೀ ಬಿ ತಿಮ್ಮಪ್ಪ ಶೆಟ್ಟರ ಕಾರ್ಖಾನೆಯಲ್ಲಿಯೂ ಇವರ ಸಂಗೀತ ಕಚೇರಿಯಿತ್ತು

ಪ್ಲೇಗು ರೋಗ ಹರಡುತ್ತಿದೆ

ಮಂಗಳೂರಲ್ಲಿ ಪ್ಲೇಗ್ ರೋಗ ಇದರ ಕುರಿತು ಹೆಲ್ತ್ ಆಫೀಸರರು ಕೊಟ್ಟ ವರದಿ ಹೀಗಿದೆ,

"ತಾ ೧೭ಕ್ಕೆ ಅಂತ್ಯವಾಗುವ ವಾರದಲ್ಲಿ ೩೧ ಇಲಿ ಬಿದ್ದಿವೆ, ಹಿಂದಿನ ವಾರ ೧೩ ಇಲಿ ಬಿದ್ದವು ಸತ್ತು ಬಿದ್ದ ಇಲಿಗಳ ರಕ್ತವನ್ನು ಮದ್ರಾಸಿಗೆ ಪರೀಕ್ಷೆಗಾಗಿ ಕಳುಹಿಸಲಾಯಿತು ಈ ವಾರ ಒಟ್ಟು ನಾಲ್ವರಿಗೆ ಪ್ಲೇಗು ರೋಗವಾಗಿ ನಾಲ್ವರೂ ಸತ್ತಿದ್ದಾರೆ ಹಿಂದಿನ ವಾರ ಮೂವರಿಗೆ ಪ್ಲೇಗು ತಗಲಿ ಮೂವರು ಮಡಿದರು ಗೊಲ್ಲರಕೇರಿ, ದೇರೆಬೈಲು ಕಡೆಗಳಲ್ಲಿ ರೋಗದ ಲಕ್ಷಣಗಳಿವೆಯೆಂದು ಸುದ್ದಿಯಿದೆ ಮಾರ್ಕೆಟ್ ರಸ್ತೆಯಲ್ಲಿ ಇಲಿ ಬಿದ್ದಿದೆ ಅಲ್ಲಿನ ಕೆಲ ಅಂಗಡಿಗಳನ್ನು ಕೆಲದಿನಗಳಿಂದ ಮುಚ್ಚಲಾಗಿದೆ

"ಇಲಿಗಳನ್ನು ಕೊಲ್ಲುವ ಕೆಲಸ ನಡೆಯುತ್ತಿದೆ. ಕೊಯಮುತ್ತೂರಿನಿಂದ ನಾಲ್ಕು ಸಯಾನೋಗೇಸ್ ಪಂಪುಗಳನ್ನು ತರಿಸಿ ಅವುಗಳನ್ನು ಉಪಯೋಗಿಸಲಾಗಿದೆ. ಇಲಿಗಳ ಬಿಲಗಳಿದ್ದೆಡೆ ಸಯನೋಗೇಸ್ ಪ್ರಯೋಗಿಸಲಾಗಿದೆ ಇಲಿಗಳು ಬಿದ್ದಲ್ಲಿ ಕ್ರಿಮಿನಾಶಕ ದ್ರಾವಕ ಚೆಲ್ಲುವುದು ವಠಾರ ಶುಚಿಗೊಳಿಸುವುದು ನಡೆದಿದೆ ಪ್ಲೇಗು ಸಂಶೋಧನಾ ಆಫೀಸರರು ತಾ. ೧೫ರಂದು ಇಲ್ಲಿಗೆ ಬಂದು ಇಲಿಗಳು ಬಿದ್ದ ಸ್ಥಳಗಳನ್ನು ಸಂದರ್ಶಿಸಿದಾರೆ.

ಶ್ರೀ. ಸುರೇಶ ವೈದ್ಯ

ನಾ ಭಾರತೀಯ, ಬ್ರಿಟಿಷ್ ಸೈನ್ಯಕ್ಕೆ ಸೇರಲಾರೆ

ಗುಂಡಿನೇಟಿಗೆ ಎದೆಯೊಡ್ಡಿದ್ದಾರೆ.

[illegible] ಶ್ರೀ ಸುರೇಶ ವೈದ್ಯರು ಬ್ರಿಟಿಷ್ ಯುದ್ಧ ನಾಯಕರ [illegible] ಎದುರಿಗೆ, ನಾ ಭಾರತೀಯ, [illegible] ಸೇರಲಾರೆನೆಂದು ಹೇಳಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಆಹ್ವಾನವಿತ್ತು ತಮ್ಮ ತಾಯ್ನಾಡಿನ ಗೌರವ ಕಾಪಾಡಿದ್ದಾರೆ. ಸುರೇಶ ವೈದ್ಯರ ಈ ಶಂಥ ಬ್ರಿಟಿಷ್ ಸಾಮ್ರಾಜ್ಯ [illegible] ದೇಶವಿದೇಶಗಳ ಭಾರತೀಯರ ಹೃದಯಗಳಲ್ಲಿ ಅಭಿಮಾನ ತುಂಬಿಸಿದೆ. ತನ್ನ ತಾಯ್ನಾಡಿನ ಗೌರವ ಉಳಿಸಲು, ಕೋರ್ಟ್ ಮಾರ್ಶಲ್‌ಮುಂದೆನಿಂತ, ಈ ವೀರ ಭಾರತ ಪುತ್ರ ಒಂದು ಜಗದ್ವಿಖ್ಯಾತರಾಗಿದ್ದಾರೆ. ಕೋರ್ಟ್ ಮಾರ್ಶಲ್ ಇವರ ವಿಚಾರಣೆ ಕ್ರಮದಲ್ಲಿ ನಡೆಯುತ್ತಿದೆ. ತೀರ್ಮಾನವಿನ್ನೂ ಆಗಿಲ್ಲ. ನಾನು ರಣರಂಗಕ್ಕಿಳಿಯಲು ಹಿಂಜರಿವ ಹೇಡಿಯಲ್ಲ; ಆದರೆ ನಿಮ್ಮ ವೇಷ ನಾ ಹಾಕಿಕೊಳ್ಳಲಾರೆ; ನನ್ನ ಸ್ಥಾನ ಸ್ವತಂತ್ರವಾದ ಭಾರತದ ಸೈನ್ಯದಲ್ಲಿ; ಸುರೇಶ ವೈದ್ಯ ಹೀಗೆ ನುಡಿದಿದ್ದಾರೆ. ನ್ಯಾಯಪತಿಗಳ ತೀರ್ಮಾನವು ಅಧಿಕಾರ ಮಧಾಂಧತೆಯಿಂದಿರದೆ ನಿಜವಾಗಿಯೂ ನ್ಯಾಯದ್ದ ಆಗಲಿ! ಅತ್ಲಾಂಟಿಕ ಶಾಸನ ಮತ್ತು ನಾಲ್ಕು ಸ್ವಾತಂತ್ರ್ಯಗಳ ವಿಷಯ ನಮಗೆ ಬೇಕಾದಷ್ಟು ಉಪದೇಶ ಕೊಡಲಾಗಿದೆ. ಜಗತ್ತನ್ನು ಮೋಸಗೊಳಿಸಲು ಎಷ್ಟೋ ಕುಶಲ ವಿದ್ಯೆ ಕಲಿಸಲಾಗಿದೆ. ಮೂವತ್ತೈದು ವರ್ಷ ಪ್ರಾಯದ, ಸ್ವಾತಂತ್ರ್ಯ ಪ್ರೇಮಿ ಸುರೇಶ ವೈದ್ಯರು ಬ್ರಿಟಿಷ್ ಸಾಮ್ರಾಜ್ಯಕ್ಕೆ ಹಾಗೂ ಮಿತ್ರಕೂಟಕ್ಕೆ ಈ ಆಹ್ವಾನವಿತ್ತಿದ್ದಾರೆ. ಕೋರ್ಟ್ ಮಾರ್ಶಲ್‌ನ ತೀರ್ಮಾನವನ್ನು ಜಗತ್ತೇ ಆತುರದಿಂದ ಎದುರು ನೋಡುತ್ತಿದೆ.

ಅವರ ಪ್ರಾರಂಭ ಜೀವನ

ತನ್ನ ರಾಷ್ಟ್ರದ ಗೌರವವನ್ನು ಕಾಪಾಡದೆ ಬದುಕುವುದಕ್ಕಿಂತ, ಗುಂಡಿನೇಟಿಗೆ ಎದೆಗೊಡುವುದು ಯೋಗ್ಯವೆಂದು ಶ್ರೀ ಸುರೇಶ ವೈದ್ಯರು ಈ ಧೀರ ನಿರ್ಧಾರ ಮಾಡುವವರೆಗೆ ಅವರ ಪರಿಚಯ ಬಹಳ ಸ್ವಲ್ಪ ಮಂದಿಗೆ ಮಾತ್ರ ಇತ್ತು. ಬೊಂಬಯಿ ಪ್ರಾಂತ್ಯದಲ್ಲಿ ಅವರು ಹುಟ್ಟಿದರು; ರಾಮ್‌ಮೋಹನ್ ಹೈಸ್ಕೂಲಲ್ಲಿ ಆ ಮೇಲೆ ಬೊಂಬೇ ವಿಲ್ಸನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ತನ್ನ ವಿದ್ಯಾರ್ಥಿ ಜೀವನದಲ್ಲಿಯೇ ಅವರು ಕಾಂಗ್ರೆಸ್ ಕೆಲಸಗಾರರಾಗಿ ಅವಿಶ್ರಾಂತ ದುಡಿದವರು. ಪತ್ರಿಕೋದ್ಯೋಗ ಮಾಡಲು ಬಾಲ್ಯದಿಂದಲೇ ಅವರಿಗೆ ಉತ್ಸಾಹವಿತ್ತು; ಮಾತೃಭೂಮಿಯ ಸೇವಾಕಾಂಕ್ಷೆ ಅವರಲ್ಲಿ ಆ ಉತ್ಸಾಹವನ್ನು ಕೆರಳಿಸಿ ಸಾಹಸ ಕಾರ್ಯಕ್ಕೆ ಮುಂದುವರಿಸಿತು. ಜ್ಞಾನ ಸಂಪಾದನೆಗಾಗಿ ಜಗತ್ ಸಂಚಾರ ಮಾಡಬೇಕೆಂದು ಅವರಲ್ಲಿ ಉತ್ಸಾಹವಿದ್ದುದರಿಂದ ವಿಲ್ಸನ್ ಕಾಲೇಜಿನ ಸಂಕುಚಿತ ಆವರಣ ಅವರಿಗೆ ಬೇಸರಹುಟ್ಟಿಸಿತು. ೧೯೩೨ರ ಸುಮಾರಿನಲ್ಲಿ ಅವರು ವಿದೇಶ ಪ್ರಯಾಣ ಮಾಡಲು ನಿರ್ಧಾರಮಾಡಿದರು. ಒಂದು ದಿನ ಶಾಂತರಾಗಿ ಅವರು ಕೊಲೊಂಬೋಗೆ ಮುಟ್ಟಿ ಅಲ್ಲಿಂದ ಉದ್ವೇಗಗೊಂಡ ತಂದೆಗೆ ತಂತಿಮಾಡಿದರು. ತನ್ನ ಮಗನ ಬುದ್ಧಿ ಸಾಮರ್ಥ್ಯವನ್ನು ತಿಳಿದ ತಂದೆ ಜಯರಾವ್ ನಾನಾ ವೈದ್ಯರು ಮಗನಿಗೆ ಐ. ಸಿ. ಎಸ್., ಓದಲು ಹೇಳಿದರು; ಆದರೆ ಹೋರಾಡುವ ಪ್ರಕೃತಿಯವರಾದ ಸುರೇಶ ವೈದ್ಯರಿಗೆ ಅಧಿಕಾರ ಜೀವನ ಹೇಗೆ ಆಕರ್ಷಣೀಯವಾಗಬೇಕು? ತನ್ನ ಕಾಲೇಜು ಎರಡನೆಯ ವರ್ಷ ತೀರಿವಾಗ ಅವರು ಸಪ್ತಸಾಗರಗಳಲ್ಲಿ ತೇಲಾಡ ಹೋಗುತ್ತಿದ್ದರು.

ಕೈಯಲ್ಲಿ ಕಾಸಿಲ್ಲದಿದ್ದರೂ ಅವರ ಸಾಹಸೀ ಜೀವನಕ್ಕೆ ವಿದೇಶವು ಬಹಳ ಆಸ್ಪದವಿತ್ತಿತು; ವ್ಯಾಪಾರಿಯಾಗಿ, ದಲಾಲಿಯಾಗಿ, ಪತ್ರಿಕೋದ್ಯೋಗಿಯಾಗಿ ಅವರು ಎಲ್ಲೆಲ್ಲೂ ಅಲೆದಾಡಿದರು; ಈ ಅಲೆದಾಟದಿಂದಾಗಿ ಕೊನೆಗೊಮ್ಮೆ ಇಂಗ್ಲೆಂಡಿನಲ್ಲಿ ತೀವ್ರ ಕಾಯಿಲೆಗೊಳಗಾದರು. ಕೈಯಲ್ಲಿ ಕಾಸಿಲ್ಲದೆ, ಮೃತ್ಯು ಬಳಿ ಬಂದಿರುವಾಗ, ಅವರು ಜೀವನ್ಮರಣ ಸಂಗ್ರಾಮ ಹೂಡಬೇಕಾಯಿತು. ಧೀರಪತ್ನಿ ಮಾರ್ಜೋರಿ ಕೂಡಾ ಗಂಡನ ಈ ಬಡತನ ಮತ್ತು ಜೀವನ್ಮರಣ ಹೋರಾಟದಲ್ಲಿ ಸಹಭಾಗಿಯಾಗಿದ್ದಳು. ಟೈಮ್ ಪತ್ರಿಕೆಯ ಲಂಡನ್ ಸಂಪಾದಕೀಯ ಮಂಡಳದಲ್ಲಿ ಸೇರುವ ಮೊದಲು ಅದೃಷ್ಟದೊಡನೆ ಅವರು ಸದಾ ಹೋರಾಡಿದರು. ಹೀಗಾದರೂ ಅವರು ನಿರಾಶರಾಗಲಿಲ್ಲ. ಇದರಿಂದಾಗಿ ಅವರು ಮಾತೃಭೂಮಿಗೆ ಮರಳುವುದಾಗಲಿಲ್ಲ. ೧೯೩೭ರಲ್ಲಿ ಪ್ರಸಿದ್ಧ ಮರಾಠೀ ಲೇಖಕರಾದ ಶ್ರೀ ಅನಂತ ಕಾನೇಕ್ಕರ್ ಇಂಗ್ಲೆಂಡಿನಲ್ಲಿ ಅವರನ್ನು ಭೇಟಿಯಾದಾಗ, ಮಾತೃಭೂಮಿಗೆ ಮರಳಿ ಬರಬೇಕೆಂದು ಅವರು ಆತುರ ತೋರಿಸಿದ್ದರು. ತನ್ಮಧ್ಯೆ, ಶ್ರೀ ವೈದ್ಯರು ‘ಕೈಲಾಸ’ ಮತ್ತು ‘ಕಿಂಗ್ ಕೋಟನ್’ ಎಂಬ ಎರಡು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದರು.

ಅವರ ಧೀರ ಬ್ರಿಟಿಷ್ ಪತ್ನಿ

ಮಾರ್ಜೋರಿ–ವೈದ್ಯರ ಧೀರ ಬ್ರಿಟಿಷ್ ಪತ್ನಿ; ಇವರಿಗೆ ಇಬ್ಬರು ಹುಡುಗಿಯರು ಹುಟ್ಟಿದ್ದಾರೆ; ಇವರ ವಿವಾಹವು ಬ್ರಿಟಿಷ್ ಮ್ಯೂಸಿಯಮ್‌ನ ಒಂದು ಭೇಟಿಯಿಂದ ಅಥವಾ ಕಾಫಿ ಹೋಟೇಲಿನ ಒಂದು ಪರಿಚಯದಿಂದ ಇಂಥಾ ಪ್ರೇಮದಿಂದ ಆದ ವಿವಾಹವಲ್ಲ. ಧೀರತೆಯು ಧೀರತೆಯನ್ನು ಒಂದುಗೂಡಿದ ದೃಷ್ಟಾಂತ ಇದು. ಥೇಮ್ಸ್‌ನ ನೆರೆಯ ನೀರು ಭೋರ್ಗರೆಯುತ್ತಿದ್ದಾಗ ಮಾರ್ಜೋರಿ ಅದಕ್ಕೆ ಹಾರಿದ್ದನ್ನು ಸುರೇಶ್ ಕಂಡ! ನಿಜವಾದ ಓರ್ವ ಪತ್ರಿಕೋದ್ಯೋಗಿಯಂತೆ ಸುರೇಶ ಸಾಹಸಮುಖಿಯಾದ ಮಾರ್ಜೋರಿ ಕೈಹಿಡಿದ. ಮಾರ್ಜೋರಿಗೆ ಸಂಗೀತದಲ್ಲಿ ಹಾಗೂ ತನ್ನ ಪತಿಯ ಮಾತೃಭೂಮಿಯ ಮೇಲೆ ಅತ್ಯಂತ ಅಭಿಮಾನ. ಅಮರಾವತಿಯಲ್ಲಿರುವ ತನ್ನ ಅತ್ತಿಗೆ ಶ್ರೀಮತಿ ವಿಮಲಾ ದೇಶಮುಖರಿಗೆ ಮಾರ್ಜೋರಿ ಬರೆದ ಈ ಕೆಳಗಿನ ಪತ್ರದಿಂದ, ಆಕೆಯ ಹೃದಯ ಸ್ಪಷ್ಟವಾಗುವುದು. ಪತ್ರ ಇಂತಿದೆ.

ಲಂಡನ್, ಜನವರಿ ೨೨–೧–೪೪

‘ನನ್ನ ಪ್ರಿಯ ವಿಮಲಾ,

ಬ್ರಿಟಿಷ್ ಸೇನೆಗೆ ಸೇರಲೊಲ್ಲೆನೆಂದು, ಸುರೇಶ್ ತಿರಸ್ಕರಿಸಿದಕ್ಕಾಗಿ ಅವರನ್ನು ಮಿಲಿಟರಿ ಅಧಿಕಾರಿಗಳು ಬಂಧಿಸಿರುವರೆಂಬ ವಿಷಯ ನೀನು ಪತ್ರಿಕೆಗಳಲ್ಲಿ ಇಷ್ಟರಲ್ಲೇ ಓದಿರಬಹುದು. ಕಳೆದ ಮೂರು ವರ್ಷಗಳಿಂದ ಇವರಿಗೆ ಅವರು ಕಾಪಟಳ ಕೊಡುತ್ತಲೇ ಇದ್ದಾರೆ; ಹಾಗಾಗಿ ಇಂಥ ಸಂದರ್ಭ ಒದಗುತ್ತದೆಂದು ನಾವು ಮೊದಲೇ ನಿರೀಕ್ಷಿಸಿದ್ದೆವು. ಅವರನ್ನು ಜನವರಿ ೧೯ಕ್ಕೆ ಬಂಧಿಸಿದರು. ಆ ಮೇಲೆ ಇದುವರೆಗೆ ಏನೂ ವಿಶೇಷ ಘಟನೆ ನಡೆದಿಲ್ಲ. ಏನಾದರೂ ಘಟನೆ ನಡೆದರೆ ಕೂಡಲೇ ನಾನದನ್ನು ನಿನಗೆ ತಿಳಿಸುತ್ತೇನೆ. ಇದುವರೆಗೆ ನಾನು ಅವರನ್ನು ಪ್ರತಿದಿನ ಒಂದು ತಾಸು ನೋಡಲು ಶಕ್ತಳಾಗಿದ್ದೇನೆ. ಅವರೀಗ ದಿಗ್ಬಂಧನದಲ್ಲಿದ್ದಾರೆ; ಸಹಜವಾಗಿ ಕೋರ್ಟ್‌ಮಾರ್ಶಲ್ ಎದುರು ನೋಡುತಿದ್ದಾರೆ. ಅಧಿಕಾರಿಗಳು ಯಾವ ಹಾದಿ ಹಿಡಿಯುತ್ತಾರೆಂಬುದೇನೂ ತಿಳಿಯದೆ ನಾನು ಇದುವರೆಗೆ ಏನೂ ಹಂಚಿಕೆಮಾಡಿಲ್ಲ, ನಿಜವಾಗಿ ಇದು ನಮ್ಮನ್ನೆಲ್ಲಾ ತಳಮಳಗೊಳಿಸುತ್ತದೆ; ಆದರೆ ಮುಂದೆ ಎಲ್ಲಾ ಸರಿಯಾಗುವುದೆಂದು ನಂಬಿ ಗಾಬರಿಗೊಳ್ಳಬೇಡ. ಭಾರತಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುವಲ್ಲಿ ತನಗೆ ಏನು ವಿಪತ್ತು ಬಂದರೂ ಅದನ್ನು ಸುರೇಶ್ ಸಂತೋಷದಿಂದ ಸ್ವೀಕರಿಸುವರೆಂಬುದು ನನಗೆ ಗೊತ್ತಿದೆ.

ನಿಮಗೆಲ್ಲರಿಗೂ ಪ್ರೇಮಗಳು

ಮಾರ್ಜೋರಿ.’

ಸುರೇಶ ವೈದ್ಯರು ಒಳ್ಳೆ ವಾಗ್ಮಿ; ಕುಶಲ ಲೇಖಕ, ಅವರೀ ಸಾಮರ್ಥ್ಯವನ್ನು ನೋಡಿ ಅಮೆರಿಕದ ಟೈಮ್ ಮತ್ತು ಲೈಫ್ ಪತ್ರಿಕೆಗಳ ಭಾರತೀಯ ವಿಚಾರ ಸಂಪಾದಕನಾಗಿ ಲಂಡನ್‌ನಲ್ಲಿ ಉದ್ಯೋಗವಿತ್ತರು. ಈ ಎರಡು ಪ್ರಸಿದ್ಧ ಪತ್ರಿಕೆಗಳ ಪ್ರತಿನಿಧಿಯಾಗಿ ಅವರನ್ನು ಭಾರತದಲ್ಲಿನ ಪರಿಸ್ಥಿತಿ ಅಭ್ಯಾಸಿಸಲು ಇಲ್ಲಿಗೆ ಕಳುಹಿಸುವ ಏರ್ಪಾಡೂ ಆಗಿತ್ತು. ಭಾರತದ ಪ್ರತಿನಿಧಿಯೋರ್ವನನ್ನು, ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಕಂಟಕ ಪ್ರಾಯನಾಗಿರುವೀತನನ್ನು ತನ್ನ ಸಂಪಾದಕ ಮಂಡಳದಲ್ಲಿ ‘ಸೇರಿಸಿಕೊಂಡ ಬಗ್ಗೆ ಹೆನ್ರಿ ಲೂಸ್ ಬಹಳ ಹೆಮ್ಮೆಪಟ್ಟಿರಬೇಕು.’ ಭಾರತದಲ್ಲಿ ಆಹಾರ ಪರಿಸ್ಥಿತಿ ಬಹಳ ಕೆಟ್ಟಿದೆಯೆಂಬ ಸುದ್ದಿ ಕೇಳಿ, ಮಾತೃಭೂಮಿಗೆ ಬೇಗನೇ ಮರಳಿ ಬರುತ್ತೇನೆಂದು ಸುರೇಶರೂ ತಮ್ಮ ಜನರಿಗೆ ಬರೆದಿದ್ದರು. ಆದರೆ ಭಾರತಕ್ಕೆ ಬರಲು ಅವರಿಗೆ ಒಪ್ಪಿಗೆ ದೊರಕದೆ ಅವರು ಬಲಾತ್ಕಾರ ಪೂರ್ವಕ ಇಂಗ್ಲೆಂಡಿನಲ್ಲಿ ಇರಲೇಬೇಕಾಯಿತು. ಸ್ವದೇಶಕ್ಕೆ ಮರಳಿ ಬರಬೇಕೆಂಬ ಸುರೇಶ ವೈದ್ಯರ ದೇಶಾಭಿಮಾನವು, ಅವರು ತಮ್ಮ ವಿದೇಶ ಜೀವನ ಕಾಲದಲ್ಲಿ ತಮ್ಮವರಿಗೆ ಬರೆದಿದ್ದ ಪತ್ರಗಳಿಂದ ವ್ಯಕ್ತವಾಗುತ್ತದೆ. ತಮ್ಮ ಕಿರಿಯ ತಮ್ಮಂದಿರಿಗೆ ತಮ್ಮ ಸಹೋದರಿಯರಿಗೆ ಅವರು ಬರೆದ ದೀರ್ಘ ಮತ್ತು ಸರಸ ಪತ್ರಗಳಲ್ಲಿ, ಅವರು ಎಂದೆಂದಿಗೂ ಸರಕಾರೀ ಉದ್ಯೋಗಕ್ಕೆ ಹಾತೊರೆಯದೆ, ದೇಶಸೇವೆಯನ್ನು ಸ್ವತಂತ್ರವಾಗಿಯೂ ಧೈರ್ಯಪೂರ್ವಕವಾಗಿಯೂ ಮಾಡಬೇಕೆಂದು ಉಪದೇಶಿಸಿದ್ದರು.

ನಮ್ಮ ಕಮುನಿಸ್ಟರಿಗೆ ಉತ್ತರ

ದಿಗ್ಬಂಧನದಲ್ಲಿ ತನಗೆ ಬ್ರಿಟಿಷ್ ಅಧಿಕಾರರು ಮತ್ತು ಸಿಪಾಯಿಗಳು ಕೊಟ್ಟ ಉಪಚಾರವನ್ನು ಅವರು ಮೆಚ್ಚಿದ್ದಾರೆ. ಆದರೆ ಬ್ರಿಟಿಷ್ ಶಿಕ್ಷೆಯನ್ನು [illegible] ರಿಕವಾಗಿ ಬ್ರಿಟನ್ನಿನ ದಂಡೆಯಲ್ಲಿ ಬಂದು ನಿಂತ ವಿದೇಶೀಯನೊಬ್ಬನನ್ನು, ಬೇರೆ ಬೇರೆಯೆಂದು ತಿಳಿಯಲಾರದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳವರು ಬಂಧಿಸಿದ್ದಾರೆ. ತನ್ನ ಮಾತೃಭೂಮಿಗೆ ಹೋಗಬಿಡಿರೆಂದು ಅವರು ಕೇಳಿಕೊಂಡಿದ್ದರು; ತನ್ನ ಕುಟುಂಬದ ಪ್ರಿಯಜನರೊಡನೆ ಸೇರಿರಬೇಕೆಂದು ಅವರು ಹಾತೊರೆದಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಹೃದಯದಲ್ಲಿ ಹೋರಾಟಕ್ಕೆ ನಿಂತ ಒಬ್ಬ ಸುರೇಶ ವೈದ್ಯರು, ಭಾರತದಲ್ಲಿ ಸಾವಿರಾರು ಮಂದಿ ಅಶಾಂತರಾಗಿ ಸೆರೆಮನೆ ಸೇರಿದಕ್ಕಿಂತ ಹೆಚ್ಚು ಆಂದೋಲನ ಮಾಡಿಬಿಟ್ಟಿದ್ದಾರೆ. ಭಾರತದ ಕಮುನಿಸ್ಟರಿಗೆ ಸುರೇಶರು ಧೀರ ಉತ್ತರವಿತ್ತಿದ್ದಾರೆ: ‘ಬಂಧುಗಳೇ, ನಿಮ್ಮ ಸ್ವಾತಂತ್ರ್ಯದ ವಿಚಾರವೇನು?’

ನೋಟೀಸು

ಉಡ್ಪಿ ಡಿ। ಮು। ಕೋರ್ಟಿನಲ್ಲಿ.

O. P. ನಂಬ್ರ 20/1944.

1. ಕೆ. ರಾಮಕೃಷ್ಣ ಶೆಟ್ಟಿ, ಕೋಡಿ ಶ್ರೀನಿವಾಸ ಶ್ಯಾನುಭಾಗರ ದತ್ತದ ಮಗ 2. ದೇವಕಿ ಅಮ್ಮ ಕೋಡಿ ಶ್ರೀನಿವಾಸ ಶ್ಯಾನುಭಾಗರ ವಿಧವೆ. 3. ಜಾಂಬವತಿ ಯಾನೆ ಕಮಲಾವತಿ ಅಮ್ಮ ಕೋಡಿ ಶ್ರೀನಿವಾಸ ಶ್ಯಾನುಭಾಗರ ಮಗಳು. ಕುಂದಾಪುರ ಕಸಬ ಕೋಡಿಯಲ್ಲಿರುವವರು— } ಅರ್ಜಿದಾರರು

ಸದ್ರಿ ಅರ್ಜಿದಾರರು ದಾಕ್ಲು ಮಾಡಿದ ಈ ಅರ್ಜಿಯಲ್ಲಿ ಕೋಡಿ ವೆಂಕಟ್ರಮಣ ಶ್ಯಾನುಭಾಗರ ವಿಧವೆ ಮೃತ ಶ್ರೀದೇವಿ ಯಾನೆ ಪರಮೇಶ್ವರಿ ಅಮ್ಮನ ಹೆಸರಿನಲ್ಲಿ ದಿ ಕೆನರಾ ಬೇಂಕಿಂಗ್ ಕೋಪೊರೇಶನ್, ಲಿಮಿಟೆಡ್ ಇದರ ಉಡ್ಪಿ ಆಫೀಸಿನಲ್ಲಿ stale Accountನಲ್ಲಿ ಇರತಕ್ಕ ರೂಪಾಯಿ 179–7–11ನ್ನು ಪಡೆಯುವ ಹಾಗೆ 1ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 1–4–1944ಕ್ಕೆ ತನ್ಕಿಗೆ ಇಟ್ಟಿರುವದರಿಂದ ಆಕ್ಷೇಪ ಉಳ್ಳವರು ಸದ್ರಿ ದಿನ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ತಾ. 21–3–’44 } K. Varadaraya Pai,
ಮೊಕ್ಕಾಂ, ಉಡ್ಪಿ. } Advocate for Pts.

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ.

ಕ್ರಮ ನಂಬ್ರ 22/1944.

ವಾದಿರು — ಚೆನ್ನಪ್ಪ ಗೌಡ ಕೂಡಾ
ಪ್ರತಿವಾದಿರು — ರಾಮಗೌಡ ಕೂಡಾ

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿ ಕೊರಗ ಗೌಡ, ಮುದ್ದ ಗೌಡನ ಮಗ. 4ನೇ ಪ್ರತಿವಾದಿ ನಾಗಪ್ಪ ಗೌಡ, 5ನೇ ಪ್ರತಿವಾದಿ ತಿಮ್ಮಪ್ಪ ಗೌಡ 4–5ನೇಯವರು 3ನೇ ಪ್ರತಿವಾದಿ ಕೊರಗ ಗೌಡನ ಮಕ್ಕಳು. ಎಲ್ಲರೂ ಪುತ್ತೂರು ತಾಲೂಕು ವಿಟ್ಲ ಮುಡ್ನೂರು ಗ್ರಾಮದ ಮಾಡ್ತಾರು ಎಂಬಲ್ಲಿರುವವರು. ಇವರಿಗೆ—

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿರಿಗೆ ನೋಟೀಸು ಬಗ್ಗೆ ತಾರೀಕು 4–4–1944ನೇ ದಿವಸ ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ವ್ಯಾದೆ ಆಗಿರುವುದರಿಂದ ಆ ದಿವಸ ಸದ್ರಿ ಪ್ರತಿವಾದಿರು ಕೋರ್ಟು ಮುಂದೆ ಹಾಜರಾಗಿ ಉದಹರಿಸಲು ತಪ್ಪಿದ್ರೆ ಅವರನ್ನು ಶಿಕ್ಷೆ ಮಾಡಿ ವ್ಯಾಜ್ಯವನ್ನು ಯುಕ್ತಕಂಡಂತೆ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

ತಾರೀಕು 18–3–44 } (Sd) K. K. Shenoi,
Pleader for Plffs.

(೧ನೇ ಪುಟದಿಂದ)

ರೋಗಿಯ ಅಂಗಾಂಗಗಳನ್ನು ಪರೀಕ್ಷಿಸುತ್ತ ಪ್ರಶ್ನಿಸಿದರು ಡಾಕ್ಟರ್. 'ನಿನ್ನೆಯಿಂದ ಹಾಸಿಗೆ ಹಿಡಿದಿರುತ್ತಾನೆ. ಡಾಕ್ಟರ್ ಬಾಬು!' ಎಂದು ಉತ್ತರವಿತ್ತರು ಮಹೇಶಬಾಬುಗಳು.

'ಪ್ರಕೃತಿಯು ಬಹಳ ನಿತ್ರಾಣವಿದೆ. ಜ್ವರವು ಕೊಡಗಿ ಸುಮಾರು ಮೂರು ನಾಲ್ಕು ದಿನಗಳಾಗಿರಬಹುದು. ತುಸು ಕಠಿಣಾವಸ್ಥೆಯಲ್ಲಿಯೇ ಇದೆ, ಕ್ಲಪ್ತ ಕಾಲಕ್ಕೆ ಯುಕ್ತಾನುಪಾನಗಳು ಅಗತ್ಯ, ಭಯಪಡಬೇಡಿ. ನಿಮ್ಮ ಮಗನು ಆರೋಗ್ಯಹೊಂದುವನು.'

ಮಹೇಶಬಾಬುವು ಕೆಲವು ನೋಟುಗಳನ್ನು ಎಣಿಸಿ ಡಾಕ್ಟರ ಕೈಯಲ್ಲಿಟ್ಟು 'ಡಾಕ್ಟರ್, ನನ್ನ ಮಗುವನ್ನು ಇದರಿಂದ ಪಾರುಗಾಣಿಸಿರಿ. ತಮ್ಮ ಈ ಮಹೋಪಕಾರವನ್ನು ಎಂದೆಂದಿಗೂ ಮರೆಯಲಿಕ್ಕಿಲ್ಲ.' ಎಂದರು. ಹ್ಹಹ! ಬಾಬು, ಇದಕ್ಕೆ ನೀವು ಧೈರ್ಯಗೆಡುವುದೇ? ಅಂತಹದೇನೂ ಆಗಿಲ್ಲ; ನಿಮಗಾಗಿ ನಾನು ಸದಾ ದಣಿಯಲು ಸಿದ್ಧನಾಗಿರುವೆನು.' ಎನ್ನುತ್ತ ಡಾಕ್ಟರ್ ತನ್ನ ಉತ್ಸಾಹವನ್ನು ಪ್ರಕಟಿಸಿ ರೋಗಿಯನ್ನು ಅತಿ ಜಾಗ್ರತೆಯಿಂದ ನೋಡಿಕೊಳ್ಳಲು ತಿಳಿಸಿ ಹೊರಟು ಹೋದರು.

ರಮೇಶಬಾಬುವು ಆ ಅನಾಥ ಜೀವಿಗಳಿಗೋಸ್ಕರ ರಾತ್ರಿಹಗಲೆನ್ನದೆ ಶ್ರಮಪಟ್ಟನು; ಅವರಿಗೆ ಸಹಾಯವೀಯುವುದರಲ್ಲಿ ಹೊತ್ತುಹೊತ್ತಿಗೆ ನಿದ್ರಾಹಾರಗಳನ್ನು ಮರೆತನು. ಇದರಿಂದ ಆತನ ದೇಹಾರೋಗ್ಯವು ಕೆಟ್ಟಿತು. ಮೈಯಲ್ಲಿ ಜ್ವರವು ಕಾಣಿಸಿತು ಆದರೆ ಅವನದನ್ನು ಲಕ್ಷಿಸಲೇ ಇಲ್ಲ. ಒಂದೆರಡು ದಿನಗಳಲ್ಲಿ ಅಸ್ವಸ್ಥತೆಯು ತೀವ್ರತೆಯನ್ನೈದಿತು, ಹಾಸಿಗೆ ಹಿಡಿದನು.

'ರಮೇಶ್ ಈಗ ಹೇಗಿದೆ ಆಯಾಸ? ಕಡಿಮೆಯಾಗಿದೆಯೇ?' ಹಾಸಿಗೆಯ ಬಳಿಯಲ್ಲಿ ಕುಳಿತಿದ್ದ ತಾಯಿ ಹೊದಿಕೆಯನ್ನು ಸರಿಪಡಿಸುತ್ತ ಕೇಳಿದರು. 'ಮುಂಚಿನಷ್ಟಿಲ್ಲ ಮಾಜಿ, ಕೊಂಚ ಕಡಿಮೆಯಾಗಿದೆ' ಎಂದ ರಮೇಶ.

'ವ್ಯರ್ಥವಾಗಿ ಇಲ್ಲದ ಅವಾಂತರ ಕಟ್ಟಿಕೊಂಡೆ. ಯಾವ ಊರವರೋ ಏನೋ? ಬಂಧುಗಳಲ್ಲ; ಬಳಗದವರಲ್ಲ! ಅಗತ್ಯವಿಲ್ಲದ ಪೇಚಾಟದಿಂದ ಈ ಸ್ಥಿತಿಯೊದಗಿತು.' ಮಾತೆಯ ನುಡಿಯಲ್ಲಿ ಮರುಕವಿತ್ತು.

'ಮಾಜಿ, ನೀವು ದುಃಖಿಸಬೇಡಿ. ನಾನು ಸುಸ್ವಸ್ಥನಾಗುವೆ. ಆದರೆ ಆ ಏಳು ಬಡಜೀವಿಗಳನ್ನು ನೋಡುವವರಾರು? ಕೆಲಸವುಯದಿಂದ ಅವರಾವಗತಿಯಲ್ಲಿರುವರೋ ಯಾರು ಬಲ್ಲರು?' ರುಗ್ಣಶಯ್ಯೆಯಲ್ಲಿ ರಮೇಶನ ಹಂಬಲ.

* * *

ಮಹೇಶಬಾಬುಗಳ ಮನೆಯಂಗಳದಲ್ಲಿ ಸೇವಕನೊಬ್ಬ ಏನೋ ಕೆಲಸದಲ್ಲಿದ್ದ. 'ಅಯ್ಯಾ ನಿಮ್ಮ ಚಿಕ್ಕಬಾಬುಗಳೆಲ್ಲಿ?' ಸೇವಕ ತಲೆಎತ್ತಿ ನೋಡಿದ. ಅವನೆದುರಿಗೆ ಒಂದು ಭಿಕ್ಷುಕರ ತಂಡ ನಿಂತಿದೆ. 'ಏತಕ್ಕೆ?' ಎಂದು ಪ್ರಶ್ನಿಸಿದ. 'ನಾವು ಅವರನ್ನು ನೋಡಬಯಸುತ್ತೇವೆ' ಅವರ ದೀನವಾಣಿ.

'ಇಲ್ಲ; ನೀವವರನ್ನು ನೋಡಲಾರಿರಿ. ಮಹಡಿಯಲ್ಲಿದ್ದಾರೆ. ಕಠಿಣ ಜ್ವರದಿಂದ ನರಳುತಿದ್ದಾರೆ.'

'ಏನು, ಚಿಕ್ಕಬಾಬುಗಳಿಗೆ ಕಾಯಿಲೆಯೇ? ನಾವು ನೋಡಲಾರೆವೇ?' ಅವರ ಮುಖಮುದ್ರೆಗಳು ವಿವರ್ಣವಾದುವು.

ರಮೇಶನು ಹಾಸಿಗೆಹಿಡಿದು ಇಂದಿಗೆ ಏಳು ಹಗಲು. ಅವನ ಕೋಣೆಯಲ್ಲಿ ಡಾಕ್ಟರ್, ಅವನ ತಂದೆ ಮಹೇಶಬಾಬುಗಳು ಮತ್ತು ತಾಯಿ. ಡಾಕ್ಟರರು ನಾಡಿಯನ್ನು ಪರೀಕ್ಷಿಸುತ್ತಿದ್ದರು. ದೇಹಾದ್ಯಂತವೂ ಕೆಂಡದಂತೆ ಉರಿಯುತಿತ್ತು. ಅಲ್ಲಿದ್ದವರ ಮುಖಮುದ್ರೆಯಲ್ಲಿ ಖಿನ್ನತೆಯು ಕಂಡುಬರುತಿತ್ತು. ಒಂದು ಇಂಜೆಕ್ಷನ್ ಕೊಟ್ಟ ಬಳಿಕ ಡಾಕ್ಟರ್, ಮಹೇಶಬಾಬುಗಳನ್ನು ಹತ್ತಿರಕ್ಕೆ ಕರೆದು ಒಂದು ಗುಟುಕು ಔಷಧಿ ಕುಡಿಸಹೇಳಿದರು. ಹೊಯ್ದ ಔಷಧಿಯು ವಿಗಳಿತವಾಗಿ ತಲೆದಿಂಬನ್ನು ತೋಯಿಸಿತು. ಇದನ್ನು ಕಂಡ ಡಾಕ್ಟರರು ಒಂದು ನಿಟ್ಟುಸಿರ್ಗರೆದು,-ಇನ್ನು ಒಂದು ಗಂಟೆಯೊಳಗೆ ಜ್ವರವಿಳಿಯುವುದು, ನನಗೆ ಆಳನ್ನು ಅಟ್ಟದಿರಿ. ತುಸುತಡೆದು ನಾನೇ ಬರುವೆನೆಂದುಹೇಳಿ ಅಲ್ಲಿಂದ ಹೊರಬಿದ್ದರು. ಮಹೇಶಬಾಬುಗಳಿಗೆ ಇದರ ಮರ್ಮವು ತಿಳಿಯಿತು.

ಕುಲದೀಪಕನಂತೆ ಇದ್ದ ಒಬ್ಬನೇ ಮಗ, ಬೇರೆ ಸಂತಾನವಿಲ್ಲ, ಅವರ ತಲೆಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮಾತೆಯಂತೂ ಅತ್ತು, ಅವಸನ್ನೆಯಾಗಿ ಮಗನ ಹಾಸಿಗೆಯ ಬಳಿ ಬಿದ್ದಿರುವರು.

ಅಷ್ಟರಲ್ಲಿ ಒಬ್ಬ ಸೇವಕನು ಬಂದು ಧನಿಯೊಡನೆ—"ಬಾಬೂಜಿ, ಹೊರಗೆ ಒಂದು ತಿರುಪೆಯವರ ತಂಡವು ಚಿಕ್ಕಬಾಬುಗಳ ಆಯುರಭಿವೃದ್ಧಿಗಾಗಿ ಭಗವಂತನನ್ನು ಪ್ರಾರ್ಥಿಸುತ್ತಿದೆ."

'ಯಾರವರು?' ವಿಚಾರಿಸಿದರು ಧನಿ.

'ಯಾರು–ಎಲ್ಲಿಯವರೆಂದು ತಿಳಿದಿಲ್ಲ. ಏಳುಮಂದಿ ಇದ್ದಾರೆ. ಒಬ್ಬಳು ತಾಯಿ. ಮಿಕ್ಕವರು ಅವಳ ಮಕ್ಕಳೆಂದು ಹೇಳಬಹುದು.

'ಎಲ್ಲಿದ್ದಾರೆ? ಯಾವಾಗ ಬಂದಿರುತ್ತಾರೆ?'

'ಹೊರಗೆ ತಲೆವಾಗಿಲಲ್ಲಿ. ಬಂದು ಐದಾರು ದಿನವಾಯ್ತು ಬಾಬುಜೀ.'

'ಹಾಗಾದರೆ ಅವರನ್ನು ಒಳಗೆ ಕರೆದು ತಾ. ನನ್ನ ಮಗುವು ಅವರನ್ನು ಒಮ್ಮೆ ನೋಡಬೇಕೆಂದು ಅನೇಕಸಾರಿ ನನ್ನೊಡನೆ ತಿಳಿಸಿತ್ತು.' ಎಂದರು ಮಾತೆ. ಅಪ್ಪಣೆಯಂತೆ ಆ ಏಳುಮಂದಿಯನ್ನು ಮಹಡಿಗೆ ಕರೆತರಲಾಯ್ತು. 'ಚಿಕ್ಕಬಾಬು ನಮ್ಮನ್ನು ಕಾಪಾಡಿದ ನೀವೆಲ್ಲಿ!' ಎನ್ನುತಾ ಒಬ್ಬ ಸ್ತ್ರೀಯು ಮುಂಬಂದಳು. ಅವಳೊಂದಿಗೆ ಮಕ್ಕಳೂ ಬಂದು ನಿಂತರು. ಅವರೆಲ್ಲರೂ ಕೈಜೋಡಿಸಿ ಭಗವಧ್ಯಾನದಲ್ಲಿ ಮೈಮರೆತು ಕಂಭಗಳಂತೆ ನಿಂತರು. ಕೆಲವು ನಿಮಿಷ ಕಳೆದುವು. ಕೊಟಡಿಯೊಳಗೆ ಗಂಭೀರ ಮೌನ. 'ಭಗವಾನ್ ಚಿಕ್ಕಬಾಬುವನ್ನು ರಕ್ಷಿಸು.'

ರಮೇಶಬಾಬುವು ಕಣ್ತೆರೆದು ಭಿಕ್ಷುಣಿಯನ್ನು ನೋಡಿದ, ಒಂದು ಬಗೆಯ ಉಲ್ಲಾಸವು ಮೊಗದಲ್ಲಿ ಮೂಡಿತು. ಬಳಿಯಲ್ಲಿದ್ದ ತಾಯನ್ನು 'ಮಾಜೀ' ಎಂದು ಕರೆದ.

'ಇದೇನಾಶ್ಚರ್ಯ! ಮೊನ್ನೆ ತಾನೆ ನಾಯೋಡಿಸಿದ ಭಿಕ್ಷುಕಿ ಇವಳೇನು ನನ್ನ ಕಂದನನ್ನು ಕಾಪಾಡಿದವಳು. ಮಹೇಶಬಾಬುಗಳು ವಿಸ್ಮಯ ಮೂಕರು.

ಅಂದಿನಿಂದ ಕಲ್ಕತ್ತೆಯ ಮಹೇಶಬಾಬುಗಳ ಮನೆಯಲ್ಲಿ ಪ್ರತಿನಿತ್ಯ ಎಳ ನೂರುಮಂದಿ ಅನಾಥರಿಗೆ ಒಪ್ಪೊತ್ತಿನ ಬೇಳೆ ಚಪಾತಿಗಳ ವ್ಯವಸ್ಥೆಯಾಗಿದೆ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The [illegible] Limited, [illegible].

ESTD. [illegible]

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (½% from Jan. to June) (¼% from July to Decr.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಾಯಿ, ಕಲ್ಕತ್ತ.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.
2½% Rebate on annual premiums.
"Permanent Disability Benetits free of any cost.
Payment of double the insured amount in case of death by accident at a very smallcost of Rs. 1-8-0 per 1000.
Special rebates on large size policies.
A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara.

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡು

[illegible] ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಖು 31—3—1944 [ಸಂಚಿಕೆ 13]

'ಭಾರತೀಯನಾಗಿದ್ದರೆ ಸೆರೆಮನೆ ಸೇರುತ್ತಿದ್ದೆ'

ಡಾ| ಲಿನ್‌ಯುತಾಂಗರು ಹೇಳುತ್ತಾರೆ.

ನೆಹರು ನಿವಾಸದಲ್ಲಿ ಚೀನದ ಪ್ರತಿನಿಧಿ—

'ಡಾ| ಲಿನ್, ನೀವು ಓರ್ವ ಭಾರತೀಯರಾಗಿದ್ದರೆ, ನೀವಿಂದು ಎಲ್ಲಿ ಇರುತ್ತಿದ್ದಿರಿ?' ಕ್ರಾನಿಕಲರ್ ಕೇಳಿದರು. ಕೂಡಲೇ ಅವರ ಉತ್ತರ ಬಂತು. 'ಸೆರೆಮನೆಯಲ್ಲಿ' ಎಂದು 'ನಿಸ್ಸಂದೇಹವಾಗಿ ಸೆರೆಮನೆಯಲ್ಲಿಯೇ; ನಿಸ್ಸಂದೇಹವಾಗಿ ಎಂಬೀ ನನ್ನ ಮಾತನ್ನು ನೀವು ದಪ್ಪಕ್ಷರದಲ್ಲಿ ಹಾಕಬಹುದು!' ಲಿನ್‌ಯುತಾಂಗ್ ಹೇಳಿದರು.

ಇದು ಮೊನ್ನೆ ಅಲ್ಲಾಬಾದಿನ ಆನಂದ ಭವನದಲ್ಲಿ ಉಳಕೊಂಡ ಚೀನದ ಪ್ರಖ್ಯಾತ ಲೇಖಕ ಡಾ| ಲಿನ್‌ಯುತಾಂಗರನ್ನು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಕ್ರಾನಿಕಲರ್ ಭೇಟಿಯಾದಾಗ ಆದ ಸಂಭಾಷಣೆಗಳು.

ಭಾರತಕ್ಕೆ ಅವರ ಸಂದೇಶ

ಭಾರತದ ಜನರಿಗೆ ಲಿನ್‌ಯುತಾಂಗರು ಕ್ರಾನಿಕಲ್‌ರೊಡನೆ ಈ ರೀತಿಯಾಗಿ ಒಂದು ಸಂದೇಶ ಕೊಟ್ಟರು. 'ಭಾರತೀಯರಿಗೆ ಒಂದೇ ಒಂದು ಗುರಿ ಇರಬೇಕು, ಅದು ಯಾವುದೆಂದರೆ ಸ್ವಾತಂತ್ರ್ಯ, ಅದಕ್ಕಾಗಿ ಅವರು ಧರ್ಮವನ್ನು ಎಲ್ಲವನ್ನು ಬಿಟ್ಟು ಒಂದಾಗಬೇಕು.'

ಈ ಸಂದೇಶವಿತ್ತ ಮೂರುದಿನಗಳ ನಂತರ ಕಲ್ಕತ್ತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮುಂದೆ ಭಾಷಣವೀಯುತ್ತಾ ಲಿನ್‌ಯುತಾಂಗರು ಇದೇ ಅಭಿಪ್ರಾಯ ಸಾರಿದರು. ಸ್ವಾತಂತ್ರ್ಯದ ಹಾದಿಗೆ ಅಡ್ಡಬರುವ ಸಂಕುಚಿತ ಧಾರ್ಮಿಕ ಮನೋಭಾವನೆಯನ್ನು ಭಾರತೀಯರು ಕಿತ್ತೊಗೆಯಬೇಕೆಂಬುದೇ ಅವರ ಸ್ಪಷ್ಟಾಭಿಪ್ರಾಯ. ಯುತಾಂಗರು ಸ್ವತಃ ಓರ್ವ ಕ್ರಿಶ್ಚಿಯನ್ ಧರ್ಮೋಪದೇಶಕರ ಮಗ, ಆದರೂ ಯಾವುದೇ ಚರ್ಚಿಗೆ ಹೋಗುವುದನ್ನವರು ಬಿಟ್ಟು ಬಿಟ್ಟಿದ್ದಾರೆ. ಹಾಗೆಂದು ಅವರಿಗೆ ಎಲ್ಲಾ ಧರ್ಮಗಳಲ್ಲಿಯೂ ಗೌರವವಿದೆ. ಎಲ್ಲಾ ಧರ್ಮಗಳು ಮಾನವಪ್ರೇಮವನ್ನೇ ಬೋಧಿಸುತ್ತವೆಂದು ಅವರು ತಿಳಿದಿದ್ದಾರೆ. 'ಭಾರತೀಯರಿಗೆ ಇಂದು ಬೇಕಾದುದು ಒಂದೇ ಧರ್ಮ; ಅದು ಸ್ವಾತಂತ್ರ್ಯವೆಂಬ ಧರ್ಮ!' ಈ ಮಾತನ್ನು ಅವರು ಹಲವಾರು ಸಲ ಹೇಳಿದರು.

ಚೀನಾ ಮತ್ತು ಭಾರತ

ಚೀನಾ ಮತ್ತು ಭಾರತದ ಸಂಬಂಧದ ಕುರಿತು ಅವರೊಡನೆ ಪ್ರಶ್ನಿಸಿದಾಗ, ಈ ತರದ ಅಭಿಪ್ರಾಯದವ ತಾನು ಒಬ್ಬನು ಮಾತ್ರವಲ್ಲ; ಚೀನದಲ್ಲಿಂದು ಬಹುಮಂದಿ ಭಾರತದ ಸ್ವಾತಂತ್ರ್ಯದ ವಿಷಯ ಸದಭಿಪ್ರಾಯವುಳ್ಳವರಾಗಿದ್ದಾರೆಂದು ಅವರು ತಿಳಿಸಿದರು. ಭಾರತದ ಪೂರ್ಣ ಸಹಕಾರವಿಲ್ಲದೆ ಚೀನರು ಜಪಾನರನ್ನು ಹೊರಗಟ್ಟುವುದೂ ಚೀನದ ಜೀವನಾಡಿಯಾದ ಬರ್ಮಾಮಾರ್ಗವನ್ನು ತೆರೆವುದೂ ಸಾಧ್ಯವಿಲ್ಲವೆಂದೂ ಚೀನಿಯರಿಂದು ತಿಳಿದಿರುವುದಾಗಿ ಅವರು ಹೇಳಿದರು. ಭಾರತ ಸ್ವತಂತ್ರವಾಗಬೇಕೆಂದೂ ಹಾಗಾದರೆ ಮಾತ್ರ ಏಶ್ಯದ ಸ್ವಾತಂತ್ರ್ಯ ಭದ್ರವಾಗುವುದೆಂದೂ ಚೀನಿಯರ ಅಂಬೋಣವಾಗಿದೆ. ಹಾಗಾಗಿ ಚೀನದ ಜನ ಮಾತ್ರವಲ್ಲ ಸರಕಾರವೂ ಭಾರತ ಸ್ವತಂತ್ರ್ಯ ಸರಕಾರ ಅಪೇಕ್ಷಿಸುತ್ತದೆಂದು ಅವರ ಅಭಿಪ್ರಾಯವಾಗಿದೆ.

'ಏಶ್ಯಾದ ಇಂದಿನ ಈ ಜಾಗೃತಿ, ರಾಷ್ಟ್ರೀಯ ಪ್ರೀತಿ, ಇದನ್ನು ಯಾರೂ ತಡೆದಿಕ್ಕಲಾರರು; ಇಲ್ಲಾಗುವ ಪ್ರತಿಯೊಂದು ಸಂಕಷ್ಟವೂ ಆ ಗುರಿ ಮುಟ್ಟಿಸುತ್ತದೆ. ಮರ್ದನ ತಾಡನಗಳಿಂದ ರಾಷ್ಟ್ರಪ್ರೇಮ ಪ್ರಬಲವಾಗುವುದು. ಮುಂದೆ ಇದರ ಸತ್ಫಲ ಅನುಭವಿಸಿಯೇ ತೀರಲಿದೆ. ಸ್ವತಂತ್ರರಾದ ಚೀನ ಮತ್ತು ಭಾರತ ಇವುಗಳು ಏಶ್ಯಾ ಸ್ವಾತಂತ್ರ್ಯದ ಮೂಲ ಹೆಜ್ಜೆಗಳು ಮಾತ್ರವಲ್ಲದೆ ಇದರಿಂದಾಗಿ ಪೂರ್ವ ಮತ್ತು ಪಶ್ಚಿಮದ ವೈಷಮ್ಯವೂ ಸಮವಾಗಲು ಹಾದಿಯಾಗುವುದು' ಹೀಗೆಂದು ಲಿನ್‌ಯುತಾಂಗ್ ಸಾರಿದರು. ಚೀನದ ವಿಷಯ ಮಾತನಾಡುತ್ತಾ ಹೊರಗಿನಿಂದ ಚೀನಿಯರಿಗೆ ಸಹಾಯ ಕಳುಹಿಸುತ್ತಾರೆಂಬುದು ಇಂದು ಕೇವಲ ಘೋಷಣೆಯೆಂದೂ, ತಾವು ತಯಾರಿಸಿದ ಶಸ್ತ್ರಗಳಿಂದ ಕೆಲ ಸಮಯ ಶತ್ರುಗಳಿಂದ ಸೆಳೆದ ಆಯುಧಗಳಿಂದಲೇ ಚೀನಿಯರು ಗೋರಿಲ್ಲಾ ಕಾಳಗ ಮಾಡುತ್ತಿರುವರಾಗಿಯೂ ಲಿನ್‌ಯುತಾಂಗ್ ತಿಳಿಸಿದರು. ಬರ್ಮಾಮಾರ್ಗವನ್ನು ತೆರೆವುದೊಂದೇ ಚೀನಕ್ಕೆ ಮಿತ್ರರು ಮಾಡುವ ಮಹೋಪಕಾರವೆಂದು ಅವರು ಹೇಳಿದ್ದಾರೆ. ಆದಾಗಬೇಕಾದರೆ ನೆಲ ಜಲ ಆಕಾಶಗಳಿಂದ ಒಮ್ಮೆಲೇ ಆಕ್ರಮಣವಾಗಬೇಕೆಂದವರ ಅಭಿಪ್ರಾಯವಾಗಿದೆ.

ಅವರು ನಮ್ಮವರೇ!

'ವಿದೇಶೀಯರಿಗೆ ಎಷ್ಟೋ ಮಂದಿಗೆ ಭಾರತದ ವಿಷಯ ಸಹಾನುಭೂತಿಯಿದೆ. ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಹಲವರು ವಿದೇಶಿಯರು ವಾದಿಸುತ್ತಾರೆ, ಆದರೆ ಲಿನ್‌ಯುತಾಂಗ್ ಅಂತಲ್ಲ; ಅವರು ನಮ್ಮವರೇ ಆಗಿದ್ದಾರೆ. ನಮ್ಮಪೈಕಿ ಒಬ್ಬರಾಗಿದ್ದಾರೆ. ಭಾರತೀಯರೊಬ್ಬರಲ್ಲಿ ಇರಬಲ್ಲ ಆಶೆ ಉದ್ವೇಗ ಆಕಾಂಕ್ಷೆ ಅವರಲ್ಲಿಯೂ ಭಾರತದ ಬಗ್ಗೆ ಇದೆ. ನಮ್ಮಲ್ಲಿರುವ ಸಾಮ್ರಾಜ್ಯಶಾಹೀ ವಿರೋಧ ಭಾವನೆಯನ್ನು ಅವರಿಗೆ ಯಾರೂ ತಿಳಿಸಬೇಕಾಗಿಲ್ಲ, ಏಕೆಂದರೆ ಅವರು ಮನೋಭಾವನೆಯಲ್ಲಿಯೂ ಕೇವಲ ನಮ್ಮವರೇ ಇರುವರು. ಒಂದು ಮುಂಜಾವ, ಸೂರ್ಯೋದಯವಾಗುವುದರೊಡನೆ, ಕೃಷಿಕರು ಗದ್ದೆಗಳಲ್ಲಿ ಹೆಂಗುಸರು ಮನೆಕೆಲಸಗಳಲ್ಲಿ ದುಡಿವುದನ್ನು ನೋಡುತ್ತಾ, ಯುತಾಂಗ್ ಹೇಳಿದರು. 'ಚೀನದಂತೆಯೆ; ಅಷ್ಟೇ ಬಡವರು ಇವರು ಎಂದು' ಹೀಗೆಂದು ಕ್ರಾನಿಕಲರ್ ಅವರ ಕುರಿತು ಬರೆಯುತ್ತಾರೆ.

ಆನಂದ ಭವನದಲ್ಲಿ ದುಃಖ

'ಸಂತೋಷ ಸಾಗರವೆನಿಸಿದ್ದ ಆನಂದ ಭವನ ಎಷ್ಟೋ ಕಾಲದಿಂದ ದುಃಖದ ಕಡಲಾಗಿತ್ತು; ಮೋತಿಲಾಲರು ತನ್ನ ಮೊದಲಿನ ಮನೆಯನ್ನು ಸ್ವರಾಜ್ಯ ಭವನವನ್ನು ರಾಷ್ಟ್ರಕ್ಕೆ ದಾನವಿತ್ತ ಮೇಲೆ ಆನಂದ ಭವನದಲ್ಲಿ ನೆಲಸಿದರು. ತನ್ನ ಕುಟುಂಬದ ಜನರು ಅಲ್ಲಿ ಸುಖಮಯ ಜೀವನ ನಡೆಸಬೇಕೆಂದು ಅವರ ಅಪೇಕ್ಷೆಯಾಗಿತ್ತು. ಮೋತಿಲಾಲ್ ಸ್ವರ್ಗವೇರಿದರು, ಸ್ವರೂಪರಾಣಿ ಪತಿಯನ್ನು ಹಿಂಬಾಲಿಸಿದರು. ಅವರ ಏಕಮಾತ್ರ ಪುತ್ರ, ಅಖಿಲ ಭಾರತವೇಕೆ ವಿಶಾಲ ವಿಶ್ವಖ್ಯಾತಿಯ ಪುತ್ರ ಜವಹರಲಾಲರು ಸದಾ ಸೆರೆಮನೆಯಲ್ಲಿಯೇ ಕೊಳೆಯುವುದಾಯಿತು; ಅವರ ಸೊಸೆ ಕುಟುಂಬದ ಭಾಗ್ಯಲಕ್ಷ್ಮಿ ಕಮಲಾ ತೀರಿಹೋದರು. ಆಗ ಒಬ್ಬೊಬ್ಬರೇ ಪುತ್ರಿಯರು ಪತಿಗೃಹ ಸೇರಿದರು. ಅವರಲ್ಲಿ ಓರ್ವರು ಅಕಾಲದಲ್ಲಿ ವೈಧವ್ಯವನ್ನೂ ಅನುಭವಿಸಬೇಕಾಯಿತು. ಹೀಗೆ ಆ ಸಂತೋಷ ಸಾಗರವಾಗಿದ್ದ ಆನಂದ ಭವನ ಇಂದು ದುಃಖದ ಕಡಲಾಗಿದೆ.

'ಇತ್ತೀಚೆಗೆ ಸೆರೆಮನೆಯಿಂದ ಬಿಡುಗಡೆ ಹೊಂದಿದ, ಜವಾಹರಲಾಲರ ಪುತ್ರಿ ಪ್ರಿ. [illegible] ಗಾಂಧಿಯೊಡನೆ ಅಲ್ಲಿ ಕೆಲಕಾಲ ವಾಸವಾಗಿದ್ದರು. ಅಂಥಾ ಅರಮನೆಯಲ್ಲಿ ಒಂದು ದಂಪತಿಗಳು ಮಾತ್ರ ಇರುವುದೆ? ಅಲ್ಲಿ ನೆಲಸಿದ ಮಹಾವಿಭೂತಿಪುರುಷರ ಆತ್ಮಗಳ ಸಂಚಾರ ಅಲ್ಲಿ ಇರದಿದ್ದೀತೆ? ಅಂಥಾ ಮನೆ ಒಂದು ದೊಡ್ಡ ಕುಟುಂಬ ವಾಸವಾಗಿರಲು-ಬೇಕಾದಷ್ಟು ನೆಂಟರಿಷ್ಟರು– ಬಂಧುಬಳಗದವರು–ಅತಿಥಿ ಅಭ್ಯಾಗತರು ಬಂದು ನೆಲಸಿ ಸಂತೋಷದಿಂದ ನಲಿಯಬೇಕಾದದ್ದು. ಅದು ಇಲ್ಲದೆ, ವಾಸಮಾಡುವವರಿಲ್ಲದೆ, ಎಷ್ಟೋ ಸಮಯದಿಂದ ಭದ್ರವಾಗಿ ಬಾಗಿಲು ಹಾಕಿ ಮೂಕ ದುಃಖದಿಂದ ಅಳುತ್ತಿರುವಂತೆ ಕಂಡುಬರುತಿತ್ತು!

ಕಳೆದವಾರದ ಗದ್ದಲ

'ಈ ದುಃಖವನ್ನು ಭೇದಿಸಿ ಕಳೆದವಾರ ಆನಂದ ಭವನದಲ್ಲಿ ತುಸು ಗದ್ದಲ ಕಂಡು ಬಂತು ಚೀನದಿಂದ ಅತಿಥಿಯೊಬ್ಬರು ಬರುತ್ತಾರೆಂದು! ಲಿನ್‌ಯುತಾಂಗ್ ಭಾರತಕ್ಕೆ ಬಂದವರು ನೆಹರುಗಳ ಮನೆಯಲ್ಲಿ ಉಳಕೊಳ್ಳುತ್ತಾರೆ. ಅದಕ್ಕೆ ಆ ಗದ್ದಲ-ಮನೆ ಸ್ವಚ್ಛಮಾಡಿದರು; ಅಂಗಳ ಗುಡಿಸಿದರು. ಬಾಗಿಲು ಕಿಟಕಿ ತೆರೆಯಲ್ಪಟ್ಟು ಒಳಗಡೆ ಗಾಳಿ ಬೀಸತೊಡಗಿತು. ಮೇಲೆ ಆನಂದ ಭವನದ ಕಟ್ಟಡದ ಮೇಲೆ ಹಾರಾಡುತ್ತಿದ್ದ ತ್ರಿವರ್ಣ ರಂಜಿತ ರಾಷ್ಟ್ರಧ್ವಜದ ಜತೆಗೆ ಚೀನದ ರಾಷ್ಟ್ರ ಪತಾಕೆಯೂ ಹಾರಾಡುತಿತ್ತು. ಬರುವ ಅತಿಥಿ ರಾಷ್ಟ್ರೀಯ ಚೀನದ ಪ್ರತಿನಿಧಿ ಡಾ| ಲಿನ್‌ಯುತಾಂಗ್.

ನಿದ್ದೆ ಬರಲೊಲ್ಲದು

'ನೆಹರು ಸೋದರಿ ಶ್ರೀಮತಿ ಕೃಷ್ಣಾ ಹಾತೀಸಿಂಗರು, ಇತ್ತೀಚೆಗೆ ತನ್ನ ತಂದೆಯ ಕುಟುಂಬದ ಜೀವನ ಸ್ಮರಣೆಗಳನ್ನೀವ ಒಂದು ರಮ್ಯ ಪುಸ್ತಕ ಬರೆದಿದ್ದಾರೆ.. 'ವಿತ್ ನೋರಿಗ್ರೆಟ್ಸ್' ಎಂದು. 'ಲಿನ್‌ಯುತಾಂಗ್', ಆನಂದ ಭವನಕ್ಕೆ ಬರುತ್ತಾ, ರೈಲುಬಂಡಿಯಲ್ಲಿ ಆ ಪುಸ್ತಕವನ್ನು ಆಸಕ್ತಿಯಿಂದ ಓದುತ್ತಿದ್ದರು. ಆ ದಿನ ರಾತ್ರಿ ಆನಂದ ಭವನದಲ್ಲಿ ಮಲಗಿದವರೇ, ಬೆಳಗ್ಗೆ 'ಕ್ರಾನಿಕಲರ್' ಇವರೊಡನೆ ಹೇಳಿದರು, ಈ ಮಾಡಿನ ಕೆಳಗೆ ನಡೆದ ಒಂದೊಂದೇ ಚಾರಿತ್ರಿಕ ಘಟನೆಗಳನ್ನು ನೆನೆನೆನೆದು ನನಗೆ ರಾತ್ರಿ ನಿದ್ದೆಯೇ ಬರಲೊಲ್ಲದು ಎಂದು! ನೆಹರು ಕುಟುಂಬದ ಜೀವನ ಸ್ಮರಣೆ ಮಾಡಿದರೆ ಯಾವನಿಗೆ ತಾನೇ ನಿದ್ದೆ ಬಂದೀತು?

— 'ಬೊಂಬೇ ಕ್ರಾನಿಕಲ್'

ಎರಡನೆ ದೇಖಾವೆ

ಬರೆದವರು: ಕೆ. ಕೆ. ಉತ್ತಪ್ಪ, ಕೊಡಗು.

"ಎಂದು ಮಣ್ಣಾ ಆ ಮೂ—ಮೂರು ಮಣಾ" ಎಂದೇ ಲೆಕ್ಕ ಮಾಡಹತ್ತಿದನು ಸೀನು.

ಭೀಮುವಿನ ತಲೆಯು ಮೇಜಿನ ಮೇಲೆ ಡಬಾನೆಬಿತ್ತು. ಅಷ್ಟರಲ್ಲಿ ಹಣೆಯ ಮೇಲೆ ಗುಳ್ಳೆಯೊಂದು ನಕ್ಕಿತು.

ಸೀನುವಿಗೋ ತಡೆಯಲಾರದ ನಗುವಿನ ಉಕ್ಕಾಟ. ಅಣ್ಣನಿಗೆ ಸಿಟ್ಟು ಬರಬಹುದೆಂದು ಏನೂ ಅರಿಯದವನಂತೆ ಪಾಠ ಓದುತಿದ್ದನು.

"ಹಾಳು ನಿದ್ರೆಗೆ ಮಾಡುತ್ತೀನಿ ಕೆಲಸ. ನಾಳೆಯಾಗಲಿ, ನಿದ್ರೆ ಬಾರದ ಹಾಗೆ ಡಾಕ್ಟರರಿಂದ ಒಂದು 'ಸ್ಟ್ರಾಂಗ್ ಡೋಸ್' ತೆಕ್ಕೊಂಡರೆ. ಆಯಿತು. ಅದರ ಹಟ ನೋಡೋಣ ಎಂದು ಮತ್ತೆ ಹಣೆಯನ್ನುಜ್ಜುತ್ತಾ ಸೀನುವಿನ ಕಡೆಗೆ ದೃಷ್ಟಿ ಇತ್ತನು.

ಗಂಟೆಯು ಹತ್ತು ಬಡಿಯಿತು. ಭಾಲಿ "ಸರಿ" ಎಂದವನೇ ಸೀನುವಿಗೆ ಮೆಲ್ಲನೆ ಏನೋ ಉಸುರಿದನು. ಸೀನುವಿನ ಅಸಮ್ಮತಿ ಚಿಹ್ನೆಯನ್ನು ಕಂಡು, "ಸಾಕೋ; ಪರೀಕ್ಷೆಗೆ ಇನ್ನೂ ಇದೆ ಒಂದು ತಿಂಗಳು, ಎಂದನು.

ಮನೆಯವರೆಲ್ಲರೂ ನಿದ್ರೆಯಲ್ಲಿದ್ದಾರೆಂದು ಮುಂದೆಟ್ಟು ಮಾಡಿದ ಕೂಡಲೇ ತಮ್ಮ ಅಂಗಿಯ ಮೇಲೆ ಕರಿ ಶಾಲುಗಳನ್ನು ಹೊದ್ದು ಉಪ್ಪರಿಗೆಯಿಂದ ಸದ್ದಿಲ್ಲದೆ ಇಳಿದರು, ಅರ್ಧ ಇಳಿದೊಡನೇ ಭೀಮುವು ಸೀನುವನ್ನು ಅಲ್ಲೇ ನಿಲ್ಲಲು ಪಿಸುಗುಟ್ಟಿ ಹೊರ ಅಂಗಳದಲ್ಲಿದ್ದ ನಾಯಿಯನ್ನು ಹಿಡಕೊಂಡು ಸೀನುವಿಗೆ ಬೆಳಕು ಬಿಟ್ಟನು. ಮೆಲ್ಲಗೆ ಬಾಗಿಲು ಹಾಕಿ ಹೊರಗಿನಿಂದ ಚಿಲ್ಕು ಹಾಕಿದವರೇ ರಸ್ತೆಗಿಳಿದರು.

"ಲೋ ಸೀನು, ಇನ್ನು ಹೆದರ್ಕೆಯಿಲ್ಲ ಕಣೋ, 'ಬ್ರೌನ್'ನ್ನು ಅಲ್ಲೇ ಬಿಟ್ಟು ಬಂದಿದ್ದರೆ ಮಾತ್ರ ನಮಗೆ ನಾಳೆ 'ಪರಂಗಿ ಮಣೆ' ಪೂಜೆಯಾಗುವ ಸಂದರ್ಭವಿತ್ತು" ಎಂದು ನಕ್ಕು ಬೇಗ ಬೇಗನೆ ಹೆಜ್ಜೆ ಹಾಕಿದನು. ನಾಯಿಯೂ ಭರದಿಂದ ಸಾಗುತಿತ್ತು. ಒಡನೆ "ಯಾವುದಕ್ಕೆ 'ಬಾಳಾಜಿ'ಗೆ? ಹ್ನು; ಹ್ಹು!," ಎಂದು ತಲೆ ಅಲ್ಲಾಡಿಸಿ, "ಟಾರ್ಸನ್ ಪಿಕ್ಚರ್ ನೋಡುವುದಾದರೆ ಮಾತ್ರ ನಾನು ಬರುವೆನು," ಎಂದು ದಾರಿ ಕವಲೊಡೆಯುವಲ್ಲಿ ಸೀನು ನಿಂತೇ ಬಿಟ್ಟನು.

"ಇವನನ್ನು ಬಿಟ್ಟರೆ ಮೋಸ," ಎಂದು ಯೋಚಿಸಿ ಸೆಂಟ್ರಲ್ ನಾಚೆ ತಿರುಗಿದನು. ಗೊತ್ತಿದ್ದವರ್‍ಯಾರದಾದರೂ ದರ್ಶನವಾದರೆ ತಂದೆಯಿಂದ ಮಂಗಳಾರತಿ ಮತ್ತೆ ನಿಶ್ಚಯವೆಂದು ಕಣ್ಣು ಮಾತ್ರ ಕಾಣುವಂತೆ ಇಬ್ಬರೂ ತಮ್ಮ ಶಾಲಿಂದ ಅಲಂಕೃತರಾಗಿದ್ದರು.

ನೆಟ್ಟಗೆ ಹೋದವರೇ, ನೆಲಕಡಲೆಯವನನ್ನು ತಕ್ಕೈಸಿ, ಟಿಕೇಟು ಹೊಂದಿ, ಮೂರುವರಾಣೆಯ ಪದವಿಯಲ್ಲಿ ಪದವೀಧರರಾದರು. ನಾಯಿಯೋ, ಪಕ್ಕದಲ್ಲೇ ನಿಂತಿತ್ತು.

ಆಟವು ಪ್ರಾರಂಭವಾಗಿ ಕೆಲವು ವೇಳೆಯಾಗಿತ್ತು. ಕಥೆಯೋ, ಭಯಂಕರ! ಕ್ಷಣ ಕ್ಷಣಕ್ಕೆ ವಿಚಿತ್ರ ದೃಶ್ಯಗಳು, ನಾನಾ ಜಾತಿಯ ಮೃಗಪಕ್ಷಿಗಳು. ಮನುಷ್ಯನೊಬ್ಬನು ಅವುಗಳೊಡನೆ ಹೋರಾಡಿ ಸದೆಬಡಿದು ಬಿಸಾಡುತಿದ್ದನು. ಅದೇ ಸಮಯಕ್ಕೆ ಸಿಂಹಗಳ ತಂಡವೊಂದೂ ಆ ಮನುಷ್ಯನಿಗೆ ಎದುರು ಬಂದವು; ಅವುಗಳೋ ತಮ್ಮ ಜಯಭೇರಿಯನ್ನು ಸಾರುತ್ತಾ ಅವನನ್ನು ಮುತ್ತಿದವು. ಎಲ್ಲರೂ ಆ ದೃಶ್ಯದಲ್ಲಿಯೇ ನೆಟ್ಟಿದ್ದರು. ಬ್ರೌನೂ ದಿಗಿಲುಗೊಂಡು ದಿಟ್ಟಿಸಿತು. ವೀರಾವೇಷದಿಂದ ಪುಳಕಿತನಾಗಿ "ಭೌವ್ರು, ಭೌವ್ರು," ಎಂದೇ ಮುಂದೆ ಹಾರಿತು. ಹಿಂದೆ ಕೂತವರು, ನಾಯಿಯು ರಜತಪರದೆಯಿಂದಲೇ ಎಂದು ದಿಟ್ಟಿಸಿ ನೋಡಿದರು. ಮುಂದೆ ಇದ್ದವರು ಭಯದಿಂದ, ತಮ್ಮ ಮೇಲೆ, ಸಿಂಹವೇ ಬಿತ್ತೋ ಎಂದು ಚೀತ್ಕರಿಸಿದರು. 'ಬ್ರೌನು' ಜನರ ಮೇಲಿಂದಲೇ ಸಿಂಹನ ಕೋಡು ಮುರಿಯಲು ಹಾರಿತು. ರಜತ ಪರದೆಯು ಜೋಡುಸಂಧಿನ ಬಿಲವೊಂದನ್ನು ತೋರಿತು. ಜನರೆಲ್ಲರೂ ನಿರಾಶರಾದರು.

ಹನ್ನೊಂದೂ ಬಡಿದಿತ್ತು. 'ಶಶಿ'ಯು ಒಮ್ಮಿಂದೊಮ್ಮೆಲೇ ಅಳಲು ಎದ್ದು ಕೂತಳು: ಎಷ್ಟು ಸಂತೈಸಿದರೂ, ಅವಳು ರಾಗ ನಿಲ್ಲಿಸಲಿಲ್ಲ. ಪಾಪ; ರಾತ್ರಿ ಊಟಕ್ಕೆ ಮುಂಚೆ ಮಲಗಿದ್ದಳಂತೆ; ಮತ್ತೆ ಎಷ್ಟು, "ಹಿಟ್ಲರ್ ಬಂದ" ಎಂದು ಹೆದರಿಸಿದರೆ ತಾನೆ ಏನು ಪ್ರಯೋಜನ? ಎತ್ತಿಗೆದುಕೊಂಡು ಹೋಗಿ ಏನಾದರೂ ತಿನ್ನಿಸಬಾರದೆ?" ಎಂದು ನಿದ್ರೆಭಂಗವಾಗಿ ರಾಯರು ಗುಡುಗುಡಿಸಿದರು.

ಮತ್ತೆ ಕೆಲವು ವೇಳೆ ನಿದ್ರೆಬಾರದೆ ಇದ್ದುದರಿಂದ, ಹೊರಗಾದರೂ ಹೋಗಿ ಬರುವ ಎಂದು ರಾಯರೂ ಎದ್ದರು. ಬಾಗಿಲು ಊಟವಾದನಂತರ ಮಲಗಿತ್ತೋ ಏನೋ! ಎಷ್ಟು ಎಳೆದರೂ ಅದು ಕದಲಲಿಲ್ಲ. ಸಿಟ್ಟಿನಿಂದ ಹೆಂಡತಿಯನ್ನು ಬಯ್ಯುತ್ತಾ ಮುಂದಿನ ದ್ವಾರಕ್ಕಾಗಿ ಹೊರಬಂದರು. ಬ್ರೌನ್ ಅಷ್ಟರಲ್ಲೇ ಕುತ್ತಿಗೆಯ ಸರಪಣಿಯೊಡನೆ ಎಲ್ಲಿಂದಲೋ ಓಡುತ್ತಾ, ಬೊಗಳುತ್ತಾ ಬರುತಿತ್ತು.

ಭೀಮುವೂ ಸೀನುವೂ ಜನರ ತಂಡದ ನಡುವೆ, ಮರೆಮರೆಯಾಗಿ ಬರುತಿದ್ದರು. ಎಲೆಕ್ಟ್ರಿಕ್ ಕಂಬದ ಹತ್ತಿರ ಮೆಲ್ಲಗೆ ಓಡಿಯೇ ಬರುತಿದ್ದರು. 'ಬ್ರೌನ್' ಬೀದಿ ದಾಟಿ ಕಡೆಗೆ ಕರೆದೊಯ್ದು ಮನಸ್ಸಿನಲ್ಲಿ ದಿಟ್ಟಿಸಿದ್ದು ತಮ್ಮ ಒಳ್ಳೆಯದಕ್ಕೆಂದೇ ಆ ಸುತ್ತಿದ್ದ ರಾಯರು ಈ ಕರೀ ಮೂರ್ತಿಗಳ ಉದ್ವೇಗದಿಂದ ಒಮ್ಮೆಲೇ ಭಯಚಕಿತರಾದರು. ದಿನದ ಮಟ್ಟಿಗೆ ಭಾವಿಸಿದರೆ ಸಾಕು. ಅಂತೂ ಸದ್ದಿಲ್ಲದೆ ಮನೆಯ ಅಂಗಳಕ್ಕೆ ತಲಪಿದರು. ಮನೆಯ ಜಗಲಿಯಲ್ಲಿ

ಸಾದರ-ಸ್ವೀಕಾರ

The Journalist vol IV Jan. Feb. 1944 Editor: P. G. Rao, Associate-Editor C. S. J. Rao ಪ್ರಕಾಶಕರು P. G Rao, No. 5 Bombay Mutual Annexe Gunbow St; Fort Bombay.

ಪತ್ರಿಕೋದ್ಯಮದ ವಿಷಯವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಪ್ರಕಟವಾಗುತ್ತಿರುವ ಪತ್ರಿಕೆಯು, ಮೊನ್ನೆ ಮದ್ರಾಸಿನಲ್ಲಿ ಜರಗಿದ ಅಖಿಲಭಾರತ ವೃತ್ತಪತ್ರಿಕಾ ಸಂಪಾದಕ ಸಮ್ಮೇಳನದ ಸಂಬಂಧ ಈ ವಿಶೇಷಾಂಕ ಹೊರಡಿಸಿದೆ. ಸಮ್ಮೇಳನಾಧ್ಯಕ್ಷ ಶ್ರೀ ಬ್ರೆಲ್ವಿಯವರ ಸ್ವಾಗತಾಧ್ಯಕ್ಷ ಶ್ರೀ. ನಟೇಶನರ ಭಾಷಣಗಳು, ಶ್ರೀ. ಬ್ರೆಲ್ವಿಯವರ ಪರಿಚಯಾತ್ಮಕ ಹಲವಾರು ಲೇಖನಗಳು, ಸಮ್ಮೇಳನಕ್ಕೆ ಸಂಬಂಧಿಸಿದ ಹಲವು ವ್ಯಕ್ತಿಗಳ, ಸನ್ನಿವೇಶಗಳ ಚಿತ್ರಗಳಿಂದ ಕೂಡಿದ್ದು ಈ ಸಂಚಿಕೆ ವಾಚನೀಯವಿದೆ. ಇದರ ಬೆಲೆ ಒಂದು ರೂಪಾಯಿ.



• ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

ಸಮರ ಭೂಮಿಯ ಸಂಚಾರ

ಜಪಾನರು ಮಣಿಪುರವನ್ನು ಪ್ರವೇಶಿಸಿದರು!

ಅಸಾಮ್—ಬರ್ಮಾ ಗಡಿಗಳಲ್ಲಿ ಕಾಳಗ

ಹಂಗೇರಿಯಾ ರುಮೇನಿಯಾ ಆಕ್ರಮಣ

ರಶ್ಯನ್ ರಣರಂಗದಲ್ಲಿ ಜರ್ಮನಿಗೆ ಸದ್ಯ ವಿಜಯವಿಲ್ಲ. ಹಿಟ್ಲರ್, ಗೆದ್ದ ಪ್ರದೇಶಗಳನ್ನು ಒಂದೊಂದೇ ಕಳಕೊಂಡನು. ರಶ್ಯದ ಮೇಲೇರಿ ಹೋಗಲು, ಹಿಟ್ಲರ್ ಹಂಗೇರಿಯವರಿಗೆ ಹೇಳಿದನೆಂದೂ ಅದಕ್ಕವರು ಒಪ್ಪದ್ದರಿಂದ ಕಳೆದ ವಾರ ಅದರ ಮೇಲೆ ಆಕ್ರಮಿಸಿದನೆಂದೂ ಹೇಳಲಾಗಿದೆ. ಅಂತೂ ಹಂಗೇರಿಯಿಂದು ಜರ್ಮನ್ ಕೈವಶವಾಗಿದೆ. ಅಂತೇ ರುಮೇನಿಯವೂ ಹಿಟ್ಲರನ ಬಗಲೊಳಗೆ ಬಂದಿರುವುದು. ರುಮೇನಿಯವರಿಗೂ ರಶ್ಯದ ಮೇಲೆ ಆಕ್ರಮಿಸಲು ಹಿಟ್ಲರ್‌ನ ಆಜ್ಞೆಯಾಗಿ ಅದಕ್ಕವರು ಒಡಂಬಡದ ಕಾರಣ ಹೀಗೆ ಮಾಡಲಾಯಿತೆಂದು ಹೇಳಲಾಗಿದೆ. ಹೇಗೂ ಹಿಟ್ಲರನು ಹಂಗೇರಿ ರುಮೇನಿಯಗಳನ್ನು 'ಸ್ವಾಹಾ' ಮಾಡಿಕೊಂಡಿರುವನು

ಮಣಿಪುರ ಪ್ರವೇಶ

೧೯೪೨ನೇ ಇಸವಿ ಮೇ ತಿಂಗಳಲ್ಲಿ ಜಪಾನರು ಬರ್ಮಾವನ್ನು ಸಂಪೂರ್ಣ ವಶಪಡಿಸಿಕೊಂಡಂದಿನಿಂದ ಇದುವರೆಗೆ ಮುನ್ನಡೆಯದೆ ತಟಸ್ಥರಾಗಿದ್ದರು, ಕಳೆದ ವಾರ ಒಮ್ಮೆಲೇ ಮಣಿಪುರವನ್ನು ಪ್ರವೇಶಿಸಿದ ಸುದ್ದಿಯು ಸಹಜವಾಗಿ ಗಾಬರಿ ಹುಟ್ಟಿಸಿದೆ. ಆಗಾಗ ಜಪಾನರು ಒಮ್ಮೊಮ್ಮೆ ಚಿತಗಾಂಗ್, ಅಸಾಮ್, ಮದ್ರಾಸ್, ವಿಶಾಖ ಪಟ್ಟಣಗಳಿಗೆ ಬಾಂಬೆಸೆಯುತ್ತಿದ್ದರೂ ಭಾರತದಲ್ಲಿ ಕಾಲಿಟ್ಟ ಪ್ರಯತ್ನ ಮಾಡಿದ ಸುದ್ದಿಯನ್ನು ನಾವು ಕೇಳಿರಲಿಲ್ಲ ಇಂದೀಗ, ಮಣಿಪುರವನ್ನು ಪ್ರವೇಶಿಸಿ ಜಪಾನರು ಭಾರತದ ಮೇಲೆ ಪದಾರ್ಪಣ ಮಾಡಿದರು

ಮಣಿಪುರ ಅಸಾಮ್ ಪ್ರಾಂತದಲ್ಲಿರುವ ಒಂದು ಆಶ್ರಿತ ಸಂಸ್ಥಾನ ಇದರ ಜನಸಂಖ್ಯೆ ೪॥ ಲಕ್ಷವಿದ್ದು, ಇದು ೮೪೫೬ ಮೈಲು ಚದುರಳತೆಯುಳ್ಳದ್ದಾಗಿದೆ ಇದರ ರಾಜಧಾನಿ ಮಣಿಪುರ ಅಥವಾ ಇಂಫಾಲ ಮಹಾಭಾರತದ ವೀರ ಬಭ್ರುವಾಹನನ ಪಟ್ಟಣವಿದು. ಈ ಸಂಸ್ಥಾನವನ್ನು ಅವರು ಧಾಳಿಯಿಟ್ಟು ಅಸಾಮ್ ಮಾರ್ಗವಾಗಿ ದಾರಿಮಾಡಿ ಕೊಂಡಿದ್ದಾರೆ. ಈಗ ಒಂದೆರಡು ವಾರಗಳಿಂದ ಮಿತ್ರರು ಅರಕಾನ್ ರಂಗದಲ್ಲಿ ಜಪಾನರನ್ನು ಸೋಲಿಸುತ್ತಿರುವರೆಂದು ಸುದ್ದಿ ಬರುತಿದ್ದರೂ, ಅಸಾಮ್ ರಂಗದಲ್ಲಿ ಜಪಾನರೇ ಹೀಗೆ ಮುಂದುವರಿದು ಬಿಟ್ಟಿದ್ದಾರೆ.

ಉದ್ದೇಶವೇನು?

ಬರ್ಮಾ ಭದ್ರವಾಗಿದೆ ಅದನ್ನು ಹಿಂದೆಗೆದುಕೊಳ್ಳಬೇಕೆಂದು ಮಿತ್ರರು ಹೇಳುತ್ತಲೇ ಇದ್ದಾರೆ. ಇದುವರೆಗೆ ಇದು ಸಾಧ್ಯವಾಗಲಿಲ್ಲವೆಂಬ ವಿಚಾರ ಬೇರೆ; ಆದರೆ ಸಾಧ್ಯವಾದಾಗ ಬರ್ಮಾವನ್ನು ಪುನಃ ಹಿಡಿವುದು ಮಿತ್ರರ ಗುರಿ. ಜಪಾನರು ಬರ್ಮಾ ಹಿಡಿದು ಚೀನದ ಜೀವನಾಡಿಯಂತಿದ್ದ ಬರ್ಮಾ ಮಾರ್ಗವನ್ನು ಮುಚ್ಚಿಬಿಟ್ಟರು; ಆ ಮೇಲೆ ಚೀನಕ್ಕೆ ಅಸಾಮ್ ಮಾರ್ಗವಾಗಿ ಮಿತ್ರರು ಸಹಾಯ ಸಾಮಗ್ರಿ ಕಳುಹಿಸುತ್ತಿದ್ದರು. ಸದ್ಯ ಈ ದಾರಿಯನ್ನೂ ಸ್ವಾಧೀನಪಡಿಸಿ ಚೀನಕ್ಕೆ ಇನ್ನೊಂದೂ ಸಹಾಯ ಸಿಗದಂತೆ ಮಾಡುವುದು ಜಪಾನರ ಒಂದು ಉದ್ದೇಶವೆಂದೂ ಅದಕ್ಕಾಗಿ ಅಸಾಮ್ ಪೂರ್ವದಲ್ಲಿ ಮಣಿಪುರವನ್ನು ಹಿಡಿದರೆಂದೂ ತಿಳಿಯಬಹುದಾಗಿದೆ. ಅರಕಾನ್ ರಂಗದಲ್ಲಿ ತಾವು ಮುಂದೊತ್ತುತ್ತಿರುವುದರಿಂದ, ನಮ್ಮ ಗಮನವನ್ನು ಆ ಕಡೆಯಿಂದ ಹಿಂತೆಗೆಸಲು ಜಪಾನರೀಗ ಅಸಾಮ್ ಮೇಲೆ ಬಿದ್ದಿರುವರೆಂದು ಸೇನಾಪತಿಗಳೇನೋ ಹೇಳಿದ್ದಾರೆ

ಜಪಾನರು ಭಾರತದ ಮೇಲೆ ಆಕ್ರಮಿಸಿ ಸ್ವಾಧೀನಪಡಿಸುವರೇ ಎಂಬ ಮಾತು ಮುಂದೆ ಇತಿಹಾಸವೇ ನಿರ್ಧರಿಸಬೇಕು, ಆದರೆ ಭಾರತದ ಮೇಲೆ ಅವರಿಗೆ ಕಣ್ಣಿದೆಯೆಂಬುದು ಖಂಡಿತ. ಬರ್ಮಾ ಸಿಂಗಾಪುರಗಳಲ್ಲಿ ಜಪಾನರು ಬೇಕು ಬೇಕಾದ ಸಿದ್ಧತೆ ಮಾಡುತ್ತಿರುವರೆಂದೂ ತಿಳಿದು ಬರುತ್ತದೆ ಸುಭಾಸ ಬೋಸರು ಸಿಂಗಾಪುರದಲ್ಲಿ ಸೈನ್ಯ ಸಂಗ್ರಹಿಸುತ್ತಿರುವರೆಂದೂ ಒಂದು ಸುದ್ದಿ ಬಂದಿತ್ತು. ಬರ್ಮಾವನ್ನು ಭಾರತವನ್ನು ಬೇರೆ ಮಾಡಿದ್ದರಿಂದ ನಾವು ಬರ್ಮಾ ಹಿಡಿದರೂ ಭಾರತದ ಮೇಲೆ ಧಾಳಿಯಾಗಲಿಲ್ಲವೆಂದು ಹೇಳುತ್ತೇವೆ ಆದರೆ ಬರ್ಮಾ ಹಿಂದಿನಂತೆ ಭಾರತಾಂತರ್ಗತವೇ ಆಗಿದ್ದರೆ ಭಾರತಕ್ಕೆ ಒಂದು ವರ್ಷ ಹಿಂದೆಯೇ ಜಪಾನರು ಹೊಕ್ಕಂತೆ ಆಗಿದೆ. ಸದ್ಯವಂತೂ ಮಣಿಪುರ ಪ್ರವೇಶಿಸಿ ಜಪಾನರು ಭಾರತದ ಒಳ ಹೊಕ್ಕಿರುವರು. ಮಿತ್ರರು ಇದೆಲ್ಲವನ್ನು ನೋಡಿ ಸುಮ್ಮಗಿರಬಾರದು.

ಮೂರು ರಣರಂಗಗಳು

ಜಪಾನರು ಭಾರತ ಗಡಿಯಲ್ಲಿ ಮಾಡುವ ಕದನವನ್ನು—ಬರ್ಮಾ ರಣರಂಗವನ್ನು—ಮೂರು ವಿಭಾಗವಾಗಿ ವಿಂಗಡಿಸಬಹುದು ದಕ್ಷಿಣದಲ್ಲಿ ಅರಕಾನ್ ಪ್ರದೇಶ, ಉತ್ತರದಲ್ಲಿ ನಾಗ ಪರ್ವತ ಪ್ರದೇಶ, ಮಧ್ಯದಲ್ಲಿ ಮಣಿಪುರ ಮಾರ್ಗ. ಈ ಮೂರು ರಣರಂಗಗಳಲ್ಲಿ ಉತ್ತರ ದಿಕ್ಕಿನಲ್ಲಿ ಅಮೇರಿಕನರೂ, ದಕ್ಷಿಣದಲ್ಲಿ ಬ್ರಿಟಿಷ್ ಸೈನಿಕರೂ ದಕ್ಷಿಣಾಫ್ರಿಕಾ ಸೈನಿಕರೂ ಮಧ್ಯಭಾಗದಲ್ಲಿ ಗಳನೆಯ ಬ್ರಿಟಿಷ್ ದಳವೂ ಹೋರಾಡುತ್ತಿದೆ. ಒಟ್ಟಿನಿಂದ ಭಾರತದ ರಕ್ಷಣೆಗೆ ಭಾರತೀಯ ಸೈನ್ಯವೇನೂ ಹೆಚ್ಚಾಗಿರದೆ, ವಿದೇಶೀ ಸೈನ್ಯವೇ ನಿಯುಕ್ತವಾಗಿದೆ ಈ ವಾರ ಮಧ್ಯ ರಣರಂಗಗಳಲ್ಲಿ ಈ ಘೋರ ಕಾಳಗ ವಾಯಿತು.

ಈ ಮೂರು ರಣರಂಗಗಳೂ ಚಿಂದ್ವಿನ್ ನದಿಯ ಪಶ್ಚಿಮ ಭಾಗದಲ್ಲಿವೆ. ಚಿಂದ್ವಿನ್ ನದಿ ಭಾರತ ಬರ್ಮಾಗಳನ್ನು ವಿಂಗಡಿಸುತ್ತದೆ ಈ ನದಿಯನ್ನು ಜಪಾನರು ಕೆಲವು ಕಡೆಗಳಲ್ಲಿ ದಾಟಿ ಈಗ ಮಣಿಪುರ ಪ್ರವೇಶಿಸಿದ್ದಾರೆ.

ಜಪಾನರ ಸಾಹಸ

'ಜಪಾನಿನ ಸಾಮ್ರಾಜ್ಯವಿಂದು ಗಂಡಾಂತರಕ್ಕೊಳಗಾಗಿದೆ; ಈ ಯುದ್ಧದಲ್ಲಿ ಗೆದ್ದರೆ ಮಾತ್ರ ಸಾಮ್ರಾಜ್ಯವುಳಿಯುವುದು' ಎಂದು ಮೊನ್ನೆ ಮೊನ್ನೆ ಟೋಜೋ ಹೇಳಿದ್ದಾನೆ. ಟೋಜೋನ ಹೇಳಿಕೆಯಂತೆ ಈ ಯುದ್ಧ ಗೆಲುವ ಸಲುವಾಗಿ ಜಪಾನೀಯರು ಭಾರತವನ್ನು ಪ್ರವೇಶಿಸಲು ಈ ಕೊನೆಯ ಸಾಹಸ ಮಾಡಿಕ್ಕರೂ ಮಾಡಿರಬಹುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಲೆಯಾಳೀ ವಿದ್ಯಾಲಯ

ಇದರ ತೃತೀಯ ವಾರ್ಷಿಕೋತ್ಸವವು ತಾ. ೨೭ರಂದು ಸಂಜೆ ಮಿಲಾಗ್ರಿಸ್ ಶಾಲಾ-ಭವನದಲ್ಲಿ ಕೇರಳದ ಮಹಾಕವಿ ವಲ್ಲತೋಲ್ ಇವರ ಅಧ್ಯಕ್ಷತೆಯಿಂದ ಜರಗಿತು.

ಕುಮಾರಿಯರಾದ ಜಾನಕಿ ಮತ್ತು ಭಾರತಿ ಇವರಿಂದ ಪ್ರಾರ್ಥನೆಯಾಗಿ ಶ್ರೀ ಕೃಷ್ಣನ್ ಇವರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಹರೀಂದ್ರನಾಥರು ಆರಂಭ ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ಗೋಪಾಲನ್ ವರದಿ ಓದಿದರು. ಶ್ರೀ ಕೆ ಯಂ. ಕೆ. ನಾಯರರು ಭಾಷಣವಿತ್ತರು. ಅಧ್ಯಕ್ಷರು ತಾಯ್ನುಡಿಯ ಪ್ರೀತಿ ಆದರ ಅಭಿಮಾನ ವ್ಯಕ್ತಿಗೆ ಎಷ್ಟರ ಮಟ್ಟಿಗೆ ಇರಬೇಕೆಂದು ವಿವರಿಸಿ ಭಾಷಣ ಕೊಟ್ಟರು

ರಾತ್ರಿ ಕುಮಾರಿ ಶಾಂತಾ ಇವರ ಭರತನಾಟ್ಯ ಮತ್ತು ಶ್ರೀ ಕುಮಾರನ್ ನಾಯರ್ ಮತ್ತು ಪಾರ್ಟಿಯವರ ಓಟ್ಟಂತುಳ್ಳಲ್ ನೃತ್ಯ ಇತ್ತು.

ಶ್ರೀ ಕೈಡೇಲು ತಿಮ್ಮಪ್ಪ ಶೆಟ್ಟರು

ತಮ್ಮ ಪೆರೋಲ್ ಅವಧಿ ತೀರಿದ ಬಳಿಕ, ತಂಜಾವೂರು ಜೈಲಿಗೆ ತೆರಳಿದ್ದು ಅಲ್ಲಿ ಅವರಿಗೆ ಇನ್ನೊಂದು ತಿಂಗಳ ಪೆರೋಲ್ ಅವಧಿ ಮುಂದುವರಿಸಲ್ಪಟ್ಟಿದೆಯೆಂದು ತಿಳಿದು ಪುನಃ ಮಂಗಳೂರಿಗೆ ಬಂದಿದ್ದಾರೆ.

ಪೆರೋಲ್ ಬಿಡುಗಡೆ

ಕೈಯ್ಯೂರು ಮೊಕದ್ದಮೆ ಸಂಬಂಧ ದಿಗ್ಬಂಧಿತರಾದ ಶ್ರೀ. ಎನ್ ಕೆ ಕುಟ್ಟನ್ ಇವರು ಒಂದು ತಿಂಗಳ ಪೆರೋಲಲ್ಲಿ ಬಂದಿರುವರು.

ವಿಶ್ವಕರ್ಣಾಟಕ ನಿರ್ಬಂಧ ನಿಷೇಧ

ಕರ್ಣಾಟಕ ಪತ್ರಿಕೋದ್ಯೋಗೀ ಸಂಘದ ಕಾರ್ಯಕಾರೀ ಸಮಿತಿ ಸಭೆ ತಾ ೨೬ರಂದು ಶ್ರೀ. ವಿ ಎಸ್ ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ ಮೈಸೂರು ಸರಕಾರವು 'ವಿಶ್ವಕರ್ಣಾಟಕ' ದಿನ ಪತ್ರಿಕೆಯನ್ನು ಒಂದು ವರ್ಷದ ವರೆಗೆ ಪ್ರಕಟಿಸಬಾರದೆಂದು ಮಾಡಿದ ನಿರ್ಬಂಧಕಾಜ್ಞೆಯನ್ನು ಖಂಡಿಸಿ, ಈ ಆಜ್ಞೆ ಅನ್ಯಾಯವಾಗಿದೆಯೆಂದು ಇಂಥಾ ಕಠಿಣ ಕಾರ್ಯಕ್ರಮ ಕೈಕೊಳ್ಳುವ ಬದಲು ಸಂಪಾದಕರನ್ನು ವಿಚಾರಣೆಗೆ ಗುರಿಪಡಿಸಬಹುದಿತ್ತೆಂದೂ, ಆದ್ದರಿಂದ ಕೂಡಲೇ ಈ ಆಜ್ಞೆಯನ್ನು ಮೈಸೂರು ಸರಕಾರ ಹಿಂದೆಗೆಕೊಳ್ಳಬೇಕೆಂದು ಒತ್ತಾಯ ಪಡಿಸುವುದಾಗಿಯೂ ನಿರ್ಣಯಿಸಿದೆ.

ಮಣಿಪುರದ ೧೫೦ ಮೈಲು ವಿಸ್ತೀರ್ಣದ ರೈಲುದಾರಿ ಹಿಡಿಯಲು ಜಪಾನರೀಗ ಭೀಕರ ಕಾಳಗ ಕೊಡುತ್ತಿದ್ದಾರೆ. ದೇಶವನ್ನು ಆಕ್ರಮಿಸಿಕೊಳ್ಳುವಲ್ಲಿ ಸಂಚಾರ ಮಾರ್ಗಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಪ್ರಾಮುಖ್ಯವಾದ ವಿಷಯವಾಗಿದೆ. ಇಲ್ಲಿ ಜಪಾನರು ಶಕ್ತಿಮೀರಿ ಹೋರಾಡುತ್ತಿರುವರು ಜಪಾನರ ಮುನ್ನುಗ್ಗುವಿಕೆ ಪ್ರಬಲವಾಗಿದೆ ಬರ್ಮಾ ರಣರಂಗದಲ್ಲಿಯೂ ಕಾಳಗ ನಡೆಯುತ್ತಲೇ ಇದೆ. ಅಂತೂ ಸದ್ಯ ಭಾರತದ ಮೇಲೆ ಜಪಾನರು ಕಾಲಿಟ್ಟದ್ದು, ಭಾರತದ ಗಡಿಯಲ್ಲಿ ಕಾಳಗವಾಗುತ್ತಿರುವುದು ಎಲ್ಲರನ್ನು ತುಂಬಾ ಉದ್ವೇಗ ಕಳವಳಗಳಿಗೆ ಗುರಿಮಾಡಿದೆ

ಗವರ್ನಮೆಂಟ್ ಕಾಲೇಜ್

ಇದನ್ನು ಪ್ರಥಮ ತರಗತಿಯ ಕಾಲೇಜಾಗಿ ಮಾಡುವರೆ ಪ್ರಯತ್ನಿಸುವ ಸಲುವಾಗಿ ಶಾಲೆಯ 'ಹಳೆಯ ವಿದ್ಯಾರ್ಥಿಗಳ ಸಂಘದ ವಿಶೇಷ ಸಭೆಯೊಂದು ಎಪ್ರಿಲ್ ೮ರಂದು ಕಾಲೇಜಿನಲ್ಲಿ ಸಂಜೆ ೫-೩೦ಕ್ಕೆ ಸೇರಲಿರುವುದು. ಸಂಘದ ಸದಸ್ಯರೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳ ವಿನಂತಿಯಿದೆ.

ಕಾರ್ಕಳ

ಗೀತಾ ಪ್ರೇಮಿಗಳ ಒಂದು ಸಭೆ ಶನಿವಾರ ಶ್ರೀ ವೆಂಕಟ್ರಮಣ ಹಾಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಸೇರಿ ಶ್ರೀ ಹುಲಿಮನೆ ಪರಮೇಶ್ವರ ಶಾಸ್ತ್ರಿಗಳು ಭಾಷಣವಿತ್ತರು.

ಬೋರ್ಡ್ ಎ. ಶಾ ಉಪಾಧ್ಯಾಯ ಯೂನಿಯನಿನ ವಾರ್ಷಿಕ ಸಭೆ ಶ್ರೀ ಎ. ಸೀತಾರಾಮರಾಯರ ಅಧ್ಯಕ್ಷತೆಯಲ್ಲಿ ಸೇರಿ ವಾರ್ಷಿಕ ಲೆಕ್ಕ ಮಂಜೂರಾಗಿ ಹೊಸ ಕಾರ್ಯಕಾರೀ ಮಂಡಳಿ ಚುನಾವಣೆಯಾಯಿತು.

ದುರ್ಗದ ಚಿತ್ಪಾವನ ಬ್ರಾಹ್ಮಣ ಸಮಾಜದವರು ಶ್ರೀ ವಿ ಡಿ ಸಾಥೆ ಮತ್ತು ಶ್ರೀಮತಿ ಉಷಾದೇವಿ ಸಾಥೆಯವರನ್ನು ತಮ್ಮ ಹರಿಹರೇಶ್ವರ ದೇಗುಲಕ್ಕೆ ಬರಮಾಡಿ ಸತ್ಕರಿಸಿದರು. ಶ್ರೀ. ಸಾಥೆಯವರ ಅಧ್ಯಕ್ಷತೆಯಲ್ಲಿ ಒಂದು ಆಹಾರ ಸಮಿತಿ ರಚಿತವಾಯಿತು

ಜಯ ಕರ್ಣಾಟಕ ನಾಟಕ ಮಂಡಳಿಯವರು ಕಳೆದ ವಾರ ಆಡಿದ ಎರಡು ನಾಟಕಗಳ ಒಂದಂಶ ಬಾಲಿಕಾ ಪಾಠಶಾಲೆಯ ಹೈಸ್ಕೂಲು ನಿಧಿಗೂ ವೀರ ಮಾರುತಿ ದೇಗುಲ ಜೀರ್ಣೋದ್ಧಾರ ನಿಧಿಗೂ ಕೊಟ್ಟಿರುವರು.

ಅಖಿಲ ಭಾರತ ರೆಡ್ ಕ್ರಾಸ್ ಸಂಘಕ್ಕೆ ಸಹಾಯ ಸಹಕಾರ ಪಡೆವ ನಿಮಿತ್ತ ತಾ. ೨೬ರಂದು ಶ್ರೀಮತಿ ಉಷಾದೇವಿ ಸಾಥೆಯರ ಅಧ್ಯಕ್ಷತೆಯಲ್ಲಿ ಜರಗಿ ಆ ಕಾರ್ಯಕ್ಕಾಗಿ ಶ್ರೀಮತಿ ಕಮಲಾಬಾಯಿ ಶೇಷಗಿರಿ ಪ್ರಭುಗಳು ಪೋಷಕೆಯರಾಗಿ ಶ್ರೀಮತಿ ಉಷಾದೇವಿ ಸಾಥೆಯರು ಅಧ್ಯಕ್ಷೆಯರಾಗಿ ಶ್ರೀಮತಿ ಲಿಲ್ಲಿ ಲೂವಿಸರು ಜತೆ ಕಾರ್ಯದರ್ಶಿಯರಾಗಿ ಶ್ರೀಮತಿ ಸಾವಿತ್ರಿ ಪಾಂಡುರಂಗ ನಾಯಕರು ಖಜಾಂಜಿಯರಾಗಿರುವ ಇನ್ನಿತರ ಐದು ಮಂದಿಯಿಂದ ಕೂಡಿದ ಒಂದು ಕಾರ್ಯಕಾರೀ ಸಮಿತಿ ರಚಿತವಾಯಿತು.

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು

(Cuticura Oitnment)

ಚರ್ಮವ್ಯಾಧಿಗಳನ್ನು ಉಲ್ಬಣಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.



ಕುಟಿಕೂರಾ ಮುಲಾಮು

CUTICURA OINTMENT

ಸ್ವದೇಶಾಭಿಮಾನಿ

ತಾರೀಕು 31-3-1944

ಜಿಲ್ಲಾ ಆಹಾರ ಪರಿಸ್ಥಿತಿ

ಕಳೆದ ಹಲವು ತಿಂಗಳುಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ಆಹಾರ ಪರಿಸ್ಥಿತಿ ವಿಚಾರದಲ್ಲಿ ಹಲವು ಮಾತುಕತೆಗಳು ಹಲವು ಯೋಜನೆಗಳು ನಡೆದವು. ಆದರೆ ಇದು ವರೆಗೂ ಯಾವುದೂ ಅಷ್ಟೊಂದು ಫಲಕಾರಿಯಾಗಿಲ್ಲವೆಂಬ ವಿಷಯವು ಸರ್ವರಿಗೂ ವಿದಿತವಿದೆ. ಈ ಜಿಲ್ಲೆಯಲ್ಲಿ ಆಹಾರದ ಅಭಾವವಿದೆಯೆಂಬ ಕುರಿತು, ಜನರು ಉಪವಾಸ, ಬೀಳ ತೊಡಗಿದ್ದಾರೆಂದು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ| ಜಿನರಾಜ ಹೆಗ್ಡೆಯವರು ಒಂದು ನಿಲುವಳಿ ಸೂಚನೆ ಕೊಟ್ಟದ್ದು, ಪಂಡಿತ ಕುಂಜ್ರುಗಳು, ಈ ವಿಚಾರವನ್ನು ಸಮರ್ಥಿಸಿ ಮಾತನಾಡಿದ್ದು—ಇದರಿಂದೆಲ್ಲಾ ದಕ್ಷಿಣ ಕನ್ನಡದ ಆಹಾರ ಕೊರತೆಯ ವಿಚಾರ ಅಖಿಲ ಭಾರತದ ಗಮನ ಸೆಳೆವಂತಾಗಿದೆ.

ಇಷ್ಟರಲ್ಲೇ ನಮ್ಮ ಹಿಂದಿನ ಕಲೆಕ್ಟರ್ ಮಿ| ಕರಮತುಲ್ಲರಿಗೆ ವರ್ಗವಾಗಿ, ಹೊಸ ಕಲೆಕ್ಟರರಾಗಿ ಶ್ರೀ| ರಾ| ಸಾ| ರಾಮದಾಸ್ ಇವರು ನೇಮಕ ಹೊಂದಿ, ಅಧಿಕಾರ ವಹಿಸಿಕೊಂಡವರೇ ಜಿಲ್ಲೆಯ ಆಹಾರ ಪರಿಸ್ಥಿತಿ ಸುಧಾರಿಸಲು ಒಂದು ಹೊಸ ಯೋಜನೆ ಮಾಡಿದ್ದಾರೆ. (ಇದರ ವಿವರಗಳನ್ನು ನಾವು ಬೇರೆ ಕಡೆಯಲ್ಲಿ ಕೊಟ್ಟಿರುವೆವು) ತಮ್ಮ ಹೊಸ ಯೋಜನೆಯನ್ನು ಫಲಕಾರಿಯಾಗುವಂತೆ ಮಾಡಲು ಅವರು ಸರ್ವ ಪ್ರಯತ್ನ ಕೈಕೊಳ್ಳುವ ನಿರ್ಧಾರಮಾಡಿರುವರು. ಈ ಸಂದರ್ಭದಲ್ಲಿ ಸಾರ್ವಜನಿಕರೂ, ಪತ್ರಿಕೆಗಳೂ ಸಹಕಾರವೀಯಬೇಕೆಂದು ಅವರು ತಿಳಿಸಿದ್ದಾರೆ. ಜನರಿಗೆ ಆಹಾರ ಒದಗಿಸಿ ಕೊಡುವಂಥಾ ಈ ವಿಷಯದಲ್ಲಿ, ಕಲೆಕ್ಟರರು ಕೈಕೊಳ್ಳುವ ಈ ಮಾನವೀಯ ಕರ್ತವ್ಯಕ್ಕೆ ಸರ್ವರೂ ಅವಶ್ಯವಾಗಿ ಸಹಾಯ ಸಹಕಾರ ಕೊಡುವರೆಂದೂ, ಕೊಡಬೇಕೆಂದೂ ನಾವು ವಿನಂತಿಸುತ್ತೇವೆ.

ಈ ಜಿಲ್ಲೆಯು ಅಧಿಕಾಹಾರ ಉತ್ಪತ್ತಿಯ ಜಿಲ್ಲೆಯೆಂದು ಗ್ರಹಿಸಿ ರೆವೆನ್ಯೂ ಬೋರ್ಡಿನವರು ಮೊದಮೊದಲು ಮಾತನಾಡ ತೊಡಗಿದರು. ಆಗ ಜನತಾ ಮುಖಂಡರೂ, ಬೇರೆ ಬೇರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳೂ ಜಿಲ್ಲೆಯ ಅಭಾವ ಪರಿಸ್ಥಿತಿಯನ್ನು ಬಹಳವಾಗಿ ಸಾರಿ ಹೇಳಿದರು. ಶ್ರೀಗಳಾದ ವೆಂಕಳಹಳ್ಳಿ ಶಿವರಾವ್, ಎ. ಬಿ. ಶೆಟ್ಟಿ ಮೊದಲಾದವರು ನಿರಂತರ ಪ್ರಯತ್ನ ಮಾಡಿ ಅಂಕೆಸಂಖ್ಯೆಗಳನ್ನು ಸಂಗ್ರಹಿಸಿ, ಗವರ್ನರರ ಎಡ್ವೈಸರರಲ್ಲಿ ಶಿಷ್ಟಮಂಡಳ ಒಯ್ದು ಕೊನೆಗೆ ರೆವೆನ್ಯೂ ಬೋರ್ಡಿನವರೂ ಈ ಜಿಲ್ಲೆ ಕೊರತೆಯ ಜಿಲ್ಲೆಯೆಂದು ಒಪ್ಪಿಕೊಂಡಿದ್ದಾರೆ. ಇಷ್ಟಾಗಬೇಕಾದರೆ, ಬಹಳ ಕಾಲ ಹಿಡಿದು. ವ್ಯಾಪಾರ, ಕಳ್ಳ ಸಂತೆ ಹೆಚ್ಚಾಗಿ, ಹಾಗೆ ಜಿಲ್ಲೆಯ ಆಹಾರ ಪರಿಸ್ಥಿತಿ ಕೆಡುತ್ತಾ ಹೋಯಿತು.

ಕೆಳಗಿನ ಕಾರ್ಯಕ್ರಮಗಳನ್ನು ನ್ಯೂನತೆಯಿಲ್ಲದೆ ಕೈಕೊಂಡರೆ ನಮ್ಮ ಜಿಲ್ಲೆಯ ಆಹಾರಾಭಾವದ ಸಮಸ್ಯೆ ಪರಿಹರಿಸಬಹುದೆಂದು ನಮಗೆ ತೋರುತ್ತದೆ.

(೧) ಕಾಸರಗೋಡು ತಾಲೂಕಿನ ಮಟ್ಟಿಗೆ ಹೊರಗಿನಿಂದ ಅಕ್ಕಿ ತರಿಸಿ ಕೊಡುವುದು. (೨) ಸಮುದ್ರ ಮಾರ್ಗವಾಗಿ ಮತ್ತು ಜಿಲ್ಲೆಯ ಗಡಿಗಳಲ್ಲಿ ಕಠಿಣ ಕಾವಲಿಟ್ಟು ಹೊರಗೆ ಅಕ್ಕಿ ಹೋಗದಂತೆ ನೋಡುವುದು. (೩) ರಖಂ ವ್ಯಾಪಾರ ಮಾಡಲು ಯಾರಿಗೂ ಪರ್ಮಿಟು ಕೊಡದಿರುವುದು. (೪) ಕಳ್ಳ ಸಂತೆಯನ್ನು ಕಂಡು ಹುಡುಕಿ ಕಠಿಣವಾಗಿ ಶಿಕ್ಷಿಸುವುದು. (೫) ಸರಕಾರಿ ನೌಕರರು ಕರ್ತವ್ಯ ಪಾಲಿಸುವಂತೆ ಎಚ್ಚರಿಸುವುದು. (೬) ಆದಷ್ಟು ಸ್ಟೋರುಗಳನ್ನು ಡಿಪೋಗಳನ್ನು ಮಾಡುವುದು. (೭) ಬೇಸಾಯಗಾರರಿಗೆ ಮುಂದೆ ಬೇಸಾಯ ಮಾಡಿಸಲು ತೊಂದರೆಯಾಗದಂತೆ ರಿಕ್ವಿಸಿಶನ್ ಮಾಡುವುದು. (೮) ತಡವಿಲ್ಲದೆ ಮುಖ್ಯ ಪಟ್ಟಣಗಳಲ್ಲಿ ಪೂರ್ಣ ರೇಶನಿಂಗ್ ಜಾರಿಗೆ ತರುವುದು.

ಕಲೆಕ್ಟರರ ಇಂದಿನ ಹೊಸ ಯೋಜನೆಯಲ್ಲಿ ಮೇಲಿನ ಕಾರ್ಯಗಳನ್ನು ನಿರ್ವಹಿಸಲು ಬೇಕಾದಷ್ಟು ಅನುಕೂಲತೆಗಳಿವೆ ಮತ್ತು ಅವರ ಭರವಸೆಯೂ ಇದೆ.

ತಡವಾಗಿಯಾದರೂ, ಹೊಸ ಕಲೆಕ್ಟರರು ಅಧಿಕಾರ ವಹಿಸಿದ ಕೂಡಲೇ ಆಹಾರ ಪರಿಸ್ಥಿತಿ ಸುಧಾರಿಸಲು ಯೋಗ್ಯ ನಿರ್ಧಾರ ಮಾಡಿದ್ದಾರೆ. ಈ ಯೋಜನೆ ಫಲಕಾರಿಯಾಗಿ ಜನರಿಗೆ ಅನ್ನ ದೊರಕುವಂತಾಗಲಿ ಎಂದು ನಾವು ಹಾರೈಸುವೆವು.

ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್—ಲೀಗ್ ಐಕ್ಯ

ಈ ಸಲದ ಕೇಂದ್ರ ಎಸೆಂಬ್ಲಿಯ ಅಧಿವೇಶನದಲ್ಲಿ ಕಾಂಗ್ರೆಸ್–ಲೀಗ್ ಸದಸ್ಯರು ಒಮ್ಮತದಿಂದ ಕೂಡಿ ಕೆಲಸಮಾಡಿದ್ದು ರಾಷ್ಟ್ರದ ಶುಭ ಚಿಹ್ನೆಗಳಲ್ಲಿ ಒಂದಾಗಿದೆ. ಇದರ ಫಲವಾಗಿ ಸರಕಾರದ ಕೆಲವು ಮಸೂದೆಗಳು ಬಿದ್ದು ಹೋದದ್ದು ಒಂದು ಗಮನಾರ್ಹ ವಿಚಾರವಿರುವುದು.

ಮುಸ್ಲಿಂಲೀಗ್ ಪಕ್ಷದ ಮುಖಂಡರಾದ ಸರ್ ಯಾಮಿನ್ ಖಾನರೇ ಎಸೆಂಬ್ಲಿಯಲ್ಲಿ ಈ ಐಕ್ಯದ ಕುರಿತು ಈ ಕೆಳಗಿನ ಹೇಳಿಕೆಯಿತ್ತದ್ದು ಪ್ರಶಂಸನೀಯವಿರುವುದು.

"ಕಾಂಗ್ರೆಸ್ ಲೀಗ್ ಎರಡು ಪಕ್ಷಗಳು ಇಂದು ಬಹು ಸಮೀಪ ಬಂದಿವೆ; ಇದರಿಂದ ಇಂದಿನ ಸರಕಾರದಲ್ಲಿ ವಿಶ್ವಾಸವಿಲ್ಲವೆಂದು ಜಗತ್ತಿಗೆ ಪ್ರದರ್ಶಿಸಲಾಗಿದೆ. ಐಕ್ಯಸಾಧನೆಗೆ ಇದು ಯೋಗ್ಯ ಹೆಜ್ಜೆಯಾಗಿರುವುದು. ಈ ಐಕ್ಯವು ಆಶ್ಚರ್ಯವೆಂದು ಫ್ರೆಡ್ರಿಕ್ ಜೇಮ್ಸರು ಹೇಳಿದರು. ಆದರೆ ರಶ್ಯ ಇಂಗ್ಲೆಂಡುಗಳೊಳಗೆ ಒಂದು ಒಮ್ಮತವಾಗಬಹುದೆಂದು ೧೯೪೧ರ ವರೆಗೆ ಫ್ರೆಡ್ರಿಕರು ತಿಳಿದಿದ್ದರೆ? ಬೇರೆ ಬೇರೆ ಜನರು ಪುನಃ ಒಟ್ಟುಗೂಡುವ ಸಂದರ್ಭ ಬರುತ್ತದೆ. ಸರಕಾರದ ದುಷ್ಕರ್ಮವು ಪುನಃ ಕಾಂಗ್ರೆಸ್ ಲೀಗುಗಳನ್ನು ಒಟ್ಟುಗೂಡಿಸಿದೆ.

"ಪಕ್ಷಗಳೊಳಗೆ ಐಕ್ಯವಾಗಬೇಕೆಂದು ಸರಕಾರವು ಹೇಳುವ ಮಾತು ಕೇವಲ ಬಣ್ಣನೆಯ ಮಾತುಗಳೆಂದು ಸರಕಾರವು ಮಾಡಿದ ತಪ್ಪು ಕೆಲಸಗಳಿಂದ ಜನರಿಗೆ ತಿಳಿದಿದೆ. ಮಾತ್ರವಲ್ಲದೆ ಪಕ್ಷಗಳೊಳಗಿನ ಅನೈಕ್ಯವನ್ನು ಸರಕಾರವು ಕೇವಲ ಸ್ವಲಾಭಕ್ಕಾಗಿ ಉಪಯೋಗಿಸುವುದೆಂದೂ ಅವರಿಗೆ ತಿಳಿದಿರುವುದು. ಭಾರತದ ಜನರಲ್ಲಿ ಎಂದೆಂದೂ ಐಕ್ಯವುಂಟಾಗಬಾರದೆಂಬುದೇ ಸರಕಾರದ ಉದ್ದೇಶವಿದೆ. ಐಕ್ಯವಾಗುವ ಸಂಭವವಿದ್ದಾಗ ಅದು ಆಗದಂತೆ ಮಾಡಲು ಏನಾದರೊಂದು ಕೆಲಸ ಮಾಡುತ್ತಾರೆ."

ಸರ್ ಯಾಮಿನ್ ಖಾನರ ಟೀಕೆ ಸಮಂಜಸವೂ ಸಮಯೋಚಿತವೂ ಇದೆ. ಕಾಂಗ್ರೆಸ್–ಲೀಗುಗಳೊಳಗೆ ಕಂಡು ಬಂದ ಈ ಐಕ್ಯವು ಇನ್ನಷ್ಟು ದೃಢಗೊಂಡು ನಮ್ಮ ರಾಷ್ಟ್ರದ ಏಳಿಗೆ ಬೇಗನೇ ಸಾಧಿಸುವಂತಾಗಲಿ.

ಸ್ವದೇಶ ಸಮಾಚಾರ

ಆರ್ಥಿಕ ಮಸೂದೆ ಬಿದ್ದು ಹೋಯಿತು!

ಸರಕಾರಕ್ಕೆ ಇನ್ನೊಮ್ಮೆ ಸೋಲು

ಕೇಂದ್ರ ಎಸೆಂಬ್ಲಿಯಲ್ಲಿ ಆರ್ಥಿಕ ಮಸೂದೆಯು ೬ ದಿನಗಳ ತನಕ ಚರ್ಚೆಯಾಗಿ ತಾ: ೨೭ರಂದು ಮತ ಗಣನೆಗೆ ಹಾಕಲ್ಪಟ್ಟು ೫೬ ರೋಧ, ೫೫ ಪರಮತಗಳಿಂದ ಅದು ಸೋಲಿಸಲ್ಪಟ್ಟಿತು. ಆಗ ಇಡೀ ಸಭಾ ಭವನದಲ್ಲಿ ಹರ್ಷ ಉದ್ಗಾರವಾಗಿ ಮಂತ್ರಿಗಳನ್ನುದ್ದೇಶಿಸಿ "ರಾಜಿ ಕೊಟ್ಟು ಹೊರ ಬೀಳಿರಿ" ಎಂಬ ಶಬ್ದ ಕೇಳಿ ಬರುತಿತ್ತು.

ಈ ಸಭೆಗೆ ಲೇಡಿ ವೇವಲ್, ಶ್ರೀಮತಿ ಸರೋಜಿನಿ ದೇವಿ, ವಿಜಯಲಕ್ಷ್ಮಿ ಪಂಡಿತ್, ಡಾ| ಬಿ. ಸಿ. ರಾಯ್ ನವಾಬ್ ಇಸ್ಮಾಯಿಲ್ ಖಾನ್ ಮೊದಲಾದವರು ಪ್ರೇಕ್ಷಕರಾಗಿ ಬಂದಿದ್ದರು.

ಮತ ಗಣನೆಯ ಸಮಯದಲ್ಲಿ ಒಂದು ಚಮತ್ಕಾರದ ಘಟನೆ ನಡೆಯಿತು. ಸರ್ ಜೆರಿಮಿರೆಜಿಮೆನರು ವಿರೋಧಿ ಪಕ್ಷದ ಕಡೆ ತಪ್ಪಿ ಕುಳಿತಿದ್ದರು. ಸರ್ ಜ್ವಾಲಾ ಪ್ರಸಾದ ಶ್ರೀ ವಾಸ್ತವರು ಶ್ರೀ ಪ್ರಕಾಶರ ಪ್ರಯತ್ನದಿಂದ ವಿರೋಧಿ ಪಕ್ಷದ ಗುಂಪಿನಲ್ಲಿದ್ದರು. ಆದರೆ ಸರಕಾರೀ ಪಕ್ಷದವರು ಇವರನ್ನು ಎಬ್ಬಿಸಿಕೊಂಡು ಹೋದರು.

ನೇಶನಲಿಸ್ಟ್ ಪಕ್ಷ ಮುಸ್ಲಿಂಲೀಗ್ ಕಾಂಗ್ರೆಸ್ ಪಕ್ಷಗಳು ಒಟ್ಟಾಗಿ ಆರ್ಥಿಕ ಮಸೂದೆಯನ್ನು ವಿರೋಧಿಸಿದರು. ಈ ಪಕ್ಷಗಳ ಪರವಾಗಿ ಡಾ| ಬೆನರ್ಜಿ ನವಾಬಜಾದಾ ಲಿಯಾಖತ ಅಲಿಖಾನ್ ಮತ್ತು ಭೂಲಾಭಾಯಿ ದೇಸಾಯಿಯವರು ಮಾತನಾಡಿ ಆರ್ಥಿಕ ಮಸೂದೆಯನ್ನು ವಿರೋಧಿಸಿದರು.

ಮದ್ರಾಸು ಸರಕಾರದ ಆಯವ್ಯಯ

೬೪೪ ಲಕ್ಷ ರೂ. ಉಳಿತಾಯ

ಮದ್ರಾಸು ಸರಕಾರದ ೧೯೪೪-೪೫ರ ಆಯವ್ಯಯ ಅಂದಾಜು ಪತ್ರವು ಈಗ ಪ್ರಕಟವಾಗಿ ಇದರಲ್ಲಿ ಉತ್ಪತ್ತಿ ರೂ. ೩೦,೨೦,೮೮ ಲಕ್ಷ ವೆಚ್ಚ ರೂ ೩೫,೯೭ ಲಕ್ಷ; ಉಳಿತಾಯ ರೂ೯೪೪ ಲಕ್ಷವೆಂದು ತಿಳಿದಿದೆ ತೆರಿಗೆಯಲ್ಲಿ ಏನೂ ಕಡಿಮೆಯಿಲ್ಲ ಯುದ್ಧಾನಂತರ ಕಾರ್ಯಕ್ಕಾಗಿ ರೂ. ೫ ಕೋಟಿ ತೆಗೆದಿಡಲಾಗಿದೆ.

ಬಂಗಾರದ ಕ್ರಯ ಏರಿದೆ.

ಮುಂಬಯಿಯಲ್ಲಿ ತಾ. ೨೯ರಂದು ನಗರದಲ್ಲಿ ರೂ. ೮೦-೧೨-೦ಗೆ ಒಂದು ತೊಲೆಯಂತೆ ಬಂಗಾರ ಮಾರಲ್ಪಡುತ್ತಿದೆ. ಬಂಗಾರ ಮಾರಾಟ ಸಂಬಂಧದಲ್ಲಿ ರಿಸರ್ವ ಬೇಂಕಿನವರು ಬೇಗನೆ ಡಿಂಟರ್ ಕೇಳಿ ಹೆಚ್ಚಿನ ಬೆಲೆ ನಿರ್ಧರಿಸುವರೆಂದು ತಿಳಿದು ಬಂದಿದೆ.

ಸರ್ ಗುರುರಾವ್ ಬೇವೂರರ ಪುತ್ರರ ಮರಣ

ಇಂಡಿಯಾ ಸರಕಾರದ ಪೋಸ್ಟ ಇಲಾಖೆಯ ಸೆಕ್ರೆಟರಿಗಳಾದ ಸರ್ ಗುರುನಾಥ ಬೇವೂರರ ಪುತ್ರ ಮೇಜರ್ ಮಧ್ವರಾವ್ ಬೇವೂರರ ಅರಕಾನ ರಣ ರಂಗದಲ್ಲಿ ೩ನೇ ಫೆಬ್ರವರಿಗೆ ನಿಧನ ಹೊಂದಿದ ವಾರ್ತೆ ಪ್ರಸಿದ್ಧವಾಗಿದೆ.

ಕಸ್ತೂರ್ ಬಾ ಸ್ಮಾರಕ ಗ್ರಂಥ

ಬೊಂಬಾಯಿ ಕ್ರಾನಿಕಲ್ ಉಪಸಂಪಾದಕ ಶ್ರೀ. ಆರ್. ಕೆ. ಪ್ರಭುಗಳ ಪ್ರಧಾನ ಸಂಪಾದಕರಾಗಿ ಕಸ್ತೂರ್ ಬಾ ಸ್ಮಾರಕ ಜೀವನ ಗ್ರಂಥವೊಂದು ಬೇಗನೇ ಪ್ರಕಟವಾಗುವುದು. ಬೊಂಬಾಯಿಯ ಹಿಂದ್ ಕಿತಾಬ್ ನವರು ಇದನ್ನು ಪ್ರಕಟಿಸುತ್ತಾರೆ. ಇದಕ್ಕೆ ಎಂ. ಆರ್. ಮಸಾನಿ ಮುನ್ನುಡಿ ಬರೆವರು. ಇದನ್ನು ಮಾರಾಟ ಮಾಡಿ ಬಂದ ಹಣ ಕಸ್ತೂರ್ ಬಾ ಸ್ಮಾರಕ ನಿಧಿಗೆ ಒಪ್ಪಿಸಲಾಗುವುದೆಂದೂ ಪ್ರಕಟವಾಗಿದೆ.

ಮುಂಬಾಯಿಯ ಆಯವ್ಯಯ

೪೬,೦೦೦ ರೂ. ಉಳಿತಾಯ

ಮುಂಬಾಯಿ ಪ್ರಾಂತದ ಹೊಸ ವರ್ಷದ ಆಯುವ್ಯಯ ಪತ್ರಿಕೆ ಪ್ರಸಿದ್ಧವಾಗಿದ್ದು ೪೬,೦೦೦ ರೂ. ಉಳಿತಾಯವಾಗುವುದೆಂದು ಹೇಳಲಾಗಿದೆ. ಹೊಸ ವರ್ಷದಲ್ಲಿ ಹೊಸ ತೆರಿಗೆಗಳು ಹೇರಲ್ಪಟ್ಟಿಲ್ಲ. ಯುದ್ಧಾನಂತರ ಪುನರ್ರಚನೆಗೆ ೪॥ ಕೋಟಿ ರೂ. ತೆಗೆದಿಟ್ಟಿರುವರು. ಕೆಲ ಹಳ್ಳಿಗಳಿಗೆ ರೇಡಿಯೋ ಒದಗಿಸುವ ಯೋಜನೆಯಾಗಿದೆ. ಮುಂಬಾಯಿ ಅಹಮ್ಮದಾಬಾದುಗಳಲ್ಲಿ ಹೇರಲಾದ ಸ್ಥಿರಾಸ್ತಿ ತೆರಿಗೆ ತುಸು ಇಳಿಸಲಾಗಿದೆ.

ಪರ್ಡಿವಾಲರ ಬಂಧನಕ್ಕೆ

ಪೋಲೀಸರಿಗೆ ಶಿಕ್ಷೆ

ಶ್ರೀ. ಜಯಪ್ರಕಾಶರ ಬಿಡುಗಡೆಗಾಗಿ ಹೇಬಸ್ ಕಾರ್ಪಸ್ ಅರ್ಜಿ ಮಾಡಲು ಲಾಹೋರಿಗೆ ಹೋಗಿದ್ದ ಬ್ಯಾರಿಸ್ಟರ್ ಶ್ರೀ ಪರ್ಡಿವಾಲರನ್ನು ಪೋಲೀಸರು ಬಂಧಿಸಿ, ಅವರ ವ್ಯಾಜ್ಯವನ್ನು ಕೊಡಲಿಲ್ಲವೆಂಬ ಬಗ್ಗೆ ಲಾಹೋರ್ ಕೋರ್ಟಿನಲ್ಲಿ ಮಾಡಿದ ವ್ಯಾಜ್ಯದಲ್ಲಿ ಲಾಹೋರ್ ಹೈಕೋರ್ಟಿನ ಜಸ್ಟಿಸರಾದ ಅಬ್ದುಲ್ ರಶಿದ್ ಮತ್ತು ಅಬ್ದುಲ್ ರಹೆಮಾನ್ ಇವರು ಇಬ್ಬರು ಪೋಲೀಸು ಅಧಿಕಾರಿಗಳಿಗೆ ರೂ. ೧೦೦ ಮತ್ತು ರೂ. ೫೦ ಜುಲ್ಮಾನೆ ವಿಧಿಸಿದ್ದಾರೆ. ಪೋಲೀಸರು ಹೈಕೋರ್ಟಿಗೆ ಒಪ್ಪಿಸತಕ್ಕ ಅಮೂಲ್ಯ ರಿಕಾರ್ಡುಗಳನ್ನು ನಾಶಮಾಡಿದರೆಂದು ಅವರ ಮೇಲೆ ಈ ಶಿಕ್ಷೆ. ಪೋಲೀಸ್ ಅಧಿಕಾರಿಗಳು ಕಣ್ಣು ತೆರೆಯಬೇಕಾದ ತೀರ್ಮಾನವಿದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಬಂಟವಾಳದಲ್ಲಿ ೬ ಸಾವಿರ ಜನರ ಉಪವಾಸ!

ಎಸೆಂಬ್ಲಿಯಲ್ಲಿ ಜಿನರಾಜ ಹೆಗ್ಡೆಯವರ ಸೂಚನೆ

ತಾ. ೨೩ರಂದು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ. ಜಿನರಾಜ ಹೆಗ್ಡೆಯವರು ದಕ್ಷಿಣ ಕನ್ನಡದ ಬಂಟ್ವಾಳದಲ್ಲಿ-೬೦೦೦ ಜನರು ಉಪವಾಸ ಬಿದ್ದ ಹಾಗೂ ಕೇಂದ್ರ ಸರಕಾರ ಆ ಕುರಿತು ತಕ್ಕ ವ್ಯವಸ್ಥೆ ಮಾಡದಿರುವ ವಿಚಾರವಾಗಿ ಒಂದು ನಿಲುವಳಿ ಸೂಚನೆ ತಂದರು.

ಆಹಾರ ಮಂತ್ರಿ ಶ್ರೀ ವಾಸ್ತವರು ಆಕ್ಷೇಪಿಸುತ್ತಾ ಇದು ಮುಖ್ಯವಾಗಿ ಮದ್ರಾಸು ಸರಕಾರಕ್ಕೆ ಸಂಬಂಧ ಪಟ್ಟ ವಿಷಯವೆಂದೂ ನಿನ್ನೆ ರಾತ್ರಿ ಟೆಲಿಫೋನಿನಿಂದ ಬಂದ ಸುದ್ದಿಯಿಂದ ಕೆಲವೇ ದಿನಗಳ ಹಿಂದೆ ನಾಗರಿಕ ಪೂರೈಕೆ ಕಮಿಶನರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸ ಮಾಡಿದ್ದು ಅಲ್ಲಿ ಪರಿಸ್ಥಿತಿ ಚೆನ್ನಾಗಿರುವುದೆಂದು ಅವರಿಗೆ ಕಂಡು ಬಂದಿದೆಯೆಂದೂ ತಿಳಿಸಿದರು (ಓ ಓ ಧನಿ ಸಭೆಯಲ್ಲಿ ಹೊರಟಿತು) ತನ್ನ ಮಾಹಿತಿಯಂತೆ ಆ ಜಿಲ್ಲೆ ಸ್ವಾವಲಂಬಿಯಾಗಿದೆ ಎಂದರು

ಆಗ ಹೆಗ್ಡೆಯವರು, ಅದು ಸ್ವಾವಲಂಬಿಯಾಗಿಲ್ಲವೆಂದರು.

ಅದಕ್ಕೆ ಆಹಾರ ಮಂತ್ರಿಗಳು ಉತ್ತರ ಕೊಡುತ್ತಾ ಆ ಜಿಲ್ಲೆಯಿಂದ ಹೊರಗೆ ಅಕ್ಕಿ ಕಳುಹಿಸುವುದಿಲ್ಲ, ಕಳೆದ ವರ್ಷ ಸ್ವಲ್ಪ ಹೆಚ್ಚೇ ಉತ್ಪತ್ತಿಯಾಗಿತ್ತು ಈ ವರ್ಷ ಹವಾಮಾನ ಕೆಟ್ಟದಿರುವುದರಿಂದ ಸ್ವಲ್ಪ ಕಡಿಮೆ ಬೀಳಬಹುದೆಂದು ಮದ್ರಾಸು ಸರಕಾರ ಅಂದಾಜು ಮಾಡಿದೆ. ಇತ್ತೀಚೆಗೆ ಅಲ್ಲಿನ ಪರಿಸ್ಥಿತಿ ವಿಚಾರಿಸಿ ಜಿಲ್ಲೆಗೆ ಫೆಬ್ರವರಿ ಮಾರ್ಚಿ ಮತ್ತು ಎಪ್ರಿಲ್ ಈ ಮೂರು ತಿಂಗಳ ಬಗ್ಗೆ ಈ ಮೊದಲು ತೆಗೆದಿಟ್ಟ ೧೦೦೦ ಟನ್ ಗೋದಿಯಲ್ಲದೆ ಪ್ರತ್ಯೇಕ ಪತ್ರಿ ತಿಂಗಳು ಒಂದು ಸಾವಿರ ಟನ್ ಆಹಾರ ಧಾನ್ಯ ಪೂರೈಸುವಂತೆ ನಿರ್ಧರಿಸಿದೆ ಪೂರೈಕೆ ಕಮಿಶನರು ಅಲ್ಲಿನ ಪರಿಸ್ಥಿತಿ ವಿಮರ್ಶಿಸಲು ಹೋಗಿದ್ದಾರೆ ಅವರ ವರದಿ ಬಂದೊಡನೆ ಅಗತ್ಯ ಕಂಡು ಬಂದರೆ ತಕ್ಕ ವ್ಯವಸ್ಥೆ ಮಾಡಲಾಗುವುದು, ಆದಕಾರಣ ಈ ನಿಲುವಳಿ ಸೂಚನೆ ಅಗತ್ಯವಿಲ್ಲದೆಂದರು.

ಅಧ್ಯಕ್ಷರು ಇದಕ್ಕೆ ಒಪ್ಪಿ ನಿಲುವಳಿ ಸೂಚನೆ ತರಬಿಡಲಿಲ್ಲ.

ಬಂಟವ್ವಾಳದ ದುಃಸ್ಥಿತಿಗಾಗಿ ಮಂಗಳೂರಿಗೆ ಶಿಷ್ಟ ಮಂಡಳಿ

ಫೆಬ್ರವರಿ ೨೯ರಂದು ಬಂಟ್ವಾಳದಲ್ಲಿ ಪಾಣೆಮಂಗಳೂರಲ್ಲಿ ೩೩೯೮ ಮಂದಿಗೆ ಮೇಲ್ಪಟ್ಟು ಗುರುತು ಚೀಟು ಕೊಡಲ್ಪಟ್ಟು ರೇಶನಿಂಗ್ ಆರಂಭವಾಯಿತು, ಆದರೆ ಇದು ಕೇವಲ ೨೨ ದಿನ ಮಾತ್ರ ನಡೆಯಿತು. ಆ ಮೇಲೆ ಎರಡು ದಿನಗಳಿಗೊಮ್ಮೆ ಒಬ್ಬನಿಗೆ ಮುಕ್ಕಾಲು ಪಾವು ಅಕ್ಕಿಯೆಂದಾಯಿತು. ಅಲ್ಲಿನ ಪರಿಸ್ಥಿತಿ ಹದಗೆಟ್ಟಿತು.

ಈ ಸಂದರ್ಭದಲ್ಲಿ ಊರವರು ಸಂಘಟಿತರಾಗಿ ಸರಕಾರ ಸ್ವಾಧೀನವಿರಿಸಿದ ಅಕ್ಕಿಯನ್ನು ಸ್ಟೋರಿಗೆ ಕೊಡುವಂತೆ ಮಾಡಲು ಪ್ರಯತ್ನಿಸಿದರು. ಹಲವು ಸಂಘ ಸಂಸ್ಥೆಗಳು ಕಲೆಕ್ಟರರಿಗೆ ತಂತಿ ಬಿಟ್ಟು ಅಕ್ಕಿ ಕೊಡಿಸಬೇಕೆಂದು ಕೇಳಿ ಕೊಂಡರು. ಒಂದು ಶಿಷ್ಟ ಮಂಡಳಿ ರಚಿತವಾಗಿ ಮಂಗಳೂರಲ್ಲಿ ಡಿ. ಕಲೆಕ್ಟರರನ್ನು ಕಂಡು ಬಂಟ್ವಾಳದ ಪರಿಸ್ಥಿತಿ ವಿವರಿಸಿದರು. ಇವರಲ್ಲಿ ಕೆಲವರು ಶ್ರೀ ಎ. ಬಿ. ಶೆಟ್ರನ್ನು ಕಂಡು ಮಾತನಾಡಿದರು. ಕಲೆಕ್ಟರರನ್ನು ಅವರು ಕಾಣುವರು ೧೦೦೦ ಮುಡಿ ಅಕ್ಕಿ ಬಂಟ್ವಾಳಕ್ಕೆ ಕಲೆಕ್ಟರರು ಈಗ ಬಿಟ್ಟು ಕೊಡುವರಾಗಿ ತಿಳಿದಿದೆ.

ನೇಮಕಗಳು

ಪೋಲೀಸ್ ಮುಕದ್ದಮೆಗಳ ಪ್ರೊಸಿಕ್ಯುಶನ್ ಕಾರ್ಯವನ್ನು ಪೋಲೀಸ್ ಇಲಾಖೆಯವರಿಂದ ತಪ್ಪಿಸಿ ಅದಕ್ಕಾಗಿ ಪ್ರತ್ಯೇಕ ಲಾಗ್ರೇಜುವೇಟರವನ್ನು ನೇಮಕ ಮಾಡಬೇಕೆಂದು ಹಿಂದೆ ಸರಕಾರ ತೀರ್ಮಾನಿಸಿದಂತೆ ನಮ್ಮ ಜಿಲ್ಲೆಗೆ ಫಸ್ಟ್ ಗ್ರೇಡ್ ಅಸಿಸ್ಟಾಂಟ ಪಬ್ಲಿಕ್ ಪ್ರೊಸಿಕ್ಯೂಟರರಾಗಿ ಶ್ರೀ. ತಣ್ಣೀರು ಬಾವಿ ರಾಮಚಂದ್ರ ರಾಯರನ್ನೂ ಸೆಕೆಂಡ್ ಗ್ರೇಡ ಅಸಿ. ಪಬ್ಲಿಕ್ ಪ್ರೊಸ್ಯಕ್ಯೂಟರಾಗಿ ಶ್ರೀಗಳಾದ ಅಂತಪ್ಪ ಮತ್ತೆ ಸೀತಾರಾಮ ಶೆಟ್ಟಿ ಇವರನ್ನೂ ನೇಮಿಸಲಾಗಿದೆಯೆಂದು ತಿಳಿಯುತ್ತದೆ.

ಪ್ಲೇಗಿನ ವರದಿ

ಮಂಗಳೂರಿನ ಮುನ್ಸಿಪಲ್ ಹೆಲ್ತಾಫೀಸರರು ಹೀಗೆ ಪ್ರಕಟಿಸುತ್ತಾರೆ

'ಕಳೆದವಾರ ೧೧ ಇಲಿಬಿದ್ದಿತು ತಾ ೨೫-೩-೪೪ಕ್ಕೆ ಅಂತ್ಯವಾಗುವೀ ವಾರದಲ್ಲಿ ೧೧ ಇಲಿ ಬಿದ್ದಿವೆ. ೬ ಇಲಿಗಳ ರಕ್ತ ತೆಗೆದು ಪರೀಕ್ಷೆಗೆ ಮದ್ರಾಸಿಗೆ ಕಳುಹಿಸಿದೆ. ವೆಬ್‌ಸ್ಟರ್ ಮಾರ್ಕೆಟಿನಿಂದ ಕಳುಹಿಸಿದ ೨ ಇಲಿಗಳ ರಕ್ತವು ಪ್ಲೇಗು ಸೋಂಕಿದ್ದೆಂದು ವರದಿ ಬಂದಿದೆ. ಕಳೆದ ವಾರ ನಾಲ್ಕುಜನರಿಗೆ ತಗಲಿ ನಾಲ್ವರೂ ಸತ್ತಿದ್ದರೂ, ಈ ವಾರ ಒಬ್ಬರಿಗೆ ತಗಲಿ ಯಾರೂ ಸತ್ತಿಲ್ಲ. ಸಿಯಾನೋ ಗೇಸ್ ಪ್ರಯೋಗಿಸಿ ಇಲಿಗಳನ್ನು ಕೊಲ್ಲಲಾಗಿದೆ. ೭೪೭೦ ಜನರಿಗೆ ಪ್ಲೇಗ್ ದಾಕು ಹಾಕಿದೆ. ಸಾರ್ವಜನಿಕ ಆರೋಗ್ಯಖಾತೆ ಡೈರೆಕ್ಟರರು ನಮ್ಮ ನಗರದಲ್ಲಿ ಕೆಲಸಮಾಡಲು ಇಬ್ಬರು ಪ್ಲೇಗು ಇನ್‌ಸ್ಪೆಕ್ಟರರನ್ನು ಕಳುಹಿಸಿಕೊಟ್ಟಿರುತ್ತಾರೆ'

ನಿಧನ

ಮಂಗಳೂರಿನ ಪ್ರಸಿದ್ಧ ವಕೀಲರಲ್ಲೊಬ್ಬರಾದ ಶ್ರೀ ಮಿಜಾರು ಗಣೇಶ ಪೈಗಳು ಕಳೆದ ಶನಿವಾರ ರಾತ್ರಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಪರಮಾತ್ಮನು ಚಿರ ಶಾಂತಿಯೀಯಲಿ.

ವರ್ಧಂತ್ಯುತ್ಸವ

ಮಂಗಳೂರು ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಸೇವಾ ಸಂಘದ ವರ್ಧಂತ್ಯುತ್ಸವವು ಶ್ರೀ ಎಂ. ರಾಮಚಂದ್ರ ಪೈಗಳ ಅಧ್ಯಕ್ಷತೆಯಲ್ಲಿ ತಾ. ೨೬ರಂದು ಜರಗಿತು.

ಶ್ರೀ. ರಾಮ ಜನ್ಮೋತ್ಸವ

ಬೋಳಾರ ಶ್ರೀ. ರಾಮ ಮಂದಿರದಲ್ಲಿ ತಾ. ೨೫ರಿಂದ ಎಪ್ರಿಲ್ ೭ರ ವರೆಗೆ ಶ್ರೀ ರಾಮ ಜನ್ಮೋತ್ಸವ ನಡೆವುದು.

ವೆಬ್‌ಸ್ಟರ್ ಮಾರ್ಕೆಟ್ ಮುಚ್ಚಿದೆ

ಇಲಿಗಳು ಬಿದ್ದ ಕಾರಣ ಮುನ್ಸಿಪಲ್ ಕೌನ್ಸಿಲ್ ನಿರ್ಧಾರದಂತೆ ತಾ. ೨೪ರಂದು ೧೫ ದಿನಗಳ ತನಕ ವೆಬ್‌ಸ್ಟರ್ ಮಾರ್ಕೆಟು ಮುಚ್ಚಲಾಗಿದೆ, ಮೈದಾನಿನಲ್ಲಿ ಈಗ ಅಂಗಡಿಕಾರರು ಸ್ಟಾಲು ಮಾಡಿದ್ದಾರೆ.

ಮಿತ್ರಮಂಡಳಿ, ಮಂಗಳೂರು

ಮಿತ್ರಮಂಡಳಿಯ ವಾರ್ಷಿಕ ಮಹಾಸಭೆಯು ಇದೇ ಎಪ್ರಿಲ್ ತಾ ೨ನೇ ಆದಿತ್ಯವಾರ ಸಾಯಂ ಘಂಟೆ ೬ಕ್ಕೆ ಥಿಯೊಸೊಫಿಕಲ್ ಲೋಜಿನಲ್ಲಿ ಜರಗಲಿರುವುದು. ಕಾರ್ಯಕ್ರಮ: ೧. ಕಳೆದ ವರ್ಷದ ವರದಿ, ಲೆಕ್ಕಪತ್ರ, ೨. ಹೊಸ ವರ್ಷದ ಅಧಿಕಾರಧಾರಿಗಳ ಚುನಾವಣೆ. ೩. ಹೊಸ ವರ್ಷದ ಯೋಜನೆ. ಸದಸ್ಯರೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಿಶನ್ ಹೈಸ್ಕೂಲ್ ಮುಖ್ಯೋಪಾಧ್ಯಾಯರ ರಜತೋತ್ಸವ

ಬಿ. ಇ. ಎಂ. ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಸ್. ಎ ಫರ್ಟಾಡೋ ಇವರು ಈ ಶಾಲೆಗೆ ಕಳೆದ ೨೫ ವರ್ಷಗಳಿಂದ ಸಲ್ಲಿಸಿದ ಸೇವೆಯ ಗೌರವಾರ್ಥ 'ರಜತೋತ್ಸವ'ವು ಶಾಲಾವಿದ್ಯಾರ್ಥಿಗಳಿಂದ ಹಾಗೂ ಉಪಾಧ್ಯಾಯರಿಂದ ಕಳೆದ ಶನಿವಾರ ಶಾಲಾ ಸೆಂಟಿನರಿ ಹಾಲಿನಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕರುಣಾಕರರು ಅಧ್ಯಕ್ಷತೆ ವಹಿಸಿದ್ದರು. ಶಾಲಾ ಬಾಲಕಿಯರಿಂದ ಪ್ರಾರ್ಥನೆಯಾದ ಮೇಲೆ ಶಾಲಾ ವಿದ್ಯಾರ್ಥಿ ಒಬ್ಬರು ಮುಖ್ಯೋಪಾಧ್ಯಾಯರ ಗುಣ ಪ್ರಶಂಸೆಯ ಒಂದು ಹಾಡು ಹಾಡಿದರು. ಆ ಮೇಲೆ ಶಾಲಾ ಸಹಾಯಕ ಉಪಾಧ್ಯಾಯರಾದ ಶ್ರೀ ಜಿ.ಇ. ಐಮನರು ಮುಖ್ಯೋಪಾಧ್ಯಾಯರಿಗೆ ಮಾನಪತ್ರವನ್ನು ಓದಿಹೇಳಿ ಒಪ್ಪಿಸಿದರು. ವಿದ್ಯಾರ್ಥಿಗಳೂ ಅಧ್ಯಾಪಕರೂ ಕೂಡಿ ಸಂಗ್ರಹಿಸಿದ ಸುಮಾರು ರೂ ೫೦೦ರ ನಿಧಿಯೊಂದನ್ನು ಮತ್ತು ಇತರ ಕಾಣಿಕೆಗಳನ್ನು ಮುಖ್ಯೋಪಾಧ್ಯಾಯರಿಗೆ ಅರ್ಪಿಸಲಾಯಿತು ಆ ನಿಧಿಯನ್ನು ಮುಖ್ಯೋಪಾಧ್ಯಾಯರ ಹೆಸರಲ್ಲಿ ವಿದ್ಯಾರ್ಥಿವೇತನದ ಬಗ್ಗೆ ಉಪಯೋಗಿಸಬೇಕೆಂದೂ ಕೇಳಿಕೊಳ್ಳಲಾಗಿದೆ. ಶ್ರೀ ಫರ್ಟಾಡೋ ಇವರು ತನಗೆ ಮಾಡಿದೀ ಗೌರವಕ್ಕಾಗಿ ಆಭಾರಿಗಳಾಗಿ ಮಾತನಾಡಿದರು. ಆ ಮೇಲೆ ಅಧ್ಯಕ್ಷರ ಭಾಷಣವಾಯಿತು.

ಆ ನಂತರ ಶಾಲೆಯ ಸಹಾಯಕ ಉಪಾಧ್ಯಾಯರಾಗಿದ್ದ ದಿವಂಗತ ಶ್ರೀ. ಅನಂತ ಶೆಣೈಯವರ ಭಾವಚಿತ್ರದ ಅನಾವರಣೋತ್ಸವವು ಅಧ್ಯಕ್ಷರ ಹಸ್ತದಿಂದ ನೆರವೇರಿತು ಶ್ರೀ ವಿ. ರಾಮ ಶರ್ಮರು ದಿವಂಗತರ ಗುಣಗಾನ ಮಾಡಿದರು. ಅಧ್ಯಕ್ಷರೂ ದಿವಂಗತರ ಗುಣ ಪ್ರಶಂಸಿಸಿದರು. ವಿವಿಧ ವಿನೋದಾವಳಿಗಳಿಂದ ಸಮಾರಂಭ ಕೊನೆಗೊಂಡಿತು. ಶ್ರೀ ಬಿ. ಅಪ್ಪಯ್ಯ ಇವರಿಂದ ರಚಿತವಾದ ಚಿಕ್ಕ ಪ್ರಹಸನವೊಂದೂ ಅಭಿನಯಿಸಲ್ಪಟ್ಟಿತು.

ಹರಿಜನ ಸೇವಕ ಸಂಘ

ದ. ಕ. ಜಿಲ್ಲಾ ಹರಿಜನ ಸೇವಕ ಸಂಘದ ೧೯೪೩ ಸಪ್ಟಂಬರ ೩೦ಕ್ಕೆ ಅಂತ್ಯವಾಗುವ ವಾರ್ಷಿಕ ವರದಿ ನಮ್ಮ ಹಸ್ತಗತವಾಗಿದೆ. ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷರಾಗಿ ಹನ್ನೊಂದು ಮಂದಿ ಮಹನೀಯರಿಂದ ಕೂಡಿದ ಕಾರ್ಯಕಾರೀ ಸಮಿತಿಯುಳ್ಳ ಈ 'ಸಂಘ' ಹರಿಜನ ಸೇವಕರಾದ ಶ್ರೀ ಎನ್. ಎಸ್. ಕಿಲ್ಲೆಯವರಿಂದ ಜಿಲ್ಲೆಯ ಹರಿಜನರ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಉನ್ನತಿಗಾಗಿ ದುಡಿಯುತ್ತಿರುವುದು ಪ್ರಶಂಸನೀಯವಿದೆ. ಕುಂದಾಪುರ, ಉಡುಪಿ, ಕಾರ್ಕಳ, ಕಾಸರಗೋಡು, ಮತ್ತು ಪುತ್ತೂರು ಈ ಕಡೆಗಳಲ್ಲಿ ತಾಲೂಕು ಸಂಘಗಳು ಸ್ಥಾಪಿತವಾಗಿವೆ. ಉಡುಪಿ, ಕುಂದಾಪುರ, ಪುತ್ತೂರು, ಮತ್ತು ಕಾಸರಗೋಡುಗಳಲ್ಲಿ ವಿದ್ಯಾರ್ಥಿ ಭವನಗಳು ನಡೆಸಲ್ಪಡುತ್ತಿದೆ ಕಾರ್ಕಳದಲ್ಲಿ ಶಬರೀ ಆಶ್ರಮವೂ ನಡೆ ಯುತ್ತಿದೆ. ಅಲ್ಲಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟದ ಏರ್ಪಾಡ ಮಾಡಲಾಗಿದೆ. ಕಾಸರಗೋಡು ತಾಲೂಕಿನ ಶೀತಂಗೋಳಿಯಲ್ಲಿ ಒಂದು ಹರಿ ಜನ ವಸತಿ ಮಾಡುವ ಏರ್ಪಾಡಾಗಿರುವುದು. ಹರಿಜನವಾರ, ನಿಧಿಸಂಗ್ರಹ ಪ್ರಚಾರಕಾರ್ಯಗಳನ್ನು ಶ್ರೀ ಕಿಲ್ಲೆಯವರ ಮಹಾ ಜನರ ನೆರವಡೆದು ಮಾಡುತ್ತಿರವರು. ಜಿಲ್ಲಾ ಬೋರ್ಡು ರೂ ೪೦ ಮಂಗಳೂರು ಮುನ್ಸಿಪಾಲಿಟಿ ರೂ ೩೦ ಗ್ರೇಂಟ್ ಕೊಟ್ಟಿರುವುದು. ಈ ಸಂಘವು ಜಿಲ್ಲೆಯ ಮಹಾಜನರ ಸಹಾಯದಿಂದ ಬಲಗೊಂಡು ಶ್ರೀ ಎನ್. ಎಸ್ ಕಿಲ್ಲೆ ಯವರಂಥಾ ಸಮರ್ಥ ಕಾರ್ಯಕರ್ತರಿಂದ ಕೂಡಿ ಜಿಲ್ಲೆಯ ದಲಿತವರ್ಗದ ಉನ್ನತಿಯ ಕಾರ್ಯವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಮಾಡುವಂತಾಗಲಿ.

ಎಸ್. ವಿ. ಘಾಟೆಯವರ ಅರ್ಜಿ ತಳ್ಳಲಾಯಿತು

ರಾಜ ಮಹೇಂದ್ರ ಜೈಲಿನಲ್ಲಿ ಸ್ಥಾನಬದ್ಧರಾಗಿರುವ ಕಮ್ಯುನಿಸ್ಟ್ ಮುಖಂಡ ಶ್ರೀ ಎಸ್. ವಿ. ಘಾಟೆಯವರ ಪರವಾಗಿ ಮಾಡಿದ ಹೇಬಸ್ ಕಾರ್ಪಸ್ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಚೀಫ್ ಜಸ್ಟಿಸ್ ಮತ್ತು ಜಸ್ಟಿಸ್ ವ್ಯಾಟರವರು ತಳ್ಳಿಹಾಕಿದರು. ಈ ಅರ್ಜಿ ಸ್ವೀಕರಿಸಲು ತಮಗೆ ಅಧಿಕಾರವಿಲ್ಲವೆಂದರು.

ಯುದ್ಧಯತ್ನಕ್ಕೆ ಸಹಾಯ ಕೊಡುತ್ತಿರುವ ಕಮ್ಯುನಿಸ್ಟ್ ವರ್ಕಿಂಗ್ ಕಮಿಟಿಯಲ್ಲಿ ಘಾಟೆಯವರು ಸದಸ್ಯರಿರುವುದರಿಂದ ಅವರ ಬಿಡುಗಡೆಯಾಗಬೇಕೆಂದು ಅರ್ಜಿಯಲ್ಲಿ ಹೇಳಲಾಗಿತ್ತು ಮದ್ರಾಸ ನಗರವನ್ನು ಬಿಟ್ಟು ಹೋಗಬೇಕೆಂದೂ ಮಂಗಳೂರು ಮುನ್ಸಿಪಾಲಿಟಿ ಸರಹದ್ದಿನೊಳಗೆ ವಾಸಿಸಬೇಕೆಂದೂ ೧೯೪೩ ಮಾರ್ಚಿಯಲ್ಲಿ ಅವರ ಮೇಲೆ ನಿಬಂಧನೆ ಹಾಕಲಾಗಿತ್ತು. ಅವರು ಅದರಂತೆ ನಡೆದಿದ್ದರು. ೧೯೪೪ ಮಾರ್ಚಿ ತಿಂಗಳಲ್ಲಿ ಪುನಃ ಅವರನ್ನು ಬಂಧಿಸಲಾಯಿತು ಮತ್ತು ಸ್ಥಾನಬದ್ಧತೆಯಲ್ಲಿಡಲಾಯಿತು. ತನ್ನನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಇಲ್ಲವೇ ಬಿಡುಗಡೆ ಮಾಡಬೇಕೆಂದು ಘಾಟೆಯವರು ಅನೇಕ ಸಲ ಅರ್ಜಿ ಮಾಡಿದ್ದು ತಮ್ಮನ್ನು ಸ್ಥಾನಬದ್ಧತೆಯಲ್ಲಿಟ್ಟದ್ದು ಅನ್ಯಾಯವೆಂದು ತಿಳಿಸಿದ್ದರು.

ಪೆರಡಾಲ

ಈ ಗ್ರಾಮದಲ್ಲಿ ಇತ್ತೀಚೆಗೆ ಜಾನುವಾರು ರೋಗ ಪ್ರಬಲವಾಗಿದ್ದು ಸತ್ತ ಜಾನುವಾರುಗಳನ್ನು ತಿಂದ ನಾಯಿಗಳಿಗೆ ಹುಚ್ಚು ತಗಲಿ ಈ ಹುಚ್ಚು ನಾಯಿಗಳು ಜಾನುವಾರುಗಳಿಗೂ ಜನರಿಗೂ ಕೂಡ ಹಾನಿ ಮಾಡುತ್ತಿವೆ. ೫, ೬ ಜಾನುವಾರುಗಳೂ ಒಬ್ಬಿಬ್ಬರು ಜನರು ಇಷ್ಟರಲ್ಲೆ ಇದರಿಂದ ತೀರಿ ಹೋದರೆಂದು ಕೇಳಿ ಬರುತ್ತದೆ. ಈ ಕಡೆ ಅಧಿಕಾರಿಗಳು ಅವಶ್ಯ ಗಮನ ಕೊಡಬೇಕು.

ಮೂಲ್ಕಿ

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರ ತಕ್ಕ ಕಾಲಾವಧಿ ಉತ್ಸವ ತಾ. ೬-೪-೪ರಿಂದ ಪ್ರಾರಂಭವಾಗಿ ತಾ. ೧೪-೪-೪ರಂದು ಅಂತ್ಯವಾಗುವುದು.

ಜಿಲ್ಲೆಯ ಆಹಾರ ವಿಚಾರದಲ್ಲಿ
ಹೊಸ ಕಲೆಕ್ಟರರ ಹೊಸ ಯೋಜನೆ
ಕಳ್ಳ ವ್ಯಾಪಾರಕ್ಕೆ ಕಠಿಣ ನಿರ್ಬಂಧ

ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ದ. ಕ. ಜಿಲ್ಲೆಯ ಕಲೆಕ್ಟರರಾದ ರಾ. ಸಾ. ಶ್ರೀ. ಪಿ. ರಾಮದಾಸ್ ಇವರು ಒಂದು ಯೋಜನೆ ತಯಾರಿಸಿದ್ದಾರೆ. ತಾ. ೨೭ರಂದು ಸಂಜೆಗೆ ಪತ್ರಿಕಾ ಪ್ರತಿನಿಧಿಗಳನ್ನು ತಮ್ಮ ಕಚೇರಿಗೆ ಆಮಂತ್ರಿಸಿ ತಮ್ಮ ಹೊಸ ಯೋಜನೆಯನ್ನು ಕಲೆಕ್ಟರರು ಅವರಿಗೆ ವಿವರಿಸಿದರು.

ಕಲೆಕ್ಟರರು ಹೊಸಯೋಜನೆಯ ಯಶಸ್ವಿತೆಗಾಗಿ ಒಂದು ಹುಕುಮು ಹೊರಡಿಸಿದ್ದಾರೆ: ಅದರ ಪ್ರಕಾರ ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಸ್ಟೋರ್ಸ್ ಮತ್ತು ಅದರ ಆಶ್ರಯದಲ್ಲಿ ನಡೆವ ಶಾಖೆಗಳಿಗಲ್ಲದೆ ಬೇರೆ ಯಾರಿಗೂ ಅಕ್ಕಿ ಮಾರುವ ಹಕ್ಕಿಲ್ಲ. ಕಲೆಕ್ಟರರ ಆಜ್ಞೆ ಹೀಗಿದೆ:

ಕಲೆಕ್ಟರರ ಆಜ್ಞೆ

"ಈ ಜಿಲ್ಲೆಯ ಯಾವನೊಬ್ಬ ಜಮೀನ್ದಾರ, ರೈತ, ವರ್ಗದಾರ, ಒಳವರ್ಗದಾರ, ಮೂಲಗಾರ, ವ್ಯಾದಗೇಣಿಗಾರ, ಜಮ್ಮಿ ಅಥವಾ ಕುಡಿಯನಾಗಲಿ ಈ ಜಿಲ್ಲೆಯೊಳಗೆ ಅಕ್ಕಿ ಭತ್ತಗಳನ್ನು ಎಷ್ಟನ್ನಾದರೂ ಬೇರೆಯವರಿಗೆ ಮಾರಾಟ ಮಾಡಕೂಡದು. ಮಂಗಳೂರಲ್ಲಿರುವ ದ. ಕ. ಜಿಲ್ಲಾ ಕೋಪರೇಟಿವ್ ರಖಂ ಸ್ಟೋರ್ಸ್ಸಿಗೆ ಇಲ್ಲವೇ ಅದರ ಉಪಶಾಖೆಗಳಿಗೆ, ಅಥವಾ ಕಲೆಕ್ಟರರಿಂದ ಅಧಿಕಾರ ಪಡೆದ ಅಧಿಕಾರಿಗಳಿಗೆ ಮಾತ್ರ ಮಾರತಕ್ಕದ್ದು.

ಆದರೆ ಕೆಳಗಿನವರನ್ನು ಈ ನಿರ್ಬಂಧ ಕಾಜ್ಞೆಗೆ ಗುರಿಪಡಿಸುವುದಿಲ್ಲ.

(a) ಗೇಣಿಗಾಗಿ ರೈತನು ತನ್ನ ಜಮೀನ್ದಾರನಿಗೆ ಅಕ್ಕಿ ಭತ್ತಗಳನ್ನು ಕೊಡುವುದು. (b) ಬೇಸಾಯದ ಖರ್ಚಿಗಾಗಿ ಜಮೀನ್ದಾರನು ತನ್ನ ರೈತನಿಗೆ ಮುಂಗಡ ಅಕ್ಕಿ ಭತ್ತ ಕೊಡುವುದು. (c) ವರ್ಗದಾರ ಇಲ್ಲವೇ ರೈತನು ತಾನು ನೇಮಿಸಿದ ಆಳಿಗೆ ಕೂಲಿ ಕೊಡುವುದು. (d) ತನ್ನ ಮಾಮೂಲು ಸೇವೆ ಅಥವಾ ಪದ್ಧತಿ ಮೇರೆಗೆ, ಅಧಿಕೃತ ಹಳ್ಳಿಯ ರೈತನು ವರ್ಗದಾರ ಇಲ್ಲವೇ ರೈತನಿಂದ ಸಂಭಾವನೆ ಪಡೆವುದು. (e) ಕಾಲಕಾಲಕ್ಕೆ ತಹಶಿಲ್ದಾರರು ಆಜ್ಞಾಪಿಸಿದ ಮೇರೆಗೆ ರೈತ ಇಲ್ಲವೇ ವರ್ಗದಾರನು ಚಿಲ್ಲರೆ ಮಾರಾಟಗಾರನಿಗೆ ಅಕ್ಕಿ ಭತ್ತ ಒದಗಿಸಬಹುದು. ಆದರೆ ಇದು ಆಯಾ ಹಳ್ಳಿಗಳ ಜನರಿಗೆ ಹಳ್ಳಿಯಲ್ಲಿಯೆ ಮಾರಾಟವಾಗಬೇಕು. (f) ಹಳ್ಳಿಯವರು ದಿನಕ್ಕೆ ಎರಡು ಸೇರು ಅಕ್ಕಿ ಅಥವಾ ನಾಲ್ಕು ಸೇರು ಭತ್ತವನ್ನು ಜಮೀನ್ದಾರ ಇಲ್ಲವೇ ರೈತನಿಂದ ವಾಸ್ತವಿಕ ಅವಶ್ಯಕತೆಗಾಗಿ ಪಡೆಯಲು ಅರ್ಹತೆಯುಳ್ಳವನಾಗುತ್ತಾನೆ.

ಈ ಆಜ್ಞೆಯನ್ನು ಮೀರುವ ಯಾವನಿಗಾದರೂ ೨ ವರ್ಷ ಶಿಕ್ಷೆ ಅಥವಾ ಜುಲ್ಮಾನೆ ಇಲ್ಲವೇ ಇವೆರಡೂ ವಿಧಿಸಲ್ಪಡುವುದು, ಈ ಆಜ್ಞೆ ಮೀರಿ ಅಕ್ಕಿ ಭತ್ತ ಸಂಗ್ರಹವು ಅಧಿಕಾರಿಗಳಿಂದ ಶೋಧಿಸಲ್ಪಟ್ಟರೆ ಆ ಸಂಗ್ರಹವನ್ನು ಕೋರ್ಟಿನವರು ಕುಶಿಬಂದಂತೆ ಸರಕಾರಕ್ಕೆ ಒಪ್ಪಿಸಬಹುದು."

ಆದರ ವಿವರಣೆ

ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಕಲೆಕ್ಟರರು ನಾಲ್ಕು ರೇಶನಿಂಗ್ ಆಫೀಸರರನ್ನು, ನಾಲ್ಕು ಮಂದಿ ತಹಶಿಲ್ದಾರರನ್ನು, ನಾಲ್ಕು ಮಂದಿ ರೆವಿನ್ಯೂ ಇನ್ಸ್ಪೆಕ್ಟರರನ್ನು ನೇಮಿಸಿದ್ದಾರೆ. ಕಳ್ಳ ವ್ಯಾಪಾರ ನಡೆವಲ್ಲಿ ಜಾಗ್ರತೆ ತಗೆದುಕೊಳ್ಳಲು ಪೋಲೀಸು ಸಿಬ್ಬಂದಿಗೆ ಆಜ್ಞೆಯಾಗಿದೆ. ಕಳ್ಳ ವ್ಯಾಪಾರ ನಡೆಸುವವರಿಗೆ ತಕ್ಕ ಶಿಕ್ಷೆವಿಧಿಸಲು ಸಬ್ ಡಿವಿಜನಲ್ ಮೆಜಿಸ್ಟ್ರೇಟರಿಗೆ ಕಲೆಕ್ಟರರ ಹುಕುಂ ಹೊರಟಿದೆ. ಕೋಪರೇಟಿವ್ ಸ್ಟೋರ್ಸ್ಸಿನವರು ಹೆಚ್ಚಿನ ಸಿಬಂದಿ ನೇಮಿಸಿದ್ದಾರೆ. ಇವರಿಗೆ ಅಕ್ಕಿ ದೊರಕಿಸುವಲ್ಲಿ ರೆವಿನ್ಯೂ ಇನ್ಸ್ಪೆಕ್ಟರರು ನೆರವಾಗುವರು.

ವರ್ಗದಾರರಿಗೆ ಮತ್ತು ಒಕ್ಕಲುಗಳಿಗೆ ತಮ್ಮ ಇಷ್ಟದಿಂದ ಬಂದು 'ಸ್ಟೋಕ್' ಒಪ್ಪಿಸಲು ರಿಯಾಯತಿ ಮಾಡಲಾಗಿದೆ. ಸಮುದ್ರ ಮಾರ್ಗವಾಗಿಯೂ, ಜಿಲ್ಲೆಯ ಗಡಿಯಲ್ಲಿಯೂ ಅಕ್ಕಿ ಹೊರಗೆ ಹೋಗದಂತೆ ಕಲೆಕ್ಟರರು ಬೇಕಾದ ಎಚ್ಚರಕೊಟ್ಟಿರುವರು. ಪ್ರತಿಯೊಬ್ಬ ವರ್ಗದಾರನಿಂದ ಅವನ ಅವಶ್ಯಕತೆಗೆ ಬೇಕಾದಷ್ಟನ್ನು ಬಿಟ್ಟು ಉಳಿದುದನ್ನೆಲ್ಲಾ ರಿಕ್ವಿಸಿಶನ್ ಮಾಡಲಾಗುವುದು.

ಎಲ್ಲೆಲ್ಲಿ ಕೋಪರೇಟಿವ್ ಸ್ಟೋರ್ಸ್ಸುಗಳಿಲ್ಲವೋ ಅಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಚಿಲ್ಲರೆ ವ್ಯಾಪಾರಿಗಳಿಂದ ಅಕ್ಕಿ ವಿತರಣೆಯಾಗುವುದು. ಆಯಾಯ ಗ್ರಾಮಕ್ಕೆ ಬೇಕಾದ ಅಕ್ಕಿ ವಿತರಣೆ ಮಾತ್ರ ಈ ಚಿಲ್ಲರೆ ವ್ಯಾಪಾರಿಗಳಿಗೆ ಕೊಡಲಾಗುವುದು. ಅವರು ಇತರ ಗ್ರಾಮಗಳಿಗೆ ಅಕ್ಕಿ ಮಾರಕೂಡದು. ಇಂತಹ ಚಿಲ್ಲರೆ ವ್ಯಾಪಾರಿಗಳನ್ನು ಚುನಾಯಿಸುವ ಕೆಲಸ ತಹಶಿಲ್ದಾರರಿಗೆ ಒಪ್ಪಿಸಿದೆ. ಕೋಪರೇಟಿವ್ ಸ್ಟೋರ್ಸ್ಸಿನ ಕೆಳನೌಕರರು ವಂಚನೆ ಮಾಡದಂತೆ ಬೇಕಾದ ಜಾಗರೂಕತೆ ವಹಿಸಲಾಗಿದೆ. ಈ ಯೋಜನೆ ಫಲಕಾರಿಯಾಗುವಂತೆ ಮಾಡಲು ಕಲೆಕ್ಟರರು ರಹಸ್ಯ ರೀತಿಯ ಸಂಶೋಧನೆ ನಡೆಸುವ ಏರ್ಪಾಡು ಮಾಡಿದ್ದಾರೆ.

ಜಿಲ್ಲೆಯ ಎಲ್ಲಾ ಅಕ್ಕಿಯನ್ನು ಪಟ್ಟಣಿಗರ ಸಲುವಾಗಿ ಸಂಗ್ರಹಿಸುವುದೆಂಬ ಭೀತಿ ಬೇಕಾಗಿಲ್ಲ. ಈ ಯೋಜನೆಯು ಹಾಗಿರುವುದಿಲ್ಲ. ಬೇರೆ ಬೇರೆ ತಾಲೂಕು ಡಿಪೋಗಳಲ್ಲಿ ಆಯಾಯ ತಾಲೂಕು ಪ್ರದೇಶಗಳಿಗೆ ಹಂಚುವರೆ ಬೇಕಾದಷ್ಟು ಅಕ್ಕಿ ಒದಗಿಸಿ ಕೊಡಲಾಗುವುದು.

ಇದಕ್ಕೆ ವ್ಯತಿರಿಕ್ತ ನಡೆದವರನ್ನು, ಕಳ್ಳ ವ್ಯಾಪಾರ ಮಾಡುವವರನ್ನು ಶಿಕ್ಷಿಸಲಾಗುವುದು. ಅಂತಹವರ ಮೇಲ್ ಕ್ರಮ ಜಾರಿಮಾಡಲು ಕಮರ್ಶಿಯಲ್ ಟೆಕ್ಸ್ ಆಫೀಸರರಿಗೆ ಹುಕುಂ ಹೋಗಿದೆ.

ಹೀಗೆ ಯೋಜನೆಯ ವಿವರ ಹೇಳಿ ಇದನ್ನು ಯಶಸ್ವಿಯಾಗುವಂತೆ ಮಾಡಲು ನಾಗರಿಕರೂ ಪತ್ರಿಕೆಗಳವರೂ, ಸಹಕರಿಸಬೇಕೆಂದೂ ಕಲೆಕ್ಟರರು ಹೇಳಿದರು. ಪೂರ್ಣ ರೇಶನಿಂಗ್ ಜಾರಿಮಾಡಲು ಕಡಿಮೆಯೆಂದರೆ ೯೦ ದಿನ ಅಕ್ಕಿ ಸಂಗ್ರಹ ಬೇಕಾಗಿದೆ, ಅದು ಆದ ಕೂಡಲೇ ರೇಶನಿಂಗ್ ಜಾರಿ ಮಾಡುವುದಾಗಿಯೂ ಕಲೆಕ್ಟರರು ಭರವಸೆಯಿತ್ತರು.

ಸಿನಿಮಾ ಸುದ್ದಿ

'ಕನ್ನಡ ಚಿತ್ರಗಳನ್ನು ಕಟು ಟೀಕಿಸಬೇಡಿ'
ಶ್ರೀ. ಕಾಳಿಂಗರಾಯರ ಸೂಚನೆ

"ಕನ್ನಡ ಚಿತ್ರ ನಿರ್ಮಾಣ ಇಂದು ಶೈಶವಾವಸ್ಥೆಯಲ್ಲಿದೆ. ನೀವು ಕನ್ನಡ ಚಿತ್ರಗಳನ್ನು ಕಟುವಾಗಿ ಟೀಕಿಸಿ ಬಿಟ್ಟರೆ, ಅವು ಅಯಶಸ್ವಿಯಾಗಿ ಮುಂದೆ ಯಾರೂ ಕನ್ನಡ ಚಿತ್ರ ತೆಗೆಯರು. ಹೀಗೆಂದು ಕನ್ನಡ ಚಿತ್ರ ಟೀಕಿಸಬಾರದೆಂದಲ್ಲ; ಅವು ತಯಾರಾಗುವ ಮುನ್ನ ಬೇಕಾದ ಸೂಚನೆ ಕೊಡಿ; ವೀರಣ್ಣನವರು ಮುಲ್ಲಮ್ಮ ತಯಾರಿಸುತ್ತಾರೆಂದು ಸುದ್ದಿಯಿದೆ. ಅವರಿಗೆ ಬೇಕಾದ ಸೂಚನೆ ಈಗಲೇ ಕೊಡಿ; ಕನ್ನಡ ಚಿತ್ರ ತಯಾರಾದ ಮೇಲಾದರೂ ಇಡೀ ಚಿತ್ರವೇ ಪ್ರಯೋಜನವಿಲ್ಲವೆಂದು ಟೀಕಿಸ ಬೇಡಿ; ಅದರಲ್ಲಿ ಯಾವುದು ಚೆನ್ನಾಗಿಲ್ಲವೆಂದು ತಿಳಿಸಿ; ಅಂತೂ ಕನ್ನಡದಲ್ಲಿ ಚಿತ್ರ ನಿರ್ಮಾಣ ತುಂಬಾ ಆಗಬೇಕು; ನೀವು ಚಲಚ್ಚಿತ್ರ ವಿಮರ್ಶಕರು ಚಲಚಿತ್ರೋದ್ಯಮಕ್ಕೆ ನೆರವಾಗಿ ನಮ್ಮ ನಾಡಿನ ಉನ್ನತಿ ಸಾಧಿಸಬೇಕು; ನೀವು ಮಾಡುತ್ತಿರುವ ಕಾರ್ಯ ಕಲಾಪಗಳು ಪ್ರಶಂಸನೀಯವಿವೆ" ಹೀಗೆಂದು ಮದ್ರಾಸ್ ಆಲ್ ಇಂಡಿಯಾ ರೇಡಿಯೋ ಗಾಯಕರೂ, ಪ್ರಸಿದ್ಧ ಹಿಂದುಸ್ಥಾನೀ ಸಂಗೀತಗಾರರೂ ಕನ್ನಡ ವಸಂತಸೇನಾ ಮೊದಲಾದ ಸಿನೆಮಾಗಳಲ್ಲಿ ನಟಿಸಿದವರೂ ಆದ ಶ್ರೀ ಕಾಳಿಂಗ ರಾಯರು ಹಿಂದಿನ ಆದಿತ್ಯವಾರ ಮಂಗಳೂರಿನ ಚಲಚ್ಚಿತ್ರ ವಿಮರ್ಶಕ ಸಂಘದಲ್ಲಿ ಮಾತನಾಡುತ್ತಾ ಹೇಳಿದರು.

ಚಲಚಿತ್ರ ವಿಮರ್ಶಕ ಸಂಘದವರು ಶ್ರೀ. ಕಾಳಿಂಗರಾವ್ ಮತ್ತು ಶ್ರೀ. ದಾಸಪ್ಪ (ಇವರೂ ಹರಿಶ್ಚಂದ್ರ ವಸಂತಸೇನೆಗಳಲ್ಲಿ ನಟಿಸಿದ್ದಾರೆ) ಇವರನ್ನು ಆಮಂತ್ರಿಸಿ ಜಿಲ್ಲಾ ಪತ್ರಿಕೋದ್ಯೋಗೀ ಸಂಘದಲ್ಲಿ ಸತ್ಕರಿಸಿದರು. ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಆ ದಿನದ ಸಭೆ ಜರಗಿತು.

ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳು ಅತಿಥಿಗಳ ಪರಿಚಯ ಮಾಡಿ ಕೊಡುತ್ತಾ, ಇವರಿಬ್ಬರೂ ನಮ್ಮ ಜಿಲ್ಲೆಯ ಕಲಾವಿದರೆಂದು ತಿಳಿಸಿ, ಮದ್ರಾಸಿನಂತಹ ನಗರದಲ್ಲಿ ನೆಲಸಿ ಕೊಂಡು ಕಲಾ ಸೇವೆ ಮಾಡುತ್ತಿರುವರೆಂಬೂ ಚಲಚ್ಚಿತ್ರದಲ್ಲಿ ನಡಿಸಿ, ಹಾಡಿ ಸ್ಟುಡಿಯೋದ ಒಳ ಹೊರಗಿನ ವಾತಾವರಣವನ್ನು ತಿಳಕೊಂಡಿದ್ದಾರಾಗಿ ಅವರಿಂದ ನಾವು ಹೆಚ್ಚಿನ ವಿಚಾರ ತಿಳಕೊಳ್ಳಬಹುದೆಂದೂ ತಿಳಿಸಿದರು.

ಶ್ರೀ. ಎಂ. ವಿ. ಪ್ರಭುಗಳು ಅತಿಥಿಗಳಿಗೆ ಸಂಘದ ಪರಿಚಯ, ಕಾರ್ಯ ಕಲಾಪಗಳನ್ನು ವಿವರಿಸಿ, ಇದು ವರೆಗೆ ಸಂಘವು ಮಾಡಿದ ಬೇರೆ ಬೇರೆ ಚಟುವಟಿಕೆಗಳ ವಿಷಯ ಪ್ರಸ್ತಾಪಿಸಿ ಚಲಚಿತ್ರ ವಿಮರ್ಶಕರು, ನಾಡಿನ ಒಂದು ಉತ್ತಮ ಕಲಾ ಪ್ರಪಂಚವಾದ ಸಿನೆಮಾ ಕೆಟ್ಟ ಹಾದಿಗೆ ಹೋಗದಂತೆ ನಿಷ್ಪ್ರಯೋಜಕವಾಗದಂತೆ ಅದರಿಂದ ರಾಷ್ಟ್ರ ಸೇವೆಯಾಗುವಂತೆ, ತಮ್ಮ ವಿಮರ್ಶೆಗಳನ್ನು ಮಾಡುತ್ತಿದ್ದಾರೆಂದರು.

ಅನಂತರ ಶ್ರೀ. ಕಾಳಿಂಗ ರಾಯರು ಮಾತನಾಡಿದರು. ಸ್ಟುಡಿಯೋದ ಜೀವನ ಹೊಲಸೆಂಬ ಭಾವನೆ ತಪ್ಪು. ಅದೇನೂ ಸ್ವರ್ಗವೂ ಅಲ್ಲ, ನರಕವೂ ಅಲ್ಲ; ಹೊರಗೆ ಮನುಷ್ಯರು ಎಷ್ಟು ದುರ್ಬಲರಿದ್ದಾರೊ, ಎಷ್ಟು ಆತ್ಮಶಕ್ತಿಯುಳ್ಳವರಿದ್ದಾರೋ ಸ್ಟುಡಿಯೋದೊಳಗೂ ಅಂತೆಯೇ. ಕನ್ನಡ ಚಿತ್ರ ಉತ್ತಮವಾಗಬೇಕಾದರೆ ಸಂಸಾರ ನಾಟಕ ಕರ್ತ ಶ್ರೀ. ಸಿಂಹರಂಥಾ ಕಲಾವಿದರಿಗೆ ಆಸ್ಪದಕೊಡಬೇಕು; ದುಡ್ಡು ಹಾಕಿದವರು, ಅದರ ನಿರ್ಮಾಪಕರು ತಮ್ಮ ಮುಖ, ತಮಗೆ ಬೇಕಾದವರ ಮುಖ ಬೆಳಗಬೇಕೆಂದು ಹಾರೈಸಬಾರದು! ಎಂದು ಮೊದಲಾಗಿ ಅನೇಕ ವಿವರಗಳನ್ನು ತಿಳಿಸಿದರು.

ಶ್ರೀ. ದಾಸಪ್ಪರು ಆ ಮೇಲೆ ಮಾತನಾಡಿದರು. ಸ್ಟುಡಿಯೋ ಜೀವನದ ಕೆಲ ಕಟು ಅನುಭವಗಳನು ತಿಳಿಸಿದರು. ಒಮ್ಮೆ ಸಿನೆಮಾ ಕಂಪನಿಯವರೊಡನೆ ಕರಾರು ಮಾಡಿ ಕೊಂಡ ಮೇಲೆ ಕಲಾವಿದನು ಸ್ವಾತಂತ್ರ್ಯ ಕಳಕೊಂಡು ನಿರ್ಮಾಪಕರ ಕೈಗೊಂಬೆಯಾಗುತ್ತಾನೆಂದರು. ಆದ್ದರಿಂದ ನೀವು ವಿಮರ್ಶಕರು, ನಟರನ್ನು ವಿಮರ್ಶಿಸುವುದಕ್ಕಿಂತಲೂ ನಿರ್ಮಾಪಕರನ್ನು ಕಟುವಾಗಿ ಟೀಕಿಸಬೇಕಾಗಿದೆಯೆಂದೂ, ಹೆಚ್ಚಾಗಿ ಇಂದು ಸಿನೆಮಾ ಕೆಡುವುದು ನಿರ್ಮಾಪಕರು ಕೈ ಹಾಕಿಯೆಂದೂ ಹೇಳಿದರು.

ಆ ಮೇಲೆ ಶ್ರೀ. ಕಾಳಿಂಗ ರಾಯರೂ ಶ್ರೀ. ಬಿ. ವಿ. ಬಾಳಿಗರೂ ಕೆಲವು ಮನೋಹರ ಹಾಡು ಹೇಳಿದರು.

ಕಾರ್ಯದರ್ಶಿ ಶ್ರೀ. ಪಿ. ಎಚ್. ರಾಯರು ಕೃತಜ್ಞತೆಯಿತ್ತರು.

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರೈಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ—ಆ ಜನರು . . . .

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು . . . . . .

ತಮ್ಮ ಆರ್ಥಿಕ ಅಡಚಣೆಗಳಲ್ಲೊ ಸಮಸ್ಯೆಗಳಲ್ಲೊ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು . . . . . .

. . . ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು. ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.
Canara Bank Ltd.

ಜಿಲ್ಲಾ ಬೋರ್ಡಿನ ಸಭೆಯಲ್ಲಿ ಬಂಗಲೆಗಾಗಿ ವಾಗ್ವಾದ

ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ಶ್ರೀ. ಅ. ಲಕ್ಷ್ಮೀನಾರಾಯಣ ಆಚಾರ್ಯರ ಅಧ್ಯಕ್ಷತೆಯಿಂದ ತಾ. ೨೦ರಂದು ಸೇರಿ ಶ್ರೀಮತಿ ಕಸ್ತೂರ್‌ಬಾ ಮತ್ತು ಜಿ. ಬೋರ್ಡಿನ ಸದಸ್ಯರಾಗಿದ್ದ ರಾ।। ಕೆ. ಪಿ. ರಾಘವೇಂದ್ರ ರಾವ್ ಇವರ ನಿಧನದ ಬಗ್ಗೆ ಸಂತಾಪಸೂಚಕರರಾವಾಗಿ ಐದು ನಿಮಿಷ ಸಭೆ ಮುಂದುವರಿಯಿತು.

ಸಭೆ ಪ್ರಾರಂಭದಲ್ಲಿ ಡಾ। ವಿಠಲ ಭಂಡಾರಿಗಳು (ಕಾಸರಗೋಡು) ರಾಜನಿಷ್ಠಾ ಪ್ರಮಾಣ ಮಾಡಿದರು. ಆರೋಗ್ಯ ಸಮಿತಿಗೆ ಜನಾಬ್ ಮಿರಾರ್ ಹೈದರ್ ಶ್ರೀಮತಿ ಚಂದ್ರಭಾಗಿ ಹೆಗ್ಗಡ್ತಿ ಮತ್ತು ಶ್ರೀ। ಸೂರಪ್ಪ ಶೆಟ್ಟಿ ಇವರು ಸದಸ್ಯರಾಗಿ ಆರಿಸಲ್ಪಟ್ಟರು.

ಸರಕಾರಿ ನೌಕರರಿಗೆ ಕೊಡುವಷ್ಟೇ ತುಟ್ಟಿ ಭತ್ತೆಯನ್ನು ಬೋರ್ಡಿನ ನೌಕರರಿಗೂ ಕೊಡಬೇಕೆಂದು ಸರಕಾರದಿಂದ ಬಂದ ಸೂಚನೆ ಸ್ವೀಕೃತವಾಯಿತು. ಬೇರೆ ಬೇರೆ ಕಡೆಗಳಿಂದ ಬಂದ ಬಂಗಲೆಗಳ ವಾಚರರೂ ಆಸ್ಪತ್ರೆಗಳ ಅಡಿಗೆಯವರೂ ತಮಗೆ ಹೆಚ್ಚು ಸಂಬಳ ಕೊಡಬೇಕೆಂದು ಕಳುಹಿಸಿದ ಅರ್ಜಿ ಮುಂದಿರಿಸಲ್ಪಟ್ಟು ಅವರಿಗೆ ತುಟ್ಟಿ ಭತ್ತೆ ಕೊಡಬೇಕೆಂದಾಯಿತು.

ಶಿರಿಯಾರ್ ಗ್ರಾಮದಲ್ಲಿ ಒಬ್ಬ ಹೊಸ ದಾಲಗಿತ್ತಿ ನೇಮಕವಾಯಿತು. ಎಡನೀರ್ ಬೋ। ಎ। ಶಾಲೆಯಲ್ಲಿ ೬ನೇ ತರಗತಿ ತೆರೆಯಲು ಸಮ್ಮತಿಸಿತು. ಕೋಳ್ಯೂರಿ ಹಾ। ಎ। ಶಾಲೆಯವರು ತಮ್ಮಲ್ಲಿನ ಶಾಲಾ ಸಂಬಳವನ್ನು ಮಾಫಿಮಾಡಬೇಕೆಂದು ಬರೆದ ಮನವಿಯನ್ನು ಸರಕಾರಕ್ಕೆ ಕಳುಹಿಸುವುದೆಂದಾಗಿ ಈ ಸಂಬಂಧ ಶ್ರೀ। ಎ ಸಿ ಕಾತುಕುಟ್ಟಿ ನಾಯರ್ ತಂದ ನಿರ್ಣಯವು ಮಂಜೂರಾಯಿತು. ಒಮ್ಮೆ ಮುಚ್ಚಿದ ಕಡ್ಡು ಬೋ। ಎ। ಶಾಲೆಯನ್ನು ಪುನಃ ತೆರೆಯಬೇಕೆಂದು ಬಂದ ಊರವರ ಅರ್ಜಿಗೆ ಸಮ್ಮತಿಸಿಗಲಿಲ್ಲ. ನಿಟ್ಟೆ ಗ್ರಾಮದಲ್ಲಿ ಕಡ್ಡಾಯ ಶಿಕ್ಷಣ ಪದ್ಧತಿ ಮಾಡಿ ತರಬೇಕೆಂದು ಅಲ್ಲಿನ ಪಂಚಾಯತ ಬೋರ್ಡಿನವರು ಬರೆದ ಕೇಳಿಕೆ ಸಾಧ್ಯವಿಲ್ಲವೆಂದಾಯಿತು. ಶ್ರೀ। ಜತ್ತಪ್ಪ ರೈಗಳು ಇಂಥಾ ಪ್ರಯೋಗ ಮಾಡಿ ನೋಡುವುದು ಒಳ್ಳೆಯದೆಂದರು.

ಜಿಲ್ಲಾ ಬೋರ್ಡು ಇಂಜಿನಿಯರರ ಪಂಚವಾರ್ಷಿಕ ಯೋಜನೆ ಸರಕಾರಕ್ಕೆ ಒಪ್ಪಿಸಬೇಕೆಂದಾಗಿ ಕೋಪರೇಟಿವ್ ಸೊಸೈಟಿ ರಿಜಿಸ್ಟ್ರಾರರು ಆರೋಗ್ಯ ಸಹಕಾರಿ ಸಂಘಗಳನ್ನು ತೆರೆಯಲು ಒಳ್ಳೆಯ ಸ್ಥಳಗಳಿವೆಯೋ ಎಂದು ಕೇಳಿದ ವಿಚಾರ ವಿಮರ್ಶಿಸಲು ಒಂದು ಸಮಿತಿರಚಿತವಾಯಿತು.

ಜಿ. ಬೋ. ಅಧ್ಯಕ್ಷರು ಮತ್ತು ಇಂಜಿನಿಯರಿಂಗ್ ಖಾತೆಯವರಿಗೆ ಮೂರು ದಿನಗಳಿಗಿಂತ ಹೆಚ್ಚು ಬಂಗ್ಲೆಯಲ್ಲಿರಲು ಬೋರ್ಡು ಒಪ್ಪಿತು.

ಧರ್ಮಾರ್ಥವಾಗಿ ಜಿ। ಬೋ। ಅಧ್ಯಕ್ಷರೂ, ಇಂಜಿನಿಯರಿಂಗ್ ಖಾತೆಯವರೂ ಬಂಗ್ಲೆಗಳಲ್ಲಿ ಉಳಕೊಳ್ಳಬಾರದೆಂದು ಹಿಂದಿನ ಸಭೆಯಲ್ಲಿ ಶ್ರೀ. ನಾಗಣ್ಣ ಹೆಗ್ಡೆಯವರು ತಂದು ಮಂಜೂರಾದ ನಿರ್ಣಯದ ವಿಚಾರದಲ್ಲಿ ಈ ನಿರ್ಬಂಧವು ಆಡಿಟ್ ಡಿಪಾರ್ಟ್‌ಮೆಂಟಿನವರಿಗೂ ಅನ್ವಯಿಸುತ್ತದೆಯೋ ಎಂದು ಸ್ಪಷ್ಟೀಕರಣಕ್ಕೆ ಬಂತು. ಶ್ರೀ. ನಾಗಣ್ಣ ಹೆಗ್ಡೆಯವರು ಆಡಿಟ್ ಖಾತೆಯವರಿಗೂ ಅನ್ವಯಿಸುತ್ತದೆ ಎಂದರು.

ಆಗ ಖಾ। ಬ. ಶಮ್ನಾಡರೆದ್ದು ನಿಂತು ಜಿ. ಬೋ. ಅಧ್ಯಕ್ಷರಿಗೂ ಇಂಜಿನಿಯರಿಂಗ್ ಖಾತೆಯವರಿಗೂ 'ಧರ್ಮಾರ್ಥ' ಬಂಗಲೆಸಿಗಬೇಕು ಎಂದು ನನ್ನ ಉಪಸೂಚನೆ ಇದೆಯೆಂದರು. ಶ್ರೀ. ಬೆಳಿಂಜೆ ಕೃಷ್ಣಯ್ಯ ಹೆಗ್ಡೆ ಮತ್ತು ಶ್ರೀ. ನಾಗಪ್ಪಯ್ಯರು ಇದನ್ನು ಅನುಮೋದಿಸಿದರು. ಅಧ್ಯಕ್ಷರು ಈ ಉಪ ಸೂಚನೆಯನ್ನು ಪುಸ್ತಕದಲ್ಲಿ ಬರೆಯುತ್ತಿರುವಾಗ ಶ್ರೀ ಜತ್ತಪ್ಪ ರೈಗಳು ಆಕ್ಷೇಪ ಪೆತ್ತಿ, ನೋಟೀಸಿಲ್ಲದೆ ಹೀಗ ಸೂಚನೆ ತರಬಾರದೆಂದೂ ಹಿಂದಿನ ಸಭೆಯಲ್ಲಿ ಅಧ್ಯಕ್ಷರೇ ಹೀಗೆ ತೀರ್ಮಾನವಿತ್ತಿದ್ದಾರೆಂದೂ ಹೇಳಿದರು. ಶ್ರೀ. ನಾಗಣ್ಣ ಹೆಗ್ಡೆಯವರೆದ್ದು ದಯಮಾಡಿ ಅಧ್ಯಕ್ಷರು ಈ ನಿರ್ಣಯ ಬರೆವುದು ಬೇಡ ಶಮ್ನಾಡರೇ ಅದನ್ನೊಮ್ಮೆ ಹೇಳಲಿ ಎಂದರು ಅಧ್ಯಕ್ಷರು ಶ್ರೀ ಜತ್ತಪ್ಪ ರೈಗಳ ಆಕ್ಷೇಪಕ್ಕೆ, ಕಾನೂನಿನಂತೆ ಪ್ರತಿಯೊಬ್ಬ ಸದಸ್ಯನಿಗೂ ನಿರ್ಣಯ ತರುವ ಹಕ್ಕಿದೆ ಎಂದರು.

ಈ ಚರ್ಚೆಯಾಗುವ ಮುನ್ನವೇ ಕೆಲವು ಮಂದಿ ಸದಸ್ಯರು ಹೋಗಿದ್ದುದರಿಂದ ಕೇವಲ ಕೆಲವು ಮಂದಿ ಸದಸ್ಯರು ಹಾಜರಿದ್ದರು. ಶ್ರೀ ವೈ. ಮಂಜಯ ಹೆಗ್ಡೆಯವರು ಎದ್ದು ನಿಂತು ಉದ್ವೇಗದಿಂದ ಐದು ನಿಮಿಷಗಳ ವರೆಗೆ ಮಾತನಾಡಿ, ಹೀಗೆ ನಿರ್ಣಯ ತರುವ ಹಕ್ಕು ಸದಸ್ಯರಿಗೆ ಇದೆಯೆಂದು ಆದ ಪಕ್ಷದಲ್ಲಿಯೂ, ಧೈರ್ಯವಿದ್ದರೆ ಶಮ್ನಾಡರು ಈ ನಿರ್ಣಯವನ್ನು ಸದಸ್ಯರೆಲ್ಲರೂ ಇರುವಾಗ ತರಲಿ, ನಿಮಗೆ ಬಂಗಲೆ ಬೇಕಾಗಿದ್ದರೆ ಎಲ್ಲಾ ಸದಸ್ಯರಿರುವಾಗ ನಿರ್ಣಯತನ್ನಿ ಈ ಹಿಂಬಾಗಿಲ ಕುತಂತ್ರ (back door tactics) ಬೇಡ ಎಂದರು

ಈ ಸಂದರ್ಭದಲ್ಲಿ ಅಧ್ಯಕ್ಷರಿಗೆ ಕಾರ್ಯದರ್ಶಿಗಳು ಏನೋ ಪುಸ್ತಕ ತೋರಿಸಿದರು ಅಧ್ಯಕ್ಷರು ಆ ಮೇಲೆ ಎದ್ದು ನಿಂತು, ಶಮ್ನಾಡರೇ ನಿಮ್ಮ ಉಪನಿರ್ಣಯವನ್ನು ತೆಗೆದು ಹಾಕಬೇಕಾಗಿದೆ ಕಾನೂನಿನಲ್ಲಿಹಾಗಿದೆ ಎಂದರು. ಶ್ರೀ ಬೆಳಿಂಜೆ ಕೃಷ್ಣಯ್ಯ ಹೆಗ್ಡೆಯವರು ಹೇಳಿದ ಕಾರಣ ನಾನು ಈ ನಿರ್ಣಯತಂದೆ, ಹಾಗಾದರೆ ನಾನು ಹಿಂತೆಗೆದು ಕೊಳ್ಳುತ್ತೇನೆ ಎಂದು ಶಮ್ನಾಡರು ಹೇಳಿದರು. "ಅಧ್ಯಕ್ಷರೇ, ನೀವು ಮೊದಲು ಕೊಟ್ಟ 'ರೂಲಿಂಗ್' ಏನಾಯಿತು?" ಎಂದು ಶ್ರೀ. ಜತ್ತಪ್ಪ ರೈಗಳು ಕೇಳಿದರು. ಸದಸ್ಯರು ತಾಳ್ಮೆಯಿಂದಿರಬೇಕೆಂದು ಅಧ್ಯಕ್ಷರು ಹೇಳಿದರು

ಅಧ್ಯಕ್ಷರು ಇಲ್ಲವೇ ಉಪಾಧ್ಯಕ್ಷರು ಇಲ್ಲದ ಸಮಯದಲ್ಲಿ ಯಾರನ್ನಾದರೂ ನಿಶ್ಚಿತ ಅವಧಿ ವರೆಗೆ ನೇಮಿಸುವ ಅಧಿಕಾರ ಜಿಲ್ಲಾ ಕಲೆಕ್ಟರಿಗೆ ಕೊಡಲಾಗಿದೆಯೆಂಬ ಸರಕಾರದ ಆಜ್ಞೆ ನಿಷೇಧ ಪೂರ್ವಕ ರಿಕಾರ್ಡು ಮಾಡಲಾಯಿತು ಶ್ರೀ ಜತ್ತಪ್ಪ ರೈಗಳು ಪ್ರತಿಷೇಧ ಸೂಚಿಸಿದರು

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs	As Ps	ASSETS	Rs	As Ps
1 Paid up Capital	12 95 970-	0- 0	1 Cash on hand & with bankers	18 26 986	3 8
2 Reserves	3 83 379-	1 6	2 Investments on (1) Govt Securities (2) Immovable properties etc	26 04 671-	6- 8
3 Deposits	61 66 927-	6 0	3 Loans on Jewels & other valuable securities	23 72 302	6 7
4 Bills for collection	5,53 548-	6- 1	4 Loans on personal securities & Bills purchased	16 74 482-	14 8
5 Sundries including revenue items	7 00 981-	0- 5	5 Bills for collection as per contra	5 53 548-	6- 1
6 Profits for the year ending 31-12-1943	1 08 522	4- 0	6 Office premises furniture etc	93 251	0 0
			7 Sundries including revenue items	84 085	10 4
Total	92 09,328	2- 0	Total	92,09,328	2 0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. BUNDER MANGALORE, Moodabidri & Padubidri. *BRANCHES*

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಯಿ,
ಕಲ್ಕತ್ತ.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building-UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara.

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 7—4—1944 [ಸಂಚಿಕೆ 14]

ದಕ್ಷಿಣ ಕನ್ನಡದ ಇಂದಿನ ಆಹಾರ ಪರಿಸ್ಥಿತಿ

ಶ್ರೀ ಎ. ಬಿ. ಶೆಟ್ಟರ ಅಭಿಪ್ರಾಯ

"ಈಗಿನ ಕಲೆಕ್ಟರರು ಜಿಲ್ಲೆಯ ಆಡಳಿತ ವಹಿಸಿಕೊಂಡಂದಿನಿಂದ ಆಹಾರ ನಿಯಂತ್ರಣ ಯೋಜನೆಯು ಬಹುಮುಖದಿಂದ ಬಲಗೊಂಡಿದೆ. ಇತ್ತೀಚೆಗೆ ಹೊರಡಿಸಲ್ಪಟ್ಟಿರುವ ಆಜ್ಞೆಗಳನ್ನು ಹಾಗೂ ಕೈ ಕೊಳ್ಳಲ್ಪಡುವವೆಂದು ಸೂಚಿಸಲ್ಪಟ್ಟಿರುವ ಕಾರ್ಯ ವಿಧಾನಗಳನ್ನೆಲ್ಲಾ ಸಕ್ರಮವಾಗಿ ಪ್ರಕಟಿಸಿ, ಜನರು ಸಂಗತಿ ತಿಳಿಯದೇನೇ ತಕ್ಸೀರಿಗೊಳಗಾಗದಂತೆ ನೋಡುವದು ಅಗತ್ಯವಿದೆ ಉಳಿತಾಯದ ಅಕ್ಕಿಯನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಕಾರ್ಯ ಮಗ್ನರಾಗುವ ರೆವಿನ್ಯೂ ನೌಕರರು, ವರ್ಗದಾರರ ಹಾಗೂ ವಕ್ಕಲುಗಳ ಮನೆ ಮತ್ತು ಬೇಸಾಯದ ಖರ್ಚಿಗೆ ಸಾಕಷ್ಟನ್ನು ಬಿಡಬೇಕಲ್ಲದೆ ಹಕ್ಕಿಯ ಬೇಸಾಯಗಾರರಲ್ಲದ ವರ್ಗಗಳಿಗೆ ಬೇಕಾಗುವಷ್ಟು ಅಕ್ಕಿಯನ್ನೂ ಉಳಿಯ ಕೊಡಬೇಕೆಂದು ತಮಗೆ ಕಲೆಕ್ಟರರಿಂದ ದೊರತಿರುವ ಸೂಚನೆಗಳನ್ನು ನೆನಪಿನಲ್ಲಿಟ್ಟು ಕೊಳ್ಳುವರೆಂದು ನಾವು ಆಶಿಸುತ್ತೇವೆ"

ಹೀಗೆಂದು ಶ್ರೀ ಎ ಬಿ ಶೆಟ್ಟರು ಜಿಲ್ಲೆಯ ಆಹಾರ ಪರಿಸ್ಥಿತಿ ವಿಚಾರ ಒಂದು ಲೇಖನ ಬರೆಯುತ್ತಾ ಅದರಲ್ಲಿ ಹೇಳುತ್ತಾರೆ. ಅವರು ಆ ಲೇಖನದಲ್ಲಿ ಚರ್ಚಿಸಿದ ಇತರ ವಿವರಗಳು ಇಂತಿವೆ

'ಸರಕಾರದ ಲೆಕ್ಕಾಚಾರದಂತೆ, ಈ ಜಿಲ್ಲೆಯು ಆಹಾರ ಸರಬರಾಯಿಯು ಮಟ್ಟಿಗೆ ಸ್ವಾವಲಂಬಿಯೆಂದು ಗಣಿಸಲ್ಪಟ್ಟಿದೆ, ಆಹಾರ ಸಮಿತಿಯು ಒಂದು ಕಮಿಟಿಯು ಎರಡು ತಿಂಗಳುಗಳಿಗೆ ಮೊದಲೇ ಈ ಪ್ರಶ್ನೆಯನ್ನು ಗಾಢವಾಗಿ ಪರ್ಯಾಲೋಚಿಸಿ ಈ ವರುಷ ನಮ್ಮ ಸಾಗುವಳಿ ಬೆಳೆಯನ್ನು ಹಾಳು ಮಾಡಿದ, ಅನಾವೃಷ್ಟಿ ಮಳೆಯ ಅಭಾವ, ಇತ್ಯಾದಿ ಕಾರಣಗಳಿಂದಾಗಿ, ಬಳಸುವದಕ್ಕೆ ಸಿಕ್ಕುವ (ಬೀಜದ ಭತ್ತವನ್ನು ಬಿಟ್ಟರೆ) ಅಕ್ಕಿಯು ಹೆಚ್ಚು ಕಡಿಮೆ ೪೬ ಲಕ್ಷ ಮುಡಿಯೆಂದು ಕಂಡು ಹಿಡಿಯಿತು ಪ್ರಾಯಸ್ಥರಿಗೆ ದಿನ ಕ್ಕರ್ಧ ಸೇರಿನ ಲೆಕ್ಕದಂತೆ ನಮ್ಮ ಜಿಲ್ಲೆಯ ಜನರಿಗೆ ಬೇಕಾಗುವ ಅಕ್ಕಿ ೫೧ ಲಕ್ಷ ಮುಡಿ, ಹೀಗೆ ೫ ಲಕ್ಷ ಮುಡಿ ಅಕ್ಕಿಯ ತೊರತೆ ಕಂಡುಬರುತ್ತದೆ.

'ಆಹಾರ ಸಮಿತಿಯು ಪರವಾಗಿ ಕಳದ ಫೆಬ್ರವರಿ ತಾ. ೧೨ರಲ್ಲಿ ಡೆಪ್ಯುಟೇಶನೊಂದು ಎಡ್ವೈಸರ್ ಶ್ರೀ. ರಾಮಮೂರ್ತಿಯರನ್ನು ಕಂಡು ಟನ್ನು (೫ ಲಕ್ಷ ಮುಡಿ) ಅಕ್ಕಿಯನ್ನು ಇಲ್ಲಿಗೆ ಕಳುಹಿಕೊಡಬೇಕೆಂದು ಒತ್ತಾಯ ಪೂರ್ವಕ ಕೇಳಿಕೊಂಡಿತು ಸಿವಿಲ್ ಸಪ್ಲೈಸ್ ಕಮಿಶನರರಾದ ಮಿ ಸ್ಕೋಟ್ ಬ್ರಾನರು, ಇದೇ ತಿಂಗಳ ಮೂರನೇ ವಾರಧಲ್ಲಿ ಈ ಜಿಲ್ಲೆಗಾಗಮಿಸಿ, ಆಹಾರ ಸ್ಥಿತಿಯನ್ನು ಮುಂದಟ್ಟು ಮಾಡಿಕೊಳ್ಳಲು ಹಲವು ಸ್ಥಳಗಳನ್ನು ಸಂದರ್ಶಿಸಿದರು ಜಿಲ್ಲೆಯಲ್ಲಿ ತನ್ನ ಅವಶ್ಯಕತೆಯನ್ನು ಪೂರೈಸಿ ಕೊಳ್ಳುವಷ್ಟು ಅಕ್ಕಿಯಿದ್ದರೂ ನಾವು ಆ ಅವಶ್ಯಕತೆಯನ್ನು ಅತಿಶಯಗೊಳಿಸಿ ತೋರಿಸಿರುವವೆಂಬ ಅಭಿಪ್ರಾಯವನ್ನು ಕಟ್ಟಿ ಕೊಂಡೇ ಇವರು ಬಂದಿದ್ದರೂ, ಜಿಲ್ಲೆಗೆ ಸಹಾಯವಗತ್ಯವಿದೆಯೆಂಬುದನ್ನು ಕೊನೆಗವರು ಮನಗಂಡಂತೆ ಕಾಣುತದೆ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಕೊರತೆಯಿರುವ ತಾಲೂಕೆಂದರೆ ಕಾಸರಗೋಡು ಅಲ್ಲಿ ಆಹಾರ ಸ್ಥಿತಿಯು ಇಷ್ಟರೊಳಗೇನೇ ತೀರಾ ನಿಕೃಷ್ಟವಾಗಿದೆ ಕಾಸರಗೋಡು ತಾಲೂಕಿಗೆ ಬೇಕಾಗುವ ಅಕ್ಕಿಯನ್ನೆಲ್ಲಾ ಸರಕಾರವು ಕಳುಹಿಕೊಡಲಿದೆಯೆಂದು ನಿರೀಕ್ಷೆಯಿದೆ ಅಧಿಕ ಪರಿಮಾಣದ ಆಹಾರ ಸರಬರಾಯಿಯ ಅಗತ್ಯವಿರುವ ಮತ್ತೊಂದು ಕ್ಷೇತ್ರವೆಂದರೆ ದಿನಕ್ಕೆ ೧,೫೦೦೦ ಮುಡಿಯಂತೆ ಬೇಕಾಗುವ ಮಂಗಳೂರು ನಗರ ಇಲ್ಲಿ ರೇಶನಿಂಗ್ ಆರಂಭ ಮಾಡುವ ಮೊದಲು ರಿಸರ್ವಾಗಿ ಇರಬೇಕಾದ ಒಂದು ತಿಂಗಳ ಅಕ್ಕಿಯನ್ನು ಸರಕಾರವು ಕಳುಹಿಕೊಡುವುದೆಂದು ನಾವು ಆಶಿಸುತ್ತೇವೆ. ಉಡುಪಿ ಪಟ್ಟಣದಲ್ಲಿ ಇದೇ ತಿಂಗಳ ೧೨ರಿಂದಲೇ ರೇಶನಿಂಗ್ ಜ್ಯಾರಿಗೆ ಬಂದಿದೆ, ಮಂಗಳೂರು ಮತ್ತು ಕಾಸರಗೋಡಿನ ಪಟ್ಟಣಗಳಲ್ಲಿ ರೇಶನಿಂಗ್ ಬಂದ ಮೇಲೆ ಈ ಜಿಲ್ಲೆಯ ಆಹಾರ ಸಮಸ್ಯೆಯನ್ನು ಬಿಡಿಸಲು ಸುಲಭವಾಗುವದು ನಿಶ್ಚಯಾತ್ಮಕ ಧಾರಣೆಗಳು (Ceiling prices) ಜಿಲ್ಲೆಯಲ್ಲಿ ಅಕ್ಕಿಯ ಬೆಲೆಯನ್ನೆನ್ನೂ ನಿಯಂತ್ರಣಕ್ಕೆ ತರಲಿಲ್ಲವೆಂಬುದು ವಿಷಾದಕರ ವಿಧೆ. ಜಿಲ್ಲೆಯ ಸರ್ವ ಕಡೆಗಳಲ್ಲಿಯೂ ಅಧಿಕ ಬೆಲೆಗೆ ಪಡಕೊಳ್ಳುವಿಕೆ ಮತ್ತು ಮಾರುವಿಕೆಗಳು ನಡೆದೇ ಇವೆ.

'ಸೆಂಟ್ರಲ್ ಕೋಪರೇಟಿವ್ ಹೋಲ್ ಸೇಲ್ ಸ್ಟೋರ್ಸ್ಸಿನ ಅಧ್ಯಕ್ಷ ಶ್ರೀ ಎಮ್. ಶಿವರಾಯರು ಸಂಗ್ರಹಿಸಿದ ಗಣನೆಗಳಂತೆ ಈ ತನಕ ರಿಕ್ವಿಸಿಶನ್ ಮಾಡಿದ ಒಟ್ಟು ಅಕ್ಕಿಯು ಮೊತ್ತ ೪,೨೦,೭೯೧ ಮುಡಿ, ಆ ಪೈಕಿ ಇದೇ ತಿಂಗಳ ೧೫ನೇ ತಾರೀಕಿನ ವರೆಗೆ ಸ್ವಯಂ ತಾವಾಗಿ ಜಮೆ ಬಂದ ಅಕ್ಕೀ ಮುಡಿಗಳು ೨೦೩೭೭೦, ಅರ್ಥಾತ್ ಒಟ್ಟು ಸಂಖ್ಯೆಯ ಅರೆವಾಸಿಗಿಂತಲೂ ತ ಸು ಕಡಿಮೆ. ಈಗ ಜ್ಯಾರಿಯಲ್ಲಿರುವ ಸ್ವಯಂ ಸರಬರಾಯಿ ಯೋಜನೆಯ ಪ್ರಕಾರ ಮಾರ್ಚ ೧ನೇ ತಾರೀಕಿನೊಳಗೆ ರಿಕ್ವಿಸಿಶನ್ ಆದ ಅಕ್ಕಿಯ ½ ಅಂಶವು ಸ್ಟೋರ್ಸುಗಳಿಗೆ ದೊರೆಯಬೇಕಿದ್ದಿತು ಕಾರ್ಕಳವೊಂದನ್ನು ಬಿಟ್ಟರೆ ಬೇರಾವ ತಾಲೂಕೂ ತನ್ನ ಪಾಲಿನ ¼ನೇ ಅಂಶವನ್ನು ಈ ತನಕ ಕೊಟ್ಟಿಲ್ಲ ಕಾಸರಗೋಡು ತಾಲೂಕು ಎಲ್ಲಕ್ಕಿಂತ ಹಿಂದೆ ಎಪ್ರಿಲ್ ೧ರೊಳಗೆ ರಿಕ್ವಿಶಿಶನ್ ಆದ ಎಲ್ಲಾ ಮೊತ್ತವೂ ಜಮೆ ಬರಬೇಕಾಗಿದೆ

'ನಿಶ್ಚಯಾತ್ಮಕ ಧಾರಣೆಯ ಕ್ರಮವು ಜಯಶೀಲವಾಗದೆ, ಉಳಿತಾಯದ ಎಲ್ಲಾ ಅಕ್ಕಿಯನ್ನೂ ಪೇಟೆ ಪಟ್ಟಣಗಳವರ ಅವಶ್ಯಕತೆಗಾಗಿ ಸರಕಾರವು ವಶಪಡಿಸಿಕೊಳ್ಳಲಿಕ್ಕಿರುವದರಿಂದ ಈ ವಿಭಾಗದಲ್ಲಿ ಸರಕಾರವು ಮತ್ತೊಂದು ಹೆಜ್ಜೆಯಿಟ್ಟಿದೆ ಕೋಪರೇಟಿವ್ ಸ್ಟೋರ್ಸುಗಳಿಗೆ ಅಥವಾ ಚಿಲ್ಲರೆಯಾಗಿ ತಮ್ಮ ಕ್ಷೇತ್ರಗಳಲ್ಲಿ ಅಕ್ಕಿ ಮಾರಾಟ ಮಾಡುವರೆ ನೇಮಕಗೊಂಡು ಪರವಾನಗಿ ಪಡೆದಿರುವ ಇತರ ಚಿಲ್ಲರೆ ವ್ಯಾಪಾರಿಗಳಿಗಲ್ಲದೆ ಮಿಕ್ಕವರಾರಿಗೂ ವರ್ಗದಾರರು ಇಲ್ಲವೇ ವಕ್ಕಲುಗಳು ತಮ್ಮ ಅಕ್ಕಿಯನ್ನು ಮಾರಕೊಡದೆಂದು ನಿಷೇಧ ಹಾಕಿದೆ (ಈ ಸಂಬಂಧವಾದ ಒಂದು ವಿವರಣೆಯು ೨೪-೩-೪೪ರ ಗಝೆಟಿನಲ್ಲಿ ಪ್ರಕಟವಾಗಿದೆ)

ರಿಕ್ವಿಶಿಶನ್ ಆಗದುಳಿದ ತಮ್ಮ ಉಳಿತಾಯದ ಅಕ್ಕಿಯನ್ನು ಸ್ವಯಂಪ್ರೇರಣೆಯಿಂದ ಅದಷ್ಟು ಬೇಗನೆ ತಂದೊಪ್ಪಿಸುವವರಿಗೆ ಮುಡಿಗೆ ಎಂಟಾಣೆಯಂತೆ ಅಧಿಕ ಬೆಲೆ ಕೊಡಲಾಗುವದು ಈ ತನಕ ರಿಕ್ವಿಶಿಶನ್ ಆಗಿರುವ ೪ ಲಕ್ಷ ೨೦ ಸಾವಿರ ಮುಡಿಗಳಷ್ಟು ಅಕ್ಕಿಯು ರೇಶನಿಂಗ್ ಜ್ಯಾರಿಗೆ ಬರುವ ಕ್ಷೇತ್ರಗಳಿಗೆ ಸಾಕಾಗುವಂತಿಲ್ಲವೆಂದೂ ಇನ್ನೊಂದು ೫ ಲಕ್ಷವಾದರೂ ಈ ಉದ್ದೇಶ ಸಾಧನೆಗೆ ಬೇಕಾಗಬಹುದೆಂದೂ ಅಂದಾಜು ಕಟ್ಟಿರುವದರಿಂದ ತಾವಾಗಿ ತಂದೊಪ್ಪಿಸದ ಇತರ ಮಾರಾಟಕ್ಕುಳಿಯುವ ಅಕ್ಕಿಯನ್ನೂ ಸಂಗ್ರಹಿಸಲಾಗುವದು ರಿಕ್ವಿಶಿಶನ್ ಆಗದ ಅಕ್ಕಿಯನ್ನು ತಾವಾಗಿ ಸ್ಟೋರ್ಸ್‌ಗಳಿಗೆ ತಂದುಕೊಡುವವರಿಗೆ ಮಂಗಳೂರಿನಲ್ಲಿ ಕೊಡಲ್ಪಡುವ ಮುಡಿಗೆಂಟಾಣೆ ಹೆಚ್ಚಿನ ದರವನ್ನು ಇತರ ತಾಲೂಕು ಕೇಂದ್ರಗಳಲ್ಲಿಯೂ ಕೊಡಲಾಗುವುದೋ ಎಂಬುದನ್ನು ನೋಡಲಿಕ್ಕಿದೆ.

'ಬಂಟ್ವಾಳ ಕಾಸರಗೋಡು, ಹೊಸದುರ್ಗದಂತಹ ಹಲವು ಸ್ಥಳಗಳು ಹಸಿವು ಪೀಡೆಗೊಳಗಾಗಿವೆ ರೇಶನ್ ಕಾರ್ಡುಗಳಿದ್ದವರ, ಕೂಡಾ ತಮ್ಮ ದಿನದ ಅಕ್ಕಿಯನ್ನು ಪಡೆಯದಂತಾಗಿದೆ ಜಿಲ್ಲೆಯ ಅಧಿಕಾರಿಗಳು ನಿಶ್ಚಿತ ಅವಧಿಗೆ ರಿಕ್ವಿಸಿಶನ್ ಮೊತ್ತವನ್ನು ತಂದೊಪ್ಪಿಸದ ರೈತರ ಅಕ್ಕಿಯನ್ನು ಸಂಗ್ರಹಿಸುವ ಕಾರ್ಯಕ್ರಮ ಕೈಕೊಳ್ಳಹತ್ತಿದ್ದಾರೆ ಈಗ ಜಿಲ್ಲೆಯಲ್ಲಿ ಜ್ಯಾರಿಯಲ್ಲಿರುವ ಯೋಜನಗ ತಮ್ಮ ಪೂರ್ಣ ಸಹಕಾರವನ್ನಿತ್ತು ಜನರ ಆಹಾರ ಸಂಕಷ್ಟವನ್ನು ತಮ್ಮಿಂದಾದಷ್ಟು ನಿವಾರಿಸುವದು ಎಲ್ಲಾ ವರ್ಗದಾರರ ಕರ್ತವ್ಯವಿದೆ'

ಶ್ರೀ ಸುರೇಶ ವೈದ್ಯರಿಗೆ ೯೪ ದಿನಗಳ ಶಿಕ್ಷೆ

ಲಂಡನ್ ನಗರದಲ್ಲಿರುವ ಭಾರತೀಯ ಪತ್ರಿಕೋದ್ಯೋಗಿ ಶ್ರೀ ಸುರೇಶ ವೈದ್ಯರನು ಕೇಂಟರ್ ಬರಿ ಮಿಲಿಟರಿ ಕೋರ್ಟಿನಲ್ಲಿ ವಿಚಾರಣೆ ನಡೆಸಿ, ಅವರಿಗೆ ೯೪ ದಿನಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ ಅವರನ್ನು ಮೈಡ್ ಸ್ಟೋನ್ ಜೈಲಿಗೆ ಒಯ್ದಿರುವರು

ಬ್ರಿಟನಿನಲ್ಲಿ ಎಲ್ಲರೂ ಒತ್ತಾಯದಿಂದ ಸೈನ್ಯಕ್ಕೆ ಸೇರಬೇಕೆಂದು ಆಜ್ಞೆಯಾದಾಗ, ನಾನು ಭಾರತೀಯ ಬ್ರಿಟಿಷ್ ಸೈನ್ಯಕ್ಕೆ ಸೇರಲಾರೆ ಎಂದು ಆಜ್ಞೆ ಪ್ರತಿಭಟಿಸಿದ್ದಕ್ಕೆ ಅವರಿಗೆ ಶಿಕ್ಷೆ ಅವರು ತಮ್ಮೊಂದು ಹೇಳಿಕೆಯಲ್ಲಿ ನಾನು ಸೈನ್ಯಕ್ಕೆ ಸೇರಲು ಅಂಜಿ ಹೀಗೆ ಹೇಳುವುದಲ್ಲ, ನನ್ನ ಸ್ಥಾನ ಸ್ವಾತಂತ್ರವಾದ ಭಾರತದ ಸೈನ್ಯದಲ್ಲಿ ಎಂದು ಸ್ಪಷ್ಟ ನುಡಿದಿದ್ದಾರೆ

ಬ್ರಿಟಿಷ್ ಸಾಮ್ರಾಜ್ಯದ ಹೃದಯದಲ್ಲಿ ನಿಂತು ಹೀಗೆ ಅವರ ಆಜ್ಞೆಯನ್ನು ವಿರೋಧಿಸಿದ ಶ್ರೀ ಸುರೇಶ ವೈದ್ಯರ ಸ್ವಾತಂತ್ರ್ಯ ಪ್ರೇಮ, ದೇಶ ವಾತ್ಸಲ್ಯಗಳು ಅಖಿಲ ಭಾರತದಲ್ಲಿ ಮಹಾ ಆಂದೋಲನ ಹುಟ್ಟಿಸಿವೆ ತನ್ನ ಸ್ವಾತಂತ್ರ್ಯ ಪ್ರೇಮ ತೋರಿಸಿದ ಫಲವಾಗಿ ಅವರೀಗ ಶಿಕ್ಷೆಗೊಳಗಾಗಿದ್ದಾರೆ.

ಕಾರ್ಕೆ ಕಾಣೆ, ನಂಬಿರೇ ಕಾಣೇ ಕಾಣೇ
... ಕಾರ್ಯಗಳು ...
ಕಾಣಸು;
... ಜಗ ವರದರ ತಣಸು;
... ಗಳನ್ನೆಲ್ಲಾ ಹಣಸು;
ಕೇಳಯ ಹಾಕುತ ಕಾಣೇ ಕಾಣೇ
—ಅರವಿಂದನಯದತ್ತ

★ ಜೊತೆಗಾತಿ ★

ಲೇಖಕ: ರತ್ನಾಕರ

'ಆ ಉಪಾಧ್ಯಾಯನಿ ಯಾರೆಂದು ತಿಳಿಸುವೆಯಾ?' ಎಂಬೊಂದು ಪಿಸು ಮಾತಿನ ಪ್ರಶ್ನೆ ನನ್ನ ಜೀವದ ಗೆಳೆಯನಿಂದ.

'ತಿಳಿಸದಿದ್ದರೆ—' ಪಿಸುಮಾತಿನಲ್ಲಿಯೇ 'ನನಗೇನು? ತಿಳಿಸಿದರೆ ನಿನಗೇನಾದರೂ ಉಪಯೋಗಕ್ಕೆ ನಾನು ಬಿದ್ದೇನು!'

'ಅದು ಹೇಗೆ?'

'ನೀವಿಬ್ಬರೂ ಹಾಡುವ ಕೋಗಿಲೆಗಳೇನೋ ಇರಬಹುದು! ಆದರೂ ಕೋಗಿಲೆಗಳಿಗೆ ಕಾಗೆಯ ಬೆಂಬಲ ಬೇಡವೇ?'

'ಅದು ಪ್ರಕೃತಿಯ ಸಹಜ ಧರ್ಮ. ಕೋಗಿಲೆಯು ಬಾಯ್ಬಿಡುವುದು ವಿರಹಿಯನ್ನು ರೇಗಿಸಬೇಕೆಂದೇ? ಹೂ ಬಿರಿಯುವುದು ದುಂಬಿಯನ್ನು ರೇಗಿಸಬೇಕೆಂದೇ? ಕೋಗಿಲೆಯ ಹಾಡಿಗೆ, ವಿರಹಿಯು ಮನಸೋಲುವುದು ಪ್ರಕೃತಿಯ ಸಹಜ; ಹೂ ಬಿರಿಯುವುದು ಕಾಲಸ್ಥಿತಿಗನುಸರಿಸಿ ಅಲ್ಲವೇ?'

'ಹೂಂ, ಅವಳು ಯಾರೆಂದು ತಿಳಿಸಲಾರೆಯಾ? ಇರಲಿ—ದುಂಬಿಯನ್ನು ರೇಗಿಸಿದ ಆ ಹೂವಿನ ಹೆಸರನ್ನಾದರೂ ಹೇಳಬಹುದೇ?'

'ದುಂಬಿಯನ್ನು ಎಷ್ಟೋ ಹೂಗಳು ರೇಗಿಸುತ್ತವೆ! ಒಂದೆರಡೇ? ಕೆಲವು ತಮ್ಮ ಚಿತ್ರ ವಿಚಿತ್ರವಾದ ಬೆಡಗಿನಿಂದ ದುಂಬಿಯನ್ನು ರೇಗಿಸಿದರೆ ಇನ್ನು ಕೆಲವು ಅದ್ಭುತವಾಗಿ ಬಿರಿದುಕೊಂಡು ಅರಳಿ ಸುಯ್ಯನೆ ಬೀಸುವ ತಂಗಾಳಿಗೆ ಅತ್ತಿತ್ತ ಹೊರಳಿ ಹಾರಿಬರುವ ಭ್ರಮರವನ್ನು ರೇಗಿಸುವವು. ಮತ್ತು ಕೆಲವು ದುಂಬಿಯು ಯಾವ ಹೂವಿನಲ್ಲಿದ್ದರೂ ಅಲ್ಲಿಗೆ ತಮ್ಮ ಪರಿಮಳವನ್ನು ಘಮ್ಮನೆ ಸೂಸಿ ಮುತ್ತಿಗೆಹಾಕಿ ಬಲಾತ್ಕಾರವಾಗಿ ಭ್ರಮರವನ್ನು ತಮ್ಮಲ್ಲಿ ಬರಮಾಡಿಕೊಳ್ಳುವುದಿಲ್ಲವೇ? ಎಲ್ಲ ಹೂವುಗಳಿಗೂ ಒಂದೇ ಬಗೆಯ ಸಾಮರ್ಥ್ಯವಿದೆಯೆಂದು ಹೇಳಬರುವುದಿಲ್ಲ—ಬಲಾತ್ಕಾರವಾಗಿ ದುಂಬಿಯನ್ನು ರೇಗಿಸಲು ಶಕ್ಯವಿಲ್ಲದ ಹೂಗಳಲ್ಲೂ ಒಮ್ಮೊಮ್ಮೆ ಅಪೂರ್ವವಾದ ಶಕ್ತಿಯಿದೆ—ನಾಚಿಕೊಂಡು, ತಲೆತಗ್ಗಿಸಿ ಕಣ್ಮರೆಯಾಗಿ ಇನಿದಾದ ಗಾಳಿಯೊಡನೆ ಕಣ್ಣುಮುಚ್ಚಾಲೆಯಾಡುವಂತೆ ಮಾಟಮಾಡುವ ಹೂಗಳೂ ಇಲ್ಲವೆ? ಕೆಲವು ದುಂಬಿಗಳಿಗೆ ಈ ಹೂಗಳೆಂದರೆ ಪ್ರಾಣ!'

'ಅವುಗಳಲ್ಲಿ ನಿನ್ನನ್ನು ರೇಗಿಸಿದ ಹೂವು ಯಾವುದೆಂದು ಹೇಳುವೆಯಾ?'

'ದುಂಬಿಯನ್ನು ಹೂವು ರೇಗಿಸಿದೆಯೋ, ಹೂವನ್ನು ದುಂಬಿಯು ರೇಗಿಸಿದೆಯೋ ನನಗೆ ತಿಳಿಯದು!'

'ಹೂವನ್ನು ದುಂಬಿ ರೇಗಿಸಿದರೆ—ಆ ವಿಚಾರವನ್ನು ನಿನ್ನೊಡನೆ ಕೇಳಿ ಪ್ರಯೋಜನವಿಲ್ಲ. ದುಂಬಿಯನ್ನು ಹೂ ರೇಗಿಸಿದ್ದರೆ, ಅದರ ಪರಿಣಾಮವೇನಾಗಿದೆಯೆಂಬುದು ದುಂಬಿಯನ್ನೇ ಕೇಳಿ ತಿಳಿಯಬೇಕು'

'ಪರಿಣಾಮ ನೆಟ್ಟಗಾಗಿದೆಯೆಂದು ತಿಳಿದುಕೊ'

'ಅದರ ಪರಿಣಾಮವಾಗಿ ನೀನೂ ನೆಟ್ಟಗಾಗಬಹುದು. ಊರೆಲ್ಲ ಬೆಂಕಿಹಚ್ಚಿದೆ—ಬುಸಾಬರಿ, ಗುಸಾಬರಿ ಎಂದು ಗೇಲಿ ಹಾಕಿ ಮೂರ್ಖನ ಹಾಗೆ ಗುಳ್ಳೆಬ್ಬಿಸಿದೆ—ಭ್ರಮರದ ಝೇಂಕಾರದ ಹಾಗೆ—'

'ಆದರೆ ಎದೆಗುಂದದಿರು. ಭ್ರಮರವು ಹೂವಿನ ಸುತ್ತ ಸುತ್ತುವ ವರೆಗೂ ಝೇಂಕಾರ ಮಾಡುವುದು—ಹೂವಿನಲ್ಲಿ ಕುಳಿತೊಡನೆ ಮಕರಂದವನ್ನು ಹೀರುತ್ತಾ ನಿಶ್ಶಬ್ದವಾಗುತ್ತದೆ!'

'ಅಯ್ಯೋ—ನಿನ್ನೊಡನೆ ಮಾತಾಡುವುದಾದರೂ ಯಾರು? ಅವಳೇ ಬರಬೇಕು ನಿನ್ನ ವಾಕ್ಸರಣಿಗೆ ತಡೆಹಾಕಲು—ಅವಳು ಬಂದಾಗ ಮಾತ್ರ ನಿನ್ನ ನಾಲಗೆ ಹೊರಳುವುದಿಲ್ಲ! ಏಕೆ?'

'ಅವಳು ಹೆಂಗಸೆಂದು—ನಾನು ಗಂಡಸೆಂದು—ತಿಳಿಯಿತೇ?'

'ಹೋಗಲಿ, ಬಿಡು; ಅವಳ ಹೆಸರನ್ನಾದರೂ ಹೇಳುವೆಯಾ?'

'ಅವಳಿಗಿನ್ನೂ ಹೆಸರೇ ಇಟ್ಟಿಲ್ಲ ನಾನು!'

'ನೀನಿಟ್ಟ ಹೆಸರು ನನಗೆ ಬೇಡ—ಅವಳ ಅಪ್ಪ, ಅವಳಿಗೊಂದು ಹೆಸರಿಟ್ಟಿಲ್ಲವೇ? ಆ ಹೆಸರನ್ನು ಹೇಳು.'

'ಆ ಹೆಸರು ಮರೆತುಹೋಗಿದೆಯೆಂದು ಇಟ್ಟುಕೊ, ಸದ್ಯಕ್ಕೆ ನಾನು ಅವಳನ್ನು ಉಪಾಧ್ಯಾಯಿನಿಯೆಂದೇ ಸಂಭೋಧಿಸುತಿದ್ದೇನೆ.'

'ಆಯಿತು—ನಿಜಕ್ಕೂ ಅವಳೊಬ್ಬ ಉಪಾಧ್ಯಾಯಿನಿಯೇ?'

'ಹೌದೆಂದು ಹೇಳುವುದಕ್ಕಿಂದ ಅಲ್ಲವೆನ್ನುವುದೇ ಲೇಸೆಂತ ನಿನ್ನ ಮುಖ ಸೂಚಿಸುತ್ತದೆ!'

'ಹಾಗೆ ಭ್ಹಾ-ಸುಮ್ಮನೆ ಉಪಾಧ್ಯಾಯಿನಿ, ಟೀಚರ್, ಗೀಚರ್, ಹುಡುಗೀರ ಸಾಲೆಯ ಮೇಷ್ಟ್ರು ಎಂತ ಅವಳಿಗೆ ವೇಷ ಹಾಕಿ ನನ್ನ ಮುಂದೆ ನಿಲ್ಲಿಸಿದ್ದೆ—ಏಕೆ—ನಿಜರೂಪದಲ್ಲಿದ್ದರೆ ನಾನು ಅಡ್ಡ ಬರುವೆನೆಂದೇ? ನಿನ್ನ ಹುಡುಗಿಯ ಹೆಸರು ನನಗೆ ಗೊತ್ತು ಹೇಳಬೇ?— ಅವಳ ಹೆಸರು...'

ಅನತಿ ದೂರದಲ್ಲಿ ಅವಳು ಬರುತ್ತಿದ್ದಳು. ಕೂಡಲೇ ನನ್ನ ಮಿತ್ರನ ಬಾಯಿಗೆ ಕೈಯೊತ್ತದಿದ್ದರೆ, ವಾಚಕ ಮಹಾಶಯ, ಅವಳ ಹೆಸರು ನಿಮ್ಮ ಕಿವಿಗೆ ಬೀಳುತ್ತಿತ್ತು ಮಾತ್ರವಲ್ಲ, ಅವಳ ಸುದ್ದಿಯನ್ನೇ ಆಡುತ್ತಿದೆವೆಂದು ಅವಳಿಗೂ ತಿಳಿಯುತಿತ್ತಲ್ಲವೆ?

ಅವಳು ಸನಿಯಕ್ಕೆ ಬರುತ್ತಾ ಬರುತ್ತಾ ನನ್ನನ್ನು ನೋಡಿದೊಡನೆ ಮುಗುಳ್ನಕ್ಕು ವೇಗವಾಗಿ ಹೆಜ್ಜೆಯನ್ನಿಟ್ಟಳು. ಅವಳು ಸುಂದರ ಉಡುಪನ್ನು ತೊಟ್ಟುಕೊಂಡು ನಾಚುತ್ತ, ಅಳುಕುತ್ತ, ಉದ್ವೇಗದ ಹೃದಯವಾದರೂ ತತ್ತರಿಸಿಕೊಂಡು ಮೆಲ್ಲಮೆಲ್ಲನೆ ಹತ್ತಿರ ಬರುತ್ತಿದ್ದಳು. ಆಹಾ, ಇವಳಿಗೂ ನಾಚಿಕೊಂಡು, ತಲೆ ತಗ್ಗಿಸಿ, ಕಣ್ಮರೆಯಾಗಿ ಇನಿದಾದ ಗಾಳಿಯೊಡನೆ ಕಣ್ಣುಮುಚ್ಚಾಲೆಯಾಡುವ ತೆಳ್ಳನೆಯ ಮೃದು ಪುಷ್ಪಕನ್ಯೆ ಎಷ್ಟು ಸಾಮ್ಯ! ಮೊನ್ನೆ ತಾನೇ 'Woman's weapons have been as varied as daring: she has entangled man in yards and yards of grills and fripperies; she has dazzled him completely with colours and optical illusions; she has resorted alternately to camouflage to rouse his curiosity or blatant exposure to appeal to his innate love of open tactics; she has even distorted herself completely out of shape to prove that she is too delicate and fragile to fight at all, thus putting him completely off his guard till he walked into the trap. ಎಂದು ರೇಡಿಯೋದಲ್ಲಿ ಒಬ್ಬ ಸುಶಿಕ್ಷಿತ ಮಹಿಳೆಯು ಸ್ತ್ರೀಯ ವೇಷಭೂಷಣದ ಮೇಲೆ ಕೊಟ್ಟ ಉಪನ್ಯಾಸ! ಆದರೆ ನನ್ನ 'ಕಥಾರಾಣಿ'ಯ ಉಡುಪು ತೊಡುಪು ಮಾಟದ ಉಡುಪಲ್ಲವಾದರೂ ಅವುಗಳಲ್ಲಿ ಅವಳಂತೆಯೇ ಒಂದು ಬಗೆಯ ಮೋಹಕತೆಯಿತ್ತು; ಸರಳತೆಯಿತ್ತು. ಅವಳು ಏನೊಂದು ಅಲಂಕಾರವಿಲ್ಲದೆ, ಬಣ್ಣ ಬೆಡಗಿಲ್ಲದೆ ಇದ್ದ ಅಂದ ಚಂದಕ್ಕೂ ಅಪೂರ್ವ ಕಳೆಯನ್ನು ತುಂಬಿಸಿ ಮನ ಮುಗ್ಧವಾಗಿ ತೋರುತ್ತಿದ್ದಳು. ಉಪನ್ಯಾಸ ಕೊಟ್ಟ ಆ ಮಹಿಳೆಯು ಈಕೆಯನ್ನು ಕಂಡಿದ್ದರೆ ಅವಳ ಉಪನ್ಯಾಸವು ಬೇರೊಂದು ರೀತಿಯಲ್ಲಿರುತ್ತಿತ್ತು.

ಅವಳು ಸಮೀಪಕ್ಕೆ ಬರುವುದರೊಳಗೆ ನನ್ನ ಗೆಳೆಯನು—'ಮಿತ್ರಾ' ಕ್ಷಮಿಸು—ಅಗತ್ಯದ ಕೆಲಸದ ನೆನಪಾಯಿತು. ಮತ್ತೆ ಕಾಣುವೆ. ಆದರೆ ನಿನಗೊಂದು ಮಾತನ್ನು ಹೇಳುವೆ—'ಜೀವನದಲ್ಲಿ ಮುಂದುವರಿಯಬೇಕೆಂಬ ಮನುಷ್ಯನಿಗೆ ಸ್ತ್ರೀಯೆ ಒಂದು ಅಡ್ಡಗಾಲು. ಸ್ತ್ರೀಯನ್ನು ಪ್ರೀತಿಸುತ್ತಿರುವಾಗ ಇನ್ನಾವ ಬೇರೆ ಕಾರ್ಯವನ್ನೂ ಸಾಧಿಸುವುದು ಅಶಕ್ಯ. ಕಾರ್ಯವನ್ನೂ ಸಾಧಿಸಬೇಕು; ಪ್ರೇಮವನ್ನೂ ಗಳಿಸಬೇಕು ಎಂದರೆ ಮದುವೆಯಾಗಬೇಕು'—ಇದು ನಾನು ಹೇಳಿದ ಮಾತಲ್ಲ—ಸರ್ವಶ್ರೇಷ್ಠ ಕಾದಂಬರಿಕಾರರಿಂದ ಟಾಲ್‌ಸ್ಟಾಯಿಯವರ ಮಾತದು!' ಎಂದು ಹೇಳುತ್ತ ಮತ್ತೆ ನಿಲ್ಲದೆ ಅಲ್ಲಿಂದ ಬೇಗ ಬೇಗನೇ ಹಿಂತೆರಳಿದನು.

ಅವಳು ಯಾರೆಂದು ಮೇಲಿಂದ ಮೇಲೆ ವಿಚಾರಿಸಿ ನನ್ನನ್ನು ಕೆರಳಿಸಿ ನಂತರ ಅವಳೇ ಸ್ವತಹಃ ಬಂದಾಗ ಮರೆಯಾಗುವ ಮಿತ್ರನ ತರ್ಕವೇನೆಂದು ನನಗೆ ಬಗೆಹರಿಯಲಿಲ್ಲ.

ನನ್ನ ಹತ್ತಿರಕ್ಕೆ ಬಂದವಳೇ, 'ಅವರು ಯಾರು—ಈಗ ನಿಮ್ಮೊಡನೆ ಮಾತನಾಡುತ್ತ ನಿಂತವರು?' ಎಂದು ಕೇಳಿದಾಗ ನನಗೆ ಎಲ್ಲಿಲ್ಲದ ಸಿಟ್ಟು ಬಂತು ನಾನು ಯಾರೊಡನೆಯೂ ಮಾತಡಿದರೆ ಇವಳಿಗೆ ಬಂತೇನು? ಇವಳಿಗೇಕೆ ಆ ಸಮಾಚಾರ? ಆದರೂ ಅವಳನ್ನು ನೋಯಿಸಲಿಕ್ಕೆ ನನ್ನ ಮನಸ್ಸು ಇಷ್ಟಪಡಲಿಲ್ಲ. ನನ್ನ ಗೆಳೆಯನ ಹೆಸರನ್ನು ಹೇಳುತ್ತಾ—'ನಿನ್ನ ಆಯುಸ್ಸು ತುಂಬ ನೋಡು; ನಿನ್ನ ವಿಷಯವೇ ಮಾತಾಡುತ್ತಿದ್ದೆವು!' ಎಂದು ಹೇಳಿದೆನು.

'ಅವರೇನಾದರೂ ನನ್ನ ವಿಷಯ ಹೇಳಿದರೇ?'

'ಇಲ್ಲ—ನೀನು ಯಾರೆಂದು ಕೇಳಿದನು ಮಾತ್ರ.'

'ನೀವೇನಂದಿರಿ?'

'ನಿನ್ನ ಹೆಸರನ್ನು ಹೇಳುತ್ತ ನೀನು ನಿಜವಾಗಿಯೂ ಉಪಾಧ್ಯಾಯಿನಿಯಲ್ಲವೆಂದು ಹೇಳಿದೆ.'

'ಮತ್ತೆ—'

'ಮತ್ತೇನು? ನೀನೇ ಬಂದೆ—ಅವನಿಗೇನೋ ಜರೂರು ಕೆಲಸವುಂಟೆಂದು ಹೇಳಿ ಕಾಲ್ತೆಗೆದ. ಅದೇ ನನಗೇನೂ ತೋಚುವುದಿಲ್ಲ. ನಿನ್ನ ವಿಷಯ ಪದೇ ಪದೇ ವಿಚಾರಿಸಿ, ನೀನು ಬಂದಾಗ ಮಾತ್ರ ಏಕೆ ಹೋದನು?'

ನನ್ನ ಪರಿಚಯ ಅವರಿಗೆ ಚೆನ್ನಾಗಿದೆ. ನಾವಿಬ್ಬರೂ ಬಾಲ್ಯದ ಒಡನಾಡಿಗಳು.

'ಎಂದರೆ? ನಿಮ್ಮಿಬ್ಬರ ಗೆಳೆತನವು ಜೀವದ ಗೆಳೆತನವೇ?'

'ಜೀವದ ಗೆಳೆತನವಲ್ಲವಾದರೂ ಜೀವ ಹೋಗುವ ಗೆಳೆತನವದು!'

'ನನ್ನ ಜೀವದ ಗೆಳೆಯ ಈ ಸಂಗತಿಯನ್ನೇಕೆ ಮರೆಮಾಡಿದ? ಯಾವುದನ್ನೂ ಮುಚ್ಚುಮರೆಯಿಲ್ಲದೆ—ಅನ್ಯೋನ್ಯ ಗೆಳೆತನದಿಂದ ಇರುತ್ತಿದ್ದೆವು. ಇದನ್ನು ಮಾತ್ರ ಯಾಕೆ ಮರೆಮಾಚಿದ?'

'ನೀವೂ ಅವರೊಡನೆ ಮರೆಮಾಚಿದ್ದೀರಲ್ಲಾ—ಎಲ್ಲವನ್ನೂ ತಿಳಿಸಿರುತ್ತಾ ನನ್ನ ಹೆಸರನ್ನು ಮಾತ್ರ ಇಷ್ಟರವರೆಗೂ ಏಕೆ ತಿಳಿಸಲಿಲ್ಲ? ಜೀವದ ಗೆಳೆಯನೆಂಬೇ ಅಥವಾ....'

'ಏಕೋ, ನಾನು ನಿನ್ನ ಹೆಸರು ಅವನಿಗೆ ತಿಳಿಸಲಿಲ್ಲ—ವೈಯುಕ್ತಿಕವಾಗಿ ತಿಳಿಸಲಿಲ್ಲವೆನ್ನಲೇ? ಹೇಗೆ, ಮನಸ್ಸೆಂದಿಕು—ತಿಳಿಸಬೇಡವೆಂದು—ತಿಳಿಸಲಿಲ್ಲ—ನೀನವನ ಬಾಲ್ಯದ ಒಡನಾಡಿಯೆಂದು ನನ್ನೊಡನೆ ತಿಳಿಸಲೇ ಇಲ್ಲ. ಒಳ ಸಂಚಲ್ಲವೇ ಇದು'

'ಪರಸ್ಪರ ಮುಚ್ಚುಮರೆಯಿಲ್ಲದೆ ಇರುತ್ತಿದ್ದಿರೆಂದು ಹೇಳಿದಿರಲ್ಲಾ—ಮುಚ್ಚುಮರೆ ಇಲ್ಲದೆ ಬದುಕಲು ಸಾಧ್ಯವೇ ಇಲ್ಲ. ನನ್ನೊಡನೆಯೂ ನಿಮ್ಮ ಮುಚ್ಚುಮರೆಯಿದೆಯೋ ಏನೋ?'

'ಅದಿರಲಿ—ನೀವಿಬ್ಬರೂ ಬಾಲ್ಯದ ಗೆಳೆಯರಾದುದರ ಬಗೆಯೆಂತು?'

'ನಿಮಗೇನು ಮಾಡಲಿಕ್ಕಿದೆ ಆ ಕತೆ ಕೇಳಿ?'

'ಕತೆಯು ಅರ್ಧದಲ್ಲಿಯೇ ಇದ್ದರೆ ಅದಕ್ಕೊಂದು ಅಂದವಾದ ಉಪಸಂಹಾರವನ್ನು ಹೆಣೆದು ಆ ಹಾರವನ್ನು ನಿನ್ನ ಕೊರಳಿಗೆ ಹಾಕುತ್ತೇನೆ—ನಿನ್ನ ಕೊರಳಲ್ಲಿ ಮುತ್ತಿನ ಸರದ ಹಾಗೆ!'

'ಹೇಳುವೆನು... ನನ್ನ ತಂದೆಯವರಿಗೆ ಮೊದಲಿಂದಲೂ ಚಿಕ್ಕ ಮಕ್ಕಳೆಂದರೆ ಪ್ರಾಣ. ಅತ್ತಿತ್ತ ಅಲೆದಾಡುತ್ತಿದ್ದ ಮಕ್ಕಳನ್ನು ನಮ್ಮ ಮನೆಗೆ ತಂದು ಅವರಿಗೆ ತಿಂಡಿತಿನಸುಗಳನ್ನು ಪ್ರೀತಿಯಿಂದ ತಿನ್ನಿಸುವುದೆಂದರೆ ಬಹು ಪ್ರೀತಿ. ಒಬ್ಬಿಬ್ಬರು ಮಕ್ಕಳನ್ನು ಅಕ್ಕರೆಯಿಂದ ಉಣಿಸದ ದಿನವೇ ಇಲ್ಲ. ಈ ನಿಮ್ಮ ಜೀವದ ಗೆಳೆಯ ಬಾಲ್ಯದಲ್ಲಿ ದಿಕ್ಕಿಲ್ಲದ ತಬ್ಬಲಿಯೆಂದು ನನ್ನ ತಂದೆಯವರು ಅವನನ್ನು ತಂದು ಸಾಕಿದ್ದರು. ಆಗ ನನ್ನ ತಂದೆಯರಿನ್ನೂ ಹುಟ್ಟಿರಲಿಲ್ಲ ನಾನು ಒಬ್ಬಂಟಿಗಳಾದುದರಿಂದ ನನ್ನ ಒಡನಾಟಕ್ಕೆಂದು ಆ ತಬ್ಬಲಿಯನ್ನು ಸಾಕಲು ಕಾರಣ. ವಯಸ್ಸು ಬೆಳೆದೊಡನೆ ಚಿ... ವರಿರುವಾ ನಾವು 'ರಾಜರಾಣಿ' ಆಟ...

(೭ನೇ ಪುಟಕ್ಕೆ ಮುಂದುವರಿಕೆ)

ಕಳೆದವಾರ ಚರ್ಚಿಲ್ ಒಂದು ಪ್ರಚಂಡ ಭಾಷಣ ಮಾಡಿದರು; ಯುದ್ಧದಲ್ಲಿ ತಾವು ಗೆಲ್ಲುವ ಭರವಸೆ ತೋರಿಸಿ ಮಾತನಾಡಿದರು. ಆದರೆ ಇಷ್ಟರಲ್ಲಿಯೇ ಒಂದು ವಿಪರೀತ ಘಟನೆ ಈಚೆಗೆ ನಡೆದು ಹೋಯಿತು. ಹಂಗೇರಿ ರುಮೇನಿಯಾಗಳನ್ನು ಹಿಟ್ಲರ್ ಹಿಡಿದು ಬಿಟ್ಟ; ಚರ್ಚಿಲ್ ತಾವು ಗೆಲ್ಲುತ್ತೇವೆಂದು ಮಾತಿನಲ್ಲಿ ಹೇಳುತ್ತಿದ್ದಂತೆ, ಹಿಟ್ಲರ್ ಆಚೆಕಡೆ ಎರಡು ಊರುಗಳನ್ನೇ ವಶಪಡಿಸಿಕೊಂಡದ್ದು ಎಂಥಾ ವಿಚಿತ್ರವಿದ್ದು! ಮಿತ್ರರು ದ್ವಿತೀಯ ರಂಗ ತೆರೆವ ಸಮಯದಲ್ಲಿ ಮಾರ್ಚಿಯ ಕೊನೆಯಲ್ಲಿ ಹಿಟ್ಲರ್ ಇನ್ನೊಂದು ಹಜ್ಜೆ ಮುಂದಿಟ್ಟಿದ್ದಾನೆ. ಹಾಗಾಗಿ ಚರ್ಚಿಲ್ ಹೇಳಿದ ಮಾತುಗಳಲ್ಲಿ ಜಗತ್ತಿಗೆ ಏನೇನೂ 'ಬಿಸಿ' ತೋರದೆ, ಅದು ವಿರುದ್ಧವೇ ಆಯಿತು; ಅಂದರೆ ಹಿಟ್ಲರನ ಆಕ್ರಮಣದಿಂದಾಗಿ ತಣ್ಣಗೆ ಆಗಿಬಿಟ್ಟಿತು'

ಸಮರ ಭೂಮಿಯ ಸಂಚಾರ

ಚರ್ಚಿಲ್ ರೂಸ್‌ವೆಲ್ಟರಿಗೆ ಗೊಂದಲ

ಇತ್ತೀಚೆಗೆ ಚರ್ಚಿಲ್ ತನ್ನ ಅಧಿಕಾರದಲ್ಲಿ ತುಸು ಗೊಂದಲಕ್ಕೊಳಗಾಗುತ್ತಿದ್ದಾರೆ. ಅವರನ್ನು ಟೀಕಿಸುವ ವಿರೋಧಿ ಪಕ್ಷದವರ 'ಬಿರುಸು ಬಾಣ'ಗಳು ಬಲವಾಗಿವೆ. ಸರಕಾರೀ ಪಕ್ಷದ ಉಮೇದ್ವಾರರು-ಚರ್ಚಿಲರ ಬೆಂಬಲವಿದ್ದು ಇತ್ತೀಚೆಯ ಉಪಚುನಾವಣೆಗಳಲ್ಲಿ ಸೋತಿದ್ದಾರೆ. 'ಒಂದೆರಡು ಸರಕಾರೀ ನಿರ್ಣಯಗಳೂ ಬಿದ್ದು ಹೋದದ್ದು ಚರ್ಚಿಲರ ಸರಕಾರದ ಮೇಲೆ ಅವಿಶ್ವಾಸ ತೋರಿಸಿದಂತೆಯೇ ಆಗಿದೆ. ಚರ್ಚಿಲರು ಇದಕ್ಕಾಗಿ, ತನ್ನ ಮೇಲೆ ಸದಸ್ಯರಿಗೆ ವಿಶ್ವಾಸವುಂಟೋ ಇಲ್ಲವೋ ಎಂದು ಪರೀಕ್ಷಿಸಲು ಒಂದು ನಿರ್ಣಯ ತರುವವರಿದ್ದಾರಾಗಿ ಕೇಳುತ್ತೇವೆ. ಇವರ ಒಗ್ಗಟ್ಟಿನ ಬಂಟರಾದ ರೂಸ್‌ವೆಲ್ಟರಿಗೂ ಅಮೇರಿಕದಲ್ಲಿ ಇದೇ ಅವಸ್ಥೆಯಾಗಿದೆ. ರೂಸ್‌ವೆಲ್ಟ್ ಸರಕಾರದ ಕೆಲ ನಿರ್ಣಯಗಳು ಅಮೆರಿಕನ್ ಕಾಂಗ್ರೆಸಿನಲ್ಲಿ ತಲೆ ಕೆಳಗಾಗಿವೆ. ವಿಲ್ಕಿ ಎದುರಾಳಿಯಾಗಿ ರೂಸ್‌ವೆಲ್ಟ್ ಸರಕಾರದ ಆಡಳಿತ ಪ್ರಯೋಜನವಿಲ್ಲವೆಂದು ಪಂಟಾ ಘೋಷ ಸಾರುತ್ತಿದ್ದಾರೆ. ಅಮೆರಿಕದ ಅಧ್ಯಕ್ಷ ಪದವಿಗೆ ಬೇಗನೇ ಚುನಾವಣೆ ಆಗಲಿದೆ. ರೂಸ್‌ವೆಲ್ಟರ ಮೇಲೆ ಜನತೆಗೆ ವಿಶ್ವಾಸವುಂಟೋ ಇಲ್ಲವೋ ಇದು ಈ ಸಲದ ಚುನಾವಣೆಯಲ್ಲಿ ಸ್ಪಷ್ಟವಾದೀತು. ಅಂತೂ ಮಿತ್ರಪಕ್ಷದ ಪ್ರಬಲ ನಾಯಕರಿಬ್ಬರು ಘಟನಾತ್ಮಕ ಗೊಂದಲಗಳಿಗೊಳಗಾಗಿರುವರು.

ಜಪಾನರ ಸೋಲೆ?

ಚರ್ಚಿಲರು ದೂರ ದೂರ ಪೂರ್ವದಲ್ಲಿ ಸೋಲಿಸಿದ ವಿಚಾರ ಹೇಳಿ, ಯೂರೋಪಿನ ರಣರಂಗದ ಕುರಿತು ತಾವು ಹೇಳಿದ ಮಾತಿನಲ್ಲಿರುವ ಜಾಡ್ಯವನ್ನು ಹೋಗಲಾಡಿಸಲು ಸಾಹಸಪಟ್ಟರು. ಪೇಸಿಫಿಕ್‌ನಲ್ಲಿ ಜಪಾನರೆದುರು ಹೋರಾಡಿ ಗೆದ್ದ ಅಮೆರಿಕನ್ ಸೈನಿಕರು ನಿಜವಾಗಿಯೂ ಪ್ರಶಂಸಾರ್ಹರು, ಚರ್ಚಿಲರು ಮಾತ್ರವಲ್ಲ ಜಗತ್ತೇ ಅವರ ಸಾಹಸ ಧೈರ್ಯಗಳನ್ನು ಕೊಂಡಾಡುವುದು. ಆದರೆ ಚರ್ಚಿಲರು ದೂರ ಪೂರ್ವದಲ್ಲಿ ಜಪಾನರು ಮೂಲೆಗೆ ಸೇರಿಸಿದ ಮಾತು ಹೇಳಿದ್ದೇ ತಡ, ಜಪಾನರು ಭಾರತದ ಗಡಿಯಲ್ಲಿ ಒಂದು ಹಜ್ಜೆ ಮುಂದಿಟ್ಟು ಮಣಿಪುರವನ್ನು ಪ್ರವೇಶಿಸಿಬಿಟ್ಟರು.'

ಹಿಂದೂ ಸಾಗರದಲ್ಲಿ ಬ್ರಿಟನು ನೌಕಾ ಸಾಮ್ರಾಜ್ಯ ಬೆಳಸಿದೆಯೆಂಬ ಗರ್ವ, ಗರ್ಳಗರ ದಶಂಬರದಂದು 'ಪ್ರಿನ್ಸ್ ಓಫ್ ವೆಲ್ಸ್ ಮತ್ತು 'ರಿಪಲ್ಸ್' ಮುಳುಗಿದ ಸಮಯದಲ್ಲಿಯೇ ಹೋಗಲಾಡಿಸಬೇಕಿತ್ತು. ಎಡ್ಮಿರಲ್ ಸಮರ್‌ವೆಲ್ಲರ ನಾಯಕತ್ವದಲ್ಲಿ ಪ್ರಬಲ ನೌಕಾಪಡೆ ಭಾರತ ಸಾಗರದಲ್ಲಿ ಸುಸಜ್ಜಿತವಾಗಿದೆಯೆಂದು ಚರ್ಚಿಲರು ಧೈರ್ಯವಿತ್ತಿದ್ದಾರೆ. ಚರ್ಚಿಲರೀ ಧೈರ್ಯದ ಮಾತುಕೇಳಿದ ಹೊತ್ತಿಗೇ ಮಣಿಪುರಕ್ಕೆ ಜಪಾನರು ಕಾಲಿಟ್ಟದ್ದು, ಅಸಾಮ್, ಅರಕಾನ್, ಬರ್ಮಾ ಗಡಿಗಳಲ್ಲಿ ಕಾಳಗ ಪ್ರಬಲವಾಗುತ್ತಿರುವ ವಿಚಿತ್ರವಾದ ಸುದ್ದಿಯನ್ನು ನಾವು ಕೇಳಬೇಕಾಗಿ ಬಂತು. ಅಮೆರಿಕದ ಬಾತ್ಮೀದಾರನೊಬ್ಬನು, ಜಪಾನೀಯರು ಭಾರತ ಸಾಗರದಲ್ಲಿ ತೀವ್ರ ಕಾಳಗವನ್ನು ಬೇಗನೆ ಕೊಡುವವರಿದ್ದಾರೆಂದೂ ಸೂಚಿಸಿದ್ದಾರೆ.

ಲೋಕಕ್ಕೂ ತಮಗೂ ಕ್ಷೇಮ—

ಅರಕಾನ್‌ನಲ್ಲಿ ಮಿತ್ರರು ವಿಜಯದ ಮೇಲೆ ವಿಜಯ ಪಡುವರೆಂದು ನಾವು ಕೇಳಿದ್ದೆವು. ಬರ್ಮಾವನ್ನು ಪುನಃ ನಾವು ಸ್ವಾಧೀನ ಮಾಡಿಕೊಳ್ಳಲೇ ಬೇಕು, ಮಾಡಿಕೊಳ್ಳುವೆವು ಎಂಬ ಧೀರೋದ್ಗಾರಗಳನ್ನು ನಾವು ಬಹಳ ಸಾರಿ ಆಲಿಸಿದ್ದೇವೆ, ಆದರೆ ಜಪಾನರು ಒಮ್ಮೇಲೆ ಮಣಿಪುರವನ್ನು ಪ್ರವೇಶಿಸಿದ್ದು ಜರ್ಮನಿ ಇನ್ನೂ ಅಭೇದ್ಯವಾಗಿರುವುದು; ಭಾರತದ ಗಡಿನಾಡಿನಲ್ಲಿ ಜಪಾನರ ಒತ್ತಡವಿಂದು ಪ್ರಬಲವಾಗುತ್ತಿರುವುದು—ಇದನ್ನೆಲ್ಲಾ ನೋಡಿದರೆ ಚರ್ಚಿಲರು ಎಂದು ಬಾಯಿ ಬಡಿಕತನಬಿಟ್ಟು ಕಾರ್ಯರಂಗಕ್ಕಿಳಿವರೋ ಎಂದು ಪ್ರಶ್ನಿಸಬೇಕಾಗಿದೆ. ಸಾವಿರಸಲ ಭರವಸೆ ಹೇಳುವುದಕ್ಕಿಂತ ಒಂದುಸಲ ಕಾರ್ಯತಃ ಮಾಡಿತೋರಿಸುವುದು ಒಳ್ಳೆಯದು. ಅತ್ತ ಹಿಟ್ಲರ್ ಹಂಗೇರಿ ರುಮೇನಿಯಾ ನುಂಗಿ ಒಂದಿದ್ದಾನೆ. ಇತ್ತ ಟೋಜೋ ಭಾರತದ ಪವಿತ್ರ ಭೂಮಿಗೆ ಕಾಲಿರಿಸಿದ್ದಾನೆ. ಮಿತ್ರರು ಶತ್ರುಗಳನ್ನು ಹೊಡೆದೋಡಿಸುವುದನ್ನು ಬಿಟ್ಟು ಅವರು ಮುಂದಡಿಯಿಡದಂತಾದರೂ ಮಾಡಿದರೆ ಲೋಕಕ್ಕೂ ಅವರಿಗೂ ಕ್ಷೇಮವುಂಟು.

ಜಪಾನರು ಮಣಿಪುರ ಪ್ರವೇಶಿಸಿದ ಮಾತ್ರಕ್ಕೆ, ಅವರು ಭಾರತವನ್ನು ಆಕ್ರಮಿಸಿದರೆಂದೇನೂ ಆಗುವುದಿಲ್ಲವೆಂಬುದಿಷ್ಟು ವಿಷಾದಕರವಿದೆ. ಜಪಾನರು ಸದ್ಯ ಮಣಿಪುರ ಪ್ರವೇಶಿಸಿ ಇಂಫಾಲ್ ಹಿಡಿವುದರಲ್ಲಿದ್ದಾರೆ. ೬೦೦ ಮೈಲು ವಿಸ್ತೀರ್ಣದ ಬರ್ಮಾ ಕೇಂದ್ರದಲ್ಲಿ ಚಟುವಟಿಕೆ ತೋರಿಸುತ್ತಿದ್ದಾರೆ. ಮಣಿಪುರದ ರೈಲ್ವೆದಾರಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಚೀನಕ್ಕೆ ಸಾಧನ ಸಾಮಗ್ರಿ ಯಾವುದೇ ಹಾದಿಯಿಂದಲೂ ಹೋಗದಂತೆ ಮಾಡಲು ಸಾಹಸ ಮಾಡುತ್ತಾರೆ. ಚೀನಕ್ಕೆ ನೆರವಾಗಬೇಕಾದರೂ ಜಪಾನರನ್ನು ಹೊಡೆದಟ್ಟಲೇಬೇಕು. ಭಾರತವನ್ನು ರಕ್ಷಿಸಬೇಕಾದರೂ ಜಪಾನರನ್ನು ಹಿಂದೂಡಬೇಕು.

ಇತ್ತೀಚೆಯ ಸುದ್ದಿಗಳು

ರಶ್ಯನ್ ಸೈನಿಕರು ಅನೇಕ ಕಡೆಗಳಲ್ಲಿ ಪ್ರುತ್ ನದಿಯನ್ನು ದಾಟಿ ರುಮೇನಿಯದ ಒಳನಾಡಿಗೆ ಪ್ರವೇಶಿಸಿದರೆಂದು ಹೇಳಲಾಗಿದೆ. ನಿಜವಾಗಿ ನೋಡಿದರೆ ರಶ್ಯನರೇ ಗಂಡುಸರು; ಇಂದಿನೀ ದ್ವಿತೀಯ ಮಹಾಯುದ್ಧದಲ್ಲಿ ರಶ್ಯನರು ಹೂಡಿದ ಹೋರಾಟ ಜಗತ್ತನ್ನೇ ಬೆರಗುಗೊಳಿಸಿದೆ. ಜರ್ಮನರನ್ನು ಇಷ್ಟರವರೆಗೆ, ಇಷ್ಟೊಂದು ಹದಗೊಳಿಸಿದ್ದೆಂದರೆ ರಶ್ಯನರೆಂದು ಜಗತ್ತೇ ಹೇಳುತ್ತದೆ. ರಶ್ಯ, ಇತರರಂತೆ ತನ್ನ ಪರಾಕ್ರಮವನ್ನು ಕೊಚ್ಚಿಕೊಳ್ಳದೆ, ತನ್ನ ಕಾರ್ಯ ಮಾಡುವುದರಲ್ಲಿ ಮಾತ್ರ ಮಗ್ನವಾಗಿದೆ. ಅದಾಗಿ ರಶ್ಯದ ಮೇಲೆ ಇಂದು ಜಗತ್ತಿನ ಅಭಿಮಾನ ಹರಿದಿದೆ. ರಶ್ಯ ಯುದ್ಧಾಂತ್ಯದಲ್ಲಿ, ಯುದ್ಧಾನಂತರ ಜಗತ್ತಿನಲ್ಲಿ ಖಂಡಿತ ಪ್ರಮುಖ ಪಾತ್ರ ವಹಿಸಿಯೇ ವಹಿಸುವುದು.

ಮಣಿಪುರ ಮೈದಾನಿನಲ್ಲಿ ಅನೇಕ ಜಪಾನೀ ಸೈನ್ಯಗಳು ನುಸುಳಿವೆಯೆಂದು ಸುದ್ದಿ. ಇಂಫಾಲಿನ ಮೇಲೆ ಪೆಟ್ಟು ಹಾಕಲು ಈ ತಂಡಗಳು ಸಾಹಸಮಾಡಲಿವೆಯೆಂದೂ ಹೇಳಲಾಗುತ್ತಿದೆ. ಇಲ್ಲಿ ಜಪಾನ್ ಸೈನಿಕರಿಗೂ ಮಿತ್ರ ಸೈನಿಕರಿಗೂ ಪ್ರಬಲ ಹೋರಾಟ ನಡೆದೇ ಇದೆ. ಬರ್ಮಾದ ರಣರಂಗದಲ್ಲಿ ವಿಮಾನ ಚಟುವಟಿಕೆಗಳು ಸದಾ ನಡೆಯುತ್ತಲೇ ಇರುವವು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 06/44.

ವಿ ಪಿ ಮೂಸಾ, ಕುಂಞಮ್ಮದೆ ಅಳಿಯ ತೆಂಕಣ ತ್ರಿಕರಪೂರು ಗ್ರಾಮದಲ್ಲಿರುವವ— } ಅರ್ಜಿದಾರ

ಮತ್ತು

1 ವಿ ಟಿ ಇಬ್ರಾಯಿನೆ 2 ವಿ ಟಿ ಕುಂಞಸನೆ 3 ವಿ ಟಿ ಖದೀಜಾಬಿ 4 ಹುಸನಕುಂಞ, ವಿ ಪಿ ಮಹಮ್ಮದ್ ಹಾಜಿ ಮಕ್ಕಳು ಸದಿ ಗ್ರಾಮದಲ್ಲಿರುವವರು— ಪ್ರತಿವಾದಿರು

ಮೃತಪಟ್ಟ ಕಾರ್ನರವ ವಿ ಪಿ ಮಹಮ್ಮದ ಹಾಜಿಯು ಮಂಗಳೂರು ಇಂಪೀರಿಯಲ್ ಬ್ಯಾಂಕಿನಲ್ಲಿ Loan no 7 219ನೇಗೆ ರೂ 225-0-0ಕ್ಕೆ ಇಟ್ಟ ನಗಗಳನ್ನು ಪಡಕೊಳ್ಳುವರೆ ತನಗೆ ವಾರ್ಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲ ಮಾಡಿದ ಅರ್ಜಿಯು ತಾರೀಕು 18-4-44ಕ್ಕೆ ಇಟ್ಟಿದೆಂತ ಈ ಮೂಲಕ ತಿಳಿಸೋಣಾಗಿಯದೆ

ಕಾಸರಗೋಡು 3-4-44 } **K Devadas Shenoy** ಅರ್ಜಿದಾರನ ಕಡೆ ವಕೀಲು.

ಮಂಗಳೂರು ಬಾಲಾಜಿ ಥಿಯೇಟರಿನಲ್ಲಿ

ಎರಡು ಅಪೂರ್ವ ನೃತ್ಯ ಪ್ರದರ್ಶನಗಳು

ಎಪ್ರಿಲ್ ೭ನೇ ಶುಕ್ರವಾರ ಸಾಯಂ ೭ ಮತ್ತು ೧೦ ಗಂಟೆಗೆ

ನರ್ತನ ಕಲಾಕೋವಿದರಾದ — **ಕುಲಕರ್ಣಿ ಶ್ರೀನಿವಾಸರು**

ಮಲಬಾರಿನ ಸುಪ್ರಸಿದ್ಧ ನರ್ತಕರಾದ — **ಆನಂದ ಶಿವರಾಮ**

ಹಾಗೂ ಉಷಾರಾಣಿ, ಸೀತಾದೇವಿ, ಗಜಲಕ್ಷ್ಮಿ, ವಾಸಂತಿಕಾ ಮೊದಲಾದ ಸುಂದರ ನರ್ತಕಿಯರೊಂದಿಗೆ

ನೃತ್ಯ ಭಾರತಿ ಆರ್ಕೆಸ್ಟ್ರಾ ಹಿಮ್ಮೇಳದಲ್ಲಿ

'ಮೇನಕಾ ವಿಜಯ' ನೃತ್ಯನಾಟಕ ಹಾಗೂ ಬೇರೆ ನರ್ತನಗಳನ್ನು ಪ್ರದರ್ಶಿಸುವರು

ದರ: 5-12-0, 3-6-0, 2-4-0, 1-2-0, ಮತ್ತು 0-9-0

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತಲ್ ಬಾರ್ ಸೋಪನ್ನೇ ಉಪಯೋಗಿಸಿರಿ

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ — ಉತ್ತಮವೂ ಬಾಳಿಕೆಯದೂ ಆಗಿದ ಬೇಗನೇ ನೊರೆ ಹೊರಡುತ್ತದೆ, ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ

PISTOL BRAND BAR SOAP

WANTED AGENTS IN S. KANARA DT.

Mangalore Stockists—M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಸ್ವದೇಶಾಭಿಮಾನಿ

ತಾರೀಕು 7-4-1944

ಬಂಗಾರದ ಬೆಲೆ

ಇತ್ತೀಚೆಗೆ ಕೆಲ ದಿನಗಳಿಂದ ಬಂಗಾರದ ಬೆಲೆ ಏರುತ್ತಾ ಹೋಗುತ್ತದೆ. ಕೇಂದ್ರ ಎಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಈ ಕುರಿತು ಚರ್ಚೆಗಳೂ ಆಗಿವೆ. ಸರಕಾರದ ಅಧಿಕಾರಿಗಳು ಆರ್ಥಿಕ ಮಂತ್ರಿಗಳು ಇದು ವ್ಯಾಪಾರಿಗಳ ವಹಿವಾಟಿನ ಕುತಂತ್ರವೆಂದು ದೂರಿದ್ದಾರೆ; ಸದಸ್ಯರು ಇದು ಸರಕಾರದ ದೋಷವೆಂದು ಸಂದೇಹಗೊಂಡಿದ್ದಾರೆ. ನಿಜವಾಗಿಯೂ, ಬಂಗಾರದ ಬೆಲೆ ಏರಲು, ಇದರ ವ್ಯಾಪಾರದಲ್ಲಿ ರಿಸರ್ವ್ ಬೇಂಕ್ ಒಫ್ ಇಂಡಿಯಾದವರು ಯಾವ ಧೋರಣೆ ವಹಿಸಿಕೊಂಡಿರುವರೆಂದು ತಿಳಕೊಳ್ಳಲು ಕಷ್ಟಸಾಧ್ಯವಾಗಿದೆ. ಬಂಗಾರದ ಬೆಲೆಯಲ್ಲಿರುವ ರಹಸ್ಯವೇನೆಂದು ಸದಸ್ಯರು ಆರ್ಥಿಕ ಮಂತ್ರಿಗಳೊಡನೆ ಎಷ್ಟು ಕೇಳಿದರೂ ಅವರು ಸತ್ಯಾಂಶ ಹೊರಗೆಡಹಿದಂತೆ ತೋರುವುದಿಲ್ಲ.

ರಿಸರ್ವ್‌ಬೇಂಕ್ ಒಫ್ ಇಂಡಿಯಾದವರು ಬಂಗಾರದ ಬೆಲೆ ನಿಶ್ಚಯಿಸಿಲ್ಲ. ಇದಕ್ಕೆ ಕಾರಣವೇನೆಂಬುದು ಎಲ್ಲರ ಪ್ರಶ್ನೆ. ಸಹಜವಾಗಿ ಬಂಗಾರವನ್ನು ವ್ಯಾಪಾರ ವಹಿವಾಟುಗಾರರ ಇಚ್ಛೆಯಂತೆ ಬೆಲೆ ಏರಿಸಬಿಟ್ಟರೆ ಅದರಿಂದ ನಮ್ಮ ದೇಶಕ್ಕೆ ನಷ್ಟವಿದೆ. ಬಂಗಾರದ ಬೆಲೆ ಏರಿದ್ದರಿಂದ, ವಿದೇಶಕ್ಕೆ ನಮ್ಮ ಹಣ ಹರಿದು ಹೋಗುವುದು. ಸಾಮಾನ್ಯ ಪರಿಸ್ಥಿತಿಯಲ್ಲಿ ಬಂಗಾರದ ಬೆಲೆ ನಿರ್ಧರಿಸದೆ ಬಿಡುವುದು ಯೋಗ್ಯವಾಗಬಹುದೇನೋ! ಆದರೆ ಇಂದಿನ ಅನಿಶ್ಚಿತ ಹಾಗೂ ಅಸಾಮಾನ್ಯ ಪರಿಸ್ಥಿತಿಯಲ್ಲಿ ಬಂಗಾರದ ಬೆಲೆಯನ್ನು ಬೇಕಾದಂತೆ ಏರಲು ಬಿಟ್ಟು ಬಿಟ್ಟರೆ ಅದು ಎಲ್ಲಿಗೆ ಮುಟ್ಟುವುದೆಂದು ಹೇಳಬರುವುದಿಲ್ಲ. ಹೀಗೆ ವಿಪರೀತವಾಗಿ ಬೆಲೆಯೇರಿದರೆ ರಾಷ್ಟ್ರದ ಸಂಪತ್ತು ಶೋಷಣೆಯಾಗುವುದು.

ಬಂಗಾರ ಮತ್ತು ನೋಟುಗಳ ವಹಿವಾಟಿನಲ್ಲಿ ನೋಟಿನ ಅತಿಪ್ರಸರಣ ತಡೆದಂತಾಗುವುದೆಂದು ಸರಕಾರ ಹೇಳಬಹುದು. ಆದರೆ ಲೋಹಗಳ ವಿಷಯು ಸರಕಾರದ ನಿಶ್ಚಿತ ಧೋರಣೆ ಇನ್ನೂ ಅರ್ಥವಾಗಲೊಲ್ಲದು. ಮಾರ್ಕೆಟು ಬೆಲೆಗಿಂತಲೂ ಕಡಿಮೆ ಕ್ರಯದಲ್ಲಿ ೧೫೦ ಕೋಟಿ ಬೆಲೆಯ ಬೆಳ್ಳಿಯನ್ನು ಭಾರತದೇಶವು ಯುದ್ಧ ಪ್ರಯತ್ನಕ್ಕೆಂಬ ನೆವನದಿಂದ ಕೊಡಬೇಕಾಯಿತು. ಹಾಗಾದರೆ ಬ್ರಿಟನು- ಅಮೇರಿಕಗಳಾದರೂ- ಇದೇ ಕಾರಣಕ್ಕಾಗಿ ತಮ್ಮಲ್ಲಿನ ಬಂಗಾರವನ್ನು ನಮ್ಮ ದೇಶಕ್ಕೆ ಹೀಗೇಕೆ ಕೊಡಬಾರದು? ಇಂದೂ ಕೂಡಾ ಲಂಡನಿನಲ್ಲಿ ಮತ್ತು ಭಾರತದಲ್ಲಿ ಪವನು ಡಾಲರುಗಳ ಬೆಲೆಗೆ ಇಷ್ಟು ಒಂದು ಅಂತರ ಏಕಿರಬೇಕು?

ಬಂಗಾರದ ಬೆಲೆ ಏರುವುದರಿಂದ ಭಾರತಕ್ಕೆ ನಷ್ಟವೂ, ವಿದೇಶೀಯರಿಗೆ ಲಾಭವೂ ಆಗುತ್ತದೆ. ಸರಕಾರ ಹೀಗಾಗಲು ಆಸ್ಪದ ಕೊಡುವುದು ನ್ಯಾಯವಲ್ಲ.

ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಅರ್ಥಶಾಖೆಯ ಕಾರ್ಯದರ್ಶಿಗಳು ಕೊಟ್ಟ ಹೇಳಿಕೆಯನ್ನು ಖಂಡಿಸುತ್ತಾ ಮುಂಬ್ಬಾ ಬುಲಿಯನ್ ಎಕ್ಸ್‌ಚೇಂಜಿನ ಕಾರ್ಯದರ್ಶಿಗಳು ಹೀಗೆಂದು ಹೇಳಿಕೆಯೊಂದನ್ನು ಕೊಟ್ಟಿದ್ದಾರೆ.

"ರಿಸರ್ವ್ ಬೇಂಕಿನವರು ಬಂಗಾರದ ಬೆಲೆಯಲ್ಲಿ ಬದಲಾವಣೆ ಮಾಡಿದ್ದರಿಂದಲೇ ಬಂಗಾರದ ಬೆಲೆ ಏರಲು ಮತು ಕೆಲವರು ಆ ಪರಿಸ್ಥಿತಿಯಿಂದ ಲಾಭ ಪಡೆಯಲು ಅವಕಾಶ ಸಿಕ್ಕಿತೆಂದು ಬುಲಿಯನ್ ಎಕ್ಸ್‌ಚೇಂಜಿನ ಕಾರ್ಯದರ್ಶಿಗಳ ಅಭಿಪ್ರಾಯವಾಗಿದೆ. ರಿಸರ್ವ್ ಬೇಂಕಿನವರು ಹೀಗೆ ಮಾಡದೆ, ಬಂಗಾರದ ಬೆಲೆಯನ್ನು ಹಿಂದಿನಂತೆ ೧ ತೊಲೆಗೆ ೭೧ ರೂಪಾಯಿಯಂತೆ ಮಾರುತ್ತಾ ಇದೆಯೆಂದೂ, ಇದೇ ಪ್ರಕಾರ ಮುಂದಾದರೂ ಮಾರಾಟ ಮಾಡಲಾಗುವುದೆಂದೂ ಒಂದು ಪ್ರಕಟಣೆ ಹೊರಡಿಸಬೇಕಾಗಿತ್ತು. ಇದರಿಂದ ಜನರಿಗೆ ಭರವಸೆ ಹುಟ್ಟಿ ಅವರಲ್ಲಿ ಧೈರ್ಯ ಹುಟ್ಟುತಿತ್ತು. ಈಗಲಾದರೂ ಬಂಗಾರದ ಬೆಲೆ ನಿರ್ಧರಿಸಿ ಪ್ರತಿದಿವಸ ನಿರ್ದಿಷ್ಟಪ್ರಮಾಣದ ಬಂಗಾರ ರಿಸರ್ವ್ ಬೇಂಕಿನವರು ಮಾರಾಟ ಮಾಡುವಂತೆ ಮಾಡುವುದು ಸರಕಾರದ ಕರ್ತವ್ಯ."

ಜಿಲ್ಲಾ ಸಮಾಚಾರಗಳು

ಕಾಸರಗೋಡು

ಕಾಸರಗೋಡು ತಾಲೂಕು ಗ್ರಾಮ ಸೇವಾ ಸಂಘದ ಕಾರ್ಯಕಾರೀ ಮಂಡಳಿಯ ಸಭೆಯೊಂದು ಕಳೆದ ತಾ. ೩೧ರಂದು ನೀಲೇಶ್ವರದಲ್ಲಿ ಶ್ರೀ. ವೇಲತ್ ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿ, ರಾಜಕೀಯ ಕಾರಣಗಳಿಂದಾಗಿ ಸಂಕಷ್ಟಕೊಳ್ಳಗಾದವರಿಗೆ ಸಹಾಯ ಮಾಡಲು ಪೊಲಿಟಿಕಲ್ ಸಫರರ್ ಲೀಗ್ ಎಂಬುದನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಎರಡು ನೂಲುವ ಪರಿಶೀಲನ ಕೇಂದ್ರಗಳನ್ನೂ ಕೈಯಿಂದ ಕಾಗದ ತಯಾರಿಸುವ ಒಂದು- ಕೇಂದ್ರವನ್ನೂ ತೆರೆಯಲು ತೀರ್ಮಾನವಾಗಿದೆ.

ಅಕ್ಕಿ

ನೀಲೇಶ್ವರದಲ್ಲಿ ಸರಿಯಾಗಿ ಅಕ್ಕಿ ಸಿಗದಿರುವುದರಿಂದ ಜನರು ರಾಗಿ ಮತ್ತು ಇತರ ಧಾನ್ಯಗಳನ್ನು ತಿನ್ನುತಿದ್ದಾರೆ. ಇವುಗಳ ಕ್ರಯವೂ ವಿಪರೀತ ಏರಿದೆ.

ಜಾನುವಾರು ರೋಗ

ಇದು ಈ ಕಡೆಯಲ್ಲಿ ವಿಪರೀತ ಹಬ್ಬುತ್ತಾ ಇದೆ. ದಾಕು ಹಾಕುವುದು ನಡೆಯುತ್ತಿದೆ. ಆದರೆ ಇದು ಸಾಕಷ್ಟು ಭರದಿಂದ ನಡೆಯದಿರುವುದರಿಂದ ರೈತರಿಗೆ ಬೇಕಾದಷ್ಟು ಪ್ರಯೋಜನ ಸಿಗುವುದಿಲ್ಲ.

ಕಾಸರಗೋಡಿಗೆ ಅಕ್ಕಿ

ಕಾಸರಗೋಡು ತಾಲೂಕಿಗೆ ತಿಂಗಳಿಗೆ ೨, ೭೦೦ ಟನ್ನಿನಂತೆ ಅಕ್ಕಿ ಮಂಜೂರಾಗಿದೆ. ತಿರುಚಿನ್ನಾಪಳ್ಳಿ ನೆಲ್ಲೂರುಗಳಿಂದ ಎಪ್ರಿಲ್ ತಿಂಗಳ ಮೊದಲ್ಗೊಂಡು ಇಷ್ಟು ಅಕ್ಕಿಯನ್ನು ಕಳುಹಿಸುವರೆ ಪ್ರಾಂತಿಕರೆವೆನ್ಯೂ ಬೋರ್ಡಿನವರು ನಿರ್ಧರಿಸಿದ್ದಾರೆ.

ಕುಲಕರ್ಣಿ ಶ್ರೀನಿವಾಸರ ನೃತ್ಯಗಳು

ತನ್ನ ನೃತ್ಯ ಮಂಡಲದೊಡನೆ ಕುಲಕರ್ಣಿಯವರು ಮಡಿಕೇರಿ ವಿರಾಜಪೇಟೆ, ಸೋಮವಾರ ಪೇಟೆ ಈ ಮೂರು ಊರುಗಳಲ್ಲಿ ಅಪೂರ್ವ ನೃತ್ಯಗಳನ್ನು ಪ್ರದರ್ಶಿಸಿದರು. ತಾ. ೨೮-೩-೪೪ನೇ ದಿನ ಮಡಿಕೇರಿ ಹ್ಯಾಸ್ಕೂಲು ಹಾಲಿನಲ್ಲಿ ನಡೆದ ಪ್ರಥಮ ಕಾರ್ಯಕ್ರಮಕ್ಕೆ ಕೊಡಗಿನ ಚೀಫ್ ಕಮೀಶನರೂ ಕೊಡಗಿನ ದೊಡ್ಡ ದೊಡ್ಡ ಕಾಫಿ ತೋಟಗಳ ಒಡೆಯರೂ ದೊಡ್ಡ ಅಧಿಕಾರಿಗಳೂ ಊರಿನ ಪ್ರಮುಖರೂ ಆಗಮಿಸಿದ್ದರು. ತಾ. ೨೫ನೇ ದಿನ ಅದೇ ಹಾಲಿನಲ್ಲಿ ಬೇರೆ ಹೊಸ ನಾಟ್ಯ ಪ್ರದರ್ಶನವಿತ್ತು. ಚಂದ್ರಕಿನ್ನರ ನೃತ್ಯ ನಾಟಕದ ವೇಷಭೂಷಣಗಳೂ ನಾಟ್ಯ ವೈಖರಿಯು ನೆರೆದ ಜನರಿಂದ ಬಹಳ ಮೆಚ್ಚುಗೆಯನ್ನು ಪಡೆದವು. ಮಡಿಕೇರಿಯ ಹ್ಯಾಸ್ಕೂಲು ವಿದ್ಯಾರ್ಥಿಗಳು ಕೊಡಗಿನ ಹಳ್ಳಿಯ ನೃತ್ಯಗಳ ಮಾದರಿಗಳನ್ನು ತೋರಿಸಿದರು. ತಾ. ೨೬ನೇ ದಿನ ವಿರಾಜಪೇಟೆಯ ಹ್ಯಾಸ್ಕೂಲು ಹಾಲಿನಲ್ಲಿ ನಡೆದ ಕಾರ್ಯಕ್ರಮವನ್ನು ಮೆಚ್ಚಿ ಅಲ್ಲಿಯ ಹೆಡ್‌ಮಾಸ್ಟರರಾದ ಶ್ರೀ. ಶೆಣೈ ಅವರು ತುಂಬ ಪ್ರಶಂಸನೀಯ ಮಾತನಾಡಿದರು. ಡಿಸೆಂಬರ ಮೊದಲ ವಾರದಲ್ಲಿ ನಡೆಯುವ ಹುತ್ತರಿ ಹಬ್ಬಕ್ಕೆ ಶ್ರೀ. ಎಸ್. ಎನ್ ರಾಮಮೂರ್ತಿಯವರು ಶ್ರೀನಿವಾಸರನ್ನು ಆಹ್ವಾನಿಸದರು. ತಾ. ೨೭ಕ್ಕೆ ಸೋಮವಾರಪೇಟೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಸುತ್ತಲಿನ ಕಾಫಿತೋಟಗಳ ಒಡೆಯರೆಲ್ಲ ಆಗಮಿಸಿದರು. ಅಂದು ಸ್ಕೂಲು ಹಾಲಿನ ಸ್ಥಳ ಸಾಲದೆ ಕೆಲವರು ನಿರಾಶರಾಗಬೇಕಾಯಿತು. ತಾ. ೨೮ರಂದು ಅಲ್ಲಿಯ ಪ್ರಸಿದ್ಧ ಪ್ಲಾಂಟರರಾದ ಶ್ರೀ. ಡಿ. ಸಿದ್ದಣ್ಣನವರು ಶ್ರೀಯುತ ಟಿ. ಸಾಕಮ್ಮನವರ ತೋಟದ ಪರಿವಾರದ ಜನರಿಗೋಸ್ಕರ ಒಂದು ಸ್ವತಂತ್ರ ಪ್ರದರ್ಶನ ಏರ್ಪಡಿಸಿದರು. ಅಂದು ಮಂಡಲಕ್ಕೆಲ್ಲ ಅವರ ರಾಜಾತಿಥ್ಯವು ದೊರೆಯಿತಲ್ಲದೆ ಒಂದು ಚಿನ್ನದ ಪದಕವನ್ನು ಕೂಡ ತಮ್ಮ ಮಧುರ ಸ್ಮರಣೆಯೆಂದು ಕೊಟ್ಟರು. ತಾ. ೨೯ಕ್ಕೆ ಮಂಡಲವು ಶ್ರೀ. ಹೆಗಡೆಯವರ ಆಮಂತ್ರಣದ ಮೇರೆಗೆ ಧರ್ಮಸ್ಥಳಕ್ಕೆ ಹೊರಟಿತು.

ತಾ. ೩೦ನೇ ರಾತ್ರೆ ಧರ್ಮಸ್ಥಳದಲ್ಲಿ ಕಾರ್ಯಕ್ರಮವಿತ್ತು. ಶ್ರೀ. ಹೆಗಡೆಯವರು ಸಂತೋಷದಿಂದ ಬರಮಾಡಿಕೊಂಡು ತುಂಬಾ ಪ್ರೋತ್ಸಾಹ ಕೊಟ್ಟರು.

ತಾ. ೨-೪-೪೪ರಂದು ಪುತ್ತೂರಲ್ಲಿ ೨ ಕಾರ್ಯಕ್ರಮಗಳಿದ್ದವು. ಕಾರ್ಯಕ್ರಮದ ಕೊನೆಗೆ ಶ್ರೀ. ಶಿವರಾಮ ಕಾರಂತರು ಮಾತನಾಡಿದರು. ಈ ದಿನ ಸಂಜೆಗೆ ಬಾಲಾಜಿ ಟಾಕೀಸಿನಲ್ಲಿ ಶ್ರೀ. ಕುಲಕರ್ಣಿ ಶ್ರೀನಿವಾಸ ಮತ್ತು ಅವರ ನೃತ್ಯ ಪಂಗಡದವರ ನೃತ್ಯಕಾರ್ಯಕ್ರಮಗಳಿವೆ.

ರೈಲ್ವೆ ದರ ಹೆಚ್ಚಿಲ್ಲ

ರೈಲ್ವೆ ದರವನ್ನು ಶೇಕಡ ೨೫ರಷ್ಟು ಏರಿಸಬೇಕೆಂದು ತಂದ ಠರಾವು ಬಿದ್ದು ಹೋದುದರಿಂದ ಸರಕಾರ ಕೊನೆ ನಿರ್ಣಯ ಮಾಡುವ ವರೆಗೆ ದರ ಏರಿಸುವುದಿಲ್ಲವೆಂದೀಗ ಪ್ರಕಟಿಸಿದೆ.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಿಗ್ಗೆ ೬-೨೫.	ರಾತ್ರಿ ೭-೩೦.
ಪಟೆಲ್ ಕನ್ನಾನ್ನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಿಗ್ಗೆ ೯-೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ ೭-೫.	ಸಾಯಂ. ೭.

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು. ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಆದರಿಂದ ನೋವು ಕಡಿಮೆಯಾಗುತ್ತದೆ. ರೆಶಿಗೆ ಒಣಗುತ್ತದೆ. ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತವೆ.

ಯಾವಾಗಲೂ ಜಾಂಬುಕನ್ನು ಉಪಯೋಗಿಸಿರಿ

ZAM-BUK

ಪ್ರಾಣಕೊಬ್ಬು ವಿರಹಿತವಾದುದು

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಭತ್ತದ ಕುರಿತು ಜಿಲ್ಲಾ ಕಲೆಕ್ಟರರ ಪ್ರಕಟಣೆ

ಜಿಲ್ಲೆಯಲ್ಲಿ ಅಕ್ಕಿ ಭತ್ತ ದಾಸ್ತಾನು ಮಾಡುವ ವಿಷಯದಲ್ಲಿ ಜಿಲ್ಲಾ ಕಲೆಕ್ಟರರು ಹೀಗೆಂದು ಪ್ರಕಟಣೆ ಕೊಟ್ಟಿದ್ದಾರೆ

"ಜಿಲ್ಲಾ ಕಲೆಕ್ಟರರಿಂದ ಪರ್ಮಿಟು ಪಡಕೊಂಡು ಮಂಗಳೂರು ನಗರದಲ್ಲಿರುವ ಭೂಮಾಲಿಕರು ತಮ್ಮ ಸ್ವಂತದ ಮನೆ ಖರ್ಚಿಗೆ ಒಂದು ವರ್ಷದ ಮಟ್ಟಿನ ಅಕ್ಕಿ ಭತ್ತವನ್ನು ದಾಸ್ತಾನು ಇಡಬಹುದು ಇತರರು ಒಂದು ತಿಂಗಳಿಗೆ ಬೇಕಾಗುವಷ್ಟು ಮಾತ್ರ ಅಕ್ಕಿ ಭತ್ತ ಸಂಗ್ರಹಿಸಿಡಬಹುದು ಇಲ್ಲವಾದರೆ ಇದು ಆಕ್ಷೇಪಾರ್ಹವೆಂದು ಗಣಿಸಲಾಗುವುದು ಹೀಗೆ ಪರ್ಮಿಟು ಹೊಂದಿ ಸಂಗ್ರಹಿಸಿಟ್ಟ ಅಕ್ಕಿ ಭತ್ತಗಳಿಗೆ ಸದ್ಯ ಸರಕಾರವು ಕೈಹಾಕುವುದಿಲ್ಲ ಆದರೆ ಕ್ರಮೇಣ ಅಗತ್ಯ ಕಂಡುಬಂದಾಗ ಮಾತ್ರ ಸ್ವಾಧೀನ ಮಾಡಿಕೊಳ್ಳುವುದು. ಕಾಸರಗೋಡಿನ ರೇಶನಿಂಗ್ ಪದ್ಧತಿ ಜಾರಿಯಲ್ಲಿರುವ ಪ್ರದೇಶಕ್ಕೂ ಇದು ಅನ್ವಯಿಸುತ್ತದೆ

ಒಂದು ತಾಲೂಕಿನಲ್ಲಿ ವಾಸಮಾಡಿಕೊಂಡಿದ್ದು ಬೇರೊಂದು ತಾಲೂಕಿನಲ್ಲಿ ಆಸ್ತಿಯಿರುವ ಭೂಮಾಲಿಕರು ಅರ್ಜಿ ಕಳುಹಿಸಿದರೆ ಅವರ ಆವಶ್ಯಕತೆಗಳ ಬಗ್ಗೆ ಅಕ್ಕಿ ವ ಭತ್ತಗಳನ್ನು ಸ್ಥಳಾಂತರಗೊಳಿಸಲು 'ಪರ್ಮಿಟು' ಕೊಡಲಾಗುವುದು ಇತರರ ಬಗ್ಗೆ ಆಯಾ ತಾಲೂಕಿನ ತಹಶಿಲ್ದಾರರು ಆಸ್ತಿ ಇರುವ ತಾಲೂಕಿನವಲ್ಲೂ, ಆಸ್ತಿದಾರನು ಇರುವ ತಾಲೂಕಿನಿಂದಲೂ ಪರ್ಮಿಟ ಬರೆದು ಕೊಡುವರು ಇಂತಹ ಅಪೇಕ್ಷೆ ಪಡುವ ಭೂಮಾಲಿಕರು ತಮ್ಮ ಉಳಿತಾಯದ ಅಕ್ಕಿ ಭತ್ತಗಳನ್ನು ಜಿಲ್ಲಾ ಕೋಪರೇಟಿವ್ ರಖಂ ಸ್ಟೋರಿಗೆ ಅಥವಾ ಅದರ ಶಾಖೆಗಳಿಗೆ ಇಲ್ಲವೇ ಸರಕಾರಿ ಅಧಿಕಾರಿಗಳಿಗೆ ಒಪ್ಪಿಸಿದ ದಾಖಲೆಗಳನ್ನು ತಯಾರಿಸಿ ತನ್ನ ವೆಚ್ಚಕ್ಕೆ ಬೇಕಾದ ಅಕ್ಕಿ ಭತ್ತಗಳ ಯಥಾರ್ಥ ಪ್ರಮಾಣದ ಪಟ್ಟಿಯನ್ನು ಕೊಟ್ಟು ಹುಕುಂ ಪಡಕೊಳ್ಳಬೇಕು

ಭೂಮಾಲಿಕರು ತಮ್ಮ ಸ್ವಂತದ ಅಕ್ಕಿ ಭತ್ತಗಳನ್ನು ಜೀವನಾವಶ್ಯಕದ ಬಗ್ಗೆ ಒಂದು ತಾಲೂಕಿನ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯಲು ಅಥವಾ ಇನ್ನೊಂದು ತಾಲೂಕಿಗೆ ಸಾಗಿಸಲು, ಎಲ್ಲಾ ಉಳಿತಾಯದ ಅಕ್ಕಿ ಭತ್ತಗಳನ್ನು ಜಿಲ್ಲಾ ಸ್ಟೋರ್ಸ್, ರಿಕ್ವಿಸಿಶನ್ ಅಧಿಕಾರಿಗಳಿಗೆ ಇಲ್ಲವೇ ಕಲೆಕ್ಟರರ ಅಜ್ಞೆ ಮೇರೆಗೆ ಒಪ್ಪಿಸಿದ ಅಧಿಕಾರ ಪತ್ರವನ್ನು ತಹಶಿಲ್ದಾರರಿಂದ ಸರ್ಟಿಫಿಕೇಟು ರೂಪವಾಗಿ ಪಡೆದ ಸಾಗಿಸಬೇಕು

ಉಳಿತಾಯದ ಅಕ್ಕಿ ಭತ್ತ ಇಲ್ಲವೇ ಸ್ವಾಧೀನ ಪಡಿಸಿದ ಅಕ್ಕಿ ಭತ್ತಗಳನ್ನು ದಕ್ಷಿಣ ಕನ್ನಡ ಕೋಪರೇಟಿವ್ ಸೆಂಟ್ರಲ್ ಸ್ಟೋರ್ಸಿಗೆ ಇಲ್ಲವೇ ಅದರ ಇತರ ಶಾಖೆಗಳಿಗೆ ಸಾಗಿಸುವ ಭೂಮಾಲಿಕನು ಸಂಬಂಧಪಟ್ಟ ತಹಶಿಲ್ದಾರರ, ಉಪ ತಹಶಿಲ್ದಾರರ ಇಲ್ಲವೇ ರಿಕ್ವಿಸಿಶನಿಂಗ್ ಅಧಿಕಾರಿಗಳ, ರೆವೆನ್ಯೂ ಇನ್ಸ್‌ಪೆಕ್ಟರರ, ಗ್ರಾಮಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಆಜ್ಞಾ ಪತ್ರ ಪಡಕೊಳ್ಳಬೇಕು. ಪರ್ಮಿಟು ದುರುಪಯೋಗವಾಗದಂತೆ ಮುಂಜಾಗತೆ ಏವಸೆ ಮಾಡಲಾಗಿದೆ. ಸಾಗಿಸುವ ಅಕ್ಕಿ ಭತ್ತಗಳ ಜತೆಗೆ ಅಧಿಕಾರಿಗಳ ಪರ್ಮಿಟು ಪತ್ರ ಇಲ್ಲದಿದ್ದರೆ ಆ ಅಕ್ಕಿ ಭತ್ತಗಳನ್ನು ಜಪ್ತಿಮಾಡಿ ಸ್ವಾಧೀನ ಪಡಿಸಲಾಗುವುದು.

ಲೇಬರ್ ಕನ್ಸಿಲಿಯೇಶನ್ ಆಫೀಸರರು

ಕೆಲಸಗಾರ ಹಾಗೂ ಮಾಲಿಕರ ವಿವಾದ ತೀರ್ಮಾನಿಸಲು ಮಲಬಾರ್ ದಕ್ಷಿಣ ಕನ್ನಡಗಳ ಲೇಬರ್ ಕನ್ಸಿಲಯೇಶನ್ ಆಫೀಸರ್ ಶ್ರೀ ಪಿ ಎಸ್ ಮೊಸೆಸರು ತಾ ೨೩ರಂದು ಮಂಗಳೂರಿಗೆ ಬಂದಿದ್ದು ತಾ ೩೦ರ ವರೆಗೆ ಇಲ್ಲಿನ ಪರಿಸ್ಥಿತಿ ಪರಿಶೀಲಿಸಿ ಬೀಡಿ ನೇಯಿಗೆ ಪ್ರೆಸ್ ಯುದ್ಧ ಬಲೆ ನೇಯುವ ಹೆಂಗಸರು, ಹಂಚು ಕೆಲಸಗಾರರನ್ನು ಭೇಟಿಯಾಗಿ ನಗರದ ಹಲವು ಕಾರ್ಖಾನೆಗಳನ್ನು ಸಂದರ್ಶಿಸಿ, ಅವಶ್ಯ ಮಾಲಕರನ್ನು ಕಂಡು ಕಲ್ಲಿಕೋಟೆಗೆ ತಾ ೧ರಂದು ತೆರಳಿದ್ದಾರೆ ಶ್ರೀ ಬಿ ಎ, ಕಕ್ಕಿಲ್ಲಾಯರು ಕೆಲಸಗಾರರ ಕೇಳಿಕೆಗಳನ್ನು ಆಫೀಸರರಿಗೆ ತಿಳಿಸಿದರು

ಪುನಃ ಕೆಲಸ ಕೊಟ್ಟರು

ಗವರ್ನಮೆಂಟ್ ಟ್ರೇಡ್ಸ್ ಸ್ಕೂಲಿನಲ್ಲಿ ಯುದ್ಧ ಬಲೆ ನೇಯುವ ಹೆಂಗಸರಲ್ಲಿ ನಾಲ್ವರನ್ನು ಕೆಲಸದಿಂದ ತೆಗೆದು ಹಾಕಿದ್ದು, ಆ ವಿಷಯ ನಿಷೇಧ ಸೂಚಿಸಿ ಮಂಗಳೂರಿನ ಬೇರೆ ಬೇರೆ ಮಜೂರ ಸಂಘಗಳು ಲೇಬರ್ ಕನ್ಸಿಲಿಯೇಶನ್ ಆಫೀಸರರಿಗೆ ತಂತಿ ಬಿಟ್ಟಿದ್ದು ಅವರು ಇಲ್ಲಿಗೆ ಬಂದವರು, ಆ ಸ್ಕೂಲಿನ ಸುಪರಿಂಟೆಂಡೆಂಟರನ್ನು ಕಂಡು ಮಾತನಾಡಿದ್ದು ಈಗ ಕೆಲಸದಿಂದ ತೆಗೆದು ಹಾಕಿದ ನಾಲ್ವರಿಗೂ ಪುನಃ ಕೆಲಸಕ್ಕೆ ತೆಗೆದು ಕೊಳ್ಳುವಂತೆ ಆಗಿದೆ

ಬೊಕ್ಕಪಟ್ಣ

ಮೊಗವೀರ ಲಿಟರರಿ ಯೂನಿಯನ್

ಈ ಮೇಲ್ಕೋರುವ ಸಂಘದ ಮಹಾಸಭೆಯು ತಾ ೨-೪-೪೪ನೇ ಆದಿತ್ಯವಾರ ಶ್ಯಾಮ ಘಂಟೆ ೩ಕ್ಕೆ ಸರಿಯಾಗಿ ಸಂಘದ ಆಶ್ರಯದಲ್ಲಿ ನಡೆಸಿಕೊಂಡು ಬರುವ ಮೊಗವೀರ ಧರ್ಮಾರ್ಥ ರಾತ್ರಿ ಶಾಲಾ ಕಟ್ಟಡದ ವರಾರದಲ್ಲಿ ಸಾಹುಕಾರ್ ಮಲ್ಪೆ ಶ್ರೀಮಾನ್ ಯಮ್ ಕೆ ಬಸಪ್ಪನವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ವರ್ಷದ ಕಾರ್ಯ ಕಲಾಪಗಳಿಗೆ ಯೋಗ್ಯ ೨೯ ಮೆಂಬರರ ಒಂದ ಆಡಳಿತೆ ಸಮಿತಿಯು ಚುನಾಯಿಸಲ್ಪಟ್ಟಿತು ಸಾಧಾರಣ ೭೫ಕ್ಕೆ ಮಿಕ್ಕಿ ಮೆಂಬರರು ಹಾಜರಾಗಿದ್ದರಲ್ಲದೆ, ಸಭೆಗೆ ಅಂದಿನ ಅಧ್ಯಕ್ಷರು ಪೋಷಕರಾಗಿ ಸೇರಿ ೨೫ ರೂಪಾಯಿಯನ್ನು ಕೊಟ್ಟಿರುವರೆಂಬುದಾಗಿ ತಿಳಿಯುವರೆ ತುಂಬಾ ಸಂತೋಷ ಪಡುತ್ತೇವೆ

ಹೊಸ ಆರೋಗ್ಯಾಧಿಕಾರಿಗಳು

ದ ಕ ಜಿಲ್ಲಾ ಬೋರ್ಡಿನ ಆರೋಗ್ಯಾಧಿಕಾರಿಗಳಾಗಿ ಕೊಯಮುತ್ತೂರಿನ-ರಿಜರ್ವ ಡ್ಯೂಟಿಯಲ್ಲಿರುವ ಫಸ್ಟ್ ಕ್ಲಾಸ್ ಹೆಲ್ತ್ ಆಫೀಸರ್ ಡಾ। ವಿ ರಾಮ ಅಯ್ಯರ್ ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು

ನಗರ ಸಭೆ

ಮಂಗಳೂರು ನಗರ ಸಭೆಯ ಸಾಮಾನ್ಯ ಸಭೆಯೊಂದು ತಾ ೩ರಂದು ಚೇರ್ಮೇನ್ ಜ। ಪುತ್ತೂರ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು

ಸಭಾಂತ್ಯದಲ್ಲಿ ಉಪ ಸಮಿತಿಗಳಿಗೆ ಸದಸ್ಯರನ್ನು ಆರಿಸುವ ವಿಷಯದಲ್ಲಿ ಚರ್ಚೆ ನಡೆಯಿತು.

"ನಗರದ ಮಲ ಕೊಳಕುಗಳನ್ನು ತೆಗೆದು ದೂರಕ್ಕೊಯ್ಯಲು ಮೂರು ಪೆಟ್ರೋಲ್ ಲಾರಿಗಳನ್ನು ಕೊಡಲು ಕಲೆಕ್ಟರರು ಒಪ್ಪಿದ್ದಾರೆ ಎಂದು ಕಮಿಶನರು ಹೇಳಿದರು ಸಭೆಯಲ್ಲಿ ತುಂಬ ಕರತಾಡನವಿತ್ತು.

ಬೊಕ್ಕಪಟ್ಣ ಆಯುರ್ವೇದಿಕ್ ಆಸ್ಪತ್ರೆಯವರು ಚಿಕಿತ್ಸೆಯಲ್ಲಿ ಒಂದು ಶಾಖೆ ತೆರೆಯಲು ಕೇಳಿದ ರೂ ೫೦೦ರ ಸಹಾಯ ಮಂಜೂರಾಯಿತು

ಡಿಪ್ರೆಸ್ಡ್ ಕ್ಲಾಸ್ ಮಿಷನ್ ಭಗಿನಿ ಸಮಾಜ ಕುರುಡರಿಗಾಗಿರುವ ಮದ್ರಾಸಿನ ಸಂಸ್ಥೆ ಇವುಗಳು ಕೇಳಿದ ಧನ ಸಹಾಯದ ವಿಷಯ ಹಾಗೂ ನಗರ ಸಭೆಯ ಅಂದಾಜು ಪಟ್ಟಿಯಲ್ಲಿ ನಷ್ಟವಿದೆಯೆಂದು ಆಸ್ತಿ ತೆರಿಗೆ ಹೊರಿಸಿ ಅದನ್ನು ಭರ್ತಿಮಾಡಬೇಕಂದೂ ಪ್ರಾಂತಿಕ ಸರಕಾರದವರು ಸೂಚಿಸಿದನ್ನೂ ವಿಚಾರಿಸುವರೆ ಬಜೆಟ್ ಕಮಿಟಿಗೆ ಒಪ್ಪಿಸಲಾಯಿತು -

ನಗರದಲ್ಲಿ ಪಾರಕ್ಕೊಮ್ಮೆ ಗಾಡಿಯಲ್ಲಿ ಬರುವ ವಾಚನಾಲಯಗಳನ್ನು ನಗರದ ಹಲವೆಡೆಗಳಲ್ಲಿ ತೆರೆವುದರ ಕುರಿತು ಪರ್ಯಾಲೋಚಿಸಲು ಒಂದು ಸಮಿತಿ ರಚಿತವಾಯಿತು

ಮುನ್ಸಿಪಲ್ ಕೌನ್ಸಿಲ್ ಜಿಲ್ಲಾ ಕಲೆಕ್ಟರರ ಭೇಟಿಯಾದರು

ಕಳೆದ ಬುಧವಾರ ನಗರ ಸಭೆಯ ಒಂದು ಅವಸರದ ಸಭೆ ಜರಗಿ ಜಿಲ್ಲಾ ವ ಸ್ಮಿಫ್ ಕೋರ್ಟಿನಲ್ಲಿ ವಿಚಾರಣೆಯಾದ ಒಂದು ವ್ಯಾಜ್ಯದಲ್ಲಿ ಡಿ। ಮುನ್ಸಿಫರು ಮುನ್ಸಿಪಾಲಿಟಿ ಕಾರ್ಯ ಪ್ರಬಂಧಿಸಲು ಇಂಜೆಕ್ಷನ್ ಹುಕುಂ ಕೊಟ್ಟ ಕುರಿತು ಈ ಸಭೆ ಅಧ್ಯಕ್ಷರ ಸಮ್ಮುಖದಲ್ಲಿ ಸೇರಿ ಆ ವಿಷಯ ಚರ್ಚಿಸಿತು ಲಾರಿಗಳಿಲ್ಲದ ನಿಸ್ಸಹಾಯತೆಯನ್ನು ಆರೋಗ್ಯಾಧಿಕಾರಿಗಳು ಸಭೆಯ ಮುಂದೆ ವಿವರಿಸಲು ಮಲಸಾಗಿಸಲು ಬಿಟ್ಟು ಉಪಯೋಗಿಸಬೇಕೆಂಬ ಸೂಚನೆ ಸ್ವೀಕೃತವಾಯಿತು. ನಗರದ ಸಭಾ ಸದಸ್ಯರೂ, ಅಧ್ಯಕ್ಷರೂ ಜಿಲ್ಲಾ ಕಲೆಕ್ಟರರನ್ನು ಸಂದರ್ಶಿಸಿ ಹೊಸ ಲಾರಿ ಮತ್ತು ಪೆಟ್ರೋಲ್ ವಿಚಾರ ಮಾತನಾಡಿದರು ಕಲೆಕ್ಟರರು ಸಾಧ್ಯವಾದ ಸಹಾಯ ಮಾಡುವೆನೆಂದು ಭರವಸೆಯಿತ್ತರು.

ಮಿತ್ರ ಮಂಡಳಿ

ಮಿತ್ರ ಮಂಡಳಿಯ ವಾರ್ಷಿಕ ಮಹಾಸಭೆಯು ಕಳೆದ ಆದಿತ್ಯವಾರ ಸಂಜೆ ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ ಮುಳಿಯ ತಿಮ್ಮಪ್ಪಯ್ಯರ ಅಧ್ಯಕ್ಷತೆಯಲ್ಲಿ ಜರಗಿತ ಕಾರ್ಯದರ್ಶಿ ಡಾ ಎಸ್ ಪಿ ಭಟ್ಟರು ವರದಿಯೊಪ್ಪಿಸಿದರು ಆ ವೇಳೆ ಹೊಸ ಕಾರ್ಯಕಾರೀ ಮಂಡಳದ ಚುನಾವಣೆಯಾಗಿ ಶ್ರೀ ಎಂ ವಾಸುದೇವ ಪ್ರಭುಗಳ ಅಧ್ಯಕ್ಷರಾಗಿಯೂ ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಉಪಾಧ್ಯಕ್ಷರಾಗಿಯೂ ಶ್ರೀ ಡಾ। ಎಸ್ ಪಿ ಭಟ್ಟರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಡಿ. ಪುಟ್ಟ ಸ್ವಾಮಿ, ಜೆ ವಾಮನ ಭಟ್ಟ ಎಸ್. ಮುಕುಂದರಾವ್, ಕೆ. ಎಸ್ ಮತ್ತು ಕಯ್ಯಾರ ಕಿಞ್ಞಣ್ಣ ರೈ ಇವರು ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು ಕಾಲೇಜುಗಳಿಂದ ಇಬ್ಬರು ವಿದ್ಯಾರ್ಥಿಗಳನ್ನು ಕಾರ್ಯಕಾರೀ ಸಮಿತಿಯಲ್ಲಿ ಸೇರಿಸಬೇಕೆಂದಾಯಿತು

ಸಭೆಯಲ್ಲಿ ಹೊಸ ವರ್ಷದ ಚಟುವಟಿಕೆಗಳ ಸಮಾಲೋಚನೆಯಾಯಿತು. ಅಖಿಲ ಸೇವಾ ಗ್ರಂಥ ಮಾಲೆಯನ್ನು ಮುಂದುವರಿಸುವುದು ವಿವಿಧ ವಿಷಯ ಪ್ರಚಾರ ಪುಸ್ತಕಮಾಲೆಯೊಂದನ್ನು ಹೊರಡಿಸುವುದು ವಿಮರ್ಶಾ ಕೂಟ ವಾಚನ ಗೋಷ್ಠಿಗಳನ್ನು ಮುಂದುವರಿಸುವುದೇ ಮೊದಲಾದ ನಿರ್ಧಾರಗಳಾದುವು. ಮುದ್ದಣ ವಾಚನಾಲಯವನ್ನು ಬಲಪಡಿಸಿ, ೨ ರೂಪಾಯಿ ಹೆಚ್ಚು ತೆರುವವರಿಗೆ ಅವರ ಮನೆಗೆ ಪುಸ್ತಕ ಕಳುಹಿಸುವ ಏರ್ಪಾಡು ಮಾಡುವುದೆಂದು ಆಯಿತು. ರೂ ೫ ತೆರುವ ಪೋಷಕ ಸದಸ್ಯರನ್ನೂ ಈ ವರ್ಷ ಮಿತ್ರ ಮಂಡಳಿ ಸೇರಿಸುವುದು ಸಭಾಂತ್ಯದಲ್ಲಿ ಶ್ರೀ ವಾಸು ಭಟ್ಟರು ಕೃತಜ್ಞತೆ ಹೇಳಿದರು

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಷನ್

ಇದರ ಜಿಲ್ಲಾ ಸಂಘದ ಹೊಸ ವರ್ಷದ ಕಾರ್ಯಕಾರೀ ಸಮಿತಿಯಲ್ಲಿ ಡಾ। ಕೇಶವ ಪೈಗಳು ಅಧ್ಯಕ್ಷರು ಶ್ರೀ ಕೆ ಬಿ ಜಿನರಾಜ ಹೆಗ್ಗಡೆಯವರು ಉಪಾಧ್ಯಕ್ಷರೂ ಶ್ರೀಮತಿ ಸುಶೀಲಾ ಬಾಯಿ ಎಸ್ ರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ದೇವಪ್ಪ ಶೆಟ್ಟರು ಕಾರ್ಯದರ್ಶಿಯಾಗಿಯೂ ಶ್ರೀ ಎಸ್ ಮುಕುಂದ ರಾಯರು ಕೋಶಾಧಿಕಾರಿಗಳಾಗಿಯೂ ಶ್ರೀ ಕೆ ಎಸ್ ಅಡಿಗರು ಹಿಂದುಸ್ಥಾನ ಸ್ಕೌಟ್ ಪತ್ರಿಕೆಯ ಸಂಪಾದಕರಾಗಿಯೂ ಇರುವರು

ಶ್ರೀಮುಖದ ವಿಮರ್ಶಾ ಗೋಷ್ಠಿ

ರವಿವಾರ ತಾ [illegible]ರಂದು ಪ್ರಕಾಶ ಕೂಟದ ಆಶ್ರಯದಲ್ಲಿ ಶ್ರೀ ಕೆ ಕೆ ರೈ ಅವರ 'ಶ್ರೀಮುಖ' ಕವಿತಾ ಸಂಗ್ರಹದ ವಿಮರ್ಶೆ ನಡೆಯಲಿದೆ ಸಮಯ ಪೂರ್ವಾಹ್ನ ೧೦ ಘಂಟೆಗೆ ಸ್ಥಳ ಪೀಪಲ್ಸ್ ಲೈಬ್ರರಿ ಮೈದಾನು ರಸ್ತೆ ಮಂಗಳೂರು ಎಂದು ಅದರ ಕಾರ್ಯದರ್ಶಿಗಳು ತಿಳಿಸುತ್ತಾರೆ

ಬಾರಕೂರು

ಶ್ರೀ ಕಾಳಿಂಗ ರಾಯರ ಸಂಗೀತ

ಪ್ರಸಿದ್ಧ ರೇಡಿಯೋ ಗಾಯಕರಾದ, ಇಲ್ಲಿನವರೇ ಆಗಿರುವ ಶ್ರೀ ಕಾಳಿಂಗ ರಾವ್ ಮತ್ತು ಶ್ರೀ ದಾಸಪ್ಪ ಇವರ ಸಂಗೀತ ಕಚೇರಿಯೊಂದು ಕಳೆದ ತಾ ೩೧ರಲ್ಲಿ ಇಲ್ಲಿ ನಡೆಯಿತು

ಕಾರ್ಕಳ

ಪದ್ಮಶಾಲಿ ವೈಶ್ಯ ಸಮಾಜ

ಸೇವಾ ಸಂಘದ ೧೧ನೆಯ ವಾರ್ಷಿಕೋತ್ಸವವು ಕಳೆದ ತಾ ೨೬ರಂದು ಶ್ರೀ ಎಂ ಎನ್ ಟಿ ಎಸ್ ಮಾಸ್ಟರ್ ಇವರ ಅಧ್ಯಕ್ಷತೆಯಲ್ಲಿ ಜರಗಿ ಪ್ರಾರ್ಥನೆ ಸ್ವಾಗತ ಭಾಷಣ ವರದಿ ವಾಚನ ಸಂದೇಶವಾಚನ ಮಹನೀಯರ ಹಾಗೂ ಅಧ್ಯಕ್ಷರ ಭಾಷಣಗಳಾದುವು

ಬಂಟ್ವಾಳದ ಜನರಿಗೆ ಅಕ್ಕಿ ಸ್ವಾಧೀನ ಮಾಡುವ ಕೆಲಸ

ಬಂಟ್ವಾಳದ ಜನರಿಗೆ ಈಗ ದಿನಕ್ಕೆ ಒಬ್ಬನಿಗೆ ಮುಕ್ಕಾಲು ಪಾವಿನಂತೆ ಅಕ್ಕಿ ದೊರಕುತ್ತದೆ ಗುರುತು ಚೀಟುಗಳಿರುವವರಿಗೆಲ್ಲಾ ಸ್ಟೋರುಗಳ ಮೂಲಕ ಅಕ್ಕಿ ವಿತರಣವಾಗುತ್ತದೆ ಎರಡು ತಿಂಗಳಿಗೆ ಬೇಕಾಗುವ ಅಕ್ಕಿ ದಾಸ್ತಾನು ಆದ ಕೂಡಲೇ ಹಿಂದಿನಂತೆ ದಿನಕ್ಕೆ ಒಂದು ಪಾವು ಅಕ್ಕಿ ಸಿಗುವುದು' ಎಂದು ಅಧಿಕಾರಿಗಳು ಭರವಸೆಯೀಯುತ್ತಾರೆ

ಕಳ್ಳ ಸಂತೆಗೆ ಹೋಗುವ ಅಕ್ಕಿಯನ್ನು ಹಿಡಿವಲ್ಲಿ ಸ್ವಯಂ ಸೇವಕರು ಸರಕಾರೀ ಅಧಿಕಾರಿಗಳಿಗೆ ಸಹಾಯ ಮಾಡುತ್ತಾರೆ ಬಂಟ್ವಾಳದಲ್ಲಿ ಒಂದು ಆಹಾರ ಸಮಿತಿಯೂ ಸ್ಥಾಪಿತವಾಗಿದೆ.

ಕಾಂಗ್ರೆಸಿನವರು ಜಪಾನ್ ಪರರಲ್ಲ ಸಂಕುಚಿತ ಮತಿಗಳಲ್ಲ

ಅಂಕೆ ಸಂಖ್ಯೆಗಳು ಋಜುಪಡಿಸುತ್ತವೆ.

ಸರಕಾರ ಮತ್ತು ಕಮುನಿಸ್ಟರು ಕಣ್ತೆರೆಯಲಿ!

ಕಾಂಗ್ರೆಸಿನವರು ಫೇಸಿಸ್ಟ್ ಹಸ್ತಕರು, ಕಾಂಗ್ರೆಸಿನವರು ಜಪಾನ್ ಪರರು, ಕಾಂಗ್ರೆಸಿನವರು ಪಂಚಮ ದಳದವರು ಎಂದು ಸರಕಾರ ಆರೋಪ ಹೊರಿಸಿದೆ, ಜತೆಯಲ್ಲಿ, ಕಾಂಗ್ರೆಸಿನವರು ಫೇಸಿಸ್ಟ್ ವಿರೋಧಿಗಳಾಗಬೇಕು, ಕಾಂಗ್ರೆಸಿನವರು ಅಂತರಾಷ್ಟ್ರೀಯ ವಿಶಾಲಮತಿಗಳಾಗಬೇಕು ಎನ್ನುತ್ತಾ, ನಮ್ಮ ಕಮುನಿಸ್ಟರು ಈ 'ಹೊಸ ತತ್ವ'ವನ್ನು ಬೋಧಿಸುತ್ತಾ ಕಾಂಗ್ರೆಸಿನ ಪ್ರತಿಷ್ಠೆ ಕೆಡಿಸಲು ಹವಣಿಸುತ್ತಿದ್ದಾರೆ. ಕಾಂಗ್ರೆಸಿನವರು, ಜಪಾನ್ ಪರರಲ್ಲ; ಫೇಸಿಸ್ಟ್ ಹಸ್ತಕರಲ್ಲ, ಸಂಕುಚಿತ ಮತಿಗಳಲ್ಲ—ಎಂಬೀ ವಿಷಯ ಗೊತ್ತಿಲ್ಲದ್ದವರಿಗೆ ಕೆಳಗಿನ ಅಂಕೆಸಂಖ್ಯೆಗಳೇ ನಿಜಸಂಗತಿ ತಿಳಿಸುವವು.

೧೯೧೨ರಲ್ಲಿ ಬಾಲ್ಕನ್ ಯುದ್ಧ ನಡೆಯಿತು. ಟರ್ಕಿ ಎಲ್ಲಾ ವಿಧದಲ್ಲೂ ಅಂದು ಜೀರ್ಣವಿದೀರ್ಣವಾಗಿತ್ತು. ಟರ್ಕಿಯ ರಾಷ್ಟ್ರ ದೇಹದಲ್ಲಿ ಅಂದು ರಕ್ತ ಹರಿಯುತಿತ್ತು.

ಅಲ್ಲಿ ಗಾಯಗೊಂಡವರು ಶತಸಾವಿರ ಮಂದಿ; ಆ ಗಾಯ ಗುಣಪಡಿಸುವ ಡಾಕ್ಟರರಿಲ್ಲ; ಇದನ್ನು ಕಂಡು ಓರ್ವ ತರುಣ ಭಾರತೀಯ ಡಾಕ್ಟರನ ಹೃದಯ ಕರಗಿ ನೀರಾಯಿತು.

ಅವರೇ ಡಾಕ್ಟರ್ ಮುಖ್ತಾರ್ ಅಹ್ಮದ್ ಅನ್ಸಾರಿಯವರು; (ಅವರು ಕಾಂಗ್ರೆಸಿನ ಅಧ್ಯಕ್ಷ ಪದವಿಗೂ ಮುಂದೆ ಏರಿದರು) ಡಾ| ಅನ್ಸಾರಿಯವರು ಆಗ ತಾನೇ ಇಂಗ್ಲಾಂಡಿನಿಂದ ವಿದ್ಯಾಭ್ಯಾಸಮಾಡಿ ಮರಳಿ ಬಂದಿದ್ದರು. ಉಚ್ಚ ಆದರ್ಶದ ಮೇಲಿನ ಅಭಿಮಾನದಿಂದ, ಸೋದರ ಮಾನವ ಜನಾಂಗದ ಮೇಲಿನ ಮಮತೆಯಿಂದ, ಅನ್ಸಾರಿಯವರು ಟರ್ಕಿಗೆ ಒಂದು ವೈದ್ಯಕೀಯ ಶಿಷ್ಟಮಂಡಳದೊಡನೆ ಪ್ರಯಾಣ ಮಾಡಿದರು.

ಈ ನಿಸ್ವಾರ್ಥಿ ಭಾರತೀಯ ವೈದ್ಯ ಮಂಡಳದವರು, ಅತುಲ ಬಲಿದಾನದಿಂದ ಮಾಡಿದ ಈ ಸೇವೆಗೆ ಟರ್ಕಿ ಬಹಳ ಕೃತಜ್ಞತೆ ತೋರಿಸಿತು. ಭಾರತ-ಟರ್ಕಿಗಳ ಮಧುರ ಬಾಂಧವ್ಯ ಬೆಳೆಯಲು ಅದೇ ಮುಂದೆ ಸಹಕಾರಿಯೂ ಆಯಿತು.

೧೯೧೪-ಮೊದಲಿನ ಮಹಾ ಯುದ್ಧದ ಕಾಲ. ಯಾರಿಂದು ಜಪಾನೀ ಪರರೆಂದೂ, ಫೇಸಿಸ್ಟ್ ಪರರೆಂದೂ ಆರೋಪಿತರಾಗಿ ಸೆರೆಮನೆಗೆ ತಳ್ಳಲ್ಪಟ್ಟಿದ್ದಾರೋ, ಅದೇ ಮೋಹನದಾಸ ಕರಮಚಂದ ಗಾಂಧಿಯವರು, ಲಂಡನಿಗೆ ಹೋಗಿ, 'ಇಂಡಿಯನ್ ಎಂಬುಲೆನ್ಸ್ ಕೋರ್' ಸ್ಥಾಪಿಸಿ ಅಲ್ಲಿ ಗಾಯಗೊಂಡವರ ಸೇವೆಗೈದರು. ಗಾಂಧೀಜಿ ಆಗ ತರುಣರು; ಬೇರಿಸ್ಟರರಾಗಿ ಬಂದವರು; ತಮ್ಮ ಸಾವಿರಾರು ರೂಪಾಯಿ ಸಂಪಾದನೆಯ ಉದ್ಯೋಗ ಬಿಟ್ಟು ಈ ಮಾನವ ಸೇವಾಕಾರ್ಯಕ್ಕಾಗಿ ಈ ಬಲಿದಾನ ಗೈದರು.

೧೯೧೯-೧೯೨೦ರಲ್ಲಿ ಅಖಿಲ ಭಾರತವೇ, ಹಿಂದು ಮುಸ್ಲಿಮರೆಲ್ಲರೂ ಖಿಲಾಫತ್ ಚಳವಳದಲ್ಲಿ ಒಂದಾಗಿ, ಏಕಕಂಠದಿಂದ ಟರ್ಕಿಯ ಮೇಲಿನ ಯೂರೋಪಿಯನ್ ಬಲತ್ಕಾರವನ್ನು ಪ್ರತಿಭಟಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸು ಮಾಡಿದ ಕಾರ್ಯಗಳು, ಇಂಗ್ಲೆಂಡಿಗೆ ಒಂದು ಶಿಷ್ಟಮಂಡಳ ಕಳುಹಿಸಿ ಟರ್ಕಿಗೆ ಆದ ಅನ್ಯಾಯವನ್ನು ಪ್ರತಿಭಟಿಸಲು ಮಾಡಿದ ಪ್ರಯತ್ನಗಳು ಇತಿಹಾಸದಲ್ಲಿಯೇ ಚಿರಸ್ಮರಣೀಯವಿವೆ.

೧೯೩೮ರ ಇಸವಿ (ಬಂತು) ಭಾರತಕ್ಕೆ ನೆಹರು ಕರೆಯಿತ್ತರು. 'ಸ್ಪೈನಿನ ಇಂದಿನ ಸ್ವಾತಂತ್ರ್ಯ ಚಳವಳವು, ಜಗತ್ತಿನಲ್ಲಿ ಯಾರೆಲ್ಲಾ ತಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾರೋ ಅವರೆಲ್ಲರ ಹೃದಯಗಳನ್ನೂ ಸಹಾನುಭೂತಿಯಿಂದ ತುಂಬಿಸಿದೆ. ಚೀನ ಮತ್ತು ಸ್ಪೈನುಗಳ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರೂ ಭಾಗವಹಿಸಲಿದ್ದಾರೆ; ರಿಪಬ್ಲಿಕನ್ ಸ್ಪೈನಿನಲ್ಲಿ ಮಿಲಿಯಾಂತರ ಮಂದಿ ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ; ಚೀನೀಯರು ಜಪಾನಿನ ನಿರ್ದಯ ಬಾಂಬು ದಾಳಿಗೆ ಬಲಿಯಾಗಿದ್ದಾರೆ; ಉಪವಾಸ ಬಿದ್ದು ಸಾಯುತ್ತಾರೆ. ಹೀಗೆ ಹೊರ ದೇಶಗಳ ಸ್ವಾತಂತ್ರ್ಯ ವೀರರ ಸಂಕಟಗಳನ್ನು ನೋಡಿ ನಾವು ಭಾರತೀಯರು ಸುಮ್ಮಗಿರುವುದು ನ್ಯಾಯವಲ್ಲ' ಎಂದರು.

ನೆಹರು ಕರೆಗೆ ಭಾರತವೆಚ್ಚತ್ತಿತು: ಟರ್ಕಿಯಿರಲಿ, ಚೀನವಿರಲಿ, ಸ್ಪೈನಿರಲಿ, ಅಬಿಸೀನಿಯವಿರಲಿ ಎಲ್ಲೆಲ್ಲ ದಳಿತ ಜನರು ಸಂಕಟಪಡುತ್ತಿದ್ದಾರೋ, ಅಲ್ಲಲ್ಲಿ ನಮ್ಮ ಸಹಾನುಭೂತಿ ಇದೆಯೆಂದು ಕಾಂಗ್ರೆಸು, ಆ ಮೂಲಕ ಅಖಿಲ ಭಾರತವೇ ಸಾರಿತು.

ಅರೆ ಹೊಟ್ಟೆಯ ಭಾರತೀಯರೂ ನಿಧಿ ಸಂಗ್ರಹಿಸಿ ಸ್ಪೈನಿಗೆ ಕಳುಹಿಸಿದರು. ಅಷ್ಟರಲ್ಲೇ ಡಾಕ್ಟರ್ ಅತುಲರ ಮುಂದಾಳುತನದಿಂದ ಚೀನಕ್ಕೆ ಸಹಾಯ ಸಲ್ಲಿಸಲು ಅಲ್ಲಿ ಗಾಯಗೊಂಡವರನ್ನು ಗುಣಪಡಿಸಲು ಒಂದು ವೈದ್ಯ ಶಿಷ್ಟಮಂಡಳವೂ ಚೀನಕ್ಕೆ ಹೊರಟಿತು.

ಡಾ| ದ್ವಾರಕನಾಥ್ ಕೋಟ್ನೀಸರು ಚೀನಕ್ಕೆ ಹೋದ ಈ ಶಿಷ್ಟಮಂಡಳದಲ್ಲಿ ಒಬ್ಬರು. ಒಂದು ವರ್ಷದ ಹಿಂದೆ ದೂರದ ಚೀನದ ಹಳ್ಳಿಯೊಂದರಲ್ಲಿ, ಚೀನದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಯಗೊಂಡವರನ್ನು ಶುಶ್ರೂಷೆ ಮಾಡುತ್ತಾ, ತಮ್ಮ ತಾಯ್ನಾಡನ್ನು, ಬಂಧುಬಾಂಧವರನ್ನು, ಇಷ್ಟಮಿತ್ರರನ್ನು ಅಗಲಿ ಅಸು ತೊರೆದರು!

ಕಾಂಗ್ರೆಸಿಗರು ಅಂತರಾಷ್ಟ್ರೀಯ ವಿಶಾಲಮತಿಗಳಾಗಬೇಕೆಂದು ಫೇಸಿಸ್ಟ್ ವಿರೋಧಿಗಳಾಗಬೇಕೆಂದು ಈಗ ನಮ್ಮ ಕಮುನಿಸ್ಟ್ 'ಕಾಮ್ರೇಡು'ಗಳು ಬೋಧಿಸುತ್ತಿದ್ದಾರೆ. ಕಾಂಗ್ರೆಸ್ ಸಂಸ್ಥೆ ಹಾಗೂ ಗಾಂಧೀಜಿ, ನೆಹರು ಮೊದಲಾದ ರಾಷ್ಟ್ರ ಮುಖಂಡರು ಜಪಾನ್ ಪರರೆಂದು, ಫೇಸಿಸ್ಟ್ ಹಿತಚಿಂತಕರೆಂದು ಸರಕಾರ ಅವರನ್ನು ಸೆರೆಮನೆಯಲ್ಲಿಟ್ಟು ಶಿಕ್ಷಿಸುತ್ತದೆ!

ರಾಷ್ಟ್ರ ಸಂಸ್ಥೆ ಹಾಗೂ ರಾಷ್ಟ್ರ ನಾಯಕರ ಮೇಲೆ ಹೊರಿಸಲ್ಪಟ್ಟ ಈ ಉಗ್ರ ಆರೋಪಗಳಿಗೆ ಇತಿಹಾಸವೇ ಉತ್ತರವೀಯಲಿ!

ಕಲ್ಕತ್ತದ ವಿಮಾನ ಧಾಳಿ

ಮಾರ್ಚ್ ೮ನೇ ತಾರೀಕಿಗೆ ಕಲ್ಕತ್ತದಲ್ಲಾದ ವಿಮಾನ ಧಾಳಿಗೆ ೩೭ ಜನರು ಮರಣ ಗೊಂಡು ೭ ಜನರಿಗೆ ಗಾಯವಾಗಿರುವುದಾಗಿ ಈಗ ಪ್ರಕಟವಾಗಿದೆ.

ನೋಟೀಸು

ಪುತ್ತೂರು ಡಿ| ಮು| ಕೋರ್ಟಿನಲ್ಲಿ

R. E. P. 513/1943.
R. E. A. 1056/1943.
O. S. 188/41.

ಸುಬ್ರಾಯ ಭಟ್ಟ— *Petitioner*
ನಾರಾಯಣ ಭಟ್ಟ ಕೂಡಾ *Respondents*

1. ನಾರಾಯಣ ಭಟ್ಟ—ರಾಮಚಂದ್ರ ಭಟ್ರ ಮಗ—ನೆಟ್ಟಣಿಗೆ ಮುಡ್ನೂರು ಗ್ರಾಮದ ಈಶ್ವರಮಂಗಲ.

2. ಸುಬ್ರಮಣ್ಯ—ಮ್ನಾವರ—ವಿಷ್ಣು ಭಟ್ರ ಮಗ—ಗಾರ್ಡಿಯನ ತಾಯಿ ಭಾಗೀರಥಿ ಅಮ್ಮ ವಿಷ್ಣು ಭಟ್ರ ವಿಧವೆ—ಪಡುವನ್ನೂರು ಗ್ರಾಮದ ಕಜೆಮೂಲೆ.

3. ನರಸಿಂಹ ಭಟ್ಟ ಗಣಪತಿ ಭಟ್ರ ಮಗ—ಸದ್ರಿ ಗ್ರಾಮದ ಕಜೆಮೂಲೆ ಸಂಪಾಜೆ ಗ್ರಾಮದ ಜೇಡ್ಲ. 1-2-3ನೆ ಎದ್ರಿರು.

ಸದ್ರಿ ವ್ಯವಹರಣೆಯಲ್ಲಿ ಎದ್ರಿರ ಆತಂಕ ನಿವೃತ್ತಿಯಿಂದ ದಾವಾ ಆಸ್ತಿಯನ್ನು ಅರ್ಜಿದಾರಗೆ ಬಿಡಿಸಿಕೊಡಬೇಕಾಗಿ ವಗೈರೆಗೆ ಅರ್ಜಿದಾರನು ಅರ್ಜಿಕೊಟ್ಟಿರುವದರಿಂದ ಅದರ ನೋಟೀಸಿನ ತನ್ಕಿ ವಾಯಿದೆ ತಾ. 11-4-1944ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ವಾಯಿದೆಗೆ ಎದ್ರಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟಿಗೆ ತಪ್ಪದೆ ಹಾಜ್ರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಅವರನ್ನು ಶಿವಾಯಿ ಎಂತ ಮಾಡಿ ಈ ವ್ಯವಹರಣೆಯನ್ನು ಮುಂದಿನ ತನ್ಕಿಯಿಂದ ಮುಂದರಿಸಲಾದೀತು. ಎಂತ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur S. K. | B. Ramachandra Rao.
27-3-1944 | Pleader for Petitioner

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರೈಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ—ಆ ಜನರು . . . .

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು . . . . :

ತಮ್ಮ ಆರ್ಥಿಕ ಅಡಚಣೆಗಳಲ್ಲೂ ಸಮಸ್ಯೆಗಳಲ್ಲೂ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು . . . . . .

. . . ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯುಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು. ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

For all sporting materials

SOUTH KANARA

SPORTS HOUSE

Shifted to the Premises of

SOANS, PHOTO

ELECTRIC STUDIO

Light House Hill Road

MANGALORE S. K.

ದಿವಂಗತ
ಎಲ್. ಎಸ್. ಪ್ರಭುಗಳು

ಕೇರಳದ ರಾಷ್ಟ್ರಭಕ್ತರಾದ ಭಾರತ ಮಾತೆಯ ಸತ್ಪುತ್ರರಲ್ಲೊಬ್ಬರಾದ ತಲಚೇರಿಯ ಶ್ರೀ। ಲಕ್ಷ್ಮಣ ಸುರೇಂದ್ರನಾಥ ಪ್ರಭುಗಳು ಕಳೆದ ತಾ. ೧೭ಕ್ಕೆ ದಿವಂಗತರಾದರು. ಮಹಾದೇವ ದೇಸಾಯಿ, ಸತ್ಯಮೂರ್ತಿ, ರಣಜಿತ್ ಪಂಡಿತ್, ಇಂಥಾ ಭಾರತದ ದಿವ್ಯ ಜ್ಯೋತಿಗಳ ಸಾಲಿಗೆ ಸೇರಿದರು

ಅವರನ್ನು ಅಮರಾವತಿ ಸೆರೆಮನೆಯಿಂದ ಅನಾರೋಗ್ಯದ ನಿಮಿತ್ತ ಕಳೆದ ಒಂದು ತಿಂಗಳ ಹಿಂದೆ ಬಿಡುಗಡೆ ಮಾಡಲಾಯಿತು. ಬಿಡುಗಡೆಯಾದಾಗ ಅವರು ಬಹಳ ನಿತ್ರಾಣಗೊಂಡಿದ್ದು ರೈಲ್ವೆ ಸ್ಟೇಶನಿನಿಂದ ಮನೆಗೆ ಇವರನ್ನು ಗಾಡಿಯಲ್ಲಿ ಕರೆದೊಯ್ಯಬೇಕಾಗಿತ್ತು. ಅವರಿಗೆ ಅರ್ಧಾಂಗವಾಯುರೋಗ ಪ್ರಬಲವಾಗಿದ್ದರಿಂದ ಇನ್ನುಮುಂದೆ ಬದುಕಲಾರರೆಂದು ತಿಳಿದು ಸರಕಾರ ಅವರನ್ನು ಕೊನೆಗಳಿಗೆಯಲ್ಲಿ ಬಿಡುಗಡೆ ಮಾಡಿತು. ಬಿಡುಗಡೆ ಹೊಂದಿದ ಕೆಲವೇ ದಿನಗಳಲ್ಲಿ ಅವರು ಸ್ವರ್ಗವೇರಿದರು

ದಿವಂಗತ ಎಲ್. ಎಸ್. ಪ್ರಭುಗಳು ಕಾಂಗ್ರೆಸ್ ಧುರೀಣರು, ಉಜ್ವಲ ದೇಶಭಕ್ತರು. ಅನೇಕ ಸಲ ತನ್ನ ದೇಶಾಭಿಮಾನದ ಸಲುವಾಗಿ ಕಾರಾಗಹವಾಸ ಅನುಭವಿಸಿದ್ದಾರೆ. ಮಾತೃಭೂಮಿಯ ಸೇವೆ ಕೊನೆ ಉಸಿರೆಳೆವವರೆಗೂ ಮಾಡುತ್ತಾ ದೇಶಸೇವೆಯಲ್ಲಿ ದುಡಿದು ದುಡಿದು ಸಂಕಷ್ಟ ಸಾವಿರಗಳನ್ನು ನಗುಮುಖದಿಂದ ಅನುಭವಿಸುತ್ತಾ ಈಗ ವೀರಸ್ವರ್ಗವೇರಿದ್ದಾರೆ.

ಪತಿಯ ದೇಶಾಭಿಮಾನದ ಸಲುವಾಗಿ ದಿವಂಗತ ಎಲ್ ಎಸ್ ಪ್ರಭುಗಳ ಪತ್ನಿಯ ಮಾಂಗಲ್ಯ ಸೂತ್ರವನ್ನು ಸರಕಾರ ಕಿತ್ತು ಮಾರಾಟ ಮಾಡಿದ ಕಥೆ ಅಖಿಲ ಭಾರತದಲ್ಲಿಯೇ ರೋಷವಿಷಾದಗಳ ರೋಮಾಂಚ ಹುಟ್ಟಿಸಿ ಜಗಜ್ಜನಿತವಾಗಿದೆ. ೧೯೩೦ರ ಸತ್ಯಾಗ್ರಹ ಆಂದೋಲನದ ಕಾಲ ಅದು. ಕಮಲಾ ಪ್ರಭುಗಳನ್ನು ಸರಕಾರ ಸೆರೆಮನೆಗೆ ಸೆಳೆಯಿತು, ಅವರ ಮೇಲೆ ಹೊರಿಸಿದ ಜುಲ್ಮಾನೆ ಅವರ ಕೊಡಲೊಪ್ಪಲಿಲ್ಲ. ಸಬ್ ಕಲೆಕ್ಟರ್ ಡೋಡ್ ವೆಲ್ ಎಂಬಾತ ಇವರ ಮಾಂಗಲ್ಯ ಸೂತ್ರವನ್ನು ಮತ್ತು ಉಂಗುರವನ್ನು ಕಿತ್ತು ಮಾರಾಟ ಮಾಡಿ ಜುಲ್ಮಾನೆ ವಸೂಲು ಮಾಡಲು ಆಜ್ಞಾಪಿಸಿದ್ದು ಈ ಘಟನೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ರಕ್ತಾಕ್ಷರಗಳಿಂದ ಬರೆವ ಘಟನೆಯಾಗಿದೆ

ಇಂಥ ಕ್ರೂರ ಆಜ್ಞೆಯ ಫಲಿತಾಂಶವಾಗಿ ಡೋಡ್ ವೆಲ್ ಭಾರತ್ಯ ಬಿಟ್ಟು ಬೇಗನೇ ಹೋಗಬೇಕಾಯಿತು. ಪ್ರಭುಗಳ ಪತ್ನಿಯ ಮಾಂಗಲ್ಯ ಸೂತ್ರವನ್ನು, ಹಿಂದೂ ಸ್ತ್ರೀಯು ಈ ಅಮೂಲ್ಯ ಆಭರಣವನ್ನು ಕಿತ್ತ ಡೋಡೆವೆಲನ ವರ್ತನೆಯನ್ನು ಹೌಸ್ ಓಫ್ ಕಾಮನ್ಸ್‌ನಲ್ಲಿ ಅದರ ಕೆಲ ಸದಸ್ಯರು ಕಟುವಾಗಿ ಟೀಕಿಸಿದರು. ಇಂಡಿಯಾ ಆಫೀಸು ಒಮ್ಮೆ ದಿಗಿಲುಗೊಂಡಿತು!

ಮಲಬಾರಿನ ಸ್ವಾತಂತ್ರ್ಯ ಪ್ರೇಮಿಗಳಿಗೆ ಎಲ್. ಎಸ್. ಪ್ರಭುಗಳು ಆವೇಶಮೂರ್ತಿಯಾಗಿದ್ದರು, ಅವರ ಬಲಿದಾನ, ಅವರ ದೇಶಾಭಿಮಾನ, ಅವರ ಕಾರ್ಯಕಲಾಪಗಳು ಹಲವು ರಾಷ್ಟ್ರರತ್ನಗಳನ್ನು ಬೆಳಗಿಸಿದೆ! ಕಾಂಗ್ರೆಸ್ಸಿನ ನಿಷ್ಠಾವಂತ ಯೋಧಾಗ್ರೇಸರರು ಆಗಿದ್ದರು. ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಎರಡು ಸಲ ಅವರು ಅಧ್ಯಕ್ಷರಾಗಿದ್ದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಅವರು ನಾಲ್ಕು ಸಲ ಸೆರೆಮನೆ ಸೇರಿದ್ದರು. ಅವರು ಕಾಂಗ್ರೆಸ್ ಮಂತ್ರಿಮಂಡಳದ ಕಾಲದಲ್ಲಿ 'ಪಬ್ಲಿಕ್ ಪ್ರೊಸಿಕ್ಯೂಟರ'ರಾಗಿ ನೇಮಕ ಹೊಂದಿದ್ದರು.

ಕೊನೆಯ ಸಲ ಶ್ರೀ। ಪ್ರಭುಗಳು ೧೯೪೨ರ ಜುಲೈಯಲ್ಲಿ ಬಂಧಿತರಾದರು. ಸೆರೆಮನೆಸೇರಿದವರೇ ಅರ್ಧಾಂಗವಾಯುವಿನಿಂದ ನರಳಿದರು. ಅವರು ಜೈಲಿನಿಂದ ಹೊರಗೆ ಸಾಯಲಂಬಂತೆ ಅವರ ಬಿಡುಗಡೆ ಕೊನೆಗಳಿಗೆಗೆ ಆಯಿತು.

ಶ್ರೀ। ಪ್ರಭುಗಳ ನಿಧನದಿಂದ ಅವರ ಬಂಧುಬಾಂಧವರು, ಕೇರಳ ಮಾತ್ರವಲ್ಲ ಅಖಿಲ ಭಾರತವೇ ಕಂಬನಿಯಿಡುತ್ತದೆ. ದಿವಂಗತರ ಆತ್ಮಕ್ಕೆ ಪರಮಾತ್ಮನು ಶಾಂತಿ ನೀಡಲಿ!

(೧ನೇ ಪುಟದಿಂದ)

ಮುಚ್ಚಾಲೆ ಮುಂತಾದ ಆಟಗಳನ್ನು ಆಡುತ್ತ ಒಬ್ಬರನ್ನೊಬ್ಬರು ಅಗಲದೆ ಇರುತ್ತಿದ್ದೆವು. ಅವನು ಒಂದು ಗಳಿಗೆ ನನ್ನ ಬಳಿಯಲ್ಲಿ ಇಲ್ಲದಿದ್ದರೆ ನನಗೆ ತುಂಬಾ ಬೇಸರವಾಗುತಿತ್ತು. ರಾತ್ರಿಂದಿವ ಅವನ ಸಹವಾಸದಲ್ಲೇ ನನ್ನ ಶೈಶವವು ಸಂತೋಷದಲ್ಲಿ ಕಳೆದುಹೋಯಿತು. ಹೀಗೆಯೇ ಒಂದು ದಿನ ನನಗೆ ತಲೆಸಿಡಿತವೆಂದು ಮಲಗಿಕೊಂಡವಳು ಸುಮಾರು ಮೂರು ತಿಂಗಳು ಕಾಲ ಬೇನೆ ಹಿಡಿದುಕೊಂಡು ಮಲಗಿಕೊಂಡಾಗ ಇವನು ಸದಾ ನನ್ನ ಬಳಿಯಲ್ಲಿದ್ದುಕೊಂಡು ಅಗಲದೆ ಇರುತ್ತಿದ್ದನು. ನನ್ನ ಕನಿಕರದ ಸ್ಥಿತಿಯನ್ನು ನೋಡಿ ಅವನು ಕೆಲಬಾರಿ ಕಣ್ಣೀರಿಳಿಸಿದುದೂ ಇದೆ. ಅಷ್ಟು ಪ್ರೀತಿಯು ಇತ್ತು ನಮ್ಮಿಬ್ಬರೊಳಗೆ ಆಗಲೇ ನನ್ನ ತಂದೆತಾಯಿಗಳು ನಮ್ಮಿಬ್ಬರನ್ನು ಗಂಡಹೆಂಡಿರನ್ನಾಗಿ ಜೊತೆಗೂಡಿಸಬೇಕೆಂದು ಯೋಚನ ಮಾಡಿದ್ದರಂತೆ—ಆಗ ನನಗೆ ಹಿಡಿಸಲಾರದಷ್ಟು ಸಂತೋಷವಂತೆ—ಗಂಡಹೆಂಡಿರ ನಿಜವಾದ ಮರ್ಮವು ತಿಳಿಯದೆ ಆಗ ನಮ್ಮಿಬ್ಬರೊಳಗೆ ಬಳೆಯುತ್ತಿದ್ದ ಪ್ರೀತಿಯು ನಿಜವಾಗಿ ಬಂಧುಪ್ರೇಮ—ನಾನು ಅವನನ್ನು ಮನಸಾ ಪ್ರೀತಿಸುತಿದ್ದೆನು—ಅಣ್ಣನಹಾಗೆ. ಆದರೆ ನನ್ನ ದುರದೃಷ್ಟದಿಂದ ದಿನದಿಂದ ದಿನಕ್ಕೆ ಅವನಲ್ಲಿ ಪ್ರೇಮದ ಮರುಳು ಹೆಚ್ಚಿ ಹೀಗೆ ಬೆಳೆಯುತ್ತ ಹೋದರೆ ಲೇಸಿಲ್ಲವೆಂದು ನನ್ನ ತಂದೆಯೊಡನೆ ಈ ಪ್ರಸ್ತಾಪವೆತ್ತಿ ಅವನನ್ನು ಬೇರೆಲ್ಲಿಗಾದರೂ ಕಳುಹಿಸಿಕೊಟ್ಟರಾದೀತೆಂದೂ ನಾನವನನ್ನು ವರಿಸಿಕೊಳ್ಳಲು ತಯಾರಿಲ್ಲವೆಂದೂ ಹೇಳಿದಾಗ ಅವರ ಮನಸ್ಸು ನೊಂದಿತು. ಆದರೆ ಬಹು ಪ್ರೀತಿಯಿಂದ ಬೆಳೆಯಿಸಿದ ಅವರ ಹೂ ನಾನು. ನನ್ನ ಮನಸ್ಸನ್ನು ನೋಯಿಸ ಹೇಸಿ ಆ ನಿಮ್ಮ ಜೀವದ ಗೆಳೆಯನನ್ನು—ಏನೋ ಹೇಳಿ ಸಮಜಾಯಿಸಿ ಬೇರೆ ಕಳುಹಿಸಿಕೊಟ್ಟರು. ಈಗ ಅವನೇನು ಮಾಡುವನೋ ತಿಳಿಯದು—ಕಲಿಯುವುದರಲ್ಲಿ ನಿಪುಣ—ಪಾಪ—ಹೆಸರಾಂತ ಕಲಾವಂತನಾಗಬೇಕೆಂದು ಬಹು ಆಸೆಪಡುತ್ತಿದ್ದ. ಅವನ ಪ್ರೇಮದ ಮೊದಲ ನಾಟಕವು 'ದುರಂತವಾದುದರಿಂದಲೋ ಏನೋ—ಈಗಲೂ ನಿರುದ್ಯೋಗಿಯಾಗಿಯೇ ಉಳಿದಿದ್ದಾನೆ—ಅಲ್ಲವೇ? ಜೀವನದ ಸುಖವಿಲ್ಲದೆ ಬಳಲುತಿದ್ದಾನೆ' ''

'ಜೀವನದ ಸುಖವು ಗಂಡಹೆಂಡಿರ ಜೋಡಿನಲ್ಲಿದೆ—ಆ ಜೋಡು ಇಲ್ಲದ ಜೀವನವು ಎಷ್ಟು ಜಿಯ್ಯುಗುಡುವ ಕಾಡು!' ಎಂದು ಮುಗಳೆಯವರ ಉದ್ಗಾರವನ್ನೇ ಕಂಬನಿಯಿಳಿಸುತ್ತ ಹೊರದೆಗೆದೆ

THE CANARA BANKING CORPORATION LTD.

(Incorporated in British India with Limited Liability)

Estd) **Head Office: UDIPI S Kanara.** **(1906.**

Statement of affairs as on 31st December, 1943.

LIABILITIES	Rs	As	Ps	ASSETS	Rs	As	Ps
1 Paid up Capital	12 95 970	0	0	1 Cash on hand & with bankers	18 26 986	3-	8
2 Reserves	3 83 379-	1	6	2 Investments on (1)Govt Securities (2) Immovable properties etc	26 04 671	6-	8
3 Deposits	61 66 927	6	0	3 Loans on Jewels & other valuable securities	23 72 30?	8	7
4 Bills for collection	5 53 548	6-	1	4 Loans on personal securities & Bills purchased	16 74 482	14	8
5 Sundries including revenue items	7 00 981	0-	5	5 Bills for collection as per contra	5 53 548-	6-	1
6 Profits for the year ending 31 12 1943	1 08 522	4	0	6 Office premises furniture etc	93 251	0-	0
				7 Sundries including revenue items	84 085	10-	4
Total	92 09,328	2	0	Total	92,09,328	2	0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. BRANCHES Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 14—4—1944 [ಸಂಚಿಕೆ 15]

ಸರಕಾರದಿಂದ ೧೩ ಸಾವಿರ ರೂಪಾಯಿ!

ಎಂ. ಎನ್. ರಾಯರಿಗೆ ಪ್ರತಿ ತಿಂಗಳು!

ಸ್ಥಾನಬದ್ಧರಿಗೆ ನೋಟೀಸು ಹೋಗಿದೆ.

ಎಂ. ಎನ್. ರಾಯರಿಂದ ಸರಕಾರ ೧೩ ಸಾವಿರ ರೂಪಾಯಿ ಕೊಡುತ್ತದೆ!

ಕೇಂದ್ರ ಎಸೆಂಬ್ಲಿಯಲ್ಲಿ ಕೂಲಿಗಾರ ಖಾತೆಯಿಂದ ಪ್ರತಿ ತಿಂಗಳು ಶ್ರೀ. ಎಂ. ಎನ್. ರಾಯರ ಮುಖಾಂತರ ಹಿಂದಿ ಕೂಲಿಗಾರ ಮಹಾ ಮಂಡಳಕ್ಕೆ ೧೩ ಸಾವಿರ ರೂಪಾಯಿ ಕೊಡಲಾಗುವುದೇ ಎಂದೂ, ಹಾಗೆ ಕೊಡುವುದಿದ್ದರೆ ಯಾವ ಉದ್ದೇಶದಿಂದ ಕೊಡಲಾಗುತ್ತದೆಯೆಂದೂ ಕೇಳಿದ್ದಕ್ಕೆ ಕೂಲಿಗಾರ ಮಂತ್ರಿ ಡಾ। ಅಂಬೇಡಕರರು ಉತ್ತರ ವೀಯುತ್ತಾ, ಔದ್ಯೋಗಿಕ ಕೂಲಿಕಾರರ ಶಿಸ್ತು ಕಾಯ್ದುಕೊಂಡು ಹೋಗಲು ಪ್ರಚಾರ ಮಾಡುವ ಸಲುವಾಗಿ ೧೩ ಸಾವಿರ ರೂಪಾಯಿ ಅವರಿಗೆ ಕೊಡಲಾಗುತ್ತದೆಂದೂ ಈ ಹಣದ ಖರ್ಚಿನ ಲೆಕ್ಕ ಪತ್ರ ಅವರು ಸರಕಾರಕ್ಕೆ ಒಪ್ಪಿಸುತ್ತಾರೆಂದೂ ಹೇಳಿದರು.

ಇದೊಂದು ಆಶ್ಚರ್ಯಕರವಾದ ಸುದ್ದಿ. ಎಂ. ಎನ್. ರಾಯ್ ಅವರ ಇಂದಿನ ಕಾಂಗ್ರೆಸ್ ವಿರೋಧವನ್ನು ನಾವೀಗ ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು. ಇತ್ತೀಚೆಗೆ ರಾಯ್‌ಯವರ 'ಇಂಡಿಪೆಂಡೆಂಟ್ ಇಂದಿಯಾ' ದಿನ ಪತ್ರಿಕೆಯಾದದ್ದೂ ಇಂದು ಅರ್ಥವಾಗುವುದು. ಸರಕಾರದ ಧೋರಣವನ್ನು ರಾಯ್‌ಯವರು ಎತ್ತಿ ಹಿಡಿದುದೂ ಇದರಿಂದಲೇ ಎಂದು ನಾವು ಹೇಳಬಹುದು.

ಕಳೆದ ನವಂಬರಿನಲ್ಲಿ ಜಮನಾದಾಸ ಮೆಹತಾರವರು, 'ನಾನೂ ಎಂ. ಎನ್. ರಾಯ್‌ಯವರೂ ಪ್ರತಿತಿಂಗಳು ೧೩ ಸಾವಿರ ರೂಪಾಯಿ ಸರಕಾರದಿಂದ ಪಡೆಯುತ್ತಿದ್ದೇವೆಂದು ಹೇಳುವುದು ಅಸತ್ಯವೆಂದು ಹೇಳಿದ್ದರು. ಮೆಹತಾರವರಿಗೆ ತಾವು ಮಾಡುವ ಕೆಲಸ ತಮಗೇ ನಾಚಿಕೆ ಹುಟ್ಟಿರಬೇಕು.

ಎಂ. ಎನ್. ರಾಯ್‌ಯವರ ಮತ್ತು ರಾಯಿಸ್ಟರ ಗುಟ್ಟು ಹೀಗೆ ಹೊರಬಿತ್ತು. ಈಗ ನಮ್ಮ ಕಮ್ಯುನಿಸ್ಟ 'ಕಾಮ್ರೇಡು'ಗಳಿದ್ದಾರೆ.

ಏಕೆ ವಿಕ್ರಮೋತ್ಸವ?

ವಿಕ್ರಮ ಸಂವತ್ಸರದ ದ್ವಿಸಹಸ್ರಾಬ್ದಿ ಮಿಲಿಯೋತ್ಸವ ಹಿಂದೂ ದೇಶದಲ್ಲಿ ಅಭೂತ ಪೂರ್ವ ಉತ್ಸವದಿಂದ ಆಚರಿಸಲ್ಪಟ್ಟಿತು. ರಾಜಕೀಯ ದಾಸ್ಯದಿಂದ ತುಳಿಯಲ್ಪಟ್ಟ ಜನತೆ ತಮ್ಮ ಗತ ವೈಭವವನ್ನು ನೆನೆಸಿ ಕೊಳ್ಳುವುದೇನೋ ಸಹಜ. ವಿಕ್ರಮಾದಿತ್ಯ ಅಶೋಕ, ಚಂದ್ರಗುಪ್ತ, ಅಕ್ಬರ, ಶಾಜಹಾನರ ಕಾಲದ ಕತೆಗಳನ್ನು ನೆನೆ ನೆನೆದು ನಾವು ಹಿಗ್ಗುತ್ತೇವೆ.

ಪಂಡಿತ ಜವಾಹರಲಾಲರು ಒಮ್ಮೆ ಹೇಳಿದ್ದರು: ನನಗೆ ಈ ರಾಜಾಧಿ ರಾಜರ ಮೇಲೆ ಏನೇನೂ ಅಭಿಮಾನವಿಲ್ಲ. ಅವರಲ್ಲಿ ಅಭಿಮಾನವಿಡತಕ್ಕ ಅಂಶ ಕೂಡ ಇಲ್ಲ "ಎಂದು, ಒಮ್ಮೆಯೇ ಮೊನ್ನೆ ಮೊನ್ನೆ ಭಾರತದ ಜನತೆ ವಿಕ್ರಮಾರಾಧಕರಾದದ್ದು ನೋಡಿ ತುಸು ದಿಗಿಲು ಹುಟ್ಟಿತು. ಯಾವನಾದರೊಬ್ಬ ಪ್ರಖ್ಯಾತ ರಾಜನ ಕುರಿತು ಆರಾಧಿಸಬೇಕೆಂದಿದ್ದರೆ ಅಶೋಕನನ್ನು ಆರಾಧಿಸಬಹುದಿತ್ತಲ್ಲಾ? ವಿಕ್ರಮನಿಗಿಂತಲೂ ಅಶೋಕ ಪ್ರಖ್ಯಾತ ರಾಜ್ಯಕಾಳಿ ದಾಸನ ಉತ್ಸವ ಆಚರಿಸಬಹುದಿತ್ತು, ಆತ ಭಾರತದ ರಾಷ್ಟ್ರೀಯ ಕವಿ.

ವಿಕ್ರಮ ಉತ್ಸವ ಸಮಿತಿಯ ಕಾರ್ಯದರ್ಶಿ ಹೊರಡಿಸಿದ ಪ್ರಕಟಣೆಯಲ್ಲಿ ಆತನ ವಿಷಯ ಹೇಳುವಾಗ 'ಹಿಂದೂ ಸಾಮ್ರಾಜ್ಯ ಸ್ಥಾಪಕ' ಎಂದು ಬರೆದಿತ್ತು. ಹಿಂದುಗಳು 'ಹಿಂದೂ ಸಾಮ್ರಾಜ್ಯ ಸ್ಥಾಪಕ'ನ ದಿನ ಆಚರಿಸುವುದು, ವಿಕ್ರಮನು ಹಿಂದೂ ಸಾಮ್ರಾಟನಾಗಿ ಆತ ಹಿಂದೂ ಧರ್ಮ ಉದ್ಧಾರಕನಾಗಿ ಈ ಉತ್ಸವ.

ಮುಸ್ಲಿಮರು 'ಪಾಕಿಸ್ಥಾನ' ಕೂಗು ಹೇಳಿ ಹೇಗೆ ರಾಷ್ಟ್ರಕ್ಕೆ ಹಾನಿ ಮಾಡುತ್ತಾರೋ ಹಿಂದುಗಳು ಹಿಂದೂ ಕೂಗೆಬ್ಬಿಸಿ ಅಷ್ಟೇ ಹಾನಿ ಮಾಡುತ್ತಾರೆ. ಭಾರತದಲ್ಲಿ ಹಿಂದೂ ಮುಸ್ಲಿಂ ವೀರರ ಆರಾಧನೆ ನಡೆವುದು ಇಂದಿಗೆ ಹಿತವಲ್ಲ; 'ಭಾರತ ವೀರ'ರ ಆರಾಧನೆ ನಡೆಯಬೇಕು. ಯಾವ ಉತ್ಸವವಾದರೂ ರಾಷ್ಟ್ರೀಯ ಉತ್ಸವವಾಗಿರಬೇಕು. ಅದರಿಂದ ಮಾತ್ರ ಭಾರತಕ್ಕೆ ಏಳಿಗೆಯಿದೆ. ಹಿಂದೂ ಮುಸ್ಲಿಮರೆಲ್ಲರೂ ಕೂಡಿ ಮಾಡುವ ಉತ್ಸವ ಅದೇ ಇಂದಿಗೂ ಮುಂದಿಗೂ ಬೇಕು.

ದೇಶದ ಹಿತದ ದೃಷ್ಟಿಯಿಟ್ಟು ಇನ್ನು ಮುಂದಾದರೂ ಇಂಥಾ ಉತ್ಸವಗಳು ಧಾರ್ಮಿಕ ಉತ್ಸವಗಳು ನಿಲ್ಲಬೇಕು, ರಾಷ್ಟ್ರೀಯ ಉತ್ಸವಗಳು ಹೆಚ್ಚಬೇಕು.

ಲಕ್ನೋದಲ್ಲಿ ಪಕ್ಷರಹಿತ ಮುಖಂಡರ ಸಮ್ಮೇಳನ

ಲಕ್ನೋದಲ್ಲಿ ಪಕ್ಷರಹಿತ ಮುಂದಾಳುಗಳ ಮೂರನೆಯ ಸಮ್ಮೇಳನವು ಕಳೆದ ವಾರ ನಡೆಯಿತು. ಸರ್ ತೇಜ್ ಬಹದ್ದೂರ್ ಸಪ್ರೂ ಇವರು ಅಧ್ಯಕ್ಷರಾಗಿದ್ದರು. ಸರ್ ಸಪ್ರೂಗಳು ವೈಸರಾಯ್ ಎಕ್ಸಿಕ್ಯುಟಿವ್ ಕೌನ್ಸಿಲಿನ ವಿಷಯ ಪ್ರಸ್ತಾಪಿಸುತ್ತಾ ಇದರಲ್ಲಿ ೧೦ ಮಂದಿ ಭಾರತೀಯರಿರುವರೆಂದು ಹೇಳಲಾಗುತ್ತಿದ್ದರೂ, ಕಳೆದ ೨೫ ವರ್ಷಗಳಲ್ಲಿ ಈಗಿನ ಕೌನ್ಸಿಲಿನಷ್ಟು ನೈತಿಕ ಗೌರವ ಕಳೆಕೊಂಡು ಜನತೆಯ ಮೇಲೆ ಏನೂ ಪ್ರಭಾವ ಬೀರದ ಒಂದು ಕೌನ್ಸಿಲು ಇರಲಿಲ್ಲವೆಂದರು.

ಕೆಲ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಶಾಸನ ಸಭಾವಿಶ್ವಾಸ ಪಾತ್ರರಾದವರೇ ಅಧಿಕಾರದಿಂದ ತಳ್ಳಲ್ಪಟ್ಟ ವಿಚಾರ ಅವರು ಟೀಕಿಸಿದರು. ಇನ್ನು ಕೆಲ ಪ್ರಾಂತ್ಯಗಳಲ್ಲಿ ಗವರ್ನರರ ನಿರಂಕುಶಾಧಿಕಾರ ನಡೆವುದನ್ನು ಖಂಡಿಸಿದರು. ಜನತೆಯ ಒಪ್ಪಿಗೆಯಿಲ್ಲದೆ ತೆರಿಗೆ ಹೊರಿಸುವ ಸಾರ್ವಜನಿಕ ಹಣವನ್ನು ತಮ್ಮಿಷ್ಟ ಬಂದಂತೆ ಖರ್ಚು ಮಾಡುವ ವಿಷಯವನ್ನು ಅವರು ಟೀಕಿಸಿದರು. ಇಂಡಿಯಾ ಆಕ್ಟಿನ ೯೩ನೇ ಪ್ರಕರಣ ದುರುಪಯೋಗವಾಗುತ್ತದೆಂದರು. ಗವರ್ನರರ ಎಡ್ವೈಸರೀ ಮಂಡಳದ ಕ್ರಮ, ನಿಯಮ ರಹಿತವೆಂದರು. ಆರ್ಡಿನೆನ್ಸ್ ಆಳಿಕೆ ಕೊನೆಗಾಣಬೇಕೆಂದೇ ಅವರ ಸ್ವಷ್ಟಾಭಿಪ್ರಾಯವಾಗಿದೆ.

ಸರ್ ಸಪ್ರೂಗಳು ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿ ಮಂಡಳದ ಅಗತ್ಯವನ್ನು ವಿವರಿಸಿ, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವಿರಬೇಕೆಂದೂ, ಮುಂದಾಳುಗಳ ಬಿಡುಗಡೆಯಾಗಬೇಕೆಂದೂ ಹೇಳಿದರು. ಗಾಂಧೀಜಿ ಹಾಗೂ ಮುಂದಾಳುಗಳ ಬಿಡುಗಡೆಯಾಗಿ ಆ ಮೇಲೆ ಒಂದು ರಾಷ್ಟ್ರೀಯ ಸಮ್ಮೇಳನ ಜರಗಿಸಬೇಕೆಂದೂ, ಶತ್ರುವು ಭಾರತಕ್ಕೆ ಕಾಲಿಟ್ಟರುವಾಗ ಆತನನ್ನು ಎದುರಿಸು ಕೆಲಸ ಕೈಕೊಳ್ಳಬೇಕೆಂದೂ, ಸಾರಿದರು.

ರಾಷ್ಟ್ರೀಯವಾರದ ರಜತೋತ್ಸವ

ಎಪ್ರಿಲ್ ೬ರಿಂದ ೧೩ರವರೆಗೆ ಭಾರತೀಯರು ರಾಷ್ಟ್ರೀಯ ವಾರವನ್ನು ಆಚರಿಸುತ್ತಾರೆ. ೧೯೧೯ನೇ ಇಸವಿಯಿಂದ ಮೊದಲ್ಗೊಂಡು ಈ ಉತ್ಸವ ನಡೆಯುತ್ತಾ ಬರುತ್ತಿದೆ. ಇಂದಿಗೆ ಇಪ್ಪತ್ತೈದು ವರ್ಷಗಳಾದುವು.

ಇಪ್ಪತ್ತೈದು ವರ್ಷಗಳ ಮೊದಲು ರೌಲೆಟ್ ಕಾನೂನು ವಿರುದ್ಧ ಮೊದಲು ಸತ್ಯಾಗ್ರಹವಾರಂಭವಾಯಿತು. ಎಪ್ರಿಲ್ ೬ನೇ ತಾರೀಕಿಗೆ ಸಾರ್ವತ್ರಿಕ ಹರತಾಳದಿಂದ ಈ ವಾರ ಪ್ರಾರಂಭವಾಗುತ್ತದೆ. ಈ ರೌಲೆಟ್ ಕಾನೂನು ವಿರುದ್ಧ ಚಳವಳ ೧೧ನೇ ತಾರೀಕಿನ ದಿನ ಜಾಲಿಯನ್ ವಾಲಾಬಾಗ್ ಕೊಲೆಯಲ್ಲಿ ಪರಿಣಮಿಸಿತು. ಅಂದಿನಿಂದ ಮೊದಲ್ಗೊಂಡು ಭಾರತೀಯರು ಈ ದಿನವನ್ನು ರಾಷ್ಟ್ರೀಯ ವಾರವಾಗಿ ಆಚರಿಸುತ್ತಾರೆ.

ಶ್ರೀಮತಿ ಅಸಫ್ ಆಲಿಯವರ ಮೋಟರ್‌ಕಾರ್ ಜಪ್ತಿ

ಶ್ರೀಮತಿ ಅರುಣಾ ಅಸಫ್ ಆಲಿಯವರ ಹೆಸರಲ್ಲಿದ್ದ, ಅ. ಭಾ. ಮಹಿಳಾ ಪರಿಷತ್ತಿನ ಮೋಟರ್ ಕಾರನ್ನು ಸರಕಾರದವರು ಸ್ವಾಧೀನ ಪಡಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ ಗೃಹಮಂತ್ರಿ ಸರ್ ಥಾರ್ನ್ ಇವರು ಉತ್ತರ ಕೊಡುತ್ತಾ ಈಗ ಕಾಣೆಯಾಗಿರುವ ಶ್ರೀಮತಿ ಅಸಫ್ ಆಲಿಯವರ, ಹೆಸರಿನಲ್ಲಿರುವ ಒಂದು ಮೋಟರುಕಾರು ಮ್ಯಾಜಿಸ್ಟ್ರೇಟರ ಅಪ್ಪಣೆ ಮೇರೆಗೆ ಜಪ್ತಿ ಮಾಡಿದುದು ನಿಜವೆಂದೂ, ಅವರು ಕಾರು ಕೊಂಡೊಯ್ದುದಕ್ಕೆ ಇದು ತಮ್ಮದೆಂದು ರುಜುಪಡಿಸಲು ಬರಲಿಲ್ಲವೆಂದೂ ಹೇಳಿದರು.

ಸ್ಥಾನಬದ್ಧರಿಗೆ ನೋಟೀಸು

ಕೇಂದ್ರ ಸರಕಾರ ಇಲ್ಲವೇ ಕೇಂದ್ರ ಸರಕಾರದ ಆಜ್ಞೆಯಿಂದ ಸ್ಥಾನಬದ್ಧತೆಯಲ್ಲಿಡಲಾದ ೧೧೫ ಮಂದಿಗೆ ಅವರ ಸ್ಥಾನಬದ್ಧತೆಯ ಕಾರಣಗಳನ್ನು ೧೯೪೪ರ ಆರ್ಡಿನೆನ್ಸ ಪ್ರಕಾರ ನೋಟೀಸು ಮೂಲಕ ತಿಳಿಸಿದ್ದು ಅವರಲ್ಲಿ ೬೨ ಜನರಿಂದ ಉತ್ತರ ಬಂದಿದೆಯೆಂದೂ ಗೃಹ ಮಂತ್ರಿಗಳು ತಿಳಿಸಿದರು. ಇಂಥ ನೋಟೀಸುಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಮಹಾತ್ಮಾಗಾಂಧಿಯವರಿಗೂ ಜಾರಿಮಾಡಲಾಗಿತ್ತೋ ಎಂದು ಕೇಳಿದ್ದಕ್ಕೆ ಜಾರಿಮಾಡಲಾಗಿತ್ತೆಂದರು.

ಸ್ಥಾನಬದ್ಧರಿಂದ ಬಂದ ಉತ್ತರಗಳನ್ನು ಪರೀಕ್ಷಿಸಲಾಗುತ್ತಿದೆಯೆಂದು ಅವರ ಬಿಡುಗಡೆ ಮಾಡಲಾಗಲಿಲ್ಲವೆಂದೂ, ಗಾಂಧಿಜಿಯವರಿಂದ ಬಂದ ಉತ್ತರದ ವಿವರ ಹೇಳಲಾಗುವುದಿಲ್ಲವೆಂದೂ ತಿಳಿಸಲಾಗಿದೆ.

The Bank of Mangalore Limited, Mangalore.

ESTD. 1931.

HEAD OFFICE Mangalore. *BRANCHES* BUNDER MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

~~**Savings bank Accounts 1½% p. a. on daily balances.**~~

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೀನೆ, ಸಕ್ಷವಾತ, ನೊಡಿಮ ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗ್ಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ ೩೮] ತಾರೀಕು 14—4—1944 [ಸಂಚಿಕೆ ೧೫]

ಸರಕಾರದಿಂದ ೧೫ ಸಾವಿರ ರೂಪಾಯಿ!

ಎಂ. ಎನ್. ರಾಯರಿಗೆ ಪ್ರತಿ ತಿಂಗಳು!

ಸ್ಥಾನಬದ್ಧರಿಗೆ ನೋಟೀಸು ಹೋಗಿದೆ.

ಎಂ. ಎನ್. ರಾಯರಿಂದ ಸರಕಾರ ೧೫ ಸಾವಿರ ರೂಪಾಯಿ ಕೊಡುತ್ತದೆ!

ಕೇಂದ್ರ ಎಸೆಂಬ್ಲಿಯಲ್ಲಿ ಕೂಲಿಗಾರ ಖಾತೆಯಿಂದ ಪ್ರತಿ ತಿಂಗಳು ಶ್ರೀ. ಎಂ. ಎನ್. ರಾಯರ ಮುಖಾಂತರ ಹಿಂದಿ ಕೂಲಿಗಾರ ಮಹಾ ಮಂಡಳಕ್ಕೆ ೧೫ ಸಾವಿರ ರೂಪಾಯಿ ಕೊಡಲಾಗುವುದೇ ಎಂದೂ, ಹಾಗೆ ಕೊಡುವುದಿದ್ದರೆ ಯಾವ ಉದ್ದೇಶದಿಂದ ಕೊಡಲಾಗುತ್ತದೆಯೆಂದೂ ಕೇಳಿದ್ದಕ್ಕೆ ಕೂಲಿಗಾರ ಮಂತ್ರಿ ಡಾ। ಅಂಬೇಡಕರರು ಉತ್ತರ ಕೊಡುತ್ತಾ, ಔದ್ಯೋಗಿಕ ಕೂಲಿಕಾರರ ಶಿಸ್ತು ಕಾಯ್ದುಕೊಂಡು ಹೋಗಲು ಪ್ರಚಾರ ಮಾಡುವ ಸಲುವಾಗಿ ೧೫ ಸಾವಿರ ರೂಪಾಯಿ ಅವರಿಗೆ ಕೊಡಲಾಗುತ್ತದೆಂದೂ ಈ ಹಣದ ಖರ್ಚಿನ ಲೆಕ್ಕ ಪತ್ರ ಅವರು ಸರಕಾರಕ್ಕೆ ಒಪ್ಪಿಸುತ್ತಾರೆಂದೂ ಹೇಳಿದರು.

ಇದೊಂದು ಆಶ್ಚರ್ಯಕರವಾದ ಸುದ್ದಿ. ಎಂ. ಎನ್. ರಾಯ್ ಅವರ ಇಂದಿನ ಕಾಂಗ್ರೆಸ್ ವಿರೋಧವನ್ನು ನಾವೀಗ ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು. ಇತ್ತೀಚೆಗೆ ರಾಯ್‌ಯವರ 'ಇಂಡಿಪೆಂಡೆಂಟ್ ಇಂಡಿಯಾ' ದಿನ ಪತ್ರಿಕೆಯೂ ಏದ್ದೂ ಇಂದು ಅರ್ಥವಾಗುವುದು. ಸರಕಾರದ ಧೋರಣವನ್ನು ರಾಯ್‌ಯವರು ಎತ್ತಿ ಹಿಡಿದುದೂ ಇದರಿಂದಲೇ ಎಂದು ನಾವು ಹೇಳಬಹುದು.

ಕಳೆದ ನವಂಬರಿನಲ್ಲಿ ಜಮುನಾದಾಸ ಮೆಹತಾರವರು, 'ನಾನೂ ಎಂ. ಎನ್. ರಾಯ್‌ಯವರೂ ಪ್ರತಿತಿಂಗಳು ೧೫ ಸಾವಿರ ರೂಪಾಯಿ ಸರಕಾರದಿಂದ ಪಡೆಯುತ್ತಿದ್ದೇವೆಂದು ಹೇಳುವುದು ಅಸತ್ಯ'ವೆಂದು ಹೇಳಿದ್ದರು. ಮೆಹತಾರವರಿಗೆ ನಾವು ಮಾಡುವ ಕೆಲಸ ತಮಗೇ ನಾಚಿಕೆ ಹುಟ್ಟಿರಬೇಕು.

ಎಂ. ಎನ್. ರಾಯ್‌ಯವರ ಮತ್ತು ಜಾಯಿಸ್ವರ ಗುಟ್ಟು ಹೀಗೆ ಹೊರಬಿತ್ತು. ಈಗ ನಮ್ಮ ಕಮ್ಯುನಿಸ್ಟ 'ಕಾಮ್ರೇಡು'ಗಳಿದ್ದಾರೆ.

ಏಕೆ ವಿಕ್ರಮೋತ್ಸವ?

ವಿಕ್ರಮ ಸಂವತ್ಸರದ ಮಿಲಿಯೋತ್ಸವ ಹಿಂದೂ ದೇಶದಲ್ಲಿ ಅಭೂತ ಪೂರ್ವ ಉತ್ಸವದಿಂದ ಆಚರಿಸಲ್ಪಟ್ಟಿತು. ರಾಜಕೀಯ ದಾಸ್ಯದಿಂದ ತುಳಿಯಲ್ಪಟ್ಟ ಜನತೆ ತನ್ನ ಗತ ವೈಭವವನ್ನು ನೆನೆಸಿ ಕೊಳ್ಳುವುದೇನೋ ಸಹಜ. ವಿಕ್ರಮಾದಿತ್ಯ, ಅಶೋಕ, ಚಂದ್ರಗುಪ್ತ, ಅಕ್ಬರ, ಶಾಹಜಹಾನರ ಕಾಲದ ಕತೆಗಳನ್ನು ನೆನೆ ನೆನೆದು ನಾವು ಹಿಗ್ಗುತ್ತೇವೆ.

ಪಂಡಿತ ಜವಾಹರಲಾಲರು ಒಮ್ಮೆ ಹೇಳಿದ್ದರು: ನನಗೆ ಈ ರಾಜಾಧಿರಾಜರ ಮೇಲೆ ಏನೇನೂ ಅಭಿಮಾನವಿಲ್ಲ. ಅವರಲ್ಲಿ ಅಭಿಮಾನವಿಡತಕ್ಕ ಅಂಶ ಕೂಡ ಇಲ್ಲ" ಎಂದು, ಒಮ್ಮೆಯೇ ಮೊನ್ನೆ ಮೊನ್ನೆ ಭಾರತದ ಜನತೆ ವಿಕ್ರಮಾರಾಧಕರಾದದ್ದು ನೋಡಿ ತುಸು ದಿಗಿಲು ಹುಟ್ಟಿತು. ಯಾವನಾದರೊಬ್ಬ ಪ್ರಖ್ಯಾತ ರಾಜನ ಕುರಿತು ಆರಾಧಿಸಬೇಕೆಂದಿದ್ದರೆ ಅಶೋಕನನ್ನು ಆರಾಧಿಸಬಹುದಿತ್ತಲ್ಲಾ? ವಿಕ್ರಮನಿಗಿಂತಲೂ ಅಶೋಕ ಪ್ರಖ್ಯಾತ ರಾಜ. ಕಾಳಿ ದಾಸನ ಉತ್ಸವ ಆಚರಿಸಬಹುದಿತ್ತು, ಆತ ಭಾರತದ ರಾಷ್ಟ್ರೀಯ ಕವಿ.

ವಿಕ್ರಮ ಉತ್ಸವ ಸಮಿತಿಯ ಕಾರ್ಯದರ್ಶಿ ಹೊರಡಿಸಿದ ಪ್ರಕಟಣೆಯಲ್ಲಿ ಆತನ ವಿಷಯ ಹೇಳುವಾಗ 'ಹಿಂದೂ ಸಾಮ್ರಾಜ್ಯ ಸ್ಥಾಪಕ' ಎಂದು ಬರೆದಿತ್ತು. ಹಿಂದುಗಳು 'ಹಿಂದೂ ಸಾಮ್ರಾಜ್ಯ ಸ್ಥಾಪಕ'ನ ದಿನ ಆಚರಿಸುವುದು, ವಿಕ್ರಮನು ಹಿಂದೂ ಸಾಮ್ರಾಟನಾಗಿ ಆತ ಹಿಂದೂ ಧರ್ಮ ಉದ್ಧಾರಕನಾಗಿ ಈ ಉತ್ಸವ.

ಮುಸ್ಲಿಮರು 'ಪಾಕಿಸ್ಥಾನ' ಕೂಗು ಹೇಳಿ ಹೇಗೆ ರಾಷ್ಟ್ರಕ್ಕೆ ಹಾನಿ ಮಾಡುತ್ತಾರೋ ಹಿಂದುಗಳು ಹಿಂದೂ ಕೂಗೆಬ್ಬಿಸಿ ಅಷ್ಟೇ ಹಾನಿ ಮಾಡುತ್ತಾರೆ. ಭಾರತದಲ್ಲಿ ಹಿಂದೂ ಮುಸ್ಲಿಂ ವೀರರ ಆರಾಧನೆ ನಡೆವುದು ಇಂದಿಗೆ ಹಿತವಲ್ಲ; 'ಭಾರತ ವೀರ'ರ ಆರಾಧನೆ ನಡೆಯಬೇಕು. ಯಾವ ಉತ್ಸವವಾದರೂ ರಾಷ್ಟ್ರೀಯ ಉತ್ಸವವಾಗಿರಬೇಕು. ಆದರಿಂದ ಮಾತ್ರ ಭಾರತಕ್ಕೆ ಏಳಿಗೆಯಿದೆ. ಹಿಂದೂ ಮುಸ್ಲಿಮರೆಲ್ಲರೂ ಕೂಡಿ ಮಾಡುವ ಉತ್ಸವ ಅದೇ ಇಂದಿಗೂ ಮುಂದಿಗೂ ಬೇಕು.

ದೇಶದ ಹಿತದ ದೃಷ್ಟಿಯಿಟ್ಟು ಇನ್ನು ಮುಂದಾದರೂ ಇಂಥಾ ಉತ್ಸವಗಳು ಧಾರ್ಮಿಕ ಉತ್ಸವಗಳು ನಿಲ್ಲಬೇಕು, ರಾಷ್ಟ್ರೀಯ ಉತ್ಸವಗಳು ಹೆಚ್ಚಬೇಕು.

ಲಕ್ನೋದಲ್ಲಿ ಪಕ್ಷರಹಿತ ಮುಖಂಡರ ಸಮ್ಮೇಳನ

ಲಕ್ನೋದಲ್ಲಿ ಪಕ್ಷರಹಿತ ಮುಂದಾಳುಗಳ ಮೂರನೆಯ ಸಮ್ಮೇಳನವು ಕಳೆದ ವಾರ ನಡೆಯಿತು. ಸರ್ ತೇಜ್ ಬಹದ್ದೂರ್ ಸಪ್ರೂ ಇವರು ಅಧ್ಯಕ್ಷರಾಗಿದ್ದರು. ಸರ್ ಸಪ್ರೂಗಳು ವೈಸರಾಯ್ ಎಕ್ಸಿಕುಟಿವ್ ಕೌನ್ಸಿಲಿನ ವಿಷಯ ಪ್ರಸ್ತಾಪಿಸುತ್ತಾ ಇದರಲ್ಲಿ ೧೦ ಮಂದಿ ಭಾರತೀಯರಿರುವರೆಂದು ಹೇಳಲಾಗುತ್ತಿದ್ದರೂ, ಕಳೆದ ೨೫ ವರ್ಷಗಳಲ್ಲಿ ಈಗಿನ ಕೌನ್ಸಿಲಿನಷ್ಟು ನೈತಿಕ ಗೌರವ ಕಳಕೊಂಡು ಜನತೆಯ ಮೇಲೆ ಏನೂ ಪ್ರಭಾವ ಬೀರದ ಒಂದು ಕೌನ್ಸಿಲು ಇರಲಿಲ್ಲವೆಂದರು.

ಕೆಲ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಶಾಸನ ಸಭಾವಿಶ್ವಾಸ ಪಾತ್ರರಾದವರೇ ಅಧಿಕಾರದಿಂದ ತಳ್ಳಲ್ಪಟ್ಟ ವಿಚಾರ ಅವರು ಟೀಕಿಸಿದರು. ಇನ್ನು ಕೆಲ ಪ್ರಾಂತ್ಯಗಳಲ್ಲಿ ಗವರ್ನರರ ನಿರಂಕುಶಾಧಿಕಾರ ನಡೆವುದನ್ನು ಖಂಡಿಸಿದರು. ಜನತೆಯ ಒಪ್ಪಿಗೆಯಿಲ್ಲದೆ ತೆರಿಗೆ ಹೊರಿಸುವ ಸಾರ್ವಜನಿಕ ಹಣವನ್ನು ತಮ್ಮಿಷ್ಟ ಬಂದಂತೆ ಖರ್ಚು ಮಾಡುವ ವಿಷಯವನ್ನು ಅವರು ಟೀಕಿಸಿದರು. ಇಂಡಿಯಾ ಆಕ್ಟಿನ ೯೩ನೇ ಪ್ರಕರಣ ದುರುಪಯೋಗವಾಗುತ್ತದೆಂದರು. ಗವರ್ನರರ ಎಡ್ವೈಸರೀ ಮಂಡಳದ ಕ್ರಮ, ನಿಯಮ ರಹಿತವೆಂದರು. ಆರ್ಡಿನೆನ್ಸ್ ಆಳಿಕೆ ಕೊನೆಗಾಣಬೇಕೆಂದೇ ಅವರ ಸ್ವಷ್ಟಾಭಿಪ್ರಾಯವಾಗಿದೆ.

ಸರ್ ಸಪ್ರೂಗಳು ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿ ಮಂಡಳದ ಅಗತ್ಯವನ್ನು ವಿವರಿಸಿ, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವಿರಬೇಕೆಂದೂ, ಮುಂದಾಳುಗಳ ಬಿಡುಗಡೆಯಾಗಬೇಕೆಂದೂ ಹೇಳಿದರು. ಗಾಂಧೀಜಿ ಹಾಗೂ ಮುಂದಾಳುಗಳ ಬಿಡುಗಡೆಯಾಗಿ ಆ ಮೇಲೆ ಒಂದು ರಾಷ್ಟ್ರೀಯ ಸಮ್ಮೇಳನ ಜರಗಿಸಬೇಕೆಂದೂ, ಶತ್ರುವು ಭಾರತಕ್ಕೆ ಕಾಲಿಟ್ಟರುವಾಗ ಆತನನ್ನು ಎದುರಿಸು ಕೆಲಸ ಕೈಕೊಳ್ಳಬೇಕೆಂದೂ, ಸಾರಿದರು.

ರಾಷ್ಟ್ರೀಯವಾರದ ರಜತೋತ್ಸವ

ಎಪ್ರಿಲ್ ೬ರಿಂದ ೧೩ರವರೆಗೆ ಭಾರತೀಯರು ರಾಷ್ಟ್ರೀಯ ವಾರವನ್ನು ಆಚರಿಸುತ್ತಾರೆ. ೧೯೧೯ನೇ ಇಸವಿಯಿಂದ ಮೊದಲ್ಗೊಂಡು ಈ ಉತ್ಸವ ನಡೆಯುತ್ತಾ ಬರುತ್ತಿದೆ. ಇಂದಿಗೆ ಇಪ್ಪತ್ತೈದು ವರ್ಷಗಳಾದುವು.

ಇಪ್ಪತ್ತೈದು ವರ್ಷಗಳ ಮೊದಲು ರೌಲೆಟ್ ಕಾನೂನು ವಿರುದ್ಧ ಮೊದಲು ಸತ್ಯಾಗ್ರಹವಾರಂಭವಾಯಿತು. ಎಪ್ರಿಲ್ ೬ನೇ ತಾರೀಕಿಗೆ ಸಾರ್ವತ್ರಿಕ ಹರತಾಳದಿಂದ ಈ ವಾರ ಪ್ರಾರಂಭವಾಗುತ್ತದೆ. ಈ ರೌಲೆಟ್ ಕಾನೂನು ವಿರುದ್ಧ ಚಳವಳ ೧೩ನೇ ತಾರೀಕಿನ ದಿನ ಜಾಲಿಯನ್ ವಾಲಾಬಾಗ್ ಕೊಲೆಯಲ್ಲಿ ಪರಿಣಮಿಸಿತು. ಅಂದಿನಿಂದ ಮೊದಲ್ಗೊಂಡು ಭಾರತೀಯರು ಈ ದಿನವನ್ನು ರಾಷ್ಟ್ರೀಯ ವಾರವಾಗಿ ಆಚರಿಸುತ್ತಾರೆ.

ಶ್ರೀಮತಿ ಅಸಫ್ ಅಲಿಯವರ ಮೋಟರ್ ಕಾರ್ ಜಪ್ತಿ

ಶ್ರೀಮತಿ ಅರುಣಾ ಅಸಫ್ ಅಲಿಯವರ ಹೆಸರಲ್ಲಿದ್ದ, ಅ. ಭಾ. ಮಹಿಳಾ ಪರಿಷತ್ತಿನ ಮೋಟರ್ ಕಾರನ್ನು ಸರಕಾರದವರು ಸ್ವಾಧೀನ ಪಡಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ ಗೃಹಮಂತ್ರಿ ಸರ್ ಥಾರ್ನ್ ಇವರು ಉತ್ತರ ಕೊಡುತ್ತಾ ಈಗ ಕಾಣೆಯಾಗಿರುವ ಶ್ರೀಮತಿ ಅಸಫ್ ಅಲಿಯವರ ಹೆಸರಿನಲ್ಲಿರುವ ಒಂದು ಮೋಟರ್ಕಾರು ಮ್ಯಾಜಿಸ್ಟ್ರೇಟರ ಅಪ್ಪಣೆ ಮೇರೆಗೆ ಏಲಂ ಮಾಡಿದುದು ನಿಜವೆಂದೂ, ಅವರು ಕಾರು ಕೊಂಡೊಯ್ದುದಕ್ಕೆ ಆಸು ತಮ್ಮದೆಂದು ರುಜುಪಡಿಸಲು ಬರಲಿಲ್ಲವೆಂದೂ ಹೇಳಿದರು,

ಸ್ಥಾನಬದ್ಧರಿಗೆ ನೋಟೀಸು

ಕೇಂದ್ರ ಸರಕಾರ ಇಲ್ಲವೇ ಕೇಂದ್ರ ಸರಕಾರದ ಆಜ್ಞೆಯಿಂದ ಸ್ಥಾನಬದ್ಧತೆಯಲ್ಲಿಡಲಾದ ೧೧೫ ಮಂದಿಗೆ ಅವರ ಸ್ಥಾನಬದ್ಧತೆಯ ಕಾರಣಗಳನ್ನು ೧೯೪೪ರ ಆರ್ಡಿನೆನ್ಸ್ ಪ್ರಕಾರ ನೋಟೀಸು ಮೂಲಕ ತಿಳಿಸಿದ್ದು ಅವರಲ್ಲಿ ೬೨ ಜನರಿಂದ ಉತ್ತರ ಬಂದಿದೆಯೆಂದೂ ಗೃಹಮಂತ್ರಿಗಳು ತಿಳಿಸಿದರು. ಇಂಥ ನೋಟೀಸುಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಮಹಾತ್ಮಾಗಾಂಧಿಯವರಿಗೂ ಜಾರಿಮಾಡಲಾಗಿತ್ತೋ ಎಂದು ಕೇಳಿದ್ದಕ್ಕೆ ಜಾರಿಮಾಡಲಾಗಿತ್ತೆಂದರು.

ಸ್ಥಾನಬದ್ಧರಿಂದ ಬಂದ ಉತ್ತರಗಳನ್ನು ಪರೀಕ್ಷಿಸಲಾಗುತ್ತಿದೆಯೆಂದು ಅವರ ಬಿಡುಗಡೆ ಮಾಡಲಾಗಲಿಲ್ಲವೆಂದೂ, ಗಾಂಧಿಜಿಯವರಿಂದ ಬಂದ ಉತ್ತರದ ವಿವರ ಹೇಳಲಾಗುವುದಿಲ್ಲವೆಂದೂ ತಿಳಿಸಲಾಗಿದೆ.

The Bank of Mangalore Limited, Mangalore.

ESTD. 1931.

HEAD OFFICE BUNDER Mangalore. MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc,. apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of 'The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 14—4—1944 [ಸಂಚಿಕೆ 15]

ಸರಕಾರದಿಂದ ೧೩ ಸಾವಿರ ರೂಪಾಯಿ!

ಎಂ. ಎನ್. ರಾಯರಿಗೆ ಪ್ರತಿ ತಿಂಗಳು!

ಸ್ಥಾನಬದ್ಧರಿಗೆ ನೋಟೀಸು ಹೋಗಿದೆ.

ಎಂ. ಎನ್. ರಾಯರಿಂದ ಸರಕಾರ ೧೩ ಸಾವಿರ ರೂಪಾಯಿ ಕೊಡುತ್ತದೆ!

ಕೇಂದ್ರ ಎಸೆಂಬ್ಲಿಯಲ್ಲಿ ಕೂಲಿಗಾರ ಖಾತೆಯಿಂದ ಪ್ರತಿ ತಿಂಗಳು ಶ್ರೀ. ಎಂ. ಎನ್. ರಾಯರ ಮುಖಾಂತರ ಹಿಂದಿ ಕೂಲಿಗಾರ ಮಹಾ ಮಂಡಳಕ್ಕೆ ೧೩ ಸಾವಿರ ರೂಪಾಯಿ ಕೊಡಲಾಗುವುದೇ ಎಂದೂ, ಹಾಗೆ ಕೊಡುವುದಿದ್ದರೆ ಯಾವ ಉದ್ದೇಶದಿಂದ ಕೊಡಲಾಗುತ್ತದೆಯೆಂದೂ ಕೇಳಿದ್ದಕ್ಕೆ ಕೂಲಿಗಾರ ಮಂತ್ರಿ ಡಾ। ಅಂಬೇಡಕರರು ಉತ್ತರ ನೀಯುತ್ತಾ, ಔದ್ಯೋಗಿಕ ಕೂಲಿಕಾರರ ಶಿಸ್ತು ಕಾಯ್ದುಕೊಂಡು ಹೋಗಲು ಪ್ರಚಾರ ಮಾಡುವ ಸಲುವಾಗಿ ೧೩ ಸಾವಿರ ರೂಪಾಯಿ ಅವರಿಗೆ ಕೊಡಲಾಗುತ್ತದೆಂದೂ ಈ ಹಣದ ಖರ್ಚಿನ ಲೆಕ್ಕ ಪತ್ರ ಅವರು ಸರಕಾರಕ್ಕೆ ಒಪ್ಪಿಸುತ್ತಾರೆಂದೂ ಹೇಳಿದರು.

ಇದೊಂದು ಆಶ್ಚರ್ಯಕರವಾದ ಸುದ್ದಿ. ಎಂ. ಎನ್. ರಾಯ್ ಇವರ ಇಂದಿನ ಕಾಂಗ್ರೆಸ್ ವಿರೋಧವನ್ನು ನಾವೀಗ ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು. ಇತ್ತೀಚೆಗೆ ರಾಯ್‌ಯವರ 'ಇಂಡ್‌ಪೆಂಡೆಂಟ್ ಇಂಡಿಯಾ' ದಿನ ಪತ್ರಿಕೆಯಾದದ್ದೂ ಇಂದು ಅರ್ಥವಾಗುವುದು. ಸರಕಾರದ ಧೋರಣವನ್ನು ರಾಯ್‌ಯವರು ಎತ್ತಿ ಹಿಡಿದುದೂ ಇದರಿಂದಲೇ ಎಂದು ನಾವು ಹೇಳಬಹುದು.

ಕಳೆದ ನವಂಬರಿನಲ್ಲಿ ಜಮುನಾದಾಸ ಮೆಹತಾರವರು, 'ನಾನೂ ಎಂ. ಎನ್. ರಾಯ್‌ಯವರೂ ಪ್ರತಿತಿಂಗಳು ೧೩ ಸಾವಿರ ರೂಪಾಯಿ ಸರಕಾರದಿಂದ ಪಡೆಯುತ್ತಿದ್ದೇವೆಂದು ಹೇಳುವುದು ಅಸತ್ಯ' ವೆಂದು ಹೇಳಿದ್ದರು. ಮೆಹತಾರವರಿಗೆ ತಾವು ಮಾಡುವ ಕೆಲಸ ತಮಗೇ ನಾಚಿಕೆ ಹುಟ್ಟಿರಬೇಕು.

ಎಂ. ಎನ್. ರಾಯ್‌ಯವರ ಮತ್ತು ರಾಯಿಸ್ಟರ ಗುಟ್ಟು ಹೀಗೆ ಹೊರಬಿತ್ತು. ಈಗ ನಮ್ಮ ಕಮುನಿಸ್ಟ 'ಕಾಮ್ರೇಡು'ಗಳಿದ್ದಾರೆ.

'ಏಕೆ ವಿಕ್ರಮೋತ್ಸವ?

ವಿಕ್ರಮ ಸಂವತ್ಸರದ ದ್ವಿಲಿಯೋತ್ಸವ ಹಿಂದೂ ದೇಶದಲ್ಲಿ ಅಭೂತ ಪೂರ್ವ ಉತ್ಸವದಿಂದ ಆಚರಿಸಲ್ಪಟ್ಟಿತು. ರಾಜಕೀಯ ದಾಸ್ಯದಿಂದ ತುಳಿಯಲ್ಪಟ್ಟ ಜನತೆ ತನ್ನ ಗತ ವೈಭವವನ್ನು ನೆನೆಸಿ ಕೊಳ್ಳುವುದೇನೋ ಸಹಜ. ವಿಕ್ರಮಾದಿತ್ಯ ಅಶೋಕ, ಚಂದ್ರಗುಪ್ತ, ಅಕ್ಬರ, ಶಾಜಹಾನರ ಕಾಲದ ಕತೆಗಳನ್ನು ನೆನೆ ನೆನೆದು ನಾವು ಹಿಗ್ಗುತ್ತೇವೆ.

ಪಂಡಿತ ಜವಾಹರಲಾಲರು ಒಮ್ಮೆ ಹೇಳಿದ್ದರು: ನನಗೆ ಈ ರಾಜಾಧಿ ರಾಜರ ಮೇಲೆ ಏನೇನೂ ಅಭಿಮಾನವಿಲ್ಲ. ಅವರಲ್ಲಿ ಅಭಿಮಾನವಿಡತಕ್ಕ ಅಂಶ ಕೂಡ ಇಲ್ಲ "ಎಂದು, ಒಮ್ಮೆಯೇ ಮೊನ್ನೆ 'ಮೊನ್ನೆ ಭಾರತದ ಜನತೆ ವಿಕ್ರಮಾರಾಧಕರಾದದ್ದು ನೋಡಿ ತುಸು ದಿಗಿಲು ಹುಟ್ಟಿತು. ಯಾವನಾದರೊಬ್ಬ ಪ್ರಖ್ಯಾತ ರಾಜನ ಕುರಿತು ಆರಾಧಿಸಬೇಕೆಂದಿದ್ದರೆ ಅಶೋಕನನ್ನು ಆರಾಧಿಸಬಹುದಿತ್ತಲ್ಲಾ? ವಿಕ್ರಮನಿಗಿಂತಲೂ ಅಶೋಕ ಪ್ರಖ್ಯಾತ ರಾಜ. ಕಾಳಿ ದಾಸನ ಉತ್ಸವ ಆಚರಿಸಬಹುದಿತ್ತು, ಆತ ಭಾರತದ ರಾಷ್ಟ್ರೀಯ ಕವಿ.

ವಿಕ್ರಮ ಉತ್ಸವ ಸಮಿತಿಯ ಕಾರ್ಯದರ್ಶಿ ಹೊರಡಿಸಿದ ಪ್ರಕಟಣೆಯಲ್ಲಿ ಆತನ ವಿಷಯ ಹೇಳುವಾಗ 'ಹಿಂದೂ ಸಾಮ್ರಾಜ್ಯ ಸ್ಥಾಪಕ' ಎಂದು ಬರೆದಿತ್ತು. ಹಿಂದುಗಳು 'ಹಿಂದೂ ಸಾಮ್ರಾಜ್ಯ ಸ್ಥಾಪಕ'ನ ದಿನ ಆಚರಿಸುವುದು, ವಿಕ್ರಮನು ಹಿಂದೂ ಸಾಮ್ರಾಟನಾಗಿ ಆತ ಹಿಂದೂ ಧರ್ಮ ಉದ್ಧಾರಕನಾಗಿ ಈ ಉತ್ಸವ..

ಮುಸ್ಲಿಮರು 'ಪಾಕಿಸ್ಥಾನ' ಕೂಗು ಹೇಳಿ ಹೇಗೆ ರಾಷ್ಟ್ರಕ್ಕೆ ಹಾನಿ ಮಾಡುತ್ತಾರೋ ಹಿಂದುಗಳು ಹಿಂದೂ ಕೂಗೆಬ್ಬಿಸಿ ಅಷ್ಟೇ ಹಾನಿ ಮಾಡುತ್ತಾರೆ. ಭಾರತದಲ್ಲಿ ಹಿಂದೂ ಮುಸ್ಲಿಂ ವೀರರ ಆರಾಧನೆ ನಡೆವುದು ಇಂದಿಗೆ ಹಿತವಲ್ಲ; 'ಭಾರತ ವೀರ'ರ ಆರಾಧನೆ ನಡೆಯಬೇಕು. ಯಾವ ಉತ್ಸವವಾದರೂ ರಾಷ್ಟ್ರೀಯ ಉತ್ಸವವಾಗಿರಬೇಕು. ಅದರಿಂದ ಮಾತ್ರ ಭಾರತಕ್ಕೆ ಏಳಿಗೆಯಿದೆ. ಹಿಂದೂ ಮುಸ್ಲಿಮರೆಲ್ಲರೂ ಕೂಡಿ ಮಾಡುವ ಉತ್ಸವ ಅದೇ ಇಂದಿಗೂ ಮುಂದಿಗೂ ಬೇಕು.

ದೇಶದ ಹಿತದ ದೃಷ್ಟಿಯಿಟ್ಟು ಇನ್ನು ಮುಂದಾದರೂ ಇಂಥಾ ಉತ್ಸವಗಳು ಧಾರ್ಮಿಕ ಉತ್ಸವಗಳು ನಿಲ್ಲಬೇಕು, ರಾಷ್ಟ್ರೀಯ ಉತ್ಸವಗಳು ಹೆಚ್ಚಬೇಕು.

ಲಕ್ನೋದಲ್ಲಿ ಪಕ್ಷರಹಿತ ಮುಖಂಡರ ಸಮ್ಮೇಳನ

ಲಕ್ನೋದಲ್ಲಿ ಪಕ್ಷರಹಿತ ಮುಂದಾಳುಗಳ ಮೂರನೆಯ ಸಮ್ಮೇಳನವು ಕಳೆದ ವಾರ ನಡೆಯಿತು. ಸರ್ ತೇಜ್ ಬಹದ್ದೂರ್ ಸಪ್ರೂ ಇವರು ಅಧ್ಯಕ್ಷರಾಗಿದ್ದರು. ಸರ್ ಸಪ್ರೂಗಳು ವೈಸರಾಯ್ ಎಕ್ಸಿಕುಟಿವ್ ಕೌನ್ಸಿಲಿನ ವಿಷಯ ಪ್ರಸ್ತಾಪಿಸುತ್ತಾ ಇದರಲ್ಲಿ ೧೦ ಮಂದಿ ಭಾರತೀಯರಿರುವರೆಂದು ಹೇಳಲಾಗುತ್ತಿದ್ದರೂ, ಕಳೆದ ೨೫ ವರ್ಷಗಳಲ್ಲಿ ಈಗಿನ ಕೌನ್ಸಿಲಿನಷ್ಟು ನೈತಿಕ ಗೌರವ ಕಳಕೊಂಡು ಜನತೆಯ ಮೇಲೆ ಏನೂ ಪ್ರಭಾವ ಬೀರದ ಒಂದು ಕೌನ್ಸಿಲು ಇರಲಿಲ್ಲವೆಂದರು.

ಕೆಲ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಶಾಸನ ಸಭಾ ವಿಶ್ವಾಸ ಪಾತ್ರರಾದವರೇ ಅಧಿಕಾರದಿಂದ ತಳ್ಳಲ್ಪಟ್ಟ ವಿಚಾರ ಅವರು ಟೀಕಿಸಿದರು. ಇನ್ನು ಕೆಲ ಪ್ರಾಂತ್ಯಗಳಲ್ಲಿ ಗವರ್ನರರ ನಿರಂಕುಶಾಧಿಕಾರ ನಡೆವುದನ್ನು ಖಂಡಿಸಿದರು. ಜನತೆಯ ಒಪ್ಪಿಗೆಯಿಲ್ಲದೆ ತೆರಿಗೆ ಹೇರಿಸುವ ಸಾರ್ವಜನಿಕ ಹಣವನ್ನು ತಮ್ಮಿಷ್ಟ ಬಂದಂತೆ ಖರ್ಚು ಮಾಡುವ ವಿಷಯವನ್ನು ಅವರು ಟೀಕಿಸಿದರು. ಇಂಡಿಯಾ ಡಿಫೆನ್ಸ ೯೩ನೇ ಪ್ರಕರಣ ದುರುಪಯೋಗವಾಗುತ್ತದೆಂದರು. ಗವರ್ನರರ ಎಡ್ವೈಸರೀ ಮಂಡಳದ ಕ್ರಮ, ನಿಯಮ ರಹಿತವೆಂದರು. ಆರ್ಡಿನೆನ್ಸ್ ಆಳಿಕೆ ಕೊನೆಗಾಣಬೇಕೆಂದೇ ಅವರ ಸ್ವಷ್ಟಾಭಿಪ್ರಾಯವಾಗಿದೆ.

ಸರ್ ಸಪ್ರೂಗಳು ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿ ಮಂಡಳದ ಆಗತ್ಯವನ್ನು ವಿವರಿಸಿ, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವಿರಬೇಕೆಂದೂ, ಮುಂದಾಳುಗಳ ಬಿಡುಗಡೆಯಾಗಬೇಕೆಂದೂ ಹೇಳಿದರು. ಗಾಂಧೀಜಿ ಹಾಗೂ ಮುಂದಾಳುಗಳ ಬಿಡುಗಡೆಯಾಗಿ ಆ ಮೇಲೆ ಒಂದು ರಾಷ್ಟ್ರೀಯ ಸಮ್ಮೇಳನ ಜರಗಿಸಬೇಕೆಂದೂ, ಶತ್ರುವು ಭಾರತಕ್ಕೆ ಕಾಲಿಟ್ಟರು ವಾಗ ಆತನನ್ನು ಎದುರಿಸು ಕೆಲಸ ಕೈಕೊಳ್ಳಬೇಕೆಂದೂ, ಸಾರಿದರು.

ರಾಷ್ಟ್ರೀಯವಾರದ ರಜತೋತ್ಸವ

ಎಪ್ರಿಲ್ ೬ರಿಂದ ೧೩ರವರೆಗೆ ಭಾರತೀಯರು ರಾಷ್ಟ್ರೀಯ ವಾರವನ್ನು ಆಚರಿಸುತ್ತಾರೆ. ೧೯೧೯ನೇ ಇಸವಿಯಿಂದ ಮೊದಲ್ಗೊಂಡು ಈ ಉತ್ಸವ ನಡೆಯುತ್ತಾ ಬರುತ್ತಿದೆ. ಇಂದಿಗೆ ಇಪ್ಪತ್ತೈದು ವರ್ಷಗಳಾದುವು.

ಇಪ್ಪತ್ತೈದು ವರ್ಷಗಳ ಮೊದಲು ರೌಲೆಟ್ ಕಾನೂನು ವಿರುದ್ಧ ಮೊದಲು ಸತ್ಯಾಗ್ರಹವಾರಂಭವಾಯಿತು. ಎಪ್ರಿಲ್ ೬ನೇ ತಾರೀಕಿಗೆ ಸಾರ್ವತ್ರಿ ಹರತಾಳದಿಂದ ಈ ವಾರ ಪ್ರಾರಂಭವಾಗುತ್ತದೆ. ಈ ರೌಲೆಟ್ ಕಾನೂನು ವಿರುದ್ಧ ಚಳವಳ ೧೩ನೇ ತಾರೀಕಿನ ದಿನ ಜಾಲಿಯನ್ ವಾಲಾಬಾಗ್ ಕೊಲೆಯಲ್ಲಿ ಪರಿಣಮಿಸಿತು. ಅಂದಿನಿಂದ ಮೊದಲ್ಗೊಂಡು ಭಾರತೀಯರು ಈ ದಿನವನ್ನು ರಾಷ್ಟ್ರೀಯ ವಾರವಾಗಿ ಆಚರಿಸುತ್ತಾರೆ.

ಶ್ರೀಮತಿ ಅಸಫ್ ಅಲಿಯವರ ಮೋಟರ್ ಕಾರ್ ಜಪ್ತಿ

ಶ್ರೀಮತಿ ಅರುಣಾ ಅಸಫ್ ಅಲಿಯವರ ಹೆಸರಲ್ಲಿದ್ದ, ಅ. ಭಾ. ಮಹಿಳಾ ಪರಿಷತ್ತಿನ ಮೋಟರ್ ಕಾರನ್ನು ಸರಕಾರದವರು ಸ್ವಾಧೀನ ಪಡಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ ಗೃಹಮಂತ್ರಿ ಸರ್ ಥಾರ್ನ್ ಇವರು ಉತ್ತರ ಕೊಡುತ್ತಾ ಈಗ ಕಾಣೆಯಾಗಿರುವ ಶ್ರೀಮತಿ ಅಸಫ್ ಆಲಿಯವರ ಹೆಸರಿನಲ್ಲಿರುವ ಒಂದು ಮೋಟರುಕಾರು ಮೇಜಿಸ್ಟ್ರೇಟರ ಅಪ್ಪಣೆ ಮೇರೆಗೆ ಏಲಂ ಮಾಡಿದುದು ನಿಜವೆಂದೂ, ಅವರು ಕಾರು ಕೊಂಡೊಯ್ದದಕ್ಕೆ ಅದು ತಮ್ಮದೆಂದು ರುಜುಪಡಿಸಲು ಬರಲಿಲ್ಲವೆಂದೂ ಹೇಳಿದರು.

ಸ್ಥಾನಬದ್ಧರಿಗೆ ನೋಟೀಸು

ಕೇಂದ್ರ ಸರಕಾರ ಇಲ್ಲವೇ ಕೇಂದ್ರ ಸರಕಾರದ ಆಜ್ಞೆಯಿಂದ ಸ್ಥಾನಬದ್ಧತೆಯಲ್ಲಿಡಲಾದ ೧೧೫ ಮಂದಿಗೆ ಅವರ ಸ್ಥಾನಬದ್ಧತೆಯ ಕಾರಣಗಳನ್ನು ೯೪೪ರ ಆರ್ಡಿನೆನ್ಸ್ ಪ್ರಕಾರ ನೋಟೀಸು ಮೂಲಕ ತಿಳಿಸಿದ್ದು ಅವರಲ್ಲಿ ೬೨ ಜನರಿಂದ ಉತ್ತರ ಬಂದಿದೆಯೆಂದೂ ಗೃಹಮಂತ್ರಿಗಳು ತಿಳಿಸಿದರು. ಇಂಥ ನೋಟೀಸುಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಮಹಾತ್ಮಾ ಗಾಂಧಿಯವರಿಗೂ ಜಾರಿಮಾಡಲಾಗಿತ್ತೋ ಎಂದು ಕೇಳಿದ್ದಕ್ಕೆ ಜಾರಿಮಾಡಲಾಗಿತ್ತೆಂದರು.

ಸ್ಥಾನಬದ್ಧರಿಂದ ಬಂದ ಉತ್ತರಗಳನ್ನು ಪರೀಕ್ಷಿಸಲಾಗುತ್ತಿದೆಯೆಂದು ಅವರ ಬಿಡುಗಡೆ ಮಾಡಲಾಗಲಿಲ್ಲವೆಂದೂ, ಗಾಂಧಿಜಿಯವರಿಂದ ಬಂದ ಉತ್ತರದ ವಿವರ ಹೇಳಲಾಗುವುದಿಲ್ಲವೆಂದೂ ತಿಳಿಸಲಾಗಿದೆ.

ಯುದ್ಧ ಕಥೆಗಳು ೧

ಸೆಬಾಸ್ಟೊಪೋಲ್ — ಯುದ್ಧದ ನೆನಹು

ಟಾಲ್‌ಸ್ಟಾಯ್

ಮಿಲಿಟರಿ ಕಾಲೇಜಿನಿಂದ ಈಗ ತಾನೇ ಹೊರಗೆ ಬಂದ ಬಗ್ಗ್ಯ ಹುಡುಗನೊಬ್ಬ ಸೆಬಾಸ್ಟೊಪೋಲಿಗೆ ಹೋಗುತ್ತಾನೆ. ಹುಡುಗಿಯರು ಮದುವೆಯ ಮರುದಿನ ಸಂತೋಷದಿಂದ ಕುಣಿಯುವಂತೆ ಅವನು ಕುಣಿಯುತ್ತಿದ್ದನು ಕೆಲ ತಿಂಗಳ ಹಿಂದೆ. ಜಾಣನಾದ ದರ್ಜಿ ಬಲು ಜಾಗರೂಕತೆಯಿಂದಲೂ ಶ್ರಮದಿಂದಲೂ ತಯಾರಿಸಿದ ಆಫೀಸರ ಯೂನಿಫಾರ್ಮ್ ಬಟ್ಟೆಗಳನ್ನು ಹಾಕಿದಾಗ ಹುಡುಗತನ ಮರೆಯಾಗಿ ಅವನು ಧೀರನಾದುದು ನಿನ್ನೆಯೋ ಎನ್ನುವಂತಿದೆ. ಮಿಲಿಟರಿ ಅಧಿಕಾರಿಗಳು ಬರುವಾಗ ಸರಿಯಾಗಿ ನಿಂತು ಸಲಾಂಮಾಡಬೇಕಾದುದಿಲ್ಲ ಅವನು; ತಾನು ಅಡ್ಡಾಡುವಾಗ ಸಿಪಾಯಿಗಳೆಲ್ಲ ಬಿಗಿಯಾಗಿ ನಿಂತು ಸಲಾಂ ಮಾಡುತ್ತಿರಲು ಅವನು ಅಲಕ್ಷ್ಯದಿಂದ ಕೈಯೆತ್ತಿ ಅವರ ಗೌರವವನ್ನು ಸ್ವೀಕರಿಸುವನು. ನಿನ್ನೆ ತಾನೇ ಅವನ ಸೈನ್ಯದ ಮುಖ್ಯಾಧಿಕಾರಿಯಾದ 'ಜನರಲ್' ಸರಿಸಮಾನನಂತೆ ಅವನನ್ನು ಮಾತಾಡಿಸಿದ್ದಾನೆ. ಮುಂದಿನ ಮಿಲಿಟರಿ ಜೀವನ ಅವನ ಪಾಲಿಗೆ ಯಶಸ್ವಿಯಾಗಲು ಕಾದಿದೆ. ಅವನ ದಾಡಿ ಅವನ ಹೊಸರೀತಿ ನೋಡಿ ಬಲು ಅಚ್ಚರಿಗೊಂಡದ್ದು ನಿನ್ನೆಯಲ್ಲವೆ? ತಾಯಿ ಸಂತಸದಿಂದ ಅವನನ್ನು ಮುದ್ದಿಟ್ಟು ತಬ್ಬಿಕೊಂಡು ಮೈದಡವಿದಾಗ ಅವನಿಗೆ ಹೆಮ್ಮೆಯೂ ನಾಚಿಕೆಯೂ ಆಗಲಿಲ್ಲವೆ? ನಿನ್ನೆ ತಾನೆ ಚೆಲುವೆಯಾದ ಹುಡುಗಿಯೊಬ್ಬಳು ಭೇಟಿಯಾದಾಗ ಅವರಿಬ್ಬರೂ ಸಂತೋಷದಿಂದ ಏನೇನನ್ನೋ ಮಾತನಾಡುತ್ತಾ ಮುಗುಳುನಗೆಯನ್ನು ಬಿಗಿಹಿಡಿದಿದ್ದಾರೆ. ಅವಳು, ಅವಳಿಗಿಂತ ಸಾವಿರಪಾಲು ಚೆನ್ನಾದ ಹುಡುಗಿಯರು, ಅವನನ್ನು ಪ್ರೀತಿಸಬಹುದು, ಪ್ರೀತಿಸಲೇಬೇಕು. ಇದೆಲ್ಲ ಅಲ್ಪ ವಿಷಯ, ಆತ್ಮಪ್ರಶಂಸೆ, ಹುಚ್ಚಾಟ ಆಗಿರಬಹುದು. ಆದರೆ ಅದು ನಿಷ್ಕಲ್ಮಷವಾದುದರಿಂದ ಪ್ರಿಯವಾಗಿದೆಯಲ್ಲವೆ?

ಅವನೀಗ ಸೆಬಾಸ್ಟಪೋಲಿನಲ್ಲಿದ್ದಾನೆ. ಅಲ್ಲಿ ನಡೆಯುತ್ತಿರುವುದರಲ್ಲಿ ಏನೋ ವಿಚಿತ್ರವಿದೆ ಕೆಡುಕಿದೆ ಎನ್ನುವುದು ಅವನಿಗೆ ಮನವರಿಕೆಯಾಗುತ್ತದೆ. ಅನೇಕ ದೈಹಿಕ ಮಾನಸಿಕ ಶಕ್ತಿಗಳಿಂದ ಹೆಸರುಗೊಂಡ ಅವನು ಮಮತೆಯ ತಾಯಿ ಮಾತ್ರವಲ್ಲದೆ ಇತರರೂ ಅನೇಕ ಮಹತ್ಕಾರ್ಯಗಳನ್ನು ನಿರೀಕ್ಷಿಸುತ್ತಿರುವ ಅವನು, ಜನರು ಸಾಯುವ, ಕೈ ಕಾಲು ಮುರಿದು ಬೀಳುವ ಕಡೆಗೆ ಹೋಗಬೇಕೆನ್ನುತ್ತಾನೆ ಅವನ ಮುಖ್ಯಾಧಿಕಾರಿ. ಅವನನ್ನು ಎಲ್ಲರೂ ಒಲಿಯುತ್ತಾರೆ ಒಲಿಯಬೇಕು. ಅವನ ಪ್ರಾಣ ತನಗೆ ಎಲ್ಲಕ್ಕಿಂತ ಮುಖ್ಯ ಎಂದು ಆಡಿದ್ದು ಅವನ ಬಗೆಗೇ ಎಂಬುದನ್ನು ಮುಖ್ಯಾಧಿಕಾರಿ ಅಲ್ಲಗಳೆಯುವುದಿಲ್ಲ. ಅವನು ಈಗ ಹೇಳುವುದಿಷ್ಟೆ 'ಹೋಗು, ಸಾವಿಗೆ ಸಿದ್ಧನಾಗು' ಎರಡು ಬಗೆಯ ಹೆದರಿಕೆಯಿಂದ ಈ ಹುಡುಗನ ಎದೆ ನಡುಗುತ್ತದೆ. ಮರಣ ಭಯ ಒಂದೆಡೆ, ಅಪಮಾನ ಭಯ ಇನ್ನೊಂದೆಡೆ. ತಾನು ಸಾಯುಹೋದರೂ ಒಂದೇ, ಇಲ್ಲೇ ಉಳಿದರೂ ಒಂದೇ ಎಂದು ನಟಿಸುತ್ತ ತನ್ನ ಕಾರ್ಯದಲ್ಲಿಯೂ ಹಾಸಿಗೆ ಮತ್ತು ಇತರ ಸಾಮಾನುಗಳಲ್ಲಿಯೂ ಆಸಕ್ತಿ ತೋರಲು ಸಿದ್ಧನಾಗುತ್ತಾನೆ. ಜನರು ಮೃತ್ಯುವಿಗೆ ತುತ್ತಾಗುವೆಡೆ ಹೋಗುವಾಗ ಅವನು ಯೋಚಿಸುವ ಬಗೆ-ಹೀಗೆ, 'ಅಲ್ಲಿ ಜನರು ಸಾಯುತ್ತಾರೆಂದು ಹೇಳುವುದು ಮಾತ್ರ; ನಿಜಸ್ಥಿತಿ ಹಾಗಿಲ್ಲ. ಹಾಗೇನೂ ಆಗಲಾರದು. ಆದರೆ ಯುದ್ಧಮುಖದಲ್ಲಿ ಅರೆತಾಸು ಕಳೆಯುವುದರೊಳಗಾಗಿ ನಿಜವಾದ ಪರಿಸ್ಥಿತಿ ತಾನೆಣಿಸಿದುದಕ್ಕಿಂತ ಬಹಳ ಭಯಂಕರವೂ ಅಸಹನೀಯವೂ ಇರುವುದು ಅವನಿಗೆ ಚೆನ್ನಾಗಿಯೇ ಗೊತ್ತಾಗುತ್ತದೆ. ಹುಮ್ಮಸಿನಿಂದ ಮುನ್ನುಗ್ಗುವ ಆರೋಗ ದೃಢಕಾಯನಾದವನೊಬ್ಬ ಅಲ್ಲಿರುತ್ತಾನೆ. ತತ್‌ಕ್ಷಣ ಏನೋ ಮಿಂಚಿದಂತಾಗಿ ಅವನ ಮಗ್ಗುಲಲ್ಲಿರುವ ಮಸಣದ ರಾಶಿಗೆ ಬಿದ್ದುಬಿಡುತ್ತಾನೆ. ಇದರಿಂದ ಅಲ್ಲಿನ ಭೀಕರ ಅರ್ಕಿ ಪಶ್ಚಾತ್ತಾಪಗಳೂ ಅಲ್ಲಿ ನಡೆಯುವ ಎಲ್ಲ ಕಾರ್ಯಭಾರಗಳ ಅನಾವರಣವೂ ಆ ನವಯುವಕನಿಗೆ ಮನದಟ್ಟಾಗುತ್ತವೆ. ಅದು ಬೀಭತ್ಸವಾಗಿರುವುದರಿಂದ ಅದರ ವಿಷಯ ಯೋಚಿಸುವುದಾಗಲಿ ಅದನ್ನು ನೋಡುವುದಾಗಲಿ ಸಲ್ಲದು, ಆಲೋಚಿಸದಿರುವುದೂ ಅಸಾಧ್ಯ. 'ಆಗ ಅವನಿಗೆ ಈ ಗತಿಯಾಯಿತು. ಇಷ್ಟರಲ್ಲಿಯೇ ನನಗೂ ಇದೇ ಗತಿ. ಇದು ಏಕೆ, ಹೇಗೆ? ಅವರು ನನಗೇಕೆ ಹಾಗೆ ಮಾಡಬೇಕು? ನಾನು ಅಷ್ಟೊಂದು ಒಳ್ಳೆಯವನು, ಅಷ್ಟೊಂದು ಪ್ರೀತಿ ಪಾತ್ರ,—ನನ್ನ ದಾದಿಗೂ ತಾಯಿಗೂ 'ಅವಳಿಗೂ' ಮಾತ್ರವಲ್ಲ, ಅನೇಕರಿಗೆ, ಪ್ರತಿಯೊಬ್ಬರಿಗೂ ಪ್ರೀತಿ ಪಾತ್ರ. ಸೆಬಾಸ್ಟೊಪೋಲಿಗೆ ಬರುವ ದಾರಿಯಲ್ಲಿ ಟಪಾಲು ಗಾಡಿಗಳ ನಿಲುದಾಣಗಳಲ್ಲಿ ಜನರು ನನಗೆ ಎಷ್ಟೊಂದು ಆದರ ತೋರಿದರು, ನಾವು ಎಷ್ಟೊಂದು ನಕ್ಕು ನಲಿದೆವು; ಎಷ್ಟೊಂದು ಪ್ರೀತಿಯಿಂದ ಅವರು ನನಗೆ ಹೊಗೆಸೇದ ಕೊಟ್ಟರು! ಇಲ್ಲಿ ನನಗಾರೂ ಹುಕ್ಕಾ ಕೊಡುವವರಿಲ್ಲ; ಮಾತ್ರವಲ್ಲದೆ, ಈ ದೇಹವನ್ನು ಕೈಕಾಲುಗಳನ್ನು ಈ ಅಸ್ತ್ರಶಸ್ತ್ರಗಳನ್ನು ಹಾಳುಮಾಡಿ ಕೆಡಹಿದ್ದರೂ, ಆ ಮನುಷ್ಯನಂತೆ ನನ್ನನ್ನು ಕೊಂದರೂ, ಯಾರೂ ಕೇಳುವವರಿಲ್ಲ. ಇಷ್ಟೇ ಅಲ್ಲ ಎಲ್ಲರನೆ ಅದನ್ನೇ ಅಪೇಕ್ಷಿಸುತ್ತಾರೋ ಎನ್ನುವಂತಿದೆ. ಹೌದು ನಾನು ಕೂಡ ಯಾರಿಗೂ ಬೇಡವಾಗಿದ್ದೇನೆ. ಯಾರಿಗೂ ಬೇಡವಾದವನು ಇಲ್ಲಿಗೇಕೆ ಹೇಗೆ ಬಂದೆ?' ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತಾನೆ, ಆದರೆ ಉತ್ತರ ದೊರೆಯುವುದಿಲ್ಲ. ಇದನ್ನೆಲ್ಲ ವಿವರಿಸುವವರಾಗಲಿ, ಸ್ವಲ್ಪ ಧೈರ್ಯ ಹೇಳುವವರಾಗಲಿ ದೊರೆತರೆ ಆದೀತು ಎನಿಸುತ್ತದೆ ಅವನಿಗೆ. ಯಾರೂ ಹಾಗೆ ಹೇಳುವವರಿಲ್ಲ. ಪ್ರಾಯಶಃ ಯಾರೂ ಹಾಗೆ ಹೇಳಲಾರರೇನೊ! ಆ ರೀತಿ ಹೇಳಲು ಅಪಮಾನ ಪಟ್ಟುಕೊಳ್ಳುತ್ತಾರೆ, ಹೇಳಲು ಯತ್ನಿಸುವುದೂ ಇಲ್ಲ. ಆದರೆ ತಾನೇಕೆ ಅಲ್ಲಿದ್ದೇನೆ ಎಂದು ಕೊಳ್ಳುತ್ತಾನೆ ಆ ಪೋರ. ಅಳಬೇಕೆನಿಸುತ್ತದೆ ಅವನಿಗೆ. ಆದರೆ ಯಾವ ಬಗೆಯ ಉತ್ತರವೂ ಹೊಳೆಯುವುದಿಲ್ಲ. ನೋವಿನಿಂದ ಎದೆ ಕುಗ್ಗಿ ಹೋಗುತ್ತದೆ. ಒಬ್ಬ ಸಾರ್ಜಂಟ್ ಬರುತ್ತಲೆ ಈ ಯುವಕ ತನ್ನ ಮನಸ್ಸಿನ ಸ್ಥಿತಿಯನ್ನು ಮರೆಮಾಚುತ್ತಾನೆ, ನಟಿಸುತ್ತಾನೆ... ಕಾಲಕಳೆಯುತ್ತಲೇ ಇದೆ. ಇತರರು ಅವನೆಡೆ ನೋಡುತ್ತಾರೆ; ಅಥವಾ ನೋಡುತ್ತಾರೆಂದು ಅವನೆಣಿಸುತ್ತಾನೆ. ಆದುದರಿಂದ ತನ್ನ ಅಲ್ಪ ಮನಸ್ಸು ಹೊರಬಿದ್ದು ಅಪಮಾನವಾಗದಂತೆ ಸರ್ವಪ್ರಯತ್ನ ಮಾಡುತ್ತಾನೆ. ಅಪಮಾನವಾಗದಿರಬೇಕಾದರೆ ಅವರು ವರ್ತಿಸುವಂತೆಯೇ ಇವನೂ ವರ್ತಿಸಬೇಕು—ಯೋಚನೆ ಮಾಡುವುದನ್ನು ಬಿಟ್ಟು ಬಿಟ್ಟು ಕುಡಿಯುವುದು, ಹೊಗೆಸೇದುವುದು, ಹಾಸ್ಯದಲ್ಲಿ ಕಾಲಕಳೆಯುವುದು, ಈ ರೀತಿಯಿಂದ ಅವನ ಮನಸ್ಸಿನ ಆಗುಹೋಗುಗಳನ್ನು ಮುಚ್ಚಿಕೊಳ್ಳುತ್ತಾನೆ. ಹೀಗೆ ಒಂದು ದಿನ ಕಳೆಯುತ್ತದೆ, ಎರಡು ಮೂರು ದಿನ, ಒಂದು ವಾರ....ಹೀಗೆ ತನ್ನ ಹೇಡಿತನವನ್ನು ಮುಚ್ಚುವುದು, ಆಲೋಚನೆಗಳನ್ನು ನಿಗ್ರಹಿಸುವುದು ಅವನಿಗೆ ಅಭ್ಯಾಸವಾಗುತ್ತದೆ. ಅವನ ಮನಸ್ಸಿಗೆ ಬಹಳ ವ್ಯಥೆಯ ವಿಷಯವೆಂದರೆ ತಾನು ಮಾತ್ರ ಹೀಗೆ ಮುಂದುಗಾಣದೆ ಯಾಕೆ ಇಲ್ಲಿ ಈ ಅಸಹನೀಯ ಪರಿಸ್ಥಿತಿಯಲ್ಲಿದ್ದೇನೆಂದು ತಿಳಿಯದೆ ಇರುವುದು. ಬೇರೆಯವರಿಗೆಲ್ಲ ತಮ್ಮ ಇರವಿನ ಅರ್ಥವಾಗಿದೆ ಎಂದೆಣಿಸುತ್ತಾನೆ ಅವನು; ಆದ್ದರಿಂದ ಅವರು ಮುಚ್ಚುಮರೆ ಇಲ್ಲದಿರಬೇಕು ಎಂದು ಬಯಸುತ್ತಾನೆ. ಎಲ್ಲರೂ ತನ್ನ ಹಾಗೆಯೇ ಇದ್ದಾರೆಂದು ಒಪ್ಪಿಕೊಂಡರೆ ತನ್ನ ಪಾಡು ಕೊಂಚ ಸಹನೀಯವಾಗುತ್ತದೆ ಎಂದುಕೊಳ್ಳುತ್ತಾನೆ. ಆದರೆ ಇತರರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುವಂತೆ ಮಾಡುವುದು ಅವನಿಗೆ ಅಸದಳವಾಗುತ್ತದೆ. ಅವರಿವರ ಉತ್ತರಣ (ಪ್ರಮೋಷನ್) ಪಡಿ (ರೇಷನ್) ಇಸ್ಪೀಟು ಮುಂತಾದ ವಿಷಯ ಮಾತಾಡುವುದು ಸುಲಭ. ಸಹಜ ಹೀಗೆ ದಿನಗಳು ಕಳೆಯುತ್ತವೆ; ಏನೂ ಯೋಚಿಸದಿರುವುದು, ಕೇಳದಿರುವುದು, ತಾನು ಮಾಡುವ ವಿಷಯ ಹೇಳದಿರುವುದು—ಇವು ಅವನಿಗೆ ರೂಢಿಯಾಗುತ್ತದೆ. ಆದರೆ ತನ್ನ ಪ್ರಕೃತಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಅವನಿಗೆ ಮನವರಿಕೆಯಾಗುತ್ತದೆ. ಹೀಗೆ ತಿಂಗಳುಗಳು ಉರುಳುತ್ತವೆ, ಹುಡುಗ ಸಾಯದೆ ಗಾಯಗೊಳ್ಳದೆ ಯುದ್ಧ ಮುಗಿಯುತ್ತದೆ.

ಮನಸ್ಸಿನ ಕಿರುಕುಳ ಮುಗಿಯಿತು. ಅವನು ಎಷ್ಟರಮಟ್ಟಿಗೆ ಹೆದರಿಕೊಂಡಿದ್ದ, ಹೇಗೆ ಓಡಿಹೋಗಬೇಕೆಂದಿದ್ದ, ಆದರೂ ಏಕೆ ಉಳಿದುಕೊಂಡ ಎಂಬುದು ಯಾರಿಗೂ ಗೊತ್ತಿಲ್ಲ; ಕೊನೆಗೆ ಅವನಿಗೆ ಉಸಿರೆಳೆಯಲು ಅವಕಾಶ ದೊರೆಯಿತು; ಹಿಂದೆ ನಡೆದುದನ್ನು ಜ್ಞಾಪಿಸಿಕೊಂಡು ಯೋಚಿಸಲು ಪುರುಸೊತ್ತಾಯಿತು. ನಡೆದುದೇನು? ಅನೇಕ ತಿಂಗಳು ತಾನು ಹೆದರಿಕೊಂಡು ಯಾತನೆಯನ್ನನುಭವಿಸ ಅದನ್ನು ಬೇರೆಯವರಿಂದ ಮರೆಮಾಚಿದ್ದು. ಸಾಹಸ ಕಾರ್ಯಗಳು, ಎಂದರೆ ಹೆಮ್ಮೆ ಪಟ್ಟುಕೊಳ್ಳಬಹುದಾದ ಕೆಲಸಗಳು, ಯಾವುವೂ ಇಲ್ಲ. ನನ್ನ ಒಂದೇ ಒಂದು ಸಾಹಸವೆಂದರೆ ನೂರಾರು ಜನರು ತಲೆಯಲ್ಲೊ ಎದೆಯಲ್ಲೊ ಇನ್ನೆಲ್ಲೆಲ್ಲೊ ಗುಂಡು ಬಿದ್ದು ಸಾಯುತ್ತಿರಲು ನಾನು ಅಲ್ಲೇ ಇದ್ದರೂ ನಿರಪಾಯನಾಗಿ ಬಹುಕಾಲ ಗುಂಡಿಗೆ ತುತ್ತಾಗಲು ಕಾದಿದ್ದುದು. ಇದೆಲ್ಲ ನನ್ನ ಸ್ವಂತ ವಿಷಯವಾಯಿತು. ಇನ್ನು, ನನಗೆ ಸಾರ್ವಜನಿಕ ಕಾರ್ಯದಲ್ಲಿ ಭಾಗವಿತ್ತು. ಎಂಥ ಸಾರ್ವಜನಿಕ ಕಾರ್ಯ? ನೂರಾರು, ಸಾವಿರಾರು ಜನರನ್ನು ಕೊಲ್ಲುವುದು. ಇನ್ನೇನು? ಸೆಬಾಸ್ಟೊಪೋಲ್ — ನಾವು ರಕ್ಷಿಸಿದ ಸೆಬಾಸ್ಟೊಪೋಲ್—ಶತ್ರುವಶವಾಗಿ ನಮ್ಮ ನೌಕಾ ಸೈನ್ಯ ಮುಳುಗಿ ಯೆರೂಸಲೇಮ್ ಚರ್ಚಿನ ಬೀಗದ ಕೈ ಹಿಂದಿನ ಮಾಲಿಕರಲ್ಲೇ ಉಳಿದು ರಷ್ಯಾ ದೇಶಕ್ಕೆ ಅಪಮಾನವಾದುದು. ಇದರ ಕೊನೆ ಎಲ್ಲಿ? ನನ್ನ ಹುಚ್ಚು ಹುಮ್ಮಸಿನಿಂದಲೂ ಎಳೆತನದಿಂದಲೂ ಸಿಕ್ಕಿಬಿದ್ದು ತಪ್ಪಿಸಿಕೊಳ್ಳಲಾರದೆ ಏಳು ತಿಂಗಳು ಉಳಿದುದರಲ್ಲಿಯೇ ಇದರ ಪರ್ಯವಸಾನವೇ ಇನ್ನೇನೂ ಇಲ್ಲವೆ?

ಈ ಬಗೆಯ ಆಲೋಚನೆ ಬರುವುದು ಸಹಜ. ಕಾರಣವಿಷ್ಟೆ, ಮೊದಲನೆಯದಾಗಿ, ಯುದ್ಧದ ಪರಿಣಾಮ ಲಜ್ಜಾಕರವಾಗಿದ್ದುದು. ಎರಡನೆಯದಾಗಿ ಅವನಿಗೆ ಹೆಚ್ಚಿನ ಗಾಯಗಳೇನೂ ಆಗದೆ ಇರುವುದರಿಂದ ಅವನ ಸಂಕಟಕ್ಕೆ ಕಾರಣ ಯಾವುದೋ ತಪ್ಪು ಕೆಲಸವೆನ್ನುವಂತಿಲ್ಲ. ಯಿದ್ಯೋದ್ಯನುವನ್ನು ಬಿಟ್ಟಿದ್ದರೂ ಅವನಿಗೇನೂ ನಷ್ಟವಿರಲಿಲ್ಲ. ಏಕೆಂದರೆ ಯುದ್ಧದಿಂದ ಅವನಿಗೆ ದೊಡ್ಡ ಪದವಿಯೇನೂ ದೊರೆತಿರಲಿಲ್ಲ ಅವನು ಒಂದೊಂದು ಸಲ ಆ ಸ್ಥಿತಿಯಿಂದ ಬಿಡುಗಡೆ ಹೊಂದಲಾರದೆ ಆ ಸ್ಥಿತಿ ತನ್ನಷ್ಟಕ್ಕೆ ತಾನೆ ಮಾಯವಾಗುವ ವರೆಗೆ ಅಲ್ಲೇ ಇರಬೇಕಾಯಿತೆಂಬ ಸತ್ಯವನ್ನು ಹೇಳಬಹುದಿತ್ತು. ಹಾಗೆ ಹೇಳಲು ಅನೇಕವೇಳೆ ಬಯಸುತ್ತಾನೆ. ಆದರೆ 'ಯುದ್ಧವು ಲಜ್ಜಾಸ್ಪದವಲ್ಲ, ಅದು ಹಿತಕಾರಿ, ಅಸಾಧಾರಣ ಹಿತಕಾರಿ' ಎಂದು ಆಗಾಗ ಜನರಾಡುವುದನ್ನು ಕೇಳಿ ಅವನಿಗೆ ಆಶ್ಚರ್ಯವಾಗುತ್ತದೆ. ಅವನು ಭಾಗವಹಿಸಿದ ರಕ್ಷಣಾ ಕಾರ್ಯ ಚರಿತ್ರಾರ್ಹವಾದುದು, ವಿಶ್ವಚರಿತ್ರೆಯಲ್ಲಿ ಅನನ್ಯವಾದುದು, ಸೆಬಾಸ್ಟೊಪೋಲಿನಲ್ಲಿದ್ದ ಇತರರೂ ತಾನೂ ಮಹಾವೀರರು, ತಾನು ಓಡಿಹೋಗದಿದ್ದುದು ವಿಚಿತ್ರವಾದ ಮಹತ್ಕಾರ್ಯ—ಹೀಗೆಲ್ಲ ಮಂದಿ ಆಡುವುದನ್ನು ಕೇಳಿ ಮೊದಲು ಅವನಿಗೆ ಆಚ್ಚರಿಯಾಗುತ್ತದೆ. ಅನಂತರ ಅದರಲ್ಲಿ ಕೊಂಚ ಆದರ ಹುಟ್ಟುತ್ತದೆ. ಕ್ರಮೇಣ ಪೂರ್ಣ ಸತ್ಯಾಂಶವನ್ನು ಹೇಳುವ ಶಕ್ತಿಯನ್ನು ಮನಃಸ್ಥೈರ್ಯವನ್ನು ಕಳೆದುಕೊಳ್ಳುತ್ತಾನೆ. ಅವನ ಒಡನಾಡಿಗಳ ಗುಟ್ಟನ್ನು ಹೇಗೆ ಬಿಟ್ಟು ಕೊಡಬಲ್ಲ? ಆದರೂ ಅರ್ಧ ಸತ್ಯವನ್ನಾದರೂ ಹೇಳಬಯಸಿ ಅಲ್ಲಿ ನಡೆದ ವಿಷಯಗಳನ್ನು ಬಣ್ಣಿಸಿ ತನ್ನ ಅನುಭವಗಳನ್ನು ಹೇಳಲೆಳಸುತ್ತಾನೆ; ಯುದ್ಧದಲ್ಲಿ ತನ್ನ ಪಾತ್ರವನ್ನು ವರ್ಣಿಸುತ್ತಾನೆ; ಸುತ್ತ ಮುತ್ತ ಜನರು ಸಾಯುತ್ತಿರುವುದನ್ನು ನೋಡಿ ತಾನು ಭಯ ಜಗುಪ್ಸೆ ಕರುಣೆಗಳನ್ನು ತೋರಿದುದನ್ನು ಬರೆಯುತ್ತಾನೆ.

ಸಮರ ಭೂಮಿಯ ಸಂಚಾರ

ಮಣಿಪುರವನ್ನು ಜಪಾನರು ಪ್ರವೇಶಿಸಿದ್ದೆ, ಒಮ್ಮೆಲೇ ಭಾರತದಾಕ್ಯಂತವು ಬಹು ಕಳವಳ ಹುಟ್ಟಿದೆ. ಭಾರತದ ಮೇಲೆ ಜಪಾನರೇನೋ ಆಗಾಗ ಬಂದು ಬಾಂಬೊಗೆಯುತ್ತಿದ್ದರೂ, ಮಣಿಪುರಕ್ಕೆ ಬರುವ ಮುನ್ನ ಭಾರತದಲ್ಲಿ ಅವರು ಕಾಲೂರಿರಲಿಲ್ಲ. ಹೀಗಾಗಿ ಮಣಿಪುರಕ್ಕೆ ಜಪಾನರು ಬಂದ ಮೇಲೆ ದಿನ ನಿತ್ಯದ ಯುದ್ಧ ಸುದ್ದಿಗೆ ಒಂದು ಕಳೆಯೇರಿದೆ? ಜಪಾನರು ಈಗ ಎಲ್ಲಿಗೆ ಬಂದಿದ್ದಾರೆ; ಎಷ್ಟು ಮುಂದುವರಿದಿದ್ದಾರೆ, ಇದೇ ಎಲ್ಲಾ ಕಡೆಗಳಲ್ಲಿಯೂ ಜನರು ತಮ್ಮ ತಮ್ಮೊಳಗೆ ಕೇಳಿಕೊಳ್ಳುವ ಪ್ರಶ್ನೆಯಾಗಿದೆ.

ಬಂಗಾಳದ ಗವರ್ನರ್ ಕೇಸಿಯವರೇ ಒಂದು ಹೇಳಿಕೆಯಲ್ಲಿ 'ಜಪಾನರು ನಮ್ಮ ಬಳಿ ಬಂದಿದ್ದಾರೆ ಕಲ್ಕತ್ತದ ಮೇಲೆ ಇವರ ನೀತಿಯಿದೆ' ಎಂದು ಸಾರಿರುವರು. ಆಗ್ನೇಯ ಸೇನೆಯ ಮುಖ್ಯ ಸೇನಾಪತಿ ಪಿ ಮೌಂಟ್‌ಬ್ಯಾಟನ್‌ರೂ 'ಜಪಾನರು ಹಿಂದು ಸಾಗರ ಮತ್ತು ಬಂಗಾಳ ಕೊಲ್ಲಿಯಲ್ಲಿ ಚಟುವಟಿಕೆ ಹೆಚ್ಚಿಸುತ್ತಿದ್ದಾರೆ'ಂದು ಹೇಳಿದ್ದಾರೆ. ಹೀಗಾಗಿ ಅಧಿಕಾರೀ ಮಂಡಳಿದಲ್ಲಿಯೇ ಜಪಾನರ ಇಂದಿನ ಚಟುವಟಿಕೆಗಳ ಕುರಿತು ಉದ್ವೇಗವಿದೆಯೆಂದು ತೋರುತ್ತದೆ.

ಜಪಾನ್ ಕಾಳಗ

ಅಸಾಮಿನ ಶ್ರೇಷ್ಠ ಭತ್ತದ ಕಣಜವಾದ ಇಂಫಾಲನ್ನು ಆಕ್ರಮಿಸಲು ಕಳೆದ ಮೂರು ವಾರದಿಂದ ಜಪಾನರು ದಾಳಿಯಿಟ್ಟು ಹೊಂಚು ಹಾಕುತ್ತಿದ್ದಾರೆ ಕಳೆದ ಮೂರುವಾರಗಳಲ್ಲಿ ಜಪಾನರು ಬಲು ದೂರದ ದಾರಿಯನ್ನು ದಾಟಿದ್ದಾರೆ ಟಾಮು ನಗರವನ್ನು ಆಕ್ರಮಿಸಿದ್ದಾರೆ. ಟಿಡ್ಡಂನಿಂದ ಬರುವ ದಾರಿಯಲ್ಲಿ ಶತ್ರು ಒತ್ತಾಟವು ಹೆಚ್ಚಾಗುತ್ತಾ ಬಂದಿದ್ದು ಇಂಫಾಲಿನ ಮೇಲೆ ಶತ್ರುಧಾಳಿ ಯಾಗುವುದೆಂಬುದಕ್ಕಿದು ಕುರುಹಾಗಿದೆ. ಬಿಶನಪುರದಿಂದ ಪಶ್ಚಿಮಕ್ಕೆ ಹೋಗುವ ರಸ್ತೆಯ ದಕ್ಷಿಣದಲ್ಲಿ ಜಪಾನರು ಹಾದಿಯನ್ನು ಅಡ್ಡಗಟ್ಟುವ ಚಟುವಟಿಕೆ ಸಾಗಿಸುತ್ತಿದ್ದಾರೆ. ಆದರೆ ಕೊನೆವರೆಗೂ ಮಿತ್ರ ಸೈನ್ಯಗಳು ಸಂರಕ್ಷಕ ಯುದ್ಧಮಾಡಿ ಶತ್ರು ಧಾಳಿಯನ್ನು ನಿರೀಕ್ಷಿಸುತ್ತಾ ಸಾಗುತವು.

ಕೊಹಿಮಾದ ಸುತ್ತಯುದ್ಧ ನಡೆಯುತ್ತಿದೆ. ಬೇರೆ ಕಡೆಗಳಲ್ಲಿ ನಿತ್ಯ ಕ್ರಮದಂತೆ ಗಸ್ತಿ ಚಟುವಟಿಕೆಯಿದೆ ಇಂಫಾಲ ವ್ಯೂಹದಲ್ಲಿ ಸ್ವಲ್ಪ ತಾಟಸ್ಥ್ಯವಿದೆಯೆಂದು ಇತ್ತೀಚೆಗೆ ಬಂದ ಸುದ್ದಿಯಿಂದ ತಿಳಿದು ಬರುತ್ತದೆ. ಅರಕಾನ ವ್ಯೂಹದಲ್ಲಿ ಜಪಾನರ ಒತ್ತಾಟ ಹೆಚ್ಚಾಗುತ್ತಿದೆ. ಮುಖ್ಯವಾಗಿ ಮಾಯೂ ಗುಡ್ಡದ ಬದಿಯಲ್ಲಿ ಶತ್ರುವಿನ ಒತ್ತಾಟವು ಮಾಂಗಡಾವ್, ಬುಥೆಡಾಂಗ್ ರಸ್ತೆಯ ದಕ್ಷಿಣದಲ್ಲಿ ಹೆಚ್ಚಾಗುತ್ತಾ ಬಂದಿದೆ. ಮಧ್ಯ ಬರ್ಮಾದಲ್ಲಿ ಯುದ್ಧವು ವಿಶೇಷವಾಗಿದೆ.

ರಶ್ಯ-ಜಪಾನ್ ಸಂಧಿ

ರಶ್ಯವು ೧೯೭೫ರಲ್ಲಿ ಜಪಾನಿನೊಡನೆ ಮಾಡಿ ಕೊಂಡಿದ್ದ ಎಣ್ಣೆ ಮತ್ತು ಮೀನು ಹಿಡಿವ ಒಪ್ಪಂದವನ್ನು ಪುನರುಜ್ಜೀವಿಸಿದೆ. ಇದರಂತೆ ರಶ್ಯದ ಈ ಶಾನ್ಯಕ್ಕಿರುವ ಮತ್ತು ಜಪಾನಿನ ವಾಯುವ್ಯಕ್ಕಿರುವ ಒಂದು ದ್ವೀಪದ ತುದಿಯಲ್ಲಿದ್ದ ಸಾಕ್ಲೀಸ್ ಎಣ್ಣೆ ಪ್ರದೇಶವನ್ನು ಜಪಾನು ಬಿಟ್ಟುಕೊಟ್ಟಿದೆ. ಈ ಒಪ್ಪಂದದಿಂದ ಜಪಾನ್ ರಶ್ಯ ಮೈತ್ರಿ ಬಲಗೊಂಡಿದೆ, ಜಪಾನ್ ನಲ್ಲಿ ತನ್ನ ಮೇಲೆರಗುವುದೋ ಎಂದು ರಶ್ಯ ಬೆದರಿತ್ತು. ಸೈಬೀರಿಯದಲ್ಲಿರುವ ವಿಮಾನಗೃಹವನ್ನು ರಶ್ಯ ಎಲ್ಲಿ ಮಿತ್ರರಿಗೊಪ್ಪಿಸುವುದೇ ಎಂದು ಜಪಾನು ಅಂಜಿತ್ತು. ಹೀಗೀ ಈ ಒಪ್ಪಂದದಿಂದ ಉಭಯತರ ಅಂಜಿಕೆಯು ಅಡಗಿದೆ. ಜಪಾನರನ್ನು ಪುಡಿ ಹಾರಿಸಬೇಕೆಂದು ಆಂಗ್ಲ ಅಮೇರಿಕನರು ಕಿಡಿಗಾರುತ್ತಿರುವಾಗ ರಶ್ಯ ಹೇಗೆ ಒಪ್ಪಂದ ಮಾಡಿ ಕೊಂಡ ಬಗ್ಗೆ ಮಿತ್ರ ವರ್ಗದಲ್ಲಿ ಅಸಮಾಧಾನವುಂಟಾಗಿದೆಯೆಂದು ಕೇಳಿ ಬರುತ್ತದೆ.

ರಶ್ಯ ರಣರಂಗ

ಕೆಂಪು ಸೈನ್ಯ, ಕಳೆದವಾರ ಪ್ರುಥ್ ನದಿಯನ್ನು ದಾಟಿ ರುಮೇನಿಯಾದಲ್ಲಿ ಕಾಲಿಟ್ಟಿದೆ ಇಲ್ಲಿಂದಲೇ ರಶ್ಯದ ಮೇಲೆ ಧಾಳಿಯಿಟ್ಟು ಸ್ಟಾಲಿನ್‌ಗ್ರಾಡ್ ವರೆಗೆ ಮುನ್ನುಗ್ಗಿದರು ರಶ್ಯನರು ಅವರನ್ನು ಕಳೆದ ಒಂದುವರೆ ವರ್ಷದಲ್ಲಿ ಹಿಂದಟ್ಟಿ ಹೀಗೆ ಓಡಿಸಿದರು. ಇದು ರಶ್ಯನರ ಸಾಹಸದ ಕೆಲಸವೆಂದೇ ಹೇಳಬಹುದು. ಪ್ರುಥ್ ನದಿಯನ್ನು ದಾಟಿ ಸಿರ್ನಾಡಿ ಕೈಗೆ ಬಂದಾಗ ರಶ್ಯನರು ವಿಜಯೋತ್ಸವವನ್ನು ಆಚರಿಸಿದರು. ನಿಜವಾಗಿ ಯಾರಿಗೆ ತಾನೇ ಇಂಥಾ ವಿಜಯದಿಂದ ಹೆಮ್ಮೆಯೆನಿಸಲಿಕ್ಕಿಲ್ಲ.

ಜರ್ಮನರು ಹಿಂದೆ ಹೋದರೇನೋ ಸರಿ ಆದರೆ ಇದು ವರೆಗೆ ಅವರು ಶರಣು ಬಂದಿಲ್ಲ ರಶ್ಯನರು ರುಮೇನಿಯಾದಲ್ಲಿಯೇ ಜರ್ಮನರನ್ನು ಸೋಲಿಸುತ್ತಿದ್ದಾರೆ ರಶ್ಯನರ ಸೇನೆಯ ಎರಡು ವಿಭಾಗ, ಒಂದು ಪೋಲೆಂಡಿನಲ್ಲಿರುವ ಲೋವ್ ನಗರದ ಕಡೆಗೂ, ಇನ್ನೊಂದು ರುಮೇನಿಯಾದ ಕಡೆಗೂ ಮುನ್ನುಗ್ಗುತ್ತಿದೆ.

ಹಲ್ಲರ ಹಿತೋಕ್ತಿ

ಅಮೆರಿಕದ ಮಂತ್ರಿ ಕಾರ್ಡೆಲ್ ಹಲ್ಲರು ಒಂದು ಭಾಷಣ ಮಾಡುತ್ತಾ ಅಮೆರಿಕದ ವಿದೇಶ ನೀತಿಯ ಕುರಿತು ಪ್ರಸ್ತಾಪಿಸಿದರು ತಟಸ್ಥ ರಾಷ್ಟ್ರಗಳು, ತಾಟಸ್ಥ್ಯ ಕಾಪಾಡಿಕೊಳ್ಳಬೇಕೆಂತಲೂ ಶತ್ರುಗಳಿಗೆ ನೆರವಾಗಬಾರದೆಂದೂ ವಿನಂತಿಸಿಕೊಂಟರು. ತಾಟಸ್ಥ್ಯ ರಾಷ್ಟ್ರಗಳು ನಮ್ಮೊಡನೆ ಸೇರಿರೆಂದು ನಾವು ಒತ್ತಾಯ ಪಡಿಸುವುದಿಲ್ಲವಾಗಿ ಹೇಳುತ್ತಾ, ಫೇಸಿಸಮ್ಮನ್ನು ಅಳಿಸಿ, ಶಾಶ್ವತ ಶಾಂತಿಗೆ ನೆರವಾಗುವ ಪ್ರಜಾ ಪ್ರಭುತ್ವವನ್ನು ಜಾರಿಯಲ್ಲಿ ತರುವುದೇ ಮಿತ್ರರ ಗುರಿಯೆಂದು ಹೇಳಿದರು. ಈ ವಿಜಯವು ಶಾಶ್ವತ ಶಾಂತಿಗೆ ನೆರವಾಗಬೇಕಾದರೆ, ಅಮೆರಿಕ, ಬ್ರಿಟಿಷ್ ಕಾಮನ್ ವೆಲ್ತ್, ಚೀನ, ರಶ್ಯಗಳ ಹಿತ ಸಾಧಿಸಬೇಕೆಂದರು. ನಾಜಿಸಂ, ಫೇಸಿಸಂಗಳೊಡನೆ ತಮ್ಮ ಒಪ್ಪಂದವಿಲ್ಲವೆಂದರು. ರೂಸ್‌ವೆಲ್ಟರಾಗಲಿ, ತಾನಾಗಲಿ ಯಾವ ಬಗೆಯ ಗುಪ್ತ ರಾಜಕೀಯ ಒಡಂಬಡಿಕೆಯನ್ನೂ ಮಾಡಿಕೊಂಡಿಲ್ಲವೆಂದರು. ಫ್ರೆಂಚ ರಾಷ್ಟ್ರೀಯ ಸಮಿತಿಯು ಫ್ರಾನ್ಸಿನ ಸರಕಾರವೆಂದು ಒಪ್ಪಲಾರೆವೆಂದರು. ಜಾಗತಿಕ ಶಾಂತಿ ನೆಲೆಗೊಳ್ಳಬೇಕಾದರೆ ಒಂದು ಅಂತರಾಷ್ಟ್ರೀಯ ಸಂಸ್ಥೆ ಪ್ರಬಲವಾಗಬೇಕೆಂದರು. ಹೀಗೆ ಕಾರ್ಡೆಲ್ ಹಲ್ಲರು ಅಮೆರಿಕದ ವಿದೇಶೀ ನೀತಿಯನ್ನು ಬಹಳ ಗಂಭೀರವಾಗಿ ಎಲ್ಲರನ್ನೂ ತಲೆತೂಗಿಸಬೇಕೆಂಬಂತೆ ವಿವರಿಸಿದರು. ಆದರೆ ಈ ತರದ ಹಲವು ಮಾತುಗಳನ್ನು ಹೇಳುವುದಕ್ಕಿಂತ ಯಥಾರ್ಥವಾದ ಒಂದು ಕೃತಿಯನ್ನು ಮಾಡಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯದ ಬಗ್ಗೆ ಈ ಹೋರಾಟವೆಂಬುದನ್ನು ಏಕೆ ಸ್ಪಷ್ಟಪಡಿಸಬಾರದು?

ಇಟಲಿಯಲ್ಲಿ

ಇಟಲಿಯ ಎಲ್ಲಾ ರಣರಂಗಗಳಲ್ಲಿಯೂ ಹವೆ ಅನುಕೂಲವಿದೆ. ಪ್ರತಿಯೊಂದು ಕಡೆಯಲ್ಲಿಯೂ ಚಟುವಟಿಕೆಗಳು ಕಾಣುತ್ತವೆ. ಕೇಸಿನೋ ರಣರಂಗ ಈಗ ಶಾಂತವಾಗಿದೆ. ಅಂಝಿಯೋ ಕರಾವಳಿಯಲ್ಲಿ ಜರ್ಮನರು ರೇಡಿಯೋದಿಂದ ನಡೆಸುತ್ತಿರುವ ಟೆಂಕುಗಳನ್ನು ಉಪಯೋಗಿಸಿದರೆಂದು ಸುದ್ದಿ. ಐದನೇ ದಳವು ಡೇರೆ ಹೊಡೆದಿರುವ ಭಾಗದಲ್ಲಿ ಹಾಕಿದ್ದ ಸರಿಗೆಯ ಬೇಲಿಯನ್ನು ನಾಶ ಗೊಳಿಸಲು ಶುಕ್ರವಾರ ದಿನ ಜರ್ಮನರು ಈ ತರದ ನಾಲ್ಕು ಟೆಂಕುಗಳನ್ನು ಕಳುಹಿಸಿದರೆಂದು ಮುಸಲೋನಿ ಕಾಲುವೆ ಬಳಿ ಅವುಗಳನ್ನು ನಾಶಗೊಳಿಸಲಾಯಿತೆಂದೂ ವಾರ್ತೆಯಿದೆ.

ದಕ್ಷಿಣ ಕನ್ನಡ ಕೊಡಗು ಬೇಸಾಯಗಾರರ ಸಂಘ

ಈ ಸಂಘದ ಪ್ರತಿನಿಧಿಗಳ ಸಭೆಯೊಂದು ೩೦-೩-೧೯೪೪ನೇಯ ದಿನ ಪುತ್ತೂರಲ್ಲಿ ಜರಗಿತು. ಶ್ರೀ. ಸಿ ಎಸ್ ಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಸಂಘದ ನಿಯಮಾವಳಿಗಳನ್ನು ಶ್ರೀ. ಗೋವಿಂದಭಟ್ಟರು ವಿವರಿಸಿ ಹೇಳಿದರು. ಅವು ಸರ್ವಾನುಮತದಿಂದ ಸ್ವೀಕೃತವಾದುವು. ಅನಂತರ ಈ ಹನ್ನೊಂದು ಜನರು ತಾತ್ಕಾಲಿಕ ಕಾರ್ಯಕಾರಿ ಮಂಡಳಿಗೆ ನೇಮಿಸಲ್ಪಟ್ಟರು:-೧. ಶ್ರೀ ಸಿ. ಎಸ್. ಶಾಸ್ತ್ರಿ, ೨. ಶ್ರೀ ಎನ್ ಕೃಷ್ಣ ಭಟ್ಟ, ೩ ಕೆ. ಶ್ಯಾಮಭಟ್ಟ, ೪ ಶ್ರೀ. ದುರ್ಗ ವೆಂಕಟೇಶಭಟ್ಟ, ೫ ಶ್ರೀ. ಕೆ ಪಿ. ಖಾಡಿಲ್ಕಾರ್, ೬. ಶ್ರೀ ಖಂಡಿಗೆ ಮಹಾಲಿಂಗ ಭಟ್ಟ, ೭. ಶ್ರೀ, ಪಿ. ಲಕ್ಷ್ಮೀನಾರಾಯಣರಾವ್, ೮. ಶ್ರೀ ಚಿನ್ನಪ್ಪ ಗೌಡ, ೯. ಶ್ರೀ. ಜಿ. ಕೆ. ಗೋವಿಂದ ಭಟ್ಟ, ೧೦. ಶ್ರೀ. ಕೆ. ವೆಂಕಪ್ಪಯ್ಯ, ೧೧. ಶ್ರೀ. ಕೆ ನಾರಾಯಣ ಭಟ್ಟ. ಅನಂತರ ಶ್ರೀ. ಗೋವಿಂದ ಭಟ್ಟರಿಂದ ಸೂಚಿಸಲ್ಪಟ್ಟು ಶ್ರೀ. ಎನ್. ವಿ ಕೊಳತ್ತಾಯರಿಂದ ಅನುಮೋದಿಸಲ್ಪಟ್ಟ ಎರಡು ಠರಾವುಗಳು ಮಂಡಿಸಲ್ಪಟ್ಟುವು. ಕಾರ್ಯಕಾರ್ಯಕಾರಿ ಮಂಡಳಿಯ ಆರು ಮಂದಿ ಸದಸ್ಯರು ಜಿಲ್ಲಾ ಕಲೆಕ್ಟರರನ್ನು ಕಂಡು ಅಕ್ಕಿ ಭತ್ತಗಳನ್ನು ಪಡೆಯುವುದರಲ್ಲಿ ಅಡಿಕೆ ಬೇಸಾಯಗಾರರಿಗಿರುವ ಸಂಕಷ್ಟಗಳನ್ನು ನಿವೇದಿಸಿಕೊಳ್ಳಬೇಕೆಂದು ಒಂದನೆಯ ಠರಾವು. ಅಡಿಕೆಯ ಬೇಸಾಯಗಾರರ ಗೋಳನ್ನು ವಿವರಿಸಿ, ಗವರ್ನರರ ಬೋಧಕರಿಗೆ ಒಂದು ಮನವಿಯನ್ನು ಕಳುಹಿಸಬೇಕೆಂಬುದು ಎರಡನೆಯ ಠರಾವು, ಎರಡು ಠರಾವುಗಳೂ ಸರ್ವಾನುಮತವಾಗಿ ಸ್ವೀಕರಿಸಲ್ಪಟ್ಟುವು. ಕಾರ್ಯಕಾರಿ ಸಮಿತಿಯ ಕೂಟವೊಂದು ಕಳೆದ ೪ನೆಯ ತಾರೀಕಿಗೆ ಶ್ರೀ. ಕೆ. ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀ. ಎನ್. ಕೃಷ್ಣಭಟ್ಟರು ಸಂಘದ ಅಧ್ಯಕ್ಷರಾಗಿ, ಶ್ರೀ. ಸಿ. ಎಸ್. ಶಾಸ್ತ್ರಿಗಳು ಉಪಾಧ್ಯಕ್ಷರಾಗಿ, ಶ್ರೀ. ಕೆ. ಶಾಮಭಟ್ಟರು ಕೋಶಾಧಿಕಾರಿಗಳಾಗಿ, ಶ್ರೀ ಜಿ ಕೆ. ಗೋವಿಂದಭಟ್ಟರು. ಸಾಮಾನ್ಯ ಕಾರ್ಯದರ್ಶಿಗಳಾಗಿ, ಶ್ರೀ ಪಿ. ಲಕ್ಷ್ಮೀನಾರಾಯಣರಾಯರು ಕಚೇರಿಯ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಅಡಿಕೆ ಬೇಸಾಯಗಾರರ ಗಮನಕ್ಕೆ

ಅಡಿಕೆ ಬೇಸಾಯಗಾರರಿಂದ ಅಧಿಕಾರಿಗಳು ಮಿತಿಮೀರಿ ಅಕ್ಕಿ ಭತ್ತಗಳನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ, ಆ ವಿಷಯದ ವಿವರಗಳನ್ನು ದ ಕನ್ನಡ ಕೊಡಗು ಅಡಿಕೆ ಬೇಸಾಯಗಾರರ ಸಂಘದ ಕಚೇರಿಗೆ ಕೂಡಲೇ ತಿಳಿಸಬೇಕು, ದಕ್ಷಿಣ ಕನ್ನಡ ಕೊಡಗು ಬೇಸಾಯಗಾರರ ಸಂಘ, ಮಹಾತ್ಮ ಗಾಂಧಿರೋಡ್, ಕೊಡಿಯಾಲಬೈಲು, ಮಂಗಳೂರು-ಈ ವಿಳಾಸಕ್ಕೆ ಬರೆಯತಕ್ಕದ್ದು. ಜಿ. ಕೆ. ಗೋವಿಂದ ಭಟ್ಟ, ಕಾರ್ಯದರ್ಶಿ.

ಕಾಸರಗೋಡು

ಶ್ರೀ ಎಂ. ಉಮೇಶರಾಯರು ತಂದೆಯ ಅಸ್ವಸ್ಥತೆಯ ನಿಮಿತ್ತ ಒಂದು ತಿಂಗಳ ಪೆರೋಲಿನಲ್ಲಿ ಬಿಡುಗಡೆಯಾಗಿ ಕಳೆದ ಆದಿತ್ಯವಾರ ಬಂದಿದ್ದಾರೆ.

WANTED

Wanted an L.T, a Kannada Pandit, two secondary grade trained teachers, one Y M C. A trained drill teacher, and a drawing teacher.

Apply to—

The Secretary
Badiadka High School Committee, Perdala P. O., Kasaragod, S K.

ಸ್ವದೇಶಾಭಿಮಾನಿ

ತಾರೀಖು 14—4—1944

ಲಕ್ನೋ ಸಮ್ಮೇಳನ

ಲಕ್ನೋದಲ್ಲಿ ಕಳೆದ ವಾರ ಪಕ್ಷ ರಹಿತ ಮುಖಂಡರು ತೃತೀಯ ಸಮ್ಮೇಳನ ಸೇರಿ; ಅದರಲ್ಲಿ ಮಾಡಿದ ಭಾಷಣಗಳು ಮತ್ತು ಅಲ್ಲಿ ಆದ ನಿರ್ಣಯಗಳು ರಾಷ್ಟ್ರದ ಇಂದಿನ ರಾಜಕೀಯ ಗೊಂದಲವನ್ನು ಸರಿಯಾಗಿ ವಿಶದೀಕರಿಸುತ್ತವೆ. ಸ್ವಾತಂತ್ರ್ಯ, ಪ್ರಜಾ ಪ್ರಭುತ್ವಗಳ ಸಲುವಾಗಿ ಹೋರಾಡಲ್ಪಡುತ್ತಿದೆಯೆಂದು ಸಾರಲಾದ ಇಂದಿನೀ ಯುದ್ಧದ ಯಶಸ್ವೀ ವಿಜಯದ ಸಲುವಾಗಿ ಭಾರತದ ರಾಜಕೀಯ ಸಮಸ್ಯೆಯ ಪರಿಹಾರವು ಎಷ್ಟರ ಮಟ್ಟಿಗೆ ಅವಶ್ಯವಿದೆಯೆಂದು ಅಲ್ಲಿನ ಕಾರ್ಯಕಲಾಪಗಳು ತಿಳಿಸುತ್ತವೆ.

ಇಂದಿಗೆ ನಾಲ್ಕುವರೆ ವರ್ಷಗಳಾದುವು ಎಷ್ಟೋ ಪ್ರಾಂತ್ಯಗಳ ಆಡಳಿತ ಜನತಾ ಪ್ರತಿನಿಧಿಗಳ ಕೈಯಿಂದ ಗವರ್ನರರ ಏಕತಂತ್ರಾಡಳಿತಕ್ಕೆ ಹೋಗಿ ಶಾಸನ ಸಭಾ ಸದಸ್ಯರು ಮಾತಾಡಲು ಉಸಿರಿಲ್ಲದವರಾಗಿದ್ದಾರೆ. ಕಳೆದ ಅರ್ಧ ಶತಮಾನದಿಂದಿತ್ತ ಇಂಥಾ ಒಂದು ಅವಸ್ಥೆ ಭಾರತಕ್ಕೆ ಬಂದಿರಲಿಲ್ಲವೆನಬಹುದು. ಪ್ರಾಂತ್ಯ ಪ್ರಾಂತ್ಯಗಳಲ್ಲಿ ಸರ್ವಾಧಿಕಾರವುಳ್ಳ ಎಡ್ವೈಸರಿ ಆಡಳಿತ ನಡೆದು ಬಂದಿರುತ್ತಾ, ಭಾರತೀಯ ಪ್ರತಿನಿಧಿಗಳಿಂದ ಆಳಲ್ಪಡುತ್ತಿದೆಯೆಂದು ಸಾರಲಾದ ಬ್ರಿಟಿಷ್ ಅಧಿಕಾರ ಶಾಹಿಯು ೯೩ನೇ ನಿಯಮದಂತೆ ಸ್ಥಿರವಾಗಿ ನೆಲೆ ನಿಂತಿದೆ ಈ ಎಡ್ವೈಸರರಲ್ಲಿ ಎಷ್ಟು ಮಂದಿ ಭಾರತೀಯರಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದು. ಲಕ್ನೋ ಸಮ್ಮೇಳನದಲ್ಲಿ ಮಾತನಾಡುತ್ತಾ ಸಪ್ರುಗಳು, ಹಿಂದೆಂದೂ ಉಪಯೋಗಿಸಿರದಂಥಾ ನಿಷ್ಠುರ ವಾಕ್ಯವನ್ನು ಹೇಳಬೇಕಾಯಿತು. 'ಜನತೆಯ ಮೇಲೆ ಗೌರವ ಕಳಕೊಂಡ ನೈತಿಕ ಮರ್ಯಾದೆ ನೀಗಿದ ಆಡಳಿತ ಇಂದಿನಂತೆ ಕಳೆದ ಕಾಲು ಶತಮಾನದಿಂದ ಇಲ್ಲಿ ಇರಲಿಲ್ಲ' ಎಂದು ಅವರು ಹೇಳಿದರು.

ವೈಸರಾಯ್ ಮಂತ್ರಿ ಮಂಡಳದಲ್ಲಿ ಬಹು ಸಂಖ್ಯಾಕ ಭಾರತೀಯರಿರುವರೆಂದು ಬ್ರಿಟಿಷ್ ಆಡಳಿತಗಾರರು ಸಾರುತ್ತಿದ್ದಾರೆ ಆದರೆ ಈ ಭಾರತೀಯರು ಭಾರತದ ಯಾವ ರಾಜಕೀಯ ಪಕ್ಷದ ಪ್ರತಿನಿಧಿಗಳೂ ಆಗಿಲ್ಲವಾಗಿ ಅವರ ಅಸ್ತಿತ್ವಕ್ಕೆ ಭಾರತದ ಜನತೆ ಏನೇನೂ ಬೆಲೆ ಕಟ್ಟುವುದಿಲ್ಲ. ಪ್ರಾಂತ್ಯಗಳಲ್ಲಿ ಗವರ್ನರರು ೯೩ನೇ ನಿಯಮದಂತೆ ಆಳುವುದು ವೈಸರಾಯ್ ಮಂತ್ರಿ ಮಂಡಳದಲ್ಲಿ ಜನತಾ ಪ್ರತಿನಿಧಿಗಳಲ್ಲದ ಭಾರತೀಯರು ಇರುವುದು, ಇದರಿಂದೆಲ್ಲಾ ಭಾರತದ ರಾಜಕೀಯ ಸಮಸ್ಯೆ ಇನ್ನಷ್ಟು ಸಂದಿಗ್ಧವಾಗಲಿದೆ.

ಇಂಥಾ ಭಾರತಕ್ಕೆ ಗಂಡಾಂತರ ಬಂದಿದೆ, ಈ ಗಂಡಾಂತರವನ್ನೆದುರಿಸಲು ಜನತೆಯ ಬೆಂಬಲಬೇಕು; ಎಡ್ವೈಸರೀ ಸರಕಾರ ವೈಸರಾಯ್ ಎಕ್ಸಿಕ್ಯುಟಿವ್ ಆಡಳಿತಗಳಿಗೆಲ್ಲಾ ಜನತೆಯ ಬೆಂಬಲವಿಲ್ಲ ಎಂಬುದನ್ನು ವರೀಕ್ಷಿಸಲು ಜನತೆಯ ಪ್ರತಿನಿಧಿಗಳಾರೆಂಬುದನ್ನು ನೋಡಲು ಸರಕಾರ ಕೂಡಲೇ ಚುನಾವಣೆ ಕೈಕೊಳ್ಳಬೇಕು. ಶತ್ರುವು ಬಾಗಿಲ ಬಳಿ ಬಂದಿರುವಾಗ ಬೆಳ್ಳು ಕಣ್ಣುಳ್ಳ ಕೊಂಡು ಹಾಲು ಕುಡಿದ ಗಾದೆಯಂತೆ ಮಾಡುವುದು ಸರಿಯಲ್ಲ; ದೇಶ ರಕ್ಷಣೆಗೆ ದೇಶದ ಮುಖಂಡರು ಮುಂದಾಗಬೇಕು.

ಲಕ್ನೋ ಸಮ್ಮೇಳನದಲ್ಲಿ ಪಕ್ಷ ರಹಿತ ಮುಖಂಡರು ಮೇಲಿನ ವಿಚಾರಗಳನ್ನು ಚರ್ಚಿಸಿದ್ದಾರೆ. ಚರ್ಚಿಸಿ ಬೇಕಾದ ಸಲಹೆಯಿತ್ತಿದ್ದಾರೆ. ಈ ಸಲಹೆ ಯೋಗ್ಯ ಕಾಲದಲ್ಲಿ ಬಂದಿದೆ; ಈ ಕಡೆ ಕಿವಿ ಕೊಡುವುದು ಸರಕಾರದ ಕರ್ತವ್ಯ.

ಅಖಿಲ ಭಾರತ ಮಹಿಳಾ ಸಮ್ಮೇಳನ

ಅಖಿಲ ಭಾರತ ಮಹಿಳಾ ಸಮ್ಮೇಳನವು ಕಳೆದ ವಾರ ಶ್ರೀಮತಿ ಕಮಲಾ ದೇವಿಯರ ಅಧ್ಯಕ್ಷತೆಯಿಂದ ಬೊಂಬಾಯಿಯಲ್ಲಿ ನಡೆಯಿತು. ಶ್ರೀಮತಿಯರಾದ ಸರೋಜಿನಿ ನಾಯ್ಡು, ವಿಜಯಲಕ್ಷ್ಮಿ ಪಂಡಿತ, ರಾಮೇಶ್ವರಿ ನೆಹರು, ರೇಣುಕಾ ರೈ, ಲೇಡಿ ರಾಮರಾವ್, ರಾಣಿಲಕ್ಷ್ಮಿ ಬಾಯಿ ರಾಜ್ವಾಡೆ ಮೊದಲಾದವರು ಬಂದಿದ್ದರು ೨೦೦ ಮಂದಿ ಪ್ರತಿನಿಧಿಗಳು ಹಾಜರಿದ್ದರು.

ನಿವೃತ್ತರಾಗಲಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಧ್ಯಕ್ಷಿಯರನ್ನು ಸ್ಥಾನ ಸ್ವೀಕರಿಸುವಂತೆ ಕೇಳಿಕೊಳ್ಳುತ್ತಾ ಕಳೆದ ವರ್ಷದಲ್ಲಿ ರಾಜಕೀಯ ವಾತಾವರಣದಿಂದಾಗಿ ಈ ಸಮ್ಮೇಳನ ಜರಗಲಿಲ್ಲವೆಂದರು. ಈ ಸಮ್ಮೇಳನವು ಬಂಗಾಳ ಬಿಜಾಪುರ ನಿಧಿಗಳ ಬಗ್ಗೆ ಸಹಾಯ ಮಾಡಿದ ಕುರಿತು ಪ್ರಸ್ತಾಪಿಸಿ ಕಸ್ತೂರ್ ಬಾ ನಿಧಿಗೆ ಸಹಾಯವಿತ್ತು. ಆ ಮೂಲಕ ಭಾರತದ ಮಹಿಳೆಯರ ವಿದ್ಯಾ ಪ್ರಚಾರಕ್ಕೆ ಸಹಾಯ ಮಾಡಿರೆಂದರು

ರಣಜಿತ್ ಪಂಡಿತ್ ಕಸ್ತೂರ್‌ಬಾ ಮೊದಲಾದವರು ನಿಧನದ ಕುರಿತು ಸಂತಾಪ ಸೂಚನೆಗಳಾದುವು.

ಶ್ರೀಮತಿ ಕಮಲಾ ದೇವಿಯರು ಮಾತನಾಡುತ್ತಾ ಮಹಿಳೆಯರು ಸಮಾಜ ಸೇವೆಯಲ್ಲಿ ತರಬೇತಿ ಹೊಂದಬೇಕೆಂದೂ, ಆರೋಗ್ಯ ಶಿಕ್ಷಣ ದೊರಕಬೇಕೆಂದೂ, ಗ್ರಾಮ ಕೈಗಾರಿಕೆ ಉನ್ನತಿಗೊಳಿಸಬೇಕೆಂದೂ, ಹೇಳಿ ವಿದೇಶಿಯರ ಹಿತದಿಂದಾಗಿ ಭಾರತ ಶೋಷಣೆಯಾಗುವ ವಿಷಯ ಪ್ರಸ್ತಾಪಿಸಿ ಕಷ್ಟಮದಿಂದಾಗಿ ದೇಶದ ಮಕ್ಕಳ ಮೇಲೆ ಬಹಳ ಆಘಾತವುಂಟಾಗಿದೆಯೆಂದೂ ಹಾಗಾಗಿ ಅವರ ಸಲುವಾಗಿ ಬೇಕಾದ ಏರ್ಪಾಡು ಮಾಡತಕ್ಕದೆಂದೂ ಹೇಳಿ ಇಂದು ಯುದ್ಧಾಸಕ್ತವಾದ ಜನಾಂಗಗಳು ಸಾರುತ್ತಿರುವ ತತ್ವಗಳೆಲ್ಲರು ಟೊಳ್ಳು ನೀತಿಯನ್ನು ತಿಳಿಸಿ ಸ್ತ್ರೀಯರ ಆಂದೋಲನ ಪುರುಷ ವಿರೋಧಕವಲ್ಲವೆಂದು ನುಡಿದರು.

ಮಹಿಳೆಯರ ಉನ್ನತಿಗೆ ಅವಶ್ಯವಿರುವ ಹಲವು ನಿರ್ಣಯಗಳಾದುವು.

।। ಮಣಿಪುರ ಸಂಸ್ಥಾನ ।।

ಕಳೆದ ಮಾರ್ಚ್ ತಿಂಗಳ ೧೫ನೇ ತಾರೀಕಿನ ದಿನ, ಯಾರ ಕನಸು ಮನಸಿನಲ್ಲಿಯೂ ಇಲ್ಲದಿರುವಾಗ ಜಪಾನೀ ಸೈನ್ಯವು ಒಮ್ಮೆಗೇ ಬ್ರಹ್ಮ ದೇಶದ ಗಡಿ ದಾಟಿ ಅಸಾಮದ ಮಣಿಪುರ ಸಂಸ್ಥಾನದಲ್ಲಿ ಕಾಲಿಟ್ಟಿತು. ಇದರಿಂದ ಹಿಂದುಸ್ಥಾನದಲ್ಲಿ ಪ್ರತ್ಯಕ್ಷ ಯುದ್ಧ ಮುಖವು ತೆರೆದಂತಾಯಿತು. ಇಡೀ ದೇಶದ ಗಮನವು ಮಣಿಪುರದತ್ತ ಹೊರಳಿತು.

ಮಣಿಪುರ ಸಂಸ್ಥಾನವು ವಿಸ್ತಾರದಲ್ಲಿ ೮೬೫೦ ಚದರ ಮೈಲು. ಅದರ ಜನಸಂಖ್ಯೆ ಸುಮಾರು ೪½ ಲಕ್ಷ. ಕಳೆದ ಶತಮಾನದಲ್ಲಿ ನಾಲ್ಕಾರು ಸಲ ಮಣಿಪುರ ಸಂಸ್ಥಾನವು ಭೂಕಂಪದ ಧಕ್ಕೆಯನ್ನು ಅನುಭವಿಸಿದ್ದಿತು ಸಂಸ್ಥಾನದ ಪ್ರದೇಶವೆಲ್ಲ ಗುಡ್ಡಗಾಡಾಗಿರುವದಲ್ಲದೆ ಇಂಫಲ, ಇರಿಲ, ಥೋಬಲ, ನಂಬಲ ಮೊದಲಾದ ಹೆಸರಿನ ಸಣ್ಣ ದೊಡ್ಡ ನದಿಗಳುಳ್ಳ ಸಂಸ್ಥಾನವಾಗಿರುವದು. ಆಹಾರೋತ್ಪತ್ತಿಯ ದೃಷ್ಟಿಯಿಂದ ಇದು ಎಷ್ಟೋ ಮಟ್ಟಿಗೆ ಸ್ವಾವಲಂಬಿಯಾಗಿರುವುದು. ಇಲ್ಲಿಯ ಮುಖ್ಯ ಉತ್ಪಾದನೆಯೆಂದರೆ ಅಕ್ಕಿ ಮತ್ತು ಕಟ್ಟಿಗೆ ಹಾಗೂ ಅದರಿಂದ ಸಿದ್ಧವಾಗುವ ಒಡವೆಗಳು. ವರ್ಷದ ಬಹು ಭಾಗವು ಮಳೆಯಲ್ಲಿಯೇ ಕಳೆಯುತ್ತದೆ. ೧೯೧೮ರ ವರೆಗೆ ಮಣಿಪುರದ ಇತಿಹಾಸದಲ್ಲಿ ತಿಳಿದುಕೊಳ್ಳುವಂಥ ಯಾವುದೇ ಘಟನೆಗಳು ಸಂಭವಿಸಿರಲಿಲ್ಲ. ಅದೇ ವರ್ಷದ ನೆರೆಹೊರೆಯ ಜನರೊಡನೆ ಮಣಿಪುರದ ನಿವಾಸಿಗಳು ಸಂಬಂಧ ಬೆಳೆಸಿದ್ದರಿಂದ ಈ ಪ್ರದೇಶದ ಅಸ್ತಿತ್ವವು ಹೊರಗಿನವರಿಗೆ ಗೊತ್ತಾಯಿತು.

೧೭೦೮ರಲ್ಲಿ ಮಣಿಪುರದ ಮೊದಲನೇ ರಾಜನಾದ ಫಾನಹಿವಾ ಎಂಬವನು ಹಿಂದೂ ಧರ್ಮ ಸ್ವೀಕರಿಸಿ ಗರೀಬ ನಿವಾಜ (ಬಡವರ ರಕ್ಷಕ) ಎಂಬ ಹೆಸರು ಧರಿಸಿ ತನ್ನ ಜನಾಂಗಕ್ಕೆ ಹಿಂದೂ ಧರ್ಮವನ್ನವಲಂಬಿಸಲು ಪ್ರೇರಣೆಯನ್ನಿತ್ತನು ಗರೀಬ ನಿವಾಜನು ಅನಂತರ ಹಲವು ಸಾರಿ ಬ್ರಹ್ಮ ದೇಶದ ಮೇಲೆ ದಂಡೆತ್ತಿ ಹೋದನು. ಆದರೆ ಅವನ ತರುವಾಯ ಸುಮಾರು ಅರ್ಧ ಶತಮಾನದ ವರೆಗೆ ಮಣಿಪುರ ರಾಜ ವಂಶದಲ್ಲಿ ಸುಸಮರ್ಥರಾರೂ ಇಲ್ಲದ್ದರಿಂದ ಬ್ರಹ್ಮೀ ಜನರು ಮಣಿಪುರದ ಮೇಲೆ ತಮ್ಮ ವರ್ಚಸನ್ನು ಸ್ಥಾಪಿಸಲು ಸಮರ್ಥರಾದರು. ಮುಂದೆ ೧೭೬೨ರಲ್ಲಿ ಅಂದಿನ ಮಣಿಪುರ ರಾಜನಾದ ಜಯಸಿಂಗನು ಇಂಗ್ಲಿಷ್ ವ್ಯಾಪಾರಿಗಳ ಮಧ್ಯಸ್ಥಿಕೆಯಿಂದ ಬ್ರಹ್ಮೀಯರೊಡನೆ ಒಪ್ಪಂದ ಮಾಡಿಕೊಂಡು ಸ್ನೇಹ ಬೆಳೆಸಿದನು, ಮುಂದೆ ಬ್ರಿಟಿಷರ ಮತ್ತು ಬ್ರಹ್ಮೀ ಜನರ ನಡುವೆ ಯುದ್ಧಾರಂಭವಾದಾಗ ಮಣಿಪುರವು ಸ್ವತಂತ್ರವೆಂದು ಜಾಹೀರ ಮಾಡಲಾಯಿತು ಆದರೆ ೧೮೨೬ರ ತರುವಾಯ ಮಣಿಪುರ ರಾಜಮನೆತನದಲ್ಲಿಯೇ ಉಂಟಾದ ಆಂತರಿಕ ಕಲಹದ ಲಾಭಪಡೆದು ಬ್ರಿಟಿಷರು ಅಲ್ಲಿ ತಮ್ಮ ಹಸ್ತಕ್ಷೇಪವನ್ನಾರಂಭಿಸಿದರು.

ಬ್ರಿಟಿಷರ ಪ್ರತಿನಿಧಿಯೊಬ್ಬನು ಚಿರವಾಗಿ ಮಣಿಪುರದಲ್ಲಿರಬೇಕೆಂದು ಗೊತ್ತಾಯಿತು. ಕೊನೆಗೆ ಇದರಿಂದ ಬೇಸತ್ತ ಸುರಚಂದ್ರ ಸಿಂಗನು ೧೮೯೦ರಲ್ಲಿ ಸಂಸ್ಥಾನ ಬಿಟ್ಟು ಹೋದನು. ಅವನ ತಮ್ಮನಾದ ಕುಲಚಂದ್ರಸಿಂಗನಿಗೆ ಪಟ್ಟ ಕಟ್ಟಲಾಯಿತು. ಕುಲಚಂದ್ರಸಿಂಗನ ಅಳ್ವಿಕೆಯು ನಾಮಮಾತ್ರವಾಗಿದ್ದಿತು. ಅವನ ಸೇನಾಪತಿಯಾದ ತ್ರಿಕೇಂದ್ರಜಿತಸಿಂಗನೆ ನಿಜವಾಗಿ ರಾಜ್ಯವಾಳುತ್ತಿದ್ದನು. ಅವನ ಆಳ್ವಿಕೆಯು ಬ್ರಿಟಿಷರಿಗೆ ಸಹಿಸಲಾರದ್ದಾದ್ದರಿಂದ ಅವನನ್ನು ಸದೆಬಡೆಯಲು ೧೮೯೧ರಲ್ಲಿಯೇ ಬ್ರಿಟಿಷರು ಕ್ವಿಂಟನ ಎಂಬ ತಮ್ಮ ಒಬ್ಬ ಸೇನಾಧಿಕಾರಿಯನ್ನು ಸೇನೆಯೊಂದಿಗೆ ಕಳುಹಿಸಿಕೊಟ್ಟರು. ಆದರೆ ಈ ಸೇನಾಧಿಕಾರಿಯನ್ನು ತ್ರಿಕೇಂದ್ರಜಿತು ಸಿಂಗನು ವಧಿಸಿದನು. ಮುಂದೆ ಬ್ರಿಟಿಷರ ಆಧುನಿಕ ಶಸ್ತ್ರಾಸ್ತ್ರಗಳೆದುರು ಅವನ ಆಟವು ನಡೆಯದೆ ಅವನೇ ಬ್ರಿಟಿಷರ ಕೈವಶನಾದನು. ಗಲ್ಲಿಗೇರಿಸಲ್ಪಟ್ಟನು. ಕುಲಚಂದ್ರನ ಮುಳ್ಳು ಕಿತ್ತೆಗೆದು ಆವನ ಕುಲದಲ್ಲಿಯ ಅಲ್ಪ ವಯಸ್ಕ ಚೂಡಾಚಂದ್ರನೆಂಬಹುಡುಗನೊಬ್ಬನನ್ನು ಕೈಗೊಂಬೆಯ ರಾಜನಾಗಿ ಮಾಡಿ, ಬ್ರಿಟಿಷರು ಈ ಸಂಸ್ಥಾನವನ್ನು೧೯೦೭ರ ವರೆಗೆ ಸುಮಾರು ೧೫ ವರ್ಷಕಾಲ ತಮ್ಮ ಕೈಯಲ್ಲಿಟ್ಟುಕೊಂಡರು.

೧೯೦೭ರಲ್ಲಿ ಚೂಡಾಚಂದ್ರನು ಅಧಿಕಾರ ಸೂತ್ರವಹಿಸಲು ಬ್ರಿಟಿಷರ ದೃಷ್ಟಿಯಿಂದ ಯೋಗ್ಯನೆಂದು ಕಂಡುಬಂದದ್ದರಿಂದ ಸಂಸ್ಥಾನದ ಆಡಳಿತೆಯು ಅವನಿಗೊಪ್ಪಿಸಲ್ಪಟ್ಟಿತು ಚೂಡಾಚಂದ್ರನಿಂದ ಈ ವರೆಗೆ ಬ್ರಿಟಿಷರಿಗೆ ಯಾವುದೇ ತೊಂದರೆ ಬರಲಿಲ್ಲ ಕಳೆದ ಮಹಾ ಯುದ್ಧದಲ್ಲಿ ಅವನು ಬ್ರಿಟಿಷರಿಗೆ ತನ್ನ ಕೈಲಾದಷ್ಟು ಸಹಾಯ ಮಾಡಿ ಮಣಿಪುರ ನಿವಾಸಿಗರನ್ನು ದಂಡಿಗೆ ಸೇರಿಸಿ ಬ್ರಿಟಿಷರ ಹೆಚ್ಚಿನ ಪ್ರಸನ್ನತೆಯನ್ನು ಪಡೆದನು. ಇದರಿಂದ ಮಣಿಪುರ ಸಂಸ್ಥಾನವು ಬಹಳ ಸಣ್ಣದಿದ್ದರೂ ಸಂಸ್ಥಾನಿಕರಿಗೆ ೨೧ ತೋಪುಗಳ ಬಹುಮಾನವೂ, ಮಹಾರಾಜಾ ಎಂಬ ಬಿರುದ ಲಭ್ಯವಾದುವು

ಇಲ್ಲಿ ಕೆಲಮಟ್ಟಿಗೆ ರೇಶ್ಮೆಯ ಉದ್ಯೋಗವು ನಡೆಯುತ್ತದೆ. ಗುಡ್ಡಗಾಡು ಪ್ರದೇಶದ ಇಳಿತಗಳಲ್ಲಿ ಉತ್ತಮ ಅಕ್ಕಿ ಬೆಳೆಯುತ್ತದೆ ಸ್ವಲ್ಪ ಎಣ್ಣೆ, ಉಪ್ಪು, ಮೊದಲಾದ ಖನಿಜ ಪದಾರ್ಥಗಳೂ ಹೊರಡುತ್ತವೆ. ಅಲ್ಲಲ್ಲಿ ವಿವಿಧ ತರಹದ ಹಣ್ಣು ಹಂಪಲಗಳು ಬೆಳೆಯುತ್ತವೆ. ಇಲ್ಲಿಂದ ರಾಜ್ಯದಾಡಳಿತೆಯಲ್ಲಿ ಬ್ರಿಟಿಷರ ವಿಶೇಷ ಹಸ್ತಕ್ಷೇಪವಿದೆ ಎನ್ನಬಹುದು. ಏಕೆಂದರೆ ರಾಜನ ಮಂತ್ರಿಮಂಡಲದಲ್ಲಿಯ ಪ್ರಮುಖ ಸ್ಥಾನವು ಬ್ರಿಟಿಷರು ಕಳುಹಿಸಿಕೊಟ್ಟ ಐ. ಸಿ. ಎಸ್. ನೌಕರನ ಸೊತ್ತಾಗಿದೆ. ಮಣಿಪುರ ಸಂಸ್ಥಾನದಲ್ಲಿ ಸಾಕ್ಷರತೆಯ ನೂರಕ್ಕೆ ಐದರಷ್ಟೂ ಇಲ್ಲ.

ಜಮಶೇದಪುರದ ಬಳಿ ಸೈನಿಕರ ಅತ್ಯಾಚಾರ

ಬೀಹಾರಿನಲ್ಲಿರುವ ಜಮಶೇದಪುರದ ಬಳಿ ಸೈನಿಕರು, ಗಂಡಸು ಮತ್ತು ಹೆಂಗಸರ ಮೇಲೆ ಅತ್ಯಾಚಾರ ಮಾಡುತ್ತಿರುವರೆಂದೂ, ಕೆಲವರನ್ನು ಅವರು ಹೊತ್ತುಕೊಂಡು ಹೋಗಿ ತಮ್ಮ ಶಿಬಿರದಲ್ಲಿ ಕೆಲ ದಿನಗಳ ವರೆಗೆ ಇಡುತ್ತಿರುವರೆಂದೂ ಈ ಸಂಗತಿ ನಿಜವೇ ಎಂದೂ ಕೇಂದ್ರ ಎಸೆಂಬ್ಲಿಯಲ್ಲಿ ಸದಸ್ಯರೊಬ್ಬರು ಪ್ರಶ್ನಿಸಿದ್ದರು. 'ಈ ಸಮಾಚಾರ ನನಗೆ ಇದುವರೆಗೆ ತಿಳಿದಿಲ್ಲ' ಎಂದು ಯುದ್ಧ ಮಂತ್ರಿಗಳು ಹೇಳಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ವಸಂತೋತ್ಸವ

ಪ್ರತಿ ವರ್ಷದಂತೆ, ಈ ವರ್ಷವೂ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ವಸಂತೋತ್ಸವವು ತಾ. ೮ರಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚೌಟರು ಸ್ವಾಗತ ಭಾಷಣ ಮಾಡಿದರು. ಸಬ್ ಜಡ್ಜರಾದ ಶ್ರೀ. ಸಿ. ಕೆ. ಮೆನೋನರು ಉದ್ಘಾಟನೆರವೇರಿಸಿದರು. ಜಾತಿಮತ ಭೇದವಿಲ್ಲದ ಈ ಸಂಸ್ಥೆ ನಿಜವಾದ ರಾಷ್ಟ್ರೀಯ ಸ್ಫೂರ್ತಿ ಹುಟ್ಟಿಸಲಿ ಎಂದು ಅವರು ಹೇಳಿದರು ಆ ದಿನ ವಿವಿಧ ವಿನೋದಾವಳಿ, ಲಕ್ಕಿ ಡಿಪ್ ಮೊದಲಾದವುಗಳಿದ್ದುವು

ಮಕ್ಕಳ ಕೂಟ

ಕದ್ರಿ ವಿದ್ಯಾದಾಯಿನಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ। ಆರ್ ರಾಮರಾಯರ ಅಧ್ಯಕ್ಷತೆಯಿಂದ ತಾ. ೬ರಲ್ಲಿ ಮಂಗಳೂರು ಮಕ್ಕಳ ಕೂಟದ ಸಭೆ ಜರಗಿತು. ಆ ದಿನದ ಸಭೆಯಲ್ಲಿ ಶ್ರೀ। ಎಂ. ಗೋಪಾಲ ಇವರು ಅಧ್ಯಕ್ಷರಾಗಿ, ಶ್ರೀ। ಶಂಕರನಾರಾಯಣ ಇವರು ಕಾರ್ಯದರ್ಶಿಗಳಾಗಿ ಒಂದು ಮಕ್ಕಳ ಕೂಟ ಸ್ಥಾಪಿತವಾಯಿತು. ಕೆನರಾ ಹ್ಯಾಸ್ಕೂಲ್ ವಿದ್ಯಾರ್ಥಿ ಶ್ರೀ ಪಿ ಶ್ರೀನಿವಾಸ ಕುಡ್ವ ಇವರು ಅಲ್ಲಿನ ವಿದ್ಯಾರ್ಥಿಗಳನ್ನು ಕೊಡಿಯಾಲ ಬೈಲಲ್ಲಿ ಜರಗುವ ತಮ್ಮ ಒಂದು ಸಭೆಗೆ ಆಮಂತ್ರಿಸಿದರು. ಶ್ರೀ. ಎಂ. ಆರ್. ಶಾಸ್ತ್ರಿಗಳು ಭಾಷಣವಿತ್ತರು. ಈ ತಿಂಗಳಲ್ಲಿ ಬೆಂಗಳೂರಲ್ಲಿ ಜರಗುವ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನದ ಅಧ್ಯಕ್ಷರಾಗಿ ಕೆನರಾ ಹ್ಯಾಸ್ಕೂಲಿನ ವಿದ್ಯಾರ್ಥಿ ಶ್ರೀ। ಬಿ. ವ್ಯಾಸರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟ ಕುರಿತು ಅವರನ್ನು ಅಭಿನಂದಿಸುವ ಠರಾವಾಯಿತು

ಕಳ್ಳ ಅಕ್ಕಿ ಹಿಡಿದರು

ಕೂಳೂರು ಹೊಳೆಯಲ್ಲಿ ಕಳ್ಳತನದಿಂದ ಸಾಗಿಸಲಿದ್ದ ೧೪೦ ಗೋಣಿ ಅಕ್ಕಿಯನ್ನು ಇತ್ತೀಚೆಗೆ ರೆವೆನ್ಯೂ ಅಧಿಕಾರಿಗಳು ಹಿಡಿದರು

ಗೋದಿ ಬಂದಿದೆ

ಮಂಗಳೂರಿನ ರಖಂ ಸ್ಟೋರ್ಸ್ಗೆ ಸದ್ಯದಲ್ಲೇ ೮೦೦ ಟನ್ ಗೋದಿ ಬರಲಿದೆ.

ನಿರ್ಬಂಧಶಾಜ್ಞೆ

ಸಭೆ, ಮೆರವಣಿಗೆಗಳನ್ನು ನಡೆಸಕೂಡದೆಂಬ ನಿರ್ಬಂಧಶಾಜ್ಞೆ ಕಳೆದ ತಾ ೨೫ರಿಂದ ಇನ್ನೊಂದು ತಿಂಗಳ ವರೆಗೆ ಮುಂದುವರಿಸಲ್ಪಟ್ಟಿದೆ.

ಪ್ಲೇಗು

ಊರಲ್ಲಿ ಪ್ಲೇಗು ರೋಗವಿರುವಾಗ, ಇಲಿಗಳನ್ನು ವಿಷಕೊಟ್ಟು ಕೊಲ್ಲುವುದು ಸರಿಯಲ್ಲವೆಂದೂ, ನಿಜವಾಗಿ ಪ್ಲೇಗು ತಗಲಿ ಸತ್ತ ಇಲಿಗಳೂ, ವಿಷತಿಂದು ಸತ್ತ ಇಲಿಗಳೆಂದು ಭ್ರಮಿಸಿ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಅನಾಹುತವಾಗುವುದೆಂದೂ ಮಂಗಳೂರು ಮುನ್ಸಿಪಲ್ ಹೆಲ್ತಾಪೀಸರರ ಸೂಚನೆ.

ಪ್ಲೇಗಿನ ವರದಿ

ಎಪ್ರಿಲ್ ೧೧ನೇ ತಾರೀಕಿನ ವರೆಗಿನ ವರದಿಯಂತೆ ಹೊಸತಾಗಿ ಇಬ್ಬರಿಗೆ ಪ್ಲೇಗ್ ರೋಗ ತಗಲಿದೆ. ಒಂದು ಮರಣವೂ ಸಂಭವಿಸಿದೆ. ಇಲಿಗಳು ಬೀಳುತ್ತಿವೆ. ಕಳೆದವಾರ ಒಬ್ಬನಿಗೆ ಮಾತ್ರ ತಗಲಿತ್ತು. ಮರಣ ಸಂಭವಿಸಿರಲಿಲ್ಲ. ಇನಾಕುಲೇಶನ್ ಕಾರ್ಯ ಭರದಿಂದ ಸಾಗುತ್ತಿದೆ. ಇಲಿಗಳನ್ನು ಸಯನೋಗೇಸ್ ಮೂಲಕ ಕೊಲ್ಲಲಾಗುತ್ತಿದೆ. ರೋಗ ಹರಡದಂತೆ ಬೇಕಾದ ಮುಂಜಾಗ್ರತೆ ವಹಿಸುತ್ತದೆ.

ಬಿ. ಇ. ಎಂ. ಹ್ಯಾಸ್ಕೂಲ್

ಇದರ ಸಹಾಯಾರ್ಥ ಶಾಲೆಯ ಹಳೆ ವಿದ್ಯಾರ್ಥಿ ಸಂಘದವರು, ಅಧ್ಯಾಪಕರೂ ಕೂಡಿ ತಾ ೧೫ರಂದು ಒಂದು ವಿವಿಧ ವಿನೋದಾವಳಿ ಪ್ರದರ್ಶಿಸುವರು.

ಪುನಃ ಶ್ರೀ. ಕಾರಂತರು ಜೈಲಿಗೆ

ತಮ್ಮ ಪೆರೋಲ್ ಅವಧಿ ಮುಗಿದು ಶ್ರೀ। ಕೆ. ಆರ್ ಕಾರಂತರು ನಾಗಪುರ ಸೆಂಟ್ರಲ್ ಜೈಲಿಗೆ ತೆರಳಿದರು.

ಇಬ್ಬರ ಬಂಧನ

ಇತ್ತೀಚೆಗೆ ಸ್ಥಾನಬದ್ಧತೆಯಿಂದ ಬಿಡುಗಡೆಯಾಗಿ ಬಂದ ಶ್ರೀ। ಪ್ರಭಾಕರಶೇಟ್ ಮತ್ತು ಕೊಯಮುತ್ತೂರಿನಿಂದ ಬಿಡುಗಡೆಯಾಗಿ ಮಂಗಳೂರಿಗೆ ಬಂದಿದ್ದ ಮದರಾಸಿನ ಶ್ರೀ ಎಂ ವಿ ಜಗನ್ನಾಥನ್ ಇವರಿಬ್ಬರು ಕಳೆದ ಬುಧವಾರ ಬಂಧಿತರಾದರು.

ಪೆರೋಲ್ ಬಿಡುಗಡೆ

ಶ್ರೀ ಮರೋಳಿ ರಾಮರಾಯ ಕಿಣಿಯವರು ಪೆರೋಲಿನಲ್ಲಿ ಬಿಡುಗಡೆಯಾಗಿ ಬಂದಿರುವರು.

ನಿವೃತ್ತರಾದರು

ಮಲಬಾರ್, ದಕ್ಷಿಣ ಕನ್ನಡ, ನೀಲಗಿರಿಗಳ ಹುಡುಗಿಯರ ಶಾಲೆಗಳ ಇನ್ಸ್ಪೆಕ್ಟ್ರೆಸ್ ಆಗಿದ್ದ ಮಿಸ್ ಸಿ ಡಿ. ಸೋಜ, ಬಿ. ಎ., ಎಫ್. ಆರ್ ಜಿ. ಎಸ್ (ಲಂಡನ್) ಇವರು ತಾ. ೬ರಿಂದ ನಿವೃತ್ತರಾದರು

ಕುಲಕರ್ಣಿ ಶ್ರೀನಿವಾಸರ ನೃತ್ಯ

ಕಳೆದ ಶುಕ್ರವಾರ ಸಂಜೆ ಶ್ರೀ ಕುಲಕರ್ಣಿ ಶ್ರೀನಿವಾಸ್ ಮತ್ತು ಪಾರ್ಟಿಯವರ ನೃತ್ಯ ಪ್ರದರ್ಶನವೊಂದು ಬಾಲಾಜಿ ಥಿಯೇಟರಿನಲ್ಲಿ ಜರಗಿತು ತುಂಬಾ ಜನರು ಬಂದಿದ್ದರು.

ಅಡಿಕೆ ತೋಟಗಾರರಿಗೆ ಸೂಚನೆ

ಎಪ್ರಿಲ್ ೨ರಿಂದ ಅಡಿಕೆ ಮೇಲಿನ ಅಬ್ಕಾರಿ ಕಾನೂನು ಜಾರಿಗೆ ಬರುವುದರಿಂದ, ಕಾನೂನಿನ ಮೇರೆಗೆ ಅಡಿಕೆ ಬೆಳೆಯಿಸುವವರು ಅಡಿಕೆಯನ್ನು ಒದಗಿಸುವವರು ಮತ್ತು ಅಡಿಕೆಯನ್ನು ವಿಕ್ರಯಿಸುವವರು ಪ್ರತ್ಯೇಕ ಪ್ರತ್ಯೇಕ ಲೈಸನ್ಸು ಪಡಕೊಳ್ಳತಕ್ಕದ್ದು. ೧೫ ಖಂಡಿಯಿಂದ ಕಡಿಮೆ ಬೆಳೆಸುವವರಿಗೆ ಲೈಸನ್ಸು ಧರ್ಮಾರ್ಥ ಕೊಡಲಾಗುವುದು ಅದಕ್ಕಿಂತ ಜಾಸ್ತಿ ಬೆಳೆಸುವವರು ಅವರವರ ಬೇಸಾಯದ ಮೇರೆಗೆ ರೂ. ೫ರಿಂದ ೫೦ ರೂಪಾಯಿ ವರೆಗೆ ತೆತ್ತು ಲೈಸನ್ಸು ಪಡಕೊಳ್ಳತಕ್ಕದ್ದು. ಅಡಿಕೆ ಒಣಗಿಸುವ ಮತ್ತು ಅದನ್ನು ಹಳತಿಗೆ ಹಾಸ್ತಾನು ಮಾಡುವ ಬಗ್ಗೆಯೂ ಪ್ರತ್ಯೇಕ ಪ್ರತ್ಯೇಕ ಲೈಸನ್ಸು ಪಡಕೊಳ್ಳಬೇಕು. ಅಡಿಕೆಯನ್ನು ಒಣಗಿಸುವಲ್ಲಿಂದ ಅಡಿಕೆ ಮಾರಾಟ ಮಾಡುವಲ್ಲಿಗೆ ಒಯ್ಯಲು ಪರ್ಮಿಟು ಪಡಕೊಳ್ಳಬೇಕು ಲೈಸನ್ಸು ಹೊಂದಿದ ಭಂಡಸಾಲೆಗಳಲ್ಲಿ ಅಡಿಕೆಯನ್ನು ಮಾರುವವನು ಮಾರುವ ಮೊದಲು ರಾತಲಿಗೆ ೦-೨-೦ಯಂತೆ ಸುಂಕ ತೆರಬೇಕು. ಹೆಚ್ಚಿನ ವಿವರ ಅಬ್ಕಾರಿ ಆಫೀಸರರಿಂದ ಪಡೆಯಬಹುದು.

ಅಡಿಕೆಯ ಮೇಲಿನ ಈ ಅಬ್ಕಾರಿ ಸುಂಕವು ೧೯೩೫ನೆಯ ಭಾರತ ಸೂತ್ರಗಳಿಗೆ ವಿರೋಧವಾಗಿದೆಯೆಂದು ಅಭಿಪ್ರಾಯವಿರುತ್ತದೆ. ಈ ಸುಂಕವೂ ಭಾರತ ಕಾನೂನಿನಿಂದ ಬಾಹಿರವೆಂದೂ ಅದಕ್ಕಾಗಿ ಕೋರ್ಟಿನಲ್ಲಿ ವ್ಯವಹರಣೆ ನಡೆಸಬೇಕೆಂದೂ ಮಾರ್ಚಿ ೧೯ರಲ್ಲಿ ಪುತ್ತೂರಲ್ಲಿ ಜರಗಿದ ಅಡಿಕೆ ಬೇಸಾಯಗಾರರ ಸಭೆಯಲ್ಲಿ ನಿಶ್ಚಯವಾಗಿದೆ. ಆದ್ದರಿಂದ ವಗೆ ತನ್ನ ವ್ಯವಹರಣೆ ನಡೆಸಿ ಅಡಿಕೆ ಸುಂಕ ತೆಗೆದು ಹೋದಲ್ಲಿ ಹಾಗೆ ತೀರ್ಮಾನವಾಗುವ ತನಕ ತಾನು ತೆತ್ತ ಲೈಸನ್ಸು ಹಣವನ್ನು ಸುಂಕದ ಹಣವನ್ನು ಹಿಂದೆ ಕೊಡುವ ಹಕ್ಕನ್ನು ವ್ಯಾಪಾರಿಕನು ಇಟ್ಟುಕೊಳ್ಳಬೇಕಾದ್ದರಿಂದ, ಸುಂಕವನ್ನು ಆಕ್ಷೇಪ ಹೇಳಿ (Under protest) ತೆರತಕ್ಕದ್ದು ಎಂದು ಅಡಿಕೆ ವ್ಯವಸಾಯ ಸಂಘದ ಪರವಾಗಿ ಎಡ್ವೊಕೇಟ್ ಶ್ರೀ। ಜಿ। ಕೆ. ಗೋವಿಂದ ಭಟ್ಟರು ಪ್ರಕಟಿಸುತ್ತಾರೆ.

ಬಂದರದಲ್ಲಿ ಬೆಂಕಿ

ಶ್ರೀ ಹರೆಕಳ್ ಮಾಮುನ ಪೈಗಳ ಎಣ್ಣೆಯ ಗೋಡೌನಿಗೆ ತಾ ೭ರಂದು ರಾತ್ರೆ ಬೆಂಕಿಬಿದ್ದು, ಕೂಡಲೇ ಅಗ್ನಿ ನಿರೋಧಕ ಯಂತ್ರಗಳು ಹೋಗಿ ಬೆಂಕಿ ನಂದಿಸಿದವು

ಪೆರಡಾಲ

ಬದಿಯಡ್ಕದಲ್ಲಿ

ಹೈಸ್ಕೂಲಿಗೆ ಸರಕಾರದ ಸಮ್ಮತಿ

ಬದಿಯಡ್ಕದಲ್ಲ ಹೈಸ್ಕೂಲ್ ಆಗಬೇಕೆಂದು, ಈ ಊರಿನವರು ಮಾಡಿದ ಪ್ರಯತ್ನದ ಫಲವಾಗಿ ಈಗ ಮದ್ರಾಸ್ ಸರಕಾರದ ವಿದ್ಯಾ ಇಲಾಖೆಯ ಡೈರೆಕ್ಟರರಿಂದ ಹೈಸ್ಕೂಲಿನ ಪ್ರಥಮ ಮೂರು ತರಗತಿಗಳನ್ನು (I, II, ಮತ್ತು III ಫಾರ್ಮುಗಳನ್ನು) ಬರುವ ಜೂನಿನಿಂದಲೇ ತೆರೆವರೆ, 'ಬದಿಯಡ್ಕ ಹೈಸ್ಕೂಲ್ ಕಮಿಟಿ'ಯವರಿಗೆ ಅನುಮತಿ ದೊರಕಿದೆ

ಪ್ರಸ್ತುತ ಇಲ್ಲಿ ಡಿಸ್ಟ್ರಿಕ್ ಬೋರ್ಡಿನ ಒಂದು ಹಾಯರ್ ಎಲಿಮೆಂಟರಿ ಶಾಲೆಯಿದೆ ಇದರಲ್ಲಿ ೩೫೦ಕ್ಕೆ ಮಿಕ್ಕಿ ವಿದ್ಯಾರ್ಥಿಗಳಿರುವರು. ಇಲ್ಲಿ ಹಯ್ಯರ್ ಎಲಿಮೆಂಟರಿ ಶಾಲೆಯೂ ಈ ಊರವರ ಪ್ರಯತ್ನದ ಫಲವಾಗಿ ಇತ್ತೀಚೆಗೆ ಸ್ಥಾಪಿತವಾಗಿ ಒಳ್ಳೇ ಜನಪ್ರಿಯವಾಗಿರುವುದು ಹಾಯರ್ ಎಲಿಮೆಂಟರಿ ಶಾಲೆಗೆ ಊರವರೇ ಒಂದು ಭವ್ಯವಾದ ಕಟ್ಟಡವನ್ನು ಕಟ್ಟಿಸಿಕೊಟ್ಟಿರುವರು

ಡಿಸ್ಟ್ರಿಕ್ ಬೋರ್ಡಿನವರು, ಕಳೆದ ತಿಂಗಳ ತಮ್ಮ ಸಭೆಯಲ್ಲಿ, ಸರಕಾರವು ಇಲ್ಲಿ ಹೈಸ್ಕೂಲ್ ತೆರವಲಿ ಊರವರಿಗೆ ಅನುಮತಿ ಕೊಡುವ ಪಕ್ಷದಲ್ಲಿ ಕಟ್ಟಡ ಸಹಿತವಾಗಿ ಹಾಯರ್ ಎಲಿಮೆಂಟರಿ ಶಾಲೆಯ ಆಡಳಿತ ಊರವರಿಗೆ ಬಿಟ್ಟು ಕೊಡುವುದಾಗಿ ಸರ್ವಾನುಮತದಿಂದ ನಿರ್ಣಯ ಮಾಡಿದ್ದರು.

ಬದಿಯಡ್ಕವೆಂಬುದು ಪೆರಡಾಲ ಗ್ರಾಮದ ಕೇಂದ್ರ, ಹಳ್ಳಿಯ ಪೇಟೆ ಇಲ್ಲಿ ಪುತ್ತೂರು, ಕಾಸರಗೋಡು, ಸುಳ್ಯ ಕುಂಬಳೆ ಮಾರ್ಗಗಳು, ಸೇರುವುದಾಗಿದ್ದು ನಾಲ್ಕು ದಿಕ್ಕುಗಳಿಂದಲೂ ವಿದ್ಯಾರ್ಥಿಗಳಿಗೆ ಬರಲು ಅನುಕೂಲವಿದೆ ಪೆರಡಾಲ ಗ್ರಾಮ ಜನ ನಿಬಿಡವಾಗಿರುವ ಊರಾದ್ದರಿಂದ ಈ ಗ್ರಾಮದಲ್ಲಿಯೇ ಹೈಸ್ಕೂಲ್ ಶಿಕ್ಷಣ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯೂ ತುಂಬಾ ಇದೆ, ಸುತ್ತಲೂ, ಕುಂಬಳೆ, ಎಡನೀರು, ಪೆರ್ಲ ಹಾಯರ್ ಎಲಿಮೆಂಟರಿ ಶಾಲೆಗಳಿದ್ದು ಇದು ಒಳ್ಳೆಯ ಹಳ್ಳಿ ಕೇಂದ್ರ ಸ್ಥಳವಾಗಿರುವುದು.

ವಿದ್ಯಾರ್ಥಿ ಭವನದ ದಾನ

ಬದಿಯಡ್ಕ ಹ್ಯಾಸ್ಕೂಲಿನಲ್ಲಿ, ಕಲಿವ ಊರ ಪರವೂರ ವಿದ್ಯಾರ್ಥಿಗಳ ಸೌಕರ್ಯದ ಸಲುವಾಗಿ, ಒಂದು ವಿದ್ಯಾರ್ಥಿ ಭವನವನ್ನು ಕಟ್ಟಿಸಿಕೊಡುವುದಾಗಿ ಕುಂಬಳೆಯ ಮಾಯಿಪ್ಪಾಡಿ ರಾಜರು ಬದಿಯಡ್ಕ ಹ್ಯಾಸ್ಕೂಲ್ ಕಮಿಟಿಯವರಿಗೆ ತಿಳಿಸಿದ್ದಾರೆ.

ಕಳೆದ ಗುರುವಾರ, ಬದಿಯಡ್ಕ ಹ್ಯಾಸ್ಕೂಲ್ ಕಮಿಟಿಯ ಸಭೆಯೊಂದು ಕುಂಬಳೆಯ ಮಾಯಿಪ್ಪಾಡಿ ರಾಜರ ಅಧ್ಯಕ್ಷತೆಯಲ್ಲಿ ಸೇರಿ, ಹ್ಯಾಸ್ಕೂಲಿನ ಬಗ್ಗೆ ಮುಂದೆ ಮಾಡಬೇಕಾದ ಚಟುವಟಿಕೆಗಳ ವಿಚಾರ ಚರ್ಚಿಸಲಾಯಿತು ಊರ ಮಹನೀಯರನೇಕರು ಬಂದಿದ್ದರು. ಹ್ಯಾಸ್ಕೂಲಿನ ಬಗ್ಗೆ ಮಾಡಬೇಕಾದ ಬೇರೆ ಬೇರೆ ಕೆಲಸಗಳಿಗಾಗಿ ಪ್ರತ್ಯೇಕ ಪ್ರತ್ಯೇಕ ಕಮಿಟಿಗಳು ರಚಿತವಾಗಿ, ಕೆಲಸ ಮುಂದುವರಿಯುತ್ತಿದೆ

ರಿಸರ್ವ್ ಪೋಲೀಸರು

ಕಳ್ಳ ವ್ಯಾಪಾರದಿಂದ ಅಕ್ಕಿ ಭತ್ತ ಸಾಗುವುದನ್ನು ತಡೆಯಲು ಬದಿಯಡ್ಕದಲ್ಲಿ ಈಗ ರಿಸರ್ವ್ ಪೋಲೀಸರನ್ನು ಇರಿಸಲಾಗಿದೆ. ಇಲ್ಲಿ ಕೆಲ ದಿನದಿಂದ ಸ್ಟೋರಿನಲ್ಲಿ ಅಕ್ಕಿ ಭತ್ತ ವಿಲ್ಲದೆ, ಊರಲ್ಲಿಯೂ ಸಿಗದೆ ಜನರು ಉಪವಾಸ ಬೀಳಬೇಕಾಗಿ ಬಂದಿದೆ ಕಾವಲಿಗಾಗಿ ಬಂದ ರಿಸರ್ವ್ ಪೋಲೀಸರೂ ತಮ್ಮ ಊಟಕ್ಕೆ ಅಕ್ಕಿಯಿಲ್ಲವೆಂದು ಮನೆ ಮನೆಗೆ ಹೋಗಿ ಅಕ್ಕಿ ಬೇಡುತ್ತಿದ್ದಾರೆ

ಬಾರ್ಕೂರು

ಇಲ್ಲಿ ಅಕ್ಕಿಯ ಅಭಾವವುಂಟಾಗಿ ಜನರು ಉಪವಾಸ ಬೀಳತೊಡಗಿದ್ದಾರೆ ಅಧಿಕಾರಿಗಳು ಬೇಗನೇ ಈ ಕಡೆ ಗಮನ ಕೊಡುವುದೊಳ್ಳೆಯದು

ಉಡುಪಿ

ನಗರಸಭೆ

ತಾ. ೩ರಲ್ಲಿ ನಗರ ಸಭೆ ಶ್ರೀ। ಎ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ, ಸರಕಾರೀ ಸೂಚನೆಯಂತೆ ಕೌನ್ಸಿಲಿನ ೧೯೪೪-೪೫ರ ಎಡ್ಯುಕೇಶನಲ್ ಬಜೆಟ್ ಭರ್ತಿಮಾಡುವರೆ ವಿದ್ಯಾ ತೆರಿಗೆಯನ್ನು ಸೇಕಡಾ ೨ ಇದ್ದುದನ್ನು ೨।ಗೇರಿಸುವುದೆಂದಾಗಿ, ಚಾಲ್ತಿ ವರ್ಷದಲ್ಲಿ ಆ ರೀತಿ ವಸೂಲು ಮಾಡುವುದೆಂದಾಯಿತು

ಅಕ್ಕಿ ಸಮಸ್ಯೆ

ರೇಶನಿಂಗ್ ಕ್ಷೇತ್ರದ ಸಹಕಾರಿ ಡಿಪೋಗಳಲ್ಲಿ ಬೆಳ್ತಿಗೆ ಅಕ್ಕಿ ದೊರಕುವುದಿಲ್ಲವಾಗಿ ದೂರಿದೆ

ಸುರತ್ಕಲ್

ಇಡ್ಯಾ ವಿದ್ಯಾದಾಯಿನೀ ಹಾ ಎ. ಶಾಲೆಯ ಇಪ್ಪತ್ತೇಳನೆಯ ವರ್ಧಂತಿ ಉತ್ಸವವು ಇದೇ ತಾ. ೨೩ರಂದು ಶ್ಯಾಮ ಸಂಟೆ ೬ಕ್ಕೆ ಶ್ರೀ। ಕಾರ್ಕಳ ಸದಾಶಿವ ರಾವ್, ಇವರ ಅಧ್ಯಕ್ಷತೆಯಲ್ಲಿಯೂ, ಅದೇ ಸಮಯ ಇಡ್ಯ ವಿದ್ಯಾದಾಯಿನೀ ಹೈಸ್ಕೂಲಿನ ಕಟ್ಟಡದ ಬಗ್ಗೆ ಶಂಕುಸ್ಥಾಪನಾ ಕಾರ್ಯವು ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎನ್. ಸುಬ್ಬರಾವ್, ಇವರಿಂದಲೂ, ನಡೆಯಲಿರುವುದು

ಖಾದಿಯ ಹೊಸ ಯೋಜನೆ

ಲೇಖಕರು: ಕೆ. ನಾರಾಯಣರಾವ್, ಖಾದಿ ಕೇಂದ್ರ, ಅಮ್ಮೆಂಬಳ

ಅಖಿಲ ಭಾರತ ಚರಕಾ ಸಂಘದ [illegible] ಕಾರ್ಯದರ್ಶಿಗಳಾದ ಸರದಾರ್ ವೆಂಕಟರಾಮಯ್ಯನವರು ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಖಾದಿ ಕಾರ್ಯಕರ್ತರ ಸಭೆಯೊಂದನ್ನು ಮಾರ್ಚ ೩೧ನೇ ಮತ್ತು ಎಪ್ರಿಲ್ ೧ನೇ ತಾರೀಖುಗಳಲ್ಲಿ ಬೆಂಗಳೂರು ನಗರದ ರಾಷ್ಟ್ರೀಯ ಹೈಸ್ಕೂಲಿನಲ್ಲಿ ಕರೆದಿದ್ದರು. ಸಾಮಾನ್ಯವಾಗಿ ಉತ್ಪತ್ತಿ ಕೇಂದ್ರಗಳ ಮತ್ತು ಖಾದಿ ಭಂಡಾರಗಳ ಎಲ್ಲಾ ವ್ಯವಸ್ಥಾಪಕರೂ ಮೈಸೂರು ಚರಕಾ ಸಂಘದ ಪ್ರತಿನಿಧಿಗಳೂ ಹಾಗೂ ಖಾದಿ ಕೆಲಸದಲ್ಲಿ ಕೂಡಿಕೊಂಡಿರುವ ಇತರ ಕಾರ್ಯಕರ್ತರೂ ಹಾಜರಿದ್ದರು. ಅಲ್ಲದೆ ಶ್ರೀಗಳಾದ ತಕಲಿ ವೆಂಕಟರಾಮಯ್ಯ, ಶ್ರೀನಿವಾಸರಾವ್, ಸಂಪತ್ ಗಿರಿರಾವ್, ರಾಮರಾವ್, ಪಿ. ಎಸ್. ನಾರಾಯಣ ರಾವ್ ಮೊದಲಾದ ಖಾದೀ ಪ್ರೇಮಿಗಳೂ ಸಭೆಗೆ ದಯಮಾಡಿಸಿದ್ದರು.

ಚರಕಾ ಸಂಘದ ವಿಕೇಂದ್ರೀಕರಣ (Decentralisation) ಯೋಜನೆಯನ್ನು ಕೂಡಲೇ ಜಾರಿಗೆ ತರುವ ವಿಷಯವನ್ನು ಕಾರ್ಯಕರ್ತರೊಂದಿಗೆ ಚರ್ಚಿಸುವುದೇ ಸಭೆಯ ಉದ್ದೇಶವಾಗಿತ್ತು.

ವಿಕೇಂದ್ರೀಕರಣ ಯೋಜನೆಯ ಪ್ರಕಾರ ಚರಕಾ ಸಂಘದವರು ಖಾದೀ ವ್ಯಾಪಾರದಿಂದ ಕೂಡಲೇ ನಿವೃತ್ತರಾಗುವರು. ಖಾದಿ ಉತ್ಪತ್ತಿ ಮತ್ತು ಮಾರಾಟಗಳನ್ನು ಜನತೆಗೆ ಬಿಟ್ಟುಕೊಡುವರು. ಹುಟ್ಟುವಳಿ ಸಂಘಗಳು (Producer's Societies) ಖಾದೀ ಉತ್ಪತ್ತಿಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನೂ ಕೈಕೊಳ್ಳಬೇಕು. ಗ್ರಾಹಕರ ಸಂಘಗಳು (Consumers Societies) ಖಾದಿ ಬಿಕರಿ ಕಾರ್ಯವನ್ನು ಕೈಕೊಳ್ಳಬೇಕು. ಈ ಸಂಘಗಳು ರಿಜಿಸ್ಟರ್ ಆಗಬೇಕಾಗಿಲ್ಲ. ಇವುಗಳಿಗೆ ಅಗತ್ಯವಿರುವ ಭಂಡವಾಳ ಮೇಲ್ವಿಚಾರ, ಲೆಕ್ಕ ಪರಿಶೋಧನೆ ಮುಂತಾದ ಮಹತ್ಕಾರ್ಯಗಳನ್ನು ಚರಕಾ ಸಂಘದವರು ಕೈಕೊಳ್ಳುವರು. ಅಲ್ಲದೆ ಸಂಶೋಧನೆ (Research) ವಿದ್ಯಾಲಯ (Training collage for workers) ಖಾದಿ ಕಾರ್ಯಕ್ಷೇತ್ರ ಭಡಾವಣೆ ಕೆಲಸ ಮೊದಲಾದುವುಗಳನ್ನು ಚರಕಾ ಸಂಘದವರು ತಮ್ಮ ಸಿಬಂದಿ ಮೂಲಕ ಕೈಕೊಂಡು ಖಾದಿಯ ವ್ಯಾಪಕತ್ವವನ್ನು ವಿಸ್ತಾರಪಡಿಸಲು ದುಡಿಯುವರು. ಇಷ್ಟರ ತನಕ ಈ ಕೆಲಸಕ್ಕೆ ನೆರವಾಗಲು ಚರಕಾ ಸಂಘಕ್ಕೆ ಬಿಡುವಿರಲಿಲ್ಲ. ಹುಟ್ಟುವಳಿ ಮತ್ತು ವ್ಯಾಪಾರಕ್ಕೆ ಸದಾ ದುಡಿಯುವುದೇ ಅವರ ಕಾರ್ಯವಾಗಿತ್ತು. ಇನ್ನು ಮುಂದೆ ಅವರು ಈ ಕೆಲಸದಿಂದ ನಿವೃತ್ತಿ ಹೊಂದಿ ತಮ್ಮ ಶಕ್ತಿಯನ್ನೂ ಧನವನ್ನೂ ಖಾದಿ ವ್ಯಾಪಕತ್ವಕ್ಕೆ ಮೀಸಲಾಗಿಡಲು ಅವಕಾಶ ದೊರೆಯುವುದರಿಂದ ಖಾದಿ ಪ್ರಸಾರಕ್ಕೆ ಒಂದು ಹೊಸ ಚೈತನ್ಯ ಒಂದು ಹೊಸ ಸ್ಫೂರ್ತಿ ದೊರಕಿದಂತಾಗಿದೆ. ಕಾರ್ಯಕರ್ತರ ವ್ಯಕ್ತಿತ್ವ ವಿಕಾಸಕ್ಕೆ ಸುಮುಹೂರ್ತ ದೊರಕಿಸಿದಂತಾಗಿದೆ. ಕಾರ್ಯಕರ್ತರೆಲ್ಲರೂ ತಂತಮ್ಮ ಜವಾಬ್ದಾರಿಯನ್ನೂ ನಿರ್ವಹಿಸಿ ಕೆಲಸ ಕೈಕೊಂಡುದೇ ಆದರೆ ದೇಶಾದ್ಯಂತವೂ ಖಾದಿಮಯವಾಗುವ ಕಾಲವು ಬೇಗನೇ ಬರುವುದು. ಅಲ್ಲದೆ ವಿಕೇಂದ್ರೀಕರಣ ಯೋಜನೆಯಲ್ಲಿ ಸ್ವತಂತ್ರ ಮತ್ತು ಸ್ವಾವಲಂಬನಗಳ ಬೀಜಗಳಿವೆ. ಜನತೆಯಲ್ಲಿ ಇವು ಮೊಳಕೆಯೊಡೆದು ವಿಕಾಸಹೊಂದಿ ಮುಂದೆ ವೃಕ್ಷಗಳಾಗಲು ಸಾಧ್ಯವಿದೆ. ಜಾತಿಜಾತಿಗಳಲ್ಲಿ ಐಕ್ಯಮತ್ಯ ನೆಲೆಗೊಳ್ಳಲು ಇದು ಏಕಮಾತ್ರ ದಾರಿಯಾಗಿದೆ. ಇಂಥಾ ಮಹತ್ತು ಶಕ್ತಿಗಳನ್ನೊಳಗೊಂಡ ಈ ಯೋಜನೆಯನ್ನು ಯಶಸ್ವೀ ಮಾಡುವ ಜವಾಬ್ದಾರಿಯು ಜನತೆಯ ಮೇಲಿದೆ. ಕಾರ್ಯಕರ್ತರಿಗೆ ನೆರವಾಗಿ ಹೆಜ್ಜೆ ಹೆಜ್ಜೆಗೂ ಅಭಿವೃದ್ಧಿಪಡಿಸಿ, ಪ್ರತಿ ಹಳ್ಳಿಯಲ್ಲಿಯೂ ಜೀವನವು ಪ್ರಕಾಶಮಯವಾಗುವಂತೆ ಮಾಡುವುದೇ ಈ ಯೋಜನೆಯ ಸಾಧ್ಯ. ಆಗ ಎಲ್ಲೆಲ್ಲಿಯೂ ಸೋಮಾರಿತನವು ಕಾಣಿಸದು. ಉದ್ಯಮ ನಿರತರಾಗಿರುವ ಗ್ರಾಮವಾಸಿಗಳಲ್ಲಿ ಕಳೆದುಂಬಿ ಗ್ರಾಮ ಪುನರುಜ್ಜೀವನ ತಾನಾಗಿಯೇ ಆಗುವುದು.

ಈಗ ಹುಟ್ಟುವಳಿ ಸಂಘಗಳ ರಚನೆ ಕುರಿತು ಯೋಚಿಸಬೇಕು. ಮುನ್ನೂರು ನೂಲುವವರು ಸೇರಿಕೊಂಡರೆ ಒಂದು ಸಂಘ ರಚನೆಯಾಗುತ್ತದೆ. ಒಟ್ಟಿನಲ್ಲಿ ನೂಲುವವರು ರೂ. ೧೨೦ ಲಡಿದಾರಗಳನ್ನು ಪಾಲುಭಂಡವಾಳವಾಗಿ ಕೊಡತಕ್ಕದ್ದು. ಎರಡೂವರೆ ವರ್ಷಗಳೊಳಗಾಗಿ ಪಾಲುಭಂಡವಾಳ ಪೂರ್ತಿಯಾಗಿ ಪಾವತಿಯಾಗಿರತಕ್ಕದ್ದು. ಇದರ ಬೆಲೆ ರೂಪಾಯಿ ೧೮-೧೨-೦ ಆಗುತ್ತೆ. ಇವರಲ್ಲೇ ನಾಲ್ಕು ಮಂದಿ ನೂಲುವವರನ್ನು ಆರಿಸಿ ಪಂಚಾಯತ ಕಮಿಟಿ ರಚನೆಯಾಗುವುದು. ಐದನೆಯವರೇ ಸಂಘದ ಸಂಚಾಲಕರು. ಇವರನ್ನು ಚರಕಾ ಸಂಘವು ಸದ್ಯಕ್ಕೆ ನೇಮಿಸುವುದು. ಸೇಕಡಾ ಮೂರರಂತೆ ಚರಕಾ ಸಂಘವು ಈ ಸಂಘಗಳಿಗೆ ಸಾಲ ಕೊಡುವುದು. ಸಂಘದ ಒಟ್ಟು ಭಂಡವಾಳವು ಆರು ಸಾವಿರ ರೂಪಾಯಿಗಳು. ಇವು ನಿರ್ದಿಷ್ಟ ಮಾಡಲ್ಪಟ್ಟಿವೆ. ಒಮ್ಮೆಯೇ ನೂಲುವವರು ೧೨೦ ಲಡಿದಾರವನ್ನು ಕೊಡಲು ಅಸಮರ್ಥರಾದರೆ, ಪ್ರತಿ ವಾರದಲ್ಲಿಯೂ ಎರಡು ಅಥವಾ ಮೂರು ಲಡಿಗಳಂತೆ ಕೊಟ್ಟು, ಎರಡುವರೆ ವರ್ಷಗಳೊಳಗೆ ಪಾವತಿಮಾಡಬಹುದು. ಚರಕಾ ಸಂಘದವರು ಸಲಹೆ ಮೇಲ್ವಿಚಾರ ನಡೆಸುವರು. ಜಮೆ ಆದ ನೂಲಿನಿಂದ ತಮ್ಮ ಹಳ್ಳಿಗಳಲ್ಲಿಯೇ ಖಾದಿ ನೇಯಿಸುವ ಏರ್ಪಾಡಾಗುವುದು. ಹಳ್ಳಿಗಳಲ್ಲಿಯೇ ನೇಯಿಗೆ ಕಲಿಸಿ ನೇಕಾರರನ್ನು ಚರಕಾ ಸಂಘದವರು ತಯಾರು ಮಾಡಲಿಕ್ಕಿರುವರು.

ಇನ್ನು ಗ್ರಾಹಕರ ಸಂಘದ ವಿಷಯ. ಈ ಸಂಘದ ಸದಸ್ಯತನವು ಐವತ್ತಕ್ಕಿಂತ ಕಡಿಮೆ ಆಗಿರದೆ ಐನೂರಕ್ಕಿಂತ ಜಾಸ್ತಿಗಿರ ಕೂಡದು. ಪ್ರತಿಯೊಬ್ಬ ಸದಸ್ಯನೂ ನೂರು ರೂಪಾಯಿಗಳ ಖಾದಿಯನ್ನು ಕೊಳ್ಳಲು ಬದ್ಧನು. ನಾಲವತ್ತು ರೂಪಾಯಿಗಳನ್ನು ಸದಸ್ಯತನದ ಪಾಲು ಭಂಡವಾಳವಾಗಿ ಕೊಡಬೇಕು. ಏಕಗಂಟಿನಿಂದ ಕೊಡಲಾರದೆ ಹೋದರೆ ಖಾದಿ ಕೊಳ್ಳುವಾಗ ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕೊಟ್ಟು ತೀರಿಸಬಹುದು. ಇದರ ಭಂಡವಾಳದ ಮಿತಿ ಹದಿನಾಲ್ಕು ಸಾವಿರಕ್ಕೆ ಮೀರಬಾರದು. ಹುಟ್ಟುವಳಿ ಸಂಘಗಳಲ್ಲಿ ತಯಾರಾಗುವ ಖಾದಿಯನ್ನು ತಮ್ಮ ಮೆಂಬರುಗಳಿಗೆ ಒದಗಿಸುವ ಜವಾಬ್ದಾರಿಯು ಈ ಸಂಘದ ವ್ಯವಸ್ಥಾಪಕರದ್ದಾಗಿದೆ. ಆದರೆ ಖಾದಿ ಒದಗುವುದು ಸಾಧ್ಯವಾಗದಿದ್ದರೆ ಸರ್ವರೂ ಪ್ರಯತ್ನಿಸಿ ಖಾದಿ ಹುಟ್ಟುವಳಿ ಹೆಚ್ಚುವಂತೆ ಕೆಲಸ ಮಾಡಬೇಕಾಗುವುದು. ಸ್ವಾವಲಂಬನ ನೂಲುವವರು ತಮ್ಮ ದಾರವನ್ನು ಬಟ್ಟೆಗೆ ಬದಲಾಯಿಸಬಹುದು. ಹಾಗೆ ಬದಲಾಯಿಸುವಾಗ ಇವರಿಗೆ ಸೇಕಡಾ ೧೨½ಯನ್ನು ಕಮಿಷನ್ ಕೊಡಲಾಗುವುದು. ಸಂಘದಲ್ಲಿ ಸೇರಿ ಬರುವ ಲಾಭವನ್ನು ಮೆಂಬರರು ಕೊಳ್ಳುವ ಖಾದಿಯ ದಾಮಾಶಯದಲ್ಲಿ ಹಂಚಲಾಗುವುದು. ಇದೇ ವಿಕೇಂದ್ರೀಕರಣ ಯೋಜನೆಯ ಸಂಕ್ಷಿಪ್ತ ವಿವರ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯವನ್ನು ಕೂಡಲೇ ಕೈಕೊಂಡು ವ್ಯವಸ್ಥೆ ಮಾಡಲಿಕ್ಕೆ ಮಂಗಳೂರು ಸ್ವದೇಶಿ ಸ್ಟೋರ್ಸಿನ ವ್ಯಾಪಾಲಕರಾದ ಶ್ರೀ. ಜಿ. ಮುಕುಂದ ಪ್ರಭುಗಳು ನೇಮಿತರಾಗಿರುವರು. ಅವರಿಂದ ಹೆಚ್ಚಿನ ಮಾಹಿತಿಯನ್ನು ಜನತೆಯು ಹೊಂದಬಹುದು.

ಚಲಚ್ಚಿತ್ರ ವಿಮರ್ಶಕ ಕೂಟ

ಇದರ ಸಭೆ ಕಳೆದ ರವಿವಾರ ಶ್ರೀ. ಪಾಂಡುರಂಗ ಬೋಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿ, ಹಿಂದಿನ ಸಭೆಗಳ ವರದಿ ಸ್ವೀಕೃತವಾಗಿ ಶ್ರೀ. ವೆಂಕಟೇಶ ಪ್ರಭುಗಳು ಹಸ್ತಾಕ್ಷರೀ ಪತ್ರಿಕೆಯ ಸಂಪಾದಕರಾಗಿ ಆರಿಸಲ್ಪಟ್ಟ ಬಳಿಕ, ಚಿತ್ರ ವಿಮರ್ಶೆ ನಡೆಯಿತು.

'ಶೋಭಾ' 'ಬದಲ್ತಿ ಧುನಿಯಾ'ಗಳು ಸಾಮಾನ್ಯ ಚಿತ್ರವೆಂದೂ 'ಶಿವಕವಿ' ಕಚ್ಚ ಫಿಲ್ಮ್‌ಗಳನ್ನು ಹಾಳುಮಾಡಿದೆಯೆಂದೂ, 'ಅಪ್ಪಾವರಾಯ' ಒಳ್ಳೆಯದಿಲ್ಲವೆಂದೂ, 'ಚಾಂದನಿ' ಕೆಳದರ್ಜೆಯ ಚಿತ್ರವೆಂದೂ, 'ವಿ ಆರ್ ನೋಟ್ ಎಲೋನ್' ಉತ್ತಮ ಚಿತ್ರವೆಂದೂ ನಿರ್ಧಾರಗಳಾದುವು. ಶ್ರೀ. ಪಿ. ಎಚ್. ರಾಯರು ಕೃತಜ್ಞತೆ ಹೇಳಿದರು.

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರೈಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ—ಆ ಜನರು . . . .

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು . . . . .

ತಮ್ಮ ಆರ್ಥಿಕ ಅಡಚಣೆಗಳಲ್ಲೊ ಸಮಸ್ಯೆಗಳಲ್ಲೊ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು . . . . .

. . . ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು. ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

For all sporting materials

SOUTH KANARA SPORTS HOUSE

Shifted to the Premises of

SOANS, PHOTO ELECTRIC STUDIO

Light House Hill Road

MANGALORE S. K.

'ಶ್ರೀಮುಖ'ದ ಅಭ್ಯಾಸಗೋಷ್ಠಿ.

ಕಳೆದ ತಾ. ೯ರಂದು ಪ್ರಕಾಶ ಸಾಹಿತ್ಯ ಕೂಟದ ಆಶ್ರಯದಲ್ಲಿ 'ಪೀಪ್‌ಲ್ಸ್ ಲೈಬ್ರರಿ'ಯಲ್ಲಿ ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳ 'ಶ್ರೀಮುಖ' ಕವಿತಾ ಸಂಗ್ರಹದ ಕುರಿತು ಒಂದು ಅಭ್ಯಾಸ ಗೋಷ್ಠಿಯು ಜರಗಿತು. ಶ್ರೀ. ಬಿ. ಶಂಕರ ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ. ಪಿ. ಕೆ. ನಾರಾಯಣರು ತಮ್ಮ ಅಭ್ಯಾಸವನ್ನು ಸಭಿಕರ ಮುಂದಿಡುತ್ತಾ ಹೀಗೆಂದರು, 'ನಮ್ಮಲ್ಲಿಯ ಉತ್ತಮ ಕವಿಗಳಲ್ಲಿ ಶ್ರೀ ರೈಗಳು ಒಬ್ಬರು; 'ಊರ್ಮಿಳಾ' ಒಳ್ಳೆಯ ಕವನ 'ಚಂದ್ರ ವಂಶದ ಕುಡಿಯ ಕಾಪಾಡು' ಕೆಲವೆಡೆಗಳಲ್ಲಿ ಅರ್ಥವಾಗುವುದು ಕಷ್ಟವೆನಿಸಿದರೂ ಚೆಲುವಾದ ಕವಿತೆ. 'ತುಳು ನಾಡಿತಿ' ಪದ್ಯದಲ್ಲಿ ತುಳುನಾಡ ಹುಡುಗಿ ಮತ್ತು ತುಳುನಾಡ ದೇವಿಯರನ್ನು ಜತೆ ಮಾಡಿ ಹಾಡಿದ್ದಾರೆ ಅದನ್ನು ವಿಂಗಡಿಸಿ ಹೇಳಿದರೂ ಆಗುತಿತ್ತು, ಸಂಸ್ಕೃತ ಪದ ಲಾಲಿತ್ಯ ತುಂಬಾ ಇದೆ'

ಆ ಮೇಲೆ ಶ್ರೀ ಬಿ ಎಂ ಇದಿನಬ್ಬರು 'ಶ್ರೀಮುಖ'ದ ಕೆಲವು ಪದ್ಯಗಳನ್ನು ಚಂದವಾಗಿ ಹಾಡಿ ತೋರಿಸಿದರು "ಇಲ್ಲಿನ ಕೆಲ ಕವಿತೆಗಳು ಬಲು ಒಳ್ಳೆಯಲ್ಲಿವೆ ಸಂಸ್ಕೃತ ಪದಗಳನ್ನು ಕೆಲವೆಡೆ ಧಾರಾಳ ಉಪಯೋಗಿಸಿರುವುದರಿಂದ ಅರ್ಥ ಮಾಡಲು ಕಷ್ಟವಾಗುತ್ತದೆ ಹಾಗಾಗಿ ಸಾಮಾನ್ಯ ಜನರು ಅರ್ಥ ಮಾಡುವಂತಿಲ್ಲ, ಇಲ್ಲಿ ಕೆಲವು ಕ್ರಾಂತಿಕಾರಕ ಕವಿತೆಗಳೂ ಇವೆ" ಎಂದು ಅವರು ಹೇಳಿದರು

ಅನಂತರ ಶ್ರೀ ವೆಂಕಟೇಶ ಪ್ರಭುಗಳು ಮಾತನಾಡಿದರು 'ಸ್ವಗತ ಕವನ ಪ್ರಗತಿ ಶೀಲ ಕವನ ಶ್ರೀ. ರೈಗಳು ಜನ ಜೀವನವನ್ನು ಇನ್ನೂ ಹೆಚ್ಚಾಗಿ ಚಿತ್ರಿಸಬೇಕು, ಅವರನ್ನು ನಾನು ಮೆಚ್ಚಿದ್ದೇನೆ ಆದ್ದರಿಂದಲೇ ಅವರನ್ನು ನಾನು ಟೀಕಿಸುತ್ತೇನೆ' ಎನ್ನುತ್ತಾ ಕೆಲವು ಟೀಕೆಗಳನ್ನು ಹೇಳಿದರು ಟೀಕಿಸುತ್ತಾ ಶ್ರೀ ಪ್ರಭುಗಳು ತನಗೆ ಕೆಲವು ಕವಿತೆಗಳು ಕೆಲವು ಶಬ್ದಗಳು ಅರ್ಥವಾಗುವುದಿಲ್ಲವೆಂದರು

ಬಳಿಕ ಶ್ರೀ ಆಮ್ಮೆಂಬಳ ಶಂಕರನಾರಾಯಣ ಇವರು ಮಾತನಾಡುತ್ತಾ ಶ್ರೀ ಪ್ರಭುಗಳು ಹೇಳಿದ ಟೀಕೆಗಳು, ಅವರು ಕವಿತೆಗಳನ್ನು ಚನ್ನಾಗಿ ಅರ್ಥ ಮಾಡಿ ಕೊಳ್ಳದೆ ಇರುವುವರಿಂದ ಎಂಬುದನ್ನು ಸೋದಾಹರಣ ಸಮರ್ಥಿಸಿ, ಕವಿಯೊಡನೆ ತನಗಿರುವ ಒಡ ನಾಟ, ಕವಿಯ ಬಾಲ್ಯ ಚಟುವಟಿಕೆಗಳನ್ನು ಕುರಿತು ತಿಳಿಸಿ 'ತುಳು ನಾಡಿತಿ 'ಚಂದ್ರ ವಂಶದ ಕುಡಿಯ ಕಾಪಾಡು' 'ಭ್ರಮರ ಗೀತೆ' ಈ ಕೆಲವು ಕವನಗಳು ತಾನು ಮೆಚ್ಚಿದವುಗಳೆಂದರು

"ಕವಿಯ ಅಭಿಪ್ರಾಯದಲ್ಲಿ ಕೆಲವು ಕಡೆ ಬದಲಾವಣೆ ಕಂಡು ಬಂದಿದ್ದರೆ, ಅದು ಸ್ವಾಭಾವಿಕ ಈ ಸಂದರ್ಭದಲ್ಲಿ ಈ ಕವಿತಾ ಸಂಗ್ರಹ ಶ್ರೀ ರೈಗಳು ಹತ್ತು ವರ್ಷಗಳಲ್ಲಿ ಆಗಾಗ ಬರೆದ ಕವನಗಳ ಸಂಗ್ರಹವೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು ಕವಿತೆ ಅರ್ಥವಾಗುದಿಲ್ಲವೆಂಬುದರಿಂದ ಸಂಸ್ಕೃತ ಶಬ್ದಗಳನ್ನು ತಿಳಿದು ಕೊಳ್ಳಲಾಗುವುದಿಲ್ಲವೆಂಬುದರಿಂದ ಕವಿಯನ್ನು ಟೀಕಿಸುವುದು ಅಸಂಬದ್ಧವಾಗುವುದು" ಎಂದು ಶ್ರೀ ತಿರುಮಲೇಶ್ವರ ಭಟ್ಟರು ಹೇಳುತ್ತಾ 'ಸ್ವಗತ' ಚೆನ್ನಾದ ಕವಿತೆಯೆಂದೂ ಇದನ್ನು ಇನ್ನೂ ಸ್ವಲ್ಪ ಮುಂದುವರಿಸಿ ಬರೆದರೆ ಚೆನ್ನಾಗುವುದೆಂದೂ ಹೇಳಿದರು

ಅಧ್ಯಕ್ಷರಾದ ಶ್ರೀ ಶಂಕರ ಭಟ್ಟರು ಮಾತನಾಡಿ, ಅರ್ಥವಾಗದೆ ಟೀಕೆ ಮಾಡಿದವರ ಕೆಲ ಸಂದೇಹಗಳನ್ನು ನಿವಾರಿಸಿ, ಸಂಸ್ಕೃತ ಶಬ್ದಗಳನ್ನು ಯಾರಾದರೂ ಬೇಕೆಂದೇ ಹಾಕ ಹಾರದೆಂದು ತಿಳಿಸಿ, ಶ್ರೀ ರೈಗಳು ಮುಂದಕ್ಕೂ ಜನತಾ ಜೀವನವನ್ನು ಚಿತ್ರಿಸಿ ಬರೆಯಲಿ ಎಂದು ಹೇಳಿ 'ಶ್ರೀಮುಖ'ದ ಕೆಲ ಉತ್ತಮ ಕವಿತೆಗಳ ಸ್ವಾರಸ್ಯವನ್ನು ತಿಳಿಸಿದರು

ಕಾರ್ಯದರ್ಶಿ ಶ್ರೀ. ಎಸ್. ಜಿ. ನಾಯಕರು ಕೃತಜ್ಞತೆ ಹೇಳಿದರು.

ಕಾಸರಗೋಡು

ಕಾಸರಗೋಡು ತಾಲೂಕು ಕಿಸಾನ್ ಸಂಘದ ಪ್ರಮುಖ ಕಾರ್ಯಕರ್ತರ ಸಭೆಯೊಂದು ತಾ. ೪ರಂದು ಹೊಸದುರ್ಗದಲ್ಲಿ ಸೇರಿ, ಸಂಘಕ್ಕೆ ಸದಸ್ಯರನ್ನು ಸೇರಿಸುವ, ಬರುವ ೨೨-೨೩ಕ್ಕೆ ಪೊನ್ನಾನಿಯಲ್ಲಿ ಜರಗುವ ಅ. ಕೇ. ಕಿಸಾನ್ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸುವ ನಿಶ್ಚಯವಾಯಿತು

ಕಾಸರಗೋಡು ತಾಲೂಕು ಗ್ರಾಮ ಸೇವಾ ಸಂಘದ ಆರ್ಗನೈಸರರಾಗಿದ್ದ ಶ್ರೀ. ಎಂ ಕುಂಞಂಬು ನಾಯರರನ್ನು ಮೂರು ತಿಂಗಳ ಹಿಂದೆ ಸೆರೆಹಿಡಿದಿದ್ದು, ಅವರ ವಿಚಾರಣೆ ಪುತ್ತೂರು ಡಿವಿಜನಲ್ ಆಫೀಸರರ ಮುಂದೆ ನಡೆದು ಅವರ ಬಿಡುಗಡೆಯಾಗಿದೆ

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ—ಉತ್ತಮ ವ್ಹಾ ಬಾಳಿಕೆಯದೂ ಆಗಿದೆ. ಬೇಗನೇ ನೊರೆ ಹೊರಡುತ್ತದೆ; ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ

PISTOL BRAND BAR SOAP

WANTED AGENTS IN S. KANARA DT.

Mangalore Stockists -M/S D. Narsimha Pai & Sons, Mangalore.

Universal Industries (India) Ltd
Nable chambers, Fort Bombay

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs	As	Ps
1 Paid up Capital	12 95 970-	0-	0
2 Reserves	3 83 379-	1	6
3 Deposits	61 66 927	6-	0
4 Bills for collection	5 53 548-	6-	1
5 Sundries including revenue items	7 00 981-	0-	5
6 Profits for the year ending 31-12-1943	1 08 522	4-	0
Total	92 09,328-	2-	0

ASSETS	Rs	As	Ps
1 Cash on hand & with bankers	18 26 986-	3	8
2 Investments on (1) Govt Securities (2) Immovable properties etc	26 04 671-	6-	8
3 Loans on Jewels & other valuable securities	23 72 302	8-	7
4 Loans on personal securities & Bills purchased	16 74 482	14	8
5 Bills for collection as per contra	5 53 548-	6-	1
6 Office premises furniture etc	93 251	0	0
7 Sundries including revenue items	84 085-	10-	4
Total	92,09,328-	2	0

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧವಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. BUNDER MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.

12 months 2½% p. a.

24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc,. apply to Head office or Branches.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳು ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features 'of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost.

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 21—4—1944 [ಸಂಚಿಕೆ 16]

★ ನಾವು ಮರೆಯತಕ್ಕುದಲ್ಲ ★

ರಾಷ್ಟ್ರೀಯ ವಾರದ ನೆನಪು,

['ಘೋರಂ'ನಿಂದ]

ಇಪ್ಪತ್ತೈದು ವರ್ಷಗಳ ಹಿಂದೆ ಪಂಜಾಬಿನ ಹೃದಯ ಪ್ರದೇಶವಾದ ಜಾಲಿಯನ ವಾಲಾ ಬಾಗಿನಲ್ಲಿ ಒಂದು ಮಾರಣ ಕೃತ್ಯ ನಡೆಯಿತು. ಮೊದಲನೆಯ ಮಹಾ ಯುದ್ಧ ಕೊನೆ ಗೊಂಡ ಕಾಲದಲ್ಲಿಯೇ ಈ ಭೀಕರ ಪಶುಕೃತ್ಯ ನಡೆಯಿತು; ಅಂಥಾ ಘೋರ ಕೃತ್ಯ ಆ ಮೇಲೆ ಆಗಿರದಿದ್ದರೂ ಆಡಳಿತದ ರೀತಿಯಲ್ಲಿ ಅಂದಿಗಿಂತ ಇಂದಿಗೆ ಏನೇನೂ ಬದಲಾಗಲಿಲ್ಲ. ಕೌನ್ಸಿಲು, ಎಸೆಂಬ್ಲಿ, ಮಂತ್ರಿಗಳು, ಎಡ್ವೈಸರರು ಈ ಪ್ರಕಾರ ಸಾಮ್ರಾಜ್ಯಶಾಹಿ ಬೇರೆ ಬೇರೆ ರೂಪ ತಾಳಿ ಕಂಡು ಬಂದರೂ ೧೯೧೯ರ ಆ ಮರೆಯಲಾಗದ ದಿನದ ಘಟನೆಗಳಿಗಿಂತ ಹೆಚ್ಚಿನ ಬದಲಾವಣೆ ಇಂದೂ ಆಗಿಲ್ಲ. ಪ್ರತಿ ವರ್ಷ ಭಾರತದ ಪ್ರತಿಯೊಂದು ಪಟ್ಟಣ ಗ್ರಾಮಗಳಲ್ಲಿ ಜಾಲಿಯನ ವಾಲಾ ಬಾಗ್‌ನಲ್ಲಿ ಕ್ರೂರ ಒಡ್ವಾಯರನ ದುರಾಡಳಿತದಿಂದ ಮರಣ ಹೊಂದಿದ ಗಂಡುಸರಿಗೆ, ಹೆಂಗುಸರಿಗೆ, ಮಕ್ಕಳಿಗೆ, ಆ ವೀರ ಯೋಧರಿಗೆ ಬಾಷ್ಪಾಂಜಲಿ ಸುರಿಸಲು ಸಾವಿರಾರು ಜನ ಸೇರುತ್ತಾರೆ.

ಕೊಲೆ ಗಡುಕ ಡಯರ್!

"ನನ್ನ ಬಳಿ ಮದ್ದು ಮತ್ತು ಗುಂಡು ಕಡಿಮೆಯಾಗಿ ಬಿಟ್ಟಿತು; ಅದಿದ್ದರೆ ನಾನು ಮತ್ತು ಮತ್ತು ಗುಂಡು ಹಾರಿಸುತ್ತಿದ್ದೆ" ಹೀಗೆಂದು ಆ ಕೊಲೆಗಡುಕ ಡಯ್ಯರ್ ತನ್ನ ಮರಣ ಕೃತ್ಯವನ್ನು ಮೆಚ್ಚುವ ಬ್ರಿಟಿಷ್ ಗುಂಪಿನ ಮುಂದೆ ಬೊಬ್ಬಿರಿದಿದ್ದ. ಅಂದಿನಾ ದಿನದಿಂದ ಮೊದಲ್ಗೊಂಡು ರಾಷ್ಟ್ರಾಭಿಮಾನ ಕೆರಳಿದ್ದು, ಎಷ್ಟೋ ಸಂಕಷ್ಟ ಸಾವಿರಗಳು ಬಂದರೂ ಸೆರೆಮನೆಯೊಳಗೆ ಸೇರಿಸಲ್ಪಡುತ್ತಿದ್ದರೂ ಸುಲಿಗೆಯನ್ನು ಸಹಿಸದೆ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಲೇ ಇದೆ. ಅಗಲಿದಾ ಆತ್ಮಗಳಿಗಾಗಿ ಈ ವರ್ಷ ಸಾರ್ವಜನಿಕ ಪ್ರಾರ್ಥನೆ ಮಾಡುವುದು ನಿರ್ಬಂಧನೆಯಿಂದಾಗಿ ಅಸಾಧ್ಯವಾಗಿರಬಹುದು. ಈ ವರ್ಷ ರಾಷ್ಟ್ರೀಯ ವಾರವು ಮಿಲಿಯಾಂತರ ಮಂದಿ ಭಾರತೀಯರ ಹೃದಯ ಮಂದಿರದಲ್ಲಿ ಮೌನವಾಗಿ ಆಚರಿಸಲ್ಪಡುವುದು. ಒಂದು ಅಪೂರ್ವ ಬಲಿದಾನದ ಸಂದರ್ಭ ಬಂದಾಗ ಅದು ಜಾತಿ ಮತ ಪಂಥಗಳ ಗಡಿಯೊಳಗಡಗಿರದೆ, ಭಾರತದ ಪ್ರತಿಯೊಂದು ಜಾತಿಯ ಹೃದಯವನ್ನೂ ಕೆರಳಿಸುವುದು. ಹೋರಾಟ ನಡೆದೇ ಇದೆ; ಆದ್ದರಿಂದ ಆ ಗಂಡುಸರ; ಹೆಂಗಸರ ಅತುಲ ಬಲಿದಾನಗಳನ್ನು ನಾವು ಮರೆಯಬಾರದು. ಇಂದು ಹಿಂದೆಂದೂ ಆಗದಂತೆ ಬ್ರಿಟಿಷ್ ಅಧಿಕಾರ ಅಲ್ಲಾಡುತ್ತಿದೆ. ನಾವು ಪ್ರತಿ ಸಮಯ ಮುಂದುವರಿದರೂ, ನಮ್ಮ ಮುಂದೊತ್ತುವಿಕೆ ತಡೆಗಟ್ಟಲ್ಪಟ್ಟರೂ ನಮ್ಮ ಮುಂದೊತ್ತುವಿಕೆಯನ್ನು ಯಾರಿಗೂ ಯಾವುದೇ ಪಶುಶಕ್ತಿಗೂ ತಡೆವುದು ಸಾಧ್ಯವಿಲ್ಲ.

ಮರಣ ತಾಂಡವ

'ಮರಣ ತಾಂಡವ' ಎಂಬ ಶಿರೋನಾಮೆಯಿಂದ ಈ ೧೯೨೧ರಲ್ಲಿ ಮಹಾತ್ಮರು ನಮ್ಮ ಸ್ಥಿತಿಯ ಕುರಿತು ಬರೆಯುತ್ತಾ, 'ಬ್ರಿಟಿಷರು ಹೇಳುತ್ತಾರೆ'ನೀವು' ಅನ್ಯೋನ್ಯ ಹೋರಾಡಿ ಸಾಯಬಾರದೆಂಬುದಕ್ಕಾಗಿ, ನೀವು ಬೇಕೆಂದರೂ, ಬೇಡವೆಂದರೂ ಭಾರತವನ್ನು ನಾವು ಬಿಡಬ್ಬಾರೆವು' ಎಂದು, ಹಾಗಾದರೆ ನಮ್ಮ ಸೋದರರ ಕೈಯಲ್ಲಿ ನಾವು ಸತ್ತು ಹೋದೇವೆಂಬ ಹೆದರಿಕೆಯಿಂದಾಗಿ ನಾವು ಚಿರ ಗುಲಾಮರಾಗಿರಬೇಕು.

'ಈ ಕೌನ್ಸಿಲು ಮತ್ತು ಎಸೆಂಬ್ಲಿಗಳ ಗೋಮುಖ ವ್ಯಾಘ್ರ ಸರ್ವಾಧಿಕಾರದಲ್ಲಿ ಆಳಲ್ಪಡುವುದಕ್ಕಿಂತ ನಿಜವಾದ ಸರ್ವಾಧಿಕಾರಿಯಿಂದಲೇ ಆಳಲ್ಪಡುವುದು ಎಷ್ಟೋ ಒಳ್ಳೆಯದು. ಇವರು ಸಂಕಟ ಹೆಚ್ಚಿಸಿ ಖರ್ಚನ್ನೂ ಅಧಿಕ ಗೊಳಿಸುತ್ತಾರೆ. ನಾವು ಬದುಕ ಬೇಕೆಂದು ಬಯಸುವುದಿದ್ದರೆ ಸತ್ಯವನ್ನು ಎದುರಿಸಿ ಸರಿಯಾದ ಸರ್ವಾಧಿಕಾರಕ್ಕೆ ಒಪ್ಪಿಕೊಳ್ಳುವುದೇ ಹಿತವಲ್ಲದೆ ಮೆಲ್ಲ ಮೆಲ್ಲಗೆ ವಿಮುಕ್ತರಾಗುವೆವೆಂಬೀ ಸ್ಥಿತಿ ಮಾತ್ರ ಬೇಡ. ಮೆಲ್ಲ ಮೆಲ್ಲನೆ ಸ್ವಾತಂತ್ರ್ಯ ಸಿಗುವುದೆಂಬ ಮಾತೇ ಸುಳ್ಳು. ನಾವು ಪೂರ್ಣ ಬಿಡುಗಡೆ ಹೊಂದುವ ವರೆಗೆ ನಾವು ಗುಲಾಮರೇ. ಎಲ್ಲಾ ಜನನಗಳೂ ಒಂದು ಮುಹೂರ್ತದಲ್ಲಿಯೇ ಆಗುತ್ತದೆ.

'ಕಾಂಗ್ರೆಸಿನ ವಿಷಯ ಹಾಗೂ ಬರಲಿರುವ ಸ್ವಾತಂತ್ರ್ಯದ ವಿಚಾರವೇನು? ಜನತಾ ಹೃದಯದಲ್ಲಿ ಸಾಕಷ್ಟು ಭೀತಿ ಹುಟ್ಟಿಸಿದರೆ ಮುಂದಿನ ಇನ್ನೊಂದು ಶತಮಾನದ ವರೆಗೂ ಸುಲಿಗೆ ಮುಂದುವರಿಸಬಹುದು. ಆದರೆ ಭಾರತವೇ ಅಂದಿನ ವರೆಗೂ ಆ ಸಂಕಷ್ಟ ವಹಿಸಿ ಉಳಿವುದೇ, ಜನತೆ ಪತಂಗಗಳಂತೆ ಸಾಯದೆ ಉಳಿದೀತೇ ಎಂಬುದು ಪ್ರಶ್ನೆ. ಮನುಷ್ಯನು ತೆಂಗಿನ ಕಾಯಿ ತಿನ್ನುವಾಗ ಅದರ ತಿರುಳಿನ ಬಗ್ಗೆ ದಯೆ ದಾಕ್ಷಿಣ್ಯವುಳ್ಳವನಲ್ಲ, ಅದೊಂದು ಹೃದಯ ಶೂನ್ಯ ಕಾರ್ಯವೆಂದು ನಾವು ಭಾವಿಸುವುದಿಲ್ಲ. ಅವನು ಕೊನೆಯ ತಿರುಳು ತಿಂದ ಬಳಿಕ ಸಿಪ್ಪೆಯನ್ನು ಬಿಸುಡುತ್ತಾನೆ. ನಿರುಪಾಯನಾದ ಗಿರಾಕಿಯೊಡನೆ ವ್ಯಾಪಾರಿಯ ವ್ಯವಹಾರವೂ ಹಾಗೆಯೆ. ಇಂಥಾ ದಯಾ ಶೂನ್ಯ ಕಾರ್ಯದಲ್ಲಿ ಹೃದಯದ ವಿಚಾರವೇ ಇಲ್ಲ. ವ್ಯಾಪಾರಿ ತನಗೆ ಬೇಕಾದುದನ್ನೆಲ್ಲಾ ತೆಗೆದು ಕೊಂಡು ಹೋಗುವನು. ಇದೊಂದು ತಲೆ ತಿರುಗಾಟದ ನೃತ್ಯ. ಇದರಿಂದ ಬಿಡುಗಡೆಯಾಗಬೇಕೆಂದು ಯಾರೂ ಬಯಸುವುದಿಲ್ಲ, ನೃತ್ಯ ಹೆಚ್ಚಾದಂತೆ ಅಮಲೂ ಹೆಚ್ಚಾಗುವುದು. ಆದರೆ ಇದೊಂದು ಮರಣ ತಾಂಡವ! ಇದರಲ್ಲಿ ಆಗುವ ಹೃದಯ ಬಡಿತ ರೋಗಿಯ ಕೊನೆಗಳಿಗೆ ವರೆಗೆ ನಿಲ್ಲುವುದೇ ಇಲ್ಲ''

ಪ್ರತಿಯೊಬ್ಬ ಆಂಗ್ಲೇಯನಿಗೆ

ಬಹಳ ಹಿಂದೆ, ಅಮೃತಸರ ಘಟನೆಯ ಬಳಿಕ ಮಹಾತ್ಮಗಾಂಧಿ ಭಾರತದಲ್ಲಿರುವ ಪ್ರತಿಯೊಬ್ಬ ಆಂಗ್ಲೇಯನಿಗೆ (೧೯೨೧) ಎಂಬೊಂದು ಲೇಖನ ಬರೆದರು 'ಅಧಿಕಾರದಲ್ಲಿರುವ ಆಂಗ್ಲೇಯನೂ, ಅಧಿಕಾರದಿಂದ ಹೊರಗಿರುವ ಆಂಗ್ಲೇಯನೂ ಬೇರೆ ಬೇರೆ, ಹಾಗೆಯೇ ಭಾರತದಲ್ಲಿರುವ ಆಂಗ್ಲೇಯನೂ ಇಂಗ್ಲೆಂಡಿನಲ್ಲಿರುವ ಆಂಗ್ಲೇಯನೂ ಬೇರೆ. ನೀವು ಭಾರತದಲ್ಲಿರುವಾಗ, ಒಂದು ವರ್ಣನಾತೀತವಾದ ದುರಾಡಳಿತಕ್ಕೆ ಅಂಟಿಕೊಂಡಿರುವಿರಿ. ನೀವೂ ಈ ಆಡಳಿತದಂತೇ ಗುಲಾಮರಾಗಿದ್ದೀರಿ. ಆದ್ದರಿಂದ ನೀವು ನನ್ನ ಮೇಲೆ ಸುಮ್ಮಸುಮ್ಮಗೆ ಆರೋಪ ಹೊರಿಸಬೇಡಿ. ಕೆಲವೇ ಮಂದಿ ನಿಮ್ಮವರ ಕೈ ಕೆಳಗಿರುವ, ಹಾಗೂ ನಿಮ್ಮನ್ನು ಕೋಟೆಯೊಳಗಡೆ, ಕೋವಿ ಕಾವಲಿನಲ್ಲಿರಿಸಿದ, ಈ ಆಡಳಿತವನ್ನು ಕೊನೆಗಾಣಿಸುವಲ್ಲಿ ಹಾಗೂ ಬದಲಾಯಿಸುವಲ್ಲಿ ನಾನು ಸಹನೆಯಿಲ್ಲದವನಾಗಿರುವೆನು. ಇದು ನಮಗೂ ನಿಮಗೂ ನಾಚಿಕೆಯ ಕೆಲಸ. ನಮ್ಮ ಜೀವನ ಅನ್ಯೋನ್ಯ ಅವಿಶ್ವಾಸ ಮತ್ತು ಭೀತಿಯಲ್ಲಿ ನಡೆಯುತ್ತಿದೆ. ಇದು ಅಮಾನುಷವೆಂಬುದನ್ನು ನೀವು ಒಪ್ಪಿಕೊಳ್ಳಬೇಕು. ನೀವು ಯಾವಾಗಲೂ ವಿದೇಶೀ ಸುಲಿಗೆಗಾರರಾಗಿರದೆ ಭಾರತ ಜನತೆಯೊಡನೆ ಸಮೊಪವರ್ತಿಗಳಾಗಿ ಇರತಕ್ಕದ್ದು. 'ಓರ್ವ ಇಂಗ್ಲೀಷನ ಜೀವಕ್ಕೆ ೧ ಸಾವಿರ ಭಾರತೀಯರ ಜೀವ' ಎಂಬುದು ನಿಮ್ಮ ಧ್ಯೇಯ; ಇದು ೧೯೧೯ರಲ್ಲಿ ನಿಮ್ಮ ಉಚ್ಚಾಧಿಕಾರಿಯೊಬ್ಬನಿಂದ ಭಾರತದಲ್ಲಿ ಪ್ರದರ್ಶಿತವಾಯಿತು."

ಕಣ್ಣಿದ್ದರೆ ಕಿವಿಯಿದ್ದರೆ

ಮಹಾತ್ಮರು ಬಹಳ ಹಿಂದೆಯೇ ಈ ಸಂಕಷ್ಟವನ್ನು ಕಂಡರು. ಅವರು ಈ ಅನರ್ಥವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಕಿವಿಯುಳ್ಳವರಿಗೆ ಕೇಳುವಂತೆ ಕಣ್ಣಿದ್ದವರಿಗೆ ಕಾಣುವಂತೆ ಮಾಡಿದ್ದಾರೆ. ಯಾರು ಕಿವಿಗೊಡಲಾರೆವೆಂದಿದ್ದಾರೋ ಅವರೊಡನೆಯೂ ಅವರು ಪ್ರಾರ್ಥಿಸಿ ಕೇಳಿಕೊಂಡಿದ್ದಾರೆ. ಕಲ್ಕತ್ತ ವಿಶ್ವವಿದ್ಯಾಲಯದ ಕೊನ್ವೊಕೇಶನ್ ಭಾಷಣವಾಡುತ್ತಾ, ಆ ತತ್ವಜ್ಞಾನಿ ರಾಧಾ ಕೃಷ್ಣನರೂ ಕೂಡಾ, 'ನಾವು ಸ್ವತಃ ಕ್ರಾಂತಿಕಾರಿಗಳಲ್ಲ; ಆದರೆ ಅವಶ್ಯ ಕಂಡರೆ ಹಾಗಾಗಬಹುದು; ದೇಶದ ಜನತೆಯ ಪರಿಸ್ಥಿತಿ ಉತ್ತಮದಾಗದೆ, ಬಡತನದಿಂದ ಜನತೆ ಸಾಯುವಾಗ, ಅದಕ್ಕೆ ಹೊಣೆಗಾರರಾದವರ ಮೇಲೆ ದಂಗೆಯೆಬ್ಬಿಸುವ ಹಂಚಿಕೆಯಾಗಬಹುದು." ರಾಧಾಕೃಷ್ಣನರು ನಮ್ಮ ಜನತೆಯ ಅಭ್ಯಾಸದಲ್ಲಿ ಬದಲಾವಣೆ ಆಗಬೇಕೆಂದರು. ನಾವೆಲ್ಲರೂ ಒಂದೇ ಮನಸ್ಸಿನಿಂದ ಸ್ವತಂತ್ರರೆಂದು ಭಾವಿಸತೊಡಗಿದರೆ ನಾವು ಸ್ವಾತಂತ್ರ್ಯ ಪಡೆದೇ ಪಡೆವೆವು. ಸ್ವತಂತ್ರಜನರೆಂದು ಬಗೆದು ಒಂದಾಗಿ ಕೆಲಸಮಾಡಿರಿ; ನೀವು ಸ್ವಾತಂತ್ರ್ಯ ಪಡೆವಿರಿ. ಜಾಲಿಯಾನ ವಾಲಾಬಾಗ್ ದಿನದಿಂದ ಮೊದಲ್ಗೊಂಡು ನಾವು ಬಹುದೂರ ನಡೆದಿದ್ದೇವೆ; ನಮಗೆ ಒಮ್ಮೊಮ್ಮೆ ದಾರಿಯ ಕೊನೆಯೇ ತಿಳಿವುದಿಲ್ಲ. ಆದರೆ ಜಾಲಿಯಾನ ವಾಲಾಬಾಗ ದಿನದಿಂದ ನಮ್ಮ ಸ್ವಾತಂತ್ರ ಬೀಜ ಮೊಳಕೆಗೊಂಡು ಅದರ ಫಲ ನಾವು ಉಣ್ಣಲೇಬೇಕು; ಬ್ರಿಟಿಷ್ ಪ್ರಧಾನಿ, ಬೆವರು, ಕಂಬನಿ, ರಕುತವನ್ನು ಸುರಿಸಲು ಪಣ ತೊಟ್ಟಿದ್ದಾರೆ. ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಬೇಕಾದಷ್ಟು ರಕ್ತ ಕಂಬನಿ ಸುರಿಸಿಯೇ ಇದ್ದೇವೆ.

ಯುದ್ಧ ಕಥೆಗಳು

ಸೆಬಾಸ್ಟೊಪೋಲ್ ಯುದ್ಧದ ನೆನಹು

ಟಾಲ್‌ಸ್ಟಾಯ್

ಅನುವಾದ ಎಂ. ವಾಸುದೇವ ಭಟ್ಟ, ಬಿ. ಎ. (Hons)

[ಎಷ್ಟೋ ಜನ ತನ್ನ ಸೆಬಾಸ್ಟೊಪೋಲಿನ ನೆನಪು ಪುಸ್ತಕ ಕೇಳಿಕೊಟ್ಟು ಅದರ ಬಗ್ಗೆ ನನ್ನ ಅಭಿಪ್ರಾಯ ಕೇಳಿದ್ದಾನೆ. ನಾನು ಅದನ್ನು ಓದಿದೆ. ನನ್ನ ಮನಸ್ಸಿನ ಮೇಲೆ ಅದು ಬಲವಾದ ಪರಿಣಾಮ ವನ್ನುಂಟುಮಾಡಿದೆ. ಅದರ ಲೇಖಕನೂ ನಾನೂ ಮೂವತ್ತನಾಲ್ಕು ವರ್ಷ ಹಿಂದೆ ಜೈಲಿನಲ್ಲಿದ್ದಾಗ ಆದ ಅನುಭವಗಳು ಇದರಿಂದ ಪುನಃ ಮನಸ್ಸಿನ ಪರದೆಯ ಮೇಲೆ ತೇಲುತ್ತದೆ. ಆಗ ನಾವು ಅನುಭವಿಸಿದ ಯುದ್ಧದ ಘೋರತೆಯನ್ನು ಈ ಲೇಖಕ ಸಣ್ಣಿಸುತ್ತಾನೆ. ಆದರೆ ಅಂದು ಇದ್ದ ನಮ್ಮ ಮನಸ್ಸಿನ ಸ್ಥಿತಿಯನ್ನು ಬಣ್ಣಿಸುವುದಿಲ್ಲ.]

ಯುದ್ಧದಲ್ಲಿ ಅವನೇಕೆ ಹಾಗೆ ಮಾಡಿದ? ಎಲ್ಲವನ್ನು ಬಿಟ್ಟು ಬಿಟ್ಟು ಓಡಿ ಹೋಗಲಿಲ್ಲವೇಕೆ? ಎಂಬ ಸಹಜವಾದ ಪ್ರಶ್ನೆಗೆ ಲೇಖಕನಲ್ಲಿ ಉತ್ತರವಿಲ್ಲ ಯೆಹೂದ್ಯರು ಫಿಲಿಸ್ಟೈನ್ ಜನರನ್ನು ದ್ವೇಷಿಸುತ್ತಿದ್ದಂತೆ ಹಿಂದಿನ ಕಾಲದ ಜನರು ತಮ್ಮ ವೈರಿಗಳನ್ನು ದ್ವೇಷಿಸುತ್ತಿದ್ದರು ಅವನು ತನ್ನ ವೈರಿಗಳನ್ನು ದ್ವೇಷಿಸುವುದಾಗಿ ಹೇಳುವುದಿಲ್ಲ. ಆದರೆ ಗೆಳೆಯರಿಗಾಗಿ ಸಾನುಭೂತಿ ತೋರುವಂತೆ ಒಂದೊಂದು ವೇಳೆ ಅವನು ವೈರಿಗಳ ವಿಷಯದಲ್ಲಿ ಸಾನುಭೂತಿ ತೋರುತ್ತಾನೆ. ಜೆರುಸಲೆಂ ಚರ್ಚಿನ ಬೀಗದ ಕೈ ತಮ್ಮ ಕೈಯಲ್ಲೇ ಇರಬೇಕೆಂದಾಗಲಿ ತಮ್ಮ ನೌಕಾಸೈನ್ಯ ಇರಬೇಕೆಂದಾಗಲಿ ಇರಬೇಡವೆಂದಾಗಲಿ ಅವನು ನಿಕಟವಾದ ಅಭಿಲಾಷೆಯನ್ನು ತೋರುವುದಿಲ್ಲ ರಾಜಕೀಯ ಅಭಿಪ್ರಾಯಕ್ಕೂ ಜನರ ಬದುಕು ಸಾವುಗಳಿಗೂ ಸಂಬಂಧವಿಲ್ಲವೆಂಬುದು ಅವನ ಅಭಿಪ್ರಾಯವೆಂದು ಅವನ ಪುಸ್ತಕವನ್ನೋದುತ್ತೋದುತ್ತ ಮನದಟ್ಟಾಗುತ್ತದೆ ಲೇಖಕನು ಯುದ್ಧ ಕಾಲದಲ್ಲಿ ಹಾಗೇಕೆ ಮಾಡಿದನೆಂಬ ಪ್ರಶ್ನೆಗೆ ದೊರೆಯುವ ಒಂದೇ ಒಂದು ಉತ್ತರವಿದು ನಾನು ಚಿಕ್ಕವನಾಗಿದ್ದಾಗ ಅಥವಾ ಯುದ್ಧ ಪ್ರಾರಂಭವಾಗುವ ಮೊದಲೇ ನನ್ನನ್ನು ಸೈನ್ಯಕ್ಕೆ ಸೇರಿಸಿದರು, ಸಾಕಷ್ಟು ಅನುಭವವಿಲ್ಲದೆ ನನಗೆ ದೊರೆತ ಸ್ಥಾನದಿಂದ ತಪ್ಪಿಸಿಕೊಳ್ಳಲು ಮಹತ್ ಪ್ರಯತ್ನವಿಲ್ಲದೆ ಸಾಧ್ಯವಾಗಲಿಲ್ಲ, ಆ ಸ್ಥಾನದಲ್ಲಿ ನಾನು ಸಿಕ್ಕಿಬಿದ್ದು ನನ್ನ ಪ್ರಕೃತಿಗೆ ತೀರ ವಿರುದ್ಧವಾದ ಅಸಹಜವಾದ ಕೆಲಸಗಳನ್ನು—ನನಗೆ ಸ್ವಲ್ಪವೂ ಕೇಡು ಮಾಡದ ಜೊತೆಗಾರರನ್ನು ಕೊಲ್ಲುವುದು ಮುಂತಾದ ಕೆಲಸಗಳನ್ನು—ನಾನು ಮಾಡಲೇ ಬೇಕಾದಾಗ, ಹಾಗೆ ಮಾಡದಿದ್ದರೆ ಶಿಕ್ಷೆಯನ್ನೂ ಅಪಮಾನವನ್ನೂ ಅನುಭವಿಸಬೇಕಾಗಿದ್ದುದರಿಂದ ಅಂತಹ ಅಮಾನುಷ ಕೃತ್ಯಗಳನ್ನಾದರೂ ಮಾಡುವುದೇ ಸರಿಯೆಂದು ನಿರ್ಧರಿಸಿದೆ

ಪುಸ್ತಕದಲ್ಲಿ ಅಲ್ಲಲ್ಲಿ ಝಾರ್ (ರಷ್ಯ ದೇಶದ ಚಕ್ರವರ್ತಿ) ಮತ್ತು ಸ್ವದೇಶಗಳ ಬಗ್ಗೆ ಪ್ರೀತಿಯ ಕುರುಹುಗಳು ತೋರಿಬಂದರೂ, ಅವು ಜೀವನ ನಿಜವಾದ ಭಾವಗಳಲ್ಲ, ಸನ್ನಿವೇಶದ ಬಲಾತ್ಕಾರದಿಂದ ಅವನು ಹಾಗೆ ಬರೆಯಬೇಕಾಯಿತು, ಎಂಬುದು ಓದುಗನಿಗೆ ತೋರುತ್ತದೆ. ಅವಯವಗಳನ್ನಾಗಲಿ, ಜೀವವನ್ನಾಗಲಿ ಕೊಡುವುದು ಶ್ರೇಯಸ್ಕರ; ಸಾವುನೋವುಗಳನ್ನು ಅನುಭವಿಸುವವರು ಪುಣ್ಯಶಾಲಿಗಳು, ಪೂಜ್ಯರು; ಎಂಬ ಭಾವನೆ ಪುಸ್ತಕದಲ್ಲಿ ತೋರಿಬಂದರೂ ಲೇಖಕನು ತನ್ನ ಜೀವನವನ್ನು ಧಾರೆಯೆರೆಯದಿರುವುದರಿಂದ ಆ ಭಾವನೆ ಸತ್ಯವಲ್ಲವೆಂದು ಲೇಖಕನಿಗೆ ಗೊತ್ತಿದೆ ಎಂದು ವಾಚಕನಿಗೆ ತೋರುತ್ತವೆ. "ತನ್ನ ನೆರೆಯವನನ್ನು ಪ್ರೀತಿಸು, ಅವನನ್ನು ಕೊಲ್ಲಬೇಡ" ಎಂಬ ದೇವರ ಸೂತ್ರ ಲೇಖಕನಿಗೆ ತಿಳಿದಿರುವುದು ವಾಚಕನಿಗೆ ಗೋಚರವಾಗುತ್ತದೆ ಆ ನಿಯಮವನ್ನು ಮಾನವನು ಯಾವ ರೀತಿಯಲ್ಲೂ ಮೀರಲಾಗದು ಎಂದೂ ಲೇಖಕನು ತಿಳಿದಿದ್ದಾನೆ.

ಇದು ಈ ಪುಸ್ತಕದ ಗುಣ. ಗಮ್ಯವಾಗಿರುವ ಈ ಭಾವ ಸ್ಪಷ್ಟವಾಗಿ ಹೇಳದಿರುವುದು ಶೋಚನೀಯ ಸಾವು ಸಂಕಟಗಳ ಬಣ್ಣಿಸಲ್ಪಟ್ಟಿವೆ, ಅವುಗಳ ಕಾರಣ ಕೊಟ್ಟಿಲ್ಲ ಮೂವತ್ತೈದು ವರ್ಷಗಳ ಹಿಂದೆ ಅದೂ ಸರಿಯಾಗಿತ್ತು, ಈಗ ಮಾತ್ರ ಇನ್ನೂ ಹೆಚ್ಚು ಬೇಕು. ಸೈನಿಕರ ಸಾವುನೋವುಗಳಿಗೆ ಕಾರಣವೇನೆಂದು ತಿಳಿದರೆ ಆ ಕಾರಣಗಳನ್ನು ಹೋಗಲಾಡಿಸಲು ನಮಗೆ ಸಾಧ್ಯವಾಗುವುದು

"ಯುದ್ಧ! ಗಾಯ, ರಕ್ತ, ಮರಣ—ಏನು ಭಯಂಕರ! ಗಾಯಗಳಿಂದ ನೋವು ಸಾವುಗಳು ಉಂಟಾಗದಂತೆ ತಡೆಗಟ್ಟಲು ರೆಡ್‌ಕ್ರಾಸ್ ಸೊಸೈಟಿಯನ್ನು ರಚಿಸಬೇಕು' ಎನ್ನುತ್ತಾರೆ ಜನ ಆದರೆ ಯುದ್ಧದಲ್ಲಿ ನಿಜವಾಗಿ ಭೀಕರವಾಗಿರುವುದು ಗಾಯಗಳಲ್ಲ, ನೋವಲ್ಲ, ಸಾವಲ್ಲ ಅನಾದಿಕಾಲದಿಂದ ನೋವನ್ನೂ ಸಾವನ್ನೂ ಅನುಭವಿಸುತ್ತಿರುವ ಮಾನವ ಸಮಾಜ ಅವುಗಳಿಗೋಸ್ಕರ ಹೆದರಬೇಕಾದುದಿಲ್ಲ ಯುದ್ಧವಿಲ್ಲದಿದ್ದರೂ ಕ್ಷಾಮಗಳಿಂದಲೂ ನೀರಿನ ನೆರೆಗಳಿಂದಲೂ ಅಂಟುಜಾಡ್ಯಗಳಿಂದಲೂ ಜನರು ಸಾಯುತ್ತಾರೆ ಆದುದರಿಂದ ಸಾವುನೋವುಗಳೇ ಭಯಾನಕವಲ್ಲ ಸಾವುನೋವುಗಳನ್ನು ಜನರ ಮೇಲೆ ಹೇರಿಸುವ ದುರ್ಬುದ್ಧಿಯೇ ಭೀಕರವಾದುದು.

ಗೂಢಚಾರನೊಬ್ಬನನ್ನು ಪಾಶಿಗೇರಿಸಬೇಕೆಂದು ಒಬ್ಬನು ಇನ್ನೊಬ್ಬನಿಗೆ ಹೇಳುತ್ತಾನೆ ಎರಡನೆಯವನು "ಸರಿ, ಅವನನ್ನು ಗಲ್ಲಿಗೇರಿಸೋಣ ಎನ್ನುತ್ತಾನೆ ಇಂತಹ ಒಂದು ಮಾತಿನಲ್ಲಿ ಸಾವುನೋವುಗಳು ತುಂಬಿವೆ ಅಚ್ಚು ಹಾಕಿ ಓದಿದ ಅಂತಹ ಒಂದು ಮಾತಿನಲ್ಲಿ ಲಕ್ಷಗಟ್ಟಲೆ ಜನರ ಸಾವುನೋವುಗಳು ಅಂಟಿಕೊಂಡಿವೆ. ಮನುಷ್ಯನ ದೇಹದ ಸಾವುನೋವುಗಳನ್ನು ಕಡಿಮೆ ಮಾಡುವುದಕ್ಕಿಂತ ಅವನ ಆತ್ಮದ ಸಾವುನೋವುಗಳನ್ನು ಕಡಿಮೆಮಾಡುವುದು ಮುಖ್ಯ. ನಮಗೆ ಬೇಕಾದುದು ರೆಡ್‌ಕ್ರಾಸ್ ಅಲ್ಲ, ಕ್ರಿಸ್ತನ ಸರಲವಾದ ಕ್ರಾಸ್—ಅಸತ್ಯ ಮೋಸಗಳನ್ನು ಹೋಗಲಾಡಿಸುವ ಕ್ರಾಸ್.

ಈ ಮುನ್ನುಡಿಯನ್ನು ಮುಗಿಸುವ ವೇಳೆಗೆ ಮಿಲಿಟರಿ ಕಾಲೇಜಿನಿಂದ ಒಬ್ಬ ವಿದ್ಯಾರ್ಥಿ ನನ್ನನ್ನು ನೋಡಬಂದು ಆಧ್ಯಾತ್ಮಿಕ ಸಂಶಯಗಳು ತನ್ನನ್ನು ಬಾಧಿಸುತ್ತಿರುವುದಾಗಿ ಹೇಳಿದನು. ಜನರು ಅನುಸರಿಸಲು ಅಷ್ಟೊಂದು ಕಠಿನವಾದ ನಿಯಮಾವಳಿಯನ್ನೇಕೆ ಮಾಡಿದ ಯೇಸು? ಈ ವಿಷಯದಲ್ಲಿ ನಾನು ಬರೆದಿದ್ದುದನ್ನು ಅವನು ಓದಿರಲಿಲ್ಲ ಜೀವನದ ಸಮಸ್ಯೆಗಳಿಗೆ ಉತ್ತರ ದೊರೆಯುವಂತೆ ಬೈಬಲ್ ಗ್ರಂಥವನ್ನು ಜಾಗರೂಕತೆಯಿಂದ ಓದಲು ಹೇಳಿಕೊಟ್ಟೆ. ನಮ್ಮ ಸಂಭಾಷಣೆಯ ಕೊನೆಯಲ್ಲಿ ದ್ರಾಕ್ಷಾರಸದ ಸುದ್ದಿ ಬಂದಾಗ ಕುಡಿಯುವುದನ್ನು ಬಿಡಬೇಕೆಂದು ಅವನಿಗೆ ಉಪದೇಶಿಸಿದೆ 'ಸೈನಿಕ ವೃತ್ತಿಗೆ ಕುಡಿತ ಬೇಕಾಗುತ್ತದೆ' ಎಂದನವನು. ಆರೋಗ್ಯಕ್ಕಾಗಿಯೂ ದೇಹಶಕ್ತಿಗಾಗಿಯೂ ಕುಡಿತ ಅವಶ್ಯವೆಂದು ಅವನ ಅಭಿಪ್ರಾಯವೆಂದು ನಾನು ತಿಳಿದೆ. ಆದರೆ, ಅವನು ಮಾತು ಮುಂದುವರಿಸುತ್ತಾ "ಗ್ಯಾಲೀಶ್ ತೆಷೆಯಲ್ಲಿ ನನ್ನ ವಾಸಿಗಳನ್ನು ಸ್ಟ್ರೊ ಬೆಲಿಫ್ ಕೊಲ್ಲಲೆಳಸಿದಾಗ ಸೈನಿಕರು ಕೊಲೆ ಮಾಡಲೊಪ್ಪಲಿಲ್ಲ. ಅವರಿಗೆ ಕುಡಿತ ಧಾರಾಳವಾಗಿ ಸಿಕ್ಕಿದ ಮೇಲೆ...." ಎಂದಾಗ ಅವನ ಅಭಿಪ್ರಾಯ ನನಗೆ ತಿಳಿಯಿತು. ಯುದ್ಧದ ಭೀಕರತೆಯೆಲ್ಲ ಈ ಹುಡುಗನಲ್ಲಿ ಅವನ ಎಳೆಮೊಗದಲ್ಲಿ ಅಚ್ಚುಕಟ್ಟಾದ ಉಡಿಗೆಯಲ್ಲಿ ತೊಡಿಗೆಯಲ್ಲಿ—ಜೀವನದ ಧ್ಯೇಯಗಳೆಲ್ಲ ತಲೆಕೆಳಗಾಗಿರುವ ಈ ಹುಡುಗನಲ್ಲಿ ಮೂರ್ತಿಮತ್ತಾಗಿವೆ.

ಇದೇ ಯುದ್ಧದ ನಿಜವಾದ ಭೀಕರತೆ! ಅವನ ಆ ಒಂದು ಮಾತಿನಲ್ಲಿ, ಈ ವಿದ್ಯಾಭ್ಯಾಸದ ಪರಿಣಾಮವಾದ ಒಂದೇ ಒಂದು ಮಾತಿನಲ್ಲಿ, ಹುದುಗಿರುವ ಕ್ರೌರ್ಯದ ಗಾಯಗಳನ್ನು ಗುಣಪಡಿಸಲು ಎಷ್ಟು ಕೋಟಿ ರೆಡ್‌ಕ್ರಾಸ್ ಕೆಲಸಗಾರರ ಪ್ರಯತ್ನದಿಂದ ಸಾಧ್ಯವಾದೀತು?



ಸೆಬಾಸ್ಟಪೋಲಿನಲ್ಲಿ ಉಗ್ರ ಕದನ ನಡೆಯುತ್ತಿದೆ. ಈ ದುರ್ಗದೊಳಗಿನ ಜರ್ಮನರೂ ರುಮೇನಿಯಾನರೂ ಕಾದು ರುವರು. ರುಮೇನಿಯವನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಅದಷ್ಟು ಸಮಯ ರಷ್ಯನರನ್ನು ತಡೆ ಹಿಡಿಯುವುದೇ ಜರ್ಮನರ ಉದ್ದೇಶವಿದ್ದಂತೆ ತೋರುವುದು. ಸೆಬಾಸ್ಟಪೋಲಿಗೆ ನುಗ್ಗಲು ರಶ್ಯನರು ಪ್ರಚಂಡ ಪರಾಕ್ರಮ ತೋರಿಸಿ ನುಗ್ಗುತ್ತಿರುವರು.

ಎರಡು ವರ್ಷಗಳ ಹಿಂದೆ ತಮ್ಮ ಕೋಟೆಯನ್ನು ರಕ್ಷಿಸಲು ಕಲಿತನದಿಂದ ಹೋರಾಡಿದ ವೀರರು ಇಂದು ಪುನಃ ಅದನ್ನು ಆಕ್ರಮಿಸಲು ಪರಾಕ್ರಮದಿಂದ ಹೋರಾಡುತ್ತಿರುವರು. ಈ ನಗರವು ಈಗ ಸಂಪೂರ್ಣ ರಶ್ಯನರಿಂದ ಸುತ್ತುಗಟ್ಟಲ್ಪಟ್ಟಿದೆ. ಮುಖ್ಯಸೈನ್ಯವು ಸೆಬಾಸ್ಟಪೋಲಿನಿಂದ ಕೇವಲ ನೂರು ಮೈಲು ದೂರದಲ್ಲಿದೆ. ಉತ್ತರದಲ್ಲಿ ೪ ಮೈಲು, ಪೂರ್ವದಲ್ಲಿ ೧೦ ಮೈಲು, ದಕ್ಷಿಣದಲ್ಲಿ ೮ ಮೈಲು ದೂರದಲ್ಲಿಯೂ ರಶ್ಯನರು ಸುತ್ತುಗಟ್ಟಿರುವರು. ರಶ್ಯನರ ಒಂದು ಸೈನ್ಯ ಸೆಬಾಸ್ಟಪೋಲನ್ನು ನುಗ್ಗಿದೆಯೆಂದೂ ಲಂಡನಿನ ಆಕಾಶವಾಣಿ ಸುದ್ದಿ.

ಪತ್ರಿಕೋದ್ಯೋಗಿ ಸಭೆಯಲ್ಲಿ ಅಮೆರಿಕದ ದಂಡಯಾತ್ರೆಯ ವಿಷಯ ಮಾತನಾಡುತ್ತಾ ನೌಕಾ ಮಂತ್ರಿ ಕರ್ನಲ್ ನಾಕ್ಸರು, ಎಂದಾದರೊಂದು ದಿನ ಕುರಾಯಿಲ್-ದ್ವೀಪ ಸಮೂಹದೊಳಗಿನ ಕೆಲವು ದ್ವೀಪಗಳನ್ನು ವಶಪಡಿಸಲು ನಮಗೆ ಸಾಧ್ಯವಿರುದೆಯೆಂದರು. ಕುರಾಯಿಲ್ ದ್ವೀಪಗಳ ಮೇಲೆ ದಂಡೆತ್ತಿ ಹೋಗುವ ಅಮೆರಿಕದ ಯೋಜನೆ ಸಿದ್ಧವಾಗಿದೆಯೆಂದೂ ತಿಳಿದುಬರುತ್ತದೆ.

ಈಗ ಐದು ವರ್ಷ ಯುದ್ಧ ನಡೆದಿದ್ದರೂ ಜರ್ಮನಿಯ ಹತ್ತಿರ ಇನ್ನೂ ೫೫ ಲಕ್ಷ ಮುಂದಲ ಸೈನಿಕರಿರುವರೆಂದೂ ಯುದ್ಧ ಪ್ರಾರಂಭದಲ್ಲಿದ್ದ ೫೦ ಲಕ್ಷ ಮುಂದಲ ಸೈನ್ಯವನ್ನು ೭೩೩೦೦೦ಕ್ಕೆ ಏರಿಸಿತ್ತೆಂದೂ, ಮಿತ್ರರ ಗುಪ್ತ ವರದಿಗಳಿಂದ ತಿಳಿದುಬಂದಿದೆಯೆಂದು ರಾಯಿಟರ್ ವಿಶೇಷ ಸುದ್ದಿಗಾರನು ಬರೆಯುತ್ತಾನೆ.

ಸಮರ ಭೂಮಿಯ ಸಂಚಾರ

ಇಟಲಿಯ ಮಾರ್ಶಲ್ ಬಡೋಗ್ಲಿಯೋ ಇಟಲಿಯ ವಿಕ್ಟರ್ ಸಾಮ್ಯುವೆಲ್ ಅರಸರಿಗೆ ತನ್ನ ರಾಜನಾಮೆಯೊಪ್ಪಿಸಿರುವನೆಂದು ಸುದ್ದಿಯಿದೆ. ಆದರೆ ಹೊಸ ಮಂತ್ರಿಮಂಡಳ ರಚಿಸಲು ಅರಸರು ಪುನಃ ಬಡೋಗ್ಲಿಯೋಗೆ ಹೇಳಿರುವರಂತೆ. ಬಡೋಗ್ಲಿಯೋ ಸರಕಾರದಲ್ಲಿಯೇ ಇಟಲಿಯ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಫೇಸಿಸ್ಟ ವಿರೋಧಕ ಶಕ್ತಿಗಳನ್ನು ಒಟ್ಟುಗೂಡಿಸುವ ಹಾಗೆ ವಿಚಾರವಿನಿಮಯ ಪ್ರಾರಂಭಿಸಬೇಕೆಂದು ಸೋವಿಯೆಟ್ ಸರಕಾರವು ಬ್ರಿಟನ್ ಮತ್ತು ಅಮೆರಿಕಗಳನ್ನು ಕೇಳಿಕೊಂಡಿರುವುದೆಂದು ವರದಿಯಿರುವುದು. ಹಿಟ್ಲರನನ್ನು ಸೋಲಿಸುವುದಕ್ಕಾಗಿ ಇಟಲಿಯಲ್ಲಿ ಸಮರ್ಥ ಸರಕಾರವನ್ನು ಸ್ಥಾಪಿಸುವುದೇ ಇದರ ಉದ್ದೇಶವಾಗಿರುವುದೆಂದೂ ಹೇಳಲಾಗಿದೆ.

ಕೋಹಿಮಾ ನಗರದ ನಾಲ್ಕು ಮೈಲು ಉತ್ತರದಲ್ಲಿ ಜಪಾನರು ಕತ್ತರಿಸಿದ್ದ ರಸ್ತೆಯನ್ನು ಬ್ರಿಟಿಷ್ ಸೈನಿಕರು ಟೇಂಕ್ ದಳದ ಸಹಾಯದೊಂದಿಗೆ ಈಗ ಸರಿಪಡಿಸಿರುವರೆಂದು ದಿಮಾಪುರದಿಂದ ಭಾರತೀಯ ಸೇನೆಯ ನಿರೀಕ್ಷಕರೊಬ್ಬರು ಬರೆಯುತ್ತಾರೆ. ಈ ವ್ಯೂಹದಲ್ಲಿ ಭಯಂಕರ ಕಾಳಗ ನಡೆದಿದ್ದೆಯೆಂದೂ ರಜಪೂತ, ಪಂಜಾಬಿ ಮತ್ತು ಬ್ರಿಟಿಷ್ ಸೈನಿಕರು ಇದರಲ್ಲಿ ಭಾಗವಹಿಸಿರುವರೆಂದೂ ತಿಳಿಯುತ್ತದೆ. ಟಿಡ್ಡಿಂ ರಸ್ತೆಯ ನೆರೆಹೊರೆಯಲ್ಲಿ ಗಸ್ತಿ ಚಟುವಟಿಕೆಯಿದೆ. ಭೀಷಣಪುರದ ಭಾಗದಲ್ಲಿ ಜಪಾನರೊಡನೆ ಹೊಡೆದಾಟವಾಗಿದೆ. ಇಂಫಾಲ್ ಮೈದಾನಿನ ಈಶಾನ್ಯ ದಿಕ್ಕಿನಲ್ಲಿ ಮಿತ್ರರ ಪರಿಸ್ಥಿತಿ ಸುಧಾರಿಸಿದೆಯೆಂದು ತಿಳಿದು ಬರುವುದು. ಪಾಲೇಲ-ಟಾಮು ರಸ್ತೆಯ ಬಳಿಯಲ್ಲಿರುವ ಪರ್ವತ ಶ್ರೇಣಿಯಲ್ಲಿ ಜಪಾನರ ಒತ್ತಡ ಬಲವಾಗಿರುವುದು. ಅರಕಾನ ಗಸ್ತಿ ಚಟುವಟಿಕೆಯೂ ವಿಶೇಷವಾಗಿಯೇ ಇದೆ.

ಸೇನಾಪತಿ ಲಾರ್ಡ್ ಲೂಯಿ ಮೌಂಟ್ ಬೇಟನರು, ಈಗ ತಮ್ಮ ಹೊಸ ಸನ್ನಿಧಿ ಕೇಂದ್ರವನ್ನು ಡಿಲ್ಲಿಯಿಂದ ಕೊಲೊಂಬೋಗೆ ಮಾಡಿದ್ದು, ಜಪಾನರ ವಿರುದ್ಧ ನಡೆವ ಹೋರಾಟದ ಸೂತ್ರ ಚಾಲನೆಗಳನ್ನು ಅಲ್ಲಿಂದಲೇ ನಿರ್ವಹಿಸುತ್ತಿರುವರು. ಅವರು ಅಲ್ಲಿಗೆ ಕಳೆದ ತಾ. ೧೫ರಂದು ತೆರಳಿದರು. ಹೀಗೆ ಡಿಲ್ಲಿಯಿಂದ ಕೋಲೊಂಬೋಗೆ ಸ್ಥಳಾಂತರಿಸಲ್ಪಟ್ಟದ್ದರಿಂದ ಬರ್ಮಾ, ಮಲಯಾ ಹಾಗೂ ಸುಮಾತ್ರದ ಕೆಲವು ಭಾಗಗಳು ಅವರಿಗೆ ಒಂದು ಸಾವಿರ ಮೈಲು ಸುತ್ತಗಲದಲ್ಲಿ ನಿಲ್ಲುತ್ತವೆ.

ಅಂಡಮಾನ್ ದ್ವೀಪಗಳಲ್ಲಿರುವ ಪೋರ್ಟ್ ಬ್ಲೇರ್‌ನಲ್ಲಿ ಆಶ್ರಯ ಪಡೆದಿರುವ ಜಪಾನೀ ಹಡಗಗಳ ಮೇಲೆ ಮಿತ್ರ ವಿಮಾನಗಳು ಬಾಂಬುಗಳನ್ನೆಸೆದವು. ಪೂರ್ವ ಏಶ್ಯಾ ವೈಮಾನಿಕ ಅಧಿಪತ್ಯದ ಮೇಜರ್ ಜನರಲ್ ಜೋರ್ಜ್ ಸ್ಟ್ರೆಟ್ ಮೇಯರರ ಸನ್ನಿಧಿ ಕೇಂದ್ರವು ಹೊಸ ಡಿಲ್ಲಿಯಿಂದ ಕಲ್ಕತ್ತಾ ಭಾಗಕ್ಕೆ ಸಾಗಿಸಲಾಗಿದೆ. ಇದರಿಂದ ರಣರಂಗಕ್ಕೆ ಒಂದು ಸಾವಿರ ಮೈಲು ಹತ್ತಿರ ಸೈನ್ಯಕೇಂದ್ರ ಸ್ಥಾಪಿತವಾದಂತಾಯಿತು.

ಮುಷ್ಕರಗಳನ್ನು ಪ್ರೋತ್ಸಾಹಿಸುವುದನ್ನು ತಡೆಯಲಿಕ್ಕೆ ಬ್ರಿಟಿಷ್ ಸರಕಾರದವರು ತಮ್ಮ ಕೈಗೆ ವಿಶೇಷಾಧಿಕಾರ ತೆಗೆದುಕೊಂಡು, ಇನ್ನು ಮೇಲೆ ಮುಷ್ಕರ ಪ್ರೋತ್ಸಾಹಕರಿಗೆ ೫ ವರ್ಷ ಶಿಕ್ಷೆ ಮತ್ತು ೫೦೦ ಪವನು ಜುಲ್ಮಾನೆ ಅಥವಾ ಎರಡನ್ನೂ ವಿಧಿಸಬಹುದಾಗಿ ಸಾರಿರುವರು.

ಆಂಝಿಯೋ ಕರಾವಳಿ ಠಾಣೆಯ ಮೇಲೆ ನುಗ್ಗಿ ಬಂದ ಶತ್ರು ಸೇನೆಗಳನ್ನು ಇದಿರಿಸಲಾಗಿದೆ. ಆಡ್ರಿಯಾಟಿಕ್ ಕರಾವಳಿಯ ಭಾಗದಲ್ಲೂ ಜರ್ಮನರು ಧಾಳಿಯಿಟ್ಟರು. ಮಿತ್ರ ವಿಮಾನಗಳು ಸೋಫಿಯಾ ಮತ್ತು ಬೆಲ್‌ಗ್ರೇಡ್‌ಗಳ ಮೇಲೆ ಬಾಂಬೆಸೆದವು.

ಆಫ್ರಿಕದ ವರ್ಣ ದ್ವೇಷ ಧೋರಣದ ಬಗ್ಗೆ ನೇವಲ್ ಮತ್ತು ಸ್ಮಾಟ್ಸರೊಳಗೆ ಪತ್ರ ವ್ಯವಹಾರ ನಡೆದಿದ್ದು, ಇದರ ಪರಿಣಾಮ ಇಬ್ಬರೂ ಒಂದು ಇತ್ಯರ್ಥಕ್ಕೆ ಬಂದಿರುವರೆಂದು ಗೊತ್ತಾಗಿದೆ. ಪೆಗಿಂಗ್ ಕಾನೂನಿನ ಬದಲು ಇನ್ನೊಂದು ಕಾನೂನಾಗುವ ಊಹೆಯಿದೆ.

ಪೂರ್ವ ಆಫ್ರಿಕದಲ್ಲಿ ಪರದೇಶಿಯರ ವಸತಿ ಬಗ್ಗೆ ದಿನದಿನಕ್ಕೆ ನಿರ್ಬಂಧ ಹೆಚ್ಚುತ್ತಾ ಹೋಗುವುದರಿಂದ ಅಲ್ಲಿನ ಭಾರತೀಯರು ಬಹಳ ಕಳವಳಗೊಂಡಿದ್ದಾರೆ. ಆಹಾರ ಧಾನ್ಯಗಳ ಕೊರತೆಯಿಂದ ಮೊದಲು ಟಾಂಗಾನಿಕಾದಲ್ಲಿದ್ದ ನಿರ್ಬಂಧವು ಈಗ ಇಡೀ ಪೂರ್ವ ಆಫ್ರಿಕಕ್ಕೆ ಹರಡಿದೆ. ಸ್ಥಿರವಾಗಿ ನೆಲಸಿದವರಿಗೆ ಹಾಗೂ ಯುದ್ಧ ಯತ್ನಕ್ಕೆ ಯಾರೂ ಅವಶ್ಯವೆಂದು ಕಂಡು ಬರುವುದೋ ಅರಿವಗೆ ನಿರ್ಬಂಧ ಅನ್ವಯಿಸುವುದಿಲ್ಲ. ಪೂರ್ವ ಆಫ್ರಿಕದ ಭಾರತೀಯರ ಒಂದು ಸಭೆ ಸೇರಿ, ಈ ನಿರ್ಬಂಧ ಹಿಂತೆಗೆಯಬೇಕೆಂಬ ನಿರ್ಣಯ ಮಾಡಿದೆ.

ನೋಟೀಸು

ಪುತ್ತೂರು ತಾಲೂಕು ನಂಬ್ರ 168ನೇ ಪೆರುವಾಯಿ ಗ್ರಾಮದ ಪಳ್ಳತ್ತಡ್ಕ ತಿಮ್ಮಣ್ಣ ಭಟ್ಟರ ಮಗ ರಾಮಪ್ಪ ಭಟ್ಟನು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದರೆ-

ನನ್ನ ಅವಿಭಕ್ತನಾಗಿರುವ 2ನೇ ಮಗ ರಾಮಕೃಷ್ಣನು ಹಲವು ವರ್ಷದಳ ಅಗ್ನ್ಯಾತು ಬುದ್ಧಿ ಸ್ಥಿರತೆ ಇಲ್ಲದೆ ಯುಕ್ತಾಯುಕ್ತ ಯಾವದೊಂದು ವ್ಯವಹಾರಗಳನ್ನು ಮಾಡುವರೆ ಅಸಮರ್ಥನಾಗಿ ನನ್ನ ಆಶ್ರಯದೊಳಗೆ ಏಕ ಗೃಹ ಕೃತ್ಯದಲ್ಲಿರುವಲ್ಲಿ ಅವನಿಗೆ ಏನೊಂದೂ ಸಾಲ ವಗೈರೆ ಮಾಡುವ ಅವಶ್ಯಕತೆ ಚೈತನ್ಯ ಕೂಡಾ ಇರುವದಿಲ್ಲವೆಂಬ ಸಂಗತಿ ಜನಜನಿತವಾಗಿದೆ. ಹೀಗಿರುವಲ್ಲಿ ನಮ್ಮ ದ್ವೇಶಿಕರು ಕುಟುಂಬ ದ್ರೋಹಕರಾದರೂ ಸದ್ರಿಯವನಿಂದ ಡಿ. ಪ್ರೊ. ನೋಟು ಕೈಕಾಗದ ವಗೈರೆ ಯಾವ ತರದ ಏನೊಂದು ರಿಕಾರ್ಡುಗಳನ್ನು ಬರೆಸಿಕೊಂಡರೆ ಯಾವವೂ ಅವು ಮಂಜೂರಾಗತಕ್ಕವುಗಳಲ್ಲವ ಅಂಥಾ ರಿಕಾರ್ಡು ವಗೈರೆ ಆಧರಿಸಿ ಯಾರಾದರೂ ಮೋಸದ ವ್ಯವಹರಣೆ ನಡಿಸಿದರೂ ಅಂಥವು ಸಹಾ ನನ್ನ ಪರೋಕ್ಷದಲ್ಲಿ ಎಂದಿಗೂ ಮಂಜೂರಾಗತಕ್ಕವುಗಳಲ್ಲವೆಂಬ ವಿಷಯವನ್ನು ಕೂಡಾ ಈ ಮೂಲಕ ಎಲ್ಲವರ ತಿಳುವಳಿಕೆ ಬಗ್ಗೆ ಪ್ರಕಟಿಸಿರುತ್ತೇನೆ.

ಪೆರುವಾಯಿ | ಪ. ರಾಮಪ್ಪ ಭಟ್ಟ.
18-4-44 |

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ— ಗಿರಾಕಿಗಳ ಪೂರ್ತಿಕೆಗಳೇನೆಂದು ತಿಳಕೊಂಡು ಒದಗಿಸುವ— ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ— ಆ ಜನರು ....

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು ......

ತಮ್ಮ ಆರ್ಥಿಕ ಅಡಚಣೆಗಳಲ್ಲೂ ಸಮಸ್ಯೆಗಳಲ್ಲೂ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು ......

... ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು. ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ ಬಾರ್ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT.

Mangalore Stockists:—M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಸ್ವದೇಶಾಭಿಮಾನಿ

ತಾರೀಖು 21—4—1944

ಮಂಗಳೂರಲ್ಲಿಯೇ [illegible] ರೇಶನಿಂಗ್ ಆಗಿಲ್ಲ; ಅದನ್ನು ಆದಷ್ಟು ಬೇಗ [illegible] ಅಂತೆಯೇ, ಅಭಾವದ ಊರುಗಳಾದ ಕಾಸರಗೋಡು ತಾಲೂಕಿನ ಪೇಟೆ ಕೇಂದ್ರಗಳಲ್ಲಿಯೂ ಸರಿಯಾಗಿ ವ್ಯವಸ್ಥೆಗೊಳ್ಳಾಗಲೇಬೇಕು. ಈಗಿನ ಕಲೆಕ್ಟರರು ಜಿಲ್ಲೆಯ ಜನರ ಆಹಾರ ವ್ಯವಸ್ಥೆಗಾಗಿ ತುಂಬಾ ಜಾಗರೂಕತೆ ವಹಿಸುತ್ತಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ನಾವು ಅವರ ಮುಂದೆ ಈ ಸೂಚನೆಗಳನ್ನು ಮಂಡಿಸಿದ್ದೇವೆ; ಮಹಾಜನರೂ ಅಧಿಕಾರಿಗಳೊಡನೆ ಸಹಕರಿಸಿ ನಮ್ಮ ಜಿಲ್ಲೆ ಕಂಗಾಲಾಗದಂತೆ ಮಾಡುವುದು ಅವಶ್ಯವಾದುದು.

ಸ್ವದೇಶ ಸಮಾಚಾರ

ಮುಂಬಯಿ ಧಕ್ಕೆಯಲ್ಲಿ ಸ್ಫೋಟ ಬೆಂಕಿಯ ಅನಾಹುತಗಳು

ತಾ. ೧೪ರಂದು ಮುಂಬಾಯಿ ಧಕ್ಕೆಯಲ್ಲಿ ಬೆಂಕಿ ಹತ್ತಿ ೧೭೭೮ಕ್ಕೆ ಮಿಕ್ಕಿದ ಜನ ಗಾಯಗೊಂಡರು; ೩೩೬ ಮಿಕ್ಕಿದ ಜನ ಮಡಿದರೆಂದು ತಿಳಿಯುತ್ತದೆ. ಧಕ್ಕೆಯಲ್ಲಿ ಎರಡು ಸಲ ಸ್ಫೋಟವಾದ ಮೇಲೆ ಹತ್ತಿದ ಬೆಂಕಿಯನ್ನು ೧೨ ಗಂಟೆಗಳ ಮೇಲೆ ನಂದಿಸಲಾಯಿತು. ೨೪ ಗಂಟೆಗಳ ಮೇಲೆ ಪರಿಸ್ಥಿತಿ ಹದಕ್ಕೆ ಬಂತು.

ಹೀಗೆ ಒಮ್ಮೆಯೇ ಎರಡು ಸ್ಫೋಟಗಳು ಧಕ್ಕೆಯಲ್ಲಿ ಆಗಿ, ಪಟ್ಟಣ ಸುಟ್ಟು ವಿಪರೀತ ಜನ ಆಸ್ತಿ ನಾಶವಾಗಿರುವುದು ಇದರ ಪರಿಹಾರ ಕಾರ್ಯಗಳು ಭರದಿಂದ ಸಾಗುತ್ತವೆ. ಬಂಗಾಳದಲ್ಲಿ ಬರಗಾಲ ಮದ್ರಾಸಿನಲ್ಲಿ ನೆರೆ, ಮುಂಬಾಯಿಯಲ್ಲಿ ಬೆಂಕಿ, ಹೀಗೆಲ್ಲಾ ದೇಶಕ್ಕೆ ಗಂಡಾಂತರ ಬರುವುದು ಬಹಳ ದುಃಖದ ಸಂಗತಿಯಾಗಿದೆ.

ಒಂದು ಮನೆಯ ಹತ್ತಿರ ಬಿದ್ದದ್ದು ಅದರಲ್ಲಿ ಬೇಂಕ್ ಓಫ್ ಇಂಗ್ಲೆಂಡಿನ ಮೊಹರು ಇತ್ತು. ಅದನ್ನು ಆ ಮನೆಯ ಯಜಮಾನ ಪೋಲೀಸ್ ಸ್ಟೇಶನಿಗೆ ಮುಟ್ಟಿಸಿದನು. ಅದರ ಬೆಲೆ ೯೦ ಸಾವಿರ ರೂಪಾಯಿ!

ಕಾಸರಗೋಡು ಕಣ್ಣಿನ ಆಸ್ಪತ್ರೆ

ಕಾಸರಗೋಡಿನ ಡಾ| ಪಿ. ಎನ್. ಭಟ್ಟರು ಹೊಸತಾಗಿ ಕಟ್ಟಿಸಿದ 'ಕಣ್ಣಿನ ಆಸ್ಪತ್ರೆ' ಉದ್ಘಾಟನಾ ಸಮಾರಂಭವು ತಾ ೨೭ರಂದು ಪ್ರಾತಃ ೯ ಗಂಟೆಗೆ ಮದ್ರಾಸ್ ಸ್ಕೂಲ್ ಓಫ್ ಇಂಡಿಯನ್ಸ್ ಮೆಡಿಸಿನ್ ಇದರ ನಿವೃತ್ತ ಪ್ರಿನ್ಸಿಪಾಲ್ ವಿದ್ಯಾರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರಿಂದ ನೆರವೇರಿಸಲ್ಪಡುವುದು. ರಾ| ಬ| ಡಾ| ಎಂ. ಕೇಶವಪೈಗಳು ಡಾ| ಜಿ ಎಸ್. ಮೂರ್ತಿಗಳ ಭಾವಚಿತ್ರ ಅನಾವರಣ ಮಾಡುವರು.

ಜಿಲ್ಲೆಯ ಆಹಾರ

ಈಗಿನ ಜಿಲ್ಲಾ ಕಲೆಕ್ಟರ್ ರಾ| ಸಾ| ರಾಮದಾಸ್ ಇವರು ಅಧಿಕಾರವಹಿಸಿದ ಕೂಡಲೇ ಜಿಲ್ಲೆಯ ಆಹಾರ ಪರಿಸ್ಥಿತಿಯಲ್ಲಿ ಒಂದು ಹೊಸ ವ್ಯವಸ್ಥೆ ಮಾಡುವ ಕಾರ್ಯಕ್ರಮ ಹೊರಡಿಸಿದರು ಇದರಂತೆ ಹೆಚ್ಚಿಗೆ ಇರುವ ಅಕ್ಕಿಯನ್ನು ಸ್ವಾಧೀನಪಡಿಸುವ ಕಾರ್ಯ ಭರದಿಂದ ಸಾಗುತ್ತಿದೆ, ಅಕ್ಕಿಭತ್ತಗಳ ಚಲನ ವಲನ ತಡೆವರೆ ನ್ನಾವಲಿನ ದಳ ಜಿಲ್ಲೆ ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿತವಾಗಿರುವುದು.

ಹೆಚ್ಚಿಗೆ ಅಕ್ಕಿಯನ್ನು ಸ್ವಾಧೀನ ಪಡಿಸುವ ಕೆಲಸ ಎಲ್ಲಿಯೂ ಅತಿರೇಕಕ್ಕೆ ಹೋಗದಂತೆ ನೋಡಬೇಕಾಗಿದೆ. ಮನೆಯ ಖರ್ಚಿಗೂ ಬೇಸಾಯಗಾರರು ಮುಂದಿನ ಸಿಳೆ ಮಾಡುವಂತೆ ಅವರ ಬೇಸಾಯದ ಖರ್ಚಿಗೂ ಅವಶ್ಯವೆಷ್ಟೆಂಬುದನ್ನು ಚೆನ್ನಾಗಿ ಪರಿಶೀಲಿಸಿಕೊಂಡು ಅವರ ವಶವಿರುವ ಅಕ್ಕಿ ಭತ್ತ ಸ್ವಾಧೀನ ಮಾಡಿಕೊಂಡರೆ ಈ ದೂರು ತಪ್ಪಬಹುದು. ಜಿಲ್ಲಾಧಿಕಾರಿಗಳೂ, ರಿಕ್ವಿಸಿಶನ್ ಅಧಿಕಾರಿಗಳೂ ಈ ಕಡೆಗೆ ಅವಶ್ಯ ಗಮನ ಕೊಡಬೇಕು.

ಮಂಗಳೂರು, ಉಡುಪಿಯಂಥಾ ಪೇಟೆಗಳಲ್ಲೇನೋ ಗುರುತು ಚೀಟಿಯಿಂದ, ರೇಶನಿಂಗ್ ಚೀಟಿಯಿಂದ ಒಂದು ವ್ಯವಸ್ಥೆಯಲ್ಲಿ ಅಕ್ಕಿ ಹಂಚಲಾಗುತ್ತಿದೆ. ಆದರೆ ಸಣ್ಣ ಸಣ್ಣ ಪೇಟೆಗಳಲ್ಲಿ, ಹಳ್ಳಿ ಕೇಂದ್ರಗಳಲ್ಲಿ ಈ ವ್ಯವಸ್ಥೆ ಸಾಕಷ್ಟು ಆಗಿಲ್ಲ ಅದರಲ್ಲೂ ಕಡಿಮೆ ಉತ್ಪತ್ತಿಯ ಕಾಸರಗೋಡು ತಾಲೂಕಿನ ಕುಂಬಳೆ, ಬದಿಯಡ್ಕ ಮೊದಲಾದ ಕೇಂದ್ರಗಳಲ್ಲಿ ಅಕ್ಕಿ ಭತ್ತ ಹಂಚುವ ವ್ಯವಸ್ಥೆ ಸರಿಯಾಗಿ ಆಗದೆ, ವಾರಕ್ಕೆ ಎರಡು ಮೂರು ದಿನಗಳವರೆಗೂ ಜನರು ಚಡಪಡಿಸುವ ಸಂದರ್ಭ ಒದಗುತ್ತದೆ.

ಈಗಿನ ಕಲೆಕ್ಟರರು ಅಧಿಕಾರ ವಹಿಸಿದ ಕಾಲದಲ್ಲಿಯೇ ಜಿಲ್ಲೆಯ ಆಹಾರ ವ್ಯವಸ್ಥೆ ಏನೇನೋ ಆಗಿ ಹೋಗಿದೆ. ಎರಡು ಬೆಳೆಗಳೂ ಆಗಿ ಎರಡು ತಿಂಗಳು ದಾಟಿ ಹೋಗಿತ್ತು. ಈ ವಿಳಂಬಕ್ಕೆ ಈಗಿನ ಕಲೆಕ್ಟರರೇನೋ ಜವಾಬ್ದಾರರಲ್ಲ; ಆದರೂ ಇಷ್ಟು ವಿಳಂಬವಾಗಿ, ಈಗ ರಿಕ್ವಿಸಿಶನ್ ಕಾರ್ಯ ಮಾಡುವಾಗ ಜನರ ಅವಶ್ಯಕತೆಯ ಸರಿಯಾದ ಲೆಕ್ಕ ತೆಗೆದು, ಜನರಿಗೆ ಗಾಬರಿ ಹುಟ್ಟದಂತೆ ವ್ಯವಸ್ಥೆ ಮಾಡಬೇಕಾದದ್ದು ಅವಶ್ಯ.

ಅಧಿಕಾರಿಗಳೆಲ್ಲಾ ದೊಡ್ಡ ನಗರಗಳ ಜನರ ಆಹಾರ ವ್ಯವಸ್ಥೆಯಲ್ಲಿ ಆತುರರಾಗಿದ್ದಾರೆಂದೂ, ಸಣ್ಣ ಪೇಟೆಗಳ, ದೂರದ ಹಳ್ಳಿಗಳ ಜನರ ಕೂಗು ಅವರಿಗೆ ಕೇಳುವುದಿಲ್ಲವೆಂದೂ ಇಷ್ಟರಲ್ಲಿಯೇ ದೂರುಗಳಿವೆ. ಇಂಥಾ ದೂರಿಗೆ ಎಡೆಗೊಡದೆ ದೂರದ ಹಳ್ಳಿ ಕೇಂದ್ರಗಳಲ್ಲಿಯೂ ಸರಿಯಾಗಿ, ಕ್ರಮಪ್ರಕಾರವಾಗಿ ಅಕ್ಕಿ ಹಂಚುವ ವ್ಯವಸ್ಥೆ ಮಾಡುವುದು ಅಗತ್ಯವಾದುದು.

ಅಮೆರಿ ಹಾಡು

ಅಮೆರಿ ತನ್ನ ಸ್ವಭಾವಕ್ಕೆ ಅನುಗುಣವಾಗಿ, ಹಿಂದೆ ಹಲವು ಸಾರಿ ಹೇಳಿದಂತೆ ಈ ಸಲವೂ ಕೂಡಾ ಕಾಂಗ್ರೆಸಿನ ಮೇಲೆ ಕಾಂಗ್ರೆಸ್ ಧುರೀಣರ ಮೇಲೆ ಬೇಕಾದಷ್ಟು ಆರೋಪ ಹೊರಿಸಿದರು. ಕಾಂಗ್ರೆಸ್ ಧುರೀಣರು ದಂಗೆಯೆಬ್ಬಿಸಿದರೆಂದು, ಭಾರತದ ಆಡಳಿತಕೆಡಿಸಿದರೆಂದು ಮೊದಲಾಗಿ ಕೂಗಿದರು. ಅಮೆರಿ ಯಾವ ಆರೋಪಹೊರಿಸಿ ಕಾಂಗ್ರೆಸ್ ಮುಂದಾಳುಗಳನ್ನು ನಿಶ್ಚಯವಿಲ್ಲದಂಥಾ ಅವಧಿ ಹಾಕಿ ಸೆರೆಮನೆ ಸೇರಿಸಿದ್ದಾರೋ, ಅಂಥಾ ಆರೋಪಗಳನ್ನು ಮತ್ತೂ ಮತ್ತೂ ಕೂಗಿ ಹೇಳದಿದ್ದರೆ ಅವರ ಕೃತ್ಯವು ತಪ್ಪಾಗುವುದೇನೋ ಸಹಜ; ಆದರೆ ಕಾಂಗ್ರೆಸ್ ಮುಖಂಡರ ಮೇಲೆ ಹೀಗೆ ಆರೋಪ ಮಾತ್ರ ಹೊರಿಸುವುದಕ್ಕಿಂತ ಆರೋಪಗಳು ಸರಿಯೋ ತಪ್ಪೋ ಎಂಬ ಬಗ್ಗೆ ಅಮೆರಿಯವರು ಅವರನ್ನು ನ್ಯಾಯಸ್ಥಾನಕ್ಕೆ ತಂದು ವಿಚಾರಣೆಗೇಕೆ ಗುರಿಪಡಿಸಬಾರದು?

ಅಮೆರಿಯವರು, ಕಾಂಗ್ರೆಸ್ ಮುಖಂಡರು ಒಮ್ಮೆಲೇ ಏಳು ಪ್ರಾಂತಗಳ ಮಂತ್ರಿಮಂಡಳವನ್ನು ರಾಜಿನಾಮೆ ಕೊಡಿಸಿದ ಬಗ್ಗೆ ಆಡಳಿತಕ್ಕೆ ತೊಂದರೆಯುಂಟು ಮಾಡಿದರೆಂದು ದೂರಿದರು ಆದರೆ ಸ್ವತಃ ರಾಜಿನಾಮೆ ಕೊಡದೆ ಇದ್ದರೂ, ಮುಂದೆ ಒತ್ತಾಯದಿಂದ ತೆಗೆದುಹಾಕಲ್ಪಟ್ಟ ಅಲ್ಲಾಭಕ್ಷ, ಫಜುಲುಲ್ ಹಕ್ಕರ ಅವಸ್ಥೆ ವಿಚಾರಿಸಿದರೆ ತೆಗೆದುಹಾಕಿಸಿಕೊಳ್ಳುವುದಕ್ಕಿಂತ ರಾಜಿನಾಮೆ ಕೊಡುವುದೇ ಎಷ್ಟೋ ಗೌರವಕರವೆಂದು ಯಾರಿಗಾದರೂ ಅನಿಸದಿರದು.

ಅಮೆರಿ ಗವರ್ನರರ ಆಡಳಿತ, ಅಡ್ವೈಸರಿ ಸರಕಾರ ಹಾಗೂ ರಾಜಿನಾಮೆಯಿತ್ತ ಕೆಲ ಪ್ರಾಂತ್ಯಗಳಲ್ಲಿ ಸ್ಥಾಪಿತ ಮಾಡಿದ ಮಂತ್ರಿಮಂಡಳಗಳ ಪ್ರಭುತ್ವಗಳನ್ನೆಲ್ಲಾ ಪ್ರಶಂಸಿಸಿದ್ದಾರೆ ತಮ್ಮ ಕಾರ್ಯಕ್ಕೆ, ತಮ್ಮ ಆಡಳಿತಕ್ಕೆ ತಾವೇ ಪ್ರಶಸ್ತಿಪತ್ರಕೊಡುವುದು ಅಷ್ಟೇನೂ ಮಹತ್ವವಾದ ಕೆಲಸವಲ್ಲ; ಅಮೆರಿಯವರ ಈ ಗವರ್ನರರ ಆಡಳಿತ, ಎಡ್ವೈಸರಿ ಸರಕಾರ ಹಾಗೂ ಹೊಸ ಮಂತ್ರಿಮಂಡಳಗಳಿಗೆ ಜನತೆಯ ಒಪ್ಪಿಗೆಯಿದೆಯೋ ಎಂದು ಪರೀಕ್ಷಿಸಲು ಸಾರ್ವಜನಿಕ ಚುನಾವಣೆಯನ್ನು ಯಾಕೆ ಮಾಡಬಾರದು?

ಗುಟಿಗೊಂದೋ ಸ್ವರವೆಂದು ಅಮೆರಿಯವರ ಹಾಡಿನ ಪಲ್ಲವಿ.

ಮಹಾತ್ಮ ಗಾಂಧಿಯವರಿಗೆ ಜ್ವರ

ಮಹಾತ್ಮ ಗಾಂಧಿಯವರಿಗೆ ಜ್ವರ ಬರುತ್ತಿದ್ದು, ೧೦೫ ಡಿಗ್ರಿ ವರೆಗೂ ಜ್ವರವೇರಿದೆಯೆಂದೂ, ಆದರೂ ಯಾವ ತೊಂದರೆಯೂ ಇಲ್ಲವೆಂದೂ, ಔಷಧಿ ತೆಗೆದುಕೊಳ್ಳುತ್ತಿರುವರೆಂದೂ ಪುಣೆ ನಗರದಲ್ಲಿ ಅದರಲ್ಲೂ ಆಗಾಖಾನ ಅರಮನೆಯಲ್ಲಿ ಸೊಳ್ಳೆ ಕಾಟ ವಿಪರೀತವಾಗಿದೆಯೆಂದೂ ಸುದ್ದಿ ಬಂದಿದೆ.

ಅಂತರಾಷ್ಟ್ರೀಯ ಕೂಲಿಗಾರ ಪರಿಷತ್ತು

ಫಿಲಿಡೆಲ್ಫಿಯದಲ್ಲಿ ಸೇರುತ್ತದೆ. ಅದಕ್ಕೆ ಇಂಡಿಯನ್ ಫೆಡರೇಶನ್ ಓಫ್ ಲೇಬರ್‌ನ ಅಧ್ಯಕ್ಷ ಜಮ್ನಾ ದಾಸ ಮೆಹತರು ಭಾರತದ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು ಈ ಫೆಡ್ಲರೇಶನಿಗಾಗಿ ಎಂ. ಎನ್. ರಾಯರಿಗೆ ಸರಕಾರ ತಿಂಗಳ ೧೩ ಸಾವಿರ ರೂಪಾಯಿ ಕೊಡುತ್ತದಾದ್ದರಿಂದ ಇದು ಸರಕಾರದಿಂದ ಲಂಚ ತಿನ್ನುತ್ತ ಸಂಸ್ಥೆಯೆಂದು ಮೆಹತರ ಪ್ರಾತಿನಿಧ್ಯವನ್ನು ಪ್ರತಿಷೇಧಿಸಿ ಶ್ರೀ ಎನ್ ಎಂ. ಜೋಶಿ ತಿಳಿಸಿರುವರು ಶ್ರೀ. ಎನ್ ಎಂ. ಜೋಶಿಗಳಿಗೆ ಪ್ರದಿನಿಧಿಗಳಾಗಿ ಹೋಗಬೇಕೆಂದಿತ್ತು ಆದರೆ ಇವರಿಗೆ ಇನ್ನೊಂದು ಸಂದರ್ಭವಿದೆ ಬರುವ ಜೂನಿನಲ್ಲಿ ಲಂಡನಿನಲ್ಲಿ ವಿಶ್ವ ಕೂಲಿಗಾರ ಸಂಘದ ಪರಿಷತ್ತು ಜರಗಲಿದೆ.

ಕಾಂಗ್ರೆಸಿನ ಮೇಲೆ ಅಮೆರಿ ನಂಜು!

ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಅಮೆರಿ ಭಾಷಣ ಮಾಡುತ್ತಾ ಕಾಂಗ್ರೆಸಿನ ಮೇಲೆ ಈ ರೀತಿ ನಂಜು ಕಾರಿದರು, "ಭಾರತದ ಸಾಮೂಹಿಕ ದಂಗೆ ಕಲಹ ಬಂಡಾಯಗಳಿಗೆ ಮತ್ತು ಭಾರತ ಸರಕಾರದ ಆಡಳಿತ ತೊಂದರೆಗೆ ಕಾಂಗ್ರೆಸು ಧುರೀಣರೇ ಕಾರಣರು" ಭಾರತ ಮತ್ತು ಬರ್ಮಾ ಆಜ್ಞೆಯ ಚರ್ಚಾ ಕಾಲದಲ್ಲಿ ಅಮೆರಿ ಈ ರೀತಿ ಮಾತನಾಡಿದರು ಲಾರ್ಡ್ಸ್ ಸಭೆಯಲ್ಲಿ ಅನುಮೋದಿಸಲ್ಪಟ್ಟ ಈ ನಿರ್ಣಯವು ಚರ್ಚಾನಂತರ ಕಾಮನ್ಸ್‌ನಲ್ಲಿಯೂ ಸ್ವೀಕೃತವಾಯಿತು.

ಮುಂಬಯಿಯಲ್ಲಿ ಬಂಗಾರದ ಗಟ್ಟಿ ಸಿಡಿಯಿತು.

ಮೊನ್ನೆಯ ಸ್ಫೋಟದಲ್ಲಿ ಸಿಡಿದ ಒಂದು ೧) ಮಣ ಭಾರದ ಬಂಗಾರದ ಗಟ್ಟಿ

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೨೫	ರಾತ್ರಿ ೭-೪೦
ಷಟಲ್ ಕಣ್ಣಾನ್ನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಗ್ಗೆ ೯-೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫	ಸಾಯಂ. ೭.

ಧೂಳು ಶ್ವಾಸಕೋಶಕ್ಕೆ
ರೋಗವನ್ನು ಒಯ್ಯುವುದು
ಶ್ವಾಸಯೋಗ್ಯ ಮಾತ್ರೆ ಪೆಪ್ಸು
ತೆಕ್ಕೊಳ್ಳಿರಿ.
ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿಯೋಗ್ಯ ರಸವನ್ನು ಹೊರಗೆಡವುದು, ಅದರಿಂದ ಶೀತ, ಇಂಫ್ಲುಯೆಂಜಾ ಮೊದಲಾದ ಬಾಧೆಗಳು ಕೂಡಲೆ ಗುಣವಾಗುವುದು.
ಪೆಪ್ಸು ಸೇವಿಸಿರಿ

PEPS
ವಿಷಹಾರಿ ಶ್ವಾಸನೀಯ ಗುಳಿಗೆಗಳು

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಸಭೆ

ತಾ. ೧೭ರಂದು ಸಂಜೆ ಚೇರ್‌ಮೇನರ ಅಧ್ಯಕ್ಷತೆಯಲ್ಲಿ ಸೇರಿತು.

ಹಾಜಿ ಎ. ಅಬ್ದುಲ್ ಖಾದರ್ ಬಾವಾ ಎಂಡ್ ಸನ್ಸ್ ಇವರು ನೆಲಗಡಲೆ ಹಿಂಡಿಯ ಮತ್ತು ಮರಗೆಣಸಿನ ಹುಡಿ ತಯಾರಿಸಲು ವಿದ್ಯುಚ್ಛಕ್ತಿ ಮೋಟರುಗಳನ್ನು ಉಪಯೋಗಿಸ ಕೂಡದೆಂದೂ, ಅದೇ ತಮ್ಮ ವ್ಯಾಪಾರದ ವಠಾರದಲ್ಲಿ ಎಲುಬನ್ನು ಶೇಖರಿಸ ಕೂಡದೆಂದೂ, ಹೆಲ್ತ್ ಆಫೀಸರರು ಅವರ ಲೈಸನ್ಸ್ ರದ್ದು ಮಾಡಿದ್ದರ ಕುರಿತು ಕೌನ್ಸಿಲಿಗೆ ಅವರು ಅಪೀಲು ಮಾಡಿದ್ದರ ವಿಚಾರಣೆ ಬಂತು

ಶ್ರೀ. ಬಿ ವೈಕುಂಠ ಬಾಳಿಗರು ಬಾವಾರವರ ಪರವಾಗಿ ವಾದಿಸಿದರು ಬಹು ಕಾಲ ಚರ್ಚೆಯಾಗಿ ಈ ವಿಷಯ ಪರಿಶೀಲಿಸಿ ವರದಿಯೊಪ್ಪಿಸಲು ೭ ಮಂದಿಯ ಸಮಿತಿ ರಚಿತವಾಯಿತು ಬರುವ ಸೋಮವಾರವೇ ಇದರ ಕೊನೆಯ ಇತ್ಯರ್ಥಕ್ಕಾಗಿ ಕೌನ್ಸಿಲು ಸಭೆ ಜರಗಬೇಕೆಂದಾಯಿತು.

ಹ್ಯೊಗೆ ಬಜಾರಿನ ಈಗಿನ ಮಾರ್ಕೆಟಿನ ಸ್ಥಳವನ್ನು ಅದರ ಹಿಂದಿನ ಪ್ರೊಪ್ರೈಟರಿಗೆ ಬಿಟ್ಟು, ಅದರ ಬದಲು ಅವರು ಕೊಡುವ ಸ್ಥಳವನ್ನು ಮಾರ್ಕೆಟಿಗಾಗಿ ಸ್ವೀಕರಿಸುವ ಕುರಿತು ಏರ್ಪಟ್ಟ ಸಮಿತಿ ವರದಿಯನ್ನೂ, ಹೆಲ್ತ್ ಆಫೀಸರರ ಸೂಚನೆಯೊಂದಿಗೆ, ಕೌನ್ಸಿಲು ಅನುಮೋದಿಸಿತು ಈ ಸಂದರ್ಭದಲ್ಲಿ ಶ್ರೀ ರಂಗರಾವ್ ತಲ್ಚೇರಿಕರರು ಹ್ಯೊಗೆ ಬಜಾರಿನ ಕೆಲ ಶೆರಿಗೆದಾರರ ಪರವಾಗಿ ವಾದಿಸಿ ಆ ಮಾರ್ಕೇಟು ಈಗಿರುವ ಸ್ಥಳದಲ್ಲಿ ಇರಬೇಕೆಂದೂ ಅದರ ಬದಲಿಗೆ ಕೊಡಲಾಗುವ ಸ್ಥಳ ಮಾರ್ಕೆಟಿಗೆ ಯೋಗ್ಯವಲ್ಲವೆಂದೂ ವಾದಿಸಿದರು

ಮಾಜಿ ಮುನ್ಸಿಪಲ್ ಕೌನ್ಸಿಲರ್ ಶ್ರೀ ಎ. ಸಿ ಗೊನ್ಸಾಲ್ವಿಸರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು

ವೆಬ್‌ಸ್ಟರ್ ಮಾರ್ಕೆಟನ್ನು ಆದಷ್ಟು ಬೇಗ ದುರಸ್ತಿ ಮಾಡಿ, ಅಲ್ಲಿಯೇ ಮಾರ್ಕೆಟನ್ನು ಎಂದಿನಂತೆ ನಡೆಸಬೇಕೆಂದೂ, ದುರಸ್ತಾಗುವವರೆಗೆ ಈಗಿನಂತೆ ಮೈದಾನಿನಲ್ಲಿ ಮಾರ್ಕೆಟ ನಡೆಯಲೆಂದೂ ಆರೋಗ್ಯ ಶಾಖೆಯ ಅಸಿ| ಡೈರೆಕ್ಟರರ ಅಭಿಪ್ರಾಯವಿರುವುದಾಗಿ ತಿಳಿದಿದೆ

ಕಲೆಕ್ಟರರ ಆಜ್ಞೆ

೧೯೪೪ ಎಪ್ರಿಲ್ ೨೦ರ ಮೇಲೆ ಜಿಲ್ಲೆಯಿಂದ ಹೊರಗೆ ಎಲ್ಲಿಗೂ ಪರ್ಮಿಟು ಇಲ್ಲದೆ ಯಾರೂ ಗೆಣಸು ಒಯ್ಯಕೂಡದು

೧೯೪೪ ಎಪ್ರಿಲ್ ೨೫ರ ಮೇಲೆ ದಕ್ಷಿಣ ಕನ್ನಡದಿಂದ ಹೊರಗೆ ಎಲ್ಲಿಗೂ ಪರ್ಮಿಟು ಇಲ್ಲದೆ ಯಾರೂ ತೆಂಗಿನೆಣ್ಣೆ ಒಯ್ಯಕೂಡದು

ಈ ಆಜ್ಞೆಗಳೆರಡನ್ನು ಮೀರಿದವನು ೩ ವರ್ಷ ಶಿಕ್ಷೆಯಾ ಜುಲ್ಮಾನೆ ಅಥವಾ ಅವೆರಡು ದಂಡನೆಗೂ ಬಾಧ್ಯನಾಗುವನು

೧-೫-೧೯೪೪ರ ಮೊದಲ್ಗೊಂಡು ಜಿಲ್ಲೆಯಲ್ಲಿ ಅಕ್ಕಿಯ ನಿಶ್ಚಿತ ಕ್ರಯ ಮತ್ತು ಪಡಕೊಳ್ಳುವ ಕ್ರಯ ಕಡಿಮೆ ಮಾಡಲ್ಪಡುವುದು, ಏಕೆಂದರೆ ನೆಲ್ಲೂರು ಚಿದಂಬರಂ ಮೊದಲಾದ ಕಡೆಗಳಿಂದ ತಂದ ಅಕ್ಕಿ ಇಲ್ಲಿಗಿಂತ ಉತ್ತಮವಿದ್ದರೂ ಅದರ ಕ್ರಯ ಇಲ್ಲಿನ ಬೆಲೆಗಿಂತ ಕಡಿಮೆಯಿರುವುದು.

ಹೊಸ ಸೆಕೆಂಡರಿ ಶಾಲೆ

ಪೆಂಟ್ಲೆಂಡ್ ಪೇಟ್‌ನಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನವರಿಗೆ ಹೊಸ ಸೆಕೆಂಡರಿ ಶಾಲೆಯೊಂದನ್ನು ತೆರೆವರೆ ಮದ್ರಾಸ್ ಪ್ರಾಂತಿಕ ವಿದ್ಯಾ ಇಲಾಖೆಯ ಡೈರೆಕ್ಟರರಿಂದ ಅನುಮತಿ ದೊರೆತಿದೆ.

ಅಡಿಕೆ ಬೇಸಾಯಗಾರರ ಸಭೆ

ಇಂದಿನಿಂದ ಬರುವ ದಶಂಬರದ ವರೆಗೆ ಅಡಿಕೆ ಬೇಸಾಯಗಾರರ ಗೃಹಕೃತ್ಯಕ್ಕೆ ಬೇಕಾದುದಲ್ಲದೆ, ಎಕ್ರೆಗೆ ೨೦ ಮುಡಿ ಭತ್ತ ಅವಶ್ಯವೆಂಬುದನ್ನು ಕಲೆಕ್ಟರರಿಗೆ ಈ ಸಂಘದವರು ತಿಳಿಸಿದ್ದು, ಕಲೆಕ್ಟರರಿಂದ ಅವರ ಅವಶ್ಯಕತೆ ಪೂರೈಸುವ ಭರವಸೆ ದೊರೆತಿದೆ, ಆ ಬಗ್ಗೆ ಪ್ರತಿಯೊಬ್ಬ ಅಡಿಕೆ ಬೇಸಾಯಗಾರನೂ ತನ್ನಲ್ಲಿರುವ ಅಕ್ಕಿ ಭತ್ತಗಳ ದಾಸ್ತಾನಿನ ಸರಿಯಾದ ವಿವರವನ್ನು ಫಿರ್ಕಾ ತಹಶಿಲ್ದಾರರಿಗೆ ಕೊಡಬೇಕು

'ಅಡಿಕೆ ಬೆಳೆಸುವವರೂ, ಒಣಗಿಸಿ ಸುಲಿವವರೂ ಪರ್ಮಿಟಿನಿಂದಲೇ ಅಡಿಕೆ ಕಳುಹಿಸಬೇಕು. ಅಡಿಕೆಯೊಂದಿಗೆ ಪರ್ಮಿಟು ಕಳುಹಿಸಬೇಕು

'೩೪-೪೪ನೇ ದಿನ ಅಥವಾ ಅದರೊಳಗೆ ಮಂಗಳೂರಿಗೆ ತಲಪಿದ ಅಥವಾ ಹೊರಟ ಅಡಿಕೆಗೂ, ಹೊರಗಣ ಪಟ್ಟಣ ಅಥವಾ ಗ್ರಾಮಗಳಲ್ಲಿರುವ ಅಡಿಕೆ ವ್ಯಾಪಾರಿಗಳ ಕೈಗೆ ೩-೪-೪೪ರ ಅವಧಿಯೊಳಗೆ ಸುಲಿದ ಅಡಿಕೆ ಬಂದು ತಲಪಿದಲ್ಲಿ ಹಾಗೆ ತಲಪಿದ್ದಕ್ಕೆ ಆಧಾರವಿದ್ದು, ಎಕ್ಸೈಸ್ ಆಫೀಸರರ ಸರ್ಟಿಫಿಕೇಟು ದೊರೆತರೆ ಅಂಥಾ ಅಡಿಕೆಗೂ, ೧-೪-೪೪ರೊಳಗೆ ಮಾರಾಟವಾಗದ ಸುಲಿದ ಹಳೆಅಡಿಕೆಗೂ ೧-೪-೪೪ರೊಳಗೆ ಸುಲಿದ ಬೇಸಾಯಗಾರರ ಅಥವಾ ಒಣಗಿಸಿ ಸುಲಿಯುವವರ ಸ್ವಾಧೀನತೆಯಲ್ಲಿರುವ ಅಡಿಕೆಗೂ ತೆರಿಗೆಯಿಲ್ಲ ೧-೪-೪೪ರೊಳಗೆ ಸುಲಿದಿದೆಯೆಂಬ ಬಗ್ಗೆ ಅಬ್ಕಾರಿ ಅಧಿಕಾರಿಗಳ ಸರ್ಟಿಫಿಕೇಟು ದೊರೆತರೂ ತೆರಿಗೆಯಿಲ್ಲ ಆದರೆ ಕೂಡಲೇ ಅಂಥಾ ಸರ್ಟಿಫಿಕೇಟ ಪಡೆಯಲಾರದವರು ಅಡಿಕೆಯನ್ನು ೧-೪-೪೪ರ ಮುಂಚೆ ಸುಲಿದಿದೆಯೆಂದು ಹೇಳಿಕೆಕೊಟ್ಟರೆ, ಆ ಅಡಿಕೆ ಮೇಲೆ ತಾತ್ಕಾಲಿಕ ಸುಂಕ ಹಾಕಿದರೂ ಹೇಳಿಕೆಗೆ ಆಧಾರವಿದ್ದರೆ ತೆರಿಗೆ ಹಿಂದೆ ಸಿಗಬಹುದು

'ಹಣ್ಣಡಿಕೆ ಮಾರಿದರೂ, ಸೀರಡಿಕೆ ಗೃಹಕೃತ್ಯಕ್ಕೆ ಉಪಯೋಗಿಸಿದರೂ ಸುಂಕವಿಲ್ಲ ಆದರೆ ಸೀರಡಿಕೆ ಮನೆ ಖರ್ಚಿಗೆ ಎಷ್ಟು ಬೇಕೆಂಬುದನ್ನು ಅಬ್ಕಾರಿ ಅಧಿಕಾರಿಗಳು ನಿಶ್ಚಯಿಸುವರು ಕೊಡಗಿನಲ್ಲಿ ಸುಲಿದ ಅಡಿಕೆಗೂ ಸುಂಕವಿಲ್ಲ'

ಹೀಗೆಂದು ಅಡಿಕೆ ಬೇಸಾಯಗಾರರ ಸಂಘದ ಕಾರ್ಯದರ್ಶಿಗಳು ಒಂದು ಲೇಖನ ಬರೆದು ತಿಳಿಸಿದ್ದಾರೆ.

ಕೋರ್ಟು ರಜೆ

ಜಿಲ್ಲೆಯ ಎಲ್ಲಾ ಕೋರ್ಟುಗಳಿಗೂ ಇದೇ ತಾ ೨೫ರಿಂದ ಬರುವ ಜೂನ್ ೬ರ ವರೆಗೆ ರಜೆಯಿದೆ ಮಂಗಳೂರು ಸಬ್ ಕೋರ್ಟುಗಳಿಗೂ ಜಿಲ್ಲಾ ಕೋರ್ಟಿಗೂ ಇದೇ ತಾ, ೨೫ರಿಂದ ಜೂನ್ ತಾ ೨೪ರ ವರೆಗೆ ರಜೆಯಿದೆ

ನಗರದಲ್ಲಿ ಪ್ಲೇಗು

ತಾ ೯ರಿಂದ ೧೩ರ ವರೆಗೆ ಇಲಿ ಬಿದ್ದ ಪ್ರದೇಶ ೧೩, ಸೋಂಕು ಮರಣಗಳು ಇಲ್ಲ ೩, ೪ ಕಡೆ ಬಿದ್ದ ಇಲಿಗಳು ಪ್ಲೇಗಿನವೆಂದು ತಿಳಿದಿದೆ

ಸೋವಿಯಟ್ ಚೀನಾ ಸಾಹಾರ್ದ ಸಮಿತಿ

ಇದರ ಸಭೆಯೊಂದು ತಾ. ೧೩ರಲ್ಲಿ ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ೫ ಮಂದಿಯ ಒಂದು ಉಪ ಸಮಿತಿ ರಚಿತವಾಯಿತು.

ಡಾ| ಯು. ಪಿ. ಮಲ್ಯರು

ಒಂದು ತಿಂಗಳ ಪೆರೋಲಿನಲ್ಲಿ ಬಿಡುಗಡೆಯಾಗಿ ಮಂಗಳೂರಿಗೆ ಬಂದಿರುವರು.

ಶ್ರೀ ಶಂಕರ ಜಯಂತಿ

ಇದೇ ತಾ. ೨೭ರಂದು ಶ್ಯಾಮ, ಘಂಟೆ ೫ಕ್ಕೆ ಅದ್ವೈತ ಸಮಿತಿ ದ ಕ ದ ಆಶ್ರಯದಲ್ಲಿ, ಮಂಗಳೂರು ಕೆನರಾ ಹ್ಯಾಸ್ಕೂಲು ಶ್ರೀ ಸುಬ್ಬರಾಯ ಪೈ ಮೆಮೋರಿಯಲ್ ಹೋಲಿನಲ್ಲಿ ಮಂಗಳೂರ ಸಬ್ ಜಡ್ಜರಾದ ಶ್ರೀಮಾನ್ ಟಿ ಡಿ ರಾಮಯ್ಯ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ನಿಧನ

ಎ ಸಿ ಗೊನ್ಸಾಲ್ವಿಸ್

ಮಾಜಿ ತಾಲೂಕು ಬೋರ್ಡು ಪ್ರೆಸಿಡೆಂಟರೂ, ಮಾಜಿ ಜಿಲ್ಲಾ ಬೋರ್ಡು ವೈಸ್ ಪ್ರೆಸಿಡೆಂಟರೂ, ಮಂಗ್ಳೂರು ಮುನ್ಸಿಪಲ್ ಕೌನ್ಸಿಲರೂ ಅಗಿದ್ದ ಶ್ರೀ ಎ. ಸಿ ಗೊನ್ಸಾಲ್ವಿಸರು ಕೆಲಕಾಲ ಅನಾರೋಗ್ಯದಲ್ಲಿದ್ದು ಕಳೆದ ಶನಿವಾರ ದಿವಂಗತರಾದರು ಮೃತರ ಆತ್ಮಕ್ಕೆ ಶಾಂತಿಯಿರಲಿ

ಬಿ ಇ ಎಂ ಹ್ಯಾಸ್ಕೂಲ್

ಇದರ ಸಹಾಯಾರ್ಥ ಒಂದು ವಿವಿಧ ವಿನೋದಾವಳಿ ಪ್ರದರ್ಶನವು ಕಳೆದ ಶನಿವಾರ ಜರಗಿ, ಇಂಗ್ಲಿಷ್ ಕನ್ನಡ, ತುಳು ನಾಟಕಗಳು ಪ್ರದರ್ಶಿತವಾಗಿ, ನೃತ್ಯ, ರಾಸಲೀಲಾ, ಡ್ರಿಲ್ ಮೊದಲಾದ ಕಾರ್ಯಕ್ರಮಗಳೂ ತೋರಿಸಲ್ಪಟ್ಟವು

ಎಂ ಎನ್ ಕಾಮತ್ ಸ್ಮಾರಕದಿನ

ಇದರ ಆಚರಣೆ ಮಾಡಲು ಮಂಗಳೂರು ಪ್ರಕಾಶ ಕೂಟವು ನಿಶ್ಚಯಿಸಿದ ಈ ಸಂದರ್ಭದಲ್ಲಿ ಪ್ರಕಾಶಕೂಟದವರು ಒಂದು ಕಥಾ ಸ್ಪರ್ಧೆ ಏರ್ಪಡಿಸಿರುವರು ಕತೆಗಳು ತಾ ೨೫ರ ಒಳಗೆ ಕಾರ್ಯದರ್ಶಿ ಪ್ರಕಾಶಕೂಟ C/o ನವಭಾರತ, ಮಂಗಳೂರು ಇಲ್ಲಿಗೆ ತಲಪಬೇಕು ಕತೆಗಳು ಚಿಕ್ಕವೂ ಸ್ವತಂತ್ರವೂ ಇರಬೇಕು

ಚಲಚ್ಚಿತ್ರ ವಿಮರ್ಶಕ ಕೂಟ

ಇದರ ಸಭೆಯೊಂದು ಕಳೆದ ಆದಿತ್ಯವಾರ ಶ್ರೀ| ಎಸ್ ಜಿ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ, 'ಪಗ್ಲಿ' ಚಿತ್ರ ಸಮಾನ್ಯ ಚಿತ್ರವೆಂದೂ, 'ಹಂಟರವಾಲೀ ಕಿ ಭೇಟಿ' ವಾಡಿಯಾದ ಮಾರಾಮಾರಿ ಚಿತ್ರಗಳ ಸಾಲಿಗೆ ಬಂದಿಲ್ಲವೆಂದೂ ಹೇಳಲಾಯಿತು

'ದೇವಿಕಾ ರಾಣಿಯವರು 'ಹಮಾರಿ ಬಾತ್'ದಂತಹ ಚಿತ್ರ ತಯಾರಿಸದೆ, ಅಛೂತ್ ಕನ್ಯಾ ನಯಾಸಂಸಾರದಂತಹ ಧ್ಯೇಯಾತ್ಮಕ ಚಿತ್ರಗಳನ್ನು ಜನತೆಗೆ ಕೊಡಬೇಕೆಂದೂ, ಸರಕಾರದ ಪ್ರಚಾರ ಚಿತ್ರಗಳು, ಕನ್ನಡ ನಾಡಿಗೆ ಕನ್ನಡ ಬಾಷೆಯಲ್ಲಿಯೇ ಸಿಗಬೇಕೆಂದೂ, ಅದಾಗದಿದ್ದರೆ ಹಿಂದಿಯಲ್ಲಾದರೂ ದೊರಕುವಂತಾಗಬೇಕೆಂದೂ ಹೀಗೆ ಎರಡು ನಿರ್ಣಯಗಳು ಶ್ರೀ| ವೆಂಕಟೇಶ ಪ್ರಭುಗಳಿಂದ ತರಲ್ಪಟ್ಟು ಮಂಜೂರಾದುವು ಕಾರ್ಯದರ್ಶಿ ಶ್ರೀ ಸಿ ಎಚ್. ರಾವ್ ಕೃತಜ್ಞತೆ ಹೇಳಿದರು

ರೆಡ್‌ಕ್ರಾಸ್ ಸಂಘ

ಇದರ ಸಹಾಯಾರ್ಥವಾಗಿ ಹಣ ಸಂಗ್ರಹಿಸುವರೆ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಹಾಯ ಪ್ರದರ್ಶನಗಳು ನಡೆಯುತ್ತಿವೆ

ಅಕ್ಕಿಯ ಅಭಾವ

ಕಂಡುಬರುವುದರಿಂದ ಇತರ ಎಲ್ಲಾ ಧವಸಧಾನ್ಯಗಳ ಬೆಲೆಯೂ ಹೆಚ್ಚುತ್ತಿದೆ

ಪತ್ರಿಕೋದ್ಯೋಗಿ ಸಂಘದ

ಮಹಾ ಸಭೆಯೊಂದು ಇತ್ತೀಚೆಗೆ ನವಯುಗ ಪ್ರೆಸ್ಸಿನಲ್ಲಿ ಜರಗಿ, ಶ್ರೀಮತಿ ಕಸ್ತೂರ್‌ಬಾರ ನಿಧನದ ಫಲುವಾಗಿ ಸಂತಾಪ ಸೂಚನೆಯಾಗಿ, 'ವಿಶ್ವಕರ್ಣಾಟಕ' ದಿನ ಪತ್ರಿಕೆಯ ಮೇಲೆ ಮೈಸೂರು ಸರಕಾರ ಹೊರಿಸಿದ ಪ್ರತಿಬಂಧಕಾಜ್ಞೆಯನ್ನು ಖಂಡಿಸಿ ಚಾಲ್ತಿ ವರ್ಷಕ್ಕೆ ಅಧಿಕಾರೀ ಮಂಡಲ ರಚಿತವಾಯಿತು

ಬದಿಯಡ್ಕ

ಅಡಿಕೆ ಬೇಸಾಯಗಾರರ ಸಂಘ

ಇದರ ಕಾರ್ಯದರ್ಶಿ ಎಡ್ವೊಕೇಟ್, ಶ್ರೀ ಜಿ ಕೆ ಗೋವಿಂದ ಭಟ್ಟರೂ ಎಡ್ವೊಕೇಟರಾದ ಶ್ರೀ ಖಂಡಿಗೆ ಶ್ಯಾಮ ಭಟ್ಟರೂ, ಶ್ರೀ ವಿಷ್ಣು ಬಟ್ಟರೂ ಇಲ್ಲಿಗೆ ಬಂದಿದ್ದು ಕಳದ ಆದಿತ್ಯವಾರ ಈ ಊರಿನ ಅಡಿಕೆ ಬೇಸಾಯಗಾರರ ಸಭೆಯೊಂದು ಶ್ರೀ ಖಂಡಿಗೆ ಮಹಾಲಿಂಗ ಬಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಡಾ| ... ಎಸ್ ಶಾಸ್ತ್ರಿಗಳು ಸಭ ಗೂಡಿದ ಉದ್ದೇಶ ವಿವರಿಸಿದ ಮೇಲೆ ಶ್ರೀ ಜಿ ಕೆ ಗೋವಿಂದ ಬಟ್ಟರು ಮೇಲಿನ ಸಂಘ ಸ್ಥಾಪಿಸುವ ಹಾಗೂ ಬಲಪಡಿಸುವ ಉದ್ದೇಶ ವಿವರಿಸಿ, ಅಡಿಕೆಗ ಹಾಕಿದ ತೆರಿಗೆ ಕಾನೂನು ವಿರುದ್ಧವೆಂದೂ ಅದಕ್ಕಾಗಿ ವ್ಯಾಜ್ಯ ಹೂಡಬೇಕೆಂದೂ ತಿಳಿಸಿದ್ದಲ್ಲದೆ ಅಡಿಕೆ ಬೇಸಾಯಗಾರರು ಮಾಡಬೇಕಾದ ಮತ್ತು ಅವರಿಗೆ ಒದಗಬಹುದಾದ ಅನೇಕ ಕಾರ್ಯ ಸೌಕರ್ಯಗಳ ಕುರಿತು ಸೂಚನೆಯಿತ್ತರು

ಈ ಕೇಂದ್ರದಲ್ಲಿ ೯ ಉಪ ಸಮಿತಿಗಳನ್ನು ರಚಿಸಲಾಯಿತು

ಹೈಸ್ಕೂಲಿಗೆ ೫ ಸಾವಿರ ರೂ ದಾನ

ಪೆರಡಾಲ್ ಗ್ರಾಮದ ವರ್ಗದಾರರಲ್ಲೊಬ್ಬರಾದ ಶ್ರೀ ಚಂಬ್ಲಿತಿಮಾರು ಶಂಕರನಾರಾಯಣ ಭಟ್ಟರು ಬದಿಯಡ್ಕ ಹೈಸ್ಕೂಲ್ ನಿಧಿಗೆ ೫ ಸಾವಿರ ರೂ ದಾನ ಮಾಡಿರುವರ

ಉಡುಪಿ

ಶ್ರೀ ಕುಲಕರ್ಣಿ ಶ್ರೀನಿವಾಸರ ನೃತ್ಯ ಮಂಡಲಿಯ ನೃತ್ಯವು ತಾ ೯ರಂದು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನಡೆಯಿತು ಶ್ರೀ| ಶಿವರಾಮ ಕಾರಂತರು ಶ್ರೀ| ಕುಲಕರ್ಣಿಯವರ ನರ್ತನವನ್ನು ಪ್ರಶಂಸಿಸಿ ಬಾಷಣವಿತ್ತರು.

ದ. ಕ ಜಿಲ್ಲಾ ಟೀಚರ್ಸ್ ಗಿಲ್ಡ್

ಇದರ ಸಭೆಯೊಂದು ಕ್ರಿಶ್ಚಿಯನ್ ಹ್ಯಾಸ್ಕೂಲಲ್ಲಿ ಶ್ರೀ ಕಾರಟರ ಅಧ್ಯಕ್ಷತೆಯಿಂದ ಜರಗಿ, ಸರಕಾರೀ ಶಾಲಾ ಉಪಾಧ್ಯಾಯರಿಗೆ ಸಿಗುವ ಸ್ಕೇಲಿನ ದರದಲ್ಲಿಯೇ ಖಾಸಗಿ ಶಾಲಾ ಉಪಾಧ್ಯಾಯರಿಗೂ ತುಟ್ಟಿಭತ್ತೆ ಸಿಗಬೇಕೆಂದೂ, ಖಾಸಗಿ ಶಾಲೆಗಳಿಗೆ ತುಟ್ಟಿ ಭತ್ತೆಗಾಗಿ ಸಹಾಯ ಧನ ದೊರಕಬೇಕೆಂದೂ, ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗುವ ವರ್ಷ ೫೫ರಿಂದ ೬೦ಕ್ಕೇರಿಸಬೇಕೆಂದೂ ನಿರ್ಣಯಗಳಾದುವು

ಕಾರ್ಕಳ

ಮನೆ ಮನೆ ಅಕ್ಕಿ ಹಿಡಿವುದು

ಇಲ್ಲಿ ಎಲ್ಲಾ ಭೂಮ್ಯಾಲಿಕರ, ಮತ್ತು ಎಲ್ಲಾ ಊರ ನಿವಾಸಿಗಳ ಪ್ರತಿ ಮನೆಯೊಂಬಂತೆ ಅಧಿಕಾರಿಗಳು ರಿಸರ್ವ್ ಪೋಲಿಸರೊಂದಿಗೆ ನುಗ್ಗಿ ಅಕ್ಕಿ ರಿಕ್ವಿಸಿಶನ್ ಮಾಡುತ್ತಾರೆ

"ಓ! ನೀವು ಕಮುನಿಸ್ಟರು"

ಒಮ್ಮೆ ನೀವು ಕೆಲಸಗಾರರೊಡನೆ ಮತ್ತು [illegible]ದೊಡನೆ ಕ್ರಾಂತಿಕಾರಿಕೆಂದೂ [illegible] ಕೊಡುವೆವೆಂದೂ ಹೇಳುತ್ತಿದ್ದಿರಿ; ಈಗ ನೀವೇ ಶಾಂತವಾದ ಮರೆತನಕ್ಕೆ ಹೊರಡಿಸಿ, ನಿರುಪಾಯ ಘೋಷಣೆ ಮಾಡುತ್ತಿದ್ದೀರಿ.

ಉಜ್ವಲ ಕ್ರಾಂತಿಯನ್ನುಳಿದು ಬೇರೆ ಏನನ್ನು ಮಾತನಾಡಿದವರನ್ನೂ ಒಮ್ಮೆ ನೀವು '[illegible]'; ಈಗ ಕ್ರಾಂತಿಗಿಳಿದವರನ್ನು 'ಪಂಚಮ ದಳ'ದವರೆಂದೂ, 'ದೇಶದ್ರೋಹಿ'ಗಳೆಂದೂ ನಿಂದಿಸುತ್ತೀರಿ.

ಒಮ್ಮೆ ನೀವು ರಾಷ್ಟ್ರದ ಎಲ್ಲಾ ಸಮಸ್ಯೆಯೂ ಕೇವಲ ಹಿಂಸಾಮಯ ಕ್ರಾಂತಿಯಿಂದಲೇ ಸಾಧ್ಯವಾಗುವುದೆಂದು ತಿಳಿದ್ದಿರಿ; ಇಂದು ನೀವು 'ಭಾರತದ ದೊರೆ'ಗೆ ಅರ್ಜಿ ಹಾಕಿ ನಿಮ್ಮ ಬೇಡಿಕೆ ಪಡೆಯಲಿಚ್ಛಿಸುತ್ತೀರಿ. ಒಮ್ಮೆ ನೀವು ಎಲ್ಲಾ ಯುದ್ಧಗಳನ್ನು ಸಾಮ್ರಾಜ್ಯಶಾಹೀ ಯುದ್ಧಗಳೆಂದೂ, ಭಂಡವಾಳ ಶಾಹಿಗಳು, ಕೂಲಿಗಾರರನ್ನು ಈ ಮೂಲಕ ಸುಲಿವರೆಂದೂ, ಸಾಲದ್ದಕ್ಕೆ ಇದೇ ಯುದ್ಧವನ್ನು ಪ್ರಾರಂಭದಲ್ಲಿ ಸಾಮ್ರಾಜ್ಯ ಶಾಹೀ ಯುದ್ಧವೆಂದೂ ಹೇಳಿದ್ದಿರಿ; ಆದರೆ ಈಗ ನಿಮಗೆ ಇದೇ ಯುದ್ಧ 'ಜನತಾ ಯುದ್ಧ'ವಾಗಿದೆ. ಇದರಿಂದ ಕೂಲಿಗಾರರ ಸಮಸ್ಯೆ ಪರಿಹಾರವಾಗುವುದೆಂದೂ ಹೇಳುತ್ತೀರಿ.

ಒಮ್ಮೆ ನಿಮ್ಮನ್ನವರು ನಿರ್ದಯವಾಗಿ ಬೆನ್ನಟ್ಟುತ್ತಿದ್ದರು; ಜಾರನ ರಶ್ಯದಿಂದ ಹೊರಗಡೆ ಅಂತಹ ನಿರ್ದಯತೆ ಬೇರೆಲ್ಲಿಯೂ ಇರಲಿಲ್ಲ. ನಿಮ್ಮ ಪಾರ್ಟಿ ಗೂಢ ಕಾರ್ಯರಂಗವಿಟ್ಟುಕೊಂಡಿತ್ತು; ಈಗ ನಿಮಗೆ ಅಧಿಕಾರಿಗಳ ಬೆಂಬಲ ಸಿಕ್ಕಿದೆ. ನಿಮ್ಮ ಪಾರ್ಟಿ ಬಹಿರಂಗ ಕಾರ್ಯರಂಗಕ್ಕಿಳಿದಿದೆ.

ಇದೆಲ್ಲಾ ನಾಜಿ ದ್ವೇಷವೇ?

ಇದೆಲ್ಲಾ ಆದದ್ದು ನಾಜೀ ಸೇನೆ ರಶ್ಯದ ಮೇಲೆ ಬಿದ್ದುದರಿಂದ.? ರಶ್ಯದ ಮೇಲಿರುವ ನಿಮ್ಮ ಅಭಿಮಾನದಿಂದ! ಎರಡು ಶತಮಾನಗಳ ನಿಮ್ಮ ಸಾಮ್ರಾಜ್ಯ ಶಾಹೀ ದ್ವೇಷ ತಣ್ಣಗಾಗಿಬಿಟ್ಟಿತು. ಬೆನ್ನಟ್ಟುವವರೂ, ಬೆನ್ನಟ್ಟಲ್ಪಡುವವರೂ ಹಸ್ತಲಾಘವ ಮಾಡಿಕೊಂಡು ಗೆಳೆಯರಾದಿರಿ.

ಎಷ್ಟೋ ಕಾಲ ಸಂಕಷ್ಟ, ಬಲಿದಾನ ಸಹಿಸಿ, ಜನತೆಯ ಮೆಚ್ಚುಗೆಗೆ ಪಾತ್ರರಾದ ನಿಮ್ಮ ಪಂಗಡದವರೊಡನೆ ರಾಜಿಮಾಡಿಕೊಳ್ಳುವುದರ ಪ್ರಯೋಜನವನ್ನು ದಿಲ್ಲಿ ಮತ್ತು ವೈಟ್ ಹಾಲಿನವರೂ ಕಂಡುಕೊಂಡರು. ಕಮುನಿಸ್ಟರನ್ನು ಬಿಡುಗಡೆ ಮಾಡಲಾಯಿತು. ಈ ಯುದ್ಧ ಯತ್ನಕ್ಕೆ ಬೆಂಬಲ ಕೊಡುವೆವೆಂಬ ದೃಢ ಭರವಸೆ ಪಡೆದೇ!

ಈ ಒಪ್ಪಂದದಿಂದ ಸರಕಾರಕ್ಕೆ ಬಹಳ ಸುಖವೇ ಆಗಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಆದ ಹೋರಾಟದಲ್ಲಿ ಈ ಮೊದಲು ಕ್ರಾಂತಿಕಾರಿಗಳಾಗಿದ್ದ, ನೀವು ಹಿಂದೆ ನಿಂತದ್ದು ಮಾತ್ರವಲ್ಲದೆ, ವಿದ್ಯಾರ್ಥಿಗಳಲ್ಲಿ, ಮಜೂರರಲ್ಲಿ ತುಸು ಪ್ರಭಾವ ಬೀರಿ ಆ ಸ್ವಾತಂತ್ರ್ಯ ಸಂಗ್ರಾಮವನ್ನು ತಡೆಯಲೂ ಯತ್ನಿಸಿದಿರಿ. ವಿದ್ಯಾರ್ಥಿಗಳೇನೋ ನಿಮಗೆ ಸರಿಯಾದ ಉತ್ತರ ವಿತ್ತಿದ್ದಾರೆ. ಆದರೆ ಕೆಲಮಂದಿ ರಾಜಕೀಯಜ್ಞಾನವಿಲ್ಲದ ಕೆಲಸಗಾರರನ್ನು ನೀವು ಕೆಲಸಗಾರರಿಗಾಗಿ ದುಡಿವವರೆಂಬ ಮಾಯಾ ಜಾಲದಿಂದ ತಪ್ಪುದಾರಿಗೆ ನೂಕಿರುವಿರಿ.

ಆದರೆ, ಎಲ್ಲರೂ ಹಿಂದೆ ನಿಂತಾಗ, ಕಾಂಗ್ರೆಸಿನ ಆ ಬಂದು ಪಕ್ಷವು ಸ್ವಾತಂತ್ರ್ಯದ ಹೋರಾಟದಲ್ಲಿ ಧುರೀಣತೆ ವಹಿಸಿ[illegible]ಕೊಂಡ ಸಂದರ್ಭದಲ್ಲಿ, ನೀವು ಅವರ ಮೇಲೆ ಹೊರಿಸಿದ ಆರೋಪ ಅಕ್ಷಮ್ಯವಾದುದು.

ಎಂತಾದರೂ ಐಕ್ಯವೇ?

ನಿಮ್ಮ ಅನ್ಯಾಯ ಇಲ್ಲಿಯೇ ನಿಲ್ಲಲಿಲ್ಲ; ಒಮ್ಮೆ ನೀವೇ ಶ್ರೀಮಂತರು ಮತ್ತು ಭೂಮ್ಮಾಲಿಕರಿಂದ ಕೂಡಿಕೊಂಡಿರುವುದಾಗಿ ಹೇಳಿದ್ದ ಮುಸ್ಲಿಂ ಲೀಗನ್ನು ಈಗ ಕಾಂಗ್ರೆಸಿಗೆ ಸಮನಾದ ಭಾರತದ ದೊಡ್ಡ ರಾಜಕೀಯ ಸಂಗಡವಾಗಿ ಎತ್ತಿ ಹಿಡಿದರುವಿರಿ. ರಾಷ್ಟ್ರೀಯ ಐಕ್ಯಕ್ಕಾಗಿ ಕಾಂಗ್ರೆಸ್—ಲೀಗ್ ಐಕ್ಯವಾಗಬೇಕೆಂದೂ ಕೂಗುತ್ತೀರಿ. ಐಕ್ಯ! ಐಕ್ಯ! ಈ ಕೂಗು ಹೀಗೆ ಕೇಳುತ್ತಿದೆ! ಐಕ್ಯ ಆಗಲೇ ಬೇಕು. ಆದರೆ ಯಾವುದನ್ನು ತೆತ್ತು? ದಾರಿಹೋಕ ನಾದವನೂ ನಿಮ್ಮೀ ಕೂಗು ಕೇಳಿ ನಗುತ್ತಾನೆ!

ಇಂಥಾ ಒಂದು ಅಸ್ವಾಭಾವಿಕ ಐಕ್ಯವಾದರೂ ಎಷ್ಟು ಕಾಲ ಉಳಿದೀತೆಂಬುದೇ ರಾಜಕೀಯ ಭವಿಷ್ಯಕಾರರೆಲ್ಲರ ಸಮಸ್ಯೆಯಾಗಿದೆ. ನೀವೇನೋ ಈ ತೆರ ಮಾತನಾಡಿ ನಿಮ್ಮ ಸ್ಥಾನ ಬಲಪಡಿಸಬೇಕೆಂದು ಬಗೆದಿದ್ದೀರಿ.

ನಮ್ಮ ದೇಶದ ಉತ್ತಮ ಪುಷ್ಪಗಳು ಸೆರೆಮನೆಯ ಒಳಗಡೆ ಬಾಡುತ್ತಿವೆ. ಆದರೆ 'ವೈಸರಾಯ್ ಭವನ' ಮತ್ತು 'ಬೊಂಬೇ ರಶ್ಯ ರಾಜಧಾನಿ'ಗಳೊಳಗೆ ನಡೆದಿರುವೀ ಸಾರಲ್ಪಡದೀಯುದ್ಧದಲ್ಲಿ ಯಾರು ತಾನೇ ಗೆದ್ದಾರು?

ಮೊದಲ ಆಟ ತಪ್ಪಿದೆ

ನೀವು ಕಮುನಿಸ್ಟರು, ನಿಮ್ಮ ರಾಜಕೀಯ ಚದುರಂಗದಲ್ಲಿ ಮೊದಲ ಆಟದಲ್ಲಿಯೇ ಸೋತಿದ್ದೀರಿ. ನಿಮ್ಮ ವಿಚಾರಕ್ಕೆ ಜನತೆಯನ್ನು ಪಳಗಿಸಬೇಕೆಂದು ನೀವೆಷ್ಟೋ ಪ್ರಯತ್ನ ಮಾಡಿದ್ದಿರಿ. ನೀವು ನಿಮ್ಮ ಕ್ರಾಂತಿಕಾರೀ ನೀತಿ ಬದಲಾಯಿಸಿದ್ದೇ ಜನತಾ ವಿಶ್ವಾಸ ಕಳಕೊಂಡಿರುವಿರಿ. ಆ ಹಿಂದಿನ ಉಜ್ವಲ ರಾಷ್ಟ್ರಾಭಿಮಾನ ಇಂದು ನಿಮ್ಮಲಿಲ್ಲ. ಕೆಲಸಗಾರರಿಗಾದರೂ ತಮ್ಮ ದೇಶ ಸ್ವತಂತ್ರವಾಗುವುದು ವಿನಾ ಬೇರೊಂದೂ ಬೇಡ. ಅವರಿಗೂ ಇಂದು ನಿಮ್ಮಲ್ಲಿ ನಂಬಿಗೆಯಿಲ್ಲ. ನಿಮ್ಮಲ್ಲಿ ಕೆಲಜನ, ಮಾತೃಭೂಮಿಯ ಸೇವೆಗೆ ಇಂದೂ ಬದ್ಧಕಂಕಣರಿರಬಹುದು, ಆದರೆ ಒಟ್ಟಿನಿಂದ ಕಮುನಿಸರಾದ ನೀವಿಂದು ಸತ್ವಹೀನರಾಗಿರುವಿರಿ; ಇದು ಮಾತ್ರವಲ್ಲ, ನಿಮ್ಮ ಎಷ್ಟೋ ಮಂದಿ ಕೇವಲ ಬರಿ ಗುಲ್ಲು ಮಾಡಿಯೇ ಸ್ವಾರ್ಥ ಸಾಧಕರಾದರು. ಕಮುನಿಸ್ಟ್ ವೇಷ, ಇಂದು ಗಾಳಿ ಬಂದಂತೆ ಕೊಡೆ ಹಿಡಿವವರಿಗೆ ಆಶ್ರಯವಾಗಿದೆ. ಶ್ರೀಮಂತ ಯುವಕರು, ಸಾಮ್ರಾಜ್ಯಶಾಹೀ ಹಿತಚಿಂತಕರು, ಕಮುನಿಸ್ಟ್ ಪಂಥಕ್ಕೆಂದು ಒಪ್ಪಿ ಅದರಲ್ಲಿ ಸೇರಿಕೊಂಡಿದ್ದಾರೆ. ಒಳಗಡೆ ಹೇಸಿಕೆ ತುಂಬಿದೆಯೆಂಬುದಕ್ಕೆ ಕಮುನಿಸ್ಟ್ ವೇಷವಿಂದು ಸಾಕ್ಷಿಯಾಗಿದೆ.

ದೂರುವುದಲ್ಲ ಕಾಮ್ರೇಡರೆ!

ನಿಮ್ಮ ಎಷ್ಟೋ ಮಂದಿ ಹಳೆ ಕಮುನಿಸ್ಟರು ಮಾತೃಭೂಮಿಯ ಸಲುವಾಗಿ ಪ್ರಾಣಾರ್ಪಣ ಮಾಡಿದ್ದಾರೆ; ನಿಮ್ಮ ವಿಷಯ ನಮಗೆ ತುಂಬಾ ಅಭಿಮಾನವಿದೆ ನೀವು ಕೆಲವರು ನಮ್ಮ ರಾಷ್ಟ್ರದ ಜೀವ ದೇಹಗಳು. ನಿಮಗೂ ನಮಗೂ ಅಭಿಪ್ರಾಯದಲ್ಲಿ ಅಲ್ಪಸ್ವಲ್ಪ ಭೇದ ತೋರಿದರೇನು? ನೀವೂ ಕೆಲವರು ಮಾತೃಭೂಮಿ ಸೇವಾ ಕಂಕಣರೇ. ಆದರೆ ಇಂದಿನ ನಿಮ್ಮ ಈ ಮತಿಶೂನ್ಯತೆ ಮಾಯವಾಗಿ ನಾಳೆಗೆ ನೀವೂ ನಮ್ಮಂತೆ ಸತ್ಯ ತಿಳಿವಿರಿ; ಆಗ ನೀವು ಪುನರೊಮ್ಮೆ ನಿಮ್ಮ ನಿಜಸತ್ವ ತೋರಿಸಬಹುದು. ಪುನರಪಿ ನಿಮ್ಮ ಸತ್ವ ಕೂಲಿಗಾರರನ್ನು ಕೆರಳಿಸೀತು. ಭಾರತ ಮಾತೆ ಇಂದಿನ ನಿಮ್ಮೀ ಹೊಸ ವೇಷವನ್ನು ಮೆಚ್ಚುವುದಿಲ್ಲ. ಹುಡುಗನ ಹುಚ್ಚಾಟವನ್ನು ನೋಡಿ ನಕ್ಕು ಸಮಾಧಾನ ಮಾಡುವ ತಾಯಿಯಂತೆ ಆಕೆ ಕರೆಯುತ್ತಾಳೆ "ಓ ನೀವು ಕಮುನಿಸ್ಟರು" ಎಂದು!

'Vepa'

ಪುಸ್ತಕಾವಲೋಕನ

ಮರೆಯ ಮುತ್ತುಗಳು:- 'ಪ್ರಕಾಶ'ದ ಎರಡನೇ ಕಿರಣ. ಸಂಪಾದಕರು: ಪಿ. ಕೆ. ನಾರಾಯಣ. ಪ್ರಕಾಶಕರು: ಪ್ರಕಾಶ ಕೂಟ, ಮಂಗಳೂರು. ಕ್ರೌನ್ ಅಷ್ಟದಳಾಕಾರದ ೨೦ ಪುಟಗಳು ಬೆಲೆ.?

[illegible] ಕಥೆಗಳ ಈ ಸಂಗ್ರಹದಲ್ಲಿ ಶ್ರೀ. [illegible] ಅವರ 'ಗುಡಿಯ ದೀಪದ ಮುಂದೆ' ಎಂಬುದು ಮೊದಲನೆಯದು. [illegible] ಮೂರ್ತಿಯಿಂದ ಭಕ್ತನ ಅಭೀಷ್ಟ ಸಿದ್ಧಿಯಾಗುವುದಿಲ್ಲವೆಂಬುದು ಇದರ ಸಾರಾಂಶ. ಕಥೆಗೆ ಒಂದು ನಿರ್ದಿಷ್ಟವಾದ ಗುರಿ ಇಲ್ಲವೆಂಬಂತೆ ತೋರುತ್ತದೆ. 'ಕುಡುಕ' ಎಂಬುದು ಶ್ರೀ. ಎಸ್. ಜಿ. ನಾಯಕ್‌ರವರ ಕಥೆ; ಈ ಸಂಗ್ರಹದಲ್ಲಿ ಎರಡನೆಯದು. ಹಗಲೆಲ್ಲ ದುಡಿದು ಸೊರಗುವ ಬಡವನು ಆಯಾ ದಿನದ ದಣಿವನ್ನು ಆರಿಸಲು ದೇಶೀಯ ಹೆಂಡವನ್ನು ಕುಡಿದರೆ, ಅವನನ್ನು ಕುಡುಕನೆಂದು ತುಚ್ಛೀಕರಿಸುವ ಸಮಾಜ ಸಿರಿವಂತರು ವಿಲಾಸಕ್ಕೋಸ್ಕರ ಪರದೇಶೀಯ ಮಾದಕಗಳನ್ನು ಕುಡಿದು ಅವಾಂತರಗೆಯ್ಯುತ್ತಿದ್ದರೂ ಅದನ್ನು ನಿಷೇಧಿಸುವುದಿಲ್ಲ; ಮಾತ್ರವಲ್ಲದೆ ಅಂತಹ ಧನಿಕರನ್ನು ಸಮಾಜಕ್ಕೆ ಆಧಾರಸ್ತಂಭರೆಂದು ಹೊಗಳುತ್ತದೆ. ಈ ಅನ್ಯಾಯವನ್ನು ಶ್ರೀಯುತರು ಮೂರೇ ಪುಟಗಳಲ್ಲಿ ರಮ್ಯವಾಗಿ ಚಿತ್ರಿಸಿದ್ದಾರೆ.

ಮೂರನೆಯ ಕಥೆಯಾದ 'ಮುರಲೀನಾದ' ಶ್ರೀ ಯಂ. ಎಸ್. ಭಟ್ಟರದು. ಎಳೆ ಹುಡುಗ ಗೋಪಾಲನಲ್ಲಿ ಗಾನ ಕಲೆಯ ಸಂಸ್ಕಾರವಿರುವುದನ್ನು ಹಿರಿಯರು ತಿಳಿಯದೆ ಅವನನ್ನು ಹಿಂಸಿಸುತ್ತಿದ್ದು ಅದರಿಂದ ಬಲಿಯಾಗುವುದರಲ್ಲಿದ್ದ ಗೋಪಾಲ ಕೊನೆಯಲ್ಲಿ ಕಲಾವಿದ ವೇಣುವಿನ ಮುರಲೀನಾದದಿಂದ ಬದುಕಿಕೊಂಡ ಸನ್ನಿವೇಶ ಸಮಂಜಸವಾಗಿದೆ.

"... ಯಾರಿಗೆ?" ಎಂಬ ನಾಲ್ಕನೆಯ ಕಥೆಯನ್ನು ಬರೆದವರು ಶ್ರೀ ಕೆ. ಸದಾಶಿವ. ಬಡ ಹುಡುಗ ಗೋಪಾಲನ ರಾಷ್ಟ್ರ ಪ್ರೇಮದ ಚಿತ್ರ ಹೃದಯಂಗಮವಾಗಿದೆ. ಕಥೆಯ ಶಿರೋನಾಮ ಏನೋ ಒಂದು ಬಗೆಯಾಗಿದೆ.

ಕಾರ್ಕಳದ ಶ್ರೀ ರಾಮಕೃಷ್ಣ ಶೆಟ್ಟಿಯವರ ಬರೆಹ "ಕ್ಷಮೆ" ಈ ಪುಟ್ಟ ಸಂಗ್ರಹದಲ್ಲಿ ಐದನೆಯದು. ಇದರ ವಸ್ತು ಮತ್ತು ಶೈಲಿ ವಿಚಿತ್ರವಾಗಿದೆ.

ಕೊನೆಯದಾದ 'ಮೃತ ಶಿಲೆ' ಶ್ರೀ ತಿ. ರಾ. ಕುಳುಕುಂದರ ಕಥೆ. ಒಂದೆಡೆ ನೂರು ಸೇರು ಅಕ್ಕಿಯ ಮೃಷ್ಟಾನ್ನ ಸಂತರ್ಪಣೆಯಾಗುತ್ತಿರುವಾಗ ಇನ್ನೊಂದೆಡೆ ಬಡವನೊಬ್ಬ ನಾಲ್ಕು ದಿನಗಳಿಂದ ಕೂಳಿಲ್ಲದೆ ಸಾಯುವನು. ಮೃತ ಶಿಲೆಯಾದ ದೇವರು ಈ ಅನ್ಯಾಯವನ್ನೆಂತು ತಡೆಯಬಲ್ಲ? ಎಂಬ ಇಲ್ಲಿನ ಭಾವಕ್ಕೂ ಮೊದಲನೆಯ ಕಥೆಯ ಭಾವಕ್ಕೂ ಸಾಮ್ಯವಿದೆ.

"ಮರೆಯ ಮುತ್ತುಗಳನ್ನು" 'ಪ್ರಕಾಶ'ದ ಎರಡನೆ ಕಿರಣವಾಗಿ ಪ್ರಕಾಶ ಪಡಿಸುವ ಸಾಹಸ ಮಾಡಿದ ಪ್ರಕಾಶ ಕೂಟ ಅಭಿನಂದನಾರ್ಹ.

—ವಾಮು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. 1906.

Statement of affairs as on 31st December, 1943.

LIABILITIES	Rs. As. Ps.	ASSETS	Rs. As. Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಒಡ್ವಯರ್ ದುರಾಡಳಿತದಲ್ಲಿ

—ಪಂಜಾಬಿನಲ್ಲಾದ ಅತ್ಯಾಚಾರ—

ಕಾಲು ಶತಮಾನದಿಂದೀಚೆಗೆ ಮೈಕಲ್ ಒಡ್ವಯರ್‌ನಿಂದ ಮೋರ್ಸ್‌ವೆಲ್‌ವರೆಗೆ ಒಳ್ಳೇ ಜತೆ ಸಿಕ್ಕಿದೆ. ಕಾಂಗ್ರೆಸಿನ ಸಂದೇಶ ಕೇಳಲು ಪ್ರತಿಯೊಂದು ಮೈದಾನಿನಲ್ಲಿ ಜನರ ಗುಂಪು ದಟ್ಟಣಿಯಾಗಿ ಸೇರುತ್ತಿದೆ. ಮೈಕಲ್ ಒಡ್ವಾಯರ್ ಆಡಳಿತದ ಕಾಲದಲ್ಲಿ ಪಂಜಾಬಿನ ಜಲಿಯಾನ್‌ವಾಲಾ ಬಾಗಿನಲ್ಲಿ ಐನ್ನೂರು, ಆರುನೂರು ಜನರು ನಿರ್ದಯ ವಧಿಸಲ್ಪಟ್ಟರು; ಅದಕ್ಕಿಂತ ಮೂರು ಪಾಲು ಹೆಚ್ಚಿನ ಜನರು ಗಾಯಗೊಂಡರು ಗಾಂಧಿಜಿ ಮುಂದಾಳಾಗಿ ಇನ್ನೂ ಅದೇ ಶಾಂತ ಗಂಭೀರತೆಯಿಂದ, ಅಂದು ಭಾರತದ ಸ್ವಾತಂತ್ರ್ಯಕ್ಕಾಗಿ ಯಾವ ಸಂದೇಶ ಸಾರಿದ್ದರೋ ಜಾಲಿಯಾನ್‌ವಾಲಾ ಬಾಗ್ ದುರಂತರ ಬಳಿಕ ಇಂದಿಗೂ ಮಹಾತ್ಮರ ಆ ಕರೆ ಜನತೆಯ ಮೇಲೆ ಅತ್ಯುಚ್ಚ ಪ್ರಭಾವ ಬೀರಿದೆ ಯಾರೋ ಒಬ್ಬ ಪ್ರತೀಕಾರೇಚ್ಛುವು ಲಂಡನಿನಲ್ಲಿ ಮೈಕಲ್ ಒಡ್ವಯರನ್ನು ಕೊಲ್ಲುವ ತನಕವೂ, ಆತ ಕೊಂದ ಕೊಲ್ಲಿಸಿದ ಜನರ ಪ್ರೇತಗಳು ಅವನಿಗೆ ಅಶಾಂತಿ ಹುಟ್ಟಿಸಿರಲೇ ಬೇಕು. ಆದರೆ ಆತನನ್ನು ಕೊಂದವನ ಬಗ್ಗೆ ಗಾಂಧಿಯ ಅಹಿಂಸಾ ತತ್ವ ಪ್ರಚಾರವುಳ್ಳ ಈ ಭಾರತದಲ್ಲಿ ಒಂದಿಷ್ಟು ಸಂತೋಷವೂ ಪ್ರದರ್ಶಿತವಾಗಲಿಲ್ಲ ರಾಷ್ಟ್ರೀಯ ಭಾರತವು, ರಾಷ್ಟ್ರೀಯವಾರವನ್ನು ಆಚರಿಸುವೀಕಾಲದಲ್ಲಿ ಮೈಕಲ್ ಒಡ್ವಾಯರಿನ ಪ್ರೇತ ಇನ್ನೂ ಇಲ್ಲಿ ಸುಳಿಯುತ್ತಿರುವ ಭಾಸವಾಗುತ್ತದೆ

ಗಂಡು, ಹೆಣ್ಣು, ಮಕ್ಕಳು

ಗಾಂಧಿ, ಒಡ್ವಾಯರ್ ಮತ್ತು ಗುಂಪು ಇದಿನ್ನೂ ನಮ್ಮ ನೆನಪನ್ನು ಸೆಳೆಯುತ್ತದೆ ಇಂದೂ ಮಹಾತ್ಮರು ಆ ಗುಂಪನ್ನು ಪ್ರಚೋದಿಸಬಲ್ಲರು ಈ ಗುಂಪು, ಮಹಾತ್ಮರ ಅಹಿಂಸಾ ಪ್ರತಿಜ್ಞೆ ಪಡಕೊಂಡಿದ್ದರೂ, ದುರಾತ್ಮರ ಹೃದಯದಲ್ಲಿ ಭೀತಿ ಹುಟ್ಟಿಸಲು ಸಾಕು ೧೯೧೯ರ ಎಪ್ರಿಲ್ ೧೩ರಂದು ಮೈಕಲ್ ಒಡ್ವಾಯರ್ ಅಷ್ಟು ತಸರದಲ್ಲಿ ಬಂದಿಳಿದವನೇ ಶಾಂತವಾಗಿದ್ದ ಜನತೆಯ ಗುಂಪಿಗೆ ಗುಂಡು ಹಾರಿಸಿದ, ಮದ್ದು ಗುಂಡು ಮುಗಿವ ತನಕ ತನ್ನ ಲೂಟಿ ಸಾಗಿಸಿದ ಗುಂಡು ಹಾರಿಸುವ ಮೊದಲು ಎಚ್ಚರಿಕೆ ಕೊಟ್ಟಿರಲಿಲ್ಲ, ಗುಂಡಿನಿಂದ ಸತ್ತ ಹಾಗೂ ಗಾಯಗೊಂಡವರ ಕುರಿತು ಏನೊಂದೂ ಎಚ್ಚರಿಕೆ ತೆಕೊಳ್ಳಲೂ ಇಲ್ಲ ಹಾಗೆ ಗಾಯಗೊಂಡವರಲ್ಲಿ, ಸತ್ತವರಲ್ಲಿ ಹಸುಗೂಸುಗಳೂ ಇದ್ದರು ಮಾರ್ಶಲ್ ಕಾನೂನು ಜಾರಿಮಾಡಿದ್ದು, ಮನುಷ್ಯರನ್ನು ನೆಲದಲ್ಲಿ ಹರಿದುಕೊಂಡು ಹೋಗಲು ಹೇಳಿದ್ದು, ಛಡಿ ಏಟು ಏರಿಸಿದ್ದು, ಇದರಿಂದ ಪರಿಸ್ಥಿತಿ ಹದಗೆಟ್ಟು ಮುಂದೆ ಹಂಟರ್ ಕಮಿಟಿ ಸ್ಥಾಪನೆಯಾಗಿ ಇದ್ದರ ವಿಚಾರಣೆ ನಡೆಯಿತು ಈ ಕಮಿಟಿಯು ವರದಿಯಲ್ಲಿ ಎಷ್ಟೋ ಭಯಂಕರ ಕೃತ್ಯ ಹೊರಬಿತ್ತು! ಆದರೆ ಏಕಾಭಿಪ್ರಾಯವಿಲ್ಲದ ಕಾರಣ, ಭಾರತೀಯ ಸದಸ್ಯರು ತಮ್ಮ ಅಸಮ್ಮತಿ ತೋರಿಸಿ ಮಾರ್ಶಲ್ ಲಾ ಕಾನೂನು ಜಾರಿಮಾಡಿದ್ದು ಅನ್ಯಾಯವೆಂದು ಖಂಡಿಸಿದರು. ರೌಲೆಟ್ ಕಾನೂನು ಪ್ರಯೋಗಕ್ಕೆಳಿಸಲಾಗಿತ್ತು. ಬ್ರಿಟಿಷರಿಗೆ ಮೊದಲನೆಯ ಮಹಾ ಯುದ್ಧದಲ್ಲಿ ನೆರವಾದ ಭಾರತಕ್ಕೆ ಇದು ದೊಡ್ಡ ಅಪಮಾನವಾಯಿತು; ಖಿಲಾಫತ್ ಪ್ರಶ್ನೆಯೂ ಎದ್ದಿತು; ಮಹಾತ್ಮರು ಖಿಲಾಫತ್ ಚಳವಳಿ ಆರಂಭಿಸಿದರು; ಕಾಂಗ್ರೆಸ್ ರಥ ಮುಂದುವರಿಯಿತು.

ಆ ಅನ್ಯೆರಿಷ್ ದಂಪತಿಗಳು

ಈ ಸಂದರ್ಭದಲ್ಲಿ ಸರಳಾದೇವಿ ಚೌಧರಾಣಿಯವರ ನೆನಪಾಗುತ್ತದೆ ಲೇಡಿ ಒಡ್ವಯರ್ ಆಕೆಯನ್ನು ಲಾಹೋರ್ ಕ್ಲಬ್‌ನಿಂದ ಹೊರಗೆ ಹಾಕಿದ ಕತೆಯಿದು, ಚೌಧರಾಣಿಯವರು ಪ್ರಥಮ ಮಹಾಯುದ್ಧಕ್ಕೆ ಎಷ್ಟೋ ಮಂದಿ ಬಂಗಾಳೀ ಯುವಕರನ್ನು ಕಳುಹಿಸಿದ್ದರು ಆಕೆಯ ಪದ್ಯಗಳು ಹೃದಯ ಸ್ಪರ್ಶೀ ಕವನಗಳು ಜನತೆಯಲ್ಲಿ ಬಹಳ ಪ್ರಭಾವ ಬೀರಿ ಯುದ್ಧಕ್ಕೆ ಜನರು ನೆರವಾಗುವಂತೆ ಮಾಡಿತ್ತು ಆದರೆ ಆಕೆಯ ಪತಿ ದತ್ತ ಚೌಧರಿಯವರನ್ನು ಇತರ ಲಾಹೋರ್ ಮುಖಂಡರೊಡನೆ ಗಡಿಪಾರ ಮಾಡಲಾಯಿತು ಈ ಸಂದರ್ಭದಲ್ಲಿಯೇ ಒಡ್ವಯರ್ ಪತ್ನಿ ಒಂದು ಹೇಳಿಕೆಯಲ್ಲಿ ಗವರ್ನರರ ಹೆಂಡತಿಯಾದ ನಾನು ಚೌಧರಿ ದತ್ತರ ಹೆಂಡತಿಯಿರುವ ಕ್ಲಬಿಗೆ ಬರಲಾರೆನೆಂದು ಸಾರಿದರು ಅವರು ಐರಿಷ್ ದಂಪತಿಗಳು, ಸ್ವಾತಂತ್ರ್ಯಕ್ಕಾಗಿ ಸಾವನ್ನಪ್ಪಲು ಹಿಂಜರಿಯಾವ ದೇಶಭಕ್ತರ ವಂಶಕ್ಕೆ ಸೇರಿದವರು, ಆದರೆ ಈ ಒಡ್ವಯರ್ ದಂಪತಿಗಳು ಅನ್ಯೆರಿಷ್ ವರ್ತನೆ ಮಾಡಿದರು ಅವರು ದೇಶಭಕ್ತರಿಗೆ ವಿರೋಧವಾದವರ ಸಾಲಿಗೆ ಸೇರಿಕೊಂಡರು

ನೆಹರು ಸಮಿತಿ

ಕಾಂಗ್ರೆಸಿನ ಆಶ್ರಯದಲ್ಲಿ ಪಂಡಿತ ಮೋತಿಲಾಲ ನೆಹರುಗಳು ಅಧ್ಯಕ್ಷರಾಗಿ ಸ್ಥಾಪಿತವಾದ ಒಂದು ಅನಧಿಕಾರೀ ಸಮಿತಿಯು ಆಗಿನ ವೈಸರಾಯ್‌ರಾಗಿದ್ದ ಚೆಮ್ಸ್‌ಫೋರ್ಡರನ್ನು ಹಿಂದಕ್ಕೆ ಕರೆವಂತೆಯೂ, ಒಡ್ವಯರನ್ನು ಮತ್ತು ಕರ್ನಲ್ ಒಬ್ರಿನನನ್ನು ಕೆಲಸದಿಂದ ತಳ್ಳಿಹಾಕುವಂತೆಯೂ ಸಾರಿತು ಆರ್ಮಿ ಕೌನ್ಸಿಲು, ಒಡ್ವಯರ್ ತೀರ್ಮಾನದಲ್ಲಿ ತಪ್ಪಿ ಹೋದನೆಂದು ಮಾತ್ರ ಹೇಳಿತು. ಆತ ಮುಂದೆ ಅಧಿಕಾರದಲ್ಲಿರಬಾರದೆಂದೇನೊ ಆಯಿತು. ಆಗಿನ ಭಾರತ ಮಂತ್ರಿ ಎಡ್ವಿನ್ ಸಾಮುವೆಲ್ ಮೊಂಟೆಗೋ, ಒಡ್ವಯರ್ ಕೃತ್ಯವನ್ನು ಖಂಡಿಸಿದರು ಯೂರೋಪಿಯನ್ ಸಂಘದವರು ಆತನ ವರ್ತನೆಯನ್ನು ಪ್ರಶಂಸಿಸಿ ಒಂದು ದೊಡ್ಡ ನಿಧಿಯನ್ನರ್ಪಿಸಿದರು ಸಾಮ್ರಾಜ್ಯಕ್ಕೆ ಆತ ದೊಡ್ಡ ಕೀರ್ತಿ ತಂದನೆಂದು ಹೊಗಳಲಾಯಿತು ಹೌಸ್ ಓಫ್ ಲಾರ್ಡ್ಸ್‌ಗಳಲ್ಲಿ ಈ ಕುರಿತು ವಾದ ವಾದಾಗ ಜನರಲ್ ಒಡ್ವಯರನ ಪ್ರಶಂಸೆ ನಡೆಯಿತು.

ಎಲ್ಲೆಲ್ಲೂ ಖಂಡನೆಗಳು

ಆಗ ಬೊಂಬೇ ಕ್ರಾನಿಕಲ್ ಪತ್ರಿಕೆಯ ಸಂಪಾದಕ ಬೆಂಜಿಮಿನ್ ಹಾರ್ನಿಮನರನ್ನು ಬೊಂಬೇ ಗವರ್ನರ್ ಶಿಕ್ಷಿಸಿದ್ದು ಪಂಜಾಬ್ ದುರಂತದ ಒಂದು ಚಿರಸ್ಮರಣೀಯ ಕಾರ್ಯ. ಪಂಜಾಬ್ ಅಕೃತ್ಯದ ವಿಷಯದಲ್ಲಿ ಹಾರ್ನಿಮನ್ ಖಂಡಿಸಿದ ಬರೆದ ಲೇಖನಗಳು ಒಡ್ವಯರ್ ದುರಾಚಾರವನ್ನು ಬ್ರಿಟಿಷ್ ಸಾರ್ವಜನಿಕರಿಗೆ ತಿಳಿಸಿತು. ಆ ಶಾಂತಿ ದೂತ ಅಂಡ್ರೂಸರೂ ಆಗ ದೇಶದಾದ್ಯಂತ ಹೋಗಿ ಶಾಂತಿ ಸಂದೇಶ ಸಾರಿದರು. ಅವರ ಗುರು ರಬೀಂದ್ರ ನಾಥ ಟಾಗೋರರು ಈ ಅಕೃತ್ಯವನ್ನು ಖಂಡಿಸಿ ತನಗೆ ಕೊಟ್ಟ ಸರ್ ಪದವಿಯನ್ನು ತಿರಸ್ಕರಿಸಿದರು ಪಂಡಿತ ಮಾಲವೀಯರು, ಲಾಲಾ ಲಜಪತ್ ರೈಗಳು ಡಾ॥ ಕಿಚಲುಗಳು ಖಂಡನೆ ಮಾಡುತ್ತಾ ಸ್ವರ್ಗ ಮರ್ತ್ಯಗಳನ್ನು ಅಲುಗಾಡಿಸಿದರು ಆ ಆಂದೋಲನದಲ್ಲಿ ದೇಶಬಂಧು ಚಿತ್ತರಂಜನ ದಾಸರು ವಹಿಸಿದ ಭಾಗವೂ ಅಪೂರ್ವವಾದುದು.

'Forum'ನಿಂದ

For all sporting materials

SOUTH KANARA

SPORTS HOUSE

Shifted to the Premises of

SOANS, PHOTO

ELECTRIC STUDIO

Light House Hill Road

MANGALORE S. K.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧಪರಿಣಾಮಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD. 1921

HEAD OFFICE Mangalore. ***BRANCHES*** BUNDER MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.
Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
FixedDeposits 6 months 2% p. a.
12 months 2½% p. a
24 months 3% p. a.
The Bank also accepts season and short term deposits and many other lucrative schemes at most favourable rates of interest. For terms etc, apply to Head office or Branches.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.
2½% Rebate on annual premiums.
"Permanent Disability Benefits free of any cost
Payment of double the insured amount in case of death by accident at a very smallcost of Rs 1-8-0 per 1000.
Special rebates on large size policies.
A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building. UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs.

Depot. **Maharata Galli, Hubli**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ನೀಲ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 28—4—1944 [ಸಂಚಿಕೆ 17]

ಗಾಂಧೀಜಿ - ನೆಹರುಗಳೊಡನೆ 'ನಾಳೆಯ ಭಾರತ'ದ ಕುರಿತು

'ಆಕಾಶವಾಣಿ'ಯಲ್ಲಿ ಸಂಭಾಷಣೆ.

ಬರೆದವರು ಕ್ರಾನಿಕಲರ್

"ಗಾಂಧೀಜಿ ಸ್ವಾತಂತ್ರ್ಯದ ಹಾದಿಯಲ್ಲಿ ಮೆಲ್ಲಗೆ ಮತ್ತು ಸ್ಥಿರವಾಗಿ ಹೋದರೆ ಮಾತ್ರ ನಾಳೆಯ ಭಾರತ ಭದ್ರತಳಹದಿಯಲ್ಲಿರುವುದಲ್ಲವೆ?"

ಗಾಂಧೀಜಿ-"ಮೆಲ್ಲಗೆ ಸ್ವಾತಂತ್ರ್ಯವೆಂಬುದೇ ಇಲ್ಲ, ಸ್ವಾತಂತ್ರ್ಯವೆಂಬುದು ಶಿಶು ಜನನದಂತೆ ಎಲ್ಲಾ ಜನನಗಳೂ ಒಂದೇ ನಿಮಿಷದಲ್ಲಿ ಆಗುತ್ತವೆ '

"ನಿಮ್ಮ ವಾತಿನಂತೆ ನಾಳೆಯ ಭಾರತ ಸ್ವತಂತ್ರವಾದ ಭಾರತವೆಂದು ಸ್ಪಷ್ಟ, ಸ್ವರಾಜ್ಯದ ವಿವರಣೆ ಕೊಡುತ್ತೀರಾ? '

ಗಾಂಧೀಜಿ 'ಬಹುಮಂದಿ ಪ್ರಾಯಸ್ಥ ಜನರ, ಹೆಂಗುಸರು, ಗಂಡಸರೂ ಕೂಡ, ಇಚ್ಛೆಯಂತೆ ಆಗುವ ಭಾರತದ ಸರಕಾರ ಸ್ವರಾಜ್ಯ ಆ ಪ್ರಾಯಸ್ಥ ಜನರು ದೇಶೀಯರಿರಬಹುದು, ಇಲ್ಲಿ ಹುಟ್ಟಿದವರಿರಬಹುದು, ನೆಲೆಸಿದವರಿರಬಹುದು, ಇಲ್ಲಿನ ಏಳಿಗೆಗಾಗಿ ದುಡಿದು ಸೇವೆ ಸಲ್ಲಿಸಿದವರಿರಬಹುದು, ಇಲ್ಲಿನ ಮತದಾರರಪಟ್ಟಿಯಲ್ಲಿ ತಮ್ಮ ಹೆಸರು ದಾಖಲೆ ಮಾಡಿದವರೆಲ್ಲಾ ಇರಬಹುದು.'

"ಅಂಥಾ ಸರಕಾರ ಬಹುಮತ ಸರಕಾರವಾಗಿ, ಬಹುಮತದ ಜಾತಿಗಳಾದ ಹಿಂದುಗಳಿಗೆ ಪ್ರಾಧಾನ್ಯವೂ ಮುಸಲ್ಮಾನರಿಗೆ ಹೆದರಿಕೆಯೂ ಹುಟ್ಟುವುದು ಸಹಜವಲ್ಲವೆ?"

ಗಾಂಧೀಜಿ "ಅದಕ್ಕಿಂತ ದೊಡ್ಡ ತಪ್ಪಿಲ್ಲ ಹಾಗಾದ ಪಕ್ಷ ನಾನದನ್ನು ಸ್ವರಾಜ್ಯವೆನಲಾರೆ ಮಾತ್ರವಲ್ಲ ನನ್ನಲ್ಲಿರುವ ಸರ್ವಶಕ್ತಿಯಿಂದ ಅಂಥಾದನ್ನು ಎದುರಿಸುವೆನು ಭಾರತ ಸ್ವರಾಜ್ಯವೆಂದರೆ ನನಗೆ ಎಲ್ಲಾ ಜನರ ಆಡಳಿತ, ನ್ಯಾಯದ ಆಡಳಿತ ನನ್ನ ಮತ್ತು ನಮ್ಮ ಕನಸಿನ ಸ್ವರಾಜದಲ್ಲಿ ಜಾತಿಮತಗಳ ಭೇದವಿಲ್ಲ '

"ಬ್ರಿಟಿಷ್ ಸರಕಾರ ಸ್ವರಾಜ್ಯ ಕೊಡಲು ಒಪ್ಪುವುದೆಂದು ಭಾವಿಸುವ '

ಗಾಂಧೀಜಿ "(ತಡೆದು) 'ಸ್ವರಾಜ್ಯವು ದೇವರೂ ಕೊಡುವಂಥಾದಲ್ಲವೆಂದು ನನ್ನ ಭಾವನೆ ನಾವದನ್ನು ನಮಗಾಗಿ ಗಳಿಸಿಕೊಳ್ಳಬೇಕು ಸ್ವರಾಜ್ಯವನ್ನು ಒಂದು ಜನಾಂಗ ಇನ್ನೊಂದು ಜನಾಂಗಕ್ಕೆ ದಾನ ಮಾಡಲಾರದು ಒಂದು ರಾಷ್ಟ್ರ ತನ್ನೆದೆಯ ರಕ್ತ ಚೆಲ್ಲಿ ಪಡಕೊಳ್ಳಬೇಕಾದ ನಿಧಿ ಅದು!

"ನನ್ನ ಪ್ರಶ್ನೆ ಕೇಳಿ, ವಿದೇಶೀಯರಿಂದ ನಮಗೆ ಬಿಡುಗಡೆಯಾಗಿ ಸ್ವರಾಜ್ಯ ಸಿಕ್ಕಿತು ಆಗ ನಮ್ಮೆಲ್ಲಾ ಸಮಸ್ಯೆ ಪರಿಹಾರವಾಯಿತೆ?"

ಗಾಂಧೀಜಿ: "ಇಲ್ಲ. ಸ್ವರಾಜ್ಯವೆಂದರೆ ನನ್ನ ಅಭಿಪ್ರಾಯದಲ್ಲಿ ನಮ್ಮ ದೇಶದ ಜನರ 'ಅಲ್ಪತನ'ದಿಂದಲೂ ಬಿಡುಗಡೆ ಇಂಗ್ಲಿಷರಿಂದ ಮಾತ್ರ ದೇಶವನ್ನು ಬಿಡುಗಡೆ ಮಾಡುವುದಕ್ಕಾಗಿ ನಾನಿಷ್ಟು ಚಡಪಡಿಸುವುದಿಲ್ಲ ಭಾರತವನ್ನು ಎಂಥಾದ್ದೇ ಇರಲಿ ಎಲ್ಲಾ ಬಂಧನಗಳಿಂದಲೂ ಬಿಡುಗಡೆಗೊಳಿಸಬೇಕೆಂದು ನಾನು ಸಾಧಿಸುತ್ತೇನೆ ಇಸ್ಪೀಟಿನ ರಾಜನನ್ನು ತೆಗೆದು ಗುಲಾಮ ರಾಜನನ್ನಿಡಲು ನಾನು ತಯಾರಿಲ್ಲ '

"ನೀವು ಯಾವುದೇ ತರದಲ್ಲಾದರೂ ಸೋಶಿಯಲಿಸಮ್ ಅಥವಾ ಕಮ್ಯುನಿಸಮ್ ಪ್ರಚಾರ ಮಾಡುತ್ತೀರಾ? '

ಗಾಂಧೀಜಿ 'ಕಮ್ಯುನಿಸಂ ಕೊನೆಗೇನು ಹೇಳುತ್ತದೆ ಒಂದು ವರ್ಗರಹಿತ ಸಮಾಜವಿರಬೇಕೆಂದು ಇದೊಂದು ಉತ್ತಮ ಆದರ್ಶ ಆದರೆ ಆ ಆದರ್ಶ ಸಾಧಿಸಲು ಪಶುಬಲ ಉಪಯೋಗಿಸಬೇಕೆಂಬಲ್ಲಿ ನಾನವರಿಂದ ತೊಲಗಿ ನಿಲ್ಲುತ್ತೇನೆ ಸಣ್ಣವ, ದೊಡ್ಡವ ಎಂಬೀ ಅಸಮಾನತೆ ತಪ್ಪು ಮಾನವ ಹೃದಯದಿಂದ ಈ ತಪ್ಪನ್ನು ಚೂರಿಹಾಕಿ ತೆಗೆಯಲು ನಾನು ಒಪ್ಪುವುದಿಲ್ಲ '

ನಾವು ಆರ್ಥಿಕ ವಿಚಾರದಿಂದ ಅಧ್ಯಾತ್ಮಿಕ ವಿಚಾರಕ್ಕೆ ಹೋಗುವಂತೆ ತೋರುತ್ತದಲ್ಲಾ '

ಗಾಂಧೀಜಿ "ನಾನು ಆರ್ಥಿಕ ವಿಚಾರಕ್ಕೂ ಅಧ್ಯಾತ್ಮಿಕ ವಿಚಾರಕ್ಕೂ ಒಂದು ಹೆಚ್ಚಿನ ಭೇದ ಅಥವಾ ಏನೂ ಭೇದ ಮಾಡುವುದಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ ವ್ಯಕ್ತಿಯ ಅಥವಾ ಜನಾಂಗದ ನೀತಿ ಮತ್ತು ಉನ್ನತಿಯನ್ನು ಹಾನಿಗೊಳಿಸುವ ಆರ್ಥಿಕ ವಿಚಾರವು ಅನ್ಯಾಯ ಆದ್ದರಿಂದಲೇ ಪಾಪ ಒಂದು ಜನಾಂಗ ಇನ್ನೊಂದು ಜನಾಂಗದ ಮೇಲೆ ಕೊಳ್ಳೆ ಮಾಡುವ ಆರ್ಥಿಕ ವಿಚಾರವೂ ಅನೀತಿಯೇ '

'ನಾಳಿನ ಭಾರತದಲ್ಲಿ, ನಿಮ್ಮ ಅಭಿಪ್ರಾಯದಂತೆ ಒಂದು ಯೋಗ್ಯ ಮೂಲವುಳ್ಳ ಆರ್ಥಿಕ ವ್ಯವಸ್ಥೆ ಹೇಗಿರಬೇಕು."

ಗಾಂಧೀಜಿ 'ನಮ್ಮ ರಾಷ್ಟ್ರೀಯ ಶಕ್ತಿಯನ್ನು ಸಂಘಟಿಸುವೆವು ಇದು ಕೇವಲ ಉತ್ಪಾದನೆ ಒಂದರಿಂದಲೇ ಆಗಲಿಕ್ಕಿಲ್ಲ. ಉತ್ಪಾದನೆಯ ಜತೆಯಲ್ಲಿ ವಿತರಣೆಯೂ ಆದರೆ ಅದು ಸಾಧ್ಯ ಆದೀತು."

'ಹಾಗಾದರೆ ನೀವು ಸಮವಾಗಿ ಹಂಚಿಕೊಡುವ ತತ್ವ ನಂಬುತ್ತೀರಾ?

ಗಾಂಧೀಜಿ 'ನನ್ನ ಗುರಿ, ಸಮವಾಗಿ ಹಂಚಿಕೊಡುವುದೇ ಆದರೆ ನಾನು ಕಂಡಂತೆ ಅದೀಗ ಸಾಧಿಸುವುದು ಸಾಧ್ಯವಿಲ್ಲ ಹಾಗಾಗಿ ನಾನೀಗ ಸಮವಾಗಿ ಹಂಚೋಣಾಗುವಂತೆ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಅಭಿಪ್ರಾಯ ದಲ್ಲಿ ಭಾರತದ ಹಾಗು ಜಗತ್ತಿನ ಆರ್ಥಿಕ ಮೂಲ ಹೇಗಿರಬೇಕೆಂದರೆ ಆ ಯೋಜನೆಯಲ್ಲಿ ಯಾರೂ ಅನ್ನ ಬಟ್ಟೆಗಳಿಲ್ಲದೆ ನರಳಬಾರದು ಬೇರೆ ಮಾತಿನಲ್ಲಿ ಹೇಳುವುದಿದ್ದರೆ ತನಗೆ ಬೇಕಾದುದನ್ನು ಒದಗಿಸಿಕೊಳ್ಳಲು ಬೇಕಾದ ದುಡಿತ ಪ್ರತಿಯೊಬ್ಬನಿಗೂ ಇರಬೇಕು ಇದು ವಿಶ್ವಕ್ಕೇ ಅನ್ವಯಿಸಿ ಆಗುವುದೂ ಸಾಧ್ಯ ಯಾವಾಗ ಎಂದರೆ ಮೂಲ ಆವಶ್ಯಕ ವಸ್ತುಗಳ ಜನತೆಯ ಸ್ವಾಧೀನ ಬರಬೇಕು ದೇವರು ಕೊಡುವ ಗಾಳಿಯಂತೆ ಅವೆಲ್ಲರಿಗೂ ಸಿಗಬೇಕು

ಆಕಾಶವಾಣಿಯ ಮೂಲಕ, ಪೂನಾದಲ್ಲಿರುವ ಗಾಂಧಿಜಿಯೊಡನೆ ಹೀಗೆ ಮಾತನಾಡಿದ ಮೇಲೆ ಇನ್ನು ಅಹಮ್ಮದ್ ನಗರದ ಕಡೆಗೆ ತಿರುಗುವ 'ನಾಳಿನ ಭಾರತ'ದ ವಿಚಾರ ನೆಹರು ಅಭಿಪ್ರಾಯವೇನೆಂದು ಕೇಳಬೇಕು ಗಾಂಧಿಜಿ ಆಕಾಶವಾಣಿಯಲ್ಲಿ ಮಾತನಾಡಲಿಕ್ಕೇ ಒಪ್ಪದವರು, ಆದರೆ ನೆಹರು ಬಂಧಿತವಾಗುವ ದಿನ ಆಕಾಶವಾಣಿಯಲ್ಲಿ ಅಮೆರಿಕಕ್ಕೆ ಭಾಷಣ ಕೊಡಲೊಪ್ಪಿದ್ದರು ಆದ್ದರಿಂದ ಅವರು ಖಂಡಿತ ಒಪ್ಪುತ್ತಾರೆ

"ಭವಿಷ್ಯ ಭಾರತದ ಕುರಿತು ನಿಮ್ಮ ಒಂದು ಸಾರಾಂಶ ಯೋಜನೆ ತಿಳಿಸುತ್ತೀರಾ?"

ನೆಹರು—"ಭಾರತದಲ್ಲಿ ಪ್ರಾಮುಖ್ಯವಾಗಿ ನಮಗೆ ಹೊಳೆವ ವಿಚಾರಗಳೆಂದರೆ, ಈ ದಾರಿದ್ರ್ಯ, ಈ ಜನರ ಗೋಳು ಮತ್ತು ಈ ನಿರುದ್ಯೋಗ ಸಾಮ್ರಾಜ್ಯಶಾಹಿ ಕೆಳಗೆ ಇವುಗಳ ನಿವೃತ್ತಿಯಾಗುವುದು ಸಾಧ್ಯವೇ ಇಲ್ಲ ಹಾಗಾಗಿ ನಾವು ಸ್ವತಂತ್ರರಾಗಲೇಬೇಕು ಇದಕ್ಕೆ ಪ್ರಾರಂಭವಾಗಿ ಆಗಬೇಕಾದದ್ದು ರಾಜಕೀಯ ಸ್ವಾತಂತ್ರ್ಯ, ಇದಕ್ಕೆ ಸಾಮಾಜಿಕ ವಿಚಾರ ಸೇರಿವೆ, ಇದಾದರೆ ಸರಿಯಾದ ದಾರಿಯಲ್ಲಿ ಯೋಗ್ಯ ಪ್ರಗತಿ ಮಾಡಬಹುದು."

"ಹಾಗಾದರೆ ನೀವು ಸಮತಾತತ್ವದ ಸಮಾಜ ಬೇಕೆನ್ನುತ್ತೀರಾ?"

ನೆಹರು—"ಹೌದು, ಸಮತಾವಾದದಿಂದ ಮಾತ್ರ ನಾವು ನಮ್ಮ ಆರ್ಥಿಕ ಸಮಸ್ಯೆ ಪರಿಹರಿಸಬಹುದು ಆದರೆ ಭಾರತ ಸ್ವತಂತ್ರವಾದಾಗ ಮಾತ್ರ ಸಮತಾವಾದ ಇಲ್ಲಿ ನಡೆಯಬಹುದು "

"ಹಾಗಾದರೆ ನೀವು ಕೆಲಸಲ ಹೇಳಿದ್ದುದುವಂತೆ 'ಗಾಂಧೀವಾದೀ ಸಮತಾವಾದಿ ಇಲ್ಲವೆ ಮಾರ್ಕ್ಸ್‌ವಾದೀ ಸಮತಾವಾದಿಯೆಂದು ನಾ ತಿಳಕೊಳ್ಳಬಹುದೇ

ನೆಹರು —"ಸಮತಾವಾದದ ವಿಚಾರವೆಂದರೆ ಮಾರ್ಕ್ಸ್ ವಿಚಾರ ಅದೇ ಇಂದಿನ ವಸ್ತು ಹಿನ ಇತಿಹಾಸದ ಅವಲೋಕನೆ ಮಾರ್ಕ್ಸ್‌ನ ಮಹತ್ತು ಇಂದು ಯಾರೂ ಅಲ್ಲಗಳೆಯಲಾರರು ಮಾರ್ಕ್ಸ್ ಜೀವನದ ಆರ್ಥಿಕ ವಿಚಾರ ಹೇಳಿದ್ದಾನೆಂದು ಹೇಳಲಾಗುವದೆ ಆತ ಅದಕ್ಕೆ ಪ್ರಾಮುಖ್ಯ ಕೊಟ್ಟದ್ದರಿಂದ ಅದರಿಂದಲೇ ಹೆಚ್ಚು ಪ್ರಯೋಜನವೂ ಅದನ್ನೇ ಹೆಚ್ಚು ನನ ಯುವ ರೆತು ಬಿಡುವುದು ಇರುವುದರಿಂದ ಆದರೆ ಮಾನವ ಜೀವನ ಮತ್ತು ಇತರ ಘಟನೆಗಳನ್ನು ಜೋಡನೆಗೊಳಿಸಬಲ್ಲ ಬೇರೆ ವಿಚಾರಗಳನ್ನೂ ಮಾರ್ಕ್ಸ್ ಹೇಳಿದ್ದಾನೆ"

"ನೀವು ಸೆರೆಮನೆಗೆ ಹೋದ ಮೇಲೆ ಆರ್ಥಿಕ ಯೋಜನೆಗಳ ಕುರಿತು ತುಂಬ ಮಾತಾಗಿದೆ ದೇಶದಲ್ಲೀಗ ತುಂಬಾ ಯೋಜನೆಗಳ ಮಾತುಕತೆಗಳೂ ಇವೆ ಕೆಲ ಜನರು ಸಂದೇಹಪಡುತ್ತಾರೆ, ನೀವೇ ಈ ಯೋಜನೆ ಹಾಡಿದ್ದೀರೆಂದು ಈ ಆರ್ಥಿಕ ಯೋಜನೆ ಕುರಿತು ನಿಮ್ಮ ಅಭಿಪ್ರಾಯವೇನು?

ನೆಹರು—'ಯಾವುದೇ ಯೋಜನೆಯಿಲ್ಲದೆ ಯಾವ ಪ್ರಯೋಜನಕಾರೀ ಕೆಲಸವೂ ಆಗುವುದಿಲ್ಲ ಆದರೆ ಅದು ಇಂದಿನ ಅವಸ್ಥೆಯಲ್ಲಿ ಸಾಧ್ಯವೆ? ಆದರೆ ಪ್ರತಿಯೊಂದು ಹೆಜ್ಜೆಗೂ ಸ್ವಾರ್ಥೀ ಜನರು ಆತಂಕ ತರುತ್ತಾರೆ, ನಮ್ಮ ಯೋಜನೆ ಹಾಳ ಮಾಡ ನೋಡುತ್ತಾರೆ, ಹೀಗಾಗಿ ನಮ್ಮ ಶಕ್ತಿ ಉತ್ಸಾಹವೆಲ್ಲ ಪ್ರಯೋಜನವಿಲ್ಲದೆ ಹಾಳಾಗುತ್ತದೆ ನಾವು ಸಂಕುಚಿತ ಸೂತ್ರದಲ್ಲಿ ಸಂಕುಚಿತ ಉದ್ದೇಶದಿಂದ ಒಂದು ಯೋಜನೆ ಮಾಡಬಹುದೆ? ನಾವು ಕೆಲ ಸಮಯ ಹಾಗೆ ಮಾಡಬಹುದು ಆದರೆ ಕೂಡಲೆ ನಮಗೆ ಹೊಸ ಸಮಸ್ಯೆ ಬಂದು ನಮ್ಮ ಯೋಜನೆ ಹಾಳಾಗುತ್ತದೆ ಜೀವನವೆಂಬುದು ಒಂದು ವಿಶಾಲ ಕ್ಷೇತ್ರ, ಅದನ್ನು ಸಂಕುಚಿತ

(೬ನೇ ಪುಟಕ್ಕೆ ಮುಂದುವರಿದಿದೆ)

"Each of us, best as well as the worst, hides within him something, some feeling, some remembrance, which if were known, would make you hate him."

—Goethe

ಕತೆಯೊಳಗಣ ಕತೆ

ಲೇಖಕ: ರತ್ನಾಕರ

ನಾನು ಬರೆಯುತ್ತಿದ್ದೆ—ಎಂದರೆ ಬರೆಯುವುದೊಂದೇ ನನಗೆ ಕೆಲಸವೆಂದು ನೀವು ಭಾವಿಸಬಹುದು. ಹೌದು, ನಿಮ್ಮ ಭಾವನೆ ಸರಿಯೇ—ದಿನದ ೨೪ ತಾಸುಗಳಲ್ಲಿ ನಾನು ನನ್ನ ಶರೀರದ ಸುಖಕ್ಕಾಗಿ ವೆಚ್ಚಮಾಡುವ ಸಮಯ, ಹೆಚ್ಚೆಂದರೆ ೭ ತಾಸು—ಉಳಿದ ೧೭ ತಾಸುಗಳಲ್ಲಿ ಒಂದೆರಡು ತಾಸು ಮಾತ್ರ ಮಾತು ಸುರಿಸುವುದರಲ್ಲಿ ವಿನಿಯೋಗವಾಗುತ್ತದೆ. ಹೀಗಾಗಿ ದಿನದ ಹೆಚ್ಚಿನ ಭಾಗವನ್ನು ನಾನು ಬರೆಯುವುದರಲ್ಲೇ ಕಳೆಯುತ್ತೇನೆ—ಆಫೀಸಿನ ಕೆಲಸ ತಪ್ಪಿದರೆ, 'ತಪ್ಪಲಾರದ ಕೆಲಸವೇನಾದರೂ ಇದ್ದೇ ಇರುವುದು; ಅದೂ ಇಲ್ಲದಿದ್ದರೆ ಕಲ್ಪನಾ ತರಂಗಗಳಿಗೇನು ಕಡಿಮೆ! ಅಂತೂ ಬರೆಯುತಿದ್ದೆ, ಗಾಳಿಯು ಸುಖವಾಗಿ ಬೀಸುತಿತ್ತೆನ್ನುವುದಕ್ಕಿಂತಲೂ ಬೀಸುವ ಗಾಳಿಗೆ ಅನುಕೂಲವಾಗುವಂತೆ ನಾನು ಮೈಯೊಡ್ಡಿ ಕೆಲಸ ಸಾಗಿಸುತ್ತಿದ್ದೆ ಎಂದರೆ ಎಷ್ಟೋ ನಿಜ! ಆಗ ಸುತ್ತಲೂ ಸದ್ದಿಲ್ಲ—ಮುಂಜಾನೆ ದಾಟಿ ನಸುಬೆಳಗು ಬಿಸಿ ಬಿಸಿಲಾಗುತಿತ್ತು;

ತಲೆಗೆ ಬಂದ ವಿಚಾರಗಳನ್ನು ಎಡೆಬಿಡದೆ ವೇಗವಾಗಿ ಬರೆಯುತ್ತಿದ್ದುದರಿಂದ ಬಹಳ ಹೊತ್ತಿನ ವರೆಗೂ ಅವಳ ಇರವು ನನಗೆ ತಿಳಿಯಲಿಲ್ಲ. ಅವಳು ಸದ್ದಿಲ್ಲದೆ ಕೋಣೆಯನ್ನು ಪ್ರವೇಶಿಸಿದುದು ನನಗೆ ಗೊತ್ತಾದುದು ನೆಲಕ್ಕೆ ಕಾಲನ್ನು ಕೆದರಿ ಮಾಡಿದ ಸದ್ದಿನಿಂದ.

'ನಾನು ಬಂದು ಅರೆತಾಸು ಆಗಲೇ ಕಳೆದುಹೋಯಿತು! ನಿಮ್ಮರರಾಗಿ ಏನೂ ತಿಳಿಯದವರಂತೆ ವರ್ತಿಸುತ್ತಿರಾ?'

ಅವಳ ಸ್ವರ! ಅದೇನು—ಈದಿನ ಅದು ಗುಡುಗಿನ ಶಬ್ದದಂತೆ ಕೇಳಿಸುತ್ತದೆ! ನನ್ನ ಕಿವಿಗಳು ಕೆಟ್ಟುಹೋಗಿವೆಯೇ?

'ಕೇಳಿಸುವುದಿಲ್ಲವೇ ನಿಮಗೆ?'

'ಕೇಳಿಸುತ್ತಿದೆ ಮಾರಾಯಿತಿ—ಸ್ವಲ್ಪ ಮೆಲ್ಲಗೆ ಮಾತಾಡುವಿಯಾ?'

'ಇಷ್ಟು ದಿನಗಳ ವರೆಗೂ ಇಸಿದಾದ ಸ್ವರ, ಕೋಗಿಲೆಯ ಕಂಠವೆಂದು ಹೇಳಿಕೊಳ್ಳುತಿದ್ದವರಿಗೆ ಇಂದೇನು ಬದಲಾವಣೆಯಾಯಿತು? ನನ್ನ ಸ್ವರವು ಕರ್ಕಶವಾಯಿತೇ? ಗುಡುಗಿನಂತೆ ಗರ್ಜನೆಯಾಯಿತೇ?'

ಏನು ಪ್ರಮಾದ! ಇಂಪಾಗಿ ಕೇಳುತ್ತಿದ್ದ ಅವಳ ಸ್ವರವಿಂದು ನನಗೆ ಕರ್ಕಶವಾಗಿ ಕೇಳಿಸುವುದೇಕೆ!

'ಏನು ಪಿಳಿ ಪಿಳಿ ಕಣ್ಣುಬಿಟ್ಟು ಬಾಯಿ ತೆರೆದು ನೋಡುತ್ತೀರಿ, ನನ್ನನ್ನು? ಬಣ್ಣ ಬಳಿದುಕೊಂಡು ಬಂದಿದ್ದೇನೆಯೇ? ಸಾಕು—ಮಿತಿಮೀರಿತು ನಿಮ್ಮ ಸಲಿಗೆ!'

'ಏನೂ ಅರ್ಥವಾಗುವುದಿಲ್ಲವಲ್ಲ!'

'ಅರ್ಥವು ಹೇಗಾದೀತು ಅನರ್ಥ ಮಾಡಿದವರಿಗೆ! ಇದನ್ನು ನೀವಲ್ಲವೇ ಬರೆದುದು?' ಎಂದು ಆಗಲೇ ಪ್ರಕಟವಾಗಿದ್ದ ನನ್ನ ಕತೆಯನ್ನು ತೋರಿಸುತಾ ಹೇಳಿದಳು.

'ನಾನು ಬರೆದಹಾಗೆ ನೆನಪು'

'ನೆನಪಂತೆ—ನೆನಪು! ನೀವೇ ಅಲ್ಲವೆ ಇದನ್ನು ಬರೆದುದು—ನಿಜಹೇಳಿ!'

'ಹೌದು, ಹೌದು! ಆದರೆ ಇಷ್ಟೆಲ್ಲ ಏಕೆ?'

'ನಾನು ಕೇಳುವುದೂ ಆ ಪ್ರಶ್ನೆಯನ್ನೇ! ನೀವಾ ಕತೆಯನ್ನೇಕೆ ಬರೆದಿರಿ?'

'ಮನಸ್ಸಿನಲ್ಲಿ ಮೂಡಿದ ಆ ಕತೆಯು ಬೆಳಕಿಗೆ ಬಂದರೆ ಚಲೋದಾದೀತೆಂತ ನೆನಸಿದೆ!'

'ಮನಸ್ಸಿನಲ್ಲಿ ಮೂಡಿದುದೆಲ್ಲ ಬೆಳಕಿಗೆ ಬಂದರೆ ಕೆನ್ನೆಗೆ ಬೀಳುವುದೆಂದು ಗೊತ್ತಿಲ್ಲವೇ ನಿಮಗೆ?'

'ಕೆನ್ನೆಗೆ ಬೀಳುವ ಏಟುಗಳ ತೀಕ್ಷ್ಣತೆಯು ಅವುಗಳನ್ನು ಕೊಡುವ ಕೈಗಳ ಮೇಲೆ ಹೊಂದಿರುತ್ತದೆ. ನಿನ್ನ ಕೈ....'

'—ನಿಲ್ಲಿಸಿರಿ, ನಿಮ್ಮ ಮಾತನ್ನು, ನೀವೇಕೆ ಆ ಕತೆಯನ್ನು ನಾನು ಹೇಳಿದ ಕತೆಯೆಂದು ಬರೆದಿದ್ದೀರಿ?'

'ನೀನು ಹೇಳಲಿಲ್ಲವೇ ಆ ಕತೆಯನ್ನು?'

'ಇಲ್ಲ ನಾನಾರಿಗೂ ಹೇಳಿಲ್ಲ!'

'ಹಾಗಾದರೆ ನೀನು ಅದನ್ನು ಹೇಳಲಿಕ್ಕಿದ್ದಿಯೆಂದು ತಿಳಿದು ನಿನ್ನನ್ನು ಬೆರಗುಗೊಳಿಸಲೋಸುಗ ನಾನು ಮುಂಚಿತವಾಗಿಯೇ ಪ್ರಕಟಿಸಿದ್ದೆ — ಬೆರಗುಹೊಂದಿದೆಯಾ?'

'ನಾನು ಹೇಳಿದ ಕತೆಯೆಂದು ನಿಮಗೆ ಬೇಕಾದ ಹಾಗೆ ತಿರುಗು ಮುರುಗು ಬರೆದು ನನ್ನ ತಲೆ ತಿರುಗು ಮುರುಗು ಮಾಡುವಿರೆಂದು ಭಾವಿಸಿದಿರಾ? ಆದರೆ ನೀವೆಣಿಸಿದುದು ತಪ್ಪಾಯಿತು. ಎಡೆಕೊಟ್ಟರೆ ಕೊಡೆಬಿಚ್ಚುವ ನಿಮ್ಮಂತಹ ತರುಣರಿಗೆ ತಕ್ಕ ಪ್ರತಿಕಾರ ಮಾಡದಿದ್ದರೆ...'

'ಎಷ್ಟು ಮಂದಿ ಇದ್ದಾರೆ ಈ ಗೊಂದಲದಲ್ಲಿ?'

'ನೀವೊಬ್ಬರೇ ನಿಮ್ಮ ಆಫೀಸಿಗೆ ಬರೆದ ಹಾಗೆ ನಾನು ಮುಖ್ಯೋಪಾಧ್ಯಾಯನಿಗೆ ತಿಳಿಸುತ್ತೇನೆ—ಹೆಮ್ಮಕ್ಕಳ (ಹೆಣ್ಣು ಮಕ್ಕಳ) ಸಾಲೆಗೆ ಹೆಮ್ಮಕ್ಕಳು (ಹಿರಿದು ಮಕ್ಕಳು) ಕಾಲಿಟ್ಟರೆ ಕೂಡಲೇ ಕಾಲು ಮುರಿದು ಹಾಕಬೇಕೆಂತ ಈಗ ನನಗೆ ತಿಳಿಯಿತು!'

'ನಾನಂತೂ ತರುಣನೆಂಬುದನ್ನು ನೀನೊಪ್ಪುತ್ತೀ! ತರುಣ ಹೃದಯವು ಯಾವಾಗಲೂ ಪ್ರಣಯವನ್ನರಸುತ್ತಿದೆ—ಚಿಕ್ಕ ಮಕ್ಕಳನ್ನು ಯಾರಾದರೂ ಆಡಿಸಲಿಕ್ಕೆ ಬೇಕಾಗುವಂತೆ ಪ್ರಣಯೋನ್ಮುಖ ತರುಣ ಹೃದಯವೂ ಯಾರನ್ನಾದರೂ ಜೊತೆಯಲ್ಲಿ ಆಡಲಿಕ್ಕೆ ಹುಡುಕುತ್ತಿರುತ್ತದೆಂದು ಯಾರೋ ಹೇಳಿದ್ದರು. ನಿನ್ನನ್ನು ಕಂಡಾಗ ಜೀವನದ ಜೊತೆಗಾತಿಯನ್ನು ಕಂಡಂತಾಯಿತು!'

'ಓದಿ ಓದಿ ನಿಮ್ಮ ತಲೆಕೆದರಿಕೊಂಡಿದ್ದೀರಿ—ಇನ್ನು ಮರುಳಾಗದಿದ್ದರೆ ಸಾಕು—ಬೇಕೆಂತಲೇ ನಾನು ಹೇಳಿದ ಕತೆಯೆಂದು ನಿಮ್ಮ ಪ್ರೇಯಸಿಯಿಂದ ಹೇಳಿಸಿದುದರಿಂದ ನನಗೀಗ ಸಾಲೆಗೆ ಹೋಗದ ಹಾಗಾಗಿದೆ—ನನ್ನ ಜೊತೆಗಾತಿಯರೆಲ್ಲ ಸಂದೇಹದ ದೃಷ್ಟಿ ಸುಳಿಸುತ್ತಿದ್ದಾರೆ—ನಾನು ನೆಮ್ಮದಿಯಿಂದ ಕೆಲಸಮಾಡಲು ಬರುವುದಿಲ್ಲ—ಈ ಎಲ್ಲಾ ಸಂಕಷ್ಟಗಳನ್ನು ತಪ್ಪಿಸಲು ಇರುವುದೊಂದೇ ಉಪಾಯ—ಇದ್ದ ವಿಷಯವನ್ನೆಲ್ಲ ಮುಖ್ಯೋಪಾಧ್ಯಾಯನೊಡನೆ ಹೇಳದೆ ನಿರ್ವಾಹವಿಲ್ಲ'

'ಎಂದರೆ—ನೀನು ನನ್ನನ್ನು ಪ್ರೇಮಿಸುವುದಿಲ್ಲವೇ?'

'ಏನು, ಪ್ರೇಮಿಸುವುದೇ? ಯಾರು ಇದನ್ನು ನಿಮ್ಮ ತಲೆಯಲ್ಲಿ ಹಾಕಿದವರು? ಕೊಂಚ ತಿಳಿದವರೆಂದು ನಿಮ್ಮಲ್ಲಿ ಆದರವನ್ನು ತೋರಿಸಿದರೆ ಅದು ಪ್ರೇಮವಾಯಿತೇ? ಛೀ, ಛೀ!'

'ಖಾಂಡೇಕರರು ಸ್ತ್ರೀಯರ ಮನವೆಂದರೆ ವಿಲಕ್ಷಣವಾದ ಕಸುವುಳ್ಳ ಭೂಮಿಯೆಂದೂ ಆದರವು ಅದರಲ್ಲಿ ಒಮ್ಮೆ ಬೇರು ಬಿಟ್ಟಿತೆಂದರೆ ಅಲ್ಪಾವಧಿಯಲ್ಲಿಯೇ ಅದಕ್ಕೆ ಪ್ರೇಮದ ಹಣ್ಣುಗಳು ಆಗಿ ಬಿಡುವವೆಂದೂ' ಹೇಳಿದುದು ಸುಳ್ಳೇ? ನಮ್ಮ ಗೆಳೆತನವಾಗಿ ಬಹು ಸಮಯವಾದರೂ ಇನ್ನೂ ಪ್ರೇಮದ ಹಣ್ಣುಗಳಾಗಿಲ್ಲವೇ?'

'ಪ್ರೇಮದ ಹಣ್ಣುಗಳಾಗುವುವೆಲ್ಲಿಂದ ಆಗಿದ್ದರೆ, ಕಾಸರಕನ ಹಣ್ಣುಗಳು ನಿಮಗೆ ತಿನಿಸದೆ ಬಿಡಲಿಕ್ಕಿಲ್ಲ! ಮತ್ತು ಆ ನಿಮ್ಮ ಖಾಂಡೇಕರರು ನಿಮ್ಮ ಹಾಗೆ ಗಂಡಸರಲ್ಲವೇ? ಗಂಡಸರಿಗೆ ಪ್ರೇಮವೆಂದರೆ ಏನೋ ಒಂದು ಬಿಡಿಸಲಾರದ ಮರುಳು—ನಾವು ಮಾತ್ರ ಅದರ ಬೆಲೆಯನ್ನು ಯಥಾಯೋಗ್ಯ ತಿಳಿದುಕೊಳ್ಳುತ್ತೇವೆ!'

'ಹೋಗಲಿ—ನಿನ್ನ ಜಾತಿಯವಳೇ ಆದ Jane Austenಳೂ 'A lady's imagination is very rapid; it jumps from admiration to love, from love to matirmony in a moment,' ಎಂದು ಹೇಳಿರುತ್ತಾಳಲ್ಲಾ? ಅದಕ್ಕೇನು ಹೇಳುವಿ?'

'ನಾನಾವುದಕ್ಕೂ ಏನನ್ನೂ ಹೇಳುವುದಿಲ್ಲ—ನನಗಿಷ್ಟೇ ಬೇಕಾದುದು—ನಿಮ್ಮ ಪ್ರೇಮದ ಮರುಳಿಗೆ ಸ್ವಲ್ಪ ಮರಳು (ಉಸುಬು) ಸುರಿಯಿರಿ—ನಿಮ್ಮನ್ನು ಪ್ರೇಮಿಸುವ ಬದಲು ದ್ವೇಷಿಸುತ್ತೇನೆ!'

'ತನ್ನನ್ನು ದ್ವೇಷಿಸುತ್ತಿರುವವರನ್ನು ಪ್ರೀತಿಸೆಂದು ಒಬ್ಬ ಮಹಾತ್ಮನೇ ಬೋಧಿಸಿಲ್ಲವೇ'

'ತನ್ನನ್ನು ದ್ವೇಷಿಸುತ್ತಿರುವವರನ್ನು ಪ್ರೀತಿಸಬಹುದು, ಆದರೆ ನಾನು ದ್ವೇಷಿಸುವವರನ್ನು ಪ್ರೀತಿಸುವುದು ಸಾಧ್ಯವೇ? ಹೇಳಿ!'

'ಎಂದರೆ—ನೀನು ನನ್ನನ್ನು ನಿಜವಾಗಿಯೂ—'

'ಇಲ್ಲ, ಇಲ್ಲ, ಇಲ್ಲಾಂದ್ರೆ! ಎಷ್ಟು ಸಲ ಹೇಳುವುದು? ಒಮ್ಮೆ ಹೇಳಿದರೆ ಸಾಲದೇ' ಎಂದು ಹುಬ್ಬು ಗಂಟಿಕ್ಕಿ ಕಣ್ಣಿನಿಂದ ನೋಡುತ್ತಾ ಗುಡುಗುಡಿಸಿದಳು.

ನನಗೆ ಆ ಮಾತು ಕೇಳಿ ಕಣ್ಣು ಕತ್ತಲೆ ಬಂದಂತಾಯಿತು. ಯಾವುದೋ ಸನ್ನಿವೇಶದಲ್ಲಿ ನಮ್ಮಿಬ್ಬರಲ್ಲಿ ಗೆಳೆತನವಾಗಿತ್ತು. ಅವಳದು ನಿರ್ಮಲವಾದ ಹಾಗೂ ಸರಳವಾದ ಒಡನಾಟ. ಈ ಒಡನಾಟದಿಂದಲೂ ಅವಳ ಆಶೆ ಆಕಾಂಕ್ಷೆಗಳ ರಸಿಕತೆಯಿಂದಲೂ ನಾನು ಅವಳನ್ನು ಪೂರ್ಣ ಮುಟ್ಟಿ ಪ್ರೀತಿಸುತಿದ್ದೆ — ಅವಳ ಅನುರಾಗವೂ ನನ್ನಲ್ಲೇ ಇತ್ತೆಂದು ನಾನು ತರ್ಕಿಸಿದ್ದೆ—ಆದರೆ ಏನು ಸರ್ವನಾಶ ಅವಳ ಅನುರಾಗವು ನನ್ನಲ್ಲಿ ಇಲ್ಲವೇ ಇಲ್ಲವೆಂದು ಕಟುವಾಗಿ ಹೇಳಿದಲ್ಲಾ! ಇಷ್ಟು ಭಯಂಕರವಾಗುತ್ತಿತ್ತೆಂದು ನಾನು ಕನಸ್ಸಿನಲ್ಲಿಯೂ ನೆನಸಿರಲಿಲ್ಲ!

ನನಗೆ ಕನಸು ಬೀಳುವುದೇ ಅಪರೂಪ. ನಿದ್ದೆ ಹೋಗುವಾಗಲೇ ಅಪರಾತ್ರಿಯಾಗುತ್ತಿದ್ದುದರಿಂದ ಸುಲಭವಾಗಿ ನಿದ್ದೆ ಬರುತಿತ್ತು ಕನಸ್ಸಿಲ್ಲದೆ. ಇದ್ದರೂ ಮಾಸಕ್ಕೊಂದೆರಡು ಮಾತ್ರ. ಆದರೆ ನಿನ್ನೆ ನಿದ್ದೆ ಬೀಳುವಾಗ ಸುಂದರ ಕನಸ್ಸೊಂದನ್ನು ಕಂಡಿದ್ದೆ—ಫ್ರಾನ್ಸ್ ದೇಶದ ಮಹಾರಾಣಿ ಮಾರ್ಗರೇಟಳು ಆ ಕಾಲದ ಪ್ರಸಿದ್ಧ ಕವಿಯಾದ ಎಲನ್ ಚಾರ್ಟರನ್ನು ಚುಂಬಿಸಿದ ದೃಶ್ಯವನ್ನು! ಓದುತಿದ್ದೆ ಅದೇ ವಿಷಯವನ್ನು! ನಿದ್ದೆ ಬಂದಾಗಲೂ ಅದೇ ಕನಸ್ಸಿನಲ್ಲಿ ತೋರಿತು. ಆ ಚುಂಬನವು ಜಗತ್ತಿನ ಅತಿ ಮುದ್ದಾದ ಚುಂಬನವಂತೆ! ರಾಜಸ್ಥಾನದಲ್ಲಿ ತೂಕಡಿಸುತಿದ್ದ ಆ ಕವಿಯನ್ನು ಕಂಡು ರಾಣಿಯು ಯಾರೂ ಇಲ್ಲದ ವೇಳೆ ಚುಂಬಿಸುತ್ತಾಳೆ! ಅವಳ ಸಖಿಯರು ಗಾಬರಿಯಾಗಿ ಆ ಆ ಕುರೂಪಿಯನ್ನೇಕೆ (ಕವಿಯು ಕುರೂಪಿಯಾಗಿದ್ದನು ನಿಜ.) ಚುಂಬಿಸಿದಳೆಂದು ಕೇಳಲು ರಾಣಿಯು 'ನಾನು ಕೊಟ್ಟ

(೭ನೇ ಪುಟಕ್ಕೆ ಮುಂದುವರಿದಿದೆ)

For all sporting materials

SOUTH KANARA

SPORTS HOUSE

Shifted to the Premises of

SOANS, PHOTO

ELECTRIC STUDIO

Light House Hill Road

MANGALORE S. K.

ಸಮರ ಭೂಮಿಯ ಸಂಚಾರ

ಭಾರತದ ಗಡಿಯಲ್ಲಿ ಯುದ್ಧ ನಡೆದೇ ಇದೆ. ಬರ್ಮಾ ರಂಗ, ಅರಕಾನ ರಂಗ ಅಸಾಮ್ ರಂಗವೆಂದು ಈ ತಿಕ್ಕಾಟ ಆಗುತ್ತಿರುವುದು ಇಂಫಾಲಿನಲ್ಲಿ ಕೊಹೀಮಾದಲ್ಲಿ, ಯುಕರೂಲ್ ರಸ್ತೆಯಲ್ಲಿ ಭೀಷಣ ಪುರದಲ್ಲಿ ಹೀಗೆ ಬೇರೆ ಬೇರೆ ಕಡೆಗಳಲ್ಲಿ ಹೋರಾಟವುಂಟು.

ಬರ್ಮಾ ರಂಗದಲ್ಲಿ ಮಿತ್ರರು ಸಾಹಸದಿಂದ ಧಾಳಿ ಮಾಡುತ್ತಿರುವರು. ಅರಕಾನ್ ಕಲಾದನ್, ಮಾಯೂ ಮತ್ತು ಉತ್ತರ ಹಾಗೂ ವಾಯುವ್ಯ ಬರ್ಮಾದಲ್ಲಿ ಶೋಣಿ ಸೇತುವೆಗಳ ಮೇಲೆ ಬಾಂಬು ಹಾಕಲಾಗಿದೆ.

ಭೀಷಣ ಪುರದ ಮೇಲ್ಗಡೆ ಒಂದು ಗುಡ್ಡದಲ್ಲಿ ಗಳನೇ ಜಪಾನ್ ಸೇನೆ ಹೋರಾಡುವ ಒಂದು ಸ್ಮಾರಕವಿದೆ. ಈ ಸ್ಮಾರಕದಲ್ಲಿ ಒಂದು ರಸ್ತೆ ಭೀಷಣ ಪುರದಿಂದ ಲಕ್ಷ್ಮೀಪುರಕ್ಕೆ ಹೋಗುತ್ತದೆ. ಇದು ೧೦೦ ಮೈಲು ವಿಸ್ತೀರ್ಣವುಂಟು ಮಣಿಪುರ ರಸ್ತೆ ತಯಾರಾಗುವ ಮೊದಲು ಶಿಲಾಪುರ ರಸ್ತೆಯೊಂದ್ರೇ ಮಣಿಪುರ ಭಾರತಗಳನ್ನು ಸಂಧಿಸುತ್ತಿತ್ತು. ಸೈನ್ಯಗಳು ಇಲ್ಲಿಗೆ ಬಂದ ಮೇಲೆ ಈ ರಸ್ತೆಯನ್ನು ಬಹು ಸಾಹಸದಿಂದ ವಿಸ್ತಾರಗೊಳಿಸಲಾಗಿವೆ.

ಒಡೆಸಾ ಸಿಕ್ಕಿತು.

. ಕಪ್ಪು ಕಡಲ ತೀರದಲ್ಲಿರುವ ಒಡೆಸಾ ಬಂದರವು ರಶ್ಯನರಿಗೆ ಸಿಕ್ಕಿದೆ, ಕಳೆದ ೩೦ ತಿಂಗಳಿಂದ ಅದು ಜರ್ಮನರ ವಶವಿತ್ತು. ೧೯೪೧ರಲ್ಲಿ ಜರ್ಮನರು ಒಡೆಸಾವನ್ನು ಮುತ್ತಿದಾಗ ರಶ್ಯನರು ೬೭ ದಿನಗಳ ಘೋರ ಕಾಳಗ ಹೂಡಿ ಬಿಟ್ಟು ಬಿಡಬೇಕಾಗಿತ್ತು. ಈಗ ಒಡೆಸಾ ರಶ್ಯನರ ವಶ ಬಂದದ್ದರಿಂದ ಕಪ್ಪು ಕಡಲಿನಹತೋಟಿ ಅವರ ಕೈಗೆ ಬಂದಂತಾಗಿದೆ.

ಇಲ್ಲಿರುವ ಅವರ ಬಲವನ್ನು ಇನ್ನು ಮುಂದೆ ರುಮೇನಿಯಾ ಮುಕ್ತಿಗೆಗಾಗಿ ಉಪಯೋಗಿಸಬಹುದು. ಡಾನ್ಯೂಬ್ ನದಿ ಮುಖದಿಂದ ಒಡೆಸಾ ಕೇವಲ ೮ ಮೈಲು ದೂರದಲ್ಲಿದೆ. ರುಮೇನಿಯಾ ಕೈ ಬಿಟ್ಟು ಹೋದರೆ ಜರ್ಮನರಿಗೆ ಎಣ್ಣೆ ಇಲ್ಲದಂತಾಗುವುದು. ಬಾಲ್ಕನಿನಲ್ಲಿ ನಾಜಿಗಳಿಗೆ ಬಹುತೊಂದರೆಯುಂಟಾದೀತು

ಕ್ರಿಮಿಯಕ್ಕೆ ರಶ್ಯನರು ಮುತ್ತಿಗೆ ಹಾಕಿದ್ದು ಮತ್ತೊಂದು ವಿಶೇಷದ ಘಟನೆ. ದಕ್ಷಿಣ ರಶ್ಯದಲ್ಲಿ ತಮಗೆ ಸೋಲಾಗುತಿದ್ದರೂ, ಕಪ್ಪು ಕಡಲ ಮೇಲೆ ತಮ್ಮ ಹತೋಟಿ ಇಟ್ಟು ಕೊಳ್ಳಲು ಬಹಳ ಹೋರಾಡುತಿದ್ದರು ಹಾಗಾಗಿ ಕ್ರಿಮಿಯದಲ್ಲಿ ಭದ್ರವಾಗಿ ಬೇರೂರಿದ್ದರು. ಒಡೆಸಾ ಕೈವಶ ಬಂದ ಮೂರನೇ ದಿನವೇ ರಶ್ಯನ್ ಸೇನೆ ಕ್ರಿಮಿಯ ಮುತ್ತಿಗೆ ಹಾಕಿದೆ ಅಲ್ಲಿರುವ ಮುಖ್ಯ ನೌಕಾನುಕೂಲವಾದ ಸೆಬಾಸ್ತ ಪೋಲಲ್ಲಿ ಘೋರ ಕಾಳಗ ನಡೆದಿದೆ. ರಶ್ಯನರು ಸೆಬಾಸ್ತ್ರಪೋಲನ್ನು ಭೇಧಿಸಿ ಒಳ ಹೊಕ್ಕಿರುವರೆಂದು ಸುದ್ದಿಯಿರುವುದು.

ಸ್ಟಾಲಿನ್‌ಸ್ಲಾವ್ ಭಾಗದಲ್ಲಿ ಮಾರ್ಶಲ್ ಜುಕೋವನವ್ಯೂಹ ಭೇದಿಸಲು ಜರ್ಮನ್ ಸೈನಿಕರು ಅಲೆಗಳಂತೆ ಬಂದರು. ರಷ್ಯನರ ಅಪ್ರತಿಮ ಪರಾಕ್ರಮದಿಂದ ಇದಿರಿಸುತ್ತಿದ್ದಾರೆ.

ಪುನಃ ಹಿಟ್ಲರ್ ಮುಸಲನಿ

ಪುನಃ ಹಿಟ್ಲರ್ ಮುಸಲನಿಗಳ ಭೇಟಿಯ ಸುದ್ದಿ ಬಂದಿದೆ. ಕಳೆದ ಶನಿವಾರ ಅವರು ಭೇಟಿಯಾದರೆಂದು ಜರ್ಮನ್ ಸುದ್ದಿ ಸಂಸ್ಥೆ ಸಾರಿದೆ. ಇಟಲಿ ಜರ್ಮನಿಗಳಿಗನ್ವಯಿಸುವ ರಾಜಕೀಯ ಆರ್ಥಿಕ ಮತ್ತು ಸೈನಿಕ ಸಮಸ್ಯೆಗಳನ್ನು ಇವರು ಹಿಂದಿನ ಸ್ನೇಹಸೌಹಾರ್ದ ಭಾವದಿಂದಲೇ ಚರ್ಚಿಸಿದರೆಂದೂ ಅದರಲ್ಲಿ ಹೇಳಲಾಗಿದೆ.

ತ್ರಿರಾಷ್ಟ್ರ ಒಪ್ಪಂದ ಮಾಡಿಕೊಂಡಿರುವ ತಾವು (ಇಟಲಿ, ಜರ್ಮನಿ, ಜಪಾನ್) ಭುಜಕ್ಕೆ ಭುಜಕೊಟ್ಟು ನಿಲ್ಲುವೆಂತ, ಇಟಲಿಯ ರಿಪಬ್ಲಿಕನ್ ಸರಕಾರ ನಿರ್ಧರಿಸಿದೆಯೆಂದು ಮುಸಲ್ಲನಿ ಹಿಟ್ಲರನಿಗೆ ತಿಳಿಸಿದನಂತೆ ಈ ನಿರ್ಧಾರದಿಂದ ಹಿಟ್ಲರನಿಗೆ ಸಂತೋಷವಾಗಿದೆಯಂತೆ, ಆಗಲೇಬೇಕು. ಹೀಗಾಗಿ ಮುಸಲನಿ ಸರಕಾರಕ್ಕೆ—ರಿಪಬ್ಲಿಕನ್ ಸರಕಾರಕ್ಕೆ— ಸಂಪೂರ್ಣ ಬೆಂಬಲ ಕೊಡುವುದಾಗಿ ಹಿಟ್ಲರ್ ಹೇಳಿದ್ದಾನಂತೆ ಪೂರ್ವ ಪಶ್ಚಿಮಗಳ ಯುದ್ಧದಲ್ಲಿ ಯೂರೋಪಿಗೆ ನ್ಯಾಯ ದೊರಕಿಸಿ ಕೊಡಲು ತ್ರಿರಾಷ್ಟ್ರಗಳು ನಿರ್ಧಾರ ಮಾಡಿರುವುದಾಗಿ ಹಿಟ್ಲರ್, ಘೋಷಣೆ ಹೊರಡಿಸಿದ್ದಾನೆ. ಈ ಉದ್ದೇಶದ ಕುರಿತೂ, ಯುದ್ಧಾನಂತರದ ಉದ್ದೇಶಗಳ ಕುರಿತೂ ಎಲ್ಲಾ ಪ್ರಯತ್ನ ಮಾಡಲಾಗುವುವೆಂದೂ ಅದರಲ್ಲಿ ಸ್ಪಷ್ಟಪಡಿಸಿರುವನು.

ಫೇಸಿಸ್ಟ್ ಮುಖಂಡರೊಡನೆ ಮಾತುಕತೆ ನಡೆಸಲು ಮುಸಲನಿಯು ಬಂದಾಗ ವೆರೋನಾ ನಗರದ ಬಳಿ ಅವನ ಮೋಟರ್ ಕಾರಿನ ಮೇಲೆ ಯಾರೋ ಬಾಂಬೊಂದನ್ನು ಎಸೆದರೆಂದು ವರದಿ ಬಂದಿದೆ. ಬಾಂಬು ಸ್ವಲ್ಪ ದೂರ ಬಿದ್ದುದರಿಂದ ಯಾರಿಗೂ ಹಾನಿಯಾಗಲಿಲ್ಲವಂತೆ. ಅಂತೂ ಮುಸಲನಿ ಇಟಲಿ ಬಿಟ್ಟು ಹೋದದ್ದೇ ಅವನ ಸ್ಥಾನ, ಜನಪ್ರಿಯತೆ ಹೋಗಿದೆ ಈಗ ಎಷ್ಟಾದರೂ ಆತ ಹಿಟ್ಲರನ ಕೈಗೊಂಬೆ. ಕೈಗೊಂಬೆ ಆಟಗಾರ ಕುಣಿಸಿದಂತೆ ಕುಣಿಯಲೇ ಬೇಕು.

ಮಾಯಾ ಯುದ್ಧವೆ?

ಕೇಸಿನೋ ರಣರಂಗದ ಯುದ್ಧಕ್ಕೆ ಹೊಸ ಕಳೆ ಬಂದಿದೆ; ಅಲ್ಲಿನ ಯುದ್ಧ ರೀತಿಯೂ ಹೊಸ ತರದ್ದಾಗಿದೆಯೆಂದು ಕೇಳಿ ಬರುತ್ತದೆ ಇಲ್ಲಿ ಯುದ್ಧ ನಡೆಯುತ್ತಿದ್ದರೂ, ಸೈನಿಕರು ಕಾಣಿಸುವುದಿಲ್ಲವೆಂದು ಸುದ್ದಿಯುಂಟು ಇದು ಪುರಾಣ ಕಾಲದ ಮಾಯಾ ಯುದ್ಧಗಳನ್ನು ನೆನಪಿಗೆ ತರುವುದು. ಮಾಯಾ ಯುದ್ಧದಲ್ಲಿ ರಕ್ಕಸರು ನಿಪುಣರು, ಇಂದು ಯುದ್ಧಕ್ಕಿಳಿದವರೂ ಹೆಚ್ಚಾಗಿ ರಕ್ಕಸ ಸ್ವಭಾವದವರೇ.

ಕೇಸಿನೋ ರಣರಂಗದಲ್ಲಿ ಹಿಂದಿನ ಮೂರು ವಾರಗಳಿಂದಲೂ ಭೀಕರ ಪರಿಸ್ಥಿತಿಯೇ ಇದೆ ಕೇಸಿನೋ ನಗರದ ಕಟ್ಟಡಗಳೆಲ್ಲಾ ಬಾಂಬಿನ ಪೆಟ್ಟಿನಿಂದ ಪುಡಿಯಾಗಿವೆಯಾಗಿ ಕೇಳುತ್ತದೆ. ಇಂಥಾ ನಗರದಲ್ಲಿ ಸೈನಿಕರು ನಿಂತು ಹೋರಾಡುತ್ತಾರೆ, ಎಲ್ಲಾ ಅಡಗಿಯೇ ಯುದ್ಧ ಕಣ್ಣಿಗೆ ಕಾಣಿಸದೆ ಹೋರಾಡುವ ಈ ಕಾಳಗವು ಮಾಯಾ ಯುದ್ಧದ ನೆನಪು ತರುತ್ತದೆ.

ಕೇಸಿನೋ ವ್ಯೂಹದ ಹಿಂದೆ ಮಾರ್ಶಲ್ ಕೆಸರ ಲಿಂಗ್ ಸಿದ್ಧನಾಗಿದ್ದಾನೆ. ಗುಸ್ತಾವ್ ಮತ್ತು ಹಿಟ್ಲರ್ ವ್ಯೂಹಗಳ ನಡುವೆ ಒಂದು ಮೂರನೇ ವ್ಯೂಹದ ರಚನೆ ನಡೆದಿದೆ. ಹಿಟ್ಲರ್ ವ್ಯೂಹ ಗುಸ್ತಾವ್ ವ್ಯೂಹಕ್ಕಿಂತ ಭದ್ರವಿರುವುದಾಗಿ ತಿಳಿದಿದೆ ಅಂತೂ ಈ ಕಡೆಯಲ್ಲಿ ಕೆಲ ವಾರಗಳ ತಿಂಗಳು ಲೆಕ್ಕದ ಹೋರಾಟಕ್ಕೂ ಬೇಕಾದ ಸಿದ್ಧತೆ ಇದ್ದೇ ಇದೆ.

ಅಸಾಮ್ ರಂಗದ ಸುದ್ದಿ

ಅಸಾಮ್ ರಣರಂಗಕ್ಕೆ ಇತ್ತೀಚೆಗೆ ನಮ್ಮಗಮನ ಹೆಚ್ಚಾಗಿ ಸೆಳೆದಿದೆ. ಏಕೆಂದರೆ ಇಲ್ಲಿಯೇ ಮೊದಲಾಗಿ ಜಪಾನರು ಭಾರತವನ್ನು ಪ್ರವೇಶಿಸಿದ್ದು; ಮಣಿಪುರ ನುಂಗಿದ್ದು; ಮಣಿಪುರ ನುಂಗಿದ ಬಳಿಕವೂ ಹೋರಾಟ ನಡೆದೇ ಇದೆ ಜಪಾನರು ಎಷ್ಟು ಮುಂದೆ ಬಂದರು, ಎಷ್ಟು ಹಿಂದೆ ಹೋದರೋ ಇತ್ಯಾದಿ ಸ್ಥಿತಿಗತಿಗಳನ್ನು ತಿಳಿಯಲು ಭಾರತೀಯರಿಗೆ ಹೆಚ್ಚಿನ ಕುತೂಹಲವಿರುವುದರಲ್ಲಿ ವಿಶೇಷವೇನೂ ಇಲ್ಲ. ಆದರೆ ಈ ಸುದ್ದಿ ಹೇಗೆ ಸಿಗಬೇಕು.? ಮೊನ್ನೆ ಕಾಮನ್ಸ್ ಸಭೆಯಲ್ಲಿಯೇ ಭಾರತ ಮಂತ್ರಿ ಅಮೆರಿಯೊಡನೆ ಭಾರತದಿಂದ, ಅಸಾಮ್ ರಂಗದಿಂದ ಬರುವ ಸುದ್ದಿ ಕುರಿತು ನಿಯಂತ್ರಣವಾಗುವ ವಿಷಯ ಸೊರೆನ್ಸ್‌ಸೇನ್ ಜಾರ್ಜ್ ಸ್ಟ್ರೇಟ್ ಮೊದಲಾದವರು ಪ್ರಶ್ನೆಗಳ ಸುರಿಮಳೆ ಹಾಕಿದರು.

'ಭಾರತದಿಂದ ಬರುವ ರಾಜಕೀಯ ಸಾಮಾಜಿಕ ಸುದ್ದಿಗಳ ಮೇಲೆ ನಿರ್ಬಂಧ ಕಡಿಮೆ ಮಾಡಲಾರಿರಾ?'' ಎಂದು ಸೊರೆನ್ಸನರು ಕೇಳಿದ್ದರು. 'ಬರ್ಮಾ ರಂಗದಿಂದ ಬರುವ ಸುದ್ದಿಗಳ ಮೇಲೆ ವಿಶೇಷ ನಿರ್ಬಂಧ ಹಾಕಲಾಗಿದೆಯೇ' ಎಂದು ಸ್ಟ್ರೇಟರು ಪ್ರಶ್ನಿಸಿದರು 'ಭಾರತದ ಪತ್ರಿಕೆ ಮತ್ತು ಮಿಲಿಟರಿ ನಿಯಂತ್ರಕರಲ್ಲಿ ಸೌಹಾರ್ದವಿಲ್ಲವೆಂದೂ, ಇದು ಹೊಸ ಪರಿಸ್ಥಿತಿಯೆಂದೂ, ಇದನ್ನು ಪರಿಶೀಲಿಸಲು ಓರ್ವ ಅನುಭವಿಕ ಅಧಿಕಾರಿಯನ್ನು ಭಾರತಕ್ಕೆ ಕಳುಹಿಸಬೇಕೆಂದೂ ಆಸ್ಟೋರರು ನುಡಿದರು 'ಅಸಾಮ್ ರಂಗದ ಬಗ್ಗೆ ಭಾರತ ಸರಕಾರದಿಂದ ಹೊರಡುವ ಪ್ರಕಟಣೆಗಳು ಪರಸ್ಪರ ವಿರೋಧವಿವೆ. ಈ ಸಭೆಗೆ ಸರಿಯಾದ ಸುದ್ದಿ ತಿಳಿಸದಿರುವುದು ಅಮೆರಿಯವರಿಗೆ ಗೊತ್ತಿದೆಯೆ?'' ಎಂದು ಅರ್ಲ್ ವಿಂಟರ್‌ಟನ್ ಕೇಳಿದರು.

ಅಮೆರಿಯವರೇನೋ ಇವೆಲ್ಲ ಕಪ್ಪು ಹಾರಿಸಿ ಉತ್ತರವಿತ್ತಿದ್ದಾರೆ ಆದರೆ ಇಂಥಾ ಹಾರಿಕೆಯ ಉತ್ತರಗಳಿಂದ ಜನತೆಯದು ಬ್ರಿಟಿಷ್ ನಾಗರಿಕರಂತೆ ಭಾರತದ ನಾಗರಿಕರಿಗೂ ಸರಿಯಾದ ಸುದ್ದಿ ಬೇಕು ರೈನಾಲ್ಡ್ ನ್ಯೂಸ್ ಪತ್ರಿಕೆ ತನ್ನೊಂದು ಅಗ್ರಲೇಖದಲ್ಲಿ ಬ್ರಿಟನಿಗೆ ಕಳುಹಿಸುವ ಭಾರತದ ಸುದ್ದಿ ಎಷ್ಟರ ಮಟ್ಟಿಗೆ ಕತ್ತರಿಸಲ್ಪಟ್ಟು ನಿಷ್ಪ್ರಯೋಜಕವಾಗುತ್ತದೆಂದು ವಿವರಿಸುತ್ತಾ ಆದ್ದರಿಂದ ತನ್ನ ಪ್ರತಿನಿಧಿಯನ್ನು ಅಲ್ಲಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತೆಂಬುದನ್ನು ತಿಳಿಸಿ ಸರಕಾರದ ದುಶ್ಚೇಷ್ಟೆಯನ್ನು ಬಯಲಿಗೆಳೆದಿದೆ. ಬಂಗಾಳ ದುರಂತ, ಗಾಂಧೀಜಿ ಉಪವಾಸ ಮೊದಲಾದವುಗಳ ಬಗ್ಗೆ ತುಂಬಾ ಕತ್ತರಿ ಪ್ರಯೋಗಿಸಲ್ಪಟ್ಟಿತೆಂದೂ ಹೀಗೆ ಉಭಯ ದೇಶದ ಜನರನ್ನು ದೂರ ದೂರ ಮಾಡುವುದು ಮಹಾ ಸಾರ್ಥಕವೆಂದೂ ಆ ಪತ್ರಿಕೆ ಘಂಟಾ ಘೋಷ ಸಾರಿದೆ.

ಬ್ರಿಟಿಷ್ ಪತ್ರಿಕೆಗಳ ದೂರು ಹಾಗೆ; ಭಾರತದ ಪತ್ರಿಕೆಗಳ ದೂರು ಹೇಳಿದರೆ ಮುಗಿಯದು

WANTED

Applications are invited from duly qualified candidates belonging to the Muhammadan (Muslim) community for appointment as Lower division clerks under the District Board in leave vacancies. The applicant should possess the qualification prescribed in G O. No. 4448 L & M., dated 29-10-1935 (as subsequently amended) Particulars regarding date of birth, previous experience knowledge of typing etc, should be furnished. The application should be accompanied by a treasury or M O receipt in support of payment of Rupee 1 (one) only to the credit of the general funds of the South Kanara District Board being the application fee prescribed by the District Board The applications should reach this office on or before 15th May 1944.

M. Sunder Rao,
For President
Dt Board, South Kanara

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT
Mangalore Stockists:—M/S D. Narsimha Pai & Sons, Mangalore.
Universal Industries (India) Ltd.
Nable chambers, Fort Bombay.

ಸ್ವದೇಶಾಭಿಮಾನಿ

ತಾರೀಖು 28—4—1944

ದಿವಂಗತ ವಿಜಯ ರಾಘವಾಚಾರ್ಯರು

ಭಾರತದ ರಾಜಕೀಯ ಮುಂದಾಳುಗಳಲ್ಲಿ ವೃದ್ಧಪಿತಾಮಹರಾಗಿದ್ದ ಡಾ| ಸಿ. ವಿಜಯ ರಾಘವಾಚಾರ್ಯರು ಕಳೆದ ವಾರ ತಮ್ಮ ೯೨ನೆಯ ವರ್ಷದ ಪ್ರಾಯದಲ್ಲಿ ತಮ್ಮ ಇಹಲೋಕದ ಜೀವನ ತ್ಯಜಿಸಿ ದಿವಂಗತರಾದರು. ಇನ್ನು ಕೇವಲ ಎಂಟು ವರ್ಷಗಳ ಜೀವನ ನಡೆಸಿದ್ದರೆ ಅವರು ತಮ್ಮ ಶತಮಾನಾಯುಷ್ಯ ಪೂರೈಸಬಹುದಾಗಿತ್ತು. ಅಂತೂ ತಮ್ಮ ಜೀವನ ಸಂಗ್ರಾಮದಲ್ಲಿ, ತಮ್ಮ ತಾಯ್ನಾಡಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತುಂಬಾ ಹೋರಾಡಿ, ಹಲವು ಹೋರಾಟಗಳಲ್ಲಿ ಯಶಸ್ಸನ್ನು ಸಂಪಾದಿಸಿದ ಅವರಿಗೆ ಭಗವಂತನು ಶತಮಾನಾಯುಷ್ಯ ಪೂರ್ಣಮಾಡಿದ್ದರೆ ಆಗ ತಮ್ಮ ಮುಖ್ಯ ಸಂಗ್ರಾಮವಾದ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಯಶಸ್ವಿತೆಯನ್ನು, ಸ್ವತಂತ್ರವಾದ ಭಾರತವನ್ನೂ ಕಂಡು ತುಂಬಿದ ಸಂತೋಷದಿಂದ, ತುಂಬು ಪ್ರಾಯದಲ್ಲಿ ಇಹಲೋಕ ತ್ಯಜಿಸಬಹುದಿತ್ತು.

ದಿವಂಗತ ವಿಜಯ ರಾಘವಾಚಾರ್ಯರು ಕಾಂಗ್ರೆಸಿನ ಸಂಸ್ಥಾಪಕರಲ್ಲೊಬ್ಬರು ಕಾಂಗ್ರೆಸನ್ನು ಬೆಳೆಸುತ್ತಾ ಬಂದವರು; ಈ ಸಂದರ್ಭದಲ್ಲಿ ಸಹಜವಾಗಿ ಸರಕಾರವನ್ನು ಎದುರಿಸಬೇಕಾಗಿ ಬಂದು ಅದರಲ್ಲಿ ಸಾಕಷ್ಟು ಎದೆಗಾರಿಕೆಯಿಂದ ಹೋರಾಡಿ, ತಾನು ಕೀರ್ತಿಗಳಿಸಿದ್ದು ಮಾತ್ರವಲ್ಲದೆ ಕಾಂಗ್ರೆಸ್ ಸಂಸ್ಥೆಯನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆಯಾಗಿ ಮಾಡಿದರು. ಸಹಜವಾಗಿ ಈ ಸಂದರ್ಭದಲ್ಲಿ ಅವರು ಒಮ್ಮೆ ಕಾಂಗ್ರೆಸಿನ ಅಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟು ಬಹುಮಾನಿಸಲ್ಪಟ್ಟರು ಮಾತ್ರವಲ್ಲದೆ ದೇಶಕ್ಕೆ ಯೋಗ್ಯ ಆದರ್ಶವನ್ನು ಕೊಡಲೂ ಶಕ್ತರಾದರು.

ಡಾ| ವಿಜಯ ರಾಘವಾಚಾರ್ಯರು ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದ್ದು ನಮ್ಮ ಜಿಲ್ಲೆಯಲ್ಲಿ; ಮಂಗಳೂರಲ್ಲಿಯೆ. ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಅವರು ಕೆಲಕಾಲ ಇಲ್ಲಿ ಕೆಲಸಮಾಡಿದರು. ಆದರೆ ಇಲ್ಲಿ ಆಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಐರೋಪ್ಯರೊಬ್ಬರ ಸರ್ವಾಧಿಕಾರಕ್ಕೆ ತಲೆ ಬಾಗಿಸದೆ ಆ ಕೆಲಸಕ್ಕೆ ರಾಜಿನಾಮೆಯಿತ್ತು ಮುಂದೆ ಸ್ವತಂತ್ರ ಜೀವನವನ್ನು ಪ್ರಾರಂಭಿಸಿದರು; ವಕೀಲರಾಗಿ ಉದ್ಯೋಗ ನಡೆಸಿದರು ವಕೀಲೀ ಉದ್ಯೋಗದಲ್ಲಿ ದೊರಕಿದ ರಾಜಕೀಯ ಜ್ಞಾನ ಮುಂದೆ ಅವರನ್ನು ಭಾರತದ ರಾಜಕೀಯ ರಂಗದಲ್ಲಿ ಮುಂದಾಳುವಾ

[illegible] ಎಯ ಮುಂದೆ [illegible] ನಡೆದ ಸೇಲಂ ಗೊಂದಲದೊಂದರಲ್ಲಿ ಅನೇಕ ಹಿಂದುಗಳೊಡನೆ ಇವರೂ ಆಪಾದಿತರಾಗಿ ಇವರಿಗೆ ೧೦ ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟಿತು. ಆದರೆ ಈ ಶಿಕ್ಷೆ ಅನ್ಯಾಯವಾದುದೆಂದು ಎದೆಗುಂದದೆ ಹೋರಾಡಿ ಅಪೀಲಿನಲ್ಲಿ ಗುಣ ಹೊಂದಿದರು. ಮುಂದೆ ವೈಸರಾಯರ ವರೆಗೂ ಹೋಗಿ ತನ್ನೊಡನೆ ಸೆರೆ ಹೊಂದಿದ ಅನೇಕರ ಬಿಡುಗಡೆ ಮಾಡಿಸಿದರು. ಮತ್ತೊಮ್ಮೆ ಅವರನ್ನು 'ಅಪ್ರಿಯಜನ'ಎಂದು ಪ್ರಸಿದ್ಧಿಸಿ ಮುನ್ಸಿಪಲ್ ಸದಸ್ಯತ್ವದಿಂದ ಅವರನ್ನು ತೆಗೆದು ಹಾಕಿದಾಗ, ಆಚಾರ್ಯರು ಭಾರತ ಮಂತ್ರಿಗಳ ಮೇಲೆ ವ್ಯಾಜ್ಯ ಮಾಡಿ ಅದರಲ್ಲಿಯೂ ಗೆದ್ದರು ಮಾತ್ರವಲ್ಲದೆ ೧೦೦ ರೂಪಾಯಿ ಖರ್ಚು ದೊರಕುವಂತಾಯಿತು. ಇಂಥಾ ಹಲವಾರು ಹೋರಾಟಗಳು ಆಚಾರ್ಯ ಜೀವನದಲ್ಲಿ ಚಿರಸ್ಮರಣೀಯವಿವೆ.

"ಅವರ ಅಪ್ರತಿಮ ಧೈರ್ಯ, ರಾಜಕಾರಣ ಜ್ಞಾನಗಳಿಗಾಗಿ ಭಾರತವೆಂದೆಂದೂ ಅವರಿಗೆ ಋಣಿಯಾಗಿದೆ. ಕಳೆದ ೬೦ ವರ್ಷಗಳಿಂದಲೂ ಅವರು ದಕ್ಷಿಣ ಭಾರತದ ಕೀರ್ತಿ ಕಳಶದಂತಿದ್ದರು. ನಾಗರಿಕ ಹಕ್ಕುಗಳಿಗಾಗಿ ಅವರಷ್ಟು ಹೋರಾಡಿದವರಿಲ್ಲ. ಕಾಂಗ್ರೆಸಿನ ಧ್ಯೇಯದಲ್ಲಿ ಮೂಲಭೂತ ಹಕ್ಕುಗಳನ್ನು ಸೇರಿಸಲು ಅವರೆಷ್ಟು ಪ್ರಯತ್ನಿಸಿದರೆಂದು ನನಗೆ ಪೂರ್ಣ ನೆನಪುಂಟು. ಕೊನೆಗೆ ಅದು ಕರಾಚಿ ಅಧಿವೇಶನದಲ್ಲಿ ಸಫಲವಾಯಿತು. ಸರಕಾರೀ ಅಧಿಕಾರಿಗಳ, ಅಧಿಕಾರದ ದುರುಪಯೋಗವನ್ನೆದುರಿಸುವಲ್ಲಿ ಇವರಿಗೆ ಸಮಾನರೆಂಬವರಿಲ್ಲ. ಅವರು ಭಾಗವಹಿಸಿದ ಪ್ರತಿಯೊಂದು ಸಭೆಯಲ್ಲಿಯೂ ಅವರದೇ ಪ್ರಭಾವ ತುಂಬುತಿತ್ತು. ವಕೀಲರು ರಾಷ್ಟ್ರದ ರಾಜಕೀಯವನ್ನು ಮುಂದುವರಿಸಬೇಕೆಂದು ೫೦ ವರ್ಷಗಳ ಹಿಂದೆ ಮನಗಾಣಿಸಿ ಕೊಟ್ಟಿದ್ದರು. ನಾನು ಕಳೆದ ೪೪ ವರ್ಷಗಳಿಂದ ಏನಾದರೂ ಸಾರ್ವಜನಿಕ ಚಟುವಟಿಕೆ ಮಾಡಿದ್ದರೆ ಅದೆಲ್ಲಾ ಅವರ ಉಪದೇಶದ ಫಲ" ಹೀಗೆಂದು ದಿವಂಗತ ವಿಜಯ ರಾಘವಾಚಾರ್ಯರ ಕುರಿತು ಶ್ರೀ ರಾಜಗೋಪಾಲಾಚಾರ್ಯರು ಹೇಳಿದ್ದಾರೆ. ಇದಕ್ಕಿಂದ ಹೆಚ್ಚಿಗೆ ಇನ್ನೇನು ಹೇಳಬೇಕು?

ಕಾಂಗ್ರೆಸಿನ ಸಂಸ್ಥಾಪಕರಲ್ಲೊಬ್ಬರೆಂದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವಿಶ್ರಾಂತದುಡಿದವರೆಂದು, ಅನ್ಯಾಯವನ್ನು ಎದೆಗುಂದದೆ ಎದುರಿಸುವ ಅಪ್ರತಿಮ ಧೀರರೆಂದು ಭಾರತವು ಎಂದೆಂದೂ ಅವರನ್ನು ಸ್ಮರಿಸುವುದು; ಅವರ ಕೀರ್ತಿಗೆ ಯೋಗ್ಯವಾದ ಸ್ಮಾರಕವೊಂದನ್ನು ಮಾಡುವುದು ರಾಷ್ಟ್ರದ ಕರ್ತವ್ಯವಾಗಿದೆ.

ದಿವಂಗತರ ಆತ್ಮಕ್ಕೆ ಚಿರಶಾಂತಿ ದೊರಕಲಿ!

ಸ್ವದೇಶ ಸಮಾಚಾರ

ರಾಜಾಜಿಗೆ ನಿರಾಶೆಯು!

ರಾಜಾಜಿಯವರಿಗೆ ಕೆಲ ಮುಸ್ಲಿಂ ಲೀಗ್ ಸರ್ವಾಧಿಕಾರಿ ಜಿನ್ನರೊಂದಿಗೆ ಕೆಲ ದಿನವಿದ್ದು ಮಾತುಕತೆ ಮಾಡಿದರು. ಜಿನ್ನರನ್ನು ತಿರುಗಿಸುವುದು ರಾಜಾಜಿಯಿಂದ ಆಗಲಿಲ್ಲವೆಂದು ತೋರುತ್ತದೆ. ರಾಜಾಜಿ ಈಗ ನಿರಾಶರಾಗಿದ್ದಾರೆ.

ಕಾಂಗ್ರೆಸ್ ಲೀಗ್ ಐಕ್ಯಕಾರ್ಯ ಮೊದಲಿಂದಲೇ ಕೆಟ್ಟುಕೊಂಡಿದೆ. ಆದರೆ ಜಿನ್ನಾ ಐಕ್ಯ ಕೇಳುವುದಿಲ್ಲ. ಪಾಕಿಸ್ಥಾನ ಬೇಕು ಅವರಿಗೆ. ಪಾಕಿಸ್ಥಾನ ಆಗದೆ ಐಕ್ಯದ ಮಾತಿಲ್ಲ. ರಾಜಾಜಿ ತಂತ್ರ ನೀತಿ ಜಿನ್ನರ ಮುಂದೆ ಫಲಿಸಲಿಲ್ಲ!

ಬ್ರಿಟಿಷರ ಕಳ್ಳ ವ್ಯಾಪಾರ

ಅಮೇರಿಕನ್ನರ ಗಂಭೀರ ಆರೋಪ

ನ್ಯೂಯಾರ್ಕ ತಾ- ೨೩—ನ್ಯೂಯಾರ್ಕ ಟೈಮ್ಸ್ ಪತ್ರಿಕೆಯು ಬ್ರಿಟನದ ಮೇಲೆ ಕಳ್ಳ ವ್ಯಾಪಾರದ ಆರೋಪ ಹೊರಿಸಿ ಒಂದು ಲೇಖನವನ್ನು ತನ್ನ ಅರ್ಥಿಕ ಸುದ್ದಿಯ ಪುಟದಲ್ಲಿ ಪ್ರಸಿದ್ಧಿಸಿರುವದು.

ಅದರಲ್ಲಿ ಅಮೇರಿಕನ್ ನಿರ್ಯಾತ ವ್ಯಾಪಾರಿಗಳು ಬ್ರಿಟನದ ಮೇಲೆ ಈ ರೀತಿ ಆರೋಪ ಹೊರಿಸಿದ್ದಾರೆ,

'ಬ್ರಿಟನಕ್ಕೆ ಇಲ್ಲಿಂದ ಕಡ ಮತ್ತು ಒತ್ತಿ ಕಾಯಿದೆಯನ್ವಯ ಕಪ್ಪು ಕಾಡಿಗೆ (ಕಾಬಾನ್ ಬ್ಲ್ಯಾಕ್) ಕಳಿಸಿಕೊಡಲಾಗುತ್ತಿದೆ. ಅವರು ಅದನ್ನು ಕಾಯಿದೆಯ ನಿಯಮದಂತೆ ತಾವೇ ಉಪಯೋಗಿಸದೆ ಅದರಿಂದ ವೃತ್ತಪತ್ರಿಕೆಯ ಮುದ್ರಣ ಮಸಿಯನ್ನು ತಯಾರಿಸಿ ಹಿಂದುಸ್ತಾನಕ್ಕೆ ಕಳಿಸುತ್ತಿರುವರು. ಆದರೆ ನಾವು ಸ್ವತಃ ಇಲ್ಲಿಂದ ಹಿಂದುಸ್ತಾನಕ್ಕೆ ಮಸಿ ಕಳಿಸಬೇಕೆಂದರೆ ಅಲ್ಲಿಯ ನಿಯಂತ್ರಕರು ಅಪ್ಪಣೆ ಕೊಡುವದಿಲ್ಲ. ವೃತ್ತಪತ್ರ ಮುದ್ರಣ ಮಸಿಗೆ ಅವಶ್ಯವಿದ್ದ ಕಾಡಿಗೆಯು ಈಗ ಅಮೇರಿಕೆಯಲ್ಲಿ ಮಾತ್ರ ಸಿಗುತ್ತಿದ್ದು ಬ್ರಿಟಿಷರು ನಮ್ಮ ಕಣ್ಣು ತಪ್ಪಿಸಿ ಅದರ ದುರ್ಲಾಭ ಪಡೆಯುತ್ತಿರುವದನ್ನು ನೋಡಿ ನಮಗೆ ಸಖೇದಾಶ್ಚರ್ಯವಾಗುತ್ತದೆ. ಅಲ್ಲಿಂದ ಕಾಡಿಗೆ ತರಿಸಿ ಕೊಂಡು, ಅದನ್ನು ಮಸಿಯಾಗಿ ತಯಾರಿಸಲಿಕ್ಕೆ ಬ್ರಿಟನಲ್ಲಿ ಇನ್ನೂ ಮಾನವ ಶಕ್ತಿ ದೊರೆಯುತ್ತಿರುವದು ವಿಲಕ್ಷಣವಾಗಿದೆ

ನರಿಮನ್ ವಿವಾಹ

ಬ್ರಹ್ಮಚಾರೀ ನರಿಮನರು ತಮ್ಮ ೫೯ನೇ ಪ್ರಾಯದಲ್ಲಿ ಕಳೆದ ವಾರ ಮದುವೆಯಾದರು. ೫೯ನೇ ವರ್ಷದಲ್ಲಿ ವಿವಾಹವಾದರೆಂದೇನೂ ವಿಶೇಷವಿಲ್ಲ. ವಿವಾಹಕ್ಕೆ ಶಾರದಾ ಕಾನೂನೊಂದನ್ನುಳಿದರೆ ನಿಶ್ಚಿತ ಅವಧಿಯೇನೂ ಇಲ್ಲ.

ಲೋರ್ಡ್ ಹೆವಿಟ್ಟರು ೭೨ನೇ ವರ್ಷದಲ್ಲಿ ೩೦ ವರ್ಷದ ಹುಡುಗಿಯನ್ನೂ, ಲೋರ್ಡ್ ರೀಡಿಂಗರು ೭೯ನೇ ವರ್ಷದಲ್ಲಿ ೩೦ ವರ್ಷದವರನ್ನು, ಲಾಯ್ಡ್ [illegible] ನೇ ವರ್ಷದಲ್ಲಿಯೂ [illegible] ದುವೆಯಾಗಿದ್ದಾರೆ. ವಿಧುರಾದವರು [illegible] ಹಳ ಕಾಲಾನಂತರ ಮದುವೆಯಾದದ್ದುಂಟು. ಶೌಕತಾಲಿಯವರು ಹೆಂಡತಿ ಸ[illegible] ೧೮ ವರ್ಷದ ಬಳಿಕ ೫೯ನೇ ವರ್ಷದಲ್ಲಿ ಮದುವೆಯಾಗಿದ್ದರು.

ನರಿಮನ್ ಅವಿವಾಹಿತರಾಗಿದ್ದಾ[illegible] ಅವರದು ತುಂಬು ಕ್ರಾಂತಿ ಜೀವನ[illegible] ಲಾಡ್ ಲಾಯ್ಡರ ಅನ್ಯಾಯವನ್ನು [illegible]ಯಲಿಗೆಳೆದದ್ದು, ಹಾರ್ವೆ ವ್ಯಾಜ್ಯದಲ್ಲಿ [illegible]ಯ ಸಿಕ್ಕಿದ್ದು, ಕಾಂಗ್ರೆಸ್ ರಾಜಕೀಯ[illegible]ಲ್ಲಿ ಅಗ್ರಸ್ಥಾನ ಪಡೆದದ್ದು, ಕಾಂಗ್ರೆಸ್ [illegible]ಕಿಂಗ್ ಕಮಿಟಿ ಸದಸ್ಯರಾದದ್ದು, ಬೊಂ[illegible]ಬೇ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದುದು, ಅನೇಕ ಸಲ ಎಸೆಂಬ್ಲಿ ಸದಸ್ಯರಾದುದು, ಬೊಂಬೇ ಮೇಯರಾದದು ಈ ಅವರ ಕ್ರಾಂತಿ ಜೀವನದಲ್ಲಿ.

ನಾಲ್ಕು ಸಲ ಅವರು ಸೆರೆಮನೆ ಸೇ[illegible]ದ್ದಾರೆ. ಬೊಂಬಯಿಯಲ್ಲಿ ಉಪ್ಪಿನಕಾಯಿದೆ ಮುರಿದ ಪ್ರಥಮ ಸತ್ಯಾಗ್ರಹಿ ಅವರ[illegible]

ಕಳೆದ ಚುನಾವಣೆಯಲ್ಲಿ ಸರ[illegible] ಕ್ವಾಸ್‌ಜಿ ಜಹಾಂಗೀರರು ಚುನಾಯಿ[illegible]ರಾಗಿ ಬಂದ ವಿಷಯ ಅವರ ಮೇಲೆ ಕಾಂಗ್ರೆಸಿನ ದೂರು ಬಿತ್ತು. ಮುಂದೆ ಬೊಂಬಯಿಯ ಪ್ರಧಾನ ಮಂತ್ರಿ ತಾನಾಗಬೇಕೆಂಬ ಅವರ ಹಕ್ಕಿನ ಕಾಳಗ ಸೋತಿತು. ಸರ್ದಾರ್ ಪಟೇಲರಿಗೂ ನರಿಮನರಿಗೂ [illegible]ತಾಗಿ ಬಂತು; ಗಾಂಧೀಜಿ ನರಿಮನ[illegible] ಮಾಡಿದ್ದು ತಪ್ಪೆಂದು ಬರೆದರು. ಕಾಂಗ್ರೆಸು ಅವರ ಮೇಲೆ ಶಿಸ್ತು ಪ್ರಯೋ[illegible]ಸಿತು.

ಇಲ್ಲಿ ಅವರ ಕ್ರಾಂತಿ ಜೀವನವೊವೆ[illegible] ವಿಶ್ರಾಂತವಾಯಿತು. ಈ ವಿಶ್ರಾಂ[illegible] ಕಾಲದಲ್ಲಿ ಸಹಜವಾಗಿ ಈ ಹಿಂದೆ ಅ[illegible]ಕಾಶವೇ ಸಿಗದ ಮದುವೆ ವಿಚಾರ [illegible]ಲೋಚನೆ ಮಾಡಲು ಅವರಿಗೆ ತುಂಬ ಅವಕಾಶ ದೊರಕಿರಬಹುದು. ನರಿಮನ[illegible] ವಿವಾಹವಾದರು; ಅವರ ವಿವಾಹಸು[illegible]ಮಯವಾಗಲಿ!

ಕಸ್ತೂರ್‌ಬಾ ಸ್ಮಾರಕ ನಿಧಿ

ಅ. ಭಾ. ಕಸ್ತೂರ್‌ಬಾ ಸ್ಮಾರಕ ನಿಧಿ[illegible] ಹಣವನ್ನು ಶೇಖರಿಸುವ ಸಲುವಾ[illegible] ಎಲ್ಲಾ ಪ್ರಾಂತಗಳಲ್ಲಿಯೂ ಸಮಿತಿಗ[illegible]ನ್ನು ರಚಿಸಲಾಗಿದೆಯೆಂದೂ, ಇದುವರೆ[illegible] ಸುಮಾರು ೩೧,೫೧,೦೦೦ ರೂಪಾ[illegible]ಗಳು ಕೂಡಿವೆಯೆಂದೂ ಮೆ ೧೦[illegible] ಮುಂಬಯಿಯಲ್ಲಿ ವಿಶ್ವಸ್ಥರ ಎರಡನೆ[illegible] ಸಭೆಯು ಕೂಡಲಿರುವುದೆಂದೂ ಕಾಯದರ್ಶಿಗಳಾದ ಶ್ರೀ. ಅಮೃತಲಾಲ ಠ[illegible]ರರು ಒಂದು ಪ್ರಕಟಣೆ ಹೊರಡಿಸಿದ್ದಾ[illegible]



ಜಿಲ್ಲಾ ಸಮಾಚಾರಗಳು

ಮಂಗಳೂರು

ದ. ಕ. ಜಿಲ್ಲಾ ಆಹಾರ ಸಮಿತಿ

ಇದರ ಸಭೆಯೊಂದು ಕಲೆಕ್ಟರರ ಆಫೀಸಿನಲ್ಲಿ ಇದೇ ತಾ. ೨೪ರಂದು ಸೇರಿತು, ಕಲೆಕ್ಟರರು ರಭಸದ ರಿಕ್ವಿಸಿಶನ್ ಕಾರ್ಯಕ್ಕಾಗಿ ತನ್ನ ಕೆಳ ನೌಕರರಿಗೆ ಕೊಟ್ಟ ಬೇರೆ ಬೇರೆ ಹುಕುಮುಗಳ ವಿಷಯ ವಿವರಿಸಿ ಅದರಲ್ಲಿ ವರ್ಗದಾರರ ಮತ್ತು ಒಕ್ಕಲುಗಳ ಅವಶ್ಯಕತೆಗೂ ಅದರ ಬೀಜದ ಅವಶ್ಯಕತೆಗೂ ಮತ್ತು ಇತರ ಅವಶ್ಯಕತೆಗಳಿಗೂ ಸಾಕಷ್ಟು ಅವಕಾಶವಿಟ್ಟಿರುವುದಾಗಿ ತಿಳಿಸಿದರು. ಆಹಾರ ಧಾನ್ಯಗಳ ಚಲನವಲನಗಳ ನಿರೀಕ್ಷಣೆಯಲ್ಲಿ ಮಾಡಿದ ಕಾರ್ಯಗಳು, ಕಳ್ಳ ವ್ಯಾಪಾರವಾಗದಂತೆ ಬೇರೆ ಬೇರೆ ದಾರಿಗಳಲ್ಲಿ ಭದ್ರತೆಯಿಟ್ಟ ವಿಚಾರವೂ ಕಲೆಕ್ಟರರು ಹೇಳಿ, ಪೋಲೀಸರು ಈ ವಿಷಯ ತುಂಬಾ ಸಹಕರಿಸಿದ್ದಾರೆಂದೂ, ಹೀಗಾಗಿ ಕಳೆದ ವಾರಗಳಲ್ಲಿ ಹೆಚ್ಚು ಧಾನ್ಯ ಬಂದಿದೆಯೆಂದೂ ಹಳ್ಳಿಗಳಿಂದ ಮಂಗಳೂರಿಗೆ ಅದನ್ನು ತರುವಲ್ಲಿ ಹೆಚ್ಚು ಲೋರಿಗಳನ್ನೇರ್ಪಡಿಸಿರುವುದಾಗಿಯೂ ತಿಳಿಸಿದರು.

ಕಲೆಕ್ಟರರು ತೆಗೆದುಕೊಂಡ ಕಾರ್ಯಗಳನ್ನು ಹೆಚ್ಚಿನ ಮಟ್ಟಿಗೆ ಆಹಾರ ಸಮಿತಿ ಒಪ್ಪಿಕೊಂಡಿತು; ಆದರೆ ಕೆಳ ನೌಕರರು ಮಿತಿಮೀರಿ ನಡೆಯದಂತೆ ಜಾಗ್ರತೆ ವಹಿಸಿಕೊಳ್ಳಬೇಕಾಗಿ ಸಮಿತಿ ಹೇಳಿತು. ತಾವು ಮತ್ತು ರೆವೆನ್ಯೂ ಡಿವಿಜನಲ್ ಆಫೀಸರರೂ, ಈ ವಿಚಾರ ಬಂದ ಊರುಗಳನ್ನು ಖುದ್ದಾಗಿ ವಿಚಾರಿಸಿ, ಅವುಗಳಿಗೆ ಬೇಕಾದ ಕ್ರಮ ತೆಗೆದುಕೊಳ್ಳುವುದಾಗಿಯೂ ಕಲೆಕ್ಟರರು ಹೇಳಿದರು.

ಶ್ರೀ. ಜಿನರಾಜ ಹೆಗ್ಡೆಯವರು ಒಂದು ನಿರ್ಣಯ ಮಂಡಿಸುತ್ತಾ, ರಿಕ್ವಿಸಿಶನ್ ಆಫೀಸರರು ಕೆಲವು ಉದ್ದೇಶಯುಕ್ತವಾದ ವಿವರ ಮೊದಲಾದವುಗಳನ್ನು ಒಕ್ಕಲುಗಳ ಸ್ಟಾಕುಗಳ ವಿಷಯ ಮತ್ತು ಅವರ ಬೀಜದ ಅವಶ್ಯಕತೆಗಳ ವಿಷಯ ತಿಳಿಸಬೇಕೆಂದು ಹೇಳಿದರು. ಈ ಸೂಚನೆಯಂತೆ ಕೆಲಸಮಾಡಲು ಆಜ್ಞೆ ಹೊರಡಿಸುವುದಾಗಿ ಕಲೆಕ್ಟರರು ಹೇಳಿದರು.

ಅಧಿಕಾಹಾರ ಬೆಳೆಸುವ ವಿಚಾರದಲ್ಲಿ ಸದಸ್ಯರು ತಮ್ಮ ಪ್ರಭಾವ ಉಪಯೋಗಿಸಬೇಕೆಂದೂ, ಈ ಕುರಿತು ಸದಸ್ಯರು ಸೂಚನೆಗಳನ್ನು ಕೊಡಬಹುದೆಂದೂ ಕಲೆಕ್ಟರರು ತಿಳಿಸಿದರು.

ಶ್ರೀ ಪಿ. ರಂಗನಾಥ ಪೂಂಜರ ಮುಂದಾಳುತನದಲ್ಲಿ ಗೊಬ್ಬರ ಪೂರೈಕೆ ವಿಚಾರ ಚರ್ಚಿಸಲಾಯಿತು. ಈ ವಿಷಯ ಜಿಲ್ಲಾ ಕೃಷಿ ಇಲಾಖೆ ಆಫೀಸರು ತನ್ನೆಲ್ಲಾ ಸಹಾಯ ಕೊಡಬೇಕೆಂದು ಕೇಳಲಾಯಿತು. ಕಲೆಕ್ಟರರು ಆ ಮೇಲೆ ಈ ಕುರಿತು ಕೃಷಿ ಇಲಾಖೆಯವರೊಡನೆ ಆಲೋಚಿಸಿ ಅವಶ್ಯಕ ಅನುಜ್ಞೆ ಹೊರಡಿಸಿರುವರು.

ಶ್ರೀ ಎ. ಬಿ. ಶೆಟ್ಟರು ಹಿಂದಿನ ಸಭೆಯಲ್ಲಿ ಮದಗ ಮೊದಲಾದ ನೀರಾವರಿಗಳ ಅಭಿವೃದ್ಧಿ ವಿಚಾರ ಕಾರ್ಯಕ್ರಮ ಕೈಕೊಳ್ಳಲಾಗಿದೆಯೇ ಎಂದು ವಿಚಾರಿಸಿದ್ದಕ್ಕೆ ಈ ವಿಷಯ ಆಲೋಚನೆಗೆ ತೆಗೆದುಕೊಂಡಿದೆಯೆಂದು ಕಲೆಕ್ಟರರು ಹೇಳಿದರು.

ಶ್ರೀ ಆರ್. ಎಂ. ಸಮ್ಮೂರರು ಕಾಸರಗೋಡು ತಾಲೂಕಿನಲ್ಲಿ ಬೀಜದ ಅವಶ್ಯಕತೆಗಾಗಿ ಭತ್ತ ಇಟ್ಟುಕೊಳ್ಳುವ ವಿಚಾರವನ್ನೆತ್ತಿದರು. ಈಗಾಗಲೇ ದ. ಕನ್ನಡ ಸ್ಟೋರ್ಸ್‌ಗೆ ತಮ್ಮಲ್ಲಿಗೆ ಬಂದ ಭತ್ತಗಳನ್ನು ಬೀಜದ ಅವಶ್ಯಕತೆ ಮುಗಿದ ಮೇಲೆ ಮಾತ್ರ ಉಪಯೋಗಿಸುವಂತೆ ಆಜ್ಞೆ ಕಳುಹಿಸಿರುವುದಾಗಿ ಹೇಳಿದರು.

ಹಳ್ಳಿಗಳಿಂದ ರಿಕ್ವಿಸಿಶನ್ ಮಾಡಿದ ಅಕ್ಕಿಯನ್ನು ಸಾಗಿಸುವರೆ ಗ್ರಾಮೋದ್ಯೋಗಸ್ಥರಿಗೆ ಸರ್ಟಿಫಿಕೇಟ್ ಕೊಡುವ ಅಧಿಕಾರ ಕೊಡಬೇಕೆಂದು ಶ್ರೀ. ಎ. ಬಿ. ಶೆಟ್ರು ಹೇಳಿದ್ದಕ್ಕೆ ಕಲೆಕ್ಟರರು ಒಪ್ಪಿದರು. ಈ ಕುರಿತು ಈಗಾಗಲೇ ಆಜ್ಞೆ ಹೋಗಿರುವುದಾಗಿಯೂ ತಿಳಿಸಿದರು.

ಹಳ್ಳಿ ಭಾಗಗಳಿಗೆ ಬೇಕಾದ ಅವಶ್ಯಕತೆಗಳನ್ನು ಒದಗಿಸುವ ವಿಚಾರ ಆಲೋಚಿಸಲಾಯಿತು. ಸಿವಿಲ್ ಸಪ್ಲೈಸ್ ಕಮಿಶನರ ಯೋಜನೆಯಲ್ಲಿ ಪ್ರತಿ ಹಳ್ಳಿಯಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಆಹಾರ ವಸ್ತು ಒದಗಿಸಲು ಬೇಕಾದ ನಿಯಮವುಂಟೆಂದೂ ಈ ಯೋಜನೆ ಇಷ್ಟರಲ್ಲೇ ತಾಲೂಕಿನ ಹಲವು ಗ್ರಾಮಗಳಲ್ಲಿ ಪ್ರಯೋಗಿಸಿರುವುದಾಗಿಯೂ ಬರುವ ಬೆಳೆ ಆಗುವವರೆಗೆ ಆಸ್ತಿಯಿಲ್ಲದ ಹಳ್ಳಿಯ ಜನರಿಗೆ ಆಹಾರ ಒದಗಿಸುವರೆ ಬೇಕಾದ ಏರ್ಪಾಡು ಮಾಡಲಾಗಿದೆಯೆಂದೂ ಕಲೆಕ್ಟರರು ಹೇಳಿದರು."

ಮುನ್ಸಿಪಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯೊಂದು ಕಳೆದ ಸೋಮವಾರ ಸಂಜೆ ಚೇರ್‌ಮೇನರ ಅಧ್ಯಕ್ಷತೆಯಲ್ಲಿ ಜರಗಿತು.

ನಗರದಲ್ಲಿ ಸಂಚಾರ ಪುಸ್ತಕಾಲಯಗಳನ್ನು ಕೂಡಲೇ ಆರಂಭಿಸುವ ಕುರಿತು ಚೇರ್‌ಮೇನರು ಸೂಚನೆಯಿತ್ತರು. ಇಲಿಗಳ ಬಾಧೆ ಇರದ ಉಗ್ರಾಣಗಳನ್ನು ರಚಿಸುವ ಅವಶ್ಯಕತೆಯ ಕುರಿತು ಬಂದ ಸರಕಾರೀ ಅಪ್ಪಣೆಯನ್ನು ಓದಿ, ಇಲ್ಲಿ ಒಮ್ಮೆಗೇ ಆ ಅಪ್ಪಣೆ ಜಾರಿಮಾಡಲು ಸಾಧ್ಯವಿಲ್ಲವೆಂಬ ಹೆಲ್ತ್ ಆಫೀಸರ ಸೂಚನೆ ಮನ್ನಿಸಲಾಯಿತು.

ಹೋಟೆಲುಗಳ ಕೊಳೆನೀರು ಕಶ್ಮಲಗಳ ವಿಚಾರ ಚರ್ಚೆಯಾಗಿ ಅವನ್ನು ಹೊರಸಾಗಿಸುವ ಕುರಿತು ಉಪಾಯ ಕಂಡು ಹುಡುಕುವರೆ ಒಂದು ಕಮಿಟಿ ರಚಿತವಾಯಿತು.

ವೆಬ್‌ಸ್ಟರ್ ಮಾರ್ಕೆಟನ್ನು ಆದಷ್ಟು ಬೇಗನೇ ಡಿಪಾರ್ಟ್‌ಮೆಂಟಿನವರ ಮೂಲಕವೇ ದುರಸ್ತಿ ಮಾಡಿಸಲು ನಿರ್ಧಾರವಾಯಿತು. ಮಾರ್ಕೆಟು ರೋಡಿನಲ್ಲಿ ದುರಸ್ತಿಯಾದ ಕೆಲವು ಅಂಗಡಿಗಳನ್ನು ಇನ್ನೊಂದು ವಾರದೊಳಗೆ ತೆರೆಯಲು ಅವಕಾಶ ಮಾಡುವುದಾಗಿ ತಿಳಿಸಲಾಯಿತು.

ಪ್ಲೇಗಿಗೆ ದಾಕು

'ಮಂಗಳೂರು ಮುನ್ಸಿಪಾಲಿಟಿ ಪ್ಲೇಗು ರೋಗ ಸೋಂಕಿಗೆ ತುತ್ತಾಗಿದೆಯೆಂದು ಈ ಮೊದಲೇ ಸೂಚಿಸಿರುವುದರಿಂದ ಈ ಜಾಡ್ಯ ತಗಲಿದ ಮಂಗಳೂರು ಮುನ್ಸಿಪಾಲಿಟಿಯೊಳಗೆ ಒತ್ತಾಯದಿಂದ ದಾಕು ಹಾಕಿಸುವ ಬಗ್ಗೆ ಮಂಗಳೂರು ಮುನ್ಸಿಪಲ್ ಹೆಲ್ತ್ ಆಫೀಸರರು ಪ್ಲೇಗ್ ಇನ್‌ಸ್ಪೆಕ್ಟರರು ಸೆನಿಟರಿ ಇನ್‌ಸ್ಪೆಕ್ಟರರು ಇವರಿಗೆ ಕಡ್ಡಾಯ ದಾಕು ಮತ್ತು ಇನಾಕುಲೇಶನ್ ಹಾಕಿಸುವ ಅಧಿಕಾರ ಕೊಡಲಾಗಿದೆಯೆಂದು ತಿಳಿದು ಬರುತ್ತದೆ.

ಕಸ್ತೂರ್‌ಬಾ ಸ್ಮಾರಕ ನಿಧಿ

ಈ ಬಗ್ಗೆ ಮತ್ತು ಇತರ ವಿಷಯಗಳ ಪರ್ಯಾಲೋಚನೆಗಾಗಿ ತಾ ೩೦ರಂದು ರವಿವಾರ ಸಂಜೆ ಗಂಟೆ ೩ಕ್ಕೆ ಪ್ರಭಾತ ಆಫೀಸಿನಲ್ಲಿ ಜಿಲ್ಲೆಯ ಪ್ರಮುಖ ಕಾರ್ಯಕರ್ತರ ಸಭೆಯೊಂದು ಸೇರಲಿದೆಯೆಂದು ತಿಳಿದು ಬರುತ್ತದೆ.

ಗವರ್ನಮೆಂಟ್ ಕಾಲೇಜ್

ಇದನ್ನು ಫಸ್ಟ್ ಗ್ರೇಡ್ ಕಾಲೇಜ್ ಮಾಡುವ ವಿಚಾರ ಇದರ ಹಳೆ ವಿದ್ಯಾರ್ಥಿಗಳ ಸಭೆಯೊಂದು ಡಾ. ರಾಮ ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿ, ಗವರ್ನರರಿಗೂ ವಿದ್ಯಾಂಗದ ಡೈರೆಕ್ಟರರಿಗೂ ಮನವಿ ಕಳುಹಲು ನಿರ್ಧಾರವಾಯಿತು.

ಕುಸ್ತಿ ಪಂದ್ಯಾಟ

ಶ್ರೀ ಪಲಿಮಾರು ಸಂಕಪ್ಪ ಸುವರ್ಣ ಪೈಲ್ವಾನರಿಗೂ ಮಂಗಳೂರಿನ ಶ್ರೀ ಸಂಕಪ್ಪ ಶೆಟ್ಟಿ ಫೈಲ್ವಾನರಿಗೂ ಕಳೆದ ತಾ ೧೬ರಂದು ಕುಸ್ತಿ ಪಂದ್ಯಾಟವಾಗಿ, ಶ್ರೀ ಸಂಕಪ್ಪ ಶೆಟ್ಟಿ ಪೈಲ್ವಾನರು ಜಯಶೀಲರಾದರು.

ವಿದ್ಯಾರ್ಥಿ ವೇತನ

ವಿಕ್ಟೋರಿಯಾ ಜುಬುಲಿ ಸ್ಕಾಲರ್ ಶಿಪ್ ಫಂಡ್ ಇದರ ವಿದ್ಯಾರ್ಥಿವೇತನಗಳ ಬಗ್ಗೆ (೧) ಮುಹಮ್ಮಡನ್ ಜಾತಿಗೆ (೨) ಬ್ರಾಹ್ಮಣ ಜಾತಿಗೆ (೩) ಅಬ್ರಾಹ್ಮಣ ಜಾತಿಗೆ ಸ್ಪರ್ಧಾ ಪರೀಕ್ಷೆಗಳು ೧೯೪೪ನೇ ಜೂನ್ ೨೬ರಂದು ೧೧ ಗಂಟೆಗೆ ಗವರ್ನ್‌ಮೆಂಟ್ ಕಾಲೇಜಿನಲ್ಲಿ ನಡೆವವು. ಈ ಸ್ಪರ್ಧಾ ಪರೀಕ್ಷೆಗೆ ಬೇಕಾದ ಅರ್ಜಿ ಫಾರ್ಮುಗಳು ೧೯೪೪ ಜೂನ್ ೧೫ರ ತನಕ ಮಂಗಳೂರು ಜಿಲ್ಲಾ ಕೋರ್ಟಿನಲ್ಲಿ ಸಿಗುವುದು. ಅರ್ಜಿ ಫಾರ್ಮು ಮತ್ತು ವಿದ್ಯಾರ್ಥಿವೇತನದ ನಿಯಮ ನಿಬಂಧನೆಗಳು ಮಂಗಳೂರು ಜಿಲ್ಲಾ ಜಡ್ಜರ ಆಫೀಸಿನಲ್ಲಿ ಪ್ರಾತಃ ೧೧ ಗಂಟೆಯಿಂದ ಸಾಯಂ ೫ ಗಂಟೆವರೆಗೆ ೧ ಮತ್ತು ೨ ಆಣೆ ಕೊಟ್ಟರೆ ಕೊಡಲಾಗುವುದು.

ಅಡಿಕೆ ಬೇಸಾಯಗಾರರಿಗೆ ಸಲಹೆಗಳು

" ಅಡಿಕೆಯನ್ನು ವಿಕ್ರಯಕ್ಕೆ ಕಳುಹಿಸುವಾಗ ಮಾಲಕರು ಈ ಕೆಳಗಿನಂತೆ ತಾವೇ ಪರ್ಮಿಟು ತಯಾರಿಸಿ ಕಳುಹಿಸತಕ್ಕದ್ದು.

೧. ಮಾಲಕನ ಹೆಸರು ಮತ್ತು ವಿಳಾಸ; ೨ ಅಡಿಕೆಯ ತೂಕ; ೩ ಎಲ್ಲಿಗೆ ಕಳುಹಿಸುವುದು (ಭಂಡಸಾಲೆಯ ಹೆಸರು); ೪ ಕಳುಹಿಸಿದ ತಾರೀಕು; ೫ ತಲಪಬಹುದಾದ ತಾರೀಕು; ೬ ಯಾವ ರಸ್ತೆಯ ಮೂಲಕ; ೭ ಯಾರ ಗಾಡಿ, ದೋಣಿ ಯಾ ಲೋರಿಯ ಮೂಲಕ ಕಳುಹಿಸುವುದು ಮತ್ತು ಕಳುಹಿಸುವವನ ದಸ್ಕತು. ಇವುಗಳನ್ನು ಪರ್ಮಿಟಿನಲ್ಲಿ ಕಾಣಿಸಬೇಕು.

೨. ಅಬ್ಕಾರಿ ಆಫೀಸರರು ಕಾರ್ಕಳ ಮತ್ತು ಚೊಕ್ಕಾಡಿಯಂತಹ ಒಳಪ್ರದೇಶಗಳಲ್ಲಿ ಸುಂಕವನ್ನು ಕೊಡಬೇಕೆಂದು ಒತ್ತಾಯಪಡಿಸುತ್ತಾರೆಂಗಿ ತಿಳಿದು ಬರುತ್ತದೆ. ಸುಂಕವನ್ನು ಭಂಡಸಾಲೆಗಳಲ್ಲಿ ಮಾರಾಟಮಾಡಿ ಸ್ವಾಧೀನ ಕೊಡುವ ಮೊದಲು ಕೊಟ್ಟರೆ ಸಾಕು. ಆ ಮೊದಲೇ ಕೊಡಬೇಕೆಂದು ಒತ್ತಾಯಪಡಿಸುವ ಅಧಿಕಾರ ಯಾರಿಗೂ ಇಲ್ಲ. ಮಾಲನ್ನು ಸಾಗಿಸುವ ಬಗ್ಗೆ ಅಬ್ಕಾರಿ ಆಫೀಸರರ ಪರ್ಮಿಟು ಅಗತ್ಯವಿಲ್ಲ. ಮೇಲೆ ತೋರುವ ಮಾಲಿಕನ ಪರ್ಮಿಟು ಮಾತ್ರ ಸಾಕು ಅಡಿಕೆಯೊಂದಿಗೆ ಮಾಲಿಕನ ಪರ್ಮಿಟು ಇದ್ದಲ್ಲಿ ಯಾರಿಗೂ ಅದನ್ನು ತಡೆದು ನಿಲ್ಲಿಸುವ ಅಧಿಕಾರವಿಲ್ಲ. ಅಧಿಕಾರಗಳು ಅಥವಾ ರಿಜರ್ವ ಪೋಲೀಸಿನವರು ಆಕ್ಷೇಪಿಸಿದಲ್ಲಿ ಅಂತಹ ಆಕ್ಷೇಪವನ್ನು ಬರಹ ಮೂಲಕ ಅವರಿಂದ ಪಡೆದುಕೊಂಡು ಸಂಘದ ಆಫೀಸಿಗೆ ತಿಳಿಸತಕ್ಕದ್ದು. ಧೃಢ ಪತ್ರಿಕೆಗಳನ್ನು ಬರೆಯಿಸಿ ಮಾಲಿಕರು ಕೂಡಲೇ ಸಂಘಕ್ಕೆ ಕಳುಹಿಸತಕ್ಕದ್ದು.

೩. ಈಗ ಸುಲಿದ ಅತಿ ಹೆಚ್ಚಿನ ಅಡಿಕೆಯಲ್ಲಿ ತಾರೀಕು ೧-೪-೪೪ರ ಮೊದಲೇ ಸುಲಿದಾದ ಮಾಲಾದ ಕಾರಣ ಸುಂಕ ಕೊಡುವ ಅಗತ್ಯವಿಲ್ಲ. ಬಚ್ಚ ಅಡಿಕೆ ಮಾಲಿಕನ ಈ ವರ್ಷದ ತನ್ನ ಹುಟ್ಟುವಳಿಯಲ್ಲಿ ಮುಕ್ಕಾಲು ಅಂಶದ ಮಟ್ಟಿಗೆ ಸರಾಗವಾಗಿ ಸುಂಕವನ್ನು ಮಾಫಿಮಾಡಬೇಕೆಂದು ಸಂಘದ ಕಾರ್ಯದರ್ಶಿಗಳು ಕಸ್ಟಮ್ಸ್ ಇಲಾಖೆಯ ಎಸಿಸ್ಟೆಂಟ್ ಕಲೆಕ್ಟರರಿಗೆ ಮನವಿಯೊಂದನ್ನು ಕಳುಹಿಸಿರುವರಲ್ಲದೆ, ಅವರನ್ನು ಸ್ವತಃ ಕಂಡು ಮಾತಾಡಿಯೂ ಇರುವರು." ಎಂದು ಈ ಸಂಘದ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ಕಾಸರಗೋಡು

ಅನಿರ್ಬಂಧ ಬಿಡುಗಡೆ

ತಂದೆಯು ಅಸ್ವಸ್ಥದ ನಿಮಿತ್ತ ಒಂದು ತಿಂಗಳ ಪೆರೋಲ್‌ನಲ್ಲಿ ಬಂದ ಶ್ರೀ ಎಂ. ಉಮೇಶರಾಯರಿಗೆ ಈಗ ಅನಿರ್ಬಂಧ ಬಿಡುಗಡೆಯ ಆಜ್ಞೆ ಬಂದಿರುವುದಾಗಿ ತಿಳಿಯುತ್ತದೆ.

ಜಿಲ್ಲಾ ಬೋರ್ಡು ಸದಸ್ಯ ಶ್ರೀ ಸಿ. ಕೆ. ರಾಘವನ್ ನಂಬಿಯಾರರಿಗೂ ಅನಿರ್ಬಂಧ ಬಿಡುಗಡೆಯಾಗಿದೆ.

ನೀಲೇಶ್ವರದ ಕಾ। ಎನ್. ಕೆ. ಕುಟ್ಟಿನರವರ ಪೆರೋಲ್ ಅವಧಿ ಇನ್ನೊಂದು ತಿಂಗಳು ಮುಂದುವರಿದಿದೆ.

ಉಡುಪಿ

ಹಿಂದೂ ಮಹಾಸಭೆಯ ಮಹಾಧಿವೇಶನ

"ಬರುವ ಮೇ ತಿಂಗಳ ತಾರೀಕು ೨೦ರಿಂದ ೨೫ರ ಒಳಗೆ ಶ್ರೀ ಉಡುಪಿ ಕ್ಷೇತ್ರದಲ್ಲಿ ಜಿಲ್ಲಾ ಹಿಂದೂ ಮಹಾಸಭೆಯ ಮಹಾಧಿವೇಶನವನ್ನು ಜರಗಿಸುವುದಾಗಿ ನಿಶ್ಚಯಿಸಿದ್ದೇವೆ. ಹಿಂದೂಗಳ ಪ್ರಸಿದ್ಧ ಮುಖಂಡರಲ್ಲೊಬ್ಬರಾದ ಶ್ರೀಮಾನ್ ಧರ್ಮವೀರ ಡಾಕ್ಟರ್ ಬಿ. ಎಸ್ ಮೂಂಜೆಯವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿರುತ್ತಾರೆ. ಈ ಸಂಬಂಧವಾಗಿ ಭರದಿಂದ ಪ್ರಯತ್ನಗಳು ನಡೆಯುತ್ತಿವೆ. ಇದೇ ಸುಸಂದರ್ಭದಲ್ಲಿ ಸಮಗ್ರ ಕರ್ನಾಟಕದ ಹಿಂದೂ ಮಹಾಸಭೆಯ ಕಾರ್ಯಕರ್ತರ ಒಂದು ಸಮ್ಮೇಳವನ್ನು ಜರಗಿಸಿ ಮುಂದಿನ ಕಾರ್ಯಕಲಾಪಗಳನ್ನು ನಿರ್ಧರಿಸಬೇಕಾಗಿ ನಿರ್ಣಯಿಸಿದ್ದೇವೆ, ಆದ ಪ್ರಯುಕ್ತ ಕರ್ನಾಟಕದ ಎಲ್ಲಾ ಕಾರ್ಯಕರ್ತರುಗಳು ಈ ಸಮಾರಂಭಕ್ಕೆ ಒಂದು ಸಹಕರಿಸಬೇಕಾಗಿ ವಿನಂತಿ," ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪೆರಡಾಲ

ಪೆರಡಾಲ ಹೈಸ್ಕೂಲ್ ನಿಧಿ

ಬದಿಯಡ್ಕದಲ್ಲಿ ತೆರೆಯಲಿರುವ ಪೆರಡಾಲ್ ಹೈಸ್ಕೂಲಿನ ಪ್ರಥಮದ ಮೂರು ತರಗತಿಗಳನ್ನು ತೆರೆವರೆ ಪ್ರಾಂತದ ವಿದ್ಯಾಧಿಕಾರಿಗಳು ಹಾಕಿದ ೧೫ ಸಾವಿರ ರೂಪಾಯಿಗಳ ಶರತದ ಹಣ ಇಷ್ಟರಲ್ಲೇ ಹೈಸ್ಕೂಲ್ ನಿಧಿಯಾಗಿಡಲ್ಪಟ್ಟಿದೆ.

ನೀಲೇಶ್ವರ

ಓಲೆ ಬೆಲ್ಲದ ಮೇಲೆ ನಿರ್ಬಂಧ ಹಾಕಿದ್ದರಿಂದ ಇಲ್ಲಿಗೆ ಸಮೀಪದ ತುರುತ್ತಿ ಎಂಬಲ್ಲಿ ತಯಾರಾಗುವ ಸುಮಾರು ೨೦ ಸಾವಿರ ಕಟ್ಟೆ ಓಲೆಬೆಲ್ಲ ಮಾರಾಟವಾಗದೆ ಉಳಿದಿರುವ ಬಗ್ಗೆ ಕಲೆಕ್ಟರರಲ್ಲಿ ಒಂದು ಶಿಷ್ಟಮಂಡಳಿ ಕಳುಹಿಸುವ ಏರ್ಪಾಡಾಗಿದೆ.

[illegible] — [illegible]

[illegible] ಸಾಧ್ಯವಿಲ್ಲ. [illegible] ಸಾಮಾಜಿಕ ವ್ಯವಸ್ಥೆಯು, ಆರ್ಥಿಕ, ರಾಜಕೀಯ [illegible] ಬರುತ್ತದೆ?

'[illegible] ಸ್ವಾರ್ಥೀ ಜನರು' ಎಂದರೆ, ಇದರಿಂದ ಭಂಡವಾಳ ಶಾಹಿಗಳೆಂದು ನೀವು ತಿಳಿಯುತ್ತೀರಾ? ರಾಷ್ಟ್ರದ ಯೋಜನೆ ತಯಾರಿಸುವಲ್ಲಿ ಭಂಡವಾಳ ಶಾಹಿಗಳು ಅಡ್ಡಿ ಬರುತ್ತಾರೆಯೆ?'

ನೆಹರು 'ಭಂಡವಾಳಶಾಹೀ ಉದ್ಯಮದಿಂದ ಹಿಂದೆ ಎಷ್ಟು ನಮಗೆ ಪ್ರಯೋಜನಗಳೇ ಆಗಿದ್ದರೂ ಇಂದಿನ ಜಗತ್ತಿಗೆ ಅದು ಪ್ರಯೋಜನವಿಲ್ಲ. ಇಂದಿನ ಸಾಮಾಜಿಕ ವ್ಯವಸ್ಥೆಗಿಂತ ಶಾಸ್ತ್ರೀಯ ಉನ್ನತಿ ಬಹಳ ಆಗಿದೆ. ಭಂಡವಾಳ ಶಾಹಿತ್ವವನ್ನು ಒಯ್ಯುವುದಾಗಲಿ, ಭಂಡವಾಳಶಾಹಿಗಳನ್ನು ದೂರುವುದಾಗಲಿ ಇದಲ್ಲ. ಭಂಡವಾಳ ಶಾಹಿತ್ವ ಜಗತ್ತಿಗೆ ಹೆಚ್ಚು ಉಪಕಾರ ಮಾಡಿತ್ತು. ದೊಡ್ಡ ಯಂತ್ರದಲ್ಲಿ ಕೆಲ ಭಂಡವಾಳ ಶಾಹಿಗಳು ಸಣ್ಣ ಚಕ್ರಗಳಂತೆ. ಇಂದಿನ ವಿಷಯವೆಂದರೆ, ಭಂಡವಾಳಶಾಹಿ ಕಾಲಕಳೆಯಿತು, ಅದರಿಂದು ಅದಕ್ಕಿಂತ ಉತ್ತಮವೂ ಆಧುನಿಕವೂ ಆದ ಸಮಾಜ ನೀತಿಗೆ ಎಡೆಗೊಡಬೇಕೆಂಬುದು?

'ಹಾಗಾದರೆ ನೀವು ಇಡೀ ದೇಶದ ಔದ್ಯೋಗೀಕರಣವಾಗಬೇಕೆನ್ನುತ್ತೀರಿ'

ನೆಹರು—'ನಾನು ಔದ್ಯೋಗೀಕರಣ ಆಗಬೇಕೆನ್ನುತ್ತೇನೆ. ದೊಡ್ಡ ಯಂತ್ರಗಳು ಕಾರ್ಖಾನೆಗಳು ಭಾರತದಲ್ಲಿ ತುಂಬಾ ಬೇಕೆನ್ನುತ್ತೇನೆ. ಭಾರತದ ಸಂಪತ್ತು ಮತ್ತು ಭಾರತೀಯರ ಜೀವನ ಸ್ಥಿತಿ ಉನ್ನತಿ ಹೊಂದಬೇಕೆನ್ನುತ್ತೇನೆ. ಇದು ಕೈಗಾರಿಕೆಗಳು ವಿಜ್ಞಾನ ರೀತಿಯಲ್ಲಾಗಿ ದೊಡ್ಡ ರೀತಿಯ ಔದ್ಯೋಗೀಕರಣ ಆದರೆ ಮಾತ್ರಸಾಧ್ಯ. ನನ್ನೀ ಇಚ್ಛೆ ಅಲ್ಲದಿದ್ದರೂ ಇಂದಿನ ಜಗತ್ತಿನ ವ್ಯವಸ್ಥೆಯಲ್ಲಿಯೂ ಇದು ಅವಶ್ಯವೆಂದು ನಾನು ತಿಳಿಯುತ್ತೇನೆ. ಹೀಗಿದ್ದರೂ ನಾನು ಭಾರತದ ಇಂದಿನ ಪರಿಸ್ಥಿತಿಯಲ್ಲಿ ಕೈಯಿಂದ ನೂಲುವುದನ್ನು ಮತ್ತು ಖಾದಿಯನ್ನು ಪ್ರೋತ್ಸಾಹಿಸುವೆನು ನನಗೆ ಇವು ಇಂದು ಆರ್ಥಿಕ, ರಾಜಕೀಯ, ಸಾಮಾಜಿಕ ಮಹತ್ವವುಳ್ಳವುಗಳಾಗಿವೆ. ....ಹೀಗಾದರೂ ಇದು ಉತ್ಪಾದನೆಯ ಹಳೆ ಕ್ರಮ. ದೇಶದ ಸಂಪತ್ತು ಹೆಚ್ಚಿಸಲು ಇದು ಸಾಲದು; ಆದ್ದರಿಂದ ದೊಡ್ಡ ಯಂತ್ರ ಬರಬೇಕು; ಖಾದಿ ಇದಕ್ಕೆ ಆತಂಕ ತರಲಾರದೆಂದು ನಾನು ನಂಬುತ್ತೇನೆ'

'ಸಾಮ್ರಾಜ್ಯಶಾಹಿತ್ವ ಮತ್ತು ಭಂಡವಾಳ ಶಾಹಿತ್ವಗಳನ್ನು ಬಿಟ್ಟು ಸಮತಾವಾದ ಮತ್ತು ಔದ್ಯೋಗೀಕರಣದ ಮುಖ್ಯ ಸಿದ್ಧಾಂತದಲ್ಲಿ ನೀವು ಭವಿಷ್ಯ ಭಾರತದ ರಚನೆಯಾಗಬೇಕೆನ್ನುತ್ತೀರಲ್ಲವೆ?'

ನೆಹರು—'ಹೌದು. ನೈಸರ್ಗಿಕನಿಯಮಗಳು ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಇತರ ಸಾಮ್ರಾಜ್ಯಶಾಹಿ ಮತ್ತು ಭಂಡವಾಳಶಾಹಿಗಳಿಗೂ ವಿರಾಮ ಕೊಡುತ್ತಿವೆ ಈ ಕಾರ್ಯದಲ್ಲಿ ನೆರವಾಗಲು ನಾನು ಬಯಸುತ್ತೇನೆ'

—ಬೊಂಬೇ ಕ್ರಾನಿಕಲ್

ಮೇಲೆ ಗಾಂಧೀಜಿ ಮತ್ತು ನೆಹರು ಹೇಳಿದ ಮಾತುಗಳು ಅವರವರ ಲೇಖನಗಳಿಂದಲೇ ಉದ್ಧೃತವಾದವುಗಳು.

ಪ್ರಭಾತ

(ದೀಪಾವಳಿ [illegible])

ಸಂಪಾದಕರು: ಶ್ರೀ ಕುಡ್ವಿ ವಾಸುದೇವ ಶೆಣೈ; ಪ್ರಭಾತ ಕಾರ್ಯಾಲಯ, ಮಂಗಳೂರು ಕೌನ್ [illegible] ಆಕಾರದ ೨೦೦ ಪುಟಗಳು. ಬೆಲೆ ಒಂದು ರೂಪಾಯಿ.

ಕಾಗದದ ತುಟ್ಟಿಯ ಈ ಕಾಲದಲ್ಲಿ ಪ್ರಭಾತದ ಈ ವಿಶೇಷಾಂಕದಂತಹ ಸಾಹಸದ ಪ್ರಕಟಣೆಯನ್ನು ನೋಡಿದರೆ ಅಭಿಮಾನ ಹುಟ್ಟುತ್ತದೆ. ಬೆಳ್ಳಿಯ ಅಕ್ಷರಗಳಿಂದ ಕೂಡಿದ್ದ ಆಕರ್ಷಕವಾದ ದಪ್ಪ ಕಾಗದದ ಆವರಣ ಪತ್ರ, ಒಳಗಡೆ ವಿವಿಧ ವರ್ಣರಂಜಿತ ೬ ಸುಂದರ ಚಿತ್ರಗಳು; ಇನ್ನು ಕೆಲವು ಏಕವರ್ಣ ಚಿತ್ರಗಳು. ಪುಟ ಪುಟಗಳಲ್ಲಿ ಬೇರೆ ಬೇರೆ ಸಣ್ಣ ದೊಡ್ಡ ಚಿತ್ರಗಳು, ಕಥೆ, ಪ್ರಹಸನ, ಪ್ರಬಂಧ, ನಾಟಕ, ಕವಿತೆಗಳಿಂದ ಕೂಡಿದ ಈ ವಿಶೇಷಾಂಕ.

ವರ್ಣರಂಜಿತ ೭ ಚಿತ್ರಗಳೆಲ್ಲವೂ ಸಿನೆಮಾಕ್ಕೆ ಸಂಬಂಧಿಸಿದುವು; ಆಧುನಿಕ ಕಾಲದ ರುಚಿಗನುಗುಣವೆನಿಸಿಯೇ ಇದೆ. ಆದರೆ ಕೆಲವು ಕಲಾಕೃತಿ, ರಾಷ್ಟ್ರೀಯ ನಾಯಕರ ಚಿತ್ರಗಳನ್ನೂ ಸೇರಿಸಿದ್ದರೆ ಸಂಚಿಕೆಯ ಕಳೆ ಇನ್ನಷ್ಟು ಏರಬಹುದಿತ್ತು; ಅಂತೆಯೇ ಒಳಗಡೆ ಲೇಖನಗಳೆಡೆಯಲ್ಲಿಯೂ ಸಿನೆಮಕ್ಕೆ ಸಂಬಂಧಿಸಿದ ಚಿತ್ರಗಳನ್ನೇ ಹೆಚ್ಚಾಗಿ ಕೊಡುವುದಕ್ಕಿಂತ, ಇನ್ನಷ್ಟು ಲೇಖನಗಳನ್ನೇ ಸಚಿತ್ರ ಮಾಡಿದ್ದರೆ, ಒಂದೆರಡು ವ್ಯಂಗ್ಯ ಚಿತ್ರಗಳನ್ನೂ ಕೊಟ್ಟಿದ್ದರೆ ಚೆನ್ನಾಗುತ್ತಿತ್ತು.

ಅಖಿಲಭಾರತ ಕೀರ್ತಿಯ ಲೇಖಕರು, ಶ್ರೀಗಳಾದ ಆರ್. ಕೆ. ಪ್ರಭು, ಅಹ್ಮದ್ ಅಬ್ಬಾಸ್, ಯೂಜಿ ಇವರೂ ಇದಕ್ಕೆ ಲೇಖನ ಕೊಟ್ಟಿದ್ದಾರೆ. ಶ್ರೀಗಳಾದ ಪ್ರಭು ಮತ್ತು ಯೂಜಿ ಇಬ್ಬರೂ ಕನ್ನಡಿಗರೇ. ಇವರ ಲೇಖನ ದೊರಕಿಸಿಕೊಂಡ ಬಗ್ಗೆ ಸಂಪಾದಕರು ಅಭಿನಂದನೀಯರು.

'ಈ ಅಸತ್ಯ ಪ್ರಚಾರ ನಿಲ್ಲಲಿ' 'ನವ ಕಾವ್ಯತಾತ ಗೋವಿಂದ ಪೈಗಳು' 'ಸಣ್ಣ ಕತೆಗಳ ತಾತ ಪಂಜೆ ಮಂಗೇಶರಾಯರು' 'ಪ್ರಗತಿಶೀಲ ಮುದ್ರೆ ಏಕೆ?' ಮೊದಲಾದ ಲೇಖನಗಳು ಕನ್ನಡ ಸಾಹಿತಿಗಳ ಕಣ್ತೆರೆಯಿಸಬಲ್ಲವು. ದಿ ಎಂ. ಎನ್. ಕಾಮತರ ಲೇಖನ, ಕವಿ 'ಮುದ್ದಣ'ನ ಜೋ ಜೋ, [illegible] ಶ್ರೀಗಳಾದ [illegible] ಲಕ್ಷ್ಮಣ [illegible] ಇಂಥಾ ಲೇಖನಗಳು [illegible] ಮಹತ್ವಪೂರ್ಣವಾಗಿವೆ.

ಶ್ರೀಗಳಾದ ಎಂ. ವಿ. ಪ್ರಭು, ಹು. ಭೀಮರಾವ್, ಸುಬ್ರಾಯನ್, ಅಮ್ಮೆಂಬಳ, ಕೆ. ವಿ. ಭಟ್ಟ, ಮಚ್ಚುಸುಲಿ, ಕುಡ್ವಿ ವಾಸುದೇವ ಶೆಣೈ ಮೊದಲಾದವರ ಕಥೆ, ಪ್ರಹಸನ, ಕವಿತೆ, ಸಿನೆಮಾ ಲೇಖನಗಳಿಂದ ಸಂಚಿಕೆ ವಾಚನೀಯವಿದೆ.

ಈ ವಿಶೇಷಾಂಕದಲ್ಲಿ ಸಿನೆಮಾಕ್ಕೆ ಸಂಬಂಧಿಸಿದ ತುಂಬ ಲೇಖನಗಳಿವೆ. ಕೆಲ ಸಿನೆಮಾ ಕಂಪೆನಿಗಳ ತುಂಬ ಪರಿಚಯವಿದೆ. ಕೆಲವು ಕಡೆ ಜಾಹೀರಾತೆಂಬಷ್ಟು ಬಹಳಾಗಿದೆ. ಅದಕ್ಕಿಂತ ಸಿನೆಮಾ ಕಲೆ ಕೈಗಾರಿಕೆಯ ಕುರಿತು ವೈವಿಧ್ಯಪೂರ್ಣ ಲೇಖನಗಳನ್ನು ಸಂಪಾದಕರು ಆರಿಸಿದ್ದರೆ ಚೆನ್ನಾಗಿತ್ತು.

ಇಷ್ಟು ದೊಡ್ಡ ವಿಶೇಷಾಂಕದಲ್ಲಿ ಇಂದಿನ ಯುದ್ಧ ರಾಜಕೀಯ ಆರ್ಥಿಕ ಸಮಸ್ಯೆಗಳ ಕುರಿತು ಒಂದೆರಡು ಲೇಖನಗಳನ್ನು ಸಂಪಾದಕರು ಸಂಗ್ರಹಿಸಿ ಹಾಕಬಹುದಿತ್ತು. ಇಂತಹ ಮುಂದಿನ ದೀಪಾವಳಿಗೆ ೩೦೦ ಪುಟದ ವಿಶೇಷಾಂಕ ಕೊಡುವುದಾಗಿ ಪ್ರಭಾತ ಸಂಚಾಲಕರು ಸಾರಿದ್ದಾರೆ. ಈ ವಿಶೇಷಾಂಕ ಮುಂದಿನ ವಿಶೇಷಾಂಕವನ್ನು ಎದುರುನೋಡುವಂತೆ ಮಾಡಿದೆ.

ಸುಬ್ರಹ್ಮಣ್ಯ

ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಇದೇ ತಾ. ೭-೫-೪೪ ರಿಂದ ಪ್ರಾರಂಭವಾಗಿ ಮುಂದೆ ಮೂರು ದಿವಸಗಳಲ್ಲೂ ಶ್ರೀದೇವರ ಸನ್ನಿಧಿಯಲ್ಲಿ ಪೂಜಾ, ಉತ್ಸವ, ವಸಂತ, ಬ್ರಾಹ್ಮಣ ಸಂತರ್ಪಣಾದಿ ಸತ್ಕಾರ್ಯಗಳು ನೆರವೇರುವವು.

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರೈಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ—ಆ ಜನರು ....

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು ......

ತಮ್ಮ ಆರ್ಥಿಕ ಅಡಚಣೆಗಳಲ್ಲೊ ಸಮಸ್ಯೆಗಳಲ್ಲೊ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು ......

... ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು. ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities; (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

(3ನೇ ಪುಟದಿಂದ ಮುಂದುವರಿದುದು)

ಕತೆಯೊಳಗಿನ ಕತೆ

ಪಟಿದ್ದು ಅವನ ರೂಪಕ್ಕಾಗಿಯಲ್ಲ; ಅವನ ಬಾಯಿಯಿಂದ ಸುರಿವಮುತ್ತಿನ ಮಾತುಗಳಿಗಾಗಿ!' ಎಂದು ಉತ್ತರ ಕೊಡುತ್ತಾಳೆ! ಆ ಉತ್ತರವನ್ನು ನೆನ ಸುತ್ತಾ ಆ ಕಾಲದ ಕವಿಗಳ ಸೌಭಾಗ್ಯ ವನ್ನು ಕೊಂಡಾಡುತ್ತಾ ನಿದ್ದೆ ಹೋಗಿದ್ದೆ!

ಬೆಳಗ್ಗೆ ಎಚ್ಚರವಾಗುವಾಗ ಎಲ್ಲಾ ಯದ್ವಾತದ್ವಾ! ಮೀಸೆ ಕತ್ತರಿಸ ಹೋಗು ವಾಗ ಸ್ವಲ್ಪ ಹೆಚ್ಚು ಕಡಿಮೆಯಾದರೆ ತುಟಿ ಕತ್ತರಿಸಿ ಹೋಗುತಿತ್ತು! ಅವ ಸರ ಅವಸರವಾಗಿ ಹೊರಗೆ ಬಂದು ಹೊಸ್ತಿಲು ದಾಟುವಾಗ ಕಾಲೆಡವಿ ಬಳಿ ಯಿದ್ದ ತೋಡಿಗೆ ಬೀಳುತಿದ್ದೆ—ಬೀಳುವು ದನ್ನು ತಪ್ಪಿಸಿ ರಸ್ತೆಗೆ ಕಾಲಿಡುತ್ತೇನೆ! ಕರಿಬೆಕ್ಕೊಂದು ಅಡ್ಡಬರಲು ಹವಣಿಸು ತ್ತದೆ! ಏನು ಅಪಶಕುನ! ಅದನ್ನು ತಪ್ಪಿಸ ಲೋಸುಗ ನಾನು ಮೂರು ಮಾರು ಮುಂದೆ ಹಾರಬೇಕಾಯಿತು! ಅದರ ಪರಿ ಣಾಮ ನಾನು ನೆಟ್ಟಗಾದೆ, ಕಾರಣ, ನನ್ನ ಕಾಲ ಹೆಬ್ಬೆರಳು ಉಳುಕಿ ಹೋ ಗಿತ್ತು! ಅಂತಿಂತು ಆಫೀಸಿಗೆ ಬಂದು ಬರೆಯುತ್ತೇನೆ—ಅವಳು ಬರಬೇಕೇ' ಎಂದೂ ಮುಗುಳ್ನಗೆಯಿಂದ ಬರುತಿದ್ದ ವಳು ಅಂದು ಸಿಡುಕಿನ ಮೋರೆ ಹಾಕಿ ಬರಬೇಕೆ?

ಕನ್ನಡ ನಾಡಿನ ಅನೇಕ ಉತ್ಸಾಹಿ ಸಾಹಿತಿಗಳಾದ ತರುಣ ತರುಣಿಯರ ಜೊತೆಗೆ ನಾನೂ ಸೇರಬೇಕೆಂದು ಬಯಸಿ ಬಹು ಪ್ರಯತ್ನಪಟ್ಟು ನನ್ನ ಮೊದಲ ಕತೆಯನ್ನು ಪ್ರಕಟಣೆಗಾಗಿ ಕಳಿಸಿದ್ದೆ—ಹಾಗೂ ಹೇಗೂ ಸಂಪಾದಕರ ದಯ ದಿಂದ ಅದು ಆಗಲೇ ಪ್ರಕಟವಾಗಿತ್ತು. ಹೆಣ್ಣಿನಿಂದ ಕತೆ ಹೇಳಿಸುತ್ತ ಕಡೆಗೆ ಅದೇ ಹೆಣ್ಣು ಕತೆ ಕೇಳುತಿದ್ದು ಗಂಡಿಗೊಲಿ ಯುವ ರೀತಿಯಲ್ಲಿ ಹೆಣೆದಿದ್ದೆ ಕತೆಯನ್ನು. ಆ ಕತೆಯು ಇವಳಿಗೆ ಅನ್ವಯಿಸುತಿ ತ್ತೆಂದು ಯಾರಿಗೆ ಗೊತ್ತು! ಈಗ ಉರಿದು ಬಿದ್ದು ಸರ್ವನಾಶ ಮಾಡುತ್ತೇನೆಂದು ಬೆದರಿಕೆ ಹಾಕಿದ್ದಾಳಲ್ಲಾ!

ಆಕಾಶದಿಂದ ಬೀಳುವ ನೀರಿನ ಹನಿ ಯು ಚಿಪ್ಪಿನಲ್ಲಿ ಬಿದ್ದರೆ ಮುತ್ತಾಗುವು ದಿಲ್ಲವೆ? ನೆಲದ ಮೇಲೆ ಬಿದ್ದರೆ ಸಿಹಿಯಾ ಗುವುದೂ ಇಲ್ಲವೆ? ಆದರೆ ಸ್ವರ್ಗೀಯ ಪ್ರೇಮದ ಗೋಪುರವನ್ನು ಕಟ್ಟಿ ರಸಿಕತನ ದಿಂದ ಗೋಪುರದ ಸೊಬಗಿಗೆ ಮನ ಸೋತು ಅದರ ಸೌಧವನ್ನೇರಲು ಬಯ ಸಿದರೆ ಅದು ಕುಸಿದು ಬೀಳಬೇಕೆ? ಆಕಾ ಶದಿಂದ ಬಿದ್ದ ನೀರಿನ ಬಿಂದುವು ನನ್ನ ಪಾಲಿಗೆ ಮಾತ್ರ ಉಪ್ಪಾಗಬೇಕೆ?

ಇಂತಹ ಯೋಚನೆಗಳು ಮನಸ್ಸಿನಲ್ಲಿ ಮೂಡಿದಂತೆಲ್ಲ ನಾನು ಅಧೀರನಾಗಿ- ಈ ಹಾಳು ಪ್ರಪಂಚದಲ್ಲಿ ಬದುಕುವುದ ಕ್ಕಿಂತ ವಿಷತಿಂದು ಸಾಯುವುದಾದರೂ ಲೇಸು ಎಂದು ತೀರ್ಮಾನಿಸಿದೆ . .

'ಅದೇನು ಯೋಚಿಸುತ್ತೀರಿ?' ಎಂದು ಮತ್ತವಳ ಪ್ರಶ್ನೆ'

'ವಿಷತಿಂದು ಸಾಯೋಣವೆನಿಸುತ್ತದೆ! ನಿನಗಾದರೂ ತೊಂದರೆ ತಪ್ಪಿತು—!'

'ವಿಷದ ಮಾತ್ರೆಗಳು ಬೇಕಿದ್ದರೆ ನನ್ನೊಡನಿವೆ-ನಾನು ಆತ್ಮಹತ್ಯ ಮಾಡಿ ಕೊಳ್ಳುವ ದೃಢನಿರ್ಧಾರ ಮಾಡಿಯೇ ಬಂದಿದ್ದೆ. ನೀವಾಗಿ ಕೊಲಗುತ್ತೀರಂ ತಲ್ಲ!—ಸರಿ—ಬೇಕಿದ್ದರೆ ಗುಳಿಗೆಯನ್ನು ತೆಗೆದುಕೊಳ್ಳಬಹುದು'—ಎಂದು ಹೇಳಿ ದಳು. ಅವಳ ಕೈಲೊಂದು ಗುಳಿಗೆಯೂ ಇತ್ತು!

ಇಷ್ಟು ಕಲ್ಲಿನ ಹೃದಯದವಳೆಂದು ನನಗಾಗಲೇ ಗೊತ್ತು. ಹೃದಯದ್ವೇಷ ಸಂ ತಾಪದೊಡನೆ ರೊಚ್ಚು ಮಿತಿಮೀರಿತು. ಎಚ್ಚೆತ್ತು ಇರಬೇಕೆಂದು ಎಷ್ಟು ಪ್ರಯತ್ನಿ ಸಿದರೂ ಕೈ ಸಾಗಲಿಲ್ಲ—ಕಣ್ಣು ಕತ್ತಲೆ ಕವಿಯಿತು.

"ಅಲ್ಲಾಂದ್ರೆ—ಏನು ಗಲಾಟೆ! ಮಾತಾ ಡಕೂಡದು—ಸದ್ದಿಲ್ಲದೆ ಮಲಗಿಕೊಂಡಿರ ಬೇಕು ಎಂದು ಡಾಕ್ಟರರು ಹೇಳಿದ್ದರೂ ನೀವು ಯಾಕೆ ಮಾತಾಡುತ್ತ ನನ್ನನ್ನು ಬಳಲಿಸುತ್ತೀರಿ? ಏನಾಗಿಲ್ಲವಂದ್ರೆ—ಭಯ ವೇನೂ ಇಲ್ಲ—ಕೊಂಚ ಜ್ವರ ಇದೆ ಅಷ್ಟೆ ಈಗಾಗಲೇ ಕೆಳಕ್ಕಿಳಿಯಬಹುದೆಂದು ಡಾಕ್ಟರರು ಹೇಳಿದ್ದಾರೆ ನನಗೋಸ್ಕರ ವಾಗಿಯಾದರೂ ದಯವಿಟ್ಟು ಸುಮ್ಮನೆ ಮಲಗಿಕೊಳ್ಳುತ್ತೀರಾ?"

ಕಣ್ಣು ತೆರೆದು ನೋಡುವಾಗ ಅವಳು ನನ್ನ ಬಳಿಯೇ ಇದ್ದು ನನ್ನನ್ನು ಉಪಚ ರಿಸುತಿದ್ದಳು—ವಾಚಕ ಮಹಾಶಯಾ! ನಾನಿದ್ದುದ್ದು ಆಸ್ಪತ್ರೆಯಲ್ಲಿ—ಡೆಲಿರಿ ಯಮ್ (Delirium) ೧೦೫ ಡಿಗ್ರಿ ಜ್ವರ ಸಮೇತ ಬಿದ್ದುದು ಭಯಂಕರವಾದ ಕನಸೊಂದು!

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ	ಬೆಳಗ್ಗೆ ೬-೩೫	ರಾತ್ರಿ ೭ ೪೦
ಷಟಲ್ ಕಣ್ಣಾನ್ನೂರು ಪರಿಯಂತ ಮಾತ್ರ	ಸಾಯಂ ೧೫ ೫೫	ಬೆಳಗ್ಗೆ ೯-೩೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭ ೫	ಸಾಯಂ ೭



A.D. 1700.

ಸುಮಾರು ಕ್ರಿ. ಶ 1704ರ ಲ್ಲಿ ಈ ಮಿನಿಟ್ ಮುಳ್ಳು ಮೊದಲು ಪ್ರಚಾರವಾಯಿ ತು ವಾಚು ತಯಾರಿಯ ಹೆಚ್ಚಿನ ಸಮಂಜಸತೆಯಲ್ಲಿ ವೃದ್ಧಿ ಸೂಚನೆಯದು.

A.D. 1944

ಮಿನಿಟ್ ಮುಳ್ಳು

ಆದರೆ ಇಂದು ಈ ಮಿನಿಟ್ ಮುಳ್ಳು ಇಲ್ಲದೆ ವಾಚುಗಳು ವಿಚಿತ್ರವಾಗಿ ತೋರುವವು ಹಳೆಗಾಲದ ವಿರಾಮ ದಿನಗಳಂತಿರದೆ, ಇಂದಿನ ನಮ್ಮ ಜೀವನದಲ್ಲಿ ಸಮಯ ನೋಡುವುದು ಅತೀವ ಆವಶ್ಯವಿದೆ ನಿಜವಾಗಿ ಗಂಟೆಗಳು ಮುಖ್ಯ ಅದ ರಲ್ಲೂ 'ಮಿನಿಟ್ ಮುಳ್ಳು ಅತೀ ಮುಖ್ಯ, ಸೆಕುಂದಗಳೂ ಅತ್ಯಗತ್ಯ ಆದ್ದರಿಂದ ಒಂದು ಒಳ್ಳೆಯ ವಾಚನ್ನು ಅದರಲ್ಲೂ ವೆಸ್ಟ್ ಎಂಡ್ ವಾಚನ್ನು ಇಟ್ಟುಕೊಳ್ಳುವುದು ಬಹಳ ಪ್ರಯೋಜನಕಾರಿ ಕೆಟ ಲಾಗು ಕೇಳಿದರೆ ಧರ್ಮಾರ್ಥ ಸಿಗುವುದು



ನ್ಯೂ ಕೆಲೆ ಬ್ರಿಜ್
ನಿಕ್ಕಲ್ ಸಿಲ್ವರ್ ರೂ 62
ಪೇಟೆಂಟ್ ನಿತ್ಯ ಶುಭ್ರ ಸ್ಟೀಲ್ ರೂ 71
18 ಕ್ಯಾರಟ್ ಗಟ್ಟಿ ಬಂಗಾರ—ರೂ 203

ನ್ಯೂ ಕೆಲೆ ಬ್ರಿ 'ಡಿ-2'
18 ಕ್ಯಾರೆಟ್ ಗಟ್ಟಿ ಬಂಗಾರ ರೂ 189

ಸರಿಯಾಗಿ ತಲಪದಿರುವುದರಿಂದ ಜಾಹೀರು ಮಾಡಿದ ಎಲ್ಲಾ ತರಗತಿಯನ್ನು ಒದಗಿಸಲು ಕಷ್ಟವಾದರೂ, ನಮ್ಮ ಲ್ಲಿರುವ ಸ್ಟೋಕಿನಲ್ಲಿ ಉತ್ತಮವಾದುದನ್ನು ಕಳುಹಿಸುವೆವು

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co.

Bombay - Calcutta

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಳ್ಳುದಾ ಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದ ಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE

The Joint Booking Office, KODIALBAIL

The Bank of Mangalore Limited, Mangalore.

ESTD: 192[illegible]

HEAD OFFICE BUNDER **BRANCHES**

Mangalore MANGALORE Moodabidri & Padubidri

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)
Savings bank Accounts 1½% p. a. on daily balances.
Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥದ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low,

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs.

Depot: **Maharata Galli, Hubli**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the [illegible]

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 5—5—1944 [ಸಂಚಿಕೆ 18]

ಕಲೆಕ್ಟರರ ಪ್ರಕಟಣೆ

ಮದ್ರಾಸು ಸಂಸ್ಥಾನದಿಂದ ಹೊರಗಿನ ಪ್ರದೇಶಗಳಿಗೆ ನ್ಯಾಯವಾಗಿ ಕೊಡಲ್ಪಟ್ಟ ಪರ್ಮಿಟು ಯಾನೆ ರಹದಾರಿಯ ಕರಾರು ಮತ್ತು ಶರ್ತ ಪ್ರಕಾರ ವಿನಾ ಭತ್ತ ಮತ್ತು ಅಕ್ಕಿ ಮತ್ತು ಲಗ್ತು ಪಟ್ಟಿಯಲ್ಲಿ ನಮೂದಿಸಿದ ಇತರ ಜೀನಸುಗಳ ಒಯ್ಯೋಣವನ್ನು ಮದ್ರಾಸು ಸರಕಾರವು ನಿರ್ಬಂಧಿಸಿರುವುದರಿಂದ ಸಧರಿ ಜೀನಸನ್ನು ಕಳ್ಳಾಟಿಕೆಯಿಂದ ರಫ್ತು ಮಾಡುವುದನ್ನು ತಡೆಮಾಡುವದು ಅಗತ್ಯವಾಗಿರುವದರಿಂದ ಈ ಶೆಡ್ಯೂಲಿನಲ್ಲಿ ನಮೂದಿಸಿ ಮಾರ್ಗಗಳಲ್ಲಿ ಹೋಗುವ ಯಾವತ್ತು ವಾಹನಗಳನ್ನು ನಿಲ್ಲಿಸಿ ಪರಿಶೋಧಿಸುವುದಕ್ಕೆ ಮತ್ತು ಅವುಗಳಲ್ಲಿ ಒಯ್ಯುವ ಭತ್ತ, ಅಕ್ಕಿ ಯಾ ಲಗ್ತು ಪಟ್ಟಿಯಲ್ಲಿ ಕಾಣಿಸಿದ ಇತರ ಜೀನಸುಗಳಿಗೆ ನ್ಯಾಯವಾದ ಪರ್ಮಿಟು ಯಾನೆ ರಹದಾರಿ ಉಂಟೋ ಎಂದು ತನ್ನಿಕೆ ನಡಿಸಿ ಸದ್ರಿ ಜೀನಸುಗಳ ಚಲಾವಣೆಯನ್ನು ತಪಾಸಣೆ ಮಾಡುವರೆ ಕೂಡ ಸದರಿ ಗಡಿನಾಡು ಮಾರ್ಗಗಳು ಇರುವ ಚಕಬಂದಿಯ ಫಿರ್ಕಾ ರೆವೆನ್ಯು ಇನ್ಸ್‌ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ರೆವೆನ್ಯು ಇಲಾಖೆಯ ಎಲ್ಲಾ ಅಧೀಸರರಿಗೂ, ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಅಧೀಸರ್ ಮತ್ತು ಅವರ ಮೇಲಿನ ತರಗತಿಯ ಕಮರ್ಶಿಯಲ್ ಟೇಕ್ಸ್ ಇಲಾಖೆಯ ಎಲ್ಲಾ ಅಧೀಸರರಿಗೂ, ಸಬ್ ಇನ್ಸ್‌ಪೆಕ್ಟರ ಮತ್ತು ಅವರ ಮೇಲಿನ ತರಗತಿಯ ಪೋಲೀಸು ಮತ್ತು ಎಕ್ಸೈಜು ಇಲಾಖೆಗಳ ಎಲ್ಲಾ ಅಧೀಸರರಿಗೂ, ಡಿಫೆನ್ಸ್ ಆಫ್ ಇಂಡಿಯಾ ಕಾನೂನುಗಳ ನಂಬ್ರ 59–13ನೇ ರೂಲು ಪ್ರಕಾರ ಮೊಕ್ತೇಸರು ಆದ ಎಲ್ಲಾ ಚೌಕಿದಾರರಿಗೂ ಮತ್ತು ಸಂಬಂಧ ಪಟ್ಟ ಗ್ರಾಮ ಉದ್ಯೋಗಸ್ತರಿಗೂ ಕೂಡ ಪಬ್ಲಿಕ್ (ಯುದ್ಧ) ಇಲಾಖೆಯ ತಾರೀಕು ೨೧–೧–೧೯೪೨ರ ನಂಬ್ರ ೨೪೩ನೇ ಗವರ್ನಮೆಂಟ್ ಹುಕುಮಿನಲ್ಲಿ ಅಧಿಕಾರ ಹೊಂದಿದ ಪ್ರಕಾರ ಡಿಫೆನ್ಸ್ ಆಫ್ ಇಂಡಿಯಾ ರೂಲುಗಳ ಪೈಕಿ ೮೧ (೨) (b)ನೇ ರೂಲು ಪ್ರಕಾರ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್ ರಾವ್ ಸಾಹೇಬ್ ಶ್ರೀ ಪಿ. ರಾಮದಾಸ್, ಬಿ. ಎ., ಆದ ನಾನು ಈ ಮೂಲಕ ಅಧಿಕಾರ ಕೊಟ್ಟಿರುತ್ತೇನೆ.

(ತಾ. 30–4–44)

ಶೆಡ್ಯೂಲು

ಕರಾವಳಿರಸ್ತೆ ನಂಬ್ರ ೨೨–ಉತ್ತರ ಮಂಗಳೂರು ಶೀರೂರು ಕುಂದಾಪುರ ತಾಲೂಕು ಶೀರೂರು ಗ್ರಾಮ, ನಾಗೋಡಿ ರಸ್ತೆ ಕುಂದಾಪುರ ತಾಲೂಕು ಕೊಲ್ಲೂರು, ನಾಗೋಡಿ, ಕೋಟೆ ಶೀರೂರು ಗ್ರಾಮ, ನಾಗೋಡಿ ಬೆನ್ನಟ್ಟಿ ಶಾಖೆಗಳು ಕುಂದಾಪುರ ತಾಲೂಕು ಕೋಟ ಶೀರೂರು ಹೆಬ್ಬಿಗೆ ಗ್ರಾಮ, ಕಂಡ್ಲೂರು ಹೊಸಂಗಡಿ ರಸ್ತೆ ಕುಂದಾಪುರ ತಾಲೂಕು ಎಡಮೊಗ್ಗ, ಹೊಸಂಗಡಿ ಗ್ರಾಮ, ಕಾರ್ಕಳ ಆಗುಂಬೆ ರಸ್ತೆ ಕಾರ್ಕಳ ತಾಲೂಕು ನಾಡ್ಪಾಲ್ ಗ್ರಾಮ, ಶೋಣ ಮಂಜರಾಬಾದ್ ರಸ್ತೆ ಪುತ್ತೂರು ತಾಲೂಕು ಶಿರಾಡಿ ಗ್ರಾಮ, ಮಂಗಳೂರು ಚಾರ್ಮಾಡಿ ರಸ್ತೆ ಪುತ್ತೂರು ತಾಲೂಕು ಚಾರ್ಮಾಡಿ ಗ್ರಾಮ, ಬಿಸ್ಲಿಘಾಟ ರಸ್ತೆ ಪುತ್ತೂರು ತಾಲೂಕು ಬೀಳಿನೆಲೆ ಗ್ರಾಮ, ಮಂಗಳೂರು ಮಡಿಕೇರಿ ರಸ್ತೆ ಪುತ್ತೂರು ತಾಲೂಕು ಸಂಪಾಜೆ ಗ್ರಾಮ.

ಪಟ್ಟಿ

ಮದ್ರಾಸ್ ಸಂಸ್ಥಾನದಿಂದ ಹೊರಗಿನ ಪ್ರದೇಶಗಳಿಗೆ ಪರ್ಮಿಟು ವಿನಾ ಒಯ್ಯೋಣವು ನಿರ್ಬಂಧಿಸಲ್ಪಟ್ಟ ಜೀನಸುಗಳ ಪಟ್ಟಿ–

೧. ಭತ್ತ ಮತ್ತು ಅಕ್ಕಿ (ತೌಡು ಸಮೇತ) ೨. ಗೋದಿ ಮತ್ತು ಅದರ ತಯಾರಿಕೆಗಳು– ೩. ಜೋಳ (ಜೋವಾರ್), ೪. ಕುಂಬು (ಬಜ್ರಿ); ೫. ಕೊರ್ರ; ೬. ರಾಗಿ; ೭. ಕಡಲೆ; ೮. ಹುರುಳಿ; ೯. ತೊಗರಿ; ೧೦. ಹೆಸ್ರು, ೧೧. ಉದ್ದು, ೧೨. ಬಟಾಣಿ ಬೇಳೆ (ಲಾಂಕ ಬೇಳೆ) ೧೩. ಬಗಡೆ. ೧೪. ಸಕ್ಕರೆ, ೧೫. ಬೆಲ್ಲ, ೧೬. ಮೆಣಸು ಮೆಣಸಿನ ತಯಾರಿಕೆಗಳು, ೧೭. ಹುಣಸೆ ಹಣ್ಣು, ೧೮. ನೀರುಳ್ಳಿ, ೧೯. ಬೆಳ್ಳುಳ್ಳಿ ೨೦. ಎಳ್ಳೆಣ್ಣೆ, ೨೧. ನೆಲಗಡಲೆಣ್ಣೆ, ೨೨. ಜಾನುವಾರು ತುಪ್ಪ ೨೩. ವನಸ್ಪತಿಯಿಂದ ತಯಾರಿಸಿದ ತುಪ್ಪ ೨೪. ಬೆಣ್ಣೆ, ೨೫. ಜಾನುವಾರುಗಳು ೨೬. ಕುರಿಗಳು, ೨೭. ಆಡುಗಳು ೨೮. ಬಟಾಟೆ, ೨೯. ಉಪ್ಪು ೩೦. ಎಣ್ಣೆಯ ಬೀಜಗಳು, ಮತ್ತು ಹತ್ತಿಯ ಬೀಜ, ೩೧. ಎಲ್ಲಾ ತರದ ಹಿಂಡಿಗಳು, ೩೨. ಕೊಬ್ಬರದ ಪ್ರೊಪ್ಪಿನ ಬೀಜಗಳು, ೩೩. ಮೀನಿನ ಪುಡಿ, ಮೀನಿನ ಹಿಂಡಿ, ಎಲುಬುಗಳು, ಎಲುಬಿನ ಪುಡಿ, ಬೋನ್ ಗ್ರಿಸ್ಟ್, ಗ್ರಿಸ್ಟ್, ಬೋನ್ ಸುಪರ್, ಹುಪ್ಸ್, ಕೊಂಬು, ಹೂಪ್ ಮೀಲ್, ಹೋರ್ನ್ ಮೀಲ್; ೩೪. ಹತ್ತಿಯ ನೂಲು, ೩೫. ಕಟ್ಟಿಗೆ, ೩೬. ಸಣಬು (all fibre or their products.) ೩೭. ಸಿಲ್ಕ್, ೩೮. ಸಿಂಕೋನದ ತೊಗಟೆ.

ಅಪೂರ್ವ ಸಂಗೀತ! ಕನ್ನಡ ಚಿತ್ರ ಅಪೂರ್ವ ಸಂಗೀತ!

ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಕನ್ನಡ ಚಿತ್ರ ಬಂದಿದೆ!

5-5-1944 **5-5-1944**

ನಿಮ್ಮ ಮುದ್ದಿನ ಮನೆಮಾತು ಕನ್ನಡವು ರಜತಪರದೆಯಲ್ಲಿ ಇಂಪಾಗಿ ಧ್ವನಿಸುವುದನ್ನು ಕೇಳಿ ಆನಂದಿಸಿರಿ!

ಕನ್ನಡ ನಾಡಿನಲ್ಲೆಲ್ಲಾ ಹೆಸರಾಂತ ಚಿತ್ರರತ್ನ!

— ಃ — ಃ — ಎಚ್. ಆರ್. ಜಿ. ಸಿ. ಶ್ರೀ. ಪಿಕ್ಚರ್ಸ್ ಮತ್ತು ಟಿ. ಎಸ್. ಶಿವಬಸವ ಸ್ವಾಮಿ ಕೃತ — ಃ — ಃ —

ವಾಣಿ ★ **ವಾಣಿ** ★ ವಾಣಿ

ಅಖಿಲಭಾರತದ ಪ್ರಸಿದ್ಧ ಪಿಟಿಲುವಾದನ ನಿಪುಣ ಸಂಗೀತ ರತ್ನ ಟಿ. ಚೌಡಯ್ಯನವರ ಅಮರ ಸಂಗೀತ ಮತ್ತು ಅಸದೃಶ ಅಭಿನಯಗಳು! ಹೆಸರಾಂತ ವಿನೋದ ಪಟು ಶ್ರೀ. ಕೆ. ಹಿರಣ್ಣಯ್ಯನವರ ಅಪೂರ್ವ ಅಭಿನಯ. ಕೋಕಿಲ ಕಂಠ ಬಳ್ಳಾರಿ ಲಲಿತ, ವೈರತ್ನ, ಪಂಡರಿ ಬಾಯಿ, ಟಿ. ಎನ್. ಚಂದ್ರಮ್ಮ, ಎ. ನಾರಾಯಣ ರಾವ್, ಎಂ. ಎಸ್. ಮಾಧವರಾವ್, ಬಿ. ಎನ್. ಸುಬ್ಬಯ್ಯ ಮೊದಲಾದ ಹೆಸರಾಂತ ಕನ್ನಡದ ನಟನಟಿಯರು.

ಸೆಂಟ್ರಲ್ ಟೊಕಿಸ್, ಮಂಗಳೂರು.

೧೫ ವರ್ಷಗಳ ಯೋಜನೆ

ರೂ. ೧೦,೦೦೦ ಕೋಟಿ ಬೇಕಾಗುವುದು

[illegible] ದೇಶದ ಸಂಪತ್ತನ್ನು [illegible] ರೀತಿಗಳನ್ನು [illegible] ಬಂದು [illegible] ಜನಹಿತಕ್ಕೆ ನಮ್ಮ [illegible] ಸೇರಿ [illegible] ಪ್ರಯೋಜನಕಾರಿಯಾದ ಕೆಲಸವನ್ನು ಮಾಡಿತು. ಆದರೆ ಅರ್ಧದಲ್ಲಿ ಯುದ್ಧವೂ, ಯುದ್ಧದ ದೆಸೆಯಿಂದ ರಾಜಕೀಯ ಬಿಕ್ಕಟ್ಟೂ ಬಂದು ಅದರ ಕೆಲಸ ಪೂರ್ತಿಯಾಗಲಿಲ್ಲ. ಕಳೆದ ವರ್ಷದಿಂದ ಸರಕಾರವೂ ಸಹ ಯುದ್ಧೋತ್ತರ ರಚನೆಯೆಂಬ ಹೆಸರು ಹಾಕಿಕೊಂಡು ದೇಶದ ಸಂಪತ್ತಿನ ವೃದ್ಧಿಕಾರ್ಯ ಮೊದಲಾದ ವಿಷಯಗಳನ್ನು ಚರ್ಚಿಸುತ್ತಿದೆ. ಈಗಿನ ಸರಕಾರದ ಅಭಿಪ್ರಾಯ ಹೇಗೂ ಇರಲಿ, ಯುದ್ಧ ಮುಗಿದ ಅನಂತರವಾದರೂ ಜನತೆಯ ನಾಯಕರ ಕೈಯಲ್ಲಿ ಸರಕಾರ ಬರುವುದು ಎಂಬ ಭರವಸೆಯಿಂದ ನಮ್ಮ ನಾಯಕರು ಸರಕಾರದ ಸೂತ್ರಧಾರಿಗಳಾಗುವುದಾದರೆ ಏನು ಮಾಡಬೇಕು ಎಂಬುದನ್ನು ತೋರಿಸಿ ಕೊಡಲಿಕ್ಕೆ ಕಳೆದ ಜನವರಿಯಲ್ಲಿ ಸರ್ ಪುರುಷೋತ್ತಮದಾಸ್ ಠಾಕೂರ್ ದಾಸ್, ಶ್ರೀ। ಜೆ. ಆರ್. ಡಿ. ತಾತಾ, ಶ್ರೀ। ಜಿ. ಡಿ. ಬಿರ್ಲಾ, ಸರ್ ಅರ್ದೇಶಿರ್ ದಲಾಲ್, ಸರ್ ಶ್ರೀರಾಮ್, ಶ್ರೀ. ಕಸ್ತೂರಭಾಯ್ ಲಾಲ್ಭಾಯ್, ಶ್ರೀ! ಎ. ಡಿ. ಶ್ರೋಫ್, ಮತ್ತು ಶ್ರೀ। ಜೋನ್ ಮತ್ತಾಯ್ ಮೊದಲಾದ ಧನವಂತರೂ ವಿಚಾರಿಗಳೂ ಸೇರಿ ಒಂದು ಪೂರ್ವೋಪಾಯವನ್ನು ಪ್ರಕಟಿಸಿದ್ದಾರೆ. ಅದರ ಸಾರಾಂಶ ಇಲ್ಲಿ ಬಟ್ಟಿ ಇಳಿಸಿದ್ದೇವೆ. ಇನ್ನು ಹದಿನೈದು ವರ್ಷಗಳೊಳಗೆ ನಮ್ಮ ಜನರ ಸರಾಸರಿ ಸಂಪತ್ತು ಈಗಿನ ಎರಡರಷ್ಟು ಆಗಬೇಕು. ಅಷ್ಟರಲ್ಲಿ ನಮ್ಮ ಜನ ಸಂಖ್ಯೆ ವರ್ಷಕ್ಕೆ ೫೦ ಲಕ್ಷ ಹೆಚ್ಚುತ್ತಿದೆ; ಆದುದರಿಂದ ಸರಾಸರಿ ಸಂಪತ್ತು ಈಗಿರುವುದರ ಎರಡರಷ್ಟಾಗಬೇಕಾದರೆ ದೇಶದ ಒಟ್ಟು ಉತ್ಪತ್ತಿ ಈಗಿರುವುದರ ಮೂರರಷ್ಟು ಆಗಲೇ ಬೇಕು. ಭೂಮಿಯ ಉತ್ಪತ್ತಿ ಹೆಚ್ಚು ಮಾಡುವುದು ಕಷ್ಟವಾದ್ದರಿಂದ ಅದನ್ನು ಇಮ್ಮಡಿ ಮಾಡಿ ಚಿಕ್ಕ ದೊಡ್ಡ ಕಾರ್ಖಾನೆಗಳ ಉತ್ಪತ್ತಿ ಐದರಷ್ಟು ಮಾಡಬೇಕೆಂಬುದೇ ಗುರಿ. ಹಾಗೆ ಹೆಚ್ಚಿಸಿದರೂ ದೇಶದ ಸಂಪತ್ತಿನ ಹೆಚ್ಚಿನ ಭಾಗ ಭೂಮಿಯ ಉತ್ಪತ್ತಿಯೇ ಆಗುವುದು, ಜನರಲ್ಲಿ ಹೆಚ್ಚಿನ ಮಂದಿ ಕೃಷಿಯಲ್ಲೇ ನಿರತರಾಗಿರಬೇಕಾದೀತು.

ದೇಶದ ಸಂಪತ್ತನ್ನು ಹೆಚ್ಚಿಸುವುದು ದೇಶದ ಜನರ ಜೀವನ ಸ್ಥಿತಿಯನ್ನು ಸುಧಾರಿಸಲಿಕ್ಕೆ. ಹಾಗಾದರೆ ಈಗಿನ ಸ್ಥಿತಿ ಹೇಗಿದೆ. ಮುಂದೆ ಹೇಗಾಗಬೇಕು. ಎಂಬುದನ್ನು ವಿಚಾರಿಸುವ. ತಿಳಿದವರ ಅಭಿಪ್ರಾಯದಂತೆ ನಮ್ಮಲ್ಲಿನ ದೃಢಕಾಯರಾಗಿ ಇರಬೇಕಾದರೆ ಪ್ರತಿಯೊಬ್ಬನಿಗೆ ಹೆಚ್ಚು ಕಡಿಮೆ ದಿನಕ್ಕೆ ೪೦ ತೊಲೆ ಅಕ್ಕಿ, ಗೋದಿ, ರಾಗಿ ಮೊದಲಾದ ಏಕ ದಳ; ೮ ತೊಲೆ ದ್ವಿದಳ ಧಾನ್ಯ; ೫ ತೊಲೆ ಸಕ್ಕರೆ ಯಾ ಬೆಲ್ಲ; ೨೫ ತೊಲೆ ಕಾಯಿಪಲ್ಯ; ೫ ತೊಲೆ ಹಣ್ಣು ಹಂಪಲು; ೪ ತೊಲೆ ಎಣ್ಣೆ, ತುಪ್ಪ ತೊಲೆ ೨೦ ಹಾಲು ಇಲ್ಲವೆ ೬ ತೊಲೆ ಮಾಂಸ, ಮೀನು, ಮೊಟ್ಟೆ ಇಷ್ಟು ಆಹಾರ ಬೇಕು. ಅಂದರೆ ಯುದ್ಧದ ಮೊದಲಿನ ಧಾರಣೆ ತೆಗೆದುಕೊಂಡರೂ, ಜನರ ಆಹಾರಕ್ಕೆ ಒಬ್ಬನಿಗೆ ತಿಂಗಳಿಗೆ ೪॥ ರೂಪಾಯಿ ಅಂದರೆ ವರ್ಷಕ್ಕೆ ಇಡೀ ದೇಶಕ್ಕೆ ೨೧೦೦ ಕೋಟಿ ರೂಪಾಯಿ ಬೇಕಾಗುವುದು.

ಅನ್ನವಾದ ಮೇಲೆ ವಸ್ತ್ರ. ಬೇರೆ ಬೇರೆ ದೇಶಗಳಲ್ಲಿ ಜನರು ಉಪಯೋಗಿಸುವ ವಸ್ತ್ರದ ಅಳತೆ ನೋಡಿದರೆ ಚಳಿ ದೇಶಗಳಷ್ಟು ಹೆಚ್ಚು ನಮಗೆ ಬೇಡವಾದರೂ ನಮ್ಮಲ್ಲೂ ಚಳಿಯಿರುವ ಪ್ರದೇಶಗಳನ್ನು ಲೆಕ್ಕಕ್ಕೆ ಹಿಡಿದರೆ ವರ್ಷಕ್ಕೆ ಒಬ್ಬನಿಗೆ ಸರಾಸರಿ ೩೦ ಗಜ ವಸ್ತ್ರ ಬೇಕೆಂದು ಹೇಳಬಹುದು. ಇದಕ್ಕೆ ಈಗಿರುವ ಜನರಿಗೆ ಯುದ್ಧದ ಮೊದಲಿನ ಧಾರಣೆಯಲ್ಲಿ ವರ್ಷಕ್ಕೆ ೨೫೫ ಕೋಟಿ ರೂಪಾಯಿ ಬೇಕು.

ಇನ್ನು ಇರಲಿಕ್ಕೆ ಮನೆ. ಒಬ್ಬನಿಗೆ ಸರಾಸರಿ ೧೦೦ ಚದರಡಿ ಸ್ಥಳ ಬೇಕೆಂದು ಹಿಡಿದರೆ ಸಾಕಷ್ಟು ಗಾಳಿ ಬೆಳಕುಗಳಿಗೆ ಅವಕಾಶವಿದ್ದು ಚೊಕ್ಕಟವಾದ ಮನೆಗಳನ್ನು ಕಟ್ಟಿ ಅವನ್ನು ತಕ್ಕ ಸ್ಥಿತಿಯಲ್ಲಿಡಲಿಕ್ಕೆ ವರ್ಷಕ್ಕೆ ೨೫೮ ಕೋಟಿ ರೂಪಾಯಿಯಾದರೂ ತಗಲುವುದು.

ಆರೋಗ್ಯ ರಕ್ಷಣೆಗೆ ತಕ್ಕ ವೈದ್ಯ ಸಹಾಯವೂ ಉಪಶಮನವೂ ಬೇಕಾಗಿದೆ. ಹುಟ್ಟಿದ ಮಕ್ಕಳಲ್ಲಿ ಸಾವಿರಕ್ಕೆ ೩೮ರಂತೆ ಒಸ್ಟ್ರೇಲಿಯದಲ್ಲಿ ೫೩ರಂತೆ ಇಂಗ್ಲಾಂಡಿನಲ್ಲಿ ೪೮ರಂತೆ ಅಮೆರಿಕದಲ್ಲಿ ೧೨ ತಿಂಗಳೊಳಗೆ ಸಾಯುವುದಿದ್ದರೆ, ನಮ್ಮಲ್ಲಿ ಸಾವಿರಕ್ಕೆ ೪೬೭ ಸಾಯುತ್ತವೆ. ಹೀಗಾಗಿ ಜನರ ಸರಾಸರಿ ಜೀವಮಾನ ಒಸ್ಟ್ರೇಲಿಯದಲ್ಲಿ ೬೫, ಇಂಗ್ಲಾಂಡಿನಲ್ಲಿ ೬೨, ಅಮೆರಿಕದಲ್ಲಿ ೬೨ ವರ್ಷವಾದರೆ ನಮ್ಮಲ್ಲಿ ಬರೀ ೨೬ ವರ್ಷ. ನಮ್ಮ ಜನರಿಗೆ ಅಗತ್ಯವಿದ್ದ ಶುದ್ಧವಾದ ಕುಡಿಯುವ ನೀರು ಸಿಕ್ಕುವುದು ಕಷ್ಟ. ಹೊಲಸು ಕೊಳೆಗಳನ್ನು ತೆಗೆದು ಸ್ವಚ್ಛತೆಯಿಡುವ ಏರ್ಪಾಡು ಸಾಕಷ್ಟಿಲ್ಲ, ಆಸ್ಪತ್ರೆಗಳು ವಿರಳ, ಬಾಣಂತಿಯರ ಆರೈಕೆಗೆ ಬೇಕಾದಷ್ಟು ಮಂದಿ ದಾದಿಯರಿಲ್ಲ. ಪ್ರತಿಯೊಂದು ಹಳ್ಳಿಗೂ ಸ್ವಚ್ಛ ನೀರು, ಧೂಳು, ಕೊಳೆಯಿಲ್ಲದ ಮಾರ್ಗಗಳಿರಬೇಕು; ಹಳ್ಳಿಗೊಂದರಂತೆ ವೈದ್ಯಶಾಲೆಯಿರಬೇಕು. ಪ್ರತಿ ದೊಡ್ಡ ಹಳ್ಳಿಗೆ ಆಸ್ಪತ್ರೆಯಿರಬೇಕು; ವಿಶೇಷ ಕಾಯಿಲೆಗಳ ಉಪಶಮನಕ್ಕೆ ತಕ್ಕ ಏರ್ಪಾಡು ಪ್ರತಿ ನಗರದಲ್ಲಿರಬೇಕು. ಇದಕ್ಕೆಲ್ಲ ಆರಂಭದಲ್ಲಿ ೨೮೧ ಕೋಟಿ, ಮತ್ತೆ ವರ್ಷಕ್ಕೆ ೧೮೫ ಕೋಟಿ ತಗಲಬಹುದು.

ಆರು ತುಂಬಿದ ಮಕ್ಕಳು ಶಾಲೆಗೆ ಹೋಗಲೇ ಬೇಕು; ೧೧ ತುಂಬುವ ವರೆಗಾದರೂ ಅವರು ಶಾಲೆಗೆ ಹೋಗುತ್ತಿರಬೇಕು. ಅಂದರೆ ಈ ಪ್ರಾಯದ ೪೪ ಕೋಟಿ ಮಕ್ಕಳು ಹಳ್ಳಿಗಳಲ್ಲೂ, ೦.೭ ಕೋಟಿ ಪೇಟೆಗಳಲ್ಲೂ ಇದ್ದಾರೆಂದಾಯಿತು. ಹಳ್ಳಿಯ ಶಾಲೆಗಳ ಖರ್ಚು ವಿದ್ಯಾರ್ಥಿಗೆ ವರ್ಷಕ್ಕೆ ರೂ. ೧೫, ಪೇಟೆಯ ಶಾಲೆಗೆ ವರ್ಷಕ್ಕೆ ರೂ. ೨೫ ಎಂದು ಹಿಡಿದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕನೇ ವರ್ಷಕ್ಕೆ ೮೨ ಕೋಟಿ ಬೇಕಾಗುವುದು. ೧೧ ದಾಟಿದ್ದು ಬರಹ ಬಾರದವರಿಗೆ ಬರಹವಂತರಾಗಿ ಮಾಡಲಿಕ್ಕೆ ೧೫ ವರ್ಷಗಳ ಖರ್ಚು ರೂ. ೬೩ ಕೋಟಿ.

ಹೀಗೆ ಮನುಷ್ಯರಿಗೆ ಬೇಕಾದ ವಿಷಯಗಳಲ್ಲಿ ಅತಿ ಕಡಿಮೆಯೆಂದರೆ—ಅನ್ನ, ವಸ್ತ್ರ, ಮನೆ, ಆರೋಗ್ಯ, ಓದು ಬರಹ—ಇವುಗಳಿಗೆನೇ ವರ್ಷಕ್ಕೆ ೨೯೦೦ ಕೋಟಿ ರೂಪಾಯಿ ಬೇಕು. ಅಂದರೆ ನಮ್ಮ ಉತ್ಪತ್ತಿ ಸರಾಸರಿ ತಲೆಗೆ ರೂ. ೭೪ ಬೇಕು; ಈಗಿನ ಉತ್ಪತ್ತಿ ತಲಾ ರೂ. ೬೫ಕ್ಕೆ ಮಿಕ್ಕಿಲ್ಲ. ಬೇರೆ ದೇಶಗಳಲ್ಲಿ ಹೇಗಿದೆ? ತಲಾ ಒಂದರ ಉತ್ಪತ್ತಿ ಒಸ್ಟ್ರೇಲಿಯದಲ್ಲಿ ೭೯೨ ರೂ. ಇಂಗ್ಲಾಂಡಿನಲ್ಲಿ ೯೮೦ ರೂ., ಅಮೇರಿಕದಲ್ಲಿ ೧೪೦೬ ರೂ. ಜಪಾನಿನಲ್ಲಿ ಸಹ ೨೧೮ ರೂ. ನಮ್ಮ ಈಗಿನ ಉತ್ಪತ್ತಿ ೧೫ ವರ್ಷಗಳಲ್ಲಿ ಮೂರರಷ್ಟು ಏರಿಸಿದರೂ ಜನ ಸಂಖ್ಯೆ ಹೆಚ್ಚುವುದರಿಂದ ಸರಾಸರಿ ತಲಾ ಒಬ್ಬನಿಗೆ ರೂ. ೧೪೮ ಆಗಬಹುದು. ರಷ್ಯದಲ್ಲಿ ೧೨ ವರ್ಷಗಳೊಳಗೆ ದೇಶದ ಉತ್ಪತ್ತಿಯನ್ನು ಐದರಷ್ಟು ಹೆಚ್ಚಿಸಿದ್ದು ನಿಜವೆಂದಾದರೂ ನಮ್ಮಲ್ಲಿ ಅದೇ ಕ್ರಮ ತರುವ ಇಚ್ಛೆ ಯೋಜಕರಿಗಿಲ್ಲವಾದ್ದರಿಂದ ಈಗಿನ ಉತ್ಪತ್ತಿಯು ಮೂರರಷ್ಟಾದರೂ ಮಾಡಬೇಕೆಂದು ಅವರ ಆಶೆ.

ಮೂಲ ಯುಕ್ತಿ

ಹಿಂದೆ ಹೇಳಿದಂತೆ ಕಾರ್ಖಾನೆಗಳ ಉತ್ಪತ್ತಿ ಐದರಷ್ಟು ಹೆಚ್ಚಿಸಬೇಕಾದರೆ ವಿದ್ಯುತ್ತು ಉತ್ಪಾದನೆ; ಖನಿಜಗಳ ಉತ್ಪಾದನೆ; ಲೋಹಗಳ ಕಾರ್ಖಾನೆಗಳು ಯಂತ್ರ ತಯಾರಿಸುವ ಕಾರ್ಖಾನೆಗಳು; ಕೈಗಾರಿಕೆಗಳಿಗೆ ಬೇಕಾದ ರಸಾಯನ ದ್ರವ್ಯಗಳು, ಕೃಷಿಗೆ ಬೇಕಾದ ಗೊಬ್ಬರ ಬಣ್ಣದ ಕಾರ್ಖಾನೆ, ಪ್ಲೇಸ್ಟಿಕ್ಸ್, ಮದ್ದುಗಳು; ಯುದ್ಧೋಪಕರಣಗಳು; ವಾಹನಗಳು; ಸಿಮೆಂಟು—ಈ ಕೈಗಾರಿಕೆಗಳನ್ನು ವಿಶೇಷ ರೀತಿಯಲ್ಲಿ ಬೆಳೆಸಿ ಭದ್ರಗೊಳಿಸಬೇಕು. ಇವುಗಳ ಮೇಲೆ ಇತರ ಉದ್ಯಮಗಳು ಹೊಂದಿವೆ.

ಇವುಗಳೊಂದಿಗೆ ಜನರ ನಿತ್ಯೋಪಯೋಗದ ವಸ್ತ್ರ, ಗಾಜು, ಚರ್ಮದ ವಸ್ತುಗಳು; ಕಾಗದ ಸಿಗರೇಟು, ಎಣ್ಣೆ, ಸಾಬೂನು—ಇವುಗಳ ಕೈಗಾರಿಕೆಗಳೂ ಬೆಳೆಯ ಬೇಕು. ಇವೆರಡು ತರದ ಕೈಗಾರಿಕೆಗಳಿಂದ ಜನರ ಉತ್ಪತ್ತಿ ಹೆಚ್ಚಿದಂತೆ ಕುರ್ಚಿ ಮೇಜುಗಳು, ಪುಸ್ತಕಗಳು, ಸಿಂಗಾರದ ಒಡವೆಗಳು—ಇಂಥವುಗಳೂ ಅಗತ್ಯವಾಗುವುವು. ಇಷ್ಟೆಲ್ಲ ಮಾಡಲಿಕ್ಕೆ ೪೪೮೦ ಕೋಟಿ ರೂಪಾಯಿಯ ಮೂಲ ಧನ ಬೇಕಾದೀತು; ಈಗ ಉಪಯೋಗದಲ್ಲಿರುವ ಮೂಲಧನ ಬರೀ ೭೦೦ ಕೋಟಿಯಿರಬಹುದು.

ಕೃಷಿಯಿಂದ ಬರುವ ಉತ್ಪತ್ತಿ ಎರಡರಷ್ಟು ಮಾಡಬೇಕಾದರೆ ಈಗಿನಂತೆ ಸರಾಸರಿ ೩ ಎಕ್ರೆ ಜಮೀನು ಒಬ್ಬನಿಗಿರುವ ಬದಲು ಇನ್ನೂ ಹೆಚ್ಚಿಸಬೇಕು; ಅಂದರೆ ಕೃಷಿಕರೆಲ್ಲ ಒಟ್ಟಾಗಿ ಸಹಕರಿಸಿ ದೊಡ್ಡ ದೊಡ್ಡ ಜಮೀನು ಕೃಷಿ ಮಾಡಬೇಕು. ಹಳ್ಳಿಯವರ ಮೇಲಿದ್ದ ಸಾಲದ ಹೊರೆ—ಇದು ೧೨೦೧ ಕೋಟಿ ರೂಪಾಯಿ ಇರಬಹುದು—ಕಡಿಮೆ ಮಾಡುವಂತೆ ತಕ್ಕ ಸಹಕಾರ ಕ್ರಮ ಆಚರಣೆಗೆ ಬರಬೇಕು. ಕೃಷಿಸ್ಥಳದ ಊರ್ಜಿತಕ್ಕಾಗಿ ಆರಂಭದಲ್ಲಿ ೨೦೦ ಕೋಟಿ, ಮತ್ತೆ ವರ್ಷಕ್ಕೆ ೧೦ ಕೋಟಿ ವೆಚ್ಚ ಮಾಡಬೇಕಾದೀತು. ಇದಲ್ಲದೆ ಇನ್ನೂ ಬೇಕಾಗುವ ಕಾಲುವೆ, ಕೆರೆ ಮೊದಲಾದ ನೀರಾವರಿಗಳಿಗೆ; ಮಾದರಿ ಕ್ಷೇತ್ರಗಳನ್ನು ನಡೆಸಲಿಕ್ಕೆ ಬೇಕಾಗುವ ಖರ್ಚನ್ನು ಕೂಡಿಸಿದರೆ ಆರಂಭದಲ್ಲಿ ೮೪೫ ಕೋಟಿ, ಅನಂತರ ವರ್ಷಕ್ಕೆ ೪೨೦ ಕೋಟಿ ಬೇಕಾದೀತು.

ವ್ಯಾಪಾರದ ಸೌಕರ್ಯಕ್ಕಾಗಿ ಈಗಿರುವ ೪೮,೦೦೦ ಮೈಲು ರೈಲು ಮಾರ್ಗವನ್ನು ಒಂದುವರೆಯಷ್ಟಾಗಿಯೂ, ಈಗ ೧೦೦ ಚದರ ಮೈಲಿಗೆ ೩೫ ಮೈಲು ಉದ್ದದಷ್ಟಿರುವ ಇತರ ಮಾರ್ಗಗಳನ್ನು ಎರಡರಷ್ಟಾದರೂ ಮಾಡಬೇಕು ಅದೇ ರೀತಿ ಬಂದರು ಸ್ಥಳಗಳನ್ನು ಊರ್ಜಿತಗೊಳಿಸಿ ಇನ್ನಷ್ಟು ಹಡುಗುಗಳನ್ನು ಕಟ್ಟಬೇಕು. ಇವಕ್ಕೆಲ್ಲ ೮೯೭ ಕೋಟಿ ಮೂಲಧನ ೪೯ ಕೋಟಿ ವರ್ಷಾವಧಿ ವೆಚ್ಚಬೇಕಾಗುವುದು.

ಮೂಲ ವಿದ್ಯಾಭ್ಯಾಸ ಸಾಲದು

ಇಷ್ಟೆಲ್ಲ ಮಾಡಲಿಕ್ಕೆ ಹಣವಿದ್ದರೆ ಸಾಲದು; ತಕ್ಕ ತರಬೇತಿ ಹೊಂದಿದ ವಿದ್ಯಾವಂತ ಕಾರ್ಯಕರ್ತರು ಬೇಕು. ರಷ್ಯದಲ್ಲಿ ಮೆನೇಜರರು, ಇಂಜಿನಿಯರರು, ಯಂತ್ರಜ್ಞರು, ತಕ್ಕ ಶಿಕ್ಷಣ ಇಡುವವರು, ಉಪಾಧ್ಯಾಯರು ಮೊದಲಾದ ವಿದ್ಯಾವಂತರ ಸಂಖ್ಯೆ ಒಂದು ಕೋಟಿಯಂತೆ. ಅಲ್ಲಿನ ಜನಸಂಖ್ಯೆ ೧೭ ಕೋಟಿ. ಈ ರೀತಿ ನಮ್ಮಲ್ಲಿನ ೪೦ ಕೋಟಿಯಲ್ಲಿ ೨॥ ಕೋಟಿ ಮಂದಿ ವಿದ್ಯಾವಂತರಿರಬೇಕಾದರೆ ಹೈಸ್ಕೂಲುಗಳು ಕಾಲೇಜುಗಳು ಹೆಚ್ಚಾಗಬೇಕು. ಪ್ರಾಥಮಿಕ ಶಾಲೆಯಲ್ಲಿ ಕಲಿತ ಪ್ರತಿಯೊಬ್ಬನಿಗೆ ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸ ಕೊಟ್ಟು ಅವರಲ್ಲಿ ೧೦ಕ್ಕೆ ಒಬ್ಬನಿಗಾದರೂ ಹೈಸ್ಕೂಲು ವಿದ್ಯಾಭ್ಯಾಸ ಕೊಡುವುದಾದರೆ, ವೃತ್ತಿಶಿಕ್ಷಣ ಕಾಲೇಜು ಶಿಕ್ಷಣದ ಖರ್ಚು ನಮ್ಮ ಉತ್ಪತ್ತಿಯ ರೂಪಾಯಿಗೆ ಒಂದು ಪೈ ಎಂದು ಸುಡಿದರೆ ವಿದ್ಯಾಭ್ಯಾಸದ ಒಟ್ಟು ಖರ್ಚು ೨೩೭ ಕೋಟಿ ಆರಂಭದಲ್ಲಿ, ಅನಂತರ ವರ್ಷಕ್ಕೆ ೨೩೭ ಕೋಟಿ ತಗಲುವುದು.

ಮೂಲಧನವೆಲ್ಲಿಂದ?

ಒಟ್ಟಾರೆ ಹೇಳುವುದಾದರೆ ನಮಗೆ ಬೇಕಾಗುವ ಧನ ಈ ರೀತಿಯಿದೆ; ಕೈಗಾರಿಕೆ ೪,೪೮೦ ಕೋಟಿ; ಕೃಷಿ ೧,೨೪೦ ಕೋಟಿ; ಮಾರ್ಗ ೯೪೦ ಕೋಟಿ; ಮನೆ ೨,೨೦೦ ಕೋಟಿ; ಇತರ ೨೦೦ ಕೋಟಿ; ಜುಮ್ಲಾ ೧೦,೦೦೦ ಕೋಟಿ.

ಇಷ್ಟು ದುಡ್ಡು ಎಲ್ಲಿಂದ ತರಲಿ ಎಂಬ ಪ್ರಶ್ನೆ. ನಮ್ಮ ಜನರು ಕೂಡಿಟ್ಟ ಹಣ ೧,೦೦೦ ಕೋಟಿಯಿದೆ ಎಂದು ಅಂದಾಜು ಮಾಡಿದ್ದಾರೆ. ಜನರ ನಂಬಿಗೆಗೆ ಪಾತ್ರವಾದ ಸರಕಾರ ಸ್ಥಾಪನೆಯಾದರೆ ೩೦೦ ಕೋಟಿಯಾದರೂ ಜನರು ಅದನ್ನು ಬಳಕೆಗೆ ತರುವುದು ಕಷ್ಟವಾಗದು. ಈಗಲೇ ಇಂಗ್ಲಾಂಡಿನವರು ಇಲ್ಲಿಂದ ಯುದ್ಧಕ್ಕಾಗಿ ಪಡಕೊಂಡ ಸಾಮಾನುಗಳಿಗಾಗಿ ನಮಗೆ ತರಬೇಕಾದ ಹಣ ೮೦೦ ಕೋಟಿಯಿದೆ; ಯುದ್ಧ ಮುಗಿಯುವುದರೊಳಗೆ ಅದು ೧೦೦೦ ಕೋಟಿಯಾಗಬಹುದು. ನಮ್ಮ ಜನರಿಗೆ ಬೇಕಾದ ಅನ್ನ, ವಸ್ತ್ರ ಮೊದಲಾದುವುಗಳನ್ನು ಇಲ್ಲೇ ತಯಾರಿಸುತ್ತ ಬಂದರೆ ಪರದೇಶಕ್ಕೆ ಈಗ ಹೋಗುವ ಹಣ ಉಳಿಸುತ್ತ ೧೫ ವರ್ಷಗಳಲ್ಲಿ ೬೦೦ ಕೋಟಿ ಉಳಿಸಬಹುದು. ಇದೂ ಸಾಲದೆ ಹೊರದೇಶಗಳಿಂದ ೭೦೦ ಕೋಟಿ, ನಮ್ಮ ಜನರು ಇನ್ನು ಮುಂದಿನ ೧೫ ವರ್ಷಗಳಲ್ಲಿ ಉಳಿಸಬಹುದಾದ ಹಣದಿಂದ ೪,೦೦೦ ಕೋಟಿ ಸಾಲ ಪಡೆಯಬಹುದು. ಈಗ ಲೆಕ್ಕ ಹಾಕುವ.

ಈಗ ಜನರ ಹತ್ತಿರ ಇರುವ ಹಣದಿಂದ ೩೦೦ ಕೋಟಿ ಇಂಗ್ಲಾಂಡಿನಿಂದ ಬರುವ ಹಣ ೧,೦೦೦ ಕೋಟಿ ೧೫ ವರ್ಷಗಳಲ್ಲಿ ಹೊರದೇಶಕ್ಕೆ ಕಳುಹಿಸದೆ ಉಳಿಸುವುದು ೬೦೦ ಕೋಟಿ ೧೫ ವರ್ಷ ಹೆಚ್ಚಿದ ಸಂಪತ್ತಿನಿಂದ ಉಳಿಸಿದ್ದು ೪,೦೦೦ ಕೋಟಿ ಹೊರದೇಶಗಳಿಂದ ಸಾಲ ೭೦೦ ಕೋಟಿ ೬,೬೦೦ ಜುಮ್ಲಾ ಕೋಟಿ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಸಮರ ಭೂಮಿಯ ಸಂಚಾರ

ಅಮೆರಿಕ ಮತ್ತು ಬ್ರಿಟಿಷ್ ಸರಕಾರಗಳು ಅನೇಕ ವಿಷಯಗಳಲ್ಲಿ ಸ್ಪೈನಿನ ಶರತುಗಳಿಗೆ ಒಪ್ಪಿಕೊಂಡು ಕರಾರು ಮಾಡಲು ನಿರ್ಧರಿಸಿವೆ. ಉತ್ತರ ಆಫ್ರಿಕದ ಸ್ಪೈನ್ ಭೂಮಿ, ಸ್ಪೈನ್ ರಾಷ್ಟ್ರ, ಟಾಂಜಿಯರ್ ಪ್ರದೇಶಗಳಿಂದ ಜರ್ಮನ್ ಪ್ರತಿನಿಧಿಗಳನ್ನು ಹೊರಗೆ ಹಾಕಿ ಟ್ಯಾಂಜಿಯರ್ ಜರ್ಮನ್ ರಾಯಭಾರಿ ಕಚೇರಿಯನ್ನು ಮುಚ್ಚಿ ಸ್ಪೈನ್ ಸಾಗರದಲ್ಲಿ ದಿಗ್ಬಂಧಿಸಿದ ಕೆಲವು ಇಟಲಿ ನೌಕೆಗಳನ್ನು ಬಿಡಲು ಸ್ಪೈನು ಒಪ್ಪಿದೆ

ಬರ್ಲಿನ್, ಪ್ಯಾರಿಸ್‌ಗಳ ಮೇಲೆ ಬ್ರಿಟಿಷ್ ವಿಮಾನಗಳು ಧಾಳಿಯಿಟ್ಟವು ಟೋಕಿಯದ ಮೇಲೂ ಬೇಗನೇ ವಿಮಾನ ಧಾಳಿಯಾಗುವ ನಿರೀಕ್ಷಣೆಯಿದೆ ಗ್ರೀಕ್ ರಾಷ್ಟ್ರೀಯ ಯೂನಿಯನಿನ ಮಂತ್ರಿ ಮಂಡಳ ಸ್ಥಾಪಿಸಲು ಸಂಪೂರ್ಣ ಬೆಂಬಲ ಕೊಡುವುದಾಗಿ ಗ್ರೀಕ್ ಮುಖ್ಯ ಮಂತ್ರಿಗಳಿಗೆ ಚರ್ಚಿಲರು ಸಂದೇಶ ಕಳುಹಿಸಿರುತ್ತಾರೆ

ಜರ್ಮನಿ ಇಂದಿಗೂ ಬಲಿಷ್ಠವಿರುವುದೆಂದೂ ಅಲ್ಲಿನ ಆಹಾರ ವ್ಯವಸ್ಥೆ ಕಷ್ಟವಾಗಿದ್ದರೂ, ಇದು ವರೆಗೆ ಅಲ್ಲಿ ಯಾರೂ ಉಪವಾಸ ಬಿದ್ದಿಲ್ಲವೆಂದೂ, ಛಟ್ಟಿನಿಂದ ಜರ್ಮನಿಯ ಆರ್ಥಿಕ ಪರಿಸ್ಥಿತಿ ನೋಡಿದರೆ ಅದು ಇನ್ನೂ ಬಲಿಷ್ಠವಿದೆಯೆಂದೂ ತಿಳಿದು ಬರುತ್ತದೆ ಅಂತೆಯೇ ಜರ್ಮನಿನ ವಿಮಾನ ಬಲ, ಜನ ಬಲಗಳೂ ಪ್ರಬಲವಿದ್ದು ಯುದ್ಧ ಆರಂಭವಾದಾಗ ಹೇಗಿತ್ತೋ ಇಂದೂ ಹಾಗೆಯೇ ಇರುವುದಾಗಿ ವರದಿಯಿರುವುದು

ಮೇದಿನದ ಸಂದೇಶ

ಮಾರ್ಶಲ್ ಸ್ಟಾಲಿನರು ಮೇ ದಿನದ ಸಂದೇಶವಾಗಿ ಮಾತನಾಡುತ್ತಾ, ರಶ್ಯನ್ ಯೋಧರ ಹೊಡೆತದಿಂದ ಫೇಸಿಸ್ಟ್ ಶಕ್ತಿಯು ಮುರಿದು ಹೋಗುವುದೆಂಬ ಭರವಸೆ ಪ್ರಕಟಿಸಿದರು ರಶ್ಯನ್ ಸೇನೆ ಸ್ಟಾಲಿನ್ ಗ್ರಾಡ್ ವಿಜಯದ ನಂತರ ಶತ್ರುವನ್ನು ಅನೇಕ ಮುಖವಾಗಿ ಹಿಮ್ಮೆಟ್ಟಿಸಿದೆಯೆಂಬುದಾಗಿಯೂ ಹೇಳಿದರು

'ರುಮೇನಿಯ, ಹಂಗೇರಿ, ಬಲ್ಗೇರಿಯ ಮತ್ತು ಫಿನ್ಲೆಂಡು ದೇಶಗಳಿಗೆ ಜರ್ಮನಿ ಈಗಾಗಲೇ ಸೋಲನ್ನು ಕಂಡಿದೆಯೆಂಬ ವಿಷಯ ತಿಳಿಯದಿರಲು ಸಾಧ್ಯವಿಲ್ಲ ಇಷ್ಟು ಗೊತ್ತಿರುವ ಈ ದೇಶಗಳು, ಈಗಾಗಲೇ ಜರ್ಮನಿಯ ಸಂಬಂಧ ಕಡಿದುಕೊಳ್ಳುವುದು ಒಳ್ಳೆಯದು." ಹೀಗೆಂದೂ ತಿಳಿಸಿದರು

"ರಶ್ಯನ್ ಸೈನ್ಯ ಫೇಸಿಸ್ಟ್ ಬಂಧನದಿಂದ ಆಕ್ರಮಿತ ರಶ್ಯದ ¾ ಅಂಶವನ್ನು ಈಗ ಬಿಡಿಸಿಕೊಂಡಿದೆ ಇನ್ನು ಮುಂದೆ ಪರಿಪೂರ್ಣ ರಶ್ಯವನ್ನು ಜರ್ಮನ್ ಬಂಧನದಿಂದ ಬಿಡಿಸುವುದೇ ರಶ್ಯನರ ಉದ್ದೇಶವಾಗಿದೆ ಹೀಗೆ ಶತ್ರುವನ್ನು ಬೆನ್ನಟ್ಟಿ ಹೋದಂತೆ ಪೋಲರನ್ನು ಜೆಕೊಸ್ಲವಕರನ್ನು ಹಾಗೂ ಪಶ್ಚಿಮ ಯೂರೋಪಿನ ನಮ್ಮ ಮಿತ್ರರನ್ನು ಬಂಧನ ವಿಮೋಚನೆಗೊಳಿಸುವುದು ನಮ್ಮ ಉದ್ದೇಶವಿರುವುದು ಈ ಕರ್ತವ್ಯವು ಸಂಪೂರ್ಣ ಸಿದ್ಧಿಸಬೇಕಾದರೆ ಇಂಗ್ಲೆಂಡು ಅಮೆರಿಕ್ ರಶ್ಯಗಳೊಳಗೆ ಐಕಮತ್ಯವಿರಬೇಕು ಪಶ್ಚಿಮದಿಂದ ಮಿತ್ರರು ಧಾಳಿಯಿಡಬೇಕು ಪೂರ್ವದಿಂದ ರಶ್ಯನರೂ ಆಕ್ರಮಿಸಬೇಕು ಎಂದು ಮೊದಲಾಗಿ ಸ್ಟಾಲಿನ್ ಸಾರಿದರು

ಕೊಹಿಮಾ ಪ್ರದೇಶದಲ್ಲಿ

ಕೊಹಿಮಾ ಪ್ರದೇಶದಲ್ಲಿ ಮಿತ್ರ ಸೇನೆಗಳು ತಮ್ಮ ಧಾಳಿಯನ್ನು ಸಾಗಿಸಿವೆ ಇಂಫಾಲ ಪ್ರದೇಶದ ಕಂಗ್ಲಾಟೊಂಗಿ ಮಿತ್ರರ ಮುಂದೊತ್ತುವ ಸೇನೆಗಳು ಶತ್ರುವಿನ ಉಗ್ರ ಪ್ರತಿಭಟನೆಯನ್ನು ಇದಿರಿಸಬೇಕಾಯಿತು ಕೈ ಕೈ ಕಾಳಗವಾದ ಬಳಿಕ ಮಿತ್ರ ಸೇನೆಗಳು ಜಪಾನೀ ಸೇನೆಯನ್ನು ಮುತ್ತಿದವು ಕಾಲೇಮಾ ಮತ್ತು ಕಾಯಾಂಗದ ಮೇಲೂ ಧಾಳಿಯಾಯಿತೆಂದು ತಿಳಿಸಲಾಗಿದೆ

ವೇಗಾಂಗತಪ್ಪುಲಲ್ಲಿ ಯುದ್ಧ ಮಾಡುವ ಚೀನೀ ದಂಡುಗಳು ಎಡಬದಿಯಲ್ಲಿ ಮುನ್ನುಗ್ಗಿ ಇಂಕಾಂಗಬಾಂಗಕ್ಕೆ ನೇರಾಗಿ ಪೂರ್ವದಲ್ಲಿರುವ ತಿಗ್ರಾಮಿಯಾಂಗವನ್ನು ಆಕ್ರಮಿಸಿದವು ಬಲಬದಿಯ ಸೇನೆಗಳು ಒಳ್ಳೆ ಪ್ರಗತಿ ಸಾಧಿಸಿವೆ ಮುಖ್ಯ ರಸ್ತೆಯಲ್ಲಿ ಕಾದಾಡುವ ಸೇನೆಗಳು ಈಗ ಇಂಕಾಂಗಾಟೊಂಗದ ಸಮೀಪಕ್ಕೆ ಬಂದು ಜಾಗ್ರತೆಯಿಂದ ಶತ್ರು ವ್ಯೂಹ ಬೇಧಿಸಲು ಪ್ರಯತ್ನಿಸುತ್ತಿವೆ. ಜಪಾನರ ಬಾಕಿವಾದ ಫಿರಂಗಿಗಳು ಈ ಕಡೆಗಳಲ್ಲಿ ಮಿತ್ರರ ಮುನ್ನಡೆಗೆ ತಡೆಯಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ವೈ ಆರ್. ಸವೂದರೆಂಬ ಪ್ರಸಿದ್ಧ ಟೆನ್ನಿಸ್ ಆಟಗಾರರು, ತಮ್ಮ ರಾಜ್ಯಕ್ಕೆ ನುಗ್ಗಿದ ೫೦ ಜಪಾನರಲ್ಲಿ ೪೪ ಜನರನ್ನು ಹೇಗೆ ಸುಲಭದಿಂದ ಸಂಹರಿಸಲಾಯಿತೆಂದು ತಿಳಿಸಿದ್ದಾರೆ ಇವರು ದ ಕನ್ನಡ ಜಿಲ್ಲೆಯ ನೀಲೇಶ್ವರದ 'ಯಶವಂತ ರಾವ್ ಫಾರ್ಮಿ'ನವರೆಂದು ಹೇಳಲಾಗಿದೆ, ಇವರು ಮಣಿಪುರದಲ್ಲಿರುವರು ಹೀಗೆ ಸಂಹರಿಸಲ್ಪಟ್ಟ ಜಪಾನರಲ್ಲಿ ಓರ್ವನು ಡಾಕ್ಟರನೂ ಆಗಿದ್ದನು

ಜಪಾನರ ಮಹತ್ವಾಕಾಂಕ್ಷೆ

ಅಸಾಮ್ ಯುದ್ಧದ ಬಗ್ಗೆ ಜಪಾನಿಗಳು ಬಹಳ ಮಹತ್ವಾಕಾಂಕ್ಷೆಯುಳ್ಳವರಾಗಿರುವರೆಂದು, ಇದೇ ಭವಿಷ್ಯದ ಬಗ್ಗೆ ನಿರ್ಣಯ ಮಾಡಲಿರುವ ಯುದ್ಧವಾಗುವುದೆಂದೂ ಮಿತ್ರರ ಕೈಗೆ ಸಿಕ್ಕಿದ ಅವರ ಒಂದು ಪತ್ರದಿಂದ ತಿಳಿದು ಬರುತ್ತದೆ.

ಆ ಆಜ್ಞೆಯಲ್ಲಿ ಹೀಗೆ ಹೇಳಲಾಗಿದೆ. 'ನಮ್ಮ ಸೈನ್ಯವೀಗ ಅಜೇಯವಾಗಿದ್ದು ಹಿಂದುಸ್ಥಾನದಲ್ಲಿ ನಮ್ಮ ವಿಜಯ ಪತಾಕೆ ಹಾರಿಸುವ ದಿನ ಬಹು ದೂರವಿಲ್ಲ ಈ ಯುದ್ಧವು ನಿರ್ಣಾಯಕವಾದುದರಿಂದ ಮುಂದಿನ ಯುದ್ಧದ ಮೇಲೂ ಬಹು ಪರಿಣಾಮವನ್ನುಂಟುಮಾಡುವುದು ನಮ್ಮ ಧ್ಯೇಯ ಉದಾತ್ತವಿರುವುದರಿಂದ ಅದನ್ನು ಸಾಧಿಸಲು ನಾವು ಸರ್ವ ಶಕ್ತಿಯನ್ನುಪಯೋಗಿಸಬೇಕು ನಾವು ಭರದಿಂದ ಮುನ್ನುಗ್ಗಬೇಕು ಕಷ್ಟಗಳನ್ನೆಣಿಸದೆ ಗುರಿಗಳನ್ನು ವಶಪಡಿಸಿಕೊಳ್ಳಬೇಕು ಎದುರಾಳಿಗಳನ್ನು ಕೊಚ್ಚಿ ಹಾಕಿ ನಮ್ಮ ಕೀರ್ತಿಯನ್ನು ಹರಡಿಸಬೇಕು"

ಅರಕಾನ ರಂಗದಲ್ಲಿ ರಾಜ್ಯದಿಂದ ಬಲು ದೂರವಿರುವ ರಾಜ್ಯಗಳ ಬಳಿ ಹೋಗಲು ಜಪಾನರು ಬಹಳ ತಂತ್ರ ನೀತಿಗಳನ್ನು ಉಪಯೋಗಿಸುತ್ತಿದ್ದಾರೆ ರಾಜ್ಯವನ್ನು ಗೊತ್ತು ಹಚ್ಚಲು ಮತ್ತು ಅಲ್ಲಿರುವ ಸೈನ್ಯ ಶಕ್ತಿಯನ್ನು ತಿಳಕೊಳ್ಳಲು ಜಪಾನರು ವೇಷ ಬದಲಿಸಿ ಬಂದು ಬೆಳಗು ಮುಂಜಾನೆ ಉರ್ದು ಭಾಷೆಯಲ್ಲಿ ಮಾತನಾಡುತ್ತಾರೆ ಒಮ್ಮೆ ಹೀಗೆ ಜಪಾನರು ಬಂದು, 'ಕಿತ್ನೆ ಒಡೆ ಎಂದು ಕೇಳಿದಾಗ, ಅಲ್ಲಿದ್ದ ಬಲೂಚಿ ಸೈನಿಕರು ಗುಂಡುಹಾರಿಸಿ ಉತ್ತರಕೊಟ್ಟರೆಂದು ಹೇಳಲಾಗಿದೆ

ಚರ್ಚಿಲರ ಸಾಮ್ರಾಜ್ಯ ಲಾಲಸೆ

ಬ್ರಿಟಿಷರ ಅಧೀನವಿರುವ ಭೂಮಿಯನ್ನು ಯಾರಿಗೂ ಬಿಟ್ಟುಕೊಡುವ ಸಂಭವವಿಲ್ಲವೆಂದು ಬ್ರಿಟನಿನ ಪ್ರಧಾನ ಮಂತ್ರಿ ಚರ್ಚಿಲರು ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ಕೊಟ್ಟ ಹೇಳಿಕೆಯನ್ನು ಅಮೆರಿಕದ 'ಆರ್ಮಿ ಮತ್ತು ನೇವಿ ಜರ್ನಲ್ ಪತ್ರಿಕೆ ಬಲವಾಗಿ ಟೀಕಿಸಿದೆ

'ನಾವು ಕೊಟ್ಟ ರಾಣೆಗಳನ್ನು ನಮಗೂ, ಹಾಂಗ್ ಕಾಂಗ್ ಮತ್ತು ಕೊವಲೂನ್ ರಾಜ್ಯಗಳನ್ನು ಚೀನಕ್ಕೂ ಹಿಂದಕ್ಕೆ ಕೊಡಲಾರೆವೆಂದು ಚರ್ಚಿಲರ ಮಾತಿನಿಂದ ಅರ್ಥವಾಗುತ್ತದೆ ಇಲ್ಲಿಯೂ ಚುಂಕಿಂಗ್‌ನಲ್ಲಿಯೂ ಈ ರೀತಿ ಅರ್ಥಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ ಹಾಂಕಾಂಗ್ ಮತ್ತು ಕೋವಲೂನ್ ರಾಜ್ಯಗಳನ್ನು ಪಡೆದುಕೊಳ್ಳಬೇಕೆಂದು ಚಿಯಾಂಗರ ಆಸೆ ಹೀಗಿರುವಾಗ ಚರ್ಚಿಲರ ಸ್ಪಷ್ಟೋಕ್ತಿಯಿಂದ ಆಂಗ್ಲೋ ಚೀನೀ ಸಂಬಂಧದಲ್ಲೂ ಬಾಧಕ ಉಂಟಾಗಬಹುದು" ಎಂದು ಆ ಪತ್ರಿಕೆ ಬರೆದಿದೆ

ಹೊಸ ಸುದ್ದಿಗಳು

ಇತ್ತ ಕೊಹಿಮಾ ವ್ಯೂಹದಲ್ಲಿ ಭೀಕರ ಸಂಗ್ರಾಮ ಸಾಗುತ್ತಿದ್ದಾಗ, ಅತ್ತ ಉತ್ತರ ಬರ್ಮಾದಲ್ಲಿ ಜಪಾನರ ಉಗ್ರ ಪ್ರತಿಧಾಳಿಯನ್ನು ಮಿತ್ರ ಸೇನೆಗಳು ಇದಿರಿಸುತ್ತಿವೆ ಇಂಫಾಲದ ಗಡಿಯಲ್ಲಿ ಠಾಣೆಯನ್ನು ಬಿಗಿದು ವ್ಯವಸ್ಥೆ ಮಾಡಿಕೊಂಡ ಮಿತ್ರರು ಜಪಾನರ ಇನ್ನೊಂದು ಹೊಸ ಧಾಳಿಯನ್ನೆದುರಿಸಲು ಸರ್ವ ಸನ್ನಾಹ ಮಾಡುತ್ತಿದ್ದಾರೆ. ಅಲ್ಲದೆ ಬೇರೆ ಕಡೆಗಳಿಂದಲೂ ಒಮ್ಮೆಲೇ ಧಾಳಿಯಾಗುವ ಸಂಭವವಿದೆಯೆಂದೂ ಹೇಳಲಾಗಿದೆ.

ಚೀನಕ್ಕೆ ಯುದ್ಧ ಸಾಮಗ್ರಿ ಪೂರೈಸುವ ಬಗ್ಗೆ ಬ್ರಿಟನು ಚೀನಗಳೊಳಗೆ ಒಂದು ಒಪ್ಪಂದವಾಗಿದೆ. ಈ ಒಪ್ಪಂದದ ಪ್ರಕಾರ ಕಡ ಮತ್ತು ಒತ್ತೆ ಕರಾರಿನ ಮೇಲೆ ಬ್ರಿಟನು ಚೀನಾಕ್ಕೆ ಯುದ್ಧ ಸಾಮಗ್ರಿ ಪೂರೈಸುವುದಲ್ಲದೆ ೫ ಕೋಟಿ ಸ್ಟರ್ಲಿಂಗಿನಷ್ಟು ಸಾಲ ರೂಪವಾಗಿಯೂ ಕೊಡುವುದು

ಇಂಫಾಲಿನಲ್ಲಿರುವ ಮಿತ್ರ ವಿಜಯಕ್ಕೆ ಭಾರತದ ಗೂರ್ಖಾ ಸೈನ್ಯಗಳು ಕಾರಣವಾಗಿದೆಯೆಂದು ತಿಳಿದುಬಂದಿದೆ ಟಾಮೂ ರಸ್ತೆಯ ಒಳಯಿರುವ ಕ್ರೀಟ ಗುಡ್ಡದ ಸಲುವಾಗಿ ಆದ ಯುದ್ಧದಲ್ಲಿ ಗೂರ್ಖಾರು ನಡೆಸಿದ ಭೀಕರ ಹೋರಾಟದಲ್ಲಿ ೮೦ ಜಪಾನರು ಮೃತಪಟ್ಟರು ಇನ್ನೊಂದು ದಳವು ಭೀಷಣಪುರದ ಸಮೀಪದಲ್ಲಿ ಶಿಲಾಚಾರದ ಕಡೆಗೆ ಹೋಗುವ ರಸ್ತೆಯಲ್ಲಿ ಶತ್ರು ಪಡೆಯನ್ನು ತಪ್ಪಿಸಿದರು ಗೂರ್ಖಾ ಸೈನಿಕರು ತಮ್ಮ ಇಚ್ಛೆಯಂತೆ ಗುಡ್ಡವನ್ನು ಸ್ವಾಧೀನಮಾಡಿಕೊಂಡರು ಟೇಂಕುಗಳೂ ಸಹಾಯಕ್ಕೆ ಬಂದವು ಮದ್ರಾಸಿನ ೩ನೇ ಪಥಕದ ಸೈನಿಕರೂ ದೊಡ್ಡ ಜಪಾನೀ ಸೇನೆಯನ್ನಿದಿರಿಸಿ ಶತ್ರುವನ್ನು ಪೂರ್ವ ವ್ಯೂಹದಿಂದ ಹಿಟ್ಟಿನ ಸಹಾಯ ಬರುವ ವರೆಗೆ ತಡೆದ ವಿಷಯವೀಗ ಪ್ರಕಟವಾಗಿದೆ.

ಸೆಬಾಸ್ಟಪೋಲಿಗೆ ರಶ್ಯನರು ಬಲವಾಗಿ ಮುತ್ತಿಗೆ ಹಾಕಿದ್ದಾರೆ ರಶ್ಯನ್ ಫಿರಂಗಿಗಳು ನಗರದ ಮೇಲೆ ಗುಂಡು ಹಾರಿಸುತ್ತಿವೆ ದುರ್ಗ ರಕ್ಷಕರಿಗೆ ಆಹಾರ ಸಾಧನ ಸಾಮಗ್ರಿ ತಡೆಯಾಗುವ ವರೆಗೆ ಮುತ್ತಿಗೆ ಹಾಕುವ ಸೂಚನೆ ತೋರುತ್ತದೆ ಯುಗೋಸ್ಲೇವಿಯದಲ್ಲಿ ಜರ್ಮನರು ಪರಾಜಯ ಹೊಂದುತ್ತಿದ್ದಾರೆ. ನ್ಯೂಗಿನಿಯದಲ್ಲಿ ಆಸ್ಟ್ರೇಲಿಯನರು ಮುಂದೊತ್ತುತ್ತಿರುವರು ಅಂಝಿಯೋ ರಾಣೆಯ ಮೇಲೆ ಜರ್ಮನರು ಧಾಳಿಯಿಟ್ಟರು

ಮಹಾತ್ಮರ ಪ್ರಕೃತಿ ಚಿಂತಾಜನಕವಿದೆ!

ಮಹಾತ್ಮಾ ಗಾಂಧಿಯವರ ಎನೀಮಿಯಾ ಪರಿಸ್ಥಿತಿ ಮತ್ತಷ್ಟು ಕೆಟ್ಟಿದ್ದು ರಕ್ತದ ಒತ್ತಡವೂ ಬಹಳ ಇಳಿದಿರುವುದೆಂದೂ ಅವರ ಸಾಮಾನ್ಯ ಪರಿಸ್ಥಿತಿ ಪುನಃ ಕೆಲಮಟ್ಟಿಗೆ ಚಿಂತಾಜನಕವಾಗಿರುವುದೆಂದೂ ತಾ ೩ರ ಮುಂಬಯಿ ಸರಕಾರದ ಪ್ರಕಟಣೆ ತಿಳಿಸುತ್ತದೆ

ಕನ್ನಡ 'ವಾಣಿ'

– ಸೆಂಟ್ರಲ್‌ನಲ್ಲಿ –

ನಂದನೂರು ಒಂದು ಸಣ್ಣ ಗ್ರಾಮ. ಇಲ್ಲಿ ಭಾಸ್ಕರ ಪಂಡಿತನೆಂಬ ಒಬ್ಬ ಪಿಟೀಲು ವಾದ್ಯವಾದನ ನಿಪುಣನಿದ್ದನು ಬಡತನವಿದ್ದರೂ ಧರ್ಮ ಪರಾಯಣೆಯಾದ ಭಾಯಮ್ಮನೆಂಬ ಪತ್ನಿಯೊಡನೆ ಶಂಕರನೆಂಬ ಏಕಮಾತ್ರ ಪುತ್ರನೊಡನೆಯೂ ಆನಂದದಿಂದ ಇರುತ್ತಿದ್ದನು ಆ ಊರ ನಿವಾಸಿಗಳು ಕೆಲವರು ಈತನ ವಿದ್ಯಾಪ್ರಭಾವವು ಪ್ರಕಾಶಕ್ಕೆ ಬರಲೆಂದು ಒಂದುನೂರು ರೂಪಾಯಿಗಳ ಸಂಭಾವನೆಯನ್ನಿತ್ತು ಪಂಡಿತನ ಕಲಾಪ್ರೌಢಿಮೆಯನ್ನು ಪ್ರೋತ್ಸಾಹಗೊಳಿಸುವರು ಆನಂದಭರಿತನಾದ ಭಾಸ್ಕರಪಂಡಿತನು ತುಂಬಿದ ಸಭಾಮಧ್ಯದಲ್ಲಿ ಕುಳಿತು ತನ್ನ ಅಪೂರ್ವ ವಿದ್ಯಾಪಾಂಡಿತ್ಯದಿಂದ ಸರ್ವರನ್ನೂ ತಲೆದೂಗಿಸುತ್ತಿರುವನು

ಅತಿ ಸಂತೋಷವು ವ್ಯಸನಕ್ಕೆ ಮೂಲ ಆಕಸ್ಮಿಕ ಬಿರುಗಾಳಿ, ಸಿಡಿಲು, ಮಿಂಚುಗಳೊಂದುಗೂಡಿ ಅಸಾಧ್ಯವಾದ ಮಳೆಯು ಪ್ರಾರಂಭವಾಗಿ ಊರಿಗೆ ಆಶ್ರಯವಾಗಿದ್ದ ಅಣೆಕಟ್ಟು ಸಿಡಿಲಿನ ಹೊಡೆತದಿಂದ ಒಡೆದುಹೋಗಿ–ಜಲಪ್ರಳಯದಲ್ಲಿ ಸರ್ವ ಪ್ರೇಕ್ಷಕರೊಡಗೂಡಿ ಭಾಸ್ಕರನು ನೀರಿನ ಪಾಲಾಗಿ ಹೋದನು

ದೈವಸಹಾಯವು ದೊಡ್ಡದು ಅಪಾಯದಿಂದ ಹೇಗೋ ಪಾರಾಗಿ ಉಳಿದುಕೊಂಡವರಲ್ಲಿ ಭಾಯಮ್ಮ ಮತ್ತು ಶಂಕರ ಇವರಿಬ್ಬರು ಪ್ರವಾಹದಲ್ಲಿ ಕೊಚ್ಚಿಬಂದ ಅವರು ನೆರೆಯ ಗ್ರಾಮದಲ್ಲಿದ್ದ ಪ್ರಭಾಕರ ದೀಕ್ಷಿತನ ಆಶ್ರಯವನ್ನು ಪಡೆಯುವರು ಶಂಕರನಿಗೆ ವಿದ್ಯಾದಾನಮಾಡಿಸುವ ಸಲುವಾಗಿ ಭಾಯಮ್ಮನು ದೀಕ್ಷಿತನ ಮನೆಯ ತೊತ್ತಾಗಿ ಜೀವಿಸುವಳು ಕಾಮುಕನಾದ ದೀಕ್ಷಿತನು ತನ್ನ ಪತ್ನಿಯಾದ ಭಾರತಿಗೆ ವಂಚಿಸಿ, ಭಾಯಮ್ಮನನ್ನು ಬಲಾತ್ಕರಿಸಿ ಅಪಮಾನಿತನಾಗುವನು ಅಸೂಯಾಪರನಾಗಿ ದೀಕ್ಷಿತನು ಸಚ್ಚರಿತ್ರೆಯಾದ ಭಾಯಮ್ಮನಲ್ಲಿ ದೋಷಾರೋಪಣೆ ಮಾಡಿ ತನ್ನ ಮನೆಯಿಂದ ಹೊರದೂಡುವನು ಮುಂದಿನಂಶ ಚಿತ್ರಪಟದಲ್ಲಿ ನೋಡಿರಿ

ಜಿಲ್ಲಾ ಸಮಾಚಾರಗಳು

ಮೂಡಬಿದ್ರೆ

ಜ್ಞಾನಪೀಠದ ಕಾರ್ಯಾಲಯ

ತಾ ೨೪–೪–೪೪ರಂದು ಇಲ್ಲಿನ ಗಂಬೀರ ಭವನದಲ್ಲಿ ಶ್ರವಣ ಬೆಳಗುಳದ ಶ್ರೀ ಚಾರುಕೀರ್ತಿ ಪಂಡಿತಚಾರ್ಯ ವರ್ಯ ಸ್ವಾಮಿಗಳಿಂದ ಜೈನ ಜ್ಞಾನಪೀಠ ಕಾರ್ಯಾಲಯದ ಉದ್ಘಾಟನೆ ನೆರವೇರಿಸಲ್ಪಟ್ಟಿತು ಜ್ಞಾನ ಪೀಠದ ಅಧ್ಯಕ್ಷರಾದ ಶ್ರೀ ಕೆ ಭ ಬಲಿ ಶಾಸ್ತ್ರಿಗಳು ಕಾಶಿಯ ದಾನವೀರ ಸಾಹು ಶಾಂತಿ ಪ್ರಸಾದಜಿಯವರು ಸ್ಥಾಪಿಸಿರುವ ಜ್ಞಾನ ಪೀಠದ ಒಂದು ಶಾಖೆ ಮೂಡಬಿದ್ರೆಯಲ್ಲಿ ಸ್ಥಾಪಿತವಾಗಲಿರುವ ವಿಷಯ ತಿಳಿಸಿ, ಈ ಮೂಲಕ ಜೈನ ಪ್ರಾಚೀನ ಅವಾರ್ಚೀನ ಸಾಹಿತ್ಯ ಗ್ರಂಥಗಳನ್ನು ಪರಿಶೋಧಿಸುವದಲ್ಲದೆ ಇತರ ಪ್ರಾಮುಖ್ಯ ಗಳ ಕಾರ್ಯಗಳನ್ನು ಮಾಡಲಿಕ್ಕಿದೆಯೆಂದರು ಆ ಮೇಲೆ ಸಭಿಕರ ಭಾಷಣ ಧನ್ಯವಾದಗಳಿಂದ ಸಭಾ ಕಾರ್ಯ ಕೊನೆ ಗೊಂಡಿತು

ಉಡುಪಿ

ಸೆಂಟ್ರಲ್ ವಾರ್ಡ್

ಇದರ ನಗರ ರಚನಾ ಕ್ರಮವು ಕಳೆದ ಮುನ್ಸಿಪಲ್ ಸಭೆಯಲ್ಲಿ ಸ್ವೀಕರಿಸಲಾಯಿತು ಗುಂಡಿ ಬೈಲು ಖಾಸಗಿ ಶಾಲೆಯ ವಿದ್ಯಾರ್ಥಿಗಳಿಂದ ಸಂಬಳ ವಸೂಲು ಮಾಡಲು ಆಕ್ಷೇಪವಿಲ್ಲವೆಂದಾಯಿತು ಹರಿಜನ ವಿದ್ಯಾರ್ಥಿಗಳ ಸಹಾಯಾರ್ಥ ೨೫ ರೂ ಮಂಜೂರಾಯಿತು

ಹಿಂದುಸ್ತಾನ ಸ್ಕೌಟ್

ಎಸೋಸಿಯೇಶನಿನ ವಾರ್ಷಿಕ ಸಭೆ ಬೋರ್ಡ್ ಹೈಸ್ಕೂಲಲ್ಲಿ ಶ್ರೀ ಫೆರ್ನಾಂಡಿಸರ ಅಧ್ಯಕ್ಷತೆಯಿಂದ ನೆರವೇರಿತು ಚಾಲ್ತಿ ವರ್ಷದ ಅಧಿಕಾರೀ ಮಂಡಳಿ ಚುನಾವಣೆ ನಡೆಯಿತು

ಬಾರಕೂರು

ಇಲ್ಲಿನ ಬೋ ಹಾ ಪ್ರಿ ಶಾಲಾ ವರ್ಧಂತ್ಯುತ್ಸವವು ಡಾ| ಎ ಎಸ್ ಹೆಬ್ಬಾರರ ಅಧ್ಯಕ್ಷತೆಯಲ್ಲಿ ನೆರವೇರಿತು ವರದಿ ವಾಚನ ಭಾಷಣಗಳಾದ ಮೇಲೆ ವಿವಿಧ ವಿನೋದಾವಳಿಗಳಿದ್ದುವು ಇಲ್ಲಿ ಒಂದು ಹೈಸ್ಕೂಲ್ ಸ್ಥಾಪಿಸುವುದು ಅವಶ್ಯವಿದೆಯೆಂದು ಭಾಷಣ ಕರ್ತರು ಅಭಿಪ್ರಾಯ ಪ್ರಕಟಿಸಿದರು

ಬಂಟ್ವಾಳದಲ್ಲಿ ಮೇ ದಿನ

ಮಂಗಳೂರು ನಗರ ಸಭೆಯ ಗಡಿಯಿಂದ ಹೊರಟ ಮಜೂರ ಮೆರವಣಿಗೆ ತಾ ೩೦ರಂದು ಸಂಜೆ ಅರ್ಕುಳಕ್ಕೆ ಹೋಗಿ, ಅದಕ್ಕಿಂತ ಮೊದಲು ಪಡಿಲಿನಲ್ಲಿ ಸಭೆ ಮಾಡಿ, ತಾ ೧ರ ದು ಗಾಂಧಿಜಿಯನ್ನು ಬಿಡಿರಿ ಎಂಬ ಜಯಘೋಷದೊಡನೆ ಬಂಟ್ವಾಳವನ್ನು ಸೇರಿತು

ಆ ಸಂಜೆ ಅಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶೀಗಳಾದ ಶಾಂತಾರಾಮ ಪೈ, ಬಿ ವಿ ಕಕ್ಕಿಲ್ಲಾಯ, ಸೋನ್ಸ್, ಲಿಂಗಪ್ಪ ಸುವರ್ಣ ಮೊದಲಾದವರು ಮಾತನಾಡಿದರು ಕಾಂಗ್ರೆಸ್ ಧುರೀಣರ ಬಿಡುಗಡೆ, ಹೊಳ್ಳರ ಬಿಡುಗಡೆ, ರಾಷ್ಟ್ರೀಯ ಸರಕಾರ ಸ್ಥಾಪನೆ, ಬಂಟ್ವಾಳದಲ್ಲಿ ಮಳೆಗಾಲಕ್ಕೆ ಬೇಕಾದ ಅಕ್ಕಿ ದಾಸ್ತಾನು ಮೊದಲಾದ ನಿರ್ಣಯಗಳಾದುವು ಮೇ ದಿನಾಚರಣೆ ಮಂಗಳೂರಲ್ಲಾಗದಂತೆ ಮಾಡಿದ ಪ್ರತಿಬಂಧದ ಕುರಿತು ನಿಷೇಧ ಸೂಚಿಸಲಾಯಿತು.

ಸ್ವದೇಶಾಭಿಮಾನಿ

ತಾರೀಖು 5—5—1944

"ಗಾಂಧೀಜಿಯನ್ನು ಬಿಡಿರಿ"

"ಮಹಾತ್ಮಾ ಗಾಂಧೀಯವರು ಅನಾರೋಗ್ಯದಿಂದಿದ್ದಾರೆ; ಗಾಂಧೀಜಿಯವರ ಆರೋಗ್ಯ ಕಳವಳವನ್ನು ಹುಟ್ಟಿಸುವಂತ ಹುದಿದೆ" ಹೀಗೆಂದು ಸರಕಾರೀ ಪ್ರಕಟಣೆಯೇ ಸಾರಿದೆ. ಭಾರತದ ಭಾಗ್ಯವಿಧಾತನೆನಿಸಿದ ಮಹಾತ್ಮಾ ಗಾಂಧೀಯವರ ಈ ಅನಾರೋಗ್ಯದ ವಾರ್ತೆ ಕೇಳಿ ಅಖಿಲ ಭಾರತವೇ ಇಂದು ಚಿಂತಾವಿಷಾದ ಮಗ್ನವಾಗಿದೆ. 'ಗಾಂಧೀಜಿಯವರನ್ನು ಬಿಡಿರಿ' ಎಂದು ಭಾರತವಿಂದು ಸರಕಾರದೊಡನೆ ಮೊರೆಯಿಡುತ್ತದೆ.

ಕಳೆದ ಎಪ್ರಿಲ್ ೧೬ರಂದು ಗಾಂಧೀಜಿಯ ಅನಾರೋಗ್ಯದ ಸುದ್ದಿ ಪ್ರಥಮವಾಗಿ ಪ್ರಕಟಿಸಲ್ಪಟ್ಟಿತು. ಆ ಮೇಲೆ ಎರಡು ದಿನಗಳ ನಂತರ ಹೊರಟ ಪ್ರಕಟಣೆಯಲ್ಲಿ ಮಹಾತ್ಮರ ಆರೋಗ್ಯ ಯಥಾಸ್ಥಿತಿಗೆ ಬಂಧಿದೆಯೆಂದು ತಿಳಿಸಲಾಗಿತ್ತು. ಆ ಸಂದರ್ಭದಲ್ಲಿಯೇ ಕಾಮನ್ಸ್ ಸಭಾಮಂದಿರದಲ್ಲಿ ಆದ ಪ್ರಶ್ನೋತ್ತರಗಳಿಂದ, ಅಮೆರಿಯವರ ಹೇಳಿಕೆಯಿಂದ ಗಾಂಧೀಜಿ ಅನಾರೋಗ್ಯ ಗಾಬರಿಗೊಳಿಸುವಂತ ಹುದಿಲ್ಲವೆಂದು ನಂಬುವಂತಾಗಿತ್ತು. ಆದರೆ ಇತ್ತೀಚೆಯ ಸುದ್ದಿಗಳಂತೂ ತೀರಾ ಕಳವಳ ಹುಟ್ಟಿಸುವಂತಿವೆ. ಗಾಂಧೀಜಿ ಆರೋಗ್ಯ ಚಿಂತಾಜನಕವಾಗಿದೆಯೆಂದು ಖಂಡಿತವಾಗಿ ತಿಳಿದು ಬಂದಿದೆ.

ಇಷ್ಟು ವಿಷಮ ಕಾಲದಲ್ಲಿಯೂ ಗಾಂಧೀಜಿಯನ್ನು ಬಿಡುಗಡೆ ಮಾಡದಿರುವುದು ನ್ಯಾಯವಲ್ಲ. ಮಹಾತ್ಮರು ತಮ್ಮ ಪಟ್ಟ ಶಿಷ್ಯನನ್ನು ಮಹಾದೇವ ಭಾಯಿಯನ್ನು ಕಳಕೊಂಡರು; ತನ್ನ ೬೦ ವರ್ಷಗಳ ಜೀವನ ಸಂಗಾತಿನಿಯಾದ ಧರ್ಮಪತ್ನಿ ಕಸ್ತೂರ್ ಬಾ ಮೊನ್ನೆ ಕಣ್ಮುಚ್ಚಿದರು. ಈ ಎರಡು ಅಗಲಿಕೆಗಳಿಂದ ಮಹಾತ್ಮರು ತುಂಬಾ ಕಂಗಾಲಾಗಿರಲೇ ಬೇಕು; ಪುನಃ ಈಗ ಅವರೂ ಅಸ್ವಸ್ಥರಾಗಿದ್ದಾರೆ. ಸೆರೆಮನೆಯಲ್ಲಿರಬೇಕೆಂದು ಗಾಂಧೀಜಿ ಖಂಡಿತ ಬಯಸುವುದಿಲ್ಲ. ತನ್ನನ್ನು ಸೆರೆಮನೆಗೆ ಸೇರಿಸಿದ್ದು ತಪ್ಪೆಂದೇ ಅವರು ತಿಳಿಸಿದ್ದಾರೆ. ಹೀಗಿರುವಾಗ, ಗಾಂಧೀಜಿ ಅನಾರೋಗ್ಯದಿಂದ ನರಳುತ್ತಿರುವಾಗ, ಅವರ ಆರೋಗ್ಯ ಚಿಂತಾಜನಕವಾಗಿರುವಾಗ, ಈಗಲಾದರೂ ಅವರನ್ನು ಬಿಡುಗಡೆ ಮಾಡದಿರುವುದು ನ್ಯಾಯವಲ್ಲ.

'ಗಾಂಧೀಜಿಯನ್ನು ಬಿಡುಗಡೆ ಮಾಡಿರಿ' ಎಂದು ಜನತೆ ಬಹು ಕಾಲದಿಂದ ಕೇಳುತ್ತಿದೆ; ಈಗಲೂ ಅದೇ ಮಾತನ್ನು ಇನ್ನಷ್ಟು ಚಿತ್ತಾಯದಿಂದ ಕೇಳುತ್ತಿದೆ. ನಾಜೀ ಪಕ್ಷಪಾತಿ ಓಸ್ವಾಲ್ಡ್ ಮೊಸ್ಲೆಯನ್ನು ಬ್ರಿಟಿಷ್ ಸರಕಾರ ಅನಾರೋಗ್ಯದ ನಿಮಿತ್ತ ಬಿಡುಗಡೆಮಾಡಿದೆ. ಗಾಂಧೀಜಿ ಮೇಲೆ ಅಂಥಾ ಆರೋಪವಿಲ್ಲ; ಸರಕಾರವು ಜಪಾನ್ ಪರ ಆಂದೋಲನ ಹೂಡುವ ಆರೋಪ ಹೊರಿಸಿದ್ದರೂ ಅದನ್ನು ರುಜುಪಡಿಸಿಲ್ಲ; ಅಂತೂ ಈಗಿನ ಸಂದರ್ಭ ವಿಷಮ ಸಂದರ್ಭ; ಅಖಿಲ ಭಾರತಕ್ಕೆ ಗಾಂಧೀಜಿಯ ಜೀವವೆಂದರೆ ಅದಕ್ಕಿಂತ ಪ್ರಿಯವಾದ ವಸ್ತು ಬೇರಿಲ್ಲ; ಗಾಂಧೀಜಿಯನ್ನು ಬಿಡುಗಡೆ ಮಾಡಿರಿ.

ಎಂದು ಜನತೆಯಿಂದು ಕೇಳುತ್ತಿದೆ; ಉದ್ವೇಗಗೊಂಡು ಕೇಳುತ್ತಿದೆ. ಸರಕಾರ ಈ ಕೇಳಿಕೆಯನ್ನು ಮನ್ನಿಸದಿರುವುದು ಸರ್ವಥಾ ಬುದ್ಧಿವಂತಿಕೆಯಾಗಲಾರದು.

ಪಂಜಾಬಿನಲ್ಲಿ ಜಿನ್ನಾ

ಜಿನ್ನಾ ತನ್ನ ಪಾಕಿಸ್ತಾನದ ವಿಸ್ತರಣ ಕಾರ್ಯವನ್ನು ರಭಸದಿಂದ ಮಾಡುತ್ತಿದ್ದರೂ, ಅವರಿಗೆ ಬೇಕುಬೇಕಾದಷ್ಟು ಬೆಂಬಲ ಕೊಡಲ್ಪಡುತ್ತಿದ್ದರೂ, ಇತ್ತೀಚೆಗೆ ಪಂಜಾಬಿನಲ್ಲಾದ ಅವಮಾನದಿಂದ ಮುಖಭಂಗವಾದಂತಾಗಿದೆ. ಬಂಗಾಲ, ಅಸ್ಸಾಮ್, ಗಡಿನಾಡು ಪ್ರಾಂತಗಳಲ್ಲಿ ಏನೇನೋ ಉಪಾಯ ತಂತ್ರಗಳನ್ನು ಮಾಡಿ ಲೀಗ್ ಮಂತ್ರಿಮಂಡಳವನ್ನು ಸ್ಥಾಪಿಸಲು ಜಿನ್ನರು ಸಮರ್ಥರಾದರೂ ಪಂಜಾಬ್ ಪ್ರಕರಣವು ಅವರೆದೆಯಲ್ಲಿ ಬಂಡೆಗಲ್ಲಾಗಿ ನಿಂತಿದೆ.

ಪಂಜಾಬಿನ ಮುಖ್ಯ ಮಂತ್ರಿ ಮಲಿಕ್ ಖಿಜರ್ ಹಯತ್ ಖಾನರು ಜಿನ್ನರನ್ನು ಪ್ರತಿಭಟಿಸುತ್ತಿದ್ದಾರೆ. ಯೂನಿಯನಿಸ್ಟ್ ಪಕ್ಷವನ್ನು ಬಿಟ್ಟು ಮಂತ್ರಿಮಂಡಳಕ್ಕೆ ಲೀಗಿನ ಬಣ್ಣ ಬಳೆಯಬೇಕೆಂದು ಜಿನ್ನರು ಹೇಳಿದ್ದನ್ನು ಅವರು ಅಲ್ಲಗಳೆದಿರುವರು. ಲೀಗ್ ಹಾಗೂ ಜಿನ್ನರ ಎದುರು ನಿಂತು, ಅದರಿಂದೊದಗಬಹುದಾದ ತೊಂದರೆಗಳೆಲ್ಲವನ್ನೂ ಪ್ರತಿಭಟಿಸಲು ಸಿದ್ಧರಾದ ಮಲಿಕಖಿಜರ್ ಹಯತ್ ಖಾನರ ಧೈರ್ಯ ಅಭಿನಂದನೀಯವಿದೆ. ಅವರು ಸಂಕುಚಿತ ಜಾತೀಯತೆಗೆ ಮನ್ನಣೆ ಕೊಡದೆ, ತನ್ನ ಪ್ರಾಂತದ ಹಿತವನ್ನು ಅನುಲಕ್ಷಿಸಿ ಕೆಲಸಮಾಡಿದರೆಂದು ಖಂಡಿತವಾಗಿ ಹೇಳಬಹುದು.

ಪಂಜಾಬ್ ರಾಜಕಾರಣವು ಮೌಂಟ್ ಫೋರ್ಡ್ ಸುಧಾರಣೆಗಳ ಕಾಲ ಬಹಳ ಹಿಂದುಳಿದಿತ್ತು. ಅದನ್ನು ಸುಧಾರಿಸುವುದಕ್ಕೆ ಒಕ್ಕಲುತನದ ಸುಧಾರಣೆಯ ಯೋಜನೆಯುಳ್ಳ ಯೂನಿಯನಿಸ್ಟ್ ಪಕ್ಷವನ್ನು ೧೯೨೩ರಂದು ಸರ್ ಫಜಲಿ ಹುಸೇನರು ಸ್ಥಾಪಿಸಿದರು. ಈ ಪಕ್ಷವು ಜಾತೀಯತೆಯನ್ನು ಮೀರಿ ನಿಂತ ಸಂಸ್ಥೆಯಾಗಿ ಪಂಜಾಬಿನಲ್ಲಿ ಜನಪ್ರಿಯವಾಯಿತು. ಇಂದು ಮಂತ್ರಿಮಂಡಳದಲ್ಲಿರುವ ಸರ್ ಛೋಟುರಾಮರು ಹಿಂದಿನಿಂದಲೂ ಆ ಪಕ್ಷದ ಬೆಂಬಲಿಗರಾಗಿದ್ದಾರೆ. ಹೇಗೂ ಜಾತ್ಯಾತೀತ ಪಕ್ಷದಿಂದಾಗಿ ಪ್ರಾಂತದ ಆಡಳಿತ ಸುಸೂತ್ರವಾಗಿ ಸಾಗಿತು.

ಸರ್ ಸಿಕಂದರ್ ಹಯತ್ ಖಾನರೂ ಅದರ ನಂತರ ಅಧಿಕಾರಕ್ಕೆ ಬಂದ ಮಲಿಕ್ ಖಿಜರ್ ಹಯತ್ ಖಾನರೂ ಸರ್ ಫಜಲಿಯವರ ಹಾದಿಯನ್ನೇ ತುಳಿದು ನ್ಯಾಯ ಮಾರ್ಗವನ್ನವಲಂಬಿಸಿದರು. ಸರ್ ಸಿಕಂದರರ ಕಾಲದಲ್ಲಿ ಜಿನ್ನರ ಆಟ ಏನೂ ನಡೆಯುತ್ತಿರಲಿಲ್ಲ. ಸರ್ ಫಜಲಿ ಹುಸೇನರಂತೂ ತುಂಬಾ ಸ್ವತಂತ್ರವಿದ್ದರು. ೧೯೪೨ರಲ್ಲಿ ಸರ್ ಸಿಕಂದರರ ನಂತರ ಮಲಿಕ ಖಿಜರ್ ಹಯತ್ ಖಾನರು ಯುನಿಯನಿಸ್ಟ್ ಪಕ್ಷದ ಧುರೀಣರಾದರು. ಇವರು ರಾಜನೀತಿಯಲ್ಲಿ ಹೊಸಬರಾದ್ದರಿಂದ, ತಮ್ಮ ಆಟ ನಡೆಸಲು ಇದೇ ಸಂದರ್ಭವೆಂದು ಜಿನ್ನರು ಈಗ ಮುಂದೆ ಬಂದಿದ್ದಾರೆ. ಆದರೆ ಮಲಿಕ್ ಖಿಜರ್ ಹಯತ್ ಖಾನರು ಜಿನ್ನರ ಮಾತನ್ನು ಅಲ್ಲಗಳೆದಿದ್ದಾರೆ. ಇದರಿಂದ ಜಿನ್ನರು ಸಹಜವಾಗಿ ಕೆರಳಿರಬಹುದು; ಕೆರಳಿ ಪಂಜಾಬಿನ ಆಡಳಿತ ಕೆಡಿಸಲು ನೋಡಬಹುದು; ಹೇಗಿದ್ದರೂ ನ್ಯಾಯವು ಕೊನೆಗೆ ಜಯಿಸುವುದೆಂಬುದು ಖಂಡಿತವಾದುದು.

ಹಿಂದುಸ್ಥಾನ

'ದಿಕ್ಕಾರ' ನಾಟಕಕ್ಕೆಂದು ೧೨ ಸಾವಿರ ರೂಪಾಯಿಗಳೊಂದಿಗೆ ಮುಂಬಯಿಗೆ ಹೋಗಿದ್ದ ಮೂವರು ಎಳೆ ವಯಸ್ಸಿನ ಬಾಲಕರನ್ನು ಪೋಲೀಸರು [illegible] ಸಿಕ್ಕಿಸಿ ಕರೆದುಕೊಂಡು ಬಂದಿರುವರು. ೧೨ ವರ್ಷದ ಬಂಗಾರಿ ಬಾಲಕನೊಬ್ಬನು ತಂದೆ ಮನೆಯಲ್ಲಿಲ್ಲದಾಗ ತಿಜೋರಿಯಲ್ಲಿಯ ೧೨ ಸಾವಿರ ರೂಪಾಯಿ ತೆಗೆದುಕೊಂಡು ಇಬ್ಬರು ಗೆಳೆಯರೊಡನೆ ಮುಂಬಯಿಗೆ ಹೋದನೆಂದೂ ಅಲ್ಲಿ ಯುರೋಪಿಯನ್ ವೇಷದಲ್ಲಿ ಒಂದು ಹಾಟೇಲಲ್ಲಿರುವಾಗ ಪೋಲೀಸರು ಸೆರೆ ಹಿಡಿದರೆಂದೂ ಆಗ ಅವರಲ್ಲಿ ೧೦ ಸಾವಿರ ರೂ ಸಿಕ್ಕವೆಂದೂ ತಿಳಿಯುತ್ತದೆ.

ಅ. ಭಾ. ಮಹಿಳಾ ಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ಕಮಲಾದೇವಿಯವರು ಮುಂಬಯಿ ನಗರ ಉಪನಗರದಲ್ಲಿರುವ ಬೇರೆ ಬೇರೆ ನಿರಾಶ್ರಿತ ಉಪಚಾರ ಕೇಂದ್ರಗಳನ್ನು ಸಂದರ್ಶಿಸುವಾಗ ಅವರಿಗೆ ಒಮ್ಮಿಂದೊಮ್ಮೆಲೆ ಅಸ್ವಸ್ಥತೆಯುಂಟಾಗಿದ್ದು ಅವರು ಕೆಲವು ದಿನಗಳ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಸಲಹೆ ಕೊಡಲಾಗಿದೆ.

ಮುಂಬಯಿಯ ಸೋಫಿಯಾ ಹೆಣ್ಣು ಮಕ್ಕಳ ಕಾಲೇಜಿನ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬೇಕೆಂದು ಮುಂಬಯಿ ಸಿನೇಟಿನವರು ನಿರ್ಣಯಿಸಿದ್ದರಷ್ಟೆ. ಆದರೆ ಮುಂಬಯಿ ಸರಕಾರದವರು ಸಿನೇಟಿನ ಸೂಚನೆಯನ್ನು ಒಪ್ಪುವದಕ್ಕೆ ಸಾಧ್ಯವಿಲ್ಲವೆಂದು ರಿಜಿಸ್ಟ್ರಾರರಿಗೆ ಪತ್ರ ಬರೆದಿರುವರು. ಆದರೆ ಶಿಕ್ಷಣ ಸಂಸ್ಥೆಗಳಲ್ಲಿ ಮತಾಂತರದ ಬಗ್ಗೆ ಸಿನೇಟು ವ್ಯಕ್ತ ಮಾಡಿದ ನಿಷೇಧದಲ್ಲಿ ಸರಕಾರದವರು ಸಹಭಾಗಿಯಾಗಿದ್ದಾರೆಂದು ಮುಂತಾಗಿ ಪ್ರಕಟಿಸಲಾಗಿದೆ.

ಮುಂಬಯಿಯಲ್ಲಿ ಚೂರೋ ಇಬ್ಬರು ಪೋಲೀಸ ಹಾಗು ಮಿಲಿಟರಿ ವೇಷದಲ್ಲಿ ಮರಿನ್ ಡ್ರಾಯಿವ್‌ದಲ್ಲಿ ಚಿಮನಪಟಲಾಲ ಶಹಾ ಇವರ ಮನೆಗೆ ಬಂದು ಕಾಂಟಾಕಾಟದಲ್ಲಿ ನಿಮ್ಮ ಅಂಗಡಿ ಝಡತಿ ಮಾಡುವದಿದೆಯೆಂದು ಹೇಳಿ ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಮೋಸ ಮಾಡಿ ೨೦ ಸಾವಿರ ರೂಪಾಯಿ ತೆಗೆದುಕೊಂಡು ಹೋದರು. ಅಪರಾಧಿಗಳ ಪತ್ತೆ ಹತ್ತಲಿಲ್ಲ.

ಬ್ಯಾ. ಜಿನ್ನಾ, ಸಾವರಕರ ಹಾಗು ಮಹಾತ್ಮಾ ಗಾಂಧಿಯವರು ತಮ್ಮಲ್ಲಿ ಒಡಂಬಡಿಕೆ ಮಾಡಿಕೊಂಡು ಸರಕಾರದ ಕಡೆಗೆ ಅಧಿಕಾರ ಕೊಡಲು ಅವರನ್ನು ಕೇಳಬೇಕೆಂದೂ ಅವರ ನಿರಾಕರಿಸಿದಲ್ಲಿ ಜಿನ್ನಾ ಹಾಗು ಮುಸಲ್ಮಾನರು ಹಿಂದುಗಳೊಡನೆ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದೂ ಡಾ. ಮುಂಜೆಯವರು ಬಡೋದೆ ಸಂಸ್ಥಾನ ಹಿಂದೂ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಹೇಳಿದರು.

ಎಪ್ರಿಲ ೧೩ನೇ ತಾರೀಕಿನಿಂದ ಮುಚ್ಚಲ್ಪಟ್ಟಿದ್ದ ಸೊಲ್ಲಾಪುರದ ಎಲ್ಲ ಗಿರಣಿಗಳು ೨೬ನೇ ತಾರೀಕಿನಿಂದ ಮತ್ತೆ ಸರುವಾಗಿವೆ. ಕಲ್ಲಿದ್ದಲು ಇಲ್ಲದ್ದರಿಂದ ಇವು ಮುಚ್ಚಲ್ಪಟ್ಟಿದ್ದವು. ಕಲ್ಲಿದ್ದಲು ಬೇಕಾದಷ್ಟು ಸಿಕ್ಕುವದೆಂದೂ ಆದರ ವ್ಯಾಗಿನುಗಳು ಸಿಕ್ಕುವದಿಲ್ಲೆಂದೂ ಒಬ್ಬ ಗಿರಣಿ ಮ್ಯಾನೇಜರ ಹೇಳಿದರು.

ಮದ್ರಾಸಿನ ಪೋಸ್ಟು ಮಾಸ್ತರ ಜನರಲ್ ರಾದ ಖಾ. ಬ. ರಹಮಾನರು ತಂತಿ ಡೈರೆಕ್ಟರರಾದ ವಾಸ ನಾಯಕ ಹಾಗು ಅಂಚೆ ತಂತಿ ಖಾತೆಯ ಡೆ. ಡೈರೆಕ್ಟರ ಜನರಲ್ ಎಂ. ಎಂ. ಖಾನ ಇವರೊಂದಿಗೆ ಪಿ. ಎಂ. ಜಿ. ಕಚೇರಿಯ ಕಟ್ಟಡ ಸ್ಥಳವನ್ನು ನೋಡಿ ಕೊಂಡು ಬರುವಾಗ ಫುಟಪಾತಿನ ಹತ್ತಿರ ಮಾತಾಡುತ್ತ ನಿಂತಿದ್ದರು ಅಷ್ಟರಲ್ಲಿ ಲೋರಿಯೊಂದು ಟ್ರಾಮಕಾರಿಗೆ ಡಿಕ್ಕಿ ಹೊಡೆದು ಅವರನ್ನು ಹಾಯ್ದು ನೆಲಕ್ಕೆ ಕೆಡಹಿತು. ರಹಮಾನರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ವಾಸಾ ನಾಯಕರಿಗೆ ಭಯಂಕರ ಗಾಯಗಳಾಗಿದ್ದರೂ ಪ್ರಕೃತಿ ಚಿಂತಾಜನಕವಾಗಿಲ್ಲ.

ಬೆಝುವಾಡಾದಿಂದ ೬ ಮೈಲಿನ ಮೇಲಿರುವ ಒಂದು ಹಳ್ಳಿಯಲ್ಲಿ ಬೆಂಕಿಯ ಅನಾಹುತದಿಂದ ಕೆಲವು ಕೆಂಗಾ ಗೋಡೌನ್‌ಗಳು ಮತ್ತು ಭತ್ತದ ಗೋಡೌನ್‌ಗಳನ್ನೊಳಗೊಂಡು ಸವಾರು ೪೦೦ ಮನೆಗಳು ನಾಶವಾದವು. ೩೬ ಗಂಟೆಗಳ ವರೆಗೆ [illegible] ಪ್ರಯೋಗಿಸಿದರು. ಅವುಗಳ ಪ್ರಯತ್ನದಿಂದ ಅರ್ಧ ಗ್ರಾಮವು ಉಳಿಯಿತು. ಅನೇಕ ಲಕ್ಷ ರೂಪಾಯಿಗಳ ಹಾನಿಯಾಗಬಹುದೆಂದು ಅಂದಾಜು ಮಾಡಲಾಗಿದೆ. ಪ್ರಾಣಹಾನಿ ಮಾತ್ರ ಆಗಿರುವದಿಲ್ಲ.

ಮುಂಬಯಿ ಸ್ಫೋಟದ ಬಗ್ಗೆ ಒಂದು ವಿಚಾರಣ ಸಮಿತಿಯನ್ನು ನೇಮಿಸಲು ಹಾಗು ನಿರ್ಗತಿಕರ ಪರಿಹಾರಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ಕೂಡಲೇ ಕೊಡಲು ಹಿಂದುಸ್ಥಾನ ಸರಕಾರದವರು ನಿರ್ಧರಿಸಿದ್ದಾರೆ.

ವಸುಮತಿ ಪತ್ರಿಕೆಯ ಒಡೆಯರಾದ ಸತೀಶಚಂದ ಮುಕರ್ಜಿಯವರು ನಿಧನ ಹೊಂದಿದರು.

ಅ. ಭಾ. ಕಸ್ತೂರಬಾ ಸ್ಮಾರಕ ನಿಧಿ ಈ ವರೆಗೆ ೩,೧೫,೧,೦೦೦ ಕೂಡಿದೆಯೆಂದೂ ಮೇ ೧೦ಕ್ಕೆ ಮುಂಬಯಿಯಲ್ಲಿ ವಿಶ್ವಸ್ತರ ಎರಡನೇ ಸಭೆ, ಕೂಡಲಿರುವದೆಂದೂ ಕಾರ್ಯದರ್ಶಿ ಅಮೃತಲಾಲ ಠಕ್ಕರರು ಪ್ರಕಟಣೆ ಹೊರಡಿಸಿದ್ದಾರೆ.

ಕಾಶೀ ವಿದ್ಯಾ ಪೀಠದ ಸಂಸ್ಥಾಪಕರೂ ಉಜ್ವಲ ರಾಷ್ಟ್ರ ಭಕ್ತರೂ ಆಗಿದ್ದ ಶ್ರೀ ಶಿವಪ್ರಸಾದ ಗುಪ್ತರು ನಿಧನ ಹೊಂದಿದರು. ಇವರು ಕಾಶೀ ವಿದ್ಯಾ ಪೀಠಕ್ಕೆ ೧೦ ಲಕ್ಷ ರೂಪಾಯಿಗಳ ಟ್ರಸ್ಟ ಮಾಡಿರುವರಲ್ಲದೆ ಆಜಮೌಜಿ ಹಿಂದಿ ದೈನಿಕ ಪತ್ರಿಕೆಯನ್ನು ಸಂಸ್ಥಾಪಿಸಿದ್ದರು. ಅಲ್ಲದೆ ಅನೇಕ ಸಂಸ್ಥೆಗಳಿಗೆ ಮುಕ್ತ ಹಸ್ತದಿಂದ ಧನ ಸಹಾಯ ಮಾಡಿರುವರು. ಇವರ ಮರಣದಿಂದ ದಾನಶೂರ ಕರ್ಣನೊಬ್ಬನು ಇಲ್ಲದಂತಾಯಿತು.

ಅಡಿಕೆ ಬೇಸಾಯಗಾರರಿಗೆ ಸಲಹೆಗಳು

ಅಡಿಕೆ ಸುಂಕ:- ತಾ. ೨೪-೪-೪೪ರಲ್ಲಿ ಅ. ಬೇ. ಸಂಘದ ಕಾರ್ಯದರ್ಶಿಯರು ಅಸಿಸ್ಟೆಂಡ್ ಕಲೆಕ್ಟರ್ ಓಫ್ ಸೆಂಟ್ರಲ್ ಎಕ್ಸೈಸರನ್ನು ಭೇಟಿ ಮಾಡಿ, ಅಡಿಕೆ ಸುಂಕದ ಕಾನೂನಿನ ಜಾರಿಯಿಂದುಂಟಾದ ಕಷ್ಟಗಳನ್ನು ವಿವರಿಸಿದರು. ಅವು ಯಾವುವೆಂದರೆ ೧. ಒಳಪ್ರದೇಶಗಳಲ್ಲಿ ೧-೪-೪೪ರ ಮೊದಲು ಸುಲಿದ ಅಡಿಕೆ ಎಂದು ದೃಢತೆಗೆ ಬಂದ ಅಡಿಕೆಯು ಇಲ್ಲಿ ತೂಕ ಮಾಡುವಾಗ ಸ್ವಾಭಾವಿಕವಾಗಿ ಕೆಲವು ರಾತಲುಗಳು ಹೆಚ್ಚಾದರೆ, ಆ ಹೆಚ್ಚಾದ ಅಡಿಕೆಗೆ ಸುಂಕ ಹೊರಿಸಬಾರದು. ಇದು ನ್ಯಾಯವೆಂದು ಅಸಿಸ್ಟೆಂಟ್ ಕಲೆಕ್ಟರರು ಒಪ್ಪಿರುವರು. ೨ ಮಂಗಳೂರಿಗೆ ಭಂಡಸಾಲೆಗಳಿಗೆ ತರುವ ಮೊದಲು ಸುಂಕ ಕೇಳಕೂಡದು. ಮಾರುವ ಹೆಚ್ಚು ಸನುಯಳ್ಳ ಮೊದಲು ಸುಂಕ ಕೊಡಲು ಕೃಷಿಕರಲ್ಲಿ ಶಕ್ತಿ ಇಲ್ಲ. ಸುಂಕವನ್ನು ಮಂಗಳೂರು ಭಂಡಸಾಲೆಗೆ ತರುವ ಮೊದಲೇ ಕೊಡಬೇಕೆಂಬ ನಿರ್ಬಂಧವಿರಬಾರದು. ಭಂಡಸಾಲೆಗಳಲ್ಲಿ ಮ್ಹಾಲು ಮಾರಾಟವಾಗಿ, ಸರಕನ್ನು ಸ್ವಾಧೀನಕೊಡುವ ಮೊದಲು ಸುಂಕ ಕೊಡುವಂತಾಗಬೇಕು ೩. ಈಗ ಬರುವ ಸುಲಿದ ಅಡಿಕೆಗಳಲ್ಲಿ ಅತಿ ಹೆಚ್ಚಿನ ಅಂಶ ೧-೪-೪೪ರ ಮೊದಲೇ ಸುಲಿದ ಆದುದೂ ಮೊದಲು ಸುಲಿಸದೆಯೋ ಯಾ ನಂತರವೋ ಎಂಬ ವಿಷಯದಲ್ಲಿ ಸರ್ಟಿಫಿಕೇಟು ಕೊಡುವ ಅಧಿಕಾರವನ್ನು ಅಬ್ಕಾರಿ ಸಬ್ ಇನ್ಸ್‌ಪೆಕ್ಟರರಿಗೆ ಕೊಡ ಕೂಡದು. ವಿವಾದದ ಎಲ್ಲಾ ದೃಢೀಕರಣಗಳನ್ನು ಮಂಗಳೂರಿನ ಜಿಲ್ಲಾ ಅಬ್ಕಾರಿ ಅಧೀಸರರು ಸಂಘದ ಒಬ್ಬ ಪ್ರತಿನಿಧಿಯ ಸಹಾಯದಿಂದ ತಾ. ೧೧-೪-೪೪ರಲ್ಲಿ ಎಡಿಶನಲ್ ಕಲೆಕ್ಟರರಿಗೂ ಸಂಘದವರಿಗೂ ಆದ ಒಪ್ಪಂದದ ಮೇರೆಗೆ ನಿಶ್ಚಯಿಸತಕ್ಕದ್ದು. ಈ ರೀತಿ ಜಿಲ್ಲಾ ಅಧಿಕಾರಿಗಳಿಗೆ ಹುಕುಂ ಕೊಡಬೇಕು- ಈ ವಿಷಯದಲ್ಲಿ ಮದ್ರಾಸಿನಲ್ಲಿರುವ ಎಡಿಶನಲ್ ಕಲೆಕ್ಟರರಿಗೆ ಬರೆಯಲು ಅಸಿಸ್ಟೆಂಟ್ ಕಲೆಕ್ಟರರು ಹೇಳಿದಂತೆ ಎಡಿಶನಲ್ ಕಲೆಕ್ಟರರಿಗೆ ಬರೆದಿದೆ. ೪ ಕೋಕ ಮತ್ತು ಕರಿ ಗೋಟಿಗೆ ಸುಂಕ ಹೊರಿಸಬಾರದು. ಈ ವಿಷಯದಲ್ಲಿ ಕೇಂದ್ರ ಸರಕಾರದವರೇ ಕಾನೂನು ಮಾಡಬೇಕು.

ಮಂಗಳೂರನ್ನು ಇಂಡಿಯಾ ಸರಕಾರದ ಅಡಿಕೆ, ಕಾಫಿ, ಚಾ ಸುಂಕದ ಸ್ಪೆಶಲ್ ಅಧಿಕಾರಿಗಳು ಮೇ ತಿಂಗಳ ೨ನೇ ವಾರದಲ್ಲಿ ಸಂದರ್ಶಿಸಲಿರುವರು. ಇವರು ಬರುವಾಗ ಸಂಘಕ್ಕೆ ಅಧಿಕಾರಿಗಳು ಮುಂಚಿತವಾಗಿ ತಿಳಿಸುವರು. ಅವರಲ್ಲಿ ಎಲ್ಲ ವಿಷಯಗಳನ್ನು ಹೇಳತಕ್ಕದ್ದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿಯ ಕ್ರಯ ಇಳಿಸಿದೆ

ತಾ. ೧-೫-೪೪ರಿಂದ ಜಿಲ್ಲಾ ಕಲೆಕ್ಟರರು ಈ ರೀತಿಯಲ್ಲಿ ಅಕ್ಕಿ ಕ್ರಯ ನಿಶ್ಚಯಿಸಿದ್ದಾರೆ. (a) ರೈತರು ತಮ್ಮ ಇಷ್ಟದಿಂದಲೇ ಕೊಟ್ಟದ್ದಕ್ಕೆ ಸುಗ್ಗಿ ಮತ್ತು ರಾಶಿ ಮುಡಿಗೆ ರೂ. ೯-೮-೦, ಗುಡ್ಡು ೧೨-೦-೦, ಮಸ್ಕತಿ ೧೦-೮-೦, ಕುಚ್ಚಿಗೆ ೯-೦-೦, ಬೆಳ್ತಿಗೆ (ಸಾಧಾರಣ) ೧೧-೮-೦, ಬೆಳ್ತಿಗೆ ಉತ್ತಮ ಜಾತಿ ೧೨-೮-೦. (b) ರಿಕ್ವಿಸಿಶನ್ ಮೂಲಕ ಪಡಕೊಂಡದಕ್ಕೆ ಮೇಲಿನ ಕ್ರಯದಲ್ಲಿ ಮುಡಿಯಲ್ಲಿ ೮ ಆಣೆ ಕಡಿಮೆಮಾಡಲಾಗುವುದು. ೧೫-೫-೪೪ರ ನಂತರ ಇನ್ನೂ ಕೂಡಾ ಕ್ರಯ ಇಳಿಸಲಾಗುವುದು.

ಅಕ್ಕಿ ದಾಸ್ತಾನು ತಿಳಿಸಬೇಕು

೮-೫-೪೪ರ ತನಕ ಕೆಳಗೆ ನಮೂದಿಸಿದ ಸ್ಥಳಗಳಲ್ಲಿರುವ ಪ್ರತಿಯೊಬ್ಬನೂ ತನ್ನ ವಶವಿರುವ ದಾಸ್ತಾನು ೧೦ ಮಣ ಮತ್ತು ಅದಕ್ಕಿಂತ ಹೆಚ್ಚಿಗಿದ್ದಲ್ಲಿ (ಪ್ರತಿ ಮಣಕ್ಕೆ 82⅔ ರಾತಲು) ಅಕ್ಕಿ ದಾಸ್ತಾನಿನ ವಿವರವನ್ನು ೧೦-೫-೪೪ರ ಒಳಗೆ ಆ ಪ್ರದೇಶದ ರೇಶನಿಂಗ್ ಆಫೀಸರರಿಗೆ ತಿಳಿಸತಕ್ಕದ್ದು. (ಕಾಸರಗೋಡು ಪೇಟೆ ಭಾಗ, (೨) ಅಡ್ಕತ್ತ ಬೈಲು ಗ್ರಾಮ, (ಕಾಸರಗೋಡು ಪೇಟೆ ಪ್ರದೇಶಕ್ಕೆ ಸೇರದ ಭಾಗ) ಕುಡ್ಲು ಗ್ರಾಮ, ಕಾಸರಗೋಡು ಗ್ರಾಮ, (ಕಾಸರಗೋಡು ಪೇಟೆ ಭಾಗಕ್ಕೆ ಸೇರದ ಪ್ರದೇಶ) ತಲಂಗಡಿ ಗ್ರಾಮ, (ಕಾಸರಗೋಡು ಪೇಟೆ ಪ್ರದೇಶಕ್ಕೆ ಸೇರದ ಭಾಗ) ಚೆಮ್ನಾಡ್ ಗ್ರಾಮ, ಕಲ್ನಾಡ್ ಗ್ರಾಮ, (ಆರ್. ಎಸ್. ನಂಬ್ರ ೧-೯೭ ಮತ್ತು ೧೮೮-೨೦೫ ಮಾತ್ರ) ಪುತ್ತೂರು ಗ್ರಾಮ, (ಆರ್. ಎಸ್. ನಂಬ್ರ ೭ ಮತ್ತು ೧೦, ೧೪ರಿಂದ ೧೯, ೨೮ರಿಂದ ೩೩ ೩೫, ೩೬, ೪೬ ಮತ್ತು ೩೦೬ರಿಂದ ೩೦೯ ಮಾತ್ರ.)

ಬರೆವ ಕ್ರಮ:—(೧) ದಪ್ಪ ಅಕ್ಷರದಲ್ಲಿ ತನ್ನ ಪೂರ್ಣ ಹೆಸರು, (೨) ವಿಳಾಸ, (೩) (a) ತನ್ನ ಸ್ವಂತ ಲೆಕ್ಕದಲ್ಲಿ (b) ಬೇರೆಯವರ ಲೆಕ್ಕದಲ್ಲಿ (c) ಬೇರೆಯವರ ಸಂಗಡ ವ್ಯಾಪಾರಾದಿಗಳಲ್ಲಿ ತನ್ನ ವಶವಿರುವ ಅಕ್ಕಿ ವ ಭತ್ತ (೪) ತಾನು ದಾಸ್ತಾನು ಇಟ್ಟ ಸರಿಯಾದ ಸ್ಥಳ ಮತ್ತು ಆ ಸ್ಥಳಗಳಲ್ಲಿ ಎಷ್ಟೆಷ್ಟಿದೆ ಎಂಬ ವಿವರ, (೫) ಯಾರ ಹೆಸರಲ್ಲಿ ಆ ದಾಸ್ತಾನು ಇಡಲಾಗಿದೆಯೋ ಅವರ ಹೆಸರು ವಿಳಾಸ, (೬) ಯಾರ ಸಂಗಡದ ವಹಿವಾಟಿನಲ್ಲಿದೆಯೋ ಅದರ ವಿವರ. ಅಕ್ಕಿ ಮತ್ತು ಭತ್ತಗಳ ಪ್ರತ್ಯೇಕ ವಿವರ ಕೊಡಬೇಕು. ಹೀಗೆಂದು ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

ಅಕ್ಕಿ ಭತ್ತ ಕೊಡಕೂಡದು

ಮೇಲೆ ನಮೂದಿಸಲಾದ ಕಾಸರಗೋಡು ಪೇಟೆ ಮತ್ತು ಅದರ ಆ ಹಳ್ಳಿ ಪ್ರದೇಶಗಳಲ್ಲಿರುವ ಯಾವುದೇ ವ್ಯಾಪಾರಿಯಲ್ಲದ ಮನುಷ್ಯನು ೧೦ ಮಣಕ್ಕಿಂತ ಹೆಚ್ಚಿನ ಅಕ್ಕಿಯನ್ನು ೧೪-೫-೪೪ರ ಮೇಲೆ ಆ ಭಾಗದ ರೇಶನಿಂಗ್ ಆಫೀಸರರ ಬರಹ ಮೂಲಕದ ಅಪ್ಪಣೆಯಿಲ್ಲದೆ ಕೊಡಲೂ ಸಾಗಿಸಲೂ ಕೂಡದು.

೧೪-೫-೪೪ರ ಮೇಲೆ ಯಾವನೇ ರಖಂ ಅಥವಾ ಚಿಲ್ಲರೆ ವ್ಯಾಪಾರಿಯೂ, ಆತ ಚಿಲ್ಲರೆ ವ್ಯಾಪಾರಿಯೆಂದು ಅಧಿಕಾರ ಪಡೆಯದ ವಿನಾ ಆ ಭಾಗದ ರೇಶನಿಂಗ್ ಆಫೀಸರರ ಬರಹ ಮೂಲಕದ ಆಜ್ಞೆಯಿಲ್ಲದೆ ಅಕ್ಕಿ ಭತ್ತ ವಹಿವಾಟು ಮಾಡಕೂಡದು.

ಜನತಾ ಆಹಾರ ಸಮಿತಿ

ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಸಭಿಕರು ವಿಚಾರ ವಿನಿಮಯ ಮಾಡಿದರು. ಶ್ರೀ| ಕೆ. ಬಿ. ಜಿನರಾಜ ಹೆಗ್ಡೆ, ಎಂ. ಎಲ್. ಎ. (ಕೇಂದ್ರ) ಅವರು ಮಾತನಾಡುತ್ತಾ "ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಹೊಸ ಕಲೆಕ್ಟರರೂ ಅಧಿಕಾರಿಗಳೂ ಮಾಡುತ್ತಿರುವ ಯತ್ನ, ಈ ವಿಷಯದಲ್ಲಿ ತಮ್ಮ ಮತ್ತಿತರರ ಕಾರ್ಯಕಲಾಪಗಳು ಇವನ್ನು ವಿವರಿಸಿದರು. ಜನತಾ ಆಹಾರ ಸಮಿತಿಗಳಿದ್ದರೆ ಜನರ ದೂರುಗಳು ಕೇಳಲ್ಪಡುವಂತೆ ಮಾಡಬಹುದು; ಜನರಿಗೆ ಎಲ ವಿಚಾರಗಳೂ ಗೊತ್ತಾಗುವಂತೆ ವಿವರಿಸಬಹುದು; ಹೆಚ್ಚು ಆಹಾರ ಬೆಳೆಸುವುದಕ್ಕೆ ಸಾಧ್ಯವಿರುವ ಕಾರ್ಯಕ್ರಮ ಕೈಕೊಳ್ಳಬಹುದು ಎಂಬ ಅಭಿಪ್ರಾಯಗಳು ವ್ಯಕ್ತಗೊಳಿಸಲ್ಪಟ್ಟುವು. ಕಮ್ಯೂನಿಸ್ಟ್ ಪಾರ್ಟಿಯ ಶ್ರೀ| ಬಿ. ವಿ. ಕಕ್ಕಿಲಾಯರು ಬಂಟವಾಳದಲ್ಲಿ ದಾಸ್ತಾನುಗಾರಿಕೆಗೆ ವಿರುದ್ಧ ಜನರೇ ಹೇಗೆ ಪ್ರಚಾರ ಮಾಡುತ್ತಿದ್ದಾರೆಂದು ವಿವರಿಸಿ ಜನತಾ ಆಹಾರ ಸಮಿತಿಗಳು ಇಂತಹ ಕೆಲಸಗಳನ್ನು ಮಾಡಬಹುದೆಂದರು.

ವಿಚಾರ ವಿನಿಮಯದ ಬಳಿಕ ಸಭೆಯು ಕೆಳಗಿನ ನಿರ್ಣಯವನ್ನು ಸ್ವೀಕರಿಸಿತು.

"ಜಿಲ್ಲೆಯ ಗ್ರಾಮಾಂತರಗಳಲ್ಲಿ ಆಹಾರ ಪರಿಸ್ಥಿತಿಯು ಕೆಡುತ್ತಿದೆಯೆಂದು ಈ ಸಭೆಗೆ ತಿಳಿದು ಬಂದುದರಿಂದ ಅದನ್ನು ಸುಧಾರಿಸಲು ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಜನತಾ ಆಹಾರ ಸಮಿತಿಗಳನ್ನು ನೇಮಿಸುವುದೇ ಮೊದಲಾದ ಕಾರ್ಯವನ್ನು ಕೈಕೊಳ್ಳುವುದಕ್ಕಾಗಿ ಈ ಕೆಳಗಿನ ಸಮಿತಿಯನ್ನು ಸಭೆಯು ನೇಮಿಸುತ್ತದೆ" ಶ್ರೀಯುತರು ಕಟ್ಪಾಡಿ ಲಕ್ಷ್ಮೀನಾರಾಯಣ ನಾಯಕ್, ಎಂ. ಡಿ. ಅಧಿಕಾರಿ, ಬಿ. ಎ. ಕಕ್ಕಿಲ್ಲಾಯ, ಕೆ. ಬಿ. ಜಿನರಾಜ ಹೆಗ್ಡೆ, ಬಿ. ದೇವಪ್ಪ ಆಳ್ವ, ಈ ಸಮಿತಿಯ ಸಭೆಯನ್ನು ಶ್ರೀ| ಅಧಿಕಾರಿಯವರು ಸದ್ಯದಲ್ಲೇ ಕರೆಯಲಿರುವರು.

ರೇಶನಿಂಗ್ ಆರಂಭ

ಈ ತಿಂಗಳ ೧೪, ೧೫ರ ಮೊದಲ್ಗೊಂಡು ನಿಶ್ಚಿತ ರೇಶನಿಂಗ್ ಆರಂಭವಾಗುವುದೆಂದು ತಿಳಿದು ಬರುತ್ತದೆ.

ಅಕ್ಕಿ ಭತ್ತ ಸರಬರಾಯಿ

ಸಂಘದ ಪ್ರತಿನಿಧಿಗಳು ಜಿಲ್ಲಾ ಕಲೆಕ್ಟರರನ್ನು ತಾ. ೨೭-೪-೪೪ರಲ್ಲಿ ಭೇಟಿ ಮಾಡಿದರು. ಅಡಿಕೆ ತೋಟದ ಕೃಷಿಯ ಬಗ್ಗೆ ಇದ್ದ ಅಕ್ಕಿ ಭತ್ತವನ್ನು ರಿಕ್ವಿಜಿಶನ್ ಮಾಡದೆ ಬಿಡುವಂತೆ ಪ್ರತಿನಿಧಿಗಳ ಸಲಹೆಗಳನ್ನು ಸಂಪೂರ್ಣವಾಗಿ ಮಾನ್ಯ ಕಲೆಕ್ಟರರು ಅಂಗೀಕರಿಸಿರುವರು. ಎಲ್ಲಾ ತಹಸಿಲ್ದಾರರಿಗೆ ಅಡಿಕೆ ಬೇಸಾಯಗಾರರಿಗೆ ವ್ಯವಸಾಯಕ್ಕೆ ಬೇಕಾದ ಅಕ್ಕಿ ಭತ್ತವನ್ನೂ ರಿಕ್ವಿಜಿಶನ್ ಮಾಡದೆ ಬಿಡುವಂತೆ ಸರ್ಕಿಲಾರು ಕಳುಹಿಸಲಾಗಿದೆ. ಕಲೆಕ್ಟರರ ಸರ್ಕಿಲಾರಿನ ಸಾರಾಂಶ—೧. ಅಡಿಕೆ ತೋಟವನ್ನು ಅತ್ಯುತ್ತಮ ಪ್ರಮಾಣ ಕೃಷಿ ಮಾಡಿಸುವವರಿಗೆ ಎಕ್ರೆಗೆ ದಿನ ೧೮ ಸರಾಸರಿ ೨ ಕೂಲಿ ಆಳುಗಳಂತೆಯೂ, ೨ ಸಾಧಾರಣ ಕೃಷಿ ಮಾಡಿಸುವವರಿಗೆ ಎಕ್ರೆಗೆ ದಿನ ೧೮ ಸರಾಸರಿ ೧½ ಕೂಲಿ ಆಳಿನಂತೆಯೂ, ೩. ಕಡಿಮೆ ಕೃಷಿ ತೋಟಗಳ ಎಕ್ರೆ ೧೮ ದಿನ ೨ರ ಒಂದು ಆಳಿನಂತೆಯೂ ಆಳು ೧೮ ದಿನ ೧೪ಕ್ಕೆ ೨ ಸೇರು ಅಕ್ಕಿ ಕೂಲಿಯಂತೆಯೂ, ಈ ಲೆಕ್ಕದ ಮೇರಿಗೆ ದಶಂಬರ ಆಖೈರಿನ ವರೆಗೆ ಆಗುವ ಅಕ್ಕಿ ಭತ್ತಗಳನ್ನು ತೋಟದ ಖರ್ಚಿಗೆ ಇಟ್ಟುಕೊಳ್ಳಬಹುದು. ಬಹಳ ಕಡಿಮೆ ತೋಟವಿದ್ದು ಮನೆ ಜನರೇ ಕೆಲಸ ಮಾಡುವಲ್ಲಿ ಮನೆ ಜನರ ಖರ್ಚಿಗೆ ಬೇಕಾದ ಭತ್ತ ಮಾತ್ರ ಇಟ್ಟುಕೊಳ್ಳಬಹುದು.

ರಿಕ್ವಿಸಿಶನ್ ಆಫೀಸರರು ಮನೆ ಮನೆಗೆ ತನಿಖೆಗೆ ಬರುವರು. ಆ ಸಮಯದಲ್ಲಿ ಸಂಘದ ಸದಸ್ಯತೆಯ ಅರ್ಜಿಯ ೧ ನಕಲನ್ನು ಆ ಮನೆಯವರು ಆಫೀಸರರಿಗೆ ಕೊಡತಕ್ಕದ್ದು. ಆಫೀಸರರು ಬಂದಾಗ ತನಿಖೆ ಮಾಡುವ ಮೊದಲು ಮನೆಯಲ್ಲಿದ್ದ ಅಕ್ಕಿ ಭತ್ತದ ಸರಿಯಾದ ಲೆಖ್ಖವನ್ನು ಬರಹ ಮೂಲಕ ಕೊಡಬೇಕು. ಹಾಗೆ ಬರಹ ಮೂಲಕ ಕೊಟ್ಟುದಕ್ಕಿಂತ ಹೆಚ್ಚು ಅಕ್ಕಿ ಭತ್ತ ಮನೆಯಲ್ಲಿದ್ದಲ್ಲಿ ಎಲ್ಲ ಅಕ್ಕಿ ಭತ್ತವನ್ನೂ ರಿಕ್ವಿಸಿಶನ್ ಮಾಡುವರು. ಆದ ಕಾರಣ ಎಲ್ಲರೂ ಸರಿಯಾದ ಅಕ್ಕಿ ಭತ್ತದ ಲೆಕ್ಕವನ್ನು ಆಫೀಸರರು ಬಂದಾಗ ಬರಹ ಮೂಲಕ ಕೊಡತಕ್ಕದ್ದು.

ಅಡಿಕೆ ಬೇಸಾಯಗಾರರಿಗೆ, ಕೂಲಿಯವರಿಗೆ ಕೊಡಲು ಅಕ್ಕಿ—ಭತ್ತವಿಲ್ಲವಾದರೆ ನಗದು ಕೂಲಿಯನ್ನು ಕೊಡತಕ್ಕದ್ದು ಕೂಲಿ ಜನರಿಗೆ ಗುರುತಿನ ಕಾರ್ಡು ಕೊಟ್ಟು ಅಕ್ಕಿಯನ್ನು ಸರಕಾರದವರು ಒದಗಿಸುತ್ತಾರೆ. ಹೀಗೆಂದು ಅ. ಬೇ. ಸಂಘದ ಕಾರ್ಯದರ್ಶಿಗಳು ಬರೆಯುತ್ತಾರೆ.

ಕಸ್ತೂರ್‌ಬಾ ಸ್ಮಾರಕ ನಿಧಿ

ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮತ್ತು ಇತರ ಕಾರ್ಯಕರ್ತರ (ಆಮಂತ್ರಿತರು) ಸಭೆಯೊಂದು ತಾ. ೩೦ರಂದು ಸಂಜೆ "ಪ್ರಭಾತ" ಕಟ್ಟಡದಲಿ ಜಿಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಎಂ. ಡಿ. ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಜರಗಿ, ಅ. ಭಾ. ಕಸ್ತೂರ್‌ಬಾ ಸ್ಮಾರಕ ನಿಧಿಗೆ ಈ ಜಿಲ್ಲೆಯಿಂದ ಹಣ ಸಂಗ್ರಹಿಸುವುದಕ್ಕಾಗಿ ಒಂದು ಸಮಿತಿ ರಚಿಸಲ್ಪಟ್ಟಿತು.

ಸಭೆಯು ಸ್ವೀಕರಿಸಿದ ನಿರ್ಣಯ ಹೀಗಿದೆ.

"ಅಖಿಲ ಭಾರತ ಕಸ್ತೂರ್‌ಬಾ ಸ್ಮಾರಕ ಸಮಿತಿಯವರು ಗೊತ್ತುಮಾಡಿರುವ ಕಸ್ತೂರ್‌ಬಾ ಸ್ಮಾರಕ ನಿಧಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧನ ಶೇಖರಿಸುವುದಕ್ಕಾಗಿ ಕೆಳಗಿನ ಮಹನೀಯರನ್ನೊಳಗೊಂಡ ಒಂದು ಸಮಿತಿಯನ್ನು ಈ ಸಭೆಯು ನೇಮಕಮಾಡಿರುತ್ತದೆ; ಮತ್ತು ಅವಶ್ಯವಿದ್ದಲ್ಲಿ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ಸಹ ಈ ಸಮಿತಿಗೆ ಕೊಡಲಾಗುತ್ತದೆ"- ಶ್ರೀಯುತರು ಬಿ. ವೈಕುಂಠ ಬಾಳಿಗ (ಅಧ್ಯಕ್ಷ); ಎ. ಬಿ. ಶೆಟ್ಟಿ ಮತ್ತು ಕೆ. ಬಿ. ಜಿನರಾಜ ಹೆಗ್ಡೆ (ಉಪಾಧ್ಯಕ್ಷರು); ವಿಟ್ಲ ಲಚಿ ಮಾಧವಜಿ (ಖಜಾನ್ಚಿ); ಎಂ. ಡಿ. ಅಧಿಕಾರಿ, ಕುಡ್ಪಿ ವಾಸುದೇವ ಶೆಣೈ, ಕುಳಕುಂದ ಶಿವರಾಯ, ಕೆ. ಕೃಷ್ಣರಾವ್, ಕೊಂಚಾಡಿ ಕೇಶವ ಶೆಣೈ, ಮಂಗಳೂರು ಜಾರಪ್ಪ, ಕಟ್ಪಾಡಿ ಲಕ್ಷ್ಮೀನಾರಾಯಣ ನಾಯಕ್, ಎಂ. ಉಮೇಶ ರಾವ್.

ಅ. ಭಾ. ಸ್ಮಾರಕ ನಿಧಿ ಸಮಿತಿಯ ಸಭೆಯು ಮುಂಬಯಿಯಲ್ಲಿ ಈ ವಾರದ ಅಂತ್ಯದಲ್ಲಿ ಸೇರಿದ ಮೇಲೆ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆಯನ್ನು ಶ್ರೀ| ಅಧಿಕಾರಿಯವರು ಕರೆಯಲಿರುವರು.

ಎಂ. ಎನ್ ಕಾಮತರ ದಿನ

ಕಳೆದ ಆದಿತ್ಯವಾರ ಎಂ. ಎನ್. ಕಾಮತರ ದಿನವು ಪ್ರಕಾಶ ಕೂಟದ ಆಶ್ರಯದಲ್ಲ ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಮಂದಿರದಲ್ಲಿ ಆಚರಿಸಲ್ಪಟ್ಟಿತು. ಶ್ರೀ ಎಂ. ಮಾಧವ ರಾಯರ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಪ್ರಕಾಶ ಕೂಟದ ಅಧ್ಯಕ್ಷ ಡಾ| ಗಿರಿಧರ ರಾಯರು ಸಭಿಕರನ್ನು ಸ್ವಾಗತಿಸಿದರು.

ಎಂ. ಎನ್. ಕಾಮತರ ಜೀವನ ಕೃತಿ ಮೊದಲಾದ ವಿಷಯಗಳ ಕುರಿತು ಶ್ರೀಗಳಾದ ಜಿ. ವಾಸುದೇವ ಪೈ, ಎಂ. ಸುಬ್ರಾಯನ್ ಮುಲ್ಕಿ ಸುಬ್ಬರಾವ್ ಎಂ. ವೆಂಕಟೇಶ ಪ್ರಭು, ಮತ್ತು ಬಿ. ವಿ. ಕಕ್ಕಿಲ್ಲಾಯರು ಮಾತನಾಡಿದರು,

ಕೊನೆಗೆ ಡಾ| ಗಿರಧರ ರಾಯರು ವಂದನಾರ್ಪಣೆ ಮಾಡಿದರು.

ನಗರ ಸಭೆ

ಮಂಗಳೂರು ನಗರ ಸಭೆಯ ಸಾಮಾನ್ಯ ಸಭೆಯೊಂದು ತಾ. ೧ರಂದು ಉಪಾಧ್ಯಕ್ಷತೆಯಲ್ಲಿ ಜರಗಿತು.

ತಂದೊಪ್ಪಿಸುವ ಪ್ರತಿಯೊಂದು ಇಲಿಗೂ ಒಂದಾಣೆಯಂತೆ ಕೊಡುವ ಪದ್ಧತಿಯನ್ನು ರದ್ದು ಮಾಡಬೇಕೆಂಬ ಆರೋಗ್ಯಾಧಿಕಾರಿಗಳ ಸೂಚನೆ ಮಾನ್ಯವಾಯಿತು.

ವೆಬ್‌ಸ್ಟರ್ ಮಾರ್ಕೆಟನ್ನು ಮಾರ್ಕೆಟಿಗೆ ಒಯ್ದುದರಿಂದಾದ ನಷ್ಟವನ್ನು ಮಾರ್ಕೆಟ್ ಕಂಟ್ರಾಕ್ಟರರಿಗೆ ಕೊಡಬೇಕೆಂದಾಯಿತು.

ಹಾಜಿ ಅಬ್ದುಲ್ ಖಾದರ್ ಎಂಡ್ ಸನ್ಸ್ ಇವರಿಗೆ ಟಾಪಿಯೋಕಾ ಪುಡಿ ತಯಾರಿಸಲು ಇಲೆಕ್ಟ್ರಿಕ್ ಮೋಟರ್ ಉಪಯೋಗಿಸುವರೆ ನೇಮಕವಾದ ಸಮಿತಿಯ ವರದಿಯೋದಲ್ಪಟ್ಟು ಸದ್ಯ ೩ ತಿಂಗಳ ವರೆಗೆ ಶರತದ ಮೇಲೆ ಸಮ್ಮತಿ ಕೊಡಬೇಕೆಂದಾಯಿತು.

೪೩ ವಿಷಯಗಳನ್ನು ೧½ ಗಂಟೆ ಒಳಗೆ ಮುಗಿಸಿದ ಬಗ್ಗೆ ಶ್ರೀ: ಮಣೇಲ್ ಗೋವಿಂದ ನಾಯ್ಕರು ಉಪಾಧ್ಯಕ್ಷರಿಗೆ ವಂದನೆ ಅರ್ಪಿಸಿದರು.

ಕದ್ರಿ

ಕದ್ರಿ ಮುನ್ಸಿಪಲ್ ಬಾಲಿಕಾ ಪಾಠ ಶಾಲೆಯ ಮಕ್ಕಳ ರಕ್ಷಕರ ದಿನಾಚರಣೆಯು ಕಳೆದ ಶನಿವಾರ ಸಂಜೆ ಶ್ರೀಮತಿ ಶಾಂಭವಿ ಆರ್. ಪೂಂಜರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಹೆಡ್ ಮಿಸ್ಟ್ರೆಸರು ವರದಿಯೋದಿದರು. ಮಕ್ಕಳ ಹೆತ್ತವರ ಕೂಟದ ಅಧ್ಯಕ್ಷರಾದ ಶ್ರೀ| ಕೆ. ಕೃಷ್ಣರಾಯರು ಶಾಲೆಯ ಮಕ್ಕಳ ಪ್ರಯೋಜನಾರ್ಥ ಒಂದು ಆಟದಂಗಳ ಮತ್ತು ಕದ್ರಿಯಂಥಾ ಹಳ್ಳಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಹಯ್ಯರ್ ಎಲಿಮೆಂಟರಿ ಶಾಲೆಗಳಾಗುವ ಅಗತ್ಯದ ಕುರಿತು ಮಾತನಾಡಿದರು. ಮಿಸ್. ರಮಣಿ ಬಿ. ಎ., ಇವರು ಸ್ತ್ರೀ ವಿದ್ಯಾಭ್ಯಾಸದ ಮೇಲೆ ಭಾಷಣ ಮಾಡಿದರು. ಮಕ್ಕಳ ವಿವಿಧ ವಿನೋದಾವಳಿಗಳು ನಡೆದವು. ಮುನ್ಸಿಪಲ್ ಕಮಿಶನರು ಹಾಜರಿದ್ದರು.

ಅಡಿಕೆ ಅಬ್ಕಾರಿ ಸುಂಕವನ್ನು ಕಿತ್ತು ಹಾಕುವ ಏರ್ಪಾಡು

ಶ್ರೀ. ಜಿ. ಕೆ. ಗೋವಿಂದ ಭಟ್ಟರು ಅಬ್ಕಾರಿ ಸುಂಕವನ್ನು ಅಡಿಕೆ ಮೇಲೆ ಹೊರಿಸುವ ಅಧಿಕಾರ ಸರಕಾರಕ್ಕಿಲ್ಲವೆಂದು ಬರೆದ ಲೇಖನವನ್ನು ಸರ್ ಸಪ್ರು, ಜಿ. ಯಸ್. ಪಾಠಕ್ ಎಡ್ವೊಕೇಟ್ ಅಲಹಾಬಾಬ್ ಹೈಕೋರ್ಟು, ಕೆ. ಎಫ್. ನರಿಮಾನ್ ಬೊಂಬ್ಬಾ, ಕೊಡಗಿನ ಡಿ. ಸೆಶನ್ಸ್ ಜಡ್ಜ ಯನ್. ಸಿ. ಮುದ್ದಪ್ಪ ಮಡಿಕೇರಿ ಮುಖ್ಯ ಚೀಫ್ ಮೆಜಿಸ್ಟ್ರೇಟ್ ಎ. ಸಿ. ಸುಬ್ಬಯ್ಯ ಮೊದಲಾದವರಿಗೆ ಕಳುಹಿಸಿದೆ. ಸರ್ ತೇಜ ಬಹದ್ದೂರ್ ಸಪ್ರುಗಳು ಲಖನೌ ಚೀಫ್ ಕೋರ್ಟಿನಿಂದ ಅಲಹಾಬಾದಿಗೆ ತಾ. ೨೩ಕ್ಕೆ ಹಿಂತಿರುಗಿ ಮೇ ೫ರ ಒಳಗೆ ಸಂಘದ ಕಾರ್ಯದರ್ಶಿಯರಿಗೆ ಬರಹ ಮೂಲಕ ಅಭಿಪ್ರಾಯ ಕಳುಹಿಸಲಿರುವರು.

ಪ್ರಕಟಣೆ

ಪ್ಲೇಗು ರೋಗದ ಸೋಂಕು ಮಂಗಳೂರು ಮುನಿಸಿಪಾಲಿಟಿಯ ಒಳಗೆ ಇನ್ನೂ ಇದೆ. ಪ್ಲೇಗು ಇನೋಕ್ಯುಲೇಶನ್ ಮಾಡಿಸಿಕೊಂಡು ತಮ್ಮನ್ನು ಕಾಪಾಡಿಕೊಳ್ಳುವ ಸೌಕರ್ಯವನ್ನು ಒದಗಿಸಿ ಕೊಟ್ಟರೂ, ಇನ್ನೂ ಬಹುಜನರು ಇದರ ಉಪಯೋಗ ಮಾಡಿಕೊಳ್ಳಲಿಲ್ಲ. ಮಳೆ ಪ್ರಾರಂಭವಾದೊಡನೆ ಪ್ಲೇಗು ಇನ್ನೂ ಹೆಚ್ಚುವ ಸಂದರ್ಭ ಕಾಣುವುದು. ಆದ ಕಾರಣ ಪ್ಲೇಗು ಇನೋಕ್ಯುಲೇಶನ್ ಖಡ್ಡಾಯ ಮಾಡಲ್ಪಟ್ಟಿದೆ. ಈ ಖಡ್ಡಾಯ ನಿರ್ಬಂಧನೆಯ ವಿಷಯ ಜನರಿಗೆ ಹೆಚ್ಚಿನ ಮಾಹಿತಿ ಇರಲಾರದಾದ ಕಾರಣ ಸಾರ್ವಜನಿಕರಿಗೆ ಈ ಮೂಲಕ ಕೆಳಗಿನ ವಿವರವು ತಿಳಿಸಲಾಗುವುದು.

ಮಂಗಳೂರು ಮುನಿಸಿಪಾಲಿಟಿಯ ಒಳಗೆ ಇರುವ ಎಲ್ಲಾ ಜನರು ತಾ. ೧೫-೫-೪೪ರ ಒಳಗೆ ಪ್ಲೇಗು ಇನೋಕ್ಯುಲೇಶನ್ ಮಾಡಿಸಿಕೊಳ್ಳತಕ್ಕದ್ದು. ಸಾರ್ವಜನರಿಗೆ ಪ್ಲೇಗು ಇನೋಕ್ಯುಲೇಶನ್ ಕೊಡುವ ಬಗ್ಗೆ ಹೆಲ್ತಾಫೀಸರರು ಮುನ್ಸಿಪಾಲಿಟಿಯ ವಿವಿಧ ಭಾಗಗಳಲ್ಲಿ ಏರ್ಪಾಡುಮಾಡಿರುತ್ತಾರೆ. ಪ್ಲೇಗು ಇನೋಕ್ಯುಲೇಶನ್ ಕೊಡುವ ಸ್ಥಳ ಮತ್ತು ಸಮಯವನ್ನು ಮುಂಚಿತವಾಗಿ ಡಂಗುರ ಮೂಲಕ ಪ್ರಕಟಿಸಲ್ಪಡುವುದು. ಈ ಸಂದರ್ಭವನ್ನು ಪ್ರತಿಯೊಬ್ಬನು ಉಪಯೋಗಿಸಿಕೊಳ್ಳಬೇಕು. ತಾರೀಕು ೧೫-೫-೪೪ರ ಒಳಗೆ ಇನೋಕ್ಯುಲೇಶನ್ ಮಾಡಿಸಿಕೊಳ್ಳಲಿಕ್ಕೆ ತಪ್ಪಿದವರು ಪ್ರೊಸಿಕ್ಯೂಶನಿಗೆ ಗುರಿಯಾಗುವರು ಎಂದು ಮಂಗಳೂರು ಮುನ್ಸಿಪಲ್ ಹೆಲ್ತಾಫೀಸರು ತಿಳಿಸುತ್ತಾರೆ.

ಆಗಮನ

ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ತಾ. ೨೭ರಂದು ಕಾಸರಗೋಡಿಗೆ ಬಂದು ಅಲ್ಲಿ ಡಾ| ಪಿ. ಎನ್. ಭಟ್ಟರ ಕಣ್ಣಿನ ಆಸ್ಪತ್ರೆಯ ಉದ್ಘಾಟನೆ ಮಾಡಿ, ಅದೇ ದಿನ ಸಂಜೆ ಮಂಗಳೂರಿಗೆ ಬಂದವರು, ಥಿಯಾಸಫಿಕಲ್ ಲಾಜಿನಲ್ಲಿ ತತ್ವ ಶಾಸ್ತ್ರದ ಕುರಿತು ಭಾಷಣವಿತ್ತರು. ಜಿಲ್ಲಾ ಎಲ್. ಪಿ. ಎಂ. ಸಂಘದವರು ಅವರಿಗೆ ಉಪಹಾರವಿತ್ತು ಸತ್ಕರಿಸಿದರು.

ಶಂಕರ ಜಯಂತಿ

ಅದ್ವೈತ ಸಮಿತಿ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿಯು ಕಳೆದ ಗುರುವಾರ ಮಂಗಳೂರಿನ ಸಬ್ ಜಡ್ಜರಾದ ಶ್ರೀ. ಡಿ. ರಾಮಯ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಂಕರಾಚಾರ್ಯರ ಜೀವನದ ಕುರಿತು ಶ್ರೀಗಳಾದ ಎಸ್ ಕೃಷ್ಣ ಭಟ್ಟ ಮತ್ತು ಬಿ. ಉಮೇಶರಾಯರು ಭಾಷಣವಿತ್ತರು.

ಇಡ್ಯ ವಿದ್ಯಾದಾಯಿನೀ

ಶಾಲೆಯ ವರ್ಧಂತ್ಯುತ್ಸವವು ಶ್ರೀ. ಕೆ. ಸದಾಶಿವರಾಯರ ಅಧ್ಯಕ್ಷತೆಯಿಂದ ಜರಗಿತು ಹ್ಯಾಸ್ಕೂಲಿಗೆ ಅಗತ್ಯವಿರುವ ಕಟ್ಟಡದ ಶಂಖುಸ್ಥಾಪನೆ ಡಿ. ಇ. ಓ. ರಾದ ಶ್ರೀ. ಎನ್. ಸುಬ್ಬರಾಯರಿಂದ ನೆರವೇರಿಸಲ್ಪಟ್ಟಿತು.

ಮುಂಬಾಯಿ ಸ್ಫೋಟನ

ನಷ್ಟ ಹೊಂದಿದವರ ವಿಚಾರವೇನು?

[illegible] ... ಗಳಿಗೆ ಭೇಟಿ ಕೊಟ್ಟು ಗಾಯಗೊಂಡವರನ್ನು ಮಾತಾಡಿಸಿ ಸಮಾಧಾನ ಹೇಳಿದರು. ಹೊಸ ದಿಲ್ಲಿಯಿಂದ ಆರ್ಥಿಕ ಖಾತೆಯ ಅಧಿಕಾರಿಗಳು ಮುಂಬಯಿ ಅನಾಹುತದಿಂದುಂಟಾದ ಹಾನಿಯ ಲೆಕ್ಕವನ್ನು ಬಹಳ ವಿಚಕ್ಷಣತೆಯಿಂದ ವಿಚಾರ ಮಾಡುತ್ತಲಿರುವರು.

ನಿಯಮ ಸಡಿಲಿಸಿದ್ದೇಕೆ?

ಮುಂಬಯಿ ಡಕ್ಕೆಯಲ್ಲಿ ಮದ್ದು ಗುಂಡು ಮುಂತಾದವುಗಳನ್ನು ಇಳಿಸಬಾರದೆಂದಿದ್ದ ನಿಯಮವನ್ನು ಸರಕಾರವು ಸಡಿಲುಗೊಳಿಸಿದ್ದರ ವಿರುದ್ಧ ಮುಂಬಯಿ ಪೋರ್ಟ ಟ್ರಸ್ಟಿನವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಲ್ಲದೆ ಉಗ್ರ ನಷ್ಟ ಭರ್ತಿಮಾಡಿಕೊಡುವಂತೆ ಕೇಳಿದ್ದಾರೆ.

ದುರಸ್ತಿ ವ್ಯವಸ್ಥೆ

ಸುಟ್ಟ ಭಾಗದ ದುರಸ್ತಿ ಕೆಲಸವು ಭರದಿಂದ ನಡೆದಿದೆ. ಆ ಭಾಗವನ್ನು ಸಂದರ್ಶಿಸಲು ಜನತೆಗೆ ಅವಕಾಶ ಕೊಟ್ಟದ್ದರಿಂದ ಅನೇಕರು ಬಂದು ನೋಡಿಕೊಂಡು ಹೋಗುತ್ತಿರುವರು. ಬಿದ್ದ ಮಣ್ಣು ಕಲ್ಲುಗಳನ್ನು ತೆಗೆವ ಕೆಲಸವು ಭರದಿಂದ ಸಾಗಿದೆ. ಇನ್ನೂ ಆಗತಕ್ಕ ಕೆಲಸ ಬಹಳವಿದೆ. ಹಾಳಾಗದ ಮತ್ತು ಹಾಳಾದ ಕಾಳುಕಡ್ಡಿಗಳ, ಚೀಲಗಳೆಲ್ಲ ಕೆಲ ವಖಾರಗಳ ಸಮೀಪದಲ್ಲಿ ಬಿದ್ದಿವೆ. ಆಯಾ ಒಡೆಯರು ಬಂದು ತಮ್ಮ ಸರಕುಗಳನ್ನು ಒಯ್ಯಬಹುದೆಂದು ತಿಳಿಸಲಾಗಿದೆ. ಒಟ್ಟಿಗೆ ಕಾರೊನರರ ಕೋರ್ಟಿಗೆ ೩೧೦ ಶವಗಳು ಬಂದಿದ್ದು ೩೫೬ ಜನ ಹೆಸರಾಗಿದ್ದಾರೆಂದು ಹೇಳಲಾಗುತ್ತದೆ. ಶುಕ್ರವಾರ ದಿನ ಕೊಂಪೆಯನ್ನು ಅಗೆಯುವಾಗ ಓರ್ವ ಮೊಚ್ಚೆಗಾರನ ಹೆಣ ದೊರಕಿತು. ಇನ್ನೊಂದೆಡೆ ಅಗೆಯುವಾಗ ಓರ್ವ ಹೆಣ್ಣು ಮಗಳು ತನ್ನ ಮಗುವನ್ನು ಎದೆಗವಚಿಕೊಂಡಿದ್ದ ಎರಡು ಶವಗಳ ಹೃದಯದ್ರಾವಕ ದೃಶ್ಯವು ಕಣ್ಣಿಗೆ ಬಿತ್ತು. ಇಷ್ಟಲ್ಲದೆ ಸ್ಫೋಟವಾದ ಜಾಗೆಯ ಸುತ್ತುಮುತ್ತ ಕತ್ತರಿಸಿ ಬಿದ್ದ ಮಾನವ ಅವಯವಗಳು ಹಾಗು ಕಪ್ಪಾಗಿ ಸಿಡಿದ ಶವಗಳು ದೊರೆತವು. ಯಾವ ಮನೆಗಳಲ್ಲಿ ವಾಸ ಮಾಡಲು ಜನರಿಗೆ ಅಪ್ಪಣೆ ಕೊಡಲಾಗಿದೆಯೋ ಆ ಮನೆಗಳ ಒಡೆಯರು ಅವುಗಳನ್ನು ತಮ್ಮ ಶಿಲ್ಪಿಗಳಿಗೆ ತೋರಿಸಿ ಬೇಗನೇ ದುರಸ್ತಿ ಮಾಡಿಸಬೇಕೆಂದೂ ಈ ಕೆಲಸವನ್ನು ಮಳೆಗಾಲ ಸಮೀಪಿಸುವದರೊಳಗೆ ಮುಗಿಸಬೇಕೆಂದೂ ಸರಕಾರದವರು ಜಾಹೀರುಪಡಿಸಿದ್ದಾರೆ. ಸತ್ತವರ ಸಂಖ್ಯೆ ಇದುವರೆಗೆ ೩೬೦ಕ್ಕೆ ಮುಟ್ಟಿದೆ. ಇದರಲ್ಲಿ ಕಣ್ಮರೆಯಾದವರ ಸಂಖ್ಯೆ ಕೂಡಿಲ್ಲ.

ಪರಿಹಾರ ಕಾರ್ಯ

ಪರಿಹಾರ ಕಾರ್ಯ ಸಮಾಧಾನಕರವಾಗಿ ಸಾಗುತ್ತಿದೆ. ಮುನಸಿಪಾಲಿಟಿಯವರು ೯ ಪರಿಹಾರ ಕೇಂದ್ರಗಳನ್ನು ತೆರೆದು ದಿನಾಲು ಸುಮಾರು ೩೦೦೦ ನಾಗರಿಕರನ್ನು ಪೋಷಿಸುತ್ತಾರೆ. ಇದರ ವೆಚ್ಚವನ್ನು ಪ್ರಾಂತೀಯ ಸರಕಾರವು ವಹಿಸುತ್ತದೆ. ಅನೇಕ ಖಾಸಗಿ ಸಂಸ್ಥೆಗಳೂ ಕೆಲವು ಮಹನೀಯರೂ ವೈಯುಕ್ತಿಕವಾಗಿ ಪರಿಹಾರ ಕಾರ್ಯವನ್ನು ಕೈಕೊಂಡಿದ್ದಾರೆ. ಕೇಂದ್ರ ಸರಕಾರದ ಇಬ್ಬರು ಆರ್ಥಿಕ ಅಧಿಕಾರಿಗಳು ಧಕ್ಕೆಗೊಂಡ ಪ್ರದೇಶಗಳಿಗೆ ಭೆಟ್ಟಿ ಕೊಟ್ಟರು. ೭೦ಕ್ಕಿಂತ ಹೆಚ್ಚು ಜನರು ಪೋಲೀಸರಿಗೆ ಅರ್ಜಿಮಾಡಿ ಸುಮಾರು ೨೩೩೫೦೦ ರೂಪಾಯಿಗಳ ತಮ್ಮ ಸಾಮಾನು ನಾಶಹೊಂದಿವೆಯೆಂದು ತಿಳಿಸಿದ್ದಾರೆ.

ಹೃದಯುದ್ರಾವಕ ದೃಶ್ಯ.

ಭಾರತ ಸೇವಕ ಸಮಾಜದ ಶ್ರೀ. ಥಕ್ಕರ್ ಬಾಪಾರವರು ಈ ಸ್ಫೋಟದ ಸಂಬಂಧದಲ್ಲಿ ಒಂದು ಪ್ರಕಟಣೆ ಹೊರಡಿಸಿದ್ದು ಅದರ ಆಶಯ ವಿಂತಿದೆ. ಅಂದು ಮೊದಲನೇ ಸ್ಫೋಟ ಸಂಭವಿಸಿದಾಗ ಥಕ್ಕರರು ಬೆಲಾರ್ಡ ಇಸ್ಟೇಟದಲ್ಲಿರುವ ಸಿಂಧಿ ಭವನದಲ್ಲಿದ್ದರು. ಅವರು ತಮ್ಮ ಅನುಭವಗಳನ್ನು ಪ್ರಕಟಿಸಿದ್ದಾರೆ. ಶುಕ್ರವಾರ ಸ್ಫೋಟವಾಗಿ ಬೆಂಕಿ ಹತ್ತಿದ್ದರೂ ಮಾಂಡವಿ ಮಸಜಿದ್ ಹಾಗು ಕರನ್ಯಾಗ ಬ್ರಿಜ್ಜ ಭಾಗಗಳಲ್ಲಿ ಸೋಮವಾರ ರಾತ್ರಿ ಸಹ ಉರಿ ಕಾಣುತ್ತಿತ್ತು. ಶುಕ್ರವಾರ ೪ ಗಂಟೆಗೆ ಮೊದಲನೇ ಸ್ಫೋಟವಾದಾಗ ನಾಗರಿಕರೆಲ್ಲರಿಗೆ ಆಶ್ಚರ್ಯವಾಯಿತು. ಇಡೀ ನಗರವು ಈ ಸ್ಫೋಟದಿಂದ ನಡುಗಿತು. ಫೋರ್ಟಿನಲ್ಲಿಯ ಎಲ್ಲ ಕಟ್ಟಡಗಳ ಗಾಜುಗಳು ಒಡೆದು ಚೂರಾದವು. ಒಂದು ಮೈಲು ದೂರವಿರುವ ಕ್ವೀನ್ಸ ರೋಡಿನಲ್ಲಿಯ ಕಟ್ಟಡಗಳ ಗಾಜು ಒಡೆದವು. ಒಂದು ಕಟ್ಟಡದಲ್ಲಿಯಂತೂ ೨೫ ಸಾವಿರ ರೂ ಬೆಲೆಯ ಗಾಜುಗಳು ಒಡೆದಿವೆ. ಈ ಸ್ಫೋಟವಾದ ಕೂಡಲೆ ಜನರು ತಮಾಶೆ ನೋಡಲು ಧಾವಿಸಿದರು. ಅದೇ ಕಾಲಕ್ಕೆ ಎರಡನೇ ಸ್ಫೋಟ ಸಂಭವಿಸಿದ್ದರಿಂದ ಅವರೆಲ್ಲ ಅದರ ಹೊಡೆತಕ್ಕೆ ಸಿಲುಕಿದರು, ಅನೇಕರು ಮೃತಪಟ್ಟರು. ಇನ್ನೂ ಅನೇಕರು ಗಾಯಗೊಂಡರು. ಎರಡನೇ ಸ್ಫೋಟ ಬಹಳ ಭೀಕರವಾಗಿತ್ತು. ಅದರಿಂದ ಮೋಟರ ಕಾರುಗಳು ಉರುಳಿಬಿದ್ದವು. ಮೆರಿನ್ ಡ್ರಾಯಿವ್‌ದಲ್ಲಿ ಹೋಗುತಿದ್ದ ಬಸ್ಸುಗಳು ಹಾದಿಬಿಟ್ಟು ಓಡಿಹೋಗಿ ದೀಪದ ಕಂಬಗಳಿಗೆ ಡಿಕ್ಕಿ ಹೊಡೆದವು. ಪೋಲೀಸರ, ಮಿಲಿಟರಿಯವರ ವ್ಯವಸ್ಥೆಯಿಂದ ಗಂಡಾಂತರ ಕಡಮೆಯಾಯಿತು. ಈ ಭಾಗದಲ್ಲಿದ್ದ ಕಾಳಿನ ಗುದಾಮುಗಳಿಗೆ ಬೆಂಕಿ ಹತ್ತಿದ ದೃಶ್ಯವು ಅತ್ಯಂತ ಹೃದಯದ್ರಾವಕವಿದ್ದಿತು. ಇಲ್ಲಿ ಜನವಸತಿ ದಟ್ಟವಾದ್ದರಿಂದ ಪರಿಸ್ಥಿತಿ ಒಮ್ಮೆಲೆ ಅಲ್ಲೋಲಕಲ್ಲೋಲವಾಯಿತು. ಸುಮಾರು ೨೦ ಸಾವಿರ ಜನ ಮುಕ್ತ್ಯಂಜೆಯಾಗುವದರೊಳಗಾಗಿ ಇದ್ದುಬಿದ್ದುದನ್ನೆಲ್ಲ ತೆಗೆದುಕೊಂಡು ಓಡಿಹೋಗಬೇಕಾಯಿತು. ಬೆಲೆಯುಳ್ಳ ಆಭರಣಗಳನ್ನು ತೆಗೆದುಕೊಂಡು ಹೋಗಲು ಕೂಡ ಅವರಿಗೆ ಸಮಯವಿರಲಿಲ್ಲ. ಅವರಿಗೆ ಲೆಕ್ಕವಿಲ್ಲದಷ್ಟು ಹಾನಿಯಾಗಿರುತ್ತದೆ. ಇವರೆಲ್ಲರಿಗೆ ವಸತಿಯನ್ನು ಕಲ್ಪಿಸಿಕೊಡುವದತ್ಯವಶ್ಯವಾಗಿದೆ. ಔದಾರ್ಯದಲ್ಲಿ ಎಂದಿನಿಂದಲೂ ಮುಂದಿದ್ದ ಮುಂಬಯಿ ನಾಗರಿಕರು ಮುಕ್ತಹಸ್ತದಿಂದ ಸಹಾಯಮಾಡಬೇಕು.

ಪೇಟೆಯ ಪರಿಸ್ಥಿತಿ

ಈ ನಷ್ಟದ ಪರಿಣಾಮ ಪೇಟೆಯ ಮೇಲೆಯೂ ವಿಪರೀತವಾಗಿದೆ. ಹಲವು ಕೋಟಿ ರೂಪಾಯಿಗಳಷ್ಟು ಹಾನಿಯಾದ್ದರಿಂದ ಅದರ ಶಾಕವು ವ್ಯಾಪಾರಸ್ಥರಿಗೂ ಹೆಚ್ಚಾಗಿ ಬಡೆದಿದೆ. ವ್ಯಾಪಾರಸ್ಥರಂತೆ ಇನ್ಶ್ಯುರೆನ್ಸ್ ಕಂಪೆನಿಗಳು ಬ್ಯಾಂಕುಗಳು ಈ ನಾಶದಲ್ಲಿ ಸಿಕ್ಕಿವೆ. ಈ ನಷ್ಟಕ್ಕೆ ಹೊಣೆಯಾರು ಎಂಬ ಮಾತೇ ಪೇಟೆಯಲ್ಲೆಲ್ಲ ಕೇಳಬರುತ್ತದೆ. ಮುಖ್ಯವಾಗಿ ವ್ಯಾಪಾರಿಗಳ ಸರಕು ನಾಶವಾಗಿವೆ. ಇವೆಲ್ಲಕ್ಕೆ ವಿಮೆ ಮಾಡಿಸಿತ್ತು. ಇದರ ಬಲದಿಂದ ಅನೇಕ ಬ್ಯಾಂಕುಗಳು ಹಣವನ್ನು ಕೊಟ್ಟಿದ್ದವು. ಆದರೆ ಸ್ಫೋಟದಿಂದಾದ ಹಾನಿಯನ್ನು ಕಟ್ಟಿಕೊಡಲಾಗದೆಂದು ವಿಮಾಪಾಲಿಸಿಗಳಲ್ಲಿ ಒಂದು ನಿಯಮವಿದೆ. ಈಗಿನ ನಷ್ಟ ಸ್ಫೋಟದಿಂದ ಆದ್ದರಿಂದ ವಿಮಾಕಂಪೆನಿಗಳು ನ್ಯಾಯವಾಗಿ ತಾವು ನಷ್ಟ ಕಟ್ಟಿಕೊಡಲು ಜವಾಬ್ದಾರರಲ್ಲವೆಂದು ಯೋಚಿಸಿದಂತೆ ತಿಳಿಯಲಾಗುತ್ತದೆ. ವಿಮಾ ಕಂಪೆನಿಗಳು ಹಣಕೊಡದಿದ್ದರೆ ಬ್ಯಾಂಕುಗಳ ಹಣಬರುವದೆಂತು? ಸರಕಾರವು ಸಹ ವಾರರಿಸ್ಕ ಇನ್ಶ್ಯುರೆನ್ಸ್ ಮೂಲಕ ಈಗ ನಷ್ಟವಾಗಿರುವ ಸರಕುಗಳ ಮೇಲೆ ಪ್ರೀಮಿಯಂ ಪಡೆಯುತ್ತಿತ್ತು. ಆದರೆ ಈ ಕಾಯಿದೆ ಪ್ರಕಾರ ಯುದ್ಧ ಶತ್ರುಬಾಧೆಯಿಂದ ಈ ಸರಕುಗಳು ನಾಶವಾದಲ್ಲಿ ಮಾತ್ರ ನಷ್ಟ ಕಟ್ಟಿಕೊಡಲು ಸರಕಾರವು ಹೊಣೆಯಿದೆ. ಹೀಗೆ ವಿಮಾ ಕಂಪೆನಿಗಳು ತಪ್ಪಿಸಿಕೊಂಡು ಸರಕಾರವು ಜಾರಿಕೊಂಡ ಮೇಲೆ ಈಗ ಆಗಿರುವ ನಷ್ಟವನ್ನು ಸರಿಪಡಿಸುವದು ಹೇಗೆಂದು ಒಂದು ದೊಡ್ಡ ಪ್ರಶ್ನೆಯೆದ್ದಿದೆ. ವ್ಯಾಪಾರಿಗಳಿಗೆ ಒದಗಿದ ಸಂಕಟವನ್ನು ಸಮಯಕ್ಕೆ ಸರಿಯಾಗಿ ಬಂದು ಪರಿಹರಿಸದಿದ್ದಲ್ಲಿ ವಿಮಾಕಂಪೆನಿಗಳು ಜಾಟಿಕ್ಕಲ್ಲದ ಉತ್ತರದಾಯಿತ್ವಯೇ ಸರಿ. ಈ ಸಂಕಟದಿಂದ ಪೇಟೆಗಳಲ್ಲಿ ವಿಪರೀತ ಕಳವಳವಾಗಿದೆ. ನಷ್ಟಪಟ್ಟವರು ಅನೇಕ ಜನರಿದ್ದಾರೆ. ಈ ವಿಚಾರದಲ್ಲಿ ಸರಕಾರದ ನಿರ್ಧಾರವಿನ್ನೂ ತಿಳಿದಿಲ್ಲ. ಇದನ್ನು ಬೇಗನೆ ತಿಳಿಸುವದತ್ಯವಶ್ಯವಾಗಿದೆ. ಸರಕಾರದವರು ತಮ್ಮ ಧೋರಣವನ್ನು ಬೇಗನೆ ನಿರ್ಧರಿಸಬೇಕು.

ಮುಂಬಾಯಿ ವಿಚಾರಣೆ ಸಮಿತಿ

ಮುಂಬಯಿಯಲ್ಲಿ ಎಪ್ರಿಲ್ ೧೪ಕ್ಕೆ ಸಂಭವಿಸಿದ ಅನಾಹುತಕ್ಕೆ ಕಾರಣಗಳೇನು ಮುಂತಾದ್ದರ ಬಗ್ಗೆ ವಿಚಾರಣೆ ಮಾಡಲು ಹಿಂದುಸ್ತಾನ ಸರಕಾರದವರು ಹ್ಯಾಕೋರ್ಟು ಜಡ್ಜ ರೋಬ್ಬರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣೆಸಮಿತಿಯನ್ನು ನೇಮಿಸಬೇಕೆಂತು ನಿರ್ಧರಿಸಿದ್ದಾರೆ. ಮುಂಬಯಿ ಸರಕಾರದೊಡನೆ ವಿಚಾರವಿನಿಮಯ ಮಾಡಿಯೇ ಅವರು ಹೀಗೆ ನಿರ್ಣಯಿಸಿರುವರೆಂದು ಪ್ರಕಟವಾಗಿದೆ. ಹಿಂದುಸ್ತಾನ ಸರಕಾರದವರು ಬೇಗನೆ ಈ ಸಮಿತಿಯನ್ನು ನೇಮಿಸಿ ವಿಚಾರಣೆಯನ್ನು ಸುರುಮಾಡಿಸಬೇಕು. ದಿನಗಳೆದಂತೆ ವಿಚಾರಣೆ ಸರಿಯಾಗಿ ನಡೆಯಲಾರದೆಂಬುದನ್ನು ಬೇರೆ ಹೇಳಬೇಕಿಲ್ಲ. ಈ ಅನಾಹುತದಿಂದ ಎಲ್ಲವನ್ನು ಕಳೆದುಕೊಂಡು ಇನ್ಶ್ಯುರೆನ್ಸ್ ಕಂಪೆನಿಗಳಿಂದ ಏನೂ ನಷ್ಟ ತುಂಬಿಕೊಳ್ಳಲು ಸಾಧ್ಯವಿಲ್ಲದವರಿಗೆ ಪರಿಹಾರ ಕೊಡುವ ಬಗ್ಗೆಯೂ ಆಲೋಚನೆ ನಡೆದಿದೆಂದು ಪ್ರಕಟಿಸಲಾಗಿದೆ. ಆ ಸಂಬಂಧದಲ್ಲಿ ಯಥಾವಕಾಶ ಪ್ರಕಟಣೆ ಹೊರಡುವದು. ಆದರೆ ಇಷ್ಟರಲ್ಲಿಯೇ ನಿರಾಶ್ರಿತರಿಗೆ ಕೂಡಲೆ ಪರಿಹಾರ ಕೊಡುವ ಬಗ್ಗೆ ಹಿಂದುಸ್ತಾನ ಸರಕಾರದವರು ೫ ಲಕ್ಷ ರೂಪಾಯಿಗಳನ್ನು ಕೊಡಿಸಿರುವರು. ಈ ಅನಾಹುತ ಸಂಭವಿಸಿದಾಗ ಅಧಿಕಾರಿಗಳು ಏನು ಉಪಾಯ ಕೈಗೊಂಡರು. ನಂತರ ಏನೇನು ಮಾಡಿದರು ಮುಂತಾದ್ದನ್ನು ತಿಳಿದುಕೊಳ್ಳುವದನ್ನೂ ಈ ಸಮಿತಿಗೆ ಒಪ್ಪಿಸಲಾಗಿದೆ. ಇಂಥ ಅನಾಹುತವು ಸಂಭವಿಸಿದ್ದು ಅತ್ಯಂತ ಶೋಚನೀಯವಾದ್ದರಿಂದ ಇದರ ಕಾರಣವನ್ನು ಹುಡುಕುವದತ್ಯವಶ್ಯ. ಅಲ್ಲದೆ ಇದಕ್ಕೆ ಕಾರಣರಾದವರಿಗೆ ಯೋಗ್ಯ ಶಾಸನ ಮಾಡುವದು ಅವಶ್ಯ. ಮುಂದೆ ಈ ಬಗೆಯ ಅನಾಹುತಗಳು ಸಂಭವಿಸದಂತೆಯೂ ನೋಡಿಕೊಳ್ಳಬೇಕು. ಇದರಲ್ಲಿ ನಷ್ಟಕ್ಕೊಳಗಾದವರಿಗೆ ಎಲ್ಲ ರೀತಿಯಿಂದಲೂ ಪರಿಹಾರ ಕೊಡಬೇಕು. ಸ್ಫೋಟ ಸಂಭವಿಸಿದ್ದಾಗ್ಗ ಇನ್ಶ್ಯುರೆನ್ಸ್ ಕಂಪೆನಿಯವರು ನಷ್ಟವನ್ನು ತುಂಬಿಕೊಡುವದಿಲ್ಲಂತೆ. ಇದು ನಿಜವಿದ್ದರೆ ಸರಕಾರದವರು ನಷ್ಟವನ್ನು ತುಂಬಿ ಕೊಡಬೇಕಾಗುವದು. ಈ ಅನಾಹುತದಿಂದ ಅನಾಥರಾದವರ ಗೋಳನ್ನು ನಿವಾರಿಸಬೇಕು. ಹಿಂದುಸ್ತಾನ ಸರಕಾರದವರು ಮತ್ತು ಮುಂಬಯಿ ಸರಕಾರದವರು ಕೂಡಲೆ ಈ ಬಗ್ಗೆ ನಿಶ್ಚಿತ ನಿರ್ಣಯ ಮಾಡಬೇಕೆಂದು ಒತ್ತಾಯಪಡಿಸುತ್ತೇವೆ.

ಕ ವೀ

ಜನರಿಂದಲೇ ಬೇಂಕುಗಳು
ಧನ ಮತ್ತು ಧನ ಗೃಹಗಳಿಂದಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರೈಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆ ಸಲಿಸುವ—ಆ ಜನರು . . . .

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು . . . .

ತಮ್ಮ ಆರ್ಥಿಕ ತೊಡಚಣೆಗಳಲ್ಲೊ ಸಮಸ್ಯೆಗಳಲ್ಲೊ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು . . .

. . . ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವ ಪಡುವುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್
Canara Bank Ltd.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತೂಲ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಬಾರ್ ಸೋಪ್ ಇಲ್ಲಿದೆ—ಉತ್ತಮ ಒಂದು ಬಾರ್ ಸೋಪ್ ಆಗಿದೆ. ಬೇಗನೇ ನೊರೆ ಹೊರಡುವ ಬಾಳಿಕೆಯದೂ ಆಗಿದೆ. ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಅಂಗಡಿಗಳಲ್ಲೂ ಸಿಗುತ್ತದೆ.

PISTOL BRAND BAR SOAP

WANTED AGENTS IN S. KANARA DT

Mangalore Stockists—M/S D. Narsimha Pai & Sons, Mangalore.

Universal Industries (India) Ltd.
Nable chambers, Fort Bombay.

ಅಖಿಲಭಾರತ ಚರಖಾ ಸಂಘದ ಹೊಸ ಯೋಜನೆ

(ಲೇಖಾಂಕ ೨)

ಲೇಖಕ: ಕಿ. ನಾರಾಯಣ ರಾವ್. ಖಾದಿಕೇಂದ್ರ, ಅಜ್ಜರಪುರ.

ಹಿಂದುಸ್ಥಾನದ ಪ್ರತಿ ಮನೆಯನ್ನು ತನ್ನ ಬಟ್ಟೆಯ ಮಟ್ಟಿಗೆ ಸ್ವಾವಲಂಬಿಯನ್ನಾಗಿ ಮಾಡುವುದೂ, ಕೈಗಾರಿಕೆ ವರ್ಗದಲ್ಲಿ ಅತೀ ಕಡಿಮೆ ಕೂಲಿ ದುಡಿಯುವ ನೂಲುವವರ ಜೀವನವನ್ನು ಹೆಚ್ಚಿಗೆ ಮಜೂರಿ ದೊರಕುವಂತೆ ಮಾಡಿ ಸುಧಾರಿಸುವುದೂ, ಅಖಿಲ ಭಾರತ ಚರಖಾ ಸಂಘದ ಧ್ಯೇಯವಾಗಿದೆ ಆದರೆ ನೂಲು ಮತ್ತು ಖಾದಿ ಉತ್ಪತ್ತಿ ಕೇಂದ್ರಗಳನ್ನು ಸ್ಥಾಪಿಸಿ ಖಾದಿ ಮಾರಾಟಕ್ಕೆ ಭಂಡಾರಗಳನ್ನು ತೆರೆದು ಜನತೆಯನ್ನು ಖಾದಿ ಪ್ರಚಾರದ ಕಡೆಗೆ ಸೆಳೆಯುವುದರಲ್ಲಿಯೇ ಚರಖಾ ಸಂಘದ ಶಕ್ತಿ ಎಲ್ಲಾ ಕೇಂದ್ರೀಕರಿಸಲ್ಪಟ್ಟುದರಿಂದ ತನ್ನ ಧ್ಯೇಯದ ಕಡೆಗೆ ಕೊಡಬೇಕಾದಷ್ಟು ಲಕ್ಷ್ಯ ಕೊಡಲು ಇದುವರೆಗೆ ಸಾಧ್ಯವಾಗಲಿಲ್ಲ ಖಾದಿ ವ್ಯಾಪಾರ ಸಂಸ್ಥೆಗಳ ಆಡಳಿತೆ ಅವುಗಳ ವ್ಯವಸ್ಥೆ ಮುಂತಾದವುಗಳಲ್ಲಿಯೇ ಕಾರ್ಯಕರ್ತರು ಮಗ್ನರಾಗಿರಬೇಕಾಗಿತ್ತು. ನೂಲುವವರ ಜೀವನವನ್ನು ಸುಧಾರಿಸಬೇಕೆಂಬ ಆಶೆಯು ಪರಿಪೂರ್ಣವಾಗಿದ್ದರೂ, ಅವರ ಪ್ರಶ್ನೆಗೆ ಗಮನ ಕೊಡುವಷ್ಟು ಬಿಡುವಿರಲಿಲ್ಲ ಹೀಗೆ ನೂಲಿಸುವುದು ನೂಲನ್ನು ಕೊಟ್ಟು ಖಾದಿ ನೇಯಿಸುವುದು, ನೇಯ್ದ ಖಾದಿಯನ್ನು ಬಜಾರಿನಲ್ಲಿ ಮಾರುವುದೇ ಮುಂತಾದ ಕೆಲಸಗಳು ಕೇಂದ್ರೀಕರಿಸಲ್ಪಟ್ಟು ಇದರಿಂದ ಸಂಚಾಲಕರ ಸಮಯವೆಲ್ಲಾ ಬರೀ ವ್ಯಾಪಾರದಲ್ಲೇ ಪೂರ್ಣ ವ್ಯಯವಾಗಿ ಸಂಘದ ಧ್ಯೇಯ ಸಾಧನೆಗೆ ದುಡಿಯುವುದಾಗುತ್ತಿರಲಿಲ್ಲ. ಇದರಿಂದ ನೂಲುವವರೂ ನೇಕಾರರೂ ತಮಗೆ ದೊರಕುತ್ತಿದ್ದ ಕೂಲಿಯಿಂದ ಜೀವನ ಸಾಗಿಸಲಾರದೆ ಅನೇಕ ವೇಳೆ ಇತರೇ ಹೆಚ್ಚು ಕೂಲಿ ಸಿಗುತ್ತಿರುವ ಉದ್ಯೋಗವನ್ನು ಮಾಡುತ್ತಿದ್ದರು ಮಜೂರಿಗಾಗಿ ಯಾರಿಗೋ ದುಡಿಯುತ್ತಿದ್ದೇವೆಂಬುದೇ ಅವರ ಭಾವನೆಯಾಗಿತ್ತು. ತಮ್ಮ ಏಳಿಗೆಗಾಗಿ ಕೆಲಸ ಮಾಡುತ್ತಿದ್ದೇವೆಂಬ ಭಾವನೆಯು ಅವರಲ್ಲಿರಲಿಲ್ಲ ಧ್ಯೇಯದ ಗಂಧವೇ ಅವರಿಗಿರಲಿಲ್ಲ ಅವರಿಗೆ ಎಂಟು ತಾಸಿನ ಕೆಲಸಕ್ಕೆ ಮೂರಾಣೆ ಬರಬೇಕೆಂದು ನಿಶ್ಚಯಿಸಲ್ಪಟ್ಟರೂ ಇದು ಬರೇ ಕಾಗದದಲ್ಲಿ ಉಳಿಯಿತೇ ಹೊರತು ಅವರ ಕೈಗೆ ಅಷ್ಟು ಬರುತ್ತಿರಲಿಲ್ಲ ಕಾರಣವೇನೆಂದರೆ ಅವರ ರಾಟೆಯು ಹಳೆಯದಾಗಿದ್ದು, ನಿಲುಗಂಬ, ಕೊಂಬೆ ಇವುಗಳು ಅಲ್ಲಾಡುತ್ತಾ, ಮೊಂಡು ಕದರು ಆದರುತ್ತಿರುವಾಗ ನೂತ ನೂಲು ಸಾಗುತ್ತಿರಲಿಲ್ಲ ಅವರ ವೇಗವು (Speed) ಗಂಟೆಗೆ ನೂರಐವತ್ತರಿಂದ ಇನ್ನೂರು ಗಜಗಳಿಗಿಂತ ಹೆಚ್ಚಲಿಲ್ಲ ಆದುದರಿಂದ ಹೆಚ್ಚಿದ ಕೂಲಿಯ ಪ್ರಯೋಜನವನ್ನು ಅವರು ಪಡೆಯಲಿಲ್ಲ ಅವರ ವೇಗವು ಹೆಚ್ಚಬೇಕಾಗಿದ್ದರೆ ನೂಲುವ ಸರಂಜಾಮುಗಳೆಲ್ಲವೂ ಆಧುನಿಕವಾಗಿರಬೇಕು ಹಂಜಿಯು ಉತ್ತಮ ತರಗತಿಯದ್ದಾಗಿರಬೇಕು ಇವುಗಳ ಕಡೆಗೆ ಗಮನ ಕೊಡಲು ವ್ಯಾಪಾರದಲ್ಲಿ ಉದ್ಯುಕ್ತರಾದ ಕಾರ್ಯಕರ್ತರಿಗೆ ಸಾಧ್ಯವಾಗಲಿಲ್ಲ ಆದ್ದರಿಂದಲೇ ಚರಖಾ ಸಂಘವು ಮೊಟ್ಟಮೊದಲು ವ್ಯಾಪಾರದಿಂದ ನಿವೃತ್ತರಾಗಬೇಕೆಂದು ತೀರ್ಮಾನಿಸಲ್ಪಟ್ಟಿರುವುದು

ಚರಖಾ ಸಂಘವು ವ್ಯಾಪಾರದಿಂದ ನಿವೃತ್ತಿ ಹೊಂದುವುದು ಅದೊಂದು ಹೊಸ ಹೆಜ್ಜೆಯಿಟ್ಟಂತಾಗಿದೆ ಈ ಹೆಜ್ಜೆಯಲ್ಲಿಯೇ ವಿಕೇಂದ್ರೀಕರಣದ ಬೀಜವಿರುವುದು ಚಿಕ್ಕ ಚಿಕ್ಕ ಉತ್ಪತ್ತಿ ಕೇಂದ್ರಗಳನ್ನಾಗಿ ಸಂಘಗಳನ್ನೇರ್ಪಡಿಸಿದರೆ ಅವುಗಳ ಕಾರ್ಯಕರ್ತರು ನೂಲುವವರ ಕಡೆಗೆ ಹೆಚ್ಚಿಗೆ ಗಮನ ಕೊಡಲು ಅವಕಾಶವಾಗುವುದು ಅಲ್ಲದೆ ನೂಲುವವರೂ, ನೇಕಾರರೂ, ಧ್ಯೇಯಕ್ಕಾಗಿ ಕೆಲಸ ಮಾಡುವಂತೆ ಖಾದಿಯ ಮೂಲ ತತ್ವಗಳನ್ನು ಅವರಿಗೆ ವಿವರವಾಗಿ ತಿಳಿಯುವಂತೆ ಮಾಡುವುದು ಅತಿ ಪ್ರಾಮುಖ್ಯ ಕೆಲಸವಾಗಿದೆ ನೂಲುವವರ ಕೂಲಿಯ ಮಟ್ಟವು ಹೆಚ್ಚಿಸಲ್ಪಡಬೇಕಾದರೂ ಖಾದಿ ಬೆಲೆಯನ್ನು ಏರಿಸದೆ ಸಾಧ್ಯವಿಲ್ಲ ಬೆಲೆ ಏರಿದ ಖಾದಿಯನ್ನು ಉಪಯೋಗಿಸುವಂತಾಗಬೇಕಾದರೆ ಈ ತತ್ವಗಳ ವಾತಾವರಣವು ಖಾದಿ ಕ್ಷೇತ್ರದಲ್ಲಿ ಉಂಟಾಗಬೇಕು. ಕೈಗಾರಿಕೆಯಲ್ಲಿ ನಿರತರಾದವರೆಲ್ಲರೂ ಖಾದಿ ತತ್ವಕ್ಕಾಗಿ ದುಡಿಯುವ ಹುಮ್ಮಸುಳ್ಳವರಾಗಬೇಕು. ಬರೀ ನಾಣ್ಯಕ್ಕಾಗಿ ದುಡಿಯುವುದೇ ಇವರ ದಾರಿಯಾದರೆ ಖಾದಿ ಮೂಲಕ ಸ್ವರಾಜ್ಯವೆಂಬ ಈ ಮಹಾ ಕಾರ್ಯಕ್ರಮವು ಯಶಸ್ವೀಯಾಗಲು ಅಡಚಣೆಯುಂಟಾಗಬಹುದು. ಖಾದಿ ಉತ್ಪತ್ತಿಯಲ್ಲಿ ತೊಡಗಿರುವ ಪ್ರತಿಯೊಬ್ಬ ವ್ಯಕ್ತಿಯೂ, ಇದಕ್ಕಾಗಿ ದುಡಿಯಬೇಕಾಗುವುದು ಹೀಗೆ ಒಂದು ಬಗ್ಗೆಯ ಕ್ರಾಂತಿಯು ಜಗತ್ತಿನಲ್ಲಿ ಬರಬೇಕಾದರೆ ವಿಕೇಂದ್ರೀಕರಣ ಯೋಜನೆಯೇ ಇದಕ್ಕೆ ಹೆದ್ದಾರಿ.

ನೂಲುವವರ ಕೂಲಿಯು ವಿಕೇಂದ್ರೀಕರಣ ಯೋಜನೆಯಲ್ಲಿ ಹೆಚ್ಚಿಸಲ್ಪಟ್ಟಿರುವುದು ಎಂಟು ತಾಸಿನ ದಿನದ ಕೆಲಸಕ್ಕೆ ಎಂಟಾಣೆ ಕೊಡುವುದೇ ಇದರ ಧ್ಯೇಯ ಈಗ ಎಂಟು ತಾಸಿನ ಕೆಲಸಕ್ಕೆ ಆರಾಣೆಯನ್ನು ಕೊಡತಕ್ಕದ್ದೆಂದು ನಿಶ್ಚಿತವಾಗಿದೆ ಮುಂದಿನ ಹೆಜ್ಜೆಯೇ ಎಂಟಾಣೆ ಎಂಟಾಣೆಯನ್ನು ದುಡಿಯುವ ಆ ದಿನ ಅನತಿ ದೂರದಲ್ಲಿದೆ ಆರ್ಥಿಕ ಪ್ರಪಂಚದಲ್ಲಿ ಎಂಟಾಣೆ ಕೂಲಿಯು ರಾಷ್ಟ್ರವಿಸ್ತಾರವಾದ ಒಂದು ಕ್ರಾಂತಿಯನ್ನುಂಟುಮಾಡುವುದು ಎಂಟಾಣೆಗಿಂತ ಕಡಿಮೆ ಕೂಲಿಗೆ ಯಾರೂ ಸಿಗಲಾರರು ಭಂಡವಾಳಿಗರ ಸಂಸ್ಥೆಯಲ್ಲಿ ಕೆಲಸಮಾಡುವ ಹೆಂಗಸರಿಗೆ ಸಿಗುವ ಕೂಲಿ ಬರೀ ಮೂರಾಣೆ ಮಾತ್ರ ನೂಲುವ ಕೂಲಿಯಿಂದ ಇದು ಎರಡರಷ್ಟು ಮಾಡಲ್ಪಟ್ಟಿರುವಾಗ ಇತರ ಕೆಲಸದ ಕೂಲಿ ಸ್ವಾಭಾವಿಕವಾಗಿ ಹೆಚ್ಚುವುದು

ಇದರ ಪರಿಣಾಮವು ಅತಿ ಕ್ರಾಂತಿಕಾರಕವಿರುವುದೆಂದು ಹೇಳಲು ಕಾರಣವೇನೆಂದು ವಿಚಾರಿಸೋಣ ನೂಲುವ ಉದ್ಯೋಗಕ್ಕೆ ಒಂದು ಘನತೆ ಒಂದು ಗೌರವ ಇದರಿಂದ ಉಂಟಾಗುತ್ತದೆ ನೂಲುವವರ ಸಂಸಾರದಲ್ಲಿ ಈ ಕೆಲಸ ಹರಡುತ್ತದೆ ಇದರಿಂದ ಅವರ ಜೀವನವು ಸುಖಮಯವಾಗುತ್ತದೆ ನೂಲುವ ಉದ್ಯಮವು ಎಲ್ಲೆಲ್ಲಿಯೂ ಹರಡುವದು ನೂಲಿನ ಲಡಿಯು ಚಾಲ್ತಿ ನಾಣ್ಯವಾಗುವುದು. ನೂಲುವವನು ಸಾರ್ವತ್ರಿಕ (Universal) ಆಗುವನು ಆಗ ಕೈನೂಲು ಬಜಾರಿನಲ್ಲಿ ಬೇಕಾದಷ್ಟು ಮಾರಾಟಕ್ಕೆ ದೊರಕಬಹುದು ಹೀಗೆ ಹೇರಳವಾಗಿ ಉತ್ಪತ್ತಿಯಾಗುವ ನೂಲನ್ನು ನೆಯ್ಯುವ ಏರ್ಪಾಡು ಬೇಕು ನೆಯಿಗೆ ಕೆಲಸ ಮಾಡುವವರನ್ನು ಹಳ್ಳಿ ಹಳ್ಳಿಯಲ್ಲಿಯೂ ತರಬೇತು ಮಾಡುವುದು ಅತ್ಯಗತ್ಯ ಈ ಕೆಲಸವನ್ನು (A I S A) ಚರಕಾ ಸಂಘವು ಕೈಕೊಳ್ಳತಕ್ಕದ್ದು ನೂಲುವವರು ಮನಸೋ ಇಚ್ಛೊದಾರವನ್ನು ನೂತು ಬಿಟ್ಟರೆ ಉಪಯೋಗವಿಲ್ಲ ಸಮತೆ ಹುರಿ, ಸರಿಯಾಗಿರುವ ನೂಲು ಮಾತ್ರ ನೂಲೆನ್ನಿಸಿಕೊಳ್ಳುತ್ತದೆ ಇಲ್ಲದೆ ಹೋದರೆ ಅದು ನೂಲಲ್ಲ, ಬರೇ ಕಸ, ಹೀಗೆ ಸರಿಯಾದ ನೂಲನ್ನು ತಯಾರಿಸುವ ಪೂರ್ವಭಾವಿಯಾಗಿ ಗಂಜೀ ಹಾಕುವ ವಿದ್ಯೆಯನ್ನು ಗ್ರಾಮಾಂತರಗಳಲ್ಲಿ ಕಲಿಸುವ ಏರ್ಪಾಡು ಇರಬೇಕು ಆ ಮೇಲೆ ಸೇಕಡಾ ಅರುವತ್ತರಷ್ಟು (ಹುರಿ) ಬಲವಿರುವ ದಾರವನ್ನು ಹಳ್ಳಿಯವರು ನೂತು, ಲಡಿ ಮಾಡಿಡಬೇಕು ಲಡಿಯಲ್ಲಿ ೮೪೦ ಗಜ ದಾರವಿದೆ ೭ ಚಿಟ್ಟಿಗಳಿವೆ ಒಂದೊಂದು ಚಿಟ್ಟಿಯಲ್ಲಿಯೂ ೧೨೦ ಗಜವಿರಬೇಕು

ಇಂಥಾ ಲಡಿ ೧ಕ್ಕೆ ೦-೨-೩ಗೆ ಕೊಳ್ಳಲ್ಪಡುತ್ತದೆ. ಇಂಥಾ ಲಡಿಗಳು ನಾನಾ ಕೈಗಳಿಂದ ಮಾಡಲ್ಪಟ್ಟಿರುವುದರಿಂದ ಒಂದೇ ನಂಬರಿನ ದಾರವಾಗಿರುವುದು ಸಾಧ್ಯವಿಲ್ಲ ನೆಯಿಗೆ ಕೇಂದ್ರಗಳಲ್ಲಿ ಈ ಲಡಿಗಳನ್ನು ನಂಬರು ವಾರು ವಿಂಗಡಿಸಲ್ಪಟ್ಟು, ನೇಕಾರರಿಗೆ ಕೊಡಲ್ಪಡಬೇಕು ಆಗ ಮಾತ್ರ ಹಸನಾದ ಖಾದಿ ಉತ್ಪತ್ತಿಯಾಗುತ್ತದೆ

ನೂಲುವ ದಳದಲ್ಲೂ ಎರಡು ಗುಂಪಿನವರಿರುವರು ೧ ನೂಲಿನ ಮಾರಾಟಕ್ಕಾಗಿ ನೂಲುವವರು, ಇವರು ತಮ್ಮ ಉಪಜೀವನಕ್ಕೆ ಈ ಉದ್ಯೋಗವನ್ನು ಕೈಗೊಂಡಿರುವರು ೨ ಸ್ವಾವಲಂಬನಕ್ಕಾಗಿ ನೂಲುವವರು ಇವರು ತಮ್ಮ ಬಟ್ಟೆಗಾಗಿ ನೂಲುವರು ಇವರು ತಯಾರಿಸಿದ ನೂಲನ್ನು ಖಾದಿ ಭಂಡಾರಗಳಲ್ಲಿ ತಮಗೆ ಬೇಕಾಗಿರುವ ನಮೂನೆಯ ಬಟ್ಟೆಗಳಿಗೆ ನೂಲನ್ನು ಬದಲಾಯಿಸಬಹುದು ಇವರಿಗೆ ಖಾದಿ ಭಂಡಾರಗಳಿಗೆ ಸಿಗುವ ಕಮಿಷನ್ ದೊರಕುವುದು ಈ ಸೌಲಭ್ಯ ಬರೇ ಖಾದಿ ಕೊಳ್ಳುವವರಿಗೆ ಇರುವುದಿಲ್ಲ ಉತ್ಪತ್ತಿ ಕೇಂದ್ರಗಳಲ್ಲಿ ಇವರಿಗೆ ಖಾದಿ ಒದಗಿಸುವ ವ್ಯವಸ್ಥೆ ಮಾಡಲ್ಪಡುವದು. ಅನೇಕರು ಸ್ವಾವಲಂಬನೆಗಾಗಿ ನೂತ ನೂಲನ್ನು ನೆಯಿಗೆಗೆ ಕೊಟ್ಟು ನೂಲನ್ನು ಕಳಕೊಂಡಿರುವುದೂ ಉಂಟು. ಅಥವಾ ಒಲೆಯಂತೆ ಜಾಳು ನೆಯಿಗೆ ಮಾಡಿದ ಒಟ್ಟೆಯನ್ನು ಎಷ್ಟೋ ದಿನಗಳ ಮೇಲೆ ಅತಿ ಪ್ರಯಾಸದಿಂದ ಪಡೆದಿರುವ ನಿದರ್ಶನವೂ ಇವೆ ಇದಕ್ಕೆ ಕಾರಣವೇನೆಂದರೆ ತಾನು ನೂತ ನೂಲಿನ ಬಟ್ಟೆಯನ್ನೇ ತಾನು ಧರಿಸಬೇಕೆಂಬ ಒಂದು ಗೊಡ್ಡು ಕಂದಾಚಾರ ಅನೇಕ ವೇಳೆ ಇದು ಸಾಧ್ಯವಾಗುವುದಿಲ್ಲ. ನೂಲಿನಲ್ಲಿ ಹುರಿ, ಸಮತೆ, ಇಲ್ಲವೆ ನೆಯಿಗೆಗೆ ಅರ್ಹವೆ ಇಲ್ಲದಿರಬಹುದು ಅಥವಾ ಚಲೋ ನೂಲಾದರೆ, ನೇಕಾರನು ಈ ನೂಲನ್ನು ತನ್ನ ಸ್ವಂತ ಬಟ್ಟೆಗಾಗಿಟ್ಟುಕೊಂಡು ಎರಡನೇ ತರಗತಿಯ ನೂಲಿನಿಂದ ಬಟ್ಟೆ ತಯಾರಿಸಿ ನಿಮ್ಮ ನೂಲಿನ ಬಟ್ಟೆ ಎಂದು ಕೊಡಬಹುದು. ಈ ಕಾರಣಗಳಿಗಾಗಿ ಖಾದಿ ಕೇಂದ್ರ ವ ಭಂಡಾರಗಳಲ್ಲಿ ತಮಗೆ ಬೇಕಿರುವ ಬಟ್ಟೆಗಳಿಗೆ ನೂಲನ್ನು ಬದಲಾಯಿಸುವ ಪದ್ಧತಿ ಉತ್ತಮವೆನಿಸಿದೆ ವಿಕೇಂದ್ರೀಕರಣದ ಉತ್ಪತ್ತಿ ಸಂಘಗಳ ಹಾಗೂ ಗ್ರಾಹಕರ ಸಂಘಗಳ ಕುರಿತು ಮುಂದಿನ ಲೇಖಾಂಕದಲ್ಲಿ ಬರೆಯಲ್ಪಡುವುದು.

ಇಬ್ಬರು ಗಾಂಧಿಗಳಿಗೂ ಅನಾರೋಗ್ಯ'

ಆರೋಗ್ಯಕ್ಕಾಗಿ ಪ್ರಾರ್ಥಿಸಿರಿ!

ಮಹಾತ್ಮ ಗಾಂಧಿಯವರು ಇತ್ತೀಚೆಗೆ ತೀವ್ರ ಅನಾರೋಗ್ಯಕ್ಕೆ ತುತ್ತಾಗಿ ಅವರ ಪರಿಸ್ಥಿತಿ ಚಿಂತಾ ಜನಕವಾಗಿದೆಯೆಂದು ಸುದ್ದಿ ಬಂದಿದೆ ಅಂತೆಯೇ ಗಡಿನಾಡಿನ ಗಾಂಧಿ ಅಬ್ದುಲ್ ಗಫಾರ್ ಖಾನರೂ ಅನಾರೋಗ್ಯದಿಂದ ನರಳುತ್ತಿರುವರಾಗಿ ತಿಳಿಯುತ್ತದೆ ಭಾರತದ ಈ ಇಬ್ಬರು ಮಹಾತ್ಮರ ಆರೋಗ್ಯದ ಸಲುವಾಗಿ ಎಲ್ಲೆಲ್ಲೂ ಪ್ರಾರ್ಥನೆ ನಡೆಯಬೇಕೆಂದು ಪಂಡಿತ ಮಾಲವೀಯರು ಪ್ರಕಟಿಸಿದ್ದಾರೆ

ಒಂದೇ ಬಾರಿ ಸೂರ‍್ಯತ್ರಯರ ಉದಯ

ಮೊನ್ನೆ ತಾ ೨೬ಕ್ಕೆ ಮುಂಜಾನೆ ಮೂರು ಸೂರ‍್ಯರು ಉದಯವಾದ ಜ್ಯೋತಿಷಿಕ ವೈಚಿತ್ರ್ಯವೊಂದು ಮದುರೆಯಲ್ಲಿ ಗೋಚರವಾಯಿತು ನಿಜವಾದ ಸೂರ‍್ಯನು ಮಧ್ಯದಲ್ಲಿ ಮತ್ತೆರಡು ದಕ್ಷಿಣೋತ್ತರಗಳಲ್ಲಿ ಉದಯವಾಗಿ ೯ ಗಂಟೆಯವರೆಗೆ ಹಾಗೆಯೆ ಕಾಣಿಸಿಕೊಂಡರು ಎಂದು ಹೇಳಲಾಗಿದೆ

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗೂಡ್ಸ್ ಬಂಡಿ	ಬೆಳಗ್ಗೆ ೬ ೩೫	ರಾತ್ರಿ ೭ ೪೦
ಪಟಲ್ ಕಣ್ಣಾನೂರು ಪರಿಯಂತ ಮಾತ್ರ	ಸಾಯಂ ೫ ೫೫	ಬೆಳಗ್ಗೆ ೯ ೩೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭_೫	ಸಾಯಂ ೭.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. BUNDER MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts season and short term deposits and many other lucrative schemes at most favourable rates of interest. For terms etc. apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost.

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನೆರೆ' ಹೋಗಲಾಡಿಸುತ್ತದೆ.

ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 12—5—1944 [ಸಂಚಿಕೆ 19]

ಮಹಾತ್ಮರ 'ಪರ್ಣಕುಟಿ'ಯಲ್ಲಿ

— ಬಿಡುಗಡೆಯಾನಂತರ —

ಗಾಂಧೀಜಿ ಅನಾರೋಗ್ಯ ದೇಶದಲ್ಲಿ ತುಂಬಾ ಕಳವಳವನ್ನುಂಟು ಮಾಡಿತು ಅವರಿಗೆ ಜ್ವರ ಬರುತಿತ್ತು, ಎನೀಮಿಯಾದಿಂದ ತಂಗಾಲಾಗಿ ರಕ್ತದ ಒತ್ತಡವೂ ಹೆಚ್ಚಾಯಿತು ಜೀವಕ್ಕೆ ಅಪಾಯವುಂಟೆಂದು ಭೀತಿಗೊಂಡರು, ದೇಶ ತುಂಬಾ ಮಹಾತ್ಮರ ಬಿಡುಗಡೆಯಾಗಬೇಕೆಂಬ ಕೂಗು ಕೇಳಿತು ಮತ್ತೆ ಘೊನೆಗೊಮ್ಮೆ ತಾ ೬ರಂದು ಗಾಂಧಿಜಿಯನ್ನು ಕೇವಲ ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಿದ ಸುದ್ದಿ ಬಂದು ಸಕಲರೂ ಸಂತೋಷಗೊಂಡರು

ಗಾಂಧೀಜಿಯ ಈ ಬಿಡುಗಡೆ ಬಗ್ಗೆ ಲಂಡನಿನಲ್ಲಿಯೂ ಬೇಕಾದಷ್ಟು ಚಳವಳ ಆಗಿದೆಯೆಂದೂ, ಅಮೆರಿಯಲ್ಲಿ ಕೆಲವುಂದಿ ಪಾರ್ಲಿಮೆಂಟು ಸದಸ್ಯರು ದೂರು ಕೊಟ್ಟು ಒತ್ತಾಯ ಪಡಿಸಿದರೆಂದೂ ವರದಿಯಿದೆ ಗಾಂಧೀಜಿ ಬಿಡುಗಡೆಯ ಬಗ್ಗೆ ವೈಸರಾಯರೇ ಜವಾಬ್ದಾರಿ ವಹಿಸಿರುವರೆಂದೂ ಹೇಳಲಾಗುತ್ತದೆ

ಗಾಂಧೀಜಿ ಈಗ ತೀರಾ ನಿಶ್ಶಕ್ತರಿರುವುದರಿಂದ ಅವರ ಭೇಟಿಗೆ ಜನರು ಮುತ್ತಿಗೆ ಹಾಕದಂತೆ ವಿನಂತಿಸಿ ಕೊಂಡಿದ್ದಾರೆ ಬಿಡುಗಡೆ ಮಾಡಿದ ನಂತರ ಗಾಂಧೀಜಿ ಹಸನ್ಮುಖಿಗಳಾಗಿರುವರೆಂದು ಸುದ್ದಿ ಬಂದಿರುವುದು

"ಗಾಂಧೀಜಿ ಆರೋಗ್ಯದ ಬಗ್ಗೆ ಭಯಪಡಬೇಕಾಗಿಲ್ಲ, ಅವರು ಬೇಗನೇ ಗುಣ ಹೊಂದುವರು' ಎಂದು ಅವರನ್ನು ಪರೀಕ್ಷಿಸಿದರು ಬಿ ಸಿ ರಾಯರು ಹೇಳಿದ್ದಾರೆ ಗಾಂಧೀಜಿಗೆ ಬಂಧನ ಹಾಕಿದ್ದೇ ಈ ಸಲ ಇಷ್ಟವಿರಲಿಲ್ಲವಾಗಿ ಬಿಡುಗಡೆ ಮಾಡಿದ ಕಾರಣದಿಂದಲೇ ಆರೋಗ್ಯ ಸರಿಯಾಗುವ ಸಂಭವವೂ ಇದೆ

ಮಹಾತ್ಮರನ್ನು ತಾ ೭ರಂದು ಮುಂಜಾನೆ ಆಗಾಖಾನ ಅರಮನೆಯ ಸೆರೆಮನೆಯಿಂದ ಬಿಡುಗಡೆ ಮಾಡಿ ಸೆರೆಮನೆ ಇನ್‌ಸ್ಪೆಕ್ಟರ್ ಜನರಲ್ ಕರ್ನಲ್ ಭಂಡಾರಿಯವರು ಕಾರಿನಲ್ಲಿ ಕುಳ್ಳಿರಿಸಿ ಲೇಡಿ ವಿಠಲದಾಸ ಥಾಕರಸಿಯವರ ಪರ್ಣ ಕುಟಿ'ಗೆ ಕರೆದೊಯ್ದು ಬಿಟ್ಟರು ೧೯೩೩ರಲ್ಲಿ ಇದೇ 'ಪರ್ಣಕುಟಿಯಲ್ಲಿ ಗಾಂಧೀಜಿ ೨೧ ದಿನಗಳ ಮಹೋಪವಾಸಕ್ಕೆ ಕೊಂಡಿದ್ದರು

ಗಾಂಧೀಜಿ ಜತೆಯಲ್ಲಿ ಡಾ। ಗಿಲ್ಡರ್, ಪ್ಯಾರೇಲಾಲ್, ಮೀರಾ ಬೆನ್, ಸುಶೀಲಾ ನಾಯರ್ ಇವರೂ ಬಿಡಲ್ಪಟ್ಟಿರುವರು ಗಾಂಧೀಜಿ ಬಿಡುಗಡೆಯ ಸುದ್ದಿ ಕೇಳಿದೊಡನೆ ಜನ ಸ್ತೋಮ ಆಗಾಖಾನ ಅರಮನೆಯ ಬಾಗಿಲಲ್ಲಿ ತುಂಬಿತ್ತು ಗಾಂಧೀಜಿ ಕುಳಿತ ಕಾರು ಹೆಬ್ಬಾಗಿಲಿಗೆ ಬಂದ ಕೂಡಲೇ ಪ್ರಚಂಡ ಜಯ ಘೋಷವೆದ್ದಿತು

ಮಹಾತ್ಮರಿಗೆ ಎಪ್ರಿಲ್ ೧೦ರಿಂದ ತೊಡಗಿ ಅಸೌಖ್ಯವಿತ್ತೆಂದೂ, ಎಪ್ರಿಲ್ ೧೪ಕ್ಕೆ ಒಮ್ಮೆಯೇ ಜೋರಾಗಿ ಮರುದಿನ ಜ್ವರ ಬಹಳ ಏರಿ, ಸ್ಮೃತಿ ತಪ್ಪಿತೆಂದೂ, ಎನೆಮಿಯ ಆಗಿದ್ದು ಮೂತ್ರ ಕ್ರಿಯೆಯೂ ಸರಿಯಾಗಿ ನಡೆದಿಲ್ಲವೆಂದೂ ಅವರೀಗ ಉಲ್ಲಸಿತರಾಗಿದ್ದರೂ, ಅವರ ದೈಹಿಕ ಮಾನಸಿಕ ದಣಿವು ಹೋಗಿಲ್ಲವೆಂದೂ, ಆದ್ದರಿಂದ ದೆಯಮಾಡಿ ಯಾರೂ ಅವರಿಗೆ ಈಗ ಶ್ರಮ ಕೊಡಬಾರದೆಂದೂ ಡಾ ಗಿಲ್ಡರ್ ಮತ್ತು ಡಾ। ಸುಶೀಲಾ ನಾಯರ್ ಒಂದು ಪ್ರಕಟಣೆಯಲ್ಲಿ ತಿಳಿಸಿರುವರು

೨೧ ತಿಂಗಳ ಸ್ಥಾನಬದ್ಧತೆಯ ನಂತರ ಗಾಂಧೀಜಿಯವರನ್ನು ಬಿಡುಗಡೆ ಮಾಡಲ್ಪಾಯಿತು ೧೯೪೨ನೆಯ ಅಗೋಸ್ತ ೯ರಂದು ಅವರ ಬಂಧನವಾಯಿತು, ಗಾಂದೀಜಿ ಆಗಾಖಾನ್ ಅರ ಮನೆಯಿಂದ ಹೊರಡುವ ಮುನ್ನ, ಮಹಾದೇವ ಬಾಯಿ ಮತ್ತು ಕಸ್ತೂರ್‌ಬಾರನ್ನು ಸಮಾಧಿ ಮಾಡಿದ ಸ್ಥಳಗಳನ್ನು ಸಂದರ್ಶಿಸಿ ಸಮಾಧಿಗಳ ಮೇಲೆ ಹೂಗಳನ್ನಿಟ್ಟು ಕೆಲ ನಿಮಿಷ ಧ್ಯಾನಾಸಕ್ತರಾಗಿ ಬಂದಿದ್ದರು

ಗಾಂಧೀಜಿಯವರನ್ನು ಒಂದು ಮಾತನಾಡಿಸಿದ ಜನರ ಬೆನ್ನು ತಟ್ಟಿದರು ಅವರು ಹಸನ್ಮುಖಿಗಳಿದ್ದರು ಮುಂದೆ ಅವರ ಮೈ ಬಿಸಿಲಾಯಿತು ಡಾಕ್ಟರರು ಪರೀಕ್ಷಿಸಿ ಸಂಪೂರ್ಣ ವಿಶ್ರಾಂತಿ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ

ಪರ್ಣ ಕುಟಿ ಈಗ ಒಂದು ಪುಣ್ಯಕ್ಷೇತ್ರವಾಗಿದೆ ದರ್ಶನಕ್ಕೆ ಸಾವಿರಾರು ಮಂದಿ ಹೋಗುತ್ತಲೇ ಇದ್ದಾರೆ ಬಿಡುಗಡೆಯಾದ ಕೆಲ ತಾಸುಗಳಲ್ಲಿಯೇ ಅವರಿಗೆ ಬೇಗನೇ ಗುಣವಾಗಲಿ ಎಂದು ಸಾವಿರಾರು ತಂತಿಗಳು ಬಂದವು. ಮಾಲವೀಯರು ಅವರಿಗೆ ಶತಾಯುಷ್ಯ ಕೋರಿ ತಂತಿ ಬಿಟ್ಟಿದ್ದಾರೆ

(೬ನೇ ಪುಟಕ್ಕೆ ಮುಂದುವರಿದಿದೆ)

ಎಲ್ಲರ ತುಟಿಗಳಲ್ಲಿಯೂ ನಲಿಯುತ್ತಿದೆ ಆ ಮಾತು! ನಗರದಲ್ಲೆಲ್ಲಾ ಅದರದೇ ಘೋಷ!

ಇಷ್ಟರಲ್ಲೇ ಸಾವಿರಾರು ಮಂದಿ ನೋಡಿದರು! ಹಲವು ಸಾವಿರ ಮಂದಿ ಕಾಯುತ್ತಿದ್ದಾರೆ!

ಕನ್ನಡ ಸಂಗೀತ! ★ ಕನ್ನಡ ಸಂಭಾಷಣೆ! ★ ಕನ್ನಡ ನಟನಟಿಯರು!

ಎಚ್ ಆರ್ ಜಿ. ಸಿ ಶ್ರೀ ಪಿಕ್ಚರ್ಸ್ ಮತ್ತು ಟಿ ಎನ್ ಶಿವಬಸವಸ್ವಾಮಿ, ಇವರ ಅತ್ಯುತ್ಕೃಷ್ಟ ಕಲಾಕೃತಿ

ಕನ್ನಡ ನಾಡಿನಲೆಲ್ಲಾ ಹೆಸರಾಂತ ಚಿತ್ರರತ್ನ

12-5-44ರಿಂದ ಕಿಕ್ಕಿರಿದ 2ನೇ ವಾರ

ವಾಣಿ

12-5-44ರಿಂದ ಕಿಕ್ಕಿರಿದ 2ನೇ ವಾರ

ವಾಣಿ

ಸಂಗೀತ ರತ್ನ ಟಿ. ಚೌಡಯ್ಯನವರ ಅಮರ ಸಂಗೀತ

ಹೆಸರಾಂತ ವಿನೋದ ಪಟು ಶ್ರೀ ಕೆ. ಹಿರಣ್ಣಯ್ಯನವರ ಅಪೂರ್ವ ಅಭಿನಯ

ಕೋಕಿಲ ಕಂಠ ಬಳ್ಳಾರಿ ಲಲಿತ, ವೈ. ರತ್ನ, ಪಂಡರಿಬಾಯಿ, ಟಿ ಎನ್. ಚಂದ್ರಮ್ಮ ಮೊದಲಾದ ಹೆಸರಾಂತ ಕನ್ನಡದ ನಟನಟಿಯರು

ಕನ್ನಡ ಚಲಚ್ಚಿತ್ರ ಪ್ರೇಮಿಗಳಿಂದ ಅತ್ಯುತ್ಕೃಷ್ಟವೆಂದು ಪ್ರಶಂಸಿತವಾದ ಕನ್ನಡ ವಾಕ್ಪಟ.

ಸೆಂಟ್ರಲ್ ಟೊಕಿಸ್‌ನಲ್ಲಿ ತಾ: 5ರಿಂದ ಆರಂಭವಾಗಿದೆ.

ಹಂಚಿಕೆಯ ಅಧಿಕಾರಿಗಳು: ಭ್ರಮರಾಂಭಾ ಪಿಕ್ಚರ್ಸ್ ಸರ್ಕ್ಯೂಟ್, ಮೈಸೂರು.

The Bank of Mangalore Limited, Mangalore.

ESTD 1931

HEAD OFFICE: Mangalore — BRANCHES: BUNDER MANGALORE, Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2¼% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc. apply to Head office or Branches.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾ ಚೇನೆ ಪಕ್ಷವಾತ, ನೊಡಿಮು ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingradients under the supervision of the experienced staff. A specific for the puerperal diseases and also valuable to puerperal women as tonic Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮವಾಗಿದ ಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಾ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 12—5—1944 [ಸಂಚಿಕೆ 19]

ಮಹಾತ್ಮರ 'ಪರ್ಣಕುಟಿ'ಯಲ್ಲಿ

— ಬಿಡುಗಡೆಯಾನಂತರ —

ಗಾಂಧೀಜಿ ಅನಾರೋಗ್ಯ ದೇಶದಲ್ಲಿ ತುಂಬಾ ಕಳವಳವನ್ನುಂಟು ಮಾಡಿತು ಅವರಿಗೆ ಜ್ವರ ಬರುತ್ತಿತ್ತು, ಎನೇಮಿಯಾದಿಂದ ಕಂಗಾಲಾಗಿ ರಕ್ತದ ಒತ್ತಡವೂ ಹೆಚ್ಚಾಯಿತು ಜೀವಕ್ಕೆ ಅಪಾಯುವುಂಟೆಂದು ಭೀತಿಗೊಂಡರು, ದೇಶ ತುಂಬಾ ಮಹಾತ್ಮರ ಬಿಡುಗಡೆಯಾಗಬೇಕೆಂಬ ಕೂಗು ಕೇಳಿತು ಮತ್ತೆ ಕೊನೆಗೊಮ್ಮೆ ತಾ ೬ರಂದು ಗಾಂಧಿಜಿಯನ್ನು ಕೇವಲ ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಿದ ಸುದ್ದಿ ಬಂದು ಸಕಲರೂ ಸಂತೋಷಗೊಂಡರು

ಗಾಂಧೀಜಿಯ ಈ ಬಿಡುಗಡೆ ಬಗ್ಗೆ ಲಂಡನಿನಲ್ಲಿಯೂ ಬೇಕಾದಷ್ಟು ಚಳವಳ ಆಗಿದೆಯೆಂದೂ, ಅಮೆರಿಯಲ್ಲಿ ಕೆಲವಂದಿ ಪಾರ್ಲಿಮೆಂಟು ಸದಸ್ಯರು ದೂರು ಕೊಟ್ಟು ಒತ್ತಾಯ ಪಡಿಸಿದರೆಂದೂ ವರದಿಯಿದೆ ಗಾಂಧೀಜಿ ಬಿಡುಗಡೆಯು ಬಗ್ಗೆ ವೈಸರಾಯರೇ ಜವಾಬ್ದಾರಿ ವಹಿಸಿರುವರೆಂದೂ ಹೇಳಲಾಗುತ್ತದೆ

ಗಾಂಧೀಜಿ ಈಗ ತೀರಾ ನಿಶ್ಶಕ್ತರಿರುವುದರಿಂದ ಅವರ ಭೇಟಿಗೆ ಜನರು ಮುತ್ತಿಗೆ ಹಾಕದಂತೆ ವಿನಂತಿಸಿ ಕೊಂಡಿದ್ದಾರೆ ಬಿಡುಗಡೆ ಮಾಡಿದ ನಂತರ ಗಾಂಧೀಜಿ ಹಸನ್ಮುಖಿಗಳಾಗಿರುವರೆಂದು ಸುದ್ದಿ ಬಂದಿರುವುದು

'ಗಾಂಧೀಜಿ ಆರೋಗ್ಯದ ಬಗೆ ಭಯಪಡಬೇಕಾಗಿಲ್ಲ, ಅವರು ಬೇಗನೇ ಗುಣ ಹೊಂದುವರು' ಎಂದು ಅವರನ್ನು ಪರೀಕ್ಷಿಸಿದರು ಬಿ ಸಿ ರಾಯರು ಹೇಳಿದ್ದಾರೆ ಗಾಂಧೀಜಿಗೆ ಬಂಧನ ಹಾಕಿದ್ದೇ ಈ ಸಲ ಇಷ್ಟವಿರಲಿಲ್ಲವಾಗಿ ಬಿಡುಗಡೆ ಮಾಡಿದ ಕಾರಣದಿಂದಲೇ ಆರೋಗ್ಯ ಸರಿಯಾಗುವ ಸಂಭವವೂ ಇದೆ

ಮಹಾತ್ಮರನ್ನು ತಾ ೬ರಂದು ಮುಂಜಾನೆ ಆಗಾಖಾನ ಅರಮನೆಯ ಸೆರೆಮನೆಯಿಂದ ಬಿಡುಗಡೆ ಮಾಡಿ ಸೆರೆಮನೆ ಇನ್‌ಸ್ಪೆಕ್ಟರ್ ಜಿನರಲ್ ಕರ್ನಲ್ ಭಂಡಾರಿಯವರು ಕಾರಿನಲ್ಲಿ ಕುಳ್ಳಿರಿಸಿ ಲೇಡಿ ವಿಠಲದಾಸ ಥಾಕರಸಿಯವರ ಪರ್ಣ ಕುಟಿ'ಗೆ ಕರದೊಯ್ದು ಬಿಟ್ಟರು ೧೯೩೩ರಲ್ಲಿ ಇದೇ 'ಪರ್ಣಕುಟಿಯಲ್ಲಿ ಗಾಂಧೀಜಿ ೨೧ ದಿನಗಳ ಮಹೋಪವಾಸಕ್ಕೆ ಕೊಂಡಿದ್ದರು

ಗಾಂಧೀಜಿ-ಜತೆಯಲ್ಲಿ ಡಾ। ಗಿಲ್ಡರ್, ಪ್ಯಾರೇಲಾಲ್, ಮೀರಾ ಬೆನ್, ಸುಶೀಲಾ ನಾಯರ್ ಇವರೂ ಬಿಡಲ್ಪಟ್ಟಿರುವರು ಗಾಂಧೀಜಿ ಬಿಡುಗಡೆಯ ಸುದ್ದಿ ಕೇಳಿದೊಡನೆ ಜನ ಸ್ತೋಮ ಆಗಾಖಾನ ಅರಮನೆಯ ಬಾಗಿಲಲ್ಲಿ ತುಂಬಿತ್ತು ಗಾಂಧೀಜಿ ಕುಳಿತ ಕಾರು ಹೆಬ್ಬಾಗಿಲಿಗೆ ಬಂದ ಕೂಡಲೇ ಪ್ರಚಂಡ ಜಯ ಘೋಷವೆದಿತು

ಮಹಾತ್ಮರಿಗೆ ಎಪ್ರಿಲ್ ೧೨ರಿಂದ ತೊಡಗಿ ಅಸೌಖ್ಯವಿತ್ತೆಂದೂ ಎಪ್ರಿಲ್ ೧೮ಕ್ಕೆ ಒಮ್ಮೆಯೇ ಜೋರಾಗಿ ಮರುದಿನ ಜ್ವರ ಬಹಳ ಏರಿ, ಸ್ಮೃತಿ ತಪ್ಪಿತೆಂದೂ, ಎನಿಮಿಯ ಆಗಿದ್ದು ಮೂತ್ರ ಕ್ರಿಯೆಯೂ ಸರಿಯಾಗಿ ನಡೆದಿಲ್ಲವೆಂದೂ ಅವರೀಗ ಉಲ್ಲಸಿತರಾಗಿದ್ದರೂ, ಅವರ ದೈಹಿಕ ಮಾನಸಿಕ ದಣಿವು ಹೋಗಿಲ್ಲವೆಂದೂ ಆದ್ದರಿಂದ ದಯಮಾಡಿ ಯಾರೂ ಅವರಿಗೆ ಈಗ ಶ್ರಮ ಕೊಡಬಾರದೆಂದೂ ಡಾ। ಗಿಲ್ಡರ್ ಮತ್ತು ಡಾ। ಸುಶೀಲಾ ನಾಯರ್ ಒಂದು ಪ್ರಕಟಣೆಯಲ್ಲಿ ತಿಳಿಸಿರುವರು

೨೧ ತಿಂಗಳ ಸ್ಥಾನಬದ್ಧತೆಯ ನಂತರ ಗಾಂಧೀಜಿಯವರನ್ನು ಬಿಡುಗಡೆ ಮಾಡಲಾಯಿತು ೧೯೪೨ನೆಯ ಆಗೋಸ್ಟ್ ೯ರಂದು ಅವರ ಬಂಧನವಾಯಿತು, ಗಾಂಧೀಜಿ ಆಗಾಖಾನ್ ಅರ ಮನೆಯಿಂದ ಹೊರಡುವ ಮುನ್ನ, ಮಹಾದೇವ ಬಾಯಿ ಮತ್ತು ಕಸ್ತೂರ್ ಬಾರನ್ನು ಸಮಾಧಿ ಮಾಡಿದ ಸ್ಥಳಗಳನ್ನು ಸಂದರ್ಶಿಸಿ ಸಮಾಧಿಗಳ ಮೇಲೆ ಹೂಗಳನ್ನಿಟ್ಟು ಕೆಲ ನಿಮಿಷ ಧ್ಯಾನಾಸಕ್ತರಾಗಿ ಬಂದಿದ್ದರು

ಗಾಂಧೀಜಿಯವರನ್ನು ಒಂದು ಮಾತನಾಡಿಸಿದ ಜನರ ಬೆನ್ನು ತಟ್ಟಿದರು ಅವರು ಹಸನ್ಮುಖಿಗಳಿದ್ದರು ಮುಂದೆ ಅವರ ಮೈ ಬಿಸಿಯಾಯಿತು ಡಾಕ್ಟರರು ಪರೀಕ್ಷಿಸಿ ಸಂಪೂರ್ಣ ವಿಶ್ರಾಂತಿ ತೆಗೆದು ಕೊಳ್ಳಬೇಕೆಂದು ಹೇಳಿದ್ದಾರೆ

ಪರ್ಣ ಕುಟಿ ಈಗ ಒಂದು ಪುಣ್ಯಕ್ಷೇತ್ರವಾಗಿದೆ ದರ್ಶನಕ್ಕೆ ಸಾವಿರಾರು ಮಂದಿ ಹೋಗುತ್ತಲೇ ಇದ್ದಾರೆ ಬಿಡುಗಡೆಯಾದ ಕೆಲ ತಾಸುಗಳಲ್ಲಿಯೇ ಅವರಿಗೆ ಬೇಗನೇ ಗುಣವಾಗಲಿ ಎಂದು ಸಾವಿರಾರು ತಂತಿಗಳು ಬಂದವು ಮಾಲವೀಯರು ಅವರಿಗೆ ಶತಾಯುಷ್ಯ ಕೋರಿ ತಂತಿ ಬಿಟ್ಟಿದ್ದಾರೆ

(೩ನೇ ಪುಟಕ್ಕೆ ಮುಂದುವರಿದಿದೆ)

ಎಲ್ಲರ ತುಟಿಗಳಲ್ಲಿಯೂ ನಲಿಯುತ್ತಿದೆ ಆ ಮಾತು! ನಗರದಲ್ಲೆಲ್ಲಾ ಅದರದೇ ಘೋಷ!

ಇಷ್ಟರಲ್ಲೇ ಸಾವಿರಾರು ಮಂದಿ ನೋಡಿದರು! ಹಲವು ಸಾವಿರ ಮಂದಿ ಕಾಯುತ್ತಿದ್ದಾರೆ!

ಕನ್ನಡ ಸಂಗೀತ! ★ ಕನ್ನಡ ಸಂಭಾಷಣೆ! ★ ಕನ್ನಡ ನಟನಟಿಯರು!

ಎಚ್ ಆರ್ ಜಿ ಸಿ ಶ್ರೀ ಪಿಕ್ಚರ್ಸ್ ಮತ್ತು ಟಿ ಎಸ್ ಶಿವಬಸವಸ್ವಾಮಿ, ಇವರ ಅತ್ಯುತ್ಕೃಷ್ಟ ಕಲಾಕೃತಿ

ಕನ್ನಡ ನಾಡಿನಲೆಲ್ಲಾ ಹೆಸರಾಂತ ಚಿತ್ರರತ್ನ

12-5-44ರಿಂದ ಕಿಕ್ಕಿರಿದ ★ 2ನೇ ವಾರ ★

ವಾಣಿ

ಸಂಗೀತ ರತ್ನ ಟಿ. ಚೌಡಯ್ಯನವರ ಅಮರ ಸಂಗೀತ

12-5-44ರಿಂದ ಕಿಕ್ಕಿರಿದ ★ 2ನೇ ವಾರ ★

ವಾಣಿ

ಹೆಸರಾಂತ ವಿನೋದ ಪಟು ಶ್ರೀ ಕೆ. ಹಿರಣ್ಣಯ್ಯನವರ ಅಪೂರ್ವ ಅಭಿನಯ

ಕೋಕಿಲ ಕಂಠ ಬಳ್ಳಾರಿ ಲಲಿತ, ವೈ. ರತ್ನ, ಪಂಡರಿಬಾಯಿ, ಟಿ ಎನ್. ಚಂದ್ರಮ್ಮ ಮೊದಲಾದ ಹೆಸರಾಂತ ಕನ್ನಡದ ನಟನಟಿಯರು

ಕನ್ನಡ ಚಲಚ್ಚಿತ್ರ ಪ್ರೇಮಿಗಳಿಂದ ಅತ್ಯುತ್ಕೃಷ್ಟವೆಂದು ಪ್ರಶಂಸಿತವಾದ ಕನ್ನಡ ವಾಕ್ಪಟ

ಸೆಂಟ್ರಲ್ ಟಾಕೀಸ್‌ನಲ್ಲಿ ತಾ. 5ರಿಂದ ಆರಂಭವಾಗಿದೆ.

ಹಂಚಿಕೆಯ ಅಧಿಕಾರಿಗಳು: ಭ್ರಮರಾಂಭಾ ಪಿಕ್ಚರ್ಸ್ ಸರ್ಕ್ಯೂಟ್, ಮೈ ಸೂ ರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ರೆಕ್ವಿಸಿಶನ್ ಕುರಿತು ವಿವರಣೆ

ಭೂ. ಸಂಘದ ಕಾರ್ಯದರ್ಶಿಗಳಿಂದ—

ಜಿಲ್ಲೆಯ ಅಕ್ಕಿ ಪರಿಸ್ಥಿತಿ ಕುರಿತು ಜಿಲ್ಲಾ ಭೂಮಾಲೀಕ ಸಂಘದ ಕಾರ್ಯದರ್ಶಿ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಈ ಸಾರ್ವಜನಿಕ ವಿವರಣೆ ಪ್ರಕಟಿಸುತ್ತಾರೆ.

"ಉತ್ಪತ್ತಾಯದ ಅಕ್ಕಿ ರೆಕ್ವಿಸಿಶನ್ ವಿಚಾರ, ಕಲೆಕ್ಟರರು ಇತ್ತೀಚೆಗೆ ಕೈಕೊಂಡ ಕಾರ್ಯಕ್ರಮವು, ಗ್ರಾಮಗಳಲ್ಲಿ ಅಕ್ಕಿ ಕೊರತೆ ಅಧಿಕಗೊಳಿಸುವುದರಿಂದ ಹಳ್ಳಿಗಳನ್ನು ಈ ಕಾನೂನಿನಿಂದ ವಿರಹಿತ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ೧೯೪೪ನೇ ಇಸವಿ ನವಂಬರ್ ಅಂತ್ಯದವರೆಗೆ ಪ್ರತಿದಿನಕ್ಕೆ ಸೇರಿ ಒಂದುವರೆ ಪಾವು ಅಕ್ಕಿ ರೈತರ ಅವಶ್ಯಕತೆ ಬಗ್ಗೆ ಬಿಟ್ಟು ಕೊಡಲು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ಕಳುಹಿಸಿದ್ದಾರೆ. ಕೆಲ ಜಮೀನಿನ ಜಮೀನ್ದಾರರ ಮತ್ತು ಒಕ್ಕಲುಗಳ ವ್ಯವಸಾಯದ ವೆಚ್ಚದ ಅಕ್ಕಿಯನ್ನಿಟ್ಟುಕೊಳ್ಳಲು ಒಪ್ಪಿರುವರು. ಎಲ್ಲಾ ಹಳ್ಳಿಗಳಲ್ಲಿ ವ್ಯವಸಾಯೇತರ ಗ್ರಾಮವಾಸಿಗಳಿಗೆ ಗುರುತು ಕಾರ್ಡಿನಿಂದ ಅಕ್ಕಿ ಒದಗಿಸಲು ಗ್ರಾಮಗಳಲ್ಲಿ ಲೈಸನ್ಸು ಪಡೆದ ಚಿಲ್ಲರೆ ವ್ಯಾಪಾರಗಳ ಅಂಗಡಿ ತೆರೆಯಲು ತಹಶಿಲ್ದಾರರಿಗೆ ತಿಳಿಸಿರುವರು. ಈ ವ್ಯಾಪಾರಿಗಳಿಗೆ ಸ್ಟೋರುಗಳ ರೆಕ್ವಿಸಿಶನ್ ಅಕ್ಕಿ ಒದಗಿಸಲಾಗುವುದು. ಚಿಲ್ಲರೆ ಅಕ್ಕಿ ವ್ಯಾಪಾರಿಗಳ ವ ತಹಶಿಲ್ದಾರರಿಂದ ಲೈಸನ್ಸ್ ಪಡೆಯಬಹುದು. ಬೇಸಾಯವಿಲ್ಲದ ಹಳ್ಳಿಗರು ಅರ್ಜಿ ಮೂಲಕ ತಹಶಿಲ್ದಾರರಿಂದ ಗುರುತಿನ ಕಾರ್ಡು ಪಡಕೊಳ್ಳಬಹುದು.

'ನಮ್ಮ ಜಿಲ್ಲೆಗೆ ೯ ಲಕ್ಷ ಮುಡಿ ಅಕ್ಕಿ ಬೇಕಾಗುವುದೆಂದು ಅಂದಾಜಾಗಿದೆ. ರಿಕ್ವಿಸಿಶನ್ ಮಾಡಿದ ೫ ಲಕ್ಷ ಅಕ್ಕಿ ಮುಡಿಯಲ್ಲಿ ಈ ವರೆಗೆ ೩ ಲಕ್ಷ ಹಂಚಲ್ಪಟ್ಟಿರುವುದು. ಮತ್ತು ಕಲೆಕ್ಟರರು ಎಲ್ಲಾ ಜಾತಿ ಅಕ್ಕಿ ಧಾರಣೆ ಇಳಿಸಿ, ಎಪ್ರಿಲ್ ೩೦ರೊಳಗೆ ಬಾಕಿ ಉಳಿದ ವರ್ಗದಾರರೂ ರೈತರೂ ತಮ್ಮ ಅಕ್ಕಿ ರಿಕ್ವಿಸಿಶನ್ ಮಾಡಲು ಕಳುಹಿಸಿಕೊಡಬೇಕೆಂದು ಆಜ್ಞಾಪಿಸಿದರು. ಹೀಗೆ ಸರಕಾರಕ್ಕೆ ಉಳಿತಾಯದ ಅಕ್ಕಿ ಕಳುಹಿಸಿಕೊಡುವವರಿಗೆ ೩೦ ದಿನಗಳ ಅಧಿಕ ಅವಧಿ ಕೊಡಲಾಗಿದೆ.

'ಕಲೆಕ್ಟರರು ಇತ್ತೀಚೆಗೆ ಮುಡಿ ಒಂದರೆ ೮ ಆಣೆ ಧಾರಣೆ ಇಳಿಸಿ ಮಾಡಿದ ಆಜ್ಞೆಯನ್ನು ಭೂಮಾಲಿಕ ಸಂಘದ ವಿನಂತಿ ಮೇರೆಗೆ ತಿದ್ದುಪಡಿಮಾಡಿದ್ದಾರೆ. ಈ ತಿದ್ದುಪಡಿ ಎಪ್ರಿಲ್ ೩೦ರಿಂದ ಅಕ್ಕಿ ರಿಕ್ವಿಸಿಶನ್ ಮಾಡಿದ ಭೂಮಾಲಿಕರಿಗೆ, ಸ್ವಪ್ರೇರಣೆಯಿಂದ ಸ್ಟೋರ್ಸಿಗೆ ಕಳುಹಿಸಿಕೊಟ್ಟವರಿಗೂ ಕಡಿಮೆಮಾಡದೆ ಹಿಂದಿನ ದರದಲ್ಲೇ ಕ್ರಯ ಕೊಡಲಾಗುವುದು. ಆದರೆ ಏಪ್ರಿಲ್ ತಾ. ೩೦ರೊಳಗೆ ರಿಕ್ವಿಸಿಶನ್ ಮಾಡಿದ ಅಕ್ಕಿಯಲ್ಲಿ ಬಾಕಿ ಉಳಿದುದಕ್ಕೆ ಪ್ರತಿ ಮುಡಿಗೆ ೮ ಆಣೆ ಕಡಿಮೆ ಕೊಡಲಾಗುವುದು. ಅನಂತರ ರಿಕ್ವಿಸಿಶನ್ ಮಾಡಿದ ಅಕ್ಕಿಗೆ ಮುಡಿಯೊಂದರ ೧ ರೂಪಾಯಿ ಕಡಿಮೆ ಕೊಡಲಾಗುವುದು.

'ಭೂಮಾಲಿಕರೆಲ್ಲರೂ ತಮ್ಮ ಉಳಿತಾಯದ ಅಕ್ಕಿ ಸ್ಟೋರ್ಸಿಗೆ ಕಳುಹಿಸಬೇಕೆಂದೂ, ಕೇವಲ ದಿನವಹಿ ಖರ್ಚಿನ ಅಕ್ಕಿ ಮಾತ್ರ ಇಟ್ಟುಕೊಳ್ಳಬೇಕೆಂದೂ, ಬೇಸಾಯ ಇಲ್ಲದ ಜನರು ಸ್ಥಳೀಯ ತಹಶಿಲ್ದಾರರಿಗೆ ಅರ್ಜಿ ಮಾಡಿ ತಮ್ಮ ಗುರುತು ಕಾರ್ಡು ಪಡಕೊಳ್ಳಬೇಕೆಂದೂ ವಿನಂತಿ."

ಕಲೆಕ್ಟರ ಪ್ರಕಟಣೆ

ಮಂಗಳೂರು ಮುನ್ಸಿಪಾಲಿಟಿ, ಬೋಳೂರು ಬಿ ಗ್ರಾಮ, ದೇರೆಬೈಲು ಗ್ರಾಮ, ಕದ್ರಿಗ್ರಾಮ, ಪದವು ಗ್ರಾಮದ ಕೆಲವು ಭಾಗ, ಮರೋಳಿ ಗ್ರಾಮ, ಅಲಪೆ ಗ್ರಾಮದ ಕೆಲಭಾಗ, ಕನ್ನೂರು ಗ್ರಾಮದ ಕೆಲಭಾಗ, ಕಂಕನಾಡಿ ಬಿ ಗ್ರಾಮದ ಕೆಲಭಾಗ, ಜಪ್ಪಿನಮೊಗರು ಬಿ ಗ್ರಾಮದ ಕೆಲಭಾಗ, ಇಡೀ ಪೆರಮನ್ನೂರು ಗ್ರಾಮ, ಉಳ್ಳಾಲ ಗ್ರಾಮ, ಸೋಮೇಶ್ವರ ಗ್ರಾಮದ ಕೆಲಭಾಗ, ತಣ್ಣೀರುಭಾವಿ ಗ್ರಾಮದ ಗಡಿವರೆಗಿನ ಹೊಯಿಗೆ ಭಾಗ, ಇಡೀ ತಣ್ಣೀರುಭಾವಿ ಗ್ರಾಮ ಇಲ್ಲಿನವರು ತಮ್ಮ ವಶವಿರುವ ಅಕ್ಕಿಯ ವಿವರವನ್ನು ರೇಶನಿಂಗ್ ಆಫೀಸರರಿಗೆ ೧೮-೫-೪೪ರ ಮೊದಲು ತಿಳಿಸಬೇಕು.

ರೇಶನಿಂಗ್ ಪ್ರಮಾಣ

ಹೊರ ಜಿಲ್ಲೆಗಳಿಂದ ಅಕ್ಕಿ ತರಿಸಲು ವಾಹನಾದಿ ಸೌಕರ್ಯ ಕಡಿಮೆಯಾಗಿರುತ್ತದರಿಂದಲೂ, ಹಳ್ಳಿಗಳ ಪ್ರಜೆಗಳಿಗೆ ಹೆಚ್ಚಿನ ಅಕ್ಕಿ ಒದಗಿಸಬೇಕೆಂಬುದರಿಂದಲೂ ದ. ಕ. ಜಿಲ್ಲೆಯ ರೇಶನಿಂಗ್ ಕ್ಷೇತ್ರಗಳಲ್ಲಿ ರೇಶನಿಂಗ್ ಪ್ರಮಾಣವನ್ನು ಅರ್ಧ ಸೇರಿನಿಂದ ೭/೧೬ನೇ ಸೇರಿಗಿಳಿಸುವ ಯೋಚನೆಯಾಗಿದೆ.

ಅಕ್ಕಿ ವಿಚಾರ

ಕಲೆಕ್ಟರರೊಡನೆ ವಿಚಾರವಿನಿಮಯ

"ಇದೇ ತಿಂಗಳ ತಾ. ೧೮ರಿಂದ ಎಲ್ಲಾ ತರಗತಿಯ ಅಕ್ಕಿಯ ದರಗಳನ್ನು ಇಳಿಸುತ್ತ ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆ ಹೊರಡಿಸಿದ್ದರಷ್ಟೆ! ಅದರ ಬಗ್ಗೆ ವಿಚಾರ ವಿನಿಮಯ ಮಾಡಲು ಈ ದಿನ ನಾವು ಜಿಲ್ಲಾ ಕಲೆಕ್ಟರರನ್ನು ಭೇಟಿಯಾಗಿದ್ದೆವು. ಅಕ್ಕಿಯ ಕುರಿತು ಎಲ್ಲಾ ವಿಷಯಗಳನ್ನು ನಾವು ಅವರೊಡನೆ ಚರ್ಚಿಸಿದ್ದೇವೆ. ಮುಖ್ಯತಃ ಕೆಲವು ಭೂಮ್ಲಾಲಿಕರು ರಿಕ್ವಿಜಿಶನ್ ಮಾಡಿದ ಅಕ್ಕಿಯನ್ನು ಎಪ್ರಿಲ್ ತಿಂಗಳ ಅಂತ್ಯದೊಳಗೆ ತಾವಾಗಿ ಮುಟ್ಟಿಸಲು ಇನ್ನೂ ಮುಂದೆ ಬಾರದುದರ ಕುರಿತು ಕಲೆಕ್ಟರರೊಡನೆ ನಾವು ವಿಚಾರ ವಿನಿಮಯ ನಡೆಸಿದೆವು. ಅದರ ಫಲಿತಾಂಶವಾಗಿ ತಮ್ಮ ಇತ್ತೀಚೆಗಿನ ಪ್ರಕಟಣೆಯನ್ನು ಈ ಕೆಳಗಿನಂತೆ ಬದಲಾಯಿಸಲು ಕಲೆಕ್ಟರರು ಸಮ್ಮತಿಸಿದ್ದಾರೆ, ಕಲೆಕ್ಟರರು ತಿದ್ದುಪಡಿಗೊಳಿಸಿದ ಹೊಸ ಪ್ರಕಟಣೆಯನ್ನು ಹೊರಡಿಸಲಿರುವರು. ಈ ವಿಷಯವನ್ನು ಪತ್ರಿಕೆಗಳ ದ್ವಾರಾ ಜನರಿಗೆ ಮುಂದಾಗಿ ತಿಳಿಸಬೇಕೆಂದು ನಮ್ಮೊಡನೆ ಹೇಳಿರುತ್ತಾರೆ. ಎಂದು ಶ್ರೀ ಮೊಳಹಳ್ಳಿ ಶಿವರಾವ್. ಅಧ್ಯಕ್ಷ ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿಮಿಟೆಡ್ ಮತ್ತು ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಎಂ. ಎಲ್. ಎ. ಜೊಯಿಂಟ್ ಸೆಕ್ರಿಟರಿ ಭೂಮಾಲಿಕರ ಸಂಘ ಇವರು ಪ್ರಕಟಿಸುತ್ತಾರೆ.

ಅವರ ಹೇಳಿಕೆಯ ವಿವರ ಹೀಗಿದೆ:—

"ತಾ. ೩೦-೪-೪೪ರ ಒಳಗೆ ರಿಕ್ವಿಜಿಶನ್ ಮಾಡಲ್ಪಟ್ಟು ಕೊಡದೆ ಬಾಕಿಯಾದ ಅಕ್ಕಿಯನ್ನು ತಾವಾಗಿ ರೈತರು ಡಿಪೋವಿಗೆ ತಂದು ಒಪ್ಪಿಸಿದ್ದಲ್ಲಿ ಅವರಿಗೆ ಮುಂಚಿನ ದರಕ್ಕಿಂತ (ರೂ. ೯॥, ೧೦, ೧೦॥, ಇತ್ಯಾದಿ) ೮ ಆಣೆ ಕಡಮೆ ಕೊಡಲಾಗುವುದು. ಆದರೆ ತಾ. ೧-೫-೪೪ರಲ್ಲು ಯಾ ಅನಂತರ ರಿಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿಗೂ, ರೈತರು ರಿಕ್ವಿಜಿಶನ್ ಮಾಡಲ್ಪಡದೆ ತಮ್ಮ ಹತ್ತಿರ ಹೆಚ್ಚಿಗೆ ಇರುವ ಅಕ್ಕಿಯನ್ನು ಡಿಪೋಗಳಿಗೆ ತಂದು ಕೊಟ್ಟರೆ ಅದಕ್ಕೂ ಮುಂಚಿನ ದರಗಳಲ್ಲಿಯೇ (ರೂ. ೯॥, ೧೦, ೧೦॥, ಇತ್ಯಾದಿ) ಕೊಡಲಾಗುವುದು. ಎಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿಗೆ ಮುಂಚಿನ ದರಗಳಿಗಿಂತ ಮುಡಿ ೧ರ ಒಂದು ರೂಪಾಯಿ ಕಡಿಮೆ ಕೊಡಲಾಗುವುದು. (ಅಂದರೆ ರೂ. ೮॥, ೯, ೯॥, ೧೦ ಇತ್ಯಾದಿ).

ಆದುದರಿಂದ ಭೂಮ್ಲಾಲಿಕರೂ ರೈತರೂ ಆದಷ್ಟು ಬೇಗನೆ ರಿಕ್ವಿಜಿಶನ್ ಮಾಡಿದ ಅಕ್ಕಿಯನ್ನು ಮತ್ತು ಹೆಚ್ಚಿನ ಉಳಿತಾಯ ಸಂಗ್ರಹವನ್ನು ಸ್ಟೋರ್‌ಗೆ ಕಳಿಸಿಕೊಡಬೇಕು. ತನ್ಮೂಲಕ ತಿದ್ದುಪಾಟು ಹೊಂದಿದ ಕಲೆಕ್ಟರರ ಪ್ರಕಟಣೆಯ ಉಪಯೋಗ ಪಡೆಯಬೇಕು. ಹೊರತು ಯಾವ ವಿಧದಲ್ಲೂ ಎಕ್ವಿಜಿಶನ್ ಕ್ರಮಕ್ಕೆ ಎಡೆಗೊಡದೆ ಮುಡಿಯಲ್ಲಿ ಸಿಗುವ ಒಂದು ರೂಪಾಯಿ ಫಾಯಿದೆಯನ್ನು ಕಳಕೊಳ್ಳಬಾರದು."

ಸ್ತೋತ್ರ ಸ್ಪರ್ಧೆ

"ನಾವು ಏರ್ಪಡಿಸಿದ ಸ್ತೋತ್ರ ಸ್ಪರ್ಧೆಯಲ್ಲಿ ಭಾಗವಹಿಸಿದ ಮಹನೀಯರಿಗೆಲ್ಲ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಸ್ತೋತ್ರಗಳು ಯಾವುದಾದರೊಂದು ಮತಪಂಥದ ವಿಶಿಷ್ಟ ತತ್ವಗಳನ್ನು ಒಳಕೊಂಡಿರಬಾರದು ಎಂಬುದು ನಮ್ಮ ಉದ್ದೇಶವಾಗಿತ್ತು. ಅದನ್ನು ಹೆಚ್ಚಿನವರು ಗಮನಿಸಲಿಲ್ಲ. ಬಂದವುಗಳಲ್ಲಿ 'ಸಾರ್ವಜನಿಕ ಮುಕ್ತಾವಳಿ'ಯು ಉತ್ತಮವಾದುದೆಂದು ಪರೀಕ್ಷಕ ಮಂಡಲಿಯ ಅಭಿಪ್ರಾಯವಾಗಿರುತ್ತದೆ. ಇದನ್ನು ರಚಿಸಿದ ಶ್ರೀ. ವಿ. ರಾಮ ಶರ್ಮರಿಗೆ ಬಹುಮಾನವು ದೊರೆಯುವುದು. ಇದನ್ನೇ ಪ್ರಾರ್ಥನೆಯಾಗಿ ಉಪಯೋಗಿಸಿಕೊಳ್ಳಬಹುದೇ ಎಂಬ ವಿಷಯದಲ್ಲಿ ಪರೀಕ್ಷಕರೊಳಗೆ ಮತಭೇದವಿದೆ. ಒಮ್ಮತದ ನಿರ್ಧಾರಕೊಳ್ಳಪಟ್ಟುದನ್ನ ಸ್ವಾತಂತ್ರ್ಯವಾಗಿ ಉಪಯೋಗಿಸಬೇಕೆಂಬುದು ಸ್ಪರ್ಧೆಯ ಪ್ರವರ್ತಕರ ಅಭಿಪ್ರಾಯವಾಗಿದೆ." ಹೀಗೆಂದು ಶ್ರೀ. ಎಂ. ಕೆ. ವೈದ್ಯರ್ ಮಂಗಳೂರು ಇವರು ತಿಳಿಸುತ್ತಾರೆ.

ಪ್ಲೇಗಿನ ವರದಿ

ತಾ. ೨೯-೪-೪೪ಕ್ಕೆ ಅಂತ್ಯವಾಗುವ ವಾರದಲ್ಲಿಯೂ ಅದರ ಹಿಂದಿನ ವಾರದಲ್ಲಿಯೂ ಮನುಷ್ಯರಾರಿಗೂ ಪ್ಲೇಗು ತಗಲಲಿಲ್ಲ ಅಥವಾ ಪ್ಲೇಗಿನಿಂದ ಯಾರೂ ಸಾಯಲೂ ಇಲ್ಲ. ಆದರೆ ೫ ಕಡೆಗಳಲ್ಲಿ ಇಲಿ ಬಿದ್ದ ವಾರ್ತೆಯಿದೆ. ಹಿಂದಿನ ವಾರ ೧೪ ಇಲಿಗಳು ಬಿದ್ದಿದ್ದವು. ಇಲಿಗಳ ವಿನಾಶ, ದಾಕು ಹಾಕುವಿಕೆಗಳು ಭರದಿಂದ ಸಾಗುತ್ತಿವೆ. ವೆಬ್‌ಸ್ಟರ್ ಮಾರ್ಕೆಟು ಮತ್ತೊಂದು ವಾರ ಮೈದಾನದಲ್ಲೇ ಇರುವುದು.

ಶ್ರೀ. ಘಾಟೆಯವರ ಬಿಡುಗಡೆ

ರಾಜಮಹೇಂದ್ರಿಯಲ್ಲಿ ಸ್ಥಾನಬದ್ಧ ಕೈದಿಗಳಾಗಿದ್ದ ಸುಪ್ರಸಿದ್ಧ ಕಮ್ಯೂನಿಸ್ಟರಾದ ಶ್ರೀ. ಯಸ್. ವಿ. ಘಾಟೆಯವರನ್ನು ಕೇಂದ್ರ ಸರಕಾರದ ಅಪ್ಪಣೆ ಮೇರೆಗೆ ಬಂಧಮುಕ್ತಗೊಳಿಸಲಾಗಿದೆ. ೧೯೪೦ನೆಯ ಮಾರ್ಚಿ ತಿಂಗಳಲ್ಲಿ ಮಂಗಳೂರಲ್ಲಿ ಇವರ ಬಂಧನವಾಗಿತ್ತು.

ಸ್ವಯಂಸೇವಕರಿಗೆ ಶಿಕ್ಷೆ

ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಘೋಷಣೆ ಮಾಡಿದ ಶ್ರೀಗಳಾದ ಶಂಕರ ಶೆಟ್ಟಿ, ಬಾಲನ್, ಕುಂಞಿರಾಮ, ಹರ್ಷ ಬಂಗೇರ, ರಾಮ, ಮತ್ತು ದೂಮಣ್ಣ ಎಂಬ ೬ ಜನ ಸ್ವಯಂಸೇವಕರಿಗೆ ಮಂಗಳೂರು ಸ್ಟೇಶನರಿ ಮೇಜಿಸ್ಟ್ರೇಟರು, ಆರೋಪಿಗಳು ಸಭೆ ಮೆರವಣಿಗೆ ಮಾಡಬಾರದೆಂಬ ಆಜ್ಞೆ ಉಲ್ಲಂಘಿಸಿದರೆಂದು ಪ್ರತಿಯೊಬ್ಬರಿಗೂ ೨೫ ರೂ. ಜುಲ್ಮಾನೆ ತಪ್ಪಿದರೆ ೬ ವಾರಗಳ ಕಠಿಣ ಶಿಕ್ಷೆಗೆ ಗುರಿಪಡಿಸಿದರು. ಆ ಸ್ವಯಂಸೇವಕರ ವಶವಿದ್ದ ಬಂಗಾಳ ನಿಧಿ ಸಂಗ್ರಹದ ಎರಡು ಡಬ್ಬಿಗಳನ್ನು ಸರಕಾರದ ವಶಪಡಿಸಲು ಮೆಜಿಸ್ಟ್ರೇಟರು ಆಜ್ಞೆಮಾಡಿರುವರು.

ಬದಿಯಡ್ಕ

ಪೆರಡಾಲ ಎಜ್ಯುಕೇಶನ್ ಸೊಸೈಟಿ

ಇಲ್ಲಿ ಬರುವ ಜೂನಿನಿಂದ ತೆರೆಯಲಿರುವ ಹ್ಯಾಸ್ಕೂಲಿನ ಬಗ್ಗೆ ಪೆರಡಾಲ ಎಜ್ಯುಕೇಶನ್ ಸೊಸೈಟಿ ಎಂಬ ಸಂಸ್ಥೆ ಸ್ಥಾಪಿತವಾಗಿ, ಅದರ ಮಹಾಸಭೆಯೊಂದು ಕಳೆದ ಶನಿವಾರ ಸಂಜೆ ಶ್ರೀ। ಈಳಂತೋಡಿ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಸೇರಿ, ಈ ಕೆಳಗಿನ ಮಹನೀಯರು ಚಾಲ್ತಿ ವರ್ಷದ ಅಧಿಕಾರೀ ಮಂಡಳಿಯಾಗಿ ಆರಿಸಲ್ಪಟ್ಟರು.

ಮಾಯಿಪ್ಪಾಡಿ ಅರಮನೆಯ ಕುಂಬಳೆ ಅರಸರಾದ ಶ್ರೀ. ಎಂ. ವಿ. ರಾಮವರ್ಮ ರಾಜರು (ಅಧ್ಯಕ್ಷರು) ಈಳಂತೋಡಿ ಕೃಷ್ಣಭಟ್ಟರು (ಉಪಾಧ್ಯಕ್ಷರು) ಶ್ರೀ. ಪಟ್ಟಾಜೆ ಕೃಷ್ಣಭಟ್ಟರು (ಕೋಶಾಧಿಕಾರಿಗಳು) ಡಾ। ಪಿ. ಎಸ್. ಶಾಸ್ತ್ರಿಗಳು (ಕಾರ್ಯದರ್ಶಿಗಳು) ಶ್ರೀಗಳಾದ ಚಂಬಲ್ತಿ, ಮಾರು ಶಂಕರನಾರಾಯಣ ಭಟ್ಟರು, ಕೋಡಿಂಗಾರು ತಿಮ್ಮಣ್ಣಾಳ್ವರು, ಬದಿಯಡ್ಕ ವೆಂಕಟೇಶ ಕಾಮತರು, ಪಂಜಿಕ್ಕೆ ಅನಂತ ಭಟ್ಟರು ಮಿಂಚಿನಡ್ಕ ಪುರುಷೋತ್ತಮ ಭಟ್ಟರು (ಸದಸ್ಯರು.) ಯುಕ್ತವೆಂದು ಕಂಡು ಬಂದಲ್ಲಿ ಈ ಸಮಿತಿಯವರು ಅಧಿಕಾರೀ ಮಂಡಳಿಗೆ ಇನ್ನು ಕೆಲವು ಮಹನೀಯರನ್ನು ಸದಸ್ಯರಾಗಿ ಸೇರಿಸಿಕೊಳ್ಳುವುದಾಗಿಯೂ ನಿರ್ಣಯವಾಗಿದೆ.

ಉಡುಪಿ

ಬೋರ್ಡು ಹೈಸ್ಕೂಲನ್ನು ಕಾಲೇಜನ್ನಾಗಿ

ಮಾರ್ಪಡಿಸಲು ತಕ್ಕ ಯೋಜನೆಯೊಂದನ್ನು ಕೈಕೊಳ್ಳುವ ಪ್ರಸ್ತಾವವು ಆ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ತಾ. ೩೦ರಲ್ಲಿ ಕೂಡಿದ ಮಹಾಸಭೆಯಲ್ಲಿ ಮಂಜೂರಾಯಿತು. ಅಧ್ಯಕ್ಷಸ್ಥಾನವನ್ನು ಶ್ರೀ ಆರ್. ಫೆರ್ನಾಂದೀಸರ ವಹಿಸಿದ್ದರು.

ದ. ಕ. ಜಿಲ್ಲಾ ಹಿಂದೂ ಮಹಾಸಭೆ

ಇದೇ ತಿಂಗಳ ತಾ. ೨೦, ೨೧ರಲ್ಲಿ ಶ್ರೀ ಉಡುಪಿ ಕ್ಷೇತ್ರದಲ್ಲಿ ಜಿಲ್ಲಾ ಹಿಂದೂ ಮಹಾಸಭೆಯ ಅಧಿವೇಶನವು ಡಾ। ಬಿ. ಯಸ್. ಮೂಂಜೆಯವರ ಅಧ್ಯಕ್ಷತೆಯಲ್ಲಿ ಜರಗುವುದು ತಾರೀಕು ೨೨ನೇ ಬೆಳಗ್ಗೆ ಕಾರ್ಕಳದಲ್ಲಿಯೂ, ಸಾಯಂಕಾಲ ಮಂಗಳೂರಲ್ಲಿಯೂ, ತಾ. ೨೩ನೇ ಬೆಳಗ್ಗೆ ಕಾಸರಗೋಡಿನಲ್ಲಿಯೂ, ಶ್ರೀಯುತ ಮೂಂಜೆಯವರಿಂದ ಭಾಷಣಗಳನ್ನು ಕೊಡಿಸುವ ಯೋಚನೆ ಇದೆ. ಸ್ವಾಗತ ಸಮಿತಿಯ ಅಧ್ಯಕ್ಷತೆಯನ್ನು ವಹಿಸುವಂತೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರನ್ನೂ ಅಧಿವೇಶನದ ಉದ್ಘಾಟನಾ ಸಮಾರಂಭವನ್ನು ಜರಗಿಸುವಂತೆ ಅಖಿಲಭಾರತ ಸಂಸ್ಥಾನಗಳ ಹಿಂದೂ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ. ಭೂಪಾಳಂ ಚಂದ್ರಶೇಖರಯ್ಯನವರನ್ನೂ ಕೇಳಿಕೊಂಡಿದೆ.

ಕಾರ್ಕಳ

ಕಾಲೇಜು ದಿನಾಚರಣೆ

ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯದ ಕಾಲೇಜು ದಿನವನ್ನು ಇದೇ ತಾ. ೩೦ರಂದು ಆಚರಿಸಿದರು. ನಿವೃತ್ತ ಸಿವಿಲ್ ಸರ್ಜನ್ ಡಾಕ್ಟರ್ ಪೇಜಾವರ ಭವಾನಿರಾಯರು ಅಧ್ಯಕ್ಷರಾಗಿದ್ದರು. ಶ್ರೀಮತಿ ಕಮಲಾಬಾಯಿಯವರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ಸಂದರ್ಭೋಚಿತ ಇತರಕಾರ್ಯಕ್ರಮಗಳೂ ಇದ್ದುವು.

ರೋಗ ರುಜಿನೆ

ಕಾರ್ಕಳ ಮತ್ತು ಅದರ ಸುತ್ತು ಮುತ್ತಲಿನ ಪ್ರದೇಶಗಳಲ್ಲಿ ಗೋಮಾರಿ ರೋಗವೂ, ಚಿಕ್ಕಮ್ಮ ಮೊದಲಾದ ಇತರ ಕಾಯಿಲೆ ಕಸಾರಿಕೆಗಳೂ ಹರಡಿ ಪ್ರಬಲವಾಗುತ್ತಿವೆ.

ರಾಮ ಕುಂಜ

ಇಲ್ಲಿನ ಸಾಮ್ನಾಯ ಸಂಸ್ಕೃತ ಪಾಠಶಾಲೆಯ ೨೪ನೇ ವರ್ಧಂತ್ಯುತ್ಸವವು ಕಳೆದ ೨೪ರಂದು ಕಾರ್ಯಕ್ರಮದಂತೆ ಶ್ರೀಯುತ ಎಚ್. ರಾಮ ರಾವ್, ಡಿಸ್ಟ್ರಿಕ್ಟ ಬೋರ್ಡ್ ಎಜ್ಯುಕೇಶನಲ್ ಆಫೀಸರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲೆಯ ಹೊಸ ಕಟ್ಟೋಣದ ಶಂಕು ಸ್ಥಾಪನಾ ಸಮಾರಂಭವೂ ಶ್ರೀ। ರಾಮರಾಯರಿಂದಲೇ ಜರಗಿಸಲ್ಪಟ್ಟಿರುತ್ತದೆ.

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಸಮರ ಭೂಮಿಯ ಸಂಚಾರ

"ಹೋರಾಡಿರಿ ಇಲ್ಲವೇ ಮಡಿಯಿರಿ" ಎಂದು ಹಿಟ್ಲರ್ ಸೆಬಾಸ್ಟ ಪೋಲ್ ಕೋಟೆಯ ರಕ್ಷಕರಿಗೆ ಆಜ್ಞೆಯಿತ್ತಿದ್ದಾನೆ ಆ ಪ್ರಕಾರ ಜರ್ಮನರು ಜೀವದಾಸೆ ತೊರೆದು ಹೋರಾಡುತ್ತಿರುವರು ಸೆಬಾಸ್ಟ ಪೋಲಿನಲ್ಲಿ ಜರ್ಮನರ ದಳವನ್ನು ಭೇದಿಸುತ್ತಾ ಕೆಂಪು ಸೇನೆ ಮುನ್ನುಗ್ಗುತ್ತಿದೆ

ಜಪಾನರನ್ನು ಆದಷ್ಟು ಬೇಗನೇ ಸೋಲಿಸುವ ಸಲುವಾಗಿ ಅವರ ವಿರುದ್ಧ ಕೂಡಲೇ ಉಗ್ರ ಧಾಳಿ ಕೈಕೊಳ್ಳುವ ಹಂಚಿಕೆಯಿದೆ ಎಂದು ಡೈಲಿ ಎಕ್ಸ್ ಪ್ರೆಸ್, ಸುದ್ದಿಗಾರನು ಅಭಿಪ್ರಾಯ ಪಡುತ್ತಾನೆ "ಒಂದೇ ಸಮಯದಲ್ಲಿ ಜಪಾನ್ ಮತ್ತು ಜರ್ಮನಿಗಳೆರಡನ್ನೂ ಸೋಲಿಸುವ ಸಂಭವವಿದೆ ಯುರೋಪಿನ ಯುದ್ಧ ಪೂರ್ಣ ಮುಗಿವುದರೊಳಗೆ ಜಪಾನನ್ನು ನಿರ್ನಾಮ ಮಾಡಲು ಸಾಧ್ಯವೆಂದು ಕೆಲವು ಸಾಮಂತ ರಾಷ್ಟ್ರಗಳ ಮಂತ್ರಿಗಳು ಅಭಿಪ್ರಾಯ ಪಟ್ಟಿರುವರು" ಎಂದೂ ಆತನ ಹೇಳಿಕೆಯಾಗಿದೆ. 'ಹಿಟ್ಲರನನ್ನು ಮೊದಲು ಸೋಲಿಸಬೇಕೆಂಬುದಕ್ಕೆ ನಾವು ಒಪ್ಪುವೆವು, ಆದರೆ ಜಪಾನಿನ ಧಾಳಿಗೂ ಆಸ್ಟ್ರೇಲಿಯ ಮಹತ್ವ ಕೊಡುತ್ತದೆ ಪೆಸಿಫಿಕ್ ಯುದ್ಧವನ್ನು ಬಹಳ ಮುಂದೆಳೆಯಬಾರದು" ಎಂದು ಆಸ್ಟ್ರೇಲಿಯ ಪ್ರಧಾನ ಮಂತ್ರಿ ಕರ್ಟಿನ್ ಹೇಳಿದರು

ಕೋಹಿಮಾ ಕಾಳಗ

ಕೋಹಿಮಾದಲ್ಲಿ ಇನ್ನೂ ಕಾಳಗ ನಡೆದೇ ಇದೆ ಆದರೆ ಸದ್ಯ ಕೆಲ ದಿನಗಳಿಂದ ಅಲ್ಲಿ ಮಳೆಯ ಸೂಚನೆ ಕಂಡು ಬರುತ್ತದೆ ಆಕಾಶವನ್ನು ಮೋಡಗಳು ಮುತ್ತಿವೆ, ಗುಡುಗು ಮಿಂಚು ಗರ್ಜನೆ ತೊಡಗಿದೆ ಆದರೆ ಜೋರಿನ ಮಳೆ ಬಂದಿಲ್ಲ ಹೇಗೂ ಮಳೆಗಾಲ ಸನ್ನಿಹಿತವಾಗಿದೆ ಎಂದು ತಿಳಿಯಬಹುದು ಮಳೆ ಬಂದರೆ ಈ ಕಡೆಯ ಯುದ್ಧದ ಬಿಸಿ ಖಂಡಿತ ಆರಲೇ ಬೇಕು

ಮಣಿಪುರ ರಸ್ತೆ ಎಂದು ಕರೆಯಲ್ಪಡುವ ಮಾಪುರ ಇಂಫಾಲ ರಸ್ತೆಯಲ್ಲಿನ ಗುಡ್ಡ ಪ್ರದೇಶದಲ್ಲಿ ೫೦೦೦ ಅಡಿ ಮೇಲೆ ಕೋಹಿಮಾ ಪ್ರದೇಶವಿದೆ ಮಣಿಪುರ ರಸ್ತೆಯು ಇಲ್ಲಿ ದಕ್ಷಿಣಕ್ಕೆ ತಿರುಗುತ್ತದೆ ಈ ಪ್ರದೇಶದಿಂದ ದಿಮ್ಮಾಪುರವು ೪೬ ಮೈಲು ಇಂಫಾಲವು ೯೦ ಮೈಲು ದೂರದಲ್ಲಿದ್ದೆ ರಸ್ತೆಯನ್ನು ಹೊಂದಿ ಕೊಂಡು ೪೦೦೦ ಜನ ಸಂಖ್ಯೆಯುಳ್ಳ ಒಂದು ಹಳ್ಳಿಯಿದೆ ಕೋಹಿಮಾ ಪ್ರದೇಶದಲ್ಲಿ ಈ ಹಳ್ಳಿಯೇ ಒಹು ಭಾಗವನ್ನು ಆಕ್ರಮಿಸಿದೆ ರಸ್ತೆಯ ಆಚೆಗೆ ಗುಡ್ಡದ ಸಾಲುಗಳಿವೆ ಈ ಗುಡ್ಡದ ಸಾಲುಗಳಲ್ಲಿ ಕೆಲವು ಬ್ರಿಟಿಷರ ಮತ್ತು ಕೆಲವು ಜಪಾನಿಯರ ವಶವಿವೆ, ಟ್ರಾಲ್ಲ ಹಿಲ್ ಎಂಬುದೀಗ ಜಪಾನರ ವಶವಿದ್ದೆ, ಇಲ್ಲಿ ಭೀಕರ ಹೋರಾಟ ನಡೆಯುತ್ತಿದ್ದೆ ಟ್ರೆಜರಿಹಿಲ್ ಎಂಬುದು ಪೂರ್ಣ ಜಪಾನರ ವಶವಿದೆ ಇಲ್ಲಿದ್ದ ಜಪಾನರನ್ನು ಅಟ್ಟುವರೆ ಕೋಹಿಮಾ ಕಾಳಗ ನಡೆಯುತ್ತಿದೆ

ಆರ್ಥಿಕ ದಿಗ್ಬಂಧನ

ಹಿಟ್ಲರನು ಯೂರೋಪಿನಲ್ಲಿ ಆರ್ಥಿಕ ದಿಗ್ಬಂಧನವನ್ನುಂಟು ಮಾಡಿದ್ದಾನೆ ಹೀಗೆ ಮಾಡಿ ಹೋರಾಡಿದಲ್ಲಿ ಸಮಗ್ರ ಯೂರೋಪು ತನಗೆ ಶರಣಾಗುವುದೆಂದು ಆತನ ಊಹೆಯಾಗಿದೆ ಆದರೆ ಈ ಆತನ ಪ್ರಯತ್ನ ಯಶಸ್ವಿಯಾಗಿಲ್ಲವೆಂದೂ, ಉಪವಾಸದಿಂದ ನರಳುವ ಮಕ್ಕಳು ಮಂದಿಗಳಿಗೆ ಮತ್ತು ಮಹಿಳೆಯರಿಗೆ ಸಹಾಯವಾಗುವಂತೆ ಆತನ ಆರ್ಥಿಕ ದಿಗ್ಬಂಧನವನ್ನು ತೆಗೆದು ಹಾಕಬೇಕೆಂದೂ ಪಾರ್ಲಿಮೆಂಟಿನಲ್ಲಿ ಸ್ವತಂತ್ರ ಕೂಲಿಗಾರ ಪಕ್ಷದ ಡೇಮುಕ್ಸವ್ಯಾಕಟಸರು? ಆಹಾರ ಪರಿಸ್ಥಿತಿ ಕುರಿತು ಭಾಷಣ ಮಾಡುತ್ತಾ ಹೇಳಿದರು.

ಯೂರೋಪಿನ ಆಕ್ರಮಿತ ಪ್ರದೇಶದಲ್ಲಿ ೧೪ ಹಾಗೂ ಅದಕ್ಕಿಂತ ಕೆಳಗಿನ ವಯಸ್ಸಿನ ಮಕ್ಕಳು ೧೧೦? ಲಕ್ಷ ಇದ್ದಾರೆ ಅವರಿಗೆ ಸಾಕಷ್ಟು ಆಹಾರ ಸಿಗದಿದ್ದರೆ ಅವರೆಲ್ಲಾ ನಿರ್ವೀರ್ಯರಾಗುತ್ತಾರೆ ಹೀಗೆ ಮಾಡಬೇಕೆಂಬುದೇ ಆರ್ಥಿಕ ದಿಗ್ಬಂಧನ ಮಾಡಿದ ನಾಜಿಗಳ ಉದ್ದೇಶವಿರುತ್ತದೆಂದು ಇನ್ವೋರ್ನೆ ಸದಸ್ಯರಾದ ಆರ್ ಆರ್ ಸ್ಟೋಕ್ಸರು ನುಡಿದರು

'೧೯೧೮ರಲ್ಲಿ ಒಪ್ಪಂದವಾದ ಮೇಲೂ ನಾವು ಆರ್ಥಿಕ ದಿಗ್ಬಂಧನವನ್ನು ಇಟ್ಟು ಅಲ್ಲಿಯ ಲಕ್ಷಾಂತರ ಬಾಲಕರನ್ನು ಉಪವಾಸ ಹಾಕಿದ್ದೇವೆ ಈಗಲೂ ನಾವು ಅದೇ ಮಾರ್ಗ ಹಿಡಿದರೆ ಖಂಡಿತ ಅನಿಷ್ಟವೊದಗುವುದು ಈಗ ನಾವು ಕೊಡುವ ಒಂದು ತುತ್ತು ಅನ್ನವು ಮುಂದೆ ಯುದ್ಧದ ವಿರುದ್ಧ ನಾವು ಮಾಡುವ ಜೀವನಿಮಯ ಒಂದೊಂದು ಕಂತಾಗಿ ಪರಿಣಮಿಸುವುದು ಎಂದು ಜಾರ್ಜ ಬರ್ನಾರ್ಡ್ ಶಾರವರು ಈ ಸಭೆಗೆ ಬಂದು ಸಂದೇಶ ಕಳುಹಿಸಿ ತಿಳಿಸಿದ್ದಾರೆ

ಹಿಂದುಸ್ಥಾನ

ತಾತಾ, ಬಿರ್ಲಾ, ಸುಲ್ತಾನ ಚಿನಾಯ್, ಕಸ್ತೂರ್ ಬಾಯಿ ಲಾಲಾಬಾಯಿ ಮೊದಲಾದ ೯ ಮಂದಿ ಭಾರತೀಯ ಔದ್ಯೋಗಿಕ ತಜ್ಞರ ಶಿಷ್ಟಮಂಡಳವೊಂದು ಭಾರತದ ಯುದ್ಧಾನಂತರದ ಔದ್ಯೋಗಿಕ ಅಭಿವೃದ್ಧಿ ಸಂಬಂಧ ಬ್ರಿಟನಿಗೆ ತೆರಳುವುದೆಂದು ತಿಳಿದಿದೆ

ರಾಷ್ಟ್ರೀಯ ಸಪ್ತಾಹದ ನಿಮಿತ್ತ ಬಂಧಿತರಾದ ಶ್ರೀಮತಿ ಮಣಿಬೆನ್ ಪಟೇಲ್ ಮತ್ತು ಇಚ್ಛಾಬೇನ್ ದೇಸಾಯಿಯರಿಗೆ ೧೦ ಹಾಗೂ ೬ ತಿಂಗಳ ಶಿಕ್ಷೆ ವಿಧಿಸಲಾಯಿತು ಇದುವರೆಗೆ ಸೆರೆಸಿಕ್ಕದಿರುವ ಆಚಾರ್ಯ ಕೃಪಾಲನಿಯರ ಪತ್ನಿ ಸುಚೇತಾ ಕೃಪಾಲನಿಯರನ್ನು ಸರಕಾರ ಸೆರೆ ಹಿಡಿದಿದೆ

ಭಾರತದ ಸರಕಾರದ ಆರ್ಥಿಕ ಸಚಿವ ರೆಜಿಮೆನರು ವಿಶೇಷ ಕೆಲಸದ ನಿಮಿತ್ತ ಇಂಗ್ಲೆಂಡಿಗೆ ತೆರಳಿದ್ದು ಅವರ ಸ್ಥಳದಲ್ಲಿ ಸಿ ಈ ಜೋನ್ಸರು ನೇಮಕ ಹೊಂದಿರುವರು

ಮದ್ರಾಸ್ ಪ್ರಾಂತದ ಜಿಲ್ಲಾ ಬೋರ್ಡ್ ಅಧ್ಯಕ್ಷ ಉಪಾಧ್ಯಕ್ಷರ ಪರಿಷತ್ತು ಮದ್ರಾಸಿನಲ್ಲಿ ಸೇರಿ ಮಧ್ಯವರ್ತಿಸಂಘವೊಂದನ್ನು ಸ್ಥಾಪಿಸಬೇಕೆಂದಾಯಿತು. ಗ್ರಾಮೋದ್ಧಾರದ ಸಲುವಾಗಿ ಲೋಕಲ್ ಬೋರ್ಡುಗಳಿಗೆ ೧ ಕೋಟಿ ರೂಪಾಯಿ ಕೊಡಬೇಕೆಂದೂ ಯುದ್ಧ ದೀಸಮಯದಲ್ಲೂ ಲೋಕಲ್ ಬೋರ್ಡ್ ಆಡಳಿತದಲ್ಲಿ ಹೆಚ್ಚುಕಡಿಮೆ ಮಾಡಬಾರದೆಂದು ಆಯಿತು

ಬಂಗಾಳದ ಪ್ರಸಿದ್ಧ ಕಾಂಗ್ರೆಸ್ ಧುರೀಣ ಬಸಂತ ಕುಮಾರ ಮುಜಮ್‌ದಾರರು ತಮ್ಮ ೭೯ನೇ ವಯಸ್ಸಿನಲ್ಲಿ ಕಾಶಿನಗರದಲ್ಲಿ ಸ್ವರ್ಗಸ್ಥರಾದರು ಅವರ ಪತ್ನಿ ಹೇಮ ಪ್ರಭಾಮುಜಮ್‌ದಾರರು ಕಾಂಗ್ರೆಸ್ ಎಂ ಎಲ್ ಎ ಆಗಿರುವರು

ಕಲ್ಕತ್ತದಲ್ಲಿ ಕೊಲೆರಾ ಮತ್ತು ಮೈಲಿಗೆ ಬೇನೆ ಬಹಳ ಇದೆ ಅಸ್ವಸ್ಥ ನಿರಾಶ್ರಿತರು ಆಸ್ಪತ್ರೆಗಳಲ್ಲಿ ಇನ್ನೂ ಚಿಕಿತ್ಸೆ ಹೋಗ್ರುತ್ತಿದ್ದಾರೆ ಕೆಲವರು ಸಾಯುತ್ತಲೂ ಇರುವರು

ಧಾರವಾಡದ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಕುರ್ತಕೋಟಿಯವರನ್ನು ಸೆರೆ ಹಿಡಿದು ಅವರ ವಿಚಾರಣೆಯಾಗುತ್ತಿದೆ ಅವರ ಮೇಲೆ ೧೯೪೨ರಿಂದಲೇ ವಾರಂಟು ಇತ್ತಾದರೂ ಅವರು ಹಾಜರಾಗಿರಲಿಲ್ಲ

ಹೊಸ ಸುದ್ದಿಗಳು

ಸಾನ ಸಾಲ್ವಡೋರಿನಲ್ಲಿ ಭೀಕರ ಹೋರಾಟ ನಡೆದಿದೆ ದೇಶದಲ್ಲಿ ಸಾರ್ವತ್ರಿಕ ಮುಷ್ಕರ ಹೂಡಿರುವರು. ಈಗ ಗಂಡಾಂತರ ಪರಿಸ್ಥಿತಿಯ ಪರ್ಯಾಲೋಚನೆಗಾಗಿ ಮಂತ್ರಿ ಮಂಡಳದ ಸಭೆ ಕೂಡಿತು ಮಂತ್ರಿಗಳೊಳಗೆ ಭಿನ್ನಾಭಿಪ್ರಾಯವುಂಟಾದುದರಿಂದ ಅಧ್ಯಕ್ಷ ಮಾರ್ಟಿನೆಝರು ರಾಜಿನಾಮೆಯಿತ್ತರು

ರಶ್ಯನ್ ಯೋಧರು ಸೆಬಾಸ್ಟಪೋಲ್ ದುರ್ಗವನ್ನು ಆಕ್ರಮಿಸಿದರೆಂದು ಅಧಿಕೃತ ಪ್ರಕಟಿಸಲಾಗಿದೆ ಇದರಿಂದ ಕ್ರಿಮಿಯಾ ದ್ವೀಪಕಲ್ಪವಿಡೀ ರಶ್ಯನರ ಕೈವಶವಾಯಿತು ಎರಡು ವರ್ಷಗಳಿಂದ ಸೆಬಾಸ್ಟಪೋಲ್ ಜರ್ಮನರ ಸ್ವಾಧೀನವಿತ್ತು ಇಲ್ಲಿನ ಕಾಳಗವನ್ನು ಲೆನಿನ್ ಗ್ರಾಡ್, ಸ್ಟಾಲಿನ್‌ಗ್ರಾಡ್, ಎಲ್ ಅಲಾಮೆನ್ ಕಾಳಗಗಳಿಗೆ ಸರಿ ಹೋಲಿಸಬಹುದು

ಅಧ್ಯಕ್ಷ ರೂಸ್‌ವೆಲ್ಟರನ್ನು ಕೊಲೆಮಾಡುವೆನೆಂದು ಬೆದರಿಕೆ ಹಾಕುತ್ತಿದ್ದ ಹೆರಾಲ್ಡ್ ಮೊನನ್ ಎಂಬವನನ್ನು ಅಮೆರಿಕನ್ ಗೂಢಾಚಾರರು ಸೆರೆಹಿಡಿದಿದ್ದಾರೆ ಮೊನನ್ ಮೊದಲು ಗೂಢಚಾರನೇ ಆಗಿದ್ದು ಮತ್ತೆ ರೈಲ್ವೆ ಕೆಲಸದಲ್ಲಿ ಸೇರಿಕೊಂಡಿದ್ದನು

ಚೀನದ ಪೈಪಿಂಗ್ ಹಾಂಕೋ ರೈಲು ಮಾರ್ಗವಾಗಿ ದಕ್ಷಿಣ ಚೀನಕ್ಕೆ ಇಳಿದು ಬರುತ್ತಿರುವ ಜಪಾನೀ ಸೈನಿಕರು ಸಿಪೆಂಗ್ ನಗರವನ್ನು ವಶಪಡಿಸಿಕೊಂಡರು ಈಗ ಯೆಸಚಿಂಗದ ದಕ್ಷಿಣದಲ್ಲಿ ಸೂಪಿಂಗಿಗೆ ಗಂಡಾಂತರ ಬರದಿದೆ ಸಿಸ್ಸಾಂಗಹ ಬಳಿ ಚೀನೀ ಸೈನಿಕರು ಜಪಾನರನ್ನು ಹಿಮ್ಮೆಟ್ಟಿಸಿದ್ದಾರೆ.

ಜನರಲ್ ಸ್ಮಟ್ಸರು ಲಂಡನಿನಲ್ಲಿ ತಾ. ೯ ರಂದು ಅಮೆರಿಯವರೊಡನೆ ಮಾತುಕತೆ ನಡೆಸಿದರು

ಸ್ವಾತಂತ್ರ್ಯ ಸಿಗುವ ವರೆಗೂ ಬದುಕುವ ಇಚ್ಛೆ

ಗಾಂಧೀಜಿ ಪ್ರಕಟಿಸಿದರು.

ಪ್ರಕೃತಿ ಪರೀಕ್ಷಿಸಲು ಬಂದ ಡಾಕ್ಟರರೊಡನೆ ಮಹಾತ್ಮಾ ಗಾಂಧಿಯವರು ನಡೆಸಿದ ಮಾತುಕತೆಯಿಂದ ಭಾರತವು ಸ್ವತಂತ್ರವಾಗುವ ವರೆಗೆ ಅವರು ಬದುಕುವ ದೃಢನಿರ್ಧಾರ ಹಾಗೂ ಇಚ್ಛೆ ತೋರಿದರೆಂದು ತಿಳಿದು ಬರುವುದು.

ಮಹಾ ರಾಷ್ಟ್ರದ ಪ್ರಸಿದ್ಧ ವೈದ್ಯರಾದ ಡಾ। ಆರ್ ಎಚ್ ಭಡಕಮಕಾರರು ಅವರಿಗೆ ಕೆಲವು ಆಯುರ್ವೇದ ಶಕ್ತಿವರ್ಧಕ ಔಷಧ ಕೊಟ್ಟ ಕೂಡಲೇ ಗಾಂಧೀಜಿಯವರು "ನನಗೆ ಇನ್ನೂ ಬಹಳ ಕಾಲ ಬದುಕುವ ಇಚ್ಛೆ ಇದೆ ನಿಮ್ಮ ಔಷಧದಿಂದ ನಾನು ಇನ್ನೂ ೨೫ ವರ್ಷ ಹೆಚ್ಚು ಬದುಕುವ ಸಹಾಯವಾದೀತೆ?" ಎಂದರು ಆಗ ಡಾಕ್ಟರರು ಆ ಶಕ್ತಿವರ್ಧಕ ಔಷಧದ ಗುಣವನ್ನು ವಿವರಿಸಿದರು ಅದಕ್ಕೆ ಗಾಂಧೀಜಿ 'ನೀವಿದನ್ನು ಪುಸ್ತಕದಲ್ಲಿ ಓದಿದ್ದನ್ನು ಹೇಳುತ್ತೀರೋ' ಅನುಭವದಿಂದ ಹೇಳುತ್ತೀರೋ" ಎಂಬುದಕ್ಕೆ ತಾನು ಅನುಭವದಿಂದ ಹೇಳುವುದಾಗಿ ಡಾಕ್ಟರರು ತಿಳಿಸಿದರು

ಯುನೈಟೆಡ್ ಪ್ರೆಸ್ ಪ್ರತಿನಿಧಿಯು ಗಾಂಧೀಜಿಯ ಪ್ರಕೃತಿ ವಿಚಾರ ಬರೆಯುತ್ತಾ ಮಹಾತ್ಮರ ಕುರಿತು ಅವರ ದೃಢ ಮನೋಬಲವನ್ನು ಗಮನಕ್ಕೆ ತಂದು ಕೊಳ್ಳಬೇಕಾಗಿದೆ, ಅವರು ಆತ್ಮ ಸರಿಯ ಮನದಿಂದಲೇ ನೋವನ್ನು ಕಡಿಮೆ ಮಾಡಬಲ್ಲರು ನಾವು ಅವರ ಕುರಿತು ಗಾಬರಿಯಾಗಿರ ವಂತೆ ಅವರು ಸ್ವತಃ ಆಗಿಲ್ಲ ಎಂದು ತಿಳಿಸಿದ್ದಾರೆ

ಗಾಂಧೀಜಿಯ ಮೂತ್ರದಲ್ಲಿ ಯುರಿಕ್ ಏಸಿಡ್ ಪ್ರಮಾಣವು ಶೇಕಡಾ ೨೦ಕ್ಕೆ ಇಳಿದದ್ದೇ ಅವರ ಬಿಡುಗಡೆಗೆ ಕಾರಣವೆಂದು ಈಗ ತಿಳಿದು ಬರುವುದು

ಗಾಂಧೀಜಿ ತಾ ೮ರಂದು ಕೆಲ ಸಮಯ ಪುಸ್ತಕಗಳನ್ನು ಓದುವುದರಲ್ಲಿಯೇ ಕಳೆದರು ಲುಯಿ ಫಿಶರರು ಇತ್ತೀಚೆಗೆ ಪ್ರಕಟಿಸಿದ "ಗಾಂಧೀಜಿಯೊಡನೆ ಒಂದು ವಾರ" ಎಂಬ ಪುಸ್ತಕದಲ್ಲಿ ಅವರು ಬಹಳ ಆಸಕ್ತಿ ವಹಿಸಿ ಅದರ ಪ್ರತಿಯೊಂದನ್ನು ತರಿಸಿ ಓದ ತೊಡಗಿದರು

ಗಾಂಧೀಜಿ ಮುಂಬಯಿಯ ಜುಹೂಗೆ ಆರೋಗ್ಯ ಲಾಭಕ್ಕಾಗಿ ತೆರಳಿದ್ದಾರೆಂದು ಸದ್ಯದ ಸುದ್ದಿ

ವರ್ಕಿಂಗ್ ಕಮಿಟಿ ಸದಸ್ಯರನ್ನೂ ಬಿಡುಗಡೆ ಮಾಡುವರೆ?

ಅಧಿಕಾರೀ ಮಂಡಳದಲ್ಲಿ ವಿಚಾರ ವಿನಿಮಯ

ಮಹಾತ್ಮಾ ಗಾಂಧೀಯವರ ಬಿಡುಗಡೆಯ ಪ್ರಯೋಜನ ಪಡೆದು ಕಾಂಗ್ರೆಸಿನೊಡನೆ ಒಪ್ಪಂದದ ಮಾತು ಕತೆ ಪ್ರಾರಂಭಿಸಲು ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕೆಂದು ಲಂಡನಿನ ಸಾರ್ವಜನಿಕರ ಅಭಿಪ್ರಾಯವಿದೆಯೆಂದು ಯುನೈಟೆಡ್ ಪ್ರೆಸ್ ಸುದ್ದಿಗಾರನು ಬರೆಯುತ್ತಾನೆ

The Ammembal Subba Rao Pai Memorial Fund

Applications for loan stipends from the above Fund should reach the undersigned on or before the 15th June 1944. While granting stipends first preference will be given to those who are already undergoing courses with aid from this Fund. If funds are available after awarding the above-said stipends applications for technical courses will be considered. Applications for Arts Courses will be considered in cases of exceptional merit. Only GOWD SARASWATH BRAHMINS need apply.

Blank application froms will be supplied at a cost of one anna each for original ones and half anna each for renewals. If they are to be sent by post an additional three fourth anna stamp should be sent to cove the postage on each form. All correspondence will be attended to if a reply post card or an embossed cover is enclosed along with the letter or application.

Mangalore, 8-5 1944 — J Vasudeva Pai B. A., L. T. Hon Secretary.

ಈ ಪ್ರಖ್ಯಾತ ಲೇಪವು ಕಲೆ ಉಳಿಯದಂತೆ ಗುಣಪಡಿಸುತ್ತದೆ.

ಈ ಜಾಂಬಕ್ ಪೆಟ್ಟಿಗೆ ಪ್ರತಿಯೊಂದು ಮನೆಯಲ್ಲಿಯೂ ಇರ ತಕ್ಕದ್ದು

ನೀವೆಷ್ಟೇ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲಕೆಲವು ಅಪಾಯಗಳೂ ಸಂಭವಿಸಿಯೇ ಬಿಡುತ್ತವೆ ಗಾಯ, ಮೊಣಕಾಲು ಬೇನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆ ಕೊಡುತ್ತವೆ ಅಂಥಾ ಗಾಯಗಳು ಒಳಗಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಅಪಾಯಕಾರಿಗಳಲ್ಲ ಅದಕ್ಕಾಗಿಯೂ ನೀವು ಆಗ ಜಾಂಬಕ್ ಹಾಗಿಸಬೇಕು ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಚರ್ಮವು ಬೇಗನೇ ಹೀರಿಕೊಂಡು, ನೋವನ್ನು ಗುಣಮಾಡಿ, ಬಾವನ್ನು ಕಡಿಮೆಮಾಡಿ ರೋಗ ಇತ್ಯಾದಿಗಳನ್ನು ಒಣಗಿಸುವುದು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಸ್ವದೇಶಾಭಿಮಾನಿ

ತಾರೀಕು 12—5—1944

ಗಾಂಧೀಜಿ ಬಿಡುಗಡೆ

ಗಾಂಧೀಜಿಯವರನ್ನು ಬಿಡುಗಡೆ ಮಾಡಿದ್ದರಿಂದ ದೇಶಸರ್ವತ್ರ ಒಂದು ಬಗೆಯ ಆನಂದವುಂಟಾಗಿರುವುದು. ಆದರೆ ಈ ಬಿಡುಗಡೆಯು ಕೇವಲ ಅನಾರೋಗ್ಯದ ನಿಮಿತ್ತವೆಂದು ಸರಕಾರದವರೇ ಒತ್ತಿ ಹೇಳಿದ್ದರಿಂದ; ಇದಕ್ಕೆ ವಿಶೇಷ ರಾಜಕೀಯ ಮಹತ್ವವನ್ನು ಯಾರೂ ಕೊಡುವುದು ಸಾಧ್ಯವಿಲ್ಲವಾಗಿದೆ. ಅಂತೂ ಗಾಂಧೀಜಿಯವರನ್ನು, ಅವರ ಇಂದಿನ ಅತ್ಯಂತ ಅನಾರೋಗ್ಯದ ಕಾಲದಲ್ಲಿ ಬಿಡುಗಡೆ ಮಾಡಲು ಯಾರು ಹೊಣೆಗಾರರಾಗಿರುವರೋ ಅವರನ್ನು ಅಭಿನಂದಿಸಲೇಬೇಕು.

ಮಹಾತ್ಮರ ಬಿಡುಗಡೆಯಿಂದ ಸರಕಾರದ ಧೋರಣದಲ್ಲಿ ಏನಾದರೂ ಬದಲಾವಣೆಯಾಗಿದೆಯೋ ಇಲ್ಲವೇ ಎಂಬ ವಿಷಯ ಇಷ್ಟು ಬೇಗನೇ ಹೇಳುವುದು ಸಾಧ್ಯವಿಲ್ಲ. ಕಳೆದ ಇಪ್ಪತ್ತೊಂದು ದಿನಗಳ ಮಹೋಗ್ರ ಉಪವಾಸ ಕಾಲದಲ್ಲಿ, ಅವರನ್ನು ಬಿಡುಗಡೆ ಮಾಡದಿದ್ದು, ಈ ಸಲ ಅದೇ ತರದ ಅವಸ್ಥೆ ಬಂದೊದಗಿರುವಾಗ ಬಿಡುಗಡೆ ಮಾಡಿದ್ದರಿಂದ ಧೋರಣೆ ತುಸು ಬದಲಾಗಿದೆಯೆಂದು ಊಹಿಸಿದರೂ ತಪ್ಪಾಗದು. ಆದರೆ ಬಿಡುಗಡೆ ಮಾಡುವುದರೊಡನೆಯೇ ಇದು ಕೇವಲ ಅನಾರೋಗ್ಯದ ನಿಮಿತ್ತವೆಂದು ಹೇಳಿದ್ದರಿಂದ ಸರಕಾರದ ಮೂಲ ಧೋರಣದಲ್ಲಿ ಬದಲಾವಣೆಯಾಗಿದೆಯೆಂದು ಹೇಳಲೂ ಬರುವುದಿಲ್ಲ. ಸದ್ಯವಂತೂ ಗಾಂಧೀಜಿ ತುಂಬಾ ನಿಶ್ಶಕ್ತರಾಗಿರುವುದರಿಂದ ಅವರಾದರೂ ಈ ಕುರಿತು ದೇಶದ ರಾಜಕೀಯದ ಕುರಿತು ಏನೂ ಹೇಳುವಂತಿಲ್ಲ.

ಹೇಗಿದ್ದರೂ, ಗಾಂಧೀಜಿಯ ಬಿಡುಗಡೆಯಿಂದ, ಭಾರತದ ರಾಜಕೀಯ ಪರಿಸ್ಥಿತಿಯು [illegible] ದಿಸೆಯಲು ಅನುಕೂಲವಾಗುವುದು. ಭಾರತದ ಭಾಗ್ಯವಿಧಾತರು ಗಾಂಧೀಜಿಯೊಬ್ಬರೇ! ಅವರನ್ನು ಬಿಡುಗಡೆಮಾಡಿ ಸರಕಾರ ಸಂಧಾನಕ್ಕೆ ಮಾರ್ಗಮಾಡಿಕೊಂಡಿದೆ; ಜನತೆಯ ಸಹಾನುಭೂತಿಯನ್ನು ಈ ಮೂಲಕ ತುಸು ಗಳಿಸಿಕೊಂಡಿದೆ. ಕಟ್ಟು ಹೋದ ವಾತಾವರಣ ಇದರಿಂದ ಸ್ವಲ್ಪ ಸರಿಯಾಗಲೇಬೇಕು. ಈ ಸಂದರ್ಭವನ್ನು ಸದುಪಯೋಗ ಮಾಡಿಕೊಂಡು ಇತರ ರಾಷ್ಟ್ರನಾಯಕರನ್ನೂ, ಕಾಂಗ್ರೆಸ್ ಮುಖಂಡರನ್ನೆಲ್ಲಾ ಬಿಡುಗಡೆ ಮಾಡಿ ಸರಕಾರ ನ್ಯಾಯವಾದ ಸಂಧಾನಕ್ಕೆ ಮುಂದೆ ಬರಬೇಕು.

ಕಟ್ಟಿಗೆಯ ಕ್ರಯ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಿಗೆ ಕ್ರಯ ವಿಪರೀತವಾಗಿ ಏರುತ್ತಿದೆ. ಇದರಿಂದ ಜನರ ಜೀವನ ಸಂಕಷ್ಟಕ್ಕೆ ಬಂದಿದೆ. ಕಟ್ಟಿಗೆವಿಚಾರವು ಎಷ್ಟರಮಟ್ಟಿಗೆ ಪ್ರಾಮುಖ್ಯವೆಂಬುದನ್ನು ಪ್ರತಿಯೊಬ್ಬರೂ ಬಲ್ಲರು. ನಮ್ಮ ಜೀವನಕ್ಕೆ ಅತ್ಯಂತ ಅವಶ್ಯವೆನಿಸಿದ ಅನ್ನವನ್ನು ತಯಾರು ಮಾಡಬೇಕಾದರೂ ಕಟ್ಟಿಗೆ ಇಲ್ಲದೆ ಸಾಧ್ಯವೇ ಇಲ್ಲ. ಹಾಗಾಗಿ ಕಟ್ಟಿಗೆಯ ಕ್ರಯ ವಿಪರೀತಕ್ಕೇರಿದರೆ ಅದರಿಂದಾಗುವ ತೊಂದರೆ ಯಾರಿಗೂ ಬೇರೆ ವಿವರಿಸಬೇಕಾಗಿಲ್ಲ.

ಮಂಗಳೂರಲ್ಲಿ ಹಾಗೂ ಜಿಲ್ಲೆಯ ಬೇರೆ ಕಡೆಗಳಲ್ಲಿಯೂ ಈಗಾಗಲೇ ಕಟ್ಟಿಗೆಯ ಕ್ರಯ ಖಂಡಿಗೆ ೧೦ ರೂಪಾಯಿಗಳಷ್ಟು ಏರಿದೆ; ಇಷ್ಟರಲ್ಲೇ ಹೀಗೆ ವಿಪರೀತಕ್ಕೇರಿರುವಾಗ ಮುಂದಿನ ಮಳೆಗಾಲದಲ್ಲಿ ಕ್ರಯ ಹೇಗೆ ನಿಲ್ಲುವುದೋ ಹೇಳಬರುವುದಿಲ್ಲ. ಇಂದಿನ ಸ್ಥಿತಿಯೇ ಮುಂವರಿದರೆ ಖಂಡಿತವಾಗಿ ಕಟ್ಟಿಗೆ ಕ್ರಯ ಮುಂವೆ ಮಳೆಗಾಲದಲ್ಲಿ ಮಲೇರಿಯಾ ಜ್ವರದಂತೆ ಏರಿಯೇ ಏರುವುದು. ಹಾಗಾಗಿ ನಮ್ಮ ಜಿಲ್ಲಾಧಿಕಾರಿಗಳು ಈ ಕುರಿತು ತೀವ್ರ ವಿಚಾರಮಾಡಿ ಕೂಡಲೇ ಕಟ್ಟಿಗೆ ಕ್ರಯವನ್ನೂ ನಿರ್ಬಂಧಿಸಬೇಕೆಂದು ನಾವು ವಿನಂತಿಸುತ್ತೇವೆ.

ಜಿಲ್ಲಾ ಸಮಾಚಾರಗಳು

ಅಡಿಕೆ ಬೇಸಾಯುಗಾರರಿಗೆ [illegible]

“ಸರ್ ತೇಜ ಬಹದ್ದೂರ್ ಸಪ್ರುಗಳು ತಾ. ೨೨ರೆಂದು ಅ. ಬೇ. ಸಂಘದ ಕಾರ್ಯದರ್ಶಿಗಳಿಗೆ ಹೀಗೆ ಬರೆದಿದ್ದಾರೆ, “ತಾವು ಕಳುಹಿಸಿದ ಅಡಿಕೆಯ ಮೇಲಿನ ಅಬ್ಕಾರಿ ತೆರಿಗೆಯ ವಿಚಾರ ವಾಸೂ ಶ್ರೀ| ಖಾರೆಕರೂ ಪರಿಶೀಲಿಸಿ, ಅಗತ್ಯವಿದ್ದರೆ, ನಿಮಗೆ ತಂತಿ ಕಳುಹಿಸುವೆವು.” ಈಗ ಕಾರ್ಯದರ್ಶಿಗಳಿಗೆ, ‘ನಿಮ್ಮೊಡನೆ ಅನುಭವ ಕೇಳಲಿದೆ ಕೂಡಲೆ ಬನ್ನಿರಿ’ ಎಂದು ತಂತಿ ಬಂದಿದೆ.

ಕಾರ್ಯದರ್ಶಿಗಳು ತಾ. ೮ರೆಂದು ಬೊಂಬಾಯಿಗಾಗಿ ಅಲಹಾಬಾದಿಗೆ ಹೊರಡಲಿರುವರು. ಸಪ್ರುಗಳೊಡನೆ ವಿಚಾರ ವಿನಿಮಯ ಮಾಡಿದ ಅನಂತರ ಅವರ ಅಭಿಪ್ರಾಯದಂತೆ; ಸಿವಿಲ್ ಪ್ರೊ. ಕಾಯಿದೆಯ ೮೦ ನಿಯಮಾನ್ವಯ ಸರಕಾರಕ್ಕೆ ನೋಟೀಸು ಕೊಡಲಾಗುವುದು.

ಅನಂತರ ಕಾರ್ಯದರ್ಶಿಗಳು ಸಿಮ್ಲಕ್ಕೆ ತೆರಳಿ ಫೆಡರಲ್ ಕೋರ್ಟಿನ ಗಮನಕ್ಕೆ ಅಡಿಕೆಯ ಮೇಲಿನ ತೆರಿಗೆಯ ವಿಚಾರವನ್ನು ತರಲು ಯತ್ನಿಸುವರು. ಕೋಕ ಮತ್ತು ಕರಿ ಗೋಟುಗಳಾದರೂ ತೆರಿಗೆಯಿಂದ ವಿನಾಯಿತಿ ಪಡೆಯುವಂತೆ ಯತ್ನಿಸುವರು. ಅಡಿಕೆ ಕೃಷಿಕರೆಲ್ಲರೂ ಒಗ್ಗಟ್ಟಾಗಿ, ಸುಂಕದ ವಿರುದ್ಧ ಹೋರಾಡದಿದ್ದರೆ; ಯುದ್ಧಾನಂತರ ಅಡಿಕೆ ಬೇಸಾಯಗಾರರ ಭವಿಷ್ಯತ್ತೇ ಮುಗಿದಂತೆ ಎಂಬುದನ್ನು ಯಾರೂ ಮರೆಯದಿರಲಿ ಯುದ್ಧ ಕೊನೆಗೊಂಡ ಮರುದಿನ ಅಡಿಕೆಯ ಬೆಲೆಯು ಯುದ್ಧ ಪೂರ್ವದ ಮಟ್ಟಕ್ಕೆ ಇಳಿಯುವುದು. ಆಗಲೂ ಖಂಡಿಗೆ ೭೦ ರೂ. ತೆರಿಗೆಯನ್ನು ಸರಕಾರಕ್ಕೆ ತೆತ್ತರೆ ಬೇಸಾಯಗಾರನಿಗೆ ಏನು ಉಳಿಯಿತು? ಕರವು ಅಡಿಕೆಯ ಬೆಲೆಯ ಮೇಲೆ ಹೊಂದಿಕೊಂಡಿಲ್ಲ. ಅಡಿಕೆಯ ಬೆಲೆಯು ಎಷ್ಟೇ ಇರಲಿ ರಾತಲಿಗೆ ೨ ಆಣೆಯಂತೆ ಕರವನ್ನು ಕೊಟ್ಟೇ ತೀರಬೇಕು. ಕೋಕ, ಕರಿಗೋಟುಗಳಿಗೆ ಖಂಡಿಗೆ ೬೦ ರಿಂದ ಹೆಚ್ಚು ಸಿಗಲಾರದು. ಕರ ೬೦. ರೂ. ಕೊಡಬೇಕು! ೩೮ರಿಂದ ೪೦ರ ವರೆಗೆ ಕೃಷಿಕರ ಪರಿಸ್ಥಿತಿಯು ಬಹು ನಿಕೃಷ್ಟಸ್ಥಿತಿಯಲ್ಲಿತ್ತು. ಬೆಲೆಯು ಬಹಳ ಕೆಳಮಟ್ಟದಲ್ಲಿತ್ತು. ಮಹಾಳಿಯ ಹಾವಳಿ ಬೇರೆಯಿತ್ತು. ಆಗ ಸರಕಾರವು ನಮಗೆ ಯಾವ ನೆರವನ್ನೂ ನೀಡಲಿಲ್ಲ, ಕೃಷಿಕನಿಗೆ ಲಾಭ ದೊರೆಯಲಿ ದೊರೆಯದಿರಲಿ ಕರ ಕೊಟ್ಟೇ ತೀರಬೇಕು. ಕಾಫಿ ಕೃಷಿಕರ ಮಟ್ಟಿಗೆ ಅವರ ಹೀನಸ್ಥಿತಿಯ ಕಾಲದಲ್ಲಿ ಸರಕಾರವು ನೆರವು ನೀಡಿದೆ. ಸೇ; ೨½ಯ ದರದಲ್ಲಿ ಸಾಲ ಕೊಟ್ಟಿದೆ. ಆದರೆ ಅಡಿಕೆ ಕೃಷಿಕರಿಗೆ ಯಾವ ಉಪಕಾರವನ್ನು ಮಾಡಲಿಲ್ಲ. ಅಲ್ಲದೆ ಅಡಿಕೆಯ ಮೇಲಿನ ಕರವು ನ್ಯಾಯವಿಧಾಯಕರ ಬಹುಮತದ ಅಭಿಪ್ರಾಯದ ವಿರುದ್ಧವಾಗಿ ಹೇರಿದುದಾಗಿರುತ್ತದೆ.” ಹೀಗೆಂದು ಅ. ಬೇ. ಸಂಘದ ಕಾರ್ಯದರ್ಶಿಗಳು ಬರೆಯುತ್ತಾರೆ.

ಮಂಗಳೂರಲ್ಲಿ ರೇಶನಿಂಗ್

‘ಕೆಲವು ದಿನಗಳಲ್ಲಿ ಆರಂಭವಾಗುವುದು; ರೇಶನಿಂಗ್ ಚೀಟನ್ನು ನಾಗರಿಕರಿಗೆ ಹಂಚಲಾಗುತ್ತಿದೆ. ಹಂಚುವ ಕೆಲಸವು ತಾ. ೬ನೆಯ ದಿನ ಕೊನೆಹೊಂದುವುದು. ಎಂದು ಅಧಿಕಾರಿಗಳು ಪ್ರಕಟಿಸಿದ್ದಾರೆ. ಬೇಕಾದ ಅಕ್ಕಿಯ ದಾಸ್ತಾನು ಆಗಿರುವುದರಿಂದ ಇದೇ ತಿಂಗಳ ೨೧ರಿಂದ ಹಸುಗೆಯು ಜಾರಿಗೆ ಬರುವುದೆಂದು ನಿರೀಕ್ಷಿಸಲಾಗಿದೆ.

ಕಯ್ಯೂರು ಕುಟುಂಬಗಳಿಗೆ ಸಹಾಯ

ಕಯ್ಯೂರು ಪ್ರಕರಣದಲ್ಲಿ ಗಲ್ಲಿಗೇರಿಸಲ್ಪಟ್ಟಿದ್ದ ನಾಲ್ವರು ಬಂಧುಗಳ ಕುಟುಂಬಗಳಿಗೆ ನೆರವು ನೀಡುವುದಕ್ಕಾಗಿ ಲಂಡನಿನ ಮಜೂರರು ಭಾರತದ ಕಮ್ಯೂನಿಸ್ಟ ಪಾರ್ಟಿಯ ಮೂಲಕ ರೂ. ೩೦೦೦ವನ್ನು ಕಳುಹಿದ್ದರು. ಈ ಹಣವನ್ನು ತಾ. ೩ರಂದು ಮಂಗಳೂರು ಕಮ್ಯೂನಿಸ್ಟ ಪಾರ್ಟಿಯ ಕಾರ್ಯದರ್ಶಿಗಳು, ನಾಲ್ಕು ಕುಟುಂಬಗಳಿಗೂ ಹಂಚಿದರು. ತಮಗೆ ದೊರೆತ ಹಣದಲ್ಲಿ ರೂ. ೧೦೦೦/-ದ ನಿಧಿಯೊಂದನ್ನು ಕಮ್ಯೂನಿಸ್ಟ ಕೈದಿಗಳಿಗೆ ನೆರವು ನೀಡುವುದಕ್ಕಾಗಿ ಕೊಟ್ಟರು. ಕೆಲ ಸಮಯದ ಹಿಂದೊಮ್ಮೆ ಈ ಕುಟುಂಬಗಳಿಗಾಗಿ ಬ್ರಿಟಿಷ್ ಮಜೂರರು ರೂ. ೬೦೦೦/- ಕಳುಹಿಸಿದ್ದರು.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

WANTED AGENTS IN S. KANARA DT.

Mangalore Stockists:—M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

PROSPECTUS OF
Canara Motor & General Insurance Co., Ltd., Mangalore.

(A Copy of this Prospectus has been filed with the Assistant Registrar of Joint Stock Companies Mangalore)

...t of the Central Government has been obtained to this issue under Defence of India Rule 94-A. It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them

Authorised Capital Rs 10,00,000/- divided into 10,000 shares of Rs 100/ each

Issued Capital Rs 3,00,000/- made up of 3,000 shares of Rs 100/ each

PAYABLE AS FOLLOWS —

On application Rs 11/ per share, of which Re 1/ per share is admission fee
1st call Rs 25/ per share to be paid on or before 30—5—1944
2nd call Rs 25/- per share to be paid on or before 31—7—1944
3rd call Rs 20/- per share
4th call Rs 20/- per share

The 3rd and 4th calls will be enforceable as and when the Directors deem necessary but none of these two calls will be made at an interval of less than 3 months from the previous call and on a notice of less than 30 days

The shares will be allotted at the absolute discretion of the Directors and no applicant can claim allotment as a matter of right express or implied

Offers in respect of 1 526 shares of the value of Rs 1 52 600 have already been received and allotted in full and the remaining shares are available for subscription

Directors

(1) *H LAXMINARAYANA KAMATH Esqr*,
Director Canara Bank Ltd The Canara Public Conveyance Co Ltd The United Karnataka Transport Co Ltd The Canara Workshops Ltd Landlord & Merchant Gangolly

(2) *A DAMODAR PAI Esqr B A B L*
Director The Canara Bank Ltd The Canara Public Conveyance Co Ltd The Canara Sales Corporation Ltd The Canara Workshops Ltd Mangalore

(3) *K K SUBBA RAO Esqr*
Proprietor The Standard Automobiles Supply Agency Cannanore

(4) *M PADMANABHA RAGHUNATH PAI, Esqr*
Director The Canara Bank Ltd Chairman Board of Directors The Canara Public Conveyance Co Ltd The Canara Sales Corporation Ltd The Canara Workshops Ltd Agent Burmah Shell & Land Lord

(5) *V S KUDVA Esqr*
Managing Director The Canara Publ c Conveyance Co Ltd The Canara Workshops Ltd The Canara Sales Corporation Ltd The United Karnataka Transport Co Ltd The Modern Motor Service of Mysore Ltd etc Director Newspaper Publishers Ltd

Managing Director

SRI V S KUDVA MANAGING DIRECTOR, THE CANARA PUBLIC CONVEYANCE CO LTD

Bankers

THE CANARA BANK LTD MANGALORE
THE CANARA BANKING CORPORATION LTD MANGALORE
THE CANARA INDUSTRIAL & BANKING SYNDICATE LTD MANGALORE

Auditor

SRI A UMANATH RAO B A G D A R A Mangalore

Registered Office

KODIALBAIL MANGALORE

OBJECTS

The company has been formed for the purposes mentioned in the Memorandum of Association (copy whereof is attached herewith & forms part of this prospectus) and particularly to transact all kinds of Insurance business including Life Fire Marine Accident Workmen s compensation etc The company intends to commence with Accidents insurance and miscellaneous insurance including workmen s compensation and motor car insurance

SCOPE & PROSPECTS

It may be mentioned here that this company is sponsored by one of the leading transport concerns of Southern India namely the Canara Public Conveyance Co Ltd The United Karnataka Transport Co of Kumta and several other motor concerns intend to subscribe substantial capital in this company thus assuring their support and active interest in this company Hence the company is assured of immediate business on a fairly large scale in the line of Motor Vehicle Insurance as well as other miscellaneous insurance The company thus hopes to start with a fairly good business in accident insurance from concerns who will be interested to see that the company will thrive on such business and this aspect minimises the risk of such business It is also expected that the company will incur very low expense to secure such business from the very beginning

DIRECTORS QUALIFICATION & REMUNERATION

The qualification of a Director shall be the holding of shares in the company of the nominal value of Rs 5,000/—The qualification of a policy-holders Director shall be as may be prescribed by the Directors from time to time subject to the provisions of Insurance Act, 1938

The remuneration of a Director shall be such sum not exceeding Rs. 25/—as the Director may fix from time to time for every meeting of the Board exclusive of travelling expenses rates for which may be fixed by the Directors from time to time A Director may in addition be paid extra remuneration for any special service rendered by him to the company

DIRECTORS INTEREST

No Director except Mr V S Kudva who has been appointed as Managing Director of the company is interested in any way whatsoever in the promotion of the company except as holder of shares

Mr V S Kudva is appointed as Managing Director and will work without remuneration for one year at the end of which the Directors shall fix his remuneration for his serv ces thereafter

POWERS OF DIRECTORS AND MANAGING DIRECTOR

The Articles provide that the business of the company shall be managed by the Directors who may exercise all such powers of the company as are not by the Act or any statutory modification thereof for the time being in force or by the Articles required to be exercised by the company in General Meeting

The general management of the company is subject to the control of Directors entrusted into the hands of the Managing Director who shall have such powers on behalf of the Board of Directors as the Directors may delegate to him from t me to time

MINIMUM SUBSCRIPTION

The Articles of Association provide that the Directors shall not proceed to allotment till shares of the nominal amount of Rupees one lakh have been subscribed

PRELIMINARY EXPENSES

No fee has been paid or will be paid to any promoter except the actual expenses incurred incidental to the registration and promotion of the Company Preliminary expenses are estimated not to exceed Rs 1 000/ excluding brokerage on the sale of shares or expense of advertisement of prospectus

Brokerage at the rate of 8 As per share will be paid by the company to any recognised broker or banker or agent approved by the Company

VOTING

According to the Art cles every member present in person on a show of hands shall have one vote and upon a poll every Member present in person or by proxy shall have one vote for every share held by him

RESTRICTION IN VOTING

No member shall be entitled to be present or to vote on any question either personally or by proxy or as proxy for another member at any general meeting or upon a poll or be reckoned in a quorum whilst any call or other sum shall be due and payable to the Company in respect of any of the shares of such member

RESTRICTION ON TRANSFER OF SHARES

The Articles provide that the Directors in their absolute and uncontrolled discretion and without assigning any reason may decline to register any proposed transfer of shares whether the same are fully paid up or not This restriction also applies to a case where the proposed transferee is already a member

INSPECTION OF MEMORANDUM AND ARTICLES OF ASSOCIATION

The Memorandum and Articles of Association of the Company may be inspected at the Registered Office of the company during business hours

APPLICATION FOR SHARES

Copies of the Prospectus and Forms of Application for shares may be obtained from the Registered Office of the company or from any of the company s Bankers and the latter are authorised and have agreed to receive applications to accept money tendered and to grant receipts on behalf of the company In case an allotment cannot be made or is made for a number of shares less than that appl ed for the entire deposit will be returned in the former case and the deposits in respect of unallotted shares in the latter case will be applied towards the amount due on account of the 1st & 2nd calls in respect of the shares allotted and the balance remaining if any thereafter will be returned in full

Mangalore,
Dated 19th April 1944

(Sd) *M PADMANABHA RAGHUNATH PAI*
A DAMODAR PAI
H LAXMINARAYAN KAMATH
" *K K SUBBA RAO*
" *V S KUDVA*

ನಮ್ಮ ಆಹಾರ

ಡಾ| ಶಿವರಾಂ

[illegible] ಆಹಾರ ಪರಿಶ್ಕೃತ [illegible] ಆಹಾರವೇ ಒಂದಾದ ಯೋಚನೆ [illegible].

ನಮ್ಮ ದೇಹದಲ್ಲಿ ಪ್ರತಿಯೊಂದು ಅಂಗದ [illegible] ದಿನಾಗಲೂ [illegible] ನಾದ ಮೇಲೆ ನಶಿಸಿ ಹೋಗುತ್ತವೆ. ಹೊಸ [illegible]ಗಳು ಉತ್ಪತ್ತಿಯಾಗುತ್ತವೆ. ನನ್ನ ಕಣ್ಣಿಗೆ [illegible]ಂದ ಹಾಗೆ ಉಗುರು, ಕೂದಲು ಇವುಗಳು [illegible]ಳೆಯುತ್ತವೆ. ಅಂತೆಯೇ ಮಿಕ್ಕ ಅಂಗಗಳೂ [illegible] ಅಂಗಾಂಗಗಳು ಬೆಳೆಯುವುದಕ್ಕೆ ಆಹಾ[illegible]ವೇ ಆಧಾರ. ಆಹಾರದಲ್ಲಿಯೂ ಸಸಾರಜನಕ 'ಪ್ರೋಟೀನ್ಸ್' ಪದಾರ್ಥಗಳೇ ಮುಖ್ಯ

ದೇಹವರ್ಧಕ ಗುಣವೊಂದೇ ಅಲ್ಲ ಆಹಾ[illegible]ಕ್ಕೆ. ನಾವು ಮಾಡುವ ಪ್ರತಿಯೊಂದು ಕೆಲ[illegible]ಕ್ಕೂ ಶಕ್ತಿಬೇಕು ಈ ಶಕ್ತಿ ಆಹಾರದ ಪಚನ[illegible]ಂದ ಉಂಟಾಗುವ ಶಕ್ತಿಯನ್ನೇ ಅವಲಂಬಿ[illegible]ಸುತ್ತದೆ. ಹೀಗೆ ಶಕ್ತಿವರ್ಧಕ ಗುಣವೂ ಉಂಟು

ಅಂದ ಮೇಲೆ ಆಹಾರದ ಮುಖ್ಯ ಗುಣಗಳು ಎರಡು ೧ ದೇಹವರ್ಧಕ ಅಥವಾ ಅತ್ಯವಶ್ಯಕ, ೨ ಶಕ್ತಿವರ್ಧಕ.

೧ ದೇಹವರ್ಧಕ ಪದಾರ್ಥಗಳಲ್ಲಿ ಮುಖ್ಯವಾದವು ಸಸಾರ ಜನಕ ಪದಾರ್ಥಗಳು, ಲೋಹ ಲವಣಾದಿಗಳು, ವಿಟಮಿನ್ಸ್ ಅಥವಾ ಅನ್ನಾಂಗಗಳು, ನೀರು,

ಶಕ್ತಿವರ್ಧಕ ಪದಾರ್ಥಗಳಲ್ಲಿ ಸಕ್ಕರೆ ಹಿಟ್ಟು ಇವುಗಳು ಬೇಗ ಪಚನವಾಗಿ ಶೀಘ್ರದಲ್ಲಿ ಶಕ್ತಿ ದೊರೆಯುವಂತೆ ಮಾಡುತ್ತವೆ ಜಿಡ್ಡು ಪದಾರ್ಥಗಳು, ಮೇದಸ್ಸುಗಳು ನಿಧಾನವಾಗಿ ಪಚನವಾಗಿ ಸಾವಕಾಶವಾಗಿ ಶಕ್ತಿ ದೊರೆಯುವಂತೆ ಮಾಡುತ್ತವೆ ದಣಿದು ಬಂದವರಿಗೆ ಆಯಾಸಪರಿಹಾರಕ್ಕಾಗಿ ಸಕ್ಕರೆ ಪಾನಕ ಕೊಡುತ್ತೇವೆ ದೀರ್ಘಕಾಲ ಶಾಖ ಬೇಕಾದ ಎಸ್ಕಿಮೋ ಜನರು ಹೆಚ್ಚಾಗಿ ಕೊಬ್ಬು ಪದಾರ್ಥಗಳನ್ನು ಸೇವಿಸುತ್ತಾರೆ

ವಿಟಮಿನ್ಸ್‌ಗಳಿಂದ ಮನುಷ್ಯನು ಸೈಂಧವನ ಹಾಗೆ ಬೆಳೆಯಬಹುದೆಂಬ ತಪ್ಪು ಅಭಿಪ್ರಾಯ ಜನರಲ್ಲಿ ಇದ್ದಂತೆ ಕಾಣಬರುತ್ತದೆ ದೇಹದ ಬೆಳವಣಿಗೆಗೆ ಸಸಾರಜನಕ ಪದಾರ್ಥಗಳು ಅವಶ್ಯಕ—ಮನೆಗೆ ಇಟ್ಟಿಗೆಗಳಿದ್ದಂತೆ—ವಿಟಮಿನ್ಸ್ ಲೋಹ ಲವಣಾದಿಗಳು ಗಾರೆ ಸಿಮೆಂಟ್ ಇದ್ದಂತೆ

ಬೆಳೆಯುವ ವಯಸ್ಸಿನಲ್ಲಿ ಸಾಕಷ್ಟು ಸಸಾರ ಜನಕ ಪದಾರ್ಥಗಳು, ವಿಟಮಿನ್ಸ್‌ಗಳೂ ಇಲ್ಲದಿದ್ದರೆ, ದೇಹದ ಕಟ್ಟಡವೇ ಶಿಥಿಲವಾಗುತ್ತದೆ ಬೆಳೆದ ಮೇಲೆ ಸರಿಯಾದ ಆಹಾರವು ದೊರೆತರೆ, ಕೊಬ್ಬು ಹೆಚ್ಚಾಗುತ್ತದೆಯೇ ವಿನಾ ದೇಹ ದಾರ್ಢ್ಯವಾಗುವುದಿಲ್ಲ ಶಿಥಿಲವಾದ ಮನೆಗೆ ಹೊಸ ಗಾರೆ ಹಾಕಿದಂತಾಗುತ್ತದೆ. ಅಂದ ಮೇಲೆ ಬೆಳೆಯುವ ವಯಸ್ಸಿನಲ್ಲಿ ಅವಶ್ಯಕ, ದೇಹವರ್ಧಕ ಆಹಾರ ಪದಾರ್ಥಗಳು ಸಾಕಷ್ಟು ದೊರೆಯಲೇ ಬೇಕು

ಪ್ರಾಚೀನ ಪದ್ಧತಿಗಳಲ್ಲಿ ನಮ್ಮ ಜನಾಂಗದವರು ಒಂದು ರೀತಿಯಲ್ಲಿ ಆಹಾರ ಸಮಸ್ಯೆಯನ್ನು ನಿವಾರಿಸಿದ್ದರು

ದೇಹವರ್ಧಕ ಆಹಾರ ಪದಾರ್ಥಗಳು ನಾಲ್ಕು ದಿನಕ್ಕೊಮ್ಮೆ ಸಿಕ್ಕಿದರೂ ದೇಹದಲ್ಲಿ ಕೇಂದ್ರೀಕೃತವಾಗಿ ದೇಹದ ಬೆಳವಣಿಗೆಗೆ ಸಹಾಯಕವಾಗುತ್ತವೆ ಹೀಗಾಗಿ ಅವರು ನಾಲ್ಕು ದಿನ ಆರು ದಿನಕ್ಕೊಮ್ಮೆ ಹಬ್ಬ ಹರಿದಿನಗಳನ್ನು ಏರ್ಪಡಿಸಿ, ಆಯಾ ಕಾಲದಲ್ಲಿ ಸುಲಭವಾಗಿ ಸಿಗುವ ಆಹಾರ ಪದಾರ್ಥಗಳನ್ನು ನಾಲಗೆಗೆ ರುಚಿಕರವಾಗುವಂತೆ ಅಡುಗೆ ಮಾಡಿ, ಉಪಯೋಗಿಸುತ್ತಿದ್ದರು

ಹೀಗೆ ಅವಶ್ಯಕ ದೇಹವರ್ಧಕ ಸಾಮಗ್ರಿಗಳು ಆಗಿಂದಾಗ್ಗೆ ದೊರೆಯುತ್ತಲೇ ಇತ್ತು

ನೆನೆಹಾಕಿದ ಹೆಸರುಬೇಳೆ ಕಡಲೆ ಬೇಳೆಗಳು ಅವುಗಳಿಂದ ಆದ ಕೋಸಂಬರಿಗಳು ಇಲ್ಲದ ಹಬ್ಬವೇ ಇಲ್ಲ. ಈ ಮೊಳಕೆಯಾಗುವ ಬೇಳೆಗಳಿಂದ ಬೇಕಾದ ಸಸಾರಜನವೂ ವೈಟಮಿನ್ 'ಬಿ' ಪದಾರ್ಥಗಳೂ, ವೈಟಮಿನ್ '—' —ರ್ಥವೂ ದೊರೆಯುತ್ತಿತ್ತು.

ವೈಟಮಿನ್ 'ಎ' ಪದಾರ್ಥವು ಹಸುವಿನ ತುಪ್ಪದಲ್ಲೂ, ಸೊಪ್ಪುಗಳಲ್ಲಿಯೂ, ಹಣ್ಣುಗಳಲ್ಲಿಯೂ ಇರುತ್ತಿತ್ತು.

ವೈಟಮಿನ್ 'ಸಿ' ಹಣ್ಣುಗಳಲ್ಲಿಯೂ, ನೆಲ್ಲಿಕಾಯಿನಲ್ಲಿಯೂ ಸಿಗುತ್ತದೆ. ಲೋಹ ಪಾತ್ರೆಗಳಲ್ಲಿ ವೈಟಮಿನ್ 'ಸಿ' ನಾಶವಾಗುತ್ತದೆ ಹುಳಿ ಪದಾರ್ಥಗಳಲ್ಲಿ ವೈಟಮಿನ್ 'ಸಿ' ಕೆಡದೆ ಇರುತ್ತದೆ ಕಲ್ಲುಮರಿಗೆಗಳಲ್ಲಿ ನೆಲ್ಲಿಕಾಯಿ ಚಟ್ನಿ ಉಪ್ಪಿನಕಾಯಿಗಳನ್ನು ಮಾಡಿ ವರ್ಷಕಾಲವೂ 'ಸಿ' ದೊರಕುವಂತೆ ಸಾಧಿಸಿದ್ದರು.

ಅನ್ನಾಂಗ 'ಡಿ' ಸೂರ್ಯರಶ್ಮಿಯ ಸಂಪರ್ಕದಿಂದ ಉತ್ಪತ್ತಿಯಾಗುತ್ತದೆ, ಕಾಯಿಪಲ್ಯಗಳ ಚೂರನ್ನು ಒಣಗಿಸುವುದು ಇದಕ್ಕಾಗಿರಬಹುದು ಈ ಆಹಾರದಲ್ಲಿ ಅನ್ನಾಂಗ 'ಡಿ' ಎಷ್ಟು ಉತ್ಪತ್ತಿಯಾಗಿದೆ, ಆಗಬಲ್ಲದು ಎಂಬುದನ್ನು ಯಾರೂ ಕಂಡು ಹಿಡಿದಿಲ್ಲ ಪ್ರಾಚೀನರೇನೋ ತಮ್ಮ ಆಹಾರ ಪದ್ಧತಿಯಲ್ಲಿ ಅನ್ನಾಂಗಗಳು ಕೆಡದಂತೆ ಶೇಖರಿಸಿಡಲು ಹಲವಾರು ವಿಧಾನಗಳನ್ನು ಉಪಯೋಗಿಸಿದ್ದರು.

ಶಾಸ್ತ್ರೀಯವಾಗಿ ಸಂಶೋಧನೆ ನಡೆದರೆ ಇನ್ನೂ ಹಲವಾರು ವಿಷಯಗಳು ತೋರಿಬಂದಾವು

ಪಶ್ಚಿಮದಲ್ಲಿ ಈ ಸಂಶೋಧನೆಗಳು ನಮ್ಮ ದೇಶದಲ್ಲಿ ನಡೆಯುವ ಸೂಚನೆಗಳೇನೂ ಇಲ್ಲ ಅಲ್ಲಿನ ತನಕ ನಮ್ಮ ಪ್ರಾಚೀನ ಪದ್ಧತಿಗಳನ್ನು ಪದ್ಧತಿಗಳನ್ನು ಪುನರುಜ್ಜೀವಿಸಿ, ಅತ್ಯಾವಶ್ಯಕ ದೇಹವರ್ಧಕ ಆಹಾರ ಪದಾರ್ಥಗಳು, ಬೆಳೆಯುವ ಹುಡುಗ ಹುಡುಗಿಯರಿಗಾದರೂ ದೊರೆಯುವಂತೆ ಮಾಡಲೇಬೇಕು

ಪದಾರ್ಥಗಳ ಶೇಖರಣೆ, ಅಡುಗೆಯ ರೀತಿ, ಇಡುವ ವಿಧಾನ, ರುಚಿ ಇವುಗಳನ್ನು ಅಡುಗೂಲಜ್ಜಿಗಳಿಂದಲೇ ಕಲಿಯಬೇಕು ಸಾವಿರಾರು ವರ್ಷಗಳ ಅನುಭವವನ್ನು ಆಗ ನಾವು ಉಪಯೋಗಿಸಿದಂತಾಗುವುದು

ಸಾರ್ವಜನಿಕರು ಸೇರಿ ದಾಂಧಲೆ ಹಚ್ಚಿ ವಿಚಾರ ಮಾಡುವಂತೆ ಮಾಡಿ ಬೆಳೆಯುವ ಹುಡುಗರಾದರೂ ಸಾಕಷ್ಟು ದೇಹವರ್ಧಕ ಆಹಾರವನ್ನು ಪಡೆಯುವಂತೆ ಮಾಡಿದರೆ, ಸಾರ್ಥಕವಾದೀತು

[೧೯೪೪—ವಸಂತ ಸಾಹಿತ್ಯೋತ್ಸವದ ಭಾಷಣದಿಂದ]

(೧ನೇ ಪುಟದಿಂದ)

[illegible] ಮಹಾತ್ಮಗಾಂಧಿ [illegible] ಬರೆದು ಮನಸ್ಸ ಮಾಡಿ ಕೊಂಡಿದ್ದಾರೆಂಬುದಕ್ಕೆ ಅವರ ಬಿಡುಗಡೆಯಾದ ಬಳಿಕ ಆಗಾಖಾನ ಅರಮನೆಯಿಂದ ಪರ್ಣ ಕುಟಿಗೆ ಕಳುಹಿಸಲಾದ [illegible] ಪೆಟ್ಟಿಗೆಗಳಲ್ಲಿ ತುಂಬಿದ್ದ ಕಾಗದ ಪತ್ರಗಳು ಸಾಕ್ಷಿಯಾಗಿವೆ

ತಾ, ೩ರಂದು ಗಾಂಧೀಜಿ ದೇಹ ಪ್ರಕೃತಿ ಮೊದಲಿನ ದಿನಗಳಂತೆಯೇ [illegible] ಲಾಗಿದೆ. ತಾ. ೬ರ ಸಂಜೆ ಗಾಂಧೀಜಿಯವರಿಗೊಮ್ಮೆ ಬಹಳ ಆಯಾಸವಾದಂತೆ ತೋರಿತು ಆ ರಾತ್ರಿ ಸಾಕಷ್ಟು ವಿಶ್ರಾಂತಿ ದೊರಕಿತು.

ಡಾಕ್ಟರರ ಅಭಿಪ್ರಾಯದಂತೆ ತಾ ೮ರಿಂದ ೧೫ ದಿನಗಳ ವರೆಗೆ ಗಾಂಧೀಜಿ ಯಾರಿಗೂ ಭೇಟಿ ಕೊಡುವುದಿಲ್ಲ. ಆದರೆ ದರ್ಶನಾಪೇಕ್ಷಿಗಳಿಗೆ ಯಾವುದೇ ಅಡ್ಡಿ ಮಾಡುವುದಿಲ್ಲ

ಗಾಂಧೀಜಿ ಶರೀರವನ್ನು ಎಕ್ಸ್‌ರೇಯಿಂದ ಪರೀಕ್ಷಿಸಲಾಯಿತು ಹೃದಯ ದೌರ್ಬಲ್ಯ ಕಂಡುಬಂದಿದೆ ಅವರನ್ನು ಜುಹೂಗೆ ಕರಕೊಂಡು ಹೋಗುವ ಆಲೋಚನೆಯಿದೆ ಡಾಕ್ಟರರು ಸಮುದ್ರಬದಿಯ ಆರೋಗ್ಯ ಸ್ಥಳಕ್ಕೆ ಹೋಗಬೇಕೆಂದಿದ್ದಾರೆ

ತಾ ೮ರಂದು ಸಂಜೆ ಪತ್ರಿಕೋದ್ಯಮಿಗಳು ೭ ನಿಮಿಷ ಗಾಂಧೀಜಿ ಭೇಟಿಮಾಡಿದರು ಯಾರೂ ಪ್ರಶ್ನೆ ಕೇಳಲಿಲ್ಲ ತಮ್ಮ ಹಾಸಿಗೆ ಸುತ್ತ ಕುಳಿತ ಪತ್ರಿಕೋದ್ಯಮಿಗಳನ್ನು ನೋಡಿ ಗಾಂಧೀಜಿ ಮುಗುಳ್ನಕ್ಕರು

ಆರೋಗ್ಯ ಸುಧಾರಿಸಿ ಕೊಳ್ಳುವುದೇ ನನ್ನ ಕರ್ತವ್ಯ, ಆಲೋಚನೆ ಎಂದು ಗಾಂಧೀ ತಿಳಿಸಿದರೆಂದು ವರದಿಯಾಗಿದೆ, ಗಾಂಧೀಜಿ ಪ್ರಾರ್ಥನೆ ಕಾಲಕ್ಕೆ ತುಂಬಾ ಜನರು ಬರುತ್ತಾರೆ. ಮಹಾತ್ಮಾ ಗಾಂಧೀಜೀ ಕೀ ಜಯಘೋಷ ಮಾಡುತ್ತಾರೆ. ಗಾಂಧೀಜಿ ಶಬ್ದ ನಿಲ್ಲಿಸಲು ಹೇಳಿದ್ದಾಗ ಜನರು ವಿಧೇಯರಾಗುವರು.

ಗಾಂಧೀಜಿ ಆರೋಗ್ಯ ಸುಧಾರಣೆಗಾಗಿ ನಂದೀ ಬೆಟ್ಟಕ್ಕೆ ಬರಬೇಕೆಂದು ಮೈಸೂರಿನಿಂದಲೂ, ಇಂದೋರಿಗೆ ಬರಬೇಕೆಂದು ಬೆಳಗಾವಿಯಿಂದಲೂ, ಕರ್ನಾಟಕದ ಕರೆ ಹೋಗಿದೆ ಆದರೆ ಅವರು ಜುಹೂಗೆ ಹೋಗುವ ಸಂಭವ ತೋರುತ್ತದೆ

ಗಾಂಧೀಜಿ ತಮ್ಮ ಕಾರ್ಯ ಪ್ರವೃತ್ತರಾಗಲು ಕೆಲವು ವಾರ ಬೇಕಾಗುವುದು ಹಾಗಾಗಿ ದೇಶದ ಪರಿಸ್ಥಿತಿ ವಿಚಾರ ಸದ್ಯ ಅವರ ಅಭಿಪ್ರಾಯ ತಿಳಿವ ಹಾಗಿಲ್ಲ ಡಾಕ್ಟರರು ಆಯಾಸಮಾಡಿಕೊಳ್ಳಬೇಡಿರೆಂದು ಹೇಳುತ್ತಿದ್ದರೂ, ಗಾಂಧೀಜಿ ಸಾಧ್ಯವಿದ್ದಷ್ಟು ಮಿತ್ರರನ್ನು ಭೇಟಿಯಾಗುತ್ತಾರೆ ಗಾಂಧೀಜಿ ಮಾತುಕತೆಗಳಲ್ಲಿ ಆಗಾಗ ವೈಯುಕ್ತಿಕ ವಿಚಾರವನ್ನೇ ಕೇಳುತ್ತಾರೆ ರಾಜಕೀಯ ವಿಚಾರ ಪೂರ್ಣ ವಿರಹಿತವಾಗಿದೆ ಏಕೆಂದರೆ ಆದರಿಂದ ಅವರ ರಕ್ತದ ಒತ್ತಡ ಹೆಚ್ಚುವುದು

ಆಯಾಸ ಮಾಡಿಕೊಳ್ಳಬೇಡಿರೆಂದು ಡಾಕ್ಟರರು ಹೇಳಿದರೂ, ಗಾಂಧೀಜಿ ತಮ್ಮ ದಿನನಿತ್ಯದ ಕಾರ್ಯಗಳಿಗೆ ತೊಡಗುತ್ತಿದ್ದಾರೆ ಓದುವುದನ್ನು ನೂಲುವುದು ಪ್ರಾರಂಭಿಸಿದ್ದಾರೆ

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು
—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು

ಸ್ಥಾಪಿತ: 1906

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara (1906.

Statement of affairs as on 31st December, 1943.

LIABILITIES	Rs As Ps	ASSETS	Rs As Ps
1 Paid up Capital	12 95 970- 0- 0	1 Cash on hand & with bankers	18 26 986- 3- 8
2 Reserves	3 83 379- 1- 6	2 Investments on (1) Govt Securities, (2) Immovable properties etc	26 04 671- 6- 8
3 Deposits	61 66 927 6- 0	3 Loans on Jewels & other valuable securities	23 72 302- 8- 7
4 Bills for collection	5,53 548- 6- 1	4 Loans on personal securities & Bills purchased	16 74 482-14- 8
5 Sundries including revenue items	7 00 981- 0- 5	5 Bills for collection as per contra	5 53 548- 6- 1
6 Profits for the year ending 31-12-1943	1 08 522- 4- 0	6 Office premises furniture etc	93 251- 0- 0
		7 Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಮಿಸ್ ವಲ್ಸಾ ಮತಾಯಿ

ಯಾರೀಕೆ? ಎಲ್ಲಿರುವಳು

ಅವಳಾರುಗೊತ್ತೆ? ಬೊಂಬಾಯಿಯ ಡಾಕ್ಟ ಜೋನ್ ಮತ್ತಾಯಿಯವರ ಪುತ್ರಿ. ಬೊಂಬಾಯಿ ಯುನಿವರ್ಸಿಟಿಯ ವಿದ್ಯಾರ್ಥಿನಿ, ವಿಶೇಶಿಕ್ಷಣಕ್ಕಾಗಿ ಅಮೇರಿಕದ ನ್ಯೂಯೋರ್ಕಿಗೆ ಹೋಗಿ ಕೊಲಂಬಿಯಾ ಯುನಿವರ್ಸಿಟಿಗೆ ಸೇರಿದ್ದಳು.

ಆಕೆ ಎಷ್ಟೆಂದರೂ ಭಾರತೀಯ ಯುವತಿ ಇಲ್ಲಿಯ ಮಹಿಳೆಯರಿಗೆ ಸಹಜವಾದ ಲಜ್ಜೆ ಸಂಕೋಚಗಳಿದ್ದವಳು ಅಮೇರಿಕದ ಗಂಡು ಭೀರಿಗಳಿಗೆ ಮಿಸ್. ವಲ್ಸಾ ಮತ್ತಾಯಿಯನ್ನು ಕಂಡಾಗ ನಮ್ಮಲ್ಲಿಯ ಸುಶಿಕ್ಷಿತ ತರುಣಿಯರಿಗೆ ಹಳ್ಳೀ ಹುಡುಗಿಯರನ್ನು ಕಂಡರೆ ಮೂಡುವಂತಹ ತಾತ್ಸಾರವೇ ಹುಟ್ಟುತಿತ್ತಂತೆ ಮೈತ್ರಿ ಸಂಪಾದನೆ ವಿಹಾರ ವಿನೋದ ಭಾಗಿತ್ವ ಸರಸ ಸಲ್ಲಾಪಗಳಲ್ಲಿ ಆಕೆಯ ಮನೋವೃತ್ತಿ ಅಮೇರಿಕನ್ ಮಟ್ಟದಷ್ಟಿರಲಿಲ್ಲ ಕಡಿಮೆ ಸಂಖ್ಯೆಯ ಸ್ನೇಹಿತರು, ಅಚ್ಚು ಕಟ್ಟಿನ ಒಂದೆರಡೇ ನಾಟಕಗಳು, ಅಗತ್ಯವಿದ್ದಲ್ಲಿಗೆ ಮಾತ್ರ ಪ್ರಯಾಣ ನಡುಬಗಿದು ನರ್ತನಕ್ಕಿಳಿದರೇನೇ ಅಸ್ತಿತ್ವವನ್ನೊಪ್ಪಿಕೊಳ್ಳುವ ಅಮೇರಿಕದಲ್ಲಿ ಮಿಸ್ ಮತ್ತಾಯಿ ಇದ್ದೂ ಹೆಚ್ಚಿನವರ ಪಾಲಿಗೆ ಇಲ್ಲದಂತಾಗಿದ್ದಳು

ಒಂದು ದಿನ ಆಕೆ ವಿಚಿತ್ರ ರೀತಿಯಿಂದ ಕಾಣೆಯಾದಳು, ಈ ತನಕ ಪತ್ತೆಯಿಲ್ಲ, ಎಷ್ಟೇ ಒದ್ದಾಡಿದರೂ ಸುಳಿವು ದೊರೆತಿಲ್ಲ ಅಮೇರಿಕದ ಪೋಲೀಸ್ ಮತ್ತು ಸೇನೆಯ ಪತ್ತೆದಾರಿ ವಿಭಾಗವು ಲೋಕದಲ್ಲೇ ಅನುಪಮವಾದುದೆನ್ನಬಹುದು ಪತ್ತೇದಾರಿಗಳು ಸರ್ವ ಶಕ್ತಿಯಿಂದ ಪ್ರಯತ್ನಿಸಿ, ಈಗ ವಲ್ಸಾ ಮತ್ತಾಯಿಯ ಪತ್ತೆ ಹಚ್ಚಬಲ್ಲೆವೆಂಬ ಧೈರ್ಯವನ್ನೇ ಕಳಕೊಂಡಿದ್ದಾರೆ ಪೂರ್ತಿ ಕಳಕೊಂಡಿಲ್ಲವೆನ್ನಲಾಗುವಂತೆ, ತಾವು ಸಾವಿರ ಸಂಖ್ಯೆಯಲ್ಲಿ ಆಕೆಯ ಭಾವಚಿತ್ರ ಪರಿಚಯಗಳೊಂದಿಗೆ ಪ್ರಕಟಿಸಿರುವ ಕರಪತ್ರಗಳೇನಾದರೂ ಕುರುಹು ತರಬಹುದೆಂಬ ನೇಣು ನೇತಾಟದಂತಹ ಒಂದೇ ಒಂದು ಆಶೆಯಲ್ಲಿದ್ದಾರೆ.

ಅವಳಿಗಾದುದೇನು? ಮಾರ್ಚಿ ೨೦ನೇ ರಾತ್ರಿ ಆವಳು ಸಂಚಾರಕ್ಕೆ ಹೋದವಳು ತನ್ನ ಮನೆಗೆ ಹಿಂದಿರುಗಲಿಲ್ಲ ಆ ರಾತ್ರಿ ವಿಪರೀತ ಮಂಜು ಬಿದ್ದಿತ್ತು, ಯಾರನ್ನೇ ಆದರೂ ಜೀವಂತವಾಗಿ ಹೂಳುವಂತಹ ಹಿಮಪಾತವಿತ್ತು, ಎಷ್ಟೇ ಶೋಧಿಸಿದರೂ ಇದಕ್ಕಿಂತ ಹೆಚ್ಚಿನ ವಾರ್ತೆ ದೊರೆತಿಲ್ಲ

ಕಾಣೆಯಾದ ಮಿಸ್ ಮತ್ತಾಯಿಗೋರ್ವ ಯೋಧನೊಡನೆ ಗಾಢ ಮೈತ್ರಿಯಿದ್ದದು ಬೆಳಕಿಗೆ ಬಂತು, ಅದು ಪ್ರಣಯವಿರಬೇಕೆಂದು ಊಹಿಸಲ್ಪಟ್ಟಿತು ಆದರೆ ಮತ್ತಾಯಿ ಸಂಬಂಧದ ದಾಖಲೆಗಳೂ ಆಕೆಯೊಟ್ಟಿಗೇನೇ ಅಂತರ್ಧಾನ ಹೊಂದಿದಂತಿದ್ದುದರಿಂದ ಪ್ರಣಯ ಪತ್ರಗಳಾವುವೂ ದೊರೆಯಲಿಲ್ಲ

ಆಕೆಯ ಸ್ನೇಹಿತೆ ಸಾಲ್ಮಾಬಿಶ್ಲಾವಿ ಎಂಬ ಈಜಿಪ್ಟ್ ಹುಡುಗಿ ವಲ್ಸಾ ಮತ್ತಾಯಿಯ ಹೊಸ ಜಾತಕವೊಂದನ್ನು 'ಜನರಲ್ ಅಮೇರಿಕನ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾಳೆ ವಲ್ಸಾ ಕ್ರಾಂತಿಕಾರಿಳಂತೆ ಬೊಂಬಾಯಿ ಯುನಿವರ್ಸಿಟಿಯಲ್ಲಿರುವಾಗಲೂ ಆಕೆ ನಿರುಪದ್ರವೀ ಹುಡುಗಿಯಾಗಿರಲಿಲ್ಲ, ಆದ್ದರಿಂದ ಅಧಿಕಾರಿಗಳು ಅವಳ ನಿಗಾ ತೆಗೆದುಕೊಳ್ಳುತ್ತಿದ್ದರು ನ್ಯೂಯೋರ್ಕಿಗೆ ಬಂದ ಮೇಲಂತೂ ಆಕೆ ತನ್ನ 'ಸ್ವತಂತ್ರ ಭಾರತ ಚಳವಳಿಯನ್ನು ಇಮ್ಮಡಿ ಹುಮ್ಮಸ್ಸಿನಿಂದ ನಡೆಸುತ್ತಿದ್ದಳು ಎಂದು ಬಿಶ್ಲಾವಿ ಬಿಡಿಸಿ ಹೇಳುತ್ತಾಳೆ ಹಿಂದೀ ಕ್ರಾಂತಿಕಾರಕರು ಜಾಪಾನೀ ಗೊರಿಲ್ಲಗಳಂತೆ ಕಾಣೆಯಾಗಬಲ್ಲರು ಎಂದು ಇದರ ಭಾವಾರ್ಥವೇನೋ!

ಅಮೇರಿಕದಲ್ಲೊಂದು 'ಇಂಡಿಯಾ ಲೀಗ್' ಇದೆ ಅದು ಈ ಕುರಿತು ಮೌನ ವಹಿಸಿದರೆ ಕರ್ತವ್ಯ ಮಿಮಾಂಸಕ್ಕದ ಆರೋಪಬರಬಹುದೆಂದು ಅಧ್ಯಕ್ಷ ಸರ್ದಾರ್ ಜೆ. ಜೆ. ಸಿಂಗರಿಗೆ ಹೆದರಿಕೆ ಬಂದಿರಬೇಕು. ಆದ್ದರಿಂದ ಅವರು ಭಾರತೀಯ ಭಾವನೆಗನುಗುಣವಾದ ಅಭಿಪ್ರಾಯವೊಂದನ್ನು ಪ್ರಕಟಿಸಿದ್ದಾರೆ 'ವಲ್ಸಾ ಮತ್ತಾಯಿ ಹಿಂದೆಂದೂ ಹಿಮಪಾತವನ್ನು ಕಂಡವಳಲ್ಲ, ಅಧಿಕವೇಗ ಹಿಮಪಾತ ವಶಾತ್ ಸಂ

'ಚಾರಕ್ಕೆ ತೆರಳಿದ್ದಳು; ಸುಂಟರ ಹಿಮದಲ್ಲಿ ಮಂಕಾಗಿ, ಧಾವಿಸಿ ಬರುತಿದ್ದ ಕಾರಿನಡಿಗಾಕೆ ಬಿದ್ದಿರಬೇಕು ಹೆಣವನ್ನು ಕಾರಿನಲ್ಲಿ ಹಾಕಿಕೊಂಡು ಹೋಗಿ ಡ್ರೈವರ್ ಅಜ್ಞಾತ ಸ್ಥಳದಲ್ಲಿ ಹುಗಿದಿರಬೇಕು' ಎಂದು ಸಿಂಗರ ಊಹೆ ಅದ್ದಿಯೇನು? ಹುಡುಗಿಯೊಟ್ಟಿಗೆ ಮಿಕ್ಕವರ ಊಹಾಶಕ್ತಿಯೂ ಪರಾರಿಯಾಗಿಲ್ಲವೆಂಬುದಕ್ಕೊಂದು ನಿದರ್ಶನವಾಗಿ ಈ ಕುರಿತು ಈ ರೀತಿ ತಲೆಗೊಂದು ಊಹೆಯಂತೆ ಹುಟ್ಟಿ ಕೊಂಡಿದೆ!

ಈಗ ಮತ್ತೊಂದು ವಾರ್ತೆ ಮಂತ್ರವಾದಿಯೊಬ್ಬನಿಂದ ಕುಮಾರಿ ವಲ್ಸಾಳ ಕುರಿತು ಇದು ವರೆಗೆ ಹುಟ್ಟಿದ ಸುದ್ದಿಗಳ ಪೈಕಿ ಇದೇ ಅತ್ಯಾಕರ್ಷಣೀಯವಾದುದು ಮಾಯಾ ಮಂತ್ರವಾದಿ ಹಾಗೂ ಅತ್ಯ ಚಮತ್ಕಾರ ಶೋಧನಾ ಕೆಲಸಗಾರನಾದ ನ್ಯೂಯೋರ್ಕಿನ ಡಾ। ತೋಮಸ್ ಎಲ್ ಗ್ಯಾರಿಟ್ ಎಂಬವನು ಆಕೆ ಅಮೇರಿಕದ ಆಗ್ನೇಯ ದಿಕ್ಕಿನಲ್ಲಿ ಒಂದು ಅನಿಶ್ಚಯಾತ್ಮಕ ನೆಲೆಯಲ್ಲಿದ್ದಾಳೆ ಎಂದು ಭವಿಷ್ಯ ಹೇಳಿದ್ದಾನೆ

ಕಾಣೆಯಾದ ಮಾರ್ಚಿ ೨೦ನೇ ತಾರೀಕಿನ ದಿನ ಅವಳು ಹೊರಬಿದ್ದುದು ಮುಂದೆ ನಡೆದುದು ನ್ಯೂಮೇಕ್ಸಿಕೋದ ರೇಟನ್ ಬಳಿಯ ಒಂದು ಸ್ಥಳದಲ್ಲಿರುವದು ಅಲ್ಲಿಯ ಆಕೆಯ ಚಲನವಲನ ಇವೆಲ್ಲಾ ದುರ್ಬೀನಿನಿಂದ ನೋಡುತ್ತಾ ಹೇಳುತ್ತಿದ್ದಾನೆ ಎಂಬಂತೆ ವಿವರವಾಗಿ ಬಂದಿವೆ ಕೊನೆಗೆ 'ಪ್ರಾಯಶಃ ಆಕೆ ಈಗ ಕಾಡಿಯಲ್ಲಿದ್ದಾಳೆ ಎಂಬೀ ಮಾತಿನೊಡನೆ ಮುಗಿಸಿದ್ದಾನೆ ಈ ಜಾದುಗಾರನಿಗೊಂದು ಶಿಫಾರಸಾಗಿ 'ವಲ್ಸಾ ಬೇಸಿಗೆ ಕಾಲವನ್ನು ಅಮೇರಿಕದ ಆ ಭಾಗದಲ್ಲಿ ಕಳೆಯಬೇಕೆಂದು ಯೋಚಿಸುತಿದ್ದುದು ನಿಜ ಎಂದು ಆಕೆಯ ಮಿತ್ರರ ಒಪ್ಪಿಗೆ

ಹೇಗಿದ್ದರೂ ಆಕೆ ಭಾರತೀಯ ಯುವತಿ ಅಮೇರಿಕದಲ್ಲಿ ಕಾಣೆಯಾಗಿದ್ದಾಳೆ' ಅವಳ ತಂದೆ ಡಾ ಜೋನ್ ಮತ್ತಾಯಿಯವರು ಇಲ್ಲಿ ಹೆಸರು ಹೊಂದಿದ ಮನುಷ್ಯ ಪ್ರೌಢ ವಿದ್ಯೆಗೆಂದು ಮಗಳನ್ನು ಅಮೇರಿಕಕ್ಕೆ ಕಳುಹಿಸಿದ್ದ ಅವರಿಗೆ ಆಕೆಯ ಈ ಅಂತರ್ಧಾನದಿಂದ ನೆಮ್ಮದಿಯಿರದು



ಸರಿಯಾಗಿ ಅವುದಾಗದಿರುವುದರಿಂದ ಜಾಹೀರು ಮಾಡಿದ ಎಲ್ಲಾ ಜಾತಿಗಳನ್ನು ಕೊಡುವರೆ ಅನಾನುಕೂಲವಾದರೂ, ನಮ್ಮ ಸ್ಟೋಕಿನಲ್ಲಿರುವ ಮಟ್ಟಿಗೆ ನಿಮಗೆ ಯುಕ್ತವಾದವುಗಳನ್ನೇ ಕಳುಹಿಸುತ್ತೇವೆ

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಯಿ ಮತ್ತು ಕಲ್ಕತ್ತ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ, ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ನಿರ್ವಹಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. BUNDER MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ, ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 19—5—1944 [ಸಂಚಿಕೆ 20]

ತನ್ನನ್ನು ತಾನೇ ಆರೋಗ್ಯಗೊಳಿಸಬಲ್ಲರು

ಮಹಾತ್ಮರ ಆತ್ಮಶಕ್ತಿಯ ಬಲ

ಮಹಾದೇವ ದೇಸಾಯಿಗಳ ಲೇಖನ.

ಗಾಂಧೀಜಿ ಈಗ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದಾರೆ. ಇಡೀ ರಾಷ್ಟ್ರವೇ ಅವರು ಬೇಗನೇ ಗುಣ ಹೊಂದಲಿ ಎಂದು ಪ್ರಾರ್ಥಿಸುತ್ತಿದೆ.

ಗಾಂಧೀಜಿ ಹಿಂದೆಯೂ ಇದೇ ತರದಲ್ಲಿ ವಿಷಮ ಅನಾರೋಗ್ಯ ಹೊಂದಿದ್ದರು. ಆಗಲೂ ಅವರು ತನ್ನ ಡಾಕ್ಟರರ ಸಹಾಯದಿಂದ ಯಶಸ್ವಿಯಾಗಿ ತನ್ನನ್ನು ಗುಣಹೊಳಿಸಿದ್ದಾರೆ. ರಾಜಾಜಿ ಹೇಳಿದಂತೆ ಅವರು 'ತನ್ನನ್ನು ಗುಣಗೊಳಿಸಿಕೊಳ್ಳುವುದರಲ್ಲಿ ಪ್ರವೀಣರು'

ಗುಂಪಿನ ಗಲಭೆ ಇಲ್ಲದಿದ್ದರೆ ಗಾಂಧೀಜಿಗೆ ತನ್ನನ್ನು ಗುಣಮಾಡಿಕೊಳ್ಳುವ ಅದ್ಭುತ ಶಕ್ತಿ ಇದೆಯೆಂಬ ಕುರಿತು ಗ್ರಿಕ್ಷಿಲರಲ್ಲಿ ಮಹದೇವ ದೇಸಾಯಿಯವರು ಒಂದು ಲೇಖನ ಬರೆದಿದ್ದಾರೆ. ಅದರ ವಿವರ ಕೆಳಗೆ ಕೊಡಲಾಗಿದೆ.

"ಗಾಂಧೀಜಿಯ ಆರೋಗ್ಯದಲ್ಲಿ ಅವನತಿಯುರೆಇಲ್ಲವೆಂದು ನಾ ಹೇಳುವುದಿಲ್ಲ; ಆದರೆ ವರ್ಕಿಂಗ್ ಕಮಿಟಿಯವರ ವಿಚಾರ ವಿನಿಮಯದಿಂದಾಗಿ ಅವರಿಗೆ ತುಂಬಾ ತಾಪತ್ರಯ ಆಯಿತು. ವರ್ಕಿಂಗ್ ಕಮಿಟಿಯೊಡನೆ ಮಾತನಾಡುವ ಮುನ್ನ ಅವರು ಒಂದು ತಾಸಿನ ಹೆಚ್ಚು ಹೊತ್ತು ಭೇಟಿಕೊಡುತ್ತಿರಲಿಲ್ಲ. ಹಾಗೆ ಮಾಡಿದರೆ ಅವರ ಪ್ರಕೃತಿ ಕೆಡುತ್ತದೆ. ವರ್ಕಿಂಗ್ ಕಮಿಟಿಯ ಸಭೆ ಸಹಜವಾಗಿ ದೀರ್ಘವೇ ಆಯಿತು. ಈ ಕುರಿತು ಮೆಂಬರರು ತಿಳಕೊಳ್ಳಲಿಲ್ಲವೆಂದಲ್ಲ; ಅವರಾದರೂ ಸಾಧ್ಯವಾದಷ್ಟು ಗಾಂಧಿಜಿಗೆ ತೊಂದರೆ ಕೊಡಬಾರದೆಂದೇ ಇದ್ದರು. ಅಷ್ಟೊಂದು ಪ್ರಾಮುಖ್ಯ ವಿಚಾರವಲ್ಲದಿದ್ದರೆ ಅವರು ಕೇಳ್ಗಾನಿಗೆ ಬರುವ ಪ್ರಯತ್ನವನ್ನೇ ಮಾಡುತ್ತಿರಲಿಲ್ಲ. ಈ ವಿಚಾರವಿನಿಮಯದಿಂದ ಅವರನ್ನು ತೊಂದರೆಗೊಳಿಸಬಾರದೆಂದು ಅದಷ್ಟು ಅವರು ಜಾಗ್ರತೆ ವಹಿಸಿಕೊಂಡಿದ್ದರು.

"ಹೇಗಾದರೂ ಸ್ವಲ್ಪ ಹೆಚ್ಚಿನ ಶ್ರಮ ಅದೆಷ್ಟು ಗಂಭೀರವಿರಲಿ ಸರಳವಿರಲಿ, ಸುಖದಾಯಕವಿರಲಿ, ದುಃಖದಾಯಕವಿರಲಿ ತೊಂದರೆ ಕೊಟ್ಟೇ ಕೊಡುತ್ತದೆ. ಸರ್ದಾರ ಪಟೇಲರು ಕೆಲ ಸಮಯ ಗಂಟೆಗಳ ತನಕವೂ ಹರಿಪುರದಲ್ಲಿ ಗಾಂಧೀಜಿ ಭೇಟ್ಟಿಗೆ ಬರುವ ಜನರನ್ನು ತಡೆದು ನಿಲ್ಲಿಸಲೂ ಬೇಕಾಗಿತ್ತು.

"ತನ್ನಷ್ಟೇ ಸ್ನಾನ, ತಿನ್ನುವುದು, ವಿಶ್ರಾಂತಿ ಇದೆಲ್ಲವೂ ಆಗುತ್ತಲೇ ಇತ್ತು. ಹರಿಪುರದಲ್ಲಿ ಎಷ್ಟರ ಮಟ್ಟಿಗೆ ಜನರ ಗುಂಪನ್ನು ಸಂದರ್ಶಿಸುವುದು, ಅವರೊಡನೆ ವಿಚಾರ ಮಾಡುವುದು ಸಾಧ್ಯವಾಗುತ್ತದೋ ಅದರಿಂದ ಅವರ ಬಂಗಾಲ ಮತ್ತು ಗಡಿನಾಡು ಪ್ರಯಾಣದ ಕ್ರಮ ವಿಚಾರ ನಿರ್ಣಯವಾಗುವುದು.

'ಗಾಂಧೀಜಿ ಆರೋಗ್ಯದ ಕುರಿತು ನಾನು ಸದಾ ಗಂಭೀರವಾಗುತ್ತೇನೆ. ಕಲ್ಕತ್ತಕ್ಕೆ ಅವರು ಮಾಡಿದ ಪ್ರಯಾಣದಿಂದ ಅವರಿಗೆ ತುಂಬಾ ಪರಿಶ್ರಮ ಆಯಿತು. ಎಲ್ಲಿಗಾದರೂ ಪ್ರಯಾಣ ಮಾಡುವುದೆಂದರೆ, ರಾತ್ರಿ ಹಗಲು ದರ್ಶನ ಕೊಡಲು ಅವರು ಸಿದ್ಧರಾಗಿರಲೇ ಬೇಕಾಗುತ್ತದೆ. ಕೆಲ ಮಂದಿ ನಡುರಾತ್ರಿಯಲ್ಲಿ ಬಂದು ಗಾಂಧೀಜಿಯನ್ನು ನೋಡಲು ಹಾತೊರೆದರು. ಇಷ್ಟು ವರ್ಷಗಳ ಸಾರ್ವಜನಿಕ ಕೆಲಸ ಮಾಡಿದ ಮೇಲೂ ನಮಗೆ ಶಿಸ್ತು ಕಾಪಾಡಲು ತಿಳಿವುದಿಲ್ಲವೆಂಬುದು ನನಗೆ ಬೇಸರ ಹುಟ್ಟಿಸುತ್ತದೆ. ಇದೇ ಪರಿಸ್ಥಿತಿ ನಮ್ಮ ಜನರದ್ದಾದರೆ ಗಡಿನಾಡಿನ ಪ್ರಯಾಣ ಮಾಡುವುದೂ ಅವರಿಗೆ ಸಾಧ್ಯವಾಗಲಾರದು.

"ಕಲ್ಕತ್ತದಲ್ಲಿ ತುಂಬ ಪರಿಶ್ರಮದ ಕೆಲಸಗಳಿತ್ತು. ಆದರೂ ಗಾಂಧೀಜಿ ತನ್ನ ಬುದ್ಧಿ ಬಲದಿಂದ ಅದನ್ನೆಲ್ಲಾ ಸರಿಗೊಳಿಸಿದರು. ಒಮ್ಮೆ ರಕ್ತದ ಒತ್ತಡ ಹೆಚ್ಚಾದರೂ ಕೊನೆಗೆ ಸರಿಯಾಯಿತು. ಡಾ| ಬಿಧನ್ ರೈ ಮತ್ತು ಸುನಿಲ್ ಬೋಸರು ಆರೋಗ್ಯ ಸಮವಾಗಿದೆ ಎಂದರು. ಆದರೆ ಗಾಂಧೀಜಿ ಹೇಳಿದರು. "ಹೇಗಿದ್ದರೂ ನಾನು ಎಷ್ಟು ವಿಶ್ರಾಂತಿ ತೆಗೆದುಕೊಂಡರೂ ಈಗ ಮುದಿಯಾದೆ. ಹಿಂದೆ ನಾನು ಎಷ್ಟು ಕೆಲಸ ಮಾಡಿದರೂ, ರಾತ್ರಿ ಎಷ್ಟು ಹೊತ್ತು ನಿದ್ದೆ ಮಾಡದಿದ್ದರೂ ಆಗ ತಿಳಿಯುತ್ತಿರಲಿಲ್ಲ." ಈ ದೀರ್ಘ ಅನಾರೋಗ್ಯವೂ ಅವರಿಗೊಂದು ಪಾಠವಾಯಿತು. ಆಹಾರ ಮತ್ತು ಇತರ ಕಾರ್ಯ ಕಲಾಪಗಳಲ್ಲಿ ವ್ಯತ್ಯಾಸ ಮಾಡಿ ಅವರು ತನ್ನನ್ನು ತಾವೇ ಗುಣಪಡಿಸಿಕೊಳ್ಳಲು ಕಲಿತು ಕೊಂಡರು. ಆಹಾರದಿಂದ ಹಾಲನ್ನು ವಜಾ ಮಾಡಿದ್ದು ರಕ್ತದ ಒತ್ತಡವನ್ನು ಹತೋಟಿಗೆ ತರಲು ತುಂಬಾ ಸಹಾಯವಾಯಿತು.

ನಗರದಲ್ಲಿ ಇಂದು ಇದೇ ಮಾತು! ನಾಗರಿಕರೆಲ್ಲರಿಗೂ ಇದೊಂದೇ ಉತ್ಸಾಹ!

ಕನ್ನಡ 'ವಾಣಿ' ಕೀರ್ತಿ ದುಂದುಭಿ ಮೊಳಗಿಸಿದೆ!

★ ★ ★ ಕನ್ನಡ ಚಿತ್ರಗಳಲ್ಲೆ ಇದು ಅತ್ಯುತ್ಕೃಷ್ಟವೆನಿಸಿದೆ! ★ ★ ★

ಕನ್ನಡ ನಾಡಿನ ಕಲೆ, ಇತಿಹಾಸ, ಸಂಗೀತ ಸರ್ವಸ್ವಗಳನ್ನು ಸೂರೆಗೊಂಡು, ಕನ್ನಡಿಗರೆಲ್ಲರೂ ಹೆಮ್ಮೆ ಪಡುವಂತಾಗಿದೆ!

ಎಚ್. ಆರ್. ಜಿ. ಪಿ. ಶ್ರೀ ಪಿಕ್ಚರ್ಸ್ ಮತ್ತು ಟಿ. ಎಸ್. ಶಿವಬಸವಸ್ವಾಮಿ, ಇವರ ಅತ್ಯುತ್ಕೃಷ್ಟ ಕಲಾಕೃತಿ

19-5-44ರಿಂದ 19-5-44ರಿಂದ

★ 3ನೇ ವಾರ ★ ★ 3ನೇ ವಾರ ★

ವಾಣಿ ವಾಣಿ

ಸಂಗೀತ ರತ್ನ ಟಿ. ಚೌಡಯ್ಯನವರ ಅಮರ ಸಂಗೀತ

ಹೆಸರಾಂತ ವಿನೋದ ಪಟು ಶ್ರೀ ಕೆ. ಹಿರಣ್ಣಯ್ಯನವರ ಅಪೂರ್ವ ಅಭಿನಯ

ಕೋಕಿಲ ಕಂಠ ಬಳ್ಳಾರಿ ಲಲಿತ, ವೈ. ರತ್ನ, ಪಂಡರಿಬಾಯಿ, ಟಿ. ಎನ್. ಚಂದ್ರಮ್ಮ ಮೊದಲಾದ ಹೆಸರಾಂತ ಕನ್ನಡದ ನಟನಟಿಯರು.

ಕನ್ನಡ ಚಲಚ್ಚಿತ್ರ ಪ್ರೇಮಿಗಳಿಂದ ಅತ್ಯುತ್ಕೃಷ್ಟವೆಂದು ಪ್ರಶಂಸಿತವಾದ ಕನ್ನಡ ವಾಕ್ಪಟ.

ಸೆಂಟ್ರಲ್ ಟಾಕೀಸ್‌ನಲ್ಲಿ

ಹಂಚಿಕೆಯ ಅಧಿಕಾರಿಗಳು: ಭ್ರಮರಾಂಬಾ ಪಿಕ್ಚರ್ಸ್ ಸರ್ಕ್ಯೂಟ್.

[illegible]

[illegible]

[illegible]

ಅನುವಾದಕ: ಎಂ. ವಾಸುದೇವ ಭಟ್ಟ, ಬಿ. ಎ. Hons. ಬಿ. ಟಿ.

ಯುದ್ಧದಲ್ಲಿ ನನಗೆ ಯಾವಾಗಲೂ ಆಸಕ್ತಿ. [illegible] ಸೇನಾನಿಗಳ ಯೋಜನೆಯಂತೆ ನಡೆದ [illegible] ತಿಳಿವಿಗೆ ಬಿದ್ದಿದ್ದು, ಆದರೆ ಯುದ್ಧದ [illegible] ಕೊಲ್ಲುವುದು ಗಾಯಗೊಳಿಸುವುದು ಈ ವಿಷಯ ನನಗೆ ಪ್ರಿಯವಾಗಿತ್ತು. ಯಾವ ರೀತಿಯಲ್ಲಿ ಯಾವ ಮನೋಭಾವದ ಪ್ರೇರಣೆಯಿಂದ ಒಬ್ಬ ಸೈನಿಕ ಇನ್ನೊಬ್ಬನನ್ನು ಕೊಲ್ಲುತ್ತಾನೆ ಎಂದು ತಿಳಿಯಲು ನನಗೆ ಹೆಚ್ಚು ಆಸೆ. ಆಸ್ಟರ್‌ಲಿಟ್ಜ್ ಮತ್ತು ಬೊರೊಡಿನೋಗಳಲ್ಲಿ ಸೈನ್ಯಗಳನ್ನು ಹೇಗೆ ಏರ್ಪಡಿಸಿದ್ದರು ಎಂದು ತಿಳಿಯುವುದರಲ್ಲಿ ನಾನು ಅಷ್ಟೊಂದು ಕಾತರನಾಗಿರಲಿಲ್ಲ.

ತೋಳುಗಳನ್ನು ಬೀಸುತ್ತಾ ಒಬ್ಬಂಟಿಗನಾಗಿ ಕೋಣೆಯಲ್ಲಿ ಅಡ್ಡಾಡುತ್ತಾ, ನಾನೊಬ್ಬ ಧೀರನೆಂದೂ ನೂರಾರು ಜನರನ್ನು ಕೊಂದುದಕ್ಕಾಗಿ ಸೇನಾಪತಿತ್ವವನ್ನೂ ಅವರ ಕೀರ್ತಿಯನ್ನೂ ಗಳಿಸುತ್ತೇನೆಂದೂ ಯೋಚಿಸುತ್ತ ಬಹುಕಾಲ ಕಳೆದೆ. ಈಗ ನನ್ನ ಮನಸ್ಸಿನಲ್ಲಿದ್ದುದು ಬೇರೆ ವಿಷಯ. ತನಗೆ ಯಾವ ಪ್ರಯೋಜನವೂ ಇಲ್ಲದಿದ್ದರೂ ಅಪಾಯಕ್ಕೊಳಗಾಗಬೇಕಾದರೆ, ಮತ್ತು ಅದಕ್ಕಿಂತ ವಿಶೇಷವೆಂದರೆ ಸ್ವಜಾತಿಯರನ್ನೇ ಕೊಲ್ಲಬೇಕಾದರೆ ಮನಸ್ಸಿಗಾಗುವ ಉದ್ರೇಕವೆಂತಹುದು? ಹೇಗೆ ಮಾಡುವುದು ಕೋಪೋದ್ರೇಕದಿಂದ ಎಂದು ಯೋಚಿಸಿದೆ. ಆದರೆ ಹೊಡೆದಾಡುವವರೆಲ್ಲ ಸದಾ ಕೋಪಗೊಂಡಿರುತ್ತಾರೆ ಎನ್ನಲಾಗುವುದಿಲ್ಲ. ಆದುದರಿಂದ, ಆತ್ಮರಕ್ಷಣೆ ಮತ್ತು ಕರ್ತವ್ಯ ಪರತೆ ಈ ಬಗೆಯ ವರ್ತನೆಯ ಧ್ಯೇಯವೆಂದು ನಿರ್ಧರಿಸಿದೆ.

ಎಲ್ಲ ಕಾಲಗಳಲ್ಲಿಯೂ ಎಲ್ಲ ಜನಾಂಗಗಳಿಂದಲೂ ಸದ್ಗುಣನೆಂದು ಪೂಜ್ಯತೆಯನ್ನು ಗಳಿಸಿಕೊಂಡಿರುವ 'ಧೈರ್ಯ'ವೆಂದರೇನು? ಕೆಲವೇಳೆ ಕೆಟ್ಟ ಮಂದಿಯಲ್ಲಿಯೂ ಕಾಣಬರುವ ಈ ಗುಣವನ್ನು, ಸದ್ಗುಣವೆನ್ನುವುದೇಕೆ? ಅಪಾಯ ಒದಗಿದಾಗಲೂ ಶಾಂತಚಿತ್ತದಿಂದಿರುವುದು ದೈಹಿಕ ಶಕ್ತಿಯಿಂದ ಮಾತ್ರವೆ? ದೃಢಕಾಯನಾದ ಆಜಾನುಬಾಹುವನ್ನು ಗೌರವ ಬುದ್ಧಿಯಿಂದ ಕಾಣುವಂತೆ ಈ ಗುಣವುಳ್ಳವನನ್ನು ಗೌರವಿಸುತ್ತಾರೆಯೆ? ಚಾಟಿಯ ಹೆದರಿಕೆಗೋಸ್ಕರ ಎತ್ತರವಾದ ದರೆಯಿಂದ ಹಾರಿ ನುಚ್ಚುನೂರಾಗುವ ಕುದುರೆಯನ್ನು ಧೈರ್ಯಶಾಲಿ ಎನ್ನಬಹುದೆ? ಅಥವಾ, ಹಿರಿಯರು ದಂಡಿಸುವರೆಂಬ ಭಯದಿಂದ ಕಾಡಿಗೋಡಿ ಮುಂಗಾಣದೆ ಕಂಗಾಲಾದ ಮಗುವನ್ನು ಧೀರನೆನ್ನಬಹುದೆ? ಅಥವಾ, ಮಾನಹಾನಿಯಾಗುವುದೆಂದು ತಿಳಿದು ಮಗುವನ್ನು ಕೊಂದುದಕ್ಕೋಸ್ಕರ ನ್ಯಾಯಸ್ಥಾನವನ್ನು ಎದುರಿಸುವ ಹೆಂಗಸು ಧೀರೆಯೆ? ಅಥವಾ, ತನ್ನಂತೆ ಮನುಷ್ಯನಾಗಿರುವವನನ್ನು ಅಹಂಭಾವದಿಂದ ಕೊಂದು ತಾನೇ ಅಪಾಯಕ್ಕೊಳಗಾಗುವವನು ಪರಾಕ್ರಮ ಶಾಲಿಯೆ?

ಪ್ರತಿಯೊಂದು ಅಪಾಯದಲ್ಲಿಯೂ ಒಂದು ಆಯ್ಕೆ ಇದೆ. ಉದಾತ್ತ ಧ್ಯೇಯವನ್ನಿಟ್ಟುಕೊಂಡು ಅಪಾಯವನ್ನೆದುರಿಸಿದರೆ ಅದಕ್ಕೆ ಧೈರ್ಯವೆನ್ನುತ್ತಾರೆ. ಆ ಧ್ಯೇಯ ಅಲ್ಪವಾದರೆ ಆ ಕಾರ್ಯ ಹೇಡಿತನವೆನಿಸುತ್ತದೆ. ಅಲ್ಲವೆ? ಇವು ನನ್ನನ್ನು ಬಾಧಿಸುತ್ತಿದ್ದ ಸಂದೇಹಗಳು, ನನ್ನ ಮನಸ್ಸನ್ನಾವರಿಸಿದ್ದ ಪ್ರಶ್ನೆಗಳು. ಇವುಗಳನ್ನು ಬಗೆಹರಿಸಲು, ಇವುಗಳಿಗೆ ಉತ್ತರ ಕಂಡುಹಿಡಿಯಲು ಮೊದಲ ಅವಕಾಶವನ್ನು ಕಲ್ಪಿಸಿಕೊಂಡು ಯುದ್ಧಕ್ಕೆ ಸೇರಬೇಕೆಂದಿದ್ದೆ.

೧೮೪೮ರ ಬೇಸಿಗೆಯಲ್ಲಿ ಕಾಕಸಸ್ ಪರ್ವತದಲ್ಲಿನ—ಎಂಬ ಕೋಟೆಯಲ್ಲಿದ್ದೆ ನಾನು. ಜುಲೈ ೧೨ನೆಯ ತಾರೀಕಿನ ದಿನ ಕ್ಯಾಪ್ಟನ್ ಖ್ಲೋಪಾವ್ ನನ್ನ ಮಣ್ಣುಗುಡಿಸಿಲಿನ ತಗ್ಗು ಬಾಗಿಲಲ್ಲಿ ಒಳಗೆ ಬಂದನು. ಆ ರೀತಿ ಅವನು ಖಡ್ಗ ಧರಿಸಿದ್ದುದನ್ನು ನಾನು ಕಾಕಸಸ್‌ಗೆ ಬಂದಾಗಿನಿಂದಲೂ ನೋಡಿಯೇ ಇರಲಿಲ್ಲ.

ಅವನು ಇರುವಲ್ಲಿಂದ ನೇರವಾಗಿ ಪ್ರಶ್ನಾರ್ಥಕವಾದ ನನ್ನ ದೃಷ್ಟಿಗೆ ಉತ್ತರವಾಗಿ ಬಂದ. 'ನಮ್ಮ ತಳಿಬಾಮು: ನಾಳೆ ಮುಂದುವರಿಯುತ್ತದೆ.' ಎಂದ. ಎಲ್ಲಿಗೆಂದು ಕೇಳಿದೆ. 'ಮ—ಗೆ. [illegible] ದ ಒಟ್ಟುಗೂಡಬೇಕಾಗಿದೆ,' ಎಂ[illegible]

"ಹಾಗಾದರೆ, ಯುದ್ಧಮುಖಕ್ಕೆ ಹೋಗುವ ರೆಂದು ತೋರುತ್ತದೆಯಲ್ಲವೆ?"

"ನಾನು ಹಾಗೆಯೇ ಎಣಿಸುತ್ತೇನೆ."

"ಯಾವ ದಿಕ್ಕಿಗೆ? ನಿನಗೆ ಹೇಗೆ ತೋರುತ್ತದೆ?"

"ಇದರಲ್ಲಿ ಯೋಚಿಸತಕ್ಕದ್ದೇನಿದೆ? ನಾನು ತಿಳಿದ ವಿಷಯ ಹೇಳುತ್ತಿದ್ದೇನೆ ಅಷ್ಟೆ. ನೆನ್ನೆ ರಾತ್ರಿ ಒಬ್ಬ ತಾರ್ತರ ಸವಾರ ಬಂದು, 'ಪಟಾಲಮು ಎರಡು ದಿನಗಳ ರೊಟ್ಟಿಯ ಪಡಿ ತೆಕ್ಕೊಂಡು ಮುಂದುವರಿಯಬೇಕೆಂದು ಸೇನಾಪತಿಯ ಅಪ್ಪಣೆಯಾಗಿದೆ' ಎಂದು ಹೇಳಿದ. ಆದರೆ ಎಲ್ಲಿಗೆ, ಯಾಕೆ, ಎಷ್ಟು ಕಾಲ ಎಂದು ಕೇಳಲಾಗದು ಗೆಳೆಯ. ನಾವು ಹೋಗಬೇಕೆಂದು ಅಪ್ಪಣೆಯಾಗಿದೆ. ಅಷ್ಟು ಸಾಕು"

"ಎರಡೇ ದಿನದ ರೊಟ್ಟಿಪಡಿ ತೆಕ್ಕೊಂಡು ಹೋಗುವುದೆಂದ ಮೇಲೆ ಸೈನ್ಯ ಅದಕ್ಕಿಂತ ದೀರ್ಘಕಾಲ ಹೊರಗಡೆ ಇರಲಾರದೆಂದು ಅರ್ಥವಾಯಿತು."

"ಅದರಿಂದ ಏನೂ ನಿರ್ಧರಿಸಿದಂತಾಗಲಿಲ್ಲ."

"ಅದು ಹೇಗೆ?" ಎಂದು ವಿಸ್ಮಯದಿಂದ ಕೇಳಿದೆ.

"ಅದು ಹಾಗೆಯೇ ನಾವು ಡಾರ್ಗೋ ಎಂಬಲ್ಲಿಗೆ ಒಂದು ವಾರದ ಪಡಿ ತೆಕ್ಕೊಂಡು ಹೋಗಿ ಒಂದು ತಿಂಗಳ ವರೆಗೆ ಅಲ್ಲೇ ಇದ್ದೆವು.

ಸ್ವಲ್ಪ ಹೊತ್ತು ಸುಮ್ಮನಿದ್ದು "ನಾನು ನಿಮ್ಮೊಡನೆ ಬರಬಹುದೆ?" ಎಂದು ಕೇಳಿದೆ.

"ನೀವು ಅವಶ್ಯವಾಗಿ ಬರಬಹುದು. ಆದರೆ, ನಾನು ಹೇಳುವುದು ಬರಬೇಡಿರೆಂದು. ಯಾಕೆ ಅನಾವಶ್ಯಕವಾಗಿ, ಅಪಾಯಕ್ಕೊಳಗಾಗಬೇಕು ನೀವು?"

"ನಾನು ನಿಮ್ಮ ಮಾತು ಕೇಳದಿದ್ದರೆ ಮನ್ನಿಸಬೇಕು. ಈ ಒಂದು ತಿಂಗಳಿಂದ ಇಲ್ಲಿರುವುದು ಯುದ್ಧವಾಗುವುದನ್ನು ನೋಡುವ ಉದ್ದೇಶದಿಂದಲೇ. ಈಗ ಒಂದು ಅವಕಾಶ ದೊರೆತರೆ ಅದನ್ನು ಬಿಟ್ಟುಬಿಡಬೇಕೆನ್ನುತ್ತೀರಾ!"

"ನಿಮ್ಮ ಇಷ್ಟಬಂದಂತೆಮಾಡಿ. ಆದರೆ, ನಿಜವಾಗಿ, ನೀವು ಹಿಂದೆ ಉಳಿದುಕೊಂಡರೇ ಮೇಲು. ನೀವು ಬೇಟೆಯಾಡುತ್ತಾ ಇಲ್ಲೆ ಇದ್ದು ನಮ್ಮ ಬರವನ್ನು ಎದುರು ನೋಡುತ್ತಿದ್ದರೆ ಬಲು ಚೆನ್ನಾಗಿದ್ದೀತು." ಎಂದು ಹೃತ್ಪೂರ್ವಕವಾಗಿ ಹೇಳಿದಾಗ, ನಾನು ಹಿಂದುಳಿದರೆ ಚೆನ್ನಾಗಿದ್ದೀತೇನೋ ಎನಿಸಿತು ಒಂದು ಕ್ಷಣಕಾಲ. ಆದರೂ, ಏನಾದರೂ ನಾನು ಇಲ್ಲಿ ಉಳಿಯಲಾರೆನೆಂದು ನಿಶ್ಚಿತವಾಗಿ ಹೇಳಿದೆ.

"ಅಲ್ಲಿ ನೀವು ನೋಡತಕ್ಕದ್ದೇನಿದೆ?" ಎಂದು ನನ್ನನ್ನು ಪ್ರಯಾಣ ವಿಮುಖನನ್ನಾಗಿ ಮಾಡಲು ಯತ್ನಿಸಿದನು ಕ್ಯಾಪ್ಟನ್.

"ಯುದ್ಧ ಹೇಗಿರುತ್ತದೆಂದು ತಿಳಿಯಬೇಕಾದರೆ ಮಿಖಾಯ್‌ಲೊವ್ಸ್ಕಿಯ ನೀಲೇನ್ಸ್ಕಿಯವರ 'ಯುದ್ಧ ವರ್ಣನೆ'ಯನ್ನು ಓದಿ; ಅದು ಒಳ್ಳೆಯ ಪುಸ್ತಕ, ಎಲ್ಲ ವಿವರಗಳನ್ನು ಕೊಡುತ್ತದೆ. ಸೈನ್ಯ ಪ್ರತಿಯೊಂದು ವಿಭಾಗದ ಸ್ಥಾನವನ್ನು ನಿರ್ದೇಶಿಸಿ ಹೊಡೆದಾಟ ಹೇಗೆ ನಡೆಯುತ್ತದೆಂಬುದನ್ನು ಬಣ್ಣಿಸುತ್ತದೆ."

"ಅದರಲ್ಲೆಲ್ಲ ನನಗೆ ಇಷ್ಟವಿಲ್ಲ" ಎಂದೆ ನಾನು.

"ಹಾಗಾದರೆ ಇನ್ನೇನು? ಜನರು ಮೃತ್ಯುವಿಗೆ ತುತ್ತಾಗುವುದನ್ನು ನೋಡಲು ಮಾತ್ರ ನಿಮ್ಮ ಇಚ್ಛೆಯೆ?—೧೮೩೨ರಲ್ಲಿ ಇಲ್ಲಿ ಒಬ್ಬನಿದ್ದ ನಮ್ಮ ಜೊತೆಯಲ್ಲಿ; ನಿಮ್ಮಂತೆಯೇ ನಾಗರಿಕ. ಸ್ಪೈನ್ ದೇಶದವನೆಂದು ತೋರುತ್ತದೆ. ಎರಡು ದಂಡ ಯಾತ್ರೆಗಳಲ್ಲಿ ನಮ್ಮೊಡನೆ ಇದ್ದು ಭಾಗಿಯಾಗಿದ್ದ, ಯಾವುದೋ ಒಂದು ಬಗೆಯ ನೀಲಿ ಟೋಪಿ ಧರಿಸಿಕೊಂಡಿದ್ದ, ಸರಿ, ಆ ಗೃಹಸ್ಥನಿಗೆ ಗತಿಕಾಣಿಸಿದರು. ಗೆಳೆಯ, ಇಲ್ಲಿ ನೀವು ಯಾರನ್ನು ಅಚ್ಚರಗೊಳಿಸಲಾರಿರಿ!"

ಕ್ಯಾಪ್ಟನ್ ನನ್ನ ಉದ್ದೇಶವನ್ನು ಹೀಗೆ ತಪ್ಪು ತಿಳಿದುಕೊಂಡುದು ನನಗೆ ಹೀನಾಯವಾದರೂ ಅವನನ್ನು ಹೀಯಾಳಿಸಲಿಲ್ಲ ನಾನು.

"ಅವನು ಧೈರ್ಯಶಾಲಿಯಾಗಿದ್ದನೆ?" ಎಂದು ಕೇಳಿದೆ.

"ದೇವರಿಗೇ ಗೊತ್ತು: ಯಾವಾಗಲೂ ಮುಂಭಾಗದಲ್ಲೇ ಸವಾರಿ ಮಾಡುತ್ತಿದ್ದ. ಎಲ್ಲೆಲ್ಲಿ ಗುಂಡುಹಾರುತ್ತಿತ್ತೊ ಅಲ್ಲೆಲ್ಲ ಅವನು ಯಾವಾಗಲೂ ಇರುತ್ತಿದ್ದ."

"ಹಾಗಾದರೆ ಅವನು ಧೈರ್ಯಶಾಲಿಯಾಗಿದ್ದಿರಬೇಕು" ಎಂದೆ ನಾನು.

"ಹಾಗಲ್ಲ. ಬೇಡದಿದ್ದ ಕಡೆಯಲ್ಲೆಲ್ಲ ಮುನ್ನುಗ್ಗುತ್ತಿದ್ದರೆ ಧೈರ್ಯಶಾಲಿ ಎಂದಾಗುವುದಿಲ್ಲ."

"ಎಂದರೆ ಧೈರ್ಯಶಾಲಿ ಎಂತಹವನು?"

"ಧೈರ್ಯಶಾಲಿ? . . . ಧೈರ್ಯಶಾಲಿ?" ಎಂದನು ಕ್ಯಾಪ್ಟನ್. ಈ ಬಗೆಯ ಪ್ರಶ್ನೆಯನ್ನು ಇದುವರೆಗೆ ಅವನಿಗೆ ಯಾರೂ ಕೇಳಿರಲಿಲ್ಲ. ಅವನು ಸ್ವಲ್ಪ ಹೊತ್ತು ಆಲೋಚಿಸಿ, "ಮಾಡಬೇಕಾದುದನ್ನು ಮಾಡುವವನೆ ಧೈರ್ಯಶಾಲಿ" ಎಂದು ಉತ್ತರವಿತ್ತನು.

ಯಾವುದಕ್ಕೆ ಹೆದರಬೇಕು ಯಾವುದಕ್ಕೆ ಹೆದರಬಾರದು ಎಂಬ ತಿಳಿವೇ ಶೌರ್ಯ ಎಂದು ಪ್ಲೇಟೋ ಹೇಳಿದುದು ನೆನಪಾಯಿತು. ಕ್ಯಾಪ್ಟನ್ ಹೇಳಿದ ರೀತಿ ಶಿಥಿಲವಾಗಿದ್ದರೂ ಅವರಿಬ್ಬರ ಮುಖ್ಯ ಅಭಿಪ್ರಾಯಗಳು ಅಷ್ಟೇನೂ ಬೇರೆಯಲ್ಲವೆಂದೂ ಕ್ಯಾಪ್ಟನ್‌ನ ಮಾತು ಗ್ರೀಕ್ ತಾತ್ವಿಕನ ಮಾತಿನಂತೆ ಸರಿಯೆಂದೂ ಮನಗಂಡೆ. ಪ್ಲೇಟೋವಿನಂತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಶಕ್ತಿ ಕ್ಯಾಪ್ಟನನಿಗಿದ್ದಿದ್ದರೆ, ಅವನು ಹೆಚ್ಚು ಖಂಡಿತವಾಗಿಯೂ ಹೀಗೆ ಹೇಳುತ್ತಿದ್ದನ: ಯಾರು ಹೆದರಬೇಕಾದುದಕ್ಕೆ ಹೆದರುತ್ತಾನೋ. "ದರ-ಬಾರದುದನ್ನು ಹೆದರುವುದಿಲ್ಲವೋ ಅವನೇ ಧೈರ್ಯಶಾಲಿ."

ಕ್ಯಾಪ್ಟನಿಗೆ ತನ್ನ ಅಭಿಪ್ರಾಯವನ್ನು ವಿವರಿಸಲಾಗಲಿಲ್ಲ.

[illegible] ಇಚ್ಛೆಯಿಂದ ಕೈಕೊಂಡ ಕಾರ್ಯವೇ ಧೈರ್ಯ, ಹೀನೋದ್ದೇಶಕ್ಕೋಸ್ಕರ ಮಾಡುವ ಕಾರ್ಯ ಹೇಡಿತನವೆನಿಸುತ್ತದೆ. ಆದುದರಿಂದ ಸ್ವಪ್ರತಿಷ್ಠೆಗೋಸ್ಕರ ಆತ್ಮಾಸಕ್ತಿಯಿಂದ ಮಾಡುವ ಕಾರ್ಯದಲ್ಲಿ ಅಪಾಯ ಸಂಭವಿಸಿದರೆ ಅದಕ್ಕೆ ಧೀರತನವೆನ್ನಲಾಗುವುದಿಲ್ಲ. ಹಾಗೆಯೇ ತನ್ನ ಸಂಸಾರದ ಮೇಲ್ಮೆಯ ದೃಷ್ಟಿಯಿಂದಲೋ ಮನೋ ನಿಶ್ಚಯದಿಂದಲೋ ಅಪಾಯವನ್ನು ನಿರಾಕರಿಸಿದವನನ್ನು ಹೇಡಿಯೆನಿಸಲೂ ಬಾರದು.

ನಾನು ಮಾತಾಡುತ್ತಿರುವಾಗ ಕ್ಯಾಪ್ಟನ್ ವಿಚಿತ್ರ ರೀತಿಯಲ್ಲಿ ನನ್ನನ್ನು ನೋಡುತ್ತಿದ್ದ. ಗುಡುಗುಡಿಯನ್ನು ಹುಂಬುತ್ತಾ ಹೇಳಿದ.

"ಅದನ್ನೆಲ್ಲ ನಾ ಇತ್ಯರ್ಥ ಮಾಡಲಾರೆ. ಇಲ್ಲಿ ನಮ್ಮಲ್ಲಿ ಒಬ್ಬ Cadet ಇದ್ದಾನೆ. ತತ್ವಾನ್ವೇಷಣದಲ್ಲಿ ಅವನಿಗೆ ಬಹಳ ಇಷ್ಟ. ಪದ್ಯವನ್ನೂ ಬರೆಯುತ್ತಾನೆ. ನೀವು ಅವನೊಂದಿಗೆ ಮಾತಾಡಬೇಕು.

ರಷ್ಯಾದಿಂದ ಹೊರಡುವುದಕ್ಕೆ ಮೊದಲೇ ಕ್ಯಾಪ್ಟನ್‌ನೊಡನೆ ಕೇಳಿದೆ. ಅವನ ಪರಿಚಯವಾದುದು ಕಾಕಸಸ್‌ನಲ್ಲಿಯೋ. ಅವನ ತಾಯಿ ಮೇರೀ ಐವನೋವ್ನ ಖ್ಲೋಪೋವಾ ನನ್ನ .

(೭ನೇ ಪುಟಕ್ಕೆ ಮುಂದುವರಿದಿದೆ)

ಸರಿಯಾದ ಅನುದಾನದಿರುವುದರಿಂದ ಜಾಹೀರು ಮಾಡಿದ ಎಲ್ಲಾ ಜಾತಿಗಳನ್ನು ಕೊಡುವರೆ ಅನಾನುಕೂಲವಾದರೂ, ನಮ್ಮ ಸ್ಟೋಕಿನಲ್ಲಿರುವ ಮಟ್ಟಿಗೆ ನಿಮಗೆ ಉತ್ತಮವಾದವುಗಳನ್ನೇ ಕಳುಹಿಸುತ್ತೇವೆ.

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಯಿ ಮತ್ತು ಕಲ್ಕತ್ತ

ಸಮರ ಭೂಮಿಯ ಸಂಚಾರ

ಕೋಹಿಮಾ ಗುಡ್ಡದ ಯುದ್ಧವು ಇತಿಹಾಸ ಪ್ರಸಿದ್ಧವಾದುದು. ಅದೀಗ ಕೊನೆಗೊಂಡಿದೆ. ಇಲ್ಲಿನ ಉತ್ತುಂಗ ಶಿಖರಗಳೆಲ್ಲಾ ಮಿತ್ರ ವಶವಾಗಿವೆ.

ಕಳೆದ ೬೦ ದಿನಗಳಿಂದಲೂ ಜಪಾನರು ಇಲ್ಲಿ ಭದ್ರವಾಗಿ ತಳವೂರಿದ್ದು ಭೀಕರ ಹೋರಾಡಿದರು. ಬರ್ಮಾ–ಭಾರತ ಗಡಿಯಲ್ಲಿ ಇದೇ ಮಹತ್ತಾದ ಯುದ್ಧ. ಶತ್ರು ಮಿತ್ರ ಉಭಯ ಪಂಗಡಗಳಲ್ಲಿಯೂ ತುಂಬಾ ಜನರು ಆಹತರಾದರು. ಇಂಥ ಭೀಕರ ಯುದ್ಧ ಬರ್ಮಾ ವ್ಯೂಹದಲ್ಲೆಲ್ಲಿಯೂ ಆಗಲಿಲ್ಲವೆಂಬಷ್ಟು ಇಲ್ಲಿ ಕಾಳಗ ನಡೆಯಿತು.

ನಾಗಾ ಹಳ್ಳಿ ಮತ್ತು ಟ್ರೆಜರಿ ಗುಡ್ಡಗಳಿಂದ ಜಪಾನರನ್ನು ಹಿಮ್ಮೆಟ್ಟಿಸಿದ್ದರಿಂದ ಮುಂದಿನ ಕೆಲಸ ಸುಲಭವಾಗಿದೆ ಹಳ್ಳಿಯ ಹೆಚ್ಚಿನ ಭಾಗವು ಮಿತ್ರ ವಶವಾಗಿದೆಯೆಂದು ವರದಿಯಿದೆ

– ಇಂಫಾಲಿನ ಉತ್ತರದಲ್ಲಿ ಮಿತ್ರರ ಕಾರ್ಯಕ್ರಮ ಸಾಗಿದೆ. ಬಾಲ್ಡವಿನಲ್ಲಿಯೂ ಶತ್ರು ಧಾಳಿಯನ್ನೆದುರಿಸಲಾಗಿದೆ. ಉತ್ತರ ಬರ್ಮಾದಲ್ಲಿ ಮಿತ್ರ ವಿಮಾನಗಳು ಧಾಳಿಯಿಟ್ಟವು ವಾರೋಂಗದಲ್ಲಿ ಚೀನೀಬಲ ಹೋರಾಡುತ್ತಿದೆ ಮೂಲಕ್ವಾಂಗ ಪ್ರದೇಶದಲ್ಲಿ ಭೀಕರ ಕಾಳಗ ನಡೆವುದು ವಾಜಾದ ನೈರುತ್ಯದಲ್ಲಿ ಜಪಾನರ ವಿರುದ್ಧ ಹೋರಾಡಲಾಗಿದೆ ಇಂಡಾವ್ರೋ ರೈಲ್ವೆ ಸ್ಟೇಶನ್ ಮತ್ತು ಟಿಡ್ಡಿಂ ರಸ್ತೆ ಚಿಂದ್ವಿನ್ ತಪ್ಪಲು, ಕೋಹಿಮಾ, ಸಲೀಲ್ ಮತ್ತು ಬುಥೆಡಾಂಗ್‌ಗಳ ಮೇಲೆ ಧಾಳಿಯಾಗಿದೆ

ಹೊನಾನಿನಲ್ಲಿರುವ ಲೋಯಾಂಗ್ ನಗರದ ಮೇಲೆ ನಡೆಸುತ್ತಿರುವ ಜಪಾನೀ ಸೇನೆಗಳು ದುರ್ಗಮವಾದ ಗೋಡೆಗಳನ್ನು ಮುರಿದಿವೆ. ಆದರ ಈ ನಗರವು ಮಾತ್ರ ಚೀನಿಯರ ಕೈಯಲ್ಲಿದೆ ನಗರದ ಹೊರವಲಯದಲ್ಲಿ ಹಸ್ತಾಹಸ್ತಿ ಕಾಳಗ ನಡೆಯುತ್ತಿರುವುದು. ಲುಂಗಾಯಿ ರೈಲ್ವೆಯಲ್ಲಿ ಮಿಮುನ್ ವ್ಯೂಹವನ್ನು ಚೀನೀ ಸೇನೆಗಳು ವಶಮಾಡಿಕೊಂಡಿವೆ.

ಮೋಗಾಂಗ್ ನದೀ ಉತ್ತರದಲ್ಲಿ ಬಾರ್ಥೋಂಗಯಾಂಗವನ್ನು ವಶಮಾಡಿಕೊಂಡು ಮುನ್ನುಗ್ಗಿ ಮೊನಸಿನದಲ್ಲಿ ಶತ್ರುವನ್ನು ಸಂಧಿಸಿವೆ ಅಲ್ಲದೆ ದಕ್ಷಿಣದಲ್ಲಿ ವಾರೋಂಗದ ಸಮೀಪ ಬಂದಿವೆ.

ಕೋಹಿಮಾ ಯುದ್ಧವು ಭದ್ರವಾಗಿ ಸಿದ್ಧಗೊಳಿಸಿದ ಕಂದಕಗಳಲ್ಲಿ ಅಡಗಿರುವ ಜಪಾನರನ್ನು ಹೊರಗಟ್ಟುವ ಸಲುವಾಗಿಯೇ ನಡೆದಂತಿದೆ

ಜರ್ಮನ್ ಸೈನಿಕರು ಕೇಸಿನೋ ನಗರದ ದಕ್ಷಿಣದಲ್ಲಿರುವ ಅನೇಕ ದಿನ್ನೆಗಳನ್ನು ಖಾಲಿಮಾಡಿರುವರೆಂದು ಸುದ್ದಿ ಸಾರಲಾಗಿದೆ ಬಹಳ ಭೀಕರ ಹೋರಾಟವಾದ ಮೇಲೆ ಜರ್ಮನರು ಈ ಗುಡ್ಡವನ್ನು ಬಿಟ್ಟುಕೊಟ್ಟರೆಂದು ಹೇಳಲಾಗಿದೆ

ಕೇಸಿನೋ ಪಿಗ್ನಾಟರೋ ರಸ್ತೆಯನ್ನು ಕತ್ತರಿಸಿದ ಬ್ರಿಟಿಷ್ ಎಂಟನೇ ಸೈನ್ಯದವರು ಕೇಸಿನೋ ನಗರದ ಹಿಂಬದಿಯಲ್ಲಿರುವ ರಸ್ತೆಗೆ ಬಹಳ ಸಮೀಪವಾಗಿರುವರು ಇನ್ನೊಂದು ಮೈಲು ನುಗ್ಗಿದರೆ ಆ ರಸ್ತೆಯು ಕತ್ತರಿಸಲ್ಪಡುವುದರಲ್ಲಿ ಯಾವ ಸಂಶಯವೂ ಇಲ್ಲ ಮಿತ್ರರ ಧಾಳಿಯನ್ನು ತಡೆಯಲು ಜರ್ಮನರು ಫಿರಂಗಿಗಳನ್ನುಪಯೋಗಿಸುತ್ತಿರುವರು ಲೀರಿ ಕಣಿವೆಯನ್ನು ಪ್ರವೇಶಿಸಿರುವ ಮಿತ್ರ ಸೇನೆಗಳು ಟ್ಯಾಂಕುಗಳ ಸಹಾಯದೊಂದಿಗೆ ಮುಂದೆ ಮುಂದೆ ನುಗ್ಗುತ್ತಿದ್ದಾರೆ. ಫ್ರೆಂಚ್ ಸೈನಿಕರು ತೆರೆಲ್ಲೆ ಎಂಬ ಸ್ಥಳವನ್ನು ಸುತ್ತುಗಟ್ಟಿದ್ದಾರೆ

ಅಮೆರಿಕನ್ ವಿಮಾನಗಳು ಪೆಸಿಫಿಕಿನ ಪೊನೆಪ್ ಮತ್ತು ಕುರೈಲ್ ದ್ವೀಪಗಳ ಮೇಲೆ ಧಾಳಿಯಿಟ್ಟಿವೆ ದಕ್ಷಿಣ ಬ್ರಿಟಿಸಿನ ಮೇಲೆ ಹಾಗೂ ಬ್ರಿಟನಿನ ವಾಯುವ್ಯದಲ್ಲಿ ಜರ್ಮನ್ ವಿಮಾನಗಳ ಚಟುವಟಿಕೆ ಜೋರಾಗಿತ್ತು ಅಲ್ಲಿ ಜರ್ಮನರು ಹಲವು ಬಾಂಬುಗಳನ್ನು ಚೆಲ್ಲಿದರು ಹಲವರು ಹಾನಿಗೊಳಗಾದರು ಸಾವು ನೋವುಗಳೂ ಆಗಿವೆ

ರಶ್ಯನ್ ವ್ಯೂಹದಲ್ಲಿ ವಿಶೇಷ ಬದಲಾವಣೆಗಳೇನೂ ಆಗಿಲ್ಲ ಮೇ ೧೪ರಿಂದ ೧೫ರ ವರೆಗೆ ರಶ್ಯನರ ದೂರಗಾಮಿಯ ವಿಮಾನಗಳು ರಾವಾ ರಸ್ಕಾಯ ಸ್ಟೇಜ್ ಹಾಗೂ ಸಮೀಪದ ರೈಲ್ವೆ ಕೇಂದ್ರಗಳ ಮೇಲೆ ಒಂದೇ ಸವನೆ ಫಿರಂಗಿ ಹಾರಿಸಿದವು. ರಾವಾರಸ್ಕಾಯದಲ್ಲಿ ಎಂಟು ಸಲ ಬೆಂಕಿಯೆದ್ದಿತು. ಈ ಸ್ಟೇಶನಿಗೆ ಹಾಗೂ ಇದರ ಸಮೀಪದ ಸ್ಟೇಶನಿಗೆ ಬರುತ್ತಿದ್ದ ಗಾಡಿಗಳು ಪುಡಿ ಪುಡಿಯಾಗಿವೆ. ಮೇ ೧೩ ಮತ್ತು ೨೪ಕ್ಕೆ ಉತ್ತರ ನಾರ್ವೆಯ ಕರ್ಕೆನಿಸ್ ಬಂದರದಲ್ಲಿ ಶತ್ರು ಹಡಗುಗಳು ಕಣ್ಣಿಗೆ ಬೀಳಲು ಸೋವಿಯೆಟ್ ವಿಮಾನಗಳು ಅವುಗಳನ್ನು ಬೆನ್ನಟ್ಟಿದವು

ಫೀಲ್ಡ್ ಮಾರ್ಶಲ್ ಕಾರ್ಲ್ ವಾನ ರುಂಡ ಸ್ಟಡನನ್ನು ದ್ವಿತೀಯ ರಂಗ ವಿರೋಧಕ ದಲಗಳ ಮುಖ್ಯ ಸೇನಾಪತಿಯಾಗಿ ಹಿಟ್ಲರನು ನೇಮಿಸಿರುವನೆಂದು ವದಂತಿ ಫೀಲ್ಡ್ ಮಾರ್ಶಲ್ ರೊಮೆಲ್ ಮತ್ತು ಬಾಸ್ಕೊವಿಯರು ಕಾಲ್ದಳಗಳ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ ಫೀಲ್ಡ್ ಮಾರ್ಶಲ್ ಹ್ಯುಗೋ ಸ್ಪೆರ್ಲನು ವೈಮಾನಿಕ ಅಧಿಕಾರಿಯ ಉದ್ಯೋಗಕ್ಕೇರಿರುವನು ಇದಲ್ಲದೆ ದ್ವಿತೀಯ ರಂಗವನ್ನಿದಿರಿಸುವ ಹೊಣೆ ಹೊತ್ತವರಲ್ಲಿ ಎಡ್ಮಿರಲ್ ರಾಂಕೆ ಮತ್ತು ಪ್ಯಾಂಝರ್ ತಜ್ಞ ಜನರಲ್ ಶ್ವೇಸನ ಬೂರ್ಗರವರ ಹೆಸರುಗಳೂ ಇವೆ

ಈ ನೇಮಕಗಳನ್ನು ಪರಿಶೀಲಿಸಿದರೆ ನಾಝಿ ಸೇನಾನಾಯಕರಿಂದಲೂ ಯುದ್ಧವೇ ಉದ್ಯೋಗವಾಗಿರುವ ಸೇನಾಧಿಕಾರಿಗಳ ಮೇಲೆ ಹಿಟ್ಲರನಿಗೆ ಹೆಚ್ಚಿನ ಶ್ರದ್ಧೆಯಿರುವುದಾಗಿ ಕೆಲವರು ಊಹಿಸುತ್ತಾರೆ ವೈಯುಕ್ತಿಕ ಸ್ನೇಹಕ್ಕಿಂತಲೂ ಯೋಗ್ಯತೆಗೆ ಪ್ರಾಶಸ್ತ್ಯವಿತ್ತು ಹಿಟ್ಲರನು ಸೇನಾಪತಿಗಳನ್ನು ಆರಿಸುತ್ತಿರುವನು. ಇದನ್ನು ನೋಡಿದರೆ ದಂಡಯಾತ್ರೆ ನಿಶ್ಚಯವೆಂದು ಆತನು ತಿಳಿದಿರಬೇಕು ಸೈನಿಕ ನಾಜಿಗಳನ್ನು ಬರ್ಲಿನಿನಿಂದ ಓಡಿಸುವೆನೆಂದು ಅಧ್ಯಕ್ಷ ಹಿಂಡನ್ ಬರ್ಗನಿಗೆ ರುಂಟ್ ಡಸ್ಟಡ್ಟನನು ಹೇಳಿದಂದಿನಿಂದ ಹಿಟ್ಲರನಿಗೆ ಸಮಾಧಾನವಿದ್ದಿಲ್ಲ ರಶ್ಯ ರಂಗದಲ್ಲಿ ಆತ ಆಫ್ರಿಕದಲ್ಲಿ ರೊಮೆಲ್ ಹೋರಾಡಿ ಇಬ್ಬರೂ ಕೀರ್ತಿಗಳಿಸಿಕೊಂಡರು ರೊಮೆಲನ ಯೋಗ್ಯತೆ ವಿಚಾರ ಬಹಳ ಪ್ರಚಾರ ಆಗಿದ್ದರೂ ಆತನು ಇನ್ನೂ ರುಂಡಸ್ಟಡ್ಟನ ಕೈ ಕೆಳಗಿರುವನೆಂಬುದನ್ನು ಮರೆಯಬಾರದು.

ಚೊಕ್ಕಾಡಿ
ಬಿರುಗಾಳಿ ಅನಾಹುತ

ಕಳೆದ ಗುರುವಾರ ಚೊಕ್ಕಾಡಿ ಪ್ರಾಂತದಲ್ಲಿ ಭಯಂಕರ ಬಿರುಗಾಳಿ ಅನಾಹುತ ವುಂಟಾಗಿ ಎಷ್ಟೋ ಮನೆ, ತೋಟಗಳು ಹಾನಿಗೊಂಡುದಲ್ಲದೆ, ಒಂದೆರಡು ಪ್ರಾಣಹಾನಿಯೂ ಆಗಿರುವುದಾಗಿ ತಿಳಿದು ಬಂದಿದೆ. ಈ ಪ್ರಾಂತದ ರೈತರಿಗೆ ಇದರಿಂದಾಗಿ ತುಂಬಾ ನಷ್ಟಗಳು ಉಂಟಾದುವು.

ಶ್ರೀ ಕಾಶೀಮಠ ಸಂಸ್ಥಾನದ

ಶ್ರೀಮತ್ ಸುಕೃತೀಂದ್ರತೀರ್ಥ ಶ್ರೀಪಾದಂಗಳವರು ಕೊಚ್ಚಿ ಸಂಸ್ಥಾನದ ಎರ್ನಾಕುಳಂ ಪ್ರಾಂತ್ಯದ ಆರ್ ಸದಾಶಿವ ಎಂಬ ಬ್ರಹ್ಮಚಾರಿಗೆ ಶಿಷ್ಯಾಶ್ರಮಪ್ರದಾನ ಸಮಾರಂಭವನ್ನು ಜರಗಿಸಲು ಸಂಕಲ್ಪಿಸಿದ್ದಾರೆ ಈ ಸಮಾರಂಭವು ತಾ ೨೪–೫'೪೪ರಂದು ದಿವಾಘಟಿ ೧೧ (ಹೊಸ ಸ್ಟೇಂ ಘಂಟೆ ೧೧–೩೦)ಕ್ಕೆ ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ನೆರವೇರಲಿರುವುದು.

ರಜಕ ಬಂಧುಗಳಲ್ಲಿ ಮುಂಬಾಯಿ ಶ್ರೀ ರಜಕ ಸಂಘದ ವಿನಂತಿ

ಪ್ರಿಯ ಸ್ವಜಾತಿ ಬಂಧುಗಳೇ, ನಮ್ಮ ಬಡ ಜಾತಿಯು ವಿದ್ಯೆಯಲ್ಲಿ ಹಿಂದುಳಿದಿರುವುದೆಂದು ಎಲ್ಲರೂ ಅರಿತ ವಿಷಯವಾಗಿದೆ ಇತರ ಜಾತಿಗಳೊಂದಿಗೆ ಸಮ ಅವಿದ್ಯೆಯ ಕಾರಣದಿಂದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯನ್ನು ಹೊಂದಲು ನಮಗ ಅಸಾಧ್ಯವಾಗಿರುವುದು ನಮ್ಮಲ್ಲಿ ಬಲವಾಗಿ ಬೇರೂರಿರುವ ಈ ಅವಿದ್ಯೆಯನ್ನು ಸಂಪೂರ್ಣ ಹೋಗಲಾಡಿಸುವುದು ನಮ್ಮ ಮೊದಲ ಕರ್ತವ್ಯವಾಗಿದೆ ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಬ್ಬ ಅಗಸ ವ್ಯಕ್ತಿಯೂ ತಮ್ಮ ಬಾಲಕ ಬಾಲಕಿಯರನ್ನೆಲ್ಲಾ ಹತ್ತಿರದ ಶಾಲೆಗಳಿಗೆ ಕಳುಹಿಸಿ ಕೈಲಾದಷ್ಟು ವಿದ್ಯೆಯನ್ನು ಕೊಡುವಂತೆ ಪ್ರಯತ್ನಿಸಬೇಕೆಂದು ನಾವು ಬಹಳವಾಗಿ ಅಪೇಕ್ಷಿಸುತ್ತೇವೆ.

'ಬಡಬಂಧುಗಳಿಗೆ ತಮ್ಮ ಮಕ್ಕಳನ್ನು ಶಾಲೆಗೆ ಹಾಕಲು ಮತ್ತು ಹೆಚ್ಚಿಗೆ ಕಲಿಸಲು ಆರ್ಥಿಕ ಕಷ್ಟದಿಂದ ಅಸಾಧ್ಯವಾದರೆ ದಯಮಾಡಿ ನಮ್ಮ ಸಂಘದ ಈ ಕೆಳಗಿನ ವಿಳಾಸಕ್ಕೆ ವಿದ್ಯಾರ್ಥಿ ವೇತನಕ್ಕೆ ಮತ್ತು ಪುಸ್ತಕ ವಗೈರೆಗೆ ತಕ್ಕ ಧನಸಹಾಯವನ್ನು ಕೋರಿ, ಬರುವ ತಿಂಗಳಲ್ಲಿ ತಾ ೨೦–೬–೧೯೪೪ರ ಒಳಗೆ ಬರೆದುಕೊಳ್ಳಬೇಕಾಗಿ ಈ ಮೂಲಕ ವಿನಂತಿ ಅಂತಹ ಕೋರಿಕೆ ಪತ್ರಗಳನ್ನು ಪರಿಶೀಲಿಸಿ ಕೈಲಾದಷ್ಟು ಧನಸಹಾಯವನ್ನೀಯುವರೆ ಸಂಘವು ತುಂಬಾ ಸಂತೋಷಪಡುತ್ತದೆ" ಎಂದು ಮೊಡಬಿದ್ರಿ ಡಿ. ಈಶ್ವರ, ಗೌ. ಕಾರ್ಯದರ್ಶಿ, ೧೬೯ ಭೋರ್ ಬಜಾರ್ ಸ್ಟ್ರೀಟ್, ೪ನೇ ಮಾಳಿಗೆ, ಕೋಟೆ, ಮುಂಬಾಯಿ ಇವರು ತಿಳಿಸುತ್ತಾರೆ.

THE CANARA BANKING CORPORATION LTD.

(Incorporated in British India with Limited Liability)

Estd) **Head Office: UDIPI S. Kanara.** **(1906.**

Statement of affairs as on 31st December, 1943.

LIABILITIES	Rs As Ps	ASSETS	Rs As Ps
1 Paid up Capital	12 95 970- 0- 0	1 Cash on hand & with bankers	18 26 986- 3- 8
2. Reserves	3,83 379- 1 6	2 Investments on (1) Govt Securities (2) Immovable properties etc	26 04 671- 6- 8
3 Deposits	61 66 927- 6- 0	3 Loans on Jewels & other valuable securities	23 72 302- 8- 7
4 Bills for collection	5 53 548- 6- 1	4 Loans on personal securities & Bills purchased	16 74 482-14- 8
5 Sundries including revenue items	7 00 981- 0- 5	5 Bills for collection as per contra	5 53 548- 6- 1
6 Profits for the year ending 31-12-1943	1,08 522- 4- 0	6 Office premises furniture etc	93 251- 0- 0
		7 Sundries including revenue items	84 085-10- 4
Total	92,09,328- 2- 0	Total	92,09,328- 2- 0

ಸ್ವದೇಶಾಭಿಮಾನಿ

ತಾರೀಕು 19—5—1944

ಮುಂದಿನ ಮಾರ್ಗ?

ಮಹಾತ್ಮಾ ಗಾಂಧಿಯವರನ್ನು ಸರಕಾರ ಬಿಡುಗಡೆ ಮಾಡಿತು; ಬಿಡುಗಡೆಗೊಂಡ ಮಹಾತ್ಮರಿಂದು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ; ಗುಣಮುಖರಾಗದೆ ಅವರು ದೇಶದ ರಾಜಕೀಯ ವಿಚಾರ ಮಾಡುವಂತಿಲ್ಲ; ಹಾಗೆ ಮಾಡುವುದು ಯೋಗ್ಯವೂ ಅಲ್ಲ. ಆದರೂ, ಗಾಂಧೀಜಿ ಬಿಡುಗಡೆಯಾಗಿದೆ, ಸರಕಾರ ಅವರನ್ನು ಬಿಟ್ಟಿದೆ, ಹೀಗಿರಲು ಭಾರತದ ಬಿಕ್ಕಟ್ಟು ಸ್ವಲ್ಪ ಸಡಿಲಾದಂತೆ ಕಂಡುಬರುವುದು. ಇಂಥಾ ಸಂದರ್ಭದಲ್ಲಿ ಪ್ರತಿಯೊಬ್ಬನ ತಲೆಯಲ್ಲಿಯೂ ಸುಳಿಯುವ ಒಂದೇ ವಿಚಾರವೆಂದರೆ, ಮುಂದಿನ ಮಾರ್ಗವೇನು? ಎಂಬುದು.

ಗಾಂಧೀಜಿಯನ್ನು ಯಾವ ಅನಾರೋಗ್ಯ ಕಾರಣದಿಂದ ಇಂದು ಸರಕಾರ ಬಿಡುಗಡೆ ಮಾಡಿತೋ, ಅದೇ ಕಾರಣದಿಂದ, ನೆಹರು, ಅಬ್ದುಲ್ ಗಫರ್ ಖಾನರನ್ನೂ ಬಿಡುಗಡೆ ಮಾಡಬೇಕೆಂದು ದೇಶದಾದ್ಯಂತ ಇಂದು ಆಂದೋಲನವಿದೆ; ಅಮೆರಿಯವರೊಡನೆ ಪಾರ್ಲಿಮೆಂಟಿನಲ್ಲಿಯೂ ಈ ಪ್ರಶ್ನೆ ಕೇಳಲಾಗಿದೆ. ಇನ್ನಷ್ಟು ದೀರ್ಘ ವೆಳೆದರೆ, ಯಾವ್ರೊಂದು ಕಾರಣದಿಂದ ಗಾಂಧೀಜಿ ಬಿಡುಗಡೆಯಾಗಿದೆಯೋ, ಆ ಕಾರಣವುಳ್ಳ, ನೆಹರು, ಅಬ್ದುಲ್ ಗಫರ್ ಖಾನ್ ಮಾತ್ರವಲ್ಲ ಸೆರೆಮನೆಯೊಳಗಿರುವ ದೇಶದ ಹಲವು ಮಂದಿ ಅಜ್ಞಾತ ಮುಂದಾಳುಗಳನ್ನೆಲ್ಲಾ ಸರಕಾರ ಬಿಡುಗಡೆಮಾಡುವುದು ನ್ಯಾಯವಾಗಿದೆ.

ಸರಕಾರ ೧೯೪೩ರಲ್ಲಿ ಗಾಂಧೀಜಿ ಮಹೋಗ್ರ ಉಪವಾಸ ಕೈಕೊಂಡಾಗಲೂ ಅವರ ಬಿಡುಗಡೆ ಮಾಡಿರಲಿಲ್ಲ. ಆ ಸಂದರ್ಭದಲ್ಲಿಯಾದರೂ ಗಾಂಧೀಜಿ ಜೀವದ ಬಗ್ಗೆ ಇಂದಿನಷ್ಟೇ ಕಳವಳವುಂಟಾಗಿತ್ತೆಂಬುದು ಖಂಡಿತ. ಆದರೆ ಈ ಸಲ ಸರಕಾರ ಬಿಟ್ಟಿರುವುದರಿಂದ ಪರಿಸ್ಥಿತಿಯಲ್ಲಿ ತುಸು ಬದಲಾವಣೆ ಕಂಡಿದೆ. ಸರಕಾರ [illegible] ಧೋರಣೆಯನ್ನು [illegible] ನೆಹರು, ಅಬ್ದುಲ್ ಗಫರ್ ಖಾನರ ವಿಷಯ ಹಾಗೂ ದೇಶದ ಹಲವು ಮಂದಿ ಅಜ್ಞಾತ ಮುಂದಾಳುಗಳ ವಿಷಯಯಾಕೆ ಬದಲಾಯಿಸಬಾರದು? ನೆಹರು ಮೊದಲಾಗಿ ಅವರೆಲ್ಲಾ ಇನ್ನೂ ಏಕೆ ಸೆರೆಮನೆಯಲ್ಲಿಯೇ ಇರಬೇಕು? ಇಡೀ ದೇಶವೇ ಇಂದು ಸರಕಾರದ ಮುಂದಿನ ಮಾರ್ಗವೇನೆಂದು ತೆರೆದ ಕಣ್ಣಿನಿಂದ ನಿರೀಕ್ಷಿಸುತ್ತಿದೆ.

ಶತ್ರುವಿಂದು ಬಾಗಿಲ ಬಳಿ ಬಂದಿದ್ದಾನೆ ಮಾತ್ರವಲ್ಲ ಮುಂದೊತ್ತಿದ್ದಾನೆ. ಶತ್ರುವನ್ನು ಪ್ರತಿಭಟಿಸಬೇಕಾದರೆ ದೇಶಕ್ಕೆ ದೇಶವೇ ಸಂಘಟಿಸಲ್ಪಡಬೇಕು. ಕಾಂಗ್ರೆಸ್ಸು ಮುಖಂಡರು ಕಡು ಫೇಸಿಸ್ಟ್ ವಿರೋಧಿಗಳೆಂದು ಸರ್ವರಿಗೂ ವಿದಿತವಿದೆ; ಕಾಂಗ್ರೆಸ್ಸು ಮುಖಂಡರು ತಮ್ಮ ಹಲವು ನಿರ್ಣಯಗಳಿಂದ, ಹಲವು ಲೇಖನ ಭಾಷಣಗಳಿಂದ ತಮ್ಮ ಫೇಸಿಸ್ಟ್ ವಿರೋಧವನ್ನು ಸಾರಿದ್ದಾರೆ; ಅವರು ಮಾತ್ರವೇ ಇಡೀ ದೇಶವನ್ನು ಕಾರ್ಯೋನ್ಮುಕ್ತಮಾಡಬಲ್ಲರು. ಹಾಗಾಗಿ ಸರಕಾರವಿಂದು ಗಾಂಧೀಜಿಯನ್ನು ಬಿಡುಗಡೆ ಮಾಡಿದಂತೆ ಎಲ್ಲಾ ಕಾಂಗ್ರೆಸ್ ಮುಂದಾಳುಗಳನ್ನೂ ಬಂಧವಿಮುಕ್ತಗೊಳಿಸಬೇಕು. ಫೇಸಿಸ್ಟ್ ವಿರೋಧ ಶಕ್ತಿಯನ್ನು ಪ್ರತಿಭಟಿಸಲು ಬೇಕಾದ ಸಿದ್ಧತೆ ಮಾಡಬೇಕು? ಸರಕಾರ ಈ ಧೋರಣ ಕೈಕೊಳ್ಳುವುದೆ?

ಕಾಂಗ್ರೆಸ್ ಮುಖಂಡರನ್ನೆಲ್ಲಾ ಬಿಡುಗಡೆಮಾಡಿದರೆ ಅವರಿಗೆಲ್ಲಾ ಒಟ್ಟುಗೂಡಿ ವಿಚಾರವಿನಿಮಯ ಮಾಡಲು ಆಸ್ಪದವಾಗುತ್ತದೆ. ಅಖಿಲಭಾರತ ಕಾಂಗ್ರೆಸ್ ಸಮಿತಿಸಭೆ ಸೇರಿಸಿ ಪರಿಸ್ಥಿತಿಯನ್ನು ಪುನರಾಲೋಚಿಸಿಬೇಕಾದ ನಿರ್ಣಯ ಮಾಡಲು ಸಾಧ್ಯವಾಗುತ್ತದೆ. ೧೯೪೨ರಂದು ಪರಿಸ್ಥಿತಿ ಹೇಗಿತ್ತೋ, ಇಂದು ಪರಿಸ್ಥಿತಿ ಎಲ್ಲಾ ವಿಧದಿಂದಲೂ ಅಂತೆ ಇಲ್ಲ. ಹಲವು ಬದಲಾವಣೆಗಳಾಗಿವೆ; ಬದಲಾವಣೆಯಾದ ಲೋಕಪರಿಸ್ಥಿತಿಗನುಸರಿಸಿ ಕಾಂಗ್ರೆಸ್ ಮುಖಂಡರೂ ಹೊಸ ನಿರ್ಣಯ ಮಾಡಬಹುದು. ಸರಕಾರ ಇದಕ್ಕೆ ಆಸ್ಪದ ಕಲ್ಪಿಸಿಕೊಡುವುದೆ? ಮುಂದಿನ ಮಾರ್ಗ ಸುಗಮವಾಗುವಂತೆ ಮಾಡಲು ಸರಕಾರ ಈ ತೆರನಲ್ಲಿ ಮುಂದೆ ಬರುವುದೆ?

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ತಲ್ ಬಾರ್ ಸೋಪನ್ನೇ ಉಪಯೋಗಿಸಿರಿ.

HERE'S AN ECONOMICAL BAR SOAP.. ಕಡಿಮೆ ಕ್ರಯದ ಒಂದು ಬಾರ್ ಸೋಪ್ ಇಲ್ಲಿದೆ — ಉತ್ತಮವೂ ಬಾಳಿಕೆಯುಳ್ಳದೂ ಆಗಿದೆ. ಬೇಗನೇ ನೊರೆ ಹೊರಡುತ್ತದೆ; ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ.

PISTOL BRAND BAR SOAP

WANTED AGENTS IN S. KANARA DT.

Mangalore Stockists:—M/S D. Narsimha Pai & Sons, Mangalore.

Universal Industries (India) Ltd.

Nable chambers, Fort Bombay.

ಸುರೇಶ ವೈದ್ಯರು ಅನ್ನಸತ್ಯಾಗ್ರಹ ಕೈಕೊಳ್ಳುವರೆ?

ಟ್ರಿಬ್ಯೂನಲಿನ ನಿರ್ಣಯಕ್ಕೆ ವಿರೋಧ!

ಸುರೇಶ ವೈದ್ಯರು ಅನ್ನತ್ಯಾಗ ಕೈಕೊಳ್ಳುವ ಸಂಭವವಿದೆಯೆಂದು ತಿಳಿದು ಬರುತ್ತದೆ. ಮೂರು ದಿನಗಳ ಹಿಂದೆ ಟ್ರಿಬ್ಯೂನಲಿನಲ್ಲಿ ಇವರ ಅಪೀಲಿನ ವಿಚಾರಣೆ ನಡೆದು ಅವರನ್ನು ಸೈನ್ಯದಿಂದ ಮುಕ್ತ ಮಾಡಬೇಕೆಂದು ಸೂಚಿಸಿದರೂ ಅವರು ಇನ್ನೂ ಬಿಡಲ್ಪಟ್ಟಿಲ್ಲ. ಅವರು ಮಿಲಿಟರಿ ಕಾವಲಿನಲ್ಲಿ ಅವರ ದಲಕ್ಕೆ ಕರೆದೊಯ್ಯಲ್ಪಟ್ಟಿದ್ದಾರೆ, ಅವಶ್ಯಕ ಕ್ರಮಗಳೆಲ್ಲ ಮುಗಿದ ಮೇಲೆ ಅವರನ್ನು ಬಿಡುವರೆಂದು ತಿಳಿಯುತ್ತದೆ.

ಟ್ರಿಬ್ಯೂನಲಿನವರ ಶಿಫಾರಾಸಾದರೂ ತಂತ್ರಗಳಿಂದ ಕೂಡಿರುವದರಿಂದ ಅದರ ವಿರುದ್ಧವೂ ಅವರು ಹೋರಾಡಲು ನಿರ್ಧರಿಸಿದ್ದಾರೆಂದು ತಿಳಿದು ಬರುವದು. ಸ್ವೀಡಿಶ್, ರಸಿಯನ್ ಅಥವಾ ಸ್ವಿಸ್ ನಾಗರಿಕರಂತೆ ತಾವೂ ಸ್ವತಂತ್ರ ನಾಗರಿಕರಿದ್ದು ಸ್ವತಂತ್ರ ಹಿಂದುಸ್ಥಾನ ಸರಕಾರವೊಂದೇ ತಮ್ಮ ಮೇಲೆ ಕೆಲಸ ಮಾಡಲು ಒತ್ತಾಯ ಮಾಡಬಹುದೆಂದೂ ಬ್ರಿಟಿಶ್ ಕೂಲಿಕಾರ ಮಂತ್ರಿಗೆ ಆ ಅಧಿಕಾರ ಉಂಟಾಗಲಾರದೆಂದೂ ಅವರ ಅಭಿಪ್ರಾಯವಿದೆ.

ಅವರ ಮಿತ್ರರಲ್ಲಿ ವಿಚಾರ ಮಾಡಲಾಗಿ ವೈದ್ಯರು ಅನ್ನತ್ಯಾಗ ಕೈಕೊಳ್ಳುವ ಸಂಭವವಿದೆಯೆಂದು ತಿಳಿದು ಬಂದಿರುವದು ಆದರೂ ಈ ತರದ ಉಗ್ರೋಪಾಯ ಕೈಕೊಳ್ಳದಿರಲು ಮಿತ್ರರು ಅವರ ಮನವೊಲಿಸಿದ್ದಾರೆ.

ಒತ್ತಾಯ ಸೈನ್ಯ ಸಂಗ್ರಹದ ಕಾಯಿದೆಯನ್ವಯ ಸೈನ್ಯಕ್ಕೆ ಸೇರಲು ನಿರಾಕರಿಸಿದರೆಂದು ಮೂರು ತಿಂಗಳ ಶಿಕ್ಷೆ ವಿಧಿಸಲ್ಪಟ್ಟ ಶ್ರೀ ಸುರೇಶ ವೈದ್ಯರ ಅಪೀಲು ವಿಚಾರಣೆಯು ತಾ. ೧೨ರಂದು ಟ್ರಿಬ್ಯೂನಲಿನ ಮುಂದೆ ನಡೆದು ಶ್ರೀ ವೈದ್ಯರನ್ನು ಸೈನ್ಯ ಸಂಗ್ರಹದಿಂದ ಬಾಹಿರ ಪಡಿಸಲು ಶಿಫಾರಸು ಮಾಡಬೇಕೆಂದು ಮತ್ತು ಅವರು ಆಸ್ಪತ್ರೆ ಅಥವಾ ನಾಗರಿಕ ರಕ್ಷಣೆಯ ಕೆಲಸದಲ್ಲಿ ಭಾಗ ತೆಗೆದುಕೊಳ್ಳಲು ಒಪ್ಪಿದರೆ ಅವರನ್ನು ತಾತ್ವಿಕ ಯುದ್ಧವಿರೋಧಿಗಳೆಂದು ರಿಜಿಸ್ಟರ್ ಮಾಡಿಕೊಳ್ಳಬಹುದೆಂದೂ ನಿರ್ಣಯಿಸಲಾಯಿತು.

ಫೆನರ್ ಬ್ರಾಕ್ವೇ ಇವರು ಶ್ರೀವೈದ್ಯರಪರವಾಗಿ ಪ್ರತಿವಾದಿಸುತ್ತ ಹೀಗೆ ಹೇಳಿದರು—

"ಶ್ರೀ ವೈದ್ಯರು ಹಿಂದುಸ್ಥಾನದ ಪ್ರಜೆಯೆಂದು ಈ ಟ್ರಿಬ್ಯೂನಲಿನ ಮುಂದಿರುವರು. ಅವರ ಖಟ್ಲೆಯಿಂದ ಈ ದೇಶ ಮತ್ತು ಹಿಂದುಸ್ಥಾನದಲ್ಲಿ ವಿಶೇಷ ಕುತೂಹಲವುಂಟಾಗಿದೆ. ವೈದ್ಯರು ನಾಝಿ ಮತ್ತು ಫೇಸಿಸ್ಟ ವಾದಗಳ ಕಡುವೈರಿಗಳಾಗಿರುವರು ಹಿಂದುಸ್ಥಾನವು ಸ್ವತಂತ್ರವಾಗುವ ವರೆಗೆ ಸಾಮ್ರಾಜ್ಯ ಸೈನ್ಯದಲ್ಲಿ ಸೇರಿ ಹೋರಾಡಲು ಸಿದ್ಧರಿಲ್ಲ."

ಶ್ರೀ ವೈದ್ಯರು ತಾವು ಓರ್ವ ಕೃಷಿಕನ ಮಗನೆಂದೂ ತಮ್ಮದು ಬಡ ಕುಟುಂಬವಾದುದರಿಂದ ಶಿಕ್ಷಣ ಪಡೆಯುವ ಹೊಣೆ ತಮ್ಮ ಮೇಲೆಯೇ ಬಿದ್ದಿತೆಂದು ಅಪೀಲು ಅರ್ಜಿಯಲ್ಲಿ ಹೇಳಿದ್ದರು.

ಅವರು ಸೈನ್ಯದಲ್ಲಿ ಸೇರಲು ನಿರಾಕರಿಸಿ ಮತ್ತು ಸೈನಿಕ ಉಡುಪು ಧರಿಸಿ ಕೂಚಿಗೆ ಬರಲು ಒಲ್ಲೆವೆಂದು ಹೇಳಿದ್ದರಿಂದ ಕ್ಯಾಂಟರ್ಬರಿ ಮಿಲಿಟರಿ ಕೋರ್ಟಿನವರು ಮಾರ್ಚ್ ೮ನೆ ತಾರೀಕಿನ ದಿವಸ ಅವರಿಗೆ ೬೨ ದಿನಗಳ ಶಿಕ್ಷೆ ವಿಧಿಸಿದ್ದರು. ಸ್ಟೀಫನ್ ಮು... ಇವರು ಕ್ಯಾಂಟರ್ಬರಿಯ ಕೋರ್ಟಿನ ಮುಂದೆ ಶ್ರೀ. ವೈದ್ಯರ ಪರವಾಗಿ ಪ್ರತಿಪಾದಿಸುವಾಗ ಅವರನ್ನು ಯುದ್ಧದ ತಾತ್ತ್ವಿಕ ವಿರೋಧಿಗಳೆಂದು ಗಣಿಸಬೇಕೆಂದು ವಿನಂತಿ ಮಾಡಿ ಕೊಂಡಿದ್ದರು. ಇದಕ್ಕೂ ಮೊದಲು ಅವರು ಜನವರಿ ತಿಂಗಳಲ್ಲಿ ಕೋರ್ಟಿನ ಮುಂದೆ ಹಾಜರಾದಾಗ ಮಿಲಿಟರಿಯಿಂದ ಓಡಿ ಹೋದವರೆಂಬ ಆರೋಪದಿಂದ ಅವರನ್ನು ಸ್ಥಾನಬದ್ಧತೆಯಲ್ಲಿಡಲು ಆಜ್ಞಾಪಿಸಲಾಗಿತ್ತು. ಇದಕ್ಕೆ ಉತ್ತರ ರೂಪವಾಗಿ, ತಾವು ಹಿಂದೀಯರಿರುವದರಿಂದ ಇಂಗ್ಲಡಿನ ಸೈನ್ಯ ಸಂಗ್ರಹದ ಕಾನೂನಿನಲ್ಲಿ ಬರುವುದಿಲ್ಲವೆಂದು ತಿಳಿದು ನೋಟೀಸು ನಿರಾಕರಿಸಿದುದಾಗಿ ಅವರು ಹೇಳಿದ್ದರು.

ಪ್ರಕಟಣೆ

ಮಂಗಳೂರು ಶ್ಯಾಹೆರಲ್ಲಿರುವ ವಿಟ್ಠಲ ಬಾಳಿಗರ ಮಗ ಸುಬ್ರಾಯ ಬಾಳಿಗನು ಈ ಮೂಲಕ ತಿಳಿಸುವುದೇನೆಂದರೆ:

ನಾನು ಮಂಗಳೂರು ಶ್ಯಾಹೆರಲ್ಲಿರುವ ನಾರಾಯಣ ಪೈಗಳ ಮಗ ಶ್ರಿಂಗೇರಿ ದಾಸ ಪೈ ಮತ್ತು ಇವರ ಮಗ ವೆಂಕಟ್ರಾಯ ಪೈ ಕೂಡಾ ಮೂರು ಜನರು ಪಾಲಿನಲ್ಲಿ ಶ್ರಿಂಗೇರಿ ದಾಸ ಪೈ ಎಂಡ್ ಕೋ ಮಂಗಳೂರು ಎಂಬ ಹೆಸರಿನಿಂದ ವ್ಯಾಪಾರ ನಡ್ಸಿಕೊಂಡು ಬಂದಿರುವಲ್ಲಿ ತಾ. 22-4-1944ರಲ್ಲು ನಾವು ಮಾಡಿಕೊಂಡ ಪಾಲು ಅಗಲುವಿಕೆ (Dissolution of paptnership deed) ಪ್ರಕಾರ ನಾನು ಸದ್ರಿ ಪಾಲುಗಾರಿಕೆಯಿಂದ ನಿವೃತ್ತನಾಗಿರುತ್ತೇನೆ ಸದ್ರಿ ಫರ್ಮಿನ ಯಾವತ್ತೂ ವೈವಾಟುಗಳು ನನಗೆ ವ ನನ್ನ ವಾರೀಸುದಾರ ಪ್ರತಿನಿಧಿಗಳಿಗ ಲಗಾವು ವ ಬ್ಯಾಂಡಿಂಗ್ ಆಗಲಿಕ್ಕಿಲ್ಲ. ಸದ್ರಿ ಫರ್ಮಿನ ಯಾವತ್ತು ಕಂಟ್ರಾಕ್ಟುಗಳಿಗೂ ವ ಸಾಲಗಳಿಗೂ ವ ಅದರ ಯಾವ ತರದ ಲಾಭ ನಷ್ಟಗಳಿಗೂ ನಾನು ಬದ್ಧನಲ್ಲ. ಈ ಸಂಗತಿಯನ್ನು ಸರ್ವರಿಗೂ ತಿಳಿಯುವಂತೆ ಈ ಮೂಲಕ ವರ್ತಮಾನ ಪತ್ರದಲ್ಲಿ ಪ್ರಕಟಿಸಲಾಗಿದೆ.

ಮಂಗಳೂರು } ಬಿ. ಸುಬ್ರಾಯ
19-5-44. } ಬಾಳಿಗ.



ಉಷ್ಣಕಾಲದಲ್ಲಿ ನಿಮ್ಮ ಕಂಠದ ಕುರಿತು ಜಾಗ್ರತೆ ತೆಕ್ಕೊಳ್ಳಿರಿ.

ಶ್ವಾಸಯೋಗ್ಯ ಮಾತ್ರೆ ಪೆಪ್ಸುಗಳನ್ನು

ಪೆಪ್ಸು ನಿಮ್ಮ ಬಾಯಲ್ಲಿ ಹಾಕಿದ ಕೂಡಲೆ ಕರಗಿ ಅತ್ಯುತ್ತಮ ಔಷಧಿ ರಸವನ್ನು ಹೊರಗೆ... ವುದು. ಅದರಿಂದ ಕಂಠದೇನೆ, ಉರಿಶೀತ, ಎ... ನೋವು ಮೊದಲಾದ ಶೀತಬಾಧೆಗಳು ಗು... ಹೊಂದುವುವು.

ಪೆಪ್ಸು ತೆಕ್ಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗ...

ಜಿಲ್ಲಾ ಸಮಾಚಾರಗಳು

ಮಂಗಳೂರು

ರೇಶನಿಂಗ್

ಮಂಗಳೂರಲ್ಲಿ ಕ್ರಮರೀತಿಯ ರೇಶನಿಂಗ್ ತಾ. ೨೧ರಿಂದ ಪ್ರಾರಂಭವಾಗುವುದು. ತಲಾ ಅರ್ಧಸೇರಿನಂತೆ ಪಡಿಯಕ್ಕಿ ಕೊಡುವ ಆಜ್ಞೆಯಾಗಿದ್ದರೂ, ಈಗ ಮದ್ರಾಸು ಸರಕಾರ ಕೊಟ್ಟ ಹೊಸ ಆಜ್ಞೆಯಂತೆ ಅರ್ಧ ಸೇರಿನಲ್ಲಿ ಅರ್ಧ ಪಾವು ಕಡಿಮೆಯಾಗುವುದು.

ಪ್ಲೇಗ್ ವರದಿ

ಪ್ಲೇಗ್ ರೋಗವು ಶಾಂತವಾಗುವ ಲಕ್ಷಣ ಕಂಡುಬರುತ್ತದೆ. ತಾರೀಕು ೧೩-೫-೪೪ರ ವರೆಗೆ ಒಟ್ಟು ೧೩,೯೨೫ ಮಂದಿಗೆ ಪ್ಲೇಗ್ ನಿವಾರಣ ಇಂಜೆಕ್ಷನ್ ಕೊಡಲಾಗಿದೆ ಕಳೆದವಾರ ಒಟ್ಟು ೫ ಇಲಿಗಳು ಬಿದ್ದಿವೆ.

ಅಪೀಲು

ತಾ ೯ರಂದು ತಲಾ ೨೫ ರೂ ಇಲ್ಲವೇ ೧½ ತಿಂಗಳ ಶಿಕ್ಷೆವಿಧಿಸಲ್ಪಟ್ಟ ಸ್ವಯಂಸೇವಕರ ಪರವಾಗಿ ಶ್ರೀ ರಂ. ರಾ. ತಲ್ಚೇರಿಕರರು ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಅಪೀಲು ದಾಖಲೆ ಮಾಡಿದ್ದಾರೆ

ನಗರ ಸಭೆ

ಮಂಗಳೂರು ನಗರಸಭೆ ಜನಾಬ್ ಪುತ್ತೂರ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ತಾ. ೧೫ರಂದು ಜರಗಿತು ಮೈದಾನಿನ ಕ್ರಿಕೆಟ್ ಆಟದ ಬಯಲು ಮಳೆಬಂದುದರಿಂದ ಹಾಳಾದ ಕುರಿತು ಅದನ್ನು ಸರಿಗೊಳಿಸಬೇಕೆಂದು ಹೇಳಿದ್ದಕ್ಕೆ ನೋಡಲಾಗುವುದು ಎಂದು ಉತ್ತರ ಬಂತು.

ನಗರ ಸಭಾ ವಾಚನಾಲಯವನು ಈಗ ಮುಚ್ಚಿಟ್ಟಿರುವುದರ ಕುರಿತು ಸಭಿಕರು ಪ್ರಶ್ನಿಸಿದರು

ಸೈಂಟ್ ವಿನ್ಸೆಂಟ್ ಡಿಪಾಲ್ ಸೊಸೈಟಿಯವರಿಂದ ಬಂದ ವಿನಂತಿ ಸ್ವೀಕೃತವಾಗಿ ಅವರಿಗೆ ೧೨೦ ರೂ ವಾರ್ಷಿಕ ಸಹಾಯ ಕೊಡುವುದೆಂದಾಯಿತ

ಸಹಾಯ ಮಾಡುವ ಸಂಘ ಸಂಸ್ಥೆಗಳನ್ನು ಸಂದರ್ಶಿಸಲ ಒಂದು ಉಪ ಸಮಿತಿ ನೇಮಿಸಲ್ಪಟ್ಟಿತು

ಅ. ಕ. ರೆಡಿಕಲ್ ಡೆಮೊಕ್ರೆಟಿಕ್ ಪರಿಷತ್ತು

ಇದೇ ಬರುವ ಜೂನ್ ೩ರಲ್ಲಿ ಹುಬ್ಬಳ್ಳಿಯಲ್ಲಿ ರ್ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ ಕರ್ನಾಟಕ ಪ್ರಾಂತಿಕ ಪರಿಷತ್ತು ಜರಗಲಿರುವುದು. ಕಾಂ ಎಂ ಎನ್ ರಾಯ್, ಪ್ರೊಫೆಸರ್ ಪಾರೀಕ್, ಡಾ ಶೆಟ್ಟಿ, ಪ್ರೊಫೆಸರ್ ಡಾಲ್ವಿ, ಎಲೆನ್ ರಾಯ್ ಮತ್ತಿನ್ನಿತರ ಪಾರ್ಟಿಯ ಧುರೀಣರು ಬರಲಿರುವರು. ಕಾಂ ಬ್ಯಾರಿಸ್ಟರ್ ತಾರ್ಕುಂಡೆ ಇವರು ಪರಿಷತ್ತಿನ ಅಧ್ಯಕ್ಷರು ಪ್ರಾಂತ್ಯದ ಎಲ್ಲ ಕಡೆಗಳಿಂದಲೂ ೩೦೦ಕ್ಕೆ ಮಿಕ್ಕಿ ಪ್ರತಿನಿಧಿಗಳು ಸೇರಲಿರುವರೆಂದೂ, ನಮ್ಮ ಜಿಲ್ಲೆಯಿಂದ ೩೦ಕ್ಕೆ ಮಿಕ್ಕಿ ಪ್ರತಿನಿಧಿಗಳು ಹೋಗಲಿರುವರೆಂದೂ ಎಣಿಸಲಾಗಿದೆ

ಬುದ್ಧ ಜಯಂತಿ

ಬಿಸೆಂಟ್ ಹೆಮ್ಮಕ್ಕಳ ಶಾಲೆಯಲ್ಲಿ ತಾ. ೮ರಂದು ಡಾ| ರಾಮ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಯುತರುಗಳಾದ ಎಂ ಯಸ್. ಮಾಧವರಾಯರು, ಎಂ ಯಸ್. ಏಕಾಂಬರರಾಯರು ಮತ್ತು ಬಿ. ಅನಂತರಾಯರು. ಬುದ್ಧನ ವಿಚಾರ ಮಾತನಾಡಿದರು.

ಇಂಡಿಯನ್ ಫೆಡರೇಶನ್ ಓಫ್ ಲೇಬರ್

ಶ್ರೀ. ಎಂ. ಎನ್. ರಾಯ್ಸರಿಂದ ಸ್ಥಾಪಿತವಾದ ಈ ಸಂಸ್ಥೆಯ ಸಮಿತಿಯೊಂದು ಇತ್ತೀಚೆಗೆ ಮಂಗಳೂರಲ್ಲಿ ಪುನರ್ನಿರ್ಮಾಣ ಗೊಂಡು ಕಾರ್ಯಪ್ರವೃತ್ತವಾಗಿದೆ. ಶ್ರೀಗಳಾದ ಎನ್. ಶಂಕರ ಭಟ್ಟರು ಕಾರ್ಯದರ್ಶಿಗಳಾಗಿಯೂ ಜಿ ಕೆ. ನೆಟ್ಟಾರ್ ಮತ್ತು ಕೆ ಆರ್. ರಾಯರು ಉಪಕಾರ್ಯದರ್ಶಿಗಳಾಗಿಯೂ ನಿಯುಕ್ತರಾಗಿದ್ದಾರೆ

ಭಾರತ ಸರಕಾರವು ಇಂಡಿಯನ್ ಫೆಡರೇಶನ್ ಆಫ್ ಲೇಬರ್ ಸಂಸ್ಥೆಗೆ ತಿಂಗಳೊಂದರ ರೂ. ೧೩,೦೦೦ ಕೊಡುವುದರ ವಿಚಾರ, ಫೆಡರೇಶನಿನ ಇತ್ತೀಚೆಗೆ ಜರಗಿದ ಸಭೆಯಲ್ಲಿ ಈ ರೀತಿಯ ವಿವರಣಾ ನಿರ್ಣಯ ಒಂದು ಮಂಜೂರಾಯಿತು 'ಯುದ್ಧ ಕಾರ್ಯವು ಜಯಪ್ರದವಾಗುವಂತೆ ಮಜೂರರನ್ನು ಸಂಘಟಿಸುವ ಸಲುವಾಗಿ ಈ ಹಣವು ವ್ಯಯಿಸಲ್ಪಡುತ್ತಿದೆ'

ಹಸುಗೆಯ ಪೂರ್ವ ಯೋಜನೆಯಾಗಿ

ಮಂಗಳೂರಲ್ಲಿರುವ ಬಿಕ್ಷುಕರ ಗಣನೆಯು ಪೋಲೀಸರಿಂದ ನಡೆಯುತ್ತವೆ

ಉಡುಪಿ

ಅಧ್ಯಾಪಕರ ಬೇಡಿಕೆಗಳು

ತಾ ೬ರಲ್ಲಿ ಸೇರಿದ ಉಡುಪಿ ತಾಲೂಕು ಎಯಿಡೆಡ್ ಶಾಲಾ ಟೀಚರ್ಸ್ ಯೂನಿಯನ್ ಮಹಾಸಭೆಯಲ್ಲಿ ಸರಕಾರೀ ಅಥವಾ ಲೋಕಲ್ ಬೋರ್ಡು ನೌಕರರಿಗೆ ಕೊಡುವಂತೆ ತುಟ್ಟಿ ಭತ್ತೆ ಸಿಗಬೇಕು, ಟ್ರೈನಿಂಗ್ ಸ್ಟೈಪೆಂಡ್ ದರವನ್ನು ಹೆಚ್ಚಿಸಬೇಕು, ತಿಂಗಳು ತಿಂಗಳು ಗ್ರಾಂಟು ದೊರೆಯಬೇಕು, ನಿಶ್ಚಿತ ಬೆಲೆಯ ಆಹಾರ ಸಾಮಗ್ರಿಗಳು ದಿನ ಮತ್ತು ವಾರದ ಬದಲಾಗಿ ತಿಂಗಳಿಗೊಮ್ಮೆ ಸಿಗುವ ರಿಯಾಯಿತಿ ದೊರೆಯುವಂತಾಗಬೇಕು, ಇತ್ಯಾದಿ ನಿರ್ಣಯಗಳು ಮಂಜೂರಾದವು.

ಕೌನ್ಸಿಲಿನ ಸಭೆ

ತಾ ೮ರಲ್ಲಿ ಉಪಾಧ್ಯಕ್ಷೆ ಶ್ರೀಮತಿ ಲೀಲಾವಾಯಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಬಸ್‌ಸ್ಟೇಂಡಿನ ಬುಕ್ಕಿಂಗ್ ಆಫೀಸಿಗೆ ರೂಪಾಯಿ ೧೩ ಮತ್ತು ಪಾರ್ಸೆಲ್ ರೂಮಿಗೆ ರೂಪಾಯಿ ೧೨ರಂತೆ ತಿಂಗಳೊಂದರ ಬಾಡಿಗೆ ವಸೂಲು ಮಾಡಬೇಕಾಗಿ ಠರಾವಾಯಿತು.

ಶ್ರೇಯಃ ಪ್ರಾರ್ಥನೆ

ಮಹಾತ್ಮಾಜಿಯವರ ಬಿಡುಗಡೆಯ ಸಂತೋಷ ಸೂಚನಾರ್ಥವಾಗಿಯೂ ಅವರಿಗೆ ಆಯುರಾರೋಗ್ಯಗಳು ಲಭಿಸುವಂತೆ ತಾ ೬ರಲು ಶ್ರೀ ಲಕ್ಷ್ಮೀ ವೆಂಕಟೇಶ ಸ್ವಾಮಿ ಸನ್ನಿಧಿಯಲ್ಲಿ ಶ್ರೇಯಃ ಪ್ರಾರ್ಥನೆಯಾಯಿತು

ಗೋಧಿ ಆಗಮನ

ಸಾಧಾರಣ ಒಂದು ಸಾವಿರ ಮುಡಿಗೆ ಮೇಲ್ಪಟ್ಟ ಗೋಧಿ ಉಡುಪಿಗೆ ಬಂದಿರುವುದು ತಾ ೧೫ರ ಅನಂತರ ಪಡಿಯಕ್ಕಿಯೊಂದಿಗೆ ಗೋಧಿ ಸಹ ಅಲ್ಪ ಪ್ರಮಾಣದಲ್ಲಿ ಕೊಡಲಾಗುವುದು ಸಕ್ಕರೆ ದೊರೆಯುವುದಿಲ್ಲ

ಪುತ್ತೂರು

ಸಂಸ್ಕೃತ ಹಿಂದೀ ಶಾಲೆಯ

ದ್ವಿತೀಯ ವಾರ್ಷಿಕೋತ್ಸವವು ತಾ. ೮ರಂದು ಶ್ರೀ. ಕೆ ಪರಮೇಶ್ವರ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಅನಂತರ ಹೊಸ ವರ್ಷದ ಶಾಲಾ ಕಮಿಟಿಗೆ ಶ್ರೀಗಳಾದ ಸಿ. ಯಸ್. ಶಾಸ್ತ್ರಿಗಳು ಅಧ್ಯಕ್ಷ, ಯನ್. ಯಸ್. ನಾರಾಯಣ ರಾಯರು ಕೋಶಾಧ್ಯಕ್ಷ ಯಸ್. ಸೂರಪ್ಪಯ್ಯ ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು.

ಕಾಸರಗೋಡು

ಕಾಂಞಾಕಾಡು ಗ್ರಾಮದಲ್ಲಿ ಸಿಡುಬು

ತಲೆದೋರಿ ಈಗಗಾಲೇ ೧೦ ಮಂದಿ ಮೃತರಾದರೆಂದು ವಾರ್ತೆ ಇನ್ನೂ ಐದಾರು ಮನೆಗಳಲ್ಲಿ ರೋಗಕ್ಕೆ ಬಲಿಬಿದ್ದವರು, ನರಳುತ್ತಾರೆ.

ಪೆರಡಾಲ

ನವಜೀವನ ಹ್ಯಾಸ್ಕೂಲ್

ಇಲ್ಲಿ ಬರುವ ಜೂನ್ ತಾ ೧ರಿಂದ ತೆರೆಯಲಿರುವ ಹ್ಯಾಸ್ಕೂಲಿಗೆ 'ನವಜೀವನ ಹ್ಯಾಸ್ಕೂಲ್' ಎಂದು ಹೆಸರಿಡುವುದಾಗಿ ಕಳೆದ ಆದಿತ್ಯವಾರ 'ಪೆರಡಾಲ ಎಜ್ಯುಕೇಶನ್ ಸೊಸೈಟಿಯ' ಆಡಳಿತ ಮಂಡಳಿಯ ಸಭೆಯಲ್ಲಿ ಅದರ ಅಧ್ಯಕ್ಷರಾದ ಮಾಯಿಪ್ಪಾಡಿ ಅರಸ ನಯಕುಂಬಳೆ ರಾಜರಾದ ಶ್ರೀ ಎಂ ವಿ ರಾಮವರ್ಮ ರಾಜರ ಅಧ್ಯಕ್ಷತೆಯಿಂದ ಸೇರಿ ನಿರ್ಣಯವಾಯಿತು

ಆ ದಿನದ ಸಭೆಯಲ್ಲಿ, ಹ್ಯಾಸ್ಕೂಲಿನ ಮುಂದಿನ ಕಾರ್ಯಕ್ರಮಗಳ ಕುರಿತು, ಹ್ಯಾಸ್ಕೂಲಿಗೆ ಹೊಸ ಕಟ್ಟಡ ಕಟ್ಟಿಸುವ ಕುರಿತೂ ಆಲೋಚಿಸಲ್ಪಟ್ಟ ಕೆಲವು ಪ್ರಾಮುಖ್ಯ ಇತ್ಯರ್ಥಗಳಾದುವು

'ಪೆರಡಾಲ ಎಜ್ಯುಕೇಶನ್ ಸೊಸೈಟಿಯು ಕಳೆದ ಶುಕ್ರವಾರ ಮಂಗಳೂರಲ್ಲಿ ರಿಜಿಸ್ಟ್ರಿಮಾಡಲ್ಪಟ್ಟಿವೆ,

ಇದೇ ಬರುವ ತಾ ೧-೬-೧೯೪೪ನೇ ಗುರುವಾರ 'ನವಜೀವನ ಹ್ಯಾಸ್ಕೂಲ್' ಪ್ರಾರಂಭವಾಗುವುದು. ಇದರ ಪ್ರಾರಂಭೋತ್ಸವವನ್ನು ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎನ್ ಸುಬ್ಬರಾಯರು ನೆರವೇರಿಸಲು ಒಪ್ಪಿರುವರು

ಮೂಡಬಿದ್ರಿ

ಇಲ್ಲಿನ ದಿಗಂಬರ ಹಯ್ಯರ್ ಎಲಿಮೆಂಟರಿ ಶಾಲೆಯನ್ನು ಹೈಸ್ಕೂಲಾಗಿ ಮಾಡುವರೆ ಅದಕ್ಕೆ ತಕ್ಕ ಪೂರ್ವ ಸಿದ್ಧತೆಗಳನ್ನು ಕೈಕೊಳ್ಳುವರೆ ಶಾಲಾ ಕಮಿಟಿಯವರು ನಿಶ್ಚಯಿಸಿದ್ದಾರೆ

ಹೈ ಸ್ಕೂಲಿಗೆ ಬೇಕಾದ ಕಟ್ಟಡ ಮತ್ತು ಸಾಕಷ್ಟು ನಿಧಿ ಹಾಗೂ ವಿದ್ಯಾರ್ಥಿಗಳ ಸಂಖ್ಯೆಯೂ ಈ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಒದಗಿದಷ್ಟಿದ್ದು ಹೈ ಸ್ಕೂಲಾಗುವರೆ ಇದು ಯೋಗ್ಯವಾಗಿದೆ ಬರುವ ಜುಲಾಯಿಯಲ್ಲಿಯೇ ಹೈಸ್ಕೂಲನ್ನು ತೆರೆವ ಪ್ರಯತ್ನ ನಡೆಯುತ್ತಿದೆ

ಮೂಡಬಿದ್ರೆಯಲ್ಲಿ ಹೈ ಸ್ಕೂಲೊಂದು ಇಲ್ಲದೆ ಇರುವುದರಿಂದ ಇಲ್ಲಿನ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತಿದೆ ಈ ಶಾಲೆಯು ಹೈಸ್ಕೂಲಾಗಿ ಮಾರ್ಪಟ್ಟಲ್ಲಿ ಅದಕ್ಕೆ ತಕ್ಕ ಅನುಕೂಲಗಳಿದ್ದು ಯೋಗ್ಯವಾಗಿ ನಡೆದೀತೆಂದು ಭರವಸೆ

ಹೆಬ್ರಿ

ಸ್ಥಳೀಯ ಬೋ. ಹಾ. ಪ್ರಾ ಶಾಲಾ ವರ್ಧಂತಿ ಉತ್ಸವವು ತಾ ೩೧ರಂದು ಕಾರ್ಕಳ ರೇಂಜ್ ಶಾಲಾ ಡಿ ಇ ರಾದ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಕೆನರಾ ಹೈಸ್ಕೂಲು, ಉರ್ವ ಶಾಖೆ

ಕಳೆದ ಹಲವು ವರುಷಗಳಿಂದ ಉರ್ವ ಪ್ರದೇಶದ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೆನರಾ ಹೈಸ್ಕೂಲಿಗೆ ಬರುತ್ತಿರುವುದರಿಂದ, ಈ ಶಾಲೆಯ ಒಂದು ಶಾಖೆಯನ್ನು ನಾವು ಉರ್ವದಲ್ಲಿ ತೆರೆಯಬೇಕೆಂದು ೧೯೩೭ನೇ ಇಸವಿಯಿಂದ ಪ್ರಯತ್ನಿಸಿದ್ದೆವು ಈಗ ವಿದ್ಯಾ ಶಾಖೆಯ ಡೈರೆಕ್ಟರರ ಅನುಮತಿಯು ಆ ಕುರಿತು ಸಿಕ್ಕಿದ್ದು ಉರ್ವ ಪ್ರದೇಶದವರ ಬಹುಕಾಲದ ಬಯಕೆಯನ್ನು ಪೂರೈಸಲು ನಮಗೆ ಸಾಧ್ಯವಾಗಿದೆಯೆಂಬುದನ್ನು ತಿಳಿಸಲು ನಾವು ಸಂತೋಷಗೊಳ್ಳುತ್ತೇವೆ. ಶ್ರೀ ಮಹಾಬಲ ಹೆಗ್ಡೆಯವರ ಪತ್ನಿಯವರ ದಯೆಯಿಂದಾಗಿ, ಈ ಉರ್ವ ಶಾಖೆಯು, ವೆಂಟಲೆಂಡ್ ಪೇಟೆಯಲ್ಲಿರುವ ಅವರ ಮನೆ ಮತ್ತು ಅದರ ವಠಾರದಲ್ಲಿ ತೆರೆಯಲ್ಪಡುವುದು ಈ ಸ್ಥಳವು ಬೊಕ್ಕಪಟ್ಣ ಮತ್ತು ಉರ್ವದ ಕಡೆಗಳಿಂದ ಬರುವ ಮಕ್ಕಳಿಗೆ ಬಹಳ ಅನುಕೂಲವಾಗಿರುವುದು ಈ ಶಾಲೆಯನ್ನು ನಡೆಸುವರೆ ಕೆನರಾ ಹೈಸ್ಕೂಲಿನ ಬಹು ಅನುಭವಸ್ಥರಾದ ಕೆಲವು ಉಪಾಧ್ಯಾಯರನ್ನು ಆರಿಸಲಾಗಿದೆ

ಈ ಶಾಖೆಯು ಇದೇ ಜೂನ್ ತಿಂಗಳ ೧ನೇ ತಾರೀಕು ಗುರುವಾರ ಪ್ರಾರಂಭವಾಗುವುದು ಮೊತ್ತಮೊದಲು I, II III ಮತ್ತು IV ಫೋರ್ಮುಗಳು ಮಾತ್ರ ತೆರೆಯಲ್ಪಟ್ಟು, ಕ್ರಮೇಣ ಸಾಧ್ಯವಾದೊಡನೆ ಸಂಪೂರ್ಣ ಹೈಸ್ಕೂಲನ್ನಾಗಿ ಮಾಡಬೇಕೆಂದು ಆಶಿಸಲಾಗಿದೆ ಎಲ್ಲ ಫೋರ್ಮುಗಳಲ್ಲಿಯೂ ಹುಡುಗಿಯರನ್ನು ಸೇರಿಸಿಕೊಳ್ಳಲಾಗುವುದು III ಮತ್ತು IV ಫೋರ್ಮುಗಳಲ್ಲಿ, ಸಾಕಷ್ಟು ವಿದ್ಯಾರ್ಥಿನಿಯರ ಸಂಖ್ಯೆ ದೊರೆತರೆ ಅವರಿಗಾಗಿ ಪ್ರತ್ಯೇಕ ಡಿವಿಜನ್‌ಗಳನ್ನು ತೆರೆಯಲು ನಿಶ್ಚಯಿಸಲಾಗಿದೆ ಕೆನರಾ ಹೈಸ್ಕೂಲಿನಲ್ಲಿ ಈಗ ದೊರೆಯುತ್ತಿರುವ ಆಟ ಪುಸ್ತಕ ಭಂಡಾರ, ವಾಚನಾಲಯ, ಮನ್ಯುವಲ್ ಟ್ರೈನಿಂಗ್ ಮತ್ತು ಲೆಬರೆಟರಿ ಮುಂತಾದ ಸೌಕರ್ಯಗಳೆಲ್ಲವನ್ನು ಈ ಶಾಲೆಗಳಲ್ಲಿಯೂ ಒದಗಿಸಲಾಗುವುದು. ಎಲ್ಲಾ ಮತದ ವಿದ್ಯಾರ್ಥಿಗಳಿಗೂ, ಅವರು ಸಾಕಷ್ಟು ಸಂಖ್ಯೆಯಲ್ಲಿದ್ದರೆ, ಧಾರ್ಮಿಕ ಶಿಕ್ಷಣವನ್ನೂ ಕೊಡುವ ವ್ಯವಸ್ಥೆ ಮಾಡಲಾಗುವುದು

ಇದೀಗಲೇ ಈ ಶಾಖೆಗೆ ವಿದ್ಯಾರ್ಥಿವೇತನಗಳಿಗಾಗಿ ಧನಸಹಾಯ ಮಾಡತೊಡಗಿದ ಈ ಪ್ರದೇಶದ ಉದಾರಿಗಳಾದ ಮಹಾಜನರ ಸಹಾಯದಿಂದ, ಕೆನರಾ ಹ್ಯಾಸ್ಕೂಲಿನ ಮುಖ್ಯ ಶಾಲೆಯಲ್ಲಿ ಬಡವ ಕ್ಕಳಿಗೆ ದೊರೆಯುವಷ್ಟೇ ಸೌಕರ್ಯಗಳನ್ನು ಇಲ್ಲಿ ಸೇರುವ ಬಡ ಮಕ್ಕಳಿಗೂ ಒದಗಿಸಲೂ ಸಮರ್ಥರಾಗುವೆವೆ ಮ ನಾವು ಆಶಿಸುತ್ತೇವೆ.

ಈ ಉರ್ವ ಶಾಖೆಯು ಯಶಸ್ವೀಯಾಗಿ ಪ್ರಯೋಜನಕಾರಿಯಾಗುವಂತೆ ಉರ್ವ ಮತ್ತು ಸುತ್ತಮುತ್ತಲಿನ ಮಹಾಜನರು ನಮ್ಮೊಡನೆ ಸಹಕರಿಸುವರಾಗಿ ವಿಶ್ವಾಸಪೂರ್ವಕ ಭಾವಿಸಲಾಗಿದೆ ಈ ಶಾಖೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಪ್ರತಿದಿನ ಪೂರ್ವಾಹ್ನ ೧೦-೩೦ ರಿಂದ ೧೨ರ ತನಕ ತೆರೆದಿರುವ ಶಾಖೆಯ ಆಫೀಸಿನಲ್ಲಿ ತಿಳಿದುಕೊಳ್ಳಬಹುದು

ಯು ಕೇಶವ ರಾವ್, ಬಿ ಎ.,ಎಲ್ ಟಿ.
ಮುಖ್ಯೋಪಾಧ್ಯಾಯ, ಉರ್ವ ಶಾಖೆ.

ಎಂ. ಮಾಧವ ರಾವ್,
ಮೆನೇಜರ್.

ಬಿಡುಗಡೆಯ ನಂತರ

ಮಹಾತ್ಮಾ ಗಾಂಧೀ ಹೇಗಿದ್ದಾರೆ?

ಜುಹುವಿನಲ್ಲಿ ವಿಶ್ರಾಂತಿ ಹೊಂದುತ್ತಾರೆ

೧೫ ದಿನಗಳ ಮೌನವ್ರತ

[illegible] ಆರೋಗ್ಯ [illegible] ಮಾಡುವ [illegible] ಹಾಕಿದ್ದು, ಮಹಾತ್ಮರು ಗುಣಹೊಂದಿದಾಗ ಅವರನ್ನು ಪುನಃ ಬಂಧಿಸುವ ಸರ್ಕಾರ ಬಂದರೆ ಹಾಗೆ ಮಾಡಬಹುದೆಂದೂ, ಪಾರ್ಲಿಮೆಂಟಿನಲ್ಲಿ ಅಮೆರಿ ಹೇಳಿದರು.

ವಿಶ್ರಾಂತಿ ಬೇಕು

"ಗಾಂಧೀಜಿ ಹಿಂದಿನಂತೆ ಇಂದೂ ಗುಣಮುಖರಾಗುವುದರಲ್ಲಿ ಸಂದೇಹವಿಲ್ಲ. ಆಂದರೆ ಇಂದಿನ ಸ್ಥಿತಿ ಹಿಂದಿಗಿಂತ ವಿಷಮಿಸಿದೆ. ಅವರು ಮಲೇರಿಯಾದಿಂದ ಬಳಲಿದರು; ಅದರ ಪರಿಣಾಮವಾಗಿ ಎನೆಮಿಯಾ ಇದೆ; ಮೂತ್ರ ಕೋಶವೂ ತೃಪ್ತಿಕರವಾಗಿಲ್ಲ. ದೇಹಬಲ ಹೀನವಿದೆ. ಮೂರು ವಾರಗಳಿಂದ ಮಲೇರಿಯಾ ಇಲ್ಲದಿದ್ದರೂ ಎನೆಮಿಯಾ ಹಾಗೆಯೇ ಇದೆ. ಎದೆಗುಂಡಿಗೆ ಸ್ನಾಯು ಬಲವಿಲ್ಲ. ಧ್ವನಿ ಕುಗ್ಗಿರುವುದು. ಬೇಗ ಆಯಾಸವಾಗುತ್ತದೆ. ಸ್ವಲ್ಪ ಮಾತನಾಡಿದೊಡನೆ ಹಾಗೂ ಮಾತುಗಳನ್ನು ಕೇಳಿದೊಡನೆ ಅವರು ಬಳಲುತ್ತಾರೆ. ಏಕಾಗ್ರತೆಯೂ ಕಠಿಣವಾಗುತ್ತದೆ. ಅವರು ಮೊದಲಿನಂತೆ ಮಾನಸಿಕ ಶ್ರಮತೆಗೆದುಕೊಳ್ಳಬೇಕಾದರೆ ತುಂಬಾ ಕಷ್ಟವುಂಟು. ಸರಿಯಾದ ವಾತಾವರಣ ಕಲ್ಪಿಸಬೇಕು. ಅವರ ಸಂದರ್ಶನ, ಭೇಟಿ, ಚರ್ಚೆ ಮಾಡ ಬಾರದು" ಎಂದು ಡಾ। ಜೀವರಾಜ ಮೆಹತಾ ಬರೆದಿರುವರು.

"ಹಕ್ಕಿ ಹಾರಿ ಹೋಯಿತು"

ಗಾಂಧೀಜಿ ಜುಹೂಗೆ ಆರೋಗ್ಯ ಹೊಂದಲು ತೆರಳಿದರು; ಅವರು ಮುಂಬಯಿಗೆ ಬಂದ ಕೂಡಲೇ ಜನರು ಅವರನ್ನು ಅಭೂತ ಪೂರ್ವ ಸ್ವಾಗತಿಸಿದರು. ಗಾಂಧೀಜಿ ಜತೆಗೆ ಡಾ। ಸುಶೀಲಾ ನಾಯರ್ ಪ್ಯಾರೆಲಾಲ್, ಮೀರಾಬೆನ್, ಕನೂ ಗಾಂಧೀ, ದಿನಶಾಮೆಥಾ ಮೊದಲಾದವರಲ್ಲದೆ ಸರಕಾರದ ಪರವಾಗಿ ಜೈಲ ಸುಪರಿಂಟೆಂಡೆಂಟರಾದ ಕಟೇಲಿಯವರೂ ಇದ್ದರು. ಗಾಂಧೀಜಿ ಪುನೆಯಿಂದ ಹೊರಡುವ ಮೊದಲು ಆಗಾಖಾನ ಅರಮನೆಗೆ ತೆರಳಿ ಕಸ್ತೂರ್‌ಬಾ ಮತ್ತು ಮಹದೇವ ದೇಸಾಯಿಯರ ಸಮಾಧಿ ಸಂದರ್ಶಿಸಿ, ಆ ಸಮಾಧಿಗಳ ಮೇಲೆ ಪುಷ್ಪಗಳನ್ನಿಟ್ಟರು.

ಗಾಂಧೀಜಿಯವರ ಪ್ರಯಾಣಕ್ಕಾಗಿ ಎರಡನೇ ವರ್ಗದ ಡಬ್ಬಿ, ಪ್ರತಿಯೊಬ್ಬ ಸ್ಥಾನಬದ್ಧ ಕೈದಿಗೆ ಏರ್ಪಾಡು ಮಾಡುವಂತೆ ಮಾಡಿದ್ದರು, ಆದರೆ ಅವರು ಮೂರನೇ ವರ್ಗದ ಗಾಡಿಯಲ್ಲಿಯೇ ಕುಳಿತುಕೊಳ್ಳುವುದಾಗಿ ಹೇಳಿದ್ದರಿಂದ ಹಾಗೆ ಮಾಡಲಾಯಿತು. ಗಾಂಧೀಜಿ ಪ್ರತಿಯೊಂದು ಸ್ಟೇಶನಿನಲ್ಲಿಯೂ ಹರಿಜನ ನಿಧಿ ಸಂಗ್ರಹಿಸಿದರು.

ಆಗಾಖಾನ ಅರಮನೆಗೆ ಹೋಗಿ ಬಂದವರೊಬ್ಬರು 'ಹಕ್ಕಿ ಹಾರಿಹೋಯಿತು. ಗೂಡು ಬರಿದಾಗಿದೆ' ಎಂದರು. ೧೯೪೨ರ ಆಗಸ್ಟ್ ೯ರಿಂದ ಸೆರೆಮನೆಯಾಗಿ ಮಾರ್ಪಟ್ಟ ಈ ಅರಮನೆಯನ್ನು ಈಗ ಅದರ ಒಡೆಯರಿಗೆ ಬಿಟ್ಟುಕೊಡುವ ಆಲೋಚನೆ ನಡೆದಿದೆ. ಅದರ ಸುತ್ತು ಹಾಕಿದ ಮುಳ್ಳು ಬೇಲಿ ಈಗಲೂ ಇದೆ.

ಬಂಧನದ ಗುರುತು

ಆ ಅರಮನೆ ಪಡ ಸಾಲೆಯಲ್ಲಿ ಗಾಂಧೀಜಿಯನ್ನು ಸೆರೆ ಹಾಕಿದ ಗುರುತು ಇನ್ನೂ ಇರುವುದು. ಅಲ್ಲಿನ ಒಂದು ಗೋಡೆಯಲ್ಲಿ ಎತ್ತರದ ಗುರುತು ಹಾಕಲಾಗಿದೆ. ಮೀರಾ ಬೆನ್ನ ಎಲ್ಲರಿಗಿಂತಲೂ ಎತ್ತರವೆಂದೂ, ಕಸ್ತೂರ್‌ಬಾ ಎಲ್ಲರಿಗಿಂತಲು ಕುಳ್ಳರೆಂದೂ ಅಲ್ಲಿನ ಗುರುತು ಸಾರುತ್ತಿವೆ.

ಅರಮನೆಯ ಆವರಣದ ಆಗ್ನೇಯ ಭಾಗದ ಒಂದು ಕಲ್ಲಿನ ಚೌಕದಲ್ಲಿ ಮಹಾದೇವ ದೇಸಾಯಿ ಮತ್ತು ಕಸ್ತೂರ್‌ಬಾ ಸಮಾಧಿಗಳಿವೆ. ಪ್ರತಿಯೊಂದು ಸಮಾಧಿಯು ಆರಡಿ ಉದ್ದ ಎರಡಡಿ ಎತ್ತರವಿದೆ. ಈ ಸಮಾಧಿಗಳ ದಕ್ಷಿಣ ಭಾಗದಲ್ಲಿ ಮಹಾತ್ಮರು ಎರಡು ಬೇವಿನ ಗಿಡಗಳನ್ನು ಚಿರಶಾಂತಿ ಹೊಂದಿದ ಆ ಎರಡು ಆತ್ಮಗಳ ಸ್ಮಾರಕವಾಗಿ ನಟ್ಟಿರುವರು. ದೇಸಾಯಿ ಸಮಾಧಿ ಮೇಲೆ ಗಾಂಧೀಜಿಯವರು 'ಓಂ' ಎಂದೂ, ಕಸ್ತೂರ್‌ಬಾ ಸಮಾಧಿ ಮೇಲೆ 'ಹೇ ರಾಮ್' ಎಂದು ಬರೆದಿದ್ದಾರೆ.

ಆ ಸಣ್ಣ ಭಾಗವನ್ನು ಕ್ರಯಕ್ಕೆ ಕೊಡಬೇಕೆಂದು ಆ ಸ್ಥಳವನ್ನು ಸಂದರ್ಶಿಸಲು ಸಾರ್ವಜನಿಕರಿಗೆ ಸಮ್ಮತಿ ಕೊಡಬೇಕೆಂದೂ, ಗಾಂಧೀಜಿ ಸರಕಾರದೊಡನೆ ಪತ್ರ ವ್ಯವಹಾರ ನಡೆಸುತ್ತಾರೆಂದು ಸುದ್ದಿ. ಮಹಾತ್ಮರ ಕೆಲ ಮಿತ್ರರು ಇಡೀ ಆಗಾಖಾನ ಅರಮನೆಯನ್ನು ಕ್ರಯಕ್ಕೆ ಕೊಂಡು ರಾಷ್ಟ್ರೀಯ ಸ್ಮಾರಕವಾಗಿ ದೇಶಕ್ಕೆ ಒಪ್ಪಿಸಲು ತಮ್ಮ ಸಿದ್ಧತೆ ವ್ಯಕ್ತ ಪಡಿಸಿರುವರೆಂದೂ ಹೇಳಲಾಗಿದೆ.

ಬಾಲಕನ ಭಕ್ತಿ

ತಾ. ೧೧ರಂದು ಪ್ರಾತಃ ೧೦-೧೫ಕ್ಕೆ ಗಾಂಧೀಜಿ ಜುಹುಗೆ ಬಂದು ತಲಪಿದರು. ಪ್ರಯಾಣವು ಸುಖಕರವಾಗಿತ್ತೇ ಎಂದು ದಕ್ಕೆ ಗಾಂಧೀಜಿ 'ಹೌದು' ಎಂದರು. ಪ್ರಕಟಣೆಗೆ ಏನಾದರೂ ಕೊಡುವುದಿದೆಯೇ ಎಂಬುದಕ್ಕೆ, ಡಾಕ್ಟರರ ನಡುವೆ ಸಿಕ್ಕಿ ಬಿದ್ದಿದ್ದೇನೆ ಎಂದರು.

ಜುಹುಗೆ ಮಹಾತ್ಮರು ಬಂದೊಡನೆಯೇ ೧೨ ವರ್ಷ ಒಬ್ಬ ಹುಡುಗ ದೂರದಿಂದ ಅಲ್ಲಿ ವರೆಗೆ ನಡೆದು ಕೊಂಡು ಬಂದು ತಾನು ತಂದಿದ್ದ ಹಣ್ಣುಗಳನ್ನು ಸಮರ್ಪಿಸಿದನು. ಮಹಾತ್ಮರು ಪ್ರಶ್ನಿಸಿದಾಗ ತನ್ನ ಬಂಧುಗಳು ತನಗೆ ಉಡುಗರೆ ಕೊಟ್ಟ ಹಣವನ್ನು ಉಳಿಸಿ ಹಣ್ಣು ತಂದೆನೆಂದು ಅವನು ಉತ್ತರವಿತ್ತನು. ಈ ಹಣ್ಣುಗಳನ್ನು ನಾನೇ ಉಪಯೋಗಿಸಬೇಕೋ? ನನಗಾಗಿ ತಂದ ಹಣ್ಣೋ? ಎಂದು ಗಾಂಧೀಜಿ ಪುನಃ ಪ್ರಶ್ನಿಸಿದರು. ನಾನು ನಿಮಗೆಂದೇ ತಂದಿದ್ದೇನೆ, ನೀವು ಇಚ್ಛೆಯಿದ್ದಂತೆ ಮಾಡಬಹುದು ಎಂದು ಅದಕ್ಕೆ ಬಾಲಕನು ಉತ್ತರವಿತ್ತನು.

ಸುಂದರ ಬನದಲ್ಲಿರುವ ಶಾಂತಿಕುಮಾರ ಮುರಾರಜಿಯವರು ಗಾಂಧೀ ಆಶ್ರಮದಲ್ಲಿರುವ ಜಹಾಂಗೀರ ಪಟೇಲ ಭವನದಲ್ಲಿ ಗಾಂಧೀಜಿ ವಿಶ್ರಾಂತಿ ಪಡೆಯುವರು. ೧೯೩೪ರಲ್ಲಿ ಹಿಂದೊಮ್ಮೆ ಗಾಂಧೀಜಿ ಕರುಳಿನ ರೋಗಕ್ಕಾಗಿ ಶಸ್ತ್ರ ಚಿಕಿತ್ಸೆ ನಡೆದಿದ್ದಾಗ ಅಲ್ಲಿ ಮೂರು ತಿಂಗಳು ಚಿಕಿತ್ಸೆ ಹೊಂದಿದ್ದರು, ೧೯೩೭ರಲ್ಲಿ ಒಮ್ಮೆ ಇಲ್ಲಿ ಗಾಂಧೀಜಿ ೧॥ ತಿಂಗಳು ಇದ್ದರು.

ನಿದ್ರೆ ಬಂದಿದೆ

ತಾ. ೧೨ರಂದು ಗಾಂಧೀಜಿಗೆ ಚೆನ್ನಾಗಿ ನಿದ್ರೆ ಬಂದಿದೆ. ಪ್ರಕೃತಿಯಲ್ಲಿ ಕೊಂಚ ಸುಧಾರಣೆ ಕಂಡುಬಂದಿರುವುದು. ಆದರೂ ದಣಿದಂತೆ ತೋರುತ್ತಾರೆ. ಆ ದಿನ ಮುಂಜಾನೆ ತಿರುಗಾಡಲು ಹೋಗಿ ಬಂದು ತುಸು ವಿಶ್ರಾಂತಿ ತೆಗೆದುಕೊಂಡರು. ಸಂಜೆ ಗಾಂಧೀಜಿ ಪಾದಿಯ ಬೆಂಚಿನ ಮೇಲೆ ಕುಳಿತು ಸಮುದ್ರಾಭಿಮುಖವಾಗಿ ಒರಗಿ ಕುಳಿತಿದ್ದರು. ಆಗ ನಡೆದ ಪ್ರಾರ್ಥನೆಗೆ ತುಂಬಾ ಜನರು ಬಂದಿದ್ದರು; ಕೆಲವರು ಮಿಲಿಟರಿಯವರೂ ಹಾಜರಾಗಿದ್ದರು. ಎಷ್ಟೋ ಜನರು ಸ್ನಾನವಮಾಡಿ ಒದ್ದೆಯಾಗಿಯೇ ಹಾಜರಾಗಿದ್ದರು. ಪ್ರಾರ್ಥನೆಯ ಬಳಿಕ ಗಾಂಧೀಜಿ ಹರಿಜನನಿಧಿ ಕೂಡಿಸಿದ್ದರು. ಗಾಂಧೀಜಿ ಭೇಟಿ ಇನ್ನಷ್ಟು ನಿರ್ಬಂಧಿಸಲಾಗಿದೆ. ಅಮೆರಿಕದ ಸುದ್ದಿಗಾರರೊಬ್ಬರು ಬಂದಿದ್ದು ಅವರನ್ನೂ ಭೇಟಿಗೆ ಬಿಡಲಿಲ್ಲ.

ಮುಸಲ್ಮಾನರ ಸ್ವಯಂನಿರ್ಣಯ ತತ್ವವನ್ನು ಒಪ್ಪಿ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳಲು ಗಾಂಧೀಜಿಯವರು ಸಿದ್ಧರಿರುವರೆಂದೂ, ೧೯೪೨ ಆಗಸ್ಟಿನಲ್ಲಿ ಜಿನ್ನಾರಿಗೆ ಹೀಗೆ ಒಂದು ಪತ್ರ ಕಳುಹಿಸಿದ್ದಾರೆಂದೂ ಪ್ರಕಟವಾದ ಸುದ್ದಿ ಕಡೆಗೆ ಮಹಾತ್ಮರ ಕಾರ್ಯದರ್ಶಿ ಶ್ರೀ. ಪ್ಯಾರೀಲಾಲರ ಲಕ್ಷ್ಯವನ್ನು ಸೆಳೆದಾಗ ಅದು ನಿರಾಧಾರವಾದುದೆಂದು ಅವರು ಉತ್ತರವಿತ್ತರು.

ಭೂತಕ್ಕೆ ಹೆದರಿ—

'ಗಾಂಧೀಜಿ ಸೆರೆಮನೆಯಲ್ಲಿ ಮರಣ ಹೊಂದಿದರೆ ಅವರ ಭೂತವು ಭಾರತದಲ್ಲಿ ಬ್ರಿಟಿಷರನ್ನು ಸದಾ ಬಾಧಿಸಬಹುದು. ಹಾಗಾಗಿ ಅವರನ್ನು ಸೆರೆಮನೆಯಿಂದ ಬಿಡಲಾಯಿತು;' ಎಂದು 'ಸ್ಟೇಟ್ಸ್‌ಮನ್ ಮತ್ತು ನೇಶನ್' ಪತ್ರಿಕೆ ಬರೆಯುತ್ತದೆ.

ರೇಶನಿಂಗ್ ಕಾರ್ಡಿನ ಮೇಲೆ ಗಾಂಧೀಜಿ ಸಂಗಡಿಗರೆಲ್ಲರೂ ಸಹಿ ಹಾಕಿದ ಬಳಿಕ, ಗಾಂಧೀಜಿಯವರಿಗೆ ಆ ಪತ್ರಕೊಡಲು ಅವರು ಅದಕ್ಕೆ ಸಹಿ ಹಾಕಲು ನಿರಾಕರಿಸಿದರು. 'ನಾನು ಆಹಾರಧಾನ್ಯ ತೆಗೆದುಕೊಳ್ಳುವುದಿಲ್ಲ. ಕೇವಲ ಹಾಲು ಹಣ್ಣು ಮಾತ್ರ ತೆಗೆದುಕೊಳ್ಳುತ್ತೇನೆ' ಎಂದು ಗಾಂಧೀಜಿ ಹೇಳಿದರು. ಇದರಿಂದಾಗಿ ಅವರ ಹೆಸರನ್ನು ರೇಶನಿಂಗ್ ಕಾಯಿದೆಯಿಂದ ತೆಗೆದು ಹಾಕಲಾಗಿದೆ.

ಗಾಂಧೀಜಿ ತಾ. ೧೪ರಿಂದ ೧೫ ದಿನಗಳ ವರೆಗೆ ಎಡೆಬಿಡದೆ ಮೌನ ಪಾಲಿಸುವರು. ಈ ಮೌನದಿಂದ ತುಂಬಾ ಉಪಕಾರ ಕಂಡು ಬಂದಲ್ಲಿ ಅದನ್ನು ಮುಂದುವರಿಸುವರೆಂದೂ ಹೇಳಲಾಗಿದೆ.

'ಕಳೆದ ವರ್ಷ ಜಿನ್ನಾರ ಮುಂದಿಟ್ಟ ಪ್ರಶ್ನೆಯನ್ನೇ ಈ ವರ್ಷವೂ ನಾನು ಅವರ ಮುಂದಿಡುತ್ತೇನೆ, ಹಿಂದು ಮುಸ್ಲಿಂ ಐಕ್ಯದ ಬಗ್ಗೆ ನನಗೆ ಗುಣಮುಖವಾದೊಡನೆ ನಾನು ಅವರೊಡನೆ ಮಾತನಾಡುತ್ತೇನೆ' ಎಂದು ಗಾಂಧೀಜಿ ಖಾಕ್ಸಾರ್ ಧುರೀಣರಾದ ಅಲ್ಲಾಮ ಮಶ್ರಿಕಿಯವರಿಗೆ ತಂತಿ ಬಿಡಲು ಹೇಳಿದ್ದಾರೆ.

ಡಾಕ್ಟರರ ಪರೀಕ್ಷೆ—

ತಾ. ೧೫ರಂದು ಬೆಳಗ್ಗೆ ಮಹಾತ್ಮರನ್ನು ಡಾ। ಗಿಲ್ಡರ್, ಡಾ। ಸುಶೀಲಾ ನಾಯರ್ ಡಾ। ಕೆ. ಸಿ. ಗಜ್ಜರ್ ಮತ್ತು ಡಾ। ಪಿ. ಸಿ. ಬಾರೋಚಾ ಈಗ ನಾಲ್ವರು ಡಾಕ್ಟರರು ಪರೀಕ್ಷಿಸಿದರು.

ಗಾಂಧೀಜಿ ಆರಾಮದಿಂದಿದ್ದು ಸುಖವಾಗಿ ನಿದ್ರೆ ಮಾಡಿದರು. ಅವರನ್ನು ನೋಡಿದಾಗ ವಿಶ್ರಾಂತಿ ಫಲಕಾರಿಯಾದಂತೆ ಕಂಡು ಬಂತು. ಅವರ ಮಲವನ್ನು ಪರೀಕ್ಷೆ ಮಾಡಿದಾಗ ಅದರಲ್ಲಿ ಅತಿಸಾರ ಮತ್ತು ಕೊಕ್ಕೆ ಹುಳದ ಬಾಧೆಯ ಕ್ರಿಮಿಗಳು ಕಂಡು ಬಂದಿವೆ. ಕೊಕ್ಕೆ ಹುಳದ ಬಾಧೆಯಿದೆ ಎಂದು ಕಳೆದ ಫೆಬ್ರವರಿಯ ಉಪವಾಸ ಕಾಲದಲ್ಲಿ ಡಾಕ್ಟರರು ಪರೀಕ್ಷೆ ಮಾಡಿದಾಗ ಕಂಡು ಬಂದಿತ್ತು.

ಗಾಂಧೀಜಿಗೆ ಮುಂಬಯಿಗೆ ಬಂದೊಡನೆ ಡಾ। ಗಜ್ಜರರು ಮಹಾತ್ಮರನ್ನು ಪರೀಕ್ಷೆ ಮಾಡಿ; ೧೪ರಂದು ರಕ್ತ ಪರೀಕ್ಷೆ ಮಾಡಿ ಕೊನೆಗೆ ಕೊಕ್ಕೆ ಹುಳಗಳನ್ನು ನಿರ್ಮೂಲ ಮಾಡಿದರೆ ಗಾಂಧೀಜಿ ಅಶಕ್ತಿ ಕಡಿಮೆಯಾಗಿ ರಕ್ತ ವರ್ಧನೆಯಾಗುವುದರಲ್ಲಿ ಸಂದೇಹವಿಲ್ಲವೆಂದಿದ್ದಾರೆ.

ಮಹಾತ್ಮರನ್ನು ಪೇಥೋಲಜಿಸ್ಟರು ಪರೀಕ್ಷೆ ಮಾಡಿ ಅವರ ದೇಹ ಕ್ರಿಯೆಯಲ್ಲಿ ಲೋಹದ ಅಂಶ ಕಡಿಮೆಯಿರುವುದೆಂದು ಹೇಳಿದ್ದಾರೆ.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಷ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮುಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಆಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

(೧ನೇ ಪುಟದಿಂದ)

ಧಾಳಿ

ತಬೊನುದಾಗ ಎರಡು ಮೈಲು ದೂರದಿರು ತ್ತವಳು. ಕೊಂಚ ಭೂಮಿಯಿದೆ ಆಕೆ. ಕಾಕ ಸಸ್‌ಗೆ ಹೊರಡುವ ಮುನ್ನ ಅವಳ ಮನೆಗೆ ಹೋಗಿದ್ದೆ. ತನ್ನ 'ಪಾಪೆಂಕ'ನನ್ನು (ಆಕೆಯ ಕರೆಗೂದಲಿನ ಇಳಿವಯಸ್ಸಿನ ಕ್ಯಾಪ್ಟನ್ ಮಗ ನನ್ನು ಪ್ರೀತಿಯಿಂದ ಕರೆಯುವ ಹೆಸರು ಅದು) ನಾನು ನೋಡಲಿರುವುದನ್ನು ಕೇಳಿ ಮುದುಕಿಗೆ ಬಹಳ ಸಂತೋಷವಾಯಿತು. ನಾನು 'ಜೀವಂತ ಪತ್ರ'ವಾಗಿ ಆಕೆಯ ಎಲ್ಲ ಸುದ್ದಿಯನ್ನೂ ಅವನಿಗೆ ತಿಳಿಸುವುದು ಮಾತ್ರವಲ್ಲದೆ ಆಕೆಯ ಸಣ್ಣದೊಂದು ಬುತ್ತಿಯನ್ನೂ ತಲಪಿಸಿಯೇನೆಂದು ಆಕೆಗೆ ಎದೆಯುಬ್ಬಿತು. ನನಗೆ ಒಳ್ಳೆಯ ಸಿಹಿತಿಂಡಿಯನ್ನೂ ಸುಟ್ಟ ಬಾತುಕೋಳಿಯನ್ನೂ ಕೊಟ್ಟು ಅವಳು ಕಿರುಮನೆಗೆ ಹೋಗಿ ಕರಿಯ ರೇಶ್ಮೆ ದಾರ ಸುತ್ತಿದ ಕರೆಯ ಚೀಲವೊಂದನ್ನು ತಂದಳು.

'ಇಲ್ಲಿ ನೋಡು. ಇದು ಸುಡು ಹೊದರಿನ ಮಹಾಮಾತೆ ಮಧ್ಯವರ್ತಿನಿಯ ಚಿತ್ರಪಟ' ಎನ್ನುತ್ತ ತನ್ನ ಮೈಮೇಲೆ ಕೈಯಿಂದ ಕ್ರಾಸ್ ಆಕಾರ ಮಾಡಿ ಕನ್ಯಾ ಮಾತೆಯ ಚಿತ್ರಪಟಕ್ಕೆ ಮುತ್ತಿಕ್ಕಿ ಅದನ್ನು ನನ್ನ ಕೈಯಲ್ಲಿಟ್ಟಳು ಇದನ್ನು ದಯವಿಟ್ಟು ಅವನಿಗೆ ಕೊಡು ಅವನು ಕಾಕಸಸ್‌ಗೆ ಹೋದಾಗ ಅವನ ಹೆಸರಿನಲ್ಲಿ ಒಂದು ಪೂಜೆ ಮಾಡಿಸಿದೆ ನೋಡು. ಅವನು ಜೀವಂತನಾಗಿ ಸುರಕ್ಷಿತವಾಗಿದ್ದರೆ ಈ ದೇವಮಾತೆಯ ಚಿತ್ರವನ್ನು ಅವನಿಗೋಸ್ಕರ ಮಾಡಿಸುವುದಾಗಿ ಹರಕೆ ಹೊತ್ತೆ ಈ ಹದಿನೆಂಟು ವರ್ಷಕಾಲವೂ ಮಹಾತಾಯಿಯೂ ಸಾಧುಸಂತರೂ ಅವನ ಮೇಲೆ ದಯೆದೋರಿದುದರಿಂದ ಅವನಿಗೆ ಒಂದು ಗಾಯ ಕೂಡ ಆಗಲಿಲ್ಲ. ಎಷ್ಟೊಂದು ಯುದ್ಧಗಳಲ್ಲಿ ಅವನು ಭಾಗಿಯಾಗಿದ್ದಾನೆ! ಅವನ ಜೊತೆಯಲ್ಲಿ ಹೋದ ಮೈಕೇಲ್ ಹೇಳಿದ್ದು ಕೇಳಿದರೆ ರೋಮಾಂಚನವಾಗುತ್ತದೆ ಮಗನ ಸುದ್ದಿ ನನಗೆ ತಿಳಿದುದೆಲ್ಲ ಬೇರೆಯವರ ಬಾಯಿಂದಲೇ ನನ್ನ ಮುದ್ದು ಅವನು ತನ್ನ ದಂಡಯಾತ್ರೆಗಳ ಸುದ್ದಿಯನ್ನು ನನಗೆ ತಿಳಿಸುವುದೇ ಇಲ್ಲ—ನಾನು ಹೆದರಿಕೊಂಡೇನೆಂದು'

ಆ ಕ್ಯಾಪ್ಟನ್ ನಾಲ್ಕು ಸಲ ಕಠಿಣವಾದ ಗಾಯಗಳಿಗೊಳಗಾಗಿದ್ದನೆಂದೂ ಆದರೆ ಆ ವಿಷಯವಾಗಲಿ ತನ್ನ ದಂಡಯಾತ್ರೆಗಳ ವಿಷಯವಾಗಲಿ ಅವನು ತಾಯಿಗೆ ಬರೆದಿರಲಿಲ್ಲವೆಂದೂ ನಾನು ಕಾಕಸಸ್‌ಗೆ ಹೋದಮೇಲೆ ನನಗೆ ತಿಳಿಯಿತು. ಅದೂ ಕ್ಯಾಪ್ಟನ್‌ನಿಂದಲ್ಲ

ಆಕೆ ಮುಂದಾವರಿಸುತ್ತಾ ಹೇಳಿದಳು ಆದುದರಿಂದ ನಾನು ಆಶೀರ್ವಾದವೊಂದಿಗೆ ಕೊಡುವ ಈ ಪವಿತ್ರ ಮೂರ್ತಿಯನ್ನು ಅವನೂ ಧರಿಸಲಿ ಪವಿತ್ರತಮೆಯಾದ ಮಧ್ಯವರ್ತಿನಿ ಅವನನ್ನು ಕಾಯಲಿ ಯುದ್ಧಕ್ಕೆ ಹೋಗುವಾಗ ಇಂತು ಇದನ್ನವನು ಖಂಡಿತ ಹಾಕಿಕೊಳ್ಳಲಿ. ಪ್ರಿಯ ಗೆಳೆಯ ಅವರಿಗೆ ಹಾಗೆಯೇ ಹೇಳು "ನಿನ್ನ ತಾಯಿ ಹಾಗೆ ಈ ಅಪೇಕ್ಷಿಪಡುತ್ತಾಳೆ" ಎಂದು ಹೇಳು

ಆಕೆ ಹೇಳಿದಂತೆಯೇ ಮಾಡುವುದಾಗಿ ಒಪ್ಪಿಕೊಂಡೆ.

"ನನ್ನ ಪಾಪೆಯನ ಬಗ್ಗೆ ನಿನಗೆ ಪ್ರೀತಿ ಬೆಳೆಯೀತೆಂದು ಬಲ್ಲೆ" ಎಂದು ಮುಂದುವರಿಸುತ್ತ ಹೇಳಿದಳು "ಅವನು ಅಷ್ಟು ಒಳ್ಳೆಯವನು! ಅವನು ನನಗೆ ಪ್ರತಿ ವರ್ಷ ಹಣಕಳಿಸದೆ ಇರುವುದೇ ಇಲ್ಲ ನನ್ನ ಮಗಳು ಅನ್ನುಷ್ಕಾಗೂ ಬಹಳ ಸಹಾಯ ಮಾಡುತ್ತಾಳೆ ಇಷ್ಟೆಲ್ಲ ಮಾಡುವುದು ಅವನ ಸಂಬಳದಿಂದಲೇ ಅಂತಹ ಮಗುವನ್ನು ದಯಪಾಲಿಸಿದುದಕ್ಕಾಗಿ ದೇವರಿಗೆ ವಂದನೆ" ಎನ್ನುವಾಗ ಆಕೆಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು

"ಆಗಾಗ ನಿನಗೆ ಪತ್ರ ಬರೆಯುತ್ತಾನೆಯೆ?" ಎಂದು ಕೇಳಿದೆ.

"ಅಪೂರ್ವವಾಗಿ ಬರೆಯುತ್ತಾನೆ, ಮುದ್ದು, ಪ್ರಾಯಶಃ ವರ್ಷಕ್ಕೊಮ್ಮೆ ಹಣ ಕಳುಹಿಸುವಾಗ ಮಾತ್ರ. ಅವನು ಹೇಳುವುದಿದು 'ನಾನು ಬರೆಯದಿದ್ದರೆ ಅಮ್ಮ, ನಾನು ಬದುಕಿದ್ದೇನೆ. ಚೆನ್ನಾಗಿದ್ದೇನೆ ಎಂಬುದೇ ಅದರ ಅರ್ಥ. ನನಗೇನಾದರೂ ಸಂಭವಿಸಿದರೆ ಹಾಗಾದರಂತೆ ದೇವರು ಕಾಪಾಡಲಿ—ನಾನಿಲ್ಲದೆಯೇ ಅವರು ನಿನಗೆ ತಿಳಿಸುತ್ತಾರೆ."

ಕ್ಯಾಪ್ಟನ್‌ಗೆ ತಾಯಿಯ ಉಡುಗೊರೆಯನ್ನು ನಾನು ಕೊಟ್ಟಾಗ—ಅವನಿದ್ದುದು ನನ್ನ ಜೊತೆಯಲ್ಲೇ—ಒಂದು ಚೂರು ಕಾಗದ ತರಿಸಿ ಅದನ್ನು ಭದ್ರವಾಗಿ ಸುತ್ತಿ ಮೂಲೆ ಇರಿಸಿದನು. ಅವನ ತಾಯಿಯ ಜೀವನದ ಅನೇಕ ವಿಷಯಗಳನ್ನು ಹೇಳಿದೆ. ಅವನು ಮೌನಿಯಾಗಿದ್ದು ನಾನು ಮಾತು ಮುಗಿಸಿದ ಮೇಲೆ ಒಂದು ಮೂಲೆಗೆ ಹೋಗಿ ಬಹಳ ಹೊತ್ತು ಗುಡುಗುಡಿಯನ್ನು ತುಂಬಿಸುತ್ತಿದ್ದನು.

"ಹೌದು, ಬಹಳ (Splendid) ಒಳ್ಳೆಯ ಮುದುಕಿ ಆಕೆ" ಎಂದು ಅಲ್ಲಿಂದಲೇ muffles ಕುಗ್ಗಿದ ದಣಿಯಲ್ಲಿ ಹೇಳಿದನು. "ಅವಳನ್ನು ಪುನಃ ನೋಡುವ ಪುಣ್ಯ ನನಗೆ ಲಭಿಸೀತೆ?"

ಈ ಮಾತುಗಳು ಹೆಚ್ಚಿನ ಪ್ರೀತಿಯನ್ನೂ ದುಗುಡವನ್ನೂ ಸೂಚಿಸಿದುವು

'ನೀನು ಇಲ್ಲಿ ನೌಕರಿ ಮಾಡುವುದೇಕೆ?" ನಾ ಕೇಳಿದೆ.

"ಪ್ರತಿಯೊಬ್ಬನೂ ನೌಕರಿ ಮಾಡಲೇಬೇಕು" ಎಂದನು ಆತ ಸ್ಥಿರ ಬುದ್ಧಿಯಿಂದ

"ರಶ್ಯಾ ದೇಶಕ್ಕೆ ವರ್ಗಾಯಿಸಿಕೊಂಡರೆ ಅವಳ ಸಮೀಪದಲ್ಲೇ ಇರಬಹುದಲ್ಲ!"

"ರಶ್ಯಾ? ರಶ್ಯಾ?" ಎನ್ನುತ್ತ ತಲೆಯಲ್ಲಾಡಿಸಿ ಸಂಕಟದಿಂದ ಮುಗುಳುನಗುತ್ತ ಹೇಳಿದ. "ಇಲ್ಲಿದ್ದರೆ ಇಷ್ಟಾದರೂ ಪ್ರಯೋಜನ ಅಲ್ಲಿಗೆ ಹೋದರೆ ಅಧಿಕಾರಿ (officer)ಗಳಲ್ಲೆಲ್ಲ ತೀರ ಚಿಕ್ಕವನಾದೇನು ಅದೂ ಅಲ್ಲದೆ ಇಲ್ಲಿ ನಮಗೆ ಸಿಕ್ಕುವ ದ್ವಿಗುಣವೇತನ ನಮ್ಮಂಥ ಬಡವರಿಗೆ ಬಹಳ ಸಹಾಯಕವಾಗುತ್ತದೆ."

"ಮಮೇಲ್ ಐವನೋ ಎಚ್, ನೀನು ಈಗ ಇರುವಂತೆ ಬಾಳಲು ಅಲ್ಲಿನ ಸಂಬಳ ಸಾಕಾಗದ"

"ಇಲ್ಲಿನ ದ್ವಿಗುಣವೇತನ ಸಾಕಾಗುತ್ತದೆಯೆ?" ಎಂದು ಮಧ್ಯದಲ್ಲಿ ಕೇಳಿದನು "ನಮ್ಮ ಅಧಿಕಾರಿಗಳನ್ನು ನೋಡಿ. ಒಂದು ತಾಮ್ರದ ದುಗ್ಗಾಣಿ ಇದೆಯೇ ಒಬ್ಬನಲ್ಲಾದರೂ? They all go on tick at the sutlers ಕಿವಿ ವರೆಗೆ ಸಾಲದಲ್ಲಿ ಹೂತು ಹೋಗಿದ್ದಾರೆ "ನಾನು ಈಗ ಇರುವಂತೆ ಬಾಳಲು ಎನ್ನುತ್ತೀರಿ ನಾನಿರುವಂತೆ ಇದ್ದೂ ನನ್ನ ಸಂಬಳದಲ್ಲಿ ಮೂರು ಕಾಸಾದರೂ ಮಿಗಿಸಿದ್ದೇನೆಂದು ತಿಳಿದಿದ್ದೀರಾ? ಇಲ್ಲಿನ ಬೆಲೆ ಹೇಗಿದೆ ಎಂದು ನಿಮಗೆ ಇನ್ನೂ ಗೊತ್ತಿಲ್ಲ. ಪ್ರತಿಯೊಂದಕ್ಕೂ ಮೂರುಪಾಲು ಬೆಲೆ."

ಆ ಕ್ಯಾಪ್ಟನ್ ಬಹಳ ಜಾಗರೂಕತೆಯಿಂದ ವೆಚ್ಚಮಾಡುತ್ತಿದ್ದನು ಇಸ್ಪೀಟ್ ಆಡುತ್ತಿರಲಿಲ್ಲ, ಅಪರೂಪವಾಗಿ ಕುಡಿಯುತ್ತಿದ್ದ, ಸೇದುತ್ತಿದ್ದುದು ಬಹಳ ಅಗ್ಗದ ಹೊಗೆಸೊಪ್ಪು, (ಅದನ್ನು, ಯಾರೋ ಏನೊ, ಮನೆಯ ಹೊಗೆ ಸೊಪ್ಪು ಎನ್ನುತ್ತಿದ್ದ ಅವನು) ಅವನನ್ನು ಕಂಡಕೂಡಲೇ ನನಗೆ ಮಮತೆ ಹುಟ್ಟಿತ್ತು. ಅವನ ಸಕಲ ಶಾಂತ ಮುಖವನ್ನು ನೇರವಾಗಿ ನೋಡುವಂತಿತ್ತು ಕಣ್ಣುಗಳಲ್ಲಿ ಒಂದು ಬಗೆಯ ಕಾಂತಿಯಿತ್ತು ಈ ಸಂಭಾಷಣೆ ನಡೆದ ಮೇಲೆ ಅವನ ಬಗ್ಗೆ ಆತ್ಮೀಯತೆ ಹುಟ್ಟಿತು

ವರ್ಧಾ ಪತ್ರ

ಮೈತಿಕ್ಕುವುದರಲ್ಲಿ ಮಹಾತ್ಮರ ವಿಶ್ವಾಸ

ಬೇಕಾದ ಜೀವಾತು ದೊರೆವುದು

ಗಾಂಧೀಜಿ ಬಿಡುಗಡೆಯಾದ ಸುದ್ದಿ ಕೇಳಿ ವರ್ಧಾದಲ್ಲಿ ಸಂತೋಷವೇ ಸಂತೋಷ; ಈ ಸಲದ ಅನಾರೋಗ್ಯ, ಹಿಂದಿನ ಅವರ ಅನಾರೋಗ್ಯಗಳಿಗಿಂತ ವಿಷಮತರದ್ದೆಂದೂ, ಈ ಸರ್ತಿ ಸೆರೆಮನೆಯಲ್ಲಿ ಕಸ್ತೂರ್‌ಬಾ, ಮಹಾದೇವ ದೇಸಾಯಿ ಮರಣ ಸಂಭವಿಸಿ ಅದರಿಂದ ಮಾನವ ಸ್ವಭಾವ ಸಹಜವಾಗಿ ಅವರಿಗೆ ತುಂಬಾ ಸಂಕಟ ವುಂಟಾಗಿರಬಹುದೆಂದೂ ಭಾವಿಸಿ, ವರ್ಧಾದ ಜನರು ಏನಾದರೂ ಗಾಂಧೀಜಿಗೆ ಅನಿರೀಕ್ಷಿತವುಂಟಾಗಬಹುದೇ ಎಂದು ವಿಷಾದಗೊಂಡಿದ್ದರು.

ಸರಿಯಾದ ಸಂದರ್ಭದಲ್ಲಿ, ವೇವಲರು ಸರಿಯಾದ ಹಾದಿ ಹಿಡಿದಿದ್ದಾರೆ. ಅವರು ಇದೇ ಹಾದಿಯಿಂದ ಮುಂದುವರಿದರೆ ಭಾರತ ಸಮಸ್ಯೆ ಪರಿಹರಿಸಲು ಇದು ಕಾರಣವಾಗಬಹುದು ಬಿಡುಗಡೆಯ ನಂತರ ಗಾಂಧೀಜಿ ಹೆಚ್ಚು ಗುಣಮುಖರಾಗದಿದ್ದರೂ ದೇವರಲ್ಲಿ ಅಚಲ ವಿಶ್ವಾಸವಿಟ್ಟಿರುವ ಗಾಂಧೀಜಿ ತನ್ನ ಆರೋಗ್ಯ ಹಾಗೂ ಜೀವಿತದ ವಿಷಯ ಹೆಚ್ಚು ಗಲಭೆಗೊಳ್ಳುವವರಲ್ಲ

ರಕ್ತದ ಒತ್ತಡವೇ ಇಂದು ಅವರ ಆರೋಗ್ಯದ ಕುರಿತು ವಿಷಮನಿಂತಿದೆ. ಗಾಂಧೀಜಿ ಔಷಧಿ ತೆಕ್ಕೊಳ್ಳಲು ಒಪ್ಪುವುದಿಲ್ಲವೆಂದು ಎಲ್ಲರಿಗೂ ಗೊತ್ತೇ ಇದೆ. ಕಳೆದ ಮಹೋಪವಾಸ ಕಾಲದಲ್ಲಿಯೂ ಗಾಂಧೀಜಿ ಔಷಧಿ ತೆಕ್ಕೊಳ್ಳ ಒಪ್ಪಲಿಲ್ಲ. ರಕ್ತದ ಒತ್ತಡ ಹೆಚ್ಚಾದದ್ದು ಸಂಪೂರ್ಣ ವಿಶ್ರಾಂತಿ ಮತ್ತು ಆಹಾರನಿಯಮದಿಂದಲೂ, ಕಡಿಮೆ ರಕ್ತದ ಒತ್ತಡವು ಜೀವಾತುಗಳಿಂದಲೂ ಗುಣವಾಗುತ್ತದೆ. ಮೈತಿಕ್ಕುವುದನ್ನು ವಿಜ್ಞಾನ ರೀತಿಯಿಂದ ಮಾಡಿದರೆ ಅದರಿಂದ ಶರೀರಕ್ಕೆ ಬೇಕಾದ ಜೀವಾತು ಹುಟ್ಟುವುದೆಂದು ಗಾಂಧೀಜಿ ವಿಶ್ವಾಸ.

ಸೇವಾಗ್ರಾಮ ಆಶ್ರಮದ ಸಂಸ್ಕೃತ ವಿದ್ವಾಂಸರಾದ ಶ್ರೀ ಪರಚುರೆ ಶಾಸ್ತ್ರಿಗಳು, ಕುಷ್ಠರೋಗದಿಂದ ನರಳುತಿದ್ದಾಗ, ಗಾಂಧೀಜಿ ಸ್ವತಃ ನರಸು ತೈಲದಿಂದ ಮೈತಿಕ್ಕಿದ್ದಾರೆ. ಅದರಿಂದ ತುಂಬಾ ಪ್ರಯೋಜನ ದೊರಕಿದೆ. ಶ್ರೀ ಶಾಸ್ತ್ರಿಗಳು ಈಗ ಸಂಪೂರ್ಣ ಗುಣಹೊಂದಿದ್ದಾರೆ. ಗಾಂಧೀಜಿ ಸ್ವತಃ ಒಳ್ಳೆಯ ಅನುಭವೀ ವೈದ್ಯರಾಗಿದ್ದು ಮೈತಿಕ್ಕಿ ಆರೋಗ್ಯ ಸಂಪಾದಿಸುವುದರಲ್ಲಿ ತುಂಬಾ ವಿಶ್ವಾಸವುಳ್ಳವರಾಗಿದ್ದಾರೆ; ಅವರೇ ಬಾದಾಮಿ ತೈಲದಿಂದ ಮೈತಿಕ್ಕಿಸಿಕೊಳ್ಳುತ್ತಾರೆ

ಬಾಪುವನ್ನು ಕಂಡು ಬಂದೊಬ್ಬರು ನನ್ನೊಡನೆ ಹೇಳಿದರು, 'ಅವರು ಹಸನ್ಮುಖಿಗಳಾಗಿದ್ದಾರೆ, ಅವರ ಆರೋಗ್ಯದ ವಿಷಯ ಗಲಭೆಯೇ ಇಲ್ಲ' ಎಂದು, ವರ್ಧಾಕ್ಕೆ ಬಾಪು ಯಾವಾಗ ಬರುತ್ತಾರೆಂಬುದು ಇನ್ನೂ ನಿಶ್ಚಯವಾಗಿಲ್ಲ, ಇದೆಲ್ಲಾ ಅವರ ಆರೋಗ್ಯದ ಮೇಲೆ ಹೊಂದಿಕೊಂಡಿದೆ. ಅವರ ಸದ್ಯದ ಕಾರ್ಯಕ್ರಮವೆಂದರೆ ಆರೋಗ್ಯಕ್ಕಾಗಿ ವಿಶ್ರಾಂತಿ ಆದರೆ ಆರೋಗ್ಯ ಹೊಂದಿದ ಕೂಡಲೇ ಬಾಪು ವರ್ಧಾಕ್ಕೆ ಬರುತ್ತಾರೆ ಖಂಡಿತ

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ.
ಬುಡ್ಸ್ ಬಂಡಿ	ಬೆಳಗ್ಗೆ ೬-೨೫	ರಾತ್ರಿ ೭-೪೦.
ಪಟೆಲ್ ಕನ್ನಾನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಗ್ಗೆ ೯ ೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೬-೫	ಸಾಯಂ. ೭.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದಕಾರಣ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE · **The Joint Booking Office,** KODIALBAIL.

ಬಿಡುಗಡೆಯ ನಂತರ

ಮಹಾತ್ಮಾ ಗಾಂಧೀ ಹೇಗಿದ್ದಾರೆ?

ಜುಹುವಿನಲ್ಲಿ ವಿಶ್ರಾಂತಿ ಹೊಂದುತ್ತಾರೆ

೧೫ ದಿನಗಳ ಮೌನವ್ರತ

[illegible] ಪಾರ್ಲಿಮೆಂಟಿನಲ್ಲಿ ಅವರು ಹೇಳಿದರು.

ವಿಶ್ರಾಂತಿ ಬೇಕು

ಗಾಂಧೀಜಿ [illegible] ಗುಣಮುಖರಾಗುವುದರಲ್ಲಿ ಸಂದೇಹವಿಲ್ಲ. ಅಂದೆ ಇಂದಿನ ಸ್ಥಿತಿ ಹಿಂದಿಗಿಂತ ಉತ್ತಮವಾಗಿದೆ. ಅವರು ಮಲೇರಿಯಾದಿಂದ ಬಳಲಿದರು; ಅದರ ಪರಿಣಾಮವಾಗಿ ಎನಿಮಿಯಾ ಇದೆ; ಮೂತ್ರ ಕೋಶವೂ ತೃಪ್ತಿಕರವಾಗಿಲ್ಲ. ದೇಹಬಲ ಹೀನವಿದೆ. ಮೂರು ವಾರಗಳಿಂದ ಮಲೇರಿಯಾ ಇಲ್ಲದಿದ್ದರೂ ಎನಿಮಿಯಾ ಹಾಗೆಯೇ ಇದೆ. ಎದೆಗುಂಡಿಗೆ ಸ್ನಾಯು ಬಲವಿಲ್ಲ. ಧ್ವನಿ ಕುಗ್ಗಿರುವುದು. ಬೇಗ ಆಯಾಸವಾಗುತ್ತದೆ. ಸ್ವಲ್ಪ ಮಾತನಾಡಿದೊಡನೆ ಹಾಗೂ ಮಾತುಗಳನ್ನು ಕೇಳಿದೊಡನೆ ಅವರು ಬಳಲುತ್ತಾರೆ. ಏಕಾಗ್ರತೆಯೂ ಕಠಿಣವಾಗುತ್ತದೆ. ಅವರು ಮೊದಲಿನಂತೆ ಮಾನಸಿಕ ಶ್ರಮತೆಗೆದುಕೊಳ್ಳಬೇಕಾದರೆ ತುಂಬಾ ಕಷ್ಟವುಂಟು. ಸರಿಯಾದ ವಾತಾವರಣ ಕಲ್ಪಿಸಬೇಕು. ಅವರ ಸಂದರ್ಶನ, ಭೇಟಿ, ಚರ್ಚೆ ಮಾಡ ಬಾರದು' ಎಂದು ಡಾ। ಜೀವರಾಜ ಮೆಹತಾ ಬರೆದಿರುವರು'

'ಹಕ್ಕಿ ಹಾರಿ ಹೋಯಿತು'

ಗಾಂಧೀಜಿ ಜುಹೂಗೆ ಆರೋಗ್ಯ ಹೊಂದಲು ತೆರಳಿದರು; ಅವರು ಮುಂಬಯಿಗೆ ಬಂದ ಕೂಡಲೇ ಜನರು ಅವರನ್ನು ಅಭೂತ ಪೂರ್ವ ಸ್ವಾಗತಿಸಿದರು. ಗಾಂಧೀಜಿ ಜತೆಗೆ ಡಾ। ಸುಶೀಲಾ ನಾಯರ್ ಪ್ಯಾರೆಲಾಲ್, ಮೀರಾಬೆನ್, ಕನೂ ಗಾಂಧೀ, ದಿನಶಾಮೆಥಾ ಮೊದಲಾದವರಲ್ಲದೆ ಸರಕಾರದ ಪರವಾಗಿ ಜೈಲ ಸುಪರಿಂಟೆಂಡೆಂಟರಾದ ಕಟೇಲಿಯವರೂ ಇದ್ದರು. ಗಾಂಧೀಜಿ ಪುನೆಯಿಂದ ಹೊರಡುವ ಮೊದಲು ಆಗಾಖಾನ ಅರಮನೆಗೆ ತೆರಳಿ ಕಸ್ತೂರ್‌ಬಾ ಮತ್ತು ಮಹದೇವ ದೇಸಾಯಿಯರ ಸಮಾಧಿ ಸಂದರ್ಶಿಸಿ, ಆ ಸಮಾಧಿಗಳ ಮೇಲೆ ಪುಷ್ಪಗಳನ್ನಿಟ್ಟರು.

ಗಾಂಧೀಜಿಯವರ ಪ್ರಯಾಣಕ್ಕಾಗಿ ಎರಡನೇ ವರ್ಗದ ಡಬ್ಬಿ, ಪ್ರತಿಯೊಬ್ಬ ಸ್ಥಾನಬದ್ಧ ಕೈದಿಗೆ ಏರ್ಪಾಡು ಮಾಡುವಂತೆ ಮಾಡಿದ್ದರು, ಆದರೆ ಅವರು ಮೂರನೇ ವರ್ಗದ ಗಾಡಿಯಲ್ಲಿಯೇ ಕುಳಿತುಕೊಳ್ಳುವುದಾಗಿ ಹೇಳಿದ್ದರಿಂದ ಹಾಗೆ ಮಾಡಲಾಯಿತು. ಗಾಂಧೀಜಿ ಪ್ರತಿಯೊಂದು ಸ್ಟೇಶನಿನಲ್ಲಿಯೂ ಹರಿಜನ ನಿಧಿ ಸಂಗ್ರಹಿಸಿದರು.

ಆಗಾಖಾನ ಅರಮನೆಗೆ ಹೋಗಿ ಬಂದವರೊಬ್ಬರು 'ಹಕ್ಕಿ ಹಾರಿಹೋಯಿತು. ಗೂಡು ಬರಿದಾಗಿದೆ' ಎಂದರು. ೧೯೪೨ರ ಆಗಸ್ಟ ೯ರಿಂದ ಸೆರೆಮನೆಯಾಗಿ ಮಾರ್ಪಟ್ಟ ಈ ಅರಮನೆಯುನ್ನು ಈಗ ಅದರ ಒಡೆಯರಿಗೆ ಬಿಟ್ಟುಕೊಡುವ ಆಲೋಚನೆ ನಡೆದಿದೆ. ಅದರ ಸುತ್ತು ಹಾಕಿದ ಮುಳ್ಳು ಬೇಲಿ ಈಗಲೂ ಇದೆ.

ಬಂಧನದ ಗುರುತು

ಆ ಅರಮನೆ ಪಡ ಸಾಲೆಯಲ್ಲಿ ಗಾಂಧೀಜಿಯನ್ನು ಸೆರೆ ಹಾಕಿದ ಗುರುತು ಇನ್ನೂ ಇರುವುದು. ಅಲ್ಲಿನ ಒಂದು ಗೋಡೆಯಲ್ಲಿ ಎತ್ತರದ ಗುರುತು ಹಾಕಲಾಗಿದೆ. ಮೀರಾ ಬೆನ್ ಎಲ್ಲರಿಗಿಂತಲು ಎತ್ತರವೆಂದೂ, ಕಸ್ತೂರ್‌ಬಾ ಎಲ್ಲರಿಗಿಂತಲು ಕುಳ್ಳರೆಂದೂ ಅಲ್ಲಿನ ಗುರುತು ಸಾರುತ್ತವೆ.

ಅರಮನೆಯ ಆವರಣದ ಆಗ್ನೇಯ ಭಾಗದ ಒಂದು ಕಲ್ಲಿನ ಚೌಕದಲ್ಲಿ ಮಹಾದೇವ ದೇಸಾಯಿ ಮತ್ತು ಕಸ್ತೂರ್‌ಬಾ ಸಮಾಧಿಗಳಿವೆ. ಪ್ರತಿಯೊಂದು ಸಮಾಧಿಯು ಆರಡಿ ಉದ್ದ ಎರಡಡಿ ಎತ್ತರವಿದೆ. ಈ ಸಮಾಧಿಗಳ ದಕ್ಷಿಣ ಭಾಗದಲ್ಲಿ ಮಹಾತ್ಮರು ಎರಡು ಬೇವಿನ ಗಿಡಗಳನ್ನು ಚಿರಶಾಂತಿ ಹೊಂದಿದ ಆ ಎರಡು ಆತ್ಮಗಳ ಸ್ಮಾರಕವಾಗಿ ನೆಟ್ಟಿರುವರು. ದೇಸಾಯಿ ಸಮಾಧಿ ಮೇಲೆ ಗಾಂಧೀಜಿಯವರು 'ಓಂ' ಎಂದೂ, ಕಸ್ತೂರ್‌ಬಾ ಸಮಾಧಿ ಮೇಲೆ 'ಹೇ ರಾಮ' ಎಂದು ಬರೆದಿದ್ದಾರೆ.

ಆ ಸಣ್ಣ ಭಾಗವನ್ನು ಕ್ರಯಕ್ಕೆ ಕೊಡಬೇಕೆಂದು ಆ ಸ್ಥಳವನ್ನು ಸಂದರ್ಶಿಸಲು ಸಾರ್ವಜನಿಕರಿಗೆ ಸಮ್ಮತಿ ಕೊಡಬೇಕೆಂದೂ, ಗಾಂಧೀಜಿ ಸರಕಾರದೊಡನೆ ಪತ್ರ ವ್ಯವಹಾರ ನಡೆಸುತ್ತಾರೆಂದು ಸುದ್ದಿ. ಮಹಾತ್ಮರ ಕೆಲ ಮಿತ್ರರು ಇಡೀ ಆಗಾಖಾನ ಅರಮನೆಯನ್ನು ಕ್ರಯಕ್ಕೆ ಕೊಂಡು ರಾಷ್ಟ್ರೀಯ ಸ್ಮಾರಕವಾಗಿ ದೇಶಕ್ಕೆ ಒಪ್ಪಿಸಲು ತಮ್ಮ ಸಿದ್ಧತೆ ವ್ಯಕ್ತ ಪಡಿಸಿರುವರೆಂದೂ ಹೇಳಲಾಗಿದೆ.

ಬಾಲಕನ ಭಕ್ತಿ

ತಾ. ೧೧ರಂದು ಪ್ರಾತಃ ೧೦-೧೫ಕ್ಕೆ ಗಾಂಧೀಜಿ ಜುಹುಗೆ ಬಂದು ತಲಪಿದರು ಪ್ರಯಾಣವು ಸುಖಕರವಾಗಿತ್ತೇ ಎಂದುದಕ್ಕೆ ಗಾಂಧೀಜಿ 'ಹೌದು' ಎಂದರು. ಪ್ರಕಟಣೆಗೆ ಏನಾದರೂ ಕೊಡುವುದಿದೆಯೇ ಎಂಬುದಕ್ಕೆ, ಡಾಕ್ಟರರ ನಡುವೆ ಸಿಕ್ಕಿ ಬಿದ್ದಿದ್ದೇನೆ ಎಂದರು.

ಜುಹುಗೆ ಮಹಾತ್ಮರು ಬಂದೊಡನೆಯೇ ೧೨ ವರ್ಷ ಒಬ್ಬ ಹುಡುಗ ದೂರದಿಂದ ಅಲ್ಲಿ ವರೆಗೆ ನಡೆದು ಕೊಂಡು ಬಂದು ತಾನು ತಂದಿದ್ದ ಹಣ್ಣುಗಳನ್ನು ಸಮರ್ಪಿಸಿದನು. ಮಹಾತ್ಮರು ಪ್ರಶ್ನಿಸಿದಾಗ ತನ್ನ ಬಂಧುಗಳು ತನಗೆ ಉಡುಗರೆ ಕೊಟ್ಟ ಹಣವನ್ನು ಉಳಿಸಿ ಹಣ್ಣು ತಂದೆನೆಂದು ಅವನು ಉತ್ತರವಿತ್ತನು. ಈ ಹಣ್ಣುಗಳನ್ನು ನಾನೇ ಉಪಯೋಗಿಸಬೇಕೊ? ನನಗಾಗಿ ತಂದ ಹಣ್ಣೊ? ಎಂದು ಗಾಂಧೀಜಿ ಪುನಃ ಪ್ರಶ್ನಿಸಿದರು. ನಾನು ನಿಮಗೆಂದೇ ತಂದಿದ್ದೇನೆ, ನೀವು ಇಚ್ಛೆಯಿದ್ದಂತೆ ಮಾಡಬಹುದು ಎಂದು ಅದಕ್ಕೆ ಬಾಲಕನು ಉತ್ತರವಿತ್ತನು.

ಸುಂದರ ಬನದಲ್ಲಿರುವ ಶಾಂತಿಕುಮಾರ ಮುರಾರಜಿಯವರು ಗಾಂಧೀ ಆಶ್ರಮದಲ್ಲಿರುವ ಜಹಾಂಗೀರ ಪಟೇಲ ಭವನದಲ್ಲಿ ಗಾಂಧೀಜಿ ವಿಶ್ರಾಂತಿ ಪಡೆಯುವರು. ೧೯೨೪ರಲ್ಲಿ ಹಿಂದೊಮ್ಮೆ ಗಾಂಧೀಜಿ ಕರುಳಿನ ರೋಗಕ್ಕಾಗಿ ಶಸ್ತ್ರ ಚಿಕಿತ್ಸೆ ನಡೆದಿದ್ದಾಗ ಅಲ್ಲಿ ಮೂರು ತಿಂಗಳು ಚಿಕಿತ್ಸೆ ಹೊಂದಿದ್ದರು, ೧೯೩೭ರಲ್ಲಿ ಒಮ್ಮೆ ಇಲ್ಲಿ ಗಾಂಧೀಜಿ ೧॥ ತಿಂಗಳು ಇದ್ದರು.

ನಿದ್ದೆ ಬಂದಿದೆ

ತಾ. ೧೧ರಂದು ಗಾಂಧೀಜಿಗೆ ಚೆನ್ನಾಗಿ ನಿದ್ರೆ ಬಂದಿದೆ. ಪ್ರಕೃತಿಯಲ್ಲಿ ಕೊಂಚ ಸುಧಾರಣೆ ಕಂಡುಬಂದಿರುವುದು. ಆದರೂ ದಣಿದಂತೆ ತೋರುತ್ತಾರೆ. ಆ ದಿನ ಮುಂಜಾನೆ ತಿರುಗಾಡಲು ಹೋಗಿ ಬಂದು ತುಸು ವಿಶ್ರಾಂತಿ ತೆಗೆದುಕೊಂಡರು. ಸಂಜೆ ಗಾಂಧೀಜಿ ಗಾಡಿಯ ಬೆಂಚಿನ ಮೇಲೆ ಕುಳಿತು ಸಮುದ್ರಾಭಿಮುಖವಾಗಿ ಒರಗಿ ಕುಳಿತಿದ್ದರು. ಆಗ ನಡೆದ ಪ್ರಾರ್ಥನೆಗೆ ತುಂಬಾ ಜನರು ಬಂದಿದ್ದರು; ಕೆಲವರು ಮಿಲಿಟರಿಯವರೂ ಹಾಜರಾಗಿದ್ದರು. ಎಷ್ಟೋ ಜನರು ಸ್ನಾನಮಾಡಿ ಒದ್ದೆಯಾಗಿಯೇ ಹಾಜರಾಗಿದ್ದರು. ಪ್ರಾರ್ಥನೆಯ ಬಳಿಕ ಗಾಂಧೀಜಿ ಹರಿಜನನಿಧಿ ಕೂಡಿಸಿದರು. ಗಾಂಧೀಜಿ ಭೇಟಿ ಇನ್ನಷ್ಟು ನಿರ್ಬಂಧಿಸಲಾಗಿದೆ. ಅಮೇರಿಕದ ಸುದ್ದಿಗಾರರೊಬ್ಬರು ಬಂದಿದ್ದು ಅವರನ್ನೂ ಭೇಟಿಗೆ ಬಿಡಲಿಲ್ಲ.

ಮುಸಲ್ಮಾನರ ಸ್ವಯಂನಿರ್ಣಯ ತತ್ವವನ್ನು ಒಪ್ಪಿ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳಲು ಗಾಂಧೀಜಿಯವರು ಸಿದ್ಧರಿರುವರೆಂದೂ, ೧೯೪೨ ಆಗಸ್ಟನ್ನ [illegible] ಜಿನ್ನಾಗೆ ಹೇಗೆ ಬಂದು, ಪತ್ರ ಕಳುಹಿ[illegible]ದ್ದಾರೆಂದೂ ಪ್ರಕಟವಾದ ಸುದ್ದಿ ಕಡೆ ಮಹಾತ್ಮರ ಕಾರ್ಯದರ್ಶಿ ಶ್ರೀ. ಪ್ಯಾರೆಲಾಲರ ಲಕ್ಷ್ಯವನ್ನು ಸೆಳೆದಾಗ ಅದು ನಿರಾಧಾರವಾದುದೆಂದು ಅವರು ಉತ್ತರವಿತ್ತರು.

ಭೂತಕ್ಕೆ ಹೆದರಿ—

'ಗಾಂಧೀಜಿ ಸೆರೆಮನೆಯಲ್ಲಿ ಮರಣ ಹೊಂದಿದರೆ ಅವರ ಭೂತವು ಭಾರತದಲ್ಲಿ ಬ್ರಿಟಿಶರನ್ನು ಸದಾ ಬಾಧಿಸಬಹುದು ಹಾಗಾಗಿ ಅವರನ್ನು ಸೆರೆಮನೆಯಿಂದ ಬಿಡಲಾಯಿತು' ಎಂದು 'ಸ್ಟೇಟ್ಸ್‌ಮನ ಮತ್ತು ನೇಶನ್' ಪತ್ರಿಕೆ ಬರೆಯುತ್ತದೆ.

ರೇಶನಿಂಗ್ ಕಾರ್ಡಿನ ಮೇಲೆ ಗಾಂಧೀಜಿ ಸಂಗಡಿಗರೆಲ್ಲರೂ ಸಹಿ ಹಾಕಿದ ಬಳಿಕ, ಗಾಂಧೀಜಿಯವರಿಗೆ ಆ ಪತ್ರಕ್ಕೆ ಸಹಿ ಹಾಕಲು ಅವರು ಅದಕ್ಕೆ ಸಹಿ ಹಾಕಲು ನಿರಾಕರಿಸಿದರು, 'ನಾನು ಆಹಾರಧಾನ್ಯ ತೆಗೆದುಕೊಳ್ಳುವುದಿಲ್ಲ. ಕೇವಲ ಹಾಲು ಹಣ್ಣು ಮಾತ್ರ ತೆಗೆದುಕೊಳ್ಳುತ್ತೇನೆ' ಎಂದು ಗಾಂಧೀಜಿ ಹೇಳಿದರು. ಇದರಿಂದಾಗಿ ಅವರ ಹೆಸರನ್ನು ರೇಶನಿಂಗ ಕಾಯಿದೆಯಿಂದ ತೆಗೆದು ಹಾಕಲಾಗಿದೆ.

ಗಾಂಧೀಜಿ ತಾ. ೧೪ರಿಂದ ೧೫ ದಿನಗಳ ವರೆಗೆ ಎಡೆಬಿಡದೆ ಮೌನ ಪಾಲಿಸುವರು. ಈ ಮೌನದಿಂದ ತುಂಬಾ ಉಪಕಾರ ಕಂಡು ಬಂದಲ್ಲಿ ಅದನ್ನು ಮುಂದುವರಿಸುವರೆಂದೂ ಹೇಳಲಾಗಿದೆ.

'ಕಳೆದ ವರ್ಷ ಜಿನ್ನರ ಮುಂದಿಟ್ಟ ಪ್ರಶ್ನೆಯನ್ನೇ ಈ ವರ್ಷವೂ ನಾನು ಅವರ ಮುಂದಿಡುತ್ತೇನೆ, ಹಿಂದು ಮುಸ್ಲಿಂ ಐಕ್ಯದ ಬಗ್ಗೆ ನನಗೆ ಗುಣಮುಖವಾದೊಡನೆ ನಾನು ಅವರೊಡನೆ ಮಾತನಾಡುತ್ತೇನೆ' ಎಂದು ಗಾಂಧೀಜಿ ಖಾಕ್ಸಾರ್ ಧುರೀಣರಾದ ಅಲ್ಲಾಮ ಮಶ್ರಿಕಿಯವರಿಗೆ ತಂತಿ ಬಿಡಲು ಹೇಳಿದ್ದಾರೆ.

ಡಾಕ್ಟರರ ಪರೀಕ್ಷೆ—

ತಾ. ೧೩ರಂದು ಬೆಳಗ್ಗೆ ಮಹಾತ್ಮರನ್ನು ಡಾ। ಗಿಲ್ಡರ್, ಡಾ। ಸುಶೀಲಾ ನಾಯರ್, ಡಾ। ಕೆ. ಸಿ. ಗಜ್ಜರ್ ಮತ್ತು ಡಾ। ಪಿ. ಸಿ. ಬಾರೋಚಾ ಈಗೆ ನಾಲ್ವರು ಡಾಕ್ಟರರು ಪರೀಕ್ಷಿಸಿದರು.

ಗಾಂಧೀಜಿ ಆರಾಮದಿಂದಿದ್ದು ಸುಖವಾಗಿ ನಿದ್ದೆ ಮಾಡಿದರು. ಅವರನ್ನು ನೋಡಿದಾಗ ವಿಶ್ರಾಂತಿ ಫಲಕಾರಿಯಾದಂತೆ ಕಂಡು ಬಂತು. ಅವರ ಮಲವನ್ನು ಪರೀಕ್ಷೆ ಮಾಡಿದಾಗ ಅದರಲ್ಲಿ ಅತಿಸಾರ ಮತ್ತು ಕೊಕ್ಕೆ ಹುಳದ ಬಾಧೆಯ ಕ್ರಿಮಿಗಳು ಕಂಡು ಬಂದಿವೆ. ಕೊಕ್ಕೆ ಹುಳದ ಬಾಧೆಯಿದೆ ಎಂದು ಕಳೆದ ಫೆಬ್ರವರಿಯ ಉಪವಾಸ ಕಾಲದಲ್ಲಿ ಡಾಕ್ಟರರು ಪರೀಕ್ಷೆ ಮಾಡಿದಾಗ ಕಂಡು ಬಂದಿತ್ತು.

ಗಾಂಧೀಜಿಗೆ ಮುಂಬಯಿಗೆ ಬಂದೊಡನೆ ಡಾ। ಗಜ್ಜರರು ಮಹಾತ್ಮರನ್ನು ಪರೀಕ್ಷೆ ಮಾಡಿ, ೧೪ರಂದು ರಕ್ತ ಪರೀಕ್ಷೆ ಮಾಡಿ ಕೊನೆಗೆ ಕೊಕ್ಕೆ ಹುಳಗಳನ್ನು ನಿರ್ಮೂಲ ಮಾಡಿದರೆ ಗಾಂಧೀಜಿ ಅಶಕ್ತಿ ಕಡಿಮೆಯಾಗಿ ರಕ್ತ ವರ್ಧನೆಯಾಗುವುದರಲ್ಲಿ ಸಂದೇಹವಿಲ್ಲವೆಂದಿದ್ದಾರೆ.

ಮಹಾತ್ಮರನ್ನು ಪೇಥೋಲಜಿಸ್ಟರು ಪರೀಕ್ಷೆ ಮಾಡಿ ಅವರ ದೇಹ ಕ್ರಿಯೆಯಲ್ಲಿ ಲೋಹದ ಅಂಶ ಕಡಿಮೆಯಿರುವುದೆಂದು ಹೇಳಿದ್ದಾರೆ.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

(೧ನೇ ಪುಟದಿಂದ)

ಧಾಳಿ

ತಮೊಸುದಾಂಗೆ ಎರಡು ಮೈಲು ದೂರವಿರು ವವಳು. ಕೊಂಚ ಭೂಮಿಯಿದೆ ಆಕೆ. ಕಾಕ ಸಸ್‌ಗೆ ಹೊರಡುವ ಮುನ್ನ ಅವಳ ಮನೆಗೆ ಹೋಗಿದ್ದೆ. ತನ್ನ 'ಪಾಷಂಕ'ನನ್ನು (ಆಕೆಯು ಪರಿಗೂಡದಲ್ಲಿನ ಇಳಿವಯಸ್ಸಿನ ಕ್ಯಾಪ್ಟನ್ ಮಗ ನನ್ನು ಪ್ರೀತಿಯಿಂದ ಕರೆಯುವ ಹೆಸರು ಅದು) ನಾನು ನೋಡಲಿರುವುದನ್ನು ಕೇಳಿ ಮುದುಕಿಗೆ ಬಹಳ ಸಂತೋಷವಾಯಿತು, ನಾನು 'ಜೀವಂತ ಪತ್ರ'ವಾಗಿ ಆಕೆಯ ಎಲ್ಲ ಸುದ್ದಿಯನ್ನೂ ಅವನಿಗೆ ತಿಳಿಸುವುದು ಮಾತ್ರವಲ್ಲದೆ ಆಕೆಯ ಸಣ್ಣದೊಂದು ಬುತ್ತಿಯನ್ನೂ ತಲುಪಿಸಿಯೇನೆಂದು ಆಕೆಗೆ ಎದೆಯುಬ್ಬಿತು. ನನಗೆ ಒಳ್ಳೆಯ ಸಿಹಿತಿಂಡಿಯನ್ನೂ ಸುಟ್ಟ ಬಾತುಕೋಳಿಯನ್ನೂ ಕೊಟ್ಟು ಅವಳು ಕಿರುಮನೆಗೆ ಹೋಗಿ ಕರಿಯ ರೇಶ್ಮೆ ದಾರ ಸುತ್ತಿದ ಕರಿಯ ಚೀಲವೊಂದನ್ನು ತಂದಳು.

'ಇಲ್ಲಿ ನೋಡು. ಇದು ಸುಡು ಹೊದರಿನ ಮಹಾಮಾತೆ ಮಧ್ಯವರ್ತಿನಿಯ ಚಿತ್ರಪಟ.' ಎನ್ನುತ್ತ ತನ್ನ ಮೈಮೇಲೆ ಕೈಯಿಂದ ಕ್ರಾಸ್ ಆಕಾರ ಮಾಡಿ ಕನ್ಯಾ ಮಾತೆಯ ಚಿತ್ರಪಟಕ್ಕೆ ಮುತ್ತಿಕ್ಕಿ ಅದನ್ನು ನನ್ನ ಕೈಯಲ್ಲಿಟ್ಟಳು. ಇದನ್ನು ದಯವಿಟ್ಟು ಅವನಿಗೆ ಕೊಡು. ಅವನು ಕಾಕಸಸ್‌ಗೆ ಹೋದಾಗ ಅವನ ಹೆಸರಿನಲ್ಲಿ ಒಂದು ಪೂಜೆ ಮಾಡಿಸಿದೆ ನೋಡು. ಅವನು ಜೀವಂತನಾಗಿ ಸುರಕ್ಷಿತವಾಗಿದ್ದರೆ ಈ ದೇವಮಾತೆಯ ಚಿತ್ರವನ್ನು ಅವನಿಗೋಸ್ಕರ ಮಾಡಿಸುವುದಾಗಿ ಹರಕೆ ಹೊತ್ತೆ. ಈ ಹದಿನೆಂಟು ವರ್ಷಕಾಲವೂ ಮಹಾತಾಯಿಯೂ ಸಾಧುಸಂತರೂ ಅವನ ಮೇಲೆ ದಯೆದೋರಿದುದರಿಂದ ಅವನಿಗೆ ಒಂದು ಗಾಯ ಕೂಡ ಆಗಲಿಲ್ಲ. ಎಷ್ಟೊಂದು ಯುದ್ಧಗಳಲ್ಲಿ ಅವನು ಭಾಗಿಯಾಗಿದ್ದಾನೆ! ಅವನ ಜೊತೆಯಲ್ಲಿ ಹೋದ ಮೈಕೇಲ್ ಹೇಳಿದ್ದು ಕೇಳಿದರೆ ರೋಮಾಂಚನವಾಗುತ್ತದೆ. ಮಗನ ಸುದ್ದಿ ನನಗೆ ತಿಳಿದುದೆಲ್ಲ ಬೇರೆಯವರ ಬಾಯಿಂದಲೇ. ನನ್ನ ಮುದ್ದ ಅವನು ತನ್ನ ದಂಡಯಾತ್ರೆಗಳ ಸುದ್ದಿಯನ್ನು ನನಗೆ ತಿಳಿಸುವುದೇ ಇಲ್ಲ—ನಾನು ಹೆದರಿಕೊಂಡೇನೆಂದು.'

ಆ ಕ್ಯಾಪ್ಟನ್ ನಾಲ್ಕು ಸಲ ಕಠಿಣವಾದ ಗಾಯಗಳಿಗೊಳಗಾಗಿದ್ದನೆಂದೂ ಆದರೆ ಆ ವಿಷಯವಾಗಲಿ ತನ್ನ ದಂಡಯಾತ್ರೆಗಳ ವಿಷಯವಾಗಲಿ ಅವನು ತಾಯಿಗೆ ಬರೆದಿರಲಿಲ್ಲವೆಂದೂ ನಾನು ಕಾಕಸಸ್‌ಗೆ ಹೋದಮೇಲೆ ನನಗೆ ತಿಳಿಯಿತು. ಅದೂ ಕ್ಯಾಪ್ಟನ್‌ನಿಂದಲ್ಲ.

ಆಕೆ ಮುಂದುವರಿಸುತ್ತಾ ಹೇಳಿದಳು ಆದುದರಿಂದ ನಾನು ಆಶೀರ್ವಾದದೊಂದಿಗೆ ಕೊಡುವ ಈ ಪವಿತ್ರ ಮೂರ್ತಿಯನ್ನು ಅವನೂ ಧರಿಸಲಿ. ಪವಿತ್ರತಮೆಯಾದ ಮಧ್ಯವರ್ತಿನಿ ಅವನನ್ನು ಕಾಯಲಿ ಯುದ್ಧಕ್ಕೆ ಹೋಗುವಾಗ ಲಂತು ಇದನ್ನವನು ಖಂಡಿತ ಹಾಕಿಕೊಳ್ಳಲಿ. ಪ್ರಿಯ ಗೆಳೆಯ ಅವರಿಗೆ ಹಾಗೆಯೇ ಹೇಳು. "ನಿನ್ನ ತಾಯಿ ಹಾಗೆ ಈ ಅಪೇಕ್ಷೆಪಡುತ್ತಾಳೆ" ಎಂದು ಹೇಳು.

ಆಕೆ ಹೇಳಿದಂತೆಯೇ ಮಾಡುವುದಾಗಿ ಒಪ್ಪಿಕೊಂಡೆ.

"ನನ್ನ ಪಾಷೆಯನ ಬಗ್ಗೆ ನಿನಗೆ ಪ್ರೀತಿ ಬೆಳೆಯಿತೆಂದು ಬಲ್ಲೆ" ಎಂದು ಮುಂದುವರಿಸುತ್ತ ಹೇಳಿದಳು: "ಅವನು ಅಷ್ಟು ಒಳ್ಳೆಯವನು. ಅವನು ನನಗೆ ಪ್ರತಿ ವರ್ಷ ಹಣಕಳಿಸದೆ ಇರುವುದೇ ಇಲ್ಲ. ನನ್ನ ಮಗಳು ಅನ್ನುಷ್ಕಾಗೂ ಬಹಳ ಸಹಾಯ ಮಾಡುತ್ತಾಳೆ. ಇಷ್ಟೆಲ್ಲ ಮಾಡುವುದು ಅವನ ಸಂಬಳದಿಂದಲೇ. ಅಂತಹ ಮಗುವನ್ನು ದಯಪಾಲಿಸಿದುದಕ್ಕಾಗಿ ದೇವರಿಗೆ ವಂದನೆ" ಎನ್ನುವಾಗ ಆಕೆಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

"ಆಗಾಗ ನಿನಗೆ ಪತ್ರ ಬರೆಯುತ್ತಾನೆಯೆ?" ಎಂದು ಕೇಳಿದೆ.

"ಅಪೂರ್ವವಾಗಿ ಬರೆಯುತ್ತಾನೆ, ಮುದ್ದು; ಪ್ರಾಯಶಃ ವರ್ಷಕ್ಕೊಮ್ಮೆ ಹಣ ಕಳುಹಿಸುವಾಗ ಮಾತ್ರ. ಅವನು ಹೇಳುವುದಿದು 'ನಾನು ಬರೆಯದಿದ್ದರೆ ಅಮ್ಮ, ನಾನು ಬದುಕಿದ್ದೇನೆ. ಚೆನ್ನಾಗಿದ್ದೇನೆ ಎಂಬುದೇ ಅದರ ಅರ್ಥ. ನನಗೇನಾದರೂ ಸಂಭವಿಸಿದರೆ—ಹಾಗಾಗದಂತೆ ದೇವರು ಕಾಪಾಡಲಿ—ನಾನಿಲ್ಲದೆಯೇ ಅವರು ನಿನಗೆ ತಿಳಿಸುತ್ತಾರೆ.'"

ಕ್ಯಾಪ್ಟನ್‌ಗೆ ತಾಯಿಯ ಉಡುಗೊರೆಯನ್ನು ನಾನು ಕೊಟ್ಟಾಗ—ಅವನಿದ್ದುದು ನನ್ನ ಜೀಡಿನಲ್ಲೇ—ಒಂದು ಚೂರು ಕಾಗದ ತರಿಸಿ ಅದನ್ನು ಭದ್ರವಾಗಿ ಸುತ್ತಿ ಮೂಲೆ ಇರಿಸಿದನು. ಅವನ ತಾಯಿಯ ಜೀವನದ ಅನೇಕ ವಿಷಯಗಳನ್ನು ಹೇಳಿದೆ. ಅವನು ಮೌನಿಯಾಗಿದ್ದು ನಾನು ಮಾತು ಮುಗಿಸಿದ ಮೇಲೆ ಒಂದು ಮೂಲೆಗೆ ಹೋಗಿ ಬಹಳ ಹೊತ್ತು ಗುಡುಗುಡಿಯನ್ನು ತುಂಬಿಸುತ್ತಿದ್ದನು:

"ಹೌದು, ಬಹಳ (Splendid) ಒಳ್ಳೆಯ ಮುದುಕಿ ಆಕೆ" ಎಂದು ಅಲ್ಲಿಂದಲೇ muffled ಕುಗ್ಗಿದ ದನಿಯಲ್ಲಿ ಹೇಳಿದನು. "ಅವಳನ್ನು ಪುನಃ ನೋಡುವ ಪುಣ್ಯ ನನಗೆ ಲಭಿಸೀತೆ?"

ಈ ಮಾತುಗಳು ಹೆಚ್ಚಿನ ಪ್ರೀತಿಯನ್ನೂ ದುಗುಡವನ್ನೂ ಸೂಚಿಸಿದುವು.

'ನೀನು ಇಲ್ಲಿ ನೌಕರಿ ಮಾಡುವುದೇಕೆ?" ನಾ ಕೇಳಿದೆ.

"ಪ್ರತಿಯೊಬ್ಬನೂ ನೌಕರಿ ಮಾಡಲೇಬೇಕು" ಎಂದನು ಆತ ಸ್ಥಿರ ಬುದ್ಧಿಯಿಂದ.

"ರಶ್ಯಾ ದೇಶಕ್ಕೆ ವರ್ಗಾಯಿಸಿಕೊಂಡರೆ ಅವಳ ಸಮೀಪದಲ್ಲೇ ಇರಬಹುದಲ್ಲ!"

"ರಶ್ಯಾ? ರಶ್ಯಾ?" ಎನ್ನುತ್ತ ತಲೆಯಲ್ಲಾಡಿಸಿ ಸಂಕಟದಿಂದ ಮುಗುಳುನಗುತ್ತ ಹೇಳಿದ. "ಇಲ್ಲಿದ್ದರೆ ಇಷ್ಟಾದರೂ ಪ್ರಯೋಜನ. ಅಲ್ಲಿಗೆ ಹೋದರೆ ಅಧಿಕಾರಿ (officer)ಗಳಲ್ಲೆಲ್ಲ ತೀರ ಚಿಕ್ಕವನಾದೇನು. ಅದೂ ಅಲ್ಲದೆ ಇಲ್ಲಿ ನಮಗೆ ಸಿಕ್ಕುವ ದ್ವಿಗುಣವೇತನ ನಮ್ಮಂಥ ಬಡವರಿಗೆ ಬಹಳ ಸಹಾಯಕವಾಗುತ್ತದೆ."

"ನವೇಲ್ ಐವನೋ ಎಚ್, ನೀನು ಈಗ ಇರುವಂತೆ ಬಾಳಲು ಅಲ್ಲಿನ ಸಂಬಳ ಸಾಕಾಗದೆ"

"ಇಲ್ಲಿನ ದ್ವಿಗುಣವೇತನ ಸಾಕಾಗುತ್ತದೆಯೆ?" ಎಂದು ಮಧ್ಯದಲ್ಲಿ ಕೇಳಿದನು. "ನಮ್ಮ ಅಧಿಕಾರಿಗಳನ್ನು ನೋಡಿ. ಒಂದು ತಾಮ್ರದ ದುಗ್ಗಾಣಿ ಇದೆಯೇ ಒಬ್ಬನಲ್ಲಾದರೂ? They all go on tick at the sutlers ಕಿರಿ ವಣಿಗೆ ಸಾಲದಲ್ಲಿ ಹೂತು ಹೋಗಿದ್ದಾರೆ. "ನಾನು ಈಗ ಇರುವಂತೆ ಬಾಳಲು ಎನ್ನುತ್ತೀರಿ. ನಾನಿರುವಂತೆ ಇದ್ದೂ ನನ್ನ ಸಂಬಳದಲ್ಲಿ ಮೂರು ಕಾಸಾದರೂ ಮಿಗಿಸಿದ್ದೇನೆಂದು ತಿಳಿದಿದ್ದೀರಾ? ಇಲ್ಲಿನ ಬೆಲೆ ಹೇಗಿದೆ ಎಂದು ನಿಮಗೆ ಇನ್ನೂ ಗೊತ್ತಿಲ್ಲ. ಪ್ರತಿಯೊಂದಕ್ಕೂ ಮೂರುಪಾಲು ಬೆಲೆ."

ಆ ಕ್ಯಾಪ್ಟನ್ ಬಹಳ ಜಾಗರೂಕತೆಯಿಂದ ವೆಚ್ಚಮಾಡುತ್ತಿದ್ದನು. ಇಸ್ಪೀಟ್ ಆಡುತ್ತಿರಲಿಲ್ಲ, ಅಪರೂಪವಾಗಿ ಕುಡಿಯುತ್ತಿದ್ದ; ಸೇದುತ್ತಿದ್ದುದು ಬಹಳ ಅಗ್ಗದ ಹೊಗೆಸೊಪ್ಪು, (ಅದನ್ನು, ಯಾರೋ ಏನೋ, ಮನೆಯ ಹೊಗೆಸೊಪ್ಪು ಎನ್ನುತ್ತಿದ್ದ ಅವನು) ಅವನನ್ನು ಕಂಡರೆ ಮೊದಲೇ ನನಗೆ ಮಮತೆ ಹುಟ್ಟಿತ್ತು. ಅವನ ಸಕಲ ಶಾಂತ ಮುಖವನ್ನು ನೇರವಾಗಿ ನೋಡುವಂತಿತ್ತು. ಕಣ್ಣುಗಳಲ್ಲಿ ಒಂದು ಬಗೆಯ ಕಾಂತಿಯಿತ್ತು. ಈ ಸಂಭಾಷಣೆ ನಡೆದ ಮೇಲೆ ಅವನ ಬಗ್ಗೆ ಆತ್ಮೀಯತೆ ಹುಟ್ಟಿತು.

ವರ್ಧಾ ಪತ್ರ

ಮೈತಿಕ್ಕುವುದರಲ್ಲಿ ಮಹಾತ್ಮರ ವಿಶ್ವಾಸ

ಬೇಕಾದ ಜೀವಾತು ದೊರೆವುದು

ಗಾಂಧೀಜಿ ಬಿಡುಗಡೆಯಾದ ಸುದ್ದಿ ಕೇಳಿ ವರ್ಧಾದಲ್ಲಿ ಸಂತೋಷವೇ ಸಂತೋಷ; ಈ ಸಲದ ಅನಾರೋಗ್ಯ, ಹಿಂದಿನ ಅವರ ಅನಾರೋಗ್ಯಗಳಿಗಿಂತ ವಿಷಮತರದ್ದೆಂದೂ, ಈ ಸರ್ತಿ ಸೆರೆಮನೆಯಲ್ಲಿ ಕಸ್ತೂರ್‌ಬಾ, ಮಹಾದೇವ ದೇಸಾಯಿ ಮರಣ ಸಂಭವಿಸಿ ಅದರಿಂದ ಮಾನವ ಸ್ವಭಾವ ಸಹಜವಾಗಿ ಅವರಿಗೆ ತುಂಬಾ ಸಂಕಟ ಪುಟ್ಟಾಗಿರಬಹುದೆಂದೂ ಭಾವಿಸಿ, ವರ್ಧಾದ ಜನರು ಏನಾದರೂ ಗಾಂಧೀಜಿಗೆ ಅನಿರೀಕ್ಷಿತವುಂಟಾಗಬಹುದೇ ಎಂದು ವಿಷಾದಗೊಂಡಿದ್ದರು.

ಸರಿಯಾದ ಸಂದರ್ಭದಲ್ಲಿ, ವೇವಲರು ಸರಿಯಾದ ಹಾದಿ ಹಿಡಿದಿದ್ದಾರೆ. ಅವರು ಇದೇ ಹಾದಿಯಿಂದ ಮುಂದುವರಿದರೆ ಭಾರತ ಸಮಸ್ಯೆ ಪರಿಹರಿಸಲು ಇದು ಕಾರಣವಾಗಬಹುದು. ಬಿಡುಗಡೆಯ ನಂತರ ಗಾಂಧೀಜಿ ಹೆಚ್ಚು ಗುಣಮುಖರಾಗದಿದ್ದರೂ ದೇವರಲ್ಲಿ ಅಚಲ ವಿಶ್ವಾಸವಿಟ್ಟಿರುವ ಗಾಂಧೀಜಿ ತನ್ನ ಆರೋಗ್ಯ ಹಾಗೂ ಜೀವಿತದ ವಿಷಯ ಹೆಚ್ಚು ಗಲಭೆಗೊಳ್ಳುವವರಲ್ಲ.

ರಕ್ತದ ಒತ್ತಡವೇ ಇಂದು ಅವರ ಆರೋಗ್ಯದ ಕುರಿತು ವಿಷಮನಿಂತಿದೆ. ಗಾಂಧೀಜಿ ಔಷಧಿ ತೆಕ್ಕೊಳ್ಳಲು ಒಪ್ಪುವುದಿಲ್ಲವೆಂದು ಎಲ್ಲರಿಗೂ ಗೊತ್ತೇ ಇದೆ. ಕಳೆದ ಮಹೋಪವಾಸ ಕಾಲದಲ್ಲಿಯೂ ಗಾಂಧೀಜಿ ಔಷಧ ತೆಕ್ಕೊಳ್ಳಲೊಪ್ಪಲಿಲ್ಲ. ರಕ್ತದ ಒತ್ತಡ ಹೆಚ್ಚಾದದ್ದು ಸಂಪೂರ್ಣ ವಿಶ್ರಾಂತಿ ಮತ್ತು ಆಹಾರನಿಯಮದಿಂದಲೂ, ಕಡಿಮೆ ರಕ್ತದ ಒತ್ತಡವು ಜೀವಾತುಗಳಿಂದಲೂ ಗುಣವಾಗುತ್ತದೆ. ಮೈತಿಕ್ಕುವುದನ್ನು ವಿಜ್ಞಾನ ರೀತಿಯಿಂದ ಮಾಡಿದರೆ ಅದರಿಂದ ಶರೀರಕ್ಕೆ ಬೇಕಾದ ಜೀವಾತು ಹುಟ್ಟುವುದೆಂದು ಗಾಂಧೀಜಿ ವಿಶ್ವಾಸ.

ಸೇವಾಗ್ರಾಮ ಆಶ್ರಮದ ಸಂಸ್ಕೃತ ವಿದ್ವಾಂಸರಾದ ಶ್ರೀ ಪರಚುರೆ ಶಾಸ್ತ್ರಿಗಳು, ಕುಷ್ಠರೋಗದಿಂದ ನರಳುತಿದ್ದಾಗ, ಗಾಂಧೀಜಿ ಸ್ವತಃ ನರಸು ತೈಲದಿಂದ ಮೈತಿಕ್ಕಿದ್ದಾರೆ. ಅದರಿಂದ ತುಂಬಾ ಪ್ರಯೋಜನ ದೊರಕಿದೆ. ಶ್ರೀ ಶಾಸ್ತ್ರಿಗಳು ಈಗ ಸಂಪೂರ್ಣ ಗುಣಹೊಂದಿದ್ದಾರೆ. ಗಾಂಧೀಜಿ ಸ್ವತಃ ಒಳ್ಳೆಯ ಅನುಭವೀ ವೈದ್ಯರಾಗಿದ್ದು ಮೈತಿಕ್ಕಿ ಆರೋಗ್ಯ ಸಂಪಾದಿಸುವುದರಲ್ಲಿ ತುಂಬಾ ವಿಶ್ವಾಸವುಳ್ಳವರಾಗಿದ್ದಾರೆ; ಅವರೇ ಬಾದಾಮಿ ತೈಲದಿಂದ ಮೈತಿಕ್ಕಿಸಿಕೊಳ್ಳುತ್ತಾರೆ.

ಬಾಪುವನ್ನು ಕಂಡು ಬಂದೊಬ್ಬರು ನನ್ನೊಡನೆ ಹೇಳಿದರು, 'ಅವರು ಹಸನ್ಮುಖಿಗಳಾಗಿದ್ದಾರೆ, ಅವರ ಆರೋಗ್ಯದ ವಿಷಯ ಗಲಭೆಯೇ ಇಲ್ಲ' ಎಂದು, ವರ್ಧಾಕ್ಕೆ ಬಾಪು ಯಾವಾಗ ಬರುತ್ತಾರೆಂಬುದು ಇನ್ನೂ ನಿಶ್ಚಯವಾಗಿಲ್ಲ; ಇದೆಲ್ಲಾ ಅವರ ಆರೋಗ್ಯದ ಮೇಲೆ ಹೊಂದಿಕೊಂಡಿದೆ. ಅವರ ಸದ್ಯದ ಕಾರ್ಯಕ್ರಮವೆಂದರೆ ಆರೋಗ್ಯಕ್ಕಾಗಿ ವಿಶ್ರಾಂತಿ. ಆದರೆ ಆರೋಗ್ಯ ಹೊಂದಿದ ಕೂಡಲೇ ಬಾಪು ವರ್ಧಾಕ್ಕೆ ಬರುತ್ತಾರೆ ಖಂಡಿತ.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೨೫.	ರಾತ್ರಿ ೭-೪೦.
ಪಟೆಲ್ ಕನ್ನಾನೂರು ಪರಿಯಂತೆ ಮಾತ್ರ	ಸಾಯಂ. ೫-೫೫	ಬೆಳಿಗ್ಗೆ ೯-೨೫.
ಮೆಲ್ಲಾಲ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency,	**The Joint Booking Office,**
MANGALORE.	**KODIALBAIL.**

The Bank of Mangalore Limited, Mangalore.

ESTD. 1931

HEAD OFFICE Mangalore. **BUNDER** MANGALORE. **BRANCHES** Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost.

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, ಬಾಲನರೆ ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 38] ತಾರೀಕು 26—5—1944 [ಸಂಚಿಕೆ 21]

ಜಿನ್ನರಿಗೆ ಗಾಂಧೀಜಿ ಬರೆದ ಪತ್ರ

'ಜಾತೀಯ ಒಪ್ಪಂದಕ್ಕೆ ಯತ್ನಿಸುವ'

—ಜುಹುವಿನಲ್ಲಿ ಮಹಾತ್ಮರು—

ಮಹಾತ್ಮಾ ಗಾಂಧಿಯವರು ಸೆರೆಮನೆಯಲ್ಲಿರುವಾಗ ಜಿನ್ನರಿಗೆ ೪–೫–೧೯೪೩ರಂದು ಒಂದು ಮಹತ್ವದ ಪತ್ರ ಬರೆದಿದ್ದರು. ಆ ಪತ್ರದಲ್ಲಿ ಅವರು, 'ನೀವು ಮತ್ತು ನಾನು ಈ ಮಹತ್ವದ ಜಾತೀಯ ಒಪ್ಪಂದದ ಸಮಸ್ಯೆಯನ್ನು ಪರಿಹರಿಸಲು ದೃಢನಿರ್ಧಾರ ಮಾಡಿದವರಾಗಿದ್ದು, ಏಕಮತ್ಯದಿಂದ ಈ ಪ್ರಶ್ನೆಗೆ ಸಂಬಂಧಿಸಿದ ಹಾಗೂ ಹಿತಸಂಬಂಧವುಳ್ಳ ಎಲ್ಲರ ಒಪ್ಪಿಗೆಗೆ ಪಾತ್ರವಾಗುವಂತೆ ಈ ಪ್ರಶ್ನೆ ಏಕೆ ಬಗೆಹರಿಸಬಾರದು ಎಂದು ಕೇಳಿದ್ದರು.

ಗಾಂಧೀಜಿಯವರ ಕಾರ್ಯದರ್ಶಿ ಪ್ಯಾರೇಲಾಲರು, 'ಡಾನ್' ಪತ್ರಿಕೆಯ ಆಮಂತ್ರಣದಂತೆ ಕಳೆದ ವರ್ಷ ಮೇ ತಾ ೪ರಂದು ಮಹಾತ್ಮರಿಗೆ ಬರೆದ ಪತ್ರವನ್ನು ಗಾಂಧೀಜಿಯವರ ಒಪ್ಪಿಗೆ ಮೇರೆ ಪ್ರಕಟಿಸಿದ್ದಾರೆ ಖಾಕ್ಸಾರ ಮುಖಂಡ ಅಲ್ಲಮ ಮಶ್ರೂಕಿಯವರ ಸೂಚನೆಯೂ ಅದಕ್ಕೆ ಕಾರಣವಾಗಿತ್ತು ಆ ಪತ್ರವು ಕೆಳಗಿನಂತಿದೆ

"ಪ್ರಿಯ ಕ್ವಿದೇ ಆಝಾಮರೇ,

ನನ್ನನ್ನು ಸೆರೆಮನೆಯಲ್ಲಿ ಹಾಕಿದ ಕೆಲಿ ದಿನಗಳ ಬಳಿಕ ಸರಕಾರವು ನಾನು ಓದ ಲಿಚ್ಛಿಸುವ ಪತ್ರಿಕೆಗಳ ಪಟ್ಟಿಯನ್ನು ಕೇಳಿತು ನನ್ನ ಆ ಪಟ್ಟಿಯಲ್ಲಿ 'ಡಾನ್' ಪತ್ರಿಕೆಯ ಹೆಸರನ್ನೂ ನಾನು ಸೇರಿಸಿದೆನು. ಹೆಚ್ಚು ಕಿಡಿಮೆ 'ಡಾನ್' ಪತ್ರಿಕೆ ನನಗೆ ಸರಿಯಾಗಿ ಸಿಗುತ್ತಿತ್ತು, ಅದು ನನ್ನ ಕೈಸೇರಿದೊಡನೆ ಬಹು ಎಚ್ಚರಿಕೆಯಿಂದದನ್ನು ನಾನು ಓದುತ್ತಿದ್ದೆ ಲೀಗಿನ ಕಾರ್ಯಕ್ರಮಗಳನ್ನು ಡಾನ್ ಪತ್ರಿಕೆಯಲ್ಲಿ ಬಂದಂತೆ ನಾನು ಅಭ್ಯಾಸ ಮಾಡಿರುವೆನು. ನಿಮಗೆ ನಾನು ಕಾಗದ ಬರೆಯಬೇಕೆಂದು ನೀವು ಕೊಟ್ಟ ಆಮಂತ್ರಣವನ್ನು ನಾನು ಬರೆದಿಟ್ಟುಕೊಂಡೆನು. ಆದ ಕಾರಣ ನಾನೀಗ ಪತ್ರ ಬರೆಯುತ್ತಿದ್ದೇನೆ

'ನಿಮ್ಮ ಆಮಂತ್ರಣವನ್ನು ನಾನು ಸ್ವಾಗತಿಸುತ್ತೇನೆ ಪತ್ರಮೂಲಕ ಅಭಿಪ್ರಾಯವಿನಿಮಯ ಮಾಡುವುದಕ್ಕಿಂತಲೂ ನಾನು ಮತ್ತು ನೀವು ಒಟ್ಟಾಗಿ ವಿಚಾರವಿನಿಮಯ ಮಾಡುವುದು ಉತ್ತಮವೆಂದು ನನ್ನ ಅಭಿಪ್ರಾಯ ಆದರೆ ನಾನು ನಿಮ್ಮ ಕೈಯಲ್ಲಿದ್ದೇನೆ.

'ಈ ಪತ್ರವನ್ನು ಸರಕಾರವು ನಿಮಗೆ ಮುಟ್ಟಿಸುವುದೆಂದು ನಾನು ಆಶಿಸುತ್ತೇನೆ. ನೀವು ನನ್ನ ಸೂಚನೆಗಳನ್ನೊಪ್ಪುವುದಾದರೆ ಸರಕಾರವು ನನ್ನನ್ನು ಭೇಟಿಮಾಡಲು ನಿಮ್ಮನ್ನು ಬಿಡುವುದು

'ಒಂದು ವಿಚಾರವನ್ನು ನಾನು ನಿಮಗೆ ಮೊದಲೇ ತಿಳಿಸುವುದು ಒಳ್ಳೆಯದು, ನಿಮ್ಮ ಆಮಂತ್ರಣದಲ್ಲಿ 'ಆದರೆ' ಎಂಬುದಿದೆ. ನನ್ನ ಹೃದಯ ಪರಿವರ್ತನೆಯಾದರೆ ಮಾತ್ರ ನಾನು ನಿಮಗೆ ಬರೆಯಬೇಕೆಂದು ನಿಮ್ಮ ಅಭಿಪ್ರಾಯವೋ ಹೇಗೆ? ಮನುಷ್ಯನ ಅಂತರಂಗ ದೇವರಿಗೆ ಮಾತ್ರ ಗೊತ್ತು

'ನಾನು ಹೇಗೆ ಇದ್ದೀನೋ ಹಾಗೆ ಅಂದರೆ, ನನ್ನ ನಿಜ ಸ್ವರೂಪವನ್ನೇ ನೀವು ತಿಳಿದು ಕೊಂಡರೆ ಸಾಕು

'ನೀವು ಮತ್ತು ನಾನು ಈ ಮಹತ್ವದ ಜಾತೀಯ ಒಪ್ಪಂದ ಪ್ರಶ್ನೆಯನ್ನು ಬಗೆಹರಿಸಲು ದೃಢನಿರ್ಧಾರ ಮಾಡಿದವರಾಗಿದ್ದು ಏಕಮತ್ಯದಿಂದ ಈ ಪ್ರಶ್ನೆಗೆ ಸಂಬಂಧಿಸಿದ ಹಾಗೂ ಹಿತಸಂಬಂಧವುಳ ಎಲ್ಲರ ಒಪ್ಪಿಗೆ ಪಾತ್ರವಾಗುವಂತೆ ಈ ಪ್ರಶ್ನೆ ಏಕೆ ಬಗೆಹರಿಸಬಾರದು?

ನಿಮ್ಮ ವಿಶ್ವಾಸ ಪಾತ್ರ,

(ಸಹಿ) ಮೋ ಕ ಗಾಂಧೀ

(೪ನೇ ಪುಟಕ್ಕೆ ಮುಂದುವರಿದಿದೆ)

ನಗರದಲ್ಲಿ ಇಂದು ಇದೇ ಮಾತು! ನಾಗರಿಕರೆಲ್ಲರಿಗೂ ಇದೊಂದೇ ಉತ್ಸಾಹ!

ಕನ್ನಡ 'ವಾಣಿ' ಕೀರ್ತಿ ದುಂದುಭಿ ಮೊಳಗಿಸಿದೆ!

★ ★ ★ ಕನ್ನಡ ಚಿತ್ರಗಳಲ್ಲೆ ಇದು ಅತ್ಯುತ್ಕೃಷ್ಟವೆನಿಸಿದೆ! ★ ★ ★

ಕನ್ನಡ ನಾಡಿನ ಕಲೆ, ಇತಿಹಾಸ, ಸಂಗೀತ ಸರ್ವಸ್ವಗಳನ್ನು ಸೂರೆಗೊಂಡು, ಕನ್ನಡಿಗರೆಲ್ಲರೂ ಹೆಮ್ಮೆ ಪಡುವಂತಾಗಿದೆ'

ಎಚ್ ಆರ್ ಜಿ. ಸಿ. ಶ್ರೀ ಪಿಕ್ಚರ್ಸ್ ಮತ್ತು ಟಿ ಎಸ್ ಶಿವಬಸವಸ್ವಾಮಿ, ಇವರ ಅತ್ಯುತ್ಕೃಷ್ಟ ಕಲಾಕೃತಿ

26-5-1944ರಿಂದ

4 ಗೌರವದ ನೇ ವಾರ

ವಾಣಿ

ಸಂಗೀತ ರತ್ನ ಟಿ. ಚೌಡಯ್ಯನವರ ಅಮರ ಸಂಗೀತ

ವಿನೋದ ಪಟು ಶ್ರೀ ಕೆ. ಹಿರಣ್ಣಯ್ಯನವರ ಅಪೂರ್ವ ಅಭಿನಯ

ಕೋಕಿಲ ಕಂಠ ಬಳ್ಳಾರಿ ಲಲಿತ, ವೈ. ರತ್ನ, ಪಂಡರಿಬಾಯಿ, ಟಿ. ಎನ್. ಚಂದ್ರಮ್ಮ ಮೊದಲಾದ ಹೆಸರಾಂತ ಕನ್ನಡದ ನಟನಟಿಯರು.

ಕನ್ನಡ ಚಲಚ್ಚಿತ್ರ ಪ್ರೇಮಿಗಳಿಂದ ಅತ್ಯುತ್ಕೃಷ್ಟವೆಂದು ಪ್ರಶಂಸಿತವಾದ ಕನ್ನಡ ವಾಕ್ಪಟ,

ಸೆಂಟ್ರಲ್ ಟಾಕೀಸ್‌ನಲ್ಲಿ

ಹಂಚಿಕೆಯ ಅಧಿಕಾರಿಗಳು:

ಭ್ರಮರಾಂಭಾ ಪಿಕ್ಚರ್ಸ್ ಸರ್ಕ್ಯೂಟ್,

ನಾ ಸನಾತನೀ ಹಿಂದು

—ಮಹಾತ್ಮಾ ಗಾಂಧೀ

[illegible] ಸನಾತನೀ ಹಿಂದೂ ಎಂದು [illegible] ೧. ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಪುರಾಣಗಳಲ್ಲಿ ಹಾಗೂ ಹಿಂದೂ ಪವಿತ್ರ ಗ್ರಂಥಗಳಲ್ಲೆಲ್ಲಾ ನಾ ನಂಬಿಕೆಯುಳ್ಳವನಾಗಿದ್ದೇನೆ; ಹಾಗಾಗಿ ಅವತಾರ ಮತ್ತು ಪುನರ್ಜನ್ಮಗಳನ್ನು ನಾ ನಂಬುತ್ತೇನೆ.

೨. ನಾನು ವರ್ಣಾಶ್ರಮ ಧರ್ಮಗಳಲ್ಲಿ ನಂಬಿಕೆಯುಳ್ಳವನು, ಆದರೆ ನನ್ನ ಅಭಿಪ್ರಾಯದಂತೆ ಆ ವರ್ಣಾಶ್ರಮ ಧರ್ಮ ವರ್ತಮಾನ ಜನತಾಭಿಪ್ರಾಯದಂತಿರದೆ ಕೇವಲ ವೈದಿಕ ರೀತಿಯದ್ದಾಗಿದೆ.

೩. ಇಂದು ಪ್ರಸಿದ್ಧವಾಗಿರುವುದಕ್ಕಿಂತಲೂ ವಿಶಾಲಾಭಿಪ್ರಾಯದಲ್ಲಿ ಗೋರಕ್ಷಣೆಯಾಗಬೇಕೆಂದು ನಾನು ನಂಬುತ್ತೇನೆ.

೪. ನನಗೆ ಮೂರ್ತಿ ಪೂಜೆಯಲ್ಲಿ ಅವಿಶ್ವಾಸವಿಲ್ಲ.

ನಾನು ವೇದ ಹಾಗೂ ಇತರ ಪವಿತ್ರ ಗ್ರಂಥಗಳು ಅಪೌರುಷೇಯವೆಂದು ನಂಬುವುದಿಲ್ಲ. ಕುರಾಣ್, ಬೈಬ್‌ಲ್, ಜೆಂಡ್ ಇವುಗಳೂ ವೇದದಷ್ಟೇ ಪವಿತ್ರವೆಂದು ನಾ ತಿಳಕೊಂಡಿರುವೆನು. ನನಗೆ ಹಿಂದೂ ಪವಿತ್ರ ಗ್ರಂಥಗಳಲ್ಲಿರುವ ವಿಶ್ವಾಸದಿಂದಾಗಿ ನಾನು ಅಲ್ಲಿನ ಪ್ರತಿಯೊಂದು ವಾಕ್ಯವನ್ನು ಪ್ರತಿಯೊಂದು ಶಬ್ದವನ್ನೂ ದೈವಿಕವೆಂದೊಪ್ಪಿಕೊಳ್ಳಲು ಸಿದ್ಧನಿಲ್ಲ. ಅಥವಾ ಈ ಮಹಾಗ್ರಂಥಗಳ ವಿಷಯ ಅಧಿಕಾರಯುತವಾದ ಜ್ಞಾನವಿಗುಂಟೆಂಬ ಅಭಿಪ್ರಾಯವೂ ನನ್ನದಲ್ಲ. ಆದರೆ ಈ ಮಹಾ ಗ್ರಂಥಗಳ ಬೋಧನೆಯ ಸತ್ವವನ್ನು ತಿಳಕೊಂಡಿರುವುದಾಗಿ ಯೋಚಿಸುತ್ತೇನೆ. ನನ್ನ ಕಾರಣ ಮತ್ತು ಯೋಚನೆಗಳಿಗೆ ವಿರುದ್ಧವಿರುವ ಇವುಗಳ ಯಾವುದೇ ವ್ಯಾಖ್ಯಾನವನ್ನಾದರೂ ನಾ ಒಪ್ಪಿಕೊಳ್ಳಲು ಸಿದ್ಧನಿಲ್ಲ ಹಿಂದೂ ಪವಿತ್ರ ಗ್ರಂಥಗಳ ಕುರಿತು ಇಂದಿನ ಶಂಕರಾಚಾರ್ಯರು ಮತ್ತು ಶಾಸ್ತ್ರಿಗಳು ಹೇಳುವುದನ್ನು ನಾ ಖಂಡಿತ ಖಂಡಿಸುತ್ತೇನೆ ಏಕೆಂದರೆ ಈ ಗ್ರಂಥಗಳ ವಿಷಯ ನಮ್ಮ ಇಂದಿನ ಜ್ಞಾನ ಕೇವಲ ಗೊಂದಲಮಯವಾಗಿದೆಯೆಂದು ನನ್ನ ತಿಳುವಳಿಕೆ. ಯಾರು ಸತ್ಯ ಅಹಿಂಸೆ ಬ್ರಹ್ಮಚರ್ಯಗಳನ್ನು ಪಾಲಿಸುವುದಿಲ್ಲವೋ, ಯಾರು ಐಶ್ವರ್ಯ ಸಂಪಾದನೆ ಮತ್ತು ಸ್ವಾಧೀನತೆಯನ್ನು ಬಿಟ್ಟುಬಿಡುವುದಿಲ್ಲವೋ ಅವನಿಗೆ ಆ ಪವಿತ್ರ ಗ್ರಂಥಗಳ ಸರಿಯಾದ ಅರ್ಥ ತಿಳಿಯಲಾರದೆಂದು ನನ್ನಭಿಮತವಿದೆ. ಗುರುಮೂಲ ವಿದ್ಯಾಭ್ಯಾಸವನ್ನು ನಾ ನಂಬುವೆನು. ಆದರೆ ಇಂದಿನ ಕಾಲದಲ್ಲಿ ಗುರುಗಳಿಲ್ಲದೆ ಕಲಿವಂಥಾದ್ದು ತುಂಬಾ ಇದೆ; ಏಕೆಂದರೆ ಪೂರ್ಣ ಪರಿಶುದ್ಧತೆ ಹಾಗೂ ಒಳ್ಳೆಯ ಕಲಿವಿಕೆ ಸೇರಿರುವುದು ಇಂದಿನೀಕಾಲದಲ್ಲಿ ಅಪರೂಪವಾಗಿದೆ. ಆದರೆ ತಮ್ಮ ಧರ್ಮದ ಮೂಲವನ್ನೇ ತಾವು ತಿಳಿದಿಲ್ಲವೆಂದು ಯಾರೂ ನಿರಾಶರಾಗಬಾರದು; ಏಕೆಂದರೆ ಪ್ರತಿಯೊಂದು ಧರ್ಮದ ಮೂಲ ತತ್ವವೂ ಒಂದೇ ಆಗಿದೆ. ಪ್ರತಿಯೊಬ್ಬ ಹಿಂದುವೂ ದೇಹದಲ್ಲಿ ಆತನ ಏಕಾಂಗಿತ್ವದಲ್ಲಿ ಪುನರ್ಜನ್ಮ ಮತ್ತು ಮೋಕ್ಷಗಳಲ್ಲಿ ವಿಶ್ವಾಸವುಳ್ಳವನಾಗಿದ್ದಾನೆ. ಆದರೆ ಇತರ ಧರ್ಮಗಳಿಗಿಂತ ಹಿಂದೂ ಧರ್ಮಕ್ಕಿರುವ ಒಂದು ವ್ಯತ್ಯಾಸವೆಂದರೆ ಅದು ವರ್ಣಾಶ್ರಮ ಧರ್ಮವಲ್ಲ; ಗೋರಕ್ಷಣೆ.

ನನ್ನ ಅಭಿಪ್ರಾಯದಂತೆ ಮಾನವನ ಪ್ರಕೃತಿಯಲ್ಲಿಯೇ ವರ್ಣಾಶ್ರಮವಿದ್ದು; ಹಿಂದು ಮತ ಅದಕ್ಕೊಂದು ವೈಜ್ಞಾನಿಕ ರೀತಿ ಕೊಟ್ಟಿದೆ. ಹುಟ್ಟಿನಿಂದಲೇ ವರ್ಣವೊಂದಕ್ಕೆ ಸೇರುತ್ತಾರೆಂದು ಅದು ಹೇಳುವುದು. ಮನುಷ್ಯನು ತನಗಿಷ್ಟ ಬಂದ ವರ್ಣವನ್ನು ಸೇರಲಾರೆ. ತನ್ನ ವರ್ಣದ ಪ್ರಕಾರ ನಡೆಯದಿರುವುದೆಂದರೆ ತನ್ನ ಪರಂಪರೆಯನ್ನು ಅಲ್ಲಗಳೆದಂತೆ. ಆದರೆ ಅನೇಕ ಜಾತಿಗಳಾಗಿ ಆದ ಆ ಮೇಲಿನ ವಿಭಾಗಗಳೆಲ್ಲಾ ಈ ತತ್ವವನ್ನು ದುರುಪಯೋಗಮಾಡಿಕೊಂಡವುಗಳು. ನಾಲ್ಕು ವರ್ಣಗಳು ಮೂಲವಾಗಿದ್ದುವು.

ಅಂತರ್ಜಾತೀ ಊಟ ಮತ್ತು ಅಂತರ್ಜಾತೀ ವಿವಾಹಗಳು ಯಾರೊಬ್ಬನಿಗಾದರೂ ಜನ್ಮತ ಬಂದ ಸ್ಥಾನವನ್ನು ಇಲ್ಲದೆ ಮಾಡುವದೆಂದು ನಾ ನಂಬಲಾರೆ. ನಾಲ್ಕು ವರ್ಣಗಳು ಮನುಷ್ಯನ ಸ್ಥಾನವನ್ನು ಸೂಚಿಸುತ್ತವೆ; ಅವು ಆತನ ಸಾಮಾಜಿಕ ವ್ಯವಹಾರಕ್ಕೆ ಅಡ್ಡಿ ತರಲಾರವು. ಆ ವೇದಗಳು, ಅವರ ಕರ್ತವ್ಯವೇನೆಂದು ಹೇಳುವವು. ಆದರೆ ಅದರಿಂದ ಯಾವನಿಗೂ ವಿಶೇಷಾಧಿಕಾರ ದೊರಕಲಾರದು. ಯಾವನಾದರೂ ವರ್ಣ ಪ್ರಕಾರ ತಾನು ಉತ್ತಮನೆಂದೂ ಇನ್ನೊಬ್ಬ ಕೀಳೆಂದೂ ತಿಳಿದರೆ ಅದು ಹಿಂದೂ ಧರ್ಮಕ್ಕೆ ಅನ್ಯಾಯ ಮಾಡಿದಂತಾಗುವುದು. ಎಲ್ಲರೂ ದೇವರ ದೃಷ್ಟಿಯಿಂದ ಸೇವೆಗಾಗಿ ಜನಿಸಿದ್ದಾರೆ; ಬ್ರಾಹ್ಮಣನು ತನ್ನ ಜ್ಞಾನದಿಂದ, ಕ್ಷತ್ರಿಯನು ತನ್ನ ರಕ್ಷಣಾ ಬಲದಿಂದ, ವೈಶ್ಯನು ತನ್ನ ವಾಣಿಜ್ಯ ಸಾಮರ್ಥದಿಂದ, ಶೂದ್ರನು ತನ್ನ ಶಾರೀರಿಕ ಶ್ರಮದಿಂದ..ಆದರೆ ಇದರಿಂದ ಓರ್ವ ಬ್ರಾಹ್ಮಣನು ಶಾರೀರಿಕ ಪರಿಶ್ರಮ ಪಡಬಾರದೆಂದಾಗಲಿ, ಆತ ರಕ್ಷಣೆ ಮಾಡಿಕೊಳ್ಳಬಾರದೆಂದಾಗಲಿ ಆಗುವುದಿಲ್ಲ. ಜನ್ಮತಃ ಬ್ರಾಹ್ಮಣನು ಜ್ಞಾನವಂತನಾಗಲು ಆ ಮೂಲಕ ಜ್ಞಾನ ದಾನ ಮಾಡಲು ತಯಾರಾಗುತ್ತಾನೆ. ಆದರೆ ಶೂದ್ರನೊಬ್ಬನು ತನಗೆ ಬೇಕಾದ ಎಲ್ಲಾ ಜ್ಞಾನಗಳನ್ನು ಗಳಿಸಿಕೊಳ್ಳಲು ಯಾವತ್ತೂ ಆಕ್ಷೇಪಗಳಿಲ್ಲ ಆತ ತನ್ನ ಶಾರೀರದಿಂದ ಹೆಚ್ಚಿನ ಸೇವೆ ಮಾಡಬಲ್ಲನು. ಆದ್ದರಿಂದ ಇತರರು ಮಾಡುವ ಇತರ ವಿಧದ ಸೇವೆಗಾಗಿ ಆತ ಮತ್ಸರಗೊಳ್ಳಬಾರದು. ಆದರೆ ತಾನು ಜ್ಞಾನಿಯೆಂದು ಓರ್ವ ಬ್ರಾಹ್ಮಣನು ಉತ್ತಮನಾಗಿ ತನ್ನಲ್ಲಿ ಭಾವಿಸಿಕೊಂಡರೆ ಆತನಲ್ಲಿ ಜ್ಞಾನವೇ ಲೋಪವಾಗಿ ಆತ ಪತಿತನಾಗುತ್ತಾನೆ. ಹಾಗೆಯೇ ತಮ್ಮ ವಿಶೇಷ ಗುಣಗಳಿಗಾಗಿ ಹೆಮ್ಮೆ ಪಡುವ ಇತರರೂ ಕೂಡ. ವರ್ಣಾಶ್ರಮ ತನಗೆ ಸಂಬಧಿಸಿದ್ದು ಹಾಗೂ ಶಕ್ತಿಯ ಪಾಲನೆ ಮತ್ತು ಅದರ ಯೋಗ್ಯ ವ್ಯಯವಾಗಿದೆ.

ಅಂತರ್ಜಾತೀ ವಿವಾಹ ಮತ್ತು ಅಂತರ್ಜಾತೀ ಭೋಜನದಿಂದ ವರ್ಣಾಶ್ರಮ ಧರ್ಮ ಹಾಳಾಗದಂತೆ, ಬೇರೆ ಬೇರೆ ವರ್ಣಗಳೊಳಗಿನ ಅಂತರ್ವಿವಾಹ ಮತ್ತು ಭೋಜನಗಳಿಂದ ಹಿಂದೂ ಧರ್ಮವೂ ಹಾಳಾಗಲಾರದು. ಹಿಂದೂ ಧರ್ಮವು ಆತ್ಮ ಸಂಯಮನದ ಪರಮಾವಧಿಯನ್ನು ಮುಟ್ಟಿದೆ. ಅದು ದೈಹಿಕ ಸುಖ ಭೋಗದ ದೂರವಾಗಿದ್ದು ಅಂತ್ಯದಲ್ಲಿ ಆತ್ಮ ಸ್ವಾತಂತ್ರ್ಯ ಸಾಧಕವಾಗಿರುವುದು. ಹೆಂಡತಿಯನ್ನು ಆರಿಸಲು ಕೆಲ ಜಾತಿ ನಿರ್ಬಂಧವು ಆತನಿಗೆ ಆತ್ಮಸಂಯಮನದ ಪಾಠ ಕಲಿಸುತ್ತದೆ. ಮೋಕ್ಷಕ್ಕೆ ವಿವಾಹಿತ ಜೀವನವೇ ದಾರಿಯೆಂದು ಹಿಂದೂ ಧರ್ಮ ಹೇಳುವುದಿಲ್ಲ. ಜನನವು ಹೇಗೆ ಪತನವೋ ವಿವಾಹವೂ ಹಾಗೆಯೇ. ಮೋಕ್ಷವೆಂದರೆ ಜೀವನ ಮರಣಗಳಿಂದ ವಿಮೋಚನೆ. ಅಂತರ್ಜಾತೀ ವಿವಾಹ ಮತ್ತು ಅಂತರ್ಜಾತಿ ಭೋಜನಗಳ ನಿಷೇಧವು ವ್ಯಕ್ತಿಯಲ್ಲಿ ಆತ್ಮ ಸಂಸ್ಕರಣ ಹುಟ್ಟಿಸಲು ಹಾದಿಯಾಗಿದೆ ಆದರೆ ಈ ತ್ಯಾಗವು ವರ್ಣದ ಪರೀಕ್ಷೆಯಲ್ಲ. ಬ್ರಾಹ್ಮಣನು ಜ್ಞಾನದಿಂದಾಗುವ ಆತನ ಕರ್ತವ್ಯವನ್ನು ಪಾಲಿಸುವುದನ್ನು ಬಿಡದಿದ್ದರೆ, ಆತ ತನ್ನ ಶೂದ್ರ ಸೋದರನೊಂದಿಗೆ ಭೋಜನ ಮಾಡಿದರೂ ವರ್ಣಚ್ಯುತನಾಗಲಾರ. ಒಂದು ಜಾತಿಯವರೊಡನೆ ಮದುವೆ ಊಟ ಮಾಡಬಾರದೆಂಬುದು ಉಚ್ಚತ್ವ ಸಾಧನೆಗಾಗಿಯಲ್ಲ. ಯಾವ ಹಿಂದುವು ತಾನು ಉಚ್ಚನೆಂಬ ಭಾವನೆಯಿಂದ ಇತರರಲ್ಲಿ ಊಟ ಮದುವೆ ಮಾಡಿಕೊಳ್ಳುವುದಿಲ್ಲವೋ ಆತ ನು ಧರ್ಮದ ವಿಪರೀತಾರ್ಥ ಮಾಡಿಕೊಂಡ ಹಾಗೆ.

ದೌರ್ಭಾಗ್ಯದಿಂದ, ಇಂದು ಊಟ ಮಾಡುವುದರಲ್ಲಿ ಮತ್ತು ಮಾಡದಿರುವದರಲ್ಲಿ ಹಿಂದುತ್ವ ಉಳಿದುಕೊಂಡಿದೆ. ಒಮ್ಮೆ ಒಬ್ಬ ಧಾರ್ಮಿಕ ಹಿಂದು ಮುಸಲ್ಮಾನರ ಮನೆಯಲ್ಲಿ ತಿಂಡಿತೀರ್ಥ ತೆಕ್ಕೊಳ್ಳುವುದನ್ನು ನೋಡಿ ನಾ ಗಾಬರಿಯಾದೆ. ಆತ ತನ್ನ ಪಾತ್ರಕ್ಕೆ ಮುಸಲ್ಮಾನ್ ಕೊಟ್ಟ ಹಾಲು ಹಾಕುತಿದ್ದ; ನನ್ನನ್ನು ನೋಡಿ ನಾಚಿದ. ಆದರೆ ನಾನು ಮುಸಲ್ಮಾನನೇ ಮಾಡಿದ ತಿಂಡಿ ತೀರ್ಥ ತಿಂದು ಆತನನ್ನು ಇನ್ನಷ್ಟು ಗಾಬರಿಗೊಳಿಸಿದೆ. ಯಾರೊಡನೆ ಊಟ ಮಾಡಬಹುದು, ಯಾರೊಡನೆ ಮಾಡಬಾರದು ಎಂಬೀ ನಿಯಮಕ್ಕೆ ಗಂಟು ಬಿದ್ದು ಹಿಂದೂ ಧರ್ಮವಿಂದು ಅದರ ಸತ್ವ ಕಳಕೊಳ್ಳುತ್ತಿದೆ. ಮದ್ಯ ತೆಕ್ಕೊಳ್ಳದಿರುವುದು, ಮಾಂಸ ತಿನ್ನದಿರುವುದು ಆತ್ಮಶಕ್ತಿಯನ್ನು ಹೆಚ್ಚಿಸಲು ಮಹತ್ವದ ಸಾಧನವೇನೋ ನಿಜ, ಆದರೆ ಇದೇ ಸಾಧನೆಯ ಕೊನೆಯಲ್ಲ ಎಷ್ಟೋ ಸಲ ಮಾಂಸ ತಿನ್ನುತ್ತಾ, ದೇವರ ಭಕ್ತಿಯಲ್ಲಿರುವವರು, ಮಾಂಸ ತಿನ್ನದೆ ದೇವರನ್ನು ದೂಷಿಸುವ ಜನರಿಗಿಂತ ದೇವರಿಗೆ ಸಮೀಪದವರಾಗುವರು.

ಹಿಂದುತ್ವದ ಮುಖ್ಯಧರ್ಮ ಗೋರಕ್ಷಣೆ. ನನ್ನ ಮಟ್ಟಿಗೆ ಮಾನವ ಜೀವಿತದಲ್ಲಿ ಗೋರಕ್ಷಣೆ ಅಮೂಲ್ಯ ಕರ್ತವ್ಯವೆನಿಸಿದೆ. ಈ ಕರ್ತವ್ಯ ಪಾಲನೆಯಿಂದ ಮನುಷ್ಯನು ಅಮರತೆಗೆ ಮುಟ್ಟುತ್ತಾನೆ. ನನಗೆ ಗೋವೆಂದರೆ ಇಡೀ ಮಾನವ ಲೋಕವೇ ಆಗಿದೆ ಎಲ್ಲಾ ಜೀವಿತಗಳಿಂದ ಮಾನವ ಜೀವಿತ ಬೇರೆಯೆಂದು ಗೋವಿನ ಮೂಲಕ ಮಾನವ ಹೊಂದುತ್ತಾನೆ ಭಾರತದಲ್ಲಿ ಗೋವು ಉತ್ತಮ ಸಂಗಾತಿ. ಅದು ವಿಪುಲತ್ವವನ್ನು ಕೊಡುವಂಥಾದ್ದು ಅದು ಹಾಲು ಮಾತ್ರ ಕೊಡುವುದಲ್ಲ, ಕೃಷಿಯಾಗುವಂತೆಯೂ ಮಾಡುತ್ತದೆ. ಗೋವು ದಯೆಯ ಕವನ. ಉದಾತ್ತ ಜೀವನದಲ್ಲಿ ನಾವು ತುಂಬ ದಯೆಯನ್ನೇ ಕಾಣುತ್ತೇವೆ. ಭಾರತದ ಮಿಲಿಯಾಂತರ ಮಾನವರಿಗೆ ಅದು ಮಾತೆಯಾಗಿದೆ ಗೋರಕ್ಷಣೆಯೆಂದರೆ

(೭ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs. As Ps	ASSETS	Rs As.Ps
1 Paid up Capital	12 95 970- 0- 0	1 Cash on hand & with bankers	18,26,986- 3- 8
2 Reserves	3,83,379- 1- 6	2 Investments on (1) Govt Securities, (2) Immovable properties etc	26,04,671- 6- 8
3. Deposits	61,66 927- 6- 0	3 Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5 Sundries including revenue items	7,00,981- 0- 5	5 Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items	84,085-10- 4
Total	92,09,328- 2- 0	Total	92,09,328- 2- 0

ಸಮರ ಭೂಮಿಯ ಸಂಚಾರ

ಮಿತ್ರ ಸೈನಿಕರು ಹಿಟ್ಲರ್ ವ್ಯೂಹವನ್ನು ಭೇದಿಸಿರುವರುವರೆಂದು ಇಟಲಿಯ ಸನ್ನಿಧಿ ಕೇಂದ್ರದಿಂದ ಅಧಿಕೃತವಾಗಿ ಪ್ರಕಟಿಸಲಾಗಿದೆ. ಜರ್ಮನರು ಹಿಟ್ಲರ್ ವ್ಯೂಹದಿಂದ ಹಿಂದೆ ಸರಿದು ರೋಮ್ ನಗರದ ಹತ್ತಿರ ಇರುವ ಹೊಸ ವ್ಯೂಹವೊಂದನ್ನು ಸೇರಿರುವರೆಂದು ಮಿತ್ರ ಪ್ರಕಟಣೆ ತಿಳಿಸುವುದು. ಅಮೇರಿಕನ್ ಸೈನಿಕರು ಗೋಟಾ ಎಂಬ ಪ್ರದೇಶವನ್ನು ಆಕ್ರಮಿಸಿರುವರು.

ಇಂಫಾಲಿನ ಉತ್ತರಕ್ಕೆ ಕೆಲವು ಮೈಲು ದೂರದಲ್ಲಿ ಇಂಫಾಲ್ ಡಿಮಾಪುರ ರಸ್ತೆಯ ಮೇಲೆ ಹೋಗುತ್ತಿರುವ ಮಿತ್ರ ಸೈನಿಕರನ್ನು ಜಪಾನರು ಪ್ರಬಲವಾಗಿ ಪ್ರತಿಭಟಿಸಿರುವರೆಂದು ತಿಳಿಯುತ್ತದೆ. ಉತ್ತರ ಬರ್ಮಾದ ಅತಿ ದೊಡ್ಡ ನಗರವಾದ ಮಿತ್ಕಿಯಾನದಿಂದ ಜಪಾನರನ್ನು ಹೊರಗಟ್ಟುವ ಕೆಲಸ ನಡೆಯುತ್ತಿದೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ನಾಗರಿಕರೆಲ್ಲರೂ ನಗರ ಬಿಟ್ಟು ಹೋಗಬೇಕೆಂದು ಫ್ರಾನ್ಸಿನ ಆಕಾಶ ವಾಣಿ ಫ್ರೆಂಚರಿಗೆ ಎಚ್ಚರಿಕೆ ಕೊಟ್ಟಿದೆ

ಭಾರತ ಬರ್ಮಾ ಗಡಿಯಲ್ಲಿ

ಮಳೆ ಸುರಿಯುತ್ತಿದೆ, ಹಾಗಾಗಿ ಸದ್ಯ ಬರುವ ನವಂಬರ ತನಕ ಈ ಗಡಿಯಲ್ಲಿ ಯುದ್ಧ ತುಸು ತಟಸ್ಥವಾಗಲೇ ಬೇಕು

ಈ ವರ್ಷದ ಆದಿಯಲ್ಲಿ ಬರ್ಮಾ ರಂಗದಲ್ಲಿ ಮಿತ್ರರ ಮುನ್ನಡೆಯಾಗುವುದು ಖಂಡಿತವೆಂದು ಸುದ್ದಿ ಸಾರಲಾಗಿತ್ತು. ಆಗ್ನೇಯ ಏಶ್ಯಾದಲ ರಚಿತವಾಗಿ ಮೌಂಟ್ ಬೇಟನ್ ಸೇನಾನಿಯಾಗಿ ಸೊಂಟ ಕಟ್ಟಿ ನಿಂತರು ಅದಕ್ಕೆ ಬೇಕಾದ ಸಕಲ ಸಿದ್ಧತೆಗಳೂ ನಡೆದವು ಬರ್ಮಾ ಗಡಿಯಲ್ಲಿ ತಿಕ್ಕಾಟವೂ ಆಯಿತು 'ಬರ್ಮಾವನ್ನು ಪುನಃ ಪಡೆಯದೆ ಸಾಧ್ಯವಿಲ್ಲ'ವೆಂದು ಮಿತ್ರ ಮುಖಂಡರು ಶಪಥ ಹಾಕಿದ್ದರು

ಆದರೆ ಇದು ವರೆಗಿನ ಪರಿಸ್ಥಿತಿಯನ್ನು ಗಮನಿಸಿದರೆ ಈ ಉತ್ಸಾಹಕ್ಕೆ ಏನೇನೂ ಬಲ ಸಿಕ್ಕಿದಂತೆ ಕಂಡು ಬರುವುದಿಲ್ಲ, ಬರ್ಮಾ ಭಾರತ ಗಡಿಯಲ್ಲಿ ತಿಕ್ಕಾಟವಾಯಿತೇನೋ ನಿಜ ಅದರ ಫಲವಾಗಿ ಬರ್ಮಾವನ್ನು ಪುನಃ ಪಡೆವುದು ಬಿಟ್ಟು ಜಪಾನರೇ ಭಾರತಕ್ಕೆ ಕಾಲಿಟ್ಟರು, ಅಸ್ಸಾಮಿಗೆ ಅವರ ಧಾಳಿ ನಡೆಯಿತು, ಮಣಿಪುರ ಆಕ್ರಮಿಸಲ್ಪಟ್ಟಿತು ಇಂದಿಗಾದರೂ ಈ ಕಡೆ ಜಪಾನರು ಜೀವದ ಹಂಗು ತೊರೆದು ಹೋರಾಡುತ್ತಿರುವರು. ಹೀಗಾಗಿ ಸದ್ಯ ಜಪಾನರು ಭಾರತವನ್ನು ಕ್ರಮಿಸುವ ಭೀತಿಯೇ ತಲೆ ದೋರಿದೆ

ತಿರುಗು ಮುರುಗು

ಆಗ್ನೇಯ ಏಶ್ಯಾದಲ್ಲಿದವರು ಪ್ರಾರಂಭದಲ್ಲಿ ಪ್ರಸ್ತಾಪಿಸಿದ ವಿಷಯಗಳೆಲ್ಲಾ ತಿರುಗು ಮುರುಗಾಗಿವೆ ಬರ್ಮಾ ಭಾರತ ಗಡಿಯನ್ನು ಜಪಾನರು ಬಿಟ್ಟೋಡುವುದರ ಬದಲು ಸದ್ಯ ಬಲ ಶಾಲಿಗಳಾಗಿರುವಂತೆ ಕಂಡು ಬರುತ್ತದೆ. ಈ ಕುರಿತು ಪಾರ್ಲಿಮೆಂಟಿನಲ್ಲಿಯೂ ಪ್ರಶ್ನೆಗಳು ಕೇಳಲ್ಪಟ್ಟ ಬರ್ಮಾ–ಭಾರತ ಗಡಿಯ ಕುರಿತು ಮೊದಲು ಕೊಟ್ಟ ವಿವರಗಳು ನಿಷ್ಪ್ರಯೋಜಕವಾಗಿವೆ ಎಂದು ಚರ್ಚಿಸಲ್ಪಟ್ಟಿವೆ.

ಅರಕಾನಿನಲ್ಲೇನಾಯಿತು?

ಈಗ ನಾವು ಪುನರೊಮ್ಮೆ ಯುದ್ಧದ ಸಿಂಹಾಲೋಕನ ಮಾಡುವ. ಅರಕಾನ ರಂಗದ ವಿಚಾರ ಮೊದಲು ಮಾಡಬೇಕು ಕಳೆದ ವರ್ಷದ ಅಂತ್ಯದಲ್ಲಿ ಅರಕಾನ ರಂಗ ಪ್ರಾರಂಭವಾಯಿತು ಅಕ್ಯಾಬ್ ಹಿಡಕೊಂಡ ಮೇಲೆ ಪ್ರಗತಿ ಬೆಳೆದು, ಬೇಗನೇ ಬರ್ಮಾದ ಮೇಲೆ ಮುಖ್ಯ ಯುದ್ಧ ತೊಡಗುವುದೆಂದಾಯಿತು ಕಳೆದ ಫೆಬ್ರವರಿಯಲ್ಲಿ ೧೪ನೇ ದಳವು ಜಪಾನರ ಮುಂದೊತ್ತುವಿಕೆಯನ್ನು ತಡೆದಾಗ ಎಲ್ಲಾ ಕಡೆಗಳಲ್ಲಿಯೂ ಉತ್ಸಾಹ ವೃಕ್ಷೇರಿತು ಚರ್ಚಿಲ್ಲರೂ ಕೂಡಾ ಮೌಂಟ್ ಬೇಟನರಿಗೆ ಧನ್ಯವಾದ ಕಳುಹಿಸಿಬಿಟ್ಟರು ಕೆಲಕಾಲದ ವರೆಗೆ ಅರಕಾನಿನಲ್ಲಿ ಜಪಾನರ ಕತೆ ಮುಗಿದು ಹೋಯಿತೆಂದೇ ಗಣಿಸಲ್ಪಟ್ಟಿತು

ಆದರೆ ಒಮ್ಮೆಲೇ ಮಾರ್ಚಿಯಲ್ಲಿ ಅರಕಾನರಂಗದ ಕಳೆ ಎದ್ದಿತು ಜಪಾನರು ಗಡಿದಾಟಿದರು, ಈಗ ಯುದ್ಧ ಕ್ಷೇತ್ರದಲ್ಲಿ 'ಕೆಲ ವ್ಯವಸ್ಥೆ ಮಾಡುತ್ತಿದ್ದೇವೆ' ಎಂದು ಮಿತ್ರ ನಾಯಕರು ಹೇಳಿದರು. ಜಪಾನರು ಅಸಾಮಿನಲ್ಲಿ ಮುಂದಡಿಯಿಟ್ಟರು.

ಈಗ ಮಳೆ ಹನಿಬಿದ್ದಿದೆ? ಮಳೆ ಬೀಳುತ್ತಿದ್ದಾಗ ಬರ್ಮಾ–ಭಾರತ ಗಡಿಯಲ್ಲಿ ಯುದ್ಧ ಹೇಗೆ ಮುನ್ನಡೆದೀತು? ಮಿತ್ರ ನಾಯಕರು ಮಣಿಪುರ ಮಾರ್ಗವನ್ನು ತೆರೆಯಲು ಸಮರ್ಥರಾಗುವರೇ ನೋಡಬೇಕು. ಅದಾಗದಿದ್ದರೆ ಇನ್ನೂ ಮುಂದೆಯೂ ಮಿತ್ರ ನಾಯಕರು 'ಕೆಲ ವ್ಯವಸ್ಥೆ' ಮಾಡುತ್ತಿರಲೇಬೇಕು. ಯುದ್ಧ ಆರಂಭವಾದ ಐದು ವರ್ಷಗಳ ಮೇಲೂ ಈ ತರ 'ವ್ಯವಸ್ಥೆ ಮಾಡುವುದೇ' ಆದರೆ ಪರಿಸ್ಥಿತಿ ಹೇಗೆ ನಿಲ್ಲುವುದೊ?

ಇತರ ಸುದ್ದಿಗಳು

ಉತ್ತರ ಬರ್ಮಾದಲ್ಲಿ ಜನರಲ್ ಸ್ಟೀಲ್‌ವೆಲ್‌ರ ಸೈನಿಕರೊಡನೆ ಸೇರಿಕೊಳ್ಳಲು ಯುನಾನ್ ಪ್ರಾಂತದಲ್ಲಿ ಮುಂದೊತ್ತುತ್ತಿರುವ ಚೀನೀ ಸೈನ್ಯವು ಸಾಲ್ವಿನ್ ನದಿದಾಟಿ ಪಶ್ಚಿಮಾಭಿಮುಖವಾಗಿ ಅನೇಕ ಪ್ರಮುಖ ಸ್ಥಾನಗಳನ್ನು ಆಕ್ರಮಿಸಿವೆ ಚೀನದ ಮಧ್ಯಭಾಗದಲ್ಲಿ ಲೊಯಾಂಗ ನಗರ ರಕ್ಷಕರು ನಗರದ ಹೊರ ಭಾಗದಲ್ಲಿ ಅನೇಕನ್ ಜಪಾನ್ ಸೈನ್ಯಗಳನ್ನು ನಾಶಗೊಳಿಸಿರುವರು ಪೀಪಿಂಗ್–ಹಾಂಕೋ ರೈಲ್ವೆ ರಸ್ತೆಯಲ್ಲಿ ಚುಮಾಟನ್ ಪ್ರಾಂತ್ಯವನ್ನು ಚೀನೀಯರು ಆಕ್ರಮಿಸಿರುವರು ಯುನಾನ್ ಪ್ರಾಂತದಲ್ಲಿ ಚೀನಿ? ಸೈನಿಕರ ಮುನ್ನಡೆ ಜಪಾನ್ ೧೪ನೇ ದಳಕ್ಕೆ ಗಂಡಾಂತರ ಒದಗಿಸಿದೆ. ಚೀನೀ ಸೈನಿಕರು ಸಾಲ್ವಿನ್ ನದಿ ದಾಟಿದರೆಂದು ಇತ್ತೀಚೆಗೆ ಸುದ್ದಿ ಬಂದಿರುವುದು

ನಾರ್ವೆ ರಾಷ್ಟ್ರದ ದಾಸ್ಯವಿಮೋಚನೆಗೊಂಡ ಮೇಲೆ, ಆ ರಾಷ್ಟ್ರದ ಆಡಳಿತದ ಕುರಿತು ಬ್ರಿಟನ್, ಅಮೆರಿಕ ರಶ್ಯ ರಾಷ್ಟ್ರಗಳು ಒಪ್ಪಂದ ಕರಾರನ್ನು ಮಾಡಿಕೊಂಡಿರುವವು. ಈ ಒಪ್ಪಂದದ ಮೇರೆಗೆ ತಾತ್ಕಾಲಿಕವಾಗಿ ಮಿತ್ರಸೈನ್ಯಾಧಿಪತಿಗಳು ನಾರ್ವೆ ಸ್ವಾತಂತ್ರ್ಯದ ಅನಂತರದ ಸೈನಸ್ಥಿತಿಗತಿಗಳನ್ನವಲಂಬಿಸಿ ನಾಗರಿಕ ಆಡಳಿತ ವಹಿಸುವರು ಸೈನ್ಯ ಪರಿಸ್ಥಿತಿಯು ಸುಧಾರಿಸಿದ ಮೇಲೆ, ನಾರ್ವೆ ಸರಕಾರವು ಘಟನಾತ್ಮಕ ನಾಗರಿಕ ಆಡಳಿತೆ ಹೊಣೆಗಾರಿಕೆಯನ್ನು ನಿರ್ವಹಿಸುವುದು

ಜನರಲ್ ಐಸೆನ್ ಹೋವರು ಯುರೋಪಿನ ಬೃಹದಾಕ್ರಮಣದ ಸಲುವಾಗಿ ೫೦ ಡಿವಿಜನ್ ಸೈನ್ಯ ಮತ್ತು ೮೦,೦೦೦ ಕೊಡೆ ಸೈನಿಕರನ್ನು ದಕ್ಷಿಣ ಇಂಗ್ಲೆಂಡಿನಲ್ಲಿ ಸಂಗ್ರಹಿಸಿರುತ್ತಾರೆಂದು ಸುದ್ದಿಯಿದೆ.

ಬ್ರಿಸ್ಟಲ್ ಬಂಧರಿನ ಅನೇಕ ಯುದ್ಧನೌಕೆಗಳು ಬಿಟ್ಟಾಗಿರುವವಂತೆ. ಯುರೋಪಿನ ಮಿತ್ರಪಕ್ಷದವರು ೧೨ ಮಿಲಿಯ ಸೈನಿಕರನ್ನು ಈ ಕಾರ್ಯಕ್ಕಾಗಿ ಸಜ್ಜುಗೊಳಿಸಿರುವರೆಂದು ಹೇಳಲಾಗಿದೆ. ನಾರ್ವೆ ತೀರದಿಂದ ಬಾಲ್ಕನ್ ಕರಾವಳಿ ವರೆಗೆ ಆಕ್ರಮಿತ ಯುರೋಪಿನಲ್ಲಿ ಈ ಭೂಮ್ಯಂತರ್ಗತ ಸೈನ್ಯವು ಜರ್ಮನ್ ವ್ಯೂಹದ ಮೇಲೆ ಹಿಂಬದಿಯಿಂದ ಮುತಿಗೆ ಹಾಕಲು ಸರ್ವ ಸಿದ್ಧತೆಗಳನ್ನು ಮಾಡುತ್ತಿರುವುದಾಗಿಯೂ ಹೇಳಲಾಗಿದೆ.

ಪ್ರಕಟಣೆ

ಮಂಗಳೂರು ಶ್ಯಾಹರಲ್ಲಿರುವ ವಿಟ್ಠಲ ಬಾಳಿಗರ ಮಗ ಸುಬ್ರಾಯ ಬಾಳಿಗನು ಈ ಮೂಲಕ ತಿಳಿಸುವುದೇನೆಂದರೆ

ನಾನು ಮಂಗಳೂರು ಶ್ಯಾಹರಲ್ಲಿರುವ ನಾರಾಯಣ ಪೈಗಳ ಮಗ ಶ್ರಿಂಗೇರಿ ದಾಸ ಪೈ ಮತ್ತು ಇವರ ಮಗ ವೆಂಕಟ್ರಾಯ ಪೈ ಕೂಡಾ ಮೂರು ಜನರು ಪಾಲಿನಲ್ಲಿ ಶ್ರಿಂಗೇರಿ ದಾಸ ಪೈ ಎಂಡ್ ಕೋ ಮಂಗಳೂರು ಎಂಬ ಹೆಸರಿನಿಂದ ವ್ಯಾಪಾರ ನಡ್ಸಿಕೊಂಡು ಬಂದಿರುವಲ್ಲಿ ತಾ 22-4-1944ರಲ್ಲು ನಾವು ಮಾಡಿಕೊಂಡ ಪಾಲು ಅಗಲುವಿಕೆ (Dissolution of paptnership deed) ಪ್ರಕಾರ ನಾನು ಸದ್ರಿ ಪಾಲುಗಾರಿಕೆಯಿಂದ ನಿವೃತ್ತನಾಗಿರುತ್ತೇನೆ ಸದ್ರಿ ಫರ್ಮಿನ ಯಾವತ್ತೂ ವೈವಾಟುಗಳು ನನಗೆ ವ ನನ್ನ ವಾರೀಸುದಾರ ಪ್ರತಿನಿಧಿಗಳಿಗೆ ಲಗಾವು ವ ಬ್ಯಾಂತಿಗ್ ಅಗಲಿಕ್ಕಿಲ್ಲ ಸದ್ರಿ ಫರ್ಮಿನ ಯಾವತ್ತು ಕಂಟ್ರಾಕ್ಟುಗಳಿಗೂ ವ ಸಾಲಗಳಿಗೂ ವ ಅದರ ಯಾವ ತರದ ಲಾಭ ನಷ್ಟಗಳಿಗೂ ನಾನು ಬಧ್ಧನಲ್ಲ ಈ ಸಂಗತಿಯನ್ನು ಸರ್ವರಿಗೂ ತಿಳಿಯುವಂತೆ ಈ ಮೂಲಕ ವರ್ತಮಾನ ಪತ್ರದಲ್ಲಿ ಪ್ರಕಟಿಸಲಾಗಿದೆ

ಮಂಗಳೂರು } ಬಿ ಸುಬ್ರಾಯ
19-5-44 } ಬಾಳಿಗ

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಒಂದಿ	ಬೆಳಿಗ್ಗೆ	ರಾತ್ರಿ
ಷಟಲ್ ಕನ್ನಾನ್ನೂರು ವರಿಯಂತ ಮಾತ್ರ	ಸಾಯಂ	ಬೆಳಿಗ್ಗೆ
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	ಸಾಯಂ

ದ್ವಿತೀಯ ರಂಗ
ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು
ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರ ದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು
—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?
ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.
ಸ್ಥಾಪಿತ: 1906.
ಕೆನರಾ ಬೇಂಕ್ ಲಿಮಿಟೆಡ್.
Canara Bank Ltd.

ನಿಮ್ಮ ಉಡಿಗೆ ತೊಡಿಗೆಗಳು ಸ್ವಚ್ಛವಿರಬೇಕಾದರೆ ಯೂನಿವರ್ಸಲ್ ಪಿಸ್ಟಲ್ ಬಾರ್ ಸೋಪನ್ನೇ ಉಪಯೋಗಿಸಿರಿ
HERE'S AN ECONOMICAL BAR SOAP.. ಕಡಿಮೆ ಕ್ರಯದ ಬಾರ್ ಸೋಪ್ ಇಲ್ಲಿದೆ—ಉತ್ತಮ ಒಂದು ಬಾರ್ ಸೋಪ್ ಇಲ್ಲಿದೆ ಬೇಗನೇ ನೊರೆ ಹೊರಡುವ ಬಾಳಿಕೆಯದೂ ಆಗಿದೆ ಬೇಗನೇ ನೊರೆ ಹೊರಡುತ್ತದೆ, ಪಿಸ್ತೂಲ್ ಬ್ರೇಂಡ್ ಬಾರ್ ಸೋಪ್ ಎಲ್ಲಾ ಕಡೆಗಳಲ್ಲೂ ಸಿಗುತ್ತೆ
PISTOL BRAND BAR SOAP

WANTED AGENTS IN S. KANARA DT.
Mangalore Stockists—M/S D. Narsimha Pai & Sons, Mangalore.
Universal Industries (India) Ltd.
Nable chambers. Fort Bombay.

ಸ್ವದೇಶಾಭಿಮಾನಿ

ತಾರೀಕು 26—5—1944

ರೇಶನಿಂಗ್

ಕೊನೆಗೊಮ್ಮೆ ತಡವಾಗಿಯಾದರೂ ಇದೇ ತಾ. ೨೧ರಿಂದ ಮಂಗಳೂರಲ್ಲಿ ಪೂರ್ಣ ರೇಶನಿಂಗ್ ಜಾರಿಗೆ ಬಂದಿದೆ; ಇಂದಾದರೂ ಶತ ಪ್ರಯತ್ನಮಾಡಿ ರೇಶನಿಂಗನ್ನು ಜಾರಿಮಾಡಿದ ಅಧಿಕಾರಿಗಳನ್ನು ನಾವು ಅಭಿನಂದಿಸದಿರಲಾರೆವು.

ಇದ್ದುದನ್ನೆಲ್ಲರೂ ಸರಿಯಾಗಿ ಹಂಚಿ ತಿನ್ನಬೇಕೆಂಬುದು ಬಹಳ ಉತ್ತಮವಾದ ತತ್ವ; ಇದೇ ಯೋಗ್ಯವಾದುದೂ ಆಗಿದೆ. ಅದರಲ್ಲಿಯೂ ಈ ಯುದ್ಧಕಾಲದಲ್ಲಿ, ಸಾಮಗ್ರಿಗಳ ಅಭಾವವುಂಟಾಗಿರುವಾಗ ಕಳ್ಳ ಸಂತೆ ನಡೆಯುತ್ತಲೇ ಇರುವಾಗ, ಆಹಾರಾವಶ್ಯಕ ಸಾಮಗ್ರಿಗಳು ಸರ್ವರಿಗೂ ಸರಿಯಾಗಿ ಹಂಚಿ ಸಿಗುವಂತೆ ಮಾಡುವ ರೇಶನಿಂಗ್ ವ್ಯವಸ್ಥೆ ಆಗಲೇಬೇಕು, ಈ ವ್ಯವಸ್ಥೆಯಲ್ಲಿ ಅಧಿಕಾರಿಗಳೊಡನೆ ನಾಗರಿಕರು ಸರ್ವರೂ ಸಹಕರಿಸುವುದು ಕರ್ತವ್ಯವಾಗಿದೆ.

ಬಂಗಾಳದ ಬರಗಾಲವನ್ನು, ಮಲಬಾರಿನ ಕರುಣಾಮಯ ಸ್ಥಿತಿಯನ್ನು ನೋಡಿದ ಕೇಳಿದ ನಮ್ಮ ಜಿಲ್ಲೆಯ ಜನರು, ನಾಗರಿಕರು, ಭೂಮಾಲಿಕರು, ವ್ಯಾಪಾರಿಗಳು ಸರ್ವರೂ ಕೂಡಿ ಏಕಕಂಠರಾಗಿ ರೇಶನಿಂಗ್' ಕೂಡಲೇ ಇಲ್ಲಿ ಜಾರಿಗೆ ತರಬೇಕೆಂದು ತೀವ್ರ ಆಂದೋಲನ ಮಾಡಿದ್ದರು, ಆಹಾರ ಪೂರೈಕೆಯ ಅಧಿಕಾರಿಗಳು ನಮ್ಮ ಜಿಲ್ಲೆಗೆ ಬಂದಾಗ್ಯು ಅವರಿಗೆ ಬಿಡದೆ ವಿನಂತಿ ಮಾಡಿಕೊಂಡಿದ್ದರು. ನಮ್ಮ ಜಿಲ್ಲೆಯ ಪತ್ರಿಕೆಗಳೂ ಅದೇ ಅಭಿಪ್ರಾಯವನ್ನು ಸಾರಿ ಸಾರಿ ಹೇಳಿದ್ದವು. ಬಂಗಾಲ ಮಲಬಾರುಗಳಿಂದ ಪಾಠ ಕಲಿತ ನಮ್ಮ ಜಿಲ್ಲೆಯ ಜನರು ಮುಂಜಾಗ್ರತೆ ವಹಿಸಿ ಹೀಗೆ ಪ್ರಬಲ ಚಳವಳ ಮಾಡಿದ್ದರಿಂದ ಈಗಲಾದರೂ ರೇಶನಿಂಗ್ ಜಾರಿಗೆ ಬಂತೆನ್ನಬಹುದು.

ಈ ಸಂದರ್ಭದಲ್ಲಿ ನಾವು ನಮ್ಮ ಹೊಸ ಜಿಲ್ಲಾಧಿಕಾರಿಗಳನ್ನು ಪ್ರತ್ಯೇಕ ಅಭಿನಂದಿಸುತ್ತೇವೆ. ಅವರು ಅಧಿಕಾರವನ್ನು ಕೈಗೆ ತೆಗೆದುಕೊಂಡವರೇ ಅದಾಗಲೇ ಕೆಟ್ಟು ಹೋಗಿದ್ದ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಸ್ತಿಮಿತಕ್ಕೆ ತರಲು ಹಠತೊಟ್ಟು ಕೆಲಸಮಾಡಿದರು. ಬೇಕುಬೇಕಾದ ಮುಂಜಾಗ್ರತೆ ವಹಿಸಿದರು; ಕಳ್ಳ ಸಂತೆಯನ್ನು ನಿರ್ಮೂಲಗೊಳಿಸಲು ಪ್ರಯತ್ನಮಾಡಿದರು. ಇದರಿಂದೆಲ್ಲಾ ಆಗಿ ಇಂದು ಇಷ್ಟು ತಡವಾದರೂ ನಮ್ಮಲ್ಲಿ 'ರೇಶನಿಂಗ್' ಜಾರಿಗೆ ಬರುವಂತಾಗಿದೆಯೆಂಬುದನ್ನು ನಾವು ಮರೆಯಲಾರೆವು. ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಪ್ರತ್ಯೇಕ ಅಭಿನಂದಿಸಲೇಬೇಕಾಗದೆ.

'ರೇಶನಿಂಗ್' ವಿಚಾರ ಅಧ್ಯಕ್ಷ ಸಂಬಂಧಪಟ್ಟ ಅಧಿಕಾರಿಗಳು ಬೇಕುಬೇಕಾದ [illegible] ತಂದುಕೊಳ್ಳಬೇಕು. ಜನರ ಜೀವನಾವಶ್ಯಕ ಸಾಮಗ್ರಿಗಳ ವಿಷಯ ವಂಚನೆ ಮಾಡಬಾರದು; ಸಾಮಗ್ರಿಗಳ ಅದರಲ್ಲೂ ಆಹಾರ ಸಾಮಗ್ರಿಗಳ ಅಭಾವ ಕಾಲದಲ್ಲಿ ಆ ಕುರಿತು ಕಳ್ಳತನ, ವಂಚನೆ ಮಾಡುವುದೆಂದರೆ ಬೇರೆಯವರು ನಮ್ಮ ಸೋದರರ ಅನ್ನವನ್ನು ಅಪಹರಿಸುವದೆಂದರ್ಥ. ಹಾಗಾಗಿ ಈ ಸಂದರ್ಭದಲ್ಲಿ ಪ್ರತಿಯೊಬ್ಬ ನಾಗರಿಕನೂ ತನ್ನ ಕರ್ತವ್ಯ, ಸಮಾಜದ ಕುರಿತು ತನ್ನ ಕರ್ತವ್ಯವೇನೆಂದು ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಬೇಕು.

ಈಗ ಹಂಚಿದ ರೇಶನಿಂಗ್ ಕಾರ್ಡು ಗಳಲ್ಲಿ ಸರ್ವವೂ ಸಮರ್ಪಕವಾಗಿಲ್ಲವೆಂಬ ದೂರಿದೆ; ಉದಾಹರಣೆಗೆ, ಇನ್ನೂ ಕೆಲವರಿಗೆ ರೇಶನಿಂಗ್ ಕಾರ್ಡುಗಳು ಸಿಕ್ಕಿಲ್ಲವೆಂದು ತಿಳಿದುಬರುತ್ತದೆ/ ಅಂತಹವರು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಷಯ ತಿಳಿಸಬೇಕು; ಅಧಿಕಾರಿಗಳು ಈ ಕಡೆ ತೀವ್ರ ಲಕ್ಷ್ಯ ಕೊಡಬೇಕು;

'ರೇಶನಿಂಗ್' ವ್ಯವಸ್ಥೆಯಿಂದ ಅಕ್ಕಿಯೇನೋ ಸರಿಯಾಗಿ ಸಿಗುವಂತೆ ಆಗಿದೆ; ಇದೇ ಕ್ರಮ ಮುಂದುವರಿದು ಜನರು ಸುಖಮಯವಾಗಿ ಬಾಳಲಿ / ಎಂದು ಹಾರೈಕೆ. ಆದರೆ ಚಿಮ್ಣಿ ಎಣ್ಣೆ, ಬೆಲ್ಲ, ಸಕ್ಕರೆ, ಕಟ್ಟಿಗೆ ಮೊದಲಾದ ಜೀವನಾವಶ್ಯಕ ಸಾಮಗ್ರಿಗಳು ಸರಿಯಾಗಿ ಸಿಗುವ ವ್ಯವಸ್ಥೆ ಇನ್ನೂ ಆಗಿಲ್ಲ. 'ರೇಶನಿಂಗ್' ವ್ಯವಸ್ಥೆಯ ಜತೆಯಲ್ಲಿ ಮೇಲೆ ಹೇಳಿದ ಆ ಅವಶ್ಯಕ ಸಾಮಗ್ರಿಗಳ ವ್ಯವಸ್ಥೆಯನ್ನೂ ಅಧಿಕಾರಿಗಳು ಅವಶ್ಯ ಮಾಡಲೇಬೇಕು. ರೇಶನಿಂಗ್ ಎಲ್ಲಾ ಅವಶ್ಯಕ ಸಾಮಗ್ರಿಗಳಿಗೂ ಆಗಬೇಕು. ನಮ್ಮ ಜಿಲ್ಲಾಧಿಕಾರಿಗಳು ಈ ಕಾರ್ಯಗಳನ್ನೂ ಪೂರೈಸಿ ಪ್ರಶಂಸಾ ಪಾತ್ರರಾಗಬೇಕೆಂದು ನಮ್ಮ ವಿನಂತಿ,

ಏಲಂ ನೋಟೀಸು

ದಕ್ಷಿಣ ಕನ್ನಡ ಸಬೊರ್ಡಿನೇಟ್ ಕೋರ್ಟಿನಲ್ಲಿ

ಹಾಲಿ ಮಮ್ಮ ಕೂಡಾ ವಾದಿರಾಗಿ ಬಡವ ಬಿನ್ನ ಸಾವುಂಞ ಬ್ಯಾರಿ ಕೂಡಾ ಪ್ರತಿವಾದಿರ ಮೇಲೆ ದಾಕಲ್ಲು ಮಾಡಿದ ಕ್ರಮ ನಂಬ್ರ 56/1943ನೇ ವ್ಯಾಜ್ಯದಲ್ಲಿ ದಾವಾಸ್ತಿರಚರ ಸೊತ್ತುಗಳಿಗೆ ಸದರಿ ಸಬೊರ್ಡಿನೇಟ್ ಕೋರ್ಟಿನವರಿಂದ ರಿಶೀವರರಾಗಿ ನೇಮಕ ಪಟ್ಟ ಮಂಗಳೂರು ಶ್ಯಹಾರಿನಲ್ಲಿರು ವಕೀಲ್ ಜಿ. ಉಪೇಂದ್ರ ಪ್ರಭು ಸದರಿ ಕೋರ್ಟು ಹುಕುಂ ಪ್ರಕಾರ ಕೋಟಿಯಾ ಬಡಾನ ಖಾನ್ ಸಾಹೇಬ C. R. No. 18/1931ನ್ನು 98—81 ವ ಇದಕ್ಕೆ ಸಂಮ್ಮಂದಪಟ್ಟ ಹಾಲಿ ಇದರಲ್ಲಿ ಇರುವ ಸಾಮಾನುಗಳು ಸಮೇತ ಸದರಿ ಕೋಟಿಯವನ್ನು ಇದೇ ಬರುವ ತಾ. 3—6—1944 ರಲ್ಲು ಬೆಳಿಗ್ಯೆ ಗಂಟೆ 10—30ರಿಂದ ಮಂಗಳೂರು ಶ್ಯಹಾರು ಬಂದರಲ್ಲಿರುವ ದಿ ಕೆನರಾ ಚೇಂಬರ್ ಆಫ್ ಕೋಮರ್ಸ್ ಮಂಗಳೂರು ಇದರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವರು. ಸದರಿ ದರಖಾಸ್ತಿಗೆ ನಿಲ್ಲುವ ಉಮೇದ್ವಾರರು ಸದರಿ ಏಲಮಿನ ಮಾರಾಟದ ಶರ್ತಗಳನ್ನು ವ ಇತರ ವಿಷಯಗಳನ್ನು ತಿಳಕೊಳ್ಳುವ ಅಗತ್ಯಪಟ್ಟಲ್ಲಿ 'ಸದರಿ ರಿಶೀವರರಿಂದ ತಿಳಕೊಳ್ಳಬಹುದು.

G. Upendra Prabhu,
ರಿಶೀವರ.
ಮಹಾಮ್ಮಾಯಿ ಟೆಂಪಲ್ ರೋಡ್,
ಮಂಗಳೂರು, ತಾ. 22—5—1944.

ಅಝಾದ್ - ನೆಹರು ಪ್ರಮುಖರ ಬಿಡುಗಡೆಯಾಗಬೇಕು

ಆದರೆ ರಾಷ್ಟ್ರೀಯ ಸರಕಾರ ರಚನೆಗೆ ಮಾರ್ಗವಾಗುವುದು

ಭಾರತೀಯರ ಸಹಕಾರದಿಂದ ಯುದ್ಧಪ್ರಯತ್ನ ಯಶಸ್ವಿಯಾಗುವದು

ಅಮೇರಿಯವರಿಗೆ ಪಾರ್ಲಿಮೆಂಟ್ ಸದಸ್ಯರ ಒತ್ತಾಯ

ಮಹಾತ್ಮಾ ಗಾಂಧಿ, ನೆಹರು, ಹಾಗೂ ಇನ್ನಿತರ ಕಾಂಗ್ರೆಸ್ ಮುಖಂಡರು ಮತ್ತು ಜಿನ್ನಾ ಇವರು ಪರಸ್ಪರ ಭೆಟ್ಟಿಯಾಗಿ ಚರ್ಚಿಸಿ ಒಂದು ನಿರ್ಣಯಕ್ಕೆ ಬರುವಂತೆ ವಾತಾವರಣವನ್ನು ಕಲ್ಪಿಸಿಕೊಟ್ಟರೆ ರಾಷ್ಟ್ರೀಯ ಸರಕಾರ ರಚಿಸಲು ಮಾರ್ಗವನ್ನು ನಿಶ್ಚಿತ ತೆರೆದಂತಾಗುವದೆಂದು ಪಾರ್ಲಿಮೆಂಟಿನ ಕೂಲಿಕಾರ ಮೆಂಬರರು ಹಿಂದೀ ರಾಜಕೀಯ ಕೈದಿಗಳ ಸಾರ್ವತ್ರಿಕ ಬಿಡುಗಡೆಯ ಬಗ್ಗೆ ಅಮೇರಿಯವರಿಗೆ ಒಪ್ಪಿಸಿದ ಮನವಿಯಲ್ಲಿ ಸ್ಪಷ್ಟಮಾಡಿರುವರು.

ಅವರು ಅಮೇರಿಯವರಿಗೆ ಮಾಡಿದ ಮನವಿಯ ಸಾರಾಂಶವು ಕೆಳಗಿನಂತಿದೆ:

"ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕೆಂದು ಹಿಂದುಸ್ಥಾನದಲ್ಲಿ ವ್ಯಾಪಕವಾದ ಅಭಿಪ್ರಾಯವು ಪ್ರಬಲವಾಗಹತ್ತಿದ್ದರಿಂದ ಬಹಳ ದಿನದಿಂದ ತಡೆಯಾದ ರಾಜಕೀಯ ಬಿಕ್ಕಟ್ಟಿನಿಂದ ಹಿಂದುಸ್ಥಾನದ ಜನರಿಗೂ ಬಹಳ ಬೇಸರವುಂಟಾಗಿದೆಂಬುದು ಸ್ಪಷ್ಟವಿದೆ. ಹಿಂದೂಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಿ ಅಲ್ಲಿಯ ಜನರ ನೆರವನ್ನು ಯುದ್ಧ ಸಂಬಂಧವಾಗಿ ಪಡೆದುಕೊಳ್ಳಬೇಕಾದ್ದರೆ ಬಿಕ್ಕಟನ್ನು ಬಗೆಹರಿಸಲು ಶಕ್ಯವಿದ್ದ ಎಲ್ಲ ಪ್ರಯತ್ನವನ್ನು ಈ ಕಡೆ(ಬ್ರಿಟನಿನ)ಯಿಂದ ಮಾಡಬೇಕು. ನಮ್ಮ ದೇಶದಲ್ಲಿ ನಾವು ಇದು ನಮ್ಮ ಯುದ್ಧವೆಂದು ತಿಳಿದುಕೊಳ್ಳುವಂತೆ ಹಿಂದೀಯರೂ ತಿಳಿದುಕೊಳ್ಳಬೇಕಾದರೆ ಅಲ್ಲಿಯ ಸಾರ್ವಜನಿಕ ನಾಯಕರೇ ಅವರಿಗೆ ಸಮಾಧಾನ ಕೊಟ್ಟು ಸ್ಪಷ್ಟಮಾಡಬೇಕಲ್ಲದೆ ಅನ್ಯಥಾ ಮಾರ್ಗವಿಲ್ಲವೆಂದು ನಮಗೆ ಸ್ಪಷ್ಟವಾಗಿ ಮನವರಿಕೆಯಾಗಿದೆ. ಕಾಂಗ್ರೆಸ್ ಹಿಂದುಸ್ಥಾನದ ಬಹುಸಂಖ್ಯಾಕ ಭಾವನೆಯ ಪ್ರತಿನಿಧಿ ಸಂಸ್ಥೆಯೆಂಬುದನ್ನು ನೀವು ಒಪ್ಪುವಿರೆಂದು ನಾವು ಭಾವಿಸುತ್ತೇವೆ. ಆದಕಾರಣ ಅಲ್ಲಿಯ ಜನರ ಸಹಾನುಭೂತಿಯನ್ನು ಒಲಿಸಿಕೊಳ್ಳುವುದಕ್ಕೆ ನಾವು ಸರ್ವ ಪ್ರಯತ್ನ ಮಾಡುವದು ಉಚಿತ ಹಾಗೂ ಗೌರವಯುಕ್ತವಿದ್ದೆ.

"ಮಹಾತ್ಮಾ ಗಾಂಧಿಯವರ ಬಿಡುಗಡೆಯೇ ಸಾರ್ವತ್ರಿಕ ಬಿಡುಗಡೆಯ ಪೂರ್ವ ಕುರುಹಾಗಿ ಮುಂದೆ ಎಲ್ಲರ ಬಿಡುಗಡೆಯಾಗಬೇಕು. ಅಂದರೆ ಮೊದಲು ಅಗ್ರಗಣ್ಯರಾದ ರಾಷ್ಟ್ರಪತಿ ಅಝಾದ, ಪಂಡಿತ ಜವಾಹರಲಾಲ ನೆಹರು ಮೊದಲಾದವರ ಬಿಡುಗಡೆ ಮಾಡಬೇಕು. ಹೀಗೆ ಮಾಡುವದರಿಂದ ಗಾಂಧಿ ಮತ್ತು ಇನ್ನಿತರ ಪ್ರಮುಖ ನಾಯಕರು ಒಟ್ಟಾಗಿ ಸದ್ಯದ ಯುದ್ಧ ಪರಿಸ್ಥಿತಿಯನ್ನು ವಿಮರ್ಶಿಸಲು ಕಾಂಗ್ರೆಸಿಗೆ ಅನುಕೂಲವಾಗುವದು.' ಅಲ್ಲದೆ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಲು ಸಾಧ್ಯವಾಗುವದು. ಆಗ್ಗೆ ಅವರು ದೂರದರ್ಶಿತ್ವದ ಹಾಗೂ ಮಹತ್ವದ ನಿರ್ಣಯಕ್ಕೆ ಬಂದು ಹಿಂದುಸ್ಥಾನದ ಯುದ್ಧ ಪ್ರಯತ್ನಕ್ಕೆ ನೆರವಾಗುವದರಲ್ಲಿ ಅನುಮಾನವಿಲ್ಲ. ಯುದ್ಧದಲ್ಲಿ ಮಿತ್ರ ರಾಷ್ಟ್ರಗಳಿಗೆ ಮನಃಪೂರ್ವಕ ನೆರವಾಗುವಂಥ ರಾಷ್ಟ್ರೀಯ ಸರಕಾರ ರಚನೆಯಾಗಬೇಕೆಂಬುದು ಎಲ್ಲರ ಆಸೆ. ಈ ರೀತಿ ರಾಷ್ಟ್ರೀಯ ಸರಕಾರವಾಗಬೇಕಾದರೆ ಗಾಂಧಿ-ನೆಹರು-ಜಿನ್ನಾರ ನಡುವೆ ಸರಳವಾದ ಚರ್ಚೆಯಾಗಿ ಅವರು ಒಂದು ನಿರ್ಣಯಕ್ಕೆ ಬರಬೇಕು. ಹಾಗಾಗಬೇಕಾದರೆ ರಾಜಕೀಯ ಮುಖಂಡರ ಅನಿರ್ಬಂಧ ಸಾರ್ವತ್ರಿಕ ಬಿಡುಗಡೆಯಾಗಬೇಕಲ್ಲದೆ ಬೇರೆ ಮಾರ್ಗವಿಲ್ಲ. ಅಲ್ಲದೆ ಕೇಂದ್ರ ಮತ್ತು ಪ್ರಾಂತಿಕ ಅಸೆಂಬ್ಲಿಗಳಿಗೆ ಆದಷ್ಟು ಬೇಗ ಪುನಃ ಚುನಾವಣೆಯಾಗುವದು ಉಚಿತ. ಮಳೆಗಾಲದಲ್ಲಿ ಬರ್ಮಾ ವ್ಯೂಹದ ಯುದ್ಧವು ಸ್ತಬ್ಧವಾಗುವದೆಂದು ನಮ್ಮ ನಿರೀಕ್ಷೆ. ಆದ್ದರಿಂದ ಈ ಕಾಲವನ್ನು ಚುನಾವಣೆಯ ಬಗ್ಗೆ ಉಪಯೋಗಿಸಿ ೯೩ ಕಲಮಿನನ್ವಯ ಗವರ್ನರರ ಆಡಳಿತೆ ಸಾಗುವ ಪ್ರಾಂತಗಳಲ್ಲಿ ಪ್ರಜಾಪ್ರಭುತ್ವ ತಳಹದಿಯ ಮೇಲೆ ಸರಕಾರವನ್ನು ಸ್ಥಾಪಿಸಲು ಹೊಸ ಹುರುಪನ್ನು ಕೊಡಬೇಕು.

"ನೀವು ಪರಮ ಔದಾರ್ಯದಿಂದ ಹಿಂದೀ ಸಮಸ್ಯೆ ಬಗೆಹರಿಸಿ ರಾಜಕೀಯ ಬಿಕ್ಕಟ್ಟನ್ನು ಸಮಯೋಚಿತವಾದ ಕರ್ತವ್ಯವೆಂದು ಕೊನೆಗೊಳಿಸಬೇಕು ಹಾಗೂ ಹಿಂದೀಯರಲ್ಲಿ ಬ್ರಿಟಿಷರ ಬಗ್ಗೆ ವಿಶ್ವಾಸವನ್ನು ಹುಟ್ಟಿಸಬೇಕು."

ಈ ಮನವಿಗೆ ವಿಲಿಯಂ ದೊಬ್ಬಿ, ಡೇವಿಸ್ ಟಾಮ್, ಬ್ರೌನ್ ಅಲೆಕ್ಸಾಂಡರ್, ಸ್ಲೋನ್, ಪಿ. ಜಿ. ಬಾರೆಟೋ, ಎಸ್. ಓ. ಡೆವಿಸ್, ಜಾನ್ ಡಿ ಮ್ಯಾಕ್ ಜಾನ್ ದಗ್‌ಡೇಲ್, ಬಿ. ಎಸ್. ವುಡ್, ಕ್ಯಾಪ್ಟನ್ ಫ್ರೆಡ್ ಬೆಲ್ಲೆಂಜರ ಮತ್ತು ಬೆರ್ನಾರ್ಡ್ ಟೇಲರರೇ ಮೊದಲಾದವರು ಸಹಿ ಮಾಡಿರುವರು.

ರಾಜ ಕುಮಾರಿ ಕೂಲಿಗಾರನನ್ನು ಮದುವೆಯಾದಳು

ದೇವಾಸ್ ಸಂಸ್ಥಾನದ ರಾಜ ಕುಮಾರಿ ಓರ್ವ ಕೂಲಿಗಾರನ ಮಗನನ್ನು ಮದುವೆಯಾಗಿ, ಪರಂಪರಾ ಕ್ರಮವನ್ನು ಮುರಿದ ವಿಶೇಷ ವಾರ್ತೆಯೊಂದು ಬಂದಿದೆ.

ಪ್ರೇಮ ರಾಜೇ ತುಕೋಜಿ ರಾವ್ ಪೊವರ್ ಈಕೆಯೇ ಆ ರಾಜ ಕುಮಾರಿ ಶ್ರೀ ಡಿ. ವಿ. ಶಿಂಧೆ ಎಂಬ ರತ್ನಗಿರಿಯ ವೆಂಗ್ರ್ಯಾರಿನಲ್ಲಿರುವ ಕೂಲಿಗಾರನ ಮಗನೇ ಆಕೆಯ ಪತಿ.

ಬೊಂಬೇ ಗನಿಯೊಂದರಲ್ಲಿ ಶ್ರೀ ಶಿಂಧೆಯವರು ಮುಖ್ಯ ಜವಾನನ ಮಗ ಅದೇ ಗನಿಯಲ್ಲಿ ಶ್ರೀ ಶಿಂಧೆಯವರು ಐದು ವರ್ಷಗಳ ವರೆಗೆ ಕೆಲಸ ಮಾಡಿದ್ದರು. ಕೆಲ ಕಾಲದ ಹಿಂದೆ ಶಿಂಧೆಯವರು ಬೆವಿನ್ ಹುಡುಗನಾಗಿ ಇಂಗ್ಲೆಂಡಿಗೆ ತೆರಳಿದ್ದರು. ಮೋಟರು ವಿಜ್ಞಾನದಲ್ಲಿ ವಿಶೇಷ ಪರಿಣತಿ ಹೊಂದಿದ ಆತ ಇಂಗ್ಲೆಂಡಿನಿಂದ ಮರಳಿ ಬಂದಾತನನ್ನು ರಾಜ ಕುಮಾರಿ ಮದುವೆಯಾದಳು ಈಗ ಸಿಂಧಿ ಸ್ಟೀಮ್ ನೆವಿಗೇಶನ್ ಕಂಪನಿ ಲಿಮಿಟೆಡ್ ಇದರಲ್ಲಿ ಉದ್ಯೋಗದಲ್ಲಿದ್ದಾನೆ.

ದಕ್ಷಿಣ ಕನ್ನಡ - ಮಂಗಳೂರು ಜಿಲ್ಲೆ

ಉಡುಪಿ

ದ. ಕ. ಜಿಲ್ಲಾ ಹಿಂದೂ ಮಹಾ ಸಭೆಯ ಮಹಾಧಿವೇಶನ

ಇದೇ ತಿಂಗಳ ತಾರೀಕು ೨೦ ೨೧ರಲ್ಲಿ ಹಿಂದೂಗಳ ಪುಣ್ಯ ಕ್ಷೇತ್ರವಾದ ಉಡುಪಿಯಲ್ಲಿ ಧರ್ಮ ವೀರ ಡಾ| ಬಿ. ಎಸ್. ಮೂಂಜೆಯವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕೆ ಜಿಲ್ಲಾ ಹಿಂದೂ ಮಹಾಸಭೆಯ ಮಹಾಧಿವೇಶನವನ್ನು ಡಾ| ಮೂಂಜೆಯವರು ತಂತಿ ಮೂಲಕ ತಿಳಿಸಿದಂತೆ ಇದೇ ಬರುವ ಜೂನ್ ತಿಂಗಳ ತಾರೀಕು ೩, ೪ಕ್ಕೆ ಮುಂದರಿಸಿಡಲಾಗಿದೆ. ಅಧಿವೇಶನವು ಜೂನ್ ತಾರೀಕು ೩ ಮತ್ತು ೪ರಲ್ಲಿ ಜರಗುವುದು. ಜೂನ್ ತಿಂಗಳ ತಾರೀಕು ೨ನೇ ಬೆಳಿಗ್ಗೆ ಕಾರ್ಕಳದಲ್ಲಿಯೂ, ಸಾಯಂಕಾಲ ಮಂಗಳೂರಲ್ಲಿಯೂ, ತಾರೀ ೫ನೇ ಬೆಳಿಗ್ಗೆ ಕಾಸರಗೋಡಿನಲ್ಲಿಯೂ ಶ್ರೀಮಾನ್ ಮೂಂಜೆಯವರು ಸಾರ್ವಜನಿಕ ಭಾಷಣಗಳನ್ನು ಕೊಡಲಿರುವರು ಶ್ರೀಮಾನ್ ತೋನ್ಸ ವೆಂಕಪ್ಪ ಹೆಗ್ಗಡೆಯವರು ಸ್ವಾಗತ ಸಮಿತಿಯ ಅಧ್ಯಕ್ಷ ಪದವನ್ನು ವಹಿಸಲು ಒಪ್ಪಿರುವರು ಅಧಿವೇಶನದ ಉದ್ಘಾಟನಾ ಸಮಾರಂಭವನ್ನು ಜರಗಿಸಲು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರಿಗೆ ಅನಾಸುಖವಾದ ಕಾರಣ ಅವರ ಬದಲಿಗೆ ಅಖಿಲ ಭಾರತ ಸಂಸ್ಥಾನಗಳ ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ ವಿ ರಾಮಾಚಾರ್, ಎಡ್ವೊಕೇಟ್ ಇವರನ್ನು ಕೇಳಿಕೊಳ್ಳಲಾಗಿದೆ ಶ್ರೀ ವಕೀಲ್ ವೆಂಕಪ್ಪ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ೧೨ ಮಂದಿ ಸದಸ್ಯರಿಂದ ಕೂಡಿದ ಸ್ವಾಗತ ಸಮಿತಿಯ ಕಾರ್ಯಕಾರೀ ಮಂಡಳಿಯು ರಚಿಸಲ್ಪಟ್ಟಿರುವುದು

ಮಂಗಳೂರು ಸಿ ಪಿ ಸಿ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ವಿ. ಎಸ್ ಕುಡ್ವರು, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರೂ ಈ ಮಹಾಧಿವೇಶನವು ಯಶಸ್ವಿಯಾಗಲೆಂದು ಹಾರ್ದಿಕ. ರೂ ೧೦೦ರಂತೆ ಧನ ಸಹಾಯ ಕೊಡುವುದಾಗಿ ವಾಗ್ದಾನ ಮಾಡಿರುವರು ಶ್ರೀ ಪುತ್ತಿಗೆ ಪರ್ಯಾಯ ಮಠದ ಶ್ರೀ ವಿದ್ಯಾವಲ್ಲಭ ಸ್ವಾಮಿಯವರು ಭೋಜನದ ವ್ಯವಸ್ಥೆ ಮಾಡಿಸುವುದಾಗಿ ಆಶ್ವಾಸನೆಯನ್ನಿತ್ತಿರುವರು.

ಅಧಿವೇಶನದ ಅಂಗವಾಗಿ ಅಖಿಲ ಕರ್ನಾಟಕ ಹಿಂದೂ ಸಂಘಟನಾವಾದಿಗಳ ಸಮ್ಮೇಳನವು ಜರಗುವುದು ಈ ಸಮ್ಮೇಳನಕ್ಕೆ ಜಿಲ್ಲೆಯ ಹೊರಗಿನಿಂದ ಬರಲಪೇಕ್ಷಿಸುವವರು. ಇದೇ ತಿಂಗಳ ತಾರೀಕು ೨೮ರ ಒಳಗೆ ನಮ್ಮೊಡನೆ ಪತ್ರ ವ್ಯವಹಾರ ನಡೆಯಿಸತಕ್ಕದ್ದು ಇದೇ ತಿಂಗಳ ತಾರೀಕು ೨೮ರ ಒಳಗೆ ಕಳುಹಿಸತಕ್ಕದ್ದು

ಪರಸ್ಥಳದಿಂದ ಅಧಿವೇಶನಕ್ಕೆ ಬರತಕ್ಕವರು ತಾ ೨೫ರ ಒಳಗೆ ಸ್ವಾಗತ ಸಮಿತಿಯ ಜತೆ ಕಾರ್ಯದರ್ಶಿಗಳಿಗೆ ತಿಳಿಸಿದಲ್ಲಿ ವಸತಿ, ಭೋಜನಗಳ ವ್ಯವಸ್ಥೆ ಮಾಡಲಾಗುವುದು.

ರೇಶನಿಂಗ್

ಮಂಗಳೂರು ನಗರ ಮತ್ತದರ ಆಸುಪಾಸುಗಳಲ್ಲಿ ತಾ. ೨೧ರಂದು ರೇಶನಿಂಗ್ ಜಾರಿಗೆ ಬಂದಿರುವುದು

ರೇಶನಿಂಗ್ ಕ್ಷೇತ್ರಗಳಲ್ಲಿ ಜನರು ಪಾಲಿಸಬೇಕಾದ ನಿಯಮಾವಳಿಗಳು.

ಒಬ್ಬನ ರೇಶನಿಂಗ್ ಚೀಟನ್ನು ಇನ್ನೊಬ್ಬನು ಬದಲು ಮಾಡಿಕೊಳ್ಳುವುದು. ಕಾನೂನಿಗೆ ವಿರೋಧ, ಮತ್ತೊಬ್ಬರ ರೇಶನಿಂಗ್ ಚೀಟನ್ನು ಉಪಯೋಗಿಸಬೇಡಿರಿ.

ನಿಮ್ಮ ಮನೆಯಲ್ಲಿ ಜನಸಂಖ್ಯೆ ಕಡಿಮೆಯಾದ ಕೂಡಲೇ ರೇಶನಿಂಗ್ ಪ್ರಮಾಣವನ್ನು ಕಡಿಮೆ ಮಾಡುವ ಬಗ್ಗೆ ಕೂಡಲೇ ರೇಶನಿಂಗ್ ಅಧವಾ ಅಸಿಸ್ಟಾಂಟ್ ರೇಶನಿಂಗ್ ಆಫೀಸರರಿಗೆ ಬರೆದುಕೊಳ್ಳಿರಿ.

ನೀವು ರೇಶನಿಂಗ್ ಕ್ಷೇತ್ರವನ್ನು ಬಿಟ್ಟು ಹೋಗುವುದಾದರೆ ಕೂಡಲೇ ನಿಮ್ಮ ರೇಶನಿಂಗ್ ಚೀಟನ್ನು ಅಸಿಸ್ಟಾಂಟ್ ಅಥವಾ ರೇಶನಿಂಗ್ ಆಫೀಸರರಿಗೆ ವಾಪಾಸು ಮಾಡಿರಿ

ಒಬ್ಬನು ಒಂದಕ್ಕಿಂತ ಹೆಚ್ಚಿನ ರೇಶನಿಂಗ್ ಚೀಟುಗಳಲ್ಲಿ ರೇಶನಿಂಗ್ ಪಡಿಯನ್ನು ಪಡೆಯ ಕೂಡದು

ಮದ್ರಾಸ್ ಎಸೆನ್ಶಿಯಲ್ ಆರ್ಟಿಕಲ್ಸ್ ರಿಸ್ಟ್ರಿಕ್ಟೆಡ್ ಎಕ್ವಿಸಿಶನ್ ಆರ್ಡರಿನ ಪ್ರಕಾರ ಒಬ್ಬನಲ್ಲಿ ಒಂದು ತಿಂಗಳಿಗೆ ಸಾಕಷ್ಟು ಪಡಿ ಇರುವುದಾದರೆ (ಅಕ್ಕಿ ಯಾ ಭತ್ತ) ಅವರ ರೇಶನ್ ಅಂಗಡಿಯಿಂದ ರೇಶನ್ ಪಡೆಯ ಕೂಡದು ಹಾಗೆ ಪಡೆದರೆ ಅದು ಕಾನೂನಿಗೆ ವಿರೋಧ

ರೇಶನಿಂಗ್ ಜಾರಿಯಾದ ಅನಂತರ ರೇಶನಿಂಗ್ ಸಂಬಂಧ ಪಟ್ಟ ಟೌನು ಯಾ ಊರುಗಳಲ್ಲಿ ರೇಶನಿಂಗ್ ಆಫೀಸರರ ಬರಹ ಮೂಲಕದ ಹುಕುಂ ವಿನಾ ಯಾರೊಬ್ಬನೂ ಪೈರಿನ ಬೆಳೆ ಕಟಾವು ಮಾಡಕೂಡದು ಹಾಗೆ ಮಾಡಿದರೆ ಅದು ಕಾನೂನಿಗೆ ವಿರೋಧ

ಕಳ್ಳ ಸಂತೆಯ ನಿರ್ಮೂಲನ

ಜಿಲ್ಲಾ ಮೆಜಿಸ್ಟ್ರೇಟರು ಜಿಲ್ಲೆಯಲ್ಲಿ ಕಳ್ಳ ಸಂತೆಯು ತಲೆಯೆತ್ತದಂತೆ ಬಲವಾದ ಕಾರ್ಯಕ್ರಮಗಳನ್ನು ಕೈಕೊಂಡಿರುವರು ಅಕ್ಕಿಯನ್ನು ಗುಪ್ತವಾಗಿ ಕೂಡಿಟ್ಟಿದ್ದ ಜಿಲ್ಲೆಯ ಒಬ್ಬಿಬ್ಬರು ಪ್ರಧಾನ ವ್ಯಾಪರಿಗಳನ್ನು ಬಂಧಿಸಿ ಖಟ್ಲೆಗಳು ನಡೆಯುತ್ತಿವೆ ಎಂದು ಕೇಳುತ್ತೇವೆ ಇನ್ನೂ ಕೆಲವರ ಬಂಧನವಾಗಲಿದೆ ಎಂದೂ ತಿಳಿದು ಬರುತ್ತದೆ

ಸಭೆ ಮೆರವಣಿಗೆಗಳ ನಿಷೇಧ

ಕಲೆಕ್ಟರರ ಆಜ್ಞೆ ಮೇರೆಗೆ ಮಂಗಳೂರು ನಗರದೊಳಗೆ ಪುನಃ ೨ ತಿಂಗಳು ಸಭೆ ಮೆರವಣಿಗೆಗಳು ನಿಷೇಧಿಸಲ್ಪಟ್ಟಿವೆ.

ಪ್ಲೇಗಿನ ವರದಿ

ಹಿಂದಿನ ವಾರದಂತೆ ಈ ವಾರದಲ್ಲೂ ೫ ಇಲಿಗಳು ಬಿದ್ದ ವಾರ್ತೆಯಿದೆ ಆದರೆ, ಈ ವಾರದಲ್ಲಿಯೂ ಜನರಿಗೆ ಪ್ಲೇಗು ತಗಲಿದ ವಾರ್ತೆಯಿಲ್ಲ ಇಲಿಗಳ ನಾಶವು ಭರದಿಂದ ಸಾಗುತ್ತಲೇ ಇದೆ ಈ ತನಕ ೩೪ ಸಾವಿರ ಇಲಿಗಳ ಬಿಲಗಳಿಗೆ ವಿಷದ ಹೆಟೆಬಿಟ್ಟು ಸ್ವಚ್ಛ ಮಾಡಲಾಗಿದೆ ದಾಕು ಹಾಕುವ ಕಾರ್ಯವೂ ಭರದಿಂದ ಸಾಗುತ್ತಿದೆ.

ಬಂಗಾಳಕ್ಕೆ ಸಹಾಯ

ಮಂಗಳೂರಿನ ಜನತಾ ರಂಗಭೂಮಿಯವರು ತಾ. ೨೧ನೆಯ ರವಿವಾರ ಸಂಜೆ ೭.೩೦ಕ್ಕೆ ಕೆನಾರಾ ಹೈಸ್ಕೂಲಿನ ಭವನೇಂದ್ರ ಹಾಲಿನಲ್ಲಿ ವಿವಿಧ ವಿನೋದಾವಳಿಗಳನ್ನು ಜರಗಿಸಿದರು. ಛಾಯಾ ನೃತ್ಯ ಓಟ್ಟಂತುಳ್ಳಲ್, ಸಂಗೀತ ಮೊದಲಾದ ಕಾರ್ಯಕ್ರಮಗಳಿದ್ದುವು.

ಪರೀಕ್ಷೆಯ ಫಲಿತಾಂಶಗಳು

ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನಿಂದ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕುಳಿತ ೧೩೫ ಮಂದಿಯ ಪೈಕಿ ೮೧ ಮಂದಿ ಎಲ್ಲಾ ವಿಭಾಗಗಳಲ್ಲಿಯೂ ಉತ್ತೀರ್ಣರಾಗಿದ್ದಾರೆ. (೪೦ I ಕ್ಲಾಸ್, ೪೦ II ಕ್ಲಾಸ್). ಬಿ. ಎ. ಗೆ ಕುಳಿತ ೮೦ ಮಂದಿಯಲ್ಲಿ ೪೭ ಮಂದಿ ಎಲ್ಲ ಭಾಗಗಳಲ್ಲಿಯೂ ಜಯ ಶೀಲರಾಗಿದ್ದಾರೆ.

ಕಯ್ಯೂರು ಕುಟುಂಬಗಳಿಗೆ

ಲಂಡನಿನಲ್ಲಿ ಸಂಗ್ರಹವಾಗುತ್ತಿದ್ದ ನಿಧಿಯನ್ನು ಅಂತ್ಯ ಗೊಳಿಸಿ, ಒಟ್ಟು ೭೫೦ ಪೌಂಡುಗಳನ್ನು ಮರಣ ಶಿಕ್ಷೆಗೆ ಬಲಿಯಾದ ನಾಲ್ವರು ಕೈಯ್ಯೂರ ಕಿಸಾನರ ಕುಟುಂಬಗಳಿಗೆ ಹಂಚುವ ಸಲುವಾಗಿ ಭಾರತದ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಕಾರ್ಯದರ್ಶಿ ಎನ್ ಯಂ. ಜೋಶಿಯವರಿಗೆ ಕಳುಹಿಸಲಾಗಿದೆ ಈ ಕುಟುಂಬವು ಈ ಮೊದಲು ಎರಡು ಬಾರಿ ಲಂಡನಿನ ಸಂಸ್ಥೆಗಳಿಗೆ ಸಹಾಯವನ್ನು ಪಡೆದಿದೆ

ಕಾಞಂಗಾಡು ಗ್ರಾಮದಲ್ಲಿ ಸಿಡುಬು

ಭಯಂಕರವಾಗಿ ಹಬ್ಬುತ್ತಿದೆ. ಈ ತನಕ ಎಂಟು ಜನರು ಮೃತರಾಗಿರುವರಾಗಿಯೂ ೨೫ ಮನೆಗಳಲ್ಲಿ ರೋಗಿಷ್ಠರು ಇರುವುದಾಗಿಯೂ ತಿಳಿದು ಬರುತ್ತಿದೆ ಈ ಕುರಿತು ಆಲೋಚಿಸಲು ಇಲ್ಲಿನ ಪುರಪ್ರಧಾನಿಗಳ ಒಂದು ಸಭೆಯು ಸ್ಥಳೀಯ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿ. ಶ್ರೀ ಎ. ಸಿ ಕಣ್ಣನ್ ನಾಯರ ಸ್ವಯಂ ಸೇವಕರು ಸಿದ್ಧರಾಗಿ ಮುಂದೆ ಬಂದಿರುತ್ತಾರೆ

ಕಾಶಿಮಠ ಸಂಸ್ಥಾನದ ಮಠಾಧೀಶರ ಶಿಷ್ಯ ಪರಿಗ್ರಹಣ

ಅಂದಿನ ಕಾರ್ಯಕ್ರಮ

ಅಂದು ಬೆಳಿಗ್ಗೆ ಶಿಷ್ಯರಾಗಲಿರುವ ವಟುವು ಪಾದಚಾರಿಯಾಗಿ ನದೀ ತೀರಕ್ಕೆ ಹೋಗಿ ಅಲ್ಲಿ ದಶ ವಿಧದ ಸ್ನಾನ ವಿಧಿಗಳನ್ನು ತೀರಿಸಿದೊಡನೆ ವಿಜೃಂಭಣೆಯಿಂದ ಅವರನ್ನು ಮಠದ ಕಡೆಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು ೧೧-೩೦ಕ್ಕೆ ಘಟಿಗೆ ನಡೆಯುವ ಕರ್ಕಾಟಕ ಶುಭ ಲಗ್ನದಲ್ಲಿ ಶಿಷ್ಯರಿಗೆ ಗುರೂಪದೇಶವಾಯಿತು. 'ಸುದೀಂದ್ರ ತೀರ್ಥ'ರೆಂದು ನಾಮಕರಣ ಮಾಡಿದರು. ಅನಂತರ ಗುರು ಶಿಷ್ಯರು ಸ್ಥಳದೇವತ ನರಸಿಂಹ ದೇವರ ಭೇಟಿ ಮಾಡಿದ ಬಳಿಕ ಪಟ್ಟಕಾಣಿಕೆ ನಡೆಯಿತು ಊರಪರವೂರಿಂದ ಹಲವು ರೀತಿಯ ಚಿನ್ನದ ಬೆಳ್ಳಿಯ ಆಭರಣಗಳು ಪಟ್ಟಕಾಣಿಕೆಗೆ ಬಂದಿದ್ದುವು. ಹಲವು ಸಾವಿರ ರೂಪಾಯಿ ಸಂಗ್ರಹವಾಗಿದೆ.

೧೨,೦೦೦ ಮಂದಿಗೆ ಸಮಾರಾಧನೆ

ಸಾಯಂಕಾಲ ಸುಮಾರು ೭ ಗಂಟೆಗೆ ಉತ್ಸವಕ್ಕೆ ಬಂದ ಅತಿಥಿಗಳಿಗೆಲ್ಲ ಸಮಾರಾಧನೆ ನಡೆಯಿತು. ಹೆಂಗಸರು ಗಂಡಸರು, ಮಕ್ಕಳು ಕೂಡಿ ಸಮಾರು ೧೨,೦೦೦ ಮಂದಿ ಸಮಾರಾಧನೆಗೆ ಕೂಡಿದ್ದರು. ದೇವಸ್ಥಾನದ ಹೊರ ಅಂಗಣದಲ್ಲೂ ಊಟಕ್ಕೆ ಕುಳಿತಿದ್ದರು.

ರಾತ್ರಿ ರಥೋತ್ಸವ

ಸಮಾರಾಧನೆ ಮುಗಿದ ಬಳಿಕ ರಾತ್ರಿ ಸುಮಾರು ೧ ಗಂಟೆಗೆ ಸ್ವಾಮಿಯವರು ಉತ್ಸವದ ಮೂರ್ತಿ ಸಮೇತ ರಥದಲ್ಲಿ ಕುಳಿತು ಉತ್ಸವ ನಡೆಯಿತು ಹಲವು ರೀತಿಯ ಮದ್ದುಗಳನ್ನು ಸುಟ್ಟರು ಉತ್ಸವವಾದ ನಂತರ ದೇವಳದೊಳಗೆ ಚಿನ್ನದ ಪಲ್ಲಕಿಯಲ್ಲಿ ದೇವರ ಪ್ರದಕ್ಷಿಣೆ, ದೇವ ದರ್ಶನ, ಕಾಳಭೈರವ ನಿರೂಪ ಇತ್ಯಾದಿ ಕಾರ್ಯಕ್ರಮಗಳು ನಡೆದು ಕೊನೆಗೆ ಉಭಯ ಸ್ವಾಮಿಗಳೂ ಕುಳಿತು ಬ್ರಾಹ್ಮಣರಿಗೆ ದಕ್ಷಿಣೆ ಮಂತ್ರಾಕ್ಷತೆ ವಿತರಣ ಸಮಾರಂಭವು ಕೊನೆಗೊಂಡಿತು.

ದಿ ಪೊಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಈ ಮೇಲಿನ ಕಂಪೆನಿಯ 1943ಕ್ಕೆ ಅಂತ್ಯವಾದ 14ನೇಯ ವರ್ಷದ ವರದಿಯು ಹಸ್ತಗತವಾಗಿದೆ ವರದಿ ವರುಷದಲ್ಲಿ ರೂ 11,75,600 ಮೌಲ್ಯದ ವಿಮಾ ವಿನಂತಿ ಪತ್ರಗಳು ಬಂದಿದ್ದುವು ಅವುಗಳಲ್ಲಿ ರೂ 10,39,700 ಮೌಲ್ಯದ 743 ವಿಮಾ ಪತ್ರಗಳು ಕೊಡಲ್ಪಟ್ಟಿವೆ ವರದಿ ವರುಷದ ಕಂಪೆನಿಯ ಹೊಸ ಪೊಲಿಸಿಗಳ ಮೌಲ್ಯವು ಹಿಂದಿನ ಎಲ್ಲಾ ವರುಷಗಳಿಗಿಂತಲೂ ಅಧಿಕ ಮೌಲ್ಯದ್ದಾಗಿದ್ದು 1942ನೇ ವರುಷದ ಪೊಲಿಸಿಗಳ ಮೌಲ್ಯಕ್ಕಿಂತ ಶೇಕಡಾ 26 ಹೆಚ್ಚಾಗಿದೆ ವರದಿ ವರುಷದಲ್ಲಿ ಉಂಟಾದ ವಿಮಾ ವಹಿವಾಟಿನ ಪ್ರಮಾಣದಲ್ಲಿ ಖರ್ಚು ಕೂಡಾ ಹೆಚ್ಚಾಗಬೇಕಿದ್ದರೂ, ಕಂಪೆನಿಯ ಖರ್ಚು ಹಿಂದಣ ವರುಷದ ಖರ್ಚಿನ ಪ್ರಮಾಣದಲ್ಲಿಯೇ ಇದ್ದುದನ್ನು ನೋಡಿದರೆ, ಕಂಪೆನಿಯ ಚಾಲಕರ ಕಾರ್ಯ ತತ್ಪರತೆಯನ್ನು ಸೂಚಿಸುತ್ತದೆ ನಮ್ಮ ಜಿಲ್ಲೆಯ ನಮ್ಮದೇ ಆದ ಈ ವಿಮಾ ಸಂಸ್ಥೆಗೆ ಸಕಲರೂ ಪ್ರೋತ್ಸಾಹವಿತ್ತು ಹಿಂದುಸ್ಥಾನದ ಆದರ್ಶ ವಿಮಾ ಸಂಸ್ಥೆಗಳಲ್ಲೊಂದಾಗುವಂತೆ ಜನರು ಪ್ರೋತ್ಸಾಹಿಸಬೇಕೆಂದು ನಾವು ಕೋರುತ್ತೇವೆ.

ಮೃದುವಾದ ಚರ್ಮವನ್ನು ಬಹ
ಜಾಗ್ರತೆಯಿಂದ ಕಾಪಾಡಬೇಕು
ಕುಟಿಕೂರಾ ಸಾಬೂನು ಮಗುವಿನ
ಮೃದು ಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು
CUTICURA SOAP.

[illegible] 'ಕೆಲಸವಿಲ್ಲ' ಹೀಗೆಂದು [illegible] ಗಾಂಧೀಜಿಯೊಡನೆ ಭೇಟಿಮಾಡಿ ಬರೆದಿದ್ದಾರೆ.

'ಅವರಿಗೆ ಆಯಾಸ ಮತ್ತು ದೌರ್ಬಲ್ಯವೆಂಬುದು ಅವರ ಮುಖ ನೋಡಿದರೆ ಗೊತ್ತಾಗುತ್ತಿದೆ' ಎಂದೂ ಅವರು ಬರೆಯುತ್ತಾರೆ.

'ಸಮುದ್ರದ ಬಳಿ ವಿಶ್ರಾಂತಿ ತೆಗೆದುಕೊಂಡ ಬಳಿಕ, ಗಾಂಧೀಜಿ ಭಾರತದ ಸ್ವಾತಂತ್ರ್ಯ ಪಡೆಯಲು ಸಿದ್ಧರಾಗಿದ್ದಾರೆಂದು ನೋಡಿದರೆ ತಿಳಿಯಬಹುದಾಗಿದೆ.

'ಜೈಲಿನ ಮುಖ್ಯ ಸುಪರಿಂಟೆಂಡೆಂಟರಾದ ಖಾನ್ ಬಹದ್ದೂರ್ ಕಾಟೇಲಿಯವರು ಮಹಾತ್ಮರ ಬಳಿಯಲ್ಲಿ ೨೧ ತಿಂಗಳವರೆಗೆ ಜೀವಿಸಿದ್ದ ವಿಷಯವಾಗಿ ತುಂಬಾ ಸಂತೋಷ ವ್ಯಕ್ತಮಾಡಿದರು.

'ಜೈಲಿನೊಳಗೆ ಈ ಮಹಾವಿಭೂತಿ ಪುರುಷರಿಗಾಗಿ, ಜೈಲಿನ ಅಧಿಕಾರಿಗಳು ಎರಡು ಮಣ್ಣಿನ ಗ್ಗಾದಿಯನ್ನು ರಚಿಸಿದ್ದರು.

'ಗಾಂಧೀಜಿ ಇಲ್ಲಿ ಏನು ಮಾಡುತ್ತಿದ್ದಾರೆಂದು ತಿಳಿಯಲು ನಾನು ಆ ಗಾದಿ ಮೇಲೆ ಹತ್ತಿದೆ. ಗೋಡೆಯಲ್ಲಿ ಗಾಂಧೀಜಿ ಚಿಪ್ಪಿನಿಂದ ಅಲ್ಲಲ್ಲಿ 'ಓಂ' ಎಂದು ಬರೆದಿದ್ದಾರೆ.'

'ಬೊಂಬೇ ಕ್ರಾನಿಕಲ್' ಪತ್ರಿಕೆ ಗಾಂಧೀಜಿಯ ಜುಹೂ ವಿಶ್ರಾಂತಿ ಕಾಲದ ಒಂದು ವರದಿ ಹೀಗೆ ಕೊಡುತ್ತದೆ:

'ಗಾಂಧೀಜಿಯ ಆರೋಗ್ಯ ವಿಚಾರ ತಿಳಿಯಲು ಸಂದರ್ಶಕರ ತಂಡವೇ ಬರುತ್ತದೆ. ಇದರಲ್ಲಿ ಹಲವು ವಿಚಾರಗಳ ಹಲವು ತರದ ಜನರಿರುತ್ತಾರೆ. ಪಂಜಾಸ್ಕೆಟ್ ಕೋಟ್ ಎಂಬಲ್ಲಿಂದ ಆಟದ ಸಾಮಾನುಗಳನ್ನು ವ್ಯಾಪಾರ ಮಾಡುವ ಒಂದು ಪಂಗಡ ಅಲ್ಲಿ ಬಂತು. ಅವರು

(೧೬ನೆಯ ಪುಟದಿಂದ)

ಪತ್ರರಿಗೆ ಗಾಂಧೀಜಿ ಬರೆದ ಪತ್ರ

'ಜಾತೀಯ ಒಪ್ಪಂದಕ್ಕೆ ಯತ್ನಿಸುವೆ'

— ಜುಹುವಿನಲ್ಲಿ ಮಹಾತ್ಮರು —

ಗಾಂಧೀಜಿಯೊಡನೆ ಯಾವತರದ ಆಟ ಆಸಕ್ತಿಯುಳ್ಳವರೆಂದು ಕೇಳಿದರು, ಅದಕ್ಕೆ ಸರೋಜಿನಿ ನಾಯುಡುರವರು ವಿನೋದದಲ್ಲಿ ಮಾತನಾಡುತ್ತಿ 'ಗಾಂಧೀಜಿಗೆ ರಾಷ್ಟ್ರೀಯ ಆಟವೊಂದೇ ಗೊತ್ತು' ಎಂದರು.

ಅಮೃತಸರದ ಧರ್ಮ ಪ್ರಕಾಶ ಮಂಡಳದವರು ಗಾಂಧೀಜಿಗೆ ಒಂದು ತಂತಿ ಕೊಟ್ಟು, ಅವರ ಆರೋಗ್ಯಕ್ಕೆ ರಕ್ತ ಬೇಕಾದರೆ, ತಮ್ಮ ಶರೀರದಿಂದ ರಕ್ತ ಕೊಡುವುದಾಗಿ ಕೆಲವರು ತಿಳಿಸಿದ್ದಾರೆ.

'ಗಾಂಧೀಜಿ, ನಿಮ್ಮ ಆರೋಗ್ಯಕ್ಕೆ ನಿಮ್ಮ ರಕ್ತಬೇಕೆಂತಾದ ಪಕ್ಷದಲ್ಲಿ, ನಮ್ಮಲ್ಲಿ ನೂರಾರು ಮಂದಿ ನಮ್ಮ ರಕ್ತವನ್ನು ನಿಮಗಾಗಿ ಕೊಡಲು ತಯಾರಿದ್ದೇವೆ; ಇದಕ್ಕಾಗಿ ನಾವು ನಿಮ್ಮ ಹಾಸಿಗೆ ಬಳಿ ಬರಲು ತಯಾರಿದ್ದೇವೆ' ಹೀಗೆಂದು ತಂತಿ ಬಿಟ್ಟಿದ್ದಾರೆ. ಒಂದು ಮಹಾಸಭೆ ಕೂಡಿಸಿ ಗಾಂಧೀಜಿಗೆ ದೀರ್ಘಾರೋಗ್ಯವಾಗಲೆಂದು ಹಾರೈಸಿ ತಿಳಿಸಿದ್ದಾರೆ.

ಗಾಂಧೀಜಿಯವರ ಆರೋಗ್ಯದ ವಿಚಾರದಲ್ಲಿ ಡಾ। ಗಿಲ್ಡರ್ ಮತ್ತು ಡಾ। ಸುಶೀಲಾ ನಾಯರರು ತಾ. ೧೪ರಂದು ಒಂದು ಪ್ರಕಟಣೆ ಹೊರಡಿಸಿ ಹೀಗೆಂದಿರುವರು:

'ಗಾಂಧೀಜಿಯವರ ಪ್ರಕೃತಿ ನಾವಕಾಶವಾಗಿ ಕ್ರಮಶಃ ಸುಧಾರಿಸುತ್ತಿದೆ; ರಕ್ತ ಪರೀಕ್ಷೆ ಮಾಡಿ ನೋಡಲಾಗಿ ಮೂತ್ರ ಕ್ರಿಯೆಯಲ್ಲಿಯೂ ಸುಧಾರಣೆ ಕಂಡುಬಂದಿದೆ.'

ಗಾಂಧೀಜಿ ತಾ. ೧೪ರಂದು ಮುಂಜಾನೆಯು ತಿರುಗಾಡಲು ಹೋಗಿದ್ದರು. ಪ್ರತಿದಿನ ಬೆಳಗು ಮುಂಜಾವಕ್ಕೇ ಅವರ ದರ್ಶನಾಪೇಕ್ಷೆಗಾಗಿ ಜುಹು ತೀರದಲ್ಲಿ ತುಂಬಾ ಜನರು ಗುಂಪು ಸೇರುತ್ತಾರೆ. ಪರಿಸ್ಥಿತಿ ಇದೇ ತರ. ಆದರೆ ಅವರು ಬೆಳಗಿನಜಾವ ತಿರುಗಾಡಲು ಹೋಗುವುದನ್ನೂ ನಿಲ್ಲಿಸಿ ಬಿಡಬಹುದು.

ತಾ. ೧೭ರಂದು ಸಂಜೆ ಮನೋಹರ ಬರ್ವೆ ಹಾಗೂ ಅವರ ಪಂಗಡಿಗರು ಮಹಾತ್ಮರೆದುರಲ್ಲಿ ಗಾಯನ ವಾದನ ಕಾರ್ಯಕ್ರಮ ಜರಗಿಸಿದರು. ಗಾಂಧೀಜಿ ಮನೋಹರ ಬರ್ವೆಯವರ ಗುರುತು ಹಿಡಿದು ಹಿಂದೆ ಅವರ ತಂದೆ ದಿವಂಗತ ಪ್ರೊ। ಜಿ. ಎಸ್. ಬರ್ವೆಯವರೊಂದಿಗೆ ಇವರು ಬಂದಿದ್ದುದನ್ನೂ, ಅವರು ಸಣ್ಣವರಿದ್ದಾಗ ತಾವು ಅವರ ಹಾಡು ಕೇಳಿದನ್ನೂ ತಿಳಿಸಿದರು. ಮತ್ತು ಅವರ ಸಂಗೀತದಿಂದ ತಮಗುಂಟಾದ ಸಂತೋಷವನ್ನು ಪತ್ರದಲ್ಲಿ ಬರೆದು ತಿಳಿಸಿದರು. ಮಾಸ್ಟರ್ ಮನೋಹರರು ಬಾರಿಸಿ ತೋರಿಸಿದ ಒಂದು ವಾದ್ಯ ಗಾಂಧೀಜಿಯವರಿಗೆ ತುಂಬಾ ಸಂತೋಷವನ್ನುಂಟು ಮಾಡಿತು.

ಚೆ ಕಿಂ ಗಿ ನ 'ಧಾಶ್ ಕಂಗ್ ದಾಸ್ ಪಾವ್' ಪತ್ರಿಕೆಯ ಸಂಪಾದಕರಾದ ಚಾಂಗಸನ್ ಇವರು ನ್ಯೂಯಾರ್ಕಿಗೆ ಹೋಗುವಾಗ ಗಾಂಧೀ ಗ್ರಾಮಕ್ಕೆ ಭೇಟಿ ಕೊಟ್ಟು ಗಾಂಧೀಜಿಯವರ ದರ್ಶನ ತೆಗೆಕೊಂಡು ಅವರ ಪ್ರಾರ್ಥನೆ ಮುಗಿವವರೆಗೆ ಅಲ್ಲಿಯೇ ಇದ್ದರು.

ತಾ. ೧೯ರಂದು ಮಹಾತ್ಮಾ ಗಾಂಧಿಯವರು ಬೊಂಬಾಯಿ ಬೆಂಕಿ ಅನಾಹುತದ ದೃಶ್ಯಗಳನ್ನು ನೋಡಿದರು. ಅಲ್ಲಿ ಅವರು ಒಂದು ತಾಸಿನ ವರೆಗಿದ್ದು ಸಂಜೆಗೆ ಪ್ರಾರ್ಥನೆಗೆ ಮರಳಿದರು. ಬೊಂಬಾಯಿಯ ಮೇಯರಾದ ಶ್ರೀ। ನಾಗಿನ್ ದಾಸ್ ಟಿ ಮಾಸ್ತರರು ಗಾಂಧೀಜಿಯವರಿಗೆ ಈ ಪ್ರದೇಶವನ್ನು ತೋರಿಸಿದರು. ಬೆಂಕಿ ಬಿದ್ದು ಒಂದು ತಿಂಗಳ ಕಾಲ ಆದರೂ ಕೆಲವೆಡೆ ಇನ್ನೂ ಬೆಂಕಿ ಉರಿಯುತ್ತಲೇ ಇದೆ. ಆ ಪ್ರದೇಶಗಳ ಪರಿಹಾರ ಕಾರ್ಯ ಸಾಗುತ್ತಲೇ ಇದೆ. ಗಾಂಧೀಜಿ ಬಿಡುಗಡೆಯಾದ ಕೂಡಲೇ ಈ ಪ್ರದೇಶಗಳನ್ನು ನೋಡಬೇಕೆಂದು ಅಭಿಪ್ರಾಯ ಪ್ರಕಟಿಸಿದ್ದರೂ, ಅವರ ಡಾಕ್ಟರರ ಅಪೇಕ್ಷೆ ಮೇರೆಗೆ ಇದುವರೆಗೆ ಹೋಗಲಿಲ್ಲವಾಗಿಯೂ ತಿಳಿದು ಬರುತ್ತದೆ. ಅವರು ಮೌನವನ್ನಾಚರಿಸುವುದರಿಂದ ಇತರರು ಹೇಳುವುದನ್ನೆಲ್ಲಾ ಕೇಳುತ್ತಿದ್ದರಲ್ಲದೆ ಏನೂ ಅಭಿಪ್ರಾಯ ಪ್ರಕಟಿಸಲಿಲ್ಲ.

ತಾ. ೨೦ರಲ್ಲಿ ಡಾಕ್ಟರರು ಪ್ರಕಟಿಸಿದ ಪತ್ರ ಪ್ರಕಾರ, ಗಾಂಧೀಜಿ ಬೆಂಕಿ ಅನಾಹುತದ ಪ್ರದೇಶವನ್ನು ನೋಡಿ ಬಂದು ತುಸು ಮಾನಸಿಕ ಅವಿಶ್ರಾಂತಿಗೊಂಡು ನಿದ್ರಾಹೀನರಾದರೂ ಹೆಚ್ಚು ಸುಧಾರಿಸಿದಂತೆ ಕಂಡುಬರುತ್ತದಾಗಿ ತಿಳಿದು ಬರುತ್ತದೆ.

ಲಾಹೋರಿನ ಪಂಡಿತ ಶಿವರಾಮರೂ, ಅನಾರೋಗ್ಯದಿಂದಿರುವ ಗೋಪಿನಾಥ ಭಾರ್ಗವರೂ ಗಾಂಧಿಜಿಯವರನ್ನು ಕಂಡರು. ಗಾಂಧೀಜಿಯವರ ಓರ್ವ ಬ್ರಾಹ್ಮಣ ಅನುಯಾಯಿಗಳು ಮಹಾತ್ಮರ ಮುಂದೆ ಪ್ರಾರ್ಥನೆ ಸಲ್ಲಿಸಿ ಅವರಿಗೆ ಭಗವದ್ಗೀತೆಯ ಒಂದು ಪ್ರತಿಯನ್ನು ಕೊಟ್ಟರು.

ಮುಖಂಡರ ಪರಿಷತ್ತೊಂದನ್ನು ಗಾಂಧೀಜಿ ಕರೆಯಬೇಕೆಂದು ಸಪ್ರುಗಳ ಅಭಿಪ್ರಾಯವಿರುವುದಾಗಿಯೂ ಅದಾಗಿ ಸಪ್ರುಗಳು ಬೇಗನೇ ಗಾಂಧೀಜಿಯವರನ್ನು ಭೇಟಿಯಾಗಬಹುದಾಗಿಯೂ ವದಂತಿಯಿದೆ.

The Progress of the "POPULAR" is in every aspect a concrete proof of the business acumen and enterprise of KARNATAKA. You have a duty towards your own institutions which can be best manifested by your co-operation and patronage.

In taking out your Life Assurance Policy in a local Company or representing it as an Agent, Special Agent or a District Agent, you contribute to the continued Success and progress of LOCAL institutions. Prefer the 'POPULAR' for your Life Assurance

1943	New Business Completed	....	Rs. 10,40,000
	Life Assurance Fund	....	Rs. 3,76,000
	Renewal Expense Ratio	....	Rs. 17·6%

Claims Paid exceed Rs. 1,00,000 **Assets exceed Rs. 4,60,000**

THE POPULAR INSURANCE COMPANY LIMITED

MANGALORE

(೨ನೇ ಪುಟದಿಂದ)

ನಾ ಸನಾತನೀ ಹಿಂದು

ಇದೇ ಮಾನವ ಕುಟುಂಬದ ರಕ್ಷಣೆ. ಪ್ರಾಚೀನ ಋಷಿ, ಯಾವನೇ ಇರಲಿ ಗೋವಿನಿಂದ ಆರಂಭಿಸುತ್ತಾನೆ. ಇದು ಹಿಂದುತ್ವ ಜಗತ್ತಿಗೆ ಕೊಟ್ಟ ದಾನ. ಆದರಿಂದ ಗೋರಕ್ಷಣೆ ಹಿಂದುಗಳಿಂದ ನಿರಂತರವೂ ಆಗಬೇಕು. ಅದರಿಂದ ಜಗತ್ತಿಗೆ ಉತ್ತಮವಿದೆ.

ನನ್ನ ಹೆಂಡತಿಗಿಂತ ಹೆಚ್ಚು ನಾ ಹಿಂದುತ್ವವನ್ನು ಬೇರೆಲ್ಲಿಯೂ ವಿವರಿಸಲಾರೆ. ಈ ಜಗತ್ತಿನಲ್ಲಿ ಯಾವಳೇ ಸ್ತ್ರೀಗಿಂತಲೂ ಹೆಚ್ಚಾಗಿ ಆಕೆ ನನ್ನನ್ನು ಆಕರ್ಷಿಸಿದ್ದಾಳೆ. ಆಕೆಯಲ್ಲಿ ಏನೂ ತಪ್ಪಿಲ್ಲವೆಂದಲ್ಲ. ನಾನು ನೋಡುವುದಕ್ಕಿಂತಲೂ ಆಕೆಯಲ್ಲಿ ಹೆಚ್ಚಿನ ತಪ್ಪು ಇದ್ದೆ ಇದೆ. ಹೀಗೆಯೇ ಹಿಂದುತ್ವದ ಕುರಿತು ನಾ ತಿಳಕೊಂಡಿದ್ದೇನೆ. ಮಹಾಭಾರತ, ಗೀತೆ ತುಲಸಿದಾಸರ ರಾಮಾಯಣ, ಇವೆರಡು ನನಗೆ ಹೆಚ್ಚಿನ ಪರಿಚಯದವುಗಳು. ಇವುಗಳನ್ನು ನಾ ತಿಳಕೊಂಡಿರುವೆನು. ಒಮ್ಮೊಮ್ಮೆ ನಾನು ಪೂರ್ಣ ಸನ್ನಿಹಿತನೆಂದು ಭಾವನೆ ಬಂದಾಗ ಗೀತೆಯೇ ನನಗೆ ಸಮಾಧಾನ ನೀಯುತ್ತದೆ. ಇಂದು ಹಿಂದೂ ದೇಗುಲಗಳಲ್ಲಿ ಆಗುತ್ತಿರುವ ಅನ್ಯಾಯಗಳನು ನಾ ಬಲ್ಲೆ; ಆದರೂ ನಾನವುಗಳನ್ನು ಪ್ರೀತಿಸುತ್ತೇನೆ. ಅದರಲ್ಲಿ ನನಗೆ ಪ್ರೇಮವುಂಟು; ಆ ಪ್ರಿಯ ನನಗೆ ಬೇರೆಯವುಗಳಲ್ಲಿಲ್ಲ; ನಾನು ತೀರಾ ಸುಧಾರಣೆಯಾಗಬೇಕೆನ್ನುವವ. ಆದರೆ ಈ ಸುಧಾರಣೆಯ ಆಶೆಯಿಂದ ಹಿಂದುತ್ವದಲ್ಲಿರುವ ಸಾರವನ್ನು ನಾ ಬಿಡಲಾರೆ. ಕೇವಲ ಮೂರ್ತಿ ನನ್ನಲ್ಲಿ ಯಾವುದೇ ಭಕ್ತಿ ಹುಟ್ಟಿಸುವುದಿಲ್ಲ. ಆದರೆ ಮೂರ್ತಿ ಪೂಜೆ ಮಾನವ ಪ್ರಕೃತಿಯ ಒಂದಂಶ ಎಂದು ನಾ ತಿಳಕೊಂಡಿರುವೆನು. ನಾವು ಚಿಹ್ನಾವಾದ ಬೇಕೆನ್ನುತ್ತೇವೆ. ಚರ್ಚಿನಲ್ಲಿ ಜನ ಏಕೆ ಗುಂಪು ಸೇರಬೇಕು? ಮೂರ್ತಿ ಆರಾಧನೆಗೆ ಒಂದು ಸಾಧನ. ಮೂರ್ತಿಯೇ ದೇವರೆಂದು ಯಾವನೇ ಹಿಂದುವೂ ತಿಳಿವುದಿಲ್ಲ. ಮೂರ್ತಿ ಪೂಜೆ ಪಾಪವೆಂದು ನಾ ಭಾವಿಸಲಾರೆ.

ಮೇಲಿನ ವಿವರಣೆಯಿಂದ ಹಿಂದುತ್ವವೊಂದು ಪ್ರತ್ಯೇಕ ಧರ್ಮವೆಂದು ವಿಶದವಾದೀತು. ಜಗತ್ತಿನ ಎಲ್ಲಾ ಮಹಾತ್ಮರನ್ನು ಆರಾಧಿಸಲೂ ಅದರಲ್ಲಿ ಅವಕಾಶವಿದೆ. ಅದು ಜಗತ್ತಿನ ಸಾಮಾನ್ಯ ತಿಳಿವಳಿಕೆಯುಳ್ಳ ಒಂದು ಮಿಶನರಿ ಧರ್ಮವಲ್ಲ. ಅದು ತನ್ನೊಳಗೆ ಅನೇಕ ಜಾತಿಗಳನ್ನು ಸೇರಿಸಿಕೊಂಡಿರುವುದೇನೋ ಸರಿ ಆದರೆ ಆ ಮಿಲನವು ವಿಕಾಸಮಯವಾದುದು. ಗುಣ ಗಂಭೀರವಾದುದು. ಪ್ರತಿಯೊಬ್ಬನೂ ಆತನ ವಿಶ್ವಾಸ ಅಥವಾ ಧರ್ಮಪ್ರಕಾರವೇ ದೇವ ಆರಾಧನೆ ಮಾಡಬೇಕೆಂದು ಹಿಂದೂ ಧರ್ಮ ಹೇಳುತ್ತದೆ. ಹಾಗಾಗಿ ಅದು ಇತರ ಎಲ್ಲಾ ಧರ್ಮಗಳೊಡನೆ ಕಲಹವಿಲ್ಲದೆ ಇದೆ.

ಇದು ಹಿಂದೂ ಧರ್ಮದ ಕುರಿತು ನನ್ನ ಅಭಿಪ್ರಾಯವಾಗಿರುವುದರಿಂದ ಅಸ್ಪೃಶ್ಯತೆಯನ್ನು ನಾನು ಒಪ್ಪಿಕೊಳ್ಳಲಾರೆನು. ಪರಂಪರೆಯಿಂದ ಇದು ಬಂದಿದೆಯೋ ಏನೋ ಸರಿ. ಹಾಗೆಯೇ ಇರಲಿ ಗಳೂ ಅನೇಕ ತಮ್ಮ ಕ್ರಮಗಳು ಬಂದಿವೆ, ಹುಡುಗಿಯರನ್ನು ದೇವದಾಸಿಯರಾಗಿ ಅರ್ಪಿಸುವುದು ಹಿಂದೂ ಧರ್ಮದ ಅಂಗವೆಂದು ತಿಳಕೊಂಡ ಕುರಿತು ನಾ ನಾಚಿಕೆ ಪಡುತ್ತೇನೆ. ಆದರೂ ಭಾರತದ ಹಲ ಭಾಗಗಳಲ್ಲಿ ಈ ಪದ್ಧತಿ ಇದೆ. ಪಶುಗಳನ್ನು ಮಾರಿಗೆ ಬಲಿಕೊಡುವುದು ಅಧರ್ಮವೆಂದೂ ಹಿಂದೂ ಧರ್ಮ ವಿರೋಧವೆಂದು ನಾ ತಿಳಿದಿರುವೆನು. ಹಿಂದೂ ಧರ್ಮ ಕಾಲದ ಬೆಳವಣಿಗೆಯದು. ಹಿಂದೂ ಧರ್ಮವೆಂಬ ಹೆಸರನ್ನ ಕೊಟ್ಟವರು ಹಿಂದುಸ್ಥಾನಕ್ಕೆ ಬಂದ ವಿದೇಶೀಯರು. ಒಂದಾನೊಂದು ಕಾಲದಲ್ಲಿ ಪಶುಗಳ ಬಲಿ ಹಿಂದೂ ಧರ್ಮದ ಹೆಸರಲ್ಲಿ ನಡೆಯುತ್ತಿತ್ತೇನೂ ನಿಜ ಆದರೆ ಇದು ಧರ್ಮವಲ್ಲ; ಧರ್ಮ ಬಾಹಿರ. ನನ್ನ ತಿಳುವಳಿಕೆಯಂತೆ ಗೋರಕ್ಷಣೆಯು ಜಾರಿಗೆ ಬಂದಾಗ ಪಶು ಮಾಂಸ ಭಕ್ಷರು ಜಾತಿ ಬಾಹಿರರಾದರು. ಸಾಮಾಜಿಕ ಘಟನೆ ಎಷ್ಟು ಬಲವಾಯಿತೆಂದರೆ ಹಿಂದಿನವರು ಮಾಡಿದ ಆ ಪಾಪಗಳಿಗಾಗಿ ಅವರ ಮಕ್ಕಳು ಫಲ ಅನುಭವಿಸಬೇಕಾಯಿತು. ಹೀಗೆ ಒಳ್ಳೆಯ ಉದ್ದೇಶದಿಂದ ಆದ ಈ ರೂಢಿಯ ಕ್ರಮಶ ಕೆಟ್ಟ ಪರಿಣಾಮ ಮಾಡಿತು. ಅಸ್ಪೃಶ್ಯತೆಯ ಕುರಿತು ನನ್ನೀ ಅಭಿಪ್ರಾಯ ಸರಿಯೋ, ತಪ್ಪೋ ಹೇಗಿದ್ದರು ಅಸ್ಪೃಶ್ಯತೆ ಮಾನವನ ದಯೆ ಪ್ರೀತಿ ಭಾವನೆಗಳಿಗೆ ವಿರುದ್ಧವಾದುದು. ಯಾವ ಧರ್ಮ ಗೋರಕ್ಷಣೆ ಮಾಡಲು ಹೇಳುತ್ತದೋ ಆ ಧರ್ಮ ಮಾನವನನ್ನು ಕೀಳೆಂದು ನಡೆಸಲು ತಿಳಿಸಲಾರದು. ಅಸ್ಪೃಶ್ಯತೆಯನ್ನಿಟ್ಟುಕೊಳ್ಳುವ ವರೆಗೆ ಹಿಂದುಗಳು ಸ್ವಾತಂತ್ರ್ಯಕ್ಕೆ ತಕ್ಕರಲ್ಲ ನಾನು ಹಿಂದು ಧರ್ಮವನ್ನು ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದೇನೆ. ಈ ಅಸ್ಪೃಶ್ಯತಾ ನಿವಾರಣೆಯು ನನಗೆ ಆವಶ್ಯವೆನಿಸುತ್ತದೆ. ನಮ್ಮ ಜನಾಂಗದ ಐದನೇ ಒಂದಂಶ ಜನರಿಗೆ ನಮ್ಮೊಡನೆ ಸಹಭಾಗಿಗಳಾಗಿರಲು ಒಪ್ಪಿಗೆ ಕೊಡದೆ ಈ ಮೂಲಕ ನಾವು ದೇವರ ಅಸ್ತಿತ್ವವನ್ನೇ ಅಲ್ಲಿ ಗಳೆಯಬಾರದು.



ಸರಿಯಾಗಿ ಮಾಲು ದೊರೆಯದಿರುವುದರಿಂದ ಜಾಹೀರು ಮಾಡಿದ ಎಲ್ಲಾ ಜಾತಿಗಳನ್ನು ಕೊಡಲು ವರಿ ಅನಾನುಕೂಲವಾದರೂ, ನಮ್ಮ ಸ್ಟೋಕಿನಲ್ಲಿರುವ ಮೆಟ್ಟಿಗೆ ನಿಮಗೆ ಉತ್ತಮವಾದವುಗಳನ್ನೇ ಕಳುಹಿಸುತ್ತೇವೆ.

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಯಿ ಮತ್ತು ಕಲ್ಕತ್ತ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆ ಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂಧರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE · **The Joint Booking Office,** KODIALBAIL.

The Bank of Mangalore Limited, Mangalore.

ESTD. 1924

HEAD OFFICE Mangalore. *BRANCHES* BUNDER MANGALORE. Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

Premiums are low.

2½% Rebate on annual premiums.

"Permanent Disability Benefits free of any cost.

Payment of double the insured amount in case of death by accident at a very smallcost of Rs. 1-8-0 per 1000.

Special rebates on large size policies.

A special scheme by which lapsed policies can be revived without paying the arrears

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI, S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯ್ಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರ

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 2—6—1944 [ಸಂಚಿಕೆ 22]

ಗಾಂಧೀಜಿಗೊಂದು ವರದಿ

೧೯೪೨ರ ಆಗಸ್ಟ್ ೯ರಿಂದ ೧೯೪೪ರ ಮೇ ೬ರ ತನಕ

ಅಹಮ್ಮತ್ ಅಬ್ಬಾಸ್—ಇವರಿಂದ

ಗಾಂಧೀಜಿ ಸೆರೆಮನೆ ಸೇರಿ ೨೧ ತಿಂಗಳ ನಂತರ ಬಿಡುಗಡೆಮಾಡಲ್ಪಟ್ಟರು. ಅವರು ಸೆರೆಯಲ್ಲಿದ್ದ ಈ ೨೧ ತಿಂಗಳುಗಳಲ್ಲಿ ಹೊರಗಿನ ಜಗತ್ತಿನಲ್ಲಿ ಅನೇಕ ಘಟನೆಗಳು ನಡೆದು ಹೋಗಿವೆ. ಸಂತೋಷಕ್ಕೆ ಕಾರಣವಾದ, ದುಃಖಕ್ಕೆ ಹೇತುವಾದ ನಾನಾ ಘಟನೆಗಳು ನಡೆದುಹೋಗಿವೆ. ಈ ಘಟನೆಗಳ ವರದಿಯನ್ನು ಗಾಂಧೀಜಿಗೆ ಒಪ್ಪಿಸಬೇಕು' ಇದರಿಂದ ಗತ ವಿಚಾರಗಳ ಸ್ಮರಣೆಮಾಡಿ ಕೊಂಡಂತಾಗುವದು.

೧೯೪೨ನೇ ಆಗಸ್ಟ್ ೯ರಲ್ಲಿ ಮಹಾತ್ಮರ ಮತ್ತಿತರ ಮುಂದಾಳುಗಳ ದಸ್ತಗಿರಿಯಾದಾಗ ಇದ್ದ ಯುದ್ಧವಾರ್ತೆಗೂ ಗಾಂಧೀಜಿಯವರನ್ನು ಬಿಡುವಾಗ ಇದ್ದ ವಾರ್ತೆಗೂ ಬಹು ವ್ಯತ್ಯಾಸವಿದೆ. ಈ ೨೧ ತಿಂಗಳುಗಳಲ್ಲಿ ಮಿತ್ರರ ಪರವಾಗಿ ಯುದ್ಧ ಬದಲಾಯಿಸಿದೆ. ಆದರೂ ಮಿತ್ರಪಕ್ಷದವರ ನೈತಿಕ ಶಕ್ತಿಯು ಸೈನಿಕ ಶಕ್ತಿಯಷ್ಟು ಭದ್ರವಾಗಿಲ್ಲ. ಅವರ ಅಟ್ಲಾಂಟಿಕ್ ಘೋಷಣೆಯು ಹಿಂದೂಸಾಗರದ ಅಡಿಯಲ್ಲಿದೆ. ತಮ್ಮ ವಸಾಹತುಗಳನ್ನು ಭದ್ರಪಡಿಸಲು ಡೊಮಿನಿಯನುಗಳ ಮುಖ್ಯಮಂತ್ರಿಗಳ ಸಮ್ಮೇಳನ ನಡೆಯುತ್ತಿದೆ. ಚರ್ಚಿಲ್ಲರ ಸಾಮ್ರಾಜ್ಯ ಗರ್ವವು ಬದಲಾಗಿಲ್ಲ.

ಈ ೨೧ ತಿಂಗಳುಗಳಲ್ಲಿ ಹಿಂದೂದೇಶದ ಜನರ ಮನಸ್ಸನ್ನು ಸೂರೆಗೊಂಡ ವ್ಯಕ್ತಿಯೆಂದರೆ ಸೆರೆಯಲ್ಲಿದ್ದ ಮಹಾತ್ಮರೆ! ಅವರ ದಸ್ತಗಿರಿಯ ಕಾಲಕ್ಕೆ 'ಕ್ವಿಟ್ ಇಂಡಿಯಾ' ಪುಸ್ತಕ ಅಚ್ಚಾಗಿತ್ತು. ಜಗತ್ತಿನಲ್ಲೇ ಆಶ್ಚರ್ಯಕರ ಸಂಗತಿಯೆಂತೆ ಕೆಲವೇ ದಿನಗಳಲ್ಲಿ ಅದರ ೨೫೦೦೦ ಪ್ರತಿಗಳು ಮುಗಿದದ್ದು ಗಾಂಧೀಯವರ ಜನಾನುರಾಗವನ್ನು ವ್ಯಕ್ತಮಾಡುತ್ತದೆ. ಅನಂತರ ಪ್ರತಿ ತಿಂಗಳಿಗೆ ಒಂದೆರಡರಂತೆ ಪುಸ್ತಕಗಳು ಗಾಂಧೀಸಾಹಿತ್ಯದಲ್ಲಿ ಪ್ರಕಟವಾಗುತ್ತಾ ಬಂದಿವೆ. ಇದರಲ್ಲಿ 'ಗಾಂಧೀಜಿಯೇ ಭಾರತ' ಎಂಬ ಪುಸ್ತಕವೂ ಒಂದು. ನಿಜ, ಗಾಂಧೀಯವರು ಜೈಲಿನಲ್ಲಿದ್ದರೂ 'ಗಾಂಧೀಜಿಯೇ ಭಾರತ.'

ಈ ಅವಧಿಯಲ್ಲಿ ಗಾಂಧಿಯವರ ಬಗ್ಗೆ ಅಪಪ್ರಚಾರ ಮಾಡಿದವರಿಗೂ ಕಡಿಮೆಯಿಲ್ಲ. ಕೇವಲ ತಿಂಗಳಿಗೆ ರೂ. ೩೦ ಪಡೆಯುವ ಗುಲಾಮಭಾರತೀಯರು ಪರರ ಮಾತು ಕೇಳಿಕೊಂಡು ಗಾಂಧಿಯವರನ್ನು ಅಥವಾ ತಮ್ಮನ್ನೇ ಅವಮಾನ ಮಾಡಿ ಕೊಂಡಿದ್ದಾರೆ. 'ಅವ್ಯವಸ್ಥೆಗೆ ಕಾಂಗ್ರೆಸು ಜವಾಬ್ದಾರ' ಎಂಬ ಪುಸ್ತಕವು ಇಂಥವರಿಂದಲೇ ಬರೆಯಲ್ಪಟ್ಟುದು. ಹಿಂದೂದೇಶ, ಅಮೇರಿಕಾ, ಬ್ರಿಟನುಗಳಲ್ಲಿ ಅಪಪ್ರಚಾರ ನಡೆಯಿತು. ಆದರೂ ಗಾಂಧೀಜಿಯವರನ್ನು ಜನರ ಹೃದಯದಿಂದ ಕಿತ್ತುಹಾಕುವ ಸರಕಾರದ ಮತ್ತೊಂದು ಪ್ರಯತ್ನವು ನಿಷ್ಫಲವಾಯಿತು.

ಗಾಂಧೀಜಿಯನ್ನು ಅವಮಾನ ಪಡಿಸಲು ಸಾಮ್ರಾಜ್ಯವಾದಿಗಳು ಪ್ರಯತ್ನಿಸುತ್ತಿದ್ದರೆ ಜಗತ್ತಿನ ಇತರ ಮಹಾವ್ಯಕ್ತಿಗಳು ಮಹಾತ್ಮರ ಗುಣಗಾನಕ್ಕೆ ತೊಡಗಿದರು. ಪರ್ಲ್‌ಬಕ್, ಲೂಯಿಫಿಶರ್, ಲಿನ್‌ಯುಟಾಂಗ್, ಲಿಯೋನಲ್ ಫೀಲ್ಡೆನ್, ಮೊದಲಾದವರು ಗಾಂಧೀಜಿ, ಮತ್ತು ಕಾಂಗ್ರೆಸಿನ ಪರ ವಾದಿಸಿದ್ದಾರೆ. ಆ ಬಗೆಗೆ ಉತ್ತಮ ಗ್ರಂಥಗಳನ್ನು ಬರೆದು ಪ್ರಚಾರಮಾಡಿದ್ದಾರೆ. ಚೈನಾವು ತನ್ನ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದೆ.

ಬಂಗಾಳ ಮತ್ತು ಬಿಜಾಪುರಗಳಲ್ಲಿ ಜನರು ಕೂಳಿಲ್ಲದೆ ಸಾಯುತ್ತಿದ್ದಾಗ ಗಾಂಧೀಜಿ ಸೆರೆಮನೆಯಲ್ಲಿ ಯಾವ ರೀತಿ ಇದ್ದಿರಬಹುದೆಂಬುದನ್ನು ಊಹಿಸುವದು ಕಷ್ಟ. ದೈವೀ ಮೂರ್ತಿಯಾದ ಗಾಂಧೀಯವರ ಹೃದಯದಲ್ಲಿ ಪ್ರತಿಯೊಬ್ಬ ಬರಗಾಲ ಪೀಡಿತನ ಕೂಗು, ಪ್ರತಿಯೊಂದು ಹಸುಳೆಯ ಅನ್ನದ ಕರೆ ಮಾಸಲಾರದ ಚಿತ್ರವನ್ನೊತ್ತಿರಬಹುದು. ಬಡ ಜನರ ಮೂರ್ತಿಸ್ವರೂಪರಾಗಿರುವ ಅವರಿಗಾದ ಹೃದಯವೇದನೆಯೇ ಅವರ ೨೧ ದಿನಗಳ ಚರಿತ್ರಾರ್ಹ ಉಪವಾಸಕ್ಕೆ ಕಾರಣವಾಗಿರಬಹುದು.

ಅಧಿಕಾರಿಗಳು ಬಡ ನಿರಾಶ್ರಿತರಿಗೆ ಯೋಗ್ಯಸಹಾಯ ಕೊಡಲಾರದಾದರು. ಸಾಮ್ರಾಜ್ಯನೀತಿಯೇ ಈ ಅವ್ಯವಸ್ಥೆಗೆ ಕಾರಣ. ಆದರೂ ನಮ್ಮಂಥಾ ಕೆಲವು ಭಾರತೀಯರು ಸಹ ನಮ್ಮ ಕೈಲಾದ ಸಹಾಯ ಮಾಡಲಿಲ್ಲವೆಂಬುದನ್ನು ಗಾಂಧೀಜಿ ತಿಳಿಯಬೇಕು. ಸ್ವಂತ ಲಾಭಕ್ಕಾಗಿ ಮೋಸದ ವ್ಯಾಪಾರ ಮಾಡಿದ್ದೇವೆ. ಬಡ ಜನರ ಸುಲಿಗೆ ಮಾಡಿದ್ದೇವೆ. ಸಾವಿನ ಮಾರ್ಗದಲ್ಲಿ ನಡೆಯುತ್ತಿರುವ ಬಡವರ ಕಷ್ಟವನ್ನು ನಮ್ಮ ಸುಖದ ಲಾಲಸೆಗಾಗಿ ಉಪಯೋಗಿಸಿ ಕೊಂಡಿರುವೆವು. ಗಾಂಧೀಜಿಯ ನಿಷೇಧವು ಇವರನ್ನು ಮುರಿಯದಿರಲಿ! ಗಾಂಧೀಜಿಯವರ ಹಿಂಬಾಲಕರೆಂದುಕೊಳ್ಳುವವರೇ ಬಡವರ ಸುಲಿಗೆ ಮಾಡಿದ್ದಾರೆ ಗಾಂಧಿಯವರ ಮುಂದೆ ನಿಲ್ಲಲು, ಅವರ ಹೆಸರನ್ನು ಉಪಯೋಗಿಸಲು, ಅವರ ತತ್ವಗಳನ್ನು ಹೇಳಲು ಈ ಮಾನವ ಪಶುಗಳಿಗೆ ಅಧಿಕಾರವಿದೆಯೆ?

ಹಿಂದೂದೇಶದ ಬಂಡವಳಗಾರರೂ ಸಹ ತಮ್ಮ ಕೈಗಾರಿಕೆಯನ್ನು ಗಾಂಧಿಯವರ ಹೆಸರನ್ನು ಉಪಯೋಗಿಸಿ ಬೆಳೆಸುತ್ತಿದ್ದಾರೆ. ಗಾಂಧೀಜಿಯವರು ವಿಶಾಲ ರೀತಿಯ ಬಂಡವಾಳ ಶಾಹೀ ಕೈಗಾರಿಕೆಗಳು ನಿರ್ನಾಮವಾಗಿ ಗುಡಿಕೈಗಾರಿಕೆಗಳಾಗಬೇಕು ಎಂದು ಹೇಳಿದರೂ ಅವರ ಹಿಂಬಾಲಕರೆನ್ನುವ ಈ ಜನರು ಬಡ ಗುಡಿಕೈಗಾರಿಕೆಗಳ ಆಶ್ರಯದಾತರೆಂಬ ಸೋಗಿನಿಂದ ತಮ್ಮ ಸ್ವಾರ್ಥ ಸಾಧಿಸಿದ್ದಾರೆ ಸಾಧಿಸುತ್ತಿದ್ದಾರೆ. ಜನರ ಆರ್ಥಿಕ ಪುರೋಭಿವೃದ್ಧಿಯ ಪೋಷಕರಾಗಿ ಇಂಥಾ ಜನರನ್ನಿಡಲು ಸಾಧ್ಯವೇ? ಗಾಂಧೀಜಿಯವರು ಈ ಬಗ್ಗೆ ಆಲೋಚಿಸಬೇಕು.

ಈ ಕಳೆದ ೨೧ ತಿಂಗಳುಗಳಲ್ಲಿ ಮುಸ್ಲಿಂಲೀಗು ತನ್ನ ಪಾಕಿಸ್ಥಾನ ನೀತಿಯನ್ನು ಮುಂದಿಟ್ಟುಕೊಂಡು ಹಲವು ಹೆಜ್ಜೆ ಮುಂದಿಟ್ಟಿದೆ. ಎರಡು ಜನಾಂಗಗಳ ಈ ನೀತಿಯು ರಾಷ್ಟ್ರದ ಸ್ವಾತಂತ್ರ್ಯಕ್ಕೆ ಗಂಡಾಂತರಕಾರಕವಾದುದು. ಮುಸ್ಲೀಂ ಲೀಗ ಈಗ ಬೆಳೆದಿದೆ. ಬ್ರಿಟಿಷ್ ಸರಕಾರವು ಈವರೆಗೆ ಅದನ್ನು ಪೋಷಿಸಿ ಕಾಂಗ್ರೆಸಿಗೆ ಪ್ರತಿವಿರೋಧಿಯಾಗಿ ನಿಲ್ಲಿಸಿದೆ, ಬ್ರಿಟಿಷ್ ಸರಕಾರವು ಈಗ ಮುಸ್ಲಿಂಲೀಗಿನ ಬೆನ್ನು ತಟ್ಟುವದನ್ನು ಸ್ವಲ್ಪ ಬಿಟ್ಟಿದೆ. ಪಂಜಾಬಿನ ಮಂತ್ರಿ ಕೆಪ್ಟನ್ ಶೌಕತ್ ಹಯಾತರನ್ನು ತೆಗೆದುಹಾಕಿದ್ದು ಇದಕ್ಕೆ ಒಂದು ನಿದರ್ಶನ. ಕಾಂಗ್ರೆಸಿನೊಡನೆ ಐಕ್ಯತೆಯಿಂದಿರುವದರಿಂದಲೇ ನಮ್ಮ ಪುರೋಭಿವೃದ್ಧಿಯಿದೆಯೆಂದು ಲೀಗು ಯೋಚಿಸುವ ಪರಿಸ್ಥಿತಿಬಂದಿದೆ. ಈ ಆಶಾಕಿರಣಕ್ಕೆ ವಿರುದ್ಧವಾಗಿ ಅದೋ ಜಿನ್ನಾರವರು ನಿಂತಿದ್ದಾರೆ!

ಕಳೆದ ೨೧ ತಿಂಗಳುಗಳ ರಾಜಕೀಯ, ನೈತಿಕ, ಆರ್ಥಿಕಘಟನೆಗಳ ವರದಿಯನ್ನು ಸೂಕ್ತವಾಗಿ ಗಾಂಧೀಜಿಗೆ ತಿಳಿಸಬಲ್ಲವರಿದ್ದಾರೆ. ಆದರೆ ಒಂದು ವಿಚಾರ ಮಾತ್ರ ನಾನು ಇಲ್ಲಿ ಬರೆಯಬೇಕಾಗಿದೆ. ಅದು ಫೇಸಿಸಂ ವಿರುದ್ಧವಾದ ಮತ್ತು ಜಪಾನರನ್ನು ಎದುರಿಸುವ ನಿರ್ಧಾರ, ಗಾಂಧೀಜಿಯವರ ದಸ್ತಗಿರಿಗೆ ಕೆಲವು ವಾರಗಳಿಗೆ ಮೊದಲು 'ಹರಿಜನ'ದಲ್ಲಿ ಅವರು ಹೀಗೆ ಬರೆದರು.

'ಬ್ರಿಟಿಷರ ಈ ದಾಸ್ಯದ ಕುರಿತು ಹೇಗೆ ನಾನು ಅಸಹನೆಯುಳ್ಳವನಾಗಿರುವೆನೋ ಹಾಗೆಯೇ ಬ್ರಿಟಿಷರ ಅಪಜಯಗಳಿಂದ ತೃಪ್ತರಾಗುವ, ಸಂತೋಷಗೊಳ್ಳುವ ಬೀದಿಯ ಜನರ ಈ ಗಂಡಾಂತರಕಾರಕ ಆತ್ಮತೃಪ್ತಿಯ ಬಗ್ಗೆಯೂ ಅಸಹನೆಯುಳ್ಳವನಿರುವೆನು. ಯೋಗ್ಯ ರೀತಿಯಿಂದ ಇದನ್ನು ತಡೆಗಟ್ಟದಿದ್ದರೆ ಜಪಾನರಿಗೆ ಇವು ಅನುಕೂಲವಾಗಬಹುದು. ಸ್ವತಂತ್ರ ಹಿಂದೂದೇಶವು ಎಂದೂ ಜಪಾನರನ್ನು ಸ್ವಾಗತಿಸದು. ಹಿಂದೂದೇಶದ ಈಗಿನ ಅನಾಸಕ್ತಿಯು, ಹಿಂದೂದೇಶದ ಸ್ವಾತಂತ್ರ್ಯವನ್ನು ಯಾವದೇ ಪರಕೀಯರಿಂದ ರಕ್ಷಿಸುವ ವಿಚಾರದಲ್ಲಿ ಮಾರ್ಪಟ್ಟು ಹೃತ್ಪೂರ್ವಕ ಸಹಕಾರವು ಮಿತ್ರರಿಗೆ ಕೊಡಲ್ಪಡುವದು.'

—ಬೊ. ಕಾ.

ಮಂಗಳೂರು

ಈ ಕರಾವಳಿಯ ಹಣ್ಣು ತರಕಾರಿಗಳ ಎರಡನೇ ಪ್ರದರ್ಶನ ತಾ. ೩೦ರಂದು ಬೆಳಿಗ್ಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಆರಂಭವಾಯಿತು. ಈ ಪ್ರದರ್ಶನದ ಗೌರವ ಕಾರ್ಯದರ್ಶಿ ಶ್ರೀ ಪಿ. ಆರ್. ಆರ್. ಪೂಂಜರವರು ಸಮಯೋಚಿತವಾದ ಭಾಷಣ ಮಾಡಿದ ಬಳಿಕ, ಶ್ರೀ ಕೆ. ಸಿ. ನ್ಯಾಕ್, ಫ್ರುಟ್ ಸ್ಪೆಶಲಿಸ್ಟ್ ಇವರೀ ಜಿಲ್ಲೆಯವರು—'ಹೆಚ್ಚಿನ ವ್ಯವಸಾಯ'ದ ಕುರಿತು ಒಂದು ಉದಾತ್ತ ಭಾಷಣ ಮಾಡಿದರು. ಈ ಸಭೆಯ ಅಧ್ಯಕ್ಷರಾದ ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ. ಪಿ. ರಾಮದಾಸ ಅವರು ಹಣ್ಣಿನ ಕೃಷಿಗೆ ಎಲ್ಲರೂ ಕೊಡಬೇಕಾದ ಪ್ರೋತ್ಸಾಹದ ಕುರಿತು ಪ್ರಸ್ತಾಪಿಸುತ್ತ ಅದು ಕೇವಲ ವ್ಯಾಪಾರೀ ದೃಷ್ಟಿಯದೇ ಆಗಿರಬಾರದೆಂದು ರಸವತ್ತಾದ ತಮ್ಮ ಭಾಷಣದಲ್ಲಿ ಶ್ರುತಪಡಿಸಿ, ನೆರೆದಿದ್ದ ಆಪ್ತ ನಾಗರಿಕರ, ಮಹಿಳೆಯರ ಮುಂದೆ ಈ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು.

ಈ ಪ್ರದರ್ಶನಕ್ಕೆ ಈ ಜಿಲ್ಲೆಯ ಅಲ್ಲದೆ ಮದ್ರಾಸ್ ಆಧಿಪತ್ಯದ ಸರಕಾರೀ ಹಣ್ಣಿನ ಕ್ಷೇತ್ರಗಳಿಂದಲೂ ಹಣ್ಣುಗಳು ಬಂದಿವೆ. ಈ ಪ್ರದರ್ಶನದಲ್ಲಿ ನೋಡಲೇಬೇಕಾದ ಹಲವು ಅಪೂರ್ವ ಪದಾರ್ಥಗಳಿವೆ. ಪದ್ರಶನ ಇಂದೂ ನಾಳೆಯೂ ಇದೆ. ದರ್ಶಕರಿಗೆ ಟಿಕೇಟಿನ ನಿರ್ಬಂಧವಿಲ್ಲ.

ಜುಹುವಿನಲ್ಲಿ ಗಾಂಧೀಜಿ

ಆರೋಗ್ಯ ಉತ್ತಮಗೊಂಡಿದೆ

ಮುಂದಿನ ವಿಚಾರವೇನು?

ಜುಹು!

ಗಾಂಧೀಜಿ ಇವತ್ತಿಂತ ವಿಚಿತ್ರ ಸ್ಥಳವೊಂದನ್ನು ತನ್ನ ಆರೋಗ್ಯಲಾಭಕ್ಕಾಗಿ ಇದುವರೆಗೆ ಆರಿಸಿಲ್ಲ.

ಇತ್ತೀಚೆ ವರೆಗೆ ಇದು ಬೊಂಬಾಯಿ ವಿಲಾಸಿಗಳಿಗೆ ವಿಹಾರ ಸ್ಥಳವಾಗಿತ್ತು.

ಇದರ ಬಳಿಯೊಂದು ವಿಮಾನ ಗೃಹವಿದೆ, ಹಾರುವ ವಿಮಾನದ ಶಬ್ದ ಹೊಸ ಹೊಸದ ಸೂಚನೆ ಅನುಭವವನ್ನು ಕೊಡುತ್ತದೆ.

ನೀಲಿ ಆಕಾಶ, ನೀಲಿ ಸಾಗರ, ಬೆಳ್ಳಿ-ಬಣ್ಣದ ಹೊಯಿಗೆ ಇಲ್ಲಿನ ವಾತಾವರಣ. ಇದರಲ್ಲಿ ಖಾಕೀ ಉಡುಪು ಸಿಪಾಯಿಗಳು ಇಲ್ಲಿ ಆಗಾಗ ಅಲೆದಾಡುತ್ತಾರೆ.

ಇಲ್ಲಿ ಬ್ರಹ್ಮಜ್ಞಾನಿಗಳ ವಸತಿಯಿದೆ. ಬಡವರ ಗುಡಿಸಲಿದೆ. ಮಿಲಿಯಾಧೀಶರ ಬಂಗಲೆಗಳೂ ಇವೆ. ವಿಶ್ರಾಂತಿಗ್ರಹಗಳೂ ಇಲ್ಲಿ ಇವೆ.

ಮಹಾತ್ಮರು ಈ ವಿಚಿತ್ರ ಸ್ಥಳವನ್ನು ವಿಶ್ರಾಂತಿಗಾಗಿ ಆರಿಸಿದ್ದಾರೆ. ಇಂದು ಅಲ್ಲಿಗೆ ಬರುವ ಸಾವಿರಾರು ಯಾತ್ರಿಕರಿಂದಾಗಿ ಇದೊಂದು ಯಾತ್ರಾಸ್ಥಳವಾಗಿದೆ.

ಕಳೆದ ಒಂದೆರಡು ವಾರಗಳಿಂದ, ಜುಹುವಿನಲ್ಲಿರುವ ಗಾಂಧೀ ಗ್ರಾಮವು ಬೇಡುವವರ, ಮಿಲಿಯಾಧೀಶರ, ರಾಜಕಾರಣಿಗಳ, ಸಾಧುಸಂತರ, ಪತ್ರಿಕೋದ್ಯಮಿಗಳ ಆಂಗ್ಲೇಯ, ಭಾರತೀಯ, ಅಮೆರಿಕನ, ಚೀನೀಯ ಇವರೆಲ್ಲರ ಯಾತ್ರ ಸ್ಥಳವಾಗಿರುವುದು.

ಇವರೆಲ್ಲರೂ ರಾಷ್ಟ್ರದ ಏಕವೀರ, ಮಹಾತ್ಮನನ್ನು-ಪ್ರಿಯ ವಿಭೂತಿ ಪುರುಷನನ್ನು ನೋಡಲು- ಜುಹುಗೆ ಬರುತ್ತಾನೆ. ಇವರೆಲ್ಲಾ ಭಾಗ್ಯವಂತರು.

ಇಬ್ಬರು ಭಾಗ್ಯವಂತರು

ತರುಣ ಚೀನೀ ಪತ್ರಿಕೋದ್ಯಮಿ ಚುಂಗ್‌ಸುನ್ ಇವರಲ್ಲಿ ಒಬ್ಬರು. ಇವರು ನ್ಯೂಯಾರ್ಕಿಗೆ ಹೋಗುವವರಿದ್ದಾರೆ. ಕಳೆದ ವಾರ ಅಮೆರಿಕಕ್ಕೆ ಹೊರಟರು ಹಡಗತಪ್ಪಿ ಭಾರತದಲ್ಲಿ ಉಳಿದರು. ಇದು ತನ್ನದೊಂದು ಭಾಗ್ಯವೆಂದೇ ಅವರೀಗ ತಿಳಿದಿದ್ದಾರೆ.

ಶ್ರೀಮತಿ ನಾಯಿಡು, ಶ್ರೀಮತಿ ಪಂಡಿತರೊಡನೆ ಇವರು ಸಂಭಾಷಣೆ ಮಾಡಿದ್ದಾರೆ. ಗಾಂಧೀ ಬಳಿ ಹೋಗಿದ್ದಾರೆ. ಇತರ ಯಾವ ಭಾರತೀಯ-ವಿದೇಶೀಯ ಪತ್ರಿಕೋದ್ಯಮಿಗೂ ಸಿಗದಷ್ಟು ಸಾಮಿಪ್ಯ ಇವರಿಗೆ ಅಲ್ಲಿ ದೊರೆತಿದೆ.

'ಶ್ರೀಮತಿ ನಾಯುಡು ತುಂಬಾ ಬುದ್ಧಿವಂತೆ; ಚೀನದ ವಿಷಯ ಅವರಿಗೆ ಬಹಳ ಗೊತ್ತಿದೆ;-ಆದರೆ ಆಕೆ ಗಂಡುಬೀರಿ. ಅವರೊಡನೆ ಯಾರಾದರೂ ಸರಳವಾಗಿ ಮಾತನಾಡಬಹುದು.' ಹೀಗೆಂದು ಚುಂಗ್‌ಸನ್ ಹೇಳಿದ್ದಾರೆ.

'ಪಂಡಿತ ನೆಹರುಗಳ ಸೋದರಿಯೆಂದು ನಾನಾಕೆಯನ್ನು ಗೌರವಿಸುತ್ತೇನೆ; ಮಾತ್ರವಲ್ಲದೆ ಆಕೆ ಮೇಡಮ್ ಕೈಶೇಕರ ಆಪ್ತರು. "ಎಂದು ಶ್ರೀಮತಿ ಪಂಡಿತರ ಕುರಿತು ಅವರ ಅಭಿಪ್ರಾಯ.

ಗಾಂಧೀಜಿ ವಿಷಯ ಕೇಳಿದಾಗ ಅವರು ಹೀಗೆಂದರು: "ಗಾಂಧೀಜಿ ಬಹಳ ದಯಾಳು; ಅವರು ಮಹಾತ್ಮರು; ಬಹಳ ದೊಡ್ಡ ಮಹಾತ್ಮರು."

ಡಿ. ಆರ್. ಡಿ. ವಾಡಿಯಾ ಇನ್ನೊಬ್ಬ ಭಾಗ್ಯವಂತರು; ಗಾಂಧೀಜಿ ಭಾವಚಿತ್ರ-

(೭ನೇ ಪುಟಕ್ಕೆ ಮುಂದುವರಿದಿದೆ)

ಸಂತೋಷದ ಸುದ್ದಿ ಬಂದಿದೆ: ಮಿತ್ರರು ಎಲ್ಲೆಲ್ಲಿಯು ಮುಂದುವರಿಯುತ್ತಿದ್ದಾರೆ. ಬರ್ಮಾರಂಗ, ಇಟಲಿ ರಣಭೂಮಿ, ಡಚ್ ನ್ಯೂಗಿನಿ ಇಲ್ಲೆಲ್ಲಾ ಮಿತ್ರರು ಪ್ರಬಲರಾಗಿರುವರು. ಇಷ್ಟರಲ್ಲಿ ದ್ವಿತೀಯರಂಗದ ಮಾತು ಕತೆಯೂ ಇದೆ. ದ್ವಿತೀಯರಂಗ ಆಗುತ್ತದೆಂದಲ್ಲ; ಆದರೂ ಆಗಬಹುದು, ಆಗಬೇಕು ಎಂದು.

ಸಮರ ಭೂಮಿಯ ಸಂಚಾರ

ಭಾರತ-ಬರ್ಮಾ ಗಡಿಯ ಕಾಳಗ

ನಮಗೆ ಅತ್ಯಂತ ಪ್ರಾಮುಖ್ಯವಾದುದು. ಚೀನಕ್ಕೂ ಇದು ಮುಖ್ಯವೇ. ಮಿತ್ರರಿಗಂತೂ ಇದೊಂದು ಪರಾಕ್ರಮದ ವಿಷಯವೇ ಸರಿ. ಆಗ್ನೇಯ ಸನ್ನಿಧಿ ಕೇಂದ್ರದ ರಚನೆ, ಲಾರ್ಡ ಮೌಂಟ್ ಬೇಟನರ ನೇಮಕ ಇವುಗಳಾದ ಮೇಲೆ ಬರ್ಮಾವನ್ನು ಪುನಃ ಪಡೆದುಕೊಳ್ಳುವ ಆಶೆ ಹಲವರಿಗೆ ಹುಟ್ಟಿತು. ಮಿತ್ರ ಸೈನ್ಯ ಮುಂದೊತ್ತಿ ಹೋಯಿತೆಂದೇ ಹಲವರು ಬಗೆದರು. ಆದರೆ ಇಲ್ಲಿ ಹೋರಾಟ ಸಾಗಿತೇನೋ ನಿಜ. ಮಿತ್ರರಲ್ಲಿ ಮುಂದೊತ್ತಿ ಬರ್ಮಾವನ್ನು ಕೈವಶ ಪಡಿಸಿಕೊಳ್ಳುವುದಕ್ಕಿಂತ ಮಣಿಪುರ ಮಾರ್ಗದಲ್ಲಿ ಜಪಾನರು ಭಾರತಕ್ಕೆ ಕಾಲಿಡದಂತೆ ಮಾಡುವ ಪ್ರಯತ್ನವೇ ಹೆಚ್ಚಿನದಾಗಿದೆಯೆಂದು ಕಂಡುಬರುತ್ತದೆ. ಜನರಲ್ ಸ್ಟಿಲ್‌ವೆಲರ ಚೀನೀ-ಅಮೆರಿಕನ್ ದಳದ ಸಾಹಸವು ಇಲ್ಲಿ ಗೌರವ ಕಾಪಾಡಿತು.

ಅರಕಾನ್ ವಿಜಯವೂ ಮಾರ್ಚ್‌ಗಳರ ವರೆಗೆ ಮಹತ್ವವಾಗಿತ್ತು. ಬುಥೆಡಾಂಗ್ ಆಕ್ರಮಣದಿಂದ ಇಲ್ಲಿನ ಯುದ್ಧರಂಗಕ್ಕೆ ವಿಶೇಷ ಕಳೆಯೇರಿಬಿಟ್ಟಿತು. ಗಳನೇ ದಳವು ಜಪಾನರನ್ನು ಸಂಪೂರ್ಣ ಸೋಲಿಸಿದ್ದು ಬಹಳ ಸಾಹಸದ ಕೆಲಸವೇ ಆಯಿತು.

ಜಪಾನರು ಮಣಿಪುರ ಭೇದಿಸಿ ಇಂದಿಗೆ ಎರಡು ತಿಂಗಳಿಗೆ ಹತ್ತಿರ ಆಯಿತು. ಬರ್ಮಾವನ್ನು ಪುನಃ ಇದುವರೆಗೆ ಪಡೆಯಲಾಗದಿದ್ದರೂ ಮಣಿಪುರದಾದಿಯಲ್ಲಿ ಮುಂದೊತ್ತಿ ಬಂದ ಜಪಾನರನ್ನು ತಡೆದು ಹಿಡಿದದ್ದು ನಿಜವಾಗಿಯೂ ಪರಾಕ್ರಮದ ಕೆಲಸವೇ ಎನಿಸಬೇಕು

ಇಟಲಿಯಲ್ಲಿ ಹೋರಾಟ

ಇಟಲಿಯ ಸರ್ವಾಧಿಕಾರಿ ಮುಸಲನಿಯು ಪದತ್ಯಾಗ ಮಾಡಿದ ಕೂಡಲೇ ಇಟಲಿ ಶರಣಾಯಿತೆಂದು ಮಿತ್ರರು ಹೆಮ್ಮೆಕೊಚ್ಚಿಕೊಂಡಿದ್ದರೂ ಇದು ವರೆಗೆ ಅಲ್ಲಿ ಹೋರಾಟ ನಡೆದೇ ಇದೆ. ಇಟಲಿಯಲ್ಲಿ ಜರ್ಮನರು ಪ್ರಬಲರಾಗಿ ಮಿತ್ರರ ಮುಂದೊತ್ತುವಿಕೆಯನ್ನು ಅಂದಿನಿಂದ ಇದುವರೆಗೂ ಎದುರಿಸುತ್ತಲೇ ಇದ್ದಾರೆ. ಆದರೆ ಈ ರಣರಂಗದಲ್ಲಿ ಇರುವ ವರೆಗೆ ಯಾರಿಗೂ ಸೋಲಾಗಲಿ, ಗೆಲುವಾಗಲಿ, ಖಂಡಿತ ನಿರ್ಧಾರವಾಗಿಲ್ಲ.

ಇಟಲಿಯ ಗುಸ್ಟಾವ್ ವ್ಯೂಹ ನಾಶವಾಗಿ, ಕೇಸಿನೋ ಪತನವಾದಂತೆ ಎಂದು ತೋರುತ್ತದೆ. ಅದರ ಮೇಲೆ ಹಿಟ್ಲರ್ ವ್ಯೂಹವೂ ಭೇದಿಸಲ್ಪಟ್ಟ ಸುದ್ದಿ ಬಂದಿದೆ. ಗುಸ್ಟಾವಿಗಿಂತಲೂ ಹಿಟ್ಲರ್ ವ್ಯೂಹ ಬಲಾಢ್ಯವೇ ಇತ್ತೆಂದು ವಿದಿತವಿದೆ. ಇದು ಕೇಸಿನೋದ ಪಶ್ಚಿಮಕ್ಕೆ ಒಂದು ಮೈಲು ದೂರದಲ್ಲಿ ಪ್ರಾರಂಭವಾಗಿ ಪೀಡಮಾಂಟ, ಅಕ್ವಿನೋ, ಪೌಂಟಿಕಾರ್ವೊ, ಎಸ್ಪಿರಾ ಮೊದಲಾದ ಅಭೇದ್ಯ ಕೋಟೆಗಳ ಮೇಲೆ ಹಾದು ಹೋಗಿದೆ. ಇದರ ಬಹು ಭಾಗವು ಇಂದೂ ಶತ್ರು ವಶವಾಗಿದೆ. ಆದರೆ ಇದರಲ್ಲಿ ಪೀಡಮಾಂಟ, ಅಕ್ವಿನೋ, ಪಾಂಟಿಕಾರ್ವೊ ಮತ್ತು ಎಸ್ಪಿರಾ, ಪಿಕೊಪಾಂಡಿ ಮೊದಲಾದ ವ್ಯೂಹಗಳೆಂದು ಮಿತ್ರರ ಕೈಗೆ ಬಂದಿರುವುದಾಗಿ ತಿಳಿದು ಬರುತ್ತದೆ. ಹಿಟ್ಲರ್ ವ್ಯೂಹದ ಆಚೆ ಐದು ಮೈಲು ಅಂತರದಲ್ಲಿ ಯುದ್ಧ ನಡೆದಿದೆ.

ರೋಮು ನಗರವು ಸಂಪೂರ್ಣ ಜರ್ಮನರ ವಶವಿತ್ತು. ಈಗ ಅದರ ಬಹು ಪಾಲು ಮುಖ್ಯ ಮಾರ್ಗ ಮಿತ್ರರ ವಶ ಬಂದಿರುವುದಾಗಿ ತಿಳಿಯುತ್ತದೆ. ಅತ್ತ ಅಂಝಿಯೋದಲ್ಲಿಯೂ ಧಾಳಿ ಪ್ರಾರಂಭಿಸಿದ್ದು ಸಿಸ್ಟರ್ನಾ ಮತ್ತು ಲಿಟರೋ ಭಾಗದಲ್ಲಿ ಭೀಕರ ಹೋರಾಟ ಸಾಗಿರುವುದು. ಕೇಸಿನೋ ರಂಗದ ದಕ್ಷಿಣ ತುದಿಯಲ್ಲಿರುವ ಅಮೆರಿಕನ್ ಸೈನ್ಯವು ಅಂಝಿಯೋ ಠಾಣೆಯಲ್ಲಿದ್ದ ಸೈನ್ಯವನ್ನು ಕೂಡಿಕೊಂಡಿರುವುದೆಂದು ಸುದ್ದಿ. ರೋಮು ನಗರವನ್ನು ಆಕ್ರಮಿಸದಿದ್ದರೆ ಮಿತ್ರರ ಪರಾಕ್ರಮ ಗೌರವಗಳಿಗೆ ಕುಂದಿರುವುದರಿಂದ ಅದನ್ನು ಕೈವಶ ಮಾಡಿಕೊಳ್ಳಲು ಉಗ್ರ ಕದನ ಸಾಗುತ್ತಿದೆ. ಇಟಲಿಯ ಈ ರಣರಂಗದಲ್ಲಿ ಆಂಗ್ಲ, ಭಾರತೀಯ, ಅಮೆರಿಕಾನ, ಫ್ರೆಂಚ್ ದಳಗಳು ಮುನ್ನುಗ್ಗುತ್ತಿವೆ. ಇಂತು ರೋಮ ನಗರದ ಯುದ್ಧ ಭೀಕರವಾಗುತ್ತಿದೆ.

ಇಟಲಿಯೊಂದನ್ನು ಬಿಟ್ಟರೆ ಯೂರೋಪಿನ ಯಾವುದೇ ರಣರಂಗದಲ್ಲಿಯೂ ವಿಶೇಷ ಚಟುವಟಿಕೆಗಳು ಕಂಡುಬರುವುದಿಲ್ಲ. ರಷ್ಯದ ಪರಿಸ್ಥಿತಿ ಸಧ್ಯ ತುಸು ಶಾಂತವಾಗಿರುವುದು. ದ್ವಿತೀಯರಂಗ ತೆರೆವ ಸುದ್ದಿಯೇನಾಯಿತು ಎಂದು ಇನ್ನೂ ತಿಳಿದಿಲ್ಲ. ದ್ವಿತೀಯರಂಗವನ್ನು ಮಿತ್ರರು ತೆರವರೇ ಎಂದು ಆದಿಯಿಂದ ಇದುವರೆಗೆ ರಶ್ಯನರು ಹಾತೊರೆಯುತ್ತಲೇ ಇದ್ದಾರೆ. ಬ್ರಿಟನಿನಲ್ಲಿಯೂ ಇದರ ಕುರಿತು ಆಶಾಜನಕ ವಾರ್ತೆಯೇನೂ ಇಲ್ಲ.

ಅಸಾಮ್-ಅರಕಾನ್-ಬರ್ಮಾ

ಅಸಾಮ್ ಗಡಿಯಲ್ಲಿ ಮೊಗಾಂದ ಕಂದರದ ಪೂರ್ವಕ್ಕೆ ಕಮನ್ ಗುಡ್ಡದಲ್ಲಿರುವ ಜಪಾನಿನ ಮುಖ್ಯ ಠಾಣ್ಯವೊಂದನ್ನು ಭೀಕರ ಹೋರಾಟದ ನಂತರ ಚೀನರು ತಮ್ಮ ಸ್ವಾಧೀನ ತೆಗೆದುಕೊಂಡರು, ಝುಗಿಯಾನ್‌ಸಿಂದ ಉತ್ತರಕ್ಕೆ ಸರಿದಿರುವ ಸೈನಿಕರು ಈಗ ಮಿಟಕಿನಾದಿಂದ ಒಂದು ಮೈಲು ಅಂತರದಲ್ಲಿದ್ದಾರೆ. ಮಿಟಕಿನಾದಿಂದ ಪಶ್ಚಿಮಕ್ಕೆ ಮತ್ತು ಕೆಳಗೆ ಕೋಹಿಮಾ ಮತ್ತು ಪಲೇಲದ ನಡುವಿರುವ ರಣರಂಗದಲ್ಲಿ ಮಿತ್ರರು ಪ್ರಬಲರಾಗಿರುವರು ಆದರೆ ಜಪಾನರು ಕೋಹಿಮಾ ಪ್ರದೇಶದಲ್ಲಿ ಕಂದಕಗಳನ್ನು ಕಡಿಯುತಿದ್ದಾರೆ. ಇಲ್ಲಿಂದ ವಿಶೇಷತಃ ಅರಾಡುರ ಪರ್ವತದಿಂದ ಅವರನ್ನು ಓಡಿಸುವುದು ಕಷ್ಟವಾಗಿದೆ.

ಇಂಫಾಲಿನ ಭೀಷಣಪುರದ ಹತ್ತಿರ ಜಪಾನರು ಬಹಳ ಹಾನಿ ಗೊಳಗಾಗಿರುವರು. ಅರಕಾನಿನಲ್ಲಿ ರಣ ಭೂಮಿಯ ದಕ್ಷಿಣ ತುದಿಯಲ್ಲಿ ಒಮ್ಮೆ ಭದ್ರವಾಗಿದ್ದ ಎರಡು ಕೊಳವೆ ಪ್ರದೇಶಗಳಲ್ಲಿ ಒಳ್ಳೆ ಉತ್ಸಾಹದಿಂದ ಹೋರಾಟ ನಡೆದಿದೆ. ಮಾಂಗಡಾ ಬುಥೆಡಾಂಗ ಮಾರ್ಗದಲ್ಲಿ ಮಹತ್ವದ ಅನೇಕ ಪ್ರದೇಶಗಳೀಗ ಮಿತ್ರರ ವಶವಿದೆ. ಹವೆ ಅನನುಕೂಲವಿರುವುದರಿಂದ ಯಾರಿಗೂ ಈಗ ಹೆಚ್ಚಿನ ಚಟುವಟಿಕೆ ಮಾಡುವುದು ಆಗುವುದಿಲ್ಲ.

ಮಿಟಕಿನಾ ಸುತ್ತು ಗಟ್ಟಿದ ಚೀನೀ ಅಮೆರಿಕನ್ ದಲಗಳು ಮೆಲ್ಲ ಮೆಲ್ಲನೆ ಪ್ರಗತಿ ಹೊಂದುತ್ತಿವೆ. ಮೋಡದಿಂದ ತುಂಬಿದ ಹವೆ ಮತ್ತು ಮಳೆ ಪ್ರಗತಿಗೆ ತುಂಬಾ ಹಾನಿ ತರುತ್ತದೆ. ಮಾಗಾಂಗ ಕಣಿವೆಯಲ್ಲಿ ಎರಡು ವಾರಗಳ ಧಾಳಿಯ ನಂತರ ಮಿತ್ರರು ಪಾರಂಗವೆಂಬ ಮಹತ್ವದ ಸ್ಥಳವನ್ನು ವಶಪಡಿಸಿಕೊಂಡರು. ಜಪಾನರು ಇಲ್ಲಿ ಕಂದಕಗಳನ್ನಿಸಗಿರುವರು ಭದ್ರವಾಗಿ ತಳವೂರಿದ್ದಾರಿಂದ ಅವರನ್ನು ಗೆಲ್ಲಲು ಎರಡು ವಾರ ಹಿಡಿಯಿತು.

ಕೋಹಿಮಾದಲ್ಲಿ ಏಳನೇ ರಜಪುತ ಅರಣ್ಯ ಸೇನೆಯು ಶತ್ರು ಪ್ರದೇಶದಲ್ಲಿ ಮುನ್ನುಗ್ಗಿ ಅಡಗಿ ಕುಳಿತಿದ್ದ ಜಪಾನರನ್ನು ಮುತ್ತಿ ತುಂಬಾ ಹಾನಿಗೆ ಗುರಿಪಡಿಸಿದರು. ಟ್ರೆಜರಿ ಹಿಲ್ ಮತ್ತು ನಾಗಾ ಹಳ್ಳಿಯಲ್ಲಿ ಜಪಾನರನ್ನು ತಿಳಿಯದಂತೆ ತುಂಬಾ ಹಾನಿಗೊಳಿಸಲಾಯಿತು. ೩೦ ಗ್ರೆನೇಡುಗಳಿಂದ ಮತ್ತು ೬೦೦ ಸುತ್ತು ಟಾಮಿ ಗುಂಡುಗಳಿಂದ ಎಷ್ಟು ಜನರನ್ನು ಕೊಲ್ಲುವುದು ಸಾಧ್ಯವಿತ್ತೋ ಅಷ್ಟು ಮಂದಿ ಶತ್ರು ದಳದವರನ್ನು ಕೊಲ್ಲಲಾಯಿತೆಂದು ಪಾಲಧಾರ ಬಜರಂಗ ಬಲಿಯವರು ಹೇಳಿದರು. ಇವರು ಸೀದ ಬರಾಣಿಯ ವೀರರಿದ್ದು ಅಲ್ಲದೆ ಎಸ್. ಎಮ್. ಪದವಿಯನ್ನು ಪಡೆದ ೨೬ ವರ್ಷದ ತರುಣ ಯೋಧರಾಗಿದ್ದಾರೆ ರಜಪುತ ಸೈನಿಕರ ಈ ಸಾಹಸವು ಬಹಳ ಪ್ರಶಂಸನೀಯವಿದೆ.

ಬರ್ಮದ ಮೇಲೆ ಧಾಳಿ ನಡೆಸುತ್ತಿದ್ದು ಸಾಲ್ವಿನ್ ನದಿಯ ಆಚೀಗೆ ಮುನ್ನುಗ್ಗುತ್ತಿರುವ ಚಿಯಾಂಗ್ ಕೈ ಶೇಕರ ಸೈನಿಕರು ಬರ್ಮಾ ಮಾರ್ಗದಿಂದ ೭೫ ಮೈಲುಗಳ ಮೇಲಿರುವ ಒಂದು ಸ್ಥಳವನ್ನು ಮುಟ್ಟಿದರೆಂದು ಹೇಳಲಾಗಿದೆ. ಟಂಗಚೆಂಗದ ಈಶಾನ್ಯಕ್ಕೆ ೩೫ ಮೈಲುಗಳ ಮೇಲಿರುವ ಟಾಟಂಗಜು ಎಂಬ ನಗರವನ್ನು ಆಕ್ರಮಿಸಿ ಚೀನರು ಮಹತ್ವದ ವಿಜಯವನ್ನು ಪಡೆದರು. ಜಪಾನ್ ಬರ್ಮಾ ವಾಹನ ಮಾರ್ಗದಲ್ಲಿ ಇದು ಒಳ್ಳೆಯ ಕೇಂದ್ರ ಸ್ಥಳವಾಗಿದೆ. ಮಿಟಕೀನ ಯುದ್ಧ ಭೂಮಿಯಿಂದ ಇದು ೫೦ ಮೈಲು ದೂರದಲ್ಲಿದೆ. ಮಳೆಗಾಲವಾದದ್ದರಿಂದ ಸಾಲ್ವಿನ್ ರಂಗದಲ್ಲಿ ಚಟುವಟಿಕೆ ಸ್ವಲ್ಪ ಮಾತ್ರವಿದೆ ಮಳೆ ಇಲ್ಲದಿದ್ದರೆ ಮಿಟಕಿನಾವನ್ನು ಇಷ್ಟರಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗುತಿತ್ತು ಮಳೆ ಇದ್ದರೂ ಬರ್ಮಾದಲ್ಲಿ ಮಿತ್ರರ ಚಟುವಟಿಕೆ ಸಾಲ್ವಿನ್‌ರಂಗದಲ್ಲಿ ಮಿತ್ರರ ಚಟುವಟಿಕೆ ಹಾಗೆಯೇ ಸಾಗುವವು.

ಸುರತಕಲ್

ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ಪ್ರಾರಂಭೋತ್ಸವವು ೩೧-೫-೪೪ ಬುಧವಾರ ೪ ಘಂಟೆಗೆ ಕೃಷ್ಣಪುರದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರಿಂದ ವಿಜೃಂಭಣೆಯಿಂದ ಜರಗಿತು. ಊರ ಹೊರ ಬಾಗಿಲಿನಲ್ಲಿ ಶಾಲಾ ಸಮಿತಿಯವರೂ ಊರ ಸಭ್ಯ ಮಹಾಶಯರೂ ಶ್ರೀಗಳವರನ್ನು ಬೇಂಡುವಾದ್ಯಗಳೊಡನೆ ಇದಿರ್ಗೊಂಡು ತಾಳಿಂಬು ಕತ್ತಿ ವರಸೆ ಮೊದಲಾದ ಆಟಗಳೊಂದಿಗೆ ಮೆರವಣಿಗೆಯಲ್ಲಿ ಶಾಲೆಗೆ ಕರೆ ತರಲಾಯಿತು. ಸ್ವಾಗತಿಸಲ್ಪಟ್ಟ ಕೆಲವು ಮಹನೀಯರು ಹೈಸ್ಕೂಲಿನ ಗೊತ್ತುಗುರಿ ಹೈಸ್ಕೂಲಿನ ಮೇಲ್ಮೆ ಬಾಲಕರ ಬಾಳ್ವೆ ಇವೇ ಮೊದಲಾದ ವಿಷಯಗಳಲ್ಲಿ ಉಪನ್ಯಾಸವಿತ್ತರು. ಶ್ರೀಗಳಾವರು ವಿದ್ಯಾ ಪರದೈವತಾ ಎಂಬುದನ್ನುದ್ದೇಶಿಸಿ, ವಿದ್ಯೆಮಹತ್ವವನ್ನು ತಮ್ಮ ಅಮೂಲ್ಯ ವಾಣಿಯಿಂದ ಒತ್ತರಿಸಿದರು. ಕೊನೆಗೆ ಬಾಲಕರ ಕೆಲವು ವಿನೋದಗಳಾದ ನಂತರ ಸಭೆಯು ಮುಕ್ತಾಯವಾಯಿತು. ತಾ. ೧-೬-೪೪ ರಿಂದ ಶಾಲೆಯು ಕ್ರಮದಂತೆ ಪ್ರಾರಂಭವಾಗಿ ಮೊದಲ ಮೂರನೇ ವರ್ಗಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಕೆಲಸವು ಭರದಿಂದ ಸಾಗುತ್ತಿದೆ. ದೂರದ ವಿದ್ಯಾರ್ಥಿಗಳಿಗೆ ಭೋಜನಾದಿ ಸತ್ಕಾರಗಳೂ ಏರ್ಪಡಿಸಲಾಗಿದೆ. ಶ್ರಿಯುತ, ಯಂ. ವಾಸುದೇವ ರಾವ್, ಎಂ. ಎ. ಯಲ್. ಟಿ. ಇವರು ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕ ಹೊಂದಿರುತ್ತಾರೆ.

ಕ್ಷಯರೋಗ ಗುಣಹೊಂದುವುದು

—ಎನ್ಸೆಸ್ಕೋಟ್ ಜೇಮ್ಸ್ ಕ್ಷಯರೋಗವು ಗುಣಪಡಿಸಲು ಅಸಾಧ್ಯವಾದ ರೋಗವಲ್ಲ, ಪ್ರಾರಂಭ ಕಾಲದಲ್ಲಿಯೇ ಈ ರೋಗವನ್ನು ಸರಿಯಾಗಿ ಶುಶ್ರೂಷೆ ಮಾಡಿದರೆ ಗುಣ ಹೊಂದಬಹುದೆಂದು ಇಂದಿನ ವಿಜ್ಞಾನವು ತಿಳಿಸುತ್ತವೆ.

ಚಿತ್ರ ತೆಗೆವುದು ಕ್ಷಯರೋಗವನ್ನು ಗುಣಪಡಿಸುವುದರಲ್ಲಿ ಪ್ರಧಾನವಾದ ಒಂದು ಅಂಗ. ಚಿತ್ರ ತೆಗೆವುದರಿಂದ ಮಾತ್ರ ಗುಣವಾಗುವುದಿಲ್ಲ. ಆದರೆ ರೋಗ ಎಲ್ಲಿದೆ ಯೆಂಬುದನ್ನು ತಿಳಿಯಲು ಇದು ತುಂಬಾ ಸಹಕಾರಿಯಾಗುತ್ತದೆ. ಪ್ರತಿ ದಿನ ಸಾವಿರಾರು ಮಂದಿ ತಮ್ಮೆದೆಯನ್ನು ಎಕ್ಸ್‌ರೇಯಲ್ಲಿ ಚಿತ್ರ ತೆಗಿಸುತ್ತಾರೆ. ಎಕ್ಸ್‌ರೇ ಚಿತ್ರದಲ್ಲಿ ಕ್ಷಯರೋಗದ ಮೂಲಕಾರಣಗಳು ಸರಿಯಾಗಿ ತಿಳಿಯಲು ಆಗುತ್ತದೆ.

ಇಂದು ಈ ರೀತಿ ಎಕ್ಸ್‌ರೇ ಚಿತ್ರ ತೆಗೆವುದರಿಂದ ಕೂಲಿಗಾರರಿಗೆ ತುಂಬಾ ಪ್ರಯೋಜನಗಳನ್ನು ವಿದೇಶಗಳಲ್ಲಿ ಕಲ್ಪಿಸಿಕೊಡುತ್ತಿದ್ದಾರೆ. ಸೇನೆಯಲ್ಲಿಯೂ ಈ ಕ್ರಮ ಪ್ರಯೋಗದಲ್ಲಿದೆ. ಲಂಡನಿನ ಹಲವು ಕಾರ್ಖಾನೆಗಳಲ್ಲಿದು ಪ್ರಯೋಗದಲ್ಲಿದೆ. ಕಾರ್ಖಾನೆಗಳಿರುವಲ್ಲಿ, ಜಿಲ್ಲೆಯ ಮುಖ್ಯ ನಗರಗಳಲ್ಲಿ ಇಂಥಾ ವೈದ್ಯಾಲಯಗಳು ತುಂಬಾ ಇವೆ.

ಯುದ್ಧ ಪ್ರಾರಂಭವಾದ ಮೇಲೆ ಕ್ಷಯರೋಗ ಹೆಚ್ಚಾದದ್ದು ಕಂಡುಬರುತ್ತದೆ. ಇದು ಯುದ್ಧದಿಂದಾಗಿ ಒದಗುವ ಅನೇಕ ಅಸೌಕರ್ಯಗಳಿಂದ ಎಂಬುದು ಅತ್ಯಂತ ಸ್ಪಷ್ಟವಿರುವುದು.

ಮೊದಲು ಎಕ್ಸ್‌ರೇ ಎದುರು ಎದೆ ತೋರಿಸಿ ಅದರ ಫೋಟೋ ತೆಗೆಯಲಾಗುವುದು. ಅದರಲ್ಲಿ ಏನಾದರೂ ಸಂಶಯ ಬಂದರೆ ಆ ಚಿತ್ರವನ್ನು ದೊಡ್ಡದು ಮಾಡಿ ನೋಡಲಾಗುತ್ತದೆ. ಆ ಸಂದರ್ಭದಲ್ಲಿ ಕ್ಷಯರೋಗದ ಮೂಲವೇನಾದರೂ ಕಂಡುಬಂದರೆ ಕೂಡಲೇ ಧರ್ಮಾರ್ಥ ಔಷಧ ಮಾಡುತ್ತಾರೆ. ಪ್ರಾರಂಭ ಕಾಲದಲ್ಲಿ ಹೀಗೆ ಮುಂಜಾಗ್ರತೆ ತಗೆದುಕೊಂಡಲ್ಲಿ ಕ್ಷಯರೋಗ ಖಂಡಿತವಾಗಿ ಗುಣವಾಗುತ್ತದೆ.

ಎಷ್ಟೋ ಮಂದಿ ಕ್ಷಯರೋಗ ಗುಣಹೊಂದಲು ಸಾಧ್ಯವಿಲ್ಲದ ರೋಗವೆಂದು ಬೆದರುತ್ತಾರೆ. ಆದರೆ ಇದು ಇಂದು ಸುಳ್ಳಾಗಿದೆ. ರೋಗವನ್ನು ಸರಿಯಾಗಿ ಮುಂಜಾಗ್ರತೆಯಿಂದ ಎದುರಿಸಿದಲ್ಲಿ ಕ್ಷಯರೋಗ ಖಂಡಿತ ಗುಣಹೊಂದುವುದು.

ಸ್ವದೇಶಾಭಿಮಾನಿ

ತಾರೀಖು 3—6—1944

[illegible] ದ ರಿಕಾರ.

ಮಹಾತ್ಮರು ಜಿನ್ನಾರಿಂಗೆ ಬರೆದ ಖಾಸಾರ್ ಪತ್ರದಿಂದು ಪ್ರಕಟವಾಗಿದೆ. ಅಲ್ಲಾಮ ಮಶ್ರುಕಿಯವರು ಜಿನ್ನಾ ಗಾಂಧೀ ಸಂಧಾನಕ್ಕೆ ಪ್ರಯತ್ನಿಸುತ್ತಿದ್ದಾರೆ. ಹಿಂದು ಮುಸ್ಲಿಂ ಐಕ್ಯ ಗಾಂಧೀಜಿ ಜನ್ಮ ಹಾಗಾಗಿ ಬೇಗನೇ ಗಾಂಧೀ ಜಿನ್ನಾ ಭೇಟಿಯಾದರೂ ಆಗಬಹುದು.

ಅಮೆರಿ ಉತ್ತರ

ಭಾರತದ ರಾಜಕೀಯ ಬಿಕ್ಕಟ್ಟು ಗಾಂಧೀಯವರ ಬಿಡುಗಡೆಯಿಂದಾಗಿ, ಬೇಗನೇ ಬಗೆಹರಿವುದೆಂದು ಭಾವಿಸಿದ್ದವರೆಲ್ಲಾ, ಅಮೆರಿಯವರು ಮೊನ್ನೆಯ ಪಾರ್ಲಿಮೆಂಟ್ ಸಭೆಯಲ್ಲಿ ಕೂಲಿಗಾರ ಪಕ್ಷದ ಸದಸ್ಯರಿಗೆ ಕೊಟ್ಟ ಉತ್ತರದಿಂದ ತುಂಬಾ ನಿರಾಶೆಯುಂಟಾಗಿದೆ.

ಕೂಲಿಗಾರ ಪಕ್ಷದ ಸದಸ್ಯರು ಗಾಂಧೀ ಬಿಡುಗಡೆಯು ರಾಜಕೀಯ ಬಿಕ್ಕಟ್ಟನ್ನು ಬಗ್ಗೆ ಹರಿಸಲು ಹಾದಿಯಾಗಿದೆಯೆಂದು ಸಹಜವಾದ ಸೂಚನೆ ಮಾಡಿದರು.

ನಿಜವಾಗಿಯೂ ಇದೊಂದು ಸಕಾರಣವಾದ ಹಾರೈಕೆಯೇ ಸರಿ ಉತ್ತರ ಕೊಡುತ್ತಾ ಅಮೆರಿಯವರೇ ಇದನ್ನು ಒಪ್ಪಿಕೊಂಡಿದ್ದಾರೆ.

"ಇದೊಂದು ಸಹಜ ಕುತೂಹಲವಾಗಿದೆ. ಗಾಂಧೀಜಿ ಬಿಡುಗಡೆಯಿಂದ ಇತರ ಮುಖಂಡರ ಬಿಡುಗಡೆಗೆ ಹಾದಿಯೂ ಆಗಿದೆ" ಹೀಗೆಂದು ಅಮೆರಿಯವರೇ ತಿಳಿಸಿದರು.

ಆದರೆ ಬ್ರಿಟಿಷ್ ಸರಕಾರವು ಈ ಹಾರೈಕೆಯನ್ನು ಸಫಲಗೊಳಿಸಲು ಬದ್ಧವಲ್ಲ ಎಂದು ಅಮೆರಿಯವರೇ ಹಾಡಿದರು.

ಗಾಂಧೀಜಿಯ ಬಿಡುಗಡೆಯು ಆರೋಗ್ಯ ನಿಮಿತ್ತವಾಗಿರುವುದರಿಂದ ಇತರರ ಬಿಡುಗಡೆ ವಿಚಾರದಲ್ಲಿ ಪರಿಸ್ಥಿತಿ ಮೊದಲಿನಂತೆಯೇ ಉಳಿದಿದೆ ಎಂದು ಅವರು ಹೇಳಿದ್ದಾರೆ.

ಅಮೆರಿಯವರ ಈ ಊಹನಾತೀತ ಕಾರಣಾತೀತ ಹಾಗೂ ಅಸಂತವಾದವಾದ ಸರಣಿಯು ನಿಜವಾಗಿ ವಿಷಾದಕರವಿದೆ.

ಮಹಾತ್ಮರನ್ನು ಬಿಟ್ಟದ್ದರಿಂದ ದೇಶದ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸಲು ಯೋಗ್ಯ ಮಾರ್ಗವಾಗಿದೆಯೆಂದು ಯಾರಾದರೊಬ್ಬ ಹಾದಿ ಹೋಕನಾದರೂ ಇಂದು ಅರ್ಥ ಮಾಡಿಕೊಳ್ಳಬಹುದು.

ಭಾರತ ಬ್ರಿಟನುಗಳ ಮಧುರ ಬಾಂಧವ್ಯಕ್ಕೆ ಇದೊಂದು ಸುವರ್ಣ ಸಂಧಿಯೇ ಆಗಿದೆ. ಈ ಅಪೂರ್ವ ಸಂಧಿಯ ಆಶೆಯನ್ನು ಅಮೆರಿಯವರು ಈ ಉತ್ತರಗಳಿಂದ ಸಂಪೂರ್ಣ ವಿಫಲಗೊಳಿಸಿದ್ದಾರೆ.

ಮಹಾತ್ಮರು ಮುಂದಾಗುವರೆ?

ಮಹಾತ್ಮ ಗಾಂಧಿಯವರು ಪುನಃ ಈ ಗೊಮ್ಮೆ ರಾಜಕೀಯ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುವರೇ ಎಂಬುದು ಎಲ್ಲರ ಆಶೆಯಾಗಿದೆ. ಏಕೆಂದರೆ ಇಂದಿನ ಬಿಕ್ಕಟ್ಟನ್ನು ಬಗೆಹರಿಸಲು ಅವರೇ ಮುಂದೆಬಂದು ಪರಿಹರಿಸಬೇಕಲ್ಲದೆ ಬೇರಾರಿಗೂ ಯಾವ ದಾರಿಯೂ ಕಾಣಲೊಲ್ಲದು.

ಗಾಂಧೀಜಿ ತಮ್ಮ ದುರ್ಬಲ ಆರೋಗ್ಯದಲ್ಲಿಯೂ ರಾಜಕೀಯದ ಕಡೆಗೆ ತೀವ್ರ ಗಮನ ಕೊಡುತ್ತಿದ್ದಾರೆಂದು ಪತ್ರಿಕೆಗಳ ಸುದ್ದಿಗಳು ಬರುತ್ತಿವೆ. ಭಾರ

'ನಾ ತಪ್ಪು ಮಾಡಿದ್ದರೆ ನನನ್ನು ತಿದ್ದಿ ಎಂದು ಗಾಂಧೀಜಿ ಜಯಕರ್ ಮೊದಲಾದವರೊಡನೆ ಕೇಳಿ ಕೊಂಡಿರುವರೆಂದೂ ವರದಿಯಾಗಿದೆ. ಮಹಾತ್ಮರು ಮಹಾನೇತಾರರುಗಳು, ಸರಿಯಾಗಿ ಆಲೋಚಿಸದೆ ಹೆಜ್ಜೆಯಿಡುವುದಿಲ್ಲ. ಒಂದು ವೇಳೆ ತಪ್ಪು ಹೆಜ್ಜೆಯಿಟ್ಟರೂ ಅದನ್ನು ಒಪ್ಪಿಕೊಳ್ಳಲು ಸಿದ್ಧರು ಅವರು.

ಇವೆಲ್ಲಾ ಚಟುವಟಿಕೆಗಳನ್ನು ಪರಿಶೀಲಿಸಿದರೆ ಬೇಗನೇ ಗಾಂಧೀಜಿ ಭಾರತದ ರಾಜಕೀಯ ಸಮಸ್ಯೆ ಪರಿಹಾರಕ್ಕೆ ಗಮನ ಕೊಡುವಂತೆ ತೋರುತ್ತದೆ. ಭಗವಂತನು ಈ ಪ್ರಯತ್ನದಲ್ಲಿ ಅವರಿಗೆ ಆಯುರಾರೋಗ್ಯಗಳನ್ನು ಯಶಸ್ಸನ್ನೂ ಕೊಡಲಿ.

ಅಪಪ್ರಚಾರ

ಕಾಂಗ್ರೆಸನ್ನು ವಿರೋಧಿಸುವಲ್ಲಿ ಲೀಗ್ ಮುಖಂಡರಾದ ಜಿನ್ನಾರು ಹೇಗೆ ಒಮ್ಮೊಮ್ಮೆ ಮಿತಿಮೀರಿ ಮಾತನಾಡುತ್ತಾರೋ ಹಿಂದು ಮಹಾ ಸಭಾಧ್ಯಕ್ಷ ಸಾವರ್ಕಾರರಾದರೂ ಅದಕ್ಕೆ ಹೊರತಿಲ್ಲವೆಂದು ಅವರು ಕಸ್ತೂರ್‌ಬಾ ನಿಧಿ ಕುರಿತು ಇತ್ತೀಚಿಗೆ ಕೊಟ್ಟ ಪ್ರಕಟಣೆಯೊಂದು ತಿಳಿಸುತ್ತದೆ.

ಕಾಂಗ್ರೆಸ್ ಮುಖಂಡರು ಕಸ್ತೂರ್ ಬಾ ನಿಧಿಯೆಂಬ ಹೆಸರಿನಿಂದ ನಿಧಿ ಶೇಖರಿಸಿ ಕಾಂಗ್ರೆಸ್ ಕಾರ್ಯಕ್ಕಾಗಿ ಉಪಯೋಗಿಸುತ್ತಿರುವರೆಂದೂ, ಗಾಂಧೀಜಿ ಕೈಗೆ ಈ ನಿಧಿ ಒಪ್ಪಿಸುವುದರಿಂದಲೇ ಈ ಉದ್ದೇಶ ಸ್ಪಷ್ಟವಾಗಿದೆಯೆಂದೂ, ಹಿಂದೆ ತಿಲಕ ಸ್ವರಾಜ್ಯ ನಿಧಿಯೂ ಹೀಗೆ ವ್ಯಯವಾಯಿತೆಂದೂ ಅವರು ಅನೇಕ ಆರೋಪಗಳನ್ನು ಹೊರಿಸಿ ಪ್ರಬಲವಾದ ಅಪಪ್ರಚಾರ ಮಾಡಿದ್ದಾರೆ.

ಸಾವರ್ಕಾರರು ಈ ಪ್ರಕಟಣೆಯನ್ನು ತನ್ನ ವೈಯುಕ್ತಿಕ ಪ್ರಕಟಣೆಯಾಗಿ ಹೇಳಿರುವರು, ಆದರೆ ಹಿಂದು ಮಹಾಸಭಾಧ್ಯಕ್ಷರಿಂದ ಹೊರಟ ಈ ಪ್ರಕಟಣೆಯು ವಿಶೇಷ ವೈಯುಕ್ತಿಕವಾಗಿ ಉಳಿಯದೆ ಇತರ ಅವರ ಅನುಯಾಯಿಗಳನ್ನೂ ವಂಚಿಸುವಂಥಾದ್ದಾಗುವುದೆಂಬುದು ಖಂಡಿತ.

'ಕಸ್ತೂರ್‌ಬಾ ನಿಧಿ' ಕಾಂಗ್ರೆಸ್ ಕೆಲಸಕ್ಕೆ ಉಪಯುಕ್ತವಾಗುವುದೆಂದು ಇತ್ತೀಚೆಗೆ ವಿದೇಶೀಯನಾದ ಭಾರತ ದ್ರೋಹಿ ಪತ್ರಿಕೋದ್ಯಮಿಯೂ ಬರೆದಿದ್ದಾನೆ. ಸಾವರ್ಕಾರರು ಸ್ವದೇಶೀಯರಾಗಿದ್ದು ಆ ಪತ್ರಿಕೋದ್ಯಮಿಯ ಸಾಲಿಗೆ ಸೇರಿದ್ದು ವಿಷಾದಕರ.

ಮಾನ್ಯತೆಯಿಲ್ಲದ ಕೆಲವರು ಮಾನ್ಯರಾದ ಇತರರನ್ನು ರೀತಿಯಾದರೂ ತಮ್ಮ ಹೆಸರು ಪ್ರಚಾರ ಪಡಿಸಬೇಕೆಂದು ಪ್ರಯತ್ನಿಸುವುದುಂಟು ಕಾಂಗ್ರೆಸಿನೆದುರು ಕಾಂಗ್ರೆಸು ಸೆರೆಮನೆ ಸೇರಿದ್ದರೂ ಹಿಂದು ಮಹಾ ಸಭೆಗಾಗಲಿ ಲೀಗಿಗಾಗಲಿ ತಲೆಯೆತ್ತಲಾಗುವುದಿಲ್ಲ. ಸಾವರ್ಕಾರರ ಈ ಅಪಪ್ರಚಾರವು ಮೇಲಿನ ದೃಷ್ಟಾಂತಕ್ಕೆ ಅನುಗುಣವಾಗಿದೆ.

ಭಾರತವು ಗಾಂಧೀಜಿಗೆ ಋಣಿ

—ರಾಜೇಂದ್ರ ಪ್ರಸಾದರು

ಭಾರತದ ರಾಜಕೀಯಕ್ಕೆ ಗಾಂಧೀಜಿಯ ದಾನ ಅಪಾರವಾದುದು. ದಕ್ಷಿಣ ಆಫ್ರಿಕದಿಂದ ಅವರು ಕೊನೆಗೆ [illegible]ರಲ್ಲಿ ಭಾರತಕ್ಕೆ ಮರಳುವಾಗಲೇ ಕಾಂಗ್ರೆಸು ಸ್ಥಾಪನೆಯಾಗಿ ಮೂವತ್ತು ವರ್ಷ ಆಗಿತ್ತು. ಕಾಂಗ್ರೆಸು ಸಂಘಟಿತವಾಗಿ, ಕೆಲಮಟ್ಟಿಗೆ ರಾಷ್ಟ್ರಪ್ರೇಮ ಹುಟ್ಟಿಸಿತ್ತು. ಆದರೆ ಈ ಜಾಗೃತಿ ಕೇವಲ ಆಂಗ್ಲ ವಿದ್ಯಾಭ್ಯಾಸ ಹೊಂದಿದವರಲ್ಲಿ ಮಾತ್ರ ಆಗಿತ್ತಲ್ಲದೆ ಜನತೆಯ ಮೇಲೆ ಆಗಿರಲಿಲ್ಲ. ಗಾಂಧೀಜಿ ಜನತೆಗೆ ಸಂದೇಶ ಸಾರಿದರು. ಕಾಂಗ್ರೆಸು ಜನತೆಯ ಸಂಸ್ಥೆಯಾಗಿ ಭೂರಿ ಆಂದೋಲನಕ್ಕೆ ಇಳಿಯಿತು.

ಗಾಂಧೀಜಿ ಕೇವಲ ರಾಜಕೀಯ ವಿಚಾರಗಳನ್ನು ಮಾತ್ರ ಕೈಕೊಂಡದ್ದಲ್ಲ; ಜನರ ಪ್ರತಿಯೊಂದು ಜೀವಿತ ವಿಚಾರವನ್ನೂ ಕೈಕೊಂಡಿದರು. ಚಂಪಾರಣ್ಯದಲ್ಲಿ ಅವರು ರೈತರ ಹಾಗೂ ಕೂಲಿಗಾರರ ಪರವಾಗಿ ಹೂಡಿದ ಸತ್ಯಾಗ್ರಹವು ನೂರಾರು ವರ್ಷಗಳಿಂದ ಆ ಜನತೆ ಅನುಭವಿಸಿದ ಸಂಕಷ್ಟ ಪರಿಹಾರಕ್ಕಾಗಿ ಅವರು ಹೂಡಿದ ಹೋರಾಟ, ಇವುಗಳಿಂದ ಕಾಂಗ್ರೆಸಿನ ಕೀರ್ತಿ ಜನತೆಯ ಹೃದಯದಲ್ಲಿ ನಡುವಂತಾಯಿತು. ಕೈರಾದಲ್ಲಿ ಅವರು ತೀರ್ವೆ ತಿದ್ದುವಡಿಗಾಗಿ ಹೂಡಿದ ಆಂದೋಲನವೂ ಅಂತಹುದೇ ಪ್ರಭಾವ ಬೀರಿತು. ಕಾಂಗ್ರೆಸು ಚಳವಳವು ಸರಕಾರೀ ಕೆಲಸದಲ್ಲಿ ಹೆಚ್ಚು ಪ್ರಾತಿನಿಧ್ಯ ಸಿಗುವಂತೆ ಗವರ್ನರರ ಆಡಳಿತ ಮಂಡಳದಲ್ಲಿ ಹೆಚ್ಚು ಸ್ಥಾನ ಸಿಗುವಂತೆ ಮಾಡಲು ಮಾತ್ರ ಇಂದು ಅವರು ಇಡೀ ದೇಶದುನ್ನತಿಗಾಗಿ ಪರಿಣಮಿಸಿತು. ಸಂತ್ರಸ್ತ ಜನರ ಸಂಕಷ್ಟ ನಿವಾರಣೆಗಾಗಿ ಆಯಿತು.

ಈ [illegible] ಮತ್ತು [illegible]ರ ಹಾಗೂ ಅದರ ನಂತರ ಕೆಲವು ಆಂದೋಲನದಿಂದಾಗಿ, ಕೆಲ ಜನರ ಗುಂಪಿಗೆ ಮಾತ್ರ ಹಿತವಾಗುವ ಕಾರ್ಯಕಲಾಪ ಅದಲ್ಲದೆ ಭೂರಿ ಜನತೆಯ ಹಿತಕರವಾಗಿ ಆಂದೋಲನ ನಡೆಯಿತು. ಈ ಸಂಕಷ್ಟ ನಿವಾರಣೆಯ ಹೋರಾಟ ಕೇವಲ ಬ್ರಿಟಿಷರೆದುರು ಅವರ ಹಿತ ಸಾಧನೆಗೆದುರು ಅದದ್ದಿರದೆ ಏಳಿಗೆಗೆ ಹಾನಿ ತರುವ ಭಾರತದ ಸ್ವಾರ್ಥ ಪಂಗಡದೆದುರೂ ಆಯಿತು. ಹೀಗಾಗಿ ಬಡ ಕೂಲಿಗಾರರ ಸಂಕಷ್ಟವನ್ನೂ ಗಾಂಧೀಜಿ ಮರೆಯದೆ ಕೆಲಸ ಮಾಡಿದರು. ಈ ಮಾರ್ಗದಲ್ಲಿ ಅವರು ಮಾಡಿದ ಪ್ರಥಮ ಪ್ರಯತ್ನವೆಂದರೆ ಅಹಮ್ಮದಾಬಾದ್ ಕಾರ್ಖಾನೆ ಕೆಲಸಗಾರರ ಪರವಾಗಿ ನಿಂತು ಮಾಡಿದ ಆಂದೋಲನ ದಳಿತವರ್ಗದ ಹರಿಜನರ ಹಿತದ ಸಲುವಾಗಿ ಅವರು ತುಂಬಾ ಕೆಲಸ ಮಾಡಿದರು, ಮಾಡುತ್ತಿದ್ದಾರೆ ಈ ಕಾರ್ಯದಲ್ಲಿ ಎಷ್ಟೋ ಸಲ ಅವರು ತಮ್ಮ ಜೀವವನ್ನೂ ಪಣವಾಗಿ ಅರ್ಪಿಸಿದ್ದಾರೆ.

ಕಾಂಗ್ರೆಸು ಸಂಸ್ಥೆಯೂ ಕೂಡಾ ಈ ಸಂದರ್ಭದಲ್ಲಿ ಸೇರಿದ ಉದ್ಯಗಲದಲ್ಲಿ ತನ್ನ ಪ್ರಭಾವವನ್ನು ಬೀರಿ, ಈಗ ರಾಷ್ಟ್ರದ ಗಂಡುಸರು ಹೆಂಗುಸರಾದಿಯಾಗಿ ಮಿಲಿಯಾಂತರ ಮಂದಿ ಸದಸ್ಯರು ಅದರ ಸದಸ್ಯರಾಗಿದ್ದಾರೆ ಕಾಂಗ್ರೆಸಿನ ಪ್ರಭಾವವು ಕೇವಲ ಅದರ ಸದಸ್ಯರ ಸಂಖ್ಯೆಯನ್ನೂ ಮೀರಿ ದೇಶವಿಡೀ ಪಸರಿಸಿದೆ. ಕಾಂಗ್ರೆಸಿನ ಈ ಪ್ರಭಾವದ ಪರೀಕ್ಷೆ ಹಲವು ಸಲವಾಗಿ, ಜನತೆ ಆ ಅಗ್ನಿ ಪರೀಕ್ಷೆ ಕಾಲದಲ್ಲಿ ವಹಿಸಿದ ಧೋರಣೆ ಕಾಂಗ್ರೆಸಿನ ಬಲ ಹೆಚ್ಚಿಸಿದೆ.

ಭಾರತಕ್ಕೆ ಮಹಾತ್ಮಾ [illegible]

ದ ಉಪಕಾರ, ಅವರಲ್ಲಿ ದೇಶ ಭಕ್ತಿ ಹುಟ್ಟಿಸಿದ್ದು ಮಾತ್ರವಲ್ಲ, ಹಿಂದೆಂದೂ ಕಂಡು ಕೇಳದಂತಹ ರೀತಿಯಲ್ಲಿ ಸಂಘಟನೆಯನ್ನು ಮಾಡಿದ್ದೂ ಆಗಿದೆ. ನನ್ನ ಅಭಿಪ್ರಾಯದಂತೆ ಭಾರತದ ರಾಜಕೀಯಕ್ಕೆ ಹಾಗೂ ಸಂತ್ರಸ್ತ ಮಾನವ ಕೋಟಿಗೆ ಅವರಿಂದಾದ ಉಪಕಾರವು ಅನ್ಯಾಯವನ್ನೆದುರಿಸುವಲ್ಲಿ ಅವರು ಹೊಸದಾಗಿ ತೋರಿಸಿಕೊಟ್ಟ ಹಾದಿಯಾಗಿದೆ. ಬಲವಂತವಾದ ಬ್ರಿಟಿಷ್ ಸಾಮ್ರಾಜ್ಯವನ್ನಾದರೂ ಶಸ್ತ್ರವಿಲ್ಲದೆ ಎದುರಿಸುವುದು ಹೇಗೆಂದು ನಮಗವರು ತಿಳಿಸಿದರು. ರಾಜಕೀಯವನ್ನು ಅವರು, ಅಸತ್ಯ ಕುತಂತ್ರಗಳಿಂದ ಮೇಲೆತ್ತಿ ಗೌರವಕರ ಸತ್ಯಮಯ ಆದರ್ಶಮಯ ಹಾದಿಗೆ ಮುನ್ನಡೆಸಿದರು. ರಾಜಕೀಯದಲ್ಲಿಯೂ ಅವರು ಸತ್ಯವನ್ನೇ ಪೆರಮೋಚ್ಚ ಹಾದಿಯಾಗಿ ಹಿಡಿದರು. ಸತ್ಯಮಾರ್ಗವನ್ನು ಹಿಡಿಯಲು ಅದರಲ್ಲಿ ಎಷ್ಟು ಕಷ್ಟವಾದರೂ ಅದನ್ನು ಬಿಡಲಿಲ್ಲ. ಶತ್ರುವಿರಲಿ ವಿರೋಧಿಯಿರಲಿ ಅವರು ತಮ್ಮ ಹೃದಯವನ್ನು ಸ್ಪಷ್ಟವಾಗಿ ಹೇಳಿ ತಿಳಿಸಬಲ್ಲರು. ನಮ್ಮ ದೌರ್ಬಲ್ಯವನ್ನು ಅಡಗಿಸಿಡುವುದರಿಂದ ನಾವು ಬಲಶಾಲಿಗಳಾಗೆವೆಂದೂ ನಮ್ಮ ದೌರ್ಬಲ್ಯವನ್ನು ತಿಳಕೊಂಡು ಅದನ್ನೆದುರಿಸುವುದರಿಂದ ಮಾತ್ರ ನಾವು ಬಲಶಾಲಿಗಳಾಗುವೆವೆಂದೂ ಅವರು ಹೇಳಿದರು.

ಎಷ್ಟೋ ಸಲ ಆಕ್ಷಣಿಕ ಸುಖಕ್ಕೆ ತೊಂದರೆಯಾಗುವುದಿದ್ದರೂ ಕೂಡಾ ಅವರು ರಾಜಕೀಯದಲ್ಲಿ ನೇರಾದ ಅಹಿಂಸೆಯ ಹಾದಿಹಿಡಿದ ಬುದ್ಧಿವಂತಿಕೆಯ ಧೋರಣ ಕೈಕೊಂಡರು ಅವರ ಸಂದೇಶದಲ್ಲಿರುವ ನೈತಿಕ ಹಾಗೂ ಅಧ್ಯಾತ್ಮಿಕ ತತ್ವಗಳೇ ಜನರನ್ನು ಆ ಕಡೆ ಆಕರ್ಷಿಸಿದವು ಸುತ್ತು ಕತ್ತಲು ಮುತ್ತಿರುವಾಗ, ಗಾಂಧೀಜಿ ತಮಗೆ ದಾಸ್ಯವಿಮೋಚನೆಯ ಬೆಳಕು ತೋರಿಸಿದರೆಂದು ಇದರಿಂದಲೇ ಜನತೆ ಮನಗಂಡಿತು. ನಾವು ನಿರಾಶಾವಾದಿಗಳಾಗಿರುವಾಗ, ಸತ್ಯ ಮತ್ತು ಅಹಿಂಸೆಗಳನ್ನು ಬೋಧಿಸಿ ನಮ್ಮನ್ನವರು ಬಲಶಾಲಿಗಳಾಗಿ ಮಾಡಿದರು.

ಮನುಷ್ಯ ಎಷ್ಟೆಂದರೂ ಹುಟ್ಟಿನಿಂದಾಗಲೇ ಶಸ್ತ್ರಸಹಿತನಾಗಿ ಹುಟ್ಟಲಿಲ್ಲ ಹುಲಿಯ ಉಗುರಾಗಲಿ, ಕೋಣನ ಕೊಂಬಾಗಲಿ ಹುಟ್ಟುವಾಗ ಆತನಿಗಿಲ್ಲ. ಆತ ಆತ್ಮಸಹಿತನಾಗಿ ಹುಟ್ಟಿದ್ದಾನೆ. ಹಾಗಾಗಿ ತನ್ನ ಉದ್ಧಾರಕ್ಕೆ ಆತ ಶಸ್ತ್ರ ಹಿಡಕೊಳ್ಳಬೇಕೇಕೆ? ನಾವು ಶಸ್ತ್ರದಂಡಗಳನ್ನು ಆಧರಿಸಿದ್ದರೆ ನಮ್ಮ ಮುಂದೆ ಮೃತ್ಯು ಕಾದಿದೆಯೆಂದು ಮಹಾತ್ಮಾಗಾಂಧೀ ತಿಳಿಸಿದರು.

ನಮ್ಮಲ್ಲಿರುವ ಆತ್ಮವನ್ನು ಎಚ್ಚರಿಸಿದ ಜೀವನ ಮತ್ತು ಸ್ವಾತಂತ್ರ್ಯ ನಮ್ಮದಾಗುವುದು. ಒಮ್ಮೆ ನಮ್ಮ ಆತ್ಮ ಜಾಗೃತವಾದರೆ, ಒಮ್ಮೆ ಹೊರಗಿನ ವಸ್ತುಗಳನ್ನು ನಂಬಿ ಬದುಕಿರುವುದು ಬಿಟ್ಟರೆ, ಒಮ್ಮೆ ಆತ್ಮಬಲ, ಆತ್ಮಶಕ್ತಿ ಹುಟ್ಟಿದರೆ ಭೂಮಿಯಲ್ಲಿನ ಯಾವುದೇ ಶಕ್ತಿಯಾದರೂ ನಮ್ಮನ್ನು ಗುಲಾಮಗಿರಿಯಲ್ಲಿಡಲಾರದು ಭಾರತ ಎಂದು ಮೆಲ್ಲಗಾದರೂ, ಕ್ರಮಪ್ರಕಾರ ಆ ಆತ್ಮಶಕ್ತಿಯನ್ನು ಗಳಿಸಿಕೊಳ್ಳುತ್ತಿದೆ, ಈ ತರದ ಜಾಗೃತಿಯನ್ನು ತಡೆಹಿಡಿಯುದು ಯಾರಿಗೂ ಸಾಧ್ಯವಿಲ್ಲದಾಗಿದೆ. ಮಹಾತ್ಮಾಗಾಂಧೀಜಿಯವರ ಮುಂದಾಳುತನದಲ್ಲಿ ಭಾರತವು ಅನುಸರಿಸಿದ ಈ ಸತ್ಯಅಹಿಂಸೆಗಳ ನೇರಾದ ದಾರಿಯಿಂದ ಭಾರತವೆಂದೂ ಚ್ಯುತವಾಗದಂತೆ ದೇವರು ಕರುಣಿಸಲಿ. ಇದೇ ಭಾರತಕ್ಕೆ ಗಾಂಧೀಜಿಯುತ್ತ ಮಹಾದಾನ ಮತ್ತು ಇದೇ ಭಾರತವು ಜಗತ್ತಿಗೆ ಕೊಡುವ ಮಹಾದಾನ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಲ್ ಕೌನ್ಸಿಲಿಗೆ ಜಿಲ್ಲಾ ಕಲೆಕ್ಟರರ ಭೇಟಿ.

ಆಹಾರ ಸಾಮುಗ್ರಿಗಳ ಕುರಿತು ಚರ್ಚೆ

ಸಿನ್ನಿ ಸಂಜೆ ಪರ್ಸನಲ್ ಅಸಿ॥ ಶ್ರೀ. ಜಿ. ದತ್ತಾತ್ರಯ ರಾವ್ ಮತ್ತು ಯುದ್ಧ ಶಾಖೆಯ ಹೆಡ್ ಕ್ಲಾರ್ಕ್ ಶ್ರೀ. ನರಸಿಂಹ ಇವರ ಸಹಿತ ಜಿಲ್ಲಾ ಕಲೆಕ್ಟರರಾದ ರಾ॥ ಸಾ॥ ಶ್ರೀ. ಪಿ ರಾಮದಾಸ್ ಬಿ. ಎ. ಅವರು ಮುನ್ಸಿಪಲ್ ಕೌನ್ಸಿಲಿನ ಸಭೆಗೆ ಭೇಟಿ ಕೊಟ್ಟರು. ಮು॥ ಚೆಯರ್‌ಮ್ಯಾನರು ಅವರಿಗೆ ಪುಷ್ಪಹಾರ ಹಾಕಿ, ಚಾ ಸತ್ಕಾರದಿಂದ ಮನ್ನಿಸಿದ ಬಳಿಕ, ಜಿಲ್ಲಾ ಕಲೆಕ್ಟರರನ್ನು ಸ್ವಾಗತಿಸಿ ಭಾಷಣ ಮಾಡಿದರು ಕಲೆಕ್ಟರರು ಈ ಆತಿಥ್ಯ ಮತ್ತು ಸ್ವಾಗತಕ್ಕಾಗಿ ವಂದಿಸಿ, ನಗರವಾಸಿಗಳ ಗೃಹಕಾರ್ಯಗಳಿಗಾಗಿ ಸಕ್ಕರೆ ಹಂಚುವ ಕುರಿತಾದ ತಮ್ಮ ಯೋಜನೆಯನ್ನು ಮುಂದಿರಿಸಿ ಕೌನ್ಸಿಲಿನ ಅಭಿಪ್ರಾಯ ಕೇಳಿದರು ಶ್ರೀಗಳಾದ ಯು. ಹಮ್ಮಬ್ಬ, ಎಂ. ಎಸ್. ಶ್ರೀಷ್ಠ ಮೊದಲಾದವರು ಸಲಹೆಗಳನ್ನು ಕೊಟ್ಟರು. ಹಿಂದೆ ಕೌನ್ಸಿಲರುಗಳ ಪರಿಶೋಧನೆಗೆ ಒಳಗಾದ ಆ "ಚೀಟಿ"ಗಳನ್ನೇ ಆಧಾರವಾಗಿರಿಸಿಕೊಂಡು ಸಕ್ಕರೆ ಹಂಚೋಣದ ಕ್ರಮವನ್ನು ನಿರ್ಧರಿಸಬಹುದೆಂದು ಸೂಚಿಸಲಾಯಿತು ಬಳಿಕ ಕಟ್ಟಿಗೆಯ ಬೆಲೆ, ಚಿಲ್ಲರೆಯ ಅಭಾವ, ಹೋಟೆಲ್ ತಿಂಡಿಗಳ ಕ್ರಯ ಇತ್ಯಾದಿಗಳ ವಿಚಾರ ಪ್ರಸ್ತಾವಿಸಲ್ಪಟ್ಟು, ಕಟ್ಟಿಗೆ ಬೆಲೆಯನ್ನು ಇಳಿಸಲಾಗುವುದೆಂದೂ, ಚಿಲ್ಲರೆಗಾಗಿ ಜಟ್ಟಿಗಳು ನಡೆಯಬಹುದೆಂದೂ, ಕೂಪನ್ ಯಾನೆ ಟೋಕನಿನ ಚಲಾವಣೆ ಶಾಸನ ವಿರುದ್ಧವೆಂದೂ ಕಲೆಕ್ಟರರು ನುಡಿದು ಒಂದೆರಡು ವಿಚಾರಗಳಿಗಾಗಿ ಕಮಿಟಿಗಳ ಸ್ಥಾಪನೆಯಾಗಬೇಕೆಂದು ಹಾರೈಸಿದರು ಮುನ್ಸಿಪಲ್ ಕಮಿಶನರ್ರಿಂದ ತಮಗೊದಗಿದ ಸಹಾಯವನ್ನು ಕುರಿತು ಪ್ರಶಂಸಿಸಿದರು. ವೈಸ್ ಚೆಯರ್‌ಮ್ಯಾನ್ ಮಿ ಸಿ. ಎಲ್ ಲೋಬೋರವರು ಮುನ್ಸಿಪಲ್ ಕೌನ್ಸಿಲನ್ನು ಈ ನಮ್ಮ ಕಲೆಕ್ಟರರು ತಮ್ಮ ವಿಶ್ವಾಸದೊಳಗೆ ತೆಗೆದು ಕೊಂಡುದಕ್ಕಾಗಿ ಕೌನ್ಸಿಲಿನ ಪರವಾಗಿ ವಂದಿಸಿ ಕೌನ್ಸಿಲ್ ಸರ್ವಪ್ರಕಾರದಲ್ಲಿಯೂ ಕಲೆಕ್ಟರರೊಡನೆ ಸಹಕರಿಸುವುದೆಂದು ತಿಳಿಸಿದರು.

ಕಲೆಕ್ಟರರು ಹೊರಟು ಹೋದ ಅನಂತರ ಸಕ್ಕರೆ ಆಕ್ಷೇಪಗಳ ಸಲಹೆಯ ಮಂಡಲಿಯ ಮೆಂಬರುಗಳಾಗಿ ಮಿ.ಗಳಾದ ಸಿ ಎಲ್ ಲೋಬೋ. ಅಹ್ಮದ್ ಹುಸೇನ್, ರಾಮಚಂದ್ರ ಗಟ್ಟಿ, ಎಂ ಎಸ್, ಶ್ರೀಷ್ಠ, ರಾ॥ ಸಾ॥ ಪೂಂಜರು ಇವರುಗಳನ್ನೂ ಹೋಟೆಲ್ ತಿಂಡಿಯ ಕ್ರಯ ನಿರ್ಣಯದ ಸಮಿತಿಯವರಾಗಿ ಮಿ॥ಗಳಾದ ಸಿ ಎಲ್ ಲೋಬೋ, ಎಂ. ರಾಮಪ್ಪ, ಶಂಕರ ಆಳ್ವ, ಮಿಸೆಸ್ ಅರಾಹಾ, ಚೆಯರ್‌ಮ್ಯಾನ್ ಇವರನ್ನೂ ಆರಿಸಲಾಯಿತು. ಮೊದಲಿನ ಸಮಿತಿಯಲ್ಲಿ ಜಿಲ್ಲಾ ಕಲೆಕ್ಟರರೂ ಇರುವರು.

ಜಿಲ್ಲೆ ಆಹಾರ ಸಮಿತಿ

ಜಿಲ್ಲೆಯ ಆಹಾರ ಸರಬರಾಯಿ ಸಮಿತಿಯ ಸಭೆ ಜಿಲ್ಲಾ ಕಲೆಕ್ಟರರಾದ ಶ್ರೀ ಪಿ. ರಾಮದಾಸ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೨೨ರಲ್ಲಿ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಿತು. ಕಲೆಕ್ಟರರು ಆಹಾರ ಸಾಮುಗ್ರಿಗಳನ್ನು ಶೇಖರಿಸುವ ಕಾರ್ಯವನ್ನು ಮಟ್ಟಿಗೆ ಮುಂಬರಿದ ಎಂದು ಕೌನ್ಸಿಲಿಗೆ ವಿವರಿಸಿದರು. ಇದೇ ೧೫-೫-೪೪ರ ವರೆಗೆ ಜಮಾಯಿಸಲಾದ ಅಕ್ಕಿ ಮುಡಿ ೪ ಲಕ್ಷ ೧೮ ಸಾವಿರ, ಭತ್ತದ ಮುಡಿ ೫೬ ಸಾವಿರವೆಂದು ಕಳೆದ ೨೨-೩-೪೪ರ ವರೆಗೆ ಜಮೆಯಾಗಿದ್ದ ಅಕ್ಕಿ ಮುಡಿ ೨ ಲಕ್ಷ ೧೩ ಸಾವಿರ, ಭತ್ತದ ಮುಡಿ ೩೦ ಸಾವಿರವೆಂದೂ, ಹೀಗೆ ಕಳೆದ ಎರಡು ತಿಂಗಳಲ್ಲಿ ಒಟ್ಟಿಗೆ ಸುಮಾರು ೨ ಲಕ್ಷ ಮುಡಿಯಷ್ಟು ಹೆಚ್ಚಿಗೆ ಕೂಡಿಸಲಾಗಿದೆ ಎಂದು ಕಳೆದ ೧೫-೫-೪೪ರಲ್ಲಿ ೬೫ ಸಾವಿರ ಮುಡಿ ಅಕ್ಕಿಯೂ ೩ ಸಾವಿರ ಮುಡಿ ಭತ್ತವೂ ಮಂಗಳೂರಲ್ಲಿ ದಾಸ್ತಾನಿದ್ದು ಇದು ಮಂಗಳೂರಿಗೆ ಎರಡು ತಿಂಗಳ ಗ್ರಾಸಕ್ಕೆ ಸಾಕೆಂದೂ ತಿಳಿಸಿದರು.

ಬೆಲೆಗಳು

ಕಳೆದ ತಾ. ೩೦-೪-೪೪ರ ಮೊದಲು ರಿಕ್ವಿಜಿಶನ್ ಮಾಡಿ ಅದನ್ನು ತಂದೊಪ್ಪಿಸದ (ಡಿಲಿವರಿ ಮಾಡಿದ) ಸ್ಟಾಕಗಳ ವಿಚಾರದಲ್ಲಿ ಇದೇ ಕಳೆದ ತಾ ೧-೫-೪೪ರಿಂದ ಮುಡಿಯೊಂದಕ್ಕೆ ಆಣೆಲನ್ನು ಕಡಿಮೆ ಮಾಡಲಾಯಿತು ಕಲೆಕರರ ಸೂಚನೆಯಂತೆ, ಇದೇ ಬರುವ ತಾ. ೧೬-೬-೪೪ರಿಂದ, ಅಷ್ಟರೊಳಗೆ ತಮ್ಮಲ್ಲಿರುವ ಮಿಗತೆಯ ಸ್ಟಾಕನ್ನು ತಂದೊಪ್ಪಿಸತ ಅಥವಾ ಅದೇ ಜೂನ್ ತಾ. ೧೬ರೊಳಗೆ ತಾವಾಗಿ ತಂದೊಪ್ಪಿಸಲು ತಯಾರಿದೆ ಎಂದು ತಮ್ಮಲ್ಲಿರುವ ಮಿಗತೆಯ ಸ್ಟಾಕಿನ ಲೆಕ್ಕಾಚಾರವನ್ನೂ ಪ್ರಕಟ ಮಾಡದ ಆ ಸ್ಟಾಕುಗಳ ವಿಚಾರದಲ್ಲಿ ಮುಡಿಯೊಂದಕ್ಕೆ ಇನ್ನೂ ೮ ಆಣೆಯನ್ನು ಹೆಚ್ಚಿಗೆಯಾಗಿ ತಗ್ಗಿಸಬೇಕೆಂದೂ ಕೌನ್ಸಿಲ್ ನಿರ್ಧರಿಸಿತು. ಅಂದರೆ ಇದೇ ತಾ. ೧೫-೬-೪೪ರಲ್ಲಿ ಅಥವಾ ಅದಕ್ಕೆ ಮೊದಲು ಆ ಸ್ಟಾಕುಗಳನ್ನು ತಾವಾಗಿಯೇ ತಂದು ಒಪ್ಪಿಸಿ ಕೊಡದಿರುವ ಪಕ್ಷದಲ್ಲಿ ಆಗ ಮುಡಿಯೊಂದಕ್ಕೆ ಒಟ್ಟಿಗೆ ೧ ರೂಪಾಯಿಯಷ್ಟು ಕಡಿಮೆ ಬೆಲೆ ದೊರಕುವಂತಾಗುತ್ತದೆ. ಈ ರೀತಿ ಬೆಲೆ ತಗ್ಗಿಸಿರುವುದನ್ನು ಸಾರ್ವಜನಿಕರಿಗೆ ತಿಳಿಸಬೇಕೆಂದೂ ಇದೇ ೧೬-೬-೪೪ರೊಳಗಾಗಿ ಆದಷ್ಟು ಬೇಗನೇ ರೈತರು ತಮ್ಮ ಸ್ಟಾಕನ್ನು ಒಪ್ಪಿಸಿ ಕೊಡುವಂತೆ ಅವರನ್ನು ಪ್ರೇರೇಪಿಸುವಲ್ಲಿ ತಮ್ಮ ವರ್ಚಸ್ಸನ್ನು ಉಪಯೋಗಿಸಬೇಕೆಂದೂ ಕಲೆಕ್ಟರರು ಈ ಸಮಿತಿಯ ಮೆಂಬರರಲ್ಲಿ ಅರಿಕೆ ಮಾಡಿಕೊಂಡಿದ್ದಾರೆ.

ಮಂಜೇಶ್ವರ ಮತ್ತು ಕುಂಬಳೇ ಫಿರ್ಕಾಗಳ ವರ್ಗದಾರರು ಇನ್ನೂ ಸ್ಟಾಕುಗಳನ್ನು ಹಿಡಿದಿಟ್ಟಿರುವರೆಂದೂ, ಆ ಕ್ಷೇತ್ರಗಳಲ್ಲಿರುವ ಮಿಗತೆಯ ಸ್ಟಾಕುಗಳನ್ನು ರಿಕ್ವಿಜಿಶನ್ ಮಾಡುವಲ್ಲಿ ರೆವಿನ್ಯೂ ಆಫೀಸರುಗಳು ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದೆ ಸುಮ್ಮನಿರುವರೆಂದೂ ಕಲೆಕ್ಟರರ ಅವಗಾಹನೆಗೆ ತರಲಾಯಿತು ತಹಶಿಲ್ದಾರರಿಗೆ ಈ ವಿಷಯದಲ್ಲಿ ಪ್ರತ್ಯೇಕವಾದ ಹುಕ್ಕುಂ ಕೊಡಲಾಗಿದೆ ಎಂದೂ ಅವರು ಆ ಫಿರ್ಕಾಗಳಲ್ಲಿ ಕ್ಯಾಂಪ್ ಮಾಡಿ ಚುರುಕಾದ ರೀತಿಯ ರಿಕ್ವಿಜಿಶನಿಂಗ್ ಕಾರ್ಯಕ್ರಮವನ್ನೇ ಕೈಕೊಳ್ಳುವರೆಂದೂ ಪುತ್ತೂರಿನ ರೆವಿನ್ಯೂ ಡಿವಿಜನಲ್ ಆಫೀಸರರೂ ಅಲ್ಲಿಗೆ ಹೋಗಿ ಅವರೇ ಸ್ವತಃ ಆ ರಿಕ್ವಿಜಿಶನಿಂಗ್ ಕ್ರಮವನ್ನು ಮುನ್ನಡೆಸುವಂತೆ ಅವರನ್ನು ಕೇಳಿಕೊಳ್ಳಲಾಗುವುದೆಂದೂ ಕಲೆಕ್ಟರರು ತಿಳಿಸಿರುವರು.

ಕೌನ್ಸಿಲಿನಲ್ಲಿ ಚರ್ಚೆಯಾದ ಬಳಿಕ ಗೆಣಸನ್ನು ಜಿಲ್ಲೆಯ ಹೊರಗೆ ಸಾಗಲು ಬಿಡಬಾರದು; ತೆಂಗಿನ ಎಣ್ಣೆಯ ಮೇಲಿನ ನಿರ್ಬಂಧವನ್ನು ಇನ್ನೂ ಕೆಲ ಕಾಲ ಮುಂದುವರಿಯಬೇಕು; ಮೈಸೂರು ಕಡೆಗೆ ಈ ಜಿಲ್ಲೆಯಿಂದ ಹೇರಳವಾಗಿ ತೆಂಗಿನಕಾಯಿ ಹೋಗುತ್ತಿರುವುದರಿಂದ ಅದನ್ನೂ ಸಾಗದಂತೆ ನಿರ್ಬಂಧಿಸಬೇಕು, ಬೆಲ್ಲವೂ ಈ ಜಿಲ್ಲೆಯಿಂದ ಹೊರಗೆ ಸಾಗ ಕೂಡದು ಎಂದು ನಿರ್ಣಯವಾಗಿ ಆ ನಾಲ್ಕೂ ಜಿಲ್ಲೆಯ ಹೊರಗೆ ಹೋಗಬಾರದೆಂದಾಯಿತು.

ರೇಶನಿಂಗಿನ ಪ್ರಮಾಣ ಅರ್ಧ ಸೇರಿನಿಂದ ೭/೧೬ನೇ ಸೇರಿಗಿಳಿಸಿದ ಈ ವಿಚಾರವನ್ನು ಕೌನ್ಸಿಲಿನಲ್ಲಿ ಪ್ರಕಟಿಸಿದ್ದಾಯಿತು. ಮತ್ತೆ ಈ ಪದ್ಧತಿಯನ್ನೇ ಶಾಸ್ತ್ರೋಕ್ತವಲ್ಲದ ರೀತಿಯ ರೇಶನಿಂಗ್ ಜ್ಯಾರಿಯಲ್ಲಿರುವ ಕಡೆಗಳಲ್ಲಿ, ಆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಜಾರಿಗೆ ತರುವುದೆಂದಾಯಿತು.

ಆಹಾರಕ್ಕೆ ಗೋದಿಯನ್ನು ಉಪಯೋಗಿಸುವ ಮಾತು ಬಂದು ಚರ್ಚೆ ನಡೆಯಿತು ರೇಶನ್ ಮಾಡದ ಕ್ಷೇತ್ರಗಳಲ್ಲಿ ಹೊರಪಡಿಸಲಾದ ರೇಶನಿನಲ್ಲಿ ಗೋಧಿ ಆ ರೇಶನಿನ ನಾಲ್ಕನೆಯ ಒಂದು ಭಾಗವಾಗಿ ಉಪಯೋಗವಾಗಬಹುದೆಂದೂ, ಗೋಧಿಯನ್ನು ಆಹಾರಸಾಧನವಾಗಿ ಬಳಸಿಕೊಳ್ಳುವಂತೆ ಅದು ಜನಪ್ರಿಯವಾಗುವ ಹಾಗೆ ಈ ಸಮಿತಿಯ ಸದಸ್ಯರು ಗೋಧಿಯ ಕುರಿತು ಪ್ರಚಾರಕಾರ್ಯ ನಡೆಸಬೇಕೆಂದೂ ಅಕ್ಕಿಗೆ ಬದಲಾಗಿ ಗೋಧಿಯನ್ನು ರೈತರು ಪಡೆದು ಹಾಗೆ ಬದಲಾಯಿಸಿಕೊಳ್ಳುವಂತೆ ತಕ್ಕ ಏರ್ಪಾಡುಗಳನ್ನೂ ಮಾಡಬೇಕೆಂದೂ ನಿರ್ಣೈಸಲಾಯಿತು

ರೇಶನ್ ಮಾಡಲಾದ ಕ್ಷೇತ್ರಗಳಲ್ಲಿ ಒಂದು ವರ್ಷಕ್ಕೆ ಬೇಕಾದಷ್ಟು ಅಕ್ಕಿ ಸಂಗ್ರಹವಿರುವ ವರ್ಗಧಾರರೂ ಅಕ್ಕಿಯನ್ನು ಕೊಟ್ಟು ಅದರ ಬದಲಿಗೆ ಗೋಧಿ ಪಡೆಯುವ ಏರ್ಪಾಡು ನಡೆಯಬೇಕು ಮತ್ತು ಹೀಗೆ ಬದಲಾಯಿಸುವ ಕೆಲಸ ಆ ರೇಶನ್ ಕ್ಷೇತ್ರದಲ್ಲಿ ಗೊತ್ತು ಮಾಡುವ ಒಂದೆರಡು ಡಿಪೊ ಅಥವಾ ಸ್ಟೋರುಗಳಲ್ಲಿ ಮಾತ್ರ ನಡೆಯಬೇಕಲ್ಲದೆ, ಹಂಚೋಣದ ಎಲ್ಲ ಡಿಪೊಗಳಲ್ಲಿಯೂ ನಡೆಯಬಾರದೆಂದೂ ಸಿದ್ಧಾರವಾಯಿತು.

ರೇಶನಿಂಗ್ ಆಫೀಸರರು

'ಒಂದು ಪ್ರಕಟಣೆ ಹೊರಡಿಸಿ, ಅದರಲ್ಲಿ ಹೀಗೆ ತಿಳಿಸುತ್ತಾರೆ' ತಾ. ೨೧-೫-೪೪ರಂದು ಜಾರಿಗೆ ಬಂದ ರೇಶನಿಂಗ್ ಕಾನೂನಿನಂತೆ, ಒಂದು ರೇಶನ್ ಯುನಿಟ್ ಎಂದರೆ ಒಂದು ಅಳತೆ ಪಾವು ಎಂತ ಇರುತ್ತಿತ್ತು, ಸದ್ರಿ ದರವನ್ನು ಒಂದು ಪಾವು ಇದ್ದುದರ ಬದಲು ೭/೮ನೇ ಪಾವ ಎಂತ ಪರಿಗಣಿಸಬೇಕಾಗಿ ಮದ್ರಾಸ್ ಸರಕಾರದ ಹುಕುಂ ಬಂದಿದೆ ಈ ರೀತಿ ಕಡಿಮೆ ಮಾಡಿದ ಕ್ರಮವು ಮಂಗಳೂರು ರೇಶನಿಂಗ್ ಸರಹದ್ದಿನಲ್ಲಿ ತಾ ೨೫-೫-೪೪ರಿಂದ ಜಾರಿಗೆ ಬರುವುದು. ಆದ್ದರಿಂದ ರೇಶನಿಂಗ್ ಪರ್ಮಿಟು ಕಾರ್ಡು ಪಡೆದವರೆಲ್ಲರೂ ತಮಗೆ ಸಿಕ್ಕಿರುವ ಯಾ ತಾವು ದಾಸ್ತಾನು ಮಾಡಿರುವ ಅಕ್ಕಿಯನ್ನು ಉಪಯೋಗಿಸುವ ಬಗ್ಗೆ ಮೇಲೆ ಹೇಳಿದ ಕಡಿಮೆ ಮಾಡಿದ ಕ್ರಮವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು."

ತಾ. ೨೬ ಮೊದಲ್ಗೊಂಡು ಕೊಡುವ ರೇಶನಿನಲ್ಲಿ ದೊಡ್ಡವರ ಒಂದು ದಿನದ ಅರ್ಧ ಸೇರಿನಲ್ಲಿ ಕಾಲುಪಾವನ್ನೂ ಚಿಕ್ಕವರಿಗೆ ಅರ್ಧ ದಿನದ ಒಂದು ಪಾವಿನಲ್ಲಿ ಅರ್ಧ ಕಾಲು ಪಾವನ್ನೂ ಕಡಿಮೆ ಮಾಡಲಾಗಿದೆ. ರೇಶನಿಂಗ್ ಬರುವ ಮೊದಲು ಸ್ವಲ್ಪ ಸಮಯ ದೊಡ್ಡವರಿಗೂ ಚಿಕ್ಕವರಿಗೂ ಒಂದುವರೆ ಪಾವು ಸಿಗುತಿತ್ತು. ಅನಂತರ ದೊಡ್ಡವರಿಗೆ ಅರ್ಧ ಸೇರು ಚಿಕ್ಕವರಿಗೆ ಒಂದು ಪಾವಾಯಿತು. ಈಗ ಅದರಲ್ಲಿಯೂ ಸೇರಿನಲ್ಲಿ ಅರ್ಧಪಾವು ಕಡಿಮೆಯಾಗಿದೆ.

ಈ ನಗರದಲ್ಲಿ ಪ್ರತಿಯೊಬ್ಬರ ಅಕ್ಕಿಯಲ್ಲಿ ಕಾಲಂಶ ಗೋಧಿಯನ್ನೂ, ಉಳಿದ ಕಾಲಂಶ ಬೆಳ್ತಿಗೆಯೂ, ಅರ್ಧಾಂಶದವು ಕುಚ್ಚಿಲಕ್ಕಿಯೂ ಕೊಡಲ್ಪಡುತ್ತದೆ.

ನೇಕಾರ ಸಂಘ

ಇದರ ಮಹಾ ಸಭೆಯೊಂದು ತಾ. ೨೩ರಂದು ಶ್ರೀ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿ, ಗಾಂಧೀಜಿ ಬಿಡುಗಡೆಗಾಗಿ ಸಂತೋಷ ತೋರ್ಪಡಿಸಿ, ಇತರ ಮುಖಂಡರ ಬಿಡುಗಡೆಯಾಗಬೇಕೆಂದು ನಿರ್ಣಯಿಸಿ, ಶ್ರೀ ಎಸ್. ಎನ್. ಹೊಳ್ಳರ ಬಿಡುಗಡೆಮಾಡಬೇಕೆಂದು ವಿನಂತಿಸುವ ನಿರ್ಣಯ ಮಾಡಲ್ಪಟ್ಟಿತು

ರೇಶನಿಂಗ್ ಅಕ್ಕಿಯ ಪ್ರಮಾಣವಲ್ಲಿ ಸೇರಿನಲ್ಲಿ ಅರ್ಧಪಾವಿನಂತೆ ಕಡಿಮೆ ಮಾಡಲು ಮದ್ರಾಸ್ ಸರಕಾರ ಮಾಡಿದ ಆಜ್ಞೆಯನ್ನು ಖಂಡಿಸಿ, ಈ ಆಜ್ಞೆ ರದ್ದಾಗಬೇಕೆಂದು ಕೇಳಿಕೊಳ್ಳಲಾಯಿತು ಕಟ್ಟಿಗೆ ಕ್ರಯ ನಿಯಂತ್ರಣವಾಗಿ ಅದರ ರೇಶನಿಂಗೂ ಆಗಬೇಕೆಂದು ನಿರ್ಣಯ ಮಾಡಲಾಗಿದೆ.

ನೇಕಾರರ ಸಂಘದ ವಾರ್ಷಿಕೋತ್ಸವ

ಕಂಕನಾಡಿ ನೇಕಾರ ಸಂಘದ ವಾರ್ಷಿಕ ಮಹಾಸಭೆ ಆ ಸಂಘದ ಅಧ್ಯಕ್ಷರಾದ ಶ್ರೀ. ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಗಾಂಧೀಜಿಯವರನ್ನು ಬಿಟ್ಟ ಸಂಬಂಧ ಸಂತೋಷ ಸೂಚಿಸುವ, ಇತರ ಮುಂದಾಳುಗಳನ್ನು ಬಿಡುಗಡೆ ಮಾಡಿರೆನ್ನುವ, ಕಟ್ಟಿಗೆ ಕ್ರಯ ತಗ್ಗಿಸಿರೆನ್ನುವ, ಈಗ ಅಕ್ಕಿ ರೇಶನ್‌ನಲ್ಲಿ ತಗ್ಗಿಸಲಾದ ಪ್ರಮಾಣದ ಕುರಿತು ಆಕ್ಷೇಪಿಸುವ ನಿರ್ಧಾರಗಳಾದುವು.

ಕಾಫಿ ಪ್ಲಾಂಟರರ ಸಭೆ

ಇಲ್ಲಿನ ರೋಮನ್ ಕೆಥಲಿಕ್ ಕಾಫಿ ಪ್ಲಾಂಟರರ ವಾರ್ಷಿಕವಾದ "ಯಾತ್ರಾ ಸಮಾರಂಭ"ವು ಉರ್ವದ ಇಗರ್ಜಿಯಲ್ಲಿ ಅದರ ವಠಾರದಲ್ಲಿ ಆದ ಮೇಲೆ, ಶ್ರೀ. ಜೆರೋಂ ಸಾಲ್ಡಾನರ ಅಧ್ಯಕ್ಷತೆಯಲ್ಲಿ ಈ ಪ್ಲಾಂಟರರ ಸಭೆ ಸೇರಿ, ಮಿ॥ಗಳಾದ ಕೆಲಿಸ್ಟಿನ್ ಸಾಲ್ಡಾನಾ, ಜೆ. ಎಲ್. ಡೊಮಿನಿಕ್ ಅಲ್ವಿನ್ ಸಾಲ್ಡಾನಾ ಅವರುಗಳು ಮಾತಾಡಿದರು. ಮಿ. ಟಿ. ಪಿ. ಬಿ ಸಿ ಕುಲಾಸೋರವರು ವಂದಿಸಿದರು.

ಮುನ್ಸಿಫ್ ಹುದ್ದೆಗೆ ಚುನಾವಣೆ

ಈ ಸಾರಿಯ ಆಯ್ಕೆಯಲ್ಲಿ ಮಿ॥ಗಳಾದ ಯು ಹಮ್ಮಬ್ಬ. ಇ. ಗೊನ್ಸಾಲ್ವಿಸ್ ಮತ್ತು ಥೋಮಸ್. ಬಿ. ಕೊಯಿಲೋ ಇವರನ್ನು ಮುನ್ಸಿಫ್ ಸ್ಥಾನಗಳಿಗೆ ಆರಿಸಲಾಗಿದೆ ಎಂದು ತಿಳಿದುಬರುತ್ತಿದೆ.

ಹಣ್ಣು ತರಕಾರಿಗಳ ಪ್ರದರ್ಶನ

ಹಣ್ಣು ತರಕಾರಿ ಪ್ರದರ್ಶನ

ಕೇಂದ್ರ ಸರಕಾರದ ಅಧಿಕಾಹಾರ ಬೆಳೆಸುವ ಪ್ರಚಾರದ ಅಂಗವಾಗಿ ಮಂಗಳೂರಲ್ಲಿ ತಾ. ೩೦ ಮತ್ತು ೩೧ನೇ ದಿನ ಗವರ್ನಮೆಂಟ್ ಕಾಲೇಜಿನಲ್ಲಿ ಹಣ್ಣು ಮತ್ತು ತರಕಾರೀ ಪ್ರದರ್ಶನವನ್ನೇರ್ಪಡಿಸಲಾಯಿತು.

ಅಮೆರಿ-ದತ್ತ ಹೋರಾಟ
ಪಾರ್ಲಿಮೆಂಟ್ ಚುನಾವಣೆಯಲ್ಲಿ

[illegible]

ಪ್ರಶ್ನೆ [illegible] ಸಾಮ್ರಾಜ್ಯ ಮಂದಿರದಲ್ಲಿ ಸದಸ್ಯರು [illegible] ಹಲವು ಪ್ರಶ್ನೆಗಳ ಸಮಸ್ಯೆಗ [illegible] ಮಗ ಜಾನ್ ಅಮೆರಿ ಬರ್ಲಿನಿನಿಂದ ಸಾರುವ ಫೇಸಿಸ್ಟ್ ಪ್ರಚಾರವೊಂದು, ಕಡೆ, ಸಾಲದ್ದಕ್ಕೆ ಮುಂಬರುವ ಚುನಾವಣೆಯ ಸೋಲಿನ ಬೆದರಿಕೆಯೂ ಸೇರಿ, ಪಾಪ, ಅಮೆರಿಯವರು ಇಂದು ನಿದ್ರಾಹೀನರಾಗಿ ರಾತ್ರಿಗಳನ್ನು ಕಳೆಯುತ್ತಿರಬಹುದು?

ಅಮೆರಿಯೆದುರು ಬರುವ ಚುನಾವಣೆಗೆ ನಿಂತ ಉಮೇದ್ವಾರರು ರಜನಿಪಾಮೆದತ್ತರು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಭಾರತೀಯ ಮುಖಂಡರು ದತ್ತರು ಅಮೆರಿಯೆದುರು ನಿಂತದ್ದು, ಕಮ್ಯುನಿಸ್ಟ್ ಪಕ್ಷದ ಪರವಾಗಿ ಎನ್ನುವುದಕ್ಕಿಂತಲೂ ಭಾರತೀಯರ ಪರವಾಗಿ ಎಂಬುದು ಹೆಚ್ಚಿನ ಸಮಂಜಸವಾಗುತ್ತದೆ. ಏಕೆಂದರೆ ಅಮೆರಿಯವರ ಇಡೀ ಆಡಳಿತವು ಭಾರತಕ್ಕೆ ಬರಗಾಲ, ನಿರಂಕುಶ ಪ್ರಭುತ್ವ, ಸಂಕಷ್ಟಗಳದ್ದೇ ಕಾಲವಾಗಿದ್ದು ಅವರೆದುರು ಭಾರತೀಯರಾಗಿ ನಿಲ್ಲುವುದೇ ಹೆಚ್ಚಿನ ಅರ್ಥವುಳ್ಳದ್ದಾಗಿದೆ.

ಇದೊಂದು ಸತ್ವಪರೀಕ್ಷೆಯ ಚುನಾವಣೆ. ಅಮೆರಿಯರಿಂದು ಸತ್ವಪರೀಕ್ಷೆಗೆ ಒಳಗಾಗಿದ್ದಾರೆ. ಭಾರತದಲ್ಲಿ ಬ್ರಿಟನು ವಹಿಸಿದ ಸಾಮ್ರಾಜ್ಯ ಶಾಹೀ ಧೋರಣೆಯೇ ಇದರಿಂದ ಅಗ್ನಿಪರೀಕ್ಷೆಗೊಳಗಾಗಿದೆ. ಇದಕ್ಕಿಂತಲೂ ಹೆಚ್ಚು ಬ್ರಿಟಿಷ್ ಮತದಾರರೂ ಪರೀಕ್ಷೆಗೊಳಗಾಗಿರುವರು. ಬರ್ಮಿಂಗಾಮಿನ ಸ್ಪಾರ್ ಬ್ರೂಕ್ ಮತದಾನ ಕ್ಷೇತ್ರದಲ್ಲಿ ಅಮೆರಿಗೆದುರು ದತ್ತರು ನಿಂತು, ಭಾರತದಲ್ಲಿ ಬ್ರಿಟಿಷರು ವಹಿಸಿದ ಸಾಮ್ರಾಜ್ಯಶಾಹೀ ಧೋರಣೆ ಸರಿಯೋ ತಪ್ಪೋ ಎಂದು ಬ್ರಿಟಿಷ್ ನಾಗರಿಕರಲ್ಲಿ ಈ ಮೂಲಕ ಪ್ರಶ್ನೆ ಕೇಳಲಾಗಿದೆ.

ದತ್ತ-ಮತ್ತು ಅಮೆರಿಯವರಿಗಿಂತ ಯೋಗ್ಯ ಎದುರಾಳಿಗಳು ಬೇರೆ ಸಿಗಲಾರರು. ದತ್ತರು ಭಾರತೀಯರಿಗೆ ಹುಟ್ಟಿ ಇಂಗ್ಲೆಂಡಿನಲ್ಲಿ ಬೆಳೆದವರು; ಅಮೆರಿ ಬ್ರಿಟಿಷರಿಗೆ ಹುಟ್ಟಿ ಭಾರತದಲ್ಲಿ-ಗೋರಕಪುರದಲ್ಲಿ-ಬೆಳೆದವರು. ದತ್ತರು ಭಾರತೀಯರಾಗಿ ಬ್ರಿಟನಿನಲ್ಲಿದ್ದು ಸ್ವಾತಂತ್ರ್ಯವಾದಿಗಳಾಗಿ ಕ್ರಾಂತಿಕಾರರಾಗಿದ್ದಾರೆ. ಅಮೆರಿ ಭಾರತದಲ್ಲಿ ಹುಟ್ಟಿ ಬ್ರಿಟಿಷ್ ಸಾಮ್ರಾಜ್ಯಶಾಹೀ ರಕ್ಷಕರಾಗಿದ್ದಾರೆ.

ಹೀಗೆ ಇಬ್ಬರು ವ್ಯಕ್ತಿಗಳು ಮಾತ್ರವಲ್ಲ, ಎರಡು ದೇಶಗಳೇ ಇಂದು ಪ್ರತಿಸ್ಪರ್ಧಿಗಳಾಗಿವೆ; ಎರಡು ವಿಧದ ಧೋರಣೆಗಳು ಎದುರಾಳಿಗಳಾಗಿವೆ. ಅಮೆರಿ ಸ್ಪಾರ್ ಬ್ರೂಕ್ ಮತದಾನ ಕ್ಷೇತ್ರ ಬಿಟ್ಟು ಬೇರೆ ಕಡೆ ಓಡಿಹೋಗದಿದ್ದರೆ ಈ ಸತ್ವಪರೀಕ್ಷೆ ಬೇಗನೇ ನಡೆಯಲಿಕ್ಕಿದೆ.

ಅಮೆರಿ ಭಾರತ ಮಂತ್ರಿಯಾಗಿ ಆದಿಯಿಂದ ಇದುವರೆಗೆ, ಒಂದು ಧೋರಣೆ ವಹಿಸಿದ್ದಾರೆ. ೧೮೭೩ರಲ್ಲಿ ಅಮೆರಿಯವರು ಗೋರಕಪುರದಲ್ಲಿ ಹುಟ್ಟಿದರು, ಭಾರತ ಅರಣ್ಯ ಖಾತೆಯ ಮಗನಾಗಿ ಹುಟ್ಟಿ ಅವರು ಇಂಗ್ಲೆಂಡಿಗೆ ತೆರಳಿ ಹ್ಯಾರೋ ಮತ್ತು ಓಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಪಡೆದರು. ಅಮೆರಿಯವರನ್ನು ಬೆಳೆಸಲು, ಅವರಿಗೆ ಯೋಗ್ಯ ವಿದ್ಯಾಭ್ಯಾಸ ಕೊಡಲು ಭಾರತವೇ [illegible] ನೆರವಿತ್ತು; ಧನಕೊಟ್ಟಿತು. ತಂದೆಗೆ ಹೆಚ್ಚಿನ ಸಂಬಳ ಮಾತ್ರವಲ್ಲದೆ ಮುಂದೆ ಪೆನ್ಶನ್ ಸಹಾ ಕೊಟ್ಟಿತು.

'ಟೈಮ್ಸ್' ಪತ್ರಿಕೆಯಲ್ಲಿ ಕೆಲಕಾಲ ಪತ್ರಿಕೋದ್ಯಮ ಕೈಕೊಂಡು, ಅವರು ರಾಜಕೀಯಕ್ಕೆ ಕಾಲಿಟ್ಟರು. ಚೇಂಬರ್ಲೆನರ ಶಿಷ್ಯರಾಗಿ ಸಾಮ್ರಾಜ್ಯವಾದದ ಗುರೂಪದೇಶ ಪಡೆದರು. ೧೯೧೧ರಲ್ಲಿ ಹೌಸ್ ಓಫ್ ಕಾಮನ್ಸನಲ್ಲಿ ಪ್ರವೇಶಿಸಿದರು. ೧೯೧೯ರಲ್ಲಿ ಅಂಡರ್ ಸೆಕ್ರಟರಿ ಓಫ್ ಸ್ಟೇಟ್ ಫೋರ್ ಕೊಲೊನೀಸ್ ಆಗಿ ನೇಮಕ ಹೊಂದಿದರು. ಸಾಮ್ರಾಜ್ಯದ ಹಲವು ಖಾತೆಗಳಲ್ಲಿ ನುರಿತು ಮುಂದೆ ಭಾರತ ಮಂತ್ರಿಯಾದರು.

ಮಧ್ಯೆ ಲೇಬರ್ ಪಾರ್ಟಿ ಅಧಿಕಾರಕ್ಕೆ ಬಂದಾಗ ಅಮೆರಿಯವರಿಗೆ ಸ್ಥಾನವೇ ಇಲ್ಲವಾಯಿತು. ಹೇಗಿದ್ದರೂ ಹಣವಂತರು ಆಳುವ ಬ್ರಿಟನದಲ್ಲಿ ಅವರಿಗೆ ಒಂದಲ್ಲದಿದ್ದರೊಂದು ಸ್ಥಾನ ಸಿಕ್ಕಿಯೇ ಸಿಗುತ್ತದೆ. ಹಲವು ಸಂಸ್ಥೆಗಳ ಡೈರೆಕ್ಟರರಾಗಿ, ಕೆಲಕಾಲ ಬ್ರಿಟಿಷ್ ಭಂಡವಾಳಶಾಹಿಗಳ ಆಪ್ತರಾಗಿದ್ದರು.

೧೯೩೧ರಲ್ಲಿ ಜಪಾನ್ ಮಂಚೂರಿಯವನ್ನಾಕ್ರಮಿಸಿದಾಗ, ಅಮೆರಿಯವರು ಜಪಾನಿನ ಸಾಮ್ರಾಜ್ಯ ಶಾಹೀ ಧೋರಣೆಯನ್ನು ಎತ್ತಿ ಹಿಡಿದು ವಾದಿಸಿದರು, ಇಟಲಿ ಅಬಿಸಿನೀಯವನ್ನು ನುಂಗಿದಾಗ ಇಟಲಿಗೂ ಬೆಂಬಲಗರಾಗಿ ಮಾತನಾಡಿದರು. ಇಂಥಾ ಮನುಷ್ಯರ ಆಡಳಿತದ ಕೈ ಕೆಳಗೆ ಭಾರತದ ಹಣೆಬರೆಹ ಎಂದು ಉಳಿದಿದೆ; ಭಾರತವು ಫೇಸಿಸ್ಟ್ ವಿರೋಧ ಹೋರಾಡಬೇಕೆಂದೂ ಹೇಳಲಾಗುತ್ತಿದೆ!

ದತ್ತರು ಭಾರತೀಯ ತಂದೆಯ, ಸ್ವೀಡಿಷ್ ತಾಯಿಯ ಮಗನಾಗಿ ಹುಟ್ಟಿ ಇಂಗ್ಲೆಂಡಿನಲ್ಲಿ ಬೆಳೆದವರು ಆಕ್ಸ್‌ಫರ್ಡಿನಲ್ಲಿ ಅವರ ವಿದ್ಯಾಭ್ಯಾಸವಾಯಿತು. ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಅವರೊಬ್ಬರು. ಭಾರತಕ್ಕೆ ಬರಲು ಬಿಡಲಿಲ್ಲ. ಆದರೆ ಭಾರತದ ಸ್ಥಿತಿಗತಿಗಳ ವಿಚಾರ ಅವರು ತಿಳಕೊಂಡೇ ಇದ್ದಾರೆ 'ಆಧುನಿಕ ಭಾರತ' 'ಇಂದಿನ ಭಾರತ' ಭಾರತದ ಸಮಸ್ಯೆಗಳಿಗೆ ಹಾದಿ ತೋರುವಂಥ ಮೊದಲಾದ ಪುಸ್ತಕಗಳನ್ನು ಭಾರತದ ಕುರಿತು ಬರೆದಿದ್ದಾರೆ.

ಕಮ್ಯುನಿಸ್ಟರಾಗಿ ಪಾಮೆದತ್ತರು ಎಷ್ಟು ಗಾಂಧೀಜಿ ಮತ್ತು ಕಾಂಗ್ರೆಸಿನ ಟೀಕಾಕಾರರಾಗಿದ್ದರು, ಏಕೆಂದರೆ ಕಾಂಗ್ರೆಸು ಆಗ ಮಧ್ಯ ತರಗತಿಯ ಜನರ ಸಂಸ್ಥೆಯೆಂದು ಪರಿಗಣಿಸಲ್ಪಡುತ್ತಿತ್ತು. ಆ ಮೇಲೆ ಪರಿಸ್ಥಿತಿ ಬದಲಾವಣೆಗಳಾದವು, ಕಮ್ಯುನಿಸ್ಟರೂ ಕಾಂಗ್ರೆಸಿನ ಕುರಿತು ತಮ್ಮ ಅಭಿಪ್ರಾಯ ಬದಲಾಯಿಸಿದರು, ಪಾಮೆದತ್ತರು ಇತ್ತೀಚೆಗೆ ಡೈಲಿವರ್ಕರ್ ಮತ್ತು ಲೇಬರ್ ಮಾಸಿಕ, ಪತ್ರಿಕೆಗಳಲ್ಲಿ ಬರೆದ ಲೇಖನಗಳೇ ಇದಕ್ಕೆ ಆಧಾರವಾಗಿವೆ.

ಗಾಂಧೀಜಿ ಮತ್ತು ಇತರ ಮುಖಂಡರನ್ನು ೧೯೪೨ನೇ ಆಗಸ್ಟಿನಲ್ಲಿ ಸಂಧಿಸಿದಾಗ ದತ್ತರು ಈ ರೀತಿ ಬರೆದರು.

'ಆ ಅಕ್ಷಪಕ್ಷಗಳು ಜಗದಾಕ್ರಮಣಕಾರ್ಯ ಕೈಕೊಂಡಿರುವಾಗ, ಸಂಯುಕ್ತ ರಾಷ್ಟ್ರಗಳು ಗೊಂದಲಗೊಂಡಿರುವಾಗ, ಈ ಕಾಲದಲ್ಲಿ ನೂರು ಮಿಲಿಯ ಮಂದಿಯುಳ್ಳ ಜಗತ್ತಿನ ⅕ ಅಂಶದಷ್ಟು ಜನಸಂಖ್ಯೆಯುಳ್ಳ ರಾಷ್ಟ್ರವೊಂದನ್ನು ಶತ್ರುವಾಗಿ ಗಣಿಸುವುದು ನ್ಯಾಯವಲ್ಲ.

'ಕಾಂಗ್ರೆಸು ಸಂಯುಕ್ತ ರಾಷ್ಟ್ರಗಳಲ್ಲಿ ಭಾರತವೂ ಸ್ವತಂತ್ರ ರಾಷ್ಟ್ರವಾಗಬೇಕೆಂದು ಕೇಳುತ್ತಾರೆ. [illegible] ಬಂಧನ, ಥಳಿ, [illegible] ದಮನನೀತಿಯೇ ಅವರಿಗೆ ಉತ್ತರವಾಗಿದೆ.

ಭಾರತೀಯರು ಫೇಸಿಸ್ಟ್ ವಿರುದ್ಧ ಅವರು ರಾಷ್ಟ್ರೀಯ ಸ್ವಾತಂತ್ರ್ಯವಾದಿಗಳು ಕಾಲು ಶತಮಾನದಿಂದ ಅದಕ್ಕಾಗಿ ಹೋರಾಡಿದ್ದಾರೆ. ಧೀರ ಬಲಿದಾನ ಮಾಡಿದ್ದಾರೆ. ಜಗತ್ತಿನ ಇತಿಹಾಸದಲ್ಲಿಯೇ ಈ ಹೋರಾಟ ಅಪೂರ್ವವಾದುದು. ಇದು ಏಕೆಂದರೆ ಅವರು ಸ್ವಾತಂತ್ರ್ಯವಾದಿಗಳಾಗಿರುವುದರಿಂದ ಭಾರತವು ನಿಜವಾಗಿಯೂ ಫೇಸಿಸ್ಟ್ ವಿರೋಧಿ; ಬ್ರಿಟನಿನ ರಾಷ್ಟ್ರೀಯ ಮಂತ್ರಿ ಮಂಡಲಕ್ಕಿಂತ ಭಾರತ ಹೆಚ್ಚಿನ ಫೇಸಿಸ್ಟ್ ವಿರೋಧಿ."

ಇಂದು ಈ ಕಾರಣದಿಂದ ದತ್ತರು ಅಮೆರಿ ಎದುರು ಹೋರಾಟಕ್ಕೆ ನಿಂತಿದ್ದಾರೆ. ಕಮ್ಯುನಿಸ್ಟ್ ಪಕ್ಷದ ಧೋರಣೆಯಲ್ಲಿ ನಾವು ಭಿನ್ನಾಭಿಪ್ರಾಯ ತೋರಿಸಿದರೂ ದತ್ತರಿಗೆ ಈ ಚುನಾವಣೆಯಲ್ಲಿ ಜಯವಾಗಲಿ ಎಂದು ಪ್ರತಿಯೊಬ್ಬ ಭಾರತೀಯರೂ ಹಾರೈಸುತ್ತಾರೆ.

—ಬೊಂಬೇ ಕ್ರಾನಿಕಲ್.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಷ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

(೨ನೇ ಪುಟದಿಂದ)

ಜುಹುವಿನಲ್ಲಿ ಗಾಂಧಿ

ಗಿದೆ ಭಾಗ್ಯ ಅವರಿಗೆ ದೊರೆತಿದೆ. ಗಾಂಧೀಜಿ ಬಿಡುಗಡೆಯಾದ ಕೂಡಲೇ ಅಮೆರಿಕದ 'ಲೈಫ್' ಪತ್ರಿಕೆ ಅವರಿಗೆ ಗಾಂಧೀಜಿ ಭಾವಚಿತ್ರ ತೆಗೆದು ಕಳುಹಿಸಲು ಕೇಳಿಕೊಂಡಿದೆ. ಅವರು ಪರ್ಣಕುಟಿಯಲ್ಲಿ ಮತ್ತು ಗಾಂಧೀಗ್ರಾಮದಲ್ಲಿ ಮಹಾತ್ಮರ ಅನೇಕ ಭಾವಚಿತ್ರ ತೆಗೆದಿದ್ದಾರೆ. ಲೈಫ್ ಪತ್ರಿಕೆಯಲ್ಲಿ ಬೇಗನೇ ಮಹಾತ್ಮರ ಈ ಚಿತ್ರಗಳು ಬರಬಹುದು.

ಗಾಂಧೀ ಸಿನೆಮಾ ನೋಡಿದರು

ಮೊನ್ನೆ ಬೊಂಬಾಯಿಯಲ್ಲಿ ಗಾಂಧೀಜಿಗಾಗಿ, ಅವರ ವಸತಿಯಲ್ಲಿಯೇ 'ಮಿಶನ್ ಟು ಮೋಸ್ಕೋ' ಎಂಬ ಚಿತ್ರವನ್ನು ಪ್ರದರ್ಶಿಸಲಾಯಿತು. ಗಾಂಧೀಜಿ ಚಲಚ್ಚಿತ್ರ ನೋಡಿದ್ದು ಬಹುಶಃ ಇದೇ ಮೊದಲನೆಯ ಸಲವೆಂದು ತೋರುತ್ತದೆ.

ಈ ಚಿತ್ರವನ್ನು ಪ್ರದರ್ಶಿಸುವ ಮೊದಲು ಡಿಸ್ನಿಯವರ ಮಿಕಿ ಮೌಸ್ ಕಾರ್ಟೂನ್ ಚಿತ್ರ ಪ್ರದರ್ಶಿಸಲಾಯಿತು. ಗಾಂಧೀಜಿ ಇದನ್ನು ತುಂಬಾ ನಕ್ಕರು.

ಗಾಂಧೀಜಿಗೆ 'ಮಿಕ್ಕಿಮೌಸ್' ಹೆಸರಿಟ್ಟ ಸರೋಜಿನಿ ದೇವಿಯವರು ಈ ಸಂದರ್ಭದಲ್ಲಿ ಗಾಂಧೀಜಿ ಬಳಿಯಿದ್ದರು. ಪ್ರದರ್ಶನದ ಎರಡು ಗಂಟೆಗಳ ಕಾಲವೂ ಅವರೊಡನೆ ಆಗಾಗ ಮಾತನಾಡುತ್ತಿದ್ದರು. ಮಿಷನ್ ಟು ಮೋಸ್ಕೋ ಚಿತ್ರದ ಉದ್ದ ೧೨ ರೀಲುಗಳು.

ಮಹಾತ್ಮರು ಚಲಚ್ಚಿತ್ರ ನೋಡಿಲ್ಲ; ಚಲಚ್ಚಿತ್ರದ ಕುರಿತು ಅವರಿಗೆ ಸದಭಿಪ್ರಾಯವೂ ಇಲ್ಲ-ಒಂದು ಪ್ರಚಾರವಿದೆ. ಆದರೆ ಇಂದು ಗಾಂಧೀಜಿ ಒಂದು ಚಿತ್ರ ನೋಡಿದ ದಾಖಲೆಯಾಗಿದೆ. ಚಲಚ್ಚಿತ್ರದ ಕುರಿತು ಸದ್ಯ ಅವರ ಅಭಿಪ್ರಾಯ ಹೇಗಿದೆಯೋ ಮುಂದೆ ವಿಚಾರಿಸಬೇಕು.

'ಫೈಲ್ವಾನ್ ಗಾಂಧಿ'

ಪೂನಾದ ಪರ್ಣಕುಟಿಯಲ್ಲಿ ವಿಶ್ರಾಂತಿ ಹೊಂದುತ್ತಿದ್ದ ಗಾಂಧೀಜಿ ಒಂದು ದಿನ ಪ್ರಾರ್ಥನೆ ಮುಗಿಸಿ ಕೋಲಿನ ಆಲಂಬವಿಲ್ಲದೆ ನೆಟ್ಟಗೆ ಮೆಟ್ಟಲುಗಳನ್ನೇರಿ ನಡೆದು ಹೋಗುತ್ತಿದ್ದರು. ಅದನ್ನು ನೋಡಿ ಅವರ ಬಳಿಯಿದ್ದ ಸರೋಜಿನಿಯವರು ಹೇಳಿದರು. 'ನೋಡಿದಿರಾ, ಫೈಲ್ವಾನ್ ಹೋಗುತ್ತಿದ್ದಾರೆ'-ಸರೋಜಿನಿಯವರ ಈ ತಮಾಷೆ ಮಾತನ್ನು ಕೇಳಿ ಗಾಂಧೀಜಿ ಚೆನ್ನಾಗಿ ನಗಾಡಿದರು. 'ಮಿಕ್ಕಿ ಮೌಸ್' ಗಾಂಧೀಯೆಂದವರೂ ಸರೋಜಿನಿಯವರೆ! 'ಫೈಲ್ವಾನ್' ಎಂದೂ ಈಗ ಕರೆಯುತ್ತಾರೆ. ಸರೋಜಿನಿಯವರಿಗೆ ಗಾಂಧೀಜಿಯೊಡನೆ ಎಂಥಾ ಸಲಿಗೆ!

'ಪರ್ಣಕುಟಿ'ಯಲ್ಲಿದ್ದಾಗ ಗಾಂಧೀಜಿಯವರನ್ನು ನೋಡಲು ನೂರಾರು ಜನ ಬರುತ್ತಿದ್ದರು. ಡಾಕ್ಟರರು ಬೇಡವೆಂದರೂ ಗಾಂಧೀಜಿ ಅವರೊಡನೆ ಮಾತನಾಡಿ ತುಂಬಾ ಶ್ರಮಪಡುತ್ತಿದ್ದರು. ಇದನ್ನು ನೋಡಿ ಸರೋಜಿನಿ ದೇವಿಯವರಿಗೆ ಸಿಟ್ಟು ಬಂತು. 'ನಿಮಗೆ ನಾ ಹೆದರುತ್ತೇನೆಂದು ತಿಳಿದಿರುವಿರಾ? ಡಾಕ್ಟರರ ಸಲಹೆ ಮೀರಿ ನೀವು ನನ್ನ ಮಗನಾಗಿದ್ದರೆ ಈಗಲೇ ದೊಣ್ಣೆಯಿಂದ ಬರೆಯೆಳೆಯುತ್ತಿದ್ದೆ' ಎಂದರು ಸರೋಜಿನಿಯವರು. ಕೂಡಿದವರಿಗೆಲ್ಲಾ ಆಶ್ಚರ್ಯವಾಯಿತು. ಗಾಂಧೀಜಿ ಮಾತ್ರ ಈ ಮಾತುಗಳನ್ನು ಕೇಳಿ ಚೆನ್ನಾಗಿ ನಕ್ಕುಬಿಟ್ಟರು.

೫೦,೦೦೦ ರೂ. ಕೊಟ್ಟರೂ ಇಲ್ಲ!

ಗಾಂಧೀಜಿಗೆ ಸಂಪೂರ್ಣ ವಿಶ್ರಾಂತಿ ಆವಶ್ಯವೆಂದು ಕಂಡುಬಂದಿರಲು ಅವರ ಸಾಮ್ರಾಜ್ಯದ ಪ್ರತಿನಿಧಿ, ಗಾಂಧೀಜಿ ಭಾರತದ ಪ್ರತಿನಿಧಿ, ಹಾಗಾಗಿ ಇವರಿಬ್ಬರು ಮೊದಲು ಭೇಟಿಯಾಗಲೂ ಯಾರಿಗೂ ಸಮ್ಮತಿ ಸಿಗುವುದಿಲ್ಲ. ಶ್ರೀಮತಿ ಸರೋಜಿನಿಯವರೀಗ ಗಾಂಧೀಜಿಗೆ ಕಾವಲು ನಿಂತಿದ್ದಾರೆ. ನಿರ್ದಾಕ್ಷಿಣ್ಯವಾಗಿ ಯಾರನ್ನೂ ಗಾಂಧೀಜಿ ಬಳಿ ಹೋಗಲು ಬಿಡುವುದೇ ಇಲ್ಲ.

ಮಹಾತ್ಮರನ್ನು ನೋಡಿ ಹೋಗಬೇಕೆಂದು ಒಬ್ಬ ಲಕ್ಷಾಧೀಶ ಬಂದ. ಅವರನ್ನು ಸರೋಜಿನಿ ಒಳಗೆ ಬಿಡಲೇ ಇಲ್ಲ. '೧೫ ನಿಮಿಷ ನೋಡಿ ಬರುತ್ತೇನೆ, ಒಮ್ಮೆ ಒಳಗೆ ಬಿಡಿ' ಎಂದು ಬೇಡಿದ. ಅದಕ್ಕೂ ನಕಾರ ಉತ್ತರ.

'ಕಸ್ತೂರ್‌ಬಾ ನಿಧಿಗೆ ರೂ. ೫೦ ಸಾವಿರ ಕೊಡುತ್ತೇನೆ' ಎಂದು ದುಡ್ಡಿನಾಸೆ ತೋರಿಸಿದ. 'ನೀವು ಆ ನಿಧಿಗೆ ಹಣ ಕೊಡಿ, ಅಥವಾ ಕೊಡದಿರಿ, ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಗಾಂಧೀಯನ್ನು ಪ್ರಾರ್ಥಿಸುವ ಸಮಯದಲ್ಲಿ ಮಾತ್ರ ನೋಡಬಹುದು' ಎಂದು ಸರೋಜಿನಿ ನಿರ್ದಾಕ್ಷಿಣ್ಯವಾಗಿ ಹೇಳಿ ಶ್ರೀಮಂತನನ್ನು ಹೊರಗಟ್ಟಿದರು.

"ವಿಲಾಯತಿಗೆ ಹೊರಟಿರುವೆನು. ಒಮ್ಮೆ ಗಾಂಧೀಜಿಯನ್ನು ನೋಡಿ ಅವರ ಆಶೀರ್ವಾದ ಪಡೆಯುತ್ತೇನೆ" ಎಂದು ಇನ್ನೊಬ್ಬರು ಬಂದು ಸರೋಜಿನಿಯವರೊಡನೆ ಗೋಳಿಟ್ಟರು. ಅವರಿಗೂ ಅದೇ ಉತ್ತರ ನಕಾರ!

ಇವರ ಮಾತಿರಲಿ, ಲೇಡಿ ಥಾಕರ್ಸೆಯವರಿಗ ಸರೋಜಿನಿಯವರದು ಇದೇ ಕಟ್ಟಳೆ. ಲೇಡಿ ಥಕರ್ಸೆ ಅಂದರೆ ಗಾಂಧೀಜಿಗೆ ಬಹಳ ಬೇಕಾದವರು, ಅವರ ಆಪ್ತವರ್ಗದಲ್ಲೊಬ್ಬರು. ಪೂನಾದಲ್ಲಿರುವ 'ಪರ್ಣಕುಟಿ,' ಆಕೆ ಗಾಂಧೀಜಿಗೆ, ಗಾಂಧೀ ಪರಿವಾರಕ್ಕೆ ಮೀಸಲಾಗಿತ್ತಿರುವ ಧಾನ. ಆಕೆಯು ಮರುಮಾತನಾಡದೆ ಸರೋಜಿನಿಯವರು ವಾದಿಸುತ್ತಾರೆ.

ಬಹುಶಃ ಸರೋಜಿನಿಯವರು ಇಷ್ಟು ನಿಷ್ಠುರವಾಗಿ ವರ್ತಿಸದಿದ್ದರೆ ಕಳೆದ ಶನಿವಾರ ಗಾಂಧೀಜಿ ಮೌನವ್ರತ ಬಿಡುವುದು ಆಗುತ್ತಿರಲಿಲ್ಲವೇನೊ! ಮೌನ ಮಾಡಿರದಿದ್ದರೆ ಅವರಿಗೆ ಇಂದಿನಷ್ಟು ಸುಖ ದೊರಕುತ್ತಿರಲಿಲ್ಲ. ಈ ದೃಷ್ಟಿಯಿಂದ ನೋಡಿ ಸರೋಜಿನಿದೇವಿಯರ ಈ ಕಾವಲಿನಿಂದ ಗಾಂಧೀಜಿಗೆ, ಇಡೀ ರಾಷ್ಟ್ರಕ್ಕೇ ಮಹೋಪಕಾರ ಮಾಡಿದ್ದಾರೆ.

'ನಾ ತಪ್ಪು ಮಾಡಿರುವೆನೆಂದು ನನಗೆ ತಿಳಿಸಿ'

ಮಹಾತ್ಮಾ ಗಾಂಧಿಯವರು ಒಂದು ಪತ್ರ ಬರೆದು ಡಾ| ಜಯಕರ್ ಸರ್ ಸಪ್ರು, ಶ್ರೀನಿವಾಸ ಶಾಸ್ತ್ರಿ, ಪಂಡಿತ ಮಾಲವೀಯ ಇವರೆಲ್ಲರೊಡನೆಯೂ ಈ ರೀತಿ ಕೇಳಿಕೊಂಡಿದ್ದಾರೆ.

"ನಾನು ಮನಸ್ಸೊಂದು ಈ ಪತ್ರ ಬರೆಯುತ್ತಿದ್ದೇನೆ. ನಿಜವಾದ ಸಂಗತಿಯನ್ನು ತಿಳಿದು ಕೊಳ್ಳುವ ಸಲುವಾಗಿ ನಾನೀ ಪತ್ರ ಬರೆಯುತ್ತಿದ್ದೇನೆ. ಅವಶ್ಯವಿದ್ದರೆ ನಿಮ್ಮನ್ನು ಕಂಡು ಪ್ರಕೃತದ ಪರಿಸ್ಥಿತಿಯನ್ನು ಕುರಿತು ಮಾತನಾಡುವಂತೆ ನನ್ನ ಕಾರ್ಯದರ್ಶಿ ಶ್ರೀ. ಪ್ಯಾರೇಲಾಲರನ್ನು ಕಳುಹಿಸುತ್ತೇನೆ."

ಆಗಸ್ಟ್ ೮ನೇ ದಿನದ ನಿರ್ಣಯವು ಕೇಡನ್ನುಂಟು ಮಾಡುವಂಥಾದಿಲ್ಲವೆಂದೂ, ಅದು ನಿಷ್ಕಲ್ಮಶವಾದುದೆಂದೂ, ತಾನು ತಪ್ಪುಮಾಡಿದುದನ್ನು ಅಧಿಕಾರಿಗಳು ತನಗೆ ಮನಗಾಣಿಸಿದರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಭಿಪ್ರಾಯವಿದೆಯೆಂದೂ ಗಾಂಧಿಜೀ ಅಭಿಮತವಿರುವುದಾಗಿ ತಿಳಿದುಬರುತ್ತದೆ.

"ಪ್ರಕೃತ ಪರಿಸ್ಥಿತಿಯಲ್ಲಿ ನನಗೆ ಯಾವ ಹಾದಿಯೂ ಕಂಡುಬಂದಿಲ್ಲ; ಮಿತ್ರರಾದ ನಿಮ್ಮಿಂದ ನನಗೆ ಇಂದಿನ ಹಾದಿಯನ್ನರಿಯಲು ಸುಗಮವಾದೀತೆಂದು ನಾನು ತಿಳಿಯುತ್ತೇನೆ"ಎಂದು ಅವರು ಬರೆದಿರುವರು

'ಬಿಡುಗಡೆಯಲ್ಲಿ ರಾಜಕೀಯವಿಲ್ಲ'

"ಗಾಂಧೀಜೀ ಬಿಡುಗಡೆ ವಿಷಯ ಮಾಡಿದ ಪ್ರಕಟಣೆಯಲ್ಲಿ ಅದರಲ್ಲಿರುವ ಶಬ್ದಗಳಿರುವಷ್ಟೇ ಅರ್ಥಮಾಡಿದ್ದಾರೆ. ಗಾಂಧೀಜಿ ಅವರ ಬಿಡುಗಡೆಗೆ ಕೇವಲ ತಾತ್ಕಾಲಿಕವಲ್ಲದೆ ಏನೂ ರಾಜಕೀಯ ಅರ್ಥ ಮಾಡಿಲ್ಲ" ಎಂದು ಶ್ರೀ. ಪ್ಯಾರೇಲಾಲರು ಪ್ರಕಟಿಸಿದ್ದಾರೆ.

"ಡಾ| ಜಯಕರರನ್ನು ಕಂಡು ಮಾತನಾಡಬೇಕೆಂದು ಗಾಂಧೀಜಿ ಪ್ರಕಟಿಸಿದ್ದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಅವರು ಮಹಾತ್ಮರ ಹಳೆಯ ಸಂಗಾತಿಗಳು. ಇವರಲ್ಲದೆ ಮಾಲವೀಯ, ಶ್ರೀನಿವಾಸ ಶಾಸ್ತ್ರಿ, ಸಪ್ರು ಮೊದಲಾದವರ ಸಲಹೆಯನ್ನೂ ಗಾಂಧೀಜೀ ಕೇಳಿದ್ದಾರೆ. ಸಾಧ್ಯವಿರುವ ಎಲ್ಲಾ ಕಡೆಗಳಿಂದಲೂ ನಿಜಾಂಶ ಸಂಗ್ರಹಿಸಲು ಗಾಂಧೀಜಿ ನನಗೆ ತಿಳಿಸಿದ್ದಾರೆ. ನಾನು ಸಾಧ್ಯವಾದ ಮಟ್ಟಿಗೆ ಆ ಕೆಲಸ ಮಾಡುತ್ತಿದ್ದೇನೆ. ಆದರೆ ಇದರ ಆಧಾರದ ಮೇಲೆ ಯಾವ ಊಹೆಮಾಡಲೂ ಸಾಧ್ಯವಿಲ್ಲ" ಹೀಗೆಂದೂ ಪ್ಯಾರೇಲಾಲ್ ಬರೆಯುತ್ತಾರೆ.

ಗಾಂಧೀಜಿ ಮುಂದೇನು ಮಾಡುವರು?

ಗಾಂಧೀಜಿ ಬಿಡುಗಡೆ ಹೊಂದಿ ಈಗ ಆರೋಗ್ಯಲಾಭ ಪಡೆಯುತ್ತಿದ್ದಾರೆ. ಇಷ್ಟರಲ್ಲೇ ಅವರು ಜಿನ್ನರಿಗೆ ಆಹ್ವಾನವಿತ್ತು ಬರೆದ ಪತ್ರ ಪ್ರಕಟವಾಗಿದೆ. ಸಪ್ರು ಜಯಕರ್ ಮೊದಲಾದವರಿಗೆ ಇಂದಿನ ರಾಜಕೀಯ ಪರಿಸ್ಥಿತಿಯ ಬಿಕ್ಕಟ್ಟು ಬಗೆಹರಿಸುವ ದಾರಿಯೇನೆಂದು ಕೇಳಿದ್ದಾರೆ.

ಇದನ್ನೆಲ್ಲಾ ನೋಡಿದರೆ ಗಾಂಧೀಜಿ ದೇಶದ ರಾಜಕೀಯ ಪರಿಸ್ಥಿತಿ ಕಡೆಗೆ ಬೇಗನೇ ಗಮನಕೊಡುವಂತೆ ಕಾಣುತ್ತದೆ. ಯಾರೊಡನೆ ಮೊದಲು ಭೇಟಿಯಾಗುವರು? ಯಾರೊಡನೆ ಸಂಧಾನ ಕಾರ್ಯತೊಡುವರು, ಹೇಗೆ ರಾಷ್ಟ್ರದ ಬಿಕ್ಕಟ್ಟು ಬಗೆಹರಿಸುವರು? ಇದೆಲ್ಲಾ ಸಮಸ್ಯೆಗಳು.

ವೇವಲ್ ಗಾಂಧೀಜಿಯನ್ನು ಬಂಧನದಿಂದ ಬಿಟ್ಟಿದ್ದಾರೆ. ವೇವಲರೇ ಈ ಬಿಡುಗಡೆಗೆ ಮುಖ್ಯ ಹೊಣೆ ಹೊತ್ತಿದರೆಂದೂ ಹೇಳಲಾಗಿದೆ. ವೇವಲ್ ಬ್ರಿಟಿಷ್ ಸಂಧಾನ ಮಾಡಿಕೊಳ್ಳಲು ಸರಿಯಾದ ಪ್ರಯತ್ನ ಮಾಡುವುದೂ ಮಾಡತಕ್ಕದ್ದೂ ಅವಶ್ಯವಿದೆ.

ಆದರೆ ಹಿಂದೂ ಮುಸ್ಲಿಂ ಐಕ್ಯವಿಚಾರ ಒಂದಿದೆ. ವೇವಲರಲ್ಲಿ ಗಾಂಧೀಜೀ ಮಾತನಾಡಲು ಹೋದರೂ, 'ನೀವು ಹಿಂದು-ಮುಸ್ಲಿಮರು ಒಂದಾಗದೆ ನಾನೇನುಮಾಡಲಿ' ಎಂದು ಅವರೂ ಹಳೇ ಹಾಡನ್ನು ಹಾಡಿದರೂ ಹಾಡಬಹುದು. ಹೀಗಾಗಿ ಮೊದಲು ಜಿನ್ನಾ-ಗಾಂಧೀ ಭೇಟಿಯಾಗಿ ಹಿಂದೂ ಮುಸ್ಲಿಂ ಸಮಸ್ಯೆ ತೀರಿಸಿ ಮುಂದೆ ವೇವಲರಲ್ಲಿ ಹೋದರೂ ಹೋಗಬಹುದು.

ಇನ್ನು ಪಕ್ಷವಿಲ್ಲದ ಮುಖಂಡರಿದ್ದಾರೆ. ಅವರು ಎಲ್ಲಾ ಪಕ್ಷದ ಮುಖಂಡರನ್ನೂ ಒಟ್ಟು ಸೇರಿಸಿ ಸಂಧಾನ ಸೌಕರ್ಯ ಕಲ್ಪಿಸಬಹುದು. ಸಪ್ರು ಜಯಕರ್ ಮೊದಲಾದವರು ಈ ಕಾರ್ಯ ಮಾಡಲು ಸಮರ್ಥಕರು. ಗಾಂಧೀಜಿ ಕೂಡಾ ಅವರಿಗೆ ಆಹ್ವಾನವಿತ್ತಿದ್ದಾರೆ. ಹಾಗಾಗಿ ಮುಂದಿನ ಮಾರ್ಗ ಯಾವುದೆಂದು ಗಾಂಧೀಜಿಯೇ ನಿಶ್ಚಯಿಸಬಲ್ಲರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯಿರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

... Limited, Mangalore.
ESTD. 1931
BUNDER MANGALORE. BRANCHES Moodabidri & Padubidri.

ANNOUNCEMENT

... accepted at the following rates from 1-4-1944
... Accounts (1% from Jan. to June)
(½% from July to Decr.)
... bank Accounts 1½% p. a. on daily balances
... 6 months 2% p. a.
12 months 2½% p. a.
24 months 3% p. a.
The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office

Some Salient Features of The 'Bombay Life' Policies

★ Premiums are low ★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very smallcost of Rs 1-8-0 per 1000.
★ Special rebates on large size policies
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff A specific for the puerperal diseases and also valuable to puerperal women as tonic Increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೊಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ
ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.
ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press. Car Street. Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 9—6—1944 [ಸಂಚಿಕೆ 23]

'ಅಗಸ್ಟ್ ನಿರ್ಣಯ ಹಿಂತೆಗೆಯಲಾರೆ'

ಜಯಕರರಿಗೆ ಗಾಂಧೀಜಿ ಪತ್ರ

ಜುಹುವಿನಲ್ಲಿ ಮಹಾತ್ಮರು

ಗಾಂಧೀಜಿ ಜಯಕರರಿಗೆ ಒಂದು ಪತ್ರ ಬರೆದಿರುವರೆಂಬ ವಿಚಾರ, ಆ ಪತ್ರದಲ್ಲಿ ಅಡಕವಾದ ವಿಷಯಗಳ ವಿಚಾರ ಕೆಲವು ಪತ್ರಿಕೆಗಳಲ್ಲಿ ಭಿನ್ನ-ಭಿನ್ನ ವಾರ್ತೆಗಳು ಪ್ರಕಟವಾಗಿದ್ದು, ಗಾಂಧೀಜಿ ಆ ತರದ ತಪ್ಪು ಕಲ್ಪನೆ ಬಾರದಂತೆ, ತಾನು ಬರೆದ ಪತ್ರವನ್ನು ಪ್ರಸಿದ್ಧಿಸಲು ಕಾರ್ಯದರ್ಶಿ ಪ್ಯಾರೇಲಾಲರಿಗೆ ಹೇಳಿದ್ದಾರೆ. ಗಾಂಧೀಜಿ ಆ ಪತ್ರವನ್ನು ತಾ. ೨೦-೫-೪೪ರಂದು ಬರೆದಿರುವರು. ಆ ಪತ್ರದಲ್ಲಿ ಗೂಢವಾದ ಅರ್ಥವೇನೂ ಇಲ್ಲವೆಂದೂ ಪ್ರಕಟಣೆ ಕೊಡುವ ಉದ್ದೇಶವಿಲ್ಲದ್ದರಿಂದ ಅದನ್ನು ಸ್ವಲ್ಪದರಲ್ಲಿಯೇ ಮುಗಿಸಲಾಗಿತ್ತೆಂದೂ ಗಾಂಧೀಜಿ ತಿಳಿಸಿದ್ದಾರೆ.

ಗಾಂಧೀಜಿ ಜಯಕರರಿಗೆ ಬರೆದ ಪತ್ರ ಇಂತಿದೆ:

ಪ್ರಿಯ ಜಯಕರರೇ,

ರಾಷ್ಟ್ರ ನನ್ನಿಂದ ತುಂಬಾ ಕೆಲಸಗಳನ್ನು ಹಾರೈಸುತ್ತದೆ. ನನ್ನ ಬಿಡುಗಡೆ ವಿಚಾರ ನೀವು ಯಾವ ಅಭಿಪ್ರಾಯಪಡುತ್ತೀರೆಂದು ನನಗೆ ಗೊತ್ತಿಲ್ಲ. ಹೇಗಿದ್ದರೂ ಬಿಡುಗಡೆಯಿಂದ ನಾ ಸುಖಿಯಾಗಿಲ್ಲ. ನನಗೆ ನಾಚಿಕೆಯಾಗಿದೆ. ನನಗೆ ಅಸೌಖ್ಯ ಆಗಬಾರದಿತ್ತು. ಅಸೌಖ್ಯ ಆಗಬಾರದೆಂದು ನಾನೆಷ್ಟು ಮುಂಜಾಗ್ರತೆ ತೆಗೆದುಕೊಂಡರೂ ಅದು ವ್ಯರ್ಥವಾಯಿತು. ನಾನು ನನ್ನೀ ಇಂದಿನ ಅನಾರೋಗ್ಯದಿಂದ ಗುಣ ಹೊಂದಿದ ಕೂಡಲೇ ಸರಕಾರದವರು ನನ್ನನ್ನು ಬಂಧಿಸುವರೆಂದು ನನಗೆ ತೋರುತ್ತದೆ. ನನ್ನನ್ನು ಒಂದು ಪಕ್ಷ ಬಂಧಿಸದಿದ್ದರೂ ನಾನೇನು ಮಾಡಬಲ್ಲೆ? ಅಗಸ್ಟ್ ನಿರ್ಣಯವನ್ನು ನಾ ಹಿಂತೆಗೆದುಕೊಳ್ಳಲಾರೆ. ನೀವು ಹೇಳುವಂತೆ ಈ ನಿರ್ಣಯ ಅಪಾಯಕಾರಿಯಲ್ಲವೆಂಬುದು ನಿಜ. ಈ ವಿಷಯದ ಸತ್ಯತೆ ಬಗ್ಗೆ ನಮ್ಮೊರ್ವರಲ್ಲಿ ಅಭಿಪ್ರಾಯ ಭೇದವಿದ್ದರೂ ಇರಬಹುದು. ಆದರೆ ಅಗಸ್ಟ್ ನಿರ್ಣಯವು ನನ್ನ ಜೀವನದ ಶ್ವಾಸ. ೨೫ನೇ ತಾರೀಕಿನ ತನಕ ನಾನು ಮೌನವನ್ನವಲಂಬಿಸುವೆನು. ಅಷ್ಟರಲ್ಲೀ ನಾನು ನಿಮ್ಮ ಕಡೆಗೆ ಪ್ಯಾರೇಲಾಲರನ್ನು ಕಳುಹಿಸಲೆ? ಅದೂ ಕೂಡಾ ನಿಮ್ಮ ಆರೋಗ್ಯವನ್ನವಲಂಬಿಸಿದೆ. ನಿಮ್ಮ ಆರೋಗ್ಯವೂ ಅಷ್ಟು ಉತ್ತಮವಾಗಿಲ್ಲವೆಂದು ನನಗೆ ತಿಳಿದು ಬಂದಿದೆ.

ನಿಮ್ಮ ವಿಶ್ವಾಸ ಪಾತ್ರ

ಮೊ. ಕ. ಗಾಂಧೀ.

ಗಾಂಧೀಜಯಕರರದಲ್ಲಿ ಹೀಗೆ ರಾಜಕೀಯ ಪತ್ರವ್ಯವಹಾರ ನಡೆಯುತ್ತಿದೆ. ಮಹಾತ್ಮರೇನೋ ಇದುವರೆಗೆ ಪ್ರತ್ಯಕ್ಷವಾಗಿ ಭಾರತದ ರಾಜಕೀಯ ಕಾರ್ಯ ಕೈಕೊಂಡಿಲ್ಲ. ಸದ್ಯ ಕೈಕೊಳ್ಳುವಂತೆಯೂ ಇಲ್ಲ. ಆದರೆ ಅದರ ಕುರಿತೇ ಸದಾ ವಿಚಾರಮಗ್ನರಾಗಿರುವರೆಂದು ಬೇರೆ ಹೇಳಬೇಕಾಗಿಲ್ಲ.

ಮಹಾತ್ಮರು ಭಾರತದ ರಾಜಕೀಯ ವಿಚಾರವನ್ನು ಈಗ ಆಲೋಚಿಸುವಷ್ಟು ಆರೋಗ್ಯ ಹೊಂದಿರದಿದ್ದರೂ ಸದ್ಯದ ಪರಿಸ್ಥಿತಿ ಕುರಿತು ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲು ತಮ್ಮ ಕಾರ್ಯದರ್ಶಿ ಶ್ರೀ ಪ್ಯಾರೇಲಾಲರನ್ನು ಕೇಳಿಕೊಂಡಿದ್ದಾರೆ. ಪ್ಯಾರೇಲಾಲರೀಗ ಆ ಕಾರ್ಯವನ್ನು ಭರದಿಂದ ಮಾಡುತ್ತಿರುವರು.

ಜಯಕರರಿಗೆ ಬರೆದ ಪತ್ರದಲ್ಲಿ ಅಭಿಪ್ರಾಯ ಪ್ರಕಟಿಸಿದಂತೆ ಗಾಂಧೀಜಿ ತಮ್ಮ ಆಪ್ತ ಕಾರ್ಯದರ್ಶಿ ಪ್ಯಾರೇಲಾಲರನ್ನು ಕಂಡು ಮಾತನಾಡಿದ್ದಾರೆ. ಸಪ್ರುಗಳನ್ನು ಜುಲೈ ತಿಂಗಳೊಳಗೆ ಕಂಡು ಮಾತನಾಡುವುದು ಸಾಧ್ಯವಿಲ್ಲವೆಂದೂ ವರದಿಯಾಗಿದೆ. ಅಂತೂ ಇದರಿಂದೆಲ್ಲಾ ಮಹಾತ್ಮರು ಅಗಸ್ಟ್ ನಿರ್ಣಯವನ್ನು ಹಿಂತೆಗೆದುಕೊಳ್ಳಲಾರೆನೆಂದು ಹೇಳಿದರೂ ಸಂಧಾನಕ್ಕೆ ಸರ್ವ ವಿಧಗಳಿಂದಲೂ ಮುಕ್ತದ್ವಾರವಿಟ್ಟೇ ಕೆಲಸ ಮಾಡುತ್ತಿದ್ದಾರೆಂಬುದು ಸ್ಪಷ್ಟವಾಗುವುದು.

ಮಹಾತ್ಮರೇ ತಮ್ಮ ಬಿಡುಗಡೆಯಾದ ಕೂಡಲೇ ತಾನು ತಪ್ಪು ಮಾಡಿದಾಗ ತಮಗನಿಸುವುದಿಲ್ಲ, ತಾನು ತಪ್ಪಾಗಿದ್ದರೆ ತಿಳಿಸಿ ಎಂಬ ಅಭಿಪ್ರಾಯ ಪ್ರಕಟಿಸಿದ್ದರೆಂದು ಹಿಂದೆ ಪ್ರಕಟವಾಗಿದೆ.

ಮುಂಬಯಿಯ ಹಿಂದಿನ ಮೇಯರರೂ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಮುಂದಾಳುಗಳೂ ಆದ ಶ್ರೀ ಮೆಹರಾಲಿಯವರು ಸಾಂತಾಕ್ರೂಜಿನಲ್ಲಿ ಈಗ ಸೆರೆಮನೆಯಿಂದ ಬಿಡುಗಡೆಯಾದ ನಂತರ ಆರೋಗ್ಯ ಹೊಂದುತ್ತಿರುವರು. ಕಳೆದ ಮಂಗಳವಾರ ಸಂಜೆ ಮಹಾತ್ಮರನ್ನು ಕಂಡು ಭೇಟಿಯಾದರು. ಅದೇ ದಿನ ಸಂಜೆಗೆ ಆಂಗ್ಲೋ ಇಂಡಿಯನ್ ಮುಖಂಡರಾದ ಶ್ರೀ ಎಸ್. ಎಚ್. ಪಾರ್ಕರರೂ ಗಾಂಧೀಜಿಯವರನ್ನು ಕಂಡು ಮಾತನಾಡಿದರು.

ಮಹಾತ್ಮರಿಗೆ ಚಳಿ ಜ್ವರ ಬಾರದಂತೆ ಮಾಡಲು ಔಷಧಿಯನ್ನು ತೆಗೆದು ಕೊಳ್ಳಬೇಕೋ ಬೇಡವೋ ಎಂದು ಗಾಂಧೀಜಿಯವರೇ ಆಲೋಚಿಸುತ್ತಿರುವರೆಂದೂ ತಿಳಿದಿದೆ. ತಾ. ೩೧ರಂದು ಮುಂಬಯಿ ನೇಶನಲ್ ವಾರ್ ಫ್ರಂಟಿನ ಮುಖಂಡರಾದ ಸರ್ ಆರ್. ಪಿ. ಮಸಾನಿಯವರು ಭಾರತೀಯ ವರ್ತನ ಸಂಘದ ಅಧ್ಯಕ್ಷರಾದ ಶ್ರೀ ಪ್ರಾಣಲಾಲ ದೇವಕರಣ ನಾನ್ಜಿಯವರೂ ಗಾಂಧೀಜಿಯನ್ನು ಅವರ ಸಾಯಂಕಾಲ ಪ್ರಾರ್ಥನೆಯ ಮೊದಲು ಕಂಡು ಮಾತನಾಡಿದರು.

ಇತ್ತೀಚೆಗೆ ಡಾಕ್ಟರರು ಗಾಂಧೀಜಿಯವರ ಆರೋಗ್ಯದ ಕುರಿತು ದಿನ ವಹಿ ಪ್ರಕಟಣೆ ಕೊಡುತ್ತಿಲ್ಲವಾದರೂ, ಮಹಾತ್ಮರು ದಿನದಿಂದ ದಿನಕ್ಕೆ ಹೆಚ್ಚು ಸುಧಾರಿಸುತ್ತಿರುವರೆಂದು ತಿಳಿದಿದೆ. ಅವರ ಮೂತ್ರ ಪಿಂಡದ ಬಾಧೆ ಕಡಿಮೆಯಾಗುತ್ತಿದೆ. ಭೇಟಿಗಾರರನ್ನು ಸಂತೋಷದಿಂದ ಸ್ವಾಗತಿಸುತ್ತಾರೆ. ಕಳೆದ ಒಂದೆರಡು ದಿನಗಳಿಂದ ಗಾಂಧೀಜಿ ಭೇಟಿಯಾದವರೊಡನೆ ಸರಲವಾಗಿ ಮಾತನಾಡುತ್ತಾರೆ. ಪಂಡಿತ ಕುಂಜ್ರುಗಳು, ಥಕ್ಕರ್ ಬಾಪರೂ ಗಾಂಧೀಜಿಯನ್ನು ಕಂಡರು. ರಾಮರಾಜ್ಯ ಚಿತ್ರದ ಕೆಲ ದೃಶ್ಯಗಳನ್ನು ಮಹಾತ್ಮರಿಗೆ ತೋರಿಸಲಾಯಿತು. ಕಳೆದ ವಾರ ಮಿಶನ್ ಟುಮೋಸ್ಕೋ ಚಿತ್ರ ನೋಡಿ ಅವರಿಗೆ ತುಂಬಾ ಆಯಾಸವಾಗಿತ್ತು.

ಬೊಂಬಯಿಯ ರಾಷ್ಟ್ರೀಯ ಕ್ರಿಶ್ಚಿಯನ್ ಸಂಘದ 400 ಮಂದಿ ಪ್ರತಿನಿಧಿಗಳು ಜುಹುಗೆ ಬಂದು ಮಹಾತ್ಮರ ಆರೋಗ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು. ಮಹಾತ್ಮರು ಅವರಿಗೆ ಹೀಗೆಂದು ಒಂದು ಸಂದೇಶವಿತ್ತರು. "ನೀವೆಲ್ಲ ಜುಹುಗೆ ಬಂದು ನನ್ನ ಆರೋಗ್ಯಕ್ಕಾಗಿ ಪ್ರಾರ್ಥಿಸಿದ ಬಗ್ಗೆ ನಾನು ಕೃತಜ್ಞನಾಗಿದ್ದೇನೆ. ದೇವರು ಇನ್ನೂ ನನ್ನಿಂದ ಏನಾದರೂ ಸೇವೆ ಮಾಡಿಸಬೇಕೆಂದಿರುವನಾದರೆ, ಖಂಡಿತವಾಗಿಯೂ ನಿಮ್ಮ ಹಾಗೂ ನಿಮ್ಮಂತೆ ಅನೇಕರ ಪ್ರಾರ್ಥನೆಗಳು ಸಫಲವಾದಾವು. ದೇವರು ನಿಮ್ಮೆಲ್ಲರನ್ನೂ ಆಶೀರ್ವದಿಸಲಿ"

೧೯೪೩ರಲ್ಲಿ ಸರಕಾರದವರು ಕಾಂಗ್ರೆಸ್ ಮತ್ತು ಗಾಂಧೀಜಿಯವರ ಮೇಲೆ ಆರೋಪ ಹೊರಿಸಿ ಪ್ರಕಟ ಮಾಡಿದ ಒಂದು ಪುಸ್ತಕಕ್ಕೆ ಮಹಾತ್ಮರ ಉತ್ತರವೇನೆಂದು ಲಂಡನ್ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಬಾತ್ಮೀದಾರನು ಕೇಳಿದ್ದಕ್ಕೆ ಮಹಾತ್ಮರು ಹೀಗೆಂದಿದ್ದಾರೆ. "ನನ್ನಲ್ಲಿ ಅದಕ್ಕೆ ಬೇಕಾದ ಎಲ್ಲಾ ಉತ್ತರಗಳೂ ಇವೆ. ನಾನು ಆರೋಗ್ಯ ಹೊಂದಿ, ಸ್ವತಂತ್ರನಾದರೆ ನೀವು ಕೇಳಿದ ಪ್ರಶ್ನೆಗಗೆಲ್ಲಾ ಉತ್ತರ ಕೊಡುತ್ತೇನೆ". ಸರಕಾರ ಹೊರಡಿಸಿದ ಆರೋಪದಲ್ಲಿ ಗಾಂಧೀಜಿ ಜಪಾನ್ ಸಂಬಂಧ ಇಟ್ಟುಕೊಂಡಿದ್ದಾರೆಂಬುದು ದೊಡ್ಡ ಆರೋಪವಾಗಿದೆ.

ಸರಕಾರ ತನ್ನ ಮೇಲೆ ಹಾಗೂ ಕಾಂಗ್ರೆಸಿನ ಮೇಲೆ ಈ ತರದ ಆರೋಪಗಳನ್ನು ಹೊರಿಸಿದ ಬಗ್ಗೆ ಗಾಂಧೀಜಿ ಬಹಳ ನೊಂದಿಕೊಂಡಿದ್ದಾರೆಂಬುದು ಸ್ಪಷ್ಟವಿದೆ. ಅಂತೂ ಸರಕಾರವು ಮಹಾತ್ಮರನ್ನು ಕೇವಲ ಆರೋಗ್ಯ ಸಂಬಂಧ ಬಿಡುಗಡೆ ಮಾಡಿಕೊಂಡಿರುವುದರಿಂದ ಗುಣ ಹೊಂದಿದ ಕೂಡಲೇ ಮಹಾತ್ಮರೇ ತಾನಾಗಿ ಸರಕಾರದೊಡನೆ ಪುನಃ ತನ್ನನ್ನು ಬಂಧನದಲ್ಲಿಡಲು ಕೇಳಿಕೊಳ್ಳಬಹುದೆಂದೂ ತಿಳಿದುಬರುತ್ತದೆ.

ಯುರೋಪಿನ ಮೇಲೆ ಮಿತ್ರರ ಮುತ್ತಿಗೆ

ದ್ವಿತೀಯ ರಂಗದ ಆರಂಭ

ಜೂನ್ ತಾ. ೬ನೇ ಪ್ರಭಾತದ ಸಮಯಕ್ಕೆ ಮಿತ್ರ ದಂಡುಗಳು ಯುರೋಪಿನಲ್ಲಿ ಇಳಿದುವು. ಮಧ್ಯರಾತ್ರಿಯು ಕಳೆಯುತ್ತಲೆ ಮಹತ್ತಾದ ಮುತ್ತಿಗೆ ಪಡೆಗಳು ಫ್ರಾನ್ಸಿನ ಉತ್ತರ ತೀರದ ಕಡೆಗೆ ಸಾವಿರಾರು ವಿಮಾನಗಳಿಂದ ಕೂಡಿಕೊಂಡು ಮುಂದುವರಿದು ಬಂದುವು. ಹಡಗು ವಿಮಾನಗಳಿಂದ ಮೊದಲು ಶತ್ರುಸ್ಥಾನಗಳನ್ನು ದಾಳಿಗೆ ಗುರಿಮಾಡಲಾಯಿತು. ಅನಂತರ ಕೊಡೆ ವೈಮಾನಿಕರೂ, ಯಂತ್ರವಿಲ್ಲದ ಜಾರು ವಿಮಾನ ದಳಗಳೂ ತೀರವನ್ನು ಬಿಟ್ಟು ಹತ್ತು ಮೈಲು ಸುಮಾರಿನ ನೆಲಪ್ರದೇಶದಲ್ಲಿ ಇಳಿದರು. ಅದೇ ಸಮಯಕ್ಕೆ ಯುದ್ಧ ಹಡಗುಗಳಿಂದಲೂ ಸೈನ್ಯ ಸರಬರಾಯಿಗಳೂ ಇಳಿಸಲ್ಪಟ್ಟವು. ಇಳಿವ ಸೈನ್ಯ ಸಮೂಹವು ಸುಸಂಘಟಿತವಾಗಿ ಮುಂದುವರಿದು, ವಿಮಾನ ಪಡೆಗಳ ಆವರಣದಲ್ಲಿ ಪ್ರದೇಶವನ್ನು ಆಕ್ರಮಿಸುತ್ತಿರುವರು.

ಯುರೋಪಿನ ಮುತ್ತಿಗೆಯ ಸರ್ವ ನಾಯಕತ್ವದ ಹೊಣೆಯನ್ನು ಜನರಲ್ ಐಸನ್‌ಹಾವ್‌ರವರು ಹೊತ್ತಿರುವರು. ಅಲ್ಲಿ ಇಳಿದ ದಂಡುಗಳ ಸೇನಾಪತ್ಯವು ಜನರಲ್ ಮೊಂಟ್‌ಗಾಮರಿಯವರಿಗೆ ಕೊಡಲ್ಪಟ್ಟಿದೆ. ಆಕ್ರಮಣಗಾರರನ್ನು ಎದುರಿಸಲು ಸಿದ್ಧವಾದ ಜರ್ಮನ್ ದಂಡುಗಳನ್ನು ಹಿಟ್ಲರನು ಸ್ವತಃ ನಡೆಸುವನಂತೆ.

[illegible]

ವಲ್ಲಾ ಮತಾಯಿ

[illegible] ತಾರೆ [illegible] ಲಂಡ್ಬ [illegible] ಮಹಾಗಾಂಡಿನಲ್ಲಿರುವ [illegible] ಹೋಟೆಲ್‌ನಲ್ಲಿ ನಡೆದ ಅಂತ್ಯಕ್ರಿಯೆಯು ವಲ್ಲಾ ಮತಾಯಿ ಕುಟುಂಬದವರಿಗೆ ಅನೇಕ ವಾರಗಳಿಂದ ಇದ್ದ ಆತಂಕ, ಚಿಂತೆಗಳನ್ನೆಲ್ಲಾ ಒಮ್ಮೆಗೆ ಕೊನೆಗೊಳಿಸಿತು. ನ್ಯೂಯಾರ್ಕಿನಿಂದ ಕೊನೆಗೆ ಹೀಗೊಂದು ಒಂದು ಸುದ್ದಿ ಬಂತು. ವಲ್ಲಾ ಮತಾಯಿಯ ಶವವು ಹಡ್ಸನ್ ನದಿಯಲ್ಲಿ ಕಾಣಸಿಕ್ಕಿತೆಂದು! ಆ ಶವದ ಗುರುತು ಹಚ್ಚಿದ್ದು ಅವಳ ಕೈಯಲ್ಲಿ ಕಟ್ಟಿದ ವಾಚಿನ ನಂಬರಿನಿಂದ ಮತ್ತು ಆಕೆಯ ಶರೀರದಲ್ಲಿ ಕಂಡ ಒಂದು ಮಚ್ಚೆಯ ಗುರುತಿನಿಂದ.

೧೯೩೧ರಲ್ಲಿ ಲಿಂಡ್‌ಬರ್ಗ್ ಶಿಶು ಅಪಹರಣವಾದ ನಂತರ ಅಮೆರಿಕದ ವರ್ತಮಾನ ಪತ್ರಿಕೆಗಳು ಇಷ್ಟೊಂದು ರೋಮಾಂಚಕವಾದ ಕತೆಯನ್ನು ಬರೆದಿರಲಿಲ್ಲ. ವಲ್ಲಾ ಮತಾಯಿಯು ಕೊಲೊಂಬಿಯಾ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದ ಇಪ್ಪತ್ತೆರಡು ವರ್ಷ ಪ್ರಾಯದ ಭಾರತೀಯ ತರುಣಿ. ಈಕೆ ಕಾಣೆಯಾದ ವಿಚಾರದಲ್ಲಿ ರೂಟರ್ ಸುದ್ದಿಗಾರನು ಕಳುಹಿಸಿದ ಹಲವೊಂದು ತಂತಿಗಳಿಂದ ಭಾರತದ ಜನಸ್ತೋಮ ಸಹಜವಾಗಿ ತುಂಬಾ ಗಾಬರಿಗೊಂಡಿತು. ಇನ್ನು ವಿಶೇಷ ಸುದ್ದಿಗಾರರೂ ಈ ವಿಚಾರ ತುಂಬ ಬರೆದಿದ್ದರು.

ರಹಸ್ಯ ಹೊರಬರುವುದೇ ಎಂಬುದು ಇಂದು ಎಲ್ಲರ ಆಶೆ; ವಲ್ಲಾ ಮತಾಯಿ ಬದುಕಿರಬಹುದೇ, ಬದುಕಿ ಪುನಃ ಮಾತೃಭೂಮಿಗೆ ಬಂದಾಳೇ ಇದೂ ಒಂದು ಆಶೆ ಇನ್ನೂ ಇದೆ. ಆಕೆ ಕಾಣೆಯಾದ ವಿಚಾರದಲ್ಲಿ ಏನೇನೋ ಕತೆಗಳು ತುಂಬಾ ಕಟ್ಟಲ್ಪಟ್ಟಿವೆ. ಆದರೆ ವಲ್ಲಾ ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ವಿಚಾರವನ್ನು ನಂಬುವುದು ಸಾಧ್ಯವಿಲ್ಲವಾಗಿದೆ. ಆಕೆಯನ್ನು ತಿಳಿದವರಿಗೆ ಆಕೆಯ ಧೈರ್ಯ ಸಾಹಸ ಆತ್ಮಶಕ್ತಿಗಳನ್ನು ಬಲ್ಲವರಿಗೆ ಈ ಆತ್ಮಹತ್ಯೆಯ ಕತೆ ಅರ್ಥವಾಗಲಾರದು. ಅಮೆರಿಕದ ಗುಪ್ತಚಾರ ಖಾತೆಯವರು ಜೆ. ಹೆಡ್ಗರ್ ಹೂವರರ ಯೋಗ್ಯ ಮುಂದಾಳುತನದಲ್ಲಿ ಎಷ್ಟು ಸಂಶೋಧನೆ ಮಾಡಿದರೂ ಈ ಕತೆಯ ಸತ್ಯಾಂಶ ಇನ್ನೂ ಹೊರಬಿದ್ದಂತೆ ತೋರುವುದಿಲ್ಲ. ವಲ್ಲಾ ಕಾಣೆಯಾದ ವಿಚಾರವು ಜಾತೀಯತೆಯಿಂದಲೂ, ದೇಶೀಯತೆಯಿಂದಲೋ ಅಂತರ್ರಾಷ್ಟ್ರೀಯತೆಯಿಂದಲೋ ಎಂಬುದು ಇನ್ನೂ ತಿಳಿದಿಲ್ಲ. ಅಂತೂ ಆಕೆಯ ಅದೃಶ್ಯತೆಯು ಅನಂತಕಾಲದ ವರೆಗೆ ರಹಸ್ಯತೆಯಾಗಿಯೇ ಉಳಿಯುವುದು.

ವಲ್ಲಾ ಮತಾಯಿ ಕೇವಲ ಓರ್ವ ಶಾಲಾ ವಿದ್ಯಾರ್ಥಿನಿಯಾಗಿರಲಿಲ್ಲ. ಇಡೀ ತನ್ನ ಜೀವಮಾನದಲ್ಲಿ ಆಕೆ ಬಹಳ ಮನೋರಂಜಕ ವ್ಯಕ್ತಿಯಾಗಿ, ರಾಷ್ಟ್ರಪ್ರೇಮ ಪೂರ್ಣಳಾಗಿದ್ದಳು. ದೇಶದ ಸ್ವಾತಂತ್ರ್ಯದ ಬಗ್ಗೆ ಆಕೆಯ ಹೃದಯ ಸದಾ ಆತುರಿಸುತ್ತಿತ್ತು; ಅದನ್ನು ಗಳಿಸುವಲ್ಲಿ ಅವಳು ತುಂಬಾ ಶ್ರಮ ಪಟ್ಟು ದುಡಿಯುತ್ತಲೂ ಇದ್ದಳು. ಆಕೆ ಬದುಕಿದ್ದರೆ, ಭಾರತದ ಸ್ವಾತಂತ್ರ್ಯ ಸಾಧನೆಗೆ ಸಹಕಾರಿಣಿಯಾದ ಮುಂದಾಳುವಾದ ಓರ್ವ ವ್ಯಕ್ತಿಯಾಗಿರುತ್ತಿದ್ದಳು. ಎರಡು ವರ್ಷಗಳ ಹಿಂದೆ ಕಾಂಗ್ರೆಸ್ ಮುಖಂಡರ ಬಂಧನವಾದಾಗ ಹೊರಟ ಒಂದು ಮಹಾ ಮೆರವಣಿಗೆಯಲ್ಲಿ ಆಕೆಯೂ ಓರ್ವ ಮುಂದಾಳುವಾದ ಮಹಿಳೆಯಾಗಿದ್ದಳು. ಆ ಸಂದರ್ಭದಲ್ಲಿ ಆಕೆಯ ಬಂಧನವಾಯಿತೆಂದೂ, ಮುಂದೆ ಆಕೆಯ ತಂದೆ ಡಾ। ಜಾನ್ ಮತಾಯಿಯವರು ಅವಳನ್ನು ಬಿಡುಗಡೆಗೊಳಿಸಿದರೆಂದೂ ತಿಳಿಯುತ್ತದೆ. ತಂದೆ ಡಾ। ಮತಾಯಿಯವರು ಆಂಗ್ಲಿಕನ್ ಚರ್ಚಿನಲ್ಲಿ ಬೊಂಬಾಯಿ ಗವರ್ನರರು ಬರುವ ಸಭೆಯಲ್ಲಿ ಹಾಜರಾಗಲು ಹೋಗುವಾಗ ಒಮ್ಮೆ ಆಕೆ ಅವರ ಕಾರಿನ ಮುಂದೆ ಪಿಕೆಟ್ ಮಾಡಿದಳೆಂದೂ, ಮಗಳನ್ನು ಎಷ್ಟು ಸಮಜಾಯಿಸಿದರೂ ಆಗದೆ ತಂದೆ ಬೇರೆ ಹಾದಿ ಹಿಡಿದು ಹೋಗಬೇಕಾಯಿತೆಂದೂ ತಿಳಿದು ಬರುತ್ತದೆ. ಆತ್ಮೀಯ ಸಂಭಾಷಣೆಗಳ ಕಾಲದಲ್ಲಿಯೂ ಆಕೆ ತನ್ನ ಹೃದಯದಲ್ಲಿ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿರುವ ಅಭಿಮಾನ ಸೇವಾತತ್ಪರತೆಗಳನ್ನು ತುಂಬಾ ಪ್ರದರ್ಶಿಸುತ್ತಿದ್ದಳು.

ಅಮೆರಿಕದಲ್ಲಿ ಇಳಿದ ಕೂಡಲೇ ವಲ್ಲಾ ಪತ್ರಿಕೋದ್ಯಮಿಗಳಿಗೆ ಕೊಟ್ಟ ಬೇಟಿಯಲ್ಲಿ, ಇಂದಿನೀ ಯುದ್ಧದ ಉದ್ದೇಶದ ಕುರಿತು ಗಂಭೀರವಾಗಿ ವಿಚಾರ ಮಾಡಲು ಭಾರತವು ಅಮೆರಿಕಕ್ಕೂ ತನ್ನ ಪ್ರಭಾವ ಬೀರುತ್ತಿದೆಯೆಂದು ಹೇಳಿದ್ದಳು, ಧೀರೆಯಾದ ಹುಡುಗಿ ಕೇವಲ ಬಾಯಿ ಬಡುಕತನ ಮಾತ್ರ ಮಾಡದೆ, ಸಂದರ್ಭ ಬಂದಾಗೆಲ್ಲ 'ತಾಯ್ನಾಡಿನ ಸ್ವಾತಂತ್ರ್ಯ ಸಾಧನಾ ಕಾರ್ಯಗಳಲ್ಲಿ ಮುಂದಾಳುವೆನಿಸಿ ದುಡಿದಿದ್ದಳು. ತಪ್ಪಾಗಲಿ, ಒಪ್ಪಾಗಲಿ, ತಾಯ್ನಾಡಿಗೆ ಸ್ವಾತಂತ್ರ್ಯ ಬೇಕೆಂಬುದೇ ಆಕೆಯ ವಾದವಿತ್ತು. ನ್ಯಾಯವು ಗೆಲಬೇಕೆಂದು ಆಕೆ ಹಟಹಿಡಿಯುತ್ತಿದ್ದಳು. ಭಾರತದ ಸಾಮಾಜಿಕ, ರಾಜಕೀಯ ಆರ್ಥಿಕ ಜೀವನದಲ್ಲಿ ನ್ಯಾಯವಿರಬೇಕೆಂದು ಆಕೆ ಹೋರಾಡುವವಳು. ಆದರೆ ಕಾಲನು ಸಹಜವಾಗಿಯೂ ಅವಳ ವಿಷಯ ಹೃದಯಶೂನ್ಯತೆ ತೋರಿಸಿದನು; ಇಂಥಾ ಹುಡುಗಿ ತನ್ನ ತುಂಬು ಜವ್ವನದಲ್ಲಿ ದೂರ ವಿದೇಶವೊಂದರಲ್ಲಿ ದುರ್ಮರಣಕ್ಕೆ ಗುರಿಯಾದಳೆಂದು ಸುದ್ದಿ ಬಂದಿದೆ.

ವಲ್ಲಾ ೧೯೨೧ರಲ್ಲಿ ಜನ್ಮವೆತ್ತಿದಳು. ಆಕೆಯ ತಂದೆ ಡಾ। ಜಾನ್ ಮತಾಯಿಯವರು ಆಗ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅರ್ಥಿಕ ಶಾಸ್ತ್ರದ ಪ್ರೊಫೆಸರರಾಗಿದ್ದರು. ಜಾನ್ ಮತಾಯಿಯವರು ಮೂವತ್ತು ವರ್ಷದ ಮೇಲೆ ಭಾರತೀಯ ಪದ್ಧತಿಯಲ್ಲಿ ಬಹಳ ತಡವಾಗಿಯೇ ಮದುವೆಯಾದರು. ಅವರ ಪತ್ನಿ ಅಚ್ಚಮ್ಮ ಮತ್ತೆ ಅವರಿಗೆ ಸುಮಾರು ಇಪ್ಪತ್ತು ವರ್ಷಗಳ ಅಭ್ಯಂತರವಿತ್ತು. ಅವರ ಮೊದಲನೆಯ ಮಗುವೇ ವಲ್ಲಾ ಮಲೆಯಾಳೀ ಭಾಷೆಯಲ್ಲಿ ವಲ್ಲಾ ಎಂದರೆ ಮುದ್ದು ಎಂದರ್ಥ. ನಿಜವಾಗಿ ವಲ್ಲಾ ಇಡೀ ಕುಟುಂಬಕ್ಕೆ ಮುದ್ದಾದ ಹುಡುಗಿಯಾದ್ದಳು.

ಅಚ್ಚಮ್ಮ ತಿರುವಾಂಕೂರಿನ ಸಿರಿವಂತ ಸಿರಿಯನ್ ಕ್ರಿಶ್ಚನ್ ಕುಟುಂಬದಿಂದ ಬಂದವಳು. ಅಚ್ಚಮ್ಮಳ ತಂದೆ ಅಲ್ಲಿ ಪ್ರಸಿದ್ಧ ವಕೀಲರು. ಮುಂದೆ ಅಲ್ಲಿನ ಲಾಕಾಲೇಜಿನ ಪ್ರಿನ್ಸಿಪಾಲರೂ ಆದರು. ಹಾಗಾಗಿ ವಲ್ಲಾ ಮುದ್ದು ಮುದ್ದಾಗಿ ಉಭಯ ಕುಟುಂಬ ಪ್ರೀತಳಾಗಿ ಬೆಳೆದಳು. ಆಕೆಯನ್ನು ಸಣ್ಣದರಲ್ಲಿಯೇ ಇಂಗ್ಲೆಂಡಿನಲ್ಲಿ ಮೊಂಟಿಸ್ಸೋರಿ ಶಾಲೆಗೆ ಸೇರಿಸಲಾಯಿತು. ತಂದೆಯವರು ಬೊಂಬಾಯಿಯಲ್ಲಿ ಹೊಸದಾಗಿ ಟಾರಿಫ್ ಬೋರ್ಡಿನ ಕೆಲಸ ತೆಗೆದುಕೊಂಡಿದ್ದರಿಂದ ಅವರಿಗೆ ಮಗಳೊಡನೆ ಇಂಗ್ಲೆಂಡಿನಲ್ಲಿರುವುದಾಗದೆ, ತಾಯಿ ಅಚ್ಚಮ್ಮ ಮಗಳೊಡನಿರಬೇಕಾಯಿತು. ಅಲ್ಲಿ ನಾಲ್ಕು ವರ್ಷ ವಿದ್ಯಾಭ್ಯಾಸ ಆದ ಮೇಲೆ ಅವರು ತಾಯ್ನಾಡಿಗೆ ಮರಳಿದರು. ಮುಂದೆ ವಲ್ಲಾ ಭಾರತದಲ್ಲಿ ಅನೇಕ ಕ್ರಿಶ್ಚನ್ ಕಾನ್ವೆಂಟ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದಳು.

ವಲ್ಲಾ ಕಾನ್ವೆಂಟುಗಳಲ್ಲಿ ವಿದ್ಯಾಭ್ಯಾಸ ಪಡೆದರೂ ಅಲ್ಲಿನ ವಾತಾವರಣ ಆಕೆಗೆ ಹೆಚ್ಚಾಗಿ ರುಚಿಸಲಿಲ್ಲ. ಅಲ್ಲಿನ ವಾತಾವರಣದಲ್ಲಿರುವ ಸಂಕುಚಿತ ಶಿಸ್ತು ಪದ್ಧತಿಗಳು ಸ್ವಾತಂತ್ರ್ಯ ಪ್ರೀತಿಯ ವಲ್ಲಾಳಿಗೆ ಒಗ್ಗಲಿಲ್ಲ. ಹಾಗಿದ್ದರೂ ಬೈಬಲ್ ಆಕೆ ಓದಿ ಅದರ ಸಾರಾಂಶ ತಿಳಿಕೊಳ್ಳುತ್ತಿದ್ದಳು. ಹಾಗಿದ್ದರೂ ಆಕೆ ಸಂಕುಚಿತ ಬು[illegible]ಯ ಧರ್ಮಾಂಧಳಾಗಿರಲಿಲ್ಲ.

ವಲ್ಲಾಳಿಗೆ ಸಂಗೀತದಲ್ಲಿ ಬಹಳ ಅ[illegible] ರುಚಿಯಿತ್ತು. ಪಿಯಾನೋ ಪಿಡ್ಲ[illegible]ಳಲ್ಲಿ ಆಕೆ ನೈಪುಣ್ಯ ಪಡೆದಿದ್ದಳು. ಲಲಿ[illegible] ಕಲೆಗಳಲ್ಲಿ ಆಕೆ ತುಂಬಾ ಪ್ರೀತಿಯು[illegible]ದ್ದಳು. ನೃತ್ಯದಲ್ಲಿ ಆಕೆ ಪ್ರವೀಣಳಿದ್ದರು[illegible] ಮುಂದೆ ಅದನ್ನು ಹೆಚ್ಚಾಗಿ ಮೆಚ್ಚುತ್ತಿ[illegible]ಲ್ಲಿಲ್ಲ. ಮೊದಮೊದಲು ಪಾಶ್ಚಾತ್ಯ ಕಲಾ[illegible] ಪದ್ಧತಿಯೇ ಉತ್ತಮವೆಂದು ಆಕೆ ವಾ[illegible]ಸುತ್ತಿದ್ದರೂ, ಆ ಮೇಲೆ ದಿನ ಹೋದಂ[illegible] ತಾಯ್ನಾಡಿನ ಕಲೆಯ ಮುಂದೆ ಅದೆಲ್ಲಾ ಅಪ್ರಧಾನ್ಯವೆಂದು ಮನಗಂಡಳು. [illegible]ಡು ವರ್ಷಗಳ ಹಿಂದೆ ವಸಂತ ಕಾ[illegible]ದಲ್ಲಿ ಸಿಮ್ಲಾದ ಹೊಟೆಲ್ ಸಿಸಿಲಲ್ಲಿ ಆ[illegible] ಉಳಕೊಂಡಿದ್ದಳು. ಆಗ ಅಲ್ಲಿ ಉದಯ ಶಂಕರ ನೃತ್ಯಸಂಗಡವಿತ್ತು. ಶಂಕ[illegible] ನೃತ್ಯವನ್ನು ನೋಡಿ ವಲ್ಲಾ ರೋಮಾಂ[illegible]ಚಿತಳಾದಳು. ಮುಂದೆ ಭಾರತ ನೃತ್ಯ[illegible] ವಿಷಯ ಆಕೆ ಹುಚ್ಚಳಾಗಿ ಹೋದಳು[illegible] ಆಕೆಗೆ ಓದುವುದರಲ್ಲಿ ಬಹಳ ಅಭಿರುಚಿ[illegible]ಯಿತ್ತು. ಸದಾ ಮುಗುಳ್ನಗೆ, ಸುಂದ[illegible]ವಾದ ಪ್ರಸನ್ನ ಮುಖ. ಒಳ್ಳೆಯ ನಡತೆ, ಇವುಗಳಿಂದ ವಲ್ಲಾ ಉತ್ತಮ ಹುಡುಗಿಯಾಗಿದ್ದರು.

ಮದುವೆ ವಿಚಾರ ಆಕೆಗೆ ಹೆತ್ತವರ ಸಂಪೂರ್ಣ ಸ್ವಾತಂತ್ರವಿತ್ತಿದ್ದರು. ಇಷ್ಟು ಬೇಗನೇ ಮದುವೆಯಾಗಿ ಗೃಹಿಣಿ ಜೀವನ ನಡೆಸಬೇಕೆಂದು ಆಕೆಗೆ ಇಷ್ಟ ವಿರಲಿಲ್ಲ. ಗೃಹಜೀವನದಲ್ಲಿ ವಲ್ಲಾ ಹಳ್ಳಿಯ ತಾಯಾಗಿದ್ದಳು. ವೇಷ ಭೂಷಣಗಳಲ್ಲೇನೋ ಆಕೆ ತುಂಬಾ ಸುಧಾರಣೆಯವಳಾದರೂ, ಖಾದಿ ಸಿಲ್ಕು, ಖಾ[illegible] ಸೀರೆಗಳಲ್ಲಿ ಅವಳಿಗೆ ಆದರ ಹೆಚ್ಚು.

ಇಂಥ ಗುಣವತಿ, ಇಷ್ಟು ಭಾಗ್ಯವತಿ, ಹೆತ್ತವರ ಪ್ರಥಮ ಪುತ್ರಿ, ದೇಶಾಭಿಮಾನ ಪೂರ್ಣಳಾದ ಭಾರತದ ನಾರಿ ಇಂದು ಜೀವನದ ರಂಗಭೂಮಿಯಿಂ[illegible] ಮರೆಯಾಗಿದ್ದಾಳೆ. ಆಕೆ ಮರೆಯಾದರೂ ಇನ್ನೊಮ್ಮೆ ಕಾಣಸಿಗಬಹುದೇ ಎಂ[illegible] ಆಶೆ ಇನ್ನೂ ಅವಳ ಹೆತ್ತವರಿಗಲ್ಲದೆ ಅ[illegible]ಳನ್ನು ಬಲ್ಲ ಹಲವರಿಗಿದೆ.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs. As.Ps.	ASSETS	Rs. As.Ps.
1. Paid up Capital	12,95,970- 0- 0	1. Cash on hand & with bankers	18,26,986- 3- 8
2. Reserves	3,83,379- 1- 6	2. Investments on (1) Govt. Securities, (2) Immovable properties, etc.	26,04,671- 6- 8
3. Deposits	61,66,927- 6- 0	3. Loans on Jewels & other valuable securities	23,72,302- 8- 7
4. Bills for collection	5,53,548- 6- 1	4. Loans on personal securities & Bills purchased	16,74,482-14- 8
5. Sundries including revenue items	7,00,981- 0- 5	5. Bills for collection as per contra	5,53,548- 6- 1
6. Profits for the year ending 31-12-1943	1,08,522- 4- 0	6. Office premises, furniture etc.	93,251- 0- 0
		7. Sundries including revenue items.	84,085-10- 4
Total	92,09,328- 2- 0	Total	92,09,328- 2- 0

ಸಮರ ಭೂಮಿಯ ಸಂಚಾರ

ದಕ್ಷಿಣ ಅಮೇರಿಕದ ಇಕ್ವೆಡಾರ್ ದೇಶದಲ್ಲಿರುವ ಗಯೋಕ್ವಿಲ ಎಂಬಲ್ಲಿ ದೊಡ್ಡ ದಂಗೆಯೊಂದು ಎದ್ದಿದೆ. ಈ ದಂಗೆಯಲ್ಲಿ ನೂರಾರು ಮಂದಿ ಕೊಲ್ಲಲ್ಪಟ್ಟಿದ್ದಾರೆ. ಗಯೋಕ್ವಿಲಾ ನಗರದ ಬೀದಿಗಳಲ್ಲಿ ಸಶಸ್ತ್ರ ಸೈನಿಕರೀಗ ಕಾವಲು ನಿಂತು ದಂಗೆಯಡಗಿಸಿರುವರು.

ಇಕ್ವೆಡಾರಿನ ರಾಜಧಾನಿಯಾದ ಕ್ವಿಟೋ ಮತ್ತು ಇತರ ನಗರಗಳ ಪರಿಸ್ಥಿತಿ ಹೇಗುಂಟೆಂಬ ಬಗ್ಗೆ ಯಾವ ಸುದ್ದಿಯೂ ಇಲ್ಲ. ಸೈನ್ಯದ ಒಂದು ತಂಡವೇ ಈ ದಂಗೆಗೆ ಕಾರಣವೆಂದೂ ತಿಳಿದು ಬರುತ್ತದೆ.

ಇಂದಿಗೆ ಎರಡು ವರ್ಷಗಳ ಹಿಂದೆ, ಎಂದರೆ ೧೯೪೨ರ ಮೇ ತಿಂಗಳಲ್ಲಿ ಇಲ್ಲಿ ಇದೇ ತರದ ಒಂದು ಕ್ರಾಂತಿಯುಂಟಾಗಿತ್ತು. ಆ ಕ್ರಾಂತಿಯಲ್ಲಿ ಭಾಗವಹಿಸಿದವರು, ಇಕ್ವೆಡಾರಿನ ಹಿಂದಿನ ಅಧ್ಯಕ್ಷರಾದ ಪೆಡ್ರೊಮೆರಿಯೊ ವೆಲೆಸ್ಕೊ ಇಬೆರ್ರಾ. ಇವರ ಅನುಯಾಯಿಗಳೆಂದೂ ಇವರು ೧೯೩೬ರಲ್ಲಿಯೂ ಒಮ್ಮೆ ಒಂದು ದಂಗೆಯೆಬ್ಬಿಸಿ ಕೃತಾರ್ಥರಾಗಲಿಲ್ಲವೆಂದೂ ತಿಳಿದಿದೆ. ಆ ಮೇಲೆ ೧೯೪೪ರ ಕ್ರಾಂತಿ ಇವರ ತಮ್ಮ ಜೋಸ್ ವೆಲೆಸ್ಕೊ ಇಬೆರ್ರಾ ಇವರ ಮುಂದಾಳುತನದಲ್ಲಿ ನಡೆಯಿತೆಂದೂ ಹೇಳಲಾಗಿದೆ.

ಇಂದಿನೀ ದಂಗೆಯು, ಈಗಿನ ಅಧ್ಯಕ್ಷರಾದ ಅರಯೋಡಿ ಲರಿಯೋ ಇವರನ್ನು ಪದಚ್ಯುತರನ್ನಾಗಿ ಮಾಡಲು ಹೂಡಲಾತೆಂದೂ ಕೆರಬಸಿಯೇರಿಯ ಸೈನ್ಯ ಭಾಗವೊಂದು ಕೆಲ ತಾಸುಗಳ ತನಕ ಕಾದಾಡಿ ಕೊನೆಗೆ ಶರಣು ಬಂತೆಂದೂ ಹೇಳಲಾಗಿದೆ.

ಇಕ್ವೆಡಾರ್‌ನ ಅಧ್ಯಕ್ಷರಾದ ಅರೆಯೋ ಡಿಲಿಯೋ ಇವರು ತನ್ನ ಮಂತ್ರಿ ಮಂಡಳದೊಡನೆ ರಾಜಿನಾಮೆಯಿತ್ತಿದ್ದಾರೆ. ತಮ್ಮ ಎಲ್ಲಾ ಅಧಿಕಾರವನ್ನೂ ಸಿನೆಟಿದ ಉಪಾಧ್ಯಕ್ಷರಾದ ಡಾ। ಫಾಸ್ಕೊನವರ ಅಲೆಂಡಿಯವರಿಗೆ ಒಪ್ಪಿಸಿ ಅರಿಯೋ ಅಮೆರಿಕದ ರಾಯಬಾರಿ ಕಚೇರಿಯನ್ನು ಈಗ ಆಶ್ರಯಿಸಿದ್ದಾರೆ.

ಯುದ್ಧಾನಂತರದ ವಿಚಾರ

ಅಮೆರಿಕದಲ್ಲಿ ಬ್ರಿಟನ್ ರಾಯಭಾರಿಯಾಗಿರುವ ಲಾರ್ಡ್ ಹೆಲಿಫಾಕ್ಸರನ್ನೂ ರಶ್ಯ ರಾಯಭಾರಿ ಆಂದ್ರೇಯಿ ಗ್ರೊಮಿಕೋರನ್ನೂ ಚೀನ ರಾಯಭಾರಿ ವೆಯಿಟಾವೋನಿಂಗ್ ಇವರನ್ನು ಅಮೆರಿಕದ ಮಂತ್ರಿ ಕಾರ್ಡೆಲ್ ಹಲ್ಲರು ಕರೆಸಿ ಸಭೆಗೂಡಿಸಿ ವಿಚಾರ ವಿನಿಮಯ ಮಾಡಿದರು. ಈ ಸಭೆ ಕೂಡಿಸುವ ಮೊದಲು ಯುದ್ಧಾನಂತರದ ಜಾಗತಿಕ ಶಾಂತಿ ಸ್ಥಾಪನೆಯ ಸಂಘ ರಚನೆಯ ಬಗ್ಗೆ ಬ್ರಿಟನು-ರಶ್ಯ ಮತ್ತು ಚೀನದೊಡನೆ ಮಾತು ಕತೆ ನಡೆಸಲು ಅಮೆರಿಕವು ಈಗ ಸಿದ್ಧವಿದೆಯೆಂದೂ ಅವರು ತಿಳಿಸಿದ್ದರು.

ಕಾರ್ಡೆಲ್ ಹಲ್ಲರು ಮಿತ್ರ ರಾಷ್ಟ್ರಗಳ ರಾಯಭಾರಿಗಳನ್ನು ಕರೆಸಿ ಪ್ರತ್ಯೇಕ ಪ್ರತ್ಯೇಕ ಮಾತನಾಡಿದರು, ಈ ಸಂಬಂಧದ ಮುಂದಿನ ಸಭೆಗಳೂ ಆದಷ್ಟು ಬೇಗ ಕೂಡವವೆಂದು ತಿಳಿದಿವೆ.

"ಹಿಟ್ಲರನು ಭೇಟಿಯಾದ ಬಳಿಕೆಂದು ಭಾರೀ ಸಭೆ ಜರಗಿಸಲು ಅಮೆರಿಕವು ಸಿದ್ಧವಿದೆಯೆಂಬುದನ್ನು ತಿಳಿಸಲು ನಮ್ಮ ನಮ್ಮ ಸರಕಾರಗಳಿಗೆ ತಿಳಿಸಲು ನಮ್ಮನ್ನು ಕರೆಯಿಸಿದ್ದರು. ಯುದ್ಧ ನಂತರದ ಜಗತ್ತಿನ ಸ್ವಾಸ್ಥ್ಯದ ಕುರಿತು ಪರ್ಯಾಲೋಚಿಸಲು ನಮ್ಮನ್ನು ಕರೆಯಿಸಲಾಗಿತ್ತು" ಹೀಗೆಂದು ಲಾರ್ಡ್ ಹೆಲಿಫಾಕ್ಸರು ಹೇಳಿದರು. ಚೀನೀ ರಾಯಭಾರಿ ವೆಲಯಿಟಾವೋಮಿಂಗರು ಶಾಂತಿ ರಕ್ಷಣೆಯ ಬಗ್ಗೆ ಒಂದು ಕರಾರು ಮಾಡಲು ಹಲ್ಲರೊಡನೆ ಚರ್ಚೆಯಾಯಿತೆಂದು ತಿಳಿಸಿದರು.

ಹಲ್ಲರಂತೂ ರಶ್ಯ ಬ್ರಿಟನು ಚೀನ ಪ್ರತಿನಿಧಿಗಳೊಡನೆ ಮಾತನಾಡಲು ತಾನು ಸಿದ್ಧರಿರುವುದಾಗಿ ಮೊದಲೇ ತಿಳಿಸಿದ್ದರು ಮಾತ್ರವಲ್ಲದೆ ತಮ್ಮ ಸಿನೇಟಿನ ಯುದ್ಧನಂತರದ ಪುನರ್ಘಟನೆ ಸಲಹೆ ಸಮಿತಿ ಸದಸ್ಯರೊಡನೆಯೂ ಆರಂಭದ ಮಾತುಕತೆ ಮುಗಿಸಿದ್ದು ಮಿಕ್ಕುಳಿದ ಮಿತ್ರ ರಾಷ್ಟ್ರಗಳೊಡನೆ ಮಾತನಾಡಲು ಈಗ ತಾವು ಸಿದ್ಧರಿರುವುದಾಗಿ ಪ್ರಕಟಿಸಿದ್ದರು. ಅಧ್ಯಕ್ಷರ ಸಮ್ಮತಿಯಂತೆ ಈ ರಾಷ್ಟ್ರಗಳ ಪ್ರತಿನಿಧಿಗಳೊಡನೆ ಮಾತನಾಡುವುದಲ್ಲದೆ, ಮುಂದಿನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಗಿಸುವ ಕುರಿತು ಅಮೆರಿಕೆನ್ ಕಾಂಗ್ರೆಸಿನ ಎರಡು ಸಭೆಗಳ ಎರಡು ಪಕ್ಷಗಳ ಮುಖಂಡರೊಡನೆಯೂ ತಾವು ವಿಚಾರ ವಿನಿಮಯ ನಡಿಸುತ್ತಿರುವುದಾಗಿಯೂ ತಮ್ಮ ಹೇಳಿಕೆಯಲ್ಲಿ ಹಲ್ಲರು ಸ್ಪಷ್ಟ ಮಾಡಿದರು. ಮೋಸ್ಕೋ ನಿರ್ಣಯದಂತೆ ಬ್ರಿಟೆನು ರಶ್ಯ ಮತ್ತು ಚೀನಗಳ ಪ್ರತನಿಧಿಗಳನ್ನು ಕರೆಯಿಸಿ ಬೇಗನೆ ಸಭೆ ಜರಗಿಸಬೇಕೆಂದು ಕಾರ್ಡೆಲ್ ಹಲ್ಲರ ಅಭಿಪ್ರಾಯವಿರುವುದಾಗಿ ತಿಳಿದಿದೆ.

ಚರ್ಚಿಲರ ಮೇಲೆ ಟೀಕೆ

ಲಂಡನಿನಲ್ಲಿ ಮಿತ್ರರ ವಿಜಯದ ಬಗ್ಗೆ ಒಂದು ಬಗೆಯ ಸಂತೋಷವಿದ್ದರೂ ರಾಜಕೀಯ ಅಭಿಪ್ರಾಯವನ್ನು ಕುರಿತು ಒಂದು ರೀತಿಯ ಮೌನ ಪ್ರದರ್ಶಿಸಲಾಗಿದೆ. ಚರ್ಚಿಲರು ಫ್ರಾಂಕೋನಿಗೆ ಬೆಣ್ಣೆ ಹಾಕುತ್ತಿದ್ದಾರೆಂದು ಸೆಸಿಲ್ ಬ್ರಾನ್ ಮತ್ತು ವಿಂಚೆಲರು ಟೀಕಿಸಲು ಪ್ರಾರಂಭ ಮಾಡಿದ್ದಾರೆ.

ಚರ್ಚಿಲರ ಮಾತುಗಳು ಫೇಸಿಸಮನ್ನು ಬಲಗೊಳಿಸುವಂತಿದ್ದು ಮಿತ್ರರ ಹೆದರಿಕೆ ಮಾತಿಗೆ ತಾವು ಅಂಜಬೇಕಾದ ಕಾರಣವಿಲ್ಲವೆಂದು ತಟಸ್ಥ ರಾಷ್ಟ್ರಗಳು ತಿಳಕೊಳ್ಳುವ ಪರಿಸ್ಥಿತಿಯನ್ನು ತಂದೊಡ್ಡಿವೆಯೆಂದು ಸೆಸಿಲ್ ಬ್ರಾನರು ಚರ್ಚಿಲರನ್ನು ಟೀಕಿಸಿದ್ದಾರೆ.

ಇಂಚೆಲ್ಲರು ಇನ್ನಷ್ಟು ತೀವ್ರವಾಗಿ ಟೀಕಿಸಿ ರಕ್ತ, ಬೆವರು, ಕಂಬನಿ ಸುರಿಸಿ ಕೊನೆಗೆ ನಿಕೃಷ್ಟವಾದ ಲಾಭ ಬಡಕ ಧೋರಣೆಗೆ ಬಂದು ಮುಟ್ಟಿದಂತಾಯಿತು ಎಂದು ಚರ್ಚಿಲ ಧೋರಣೆಯ ಕುರಿತು ಆರೋಪ ಹೇರಿಸಿದ್ದಾರೆ.

ಸ್ಪೈನಿನಲ್ಲಿ ಕ್ರಾಂತಿಯಾಗದಂತೆ ಫ್ರಾಂಕೋನಿಗೆ ಬೆಂಬಲ ಕೊಟ್ಟು ಬಲಗೊಳಿಸುವುದೇ ಚರ್ಚಿಲರ ಉದ್ದೇಶವಿರಬಹುದು. ಚರ್ಚಿಲರ ಮಾತಿನಿಂದ ಯೂರೋಪನು ತಮ್ಮ ತಮ್ಮ ವರ್ಚಸ್ಸಿನ ಪ್ರದೇಶಗಳನ್ನಾಗಿ ವಿಭಜಿಸುವ ಯುಕ್ತಿ ಕಂಡು ಬರುತ್ತದೆಯೆಂಬುದಾಗಿ ಎನ್ನೆಸ್ ಮೆಕ್ಕ್ವಿರ್ಕರು ಅಭಿಪ್ರಾಯಪಡುತ್ತಾರೆ. ಒಟ್ಟಿನಿಂದ ಚರ್ಚಿಲರ ಮಾತಿನಿಂದ ಯುದ್ಧದ ನಡುವಳಿ ಕುರಿತು ಆಗಾಗ ಬದಲಾವಣೆಯಾಗುತ್ತಿದೆ, ಎಂದು ಅಭಿಪ್ರಾಯ ಅಮೆರಿಕದ ಮುಖಂಡರಲ್ಲಿಯೂ ಕಂಡು ಬರುತ್ತದೆ.

ಈಗಲಂತೂ ಅಧಿಕಾರದ ಬಗ್ಗೆ ಈ ಯುದ್ಧ ನಡೆದಿದೆಯೆಂದು ಸ್ಪಷ್ಟವಾಯಿತು. ಯಾರಿಗೂ ಸಮಾಧಾನವಿಲ್ಲದದ್ದರೂ, ಸಣ್ಣ ಸಣ್ಣ ರಾಷ್ಟ್ರಗಳನ್ನು ಕೀಳಟ್ಟದಲ್ಲಿಟ್ಟು ಅವುಗಳ ಮಟ್ಟಿಗೆ ದೊಡ್ಡ ರಾಷ್ಟ್ರಗಳು ಶಾಂತಿ ವ್ಯವಸ್ಥೆ ಮಾಡುವವೆಂಬ ಸಾಮಾನ್ಯ ಅಭಿಪ್ರಾಯವು ಈಗ ಖಚಿತವಾಗ ತೊಡಗಿದೆಯೆಂದು ದೂರದೃಷ್ಟನ್ನರು ಅಭಿಪ್ರಾಯ ಪಡುತ್ತಾರೆ.

ಮುಂದಿನ ಮಾರ್ಗ

ಸುಮಾರು ಎಂಟು ವಾರಗಳ ಹಿಂದೆ, ಯೂರೋಪಿನ ಮೇಲೆ ಮಹತ್ತಾದ ಮಿತ್ರ ಧಾಳಿಯಾಗುವುದೆಂದು ಪ್ರಕಟವಾದ ಕೂಡಲೇ ಹಿಟ್ಲರನ ಕೋಟೆಗಳ ಮೇಲೆ ಮುತ್ತಿಗೆ ಖಂಡಿತವೆಂಬುದು ನಿಜವಾಗಿತ್ತು. ಆ ಮೇಲೆ ಮುಖಂಡರು ಕೊಟ್ಟ ಹೇಳಿಕೆ ಮತ್ತು ಬಂದ ವರದಿಗಳಿಂದೆಲ್ಲಾ ಮಿತ್ರರು ಮಹಾಯೋಜನೆ ಕೈಕೊಂಡಿರುವರೆಂದು ಸ್ಪಷ್ಟವಾಯಿತು ಇಷ್ಟಿದ್ದರೂ ಮುಂದಿನ ಮಾರ್ಗದ ಕುರಿತು ಮಿತ್ರ ಪತ್ರಿಕೆಗಳು ಮೌನದಿಂದಿರುವ ನಿಮಿತ್ತ ಯಾವುದೂ ನಮಗಿದು ವರೆಗೂ ಸರಿಯಾಗಿ ಗೊತ್ತಾಗಲಾರದು.

ಬಹುಶಃ ಇದೆಲ್ಲವನ್ನೂ ರಹಸ್ಯವಾಗಿಟ್ಟಿರಲೂ ಸಾಕು. ನಾವೀಗ ಜೂನ್ ತಿಂಗಳಿಗೆ ಮುಟ್ಟಿರುವುದರಿಂದ ಈ ವಿಷಯ ಊಹಾಪೋಹೆಗಳುಂಟಾಗುವುದು ಸಹಜವಿದೆ. ಪ್ರೆಸಿಡೆಂಟ್ ರೂಸ್‌ವೆಲ್ಟರು ಇತ್ತೀಚೆಗೆ ಕೊಟ್ಟ ಹೇಳಿಕೆಯೊಂದರಲ್ಲಿ ಯೂರೋಪಿನ ಆಕ್ರಮಣವು ಜೂನ್, ಜುಲೈ, ಅಗಸ್ಟ್ ತಿಂಗಳಲ್ಲಿ ಸಂಭವಿಸುವುದೆಂದು ಹೇಳಿದ್ದಾರೆ. ಅಂತೂ ಈ ಮಳೆಗಾಲದಲ್ಲಿ ಆ ಕಾರ್ಯಕಲಾಪಗಳನ್ನು ಮಿತ್ರರು ಮಾಡುವರೆಂದು ನಾವಿದರಿಂದ ಅರ್ಥಮಾಡಿಕೊಳ್ಳಬಹುದು. ಬೇರೆ ಯುದ್ಧ ವರದಿಗಾರರು, ಆಕ್ರಮಣ ಕಾರ್ಯವು ಪೂರ್ವ, ದಕ್ಷಿಣ ಮತ್ತು ಪೂರ್ವ ದಿಕ್ಕುಗಳಿಂದ ಆಗುವುದೆಂದೂ ಹೇಳಿದ್ದಾರೆ.

ಪೂರ್ವ ದಿಕ್ಕಿನಿಂದ ಆಕ್ರಮಣವಾಗುವುದಿದ್ದರೆ ಅದು ಕೆಂಪು ಸೈನ್ಯದ ಮಳೆಗಾಲದ ಧಾಳಿ. ಕೆಂಪು ದಳವಾದರೂ ಕಳದ ಆರು ವಾರಗಳಿಂದ ಈ ಸಿದ್ಧತೆಗಳನ್ನು ಮಾಡುತ್ತಲೇ ಇದೆ. ಸ್ಟಾಲಿನರೂ ತಮ್ಮ ಮೇ ದಿನದ ಭಾಷಣದಲ್ಲಿ, ರಕ್ತ ದಳವು ರಶ್ಯದಲ್ಲದ ಗಡಿಯನ್ನು ಸ್ವತಂತ್ರಗೊಳಿಸುವ ಕಾಲವು ಬೇಗನೇ ಬರುವುದೆಂದೂ ಹೇಳಿದ್ದರು. ಅದಾದರೂ ಮಳೆಗಾಲದ ಧಾಳಿಯೆಂದೂ ನಾವು ಊಹಿಸಬಹುದಾಗಿದೆ.

ಇನ್ನು ಕೆಲವು ವರದಿಗಾರರು ಹೇಳುವುದೇನೆಂದರೆ, ರೋಮನ್ನು ಆಕ್ರಮಿಸುವುದೇ ಮಿತ್ರರ ಮುಂದಿನ ಪ್ರಥಮ ಕಾರ್ಯವೆಂದು; ಅದೇ ದ್ವಿತೀಯ ರಂಗದ ಪ್ರಾರಂಭವೆಂದೂ ಅದರ ಅಭಿಪ್ರಾಯವಾಗಿದೆ. ಫ್ರಾನ್ಸಿನ ಮೇಲೆ ಧಾಳಿಯಾಗುವ ಸುದ್ದಿಯೂ ಪ್ರಬಲವಾಗಿದೆ. ಆದರೆ ಇದರ ಕುರಿತು ಯಾವುದೇ ಚಟುವಟಿಕೆಗಳೂ ಸದ್ಯಕ್ಕೆ ಕಂಡು ಬರುವುದಿಲ್ಲ. ಆದರೆ ಬೊಂಬು ಹಾಕುವ ಕೆಲಸ ಮಾತ್ರ ನಡೆದಿದೆ. ಇದು ಫ್ರಾನ್ಸಿನ ಮೇಲೆ ಮಾತ್ರವಲ್ಲ, ಇತ್ತೀಚೆಗೆ ಜರ್ಮನಿಯ ಮೇಲೂ ಪ್ರಬಲವಾಗಿದೆ.

ಈ ಲೇಖವು ಪ್ರಕಟವಾಗುವುದರೊಳಗೆ ಯೂರೋಪಿನಲ್ಲಿ ಮಿತ್ರರು ದ್ವಿತೀಯ ರಂಗ ತೆರೆದಿರುವರಾಗಿಯೂ ಜರ್ಮನ್ ವಿರೋಧವು ಅಧಿಕವಿದ್ದರೂ, ಮಿತ್ರರು ಫ್ರಾನ್ಸಿನ ಕರಾವಳಿಯಲ್ಲಿ ಕಾಲೂರಿ, ಬಹಳ ವೇಗದಿಂದ ಮುಂದೆ ಸಾಗುತ್ತಿರುವರಾಗಿ ತಿಳಿದುಬರುತ್ತದೆ.

ಇತರ ಸುದ್ದಿಗಳು

ಮಿತ್ರರು ರೋಮನಗರವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವರು. ಅಲ್ಲದೆ ಅಲ್ಲಿಂದ ಮುಂದೆ ಸಾಗುತ್ತಿರುವರು. ಜರ್ಮನ್ ದಂಡುಗಳು ಹಿಂಗಾಲು ಹಾಕುತ್ತಿರುವರಾಗಿ ತಿಳಿದುಬರುತ್ತದೆ.

ಮಿತ್ರರ ದ್ವಿತೀಯ ರಂಗದ ಕಾರ್ಯವು ಯಶಸ್ವಿಯಾಯಿತೆಂದರೆ ಈ ಕಠೋರ ಯುದ್ಧವು ತ್ವರ್ಯದಲ್ಲೇ ಕೊನೆಗೊಳ್ಳುವುದೆಂಬ ಭರವಸೆಗಳುಂಟಾಗಿವೆ. ಇಷ್ಟರ ತನಕದ ಯುದ್ಧಗತಿಯನ್ನು ನೋಡಿದರೆ ಮಿತ್ರರಿಗೆ ಮೇಲ್ಮೆಯಿಷ್ಟಂತೆ ತೋರುತ್ತದೆ.

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ಬೇಗನೇ ಲಂಡನನ್ನು ಸಂದರ್ಶಿಸುವರೆಂದು ವರದಿಯಾಗಿದೆ. ಅಲ್ಲಿ ಅವರು ಪ್ರಾಮುಖ್ಯ ಮಾತುಕತೆ ಮಾಡುವರೆಂದೂ ಸುದ್ದಿ ಇರುವುದರಿಂದ ಅಮೆರಿಕದಲ್ಲಿ ಈಗ ಇದು ಪ್ರಾಮುಖ್ಯವಾದೊಂದು ಊಹಾಪೋಹೆಗಳ ಸಂಗತಿಯಾಗಿರುವುದು.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

(—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸ್ವದೇಶಾಭಿಮಾನಿ

ತಾರೀಖು 9—6—1944

ರಿಂದ [illegible] ನಿರಾಕರಿ ದರು.

ಡಿ.ವೆಲರನ್ನು ಈ ಸಂದರ್ಭದಲ್ಲಿ ಅಭಿವಂದಿಸಬೇಕಾಗಿದೆ. ಅವರು ತೋರಿದ ಧೈರ್ಯ, ಅಭಿಮಾನ, ಸ್ವಾತಂತ್ರ್ಯ ರೀತಿಗಳು ಕೊಂಡಾಡಲ್ಪಡಬೇಕು. ಡಿ.ವೆಲರ ಈ ವಿಜಯ ಅವರ ಕೀರ್ತಿಯನ್ನು ಮಾತ್ರವಲ್ಲ ಅಯರ್ಲೆಂಡಿನ ಕೀರ್ತಿಯನ್ನೂ ಬೆಳಸಿದೆ.

ಡಿವೆಲರ ವಿಜಯ

ಅಯರ್ಲೆಂಡಿನ ಚುನಾವಣೆಯಲ್ಲಿ ಡಿ.ವೆಲರಿಗೆ ಬಹುಮತ ದೊರೆತ್ತು ಯಶಸ್ವಿಯಾಗಿರುವುದು, ಅವರ ಇಂದಿನ ಧೋರಣೆಯು ಜನಪ್ರಿಯವಾಗಿರುವುದೆಂಬುದಕ್ಕೆ ಸ್ಪಷ್ಟವಾದ ಆಧಾರವಾಗಿದೆ. ಡಿ.ವೆಲರ ಪಕ್ಷವು ಸರಕಾರೀ ಪಕ್ಷವಾಗಿದ್ದು, ಅವರನ್ನು ವಿರೋಧಿಸುವವರು ಸಮ್ಮಿಶ್ರ ಮಂತ್ರಿ ಮಂಡಳವನ್ನು ಮಾಡಲು ಅಪೇಕ್ಷೆ ಪಟ್ಟಿದ್ದು ಈಗ ಅವರ ಆಶೆ ನಿರಾಶೆಯಾಗಿದೆ.

ಡಿ.ವೆಲರ ವಿಜಯವು ಅವರ ತಾಟಸ್ಥ್ಯ ಧೋರಣೆಗೆ ಜನಸಮ್ಮತಿಯಿದೆಯೆಂದೂ ತಿಳಿಸುತ್ತದೆ. ಇದರಿಂದ ಇಂದು ಅವರ ಗೌರವ ಇನ್ನಷ್ಟು ಹೆಚ್ಚಿದೆ. ಇತ್ತೀಚೆಗೆ ಅಮೆರಿಕ ಬ್ರಿಟನುಗಳೊಡನೆ ಡಿ.ವೆಲರಿಗೆ ಭಿನ್ನಾಭಿಪ್ರಾಯ ಹುಟ್ಟಿದರೂ, ಆ ತಾಟಸ್ಥ್ಯ ಧೋರಣದ ಸಂದರ್ಭದಲ್ಲಿಯೇ ಈ ಚುನಾವಣೆಯೂ ನಡೆದಿರುವುದರಿಂದ ಡಿ.ವೆಲರಾ ನಿಜವಾಗಿ ಸತ್ವಪರೀಕ್ಷೆಗೊಳಗಾಗಿ ಯಶಸ್ವಿಯಾಗಿದ್ದಾರೆನಬಹುದು.

ಅಯರ್ಲೆಂಡಿನಲ್ಲಿದ್ದ ಅಕ್ಷ ಪಕ್ಷದ ರಾಯಭಾರಿಯನ್ನು ಹೊರ ಹಾಕಬೇಕೆಂದು, ಅಮೆರಿಕನ್ ಸರಕಾರ ಸಾರಿದ್ದಕ್ಕೆ ಡಿ.ವೆಲರು ಗಂಭೀರ ಉತ್ತರವಿತ್ತು, ತನ್ನ ಸ್ಥಾನವನ್ನು ಸ್ಪಷ್ಟಪಡಿಸಿದ್ದಾರೆ. ಅಯರ್ಲೆಂಡು ಅಮೆರಿಕದ ಮಾತಿಗೆ ಬೆದರುವಂತಿಲ್ಲವೆಂದೂ, ಅದಿನ್ನೂ ತಾಟಸ್ಥ್ಯವಹಿಸುತ್ತಿರುವುದರಿಂದ ಯಾವುದೇ ಪಕ್ಷದ ರಾಯಭಾರಿಯಾದರೂ ತಮ್ಮ ಪಾಲಿಗೆ ಒಂದೇ ಎಂಬ ಧೀರ ಗಂಭೀರ ಉತ್ತರ ಕೊಟ್ಟಿದ್ದಾರೆ.

ಅಮೆರಿಕಕ್ಕೆ ಈ ಉತ್ತರವಿತ್ತರೂ, ಅದರಿಂದ ಡಿ.ವೆಲರು ತಮ್ಮ ಸ್ಥಾನದ ಬಗ್ಗೆ ಖಂಡಿತವಿರಲಿಲ್ಲ. ಏಕೆಂದರೆ ಬ್ರಿಟನು ಅಮೆರಿಕ ಕೂಡಿದ ಮಿತ್ರರಾಷ್ಟ್ರಗಳ ಪ್ರಭಾವ ಬೇಕಾದಷ್ಟು ಅಯರ್ಲೆಂಡಿನಲ್ಲಿ ಇದ್ದೆ ಇದೆ. ಅದಾಗಿ ಅವರು ಸಾರ್ವತ್ರಿಕ ಚುನಾವಣೆಯನ್ನಿದಿರಿಸಿದರು. ಹೀಗಿರುವಾಗಲೂ ಇಂದು ಅದರಲ್ಲಿ ವಿಜಯಿಯಾಗಿ ಬಂದಿರುವರೆಂಬುದು ಅವರ ಸ್ಥಾನವನ್ನು ಭದ್ರಗೊಳಿಸಿದರು. ಮತದಾರರು ತನಗೆ ಬಹುಮತ ಕೊಡುವರೆಂಬ ಅವರ ಹಾರೈಕೆ ಸಫಲವಾಯಿತು. ಅಮೆರಿಕದ್ದ ಮಾತನ್ನು ತಿರಸ್ಕರಿಸಿದ್ದರಿಂದ ಡಿ.ವೆಲರ ಪದಚ್ಯುತರಾಗುವ

ಕಡಲರಾಣಿ

—"ಕಡಲುಗಳಲ್ಲಿ ಬ್ರಿಟನಿನ ಪ್ರಭಾವ ಬಲವಾಗಿರುವಾಗ ಇಂಗ್ಲಿಷರು ಇತರ ರಾಷ್ಟ್ರಗಳನ್ನು ಕೀಳ್ಮೆಗೆಯುತ್ತಿದ್ದರು. ತಮ್ಮಾ ತಿರಸ್ಕಾರ ಭಾವವನ್ನು ಗುಪ್ತವಾಗಿಡಲೂ ಅವರು ಲಿಗ ಎಚ್ಚರ ವಹಿಸಲಿಲ್ಲ. ಈಗ ಬ್ರಿಟಿಷ್ ನೌಕಾಬಲಕ್ಕಿಂತ ಅಮೆರಿಕನ್ ನೌಕಾಬಲ ಹೆಚ್ಚಿಗಿದೆ. ವಾಶಿಂಗ್‌ಟನ್ ಲೋಕದ ರಾಜಧಾನಿಯಾಗಿದೆ, ನ್ಯೂಯಾರ್ಕ್ ಆರ್ಥಿಕ ಕೇಂದ್ರವಾಗಿದೆ. ಕಳೆದ ೨೦೦ ವರ್ಷಗಳಿಂದಲೂ ಬ್ರಿಟನು ಅಗ್ರಸ್ಥಾನ ಪಡೆದಿತ್ತು. ಈಗ ಅದಕ್ಕೆ ದ್ವಿತೀಯ ಸ್ಥಾನ ದೊರೆತಿದೆ. ಇದನ್ನರಿತು ಬದಲಾವಣೆ ಮಾಡಿಕೊಳ್ಳಲು ಬ್ರಿಟನು ಇಂದು ಕಲಿತುಕೊಳ್ಳಬೇಕು. ಅದಷ್ಟು ಎಚ್ಚರದಿಂದ, ಗೌರವದಿಂದ ಅಂಥಾ ಬದಲಾವಣೆಗೆ ಹೊಂದಿಕೊಳ್ಳುವುದು ಯೋಗ್ಯ. ಹಿಂದೆ ಬ್ರಿಟಿಷರು ತೋರಿದ ಹೆಮ್ಮೆಯು ಈಗ ಅಟ್ಲಾಂಟಿಕ್ ಕಡಲು ದಾಟಿ ಅಮೆರಿಕದ ಪಾಲಾಗಿದೆ. ಕಡಲುಗಳ ಮೇಲೆ ಅಮೆರಿಕದ ಪ್ರಭಾವವಿಂದು ಬಲವಾಗಿದೆ."

—ಹೀಗೆಂದು ಬ್ರಿಟನಿನ ಪ್ರಸಿದ್ಧ ಮೇಧಾವಿಗಳೂ, ತತ್ವಜ್ಞಾನಿಗಳೂ ಲೇಖಕರೂ ಆದ ಬರ್ಟ್ರಂಡ್ ರಸೆಲರು ಬ್ರಿಟನು ಅಮೆರಿಕಗಳ ನಡುವೆ ಹಿಂದಿನ ಮತ್ತು ಇಂದಿನ ಸಂಬಂಧಗಳ ಕುರಿತು ವಿಮರ್ಶಿಸಿ 'ಸೆಟರ್ಡೆ ಈವಿನಿಂಗ್ ಪೋಸ್ಟ್' ಪತ್ರಿಕೆಯಲ್ಲಿ ಬರೆಯುತ್ತಾರೆ. ಅವರ ಆ ಲೇಖನದ ಶಿರೋನಾಮೆಯು "ಅಮೆರಿಕನರು ಮತ್ತು ಬ್ರಿಟಿಷರು ಮಿತ್ರರಾಗಿ ಉಳಿಯುವರೆ?" ಎಂದಾಗಿರುತ್ತದೆ.

ರಸೆಲರು ತಮ್ಮ ಆ ಲೇಖನದಲ್ಲಿ ಮತ್ತೆ ಹೀಗಂದಿರುವರು.

"ಇಂದಿಗಂತೂ ಬ್ರಿಟನಿನಲ್ಲಿ ಅಮೆರಿಕನರ ಕುರಿತು ಹೆಚ್ಚಿನ ಆದರವಿದೆ. ಆದರ ಸ್ನೇಹ ಸರಕಾರ ಹಿತಕರವಾಗಿ ವರ್ಣಿಸುವುದು ಉಭಯ ರಾಷ್ಟ್ರಗಳಿಗೂ ಲೋಕಕ್ಕೂ ಹಿತವಾಗುವುದು. ನಮ್ಮಲ್ಲಿ ಏಕಾಭಿಪ್ರಾಯವಿದ್ದರೆ ಇಡೀ ಜಗತ್ತನ್ನೇ ನಮ್ಮ ಕಡೆಗೆ ಒಲಿಸಬಹುದು. ಆದರೆ ಅನ್ಯೋನ್ಯ ಸಂಶಯದಿಂದ ಒಮ್ಮತ ಹಾಳಾದರೆ ನಮ್ಮ ಆಶೆ ಅಭಿಪ್ರಾಯಗಳ ವಿರೋಧಿಗಳಿಗೆ ಜಯವುಂಟಾಗುವುದು."

ಬರ್ಟ್ರಂಡ್ ರಸೆಲ್ ಈಗ ಅಮೆರಿಕದಲ್ಲಿರುವರು. ಅವರ ಮಾತು ಅನುಭವದ ಮಾತು, ಆಳವಾದ ಮಾತು. ಅರ್ಥಮಾಡಿಕೊಳ್ಳಬೇಕಾದ ಮಾತು.

ಹಿಂದುಸ್ಥಾನ

ಕಸ್ತೂರಬಾ ಸ್ಮಾರಕ ನಿಧಿಗೆ ಕಾನಪುರದಲ್ಲಿ ೨೫೦೭೪ರೂ. ಕೂಡಿದೆ.

ಮುಂಬಯಿ ಹಾಗೂ ಅಹಮ್ಮದಾಬಾದದಲ್ಲಿ ಇತ್ತೀಚೆಗೆ ವಶಪಡಿಸಿಕೊಂಡ ಬಟ್ಟೆಯನ್ನು ಸಂಯುಕ್ತ ಪ್ರಾಂತ ಜಿಲ್ಲೆಗಳಿಗೆ ಹಂಚಲಾಗಿದೆ.

ಲಖನೌ ನಗರದ ಮುಸ್ಲಿಂ ಲೀಗದವರು ಮುಖ್ಯ ಮಂತ್ರಿಗಳಾದ ಮಲೀಕ ಖಿಜರ ಹಯಾತಖಾನರನ್ನು ಲೀಗದಿಂದ ತಳ್ಳಿದ್ದನ್ನು ಸ್ವಾಗತಿಸಿರುವರು.

ಪೋಲೀಸರು ಲಖನೌದಲ್ಲಿ ಒಂದು ಮನೆ ಝಡತಿ ಮಾಡಿ ಖೊಟ್ಟಿ ನೋಟುಗಳನ್ನು ತಯಾರಿಸುತ್ತಿದ್ದ ಟೋಳಿಯ ಮುಖಂಡನನ್ನು ಸೆರೆಹಿಡಿದಿದ್ದಾರೆ.

ಸಿಂಧ ಅಸೆಂಬ್ಲಿ ಅಧ್ಯಕ್ಷರಾದ ಸಯ್ಯದ ಮಿರಾನಶಹಾ ಅವರು ಮಧ್ಯ ಪೂರ್ವದಲ್ಲಿಯ ಹಿಂದಿ ಸೈನಿಕರಿಗೆ ಭೆಟ್ಟಿಕೊಟ್ಟು ತಿರುಗಿ ಬಂದಿದ್ದು ಅವರ ಹಿತ ಸಂರಕ್ಷಣೆಗಾಗಿ ಯುದ್ಧದ ನಂತರ ಅವರ ಭಿನ್ನ ಮತದಾರ ಸಂಘ ಏರ್ಪಡಿಸಬೇಕೆಂದು ಹೇಳಿದರು.

ಕಾನಪುರ ಪೋಲೀಸರು ಹಾಲವುವಾರ್ಡದಲ್ಲಿ ಒಂದು ಮನೆಯನ್ನು ಝಡತಿ ಮಾಡಲಾಗಿ ೨ ಪಿಸ್ತೂಲು ಹಾಗು ಆಕ್ಷೇಪಾರ್ಹ ಕಾಗದ ಪತ್ರ ಸಿಕ್ಕಿದ್ದರಿಂದ ೪ ಜನರು ಸೆರೆಹಿಡಿಯಲ್ಪಟ್ಟಿದ್ದಾರೆ.

ಸಂಯುಕ್ತ ಪ್ರಾಂತ ಕಾಂಗ್ರೆಸ್ ಕಮಿಟಿಯ ಸಭಾಸದರಾದ ರಾಮ ದುಲಾರಿ ಮಿಶ್ರ ಅವರ ತಂದೆಯವರು ತೀರಿಕೊಂಡಿದ್ದರಿಂದ ಅವರು ೧೪ ದಿವಸ ಪೆರೋಲ ಮೇಲೆ ಬಿಡಲ್ಪಟ್ಟಿದ್ದಾರೆ.

ಪಂಜಾಬದಲ್ಲಿ ಲೀಗವನ್ನು ಸಂಘಟಿಸಲು ೬೦ ಸಾವಿರ ರೂಪಾಯಿ ತೆಗೆದಿಡಲ್ಪಟ್ಟಿವೆ.

ಸಾಗರೋತ್ತರ ಪ್ರದೇಶಗಳಿಂದ ಕಳೆದ ವಾರದಲ್ಲಿ ಹಿಂದುಸ್ಥಾನಕ್ಕೆ ೩೪ ಸಾವಿರ ಟನ್ ಗೋಧಿ ಬಂದಿದೆ.

ಪಾಟಣಾದಿಂದ ೬೦ ಮೈಲಿನ ಮೇಲೆ ಬಹಿಮಾಯಾ ಎಂಬಲ್ಲಿ ೨ನೇ ವರ್ಗದ ಪ್ರವಾಸಿಕನೊಬ್ಬನ ೨೦ ಸಾವಿರ ರೂಪಾಯಿ ಆಭರಣ ಮೊದಲಾದವುಗಳು ಕಳವಾಗಿ ಹೋಗಿದೆ.

ಸುರತ ಬಾಂಬ ಖಟ್ಲೆಯಲ್ಲಿ ಸರಕಾರಕ್ಕೆ ವಿರುದ್ಧ ತಿರುಗಿದ ಮೂವರು ಮಾಫಿಸಾಕ್ಷಿದಾರರನ್ನು ವಿಚಾರಣೆಗೆ ಗುರಿಪಡಿಸಿರುವರು.

ಅಖಿಲ ಗುಜರಾಥ ಒಕ್ಕಲಿಗರ ಮೊದಲನೆ ಪರಿಷತ್ತು ಮಾಂಡವಿ ತಾಲೂಕ ದೇವಗಡದಲ್ಲಿ ಜೂನ್ ತಾ. ೭ಕ್ಕೆ ಸ್ವಾಮಿ ಸಹಜಾನಂದ ಸರಸ್ವತಿಯವರ ಅಧ್ಯಕ್ಷತೆಯಲ್ಲಿ ಸೇರುವದು.

ಸ್ಥಾನ ಬದ್ಧತೆ ಹುಕುಮಿನಲ್ಲಿ ಕಾಣಿಸಿದ ಕಾರಣ ಮೊದಲಾದವುಗಳನ್ನು ಯಾವದೇ ರೀತಿ ಪ್ರಸಿದ್ಧಿಸುವದು ಅಪರಾಧವಾಗುವದೆಂದು ಸರಕಾರದ ಪ್ರಕಟನೆ ಹೊರಟಿದೆ.

ಜಪಾನಿ ರೇಡಿಯೊ ವಾರ್ತೆಗಳನ್ನು ಹರಡುತ್ತಿದ್ದ ಆರೋಪದಿಂದ ಮುರಾದಾಬಾದದಲ್ಲಿ ೧೪ ರೇಡಿಯೋಗಳನ್ನು ಜಪ್ತ ಮಾಡಲಾಗಿದೆ.

ಮುಂಬಯಿ ಸರಕಾರದವರು ಇತ್ತೀಚಿಗೆ ೧೦ ಗಿರಣಿಗಳ ಸಂಬಂಧದಲ್ಲಿ ಹೊರಡಿಸಿದ ಹುಕುಮಿನಿಂದ ಇಲಾಖೆಯಲ್ಲಿಯ ಬಟ್ಟೆ ಗಿರಾಕಿಗಳಿಗೆ ೨೩೦ ಲಕ್ಷ ರೂಪಾಯಿ ಲಾಭವಾಗಬಹುದೆಂದು ಅಂದಾಜು ಮಾಡಲಾಗಿದೆ. ಜಪ್ತ ಮಾಡಿದ ಅರಿವೆಗಳನ್ನು ೧೪ಂಕ್ಕೆ ೧೪ಕ್ಕಿಂತ ಹಾಗು ಅವುಗಳಲ್ಲಿ ತಯಾರಾದವುಗಳನ್ನು ೧೦೦ಕ್ಕೆ ೧೦ಕ್ಕಿಂತ ಹೆಚ್ಚಿಗೆ ತೆಗೆದು ಕೊಳ್ಳದೆ ಮಾರುವವರಿಗೆ ಅವುಗಳನ್ನು ಕೊಡಲಾಗುವದು ಮೇಲಿನ ೧೦ ಗಿರಣಿಗಳು ಕೂಡಿ ವರ್ಷಕ್ಕೆ ೩೫೯೦ ಲಕ್ಷ ಯಾರ್ಡ ಬಟ್ಟೆ ತಯಾರಿಸುವವು ಮತ್ತು ಜಪ್ತ ಮಾಡಿದ ಬಟ್ಟೆ ೫೬೦೦೦೦೦ ಯಾರ್ಡ ಇರುವದು. ಎಲ್ಲ ಕೂಡಿ ೩೫೫೬೦೦೦೦೦ ಯಾರ್ಡ ಆಗುವದು.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ- ಅಷ್ಟು ಚರ್ಮ ಮೃದುಕರ-
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಜಾಂಬಕನ್ನುಪಯೋಗಿಸಿ ನಿಮ್ಮ ಪಾದದನೋವನ್ನು ಗುಣಪಡಿಸಿರಿ.
ಪ್ರತಿರಾತ್ರಿ ತಪ್ಪದೆ ಇದನ್ನು ಹಚ್ಚಿರಿ.
ನೋವುಳ್ಳ ಪಾದಗಳಿಗೆ ಮತ್ತು ಬಾತುಹೋದ ಮಣಿಗಂಟಿಗೆ ಜಾಂಬಕಿನಷ್ಟು ಉತ್ತಮ ಔಷಧಿ ಬೇರಿಲ್ಲ. ಮಣಿಗಂಟಿಗೆ ಪಾದಕ್ಕೆ ಬೆರಳುಗಳ ಮಧ್ಯಕ್ಕೆ ಇದನ್ನು ಮೆಲ್ಲಗೆ ಹಚ್ಚಿ ಉಜ್ಜಿರಿ. ಇದರಲ್ಲಿರುವ ಉತ್ತಮ ವನೌಷಧಿ ಸತ್ವವು ಚರ್ಮದೊಳಗೆ ಹೀರಲ್ಪಟ್ಟು ನೋವನ್ನು ಕಡಿಮೆಮಾಡಿ ಗಾಯವನ್ನು ಗುಣಪಡಿಸುತ್ತದೆ. ಚರ್ಮ ಗಟ್ಟಿಯಾದದ್ದು ಮೃದುವಾಗುತ್ತದೆ. ಆಳದ ಗಾಯಗಳೂ ಕೂಡುತ್ತವೆ. ನೀವು ಇದರಿಂದ ಸಂತೋಷಪಡುವಿರಿ.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ
ZAM-BUK
ಪ್ರಾಣಕೊಟ್ಟು ವಿರಚಿತವಾದುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಫುಡ್ ಕೌನ್ಸಿಲ್ ಸಭೆಯ ವರದಿ

ಕಳೆದ ತಾ. ೨೭-೫-೧೯೪೪ರಂದು ಫುಡ್ ಕೌನ್ಸಿಲ್ ಸಭೆಯಲ್ಲಿ ಗೋದಿಯ ವಿತರಣೆಯ ಕುರಿತು ಚರ್ಚೆಯು ನಡೆದು ಈ ಕೆಳಗಿನ ನಿರ್ಣಯಗಳಾದವು.

A ರೇಶನಿಂಗ್ ಜ್ಯಾರಿಯಲ್ಲಿದ್ದ ಸ್ಥಳಗಳಲ್ಲಿ

೧ ಒಂದು ವರ್ಷದ ಮಟ್ಟಿಗೆ ತಮ್ಮ ಉಪಯೋಗಕ್ಕೆ ತಮ್ಮದೇ ಅಕ್ಕಿ ಇದ್ದು ಅದನ್ನು ರೇಶನಿಂಗ್ ಆಫೀಸರರಿಗೆ ತಿಳಿಸಿದ್ದರೆ ಸಮ್ಮಂದಪಟ್ಟ ರೇಶನಿಂಗ್ ಆಫೀಸರರಿಗೆ ಗೋದಿಗಾಗಿ ಅರ್ಜಿ ಮಾಡಬೇಕು. ಸಮ್ಮಂದಪಟ್ಟ ರೇಶನಿಂಗ್ ಆಫೀಸರರು ರೇಶನ್ ಕಾರ್ಡು ಉಪಯೋಗಿಸದೇ ಇದ್ದ ಅವಧಿಗೆ ಉಪಯೋಗಿಸುವುದಕ್ಕೆ ಗೋದಿಯನ್ನು ಕೊಂಡುಕೊಳ್ಳಲು ಪರ್ಮಿಟನ್ನು ಕೊಡುವರು. ಅರ್ಜಿದಾರರು ಆ ಪರ್ಮಿಟಿನಲ್ಲಿ ಕಾಣಿಸಿದಷ್ಟು ಗೋದಿಯನ್ನು ಎಸ್. ಕೆ. ಸಿ. ಸಿ. ಡಬ್ಲ್ಯು ಎಸ್. ಸ್ಟೋರಿನಿಂದಾಗಲೀ ಇದರ ಬ್ರಾಂಚುಗಳಲ್ಲಾಗಲೀ ಅದೇ ಪರಿಮಾಣದಷ್ಟು ಅಕ್ಕಿಯನ್ನು ಹಿಂದೆ ಕೊಟ್ಟು ಗೋದಿಯನ್ನು ಪಡಕೊಳ್ಳಬೇಕು. ಗೋದಿ ಮತ್ತು ಅಕ್ಕಿಯ ಬೆಲೆಯ ವ್ಯತ್ಯಾಸವನ್ನು ನಿಯಂತ್ರಿಸಲ್ಪಟ್ಟ ದರದಲ್ಲಿ ಕೊಂಡುಕೊಳ್ಳುವುದು ಮತ್ತು ಕೊಂಡು ಕೊಂಡ ಗೋದಿಗೆ ಕೊಟ್ಟ ರಶೀದಿಯನ್ನು ತಗೆದಿಟ್ಟು ಅಕ್ಕಿಯ ಸ್ಟಾಕನ್ನು ತನಿಕಿ ಮಾಡಲು ಬರುವ ಆಫೀಸರರು ಕೇಳಿದಾಕ್ಷಣ ತೋರಿಸತಕ್ಕದ್ದು.

೨ ಹತ್ತು ಮಣ ಅಕ್ಕಿಗಿಂತ ಕಡಿಮೆ ಇದ್ದು ಒಂದು ತಿಂಗಳಿಗೆ ಸಾಕಾಗುವಷ್ಟು ಅಕ್ಕಿಗಿಂತ ಹೆಚ್ಚಿಗೆ ಇದ್ದು ರೇಶನ್ ಕಾರ್ಡನ್ನು ಉಪಯೋಗಿಸದೇ ಇರುವವರು ರೇಶನಿಂಗ್ ರೂಲ್ಸುಗಳಿಗನುಸಾರವಾಗಿ ತಮ್ಮ ತಮ್ಮ ರೇಶನ್ ಕಾರ್ಡುಗಳಲ್ಲಿ ಕಾಣಿಸಿದ ಸಂಪೂರ್ಣ ಕಾಲಾಂಶ ಗೋದಿಯನ್ನು S. K. C. C. W. Stores, ದಿಂದ ಅಷ್ಟೆ ಪರಿಮಾಣದಲ್ಲಿ ಪಡಕೊಳ್ಳಬಹುದು. ಹಾಗೆ ಪಡಕೊಂಡ ಗೋದಿಗೆ ಸಿಕ್ಕಿದ ರಶೀದಿಯನ್ನು ಜಾಗ್ರತೆಯಲ್ಲಿಟ್ಟು ತನಿಕಿಗೆ ಬರುವ ಆಫೀಸರರು ಕೇಳಿದಾಕ್ಷಣ ತೋರಿಸಬೇಕು. ಸ್ಟೋರಿನವರು ಕೂಡಾ ಇಂಥಾ ಲೆಕ್ಕಗಳನ್ನು ಬೇಗನೇ ತನಿಕಿ ಮಾಡಲು ಅನುಕೂಲವಾಗುವಂತೆ ಇದಕ್ಕಾಗಿ ಪ್ರತ್ಯೇಕ ಲೆಕ್ಕವನ್ನಿಡಬೇಕು.

೩. ರೇಶನ್ ಕಾರ್ಡುಗಳನ್ನು ಉಪಯೋಗಿಸುವವರಿಗೆ ಕಾಲಾಂಶದಷ್ಟು ಗೋದಿಯು ಕೊಡಲ್ಪಡುತ್ತದೆ. ಕಾಲಾಂಶಕ್ಕಿಂತಲು ಹೆಚ್ಚು ಗೋದಿಯು ಬೇಕಾದಲ್ಲಿ ಸಮ್ಮಂದಪಟ್ಟ ರೇಶನಿಂಗ್ ಆಫೀಸರರು ಶಿಫಾರಸ್ಸುಮಾಡಿದರೆ ಕೊಡಬಹುದು. ಈ ವಿಷಯದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಸಾಕಷ್ಟು ಗೋದಿಯು ಒದಗಿಸುವಂತೆ ವಿನಂತಿಸಲಾಗಿದೆ.

B ರೇಶನ್ ಜ್ಯಾರಿಗೆ ಬಾರದ ಸ್ಥಳಗಳಲ್ಲಿ

೧ ತಮ್ಮ ಉಪಯೋಗಕ್ಕೆ ತಮ್ಮದೇ ಅಕ್ಕಿ ಇದ್ದ ಜನರ ವಿಷಯದಲ್ಲಿ ಡಿಪ್ಯುಟಿ ಕಲೆಕ್ಟರ್, ತಹಶಿಲ್ದಾರ್, ಡಿಪ್ಯುಟಿ ತಹಶಿಲ್ದಾರರು ಅವರಿಗೆ ರೇಶನ್ ಸ್ಥಳಗಳಲ್ಲಿ ಜಾರಿಯಲ್ಲಿದ್ದ ಪ್ರಮಾಣದಷ್ಟೆ ಗೋದಿಯನ್ನುಕೊಟ್ಟು ಅಷ್ಟೇ ಪ್ರಮಾಣದಲ್ಲಿ ಅಕ್ಕಿಯನ್ನು ಹಿಂದೆ ತೆಗೆದುಕೊಳ್ಳಬೇಕು ಈ ವಿಷಯದಲ್ಲಿ ಮೇಲೆ ಕಾಣಿಸಿದ ಅಧಿಕಾರಿಗಳು ತಕ್ಕ ವ್ಯವಸ್ಥೆಗಳನ್ನು ಕೂಡಲೇ ಮಾಡಬೇಕು ಇಂಥಾ ಸಳ್ಳಗಳಿಗೆ ತಹಶಿಲ್ದಾರ್ ಅಥವಾ ಡಿಪ್ಯುಟಿ ತಹಶಿಲ್ದಾರರ ಆರ್ಡರಿನ ಮೇರೆಗೆ S. K. C. C. W. Store Ltd, ಇದರ ಬ್ರಾಂಚಿನವರು ಗೋದಿಯನ್ನು ಕೂಡಲೇ ಕಳುಹಿಸುವ ಏರ್ಪಾಡು ಮಾಡಬೇಕು ಮತ್ತು ಈ ವಿಷಯು ಪ್ರತ್ಯೇಕ ಲೆಕ್ಕವನ್ನಿಡಬೇಕು.

೨ ಐಡೆಂಟಿ ಕಾರ್ಡುಗಳಿದ್ದ ಕಡೆಯಲ್ಲಿ ರೆವೆನ್ಯೂ ಡಿವಿಜನಲ್ ಆಫೀಸರರು ತಹಶಿಲ್ದಾರರು ಯಾ ಡಿಪ್ಯುಟಿ ತಹಶಿಲ್ದಾರರು ಕಾಲಾಂಶ ಗೋದಿಯನ್ನು ಒದಗಿಸುವ ಏರ್ಪಾಡನ್ನು ಮಾಡುವಂತೆ ವಿನಂತಿಸಲಾಗಿದೆ. ಅದೇ ವಿತರಣಾಕಾರಿಗಳಿಗೆ ಗೋದಿಯನ್ನು ಒದಗಿಸುವ ಏರ್ಪಾಡನನ್ನು ಕೂಡಲೇ ಮಾಡಲಾಗುವುದು

ಕೆನರಾ ವಾಣಿಜ್ಯ ಸಂಘ

ಈಚಿಗೆ ಶ್ರೀ ಕಸ್ತೂರಿ ನಾಗೇಶ ಪೈ ಅವರ ಅಧ್ಯಕ್ಷತೆಯಲ್ಲಿ ಸಂಘದ ಮಂದಿರದಲ್ಲಿ ಜರಗಿದ ಅದರ ವಾರ್ಷಿಕ ಸಭೆಯಲ್ಲಿ ವಾರ್ಷಿಕ ಲೆಕ್ಕ ಪತ್ರ ಇತ್ಯಾದಿಗಳ ಸ್ವೀಕಾರವಾಗಿ ಮುಂದಿನ ವರ್ಷದ ಅಧಿಕಾರಿ ಮಂಡಲದ ಚುನಾವಣೆಯಾಯಿತು ಶ್ರೀ. ವಿಠಲ್ಜಿ ಪುರುಷೋತ್ತಮ್ ಶೇಟ್ ಅವರು ಅಧ್ಯಕ್ಷರು; ಜನಾಬ್ ಮಹಮ್ಮದ್ ಅಬ್ದುಲ್ ಸಕೂರ್ ಅವರು ಉಪಾಧ್ಯಕ್ಷರು; ಶೀಗಳಾದ ಎಂ. ರಾಘವೇಂದ್ರ ಪೈ ಅವರೂ ಮಣೇಲ್ ಶ್ರೀನಿವಾಸ ನಾಯ್ಕರೂ ಜತೆ ಕಾರ್ಯದರ್ಶಿಗಳು; ಶ್ರೀ ಎಂ. ಎಲ್. ಗೋಪಾಲ ಸೆಟ್ಟಿ ಅವರು ಕೋಶಾಧಿಕಾರಿಗಳು.

ಡಾ। ಮೂಂಜೆಯವರು ಮಂಗಳೂರಲ್ಲಿ

ನಿನ್ನೆ ಸಂಜೆ ಉಡುಪಿ ಕಡೆಯಿಂದ ಡಾ. ಮೂಂಜೆಯವರು ಇಲ್ಲಿಗೆ ದಯೆಮಾಡಿಸಿ ಕೆನರಾ ಹ್ಯಾ ಸ್ಕೂಲಿನ ವಠಾರದಲ್ಲಿ ಕೆಲವು ಮಾತುಗಳನ್ನು ನೆರೆದವರಿಗೆ ಹೇಳಿದರು. ಹಿಂದುಸ್ಥಾನದ ಜಾತಿಗಳು, ಹಿಂದೂ ಸಂಘಟನೆ ಮೊದಲಾದ ವಿಚಾರಗಳನ್ನೆತ್ತಿಕೊಂಡು, ಜಗಳಗಂಟತನವಾರಂಭವಾದ ಅಂದಿನಿಂದ ಹಿಂದೂ ಸಂಘಟನೆಯ ಶಬ್ದ ಪ್ರಚಾರಕ್ಕೆ ಬಂತೆಂದೂ, ಜಗತ್ತಿನ ಇತರ ಕಡೆಗಳಲ್ಲಿಯೂ ಜಾತಿಗಳನ್ನು ಇತರ ರೂಪದಿಂದ-ಗ್ರೂಪುಗಳೆಂಬ ವರ್ಗದಿಂದ-ನಾವು ನೋಡಬಹುದೆಂದೂ, ಇಂಗ್ಲೆಂಡಿನಲ್ಲಿ ರೋಮನ್ ಕೆಥೊಲಿಕ್ ಮತ್ತು ಪ್ರಾಟೆಸ್ಟೆಂಟ್ ಧರ್ಮಾವಲಂಬಿಗಳಲ್ಲಿ ಹೇಗೆ ಕಾದಾಟ ನಡೆದಿತ್ತು ಎಂದೂ ಮುಂತಾಗಿ ವಿವರಿಸಿದರು. ಕೆಲ ಸಂದರ್ಭಗಳಲ್ಲಿ ತಮ್ಮ ಜೀವನದ ಕೆಲವೊಂದು ಸ್ವಾರಸ್ಯವಾದ ಅನುಭವಗಳನ್ನೂ ತಿಳಿಯ ಪಡಿಸಿದರು.

ಶ್ರೀ ನಾಗರಾಜಯ್ಯ, ವಕೀಲ್ ಇವರು ಡಾ। ಮೂಂಜೆಯವರಿಗೆ ಪುಷ್ಪಮಾಲಿಕೆ ಹಾಕಿ ಅವರ ಪರಿಚಯ ಮಾಡಿಸಿ ಕೊಟ್ಟರು.

ಹೆರಿಗೆ ವಾರ್ಡುಗಳ ಆರಂಭೋತ್ಸವ ಹೊಸದುರ್ಗ, ಮಂಜೇಶ್ವರ

ದಿವಂಗತ ಡಾ। ಅಮ್ಮೆಂಬಳ ಸರ್ವೋತ್ತಮ ಪೈ, ಬೊಂಬಾಯಿ, ಇವರ ಸ್ಮಾರಕಾರ್ಥವಾಗಿ ಅವರ ಮಗಳಾದ ಶ್ರೀಮತಿ ಪ್ರೇಮಾ ವಿಠ್ಠಲ ರಾವ್ ಅವರ ದಾನಧನದಿಂದ ಕಟ್ಟಿಸಲಾದ ಹೊಸದುರ್ಗ ಮತ್ತು ಮಂಜೇಶ್ವರಗಳಲ್ಲಿನ ಎರಡು ಹೆರಿಗೆ ವಾರ್ಡುಗಳ ಆರಂಭೋತ್ಸವವು ಅನುಕ್ರಮವಾಗಿ ಕಳೆದ ಮೇ ತಾ. ೩೧ ಮತ್ತು ಜೂನ್ ತಾ. ೧ರಲ್ಲಿ ಜರುಗಿದುವು. ಹೊಸದುರ್ಗದಲ್ಲಿ ರಾ॥ ಬ॥ ಡಾ. ವಿ. ಪಿ. ಕಾಮತರೂ (ನಿವೃತ್ತ ಸಿವಿಲ್ ಸರ್ಜನರವರು) ಮಂಜೇಶ್ವರದಲ್ಲಿ ಡಾ. ಎಂ. ಕಾಮತ್, ಎಂ. ಬಿ., ಸಿ. ಎಂ., ನಿವೃತ್ತ ಡಿ. ಎಂ. ಒ. ಅವರೂ ಆರಂಭೋತ್ಸವಗಳನ್ನು ನೆರವೇರಿಸಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷರು ಈ ಸಂದರ್ಭಗಳಲ್ಲಿ ಸನ್ನಿಹಿತರಾಗಿದ್ದು ಬೋರ್ಡಿಗೆ ಕೊಟ್ಟ ಈ ದಾನಗಳನ್ನು ಸ್ವೀಕರಿಸಿದರು. ಈ ವಾರ್ಡುಗಳನ್ನು ಕಟ್ಟಿಸುವ ಬಗ್ಗೆ ಜಿಲ್ಲಾ ಬೋರ್ಡಿಗೆ ರೂ.೫೩೦೦ನ್ನು ಕೊಟ್ಟ ಶ್ರೀಮತಿಯವರ ದಾನಧರ್ಮದ ಬುದ್ಧಿಯನ್ನು ಪ್ರಶಂಸಿಸಿ ಎರಡು ಕಡೆಗಳಲ್ಲಿಯೂ ಹಲವು ಮಂದಿ ಭಾಷಣ ಮಾಡಿದರು. ಎರಡು ಸಮಾರಂಭಗಳಿಗೂ ಜನಸಂದಣಿ ವಿಶೇಷವಾಗಿ ನೆರೆದಿತ್ತು.

ಹೆಬ್ರಿ

ಸ್ಥಳೀಯ ಬೋ। ಹಾ। ಎ। ಶಾಲೆಯ ವರ್ಧಂತಿ ಉತ್ಸವವು ಕಾರ್ಕಳ ರೇಂಜ್ ಡಿ. ಇ. ರಾದ ಶ್ರೀ। ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮದಂತೆ ಜರಗಿ, ಬಾಲಕರಿಂದ "ತೌಳವ ಸ್ವಾತಂತ್ರ್ಯ" ಮತ್ತು "ಜನಮರ್ಲ್" ನಾಟಕವನ್ನೂ, ಬಾಲಕಿಯರಿಂದ "ಧರ್ಮಸಂಕಟ"ವೆಂಬ ಸಂಗೀತ ನಾಟಕವನ್ನೂ ಅಭಿನಯಿಸಿದ ಮೇಲೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿರುವುದು.

ಹೆಬ್ರಿ ಶಾಲಾ ಹಿರಿಯ ವಿದ್ಯಾರ್ಥಿ ಮಂಡಲದವರು ಡಾ। ಪದ್ಮನಾಭ ಸೆಟ್ರ ನೇತೃತ್ವದಲ್ಲಿ ತಮ್ಮ ಸಂಘದ ದಿನಾಚರಣೆಯನ್ನು ಜರಗಿಸಿ, "ದೈವಸಂಕಲ್ಪ"ವೆಂಬ ನಾಟಕವನ್ನು ಪ್ರದರ್ಶಿಸಿರುವರು.

ವರಂಗ

ತಾ. ೨೮-೫-೪೪ರಲ್ಲು ಬಾಲಕ ಪಾಠಶಾಲೆಯ ವರ್ಧಂತಿಯು ಕಾರ್ಕಳ ರೇಂಜ್ ಡಿ. ಇ. ರಾದ ಶ್ರೀ। ಯು. ಕೃಷ್ಣರಾಯರ ಸಭಾಧಿಪತ್ಯದಲ್ಲಿ ನೆರವೇರಿ, "ಚಂದ್ರಹಾಸ" ನಾಟಕದೊಂದಿಗೆ ಮುಕ್ತಾಯವಾಯಿತು.

ದಿ ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ವಿದ್ಯಾರ್ಥಿ ವೇತನ

ಈ ಮೇಲಿನ ಸಂಸ್ಥೆಯಿಂದ ವೇತನವನ್ನೂ ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಿಂಗಳ ತಾ. ೧೫-೭-೪೪ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳ ಉತ್ತರ ಸಮೇತ ಕೆಳಗಿನ ವಿಳಾಸಕ್ಕೆ ಬರ ಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡು ಬಂದವರಿಗೆ ವೇತನವನ್ನು ಕೊಡಲಾಗುವುದಿಲ್ಲ.

(೧) ವಿದ್ಯಾರ್ಥಿಯ ಸಂಪೂರ್ಣ ಹೆಸರು. (೨) ತಂದೆಯಾ ರಕ್ಷಕನ ಹೆಸರು, ವಿಳಾಸ, ವೃತ್ತಿ ಮತ್ತು ವರ್ಷಾವಧಿ ಉತ್ಪತ್ತಿ. (೩) ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ. (೪) ಕಲಿಯತಕ್ಕ ದರ್ಜೆ ಮತ್ತು ಶಾಲೆಯ ಹೆಸರು. (೫) ಕಳದ ಪರೀಕ್ಷೆಯ ಮಾರ್ಕು ಪಟ್ಟಿ (೬) ಶಾಲಾ ಸಂಬಳ. (೭) ವಿದ್ಯಾರ್ಥಿಯ ಗುಣ ನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ (೮) ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥಾವ ಪ್ರಸಿದ್ಧ ವಕೀಲರ ಒಂದು ಪತ್ರ

ಗೌರವ ಕಾರ್ಯದರ್ಶಿ
ದಿ ಬಿಲ್ಲವರ ಎಸೋಸಿಯೇಶನ್
17 Raghunath Dadaji Street
Fort Bombay

ಗೌಡಸಾರಸ್ವತ ಬ್ರಾಹ್ಮಣ ವಿದ್ಯಾರ್ಥಿ ವೇತನ ಸಂಘ, ಮುಂಬಾಯಿ

ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಹೈಸ್ಕೂಲಿನಲ್ಲಿ ಕಲಿಯುವ ವಿದ್ಯಾರ್ಥಿಗಳಿಂದ ಅವರ ಸಹಾಯದ ಬಗ್ಗೆ ಮನವಿಗಳನ್ನು ಅಪೇಕ್ಷಿಸಲಾಗಿದೆ. ಅಂಥಾ ಮನವಿಗಳು ಇದೇ ಜೂನ್ ತಾರೀಕು ೩೦ರ ಒಳಗೆ, ಗೌಡ ಸಾರಸ್ವತ ಬ್ರಾಹ್ಮಣ ಸ್ಕೋಲರ್‌ಶಿಪ್ ಲೀಗ್ C/o. ಸಾರಸ್ವತ ಬ್ರಾಹ್ಮಣ ಸಮಾಜ, ನಿಕಟ್ ಲೇನ್ ಗಿರ್‌ಗಾಂ, ಬೊಂಬ್ಯಾ ಇದರ ಸೆಕ್ರಿಟರಿಯವರಿಗೆ ತಲ್ಪಬೇಕು. ಇದಲ್ಲದೆ ಬೊಂಬ್ಯಾ ಆದಿಪತ್ಯದಲ್ಲಿ ಟೆಕ್ನಿಕಲ್ ಮತ್ತು ಕೈಗಾರಿಕಾ ವಿದ್ಯಾ ಸಂಸ್ಥೆಗಳಲ್ಲಿ ಕಲಿಯುವ ಸಮಾಜದ ವಿದ್ಯಾರ್ಥಿಗಳಿಂದ ರೂ. ೨೦ರ ಡಾಂಗೆ ಮೆಮೋರಿಯಲ್ ಬಹುಮಾನಕ್ಕೂ, ರೂಪ್ಯಾ ೫ರ ಕೈಗಾರಿಕಾ ವಿದ್ಯಾರ್ಥಿ ವೇತನ ಬಗ್ಗೆಯೂ ಮನವಿಗಳನ್ನು ಅಪೇಕ್ಷಿಸಲಾಗಿದೆ.

ಅ. ಭಾ. ಚರಖಾ ಸಂಘದ ವಿಕೇಂದ್ರೀಕರಣ ಯೋಜನೆ

(ಲೇಖಕ: ಹಿ. ನಾರಾಯಣ ರಾವ್, ಖಾದಿ ಕೇಂದ್ರ, ಅಜ್ಜಂಪುರ.)

ಲೇಖಾಂಕ: ೩.

ಹೊಸ ಯೋಜನೆ ಪ್ರಕಾರ ಖಾದಿ ಉತ್ಪತ್ತಿಕಾರರು, ಸ್ವಂತ ಭಂಡವಾಳದಿಂದ ಉತ್ಪತ್ತಿಕಾರರ ಸಂಘವನ್ನು ರಚಿಸಿ, ಖಾದಿ ಹುಟ್ಟುವಳಿ ಕಾರ್ಯವನ್ನು ಮಾಡಬೇಕು. ಖಾದಿ ಗ್ರಾಹಕರು ತಮ್ಮ ಭಂಡವಾಳದಿಂದ ಗ್ರಾಹಕರ ಸಂಘ ಮಾಡಿಕೊಂಡು ತಾವೇ ಮಾಲಿಕರಾಗಿ ಪ್ರಮಾಣಿಕ ಹುಟ್ಟುವಳಿ ಸಂಘದಿಂದ ಖಾದಿ ತರಿಸಿಕೊಂಡು ವ್ಯಾಪಾರ ನಡೆಸತಕ್ಕದ್ದು. ನೂಲುವವರ ಮತ್ತು ನೇಕಾರರ ಕೈಯಲ್ಲಿ ಉತ್ಪತ್ತಿ ಕೆಲಸ, ಖಾದಿಧಾರಿಗಳ ಕೈಯಲ್ಲಿ ಖಾದಿ ಕೊಂಡು ಮಾರುವ ಕೆಲಸ. ಹುಟ್ಟುವಳಿ ಸಂಘಕ್ಕೆ ೧೨೦ ಅಡಿದಾರ ಚಂದಾ ಕೊಡುವ ೩೦೦ ಜನ ಸದಸ್ಯರು ಇರುವರು. ಇದನ್ನು ನಡೆಸಿಕೊಂಡು ಹೋಗುವ ವ್ಯವಸ್ಥಾಪಕರು ಸಧ್ಯಕ್ಕೆ ಚರಖಾಸಂಘದಿಂದ ನೇಮಿತರಾಗುವರು. ಐದು ಮಂದಿ ಪಂಚಾಯತಿ ಸದಸ್ಯರಲ್ಲಿ ಇವರೊಬ್ಬರು. ಉಳಿದ ನಾಲ್ವರು ನೂಲುವವರ ಮತ್ತು ನೇಕಾರರ ಪ್ರತಿನಿಧಿಗಳು. ಗ್ರಾಹಕ ಸಂಘದಲ್ಲಿ ಕನಿಷ್ಠ ೫೦ ಅಧಿಕಾಧಿಕ ೫೦೦ ಸದಸ್ಯರು. ಅಧಿಕಾಧಿಕ ಭಂಡವಾಳ ೧೬೦೦೦ ರೂಪಾಯಿಗಳು. ವರ್ಷಕ್ಕೆ ೨೫ ರೂಪಾಯಿಗಳಷ್ಟು ಖಾದಿ ಕೊಳ್ಳಲು ಒಪ್ಪಿಗೆ ಕೊಟ್ಟು ಪ್ರವೇಶ ಧನ ಹತ್ತು ರೂಪಾಯಿಗಳನ್ನು ಕೊಡುವವನು ಸದಸ್ಯನಾಗುವನು.

ಈ ಸಂಘಗಳನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸಿ ಇವುಗಳ ಆಡಳಿತೆಯನ್ನು ನಡೆಸಿಕೊಂಡು ಹೋಗುವ ಶಕ್ತಿಯು ಜನತೆಯಲ್ಲಿ ಅಂಕುರಿಸಿತೆಂದರೆ ಸ್ವರಾಜ್ಯಕ್ಕೆ ಅರ್ಹತೆ ಬಂತೆಂಬುದನ್ನು ಊಹಿಸಬಹುದು. ಇದಕ್ಕೆ "ಖಾದಿ ಮೂಲಕ ಸ್ವರಾಜ್ಯ"ವೆನ್ನುವುದು. ಕೋಮುವಾರು ಐಕ್ಯವನ್ನು ಸ್ಥಾಪಿಸಲು ಇದು ಅತ್ಯುತ್ತಮ ದಾರಿ.

ವ್ಯಾಪಾರವನ್ನು ಕೈಬಿಟ್ಟ ಚರಖಾ ಸಂಘವು ಸನ್ಯಾಸವನ್ನು ಕೈಕೊಳ್ಳುವುದಿಲ್ಲ. ಸಂಘಗಳು ಸತ್ಯ ಸಂಧತೆಯಿಂದಲೂ, ಯಶಸ್ವಿಯಾಗಿಯೂ ನಡೆಯುವಂತೆ ಮೇಲ್ವಿಚಾರ, ಸಂಶೋಧನೆ, ವಿದ್ಯಾಭ್ಯಾಸವೇ ಮುಂತಾದ ಕಾರ್ಯಗಳ ಮೂಲಕ ಈ ಸಂಘಗಳಿಗೆ ಸಹಾಯವನ್ನಿತ್ತು ಗ್ರಾಮ ಸಂಘಟನಾ ಕಾರ್ಯಕ್ಕೆ ನೆರವಾಗಿ ಅತಿ ಜೋರಿನಿಂದಲೂ, ದಕ್ಷತೆಯಿಂದಲೂ ಕೆಲಸ ಮಾಡುವುದು. ಕಾರ್ಯಕರ್ತರಲ್ಲಿ ಇದರಿಂದ ಒಂದು ಹೊಸ ಹುರುಪು ಬಂದಿದೆ. ಖಾದಿಗಾಗಿ ಮೀಸಲಾಗಿಟ್ಟ ಜೀವನದ ಸಾರ್ಥಕತೆಯು ಆವಾಗಲೇ ಮನಗಂಡಿದೆ.

ಗಾಂಧೀಜಿ ತ್ರಿಗುಣಗಳು

—ದೀನಬಂಧು ಆಂಡ್ರ್ಯೂಸ್

[illegible] ವರಿಗೆ ಕಷ್ಟ ಮಾತ್ರ [illegible] ಅದರಿಂದ, ಮಾನ [illegible] ದೇವರ ಮೇಲೆ ಭಕ್ತಿಯುಳ್ಳವ [illegible] ಕಾರ್ಯಗಳನ್ನು ಮಾಡ [illegible] ಎಂಬುದು ಅವರ ಅಭಿಮತವಿದೆ.

[illegible] ಸತ್ಯ. ಅವರಿಗೆ [illegible] ದೈವಿಕಗುಣ; ಅದನ್ನು ಕಾಯಾ ವಾಚಾ ಮನಸಾ ಮಾನವನು ಅನುಸರಿಸ ಬೇಕು. ಕೇವಲ ಸುಳ್ಳು ಹೇಳದಿರುವುದು ಮಾತ್ರ ಸಾಲದು; ಅದೇ ಸತ್ಯದ ಮೂಲ ವೇನಲ್ಲ. ಸರಿ; ಆದರೆ ಸತ್ಯವಾಹಿನಿ ಹೃದಯದಿಂದ ಹರಿದುಬರಬೇಕು.

ಸತ್ಯವೆಂಬುದನ್ನು ಅವರು ಅವ್ಯಕ್ತ ದೇವರೆಂದು ತಿಳಿಕೊಂಡಿದ್ದಾರೆ. 'ಸತ್ಯವೇ ದೇವರು; ದೇವರೇ ಸತ್ಯ' ಈ ಮಾತನ್ನು ಅವರು ಅನೇಕ ಸಲ ಹೇಳುತ್ತಾರೆ. ಸತ್ಯ ದಿಂದ ದೂರವಾಗುವುದು ಆತ್ಮನಿಂದ ದೂರವಾದಂತೆ; ಬೆಳಕನ್ನು ಬಿಟ್ಟು ಅಂಧ ಕಾರದಲ್ಲಿ ನಡೆದಂತೆ. ಇದು ದಿನದ ಪ್ರಾರ್ಥನೆ.

ಅಸತೋಮಾಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋಮಾ ಅಮೃತಂಗಮಯ

ಸತ್ಯ ಮತ್ತು ಅಸತ್ಯವನ್ನು ಬೆಳಕು ಮತ್ತು ಕತ್ತಲೆ ಹಾಗೂ ಅಮರತ್ವ ಮತ್ತು ಆತ್ಮ ಗ್ಲಾನಿ ಇವುಗಳಿಗೆ ಹೋಲಿಸಲಾಗಿದೆ.

ದೇವರ ತಿಳುವಳಿಕೆಗೆ ಇನ್ನೊಂದು ಮೂಲ ಅಹಿಂಸೆ. 'ತೊಂದರೆ ಕೊಡದಿರು ವುದು', ಎಂಬುದೇ ಇದರ ಶಬ್ದಾರ್ಥ. ಆದರೆ ಗಾಂಧೀಜಿ ಇದಕ್ಕಿಂತ ಹೆಚ್ಚಿನ ಅರ್ಥಮಾಡಿಕೊಂಡಿದ್ದಾರೆ; ಉತ್ತಮ ಕಾರ್ಯ ಮಾಡುವುದೆಂದು. ಯುದ್ಧ ಮತ್ತು ರಕ್ತಪಾತಗಳು ಅದರಲ್ಲಿ ಭಾಗ ವಹಿಸಲು ತಿರಸ್ಕರಿಸುವುದೆಂದು; ಇಷ್ಟು ಮಾತ್ರವಲ್ಲ, ನಮಗೆ ತಪ್ಪು ಮಾಡಿದವರ ಹೃದಯ ಕರಗಿಸಲು ನಾವು ಸಂಕಷ್ಟಗಳಿಗೆ ಗುರಿಯಾಗುವುದೆಂದು. ಸಾರಾಂಶವಾಗಿ, ಸತ್ಯದಂತೆ ಇದೂ ದೇವರ ಪ್ರಕೃತಿ. 'ಅಹಿಂಸಾ ಪರಮೋ ಧರ್ಮ:' ಎಂದು ಪವಿತ್ರ ಗ್ರಂಥ ಸಾರಿದೆ. ಹಾಗಾಗಿ ಗಾಂಧೀಜಿ ತನ್ನ ಜೀವನದಲ್ಲಿ ಈ ಉತ್ತಮ ಸಾಧನೆ ಗಾಗಿ ಹೆಣಗಾಡುತ್ತಾ, ಅದನ್ನು ಸತ್ಯ ದೊಂದಿಗೆ ಸೇರಿಸುತ್ತಾರೆ.

ಮಹಾತ್ಮಾ ಗಾಂಧೀಯವರು ಪ್ರಧಾನ್ಯತೆ ಕೊಡುವ ಮೂರನೆಯ ಗುಣ ಬ್ರಹ್ಮಚರ್ಯ; ಬ್ರಹ್ಮಚರ್ಯವೆಂಬೀ ಶಬ್ದ ಹುಟ್ಟಿದ್ದೇ ಸಂಸ್ಕೃತದ ಬ್ರಹ್ಮ (ದೇವರು) ಎಂಬುದರಿಂದ. ಪ್ರಾಚೀನ ಹಿಂದುಸ್ಥಾನದಲ್ಲಿ ಬ್ರಹ್ಮಚರ್ಯ ಪಾಲನೆಯಿಂದ, ಕಾಮ ಭೋಗಗಳ ವಿರಕ್ತಿಯಿಂದ ಮಾನವನ್ನು ಆತ್ಮ ಶಕ್ತಿ ಗಳಿಸಿಕೊಂಡು ಅದ್ಭುತ ಕ್ರಿಯಾಶಾಲಿಯಾಗುವ ಕ್ರಮ ಪ್ರಚಾರವಿದೆಯೆಂದು ಅವರು ತಿಳಿದಿದ್ದಾರೆ. ನಿಜವಾದ ಸತ್ಯ ಅಹಿಂಸೆಗಳ ಆರಾಧಕನು ಸರಿಯಾದ ಬ್ರಹ್ಮಚಾರಿಯಾಗಿರಲೇಬೇಕೆಂದು ಅವರು ಹೇಳುತ್ತಾರೆ. ಮದುವೆಯೂ ಕೂಡಾ, ಮಾನವನ ದೌರ್ಬಲ್ಯದ ಸಲುವಾಗಿ ಮಾಡಲಾದ ಒಂದು ರಿಯಾಯತಿ ಎಂದು ಗಾಂಧೀಜಿ ತಿಳಿದಿರುವರು. ಹಾಗಾಗಿ ಕಾಮಭೋಗ ವಿರಹಿತ ಮಾನವ ಜೀವನವು ಅತ್ಯುತ್ತಮ ಜೀವನವೆಂದು ಗಾಂಧೀಜಿ ಹೇಳುವರು. ಎಷ್ಟೋ ಸಲ ಮಿತಿಯಿಲ್ಲದ ಉಪವಾಸಾದಿ ಸಂಕಷ್ಟಗಳನ್ನು ಅನುಭವಿಸಿಕೊಂಡಿರುವುದು ಅವರ ಬ್ರಹ್ಮಚರ್ಯ ಪಾಲನೆಯಿಂದಾಗಿ ಎಂದು ನಾನು ತಿಳಿಕೊಂಡಿರುವೆನು.

ಗಾಂಧೀಜೀ ಮುಖ್ಯವಾಗಿ, ಧಾರ್ಮಿಕ ವ್ಯಕ್ತಿ—ದೇವರ ದಯೆಯಿಲ್ಲದೆ ತಪ್ಪು ಕೆಲಸಗಳಿಂದ ದೂರವಾಗಿರುವುದು ಸಾಧ್ಯವಿಲ್ಲವೆಂದು ಅವರು ಭಾವಿಸಿದ್ದಾರೆ. ಸತ್ಯಾಗ್ರಹಿಗೆ ಮೊದಲನೆಯದಾಗಿರಬೇಕಾದೊಂದು ವಿಚಾರವೆಂದರೆ ದೇವರ ಮೇಲೆ ಭಕ್ತಿ. ಸತ್ಯ ಮತ್ತು ಪ್ರೇಮವೇ ದೇವರು. ಮೌನ ಪ್ರಾರ್ಥನೆಯ ಫಲವಾಗಿ ಅವರಿಗುಂಟಾದ ಆತ್ಮ ಪ್ರೇರಣೆಯಿಂದ ಅವನಲ್ಲಿ ಎಂಥಾ ಬದಲಾವಣೆಗಳಾಗಿವೆ ಯೆಂಬುದನ್ನು ನೋಡಿದ್ದೇನೆ. ಕಷ್ಟಕಾಲದಲ್ಲಿ ಅವರಿಗೆ ಒಂದು ಪ್ರೇರಣೆ ಹುಟ್ಟುತ್ತದೆ. ದೇವರ ಧ್ವನಿಯಾದ ಆ ಪ್ರೇರಣೆ ಬಂಧಾಗ ಪ್ರಪಂಚದ ಯಾವುದೇ ಶಕ್ತಿಯೂ ಅವರನ್ನು ತಡೆಹಿಡಿಯಲಾರದು.

ಗೀತಾ ಪಠನದಿಂದ ಅವರಿಗೆ ಧಾರ್ಮಿಕ ಜ್ಞಾನ ದೊರಕುವುದು. ಅದೇ ಅವರ ದಿನದ ಪ್ರಾರ್ಥನೆ, ಸಾರ್ವಜನಿಕರ ಆರಾಧನೆ.

೨

ಅವರಲ್ಲಿರುವ ಮಾನವ ಗುಣಗಳ ಕಡೆಗೆ ನೋಡುವ ಇಲ್ಲಿಯೂ ಬಹಳ ಮಾರ್ಮಿಕ ಮತ್ತು ಪ್ರೇಮಮಯ ಸ್ಪರ್ಶ ಇದೆ. ಅದಕ್ಕೆ ಮೇಲೆ ವಿವರಿಸಿದ ಗುಣಗಳೇ ಅವರಿಗೆ ಅನುಕೂಲತೆಗಳನ್ನೊದಗಿಸುತ್ತದೆ. ರೋಮೆನ್ ರೋಲೆಂಡರು ಕೆಲ ವರ್ಷಗಳ ಹಿಂದೆ ಮಹಾತ್ಮಾ ಗಾಂಧಿಯವರು 'ಜೀವಂತನಾದ ಸೈಂಟ್ ಪಾಲ್' ಎಂದು ಬರೆದಾಗ ಅವರ ಆ ಹೋಲಿಕೆ ಓದಿ ನಾ ನಿಜವಾಗಿ ಮೆಚ್ಚಿಬಿಟ್ಟೆನು. ಇದರಲ್ಲಿ ನಿಜವಾಗಿ ಸತ್ಯಾಂಶವಿದೆ. ಏಕೆಂದರೆ ಗಾಂಧೀಜಿ ಸೈಂಟ್ ಪಾಲನಂತೆ ಧಾರ್ಮಿಕ ವ್ಯಕ್ತಿಗಳಲ್ಲಿ ದ್ವಿತೀಯ ಜನ್ಮ ಪಡೆದವರೇ ಆಗಿದ್ದಾರೆ, ಅವರು ತಮ್ಮ ಜೀವನದಲ್ಲಿ ಹಲವು ಬದಲಾವಣೆ ಹೊಂದಿದ್ದಾರೆ; ನಾವು ಅದನ್ನು ಮತಾಂತರ ಎನ್ನುತ್ತೇವೆ. ಪ್ರಾರಂಭದ ಅವರ ಜೀವನದಲ್ಲಿ ವಕೀಲನಾಗಿ ಆ ಉದ್ಯೋಗದಲ್ಲಿ ಕೃತಾರ್ಥವಾಗಿ ಮುಂದೆ ರಾಷ್ಟ್ರದ ಧುರೀಣನಾಗಿ, ಆ ಕಾರ್ಯದಲ್ಲಿಯೂ ವಿಜಯಿಯಾಗಿದ್ದಾರೆ.

ಅವರು ದಕ್ಷಿಣ ಆಫ್ರಿಕಕ್ಕೆ ಹೋದದ್ದು ಅಲ್ಲಿನ ಇಬ್ಬರು ಭಾರತೀಯ ವ್ಯಾಪಾರಿಗಳ ಕಡೆಯಿಂದ ವಕೀಲನಾಗಿ ವಾದಿಸಲು. ಅಲ್ಲಿ ವರೆಗೆ ಅವರಿಗೆ 'ವರ್ಣ ಭೇಧ' ತಿಳಿದಿರಲಿಲ್ಲ; ಅಲ್ಲಿ ಹೋದವರಿಗೆ ಆಗುವ ಹೊಡೆತ ಅವಮಾನ ಅರಿತಿರಲಿಲ್ಲ. ಆದರೆ ದರ್ಬಾನಿನಿಂದ ಮಾರ್ಟಿಜ್‌ಬರ್ಗ್‌ಗೆ ಪ್ರಯಾಣ ಮಾಡುತ್ತಿದ್ದಂತೆ ನಿಜಸ್ವರೂಪದಲ್ಲಿ ಆದರ ಅನುಭವ ಅವರಿಗಾಯಿತು. ಅವರು ಮೊದಲನೆಯ ತರಗತಿ ಟಿಕೇಟು ಪಡೆಕೊಂಡಿದ್ದರೂ ಅವರನ್ನು ರೈಲಿನ ಅಧಿಕಾರಿ ಆ ಗಾಡಿಯಿಂದ ಹೊರ ಹಾಕಿದ ಮೈಲು ಬಂಡಿ ಅವರನ್ನು ಬಿಟ್ಟೇ ಹೊರಟು ಹೋಯಿತು. ಆಗ ರಾತ್ರಿಯಾಗಿತ್ತು ಯಾರ ಪರಿಚಯವೂ ಇಲ್ಲದೆ ರೈಲ್ವೆ ಸ್ಟೇಶನಿನಲ್ಲಿ ಅವರು ಹೊಸಬರೇ ಆಗಿದ್ದರು. ಆ ರಾತ್ರಿ ಅಲ್ಲಿ ಹಿಮ ಬಾಧೆಗೆ ನಡುಗುತ್ತ, ಭಾರತಕ್ಕೆ ಮುಂದಿನ ಹಡಗದಲ್ಲಿಯೇ ಮರಳಿ ಬಂದು ಬಿಡುವುದೇ ಅಥವಾ ತನ್ನ ಜನರು ಹೇಗೆ ಇಲ್ಲಿ ಸಂಕಷ್ಟ ಪಡುತ್ತಾರೋ ಹಾಗೆ ತಾನೂ ಸಂಕಷ್ಟ ಪಡುವುದೋ ಎಂದು ಆಲೋಚಿಸಿ ಆಲೋಚಿಸಿ ಬೆಳಗಿನ ಜಾವ ಆಗುವ ಹೊತ್ತಿಗೆ ಅವರ ಆತ್ಮಕ್ಕೆ ಬೆಳಕೊಂದು ಕಂಡಿತು. ಮಾನವನಂತೆ ನಡೆಯಲು ಅವರು ದೇವರ ದಯೆ ಎಂದು ನಿರ್ಣಯಿಸಿಕೊಂಡರು; ಇಂಥಾ ಹಲವು ಅವಮಾನ ದಕ್ಷಿಣ ಆಫ್ರಿಕದಲ್ಲಿ ಅವರಿಗೆ ಆದುದ್ದುಂಟು. ಆದರೆ ಒಮ್ಮೆ ನೇಗಿಲ ಹಿಡಿದವರು ಮತ್ತೆ ಅದಿಯನ್ನು ಬಿಡಲಿಲ್ಲ.

ಡಾ॥ ಮೋಟ್ ಇವರಿಗೆ ಗಾಂಧೀಜಿ ಆ ರಾತ್ರಿಯ ವಿಚಾರ ಹೇಳುವುದನ್ನು ನಾನು ಕೇಳಿದ್ದೇನೆ; ಅವರ ಜೀವನದಲ್ಲಿ ದೊಡ್ಡದೊಂದು ಬದಲಾವಣೆ ಆ ರಾತ್ರಿ ಆಯಿತು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಂತಪಾಲರಲ್ಲಿರುವಂತಹ ಕೆಲವು ಗುಣಗಳನ್ನು ನಾವು ಗಾಂಧೀಜಿಯವರಲ್ಲಿಯೂ ಕಾಣಬಹುದು; ದೇವರಲ್ಲಿರುವ ಅವರ ಅಚಲ ನಿರ್ಧಾರ ಪಾಪದ ಭೀತಿ; ಇವುಗಳೇ ಅವು. ಇದರಿಂದಾಗಿ ಅವರು ಮಾನವ ದಯೆ ಭಾವನೆಯುಳ್ಳವರಾಗಿದ್ದಾರೆ.

ಎಸಿಸಿಯ ಸೈಂಟ್ ಫ್ರಾನ್ಸಿಸ್ಕನರಲ್ಲಿರುವ ಗುಣಗಳನ್ನು ನಾವು ಗಾಂಧೀಜಿಯವರಲ್ಲಿ ಕಾಣುತ್ತೇವೆ. ಮುಖ್ಯವಾಗಿ ಅದು ಬಡತನವನ್ನೇ ತನ್ನ ಅರ್ಧಾಂಗಿಯಾಗಿ ಅಪ್ಪಿಕೊಂಡಿದ್ದು ಸೇಗಾಂವಿನ ದರಿದ್ರ ನಾರಾಯಣ ಅವರು ಅಲ್ಲಿ ಅವರು ಬಡವರೊಡನೆ ದಲಿತರೊಡನೆ ಜೀವನ ಮಾಡುತ್ತಾರೆ; ಅವರ ಸಂಕಷ್ಟಗಳಲ್ಲಿ ಸಮಭಾಗಿಗಳಾಗಿದ್ದಾರೆ, ಎರಡು ಸಲ ನಾನವರನ್ನು ಸೈಂಟ ಫ್ರಾನ್ಸಿಸರ ಸದೃಶವಾಗಿ ಕಂಡಿದ್ದೇನೆ.

ಒಮ್ಮೆ ಸಂಜೆ ದರ್ಬಾನಿನ ಫೊನಿಕ್ಸ್ ಆಶ್ರಮದಲ್ಲಿ ಇಡೀ ದಿನಗಳಲ್ಲಿ ಕಂಗಾಲಾಗಿದ್ದ ಅವರು ಒಂದು ರೋಗಿ ಶಿಶುವನ್ನು ಮಡಿಲಲ್ಲಿಟ್ಟು ಶುಶ್ರೂಶೆ ಮಾಡುತ್ತಿದ್ದರು. ಅವರ ಬಳಿ ಜುಲೂ ಹುಡುಗಿ ಒಬ್ಬಾಕೆ ಕುಳಿತಿದ್ದಳು. ಕರುಣಾಳು ಬಾ ಬೆಳಕೆ ಎಂಬ ಪದ್ಯವನ್ನು ಹಾಡುವಂತೆ ನನ್ನೊಡನೆ ಅವರು ಹೇಳಿದರು; ಕತ್ತಲೆ ಕವಿಯುತ್ತಾ ಬರುತಿತ್ತು. ಆಗ ಅವರು ತರುಣರಿದ್ದರೂ ಪ್ರಪಂಚ ಸಂಕಷ್ಟ ಅನುಭವಿಸಿ ಶರೀರ ತ್ರಾಣ ಕುಂದಿದವರಿದ್ದರೂ ಆದರೂ ಅವರ ಆತ್ಮ ಶಕ್ತಿ ದೃಢವಿತ್ತು. ಆ ಗೀತ ಕೊನೆಗಾಣುವ ವರೆಗೆ ನಾವು ಯಾವ ಧ್ಯಾನದಿಂದ ಕುಳಿತಿದ್ದೆವೆಂಬುದನ್ನು ನಾವಿಂದೂ ನೆನಪಿಟ್ಟು ಕೊಂಡಿದ್ದೇನೆ.

ಇನ್ನೊಂದು ಸಲ ಒರಿಸ್ಸಾದಲ್ಲಿ ಅವರು ಆಗ ಮೃತ್ಯು ಮುಖದಲ್ಲಿದ್ದಾರೆ. ತುಂಬಾ ಆಯಾಸ ಆಗಿತ್ತು ಅವರಿಗೆ; ಅವರ ಶರೀರದಲ್ಲಿ ಒಮ್ಮೆಲೇ ರಕ್ತದ ಒತ್ತಡ ಹೆಚ್ಚಿತು. ತಂತಿ ಸಿಕ್ಕಿದೊಡನೆ ಅವರ ಬಳಿಯಿರಲು ಇಡೀ ರಾತ್ರಿ ನಾ ತೆರಳಿದ್ದೆ. ಇಡೀ ರಾತ್ರಿ ಅವಿಶ್ರಾಂತರಾಗಿ ಸೂರ್ಯೋದಯ ಹಾರೈಸಿ ಅವರು ಕುಳಿತಿದ್ದರು. ಕೂಡಲೇ ಒಬ್ಬ ದಳಿತ ಅಸ್ಪೃಶ್ಯನು ಅವರ ಬಳಿ ಬಂದ ಇಕ್ಷಣ ಅವರ ಅಸೌಖ್ಯ ಗುಣವಾದಂತೆ ಕಂಡಿತು ಆ ಅಸ್ಪೃಶ್ಯವನ್ನು ಅವಸ್ಥೆಗೆ ಕಂಡ ಕುರಿತು ಅವರ ಹೃದಯ ದುಃಖಗೊಂಡಂತೆ ತೋರಿತು.

೩

ಶತ ಶತಮಾನಗಳ ವರೆಗೆ ಗಾಂಧೀಜಿಯವರ ಹೆಸರು ಉಳಿವುದು ಈ ಎರಡು ಕಾರ್ಯಕ್ರಮಗಳಿಂದ (೧) ಖಾದಿಪ್ರಚಾರ (೨) ಸತ್ಯಾಗ್ರಹ.

ಇಂದಿನ ಯಾಂತ್ರಿಕ ಯುಗದಲ್ಲಿ ಕೃಷಿಕರಿಗೆ ಗ್ರಾಮ ಉದ್ಯೋಗಗಳ ಕೈಗಾರಿಕೆಯನ್ನು ವಿಸ್ತಾರ ರೂಪದಲ್ಲಿ ತೋರಿಸಿದ ಪ್ರಥಮ ಶಕ್ತಿ ಗಾಂಧೀಜಿ. ಕೃಷಿಯ ಕೆಲಸ ಇಲ್ಲದ ಸಮಯದಲ್ಲಿಯೂ ಆ ಮಿಲಿಯಾಂತರ ಬಡ ರೈತರಿಗೆ ಜೀವನದ ಹಾದಿ ತೋರಿಸಿರುವವರು ಅವರು. ಭಾರತದಲ್ಲಿ ವರ್ಷದ ನಾಲ್ಕೈದು ತಿಂಗಳು ನಿರುದ್ಯೋಗ ಇದೆ. ಹಿಂದೆ, ಯಂತ್ರಗಳು ಪ್ರಚಾರಕ್ಕೆ ಬರುವ ಮೊದಲು ಪ್ರತಿ [illegible] ಪ್ರತಿಯೊಬ್ಬನೂ ನೂಲನ್ನೂತು ತನ [illegible] ಕಸುಬು ಮಾಡಿ ತಮಗೆ ಬೇಕಾದ [illegible] ರ್ಯ ಮಾಡಿ ಕೊಳ್ಳುತ್ತಿದ್ದರು.

ಈ ಯಾಂತ್ರಿಕ ಪ್ರಯೋಗದಿಂದಾ [illegible] ಪ್ರಪಂಚದ ಅರ್ಧ ಮಂದಿಯಷ್ಟಾದರೆ [illegible] ಈ ನಿರುದ್ಯೋಗಕ್ಕೆ ಬಂದಿದ್ದಾರೆ. ಯಂ [illegible] ಗಳು ಹಳ್ಳಿ ಕೈಗಾರಿಕೆಗಳನ್ನು ನಾ [illegible] ಮಾಡಿವೆ.

ಹಳ್ಳಿಯವರು ನೈತಿಕ ಹಾಗೂ ದೈಹಿ [illegible] ಉಪವಾಸದಿಂದ ನಿವೃತ್ತರಾಗುವಂತೆ [illegible] ಹಳ್ಳಿ ಕೈಗಾರಿಕೆಗಳನ್ನು ಪ್ರೋತ್ಸಾಹಿ [illegible] ದವರು ಗಾಂಧೀಜಿ. ಈ ಮಾರ್ಗದ [illegible] ಅವರು ಮಿಲಿಯಾಂತರ ಮಂದಿಯ [illegible] ದಯದಲ್ಲಿ ಆಶಾಕಿರಣ ತೋರಿಸಿದ್ದಾ [illegible] ಅವರೀ ಪ್ರಭಾವವು ಭಾರತದಲ್ಲಿ ಮಾ [illegible] ವಲ್ಲ ಹೊರಗೂ ಹಬ್ಬಿದೆ; ಬೇಸರದ [illegible] ಇಂದಿನೀ ಯುದ್ಧ ಕಾಲದಲ್ಲಿ ಅಲ್ಲಿನ ಹ [illegible] ಯವರು ಹತ್ತಿ ಬೆಳೆಸಿ ನೂಲು ವಸ್ತ್ರ ಮ [illegible] ಡಲು ತೊಡಗಿದ್ದಾರೆ. ಮುಂದೆ ಕೆನಡ [illegible] ಮೊದಲಾದ ಕಡೆಯ ಈ ಹಳ್ಳಿ ಕೈಗಾ [illegible] ಕೆ ಪ್ರಚಾರಕ್ಕೆ ಬರುವುದು ತುಂಬ ಸಾಧ್ಯವಿದೆ.

(೨) ಅಹಿಂಸೆಯಲ್ಲಿರುವ ಅವರ ಅಚ [illegible] ವಿಶ್ವಾಸದಿಂದಾಗಿ, ಇಂದು ತಮ್ಮ ಮೇಲ [illegible] ದ ಅನಾಚಾರವನ್ನು ಮೌನವಾಗಿ ವಹಿ [illegible] ತಮಗೆ ಕೆಟ್ಟದು ಮಾಡಿದವರ ಮೇ [illegible] ಸತ್ಯಾಗ್ರಹದಿಂದ ವಿಜಯ ಸಾಧಿಸುವುದ [illegible] ಸಾಧ್ಯವೆಂದು ಅವರು ತೋರಿಸಿರುವರು [illegible] ಆಫ್ರಿಕದಲ್ಲಿ ಅವರು ಸತ್ಯಾಗ್ರಹದಿಂ [illegible] ಪ್ರಚಂಡ ವಿಜಯ ಪಡೆದರು. ತ [illegible] ಸತ್ಯಾಗ್ರಹಿ ಸೇನೆಯನ್ನು ಡ್ರಾಕೆನ [illegible] ಬರ್ಗ್ ಪರ್ವತದಿಂದ ಟ್ರಾನ್ಸ್‌ವಾಲ ವರೆಗೆ ಮುನ್ನಡೆಸಿದ ಬಳಿಕ, ಜನರಲ [illegible] ಸ್ಮಟ್ಸರು ಗಾಂಧೀಜಿ ಹೇಳಿದ ಶರತಗ [illegible] ಗೆಲ್ಲಾ ಒಪ್ಪಿದರು. ಇಂಥಾ ನೈತಿಕ ಯು [illegible] ಹಿಂಸಾ ಶೂನ್ಯ ಸಮರವು ಪ್ರತಿಭಟಿಸ [illegible] ಅಸಾಧ್ಯವಾದುದೆಂದು ಜನರಲ್ ಸ್ಮಟ [illegible] ಒಪ್ಪಿಕೊಂಡರು.

ಗಾಂಧೀಜಿಯ ಗುಣಗಳನ್ನು ಈ ತ [illegible] ದಲ್ಲಿ ವಿವರವಿವರವಾಗಿ ತುಂಬಾ ಬರೆ [illegible] ಬಹುದು. ನಾ ಹಿಂದೆ ಹೇಳಿದ ಸಂ [illegible] ಫ್ರಾನ್ಸಿಸರ ಹೋಲಿಕೆಯಿಂದಲೇ ನಾ [illegible] ಲೇಖನ ಮುಕ್ತಾಯಗೊಳಿಸುತ್ತೇನೆ. [illegible] ರು ಗಾಂಧೀಜಿಯಂತೆ ತಾನೂ ನೂಲಿ [illegible] ಮಾಡಿದ ವಸ್ತ್ರ ಉಡುತ್ತಿದ್ದರು. ಅವ [illegible] ತಮ್ಮ ಜೀವಮಾನದಲ್ಲಿ ನೂಲುವ ಕ [illegible] ಬಿಗೆ ಮಾನವ ದೃಷ್ಟಿಯಲ್ಲಿ ಗೌರವ [illegible] ದರು. ಸಂತ ಫ್ರಾನ್ಸಿಸರೂ ನಿರಾಯು [illegible] ರಾಗಿ ಸಂಕಷ್ಟ ಸಾವಿರಗಳನ್ನಾದರ [illegible] ಎದುರಿಸಲು, ಸಾರೇಸೀನಿನ ಯು [illegible] ಕ್ಷೇತ್ರಕ್ಕೆ ಹೋದರು. ಹಾಗೆ ಹೋ [illegible] ತಾನು ಕಷ್ಟಪಟ್ಟು ಯುದ್ಧಾಶಕ್ತ ಜನರಿ [illegible] ಪ್ರೇಮ ಸಂದೇಶ ಸಾರಿದರು. ಮಹಾತ [illegible] ಗಾಂಧಿಯವರಲ್ಲಿರುವ ಗುಣಗಳೇ ಸಂ [illegible] ಫ್ರಾನ್ಸಿಸರ ಹೃದಯದಲ್ಲಿಯೂ ಇದ್ದವ [illegible] ಹೀಗೆ ಅವರಿಬ್ಬರೂ ಆತ್ಮ ಬೆಳಗಿಸಿದರ [illegible] ಗಾಂಧೀಜೀ ಇನ್ನೊಂದು ಹಜ್ಜೆ ಮುಂದ [illegible] ವರಿದಿದ್ದಾರೆ. ಅವರ ಎರಡು ಸ [illegible] ಶೋಧನೆಗಳು ಖಾದಿ ಮತ್ತು ಸತ್ಯಾಗ್ರ [illegible] ಇವು ಮಾನವ ಜೀವನದಲ್ಲಿ ಇಂ [illegible] ಅಂತರ್ಗತವಾಗಿಬಿಟ್ಟಿವೆ. ಮಾನವ ಇ [illegible] ಹಾಸದಲ್ಲಿ ಹಿಂದೆಂದೂ ಆಗಿರದಷ [illegible] ವಿಸ್ತಾರ ಕ್ಷೇತ್ರ ಅವುಗಳ ಪ್ರಚಾರ ಇ [illegible] ರಲ್ಲೇ ಆಗಿದೆ. ಮಾನವ ಜೀವಿತ [illegible] ಶಾಂತಿ ಮತ್ತು ಪ್ರೇಮ ಸಂದೇಶಗಳನ [illegible] ಹಿಂದಿನ ಯಾವುದೇ ವಿಭೂತಿಪುರುಷನ [illegible] ಸಾರಿದದಷ್ಟು ಹೆಚ್ಚಾಗಿ ಮಹಾತ್ಮ ಗಾಂ [illegible] ಸಾರುವರು.

ಹದಿನಾರು ಮಂದಿಗೆ ಫಾಶಿ ಶಿಕ್ಷೆ

ಚೀಮೂರು ಪ್ರಕರಣದಲ್ಲಿ

ಚೀಮೂರು ಮತ್ತು ಅಷ್ಟಿ ಇಲ್ಲಿ ಕಳದ ಆಗಸ್ಟ್ ಗಲಭೆಯ ನಿಮಿತ್ತವಾಗಿ ಹದಿನಾರು ಮಂದಿಯನ್ನು ಗಲ್ಲಿಗೇರಿಸಲು ನಿರ್ಣಯಿಸಲಾಗಿದೆ. ಅವರ ದೂರು ಪ್ರಿವಿಕೌನ್ಸಿಲಿಗೂ ಹೋಗತಕ್ಕದ್ದಿದೆ ಸದ್ಯ ಸಂಯುಕ್ತ ಪ್ರಾಂತ ಸರಕಾರದ ಮುಖ್ಯಾಧಿಕಾರಿಗಳ ಹಾಗೂ ಗವರ್ನರ್ ಜನರಲರಲ್ಲಿ ಜೀವದಯಾ ಯಾಚನೆ ಮಾಡಲಾಗಿದೆ.

ಗಲ್ಲಿಗೇರಿಸಬೇಕೆ?

ಸರಕಾರದ ಪ್ರತಿನಿಧಿಗಳ ಕೈಚಳಕವಿರುವ ಈ ಆಪಾದನೆಯಲ್ಲಿ ಈ ಹದಿನಾರು ಮಂದಿ ದೇಶಬಾಂಧವರು ಗಲ್ಲಿಗೇರಿಸಲ್ಪಡಬೇಕೇ ಎಂಬುದು ವಿಚಾರಣೀಯ ವಿಷಯ ಚೀಮೂರು ಮತ್ತು ಅಷ್ಟಿ, ಈ ಎರಡು ಕಡೆಯ ಜನರು ಎಂಥಾ ಸಂಕಷ್ಟ ಸಾವಿರಗಳನ್ನು ಅನುಭವಿಸಿದ್ದಾರೆಂಬುದು ಇಂದು ಜಗಜ್ಜನಿತವಾಗಿದೆ ಹೀಗಿದ್ದರೂ ಅವರು ಪಟ್ಟಪಾಡಿನ ಸರಿಯಾದ ವಿವರಗಳನ್ನು ತಿಳಿಯಲು ನಾವಿಂದು ಅರ್ಹರಾಗಿಲ್ಲ ಹೇಗಿದ್ದರೂ ಅಲ್ಲಿನ ಗಲಭೆಯ ನಂತರ ಅಲ್ಲಿ ಕಠಿಣವಾದ ಕಾನೂನು ಜಾರಿಮಾಡಲ್ಪಟ್ಟಿತೆಂಬುದು ಸ್ಪಷ್ಟವಿದೆ

ಇದೇ ವಿಷಯವಾಗಿ, ಚೀಮೂರು ಅಷ್ಟಿಗಳ ಸುದ್ದಿ, ಅಲ್ಲಿ ನಡೆದ ದುರಂತ ಕಾರ್ಯ, ಅಇನ್ನು ಬಹಿರಂಗ ಪಡಿಸಲು ಅಧಿಕಾರವಿಲ್ಲದಿರುವಿಕೆ, ಇದರಿಂದಾಗಿ ಪ್ರೊಫೆಸರ್ ಭನ್ಸಾಲಿಯವರು ಆಮರಣಾಂತರ ಉಪವಾಸ ದೀಕ್ಷೆ ತೊಟ್ಟ ವಿಚಾರವೂ ಜಗಜ್ಜನಿತವಿದೆ ಭನ್ಸಾಲಿ ಮಾಡಿದ ಆ ವೀರದೀಕ್ಷೆಯ ಸದ್ದಿಯೂ ಪತ್ರಿಕೆಗಳಲ್ಲಿ ಸರಿಯಾಗಿ ವರದಿಯಾಗಲಿಲ್ಲ ವರಧಿಯಾಗದಿರುವುದೂ, ಆ ವಿಷಯಕ್ಕಾಗಿ ಅಖಿಲಭಾರತ ಪತ್ರಿಕೆಗಳು ಮಾಡಿದ ಸಿರ್ಣಯವೂ–ಇವುಗಳಿಂದೆಲ್ಲಾ ಬೇಕಾದಷ್ಟು ಪ್ರಚಾರ ಆಗಿರುತ್ತದೆ. ಇಂಥಾ ಬಹಿರಂಗವಾಗದ, ಬಹಿರಂಗವಾಗಲು ಬಿಡದ, ಕಠಿಣ ದುರಂತಕ್ಕೀಡಾದ ಚೀಮೂರು ಅಷ್ಟಿ ಈ ಎರಡು ಸ್ಥಳಗಳ ಹದಿನಾರು ಮಂದಿ ದೇಶಬಾಂಧವರು ಇಂದು ಗಲ್ಲಿಗೆ ಕೊರಳೊಡ್ಡಿ ನಿಲ್ಲಬೇಕಾಗಿದೆ

ವಾತಾವರಣ ಕೆಡಿಸಬಾರದು

ಇಂದು ಗಾಂಧೀಜಿ ಬಿಡುಗಡೆಯಾಗಿದ್ದಾರೆ ಗಾಂಧೀಜಿ ಬಿಡುಗಡೆಯಿಂದ ಎಷ್ಟೆಂದರೂ ರಾಜಕೀಯ ವಾತಾವರಣ ಬಹುಮಟ್ಟಿಗೆ ಸ್ವಚ್ಛವಾಗಬಹುದೆಂಬ ಆಶೆ ಎಲ್ಲರಲ್ಲಿಯೂ ಹುಟ್ಟಿದೆ. ಆಗಸ್ಟ್ ಗಲಭೆಗೆ ಯಾರೇ ಕಾರಣರಿರಲಿ, ಸರಕಾರವಂತೂ ಅದರ ಹೊಣೆಗಾರಿಕೆಯನ್ನು ಕಾಂಗ್ರೆಸಿನ ಮೇಲೆ ಗಾಂಧೀಜಿ ಮೇಲೆ ಹೊರಿಸಿದೆ ಹಾಗಾಗಿ ಈಗ ಚೀಮೂರು ಅಷ್ಟಿಗಳ ಆ ದೇಶಬಾಂಧವರು ಗಲ್ಲಿಗೇರುವಾಗ ಅದರ ಹೊಣೆ ಸರಕಾರದ ದೃಷ್ಟಿ ಕಾಂಗ್ರೆಸು ಹಾಗೂ ಗಾಂಧೀಜಿ ಮೇಲೆ ಬೀಳುತ್ತದೆ. ಸರಕಾರಕ್ಕೆ ಈಗ ಗಾಂಧೀಜಿ ಬಿಡುಗಡೆಯಿಂದ ಉಂಟಾದ ಒಳ್ಳೆಯ ವಾತಾವರಣವನ್ನು ಕೆಡಿಸುವ ಅಭಿಪ್ರಾಯವಿಲ್ಲದಿದ್ದರೆ ಈ ಹದಿನಾರು ಮಂದಿಗೆ ಫಾಶಿ ಶಿಕ್ಷೆವಿಧಿಸುವ ಮುನ್ನ ಚೆನ್ನಾಗಿ ಆಲೋಚಿಸಬೇಕಾಗಿದೆ.

—'Forum'ನಿಂದ

ಪೆರಡಾಲ

ನವಜೀವನ ಹ್ಯಾಸ್ಕೂಲ್ ಪ್ರಾರಂಭ

ಕಳೆದ ತಾ. ೧೧ರಂದು ಪೆರಡಾಲ ನವಜೀವನ ಹೈಸ್ಕೂಲಿನ ಪ್ರಾರಂಭೋತ್ಸವವು ಪ್ರಾತಃ ೧೧ ಗಂಟೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ। ಆರೂರು ಲಕ್ಷ್ಮೀನಾರಾಯಣರಾಯರಿಂದ ಜರಗಿಸಲ್ಪಟ್ಟಿತು. ಪೆರಡಾಲ ಎಜ್ಯುಕೇಶನ್ ಸೊಸೈಟಿ ಅಧ್ಯಕ್ಷರಾದ ಕುಂಬಳೆಯ ಅರಸರಾದ ಶ್ರೀ। ಎಂ ವಿ ರಾಮವರ್ಮರಾಜರು ಅಧ್ಯಕ್ಷತೆ ವಹಿಸಿದ್ದರು

ಅಧ್ಯಕ್ಷರನ್ನೂ ಉದ್ಘಾಟಕರನ್ನೂ ಮೆರವಣಿಗೆಯಲ್ಲಿ ಕರತಂದು ಪ್ರಾರಂಭದಲ್ಲಿ ಶಾಲಾ ಬಾಲಕಿಯರಿಂದ ಪ್ರಾರ್ಥನೆ ಸ್ವಾಗತಗಳಾದ ಮೇಲೆ, ಪೆ। ಎ। ಸೊಸೈಟಿಯ ಕಾರ್ಯದರ್ಶಿ ಡಾ ಪಿ ಎಸ್ ಶಾಸ್ತ್ರಿಗಳ ಸ್ವಾಗತ ಭಾಷಣಮಾಡಿದ ನಂತರ ಸಂಘದ ಉಪಾಧ್ಯಕ್ಷ ಶ್ರೀ। ಈಳಂತೋಡಿ ಕೃಷ್ಣಭಟ್ಟರು ಸಂಘದ ಮತ್ತು ಹೈಸ್ಕೂಲಿನ ಇದುವರೆಗೆ ಚಟುವಟಿಕೆಗಳನ್ನು ವಿವರಿಸಿದದರು

ಅನಂತರ ಶ್ರೀ। ಆರೂರು ಲಕ್ಷ್ಮೀನಾರಾಯಣರಾಯರು ಹೈಸ್ಕೂಲನ್ನು ಪ್ರಾರಂಭಮಾಡಿ ಭಾಷಣವಿತ್ತರು ನವಜೀವನ ಹೈಸ್ಕೂಲು ಆದರ್ಶವಾದ ಹೈಸ್ಕೂಲಾಗಲಿ ಎಂದು ಹಾರೈಸಿದರು.

ಅನಂತರ ಅಧ್ಯಕ್ಷರ ಭಾಷಣವಾದ ಮೇಲೆ, ಕಾರ್ಯದರ್ಶಿಗಳು ವಂದನಾರ್ಪಣೆಮಾಡಿದರು ನೆರೆದವರಿಗೆ ಸಿಹಿತಿಂಡಿ ಹಂಚಲಾಯಿತು

ಮಧ್ಯಾಹ್ನ ಪುತ್ತೂರು ಕಾಸರಗೋಡು ಮಂಗಳೂರು ಮೊದಲಾದ ಕಡೆಗಳಿಂದ ಬಂದ ಅತಿಥಿಗಳಿಗೆ ಡಾ। ಪಿ ಎಸ್ ಶಾಸ್ತ್ರಿಗಳು, ಹೈಸ್ಕೂಲ್ ವಿದ್ಯಾರ್ಥಿಭವನದಲ್ಲಿ ಒಂದು ಭೋಜನ ಸತ್ಕಾರ ಮಾಡಿಸಿದರು

ಶ್ರೀ ಪಿ ಸುಬ್ರಾಯಭಟ್ ಬಿ ಎ, ಎಲ್ ಟಿ ಇವ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಕ ಹೊಂದಿದ್ದಾರೆ

ಕಾಲವು ಬದಲಾಗಿದೆ.

1754



ತೋಮಸ್ ಮಡ್ಜನಿಂಧ ಶೋಧಿಸಲ್ಪಟ್ಟ ಈ ಎಂಕರ್ ಎಸ್ಕೇಪ್‌ಮೆಂಟು ಮೊದಲಾಗಿ 19ನೇ ಶತಮಾನದಲ್ಲಿ ಬಳಕೆಗೆ ಬಂದೀತು

1944



ಸೆಕುಂಡಸ್ ಚಚ್ಚೌಕ

ರೋಲ್ಡ್‌ಗೋಲ್ಡ್ 10 ವರ್ಷ ರೂ 53



ಸೆಕುಂಡಸ್ ರೆಕ್ಟೆಂಗುಲರ್

ರೋಲ್ಡ್‌ಗೋಲ್ಡ್ 10 ವರ್ಷ ರೂ। 53

ವಾಚುಗಳಲ್ಲಿ ಇಂದು ಉಪಯೋಗಿಸುವ ಎಸ್ಕೇಪ್‌ಮೆಂಟು, ದಿಯಲ್ಲಿ ಅಂದರೆ ಸುಮಾರು 200 ವರ್ಷಗಳ ಹಿಂದೆ ಉಪಯೋಗಿಸಿದಂತವುಗಳಾಗಿವೆ ಸರಿಯಾದ ಸಮಯ ಸೂಚಿಸುವಿಕೆಯು ಈ ಶೋಧನೆಯ ಮೇಲೆ ಹೊಂದಿಕೊಂಡಿದೆ "ವೆಸ್ಟ್ ಎಂಡ್ ವಾಚು"ಗಳು ಎಲ್ಲಾ ಪ್ರಾಮುಖ್ಯ ಶೋಧನೆ ಮತ್ತು ಅನೇಕ ಸುಧಾರಣೆಗಳಿಂದ ಕೂಡಿಕೊಂಡಿದೆ

ಈಗಿನ ಅನಿಯಮಿತ ತಲಪುವಿಕೆಯ ದೆಸೆಯಿಂದ ಜಾಹೀರಾತು ಮಾಡಿದ ಎಲ್ಲಾ ನಮೂನೆಯ ವಾಚುಗಳನ್ನು ಜನತೆಗೆ ಒದಗಿಸುವುದು ಕಷ್ಟ ಆದರೆ ಆದಷ್ಟು ಆರ್ಡರುಗಳನ್ನು ಕಳುಹಿಸಲು ಎಲ್ಲಾ ರೀತಿಯ ಪ್ರಯತ್ನಗಳು ಮಾಡಲ್ಪಡುವುವು

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬ್ಯಾ ವ ತ್ತ ಕಲ್ಕತ್ತ

WEST END WATCH Co.

Bombay & Calcutta

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE	BUNDER	BRANCHES
Mangalore.	MANGALORE,	Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೋಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

- ★ Premiums are low.
- ★ 2½% Rebate on annual premiums.
- ★ "Permanent Disability Benefits free of any cost.
- ★ Payment of double the insured amount in case of death by accident at a very small cost of Rs. 1-8-0 per 1000.
- ★ Special rebates on large size policies.
- ★ A special scheme by which lapsed policies can be revived without paying the arrears
- ★ War risk cover at no extra cost

and, above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products, Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 16—6—1944 [ಸಂಚಿಕೆ 24]

"ಗಾಂಧೀಜಿಗೆ ದೈವಸಾಕ್ಷಾತ್ಕಾರವಾಗಿದೆ"

ಪೀಠಾಪುರದ ಯುವರಾಜನ ಅನುಭವ

'ಲೋಕದ ಮಹಾ ಪುರುಷನನ್ನು ಕಂಡೆ'

ಪೀಠಾಪುರದ ಯುವರಾಜರು, ಅವರ ಪತ್ನಿ, ಮೇಡಂ ಸೋಫಿಯಾ ವಾಡಿಯಾ ಇವರೆಲ್ಲಾ ಜುಹುವಿಗೆ ಬಂದು ಮಹಾತ್ಮಾ ಗಾಂಧಿಯವರನ್ನು ಸಂದರ್ಶಿಸಿದರು. ಗಾಂಧೀಜಿ ಎಂಥಾ ಮಹಾತ್ಮರು ಎಂಬ ವಿಚಾರ ಯುವರಾಜರು ತಮ್ಮ ಅನುಭವವನ್ನು ತಿಳಿಸಿದ್ದಾರೆ. ಅವರ ಆ ಅನುಭವದ ವಿವರ ಹೀಗಿದೆ:

ಸರೋಜಿನಿಯವರ ವಸತಿಗೆ

"ನಾವೆಲ್ಲ ಸಂಜೆ ಹೊತ್ತಿಗೆ 'ಗಾಂಧೀಗ್ರಾಮ'ಕ್ಕೆ ಬಂದೆವು. ಅಲ್ಲಿ ನಮ್ಮ ಕಾರನ್ನು ಸರೋಜಿನಿ ದೇವಿಯರ ಕಾರ್ ಡ್ರೈವರನು ಇದಿರ್ಗೊಂಡನು. ಅಲ್ಲಿನ ಒಬ್ಬ ಸ್ವಯಂಸೇವಕನು ಸರೋಜನಿದೇವಿಯರ ವಸತಿಗೆ ನಮಗೆ ದಾರಿ ತೋರಿಸಿದ. ಆ ವಸತಿಯ ಮುಂದೆ ತುಸು ದೂರ ಕಾರು ನಿಲ್ಲಿಸಿ ಅವರ ವಸತಿಗೆ ನಾವು ಹೋದೆವು. ಸರೋಜಿನಿಯವರನ್ನು ಇತ್ತೀಚೆಗೆ ಕೆಲ ದಿನಗಳಿಂದ ನಾ ಕಂಡಿರಲಿಲ್ಲ. ಅವರು ನಮ್ಮನ್ನು ಪ್ರೀತಿಯಿಂದ ಸ್ವಾಗತಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ ಹಾತಿಸಿಂಗರೂ ಅಲ್ಲಿದ್ದರು. ಅವರೂ ನಮಗೆ ಸ್ವಾಗತವಿತ್ತರು. ತುಸು ಹೊತ್ತು ಯೋಗಕ್ಷೇಮ ಆದ ಮೇಲೆ ಸರೋಜನಿಯವರು ನಮ್ಮನ್ನು ಗಾಂಧೀಜಿಯರಲ್ಲಿಗೆ ಕರಕೊಂಡು ಹೋದರು.

"ಆ ಸಂದರ್ಭದಲ್ಲಿ ಓರ್ವ ಮಹಾರಾಣಿಯವರು, (ಬಹುಶಃ ನೇಪಾಲದ ಮಹಾರಾಣಿ ಶ್ರೀ ಭಕ್ತಿದೇವಿಯರಿರಬೇಕು,) ಅವರ ಹೆಮ್ಮಕ್ಕಳೂ ಬಂದರು. ತುಂಬಾ ಹಣ್ಣುಹಂಪಲು ಹೂಗಳನ್ನು ಅವರು ತಂದಿದ್ದರು. ಆ ಮಹಾರಾಣಿಯವರು ಅವುಗಳನ್ನು ಗಾಂಧೀಜಿಗರ್ಪಿಸಲು ತಂದಿದ್ದರು. 'ಇವನ್ನೆಲ್ಲಾ ಮಹಾತ್ಮರ ವಸತಿಗೆ ಕೊಂಡುಹೋದರೆ ಅವರಿಗಲ್ಲಿ ಸ್ಥಳವಿಲ್ಲದಂತಾಗುತ್ತದೆ' ಎಂದು ಸರೋಜಿನಿಯವರು ಹೇಳಿದರು. 'ಗಾಂಧೀಜಿ ಬೊಂಬಯಿಗೆ ಬಂದಾಗ ಒಬ್ಬ ಹುಡುಗ ತಂದು ಅರ್ಪಿಸಿದ ಹಣ್ಣು ಇವುಗಳಿಗಿಂತ ಶ್ರೇಷ್ಠವಿರಬೇಕು" ಎಂದು ನಾ ಹೇಳಿದೆ.

ನಾಡು ನಡುಗಿದೆ—

ಆ ಮೇಲೆ ಸರೋಜಿನಿಯರು ನಮ್ಮನ್ನೆಲ್ಲಾ ಗಾಂಧೀಜಿ ವಸತಿಗೆ ಕರಕೊಂಡು ಹೋದರು. ಮಹಾತ್ಮರ ವಸತಿಯನ್ನು ಹೊಕ್ಕಾಗ ನನಗೇಕೋ ತುಸು ಕಂಪನವುಂಟಾಯಿತು. ಸೈಂಟ್ ಜೇಮ್ಸ್ ಅರಮನೆಯಲ್ಲಿ ನಡೆದ ದರ್ಬಾರಿನಲ್ಲಿ ನನ್ನ ಹೆಸರು ಕರೆದಾಗ, ಜಾರ್ಜ್ ಪಂಚಮರು ನನಗೆ ಹಸ್ತಲಾಘವವಿತ್ತಾಗಲೂ ನನಗೆ ಯಾವ ಕಂಪನವೂ ಉಂಟಾಗಿರಲಿಲ್ಲ. ಗುಂಡು ಬಾಂಬುಗಳನ್ನೆದುರಿಸುವ ಸಂದರ್ಭ ಬರುತ್ತದೆಂದು ಭಾವಿಸುವಾಗಲೂ ನನಗೆ ನಡುಕ ಹುಟ್ಟಿರಲಿಲ್ಲ. ಈಗೇಕೋ ನಾನು ನಡುಗಿ ಹೋದೆ.

"ಮಹಾತ್ಮರು ಹಾಸಿಗೆ ಮೇಲೆ ಕುಳಿತಿದ್ದರು. ಅವರ ಹತ್ತಿರ ಬಂದಂತೆ ನನ್ನಲ್ಲಿ ಉಲ್ಲಾಸವುಂಟಾಯಿತು. ಆಧುನಿಕ ಜಗತ್ತಿನ ಮಹಾ ಪುರುಷನ ಸನ್ನಿಧಿಯಲ್ಲಿ ನಿಂತಿರುವೆನೆಂದು ನನಗೆ ತಿಳಿವುಂಟಾಯಿತು. ಆ ಮಹಾ ಪುರುಷನು ಕೃಶನಾಗಿರುವನು. ಆದರೂ ಅವನು ಮಹಾಧಿಪತ್ಯವನ್ನೇ ಅಲುಗಾಡಿಸಿದ್ದಾನೆ. ಸತ್ಯ, ಧರ್ಮ, ದಯೆ ಮತ್ತು ಅಹಿಂಸೆಗಳ ಅಸ್ತ್ರದಿಂದ ಬ್ರಿಟಿಷ್ ಚಕ್ರಾಧಿಪತ್ಯವನ್ನು ಕಂಪನಗೊಳಿಸಿರುವನು. ಇಂಥಾ ಮಹಾಪುರುಷನ ಮುಂದೆ ನಿಂತಾಗ ನನ್ನಲ್ಲಿ ಭಯ ಗೌರವಗಳು ಹುಟ್ಟಿದ್ದರಲ್ಲಿ ಆಶ್ಚರ್ಯವೇನಿದೆ?

ಗಾಂಧೀಜಿ ಸಾಕ್ಷಾತ್ಕಾರ

"ಗಾಂಧೀಜಿ ವಸತಿಯಲ್ಲಿ ಅವರಿಗೆ ಮೊದಲು ಕಾಣಿಕೆ ಕೊಟ್ಟರು ಆ ಮಹಾರಾಣಿಯವರು. ಅವರು ಮಹಾತ್ಮರಿಗೆ ಪುಷ್ಪಹಾರಗಳನ್ನು ಸಮರ್ಪಿಸಿದರು. ಗಾಂಧೀಜಿ ತುಂಬ ಬಲಹೀನರಾಗಿದ್ದರೂ ಅವರ ಉಪಚಾರಗಳನ್ನು ಮಂದಸ್ಮಿತರಾಗಿ ಸ್ವೀಕರಿಸಿದರು.

"ಅನಂತರ ಸರೋಜಿನಿಯವರು ನನ್ನ ಪತ್ನಿಯನ್ನು ಗಾಂಧೀಜಿಗೆ ಪರಿಚಯ ಮಾಡಿಸಿದರು. ಆಕೆ ಗಾಂಧೀಜಿಗೆ ನಮಸ್ಕರಿಸಿದಾಗ, ಆಕೆಯ ಕೈಗೆ ಏನಾಗಿದೆಯೆಂದು ಅವರು ಸಂಜ್ಞೆಯಿಂದ ಪ್ರಶ್ನಿಸಿದರು. ನನ್ನ ಹೆಂಡತಿಯ ಕೈಗೆ ಗಾಯವಾಗಿದ್ದು ಮದ್ದು ಹಚ್ಚಿತ್ತು. ಸರೋಜಿನಿಯವರು ಗಾಂಧಿಜಿಗೆ ನನ್ನ ಪರಿಚಯ ಮಾಡಿದಾಗ ಅವರು ಮುಗುಳ್ನಗೆಯಿಂದ ನನ್ನನ್ನು ಸ್ವಾಗತಿಸಿದರು. ಅವರ ಪಾದಗಳನ್ನು ಮುಟ್ಟಿ ನಾ ನಮಸ್ಕರಿಸಿದಾಗ, ನನ್ನ ಮೈಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು, ಆ ಮಹಾತ್ಮನ ಮಂದಸ್ಮಿತದಲ್ಲಿಯೂ, ಆತನ ಹೊಳೆವ ಕಣ್ಣುಗಳಲ್ಲಿಯೂ ನಾನು ಒಂದು ಜನಾಂಗದ ಪೂರ್ವೇತಿಹಾಸವನ್ನು ಕಂಡೆನು. ಜಗತ್ತಿನ ಭವ್ಯ ಭವಿಷ್ಯದ ಬಗ್ಗೆ ಭರವಸೆಯನ್ನು ಕಂಡೆನು.

"ಮಹಾತ್ಮರು ಮೌನವ್ರತವನ್ನವಲಂಬಿಸುತ್ತಿದ್ದರೂ ಅವರೊಡನೆ ಸಂಭಾಷಿಸಬಹುದಿತ್ತು. ರಾಜಾಜಿಯವರು ನನ್ನ ಮೂಲಕ ಗಾಂಧೀಜಿಗೆ ಬಾಯಿ ಮೂಲಕ ತಿಳಿಸಬೇಕಾದ ಸಂಗತಿಗಳನ್ನು ಹೇಳಿಕಳುಹಿಸಿದ್ದರು. ಅದನ್ನು ನಾನವರಿಗೆ ತಿಳಿಸಬೇಕೆಂದಿದ್ದೆ. ಆದರೆ ಮಹಾತ್ಮರಿಗೆ ಸುಮ್ಮಗೆ ತೊಂದರೆಕೊಡಬಾರದೆಂದು ಭಾವಿಸಿ ರಾಜಾಜಿಗೆ ಹೇಳಿಕಳುಹಿಸಿದ ಮಾತುಗಳನ್ನು ಸರೋಜಿನಿಯವರಿಗೆ ತಿಳಿಸಿ ಗಾಂಧೀಜಿಗೆ ತಿಳಿಸ ಹೇಳಿದೆ.

—ಧ್ಯಾನಮಗ್ನ ಮಹಾತ್ಮಾ

"ಮರುದಿನ ಪ್ರಾರ್ಥನೆಯ ಕಾಲದಲ್ಲಿಯೂ ನಾವು ಇದ್ದೆವು. ಕಡಲ ತೀರದಲ್ಲಿ ಮಳಲಿನ ಮೇಲೆ ಐದು ಸಾವಿರ ಮಂದಿ ಕುಳಿತಿದ್ದರು. ಅವರಲ್ಲಿ ಅನೇಕರು ಬಹುದೂರದಿಂದ ಬಂದಿದ್ದರು. ಸಭೆಯಲ್ಲಿ ಮಾತುಕತೆ, ಗುಲ್ಲು, ಅವ್ಯವಸ್ಥೆಗಳೊಂದೂ ಇರಲಿಲ್ಲ. ನಮ್ಮ ರಾಷ್ಟ್ರದ ಕೋಟ್ಯಂತರ ಜನರಿಗೆ ಈ ಚಿಕ್ಕ ಮನುಷ್ಯ ಏನು ಮಾಡಬಲ್ಲನೋ ಅದನ್ನು ಎಷ್ಟು ಮಿಲಿಟರಿ ಹಾಗೂ ಪೋಲೀಸು ಬಲಗಳಿಂದಲೂ ಸಾಧಿಸಿಕೊಳ್ಳಲು ಸಾಧ್ಯವಿಲ್ಲ. ಆ ಇಡೀ ವಾತಾವರಣದಲ್ಲಿ ಮಹಾತ್ಮರ ಪ್ರಭಾವ ತುಂಬಿತ್ತು. ಉನ್ನತಾಸನದ ಮೇಲೆ ಗಾಂಧೀಜಿ ಧ್ಯಾನಮಗ್ನರಾಗಿ ಕುಳಿತಿದ್ದರು. ಅವರ ಕೈಯಲ್ಲಿದ್ದ ಬೀಸಣಿಗೆ ಅವರ ಮುಖಕ್ಕೆ ನೆರಳನ್ನು ಕೊಡುತ್ತಿತ್ತು. ಆಗ ತಾನೇ ಮುಳುಗುತ್ತಿದ್ದ ಸೂರ್ಯನ ಕಿರಣಗಳು, ಮಹಾಸಾಗರವಾದ ಅರೇಬಿ ಸಮುದ್ರದ ತರಂಗಗಳು ಮಹಾತ್ಮಾಜಿಗೆ ಗೌರವ ಸಲ್ಲಿಸುವಂತಿತ್ತು.

ದೈವಸಾಕ್ಷಾತ್ಕಾರವಾಗಿದೆ—

"ನನಗೆ ಪ್ರಾರ್ಥನೆ ಮಾಡುವುದಾಗಲಿಲ್ಲ. ನನ್ನ ದೃಷ್ಟಿ ಮಹಾತ್ಮರ ಮೇಲೆಯೇ ನಟ್ಟಿತ್ತು. ಇಡೀ ಜನಸಂದಣಿ ಕೂಡಾ ನನ್ನಂತೆಯೇ ಗಾಂಧೀಜಿ ಸಾಕ್ಷಾತ್ಕಾರವನ್ನು ಕಣ್ಣಾರೆಯೆ ನೋಡುತ್ತಾ ಅತ್ಯ ಸಂತೋಷಪಡುತ್ತಿರಬಹುದು. ಈ ದುರ್ಬಲ ಮನುಷ್ಯನಿಗೆ ಇಂಥಾ ಶಕ್ತಿ ಎಲ್ಲಿಂದ ಬಂತೆಂದು ನಾನು ಈಗ ಅರಿತುಕೊಳ್ಳಲಾರಂಭಿಸಿದೆ. ಗಾಂಧೀಜಿಗೆ ದೈವಸಾಕ್ಷಾತ್ಕಾರವಾಗಿರುವುದರಿಂದಲೇ ಅವರಿಗೀ ಶಕ್ತಿ ಬಂದಿದೆಯೆಂದು ನಾನಾಗ ತಿಳಿದುಕೊಂಡೆ. ಮಹಾತ್ಮರಾದವರಿಗೆ ಮಾತ್ರ ಈ ಸಾಧನೆ ಸಾಧ್ಯ. ಎಂಥಾ ಸ್ಫೂರ್ತಿದಾಯಕ ಹೃದಯ ಅವರದು! ಆ ಸಂದರ್ಭದಲ್ಲಿ ಭಗವಾನ್ ಬುದ್ಧನ, ನನ್ನ ಗುರುದೇವ ರವೀಂದ್ರನಾಥ ಠಾಗೂರರ ಇವರ ಚಿತ್ರಗಳು ನನ್ನ ಕಣ್ಣಮುಂದೆ ಬಂದು ನಿಂತವು.

"ಪ್ರಾರ್ಥನೆಯಾದ ಬಳಿಕ ಹರಿಜನ ನಿಧಿಗೆ ಹಣ ಕೂಡಿಸಲಾಯಿತು. ಅಂದು ೧೫೦೦೦ ರೂ.ಗಳು ಸೇರಿದುವೆಂದು ಶ್ರೀ. ಶಾಂತಿ ಕುಮಾರ ಮುರಾರ್ಜಿಯವರು ನನಗೆ ಹೇಳಿದರು. ಒಂದು ಬಾಲಿಕೆ ಕೆಲವು ಹಣ್ಣುಗಳನ್ನು ತಂದಿತ್ತಳು. ಗಾಂಧೀಜಿ ಅವನ್ನು ಸ್ವೀಕರಿಸಿಕೊಂಡರು. ವಿಜಯಲಕ್ಷ್ಮಿ ಪಂಡಿತರು ಹಣ್ಣುಗಳನ್ನು ಹುಡುಗಿಯ ಕೈಯಿಂದ ತೆಗೆದುಕೊಂಡರು."

ಮಂಗಳೂರು

ರೇಶನಿಂಗ್ ಆಫೀಸರರ ಪ್ರಕಟಣೆ

"ಈ ಪ್ರದೇಶದಲ್ಲಿ ಬಿರಿಯಾಣಿ ಪಿಲಾವು, ಇವುಗಳ ಬಗ್ಗೆ ಉಪಯೋಗಿಸಲ್ಪಡುವ ಜೀರ್ಸಾಲೆ ಗಂಧ್ಸಾಲೆ ವಗೈರೆ ನಾಜುಕಾದ ಬೆಳ್ತಿಗೆ ಅಕ್ಕಿಯು ರೇಷನ್ ರೂಲ್ಸ್‌ಗಳಿಗೆ ಒಳಪಡುವ ಬೆಳ್ತಿಗೆ ಅಕ್ಕಿ ಅಲ್ಲವೆಂತಲೂ ರೇಷನ್ ರೂಲ್ಸ್‌ನಿಂದ ವಿರಹಿತಪಡಿಸಿರುವ ಪಿಲಾವು ಅಕ್ಕಿಯೆಂತಲೂ ಜನರಲ್ಲಿ ಒಂದು ಅಭಿಪ್ರಾಯವಿದೆ. ಆದರೆ ಈ ವಿಷಯದಲ್ಲಿ ಕೊಡಲ್ಪಟ್ಟಿರುವ ಹುಕುಮ್‌ಗಳ ಮೇರೆಗೆ ಜೀರ್ಸಾಲೆ, ಗಂಧ್ಸಾಲೆ ವಗೈರೆ ಸ್ಥಳೀಕ ನಾಜುಕಾದ ಅಕ್ಕಿಯು ಪಿಲಾವು ಅಕ್ಕಿ ಅಲ್ಲವೆಂತಲೂ ರೇಶನ್ ರೂಲ್ಸ್‌ಗಳಿಗೆ ಒಳಪಟ್ಟಿರುವ ಬೆಳ್ತಿಗೆ ಅಕ್ಕಿಯ ವರ್ಗಕ್ಕೆ ಸೇರಿರುತ್ತದೆಂತಲೂ ಈ ಮೂಲಕ ತಿಳಿಯಪಡಿಸೋಣಾಗುತ್ತದೆ. ಮದ್ರಾಸ್ ರೇಶನಿಂಗ್ ಓರ್ಡರ್‌ನಿಂದ ವಿರಹಿತಪಡಿಸಿರುವ ಪಿಲಾವು ಅಕ್ಕಿಯೆಂಬುದು ಉತ್ತರ ಹಿಂದೂಸ್ಥಾನದಲ್ಲಿ ಶೇಖರಿಸಲ್ಪಡುವ ಒಂದು ವಿಶೇಷ ಜಾತಿಯ ಅಕ್ಕಿಯಾಗಿರುತ್ತದೆ. ಎಂಬುದಾಗಿ ರೇಷನಿಂಗ್ ಆಫೀಸರರು ಪ್ರಕಟಿಸಿದ್ದಾರೆ."

ಸ್ವದೇಶಾಭಿಮಾನಿ

ತಾರೀಖು 16—6—1944

ಯಾರು ಮುಂದೆ ಬರಬೇಕು?

"ನಾನು ಆಗಸ್ಟ ನಿರ್ಣಯವನ್ನು ಹಿಂತೆಗೆದುಕೊಳ್ಳಲಾರೆ" ಎಂದು ಗಾಂಧೀಜಿ ವರದಿಗಾರರಿಗೆ ಬರೆದ ಪತ್ರದ ಅಧಿಕಾರೀ ವಿವರಣೆಯೊಂದು ಈಗ ಶ್ರೀ ಪ್ಯಾರೀಲಾಲರಿಂದ ಕೊಡಲಾಗಿದೆ.

"ಆಗಸ್ಟ ನಿರ್ಣಯವನ್ನು ಹಿಂತೆಗೆದುಕೊಳ್ಳಲಾರೆನೆಂದು ಗಾಂಧೀಜಿ ಹೇಳಿದ್ದರ ಅಭಿಪ್ರಾಯವೇನೆಂದರೆ, ಹಾಗೆ ಮಾಡಲು ಅವರಿಗೆ ನ್ಯಾಯವಾದ ಅಧಿಕಾರವಿಲ್ಲವೆಂಬುದು" ಹೀಗೆ ಶ್ರೀ ಪ್ಯಾರೀಲಾಲರು ವ್ಯಾಖ್ಯಾನಿಸಿದ್ದಾರೆ.

ಶ್ರೀ ಪ್ಯಾರೀಲಾಲರು, ಮಹಾತ್ಮರ ಆಪ್ತ ಕಾರ್ಯದರ್ಶಿಗಳು; ಸೆರೆಮನೆಯಲ್ಲಿಯೂ ಅವರ ಜತೆಯಲ್ಲಿಯೇ ಇದ್ದವರು; ಮಹಾತ್ಮರ ಮನೋಗತವನ್ನು ಬಹಳ ಸಮೀಪದಿಂದ ಆತ್ಮೀಯತೆಯಿಂದ ಅರಿತವರು.

ಹಾಗಾಗಿ ಶ್ರೀ ಪ್ಯಾರೀಲಾಲರ ಈ ವಿವರಣೆಯು ಎಲ್ಲಾ ಊಹಾಪೋಹಗಳನ್ನು ನಿವಾರಿಸಿದೆ; ಗಾಂಧೀಜಿ, ಆಗಸ್ಟ ನಿರ್ಣಯ ಹಿಂತೆಗೆದುಕೊಳ್ಳಲಾರೆನೆಂದು ಹಠಹಿಡಿದು ಹೇಳುವುದಲ್ಲ; ಹಾಗೆ ಮಾಡಲು ಅವರಿಗೆ ಸರಿಯಾದ ಮಾರ್ಗವಿಲ್ಲವೆಂದು ಈಗ ಸ್ಪಷ್ಟವಾಗಿದೆ.

ಮಹಾತ್ಮರು ಆಗಸ್ಟ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕಾದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಅಭಿಪ್ರಾಯ ಕೇಳಬೇಕು; ಕಾಂಗ್ರೆಸ್ ಕಮಿಟಿಯನ್ನು ವಿಚಾರಿಸಬೇಕು; ಹಾಗೆ ಮಾಡದೆ ತಾವಾಗಿ ಯಾವುದೇ ಕೆಲಸ ಮಾಡಲೂ ಅವರು ಶಕ್ತರಾಗಿಲ್ಲ.

ಹೀಗೆಲ್ಲಾ ಮಾಡಬೇಕಾದರೆ ಸರಕಾರ ಮುಂದೆ ಬರಬೇಕು; ಮಹಾತ್ಮರನ್ನು ಬಿಡುಗಡೆ ಮಾಡಿ, ಭಾರತದ ಬಿಕ್ಕಟ್ಟು ಬಗೆಹರಿಸಲು ಒಂದು ಹಾದಿ ಮಾಡಿದಂತೆ, ರಾಷ್ಟ್ರಮುಖಂಡರನ್ನೆಲ್ಲಾ ಬಂಧವಿಮೋಚನೆಗೊಳಿಸಿ ಸಂಧಾನದ ಮಾರ್ಗವನ್ನು ಸಂಪೂರ್ಣ ಸುಗಮ ಮಾಡಬೇಕು.

ಅಮೇರಿಕವು ಯಾವಾಗಲೂ ಅಸ್ವತಂತ್ರ ರಾಷ್ಟ್ರಗಳ ಸ್ವಾತಂತ್ರ್ಯ ಸಂಪಾದನೆಗೆ ನೆರವಾಗುವುದೆಂದು ಕಾರ್ಡೆಲ್ ಹಲ್ಲರು ಇತ್ತೀಚೆಗೆ ಕೊಟ್ಟ ಹೇಳಿಕೆಯಿಂದ, ಅವರ ಆ ಮಾತು ಭಾರತದ ಕ್ಷಿಂಮಿಲಿಯ ಜನರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೋತ್ಸಾಹಕವಾಗಿದೆಯೆಂದು ಕೆಲವರು ಊಹಿಸುತ್ತಾರೆ.

ಈ ಊಹೆಗಿಂತ ದೊಡ್ಡ ಪ್ರಮಾದ ಬೇರೇನೂಯಿಲ್ಲವೆಂದು ನಮಗನಿಸುತ್ತದೆ. ಕಾರ್ಡೆಲ್‌ಹಲ್ಲರ 'ಮೇಲಿನ ಹೇಳಿಕೆ ಭಾರತದ ಬಂಧವಿಮೋಚನೆಗೆ ಅಮೇರಿಕದ ಬೆಂಬಲವೆಂಬುದು ಕನಸಿನ ಮಾತಾಗಿದೆ.

ಅಟ್ಲಾಂಟಿಕ್ ಶಾಸನಕ್ಕೆ ಸಹಿಮಾಡಿದ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರೇ ಅಸ್ವತಂತ್ರ ರಾಷ್ಟ್ರಗಳ ಬಗ್ಗೆ ಮಾತನಾ[illegible]

[illegible]

ಅಟ್ಲಾಂಟಿಕ್ ಶಾಸನವು ಏರ್ಪಟ್ಟಾದಾಗ, ಅದು ಜಗತ್ತಿನ ಸ್ವಾತಂತ್ರ್ಯ ಶಾಸನವೆಂದು ಜಗಜ್ಜನಿತವಾಗಿತ್ತು; ಅಧ್ಯಕ್ಷ ರೂಸ್‌ವೆಲ್ಟರಾದರೂ, ಆ ಶಾಸನವು ಎಲ್ಲಾ ಅಸ್ವತಂತ್ರರಾಷ್ಟ್ರಗಳಿಗೂ ಅನ್ವಯಿಸುತ್ತದೆಂದು ಹೇಳಿದರಾಗಿ ವರದಿಯಾಗಿತ್ತು.

ಆದರೆ ಚರ್ಚಿಲರು ಇದನ್ನೆಲ್ಲವನ್ನು ಒಮ್ಮೆಲೇ ತಲೆಕೆಳಗು ಮಾಡಿದರು, ಬ್ರಿಟಿಷ ಸಾಮ್ರಾಜ್ಯದ ಮಟ್ಟಿಗೆ ಅಟ್ಲಾಂಟಿಕ್ ಶಾಸನ ಇದ್ದರೂ, ಪರಿಸ್ಥಿತಿ ಮೊದಲಿನಂತೆಯೇ ಉಳಿವುದೆಂದು ಎದೆ ತಟ್ಟಿ ತಿಳಿಸಿದರು. ಏಕೆಂದರೆ ಬ್ರಿಟಿಷ್ ಸಾಮ್ರಾಜ್ಯವನ್ನು ದಿವಾಳಿ ಮಾಡಲು ಅವರು ಪೌರೋಹಿತ್ಯ ವಹಿಸುವುದಿಲ್ಲವೆಂದು ಖಂಡಿತ ಹೇಳಿದ್ದಾರೆ!

ಅಟ್ಲಾಂಟಿಕ್ ಶಾಸನದಂಥಾ ಶಾಸನವೇ ಹಾಗಾದ ಮೇಲೆ, ಕಾರ್ಡೆಲ್ ಹಲ್ಲರ ಇಂದಿನ ಹೇಳಿಕೆಗೆ ಯಾರು ಹೆಚ್ಚಿನ ಮನ್ನಣೆ ಕೊಡಬೇಕು, ಮಿತ್ರ ಮುಖಂಡರ ಯಾವುದೇ ಶಾಸನ, ಹೇಳಿಕೆಗಳೂ ಪರತಂತ್ರರಾದ ನಮಗೆ ಅನ್ವಯಿಸುವುದೇ?

ದ್ವಿತೀಯ ರಂಗವಾಗಿದೆ!

ಮಿತ್ರರು, ಕೊನೆಗೊಮ್ಮೆ ಸಕಲ ಸಿದ್ಧತೆಗಳನ್ನು ಮಾಡಿ ಫ್ರಾನ್ಸಿಗೆ ಮುತ್ತಿಗೆ ಹಾಕಿದ್ದಾರೆ. ಮಿತ್ರರು ಅಪರಿಮಿತ ನೌಕಾಬಲ ಸಮೇತ ಫ್ರಾನ್ಸಿಗೆ ಆಕ್ರಮಣ ಮಾಡಿ ಸಾಹಸದ ಹೋರಾಟ ಹೂಡಿದ್ದಾರೆ. ದ್ವಿತೀಯ ರಂಗವಾಗಿದೆಯೆಂದು ಮಿತ್ರರಿಂದ ಧೈರ್ಯಪೂರ್ವಕ ಹೇಳುತ್ತಿದ್ದಾರೆ.

ಈ ದ್ವಿತೀಯ ಮಹಾಯುದ್ಧ ಆರಂಭವಾದ ಕೂಡಲೇ, ಹಿಟ್ಲರನು ಹೋರಟ ರಭಸದಲ್ಲಿಯೇ ಬಹಳ ಮುನ್ನುಗ್ಗಿ ಫ್ರಾನ್ಸಿನ ವರೆಗೂ ಬಂದು, ಬ್ರಿಟಿಷರ ನೆರೆಕರೆಯಲ್ಲಿ ತಳವೂರಿದ್ದನು. ಸಹಜವಾಗಿ ಶತ್ರು ನೆರೆಕರೆಯಲ್ಲಿ ತಳವೂರಿದ್ದರಿಂದ ಬ್ರಿಟಿಷರಿಗೆ ತುಂಬಾ ತೊಂದರೆಗಳುಂಟಾಯಿತು. ಲಂಡನ್ನು ಬಹಳ ಬಾಂಬಿನ ಧಾಳಿಗೆ ತುತ್ತಾಯಿತು.

ಇಂಥಾ ಶತ್ರುವನ್ನು ಸೋಲಿಸಲು ಹಲವು ಕಾರ್ಯಗಳು ಆಗಬೇಕಾಗಿವೆ. ಇವುಗಳಲ್ಲಿ ಎಲ್ಲದರಲ್ಲೂ ಅತ್ಯಂತ ಮುಖ್ಯವಾದುದು ಆತನನ್ನು ತನ್ನ ನೆರೆಕರೆಯಿಂದ ಹೊರಹಾಕುವುದು. ಫ್ರಾನ್ಸಿನಿಂದ ಶತ್ರುವನ್ನು ಹೊಡೆದೋಡಿಸುವುದು. ಆ ಕಾರ್ಯವಿಂದು ಮಹಾಸನ್ನಾಹದಿಂದ ತೊಡಗಿದೆ.

ದ್ವಿತೀಯ ರಂಗವು ಈಗ ಹೀಗೆ ಆರಂಭವಾಗಿದೆಯೆಂದು ಖಂಡಿತ ಹೇಳಬಹುದು. ಈ ದ್ವಿತೀಯ ರಂಗವು ಫಲಕಾರಿಯಾದೀತೆಂದು ನಮ್ಮ ಆಶೆ; ಹಿಟ್ಲರನನ್ನು ಸೋಲಿಸಲು, ರಶ್ಯನರು ಎಂಥಾ ಪರಾಕ್ರಮದಿಂದ ಹೋರಾಡಿದರೂ, ಬ್ರಿಟನು ಅಮೇರಿಕಗಳು ದ್ವಿತೀಯ ರಂಗ ತೆರೆಯದಿದ್ದರೆ ಆ ಕಾರ್ಯ ಸಂಪೂರ್ಣವಾಗಲಾರದು. ಆ ಕೆಲಸದಲ್ಲೀಗ ತೊಡಗಿದ್ದಾರೆ.

ಫ್ರಾನ್ಸಿನ ಆಕ್ರಮಣ ಕಾರ್ಯ ಬಹಳ ರಭಸದಿಂದ ಮುಂದೊತ್ತಿದೆ; ರೋಮ್ ಪತನವೊಂದು ಹಿಟ್ಲರನಿಗೆ ದೊಡ್ಡ ಅಪಜಯ. ಇಂದಿನ ಪರಿಸ್ಥಿತಿ ನೋಡಿದರೆ ಶತ್ರುವಿನ ಪರಾಕ್ರಮ ಬೇಗನೇ ಜಗ್ಗುವಂತಿದೆ.

ಹಿಂದುಸ್ಥಾನ

ನಾರ್ಮಂಡಿ ಕರಾವಳಿ ಠಾಣೆಯಲ್ಲಿ ೨॥ ಲಕ್ಷ ಜರ್ಮನರ ವಿರುದ್ಧ ಹೋರಾಡುತ್ತಿರುವ ಮಿತ್ರ ಸೈನಿಕರು ಮೂರು ವಿಜಯಗಳನ್ನು ಸಂಪಾದಿಸಿರುವರು.

"ಮೊದಲನೆಯದಾಗಿ ಮಿತ್ರರು ೧೦ ಸಾವಿರ ಜರ್ಮನ್ ಸೈನಿಕರನ್ನು ಸೆರೆಹಿಡಿದಿರುವರು. ಎರಡನೆಯದಾಗಿ, ಯಾಂತ್ರಿಕ ಬಲವನ್ನು ಸಂಘಟಿಸಲು ಅವರಿಗೆ ಅಶಕ್ಯ. ಏಕೆಂದರೆ ಅದಕ್ಕೆ ಸಿದ್ಧತೆ ನಡೆಸುವ ವರೆಗೆ ಮಿತ್ರರನ್ನು ತಡೆಯಲು ಜರ್ಮನರಲ್ಲಿ ಸಾಕಷ್ಟು ಕಾಲ್ದಳಗಳಿಲ್ಲ. ಅವರು ಫ್ರೆಂಚ್ ಟ್ಯಾಂಕುಗಳನ್ನು ಉಪಯೋಗಿಸುತ್ತಿರುವುದು ದೌರ್ಬಲ್ಯವೇ ಮೂರನೇ ಕಾರಣ.

ರೋಮೆಲ್ಲನ ವಶ ಈಗ ೧೪, ೧೫, ದಂಡುಗಳು ಇವೆಯೇನೋ ನಿಜ. ಮಿತ್ರರ ವಿರುದ್ಧ ಅವನ್ನು ರಣರಂಗಕ್ಕೆ ಅಟ್ಟುವುದು ಖಂಡಿತ. ಆದರೆ ಮಿತ್ರರು ನಿರೀಕ್ಷಿಸಿದಷ್ಟು ಬೇಗನೇ ಸೈನ್ಯ ಸಂಘಟಿಸಲು ಅವನಿಂದಾಗಲಿಲ್ಲ.

ಟಿಲ್ಲಿ ಸರ್ ಸ್ಯೂಲೆಸ್‌ದಲ್ಲಿ ಈಗ ಮೂರು ಪ್ಯಾಂಝುರ್ ದಂಡುಗಳು ಹೋರಾಡುತ್ತಿವೆ. ಇವುಗಳಲ್ಲಿ ೨೧ನೇ ಪ್ಯಾಂಝುರ್ ದಂಡೂ ಇದೆ. ಈ ದಂಡಿನಲ್ಲಿ ಫ್ರೆಂಚ್ ಟ್ಯಾಂಕುಗಳಿದ್ದಂತೆ ಕಂಡುಬಂದಿದೆ. ಫ್ರಾನ್ಸದಲ್ಲಿ ಜರ್ಮನರಿಗಾಗಿ ತಯಾರಿಸಲ್ಪಟ್ಟ ಟ್ಯಾಂಕುಗಳು ಬೇರೆ. ಅವು ೧೯೪೦ರ ಮೊದಲು ತಯಾರಿಸಲ್ಪಟ್ಟವುಗಳು. ಇವು ಹಳೇ ಮಾದರಿಯವು ಇತ್ತೀಚೆಗ ಟ್ಯಾಂಕುಗಳ ರಚನೆಯಲ್ಲಿ ಹೊಸ ಹೊಸ ಸಂಶೋಧನೆಗಳಾಗಿವೆ. ಹೀಗಿರುವಾಗ ಈ ಹಳೇ ಟ್ಯಾಂಕುಗಳು ಬಹಳ ವಿಲಕ್ಷಣವೇ ಸರಿ. ಆಧುನಿಕ ಟ್ಯಾಂಕುಗಳಷ್ಟು ವೇಗವಿಲ್ಲ. ತೋಪುಗಳೂ ಪರಿಣಾಮಕಾರಿಯಲ್ಲ. ಪೆಟ್ರೋಲದ ವ್ಯವಸ್ಥೆಯೂ ತೃಪ್ತಿಕರವಾಗಿಲ್ಲ. ಈ ಟ್ಯಾಂಕುಗಳನ್ನು ಜರ್ಮನರು ಉಪಯೋಗಿಸುತ್ತಿರುವದನ್ನು ನೋಡಿದರೆ ಅವರಲ್ಲಿ ಯಾಂತ್ರಿಕ ಕೊರತೆಯಿದೆಯೆಂದು ಹೇಳಲಡ್ಡಿಯಿಲ್ಲ.

ಈಗ ಟಿಲ್ಲಿ ಸರ್ ಸ್ಯೂಲೆಸ್ ಯುದ್ಧದಲ್ಲಿ ಬ್ರಿಟಿಷ್ ಟ್ಯಾಂಕು ಪಡೆಗಳು ಭಾಗವಹಿಸಿವೆ. ನಗರದ ನೈಋತ್ಯ ಮತ್ತು ಆಗ್ನೇಯ ಕಡೆಗಳಲ್ಲಿ ಭೀಕರ ಬೀದಿಕಾಳಗ ನಡೆಯುತ್ತಿವೆ. ಟಿಲ್ಲಿ ಮತ್ತು ಕ್ಯಾರಂಟನಗಳ ಮಧ್ಯೆ ಸೇರಿಸಿ ಅರಣ್ಯವಿದೆ. ಜರ್ಮನರು ಇಲ್ಲಿ ಮದ್ದುಗುಂಡು ಹಾಗು ಸಹಾಯ ಸಲಕರಣೆಗಳನ್ನು ಸಂಗ್ರಹಿಸಿಟ್ಟಿದ್ದರು. ಈಗ ಈ ಕಾಡು ಸಂಪೂರ್ಣ ಮಿತ್ರರ ವಶವಾಗಿದೆ. ಒಂದು ಮಿತ್ರ ದಳವು ಬೇಯು—ಸೈಂಟ್ ಲೋ ರಸ್ತೆಯನ್ನು ದಾಟಿ ಹೋಗಿದೆ.

ಚೆರಬೂರ್ ದ್ವೀಪಕಲ್ಪದಲ್ಲಿ ಜರ್ಮನರ ಪ್ರತಿಭಟನೆಯು ಉಗ್ರವಾಗಿದೆ. ಪಶ್ಚಿಮದಿಂದ ಅವರು ಸಹಾಯ ಸಲಕರಣೆಗಳನ್ನು ಕಳಿಸುತ್ತಿರುವರು. ನಿನ್ನೆ ಮಿತ್ರ ವಿಮಾನಗಳು ಶತ್ರುವಾಹನ ಸೌಕರ್ಯಗಳ ಮೇಲೆ ಬಾಂಬೆಸೆದುವು. ಪ್ಯಾರಿಸ್‌ದ ಪಶ್ಚಿಮದಲ್ಲಿ ಶೀನ್ ನದಿಗೆ ಕಟ್ಟಿದ್ದ ಸೇತುವೆಗಳೆಲ್ಲವನ್ನು ಮಿತ್ರ ವಿಮಾನಗಳು ನಾಶ ಮಾಡಿವೆ ಜರ್ಮನರು ರಬ್ಬರ್ ಸೇತುವೆಗಳನ್ನು ಹಾಕಿದರು. ಅವನ್ನೂ ನಾಶಗೊಳಿಸಲಾಗಿದೆ."

ಸಿಂಧದ ಹಿಂದೂ ಮಂತ್ರಿಗಳಾದ ಡಾ॥ ಹೇಮನದಾಸ. ಹಾಗು ರಾಯಸಾಹೇಬ ಗೋಕುಲದಾಸರು ಹಿಂದು ಸಭೆಯವರು ತಮ್ಮ ಬೆಂಬಲ ಹಿಂತೆಗೆದುಕೊಂಡ ಸಂಬಂಧದಲ್ಲಿ ಪತ್ರಿಕೆಗಳಿಗೆ ಪ್ರಕಟನೆ ಕೊಟ್ಟು ತಮ್ಮ ಮೇಲಿನ ಆರೋಪಗಳನ್ನು ತಿಳಿಸದೆ ಈ ರೀತಿ ಮಾಡಿದ್ದು ಅನ್ಯಾಯದ್ದಾಗಿರುವದೆಂದೂ ಆದರೂ ಹಿಂದುಗಳ ಹಿತಕ್ಕಾಗಿ ಎಂದಿನಂತೆ ತಾವು ಹೋರಾಡುವದಾಗಿಯೂ ತಿಳಿಸಿದ್ದಾರೆ.

ಬಂಗಾಲದಲ್ಲಿಯ ಭಾರತ ಬರಗಾಲ ಪರಿಹಾರ ಸಮಿತಿಯವರು ಶ್ರೀ॥ ವಿಜಯಲಕ್ಷ್ಮಿ ಪಂಡಿತರ ಮುಖಾಂತರವಾಗಿ ಬಂಗಾಲದ ರೋಗಗ್ರಸ್ತರಿಗೆ ಪರಿಹಾರ ಕೊಡುವದಕ್ಕಾಗಿ ೨೭೦೦ ರೂ.ಗಳನ್ನು ದಾನವಾಗಿ ಕೊಟ್ಟಿದ್ದಾರೆ. ಈ ಪರಿಹಾರ ಕೊಡುವದಕ್ಕಾಗಿ ಒಂದು ಮಂಡಳವು ರಚಿತವಾಗಿದ್ದು ಪಾಟ್ನಾ ಜಿಲ್ಲೆಗೆ ಬೇಗನೆ ಹೋಗಲಿರುವದು.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರ ಧೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ಏರ್ಪಾಡಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಸಪ್ತಾಹ ಭೂಮ್ಯಾಯು ಸಂಚಾರ

ರೋಮ್ ಪತನ; ಫ್ರಾನ್ಸ್ ಆಕ್ರಮಣ!

ಮಿತ್ರರು ದ್ವಿತೀಯರಂಗ ತೊಡಗಿದರು!

ಯುದ್ಧ ಮುಖವೇ ಇಂದು ಬದಲಿದೆ; ಒಮ್ಮೆಗೇ ಮಿತ್ರರು ಮಹಾ ಸಾಹಸ ಕಾರ್ಯಗಳನ್ನು ಮಿಂಚಿನ ವೇಗದಿಂದ ಕೈಕೊಂಡಿದ್ದಾರೆ. ಆ ಕಡೆ, ಇಟಲಿಯಲ್ಲಿ ಇತಿಹಾಸ ಪ್ರಸಿದ್ಧ ಪವಿತ್ರ ರೋಮ್ ನಗರವು ನಾಜಿಗಳ ಕೈಯಿಂದ ಕಿತ್ತು ತೆಗೆಯಲಾಯಿತು, ಈಚೆಗೆ ಫ್ರಾನ್ಸಿನಲ್ಲಿ ಅಗಣಿತ ನೌಕಾ ವಿಮಾನ ಬಲಸಮೇತ ಮಿತ್ರರ ಮುತ್ತಿಗೆ ಆರಂಭವಾಯಿತು ಈ ಕಾರ್ಯಕ್ರಮಗಳು ಇಂದು ಯುದ್ಧ ಮುಖವನ್ನೇ ತೀರಾ ಬದಲಾಯಿಸಿವೆ

ಹಲ ಕಾಲದಿಂದ ತುಸು ಸುಮ್ಮಗಿದ್ದ, ಕೇವಲ ರಕ್ಷಣಾ ಕಾರ್ಯದಲ್ಲಿ ಮಾತ್ರ ತೊಡಗಿದ್ದ ಮಿತ್ರರು, ಈಗ ರಭಸದಿಂದ, ಧೈರ್ಯದಿಂದ ಆಕ್ರಮಣ ಕಾರ್ಯಕ್ಕೂ ಕೈ ಹಾಕಿದ್ದಾರೆಂದು ಹೇಳಬಹುದು ಕಳೆದ ಐದು ವರ್ಷಗಳಲ್ಲಿ ಮುದೊಂತಿ ಮುನ್ನುಗ್ಗಿ ಬಂದ ಹಿಟ್ಲರನು ತನ್ನ ತಲೆ ಕೆಟ್ಟ ಅನೇಕ ಕೆಲಸಗಳಿಂದ ತುಂಬಾ ಜನ ಧನ ಉತ್ಸಾಹ ಶಕ್ತಿಗಳನ್ನು ಇಂದು ಕಳ ಕೊಂಡು ನಿರುಪಾಯನಾಗಿ ನಿರುತ್ಸಾಹ ಗೊಂಡಿರುವೀ ಕಾಲದಲ್ಲಿ ಹೆಚ್ಚಿನ ನಷ್ಟ ಗಳಿಗ ಗುರಿಯಾಗದೆ, ಹೆಚ್ಚಿನ ಸಾಹಸ ಗಳಿಗೂ ಇಳಿಯದೆ, ಕೇವಲ ಆತ್ಮರಕ್ಷಣೆ ಮಾಡಿಕೊಂಡು ಶಕ್ತಿ ಸಂಗ್ರಹಿಸಿಕೊಂಡಿದ್ದ ಮಿತ್ರರು ಶತ್ರುವನ್ನು ಈ ಸಂದರ್ಭ ದಲ್ಲಿ ಹೊಡೆದಿರುವುದು ಇದೊಂದು ಯುದ್ಧ ಮುಖವನ್ನು ಖಂಡಿತವಾಗಿ ಬದಲಾಯಿಸತಕ್ಕ ಘಟನೆಯಾಗಿದೆ

ರೋಮ್ ಪತನ

ಇತಿಹಾಸ ಪ್ರಸಿದ್ಧವೂ, ಜಗದ್ಗುರು ಪೋಪರ ನೆಲೆಯೂ ಆಗಿ ಪವಿತ್ರವೂ ಆಗಿರುವ ಇಟಲಿಯ ಮುಖ್ಯ ನಗರ ರೋಮ್ ಕಳೆದ ನಾಲ್ಕನೆಯ ತಾರೀಕಿನ ದಿನ ಮಿತ್ರರ ವಶವಾಗಿದೆ ಇದೊಂದು ದೊಡ್ಡ ವಿಜಯವೆನ್ನಬೇಕು.

ಈಚೆಯ ಇತಿಹಾಸದಲ್ಲಿ ರೋಮ್ ನಗರದ ಈ ಪತನವು ಮೂರನೆಯ ಸಲವಾಗಿದೆ, ೧೯೨೨ರಲ್ಲಿ ರೋಮಿಗೆ ಫೇಸಿಸ್ಟರ ಆಕ್ರಮಣವಾಗಿ ಅದು ಅವರವಶವಾಗಿತ್ತು, ಆನಂತರ ಇಂದಿಸೀ ಮಹಾ ಯುದ್ಧ ಪ್ರಾರಂಭವಾಗಿ ೧೯೪೦ರಲ್ಲಿ ಮುಸಲನಿ ಮಿತ್ರರ ಮೇಲೆ ಯುದ್ಧ ಸಾರಿದನು ಮಿತ್ರರು ಇಟಲಿಗೆ ನುಗ್ಗಿ ಶತ್ರುಗಳನ್ನು ಓಡಿಸುತ್ತಿದ್ದರು ರೋಮನ್ನು ವಶಪಡಿಸಿಕೊಳ್ಳಬೇಕೆಂದು ಚರ್ಚಿಲ್ಲರು ಕಳದ ಜುಲೈ ತಿಂಗಳಲ್ಲಿಯೇ ಹೇಳಿದ್ದರು ಅಲ್ಲಲ್ಲಿ ಕೊಡೆ ವೈಮಾನಿಕರನ್ನೂ ಇಳಿಸಿದ್ದರು ಇದು ಗೊತ್ತಾಗಿಯೇ ಜರ್ಮನರು ಸಪ್ಟಂಬರ ೮-೯ರಲ್ಲಿ ರೋಮನ್ನು ಸ್ವಾಧೀನ ಮಾಡಿಕೊಂಡಿದ್ದರು ಇದು ರೋಮಿನ ಎರಡನೇ ಪತನವಾಗಿದೆ. ಅಂದಿನಿಂದ ಇದುವರೆಗೆ ರೋಮ್ ಜರ್ಮನರ ಕೈಯಲ್ಲಿತ್ತು

ಕಳೆದ ೯ ತಿಂಗಳಿಂದ ಜರ್ಮನರ ವಶದಲ್ಲಿದ್ದ ರೋಮ್ ನಗರವನ್ನು ಮಿತ್ರರು ಈಗ ಸ್ವಾಧೀನ ಪಡಿಸಿಕೊಂಡು ಸೈನಿಕ ದೃಷ್ಟಿಯಿಂದಲ್ಲವಾದರೂ ನೈತಿಕ ಹಾಗೂ ಗೌರವದ ದೃಷ್ಟಿಯಿಂದ ಮಹಾ ವಿಜಯವನ್ನು ಗಳಿಸಿಕೊಂಡರೆಂದು ಹೇಳಬಹುದು

ಹೀಗೆ ರೋಮ್ ನಗರವು ಮಿತ್ರರ ವಶವಾದದ್ದರಿಂದ ಇಟಲಿಯ ಯುದ್ಧದಲ್ಲಿ ಹೆಚ್ಚಿನ ಜಯಗಳಿಸಿದಂತಾಗಿದೆ. ಆದರೂ ಅಲ್ಲಿ ಪೂರ್ಣ ಜಯವಾಗಿಲ್ಲ. ರೋಮ್ ನಗರದ ಪತನವಾದ ಮೇಲೇನು ಎಂಬುದೂ ಒಂದು ಪ್ರಶ್ನೆಯಾಗಿದೆ. ಸೈನಿಕ ದೃಷ್ಟಿಯಿಂದ ಹೆಚ್ಚಿನ ಮಹತ್ವವಿಲ್ಲದಿದ್ದರೂ ನೈತಿಕ ದೃಷ್ಟಿಯಿಂದ ಬಹಳ ಬದಲಾವಣೆಗಳಾಗಬಹುದು. ಬಡೋಗ್ಲಿಯೋ ಸರಕಾರ ರಾಜಿಯಿತ್ತು ಮಿತ್ರರ ಕೈವಾಡವಿರುವ ಜನಪ್ರಿಯ ಸರಕಾರವೊಂದು ಬೇರೆ ಇಟಲಿಯಲ್ಲೀಗ ತಲೆಯೆತ್ತುವುದು. ಸಂಭವವಿದೆ ಚರ್ಚಿಲ್ಲರು ಪ್ರಭುತ್ವವಾದಿಗಳಾಗಿರುವುದರಿಂದ, ಇಟಲಿಯ ಅರಸನನ್ನೂ ಪುನಃ ಗದ್ದುಗೆಗೇರಿಸಬಹುದೇನೊ'

ಜರ್ಮನರ ಉತ್ಸಾಹಕ್ಕೆ ರೋಮ್ ಪತನವು ದೊಡ್ಡ ಆಘಾತವಾಗಿದೆ.

ಭಾರತ ಸೈನಿಕರ ಸಾಹಸ

ಸ್ವತಂತ್ರವಾದ ಯೂರೋಪಿನ ಪಟ್ಟಣದಲ್ಲಿ ರೋಮ್ ಮೊದಲನೆಯದು; ರೋಮನ್ನು ಸ್ವತಂತ್ರಗೊಳಿಸಿದ್ದು ಭಾರತದ ಸೈನಿಕರು'

ರೋಂ ನಗರಕ್ಕೆ ಮೊದಲಾಗಿ ಪ್ರವೇಶಿಸಿದ್ದು ಬ್ರಿಟಿಷ್ ಲನೆ ಮತ್ತು ಭಾರತೀಯ ಸೈನ್ಯಗಳು ಎಲ್ ಎಲಾಮಿನ್ ಕ್ಷೇತ್ರದಿಂದ ತೊಡಗಿ ರೋಂ ವಿಜಯದ ವರೆಗೆ ಮೆಡಿಟರೇನಿಯನ್ ಕ್ಷೇತ್ರದ ತನಕ ಜಯಪತಾಕೆ ಹಾರಿಸಿದ್ದು ಭಾರತೀಯ ಸೈನಿಕರು' ಮಿತ್ರರಿಗೆ ಮಹಾ ವಿಜಯವನ್ನು ದೊರಕಿಸಿದ್ದು ಭಾರತೀಯರು' ಭಾರತದ ಸೈನ್ಯಗಳಿಗೆ ಜಗತ್ತು ಎಷ್ಟು ಋಣಿಯಾಗಿದ್ದರೂ ಸಾಲದೆಂದು ಹಿಂದೆ ಸೇನಾಧಿಕಾರಿಯಾಗಿದ್ದಾಗ ವೇವಲರೇ ಹೇಳಿದ್ದರು

ಯೂರೋಪಿನ ಪುರಾತನ ಸಂಸ್ಕೃತಿ ಪೀಠವೂ, ಜಗದ್ಗುರು ಪೋಪರ ನೆಲೆಮನೆಯೂ, ಇತಿಹಾಸ ಪ್ರಸಿದ್ಧವೂ ಆದ ರೋಂ ನಗರವನ್ನು ಬಂಧವಿಮೋಚನಗೊಳಿಸಿದ ಕೀರ್ತಿ ಭಾರತೀಯ ಸೈನಿಕರದಾಗಿದೆ'

ರೋಂ ಪತನವಾದದ್ದೇ ತಡ ಯುರೋಪಿನ ವಿಜಯಯಾತ್ರೆಯೂ ತೊಡಗಿದೆ ಫ್ರಾನ್ಸಿಗೆ ಧಾಳಿಯಾಗಿದೆ ಜರ್ಮನರು ಇನ್ನೂ ಈ ವಿಜಯಯಾತ್ರೆಯನ್ನು ಹೆಚ್ಚಿನ ಪರಿಣಾಮಕಾರಿಯಾಗುದೆಂದು ಒಪ್ಪಿಕೊಳ್ಳುವುದಿಲ್ಲ 'ಇದೆಲ್ಲಾ ಬ್ರಿಟನು ಅಮೆರಿಕದ ಬೊಬ್ಬೆ, ಜರ್ಮನ್ ಸೇನಾ ಖಾತೆಯನ್ನು ಮರುಳುಗೊಳಿಸುವ ಮಾಟ, ಇದಕ್ಕೆ ನಾವು ಬೆರಗಾಗುವಂತಿಲ್ಲ, ಈ ಮುತ್ತಿಗೆ ಮಹಾ ಮುತ್ತಿಗೆಯಾಗುತ್ತದೋ ಇಲ್ಲವೋ ಮುಂದೆ ನೋಡಬೇಕಾಗಿದೆ' ಹೀಗೆಂದು ಜರ್ಮನ್ ಪ್ರಚಾರಖಾತೆ ಸಾರುತ್ತದೆ ಹೀಗೆ ಜರ್ಮನರು ಅಲ್ಲಗಳೆವುದರಲ್ಲಿ ಅರ್ಥವಿಲ್ಲ ಮಿತ್ರರು ಮಹಾ ಸಾಹಸಮಾಡಿ ಫ್ರಾನ್ಸಿಗೆ ಈಗ ಮುತ್ತಿಗೆ ಹಾಕಿದ್ದಾರೆಂಬ ದರಲ್ಲಿ ಏನೇನೂ ಸಂಶಯವಿಲ್ಲ ಹಿಟ್ಲರನ ವಿನಾಶಕ್ಕಿಂದು ಕಾಲ ಬಂದಿವೆ, ಫೇಸಿಸ್ಟರ ತಳಹದಿ ಸಡಿಲಾಗುತ್ತಿದೆ

ಫ್ರಾನ್ಸ್ ಆಕ್ರಮಣ

ರೋಮ್ ಪತನವಾದ ಸುದ್ದಿ ಬಂದ ಬೆನ್ನಿಗೆ ಮಿತ್ರರು ಫ್ರಾನ್ಸನ್ನು ಆಕ್ರಮಿಸಿದ ವಾರ್ತೆಯೂ ಬಂದದ್ದು ಇಂದು ಯುದ್ಧದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ತೆರೆದಂತಾಗಿದೆ ಯೂರೋಪಿಗೆ ಮಹಾ ಆಕ್ರಮಣ ಮಾಡಬೇಕೆಂದು ಮಿತ್ರರು ಹಲಗಾಲದಿಂದ ಆಲೋಚಿಸುತ್ತಿದ್ದು ಸದ್ಯ ಆ ಕಾರ್ಯದಲ್ಲಿ ದುಮುಕಿದ್ದಾರೆ ಇಂಗ್ಲಿಷ್ ಕಾಲುವೆಯನ್ನು ದಾಟಿ ಫ್ರಾನ್ಸಿಗೆ ಮುತ್ತಿಗೆ ಹಾಕಿದ್ದರಿಂದ ಮಿತ್ರರು ದೊಡ್ಡದೊಂದು ಧಾಳಿಗ ತೊಡಗಿದ್ದು ಮಾತ್ರವಲ್ಲ ಸೈನಿಕ ದೃಷ್ಟಿಯಿಂದಲೂ ಮಹತ್ವದ ಕಾರ್ಯವನ್ನೇ ಕೈಕೊಂಡಿದ್ದಾರೆ ಕಾಲುವೆ ದಾಟಿದ ಈ ಆಕ್ರಮಣ ಬರ್ಲಿನ್ ಧಾಳಿಗೂ ಹತ್ತಿರದ ಹಾದಿಯಾಗುತ್ತದೆ ಪಶ್ಚಿಮದಲ್ಲಿ ಹೀಗೆ ಮುಖ್ಯ ಸೈನ್ಯ ಚಟುವಟಿಕೆ ಪ್ರಾರಂಭಿಸಿದ್ದರಿಂದ ರಶ್ಯನರು ಹಲಗಾಲದಿಂದ ಹಾರೈಸುತ್ತಿದ್ದ ದ್ವಿತೀಯ ರಂಗವನ್ನು ಕೈಕೊಂಡಂತಾಯಿತು. ಜರ್ಮನಿಯನ್ನು ಇಕ್ಕಳದಲ್ಲಿ ಹಾಕಿ ಸೋಲಿಸಬೇಕೆಂದ ಮಿತ್ರರು ಹಂಚಿಕೆ ಹೂಡಿಯೇ ಇದ್ದಾರೆ ಇಂದಿನ ಫ್ರಾನ್ಸ್ ಧಾಳಿಯಿಂದ ಅದರಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ

ಈ ಹೋರಾಟವೇನೋ ಕಠಿಣವು ಮತ್ತು ಸಂಕಷ್ಟದ್ದು. ಫ್ರಾನ್ಸ್ ಕರಾವಳಿಯಲ್ಲಿ ೫೦೦,೦೦೦ ಅಮೆರಿಕನ್ ಸೈನಿಕರೂ, ೨೦೦,೦೦೦ ಬ್ರಿಟಿಷ್ ಸೈನಿಕರೂ ಮರಣಕ್ಕೆ ತುತ್ತಾಗಬೇಕಾದೀತೆಂದು ಸೈನ್ಯ ತಜ್ಞರು ಹೇಳುತ್ತಿದ್ದಾರೆ. ಈ ಊಹನೆ ಅಮೆರಿಕದಲ್ಲಿ ತುಂಬಾ ಗಡಿಬಿಡಿಗೆ ಕಾರಣವಾಗಿದ್ದರೂ, ಇದರಲ್ಲಿ ಹೆಚ್ಚಿನ ಅಸಂಭವವೇನೂ ಇರುವುದಿಲ್ಲ. ಇಂಗ್ಲಿಷ್ ಕಾಲುವೆಯ ಅಡ್ಡಕ್ಕೆ ಜಗತ್ತಿನ ಹಲವು ಭದ್ರ ರಕ್ಷಣಾ ವ್ಯೂಹಗಳಿವೆ ಹೇಗಿದ್ದರೂ ಕಳದ ಮೂರು ವರ್ಷಗಳಿಂದ ನಾಜಿಗಳು ಅವುಗಳನ್ನು ಬಲಗೊಳಿಸುತ್ತಿದ್ದಾರೆ ಡಿಪ್ಪೆ ಧಾಳಿಯಿಂದ ಫ್ರಾನ್ಸ್ ಕರಾವಳಿ ಅಷ್ಟೇನೂ ಸುಲಭವಲ್ಲವೆಂದೂ ಭೂಪಟದಲ್ಲಿ ಕಂಡಷ್ಟು ಸುಲಭದಲ್ಲಿ ಸ್ವಾಧೀನ ಮಾಡಲು ಸಾಧ್ಯವಿಲ್ಲವೆಂದೂ ಖಚಿತಗೊಳಿಸಿದೆ ಫ್ರಾನ್ಸ್ ಕರಾವಳಿ ಬಹಳ ಉಂಟಾಗಿದ್ದು ಇಳಿಯಲು ತುಂಬಾ ತೊಂದರೆ ಕೊಡುವಂಥಾದ್ದಿದೆ ಕರಾವಳಿಯಿಂದ ಸಾಧಾರಣ ಹತ್ತು ಮೈಲು ಅಂತರದ ಸ್ಥಾನವನ್ನು ಒಲಿಗೊಳಿಸಿ ಕೊಳ್ಳುವಿದ್ದರೆ ಫ್ರಾನ್ಸಿಗೆ ಯಶಸ್ವಿ ಧಾಳಿಯಿಡುವುದು ಕಷ್ಟಕರವಾದೀತು.

ಎಷ್ಟು ಕಷ್ಟವಿದ್ದರೂ ಮಿತ್ರರಿಗೆ ಅಗಣಿತ ವೈಮಾನಿಕ ಬಲವಿಳಿಸಿ ಅಪರಿಮಿತ ನೌಕಾ ಬಲವಿಳಿಸಿ ದಾರಿ ಹತ್ತಿರವಾದದ್ದರಿಂದ ಒಮ್ಮೆಲೇ ಭಯಗೊಳಿಸಲು ಸಾಧ್ಯವಿದೆ ಫ್ರಾನ್ಸ್ ಜರ್ಮನರ ಕೈಕೆಳಗೆ ಬಂದ ಮೇಲೆ ಆಕ್ರಮಣಗಾರರ ವಿರುದ್ಧ ಬಂಡಾಯ ನಡೆಯುತ್ತಲೇ ಇದ್ದು ಈಗ ಬಂಡಾಯಗಾರರಿಗೆ ಒಳ್ಳೇ ಸಂದರ್ಭವೊದಗಿ ಮಿತ್ರರಿಗವರು ನೆರವಾಗಬಹುದು ದಿನ ದಿನದ ಸುದ್ದಿಗಳನ್ನು ಕೇಳಿದಂತೆ ಫ್ರಾನ್ಸಿನಲ್ಲಿ ಮಿತ್ರರು ಯಶಸ್ವಿಯಾಗಿ ಮುಂದೊತ್ತಿದಂತೆ ಕಂಡು ಬರುವುದು

ಆಕ್ರಮಣದ ವಿವರಗಳು

ಬ್ರಿಟಿಷ್ ಅಮೆರಿಕನ್ ಮತ್ತು ಕೆನಡಿಯನ್ ಸೈನಿಕರು ಜನರಲ್ ಮೊಂಟ್‌ಗಮರಿಯ ವರ ಮುಂದಾಳು ತನದಲ್ಲಿ ತಾ ೬ರಂದು ಮುಂಜಾನೆ ಫ್ರಾನ್ಸಿನ ಉತ್ತರ ಕರಾವಳಿಯಲ್ಲಿ ಹಿಟ್ಲರ್ ಕೋಟೆಗಳ ಮೇಲೆ ಧಾಳಿಯಿಟ್ಟು ದ್ವಿತೀಯರಂಗ ಪ್ರಾರಂಭಿಸಿದರು ಈ ಆಕ್ರಮಣ ಆರಂಭವಾ

(೫ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability)

Estd) Head Office: UDIPI S Kanara. (1906.

Statement of affairs as on 31st December, 1943.

LIABILITIES	Rs As Ps	ASSETS	Rs. As Ps
1 Paid up Capital	13 68 480- 0- 0	1 Cash on hand & with bankers 8 in Current & Fixed Deposit A/cs	19,71,808' 0- 1
2 Reserves	4 12 120-12 8	2 Investments on (1) Govt Securities (2) Immovable properties etc	24 26 660,- 9- 9
3 Deposits	67 30 955- 3- 4	3 Loans on Jewels & other valuable securities	33 10,167-15-3
4 Due to Bankers	7,34,366-10 9	4 Loans on personal securities & Bills purchased	20 49 197-13-10
5 Bills for collection	6 70 379- 8- 8	5 Bills for collection as per contra	6,70 379- 8- 8
6 Sundries including revenue items	7 58 745- 8 4	6 Office premises furniture etc.	93,705- 0-10
		7 Sundries including revenue items	1,13,128-13- 4
Total	10 675,047-11- 9	Total	1,06,75,047-11- 9

ಜಿಲ್ಲಾ ಸಮಾಚಾರಗಳು

ಮಂಗಳೂರು

[illegible] ಪ್ರತಿಗಳ [illegible] ಒಂದು [illegible] ವರ್ಷ ತಿಂಗಳ [illegible] ಮತ್ತು [illegible] ಸಮಾಚಾರಗಳ [illegible] ದಕ್ಷಿಣ [illegible] ಬೇಕೆಂದೂ [illegible] ಸಿಲ್ಲಿಸಬಾ [illegible] ಮತ್ತು [illegible] ದರ ಮತ್ತು [illegible] ಪರವನ್ನು [illegible] ಪ್ರಕಟಿಸಬೇಕೆಂದೂ [illegible]

ಚಕ್ರವರ್ತಿಯವರ ಜನ್ಮೋತ್ಸವ ಸಂಬಂಧದಲ್ಲಿ ಕೈಸ್ತ್ರ ಮಹಿಳಾ ಕಾಲೇಜಿನ ಲೆಕ್ಚರರ್ ಆಗಿರುವ ಶ್ರೀ। ಗೋಪಾಲ [illegible] ಅವರಿಗೆ "ರಾವ್ ಬಹದೂರ್" ಮತ್ತು ಬೊಂಬಾಯಿಯಲ್ಲಿ ವಾಸ್ತವ್ಯ ಮಾಡಿರುವ ಡಾ। ಯು ಬಿ. ನಾರಾಯಣ ರಾವ್ ಅವರಿಗೆ "ರಾವ್ ಸಾಹೇಬ್" ವಾಣಿಜ್ಯ ಕೈಗಾರಿಕೆಗಳ ಜತೆ ಪ್ರೈಶಿಕ್ಷಣ ರಾದ ಶ್ರೀ ಅದ್ಯಂತಾಯ ಇವರಿಗೆ ರಾವ್ ಬಹದೂರ್ ಬಿರುದುಗಳನ್ನು ದಯಪಾಲಿಸಲಾಗಿದೆ. ಇವರು ನಮ್ಮ ಜಿಲ್ಲೆಯವರು.

ಪ್ಲೇಗಿನ ಹರಡುವಿಕೆಯನ್ನು ತಡೆಯುವ ಕಾರ್ಯಕ್ರಮಗಳು ಹೆಲ್ತ್ ಆಫೀಸ ನ ಕಡೆಯಿಂದ ಅವ್ಯಾಹತವಾಗಿ ನಡೆದಿವೆ ಹೋಗದ ವ್ಯಾಪ್ತಿಯನ್ನು ಹೆಚ್ಚು ಕಡಿಮೆ ತಡೆಗಟ್ಟಲಾಗಿದೆ ಎಂದು ನಂಬಲಾಗಿದೆ. ಸುಮಾರು ೧೭ ಸಾವಿರ ಜನರಿಗೆ ಎಂಟಿ ಪ್ಲೇಗ್ ಇಂಜೆಕ್ಷನ್ ಕೊಡಲಾಗಿದೆ.

ಸ್ಥಳೀಯ ವೆಬ್‌ಸ್ಟರ್ ಮಾರ್ಕೆಟಿನ ಕಟ್ಟಡ ಕೆಲಸಗಳು ಪೂರೈಯಾಗುತ್ತಲಿವೆ. ಕೆಲಸವು ಭರದಿಂದ ಸಾಗಿದೆ. ತಾತ್ಕಾಲಿಕವಾಗಿ ಸೆಂಟ್ರಲ್ ಮೈದಾನಿನಲ್ಲಿ ಚಮ್ಮುಲ್ಲಾಷ್ಟೆ ಪ್ಯಾಕಾರ ಅಂಗಡಿಗಳೂ ಇತರ ಸಂತೆಗಳೂ ಸದ್ಯಕ್ಕೆ ಅಲ್ಲೇ ನಡೆಸಲ್ಪಡುತ್ತಿವೆ.

ಅಡಿಗೆ ಪಾತ್ರೆಗಳಿಗೆ ಕಲಾಯಿ ಹಾಕಲು ಉಪಯೋಗಿಸುವ ತಿವರವು ಸಿಗುವುದು ಬಹಳ ಕಷ್ಟವಾಗಿರುವುದೆಂದೂ ಸರಕಾರವು ನಿರ್ಣಯಿಸಿದ ಧಾರಣೆಗೆ ಅದನ್ನು ಸಿಗುವಂತೆ ಮಾಡಬೇಕೆಂದೂ ಇಲ್ಲಿಯ ಕೆಲವು ಕಲಾಯಿ ಕೆಲಸಗಾರರು ಜಿಲ್ಲಾಧಿಕಾರಿಗಳಿಗೆ ವಿನಂತಿಸಿ ಕೊಂಡಿರುವರೆಂದು ತಿಳಿಯುತ್ತೇವೆ ತಿವರದ ಕಂಟ್ರೋಲ್ ಬೆಲೆ ಸೇರಿಗೆ ರೂ ೨॥ ಇರುತ್ತದೆ.

ಈ ಸಲದ ಎಸ್ ಎಸ್ ಎಲ್. ಸಿ. ಪರೀಕ್ಷೆಯಲ್ಲಿ ಮಂಗಳೂರಿನ ೧೧ ಹೈಸ್ಕೂಲುಗಳಿಂದ ಒಟ್ಟಿಗೆ ೩೮೪ ಮಂದಿ ಪಾಸ್ ಆಗಿರುವರು. ಮದ್ರಾಸ್ ಪ್ರಾಂತ್ಯದಲ್ಲಿ ಈ ಸಲ ಈ ಪರೀಕ್ಷೆಗೆ ಕುಳಿತವರ ಸಂಖ್ಯೆ ಅತೀ ಹೆಚ್ಚು ಎಂದು ತಿಳಿದು ಬರುತ್ತದೆ. ಇವರಲ್ಲಿ ೧೫,೭೯೫ ಮಂದಿ ಉತ್ತೀರ್ಣರಾಗಿರುವರು. ಹುಡುಗಿಯರ ಸಂಖ್ಯೆ ೩೫೦.

ವಿದ್ಯಾ ಇಲಾಖೆಯವರು ಹಾಯರ್ ಎಲಿಮೆಂಟರಿ ಶಾಲೆಗಳ ಎಂಟನೇ ತರಗತಿಯ ವಿದ್ಯಾರ್ಥಿಗಳ ಪರೀಕ್ಷೆಗೆ [illegible] ಇಂಗ್ಲಿಷ್ ತೆಗೆದುಕೊಂಡು [illegible] ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಮುಂದಿನ [illegible] IV ಫಾರ್ಮಿನಲ್ಲಿ ವಿದ್ಯಾರ್ಥಿಗಳು ಸೇರಬಹುದೆಂದೂ ತಿಳಿದು ಬರುತ್ತದೆ. ಹೀಗಾದರೆ ಧರ್ಮಾರ್ಥವಾಗಿ ಶಿಕ್ಷಣ ಕೊಡುವ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಒಂದು ವರ್ಷದ ಶಿಕ್ಷಣದ ಮಟ್ಟಿಗೆ ತುಂಬಾ ಅನುಕೂಲವಾದಂತಾಗುವುದು.

ರಥ ಬೀದಿಯಲ್ಲಿರುವ ಶ್ರೀ ಶಾರದಾ ಸಂಗೀತ ಸಭಾ ಇದರ ವಾರ್ಷಿಕೋತ್ಸವವು ಎಂ. ಅನಂತ ಪ್ರಭು ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಹಲವು ತರದ ಕೂಟ ವಾದ್ಯಗಳಿಂದಲೂ ಬಾಯಿ ಹಾಡುಗಾರಿಕೆಯಿಂದಲೂ ಕೂಡಿದ ಆಕರ್ಷಕ ಕಾರ್ಯಕ್ರಮಗಳಿಂದ ಸಮಾರಂಭವು ಕೂಡಿತ್ತು. ಪ್ರೊ। ಎಮ್. ಅಪ್ಪು ರಾವ್ ಇವರು ಸಭೆಯ ಸಂಗೀತ ಅಧ್ಯಾಪಕರಿದ್ದು ಇವರ ತರಬೇತಿಯು ಪ್ರಶಂಸಿಲ್ಪಟ್ಟಿತು

ಸ್ಥಳೀಯ ಸಿ. ಪಿ ಸಿ. ಮೋಟರ್ ಕಂಪೆನಿಯ ಕರ್ಮ ಶಾಲೆಯಲ್ಲಿ ಮರದ, ಕಬ್ಬಿಣದ, ಫಿಟಿಂಗ್, ಯಂತ್ರ ಮುಂತಾದ ಕೈಗಾರಿಕೆ ಕಸಬುಗಳನ್ನು ಧರ್ಮಾರ್ಥವಾಗಿ ಕಲಿಸುವರೆ ಏರ್ಪಡಿಸಿರುವರು. ವಿದ್ಯಾರ್ಥಿಗಳು ೫ನೇ ತರಗತಿ ಮೇಲ್ಪಟ್ಟು ೮ನೇ ತರಗತಿ ಒಳಗೆ ಕಲಿತವರಿರಬೇಕು. ತೃಪ್ತಿಕರ ತರಬೇತಿಯ ನಂತರ ಸಂಬಳವನ್ನೂ ಕೊಡಲಾಗುವುದೆಂದೂ ಕಂಪೆನಿಯು ಪ್ರಕಟನೆಯೊಂದು ತಿಳಿಸುತ್ತದೆ

ನಿಧನ

ತಾ ೧೧ರಂದು ಇಲ್ಲಿಯ ಪ್ರಸಿದ್ಧ ವ್ಯಾಪಾರಿಗಳೊಬ್ಬರಾದ ಶ್ರೀ। ಉಳ್ಳಾಲ ಹರಿ ವಾಮನ ನಾಯ್ಕ ಇವರು ಅಕಸ್ಮಾತಾಗಿ ಹೃದ್ರೋಗದಿಂದ ನಿಧನ ಹೊಂದಿದರು

ತಾ ೧೩ರಂದು ಇನ್ನೋರ್ವ ಪ್ರಸಿದ್ಧ ವ್ಯಾಪಾರಿಗಳೂ ವಯೋವೃದ್ಧರೂ ಆಗಿದ್ದ ಶ್ರೀ ಕೆಂದೇಲ ವೈಕುಂಠ ಕಾಮತ್ ಇವರೂ ದೈವಾಧೀನರಾದರು ಇವರಿರ್ವರ ನಿಧನಕ್ಕೆ ವಿಷಾದಿಸುತ್ತೇವೆ ಮೃತರ ಆತ್ಮಗಳಿಗೆ ಶಾಂತಿಯನ್ನು ಕೋರುವೆವು.

ಮಂಗಳೂರಲ್ಲಿ ಈಗೆರಡು ದಿನಗಳಿಂದ ಮಳೆಯು ಬಿರುಸಾಗಿ ಬಂದಿರುತ್ತದೆ ಮೊತ್ತಮೊದಲಿನ ಮಳೆಯೊಡನೆ ಗಾಳಿ ಬೀಸಾಟದ ರಭಸವಿದ್ದುದರಿಂದ ಕೆಲವು ಕಡೆಗಳಲ್ಲಿ ಮರಗಳೂ ಬಿದ್ದಿರುವವು.

ರೇಶನಿಂಗ್ ಸಂಬಂಧದಲ್ಲಿ ಅಕ್ಕಿ ತನಿಕೆಯ ಕೆಲಸವು ನಡೆಯುತ್ತದೆ. ಅಧಿಕಾರಿಗಳು ಪೋಲಿಸ್ ಸಹಾಯದಿಂದ ಕೆಲವು ಕಡೆಗಳಲ್ಲಿ ಈಗಾಗಲೇ ತನಿಖೆ ನಡೆಸಿರುವರು ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದ ವಠಾರದಲ್ಲಿಯೂ ಕೆಲವು ಕಡೆ ತನಿಖೆ ನಡೆಯಿತಾಗಿ ತಿಳಿದು ಬರುತ್ತದೆ.

ರೈಲ್ವೆ ಸ್ಟೇಶನಿನ ಬಳಿ ಮತ್ತಿತರ ವಾಹನ ರಸ್ತೆಗಳ ಬಳಿಯಲ್ಲಿಯೂ ಅಕ್ಕಿ ಸಕ್ಕರೆ ಮೊದಲಾದುವುಗಳ ಸಾಗಿಸುವ ವಿಷಯದಲ್ಲಿ ಬಲವತ್ತರ ತನಿಖೆ ಇಡಲಾಗಿದೆಯೆಂದೂ ತಿಳಿದುಬರುತ್ತದೆ

ಜಿಲ್ಲಾ ಪ್ರೆಸ್ ಮಜೂರ ಸಂಘ

ಇದರ ೪ನೇ ವಾರ್ಷಿಕ ಮಹಾಸಭೆ ಶ್ರೀ। ಕು. ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ [illegible] ಸಂಘದ [illegible] ತಿಯೊಡನೆ [illegible] ಗಾಂಧೀಜಿಯವರು [illegible] ಬರಗಾಲಕ್ಕೆ ಸಂತೋಷ ಸೂಚಿಸುವ ಮತ್ತು ಒಕ್ಕಟ್ಟು ಪರಿಹಾರವಾಗಲೆಂಬ ಹಾರೈಕೆಯನ್ನು ಸೂಚಿಸುವ ಠರಾವುಗಳನ್ನು ಮಾಡಿರುವರು. ಸಭೆಯಲ್ಲಿ ಹೊಸ ಕಾರ್ಯಕಾರಿ ಸಮಿತಿಯು ಆರಿಸಲ್ಪಟ್ಟಿತು. ಶ್ರೀ। ಕೆ. ಕೃಷ್ಣರಾಯರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಪ್ರಕಾಶ ಕೂಟ

ಇದರ ವಾರ್ಷಿಕ ಸಭೆಯು ಇದೇ ಜೂನ್ ತಾ. ೨೫ರಲ್ಲಿ ಪತ್ರಿಕೋದ್ಯೋಗಿ ಆಫೀಸಿನಲ್ಲಿ ಬೆಳಿಗ್ಗೆ ೧೧ ಗಂಟೆ ಸೇರಲಿದೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಕಸ್ತೂರ್ ಬಾ ಸ್ಮಾರಕ ನಿಧಿಸಮಿತಿ

ಈ ಸಮಿತಿಯು ಧನ ಸಂಗ್ರಹ ಕಾರ್ಯಕ್ಕಾಗಿ ಜಿಲ್ಲೆಯ ಐದು ಮಹನೀಯರನ್ನು ನೇಮಿಸಿದೆ ಅವರು ಶ್ರೀಯುತರಾದ ವಿ. ಎಸ್. ಕುಡ್ವ, ಎಂ ಡಿ ಅಧಿಕಾರಿ, ಶ್ರೀಮತಿ ಲೀಲಾಬಾಯಿ ಏಕಾಂಬರ್ ರಾವ್, ಎ ದಾಮೋದರ ಪೈ, ಡಾ। ಮಾಧವ ಪೈ, ಮತ್ತು ಮೊಳಹಳ್ಳಿ ಶಿವರಾವ್ ಶ್ರೀ ಕುಡ್ವರು ಕಾರ್ಯಕರ್ತರು

ಡಾ। ಮಲ್ಯರು ಹಿಂತೆರಳಿದರು

ಎರಡು ತಿಂಗಳ ಪೆರೋಲ್ ಮೇಲೆ ಬಿಡಲ್ಪಟ್ಟ ಡಾ। ಯು ಪಿ ಮಲ್ಯರು ನಿನ್ನೆ ತಂಜಾವೂರ್ ಸ್ಪೆಶಲ್ ಜೈಲಿಗೆ ಹಿಂತೆರಳಿದರು

ಸಿಗರೇಟ್ ಧಾರಣೆಯ ಬೆಲೆಯನ್ನು ನಿಶ್ಚಯಿಸಲ್ಪಟ್ಟ ಹುಕುಂ ಒಂದನ್ನು ಮದ್ರಾಸ್ ಸರಕಾರವರು ಮಾರಾಟಗಾರರ ಮತ್ತು ಗ್ರಾಹಕರ ಅವಗಾಹನೆ ಬಗ್ಗೆ ಪುನಃ ಪ್ರಕಟಿಸಿರುವರು ಈ ಧಾರಣೆಗಿಂತ ಹೆಚ್ಚಿಗೆ ಮಾರಲೂ, ಪಡಕೊಳ್ಳಲೂ ಬಾರದಾಗಿ ಇದರಲ್ಲಿ ತಿಳಿಸಿರುವರಂತೆ.

ಈಚೇಗೆ ಬೆಲ್ಲದ ಸರಬರಾಯಿಯೂ ಬಹಳ ಕಡಿಮೆಯಾದಂತೆ ಸುದ್ದಿ ಯಾವ ತರದ ಬೆಲ್ಲವೂ ಸಿಗುವುದು ಕಷ್ಟವಾಗಿರುವುದು. ಊರ ಬೆಲ್ಲದ ಧಾರಣೆಯೂ ಏರಿರುವುದು ಎಂದು ತಿಳಿಯುತ್ತೇವೆ

ಪುತ್ತೂರು

ಇಲ್ಲಿಯ ಬೋರ್ಡು ಹೈಸ್ಕೂಲಿನಲ್ಲಿ ಯು III ನೇ ಫಾರ್ಮಿನ C, I ಫೋರಮಿನ B ಮತ್ತು ನಾಲ್ಕನೇ ತರಗತಿಯ ಕ್ಲಾಸುಗಳನ್ನು ತೆಗೆದು ಹಾಕಲು ಹುಕುಮು ಬಂದಿದೆಯಾಗಿ ತಿಳಿದು ಬರುತ್ತದೆ ಈ ಸಂಬಂಧ ಒಂದು ಸಾರ್ವಜನಿಕ ಸಭೆ ಸೇರಿ ಹತ್ತಿರದ ಬೇರೆ ಶಾಲೆಗಳಿಂದ ಬರುವ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತದೆಂದೂ ಪುನಃ ಆ ಕ್ಲಾಸುಗಳನ್ನು ತೆರೆಯಬೇಕೆಂದು ಮೇಲಾಧಿಕಾರಿಗಳನ್ನು ವಿನಂತಿಸಿ ಕೊಳ್ಳಬೇಕಾಗಿಯೂ ನಿರ್ಣಯಿಸಿರುವರೆಂದೂ ತಿಳಿದು ಬರುತ್ತದೆ

ಇಲ್ಲಿಂದ ಕುಂದಾಪುರಕ್ಕೆ ವರ್ಗವಾದ ಡಿಸ್ಟ್ರಿಕ್ ಮುನ್ಸಿಪರ ಸ್ಥಾನಕ್ಕೆ ಜ। ಮಹಮ್ಮದ್ ಸಾಹೇಬ್ ಬಹದ್ದೂರ್ ಇವರು ಬಂದಿರುವರು

ಇಲ್ಲಿ ಬೇಸಾಯಗಾರರು ನಿರೀಕ್ಷಿಸಿದಷ್ಟು ಮಳೆಯು ಬರಲಿಲ್ಲವಾದುದರಿಂದ ಕೃಷಿಕರಿಗೆ ಸ್ವಲ್ಪ ಮಟ್ಟಿನ ತೊಂದರೆಯಾಗಿರುವುದಂತೆ ಆದರೆ ಈ ವಾರದಿಂದ ಒಳ್ಳೇ ಮಳೆ ಬರುವ ಲಕ್ಷಣಗಳು ತೋರುತ್ತವೆಯೆಂದು ಒಂದು ವಾರ್ತೆ.

ಉಪ್ಪಿನಂಗಡಿ

ಅಕ್ಕಿಯನ್ನು ನಿಯಂತ್ರಿತ ಬೆಲೆಗಿಂತ ಹೆಚ್ಚಾಗಿ ಮಾರಿದ, ಮತ್ತಿತರ ಆರೋಪಗಳ ಮೇಲೆ ಅನೇಕ ಅಕ್ಕಿ ವ್ಯಾಪಾರಿಗಳನ್ನು ದಸ್ತಗಿರಿ ಮಾಡಿರುವರಾಗಿ ಸುದ್ದಿ ತಿಳಿದು ಬರುತ್ತದೆ.

ಮೂಲ್ಕಿ

ಮೂಲ್ಕಿ ಯೂನಿಯನ್ ಕ್ಲಬ್ಬು ಇದರ ೫ನೇ ವಾರ್ಷಿಕ ಉತ್ಸವವು ಮತ್ತು ಕೀರ್ತಿಶೇಷ ಡಾ। ಬೋಳ ಶಾಮರಾಯರ ಜನ್ಮದಿನೋತ್ಸವವು ತಾ ೧೬ರಲ್ಲಿ ಜರುಗಿತು ರಾವ್ ಸಾಹೇಬ್, ಶ್ರೀ ಪಿ. ಆರ್ ರಂಗನಾಥ ಪೂಂಜ, ಬಿ ಎ. ಬಿ. ಎಲ್ ವಡ್ವೊಕೇಟ್ ಇವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಕಳ

ಇಲ್ಲಿಯ ಅನಾಥಾಶ್ರಮದ ವಾರ್ಷಿಕ ಸಭೆಯನ್ನು ಇದೇ ಬರುವ ೨೫ನೇ ತಾರೀಕಿನಂದು ಡಿ। ಮುನ್ಸಿಪ್ ರಾದ ಶ್ರೀ ಕೆ ಕೊರಗಪ್ಪ ಬಿ ಎ ಬಿ ಎಲ್, ಇವರ ಅಧ್ಯಕ್ಷತೆಯಲ್ಲಿ ಜರಗಿಸುವುದೆಂತ ನಿಶ್ಚೈಸಲಾಗಿದೆ

ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆಯೊಂದು ಜರಗಿದಾಗ ಓದುಗಾರಿಕೆಯ ಕುರಿತು ಶ್ರೀ ವ್ಯಾ ವಿಠಲ್ ದಾಸ್ ಶೆಣೈಯವರೂ, ಮಾದರಿ ಪಾಠದ ಕುರಿತೂ ಇತರ ಕೆಲವರೂ ಯುದ್ಧ ಪರಿಸ್ಥಿತಿ ಉಪಾಧ್ಯಾಯರಿಂದ ಯುದ್ಧ ಮುಖಕ್ಕೆ ಸಹಾಯ ಎಂಬ ವಿಷಯಗಳ ಕುರಿತು ಭಾಷಣಗಳಾದವು ಡಿ ಇ ರಾದ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು ಇಲ್ಲಿಯ ಉಪಾಧ್ಯಾಯಿನಿಯರದೂ ಒಂದು ಸಭೆ ಸೇರಿ ಕಾರಣಾಂತರಗಳಿಂದ ಮುಂದುವರಿಸಲ್ಪಟ್ಟಿತೆಂದು ತಿಳಿದುಬರುತ್ತದೆ

ಹೊಸದುರ್ಗ

ಈ ಸೆಂಟರಿನ ಉಪಾಧ್ಯಾಯಿನಿಯರು ಒಂದ ಸಭೆ ಸೇರಿ ತಮ್ಮ ಶಾಲೆಗಳಲ್ಲಿನ ಮಕ್ಕಳಿಗ ಮಧ್ಯಾಹ್ನ ಧರ್ಮಾರ್ಥ ಊಟದ ಸಹಾಯ ವನ್ನು ಕೊಡಿಸುವುದಕ್ಕೆ ಸರಕಾರದ ಸಹಾಯವನ್ನು ಕೇಳುವಂತೆ ನಿರ್ಣಯಿಸಿರುವರು.

ತಾಲೂಕು ಬೋರ್ಡು ಟೀಚರ್ಸ್ ಯೂನಿಯನ್ನಿನವರು ಕೂಡಾ ಇದೇ ರೀತಿಯ ಮನವಿಯೊಂದನ್ನು ಮಾಡಿಕೊಂಡಿರುವರಾಗಿ ತಿಳಿದು ಬರುತ್ತದೆ

ಕಾಸರಗೋಡು ತಾಲೂಕು ಕಿಸಾನ್ ಸಂಘದವರು ತಮ್ಮ ವರ್ಕಿಂಗ್ ಕಮಿಟಿ ಸಭೆಯಲ್ಲಿ "ಒಲೆಬೆಲ್ಲವನ್ನು ಜಿಲ್ಲೆಯ ಹೊರ ಸಾಗಿಸಬಾರದೆಂಬ" ಫುಡ್ ಕೌನ್ಸಿಲ್ ನವರ ತೀರ್ಮಾನವನ್ನು ವಿರೋಧಿಸಿ, ಹಾಗೆ ಮಾಡಿದಲ್ಲಿ ಒಲೆಬೆಲ್ಲದ ಬೆಲೆ ಇಳಿದು ಅದರ ವ್ಯವಸಾಯವೇ ನಿಂತು ಹೋಗುವ ಸಂಭವವಿರುವುದಾಗಿ ಅಭಿಪ್ರಾಯ ಪಟ್ಟು ಕಲೆಕ್ಟರರಿಗೆ ಒಂದು ಮನವಿ ಕಳುಹಿಸಿರುವರೆಂದು ತಿಳಿಯುತ್ತದೆ. ಮತ್ತೊಂದು ನಿರ್ಣಯದಲ್ಲಿ ಅವ ಶಕ್ತಿ ತಯಾರಕರಿಗೆ ಕಂಟ್ರೋಲ್ ದರದಲ್ಲಿ ಭತ್ತ ಸಿಗುವಂತೆ ಮಾಡಬೇಕೆಂದೂ ವಿನಂತಿಸಿಕೊಂಡಿರುವರಂತೆ.

ತೆಕ್ಕಟ್ಟೆ

ಇಲ್ಲಿಯ ಬಡ ವಿದ್ಯಾರ್ಥಿ ಸಂಘದವರು ಸಾರ್ವಜನಿಕರಿಂದ ಧನಸಹಾಯವನ್ನು ಕೋರಿ, ಬಡ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಅಪೇಕ್ಷಿಸಿರುವರು.

ಇತ್ತಂಡದವರಿಗೂ ವಿಶೇಷ ಹಾನಿ

ಕ್ಯಾರೆಂಟಿನ ಯುದ್ಧದಲ್ಲಿ ಇತ್ತಂಡದವರಿಗೂ ವಿಶೇಷ ಹಾನಿಯಾಗಿದೆಯೆಂದು ರಾಯಟರ ವಿಶೇಷ ಸುದ್ದಿಗಾರನು ಬರೆಯುತ್ತಾನೆ.

ನಗರದ ಸುತ್ತುಮುತ್ತಲಿನ ಗುಡ್ಡಗಳಲ್ಲಿ ಜರ್ಮನರು ಮೆಶಿನ್ ಗನ್ನುಗಳನ್ನು ಇಟ್ಟಿದ್ದರು. ಅನುಕೂಲ ಸ್ಥಳಗಳನ್ನು ನೀರಿನಿಂದ ಮುಳುಗಿಸಿದರು. ಮಿತ್ರರು ಕೊಡೆ ಸೈನಿಕರನ್ನು ಇಳಿಸಬೇಕಾಯಿತು ಇವರೂ ಎದೆಯ ವರೆಗೆ ನೀರಿದ್ದ ಸ್ಥಳಗಳಲ್ಲಿ ನಡೆದು ಹೋದರು ಜರ್ಮನರು ಗುಂಡಿನ ಮಳೆಯನ್ನೆ ಸುರಿಸುತ್ತಿದ್ದರು. ಪ್ರತಿಯೊಂದು ಇಂಚು ಸ್ಥಳಕ್ಕಾಗಿ ಹೋರಾಡಬೇಕಿತ್ತು ಜರ್ಮನರು ಪ್ರತಿದಾಳಿಯನ್ನು ಕೈಕೊಂಡರು ಹೀಗಿದ್ದರೂ ಇವರು ಮುಂದೊತ್ತಿ ಜರ್ಮನ ಠಾಣೆಗಳ ಮೇಲೆ ಕೈ ಬಾಂಬುಗಳನ್ನೆಸೆದರು ಈ ದಿನ ಮುಂಜಾನೆ ನಗರವು ಕೈವಶವಾಯಿತು. ನಗರದ ಬಹು ಭಾಗವು ಹಾಳು ಕೆಂಪೆಯಾಗಿವೆ ಎಷ್ಟು ಭೀಕರ ಹೋರಾಟ ನಡೆದಿದೆಯೆಂಬುದಕ್ಕೆ ನಗರದ ಭಗ್ನಾವಶೇಷಗಳೇ ಸಾಕ್ಷಿಯಾಗಿವೆ ಶರಣು ಬರಬೇಕೆಂದು ಜರ್ಮನರಿಗೆ ಅಮೇರಿಕನ್ನರು ಹೇಳಿ ಕಳಿಸಿದ್ದರು. ಆದರೆ ಕರುಣ ಜರ್ಮನ ಕ್ಯಾಪ್ಟನ್ ನಿರಾಕರಿಸಿದ. ಮೇಲಾಧಿಕಾರಿಯು ಶರಣು ಹೋಗಲು ಆಜ್ಞಾಪಿಸಿಲ್ಲ ಆದುದರಿಂದ ಶರಣು ಹೋಗಲು ಅವನು ಒಪ್ಪಲಿಲ್ಲ ಈಗ ಫ್ರೆಂಚ್ ರಿಪಬ್ಲಿಕ್‌ದ ಧ್ವಜವು ನಗರದಲ್ಲಿ ಹಾರಾಡುತ್ತಿದೆ

(೩ನೇ ಪುಟದಿಂದ)

ದ್ದೇ ಇದೀ ಯೂರೋಪಿನಲ್ಲಿ ತುಂಬ ಗಡಿಬಿಡಿಯೆದ್ದಿರುವುದು. ಆಂಗ್ಲೊ ಅಮೆರಿಕನ್ ಸೈನಿಕರು ನೌಕೆ ಹಾಗೂ ವಿಮಾನಗಳಿಂದ ಹಾವ್ರೆ ಮತ್ತು ಚೆರಬರ್ಗನಡುವಿನ ಇಡೀ ಕರಾಳಿಯಲ್ಲಿ ಇಳಿದಿರುವರು ವಿಮಾನ ಸೈನಿಕರು ನಾರ್ಮಂಡಿ ಹಾಗೂ ಸೀನ ಉಗಮ ಸ್ಥಳದಲ್ಲಿಳಿದಿದ್ದು ಸೀನ ಹಿಸುರಿ ಹಾಗೂ ವಾಯರ ಉಗಮದಲ್ಲಿ ದೊಡ್ಡ ಧಾಳಿಯಾರಂಭವಾಯಿತು

ಜರ್ಮನ ವಿಮಾನಗಳು ಮಿತ್ರ ಆಕ್ರಮಣವನ್ನು ಬಲವಂತವಾಗಿ ಎದುರಿಸಿವೆ ಪೇರಿಸ್ ಹೊರ ವಲಯದ ಮೇಲೂ ಧಾಳಿಯಾಯಿತು. ಸಾವಿರಾರು ಭದ್ರರಂಗಿಗಳಿಂದ ವೈರಿಗಳು ಗುಂಡು ಹಾರಿಸಿದರು ಯೂರೋಪಿನ ಮೇಲಿನೀ ಧಾಳಿಯನ್ನೆದುರಿಸಲು ಹಿಟ್ಲರನೇ ಸ್ವತಃ ಕಾರ್ಯ ಭಾರವಹಿಸಿರುವನಾಗಿ ಹೇಳಲಾಗಿದೆ ದ್ವಿತೀಯ ರಂಗದ ಸೇನಾಪತಿ ಜನರಲ್ ಐಸೆನ್ ಹಾವರು ಒಂದು ಪ್ರಕಟಣೆ ಹೊರಡಿಸಿ ಮಿತ್ರ ಸೈನಿಕರನ್ನು ಹುರಿದುಂಬಿಸಿದ್ದಾರೆ ಜನರಲ್ ಡಿಗಾಲೆ ಇಂಗ್ಲೆಂಡಿಗೆ ಬಂದಿದ್ದು ಫ್ರಾನ್ಸಿನ ಜನರನ್ನು ಉದ್ದೇಶಿಸಿ ಆಕಾಶವಾಣಿಯಲ್ಲಿ ಭಾಷಣ ಮಾಡಿದನು ಅಟ್ಲಾಂಟಿಕ್ ದುರ್ಗದ ಬಳಿ ಕಾಳಗ ಘೋರವಾಗಿ ನಡೆಯಿತು ಧಾಳಿಯ ಸೈನಿಕರು ಈ ಸಲ ಮೊದಲನೆಯ ಬಲವಾಗಿ ಗುಪ್ತಾಸ್ತ್ರಗಳನ್ನು ಉಪಯೋಗಿಸಿದರೆಂದು ಹೇಳಲಾಗಿದೆ. ಕಾಮನ್ಸಿನಲ್ಲಿ ಚರ್ಚಿಲ್ಲರೊಂದು ಹೇಳಿಕೆಯಿತ್ತು ಯೂರೋಪು ಧಾಳಿ ಸಮಾಧಾನಕರವಾಗಿದೆ ಎಂದಿದ್ದಾರೆ.

ಹಿಟ್ಲರನು ನಾಲ್ವರು ಸೇನಾಪತಿಗಳೊನೆ ಹಾಗೂ ಇತರ ಕೆಲವು ಸೇನಾಪತಿ

ಗಳು ಸಮೇತ ಭದ್ರವಾದ ಸಂರಕ್ಷಣೆಯಿಂದ ತನ್ನ ಮುಖ್ಯ ಕಚೇರಿಯನ್ನು ಉತ್ತರ ಫ್ರಾನ್ಸಿನ ಯಾವುದೋ ಒಂದು ಭಾಗಕ್ಕೆ ಒಯ್ದಿರುವನೆಂದೂ ಯುದ್ಧ ರಂಗದ ಸಮೀಪದಲ್ಲಿಯೇ ಇದ್ದು ಆತನು ಎಲ್ಲವನ್ನೂ ಪ್ರತ್ಯಕ್ಷ ಪರೀಕ್ಷಿಸುತ್ತಿರುವನೆಂದೂ ಹೇಳಲಾಗಿದೆ ಜರ್ಮನರ ವಿರುದ್ಧ ಸರ್ಕಿಸಬೇಡಿರೆಂದು ಫ್ರಾನ್ಸಿನವರಿಗೆ ಪಿಟೇನರೊಂದು ಸಂದೇಶವಿತ್ತಿರುವರು. 'ಅವರೆ ಬರುತಿದ್ದಾರೆ' ಎಂಬಷ್ಟೇ ಮಾತಿನಿಂದ ಜರ್ಮನ್ ಸೈನಿಕರು ಮಿತ್ರರ ಆಕ್ರಮಣವನ್ನು ಸ್ವಾಗತೀಕರಿಸಿದರೆಂದು ತಿಳಿಯುತ್ತದೆ

ಇತ್ತೀಚೆಗೆ ಬಂದ ಸುದ್ದಿಯಂತೆ ಹಿಟ್ಲರನು ಪೂರ ಕೌಪ ಬಂದರವನ್ನು ಬಿಟ್ಟುಕೊಟ್ಟನೆಂದು ತಿಳಿದಿದೆ ಚೆರಬರ್ಗ ಕಾರೆಂಟನ್ ರೈಲ್ವೆ ಭೇದಿಸಲ್ಪಟ್ಟಿದೆ. ನಾರ್ಮಂಡಿಯಲ್ಲಿ ಭೀಕರ ಹೋರಾಟವಾಗಿದೆ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 66/1944

ವಿ ಸಿ ಮೂಸಾ, ಕುಂಞಮ್ಮದ್ ಅಳಿಯ, ತೆಂಕು ತ್ರಿಕರಪೂರು ಗ್ರಾಮದಲ್ಲಿರುವವ— ಅರ್ಜಿದಾರ

ಮತ್ತು

1 ವಿ ಟಿ ಇಬ್ರಾಯಿನ್, 2. ವಿ ಟಿ ಕುಂಞ ಹಸನ್, 3 ವಿ ಟಿ ಖದೀಜಾಬಿ, 4 ಹುಸನ ಕುಂಞ, ವಿ ಪಿ ಮುಹಮ್ಮದ್ ಹಾಜಿ ಮಕ್ಕಳು—ಸದ್ರಿ ಗ್ರಾಮದಲ್ಲಿರುವವರು— ಎದ್ರಿರು

ಮೃತಪಟ್ಟ ಕಾರ್ನಾವನ ವಿ ಪಿ. ಮುಹಮ್ಮದ್ ಹಾಜಿಯು ಮಂಗಳೂರು ಇಂಪಿರಿಯಲ್ ಬ್ಯಾಂಕಿನಲ್ಲಿ L No 7/219ನೇಗೆ ರೂಪ್ಯಾ 225-0-0ಕ್ಕೆ ಇಟ್ಟ ನಗಗಳನ್ನು ಪಡಕೊಳ್ಳುವರೆ ತನಗೆ ವಾರಿಸಿ ಸರ್ಟಿಫೀಕೇಟು ಕೊಡಿಸಬೇಕಾಗಿ ದಾಕ್ಲು ಮಾಡಿದ ಅರ್ಜಿಯು ತಾ 16-6-44ಕ್ಕೆ ಇಟ್ಟಿದೆಂಬ ಸಂಗತಿಯು ಈ ಮೂಲಕ ತಿಳಿಸೋಣಾಗಿಯದೆ

K Devadas Sheny,
Vakil for Petitioner

ಕಾಸರಗೋಡು, ತಾ 13-6-44

ಕಾಲವು ಬದಲಾಗಿದೆ

1754

Thomas Mudge

ತೋಮಸ್ ಮಜ್ಜನಿಂದ ಶೋಧಿಸಲ್ಪಟ್ಟ ಈ ಎಂಕ್‌ರ್ ಎಸ್ಕೇಪ್‌ಮೆಂಟು ಮೊದಲಾಗಿ 19ನೇ ಶತಮಾನದಲ್ಲಿ ಬಳಕೆಗೆ ಬಂದೀತು.

1944



ಸೆಕುಂಡಸ್ ಚಚ್ಚೌಕ

ರೋಲ್ಡ್‌ಗೋಲ್ಡ್ 10 ವರ್ಷ ರೂ 53



ಸೆಕುಂಡಸ್ ರೆಕ್ಟೆಂಗುಲರ್

ರೋಲ್ಡ್‌ಗೋಲ್ಡ್ 10 ವರ್ಷ ರೂ 53

ವಾಚುಗಳಲ್ಲಿ ಇಂದು ಉಪಯೋಗಿಸುವ ಎಸ್ಕೇಪ್‌ಮೆಂಟು, ಆದಿಯಲ್ಲಿ ಅಂದರೆ ಸುಮಾರು 200 ವರ್ಷಗಳ ಹಿಂದೆ ಉಪಯೋಚಿಸಿದಂತವುಗಳಾಗಿವೆ ಸರಿಯಾದ ಸಮಯ ಸೂಚಿಸುವಿಕೆಯು ಈ ಶೋಧನೆಯ ಮೇಲೆ ಹೊಂದಿಕೊಂಡಿದೆ "ವೆಸ್ಟ್ ಎಂಡ್ ವಾಚು"ಗಳು ಎಲ್ಲಾ ಪ್ರಾಮುಖ್ಯ ಶೋಧನೆ ಮತ್ತು ಅನೇಕ ಸುಧಾರಣೆಗಳಿಂದ ಕೂಡಿಕೊಂಡಿದೆ

ಈಗಿನ ಅನಿಯಮಿತ ತಲಪುವಿಕೆಯ ದೆಸೆಯಿಂದ ಜಾಹೀರಾತು ಮಾಡಿದ ಎಲ್ಲಾ ನಮೂನೆಯ ವಾಚುಗಳನ್ನು ಜನತೆಗೆ ಒದಗಿಸುವುದು ಕಷ್ಟ ಆದರೆ ಆದಷ್ಟು ಆರ್ಡರುಗಳನ್ನು ಕಳುಹಿಸಲು ಎಲ್ಲಾ ರೀತಿಯ ಪ್ರಯತ್ನಗಳು ಮಾಡಲ್ಪಡುವುವು

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬ್ಯಾ ಮತ್ತು ಕಲ್ಕತ್ತ

WEST END WATCH Co

Bombay & Calcutta

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. BUNDER MANGALORE. *BRANCHES* Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June) (½% from July to Decr.)

Savings bank Accounts 1½% p. a. on daily balances.

FixedDeposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

(Regd)

ಅಮೃತಾಂಜನ

ತಲೆವೇದನೆ,ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಘುಂತಾ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our34 years' experiencein Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low.
★ 2½% Rebate on annual premiums.
★ "Permanent Disability Benefits free of any cost
★ Payment of double the insured amount in case of death by accident at a very smallcost of Rs. 1-8-0 per 1000.
★ Special rebates on large size policies.
★ A special scheme by which lapsed policies can be revived without paying the arrears
★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause.

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press. Car Street. Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 38] ತಾರೀಕು 23—6—1944 [ಸಂಚಿಕೆ 26]

ಮಹಾತ್ಮಾ ಗಾಂಧಿಯವರು ಇತ್ತೀಚೆಗೆ ತನ್ನ ದಿನದ ಕೆಲಭಾಗವನ್ನು ದೇಶದ ರಾಜಕೀಯ ಪರಿಸ್ಥಿತಿ ತಿಳಕೊಳ್ಳುವ ಬಗ್ಗೆ ಉಪಯೋಗಿಸುತ್ತಿದ್ದಾರೆ. ಈ ಕುರಿತು ಮಾತುಕತೆ ನಡೆಸುತ್ತಿರುವರು. ಪಂಡಿತ ಮಾಲವೀಯ, ರೈ. ಅ. ಶಾಸ್ತ್ರಿ, ಜಯಕರ್, ಸಪ್ರು ಮೊದಲಾದವರಿಗೆ ಈ ಕುರಿತು ಬರೆಯುತ್ತಿರುವುದು ಮಾತ್ರವಲ್ಲ ಮಹಾತ್ಮರು ಬಹಳ ಜನರ ಭೇಟಿ ಸಹ ತೆಗೆದುಕೊಳ್ಳುತ್ತಿದ್ದಾರೆ. ಮಹಾತ್ಮರು ಭೇಟಿಗಾರರು ದೇಶದ ಪರಿಸ್ಥಿತಿ ವಿಚಾರ ಹೇಳುವ ಮಾತನ್ನು ಕೇಳುತ್ತಾ ಅದನ್ನು ಹೀರಿಕೊಳ್ಳುವಂತೆ ತೋರುತ್ತದೆ,

ಶ್ರೀ. ಬಿರ್ಲಾ ಮತ್ತು ಶ್ರೀ ಭೂಲಾಭಾಯಿ ದೇಸಾಯಿ ಇವರು ಕಳೆದ ೧೫ ದಿನಗಳಿಂದ ದಿನಂಪ್ರತಿ ಮಹಾತ್ಮರ ಭೇಟಿ ಮಾಡಿ ಇವರಿಗೆ ದೇಶದ ಪ್ರಕೃತ ಪರಿಸ್ಥಿತಿ ವಿಚಾರ ತಿಳಿಸುತ್ತಿದ್ದಾರೆ. ಶ್ರೀ ಮುನ್ಶಿಯವರು ಮಹಾತ್ಮರನ್ನು ಪೂನಾ ಬೊಂಬಾಯಿಗಳಲ್ಲಿ ಅನೇಕ ಸಲ ಭೇಟಿ ಮಾಡಿಕೊಂಡರು. ಮಹಾತ್ಮರ ಉಪವಾಸ ಕಾಲದಲ್ಲಿ, ವೈಸರಾಯರ ಕಾರ್ಯಕಾರೀ ಮಂಡಳದಿಂದ ರಾಜಿನಾಮೆಯಿತ್ತು ಹೊರಬಂದ ಸರ್ ಹೋಮಿ ಮೋದಿಯವರು ಮಹಾತ್ಮರನ್ನು ಎರಡು ಸಲ ಭೇಟಿಯಾಗಿ ಭಾರತದ ಪ್ರಕೃತದ ಬಿಕ್ಕಟ್ಟನ್ನು ಬಗೆಹರಿಸಲು ಕಾಂಗ್ರೆಸು ಕೈಕೊಳ್ಳಬೇಕಾದ ಕಾರ್ಯಗಳ ಕುರಿತು ತಿಳಿಸಿದರೆಂದು ತಿಳಿದು ಬರುತ್ತದೆ.

ಶ್ರೀಗಳಾದ ಪುರುಷೋತ್ತಮ ದಾಸ ಥಾಕೂರ್ ದಾಸ್, ಜೆ. ಆರ್. ಡಿ. ತಾತಾ, ಥಕ್ಕರ್ ಬಾಪಾ, ಮತ್ತು ಪಂಡಿತ ಹೃದಯನಾಥ ಕುಂಜ್ರು ಇವರು ಗಾಂಧಿಜಿಯವರನ್ನು ಕಂಡು ಅವರೊಡನೆ ವಿಚಾರ ವಿನಿಮಯ ಮಾಡಿದರು. ಮಸಾನಿ, ಪಿ. ಸಿ. ಜೋಶಿ ಇವರು ಗಾಂಧಿಜಿಯವರನು ಕಂಡು ಮಾತನಾಡಿ ಅವರವರ ಅಭಿಪ್ರಾಯ ತಿಳಿಸಿದರು. ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಬಗ್ಗೆ ಜಯಕರರ ಅಭಿಪ್ರಾಯವು ಶ್ರೀ ಪ್ಯಾರೇಲಾಲರ ಮುಖಾಂತರ ಗಾಂಧೀಜಿಯವರಿಗೆ ವರದಿ ಮೂಲಕ ತಿಳಿಸಲಾಗಿದೆ. ರೈ. ಅ. ಶಾಸ್ತ್ರಿಗಳ ವಿಚಾರವನ್ನು ಗಾಂಧಿಜಿಯವರಿಗೆ ಶ್ರೀ ವೆಂಕಟ್ರಮಣ ಶಾಸ್ತ್ರಿಗಳು ತಮ್ಮ ಇತ್ತೀಚೆಯ ಭೇಟಿಯ ಕಾಲದಲ್ಲಿ ತಿಳಿಸಿರುವರೆಂದು ನಂಬಲಾಗಿದೆ.

ಮಹಾತ್ಮರು ಪೂನೆಗೆ ಹೋದವರು, ಅಲ್ಲಿ ಡಾ. ಮೆಹತಾರವರ ಪ್ರಕೃತಿ ಚಿಕಿತ್ಸೆಯ ಆಸ್ಪತ್ರೆಯಲ್ಲಿ ಕೆಲ ದಿನ ಇರುವರೆಂದು ತಿಳಿದುಬರುವುದು.

ಮಹಾತ್ಮರು

ರಾಜಕೀಯ ಮಾತುಕತೆ ಮಾಡುತ್ತಿದ್ದಾರೆ

ಗಾಂಧೀಜಿಗೆ ಮುಂದಾಳುತನದಲ್ಲಿ ವಿಶ್ವಾಸವಿದೆ

"ನೀವು ಪ್ರಸನ್ನ ಮೌನದಿಂದ ತಿಳಕೊಳ್ಳತಕ್ಕದನ್ನೆಲ್ಲಾ ತಿಳಿಯಬಹುದು" ಎಂದು ತಾ. ೧೨ರಂದು ತಮ್ಮನ್ನು ಕಾಣಬಂದ ಪತ್ರಿಕಾ ಪ್ರತಿನಿಧಿಗಳೊಡನೆ ಗಾಂಧೀಜಿಯವರು ಕಾಗದಲ್ಲಿ ಬರೆದು ತಿಳಿಸಿದರು. ಈ ದಿನ ಅವರ ವಾರದ ಮೌನ ದಿನವಾಗಿದ್ದು, ಗುರುವಾರ ಅವರು ಪೂನಕ್ಕೆ ತೆರಳುವುದರಿಂದ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಡಲು ಒಪ್ಪಿದರು. ಪತ್ರಿಕಾ ಪ್ರತಿನಿಧಿಗಳು ಬಂದಾಗ, ಅವರು ಒಂದು ಚಾಪೆಯ ಹೋಲೆ ಮಂಡಿಯೂರಿ ಏನೋ ಬರೆಯುತ್ತಿದ್ದರು.

ಪತ್ರಿಕಾ ಪ್ರತಿನಿಧಿಗಳು ಅವರ ಸುತ್ತು ಬಂದು ನೆರೆದರು. ಅವರಲ್ಲಿ ಒಬ್ಬನು, ಈ ಮೌನ ಸಂದರ್ಶನದಿಂದ ಪತ್ರಿಕಾ ಪ್ರತಿನಿಧಿಗಳಿಗೆ ತೃಪ್ತಿಯಾಗಿರುವುದಿಲ್ಲವೆಂದೂ ಸಂಪೂರ್ಣ ಆರೋಗ್ಯ ಹೊಂದಿ ಮೊದಲಿನಂತೆ ಮಾತುಕತೆ ಜರಗಿಸುವ ದಿನ ಬೇಗನೇ ಒದಗಲೆಂದು ಹಾರೈಸುವುದಾಗಿಯೂ ಕಾಗದದಲ್ಲಿ ಬರೆದು ತಿಳಿಸಿದನು. ಅದೇ ಭೇಟಿಯಲ್ಲಿ ಮಹಾತ್ಮರು "ಹಾಗಾಗಲಿ; ದೇವರು ನಮಗೆ ಆ ರೀತಿ ಸಹಾಯ ಮಾಡಲಿ; ಎರಡು ಪಕ್ಷದವರೂ ಮೌನ ತಾಳಬೇಕೆಂದೇ ಶರತವಿದೆ; ನೀವು ನನ್ನ ಮೌನದಿಂದ ತಿಳಕೊಳ್ಳಬೇಕಾದ್ದನ್ನೆಲ್ಲಾ ತಿಳಕೊಳ್ಳಬಹುದು" ಎಂದು ಬರೆದು ತಿಳಿಸಿದರು.

ಪುನಃ ಸ್ವಲ್ಪ ಸಮಯ ಮೌನವೇ ನೆಲಸಿತ್ತು. ಇನ್ನೂ ಎಷ್ಟು ಹೊತ್ತು ಇಲ್ಲಿರಬಹುದೆಂದು ಅವರೊಡನೆ ಕೇಳಲಾಯಿತು. ಅವರು ೧೦ ಮಿನಿಟು ಇರಬಹುದೆಂದು ಬೆರಳಿನಿಂದ ಸೂಚಿಸಿದರು. ನೀವು ಜುಹೂಗೆ ಬಂದಂದಿನಿಂದ ನಾವು ನಿಮ್ಮ ಭೇಟಿ ಕಾಯುತ್ತಾ ಇದ್ದೆವು. ಆದ ಕಾರಣ ಮೌನ ಸಂದರ್ಶನದ ಅವಧಿ ಇನ್ನೂ ಬೆಳಸಬೇಕು, ಎಂದು ಪತ್ರಿಕಾ ಪ್ರತಿನಿಧಿಗಳು ಕೇಳಿಕೊಂಡರು. "ನಮ್ಮಲ್ಲಿ ಯಾರಾದರೂ ಒಳ್ಳೆಯ ಹಾಡುಗಾರರಿದ್ದರೆ ಹೆಚ್ಚಿನ ಸಮಯ ತೆಗೆದುಕೊಳ್ಳಬಹುದು. ಇಲ್ಲವಾದರೆ ವ್ಯರ್ಥ ಕಾಲ ಕಳೆದು ಪ್ರಯೋಜನವೇನು? ಪತ್ರಿಕಾ ವ್ಯವಸಾಯಕ್ಕೆ ಮೌನಕ್ಕೆ ಆಸ್ಪದವಿಲ್ಲ" ಎಂದು ಮಹಾತ್ಮರು ಅದಕ್ಕೆ ತಿಳಿಸಿದರು.

ಮಹಾತ್ಮರ ಈ ಅಭಿಪ್ರಾಯ ತಿಳಿದು ಪತ್ರಿಕಾ ಪ್ರತಿನಿಧಿಗಳು ಪೇಚಾಟಕ್ಕೆ ಬಿದ್ದರು; ಅವರಲ್ಲಿ ಒಬ್ಬನು ಹಾಡತೊಡಗಿದನು. ಮಹಾತ್ಮರಿಗೆ ಅದು ಮೆಚ್ಚಿದಂತೆ ತೋರಿತು. ಅದು ಕೊನೆಗಾಣುವಷ್ಟರಲ್ಲಿ ಇನ್ನೊಬ್ಬನು ಹಾಡುವ ಇಚ್ಛೆ ಪ್ರದರ್ಶಿಸಿದನು. "ನಾನು ಇನ್ನು ಬೇಕಾದಷ್ಟು ಸಂತೋಷದಿಂದ ಕೇಳಬಹುದಾಗಿತ್ತು; ಆದರೆ ಅಸ್ವಸ್ಥನಾಗಿದ್ದರೂ ನನ್ನ ಸಮಯವೆಲ್ಲಾ ರಾಷ್ಟ್ರಕಾರ್ಯಕ್ಕೆ ಮೀಸಲಾಗಿದೆ ಎಂದು ಗಾಂಧೀಜಿ ಬರೆದು ತಿಳಿಸಿದರು. ಆ ಮೇಲೆ ಪತ್ರಿಕಾ ಪ್ರತಿನಿಧಿಗಳು ಹರಿಜನ ನಿಧಿಗೆ ಹಣ ಸ್ವಲ್ಪ ಕೂಡಿಸಿಕೊಟ್ಟರು.

* * *

"ನಿನ್ನೆಗಿಂತ ಗಾಂಧೀಜಿ ಈ ದಿನ ಚೆನ್ನಾಗಿದ್ದಾರೆ; ಉಲ್ಲಾಸವಂತರಾಗಿ ಗುಣಮುಖರಾಗಿ ಕಾಣುತ್ತಾರೆ; ಬೇಗನೇ ತನ್ನೀ ದೌರ್ಬಲ್ಯ ಹೋದೀತೆಂದು ಅವರು ಹೇಳುತ್ತಾರೆ" ಎಂದು ಮಹಾತ್ಮರನ್ನು ತಾ. ೧೧ರಂದು ಪರೀಕ್ಷೆ ಮಾಡಿದ ಡಾ। ರೋಯಿಯವರು ಹೇಳಿದರು. ಡಾ। ರೋಯಿಯವರು ಅದೇ ದಿನ ಕಲ್ಕತ್ತೆಗೆ ಹೊರಟಿದ್ದರು, ಅವರ ಸಾಮಾನು ಕೂಡಾ ಸ್ಟೇಶನಿಗೆ ಹೋಗಿತ್ತು. ಆದ್ದರೆ ಗಾಂಧೀಜಿ ಅವರನ್ನು ಇನ್ನೊಂದು ದಿನ ಉಳಕೊಳ್ಳಲು ಹೇಳಿದ್ದರಿಂದ ತಮ್ಮ ಪ್ರಯಾಣ ನಿಲ್ಲಿಸಬೇಕಾಯಿತು. ಡಾ। ರೋಯಿಯವರು ಮಹಾತ್ಮರನ್ನು ಒಂದು ತಾಸಿನತನಕ ಪರೀಕ್ಷೆಮಾಡಿದರು. ಅವರ ಅಭಿಪ್ರಾಯದಂತೆ ಮಹಾತ್ಮರಿನ್ನೂ ಬಹಳ ದುರ್ಬಲರಿದ್ದು, ಮಾತುಕತೆ ಮಾಡಲು ಅಸಮರ್ಥರಿರುವರೆಂದು ತಿಳಿದಿದೆ. ತುಂಬಾ ವಿಶ್ರಾಂತಿ ಮಹಾತ್ಮರಿಗೆ ಇನ್ನೂ ಅಗತ್ಯವೆಂದು ಅವರ ಅಭಿಪ್ರಾಯ. ಅವರ ಮೂತ್ರಕೋಶದ ತೊಂದರೆ ತುಂಬಾ ಕಡಿಮೆಯಾಗಿದೆ. ಹುಳಬಾಧೆ ಮತ್ತು ಅತಿಸಾರ ಬಾಧೆ ಇನ್ನೂ ಅವರಿಗೆ ತೊಂದರೆ ಕೊಡುತ್ತದೆ. ಇವೆರಡೂ ಮೆಲ್ಲನೆ ಹೋದೀತೆಂದು ಡಾ। ರೋಯಿಯವರ ಅಭಿಮತವಿದೆ. ಮಹಾತ್ಮರಿಗೆ ಇನ್ನು ಸ್ವಲ್ಪ ಶರೀರ ಶಕ್ತಿ ಬಂದರೆ ಅವರೇ ಇವೆರಡನ್ನೂ ಹತೋಟಿಗೆ ತರಲು ಸಮರ್ಥರಾದರು. ಶಕ್ತಿ ಬರಲು ಮಹಾತ್ಮರಿಗೆ ಶಕ್ತಿವರ್ಧಕ ಔಷಧ ಹೇಳಲಾದರೂ ಅವರು ಬಲಬರಲು ಔಷಧಿ ತೆಕ್ಕೊಳ್ಳಲೊಪ್ಪುವುದಿಲ್ಲ. ಅವರಿಗೆ ಇಚ್ಛೆ ಇಲ್ಲದೆ ಯಾವ ಔಷಧವೂ ಒತ್ತಾಯದಿಂದ ಕೊಡಬಾರದೆಂದು ಡಾ। ರೋಯಿಯವರು ಹೇಳುತ್ತಾರೆ.

ಮಹಾತ್ಮರು ಪೂನಕ್ಕೆ ಹೋಗಿ ಅಲ್ಲಿ ಡಾ। ಮೆಹತರ ನೈಸರ್ಗಿಕ ಚಿಕಿತ್ಸೆ ಪಡೆದು, ಸಾಧ್ಯವಾದರೆ ಪಂಚಗಣಿ ಸೆನಿಟೋರಿಯಮ್ಮಿಗೂ ಹೋಗುವರು. ಇಲ್ಲವಾದರೆ ವಿಶ್ರಾಂತಿಗಾಗಿ ನಾಸಿಕಕ್ಕೂ ತೆರಳಬಹುದು. ಜುಲ್ಯಾ ತಿಂಗಳಲ್ಲಿ ಅವರು ರಾಜಕೀಯ ಮಾತುಕತೆ ಪ್ರಾರಂಭಿಸಬಹುದೆಂದು ತಿಳಿಯುತ್ತದೆ.

* * *

"ಜುಹುವಿನಲ್ಲಿ ಗಾಂಧೀಜಿ ಇರುವಾಗ, ಮುಖ್ಯ ಸಮಯವೆಲ್ಲಾ ಅವರ ದೈಹಿಕಾರೋಗ್ಯದಲ್ಲಿಯೇ ಗಮನವಿರಿಸಬೇಕಾಗಿ ಬಂದದ್ದರಿಂದ ಯಾವುದೇ ರಾಜಕೀಯ ಮಾತುಕತೆಯಾಗಲಿ, ಪತ್ರವ್ಯವಹಾರವಾಗಲಿ ಮಾಡುವುದು ಸಾಧ್ಯವಾಗಲಿ; ಅವರಿಗೆ ರಾಷ್ಟ್ರದ ರಾಜಕೀಯ ವಿಚಾರ ತಿಳಕೊಳ್ಳುವುದೂ ಆಗಲಿಲ್ಲ. ಪೂನದಲ್ಲಿ ಮಹಾತ್ಮರು ಹೋಗಿ ನೆಲಸಿದ ಮೇಲೆ ಆ ಕುರಿತು ಮಹಾತ್ಮರು ಆಲೋಚಿಸಬಹುದು" ಹೀಗೆಂದು ಮಹಾತ್ಮರ ಕಾರ್ಯದರ್ಶಿ ಶ್ರೀ. ಪ್ಯಾರೇಲಾಲರು ಹೇಳಿದರು. ಲಕ್ನೋದಲ್ಲಿ ಸೇರಿದ ಬಂಧಮುಕ್ತ ಕಾಂಗ್ರೆಸಿನವರ ನಿರ್ಣಯವನ್ನೂ, ೧೪ನೇ ಅಗಸ್ಟಿನ ಅನಂತರದ ಸಂಯುಕ್ತ ಪ್ರಾಂತದ ರಾಜಕೀಯ ವಿಚಾರದ ವರದಿಯನ್ನೂ ಮಾಜಿ ಸಂಯುಕ್ತ ಪ್ರಾಂತದ ಮಂತ್ರಿ ಶ್ರೀ. ಸಂಪೂರ್ಣನಂದರು ಮಹಾತ್ಮರಿಗೊಪ್ಪಿಸಿರುವರೆಂದು ತಿಳಿದುಬರುತ್ತದೆ.

ಶ್ರೀ. ಕೆ. ಸುಬ್ರಹ್ಮಣ್ಯಂ ಇವರ ಮುಂದಾಳುತನದಲ್ಲಿ ಬೊಂಬಾಯಿಯ ಕೇರಳೀಯ ಸಮಾಜದ ನೂರಾರು ಮಂದಿ ಸದಸ್ಯರು ಗಾಂಧೀಜಿಯವರ ಆರೋಗ್ಯದ ಬಗ್ಗೆ ಪ್ರಾರ್ಥನೆ ಮಾಡಿದ್ದಲ್ಲದೆ ೫೦೧ ರೂ.ಗಳ ನಿಧಿಯೊಂದನ್ನು ಅವರಿಗೆ ಕಾಣಿಕೆಯಿತ್ತರು. ಮಹಾತ್ಮರು ಒಂದು ಲಿಖಿತ ಸಂದೇಶ ಕೊಡುತ್ತಾ, "ನೀವು ನನ್ನಲ್ಲಿವರೆಗೆ ಬಂದು ನನಗೀ ನಿಧಿಹಣವನ್ನು ಹರಿಜನ ನಿಧಿಗಾಗಿ ಕೊಟ್ಟದಕ್ಕಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ದೇಶದ ದಲಿತರ ಬಗ್ಗೆ ನೀವು ಮಾಡಿದ ಈ ಪ್ರಯತ್ನ ಫಲಕಾರಿಯಾಗಲಿ. ದೇವರು ನಿಮ್ಮೊಡನಿರಲಿ" ಎಂದು ತಿಳಿಸಿದರು.

* * *

ತಾ. ೧೪ರಂದು ಜಯಕರರು ಮಹಾತ್ಮರನ್ನು ಭೇಟಿಯಾದರು. ಸಂಜೆ ೪ ಗಂಟೆಗೆ ಜಯಕರರು ಗಾಂಧೀಜಿಯವರ ಕುಟೀರಕ್ಕೆ ತೆರಳಿದರು. ಅವರು ಹೊರಟಾದ ೫ ಗಂಟೆಗೆ ೧೫ ಮಿನಿಟುಗಳಾದುವು. ಮಹಾತ್ಮರೊಡನೆ ಜಯಕರರು

(೫ನೇ ಪುಟಕ್ಕೆ ಮುಂದುವರಿದಿದೆ)

ಸ್ವದೇಶಾಭಿಮಾನಿ

ತಾರೀಕು 26—6—1944

ಹೊಸನಿಯಂತ್ರಣಗಳು

ಜೀವನಾವಶ್ಯಕ ಸಾಮಗ್ರಿಗಳಿಗೆ, ಯುದ್ಧಾನಂತರ ಒಂದೇ ಸವನೆ ಬೆಲೆ ಯೇರುತ್ತಾಹೋಗಿ ಎಲ್ಲವೂ ಅವ್ಯವಸ್ಥೆಗೆ ಬಂದ ನಿಮಿತ್ತ ಅವುಗಳಿಗೆಲ್ಲಾ ನಿಯಂತ್ರಣ ಮಾಡುವುದು ಅವಶ್ಯಕವಾಯಿತು ಇವುಗಳಲ್ಲಿ ಮೊದಲಾಗಿ ಆಹಾರ ಪದಾರ್ಥಗಳಿಗೆ ನಿಯಂತ್ರಣ ಮಾಡುವುದು, ನಮ್ಮ ಜಿಲ್ಲೆಯಲ್ಲಿ ಅಕ್ಕಿ ಭತ್ತಗಳ ಬೆಲೆ ನಿಯಂತ್ರಿಸುವುದು ಪ್ರಧಾನ ಕಾರ್ಯವಾಗಿತ್ತು. ಈ ಕಾರ್ಯವನ್ನು ನಮ್ಮ ಹೊಸ ಜಿಲ್ಲಾಧಿಕಾರಿಗಳು ಅಧಿಕಾರ ವಹಿಸಿದ ಕೂಡಲೇ ಮನಗಂಡು, ಒಂದೊಂದೇ ನಿಯಂತ್ರಣವನ್ನು ಜಾರಿಗೆ ತರುತ್ತಿರುವುದು ಶುಭಸೂಚನೆಯಾಗಿದೆ; ಅವರೀ ಪ್ರಯತ್ನವು ಯಶಸ್ವಿಯಾಗುವಂತೆ ಸಾರ್ವಜನಿಕರೂ ಖಂಡಿತವಾಗಿ ಸಹಕರಿಸುವರೆಂದೂ ನಾವು ನಂಬಿದ್ದೇವೆ.

ನಮ್ಮ ಜಿಲ್ಲೆಯಲ್ಲಿ ಸರಿಯಾದ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಅಕ್ಕಿ ಭತ್ತಗಳ ಕ್ರಯನಿಯಂತ್ರಣವಿಂದು ಆಗಿದೆ; ಪ್ರಮುಖ ನಗರಗಳಲ್ಲಿ ರೇಶನಿಂಗ್ ಜಾರಿಯಾಗಿದೆ; ಇತರ ಕಡೆಗಳಲ್ಲಿ ಗುರುತು ಚೀಟಿಗಳ ಮೂಲಕ ಅಕ್ಕಿ ಭತ್ತ ಹಂಚಲಾಗುತ್ತದೆ. ಅಕ್ಕಿ ಭತ್ತಗಳ ಕ್ರಯ ನಿಯಂತ್ರಣವಾದ ಕೂಡಲೇ ಸಕ್ಕರೆ ಚಿಮ್ಣಿ ಎಣ್ಣೆಗಳ ಕ್ರಯ ನಿಯಂತ್ರಣವೂ ಈಗ ಆಗಿದೆ ಸಾಲದ್ದಕ್ಕೆ ಸದ್ಯ ಕಾಫಿ ಹೊಟೆಲುಗಳ ಕಾಫಿ, ಚಾ, ತಿಂಡಿ ತಿನಸುಗಳ ಮೇಲೂ ಕ್ರಯ ನಿರ್ಬಂಧ ಮಾಡಿದ್ದು ಜಿಲ್ಲಾಧಿಕಾರಿಗಳ ಧೂರದರ್ಶಿತ್ವವನ್ನು ವ್ಯಕ್ತಪಡಿಸುತ್ತದೆ.

ಬಟ್ಟೆಯ ಕುರಿತು ನಿಯಂತ್ರಣ ಬಂದಿದೆ, ಆದರೆ ಜನರಿಗೆ ಬೇಕಾದ ತರದ ಅರಿವೆಗಳು ದುರ್ಲಭವಾದ ಹತ್ತಿವೆ. ದೃಷ್ಟಾಂತಕ್ಕಾಗಿ, ಯೋಗ್ಯತರದ ದೋತಿಗಳು ಸಿಕ್ಕುವುದು ಈಗ ಪ್ರಯಾಸಕರವಾಗಿದೆ. ಆದುದರಿಂದ ಅರಿವೆ ವ್ಯಾಪಾರದ ಕಡೆಗೆ ಅಧಿಕಾರಿಗಳ ದೃಷ್ಟಿ ಸರಿಯಬೇಕಾಗಿದೆ.

ಕಟ್ಟಿಗೆಯ ಕುರಿತು, ಬೆಲೆಯ ನಿಯಂತ್ರಣ ಮಾತ್ರವಲ್ಲದೆ, ಕಟ್ಟಿಗೆ ಕೊರತೆ ಬಾರದಂತೆ ಜಿಲ್ಲೆಯ ಅರಣ್ಯಗಳಿಂದ ಕಟ್ಟಿಗೆಯನ್ನು ಒದಗಿಸುವ ಏರ್ಪಾಡು ಬೇಗನೆ ಆಗಬೇಕಾಗಿದೆ.

ಆಚಾರ್ಯ ರೇ.

ಸರ್ ಪ್ರಫುಲ್ಲ ಚಂದ್ರರೇಯವರು ಇದೇ ತಾ. ೧೬ರಂದು ದಿವಂಗತರಾದರು. ಇವರ ನಿಧನದಿಂದ ದೇಶವು ಸರ್ವ ಪ್ರಖ್ಯಾತ ವಿಜ್ಞಾನ ವಿಶಾರದನನ್ನು ಕಳಕೊಂಡಿತು; ಕಳೆದ ಶತಮಾನದಲ್ಲಿ ಭಾರತದ ಹೊಸ ಜೀವನದ ಬೆಳಕನ್ನು ತೋರಿದ ಮಹಾಪುರುಷರೊಬ್ಬರು ಇಂದು [illegible] ಹೋದರು. ಈ ನಕ್ಷತ್ರ ಮಂಡಲದ ದೊಡ್ಡ ನಕ್ಷತ್ರವಾದ ಸರ್ ಜಗದೀಶ ಚಂದ್ರ ಬೋಸ್, ರವೀಂದ್ರನಾಥ ಠಾಗೂರ್, ಸರ್ ಸಿ. ವಿ. ರಾಮನ್, ಮಹಾತ್ಮಾ ಗಾಂಧೀ ಈ ಮಹಾಪುರುಷರ ಸಾಲಲ್ಲಿ ಸೇರಿದ್ದ ಆಚಾರ್ಯ ರೇಯವರು ಭಾರತದ ಕೀರ್ತಿಧ್ವಜವನ್ನೆತ್ತಿ ಹಿಡಿದ ಮಹನೀಯರಿದ್ದರು. ಭಾರತದ ಪ್ರಾಚೀನ ಸಂಸ್ಕೃತಿಯ ಉಜ್ವಲತೆಯನ್ನು ಜಗತ್ತಿಗೆ ಸಾರಿ ತೋರಿದ್ದ ಮಹಾಪುರುಷರು. ಆಧುನಿಕ ವಿಜ್ಞಾನ ಶಾಸ್ತ್ರದ ಅಭಿವೃದ್ಧಿಗಾಗಿ ಹೋರಾಡುತ್ತಾ ಪ್ರಾಚೀನ ಹಿಂದೂ ವಿಜ್ಞಾನವನ್ನು ಅವರು ಲೋಕಕ್ಕೆ ಎತ್ತಿ ತೋರಿಸಿದರು. ಇದರಿಂದ ಅವರು ಆಧುನಿಕ ಜಗತ್ತಿಗೆ ಹಿಂದೂ ಸಂಸ್ಕೃತಿಯ ಉಜ್ವಲತೆಯನ್ನು ತಿಳಿಸಿ ಪ್ರಸಿದ್ಧರಾಗಿರುವರು.

ರಾಷ್ಟ್ರದ ಬಗ್ಗೆ ಆಚಾರ್ಯರ ಭಕ್ತಿ ಅಪಾರವಾದುದು "ಆಧುನಿಕ ಭಾರತವು ಜಗತ್ತಿನ ಉದ್ಧಾರಕ್ಕೆ ತನ್ನ ಪಾಲನ್ನು ಸಲ್ಲಿಸುವುದೆಂಬ ಕನಸನ್ನು" ಅವರು ಕಂಡರು. ಹಿಂದೂದೇಶದಲ್ಲಿ ಪ್ರಸಿದ್ಧವಾದ ಬಂಗಾಳ ಕೆಮಿಕಲ್ ಮತ್ತು ಫಾರ್ಮೆಸ್ಯೂಟಿಕಲ್ ಎಂಬ ಎಲ್ಲಾ ತರದ ಔಷಧಗಳನ್ನು ತಯಾರಿಸಿ ಸುಲಭ ದರದಲ್ಲಿ ಮಾರಾಟಮಾಡುತ್ತಿರುವ ಸಂಸ್ಥೆಗುನ್ನು ಸ್ಥಾಪಿಸಿದರಿವರು ಅವರ ಕೈಕೆಳಗೆ ಸುರಿತ ಹಲವು ಮಂದಿ ಯುವಕರು ವೈಜ್ಞಾನಿಕ ಸಂಶೋಧನೆಯಲ್ಲಿ ಪ್ರವೀಣರಾಗಿದ್ದಾರೆ. ವಿಜ್ಞಾನ ಹಾಗೂ ದೇಶದ ಆರ್ಥಿಕ ಅಭಿವೃದ್ಧಿ ಕುರಿತು ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದಂತೆ ಅವರು ಬಂಗಾಳ ಮೊದಲಾದ ಕಡೆಗಳಲ್ಲಿ ನಿರಾಶ್ರಿತರಿಗೆ ಸಹಾಯ ಮಾಡುತ್ತಲೂ ಇದ್ದರು. ಖಾದಿಯ ಅಚಲ ಭಕ್ತರಿದ್ದು ಅದರ ಉದ್ಧಾರಕ್ಕೆ ಅವರು ತುಂಬಾ ಪರಿಶ್ರಮಿಸುತ್ತಿದ್ದಾರೆ ಮಾತೃ ಭಾಷೆಗೆ ಪ್ರಧಾನತೆ ಬರಬೇಕೆಂದವರು ಬಹಳ ಸಾಧಿಸಿದ್ದಾರೆ.

ಹೀಗಾಗಿ ಆಚಾರ್ಯರು ಚಿರ ಸ್ಮರಣೀಯರಾಗಿರುವರು

ಹೋಟೇಲು ತಿಂಡಿಗಳ ದರ ನಿರ್ಣಯ

ದಕ್ಷಿಣ ಜಿಲ್ಲಾ ಕಲೆಕ್ಟರರು, ಮಂಗಳೂರು ಮುನಿಸಿಪಾಲಿಟಿಯೊಳಗೆ ತಿಂಡಿ ಪಾನೀಯಗಳ ದರಗಳನ್ನು ಈ ಕೆಳಗಿನಂತೆ ನಿರ್ಣಯಿಸಿರುವರು:—

೧. ಕಾಫಿ ಮತ್ತು ಚಹಾ (ಸಕ್ಕರೆ) ಸಿಂಗಲಿಗೆ ೦-೦-೯, ೨. ಕಾಫಿ ಮತ್ತು ಚಹಾ (ಬೆಲ್ಲ) ಸಿಂಗಲಿಗೆ ೦-೦-೬, ೩. ಥಂಡಾ ಪಾನೀಯ (ಸಕ್ಕರೆ) ಸಿಂಗಲಿಗೆ ೦-೧-೩, ೪. ಫ್ರುಟ್ ಸಲಾದ್ ಮತ್ತು ಐಸ್ ಕ್ರೀಮ್ ಕಪ್ಪಿಗೆ ೦-೨-೦, ೫. ಬಾದಾಮಿ ಹಲ್ವಾ (೨೪ತೊಲೆಗೆ ಸೇರಿಗೆ) ೧-೦-೦, ೬. ಇತರ ಹಲ್ವಾ (೨೪ತೊಲೆಯ ಸೇರಿಗೆ) ೦-೧೨-೦, ೭. ಸಾಟು, ಲಡ್ಡು, ಜಿಲೇಬಿ, ಜಹಾಂಗೀರ್, ಮೈಸೂರುಪಾಕ್ ಮತ್ತು ಇತರ ಮಿಠಾಯಿ(೨೪ತೊಲೆ ಸೇರಿಗೆ) ೦-೧೦-೦, ೮. ಹೋಳಿಗೆ (ದೊಡ್ಡ ಸೈಜು) ೦-೧-೦, ೯. ಹೋಳಿಗೆ (ಸಣ್ಣ ಸೈಜು) ೦-೦-೬, ೧೦. ಶೀಮೆ ಪಾಯಸ ಕಪ್ಪಿಗೆ ೦-೧-೩, ೧೧ ರವೆಯ ಕ್ಷೀರಾ (೨೪ತೊಲೆಗೆ ಸೇರಿಗೆ) ೦-೮-೦, ೧೨. ಮಸಾಲೆ ದೋಸೆ (ಈಗಿನ ಸೈಜು) ೦-೧-೩, ೧೩. ತುಪ್ಪ ದೋಸೆ (ಈಗಿನ ಸೈಜು) ೦-೦-೯, ೧೪. ಖಾಲಿ ದೋಸೆ (ಈಗಿನ ಸೈಜು) ೦-೦-೩, ೧೫. ಪಕೋಡೆ, ಚಿಪ್ಸ್ ಪ್ಲೇಟಿಗೆ ೦-೦-೯, ೧೬ ಪುರಿ (ಈಗಿನ ಸೈಜು) ೦-೦-೬, ೧೭. ಪುರಿ-ಬಾಜಿ (ಈಗಿನ ಸೈಜಿನ ೨ ಪುರಿ, ಬಾಜಿ ಈಗಿನಷ್ಟು) ೦-೧-೩, ೧೮ ಉಪ್ಪಾ ಪ್ಲೇಟಿಗೆ ೦-೦-೬, ೧೯. ಖಾರಕಡ್ಡಿ, ಶೀವೊ, ಬೊಂಬೇ ಮಿಕ್ಚರ್, ಮೈಸೂರು ಪಕೋಡ, ದೀವಿ ಹಲಸು ಬಜೆ (೨೪ ತೊಲೆ ಸೇರಿಗೆ) ೦-೮-೦, ೨೦ ಬೋಂಡಾ, ಬಾಳೆಕಾಯಿ ಪೋಡಿ ೦-೦-೬, ೨೧ ಸಬ್ಬಕ್ಕಿ ವಡೆ, ನೀರುಳ್ಳಿ ವಡೆ, ಬಟಾಟೆ ವಡೆ, ತೈರೋಡೆ ೦-೦-೯, ೨೨ ಅವಿಲು, ಪಳಿ ೦-೦-೬, ೨೩ ಗೇರುಬೀಜ ಬಜೆ ಪ್ಲೇಟಿಗೆ ೦-೧-೦, ೨೪ ಇಡ್ಲಿ (ಹಳೇ ಸೈಜು, ಚಟ್ನಿ—ಸಾಂಭಾರ್ ಗಳು ಸಹಿತ ಮೊದಲಿನಂತೆ) ೦-೦ ೬

ವಿ ಸೂ —ಉಡುಪಿ ಶ್ರೀ ಕೃಷ್ಣ ಭವನದವರು ೦-೧-೦, ೧-೪-೦, ೦-೧೨-೦, ೦-೧-೬, ೦-೧-೦, ೦ ೧-೦, ೦ ೧ ೬, ೦ ೦ ೯, ಈ ದರಗಳನ್ನು ಅನುಕ್ರಮವಾಗಿ ೧, ೫, ೭, ೧೨, ೧೩, ೧೫, ೧೭ ಮತ್ತು ೧೮ನೇ ಐಟಮುಗಳಿಗೆ ಚಾರ್ಜ್ ಮಾಡಬಹುದು. ತಾಜಮಹಲ್, ಸ್ವಸ್ತಿಕಾ ಭವನ್, ಶ್ರೀವಿಲಾಸ ಮತ್ತು ಮೊಡರ್ನ್ ಕೆಫೆಯವರು ೧ನೇ ಐಟಮಿಗೆ ಆಣೆ ೦-೧-೦ ಮತ್ತು ೨ನೇ ಐಟಮಿಗೆ ೦-೦-೯ ಚಾರ್ಜ್ ಮಾಡಬಹುದು. (ಇಲ್ಲಿ ಕಾಣಿಸಿರದಂತಹ ಐಟಮುಗಳಿಗೆ, ಹೊಟೇಲು ಮಾಲಕರು ಈಗಿನ ೨/೩ ದರ ಚಾರ್ಜ್ ಮಾಡಬೇಕು. ಉಲ್ಲಂಘಿಸಿದವರಿಗೆ ಸಕ್ಕರೆ ಮೊದಲಾದ ಸೀಧಾ ರದ್ದು ಮಾಡಲಾದೀತು)

(ಜಿಲ್ಲಾ ಕಲೆಕ್ಟರರ ಹುಕುಂ ಅನ್ವಯ.)

ಹೊಸ ದುರ್ಗ

ತಲಾ ೧½ ಪಾವಿನಿಂದ ೧ ಪಾವಿಗೆ ಅಕ್ಕಿಯ ಪೂರೈಕೆಯನ್ನು ಇಳಿಸಿದುದಕ್ಕೆ ಕಾಸರಗೋಡು ತಾಲೂಕು ಕಿಸಾನ್ ಕೌನ್ಸಿಲಿನವರು ಮೊದಲಿನಷ್ಟೆ ಕೊಡಿಸಬೇಕೆಂದು ಒಂದು ಮನವಿಯನ್ನು ಕಲೆಕ್ಟರರಲ್ಲಿ ಮಾಡಿರುವರಂತೆ.

ಇಲ್ಲಿನ ಸಬ್ ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ಗುರುತು ಚೀಟಿ ಮೂಲಕ ತಲಾ ೧ ಪಾವಿನಂತೆ ಅಕ್ಕಿ ಸಿಗುವಂತೆ ಏರ್ಪಡಿಸಿರುವರಾಗಿ ತಿಳಿಯುತ್ತೇವೆ.

ಕೆಲವು ಸಮಯದಿಂದ ಈ ಭಾಗಗಳಲ್ಲಿ ಭಯಂಕರವಾಗಿ ಹರಡಿರುವುದಾಗಿ ತಿಳಿದಿದ್ದ ಸಿಡುಬು ಈಗ ಹೆಚ್ಚು ಕಡಿಮೆ ಶಾಂತವಾಗಿರುವುದಾಗಿ ತಿಳಿದು ಬರುತ್ತದೆ. ಈ ಸಂಧರ್ಭದಲ್ಲಿ ಇಲ್ಲಿಯ ಸಿಡುಬು ನಿವಾರಣಾ ಸಮಿತಿಯ ಕಾರ್ಯವು ಸ್ತುತ್ಯವಿದೆ

ಹಿಂದುಸ್ಥಾನ

ಬೊಂಬಾಯಿಯಲ್ಲಿ ಒಂದು ಸಿನೇಮಾ ಮಂದಿರದಲ್ಲಿ ೯ನೇ ತಾರೀಕು ರಾತ್ರಿ ೧೦ ಗಂಟೆಗೆ ಬುಕಿಂಗ್ ಆಫೀಸಿನಲ್ಲಿ ಜಗಳ ಸಂಭವಿಸಿ ಗುಂಡಿನ ಅತ್ಯಾಚಾರದಲ್ಲಿ ಅದು ಪರಿಣಮಿಸಿತು. ಖಾಕಿ ವಸ್ತ್ರ ಧರಿಸಿದ ಒಬ್ಬನು ಒಂದೆ ಸವನೆ ೩ ಗುಂಡು ಹಾರಿಸಿದನು ಪೋಲೀಸರು ಈ ಬಗ್ಗೆ ತಪಾಸಣೆ ನಡೆಸಿದ್ದಾರೆ

ರೇಶನಿಂಗ್ ಹುಕುಮು ಮುರಿದು ಗೋದಿ ಮತ್ತು ಜೋಳ ತಂದರೆಂದು ಅಹಮದಾಬಾದ ರೈಲ್ವೆ ಸ್ಟೇಶನದಲ್ಲಿ ೧೨ ಜನರನ್ನು ಸೆರೆಹಿಡಿಯಲ್ಪಟ್ಟರು. ಅವರ ವಿಚಾರಣೆ ನಡೆದು ಪ್ರತಿಯೊಬ್ಬರಿಗೆ ೫೦ ರೂ ದಂಡ ಇಲ್ಲವೆ ೧ ತಿಂಗಳ ಶಿಕ್ಷೆ ವಿಧಿಸಲಾಯಿತು.

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 31st December, 1943.

LIABILITIES	Rs As P
1 Paid up Capital	13,68 480- 0- 0
2. Reserves	4,12 120-12- 8
3 Deposits	67,30,955- 3- 4
4. Due to Bankers	7,34,366-10- 9
5 Bills for collection	6,70,379- 8- 8
6. Sundries including revenue items	7,58,745- 8- 4
Total	10,675,047-11- 9

ASSETS	Rs. As Ps.
1 Cash on hand & with bankers & in Current & Fixed Deposit A/cs	19,71,808 0- 1
2 Investments on (1)Govt. Securities (2) Immovable properties etc.	24,26,660,- 9- 9
3 Loans on Jewels & other valuable securities	33,10,167-15-3
4 Loans on personal securities & Bills purchased	20,49,197-13-10
5 Bills for collection as per contra	6,70 379- 8- 8
6. Office premises, furniture etc.	93,705- 0-10
7. Sundries including revenue items.	1,13,128-13- 4
Total	1,06,75,047-11- 9

ಸಮರ ಭೂಮಿಯ ಸಂಚಾರ

ನಾರ್ಮಂಡಿ ಕಾಳಗ; ಟೋಕಿಯೋ ಧಾಳಿ!

ಫಿನ್‌ಲೆಂಡಿನಲ್ಲಿ ಹೊಸ ಕಾದಾಟ

ಫ್ರಾನ್ಸಿನಲ್ಲಿ ಕಾಳಗ ಎಡೆಬಿಡದೆ ಸಾಗುತ್ತಲಿದೆ. ಎಂಬತ್ತು ಮೈಲು ದೂರದ ಕರಾವಳಿಯಲ್ಲಿ ಮಿತ್ರರು ಅಗಣಿತ ಸೇನಾಸಮೂಹದೊಡನೆ ಮುತ್ತಿಗೆ ಹಾಕಿದ್ದಾರೆ. ಜರ್ಮನರಿದನ್ನು ಪ್ರಬಲ ಪರಾಕ್ರಮದಿಂದ ಎದುರಿಸುತ್ತಿದ್ದಾರೆ. ಕೆಲಕಡೆ ಮಿತ್ರರು ಹತ್ತಾರು ಮೈಲು ಮುನ್ನಡೆದಿದ್ದಾರೆ. ಕರಾವಳಿಯ ಆರು ಮೈಲು ದೂರದಲ್ಲಿ ನಾರ್ಮಂಡಿ ಪ್ರಧಾನ ಪಟ್ಟಣಗಳಲ್ಲೊಂದಾಗಿದೆ. ಹಲವು ರೈಲು ರಸ್ತೆಗಳಿಲ್ಲಿ ಬಂದು ಸೇರುತ್ತವೆ. ಇಲ್ಲಿನ ಒಂದು ರಸ್ತೆ ಆಗ್ನೇಯಾಭಿಮುಖವಾಗಿ ೧೨೫ ಮೈಲು ದೂರದಲ್ಲಿರುವ ಫ್ರಾನ್ಸಿಗೂ ಸೇರುತ್ತದೆ. ಮಿತ್ರರೀಗ ನಾರ್ಮಂಡಿಯಲ್ಲಿಳಿದು ಕಾಳಗ ಕೊಡುತ್ತಿರುವರು ಮಿತ್ರರು ಫ್ರಾನ್ಸಿನಲ್ಲಿ ೧೮ ಡಿವಿಜನ್ ಸೈನ್ಯಗಳನ್ನಿಳಿಸಿರುವರೆಂದು, ಎಂದರೆ ಸುಮಾರು ಎರಡುವರೆ ಲಕ್ಷ ಸೈನ್ಯವಿಳಿಸಿದ್ದಾರೆಂದು ತಿಳಿದುಬರುತ್ತದೆ. ಚರ್ಚಿಲರೂ, ಸ್ಮಟ್ಸರೂ, ಅಮೆರಿಕನ್ ನಾಯಕರೊಡನೆ ನಾರ್ಮಂಡಿ ಕರಾವಳಿಯನ್ನು ಸಂದರ್ಶಿಸಿದ್ದಾರೆ. ಮಿತ್ರರಲ್ಲಿ ತಮ್ಮ ಗುಪ್ತಸ್ಥಾನವನ್ನುಪಯೋಗಿಸಿರುವರೆಂದೂ ಅಂತೆಯೇ ಹಿಟ್ಲರನೂ ಮಾಡಿದ್ದಾನೆಂಥೂ ವರದಿಯಿದೆ

ಹಿಟ್ಲರನಿಗೆ ಎಡಬಲಗಳಿಂದ ಏಟುಗೊಡುವಂತೆ, ರಶ್ಯನರು ಫಿನ್ಲೆಂಡಿನಲ್ಲಿ ಹೊಸ ಆಕ್ರಮಣ ಮಾಡಿದ್ದಾರೆ. ಅಲ್ಲಿ ರಶ್ಯನರು ಮುಂದುವರಿಯುತ್ತಿದ್ದಾರೆ ರಶ್ಯನ್ ರಾಣೆಯಿಂದಲೂ, ಇಟಲಿಯಿಂದಲೂ, ಅಮೆರಿಕದ ಬಾಂಬರುಗಳು ಹಾರಿ ರುಮೇನಿಯದಲ್ಲಿರುವ ಜರ್ಮನ್ ಕೇಂದ್ರಗಳ ಮೇಲೆ ಬಾಂಬುಗಳನ್ನೆಸೆದಿವೆ ರೋಮಿನಿಂದ ಮಿತ್ರ ಸೈನ್ಯಗಳು ೭೫ ಮೈಲುಗಳಿಂದ ದೂರ ಸಾಗಿವೆಯೆಂದು ತಿಳಿಯುತ್ತದೆ. ಟೋಕಿಯೋದ ಮೇಲೆ ಯುದ್ಧಾರಂಭವಾದ ಎರಡನೇ ಸಲವಾಗಿ ಈಗ ಬಾಂಬು ಧಾಳಿಯಾಗಿದೆ ಭಾರತದ ಗಡಿಭೂಮಿಯಲ್ಲಿ ಕೋಹಿಮಾ, ಇಂಫಾಲುಗಳಲ್ಲಿಯೂ ಮಿತ್ರ ಸೇನೆಯೇ ಪ್ರಗತಿ ಹೊಂದುತ್ತಿದೆ

ದ್ವಿತೀಯ ಧಾಳಿ ವಿಷಮ

ಮಿತ್ರರು ಮಹಾಸಾಹಸದಿಂದ ಫ್ರೆಂಚ್ ಕರಾವಳಿಯಲ್ಲಿ ಕಳೆದ ವಾರದಲ್ಲಿ ಇಳಿದಾಗ, ಹಲವರು, ಮೊದಲಿನ ಧಾಳಿಗಿಂತ ದ್ವಿತೀಯ ಧಾಳಿ ವಿಷಮಕರವಾದೀತೆಂದು ಹೇಳಿದ್ದರು ಧಾಳಿಯಿಟ್ಟ ಒಂದು ವಾರದ ನಂತರ ನಿಜವಾದ ವಿಷಮತೆಯುಂಟಾಗುವುದೆಂದು ಜರ್ಮನ್ ವರದಿಗಾರರು ಸಾರಿದ್ದರು. ಕಳೆದ ಐದಾರು ದಿನಗಳ ಘಟನೆಗಳು ಈ ಭವಿಷ್ಯವನ್ನು ಖಚಿತಗೊಳಿಸುವಂತಿದೆ

ಮಿತ್ರರೀಗ ಸೀನ್ ನದಿಯ ಮುಖದಿಂದ ಚೆರ್ಬರ್ಗ್ ವರೆಗೆ ಮುನ್ನಡೆದು ಕರಾವಳಿಯಲ್ಲಿ ಶತ್ರುಗಳನ್ನು ಹೊಡೆದೋಡಿಸಲಾಗಿದೆ ಈ ಸಾಹಸ ಮಾಡಲು ಪಟ್ಟ ಪಾಡು ಅಷ್ಟಿಷ್ಟಲ್ಲವೆಂದು ಆ ಮೇಲೆ ಬಂದ ಸುದ್ದಿಗಳು ನಮಗೆ ತಿಳಿಸುತ್ತವೆ, ಎಷ್ಟೋ ಜನ ಧನನಷ್ಟಗಳು ಉಂಟಾಗಿವೆ. ಒಳಪ್ರದೇಶಕ್ಕೆ ಮುನ್ನಡೆವುದು ಅಷ್ಟೇನೂ ಸುಲಭವಾಗಿರದೆ ನಿರ್ಧಾರಪೂರ್ವಕ ಎದುರಿಸಿನಿಂತ ಜರ್ಮನರೊಡನೆ ಮಿತ್ರರು ಬಹಳ ಪೇಚಾಡಿ ಕಾದಾಟ ಕೊಡಬೇಕಾಯಿತು, ಮೂರು ಪಟ್ಟಣಗಳನ್ನು ಕಳೆದುಕೊಂಡು ಮಿತ್ರರು ಹಿಂಜರಿಯಬೇಕಾಗಿ ಬಂತು. ಪೂರ್ವದಲ್ಲಿ ಸೀನ್ ಪಟ್ಟಣವು ಆಕ್ರಮಣಗಾರರನ್ನೆದುರಿಸಿ ಬಲವಾಗಿ ನಿಂತಿದೆ. ಒಂದು ವಾರದ ಮುನ್ನ ಈ ನಗರವು ಇಂದೋ ಮುಂದಿನ ನಿಮಿಷವೋ ಪತನವಾಗುವುದೆಂದು ಖಂಡಿತ ಮಾಡಲಾಗಿತ್ತು. ದಕ್ಷಿಣ ದಿಕ್ಕಿನಿಂದ ಸೀನ್ ನಗರವನ್ನು ಹಿಡಿವ ಮಿತ್ರರ ಸಾಹಸ ಫಲಿಸಿದರೂ, ಇತರ ಕಡೆಗಳಲ್ಲಿ ಮಿತ್ರರು ಹಿಂಜರಿಯಬೇಕಾಗಿ ಬಂತು.

ಪಶ್ಚಿಮದಲ್ಲಿ ಮಿತ್ರರ ಮುಖ್ಯ ಗುರಿ ಚೆಂಬರ್ಗ್ ಏಕೆಂದರೆ ಅವರ ಆಕ್ರಮಣ ಕಾರ್ಯವನ್ನು ಮುಂದುವರಿಸಲು ಇದು ಅತ್ಯಂತ ಅವಶ್ಯವಿರುವ ಬಂದರ ಪ್ರದೇಶವಾಗಿದೆ ಅರ್ಧ ದ್ವೀಪವನ್ನು ಸ್ವಾಧೀನಪಡಿಸಿಕೊಂಡು ಬಂದರವನ್ನು ಬೇರೆ ಮಾಡಬೇಕೆಂಬ ಅವರ ಪ್ರಯತ್ನವು ಸ್ವಲ್ಪ ಮಟ್ಟಿಗೆ ಯಶಸ್ವಿಯಾದರೂ ಅದು ಪೂರ್ಣ ಫಲಕಾರಿಯಾಗಲಿಲ್ಲ ಅಮೆರಿಕನ್ ಸೈನಿಕರು ಹೆಚ್ಚಿನ ಸಾಹಸ ಮಾಡಿ ಪಟ್ಟಣವನ್ನು ಒಮ್ಮೆ ಕೈವಶ ಮಾಡಿಕೊಂಡರೂ, ಪಟ್ಟಣವು ಪುನಃ ಆಕ್ರಮಿತವಾಗಿ ಚೆಂಬರ್ಗಿನಲ್ಲಿ ಎದುರಾಳಿಗಳನ್ನು ಪ್ರತ್ಯೇಕೀಕರಿಸುವ ಕಾರ್ಯ ಮಂದಗತಿಯಿಂದ ಮುಂದೆ ಸಾಗುತ್ತಿದೆ

ಇಂದಿನ ವರದಿ ಸತ್ಯವಾದರೆ ಶತ್ರುಗಳಿಂದು ಬಂದರವನ್ನು ಹಾಳುಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಹಾಗಾದರೆ ಮಿತ್ರರು ಇದು ವರೆಗೆ ಮಂದಗತಿಯಿಂದ ಸಾಗಿದ್ದು ಸರಿಯಾಗಲಿಲ್ಲ. ಎರಡನೆಯ ವಾರದ ವರದಿಯಂತೆ, ಜರ್ಮನರು ಫ್ರಾನ್ಸ್ ರಕ್ಷಣೆಗೆ ಈಗಾಗಲೇ ಭಾರವಾದ ಸುಸಜ್ಜಿತ ಯೋಜನೆಗಳನ್ನು ಮಾಡಿಕೊಂಡಿರುವರೆಂದು ತಿಳಿಯುತ್ತೇವೆ ಹಾಗಾಗಿ ಈಗ ದ್ವಿತೀಯ ಯುದ್ಧತರಂಗವು ಬಹಳ ಪ್ರಬಲವಾಗುವುದು, ಮಿತ್ರರಿಗೆ ಆಕ್ರಮಣವು ದುರ್ಗಮವಾಗುತ್ತದೆಂದೂ ತೋರುತ್ತದೆ ಜನರಲ್ ಮೊಂಟ್‌ಗೂಮರಿ, ರೊಮೆಲನ ಆಕ್ರಮಣವನ್ನು ಕಿತ್ತು ಹಾಕುವ ಯೋಜನೆ ಮಾಡಿದ್ದಾನೆಂಬುದೇನೋ ಶುಭವಾರ್ತೆ, ಏಕೆಂದರೆ ಮಿತ್ರರು ತಮ್ಮ ಮುಂದೊತ್ತುವಿಕೆಯಲ್ಲಿ ಇನ್ನಷ್ಟು ಬಲ ಉಪಯೋಗಿಸಿದರೆ ಮಾತ್ರ ಜರ್ಮನರ ಪ್ರತಿಭಟನೆಯನ್ನು ಮುರಿಯಬಹುದು ಹೇಗಿದ್ದರೂ ಈ ವಿಚಾರದಲ್ಲಿ ಬೇಗನೇ ಒಂದು ನಿರ್ಣಯವಾಗುವುದು ಸಾಧ್ಯವಿಲ್ಲ ನ್ಯೂಯಾರ್ಕಿನಿಂದ ಬಂದ ಸುದ್ದಿಯಂತೆ, ಐದು ವಾರಗಳಾದರೆ ಫ್ರಾನ್ಸ್ ಆಕ್ರಮಣದ ಫಲಿತಾಂಶ ತಿಳಿಯಲಾರದೆಂದು ತೋರುವುದು

ಸ್ಟಾಲಿನ್ ಧೋರಣ

ಆಂಗ್ಲ ಅಮೇರಿಕನ್ ದಳದವರು ಹೀಗೆ ಫ್ರಾನ್ಸನ್ನು ಆಕ್ರಮಿಸಿ ದ್ವಿತೀಯ ರಂಗವನ್ನು ಕೊನೆಗಾದರೂ ಒಮ್ಮೆ ತೆರೆದುದಕ್ಕಾಗಿ ಸ್ಟಾಲಿನ್ ತನ್ನ ಹಾರ್ದಿಕ ಅಭಿನಂದನೆ ಸಲ್ಲಿಸಿದ್ದಾನೆ ಇಡೀ ಫ್ರಾನ್ಸು ಹಿಟ್ಲರನ ಕೈವಶವಿರುವುದರಿಂದ, ಅಲ್ಲಿಳಿದು ಆತನನ್ನು ಸೋಲಿಸಿ, ಆ ರಾಷ್ಟ್ರವನ್ನು ಪುನಃ ತಮ್ಮ ಅಧೀನ ನಡಿಸಿಕೊಳ್ಳುವಂತಹ ಕಾರ್ಯವು ಅನುಪಮ ಸಾಹಸವೆಂದು ಸ್ಟಾಲಿನ್ ನಂಬಿರುವನು ಹೇಗಿದ್ದರೂ ಆ ಕಡೆ ಸ್ಟಾಲಿನ್ ಎಷ್ಟು ಬಲವಾಗಿ ತನ್ನ ಕತ್ತಿಸುತ್ತಿಗೆಯ ಪೆಟ್ಟು ಕೊಡುತ್ತಾನೋ ಅಷ್ಟು ಜೋರಾಗಿ ಮಿತ್ರರು ಫ್ರಾನ್ಸಿನಲ್ಲಿ ಮುಂದುವರಿಯಬಹುದೆಂಬುದು ನಿಜವಿದೆ. ರಶ್ಯನ್ ದಳಗಳು ಈಗಾಗಲೇ ಎಲ್ಲಾ ರಂಗಗಳಲ್ಲಿಯೂ ಜರ್ಮನರನ್ನು ಎದುರಿಸುತ್ತಿವೆಯೆಂದು ಜರ್ಮನ್ ಸುದ್ದಿ ಖಾತೆಯೇ ಒಪ್ಪುತ್ತದೆ. ನಿಜವಾಗಿಯೂ ಸ್ಟಾಲಿನ್ ಹಿಟ್ಲರ್ ಧ್ವಂಸ ಕಾರ್ಯದಲ್ಲಿ ನಿರತನಾಗಿದ್ದರೂ, ಜರ್ಮನರು ಪಶ್ಚಿಮದಲ್ಲಿ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆಂಬುದರ ಮೇಲೆ ಆತನ ನಿರ್ಣಾಯಕ ಯುದ್ಧ ನಡೆಯಬಹುದು. ರೊಮೆಲನ ಸೈನ್ಯ ಪಶ್ಚಿಮ ಪೂರ್ಣ ಯುದ್ಧ ನಿರತರಾಗುವ ಸಮಯದಲ್ಲಿಯೇ ಸ್ಟಾಲಿನ್ ಈಚೆಗಿನ ಜರ್ಮನರ ಮೇಲೆ ಮುತ್ತಿಗೆ ಹಾಕುವನೆಂಬುದು ಖಂಡಿತವಾಗಿದೆ. ತನ್ಮಧ್ಯೇ ರಶ್ಯನ್ ಸೇನೆ ಫಿನ್ಲೆಂಡಿಗೆ ಧಾಳಿಯಿಡುತ್ತಿದೆ ಇದರಲ್ಲಿ ದುರ್ಗಮ ಮೆನರಿಮ್ ಕೋಟೆ ಭೇದಿಸಲು ನೋಡಬಹುದು ರಶ್ಯನ್ ದಳಗಳು ವೀಪುರಿಯ ವಿಬೋರ್ಗಿನಿಂದ ಕೇವಲ ಮೂವತ್ತು ಮೈಲು ಅಂತರದಲ್ಲಿದೆ. ಅಮೆರಿಕವು ಹೆಲ್ಸಿಂಕಿಯ ಸಂಬಂಧವನ್ನು ಈಗಾಗಲೇ ಮುರಿದು ಕೊಂಡಿದೆ ಫಿನ್ನರು ಕಳೆದ ಮಾರ್ಚಿಯಲ್ಲಿಯೇ ಒಪ್ಪಿಸಿದ ಒಪ್ಪಂದ ಕರಡವನ್ನು ತಿರಸ್ಕರಿಸಿದ್ದಾರೆ ಕೆಂಪು ಸೇನೆಯ ಮುಂದೊತ್ತುವಿಕೆ ಮತ್ತು ಅಮೆರಿಕದ ತಂತ್ರ ನೀತಿ ಇವೆರಡು ಫಿನ್ನರ ಸ್ಥಿತಿ ಗತಿಯಲ್ಲಿ ತುಂಬಾ ಬದಲಾವಣೆ ತರಬಹದು

ಟೋಕಿಯೋ ಧಾಳಿ

ಎರಡು ವರ್ಷಗಳ ಹಿಂದೆ ೧೯೪೨ನೆಯ ಇಸವಿ ಎಪ್ರಿಲ್ ೧೮ರಂದು ಟೋಕಿಯೋಗೆ ಬಾಂಬು ಬಿದ್ದ ವರ್ತಮಾನ ಪತ್ರಿಕೆಗಳಲ್ಲಿ ಬರದಿತ್ತು ಇದು ಅಗ್ಗಬಂದು ರೋಮಾಂಚಕ ಘಟನೆಯಾಗಿತ್ತು. ಅಮೆರಿಕನ್ ವಿಮಾನಗಳು ಜಪಾನಿನ ರಾಜಧಾನಿಯ ಮೇಲೆ ಬಾಂಬೆಸೆದು ಚೀನೀ ವಿಮಾನಕ್ಷೇತ್ರದಲ್ಲಿಳಿದಿದ್ದವು ಇದೇ ಕಳೆದ ಗುರುವಾರ ಪುನಃ ಆ ಜಪಾನಿನ ರಾಜಧಾನಿ ಟೋಕಿಯೋದ ಮೇಲೆ ಧಾಳಿಯಾಗಿ ನಾಗಸಾಕಿ ಮೊದಲಾದ ಕೆಲ ಪ್ರಾಮುಖ್ಯ ಕೈಗಾರಿಕೆಯ ಕೇಂದ್ರಗಳಿಗೂ ಹಾನಿಯುಂಟಾದ ಸುದ್ದಿ ಬಂದಿರುವುದು ಇಲ್ಲಿಗೆ ಬಾಂಬು ಹಾಕಿದ ವಿಮಾನಗಳು ಭಾರತ ಬರ್ಮಾ ಚೀನಾ ರಂಗದಿಂದ ಬಂದವುಗಳೆಂದೂ ಪ್ರಕಟವಾಗಿರುವುದು ೧೯೪೨ರ ಧಾಳಿಯು ಪ್ರೇಕ್ಷಣೀಯ ಪ್ರದರ್ಶನವಾಗಿತ್ತು. ಹಾಗೂ ಇಂದಿನ ಜಪಾನಿನ ಸಿದ್ಧತೆಗಳನ್ನು ಪರಿಶೀಲಿಸಿದರೆ ಅದಕ್ಕೆ ಬಾಂಬು ಬೀಳುವುದು ಸಾಧ್ಯವೇ ಇರಲಿಲ್ಲ. ಇಂದಿನ ಧಾಳಿ ಜಪಾನ್ ಧಾಳಿಯ ಪ್ರಥಮ ಕಾರ್ಯವೆಂದೂ ಇದು ಇನ್ನೂ ಮುಂದುವರಿಯುವುದೆಂದೂ ಈಗ್ಗೆ ಅನಿಸುತ್ತಿದೆ. ಆರು ತಿಂಗಳ ಹಿಂದೆ ಅಮೆರಿಕದ ನೌಕಾಸೇನಾಪತಿ ಜನರಲ್ ಏರ್ನಾಲ್ಡರು ಜಪಾನನ್ನು ನಾವು ಸುಮ್ಮಗಿರಲು ಬಿಡಲಾರೆವೆಂದು ಕಂಠೋಕ್ತ ಹೇಳಿದ್ದರು. ಹೇಗಿದ್ದರೂ ಇಂದು ಅಮೆರಿಕನರ ಸಾಹಸ ಜಪಾನಿಗೆ ಗೊತ್ತಾಗಿದೆ. ಅಮೇರಿಕದ ೧೪ನೇ ದಳವು ಚೀನಾರಂಗದಲ್ಲಿದ್ದು ಬರ್ಮಾ, ಇಂಡೋ ಚೀನಾ, ಥಾಯಿಲೆಂಡ್, ಹೈನಾನ್‌ಗಳ ಮೇಲೆ ಆಗಾಗ ಬಾಂಬು ಹಾಕುತ್ತಿದೆ ಜಪಾನಿನಲ್ಲಿ ಇದು ಮೊದಲು ಕೊರಿಯಾ ಮಂಚೂರಿಯಗಳು ಬಾಂಬಿನ ಪೆಟ್ಟಿಗೆ ಬಲಿಯಾಗಿವೆ ಹೀಗೆ ಭೀಕರ ವಿಮಾನಗಳು ಜಪಾನಿನ ಮೇಲೆ ಪ್ರಚಂಡ ಧಾಳಿ ಇಟ್ಟಿರುವವು

ಇತರ ವಿವರಗಳು

ಫ್ರಾನ್ಸಿನಿಂದ ಬಂದ ಇತ್ತೀಚೆಯ ಸುದ್ದಿಯಂತೆ ಕಾಮೆಂಟ್ ಭಾಗದಲ್ಲಿ ಭೀಕರ ಹೋರಾಟ ನಡೆಯುತ್ತಿದ್ದು ಕ್ವಿನೆವಿಲ್ ದುರ್ಗವು ಮಿತ್ರವಶವಾಗಿರುವದೆಂದು ತಿಳಿದುಬಂದಿವೆ ಮೊಂಟ್‌ಬರ್ಗ್ ರಸ್ತೆಗಳಲ್ಲಿ ಇನ್ನೂ ಕೈಕೈ ಹೋರಾಟ ನಡೆದಿದೆ ಟಿಲ್ಲಿಕಾಮೆಂಟ್ ಪ್ರದೇಶದಲ್ಲಿ ಬ್ರಿಟಿಷರ ಬಲಿಷ್ಠ ಟೇಂಕ್ ಬಲ ಜರ್ಮನ್ ಠಾಣ್ಯಗಳ ಮೇಲೆ ಉಗ್ರ ಧಾಳಿ ನಡೆಸಿವೆ ಕೇನದಲ್ಲಿರುವ ಮಿತ್ರ ಸೈನ್ಯಗಳ ಮೇಲೆ ಗಂಡಾಂತರ ತರುವುದೇ ಮಿತ್ರರ ಉದ್ದೇಶವಾಗಿದೆ

ಚೆರ್ಬರ್ಗ್ ದ್ವೀಪಕಲ್ಪದಲ್ಲಿ ಅಮೆರಿಕನರಿಂದ ಸಂಭವಿಸಬಹದಾದ ಧಾಳಿ ಎದುರಿಸಲು ಜರ್ಮನರು ಸಿದ್ಧತೆಯಾಗುತ್ತಿದೆ ನಾರ್ಮಂಡಿಯಭೀಕರ ಪ್ರತಿಧಾಳಿ ಸಂಭವಿಸುವಂತೆ ತೋರುತ್ತದೆ. ದಕ್ಷಿಣ ಫ್ರಾನ್ಸಿನಲ್ಲಿ ದಂಗೆಯೆದ್ದಿರುವುದೆಂದ ಸುದ್ದಿ ಇಟಲಿಯಲ್ಲಿ ಬೊಲ್ಸೀನ ಸರೋವರಕ್ಕೆ ಉತ್ತರದಲ್ಲಿ ೧೦ ಮೈಲು ದೂರದಲ್ಲಿರುವ ಅಕ್ವಾಪಂಡೆಟೋ ಎಂಬ ನಗರವನ್ನು ಜರ್ಮನರು ಖಾಲಿ ಮಾಡಿರುವರು ಕರೇಲಿಯದಲ್ಲಿ ರಶ್ಯನರು ಮುಷ್ಟಿಧಿರುವರು ಟೋಕಿಯೋ ಮೇಲೆ ದಾಳಿ ಮಾಡಲು ಚೀನದಿಂದ ಅಮೆರಿಕನ್ ವಿಮಾನಗಳು ಬಂದಿದ್ದುವೆಂದು ಈಗ ತಿಳಿದು ಬಂದಿದೆ

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

[illegible] ಸಮಾಚಾರಗಳು

ಮಂಗಳೂರು

ಇಲ್ಲಿ [illegible] ದವೇ ಪ್ರತ್ಯಕ್ಷ[illegible] [illegible] ಸಾಮಾನುಗಳ ಬೆಲೆಗಳು ಒಂದೇ ಸಮನೇ [illegible] ಅಧಿಕಾರಿಗಳು ಈ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿರುವರು. ಮೇಲಿಂದ ಮೇಲೆ ಪ್ರಾಮುಖ್ಯ [illegible] ಕೇಂದ್ರಗಳಲ್ಲಿ ಧಾಳಿ, ಪರಿಶೋಧನೆಗಳು ನಡೆಯುತ್ತಲಿವೆ.

ಕಳೆದ ವಾರದಿಂದ ಚಿಲ್ಲರೆ ಕೂಪನ್‌ಗಳ ಹಂಚುವಿಕೆಯನ್ನು ನಿಲ್ಲಿಸಲಾದ್ದರಿಂದ ಚಿಲ್ಲರೆ ನಾಣ್ಯಗಳು ದೊರೆಯದೆ ಇಲ್ಲದೆ, ಸಿಗುವಂತಾಗಿದೆ. ಕೆಲವೊಂದು ಕಡೆಗಳಲ್ಲಿ ಪೋಲಿಸು ಅಧಿಕಾರಿಗಳು ತನಿಖೆ ನಡೆಸಿರುವರು.

ಸ್ಥಳೀಯ ಮೈದಾನದಲ್ಲಿ ತಾತ್ಕಾಲಿಕವಾಗಿ ಸ್ಥಾಪಿಸಲ್ಪಟ್ಟ ಕೆಲವೊಂದು ಬಾಳೆಹಣ್ಣಿನ ವ್ಯಾಪಾರಿಗಳ ಅಂಗಡಿಗಳಲ್ಲಿ ಕೋಥೆ ನಡೆಸಿ ಅಧಿಕಾರಿಗಳು ಅತ್ಯಧಿಕವೆಂದು ಕೋರಿದ ಚಿಲ್ಲರೆಯನ್ನು ಒಯ್ದಿರುವರೆಂದೂ ಸಂಬಂಧ ಪಟ್ಟ ಮಾಲಕರ ಮೇಲೆ ಕಟ್ಲೆ ನಡೆಯಲಿದೆಯೆಂದೂ ಕೇಳುತ್ತೇವೆ.

ಈ ಸಂಬಂಧದಲ್ಲಿ ಅಧಿಕಾರಿಗಳು ವ್ಯಾಪಾರಸ್ಥರಲ್ಲಿಯೂ ಒರ್ವೋರ್ವ ವ್ಯಕ್ತಿಯ ಹತ್ತಿರವೂ ಎಷ್ಟು ಚಿಲ್ಲರೆ ಇರಬಹುದೆಂಬುದರ ಕುರಿತು ಒಂದು ಪ್ರತ್ಯೇಕ ಪ್ರಕಟಣೆಯನ್ನು ಹೊರಡಿಸುವುದು ಸಾರ್ವಜನಿಕರಿಗೆ ಒಳಿತೆಂದು ಅಭಿಪ್ರಾಯ ಪಡಲಾಗಿದೆ ಎಂದೊಂದು ವಾರ್ತೆ.

ಬೆಳೆಕಾಳುಗಳಲ್ಲಿ ಕೆಲವೊಂದರುಗಳ ಬೆಲೆಯನ್ನು ನಿರ್ಣಯಿಸಿದ್ದಾರೆ 2½ ಮಣದ 1ನೇ ತರಗತಿ ಕಡ್ಲೆ ಗೋಣಿಗೆ ರೂ. 36-9-0 ಸೇರಿಗೆ 6¼ ಆ. 2ನೇದು ಗೋಣಿಗೆ 36ರೂ. ಸೇ. 6¼ ಆ 3ನೇದು ಗೋಣಿಗೆ 34-9-0 ಸೇ. 6 ಆ.

ಕಡ್ಲೆ ಬೇಳೆಗೆ ಕ್ರಮವಾಗಿ ೧, ೨, ೩, ನೇ ತರಗತಿಯವುಗಳಿಗೆ ಗೋಣಿಗೆ ಮತ್ತು ಸೇರಿಗೆ:- ೪೭-೧೦-೦ ೦-೭-೧೨, ೪೨-೧೦-೦;೦-೭-೦,ರೂ. ೪೧,೦ ೬ ೧೦ ಇದರಲ್ಲಿ ೪, ೫, ೬ನೇ ತರಗತಿಯದಕ್ಕೆ ಗೋಣಿ ಮತ್ತು ಸೇರಿಗೆ ೩೮-೧೦-೦, ೦-೬-೫, ರೂ ೩೬, ೬೪, ೩೨-೧೨-೦, 5½ ಆ,

ಕಡ್ಲೆ ಹಿಟ್ಟಿಗೆ ಕ್ರಮವಾಗಿ ೧, ೨, ೩ನೇ ತರಗತಿಯ ೧೯೬ ರಾತ್ತಲ ಗೋಣಿಗೆ ಮತ್ತು ಸೇರಿಗೆ ರೂ. ೪೨, ೪೨-೨-೦, ೦-೩-೪, ೩೭-೧೦-೦ ೦-೩-೩, ೩೦-೧೫-೦; ೦-೨-೯.

ಮಂಗಳೂರು ಶಹರಿನಲ್ಲಿ ಚಿಮಿಣಿ ಎಣ್ಣೆಯ ಬೆಲೆ ಈ ಕೆಳಗಿನಂತಿರಬೇಕೆಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿರುವರಾಗಿ ತಿಳಿಯುತ್ತೇವೆ. ಮೂಲ ವ್ಯಾಪಾರಿಗಳ ಬೆಲೆ ಟಿನ್ನಿಗೆ ರೂ. ೬-೪ ೯, ಬಾಟ್ಲಿಗೆ ೪೦ ಆ. ರಖಂ ವ್ಯಾಪಾರಿಗಳ ಬೆಲೆ ಟಿನ್ನಿಗೆ ರೂ. ೬-೧೪-೦; ಬಾಟ್ಲಿಗೆ ೩¼ ಆ. ಬೌನಿ ಸಿ ಹೊರಗಿನ ತಾಲೂಕಿನಲ್ಲಿ ಟಿನ್ನಿಗೆ ೭೦ ೫, ಬಾಟ್ಲಿಗೆ 3¼ ಆ.

ತಾ. ೧೯ರಲ್ಲಿ ಜರಗಿದ ನಗರ ಸಭೆಯಲ್ಲಿ ಹಣ್ಣು ಹಂಪಲು ತರಕಾರಿ ಮೀನು ಮಾಂಸಗಳ ಬೆಲೆಯನ್ನು ಕೂಡಾ ನಿಯಂತ್ರಿಸಬೇಕೆಂದೂ, ಆ ಸಂಬಂಧ ಯಾವ ಸಹಾಯವನ್ನಾದರೂ ಕೊಡುವುದಕ್ಕೆ ಸಭೆ ವಿರುದಾಗಿಯೂ ಸಭೆಯು ಕಲೆಕ್ಟರರನ್ನು ಕೇಳಿಕೊಳ್ಳುವುದಾಗಿ ನಿರ್ಣಯಿಸಲಾಗಿದೆಯಾಗಿ ಕೇಳುತ್ತೇವೆ.

ಸ್ಥಳೀಯ ಸೆಂಟ್ರಲ್ ಮೈದಾನವನ್ನು ಶಾಶ್ವತವಾಗಿ ತೋರುವಂತೆ ಮಾಡುವ [illegible] ನಗರ ಸಭೆಯ [illegible].

ಮೈದಾನದಲ್ಲಿ ತಾತ್ಕಾಲಿಕವಾಗಿ ತೆರೆಯಲ್ಪಟ್ಟ ವೆಬ್ ಸ್ಟರ್ ಮಾರ್ಕೆಟನ್ನು ಜುಲ್ಲಾ ಮಧ್ಯದಲ್ಲಿ ಸುಮಾರಿಗೆ ದುರಸ್ತಿಯಾಗುತ್ತಿರುವ ಅದರ ಹಿಂದಿನ ಸ್ಥಳಕ್ಕೆ ಒಯ್ಯುವಂತಾಗಬಹುದೆಂದು ತಿಳಿದಿದೆ.

ಇಲ್ಲಿ ಕದ್ರಿಯ ಸಮೀಪದ ಕೆಲವು ದಿನಗಳ ಹಿಂದೆ ಒಂದು ದುರ್ಘಟನೆಯ ಘಟನೆಯಾಯಿತು. ಅಗಸರು ವಸ್ತ್ರ ಒಗೆಯಲು ಉಪಯೋಗಿಸುತ್ತಿದ್ದ ಕೆರೆಯೊಂದರಲ್ಲಿ ಕೆಲ ಮಕ್ಕಳು ಹಲಗೆ ತುಂಡೊಂದರಲ್ಲಿ ಕೂತು ದೋಣಿಯಾಟ ವಾಡುತ್ತಿರುವಾಗ ೧೩ ವರ್ಷದ ಹುಡುಗನೊಬ್ಬನು ಜಾರಿ ಕೆರೆಯೊಳಗೆ ಬಿದ್ದು, ಆಸುಪಾಸಿನಲ್ಲಿ ಅವನನ್ನು ಬದುಕಿಸುವ ದೊಡ್ಡವರಾರೂ ಇಲ್ಲದ ಕಾರಣ ಮೃತಪಟ್ಟನು. ಮಳೆಗಾಲದಲ್ಲಿ ಕೆರೆ ಬಾವಿಗಳ ಬಳಿ ಚಿಕ್ಕವರನ್ನು ಬಿಡುವುದು ಅಪಾಯಕರ.

ಇಲ್ಲಿಯ ಸೋವಿಯಟ್ ಸೌಹಾರ್ದ ಸಮಿತಿಯ ಆಶ್ರಯದಲ್ಲಿ ರಶ್ಯಾದಿನವು ನಿನ್ನೆ ರಘುನಾಥಯ್ಯ ಸ್ಮಾರಕ ಭವನದಲ್ಲಿ ಜರುಗಿತು. ರಶ್ಯನರ ವಿಜಯದ ಕುರಿತು ಸಂತೋಷ, ಸಹಾನುಭೂತಿಯ ಭಾಷಣಗಳಾದುವು.

ಜಿಲ್ಲಾ ಬೀಡಿ ಮಜೂರರ ವಾರ್ಷಿಕ ಮಹಾಸಭೆ ತಾ. ೧೯ರಂದು ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿತು ಕಾಂಗ್ರೆಸ್ ಮುಖಂಡರನ್ನು ಬಿಟ್ಟು ಬಿಕ್ಕಟ್ಟು ಪರಿಹರಿಸಬೇಕೆನ್ನುವ ಮತ್ತು ಎರಡು ಪಾವು ಅಕ್ಕಿ ಮಜೂರರಿಗೆ ಸಿಗಬೇಕೆನ್ನುವ ಠರಾವುಗಳಾದುವು ಶ್ರೀ. ಮಂಜು, ಮತ್ತು ಶ್ರೀ. ಲಿಂಗಪ್ಪ ಸುವರ್ಣ ಇವರು ಮುಂದಿನ ವರ್ಷದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು.

ದ. ಕ. ಜಿಲ್ಲಾ ದೇವಾಡಿಗರ ಶುಭೋದಯ ಸಂಘ ಇದರ ವರ್ಷಾವಧಿ ಮಹಾಸಭೆಯನ್ನು ಈ ಸಲ ನವೆಂಬರ್ ತಿಂಗಳಲ್ಲಿ ಮೂಲ್ಕಿಯಲ್ಲಿ ಜರಗಿಸುವುದಾಗಿ ನಿಶ್ಚಯವಾಗಿದೆಯಾಗಿ ತಿಳಿದುಬರುತ್ತದೆ.

ಇಲ್ಲಿಯ ಬಂದರದಲ್ಲಿ ತಾ. ೧೫ರಲ್ಲಿ ನೇಣು ಹಾಕಿ ತೂಗಾಡುತ್ತಿದ್ದುವ ಓರ್ವ ಬಿಕ್ಷುಕನ ಹೆಣವು ದೊರೆತಿದೆ ಜೀವನ ನಡೆಸಲು ಕಷ್ಟವಾಗಿ ಆತ್ಮ ಹತ್ಯ ಮಾಡಿಕೊಂಡಿರುವನಾಗಿ ಊಹಿಸಲಾಗಿದೆ. ಮೃತನು ಹಿಂದೆ ಬಂಡಸಾಲೆಗಳಲ್ಲಿ ಕೂಲಿ ಕೆಲಸಮಾಡಿ ಜೀವನ ಮಾಡುತಿದ್ದನಂತೆ

ಕಟ್ಟಿಗೆಯ ಬೆಲೆಯನ್ನು ನಿಯಂತ್ರಿಸುವ ಆಜ್ಞೆಯೊಂದನ್ನು ಕಲೆಕ್ಟರರು ಹೊರಡಿಸಿರುವರು. ಕಳೆದ ತಾ. 15ರಲ್ಲಿ ಇದ್ದ ಕಟ್ಟಿಗೆಯನ್ನು ಮುಂದೆ ತಿಂಗಳಿಗೆ ⅛ ಅಂಶ ದಷ್ಟೆ ಮಾರಬೇಕು. ಅಂದರೆ ಈಗಿದ್ದ ಸ್ಟಾಕನ್ನು 6 ತಿಂಗಳ ತನಕ ಕ್ರಮವಾಗಿ ಮಾರಬೇಕು. ಪರಿಣಾಮವಾಗಿ ಬೆಲೆಗಳು ಕರಿ ಮರ ಕಟ್ಟಿಗೆ ಖಂಡಿಗೆ ರೂ 6½ 7, 7¼ ಸಾಧಾರಣದಕ್ಕೆ ರೂ 5, 5¼, 5½, ಈ ಮಟ್ಟಕ್ಕೆ ಇಳಿಸಲ್ಪಟ್ಟಿವೆ

ಸಹಕಾರಿ ಸುಪರ್‌ವೈಜರುಗಳ ತರಬೇತಿ ಜೂಲ್ಯಾ ೩ರಿಂದ ಕೊಯಮುತ್ತೂರು ಸಹಕಾರಿ ಶಿಕ್ಷಣ ಸಂಸ್ಥೆಯಲ್ಲಿ ಪ್ರಾರಂಭವಾಗುವುದು. ಹೋಗಲಿಚ್ಛಿಸುವವರು ಎಸ್. ಎಸ್. ಎಲ್. ಸಿ. ಪಾಸಾಗಿರಬೇಕು. ಶಿಕ್ಷಣ ಕಾಲ ೯ ತಿಂಗಳು. ಸ್ವಂತ ಖರ್ಚು. ಅರ್ಜಿಗಳು ೨೧ ರೊಳಗೆ, ದ. ಕ. ಸೆಂ. ಕೋ. ಬ್ಯಾಂಕ್ ಲಿ. ಇಲಿಗೆ ತಲ್ಪಬೇಕು.

ಶಾಲಾ ಮಕ್ಕಳ ಮತ್ತು ಇತರ ಬರಿಯುವ ಎಕ್ಸರ್ ಸೈಜ್ ಪುಸ್ತಕಗಳ ಬೆಲೆಯನ್ನೂ ನಿಯಂತ್ರಿಸಿರುವರು [illegible] ಸರಕಾರವು ಒಂದು ತ್ರಿಕಟಿ [illegible] ಹೊರಡಿಸಿದೆ [illegible] ಆಗುವ ಕಾಗದದ ೫೦% ಅಂಶವು ಮಾತ್ರ ಮಾರಿಸಲಾಗುವುದೆಂದು ತಿಳಿಸಲಾಗಿದೆ. ಅಲ್ಲದೆ ಕಾಗದ ಖರ್ಚಾಗುವ ಎಲ್ಲಾ ತರದ ಸಾಮಾನುಗಳನ್ನೂ ಆದಷ್ಟು ಕಮ್ಮಿ ಮಾಡಬೇಕೆಂದೂ ಕೇಳಿಕೊಳ್ಳಲಾಗಿದೆ.

ಹೊಟೆಲುಗಳಲ್ಲಿ ಕಾಫಿ ತಿಂಡಿಗಳ ಬೆಲೆಯನ್ನು ಇಳಿಸಿರುವರು. ಕ್ರಮವಾಗಿ ತಿಂಡಿಗಳ ಇಳಿಸಿದ ದರವನ್ನು ಹಾಕಿದ ಬೋರ್ಡುಗಳನ್ನೂ ಹಾಕಿರುವರು. ತಾವು ಹೊರಡಿಸಿದ ಹುಕುಂಗಳಿಗನುಸಾರವಾಗಿ ತಿಂಡಿ ತಿನಸುಗಳು ವಿಕ್ರಿತವಾಗುವವೊ ಇಲ್ಲವೊ ಎಂದು ಗಿರಾಕಿಗಳು ತಿಳಕೊಂಡು ಆಕ್ಷೇಪಗಳಿದ್ದರೆ ಅಧಿಕಾರಿಗಳಿಗೆ ತಿಳಿಸಬೇಕಾಗಿ ಕೋರಲಾಗಿದೆ. ಈ ವಿಷಯದ ಪ್ರಕಟಣೆಯೊಂದು ಕೋರ್ಟು ಕಚೇರಿಗಳಿಗೂ ಶಾಲಾ ಕೊಲೇಜುಗಳಿಗೂ ಮುಟ್ಟಿಸಲಾಗಿದೆ.

ಕಟ್ಟಿಗೆಯ ವಿಚಾರದಲ್ಲಿ ಆಗಲೇ ಅನೇಕ ತೊಂದರೆಗಳುಂಟಾಗಿವೆಯಂತೆ. ಮುಖ್ಯವಾಗಿ ಸ್ಟಾಕಿನ ⅛ ಅಂಶ ಕಟ್ಟಿಗೆಯನ್ನು ಮಾರಿದ ಮೇಲೆ ದಿನನಿತ್ಯ ಕಟ್ಟಿಗೆ ಪಡಕೊಳ್ಳುವ ಬಡವರಿಗೆ ಪ್ರತಿದಿನ ಕಟ್ಟಿಗೆ ಬೇಕಾದ ಕಡೆಗಳಲ್ಲಿ ಸಿಗಲು ಕಷ್ಟವಾಗಿದೆಯೆಂದೂ ಅಂತವರಿಗೆ ತಕ್ಕ ಏರ್ಪಾಡು ಮಾಡಬೇಕೆಂದೂ ಅಪೇಕ್ಷಿಸಲಾಗಿದೆ.

ನಿಧನ

ಇಲ್ಲಿಯ ಸುಪ್ರಸಿದ್ಧ ವ್ಯಾಪಾರಿಗಳೂ ಚೆಂಬರ್ ಆಫ್ ಕಾಮರ್ಸಿನ ಮಾಜಿ ಅಧ್ಯಕ್ಷರೂ ಆದ ಶ್ರೀ. ಕಸ್ತೂರಿ ನಾಗೇಶಯ್ಯ ಇವರ ಧರ್ಮಪತ್ನಿಯವರು ಕೆಲವೇ ದಿನಗಳ ಅನಾರೋಗ್ಯದಿಂದ ಇಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿ ಕೋರುವೆವು.

ಉಡುಪಿ

ಇಲ್ಲಿಯೂ ಅಧಿಕಾರಿಗಳು ಚಿಲ್ಲರೆ ಮತ್ತು ಹೆಚ್ಚು ಬೆಲೆಗೆ ಮಾರಲ್ಪಡುವ ಸಾಮಾನುಗಳ ತಪಾಸಣೆ ನಡೆಸಿರುವರು ಆಗಲೇ ಒಂದೆರಡು ಕಡೆಗಳಲ್ಲಿ ಶೇಖರಿಸಿದಲ್ಪಟ್ಟ ಚಿಲ್ಲರೆಯೂ ಸಿಕ್ಕಿ ಸಂಬಂಧಪಟ್ಟವರ ಮೇಲೆ ಕಟ್ಲೆ ನಡೆಯಬಹುದಾಗಿ ತಿಳಿದು ಬರುತ್ತದೆ.

ಮುಖ್ಯ ಸಾಮಾನುಗಳ ಧಾರಣೆ ನಿಯಂತ್ರಿಸಲ್ಪಟ್ಟಿರುವುದಾದರೂ ಆ ಸಾಮಾನುಗಳು ಸಿಕ್ಕುವುದು ಮಾತ್ರ ಕಷ್ಟಕರವಾಗಿದೆಯಾಗಿ ಮುದ್ದಿ ಕಳ್ಳ ಸಂತೆಯು ಈ ಕಡೆಗಳಲ್ಲಿ ಇನ್ನೂ ತಗ್ಗಿಲ್ಲವೆಂದು ನಂಬಲಾಗಿದೆ.

ರಾಜಕೀಯ ಚಳವಳ ಸಂಬಂಧ

ಡಿಫೆನ್ಸ್ ಕಾನೂನಿನನ್ವಯ ದಸ್ತಗಿರಿ ಮಾಡಲ್ಪಟ್ಟು ಕಟ್ಲೆಗೊಳಗಾದ ಶ್ರೀ. ವಾಂಗಾಳ ಮಂಜುನಾಥ ನಾಯ್ಕರು [illegible] ಪ್ರಿಯರಾಗಿದ್ದರೆಂದು ತೀರ್ಮಾನಿಸಲ್ಪಟ್ಟು ಕಾಣಿಗೆರಲ್ಲು ಬಿಡುಗಡೆ ಹೊಂದಿದರು.

ಪುತ್ತೂರು

ಇನ್ನೂ ಈ ಕಡೆಗಳಲ್ಲಿ ಸಾಕಷ್ಟು ಮಳೆ ಬಿದ್ದಿಲ್ಲ. ಸಾಗುವಳಿ ಕೆಲಸಗಳು ಸಾವಧಾನವಾಗಿ ನಡೆಯುತ್ತಿವೆ. ಬೇಸಾಯ ಮಜೂರರಿಗೆ ಕೊಡಲು ಸಾಕಷ್ಟು ಅಕ್ಕಿ ದಾಸ್ತಾನಿಲ್ಲವಾದುದರಿಂದ ಕೆಲಸಗಾರರು ಸಿಗುವುದು ಕಷ್ಟವಾಗಿದೆಯಂತೆ. ಈ ಪರಿಸ್ಥಿತಿ ಸುಧಾರಿಸಿ ಕೃಷಿಗೆ ತೊಂದರೆ ಬರದಂತೆ ಅಧಿಕಾರಿಗಳು ಸಹಕರಿಸುವರಾಗಿ ಹಾರೈಸಲಾಗಿದೆ.

ಕಾರ್ಕಳ

ಸ್ಥಳೀಯ ಕೋಪರೇಟಿವ್ ಸ್ಟೋರ್ಸ್‌ನ ನೇತೃತ್ವದಲ್ಲಿ "ಹೆಚ್ಚಾಗಿ ಗೋದಿ ಉಪಯೋಗಿಸಿರಿ" ಎಂಬ ಪ್ರಚಾರವು ಪ್ರಾರಂಭವಾಗಿದೆ ಶಾಲಾ ಮಕ್ಕಳ ಮೆರವಣಿಗೆ, ರೊಟ್ಟಿ ಚಪಾತಿಗಳ ಹಂಚುವಿಕೆ ಕಾರ್ಯಕ್ರಮಗಳಿದ್ದುವು.

ನೀಲೇಶ್ವರ

ಇಲ್ಲಿನ ಕೆಲವು ಯುವಕ ಪ್ರಮುಖರ ಪ್ರಯತ್ನದ ಫಲವಾಗಿ ಒಂದು ಹೊಸ ವಾಚನಾಲಯವು ತೆರೆಯಲ್ಪಟ್ಟಿದೆ.



ಧೂಳು ಶ್ವಾಸಕೋಶಕ್ಕೆ ರೋಗವನ್ನು ಒಯ್ಯುವುದು
ಶ್ವಾಸಯೋಗ್ಯ ಮಾತ್ರೆ ಪೆಪ್ಸು ತೆಕೊಳ್ಳಿರಿ
ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿಯೋಗ್ಯ ರಸವನ್ನು ಹೊರಗೆಡವುದು, ಆದರಿಂದ ಶೀತ, ಕೆಂಪು ಬೆಂಜಾ, ಮೊದಲಾದ ಬಾಧೆಗಳು ಕೂಡಲೆ ಗುಣವಾಗುವುದು
ಪೆಪ್ಸು ಸೇವಿಸಿರಿ
PEPS
ವಿಷಹಾರಿ ಶ್ವಾಸನೀಯ ಗುಳಿಗೆಗಳು

ಚರ್ಮವ್ಯಾಧಿಗಳು ಮೇಜಿಕಿನಂತೆ
ಮಾಯವಾಗುವುವು!
ಕುಟಿಕೂರಾ ಮುಲಾಮು.
(Cuticura Ointment)
ಚರ್ಮವ್ಯಾಧಿಗಳನ್ನು ಉರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು


ಕುಟಿಕೂರಾ ಮುಲಾಮು
CUTICURA OINTMENT

ರಾಜಕೀಯ ಮಾತುಕತೆ ಮಾಡುತ್ತಿದ್ದಾರೆ.

(೧ನೇ ಪುಟದಿಂದ)

ಯಾವ ವಿಷಯದ ಬಗ್ಗೆ ಮಾತನಾಡಿದ ರೆಂದು ಪತ್ರಿಕಾಪ್ರತಿನಿಧಿಗಳು ಕೇಳಿದಾಗ ಜಯಕರರು ಅದನ್ನು ಹೇಳಲು ನಿರಾಕರಿಸಿದರು. ಭೇಟಿಯಿಂದ ಏನಾದರೂ ಪ್ರಯೋಜನವಾಯಿತೇ ಎಂದು ಕೇಳಲು, "ಏನನ್ನೂ ಹೇಳಲು ಸಾಧ್ಯವಿಲ್ಲ" ಎಂದು ಅವರು ಹೇಳಿದರು. ಪುನಃ ಮಹಾತ್ಮರನ್ನು ಭೇಟಿಯಾಗುತ್ತೀರಾ ಎಂದು ಪ್ರಶ್ನಿಸಿದ್ದಾಗ, ಜಯಕರರು ನಗುತ್ತಾ 'ನನಗೆ ಗೊತ್ತಿಲ್ಲ' ಎಂದರು.

ಮಹಾತ್ಮರು ತಾ. ೧೫ರಂದ ಪೂನೆಗೆ ಹೋಗಲು ನಿಶ್ಚಯಿಸಿದ್ದಾರೆ. ತಾ. ೧೪ರಂದು ಸಂಜೆ ಬ್ರಿಲ್ಲಾ, ದೇಸಾಯಿ, ಸರ್ಕಾರ್ ಮೊದಲಾದವರು ಗಾಂಧೀಜಿಯವರನ್ನು ಕಂಡು ಪ್ರಕೃತದ ರಾಜಕೀಯ ಪರಿಸ್ಥಿತಿ ವಿಷಯ ಆಲೋಚಿಸಿದರು ಮಹಾತ್ಮರನ್ನು ಭೇಟಿಯಾದ ಜಯಕರರು ರಾಷ್ಟ್ರದ ಪ್ರಕೃತ, ರಾಜಕೀಯ ಪರಿಸ್ಥಿತಿ ಬಗ್ಗೆ ಕೆಲವು ಸೂಚನೆಗಳನ್ನಿತ್ತರೆಂದು ಗೊತ್ತಾಗಿದೆ. ಜಯಕರರು ೨೧ ತಿಂಗಳು ಮಹಾತ್ಮರು ಆಗಾಖಾನ ಸೆರೆಮನೆಯಲ್ಲಿರುವಾಗ ಆದ ರಾಜಕೀಯ ಪರಿಸ್ಥಿತಿ ಬಗ್ಗೆ ವಿವರಿಸಿ ಹೇಳಿದರೆಂದು ಯುನೈಟೆಡ್ ಪ್ರೆಸ್ ವರದಿಗಾರನು ತಿಳಿಸಿದ್ದಾನೆ.

ತಾ ೧೫ರಂದು ಬೆಳಗ್ಗೆ ಮಹಾತ್ಮರು ಮನೆಗೆ ತೆರಳುವಾಗ, ಅವರ ಜತೆಯಲ್ಲಿ ಶ್ರೀ. ಪ್ಯಾರೇಲಾಲ, ಮೀರಾಬೆನ್, ಕನೂ ಗಾಂಧಿ, ಸುಶೀಲಾನಾಯರ್, ಶಾಂತಿ ಕುಮಾರ ಮುರಾರಿ, ಹಾಗೂ ಅವರ ಪತ್ನಿ, ಸರೋಜಿನಿ ದೇವಿ ಮತ್ತು ವಿಜಯ ಲಕ್ಷ್ಮಿ ಪಂಡಿತರೂ ಅವರೊಡನೆ ಹೋಗುವರು ಸರೋಜಿನಿ ದೇವಿ ಮತ್ತು ವಿಜಯ ಲಕ್ಷ್ಮಿ ಪಂಡಿತರು ಪೂನದಲ್ಲಿ ಮಹಾತ್ಮರೊಡನೆ ಉಳಕೊಳ್ಳುವರು ಡಾ। ಮೆಹತಾರವರೊಡನೆ ಗಾಂಧೀಜಿಯವರು ಉಳಕೊಳ್ಳುವರೆಂದು ತಿಳಿದುಬಂದಿರುವುದರಿಂದ ಅಲ್ಲಿ ವ್ಯವಸ್ಥೆಗಳು ಭರದಿಂದ ಸಾಗುತ್ತಿವೆ ಪೂನದಲ್ಲಿ ೧೫ ದಿವಸವಿದ್ದು, ಜುಲೈ ಮೊದಲನೆ ವಾರದಲ್ಲಿ ಪಂಚಗಣಿಗೆ ಹೊರಡುವರೆಂದೂ ಅಲ್ಲಿ ಅವರು ಡಾಕ್ಟರರ ಅಭಿಪ್ರಾಯದಂತೆ ಎರಡ ತಿಂಗಳು ಉಳಕೊಳ್ಳುವರೆಂದೂ, ಅಲ್ಲಿನ ವ್ಯವಸ್ಥೆಗೆ ಅಲ್ಲಿನ ಸ್ಟೇಟ್ ಮೆನೇಜರ್ ಶ್ರೀ ವತ್ಸರಾಜ ಜೋಶಿ ಅವರಿಗೆ ಪತ್ರ ಬರೆದಿರುವರೆಂದೂ ಅವರು ಬೆಟ್ಟದಲ್ಲಿ ಮಹಾತ್ಮರಿಗೆ ಅವಶ್ಯವಿರುವ ಎಲ್ಲಾ ಸೌಕರ್ಯಗಳಿಂದ ಕೂಡಿದ ಬಂಗಲೆ ಆರಿಸಿ ಮಹಾತ್ಮರೊಡನೆ ಆಲೋಚಿಸಿ ಹೋಗಿರುವರೆಂದೂ ತಿಳಿಯುತ್ತದೆ. ಅಲ್ಲಿನ ವ್ಯವಸ್ಥೆ ತಿಳಿದು ಬರಲು ಸುಶೀಲಾ ನಾಯರರು ಮಹಾತ್ಮರಿಗಿಂತ ಒಂದು ವಾರ ಮೊದಲು ಅಲ್ಲಿಗೆ ಹೋಗುವ ಸಂಭವವಿದೆ.

* * *

ಮಹಾತ್ಮರನ್ನು ಕೆಲಮಂದಿ ಅಮೇರಿಕನ್ ನೀಗ್ರೊ ಸೈನಿಕರು ಭೇಟಿಮಾಡಿಕೊಂಡರು. ಕಸ್ತೂರ್‌ಬಾ ನಿಧಿಗೆ ಹರಿಜನ ನಿಧಿಗೆ ಮತ್ತು ಮಹಾದೇವ ದೇಸಾಯಿ ನಿಧಿಗೆ ಸಿಂಧ್ಯಾ ಸ್ಟೀಮ್ ನೆವಿಗೇಶನ್ ಕಂಪನ್ನಿಯ ಕೆಲಸಗಾರರು ಕ್ರಮವಾಗಿ ರೂ. ೫೦೦೧ ರೂ. ೧೦೦೧ ಮತ್ತು ರೂ. ೧೧೦೦೧ಗಳನ್ನು ಮಹಾತ್ಮರಿಗೆ ಅರ್ಪಿಸಿದರು.. ಮಹಾತ್ಮರ ಉಪವಾಸ ಪೀಡಿತರಿಗೆ ಸಹಾಯ ಮಾಡುವ ಹಲವು ಕೆಲಸಗಾರರನು ಭೇಟಿಯಾದರು ಮಹಾತ್ಮರು ಬೊಂಬಯಿ ಬೆಂಕಿ ಅನಾಹುತದ ಸ್ಥಳ ಸಂದರ್ಶಿಸಿದರೂ ಆ ವಿಷಯ ಹೆಚ್ಚು ವಿಚಾರಮಾಡುವ ಪರಿಸ್ಥಿತಿಯಲ್ಲಿರುವುದಿಲ್ಲವೆಂದೂ ಶ್ರೀ ಪ್ಯಾರೇಲಾಲರು ಹೇಳಿದರು.

"ನಾವೆಲ್ಲರೂ ನಿಮ್ಮ ಸತ್ಯ ಅಹಿಂಸೆಗಳಿಗೆ ಮನಃಪೂರ್ವಕವಾಗಿ ಧೈರ್ಯ ಪೂರ್ವಕವಾಗಿ ಪ್ರತಿಜ್ಞೆ ಮಾಡಿ ಬದ್ಧರಾಗಿರುವೆವು; ಏಕೆಂದರೆ ಅದು ವಿನಾ ಜಗತ್ತಿನಲ್ಲಿ ನಿಜವಾದ ಶಾಂತಿ ನೆಲಸಲು ಸಾಧ್ಯವಿಲ್ಲವೆಂದು ನಾವು ತಿಳಕೊಂಡಿರುವೆವು. "ಹೀಗೆಂದು ಬಂಗಾಳ ಪ್ರಾಂತಿಕ ಕಾಂಗ್ರೆಸ ಕಮಿಟಿ ಅಧ್ಯಕ್ಷಕಾಂಗ್ರೆಸು ಕೆಲಸಗಾರರ ಪರವಾಗಿ ಮಹಾತ್ಮರಿಗೊಂದು ಪತ್ರಬರೆದಿರುವರು, ಅವರು ಮತ್ತೆ ತಮ್ಮ ಪತ್ರದಲ್ಲಿ ಮಹಾತ್ಮರ ಆರೋಗ್ಯಕ್ಕಾಗಿ ತಾವೆಲ್ಲರೂ ಪ್ರಾರ್ಥಿಸುವುದಾಗಿ ಹೇಳುತ್ತಾ, ನಿಮ್ಮ ಈ ಬಲಿದಾನವು ಮಹಾತ್ಮಾ ಏಸುವಿನ ಬಲಿದಾನದಿಂತಿದೆಯೆಂದೂ ತಿಳಿಸಿದ್ದಾರೆ ಅದಕ್ಕೆ ಗಾಂಧೀಜಿ ಉತ್ತರ ಬರೆದು, ಯಾರು ನಮ್ಮನ್ನು ಈ ಅಗ್ನಿಪರೀಕ್ಷೆಗೆ ಒಳಗು ಮಾಡಿದ್ದಾನೋ ಆ ದೇವರೇ ನಮಗೆ ಅದನ್ನು ಸಹಿಸುವ ಶಕ್ತಿಯನ್ನು ಕೊಡುವನೆಂದು ತಿಳಿಸಿರುವರು.

ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕೆಲಸಗಾರರು ಮಹಾತ್ಮರನ್ನು ಭೇಟಿಯಾಗಲಿರುವರು ಜೆಸ್ಸೂರ್ ಕಾಂಗ್ರೆಸ್ ಕೆಲಸಗಾರರು, ಮಹಾತ್ಮಾ ಗಾಂದಿಯವರ ಮುಂದಾಳುತನನಲ್ಲಿ ತಮ್ಮ ಸಂಪೂರ್ಣ ವಿಶ್ವಾಸ ಪ್ರದರ್ಶಿಸಿ ನಿರ್ಣಯವೊಂದನ್ನು ಕಳುಹಿಸಿದ್ದಾರೆ ಗೋರಕಪುರ ಕಾಂಗ್ರೆಸ್ ಕೆಲಸಗಾರರೂ ಅದೇ ರೀತಿಯ ನಿರ್ಣಯವೊಂದನ್ನು ಮಾಡಿದ್ದಾರೆ

ಮಹಾತ್ಮಾ ಗಾಂಧಿಯವರು ತಾ ೧೫ರಂದು ಪೂನೆಗೆ ತೆರಳಿದ್ದಾರೆ ಅಲ್ಲಿ ಮೇಥಾರವರ ಚಿಕಿತ್ಸಾಭವನದಲ್ಲಿ ಉಳಕೊಂಡಿರುವರು ಅಲ್ಲಿಗೂ ಬಹು ಮಂದಿ ದರ್ಶನಾಪೇಕ್ಷಿಗಳಾಗಿ ಬರುತ್ತಿದ್ದಾರೆ. ರಾಜಕೀಯ ಮಾತುಕತೆ ಮುಂದುವರಿಯುತ್ತಲೇ ಇದೆ

ಕಾಲವು ಬದಲಾಗಿದೆ.

1754

ತೋಮಸ್ ಮಡ್ಜನಿಂದ ಶೋಧಿಸಲ್ಪಟ್ಟ ಈ ಎಂಕ್‌ರ್ ಎಸ್ಕೇಪ್‌ಮೆಂಟು ಮೊದಲಾಗಿ 19ನೇ ಶತಮಾನದಲ್ಲಿ ಬಳಕೆಗೆ ಬಂದೀತು

1944



ಸೆಕುಂಡಸ್ ಚಚ್ಚೌಕ

ರೋಲ್ಡ್‌ಗೋಲ್ಡ್ 10 ವರ್ಷ ರೂ 53



ಸೆಕುಂಡಸ್ ರೆಕ್ಟೆಂಗುಲರ್

ರೋಲ್ಡ್‌ಗೋಲ್ಡ್ 10 ವರ್ಷ ರೂ 5 3

ವಾಚುಗಳಲ್ಲಿ ಇಂದು ಉಪಯೋಗಿಸುವ ಎಸ್ಕೇಪ್‌ಮೆಂಟು, ಆದಿಯಲ್ಲಿ ಅಂದರೆ ಸುಮಾರು 200 ವರ್ಷಗಳ ಹಿಂದೆ ಉಪಯೋಜಿಸಿದಂತವುಗಳಾಗಿವೆ ಸರಿಯಾದ ಸಮಯ ಸೂಚಿಸುವಿಕೆಯು ಈ ಶೋಧನೆಯ ಮೇಲೆ ಹೊಂದಿಕೊಂಡಿದೆ 'ವಸ್ಟ್ ಎಂಡ್ ವಾಚು"ಗಳು ಎಲ್ಲಾ ಪ್ರಾಮುಖ್ಯ ಶೋಧನೆ ಮತ್ತು ಅನೇಕ ಸುಧಾರಣೆಗಳಿಂದ ಕೂಡಿಕೊಂಡಿದೆ

ಈಗಿನ ಅನಿಯಮಿತ ತಲಪುವಿಕೆಯ ದೆಸೆಯಿಂದ ಜಾಹೀರಾತು ಮಾಡಿದ-ಎಲ್ಲಾ ನಮೂನೆಯ ವಾಚುಗಳನ್ನು ಜನತೆಗೆ ಒದಗಿಸುವುದು ಕಷ್ಟ ಆದರೆ ಆದಷ್ಟು ಆರ್ಡರುಗಳನ್ನು ಕಳುಹಿಸಲು ಎಲ್ಲಾ ರೀತಿಯ ಪ್ರಯತ್ನಗಳು ಮಾಡಲ್ಪಡುವುವು

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬ್ಯಾ ಮತ್ತು ಕಲ್ಕತ್ತ

WEST END WATCH Co.

Bombay & Calcutta

W

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

Limited, Mangalore.

ESTD. 1931

BRANCHES Moodabidri & Padubidri.

ANNOUNCEMENT

Deposits accepted at the following rates from 1-4-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc., apply to Head office or Branches.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ್ಯ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತಾ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office.

Some Salient Features of The 'Bombay Life' Policies

★ Premiums are low. ★ 2½% Rebate on annual premiums.

★ "Permanent Disability Benefits free of any cost

★ Payment of double the insured amount in case of death by accident at a very small cost of Rs. 1-8-0 per 1000.

★ Special rebates on large size policies.

★ A special scheme by which lapsed policies can be revived without paying the arrears

★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರ್ಯಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ ೩೮] ತಾರೀಕು 30—6—1944 [ಸಂಚಿಕೆ 26]

ಸರಕಾರದ

ಆರೋಪಗಳಿಗೆ ಮಹಾತ್ಮರ ಉತ್ತರ

'ಆಗಸ್ಟ್ ದುರಂತಕ್ಕೆ ಸರಕಾರವೇ ಹೊಣೆ'

'ಆರೋಪಗಳನ್ನು ಹಿಂತೆಗೆದುಕೊಳ್ಳಿರಿ'

'ಮಹಾತ್ಮಾ ಗಾಂಧಿಯವರೊಡನೆ ಪತ್ರವ್ಯವಹಾರ' ಎಂಬ ಮಹತ್ವದ ಪುಸ್ತಕವನ್ನು ಸರಕಾರದವರು ಈಗ ಪ್ರಕಟಿಸಿದ್ದಾರೆ. ಅದು ಸಮೀಪ ಮುದ್ರಣದ ೧೨೫ ಪುಟಗಳಷ್ಟಿದೆ. ೧೯೪೨ ಆಗಸ್ಟಿನಿಂದ ೧೯೪೪ ಎಪ್ರಿಲ್ ವರೆಗೆ ಮಹಾತ್ಮಾ ಗಾಂಧಿ, ಲಾರ್ಡ್ ಲಿನ್‌ಲಿತ್‌ಗೋ, ಲಾರ್ಡ್ ವೇವೆಲ್, ಲಾರ್ಡ್ ಸಾಮುವೇಲ್ ಮತ್ತು ಗ್ರಹಖಾತೆ ಇವರೊಡನೆ ನಡೆದ ಪತ್ರವ್ಯವಹಾರ ಹಾಗೂ ಸರ್ ರಿಚಾರ್ಡ್ ಟ್ಯಾಟನ್ ಹ್ಯಾಮರು ಪ್ರಸಿದ್ಧಿಸಿದ 'ಆಗಸ್ಟ್ ದುರಂತಕ್ಕೆ ಕಾಂಗ್ರೆಸು ಹೊಣೆ' ಎಂಬ ಪುಸ್ತಕಕ್ಕೆ ಗಾಂಧೀಜಿಯವರಿತ್ತ ೬೮ ಪುಟಗಳ ಉತ್ತರ ಅದರಲ್ಲಿ ಇದೆ.

ಸರ್ ಟಾಟನ್ ಹ್ಯಾಮರ ಪುಸ್ತಕಕ್ಕೆ ೧೯೪೩ ಜುಲೈ ೧೫ರಂದು ಮಹಾತ್ಮರು ಉತ್ತರ ಬರೆದಿದ್ದು ಅದರಲ್ಲಿ ಸರಕಾರದವರು ಕಾಂಗ್ರೆಸಿನ ಮೇಲೆ ಹೊರಿಸಿದ ಆರೋಪಗಳನ್ನೆಲ್ಲಾ ಅಲ್ಲಗಳೆದಿದ್ದಾರೆ. ಅವರು ಅದರಲ್ಲಿ ಹೀಗಂದಿರುವರು:

ಮುಖಂಡರ ಬಂಧನದಿಂದ

"ರಾಷ್ಟ್ರಮುಖಂಡರ ಬಂಧನವೇ ಆಗಸ್ಟ್ ದುರಂತಕ್ಕೆ ಕಾರಣವಾಯಿತು. 'ಬ್ರಿಟಿಷರು ಹೊರಟುಹೋಗಿರಿ' ಎಂದು ಹೇಳಿದ್ದಗಿಂದ ದೊಡ್ಡದೊಂದು ಚಳವಳ ನಡೆಸಿರಲಿಲ್ಲ; ನಾನಾಗಲಿ ಕಾಂಗ್ರೆಸು ಮುಖಂಡರಾಗಲಿ ಹಿಂಸೆ ಬೋಧಿಸಿಲ್ಲ; ಕಾಂಗ್ರೆಸಿನವರು ಹಿಂಸೆ ಮಾಡಿದರೆ ನನ್ನನ್ನು ಜೀವಂತ ನೋಡಲಾರರೆಂದು ನಾನು ಎಚ್ಚರಿಕೆ ಕೊಟ್ಟಿದ್ದೆ; ಆಗಸ್ಟ್ ಚಳವಳ ಪ್ರಾರಂಭಿಸುವುದಕ್ಕಿಂತ ಮೊದಲು ಸರಕಾರದೊಡನೆ ಮಾತುಕತೆ ಪ್ರಾರಂಭಿಸುವ ಪೂರ್ಣ ಸಿದ್ಧತೆಯಲ್ಲಿದ್ದೆ; ಹೀಗೆಲ್ಲಾ ಇದ್ದು ಸರಕಾರ ಮುಖಂಡರನ್ನು ಬಂಧಿಸದಿದ್ದರೆ ಚಳವಳ ಪ್ರಾರಂಭವಾಗುತ್ತಿದ್ದಿಲ್ಲ.

"ಮಾತುಕತೆ ಪೂರ್ಣ ಯಶಸ್ವಿಯಾಗುವಂತೆ ನಾನು ಪ್ರಯತ್ನಿಸುತ್ತಿದ್ದೆ; ಅದು ಅಯಶಸ್ವಿಯಾಗುತ್ತಿದ್ದರೆ ಚಳವಳವನ್ನು ತಡೆಯಲು ಸರಕಾರದವರು ಮೊದಲಿನಷ್ಟೆ ಸಮರ್ಥರಿದ್ದರು. ಸರಕಾರದವರು ತಡೆದು ನಾವು ಪ್ರಾರಂಭಿಸಿದ್ದರೆ ಒಂದು ಕಾರಣವಾದರೂ ಸಿಗುತ್ತಿತ್ತು. ಸರಕಾರ ಕೈಹಾಕುವ ಮೊದಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ನಾನು ಮತ್ತು ಇತರರು ಮಾಡಿದ ಭಾಷಣಗಳನ್ನು ಪೂರ್ಣ ಅಭ್ಯಸಿಸಬೇಕಾಗಿತ್ತು. ಕಾಂಗ್ರೆಸು ಅಹಿಂಸಾತ್ಮಕವಾಗಬೇಕೆಂದು ಮುಖಂಡರ ಇಚ್ಛೆಯಿತ್ತು. ಏಕೆಂದರೆ ಬಲಾಢ್ಯ ಸರಕಾರದೆದುರು ಹಿಂಸೆ ಸಾಧ್ಯವಿಲ್ಲವೆಂದು ಅವರು ಅಭಿಪ್ರಾಯದಲ್ಲಿದ್ದರು. ಆದ್ದರಿಂದ ಕಾಂಗ್ರೆಸಿಗರಿಂದಾಗಲಿ ಇತರರಿಂದಾಗಲಿ ಹಿಂಸೆ ಘಟಿಸಿದ್ದರೆ ಮುಖಂಡರ ಇಚ್ಛೆಯ ವಿರುದ್ಧವಾಗಿ ಆಗಿದೆ. ನಾಜಿ, ಫೇಸಿಸ್ಟ್ ಅಥವಾ ಜಪಾನೀ ಪ್ರಭುತ್ವವನ್ನು ಕಾಂಗ್ರೆಸು ಸಹಿಸುವುದಿಲ್ಲ. ಸ್ವಾತಂತ್ರ್ಯವೇ ಉಸಿರಾಗಿರುವ ಹಾಗೂ ಬಲಾಢ್ಯ ಸಾಮ್ರಾಜ್ಯದೊಡನೆ ಹೋರಾಟ ಹೂಡಿದ ಈ ಮಹಾ ಸಂಸ್ಥೆ ಎಲ್ಲಾ ತರದ ವಿದೇಶೀ ಪ್ರಭುತ್ವವನ್ನು ಕೊನೆ ವರೆಗೂ ಹೋರಾಡುವುದು. ಅಹಿಂಸಾಕವಚ ಧರಿಸಿರುವವರೆಗೆ ಅದು ಅವಿನಾಶಾತ್ಮಕ ಹಾಗೂ ಅಜೇಯವಿದೆ.

ಕಾಂಗ್ರೆಸಿನ ಮೇಲೆ ದ್ವೇಷವೇಕೆ?

"ಕಾಂಗ್ರೆಸಿನ ಮೇಲೆ ಸಿಟ್ಟಿಗೆ ಕಾರಣವೇನು? ಬ್ರಿಟಿಷರು ಇಷ್ಟು ಸಿಟ್ಟಿಗೇರಿದ್ದನ್ನು ನಾನು ಹಿಂದೆಂದೂ ನೋಡಿಲ್ಲ. 'ಹಿಂದುಸ್ಥಾನದಿಂದ ಹೊರಡಿರಿ' ಎಂಬುದೇ ಇದಕ್ಕೆ ಮೂಲ ಕಾರಣ? ಆಗಸ್ಟ್ ೮ರ ಪ್ರಕಟಣೆ ಹೊರಬೀಳುವುದನ್ನೆ ಅವರು ಕಾಯುತ್ತಿದ್ದರು. ೧೯೨೦ರಿಂದಲೇ ಸ್ವಾತಂತ್ರ್ಯ ಚಳವಳ ಆರಂಭವಾಗಿದೆ. ಆದರೂ, ಹಿಂದು-ಮುಸ್ಲಿಂ ಐಕ್ಯ, ಸಂಸ್ಥಾನಾಧಿಪತಿಗಳ ಸಂಬಂಧ, ಅಲ್ಪಸಂಖ್ಯಾಕರ ಹಿತ ಮೊದಲಾದ ನೆವನಗಳಿಂದ ಸ್ವಾತಂತ್ರ್ಯ ವೃಷ್ಟಿ ದೂರ ನಿಂತಿದೆ. ಬ್ರಿಟಿಷರ ಭೇದೋಪಾಯವಂತೂ ಅಕ್ಷಯವಾಗಿದೆ.

"ಯುದ್ಧಾಸಕ್ತ ರಾಷ್ಟ್ರಗಳು ರಕ್ತದ ಕಾಲುವೆ ಹರಿಯುತ್ತಿರುವಾಗ ಹಿಂದುಸ್ಥಾನವು ಅಸಹಾಯ್ಯತೆಯಿಂದಿತ್ತು. ಆದ್ದರಿಂದಲೇ 'ಬ್ರಿಟಿಷರು ಹೊರ ಹೋಗಿರಿ' ಎಂಬ ಕೂಗು ಹೊರಟಿತು. ಫಾಸಿಸಂ ಮತ್ತು ಸಾಮ್ರಾಜ್ಯ ಶಾಹಿತ್ವದಿಂದ ಪ್ರಜಾಪ್ರಭುತ್ವವನ್ನು ರಕ್ಷಿಸುವುದೇ ಅದರ ಧ್ಯೇಯವಾಗಿದೆ. ಕಾಂಗ್ರೆಸಿನ ಬೇಡಿಕೆ ಪೂರೈಸುವುದೆಂದರೆ ಪರಪ್ರಭುತ್ವ ನಾಶಮಾಡಿದಂತೆ. ಆದ್ದರಿಂದ ಬ್ರಿಟಿಷ್ ಸರಕಾರ ಸಿಟ್ಟಿಗೆದ್ದಿತು. ಇದರಿಂದ ಯುದ್ಧ ಪ್ರಯತ್ನಕ್ಕೆ ಸರಕಾರವೇ ಕಲ್ಲು ಹಾಕಿಕೊಂಡಿತು. ಯುದ್ಧಪ್ರಯತ್ನಕ್ಕೆ ಕಾಂಗ್ರೆಸು ತಡಮಾಡಿತೆಂಬ ಆರೋಪ ನಿರಾಧಾರವಾದುದು. ಮುಖಂಡರನ್ನು ಬಂಧಿಸಿದ್ದರ ಪರಿಣಾಮ ಆಗಸ್ಟ್ ದುರಂತವಾಗಿದೆ.

ಸರಕಾರ ಮತ್ತು ಕಾಂಗ್ರೆಸ್ಸು

"೪೦ ಕೋಟಿ ಜನಸಂಖ್ಯೆಯ ಈ ನಾಡನ್ನು ಬ್ರಿಟಿಷ್ ಪ್ರತಿನಿಧಿ ವೈಸರಾಯರು, ೨೫೦ ಬ್ರಿಟಿಷ್ ಕಲೆಕ್ಟರರು, ಹಾಗೂ ಜನತೆಯಿಂದ ಪ್ರತ್ಯೇಕಿಸಲ್ಪಟ್ಟ ಬ್ರಿಟಿಷ್ ಅಧಿಕಾರಿಗಳಿಂದ ಶಿಕ್ಷಣ ಪಡೆದ ಸೈನ್ಯ ಇವರು ಆಳುತ್ತಿದ್ದಾರೆ. ವೈಸರಾಯರಿಗೆ ಬ್ರಿಟಿಷ್ ಅರಸರಿಗಿಂತ ಹೆಚ್ಚು ಅಧಿಕಾರವಿದ್ದು ಇಡೀ ಪ್ರಪಂಚದಲ್ಲಿ ಯಾವುದೇ ಅಧಿಕಾರಿಗೂ ಇಷ್ಟು ಅಧಿಕಾರವಿಲ್ಲ. ಕಲೆಕ್ಟರರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವೈಸರಾಯರ ಕಿರುಮೂರ್ತಿಗಳು. ಅವರು ಹೆಸರಿನಂತೆ ತೆರಿಗೆ ತೆಗೆಯುವರಲ್ಲದೆ ಅವರಿಗೆ ಮೇಜಿಸ್ಟ್ರೇಟರ ಅಧಿಕಾರವು ಇದೆ. ಅವಶ್ಯವೆನಿಸಿದಾಗ ಅವರು ಮಿಲಿಟರಿ ಸಹಾಯವನ್ನೂ ಕರೆಯಿಸಬಹುದು. ತಮ್ಮ ತಮ್ಮಗಳ ಕ್ಷೇತ್ರದಲ್ಲಿರುವ ಸಣ್ಣ ಸಣ್ಣ ಅರಸರ ಮೇಲೆ ಅಧಿಕಾರ ದರ್ಪವನ್ನೂ ತೋರಿಸಬಲ್ಲರು.

"ಕಾಂಗ್ರೆಸು ಜಗತ್ತಿನಲ್ಲಿಯೇ ನಿಜವಾದ ಪ್ರಜಾಪ್ರಭುತ್ವ ಸಂಸ್ಥೆ. ಅದರ ಧ್ಯೇಯ ಅಹಿಂಸೆಯಾದುದರಿಂದ ಈ ಹೆಸರು ಪ್ರಾಪ್ತವಾಗಿದೆ. ಅದು ಪ್ರಾರಂಭದಿಂದಲೂ ಪ್ರಜಾಸತ್ತಾತ್ಮಕವಿದ್ದು ಅಖಿಲ ಭಾರತ ಪ್ರತಿನಿಧಿ ಸಂಸ್ಥೆಯಾಗಿದೆ. ಸ್ವಾತಂತ್ರ್ಯ ಹೋರಾಟ ಎಷ್ಟೇ ಅಪೂರ್ಣವಿದ್ದರೂ ಕಳೆದ ೬೦ ವರ್ಷಗಳಲ್ಲಿ ಅದು ಸ್ವಾತಂತ್ರ್ಯ ಧ್ಯೇಯದಿಂದ ಎಳ್ಳಷ್ಟೂ ಅಚಲವಾಗಿಲ್ಲ.

ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲ

"ಸರಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿದ್ದರೆ ಕಾಂಗ್ರೆಸಿನ ಸಹಕಾರ ಸ್ವೀಕರಿಸಬೇಕಿತ್ತು. ೫೦ ವರ್ಷಗಳಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಂಗ್ರೆಸಿಗರು ಓಡಿ ಬರುತ್ತಿದ್ದರು. ಆದರೆ ಭಾರತವನ್ನು ಬ್ರಿಟನಿನ ಸಮಾನ ದರ್ಜೆಯಲ್ಲಿಡಲು ಅದು ಸಿದ್ಧವಿಲ್ಲ. ಅದನ್ನು ಕೇಳಿದವರನ್ನು ಸೆರೆಮನೆಗಟ್ಟಿದರು. ಘಾತುಕರೆಂದು ಬೆನ್ನಟ್ಟಿದರು. ಶ್ರೀ ಜಯಪ್ರಕಾಶ ಹಾಗೂ ಇನ್ನೂ ಹಲವು ಕೆಲವು ಅಂಥವರ ಉದಾಹರಣೆಗಳನ್ನು ಹೇಳಬಹುದು. ಅವರನ್ನು ಹಿಡಿದು ಕೊಟ್ಟವರಿಗೆ ರೂ. ೫೦೦೦ವನ್ನು ಎರಡು ಪಾಲು ಹೆಚ್ಚಿಸಲಾಯಿತು. ನನ್ನ ಮತ್ತು ಅವರಲ್ಲಿ ಭಿನ್ನಾಭಿಪ್ರಾಯವಿದೆ. ಆದರೆ ಅವರ ಪ್ರಾಮಾಣಿಕತೆ ಮತ್ತು ದೇಶಪ್ರೇಮಕ್ಕೆ ನಾನು ಸಂಶಯವುಳ್ಳವನಾಗಿಲ್ಲ. ಅವರಲ್ಲಿ ಸ್ವಾತಂತ್ರ್ಯದಾಹ ತುಂಬಿದೆ. ವಿದೇಶೀ ಪ್ರಭುತ್ವ ಹೋಗಬೇಕೆಂಬ ಆತುರವಿದೆ. ಯಾವುದೇ ರಾಷ್ಟ್ರವಾದರೂ ಹೆಮ್ಮೆಪಡುವ ಸದ್ಗುಣಗಳಿವು.

"ಹೀಗೆ ಸರಕಾರದವರು ಆರ್ಥಿಕ ದೃಷ್ಟಿಯಲ್ಲಿಯೂ ಮಾಡಿದೆ. ಖಾದಿ ಸಂಸ್ಥೆಯನ್ನು ಜಪ್ತಿಮಾಡಿದೆ. ಹೀಗೆ ಮಾಡಲು ಯಾವ ಯಾವ ಕಾನೂನಿದೆಯೋ ನನಗೆ ಗೊತ್ತಿಲ್ಲ. ಹೀಗೆ ಕುಮಾರಪ್ಪರ ಗ್ರಾಮೋದ್ಯೋಗ ಸಂಘ, ವಿನೋಬಾಜಿಯವರ ಅನುಯಾಯಿಗಳು ಇವರ ಮೇಲೂ ಸರಕಾರದ ವಕ್ರದೃಷ್ಟಿ ಬಿದ್ದಿದೆ. ಹಿಂದುಸ್ಥಾನವು ಆವಶ್ಯಕವಸ್ತುಗಳ ಕೊರತೆಯಿಂದ ನರಳುತ್ತಿರುವಾಗ, ಯುದ್ಧಕ್ಕೆ ಇಲ್ಲಿಂದ ಜನ ಧನ ಸಂಪತ್ತು ದೊರಕುತ್ತದೆಂದು ಸರಕಾರ ಹೇಳುವುದು ಆಶ್ಚರ್ಯವಾಗಿದೆ. ಸರಕಾರ ಕಾಂಗ್ರೆಸಿಗರನ್ನು ಬಂಧಿಸದೆ ಅವರ ಸೇವೆ ಪಡೆದಿದ್ದರೆ ಈ ಕೊರತೆ ಬಹಳ ಮಟ್ಟಿಗೆ ಕಡಿಮೆಯಾಗುತ್ತಿತ್ತು. ಬಿಹಾರ ಭೂಕಂಪ ಮತ್ತು ಗುಜರಾಥ್ ನೆರೆಹಾವಳಿಯಲ್ಲಿ ರಾಜೇಂದ್ರ ಪ್ರಸಾದ ಮತ್ತು ವಲ್ಲಭಭಾಯಿಯವರು ಸಲ್ಲಿಸಿದ ಸೇವೆ ಸಕಲರಿಗೂ ಗೊತ್ತಿದೆ.

ಆರೋಪ ಹಿಂತೆಗೆಯಿರಿ

ಸರ್ ಟೊಟೆನ್‌ಹ್ಯಾಮರ ಆರೋಪಗಳಿಗಿದು ನನ್ನ ಉತ್ತರ. ಇದನ್ನು ಸರಕಾರ ಪ್ರಕಟಿಸಬೇಕು. ಟೊಟೆನ್‌ಹಾಮರ ಆರೋಪಗಳಿಗೆ ಬೆಲೆಯಿಲ್ಲವೆಂದು ಸಪ್ರು ಜಯಕರ್ ಮೊದಲಾದವರೂ ಹೇಳಿದ್ದಾರೆ. ಆದ್ದರಿಂದ ಸರಕಾರದವರು ಆರೋಪಗಳನ್ನು ಹಿಂತೆಗೆದುಕೊಳ್ಳಬೇಕು. ಸರಕಾರದ ವಶ ಮಹತ್ವದ ಸಾಕ್ಷಿಗಳಿವೆಯೆಂದು ಆ ಆರೋಪದ ಪುಸ್ತಕದಲ್ಲಿ ಹೇಳಲಾಗಿದೆ. ಸರಕಾರವು ಅದನ್ನು ಹೊರಗೆಡಹಬಹುದು."

ಮಹಾತ್ಮರು ಈ ಲೇಖನದಲ್ಲಿಯೂ ನ್ಯಾಯಾನ್ಯಾಯಗಳು ನಿಷ್ಪಕ್ಷಪಾತದ ವಿಚಾರಣಾ ಮಂಡಳದೆದುರು ವಿಚಾರಣೆಗೊಳಪಡಲಿ ಎಂದು ತಿಳಿಸಿದ್ದಾರೆ.

ಸ್ವದೇಶಾಭಿಮಾನಿ

ತಾರೀಖು ೩೦—೬—೧೯೪೪

ತಪ್ಪು ಯಾರದು?

ಮಹಾತ್ಮಾ ಗಾಂಧಿಯವರು ತಮ್ಮ [illegible] ಹಾಗೂ ಕಾಂಗ್ರೆಸು ಮುಖಂಡರನ್ನು ಬಂಧನದಲ್ಲಿರಿಸಿದ ವಿಚಾರ ತಮ್ಮ ಮೇಲೆ ಸರಕಾರ ಹೊರಿಸಿದ ಆರೋಪಗಳ ವಿಚಾರ [illegible] ಹಾಗೂ ಕಾಂಗ್ರೆಸಿನ ರಾಜಕೀಯ ಧೋರಣೆಯ ವಿಚಾರಗಳನ್ನೆಲ್ಲಾ ಸ್ಪಷ್ಟೀ[illegible] ಲಾರ್ಡ್ ಲಿನ್‌ಲಿತ್‌ಗೋ, ಲಾರ್ಡ್ ವೇವಲ್, ಲಾರ್ಡ್ ಸ್ಯಾಮ್ಯುವೆಲ್ [illegible] ಖಾತೆ, ಸರ್ ರಿಚರ್ಡ್ ಟಾಟನ್‌ಹ್ಯಾಮ್ ಇವರಿಗೆಲ್ಲಾ ಬರೆದ ಪತ್ರಗಳೂ 'ಆಗಸ್ಟ್ ದುರಂತಕ್ಕೆ ಕಾಂಗ್ರೆಸೇ ಹೊಣೆ' ಎಂದು ಸರಕಾರವು ಪ್ರಕಟಿಸಿದ ಪುಸ್ತಕಕ್ಕೆ ಕೊಟ್ಟ ಉತ್ತರಗಳೂ ಇಂದು ಪ್ರಕಟವಾಗಿವೆ. ಈ ಪತ್ರ ಹಾಗೂ ಉತ್ತರಗಳಿಂದ ಕಾಂಗ್ರೆಸು ಮತ್ತು ಮಹಾತ್ಮಾ ಗಾಂಧಿಯವರ ಅಭಿಪ್ರಾಯವೇನೆಂದು ಜನರಿಗೆ ಇನ್ನಷ್ಟು ಮಂದಟ್ಟಾಗಿರುವುದು.

೧೯೪೨ರ ಆಗಸ್ಟ್ ೮ರಂದು ಕಾಂಗ್ರೆಸು ಒಂದು ಮಹಾ ನಿರ್ಣಯವನ್ನು ಮಾಡಿತು ಆ ನಿರ್ಣಯವನ್ನು ಪ್ರಯೋಗಕ್ಕೆ ತರುವ ನಾಯಕತ್ವ ಮಹಾತ್ಮಾ ಗಾಂಧಿಯವರಿಗೆ ಕೊಡಲಾಗಿತ್ತು. ಗಾಂಧೀಜಿ ವೈಸರಾಯರೊಡನೆ ಮಾತು ಕತೆ ಮಾಡಿ ಮತ್ತು ಎರಡು ಮೂರು ವಾರ ಕಳೆದ ನಂತರ ನಿರ್ಣಯವನ್ನು ಪ್ರಯೋಗಕ್ಕೆ ತರುವುದಾಗಿ ಸಾರಿದ್ದರು. ಹೇಗಿದ್ದರೂ ಮಹಾತ್ಮರ ಮುಂದಾಳುತನದಿಂದ ಆಗುವ ಆಂದೋಲನವು ಪೂರ್ಣ ಅಹಿಂಸಾತ್ಮಕವಿರುವುದೆಂಬುದಕ್ಕೆ ಯಾರೂ ಸಂಶಯ ಪಡಬೇಕಾಗಿಲ್ಲ. ಏಕೆಂದರೆ ಯಾರೇ ಆಗಲಿ ಈ ಸಂದರ್ಭದಲ್ಲಿ ಹಿಂಸೆಯನ್ನು ಮಾಡಿದ್ದರೆ ತನ್ನನ್ನು ಸಜೀವ ನೋಡಲಾರಿರಿ ಎಂದು ಗಾಂಧೀಜಿಯೇ ಎಚ್ಚರಿಸಿದ್ದರು ಕೂಡಾ. ಹಾಗಾಗಿ ಆಂದೋಲನ ಆರಂಭವಾಗಬೇಕಾದರೆ ಸಾಕಷ್ಟು ಸಮಯವಿತ್ತು ಅದು ಪ್ರಾರಂಭವಾಗಿದ್ದರೂ ಪೂರ್ಣ ಅಹಿಂಸಾತ್ಮಕವಾಗಿರುತಿತ್ತು.

ಇಷ್ಟರಲ್ಲಿ ಒಮ್ಮೆಲೇ ಗಾಂಧೀಜಿಯಿಂದ ಹಿಡಿದು ಅಖಿಲ ಭಾರತದ ಎಲ್ಲಾ ಗ್ರಾಮ ನಗರಗಳಲ್ಲಿರುವ ಮುಖಂಡರು ಸೆರೆಮನೆಗೆ ಸೇರಿಸಲ್ಪಟ್ಟರು. ಗೊತ್ತು ಗುರಿಯಿಲ್ಲದೆ ಸಾಗಿಸಲ್ಪಟ್ಟರು. ವಿಚಾರಣೆಯಿಲ್ಲದೆ ಬಂಧನದಲ್ಲಿ ಅಡಗಿಸಲ್ಪಟ್ಟರು; ಸಹಜವಾಗಿ ಇದು ಗೊಂದಲವನ್ನು ಆಹ್ವಾನಿಸುವಂಥಾ ಸಂದರ್ಭವೇ ಆಗಿದೆ. ಇಂಥಾ ಸಂದರ್ಭದಲ್ಲಿ ಜನತೆ ಗಲಭೆ ಗೊಂಡಿತು; ಕೆಲ ದುರಂತ ಕೃತ್ಯ ನಡೆಯಿತು; ಇದಕ್ಕೆ ಮುಖಂಡರ ಬಂಧನದಿಂದ ಹ್ಯಾಗೂ ಇತರ ಉತ್ತೇಜಕ ಕಾರ್ಯಗಳಿಂದ ಸರಕಾರವೇ ಹೊಣೆಯಾಗಿದೆ—ಹೀಗೆಂದು ಮಹಾತ್ಮಾ ಗಾಂಧಿಯವರು ಸಮರ್ಥಿಸಿದ್ದಾರೆ. ರಾಷ್ಟ್ರ ಮುಖಂಡರ ಬಂಧನದ ನಂತರ ಆಗಸ್ಟ್ ದುರಂತದ ನಂತರ ಭಾರತದ ಬೇರೆ ಬೇರೆ ಮುಖಂಡರೂ ಪತ್ರಿಕೆಯವರೂ ಹೇಳಿದ ವಿಷಯಗಳನ್ನೇ ಮಹಾತ್ಮರೂ ಈ ಉತ್ತರಗಳಲ್ಲಿ ಒಪ್ಪಿ ಕೊಂಡಿದ್ದಾರೆ.

[illegible] ಮಹಾತ್ಮಾಜಿ [illegible] ಬಂಧನಕ್ಕೂ ೧೯೪೨ ಆಗಸ್ಟ್ ದುರಂತಕ್ಕೂ ಕಾಂಗ್ರೆಸೇ ಕಾರಣವೆಂದು ಸರಕಾರ ಪ್ರಕಟಿಸುತ್ತಾ ಆತ್ಮ ಸಮರ್ಥನೆಗಾರರೂ ಮುಖಂಡರಿಗೆ ಅವಕಾಶ ಕೊಡದೆ, ಕೇವಲ ಆರೋಪಗಳನ್ನು ಅವರ ತಲೆ ಮೇಲೆ ಹೊರಿಸಿದ ವಿಚಾರ ದೇಶದಾದ್ಯಂತ ಕೋಲಾಹಲವೆಬ್ಬಿಸಿತು. ಇತರ ಪಕ್ಷದ ಮುಖಂಡರೂ ಸರಕಾರದ ಈ ವರ್ತನವನ್ನು ಖಂಡಿಸಿದ್ದರು. ಮಹಾತ್ಮರೀಗ ಹೊರ ಬಂದ ಮೇಲೆ ಅವರ ಉತ್ತರಗಳು ಪ್ರಕಟವಾಗಿವೆ. ಕಾಂಗ್ರೆಸಿನ ಪರವಾಗಿ ಅವರ ಮೇಲಿನ ಆರೋಪಗಳಿಗೆ ಉತ್ತರ ಕೊಡಲು ಮಹಾತ್ಮರೇ ಯೋಗ್ಯರಾಗಿದ್ದಾರೆ. ಮಹಾತ್ಮರ ಉತ್ತರಗಳಿಂದ ಇಂದು ರಾಜಕೀಯ ವಾತಾವರಣವು ತುಸು ಶುಭ್ರವಾಗಿದೆ. ಯಾರದು ತಪ್ಪು, ಯಾರದು ಸರಿ ಎಂಬುದನ್ನು ಜನತೆ ತಿಳಕೊಳ್ಳಲು ಅನುಕೂಲವಾಗಿರುವುದು. ಇಷ್ಟು ತಡಮಾಡಿಯಾದರೂ ತನ್ನ ಉತ್ತರ ಪ್ರಕಟವಾದ ಬಗ್ಗೆ ಮಹಾತ್ಮರು ಸಂತುಷ್ಟರಾಗಿರುವರೆಂದು ತಿಳಿದು ಬರುತ್ತದೆ.

ಮಹಾತ್ಮರ ಉತ್ತರಗಳಿಂದ ಕೆಲವು ಗುಟ್ಟಿನ ಸಂಗತಿಗಳು ಹೊರಬಂದಿವೆ. ಕಸ್ತೂರ್‌ಬಾರ ನಿಧನದ ಕುರಿತು ಸರಕಾರೀ ಪ್ರಕಟಣೆ, ಮೀರಾ ಬಾಯಿಯವರ ಬಂಧನದ ವಿಚಾರ ಇವುಗಳು ಬಹಿರಂಗವಾಗಿರುವವು. ಇದ ವರೆಗೆ ಕೇವಲ ಒಂದು ಪಕ್ಷದ ಅಭಿಪ್ರಾಯ, ಎಂದರೆ ಸರಕಾರ ಅಭಿಪ್ರಾಯ ಮಾತ್ರ ತಿಳಿದಿದ್ದು, ಇನ್ನೊಂದು ಪಕ್ಷದ ಎಂದರೆ ಗಾಂಧೀಜಿ ಹಾಗೂ ಕಾಂಗ್ರೆಸಿನ ಅಭಿಪ್ರಾಯ ತಿಳಿಯದ ದೋಷವಿಂದು ದೂರವಾಗಿದೆ. ಮಹಾತ್ಮರ ಪ್ರಕಟದಲ್ಲಿ ಎಷ್ಟೋ ಹೃದಯ ದ್ರಾವಕ ಸಂಗತಿಗಳಿವೆ; ದೇಶದಲ್ಲಿ ಅನ್ನಾಹಾರವಿಲ್ಲದೆ ಸಂಕಟಪಡುತ್ತಿರುವ ಜನತೆಗಾಗಿ ಅವರು ಸಹಜವಾಗಿ, ಮರುಗಿದ್ದಾರೆ. 'ನೀವು ತಪ್ಪು ಮಾಡಿರುವಿರಿ ಎಂಬ ವಿಚಾರವನ್ನು ದೇವರು ನಿಮ್ಮ ಗಮನಕ್ಕೆ ಮುಂದೆ ಎಂದಾದರೊಂದು ದಿನ ತಂದಾನು, ಎಂದು ಲಿನ್‌ಲಿತ್‌ಗೋರವರಿಗೆ ಗಾಂಧೀಜಿ ಬಹಳ ಹೃದಯ ಸ್ಪರ್ಶಿಯಾಗಿ ಬರೆಯುತ್ತಾರೆ.

ಸರಕಾರ ತಪ್ಪನ್ನು ಗಾಂಧೀಜಿ ಹಾಗೂ ಕಾಂಗ್ರೆಸಿನ ಮೇಲೆ ಹೊರಿಸಿದಂತೆ ಗಾಂಧೀಜಿ ಮತ್ತು ಕಾಂಗ್ರೆಸಿನವರು ತಪ್ಪನ್ನು ಸರಕಾರದ ಮೇಲೆ ಹೊರಿಸುತ್ತಾರೆ. ಇದರ ಸತ್ಯಾಂಶವನ್ನು ಮುಂದೆ ಇತಿಹಾಸವೇ ತಿಳಿಸುವುದೆಂಬ ಬಗ್ಗೆ ಸಂಶಯವಿಲ್ಲ. ಆದರೆ ಇಂದಿನೀ ಗಂಡಾಂತರ ಕಾಲದಲ್ಲಿ ಅನ್ಯೋನ್ಯ ದೂಷಣೆ ಮಾಡಿ ಕಾಲ ಕಳೆವುದು ಸರಿಯಲ್ಲ. ಮಹಾತ್ಮಾ ಗಾಂಧಿಯವರೇ ಹೇಳಿದಂತೆ ಯಾರದ್ದು ತಪ್ಪು, ಯಾರದು ಸರಿ ಎಂಬ ಬಗ್ಗೆ ಒಂದು ನಿಷ್ಪಕ್ಷಪಾತದ ವಿಚಾರಣಾ ಮಂಡಳಿ ಏರ್ಪಟ್ಟು ಅಲ್ಲಿ ಉಭಯ ಪಕ್ಷದ ವಿಚಾರಣೆಯಾಗಲಿ, ಆಗ ಸತ್ಯಾಂಶ ಖಂಡಿತ ಹೊರಬಂದೀತು. ಸರ್ ಸಪ್ರು ಮೊದಲಾದವರೂ ಈ ಅಭಿಪ್ರಾಯವನ್ನು ಹಿಂದೆಯೇ ತಿಳಿಸಿದ್ದಾರೆ. ಸರಕಾರವು ಗಾಂಧೀಜಿಯಿತ್ತ ಈ ಆಹ್ವಾನಕ್ಕೆ ರಾಷ್ಟ್ರವಿತ್ತ ಈ ಆಹ್ವಾನಕ್ಕೆ ಉತ್ತರಕೊಡಬೇಕು; ಅಪರಾಧಿಗಳು ಯಾರೆಂಬುದು ನಿಷ್ಪಕ್ಷಪಾತದ ವಿಚಾರಣಾ ಮಂಡಳಿಯೆದುರು ತೀರ್ಮಾನವಾಗಬೇಕು.

ಹಿಂದುಸ್ಥಾನ

ಪಂಢರಪುರದ ಜಾತ್ರೆಯನ್ನು ಕೂಡಿಸಬಾರದೆಂದು ಸರಕಾರದವರು ವಿಧಿಸಿದ ಹುಕುಮನ್ನು ನಿಷೇಧಿಸುವ ಗೊತ್ತುವಳಿ ಪುಣೆ ಮುನಸಿಪಾಲಿಟಿಯಲ್ಲಿ ಸ್ವೀಕೃತವಾಯಿತು. ಈ ಬಗ್ಗೆ ಅನೇಕರು ಹುಕುಮು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಮೂರು ದಿನ ಜಾತ್ರೆ ಕೂಡಲು ಅಪ್ಪಣೆ ದೊರೆತಿದೆ.

ಮುಂಬಯಿಯಲ್ಲಿ ಚತುರ್ಭುಜ ಗೋವರ್ಧನದಾಸ ಎಂಬವನಿಗೆ ಧಾನ್ಯ ಸಂಗ್ರಹ ತಿಳಿಸದಿದ್ದ ಬಗ್ಗೆ ೫೦೦೦ ರೂಪಾಯಿ ದಂಡವಾಯಿತು.

ಮದ್ರಾಸದಲ್ಲಿ ಅವಡಿ ಹತ್ತರ ಕೂಲಿಕಾರರ ಮೋಟಾರೊಂದು ಉರುಳಿ ಬಿದ್ದು ೬ ಜನರು ಮರಣ ಹೊಂದಿದ್ದು ೨೧ ಜನರಿಗೆ ಗಾಯಗಳಾಗಿವೆ.

ಧಾನ್ಯ ಸಂಗ್ರಹದ ಬಗ್ಗೆ ಕೇಂದ್ರ ಸರಕಾರದವರು ಪಂಜಾಬು ಯುಕ್ತ ಪ್ರಾಂತ ಓಡಿಸಾ ಅಸಾಮುಗಳಲ್ಲಿ ೨ ಲಕ್ಷ ಟನ್ ಧಾನ್ಯ ಹಿಡಿಯುವ ಉಗ್ರಾಣಗಳನ್ನು ಕಟ್ಟಿಸು ವರಿದ್ದಾರೆ.

ಕಳೆದ ೧೮ ತಿಂಗಳುಗಳಿಂದ ಹಿಂದಿ ರೇಲ್ವೆಗಳು ತಮ್ಮ ೮೫೦೦೦ ನೌಕರರಿಗೆ ಆಹಾರ ಧಾನ್ಯ ಕಡಮೆ ಬೆಲೆಗೆ ಒದಗಿಸುತ್ತಿರುವರು. ಕಳೆದ ವರುಷ ೨೦ ಕೋಟಿ ೧೭ ಲಕ್ಷ ರೂಪಾಯಿ ಬೆಲೆಯ ೧೧೨ ಲಕ್ಷ ಮಣ ಆಹಾರ ಧಾನ್ಯ ಈ ರೀತಿ ಪೂರೈಸಿದ್ದಾರೆ.

ಸಂಯುಕ್ತ ರಾಷ್ಟ್ರಗಳ ಪುನರ್ನಿಯೋಜನ ಮತ್ತು ಪರಿಹಾರ ಸಮಿತಿಯಿಂದ ಬಂಗಾಲಕ್ಕೆ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕೆಂದು ಬ್ರಿಟಿಷ್ ವಿಶ್ವವಿದ್ಯಾಲಯಗಳ ಹಿಂದಿ ಬರಗಾಲ ಸಮಿತಿಯ ಕಾರ್ಯದರ್ಶಿ ಡಿ. ಎಂ. ಸೇನರು ಹಾಯ ಕಮೀಶನರರಿಗೆ ಬಿನ್ನವಿಸಿಕೊಂಡಿರುವರು.

ಬರೇಲಿಯದ ಬಾಬೂರಾಮ ಎಂಬ ಕಳ್ಳನಿಗೆ ೧೦ ವರ್ಷ ಕಠಿನ ಶಿಕ್ಷೆ ವಿಧಿಸಲಾಯಿತು. ಅವನು ೬೦ ವರ್ಷದವನಿದ್ದು ೩೫ ವರ್ಷ ಸೆರೆಮನೆಯಲ್ಲಿಯೇ ಕಳೆದಿರುವನು.

ಬಂಗಾಲ ಶಾಸನ ಸಭೆಯಲ್ಲಿ ಮಾಧ್ಯಮಿಕ ಶಿಕ್ಷಣ ಮಸೂದೆಯ ಬಗ್ಗೆ ಮೇ ೨೫ಕ್ಕೆ ತಂದ ಮುಕ್ತಾಯ ಸೂಚನೆಯು ಪಾಸಾಗಿದೆಯೆಂದು ೨೦ಕ್ಕೆ ಅಧ್ಯಕ್ಷರು ಹೇಳಿದ ಕೂಡಲೇ ವಿರೋಧಿ ಪಕ್ಷದ ಸದಸ್ಯರೆಲ್ಲ ಸಭೆ ಬಿಟ್ಟು ಹೋದರು.

ಬಾಬು ರಾಜೇಂದ್ರ ಪ್ರಸಾದರ ಸ್ಥಾನಬದ್ಧತೆಯ ಅವಧಿಯನ್ನು ಮತ್ತೆ ಬೆಳೆಸಿದ್ದಾರೆ.

ಅಲ್ಲಾಬಕ್ಷ ಹಾಗು ಇನ್ನಿತರ ಅನೇಕ ಜನರನ್ನು ಕೊಲೆ ಮಾಡಿ ತಪ್ಪಿಸಿಕೊಂಡಿದ್ದ ಮೀರ ಮಹಮ್ಮದನೆಂಬ ಹೂರನನ್ನು ಅವನು ಕರಾಚಿ ಜೇಲಿನಲ್ಲಿ ಮಹಮ್ಮದ ಬಾಯೋನ ಭೆಟ್ಟಿಗೆ ಬಂದಾಗ ಒಳ್ಳೆ ಚಾತುರ್ಯದಿಂದ ಸೆರೆಹಿಡಿಯಲಾಯಿತು.

ಲಾಹೋರದ ಜವಳಿ ವ್ಯಾಪಾರಸ್ಥರೊಬ್ಬರು ನಿಯಂತ್ರಿತ ದರದಲ್ಲಿ ಬಟ್ಟೆ ಮಾರಲು ನಿರಾಕರಿಸಿದರೆಂದು ಅವರಿಗೆ ೬ ತಿಂಗಳ ಶಿಕ್ಷೆ ಮತ್ತು ೨೦೦೦ ರೂಪಾಯಿ ದಂಡ ವಿಧಿಸಲಾಯಿತು.

ಕಟಕ ತಾ ೨೬ರಲ್ಲಿ ತಮಗೆ ಮಂತ್ರಿಮಂಡಲ ರಚಿಸುವಷ್ಟು ಬಹುಮತದ ಬೆಂಬಲವಿಹಯೆಂದು ಇತ್ತೀಚೆಗೆ ಭೆಟ್ಟಿ[illegible] ಯಾದಾಗ ಪಂಡಿತ ಗೋದಾವರೀ ಮಿಶ್ರರು ಗವರ್ನರರಿಗೆ ತಿಳಿಸಿರುವರೆಂದು ಹೇಳಲಾಗಿದೆ.

ದ್ವಿತೀಯ ಮಲಬಾರದ ೫೦ ಸಾವಿರ ಜನಸಂಖ್ಯೆಯುಳ್ಳ ಪಾಲ್ಘಾಟ ನಗರವು ಪ್ಲೇಗು ರೋಗಕ್ಕೆ ಗುರಿಯಾದ ಪ್ರದೇಶವೆಂದು ಮದರಾಸು ಸರಕಾರವು ಜಾಹೀರು ಮಾಡಿದೆ.

ಹೊಸದಿಲ್ಲಿ ತಾ ೨೭ರಲ್ಲಿ ಈಗಿನಿಂದ ಯುದ್ಧ ಮುಗಿಯುವ ವರೆಗೆ ವಾಹನಗಳ ಅಡಚಣೆಯ ಕಾರಣದಿಂದ ಮಹತ್ವದ ಕೇಂದ್ರಗಳಲ್ಲಿ ಕುದುರೆ ಶರ್ಯತ್ತನ್ನು ನಿಲ್ಲಿಸುವ ಸಂಭವವಿದೆಯೆಂದು ತಿಳಿದು ಬಂದಿದೆ.

ಮುಂಬಯಿಯಲ್ಲಿ ಕಸ್ತೂರಬಾ ಸ್ಮಾರಕ ನಿಧಿಗೆ ಇಂದಿಗೆ ಒಟ್ಟು ೪,೨೫,೬೫೮ ರೂ.ಗಳು ಕೂಡಿವೆಯೆಂದೂ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ. ಇಷ್ಟರ ತನಕ ನಿಧಿ ೨೦ ಲಕ್ಷಕ್ಕೆ ಮಿಕ್ಕಿತು.

೧೯೪೨ನೇ ಆಗಸ್ಟ್ ಆಂದೋಲನದ ಕಾಲದಲ್ಲಿ ಜಮಶೇದಪುರ ಟಾಟಾ ಕಾರಖಾನೆಯಲ್ಲಿ ಸಂಭವಿಸಿದ ಸಂಪಿನ ಬಗ್ಗೆ ಶ್ರೀ ಎಂ. ಎನ್. ರಾಯರು ಮಾಡಿದ ಕೆಲವು ವಿಧಾನಗಳು ತಮಗೆ ಮಾನಹಾನಿಕರವಾಗಿರುವವೆಂದು ಟಾಟಾರವರ ಪರವಾಗಿ ಶ್ರೀ ಎಂ. ಎನ್. ರಾಯ ಅವರ ಮೇಲೆ ೧ಲಕ್ಷ ರೂಪಾಯಿ ದಿವಾಣಿ ದಾವೆ ಮುಂಬಯಿ ಹಾಯಕೋರ್ಟಿನಲ್ಲಿ ಮಾಡಲ್ಪಟ್ಟಿರುವರು.

ಕಳೆದ ೧೯೨೫ನೇ ಇಸವಿಯಲ್ಲಿ ಹಳ್ಳಿ ಕೈಗಾರಿಕೆ ಹಾಗೂ ನೂಲುವ ಮತ್ತು ನೇಯುವ ಕೈಗಾರಿಕೆಯನ್ನು ಬೆಳೆಸುವ ಉದ್ದೇಶದಿಂದ ಅ. ಭಾ. ಕಾಂಗ್ರೆಸ ಕಮಿಟಿಯವರು ಸ್ಥಾಪಿಸಿ ಬಡವರಿಗೆ ಸಾಕಷ್ಟು ಸಲಕರಣೆಗಳನ್ನು ಪೂರೈಸಿ ಅರಿವೆಯನ್ನು ನೇಯುವಂತೆ ಮಾಡಲು ಮುಂದಾದ ಹಾಗೂ ಮಹಾತ್ಮಾ ಗಾಂಧಿಯವರನ್ನು ಒಬ್ಬ ಧರ್ಮದರ್ಶಿಯನ್ನಾಗಿ ಒಳಗೊಂಡ ಅಖಿಲ ಭಾರತ ಚರಕ ಸಂಘವು ಆದಾಯಕರ ತೆರಬೇಕೆಂದು ಮುಂಬಯಿ ಹಾಯಕೋರ್ಟಿನವರು ಕೊಟ್ಟ ತೀರ್ಮಾನದ ವಿರುದ್ಧ ಪ್ರಿವೀ ಕೌನ್ಸಿಲದಲ್ಲಿ ಮಾಡಿದ ಅಪೀಲಿನಲ್ಲಿ ಪ್ರಿವೀ ಕೌನ್ಸಿಲದ ನ್ಯಾಯ ನಿರ್ಣಯ ಸಮಿತಿಯವರು ಅ. ಭಾ. ಚರಕ ಸಂಘದ ಬೇಡಿಕೆಯಂತೆ ತೀರ್ಪು ಕೊಟ್ಟರು.

ವಾಯುಸರಾಯ ವಾವೆಲ್ಲರ ಮಗ ಆರ್ಚಿಬಾಲರು ಮೋಗಾಂಗದ ಆಗ್ನೇಯ ಭಾಗದಲ್ಲಿಯ ಯುದ್ಧ ರಂಗದಲ್ಲಿ ಹೋರಾಡುವಾಗ ಗಾಯಗೊಂಡರೆಂದೂ ಅವರನ್ನು ವಿಮಾನದಿಂದ ಬೇರೆ ಕಡೆಗೆ ಸಾಗಿಸಲಾಯಿತೆಂದು ಸುದ್ದಿ ಬಂದಿದೆ. ಇದಕ್ಕೂ ಮೊದಲು ೧೯೪೩ರಲ್ಲಿ ಪಾಕಿಸ್ತಾನ ರಣರಂಗದಲ್ಲೂ ಅವರು ಗಾಯಗೊಂಡಿದ್ದರು.

ಹುಗಳಿ ನದಿಯಲ್ಲಿ ಒಂದು ದೋಣಿಯಲ್ಲಿ ೪ ಮಣ ಅಕ್ಕಿ ಸಾಗಿಸಲು ಯತ್ನಿಸಿದ್ದಕ್ಕೆ ಇಬ್ಬರು ನಾವಿಕರಿಗೆ ೨ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಕರಾಚಿಯಿಂದ ಹೊರಗೆ ಸಾಗುತ್ತಿದ್ದ ೧೦ ಸಾವೀರ ರೂಪಾಯಿಗಳ ಮೋಟಾರು ಟ್ಯೂಬ ಟಾಯರ ಮೊದಲಾದುವುಗಳನ್ನು ಸಿ. ಐ. ಡಿ.ಯವರು ಪತ್ತೆ ಹಚ್ಚಿ ೬ ಜನರನ್ನು ಸೆರೆಹಿಡಿದಿರುವರು.

ಸಮರ ಭೂಮಿಯ ಸಂಚಾರ

ಚೆರ್ಬರ್ಗಿನಲ್ಲಿ ಮಹೋಗ್ರ ಸಂಗ್ರಾಮ

ಸೋವಿಯೆಟ್ ಧಾಳಿ ಪ್ರಾರಂಭ?

ಇಂಫಾಲ್ ರಸ್ತೆ ಕಯಿತು

ಚೆರ್ಬರ್ಗಿನಲ್ಲಿ ಜರ್ಮನರ ಉಗ್ರ ಪ್ರತಿಭಟನೆಯಿಂದ ಅಮೇರಿಕನರ ಪ್ರಗತಿಗೆ ತಡೆಯುಂಟಾಗಿದೆ. ಚೆರ್ಬರ್ಗಿನ ವ್ಯೂಹದಲ್ಲಿ ಜರ್ಮನರು ತಮ್ಮ ಸೈನ್ಯವನ್ನು ಭದ್ರಗೊಳಿಸಿ ಅಚಲರಾಗಿ ನಿಂತು ಕಾದುತ್ತಿದ್ದಾರೆ. ಚೆರ್ಬರ್ಗಿನಿಂದ ಪೂರ್ವಕ್ಕೆ ಸ್ಯೆಂಟ್ ಪಿಯರ್ ಎಗ್ಲಿಸೆ ಕಡೆಗೆ ಹೋಗುವ ರಸ್ತೆಯನ್ನು ಹಾದು ಮಿತ್ರರು ನಗರವನ್ನು ಪ್ರವೇಶಿಸಿದ್ದು, ಈ ದುರ್ಗದ ಆಕ್ರಮಣದ ಕಾರ್ಯವು ಬೇಗನೇ ಕೊನೆಗೊಳ್ಳುವುದರಲ್ಲಿದೆ. ನಾರ್ಮಂಡಿಯಲ್ಲಿ ಮೊಂಟಿಗಮೊರಿಯವರು ಹೆಚ್ಚುಹೆಚ್ಚಾಗಿ ಹೊಸ ಸೈನ್ಯಗಳನ್ನು ತರಿಸಿ ಸ್ಯೆಂಟ್ ಲೋ ದಲ್ಲಿರುವ ಜರ್ಮನ ಠಾಣ್ಯದ ಮೇಲೆ ಧಾಳಿಯಿಡುತ್ತಿರುವರು. ಚೆರ್ಬರ್ಗ್ ಯುದ್ಧ ಕೊನೆಯ ಅಂಕವನ್ನು ಹೊಂದುತ್ತಿದೆ. ಈ ವ್ಯೂಹದ ಕಾದಾಟವು ಪೂರ್ವದಲ್ಲಿ ಸ್ಯೆಂಟ್ ಪಿಯರ್ ಅಗ್ಲಿಸೆಯಿಂದ ಆರಂಭವಾಗಿ, ಚೆರ್ಬರ್ಗಿನಿಂದ ಆರು ಮೈಲು ಆಗ್ನೇಯಕ್ಕಿರುವ ರೋವೋಸೆ ವರೆಗೂ, ವಾಯುವ್ಯದಲ್ಲಿ ಬೋಯ್ ಡುಮೆಂಟ್ ಡ್ಯೂರೋಯಿ ವರೆಗೂ ವ್ಯಾಪಿಸಿದೆ.

ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಸೋವಿಯಟ್ ಧಾಳಿ ಪ್ರಾರಂಭವಾಯಿತೆಂದು ಜರ್ಮನ್ ಸುದ್ದಿ ಸಂಸ್ಥೆಯು ಪ್ರಕಟಿಸಿರುತ್ತದೆ. ಮೊಗಿಲೇವದ ದಕ್ಷಿಣದಿಂದ ವಿಟಬೆಸದ ವರೆಗೆ ಈ ಧಾಳಿ ಪ್ರಾರಂಭವಾಗಿರುವುದು. ಇವೆರಡು ಸ್ಥಳಗಳೂ ಬಿಳಿ ರಷ್ಯದ ರಂಗದಲ್ಲಿ ಜರ್ಮನರ ಭದ್ರಸ್ಥಳಗಳಾಗಿರುವವು. ರಶ್ಯನರು ತಮ್ಮ ಸಂಧಿಶರತಗಳನ್ನು ಫಿನ್ಲೆಂಡಿನವರಿಗೆ ಅನಧಿಕೃತ ತಿಳಿಸಿರುವರೆಂದು ತಿಳಿದುಬರುತ್ತದೆ. ಫಿನ್‌ಲೆಂಡು ೧೯೪೦ರ ಗಡಿಯನ್ನು ರಶ್ಯಕ್ಕೆ ಬಿಟ್ಟುಕೊಡಬೇಕು, ಫಿನ್ಲೆಂಡಿನಲ್ಲಿ ಬೇಕಾದ ಕಡೆಗೆ ತಿರುಗಾಡಲು ಮತ್ತು ಫಿನ್ಲೆಂಡಿನ ವಿಮಾನ ಠಾಣೆಗಳನ್ನು ಉಪಯೋಗಿಸಲು ರಶ್ಯನರಿಗೆ ಅನುಮತಿ ಕೊಡಬೇಕೆಂಬುದೇ ಈ ಶರತಗಳೆಂದೂ ತಿಳಿಯುತ್ತದೆ.

ಇಟಲಿಯ ರಸ್ತೆಗಳೆಲ್ಲಾ ಕೆಸರಿನಿಂದ ತುಂಬಿದ್ದರೂ, ಮಿತ್ರ ಸೇನೆಗಳು ಪ್ರತಿಯೊಂದು ರಸ್ತೆಯಲ್ಲಿಯೂ ಮುಂದುವರಿದಿವೆ. ಅಡ್ರಿಯಾಟಿಕ್ ರಂಗದಲ್ಲಿ ಶತ್ರುಗಳನ್ನು ಹಿಂಬಾಲಿಸಿ ಮಿತ್ರ ಸೇನೆಗಳು ಕರಾವಳಿಯ ಪೆಡಾಸೋ ಎಂಬ ಹಳ್ಳಿಯನ್ನು ಸೇರಿವೆ. ಸ್ಯಾಂಕ್ರೋ ಮಾರ್ಕೋ ಎಂಬ ಹಳ್ಳಿಯನ್ನು ಭಾರತೀಯ ಸೇನೆಯು ಕೈವಶಪಡಿಸಿಕೊಂಡಿರುವವು. ಜರ್ಮನರು ಉಗ್ರವಾಗಿ ಪ್ರತಿಭಟಿಸುತ್ತಲೂ ಇದ್ದಾರೆ.

ಚೆರ್ಬರ್ಗ್ ಸಂಗ್ರಾಮ

ಚೆರ್ಬರ್ಗ ನಗರದಲ್ಲಿ ಭೀಕರ ಹೋರಾಟ ನಡೆಯುತ್ತಿದೆ. ಅಮೇರಿಕನರು ಚೆರ್ಬರ್ಗ ಕೋಟೆಗೆ ಬಲವಂತವಾಗಿ ಮುತ್ತಿಗೆ ಹಾಕಿ ಬಾಂಬಿನ ಸುರಿಮಳೆ ಸುರಿಸಿದ್ದಾರೆ. ಮಿತ್ರರು ವಾಲೋನಿ ನಗರವನ್ನು ದಾಟಿ ಮುಂದುವರಿದಿರುವರು. ಚೆರ್ಬರ್ಗ ಹೋರಾಟವು ನಿಮಿಷ ನಿಮಿಷಕ್ಕೂ ಭೀಷಣ ರೂಪವನ್ನು ತಾಳುತ್ತಿದ್ದು ಶತ್ರು ವಶವಿದ್ದ ಪ್ರದೇಶಗಳು ಕಡಿಮೆಯಾಗುತ್ತಾ ಬರುತ್ತವೆ. ಮಿತ್ರರು ವಾಲೋನಿ ನಗರದ ಉತ್ತರಕ್ಕಿರುವ ಮುಖ್ಯ ರಸ್ತೆಯಲ್ಲಿ ಸಾಗುತ್ತಿದ್ದಾರೆ. ಪಶ್ಚಿಮದಲ್ಲಿಯೂ ಮಿತ್ರ ಸೇನೆಗಳು ಮುಂದೆ ಸಾಗಿದ್ದು ಕಡಲ ಕರಾವಳಿಗೆ ಐದು ಮೈಲು ದೂರದಲ್ಲಿವೆ. ಹೇಗ್ ಎಕ್ಕೆವಿಲ್ ಮೊದಲಾದ ಪ್ರದೇಶಗಳು ಮಿತ್ರರ ಕೈಗೆ ಬಂದಿವೆ.

ಚೆರ್ಬರ್ಗದ ಹೊಡೆತದಿಂದ ರೊಮೆಲನ ಪರಾಕ್ರಮ ಕುದಿಯುತ್ತಾ ಬರುತ್ತದೆ. ಮಿತ್ರರ ರಭಸದ ಮುನ್ನಡೆಗೆ ಎಲ್ಲಿಯೂ ತಡೆಯಾಗಿಲ್ಲ. ಚೆರ್ಬರ್ಗವು ಭದ್ರವಾಗಿ ಸಂರಕ್ಷಿಸಲ್ಪಟ್ಟಿದೆಯೆಂಬುದರಲ್ಲಿ ಸಂಶಯವಿಲ್ಲ. ಆದರೆ ಇದರ ಆಗ್ನೇಯದಲ್ಲಿ ರಕ್ಷಣೆ ಅಷ್ಟೊಂದು ಬಲವಾಗಿಲ್ಲವೆಂದು ಮಿತ್ರರು ತರ್ಕಿಸುತ್ತಾರೆ. ಮಿತ್ರ ಸೇನೆಗಳು ಈಗಾಗಲೇ ಚೆಂಬರ್ಗನ ಹೊರವಲಯಕ್ಕೆ ಬಂದಿರುವವು. ವ್ಯೂಹದ ಎಡಬಲ ಭಾಗಗಳನ್ನು ಜರ್ಮನರು ವೈಮಾನಿಕ ಕ್ಷೇತ್ರಗಳನ್ನು ಬಲವಾಗಿ ಸಂರಕ್ಷಿಸುತ್ತಿದ್ದಾರೆ. ಈಗ ಮಿತ್ರ ಸೇನೆಗಳು ಕ್ಯೂನ್ ವಿಲೆಯ ಉತ್ತರಕ್ಕೆ ಪೂರ್ವ ಕರಾವಳಿಯಲ್ಲಿ ಬಂದಿವೆ. ಕ್ಯಾರೆಂಟನಿನ ಪರಿಸ್ಥಿತಿಯು ವಿಶೇಷ ಬದಲಾವಣೆಯಾದದ್ದು ಕಂಡು ಬರುವುದಿಲ್ಲ. ಹಾಟೋಟ್ ಮತ್ತು ಟಿಲ್ಲಿಯ ಸುತ್ತು ಘೋರ ಸಂಗ್ರಾಮ ಸಾಗುತ್ತಿದೆ.

ಚೆರ್ಬರ್ಗಿನ ಸುತ್ತಲಿರುವ ಒಂದು ಸ್ಥಳವನ್ನು ಅಮೇರಿಕನ್ ಸೇನೆಗಳು ಆಕ್ರಮಿಸಿ ಚೆರ್ಬರ್ಗ್ ಬಂದರದ ಸಂರಕ್ಷಕ ವ್ಯೂಹವನ್ನು ಭೇದಿಸಿವೆ. ಪೂರ್ವ ಮತ್ತು ಪಶ್ಚಿಮ ಭಾಗಗಳಿಂದ ಮಿತ್ರ ಸೈನ್ಯಗಳು ಮುನ್ನುಗ್ಗಿ ನಗರದ ಸಂರಕ್ಷಕ ವ್ಯೂಹದ ಮೇಲೆ ಒಳ್ಳೆಯ ಒತ್ತಾಟದಿಂದ ಧಾಳಿ ನಡೆಸಿವೆ. ಚೆರ್ಬರ್ಗ ದ್ವೀಪ ಕಲ್ಪದ ಪಶ್ಚಿಮದಲ್ಲಿ ಜರ್ಮನರು ಅತ್ಯುಗ್ರ ಪ್ರತಿಭಟನೆ ಕೊಡುತ್ತಿರುವರು. ಪೂರ್ವ ಪ್ರದೇಶದಲ್ಲಿ ವಿಶೇಷ ಪ್ರತಿಭಟನೆಯಿಲ್ಲದ್ದರಿಂದ ಅಮೇರಿಕನ್ ಸೈನ್ಯಗಳು ಹೊಯ್‌ಮ್ಯಾನಿಜ್ ಹಳ್ಳಿ ದಾಟಿ ಬ್ರಿಟಿಷ್ ಕಡಲ್ಗಾಲುವೆಯಿಂದ ನಾಲ್ಕು ಮೈಲು ದೂರ ಪ್ರದೇಶಕ್ಕೆ ಬಂದು ಮುಟ್ಟಿವೆ. ಚೆರ್ಬರ್ಗಿನಲ್ಲಿರುವ ಜರ್ಮನರು ಸಂಪೂರ್ಣ ಎಲ್ಲರೂ ಹತರಾಗುವ ವರೆಗೆ ಯಾರೂ ಶರಣಾಗ ಕೂಡದೆಂದು ರೊಮೆಲನು ಆಜ್ಞೆ ವಿಧಿಸಿರುವನೆಂದು ತಿಳಿದಿದೆ. ಈ ಲೇಖವು ಪ್ರಕಟವಾಗುವುದರೊಳಗೆ, ಚೆರ್ಬರ್ಗವು ಮಿತ್ರರ ಕೈ ವಶವಾಗಿರುವುದೆಂದು ವಾರ್ತೆಯು ಬಂದಿರುತ್ತದೆ.

ಮಾಂಟ್‌ಬರ್ಗ್ ಶತ್ರುವಶ

ಮಿತ್ರರ ಕೈವಶವಾಗಿದೆಯೆಂದು ಅಧಿಕೃತವಾಗಿ ಸಾರಲ್ಪಟ್ಟಿದ್ದ ಮಾಂಟಬರ್ಗ ದುರ್ಗವು ಈಗ ಪುನಃ ಜರ್ಮನರ ಕೈವಶವಾಗಿದೆ. ಒಮ್ಮೆ ಅದು ಅಮೇರಿಕನರ ಕೈವಶವಾಗಿತ್ತೆಂದು ಹೇಳಲಾಗಿದ್ದರೂ ಅದು ಬಹಳ ಹೊತ್ತು ಅಮೇರಿಕನರ ಕೈಯಲ್ಲಿ ಭದ್ರವಾಗಿ ಉಳಿಯಲಿಲ್ಲವೆಂದು ಈಗ ಸರಿಯಾಗಿ ತಿಳಿದು ಬಂದಿದೆ. ನಾರ್ಮಂಡಿಯಲ್ಲಿ ಕಳೆದ ವಾರದಿಂದ ನಡೆಯುತ್ತಿದ್ದ ಭೀಷಣ ಯುದ್ಧವು ಇದುವರೆಗೂ ಯಾವುದೇ ಇತ್ಯರ್ಥವಾಗದೆ, ಉಭಯ ಪಕ್ಷದವರಿಗೂ ಖಂಡಿತ ಸೋಲುಗೆಲವುಗಳಾಗದೆ ಒಂದೇ ಸವನೆ ಸಾಗುತ್ತಿದೆ.

ಅಮೇರಿಕನ್ ಸೈನ್ಯವು ಇಲ್ಲಿ ಸ್ಯೆಂಟ್ ಸೋವೆಯಾದಿಂದ ಕರಾವಳಿಯ ಕಡೆಗೆ ಮುನ್ನುಗ್ಗಿ ತಮ್ಮ ಯೋಜನೆಯಂತೆ ಸೇನಾ ವ್ಯೂಹದ ಎರಡನೇ ತೋಳನ್ನು ಬಲಗೊಳಿಸಿ ತಮ್ಮ ಇಕ್ಕುಳ ವ್ಯೂಹವನ್ನು ಮುಚ್ಚುವ ಹಾಗೂ ಬಲಗೊಳಿಸುವ ಸನ್ನಾಹದಲ್ಲಿದೆ. ಮಿತ್ರರ ಇಕ್ಕುಳ ವ್ಯೂಹದ ದಕ್ಷಿಣ ತೋಳು ಪೋರ್ಟ್‌ಬೇಲ್ ಮುಂತಾದ ಸ್ಥಳವನ್ನು ಆವರಿಸಿದೆ. ಈ ಮಧ್ಯದಲ್ಲಿರುವ ಶತ್ರು ಸೇನೆಯು ಸ್ಯೆಂಟ್ ಜೇಕ್ಸ್ ಡಿನೋವೊದಿಂದ ಬಾರ್ನೆವಿಲೆಯ ಸಮೀಪಕ್ಕೆ ಹೋಗಲಿರುವ ಒಂದೇ ಮಾರ್ಗದಿಂದ ಪಾರಾಗಲು ಬಹಳ ಯತ್ನಿಸುತ್ತಿವೆ. ಇಕ್ಕುಳದ ಸಣ್ಣ ತೋಳಿನಿಂದ ಈ ಭಾಗವನ್ನು ಆವರಿಸುವುದು ಶಕ್ಯವಾಗಲಿಲ್ಲ. ಆದ್ದರಿಂದ ಸಾಕಷ್ಟು ಜರ್ಮನರನ್ನು ಇರುಬಿನಲ್ಲಿ ಸಿಲುಕಿಸುವುದೂ ಸಾಧ್ಯವಾಗಲಿಲ್ಲ.

ನಾರ್ಮಂಡಿಯಲ್ಲಿ ಜರ್ಮನರು ಹಾರುವ ಗುಂಡುಗಳನ್ನು ಉಪಯೋಗಿಸುತ್ತಿದ್ದಾರೆ. ಕಾಲ್ದಳಕ್ಕೆ ಇದನ್ನು ಒದಗಿಸಿರುವರು. ಒಬ್ಬನಿಂದಲೇ ಈ ಗುಂಡನ್ನು ಸೆಯಲು ಸಾಧ್ಯವಿದೆ. ಇದೊಂದು ನಾಲ್ಕಡಿ ಉದ್ದವಿರುವ ಟ್ಯೂಬ್. ಅದರ ಬುಡದಲ್ಲಿ ಮಾತ್ರ ಸ್ಫೋಟವಾಗುವ ಮದ್ದುಗುಂಡಿದೆ. ಇಂತಹ ಅನೇಕ ಗುಂಡುಗಳನ್ನು ಮಿತ್ರರು ವಶಪಡಿಸಿದ್ದಾರೆಂದು ತಿಳಿದಿದೆ. ಬ್ರಿಟನಿನ ಮೇಲೆ ಜರ್ಮನರ ಈ ಹಾರುವ ಗುಂಡುಗಳು ಹಾನಿ ಮಾಡಿವೆ.

ಫ್ರೆಂಚರು ದಂಗೆಯೇಳುವರೆ?

"ಇದು ಫ್ರಾನ್ಸಿನ ಯುದ್ಧ, ಫ್ರಾನ್ಸಿನ ಯುದ್ಧ" ಹೀಗೆಂದು ಆಕ್ರಮಣ ದಿನ ಆಕಾಶವಾಣಿಯಲ್ಲಿ ತನ್ನ ಜನರಿಗೆ ಸಂದೇಶವೀಯುತ್ತಾ ಜನರಲ್ ಚಾರ್ಲ್ಸ್ ಡಿಗೋಲೇ ಹೇಳಿದನು. ಸ್ವಾತಂತ್ರ್ಯ ಪ್ರಿಯರಾದ ಪ್ರಪಂಚದ ಎಲ್ಲಾ ಭಾಗಗಳಲ್ಲಿರುವ ಫ್ರೆಂಚರೂ ಆಕ್ರಮಣ ದಿನವನ್ನು ಸಂತೋಷದ ದಿನವಾಗಿ ಪರಿಗಣಿಸಿ ಕೊಂಡಾಡಿದ್ದಾರೆ. ಪೇರಿಸಿಗೆ ಮಿತ್ರ ಸೇನೆ ಬೇಗನೇ ಮುಂದೊತ್ತಲಿ ಎಂಬುದಾಗಿ ಎಲ್ಲರೂ ಹಾತೊರೆಯುತ್ತಾರೆ?

ಆದರೆ ಪೇರಿಸಿಗೆ ಹೋಗುವುದು ಅಷ್ಟೇನೂ ಸುಲಭವಲ್ಲ. ಫ್ರೆಂಚ್ ಸ್ವತಂತ್ರ ರಾಷ್ಟ್ರೀಯ ಸಂಘದವರು ಈ ಬಗ್ಗೆ ಹುರಿದುಂಬಿಸುತ್ತಾರೆ. ಇತರ ಫ್ರೆಂಚರೂ ತಮ್ಮ ರಾಷ್ಟ್ರ ಸ್ವತಂತ್ರವಾಗಬೇಕೆಂದು ಅಹರ್ನಿಶಿ ಹಾತೊರೆಯುತ್ತಿರುವರು. ಆದರೆ ಮಿತ್ರರು ಫ್ರಾನ್ಸಿನಲ್ಲಿ ಮುಂದುವರಿಯಬೇಕಾದರೆ ಅಲ್ಲಿನ ನಾಗರಿಕರಿಂದ ಹೆಚ್ಚಿನ ಬೆಂಬಲ ಸಿಗಬೇಕು. ಅವರು ಹೆಚ್ಚಿನ ಶಿಸ್ತು ಪಾಲಿಸಬೇಕು; ಹೆಚ್ಚಿನ ಸ್ವಾರ್ಥ ತ್ಯಾಗಮಾಡಬೇಕು. ೧೯೪೦ರಲ್ಲಿ ಮಾಡಿದ ಪ್ರಮಾದವು ಪುನರಾವರ್ತನೆಯಾಗಲಾರದು. ಸ್ಥಳೀಯ ಆಡಳಿತ ಉಳಿಯಬೇಕು, ಅದು ಫ್ರೆಂಚರ ಕೈಯಲ್ಲಿಯೇ ಉಳಿಯಬೇಕು, ಜರ್ಮನರು ದಿನದಿಂದ ದಿನಕ್ಕೆ ಫ್ರಾನ್ಸಿನಿಂದ ತಳಬಿಟ್ಟು ಹೊರಟು ಹೋಗಬೇಕಾದೀತು.

ಹೀಗಾಗಬೇಕಾದರೆ ಫ್ರೆಂಚರು ಬಲಿದಾನ ಮಾಡಬೇಕು; ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದಂಗೆಯೇಳುವುದು, ತಮ್ಮ

(೫ನೇ ಪುಟಕ್ಕೆ ಮುಂದುವರಿದಿದೆ)

THE CANARA BANKING CORPORATION LTD.

(Incorporated in British India with Limited Liability.)

Estd) Head Office: UDIPI S. Kanara. (1906.

Statement of affairs as on 30th April, 1944.

LIABILITIES	Rs. As.Ps.	ASSETS	Rs. As.Ps.
1. Paid up Capital	13,68,480- 0- 0	1. Cash on hand & with bankers in Current & Fixed Deposit A/cs	19,71,808- 0- 1
2. Reserves	4,12,120-12- 8	2. Investments on (1) Govt. Securities (2) Immovable properties etc.	24,26,660,- 9- 9
3. Deposits	67,30,955- 3- 4	3. Loans on Jewels & other valuable securities	33,50,167-13-3
4. Due to Bankers	7,34,366-10- 9	4. Loans on personal securities & Bills purchased	20,49,197-13-10
5. Bills for collection	6,70,379- 8- 8	5. Bills for collection as per contra	6,70,379- 8- 8
6. Sundries including revenue items	7,58,745- 8- 4	6. Office premises, furniture etc.	93,705- 0-10
		7. Sundries including revenue items.	1,13,128-13- 4
Total	1,06,75,047-11- 9	Total	1,06,75,047-11- 9

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಸ್ತೂರ್ಬಾ ಸ್ಮಾರಕ ಸಮಿತಿ ಇದರ ಸಭೆಯು ಜುಲೈ ೨ನೇ ರವಿವಾರ ಕಾಂಗ್ರೆಸ್ ನವಭಾರತ ಕಾರ್ಯಾಲಯದಲ್ಲಿ ಸೇರಲಿದೆ. ಜಿಲ್ಲೆಯಿಂದ ಸಮಿತಿಗೆ ಬೀದಿ ಮುಡಿ ...ರ ಕಡೆಯಿಂದ ಅಗಲೇ ಸ್ವಲ್ಪ ಹಣವು ಸಂಗ್ರಹಿಸಿ ಕೊಡಲ್ಪಟ್ಟಿರುವದು.

ದ. ಕ. ಜ. ಪತ್ರಿಕೋದ್ಯೋಗಿ ಸಂಘದ ಮಹಾಸಭೆಯಲ್ಲಿ ಸದ್ರಿ ಸಂಘದ ಕಾರ್ಯದರ್ಶಿತ್ವಕ್ಕೆ ರಾಜಿನಾಮೆ ಇತ್ತ ಶ್ರೀ ಕೆ. ಕೆ. ... ಇವರ ಸೇವೆಯನ್ನು ಪ್ರಶಂಸಿಸಿ ದಾಖಲೆ ಮಾಡಲಾಯಿತು.

ಕದ್ರಿ ಮಕ್ಕಳ ಕೂಟ– ಇವರು ಮಕ್ಕಳಿಗೆ ಅಭಿರುಚಿಸುವ ಅನೇಕ ಆಕರ್ಷಣೀಯ ಚಟುವಟಿಕೆಗಳನ್ನು ನಡೆಸುತ್ತಿರುವರು. ಮಕ್ಕಳ ಕಥೆ ಹಾಡು, ಚಿತ್ರಗಳ ಮೂಲಕ ಇತರ ಜನಾಂಗಿಕ ಮಕ್ಕಳ ಜೀವನ ವಿಶೇಷದ ಕುರಿತು ಪರಿಚಯ ಭಾಷಣಗಳು ನಡೆದವು.

ಚೆಟ್ಟಿಯಾರ್ ಸಮಾಜ ಸುಧಾರಕ ಸಂಘ ಇದರ ವಾರ್ಷಿಕಾಧಿವೇಶನವು ...ಪೇಟೆಯಲ್ಲಿ ಶ್ರೀ ಕೆ. ಕೃಷ್ಣ ... ಇವರ ಅಧ್ಯಕ್ಷತೆಯಲ್ಲಿ ಜರಗಿ ... ಮಂದಿ ಮಹನೀಯರ ಒಂದು ಹೊಸ ಕಾರ್ಯ ಸಮಿತಿಯಾಯಿತು.

ತಾ. ೨೭ರಂದು ಜನತಾ ಆಹಾರ ಸಮಿತಿಯವರ ಸಭೆಯೊಂದು ಶ್ರೀ. ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ...ಡುತ್ತಿರುವ ಆಹಾರ ಪರಿಸ್ಥಿತಿಗಾಗಿ (ಮುಖ್ಯ ಹಳ್ಳಿಗಳ) ವಿಷಾಧಿಸಿ ಸಭೆಯು ಇದರ ಸುಧಾರಣೆಗಾಗಿ ಪ್ರಭಾವ ಶಾಲಿ ಪುರೀಣರ ಒಂದು ಸಮಿತಿಯನ್ನು ರಚಿಸಲ್ಪಟ್ಟಿತು. ಶ್ರೀ. ಅಧಿಕಾರಿಗಳು ಅಧ್ಯಕ್ಷರು, ಶ್ರೀ. ಬಿ. ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಉಪಾಧ್ಯಕ್ಷರು. ಶ್ರೀ. ಕೆ. ಕೆ. ಶೆಟ್ಟಿ, ಪ್ರಧಾನ ಕಾರ್ಯದರ್ಶಿಗಳು. ತಾಲೂಕು ಉಪಸಮಿತಿಗಳೂ ನೇಮಿಸಲ್ಪಟ್ಟವು. ವೆಚ್ಚಕ್ಕಾಗಿ ಹಣ ಸಂಗ್ರಹವೂ ಆಗುವುದು.

ನಗರದಲ್ಲಿ ಶೋಧನೆಗಳು ಆರಂಭವಾದಂದಿನಿಂದ ಇಲೆಕ್ಟ್ರಿಕ್ ಬಲ್ಬುಗಳು, ಸಿಮೆಂಟ್, ಹಾರೆ, ಪಿಕ್ಕಾಸು ಮೊದಲಾದ ಸರಕು ಸಾಮಾನುಗಳು ನಿಯಂತ್ರಿತ ಬೆಲೆಗೆ ಸಿಗುವಂತಾಗಿದೆ. ಇವನ್ನು ಮಾರುವಲ್ಲಿ ಬೆಲೆಗಳ ಪಟ್ಟಿಗಳನ್ನು ತೂಗಿಸಿರುವರು. ಕಳ್ಳ ಸಂತೆಯ ಪ್ರಭಾವ ತಗ್ಗಿರುವುದಾಗಿ ನಂಬಲಾಗಿದೆ.

ದಾಸ್ತಾನು

ಮಾಡಿ ಲಾಭಗಳಿಸುವ ವಿರೋಧ ಕಾನೂನಿನನ್ವಯ ಅಧಿಕಾರಿಗಳಿಂದ ಸುಮಾರು ಕೇಸುಗಳು ವಿಚಾರಣೆಗೆ ಗುರಿಮಾಡಲ್ಪಟ್ಟಿವೆ. ಮದ್ದುಗುಂಡು, ಪೆನ್ನು, ಬೆಟರ್ರಿ ಸಿಗ್ರೆಟ್, ಢೋಬಿಖಾರ, ಕೊಡೆ, ಬ್ಲೇಡ್, ಸೈಕಲ್, ಇತ್ಯಾದಿಗಳು ಈ ಕಾನೂನಿನ ಕ್ಷೇತ್ರದಲ್ಲಿವೆ.

ಔಷಧ ನಿಯಂತ್ರಣ

ಇದರ ಅನ್ವಯ ಕೇಸುಗಳೂ ಆಗಿವೆಯಾಗಿ ಪ್ರಕಟವಾಗಿದೆ, ವಿಚಾರಣೆಗೂ ಗುರಿಮಾಡಲಾಗಿದೆಯುಂತೆ. ಗಿರಾಕಿಗಳು ತಾವು ಪಡೆಯುವ ವಸ್ತುಗಳಿಗೆ ಸರಿಯಾದ ಬೆಲೆಯ ರಶೀದಿಗಳನ್ನು ಪಡೆದುಕೊಳ್ಳುವುದರಲ್ಲಿ ಜಾಗ್ರತರಾಗಿರಬೇಕಾಗಿ ಅಧಿಕಾರಿಗಳ ಕೇಳಿಕೆ ಇದೆ.

ಅಡಿಕೆಯ ಮೇಲೆ ಅಬ್ಕಾರಿ ಸುಂಕ

ಹೊಂಸುವ ಶಾಸನವನ್ನು ರದ್ದುಗೊಳಿಸಿ ಅಡಿಕೆಯ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವ ಉಪಾಯದೆಗಳನ್ನುಂಟುಮಾಡಬೇಕೆಂದು ವಿನಂತಿಸುವ ಮನವಿಯನ್ನು ವ್ಯಾಸರಾಯರಿಗೆ ಕಳುಹಿಸಿರುವರಾಗಿ ಅ. ಬೆ. ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ. ಸುಂಕದ ವಿಷಯ ಫೆಡರಲ್ ಕೋರ್ಟಿನ ಪರಿಶೀಲನೆಗೆ ಒಳಪಡಿಸಬೇಕಾಗಿಯೂ ವಿನಂತಿಸಿದೆ.

ಈ ಸಂಬಂಧ ಸಂಘದವರು ಸರ್ ತೇಜ್ ಬಹದ್ದೂರ್ ಸಪ್ರೂ ರವರಲ್ಲಿ ತಮ್ಮ ಕಡೆಯಿಂದ ವ್ಯವಹರಿಸುವುದಕ್ಕೆ ಕೇಳಿಕೊಂಡಿದ್ದರು. ಶಾಸ್ತ್ರೀಯರಿಂದ ಸಪ್ರೂರವರು ತಮ್ಮ ಕೊನೆಯ ಅಭಿಪ್ರಾಯವನ್ನು ಬರುವ ತಿಂಗಳೊಳಗೆ ತಿಳಿಸುವರಾಗಿ ಬರೆದಿರುವರಂತೆ.

ಸ್ಥಳೀಯ ವೆಬ್‌ಸ್ಟರ್ ಮಾರ್ಕೆಟು ಜುಲೈ ೧೦ರ ಸುಮಾರಿಗೆ ಹಿಂದಿನ ಸ್ಥಾನಕ್ಕೆ ಒಯ್ಯಲ್ಪಡಬಹುದಾಗಿ ತಿಳಿದು ಬರುತ್ತದೆ.

ಆರೋಗ್ಯ:– ನಗರದಲ್ಲಿ ಪ್ಲೇಗಿನ ಪ್ರಸಾರವನ್ನು ಆರೋಗ್ಯ ಇಲಾಖೆಯವರು ಹೆಚ್ಚು ಕಡಿಮೆ ನಿರ್ಮೂಲ ಗೊಳಿಸಿರುವರಾಗಿ ಭರವಸೆ ಇದೆ. ಇತ್ತೀಚೆಗಿನ ಸುದ್ದಿಗಳಿಂದ ಕೆಲವೊಂದು ಭಾಗಗಳಲ್ಲಿ ಈ ರೋಗದ ಚಿಹ್ನೆಗಳು ಗಮನಕ್ಕೆ ಬಂದಿರುವುವಂತೆ. ಆದರೂ ಗಾಬರಿಗೆ ಯಾವ ಕಾರಣವು ಇಲ್ಲವೆಂದು ಊಹಿಸಲಾಗಿದೆ. ದಾಕು ಹಾಕಲ್ಪಟ್ಟ ಸಂಖ್ಯೆ ಸುಮಾರು ೧೮೫೦೦.

ಸಕ್ಕರೆ, ಎಣ್ಣೆ:– ಮುನಿಸಿಪಾಲಿಟಿಯವರು ನಾಗರಿಕರಿಗೆ ಚಿಮಿಣಿಎಣ್ಣೆ ಮತ್ತು ಸಕ್ಕರೆ ಸೀದಾ ಕಾರ್ಡುಗಳನ್ನು ಹಂಚುತ್ತಲಿರುವರು, ೩೦ರ ಒಳಗೆ ಅವುಗಳನ್ನು ತಮ್ಮ ವ್ಯಾಪಾರಿಗಳಲ್ಲಿ ರಜಿಸ್ಟರ್ ಮಾಡಬೇಕು. ಮತ್ತೆ ಕೆಲವು ದಿವಸಗಳಲ್ಲಿ ಹಂಚುವಿಕೆ ಪ್ರಾರಂಭವಾಗಬಹುದೆಂದು ನಿರೀಕ್ಷಿಸಲಾಗಿದೆ.

ಇಂತಹ ಕಾರ್ಡು ದೊರೆಯದಿದ್ದವರು ವಾರ್ಡು ಕಟ್ಟಡ ನಂಬ್ರಗಳನ್ನೂ ಬಾಡಿಗೆ ವಸತಿ ಕೋಣೆಗಳ ಲೆಕ್ಕವನ್ನೂ ತಿಳಿಸಿ ಮುನಿಸಿಪಲ್ ಕಮಿಶನರರಿಗೆ ಮನವಿ ಮಾಡಿ ಕೊಳ್ಳತಕ್ಕದ್ದು. ತಮಗ ವಶ್ಯವರುವ ಚಿಮಿಣಿ ಎಣ್ಣೆ ಸಕ್ಕರೆಗಳ ಪರಿಮಾಣವನ್ನೂ ಕಾಣಿಸಬೇಕು ಇದರ ಪರ್ಯಾಲೋಚನೆಗೆ ಒಂದು ಪ್ರತ್ಯೇಕ ಸಮಿತಿ ಇದೆ. ಮನವಿಗಾರರು ಅರ್ಜಿಯಲ್ಲಿ "ಮುನಿಸಿಪಲ್ ಸ್ಪೆಶಲ್ ಕಮಿಟಿ, ಮುನಿಸಿಪಲ್ ಆಫೀಸ್ ಮಂಗಳೂರು" ಎಂಬ ವಿಳಾಸ ಬರೆದು ಕಳುಹಿಸಬೇಕು. ಸ್ಪೆಶಲ್ ಪರ್ಮಿಟು ಇದ್ದವರು ಕಲೆಕ್ಟರರೊಡನೇ ತಮ್ಮ ಹಾಲು ಹವಾಲುಗಳನ್ನು ತಿಳಿಸಿ ಅದನ್ನು ಒಪ್ಪಿಸಬೇಕು.

ಕಟ್ಟಿಗೆ:– ವ್ಯಾಪಾರಿಗಳು ತಮ್ಮ ಸ್ಟಾಕಿನ ½ ಅಂಶವನ್ನು ಜುಲೈ ತಿಂಗಳೊಳಗೆ ಮಾರಬಹುದೆಂದೂ ಉಳಿದುದನ್ನು ಆಗಸ್ಟ್ ಸೆಪ್ಟಂಬರ್‌ಗಳ ಮಾರಾಟಕ್ಕಾಗಿ ಇಡತಕ್ಕದೆಂದೂ, ಹೊಸತಾಗಿ ಪಡೆಕೊಳ್ಳುವ ಎಲ್ಲಾ ಕಟ್ಟಿಗೆ ಮನೆಗೆ ೨ ಮಣದಂತೆ ಮಾರಿ ತೀರಿಸಬೇಕೆಂದೂ ಕಲೆಕ್ಟರರ ಒಂದು ಪ್ರಕಟಣೆಯಾಗಿದೆ. ಹೆಚ್ಚಿಗೆ ಕಟ್ಟಿಗೆ ಬೇಕಾದವರು. ಪರ್ಮಿಟ್ ಪಡೆಯಬೇಕು.

ಚಿಮಿಣಿ ಎಣ್ಣೆ ಈಗಿನ ಕಾರ್ಡುಗಳಲ್ಲಿ ತಿಂಗಳಿಗೆ ಎರಡು ಸಲವೆಂದಿದ್ದರೂ ಇನ್ನು ಕೂಲಸ್ಥರು ತಿಂಗಳಿಗೊಮ್ಮೆಯೇ ತಮ್ಮ ಎಣ್ಣೆಯನ್ನು ಪಡೆಯಬಹುದೆಂದೂ ಸಂ...

ಉಪಾಹಾರಗೃಹ

ಹೋಟೆಲುಗಳು ಅಧಿಕಾರಿಗಳ ಶಿಫಾರಸ್ಸಿನಂತೆ ಹೋಟೆಲ್‌ದಾರರ ಸಂಘ ... ಎಂಬ ಹೆಸರಿನ ಹೊಸ ಉಪಹಾರ ಗೃಹವೊಂದು ಹಂಪನ ಕಟ್ಟೆಯಲ್ಲಿ ತೆರೆಯಲಾಗಿದೆ. ಜಿಲ್ಲಾ ಜಡ್ಜ್ ಶ್ರೀ ಕೋಮನ್ ಐ. ಸಿ. ಎಸ್. ಇವರು ಆರಂಭೋತ್ಸವವನ್ನು ನೆರವೇರಿಸಿದರು.

ನಗರದಲ್ಲಿ ಬೈ ಹುಲ್ಲಿನ ಕ್ರಯವು ವಿಪರೀತಕ್ಕೆ ಏರುವುದೆಂದೂ ಅದನ್ನು ಸದ್ಯದಲ್ಲಿ ನಿಯಂತ್ರಿಸಬೇಕೆಂದೂ ಅಪೇಕ್ಷಿಸಲಾಗಿದೆ.

ಅಕ್ಕಿ, ಗೋದಿ:– ಅಕ್ಕಿಯ ಬದಲು ಗೋದಿಯನ್ನು ಪಡೆಯುವ ಅನುಕೂಲತೆಯ ಬಗ್ಗೆ ದಕ್ಷಿಣ ಕನ್ನಡ ಸೆಂಟ್ರಲ್ ಕೋ–ಒಪರೇಟಿವ್ ಹೋಲ್ ಸೇಲ್ ಸ್ಟೋರ್ಸಿನವರು ಯೋಗ್ಯ ಏರ್ಪಾಡು ಮಾಡಿರುವರು. ಈ ಏರ್ಪಾಡು ಕಲೆಕ್ಟರರ ಅನುಮತಿಯ ಮೇರೆ ಜಾರಿಗೆ ತರಲ್ಪಟ್ಟಿದೆ. ಅಕ್ಕಿಯ ಬದಲು ಗೋದಿಯನ್ನು ಕೊಡುವ ಬದಲಾವಣೆಯರ ಅಂಗಡಿಗಳು ಜಿಲ್ಲೆಯ ಹಲವು ಕೇಂದ್ರಗಳಲ್ಲಿ ತೆರೆಯಲ್ಪಟ್ಟಿದೆ.

ಬಸ್ಸ್ ಸ್ಟೆಂಡ್

ಜೇಡಿಗುಡ್ಡದಲ್ಲಿರುವ ಮೋಟಾರ್ ನಿಲ್ದಾಣವನ್ನು ಹಂಪನಕಟ್ಟೆಗೆ ಒಯ್ಯುವ ಸುದ್ದಿ ನಿರಾಧಾರವೆಂದು ಈಗ ತಿಳಿದುಬರುತ್ತದೆ. ಟಿಕೇಟು ರಿಸರ್ವ್ ಮಾಡುವ ಕ್ರಮವನ್ನು ರದ್ದುಗೊಳಿಸಿ ಪ್ರಯಾಣಿಕರು ಕ್ಲಪ್ತ ಕಾಲಕ್ಕೆ ಸ್ವಲ್ಪ ಮುಂಚಿತವಾಗಿ ಟಿಕೇಟು ಕೊಳ್ಳುವಂತಾಗುವ ಏರ್ಪಾಡೂ ಅಧಿಕಾರಿಗಳ ಪರ್ಯಾಲೋಚನೆಯೊಳಗಿದೆ ಎಂದೂ ಊಹಾ ಪೋಹೆಗಳು ಇವೆ. ಕೆಲವು ಸಂಧರ್ಭಗಳಲ್ಲಿ ರಿಸರ್ವ್ ಮಾಡುವ ಏರ್ಪಾಡು ಮುಂದರಿಯಲೂ ಬಹುದು. ಆದರೆ 'ರಿಫಂಡ್' ಮಾತ್ರ ಸಿಗಲಾರದಂತಹ ಒಂದು ಏರ್ಪಾಡು ಜ್ಯಾರಿಗೆ ಬರಬಹುದೆಂದು ತಿಳಿದು ಬರುತ್ತದೆ.

ಕುಮಾರಿ ಮಾಲತಿ ಬಿ. ಎ. ಇವರು ಮದ್ರಾಸಿನಲ್ಲಿ ಗಣಿತ ಶಾಸ್ತ್ರದಲ್ಲಿ ಬಿ. ಎ. ಒನರ್ಸ್ ಕ್ಲಾಸುಗಳಲ್ಲಿ ತೇರ್ಗಡೆ ಹೊಂದಿ ಈಗ ಬೆಂದೂರು ಮಹಿಳಾ ಕೋಲೆಜಿನಲ್ಲಿ ಅಧ್ಯಾಪಕಿಯರಾಗಿ ನೇಮಕ ಹೊಂದಿರುವರು. ಇವರು ಗೌ। ಸಾ। ಬ್ರಾಹ್ಮಣ ಸಮಾಜದ ಗೌರವಸ್ಥ ಮನೆತನದವರಿರುವರು.

ಶೋಧೆ:– ಅಧಿಕಾರಿಗಳು ಈ ವಾರದಲ್ಲಿ ಕೆಲವು ಕಾಗದ ವ್ಯಾಪಾರಿಗಳ ಸ್ಟಾಕು ಲೆಕ್ಕವನ್ನು ಪರಿಶೋಧಿಸಿ ಕೆಲವರ ಮೇಲೆ ಕಟ್ಲೆ ಹೂಡಿರುವರಾಗಿ ತಿಳಿದು ಬರುತ್ತದೆ. ಪುಸ್ತಕ ವ್ಯಾಪಾರ ತೃಪ್ತಿಕರವಾಗಿ ನಡೆಯದಿದ್ದಲ್ಲಿ ಅಧಿಕಾರಿಗಳ ಗಮನಕ್ಕೆ ತರಬೇಕಾಗಿ ಹಜೂರ್ ಪ್ರಕಟನೆಯಾಗಿದೆ.

ಉಪ್ಪಿನಂಗಡಿ

ಕೆಲವು ದಿನಗಳ ಹಿಂದೆ ಇಲ್ಲಿಯ ಹತ್ತಿರದ ಕಾಡಿನಲ್ಲಿ ಕಟ್ಟಿಗೆ ಹೆಕ್ಕುತಿದ್ದ ಒರ್ವ ಮಾಪಿಳ್ಳೆ ಹುಡುಗಿಯನ್ನು ಅದೇ ಜಾತಿಯ ಆಗಂತುಕನೊಬ್ಬನು ಮುಖಕ್ಕೆ ಕಲ್ಲಿನಿಂದ ಹೊಡೆದು ಮೂರ್ಛೆ ಗೊಳಿಸಿ ಅವಳ ಮೈಮೇಲಿದ್ದ ಸ್ವಲ್ಪ ಭಂಗಾರವನ್ನು ಅಪಹರಿಸಲು ಪ್ರಯತ್ನಿಸಿದನಂತೆ. ಅಕಸ್ಮಾತಾಗಿ ದಾರಿ ಹೋಕರೀವರ್ಗಿಂಗೆ ವಿಷಯ ತಿಳಿದು ಓಡಿ ಹೋಗುತ್ತಿರುವ ಮೂಸಿಕಾರನನ್ನು ಸೈಕಲುಗಳಿಂದ ಹಿಂಬಾಲಿಸಿ ಹಿಡಿದು ಅಧಿಕಾರಿಗಳ ವಶಕ್ಕೆ ಕೊಡಲಾಯಿತೆಂಬ ಒಂದು ವಿಚಿತ್ರ ಸುದ್ದಿಯು ತಿಳಿದು ಬರುತ್ತದೆ. ತರುಣಿಯು ಪುತ್ತೂರಲ್ಲಿ ವೈದ್ಯಕೀಯ ಆರೈಕೆಯಲಿರುವಳಂತೆ.

ಕಟೀಲು

ಕಳೆದ ತಾ. ೨೩ರ ಬೆಳಗ್ಗೆ ಇಲ್ಲಿಯ ಪ್ರಖ್ಯಾತ ದೇವಸ್ಥಾನದ ಸುತ್ತು ಹರಿಯುವ ನಂದಿನೀ ನದಿಯಲ್ಲಿ ಒಂದೇ ಸವನೇ ನೀರು ಹೆಚ್ಚೇರುತ್ತಾ ದೇವಸ್ಥಾನದ ಒಂದು ಪಾರ್ಶ್ವವು ಕುಸಿದು ಬಿತ್ತು. ಅನೆ ಗಾತ್ರದ ಬಂಡೆಯೊಂದು ನೀರ ಸೆಳೆತಕ್ಕೆ ಬಹಳ ದೂರಕ್ಕೆ ಒಯ್ಯಲ್ಪಟ್ಟಿದೆ. ಮಾರ್ಗ ಮಟ್ಟಕ್ಕಿಂತ ನೀರು ಎರಡಾಳು ಏರಿ ದೇವಳದ ಗರ್ಭ ಗುಡಿಯೊಳಗಿನ ಲಿಂಗದ ವರೇಗೆ ಬಂದು ಮತ್ತೆ ಒಂದೇ ಸವನೇ ಇಳಿಯಲಾರಂಭಿಸಿತು. ಊರಿನ ಕೆಲ ಸಾಹಸಿಗರು ದೇವಳದ ಬಂಗಾರ ಸೊತ್ತುಗಳನ್ನೂ ಹಳೇ ರಿಕ್ಕಾರ್ಡುಗಳನ್ನೂ ಗಂಡಾಂತರದ ಮಧ್ಯದಲ್ಲಿ ಸುರಕ್ಷಿತ ಗೊಳಿಸಿದ್ದ ಕಾರ್ಯವು ಸ್ತುತ್ಯ.

ಪಡುಗೋಡು, ಅತ್ತೂರು, ಪಂಜ, ಮೂಡೂರು ಈ ಕಡೆಗಳಲ್ಲಿ ಈ ನೆರೆಯಿಂದ ಬಹಳ ಹಾನಿಯಾಗಿದೆಯೆಂದು ತಿಳಿದು ಬಂದಿದೆ. ಜನರು ಮಾಡು ಮರಗಳಲ್ಲಿ ಏರಿ ಬದುಕಿ ಕೊಂಡರು. ಒರ್ವ ಮಾಪಿಳ್ಳೆಯ ಹೆಣ ಸಿಕಿದೆಯಂತೆ. ೫ ಮಂದಿ ತುರುಕರು ನೀರು ಪಾಲಗಿರುವರೆಂದೂ ಊಹಿಸಲಾಗಿದೆ.

ನೆರೆಯ ನಂತರ ಒಂದು ಭೀಕರ ವಧಂತಿ ಈ ಕಡೆಗಳಿಂದ ಬಂದಿರುತ್ತದೆ. ಕಾಡಿನಿಂದ ಹುಲಿಯೊಂದು ಮನೆಯ ಆಶ್ರಯ ಪಡೆದಿದ್ದು ಅಲ್ಲಿನ ಹೆಣ್ಣು ಮಗುವೊಂದನ್ನು ಕೊಂದು ತಿಂದಿದೆ ಎಂದು ಸುದ್ದಿ. ಹೆಚ್ಚಿನ ವಿವರಗಳು ಇನ್ನೂ ಬರಲಿವೆ.

ಕಾರ್ಕಳ

ಈ ತಾಲೂಕಿನಲ್ಲಿ ಉತ್ಪನ್ನವಾಗಿ ಮಾರಾಟಕ್ಕೆ ಬಂದ ಅಕ್ಕಿಯ ಹೆಚ್ಚಿನ ಅಂಶವು ಇತರ ಪ್ರದೇಶಗಳಿಗೆ ಒಯ್ಯಲ್ಪಟ್ಟಿದುದರಿಂದ ಇಲ್ಲೀಗ ಬೇಗನೆ ಅಕ್ಕಿಯ ಬರಗಾಲವು ಬರಬಹುದೆಂದು ಅಂಜಿಕೆಯುಂಟಾಗಿ ಹೊಸ ನಿಹಿತವಾದ ಈ ಗಂಡಾಂತರದಿಂದ ಈ ತಾಲೂಕಿನ ಜನರನ್ನು ತಪ್ಪಿಸುವದಕ್ಕೆ ಈಗಾಗಲೇ ಮುಂಜಾಗ್ರತೆಯ ಕಾರ್ಯ ಕ್ರಮಗಳನ್ನು ಕೈಕೊಳ್ಳುವುದು ಅತಿ ಅಗತ್ಯವಾಗಿದೆ.

ಪೆರಡಾಲ

ಕಳೆದ ಜೂನ್ ತಿಂಗಳಲ್ಲಿ ಹೊಸತಾಗಿ ಇಲ್ಲಿ ತೆರೆದ ನವ ಜೀವನ್ ಹೈಸ್ಕೂಲಿನ II ಮತ್ತು III ಫಾರ್ಮುಗಳಲ್ಲಿ ಎರಡೆರಡು ಡಿವಿಜನುಗಳಾಗಿವೆ. ಕುಂಬಳೆ ಕಾಸರಗೋಡು, ಆದೂರು ಮೊದಲಾದ ಕಡೆಗಳಿಂದಲ್ಲದೆ ಪುತ್ತೂರು, ಸುಳ್ಯ ಮೊದಲಾದ ದೂರದ ಪ್ರದೇಶಗಳಿಂದ ವಿದ್ಯಾರ್ಥಿಗಳು ಬಂದು ಸೇರುತ್ತಾರೆ. ಶಾಲೆಗೆ ಒಂದು ಯೋಗ್ಯ ವಿದ್ಯಾರ್ಥಿ ಭವನವೂ ಇರುವುದು.

ಪಾವಂಜೆ

ಈ ಕಡೆಗಳಲ್ಲಿನ ಜನರು ಭಯಂಕರ ನೆರೆ ಹಾವಳಿಗೆ ತುತ್ತಾಗಿರುವರು. ಆಶ್ಚರ್ಯವೆಂದರೆ ವಿಶೇಷ ಮಳೆಬಾರದಿದ್ದರೂ ನೋಡುತಿದ್ದ ಹಾಗೆ ನದಿಗಳ ನೀರು ಉಕ್ಕೇರಿದಂತಾಗಿ ಪೈರು ಪಚ್ಚೆಗಳ ಮತ್ತು ಮನೆ ಮಠಗಳ ಹಾನಿಗೆ ಕಾರಣವಾಗಿರುವುದೆಂದೂ ಅನೇಕ ಕಡೆಗಳಲ್ಲಿ ಸಣ್ಣ ದೊಡ್ಡ ಕಟ್ಟ ಪುಣಿಗಳು ಕೊರೆದು ಕುಸಿದು ಹೋಗಿವೆಯೆಂದೂ ತಿಳಿದು ಬರುತ್ತದೆ.

ಮಂಜೇಶ್ವರ

ಆನೆ ಕಲ್ಲಿನಿಂದ ಉಪ್ಪಳದ ತೀರ ಪ್ರದೇಶದಲ್ಲಿ ನೆರೆ ಬಂದಿತ್ತು. ಹಿಂದಿನಷ್ಟು ವಾಸ ಸ್ಥಾನಗಳಿಗೆ ಹಾನಿಯಾಗಿರಬಹುದು. ದವಸ ಧಾನ್ಯಗಳೂ ಕೆಲವೆಡೆ ನಷ್ಟಕ್ಕೆ ಗುರಿಯಾಗಿದೆ.

ತಮ್ಮ ಭೂಮಿಯ ಸಂಹಾರ

ಚೆರ್ಬೋರ್ಗಿನಲ್ಲಿ ಮಹೋಗ್ರ ಸಂಗ್ರಾಮ

(೩ನೇ ಪುಟದಿಂದ)

ಹೆಗಲಮೇಲಿರುವ ನೊಗವನ್ನು ಕಳಚಲು ಹೋರಾಡುವುದು ಇಡೀ ಯೂರೋಪಿನ ಸ್ವಾತಂತ್ರ್ಯದ ಪೂರ್ವ ಚಿಹ್ನೆ, ಇಡೀ ಇಡೀ ಜಗತ್ತಿನ ಸ್ವಾತಂತ್ರ್ಯದ ಪೂರ್ವ ಚಿಹ್ನೆ,

ಇಷ್ಟು ಆಗಬೇಕಾದರೆ ಅಷ್ಟೇನೂ ಸುಲಭವಲ್ಲ; ಒಮ್ಮೆನೇ ಫ್ರಾನ್ಸಿನಲ್ಲಿ ರಾಷ್ಟ್ರೀಯ ಪ್ರೇಮ ನೆರೆಯದ್ದಂತೆ ಯೋಚಬೇಕು. ಆಕ್ರಮಿತ ಫ್ರಾನ್ಸಿನಲ್ಲಿ ಫ್ರೆಂಚರು ಯಾವ ರೀತಿಯಲ್ಲಿ ಯಾವ ಸ್ಥಿತಿಯಲ್ಲಿದ್ದಾರೆಂಬುದನ್ನು ಯೋಚಿಸಿದರೆ ಈ ತರದಲ್ಲಿ ಒಮ್ಮೆಲೇ ರಾಷ್ಟ್ರಪ್ರೇಮದ ನೆರೆಯೇಳುವುದು ಸಾಧ್ಯವೇ ಎಂಬ ವಿಚಾರ ತುಂಬಾ ಆಲೋಚಿಸಬೇಕಾಗಿದೆ,

ಜರ್ಮನ್ ಆಕ್ರಮಣವಾದ ಮೇಲೆ ಫ್ರೆಂಚರನ್ನು ನಿಶ್ಶಕ್ತರನ್ನಾಗಿ, ನಿಶಸ್ತ್ರರಾಗಿ ಮಾಡುವ ಕೆಲಸ ಭರದಿಂದ ನಡೆದಿದೆ. ಅವರಿಗೆ ಒಳ್ಳೆಯ ಪುಷ್ಟಿಕರ ಆಹಾರವಿಲ್ಲ. ಇಂಥಾ ಪರಿಸ್ಥಿತಿಯಲ್ಲಿದ್ದ ಫ್ರೆಂಚರು ದಂಗೆಯೇಳಬೇಕು. ರಾಷ್ಟ್ರದ ಸ್ವಾತಂತ್ರ್ಯ ಪ್ರೇಮದಿಂದ ಆ ಕೆಲಸವು ಸಾಧ್ಯವಾದೀತು.

ಟರ್ಕಿಯ ಒಲವೆಲ್ಲಿ?

ಕಳೆದ ೪-೫ ವರ್ಷಗಳಿಂದಲೂ, ಎಂದರೆ ಯುದ್ಧಾರಂಭವಾದ ಬಳಿಕ ಟರ್ಕಿ ಯಾವ ಕಡೆಗೆ ನಿಲ್ಲುತ್ತದೆ, ಅದರ ಒಲವೆಲ್ಲಿ ಎಂಬ ವಿಚಾರ ತುಂಬಾ ಚರ್ಚೆಗಳಾಗಿವೆ. ಟರ್ಕಿಯ ಮುಖಂಡರು ತಮ್ಮ ಅಂತರಂಗವನ್ನು ಇದು ವರೆಗೂ ಯಾರಿಗೂ ತಿಳಿಸಿಲ್ಲ. ಹೀಗಿದ್ದರೂ ಬ್ರಿಟನು ಅಮೇರಿಕಗಳು ಟರ್ಕಿ ತಮ್ಮ ಪಕ್ಷಕ್ಕೆ ಸಾಲುವುದೆಂದೂ ಪ್ರಚಾರ ನಡೆಸುತ್ತಿದ್ದಾರೆ.

೧೯೪೩ನೆಯ ಎಪ್ರಿಲ್ ತಿಂಗಳಲ್ಲಿ ಚರ್ಚಿಲರು ಟರ್ಕಿಯ ಮುಖ್ಯಾಧಿಕಾರಿಗಳನ್ನು ಕಂಡು ಮಾತನಾಡಿದ ಬಳಿಕ ಅವರು ಮಿತ್ರ ಪಕ್ಷಕ್ಕೆ ಬೆಂಬಲಿಗರಾಗಿರುವರೆಂದು ಹೇಳಲಾಗುತ್ತದೆ. ಟರ್ಕಿಯ ಅಧಿಕಾರಿಗಳೂ ಆಗಾಗ ಅದಕ್ಕೆ ಅನುಕೂಲವಾಗುವಂತೆ ಮಾತನಾಡುತ್ತಿದ್ದರು.

ಬಾಲ್ಕನಿನಲ್ಲಿನ ಜರ್ಮನ್ ವಶವಿರುವ ಸ್ಥಳಗಳನ್ನು ಆಕ್ರಮಿಸಲು ಅನುಕೂಲವಾಗುವಂತಹ ವಿಮಾನ ನಿಲ್ದಾಣಗಳನ್ನು ತಮಗೆ ಕೊಡಬೇಕೆಂದು ಮಿತ್ರರು ಕೇಳಿಕೊಂಡರು. ಅದಕ್ಕೆ ಟರ್ಕಿಯು ಒಪ್ಪಲಿಲ್ಲ. ಏಕೆಂದರೆ ಇದರಿಂದ ಪ್ರತ್ಯಕ್ಷ ಜರ್ಮನಿಯೊಡನೆ ಯುದ್ಧ ಹೂಡಬೇಕಾದ ಸಂದರ್ಭವೊದಗುವುದೆಂದು ಅವರು ಬೆದರಿದರು. ಮಾತ್ರವಲ್ಲದೆ ಇದುವರೆಗೆ ಮಿತ್ರ ಪಕ್ಷದಿಂದ ಬಹಳ ಕಡಿಮೆ ಪ್ರಮಾಣದಲ್ಲಿ ಯುದ್ಧಸಾಮಗ್ರಿಗಳು ಬಂದಿದ್ದು, ಅದು ಕಡಿಮೆಯಿರುವಾಗ ಹೇಗೆ ಯುದ್ಧವನ್ನು ಆಮಂತ್ರಿಸಲಿ ಎಂಬುದಾಗಿ ಅವರ ಹೇಳಿಕೆಯಾಗಿದೆ. ಆದರೆ ಯುದ್ಧ ಸೇರಬೇಕೆಂದು ಅಭಿಪ್ರಾಯ ಪ್ರಕಟಿಸದ ರಾಷ್ಟ್ರಕ್ಕೆ ಯಾಕೆ ಯುದ್ಧ ಸಾಮಗ್ರಿ ಸಾಗಿಸುವುದೆಂದು ಮಿತ್ರ ಪಕ್ಷದವರ ಅಭಿಮತವಿದೆ.

ಈ ಮಧ್ಯೆ ಟರ್ಕಿಯು ಜರ್ಮನಿಗೆ ಕೆಲವು ಯುದ್ಧ ಸಾಮಗ್ರಿಗಳನ್ನು ಕಳುಹಿಸುತ್ತಿದೆಯೆಂದು ಬ್ರಿಟನಿಗೆ ತಿಳಿಯಿತು. ಇದು ಆಂಗ್ಲ ಟರ್ಕಿ ಒಪ್ಪಂದಕ್ಕೆ ವಿರುದ್ಧವಿದ್ದು, ಹೀಗೆ ಮಾಡುವುದು ಉಚಿತವಲ್ಲವೆಂದು ಟರ್ಕಿಗೆ ತಿಳಿಸಲಾಯಿತು. ಕೂಡಲೆ, ಇನ್ನು ಮುಂದೆ ಹಾಗೆ ಮಾಡುವುದಿಲ್ಲವೆಂದು ಟರ್ಕಿಯೂ ಒಪ್ಪಿಕೊಂಡಿತು. ಆ ಮೇಲೆ ಟರ್ಕಿಯು ತನ್ನ ವಿದೇಶೀ ಧೋರಣೆಯನ್ನು ಸಾರಿ ಬ್ರಿಟನಿನೊಡನೆ ಗೆಳೆತನವಿಟ್ಟುಕೊಂಡಿರುವುದೇ ತನ್ನ ಧೋರಣೆಯೆಂದಿತು.

ಆ ಮೇಲೆ ಚರ್ಚಿಲರು ಮಾಡಿದ ಹೇಳಿಕೆಗಳನ್ನು ಅವಲೋಕಿಸಿದರೆ, ಬ್ರಿಟನು ಮತ್ತು ಟರ್ಕಿಯ ಸಂಬಂಧ ಚೆನ್ನಾಗಿಲ್ಲವೆಂದು ಅರ್ಥವಾಗುತ್ತದೆ. ಜರ್ಮನಿಯ ಕೆಲವು ಹಡಗುಗಳು ಕಪ್ಪು ಸಮುದ್ರದಿಂದ ಈಜಿಯನ್ ಸಮುದ್ರಕ್ಕೆ ಗುಪ್ತವಾಗಿ ಹೋದವೆಂದು ಕಾಮನ್ಸ್ ಸಭೆಯಲ್ಲಿ ಈ ಜನರು ಹೇಳಿದರು. ಇದರಿಂದ ಟರ್ಕಿಯ ಬಗ್ಗೆ ಬ್ರಿಟನಿನಲ್ಲಿ ಸಂದೇಹ ಹುಟ್ಟುವಂತಾಗಿದೆ. ಈ ವಿಷಯವನ್ನು ಟರ್ಕಿಯ ಅಧ್ಯಕ್ಷರಿಗೂ ತಿಳಿಸಿದೆ. ಈ ರೀತಿ ಹಡಗ ಹೋದದ್ದು ತಮಗೆ ಗೊತ್ತಿಲ್ಲವೆಂದು ಅಲ್ಲಿನ ಅಧ್ಯಕ್ಷರು ತಿಳಿಸಿದ್ದಾರೆ.

ಇದರಿಂದ ಟರ್ಕಿಯ ರಾಜಕಾರಣದಲ್ಲಿ ಗೊಂದಲ ಹುಟ್ಟಿದೆ. ಅಲ್ಲಿನ ವಿದೇಶೀ ರಾಜಕಾರಣ ಮಂತ್ರಿ ರಾಜಿನಾಮೆಯಿತ್ತಿರುವರು. ಮುಖ್ಯ ಮಂತ್ರಿ ಸರ್ ಜೋಗ್ಲುರವರೇ ಎಲ್ಲಾ ಜವಾಬ್ದಾರಿ ವಹಿಸಿ ಹಿಂದಿನ ಒಪ್ಪಂದದಂತೆ ಟರ್ಕಿಯ ಧೋರಣೆಯನ್ನು ಬದಲಾಯಿಸಿದ್ದಾರೆ. ಈಗಿನ ರೀತಿ ಮಿತ್ರ ಪಕ್ಷದವರಿಗೆ ಸಮಾಧಾನವನ್ನೇನೋ ಉಂಟುಮಾಡಿದೆ. ಆದರೆ ನಿಜವಾಗಿ ಟರ್ಕಿಯ ಒಲವೆಲ್ಲಿ ಎಂಬ ವಿಚಾರವು ಎಲ್ಲರ ಹೃದಯವನ್ನು ತಳಮಳಗೊಳಿಸಿದೆ.

ಇಂಫಾಲ ರಸ್ತೆ ತೆರೆಯಿತು.

ಜಪಾನರು ಆಕ್ರಮಿಸಿದ್ದ ಇಂಫಾಲ ರಸ್ತೆಯು ತೆರೆಯಲ್ಪಟ್ಟು, ಜಪಾನರನ್ನು ಅಲ್ಲಿಂದ ಓಡಿಸಲಾಗಿದೆಯೆಂದು ತಿಳಿದು ಬರುತ್ತದೆ. ಕೊಹಿಮಾ ಇಂಫಾಲ ರಸ್ತೆಯನ್ನು ಕೈವಶಮಾಡಿದ್ದ ಜಪಾನರು ಮಿತ್ರರ ಸ್ವಾಧೀನವಾಗುವ ಸಂಭವ ಕಡಿಮೆಯಿದೆ. ಏಕೆಂದರೆ ಇವರಲ್ಲಿ ಹೆಚ್ಚಿನವರನ್ನು ಜಪಾನರು ಹಿಂದೆ ಕರೆಸಿಕೊಂಡಿರುವರು. ಈ ಪ್ರದೇಶದಲ್ಲಿ ಕುರಿಕರಾಸಂ ಮತ್ತು ಮರಾಂ ನಗರಗಳೂ ಮಿತ್ರರ ಕೈವಶವಾಗಿವೆ. ಭೀಷಣಪುರದ ಪಶ್ಚಿಮದಲ್ಲಿ ಭಾರತೀಯ ಸೈನಿಕರು ಕುಂಗಿ ಜಪಾನೀ ಠಾಣೆಯ ಮೇಲೆ ಧಾಳಿ ಮಾಡಿರುವರು.

ಜಪಾನರಿಗೆ ಪೆಸಿಫಿಕ್ ಯುದ್ಧದಲ್ಲಿ ಅಪಾರ ಜನನಷ್ಟವೂ, ನೌಕಾನಷ್ಟವೂ ಆಗಿರುವುದೆಂದು ಲಂಡನ್ ಟೈಮ್ಸ್ ಪತ್ರಿಕೆ ಬರೆದಿರುವುದು. ಈ ನೌಕಾ ನಷ್ಟದಿಂದ ಜಪಾನು ವಿಷಮ ಪರಿಸ್ಥಿತಿಗೆ ಬಂದೊದಗಿರುವುದು. ನೌಕಾ ಅಪಜಯವಾದರೆ ಜಪಾನು ಖಂಡಿತ ಸೋಲಿಗೆ ಶರಣಾಗಬೇಕಾಗುವುದು. ಈ ಕಡೆ ಹಿಂದೀ ಸಾಗರದಲ್ಲಿ ಎಡ್ಮಿರಲ್ ಸಮ್ಮರ್ ವಿಲೆಯವರ ನೌಕಾ ಪಡೆಯ ಶಕ್ತಿಯೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರಿಂದಲೂ ಜಪಾನರು ಕಂಗೆಟ್ಟಿರುವರು. ಜಪಾನು ಹೀಗೆ ನೌಕಾ ಹಾನಿ ಜನ ಹಾನಿಯನ್ನು ಬಹಳ ಹೊಂದಿದೆಯೆಂದು ಲಂಡನ್ ಟೈಮ್ಸ್ ಪತ್ರಿಕೆ ಬರೆದರೂ ಸತ್ಯಾಂಶವೇನೆಂದು ತಿಳಿಯಬೇಕಷ್ಟೆ.

WANTED

Applications for posts of Agents of Depots and Clerks. Minimum qualifications S. S. L. C. Apply stating qualifications Age, Community, Native place, previous employment and whether the applicant is prepared to furnish the security prescribed, by 15th July 1944. Applications must be in the Applicant's own hand and should contain a sample of his writing in Kannada or Malayalam as the case may be. The appointments will be temporary for the duration of the War, but the hands will be absorbed in permanet services as and when opportunity occurs

APPLY:—

The Executive Officer,
S. K. C. C. W. Stores, Ltd.,
Food Office, Kodiyalbail,
Mangalore.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯ ರಂಗ—ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ—ಜರ್ಮನಿಯಲ್ಲಿ ಜನರ ನೈತಿಕ ಭಂಗ—ಜರ್ಮನರ ಪತನ—ಯುದ್ಧ ಸಮಾಪ್ತಿ—ಯುದ್ಧ ಸಾಮಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿ ರಾಶಿಯಾಗಿ ಬರೋಣ—ಧಾರಣೆಗಳ ಇಳಿತ—ನಷ್ಟ—ಕೊರತೆ—ಕೇಡುಗಳು—ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್ ಲಿಮಿಟೆಡ್.

Canara Bank Ltd.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE BUNDER *BRANCHES*
Mangalore. MANGALORE. Moodabidri & Padubidri.

ANNOUNCEMENT

Deposits accepted at the following rates from 1-4-1944.
Current Accounts (1% from Jan. to June)
(½% from July to Decr)
Savings bank Accounts 1½% p. a. on daily balances.
Fixed Deposits 6 months 2% p. a.
12 months 2½% p. a.
24 months 3% p. a.

The Bank also accepts Season and short term deposits and many other lucrative schemes at most favourable rates of interest. For terms etc. apply to Head office or Branches

(Regd)

ಅಮೃತಾಂಜನ

ತಲೆನೋವು, ಶರೀರವೇದನೆ, ಉಳುಕು, ಕಾಕಿ, ...
ಹಲ್ಲುನೋವುಗಳಿಗೂ ಎದೆನೋವು, ಗಾ...
ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇ...
ಪಕ್ಷವಾತ, ಮೊದಿನೆ ಮೊದಲಾದ ಎಲ್ಲ ರೋ...
ಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾ...
ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE CO., LTD.

Our 34 years' experience in Insurance Service enables us to recommend to you this First Class Indian Life Office

Some Salient Features of The 'Bombay Life' Policies

- ★ Premiums are low
- ★ 2½% Rebate on annual premiums.
- ★ "Permanent Disability Benefits free of any cost
- ★ Payment of double the insured amount in case of death by accident at a very small cost of Rs 1-8-0 per 1000.
- ★ Special rebates on large size policies
- ★ A special scheme by which lapsed policies can be revived without paying the arrears
- ★ War risk cover at no extra cost

and above all

If premiums are not paid Policies are not forfeited by the Company but are continued in force under the Automatic Non-forfeiture Clause

For Liberal Agency Contracts Please apply to

KOCHIKAR BROTHERS LTD.,

Chief Agents for South India including Indian States.

The "Bombay Life" Building UDIPI. S. K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಬಹಳ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಪ್ರಖ್ಯಾತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನೀಲಿ ಅತ್ಯುತ್ತಮವಾದ ಹೇರ್ ಆಯಿಲ್.

ಕೂದಲನ್ನು ಸೊಂಪಾಗಿ ಬೆಳೆಸಿ, 'ಬಾಲನರೆ' ಹೋಗಲಾಡಿಸುತ್ತ...
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರ...

Edited, Printed & Published by A. S. Kamath at the Sharada Press, Car Street, Mangalore.